ವೃತ್ತಾಂತ ಪತ್ರಿಕೆ

1906.

ಟಪ್ಪಾಲ್ ಹಾಸಲು:

[illegible]

ಮನಿಯಾರ್ಡರ್ ಮತ್ತು ಸುಂಕ ಕಮಿಷನ್:

[illegible]

	ಜನವರಿ.	ಫೆಬ್ರವರಿ.	ಮಾರ್ಚ್.	ಏಪ್ರೆಲ್.	ಮೇ.	ಜೂನ್.
ಭಾನುವಾರ	೭ ೧೪ ೨೧ ೨೮	೪ ೧೧ ೧೮ ೨೫	೪ ೧೧ ೧೮ ೨೫	೧ ೮ ೧೫ ೨೨ ೨೯	೬ ೧೩ ೨೦ ೨೭	೩ ೧೦ ೧೭ ೨೪
ಸೋಮವಾರ	೧ ೮ ೧೫ ೨೨ ೨೯	೫ ೧೨ ೧೯ ೨೬	೫ ೧೨ ೧೯ ೨೬	೨ ೯ ೧೬ ೨೩ ೩೦	೭ ೧೪ ೨೧ ೨೮	೪ ೧೧ ೧೮ ೨೫
ಮಂಗಳವಾರ	೨ ೯ ೧೬ ೨೩ ೩೦	೬ ೧೩ ೨೦ ೨೭	೬ ೧೩ ೨೦ ೨೭	೩ ೧೦ ೧೭ ೨೪	೧ ೮ ೧೫ ೨೨ ೨೯	೫ ೧೨ ೧೯ ೨೬
ಬುಧವಾರ	೩ ೧೦ ೧೭ ೨೪ ೩೧	೭ ೧೪ ೨೧ ೨೮	೭ ೧೪ ೨೧ ೨೮	೪ ೧೧ ೧೮ ೨೫	೨ ೯ ೧೬ ೨೩ ೩೦	೬ ೧೩ ೨೦ ೨೭
ಗುರುವಾರ	೪ ೧೧ ೧೮ ೨೫	೧ ೮ ೧೫ ೨೨	೧ ೮ ೧೫ ೨೨ ೨೯	೫ ೧೨ ೧೯ ೨೬	೩ ೧೦ ೧೭ ೨೪ ೩೧	೭ ೧೪ ೨೧ ೨೮
ಶುಕ್ರವಾರ	೫ ೧೨ ೧೯ ೨೬	೨ ೯ ೧೬ ೨೩	೨ ೯ ೧೬ ೨೩ ೩೦	೬ ೧೩ ೨೦ ೨೭	೪ ೧೧ ೧೮ ೨೫	೧ ೮ ೧೫ ೨೨ ೨೯
ಶನಿವಾರ	೬ ೧೩ ೨೦ ೨೭	೩ ೧೦ ೧೭ ೨೪	೩ ೧೦ ೧೭ ೨೪ ೩೧	೭ ೧೪ ೨೧ ೨೮	೫ ೧೨ ೧೯ ೨೬	೨ ೯ ೧೬ ೨೩ ೩೦

ಕೋಲಾರ್ ಚಿನ್ನದ ಗಣಿ ಕಾರ್ಖಾನೆಗಳು.

	ಜುಲೈ.	ಆಗಸ್ಟ್.	ಸೆಪ್ಟೆಂಬರ್.	ಅಕ್ಟೋಬರ್.	ನವೆಂಬರ್.	ಡಿಸೆಂಬರ್.
ಭಾನುವಾರ	೧ ೮ ೧೫ ೨೨ ೨೯	೫ ೧೨ ೧೯ ೨೬	೨ ೯ ೧೬ ೨೩ ೩೦	೭ ೧೪ ೨೧ ೨೮	೪ ೧೧ ೧೮ ೨೫	೨ ೯ ೧೬ ೨೩ ೩೦
ಸೋಮವಾರ	೨ ೯ ೧೬ ೨೩ ೩೦	೬ ೧೩ ೨೦ ೨೭	೩ ೧೦ ೧೭ ೨೪	೧ ೮ ೧೫ ೨೨ ೨೯	೫ ೧೨ ೧೯ ೨೬	೩ ೧೦ ೧೭ ೨೪ ೩೧
ಮಂಗಳವಾರ	೩ ೧೦ ೧೭ ೨೪ ೩೧	೭ ೧೪ ೨೧ ೨೮	೪ ೧೧ ೧೮ ೨೫	೨ ೯ ೧೬ ೨೩ ೩೦	೬ ೧೩ ೨೦ ೨೭	೪ ೧೧ ೧೮ ೨೫
ಬುಧವಾರ	೪ ೧೧ ೧೮ ೨೫	೧ ೮ ೧೫ ೨೨ ೨೯	೫ ೧೨ ೧೯ ೨೬	೩ ೧೦ ೧೭ ೨೪ ೩೧	೭ ೧೪ ೨೧ ೨೮	೫ ೧೨ ೧೯ ೨೬
ಗುರುವಾರ	೫ ೧೨ ೧೯ ೨೬	೨ ೯ ೧೬ ೨೩ ೩೦	೬ ೧೩ ೨೦ ೨೭	೪ ೧೧ ೧೮ ೨೫	೧ ೮ ೧೫ ೨೨ ೨೯	೬ ೧೩ ೨೦ ೨೭
ಶುಕ್ರವಾರ	೬ ೧೩ ೨೦ ೨೭	೩ ೧೦ ೧೭ ೨೪ ೩೧	೭ ೧೪ ೨೧ ೨೮	೫ ೧೨ ೧೯ ೨೬	೨ ೯ ೧೬ ೨೩ ೩೦	೭ ೧೪ ೨೧ ೨೮
ಶನಿವಾರ	೭ ೧೪ ೨೧ ೨೮	೪ ೧೧ ೧೮ ೨೫	೧ ೮ ೧೫ ೨೨ ೨೯	೬ ೧೩ ೨೦ ೨೭	೩ ೧೦ ೧೭ ೨೪	೧ ೮ ೧೫ ೨೨ ೨೯

● ಈ ಗುರುತು ಅಮಾವಾಸ್ಯೆ; ◐ ○ ಈ ಗುರುತುಗಳು ಪೌರ್ಣಿಮೆ.

ಸರ್ಕಾರಿ ರಜಾ ದಿವಸಗಳು.

ಜನವರಿ.—[illegible]—ಕ್ರಿಸ್ಮಸ್ ೧—೩.

" ಸಂಕ್ರಾಂತಿ ೧೩. ಶ್ರೀಮನ್ಮಹಾರಾಜರವರ ಪಟ್ಟಾಭಿಷೇಕದ ದಿನ ೧೦.

ಫೆಬ್ರವರಿ.—ಮಹಾಶಿವರಾತ್ರಿ ೨೧.

ಮಾರ್ಚ್.—[illegible]

" [illegible] ೧೦.

ಏಪ್ರೆಲ್.—ಶ್ರೀರಾಮನವಮಿ ೩.

ಸರ್ಕಾರಿ ರಜಾ ದಿವಸಗಳು.

ಏಪ್ರೆಲ್.—ಗುಡ್ ಫ್ರೈಡೆ ೧೩.

ಜೂನ್.—ಶ್ರೀಮನ್ಮಹಾರಾಜರವರ ವರ್ಧಂತಿ ೨.

" ಚಕ್ರವರ್ತಿಯವರ ಜನ್ಮದಿನ ೨೬.

ಆಗಸ್ಟ್.—ಉಪಾಕರ್ಮ ೩ ಮತ್ತು ೪.

" ಗಣೇಶ ೨೩.

ಸೆಪ್ಟೆಂಬರ್.—ಮಹಾಲಯ ಅಮಾವಾಸ್ಯೆ ೧೮.

" ನವರಾತ್ರಿ ಪ್ರಾರಂಭ ೧೯.

ಸರ್ಕಾರಿ ರಜಾ ದಿವಸಗಳು.

ಸೆಪ್ಟೆಂಬರ್.—ದಸರಾ ರಜಾ ೨೫ ರಿಂದ ಹಿಡಿದು

ಅಕ್ಟೋಬರ್.—೫ರ ವರೆಗೆ.

" ದೀಪಾವಳಿ ೧೬.

" ಬಲಿಪಾಡ್ಯಮಿ ೧೮.

ಡಿಸೆಂಬರ್.—ಕ್ರಿಸ್ಮಸ್ ೨೪—೩೧.

ಸಿವಿಲ್ ಕೋರ್ಟುಗಳ ರಜಾ ದಿವಸಗಳು.

ಛೀಫ್ ಕೋರ್ಟಿಗೆ ಏಪ್ರೆಲ್ ೧೬ ರಿಂದ ಜೂನ್ ೧೬ ರ ವರೆಗೆ.

ಇತರ ಸಿವಿಲ್ ಕೋರ್ಟುಗಳಿಗೆ ಏಪ್ರೆಲ್ ೧೬ ರಿಂದ ಮೇ ೨೭ ರ ವರೆಗೆ.

PRINTED AT THE WESLEYAN MISSION PRESS, MYSORE—1906

ದಿವಾನರವರು—ರಿವಿಜನ್ ಸರ್ವೆ ಆಗುವಕಾಲದಲ್ಲಿ ಇದನ್ನೆಲ್ಲಾ ಸಮಾಧಾನ ಮಾಡಿಕೊಡುತ್ತೇವೆ

... ಮೆಂಬರುಗಳು—ಒಡೆದುಹೋದ ಕೆರೆಗಳ ಕೆಳಗಿರುವ ...ಗಳನ್ನು ಕೆಲವು ಸಂದರ್ಭಗಳಲ್ಲಿ ಬಾಗಾಯತಿಗೆ ದಾಖಲ್ಮಾಡಿ ಕಂದಾಯ ಹಾಕಿದ್ದಾರೆ ಅಂಥಾ ತೋಟಗಳಲ್ಲಿ ಧ್ವಜಸ್ಥರೇನೂ ಇಲ್ಲ ಸ್ವಲ್ಪ ತರಕಾರಿ ಮುಂತಾದ್ದನ್ನು ಮಾತ್ರ ಮಾಡಿಕೊ...ರೆ ಜಮಾಬಂದಿ ಆಫೀಸರುಗಳು ಇಂಥಾ ಜಮೀನುಗಳ ಕಂದಾಯ ಕಡಿಮೆ ಮಾಡಿ ರಿಪೋರ್ಟ್ ಮಾಡಿಕೊಡುವಂತೆ ಅವರಿಗೆ ಅಧಿಕಾರ ಕೊಡಬೇಕು

ದಿವಾನರವರು—ಈ ವಿಷಯದಲ್ಲಿ ನಾವು ಹುಕುಂ ಕೊಡುವ ಅಗತ್ಯವಿಲ್ಲ ಡೆಪ್ಯುಟಿ ಕಮೀಷನರನ್ನು ಕೇಳಿಕೊಂಡರೆ ಅವರೇ ಮಾಡುತ್ತಾರೆ ಈಗಿನ ಸಂದರ್ಭದಲ್ಲಿ ಇದು ಆಗುವುದಿಲ್ಲ

ಮಧುಗಿರಿ ತಾ ಮೆ॥ ಶ್ರೀಕಂಠಯ್ಯನವರು—ಇನಾಂದಾರರು ... ಕಡೆಯಿಂದ ಕಂದಾಯ ಸಲ್ಲಿಸುವ ಪಾವತಿ ಹೊಂದದೆ ಬಹಳ ತೊಂದರೆ ಪಡುತ್ತಾರೆ ಸರ್ಕಾರದ ಕಂದಾಯ ವಸೂಲಾಗುವಂತೆ ಅದೇ ... ಇನಾಂ ಗ್ರಾಮಗಳಿಗೂ ಜಾರಿಗೆ ತರಬೇಕು ಇನಾಂದಾರರು ಜಮೀನಿಂದಲೇ ಕಂದಾಯ ವಸೂಲ್ಮಾಡಿಕೊಳ್ಳುವಂತೆ ಮಾಡಬೇಕು

ದಿವಾನರವರು—ಇದು ಈಗ ಆಗುವುದಿಲ್ಲ ಇದಕ್ಕಾಗಿ ನಮ್ಮನ್ನು ...

ಶಿವಮೊಗ್ಗೆಯ ಮೆ॥ ಬಾಲಕೃಷ್ಣರಾಯರು—ಶಿವಮೊಗ್ಗೆಯಲ್ಲಿ ಸರ್ಕಾರದಿಂದ ಒಂದು ವಿದ್ಯಾರ್ಥಿನಿಲಯವನ್ನು (ಸ್ಟೂಡೆಂಟ್ಸ್ ಹೋಂ) ಕಟ್ಟಿಸಬೇಕು ಈಗ ಒಂದು ಕಟ್ಟಡಕ್ಕೆ ೩೦ ರೂ ಬಾಡಿಗೆ ಕೊಡುತ್ತಾರೆ ಆದರೂ ಕಟ್ಟಡವು ಅನುಕೂಲವಿಲ್ಲ

ದಿವಾನರವರು—ಇದು ಅವಶ್ಯವೆಂದು ನಾವೂ ಒಪ್ಪುತ್ತೇವೆ ಹಣ ಬೇಕು ಮುಂದೆ ನೋಡೋಣ

ಶಿವಮೊಗ್ಗೆಯ ಕೆಲವು ಮೆಂಬರುಗಳು—ಶಿವಮೊಗ್ಗಾ ವಿದ್ಯಾನಿಲಯದಲ್ಲಿ ಲಿಂಗಾಯತ ವಿದ್ಯಾರ್ಥಿಗಳನ್ನೂ ಸೇರಿಸಿಕೊಳ್ಳುವಂತೆಯೂ ... ಜನಕ್ಕೆ ಅಲ್ಲೇ ಪರ್ಬಾಡು ಮಾಡುವಂತೆಯೂ ಕೇಳಿಕೊಳ್ಳುತ್ತೇವೆ ಮತ್ತು ... ಶಿವಮೊಗ್ಗೆಯಲ್ಲಿ ಕಾಲೇಜನ್ನು ವಜಾಮಾಡೋಣ ... ಅದಕ್ಕೆ ಪ್ರತಿಯಾಗಿ ಅಲ್ಲಿ ಒಂದು ಕೈಗಾರಿಕೆ ಪಾಠಶಾಲೆಯನ್ನಾದರೂ ಇಡಿಸಿಕೊಡಬೇಕು

ದಿವಾನರವರು—ಒಳ್ಳೇದು, ಈ ಸಂಗತಿಗಳನ್ನೆಲ್ಲಾ ವಿದ್ಯಾಭ್ಯಾಸ ಇಲಾಖೆಯ ಇನ್ಸ್ಪೆಕ್ಟರ್ ಜನರಲ್‌ರವರಿಗೆ ತಿಳಿಸಿ, ಸಾಧ್ಯವಾದಷ್ಟು ನಡಸುವಂತೆ ಹೇಳುತ್ತೇವೆ

ಹೊನ್ನಾಳಿ ತಾ ಮೆ॥ ಮರಿಸೇವದ ಗುರುಸಿದ್ಧಯ್ಯನವರು—... ವ್ಯವಸಾಯದ ಬ್ಯಾಂಕಿಗೆ ಸರ್ಕಾರದವರು ದ್ರವ್ಯಸಹಾಯ ... ಕೊಟ್ಟರುವ ರೈತರಿಗೆ ಉಪಕಾರವಾದಬೇಕು

ದಿವಾನರವರು—ಆ ಬ್ಯಾಂಕಿನವರು ಅರ್ಜಿಬರೆದು ಕೇಳಿಕೊಳ್ಳಲಿ

ಅದೇ ಮೆಂಬರು—ಚಟ್ನಹಳ್ಳಿ ಹಳ್ಳಕ್ಕೆ ಅಡ್ಡಕಟ್ಟೆ ಕಟ್ಟಿ ಸೋ... ಊರಿಗೆ ತಿರುಗಿಸಿದರೆ ಬೇಸಿಗೆಯಲ್ಲೂ ನೀರಿಗೆ ಅಭಾವವಾಗುವುದಿಲ್ಲ ಸ್ವಲ್ಪ ಖರ್ಚಿನಲ್ಲೇ ಅಡ್ಡಕಟ್ಟೆಯನ್ನು ಹಾಕಬಹುದು

ದಿವಾನರವರು—ಆ ನೀರನ್ನು ತಂದು ಕೂಡಿಸುವುದಕ್ಕೆ ಒಂದು ... ಕೆರೆ ತಯಾರಾಗುತ್ತಿದೆ ಇದಕ್ಕೆ ೩೦,೦೦೦ ರೂಪಾಯಿ ಕೊಟ್ಟಿದ್ದೇವೆ ಅಡ್ಡಕಟ್ಟೆ ಅವಶ್ಯವಿಲ್ಲ.

ಅದೇ ಮೆಂಬರು—ಹೊನ್ನಾಳಿ ತಾಲ್ಲೂಕನ್ನು ನ್ಯಾಮತಿಗೆ ತಂದಿ... ಪ್ರಜೆಗಳಿಗೂ ರೈತರಿಗೂ ವ್ಯಾಪಾರಸ್ಥರಿಗೂ ತುಂಬಾ ಅನುಕೂಲವಾಗುವದು

ದಿವಾನರವರು—ಇದು ಅವಶ್ಯವಲ್ಲವೆಂದು ಡೆಪ್ಯುಟಿಕಮಿಷನರು ಹೇಳುತ್ತಾರೆ

... ತಾ ಮೆಂಬರುಗಳು—ನಗರದಲ್ಲಿ ಈಗಿರುವ ಜಮಾದಾರರನ್ನು ತೆಗೆದು ಕಾನ್ಸ್ಟೇಬಲ್ ಪೋಲೀಸಿನವರನ್ನು ನೇಮಿಸುತ್ತಾರೆಂದು ಕೇಳುತ್ತೇವೆ ಇದರಿಂದ ಜನರಿಗೆ ತುಂಬಾ ಕಷ್ಟಬಂದೀತು.

ದಿವಾನರವರು—ಈ ಸಂಗತಿಯನ್ನು ವಿಚಾರಿಸಿ, ಹುಕುಂ ಕೊಡುತ್ತೇವೆ

ಚಿಕ್ಕಮಗಳೂರು ಮೆ॥ ಅಬ್ದುಲ್ ಖಾಲಿಕ್‌ಯವರು—ಚಿಕ್ಕಮಗಳೂರು ಟವುನ್ ಆರೋಗ್ಯವಿಚಾರವನ್ನು ಸರ್ಕಾರದವರು ಕ್ರಮವಾಗಿ ನಡಸುವವರಾಗಿದ್ದಾರೆ ಅಲ್ಲಿ ಬಚ್ಚಲ ನೀರೂ ಮಳೆನೀರೂ ಸರಿಯಾಗಿ ಹರಿಯುವಂತೆ ಮಾಡಬೇಕು

ದಿವಾನರವರು—ಇದನ್ನೆಲ್ಲಾ ಸರ್ವೆಮಾಡಿ, ರಿಪೋರ್ಟ್ ಕೊಡಬೇಕೆಂದು ಹುಕುಂ ಕೊಟ್ಟಿದೆ ಇದಕ್ಕೆ ೪—೬ ತಿಂಗಳು ಹಿಡಿಯುವುದು

ಚಿಕ್ಕಮಗಳೂರು ಮೆ॥ ಸಿ ಶ್ರೀನಿವಾಸರಾಯರು—ರಾಮನಹಳ್ಳಿ ಕೆರೆಯನ್ನು ದುರಸ್ತು ಮಾಡಿಸಿ ಕೊಡಬೇಕು

ದಿವಾನರವರು—ಅದಕ್ಕೆ ಅಂದಾಜುಪಟ್ಟಿ ತಯಾರ್ಮಾಡಿಸಬೇಕು ಬರೆದಿದ್ದೇವೆ ಜಾಗ್ರತ ನಡಿಸುವಂತೆ ಹೇಳುತ್ತೇವೆ

ಚಿಕ್ಕಮಗಳೂರು ಮೆ॥ ಎ ಕಾಮರಾಯರು—ನಗರದ ಕೆರೆಯನ್ನು ದುರಸ್ತು ಮಾಡಿಸಿ ಕೊಡಬೇಕು

ದಿವಾನರವರು—ಇಂಜನೀಯರ್ ಇಲಾಖೆಯವರು ಅಂದಾಜು ಪಟ್ಟಿಯನ್ನು ತಯಾರ್ಮಾಡುತ್ತಿದ್ದಾರೆ ಆಗಿಬರಲಿ.

ಮೂಡಿಗೆರೆ ಮೆಂಬರು—ಮೂಡಿಗೆರೆ ಟವುನಿನಲ್ಲಿ ಸರ್ಕಾರದವರು ಎರಡು ಬಾವಿಗಳನ್ನು ತೆಗೆಸಿಟ್ಟಿದ್ದಾರೆ ಇದರಲ್ಲಿ ಬೇಸಿಗೆಯಲ್ಲಿ ನೀರು ನಿಲ್ಲುವದಿಲ್ಲ ಹಳ್ಳದಿಂದ ಊರಿಗೆ ನಾಲ್ಕು ಫರ್ಲಾಂಗ್ ದೂರ ಅಷ್ಟು ದೂರದಿಂದ ನೀರು ಹೊತ್ತು ತರುವುದು ತುಂಬಾ ಕಷ್ಟ ... ಇದಿಸಿ ಕೊಡಬೇಕು

ದಿವಾನರವರು—ಡೆಪ್ಯುಟಿಕಮಿಷನರು ಬಂದು ತನಿಖೆ ಮಾಡುತ್ತಾರೆ.

ತರೀಕೆರೆ ತಾ ಮೆಂಬರುಗಳು—ತರೀಕೆರೆಗೆ ಕುಡಿಯುವ ನೀರು ನಲ್ಲಿ ಮೂಲಕ ತಂದು ಬಿಡಬೇಕೆಂದೂ ಅದಕ್ಕಾಗಿ ಬೇಕಾಗುವ ಹಣದಲ್ಲಿ ೧೬,೦೦೦ ರೂಪಾಯನ್ನು ಮ್ಯುನಿಸಿಪಾಲಿಟಿಯವರು ಕೊಡುತ್ತೇವೆಂದೂ ಗೊತ್ತಾಗಿದೆ ಕಾಮಗಾರಿಯನ್ನು ಜಾಗ್ರತೆಯಿಂದ ಪ್ರಾರಂಭಿಸಿ ಕೊಡಬೇಕು

ದಿವಾನರವರು—ಇದಕ್ಕೆ ೬೪,೦೦೦ ರೂಪಾಯಿ ಬೇಕಾಗುವುದೆಂದು ಅಂದಾಜುಪಟ್ಟಿ ತಯಾರಾಗಿ ಬಂದಿದೆ ಈ ವರುಷ ಇದಕ್ಕೆ ಹಣವಿಲ್ಲ ಮುಂದಿನವರುಷ ಬಡ್ಜೆಟ್ ತಯಾರ್ಮಾಡುವಾಗ್ಗೆ ಈ ಸಂಗತಿಯನ್ನು ಯೋಚಿಸುತ್ತೇವೆ

ಚಿಕ್ಕಮಗಳೂರು ಮೆಂಬರುಗಳು—ಚಿಕ್ಕಮಗಳೂರು ಟವುನಿಗೆ ನಲ್ಲಿ ನೀರು ಸರಬರಾಜಾಗುವುದು ತೃಪ್ತಿಕರವಾಗಿಲ್ಲ

ದಿವಾನರವರು—ನೀರನ್ನು ಒದಗಿಸುವುದಕ್ಕೆ ಗವರ್ನಮೆಂಟಿನವರು ಬೇರೆ ಏರ್ಪಾಡನ್ನು ಕುರಿತು ಯೋಚಿಸುತ್ತಿದ್ದಾರೆ

ಹೊಳಲ್ಕೆರೆ ಮೆ॥ ವೆಂಕಟರಮಣಪ್ಪನವರು—ಹೊಳಲ್ಕೆರೆಯಲ್ಲಿರುವ ಮುಸಾಫರಖಾನೆಯೊಳಗೆ ಒಂದು ಭಾಗದಲ್ಲಿ ಅಮಲ್ದಾರರು ಬಾಡಿಗೆ ಕೊಟ್ಟು ವಾಸಮಾಡುತ್ತಿದ್ದಾರೆ ಇನ್ನೊಂದು ಭಾಗದಲ್ಲಿ ಇಂಜನಿಯರ್ ಇಲಾಖೆಯನ್ನು ಮಾಡಿಕೊಂಡಿದ್ದಾರೆ ಇದರಿಂದ ಪ್ರಯಾಣೀಕರಿಗೆ ತುಂಬಾ ಅನಾನುಕೂಲ ಸರ್ಕಾರದವರು ಪ್ರತ್ಯೇಕವಾದ ಮುಸಾಫರಖಾನೆಯನ್ನು ಹೊಸದಾಗಿ ಕಟ್ಟಿಸಿಕೊಡಬೇಕು

ದಿವಾನರವರು—ಬೇರೆ ಕಟ್ಟಿಸುವ ಅವಶ್ಯವಿಲ್ಲ ಇಂಜನಿಯರ್ ಇಲಾಖೆಯನ್ನೂ ಅಮಲ್ದಾರರು ವಾಸಮಾಡುವದನ್ನೂ ಕೂಡಲೆ ತಪ್ಪಿಸಿ, ಆ ಮುಸಾಫರಖಾನೆಯನ್ನು ಪ್ರಯಾಣೀಕರಿಗಾಗಿಯೇ ತೆಗೆದಿಡಬೇಕೆಂದು ಹುಕುಂ ಕೊಡುತ್ತೇವೆ

ಚಿತ್ರದುರ್ಗದ ಮೆ॥ ದಸ್ತಗೀರ್‌ಸಾಬರು—ಚಿತ್ರದುರ್ಗದಲ್ಲಿ ಹೊಸಕೆರೆ ಕೆರೆಯಬಳಿಯಲ್ಲಿ ಇರುವ ಸೀನೀರಿನ ಹೊಂಡವನ್ನು ೭೦,೦೦೦ ರೂಪಾಯಿ ಮುಟ್ಟಿಸಿ ತಯಾರ್ಮಾಡಿದ್ದಾರೆ ಅದರಲ್ಲಿ ನೀರೆಲ್ಲಾ ಜನಿತು ಹೊರಟು ಹೋಗುತ್ತದೆ ಅದನ್ನು ದುರಸ್ತುಮಾಡಿಸಿಕೊಟ್ಟರೆ ಪ್ರಜೆಗಳಿಗೂ ಗೋಕಾವಲುಗಳಿಗೂ ವ್ಯವಸಾಯಕ್ಕೂ ಅನುಕೂಲವಾದೀತು

ದಿವಾನರವರು—ಅದರ ಸ್ಥಿತಿಯನ್ನು ವಿಚಾರಣೆ ಮಾಡ ಹುಕುಂ ಕೊಡುತ್ತೇವೆ

ಹೊಳಲ್ಕೆರೆ ಮೆ॥ ವೆಂಕಟರಾಮಯ್ಯನವರು—ಹೊಳಲ್ಕೆರೆಗೆ ಸೇರಿದ ಹಿರೆಕೆರೆ ಕೆರೆಗೆ ಅಂದನೂರು ಹಳ್ಳದಿಂದ ನೀರು ತಂದು ಬಿಟ್ಟರೆ ಇನ್ನೂ ೧,೦೦೦ ಎಕರೆ ಜಮೀನು ತರೀಫಸಲಿಗೆ ಬರುವುದು ಕೆರೆಯಲ್ಲಿ ನೀರಿರುವುದಿಲ್ಲವಾದ್ದರಿಂದ ಬಾಗಾಯತು ತೋಟಗಳೆಲ್ಲಾ ಒಣಗುತ್ತಿವೆ ತರೀಪಸಲು ನಿಂತು ಹೋಗಿದೆ ರೈತರು ಬಹಳ ಕಷ್ಟಪಡುತ್ತಿದ್ದಾರೆ ೧೦—೧೨ ವರುಷಗಳಿಂದ ಈ ವಿಚಾರವನ್ನು ಅರಿಕೆ ಮಾಡಿಕೊಳ್ಳುತ್ತಿದ್ದೇವೆ ಜಗಲಾದರೂ ಮಾಡಿಸಿ ಕೊಡಬೇಕು ಚೀಫ್ ಇಂಜನಿಯರು ಬಂದು ನೋಡಿ ಅದಕ್ಕೆ ೬೦,೦೦೦ ರೂಪಾಯಿ ಖರ್ಚಾಗುತ್ತೆಂತಲೂ ಈ ಖರ್ಚು ನಿಷ್ಪ್ರಯೋಜನವೆಂತಲೂ ಹೇಳುವರು ಅಷ್ಟು ಖರ್ಚು ಅವಶ್ಯವಿಲ್ಲ ೩೦,೦೦೦ ರೂಪಾಯಿನೊಳಗೆ ಎಲ್ಲಾ ಪೂರೈಸುತ್ತೆ

ದಿವಾನರವರು—ಚೀಫ್ ಇಂಜನಿಯರೇ ನಮ್ಮ "ಪುರೋಹಿತ"ರಾಗಿದ್ದಾರೆ ಅವರು ಹೇಳುವಂತೆ ನಾವು ಕೇಳಬೇಕು ಆಗಲಿ, ಈಗ ನಿಮ್ಮ ಆಕ್ಷೇಪಣೆಯನ್ನು ಅವರಿಗೆ ತಿಳಿಸಿ, ಮತ್ತೊಂದುಸಲ ಅವರು ಅಲ್ಲಿಗೆ ಹೋಗಿ ತನಿಖೆಮಾಡುವಂತೆ ಬರೆಯುತ್ತೇವೆ ಅವರು ಬಂದು ನೋಡುತ್ತಾರೆ

ಇಂಡಿಯಾ ದೇಶದ ವೃತ್ತಾಂತಗಳು.

ತುರ್ಕಿ ಸುಲ್ತಾನರ ಕಡೆಯಿಂದ ಸೈಯದ್ ಸಾಲೇಮಹಮದ್ ಎಂಬ ಅಧಿಕಾರಿಯು ಕಾಬೂಲ್ ಪಟ್ಟಣಕ್ಕೆ ಬಂದಿದ್ದನು ಅಮೀರರು ಆತನಿಗೆ ೧೧,೦೦೦ ರೂಪಾಯಿನ ಬಿಲ್ಲತ್ತುಗಳನ್ನು ಕೊಟ್ಟು ವಿಶೇಷ ಸನ್ಮಾನ ಮಾಡಿ ಕಳುಹಿಸಿದರು

ಬೊಂಬಾಯಿನಲ್ಲಿ ಪ್ರಸಿದ್ಧ ಹತ್ತಿ ಕಾರ್ಖಾನೆಯ ಸಾಹುಕಾರರಾದ ರಾಲಿ ಎಂಬವರ ಕಾರ್ಖಾನೆಯಲ್ಲಿದ್ದ ೪೦ ಸಾವಿರ ಹತ್ತಿ ಮೂಟೆಗಳ ಪೈಕಿ ೭೦೨ ಮೂಟೆಗಳು ಸುಟ್ಟುಹೋದವು ಇದರಿಂದ ಸಾಹುಕಾರರಿಗೆ ಸುಮಾರು ೭೦,೦೦೦ ರೂಪಾಯಿವರೆಗೆ ನಷ್ಟವಾಗಿದೆ

ಕಲ್ಕತ್ತಾ ಪಟ್ಟಣದಲ್ಲಿ ಸಿಡುಬಿನ ಅವಾಂತ್ರ ಸ್ವಲ್ಪಮಟ್ಟಿಗೆ ಪ್ರಜೆಗಳನ್ನು ಕಳವಳ ಪಡಿಸುತ್ತಿದೆ ಮ್ಯುನಿಸಿಪಾಲಿಟಿಯವರು ಡಾಕ್ಟರು ಹಾಕತಕ್ಕ ಶಿಬ್ಬಂದಿಯನ್ನು ಬಹಳವಾಗಿ ಹೆಚ್ಚುಮಾಡಿ, ಜನರಿಗೆ ವಿವೇಕ ಹೇಳಿಸುತ್ತಲೂ ಮಕ್ಕಳಿಗೆಲ್ಲಾ ಸಿಡುಬು ಹಾಕಿಸುತ್ತಲೂ ಬಂದಿದ್ದಾರೆ.

ಅಫ್ಘಾನಿಸ್ಥಾನದ ಅಂಚೆ ಇಲಾಖಾ ಅಧಿಕಾರಿಯಾದ ಮಿರ್ಜಾಗುಲಾಂ ಹೈದರ್‌ಖಾನ್ ಎಂಬಾತನು ಹಿಂದುಸ್ಥಾನಕ್ಕೆ ಬಂದು, ಇಂಡಿಯಾ ಗವರ್ನಮೆಂಟನಿಂದ ಅಮೀರರಿಗೆ ಸಲ್ಲಬೇಕಾಗಿರುವ ವರುಷಾಶನದ ಪೈಕಿ ೧೬ ಲಕ್ಷ ರೂಪಾಯನ್ನು ಕರೆನ್ಸಿ ನೋಟುಮಾಡಿ ತೆಗೆದುಕೊಂಡು, ಅಮೀರರಿಗೆ ಪಾವತಿಮಾಡುವ ಉದ್ದೇಶ್ಯ ಹೊಂದಿರುವಿದನು

ಕರ್ಜನ್ ಮೆಮೋರಿಯಲ್ ಫಂಡು ಈಗಾಗಲೇ ೭೫,೦೦೦ ರೂಪಾಯಿನವರೆಗೆ ಬಂದಿರುತ್ತೆ. ಇಚೆಗೆ ಬಂದ ಕೆಲವು ಚಂದಾಗಳಲ್ಲಿ ಭಾವಲ್‌ಪುರದ ನವಾಬರಿಂದ ೧,೦೦೦ ರೂಪಾಯಿ, ಧಕ್ಕಾ ನವಾಬರಿಂದ ೫೦೦ ರೂಪಾಯಿ, ಜೋಧಾನವಾಬರಿಂದ ೭೦೦ ರೂಪಾಯಿ, ಮತ್ತು ನ್ಯಾಷನಲ್ ಬ್ಯಾಂಕಿನಿಂದ ೧,೦೦೦ ರೂಪಾಯಿ, ಈ ಫಂಡಿಗೆ ಸೇರಿರುತ್ತದೆ

ಹಿಂದುಸ್ಥಾನದ ಮೂಲೆ ತಾಣಿಗೆ ಸೇರಿದ ದಿರಾ ಇಸ್ಮೈಲ್‌ಖಾನ್ ಎಂಬ ಪಟ್ಟಣಕ್ಕೂ ಸ್ವದೇಶೀ ಏರ್ಪಾಡು ವ್ಯಾಪನೆಯಾಗಿದೆ ಅಲ್ಲಿನ ಜನರು ಪರದೇಶದ ಸರಕುಗಳನ್ನು ಕೊಂಡು ಉಪಯೋಗಿಸಕೂಡದೆಂದು ನಿಶ್ಚೈಸಿಕೊಂಡು, ಷೇರುಮೂಲಕ ೫೦,೦೦೦ ರೂಪಾಯಿ ಕೂಡಿಸಿ, ಸ್ವದೇಶೀಯ ಪದಾರ್ಥಗಳನ್ನೇ ಇಟ್ಟು ವಿಕರಿಮಾಡುವ ಅಂಗಡಿಗಳನ್ನು ಇಡಿಸಿರುತ್ತಾರೆ

ಅಯೋಧ್ಯಾದಲ್ಲೆಲ್ಲಾ ಹೆಚ್ಚಾಗಿ ಜಮೀನು ಪಡೆದಿರುವ ಕಪೂರ್ಥಲದ ಮಹಾರಾಜರು ವೈದ್ಯವಿದ್ಯಾಶಾಲೆಯ ಫಂಡಿಗೆ ೩೦,೦೦೦ ರೂಪಾಯನ್ನು ಧರ್ಮಾರ್ಥವಾಗಿ ದಯಪಾಲಿಸಿರುತ್ತಾರೆ ಆ ಕಾಲೇಜಿನ ಫಂಡಿಗೆ ಈಗಾಗಲೇ ಒಂಭತ್ತೂ ಮುಕ್ಕಾಲು ಲಕ್ಷ ರೂಪಾಯಿಗಿಂತ ಹೆಚ್ಚಾಗಿ ಹಣ ಸೇರಿರುತ್ತದೆ. ಇನ್ನು ಸ್ವಲ್ಪ ದಿವಸಗಳಲ್ಲೇ ಅದು ಹತ್ತುಲಕ್ಷಕ್ಕೆ ಬರುವುದೆಂಬುದರಲ್ಲಿ ಸಂದೇಹವಿಲ್ಲ

ಆಗ್ರಾದಲ್ಲಿರುವ ಎ ಜಾನ್ ಕಂಪೆನಿಯವರು ಜನಗಳ ಉಪಯೋಗಾರ್ಥವಾಗಿ ೫೦,೦೦೦ ರೂಪಾಯನ್ನು ಮುಟ್ಟಿಸಿ ಒಂದು ಆಸ್ಪತ್ರೆಯನ್ನು ಕಟ್ಟಿಸಿ, ಅದಕ್ಕೆ ಪ್ರಿನ್ಸ್‌ಆಫ್‌ವೇಲ್ಸ್‌ರವರ ಹೆಸರನ್ನು ಇಡುವುದಾಗಿಯೂ, ಆ ಆಸ್ಪತ್ರೆಯ ಖರ್ಚಿಗಾಗಿ ತಿಂಗಳಿಗೆ ೫೧೦ ರೂಪಾಯನ್ನು ಕೊಡುವುದಾಗಿಯೂ ಪ್ರಕಟಿಸಿರುತ್ತಾರೆ ಬೆಲಾನ್‌ಗಂಜ್ ಎಂಬುವ ಭಾಗವೇ ಬಹಳ ಪ್ರಜಾಸಂಖ್ಯೆಯನ್ನುಳ್ಳದ್ದರಿಂದ ಅದರ ಹತ್ತಿರದಲ್ಲೇ ಆಸ್ಪತ್ರೆಯನ್ನು ಕಟ್ಟಬೇಕೆಂದಿರುತ್ತಾರೆ

ಕಳೆದ ಕೆಲವು ತಿಂಗಳಿಂದಲೂ ಸಿಂಗಪೂರ್ ಮತ್ತು ಹಾಂಕಾಂಗ್ ಪಟ್ಟಣಗಳಿಂದ ಚೀನಾ ದೇಶಸ್ಥರು ಸಾವಿರಗಟ್ಟಲೆ ಬಂದು ಕಲ್ಕತ್ತಾ ಪಟ್ಟಣವನ್ನು ಸೇರುತ್ತಿದ್ದಾರೆ ಅವರಲ್ಲಿ ಅನೇಕರು ಮರಕೆಲಸವನ್ನೂ ಕೈಗಾರಿಕೆ ಕೆಲಸಗಳನ್ನೂ ಮಾಡುತ್ತಾರೆ ಪ್ರಿನ್ಸ್ ಆಫ್ ವೇಲ್ಸ್‌ರನ್ನು ಎದುರುಗೊಳ್ಳುವ ನಿಮಿತ್ತವಾಗಿ ನಡೆಯುತ್ತಿರುವ ಕೆಲಸಗಳಲ್ಲಿ ಅನೇಕರು ಸೇರಿರುವರು ಒಬ್ಬ ಬಂಗಾಳಿ ಕೆಲಸಗಾರನಿಗಿಂತ ಒಬ್ಬ ಚೈನಿ ಕೆಲಸಗಾರನು ಬಹಳ ಸುಲಭವಾಗಿ ಜೀವನಮಾಡತಕ್ಕವನಾದ್ದರಿಂದ ಇವನಿಗೆ ಹೆಚ್ಚಾಗಿ ಕೂಲಿಯನ್ನು ಕೊಡಬೇಕು.

ಇಂಡಿಯಾದಲ್ಲಿ ಚಲಾವಣೆಯಲ್ಲಿರತಕ್ಕ ರೂಪಾಯಿನಲ್ಲಿ ಚಿನ್ನವಿದೆ ಎಂದು ಸಾಧಾರಣವಾಗಿ ಒಬ್ಬರಿಗೂ ತಿಳಿದಿರಲಾರದು ಒಂದು ರೂಪಾಯಿನಲ್ಲಿರುವ ಚಿನ್ನವು ಬಹಳ ಸ್ವಲ್ಪ ಆದರೆ ಅನೇಕ ರೂಪಾಯಿಗಳನ್ನು ಸೇರಿಸಿದರ ಚಿನ್ನವು ಅಧಿಕವಾಗುವದು ಕಳೆದ ವರುಷ ಇಂಡಿಯಾ ಟಂಕಸಾಲೆಯಲ್ಲಿ ಕೆಲಸಮಾಡಿದ ಕರ್ನಲ್ ಮಕ್ಕಾರ್ಟನರವರ ರಿಪೋರ್ಟಿನಲ್ಲಿ—ಈ ವರುಷ ಛಾಪಾಹಾಕಿದ ನಾಣ್ಯಗಳಲ್ಲೆಲ್ಲಾ ಸುಮಾರು ೬,೭೩೭ ಔನ್ಸುಗಳ ಚಿನ್ನವಿತ್ತೆಂತಲೂ ಅದರ ಬೆಲೆಯು ಸುಮಾರು ನಾಲ್ಕೂ ಕಾಲು ಲಕ್ಷ ರೂಪಾಯಾಗುತ್ತೆಂತಲೂ ತಿಳಿಸಿದ್ದಾರೆ

ಹಿಂದುಸ್ಥಾನದ ಸಮಸ್ತ ಕೈಗಾರಿಕೆಗಳ ಮತ್ತು ವ್ಯವಸಾಯೋಪಕರಣಗಳ ಪ್ರದರ್ಶನೋತ್ಸವವು ಕಾಶೀ ಪಟ್ಟಣದಲ್ಲಿ ಕಳೆದ ೨೩ನೇ ತಾರೀಖು ಶನಿವಾರದಿಂದ ಪ್ರಾರಂಭವಾಯಿತು ಕಾಶೀ ಮಹಾರಾಜರವರು ಬಹು ಮನೋಹರವಾದ ಮತ್ತು ಪ್ರೋತ್ಸಾಹಕರವಾದ ಉಪನ್ಯಾಸಮಾಡಿ, ಪ್ರದರ್ಶನವನ್ನು ಪ್ರಾರಂಭಮಾಡಿದರು ನೆನ್ನೆ ದಿನ ಅದೇ ಪಟ್ಟಣದಲ್ಲಿ ಹಿಂದುಸ್ಥಾನದ ಸಾರ್ವಜನಿಕ ಸಮಾಜವು ಪ್ರಾರಂಭವಾಯಿತು ಘನವನ್ನೈದಿದ ಮೆ॥ ಗೋಖಲೆಯವರು ಸಭಾನಾಯಕರಾಗಿ ಹಿಂದುಸ್ಥಾನದ ಕುಂದು ಕೊರತೆಗಳನ್ನೆಲ್ಲಾ ವಿವರಿಸಿ ಉಪನ್ಯಾಸಮಾಡಿದರು

ಪೂನಾದಲ್ಲಿ ಆರುಜನ ಆಯುಧಪಾಣಿಗಳಾದ ಹೆಡ್ ಕ್ವಾರ್ಟರ್ ಪೋಲೀಸಿನವರು ಒಂದು ಮನೆಗೆ ರಾತ್ರಿ ಕಾಲದಲ್ಲಿ ನುಗ್ಗಿದ್ದರೆಂದು ತಿಳಿದುಬಂದದ್ದರಿಂದ ಸರ್ಕಾರದವರು ಅವರನ್ನು ಕೈಸೆರೆ ಹಿಡಿದಿರುತ್ತಾರೆ ಮೂರುದಿನದ ಹಿಂದೆ ಅವರು ಗವರ್ನಮೆಂಟಿನ ಪೆನ್ಷನ್‌ದಾರನ ಹೆಂಡತಿಯಿದ್ದ ಮನೆಗೆ ನುಗ್ಗಿ ಸುಮಾರು ೩,೦೦೦ ರೂಪಾಯಿ ಬಾಳುವಷ್ಟು ನಗಗಳನ್ನು ಕದ್ದುಕೊಂಡು ಹೋದರು ಮನೆಯಲ್ಲಿ ಶಬ್ದವಾಗುವುದನ್ನು ಕೇಳಿ, ಆವಳು ಕಿರಿಚಿಕೊಂಡಮೇಲೆ ಮಗ್ಗಲುಮನೆಯವರು ಅವಳ ಸಹಾಯಕ್ಕಾಗಿ ಬಂದರು ಪೋಲೀಸಿನವರೆಲ್ಲಾ ಸಿಕ್ಕಿಬಿದ್ದು ಮಾರನೇ ದಿನ ವಿಚಾರಣೆಗೆ ಗುರಿಮಾಡಲ್ಪಟ್ಟರು

ಜನಂಗೀರಾ ಬಾದಿನ ನವಾಬರಾದ ಅಸಾದಕ್ ರಾಸಲ್‌ಖಾನರವರು ಪ್ರಿನ್ಸ್ ಆಫ್ ವೇಲ್ಸ್‌ರವರು ತಮ್ಮ ರಾಜ್ಯವನ್ನು ಪ್ರವೇಶಿಸುವುದರ ಸಲುವಾಗಿ ಮೆಡಿಕಲ್ ಕಾಲೇಜಿನ ಫಂಡು ೧೦ ಲಕ್ಷಕ್ಕೆ ಎಷ್ಟು ಕಡಿಮೆಯಾಗುವುದೋ ಅಷ್ಟನ್ನೂ ತಾವೇ ಕೊಡುವುದಾಗಿ ಹೇಳಿರುತ್ತಾರೆ ಈ ನವಾಬರು ಮುಂಚೆಯೇ ೫೫,೦೦೦ ರೂಪಾಯಿ ಕೊಡುವುದಾಗಿ ವಾಗ್ದಾನ ಮಾಡಿದ್ದರು ಅದಲ್ಲದೆ ಅವರ ರಾಣಿ ಸಾಹೇಬರಿಂದ ಕೊಡಲ್ಪಟ್ಟ ೫,೦೦೦ ರೂಪಾಯಿಯೂ ಈ ಫಂಡಿಗೆ ಸೇರುತ್ತದೆ. ಈ ಫಂಡು ಪ್ರಾರಂಭಿಸಿದ ಎರಡು ತಿಂಗಳೊಳಗಾಗಿಯೇ ೧೦ ಲಕ್ಷ ಹಣ ಕೂಡಿರುವುದು ಆಶ್ಚರ್ಯವೇಸರಿ.

ಟಿಬೆಟ್ಟಿನಿಂದ ಬೌದ್ಧಗುರುವಾದ ತಾಷಿಲಾಮಾ ಎಂಬ ಮಹನೀಯನು ಕಳೆದ ವಾರ ಕಾಶೀ ಪಟ್ಟಣಕ್ಕೆ ಬಂದು, ಅಲ್ಲಿನ ಬೌದ್ಧಪ್ರಾಭವಿಗಳಲ್ಲಿ ಪೂಜೆ ಪುರಸ್ಕಾರಗಳನ್ನು ಮಾಡಿ, ಧಾಮೇ ಅದ್ರಿ ಎಂಬ ದೇವಾಲಯದ ಸುತ್ತಲೂ ನೂರಾರು ಮಣ ತುಪ್ಪವನ್ನು ಸುರಿದು ಸಾವೇ ೩೦೦ ದೀಪಗಳನ್ನು ಹಚ್ಚಿ ಉರಿಸಿ, ಪಲಪುಷ್ಪಗಳನ್ನು ಆ ಸ್ಥಳದಲ್ಲಿ ಚೆಲ್ಲಿ ಕೀರ್ತನೆಗಳನ್ನು ಹಾಡುತ್ತಾ ಮಂತ್ರಗಳನ್ನು ಹೊಸುತ್ತಾ ಪ್ರ...

ಕ್ಷಣವಾಗಿ, ಉಚ್ಚಸ್ಥಾನವನ್ನಲಂಕರಿಸಿ, ತಮ್ಮ ಹಿಂಬಾಲಕರಾದ ಶಿಷ್ಯವರ್ಗದವರಿಂದ ಪೂಜೆ ಪುರಸ್ಕಾರಗಳನ್ನು ಸ್ವೀಕರಿಸಿದರೆ ಆ ಪಟ್ಟಣದಲ್ಲಿ ಸಿಕ್ಕಿದ ಬೌದ್ಧ ವಿಗ್ರಹವನ್ನು ಅಲ್ಲಿನ ಬೌದ್ಧರು ಅವರಿಗೆ ಒಪ್ಪಿಸಿದರು.

❖❖❖❖

ರಾಜಪುತಾನಾದಲ್ಲಿ ಈಗ ೩೨,೦೦೦ ಪ್ರಜೆಗಳು ಕ್ಷಾಮಪೀಡಿತರಾಗಿ ಸರ್ಕಾರದವರ ಪೋಷಣೆಯಲ್ಲಿದ್ದಾರೆ.

❖❖❖❖

ಆಗ್ರಾ ಡಿವಿಜನಲ್ಲಿ ಮಳೆಬೆಳೆಗಳಿಲ್ಲದೆ ಪ್ರಜೆಗಳು ಬಹಳ ಕಷ್ಟಪಡುತ್ತಿದ್ದಾರೆ. ಆ ಪ್ರಾಂತ್ಯ ಕ್ಷಾಮಪ್ರಾಪ್ತವಾಗುವಂತೆ ಕಾಣುತ್ತಿದೆ. ಸರ್ಕಾರದವರು ೩,೫೧,೫೦೦ ರೂಪಾಯಿ ಕಂದಾಯಗಳನ್ನು ರೆಮಿಷನ್ ಮಾಡಬೇಕೆಂದೂ ೨,೬೬,೫೦೦ ರೂಪಾಯಿ ಕಂದಾಯಗಳನ್ನು ಸದ್ಯ ವಸೂಲ್ಮಾಡದೆ ಬಿಡಬೇಕೆಂದೂ ತೀರ್ಮಾನ ಮಾಡಿದ್ದಾರೆ.

❖❖❖❖

ಸಿಲೋನ್ (ಲಂಕಾ) ದ್ವೀಪದ ಸಮುದ್ರ ತೀರದಲ್ಲಿ ಮುತ್ತಿನ ಚಿಪ್ಪುಗಳನ್ನು ತೆಗೆದುಕೊಳ್ಳುವುದಕ್ಕೆ ಲಂಡನ್ ಪಟ್ಟಣದ ಒಂದು ಕಂಪನಿಯವರು ಗವರ್ನಮೆಂಟಿನವರ ಸಂಗಡ ೨೦ ವರುಷಗಳಿಗೆ ಕಂಟ್ರಾಕ್ಟು ತೆಗೆದುಕೊಂಡಿದ್ದಾರೆ. ಇದಕ್ಕಾಗಿ ಆ ಕಂಪನಿಯವರು ವರುಷ ಒಂದಕ್ಕೆ ನಾಲ್ಕೂವರೆ ಲಕ್ಷ ರೂಪಾಯಿಯಂತೆ ಗವರ್ನಮೆಂಟಿಗೆ ಕೊಡುತ್ತಾ ಬರುವರು.

❖❖❖❖

ಬೊಂಬಾಯಿ ಪಟ್ಟಣದಲ್ಲಿ ಬಡ ಮುಸಲ್ಮಾನ ಹುಡುಗರನ್ನು ಒಂದು ಬಂಗಲೆಯಲ್ಲಿಟ್ಟು ಅವರಿಗೆ ಅನ್ನವಸ್ತ್ರ ಕೊಟ್ಟು ವಿದ್ಯೆ ಕಲಿಸಬೇಕೆಂದು ಅಲ್ಲಿನ ಸಾಹುಕಾರರಾದ ಹಾಜಿ ಹಾಸಂ ಸೇಟರೂ, ಹಾಜಿ ಇಸ್ಮೈಲ್ ಹಾಸಂ ಸೇಟರೂ ೧,೩೮,೦೦೦ ರೂಪಾಯಿ ಧರ್ಮ ಮಾಡಿದ್ದಾರೆ. ಈ ಫಂಡಿನ ಮೇಲ್ವಿಚಾರಣಾ ಕರ್ತರು ಆ ಪೈಕಿ ೬೦,೦೦೦ ರೂಪಾಯಿ ಖರ್ಚುಮಾಡಿ ಒಂದು ದೊಡ್ಡ ವಿಸ್ತಾರವಾದ ಬಂಗಲೆಯನ್ನು ಕೊಂಡು, ಅದರಲ್ಲಿ ಸದ್ಯ ೪೦ ಮಂದಿ ಬಾಲಕರನ್ನಿಟ್ಟುಕೊಂಡು ಸಾಕಿ ವಿದ್ಯೆ ಕಲಿಸುತ್ತಿದ್ದಾರೆ.

❖❖❖❖

ರಂಗೂನ್ ಪಟ್ಟಣದಲ್ಲಿ ನದಿಯ ಪ್ರವಾಹ ಊರೊಳಕ್ಕೆ ಬಾರದಂತೆ ಸರ್ಕಾರದವರು ೮೦,೦೦೦ ರೂಪಾಯಿ ಮುಟ್ಟಿಸಿ ಭಾರೀ ಅಡ್ಡಕಟ್ಟೆಗಳನ್ನು ಹಾಕಿಸಿದ್ದಾರೆ. ಈಗ ಈ ಕಟ್ಟೆಗಳು ದುರ್ಬಲವಾಗಿವೆ ಎಂತಲೂ ಪ್ರವಾಹ ಬಂದರೆ ಅವು ಕೊಚ್ಚಿಹೋಗುವವೆಂತಲೂ ಭೀತಿಯುಂಟಾಗಿದೆ. ಸರ್ಕಾರದವರು ವಿಲಾಯತಿಯಿಂದ ಒಬ್ಬ ಇಂಜನಿಯರನ್ನು ಕರೆಸಿ ಪರೀಕ್ಷೆ ಮಾಡಿಸಿದಾಗ ಆತನು—ಈ ಕಟ್ಟೆಗಳು ಬಲವಾಗಿಲ್ಲವೆಂದೂ ಹೊಸ ಕಟ್ಟೆಗಳನ್ನೇ ಕಟ್ಟಬೇಕೆಂದೂ ತಿಳಿಸಿದನು. ಸರ್ಕಾರದವರು ಅದಕ್ಕೆ ಒಂದು ಕೋಟಿ ರೂಪಾಯಿ ಖರ್ಚು ಮಾಡಲೇಬೇಕಾಗಿದೆ.

❖❖❖❖

ಪ್ರಿನ್ಸ್ ಆಫ್ ವೇಲ್ಸ್‌ರವರೂ ಅವರ ಪತ್ನಿಯವರೂ ಅಮೃತಸಾರ ಪಟ್ಟಣಕ್ಕೆ ಹೋಗಿದ್ದಾಗ್ಗೆ ಅಲ್ಲಿರುವ ಶಾಲು ಮತ್ತು ಜಮಖಾನಗಳನ್ನು ತಯಾರ್ಮಾಡುವ ಕಾರ್ಖಾನೆಯನ್ನೆಲ್ಲಾ ಪರಾಂಬರಿಸಿದರು. ಈ ಕಾರ್ಖಾನೆಯಲ್ಲಿ ತಯಾರಾದ ಪದಾರ್ಥಗಳು ಇಂಗ್ಲೆಂಡಿನಲ್ಲಿ ಅನೇಕ ಅರಮನೆಗಳಲ್ಲಿ ಇರುವದರಿಂದ ಈ ಕಾರ್ಖಾನೆಯ ವಿಷಯ ಅವರಿಗೆ ತಿಳಿದೇ ಇದೆ. ಈ ಕಾರ್ಖಾನೆಯ ಮುಖ್ಯಸ್ಥರಾದ ರಾಮ್‌ಬಹದೂರ್ ಲಾಲ ಗಾಗರಮಾಲ್‌ರವರೂ ಅವರ ಮಕ್ಕಳೂ ಯುವರಾಜರನ್ನು ಮರ್ಯಾದಾಪೂರ್ವಕವಾಗಿ ಎದುರುಗೊಂಡರು. ಅವರು ಸ್ವಲ್ಪ ಹೊತ್ತು ಕಾರ್ಖಾನೆಯನ್ನೆಲ್ಲಾ ನೋಡಿ ವಿಸಿಟರ್ಸ್ ಬುಕ್ಕಿನಲ್ಲಿ ತಮ್ಮ ರುಜು ಹಾಕಿರುತ್ತಾರೆ.

❖❖❖❖

ಪೂರ್ವ ಬಂಗಾಳಾ ಎಂಬ ಹೊಸ ಅಧಿಪತ್ಯಕ್ಕೆ ಸೇರಿದ ಆರ್‌ದೋಲ್ ಎಂಬ ಊರಿನಲ್ಲಿ ಪ್ರಜಾನೆಮ್ಮದಿಗೆ ಭಂಗ ಬರಬಹುದೆಂದು ಸರ್ಕಾರದವರಿಗೆ ತಿಳಿದುಬಂದಾಗ ಅವರು ಅಲ್ಲಿನ ಮಾತು ಬರಬಹುದಾದ ಐದುಮಂದಿ ಮುಖಂಡರನ್ನು ಪೋಲೀಸ್ ಸ್ಪೆಷಲ್ ಕಾನ್‌ಸ್ಟೇಬಲ್‌ಗಳಾಗಿ ಕೆಲವು ಕಾಲ ಕೆಲಸಮಾಡಿ ಸರ್ಕಾರಕ್ಕೆ ಸಹಾಯಮಾಡಬೇಕೆಂದು ನೇಮಕ ಮಾಡಿದರು. ಆ ಐದುಮಂದಿಯೂ ಸರ್ಕಾರದ ಹುಕುಮನ್ನು ಉಲ್ಲಂಘಿಸಿ, ತಾವು ಕಾನ್‌ಸ್ಟೇಬಲ್‌ಗಳಾಗಿ ಕೆಲಸಮಾಡುವುದು ತಮಗೆ ಅವಮಾನಕರವಾದದ್ದೆಂದು ಹೇಳಿ ತಿರಸ್ಕರಿಸಿದರು. ಆಗ ಸರ್ಕಾರದವರು ಅವರಮೇಲೆ ಫಿರ್ಯಾದು ಮಾಡಿದರು. ಈ ಮೊಕದ್ದಮೆಯನ್ನು ಸೌರಾ ಪಟ್ಟಣದ ಮ್ಯಾಜಿಸ್ಟ್ರೇಟರು ದರ್ಯಾಫ್ತು ಮಾಡುವಲ್ಲಿ ಆ ಐದು ಮಂದಿಯೂ ಹುಕುಮಿನಂತೆ ನಡಕೊಳ್ಳಲು ಸಿದ್ಧರಾಗಿದ್ದೇವೆಂತಲೂ ಕರುಣವಿಟ್ಟು ಮಾನ ಕಾಪಾಡಬೇಕೆಂತಲೂ ಮ್ಯಾಜಿಸ್ಟ್ರೇಟರನ್ನು ಕೇಳಿಕೊಂಡರು. ಆಗ ಮ್ಯಾಜಿಸ್ಟ್ರೇಟರು ಅವರ ಮನವಿಯನ್ನು ಲಾಲಿಸಿ, ಅವರಿಗೆ ತಲಾ ಹತ್ತು ರೂಪಾಯಿಯಂತೆ ಜುಲ್ಮಾನೆ ಹಾಕಿ, ಅವರು ಒಂದೊಂದು ವಾರ ಕಾನ್‌ಸ್ಟೇಬಲ್‌ಗಳಾಗಿ ನೌಕರಿ ಮಾಡಬೇಕೆಂದು ತೀರ್ಮಾನ ಮಾಡಿದರು.

❖❖❖❖

ಕಳೆದ ೧೯ನೇ ತಾರೀಖಿನದಿನ ಬರ್ದ್ವಾನಿನ ಮಹಾರಾಣಿ ವರ್ಗಾರಿ ನಾರಾಯಣಕುಮಾರಿ ದೇವಿಯವರು ಕಾಲವಾದರು. ಈಕೆಗೆ ಸುಮಾರು ೩೩ ವಯಸ್ಸಾಗಿತ್ತು. ಇವರ ಉತ್ತರಕ್ರಿಯಾದಿಗಳನ್ನು ನಡೆಸುವುದಕ್ಕೆ ಮಹಾರಾಜ ಅಧಿರಾಜರವರು ಒಂದು ಲಕ್ಷ ರೂಪಾಯಿಗಿಂತಲೂ ಹೆಚ್ಚಾಗಿ ಸ್ಯಾಂಕ್ಷನ್ ಮಾಡಿದರು. ೧೩ನೇ ತಾರೀಖಿನ ದಿನ ಕಾಶಿ, ಕಲ್ಕತ್ತಾ, ಪೂರಿ, ರಂಗಪುರ, ದರ್ಭಾಂಗ, ಇನ್ನೂ ಅನೇಕ ಇತರ ಸ್ಥಳಗಳಿಂದ ಬ್ರಾಹ್ಮಣರು ಬಂದು ಸೇರಿ, ಮೂರು ಪಂಗಡವಾದರು. ಕರ್ಮಗಳೆಲ್ಲಾ ನಡೆದಮೇಲೆ ಮೊದಲನೆ ಪಂಗಡದವರು ೧೦೧ ರೂಪಾಯಿಯನ್ನೂ ಎರಡನೆಯವರು ೫೧ ರೂಪಾಯಿಯನ್ನೂ ಮೂರನೆಯವರು ೨೫ ರೂಪಾಯಿಯನ್ನೂ ಹೊಂದಿದ್ದಲ್ಲದೆ ತಮ್ಮ ಊರಿಗೆ ಹೋಗುವುದಕ್ಕೆ ರೈಲ್ ಛಾರ್ಜನ್ನೂ ಆಹಾರ ಸಾಮಗ್ರಿಗಳನ್ನೂ ಕೊಂಡುಹೋದರು. ಇದಲ್ಲದೆ ಚಿನ್ನ, ಬೆಳ್ಳಿ, ಅನೇಕ ಹಿತ್ತಾಳೆ ಪಾತ್ರೆಗಳು, ಒಂದು ಆನೆ, ಕುದುರೆ ಹಸು, ಪಾಲಕಿ ಮತ್ತು ಬೆಲೆಯುಳ್ಳ ವಸ್ತ್ರಗಳು ದಾನವಾಗಿ ಕೊಡಲ್ಪಟ್ಟವು. ಸುಮಾರು ೨೬೦೦೦ ರೂಪಾಯನ್ನೂ ಬ್ರಾಹ್ಮಣರಿಗೆ ದಕ್ಷಿಣೆಯ ರೂಪವಾಗಿ ಹಂಚಿದರು. ೧೮ನೇ ತಾರೀಖಿನದಿನ ನಿರ್ಮಲವಾದ ತೋಟದಲ್ಲಿ ಸುಮಾರು ೩೦,೦೦೦ ಬಡಬಗ್ಗರು ಊಟದಿಂದ ತೃಪ್ತಿಪಟ್ಟರು.

❖❖❖❖

ಹೈದರಾಬಾದ್ ಪಟ್ಟಣಕ್ಕೆ ಒಬ್ಬ ಫಕೀರನು ಹೋಗಿ ಒಂದು ತುಪ್ಪದಂಗಡಿ ಮುಂದೆ ನಿಂತು ಅಂಗಡಿಯವನನ್ನು ಕೂಗಿ ಕಾಯಿಸುವುದಕ್ಕೆ ಸ್ವಲ್ಪ ಹಾಲು ಕೊಡೆಂದು ಕೇಳಿದನು. ಅಂಗಡಿಯವನು ಹಾಲು ತಂದು ಕೊಟ್ಟನು. ಫಕೀರನು ಅದನ್ನು ಕಾಯಿಸಿದು, ಅದಕ್ಕೆ ಪ್ರತಿಯಾಗಿ ಒಂದು ಚಿನ್ನದ ಗಟ್ಟಿಯನ್ನು ಅಂಗಡಿಯವನಿಗೆ ಕೊಟ್ಟನು. ಇವನಿಗೆ ವಿಸ್ಮಯ ಉಂಟಾಗಿ ಫಕೀರನಿಗೆ ಚಿನ್ನ ಮಾಡುವ ವಿಧಾನ ತಿಳಿದಿದೆ ಎಂಬ ಭ್ರಮೆ ಹುಟ್ಟಿ, ಅವನ ಹಿಂದೆಯೇ ಹೋಗುತ್ತಾ ಅವನನ್ನು ತನಗೆ ಬಹಳವಾಗಿ ಬೇಡಿಕೊಂಡು ಅವನನ್ನು ತನ್ನ ಮನೆಗೆ ಕರೆತಂದು ಹತ್ತು ದಿನಗಳ ವರೆಗೆ ಅವನಿಗೆ ಭಕ್ಷ್ಯಭೋಜ್ಯಾದಿಗಳನ್ನಿಕ್ಕಿ ಸಂತೋಷಪಡಿಸಿದನು. ಫಕೀರನು ವರ್ತಕನನ್ನು ಕರೆದು ಅವನಿಂದ ೨೧ ತೊಲೆಯಷ್ಟು ಚಿನ್ನವನ್ನೂ ಪಾದರಸ ಸೀಸ ಮೊದಲಾದ ವಸ್ತುಗಳನ್ನೂ ತರಿಸಿಕೊಂಡು ಒಂದು ಗುಣಿಯಲ್ಲಿ ಎಲ್ಲಾ ತುಂಬಿ ಉರಿಹಾಕಿ ಮೇಲೆ ಮಣ್ಣುಮುಚ್ಚಿ, ೨—೩ ದಿನ ಹಾಗೇ ಬಿಟ್ಟದ್ದರೆ ಅವೆಲ್ಲಾ ಸೇರಿ ೪೨ ತೊಲಾ ಚಿನ್ನವಾಗುವುದೆಂದು ಅವನಿಗೆ ಭರವಸ ಹೇಳಿ, ಮರುದಿನ ಹೊರಟುಹೋದನು. ವರ್ತಕನು ನಾಲ್ಕಾರು ದಿನಗಳ ತನಕ ಕಾದು ಸಾಕಾಗಿ, ಫಕೀರನುಬಾರದಿದ್ದರೇನೆಂದು ತಾನೇ ಆ ಸ್ಥಳಕ್ಕೆ ಹೋಗಿ ಗುಣಿಯನ್ನು ಬಗೆದು ನೋಡುವಲ್ಲಿ ಅದರೊಳಗೆ ಏನೂ ಇರಲಿಲ್ಲ. ಆ ಫಕೀರನು ಎಲ್ಲಿಹೋದನೋ.

ಬಾತ್ಮಿದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ನಿಗಾ ಕೊಡಲಾರೆವು. ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು; ಇಂಥವುಗಳಿಗೆ ನಾವು ನಿಗಾ ಕೊಡಲಾರೆವು.

ಪ್ರಕಟಿಸಲಾರವೆಂದು ಹೇಳಿ ತಿರಸ್ಕರಿಸಿದ ಬಾತ್ಮಿಗಳನ್ನು ನಾವು ಬಾತ್ಮಿದಾರರಿಗೆ ವಾಪಸು ಕಳುಹಿಸಲಾರೆವು.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಎಡಿ.

ಚಂದಾದಾರ, ಚಿತ್ರದುರ್ಗ —ನೀವು ಬರೆದಿರುವ ಬಾತ್ಮಿ ಅಷ್ಟ ಯರ್ಥಕರವಾಗಿದೆ. ಆ ಸಂಗತಿ ಪೂರಾ ಗೊತ್ತಾದಮೇಲೆ ತಿಳಿಸಿದರೆ ಪ್ರಕಟಿಸುತ್ತೇವೆ. ಸದ್ಯ ಅದನ್ನು ಹಾಗೇ ಇಟ್ಟಿರುವೆವು.—ಎಡಿ.

ಕರೆಸ್ಪಾಂಡೆನ್ಸ್.

ಪ್ರಶ್ನೆ.

ಅಯ್ಯಾ,

ನನ್ನ ಸ್ವಂತ ದನಕರುಗಳ ಸಗಣಿಯನ್ನು ಮನೆ ಬಾಗಿಲು ಬಿಟ್ಟು ಹೊರಗೆ ಹೋದನಂತರ ಮನೆಗೆ ಸಂಬಂಧಪಟ್ಟ ಆವರಣದಲ್ಲೇ ಆಗಲಿ ಅಥವಾ ಸರ್ಕಾರಿ ನಿವೇಶನದಲ್ಲೇ ಆಗಲಿ ಬಿದ್ದಿದ್ದರೆ ತೆಗೆದುಕೊಳ್ಳಬಹುದೇ? ಕೂಡದೇ? ಎಂಬ ಬಗ್ಗೆ ಯಾರಾದರು ಪುಣ್ಯಾತ್ಮರು ಜವಾಬು ಕೊಡುವರೆಂದು ನಂಬುತ್ತೇನೆ.

ಎ. ರೇವಣ್ಣಯ್ಯ

ಚನ್ನಪಟ್ಟಣದ ಮುನಿಸಿಪಾಲಿಟಿ.

ಅಯ್ಯಾ,

ಈ ಟವುನಿಗೆ ಬಹುಕಾಲದಿಂದಿರುವಂಥಾ ಮೆಂಬರುಗಳು ಮೀಟಿಂಗಿಗೂ ಬಾರದೆ, ಯಾವ ಕೆಲಸಗಳೂ ನಡೆಸದಿರುವ ಸಂಗತಿ ಲೇಟ್ ಅಮಲ್‌ದಾರ್‌ರವರು ನೋಡಿ, ಇವರು ಉಪಯೋಗವಿಲ್ಲವೆಂದು ಬೇರೆ ಲಾಯಖಾದ ಹೊಸ ಮೆಂಬರುಗಳನ್ನು ಚುನಾಯಿಸಿ, ಪಟ್ಟಿಯನ್ನು ಡಿಸ್ಟ್ರಿಕ್ಟಿಗೆ ಕಳುಹಿಸಿ ಸುಮಾರು ೨ ವರುಷಗಳಾಗಿರಬಹುದು. ಹಾಲಿ ಅಮಲ್‌ದಾರ್‌ರವರು ಕೂಡ ಹೊಸ ಮೆಂಬರುಗಳನ್ನು ಚುನಾಯಿಸಿದ ಹೊರತು ಕೆಲಸಗಳು ಸರಿಯಾಗಿ ನಡೆಯುವದಿಲ್ಲವೆಂದು ಅನೇಕವಾಗಿ ಡಿಸ್ಟ್ರಿಕ್ಟಿಗೆ ಬರೆದುಕೊಂಡದ್ದಕ್ಕೆ ಪಟ್ಟಿ ಗವರ್ನಮೆಂಟಿಗೆ ಕಳುಹಿಸಿರುವದಾಗಿ ಆರ್ಡರು ಬಂದು ಸುಮಾರು ೩ ತಿಂಗಳಾಗಿರಬಹುದು. ತಸಲ್‌ವರೆಗೆ ಆರ್ಡರ್ ಇಲ್ಲದೆ ಇದೆ. ಅದು ಸರ್ಕಾರಿ ಸೆಕ್ರೆಟರಿಯಾಟ್ಟಿನಲ್ಲಿ ಬಿದ್ದುಹೋಯಿತೋ ತಿಳಿಯಲಿಲ್ಲ. ಈಗಲಾದರೂ ಗವರ್ನಮೆಂಟಿನವರು ಚಿತ್ತಕ್ಕೆ ತಂದು ಸದರಿ ಪಟ್ಟಿ ಮೇರಿಗೆ ಜಾರಿಗೆ ತರುವ ಪಕ್ಷದಲ್ಲಿ ಈ ಟವುನ್ ಮುನಿಸಿಪಾಲಿಟಿ ಕೆಲಸಗಳೂ ಲೆಕ್ಕದ ಬಾಬುಗಳೂ ನಿರ್ವಂಚನೆಯಿಂದ ನಡೆಯಲು ಅಭ್ಯಂತರವಿಲ್ಲ.

ನಿಷ್ಪಕ್ಷಪಾತಿ.

ಅಸಂಗತ ವಿಷಯಗಳು.

ಅಯ್ಯಾ,

ತಮ್ಮ ಪತ್ರಿಕೆಯಲ್ಲಿ ಅನೇಕ ದಫೆ ಮೈಸೂರು ಗವರ್ನಮೆಂಟಿನವರು ಪ್ರಜೆಗಳಿಗೆ ಮಾಡುವ ಉಪಕಾರಗಳ ವಿಷಯವನ್ನು ಪ್ರಚುರಪಡಿಸಿ, ರೈತರುಗಳ ಮನಸ್ಸಿಗೆ ಕೇವಲ ಆಸಕ್ತಿಯನ್ನು ಉಂಟುಮಾಡಿರುತ್ತೀರಿ. ಆದರೆ ತಮ್ಮ ಪತ್ರಿಕೆಯಲ್ಲಿ ಕಾಣುವ ವಿಷಯಗಳನ್ನೆಲ್ಲಾ ನಂಬಿ ಮಾಡುವವರಿಗೆ ಕೆಲವು ವಿಷಯಗಳಲ್ಲಿ ಜಯ ಸಿಕ್ಕುವದು ಕಷ್ಟವಾಗಿರುತ್ತೆ. ಹೋದ ಎರಡನೇ ದಸರಾದಲ್ಲಿ ದಿವಾನ್ ಸಾಹೇಬರ ಉಪನ್ಯಾಸದಲ್ಲಿ ವಿಶೇಷ ಮತ್ತು ಹೊಸತರದ ವ್ಯವಸಾಯವಮಾಡುವವರಿಗೆ ಸರ್ಕಾರದವರು ಗೊಬ್ಬರ ಬೀಜ ಮುಂತಾದವುಗಳಿಗೆ ಸಹಾಯವಮಾಡುತ್ತಾರೆಂತ ಪ್ರಚುರಪಡಿಸಿದ್ದಿರಿ. ಸದರಿ ವಿಷಯವಾಗಿ ಡಿಸ್ಟ್ರಿಕ್ಟ್ ಜನರಲ್ ಆಸಿಸ್ಟೆಂಟ್ ಸಾಹೇಬರನ್ನೂ ಅಮಲ್ದಾರರನ್ನು ಈ ವಿಷಯದಲ್ಲಿ ನಿಜವೇನೆಂದು ಕೇಳಿದ್ದಕ್ಕೆ ಆಗುವದಿಲ್ಲವೆಂದು ಹೇಳಿದ್ದಾರೆ.

ರೇಷ್ಮೆ ಫಸಲಿನ ಮೇಲ್ವಿಚಾರಣೆ ಇನ್ಸ್‌ಪೆಕ್ಟರು ತುಮಕೂರು ಡಿಸ್ಟ್ರಿಕ್ಟಿಗೆ ಒಬ್ಬರನ್ನ ವರ್ಗಾಯಿಸಿರುತ್ತೆ ಎಂದು ತಮ್ಮ ಪತ್ರಿಕೆಯಲ್ಲಿ ಪ್ರಚುರಪಡಿಸಿದ್ದಿರಿ. ಇದು ನಿಜವೆಂದು ನಂಬಿ, ಅವರ ಹೆಸರಿಗೆ ಒಂದು ಅರ್ಜಿ ಗುಜರಾಯಿಸಿಕೊಂಡು ಒಂದು ವರುಷವಾಯಿತು. ಅದಕ್ಕೆ ಜವಾಬನ್ನು ಕೊಡದೆ ಇರುವರೇ? ಈಗಲೂ ಅವರಿರುವದಾದರೆ ಎಲ್ಲಿರುವರು? ಅವರ ಮೇಲುವಿಳಾಸವೇನು? ಅವರಿಗೇನೇ ನಾವು ರೇಷ್ಮೆ ಫಸಲಿನ ವಿಷಯ ತಿಳಿಯತಕ್ಕ ಅಂಶದ ಬಗ್ಗೆ ಮನವಿ ಮಾಡಿಕೊಳ್ಳಬಹುದೇ? ಇಲ್ಲವೇ ತಾಲ್ಲೋಕು ಅಮಲ್‌ದಾರ್ ಮೂಲಕ ಬರೆದುಕೊಳ್ಳಬೇಕೇ? ದಯಮಾಡಿ ತಿಳಿಸಿ.

ಘನತೊಂದಿದ ಲೇಟ್ ತಾತಾಯವರು ಬೆಂಗಳೂರಿನಲ್ಲಿ ಸ್ಥಾಪನೆಮಾಡಿರುವ ರೇಷ್ಮೆ ಕಾರ್ಖಾನೆಯಲ್ಲಿ ರೇಷ್ಮೆ ತಯಾರು ಮಾಡಬೇಕೆಂಬ ಕುತೂಹಲ ಉಂಟಾಗಿರುವ ರೈತರ ಮಕ್ಕಳಿಗೆ ಸದರಿ ಕಸುಬನ್ನು ಕಲಿಸಿ ಕೊಡಲು ಮೈಸೂರು ಸರ್ಕಾರದವರು ಸಹಾಯಮಾಡುವರೇ? ಈ ವಿಷಯವನ್ನೂ ತಿಳಿಸಬೇಕು.

ವಿಶೇಷ ಫಸಲನ್ನು ಇಡತಕ್ಕ ರೈತನಿಗೆ ಜಮೀನ್ ಕಂದಾಯ ವಜಾ ಮಾಡಬೇಕೆಂದು ಈ ವರ್ಷ ಒಬ್ಬ ಮೆಂಬರು ದಿವಾನ್‌ಸಾಹೇಬರನ್ನು ಕೇಳಿದ್ದಕ್ಕೆ ಅಂಥವರು ಡೆಪ್ಯುಟಿಕಮಿಷನರ್ ಸಾಹೇಬರಿಗೆ ಅರ್ಜಿ ಗುಜರಾಯಿಸಿಕೊಳ್ಳಲಿ ಎಂದು ಅಪ್ಪಣೆಯಾಗಿರುತ್ತೆ. ವಿಶೇಷ ಫಸಲೆಂದರೇನು? ಒಂದು ತಾಲ್ಲೋಕಿನಲ್ಲಿ ಇಲ್ಲದೇ ಇರುವ ಫಸಲೋ? ಇಲ್ಲವೇ ಒಂದು ದೇಶದಲ್ಲೇ ಇಲ್ಲದೆ ಇರುವ ಫಸಲೋ? ಇಲ್ಲವೇ ಸರ್ಕಾರದವರು ರೈತರಿಗೆ ವ್ಯವಸಾಯ ಮಾಡಿ ನೋಡಿರೆಂದು ಕೊಡುವ ಫಸಲೋ? ಇಲ್ಲವೇ ಕಾಫಿ, ರೇಷ್ಮೆ, ಯಾಲಕ್ಕಿ, ಬಟಾರ, ರಬ್ಬರು ಮುಂತಾದವುಗಳಿಗೆ ಅನ್ವಯಿಸುತ್ತೋ? ಈ ಸಂಗತಿಯನ್ನು ದಯಮಾಡಿ ತಾವಾದರೂ ತಮ್ಮ ಚಂದಾದಾರರಲ್ಲಿ ಯಾರಾದರೂ ಇಲ್ಲವೇ ಸರ್ಕಾರದವರಲ್ಲಿ ಮೇಲಧಿಕಾರಿಗಳಾದರೂ ರೈತರ ತಿಳುವಳಿಕೆಗೆ ಬರುವಂತೆ ಪ್ರಚುರಪಡಿಸ್ಯಾರೆಂತ ನಂಬಿ ಬರೆದಿರುತ್ತೇನೆ.

ಚಂದಾದಾರ.

ತಾಲ್ಲೋಕು ವರ್ತಮಾನಗಳು.

ಬೇಲೂರು.—ಇದುವರೆಗೆ ಈ ತಾಲ್ಲೋಕಿನಲ್ಲಿ ಖೂನಿ ಮೊಕದ್ದಮೆಗಳು ಅಪೂರ್ವವಾಗಿದ್ದವು. ಈ ವರುಷ ದರೋಡೆಗಳು, ಹಾದಿಯ ಕಳವೂ, ಖೂನಿಗಳೂ ಈ ಟವನ್ನಿನಲ್ಲಿಯೇ ಒಂದೊಂದು ದಿನ ೮—೧೦ ಮನೆಗಳ ಬೀಗ ಮುರಿಯುವದೂ ಸಹಾ ನೋಡಿದರೆ ನಮ್ಮ ಪೋಲೀಸಿನವರು ಎಷ್ಟು ಎಚ್ಚರದಿಂದಿರುವರೆಂಬುದು ವ್ಯಕ್ತಪಡುತ್ತೆ. ಈ ಊರಿನಲ್ಲಿ ಎಲ್ಲೆಲ್ಲಿಯೂ ಪರೀಲವೆಂಬ ಮಾರಿಯ ಆಟ ಬಹು ಜೋರಾಗಿದೆ. ಇದರಿಂದ ಬಹು ಮಂದಿ ಈ ದುರ್ಭಿಕ್ಷಕಾಲದಲ್ಲಿ ಸರ್ವಸ್ವವನ್ನೂ ಸೋತು ಕೊರಗುತ್ತಿರುವರು. ಈ ತಾಲ್ಲೋಕಿನ ಕೆಲವು ನೌಕರರೂ ಸಾಹುಕಾರರೂ ಪ್ರೋತ್ಸಾಹಕರಾಗಿರುವರೆಂದು ಕೇಳುತ್ತೇನೆ.—ಮೈಸೂರಿನಲ್ಲಿ ನಡೆಯುವ ಪ್ರದರ್ಶನೋತ್ಸವಕ್ಕೆ ಈ ಊರು ಸ್ತ್ರೀಯರು ಅಭ್ಯಸಿಸಿರುವ ಕುಶಲ ವಿದ್ಯೆಯನ್ನು ಅಲ್ಲಿ ತೋರ್ಪಡಿಸಬೇಕೆಂಬ ಅಭಿಮಾನದಿಂದ ನಮ್ಮ ಅಮಲ್ದಾರ್ ಕೃಷ್ಣಯ್ಯಂಗಾರರ ಪತ್ನಿಯವರು ಕಳೆದ ೧೯ನೇ ಮಂಗಳವಾರ ಗರ್ಲ್ಸ್ ಸ್ಕೂಲಿಗೆ ದಯಮಾಡಿ, ನೋಟೀಸು ಮೂಲಕ ಈ ಟವನ್ನಿನಲ್ಲಿ ಕುಶಲೆಯರಾದ ಸ್ತ್ರೀಯರನ್ನು ಬರಮಾಡಿಕೊಂಡು ಕುಶಲ ವಿದ್ಯೆ ವಿಷಯದಲ್ಲಿ ಕೊಂಚ ಉಪನ್ಯಾಸ ಮಾಡಿ, ಅವರುಗಳಿಂದ ಪ್ರದರ್ಶನ ಮಾಡಲ್ಪಟ್ಟ ಮಣಿಯಿಂದ ನಿರ್ಮಿತವಾದ ಸೋಫಾಲತೆ, ಪತ ಮುಂತಾದವುಗಳಲ್ಲಿ ಕೆಲವನ್ನು ಚುನಾಯಿಸಿದರು.

ಹರಿಹರ.—ಇದೇ ತಿಂಗಳು ೧೩ನೇ ತಾ. ಹೊತ್ತಾರೆ ಘನತೆ ಹೊಂದಿದ ಟಾಂಲಿನ್ಸನ್ ದೊರೆಗಳು ಬೆಂಗಳೂರಿಂದ ಹರಿಹರಕ್ಕೆ ದಯಮಾಡಿ, ಅಲ್ಲಿ ಹೆಣ್ಣು ಮಕ್ಕಳ ಸ್ಕೂಲನ್ನು ಪರೀಕ್ಷೆ ಮಾಡಿದರು. ಮಧ್ಯಾಹ್ನ ೩ ಘಂಟೆಗೆ ಸರಿಯಾಗಿ ಸ್ಕೂಲಿಗೆ ದಯಮಾಡಿದರು. ಆ ಕಾಲದಲ್ಲಿ ಆ ಸ್ಕೂಲಿನ ವಿದ್ಯಾರ್ಥಿನಿಯರು ಮತ್ತು ಆ ಊರಿನಲ್ಲಿರುವ ಅಮಲ್ದಾರರು ಮತ್ತು ಡಾಕ್ಟರು ಸ್ಕೂಲ್ ಮಾಸ್ಟರುಗಳು ಅನೇಕ ವರ್ತಕರು ಇನ್ನೂ ಬೇರೆ ಜನರು ಸೇರಿದ್ದರು. ಆ ಸ್ಕೂಲನ್ನು ಅಲ್ಲಿನ ಉಪಾಧ್ಯಾಯರು ಬಹು ಚನ್ನಾಗಿ ಶೃಂಗಾರಮಾಡಿದ್ದರು. ಆ ಕಾಲಕ್ಕೆ ಸರಿಯಾಗಿ ಘನ ಟಾಂಲಿನ್ಸನ್ ದೊರೆಗಳು ಕ್ರೀಸ್ತುಸ್ವಾಮಿಯು ಸಣ್ಣ ಮಕ್ಕಳನ್ನು ಎಷ್ಟು ಪ್ರೀತಿಮಾಡಿದನೆಂಬ ತಿಳುವಳಿಕೆಯನ್ನು ಕೊಡುವ ಉದ್ದೇಶ್ಯ ಸುವಾರ್ತೆಯಲ್ಲಿ ಒಂದು ಭಾಗವನ್ನು ತೆಗೆದು ಓದಿದರು. ಅನಂತರ ಉಪದೇಶಿಗಳಾದ ಜಾನಯ್ಯನವರು ಭಗವಂತನಿಗೆ ಪ್ರಾರ್ಥನೆ ಮಾಡಿದ ಮೇಲೆ ಆ ಪಾಠಶಾಲೆಯ ಮಕ್ಕಳು ಸಭೆಯವರನ್ನು ಸಂತೋಷಪಡಿಸುವ ಉದ್ದೇಶ್ಯ ಬೇರೆ ಬೇರೆ ಸಂಗೀತಗಳನ್ನೂ ಸಂಭಾಷಣೆಯನ್ನೂ ನಡಿಸಿದರು. ತರುವಾಯ ಘನವುಳ್ಳ ದೊರೆಗಳು ತಮ್ಮ ಹಸ್ತದಿಂದ ಪ್ರತಿ ಮಗುವಿಗೂ ಗೊಂಬೆ, ಪೆಟ್ಟಿಗೆ, ಮೊದಲಾದ ಅನೇಕ ಸಾಮಾನುಗಳನ್ನು ಕೊಟ್ಟರು. ಮಕ್ಕಳು ಮಂಗಳವನ್ನು ಹಾಡಿ, ಕೊನೆಯಲ್ಲಿ ಎಡ್ವರ್ಡ್ ಚಕ್ರವರ್ತಿಗಳ ಮೇಲಣ ಸಂಗೀತವನ್ನು ಹಾಡಿದರು. ಅಲ್ಲಿ ಸೇರಿದ್ದವರ ಪೈಕಿ ಒಬ್ಬರು ನಿಂತು ಸ್ತ್ರೀ ವಿದ್ಯಾಭ್ಯಾಸದಿಂದ ಎಷ್ಟು ಪ್ರಯೋಜನ ಉಂಟೆಂದು ಬೇರೆ ಬೇರೆ ಉದಾಹರಣೆಗಳನ್ನು ಕೊಟ್ಟು ತಿಳಿಸಿದರು. ತಾಲೋಕು ಅಮಲ್ದಾರರು ಸ್ವಲ್ಪ ಮಾತಾಡಿದ ಮೇಲೆ ಸೇರಿದ್ದ ಸಭಿಕರಿಗೆ ಗಂಧ ತಾಂಬೂಲ ಮೊದಲಾದವುಗಳು ಕೊಡಲ್ಪಟ್ಟವು. ಸಭೆಯು ತೀರಿತು. ಆ ಮೇಲೆ ಘನ ದೊರೆಗಳವರು ಅಲ್ಲಿನ ಕ್ರೈಸ್ತಮಂಡಲಿಯನ್ನು ನೋಡಿಕೊಂಡು, ಅದೇ ದಿನ ಸಾಯಂಕಾಲ ದಾವಣಗೆರೆಗೆ ದಯಮಾಡಿಸಿದರು.

...ಮಗಳೂರು.—ಈ ಊರಿನಲ್ಲಿ ಛಳಿ ಹೆಚ್ಚಾಗಿದೆ. ಪ್ಲೇಗ್ ...ತಲೂ ಈ ವರುಷ ಜಾಸ್ತಿಯಾಗಿದೆ.—ಇದೇ ತಾಲ್ಲೂಕು ...ನಲ್ಲಿ ೬ನೇ ತಾ. ಡಕಾಯಿತಿ ನಡಸಿ ಸುಮಾರು ೭೦ ರೂ ... ಒಡವೆಗಳನ್ನು ಕಳವುಮಾಡಿದ ೫ ಜನರನ್ನು ಪೋಲೀ... ಹಿಡಿದು ತಾಲ್ಲೂಕ್ ಮ್ಯಾಜಿಸ್ಟ್ರೇಟರಲ್ಲಿ ಹಾಜರುಮಾಡಿ ...ದು ಕೇಳುತ್ತೇನೆ.—ಒಬ್ಬ ಪೋಲೀಸ್ ಕಾನ್ಸ್ಟೇಬಲ್ ತರೀಕೆ ...ವ ಪ್ಲೇಗ್ ರೋಗ ತಗಲಿ ಇಲ್ಲಿಗೆ ಬಂದು ಮೃತಪಟ್ಟನೆಂದೂ ...ಡಿಸ್ಟ್ರಿಕ್ಟ್ ಆಫೀಸಿನಲ್ಲಿ ಒಂದೆರಡು ಇಲಿಗಳು ಸತ್ತುಬಿದ್ದಿ... ವರ್ತಮಾನವಿದೆ.—ನೆನ್ನೆ ೨೦ನೇ ತಾ ಇಲ್ಲಿನ ಡೆಪ್ಯುಟಿ ...ರವರ ಮನೆಯಲ್ಲಿ ಹೆಂಗಸರ ಒಂದು ಕೂಟವು ನಡೆಯಿತು. ...ಟಕ್ಕೆ ಮಿಸೆಸ್ ಬೆಂಗಯ್ಯಸೆಟ್ಟರು ಪ್ರೆಸಿಡೆಂಟರಾಗಿಯೂ ...ಪ್ಟರ್ ಮಿಸ್ ಪಾಲ್ಮರ್ ಎಂಬವರು ಸೆಕ್ರೆಟರಿಯಾಗಿಯೂ ...ಕೊಂಡು, ಇಲ್ಲಿನ ಯೂರೋಪಿಯನ್ ಯೂರೇಷಿಯನ್ ಮ... ಹಿಂದೂ ದೊಡ್ಡ ಮನುಷ್ಯರ ಮನೆಯ ಹೆಂಗಸರನ್ನು ಕೂಟ... ...ಸಿಕೊಂಡು, ವಿನೋದಗಳು ನಡಸಿದರು ಈ ಕೂಟದಲ್ಲಿ ಸು... ೫೦ ಸ್ತ್ರೀಯರು ಸೇರಿದ್ದರೆಂದೂ ಅವರಲ್ಲಿ ಮೈಸೂರಿನಲ್ಲಿ ...ವ ಕೈಗಾರಿಕೆ ಮತ್ತು ವ್ಯವಸಾಯ ಸಂಬಂಧವಾದ ಪ್ರದರ್ಶನ ...ಇಲ್ಲಿನ ಸ್ತ್ರೀಯರಿಂದ ಮಾಡಲ್ಪಟ್ಟ ವಿಶೇಷವಾದ ಕಸೂತಿ ...ಯನ್ನು ಬಿಡ ಜನರ ಹೆಂಗಸರು ಮಾಡಿದ ಕೈಗಾರಿಕೆ ಕೆಲಸ ... ವಿಶೇಷವಾದ ಸಾಮಾನುಗಳನ್ನೂ ಕಳುಹಿಸಬೇಕೆಂಬುವದೇ ...ಟದ ಉದ್ದೇಶವೆಂದು ತೋರುತ್ತದೆ. ಈ ಕೂಟವನ್ನು ನಡೆ... ಇದಕ್ಕೆ ೪ ದಿವಸಕ್ಕೆ ಮೊದಲೇ ನಡಸಿ, ಇದರ ಉದ್ದೇ... ಎಲ್ಲಾ ಜನರಿಗೂ ತಿಳಿಸಿದ್ದರೆ ಬೇಕಾದವರು ಅನುಕೂಲವಾದ ...ಗಳನ್ನು ಸಿದ್ಧಪಡಿಸುವದಕ್ಕೆ ಅನುಕೂಲವಿತ್ತು.—ಇಲ್ಲಿನ ...ಟಿಕ ಆಸ್ಪತ್ರೆಯಲ್ಲಿ ಔಷಧಕ್ಕಾಗಿ ಬರುವವರಿಂದ ಅವರ ...ಜಟ್ಟರಳಿನ ಗುರುತನ್ನು ಮುದ್ರೆಯಾಗಿ ಒತ್ತಿಸಿಕೊಳ್ಳುತ್ತಿ... ಇದನ್ನು ವಿಚಾರಿಸಿದಲ್ಲಿ ಗವರ್ನಮೆಂಟಿನವರು ಈ ವಿಷಯ... ಪ್ರೊಸೀಡಿಂಗ್ಸ್ ಮಾಡಿರುವದಾಗಿ ಹೇಳುತ್ತಾರೆ. ಇದರಿಂದ ಕ... ...ಕ ವೈದ್ಯದ ಲಕ್ಷ್ಯದ ವಿಷಯದಲ್ಲಿ ಗವರ್ನಮೆಂಟಿನವರಿಗೆ ಸಂ... ...ಟ್ಟದಂತೆ ಕಾಣುತ್ತದೆ.

ಕೊಳನರಸೀಪುರ.—ಈ ಪ್ರಾಂತ್ಯ ವಾಸಿಗಳು ಬಹಳ ...ಗಿರುವದರಿಂದ ಬಡಬಗ್ಗರ ಕಷ್ಟವನ್ನು ಹೇಳತೀರದು. ಸಾ... ಅಕ್ಕಿ ರೂಪಾಯಿಗೆ ೪ ಸೇರು ಸಿಕ್ಕುವದು ಕಷ್ಟ. ರಾಗಿ ೧೨ ...ತೆ ಮಾರುತ್ತಾರೆ. ನಮ್ಮ ಅಮಲ್ದಾರ್ ಮ॥ ಸೀತಾರಾಮಯ್ಯ... ...ರು ಬಡವರ ಕಷ್ಟವನ್ನು ನೋಡಿ, ಸಂತೆಯಲ್ಲಿ ೧೫ ಸೇರ... ಮಾರಬೇಕೆಂದು ಆಜ್ಞೆ ಮಾಡಿದರು. ಒಂದೆರಡು ಸಂತೆ ಮಾತ್ರ ...ನಡೆಯಿತು. ಈಗ ಯಥಾಪ್ರಕಾರ ೧೪ ಸೇರಿನಂತೆ ಮಾರು... ...ರೆ. ಈ ಸಾರಿ ಗಿಡ್ಡವಾಗಿ ಫಸಲು ಅರ್ಧ ಮಟ್ಟಿಗೆ ಆಗಿದೆ. ಅದ... ದೊಡ್ಡದಾಗಿ ಈ ಪ್ರಾಂತ್ಯದಿಂದಲ್ಲದೆ ಇಲ್ಲಿನವರ ಕಷ್ಟ ಪರಿ... ...ಗಲಾರದು. ನಾಲಾ ನೀರಿನ ಆಧಾರದಿಂದ ಈ ಸಾರಿ ಭತ್ತದ ... ಅಕ್ಕ ಮಟ್ಟಿಗೆ ಬೆಳೆದು ಕಟಾವಾಗುತ್ತಾ ಇದೆ. ಆದರೆ ಸುಗ್ಗಿ... ಧಾರಣೆ ಜ್ಯಾಗಾಗುವದೋ ನೋಡಬೇಕು.—ಅಮಲ್ದಾರರು ನಮ್ಮ... ...ಗೆ ದಯಮಾಡಿಸಿರುವದು ನಮ್ಮಗಳ ಪೂರ್ವಪುಣ್ಯವೆಂದು ಹೇ... ...ದರಲ್ಲಿ ಆಶ್ಚರ್ಯವಿಲ್ಲ. ಇವರು ಪ್ರಜೆಗಳಲ್ಲಿ ತುಂಬಾ ಪ್ರೀತಿ... ...ನಾಗಿ ಸರ್ಕಾರದ ಕೆಲಸವನ್ನು ಬಹು ಮುತವರ್ಜಿಯಿಂದ ...ತ್ತಾ ಬರುತ್ತಾರೆ. ಟರ್ಮ ಪಾಠಶಾಲೆ ಬಹಳ ಚನ್ನಾಗಿದೆ. ಈ... ನಮ್ಮ ಊರಿಗೆ ಪ್ಲೇಗ್ ಬಾರದೆ ನೋಡಿದ್ದು ಸಕಲರಿಗೂ ಸಂ... ...ಷವನ್ನುಂಟುಮಾಡಿದೆ. ಈ ಊರಿನಲ್ಲಿ ಬಹು ಕಾಲದಿಂದ ಗು... ...ಗಿ ಕಳ್ಳರಾಗಿದ್ದವರನ್ನು ಅಮಲ್ದಾರರು ನಾಪಸಪಟ್ಟು ಪತ್ತೆಮಾಡಿ ...ಡಿಸಿದರು. ಇನ್ನು ಕಳ್ಳರು ಯಾರಿದ್ದಾರೆಂದು ಅಂತರಂಗದಲ್ಲಿ ... ಮಾಡುತ್ತಾ ಇದ್ದಾರೆ.—ಈ ಊರಿನಲ್ಲಿ ಇಸ್ಪೀಟಿನ ಆಟವು ...ದಾಗಿದೆ ಎಂದು ವರ್ತಮಾನವಿದೆ. ಇದರಿಂದ ಅನೇಕರಿಗೆ ನಷ್ಟ ...ಗುವದು. ಸರ್ಕಾರದವರು ಈ ಕೆಟ್ಟ ಪದ್ಧತಿಯನ್ನು ತಪ್ಪಿಸಿ ಪ್ರ... ...ಗೆ ಸುಖವನ್ನುಂಟು ಮಾಡುವರೆಂದು ನಂಬುತ್ತೇನೆ.—ಇದಲ್ಲ... ಈ ಸ್ಥಳದ ಮಾದಿಗರು ಮತ್ತು ಹೊಲೆಯರು ಕೆಲವು ದಾಸರುಗಳನ್ನು ...ಕೊಳ್ಳುತ್ತಾರಂತೆ. ಈ ವಿಷಯದಲ್ಲಿ ಪೋಲೀಸಿನವರ ಎಚ್ಚ... ...ಬೇಕಾಗಿದೆ.—ಪೂರ್ವದಲ್ಲಿ ಬೀಟಿನವರು ರಾತ್ರಿ ಕಾಲದಲ್ಲಿ ಬೀ... ...ಬ್ಬ ಮಾಡುತ್ತಾ ಜನರನ್ನು ಎಚ್ಚರಿಕೆ ಪಡಿಸುತ್ತಿದ್ದರು. ...ಗ ಒಬ್ಬನಾದರೂ ಬರುವದಿಲ್ಲ. ಎಂಜಲು ನಾಳಿಗಳನ್ನು ನೆಕ್ಕಿ... ...ನಾಯಿಗಳು ಶಬ್ದ ಮಾಡುತ್ತಿದ್ದವು. ಅವುಗಳನ್ನೂ ಸಹ ನಮ್ಮ ...ನವರು ವಿಷದ ಹಾಕಿ ಕೊಂದುಹಾಕಿಸಿದರು.

...ಗಲೂರು.—ಈ ತಾಲ್ಲೂಕಿನಲ್ಲಿ ಈ ವರುಷ ಮಳೆ ಇಲ್ಲದೆ ...ಲ್ಲ ಒಣಗಿ ಹೋಗಿರುವದರಿಂದ ಗೋಕಾಯಿಗಳೂ ಪ್ರಜೆಗಳೂ ...ನ ಮಾತಕ್ಕಿಯ್ಯ ಬಹಳ ದುರ್ಲಭವಾಗಿರುತ್ತದೆ. ನಾಗೂ ...ಗು ಯುಗಾದಿ ವರೆಗೂ ಕೆರೆ ಜೀವನವಾದರೂ ಉಳಿಸಿಕೊಳ್ಳ... ...ದು ಮುಂದಿನ ವರುಷವೂ ಮುಂಗಾರಿ ಮಳೆ ಬಾರದೆ ಹೋದರೆ ...ಯಿಗಳ ಆತ್ಮಗಳು ಆಕಾಶಯಾತ್ರೆ ಹೊಂದುವದೇನೋ ... ಪ್ರಜೆಗಳಿಗಾದರೋ ಧಾತು ಸಂವತ್ಸರದಂಥ ಕ್ಷಾಮಪ್ರಾಪ್ತಿ ಯಾ... ...ದು ಸಂದೇಹವಿಲ್ಲ.—ಇಲ್ಲಿಂದ ಮಂಜರಾಬಾದಿಗೆ ವರ್ಗವಾದ ...ಕೃಷ್ಣಯ್ಯಂಗಾರ್ ಅಮಲ್ದಾರರು ಈ ತಾಲ್ಲೂಕಿನಲ್ಲಿ ಛರ್ಜಾರಿ ವದ ... ಮಾಡಿದ್ದು, ಚಿರಸ್ಮರಣೀಯವಾಗಿರುತ್ತದೆ. ಇವರು ಪ್ರಜೆಗ... ...ಕ್ಷಪಾತವಿಲ್ಲದೆ ಪ್ರೀತಿಸುತ್ತಾ ಪ್ರಜಾಹಿತೈಷಿಗಳಾಗಿದ್ದರು ... ನಮ್ಮ ಊರುಗಳಿಗಲ್ಲ ಹೊರಡಬೇಕಾದ ೬—೫ ದಿವಸಗಳಲ್ಲಿ ಬಡ... ...ಪಡೆದ ಮಾನಮರ್ಯಾದೆಗಳೂ ಉತ್ಸವಗಳೂ ಸಾಕ್ಷಿಗಳಾಗಿ... ...ವೆ. ಈಗಿನ ನಮ್ಮ ಅಮಲ್ದಾರರು ಹಿಂದಿನವರ ಹಾಗೆ ಪ್ರೀತಿ... ...ಕಾಪಾಡುತ್ತಾರೆಂದು ಪ್ರಜೆಗಳು ಹಾರೈಸುತ್ತಾರೆ. ಇನ್ನೂ ... ...ಕರು ಬಗ್ಗೆ ಬಹಳ ಪತ್ರಿಕಾದಾರರು ಹಿಂದಿನ ಪತ್ರಿಕೆಯಲ್ಲಿ...

ತೊಂದರೆಗಳನ್ನೂ ಇಲ್ಲವೆಂತ ಬರೆದಿದ್ದಾರೆ. ಆದರೆ ಹಿಂದಿನ ವರ್ಷ ರಿನಲ್ಲಿ ಯಾರಿಗೆ ಯಾವ ತೊಂದರೆಗಳು ಇದ್ದವು? ಈಗಿನ ಅಮಲ್ದಾರರು ಏನು ಸೌಕರ್ಯ ಕಲ್ಪಿಸಿರುತ್ತಾರೆ ಎಂಬುದನ್ನು ವಿಶದವಾಗಿ ತಿಳಿಸಿದ್ದರೆ ಚನ್ನಾಗಿತ್ತು.—ಸದರಿ ಪತ್ರಿಕಾದಾರರು ಸದ್ಯ ಕ್ಷಾಮದ ಬಾಧೆ ಇಲ್ಲವೆಂತ ಬರೆದಿದ್ದಾರೆ ರೂ. ೧ ಕ್ಕೆ ಅಕ್ಕಿ ೬॥ ಸೇರು, ರಾಗಿ ೧೮ ಸೇರು ಮಾರುವ ಕಾಲದಲ್ಲಿ ಯಾರಿಗೆ ಕ್ಷಾಮದ ಬಾಧೆ ಇಲ್ಲವೋ, ನುಮ್ಮಟ್ಟಿ ಎಲ್ಲಿ ಕರದಿದೆಯೋ, ಕನಕವೃಷ್ಟಿ ಏನಾದರೂ ಕರೆದಿದೆಯೋ ಜಗತ್ತರ್ತನೇ ಬಲ್ಲನು! ಹೀಗಂತು ಕಲ್ಪವೃಕ್ಷಕಾಮಧೇನುಗಳನ್ನುಳ್ಳ ಸ್ವರ್ಗಲೋಗಿಗಳಿಗೆ ಕ್ಷಾಮದ ಬಾಧೆ ಎತ್ತಣದು? ಕ್ಷುತ್ ಪಿಪಾಸೆಗಳ ಸಂಕಟ ಭುಜಿಸಿದವರಿಗೆ ಹ್ಯಾಗೆಹಾನೇ ಗೊತ್ತಾದೀತು!—ಈ ಟವಿನಲ್ಲಿ ಮ॥ ಗೊಂಚಿಗಾರ ಗುರಪ್ಪನವರ ಮನೆ ಮುಂದಿನ ರೋಡು ಬೇಗಾರಕಟ್ಟೆಯಿಂದ ಕೆರೆಯ ವರಿಗೂ ಉಭಯ ಚರಂಡಿಗಳಲ್ಲಿ ಕೊಳೆ ತುಂಬಿ ಮೇಲೆ ಚಪ್ಪಡಿಗಳಿಂದ ಮುಚ್ಚಲ್ಪಟ್ಟಿರುವದರಿಂದ ಒಳಗಿನ ವಿಷವಾಯುವು ರಕ್ಷ್ಯಾ ಜರ್ಮ ಯಿಂದಲ್ಲಿ ಶತ್ರುಸೈನ್ಯನಾಶಕ್ಕಾಗಿ ಭೂಮಿಯಲ್ಲಿ ಹೂತಿಡುತ್ತಿದ್ದ ಮದ್ದಿನ ಹಾಗೆ ಇರುತ್ತದೆ. ಹೋದ ವರುಷ ಪ್ಲೇಗ್ ಇದೇ ಬೀದಿಯಲ್ಲಿ ಶುರು ಆಗಿತ್ತು. ಈಗಲೂ ಅದೇ ಭಯವಿರುತ್ತದೆ ಇದಕ್ಕೆ ನಮ್ಮ ಅಮಲ್ದಾರರೂ ಜಾನ್ಪತ್ರೆ ಅಸಿಸ್ಟೆಂಟರೂ ಗಮನ ಕೊಡಬೇಕಾಗಿರುತ್ತದೆ. ದೇವರ ದಯದಿಂದ ಈ ವರುಷ ಛಳಿ ಜ್ವರ ಮುಂತಾದ ಉಪದ್ರಗಳು ಬಹಳ ಕಡಿಮೆಯಾಗಿರುತ್ತವೆ.

ಗೋರಿಬಿದನೂರು.—ಈ ತಾಲ್ಲೂಕು ಅಮಲ್ದಾರ್ ಮ॥ ಡಿ. ಸುಬ್ಬರಾಯರ ಕುಮಾರ್ತಿ ಸೌ॥ ಪದ್ಮಾವತಿಬಾಯಮ್ಮನೆಂಬ ಕನ್ಯೆಯನ್ನು ತಾಲ್ಲೂಕು ಮಜಕೂರು ಗೌರಿಬಿದನೂರಿನಲ್ಲಿರುವ ಹೆಗ್ಗೆ ನಾಳ್ನವಸ್ತಿಗೆ ಜೋಡಿದಾರ್ ಮ॥ ಕೃಷ್ಣಾಚಾರ್ಯರ-ಕುಮಾರ ರಾ॥ ಶ್ರೀನಿವಾಸಮೂರ್ತಿ ಎಂಬ ವರನಿಗೆ ಕೊಟ್ಟು ಗೋರಿಬಿದನೂರು ಟವಿನಲ್ಲೇ ಲಗ್ನಮಾಡಿದರು. ಈ ಲಗ್ನಕ್ಕೆ ಬಹಳ ಜನ ದೊಡ್ಡಮನುಷ್ಯರುಗಳು ಮನ್ನೆದಾರರುಗಳು ಸಹ ಜಮಾಯಿಸಿದ್ದರು. ಅಲ್ಲದೆ ನಮ್ಮ ಮೈಸೂರು ಸೇನೆಯ ವಿಚಾರಣೆಯ ಸರ್ ಬಿ ಎಂ ಕೃಷ್ಣವೂ ತಿಗಳವರು, ಎಕ್ಸಿಕ್ಯೂಟೀವ್ ಕಮಿಷನರಾದ ಮ॥ ಪೂರ್ಣಯ್ಯನವರು, ಪ್ರೈವೇಟ್ ಸೆಕ್ರೆಟರಿ ಮ॥ ರಂಗರಾಯರು, ಇನ್ನೂ ಕೆಲವು ಜನ ಹುದ್ದೆದಾರರು ಈ ತಿಂಗಳು ೧೩ ನೇ ತಾ. ಬುಧವಾರ ಸಾಯಂಕಾಲದ ಗಾಡಿಯಲ್ಲಿ ಸತಿ ಪರಿವಾರ ಸಮೇತ ದಯಮಾಡಿಸಿದರು. ತಾ ೧೪ ನೆ ಗುರುವಾರ ಬೆಳಿಗ್ಗೆ ಲಗ್ನ ಆಗುಮಾಡಿಸಿಕೊಂಡು, ವಧೂವರರಿಗೆ ಆಶೀರ್ವದಿಸಿ, ರಾತ್ರಿ ಭೋಜನಸ್ಪೇಷಲಿಗೆ ದಿವಾನರವರು ಪೂರ್ಣಯ್ಯನವರು ದಯಮಾಡಿಸಿದರು. ಆಗ ತಾಲ್ಲೋಕು ಮಜಕೂರು ನಂಚ... ನಹಳ್ಳಿ ಸಮ್ಮತು ಪ್ಯೊಲಿಗಾನ ಪಳ್ಳಿಯಲ್ಲಿರುವ ಪಟೇಲ್ ವೆಂಕಟಪ್ಪ ಮಗ ಗೌಡರು ಮಾಣಿಕನಗರಿಕೆ ಪಟೇಲ್ ವೆಂಕಟೇಗೌಡರು, ಘೂರದ ಚೆಕ್ಕೆಗೌಡರು, ವರವಣಿ ಅನ್ನದಾನಪ್ಪನವರು, ಕಸಬದಲ್ಲಿರುವ ಕಂಟ್ರಾಕ್ಟರು ಮೊಹಿದೀನ್‌ಸಾಹೇಬಿ ವಗೈರೆಯರು ಹಾರ ತುರಾಯಿ ವಗೈರೆ ಮರ್ಯಾದೆಗಳೊಡನೆ ದಿವಾನರವರನ್ನು ಸತ್ಕರಿಸಿ, ಫಲ ಸಮರ್ಪಿಸಿಕೊಂಡರು. ಅನಂತರ ದಿವಾನರವರು ಇವರುಗಳ ರಾಜಭಕ್ತಿಗೆ ಸಂತೋಷಯುಕ್ತರಾಗಿ ಇವರುಗಳ ಮನೆ ಉಚಿತವಾದ ಸಂಭಾಷಣೆ ಮಾಡಿ ಅಪ್ಪಣೆ ಕೊಟ್ಟು ರಾತ್ರಿ ಮೂರು ಘಂಟೆ ಗಾಡಿಯಲ್ಲಿ ಬೆಂಗಳೂರಿಗೆ ದಯಮಾಡಿಸಿದರು. ಆದರೆ ಈ ಲಗ್ನಕ್ಕೆ ಶ್ರೀಮಂತರಾದ ಇಂಥಾ ಮಹನೀಯರು ದಯಮಾಡಿಸಿ ಆಶೀರ್ವಾದ ಮಾಡಿದ ನೂತನ ವಧೂವರರ ಪೂರ್ವೋದಯವು ಅದೃಷ್ಟವು ಬಹಳ ಶ್ಲಾಘನೀಯವಾದದ್ದೆಂದು ತಿಳಿದು ನಾವುಗಳು ಬಹಳ ಸಂತೋಷಪಡುತ್ತೇವೆ.—ಈ ತಾಲ್ಲೂಕಿನಲ್ಲಿ ಈ ವರ್ಷ ಮಳೆ ಬೆಳೆ ಕಡಿಮೆಯಾಗಿರುತ್ತೆ. ರಾಗಿ ರೂಪಾಯಿಗೆ ೧೪—೧೫ ಸೇರು ಮಾರುತ್ತೆ. ಅಕ್ಕಿ ೬—೭ ಸೇರು ಮಾರುತ್ತೆ. ರೈತರಿಗೆ ಹರೀ ಫಸಲು ಈ ತಾಲ್ಲೂಕಿನ ಬಹಳ ಪ್ರದೇಶಗಳಲ್ಲಿ ಸುತರಾಂ ಇಲ್ಲದೆ ಜನರಿಗೆ ಬಹು ತೊಂದರೆ ಪಡುತ್ತಾರೆ ತಾಲ್ಲೂಕು ಮಜಕೂರು ನಾಚ... ನಹಳ್ಳಿ ಸಮ್ಮತು ಜರಬಂಡಹಳ್ಳಿ ನಾರಾಯಣಸ್ವಾಮಿ ಕೆರೆಕೆಳಗೆ ತರಿಜಮೀನುಗಳಿಗೆ ಇಟ್ಟಿದ್ದ ಫಸಲು ಗದ್ದೆಗಳು ಯಾವತ್ತು ಅರ್ಧ ಅರಿ ಸ್ವರು ಆಗಿ ಸುತರಾಂ ಒಣಗಿಹೋದವು ಕಬ್ಬಿನ ತೋಟದ ಫಸಲು ಸಹ ಒಣಗಿ ಹೋಯಿತು. ಈ ಪ್ರಾಂತ್ಯ ಬಾಗಾಯತು ಜಮೀನುಗಳಿಗೆ ನೀರು ಹಾಕಿದ್ದ ಕಬ್ಬಿನ ತೋಟಗಳು ಒಣಗಿ ಹೋಗುತ್ತಾ ಇವೆ ಇಲ್ಲಿ ಒಂದು ಸಾವಿರ ರೂಪಾಯಿ ಇಟ್ಟು ಭಾವಿ ತೆಗೆಸಿದರೆ ದಿನ ೧ ಕ್ಕೆ ೩ ಅಥವಾ ೪ ಗುಂಟೆ ಜಮೀನಿಗೆ ಗಾಯಿಸುವಷ್ಟು ಜಲ ಗುಸಿರು ಮಾತ್ರ ಭಾವಿಗಳಲ್ಲಿ ಬರುತ್ತೆ. ಈ ಕಷ್ಟ ನಷ್ಟಗಳಿಗೆ ಗವರ್ನಮೆಂಟಿನವರು ಗಮನಕ್ಕೆ ತೆಗೆದುಕೊಂಡು ಸದರಿ ನಾರಾಯಣಸ್ವಾಮಿ ಕೆರೆಕೆಳಗಿನ ತರೀ ಕಂದಾಯವಾದರೂ ರಿಮಿಷನ್ ಕೊಡಿಸಿ ಕೊಟ್ಟರೆ ರೈತರುಗಳಾದ ನಮ್ಮಗಳಿಗೆ ಬಹಳ ಕ್ಷೇಮವಾಗುತ್ತವೆ.

ದಾವಣಗೆರೆ.—ಇದೇ ತಿಂಗಳು ೬ನೇ ತಾ ಬೆಳಿಗ್ಗೆ ೧೦ ಘಂಟೆಗೆ ಫನವುಳ್ಳ ಟಾಂಲಿರ್ಸ್ ಧಂರೆಗಳವರು ಇಲ್ಲಿನ ವರ್ನಾಕ್ಯುಲರ್ ಸ್ಕೂಲಿಗೂ ಮತ್ತು ಬ್ರಾಂಚ್ ಸ್ಕೂಲಿಗೂ ಇನಾಮುಗಳನ್ನು ಕೊಡುವ ಉದ್ದೇಶ ದಯಮಾಡಿದರು. ಆ ಕಾಲಕ್ಕೆ ಸರಿಯಾಗಿ ಇಲ್ಲಿನ ವಿದ್ಯಾರ್ಥಿಗಳು ಕೆಲವು ಸರ್ಕಾರಿ ನೌಕರರು, ಅನೇಕ ವರ್ತಕರೂ ದಯಮಾಡಿಸಿದ್ದರು. ಈ ವರ್ನಾಕ್ಯುಲರ್ ಸ್ಕೂಲನ್ನು ಕಾಗದದ ಹೂವಿನಿಂದಲೂ ಅನೇಕ ತಸ್ವೀರುಗಳಿಂದಲೂ ಬಾಳೆ ಕಂಬ ತೋರಣಗಳಿಂದಲೂ ಬಹು ರಮ್ಯವಾಗಿ ಅಲಂಕರಿಸಿದ್ದರು. ಮೊದಲು ಫನವುಳ್ಳ ಧೊರೆಗಳು ಕ್ರಿಸ್ತ ಸ್ವಾಮಿಯು ಮಕ್ಕಳನ್ನು ಪ್ರೀತಿಸುವದೇ ... ಭಾಗವನ್ನು ಸುವಾರ್ತೆಯಿಂದ ತೆಗೆದು ಓದಿ ಅಲ್ಲಿದ್ದ ಮಕ್ಕಳಿಗೂ ದೊಡ್ಡವರಿಗೂ ತಿಳಿಯಲಿಕ್ಕೆ ಕೆಲವು ಮಾತುಗಳನ್ನು ಹೇಳಿ ಉಪದೇಶಿಸಿದರು ಆಗಮ ಜಾನ್ ... ಅಯ್ಯನವರು ಭಗವಂತನಿಗೆ ಪ್ರಾರ್ಥನೆ ಮಾಡಿದರು. ತದನಂತರ ಆ ವಿದ್ಯಾರ್ಥಿಯಲ್ಲಿ ಕೆಲವರು ಸಭೆಯವರನ್ನು ಸಂತೋಷಪಡಿಸುವಂತೆ ಕೆಲವು ಕೀರ್ತನೆಗಳನ್ನು ಹಾರ್ಮೋನಿಯಂ ಜೊತೆಯಲ್ಲಿ ಬಹು ಮನೋಹರವಾಗಿ ಹಾಡಿ, ಸಭಿಕರನ್ನು ಸಂತೋಷಪಡಿಸಿದ್ದು ಮಾತ್ರವಲ್ಲ. ಕೆಲವು

ಮಕ್ಕಳು ಮಾತುಗಾರಿಕೆಯಿಂದಲೂ ಸಭೆಯವರನ್ನು ಹರ್ಷಗೊಳಿಸಿದರು ಸ್ಕೂಲಿನ ಹೆಡ್‌ಮಾಸ್ಟರು ರಿಪೋರ್ಟನ್ನು ಓದಿದರು. ಫನವುಳ್ಳ ಧೊರೆಗಳವರು ಈ ಸಭೆಯನ್ನು ಯಾವ ಉದ್ದೇಶದಿಂದ ಮಾಡಿದ್ದೇವೆಂಬುವದಾಗಿ ತಿಳಿಸಿದ್ದು ಮಾತ್ರವಲ್ಲದೆ, ಈ ವರ್ಷ ತಕ್ಕನಿಟ್ಟಿಗೂ ಈ ಸ್ಕೂಲುಗಳು ತುಂಬಾ ಅಭಿವೃದ್ಧಿಸ್ಥಿತಿಯಲ್ಲಿ ಇದ್ದಕಾರಣ ಒಬ್ಬ ಉಪಾಧ್ಯಾಯನನ್ನೂ ಮತ್ತು ಒಬ್ಬ ಜವಾನನನ್ನೂ ಹೆಚ್ಚಾಗಿ ಕೊಟ್ಟದ್ದೇವೆ ಇನ್ನು ಈ ಸ್ಕೂಲು ವೃದ್ಧಿಯಾಗುವಂತೆ ಪ್ರಯತ್ನ ಮಾಡುವದಾದರೆ ನಿರ್ಹ ಇಲಾಖೆಯವರು ಇನ್ನೂ ಹೆಚ್ಚಾದ ಪ್ರೋತ್ಸಾಹ ಕೊಡುವರದಲ್ಲದೆ ಏನೂ ಸಂದೇಹವಿಲ್ಲವೆಂದು ತಿಳಿಸಿದರು. ತರುವಾಗ ಪ್ರತಿ ಮಗುವಿಗೂ ಬೊಂಬೆ ಪಟ್ಟಿಗೆ ಇನ್ನೂ ನಾನಾ ವಿಧವಾದ ಸಾಮಾನುಗಳನ್ನು ಫನವುಳ್ಳ ಧೊರೆಗಳು ಸ್ವಹಸ್ತದಿಂದ ಕೊಟ್ಟರು. ಅದಾನಂತರ ಮ॥ ಗುರುಶಾಂತಪ್ಪನವರು ಹೆಣ್ಣುಮಕ್ಕಳ ವಿದ್ಯದ ವಿಷಯದಲ್ಲಿ ಸ್ವಲ್ಪ ಮಾತನಾಡಿದ್ದು ಮಾತ್ರವಲ್ಲದೆ ವಿದ್ಯಾ ಇಲಾಖೆಯವರು ಇಷ್ಟು ಒಳ್ಳೇ ಅಭಿಪ್ರಾಯದಿಂದ ನಮ್ಮ ಮಕ್ಕಳಿಗೆ ವಿದ್ಯಾದಾನ ಮಾಡುವದರಿಂದ ದಾವಣಗೆರೆ ನಿವಾಸಿಗಳಾದ ನಾವು ಅವರಿಗೆ ವಂದನೆ ಮಾಡುವದು ಮಾತ್ರವಲ್ಲದೆ ಇನ್ನೂ ಹೆಚ್ಚಾದ ಪ್ರೋತ್ಸಾಹ ಮಾಡುವದು ನಮ್ಮ ಧರ್ಮವಾಗಿದೆ ಎಂದು ಹೇಳಿದರು. ಮಕ್ಕಳು ಮಂಗಳ ವನ್ನು ಹಾಡಿದರು ಬಂದಿದ್ದ ಎಲ್ಲಾ ಸಭಿಕರಿಗೂ ಹೂವು ಗಂಧ ತಾಂಬೂಲ ಮೊದಲಾದವು ಕೊಡೋಣವಾಯಿತು. ಮಕ್ಕಳಿಗೆ ತಿಂಡಿ ಸಾಮಾನು ಹಂಚಲ್ಪಟ್ಟವು. ಸಭೆಯು ಮುಕ್ತಾಯವಾಯಿತು.—ಪೋಲೀಸ್ ಇನ್‌ಸ್ಪೆಕ್ಟರು ಆ ದಿನ ಮಕ್ಕಳಿಗೋಸ್ಕರ ಉಚಿತವಾಗಿ ೨ ರೂಪಾಯಿ ಬಹುಮಾನ ಕೊಟ್ಟರು. ವಿದ್ಯಾಭಿಮಾನಿಗಳಾದ ಇವರು ಇನ್ನೂ ಹೆಚ್ಚಲೆಂದು ಕೋರುತ್ತೇವೆ. ಆ ದಿನ ಸಾಯಂಕಾಲವೂ ಮಾರನೆ ದಿನವೂ ಫನವುಳ್ಳ ದೊರೆಗಳವರು ದಾವಣಗೆರೆಯಲ್ಲಿಯೇ ಇದ್ದ ಸ್ಕೂಲನ್ನು ಪರೀಕ್ಷಿಸಿಕೊಂಡು, ಇಲ್ಲಿನ ಎಲ್ಲಾ ಕೆಲಸ ಕಾರ್ಯಗಳನ್ನು ನೋಡಿಕೊಂಡು, ಅದೇ ಸಾಯಂಕಾಲ ರೈಲ್ ದಾರಿ ಚಿತ್ರದುರ್ಗಕ್ಕೆ ದಯಮಾಡಿದರು.

ವಿದೇಶ ವರ್ತಮಾನಗಳು.

ನಾರ್ವೆಯಲ್ಲಿ ಹೆಂಗಸರು ಮುಂದಿನ ವರುಷದಿಂದ ಲಾಯರುಗಳಾಗಿಯೂ ಜಡ್ಜಿಗಳಾಗಿಯೂ ಕೆಲಸ ಮಾಡಬಹುದೆಂದು ಅಲ್ಲಿನ ಸರ್ಕಾರದವರು ಪ್ರಕಟಿಸಿರುತ್ತಾರೆ.

❖❖❖❖

ಲೇಟ್ ಲಾರ್ಡು ಸಾಲಿಸ್‌ಬರಿಯವರು ಕೂಡಿಸಿದ್ದ ಸುಮಾರು ೨,೫೦೦ ಪುಸ್ತಕಗಳನ್ನು ಅವರ ಮಗನಾದ ವಿಸ್‌ಕೌಂಟ್ ಟೇಲರ್ ಎಂಬಾತ ಯು ಆಕ್ಸ್‌ಫರ್ಡಿನಲ್ಲಿರುವ ಸೋಮರವಿಲ್ ಎಂಬ ಕಾಲೇಜಿಗೆ ಇನಾಮಾಗಿ ಕೊಟ್ಟಿರುತ್ತಾಳೆ.

❖❖❖❖

ಪ್ರಿನ್ಸ್ ಆಫ್ ವೇಲ್ಸ್‌ರವರೂ ಅವರ ಪತ್ನಿಯವರೂ ಹಿಂದುಸ್ಥಾನದಲ್ಲಿ ಸಂಚಾರ ಮಾಡಿದನಂತರ ಏಪ್ರಿಲ್ ತಿಂಗಳಲ್ಲಿ ಇಂಗ್ಲೆಂಡಿಗೆ ಹೋಗುವಾಗ್ಗೆ ಆಫ್ರಿಕಾದಲ್ಲಿರುವ ಈಜಿಪ್ಟಿನ ಮುಖ್ಯಪಟ್ಟಣವಾದ ಕೈರೋ ನಗರವನ್ನು ನೋಡಿಕೊಂಡು ಹೋಗುತ್ತಾರೆಂದು ತಿಳಿದು ಬಂದಿದೆ.

❖❖❖❖

ರಷ್ಯಾದವರು ಹಿಡಿದು ಕೈದಿನಲ್ಲಿಟ್ಟುಕೊಂಡಿದ್ದ ೧,೬೪೦ ಮಂದಿ ಜರ್ಮನ್ ಸೈನಿಕರು ರಷ್ಯಾದಿಂದ ವಾಪಸು ಜಪಾನಿಗೆ ಪ್ರಯಾಣ ಮಾಡುತ್ತಿದ್ದಾರೆ. ಅವರನ್ನು ಕೇಳಲಾಗ ರಷ್ಯಾದವರು ತಮ್ಮನ್ನು ಎಲ್ಲೋ ಒಂದು ಕೊಳಕು ಹಳ್ಳಿಯಲ್ಲಿ ಇಟ್ಟಿದ್ದರೆಂತಲೂ ಅವರು ತಮ್ಮ ಆಹಾರ ಮುಂತಾದ್ದನ್ನು ಸರಿಯಾಗಿ ನೋಡಿಕೊಳ್ಳುತ್ತಿರಲಿಲ್ಲವೆಂತಲೂ ಆಕ್ಷೇಪಣೆ ಮಾಡಿ ಜವಾಬು ಕೊಟ್ಟರು.

❖❖❖❖

ಪ್ಯಾರಿಸ್ ಪಟ್ಟಣದಿಂದ ಹೊರಟ ಒಂದು ರೈಲ್ ಗಾಡಿಯು ಟೌಲ್ ಎಂಬ ಸ್ಟೇಷನಿಗೆ ಬಂದು ನಿಲ್ಲಲು. ಅಲ್ಲಿನ ಒಬ್ಬಾನೊಬ್ಬ ರೈಲ್ವೆ ನೌಕರನಿಗೆ ಒಂದು ಗಾಡಿಯಲ್ಲಿ ಎರಡು ಲಕ್ಷದ ೫೦ ಸಾವಿರ ರೂಪಾಯಿ ನೋಟುಗಳುಳ್ಳ ಒಂದು ಪುಸ್ತಕವು ಸಿಕ್ಕಿತು. ಆ ಸ್ಟೇಷನಿಂದ ಮುಂದಕ್ಕೆ ರೈಲು ಹೋಗುವದರೊಳಗಾಗಿ ಆ ಪುಸ್ತಕದ ಮಾಲೀಕನು ಸಿಕ್ಕಿದನು. ಅವನಿಗೆ ಆ ನೋಟುಳ್ಳ ಪುಸ್ತಕವನ್ನು ಕೊಟ್ಟಾಗ ಅವನು ಆ ನೌಕರನಿಗೆ ೩೦ ರೂಪಾಯಿ ಬಹುಮಾನ ಕೊಟ್ಟು ತನ್ನ ಪುಸ್ತಕವನ್ನು ಪಡೆದು ಮುಂದಕ್ಕೆ ಹೋದನು.

❖❖❖❖

ಚೈನಾದೇಶದಲ್ಲೆಲ್ಲಾ ಹೆಚ್ಚಾ ವ್ಯಾಪಾರ ನಡೆಯುವ ಷ್ಯಾಂಘಾಯಿ ನಗರದಲ್ಲಿ ಕಳೆದ ೧೫ ನೇ ತಾರೀಖಿನ ದಿನ ಜನಗಳೆಲ್ಲಾ ಗುಂಪಿದ್ದು ಜರ್ಮನಿಯ ಅಧಿಕಾರಿಯನ್ನು ಕೊಂದು, ಅಮೇರಿಕದವನನ್ನು ೨೦ ಯಾಗುವಂತೆ ಹೊಡೆದು, ಇನ್ನೂ ಇತರ ಅನ್ಯದೇಶೀಯರನ್ನೂ ಗಾಯಪಡಿಸಿರುವರು. ಈ ದಂಗೆಯನ್ನು ಅಣಗಿಸುವದಕ್ಕೆ ಯುದ್ಧದ ಹಡಗುಗಳೂ, ಸೋಲ್ಜರುಗಳೂ ಬಂದು ಇಳಿದು, ಜನಗಳ ಗಾಬರಿಯನ್ನು ಸ್ವಲ್ಪ ಕಡಿಮೆಮಾಡಿ, ಅಲ್ಲಿನ ಪೋಲೀಸ್ ಠಾಣೆಯನ್ನು ಸುಟ್ಟು ದಂಗೆಕೋರರಲ್ಲಿ ಸುಮಾರು ೨೦ ಮಂದಿಯನ್ನು ಕೊಂದ ಮೇಲೆ ದೇಶವು ತಹಬಂದಿಗೆ ಬಂದಿರುತ್ತದೆ.

❖❖❖❖

ತುರ್ಕಿ ಸುಲ್ತಾನರವರು ಕಳೆದ ಜುಲೈ ತಿಂಗಳಲ್ಲಿ ರಾಜಧಾನಿಯಾದ ಕಾನ್ಸ್ಟಾಂಟಿನೋಪಲ್ ಪಟ್ಟಣದಲ್ಲಿ ತಮ್ಮ ಅರಮನೆಯಿಂದ ಮಸೀದಿಗೆ ಹೋಗಿ ದೇವರ ಪ್ರಾರ್ಥನೆ ಮುಗಿಸಿಕೊಂಡು ಬರುವಾಗ್ಗೆ ಮಸೀತಿಬಾಗಿಲಲ್ಲಿ ದುಷ್ಟರ್ಯಾರೋ ಅವರನ್ನು ಕೊಲ್ಲಬೇಕೆಂದು ಮದ್ದಿನ ಗುಂಡನ್ನು ಅವರ ಬಳಿಗೆ ಎಸೆದರೆಂತಲೂ ದೇವರ ದಯದಿಂದ ಸುಲ್ತಾನರಿಗೆ ಯಾವ ಅಪಾಯವೂ ಆಗದೆ ತಪ್ಪಿಸಿಕೊಂಡರೆಂತಲೂ ತಿಳಿಸಿದ್ದೆವಷ್ಟೆ. ಅಂದಿನಿಂದ ಪೋಲೀಸಿನವರು ಆ ಘಾತುಕರನ್ನು ಕಂಡುಹಿಡಿಯಬೇಕೆಂದು ತುಂಬಾ ಶ್ರಮಪಡುತ್ತಿದ್ದರು. ಬೆಲ್ಜಿಯಂ ಪ್ರಜೆಯೊಬ್ಬನೂ ಮೂರು ಮಂದಿ ಅರ್ಮೀನಿಯರೂ ಜನರೂ ಸಿಕ್ಕಿಬಿದ್ದರು. ಇವರನ್ನು ದಯರ್ಬಾಷ್ಪಾಯಿಂದ ಕಳೆದ ವಾರ ಗಲ್ಲಿಗೆ ಹಾಕಿಸಿರುತ್ತಾರೆಂದು ತಂತೀವರ್ತಮಾನ ಬಂದಿದೆ.

COMMERCIAL CLASSES.

Hardwicke College, Mysore.

These classes will be opened, 8th. Jan., 1906.

TEACHER—Mr S. Gnanappaji, of the Reid College, Lucknow: holder of the Remington Gold Medal for Typewriting.

HOURS—7—10 a.m., & 7—8 p.m

FEES—Typewriting, Rs 1—8—0 per month; Shorthand Re 1; Bookkeeping, Re 1. Commercial Correspondence & Commercial Geography, (if desired), Re 1.

SCHOOL STUDENTS AT HALF-FEES.

ADMISSION FEE—Re. 1. 3

Application for admission to be made to

The PRINCIPAL, Hardwicke College.

ರಬ್ಬರ್ ಸ್ಟಾಂಪುಗಳು.

2

ನಮ್ಮ ಕಂಪೆನಿಯಲ್ಲಿ ತಯಾರಾಗಲ್ಪಡುವ ಇಂಗ್ಲಿಷ್ ಮೇಕ್ ರಬ್ಬರ್ ಸ್ಟಾಂಪುಗಳು ಬಿರುನ ಜನವರಿ ಆಖೈರೊಳಗಾಗಿ ದರಖಾಸ್ತು

ಕಳುಹಿಸತಕ್ಕವರಿಗೆ ಅರ್ಧ ಕ್ರಯಕ್ಕೆ ತಯಾರಿಸಿ ಕಳುಹಿಸುತ್ತೇವೆ. ಓವಾಲ್, ರೌಂಡ್, ಚಚ್ಚೌಕ ಯಾವ ಆಕಾರವಾದರೂ ಅದರಲ್ಲಿ ಬೇಕಾದ ಅಕ್ಷರಗಳನ್ನು ಹಾಕಿ, ಸುಂದರವಾದ ರಬ್ಬರ್ ಸ್ಟಾಂಪು ೧, ಇಂಕಿ ಸೀಸಾ ೧, ರಬ್ಬರ್ ಸ್ಟಾಂಪು ಇರಿಸುವ ಪೆಟ್ಟಿಗೆ ೧, ಬ್ರಷ್ ೧, ಪ್ಯಾಡ್ ೧, ಇವುಗಳ ಸಹಿತ ಕ್ರಯ ರೂ ೧—೮—೦; ಪೋಸ್ಟೇಜು ೩ ಆಣೆ

ವಿಳಾಸ:—ಮ್ಯಾನೇಜರ್, ರಬ್ಬರ್ ಸ್ಟಾಂಪ್ ಮ್ಯಾನುಫ್ಯಾಕ್ಚರಿಂಗ್ ಕಂಪೆನಿ, ಪಾರ್ಕ್ ಟೌನ್, ಮದ್ರಾಸ್.

ಜ್ವರಹರಿ.

9

ಇದು ಸಾಧಾರಣ ಜ್ವರ, ಚಳೀಜ್ವರ, ಮೊರೇಜ್ವರ, ಪಿತ್ತಜ್ವರ, ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮಹಾಮಹೋಪಾಧ್ಯಾಯ ಸಬ್ ಓವರ್ಸಿಯರ್ ಆಫೀಸರ್ ಎಸ್. ಟಿ. ವೆಂಕಟಪತಿ ಅಯ್ಯರವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨೦ ಡೋಸಿನ ಸೀಸೆಯು ತೀರಿಹೋಯಿತು. ಇಷ್ಟು ಸ್ವಲ್ಪ ಕಾಲದಲ್ಲೀ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚನ್ನಾಗಿ ಗುಣ ಹೊಂದಿರುವರು. ಇನ್ನೂ ಜನಗಳು ಕಾಹಿಲೇ ಬೀಳುತ್ತಿರುವುದರಿಂದ ದಯವಿಟ್ಟು ಇನ್ನೊಂದು ೨೦ ಡೋಸಿನ ಸೀಸೆಯನ್ನು ವಿ. ಪಿ. ಪಿ ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದ್ದಾರೆ

ಕ್ರಯ.—ಸೀಸೆ ೧ ಕ್ಕೆ ೮ ಆಣೆ, ೦ ರೂ , ೧—೮ ರೂ , ರೂ. ೨—೧೨ ಆ., ೧೧ ರೂ ; ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು.

ಓಮಂ ಕರ್ಪೂರ.

[redacted]

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆ ಕಳೆಚುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಯೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ ಕ್ರಯದ ದರವು ಜ್ವರಹರಿ ಎಂಬ ಔಷಧದಂತೆಯೇ. ಸೀಸೆಗಳಲ್ಲಿ ದೊರಕುವದು.

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಹೆಪ್ರಿಯ ಓಮಂ ಕರ್ಪೂರವನ್ನು ನಾನೂ ನನ್ನ ತಾಬೇದಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣಭೇದಿ, ಅಜೀರ್ಣ ರೋಗಿಷ್ಠರಿಗೆ ಕೊಡುತ್ತೇವೆ. ಕೊಟ್ಟ ಕೂಡಲೆ ಅವರ ರೋಗವು, ಗುಣವಾಗುತ್ತಲಿದೆ ಇದು ಬಹು ಒಳ್ಳೇ ಔಷಧವೆಂತ ಬರೆದಿದಾರೆ.

ಈ ನಾಲ್ಕು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲಿ, ದೊಡ್ಡ ಷಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇದಲ್ಲದೆ ಕೆಳಗಿನ ವಿಳಾಸದಾರ್ರಲ್ಲಿ ವಿಶೇಷ.—

ಹೆಪ್ರಿಯವರ, ಗ್ರೇಟ್ ಇಂಡಿಯಾ ಔಷಧಗಳ ಕಂಪೆನಿ,

ನೆಳೆಂಡ್ ಬೀಚ್ ರೋಡ್ ಮದ್ರಾಸ್.

ದೇವಾಂಗ ಪಂಡಿತರಿಗೆ ಅಗತ್ಯ ಬೇಕಾದದ್ದು.

[redacted] 14

ಸ್ವಲ್ಪ ಪ್ರತಿಗಳಿವೆ, ಜಾಗ್ರತೆಪಟ್ಟರೆ ಸಿಕ್ಕುತ್ತವೆ. ನಂತರ ಖಂಡಿತ ಸಿಕ್ಕುವದಿಲ್ಲ. ಸ್ವಕುಲಗುರುಗಳು ಮುದ್ದುಸಂಗ ಮುನಿಸ್ವಾಮಿಗಳು ರಚಿಸಿದ್ದು ಅರ್ಥಸಹಿತ ದೇವಾಂಗಮತಪ್ರಕಾಶಿಕೆ ಸಪ್ತಾವತಾರಕ್ಕೂ ಸುಂದರವಾದ ೧೪ ತಸ್ವೀರಿದೆ ಕ್ರಯ ಸುಲಭವಾಡಿದೆ ೧೪ ತಸ್ವೀರಿರುವ ಪ್ರತಿ ೧ ಕ್ಕೆ ವಿ ಪಿ. ಖರ್ಚು ಸೇರಿ ರೂ. ೨—೮. ತಸ್ವೀರಿಲ್ಲದ ಇದೇ ಪ್ರತಿ ೧ ಕ್ಕೆ ವಿ. ಪಿ ಖರ್ಚು ಸೇರಿ ರೂ ೧—೮. ವೇದ ಉಪನಿಷತ್ತುಗಳ ಅರ್ಥಸಹಿತ ಮೂಲಸ್ತಂಭ ೧ ಕ್ಕೆ ರೂ ೧—೮. ತಕ್ಷಣ ಮನಿಆರ್ಡರಿಗೂ ವಿ ಪಿ ಲೂ ಕಳುಹಿಸುತ್ತೆ. ವಿಳಾಸ— ಮೈಸೂರು ಬಿವಳಿ ಅಂಗಡಿ ಬ್ರಹ್ಮಶ್ರೀ ಯಜಮಾನ ಪುಟ್ಟಮಲ್ಲಯ್ಯ

SREEMADACHARYA SUKTI MUKTAVALI.
ಶ್ರೀಮದಾಚಾರ್ಯಸೂಕ್ತಿ ಮುಕ್ತಾವಲೀ.

7

ಈ ಹೆಸರಿನಿಂದ ಪ್ರತಿ ತಿಂಗಳಲ್ಲಿಯೂ ಒಂದು ಸಂಚಿಕೆಯು ಪ್ರಕಟಿಸಲ್ಪಡುವುದು ಇದರಲ್ಲಿ ಶ್ರೀರಾಮಾನುಜಸಿದ್ಧಾಂತ ಸ್ಥಾಪಕರಾದ ಪೂರ್ವಾಚಾರ್ಯರುಗಳು ಮಾಡಿರುವ ಸ್ತೋತ್ರ, ದ್ರಾವಿಡಪ್ರಬಂಧ, ಗ್ರಂಥಗಳಿಗೆ ಕನ್ನಡದಲ್ಲಿ ಪ್ರತಿಪದ ಟೀಕಾ ತಾತ್ಪರ್ಯಗಳು ಸರ್ವರಿಗೂ ತಿಳಿಯುವಂತೆ ಸುಲಭಶೈಲಿಯಾಗಿ ಬರೆದು ಮುದ್ರಿಸಲ್ಪಡುವುವು. ಶ್ರೀವಿಷ್ಣುಸಹಸ್ರನಾಮಕ್ಕೆ ದ್ವೈತಾದ್ವೈತ ವಿಶಿಷ್ಟಾದ್ವೈತವೆಂಬ ತ್ರಿಮತ ಭಾಷ್ಯಗಳೂ ಕನ್ನಡದಲ್ಲಿ ತರ್ಜುಮೆಮಾಡಿ ಮುದ್ರಿಸಲ್ಪಡುವುವು ಈ ಸಂಪೂರ್ಣ ಗ್ರಂಥಕ್ಕೆ ಪೋಸ್ಟೇಜು ದೇಖಲ್ ರೂ. ೨-೬; ಶ್ರೀಮದಾಚಾರ್ಯಸೂಕ್ತಿ ಮುಕ್ತಾವಲೀ ಸಾಂವತ್ಸರಿಕ ಚಂದಾ ಪೋಸ್ಟು ಚಾರ್ಜು ಸಹಿತ ರೂ. ೧-೧೪.

ಇದರ ವಿಶೇಷವಿವರಗಳನ್ನು ತಿಳಿಯಲಪೇಕ್ಷಿಸುವವರು ಈ ಕೆಳಗಿನ ವಿಳಾಸದಾರರಿಗೆ ಬರೆಯಬೇಕು

ತೂಪ್ಪುಲ್‌ವೆಂಕಟಾಚಾರ್ಯರು

ತುಲಸಿತೋಟ, ಬೆಂಗಳೂರು ಸಿಟಿ.

ಹೋಮಿಯೋಸಿಯ.

ಈ ಔಷಧಿಯು ಮನೆ, ಅರಮನೆ, ಕಾರ್ಖಾನೆ, ಆಸ್ಪತ್ರೆ, ಪೋಲೀಸ್ ಠಾಣಾ, ವಿದ್ಯಾಶಾಲೆ, ಕೋರ್ಟು, ಕಛೇರಿ, ಮುಂತಾದ ಸ್ಥಳಗಳಲ್ಲೆಲ್ಲಾ ಇದ್ದೇ ಇರಬೇಕು. ಇದಕ್ಕೆ ಸಮಾನವಾದ ಔಷಧ ಮತ್ಯಾವದೂ ಇಲ್ಲವೆಂಬುವದು ಲೋಕಪ್ರಸಿದ್ಧವಾಗಿದೆ.

ಈ ತೈಲವು ರತ್ನಾಲಯದಲ್ಲಿ ಜೀವರಾಶಿಗಳಿಗೆ ಮವಶ್ಯಾಗಿ ಸಿಕ್ಕತಕ್ಕ ಔಷಧ ಇದನ್ನು ಉಪಯೋಗಿಸಿದ ದೊಡ್ಡ ಮನುಷ್ಯರು, ಡಾಕ್ಟರುಗಳು, ಮುಂತಾದವರು ಅದರ ಗುಣವನ್ನು ಹೊಗಳಿ ಸರ್ಟಿಫಿಕೇಟುಗಳನ್ನು ಕೊಟ್ಟಿದ್ದಾರೆ. ನೋವು ಕಂಡರೆ ಇದನ್ನು ಹಚ್ಚಿದ ಕೂಡಲೇ ವಾಸಿಯಾಗುವದು.

ಈ ತೈಲವು ಅರೆ ತಲೆನೋವು, ಸೊಂಟನೋವು, ಪಾರ್ಶ್ವವಾಯು, ಮೂಲವ್ಯಾಧಿ, ಉಬ್ಬಸ, ವಾಯುಗಳು, ನರ ಹೊರಳುವದು, ಉಳುಕು, ಕೀಲುವಾಯು, ಗುಳ್ಳೆಗಳು, ಹಲ್ಲುನೋವು, ಮುಖನೋವು, ಊದುಗಳು, ಗಡ್ಡೆಗಳು, ರಣಗಳು, ಜುಳುಕಡ್ಡಿ, ಸೊಳ್ಳೆ ಮತ್ತು ಚೇಳು ಕಡಿದದ್ದು, ಚಿಪ್ಪಿರುವದು, ಬೆಂಕಿಯಲ್ಲಿ ಸುಟ್ಟುಕೊಂಡದ್ದು, ಕತ್ತಿ ಗಾಯ—ಇವೇ ಮೊದಲಾದ ನಾನಾ ಬಾಧೆಗಳನ್ನು ಹುಟ್ಟಡಗಿಸುತ್ತದೆ. ರಾತ್ರಿ ಹಚ್ಚಿಕೊಂಡು ಮಲಗಿದರೆ ಸೊಳ್ಳೆ ಹತ್ತಿರ ಸೇರುವದಿಲ್ಲ.

ಕ್ರಯ.— ಸಣ್ಣ ಡಬ್ಬಿ ೧ ಕ್ಕೆ ೧ ರೂ., ದೊಡ್ಡದಕ್ಕೆ ರೂ. ೨—೮ ಆ.; ಒಂದೇ ಸಲ ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ ಬಿಡುತ್ತಾರೆ ರೂ. ೨—೮ ಆಣೆ ಬಾಬ್ತು ಡಬ್ಬಿದಲ್ಲಿ ೧ ರೂ. ಡಬ್ಬಿದಲ್ಲಿರುವದಕ್ಕಿಂತ ೪ ರಷ್ಟು ಹೆಚ್ಚು ಔಷಧವಿರುತ್ತೆ. ರೂ. ೨—೮ ಆ. ಈ ಡಬ್ಬಿವನ್ನು ತರಿಸಿಕೊಳ್ಳುವವರಿಗೆ ಟಪ್ಪಾಲ್ ಖರ್ಚು ಮಾಫಿ ಬಿಡುತ್ತೆ.

ಹೋಮಿಯೋಸಿಯಾ ಯೂಕೆಲಿಪ್ಟಸ್.

ಈ ತೈಲವು ಹಳೇ ನೋವುಗಳಿಗೆ ಉಪಯೋಗಿಸತಕ್ಕದ್ದು ಚರ್ಮ ಒಡೆದ ಕಡೆ ಇದನ್ನು ಹಚ್ಚಕೂಡದು. ಇದರಲ್ಲಿ ಹೋಮಿಯೋಸಿಯದ ಗುಣಗಳು ಬಹು ತೀಕ್ಷ್ಣವಾಗಿ ಇರುತ್ತವೆ ಅದಕ್ಕಿಂತಲೂ ಇದರಲ್ಲಿ ಇನ್ನೆರಡು ಗುಣಗಳುಳ್ಳ ಹೊಸ ಭಾಗವಿರುತ್ತದೆ ಇದನ್ನು ಚರ್ಮವು ಬಹು ಬೇಗನೆ ಸೇದಿಕೊಳ್ಳಬಲ್ಲದು ಡಬ್ಬಿಗಳಲ್ಲಿ ತುಂಬಿ ೮ ಆಣೆಗೂ, ೧ ರೂ. ಗೂ ಒಂದರಂತೆ ಬಿಕರಿ ಮಾಡಲ್ಪಡುವದು. ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫು ಎಲ್ಲಾ ಷಾಪುಗಳಲ್ಲಿಯೂ ದೊರೆಯುವದು

ಈ ಔಷಧಗಳ ವಿವರಣೆಯೂ, ಸರ್ಟಿಫಿಕೇಟುಗಳೂ ಉಳ್ಳ ನೋಟೀಸುಗಳನ್ನು ಅಪೇಕ್ಷಿಸಿದರೆ ಕಳುಹಿಸುವೆವು.

ವಿಳಾಸ.—ಹೋಮಿಯೋಸಿಯಾ ಕಂಪೆನಿ. ೨೩, ನೆಳೆಂಡ್ ಬೀಚ್ ರೋಡ್. ಮದರಾಸ್.

ಮೈಸೂರು ಸೀಮೆಯಲ್ಲಿ ಪ್ಲೇಗಿನ ಸ್ಥಿತಿ.

೮—೧೨—೧೯೦೫ ರಿಂದ ೧೫—೧೨—೧೯೦೫ ರ ವರೆಗೆ

ಸ್ಥಳ.	ಪ್ಲೇಗ್ ತಗಲಿದ್ದು.	ಪ್ಲೇಗ್ ಸತ್ತದ್ದು.	ಕೋ[illegible]	[illegible]
ಬೆಂಗಳೂರು ಪಟ್ಟಣ	18	12	9[illegible]	[illegible]
ಮೈಸೂರು ,,	0	0	[illegible]	[illegible]
ಬೆಂಗಳೂರು ಡಿಸ್ಟ್ರಿಕ್ಟು	11	5	47	[illegible]
ಮೈಸೂರು ,,	20	15	78	[illegible]
ಕೋಲಾರ್ ,,	5	4	81	[illegible]
ಕೋಲಾರ್ ಚಿನ್ನದ ಗಣಿಗಳು	1	2	13	1
ತುಮಕೂರು ಡಿಸ್ಟ್ರಿಕ್ಟು	0	0	[illegible]	[illegible]
ಹಾಸನ (ಹೊರಗಿನದು)	5	5	[illegible]	[illegible]
ಚಿತ್ರದುರ್ಗ ,,	0	0	11	[illegible]
ಕಡೂರ್ ,,	2	1	[illegible]	[illegible]
ಶಿವಮೊಗ್ಗ ,,	2	1	31	[illegible]
ಜುಮ್ಲಾ	64	45	341	[illegible]

ಶಾಲಿವಾಹನ ಶಕ ವರುಷಂಗಳು ೧೮೨೮ ನೇ ವಿಶ್ವಾವಸು ನಾಮ ಸಂವತ್ಸರದ ಪುಷ್ಯ ಶುದ್ಧ ಬಿದಿಗೆ ಗುರುವಾರದಿಂದ ಪುಷ್ಯ ಶುದ್ಧ [illegible] ಬುಧವಾರದ ವರೆಗಿನ ಒಂದು ವಾರದ ಪಂಚಾಂಗ

೧೯೦೫ ನೇ ಇಸವಿ ಡಿಸೆಂಬರ್, ಮತ್ತು ಜನವರಿ.

ತಾ.	ವಾರ	ತಿಥಿ	ಘಳಿಗೆ	ನಕ್ಷತ್ರ.	ಘಳಿಗೆ.	[illegible]
28	ಗುರು	ಬಿದಿಗೆ	0 28	ಉಷಾ	58 30	14
29	ಶುಕ್ರ *	ಚೌತಿ	58-20	ಶ್ರ	13-28	15
30	ಶನಿವಾ	ಪಂಚಮಿ	58-50	ಧ	14-48	16
31	ರವಿವಾ ǂ	ಷಷ್ಟಿ	60 0	ಶ	17-2	17
1	ಚಂದ್ರ	ಸಪ್ತಮಿ	0-33	ಪೂಭಾ	20 42	18
2	ಕುಜ ‡	ಅಷ್ಟಮಿ	3-38	ಉಭಾ	25-12	19
3	ಬುಧ ¶	ನವಮಿ	7-50	ರೆ	30-43	20

* ಮಾರ್ಗ ಗಣಪತಿವ್ರತ.

ǂ ತುಳಸೀಷಷ್ಟಿ

‡ ಅಮೃತಯೋಗ

¶ ಉತ್ಪಾತಯೋಗ

ಪೇಟೇ ಧಾರಣೆ.

ದಿನಸಿ		ಮೈಸೂರು.	ಬೆಂಗಳೂರು
ಕಳ್ಳೆ ಅಕ್ಕಿ ಪಲ್ಲ ೧ ಕ್ಕೆ	ರೂ	೧೨-೦-೦	೧೩-೮
ಕೆಂಬೂತಿ ಅಕ್ಕಿ ಅವಲ್	..	೧೨-೮-೦	೧೪-[illegible]
,, ದುಯಂ	..	೧೨-೦-೦	೧೩-೮
ಜಾಪ್ರಾಣಿ ಅಕ್ಕಿ	..	೧೨-೦-೦	೧೩-[illegible]
ಸಣ್ಣಕ್ಕಿ ಅವಲ್	..	೧೩-೦-೦	೧೬-[illegible]
,, ದುಯಂ	..	೧೨-೮-೦	೧೪-೮
ತೊಗರೀ ಬೇಳೆ ಪಲ್ಲ ೧ ಕ್ಕೆ	..	೯-೧೨-೦	೧೦-[illegible]
,, ದುಯಂ	..	೯-೮-೦	೧೧-[illegible]
ಹೈನ ರಾಗಿ ಪಲ್ಲ ೧ ಕ್ಕೆ	..	೬-೧೨-೦	೬-[illegible]
ಕಾಪ್ರಿಗಿ	..	೬-೮-೦	೫-೦-[illegible]
ಜೋಳ	..	೬-೧೨-೦	೬-೮
ಹುರಳಿ ಪಲ್ಲ ೧ ಕ್ಕೆ	..	೮-೮-೦	೧೦-[illegible]
ಬಿಳೀ ಅವರೆ	..	೯-೦-೦	೯-೦-[illegible]
ಹೆಸರು	..	೯-೪-೦	೧೦-೮
ಉದ್ದು	..	೧೧-೮-೦	೯-೦-[illegible]
ಕಡಲೆ	..	೧೦-೮-೦	೨೧-೦-[illegible]
ಎಳ್ಳು ಸೆ ೧-೦೭ ಕ್ಕೆ	..	೧೯-೦-೦	೧೫-೪
ಹುರುಳಿ	..	೬-೧೨-೦	೧೦-[illegible]
ಹರಳು ೧-೦೭ ಸೇರಿಗೆ	..	೧೦-೧೨-೦	೧೨-೮
ಸೀಗೇಕಾಯಿ ಮಣ ೧ ಕ್ಕೆ	..	೫-೮-೦	೬-೮
ಮೆಣಸಿನಕಾಯಿ	..	೩-೮-೦	೩-೧೨
,, ದುಯಂ	..	೩-೪-೦	೩-೮
ಬೆಲ್ಲ ದೊಡ್ಡ ಅಚ್ಚು	..	೪-೮-೦	ಮ ೨-[illegible]
ಒಳ್ಳೆಣ್ಣೆ ಮಣ ೧ ಕ್ಕೆ	..	೫-೮-೦	೪-೮
ಹರಳೆಣ್ಣೆ ,,	..	೫-೦-೦	೪-೮
ಕೊತ್ತುಂಬರಿ ಪಲ್ಲ ೧ ಕ್ಕೆ	..	೧೧-೮-೦	೧೩-೦-[illegible]
ಉಪ್ಪು ,,	..	೭-೦-೦	೮-೮
ಹುಣಿಸೇ ಹಣ್ಣು	..	೦-೧೨-೦	೦-೧೨
,, ಬಳೇದು	..	೦-೮-೦	೦-೧೦
ತುಪ್ಪ	..	೧೪-೦-೦	೧೨-೮
ಸೀಮೆಯೆಣ್ಣೆ ಪೆಟ್ಟಿ ೧ ಕ್ಕೆ	..	೫-೭-೦	೫-[illegible]
ತೆಂಗಿನಕಾಯಿ ೧೦೦ ಕ್ಕೆ	..	೪-೦-೦	೪-[illegible]
ಅಳಲೇಕಾಯಿ ಮಣ ೧ ಕ್ಕೆ	..	೦-೧೨-೦	೦-[illegible]
ಅಂಟ್ವಾಳದ ಕಾಯಿ ಮಣ ೧ ಕ್ಕೆ	..	೦-೧೨-೦	೦-೦-[illegible]
ಚಿನ್ನ (ಬಾರ್) ಕೆಂಪು	..	೧೫-೪-೦	೧೫-೪
,, ,, ಪಸಿಮೆ	..	೧೫-೩-೦	೧೬-[illegible]
,, ,, ಗಟ್ಟಿ ತೊಲ ೧ ಕ್ಕೆ	..	೨೩-೧೨-೦	೨೨-[illegible]
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ	..	೭೨-೦-೦	೭೦-[illegible]

Printed and Published by the Rev. H. Spencer, for the Proprietor and Manager, Wesleyan Mission Press, Mysore. 28/12/1905.

ವೃತ್ತಾಂತ ಪತ್ರಿಕೆ.

REGISTERED M. 30

ಕ್ರಯ ೧ ದುಡ್ಡು ——— ಕ್ರಯ ೧ ದುಡ್ಡು

ಪ್ರತಿ ಗುರುವಾರ ಪ್ರಾತ:ಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಪುಸ್ತಕ ೧೯ | ಮೈಸೂರು—ಸನ್ ೧೯೦೬ ನೇ ಇಸವಿ ಜನವರಿ ತಾರೀಖು ೧೧ ನೇ ಗುರುವಾರ. | ಸಂಚಿಕೆ ೭೨

"ವಾಗ್ದೇವಿ."

9

ಹಾಸ್ಯ ಕರುಣ ವೀರ ರಸಗಳಿಂದ ಭರಿತವಾದ ಕಾದಂಬರಿ ಕ್ರಯ ಒಂದು ರೂಪಾಯಿ. ಅಂಚೆ ಹಾಸಲು ವಿನಾ. ಬೇಕಾದವರು ಕೆಳಗಿನ ವಿಳಾಸಕ್ಕೆ ಬರೆಕೊಳ್ಳಬಹುದು.

ಗೋಪಾಲ್ ಬಾಬೂರಾವ್, ಮಂಗಳೂರು

"ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ.

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜಂಟ್ರ ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ (ಅಡ್ವಾನ್ಸು) . . . ರೂ. ೧—೦—೦

ಸ್ವಂತವಾಗಿ ಆಫೀಸಿನಿಂದ ಅಂಚೆಯ ಮೇಲೆ ತರಿಸಿಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಪಾರ್ಸಲ್ ಸಹಿತ . . . ರೂ. ೧—೧೪—೦

" " ೬ " " ೦—೧೫—೦

ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು

ವಿಳಾಸ:—ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು.

ಜ್ವರಹರಿ.

10



ಇದು ಸಾಧಾರಣ ಜ್ವರ, ಚಳೀಜ್ವರ, ನೋವೀಜ್ವರ, ಪಿತ್ಥಜ್ವರ, ಕಫಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ ಚಳ್ಳಕೆರೆಯಲ್ಲಿರುವ ಮರಾಮತ್ ಸಬ್ ಡಿವಿಜನ್ ಆಫೀಸರ್ ಎಸ್. ಟಿ. ವೆಂಕಟಪತಿ ಅಯ್ಯರವರು—ನಿವ್ವ ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨೦ ಶೀಸೆಯು ತೀರಿಹೋಯಿತು. ಇಷ್ಟು ಸ್ವಲ್ಪ ಕಾಲದಲ್ಲೇ ಈ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚನ್ನಾಗಿ ಗುಣಹೊಂದಿರುವರು. ಇನ್ನೂ ಜನಗಳು ಕಾಹಿಲೇ ಬೀಳುತ್ತಿರುವ್ರದರಿಂದ ದಯವಿಟ್ಟು ಇನ್ನೊಂದು ೨೦ ಡಜನಿನ ಶೀಸೆಯನ್ನು ವಿ. ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದ್ದಾರೆ.

ಕ್ರಯ:—ಶೀಸೆ ೧ ಕ್ಕೆ ೮ ಆಣೆ, ೧ ಡ., ೧—೮ ರೂ ; ೨—೧೨ ಆ., ೧೧ ರೂ ; ಸನ್ನೆರಡು ಶೀಸೆ ತರಿಸಿಕೊಂಡರೆ ಅಂಚೆ ಕೂಲಿಯು ಮಾಫಿ ಬಿಡಲಾಗುವದು.

****

ಪಿಮುಂಕಪೂರ.

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆಕಳೆತ, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದವುಗಳಿಗೆ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು. ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಯೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ. ಇದರ ದರವು ಜ್ವರಹರಿ ಎಂಬ ಔಷಧವಂತೆಯೇ. ಶೀಸೆಗಳಲ್ಲಿ ದೊರೆವದು.

ಮೈಸೂರ ಆಸಿಸ್ಟೆಂಟ್ ಸರ್ಜನ್ ಗಣಪತಿಯವರು—ಹೆಸ್ರಿಯ ಮುಂತಾದ ಕರ್ಪೂರವನ್ನು ನಾನೂ ನನ ತಾಬೇದಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣ, ಅಜೀರ್ಣ ರೋಗಿಷ್ಠರಿಗೆ ಕೊಡುತ್ತೇವೆ. ಕೊಟ್ಟ ಕೂಡಲೆ ರೋಗವು ಗುಣವಾಗುತ್ತಲಿದೆ. ಇದು ಬಹು ಒಳ್ಳೇ ಔಷಧವಾಗಿದೆ.

ಈ ಸಾಲ್ಕು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ ದೊಡ್ಡ ಶಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇವಲ್ಲದೆ ಕೆಳಗಿನ ವಿಳಾಸದಾರರಲ್ಲಿ ವಿಶೇಷ:—

ಮದರಾಸಿನ ಗ್ರೇಟ್ ಇಂಡಿಯನ್ ಔಷಧಗಳ ಕಂಪೆನಿ, ಸೇಂಟ್ ಮೇರೀಸ್ ರೋಡ್ ಮದ್ರಾಸ್.

ಯನ್. ಆರ್. ವೆಂಕಟಸುಬ್ಬಾಚಾರ್ಯ, ಸುಬೋಧಗ್ರಂಥಾಲಯ, ಮೈಸೂರು.

21

ವೆಸ್ಟ್ರಿಲ್ಲ್ಯಾ ಕನ್ನಡದ ೪ನೆ ಪುಸ್ತಕದ ನೋಟ್ಸು	೦—೪—೦
ಡಿಟೊ ,, ,, ೬ ನೆ ಪುಸ್ತಕದ ನೋಟ್ಸು	೦—೪—೦
ಡಿಟೊ ೩—೪ ನೆಯ ಪುಸ್ತಕಗಳ ನೋಟ್ಸು	೦—೨—೦
ಮೈಸೂರು ಸಂಸ್ಥಾನದ ಭೂವಿವರಣೆ (೨ನೆ ಛಾಪೆ)	೦—೧—೦
೨ನೆ ತರಗತಿ ಪದ್ಯಸಂಗ್ರಹದ ನೋಟ್ಸು	೦—೧—೬

ಬೇಕಾಗಿದೆ.

ಮನೆಯ ಕೆಲಸಕ್ಕೂ ಕಸಬುದಾರರ ಕೆಲಸಕ್ಕೂ ಉಪಯೋಗವಾದ್ದೆಂದು ಪ್ರಸಿದ್ಧಿ ಪಡೆದಿರುವ ಛಾಫ್ ಹೊಲಿಯುವ ಯಂತ್ರಗಳನ್ನು ಮಾರಾಟ ಮಾಡಲು ಸಬ್ ಏಜಂಟರುಗಳೂ, ಪ್ರೋತ್ಸಾಹಪಡಿಸುವವರೂ (Canvassers)ರಿವಂವಾಗರಾಗಿಯೂ ಚಿಲ್ಲರೆಯಾಗಿ ಕೊಂಡುಕೊಳ್ಳತಕ್ಕವರೂ ಬೇಕಾಗಿದೆ. ವಿಶೇಷವಾದ ತಪಶೀಲನ್ನು ಕೆಳಗಿನ ವಿಳಾಸದಾರರಿಂದ ತಿಳಿಯಬಹುದು.

ಕಮಿಷನ್ ಮತ್ತು ಜನರಲ್ ಏಜನ್ಸಿ,
ಸೋಲ್ ಏಜಂಟರು,
ಶಿವಮೊಗ್ಗ—(ದಕ್ಷಿಣ ಇಂಡಿಯ).

ಹೋಮೋಸಿಯಾ.

ತಕ್ಷಣ ಪರಿಹಾರ. ತಗಲುತ್ತಲೇ ನೋವು ವಾಸಿಯಾಗುತ್ತೆ

ಈ ಔಷಧಿಯು ಮನೆ, ಅರಮನೆ, ಕಾರ್ಖಾನೆ, ಆಸ್ಪತ್ರೆ, ಪೋಲೀಸ್ ಠಾಣಾ, ವಿದ್ಯಾಶಾಲೆ, ಕೋರ್ಟು, ಕಛೇರಿ, ಮುಂತಾದ ಸ್ಥಳಗಳಲ್ಲೆಲ್ಲಾ ಇದ್ದೇ ಇರಬೇಕು. ಇದಕ್ಕೆ ಸಮಾನವಾದ ಔಷಧ ಮತ್ತಾವದೂ ಇಲ್ಲವೆಂಬುವದು ಲೋಕಪ್ರಸಿದ್ಧವಾಗಿದೆ.

ಈ ತೈಲವು ತತ್ಕಾಲದಲ್ಲಿ ಜೀವರಾಶಿಗಳಿಗೆ ಮಹತ್ತಾಗಿ ಸಿಕ್ಕತಕ್ಕ ಔಷಧ ಇದನ್ನು ಉಪಯೋಗಿಸಿದ ದೊಡ್ಡ ಮನುಷ್ಯರು, ಡಾಕ್ಟರುಗಳು, ಮುಂತಾದವರು ಇದರ ಗುಣವನ್ನು ಹೊಗಳಿ ಸರ್ಟಿಫಿಕೇಟುಗಳನ್ನು ಕೊಟ್ಟಿದ್ದಾರೆ. ನೋವು ಕಂಡರೆ ಇದನ್ನು ಹಚ್ಚಿದ ಕೂಡಲೇ ವಾಸಿಯಾಗುವದು.

ಈ ತೈಲವು ಅರೆ ತಲೆನೋವು, ಸೊಂಟನೋವು, ಪಾರ್ಶ್ವವಾಯು, ಮೂಲವ್ಯಾಧಿ, ಉಬ್ಬಸ, ವಾಯುಗಳು, ನರ ಹೊರಳುವದು, ಉಳುಕು, ಕೀಲುವಾಯು, ಗುಳ್ಳೆಗಳು, ಹಲ್ಲುನೋವು, ಮುಖನೋವು, ಊದುಗಳು, ಗಡ್ಡೆಗಳು, ರಣಗಳು, ಹುಳುಕಡ್ಡಿ, ಸೊಳ್ಳೆ ಮತ್ತು ಚೇಳು ಕಡಿದದ್ದು ಚಿಪ್ಪಿರುವದು, ಬೆಂಕಿಯಲ್ಲಿ ಸುಟ್ಟುಕೊಂಡದ್ದು, ಕತ್ತಿ ಗಾಯ—ಇವೇ ಮೊದಲಾದ ನಾನಾ ಬಾಧೆಗಳನ್ನು ಹುಟ್ಟಡಗಿಸುತ್ತದೆ. ರಾತ್ರಿ ಹಚ್ಚಿಕೊಂಡು ಮಲಗಿದರೆ ಸೊಳ್ಳೆ ಹತ್ತಿರ ಸೇರುವದಿಲ್ಲ.

ಕ್ರಯ:— ಸಣ್ಣ ಡಬ್ಬಿ ೧ ಕ್ಕೆ ೧ ರೂ., ದೊಡ್ಡದಕ್ಕೆ ರೂ. ೨—೮ ಆ. ; ಒಂದೇ ಸಲ ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ ಬಿಡುತ್ತಾರೆ. ರೂ. ೨—೮ ಆಣೆ ಬಾಬ್ತು ಡಬ್ಬಿದಲ್ಲಿ ೧ ರೂ. ಡಬ್ಬಿದಲ್ಲಿರುವದಕ್ಕಿಂತ ೪ ರಷ್ಟು ಹೆಚ್ಚು ಔಷಧವಿರುತ್ತೆ. ರೂ. ೨—೮ ಆ. ಈ ಡಬ್ಬಿವನ್ನು ತರಿಸಿಕೊಳ್ಳುವವರಿಗೆ ಟಪ್ಪಾಲ್ ಖರ್ಚು ಮಾಫಿ ಬಿಡುತ್ತೆ.

****

ಹೋಮೋಸಿಯಾ ಯಂಬ್ರೋಕೇಷನ್.

ಈ ತೈಲವು ಹಳೇ ನೋವುಗಳಿಗೆ ಉಪಯೋಗಿಸತಕ್ಕದ್ದು ಚರ್ಮ ಒಡೆದ ಕಡೆ ಇದನ್ನು ಹಚ್ಚಕೂಡದು. ಇದರಲ್ಲಿ ಹೋಮೋಸಿಯದ ಗುಣಗಳು ಬಹು ತೀಕ್ಷ್ಣವಾಗಿ ಇರುತ್ತವೆ ಅದಕ್ಕಿಂತಲೂ ಇದರಲ್ಲಿ ಇನ್ನೆರಡು ಗುಣಗಳುಳ್ಳ ಹೊಸ ಭಾಗವಿರುತ್ತದೆ ಇದನ್ನು ಚರ್ಮವು ಬಹು ಬೇಗನೆ ಸೇದಿಕೊಳ್ಳಬಲ್ಲದು. ಡಬ್ಬಿಗಳಲ್ಲಿ ತುಂಬಿ ೮ ಆಣೆಗೂ, ೧ ರೂ. ಗೂ ಒಂದರಂತೆ ಬಿಕರಿ ಮಾಡಲ್ಪಡುವದು ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫು. ಎಲ್ಲಾ ಶಾಪುಗಳಲ್ಲಿಯೂ ದೊರೆಯುವದು.

ಈ ಔಷಧಗಳ ವಿವರಣೆಯೂ, ಸರ್ಟಿಫಿಕೇಟುಗಳೂ ಉಳ್ಳ ನೋಟೀಸುಗಳನ್ನು ಅಪೇಕ್ಷಿಸಿದರೆ ಕಳುಹಿಸುವೆವು.

ವಿಳಾಸ:—ಹೋಮೋಸಿಯಾ ಕಂಪೆನಿ. ೨೩ ಸೆಕೆಂಡು ಬೀಚ್ ಲೈನ್. ಮದರಾಸ್.

WANTED WILD ANIMALS.

ಬೇಕಾಗಿದೆ. ಬೇಕಾಗಿದೆ.

39

ಎಲ್ಲಾ ಬಗೆಯ ಕಾಡು ಮೃಗಗಳನ್ನೂ. ಮೈಸೂರು ಜೂ ಸೂಪರಿಂಟೆಂಡೆಂಟ್ ಮಿ॥ ಹ್ಯೂಜಸ್ ಯವರು ಕೊಂಡುಕೊಳ್ಳುವರು.

Apply to—Mr. Hughes, Mysore Zoo.

"ಭೂಗೋಳ" ಸಂಗ್ರಹ—ಐದನೇ ಮುದ್ರಣ.

17

ಮೈಸೂರು ಶಿವರಾಂಪೇಟೆ ವೆಸ್ಲಿಯನ್ ಮಿಷನ್ ಬಾಲಕರ ಪಾಠಶಾಲೆಯ ಹೆಡ್ ಮಾಸ್ಟರಾದ ಮಿ॥ ಟಿ. ಎಂ. ರಾಮಸ್ವಾಮಯ್ಯನವರಿಂದ ರಚಿಸಲ್ಪಟ್ಟಿರುವ ಈ ಪುಸ್ತಕವನ್ನು ಈಗ ಮೈಸೂರು ವಿದ್ಯಾಭ್ಯಾಸದ ಇಲಾಖೆಯವರು ದೇಶೀಯ ಪರೀಕ್ಷೆಗಳಿಗೂ ಎಲ್ಲಾ ಪಾಠಶಾಲೆಗಳಿಗೂ ಟೆಕ್ಸ್ಟ್ ಬುಕ್ಕಾಗಿ ನಿಯಮಿಸಿರುತ್ತಾರೆ. ಈ ಪುಸ್ತಕವನ್ನು ಬಹಳವಾಗಿ ತಿದ್ದಿ ಹೊಸ ವಿಷಯಗಳನ್ನು ಅನೇಕವಾಗಿ ಕೂಡಿಸಿ ಪ್ರಕಟಿಸಲಾಗಿದೆ. ೧೦೦ ಪ್ರತಿಗಳು ಅಥವಾ ಅದಕ್ಕಿಂತಲೂ ಹೆಚ್ಚಾಗಿ ಒಂದೇ ಸಲ ಕೊಂಡುಕೊಳ್ಳುವವರಿಗೆ ಶೇಕಡಾ ೧೨॥ ಯಂತೆ ಡಿಸ್ಕೌಂಟು ಕೊಡಲಾಗುವುದು ಪ್ರತಿಗಳನ್ನು ಒಟ್ಟಾಗಿ ತರಿಸಿಕೊಳ್ಳುವವರು—ದಿ ಸೂಪರಿನ್‌ಟೆಂಡೆಂಟ್, ವೆಸ್ಲಿಯನ್ ಮಿಷನ್ ಪ್ರೆಸ್, ಮೈಸೂರು— ಈ ವಿಳಾಸಕ್ಕೂ ಬಿಡಿ ಪ್ರತಿಗಳನ್ನು ತರಿಸಲಪೇಕ್ಷಿಸುವ ವಿದ್ಯಾರ್ಥಿಗಳೇ ಮುಂತಾದವರು—ದಿ ಮ್ಯಾನೇಜರ್, ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು—ಈ ವಿಳಾಸಕ್ಕೂ ಬರೆಯತಕ್ಕದ್ದು. ಕ್ರಯ:—೧ ಪ್ರತಿಗೆ ೪ ಆಣೆ, ಪೋಸ್ಟೇಜು ೧ ಆಣೆ.

ಮುದ್ರಾಮಂಜೂಷವು—ಎರಡನೆಯ ಮುದ್ರಣ.

ಕ್ರಯ, ರೂ. ೧—೮—೦. 2

ವಿದ್ಯಾರ್ಥಿಗಳೂ ವಿದ್ಯಾವಂತರೂ ಸಾಮಾನ್ಯ ಪ್ರಜೆಗಳೂ ಅಧಿಕಾರಸ್ಥರೂ ಲೋಕವ್ಯವಹಾರಾದಿಗಳನ್ನು ಪರಿಷ್ಕಾರವಾಗಿ ಕಲಿತುಕೊಳ್ಳುವುದಕ್ಕೆ ವಿಶೇಷ ಸಹಕಾರಿಯಾದ "ಮುದ್ರಾಮಂಜೂಷ" ವೆಂಬೀ ನವರಸಯುಕ್ತವಾದ ಕನ್ನಡ ಗ್ರಂಥವು ಈಗಿನ ವ್ಯಾಕರಣಕ್ಕೆ ಸರಿಯಾಗಿ ತಿದ್ದಿ, ಬಹು ದೊಡ್ಡದಾದ ಹೊಸ ಅಕ್ಷರದಿಂದ ಒಳ್ಳೇ ಗ್ಲೇಜು ಕಾಗದದ ಮೇಲೆ ಅಚ್ಚು ಹಾಕಿ, ಪ್ರಕಟಿಸಲ್ಪಟ್ಟಿದೆ. ಚಿಮ್ಮಿ ಅಷ್ಟಪತ್ರ. ಸೆಕ್ಷನ್ ಹೊಲಿಗೆ, ಸುಂದರವಾದ ಕ್ಯಾಲಿಕೋ ಬೈಂಡು. ಬಹು ಶುದ್ಧವಾದ ಪ್ರತಿ. ಇದಕ್ಕೆ ಚಾಣಕ್ಯರ ನೀತಿ," "ಚಂದ್ರಗುಪ್ತ ಚಾಣಕ್ಯರ ಕಥೆ" ಎಂಬೀ ಹೆಸರುಗಳೂ ಉಂಟು. ಇಂಥಾ ಸರ್ವೋತ್ತಮವಾದ ಪುಸ್ತಕವನ್ನು ಕನ್ನಡಿಗರೆಲ್ಲಾ ತರಿಸಿ ಓದಿ, ಪ್ರಯೋಜನವನ್ನು ಪಡೆಯುವರೆಂದು ಹಾರೈಸುತ್ತೇವೆ. ಕ್ರಯ ೧ ಪ್ರತಿಗೆ ರೂ. ೧—೮—೦, ಪೋಸ್ಟೇಜು ೨ ಆಣೆ. ವಿ. ಪಿ. ಪಿ. ತರಿಸಿಕೊಂಡರೆ ರೂ. ೧—೧೧—೦ ಬೀಳುವುದು. ೧೦೦ ಅಥವಾ ಅದಕ್ಕಿಂತ ಹೆಚ್ಚು ಪ್ರತಿಗಳನ್ನು ತರಿಸಿಕೊಳ್ಳುವ ಪುಸ್ತಕವ್ಯಾಪಾರಿಗಳಿಗೆ ಶೇಕಡಾ ೨೫ ರೂಪಾಯಿಸಂತೆ ಡಿಸ್ಕೌಂಟು ಕೊಡಲಾಗುತ್ತದೆ. ಬೇಗ ಈ ವಿಳಾಸಕ್ಕೇನೇ ಬರೆಯಿರಿ:—

ವಿಳಾಸ—ಮ್ಯಾನೇಜರ್. ಸಿ. ಎಲ್. ಎಸ್. ಬುಕ್ ಡಿಪೋ.
ಮೈಸೂರು.

ಅತಿಸುಲಭ. ನೋಟೀಸು. ಅತಿಸುಲಭ

೧೯೦೬ನೆ ಲೋವರ್ ಸೆಕಂಡರಿ ಕನ್ನಡ ಟೆಕ್ಸ್ಟಿನ ಅತ್ಯುತ್ತಮವಾದ ನೋಟ್ಸು, ೧೬೪ ಪುಟವುಳ್ಳದ್ದು ಕ್ರಯ ೫ ಆಣೆ ಡಿಸ್ಕೌಂಟು ೦-೧-೦ ಮೆಟ್ರಿಕ್ಯುಲೇಷನ್ ರೀಡರಿನ ನೋಟ್ಸು ಕ್ರಯ ೬ ಆಣೆ

ವಿಳಾಸ—ಕನ್ನಡ ಪಂಡಿತ ಕೆ. ನಾರಾಯಣಶಾಸ್ತ್ರಿ, ಮಹಾರಾಜರವರ ಗೌರ್ನಮೆಂಟ್ ಕನ್ನಡ ಸ್ಕೂಲು ಮೈಸೂರು

ಅಗ್ಗ! ಅಗ್ಗ!! ಬಹು ಅಗ್ಗ!!!

ಮೇಲಾದ ಜರ್ಮನ್ ಸಿಲ್ವರ್ ಫ್ರೆಂಚ್ ಹೇರಿ ಟೆ[illegible] ಕಾಲ್ ಗೊಲಸು ಇದು ಬೆಳ್ಳಿಗೆ ಸಮಾನವಾದ ಜರ್ಮನ್ ಸಿಲ್ವರ್ ಬೆಳ್ಳಿಯಿಂದ ತಯಾರಿಸಲ್ಪಟ್ಟಿರುತ್ತೆ ಸುಲಭವಾಗಿ ಕಾಕಿ ತೆಗೆದು ಮತ್ತೆ ಕೀಲಿಸಿದರೂ ವಜಾ[illegible]ದ ತಿರುಪಿನಿಂದ



ಲೂ ಬೆಳ್ಳಿ ಗೊಲಸಿಗೆ ಸ್ವಲ್ಪವೂ ವ್ಯತ್ಯಾಸವಿಲ್ಲದಂತೆ ತಯಾರಿಸಲ್ಪಟ್ಟಿರುತ್ತೆ ಎಂದಿಗೂ ಬಣ್ಣ ಕೆಡಲಾರದು ಇದನ್ನು ನೋಡಿದವರು ಬಿಡದೆ [illegible] ಕೊಂಡುಕೊಳ್ಳುವರು [illegible] ಮದುವೆ ಮುಂತಾದ ಕಾರ್ಯಗಳಿಗೂ ಉಪಯೋಗಿಸುವಷ್ಟು ಸುಲಭವಾಗಿವೆ

ದೊಡ್ಡವು ಜೋಡಿ ೧ಕ್ಕೆ ರೂ ೩-೦-೦ ಚಿಕ್ಕವರಿಗೆ ರೂ ೧-೮-೦ ಮಕ್ಕಳಿಗೆ ರೂ ೧-೪-೦ ಆಣೆ

ವಿಳಾಸ—ಮ್ಯಾನೇಜರ್, ಜರ್ಮನ್ ಸಿಲ್ವರ್ ಜ್ಯುಯಲ್ ಡಿಪೋ, ಸಾಹುಕಾರ್ ಪೇಟೆ, ಮದ್ರಾಸು

ಸವಿನುಡಿ

ಲೋಕಹಿತಕ್ಕೋಸ್ಕರ ತಿಂಗಳಿಗೆರಡುಸಲ ಪ್ರಕಟವಾಗುವ ಪತ್ರಿಕೆ 9

ಒದವುದಕ್ಕೆ ಅನೇಕ ಉಪಯುಕ್ತಾಂಶಗಳೆರಡಿ ಇಷ್ಟು ಸುಲಭ ಚಂದಾ ಉಳ್ಳ ಪತ್ರಿಕೆಯು ಇದೊಂದಲ್ಲದೆ ಕನ್ನಡದಲ್ಲಿ ಬೇರೆ ಯಾವುದೂ ಇಲ್ಲ

ಪುಗಸಟೆ ದೊರೆಯುವ ಮಾದರಿ ಸಂಚಿಕೆ—ರಸಿಕರಾದವರು ಓದಿದರೆ ಪತ್ರಿಕೆಗೆ ಆಶ್ರಯ ಕೊಡದೆ ಇರುವುದೇ ಇಲ್ಲ. ಹೋಗಕೂಡದೇಕೆ ?

ಅಂಚೆ ವೆಚ್ಚಸಮೇತ ವರುಷದ ಚಂದಾ —

ಮುಂಗಡ ಹನ್ನೆರಡಾಣೆ ಮಾತ್ರವೇ, ಅನಂತರ, ಒಂದು ರೂಪಾಯಿ ಎಂಟಾಣೆ ಮಾತ್ರ

ವಿದ್ಯಾರ್ಥಿಗಳು ಅಂಚೆ ಖರ್ಚಿನ ಪೂರ್ತ **ಆರಾಣೆಗೆ ತಾವಾಗಿಯೂ ಅಂಚೆ ಚೀಟುಗಳನ್ನು ಮುಂಗಡ ಕೊಟ್ಟರೆ**, ಒಂದು ವರುಷ ಪೂರಾ ಪತ್ರಿಕೆಯನ್ನು **ಪುಗಸಟೆ ಕೊಡುತ್ತೇವೆ** ವಿ. ಪಿ. ಮೂಲಕ ತರಿಸಿಕೊಂಡರೆ ಒಂದಾಣೆ ಹೆಚ್ಚು

ಒದಿ ಬುದ್ಧಿವಂತರಾಗಬೇಕೆಂಬಿಚ್ಛೆಯುಳ್ಳವರು ಈ ಸಂಧಿಯನ್ನು ಬಿಡಬಾರದು. ಬೇಗ ಬೇಗ ನಿಮ್ಮ **ವಿಳಾಸಗಳ ಮಾತ್ರ ಕೊಟ್ಟು** ಮಾದರಿ ಸಂಚಿಕೆಯೊಂದನ್ನು ಓದಿನೋಡಿ

ವಿಳಾಸ:—ಭಾರತಿಸಂಘಂಗಿದಾಸ, ಸಂಪಾದಕ, ಸವಿನುಡಿ, ಹೊಸ ಕೋಟೆ, ಬೆಂಗಳೂರು ಡಿಸ್ಟ್ರಿಕ್ಟು

ವೃತ್ತಾಂತ ಪತ್ರಿಕೆ.

ಸನ್ ೧೯೦೬ ನೇ ಇಸವಿ ಜನವರಿ ತಾ|| ೧೧ ನೇ ಗುರುವಾರ

ಸಾರ್ವಜನಿಕ ಸಭೆಯು.

ಹಿಂದುಸ್ಥಾನದ ನ್ಯಾಷನಲ್ ಕಾನ್‌ಗ್ರೆಸ್ ಎಂಬ ಸಾರ್ವಜನಿಕ ಸಭೆಯು ಸ್ಥಾಪನೆಯಾಗಿ ೨೧ ವರುಷಗಳಾದವು. ೨೧ನೇ ಮಹಾ ಸಭೆಯು ಕಳೆದ ಡಿಸೆಂಬರ್ ೨೭ನೇ ತಾರೀಖು ಬುಧವಾರ ಕಾಶೀ ಪಟ್ಟಣದಲ್ಲಿ ಪ್ರಾರಂಭವಾಗಿ ಮೂರು ದಿನಗಳ ವರೆಗೆ ನಡೆಯಿತು. ವೈಸ್‌ರಾಯಿಯವರ ಮಂತ್ರಾಲೋಚನಾ ಸಭೆಯ ಮೆಂಬರರಾಗಿಯೂ ಬಹು ಸಮರ್ಥರೆಂಬ ಹೆಸರು ಪಡೆದವರಾಗಿಯೂ ಇರುವ ಮ|| ಗೋಪಾಲಕೃಷ್ಣ ಗೋಖಲೆಯವರು ಆ ಮಹಾ ಸಭೆಯ ಪ್ರೆಸಿಡೆಂಟರಾಗಿ ನಿಂತು, ಹಿಂದುಸ್ಥಾನದ ಕಾರುಬಾರುಗಳನ್ನೂ, ಪ್ರಜೆಗಳ ಸ್ಥಿತಿಗತಿಯನ್ನೂ, ವಿಶೇಷವಾಗಿ ಲಾರ್ಡ್ ಕರ್ಸನ್‌ರವರ ಆಳ್ವಿಕೆಯಲ್ಲಿ ಅವರು ನಡೆಸಿದ ಕಾರುಬಾರುಗಳನ್ನೂ, ಸ್ವದೇಶೀ ವಿಚಾರವನ್ನೂ ಕುರಿತು ತಮ್ಮ ದೃಷ್ಟಿಗೆ ತೋರಿದಂತೆಯೂ ದೇಶೀಯ ಪ್ರಜಾಕ್ಷೇಮಕ್ಕೆ ಹಿತವನ್ನುಂಟುಮಾಡುವಂತೆಯೂ ಉಪನ್ಯಾಸಮಾಡಿದರು. ಗವರ್ನಮೆಂಟಿನವರು ಬಂಗಾಳಾ ಅಧಿಪತ್ಯವನ್ನು ವಿಭಾಗ ಮಾಡಿದ್ದು ಆ ಪ್ರಾಂತ್ಯದಲ್ಲಿ ತುಂಬಾ ಗಲಭೆಯ

ಚೇಂಬರ್ಲೇನ್ ರವರು ಹೊಟ್ಟೆಶೂಲೆ, ಕಾಲರಾ, ಭೇದಿಗಳಿಗೆ ಕಂಡು ಹಿಡಿದಿರುವ ಔಷಧವು,



52

ಕಳಕ್ಕೆ ಬ್ಬೆಯ ನೆ (ವು, ವಾಂತಿ ಭೇದಿ ಉಪದ್ರವ, ಬಿರಿ ಭೇದಿಯಾಗುವದು, ಅತಿಸಾರ, ಕಾಲುಗಳ ಸೆಳೆತಗಳ ನೋವು ಹೊಟ್ಟೆಶೂಲೆ— ಈ ರೋಗಗಳಿಗೆ ತಕ್ಕ ಪರಿಹಾರವು ಈ ಔಷಧಕ್ಕಿಂತಲೂ ಪ್ರಪಂಚದಲ್ಲಿ ಮತ್ತೆ ಬೇರೆ ಇಲ್ಲ. [illegible] ಭಾರೀ ಡಾಕ್ಟರು ಹೇಳುವುದನ್ನು ಕೇಳಿ —"ಕೆಳ ಹೊಟ್ಟೆ ಕರುಳುಗಳಲ್ಲಿ ಉಂಟಾಗುವ ನೋವುಗಳಿಗೆಲ್ಲಾ ನಾನು [illegible] ಇದು ಸಂಪೂರ್ಣವಾದ ಔಷಧ, [illegible] ರೋಗಿಗಳಿಗೆ ನಾನು ಈ ಔಷಧವನ್ನು ಕೊಟ್ಟು [illegible] ರುತ್ತೇನೆ" [illegible] ರೋಗಗಳಲ್ಲೆಲ್ಲಾ ಈ ಔಷಧವನ್ನೇ ಸೇವಿಸತಕ್ಕದ್ದು [illegible] ಔಷಧವು [illegible] ಜಾಗ್ರತೆಯಾಗಿ ಕೊಟ್ಟರೆ [illegible] ಗುಣ ಮಾಡುವುದು ಆದಕಾರಣ ಯಾವ ಮನೆಯಲ್ಲಿ ಈ ಔಷಧ ಇಲ್ಲದೆ ಇರಬಾರದು [illegible] ತರಿಸಿ ಪ್ರಾಣವನ್ನು ಉಳಿಸಿಕೊಳ್ಳಬಹುದು [illegible] ಔಷಧಿ [illegible] ಈ ಔಷಧ [illegible] ಬರೆದು [illegible] ತಮ್ಮ ವಿಳಾಸವನ್ನು [illegible] ಸಿಗುವ ಇತರ [illegible]

ರೋಷ್ಟಿ ಇ. ಸ್ಮಿತ್ ಅಂಡ್ ಕಂಪೆನಿ,
ಮೌಂಟ್ ರೋಡ್,
ಮದರಾಸ್

ನ್ನು ಉತ್ಪತ್ತಿಸಿದೆ ಎಲ್ಲೆಲ್ಲೂ "ದೇಶೀ," ಸ್ವದೇಶೀ ಎಂಬ ಶಬ್ದವೇ ಕೇಳಿಬರುತ್ತಿದೆ ವಿಲಾಯಿತಿಯ ಸರಕುಗಳ ಮಾರಾಟಕ್ಕೆ ಅಡ್ಡಿಯನ್ನುಂಟುಮಾಡಬೇಕೆಂಬ ಉತ್ಸಾಹದಲ್ಲಿ ಸ್ವದೇಶೀ ವಸ್ತುಗಳಿಗೆ ಕೊರತೆಯುಂಟಾಗಿರುವುದು ಇದು ನಡೆಯುವುದರಲ್ಲಿ ದೇಶಾಭಿವೃದ್ಧಿಗೆ ಅನುಕೂಲವಾಗುವುದು ಭಾರತೀಯರು ಗವರ್ನಮೆಂಟಿನವರ ಕಾರುಬಾರುಗಳನ್ನು ಆಗಿಂದಾಗ್ಗೆ ಹಿಡಿದು ಸಹಜವಾಗಿ ಚರ್ಚಿಸುವುದೂ, ಪ್ರಜೆಗಳ ಕಷ್ಟ ಇಂಗಿತಗಳನ್ನು ಪ್ರಭುಪಾಲಕರಿಗೆ ನ್ಯಾಯವಾಗಿಯೂ ತಾಳ್ಮೆಯಿಂದಲೂ ತಿಳಿಯಪಡಿಸುವುದೂ ಅವಶ್ಯವೇ ಸರಿ ಆದರೆ ಉಪನ್ಯಾಸಕರೂ ಚರ್ಚೆಮಾಡಿ ಆಕ್ಷೇಪಿಸತಕ್ಕವರೂ ವಿಷಯಗಳನ್ನು ಮೊದಲು ಸರಿಯಾಗಿ ತಿಳಿದುಕೊಂಡಿರಬೇಕು ಗವರ್ನಮೆಂಟಿನವರ ಕಾರ್ಯಗಳನ್ನು ಸಿದಾನವಾಗಿಯೂ ನಿಷ್ಪಕ್ಷಪಾತತೆಯಿಂದಲೂ ಚರ್ಚಿಸಿ ತಿಳಿದುಕೊಳ್ಳದೇನೇ ಗವರ್ನಮೆಂಟಿನವರನ್ನು ನಾನಾ ಪ್ರಕಾರವಾಗಿ ಬಿಲ್ಲಗಳೆಯುವುದೂ, ಅವರಿಗೆ ಪ್ರಜೆಗಳ ಮೇಲೆ ದಯೆದಾಕ್ಷಿಣ್ಯಾದಿಗಳಿಲ್ಲವೆನ್ನುವುದೂ, ಅವರು ಈ ರಾಷ್ಟ್ರವನ್ನು ಹಿಂಡಿ ಹಾಕುತ್ತಾರೆನ್ನುವುದೂ ಸಹಜವಾದ ಆಕ್ಷೇಪಣೆಗಳೆನ್ನಿಸಿಕೊಳ್ಳುವುದಿಲ್ಲ. ಅಲ್ಲಗಳೆಯುವುದರಿಂದಲೂ ನಿಷ್ಠುರ ವಾಕ್ಯಗಳಿಂದಲೂ ಯಾರೂ ಇದುವರೆಗೆ ತಮ್ಮ ಇಷ್ಟಾರ್ಥವನ್ನು ಕೈಗೂಡಿಸಿಕೊಂಡಿಲ್ಲ. ಪ್ರಜೆಗಳೂ ಪ್ರಜಾಪಾಲಕರೂ ಏಕೀಭವಿಸಿ ಕಾರ್ಯಸಾಧನೆ ಮಾಡುವುದಾದರೆ ಎಲ್ಲಾ ಅನುಕೂಲವಾದೀತೆನ್ನುವುದಕ್ಕೆ ಸಂಶಯವಿಲ್ಲ

ಒಳದೇಶದ ವೃತ್ತಾಂತಗಳು.

ಚಾಮುಂಡಿ ಬೆಟ್ಟದಮೇಲಿರುವ ದೇವಿಕೆರೆ ಎಂಬ ಕೊಳವನ್ನು ಸರಿಮಾಡುವುದಕ್ಕೆ ೨,೩೦೦ ರೂಪಾಯಿ ಸ್ಯಾಂಕ್ಷನ್ ಆಗಿದೆ

●●●●

ದಿವಾನ್ ಸರ್ ಪಿ. ಎನ್. ಕೃಷ್ಣಮೂರ್ತಿಯವರು ತಮ್ಮ ಸೆಕ್ರೆಟರಿಗಳ ಸಮೇತ ಈ ದಿನ ಬೆಂಗಳೂರಿಂದ ರಾಜಧಾನಿಗೆ ದಯಮಾಡುವವರಾಗಿದ್ದಾರೆಂದು ವರ್ತಮಾನವಿದೆ

●●●●

ನಮ್ಮ ಯುವರಾಜರ ವಿದ್ಯಾಗುರುಗಳಾದ ಮೇಜರ್ ಹಿಲ್‌ರವರಿಗೆ ಕಳೆದ ವಾರ ಬೆಂಗಳೂರಿನಲ್ಲಿ ವಿವಾಹವಾಯಿತು ನೂತನ ದಂಪತಿಗಳು ಈಗ ಕುಣಿಗಲಿಗೆ ಹೋಗಿರುತ್ತಾರೆ

●●●●

ಮೈಸೂರು ವೀರನಗೆರೆಯಲ್ಲಿದ್ದ ಬೆಲ್ಸ್ ನೂಲಿನ, ಮುಚ ಎಂಬಿಬ್ಬರು ಹುಡುಗರು ಎಲ್ಲೋ ತಪ್ಪಿಸಿಕೊಂಡು ಹೋಗಿ ನಾಲ್ಕು ತಿಂಗಳು ಮೇಲಾಯಿತು ಅವರಲ್ಲಿ ಒಬ್ಬನಿಗೆ ೮, ಇನ್ನೊಬ್ಬನಿಗೆ ೫ ವರುಷ ವಯಸ್ಸಾಗಿದೆ

●●●●

ಈ ಸಲ ನಡೆದ ಮೈಸೂರು ಲೋವರ್ ಸೆಕಂಡರಿ ಪರೀಕ್ಷೆಯಲ್ಲಿ ಮೈಸೂರು ಹೈಸ್ಕೂಲಿನಿಂದ ೧೯ಕ್ಕೆ ೧೦ ಮಂದಿಯೂ, ಹಾರ್ಡ್ವಿಕ್ ಕಾಲೇಜಿನಿಂದ ೧೩ಕ್ಕೆ ೯ ಮಂದಿಯೂ, ಓವರಾಂಪೇಟೆ ಸ್ಕೂಲಿನಲ್ಲಿ ೨೯ಕ್ಕೆ ೨೦ ಮಂದಿಯೂ ತೇರ್ಗಡೆ ಆಗಿರುವಂತೆ ತಿಳಿದುಬಂದಿದೆ

●●●●

ಇನಾಂ ಗ್ರಾಮಗಳಲ್ಲಿ ಪಟೇಲ್ ಶ್ಯಾನ ಭಾಗರನ್ನು ಇನಾಂದಾರರೇ ಗೊತ್ತುಮಾಡಬೇಕೆಂತಲೂ, ಅದನ್ನು ಡೆಪ್ಯುಟಿಕಮಿಷನರು ಮಂಜೂರು ಮಾಡಬೇಕೆಂತಲೂ, ಅವರಿಗೆ ಸಲ್ಲಬೇಕಾದ ರಸುಮುಗಳನ್ನು ಇನಾಂದಾರರು ಕೊಡುತ್ತಾ ಬರಬೇಕೆಂತಲೂ ಸರ್ಕಾರದವರು ರೂಲ್ಸು ಮಾಡಿರುತ್ತಾರೆ

●●●●

ಹಿಂದಿನ ವಾರ ಶ್ರೀಮನ್ ಮಹಾರಾಜರವರು ರಾಜಧಾನಿಯಿಂದ ಕಾಕನಕೋಟೆಗೆ ಮೋಟಾರ್ ಕಾರ್ ಎಂಬ ಬಂಡಿಗಳಲ್ಲಿ ದಯಮಾಡಿ, ಅಲ್ಲಿ ಆನೆ ಸಿಕ್ಕಿದ್ದನ್ನು ಪರಾಂಬರಿಸಿ ವಾಪಸು ಚಿತ್ತೈಸುವಾಗ್ಗೆ ಚಟ್ನಹಳ್ಳಿ ಹತ್ತಿರ ಅವರ ಹಿಂದಿನ ಮೋಟಾರ್ ಗಾಡಿಗೆ ಎದುರಾಗಿ ಒಂ

ದು ಎತ್ತಿನ ಗಾಡಿ [illegible] ರಸ್ತೆ ಪಕ್ಕದಲ್ಲಿ ಉರುಳಿದ್ದರಿಂದ [illegible] ಅವರಲ್ಲಿ [illegible] ಇದ್ದರು [illegible] ಅನುಸ್ಸರಣ [illegible] ತಂದು ಇಲ್ಲಿ ಆಸ್ಪತ್ರೆಯಲ್ಲಿಯು ಇಲಾಜು ಮಾಡುತ್ತಿದ್ದಾರೆ [illegible] ಇಷ್ಟರಲ್ಲೇ ಆಗುತ್ತದೆ ಎಂದು ಕೇಳುತ್ತೇವೆ

●●●●

[illegible] ಆಗಿರತಕ್ಕ ಗವರ್ನರಾದ ಲಾರ್ಡ್ [illegible] ರವರು [illegible] ಸಭೆ [illegible] ಆ[illegible] ಸನ್ಮಾನ ಪತ್ರ ಅವರ ಅಭ್ಯುದ್ಧಿ [illegible] ಗಳನ್ನು [illegible] ಗಿಸಿಕೊಟ್ಟರು

●●●●

[illegible]ಳವಳ್ಳಿ ತಾಲ್ಲೂಕ [illegible] ಜಾತ್ರೆಯಲ್ಲಿ [illegible] ಜನರಲ್ಲಿ [illegible] ಬಿದ್ದು [illegible] ಇಂತಾ ದುಸ್ಥಿತಿ [illegible] ರೂ [illegible] ಸಿಕ್ಕುವುದೇ ಪಾಡಾಗಿದೆ

●●●●

ಲೇಟ್ [illegible] ರಾಜರವರ [illegible] ದಿನ ಶ್ರೀಮನ್ ಮಹಾರಾಜರವರ ಅಪ್ಪಣೆ ಪ್ರಕಾರ [illegible] ಒಬ್ಬ ನೌಕರ ಕಲ್ಕತ್ತೆಗೆ ಹೋಗಿ ಅಲ್ಲಿನ ಕಾಳಿಕಾಸ್ಥಾನದಲ್ಲಿ ಕಟ್ಟಿಸಿದ ವಧ[illegible] ಸತ್ರದಲ್ಲಿ ವೈದಿಕರಿಗೆ ೫೦೦ ರೂಪಾಯಿ ದಕ್ಷಿಣೆ ಸಮಾರಾಧನೆ ಕೊಟ್ಟು ಬಂದಿರುತ್ತಾನೆಂದು ತಿಳಿದು ಬಂದಿದೆ

●●●●

ಕಳೆದ ವಾರ ಕೋಲಾರದ ಹತ್ತಿರ ಬಂದು ಕೋರ್ಟಿನ [illegible] ಕಾಗೆಯೂ ವಿದ್ಯುಚ್ಛಕ್ತಿಯ [illegible] ತಂತಿಯ ಮೇಲೆ ಕುಳಿತುಕೊಂಡದ್ದರಿಂದ ಅವೆರಡೂ ಆ ಕ್ಷಣವೇ ಸತ್ತುಬಿದ್ದವು [illegible] ಕೋತಿಗಳೂ ಅನೇಕವಾಗಿ ಸೇರಿ ಆ ಹೆಣಗಳ ಬಳಿ ನಾನಾ ವಿಧ ಶಬ್ದಮಾಡುತ್ತಾ ದುಃಖಪಡುತ್ತಿದ್ದವೆಂದು ಒಬ್ಬ ಬಾತ್ಮೀದಾರರು [illegible] ಬರೆಯುತ್ತಾರೆ

●●●●

ಮೈಸೂರು ಸರ್ಕಾರಿ ನೌಕರರ ಪೈಕಿ ಯಾರಿಗೇ ಆಗಲಿ [illegible] ನಾಯಿ ಕಚ್ಚಿದಾಗ [illegible] ಅಂಥವರನ್ನು ಉತ್ತರ ದೇಶದಲ್ಲಿರುವ ಕಸೌಲಿ ಆಸ್ಪತ್ರೆಗೆ ಚಿಕಿತ್ಸೆಗಾಗಿ ಕಳುಹಿಸಿಕೊಡುವ ವಿಷಯದಲ್ಲಿ ಸರ್ಕಾರದವರು ಖರ್ಚನ್ನು ತಾವೇ ವಹಿಸಿಕೊಳ್ಳುವುದಾಗಿ [illegible] ರತ್ತಾರೆ

●●●●

ಹಿಂದಿನ ಸೋಮವಾರ ಮಧ್ಯಾಹ್ನ ಬೆಂಗಳೂರು ಯಲಹಂಕ ಬಾಗಿಲು ಅಂಚೆಯಾಫೀಸಿನಲ್ಲಿದ್ದ ಪಂಡಿತ ಬಿ. ಸಿ. ತಿಮ್ಮಪ್ಪನವರು ಮಾಡಿದರೆಂಬ ವ್ಯಸನಕರವಾದ ಸಂಗತಿಯನ್ನು ತಿಳಿದು ವಿಷಾದಿಸುತ್ತೇವೆ ಇವರು ಪಂಡಿತನದಲ್ಲಿ ನಿಪುಣರೆನ್ನಿಸಿಕೊಂಡಿದ್ದರು, ಇವರ ವಯಸ್ಸು ೧೯ ವರುಷವಾಗಿತ್ತು ಎಂದು ಅಲ್ಲಿನ ಒಬ್ಬ [illegible] ಬರೆಯುತ್ತಾರೆ

●●●●

ದೇವನಹಳ್ಳಿ ಟೌನ್ ಮೆಡಿಕಲ್ ಪ್ರಾಕ್ಟೀಷನರ್ ಮ|| ಎಂ. [illegible] ವಿಂದಸೆಟ್ಟರವರು, ಮೈಸೂರು [illegible] ಅನಂತಜೋಯಿಸರು [illegible] ಗ್ರಾಜುಯೇಟ್ಸ್ ಟ್ರೇಡಿಂಗ್ ಅಸೋಸಿಯೇಷನ್ [illegible] ನವರೂ ೧೯೦೬ನೆ ವರುಷದ ಕ್ಯಾಲೆಂಡರನ್ನು (ಪಂಚಾಂಗ) [illegible] ಟಿಸಿ, ನಮ್ಮಲ್ಲಿಗೆ ಕಳುಹಿಸಿರುತ್ತಾರೆ ಇವನ್ನು ನಾವು ಆದರದಿಂದ ಸ್ವೀಕರಿಸಿ ಅವರನ್ನು ವಂದಿಸುತ್ತೇವೆ

●●●●

ರಾಜಧಾನಿಯಲ್ಲಿ ಮ್ಯುನಿಸಿಪಾಲಿಟಿಯವರು ೧೨,೦೦೦ ರೂಪಾಯಿಗಿಂತಲೂ ಹೆಚ್ಚಾಗಿ ಖರ್ಚುಮಾಡಿ ರಸ್ತೆಗಳನ್ನು ದುರಸ್ತು ಮಾಡಿಸುತ್ತಿದ್ದಾರೆ ಹೀಗೆ ಮಾಡಿಸಿರುವ ರಸ್ತೆಗಳಿಗೆ ಸರಿಯಾಗಿ [illegible] ನೀರು ಹಾಕದೆ ಇರೋಣದರಿಂದ ರಸ್ತೆಗಳೆಲ್ಲಾ ದೂಳೆದ್ದು ಹೋಗಿರುವವು ಈ ವಿಷಯಕ್ಕೆ ವೈಸ್ ಪ್ರೆಸಿಡೆಂಟರು ಗಮನ ಕೊಟ್ಟಾರೆಂದು ನಿರೀಕ್ಷಿಸುತ್ತೇವೆ

●●●●

ಬೆಂಗಳೂರು ಇಂಪೀರಿಯಲ್ ಸರ್ವಿಸ್ ರೆಜಿಮೆಂಟಿನ ಕರ್ನಲ್ ದೇಶರಾಜೇ ಅರಸಿನವರೂ ಇನ್ನು ಕೆಲವರೂ ಕಲ್ಕತ್ತಾ ಪಟ್ಟಣಕ್ಕೆ ಹೋಗಿ ಅಲ್ಲಿನ ಕುದುರೆ ಸೈನಿಕರ ಸಂಗಡ ಪೋಲೋ ಎಂಬ ಕುದುರೆ

[illegible] ಆದರ ಜೊಂಡಾಟದ ಸಂದ್ಯವನ್ನು ಆಡಿದರು [illegible] ಎಂ ಗೋಲ್ ಗ ಸಟ್ ಸಿಡಿಯರಿಗಳನ್ನು ಮಾಡಿ, [illegible] ಸೋಲಿಸಿರುತ್ತಾರೆಂದು ವರ್ತಮಾನ ಬಂದಿದೆ

••••

[illegible]ದ ಡಿಸ್ಟ್ರಿಕ್ಟ್ ಪೊಲೀಸ್ ಸುಪರಿಂಟೆಂಡೆಂಟರಾಗಿ [illegible] ಡೇವಿಸ್ ಯವರು [illegible] ಕಾಯಿಲೆಯಲ್ಲಿ ಬಿದ್ದುಕೊಂಡರು. [illegible] ಇಲ್ಲಿ [illegible] ಅವರನ್ನು ಚಿಕಿತ್ಸೆ ಮಾಡಿಸುವುದಕ್ಕೆ ಅಲ್ಲಿಂದ ರೈಲಿನ ಮದರಾಸಿಗೆ ಕರೆದುಕೊಂಡು ಹೋದರು. ಡಿಸ್ಟ್ರಿಕ್ಟ್ ಪೋಲೀಸನ್ನು ಮೆ॥ ಆರ್. ಬಿ. ಪ್ಲನುರ್‌ಯವರೇ ನೋಡಿಕೊಳ್ಳುತ್ತಾರೆ

••••

ಈ ಸಲ ಶ್ರೀರಂಗಪಟ್ಟಣದ ಮತ್ತು [illegible]ರಿನ ಸರ್ಕಾರಿ ಗಂಧದ [illegible]ಗಳಲ್ಲಿ [illegible] ಟನ್ನಗಳ ಗಂಧ ಹರಾಜಾಗಿ [illegible] ಲಕ್ಷ [illegible] ರೂಪಾಯಿ ಉತ್ಪತ್ತಿಯಾಯಿತು. ಈ ಸಲ ಹರಾಜಿನಲ್ಲಿ ಗಂಧದ [illegible] ಹಿಂದೆ ಯಾವಾಗಲೂ ಹೆಚ್ಚಿರಲಿಲ್ಲ. ನಮ್ಮ [illegible]ದಲ್ಲಿ ಈ ವರುಷ ಈ ಬಾಬಿನಲ್ಲಿ ಒಟ್ಟು [illegible] ರೂಪಾಯಿಗಿಂತಲೂ ಹೆಚ್ಚಾಗಿಯೇ [illegible] ಆಗಿದೆ ಎಂದು [illegible] ಸಂತೋಷಪಡುವೆವು.

••••

ಕಾಕನಕೋಟೆಯ [illegible] ಇಲಾಖೆಯವರು [illegible] ಕೆಲಸ ಮಾಡುತ್ತಿದ್ದಾರೆ. ಇದುವರೆಗೆ [illegible] ಆನೆಗಳನ್ನು [illegible] ಸ್ವಲ್ಪ [illegible] ಪ್ರಿನ್ಸ್ [illegible] ವೇಲ್ಸ್‌ರವರು ಅಲ್ಲಿಗೆ [illegible] ಆನೆಗಳನ್ನು [illegible]

••••

ಮೈಸೂರು [illegible] ಪ್ರೆಸ್ಸಿನ [illegible] ಬೆಂಗಳೂರಿಂದ [illegible] ಪ್ರಿನ್ಸ್ [illegible] ವೇಲ್ಸ್‌ರವರಿಗಾಗಿ [illegible]

••••

ಶ್ರೀಮಾನ್ [illegible] ಯುವರಾಜರವರ [illegible] ಗುಂಡ್ಲುಪೇಟೆ ತಾಲ್ಲೂಕು [illegible] ರಾಜಧಾನಿಯಿಂದ [illegible] ಕೆಡ್ಡಾ ಕ್ಯಾಂಪಿಗೆ [illegible] ಬಿಡಾರ [illegible] ಅವರೆಲ್ಲಾ ಆ ಸಾಯಂಕಾಲ [illegible] ಬಂದು, [illegible] ಅಲ್ಲಿ ಆಗಮಿಸಿ ನೆನ್ನೆ ಸಾಯಂಕಾಲ ರಾಜಧಾನಿಗೆ ಬರುವವರಾಗಿದ್ದಾರೆಂದು ಕೇಳಿದೆವು

••••

ಬೆಂಗಳೂರು ಪಟ್ಟಣದಿಂದ ಬಿಡದಿಗೆ ಹೋಗುವ ರಸ್ತೆಯಲ್ಲಿ [illegible] ದಿಂದ ಸ್ವಲ್ಪ ದೂರದಲ್ಲಿ ಪೊಲೀಸ್ ಸ್ಟೇಷನ್ನಿನಲ್ಲಿ [illegible] ಎಕ್ಸ್‌ಹಿಬಿಷನ್ [illegible] ಪ್ರಿನ್ಸ್ ಆಫ್ [illegible] ವೇಲ್ಸ್‌ರವರು [illegible] ಫೆಬ್ರವರಿ [illegible] ನೇ ತಾ [illegible] ಸಾಯಂಕಾಲ ಪ್ರತಿಷ್ಠೆ ಮಾಡುವರು. ಈ ಉತ್ಸವಕ್ಕಾಗಿ ಆ [illegible] ಸುಂದರವಾದ ಚಪ್ಪರವನ್ನೂ ದೊಡ್ಡ ಮನುಷ್ಯರೆಲ್ಲಾ ಸೇರುವ [illegible] ಗ್ಯಾಲರಿಗಳನ್ನೂ ಕಟ್ಟಿಸುತ್ತಿದ್ದಾರೆ.

••••

ಹೊಸ ವರುಷದ ಬಹುಮಾನಗಳು ಕಳೆದ ೧ನೇ ತಾರೀಖಿನ ದಿನ [illegible]ವಾದವು. ಮೈಸೂರು ಸಂಸ್ಥಾನದಲ್ಲಿ ವಿದ್ಯುಚ್ಛಕ್ತಿಯ ಕಾರ್ಖಾನೆ [illegible] ಸ್ಥಾಪನೆ ಮಾಡಿ, ಸೂಪರಿಂಟೆಂಡಿಂಗ್ ಇಂಜನಿಯರಾಗಿರುವ ಮೇಜರ್ ಆರ್ಥರ್ ಜಾಲಿ ಡಿಲಾಬಿನಿಯರ್ ಯವರಿಗೆ ಸಿ. ಐ. ಇ. [illegible] ಬಿರುದೂ ಬೆಂಗಳೂರು ದಂಡಿನಲ್ಲಿ ಮಹಾ ಧರ್ಮಿಷ್ಠರೆಂಬ [illegible] ಪಡೆದಿರುವ ಮ್ಯುನಿಸಿಪಲ್ ಕಮಿಷನರ್ ರಾವ್ ಬಹದೂರ್ [illegible] ಆಣ್ಣಾಸಾಮಿ ಮೊದಲಿಯಾರ್ರಿಗೆ ೨ನೇ ಕ್ಲಾಸಿನ [illegible] ಹಿಂದ್ ಎಂಬ ಬಿರುದೂ ದೊರಕಿರುತ್ತವೆ

••••

ಸರ್ಕಾರದವರು ಜನನ ಮರಣಗಳ ಸಂಖ್ಯೆಯನ್ನು ಎಲ್ಲಾ ಕಡೆಗಳ [illegible] ಕೊಡಿಸುತ್ತಾರಷ್ಟೆ. ಇನ್ನು ಮೇಲೆ ಬಾಣಂತಿಯರು ಮಿಷ್ಟು [illegible] ಸಾಯುತ್ತಾರೆಂಬುವುದನ್ನು ರಿಜಿಸ್ಟರಿನಲ್ಲಿ ಬೇರೇ ಕಲಂ ಹಾಕಿ [illegible] ರಿಪೋರ್ಟ್ ಮಾಡಬೇಕೆಂದು ನಮ್ಮ ಸರ್ಕಾರದವರು ಎಲ್ಲಾ [illegible] ಕಮಿಷನರುಗಳಿಗೂ ಮ್ಯುನಿಸಿಪಲ್ ಮತ್ತು ಡಿಸ್ಟ್ರಿಕ್ಟ್ ಬೋರ್ಡ್ [illegible] ಪ್ರಸಿಡೆಂಟರಿಗೂ ತಿಳಿಸಿರುತ್ತಾರೆ. ಪ್ರಜೆಗಳು ತಮ್ಮ [illegible] ಮಕ್ಕಳಿಗೆ ವಿಶೇಷ ಪ್ರಸ್ತ ಮಾಡುವುದನ್ನು ಅವರಿಗೆ [illegible] ವ [illegible] ಕೊಡುವ ತನಕ ಆದರೂ ಸಾವಕಾಶ ಮಾಡಿದಲ್ಲಿ ಬಾಣಂತಿಯರ [illegible] ಸಂಖ್ಯೆಯು ಕಡಿಮೆಯಾಗುವುದಲ್ಲದೆ ಹುಟ್ಟಿದ ಮಕ್ಕಳೂ [illegible]ವಾಗಿ ಬೆಳೆಯುವುದಕ್ಕೂ ಎಷ್ಟೋ ಸಹಕಾರಿಯಾದೀತು.

••••

ಕಳೆದ ವಾರ ಬೆಂಗಳೂರಿನಲ್ಲಿ ನಡೆದ ಮಿಷನ್ ಸಂಘದಲ್ಲಿ [illegible] ಮಿಷನ ಬಿಡಾರಗಳು [illegible] ಕಾಗಿರುವಂತೆ ಕೇಳುತ್ತೇ [illegible] ಮಾಡಿದ ರೆವ್. [illegible] ಮೈಸೂರು ಮಿಷನ್ ಪ್ರೆಸ್ಸಿನ ಸೂಪರಿಂಟೆಂಡೆಂಟರಾಗಿಯೂ ರೆವ್. ಟು[illegible] ನೆಲ್ಲಾ ಯವರು ಗುಬ್ಬಿ ಸರ್ಕಿಟಿನಲ್ಲಿಯೂ ಇರುವರು. ರೆವ್. ಎಸ್ [illegible] ಯವರೂ [illegible] ಯವರೂ ದೇಶಾರೋಗ್ಯಕ್ಕಾಗಿ [illegible] ಹೋಗಿ ಬರುತ್ತಾರೆ. [illegible] ದ ಬೆಂಗಳೂರಿಂದ ರೆವ್. [illegible] ತುಮಕೂರಿಗೂ [illegible] ಮೈಸೂರು ಮಿಷನ್ ಪ್ರೆಸ್ ಸೂಪರಿಂಟೆಂಡೆಂಟರಾಗಿರುವ ರೆವ್. ಸ್ಪೆನ್ಸರ್ ಯವರು ಮೈಸೂರು ಹಾರ್ಡ್ವಿಕ್ ಕಾಲೇಜಿಗೂ ನೇಮಕವಾಗಿದ್ದಾರೆ. ರೆವ್. ಬೂಟ್‌ರವರು ಮೈಸೂರು ಮಿಷನ್ ಹೈಸ್ಕೂಲಿನ ಭಾರವನ್ನು ವಹಿಸಿರುವರು.

••••

ನಂಜಾ ಫಹನವನ್ನೆತ್ತಿದ ಪ್ರಿನ್ಸ್ ಮತ್ತು ಪ್ರಿನ್ಸೆಸ್ ಆಫ್ ವೇಲ್ಸ್‌ರವರು ಮೈಸೂರು ಸಂಸ್ಥಾನಕ್ಕೆ ದಯಮಾಡುವದರ ನಿಮಿತ್ತ [illegible] ಸಂಸ್ಥಾನದ ಸಮಸ್ತ ಸರ್ಕಾರಿ ಕಛೇರಿಗಳಿಗೂ, ಕೋರ್ಟುಗಳಿಗೂ, ಸ್ಕೂಲುಗಳಿಗೂ ಇದೇ ಜನವರಿ [illegible] ನೇ ಸೋಮವಾರ, [illegible] ಗಳವಾರ, ಬುಧವಾರ ರಜಾ ಕೊಟ್ಟಿದೆ. ಮತ್ತು ಅವರು ಬೆಂಗಳೂರಿಗೂ ದಯಮಾಡುತ್ತಾರಾದ್ದರಿಂದ ಫೆಬ್ರವರಿ [illegible] ನೆ ತಾರೀಖು ಸೋಮವಾರ ಅಲ್ಲಿನ ಸಮಸ್ತ ಸರ್ಕಾರಿ ಆಫೀಸುಗಳಿಗೂ ಕೋರ್ಟುಗಳಿಗೂ ಸ್ಕೂಲುಗಳಿಗೂ ರಜಾ ಕೊಟ್ಟಿದೆ. ಇಲಾಖಾ ಅಧಿಕಾರಿಗಳು ಅಂದು [illegible] ಕಾರ್ಯಗಳಿಗೆ ಅಡ್ಡಿಯಾಗದಂತೆ ಏರ್ಪಾಡು ಮಾಡತಕ್ಕದ್ದು

••••

ಕಳೆದ ಬುಧವಾರ ರಾಜಧಾನಿಯಲ್ಲಿರುವ ಜಯಲಕ್ಷ್ಮೀವಿಲಾಸ ಆರ್ಯಬಂಗಲಾ [illegible] ಯಲ್ಲಿ [illegible] ಉತ್ಸವವನ್ನು [illegible] ದೊಡ್ಡ ಮನುಷ್ಯರು ದಯಮಾಡಿದ್ದರು. [illegible]

••••

[illegible]

[illegible] ಬೆಂಗಳೂರು [illegible] ಆ ಪ್ರಾಂತ್ಯದಲ್ಲಿ [illegible], ಧಾನ್ಯ [illegible] ಕ್ಷಾಮ ಪ್ರಾಪ್ತವಾಗಿದೆ ಎಂದಾಗಲಿ, ಪ್ರಾಪ್ತವಾಗುವಂತಿದೆ ಎಂದಾಗಲಿ ಹೇಳುವ ಸ್ಥಿತಿ ಇನ್ನೂ ಕಂಡುಬರುವದಿಲ್ಲ

••••

ಕಾಶೀಪಟ್ಟಣದಲ್ಲಿರುವ ಪ್ರಸಿದ್ಧವಾದ ಸೆಂಟ್ರಲ್ ಹಿಂದೂ ಕಾಲೇಜನ್ನು ಸ್ಥಾಪಿಸಿ ನಡೆಸುತ್ತಿರುವ ಮಿಸೆಸ್ ಬೆಸೆಂಟ್ ಎಂಬಾಕೆಯು ಮಿಸ್ ವಿಲ್ಸನ್, ಮೆ॥ ಭಗವಾನ್‌ದಾಸ್ ಎಂಬಿವರನ್ನೂ ಒಬ್ಬ ಪಾರ್ಸಿ ದೊಡ್ಡಮನುಷ್ಯನನ್ನೂ ಸಂಗದ ಕರೆದುಕೊಂಡು, ಕಳೆದ ಗುರುವಾರ ಮಧ್ಯಾಹ್ನ ರಾಜಧಾನಿಗೆ ಬಂದಿದ್ದರು. ಶ್ರೀಮನ್ಮಹಾರಾಜರವರು ಆಕೆಗೆ ಭೇಟಿಕೊಟ್ಟು, ಸ್ವಲ್ಪಹೊತ್ತು ಆಕೆಯ ಸಂಗಡ ಸಂಭಾಷಣೆ ಮಾಡಿದರು. ಮೇಲ್ಕಂಡ ಕಾಲೇಜಿನ ಮೂಲಧನಕ್ಕೆ ೧೦ ಲಕ್ಷ ರೂಪಾಯಿ ಬೇಕಾಗಿರುವದಾಗಿಯೂ, ಆ ಸ್ಥಿತಿ ಆಕೆ ಆಗಲೇ ೬ ಲಕ್ಷ ರೂಪಾಯಿ ಕೂಡಿಸಿರುವದಾಗಿಯೂ, ಉಳಿದ ಹಣವನ್ನು ಕೂಡಿಸುವುದಕ್ಕೆ ಚಂದಾ ಎತ್ತಬೇಕೆಂಬ ಉದ್ದೇಶದಿಂದ ಆಕೆ ಮೈಸೂರಿಗೆ ಬಂದಿದ್ದ ಹಾಗೂ ಕೇಳುತ್ತೇವೆ. ಆ ಹಿಂದೂ ಕಾಲೇಜಿನ ಅಭಿವೃದ್ಧಿಯಲ್ಲಿ ನಮ್ಮ ಮಹಾರಾಜರವರಿಗೆ ವಿಶೇಷ ಉತ್ಸಾಹವಿರುವುದಾಗಿಯೂ, ಅದರ ಮೂಲಧನಕ್ಕೆ ದ್ರವ್ಯಸಹಾಯ ಮಾಡುತ್ತೇವೆಂದು ಆಕೆಗೆ ಭರವಸೆ ದಯಪಾಲಿಸಿರುವುದಾಗಿಯೂ ಆಕೆಯಿಂದ ತಿಳಿದುಕೊಂಡೆವು. ಆ ತರುವಾಯ ಆಕೆ ಇಲ್ಲಿನ [illegible] ಬಂಗಲೆಯಲ್ಲಿ "ಹಿಂದುಸ್ಥಾನಕ್ಕೆ ಸದ್ಯದಲ್ಲಿ ಯಾವ ತರಹಾ ವಿದ್ಯೆ ಅವಶ್ಯವಾಗಿದೆ" ಎಂಬ ವಿಷಯವನ್ನು ಕುರಿತು ಉಪನ್ಯಾಸ ಮಾಡಿ, ಮರುದಿವಸ ಬೆಳಿಗ್ಗೆ ಕೆಲವು ವಿದ್ವಾಂಸರ ಸಂಗಡ ಕೆಲವು ವಿಷಯಗಳನ್ನು ಚರ್ಚಿಸಿ, ಭೋಜನವನ್ನು ತೀರಿಸಿಕೊಂಡು ರೈಲು ಹತ್ತಿ ಕೈವಾರವನ್ನು ಕುರಿತು ಪ್ರಯಾಣ ಮಾಡಿದರು. ನಮ್ಮ ದಿವಾನರವರ ಪ್ರೈವೇಟ್ ಸೆಕ್ರೆಟರಿಯವರು ಆಕೆಯ ಸಂಗಡ ಬಂದು, ಬೇಕಾದ ಸೌಕರ್ಯಗಳನ್ನೆಲ್ಲಾ ಏರ್ಪಡಿಸಿ ಕೊಟ್ಟರು. ಅರಮನೆ ಕೋಠೀಖಾನೆ ಇಲಾಖೆಯವರು ಏಂಟು ಆಕೆಗೂ ಆಕೆಯ ಸಂಗಡಿಗರಿಗೂ ಭೋಜನಾದಿಗಳಿಗೆ ಅನುಕೂಲದ [illegible]

ತುಂಕೂರು ಡಿಸ್ಟ್ರಿಕ್ಟ್ ಸೀರ್ಯಾಜಲ್ಲಿ ಹೊಸೆಂಬರ್ [illegible] ರಿಂದ ತಂತೀ ವರ್ತಮಾನದ ಆಫೀಸನ್ನು ಇಟ್ಟು ನಡೆಸುತ್ತಿದ್ದಾರೆ

••••

ರೆವಿನ್ಯೂ ಕಮೀಷನರಾಗಿದ್ದು ಈಗ ರಜೆಯಲ್ಲಿರುವ ಅಕ್ಟಿಂಗ್ ಅಮಲ್ದಾರರಾಗಿರುವ ಮೆ॥ ಎಂ. ಸದಾಶಿವರಾಯರನ್ನೂ, ರೆವಿನ್ಯೂ ಕಮೀಷನರಾಗಿದ್ದು ಈಗ ಮುಳಬಾಗಲು ಆಕ್ಟಿಂಗ್ ಅಮಲ್ದಾರರಾಗಿರುವ ಮೆ॥ ಎಂ. ಎ. ಶ್ರೀನಿವಾಸ್ಯಯ್ಯಂಗಾರ್ರನ್ನೂ ಖರೇ ದರ್ಜೆಯ ಅಮಲ್ದಾರರನ್ನಾಗಿ ಖಾಯಂ ಮಾಡಿರುತ್ತಾರೆ.

ಪ್ರಿನ್ಸ್ ಆಫ್ ವೇಲ್ಸ್‌ರವರ ಆಗಮನವು.

ಪ್ರಿನ್ಸ್ ಆಫ್ ವೇಲ್ಸ್‌ರವರನ್ನೂ ಅವರ ಪತ್ನಿಯವರನ್ನೂ ಎದುರುಗೊಂಡು ಸತ್ಕರಿಸುವುದಕ್ಕೆ ರಾಜಧಾನಿಯಲ್ಲಿ ಬಹು ವಿಶೇಷವಾದ ಏರ್ಪಾಡುಗಳಾಗುತ್ತಿವೆ. ಅವರು ಇಳಿದುಕೊಳ್ಳತಕ್ಕ ವಸತಿಗೆ ಬಂಗಲೆಯನ್ನು ದುರಸ್ತು ಮಾಡಿ, ನೇತ್ರಾನಂದಕರವಾಗಿ ಅಲಂಕರಿಸಿ, ದಿವ್ಯವಾದ ಹೊಸ ಸಾಮಾನುಗಳನ್ನು ಸೀಮೆಯಿಂದಲೇ ತರಿಸಿ ಸಿದ್ಧಪಡಿಸುತ್ತಿದ್ದಾರೆ. ಆ ಬಂಗಲೆಯಲ್ಲಿ ಬಿಟ್ಟಿಗಳನ್ನು [illegible] ಬಾಂಬೆ ಪಟ್ಟಣದಿಂದ ಮಿ॥ ಸ್ಮಿತ್ ಎಂಬ ಚಿತ್ರಗಾರನನ್ನೂ ಅಲಂಕಾರ ಮಾಡುವುದಕ್ಕೆ ವಿಲಾಯಿತಿಯಿಂದ ಮೆ॥ ಲಾರ್ನ್‌ಸ್ಟರ್ ಎಂಬಾತನನ್ನೂ ಕರೆಸಿ ಕೆಲಸಮಾಡಿಸುತ್ತಿದ್ದಾರೆ. ಪ್ರಿನ್ಸ್ ಆಫ್ ವೇಲ್ಸ್‌ರವರೂ ಅವರ [illegible] ನಮ್ಮ ರಾಜಧಾನಿಯಲ್ಲಿ [illegible]

[illegible] ಪ್ರಿನ್ಸ್ ಆಫ್ ವೇಲ್ಸ್‌ರವರು [illegible] ಅಲಂಕಾರವಾಗಿದೆ.

[illegible]

[illegible] ಸೋಮವಾರ

ಪ್ರಿನ್ಸ್ ಆಫ್ ವೇಲ್ಸ್‌ರವರು ಪತ್ನಿ ಸಮೇತ [illegible] [illegible] ... [illegible]

[illegible]

[illegible] ... [illegible]

[illegible] ಪ್ರಿನ್ಸ್ ಆಫ್ ವೇಲ್ಸ್‌ರ [illegible] ... [illegible]

ಪ್ರಿನ್ಸ್ ಆಫ್ ವೇಲ್ಸ್‌ರವರು ಭೇಟಿಕೊಡುವುದಕ್ಕೆ [illegible] ಚಿತ್ತೈಸುವುದು, ಮಧ್ಯಾಹ್ನ [illegible]

ಜನವರಿ ತಾರೀಖು [illegible] ನೇ ಮಂಗಳವಾರ

ಪ್ರಿನ್ಸ್ ಆಫ್ ವೇಲ್ಸ್‌ರವರು ಶ್ರೀ ಚಾಮರಾಜೇಂದ್ರ ಟೆಕ್ನಿಕಲ್ ವಿದ್ಯಾಶಾಲೆಗೆ ಅಸ್ತಿಭಾರ ಹಾಕುವುದು, ಬೆಳಿಗ್ಗೆ [illegible]

ರಾಜದಂಪತಿಗಳು ಶ್ರೀರಂಗಪಟ್ಟಣಕ್ಕೆ ಮೋಟಾರ್ ಗಾಡಿಯಲ್ಲಿ ಪ್ರಯಾಣ ಮಾಡುವುದು, ಮಧ್ಯಾಹ್ನ ... [illegible]

ಜನವರಿ ತಾರೀಖು [illegible] ನೇ ಬುಧವಾರ

ರಾಜದಂಪತಿಗಳು ಕೆಡ್ಡಾ ಕ್ಯಾಂಪಿಗೆ ಚಿತ್ತೈಸುವುದು, ಮಧ್ಯಾಹ್ನ ... [illegible]

ಫೆಬ್ರವರಿ ತಾ. [illegible] ನೇ ದಿನಗಳು ಕೆಡ್ಡಾ ಮತ್ತು ಶಿಕಾರಿ ಕ್ಯಾಂಪುಗಳಲ್ಲಿರುತ್ತಾರೆ.

ಫೆಬ್ರವರಿ ತಾರೀಖು [illegible] ನೆ ಭಾನುವಾರ

ರಾಜದಂಪತಿಗಳು ಕೆಡ್ಡಾ ಕ್ಯಾಂಪಿನಿಂದ ವಾಪಸು ರಾಜಧಾನಿಗೆ ದಯಮಾಡುವುದು, ಬೆಳಿಗ್ಗೆ ... [illegible]

ಅವರು ಆರಾಧನೆಗಾಗಿ ದೇವಾಲಯಕ್ಕೆ ಚಿತ್ತೈಸುವುದು, ಸಾಯಂಕಾಲ ... [illegible]

ರಾಜದಂಪತಿಗಳು ರಾಜಧಾನಿಯಿಂದ ಹೊರಡುವುದು, ರಾತ್ರಿ ... [illegible]

ಫೆಬ್ರವರಿ ತಾರೀಖು [illegible] ನೆ ಸೋಮವಾರ.

ಪ್ರಿನ್ಸ್ ಆಫ್ ವೇಲ್ಸ್‌ರವರು ಬೆಂಗಳೂರು ಸ್ಟೇಷನ್ನಿನಲ್ಲಿ ರೈಲಿನಿಂದ ಇಳಿಯುವುದು, ಬೆಳಿಗ್ಗೆ ... [illegible]

ಅವರು ಲೇಟ್ ಚಕ್ರವರ್ತಿನಿಯವರ ಪ್ರತಿಮೆಯನ್ನು ಪ್ರತಿಷ್ಠೆ ಮಾಡುವದು, ಸಾಯಂಕಾಲ ... [illegible]

ಫೆಬ್ರವರಿ ತಾರೀಖು [illegible] ನೆ ಮಂಗಳವಾರ

ರಾಜದಂಪತಿಗಳು ದಂಡಿನಲ್ಲೂ ಪಟ್ಟಣದಲ್ಲೂ ಸಂಚಾರ ಮಾಡಿಕೊಂಡು ಹೋಗುವುದು, ಬೆಳಿಗ್ಗೆ ... [illegible]

ಅವರು ಲಾಲ್ ಬಾಗ್ ಉದ್ಯಾನವನಕ್ಕೆ ದಯಮಾಡುವುದು, ಸಾಯಂಕಾಲ ... [illegible]

ಫೆಬ್ರವರಿ ತಾರೀಖು [illegible] ನೆ ಬುಧವಾರ.

ಪ್ರಿನ್ಸ್ ಆಫ್ ವೇಲ್ಸ್‌ರವರು ಪತ್ನಿ ಪರಿವಾರ ಸಹಿತ ಬೆಂಗಳೂರು ಸಿಟಿ ಸ್ಟೇಷನ್ನಿನಲ್ಲಿ ರೈಲು ಹತ್ತಿ ಮುಂದಕ್ಕೆ

ಇಂಡಿಯಾ ದೇಶದ ವೃತ್ತಾಂತಗಳು.

ವಿಜಯನಗರದ ಮಹಾರಾಜರವರಿಗೆ ಕಳೆದ ೨೮ ನೇ ತಾರೀಖಿನ ದಿವಸ ೨ ನೇ ಪುತ್ರನು ಜನಿಸಿದನು. ಆ ದಿನ ಅನೇಕ ಸಂತೋಷೋತ್ಸವಗಳು ನಡೆಸಲ್ಪಟ್ಟವು.

ಕಲ್ಕತ್ತಾ ಪಟ್ಟಣದಲ್ಲಿ ಪೋಲೋ ಎಂಬ ಕುದುರೆ ಮೇಲೆ ಕೂತು ಆಡುವ ಚಂಡಾಟದ ಪಂದ್ಯದಲ್ಲಿ ಕೂಚ್ ಬೇಹಾರದ ಮಹಾರಾಜರವರು ಕುದುರೆಯಿಂದ ಬಿದ್ದು ಗಾಯಪಟ್ಟರು ಈಗ ಅವರಿಗೆ ಗಾಯಗಳು ವಾಸಿಯಾಗುತ್ತಿವೆ ಎಂದು ಪ್ರಕಟವಾಗಿದೆ.

ರಾಜ ಗೃಹದಲ್ಲಿ ಮಹಾರಾಜರವರು ಜನವರಿ ೧ ನೇ ತಾರೀಖಿನ ದಿನ ದೊಡ್ಡ ದರ್ಬಾರ್ ನಡಿಸಿದರು. ಸೈನಿಕರಿಂದ ಕವಾತು ಮಾಡಿಸಿದರು. ಗೌರವಾರ್ಥವಾದ ೩೧ ತೋಪುಗಳನ್ನು ಹಾರಿಸಿದರು. ೧೨ ಮಂದಿ ಬಂದೀವಾನರನ್ನು ಜೈಲಿನಿಂದ ಬಿಡುಗಡೆಮಾಡಿದರು.

ಕಾಶೀಪಟ್ಟಣದಲ್ಲಿ ಹಿಂದುಗಳು ಸೇರಿ ಒಂದು ಯೂನಿವರ್ಸಿಟಿ ಎಂಬ ವಿದ್ಯಾ ಸಂಘವನ್ನು ಸ್ಥಾಪನೆ ಮಾಡಿಕೊಳ್ಳಬೇಕೆಂದು ಮುನ್‌ಷಿ ಮಾಧವಲಾಲ್‌ರವರು ಸಭೆಮಾಡಿ ಗೊತ್ತುಮಾಡಿದರು. ಈ ಏರ್ಪಾಡಿಗೆ ಒಂದು ಕೋಟಿ ರೂಪಾಯಿ ಬೇಕಾಗುವುದು. ಚಂದಾ ಕೂಡಿಸುತ್ತಿದ್ದಾರೆ.

ಅಲಹಾಬಾದ್ (ಪ್ರಯಾಗ) ಪಟ್ಟಣದಲ್ಲಿ ನಾಳೆ ಸೋಮವಾರ ನಡೆಯುವ ಕುಂಭಮೇಲಾ ಎಂಬ ಜಾತ್ರೆಗೆ ಸುಮಾರು ೨೦ ಲಕ್ಷ ಹಿಂದುಗಳು ಸೇರುತ್ತಾರೆಂದು ಸರ್ಕಾರದವರು ಊಹಿಸಿ ಪ್ರಜಾಸಮೃದ್ಧಿಯನ್ನೂ ಆರೋಗ್ಯವನ್ನೂ ಕಾಪಾಡುವುದಕ್ಕೆ ಅಗಾಧವಾದ ಏರ್ಪಾಡುಗಳನ್ನು ಮಾಡುತ್ತಿದ್ದಾರೆ.

ಕತ್ಯವಾಡಕ್ಕೆ ಸೇರಿದ ಜುನಾಘಡ ಸಂಸ್ಥಾನದಲ್ಲಿ ಪ್ರಜೆಗಳ್ಯಾರೂ ಸ್ವದೇಶೀ ವಿಷಯವನ್ನು ಕುರಿತು ಸಭೆಗಳನ್ನು ನಡಿಸಿ ಚರ್ಚೆ ಮಾಡಕೂಡದೆಂತಲೂ, ಹಾಗೆ ಸಭೆ ಸೇರುವುದು ಕಾನೂನಿಗೆ ವಿರೋಧವೆಂತಲೂ, ಸಭೆ ಸೇರಿದವರನ್ನು ಹಿಡಿದು ಶಿಕ್ಷಿಸುತ್ತೇವೆಂತಲೂ, ಅಲ್ಲಿನ ದಿವಾನರವರು ಇಸ್ತಿಹಾರು ಜಾಹೀರಿಸಿದ್ದಾರೆ.

ರಂಗೂನ್ ಪಟ್ಟಣದ ಕಾಡುಗಳಲ್ಲಿ ಮರಗಳಿಂದ ಕಾಗದ ತಯಾರು ಮಾಡಬೇಕೆಂದು ವಿಲಾಯತಿಯಿಂದ ಸಿಂಡಾಲ್ ಎಂಬಾತನು ಬಂದು, ಅಲ್ಲೆಲ್ಲಾ ಮರಗಳನ್ನು ಪರೀಕ್ಷಿಸುತ್ತಿದ್ದಾನೆ. ಅಲ್ಲಿರುವ ಮರಗಳ ಪೈಕಿ ಸುಮಾರು ೧೨ ಜಾತಿ ಮರಗಳು ಕಾಗದ ತಯಾರು ಮಾಡುವದಕ್ಕೆ ಯೋಗ್ಯವಾಗಿರುವವೆಂದು ತೀರ್ಮಾನಿಸಿರುವನು.

ಹಿಂದುಸ್ಥಾನದ ಗವರ್ನ್‌ಮೆಂಟಿನವರಿಗೂ ಅಫ್ಘಾನಿಸ್ಥಾನದ ಅಮೀರರಿಗೂ ನಡೆದ ಒಪ್ಪಂದದಂತೆ ಇಂಡಿಯಾ ಗವರ್ನ್‌ಮೆಂಟಿನವರು ಬಹಳ ಹಣ ಖರ್ಚುಮಾಡಿ, ಫಿರಂಗಿಗಳನ್ನೂ ಮದ್ದನ್ನೂ ತಯಾರು ಮಾಡಿಸಿ, ಅಫ್ಘಾನಿಸ್ಥಾನದ ಪಶ್ಚಿಮ ಮತ್ತು ಉತ್ತರ ಎಲ್ಲೆಕಟ್ಟುಗಳನ್ನು ಭದ್ರಪಡಿಸಿಕೊಳ್ಳುವದಕ್ಕೆ ಅವರ ವಶಕ್ಕೆ ಕೊಡುವರು.

ಕೆಲವು ದಿನಗಳ ಕೆಳಗೆ ಕಾಶಿಯ ಟೌನ್ ಹಾಲಿನಲ್ಲಿ ಮಿಸೆಸ್ ಬೆಸೆಂಟರವರು ಇಂಡಿಯಾದೇಶಕ್ಕೆ ಈಗ ಅತ್ಯವಶ್ಯಕವಾದ ಕೈಗಾರಿಕೆ ಪಾಠಶಾಲೆಯ ವಿಷಯವಾಗಿ ಉಪನ್ಯಾಸ ಮಾಡಿದರು. ಕಾಶಿಯಲ್ಲಿ ಒಂದು ಕೈಗಾರಿಕೆ ವಿದ್ಯಾಶಾಲೆಯನ್ನಿಟ್ಟು ಹಿಂದುಗಳನ್ನು ತರಪೇತು ಮಾಡಬೇಕೆಂಬುವದೇ ಆಕೆಯ ಮುಖ್ಯೋದ್ದೇಶವಾಗಿದೆ.

ಸಂಯುಕ್ತ ಆಧಿಪತ್ಯಕ್ಕೆ ಸೇರಿದ ಷಹರಣಪುರದಲ್ಲಿ ದಿಗಂಬರ ಜೈನ ಮಹಾಸಭೆ ನಡೆಯಿತು. ಬೊಂಬಾಯಿಪಟ್ಟಣದ ಜವಾರಿ ಮಾಣಿಕ್‌ಚಂದ್ ಪನಾಕ್‌ರವರು ಸಭಾಧ್ಯಕ್ಷರಾಗಿದ್ದರು. ಜೈನ ಬಾಲಕರಿಗೆ ವಿದ್ಯಾಭ್ಯಾಸ ಮಾಡಿಸಿ ಅವರನ್ನು ಅಭಿವೃದ್ಧಿಗೆ ತರಬೇಕೆಂದು ಗೊತ್ತುಮಾಡಿ, ಅದಕ್ಕಾಗಿ ೮೨,೦೦೦ ರೂಪಾಯಿ ಚಂದಾ ಕೂಡಿಸಿದ್ದಾರೆ.

ಕಲ್ಕತ್ತಾದಲ್ಲಿ ಗುಲ್‌ಸ್ಟಾರರವರು ತಮ್ಮ ಕಿಲ್ಲಿನಾರ್ ಎಂಬ ಕುದುರೆಯನ್ನೂ ಫಾರ್ಸ್ಟರರವರು ತಮ್ಮ ಡಾಲ್‌ಕೀತ್ ಎಂಬ ಕುದುರೆಯನ್ನೂ ವಿನೋದಾರ್ಥವಾಗಿ ಜೂಜು ಬಿಟ್ಟರು ಅದರಲ್ಲಿ ಡಾಲ್‌ಕೀತ್ ಎಂಬ ಕುದುರೆಯು ಗೆದ್ದದ್ದರಿಂದ ಗುಲ್‌ಸ್ಟಾರರವರು ೪೦ ಸಾವಿರ ರೂಪಾಯಿ ಕೊಟ್ಟು ಅದನ್ನು ಕೊಂಡುಕೊಂಡರು.

ಬೊಂಬಾಯಿ ಆಧಿಪತ್ಯಕ್ಕೆ ಸೇರಿದ ಕೆಲವು ತಾಲ್ಲೂಕುಗಳಲ್ಲಿ ಮಳೆ ಇಲ್ಲದೆ ಬೆಳೆಗಳು ಆಗಲೇ ಇಲ್ಲ. ಇನ್ನು ಕೆಲವು ತಾಲ್ಲೂಕುಗಳಲ್ಲಿ ಅರೆವಾಸಿ ಮಾತ್ರ ಬೆಳೆಗಳಾಗಿವೆ. ಸರ್ಕಾರದವರು ಇದನ್ನು ನೋಡಿ, ಕಂದಾಯ ರಿಮಿಷನ್ ಮಾಡಬೇಕೆಂತಲೂ ರೈತರಿಗೆ ಬೇಕಾದ ಸೌಕರ್ಯಗಳನ್ನು ಒದಗಿಸಿಕೊಡಬೇಕೆಂತಲೂ ಹುಕುಂ ಕೊಟ್ಟಿದ್ದಾರೆ.

ಬರ್ಮಾ ಆಧಿಪತ್ಯಕ್ಕೆ ಸೇರಿದ ಮಾಯಿಂಗ್‌ಮೆಯಾ ಪಟ್ಟಣದಲ್ಲಿ ಕಮಿಷನರವರು ಒಂದು ಸಭೆಮಾಡಿ, ಗ್ರಾಮಾಂತರ ಪ್ರಜೆಗಳನ್ನೆಲ್ಲಾ ಕರೆಸಿಕೊಂಡು, ಹಳ್ಳಿಗಾಡುಗಳಲ್ಲಿ ಸರ್ಕಾರಿ ಕಾರ್ಯಗಳನ್ನು ಬಹಳ ತೃಪ್ತಿಕರವಾಗಿ ನಡಿಸಿದ ರೈತರೇ ಮೊದಲಾದ ಕೆಲವು ಜನರಿಗೆ ಬಹುಮಾನಗಳನ್ನು ಕೊಟ್ಟರು. ಒಬ್ಬ ಹೆಂಗಸು ಡಕಾಯಿತಿ ಕಳ್ಳರನ್ನು ಹಿಡಿದು ಕೊಟ್ಟದ್ದಕ್ಕೆ ಅವಳಿಗೆ ಒಂದು ಜೊತೆ ಚಿನ್ನದ ಕಡಗಗಳನ್ನು ಬಹುಮಾನ ಮಾಡಿದರು.

ಲಾಹೋರ್ ಪಟ್ಟಣದಲ್ಲಿ ಪ್ರಕಟಿಸಲ್ಪಡುವ ವತನ್ ಎಂಬ ಹಿಂದೂಸ್ಥಾನಿ ಪತ್ರಿಕೆಯ ಎಡಿಟರು ಜಪಾನ್ ಗವರ್ನ್‌ಮೆಂಟಿನವರು ತಮ್ಮ ದೇಶದಲ್ಲುಂಟಾಗಿರುವ ಕ್ಷಾಮಬಾಧೆಯನ್ನು ಪರಿಹಾರ ಮಾಡುವದಕ್ಕೆ ಇತರ ಕಡೆಗಳಿಂದ ದ್ರವ್ಯರೂಪವಾದ ಸಹಾಯವನ್ನು ಹೊಂದಬಹುದೇ ಎಂದು ಬೊಂಬಾಯಿನಲ್ಲಿರುವ ಜಪಾನೀರಾಯಭಾರಿಯನ್ನು ಕೇಳಿರುತ್ತಾರೆ

ರಂಗೂನ್ ಸರ್ಕಾರದವರು ಪ್ರಿನ್ಸ್ ಆಫ್ ವೇಲ್ಸ್‌ರವರ ಆಗಮನದ ಜ್ಞಾಪಕಾರ್ಥವಾಗಿ ಅಲ್ಲಿನ ಜೈಲುಖಾನೆಗಳಲ್ಲಿ ಬಹಳ ಕಾಲ ಶಿಕ್ಷೆಯನ್ನನುಭವಿಸಬೇಕಾಗಿರುವ ಖೈದಿಗಳಲ್ಲಿ ಒಳ್ಳೇ ನಡತೆಯುಳ್ಳ ಕೆಲವರನ್ನು ಬಿಡುಗಡೆ ಮಾಡಬೇಕೆಂದು ಜೈಲುಖಾನೆಗಳ ಅಧಿಕಾರಿಗಳನ್ನು ಕೇಳಿದ್ದಾರೆ. ಈ ಸಮಯದಲ್ಲಿ ಕೆಲವು ಖೈದಿಗಳು ಬಿಡುಗಡೆಯನ್ನು ಹೊಂದುವರು.

ರಾಜಪುಟಾನಾ ಸಂಸ್ಥಾನಗಳಲ್ಲಿ ಪ್ರಜೆಗಳು ಕ್ಷಾಮಪೀಡಿತರಾಗಿದ್ದಾರೆ ಈಗ ೬೩,೦೦೦ ಜನರು ಸರ್ಕಾರದವರ ಪೋಷಣೆಯಲ್ಲಿರುವರು. ಆತ್ತಲಾಗಿ ಸಂಯುಕ್ತ ಆಧಿಪತ್ಯದಲ್ಲಿ ೩೦,೦೦೦ ಪ್ರಜೆಗಳು ರಿಲೀಫ್ ಕಾಮಗಾರಿಗಳನ್ನು ಮಾಡಿ ಹೊಟ್ಟೆ ಹೊರಕೊಳ್ಳುತ್ತಿದ್ದಾರೆ ಆ ಸುತ್ತುಮುತ್ತಿನ ಪ್ರಾಂತ್ಯಗಳಲ್ಲೆಲ್ಲಾ ದಿನಸಿಗಳ ಧಾರಣೆಯು ತುಂಬಾ ಹೆಚ್ಚಿರುವುದು.

ಸಿಲೋನ್ (ಲಂಕಾ) ದ್ವೀಪದಲ್ಲಿರುವ ಸುಮಾರು ೩೦,೦೦೦ ಮಹಮ್ಮದೀಯರು ಅಲ್ಲಿನ ಕೊಲಂಬೋ ಪಟ್ಟಣದಲ್ಲಿ ಸಭೆಸೇರಿ ತಮ್ಮ ಜಾತಿಯ ಬಾಲಕರಿಗೆ ವಿದ್ಯೆ ಕಲಿಸುವ ಏರ್ಪಾಡು ಮಾಡಬೇಕೆಂದು ತೀರ್ಮಾನಿಸಿರುತ್ತಾರೆ. ಈ ಸಭೆಯನ್ನು ನಡೆಸುವುದಕ್ಕೆ ಬೊಂಬಾಯಿನಲ್ಲಿ ಬ್ಯಾರಿಸ್ಟರಾಗಿರುವ ಮೌಲ್ವಿ ರಫಿಯುದ್ದೀನ್ ಅಹಮದ್‌ಯವರು ಅಲ್ಲಿಗೆ ಹೋಗಿದ್ದರು.

ಕೃಷ್ಣಾ ಡಿಸ್ಟ್ರಿಕ್ಟಿನಲ್ಲಿ ಒಬ್ಬ ಜಮೀನ್ದಾರರಾದ ಶ್ರೀ ರಾಜಾ ರಂಗಯ್ಯ ಅಪ್ಪಾರಾವ್‌ರವರು ಯಾವನಾದರೊಬ್ಬ ವಿದ್ಯಾರ್ಥಿಗೆ ೩,೦೦೦ ರೂಪಾಯಿ ವರ್ಷಾಶನವಂತೆ ಎರಡುವರೆ ಲಕ್ಷ ಕೊಟ್ಟು, ಜಪಾನ್ ರಾಜ್ಯಕ್ಕೆ ಕಳುಹಿಸಿ, ಕೆಲವು ಹೊಸ ಕೈಗಾರಿಕೆಗಳನ್ನು ಕಲಿತುಕೊಂಡು ಬಂದು ಹಿಂದೂಸ್ಥಾನಕ್ಕೆ ಶಕ್ತಿಮುಟ್ಟಿಗೆ ಸಹಾಯಮಾಡುವಂತೆ ಏರ್ಪಾಡು ಮಾಡಿರುತ್ತಾರೆ

ಬೊಂಬಾಯಿ ಪಟ್ಟಣದಲ್ಲಿ ಮುಂದಿನ ಫೆಬ್ರವರಿ ೯ ನೆ ಶುಕ್ರವಾರ ರಾತ್ರಿ ಸರ್ಕಾರದವರು ಪ್ರಜಾಸಂಖ್ಯೆಯನ್ನು ಗೊತ್ತು ಮಾಡಬೇಕೆಂದು ಹುಕುಂ ಕೊಟ್ಟಿದ್ದಾರೆ. ೧೯೦೧ ನೆ ಇಸವಿಯಲ್ಲಿ ಪ್ಲೇಗ್ ಉಪದ್ರವದೆಸೆಯಿಂದ ಆ ಪಟ್ಟಣದ ಪ್ರಜಾಸಂಖ್ಯೆಯು ೭,೭೬,೦೦೦ ಕ್ಕೆ ಇಳಿಯಿತು. ಮುಂದೆ ನಡೆಯುವ ಗಣತಿಯಲ್ಲಿ ಪ್ರಜೆಗಳು ಇನ್ನೂ ಹೆಚ್ಚಾಗಿರುವರೆಂದು ಗೊತ್ತಾಗುವುದು.

ಪ್ರಿನ್ಸ್ ಆಫ್ ವೇಲ್ಸ್‌ರವರು ಮದರಾಸಿಗೆ ಬಂದಾಗ ಬೀದಿಗಳಲ್ಲಿ ಉಸ್ತುವಾರಿ ಮಾಡುವದಕ್ಕೆ ಹೆಚ್ಚು ಪೋಲೀಸಿನವರು ಬೇಕೆಂದು ಇನ್ಸ್‌ಪೆಕ್ಟರ್ ಜನರಲ್‌ರವರು ಪ್ರಕಟಿಸಿರುತ್ತಾರೆ. ಹೆಚ್ಚು ಪೋಲೀಸಿನವರೆಲ್ಲಾ ಈ ತಿಂಗಳು ೨೧ ನೇ ತಾರೀಖಿನಿಂದ ಮದರಾಸಿನಲ್ಲಿ ಬಂದಿರಬೇಕು. ೩೦ ಹೆಡ್ ಕಾನ್ಸ್ಟೇಬಲ್‌ಗಳೂ, ೩೦೦ ಕಾನ್ಸ್ಟೇಬಲ್‌ಗಳೂ, ೬ ಇನ್ಸ್‌ಪೆಕ್ಟರುಗಳೂ ಹೆಚ್ಚಾಗಿರಬೇಕಾಗಿದೆ

ಕಳೆದ ೨೦ನೇ ತಾರೀಖಿನ ದಿನ ರಾತ್ರಿ ಹತ್ತು ಗಂಟೆ ಸಮಯದಲ್ಲಿ ರಂಗೂನ್ ಪಟ್ಟಣದಲ್ಲಿ ಲಕ್ಷಾಂತರ ರೂಪಾಯಿ ವೆಚ್ಚಿಸಿ ತಯಾರುಮಾಡಿಸುತ್ತಿದ್ದ ಜನರಲ್ ಆಸ್ಪತ್ರೆಯ ಒಂದು ಭಾಗವು ಕುಸಿದು ಬಿತ್ತು. ಹಗಲು ಸಾವಿರಾರು ಕೂಲಿಗಳು ಕೆಲಸ ಮಾಡುತ್ತಿದ್ದಾಗ ಈ ಕಟ್ಟಡವು ಬಿದ್ದಿದ್ದರೆ ತುಂಬಾ ಅನಾಹುತವಾಗುತ್ತಿತ್ತು. ಈಗಾಗಲೇ ಈ ಕಟ್ಟಡವು ೫೦ ಅಡಿಯ ಎತ್ತರದವರೆಗೂ ಕಟ್ಟಲ್ಪಟ್ಟಿತ್ತು.

ಕಲ್ಕತ್ತಾದ ಹತ್ತಿರ ಇರುವ ರಾಜಶಾಹಿ ಪಟ್ಟಣದಲ್ಲಿ ಕಳೆದ ೨೬ ನೇ ತಾರೀಖಿನ ದಿನ ಸುಮಾರು ೩,೦೦೦ ಜನದ ವರೆಗೂ ಹಿಂದುಗಳೂ ಮುಸಲ್ಮಾನರೂ ಒಂದು ಅಂತರಂಗಸ್ಥಳದಲ್ಲಿ ಸೇರಿ ಸ್ವದೇಶಿ ಸಮಾಜದ ವಿಷಯವಾಗಿ ಚರ್ಚಿಸುತ್ತಿದ್ದರು. ಆಗ ಅಲ್ಲಿನ ಪೋಲೀಸ್ ಇನ್ಸ್‌ಪೆಕ್ಟರು ೫೦ ಜನ ಆಯುಧಪಾಣಿಗಳಾದ ಪೋಲೀಸಿನವರೊಡನೆ ಅಲ್ಲಿಗೆ ಹೋಗಿ ಗಲಾಟೆ ಮಾಡುವ ಜನರನ್ನು ಚದರಿಸಿದರು. ಇದರಿಂದ ಅಲ್ಲಿನ ಜನಗಳೆಲ್ಲಾ ತುಂಬಾ ಅಸಮಾಧಾನ ಪಡುತ್ತಿದ್ದಾರೆ.

ತಿರುವಾಂಕೂರು (ಅನಂತಶಯನ) ಸಂಸ್ಥಾನಕ್ಕೆ ಸೇರಿದ ನಜರೇತ್ ಎಂಬ ಸ್ಥಳದಲ್ಲಿರುವ ಕೈಗಾರಿಕೆ ಪಾಠಶಾಲೆಯಲ್ಲಿ ನೇಯುವದನ್ನು ಕಲಿಸುವ ಚಿನ್ನಸಾಮಿನಾಯುಡುರವರು ಈಚೆಗೆ ದರ್ಜಿಯವರ ಸಹಾಯವಿಲ್ಲದೇನೇ ಬಟ್ಟೆಗಳನ್ನು ನೇಯುವದನ್ನು ಕಂಡು ಹಿಡಿದಿರುತ್ತಾರೆ. ಅವರು ಹೇಳುವಂತೆ ಹಿಂದೂ ಅಥವಾ ಯೂರೋಪಿಯನ್ ಮಗ್ಗಗಳಲ್ಲಿ ಷರಾಯಿ, ಷರಟು, ಇವೇ ಮುಂತಾದವುಗಳನ್ನು ನೇಯಬಹುದು. ಮತ್ತು ಅಕ್ಷರಗಳನ್ನೂ ಬಟ್ಟೆಗಳ ಮೇಲೆ ಸುಲಭವಾಗಿ ಬಿಡಿಸಿ ನೇಯಬಹುದು.

ಮದರಾಸಿನಲ್ಲಿ ಪ್ರಸಿದ್ಧ ಹೈಕೋರ್ಟ್ ವಕೀಲರಾದ ಮ|| ವಿ. ಕೃಷ್ಣಸ್ವಾಮಿ ಐಯರವರು ಮೊದಲಿನಿಂದ ಪರೋಪಕಾರ ನಿರತರಾಗಿದ್ದದ್ದು ಅನೇಕರಿಗೆ ತಿಳಿದಿರಬಹುದು. ಅವರು ಈಚೆಗೆ ಮದರಾಸಿನಲ್ಲಿ ಒಂದು ಸಂಸ್ಕೃತ ಪಾಠಶಾಲೆಯನ್ನು ಸ್ಥಾಪಿಸಬೇಕೆಂದು ೨೫,೦೦೦ ರೂಪಾಯಿಗಳನ್ನು ಕೊಟ್ಟಿರುತ್ತಾರೆ. ಇನ್ನೂ ಅನೇಕರು ಇದಕ್ಕೆ ಸಹಾಯ ಮಾಡುವದಾಗಿ ವಾಗ್ದಾನ ಮಾಡಿರುವರು. ಈ ಪಾಠಶಾಲೆಗೆ ಸೇರುವವರೆಲ್ಲರೂ ಇಂಗ್ಲೀಷನ್ನೂ ಸಂಸ್ಕೃತವನ್ನೂ ಕಲಿಯಬೇಕೆಂದು ವಿಧಿಸುವರು.

ಮುಲ್ತಾನ್ ಡಿಸ್ಟ್ರಿಕ್ಟಿನಲ್ಲಿ ಮುಖ್ಯ ಪಟ್ಟಣವಾದ ಅ[illegible]ಫರ್ ಎಂಬಲ್ಲಿ ಅನೇಕ ಹಿಂದು ದೊಡ್ಡ ಮನುಷ್ಯರು ಸಭೆ ಸೇರಿ, ಪರ ದೇಶದಿಂದ ಬರುವ ಸಕ್ಕರೆಯನ್ನು ತಾವು ಉಪಯೋಗಿಸಬಾರದೆಂದು ಚರ್ಚೆ ನಡಿಸಿದರು. ಒಬ್ಬ ಸಿಕ್ ಮತಸ್ಥನು ಆ ಸಕ್ಕರೆಯಲ್ಲಿ ಪ್ರಾಣಿಗಳ ಮೂಳೆಗಳೂ ಸೇರಿರುತ್ತವೆಂದು ಹೇಳಿದನು. ಆ ಮೇಲೆ ಅಲ್ಲಿದ್ದವರೆಲ್ಲರೂ ಆ ಸಕ್ಕರೆಯು ತಮ್ಮ ಮತಕ್ಕೆ ಯೋಗ್ಯವಾದದ್ದಲ್ಲವೆಂತಲೂ, ಇನ್ನು ಮೇಲೆ ಅದನ್ನು ಉಪಯೋಗಿಸುವುದಿಲ್ಲವೆಂತಲೂ ಶಪಥ ಮಾಡಿಕೊಂಡರು.

ಕಾಶೀಪಟ್ಟಣದ ಬಂಗಾಳಿ ತೋಲಾ ಎಂಬ ರಾಜಬೀದಿಯಲ್ಲಿ [illegible]ದವಾರ ಆಕಸ್ಮಾತ್ತಾಗಿ ಒಂದು ಚಿರತೆಯು ನುಗ್ಗಿ ನಾಲ್ಕಾರು ಜನರನ್ನು ಬಗರಿ ಗಾಯಮಾಡಿತು ಜನರೆಲ್ಲಾ ತುಂಬಾ ಗಾಬರಿಬಿದ್ದು ತಮ್ಮ ತಮ್ಮ ಮನೆಗಳೊಳಗೆ ಸೇರಿಕೊಂಡರು ಚಿರತೆಯು ಒಂದು ಕತ್ತಲ ಕೋಣೆಯೊಳಗೆ ಹೋಗಿ ಸೇರಿಕೊಂಡಿತು. ಬಾಬೂ ಸು[illegible]ದ್ರಸನ್ಯಾಲ್ ಎಂಬ ದೊಡ್ಡ ಮನುಷ್ಯನು ಆ ಚಿರತೆಯನ್ನು ಗುಂಡು ಹೊಡೆದು ಕೊಂದುಹಾಕಿದನು. ಅದು ಎಲ್ಲಿಂದ ಹ್ಯಾಗೆ ಪಟ್ಟಣಕ್ಕೆ ಬಂತೋ ಎಲ್ಲರೂ ಆಶ್ಚರ್ಯಪಡುತ್ತಿದ್ದಾರೆ.

ಸ್ಯಾಂಡೋ ಜಟ್ಟಿಯು ಬೊಂಬಾಯಿಗೆ ಬಂದಿದ್ದಾಗ್ಗೆ ಅಲ್ಲಿ ಭಾರೀ ಸಾಹುಕಾರನಾದ ಬೋಮಾಂಜಿ ಎಂಬಾತನು ಅವನನ್ನು ಕಂಡು, ತನ್ನ ಕೂಣ ರೋಗವನ್ನು ವಾಸಿ ಮಾಡಿಕೊಟ್ಟರೆ ಒಂದೂವರೆ ಲಕ್ಷ ರೂಪಾಯಿ ಬಹುಮಾನ ಕೊಡುವೆನೆಂದು ಹೇಳಿದನು. ಜಟ್ಟಿಯು ಅದೇ ಪ್ರಕಾರ ಚಿಕಿತ್ಸೆ ಮಾಡಿ ವಾಸಿ ಮಾಡಿದನು. ಸಾಹುಕಾರನು ಆಡಿದ ಮಾತಿಗೆ ತಪ್ಪದೆ ಆ ಜಟ್ಟಿಗೆ ಒಂದೂವರೆ ಲಕ್ಷ ರೂಪಾಯಿ ಕೊಟ್ಟಿರುತ್ತಾನೆ. ಇದಲ್ಲದೆ ಒಂದು ದೊಡ್ಡ ಬಂಗಲೆಯನ್ನು ಕಟ್ಟಿಸಿ, ಅದಕ್ಕೆ ಸ್ಯಾಂಡೋ ಬಂಗಲೆ ಎಂದು ಹೆಸರಿಟ್ಟಿರುವನು.

ಮೆಕ್ಕಾಕ್ಕೆ ಯಾತ್ರೆ ಹೋಗುವ ಮುಸಲ್ಮಾನ್ ಪ್ರಜೆಗಳನ್ನು ಸರ್ಕಾರದವರು ಬೊಂಬಾಯಿನಲ್ಲಿ ೧೦ ದಿನಗಳ ತನಕ ತಡೆದು, ಅವರ ಜಹಜನ್ನು ಹತ್ತಿಸುತ್ತಾರೆ. ಇದಲ್ಲದೆ ಅವರನ್ನು ಇನ್ನೂ ಕ[illegible]ವ ಕೆಲವು ನಿರ್ಬಂಧಗಳಿಗೆ ಗುರಿಪಡಿಸುತ್ತಾರೆ. ಕಳೆದವಾರ ಬೊಂಬಾಯಿಪಟ್ಟಣದ ಜುಮ್ಮಾ ಮಸೀದಿಯಲ್ಲಿ ಸುಮಾರು ೫,೦೦೦ ಮುಸಲ್ಮಾನ್ ಪ್ರಜೆಗಳು ಸಭೆ ಸೇರಿ, ವೈಸ್‌ರಾಯಿ ಯವರಿಗೆ— ಈ ನಿರ್ಬಂಧಗಳನ್ನೆಲ್ಲಾ ತೆಗೆದುಬಿಟ್ಟರೆ ಯಾತ್ರೆ ಹೋಗುವವರ ಕಷ್ಟಗಳು ನಿವಾರಣೆಯಾಗುವವು ಎಂದು ತಂತೀ ವರ್ತಮಾನ ಕೊಟ್ಟು ಕೇಳಿರುತ್ತಾರೆ.

ಬಂಗಾಳದ ಪಶ್ಚಿಮದಿಕ್ಕಿನ ಡಿಸ್ಟ್ರಿಕ್ಟುಗಳಲ್ಲಿ ಒಂದಾದ ಸಿಂಗ್‌ಭೂಮಿನಲ್ಲಿ ಕಳೆದ ೨೬ ನೇ ತಾರೀಖು ಮಂಗಳವಾರ ಒಂದು ಅದ್ಭುತ ನಡೆಯಿತು. ಈಗ ಹೊಸದಾಗಿ ಕಟ್ಟುತ್ತಿರುವ ನಾರಿನ [illegible]ರ್ನೆಯ ಒಂದು ಭಾಗವು ಕುಸಿದುಕೊಂಡು, ಅದರ ಮೇಲೆ ಕೆಲಸ ಮಾಡುತ್ತಿದ್ದ ಅನೇಕ ಸಂಜಾಬಿಗಳಿಗೆ ಪೆಟ್ಟು ಬಿತ್ತು. ಅನೇಕ ಜನರು ಅದರ ಕೆಳಗೆ ಸಿಕ್ಕಿದರು. ಇಬ್ಬರು ಗಂಡಸರೂ ಒಬ್ಬ ಹೆಂಗಸೂ ಸತ್ತರು. ಇಪ್ಪತ್ತೆರಡು ಜನ ಗಾಯ ಹೊಂದಿರುತ್ತಾರೆ ಒಂದು ಕಬ್ಬಿಣದ ತೊಲೆಯು ಒಂದು ಗಾಡೀ ಕಂಭದ ಮೇಲೆ ಬಿದ್ದು ಇಷ್ಟು ಅನಾಹುತವನ್ನು ಮಾಡಿತೆಂದು ತಿಳಿದು ಬಂದಿದೆ.

ಹದಿನೆಂಟನೇ ಶತಮಾನದಲ್ಲಿ ಇಂಡಿಯಾಕ್ಕೂ ಅದರ ಜನಗಳಿಗೂ ಮಹೋಪಕಾರ ಮಾಡಿರುವ ಎಡ್ಮಂಡ್ ಬರ್ಕ್‌ರವರ ಮತ್ತು ಲೇ[illegible] ಗಣೇಶವಾಸುದೇವ ಜೋಷಿಯವರ ಜ್ಞಾಪಕಾರ್ಥವಾಗಿ ಇಂಡಿಯನ್ ಸೋಷಿಯಾಲಜಿಸ್ಟ್ ಎಂಬ ಪತ್ರಿಕೆಯ ಮ್ಯಾನೇಜರು ವರುಷಕ್ಕೆ ೧,೦೦೦ ರೂಪಾಯಿನ ೬ ವೇತನಗಳನ್ನು ಕೊಡುತ್ತೇವೆಂದು ಪ್ರಕಟಿಸಿರುತ್ತಾರೆ. ಒಳ್ಳೇ ಗ್ರಂಥಕರ್ತರೂ, ಪತ್ರಿಕಾಕರ್ತರೂ ಈ ವೇತನಗಳನ್ನು ಪಡೆಯಬಹುದು. ಇವರು ಇತರ ದೇಶಗಳಿಗೆ ಹೋಗಿ ತಮ್ಮ ದೇಶವನ್ನು ಊರ್ಜಿತಸ್ಥಿತಿಗೆ ತರುವಂತೆ ವಿದ್ಯೆ ಕಲಿತು ಬಂದು ಸ್ವದೇಶಿಗಳಿಗೆ ಕೈಲಾದ ಮಟ್ಟಿಗೂ ಸಹಾಯ ಮಾಡಬೇಕೆಂಬುವದೇ ಈ ವೇತನಗಳ ಮುಖ್ಯೋದ್ದೇಶ.

ಕಳೆದ ೨೬ ನೇ ಡಿಸೆಂಬರಿನ ದಿನ ಪಂಜಾಬ್ ದೇಶದ ರಾಜಪುತ್ರ ಜನರೂ, ಇನ್ನೂ ಅನೇಕ ದೊಡ್ಡ ಮನುಷ್ಯರೂ ಲಾಹೋರಿನಲ್ಲಿ ಸಭೆ ಸೇರಿ, ರಾಜಪುತ್ರ ಪ್ರಾಂತಿಕ ಸಭೆ ಎಂಬ ಒಂದು ಸಂಘವನ್ನು ಏರ್ಪಾಡು ಮಾಡಿದರು. ಜಮ್ಮು ಮತ್ತು ಕಾಶ್ಮೀರ ದೇಶಗಳ ಧಣಿಯಾದ ಮಹಾರಾಜ ಪ್ರತಾಪಸಿಂಗರವರೇ ಇದಕ್ಕೆ ಖಾಯಂ ಪ್ರೆಸಿಡೆಂಟರು. ಪ್ರಿನ್ಸ್ ಆಫ್ ವೇಲ್ಸ್‌ರವರ ಆಗಮನದ ಜ್ಞಾಪಕಾರ್ಥವಾಗಿಯೂ ಈ ಸಂಘದ ಸಭೆಗಳು ಕೂಡುವದಕ್ಕಾಗಿ ಲಾಹೋರ್ ಪಟ್ಟಣದಲ್ಲಿ ಒಂದು ಬಂಗಲೆಯನ್ನು ಕಟ್ಟುವರು. ಪರಸ್ಥಳದ ರಜಪುತ್ರ ವಿದ್ಯಾರ್ಥಿಗಳ್ಯಾರಾದರೂ ಅಲ್ಲಿ ಓದುವ ಹಾಗಿದ್ದರೆ ಅವರಿಗೆ ಈ ಬಂಗಲೆಯಲ್ಲೇ ಸ್ಥಳ ಕೊಡಬೇಕೆಂತಲೂ ನಿಶ್ಚಯಿಸಿರುವರು. ಈ ಬಂಗಲೆಗೂ ವಿದ್ಯಾರ್ಥಿಗಳಿಗೆ ಕೊಡುವ ವೇತನಗಳಿಗೂ ಪ್ರಿನ್ಸ್ ಆಫ್ ವೇಲ್ಸ್‌ರವರ ಹೆಸರನ್ನೇ ಇಡುತ್ತಾರೆ.

ಕಾಶೀ ಪಟ್ಟಣದಲ್ಲಿ ಮಿಸೆಸ್ ಬೆಸೆಂಟ್‌ರವರು ಒಂದು ಹಿಂದೂ ಕಾಲೇಜನ್ನು ಸ್ಥಾಪಿಸಿರುತ್ತಾರಷ್ಟೆ. ದಕ್ಷಿಣದೇಶದ ಹಿಂದುಗಳು ಅಲ್ಲಿಗೆ ಹೋಗಿ ವಿದ್ಯಾಭ್ಯಾಸ ಮಾಡುವುದು ತುಂಬಾ ಕಷ್ಟವಾಗಿರು[illegible]

...ತಿರುಚನಾಪಳ್ಳಿಯಲ್ಲಿ ಒಂದು ಹಿಂದೂ ಕಾಲೇಜನ್ನು ಸ್ಥಾಪಿಸಬೇಕೆಂದು ಕೆಲವರು ಪ್ರಯತ್ನ ಪಟ್ಟಿದಾರೆ. ಈ ಕಾಲೇಜಿನ ಮೂಲಧನಕ್ಕೆ ಆಗಲೇ ಬಹಳ ಹಣ ಕೂಡಿರುವುದು. ಬೊಂಬಾಯಿಯ ಧರಂ... ಮುರಾರ್ಜಿ ಗೋಕುಲದಾಸ್ ಸೇಟರು ೧,೦೦೦ ರೂಪಾಯಿ, ಮ|| ...ಸುದರ್ಶನಯ್ಯಂಗಾರರು) ೨,೦೦೦ ರೂಪಾಯಿ, ಪಾಲೂವರಂ ಜಮೀನ್ದಾರರಾದ ಮ|| ಕೃಷ್ಣರಾಯರು ೧,೦೦೦ ರೂಪಾಯಿ, ಇನ್ನೊಬ್ಬರು ... ರೂಪಾಯಿ, ಮ|| ಶೇಷಾಚಾರು) ೫೦೦ ರೂಪಾಯಿ, ಈ ರೀತಿ ... ವರುಷಗಳ ತನಕ ಪ್ರತಿ ವರುಷವೂ ಚಂದಾಕೊಡುತ್ತೇವೆಂದು ...ನ ಮಾಡಿದಾರೆ. ಅತ್ತಲಾಗಿ ಅಲಪ್ಪೆನಗರದಲ್ಲಿ ಒಂದು ಹಿಂದೂ ಶಾಲೆಯನ್ನು ಸ್ಥಾಪಿಸುವುದಕ್ಕೆ ಅಲ್ಲಿನವರು ೨೦,೦೦೦ ರೂಪಾಯಿ ಕೂಡಿಸಿದಾರೆ.

****

ಇಂಡಿಯಾದಲ್ಲಿರುವ ಸಮಸ್ತ ಜನರೂ ದುರಭ್ಯಾಸವಾದ ಕುಡಿತವನ್ನು ನಿಲ್ಲಿಸಬೇಕೆಂದು ಕಾಶಿಯಲ್ಲಿ ಕಳೆದ ೨೬ನೇ ತಾರೀಖು ಸೋಮವಾರ ಒಂದು ಸಭೆ ಕೂಡಿದ್ದರು. ಈ ಸಭೆಗೆ ಅಧ್ಯಕ್ಷರಾಗಿ ..., ಕಾಶಿಯ ಸೆಂಟ್ರಲ್ ಹಿಂದು ಕಾಲೇಜಿನ ಮುಖ್ಯ ಸಹಾಯೋಪಾಧ್ಯಾಯರಾದ ಮಹಾ ಮಹೋಪಾಧ್ಯಾಯ ಆದಿತ್ಯರಾಮ ಭಟ್ಟಾಚಾರ್ಯರು ಕುಡಿತದಿಂದುಂಟಾಗುವ ಕಷ್ಟನಷ್ಟಗಳ ವಿಷಯವಾಗಿ ಸ್ವಲ್ಪ ಹೊತ್ತು ಉಪನ್ಯಾಸ ಮಾಡಿ, ಬೊಂಬಾಯಿಯ ಡಾಕ್ಟರ್ ಸರ್ ಬಾಲಚಂದ್ರಕೃಷ್ಣರವರಿಗೆ ಅಗ್ರಾಸನವನ್ನು ವಹಿಸಿದರು. ಇವರು ಜನಭರಿತವಾದ ಸ್ಥಳಗಳಲ್ಲೂ, ಆಗಾಗ್ಗೆ ಜನಗಳು ಸೇರುವ ಸಂತೆ ಮುಂತಾದ ಸ್ಥಳಗಳಲ್ಲಿಯೂ ಸೇಂದಿಯ ಅಂಗಡಿಯನ್ನು ಇಡಕೂಡದೆಂದು ಹೇಳಿದರು. ಇದೆಲ್ಲಾ ಆದ ಮೇಲೆ ಅವರು ಕೆಲವು ಕಾನೂನುಗಳನ್ನು ಸೂಚಿಸಿದರು. ಅದರಲ್ಲಿ ಅವರು ೧೮೭೦ನೇ ಇಸವಿಯಲ್ಲಿ ಸೇಂದಿ ...ಯಿಂದ ೧೨|| ಲಕ್ಷ ರೂಪಾಯಿಯಾದದ್ದು ೧೯೦೦—೧ ನೇ ಇಸವಿಯಲ್ಲಿ ೪೦ ಮುಕ್ಕಾಲು ಲಕ್ಷ ರೂಪಾಯಿ ಉತ್ಪತ್ತಿಯಾದದ್ದಕ್ಕೆ ಜನರ ಕುಡಿತವೇ ಕಾರಣವೆಂದು ಸ್ಪಷ್ಟವಾಗಿ ತಿಳಿಸಿದರು. ಮದಿ... ವರುಷಕ್ಕೆ ಕಮ್ಮಿಯಾಗಿರುವವರಿಗೆ ತುಂಬಾ ವಿಷಕೊಡ... ಮದ್ಯಪಾನವನ್ನು ಮಾರಲೇಕೂಡದೆಂತಲೂ, ಸಂತೆಗಳಲ್ಲಿ ಸೇಂದಿ ಅಂಗಡಿಗಳನ್ನು ಇಡಕೂಡದೆಂತಲೂ, ಹೆಂಗಸರನ್ನು ಹೆಚ್ಚಾಗಿ ಇಂಥ ಅಂಗಡಿಗಳಲ್ಲಿ ಇಟ್ಟುಕೊಳ್ಳಕೂಡದೆಂತಲೂ ಕೆಲವು ಕಾನೂನುಗಳನ್ನು ಮಾಡಿ ಗವರ್ನಮೆಂಟಿನವರಿಗೆ ತಿಳಿಸಬೇಕೆಂದು ನಿಶ್ಚಯಿಸಿರುತ್ತಾರೆ.

ವಿದೇಶ ವರ್ತಮಾನಗಳು.

ಆಸ್ಟ್ರಿಯಾ ಹಂಗೆರಿಗೆ ಮುಖ್ಯ ಪಟ್ಟಣವಾದ ಬ್ಯೂಡಪೆಸ್ಟ್ ನಗರದಲ್ಲಿ ೧೦೭ ವಯಸ್ಸುಳ್ಳ ಸ್ಟ್ರಾಬಾರ್ಸ್ ಎಂಬುವನು ಡಿಸೆಂಬರ್ ೧೬ನೇ ತಾರೀಖಿನ ದಿನ ಕಾಲವಾದನು.

****

ಆಫ್ರಿಕದಲ್ಲಿ ದೊಡ್ಡ ಸರೋವರವಾದ ವಿಕ್ಟೋರಿಯಾ ನಿಯಾಂಜಾ ಸುತ್ತುಮುತ್ತಲು ನಿದ್ರಾರೋಗವು ವ್ಯಾಪಿಸಿ, ಒಂದು ಲಕ್ಷಕ್ಕಿಂತ ಹೆಚ್ಚಾಗಿಯೇ ಜನರು ಸತ್ತಿರುವರು

****

ಚೈನಾದವರಿಗೂ ಜಪಾನಿನವರಿಗೂ ನಡೆಯುತ್ತಿದ್ದ ಮನಸ್ತಾಪ ಈಗ ಕೊನೆಗಂಡಿದೆ ಎಂತಲೂ ಅವರವರಿಗೆ ಕರಾರು ಈ ತಿಂಗಳ ನಡೆಯುವದಾಗಿಯೂ ತಿಳಿದುಬಂದಿದೆ.

****

ಸ್ಕಾಟ್ಲೆಂಡಿಗೆ ಪಶ್ಚಿಮದಲ್ಲಿರುವ ಮ್ಯಾರ್ ದ್ವೀಪದಲ್ಲಿದ್ದು ಈಗ ಮೃತಪಟ್ಟ ಹೆನ್ರಿ ನೋಬೆಲ್‌ರವರು ೧೫ ಲಕ್ಷ ರೂಪಾಯಿಗಳನ್ನು ಪರೋಪಕಾರ ಕೆಲಸಗಳಿಗೋಸ್ಕರ ಕೊಟ್ಟಿರುವರು.

****

ಪ್ಯಾರಿಸ್ ಪಟ್ಟಣದ ಲಾಟರಿಯಲ್ಲಿ ಒಬ್ಬ ಬಡ ಕುಮ್ಮಾರನಿಗೆ ಸುಮಾರು ೬ ಲಕ್ಷ ರೂಪಾಯಿ ಲಭಿಸಿತು. ಇದೇ ವಿಧವಾದ ಬಹುಮಾನವು ಕೆಲವು ತಿಂಗಳ ಕೆಳಗೆ ಒಬ್ಬ ಕೂಲಿಯವಳಿಗೆ ಸಿಕ್ಕಿತು.

****

ವಿಲಾಯಿತಿಗೆ ಸೇರಿದ ಬರ್ಮಿಂಗ್‌ಹಾಂ ಪಟ್ಟಣದಲ್ಲಿ ಹಾರ್ಡಿಂ ಎಂಬಾತನು ತನ್ನ ಆಸ್ತಿಯಲ್ಲಿ ಒಂದು ಪುಸ್ತಕಭಂಡಾರವನ್ನು ...ಸುವುದಕ್ಕೆ ಒಂದೂವರೆ ಲಕ್ಷ ರೂಪಾಯಿ ಧರ್ಮಕೊಟ್ಟಿದ್ದಾನೆ.

****

ಬ್ರಿಟಿಷರಿಗೆ ಸೇರಿದ ಪೂರ್ವ ಆಫ್ರಿಕದಲ್ಲಿ ಚಿನ್ನವೂ, ವಜ್ರಗಳೂ, ಬೆಳ್ಳಿಯೂ ಸಿಕ್ಕುವವೆಂದು ಈಚೆಗೆ ತಿಳಿಯಿತು. ಅನೇಕರು ಆಗಲೇ ಪರೀಕ್ಷೆ ಮಾಡುವದಕ್ಕೆ ಅಲ್ಲಿಗೆ ಹೋಗಿ ಸೇರಿರುವರು

****

ಯುದ್ಧದಲ್ಲಿ ಹಿಡಿಯಲ್ಪಟ್ಟ ರಷ್ಯಾ ಸೈನಿಕರಲ್ಲಿ ೧,೮೬೭ ಮಂದಿ ರಷ್ಯಾ ಸೈನಿಕರನ್ನು ಜಪಾನಿನವರು ವಾಪಸು ಕಳುಹಿಸಿದರು. ಇವರು ಒಂದು ಜಹಜಿನಲ್ಲಿ ಕುಳಿತು ರಷ್ಯಾಕ್ಕೆ ಪಯಣಮಾಡುತ್ತಿದ್ದಾರೆ.

****

ಜಪಾನ್ ರಾಜ್ಯದ ಮೂರು ಡಿಸ್ಟ್ರಿಕ್ಟುಗಳಲ್ಲಿ ಕ್ಷಾಮ ಪ್ರಾಪ್ತವಾಗಿದೆ. ಅರವತ್ತು ವರುಷಗಳಿಂದ ಇಷ್ಟು ಕಠಿಣವಾದ ಕ್ಷಾಮ ಬಂದಿರಲಿಲ್ಲ. ಈಗ ೬,೮೦,೦೦೦ ಪ್ರಜೆಗಳು ಸರ್ಕಾರದವರ ಪೋಷಣೆಯನ್ನು ಪಡೆದುಕೊಂಡಿದ್ದಾರೆ.

****

ಲಂಡನ್ ಪಟ್ಟಣದಲ್ಲಿ ಕಾಗದದ ಕಾರ್ಖಾನೆಯನ್ನಿಟ್ಟಿರುವ ಕ್ಯಾ... ಹಾರ್ಟಿಂಗ್‌ಟನ್ ಎಂಬಾತನು ಅಲ್ಲಿನ ಬಡಬಗ್ಗರಾದ ಪ್ರಜೆಗಳಿಗೆ ...ಹೆರಿಗೆ ಆಸ್ಪತ್ರೆಯನ್ನು ಕಟ್ಟಿಸಬೇಕೆಂದು ೪೫ ಲಕ್ಷ ರೂಪಾಯಿ ಕೊಟ್ಟಿದ್ದಾನೆ.

ವಿಲಾಯಿತಿಯಲ್ಲಿ ದೇವರ್ ಡಿಸ್ಟ್ರಿಕ್ಟಿಗೆ ಸೇರಿದ ಡೀವರ್ಟ್ರಿಲ್ ಎಂಬ ಊರಿನೊಳಗೆ ಒಂದು ಗಣಿಯಲ್ಲಿ ಅಪಾಯವಾಯಿತು. ಕೂಲೀ ಮಾಡುತ್ತಿದ್ದವರಲ್ಲಿ ೨೧ ಜನರು ಮೃತಪಟ್ಟರು. ೪೦—೫೦ ಜನರಿಗೆ ತುಂಬಾ ಗಾಯಗಳಾಗಿವೆ.

****

ಜಪಾನ್ ರಾಜ್ಯದವರು ರಷ್ಯಾದವರ ಮೇಲೆ ನಡಿಸಿದ ಯುದ್ಧಕ್ಕಾಗಿ ೧೨೦ ಕೋಟಿ ದ್ರವ್ಯವನ್ನು ಸಾಲಮಾಡಿದ್ದಾರೆ. ಈ ಪೈಕಿ ಪ್ರತಿ ವರ್ಷವೂ ೧೮೦ ಲಕ್ಷ ದ್ರವ್ಯದಂತೆ ಕೊಟ್ಟು ತೀರಿಸಬೇಕೆಂದು ಗೊತ್ತುಮಾಡಿಕೊಂಡಿರುವರು.

****

ದಕ್ಷಿಣ ಆಫ್ರಿಕದಲ್ಲೆಲ್ಲಾ ವಜ್ರದ ಗಣಿಗಳಿಗೆ ಪ್ರಸಿದ್ಧವಾಗಿರುವ ಕಿಂಬರ್ಲೀಯ ಹತ್ತಿರ ಒಂದು ಹಳ್ಳಿಯಲ್ಲಿ ಒಬ್ಬನು ಅಗೆಯುತ್ತಿದ್ದಾಗ್ಗೆ ಅವನಿಗೆ ೧೫೦ ಕ್ಯಾರಟ್ ತೂಕವುಳ್ಳ ಒಂದು ವಜ್ರವು ಸಿಕ್ಕಿತು. ಅವನು ಅದನ್ನು ೪೦,೩೬೫ ರೂಪಾಯಿಗಳಿಗೆ ಮಾರಿದನು.

****

ವಿಲಾಯಿತಿಗೆ ಸೇರಿದ ಡಬ್ಲಿನ್ ಪಟ್ಟಣದಲ್ಲಿ ಐರಿ ಎಂಬಾಕೆಯು ತನ್ನಾಸ್ತಿಯಲ್ಲಿ ೩೬ ಸಾವಿರ ರೂಪಾಯನ್ನೂ, ಲೀಡ್ಸ್ ಪಟ್ಟಣದಲ್ಲಿ ಆರ್ಡಿಂಗ್ಟನ್ ಎಂಬಾತನು ೧೮೨ ಲಕ್ಷ ರೂಪಾಯಿಗಳನ್ನೂ ಮತಪ್ರಸಾರಕ ಕಾರ್ಯಗಳಿಗೆ ವಿನಿಯೋಗಿಸಬೇಕೆಂದು ಧರ್ಮ ಮಾಡಿದ್ದಾರೆ.

****

ಲಂಡನ್ ಪಾರ್ಲಿಮೆಂಟಿನ ಮೆಂಬರಾಗಿದ್ದ ಹ್ಯೂಯಟ್‌ರವರು ತಮ್ಮ ಹೆಂಡತಿಯನ್ನು ಕೊಲ್ಲುವುದಕ್ಕಾಗಿ ಹರ್ಬರ್ಟ್ ಮಾರ್ಷಲ್ ಎಂಬೊಬ್ಬನನ್ನು ನೇಮಿಸಿರುವದಾಗಿ ತಿಳಿದುಬಂತು. ಕೋರ್ಟಿನವರು ಹ್ಯೂಯಟ್‌ರವರನ್ನು ವಿಚಾರಣೆ ಮಾಡಿ, ಐದು ವರುಷ ಸಜಾ ವಿಧಿಸಿರುತ್ತಾರೆ.

****

ಚೀನಾ ರಾಜ್ಯದವರು ತಮ್ಮ ಸೈನ್ಯವನ್ನು ಈಗಿನ ಕಾಲಕ್ಕೆ ತಕ್ಕಂತೆ ತರಪೇತು ಮಾಡಿಕೊಳ್ಳುತ್ತಿದ್ದಾರೆ. ಈಗ ೪,೩೭,೦೦೦ ಸೈನಿಕರು ಬಹಳ ಚೆನ್ನಾಗಿ ತರಪೇತಾಗಿರುವುದನ್ನು ವಿಲಾಯಿತಿಯವರು ನೋಡಿ, ಜಪಾನಿನವರು ರಾಜ್ಯವನ್ನು ವಿಸ್ತರಿಸಿಕೊಳ್ಳುವುದಕ್ಕೆ ಅಡ್ಡಿಯಾಯಿತೆಂದು ಸಂತೋಷಪಡುವರು.

****

ಮಾಸ್ಕೋ ಪಟ್ಟಣದಲ್ಲಿ ಗಲಭೆಯು ಇನ್ನೂ ಹೆಚ್ಚಾಗುತ್ತಿದ್ದು ಕಳೆದ ಸೋಮವಾರ ನಡೆದ ಕದನದಲ್ಲಿ ಸುಮಾರು ೫,೦೦೦ ಜನ ಸತ್ತರು. ೧೪,೦೦೦ ಜನ ಘಾಯಿ ಹೊಂದಿದ್ದಾರೆ. ಈ ಗಲಭೆಗೆ ಸೇರದ ಅನೇಕ ಸಾಧು ಜನರು ಕೊಲ್ಲಲ್ಪಟ್ಟಿದಾರೆ. ಆ ಪಟ್ಟಣದಲ್ಲಿ ಆಹಾರ ಸಾಮಗ್ರಿಗಳು ಸಾಲದೇ ಹೋಗುತ್ತಿವೆ.

****

ಕಳೆದ ೧೮೯೮ ನೇ ಇಸವಿಯಲ್ಲಿ ಸಾಂಡ್ವಿಚ್ ದ್ವೀಪಗಳ ರಾಣಿಯನ್ನು ಅಮೇರಿಕ ಸರ್ಕಾರದವರು ಅಧಿಕಾರದಿಂದ ತಪ್ಪಿಸಿದರು. ಈಗ ಆ ರಾಣಿಯು ತನ್ನ ಆಸ್ತಿಯನ್ನು ಕಳಕೊಂಡದ್ದಕ್ಕೆ ಪ್ರತಿಯಾಗಿ ತನಗೆ ೧೫ ಕೋಟಿ ದ್ರವ್ಯವನ್ನು ಪ್ರತಿಫಲ ಕೊಡಬೇಕೆಂದು ಆ ಸರ್ಕಾರದವರನ್ನು ಕೇಳಿರುತ್ತಾಳೆ. ಆಕೆಯ ಆಸ್ತಿಗಳನ್ನೆಲ್ಲಾ ಅಮೇರಿಕದವರು ಸೇರಿಸಿಕೊಂಡಿದ್ದಾರೆ.

****

ಪ್ಯಾರಿಸ್ ಪಟ್ಟಣದಲ್ಲಿ ಕೆಲವು ದೊಡ್ಡ ಮನುಷ್ಯರು ಸೈನ್ಯದ ಇಲಾಖೆಯವರಿಗೆ ವಿರೋಧವಾಗಿ ನಿಂತು ತುಂಬಾ ಕಾರುಬಾರುಗಳನ್ನು ನಡಸುತ್ತಾ ಬಂದರು. ಸರ್ಕಾರದವರು ಆ ದೊಡ್ಡ ಮನುಷ್ಯರ ಪೈಕಿ ೨೬ ಮಂದಿ ಮುಖಂಡರನ್ನು ಹಿಡಿದು ಪರ್ಯಾಪ್ತಿ ಮಾಡಿ, ಅವರಿಗೆಲ್ಲಾ ಸಜಾ ಶಿಕ್ಷೆಯನ್ನು ವಿಧಿಸಿದರು ಈ ಸಂಗತಿಯು ಫ್ರಾನ್ಸ್ ರಾಜ್ಯದಲ್ಲಿ ಗಲಭೆಯನ್ನುಂಟುಮಾಡಿದೆ.

****

ತುರ್ಕಿಗೂ ಪರ್ಷಿಯಕ್ಕೂ ನಡುವೆ ಇರುವ ಎಲ್ಲೆಕಟ್ಟನ್ನು ಗುರುತು ಮಾಡುವದಕ್ಕೆ ಎರಡು ರಾಜ್ಯಗಳವರೂ ತಮ್ಮ ಅಧಿಕಾರಿಗಳನ್ನು ಕಳುಹಿಸಿದರು. ಅವರವರಿಗೆ ಮನಸ್ತಾಪಗಳುಂಟಾಗಿವೆ. ಸುಮಾರು ೫೦,೦೦೦ ಪರ್ಷಿಯಾ ಜನರು ತುರ್ಕಿಯವರ ಮೇಲೆ ನುಗ್ಗಿ ತುಂಬಾ ದಾಂಧಲೆ ನಡಸುತ್ತಿದ್ದಾರೆ ಇವರ ಹಿಂಸೆಯನ್ನು ತಪ್ಪಿಸುವದಕ್ಕೆ ತುರ್ಕಿಯವರು ಬಹಳ ಸೈನ್ಯವನ್ನು ಅಲ್ಲಿಗೆ ಕಳುಹಿಸಿರುವಂತೆ ವರ್ತಮಾನ ಬಂದಿದೆ

****

ಜಪಾನ್‌ರಾಜ್ಯದ ವಿದ್ಯಾಶಾಲೆಗಳಲ್ಲಿ ಅನೇಕ ಸಾವಿರ ಚೀನಾ ಹುಡುಗರು ವಿದ್ಯಾಭ್ಯಾಸಮಾಡುತ್ತಿದ್ದಾರೆ ಈಚೆಗೆ ಚೀನಾ ಜಪಾನ್ ರಾಜ್ಯಗಳಿಗೆ ಆದ ಕರಾರನ್ನು ನೋಡಿ ಚೀನಾ ವಿದ್ಯಾರ್ಥಿಗಳು ಅಸಮಾಧಾನಪಟ್ಟು, ಜಪಾನಿನವರು ಕಾಲಕ್ರಮದಲ್ಲಿ ಆಸ್ಯಾಖಂಡವನ್ನೆಲ್ಲಾ ಆಕ್ರಮಿಸಿಕೊಳ್ಳುವರೆಂದು ತಿಳಿದು, ಸರ್ಕಾರದವರ ಮೇಲೆ ತಿರುಗಿಬಿದ್ದರು. ಜಪಾನಿನವರು ಆ ವಿದ್ಯಾಶಾಲೆಗಳ ಮುಖ್ಯಾಧಿಕಾರಿಗಳನ್ನು ಕೆಲಸದಿಂದ ಕಿತ್ತುಹಾಕಿದರು. ಇದನ್ನು ನೋಡಿ ಚೀನಾ ವಿದ್ಯಾರ್ಥಿಗಳು ಸುಮಾರು ೯,೦೦೦ ಮಂದಿ ಪಾಠಶಾಲೆಗಳನ್ನು ಬಿಟ್ಟುಬಿಟ್ಟರು.

****

ಸ್ಪೇಯಿನ್ ದೇಶದಲ್ಲಿ ಬಡವರಾಗಿರತಕ್ಕ ಪ್ರಜೆಗಳೂ ಕೂಡ ಆಹಾರಕ್ಕೆ ಮಾತ್ರವಲ್ಲದೆ ವಿಶೇಷ ಖರ್ಚುಗಳಿಗೆ ತುಂಬಾ ಹಣವನ್ನು ವಿನಿಯೋಗಿಸುತ್ತಾರೆಂದು ಗೊತ್ತಾಗುತ್ತಿದೆ, ಸಾಧಾರಣ ಜನರು ಮಂದು ಖರ್ಚಿಗೆ ಒಂದು ವರುಷದಲ್ಲಿ ಎಷ್ಟೆಷ್ಟು ವಿನಿಯೋಗಿಸುತ್ತಾರೆಂದರೆ—ಸಿಗರೆಟ್ ಮತ್ತು ಚುಟ್ಟಾಗಳಿಗೆ ಪಳೊವರೆ ಕೋಟಿ ರೂಪಾಯಿ, ಲಾಟರಿಗಳಿಗೆ ಆರು ಕೋಟಿ ರೂಪಾಯಿ, ಗೂಳಿ ಕಾಳಗಕ್ಕೆ ನಾಲ್ವತ್ತೂವರೆ ಕೋಟಿ ರೂಪಾಯಿ, ಮದ್ಯಪಾನ ಮುಂತಾದ್ದಕ್ಕೆ ನೂರ ಮೂವತ್ತೂವರೆ ಕೋಟಿ ರೂಪಾಯಿ, ಈ ಪ್ರಕಾರ ಹೆಚ್ಚು ಖರ್ಚು ಮಾಡಿ ದರಿದ್ರರಾಗುವರೆಂದು ಪ್ರಕಟವಾಗಿದೆ.

ಬಾತ್ಮಿದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ನಿಗಾ ಕೊಡಲಾರೆವು. ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು; ಇಂಥವುಗಳಿಗೆ ನಾವು ನಿಗಾ ಕೊಡಲಾರೆವು.

ಪ್ರಕಟಿಸಲಾರೆವೆಂದು ಹೇಳಿ ತಿರಸ್ಕರಿಸಿದ ಬಾತ್ಮಿಗಳನ್ನು ನಾವು ಬಾತ್ಮಿದಾರರಿಗೆ ವಾಪಸು ಕಳುಹಿಸಲಾರೆವು.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಎಡಿ.

ಕರೆಸ್‌ಪಾಂಡೆನ್ಸ್.

ಪುಂಡು ಜನರೂ ಪೋಲೀಸಿನವರೂ.

ಅಯ್ಯಾ,

ಕೆಲವೂರುಗಳಲ್ಲಿ ಕೆಲವರು ಪುಂಡರು ಸೇರಿಕೊಂಡು ಪರೇಲ್ ಎಂಬ ಇಸ್ಪೀಟಿನ ಆಟವನ್ನು ಆಡುವುದು, ಕೆರೆ, ಕೊಳ, ಭಾವಿ ಬಳಿ ಹೆಂಗಸರು ಬರುವ ಕಡೆ ಗುಂಪು ಕಟ್ಟಿಕೊಂಡಿರುವುದು, ಮಾನಸ್ಥರ ಮೇಲೆ ಸುಳ್ಳು ನೋಟೀಸುಗಳನ್ನು ರಾತ್ರಿ ಹೊತ್ತು ಬೀದಿಗಳಲ್ಲಿ ಲಾಂದ್ರಕಂಭಗಳಿಗೆ ಹಚ್ಚುವುದು, ಇವೇ ಮೊದಲಾದ ಅನೇಕ ದುಷ್ಟತೆಗಳನ್ನು ನಡೆಸುವರು ಇವುಗಳಿಗೆ ಯಾರೂ ಗಮನವೇ ಕೊಡುವುದಿಲ್ಲ. ಪೋಲೀಸಿನವರು ಬಿಗಿಯಿಲ್ಲದಿರುವುದರಿಂದ ಪುಂಡರಿಗೆ ಭೀತಿ ಕಡಿಮೆ ಗುಮಾನಿ ಅಸಾಮಿಗಳು ತಿಳಿದರೆ ಪತ್ತೆ ತರದೂದು ಯಾಕೆ ಮಾಡಬಾರದು? ಹೀಗೆ ಮಾಡುವುದರಿಂದ ಪೋಲೀಸಿನವರ ಪೈಕಿ ಕೆಲವರ ಸಹಾಯವಿಲ್ಲದೆ ನಡಿಯುವುದಿಲ್ಲವೆಂದು ಊಹಿಸಬೇಕಾಗುವುದು. ಹಾಗಿಲ್ಲದೆ, ಬೀಟು ಕಾಲದಲ್ಲಿ ರಾತ್ರಿ ವೇಳೆ ಹೊರಗಿನವರು ಬಂದು, ನೋಟೀಸುಗಳನ್ನು ಹಚ್ಚುವುದಕ್ಕೆ ಧೈರ್ಯವೆಲ್ಲಿ ಬಂತು? ಇವೆಲ್ಲಾ ತಿಳಿಸಿದರೆ ಪೋಲೀಸಿನವರಿಗೆ ಮನಃಕಷ್ಟಾಯ! ಈ ಕಡೆ ನೋಡಿದರೆ ಮಾನಸ್ಥರಿಗೆ ತೊಂದರೆ! ಪೋಲೀಸಿನವರು ಮಾಡಬೇಕಾದ ಕರ್ತವ್ಯವನ್ನು ಪತ್ರಿಕಾ ಮುಖೇನ ತಿಳಿಸಬೇಕಾದ ಪ್ರಮೇಯವ್ಯಾಕೊ ನಾಕರೇ ಊಹಿಸಿ ಈ ಮಧ್ಯೆ ಜನರು ಬದುಕುವ ಬಗೆ ಹೇಗೆ? ಸ್ಥಳೀಕರು ನೌಕರಿಗೆ ಸೇರಿದರೆ ದಾಕ್ಷಿಣ್ಯ ಬಾಧ್ಯವು ಹೆಚ್ಚು. ಅಲ್ಲವೇ? ಒಂದು ವೇಳೆ ದಾಕ್ಷಿಣ್ಯ ಬಾಧ್ಯ ಮಾಡದಿದ್ದರೆ ಪೋಲೀಸಿನವರ ಮೇಲೆ ಕರುಬುವುದು! ಇವಕ್ಕೆಲ್ಲಾ ಹೆದರಿರುತ್ತಾರೇನೋ? ಅಯ್ಯೋ, ಪಾಪ! ಇವರು ತಾನೇ ಏನು ಮಾಡ್ಯಾರು? ಒಂದು ವೇಳೆ ತಮ್ಮ ಮನೆಯ ದೀಪವೆಂದು ಮುಟ್ಟುವರೆ ಕೈಸುಡದೇ? ಇವನ್ನೆಲ್ಲ ನಮ್ಮ ಪೋಲೀಸಿನವರು ಆಲೋಚಿಸಿ ಪುಂಡರಿಗೆ ಆಸರೆ ಕೊಡದೆ ಈ ವಿಷಯದಲ್ಲಿ ಮುತುವರ್ಜಿ ತೋರಿಸಿ ಪುಂಡರನ್ನು ಅಡಗಿಸಿದರೆ ಕೃತಜ್ಞನಾಗಿರುತ್ತೇನೆ.

ಸ. ಸ ರ.

ಚಿತ್ರದುರ್ಗದ ಮ್ಯುನಿಸಿಪಾಲಿಟಿ.

ಅಯ್ಯಾ,

ಚಿತ್ರದುರ್ಗದ ಮ್ಯುನಿಸಿಪಲ್ ಬೋರ್ಡಿನ ಮೆಂಬರುಗಳು ತಮ್ಮನ್ನು ಪ್ರೆಸಿಡೆಂಟರು ಮೈಸೂರು ದಸರಾದಲ್ಲಿ ಪ್ರಜಾಪ್ರತಿನಿಧಿಗಳಾಗಿ ಚುನಾಯಿಸಿದರೆ ಸಾಕು, ತಮಗೆ ಮ್ಯುನಿಸಿಪಲ್ ಕಮಿಷನರು ಎಂಬ ಬಿರುದು ಇದ್ದರೆ ಸಾಕು ಎಂತಲೋ ಏನೋ ಮೀಟಿಂಗುಗಳಲ್ಲಿ ಪ್ರೆಸಿಡೆಂಟರ ಅಭಿಪ್ರಾಯಕ್ಕೆ ಅನುಮೋದಿಸಿಬಿಟ್ಟರೆ ತಮ್ಮ ಕೆಲಸ ಮಾಯಿತೆಂದು ಕಾಲಕಳೆಯುವ ಹಾಗೆ ತೋರುತ್ತೆ. ಅಲ್ಲದೆ ಊರಲ್ಲಿ ಗಲೀಜು ಪಾಕುಮಾಡುವ ವಿಷಯದಲ್ಲಿ ನೌಕರರು ಮಾಡತಕ್ಕ ಅಶ್ರದ್ಧೆಯನ್ನು ಪ್ರೆಸಿಡೆಂಟರ ತಿಳುವಳಿಕೆಗೆ ತಂದು, ಜನಗಳಿಗುಪಯೋಗ ಮಾಡುವ ಯೋಚನೆಯೇ ಇದ್ದಹಾಗಿಲ್ಲ. ಅಡ್ವೊಕೇಟ್ ಮ|| ಬಿ. ಕೃಷ್ಣರಾಯರು ಈ ಬೋರ್ಡಿನಲ್ಲಿ ಮೆಂಬರಾಗಿರುವಾಗ ಎಷ್ಟೋ ಉತ್ತಮವಾಗಿತ್ತು. ಅವರು ಮೈಸೂರಿಗೆ ಹೋದನಂತರ ಒಬ್ಬ ಪ್ಲೀಡರನ್ನು ಮೆಂಬರಾಗಿ ನಮ್ಮ ಡೆಪ್ಟಿ ಕಮಿಷನರು ಚುನಾಯಿಸಿದಾರೆಂದು ತಿಳಿಯಿತು. ಇದು ಬಹಳ ಆಶ್ಚರ್ಯವೇ ಸರಿ. ಇವರಿಗೆ ಸ್ಥಿರ ಆಸ್ತಿಯು ಈ ಟವರ್ನಲ್ಲಿ ಏನೂ ಇದ್ದಹಾಗೆ ತಿಳಿಯದು. ಇವರಿಗಿಂತಲೂ ಹೆಚ್ಚು ತಿಳುವಳಿಕೆಯುಳ್ಳವರಾಗಿಯೂ ಸರ್ಕಾರಕ್ಕೆ ಜಮೀನ್ ಮತ್ತು ಮುನಿಸಿಪಲ್ ಕಂದಾಯ ಕೊಡತಕ್ಕವರಾಗಿಯೂ ಇರುವ ರೈತರು ವರ್ತಕರು ಇತರ ದೊಡ್ಡಮನುಷ್ಯರು ಇದಾರೆ. ಅಲ್ಲದೆ ಕಳೆದವಾರದ ನಿಮ್ಮ ಪತ್ರಿಕೆಯಲ್ಲಿ ಪ್ರಕಟಿಸಿರುವಂತೆ ಪ್ರಜಾಪ್ರತಿನಿಧಿ ಸಭೆಗೆ ಮೆಂಬರಾಗಲು ಅರ್ಹತೆ ವಿಷಯದಲ್ಲಿ ನಮ್ಮ ದಿವಾನರವರು ಕೊಟ್ಟ ಜವಾಬಿನಿಂದ ಆಸ್ತಿಯು ಇಲ್ಲದೆ, ಬರೀ ವಿದ್ಯಾವಂತರನ್ನು ಮೆಂಬರನ್ನಾಗಿ ಮಾಡುವದಕ್ಕೆ ಆಗುವದಿಲ್ಲ. ಅದು ಗವರ್ನಮೆಂಟಿನವರಿಗೆ ಇಷ್ಟವಿಲ್ಲವೆಂದು ಸ್ಪಷ್ಟವಾಗಿ ಗೊತ್ತಾಗುತ್ತೆ. ಅಲ್ಲದೆ ಈ ರೀತಿ ಇದುವರಿಗೂ ಇಲ್ಲಿ ನಡೆದದ್ದು ಇಲ್ಲ. ಈಗ ನಮ್ಮ ಡೆಪ್ಟಿ ಕಮಿಷನರು ಇದು ಯಾವದನ್ನೂ ಯೋಚಿಸದೆಯೋ ಇವರಿಗಿಂತಲೂ ಹೆಚ್ಚಾಗಿ ಅರ್ಹತೆಯುಳ್ಳವರು ಊರಲ್ಲಿ ಯಾರೂ ಇಲ್ಲವೆಂದು ಭಾವಿಸಿಯೋ ಹೇಗೋ ಇವರನ್ನು ಮೆಂಬರುಮಾಡಿರುವದೂ, ಗವರ್ನಮೆಂಟಿನವರು ಮಂಜೂರು ಮಾಡಿರುವದೂ ಬಹಳ ಆಶ್ಚರ್ಯವಾಗಿದೆ. ಈ ಬೋರ್ಡಿನಿಂದ ಇವರನ್ನು ಪ್ರಜಾಪ್ರತಿನಿಧಿಸಭೆ ಮೆಂಬರಾಗಿ ಚುನಾಯಿಸಿದರೆ ದಿವಾನರ ಅಭಿಪ್ರಾಯಕ್ಕೆ ಇದು ವಿರೋಧವಲ್ಲವೇ? ಇದು ಟವರ್ನಲ್ಲಿ ಅನೇಕರಿಗೆ ಅಸಮ್ಮತವಾಗಿದೆ. ಅಲ್ಲದೆ ಬೋರ್ಡ್ ಮೆಂಬರುಗಳಲ್ಲಿ ಲಾಯರುಗಳೇ ಹೆಚ್ಚಾಗಿರುವದರಿಂದ ಇವರ ಪೈಕಿ ಒಬ್ಬಿಬ್ಬರನ್ನು ತೆಗೆದು, ವರ್ತಕರನ್ನೂ ಸ್ಥಳವಂದಿಗರಾಗಿ ಯೋಗ್ಯರಾಗಿರುವವರನ್ನೂ ಚುನಾಯಿಸುವದು ಒಳ್ಳೇದು ನಮ್ಮ ಪ್ರೆಸಿಡೆಂಟರು ಊರಿನ ಸ್ಥಿತಿಯನ್ನು ನೋಡಲು ಊರೊಳಗೆ ಇವರ ಹಿಂದಿನವರು ಬಂದಂತೆ ಪದೇ ಪದೇ ಬರುವದಿಲ್ಲ. ಇದರಿಂದ ವೈಸ್ ಪ್ರೆಸಿಡೆಂಟರು ಮತ್ತು ಅವರ ನೌಕ

ಅದ ಕ್ರಿಯೆಯು ಕಡಿಮೆಯಾಗಿದೆ. ಕ್ರಮ್ಮ ಪೂರ್ವಕ ಬೀಗಗಳು ಚರಂಡಿಗಳು ತಿಪ್ಪೆಗುಂಡಿಗಳು ವಿಶ್ವದ ಬಾಳು ಇರುವಂತೆ ಅಷ್ಟು ವಿಚಾರ ಮಾಡುವದೂ ತಮ್ಮ ಪೂರಾ ಕೆಲಸ ಸರಿಯಾಗಿ ಜಾರಿಯಾದ್ದನ್ನು ನೋಡುವದೂ ಪ್ರಸಿಡೆಂಟರ ಕರ್ತವ್ಯವಾಗಿದೆ. ಇದಕ್ಕೆ ಗಮನಕೊಡದೆ ಇರಲಾರರು ಎಂದು ನಂಬಿದ್ದೇವೆ.

ಸತ್ಯ.

ನೀರು ಎತ್ತುವ ಯಂತ್ರಗಳು ಬೇಕು.

ಅಯ್ಯಾ,

ವ್ಯವಸಾಯಕ್ಕೆ ಅನುಕೂಲವಾದ ೪೦—೧೦೦ ರೂಪಾಯಿ ಬಾಬತು ಬಾವಿಯಿಂದ ಸುಲಭವಾಗಿ ನೀರನ್ನು ಮೇಲಕ್ಕೆ ತರುವ ಯಂತ್ರಗಳು ತಯಾರಾಗಿರುವದು ತಮಗೆ ಗೊತ್ತಿರುತ್ತೆಂತ ತಿಳಿದದ್ದರಿಂದ ತಮಗೆ ಬರೆದು ಇದ್ದೇನೆ. ನಮಗೆ ಗದ್ದೆಗಳಿಗೂ ತೋಟಗಳಿಗೂ ನೀರು ಹಾಯಿಸುವದಕ್ಕೆ ಅನುಕೂಲವಿರುವ ಪಕ್ಷ ಈ ಯಂತ್ರಗಳು ಎಲ್ಲಿ ಸಿಕ್ಕುತ್ತವೆ? ಅವುಗಳ ನಕ್ಷೆಯನ್ನೂ ಅವನ್ನು ನಡಸತಕ್ಕ ವಿಧಾನ ಸಂದರ್ಭಗಳನ್ನೂ ತಿಳಿಸಿಕೊಡುವಿರಾಗಿ ನಂಬಿದ್ದೇನೆ. ಇದಕ್ಕಾಗಿ ತಗಲುವ ಚಾರ್ಜನ್ನು ನಾನು ಕಳುಹಿಸಿಕೊಡುತ್ತೇನೆ. ಕೃಪೆ ಇರಲಿ.

ಯಲಿಯೂರ್ ಎಸ್. ರಂಗಾಚಾರ್,
ಜನವರಿ, ೩. ಪೆನಷನರ್, ದಂಟಗನಹಳ್ಳಿ ಹೋಬಳಿ,
ಹಾಸನದ ಡಿಸ್ಟ್ರಿಕ್ಟು.

ಅನ್ನ ಜಿಷ್ಣದ ವಿಚಾರ.

ಅಯ್ಯಾ,

ಈ ಊರು ಕಸಬಾದಲ್ಲಿ ಜನರು ನೀರಿಲ್ಲದೆ ಬಹಳ ಕ್ರಮ ಪಡುತ್ತಿದ್ದಾರೆ. ಇದೂ ಅಲ್ಲದೆ ಈ ತಾಲ್ಲೂಕಿನಲ್ಲಿ ಕೆಲವು ಕಾಲ ಕಾಲಕ್ಕೆ ಸರಿಯಾಗಿ ಮಳೆಗಳು ಬಾರದೆ, ರಾಗಿ ಫಸಲು ಒಣಗಿ ಹೋಗಿದೆ. ಕೆರೆಗಳಲ್ಲಿ ಸುತರಾಂ ನೀರಿಲ್ಲದೆ, ಫಸಲು ಇಪಲೇ ಇಲ್ಲ. ಕೆಲವು ಕಡೆ ಕೆರೆಗಳಿಗೆ ನೀರು ಬರುತ್ತವೆಂಬ ಭರವಸೆ ಮೇಲೆ ಪೈರಾಚೆ ಭತ್ತ ಬಿತ್ತಿದ್ದ ಕಡೆಯಲ್ಲಾ ಮಳೆಯಿಲ್ಲದೆ ಎಳೇ ಪೈರುಗಳೆಲ್ಲಾ ಒಣಗಿಹೋಯಿತು. ಧಾನ್ಯವಾಸಿಗಳು ಜಾಸ್ತಿಯಾಗುತ್ತಿವೆ. ಈ ರೀತಿ ಪ್ರಜೆಗಳು ಕಷ್ಟದಲ್ಲಿ ಸಿಕ್ಕಿ ನರಳುತ್ತಿದ್ದಾರೆ. ಇಂಥಾದ್ದರಲ್ಲಿ ಕಂದಾಯಗಳ ವಸೂಲಿ ಕಾಲವು ಸಮೀಪಿಸುತ್ತಾ ಬಂತೆಂದು ಪ್ರಜೆಗಳು ಕಳವಳ ಪಡುತ್ತಿದ್ದಾರೆ. ನಮ್ಮ ಅಮಲ್ದಾರರವರು ಈ ನೀರಿನ ವಿಷಯದಲ್ಲಿ ಸಂಬಂಧ ನಿಗಾಕ್ಕೆ ಬಂದು ಸರ್ಕಾರದಿಂದ ಬಾವಿಗಳನ್ನು ತೆಗೆಸಿಕೊಟ್ಟು ಪ್ರಜೆಗಳಿಗೂ ದನಕರುಗಳಿಗೂ ಇರುವ ನೀರಿನ ಕಷ್ಟವನ್ನು ನಿವಾರಣೆ ಮಾಡ್ಯಾರೆಂದು ನಿರೀಕ್ಷಿಸುತ್ತಿದ್ದಾರೆ.

ಇಲ್ಲಿನ ಸಿರಸ್ತೆದಾರರಾಗಿದ್ದ ಮೆ॥ ಕಾಶೀನಾಥಾಚಾರರನ್ನು ನೆಲಮಂಗಲಕ್ಕೆ ವರ್ಗಾಯಿಸಿದ್ದೀರಿ ಅವರು ತಾ. ೧೦ರಲ್ಲಿ ಛಾರ್ಜ ಕೊಟ್ಟು ಆ ರಾತ್ರಿಯೇ ತಮ್ಮ ಮಿತ್ರಾದಿಗಳಿಂದಲೂ ಪರರಿಂದಲೂ ವಿಶ್ವಾಸ ಮರ್ಯಾದೆಗಳನ್ನು ಪಡೆದು ಸಮ್ಮತಿಯನ್ನು ಅಂಗೀಕರಿಸಿ ಆ ರಾತ್ರಿ ರೈಲಿನಲ್ಲಿ ಪ್ರಯಾಣವಾದರು. ಇವರು ಬಹಳ ವಿಶ್ವಾಸದಾಗಿ ಕೆಲಸ ನಿರ್ವಹಿಸುತ್ತಾ ಪ್ರಜೆಗಳ ಪ್ರೀತಿಗೆ ಪಾತ್ರರಾಗಿದ್ದರು.

ಕ. ನಾ. ರಾ.

ನಂಜನಗೂಡಿನ ಕೋರ್ಟಿನ ವಿಚಾರ.

ಅಯ್ಯಾ,

ಇಲ್ಲಿಗೆ ತಾ. ೬ರಲ್ಲಿ ಮೈಸೂರು ಚೀಫ್‌ಕೋರ್ಟಿನ ಜಡ್ಜಿಗಳಾದ ಮೆ॥ ಎಚ್. ವಿ. ನಂಜುಂಡಯ್ಯನವರು ಬೆಳಗಿನ ರೈಲಿನಲ್ಲಿ ದಯಮಾಡಿದರು. ಪುರಸಭೆಯವರು, ಅಮಲ್ದಾರರು, ಇನ್ನೂ ಕೆಲವು ದೊಡ್ಡ ಮನುಷ್ಯರು ಸ್ಟೇಷನ್ ಬಳಿ ಕಾದಿದ್ದು ಫಲಪುಷ್ಪಗಳನ್ನು ಒಪ್ಪಿಸಿ, ಜಡ್ಜಿಯವರನ್ನು ರಸಿಡೆನ್ಸಿ ಬಂಗ್ಲೆಗೆ ಕರೆದುಕೊಂಡು ಹೋಗಿ ಇಳಿಸಿದರು. ಭೋಜನಾನಂತರ ಜಡ್ಜಿಯವರು ಸುಮಾರು ೧ ಘಂಟೆ ಸಮಯದಲ್ಲಿ ಮುನ್ಸಿಫ್ ಕೋರ್ಟಿಗೆ ದಯಮಾಡಿ, ಕೋರ್ಟಿನ ಹಾಲಿನಲ್ಲಿ ಸಿದ್ಧಪಡಿಸಿದ್ದ ಪೀಠವನ್ನು ಅಲಂಕರಿಸಿ, ಆ ದಿವಸ ಅಪ್ಪರ್ ಆದ ಮೊಕದ್ದಮೆಗಳನ್ನು ನೋಡಿ, ಸಮನ್‌ಗಳು ಯಾವ ರೀತಿ ಜಾರಿಯಾಗಿವೆ ಎಂಬ ವಿಷಯಕ್ಕೆ ಗಮನ ಕೊಟ್ಟು, ಅಲ್ಲಿಂದ ರೆಕಾರ್ಡ ರೂಮಿಗೆ ದಯಮಾಡಿ, ಕಟ್ಟುಗಳನ್ನೂ ಅವರವರ ಷರೀಕುಗಳನ್ನೂ ಪರಾಂಬರಿಸಿ, ಡೆಪ್ಯುಟಿ ನಾಜರ ಇಲಾಖೆ ರಿಜಸ್ಟರುಗಳನ್ನು ನೋಡಿ, ಅಲ್ಲಿಂದ ಗರಲ್‌ಸ್ಕೂಲಿಗೆ ಹೋಗಿ ಬಾಲಿಕೆಯರ ಮಂಗಳಗಾನವನ್ನು ಕೇಳಿ ಆನಂದ ಪಟ್ಟು, ಅವರುಗಳಿಗೆ ಮಿಠಾಯಿ ಹಂಚಿ, ಸಾಯಂಕಾಲ ಸುಮಾರು ೬ ಘಂಟೆ ಸಮಯದಲ್ಲಿ ಬಂಗ್ಲೆಗೆ ತೆರಳಿದರು. ೮ನೆ ತಾ. ೩—೪ ದಿವಸಗಳ ಹಿಂದೆ ಮೆ॥ ರಾಮೇಗೌಡರು ಮುತ್ತಾಮ ಸುಬ್ರಾಯರು ಇನ್‌ಸ್ಪೆಕ್ಷನ್ ಮಾಡಿ ಗುರುತು ಮಾಡಿಕೊಂಡು ಇಟ್ಟಿದ್ದನ್ನು ಇಟ್ಟುಕೊಂಡು ಅದರಂತೆ ರಿಜಸ್ಟರುಗಳನ್ನೆಲ್ಲಾ ಪರಾಂಬರಿಸಿದರು. ಆದರೆ ನಮ್ಮ ಮುನ್ಸಿಫರವರು ಆಗಿಂದಾಗ್ಯೆ ಇನ್‌ಸ್ಪೆಕ್ಷನ್ ಮಾಡುತ್ತಿದ್ದದ್ದರಿಂದ ಯಾವದರಲ್ಲೂ ದೋಷ ಕಂಡು ಬರಲಿಲ್ಲವಾಗಿ ತಿಳಿಯ ಬರುತ್ತೆ. ಅದೇ ಮಧ್ಯಾಹ್ನ ಲಾಯರುಗಳೆಲ್ಲರೂ ಬಂಗ್ಲೆಗೆ ಹೋಗಿ ಫಲಪುಷ್ಪಗಳನ್ನು ಜಡ್ಜಿಯವರಿಗೆ ಒಪ್ಪಿಸಿ, ಅವರಿಂದ ಸನ್ಮಾನಿತರಾಗಿ ಕಳುಹಿಸಿಕೊಂಡರು. ಆಗ ಜಡ್ಜಿಯವರು ಕೋರ್ಟಿನಲ್ಲಿ ನಿಮ್ಮಗಳಿಗೆ ಅನುಕೂಲವೇನು? ಪ್ರತಿಕೂಲವೇನು? ಎಂದು ಪ್ರಶ್ನೆ ಮಾಡಿದರು. ಎಲ್ಲರ ಅನುಮತಿ ಮೇರೆ ಮೆ॥ ಪ್ಲೀಡರ್ ಸುಬ್ಬರಾಯರು ಎದ್ದು ಈ ಕೋರ್ಟಿನಲ್ಲಿರುವ ಪ್ರೋಸೆಸ್ಸ ನೌಕರರು ಬಹು ದಿನಗಳಿಂದಲೂ ಅಲ್ಲೇ ಇದ್ದು ಸ್ಥಳವಂದಿಗರಾಗಿರುತ್ತಾರೆ. ಆದರೆ ಇವರು ತಾಲ್ಲೋಕುಗಳಲ್ಲಿ ಕೆಲವು ಕಡೆ ಜನರನ್ನು ಗೊತ್ತು ಮಾಡಿಕೊಂಡು, ಆ ಗ್ರಾಮದ ಅಸಾಮಿಗಳ ೧೦ ಮೈಲಿ ಫಾಸಲೆ ಇರುವ ಗ್ರಾಮಗಳಿಗೆ ಸಮನ್‌ಗಳ ಜಾರಿ ಪತ್ರಗಳ ಬರಿಸಿಕೊಂಡು ಬರುತ್ತಾರೆಂದು ಸಾಕ್ಷಿಗಾರರು ಹೇಳಿಕೊಳ್ಳುವರು. ಆದ್ದರಿಂದ ಇವರುಗಳನ್ನು ಬೇರೆ ಸ್ಥಳಕ್ಕೆ ವರ್ಗಾಯಿಸಿ, ಸಾಕ್ಷಿಗಾರರ ತೊಂದರೆಯನ್ನು ಪರಿಹರಿಸಿಕೊಡಬೇಕೆಂದು ಕೇಳಿಕೊಂಡರು. ಜಡ್ಜಿಯವರು ಈ ವಿಷಯವನ್ನು ನೋಟು ಮಾಡಿಕೊಂಡಿರುತ್ತೇವೆಂದು ಅಪ್ಪಣೆ ಕೊಡಿಸಿದರು. ಅನಂತರ ಬಂಗ್ಲೆಯಿಂದ ಹೊರಟು, ಸಂಸ್ಕೃತಪಾಠಶಾಲೆಯಲ್ಲಿ ನಡಿಯಬೇಕಾದ ಉಪನ್ಯಾಸಕ್ಕೆ ದಯಮಾಡಿ ಅಗ್ರಾಸನವನ್ನು ವಹಿಸಿ, ಉಪನ್ಯಾಸ ಪೂರೈಸಿದ ತರುವಾಯ ಸಭಿಕರಿಂದ ವಂದನೆಯನ್ನು ಸ್ವೀಕರಿಸಿ, ತಮ್ಮ ಬಿಡಾರಕ್ಕೆ ತೆರಳಿದರು. ಜಡ್ಜಿಯವರು ಸಂಪೂರ್ಣ ವಿಶ್ವಾಸವಿಟ್ಟು ಅಗ್ರಾಸನವನ್ನು ವಹಿಸಿದ್ದಕ್ಕೆ ಸಭಿಕರ ಆನಂದವು ಬಹುಮಾಗಿರುತ್ತದೆ. ಇವರು ೬ನೆ ತಾ. ಪ್ರಾತಃಕಾಲದ ರೈಲಿನಲ್ಲಿ ಬೆಂಗಳೂರಿಗೆ ತೆರಳಿದರು. ಈ ಕೋರ್ಟಿನ ಡೆಪ್ಯುಟಿ ನಾಜರು ಜಾರಿಗೆ ಕೊಟ್ಟ ಪ್ರಾಸೆಸ್ಸುಗಳನ್ನು ಮಾಡಲು ತೆಗೆದುಕೊಂಡರೆಂದು ಚೀಫ್ ಕೋರ್ಟಿಗೆ ಯಾರೋ ಅರ್ಜಿ ಬರೆದುಕೊಂಡಿದ್ದರಂತೆ. ನಮ್ಮ ಡಿಸ್ಟ್ರಿಕ್ಟು ಜಡ್ಜಿಯವರಾದ ಮೆ॥ ರಾಮಸ್ವಾಮಯ್ಯನವರು ಬಂದು ಇನ್‌ಸ್ಪೆಕ್ಷನ್ ಮಾಡಲು ಮೇಲೆ ಕಂಡ ವಿಷಯವು ರುಜುವಾತು ಆಯಿತಂತೆ. ಸದರಿ ನಾಜರನ್ನು ಹೊಳೆನರಸೀಪುರಕ್ಕೆ ವರ್ಗಾಯಿಸಿರುವದಾಗಿ ೬ನೆ ತಾರೀಖು ಸಾಯಂಕಾಲ ಹುಕುಂ ಬಂದಿದೆ.

ಟಾಕ್ಮಿದಾರ್.

ಮತಾಂತರದವರ ಕಾನೂನು.

ಅಯ್ಯಾ,

ಮತಾಂತರ ಹೊಂದಿದವರಿಗೆ ದಾಯಭಾಗವನ್ನು ಕೊಡುವದರ ವಿಷಯ [illegible] ಸರ್ಕಾರದವರು ಒಂದು ಕಾನೂನನ್ನು ಮಾಡಿ, ಅದರ ಮಸೂದೆಯನ್ನು ಗೆಜೆಟ್ಟಿನಲ್ಲಿ ಪ್ರಚುರಪಡಿಸಿ ಪ್ರಜೆಗಳು ತಮ್ಮ ಅಭಿಪ್ರಾಯವನ್ನು ಸರ್ಕಾರಕ್ಕೆ ೨ ತಿಂಗಳೊಳಗಾಗಿ ತಿಳಿಯಪಡಿಸಬೇಕೆಂದು ಕೇಳಿರುವ ವಿಷಯವಾಗಿ ಅನೇಕ ಸ್ಥಳಗಳಲ್ಲಿ ವಿಚಾರಣೆಗಳನ್ನು ಮಾಡಿ, ತಮ್ಮ ಅಭಿಪ್ರಾಯಗಳನ್ನು [illegible] ಕೆಲವರು [illegible] ವರ್ತಮಾನಪತ್ರಿಕೆಯಲ್ಲಿ ಈ ತಿಂಗಳ ೪ನೇ ತಾರೀಖಿನಲ್ಲಿ ಪ್ರಕಟವಾಗಿರುವ "ವೃತ್ತಾಂತ ಚಿಂತಾಮಣಿ" ಎಂಬ ಪತ್ರಿಕೆಯಲ್ಲಿ [illegible] ಪ್ರಸ್ತಾಪಿಸಲ್ಪಟ್ಟಿದೆ. ಅದರಲ್ಲಿ [illegible] ಕಾನೂನನ್ನು ಸರ್ಕಾರದವರು ಮಾಡಬಾರದೆಂದು [illegible] ಪ್ರಸ್ತಾಪಿಸಲ್ಪಟ್ಟಿದೆ. "ವೃತ್ತಾಂತ ಚಿಂತಾಮಣಿ" ಎಂಬ ಪತ್ರಿಕೆಯಲ್ಲಿ ಈ ವಿಷಯವಾಗಿ ಪ್ರಸ್ತಾಪಿಸಿರುವ [illegible] ಸಂಗತಿಗಳನ್ನು [illegible] ಪ್ರಸ್ತಾಪಿಸಲು ಇಷ್ಟಪಡುತ್ತೇನೆ.

೧. ಸದರಿ ಪತ್ರಿಕೆಯು ಕ್ರಿಸ್ತಮತಾವಲಂಬಿಗಳು ನಮ್ಮ [illegible] ವಿರುದ್ಧವಾಗಿ [illegible] ಕಾರಣ [illegible] ಒಂದು ಮೇಲೆ [illegible] ಕ್ಕೆ ಒಪ್ಪಿಸಿದೆ [illegible] ಆವರ ಜೀವನ. [illegible] ಮತಗಳಿಲ್ಲದಂಥ ಜನರು ಆಗಿರುತ್ತಾರಂತಲೂ, ಇಂಥವರಿಗೆ ಈ ಹೊಸ ಕಾನೂನಿನಿಂದ ಏನೂ ಪ್ರಯೋಜನವಿಲ್ಲವೆಂತಲೂ, ಬ್ರಿಟಿಷ್ ಇಂಡಿಯಾದಲ್ಲಿ ಈ ತರಹ ಕಾನೂನು ೫೦ ವರ್ಷಗಳ ಹಿಂದೆ ಜಾರಿಯಲ್ಲಿ ಬಂದಿದ್ದರೂ ಅದರಿಂದ ಉಂಟಾದ ಪ್ರಯೋಜನ ಬಹಳ ಕಡಿಮೆಯಾಗಿಯೇ ಇದೆ ಎಂತಲೂ ಪ್ರಸ್ತಾಪಿಸಿದೆ. ಈ ಎರಡು ಕಾರಣಗಳಿಂದ ಈ ಕಾನೂನು ಮಾಡುವದು ಅವಶ್ಯವಿಲ್ಲ ಅಂದ ಹಾಗಾಯಿತು. ಈ ಎರಡು ಕಾರಣಗಳಿಂದ ಕ್ರಿಸ್ತಾವಲಂಬಿಗಳಿಗೆ ಏನೂ ಪ್ರಯೋಜನವಾಗಲಿಲ್ಲ ಎಂಬದಾಗಿ ತಮ್ಮ ಪತ್ರಿಕೆಯಲ್ಲಿ ರುಜುವಾತು ಮಾಡುತ್ತಿರುವ ಮಹನೀಯರಿಗೆ ಹಿಂದೂ ಮಹಮದ್ ಮತಗಳಿಗೇನೂ ಹಾನಿಯಾಗಲಿಲ್ಲ ಎಂಬ ಸಂಗತಿ ಯಾಕೆ ಗೋಚರವಾಗಲಿಲ್ಲ? ಈ ಕಾನೂನಿನಿಂದ ಕ್ರಿಸ್ತರಿಗೆ ಯಾವಾಗ ಪ್ರಯೋಜನವಾಗಲಿಲ್ಲವೋ ಆತ್ತಕಡೆಯಲ್ಲಿ ಹಿಂದೂ ಮಹಮದ್ ಮತಗಳಿಗೆ ನಷ್ಟವಾಗಲಿಲ್ಲ ಎಂಬದು ಸಹಜವೇ. ಹಾಗಾದರೆ ಹಿಂದೂ ಮಹಮದೀಯರು ಇದು ಕ್ರಿಸ್ತರಿಗೆ ನಿಷ್ಪ್ರಯೋಜನವಾದ ಮತ್ತು ತಮಗೆ ಹಾನಿಯಿಲ್ಲದ ಕಾನೂನು ಎಂದು ಬಿಟ್ಟುಬಿಡದೆ, ಬೇಡವೆಂದು ಗದ್ದಲವೆಬ್ಬಿಸುವದು ಯಾಕೆ? ಮತ್ತು ಇಂಥಾ ಕಾನೂನನ್ನು ಜಾರಿಗೆ ತರುವದರಿಂದ ಅನೇಕಾನೇಕ ಹಿಂದೂ ಮಹಮದ್ ಮತಸ್ಥರಿಗೆ ಮನಃಕ್ಲೇಶಗಳಿಗೂ ತೊಂದರೆಗಳಿಗೂ ಅವಕಾಶವಾಗುತ್ತದೆ ಎಂಬದಾಗಿ ಸದರಿ ಪತ್ರಿಕೆ ಪ್ರಸ್ತಾಪ ಮಾಡುವದು ಘಾಳಿಯನ್ನು ಗುದ್ದಿ ಕೈ ನೋಯಿಸಿಕೊಂಡಂತೆ ಇರುತ್ತದೆ ಎಂಬದಾಗಿ ಎಲ್ಲಾ ಜನರಿಗೆ ತಮ್ಮ ಪತ್ರಿಕೆಯಲ್ಲಿ ಪ್ರಕಟಮಾಡಿದರೆ ಒಳ್ಳೇದೆಂದು ಕಾಣುತ್ತದೆ.

೨. ಈ ಸದರೀ ಕಾನೂನು ಬ್ರಿಟಿಷ್ ಇಂಡಿಯಾದಲ್ಲಿ ಈಗ ಐವತ್ತು ವರ್ಷಗಳಿಂದ ಜಾರಿಯಲ್ಲಿದೆ ಎಂದು ಸದರಿ ಪತ್ರಿಕೆ ಹೇಳುತ್ತದೆ. ಹಾಗಾದರೆ ಎಲ್ಲಾ ಬ್ರಿಟಿಷ್ ಇಂಡಿಯಾದಲ್ಲಿರುವ ಹಿಂದೂ ಮಹಮ್ಮದೀಯರ ಸಂಖ್ಯೆ ಹೆಚ್ಚೋ? ಮೈಸೂರು ದೇಶದಲ್ಲಿರುವ ಹಿಂದೂ ಮಹಮ್ಮದೀಯರ ಸಂಖ್ಯೆ ಹೆಚ್ಚೋ? ಬ್ರಿಟಿಷ್ ಇಂಡಿಯದಲ್ಲಿರುವ ಹಿಂದೂ ಮಹಮ್ಮದೀಯರ ಶಾಸ್ತ್ರ ಗ್ರಂಥಗಳೂ ಮೈಸೂರು ಸಂಸ್ಥಾನದ ಹಿಂದೂ ಮಹಮ್ಮದೀಯ ಶಾಸ್ತ್ರ ಗ್ರಂಥಗಳೂ ಬೇರೆ ಬೇರೆಯೋ? ಅಥವಾ ಒಂದೇ ಆಗಿರುತ್ತವೆಯೋ? ಸದರೀ ಪತ್ರಿಕೆಯ ಕರ್ತರು ಯಾವದಾದರೂ ಒಂದು ಸಂಗತಿ ಚರ್ಚೆಗೆ ಬಂದಾಗ ಹೆಚ್ಚು ಜನರ ಸಂಖ್ಯೆಯು ಅಭಿಪ್ರಾಯದಂತೆ ನಡಿಯಬೇಕು. ಮೈಸೂರು ಸಂಸ್ಥಾನದಲ್ಲಿ ಹಿಂದೂ ಮಹಮ್ಮದೀಯರ ಸಂಖ್ಯೆ ಹೆಚ್ಚು, ಕ್ರಿಸ್ತರ ಸಂಖ್ಯೆ ಕಡಿಮೆ, ಆದ್ದರಿಂದ ಹೆಚ್ಚು ಜನರ ಅನುಮತಿ ಅಥವಾ ಅಭಿಪ್ರಾಯದಂತೆ ನಡಿಯಬೇಕೆಂದು ವಾದಿಸುತ್ತಾರೆ. ಸದರೀಯವರ ವಾದವು ತಮಗೆ ಅನುಕೂಲವಾಗಿದೆ ಎಂಬುದನ್ನು ಪುರಾತಂಕೆ ಕಾಣುತ್ತದೆ. ಹ್ಯಾಗೆಂದರೆ ಎಲ್ಲಾ ಬ್ರಿಟಿಷ್ ಇಂಡಿಯಾದಲ್ಲಿರುವ ಹಿಂದೂ ಮಹಮ್ಮದೀಯರ ಸಂಖ್ಯೆಗಿಂತ ಮೈಸೂರು ಸಂಸ್ಥಾನದಲ್ಲಿರುವ ಹಿಂದೂ ಮಹಮ್ಮದೀಯರ ಸಂಖ್ಯೆ ಕಡಿಮೆಯಾಗಿರುವದರಿಂದ ತಮ್ಮ ಮತ ದವರಾಗಿಯೂ ತಮ್ಮಂತೆ ಶಾಸ್ತ್ರಗ್ರಂಥಗಳನ್ನು ಓದಿದವರಾಗಿಯೂ ತಮ್ಮ ಸಂಖ್ಯೆಗಿಂತ ಎಷ್ಟೋ ಹೆಚ್ಚಾಗಿಯೂ ಇರುವ ಬ್ರಿಟಿಷ್ ಇಂಡಿಯಾದ ಹಿಂದೂ ಮಹಮ್ಮದೀಯರ ಮೇಲ್ಪಂಕ್ತಿಯನ್ನೇ ಅನುಸರಿಸುವದು ಕೊಡಬೇಕಾದ ಮೈಸೂರು ಸಂಸ್ಥಾನದ ಹಿಂದೂ ಮಹಮ್ಮದೀಯರ ಕರ್ತವ್ಯವಾಗಿರುತ್ತದೆ. ಅಲ್ಲದೆ ಮೈಸೂರು ಸರ್ಕಾರದವರು ಸದರೀ ಕಾನೂನನ್ನು ಜಾರಿಯಲ್ಲಿ ತರುವದು ನ್ಯಾಯವಾಗಿಯೇ ಇರುತ್ತದೆ.

೩. ಸದರೀ ಪತ್ರಿಕಾ ಕರ್ತರು ಹಿಂದಕ್ಕೆ ಲಾರ್ಡ ಕರ್ಜನ್ ಪ್ರಭುಗಳು ಸಹ ಇಂಥಾ ಕಾನೂನನ್ನು ಜಾರಿ ಮಾಡಿದರೆ ಅನೇಕ ತೊಂದರೆಗಳಿಗೆ ಕಾರಣವಾಗುವದೆಂದು ನೆನಸಿ, ಇಂಥಾ ಕಾನೂನಿಗೆ ಒಪ್ಪಲಿಲ್ಲವೆಂದು ಬರೆಯುತ್ತಾ, ಇನ್ನೊಂದು ಕಡೆ ಸದರೀ ಪತ್ರಿಕೆಯಲ್ಲಿಯೇ "ಲಾರ್ಡ ಕರ್ಜನರವರು ಒಳ್ಳೇ ಕೆಲಸಗಳನ್ನು ಮಾಡಿದ್ದಾಗ್ಯೂ ಇವರು ಮಾಡಿದ ಕೆಲವು ಕೆಲಸಗಳ ಅನರ್ಥಗಳು ಇವರು ಮಾಡಿದ ಉಪಕಾರಗಳಿಗಿಂತ ಹೆಚ್ಚಾದದ್ದರಿಂದ ಇವರ್ನ್ನು ಪೂರ್ವ ಪ್ರಸ್ಸಿನಲ್ಲೇ ಇವರಿಗೆ ದೊಡ್ಡಸ್ಥಿಕೆಯು ಪ್ರಾಪ್ತಿಯಾಯಿತು. ಅಧಿಕಾರವು ಮುಖ್ಯವಾಗಿ ಜನ ಪರಿಪಾಲನೆಗಾಗಿ ಉಪಯೋಗಿಸಲ್ಪಡಬೇಕು, ಅನ್ಯಥಾ ಉಪಯೋಗಿಸಲ್ಪಟ್ಟರೆ ಅದರ ಫಲವು ಅನುಭವಿಸಲ್ಪಡಬೇಕು ತಪ್ಪುವದಿಲ್ಲ. ಅತ್ಯುತ್ಕೃಷ್ಟವಾದ ಸಾಧನಗಳು ಈ ಜನ್ಮದಲ್ಲಿ ಅನುಭವಿಸಲ್ಪಡುವವು" ಎಂಬದಾಗಿ ಬರೆಯುತ್ತಾರೆ. ಹಾಗಾದರೆ "ವೃತ್ತಾಂತ ಚಿಂತಾಮಣಿ" ಪತ್ರಿಕಾ ಕರ್ತರು [illegible]

[illegible]

೪. [illegible]

[illegible] ಅವರ ಕುಟುಂಬದವರು [illegible] ಇಲ್ಲಿ ಜಾರಿಯಲ್ಲಿ ಇರುವುದಿಲ್ಲವೇ!

೫. ತಂದೆಯು ಹಿಂದೂ ಮತದಲ್ಲಿ ಇದ್ದು, ಮಗನಾದವನು ಅನ್ಯಮತಾವಲಂಬಿಯಾದರೆ ತಂದೆ ಸತ್ತಾಗ ಸದರೀ ಮಗನು ಉತ್ತರಕ್ರಿಯಾದಿಗಳನ್ನು ಮಾಡದೆ ಹೋಗುವದರಿಂದ ದಾಯಭಾಗಕ್ಕೆ ಅರ್ಹನಲ್ಲ ಎಂಬದಾಗಿ ಪತ್ರಿಕೆಯಲ್ಲಿ ಸಮರ್ಥಿಸುತ್ತಾರೆ. ಅಂಥಾ ಮತಾವಲಂಬಿಯಾದ ಮಗನನ್ನು ಸರ್ಕಾರದವರಾದರೂ ಮತ್ಯಾರಾದರೂ ನಿನ್ನ ತಂದೆಯ ಕರ್ಮವನ್ನು ಮಾಡಿದರೆ ಫಲಾನಿ ಇಂಥದನ್ನು ಕೊಡುವದಾಗಿ ಹೇಳಬೇಕೇ ಬೇಡವೇ? ಆ ಹಕ್ಕಿಂದೇ ಇಲ್ಲವೋ? ಮತಾವಲಂಬಿಯಾದಾಕ್ಷಣಕ್ಕೆ ತಂದೆಗೆ ಮಗನಲ್ಲದೆ ಹೋದನೋ?

೬. ಸದರೀ ಪತ್ರಿಕೆಯಲ್ಲಿ ಪೂರ್ವಕ್ಕೆ ಹಿಂದೂ ಮುಸ್ಲಿಮರು ಮತಧರ್ಮಗಳನ್ನು ಕಾಪಾಡುತ್ತಿದ್ದಂತೆಯೇ ಈಗಿನ ಸರ್ಕಾರಗಳು ಮಾಡಬೇಕೆಂದು ಸಮರ್ಥಿಸಿದೆ. ಪೂರ್ವಕ್ಕೆ ಹಿಂದೂ ಮತಧರ್ಮಗಳನ್ನು ಮುಸಲ್ಮಾನ ಪ್ರಭುಗಳು ಎಷ್ಟು ಮಟ್ಟಿಗೆ ಕಾಪಾಡಿದರೆಂಬದು ಎಲ್ಲರಿಗೂ ಗೋಚರವಾದ ಸಂಗತಿಯೇ ಆಗಿದೆ. ಮತ್ತು ಈ ಕಾನೂನಿನ ವಿಷಯ ಹಿಂದೂ ಮಹಮ್ಮದೀಯರು ಪ್ರತಿಭಟಿಸುವದು ಶೋಚನೀಯವಾದ ಸಂಗತಿಯೇ. ಒಬ್ಬ ಹಿಂದೂ ಮಹಮ್ಮದೀಯನಾದರೆ ಈ ಕಾನೂನು ಅವರಿಗೆ ಪ್ರಯೋಜನವಿಲ್ಲವೋ? ಹಿಂದೂ ಧರ್ಮದ ಪಾರಂಪರ್ಯದವರು ಕಾಫರರು. ಅಂಥಾವರಲ್ಲಿ ಮಹಮ್ಮದೀಯರು ಸೇರಬಾರದು. ಅಂಥಾವರ ಮತಸಂಬಂಧವಾದ ಕಾರ್ಯಗಳಿಗೆ ಸಹಾಯ ಮಾಡಕೂಡದು ಎಂಬದಾಗಿ ಖುರ್ಆನ್ ಹುಕ್ಕುಂ ಇರುವಾಗ್ಯೂ ಮಹಮ್ಮದೀಯರು ಈ ವಿಷಯಕ್ಕೆ ಹಿಂದುಗಳ ಜೊತೆಗೆ ಹ್ಯಾಗೆ ಸೇರಿದರೋ ಆಶ್ಚರ್ಯ!

೭. ಹಿಂದೂ ಮತಾಚಾರಗಳು ನೆಲೆಯಿಲ್ಲದವುಗಳಾಗಿವೆ. ಹಿಂದಕ್ಕೆ ಯಾವನೊಬ್ಬನಾದರೂ ಸಮುದ್ರದ ಮೇಲೆ ಪ್ರಯಾಣಮಾಡಿ ಯೂರೋಪು ಮುಂತಾದ ಸ್ಥಳಗಳಿಗೆ ಹೋಗಿಬಂದರೆ ಅವನು ಮತಭ್ರಷ್ಟನೆಂದು ಅನ್ನುತ್ತಿದ್ದರು. ಜಾತಿಯಿಂದ ಹೊರಗೆ ಹಾಕುತ್ತಿದ್ದರು. ಈಗ ಬಹಳ ಜನರುಗಳೂ ವಿದ್ಯಾವಂತರೂ ಹೋಗಿ ಬರುತ್ತಾ ಇರುವದರಿಂದ ಅದಕ್ಕೆ ಮೌನವನ್ನು ಧರಿಸಿದರು. ಈಗ ತಮ್ಮದ್ಯೆ ಕ್ರಿಸ್ತರು ಹಿಂದೂ ಮತಾವಲಂಬಿಗಳಾಗಬಹುದು ಎಂಬದಾಗಿ ವಿಚಾರಿಸುತ್ತಾ ಇದೆ. ಇದು ಹಿಂದೂ ಮತಧರ್ಮವೇನೋ? ಹಿಂದೂ ಮತದ "ಕಾಲಂ ಕೊದ್ದಿ ದೇವರು" ಎಂಬ ತೆಲುಗು ಗಾದೆಗೆ ಸರಿಯಾಗಿದೆ. ಇದು ಒಂದು ಹಾಸ್ಯವಲ್ಲ.

ಮತಾವಲಂಬಿಗಳ ಕಾನೂನಿಗೆ [illegible]

ಸುಳ್ಳು ಹೇಳುವದು.

ಆದಿ ಕ್ರೈಸ್ತ ಸಭೆಯವರು ಒಬ್ಬರಲ್ಲೊಬ್ಬರು ಅತ್ಯಂತ ಪ್ರೀತಿ ಸಮಾಧಾನದಿಂದಲೂ ಐಕಮತ್ಯದಿಂದಲೂ ಕೂಡಿಕೊಳ್ಳುತ್ತಾ ಒಂದೇ ಕುಟುಂಬದವರಂತೆ ಒಗ್ಗಟ್ಟಾಗಿ ವಾಸಿಸುತ್ತಿದ್ದರು. ಅವರೊಳಗೆ ಅನೇಕರು ತಮ್ಮ ತಮ್ಮ ಮನೆಮಾರುಗಳನ್ನು ಮಾರಿಬಿಟ್ಟು ಆ ಹಣವನ್ನು ತಂದು ತಮ್ಮ ಗುಂಪಿನಲ್ಲಿ ಬಡವರಾದವರ ಸಂರಕ್ಷಣೆಗಾಗಿ ಕೊಡುತ್ತಿದ್ದುದರಿಂದ ಸಭೆಯವರಲ್ಲಿ ಯಾರೂ ಕೊರತೆಯುಳ್ಳವರಾಗಿ ಇರುತ್ತಿರಲಿಲ್ಲ.

[illegible]

ಆಗ ಆ ಅಪೊಸ್ತಲರಲ್ಲಿ ಪ್ರಮುಖನಾಗಿದ್ದ ಪೇತ್ರನು ಆ ಅನನೀಯನಿಗೆ—ನೀನು ಪವಿತ್ರಾತ್ಮನನ್ನು ವಂಚಿಸುವದಕ್ಕೂ ಆ ಹೊಲದ ಕ್ರಯದಲ್ಲಿ ಕೆಲವನ್ನು ಇಟ್ಟುಕೊಳ್ಳುವದಕ್ಕೂ ಸೈತಾನನು ನಿನ್ನ ಹೃದಯವನ್ನು ಯಾಕೆ ತುಂಬಿಸಿದನು? ಆ ಆಸ್ತಿ ಇದ್ದಾಗ ನಿನ್ನದಾಗಿದ್ದಿಲ್ಲವೇ? ಮಾರಿದ ಮೇಲೆ ಬಂದ ಹಣವು ನಿನ್ನ ಅಧೀನದಲ್ಲಿ ಇದ್ದಿಲ್ಲವೇ? ನೀನು ಮನುಷ್ಯರಿಗೆ ಸುಳ್ಳಾಡಲಿಲ್ಲ, ದೇವರಿಗೆ ಆಡಿದೆ ಎಂದನು. ಈ ಮಾತುಗಳನ್ನು ಅನನೀಯನು ಕೇಳುತ್ತಲೇ ಕೆಳಗೆ ಬಿದ್ದು ಪ್ರಾಣವನ್ನು ತೊರೆದನು. ಆಗ ಅಲ್ಲಿದ್ದ ಯೌವನಸ್ಥರು ಎದ್ದು ಅವನನ್ನು ಹೊತ್ತುಕೊಂಡು ಹೋಗಿ ಹೂಣಿಟ್ಟು ಬಂದರು.

ಇಷ್ಟರೊಳಗೆ ಆ ಅನನೀಯನ ಹೆಂಡತಿಯು ನಡೆದ ಸಂಗತಿಯನ್ನು ತಿಳಿಯದೆ ಒಳಗೆ ಬಂದಳು. ಪೇತ್ರನು ಆಕೆಯನ್ನು ನೋಡಿ, ನೀವು ಆ ಹೊಲವನ್ನು ಮಾರಿದ್ದು ಇಷ್ಟಕ್ಕೇನೆ? ಹೇಳು ಎಂದು ಕೇಳಲು ಆಕೆಯು—ಹೌದು, ಅಷ್ಟಕ್ಕೇ ಎಂದಳು. ಆಗ ಪೇತ್ರನು ಆಕೆಗೆ—ನೀವಿಬ್ಬರೂ ಪ್ರಭುವನ್ನು ಪರೀಕ್ಷಿಸುವದಕ್ಕೆ ಯಾಕೆ ಒಪ್ಪಿಕೊಂಡಿರಿ? ಇಗೋ, ನಿನ್ನ ಗಂಡನನ್ನು ಹೂಣಿಟ್ಟವರು ಬಾಗಿಲಲ್ಲಿ ನಿಂತಿದ್ದಾರೆ. ನಿನ್ನನ್ನೂ ಹೊತ್ತುಕೊಂಡು ಹೋಗುವರು ಎಂದು ಹೇಳಿದನು. ಕೂಡಲೇ ಆಕೆಯೂ ಅವನ ಪಾದದ ಮುಂದೆ ಬಿದ್ದು ಪ್ರಾಣವನ್ನು ತೊರೆದಳು. ಆ ಯೌವನಸ್ಥರು ಒಳಗೆ ಬಂದು ಆಕೆಯು ಸತ್ತಿರುವದನ್ನು ನೋಡಿ ಆಕೆಯನ್ನು ಹೊತ್ತುಕೊಂಡು ಹೋಗಿ ಗಂಡನ ಪಕ್ಕದಲ್ಲಿ ಹೂಣಿಟ್ಟರು.

ಈ ವೃತ್ತಾಂತವನ್ನು ಓದುವಲ್ಲಿ ನಮಗೆ ತಿಳಿಯಬರುವದೇನೆಂದರೆ—ದೇವರ ಜನರು ಕೂಡಿರುವ ಸ್ಥಳವು ಪವಿತ್ರವಾಗಿರತಕ್ಕದ್ದು. ನಾವು ಘನಪಡಿಸತಕ್ಕದ್ದು. ಆ ಅನನೀಯನೂ ಅವನ ಹೆಂಡತಿಯೂ ಪ್ರಮುಖರಾದ ಆ ಅಪೊಸ್ತಲರನ್ನು ವಂಚಿಸುವ ಪ್ರಯತ್ನಿಸಿ ಎಂಥ ಅಪಮಾನಕರವಾದ ಕೃತ್ಯವನ್ನು ನಡಿಸುವದಕ್ಕೆ ಗುರಿಯಾದರು! ಇಷ್ಟೇ ಅಲ್ಲ, ಪ್ರೀತಿಪೂರ್ವಕವಾದ ಕುಟುಂಬದಂತಿದ್ದ ಸಭೆಯಲ್ಲಿ ಒಬ್ಬರನ್ನೊಬ್ಬರು ನಂಬದೆ ಸಂಶಯಪಡತಕ್ಕ ಭಾವವು ಹುಟ್ಟುವದಕ್ಕೆ ಕಾರಣವಾಯಿತು. ದೇವರು ತಂದೆಯೆನಿಸಿಕೊಳ್ಳುವರಲ್ಲಿ ಇಂಥ ಗಂಡನೆಗೆ ಅವಕಾಶವೇ ಇಲ್ಲ. [illegible] ಇನ್ನೊಂದು ವಿಷಯವೇನೆಂದರೆ—ದೇವರನ್ನು ವಂಚಿಸುವದು ಅಸಾಧ್ಯ. ಸಭಾಪ್ರಮುಖರಾದ ಅಪೊಸ್ತಲರು ತಪ್ಪನ್ನು ಕಂಡುಹಿಡಿಯಲಾರರು ಎಂದು ಆ ಗಂಡಹೆಂಡರು ಯೋಚಿಸಿದರೆಂದು ತೋರುತ್ತದೆ. ಇವರೇನ ತಿಳಿಗೇಡಿತನ! ಸಕಲವೂ ತಿಳಿದ ಭಗವಂತನೇ ಪೇತ್ರನಿಗೆ ಸಹಾಯಕನಾಗಿದ್ದಾನೆಂಬುದು ಅವರು ಮರೆತರಲ್ಲ! ಕಡೆಗೇನಾಯಿತು? ಅವರ ತಪ್ಪು ಹೊರಬಿದ್ದು ಸಾಯುವಂಥ ಭಯಂಕರವಾದ ಶಿಕ್ಷೆಯು ಅವರಿಗುಂಟಾಯಿತು. ದೇವರಿಗೆ ತಿಳಿಯದ ಕಾರ್ಯವೇನಿದೆ? ಕಾರ್ಯಾಕಾರ್ಯಗಳಿಗೆ ಫಲಾಫಲಗಳನ್ನು ಆತನು ಕೊಡದೆ ಬಿಡುವದೇ ಇಲ್ಲ. ಕೆಲವರು ಪ್ರತಿಯೊಬ್ಬರೂ ಅಸತ್ಯವನ್ನು ವಿಸರ್ಜಿಸಿ ತಮ್ಮ ತಮ್ಮ ನೆರೆಯವರ ಸಂಗಡ ಸತ್ಯವನ್ನೇ ಆಡಬೇಕು ಎಂದು ಸತ್ಯವೇದವು ವಿಧಿಸುವದು ಸೆಮಯದಲ್ಲಿ ತಕ್ಕದ್ದು.

ತಾಲೂಕು ವರ್ತಮಾನಗಳು.

ಚಾಮರಾಜನಗರ.—ತಾ ೬ನೆ ಡಿಸೆಂಬರಿನಲ್ಲಿ ಇಲ್ಲಿನ ಎ ವಿ ಸ್ಕೂಲಿನಲ್ಲಿ ಸುಂದರ ರಾಜಾರಾವ್ ಎಂಬ ಕೊಯಮುತ್ತೂರಿನವರೊಬ್ಬರು ಸಪಾರದ ಬದಲಾವಣೆ, ಇಸ್ಪೀಟು ತಮಾಷ, ಫಲಪ್ರಸ್ಥ ಪ್ರದರ್ಶನವೇ ಮೊದಲಾದ ಮ್ಯಾಜಿಕ್ ತಮಾಷೆಗಳನ್ನು ಬಾಲಕರಿಗೆ ತೋರ್ಪಡಿಸಿದರು. ಇದರಿಂದ ಬಾಲಕರಿಗೆ ಯಾವ ಪ್ರಯೋಜನವೂ ಇಲ್ಲದಿದ್ದರೂ ಇವರ ಯುಕ್ತಿಗಳು ಮನೋಹರವಾಗಿದ್ದವು.—ನೆನ್ನೆ ಡೆಪ್ಯುಟಿ ಕಮಿಷನರವರ ಸವಾರಿಯು ಈ ಊರಿಗೆ ದಯಮಾಡಿಸಿದ್ದರೂ ಇಲ್ಲಿನ ಕೆಲವು ಸ್ಕೂಲು ಸಂಸರಗಳನ್ನು ವಿಚಾರಮಾಡುವ ಹಾಗೆ ತಿಳಿದಿರುತ್ತೇನೆ. ಈ ವಿಷಯದಲ್ಲಿ ಜನರ ಸ್ವಭಾವ ಸವಿಸ್ತಾರ ನೋಡಿ, ಯುಕ್ತಾಯುಕ್ತಗಳನ್ನು ಆಲೋಚಿಸತಕ್ಕದ್ದಾಗಿದೆ.—ನ್ಯೂ ವಿದ್ಯಾಭ್ಯಾಸದ ಇಲಾಖಾ ಮೆ॥ ವೆಂಕಟಸ್ವಾಮಿ ನಾಯ್ಡುರವರು ದಯಮಾಡಿ ಎಲ್ಲಾ ಸ್ಕೂಲುಗಳನ್ನೂ ಇನ್ಸ್‌ಪೆಕ್ಟ್ ಮಾಡಿಕೊಂಡು ಹೋದರು.

ಹೆಗ್ಗಡದೇವನಕೋಟೆ.—ಕಾಕನಕೋಟೆ ಖೆಡ್ಡಕ್ಕೆ ಡಿಸೆಂಬರ್ ೧೯ರಲ್ಲಿ ಪಾರೆಸ್ಟು ಇಲಾಖೆಯವರಾದ ಮೆ॥ ಎಚ್ ಶ್ರೀನಿವಾಸರಾಯರು ಮತ್ತು ಸ್ಪೆಷಲ್ ಡ್ಯೂಟಿಗಾಗಿ ಬಿಗಳು ತಾಲೂಕಿನಿಂದ ಬಂದಿರುವ ಮೆ॥ ಕೆ ವೆಂಕಟನಾರಣಪ್ಪನವರು, ಮೆ॥ ಬಿ ಚಂದ್ರಶೇಖರಯ್ಯನವರು ಇವರುಗಳು ಕಾಣಿಸಿಕೊಂಡು ೧೯ ಆನೆಗಳು ಪ್ರಯಾಣದಿಂದ [illegible] ೧೫ನೆ ನಂಬರು ಖೆಡ್ಡಕ್ಕೆ ಎಳೆ ಸಾಗಿಸಿದರು. ತಾ ೨೦ರಲ್ಲಿ ೬ನೇ ನಂಬರು ಖೆಡ್ಡಕ್ಕೆ [illegible] ಬಂದು ಬೇಗ್ಗಳಿದ್ದ ಆನೆಯನ್ನು ಹಿಡಿದು ೮ ಗುಂಪಿನಲ್ಲಿ ಆನೆಗಳನ್ನು ಲೆಕ್ಕಮಾಡಿದ್ದು [illegible] ಆನೆಗಳು ಸಂಪೂರ್ಣ [illegible] ತಪ್ಪಿಸಿಕೊಳ್ಳದ ಹಾಗೆ ಇವರ ಅಗ್ನಿ ನಮ್ಮ ದೀರ್ಘವಾದ ಸರ್ ಪಿ [illegible] ಮುಂತಾದವರು ಒಂದು ಸ್ಕೂಲಿಗೆ ಬಂದು [illegible] ಇಲ್ಲಿಂದ ಆನೆಗಳನ್ನು ಕಾಡಿಗೆ [illegible] ಇಲ್ಲಿನ [illegible] ಜನವರಿ ೧೦ನೇ ತಾರೀಖಿನೊಳಗಾಗಿ ಮತ್ತೊಂದು ಆನೆ ಶಿಕಾರಿ ಮಾಡುತ್ತಾರೆ. ನಾವು ಕಳೆದ [illegible] ಪತ್ರಿಕೆಯಲ್ಲಿ ಹತ್ತು ಗುಂಪನ್ನು ಹತ್ತಿ ಮಾಡಿರುತ್ತಾರೆ. ಆದರೆ ಸರ್ಕಾರದ ನೌಕರರನ್ನು ಮೇಲ್ವಿಟ್ಟ ಅಧಿಕಾರಿಗಳು ಕಷ್ಟಪಡುತ್ತಿರುವದು ಏಕೆ? ಇದರಿಂದ ಆಗತಕ್ಕ ಕೆಲಸಗಳು ಹಾಳಾಗುತ್ತವೆ—ಈ ದಿನ ಪ್ರಿನ್ಸ್ ಆಫ್ ವೇಲ್ಸ್‌ರವರ ಸವಾರಿ ಕಾಕನಕೋಟೆಗೆ ದಯಮಾಡುವ ಸಂದರ್ಭದಲ್ಲಿ [illegible] ರಸ್ತೆಯನ್ನು ಕಳೆದ ೩ ತಿಂಗಳಿನಿಂದ ಕಾಂಟ್ರಾಕ್ಟ್ ದಾರರು ಬಹಳ ಮುತುವರ್ಜಿಯಾಗಿ ಕೆಲಸ ಮಾಡಿಸುತ್ತಾರೆ. ಮರದ ಬಂಬಿಗಳನ್ನು ಹೊಡೆದು ರಸ್ತೆ ಹಾಕಿಸಿ ಹಾಳು ಮಾಡುತ್ತಾರೆ. ಈ ಪಟು ಕಾಂಟ್ರಾಕ್ಟುದಾರುಗಳಿಗೆ ತುಂಬಾ ನಷ್ಟವಾಗುತ್ತೆ. ಬಹಳ ಶ್ರಮಪಟ್ಟು ಕೆಲಸ ಮಾಡುತ್ತಾರೆ. ಅವರ ಶ್ರಮವನ್ನು ಎಷ್ಟು ಹೇಳಿದರೂ ಸ್ವಲ್ಪವಾಗಿರುತ್ತದೆ. ಇದುವರೆಗೂ ನಮ್ಮ ಸರ್ಕಾರದವರು ನಮ್ಮ ರೈತರಿಗೆ ಗಾಡಿ ಬಿಡುವುದನ್ನು ತಪ್ಪಿಸಿದರೆ ಕಾಂಟ್ರಾಕ್ಟುದಾರರಿಗೆ ಎಷ್ಟೋ ಉತ್ತಮವಾಗಿರುತ್ತೆ.

ಚಿಕ್ಕಮಗಳೂರು.—ಕಳೆದ ತಿಂಗಳ ೨೭, ೨೮, ೨೯ನೇ ತಾರೀಖುಗಳಲ್ಲಿ ಚಿಕ್ಕಿ ಸರ್ಕಸಿನವರು ಇಲ್ಲಿಗೆ ಬಂದು ಆಟವನ್ನು ಆಡಿದರು. ಆದರಿಂದ ಅವರಿಗೆ ಸಾವಿರ ರೂಪಾಯಿಗಿಂತಲೂ ಹೆಚ್ಚಾಗಿ ಉತ್ಪತ್ತಿಯಾಗಿರಬಹುದೆಂದು ಊಹಿಸುತ್ತದೆ.—ಕಳೆದ ೨೯ನೆ ತಾರೀಖಿನ ರಾತ್ರಿ ಇಲ್ಲಿನ ಕೋಟೆಯಲ್ಲಿನ ಬಾಲಯ್ಯನ ಮನೆಯವರೆಲ್ಲರೂ ಮನೆಯ ಮುಂಭಾಗದಲ್ಲಿ ಆಡುತ್ತಿರುವ ಬಾಜಾಸುರನ ಕತೆಯನ್ನು ಕೇಳುತ್ತಿರುವಾಗ ಹುಮಾರು ರಾತ್ರಿ ೧೦ ಘಂಟೆ ಸಮಯದಲ್ಲಿ ಮನೆಗೆ ನುಗ್ಗಿ ಸುಮಾರು ೫೦ ಒಡವೆ ವಸ್ತುಗಳೆಲ್ಲಾ ಸೇರಿ ಇನ್ನೂರು ರೂಪಾಯಿಯವರೆಗೂ ಇದ್ದ ಒಂದು ಪೆಟ್ಟಿಗೆಯನ್ನು ಹೊತ್ತುಕೊಂಡುಹೋಗಿ ನಾರಣೆ ಬಿಸವೇ ಮೂರಾರು ಅದೇ ಸ್ಥಳದ ಕಳ್ಳರು ಪೋಲೀಸಿನವರ ಕೈಗೆ ಸಿಕ್ಕಿಬಿದ್ದರು.—ನಮ್ಮ ಡೆಪ್ಯುಟಿ ಕಮಿಷನರು ವಿರ್ಹಾನನ್ನು ನೋಡಿ ದಫ ಹಾಗೆ ಹೊಳಲುಕೆರೆವರೆಗೂ ಹೋಗಿವಾರೆಂದು ವರ್ತಮಾನ.—ಇಲ್ಲಿನ ಸಂತೆಯಲ್ಲಿಯೂ ಊರಿನ ಬೇರೆ ಬೇರೆ ಕಡೆಗಳಲ್ಲಿಯೂ ಜೂಜಾಟವು ನಡೆಯುತ್ತಿದ್ದು ಇದರಿಂದ ಅನೇಕರಿಗೆ ನಷ್ಟವೂ ಜೂಜಾಡುವವರು ಕಳವು ಮಾಡುವದಕ್ಕೆ ಆಸ್ಪದವೂ ಕಾಣುವವರು ಜೂಜಾಟವನ್ನು ಕಲಿತುಕೊಳ್ಳಲು ಕಾರಣವೂ ಆಗುವದರಿಂದ ಇದನ್ನು ನಿಲ್ಲಿಸುವದಕ್ಕೆ ಇಲ್ಲಿ ಗ್ಯಾಂಬ್ಲಿಂಗ್ ಆಕ್ಟ್ ಜಾರಿಯಲ್ಲಿಲ್ಲವೆಂದು ಪೋಲೀಸಿನವರು ಹಟಸ್ಥರಾಗಿರಲೆ, ಆದ ಮಟ್ಟಿಗೂ ಅದರ ವಳಿಗೆಯನ್ನು ತಡೆಮಾಡುವವಲ್ಲಿ ನಿಗಾಕೊಡಬಹುದು ಒಳ್ಳೇದಲ್ಲವೇ?—ಕಳೆದ ನವೆಂಬರ್ ತಿಂಗಳಲ್ಲಿ ಜರುಗಿದ ಈ ಡಿಸ್ಟ್ರಿಕ್ಟಿನ ಸಂಟ್ರಲ್ ಜೈಲು ಇತ್ತೀಚಿನ ಕೋಟೆಯಲ್ಲಿನ ಗಂಧವನ್ನು ಒಂದು ಒಕ್ಕದ ಎಂಬತ್ತಾರು ಸಾವಿರ ರೂಪಾಯಿಗೂ, ತರೀಕೆರೆ ಕೋಟೆಯಲ್ಲಿದ್ದದ್ದನ್ನು ಎಂಭತ್ತಾರು ಸಾವಿರ ರೂಪಾಯಿಗೂ ಬೊಂಬಾಯಿ ಕಡೆಯ ಸತ್ತೆಕರು ಪಡಿಕೊಂಡಿನಲ್ಲಿ ಪಡೆದು ಈಗ ಎಲ್ಲವನ್ನು ಸಾಗಿಸುತ್ತಲಿದ್ದಾರೆ.

ತೀರ್ಥಹಳ್ಳಿ.—ಎಳ್ಳು ಅಮಾವಾಸ್ಯೆಗೆ ಅನೇಕ ಜನರು ಬಂದು ರಾಮತೀರ್ಥದಲ್ಲಿ ಮುಳುಗಿ ಹೋದರು. ಮೆ॥ ರಾಘವಾಚಾರು ಮುತವರ್ಜಿ ವಹಿಸಿ, ರಾಮತೀರ್ಥದ ಉತ್ತರ ಸ್ಥಾನ ಮಾಡುವವರಿಗೆ ಅನೇಕ ಏರ್ಪಾಡುಗಳನ್ನು ಮಾಡಿಸಿ, ಜನರನ್ನು ಸಂತೋಷಪಡಿಸಿದರು. ವಿಶೇಷವಾಗಿ ಜನಗಳು ಬಂದು ವ್ಯಾಪಾರ ಮಾಡುತ್ತಿದ್ದಾರೆ. ಈ ಸಾರಿ ತಕ್ಕಷ್ಟು ಮಳೆ ಇಲ್ಲದೆ, ಫಸಲು ಚೆನ್ನಾಗಿ ಆಗದಿದ್ದರಿಂದ ವ್ಯಾಪಾರಸ್ಥರಿಗೆ ಬಹಳ ನಷ್ಟವಾಗಿದೆ. ಜನರಿಗೆ ತಕ್ಕ ಜೀವನ ಇಲ್ಲದ್ದರಿಂದ ಕೊಳ್ಳುವದು ಸಹ ನಿಂತುಹೋಯಿತು.—ಆಗುಂಬೆಯಲ್ಲಿ ಮುಜರಾಯಿ ಸೂಪರೇಂಟರು ದಯಮಾಡಿಸಿದಾಗ ದೇವಸ್ಥಾನ ಛತ್ರ ಮುಂತಾದ್ದನ್ನು ವಿಚಾರಿಸಿಕೊಂಡು ಬರುವಾಗ್ಯೆ ಒಂದು ಮನೆಗೆ ಬೆಂಕಿ ಬಿದ್ದು ಸುಟ್ಟು ಹೋಯಿತು. ಇಲ್ಲಿಗೆ ಸಮೀಪದಲ್ಲಿರುವ ಬಿದರಳ್ಳಿ ಎಂಬ ಗ್ರಾಮದಲ್ಲಿ ಒಬ್ಬ ರೋಮಾಯ ಕ್ರೈಸ್ತನು ಮರದ ಮೇಲೆ ಹತ್ತಿ ರಂಬೆ ಕಡಿಯುತ್ತಿರುವಲ್ಲಿ ಕಾಲು ಜಾರಿ ಬಿದ್ದು ತಕ್ಷಣವೇ ಸತ್ತು ಹೋದನು. ಅವನನ್ನು ಆಸ್ಪತ್ರೆಗೆ ತಂದು ಪರೀಕ್ಷಿಸಿ, ದಫನ್ ಮಾಡಿಸಿದರು.—ತೀರ್ಥಹಳ್ಳಿಯಲ್ಲಿ ಅನೇಕ ವರ್ತಕರು ಉಪ್ಪಿನಕಡೆ ಯಿಂದ ಮಾಲುಗಳನ್ನು ತಂದು ಇಲ್ಲಿ ಸಾಮಾನು ಮಾರುವರೆ, ನೇಮಿ ಮುಂತಾದ ಕಡೆಗೆ ಹೋಗುತ್ತೇವೆ, ಚೆಕ್‌ಪೋಸ್ಟಿ ಎಂಬ ಸುಂಕದ ಕಟ್ಟೆ ನೌಕರರನ್ನು ಕೇಳಿದರೆ ಕೊಡುವದಿಲ್ಲ, ನೀವು ಕದ್ದು ಒಯ್ಯುತ್ತೀರೆಂದು ಹೇಳಿ ಮಾಲೀಕರನ್ನು ಬಹು ಆಟೋಪ ಮಾಡುತ್ತಾರೆ. ಇದು ತಪ್ಪು. ಕಮಿಷನರವರು ಕೊಟ್ಟಿರುವ ಅಪ್ಪಣೆಗೆ ವಿರೋಧವೆಂದು ಜನಗಳು ಹೇಳುತ್ತಾರೆ. ಹೀಗೆ ಮಾಡುವದು ಸರಿಯಲ್ಲ. ಟೌನಿನಲ್ಲಿ ಮಾರಾಟ ಮಾಡುವ ಪದಾರ್ಥಗಳಿಗೆ ಸುಂಕ ವಸೂಲು ಮಾಡುವರು. ದಫಾ ಗುವ ಸಾಮಾನುಗಳಿಗೆ ವಸೂಲು ಮಾಡುವದು ತಪ್ಪು. ಈ ವಿಷಯದಲ್ಲಿ ನಮ್ಮ ಅಮಲ್ದಾರರು ಚೆಕ್ಕು ನೌಕರರಿಗೆ ಎಚ್ಚರಿಕೆ ಕೊಟ್ಟು ಕ್ರಮಪಡಿಸುವರೆಂದು ನಂಬಿದೆ. ಇನ್ನು ಕಳ್ಳತನದ ಮಾತು ಕೇಳಿದರೆ ಬಂಡೆ ಹೆಚ್ಚಿನಿಂದ ಬರುವವು ಒಳ್ಳೆಯದು. ಕೆಲಳಗೆ ಗ್ರಾಮದ ಚಾವಡಿನ ಕೋಣೆಗಳಲ್ಲಿ ಮರದ ಮೇಲೆ ಒಂದು ಕಾಲಿಂಗರ್ ನ ಬಗೆಕೊಂಡು ಬಹು ಹಿಂಸೆ ಕೊಡುತ್ತಿತ್ತು. ಕೆಲವರು ಧೈರ್ಯದಿಂದ ಹೋಗಿ ಹೊಡೆದು ತಂದು ಹಾಕಿದರು. ಅದು ೧೦ ಅಡಿ ಉದ್ದವಾಗಿಯೂ ೭—೮ ಅಂಗುಲ ದಪ್ಪವಾಗಿಯೂ ಇತ್ತು. ಇಂಥಾ ಹಾವು ವಿಶೇಷವಾಗಿ ಜನರಿಗೆ ತೋರದೆ ಕೇವಲ ಕಾಡಿನಲ್ಲಿ ನಿನ್ನೆ ದಿವಸ ಮುಜರಾಯಿ ಸೂಪರೆಂಟರು ತೀರ್ಥಹಳ್ಳಿಗೆ ಬಂದು, ಇಲ್ಲಿನ ದೇವಸ್ಥಾನ ಛತ್ರ ಮುಂತಾದವುಗಳನ್ನು ವಿಚಾರಿಸಿದರು. ಮತ್ತು ಛತ್ರದ ಕಟ್ಟೆ ಮರ್ಕಟಗಳು ಮುಂತಾದವುಗಳನ್ನು ಸಹ ನೋಡಿಕೊಂಡು, ಎಲ್ಲಾ ಏರ್ಪಾಡು ಸಹಾಯಗಳನ್ನು ಮಾಡುವದರಲ್ಲಿದ್ದಾರೆ.

ಫ್ರೆಂಚ್‌ರಾಕ್ಸ್.—ಇನ್ನೂ ಜನರು ಸಂಪೂರ್ಣವಾಗಿ ಊರನ್ನು ಬಿಡದೆ ಕಾರಣ ಪ್ಲೇಗ್ ಆಗಾಗ್ಯೆ ಆಲೆಯಾಕುತ್ತಲೇ ಇರುತ್ತದೆ. ಜೋಪಡಿಗಳಿಗೆ ಹೋದವರೆಲ್ಲ ಕ್ಷೇಮದಿಂದ ಇರುತ್ತಾರೆ. ಜನರೆಲ್ಲಾ ಒಂದೇ ಸಾರಿ ಊರು ಖಾಲಿಮಾಡಿದ್ದರೆ ಫ್ಲೇಗು ಬೇಗನೆ ಎಲ್ಲರೂ ಮನೆಗಳನ್ನು ಸೇರಬಹುದಾಗಿತ್ತು. ಸರ್ಕಾರದ ನಿರ್ಬಂಧವಿಲ್ಲದ್ದರಿಂದ ಜನರಿಗೆ ಊದಾಸೀನಕ್ಕೆ ಕಾರಣವಾಯಿತು. ಈ ಕಾಲದಲ್ಲಿ ದೊಡ್ಡವರಾದವರೂ ಜನರಿಗೆ ಪ್ರೋತ್ಸಾಹಪಡಿಸಿ, ಅವರ ಪ್ರಾಣದಾನವನ್ನು ತೋರಿಸಬೇಕು. ಅವರೇ ಊರಿನಲ್ಲಿ ವಾಸಮಾಡುತ್ತಾರೆ. ಆಸ್ಪತ್ರೆ ಅಸಿಸ್ಟೆಂಟರಾದ ಮೆ॥ ಪರಿನಾಮಿಯ್ಯರು ಜನರಿಗೋಸ್ಕರ ಬಹಳ ಪ್ರಯಾಸ ತೆಗೆದುಕೊಳ್ಳುತ್ತಾರೆ. ಪ್ಲೇಗ್ ರೋಗಿಗಳನ್ನು ದಿನಕ್ಕೆ ೩ ಸಾರಿ ಸಂಧಿಸುವದೂ ಅವರಿಗೆ ತಕ್ಕ ಚಿಕಿತ್ಸೆ ಕೊಡುವದೂ ಉಂಟು. ಇದಕ್ಕೆ ಜನರು ಅವರು ಕೊಡತಕ್ಕ ಔಷಧಿಗಳಲ್ಲಿಟ್ಟಿರುವ ನಂಬಿಕೆಯೇ ದೊಡ್ಡ ಸಾಕ್ಷಿಯಾಗಿದೆ.—ಜನರು ಜೋಪಡಿಗಳಿಗೆ ಹೋದ ಕೆಲವು ಕಾಲ ಪೋಲೀಸ್ ಬಂದೋಬಸ್ತು ತಕ್ಕವಾಗಿ ಇತ್ತು. ಇದರಿಂದ ಜನರು ರಾತ್ರಿ ಕಾಲದಲ್ಲಿ ನಿರ್ಭಯದಿಂದ ನಿದ್ರೆಮಾಡುತ್ತಾ ಇದ್ದರು. ಈಚೆಗೆ ಅಮಲ್ದಾರರು ರಜಾಪಡೆದುಕೊಂಡಿದ್ದರಿಂದಲೂ ಪೋಲೀಸಿನವರಲ್ಲಿ ಕೆಲವರು ಕಾಯಿಲೆ ಬಿದ್ದದ್ದರಿಂದಲೂ ಪೋಲೀಸ್ ಬಂದೋಬಸ್ತು ಸರಿಯಾಗಿ ನಡೆಯಲಿಲ್ಲ. ತಾ ೨೮ನೇ ಸೋಮವಾರ ಬೆಳಗಿನ ಜಾವದಲ್ಲಿ ೮—೯ ಸ್ಥಳಗಳಲ್ಲಿ ಕಳ್ಳತನವಾಯಿತು. ಪ್ಲೇಗ್ ಇನ್ಸ್‌ಪೆಕ್ಟರ ಮಂಟಪಕ್ಕೆ ನುಗ್ಗಿ ರೂಪಾಯಿ, ಒಡವೆ, ಬಟ್ಟೆ ಮುಂತಾದ್ದೆಲ್ಲಾ ಸುಮಾರು ೫೦೦ ರೂಪಾಯಿಗಳವರೆಗೂ ತೆಗೆದುಕೊಂಡು ಹೋದರು. ಇನ್ನೂ ಕೆಲವು ಮನೆಗಳಲ್ಲಿ ಛತ್ರ, ಕಬ್ಬಿಣ, ಮುಂತಾದ್ದನ್ನು ತೆಗೆದುಕೊಂಡು ಹೋಗಿದ್ದಾರೆ. ಪೋಲೀಸಿನವರು ಗುಮಾನಿ ಜನರ ಮನೆಯನ್ನು ಶೋಧನೆ ಮಾಡಿಸಿದರು. ಏನೂ ಸಿಕ್ಕಲಿಲ್ಲ.—ಜೋಪಡಿಗಳಲ್ಲಿ ರಕ್ಷಣೆ ಇದಕ್ಕಾಗಿ ಸರಕಾರದವರು ೩ ಬಾವಿಗಳನ್ನು ತೋಡಿಸಿದರು. ಇದುವರೆಗೂ ತಕ್ಕವಿಷ್ಟ್ಯಗೂ ಅನುಕೂಲವಿದ್ದರೂ ಈಗೀಗ ಸುತರಾಂ ನೀರಿಲ್ಲ. ಜನರು ಬಹಳ ಕಷ್ಟಕ್ಕೆ ಗುರಿಯಾಗಿದ್ದಾರೆ. ಈ ವಿಷಯಕ್ಕೆ ದಯಾಳುಗಳಾದ ಮೆ॥ ಕೆ ಶ್ರೀನಿವಾಸರಾಯರು ಗಮನ ಕೊಟ್ಟರೆ ಬಡವರ ಕಷ್ಟ ನಿವಾರಣೆಯಾಗುತ್ತದೆ.—ಫ್ರೆಂಚ್‌ರಾಕ್ಸಿನವರು ದ್ವಾಪರ ಗೌಡರು ಕೊಪ್ಪಲನ್ನು ಸೇರಿದ್ದರಿಂದ ಅಲ್ಲೂ ಸಹ ಇಲಿಗಳು ಸಾಯುವದಕ್ಕೆ ಪ್ರಾರಂಭಿಸಿದೆ. ಇನ್ನು ಕೆಲವು ದಿನಗಳಲ್ಲಿ ಅದನ್ನೂ ಸಹ ಬಿಡಬೇಕಾಗುತ್ತದೆ.—ಈಗ ನಾಗಮಂಗಲಕ್ಕೆ ಪ್ಲೇಗ್ ವ್ಯಾಪಿಸಿ ಕೆಲವು ದಿವಸಗಳಾಯಿತು. ೭—೮ ಜನರು ಮಾತ್ರ ಮರಣ ಹೊಂದಿದರು. ಊರಿನ ಜನರೆಲ್ಲಾ ಬಹು ಜಾಗ್ರತೆಯಿಟ್ಟು ಹೊರಗೆ ಜೋಪಡಿಗಳಲ್ಲಿ ವಾಸಮಾಡುತ್ತಾರೆ. ಊರಿನಲ್ಲಿ ಜನರಿಲ್ಲ. ಕಾಹಿಲೆ ರೋಗ ಕಮ್ಮಿಯಾಗಿದೆ. ಈ ಕಾಲದಲ್ಲಿ ಅಮಲ್ದಾರರೂ ಪೋಲೀಸ್ ಇನ್ಸ್‌ಪೆಕ್ಟರೂ ಜನರೊಡನೆ ಹೊರಗೆ ಇರತಕ್ಕ ಜನರ ಎಚ್ಚರಿಯ ಬಹಳ ಮುತುವರ್ಜಿಯನ್ನು ವಹಿಸಿದ್ದಾರೆ. ಜನರಿಗೆ ನೀರಿಗೆ ಮಾತ್ರ ಬಹಳ ಕಷ್ಟವಾಗಿದೆ. ದಯಾಳುಗಳಾದ ಸರಕಾರದವರು ಈ ವಿಷಯವನ್ನು ಗಮನಕ್ಕೆ ತಂದುಕೊಂಡರೆ ಪ್ರಜೆಗಳಿಗೆ ಬಹಳ ಸಹಾಯವಾಗುತ್ತದೆ.—ಕೆಲವು ದಿವಸಗಳಿಗೆ ಮುಂಚೆ ಇದ್ದ ಅಮಲ್ದಾರರು ಸಂತೆಯಲ್ಲಿ ರೂಪಾಯಿಗೆ ೩೦ ಸೇರು ಮಾರಬೇಕೆಂದು ಡಂಗುರ ಹೊಡಿಸಿದ್ದರಂತೆ. ಈ ಕಾಲ ಹಾಗೆ ಮಾರಿದರೆಂತಲೂ, ಅವರು ಶ್ರೀರಂಗಪಟ್ಟಣಕ್ಕೆ ವರ್ಗವಾದ ಮೇಲೆ ೧೫—೧೬ ಸೇರು ಮಾರುತ್ತಾರೆಂತಲೂ ಜನರು ಹೇಳಿಕೊಳ್ಳುತ್ತಾರೆ. ಈ ವಿಷಯಕ್ಕೆ ಅಮಲ್ದಾರರು ನಿಗಾ ಕೊಟ್ಟರೆ ಪ್ರಯೋಜನವಾಗುತ್ತದೆ.

P. SUBBAROY'S

World Renowned and most Efficacious Ayurvedic Medicines.

ಪಿ. ಸುಬ್ಬರಾಯರವರ ಲೋಕಪ್ರಸಿದ್ಧವಾದ ಮತ್ತು ಅತ್ಯಂತ ಗುಣಕಾರಿಯಾದ ಆಯುರ್ವೇದ ಔಷಧಗಳು.

10

೧. ಪುಷ್ಟಿರಸಾಯನ.—ಇದರ ಸೇವನೆಯಿಂದ ನರಗಳ ಸಂಬಂಧವಾದ ಮತ್ತು ಇತರ ವಿಧವಾದ ಎಲ್ಲಾ ಶರೀರದ ದುರ್ಬಲಗಳೂ ಹೋಗಿ, ಹೊಟ್ಟೆಯಲ್ಲಿ ಅಗ್ನಿ ಉಂಟಾಗಿ, ದೇಹವು ಪುಷ್ಟಿಹೊಂದುವದು. ಪುಷ್ಟಿಯನ್ನು ಕಳೆದುಕೊಂಡ ಚಿಕ್ಕವಯಸ್ಸಿನವರಿಗೆ ಇದು ಒಳ್ಳೆ ಔಷಧವು ಇದರಿಂದ ಶರೀರದ ಪ್ರತಿ ಅವಯವದ ನೋವು, ಅಶಕ್ತಿಯೂ ಹೋಗಿ, ಪುಷ್ಟಿಯೂ, ಬಲವೂ ಉಂಟಾಗುವವು. ಪೆಟ್ಟಿ ೧ಕ್ಕೆ ರೂ. ೨ ವಿ. ಪಿ. ಛಾರ್ಜಿ ೬ ಆಣೆ.

೨. ಅಜೀರ್ಣ ಗುಳಿಗೆ.—ಅಜೀರ್ಣ, ತೇಗುವುದು, ಹೊಟ್ಟೆಯಲ್ಲಿ ಉರಿ, ಮತ್ತಾಗಿರುವಿಕೆ, ಹಸಿವಿಲ್ಲದಿರುವದು, ಪಿತ್ಥ, ಬಾಯಿಯ ದುರ್ಗಂಧ, ಹೊಟ್ಟೆಶೂಲೆ, ನಿದ್ರೆ ಚಿತ್ತದಿರುವಿಕೆ, ತಲೆತಿರುಗುವದು, ಇವೆಲ್ಲಾ ನಿರ್ಮೂಲವಾಗುವವು. ಪೆಟ್ಟಿ ೧ಕ್ಕೆ ೮ ಆಣೆ ವಿ. ಪಿ. ೨ ಪೆಟ್ಟಿಗೆ ವರೆಗೆ ಛಾಂಗಿ ಛಾರ್ಜಿ ೫ ಆಣೆ.

೩. ಲಕ್ಷ್ಮೀಕರ ಕಸ್ತೂರಿಮಾತ್ರೆ.—ಇದು ತಾಂಬೂಲಕ್ಕೆ ಪ್ರಾಣಮಿತ್ರನು. ಇದರಿಂದ ಬಾಯಿಯ ದುರ್ಗಂಧವು ಹೋಗುವದು. ಭೋಜನಾನಂತರ ತಾಂಬೂಲದ ಸಂಗಡ ೧—೨ ಮಾತ್ರೆಗಳನ್ನು ಸೇವಿಸಿದರೆ, ಇತರ ಸುವಾಸನಾದ್ರವ್ಯಗಳು ಅನಾವಶ್ಯಕವಾಗಿರುವುದಲ್ಲದೆ, ಅಲ್ಪಕಾಲದಲ್ಲಿ ಅತ್ಯಂತ ಕಠಿಣವಾದ ಆಹಾರವನ್ನು ಕೂಡ ಜೀರ್ಣಕ್ಕೆ ತರುವುದು. ಬೆಳಿಗ್ಗೆ ಊಟಕ್ಕೆ ಮುಂಚೆ ೨ ಮಾತ್ರೆಗಳನ್ನು ಕ್ರಮವಾಗಿ ಸೇವಿಸುತ್ತಿದ್ದರೆ ಅಜೀರ್ಣ, ಮಂದ, ಹಲ್ಲುನೋವು, ಹೊಟ್ಟೆಯ ಉರಿ, ಇವುಗಳು ವಾಸಿಯಾಗುವವು. ಇದರಲ್ಲಿ ಅಫೀಮೇ ಮೊದಲಾದ ಮತ್ತು ಪ್ರತಿಬಂಧಕವಾದ ಯಾವ ವಸ್ತುವೂ ಇಲ್ಲದ್ದರಿಂದಲೂ, ಇದರ ತಯಾರಿಗೆ ಕಸ್ತೂರಿ ಸುವರ್ಣ ವರಕು ಮುಂತಾದ ಅಮೂಲ್ಯ ವಸ್ತುಗಳು ಸೇರಿರುವದರಿಂದಲೂ ಎಳೇ ಮಕ್ಕಳಿಂದ ಮುದುಕರವರಿಗೆ ಎಲ್ಲರೂ ತಾಂಬೂಲದೊಂದಿಗೆ ಅಥವಾ ಬರಿಬಾಯಲ್ಲಿ ಹಾಕಿಕೊಂಡು ಉಪಯೋಗಿಸಬಹುದು. ಕ್ರಮವಾಗಿ ಸೇವಿಸುವವರಿಂದ ದೇಹದಲ್ಲಿ ರೋಗಕ್ಕೆ ಅಸ್ಪದ ಕೊಡದೆ ಸಹ ನೋಡಿಕೊಳ್ಳುವದು. ಜ್ವರ, ನೆಗಡಿ, ಕೆಮ್ಮಲು ಮುಂತಾದವುಗಳಿಗೆ ಸಣ್ಣ ಮಕ್ಕಳಿಂದ ದೊಡ್ಡವರಿಗೆ ೧ ರಿಂದ ೪ ಮಾತ್ರೆಗಳಂತೆ ಕೊಟ್ಟರೆ ಗುಣ ಕಾಣುವದು. ಸುಮಾರು ೨೦೦ ಮಾತ್ರೆ ಉಳ್ಳ ಸೀಸೆ ೧ಕ್ಕೆ ೪ ಆಣೆ. ೧ ರಿಂದ ೧೨ ಸೀಸೆಗೆ ವಿ. ಪಿ. ಛಾಂಗಿ ಛಾರ್ಜಿ ೫ ಆಣೆ.

೪. ವೇದನಾಪರಿಹಾರಕ ತೈಲವು.—ಇದನ್ನು ಪೋಲ್ಟ್ರಾಗದಲ್ಲಿ ಮಾತ್ರ ಹಚ್ಚುವದರಿಂದ ಕೈಕಾಲು ಹಿಡಿದುಕೊಳ್ಳುವದು, ವಾತರೋಗ, ಹಾರ್ಸ್ಯವಾಯು, ನರಗಳ ಸೆಳೆತ, ಮೊಣಕಾಲು ಸೊಂಟ ಮತ್ತು ಎದೆ ಇವುಗಳ ನೋವು, ತೋಳು ಮುಂತಾದ ಅಂಗಗಳ ಕೀಲಿನ ನೋವು, ತಲೆಶೂಲೆ, ಹಲ್ಲುನೋವು, ಕಿವಿನೋವು, ಚಳಿ, ಕೆಮ್ಮು ಮುಂತಾದ ಎಲ್ಲಾ ವಿಧವಾದ ನೋವುಗಳೂ ಖಂಡಿತವಾಗಿ ವಾಸಿಯಾಗುವವು. ಸೀಸೆ ೧ಕ್ಕೆ ೧ ರೂ. ೩ ಬಾಟ್ಲು ವರೆಗೆ ವಿ. ಪಿ. ಛಾಂಗಿ ಛಾರ್ಜಿ ೫ ಆಣೆ.

೫. ಲೋಕಪ್ರಸಿದ್ಧವಾದ ಪರಿಮಳ ಕೇಶತೈಲವು.—ಬೋಳುತಲೆ, ಸುಂಡು ಅಥವಾ ಹೊಟ್ಟು ಉದುರುವಿಕೆ, ಇವು ಸಂಪೂರ್ಣವಾಗಿ ವಾಸಿಯಾಗುವದಲ್ಲದೆ, ತಲೆಯನ್ನೂ ಮೆದುಳನ್ನೂ ತಣ್ಣಗಿರುವಂತೆ ಮಾಡಿ, ತಲೆ, ಮೀಸೆ, ಹುಬ್ಬುಕೂದಲುಗಳನ್ನು ಹೇರಳವಾಗಿ ಬೆಳೆಸುವದು ಮತ್ತು ಕಣ್ಣು ಮಿದುಳು ಸಂಬಂಧವಾದ ರೋಗಗಳನ್ನೆಲ್ಲಾ ವಾಸಿಮಾಡುವದು. ಬಹಳ ಮನೋರಂಜಕವಾಗಿ ಪರಿಮಳಿಸುವದು. ಬೆಲೆ ಸೀಸೆ ೧ಕ್ಕೆ ೮ ಆಣೆ ೨ ಸೀಸೆ ವರೆಗೆ ವಿ. ಪಿ. ಛಾರ್ಜಿ ೫ ಆಣೆ.

೬. ನೇತ್ರಬಿಂದು.—ನವಿದಾಪನ್ನಪಟ್ಟಿ, ಕಣ್ಣಿನಲ್ಲಿ ನೀರು ಸುರಿಯುವುದು, ಕಣ್ಣುನೋವು, ಪೂವು ಬರುವುದು, ಉರಿ ಮುಂತಾದ ನೇತ್ರರೋಗಗಳು ಇದರಿಂದ ಗುಣವಾಗುವವು. ಸೀಸೆ ೧ಕ್ಕೆ ೮ ಆಣೆ ವಿ. ಪಿ. ಛಾರ್ಜಿ ೬ ಸೀಸೆ ವರೆಗೂ ೫ ಆಣೆ.

೭. ಪ್ರಾಣಬಿಂದು.—ಕಿವಿಯು ಎಷ್ಟು ಕೆಟ್ಟಾಗಿ ಹೋಯಿತ್ತಿದ್ದರೂ ಅದನ್ನೂ ಕೀವು ಸುರಿಯುವುದೂ, ಕಿವಿಯ ಮಾಂದ್ಯವು, ಕಿವುಡು ಮುಂತಾದ್ದನ್ನೂ ಜಾಗ್ರತೆ ಪರಿಹರಿಸುವುದು, ಬೆಲೆ ಸೀಸೆ ೧ಕ್ಕೆ ೮ ಆಣೆ ವಿ ಪಿ ಛಾರ್ಜಿ ೬ ಸೀಸೆ ವರೆಗೂ ೫ ಆಣೆ.

೮. ಗಂಡಕಸ್ತೂರಿ ಔಷಧಿ.—ಚರ್ಮರೋಗಗಳು, ಚರ್ಮಗತವಾದ ಎಲ್ಲಾ ವ್ಯಾಧಿಗಳಿಗೂ ಅತ್ಯುತ್ತಮವಾದ ಮದ್ದು. ಒಂದು ಸಾರಿ ಬಳಸಿಯಾದ ಮೇಲೆ ಪುನಃ ತಲೆದೋರುವದಿಲ್ಲ. ಸೀಸೆ ೧ಕ್ಕೆ ೪ ಆಣೆ. ವಿ. ಪಿ. ಛಾರ್ಜಿ ೬ ಸೀಸೆ ವರೆಗೂ ೫ ಆಣೆ.

೯. ಸಂಜೀವನಿ.—ಹೊಟ್ಟೆನೋವು, ಆಯಾಸ ಯಾವದೂ ಸ್ವಲ್ಪವೂ ಉಂಟಾಗದಂತೆ ಸುಖವಾಗಿ ಭೇದಿಯಾಗುವದು. ಮಲಬಂಧ, ಅಜೀರ್ಣ, ವಾಯು, ಎದೆಯುರಿಯುವುದು, ಪಿತ್ಥ, ಜ್ವರ, ಇವುಗಳನ್ನು ವಾಸಿ ಮಾಡುವುದು. ಸೀಸೆ ೧ಕ್ಕೆ ೮ ಆಣೆ ವಿ. ಪಿ. ಛಾರ್ಜಿ ೬ ಸೀಸೆ ವರೆಗೆ ೫ ಆಣೆ.

ಕಾಗದವನ್ನು ಇಂಗ್ಲಿಷ್ ಅಥವಾ ತಮಿಳಿನಲ್ಲಿ ಬರೆಯಿರಿ.

Apply to :—**P. SUBBAROY,**

Porto Novo, South Arcot.

ವಿಳಾಸ:—ಪಿ. ಸುಬ್ಬರಾಯ್,

ಪೋರ್ಟನೋವೋ, ದಕ್ಷಿಣ ಆರ್ಕಾಟ್ ಜಿಲ್ಲಾ.

COMMERCIAL CLASSES.

Hardwicke College, Mysore.

These classes will be opened, 8th. Jan., 1906.

TEACHER—Mr. S. Gnanappah, of the Reid College, Lucknow: holder of the Remington Gold Medal for Typewriting.

HOURS—7—10 a.m., & 7—8 p.m.

FEES—Typewriting, Rs. 1—8—0 per month; Shorthand Re 1; Bookkeeping, Re 1. Commercial Correspondence & Commercial Geography, (if desired), Re 1.

SCHOOL STUDENTS AT HALF-FEES.

ADMISSION FEE—Re. 1. 4

Application for admission to be made to

The PRINCIPAL, Hardwicke College.

ಸನ್ ೧೯೦೬ನೇ ಇಸವಿಯ

ಎಂ. ನಂ॥ ಎಸ್. ನಂ॥ ಬಿ. ನಂ॥ ಸಿ. ನಂ॥ ಜೆ. ನಂ॥ ಡಿ. ನಂ॥ ಪಂಚಾಂಗ ಸಮೇತವಾದ ಇಂಗ್ಲಿಷು—ಕನ್ನಡ

ಪಾಕೆಟ್ ಡೈರಿಗಳು. 9

ಈ ಡೈರಿಗಳು ವರ್ತಕರು, ಲಾಯರುಗಳು, ಕಂಟ್ರಾಕ್ಟರು, ದೊಡ್ಡ ಮನುಷ್ಯರು, ಬುಕ್‌ಕೀಪರ್ ಸನ್ನಸ್ತರಿಗೂ ಉಪಯೋಗವಾಗಿರುತ್ತವೆ ಇವುಗಳಲ್ಲಿ ಅಡಕವಾಗಿರುವ ವಿಷಯಗಳು—ಪರಾಭವ ಸಂ॥ ಪಂಚಾಂಗ ಗ್ರಹ ಕುಂಡಲಿ ಸಹಿತ, ಕ್ಯಾಲೆಂಡರು, ಹಬ್ಬಗಳು, ರಜಾದಿನಗಳು, ರೈಲ್‌ಛಾರ್ಜು, ಕೋರ್ಟ್ ಫೀಜು, ಪ್ರೋಸೆಸ್ ರುಸುಂ, ಸ್ಟಾಂಪು ರಿಜಿಸ್ಟರ್ ಫೀಜುಗಳು, ಪೋಸ್ಟಾಫೀಸಿನ ಮುಖ್ಯ ವಿಷಯಗಳು, ಜಮೀನುಗಳ ಅಳತೆ, ತೂಕಗಳು, ಗೌರಿ ಪಂಚಾಂಗ, ಪ್ರಶ್ನಶಾಸ್ತ್ರ, ಹಲ್ಲಿ ಬಿದ್ದ ಫಲ, ರಾಹು ಗುಳಿಕಕಾಲ, ವಾರ ಶೂಲೆ, ದಿನಸಂಬಳದ ಪಟ್ಟಿ, ಬೋಬಿಲ್ಸ್, ಜನಾಬುಕರ್ನ ಪಟ್ಟಿ, ಇನ್ನೂ ಅನೇಕ ವಿಷಯಗಳಿವೆ ಉತ್ಕೃಷ್ಟವಾದ ಕಾಗದ, ರೂಲು ಹಾಕಿದೆ, ಕೆಂಪು ಸಾವರ್ಣ ಬೈಂಡು, ಲೇಖನಿಯಿಂದ ಗಿಲಿಟು ಮಾಡಿದೆ.

ಎ. ನಂಬರ್ ಚಿಕ್ಕಸೈಜು ೩ ಆಣೆ	ಸಿ. ನಂಬರ್ ದೊಡ್ಡಸೈಜು ೬ ಆ.
ಎಫ್. ,, ,, ೪ ,,	ಎಚ್. ,, ,, ೬ ,,
ಬಿ. ,, ಮಧ್ಯಮಳದ್ದು ೫ ,,	ಡಿ. ,, ಮಧ್ಯಮಳದ್ದು ೮ ,,

ಪೋಸ್ಟು ಛಾರ್ಜು ಬೇರೆ ಒಂದೇ ಸಲವೇ ೧೨ ಡೈರಿ ತರಿಸಿದರೆ ೧ ಡೈರಿ ಇನಾಂ. ವಿ. ಪಿ. ಮೂಲಕ ತರಿಸಿಕೊಳ್ಳಿ

ನಮ್ಮ ವಿಳಾಸ:—ಎಂ. ಆರ್. ಕೃಷ್ಣಸ್ವಾಮಿ ಸೆಟ್ಟಿ, ಶ್ರೀ ಕೃಷ್ಣವಿಲಾಸ ಪ್ರೆಸ್, ಮೈಸೂರು.

ಇಂಡಿಯಾ ವ್ಯವಸಾಯ ಮತ್ತು ಸಹಾಯಕ ಆಫೀಸು

16

[೧೯೦೨ರಲ್ಲಿ ಸ್ಥಾಪಿತವಾದದ್ದು]

ಈ ಆಫೀಸಿನ ಉದ್ದೇಶವೇನೆಂದರೆ—ಯಾವ ಜಾತಿಯವನೇ ಆಗಲಿ ಮತದವನೇ ಆಗಲಿ ಈ ಆಫೀಸಿನ ಚಂದಾದಾರನಾಗಿ ಅದರ ಭರವಸ ಪತ್ರವನ್ನು ಹೊಂದಿದ್ದರೆ ಅವರ ಮರಣಾನಂತರ ಅವರ ಕುಟುಂಬದವರಿಗೆ ಸಹಾಯವು ದೊರಕಲ್ಪಡುವದು.

ಈ ಆಫೀಸಿನ (A) ತರಗತಿಗೆ ಸೇರಿದವರು ಪಡೆಯಬೇಕೆಂದಿರುವ ಪ್ರತಿ ೧೦೦೦ ರೂಪಾಯಿಗಳ ಮೊಬಲಿಗಾಗಿ ಮಾಸೆಯೂ ವಾ ಒಂದೊಂದು ರೂಪಾಯಿಯ ಪ್ರಕಾರ ಒಟ್ಟು ರೂ ೪೬ ನ್ನು ಮಾತ್ರವೇ ಸಲ್ಲಿಸಬೇಕಾಗುವದು.

ಆಫೀಸಿನವರು ಚಂದಾದಾರರಿಂದ ವಸೂಲಾದ ಮೊಬಲಗನ್ನು ಶಾಸ್ತ್ರರೀತಿಯಾಗಿ ನಡೆಸಲ್ಪಡುವ ವ್ಯವಸಾಯಕ್ಕೆ ಹಾಕಿ ಅದರಿಂದ ಬಂದ ಲಾಭದಿಂದಲೇ ಚಂದಾದಾರರ ಸಹಾಯದ್ರವ್ಯವನ್ನು ಕೊಡಲಾಗುವದು. ವ್ಯವಸಾಯ ನಿಮಿತ್ತವಾಗಿ ನಾವು W.I.P. ರೈಲ್ವೆ ಬಳಿ ಪಲ್ಲರುವ "ಕೊಲ್ಲಂ ಎಸ್ಟೇಟ್" ಎಂಬ ಸರ್ವೋತ್ಕೃಷ್ಟವಾದ ಭೂಮಿಯನ್ನು ೯೯ ವರ್ಷಕ್ಕೆ ಸ್ವಂತವಾಗಿ ಪಡೆದಿದ್ದೇವೆ. ಈ ಭೂಮಿಗೆ ಒಂದು ಹೊಳೆಯಿಂದ ಕಾಲುವೆ ಮಾಡಿ ನೀರನ್ನು ತಂದುಕೊಂಡಿರುವದರಿಂದ ಫಸಲು ಕಡಮೆಯಾಗುವದೆಂಬ ಭಯವೇ ಇಲ್ಲ.

ಈ ಆಫೀಸಿನಲ್ಲಿ ಭರವಸಪತ್ರವನ್ನು ಪಡೆದಿರುವವರು ಚಂದಾದಾರರಾಗಿ ಮಾತ್ರ ಇದ್ದಾರೆ. ಆದಾಯ ನಷ್ಟಗಳಿಗೆ ಭಾಗಿಗಳಾದ ಪಾಲುದಾರರಾಗಿರುವದಿಲ್ಲ. ಆದರೂ ಅವರ ಲಾಭಕ್ಕೆ ನಮ್ಮ ಭೂಸ್ಥಿತಿಯು ಆಧಾರವಾಗಿರುತ್ತದೆ.

ಚಂದಾ ಮೊಬಲಗನ್ನೆಲ್ಲಾ ವಾಪತಿ ಮಾಡಿ ಭರವಸಪತ್ರವನ್ನು ಪಡೆದಿರುವ ಯಾವ ಚಂದಾದಾರನಾಗಲಿ ಆಫೀಸಿನಿಂದ ಬರತಕ್ಕ ಲಾಭವು ತೃಪ್ತಿಕರವಾಗಿ ಕಾಣದಿದ್ದರೆ ತಾನು ಸಲ್ಲಿಸಿರುವ ಚಂದಾವೂ ಬಳಿಗನ್ನೆಲ್ಲಾ ವಾಪಸು ಪಡೆಯಬಹುದು.

ಈ ಆಫೀಸಿಗೆ ಸಬ್ ಏಜೆಂಟುಗಳು ಬೇಕಾಗಿದೆ. ವಿವರವಾಗಿ ತಿಳಿಯಬೇಕೆನ್ನುವವರು ಅರ್ಧಾಣೆ ಸ್ಟಾಂಪಿಟ್ಟು ಕೆಳಗಿನ ವಿಳಾಸಕ್ಕೆ ಇಂಗ್ಲೀಷಿನಲ್ಲಿ ಬರೆದುಕೊಳ್ಳತಕ್ಕದ್ದು.

ವಿಳಾಸ:—The Manager,

The India Agricultural and Helping Office,

Vengurla Post, Bombay Presidency.

ಮೈಸೂರು ಸೀಮೆಯಲ್ಲಿ ಪ್ಲೇಗಿನ ಸ್ಥಿತಿ.

೨೩—೧೨—೧೯೦೫ ರಿಂದ ೩೦—೧೨—೧೯೦೫ ರ ವರೆಗೆ

ಸ್ಥಳ.	ಪ್ಲೇಗ್ ಜಾಗರಿ ದದ್ದು.	ಸತ್ತ ದದ್ದು.	ಹೋದವಾರ ಈ ವಾರ ರೋಗ್ಯ	
ಬೆಂಗಳೂರು ಪಟ್ಟಣ	25	19	20	19
ಮೈಸೂರು ,,	0	0	33	36
ಬೆಂಗಳೂರು ಡಿಸ್ಟ್ರಿಕ್ಟು	15	13	50	42
ಮೈಸೂರು ,,	27	12	70	54
ಕೋಲಾರ್ ,,	5	4	21	17
ಕೋಲಾರ್ ಚಿನ್ನದ ಗಣಿಗಳು	3	2	12	10
ತುಂಕೂರು ಡಿಸ್ಟ್ರಿಕ್ಟು	0	0	47	42
ಹಾಸನ (ಹೊರಗಿನದು)	0	0	11	7
ಚಿತ್ರದುರ್ಗ ,,	3	2	16	15
ಕಡೂರ್ ,,	4	5	14	7
ಶಿವಮೊಗ್ಗ ,,	28	16	21	14
ಜುಮ್ಲಾ	110	71	315	270

ಶಾಲಿವಾಹನ ಶಕ ವರುಷಂಗಳು ೧೮೨೮ ನೇ ವಿಶ್ವಾವಸುಸಂವತ್ಸರದ ಪುಷ್ಯ ಬಹುಳ ಷಾಷ್ಠ್ಯ ಗುರುವಾರದಿಂದ ಪುಷ್ಯ ಬಹುಳ ಸಪ್ತಮಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ.

೧೯೦೬ ನೇ ಇಸವಿ ಜನವರಿ

ತಾ.	ವಾರ.	ತಿಥಿ.	ಘಳಿಗೆ.	ನಕ್ಷತ್ರ.	ಘಳಿಗೆ.	ಅಧಿಕ ಧನು ಮಾಸ
11	ಗುರು ‡	ಪಾಡ್ಯ	38-12	ಪು	7 17	28
12	ಶುಕ್ರ *	ಬಿದಿಗೆ	37-50	ಪ್ಯ	8-48	29
13	ಶನಿವಾ :	ತದಿಗೆ	35-46	ಶ್ಲೆ	8-42	1
14	ರವಿವಾ)	ಚೌತಿ	32-50	ಮ	7-56	2
15	ಚಂದ್ರ ..	ಪಂಚಮಿ	28-48	ಪು	6-5	3
16	ಕುಜ	ಷಷ್ಟಿ	24-20	ಉ	3-26	4
17	ಬುಧ ¶	ಸಪ್ತಮಿ	19-10	ಹ	22-8	5

‡ ಅಮೃತಯೋಗ. * ಉತ್ಪಾತಯೋಗ : ಉತ್ತರಾಯಣ ಪುಣ್ಯಕಾಲ, ಭೋಗೋತ್ಸವ, ರಾತ್ರಿ ಸಂಕ್ರಾಂತಿ ದೀಪಸ್ನಾನ, ಶಿವಗಂಗೇಲಿ ಗಂಗೋತ್ಪತ್ತಿ, ಮಾಗಡಿ ಬಿಗರುಕಟ್ಟಿಯೋದು.) ಉತ್ತರಾಯಣ ಪುಣ್ಯಕಾಲ, ಕೂಷ್ಮಾಂಡದಾನ, ಸಂಕಷ್ಟಚತುರ್ಥಿ. :: ಕನೂಕಟ್ಟು ¶ ತಿಥಿದ್ವಯಂ

ಪೇಟೇ ಧಾರಣೆ.

ದಿನಸಿ.		ಮೈಸೂರು.	ಬೆಂಗಳೂರು.
ಕಡ್ಡೀ ಅಕ್ಕಿ ಪಲ್ಲ ೧ಕ್ಕೆ	ರೂ	೧೨-೦-೦	೧೩-೮-೦
ಕೆಂಬೂತಿ ಅಕ್ಕಿ ಅವಲ್	..	೧೨-೦-೦	೧೪-೦-೦
,, ದುಯಂ	..	೧೧-೮-೦	೧೩-೦-೦
ಜಾಬ್ರಾಣಿ ಅಕ್ಕಿ	..	೧೨-೦-೦	೧೨-೮-೦
ಸಣ್ಣಕ್ಕಿ ಅವಲ್	..	೧೩-೦-೦	೧೫-೦-೦
,, ದುಯಂ	..	೧೨-೮-೦	೧೪-೦-೦
ತೊಗರೀ ಬೇಳೆ ಪಲ್ಲ ೧ಕ್ಕೆ	..	೯-೦-೦	೧೦-೮-೦
,, ದುಯಂ	..	೮-೧೨-೦	೧೦-೦-೦
ಹುರಿ ರಾಗಿ ಪಲ್ಲ ೧ಕ್ಕೆ	..	೩-೪-೦	೬-೦-೦
ಕಾದ್ರಾಗಿ	..	೬-೧೨-೦	೫-೮-೦
ಜೋಳ	..	೩-೬-೦	೬-೮-೦
ಹಲಸಂದೆ ಪಲ್ಲ ೧ಕ್ಕೆ	..	೯-೦-೦	೯-೮-೦
ಬಿಳೇ ಅವರೆ	..	೯-೬-೦	೯-೧೨-೦
ಹೆಸರು	..	೯-೪-೦	೧೦-೦-೦
ಉದ್ದು	..	೧೧-೦-೦	೯-೮-೦
ಕಡಲೆ	..	೧೨-೦-೦	೧೦-೦-೦
ಎಳ್ಳು ಸೆ. ೧೨೩ಕ್ಕೆ	..	೧೯-೦-೦	೧೫-೦-೦
ಹುರುಳಿ	..	೩-೬-೦	೨-೮-೦
ಹರಳು ೧೨೩ ಸೇರಿಗೆ	..	೧-೨-೦-೨-೦	೧೨-೪-೦
ಸೀಗೇಕಾಯಿ ಮಣ ೧ಕ್ಕೆ	..	೫-೦-೦	೫-೦-೦
ಮೆಣಸಿನಕಾಯಿ	..	೩-೮-೦	೨-೮-೦
,, ದುಯಂ	..	೩-೪-೦	೨-೪-೦
ಬೆಲ್ಲ ದೊಡ್ಡ ಅಚ್ಚು	..	೪-೮-೦	ಮ ೧-೧೦-೦
ಒಳ್ಳೆಣ್ಣೆ ಮಣ ೧ಕ್ಕೆ	..	೫-೦-೦	೪-೧೨-೦
ಹರಳೆಣ್ಣೆ ,,	..	೪-೧೨-೦	೪-೮-೦
ಕೊತ್ತುಂಬರಿ ಪಲ್ಲ ೧ಕ್ಕೆ	..	೧೧-೮-೦	೧೦-೦-೦
ಉಪ್ಪು ,,	..	೩-೬-೦	೩-೪-೦
ಹುಣಿಸೇ ಹಣ್ಣು	..	೦-೧೨-೦	೦-೧೦-೦
,, ಹಳೇದು	..	೦-೮-೦	೦-೯-೦
ತುಪ್ಪ	..	೧೩-೪-೦	೧೦-೮-೦
ಸೀಮೆಯೆಣ್ಣೆ ಪಟ್ಟಿ ೧ಕ್ಕೆ	..	೫-೦-೦	೫-೦-೦
ತೆಂಗಿನಕಾಯಿ ೧೦೦ಕ್ಕೆ	..	೪-೦-೦	೪-೨-೦
ಅಳಲೇಕಾಯಿ ಮಣ ೧ಕ್ಕೆ	..	೦-೧೨-೦	೦-೧೦-೦
ಅಂಟ್ವಾಳದ ಕಾಯಿ ಮಣ ೧ಕ್ಕೆ	..	೦-೧೨-೦	೦-೧೨-೦
ಚಿನ್ನ (ಪೌ) ಕೆಂಪು	..	೧೫-೪-೦	೧೫-೨-೦
,, ,, ಪಸಿಮೆ	..	೧೫-೩-೦	೧೫-೧೦-೦
,, ,, ಗಟ್ಟಿ ತೊಲ ೧ಕ್ಕೆ	..	೨೩-೧೨-೦	೨೩-೬-೦
ಬೆಳ್ಳಿ ಗಟ್ಟಿ ತೊಲ ೧೦೦ಕ್ಕೆ	..	೭೨-೦-೦	೮೧-೦-೦

Printed and Published by the Rev. H. Spencer, B.A., the Proprietor and Manager, Wesleyan Mission Press. Mysore. 11/1/1906.

ವೃತ್ತಾಂತ ಪತ್ರಿಕೆ.

REGISTERED M. 20

ಕ್ರಯ ೧ ದುಡ್ಡು ——— ಕ್ರಯ ೧ ದುಡ್ಡು

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು

ಸಂಪುಟ ೧೯ — ಮೈಸೂರು—ಸನ್ ೧೯೦೬ ನೇ ಇಸವಿ ಜನವರಿ ತಾರೀಖು ೧೮ ನೇ ಗುರುವಾರ. — ಸಂಚಿಕೆ ೩

"ವಾಗ್ದೇವಿ"

1 10

ಹಾಸ್ಯ ಕರುಣ ವೀರ ರಸಗಳಿಂದ ಭರಿತವಾದ ಕಾದಂಬರಿ ಕ್ರಯ ಒಂದು ರೂಪಾಯಿ ಅಂಚೆ ಕಾಸಲು ವಿನಾ ಬೇಕಾದ ವರು ಕೆಳಗಿನ ವಿಳಾಸಕ್ಕೆ ಬರೆಕೊಳ್ಳಬಹುದು

ಬೋರ್ಡ್ ಹಾಬರ್ ರಾಯ್, ಮಂಗಳೂರು

"ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ

ಊರಿನಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜಂಟರ ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ (ಅಡ್ವಾನ್ಸು) . ರೂ ೧ ೮ ೦

ಸ್ಥಳದವರು ಆಫೀಸಿನಿಂದ ಅಂಚೆಯ ಮೂಲಕ ತರಿಸುವವರಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಪೋಸ್ಟೇಜು ಸಹಿತ ರೂ ೧—೧೨—೦

" " " " ೦—೧೪—೦

ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು.

ವಿಳಾಸ —ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು

ಜ್ವರಹರಿ 2 10

ಇದು ಸಾಧಾರಣ ಜ್ವರ, ಚಳಿಜ್ವರ, ಮರುಜ್ವರ, ಪಿತ್ತಜ್ವರ, ಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಿಕಿತ್ಸೆಯಲ್ಲಿರುವ ಮಹಾಮುಕ್ ... ಸೆಕೆಂಡ್ ಡಿವಿಷನ್ ಆಫೀಸರ್ ಎಸ್. ಟಿ ವೆಂಕಟಪತಿ ಅಯ್ಯರ್ ... ಕೆಲವು ದಿನಸಗಳ ಹಿಂದೆ ಕಳುಹಿಸಿಕೊಟ್ಟ ... ಸೀಸೆಯು ತೀರಿಹೋಯಿತು ಇಷ್ಟು ಸ್ವಲ್ಪ ಕಾಲದಲ್ಲೇ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಹೊಂದಿರುವರು ಇನ್ನೂ ಜನಗಳು ಕಾಹಿಲೇ ಬೀಳುತ್ತಿರುವುದರಿಂದ ದಯವಿಟ್ಟು ಇನ್ನೊಂದು ... ಡಜನಿನ ಸೀಸೆಯನ್ನು ವಿ. ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆ ...

ಕ್ರಯ —ಸೀಸೆ ೧ ಕ್ಕೆ ೮ ಆಣೆ, ೧ ಡಜನ್, ೧—೮ ರೂ , ... ಅ , ೧೧ ರೂ , ಒನ್ನೆರಡು ಸೀಸೆ ತರಿಸಿಕೊಂಡರೆ ... ಮಾಫಿ ಬಿಡಲಾಗುವದು

⁂⁂⁂⁂

ಬಿ ಮಂ ಕ ಪೂ ರ ರ.

ಈ ಔಷಧವು ಅಜೀರ್ಣ, ಬೇಧಿ, ಸಾಧಾರಣ ಹೊಟ್ಟೆ ಕಳೆತ, ವಾಂತಿ ಬೇಧಿ, ನಾನಾತರದ ಹೊಟ್ಟೆನೋವುಗಳು—ಮುಂತಾದವುಗಳಲ್ಲಿ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವುದು. ಇದು ಹೆಂಗಸರು ತಿಂಗಳಿಗೆ ಒಂದು ಸಾರಿ ಹೊರಗೆ ಆಗುವಾಗ್ಯೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ ... ದರವು ಪ್ವರಹರಿ ಎಂಬ ಔಷಧದಂತೆಯೇ ಸೀಸೆಗಳಲ್ಲಿ ... ವದು.

... ದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಹೆನ್ರಿಯ ... ಕರ್ಪೂರವನ್ನು ನಾನೂ ನನ್ನ ತಾಬೇದಾರರೂ ಮ್ಯುನಿಸಿಪಲ್ ... ಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣ, ... ಜೀರ್ಣ ರೋಗಿಷ್ಟರಿಗೆ ಕೊಡುತ್ತೇವೆ ಕೊಟ್ಟ ಕೂಡಲೆ ರೋಗವು ಗುಣವಾಗುತ್ತಲಿದೆ ಇದು ಬಹು ಒಳ್ಳೇ ಔಷಧ ... ಬರೆದಿದ್ದಾರೆ

ಈ ನಾಲ್ಕು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳ ... ಔಷಧ ಷಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ... ಇದಲ್ಲದೆ ಕೆಳಗಿನ ವಿಳಾಸದಾರರಲ್ಲಿ ವಿಶೇಷ — ... ಗ್ರೇಟ್ ಇಂಡಿಯನ್ ಔಷಧಗಳ ಕಂಪೆನಿ,

ಸೆಕೆಂಡ್ ಬೀಚ್ ಲೈನ್ ಮದ್ರಾಸ್

೧೯೦೬ ನೇ ಲೋವರ್ ಸೆಕೆಂಡರಿ ಕನ್ನಡ ನೋಟ್ಸ್.

20 1

ಹಿಂದಿನ ವರುಷದಂತೆ ನಮ್ಮ 'ಎಗ್ಜಾಮಿನರ್' ಮಾಸ ಪುಸ್ತಕಕ್ಕೆ ಚಂದಾದಾರರಾಗತಕ್ಕವರಿಗೆ ಬೆಲೆಯಿಲ್ಲದೆ ಬಹುಮಾನವಾಗಿ ದೊರೆಯುತ್ತದೆ ಎಲ್ಲಾ ಸಂಗತಿಗೂ ನಮ್ಮ ಪ್ರಕಟನೆಯನ್ನು ತರಿಸಿ ನೋಡಿ

ವಿಳಾಸ —ಮ್ಯಾನೇಜರ್, ಎಗ್ಜಾಮಿನರ್ ಆಫೀಸ್, ಚಿಕ್ಕಬಳ್ಳಾಪುರ

ಬೇಕಾಗಿದೆ. 4 4

ಮನೆಯ ಕೆಲಸಕ್ಕೂ ಕಸಬುದಾರರ ಕೆಲಸಕ್ಕೂ ಉಪಯೋಗವಾದ್ದೆಂದು ಪ್ರಸಿದ್ಧಿ ಪಡೆದಿರುವ ಘಾಘ್ ಹೊಲಿಯುವ ಯಂತ್ರಗಳನ್ನು ಮಾರಾಟ ಮಾಡಲು ಸಬ್ ಏಜಂಟರುಗಳೂ, ಪ್ರೋತ್ಸಾಹಪಡಿಸುವವರೂ (Canvassers) ರಬಂವಾದಾಗಿಯೂ ಚಿಲ್ಲರೆಯಾಗಿ ಕೊಂಡುಕೊಳ್ಳತಕ್ಕವರೂ ಬೇಕಾಗಿದೆ ವಿಶೇಷವಾದ ತಪಶೀಲನ್ನು ಕೆಳಗಿನ ವಿಳಾಸದಾರರಿಂದ ತಿಳಿಯಬಹುದು.

ಕಮಿಷನ್ ಮತ್ತು ಜನರಲ್ ಏಜನ್ಸಿ,

ಸೋಲ್ ಏಜಂಟರು,

ಶಿವಮೊಗ್ಗ—(ದಕ್ಷಿಣ ಇಂಡಿಯ)

ಹೋನೋಸಿಯಾ.

ತಕ್ಷಣ ಪರಿಹಾರ

ತಗಲುತ್ತಲೇ ನೋವು ವಾಸಿಯಾಗುತ್ತೆ

ಈ ಔಷಧಿಯು ಮನೆ, ಅರಮನೆ, ಕಾರ್ಖಾನೆ, ಆಸ್ಪತ್ರೆ, ಪೋಲೀಸ್ ಠಾಣಾ, ವಿದ್ಯಾಶಾಲೆ, ಕೋರ್ಟು, ಕಚೇರಿ, ಮುಂತಾದ ಸ್ಥಳಗಳಲ್ಲೆಲ್ಲಾ ಇದ್ದೇ ಇರಬೇಕು ಇದಕ್ಕೆ ಸಮಾನವಾದ ಔಷಧ ಯಾವದೂ ಇಲ್ಲವೆಂಬುವದು ಲೋಕಪ್ರಸಿದ್ಧವಾಗಿದೆ

ಈ ತೈಲವು ರತ್ನಾಲದಲ್ಲಿ ಜೀವದಾನಿಗಳಿಗೆ ಮಹತ್ತಾಗಿ ಸಿಕ್ಕತಕ್ಕ ಔಷಧ ಇದನ್ನು ಉಪಯೋಗಿಸಿದ ದೊಡ್ಡ ಮನುಷ್ಯರು, ಡಾಕ್ಟರುಗಳು, ಮುಂತಾದವರು ಇದರ ಗುಣವನ್ನು ಹೊಗಳಿ ಸರ್ಟಿಫಿಕೇಟುಗಳನ್ನು ಕೊಟ್ಟಿದಾರೆ ನೋವು ಕಂಡರೆ ಇದನ್ನು ಹಚ್ಚಿದ ಕೂಡಲೇ ವಾಸಿಯಾಗುವದು

ಈ ತೈಲವು ಅರೆ ತಲೆನೋವು, ಸೊಂಟನೋವು, ಪಾರ್ಶ್ವವಾಯು, ಮೂಲವ್ಯಾಧಿ, ಉಬ್ಬಸ, ವಾಯುಗಳು, ನರ ಸೆಳೆತ, ಉಳುಕು, ಕೀಲುವಾಯು, ಗುಳ್ಳೆಗಳು, ಹಲ್ಲುನೋವು, ಮುಖನೋವು, ಊದುಗಳು, ಗಡ್ಡೆಗಳು, ರಣಗಳು, ಹುಳುಕಡ್ಡಿ, ಸೊಳ್ಳೆ ಮತ್ತು ಚೇಳು ಕಡಿದದ್ದು, ಚಿಪ್ಪಿರುವದು, ಬೆಂಕಿ ಯಲ್ಲಿ ಸುಟ್ಟುಕೊಂಡದ್ದು, ಕತ್ತಿ ಗಾಯ—ಇವೇ ಮೊದಲಾದ ನಾನಾ ಬಾಧೆಗಳನ್ನು ಹುಟ್ಟಡಗಿಸುತ್ತದೆ ರಾತ್ರಿ ಹಚ್ಚಿಕೊಂಡು ಮಲಗಿದರೆ ಸೊಳ್ಳೆ ಹತ್ತಿರ ಸೇರುವದಿಲ್ಲ

ಕ್ರಯ — ಸಣ್ಣ ಡಬ್ಬಿ ೧ ಕ್ಕೆ ೧ ರೂ , ದೊಡ್ಡದಕ್ಕೆ ರೂ ... ೮ ಅ , ಒಂದೇ ಸಲ ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ ಬಿಡುತ್ತಾರೆ ರೂ ...—೮ ಆಣೆ ಬಾಬ್ತು ಡಬ್ಬಿಯಲ್ಲಿ ೧ ರೂ ಡಬ್ಬಿಯಲ್ಲಿರುವದಕ್ಕಿಂತ ೬ ರಷ್ಟು ಹೆಚ್ಚು ಔಷಧವಿರುತ್ತೆ ರೂ ...—೮ ಅ ಈ ಡಬ್ಬಿಯನ್ನು ತರಿಸಿಕೊಳ್ಳುವವರಿಗೆ ಟಪ್ಪಾಲ್ ಖರ್ಚು ಮಾಫಿ ಬಿಡುತ್ತೆ

⁂⁂⁂⁂

ಹೋಮೋಸಿಯಾ ಯಂಬ್ರೋಕೇಷನ್.

ಈ ತೈಲವು ಸಕಲ ನೋವುಗಳಿಗೆ ಉಪಯೋಗಿಸಬಹುದು ಚರ್ಮ ಒಡೆದ ಕಡೆ ಇದನ್ನು ಹಚ್ಚಕೂಡದು ಇದರಲ್ಲಿ ಹೋಮೋಸಿಯದ ಗುಣಗಳು ಬಹು ಅಧಿಕವಾಗಿ ಇರುತ್ತವೆ ಅದಕ್ಕಿಂತಲೂ ಇದರಲ್ಲಿ ಇನ್ನೇನು ಗುಣಗಳುಳ್ಳ ಹೊಸ ಭಾಗವಿರುತ್ತದೆ ಇದನ್ನು ಚರ್ಮವು ಬಹು ಬೇಗನೆ ಸೇದಿಕೊಳ್ಳಬಲ್ಲದು ಡಬ್ಬಿಗಳಲ್ಲಿ ... ೮ ಆಣೆಗೂ, ೧ ರೂ ಗೂ ದೊರೆಯುವದು ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ ಎಲ್ಲಾ ಷಾಪುಗಳಲ್ಲಿಯೂ ದೊರೆಯುವದು

ಈ ಔಷಧಗಳ ವಿವರಪಟ್ಟಿಯೂ, ಸರ್ಟಿಫಿಕೇಟುಗಳುಳ್ಳ ನೋಟೀಸುಗಳನ್ನು ಅಪೇಕ್ಷಿಸಿದರೆ ಕಳುಹಿಸುವೆವು

ವಿಳಾಸ —ಹೋಮೋಸಿಯಾ ಕಂಪೆನಿ ೩೩ ಸೆಕೆಂಡು ಬೀಚ್ ಲೈನ್ ಮದರಾಸ್.

WANTED WILD ANIMALS.

ಬೇಕಾಗಿದೆ. ಬೇಕಾಗಿದೆ

5 40

ಎಲ್ಲಾ ಬಗೆಯ ಕಾಡು ಮೃಗಗಳು. ಮೈಸೂರು ಜೂ ಸೂಪರಿಂಟೆಂಡೆಂಟ್ ಮಿ॥ ಹ್ಯೂಜಸ್ ಯವರು ಕೊಂಡುಕೊಳ್ಳುವರು

Apply to—Mr Hughes, Mysore Zoo.

"ಭೂಗೋಳ" ಸಂಗ್ರಹ—ಐದನೇ ಮುದ್ರಣ.

6 1

ಮೈಸೂರು ಶಿವರಾಂಪೇಟೆ ವೆಸ್ಲಿಯನ್ ಮಿಷನ್ ಬಾಲಕರ ಪಾಠಶಾಲೆಯ ಹೆಡ್ ಮಾಸ್ಟರಾದ ಮ॥ ಟಿ. ಎಂ. ರಾಮಸ್ವಾಮಯ್ಯನವರಿಂದ ರಚಿಸಲ್ಪಟ್ಟಿರುವ ಈ ಪುಸ್ತಕವನ್ನು ಈಗ ಮೈಸೂರು ವಿದ್ಯಾಭ್ಯಾಸದ ಇಲಾಖೆಯವರು ದೇಶೀಯ ಪರೀಕ್ಷೆಗಳಿಗೂ ಎಲ್ಲಾ ಪಾಠಶಾಲೆಗಳಿಗೂ ಟೆಕ್ಸ್ಟ್ ಬುಕ್ಕಾಗಿ ನಿಯಮಿಸಿರುತ್ತಾರೆ. ಈ ಪುಸ್ತಕವನ್ನು ಬಹಳವಾಗಿ ತಿದ್ದಿ ಹೊಸ ವಿಷಯಗಳನ್ನು ಅನೇಕವಾಗಿ ಕೂಡಿಸಿ ಪ್ರಕಟಿಸಲಾಗಿದೆ. ೧೦೦ ಪ್ರತಿಗಳು ಅಥವಾ ಅದಕ್ಕಿಂತಲೂ ಹೆಚ್ಚಾಗಿ ಒಂದೇ ಸಲ ಕೊಂಡುಕೊಳ್ಳುವವರಿಗೆ ಶೇಕಡಾ ೧೨॥ ಯಂತೆ ಡಿಸ್ಕೌಂಟು ಕೊಡಲಾಗುವದು ಪ್ರತಿಗಳನ್ನು ಒಟ್ಟಾಗಿ ತರಿಸಿಕೊಳ್ಳುವವರು—ದಿ ಸೂಪರಿನ್‌ಟೆಂಡೆಂಟ್, ವೆಸ್ಲಿಯನ್ ಮಿಷನ್ ಪ್ರೆಸ್, ಮೈಸೂರು— ಈ ವಿಳಾಸಕ್ಕೂ ಬಿಡಿ ಪ್ರತಿಗಳನ್ನು ಕೊಂಡುಕೊಳ್ಳಬೇಕೆನ್ನುವ ವಿದ್ಯಾರ್ಥಿಗಳೇ ಮುಂತಾದವರು—ದಿ ಮ್ಯಾನೇಜರ್, ಸಿ. ಎಲ್. ಎಸ್ ಬುಕ್ ಡಿಪೋ, ಮೈಸೂರು—ಈ ವಿಳಾಸಕ್ಕೂ ಬರೆಯುತಕ್ಕದ್ದು. ಕ್ರಯ —೧ ಪ್ರತಿಗೆ ೪ ಆಣೆ, ಪೋಸ್ಟೇಜು ೧ ಆಣೆ.

ಮುದ್ರಾಮಂಜೂಷ—ಎರಡನೆಯ ಮುದ್ರಣ.

ಕ್ರಯ, ರೂ ೧—೮—೦ 7-3

ವಿದ್ಯಾರ್ಥಿಗಳೂ ವಿದ್ಯಾವಂತರೂ ಸಾಮಾನ್ಯ ಪ್ರಜೆಗಳೂ ಅಧಿಕಾರಸ್ಥರೂ ಲೋಕವ್ಯವಹಾರಾದಿಗಳನ್ನು ಪರಿಷ್ಕಾರವಾಗಿ ಕಲಿತುಕೊಳ್ಳುವುದಕ್ಕೆ ವಿಶೇಷ ಸಹಕಾರಿಯಾದ "ಮುದ್ರಾಮಂಜೂಷ" ವೆಂಬೀ ನವರಸಯುಕ್ತವಾದ ಕನ್ನಡ ಗ್ರಂಥವು ಈಗಿನ ವ್ಯಾಕರಣಕ್ಕೆ ಸರಿಯಾಗಿ ತಿದ್ದಿ, ಬಹು ದೊಡ್ಡದಾದ ಹೊಸ ಅಕ್ಷರದಿಂದ ಒಳ್ಳೇ ಗ್ಲೇಜು ಕಾಗದದ ಮೇಲೆ ಅಚ್ಚು ಹಾಕಿ, ಪ್ರಕಟಿಸಲ್ಪಟ್ಟಿದೆ. ಹೆಮ್ಮಿ ಅಷ್ಟಪತ್ರ, ಸೆಕ್ಷನ್ ಹೊಲಿಗೆ, ಸುಂದರವಾದ ಕ್ಯಾಲಿಕೋ ಬೈಂಡು ಬಹು ಶುದ್ಧವಾದ ಪ್ರತಿ. ಇದಕ್ಕೆ "ಚಾಣಕ್ಯರ ನೀತಿ," "ಚಂದ್ರಗುಪ್ತ ಚಾಣಕ್ಯರ ಕಥೆ" ಎಂಬೀ ಹೆಸರುಗಳೂ ಉಂಟು ಇಂಥಾ ಸರ್ವೋತ್ತಮವಾದ ಪುಸ್ತಕವನ್ನು ಕನ್ನಡಿಗರೆಲ್ಲಾ ತರಿಸಿ ಓದಿ, ಪ್ರಯೋಜನವನ್ನು ಪಡೆಯುವರೆಂದು ಹಾರೈಸುತ್ತೇವೆ. ಕ್ರಯ ೧ ಪ್ರತಿಗೆ ರೂ ೧—೮—೦, ಪೋಸ್ಟೇಜು ೨ ಆಣೆ ವಿ ಪಿ ಪಿ. ತರಿಸಿಕೊಂಡರೆ ರೂ ೧—೧೧—೦ ಬೇಕಾದವು ೨ ೧೦೦ ಅಥವಾ ಅದಕ್ಕಿಂತ ಹೆಚ್ಚು ಪ್ರತಿಗಳನ್ನು ತರಿಸಿಕೊಳ್ಳುವ ಪುಸ್ತಕವ್ಯಾಪಾರಿಗಳಿಗೆ ಶೇಕಡಾ ೨೫ ರೂಪಾಯಿನಂತೆ ಡಿಸ್ಕೌಂಟು ಕೊಡಲಾಗುತ್ತದೆ. ಬೇಗ ಈ ವಿಳಾಸಕ್ಕೇನೇ ಬರೆಯಿರಿ:—

ವಿಳಾಸ—ಮ್ಯಾನೇಜರ್. ಸಿ ಎಲ್. ಎಸ್. ಬುಕ್ ಡಿಪೋ,

ಮೈಸೂರು.

ನೀವು ವಿಲಾಯತಿಯಿಂದ ಯಾವ ಸಾಮಾನುಗಳನ್ನಾದರೂ ತರಿಸಿಕೊಳ್ಳಬೇಕಾಗಿದ್ದರೆ 19-1

ಪ್ರೈಡ್ ಮತ್ತು ಕಾಸ್ಟ್‌ಲೆಂಡ್,

೨೨—೩೪, ಸಿಟಿ ರೋಡ್, ಲಂಡನ್, ಇ. ಸಿ.

ಎಂಬೀ ವಿಳಾಸಕ್ಕೆ ಪಣ ಕಳಿಸಿ, ಕಾಗದ ಬರೆಯಿರಿ. ಈ ಕಂಪನಿಯವರು ಪೇಟೆಂಟ್ ಔಷಧಿಗಳನ್ನೂ, ಆಳಕ್ಕರಿಗೂ ಮಕ್ಕಳಿಗೂ ಕೊಡುವಂಥಾ, ಯಂತ್ರಗಳಿಂದಲೇ ತಯಾರಾದಂಥಾ ಆಹಾರಗಳನ್ನೂ, ಇನ್ನೂ ನಾನಾತರದ ಪದಾರ್ಥಗಳನ್ನೂ ಇಟ್ಟು ಬಿಕರಿಮಾಡುತ್ತಾರೆ. ಅವರು ಬಹು ವಿಶೇಷವಾದ ಗಮನಕೊಟ್ಟು, ಸಾಧ್ಯವಿದ್ದಷ್ಟೂ ಅಗ್ಗವಾಗಿ, ಬೇಕಾದ ಸಾಮಾನುಗಳನ್ನೇ ಆರಿಸಿ, ಮರಿಟಪ್ಪಾಲಿಗೇನೇ ಕಳುಹಿಸಿಕೊಡುವರು.

ದೇವಾಂಗ ವಂಶಸ್ಥರಿಗೆ ಅಗತ್ಯ ಬೇಕಾದದ್ದು.

16-15

ಸ್ವಲ್ಪ ಪ್ರತಿಗಳವೆ ಜಾಗ್ರತೆಪಟ್ಟರೆ ಸಿಕ್ಕುತ್ತವೆ. ನಂತರ ಖಂಡಿತ ಸಿಕ್ಕುವದಿಲ್ಲ. ಸ್ವಕುಲಗುರುಗಳು ಮುದ್ದುಸಂಗ ಮುನಿಸ್ವಾಮಿಗಳು ರಚಿಸಿದ್ದು ಅರ್ಥಸಹಿತ ದೇವಾಂಗಮತಪ್ರಕಾಶಿಕೆ ಸಪ್ತಾವತಾರಕ್ಕೂ ಸುಂದರವಾದ ೧೨ ತಸ್ವೀರಿದೆ ಕ್ರಯ ಸುಲಭಮಾಡಿದೆ. ೧೨ ತಸ್ವೀರಿರುವ ಪ್ರತಿ ೧ಕ್ಕೆ ವಿ. ಪಿ. ಖರ್ಚು ಸೇರಿ ರೂ ೨—೪.
ತಸ್ವೀರಿಲ್ಲದ ಇದೇ ಪ್ರತಿ ೧ಕ್ಕೆ ವಿ ಪಿ ಖರ್ಚು ಸೇರಿ ರೂ. ೧—೪.
ವೇದ ಉಪನಿಷತ್ತುಗಳ ಅರ್ಥಸಹಿತ ಮೂಲಸ್ತಂಭ ೧ಕ್ಕೆ ರೂ. ೧—೪.
ತಕ್ಷಣ ಮುಕಆರ್ಡರಿಗೂ ವಿ ಪಿ ಲಿ ಕಳುಹಿಸುತ್ತೆ. ವಿಳಾಸ— ಮೈಸೂರು ಜವಳಿ ಅಂಗಡಿ ಬ್ರಹ್ಮಶ್ರೀ ಯಜಮಾನ ಪುಟ್ಟಮಲ್ಲಯ್ಯ

ಪರಿಮಳ ನಶ್ಯದಪುಡಿ

ಪರಿಮಳ ನಶ್ಯದಪುಡಿ ಡಬ್ಬಿ ೧ಕ್ಕೆ . .	0—9—0
ಟಪಾಲ್ ಖರ್ಚು	0—3—0
ಸಾದಾ ನಶ್ಯದಪುಡಿ ಡಬ್ಬಿ ೧ಕ್ಕೆ	0—6—0
ಟಪಾಲ್ ಖರ್ಚು	0—3—0

ಈ ಪುಡಿಯನ್ನು ಮೇಲಾದ ಹೊಗೆಸೊಪ್ಪಿನಿಂದ ಸುವಾಸನೆಯುಳ್ಳದ್ದಾಗಿ ತಯಾರು ಮಾಡಲ್ಪಟ್ಟಿರುತ್ತೆ. ಇದರ ಸುವಾಸನೆ ಒಂದು ಸೇರು ಸಾಧಾರಣ ಪುಡಿಯಲ್ಲಿ ಸ್ವಲ್ಪವನ್ನು ಹಾಕಿ ಕಲಸಿದರೆ ಪುಡಿಯಲ್ಲಾ ಗಮಗಮಿಸುತ್ತೆ. ಉಪಯೋಗಿಸುವವರಿಗೆ ಸುವಾಸನೆಯನ್ನೂ ಆನಂದವನ್ನೂ ಉಂಟುಮಾಡುತ್ತೆ.

ತಲೆನೋವು, ಪೀನಸ, ಜಲದೋಷ, ಶಿರೋವ್ಯಾಧಿ ಇವುಗಳನ್ನು ತಪ್ಪದೆ ಪರಿಹರಿಸುತ್ತೆ. ಮಾದರಿಗೆ ೧ ಡಬ್ಬಿಯನ್ನು ತರಿಸಿ ಪರೀಕ್ಷಿಸಿರಿ ☞ ಪ್ರತಿ ೧ ಡಬ್ಬಿಯಲ್ಲಿ ೯ ತೋಲ ನಶ್ಯದಪುಡಿ ಇರುತ್ತೆ.

ಮಾನೇಜರ್, ಧನ್ವಂತರಿ ವೈದ್ಯಶಾಲಾ,

69 ಕೃಷ್ಣಾಬಜಾರು ರೋಡ್, **ಸಾಹುಕಾರ್ ಪೇಟೆ, ಮದರಾಸು.**

COMMERCIAL CLASSES.

Hardwicke College, Mysore.

These classes will be opened, 8th. Jan., 1906.

TEACHER—Mr S. Gnanappah, of the Reid College, Lucknow: holder of the Remington Gold Medal for Typewriting

HOURS—7—10 a m, & 7—8 p m.

FEES—Typewriting, Rs 1—8—0 per month; Shorthand Re 1, Bookkeeping, Re 1 Commercial Correspondence & Commercial Geography, (if desired), Re 1.

SCHOOL STUDENTS AT HALF-FEES.

ADMISSION FEE—Re. 1. 12-5

Application for admission to be made to

The PRINCIPAL, Hardwicke College.

ನವಿನುಡಿ.

10-10

ಲೋಕಹಿತಕ್ಕೋಸ್ಕರ **ತಿಂಗಳಿಗೆರಡುಸಲ** ಪ್ರಕಟವಾಗುವ ಪತ್ರಿಕೆ.

ಓದುವುದಕ್ಕೆ ಅನೇಕ ಉಪಯುಕ್ತಾಂಶಗಳಡಗಿ ಇಷ್ಟು ಸುಲಭವಾದ ಉಳ್ಳ ಪತ್ರಿಕೆಯು ಇದೊಂದಲ್ಲದೆ ಕನ್ನಡದಲ್ಲಿ ಬೇರೆ ಯಾವುದೂ ಇಲ್ಲ.

ಪುಗಸಟೆ ದೊರೆಯುವ ಮಾದರಿ ಸಂಚಿಕೆ—ರಸಿಕರಾದವರು ಓದಿದರೆ ಪತ್ರಿಕೆಗೆ ಆಶ್ರಯ ಕೊಡದೆ ಇರುವುದೇ ಇಲ್ಲ. ಹೊಗಳುವುದೇಕೆ?

ಅಂಚೆ ವೆಚ್ಚಸಮೇತ ವರುಷದ ಚಂದಾ:—

ಮುಂಗಡ ಹನ್ನೆರಡಾಣೆ ಮಾತ್ರವೇ; ಅನಂತರ, ಒಂದು ರೂಪಾಯಿ ಎಂಟಾಣೆ ಮಾತ್ರ.

ವಿದ್ಯಾರ್ಥಿಗಳು ಅಂಚೆ ಖರ್ಚಿನ **ಪೂರ್ತ ಆರಾಣೆಗೆ ಕಾಲಾಣೆಯ ಅಂಚೆ ಚೀಟುಗಳನ್ನು ಮುಂಗಡ ಕೊಟ್ಟರೆ,** ಒಂದು ವರುಷ ಪೂರಾ ಪತ್ರಿಕೆಯನ್ನು **ಪುಗಸಟೆ ಕೊಡುತ್ತೇವೆ.** ವಿ. ಪಿ. ಮೂಲಕ ತರಿಸಿಕೊಂಡರೆ ಒಂದಾಣೆ ಹೆಚ್ಚು.

ಓದಿ ಬುದ್ಧಿವಂತರಾಗಬೇಕೆಂಬಿಚ್ಛೆಯುಳ್ಳವರು ಈ ಸಂಧಿಯನ್ನು ಬಿಡಬಾರದು. ಬೇಗ ಬೇಗ ನಿಮ್ಮ **ವಿಳಾಸಗಳ ಮಾತ್ರ ಕೊಟ್ಟು** ಮಾದರಿ ಸಂಚಿಕೆಯೊಂದನ್ನು ಓದಿನೋಡಿ.

ವಿಳಾಸ:—ಭಾರತಿಸಂಪಂಗಿರಾಮು, ಸಂಪಾದಕ, ನವಿನುಡಿ,

ಹೊಸ ಕೋಟೆ, ಬೆಂಗಳೂರು ಡಿಸ್ಟ್ರಿಕ್ಟ್.

CHAMBERLAIN'S COUGH REMEDY.

ಚೇಂಬರ್ಲಿನ್ ಯವರು ಕಂಡುಹಿಡಿದ ಕೆಮ್ಮಿನ ಔಷಧವು.



15-2

ಶೀತದ ಕೆಮ್ಮು, ಗಂಟಲು ಗೂರನ್ನುವುದು, ಹುಲುಗೆಮ್ಮು, ನಾಯಿಗೆಮ್ಮು, ಎಲ್ಲಾ ತರದ ಶೀತ, ಗಂಟಲು ಎದೆಯಲ್ಲಿ ಹುಟ್ಟುವ ಸಮಸ್ತ ವ್ಯಾಧಿಗಳು, ಇವಕ್ಕೆಲ್ಲಾ ಈ ಔಷಧವು ಬಹಳ ಪ್ರಯೋಜನವಾಗಿದೆ.

ಆ ಕೆಮ್ಮನ್ನು ಅಲಕ್ಷ್ಯಮಾಡಬೇಡಿ. ಅದು ಮಹಾ ಅಪಾಯವನ್ನುಂಟುಮಾಡತಕ್ಕದ್ದಾಗಿದೆ. ಅದರ ಮೇಲೆ ನ್ಯೂಮೋನಿಯಾ ಎಂಬ ಅತಿ ಕಠಿಣವಾದ ಜ್ವರವು ಹುಟ್ಟುವುದು, ತರುವಾಯ ಉಗುಳಿನಲ್ಲಿ ರಕ್ತ ಬೀಳುವುದು ಹಾಗೆಯೇ ಕ್ಷಯರೋಗಕ್ಕೆ ಆಸ್ಪದವಾಗುವುದು.

ಚೇಂಬರ್ಲೇನರವರು ಕಂಡುಹಿಡಿದಿರುವ ಕೆಮ್ಮಿನ ಔಷಧವು ಗಂಟಲಿನಲ್ಲಿ ಶ್ಲೇಷ್ಮ ಕಟ್ಟುವುದನ್ನೂ ಶ್ಲೇಷ್ಮ ಬೀಳುವುದನ್ನೂ ಖಂಡಿತವಾಗಿ ನಿವಾರಣೆಮಾಡುತ್ತದೆ. ಉಸುರು ಹೊಯ್ಯುವುದು ಕಷ್ಟವಾಗಿದ್ದರೆ ಅದನ್ನು ಕೂಡಲೇ ಪರಿಹರಿಸುತ್ತದೆ. ಅಪಾಯಕರವಾದ ಕೆಮ್ಮಿನ ಶಬ್ದವನ್ನು ನಿಲ್ಲಿಸಿಬಿಡುತ್ತದೆ. ಎದೆ ಒಣಗುವಂಥಾ ಕೆಟ್ಟಸ್ಥಿತಿಯನ್ನು ಸಂಪೂರ್ಣವಾಗಿ ವಾಸಿಮಾಡಬಲ್ಲದ್ದು. ಕೆಮ್ಮನ್ನು ಶಮನಮಾಡಿ, ನೀವು ಸುಖವಾಗಿ ನಿದ್ರೆಮಾಡುವಂತೆ ಮನಸ್ಸಿನ ಉಲ್ಲಾಸಕೊಡುತ್ತದೆ.

ಚೇಂಬರ್ಲೇನರವರು ಕಂಡುಹಿಡಿದಿರುವ ಕೆಮ್ಮಿನ ಔಷಧದಲ್ಲಿ ಸ್ವಲ್ಪಮಾತ್ರವಾದರೂ ಅಫೀಮನ್ನು ಸೇರಿಸುವುದಿಲ್ಲ.

ಈ ಔಷಧವು ವನಸ್ಪತಿಗಳ ತಯಾರಿ

ಕೈಯಿಂದ ಮುಟ್ಟದೆ ತಯಾರಾಗಿದೆ.

ಎಲ್ಲೆಲ್ಲೂ ಬಿಕರಿಯಾಗುವುದು. ಸಣ್ಣಸೀಸೆಗೆ ೧ ರೂಪಾಯಿ ದೊಡ್ಡಸೀಸೆಗೆ ೨ ರೂಪಾಯಿ

ಇದನ್ನು ನೋಡಿದರೆ ನೀವು ಬಹು ಆಶ್ಚರ್ಯಪಡುವಿರಿ!!!

ನಮ್ಮ ಪ್ರಸಿದ್ಧವಾದ ಪುಸ್ತಕಭಂಡಾರದಲ್ಲಿ ಅನೇಕ ಸಾವಿರ ರೂಪಾಯಿ ಬಾಳುವ ಕನ್ನಡ ಗ್ರಂಥಗಳೂ, ಬಾಲಪುಸ್ತಕಗಳೂ, ಪೇನಾ, ಪೆನ್ಸಿಲ್, ನೋಟ್‌ಬುಕ್, ಅನೇಕ ವಿಧವಾದ ಕಾಗದದ ಟೋಪಿಗಳು, ವೃತ್ತಾಂತ ಪತ್ರಿಕೆ, ಮಹಿಳಾಸಖಿ ಕನ್ನಡ ಗ್ರಂಥಮಿತ್ರ, ಪ್ರೊಗ್ರೆಸ್, ಹಾರ್ವೆಸ್ಟ್‌ಫೀಲ್ಡ್ ಮುಂತಾದ ಪ್ರಸಿದ್ಧವಾದ ವರ್ತಮಾನಪತ್ರಿಕೆಗಳು ಇಲ್ಲಿ ಅನೇಕ ಸಾವಿರಗಟ್ಟಲೆಯಾಗಿ ಮಾರಾಟವಾಗುತ್ತಿವೆ. ಈ ಡಿಪೋ ಕಟ್ಟಡವು ರಾಜಧಾನಿಯಲ್ಲಿ ಬಹು ಪ್ರಸಿದ್ಧವಾದ ಸ್ಥಳವೆಂದು ಮೈಸೂರು ದೇಶವೆಲ್ಲೆಲ್ಲಾ ಹೆಸರುಗೊಂಡಿದೆ. ಈ ಕೆಳಗೆ ನಮೂದಿಸಿರುವ ಪುಸ್ತಕಗಳನ್ನು ಸ್ವಲ್ಪ ನೋಡಿ —

ಕಥಾಸಂಗ್ರಹ	೧—೩ ಭಾಗಗಳು	ಕ್ರಯ	೧—೦—೦
	ವಿ. ಪಿ. ಪಿ. ಮೂಲಕ		೧—೩—೦
ಅನುಭವಸಾರ	. .	ಕ್ರಯ	೦—೧—೦
ಗ್ರೀಕರ ಚರಿತ್ರೆ	. . . .	,,	೦—೨—೦
ರೋಮನರ ಚರಿತ್ರೆ	. . . .	,,	೦—೨—೦

ಕನ್ನಡ—ಇಂಗ್ಲಿಷ್—ಹಿಂದೂಸ್ಥಾನಿ ಭಾಷಾಮಂಜರಿ. ಈ ಪುಸ್ತಕದಿಂದ ಇಂಗ್ಲಿಷ್ ಮತ್ತು ಹಿಂದುಸ್ಥಾನಿ ಭಾಷೆಗಳನ್ನು ಬಹು ಸುಲಭವಾಗಿ ಕಲಿಯಬಹುದು. ಇದರ ಕ್ರಯ ಎಂಟೇ ಆಣೆ

ವಿ ಪಿ ಪಿ ಮೂಲಕ ೦—೧೦—೦

ಶ್ರೀಚಾಮರಾಜೇಂದ್ರ ಒಡೆಯರವರ ಚರಿತ್ರೆ ಉತ್ಕೃಷ್ಟವಾದ ಪುಸ್ತಕ ಅನೇಕ ತಸ್ವೀರುಗಳು ಇವೆ. ಇದನ್ನು ಕಾರಿತಾ ರಾಜಧರ್ಮಪ್ರವೀಣ ಮ॥ ರಾ॥ ತಂಬೋಶೆಟ್ಟರು ಒಂದು ಉತ್ಕೃಷ್ಟವಾದ ಅವತರಣಿಕೆಯನ್ನು ಬರೆದಿದ್ದಾರೆ ಕ್ರಯ ೧—೮—೦

ವಿ. ಪಿ. ಪಿ. ಮೂಲಕ ೧—೧೧—೦

ಎಡ್ವರ್ಡ್ ಸಾರ್ವಭೌಮರ ಜೀವಚರಿತ್ರೆ	೦—೬—೦
ಕ್ರಿಮಿವರ್ಗವರ್ಣನೆ	೦—೨—೦

ಅರೇಬಿಯನ್ ನೈಟ್ಸ್ ಅಥವಾ **ಯವನಯಾಮಿನೀ ವಿನೋದ ಕಥೆಗಳು** "ಈ ಪುಸ್ತಕವು ಲೋಕಪ್ರಸಿದ್ಧವಾದುದೆಂದು ಎಲ್ಲರೂ ಒಪ್ಪಿಕೊಳ್ಳುತ್ತಾರೆ. ನಾನೂರು ಎಪ್ಪತ್ತು ಪುಟಗಳುಳ್ಳದ್ದು. ಭಾರಿ ಪುಸ್ತಕ. ಭಾಷೆಯು ಬಹು ಸರಳವಾಗಿದೆ. ಪುಸ್ತಕವನ್ನು ಒಂದಾವರ್ತಿ ಓದಿದ ಮೇಲೆ ಅದನ್ನು ಪುನಃ ಪುನಃ ಓದುವಂತೆ ಅದು ಮನಸ್ಸನ್ನು ಆಕರ್ಷಿಸುವದು. ಇದರ ಕ್ರಯ ಎರಡೇ ರೂಪಾಯಿ ವಿ. ಪಿ. ಪಿ. ಮೂಲಕ ೨—೪—೦ ಹತ್ತು ಅಥವಾ ಹದಿನೈದು ವರ್ಷಗಳ ಹಿಂದೆ ಇದರ ಕ್ರಯ ಎಂಟು ರೂಪಾಯಿ ಎಂದು ಅನೇಕರಿಗೆ ಗೊತ್ತು. ಇದನ್ನು ಬಡವರೂ, ಐಶ್ವರ್ಯವಂತರೂ ಓದುವಂತೆ ಪುನಃ ಛಾಪಿಸಿ ಇಷ್ಟು ದೊಡ್ಡ ಪುಸ್ತಕವನ್ನು ಇಷ್ಟು ಸುಲಭ ಕ್ರಯಕ್ಕೆ ಮಾರುತ್ತೇವೆ. ಎರಡು ಪುಸ್ತಕಗಳನ್ನು ಒಟ್ಟಿಗೆ ತರಿಸಿಕೊಂಡರೆ, ಪುಸ್ತಕಕ್ಕೆ ಎರಡು ಆಣೆಯಂತೆ ಕಮಿಷನ್ ಕೊಡುತ್ತೇವೆ. ಜಾಗ್ರತೆ ನೋಡಿ.

ಪಕ್ಷಿಗಳ ಚರಿತ್ರೆ	೦—೧—೦
ಪ್ರಾಚೀನ ಜೀವರಾಶಿಗಳ ವರ್ಣನೆ	೦—೧—೦
ಸಣ್ಣವರಿಗೆ ಹೇಳದ ಕಥೆಗಳು	೦—೧—೦

ಬಾಲಿಕಾಗೀತ ಮುಕ್ತಾಫಲವು, ಗೀತಮಂದಾರ ೦—೨—೦, **ಕಲ್ಯಾಣಗೀತಾವಳಿ** ೦—೫—೦, ಈ ಹಾಡಿನ ಪುಸ್ತಕಗಳು ನಮ್ಮಲ್ಲಿ ಯಾವಾಗಲೂ ದೊರೆಯುತ್ತವೆ.

ಮುಖ್ಯವಾಗಿ, ಸ್ನೇಹಿತರೇ, ತಾವು ರಾಜಧಾನಿಗೆ ಬರುವಾಗಲೆಲ್ಲಾ ನಮ್ಮ ಪುಸ್ತಕಾಲಯವನ್ನು ನೋಡಿಯೇ ಹೋಗಬೇಕೆಂದು ಕೇಳಿಕೊಳ್ಳುತ್ತೇವೆ. ನಿಮಗೆ ಪುಸ್ತಕವಲ್ಲದೆ ಬೇರೆ ಯಾವದಾದರೂ ಪದಾರ್ಥಗಳಾಗಲೀ ಅಥವಾ ಸಂಗತಿಗಳಾಗಲೀ ಅಪೇಕ್ಷಿಸುವ ಸಂದರ್ಭದಲ್ಲಿ ನೀವು ನಮಗೆ ಒಂದು ಕಾರ್ಡು ಬರೆದರೆ ತಕ್ಷಣವೇ ಜವಾಬು ಕೊಡುವದಕ್ಕೆ ಪ್ರಯತ್ನಮಾಡುತ್ತೇವೆ.

ವಿಳಾಸ:— ಮ್ಯಾನೇಜರ್,

ಸಿ. ಎಲ್ ಎಸ್. ಬುಕ್ ಡಿಪೋ,

ಮೈಸೂರು.

ರಬ್ಬರ್ ಸ್ಟಾಂಪುಗಳು.

ನಮ್ಮ ಕಂಪೆನಿಯಲ್ಲಿ ತಯಾರಾಗಿರುವ ಇಂಗ್ಲಿಷ್ ಮೇಲ್ ರಬ್ಬರ್ ಸ್ಟಾಂಪುಗಳು ಬರುವ ಜನವರಿ ಆಖೈರಿನೊಳಗಾಗಿ ...

ಕಳುಹಿಸತಕ್ಕವರಿಗೆ ಆರ್ಡರ್ ... ಕ್ಕೆ ತಯಾರಿಸಿ ಕಳುಹಿಸುತ್ತೇವೆ ... ಚೌಕಾಕಾರ, ರವುಂಡು, ಚಟ್ಟ ... ಯಾವ ಆಕಾರವಾದರೂ ಅದು ... ರಬೇಕಾದ ಅಕ್ಷರಗಳನ್ನು ... ಸುಂದರವಾದ ರಬ್ಬರ್ ಸ್ಟಾಂಪು ... ಇಂಕ ಸೀಸಾ ೧, ರಬ್ಬರ್ ಸ್ಟಾಂಪು ಇರಿಸುವ ಪೆಟ್ಟಿಗೆ ೧, ಬ್ರಷ್ ಪ್ಯಾಡ್ ೧, ಇವುಗಳ ಸಹಿತ ಕ್ರಯ ರೂ ೧—೪—೦; ಪೋಸ್ಟೇಜ್ ೩ ಆಣೆ

ವಿಳಾಸ:—ಮ್ಯಾನೇಜರ್, ರಬ್ಬರ್ ಸ್ಟಾಂಪ್ ಮ್ಯಾನುಫ್ಯಾಕ್ಚರಿಂಗ್ ಕಂಪೆನಿ, ಪಾರ್ಕ್ ಟೌನ್, ಮದ್ರಾಸ್

ಅಗ! ಅಗ್ಗ!! 9-2 ಬಹು ಅಗ್ಗ!

ಮೇಲಾದ ಜರ್ಮನ್ ಸಿಲ್ವರ್ ಪ್ರಮೇಯ ಚೇರಿ ಟೋಲ್ ಕಾಲ್ ಗು... ಸು ಇದು ಬೆಳ್ಳಿಗೆ ಸಮಾನವಾದ ಜರ್ಮನ್ ಸಿಲ್ವರ್ ಬೆಳ್ಳಿಯಿಂದ ತ... ರಿಸಲ್ಪಟ್ಟಿರುತ್ತೆ. ಸುಲಭವಾಗಿ ಹಾಕಿ ತೆಗೆಯುವಂತೆ ಕೀಲಿನಿಂದ...



ಮಜಬೂತಾದ ತಿರುಪಿ... ಲೂ ಬೆಳ್ಳಿ ಗೋಲಸಿಗೆ ... ವ್ಯತ್ಯಾಸವಿಲ್ಲದಂ... ಯಾರಿಸಲ್ಪಟ್ಟಿರುತ್ತೆ ... ಗೂ ಬಿಡ್ಡು ಕೆಲ... ಇದನ್ನು ನೋಡಿದವರು ... ಡರು ಒಂದು ಜೋ... ನ್ನು ತರಿಸಿ ಪರೀಕ್ಷಿಸಿರಿ ... ವರಿಗೂ ಭಾಗ್ಯವಂತರಿ... ಉಪಯೋಗಿಸುವಷ್ಟು ... ಭ ಕ್ರಯ.

ದೊಡ್ಡವರಿಗೆ ಜೋಡಿ... ರೂ ೨-೦-೦. ಚಿಕ್ಕ... ರೂ ೧-೧೨-೦. ಮಕ್ಕ... ರೂ. ೧-೮-೦ ಜತೆ.

ವಿಳಾಸ—ಮ್ಯಾನೇಜರ್, ಜರ್ಮನ್ ಸಿಲ್ವರ್ ಜ್ಯುಯಲ್ ... ಸಾಹುಕಾರ್ ಪೇಟೆ, ಮದ್ರಾ...

ವೃತ್ತಾಂತ ಪತ್ರಿಕೆ.

—:0:—

ಸನ್ ೧೯೦೬ ನೇ ಇಸವಿ ಜನವರಿ ತಾ॥ ೧೯ ನೇ ಗುರುವಾರ

ಹೊಸ ವೈಸ್‌ರಾಯಿ ಯವರೂ ಬಂಗಾಳ ವಿಭ...

ಕಲ್ಕತ್ತಾ ಪಟ್ಟಣದಲ್ಲಿ ಬಾಬೂ ಸುರೇಂದ್ರನಾಥ ... ನಾರ್ಜಿಯವರೇ ಮೊದಲಾದ ಕೆಲವು ಹಿಂದೂ ... ಮನುಷ್ಯರು ಸೇರಿ, "ಇಂಡಿಯನ್ ಅಸೋಸಿಯೇಷನ್" ಎಂಬ ಸಂಘವನ್ನು ಸ್ಥಾಪಿಸಿಕೊಂಡಿದ್ದಾರೆ. ಈ ಸಂಘದ ... ವರು ವೈಸ್‌ರಾಯಿ ಲಾರ್ಡ್ ಮಿಂಟೋರವರಿಗೆ ... ವಾರ ಒಂದು ಅಡ್ರೆಸ್ಸನ್ನು ಓದಿ ಒಪ್ಪಿಸಿ, ಲಾರ್ಡ್ ಕರ್ಜನ್ ... ರವರ ಕಾಲದಲ್ಲಿ ಬಂಗಾಳಾ ಆಧಿಪತ್ಯವನ್ನು ವಿಭಾಗ ... ಮಾಡಿದ್ದನ್ನು ರದ್ದುಮಾಡಬೇಕೆಂತಲೂ, ಆ ಹೊಸ ಆ... ಧಿಪತ್ಯದ ಪ್ರಜೆಗಳಿಗೆ ತುಂಬಾ ಅನಾನುಕೂಲವಾ... ಎಂತಲೂ, ಹೊಸ ಪ್ರಾಂತ್ಯದಲ್ಲಿ ಸರ್ಕಾರಿ ಅಧಿಕಾರಿ... ಪ್ರಜೆಗಳನ್ನು ನಾನಾತರವಾಗಿ ಕಷ್ಟಪಡಿಸುತ್ತಿದ್ದಾ...

...ಈ ವಿಚಾರಗಳನ್ನು ತನಿಖೆಮಾಡಿ ಕ್ರಮಪಡಿಸಬೇಕೆಂದು ಕೇಳಿಕೊಂಡರು. ವೈಸ್‌ರಾಯಿ ಲಾರ್ಡ್ ಮಿಂಟೋಯವರು ಆ ವಿಜ್ಞಾಪನಾ ಪತ್ರಿಕೆಯನ್ನು ಅಂಗೀಕರಿಸಿ, ಆ ಸಂಘದವರನ್ನು ವಂದಿಸಿ ಪ್ರತ್ಯುತ್ತರದಲ್ಲಿ ತಿಳಿಸಿದ್ದೇನೆಂದರೆ—ಹಿಂದಿನ ಗವರ್ನಮೆಂಟಿನವರು ಮಾಡಿರತಕ್ಕ ರಾಜಕೀಯ ಬದಲಾವಣೆಯನ್ನು ನಾವು ವ್ಯತ್ಯಸ್ತ ಮಾಡಲಿಕ್ಕಾಗುವುದಿಲ್ಲ. ಅದರಂತೆ ನಾವು ರಾಜ್ಯಭಾರ ನಡಸಬೇಕಾಗಿರುತ್ತದೆ. ಆದರೂ ಈ ಬದಲಾವಣೆಯಿಂದ ಆ ಪ್ರಾಂತ್ಯದಲ್ಲಿ ಗಲಭೆಯಾಗಿರುವುದು ತೃಪ್ತಿಕರವಾಗಿಲ್ಲ. ಸ್ವದೇಶೀ ಏರ್ಪಾಡನ್ನು ನಿಮ್ಮಂತೆಯೇ ನಾನೂ ಅನುಮೋದಿಸುವೆನು. ಅಧಿಕಾರಿಗಳನ್ನು ವಿಚಾರಿಸುವುದರಲ್ಲಿ ಅವರು ನಡಿಸಿದ ಕಾರ್ಯಗಳು ಪ್ರಜಾ ನಮ್ಮ ಅವಶ್ಯವಾಗಿದ್ದವೆಂದು ತಿಳಿಯುತ್ತದೆ ಎಂಬುದೇ. ಈ ರೀತಿಯಾಗಿ ವೈಸ್‌ರಾಯಿ ಯವರು ಅಪ್ಪಣೆ ಕೊಡಿಸಿದ್ದು ನ್ಯಾಯವಾಗಿಯೂ ಸರ್ವತ್ರ ತೃಪ್ತಿಕರವಾಗಿಯೂ ಇರುವುದು. ಬಂಗಾಳದವರು ಈ ವಿಧಹನೆಯ ವಿಚಾರದಲ್ಲಿ ಇನ್ನಾದರೂ ಸಮಾಧಾನಹೊಂದಿ, ಗಲಭೆಯನ್ನು ನಿಲ್ಲಿಸುವರೆಂದು ನಿರೀಕ್ಷಿಸುತ್ತೇವೆ.

ಒಳದೇಶದ ವೃತ್ತಾಂತಗಳು.

ಮೈಸೂರು ಲಿಂಗಾಯತ ವಿದ್ಯಾವರ್ಧಕ ಫಂಡಿಗೆ ಇದುವರೆಗೆ ೫,೫೫೦ ರೂಪಾಯಿ ಚಂದಾ ವಸೂಲಾಗಿದೆಯೆಂದು ಸೆಕ್ರೆಟರಿ ಮೆ॥ ಬಿ. ಎನ್. ನಂಜಪ್ಪನವರು ತಿಳಿಸುತ್ತಾರೆ.

❖❖❖❖

ಬೆಂಗಳೂರಿನಲ್ಲಿ ರಾತ್ರಿಹೊತ್ತು ಬೆಳದಿಂಗಳು ಬರುವಾಗ್ಗೆ ವಿದ್ಯುಚ್ಛಕ್ತಿಯ ದೀಪಗಳನ್ನು ಹಚ್ಚಬೇಕಾದದ್ದಿಲ್ಲವೆಂದು ಸರ್ಕಾರದವರು ಅಪ್ಪಣೆಕೊಟ್ಟಿರುವಂತೆ ಪ್ರಕಟವಾಗಿದೆ.

❖❖❖❖

ಬೆಂಗಳೂರು ಪಟ್ಟಣದಲ್ಲಿ ಈಗೀಗ ಪ್ಲೇಗ್ ಉಪದ್ರವು ಹೆಚ್ಚಾಗಿರುವಂತೆ ಕಾಣುವುದು, ಹೋದ ವರುಷ ಈ ದಿನಗಳಲ್ಲಿ ಇದ್ದುದಕ್ಕಿಂತಲೂ ಈಗ ಸ್ವಲ್ಪ ಹೆಚ್ಚಾಗಿದೆ.

❖❖❖❖

ಮಂಜರಾಬಾದ್ ತಾಲ್ಲೂಕಿನಲ್ಲಿ ಈಚೆಗೆ ಕೊಲೆಗಳು ಹೆಚ್ಚಾಗಿ ನಡೆದುದರಿಂದ ಅಲ್ಲಿನ ಪ್ರಜೆಗಳ ಮನೆಗಳಲ್ಲಿರುವ ಬಂದೂಕಗಳನ್ನು ಪೊಲೀಸಿನವರು ಶೋಧಿಸಿ ತೆಗೆದುಕೊಳ್ಳುತ್ತಿದ್ದಾರೆಂದು ಕೇಳುತ್ತೇವೆ.

❖❖❖❖

ಪ್ರಸಿದ್ಧ ಚಿತ್ರಗಾರರಾದ ರಾಜಾ ರವಿವರ್ಮರವರು ಅರಮನೆ ಕೆಲಸಕ್ಕಾಗಿ ರಾಜಧಾನಿಗೆ ಬಂದಿರುತ್ತಾರಷ್ಟೆ. ಇವರ ಕುಮಾರನಿಗೆ ಬಂದಿದ್ದ ಜ್ವರವಾದ ಕಿವುಡು ಎದ್ದು ಬಹಳ ಕಷ್ಟಪಡಿಸಿತು. ಈಗೀಗ ವಾಸಿಯಾಗುತ್ತಿದೆ.

❖❖❖❖

ರಾಜಧಾನಿಯ ೧ ನೇ ಅಗ್ರಹಾರದಲ್ಲಿ ಹಿಂದೂ ಧರ್ಮಗಳಿಗನುಸಾರವಾದ ಒಂದು ಪ್ರೈಮರಿ ಪಾಠಶಾಲೆಯನ್ನು ಏರ್ಪಡಿಸುವುದಕ್ಕಾಗಿ ಅಲ್ಲಿನ ಸದ್ವಿದ್ಯಾಶಾಲೆಯಲ್ಲಿ ನೆನ್ನೆ ಸಾಯಂಕಾಲ ಒಂದು ಸಭೆ ಸೇರುವುದಾಗಿತ್ತು.

❖❖❖❖

ಪ್ರಿನ್ಸ್ ಆಫ್ ವೇಲ್ಸ್‌ರವರು ರಾಜಧಾನಿಗೆ ದಯಮಾಡುವಾಗ್ಗೆ ಯೂರೋಪಿಯನರಿಗೂ ಎಲ್ಲಾ ಜಾತಿಯ ಬಡಬಗ್ಗರಿಗೂ ಬೇರೆ ಬೇರೆ ಕಡೆಗಳಲ್ಲಿ ಅನ್ನೋದಕಗಳನ್ನು ನಡಸುವಂತೆ ಏರ್ಪಾಡುಮಾಡಬೇಕೆಂದು ಸರ್ಕಾರದವರು ೨,೦೦೦ ರೂಪಾಯಿ ಸ್ಯಾಂಕ್ಷನ್ ಮಾಡಿದ್ದಾರೆ.

❖❖❖❖

ಪೊಲೀಸ್ ಇನ್ಸ್‌ಪೆಕ್ಟರ್ ಜನರಲ್‌ರವರು ಬೆಂಗಳೂರಿನಿಂದ ೫೦ ಮಂದಿ ಪೊಲೀಸ್ ಶಿಬ್ಬಂದಿಯನ್ನು ತೆಗೆದುಕೊಂಡು, ಈ ದಿನ ರಾಜಧಾನಿಗೆ ಬರುವವರಾಗಿದ್ದಾರೆ. ಪ್ರಿನ್ಸ್ ಆಫ್ ವೇಲ್ಸ್‌ರವರು ರಾಜಧಾನಿಯಲ್ಲಿದ್ದು ದಯಮಾಡುವ ತನಕ ಈ ಶಿಬ್ಬಂದಿಯನ್ನು ಇಲ್ಲೇ ಇಡುವರು.

❖❖❖❖

ನಮ್ಮ ಮಹಾರಾಜರವರ ಪ್ರೈವೇಟ್ ಸೆಕ್ರೆಟರಿಯವರಾದ ಮೆ॥ ಬ್ಯಾನರ್ಮೆನ್ ವೆಹಾನಕಿಯವರ ಅಧಿಕಾರಾವಧಿಯು ಕಳೆದ ಡಿಸೆಂಬರಿಗೆ ಪೂರೈಸಿತು. ಶ್ರೀಮನ್ ಮಹಾರಾಜರವರು ಈಚೆಗೆ ಅಪೇಕ್ಷೆಪಟ್ಟಂತೆ ಇಂಡಿಯಾ ಗವರ್ನಮೆಂಟಿನವರು ಅವರೇ ಇನ್ನೊಂದು ವರುಷ ಪ್ರೈವೇಟ್ ಸೆಕ್ರೆಟರಿಯಾಗಿ ಇರಬಹುದೆಂದು ಸ್ಯಾಂಕ್ಷನ್ಮಾಡಿದಾರೆ.

❖❖❖❖

ದಿವಾನರವರು ಕಳೆದ ಗುರುವಾರ ರಾಜಧಾನಿಗೆ ಬಾರದೆ, ಕಾರ್ಯಗೌರವದಿಂದ ಬೆಂಗಳೂರಿನಲ್ಲೇ ನಿಲ್ಲಬೇಕಾಯಿತು. ಆದರೂ ಈ ವಾರ ಒಂದೆರಡು ದಿನಗಳ ಮಟ್ಟಿಗೆ ಇಲ್ಲಿ ಬಂದಿದ್ದು, ತರುವಾಯ ಮಲೆನಾಡಿನ ಕಡೆ ಸರ್ಕೀಟು ಹೊರಡುವುದಾಗಿಯೂ, ಆ ಪ್ರಾಂತ್ಯದ ಬೆಳೆಗಳಾಗದೆ ಜನರ ಕಷ್ಟನಷ್ಟಗಳನ್ನು ವಿಚಾರಣೆಮಾಡಿಕೊಂಡು ಬರುವವರಾಗಿದ್ದಾರೆಂತಲೂ ಕೇಳುತ್ತೇವೆ.

❖❖❖❖

ಮೈಸೂರು ಎಗ್ರಿಕಲ್ಚರ್ ಕಮಿಟಿಯ ಸೆಕ್ರೆಟರಿ ಮೆ॥ ಎ. ಆನಂದರಾಯರು ತಿಳಿಸುವುದೇನೆಂದರೆ—“ಮೈಸೂರು ಕೈಗಾರಿಕೆ ಮತ್ತು ವ್ಯವಸಾಯೋಪಕರಣಗಳ ಪ್ರದರ್ಶನವು ಇದೇ ಜನವರಿಯಲ್ಲಿ ಸುಮಾರು ೩೦ನೇ ತಾರೀಖಿಗೆ ತೆರೆಯಲ್ಪಡುವುದು. ಇದಕ್ಕೆ ಮುಂಚೆ ಅವಧಿಯನ್ನು ಪಡೆದು ಇರತಕ್ಕವರ ವಿನಹ ಇತರರ್‍ಯಾರೇ ಆಗಲಿ ಪ್ರದರ್ಶನ ವಸ್ತುಗಳನ್ನು ಈ ಆಫೀಸಿಗಾಗಲಿ ಡಿಸ್ಟ್ರಿಕ್ಟುಗಳಿಗಾಗಲಿ ಕಳುಹಿದರೆ ಅಂಗೀಕರಿಸುವುದಿಲ್ಲ” ಎಂಬುದೇ.

ಪ್ರಿನ್ಸ್ ಆಫ್ ವೇಲ್ಸ್‌ರವರು ಫೆಬ್ರವರಿ ೫ ನೆ ತಾರೀಖು ಬೆಳಗ್ಗೆ ಬೆಂಗಳೂರಿನಲ್ಲಿ ರೈಲಿನಿಂದ ಇಳಿಯುವಾಗ್ಗೆ ಅವರನ್ನು ಎದುರುಗೊಳ್ಳುವುದಕ್ಕಾಗಿ ಮೈಸೂರು ಸಂಸ್ಥಾನದ ದಿವಾನರೇ ಮುಂತಾದ ೧೦ ಮಂದಿ ದೊಡ್ಡ ಮನುಷ್ಯರೂ, ಬ್ರಿಟಿಷ್ ರೆಸಿಡೆಂಟರೇ ಮೊದಲಾದ ಯೂರೋಪ್ಯಿಯನ್ ಸರ್ದಾರರೂ, ದಂಡಿನ ೬ ಮಂದಿ ಮ್ಯುನಿಸಿಪಲ್ ಕಮಿಷನರುಗಳೂ, ಕೊಡಗಿನಿಂದ ೧೨ ಮಂದಿ ಪ್ರತಿನಿಧಿಗಳೂ ಹೋಗಿ ರೈಲ್ವೆ ಸ್ಟೇಷನಲ್ಲಿ ಕಾದಿರುವರೆಂದು ಪ್ರಕಟವಾಗಿದೆ.

❖❖❖❖

ಸಂತಾನಂತರವನ್ನು ಹೊಂದುವವರಿಗೆ ಪಿತ್ರಾರ್ಜಿತದ ಆಸ್ತಿಯಲ್ಲಿ ಹಕ್ಕು ಹೋಗಕೂಡದೆಂದು ನಮ್ಮ ಸರ್ಕಾರದವರು ಅಭಿಪ್ರಾಯಪಟ್ಟು, ಮಸೂದೆ ಕಾನೂನನ್ನು ಮಾಡಿ, ಅದರ ವಿಷಯದಲ್ಲಿ ಪ್ರಜೆಗಳು ತಮ್ಮ ಅಭಿಪ್ರಾಯಗಳನ್ನು ಸರ್ಕಾರಕ್ಕೆ ಎರಡು ತಿಂಗಳೊಳಗಾಗಿ ಅಂದರೆ ಕಳೆದ ಡಿಸೆಂಬರು ೧೩ನೇ ತಾರೀಖಿನೊಳಗಾಗಿ ತಿಳಿಸಬೇಕೆಂದು ಪಬ್ಲಿಷ್ ಮಾಡಿದ್ದರಷ್ಟೆ. ಈಚೆಗೆ ಆ ೨ ತಿಂಗಳ ಕಾಲ ಸಾಕಾಗುವುದಿಲ್ಲವೆಂದು ಸರ್ಕಾರದವರಿಗೆ ತೋರಿಬಂದು, ಆ ಅವಧಿಯನ್ನು ಇನ್ನೂ ಮೂರು ತಿಂಗಳು ಹೆಚ್ಚು ಮಾಡಿದ್ದಾರೆ. ಈ ಹುಕುಮು ಈ ವಾರದ ಸರ್ಕಾರಿ ಗೆಜೆಟ್ಟಿನಲ್ಲಿ ಛಾಪಿಸಲಾಗಿದೆ.

❖❖❖❖

ಪ್ರಿನ್ಸ್ ಆಫ್ ವೇಲ್ಸ್‌ರವರು ಫೆಬ್ರವರಿ ೯ ನೆ ತಾರೀಖು ಸಾಯಂಕಾಲ ೪ ಗಂಟೆಯ ವೇಳೆ ಬೆಂಗಳೂರು ಪಟ್ಟಣಕ್ಕೂ ದಂಡಿಗೂ ಮಧ್ಯಸ್ಥದಲ್ಲಿ ಕಟ್ಟಿರುವ ಮಹಾರಾಜ್ಞಿ ವಿಕ್ಟೋರಿಯಾರವರ ಛಾಯಾಪ್ರತಿಮೆಯನ್ನು ಪ್ರತಿಷ್ಠೆ ಮಾಡುವರು. ಮೊದಲು ದಿವಾನ್ ಸರ್ ಪಿ. ಎನ್. ಕೃಷ್ಣಮೂರ್ತಿಯವರು ಸಂಕ್ಷೇಪವಾಗಿ ಒಂದು ಅಡ್ರೆಸ್ಸನ್ನು ಓದುತ್ತಾರೆ. ಪ್ರತಿಮೆಯು ಪ್ರತಿಷ್ಠೆಯಾದ ಒಡನೆಯೇ ಗೌರವಾರ್ಥವಾದ ೧೦೧ ತೋಪುಗಳು ಹಾರಿಸಲ್ಪಡುವುವು. ಆ ಸಾಯಂಕಾಲವೇ ಪ್ರಿನ್ಸ್ ಆಫ್ ವೇಲ್ಸ್‌ರವರು ಲಾಲಬಾಗಿಗೆ ದಯಮಾಡಿ, ಫಲಪುಷ್ಪಪ್ರದರ್ಶನೋತ್ಸವವನ್ನು ಪರಾಂಬರಿಸುತ್ತಾರೆ.

❖❖❖❖

ಮದರಾಸ್ ಆಧಿಪತ್ಯಕ್ಕೆ ಸೇರಿದ ಜೈಲ್‌ಖಾನೆಗಳಲ್ಲಿ ಬಂದೀವಾನರಿಗೆ ಬೇಕಾಗುವ ಆಹಾರ ಸಾಮಗ್ರಿಗಳನ್ನು ಸರ್ಕಾರದವರು ಸುಗ್ಗಿಯಲ್ಲೇ ಕೊಂಡು ತುಂಬಿಕೊಳ್ಳುತ್ತಾರೆ. ಕಂಟ್ರಾಕ್ಟರ ಮೂಲಕ ಜಿನಸಿಗಳನ್ನು ತರಿಸುವುದಿಲ್ಲ. ಇದರಿಂದ ಜೈಲ್‌ಖಾನೆಗಳ ಖರ್ಚು ಬಹಳ ಕಡಿಮೆಯಾಗುತ್ತಿದೆ. ಮೈಸೂರು ಸರ್ಕಾರದವರು ಅದರಂತೆಯೇ ಜಿನಸಿಗಳನ್ನು ಸುಗ್ಗಿಯಲ್ಲಿ ತೆಗೆದಿಡಬೇಕೆಂದು ಆಲೋಚಿಸುತ್ತಿದ್ದಾರೆ. ಡಾಕ್ಟರ್ ಅಚ್ಯುತರಾಯರು ಮದರಾಸ್ ಪ್ರಾಂತ್ಯಕ್ಕೆ ಹೋಗಿ ಬಂದು, ಅದು ಒಳ್ಳೇ ಏರ್ಪಾಡೆಂದು ಬರೆದಿರುವಂತೆ ವರ್ತಮಾನವಿದೆ. ಇದರಿಂದ ಸರ್ಕಾರಕ್ಕೆ ಅಧಿಕವಾಗುವುದರಲ್ಲಿ ಸಂಶಯವಿಲ್ಲ.

ಮೈಸೂರು ಗೆಜೆಟ್ ಸಂಗ್ರಹ.

ಮೆ॥ ಸದಾಶಿವರಾಯರು ರಜದ ಮೇಲಿರುವಾಗ್ಗೆ ಶಿವಮೊಗ್ಗಾ ಡಿಸ್ಟ್ರಿಕ್ಟ್ ಪೊಲೀಸ್ ಹೆಡ್‌ಕ್ವಾರ್ಟರ್ ಇನ್ಸ್‌ಪೆಕ್ಟರ್ ನಾರಾಯಣರಾಯರು ಅರಕಲಗೂಡು ತಾಲ್ಲೂಕಿನ ಅಮಲ್ದಾರ್ ಮತ್ತು ೩ ನೆ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ನೇಮಿಸಲ್ಪಟ್ಟಿದ್ದಾರೆ. ಕೂಡ್ಲೆ ಕೆಲಸದ ಮೇಲೆ ಹಾಜರಾಗತಕ್ಕದ್ದು.

ಹೊಸದುರ್ಗದ ತಾಲ್ಲೂಕ್ ಅಮಲ್ದಾರ್ ಮೆ॥ ಕೆ. ಹನುಮಂತರಾಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಮತ್ತೊಂದು ಹುಕುಂ ಕೊಡಲ್ಪಡುವ ತನಕ ಕೋಲಾರ ಡಿಸ್ಟ್ರಿಕ್ಟ್ ಪೊಲೀಸ್ ಹೆಡ್‌ಕ್ವಾರ್ಟರ್ ಇನ್ಸ್‌ಪೆಕ್ಟರ್ ಪಿ. ಸುಬ್ಬರಾಯರು ಹೊಸದುರ್ಗದ ಅಮಲ್ದಾರ್ ಮತ್ತು ೩ ನೆ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ನೇಮಿಸಲ್ಪಟ್ಟಿದ್ದಾರೆ.

ಬೆಂಗಳೂರು ಡಿಸ್ಟ್ರಿಕ್ಟ್ ಪೊಲೀಸ್ ಹೆಡ್ ಕ್ವಾರ್ಟರ್ ಇನ್ಸ್‌ಪೆಕ್ಟರ್ ಶ್ರೀನಿವಾಸೈಯ್ಯಂಗಾರ್ರನ್ನು ಹಂಗಾಮಿಯಾಗಿ ಡಿಪ್ಟಿ ಅಮಲ್ದಾರ್ ಮತ್ತು ೨ನೆ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ನೇಮಿಸಿ, ಬೆಂಗಳೂರು ತಾಲ್ಲೂಕಿಗೆ ವರ್ಗಮಾಡಿದೆ.

ಮತ್ತೊಂದು ಹುಕುಂ ಕೊಡುವತನಕ ಪ್ರೆಂಚ್‌ರಾಕ್ಸಿನ ಡೆಪ್ಟಿ ಅಮಲ್ದಾರ್ ಸಿ. ಆರ್. ನಾರಾಯಣಸ್ವಾಮಿ ಮೊದಲಿಯಾರರು ನಾಗರದ ತಾಲ್ಲೂಕ್ ಅಮಲ್ದಾರ್ ಮತ್ತು ೩ನೆ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಕೆಲಸನೋಡತಕ್ಕದ್ದು.

ಮೈಸೂರ್ ಇನ್‌ಫೆಂಟ್ರಿ ೩ನೆ ಬಟಾಲಿಯನ್ ಕಮಿಷನ್ ರ್‍ಯಾಂಕಿಯಲ್ಲಿ ಅಬ್ದುಲ್ ರಹೀಂ ಯವರನ್ನು ರಿಜಿಮೆಂಟ್ ಹಾವಿಲ್ದಾರ್ ಮೇಜರ್ ದರ್ಜೆಯಿಂದ ೩ನೆ ಗ್ರೇಡ್ ಜಮಾದಾರಿಗೆ ಬಡ್ತಿ ಮಾಡಿದೆ.

ಆ॥ ಕೆಮಿಸ್ಟ್ ಮೆ॥ ಎ. ಕೆ. ಯಜ್ಞನಾರಾಯಣ ಐಯರವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಶಿವಮೊಗ್ಗಾ ಡಿಸ್ಟ್ರಿಕ್ಟಿನಲ್ಲಿ ಸ್ಪೆಷಲ್ ಡ್ಯೂಟಿಮೇಲಿರುವ ಫಾರೆಸ್ಟ್ ಸಬ್ ಅ॥ ಕನ್ಸರ್ವೇಟರ್ ಮೆ॥ ಎಂ. ಶ್ರೀನಿವಾಸರಾಯರಿಗೆ ನೊವೆಂಬರ್ ೧೬ ರಿಂದ ಮೂರು ತಿಂಗಳ ಕಾಯಿಲೆ ರಜಾ ಕೊಟ್ಟಿದೆ.

ಅರಕಲಗೂಡು ತಾಲ್ಲೂಕ್ ಅಮಲ್ದಾರ್ ಮೆ॥ ಎಂ. ಸದಾಶಿವರಾಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಮೂರು ತಿಂಗಳ ಸಂಬಳವಿಲ್ಲದ ರಜಾ ಕೊಟ್ಟಿದೆ.

ತುಂಕೂರು ತಾಲ್ಲೂಕ್ ರೆವಿನ್ಯೂ ಪ್ರೊಬೇಷನರ್ ಮತ್ತು ೩ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಮೆ॥ ಅಪ್ಪಣ್ಣೈಯಂಗಾರ್ರನ್ನು ಬೆಂಗಳೂರು ತಾಲ್ಲೂಕಿಗೆ ವರ್ಗಮಾಡಿದೆ.

ಚನ್ನಪಟ್ಟಣದ ತಾಲ್ಲೂಕ್ ಶಿರಸ್ತೇದಾರರಾಗಿದ್ದು ನೆಲಮಂಗಲಕ್ಕೆ ವರ್ಗಪಟ್ಟಿರುವ ಸಿ. ಕಾಶೀನಾಥರಾಯರಿಗೆ ಜನವರಿ ಆಖೈರ್ ತನಕ ೩ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರ ಕೊಟ್ಟಿದೆ.

ನಂಜನಗೂಡಿನ ಮತ್ತು ಚಾಮರಾಜನಗರದ ತಾಲ್ಲೂಕುಗಳ ಶಿರಸ್ತೇದಾರರಿಗೆ ಫೆಬ್ರವರಿ ೫ನೇ ತಾರೀಖು ತನಕ ೩ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರ ಕೊಟ್ಟಿದೆ.

ನಮ್ಮ ಪುಸ್ತಕಭಂಡಾರವು.

“ಕನ್ನಡ ಸಂಗೀತವಸ್ತುಪಾಠ.”

ಉಪಾಧ್ಯಾಯರು ಬಾಲಕಿಯರಿಗೆ ಬೇಸರಿಕೆಯಾಗದ ಹಾಗೆ ವಿದ್ಯೆ ಕಲಿಸುವುದಕ್ಕೆ ಈಗೀಗ ನಮ್ಮ ದೇಶದಲ್ಲೂ ಅನೇಕ ಉಪಾಯಗಳನ್ನು ಕಲ್ಪಿಸುತ್ತಿದ್ದಾರೆ. ಸ್ವಲ್ಪ ಹೊತ್ತು ಪಾಠದಲ್ಲಿ ಹುಡುಗರನ್ನು ಕೂಡಿಸಿ ಓದಿಸುವುದು, ಕಥೆಗಳನ್ನು ಹೇಳಿ ಸಂತೋಷಪಡಿಸುವುದು, ಬೈಲಿನಲ್ಲಿ ನಿಲ್ಲಿಸಿ ಅಂಗಸಾಧನೆ ಮಾಡಿಸುವುದು, ಕರ್ಷಣವನ್ನುಂಟುಮಾಡುವಂಥಾ ಹಾಡುಗಳನ್ನು ಕಲಿಸುವುದು, ಚಿತ್ರ ಬರಸುವುದು, ಬೊಂಬೆಗಳನ್ನೂ ಮಂಟಪಗಳನ್ನೂ ನಾನಾ ರೀತಿಯಲ್ಲಿ ಕಟ್ಟುವುದಕ್ಕೆ ಹೇಳಿಕೊಟ್ಟು ಕಟ್ಟಿಸುವುದು, ಈ ಮೊದಲಾದ ಅನೇಕ ಹೊಸ ಕ್ರಮಗಳನ್ನು ರೂಢಿಗೆ ತಂದು, ಬಾಲಕರ ವಿದ್ಯಾಭ್ಯಾಸ ಕ್ರಮವನ್ನು ಬಹಳ ಬದಲಾವಣೆ ಮಾಡಿರುತ್ತಾರೆ. ಇಂಥಾ ಬೋಧನೆಗೆ ಯೋಗ್ಯತಾಸಿದ್ಧಿಯನ್ನು ಪಡೆಯುವಂತೆ ಸರ್ಕಾರದವರು ಅಲ್ಲಲ್ಲಿ ನಾರ್ಮಲ್ ಸ್ಕೂಲುಗಳನ್ನು ಏರ್ಪಡಿಸಿ, ಉಪಾಧ್ಯಾಯರುಗಳನ್ನೇ ತರಪೇತುಮಾಡಿ, ಪಾಠಶಾಲೆಗಳಿಗೆ ನೇಮಿಸುವರು. ಹೀಗೆ ಸುಶಿಕ್ಷಿತರಾದ ಉಪಾಧ್ಯಾಯರು ಬಾಲಕರ ವಿದ್ಯಾಭ್ಯಾಸಂಗಳಲ್ಲಿ ಮೊದಲಿಗಿಂತಲೂ ಈಗ ವಿಶೇಷವಾದ ಆಸಕ್ತಿಯನ್ನು ತೋರ್ಪಡಿಸುತ್ತಿದ್ದಾರೆಂಬುದನ್ನು ನಾವು ಹೇಳಬೇಕಾಗಿಲ್ಲ. ಗದಗ ತಾಲ್ಲೂಕಿಗೆ ಸೇರಿದ ಲಕ್ಕುಂಡಿ ಪಾಠಶಾಲೆಯ ಹೆಡ್ ಮಾಸ್ಟರಾದ ಮ॥ ಜಗನ್ನಾಥ ಶ್ರೀಧರಗೋಖಲೆಯವರು ಚಿಕ್ಕ ಹುಡುಗರಿಗೆ ಕನ್ನಡದಲ್ಲಿ ವಸ್ತುಪಾಠಗಳನ್ನು ಸಂಗೀತರೂಪವಾಗಿ ಕಲಿಸಲು ಅನುಕೂಲವಾಗಿರುವಂಥಾ ಒಂದು ಸಣ್ಣ ಪುಸ್ತಕವನ್ನು ರಚಿಸಿ, ಬೆಳಗಾಂವಿಯಲ್ಲಿರುವ ಶ್ರೀರಾಮಚಂದ್ರಪ್ರಕಾಶವೆಂಬ ಮುದ್ರಾಲಯದಲ್ಲಿ ಅಚ್ಚು ಹಾಕಿಸಿರುತ್ತಾರೆ. ಈ ಪುಸ್ತಕದಲ್ಲಿ ಹುಲಿ, ಆನೆ, ಒಂಟೆ, ಕುರಿ, ಪಕ್ಷಿಗಳು, ವೃಕ್ಷಗಳು, ಹೊಳೆ, ಸೂರ್ಯೋದಯಾಸ್ತಮಾನಗಳು, ಋತುಗಳು, ಕವಾತು, ದೀಪಗಳು, ಈ ಮೊದಲಾದ ವಿಷಯಗಳನ್ನು ವರ್ಣಿಸಿ, ಹಾಡುಗಳನ್ನು ರಚಿಸಿದ್ದಾರೆ. ಬಾಲಕರಿಗೆ ಬಹಳ ಉಪಯುಕ್ತವಾಗಿರುವ ಈ ಪುಸ್ತಕಕ್ಕೆ ಗ್ರಂಥಕರ್ತರು ಮೂರು ಆಣೆ ಕ್ರಯವನ್ನು ಇಟ್ಟಿರುವರು. ಇದು ಸ್ವಲ್ಪ ಹೆಚ್ಚೆಂತಲೇ ನಮಗೆ ತೋರುತ್ತಿದೆ. ಉಪಾಧ್ಯಾಯರುಗಳು ಒಂದೊಂದು ಪ್ರತಿಯನ್ನು ತರಿಸಿಕೊಂಡು, ಬಾಲಕರಿಗೆ ಹಾಡುಗಳನ್ನು ಕಲಿಸುವರೆಂದು ಹಾರೈಸುತ್ತೇವೆ.

“ಮೈಸೂರು ಮಹಾರಾಜಾಧಿರಾಜ ಶ್ರೀ ಚಾಮರಾಜೇಂದ್ರ ಒಡೆಯರವರ ಚರಿತ್ರೆ.”

ಈ ಪುಸ್ತಕವು ಕನ್ನಡವನ್ನು ಕಲಿತಿರತಕ್ಕ ಪ್ರತಿಯೊಬ್ಬ ಮನುಷ್ಯನೂ ಓದಲಿಕ್ಕೆ ಪರ್ಯಾಯುಕ್ತವಾದದ್ದಾಗಿ, ಮೈಸೂರು ಸಂಸ್ಥಾನದ ಚರಿತ್ರೆಯೂ, ರಾಜವಂಶದ ಪೂರ್ವ ಚರಿತ್ರೆಯೂ, ಲೇಟ್ ಶ್ರೀ ಚಾಮರಾಜೇಂದ್ರ ಒಡೆಯರವರ ಅಂತರಂಗ ಬಹಿರಂಗ ಕಾರ್ಯಗಳೂ, ಅವರಿಗಿದ್ದ ಅಸಾಧಾರಣವಾದ ಪ್ರಜಾವಾತ್ಸಲ್ಯವೂ, ಅವರ ಕಾಲದಲ್ಲಿ ನಡೆದ ನಾನಾ ಉತ್ಸವಾದಿಗಳೂ ಬಹು ಹೃದಯಂಗಮವಾಗುವಂತೆ ವಿವರಿಸಲ್ಪಟ್ಟಿವೆ. ಶ್ರೀಮನ್ ಮಹಾರಾಜರವರ ಮಹಾಮಾತೃಶ್ರೀಯವರೂ ಇದರಲ್ಲಿ ಕಂಡ ಸಂಗತಿಗಳನ್ನೂ ಚರಿತ್ರೆಯನ್ನೂ ಓದಿ ಸಂತೋಷಪಟ್ಟಿದ್ದಾರೆ. ಮೆ॥ ತಂಬೂಶೆಟ್ಟಿರವರು ಈ ಪುಸ್ತಕಕ್ಕೆ ಅವತರಣಿಕೆಯನ್ನು ಬರೆದಿರುವರು. ಇದರಲ್ಲಿ ಗ್ರಂಥಕರ್ತರು ವಿಶೇಷವಾದ ಅನೇಕ ಕಾಗದ ಪತ್ರಗಳನ್ನು ಸಂಗ್ರಹಿಸಿ ಪ್ರಕಟಿಸಿರುತ್ತಾರೆ. ಇದಲ್ಲದೆ ಬಹು ಅಪೂರ್ವವಾದ ಕೆಲವು ಚಿತ್ರಗಳನ್ನು ವಿಲಾಯತಿಯಲ್ಲಿ ನೇತ್ರಾನಂದಕರವಾಗಿ ತಯಾರುಮಾಡಿಸಿ, ಈ ಪುಸ್ತಕದಲ್ಲಿ ಅಡಕಮಾಡಿದ್ದಾರೆ. ಶ್ರೀ ಚಾಮರಾಜೇಂದ್ರ ಒಡೆಯರವರ ಸ್ವೀಕಾರ, ಪಟ್ಟಾಭಿಷೇಕ, ವಿದ್ಯಾಭ್ಯಾಸ, ವಿವಾಹ, ರಾಜ್ಯಾಭಿಷೇಕ, ಸ್ವದೇಶ ಸಂಚಾರ, ಉತ್ತರದೇಶಾಟನೆ, ಗಂಗಾಯಾತ್ರೆ, ರಾಜ್ಯಭಾರಕ್ರಮ, ಗುಣಾತಿಶಯಗಳು, ಈ ಮೊದಲಾದ ಅನೇಕ ವಿಷಯಗಳು ಬಹು ರಮಣೀಯವಾದ ವರ್ಣನೆಗಳಿಂದಲೂ, ಮಹಾ ಲಲಿತವಾಗಿಯೂ, ಸಮಯೋಚಿತ ವಾಕ್ಯ ವಿಶೇಷಗಳೊಡನೆಯೂ ಬರೆಯಲ್ಪಟ್ಟಿವೆ. “ಯಾರ ಅಕಾಲ ಮರಣವು ಇಂಡಿಯಾ ದೇಶದೊಳಗೆಲ್ಲ ಪರಮ ರಾಷ್ಟ್ರೀಯ ದೌರ್ಭಾಗ್ಯವೆಂದು ಭಾವಿಸಲ್ಪಟ್ಟಿತೋ, ಮತ್ತು ಬ್ರಿಟಿಷ್ ಸರ್ಕಾರದವರು ಚಕ್ರಾಧಿಪತ್ಯಕ್ಕೆ ಉಂಟಾದ ನಷ್ಟವೆಂದು ಯಾರ ಮರಣವನ್ನು ಕುರಿತು ದುಃಖಿಸಿದರೋ ಅಂತ ಮಹಾರಾಜರವರ ಜೀವನ ಚರಿತ್ರವು, ಮೈಸೂರು ರಾಜ್ಯವನ್ನು ಕಾರುಣ್ಯದಿಂದ ಮರಳಿ ಕರುಣಿಸಿಕೊಟ್ಟ ಬ್ರಿಟಿಷ್ ಸರ್ಕಾರದವರು ಸ್ಥಾಪಿಸಿದ ಉದಾರವೂ ಸುವಿವೇಕಪೂರಿತವೂ ಆದ ರಾಜನೀತಿಯೆಂಬ ವೃಕ್ಷಕ್ಕೆ ಪ್ರಥಮಫಲವಾಗಿ ಯಾರಿದ್ದರೋ ಅಂತಹ ಪ್ರಭುಗಳ ವಿಷಯದಲ್ಲಿ ನಿರವಧಿಕವಾದ ಕೃತಜ್ಞತೆಯನ್ನೂ ಪರಮ ಗೌರವಾಸ್ಪದವಾದ ಭಕ್ತಿಭಾವಗಳನ್ನೂ ಪಾಠಕಮಹಾಶಯರ ಉದಾರಚಿತ್ತದಲ್ಲಿ ಜನಿಯಿಸದೆ ಇರಲಾರದು” ಎಂದು ಮೆ॥ ತಂಬೂಶೆಟ್ಟಿರವರು ಈ ಪುಸ್ತಕದಲ್ಲಿ ಹೇಳುತ್ತಾರೆ. ಇದರ ಪರಿಶಿಷ್ಟದಲ್ಲಿ ಗ್ರಂಥಕರ್ತರು ಈ ಸಂಸ್ಥಾನದ ದಿವಾನಗಿರಿ ಮಾಡಿದಂಥಾ ರಂಗಾಚಾರ್ಲು ಯವರು, ಸರ್ ಶೇಷಾದ್ರಿ ಐಯ್ಯರ್ ಯವರು ಎಂಬೀ ಪ್ರಸಿದ್ಧ ಪುರುಷರ ಜೀವನ ಚರಿತ್ರೆಯನ್ನೂ ರಚಿಸಿ ಅಡಕಮಾಡಿರುವರು. ಇಂಥಾ ವಿಶೇಷ ಗ್ರಂಥವನ್ನು ಮೆ॥ ಶಿಂಗ್ರಯ್ಯನವರು ರಚಿಸಿ ಪ್ರಕಟಿಸಿರುವುದಕ್ಕಾಗಿ ಕನ್ನಡಿಗರೆಲ್ಲರೂ ಅವರನ್ನು ವಂದಿಸತಕ್ಕದ್ದಾಗಿದೆ. ಪುಸ್ತಕವು ಮೈಸೂರು ವೆಸ್ಲಿಯನ್ ಮಿಷನ್ ಪ್ರೆಸ್ಸಿನಲ್ಲಿ ಅಂದವಾದ ಅಕ್ಷರಗಳಿಂದ ನೇತ್ರಾನಂದಕರವಾಗಿ ಅಚ್ಚಾಗಿರುವುದು. ಗ್ರಂಥಕರ್ತರು ಡಿಮ್ಮಿ ಅಷ್ಟಪತ್ರದ ೨೬೦ ಪುಟಗಳಿಗಿಂತಲೂ ಹೆಚ್ಚಾಗಿರುವ ಚಿತ್ರಗಳೊಡನೆ ಕೂಡಿದ ಈ ಪುಸ್ತಕಕ್ಕೆ ರೂ ೧—೮—೦ ಕ್ರಯವನ್ನಿಟ್ಟಿರುವುದು ಹೆಚ್ಚಲ್ಲವೆಂದು ತೋರುತ್ತಿದೆ. ಕನ್ನಡಿಗರೆಲ್ಲರೂ ಇದನ್ನು ತರಿಸಿ ಓದಿ ಸಂತೋಷಪಡುವುದರ ಮೂಲಕ ಗ್ರಂಥಕರ್ತರ ಶ್ರಮವನ್ನು ಸಾರ್ಥಕಪಡಿಸಬೇಕಾಗಿದೆ.

ಕುಷ್ಠರೋಗಕ್ಕೆ ಔಷಧಿ.

ಟಿ. ಬಿ. ಎಂ ಎಂಬ ಬಾತ್ಮಿದಾರನು ಈ ವಿಷಯವಾಗಿ "ಸತ್ಯದೀಪಿಕೆ" ಪತ್ರಿಕೆಯಲ್ಲಿ ಬರೆಯುವುದೇನಂದರೆ.—

ಕುಷ್ಠರೋಗವನ್ನು ಗುಣಮಾಡುವ ಮದ್ದು ಇಲ್ಲ ಎಂಬದಾಗಿಯೂ, ಕುಷ್ಠರೋಗಿಗಳನ್ನು ನಾಗರಹಾವು ಕಚ್ಚುವುದಿಲ್ಲ, ಕಚ್ಚಿದರೆ ಗುಣವಾಗುತ್ತದೆ, ನಾಗರಹಾವು ಸಾಯುತ್ತದೆ ಎಂಬುದಾಗಿಯೂ ಕೇಳಿ ಬಲ್ಲೆ; ಪರಂತು ನಾಗರಹಾವಿನ ವಿಷದಿಂದ ಗುಣವಾದ ಕುಷ್ಠರೋಗಿಗಳನ್ನು ನಾನು ಕಾಣಲಿಲ್ಲ.

ಇತ್ತಲಾಗಿ ನಾನು ಮಂಗಳೂರು ತಾಲ್ಲೂಕು ಕಸಬಾ ತಲಪಾಡಿ ಗ್ರಾಮಕ್ಕೆ ಹೋದಾಗ ಈ ವಿಷಯವಾದ ಒಂದು ವರ್ತಮಾನ ಕೇಳಿ ಅದನ್ನು ವಿಚಾರಿಸಿದಾಗ್ಗೆ, ಅದು ನಿಜವೆಂಬುದಾಗಿ ಕಂಡುಬಂತು. ಅದೇನೆಂದರೆ, ಸದರಿ ಗ್ರಾಮದಲ್ಲಿ ನಡಾಹಿತ್ಲು ಕುಂಬಾರ ಮಂಜು ಎಂಬುವನಿಗೆ ಕಣಕುಷ್ಠ ಇತ್ತು; ಅವನು ಅದರ ಬೇನೆ ಅಥವಾ ನಾಚಿಕೆ ತಾಳಕೂಡದೆ "ಕುಷ್ಠರೋಗಿಗಳಿಗೆ ಸರ್ಪ ಕಚ್ಚಿದರೆ ಗುಣವಾಗುತ್ತದೆ" ಎಂಬ ಜನಜನಿತವಾದ ಮಾತಿನ ಆಧಾರದಿಂದ ಜೀವದಾಶೆ ಬಿಟ್ಟು ಸಾಧನೆಮಾಡಿ, ನಾಗರಹಾವನ್ನು ಹಿಡಿದು ಅದಕ್ಕೆ ಸಿಟ್ಟೆಬ್ಬಿಸಿ, ಪೀಡೆಕೊಟ್ಟು, ಅದು ತನ್ನನ್ನು ಕಚ್ಚುವಂತೆ ಮಾಡಿದನಂತೆ, ಅನಂತರ ಅವನ ವ್ಯಾಧಿಯು ದಿನೇ ದಿನೇ ಮಾಯುತ್ತಾ ಬಂದು, ಈಗ ಪೂರಾ ಗುಣವಾಗಿ ನಮ್ಮಂತೆಯೇ ಶುದ್ಧ ದೇಹಿಯಾಗಿರುತ್ತಾನೆ

ಅದೇ ಗ್ರಾಮದಲ್ಲಿ ದೇವಸ್ಥಾನದ ಜಾಗದಲ್ಲಿ ಹೊಲೆಯ ಪೊಕ್ಕ ಎಂಬುವನ ಅಳಿಯ ಪಿಲಿಕೂರು ನುಡಿಕರಿ ಮುಂಡ ಎಂಬುವನಿಗೆ ಸಹ ಕುಷ್ಠರೋಗ ಹಿಡಿದು, ಮೈಯೆಲ್ಲಾ ಹುಣ್ಣುಗಳಾಗಿ ಬೆರಳು ವಗೈರೆ ಕೊಳೆಯುತ್ತಾ ಬಂದಿವೆ. ಈ ಹೊಲೆಯನು ಮೇಲೆ ಹೇಳಿದ ಕುಂಬಾರ ಮಂಜುಗೆ ವ್ಯಾಧಿಯು ಹ್ಯಾಗೆ ಗುಣವಾಯಿತೆಂಬುದನ್ನು ತಿಳಿದವನಾದ್ದರಿಂದ ತನ್ನನ್ನೂ ಒಂದು ನಾಗರಹಾವು ಕಚ್ಚಿದರೆ ಆದೀತೆಂತ ಬಯಸುತ್ತಿರಲಾಗಿ, ಇತ್ತಲಾಗಿ ಸುಮಾರು ೨೦ ದಿವಸಗಳ ಮೊದಲು ಮೈದಾನದಲ್ಲಿ ಒಂದು ನಾಗರಹಾವನ್ನು ಕಂಡು, ಅದರ ಬಾಲವನ್ನು ತುಳಿದು ಬಹುತರವಾಗಿ ನೋಯಿಸಿದರೂ, ನಾಗರಹಾವು ಅವನನ್ನು ಕಚ್ಚಲಿಲ್ಲವಂತೆ, ತನ್ನನ್ನು ಅದು ಕಚ್ಚದೇ ಹೋದದ್ದನ್ನು ನೋಡಿ, ಅವನು ಅದನ್ನು ಹಿಡುಕೊಂಡು ತನ್ನ ಗುಡಿಸಲಿಗೆ ಹೋಗಿ, ಒಂದು ಪಾತ್ರೆಯೊಳಗೆ ಅದನ್ನು ಮುಚ್ಚಿಟ್ಟು ದಿನಂಪ್ರತಿ ಅದರೊಳಗೆ ಕೈ ಹಾಕಿ ಅದನ್ನು ಹಿಡಿಯುತ್ತಾ ಒತ್ತುತ್ತಾ ಇದ್ದರೂ, ೩ ದಿವಸಗಳ ವರೆಗೆ ಅದನ್ನು ಉಪವಾಸದಿಂದಿರಿಸಿ ಬಹು ಪ್ರಯತ್ನ ಮಾಡಿದರೂ, ಹಾವು ಕಚ್ಚಲೇ ಇಲ್ಲವಂತೆ, ಕಡೆಗೆ ಹೊಲತಿ ವಗೈರೆರು ಅವನನ್ನು ಗದರಿಸಿ—ನಿನ್ನನ್ನು ಕಚ್ಚುವುದಿಲ್ಲ ಎಂಬುದರಿಂದ ನೀನು ಅದನ್ನು ಇಲ್ಲಿ ಇಟ್ಟು ನಮಗೆ ಹೆದರಿಕೆಗೆ ಕಾರಣಮಾಡುತ್ತೀ, ಅದು ಫಕ್ಕನೇ ಹೊರಗೆ ಬಂತೆಂದರೆ ನಮ್ಮನ್ನು ಕಚ್ಚದೆ ಇರುವುದೇ? ನೀನು ಅದನ್ನು ಎಲ್ಲಿಯಾದರೂ ಬಿಟ್ಟು ಬಾ ಎಂದು ಹೇಳಿ ಒತ್ತಾಯಪಡಿಸಿದ್ದರಿಂದ, ಅವನು ಅದನ್ನು ತಿರಿಗಿ ಮೈದಾನಿಗೆ ತೆಗೆದುಕೊಂಡು ಹೋಗಿ ಬಾಲ ಹಿಡಿದು ತುಳಿದು ಪೀಡಿಸಿದರೂ, ಕಚ್ಚಲಿಲ್ಲವಂತೆ. ಕಡೆಗೆ ಅದು ಹೆಡೆ ಎತ್ತಿದ್ದನ್ನು ನೋಡಿ, ತನ್ನ ಒಂದು ಕಾಲನ್ನು ಅದರ ಮುಂದಿಟ್ಟಾಗ್ಗೆ ಒಂದು ಸಾರಿ ಕಚ್ಚಿತಂತೆ; ಕೂಡಲೇ ಇನ್ನೊಂದು ಕಾಲನ್ನು ಎದುರಿಗಿಟ್ಟಾಗ್ಗೆ, ಅದನ್ನು ಎರಡು ಸಾರಿ ಕಚ್ಚಿತಂತೆ, ಆ ಮೇಲೆ ಅದನ್ನು ಹೋಗಗೊಡಿಸಿದನಂತೆ, ಈಗ ಸದರಿ ಹೊಲೆಯನ ಹುಣ್ಣುಗಳು ಮಾಯುತ್ತಾ ಬರುವುದು ಕಾಣುತ್ತದೆ

ಈ ಸಂಗತಿಯನ್ನು ವೈದ್ಯ ಇಲಾಖೆಯವರು ತನಿಖೆ ಮಾಡಿ ನಾಗರಹಾವಿನ ವಿಷವು ಕುಷ್ಠಕ್ಕೆ ದಿವ್ಯ ಔಷಧಿಯಾದೀತೇ ಎಂಬುವುದನ್ನು ಪರೀಕ್ಷಿಸಬಾರದೇ? ಸದರಿ ಹೊಲೆಯನನ್ನು ಕರೆಸಿ ಪರೀಕ್ಷೆ ಮಾಡಿದಲ್ಲಿ ವೈದ್ಯ ಇಲಾಖೆಯವರಿಗೆ ಹೆಚ್ಚಿನ ಅನುಭವವಾಗಲಿಕ್ಕೆ ಆಸ್ಪದವಾದೀತು ಎಂದು ನಂಬುತ್ತೇನೆ.

ನಾಮದಾರ್ ಗೋಖಲೆ, ಸಿ. ಐ. ಇ. ಯವರ ಚರಿತ್ರೆ.

ನಾವು ಈ ವಿಸ್ತಾರವಾದ ಜೀವಲೋಕದಲ್ಲಿ ಮಹಾಶಯರ ಚರಿತ್ರೆಗಳನ್ನು ಓದುವಾಗಲೂ ಕೇಳುವಾಗಲೂ ಬರೆಯುವಾಗಲೂ ಇದನ್ನು ಏತಕ್ಕಾಗಿ ಅನುಭವರೂಪವಾಗಿ ಉಪಯೋಗಿಸುತ್ತೇವೆಂದು ನಮ್ಮನ್ನು ನಾವೇ ಪ್ರಶ್ನಿಸುವೆವಾದರೆ ನಾವು ಸನ್ಮಾರ್ಗಿಗಳಾಗುವ ಉದ್ದೇಶಾರ್ಥವಾಗಿ ಎಂದು ನಾವೇ ಉತ್ತರವನ್ನು ಹೊಂದುತ್ತೇವೆ. ಅಂಥ ಪವಿತ್ರ ಚರಿತ್ರೆಯು ಒಬ್ಬ ಪುರುಷಶ್ರೇಷ್ಠನ ವರ್ತನೆಯಿಂದುಂಟಾದುದಾಗಿರುವಲ್ಲಿ ಆತನು ಸತ್ಪುರುಷನಾದುದೆಂತು ಎಂದು ಸಂದೇಹವು ಹುಟ್ಟುವದಷ್ಟೆ. ಇದರಿಂದ ಸದ್ವರ್ತನೆಯಲ್ಲಿ ಕೃತ್ರಿಮಾಕೃತ್ರಿಮಗಳುಂಟೆಂದು ಸಾಧಾರಣವಾಗಿ ತಿಳಿದುಕೊಳ್ಳಬಹುದು ಅದರಂತೆ ಅಕೃತ್ರಿಮಸದ್ವರ್ತನೆಯುಳ್ಳರುವವನಾದ ಮಿ|| ಗೋಖಲೆಯವರು ದೇಶವಾತ್ಸಲ್ಯಕ್ಕಾಗಿ ತಮ್ಮ ಅಮೂಲ್ಯವಾದ ಬುದ್ಧಿಶಕ್ತಿಯನ್ನು ಉಪಯೋಗಿಸಿ ತನ್ನ ಜೀವಿತಕಾಲವನ್ನು ಸಫಲಗೊಳಿಸುತ್ತಿರುವರೆಂಬ ಭಾಗವು ಸರ್ವರಿಗೂ ಮೇಲುಪಂಕ್ತಿಯಾಗಿರುವದು ಪರಹಿತಕ್ಕಾಗಿ ಯಾವ ಮಹಾತ್ಮನ ಬುದ್ಧಿಬಲ ಪೂರ್ವಕವಾದ ಶೌರ್ಯ ಧೈರ್ಯಾದಿಗಳು ಉಪಯೋಗವಾಗುತ್ತಿರುವವೋ ಆತನೇ ಅಸಹಾಯಶೂರನೆಂದು ಹೇಳಿಸಿಕೊಳ್ಳುವನು.

"ಪ್ರಾಯಃ ಸುಕೃತಿನಾಮರ್ಥೇ ದೇವಾಯಾಂತಿ ಸಹಾಯತಾಂ" ಎಂಬಂತೆ ಈ ಗೋಖಲೆಯವರ ಅಕಳಂಕವಾದ ಮತ್ತು ಆ ಸೇತು ಹಿಮಾಚಲಪರ್ಯಂತವೂ ವ್ಯಾಪ್ತವಾದ ಕೀರ್ತಿಯು ಇವರ ಸ್ವಶಕ್ತಿಯಿಂದುಂಟಾದುದೆಂದೇ ತಿಳಿಯಬೇಕು. ಇವರ ವಯಸ್ಸು ನಲವತ್ತು ವರ್ಷಗಳು ಮಾತ್ರವೆ. ೩೦ ಕೋಟಿ ಪ್ರಜಾಯುಕ್ತವಾದ ರಾಷ್ಟ್ರೀಯ ಮಹಾಸಭೆಯ ಅಧ್ಯಕ್ಷತೆಯು ಇವರ ಯೋಗ್ಯತೆಯು ಮಹತ್ವಕ್ಕೆ ನಿದರ್ಶನವೆಂಬುದು ಆಶ್ಚರ್ಯವಲ್ಲ. ಅಷ್ಟು ಪ್ರಜಾಜಾಲವು ಈ ಮಹನೀಯರಿಗೆ ಕೊಟ್ಟ ಸನ್ಮಾನವು ದಿಗಂತ ವಿಶ್ರಾಂತವಾದ ಇವರ ಕೀರ್ತಿಗೆ ಬೀಜವಾಯಿತು.

ರತ್ನಗಿರಿ ಜಿಲ್ಲೆಯ ಒಂದು ಹಳ್ಳಿಯಲ್ಲಿ ೧೮೬೬ ರಲ್ಲಿ ಇವರು ಜನಿಸಿದರು ಇವರ ಅಲ್ಪವಯಸ್ಸಿನಲ್ಲೇ ಪಿತೃವಿಯೋಗವುಂಟಾದುದರಿಂದ ಇವರ ಒಬ್ಬ ಅಣ್ಣಂದಿರಿಂದ ಇವರ ಅಭ್ಯಾಸವು ನಡೆಯುತ್ತಿತ್ತು. ಇವರು ಆಮೇಲೆ ಕೊಲ್ಹಾಪುರದ ಹೈಸ್ಕೂಲಿನಲ್ಲಿ ಇಂಗ್ಲಿಷ್ ಅಭ್ಯಾಸಕ್ಕೆ ಉಪಕ್ರಮಿಸಿ ತಮ್ಮ ೧೫ನೇ ವಯಸ್ಸಿನಲ್ಲಿ ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ತೇರ್ಗಡೆಯನ್ನು ಹೊಂದಿದರು. ಅನಂತರದಲ್ಲಿ ಇವರು ಮುಂಬೈ ಪೂನೆ ಈ ಸ್ಥಳಗಳ ಕಾಲೇಜುಗಳಲ್ಲಿ ಅಭ್ಯಾಸಮಾಡಿ ಬಿ. ಎ. ಪರೀಕ್ಷೆಯಲ್ಲಿ ತೇರ್ಗಡೆಹೊಂದಿದನು

ಮುಂದೆಯೂ ಓದಬೇಕೆಂಬ ಇವರ ಅಪೇಕ್ಷೆಯು ದ್ರವ್ಯಾಭಾವದಿಂದ ಕೊನೆಗಾಣದೆ ಜೀವಿಕಾರ್ಥವಾಗಿ ೧೮೮೪ ರಲ್ಲಿ ನ್ಯೂ ಇಂಗ್ಲಿಷ್ ಸ್ಕೂಲಿನಲ್ಲಿ ಬೋಧಕರಾಗಿ ಏರ್ಪಟ್ಟರು.

ಟಿಳಕ್ ಮೊದಲಾದ ಮಹನೀಯರೂ ಇವರೂ ಈಗಿನಂತೆ ದೇಶಾಭಿಮಾನಕ್ಕಾಗಿ ತಮ್ಮ ಶಕ್ತಿಗಳನ್ನೆಲ್ಲಾ ವ್ಯಯಮಾಡುವವನ್ನು ಬಿಟ್ಟು ಮೇಲ್ತರದ ಪರೀಕ್ಷೆಗಳನ್ನು ಕೊಟ್ಟು ಮಹತ್ಪದವಿಗಳಿಗೆ ಬಂದು ಬಹು ದ್ರವ್ಯಗಳನ್ನು ಸಂಪಾದಿಸಬಹುದಾಗಿತ್ತು. ಹಾಗೆ ಮಾಡದೆ, ಪರೋಪಕಾರಾಯ ಇದಂ ಶರೀರಂ|| ಎಂಬಂತೆ ದೇಶಹಿತಕ್ಕಾಗಿ ಕಷ್ಟವನ್ನಾದರೂ ಸಹಿಸುತ್ತಿರುವರು.

ಮತ್ತು ಮಿ|| ಗೋಖಲೆಯವರೂ ದಾನಾಯುತ ಮೆಂಬರಾಗಿ ಅಲ್ಪ ಸಂಬಳವನ್ನು ತೆಗೆದುಕೊಳ್ಳುತ್ತಾ ನಡೆಸಿದ ಕಾರ್ಯವು ಲೋಕೋತ್ತರವಾದ ಆಶ್ಚರ್ಯವನ್ನೂ ಮಹತ್ವವನ್ನೂ ತೋರಿಸತಕ್ಕದ್ದಾಗಿದೆ ಆ ಮೇಲೆ ಇವರು ಕೆಲಕಾಲದಲ್ಲೇ ಇಂಗ್ಲಿಷ್ ಭಾಷೆಯ ಪ್ರೊಫೆಸರಾಗಿ ಫರ್ಗ್ಯುಸನ್ ಕಾಲೇಜಿನಲ್ಲಿ ನಿಯಮಿತರಾದರು.

ಇವರು ಈ ಕಾರ್ಯವನ್ನು ನಿರ್ವಹಿಸುತ್ತಿದ್ದವರಾದರೂ ಸಾರ್ವಜನಿಕವಾದ ಹಿತವನ್ನು ಮಾಡುವ ವಿಷಯದಲ್ಲಿ ಇವರ ಉಲ್ಲಾಸವು ಬೆಳೆಯುತ್ತಿತ್ತು ಅಲ್ಲದೆ ಇವರು ವಾಗ್ಮಿಗಳೂ ಲೋಕೋತ್ತರವಾದ ಅಭಿಪ್ರಾಯಗಳನ್ನು ಲೇಖನ ಮೂಲಕ ತೋರ್ಪಡಿಸುವವರೂ ಆಗಿದ್ದರು.

ಆಗ್ಗೆ ಪೂನೆಯಲ್ಲಿನ ಸಮಸ್ತ ಸಾರ್ವಜನಿಕ ಸಭೆಗಳ ಮತ್ತು ಸಭಾ ವ್ಯಾಖ್ಯಾನಗಳ ಪುರಸ್ಕರ್ತರಾದ ರಾ. ಬ. ಮಹಾದೇವಗೋವಿಂದರಾನಡೆ ಯವರು ನೈಜವಾಗಿಯೂ ಫರ್ಗ್ಯುಸನ್ ಕಾಲೇಜಿನವರಿಗೆ ಸಹಾಯಕರಾಗಿದ್ದರು ಇವರಿಗೆ ನಮ್ಮ ಗೋಖಲೆಯವರ ಕರ್ತೃತ್ವವು ನಿದರ್ಶನಕ್ಕೆ ಬಂದಿತು ಮೇಲೆ ಕಂಡ ಸೊಸೈಟಿಯಿಂದ ಒಂದು ತ್ರೈಮಾಸಿಕ ಪತ್ರಿಕೆಯು ಹೊರಡುತ್ತಿತ್ತು.

ಇಂಥ ಪತ್ರಿಕೆಗೆ ಒಬ್ಬ ಎಡಿಟರು ಬೇಕಾಗಿದ್ದುದರಿಂದ ಅಂಥ ಕಾರ್ಯನಿರ್ವಾಹಕ ಶಕ್ತರೆಂದು ಮಿ|| ಗೋಖಲೆ ಯವರು ನಿಶ್ಚಯಿಸಲ್ಪಟ್ಟರು. ಹಾಗೇ ೧೮೮೮ ರಲ್ಲಿ ಇವರು ಎಡಿಟರಾಗಿ ನಿಯಮಿತರಾದುದರಿಂದ ಮಿ|| ರಾನಡೆ ಯವರ ಸಾಮೀಪ್ಯವು ಇವರಿಗೆ ಸಿದ್ಧಿಸಿತು ಇದರಿಂದ ಸಾರ್ವಜನಿಕ ಮತ್ತು ರಾಜಕೀಯ ಈ ಭಾಗಗಳ ಅನುಭವ ವಿಷಯದಲ್ಲಿ ಮಿ|| ಗೋಖಲೆಯವರು ಮಿ|| ರಾನಡೆಯವರಲ್ಲಿ ಶಿಷ್ಯತ್ವವನ್ನು ವಹಿಸಿದರು. ಈ ವಿಧವಾದ ಗುರು-ಶಿಷ್ಯತ್ವವಲ್ಲವೇ ಲೋಕಕ್ಕೆ ಅತ್ಯುತ್ತಮವಾದ ಫಲದಾಯಕವಾದುದು! ಅದೇ ಇಸವಿಯಲ್ಲಿ ಪೂನೆಯಲ್ಲಿ ಕೂಡಿದ ಪ್ರಾಂತಿಕ ಸಭೆಯ ಸೆಕ್ರೆಟರಿ ಕೆಲಸವು ಮಿ|| ಗೋಖಲೆಯವರಿಗೆ ವಹಿಸಲ್ಪಟ್ಟಿತು ಮತ್ತು ಇದೇ ವರ್ಷದಲ್ಲಿ ತಮ್ಮ ಅತ್ಯುತ್ತಮ ಇಂಗ್ಲಿಷ್ ಅಂಕಗಣಿತದ ಪುಸ್ತಕವನ್ನು ಪ್ರಚುರಪಡಿಸಿದುದಲ್ಲದೆ ಆ ಕಾಲೇಜಿನ ಗಣಿತವಿದ್ಯಾ ಪ್ರೊಫೆಸರ್ ಕೆಲಸವನ್ನೂ ವಹಿಸಬೇಕಾಯಿತು ಅಲ್ಲಿ ಇಂಗ್ಲಿಷ್ ಗಣಿತ ಈ ಉಭಯ ವಿಷಯಗಳಲ್ಲೂ ಬೋಧಕರಾದುದಲ್ಲದೆ, ಅದೇ ಕಾಲದಲ್ಲಿ ಮಿ|| ಕೆ. ಗೋಪಾಲರಾವ್ ಅಗರಕರ ಇವರು ಸುಧಾರಕ ಪತ್ರವನ್ನು ಮಾಡಿದರು ಅದರ ಇಂಗ್ಲಿಷ್ ಭಾಗದ ಲೇಖನವು ಮಿ|| ಗೋಖಲೆಯವರ ಪಾಲಿಗೆ ಬಂದಿತು. ಈ ಬರವಣಿಗೆಯ ನೈಪುಣ್ಯವನ್ನು ನೋಡಿದ ಲಾರ್ಡ್ ರೇಯವರು ತಾವಾಗಿಯೇ ಈ ಪತ್ರಿಕೆಯ ಚಂದಾದಾರರಾದೆವೆಂದು ಹೇಳುವರು. ೧೮೯೦ ರಲ್ಲಿ ಇವರು ಅದೇ ಕಾಲೇಜಿನಲ್ಲಿ ಇಂಗ್ಲಿಷ್ ಮತ್ತು ಇತಿಹಾಸ ಬೋಧಕರಾಗಿ ಏರ್ಪಟ್ಟು ೯೩ ರಲ್ಲಿ ಕಾಲೇಜನ್ನು ಬೆಳೆಯಿಸುವ ನಿಮಿತ್ತ ಚಂದಾವನ್ನು ಕೂಡಿಸುವ ಕಾರ್ಯದ ಕರ್ತೃಗಳಾದರು. ಈ ಕಾರಣದಿಂದ ಇವರು ದೇಶಸಂಚಾರ ಮಾಡಿ ಆಗ ಉಂಟಾದ ದೇಹಾನಾರೋಗ್ಯವು ಇನ್ನೂ ಒಂದೊಂದು ವೇಳೆಯಲ್ಲಿ ಕಾಣಿಸುತ್ತಿರುವದು. ಹಿಂದೂ ಗೃಹಸ್ಥರಿಗೆ ಆವರೆಗೂ ದೊರೆಯದಿದ್ದ ಯಂ. ಯಸ್. ಯಫ್. ಪರೀಕ್ಷೆಯ ಇಂಗ್ಲಿಷ್ ಭಾಷಾಭಾಗದಲ್ಲಿ ಪರೀಕ್ಷಕರಾಗಿ ನಿಯಮಿತರಾದರು. ಮುಂದೆ ಇವರು ಎಂ. ಎ. ಪರೀಕ್ಷೆಯವರೆಗೂ ಪರೀಕ್ಷಕರಾದರು ಆ ಮೇಲೆ ಕಂಡ ಫರ್ಗ್ಯುಸನ್ ಕಾಲೇಜಿನಲ್ಲಿ ಮೊದಲ ಎರಡು ಭಾಗಗಳಲ್ಲದೆ ಅರ್ಥಶಾಸ್ತ್ರವಿಷಯದಲ್ಲೂ ಪ್ರೊಫೆಸರಾದರು ಹೀಗೆ ೯೮ ರಲ್ಲಿ ಆದ ಪೂನೆಯ ರಾಷ್ಟ್ರೀಯ ಸಭೆಯ ಸೆಕ್ರೆಟರಿ ಕೆಲಸ, ಆ ಮೇಲೆ ಯೂನಿವರ್ಸಿಟಿಯ ಫೆಲೋ, ಅಲ್ಲಿಂದ ಡೆಕ್ಕನ್ ಸಭೆಯ ಸೆಕ್ರೆಟರಿ, ಕಾರ್ಯಾರ್ಥವಾಗಿ ವಿಲಾಯತಿ ಪ್ರಯಾಣ, ಅಲ್ಲಿಂದ ಗೌರವ ಹೊಂದಿ ಬಂದ ಮೇಲೆ ಪೂನೆಯ ಮ್ಯುನಿಸಿಪಾಲಿಟಿ ಮೆಂಬರ ಕೆಲಸ, ಅನಂತರ ೯೯ ರಲ್ಲಿ ಮುಂಬೈಯ ಕಾಯಿದೆ ಕೌನ್ಸಿಲ್ ಮೆಂಬರಾದರು ೯೦೦ ರಲ್ಲಿ ಸರ್ಕಾರದವರಿಂದ ಇವರು ಇನಾಕ್ಯುಲೇಷನ್ ಕಮಿಟಿ ಮೆಂಬರಾಗಿ ನಿಯಮಿತರಾದರು. ೯೦೦ ರಲ್ಲಿ ಇವರು ಹಿಂದೂಸ್ಥಾನದ ಕಾಯಿದೆ ಕೌನ್ಸಿಲ್ ಹುದ್ದೆಗೆ ಬಂದರು. ೯೦೨ ರಲ್ಲಿ ಇವರು ಪೂನೆಯ ಮ್ಯುನಿಸಿಪಾಲಿಟಿ ಅಧ್ಯಕ್ಷರಾದರು ೯೦೩ ರಲ್ಲಿ ಡೆಕ್ಕನ್ ಸೊಸೈಟಿಯಲ್ಲಿ ಇವರ ೧೮ ವರ್ಷಗಳ ಕಾಲ ಕೆಲಸ ಮಾಡಿದುದರಿಂದ ಎರಡು ವರುಷಗಳ ಫರ್ಲೋ ರಜವನ್ನು ತೆಗೆಯುವದಕ್ಕವಕಾಶವಿದ್ದುದರಿಂದ ಹಾಗೇ ರಜವನ್ನು ತೆಗೆದುಕೊಂಡರು. ಅದೇ ವರ್ಷ ನಡೆದ ಮದ್ರಾಸ್ ರಾಷ್ಟ್ರೀಯ ಸಭೆಯಲ್ಲಿ ಇವರು ಜಾಯಿಂಟ್ ಸೆಕ್ರೆಟರಿಗಳಾಗಿ ನಿಯಮಿತರಾದರು. ಪದ್ಧರವಾದ ಕರ್ಜನ್ ಪ್ರಭುಗಳು ಇವರಿಗೆ ಸಿ. ಐ. ಇ. ಎಂಬ ಬಿರುದನ್ನು ಕೊಟ್ಟರು. ಮತ್ತು ಮುಂಬೈ ಸರ್ಕಾರದವರು ನೂತನ ಆ[illegible]ನಂತೆ ಇವರನ್ನು ಯೂನಿವರ್ಸಿಟಿಯ ಫೆಲೋ ಆಗಿ ನಿಯಮಿಸಿದರು ೯೦೪ ರಲ್ಲಿ ಮುಂಬೈಯ ಸಭೆಯಲ್ಲಿ ನಿಯಮಿತರಾದಂತೆ ಈ ವರ್ಷ ಇವರು ವಿಲಾಯತಿಗೆ ಹೋಗಿ ತಮ್ಮ ಕಾರ್ಯವನ್ನು ಎಷ್ಟು ದಕ್ಷತೆಯಿಂದ ನೆರವೇರಿಸಿದರೆಂಬುದು ಲೋಕವಿಖ್ಯಾತವಾಗಿದೆ. ಇ[illegible] ಇವರ ಕಾರ್ಯದ ಫಲವು ನಮ್ಮ ದೇಶೀಯರಿಗೆಲ್ಲಾ ಬೇಗ ಲ[illegible]ಲೆಂದು ನಾವು ಬಯಸುವದೇನೂ ಆಶ್ಚರ್ಯವಲ್ಲ

"ಸ್ವಾಮಿ, ನನಗೆ ನಂಬಿಕೆ ಕಡಮೆ, ಸಹಾಯಮಾಡು."

ಒಂದಾನೊಂದು ದಿನ ಯೇಸುಸ್ವಾಮಿಯು ತನ್ನ ಶಿಷ್ಯರ ಮೂವರು ಮಂದಿಯನ್ನು ಕರೆದುಕೊಂಡು ಒಂದು ಬೆಟ್ಟದ ಮೇಲೆ ಹೋಗಿ ಪ್ರಾರ್ಥಿಸುತ್ತಿದ್ದನು. ಆಗ ರಾತ್ರಿ ವೇಳೆಯಲ್ಲಿ ನಡೆದ ಆಶ್ಚರ್ಯಕರವಾದ ಸಂಗತಿಯೇನಂದರೆ—ಆತನ ರೂಪವು ಬೇರೆಯಾಯಿತು ಆತನ ಉಡುಪು ಬಹು ಬಿಳ್ಳಗೆ ಹೊಳೆಯುವಂಥಾದ್ದಾಯಿತು ಇದಲ್ಲದೆ ದೇವಲೋಕವಾಸಿಗಳಾದ ಎಲೀಯನೂ ಮೋಶೆಯೂ ಕಾಣಿಸಿಕೊಂಡು ಯೇಸುಸ್ವಾಮಿಯ ಸಂಗಡ ಮಾತಾಡುತ್ತಾ ಇದ್ದರು ತರುವಾಯ ಮೋಡವು ಅವರ ಮೇಲೆ ಕವಿಯಿತು ಆ ಮೋಡದೊಳಗಿಂದ—ಈತನು ನನ್ನ ಪ್ರೀತಿಯ ಮಗನು, ಈತನ ಮಾತನ್ನು ಕೇಳಿರಿ ಎಂಬ ವಾಣಿ ಆಯಿತು

ಬಳಿಕ ಅವರು ಬೆಟ್ಟದಿಂದ ಇಳಿದು ಉಳಿದ ಶಿಷ್ಯರ ಬಳಿಗೆ ಬಂದು ಅವರ ಸುತ್ತಲೂ ದೊಡ್ಡ ಗುಂಪು ಇರುವದನ್ನೂ ಅವರ ಸಂಗಡ ಶಾಸ್ತ್ರಿಗಳು ತರ್ಕಮಾಡುವದನ್ನೂ ಕಂಡರು ಕೂಡಲೆ ಆ ಗುಂಪಿನವರು ಯೇಸುವನ್ನು ಕಂಡು ಬಹು ಆಶ್ಚರ್ಯಪಟ್ಟು ಆತನ ಬಳಿಗೆ ಓಡಿ ಬಂದು ಆತನನ್ನು ವಂದಿಸಿದರು. ಆತನು ಆ ಶಾಸ್ತ್ರಿಗಳನ್ನು ಕುರಿತು—ಇವರ ಸಂಗಡ ಏನು ತರ್ಕ ಮಾಡುತ್ತೀರಿ? ಎಂದು ಕೇಳಿದ್ದಕ್ಕೆ ಆ ಗುಂಪಿನಲ್ಲಿ ಒಬ್ಬನು—ಬೋಧಕನೇ, ನನ್ನ ಮಗನನ್ನು ನಿನ್ನ ಬಳಿಗೆ ಕರಕೊಂಡು ಬಂದೆನು, ಅವನಿಗೆ ಮೂಕ ದೆವ್ವ ಹಿಡಿದಿದೆ ಅದು ಎಲ್ಲಿ ಅವನ ಮೇಲೆ ಬಂದರೂ ಅವನನ್ನು ಒದ್ದಾಡಿಸುತ್ತದೆ, ಅವನ ಬಾಯಲ್ಲಿ ನೊರೆ ಬರುತ್ತದೆ ಕರಕರನೆ ಹಲ್ಲು ಕಡಿಯುತ್ತಾನೆ, ಕುಂದಿಹೋಗುತ್ತಾನೆ. ಆ ದೆವ್ವವನ್ನು ಬಿಡಿಸಬೇಕೆಂದು ನಿನ್ನ ಶಿಷ್ಯರಿಗೆ ಹೇಳಿಕೊಂಡೆ, ಅವರ ಕೈಯಿಂದ ಆಗದೆ ಹೋಯಿತು ಅಂದನು ಆತನು—ಅವನನ್ನು ನನ್ನ ಬಳಿಗೆ ಕರಕೊಂಡು ಬನ್ನಿರಿ ಅಂದನು ಅವನನ್ನು ಆತನ ಬಳಿಗೆ ತೆಗೆದುಕೊಂಡು ಬಂದರು ಅವನು ಆತನನ್ನು ಕಂಡ ಕೂಡಲೆ ಆ ದೆವ್ವವು ಅವನನ್ನು ಬಹಳವಾಗಿ ಅದುರಿಸಲು, ಅವನು ನೆಲಕ್ಕೆ ಬಿದ್ದು ನೊರೆ ಸುರಿಸುತ್ತಾ ಹೊರಳಾಡಿದನು. ಯೇಸುಸ್ವಾಮಿಯು ಅವನ ತಂದೆಯನ್ನು ಕುರಿತು—ಇದು ಇವನಿಗೆ ಬಂದು ಎಷ್ಟು ದಿನವಾಯಿತು? ಎಂದು ಕೇಳಿದಾಗ ಅವನು—ಚಿಕ್ಕಂದಿನಲ್ಲಿಯೇ ಬಂದದೆ ಮತ್ತು ಇವನನ್ನು ಕೊಲ್ಲಬೇಕೆಂದು ಆಗಾಗ್ಯೆ ಬೆಂಕಿಯಲ್ಲಿಯೂ ನೀರಿನಲ್ಲಿಯೂ ಕೆಡವಿತು ನಿನ್ನ ಕೈಲಿ ಏನಾದರೂ ಆಗುವ ಹಾಗಿದ್ದರೆ ನಮ್ಮ ಮೇಲೆ ಕರುಣೆಯಿಟ್ಟು ನಮಗೆ ಸಹಾಯಮಾಡು ಅಂದನು. ಯೇಸು ಅವನನ್ನು ನೋಡಿ—ನಿನ್ನ ಕೈಲಿ ಆಗುವ ಹಾಗಿದ್ದರೆ ಅನ್ನುತ್ತೀಯೋ? ನಂಬುವವನಿಗೆ ಎಲ್ಲಾ ಆಗುವದು ಅಂದನು. ಅಂದ ಕೂಡಲೆ ಆ ಹುಡುಗನ ತಂದೆಯು—ನಂಬುತ್ತೇನೆ, ನನಗೆ ನಂಬಿಕೆ ಕಡಮೆಯಾಗಿದ್ದರೂ ಸಹಾಯಮಾಡು ಎಂದು ಕೂಗಿ ಹೇಳಿದನು ಯೇಸುಸ್ವಾಮಿಯು ಆ ದೆವ್ವವನ್ನು ಗದರಿಸಿ—ಎಲೇ ಕಿವುಡಾದ ಮೂಗು ದೆವ್ವವೇ, ಇವನನ್ನು ಬಿಟ್ಟು ಹೋಗು; ಇನ್ನು ಮುಂದೆ ಹಿಡುಕೊಳ್ಳಬೇಡ ಎಂದು ನಿನಗೆ ಅಪ್ಪಣೆ ಕೊಡುತ್ತೇನೆ ಅಂದನು ಆಗ ಅದು ಅಬ್ಬರಿಸಿ ಅವನನ್ನು ಒದ್ದಾಡಿಸಿ ಬಿಟ್ಟು ಹೋಯಿತು ಆ ಹುಡುಗನು ಸತ್ತ ಹಾಗೆ ಬಿದ್ದಿದ್ದರಿಂದ ಬಹು ಜನರು—ಸತ್ತುಹೋದನು ಅಂದರು. ಆದರೆ ಯೇಸು ಅವನನ್ನು ಕೈಹಿಡಿದು ಎಬ್ಬಿಸಲು, ಅವನು ಎದ್ದು ನಿಂತನು.

ಇವೆರಡು ವೃತ್ತಾಂತಗಳ ಭಾವವನ್ನು ನೋಡಲಾಗಿ ಒಂದೆರಡು ಸಂಗತಿಗಳು ಗೊತ್ತಾಗುತ್ತವೆ ಆ ಸ್ವಾಮಿಯು ಬೆಟ್ಟದಮೇಲಿರುವಾಗ ನಡೆದ ಕಾರ್ಯಕ್ಕೂ ಬೆಟ್ಟದ ಅಡಿಯಲ್ಲಿದ್ದ ವಿದ್ಯಮಾನಕ್ಕೂ ಎಷ್ಟು ತಾರತಮ್ಯವಿದೆ ಬೆಟ್ಟದಮೇಲಣ ಕಾರ್ಯವನ್ನು ಪರ್ಯಾಲೋಚಿಸುವಾಗ ಆ ಸ್ಥಾನವು ದಿವ್ಯಲೋಕದ ಮಹಿಮೆಯಿಂದಲೂ ದಿವ್ಯಲೋಕದ ಸಂಭಾಷಣೆಯಿಂದಲೂ ಶಾಂತಿಯಿಂದಲೂ ಕೂಡಿ ಎಷ್ಟು ರಮ್ಯವಾಗಿತ್ತೋ ವಿವರಿಸಲಾಗದು ಆದಕಾರಣವೇ ಆ ಶಿಷ್ಯರೊಳಗೊಬ್ಬನಾದ ಪೇತ್ರನು—ಸ್ವಾಮಿ, ನಾವು ಇಲ್ಲೇ ಇರುವದು ಒಳ್ಳೇದು ಎಂದು ಹೇಳಿದನು. ಈ ವಿದ್ಯಮಾನಕ್ಕೂ ಬೆಟ್ಟದ ಅಡಿಯಲ್ಲಿ ನಡೆಯುತ್ತಿದ್ದ ವಿದ್ಯಮಾನಕ್ಕೂ ಎಷ್ಟು ವ್ಯತ್ಯಾಸ! ಒಂದು ಕಡೆಯಲ್ಲಿ ಕೋಪಿಷ್ಟರೂ ಅಸೂಯಾಭರಿತರೂ ಅಹಂಕಾರಿಗಳೂ ಆದ ಆ ಶಾಸ್ತ್ರಿಗಳು ಏನೂ ಅರಿಯದ ಆ ಶಿಷ್ಯರನ್ನು ಕಚ್ಚಿ ತಿಂದುಹಾಕಿಬಿಡುವವರಂತೆ ಕಾಣುತ್ತಲಿರುವದನ್ನೂ ಮತ್ತೊಂದು ಕಡೆ ನಾನಾ ರೋಗಗಳಿಂದ ಪೀಡಿತರಾದವರು ನರಳಾಡುತ್ತಿರುವವನ್ನೂ ನೋಡುವಲ್ಲಿ ಆ ಬೆಟ್ಟದ ಅಡಿಯಲ್ಲಿ ವಾಸಿಸುವುದಕ್ಕೆ ಯಾರು ತಾನೇ ಇಷ್ಟಪಡುವರು! ಈ ಭೂಲೋಕವು ಕೇವಲ ದುಃಖದಿಂದಲೂ ಪಾಪಕೃತ್ಯಗಳಿಂದಲೂ ಸಂಕಟಗಳಿಂದಲೂ ತುಂಬಿದಂಥಾದ್ದು! ಇಂಥ ಲೋಕದಲ್ಲಿ ಇರುವದು ಒಳ್ಳೇದಲ್ಲ. ಬೆಟ್ಟದಮೇಲೆ ದೇವಲೋಕದ ಮಹಿಮೆಯನ್ನೂ ಮಹಿಮಾಮೂರ್ತಿಯಾದ ಸ್ವಾಮಿಯನ್ನೂ ನೋಡುತ್ತಲೂ ದೇವಲೋಕವಾಸಿಗಳೊಡನೆ ಸಂಭಾಷಣೆಯನ್ನು ಮಾಡುತ್ತಲೂ ಜೀವಿಸಿಕೊಂಡಿರೋಣ ನಡೆಯಿರಿ ಎಂದು ಹೇಳುವರಲ್ಲವೇ? ಇದರಲ್ಲಿ ಸಂಶಯನೇ ಇಲ್ಲ. ಭೂಲೋಕದ ಸಹವಾಸವು ಕೇವಲ ಮನೋವ್ಯಥೆಗೆ ಕಾರಣವಾಗಿರುವದರಿಂದಲ್ಲವೇ ಅನೇಕರು ಕಾಡಿಗೆ ಓಡಿಹೋಗುವವರಾಗಿದ್ದಾರೆ. ಆದರೆ ಮೇಲೆ ಕಂಡ ಎರಡು ವೃತ್ತಾಂತಗಳನ್ನು

[illegible] ವೃತ್ತಾಂತವನ್ನು ಇಟ್ಟು ಹೋಲಿಸಿ ನೋಡಿದರೆ ಈ ವಿಷಯ [illegible] ವಿಶೇಷವಾದ ಬುದ್ಧಿವಾದವು ದೊರಕುವದು. ಮಹಿಮಾ [illegible]ದ ಆ ಸ್ವಾಮಿಯು ಆ ಬೆಟ್ಟದ ಮೇಲೆ ಅತಿಶಯವಾದ [illegible] ವಿವರಿಸಲಸದಳವಾದ ಪದವಿಯನ್ನೂ ಹೊಂದಿ ವಿಂ [illegible] ವಾಸಿಸುತ್ತಿರುವವರು ಒಂದುವೇಳೆ ಮನಸ್ಸಿನಲ್ಲಿ [illegible]ವಾಗಿದ್ದಾಗ್ಯೂ ಅಲ್ಲಿಂದ ಕೆಳಕ್ಕಿಳಿದು ಬಂದು ದುಃಖದಿಂದಲೂ [illegible]ದಿಂದಲೂ ತುಂಬಿದ ಆ ಜನರ ಗುಂಪಿನಲ್ಲಿ ಕಾಣಿಸಿಕೊಂಡು [illegible] ಕನಿಕರಯುಕ್ತನಾಗಿ ಪ್ರವರ್ತಿಸಿದನಲ್ಲವೇ? ಹೌದು, ನಿಜ [illegible] ದೇವರ ದರ್ಶನವನ್ನು ಮಾಡಿದಂಥ ಅಥವಾ ದೇವಲೋಕವಾಸಿ [illegible] ಸಂಭಾಷಣೆಮಾಡಿದಂಥ ಇಲ್ಲವೆ ದೇವಧ್ಯಾನಾಸಕ್ತನಾದಂಥ [illegible] ಭೂಲೋಕದ ಸಂಕಟಗಳನ್ನೂ ದುಃಖಪರಂಪರೆಗಳನ್ನೂ [illegible] ಉಪೇಕ್ಷಿಸುವದಿಲ್ಲ. ತಾನು ದೇವರಿಂದ ಪಡೆದ ಮನಶ್ಶಾಂತಿ [illegible]ವನ್ನು ನರಲೋಕವಾಸಿಗಳಾದಂಥ ಮತ್ತು ದುಃಖಕ್ಕೊಳಗಾ[illegible] ಮನುಷ್ಯರಿಗೆ ಅನುಭವಗೊಳಿಸಬೇಕೆಂದು ಪ್ರಯತ್ನಪಡುವನು [illegible]ಕೊಂದು ಭಾವವೇನಂದರೆ—ಎರಡನೇ ವೃತ್ತಾಂತದಲ್ಲಿ ಹೇಳ[illegible] ಕಂದೆಯಾದವನು ನರಸಂಕುಲದ ವಿಧ್ಯಾಪನವನ್ನು ಸೂಚಿಸ[illegible]ವಾಗಿದ್ದಾನೆ ಮನುಷ್ಯರು ತಮಗೆ ಸಂಭವಿಸುವ ಕಷ್ಟಕಾಲದಲ್ಲಿ [illegible] ಸ್ಮರಿಸತಕ್ಕವರಾದರೂ ನಂಬಿಕೆಯಲ್ಲಿ ಕಡಮೆಯಾದವ[illegible]ನ ಶ್ಯಲಿ ಆಗುವದಾಗಿದ್ದರೆ ಸಹಾಯಮಾಡು” ಎಂದು [illegible] ಕುರಿತು ಬೇಡುವವರಂತಿದ್ದಾರೆ. ಮನುಷ್ಯರು ಹೊಂದುವ [illegible]ವೇದನೆಗಳೆಲ್ಲಾ ಅವರ ಅಪನಂಬಿಕೆಯ ದೆಸೆಯಿಂದಲೇ ಎಂದು [illegible] ಹೇಳಬೇಕಾಗಿದೆ ಭಗವಂತನು ಒಳ್ಳೆಯವನೂ ತನ್ನ ನ[illegible]ನಮಗೆ ಒಳ್ಳೆಯದಾಗುವುದನ್ನೇ ತಿಳಿದು ಮಾಡುವಂಥ ಸಮ[illegible] ಎಂದು ತಿಳಿದಿದ್ದರೆ ಎಷ್ಟು ಕೇಡಿಗೆ ತಪ್ಪಿಸಿಕೊಳ್ಳಲಾರರು! [illegible]ವನೋ ದೂರ ಸ್ನೇಹಿತನೇ, ನಿನ್ನ ಮನಸ್ಸು ಏನು ಹೇಳುತ್ತಿ[illegible] ನಿನ್ನಲ್ಲಿ ಕೋಪವೂ ಅಸೂಯೆಯೂ ಬೆಂಕಿಯಂತೆ ನಿನ್ನನ್ನು [illegible] ಬಿಡುತ್ತಾ ಇವೆಯೋ? ದುರ್ಗುಣಗಳೆಂಬ ದೆವ್ವಗಳು ನಿನ್ನನ್ನು [illegible]ಟ್ಟು ನಾಶಮಾಡಬೇಕೆಂದು ಪ್ರಯತ್ನಿಸುತ್ತಿವೆಯೋ? ಭಕ್ತಿಯು [illegible]ದಲ್ಲಿ ಅಲಕ್ಷ್ಯ ಭಾವವೆಂಬ ಮಹಾ ಜಲಕೂಪದಲ್ಲಿ ನಿನ್ನ ಆ[illegible] ಜೀವವನ್ನು ನ ಮುಳುಗಿಸಿ ನಾಯಿಯ ಅವಸ್ಥೆಗೆ ಸಿಕ್ಕಿದೆಯೋ? [illegible] ದಾರಿದ್ರ್ಯಗಳು ನಿನ್ನನ್ನು ಸರಪಣಿಯಿಂದ ಬಿಗಿಯುವ ಹಾಗೆ ದಾಸ[illegible] ಸಿಕ್ಕಿಸಿಕೊಂಡು ಕೊರೆದು ಗಾಯಮಾಡಲಾಗಿ ನೀನು ತಡೆ[illegible]ರದ ಕಲ್ಮರಗಳು ಸೀಳುವಂತೆ ಕೂಗಾಗಿ ಪ್ರಲಾಪಿಸುತ್ತಿರು[illegible]ಯೋ? ನೀನು ಯೇಸುಸ್ವಾಮಿಯನ್ನು ಕುರಿತು—ಓ ದೇವನೇ, [illegible] ನಂಬಿಕೆ ಸಾಲದು, ನನಗೆ ಸಹಾಯ ಮಾಡು ಎಂದು ಮೊರೆಯಿ[illegible] ಭೂಲೋಕವು ಅನಾಯಕವಾದ ಸ್ಥಿತಿಗೆ ಮುಟ್ಟಿತು, ಇದೆಲ್ಲಾ [illegible] ಹೋಗುತ್ತಿವೆಯಲ್ಲಾ ಎಂದು ಅವಿಚಾರಪರನಾಗಿ ಮರುಗು[illegible]ಯೋ? ಯೇಸುಸ್ವಾಮಿಯನ್ನು ನೋಡು ಆತನಲ್ಲಿದ್ದ ನಂಬಿ[illegible] ನೋಡು ಆತನಲ್ಲಿ ನಂಬಿಕೆಯು ಇಲ್ಲದೆ ಹೋಗಿದ್ದರೆ [illegible] ಮಹಿಮಾ ಪದವಿಯನ್ನು ಬಿಟ್ಟು ನರಾವತಾರಿಯಾಗುತ್ತಿದ್ದನೇ? [illegible] ನಂಬಿಕೆಯು ಕಡಮೆಯಾಗಿದ್ದದ್ದೇ ಆದರೆ ಬಡವರನ್ನು [illegible]ಸುತ್ತಲೂ ರೋಗಿಷ್ಠರನ್ನು ಸ್ವಸ್ಥಮಾಡುತ್ತಲೂ ಮೂರ್ಖರಿಗೆ [illegible] ಹೇಳಿ ಬಂಧಿಸುತ್ತಲೂ ಸಂಚರಿಸುತ್ತಿದ್ದನೇ? ಆತನನ್ನು [illegible] ಪಡೆಯೋಣ ನಮ್ಮಲ್ಲೇ ದುರ್ಗುಣ ಪರಂಪರೆಗಳು ಪೀಡಿ[illegible]ರುವಾಗಲೂ ಇತರರಲ್ಲಿ ಸಂಕಟಗಳು ತಲೆದೋರುತ್ತಿರುವಾಗ[illegible] ಅಧೈರ್ಯಕ್ಕೂ ಅಪನಂಬಿಕೆಗೂ ವಶವರ್ತಿಗಳಾಗದೆ ನಿರಂತರವೂ [illegible]ಯಕನಾಗಿ ಜತ್ತಿರವಿರುವ ಆ ಮಹಾ ಸಹಾಯಕನನ್ನು ಕುರಿತು [illegible], ನನಗೆ ನಂಬಿಕೆ ಕಡಮೆ, ಸಹಾಯಮಾಡು ಎಂದು ಮೊರೆ[illegible]ಕೊಳ್ಳುವ ಆ ಸಹಾಯವನ್ನು ಹೊಂದಿ ಭೂಲೋಕದ ಸಂಕ[illegible] ಪರಿಹಾರ ಮಾಡುವ ಕೆಲಸದಲ್ಲಿ ನಿರತರಾಗಿರೋಣ.

ಇಂಡಿಯಾ ದೇಶದ ವೃತ್ತಾಂತಗಳು.

[illegible]ಪಟ್ಟಣದ ಅಂಗಡೀ ಬೀದಿಯಲ್ಲಿ ಕಳೆದವಾರ ಬೆಂಕಿಬಿದ್ದು [illegible] ೬೦ ಭಾರೀ ಅಂಗಡಿಗಳು ಸರಕುಗಳ ಸಹಿತ ಸುಟ್ಟುಹೋ[illegible] ವರ್ತಕರಿಗೆ ಸ್ವಲ್ಪ ಹೆಚ್ಚುಕಡಿಮೆ ೫ ಲಕ್ಷ ರೂಪಾಯಿ ತನಕ [illegible]ವಾಗಿರುವುದು.

❖❖❖❖

ಪ್ರಿನ್ಸ್ ಆಫ್ ವೇಲ್ಸ್‌ರವರ ದರ್ಶನಾರ್ಥವಾಗಿ ಕೊಚ್ಚಿ ರಾಜ[illegible] ತಾ॥ ೧೩ ನೇ ಶನಿವಾರವೂ, ತಿರುವಾಂಕೂರು ಮಹಾರಾಜರ[illegible] ತಾ॥ ೨೦ ನೇ ಸೋಮವಾರವೂ ಪರಿವಾರಸಹಿತ ಮದರಾಸಿಗೆ [illegible]ಮಾಡುವವರಾಗಿದ್ದಾರೆ.

❖❖❖❖

ಸಿಂಗಪುರದಲ್ಲಿ ಜನರು ಸಾಯುವುದು ಈಚೆಗೆ ಹೆಚ್ಚಾದ್ದರಿಂದ [illegible] ಕಾರಣ ಮುಂತಾದ್ದನ್ನು ಗೊತ್ತುಮಾಡುವುದಕ್ಕೆ ಕಲ್ಕತ್ತಾ [illegible]ನದ ಹೆಲ್ತ್ ಆಫೀಸರಾದ ಡಾ॥ ಜೆ. ಎನ್ ಕೂಕ್ ಯವರು [illegible]ಗೆ ಕೆಲವು ಕಾಲದಮಟ್ಟಿಗೆ ಹೋಗಿಬರುವರು.

❖❖❖❖

ಪ್ರಯಾಗದಲ್ಲಿ ಈಸಲ ಸಂಕ್ರಮಣ ಗಂಗಾ ಸ್ನಾನಕ್ಕೆ ಇಪ್ಪತ್ತು [illegible] ಪ್ರಜೆಗಳು ಸೇರಬಹುದೆಂದು ಕಳೆದವಾರ ಸೂಚಿಸಿದ್ದೆವಷ್ಟೇ. [illegible] ಅಲ್ಲಿಗೆ ಹೋದ ಪರದೇಶಿಗಳ ಕ್ಯಾಂಪುಗಳಲ್ಲಿ ವಾಂತಿಭೇದಿ [illegible]ವು ಕಾಣಿಸಿಕೊಂಡು, ತುಂಬಾ ಗಲಭೆಯನ್ನುಂಟು ಮಾಡಿರು[illegible]

❖❖❖❖

ಇಂಡಿಯಾ ಸ್ಟೇಟ್ ಸೆಕ್ರಟರಿಯವರು ಹಿಂದೂಸ್ಥಾನದಲ್ಲಿ ಈಗಿ[illegible] ರೈಲ್ ರಸ್ತೆಗಳನ್ನು ಬಿಸಾವಣೆ ಮಾಡುವುದಕ್ಕೂ ಇನ್ನು ಕೆಲವು [illegible] ರೈಲ್ ರಸ್ತೆಗಳನ್ನು ಹಾಕಿಸುವುದಕ್ಕೂ ಮುಂದಿನ ವರುಷ [illegible]ಕೋಟಿ ರೂಪಾಯಿ ಖರ್ಚು ಮಾಡಬಹುದೆಂದು ಸ್ವೀಕರಿಸಿದ್ದಾ[illegible]ರೆ.

ಮದರಾಸ್ ಅಧಿಪತ್ಯದಲ್ಲಿರುವ ಆಸ್ಪತ್ರೆಗಳ ಕಳೆದ ವರುಷದ ರಿಪೋರ್ಟನ್ನು ಈ ಕೆಳಗೆ ಬರೆಯುತ್ತೇವೆ.—ಪ್ಲೇಗಿನಿಂದ ೨೦,೧೧೩ ಜನರೂ, ಜ್ವರಗಳಿಂದ ೨,೮೮,೨೮೮ ಜನರೂ, ಸಿಡುಬಿನಿಂದ ೯,೯೬೯ ಪ್ರಜೆಗಳೂ ಮೃತಪಟ್ಟರು. ಮದರಾಸ್ ಪಟ್ಟಣದಲ್ಲಿ ಮಾತ್ರ ಜ್ವರದಿಂದ ೬,೯೮೧ ಜನರು ಸತ್ತಿರುತ್ತಾರೆ.

❖❖❖❖

ಪೂನಾ ಪಟ್ಟಣದಲ್ಲಿ ಮಿ॥ ಜೆ ಗಾಡ್ಬೋಲ್ ಎಂಬೊಬ್ಬ ಇಂಜಿನಿಯರು ಬೈಸಿಕಲ್ ಗಾಡಿಯ ಮೇಲೆ ಕೂತುಕೊಂಡು ಹೋಗುತ್ತಿದ್ದಾಗ ಹೊಸದಾಗಿ ನೀರು ಚಲ್ಲಿದ್ದ ರಸ್ತೆಯ ಮೇಲೆ ಆ ಬೈಸಿಕಲ್ ಗಾಡಿ ಜಾರಿ ಎಡಪಾರ್ಶ್ವಕ್ಕೆ ಉರುಳಿಕೊಂಡಿತು ಅವನು ಗಾಡಿಯಿಂದ ಬಿದ್ದು ಎರಡು ಕಾಲುಗಳನ್ನೂ ಮುರಿದುಕೊಂಡು, ಆಸ್ಪತ್ರೆಯಲ್ಲಿ ಬಿದ್ದಿದ್ದಾನೆ.

❖❖❖❖

ಇದುವರೆಗೆ ಹಿಂದುಸ್ಥಾನದ ಪೋಸ್ಟ್ ಮತ್ತು ಟೆಲಿಗ್ರಾಫ್ ಇಲಾಖೆಗಳ ಡೈರೆಕ್ಟರ್ ಜನರಲ್‌ರಾಗಿದ್ದ ಸರ್ ಎ ಯು. ಫ್ರೇಸರ್‌ರವರು ವಯಸ್ಸು ಕಳೆದದ್ದರಿಂದ ಕೆಲಸಕ್ಕೆ ರಾಜೀನಾಮೆ ಕೊಟ್ಟು ಸೀಮೆಗೆ ಹೊರಟುಹೋಗುವರು ಆ ಕೆಲಸಕ್ಕೆ ಮಿ॥ ಸ್ಟುವರ್ಟ್ ವಿಲ್ಸನ್ ಎಂಬವರು ಮಾರ್ಚಿ ತಿಂಗಳಲ್ಲಿ ಸೀಮೆಯಿಂದ ಬಂದು ನೇಮಕವಾಗುವರು

❖❖❖❖

ಹಿಂದೂಸ್ಥಾನದಿಂದ ಮಕ್ಕಾಮದೀನ ಎಂಬ ಪುಣ್ಯ ಸ್ಥಳಗಳಿಗೆ ಯಾತ್ರೆಹೋಗುವ ಮುಸಲ್ಮಾನ ಪ್ರಜೆಗಳು ಬೊಂಬಾಯಿ ಪಟ್ಟಣದಲ್ಲಿ ಸೇರಿ, ಅಲ್ಲಿ ಹಡಗು ಹತ್ತಿ ಪ್ರಯಾಣ ಮಾಡುವರಷ್ಟೆ. ಪ್ರತಿ ವರುಷವೂ ಸಾಮಾನ್ಯವಾಗಿ ೧೨—೧೩ ಸಾವಿರ ಮುಸಲ್ಮಾನರು ಯಾತ್ರೆ ಹೋಗುತ್ತಾರೆ ಈ ವರುಷ ೮೦,೬೦೦ ಮಹಮದೀಯರು ಬೊಂಬಾಯಿಂದ ಪ್ರಯಾಣ ಮಾಡಿದರೆಂದು ತಿಳಿದುಬಂದಿದೆ.

❖❖❖❖

ಇಂಡಸ್ (ಸಿಂಧು) ನದಿಗೆ ಸಕ್ಕರ್ ಪಟ್ಟಣದಲ್ಲಿ ಸರ್ಕಾರದವರು ಸೇತುವೆ ಕಟ್ಟಿ, ಅದರ ಮೇಲೆ ಸಂಚರಿಸುವಂಥಾ ಜನರಿಂದಲೂ ಜಾನುವಾರುಗಳಿಗೂ ತೆರಿಗೆ ಹಾಕಿ ವಸೂಲ್ಮಾಡುತ್ತಾರೆ. ವಿಲಾಯತಿಯ ಯುವರಾಜರವರು ದಯಮಾಡಿದ್ದರ ಜ್ಞಾಪಕಾರ್ಥವಾಗಿ ಈ ತೆರಿಗೆಗಳನ್ನು ವಜಾ ಮಾಡಿ, ಪ್ರಜೆಗಳಿಗೆ ಶಾಶ್ವತವಾದ ಸೌಕರ್ಯವನ್ನು ಕಲ್ಪಿಸಿಕೊಡಬೇಕೆಂದು ಆ ಪ್ರಾಂತ್ಯದವರು ಸರ್ಕಾರದವರನ್ನು ಬೇಡಿಕೊಂಡಿದ್ದಾರೆ

❖❖❖❖

ಕಾಂಗ್ರಾ ಕಣಿವೆಯಲ್ಲಿ ಭೂಕಂಪದ ದೆಸೆಯಿಂದ ರೈತ ಪ್ರಜೆಗಳು ತುಂಬಾ ನಷ್ಟಪಟ್ಟಿರುವುದನ್ನು ನೋಡಿ, ಇಂಡಿಯಾ ಗವರ್ನಮೆಂಟಿನವರು ಆ ಪ್ರಾಂತ್ಯದಲ್ಲಿ ಸಾರ್ವತ್ರಿಕವಾಗಿ ಜಮೀನ್ ಕಂದಾಯವನ್ನೆಲ್ಲಾ ರಿಮಿಷನ್ ಮಾಡಿರುತ್ತಾರಲ್ಲದೆ, ಆ ಡಿಸ್ಟ್ರಿಕ್ಟಿನಲ್ಲಿ ಜಹಗೀರುದಾರರಾಗಿದ್ದವರಿಗೆ ಸ್ವಲ್ಪವೂ ಹುಟ್ಟುವಳಿ ಆಗದೆ ಹೋದ್ದರಿಂದ ಅವರಿಗೆಲ್ಲಾ ಯೋಗ್ಯತಾನುಸಾರ ದ್ರವ್ಯಸಹಾಯ ಮಾಡಬೇಕೆಂದು ಸ್ವೀಕಾರ ಮಾಡಿದ್ದಾರೆ.

❖❖❖❖

ಮದರಾಸ್ ಅಧಿಪತ್ಯದ ಗವರ್ನರಾದ ಲಾರ್ಡ್ ಆಂಪ್ಥಿಲ್ ಯವರು ಪತ್ನಿ ಪರಿವಾರ ಸಹಿತ ಫೆಬ್ರವರಿ ೧೬ ನೆ ತಾರೀಖಿನ ದಿನ ಮದರಾಸನ್ನು ಬಿಟ್ಟು ಬೊಂಬಾಯಿಗೆ ಹೋಗಿ ಅಲ್ಲಿ ಹಡಗು ಹತ್ತಿ ವಿಲಾಯತಿಯನ್ನು ಕುರಿತು ಪ್ರಯಾಣ ಬೆಳೆಸುವವರಾಗಿದ್ದಾರೆ ಮದರಾಸ್ ಅಧಿಪತ್ಯದ ಗವರ್ನರ್ ಕೆಲಸಕ್ಕೆ ಹೊಸದಾಗಿ ನೇಮಕವಾಗಿರುವ ಸರ್ ಆರ್ಥರ್ ಲಾಲಿ ಯವರು ಅದೇ ೧೬ ನೆ ತಾರೀಖಿನ ದಿನ ಹಡಗಿನಲ್ಲಿ ಸೀಮೆಯಿಂದ ಬಂದು ಬೊಂಬಾಯಿನಲ್ಲಿ ಇಳಿಯುವರು

❖❖❖❖

ಸುಮಾರು ಆರು ವಾರಗಳ ಕೆಳಗೆ ಪೂರ್ವ ಬಂಗಾಳಾ ಮತ್ತು ಆಸಾಂ ಪ್ರಾಂತ್ಯದಲ್ಲಿ ಬೇಕರ್‌ಗಂಜ್ ರೆವಿನ್ಯೂ ಸೆಟಲ್‌ಮೆಂಟ್ ಆಫೀಸಿನ ಸುಮಾರು ೧೦೦ ಗುಮಾಸ್ತರು ಏಕ ಕಾಲದಲ್ಲಿ ಕೆಲಸಕ್ಕೆ ಬರುವುದಿಲ್ಲವೆಂದು ಹೇಳಿಕಳುಹಿಸಿ, ಮನೆಯಲ್ಲೇ ನಿಂತುಬಿಟ್ಟರು. ಸರ್ಕಾರಿ ಕೆಲಸ ನಡೆಯುವುದೇ ಕಷ್ಟಕ್ಕೆ ಬಂದಿತು. ಅಧಿಕಾರಿಗಳು ಆ ಗುಮಾಸ್ತರಿಗೆ ಬದಲಾಗಿ ಹೊಸ ನೌಕರರನ್ನು ತಂದು ಸೇರಿಸಿಕೊಂಡು, ಈಗ ಮೇಲ್ಕಂಡ ೧೦೦ ಮಂದಿಯ ಪೈಕಿ ೬೩ ಮಂದಿಯನ್ನು ಕೆಲಸದಿಂದ ವಜಾ ಮಾಡಿದೆ ಎಂದು ಘೋಷಿಸಿದ್ದಾರೆ.

❖❖❖❖

ಪೂರ್ವಬಂಗಾಳಾದಲ್ಲಿ ಇಬ್ಬರು ವಕೀಲರು ಸೀಮೆಯಿಂದ ಬಂದು ಬಿಕರೀ ಆಗುವ ಉಪ್ಪನ್ನು ಯಾರೂ ಕೊಂಡುಕೊಳ್ಳಕೂಡದೆಂದು ಅಡ್ಡಿಮಾಡುತ್ತಾ ಬಂದದ್ದರಿಂದ ಸರ್ಕಾರ್ದವರು ಅವರಿಬ್ಬರ ಮೇಲೂ ಮೊಕದ್ದಮೆ ಮಾಡಿದರು. ಮ್ಯಾಜಿಸ್ಟ್ರೇಟರು ಒಬ್ಬ ವಕೀಲನಿಗೆ ಹತ್ತು ದಿನಗಳ ಕಠಿಣ ಸಜವನ್ನೂ ೬೦೦ ರೂಪಾಯಿ ಜುಲ್ಮಾನೆಯನ್ನೂ ವಿಧಿಸಿದರು; ಇನ್ನೊಬ್ಬ ವಕೀಲನಿಗೆ ಒಂದು ತಿಂಗಳ ಕಠಿಣ ಸಜವನ್ನೂ ೧,೦೦೦ ರೂಪಾಯಿ ಜುಲ್ಮಾನೆಯನ್ನೂ ಹಾಕಿದರು. ಈಗ ಅವರಿಬ್ಬರೂ ಜಾಮೀನ್ ಕೊಟ್ಟು ಅಪೀಲ್ ಮಾಡಿದ್ದಾರೆ.

❖❖❖❖

ಅಫ್ಘಾನಿಸ್ಥಾನದಲ್ಲಿ ಪ್ರಜೆಗಳಲ್ಲಿ ಗಣ್ಯರಾಗಿರತಕ್ಕವರು ಅಪರಾಧಮಾಡಿದರೆ ಇದುವರೆಗೆ ಅವರನ್ನು ಗಡೀಪಾರು ಮಾಡುವ ಪದ್ಧತಿ ಇತ್ತು. ಹೀಗೆ ಗಡೀಪಾರು ಹೊಂದಿದವರು ಹೋಗಿ ರಷ್ಯಾದವರ ಆಶ್ರಯದಲ್ಲಿ ಸೇರಿಕೊಳ್ಳುತ್ತಾರೆಂಬುವದನ್ನು ಕೇಳಿ, ಅಮೀರರು ಗಡೀಪಾರಿನ ಶಿಕ್ಷೆಯನ್ನೇ ವಜಾಮಾಡಿ, ಅಂಥಾ ಮುಖಂಡರಾದ ಅಪರಾಧಿಗಳು ಕೆಲವು ಕಾಲ ತಮ್ಮ ಮನೆಗಳಲ್ಲೇ ಇರಬೇಕೆಂತಲೂ, ಹೊರಕ್ಕೆ ಬಂದರೆ ಅವರನ್ನು ಗುಂಡಿಗೆ ಕಟ್ಟಿ ಕೊಲ್ಲಬೇಕೆಂತಲೂ ಹುಕುಂ ಕೊಟ್ಟಿದ್ದಾರೆ. ಈ ಹುಕುಮಿನಂತೆ ಇದುವರೆಗೆ ೧೧ ಜನ ಗಣ್ಯರಾದ ಪ್ರಜೆಗಳು ಪ್ರಾಣ ಕಳೆದುಕೊಂಡರೆಂದು ತಿಳಿದುಬಂದಿದೆ

ಪ್ರಿನ್ಸ್ ಆಫ್ ವೇಲ್ಸ್‌ರವರು ಕಲ್ಕತ್ತಾ ಪಟ್ಟಣಕ್ಕೆ ದಯಮಾಡಿದ ಸಂಭ್ರಮವನ್ನು ಕಾರ್ಯತಃ ಪ್ರಕಾಶಪಡಿಸಬೇಕೆಂದು ದರ್ಭಾಂಗದ ಮಹಾರಾಜರವರು ಒಂದು ಲಕ್ಷ ರೂಪಾಯಿಗಳನ್ನು ಅವರ ಬಳಿಗೆ ಕಳುಹಿಸಿಕೊಟ್ಟು ಆ ಹಣವನ್ನು ಅವರು ಇಷ್ಟಪಡುವ ರೀತಿಯಲ್ಲಿ ವಿನಿಯೋಗಿಸಬಹುದೆಂದು ಅರಿಕೆಮಾಡಿದರು ಪ್ರಿನ್ಸ್ ಆಫ್ ವೇಲ್ಸ್‌ರವರು ಅದನ್ನು ಅಂಗೀಕರಿಸಿ, ಬಹು ಆದರ ಪೂರ್ವಕವಾಗಿ ಮಹಾರಾಜರವರನ್ನು ವಂದಿಸಿ, ಆ ಹಣದಲ್ಲಿ ೯೦,೦೦೦ ರೂಪಾಯಿಯನ್ನು ವೈದ್ಯ ವಿದ್ಯಾಶಾಲೆಯ ಆಸ್ಪತ್ರೆ ಫಂಡಿಗೂ, ಉಳಿದ ೧೦,೦೦೦ ರೂಪಾಯಿಯನ್ನು ಕಲ್ಕತ್ತಾ ಪಟ್ಟಣದಲ್ಲಿರುವ ಲೇಡಿ ಡಫ್ರಿನ್ ಆಸ್ಪತ್ರೆಯ ಮೂಲ ಧನಕ್ಕೂ ವಿನಿಯೋಗಿಸುವಂತೆ ಅಪ್ಪಣೆಯನ್ನಿತ್ತರು

❖❖❖❖

ಅಫ್ಘಾನಿಸ್ಥಾನದಲ್ಲಿ ಈಗಿನ ಅಮೀರರಿಗೆ ದೊರೆತನವಾದಾಗ್ಗೆ ಹಿಂದಿನ ಅಮೀರರ ಕಾಲದ ಕಂದಾಯಗಳು ಕೆಲವು ವಸೂಲಾಗದೆ ಬಾಕಿಯಾಗಿದ್ದವು. ಈಗಿನ ಅಮೀರರು ತಮಗೆ ರಾಜ್ಯಾಧಿಪತ್ಯ ದೊರೆತ ಸಂತೋಷಕ್ಕಾಗಿ ಆಗ ಬಾಕಿ ಇದ್ದ ಕಂದಾಯಗಳನ್ನೆಲ್ಲಾ ಮಾಫಿ ಮಾಡುತ್ತೇವೆಂದು ಇಸ್ತಿಹಾರು ಕೊಟ್ಟು ಪ್ರಕಟಿಸಿದರು. ಈಗ ಆ ರೈತರೂ ಜಮೀನ್ದಾರರೂ ತಮ್ಮ ಭೂಮಿಗಳನ್ನು ಉತ್ತು ಬೆಳೆ ಬೆಳೆದು ಸುಖಸಂತೋಷಗಳನ್ನು ಅನುಭವಿಸುತ್ತಿದ್ದಾರೆ. ಇದನ್ನು ಅಮೀರರು ನೋಡಿ, ಹಿಂದೆ ತಾವು ಮಾಫಿ ಬಿಟ್ಟಿದ್ದ ಕಂದಾಯಗಳನ್ನೆಲ್ಲಾ ಅವರಿಂದ ಈಗ ವಸೂಲ್ಮಾಡಲೇ ಬೇಕೆಂದು ಹುಕುಂ ಕೊಟ್ಟರು ಈ ಹುಕುಮನ್ನು ಕೇಳಿ ಪ್ರಜೆಗಳೆಲ್ಲಾ ಗಾಬರಿಪಡುತ್ತಿದ್ದಾರೆ.

❖❖❖❖

ಬೊಂಬಾಯಿ ಪಟ್ಟಣದ ಮುಂಬಾದೇವಿಕೆರೆ ಬೀದಿಯಲ್ಲಿ ಕಳೆದವಾರ ಗವರ್ನರಾದ ಲಾರ್ಡ್ ಲಾಮಿಂಗ್ಟನ್‌ರವರು ಜೈನ ಬಾಲಕರಿಗಾಗಿ ಒಂದು ವಿದ್ಯಾಶಾಲೆಯನ್ನೂ ಒಂದು ಆಸ್ಪತ್ರೆಯನ್ನೂ ಪ್ರತಿಷ್ಠೆಮಾಡಿದರು. ಆ ಪಟ್ಟಣದಲ್ಲಿ ತುಂಬಾ ಐಶ್ವರ್ಯವಂತರಾಗಿದ್ದು ಗತಿಸಿದ ಬಾಬೂ ಪನ್ನಾ ಲಾಲ್ ಪೂರ್ಣಚಂದ್ ಎಂಬ ಜವಾಹಿರಿ ವ್ಯಾಪಾರಸ್ಥನು ತನ್ನ ಜೈನ ಮತದ ಬಾಲಕರಿಗೆ ಒಂದು ಪಾಠಶಾಲೆಯಾಗಲಿ ವೈದ್ಯಶಾಲೆಯಾಗಲಿ ಇಲ್ಲದ್ದನ್ನು ನೋಡಿ, ಇವೆರಡನ್ನೂ ಸ್ಥಾಪಿಸಬೇಕೆಂದು ಅಪೇಕ್ಷಿಸಿ, ತನ್ನ ಆಸ್ತಿಯಲ್ಲಿ ಅವೆರಡಕ್ಕೂ ೬ ಲಕ್ಷ ರೂಪಾಯಿ ಧರ್ಮ ಮಾಡಿದನು. ಈ ಪೈಕಿ ಎರಡು ಲಕ್ಷ ರೂಪಾಯಿ ಮುಟ್ಟಿಸಿ ಒಂದು ಪಾಠಶಾಲೆಯನ್ನೂ ಒಂದು ವೈದ್ಯಶಾಲೆಯನ್ನೂ ಕಟ್ಟಿಸಿದ್ದಾನೆ. ಪಾಠಶಾಲೆಯು ೩೦೦ ಮಂದಿ ವಿದ್ಯಾರ್ಥಿಗಳು ಓದುವಷ್ಟು ದೊಡ್ಡದಾಗಿದೆ. ಆ ಪಟ್ಟಣದ ಜೈನ ಪ್ರಜೆಗಳು ಆತನ ಧರ್ಮವನ್ನು ನೋಡಿ ಕೊಂಡಾಡುತ್ತಿರುವರು ಗವರ್ನರವರೂ ಕೂಡ ಅವೆರಡು ಕಟ್ಟಡಗಳನ್ನು ಪ್ರತಿಷ್ಠೆ ಮಾಡುವಾಗ್ಗೆ ಆತನ ಉದಾರಮನಸ್ಸನ್ನು ಹೊಗಳಿದರು.

❖❖❖❖

ಕಾಶೀಪಟ್ಟಣದಲ್ಲಿ ನಡೆದ ಕಾಂಗ್ರೆಸ್ ಮಹಾಸಭೆಗೆ ಮದರಾಸಿನಿಂದ ಪ್ರತಿನಿಧಿಯಾಗಿ ಹೋಗಿದ್ದ ಮಿ॥ ಎನ್. ಕೆ. ರಾಮಸ್ವಾಮಿ ಐಯರೆಂಬುವರು ಕಲ್ಕತ್ತಾ ಪಟ್ಟಣದ ಪ್ರಸಿದ್ಧ ಕಾಳಿಕಾ ದೇವಸ್ಥಾನವನ್ನು ಕೂಡ ನೋಡಿಕೊಂಡು ಬಂದು, ಕಾಳಿಕಾ ವಿಗ್ರಹವನ್ನು ವಿವರಿಸಿ ಬರೆಯುವುದೇನಂದರೆ— ಈ ವಿಗ್ರಹವು ಬಹು ಭಯಂಕರವಾಗಿಯೂ ಮಹಾ ವಿಕಾರವಾಗಿಯೂ ಇದೆ ಉದ್ದವಾದ ಹಲ್ಲುಗಳಿವೆ, ನಾಲಿಗೆಯನ್ನು ಹೊರಕ್ಕೆ ಚಾಚಿರುತ್ತದೆ ಕೈಯಲ್ಲಿ ಒಂದು ತಲೆ ಬುರುಡೆಯನ್ನು ಹಿಡಿದಿದೆ ತಲೆ ಬುರುಡೆಗಳ ರುಂಡಮಾಲಿಕೆಯನ್ನು ಕೊರಳಲ್ಲಿ ಧರಿಸಿಕೊಂಡಿದೆ. ಈ ದೇವತೆಯ ಎದುರು ಪಾರ್ಶ್ವದಲ್ಲಿ ಕುರಿ ಕೋಣ ಮೊದಲಾದ ಮೃಗ ಪ್ರಾಣಿಗಳನ್ನು ಸರ್ವದಾ ಕಡಿದು ಸಮರ್ಪಣೆ ಮಾಡುತ್ತಲೇ ಇರುವರು. ರಕ್ತವು ಯಾವಾಗಲೂ ಪೀಠದಲ್ಲಿ ಹೊರಗಡೆಯೂ ಹರಿಯುತ್ತಿರುವುದು ಬಂಗಾಳಿಗಳು ಈ ರಕ್ತವನ್ನು ತೆಗೆದು ಹುಬ್ಬಿನ ನಡುವೆ ಇಟ್ಟುಕೊಳ್ಳುತ್ತಾರೆ. ಇದು ಅಲ್ಲಿನವರಿಗೆ ಸರ್ವಸಾಮಾನ್ಯವಾಗಿ ಪರಿಣಮಿಸಿದ್ದರೂ ಪರದೇಶದಿಂದ ಹೋಗಿ ನೋಡುವವರಿಗೆ ಭಯವೂ ಭ್ರಾಂತಿಯೂ ಅಸಹ್ಯವೂ ಉಂಟಾಗುತವೆ

❖❖❖❖

ಬೊಂಬಾಯಿ ಅಧಿಪತ್ಯಕ್ಕೆ ಸೇರಿದ ಲಿಂಬ್ಡಿ ಎಂಬ ಸಂಸ್ಥಾನವನ್ನು ಸರ್ ಯಶ್ವಂತ್ ಸಿಂಗ್‌ಜಿ ಎಂಬ ಠಾಕೂರ್ ಸಾಹೇಬ್ ಯವರು ಆಳುತ್ತಿದ್ದಾರೆ. ಈ ಸಂಸ್ಥಾನದ ರಾಜಧಾನಿಯಾದ ಲಿಂಬ್ಡಿ ಎಂಬ ಪಟ್ಟಣದ ಅರಮನೆಗೆ ಈ ತಿಂಗಳ ೨ ನೇ ತಾರೀಖು ಮಂಗಳವಾರ ರಾತ್ರಿ ಬೆಂಕಿ ಬಿದ್ದು ಉರಿಯಲಾರಂಭವಾಯಿತು. ಅರಮನೆಯೆಲ್ಲಾ ಸುಟ್ಟು ಬೂದಿಯಾಗಿದೆ ಅರಮನೆಯಿಂದ ದೊರೆಯನ್ನೂ ರಾಣಿವಾಸದವರನ್ನೂ ಬಿಡುಕಿಸಿ ಹೊರಕ್ಕೆ ಕರತರುವುದೇ ಮಹಾ ಪ್ರಯಾಸವಾಯಿತು. ಅನೇಕರನ್ನು ಉರಿಯುಮಧ್ಯೆ ಕಿಟಕಿಗಳ ಮೂಲಕ ಹಗ್ಗಗಳನ್ನು ಹಾಕಿ ಇಳಿಸಿ ಬಿಡುಕಿಸಿಕೊಂಡರು. ಅರಮನೆಯಲ್ಲಿದ್ದ ಸಮಸ್ತ ನಗನಾಣ್ಯಗಳೂ ಪದಾರ್ಥಗಳೂ ನಾಶವಾದವು. ಉರಿಯು ಅರಮನೆಯಿಂದ ಪ್ರಜೆಗಳ ಮನೆಗಳಿಗೆ ವ್ಯಾಪಿಸಿ ಪಟ್ಟಣಕ್ಕೆ ಪಟ್ಟಣವೇ ಹತ್ತಿಕೊಂಡು, ಮೂರು ದಿನಗಳ ತನಕ ಏಕಪ್ರಕಾರವಾಗಿ ವ್ಯಾಪಿಸಿಕೊಂಡು, ಪತ್ತಾರು ಮೈಲಿಗಳ ದೂರಕ್ಕೆ ಜ್ವಾಲೆಗಳು ಕಾಣಿಸುತ್ತಿದ್ದವು. ಇದರಿಂದ ಸುಮಾರು ೫೦—೬೦ ಲಕ್ಷ ರೂಪಾಯಿಗೆ ಕಮ್ಮಿ ಇಲ್ಲದಷ್ಟು ಆಸ್ತಿಪಾಸ್ತಿಗಳು ನಿರ್ನಾಮವನ್ನು ಹೊಂದಿರುವುದಕ್ಕೆ ಸಂಶಯವಿಲ್ಲ. ಕಡೇ ಪಕ್ಷ ಈ ಉರಿಯಲ್ಲಿ ೩೦—೪೦ ಜನರಾದರೂ ಸಿಕ್ಕಿ ಮೃತಪಟ್ಟರೆಂದು ಹೇಳುತ್ತಾರೆ. ಲಿಂಬ್ಡಿ ಎಂಬೀ ಸಂಸ್ಥಾನವು ಬಹಳ ಚಿಕ್ಕ ರಾಜ್ಯ ಅದರ ವಿಸ್ತೀರ್ಣವೆಲ್ಲಾ ೩೪೪ ಚದರ ಮೈಲಿ ಆಗಬಹುದು. ಆ ಸಂಸ್ಥಾನದಲ್ಲೆಲ್ಲಾ ೬೩,೦೦೦ ಪ್ರಜೆಗಳಿದ್ದಾರೆ. ಈ ಪೈಕಿ ೬,೬೦೦ ಮಂದಿ ಮಹಮ್ಮದೀಯರು ಉಳಿದವರೆಲ್ಲಾ ಹಿಂದುಗಳೇ. ಠಾಕೂರ್ ಸಾಹೇಬ್ ಯವರು ೩೫ ಸವಾರ್ ಸೈನಿಕರನ್ನೂ, ೧೬೬ ಸಿಪಾಯಿಗಳನ್ನೂ, ೨೮ ಫಿರಂಗಿಗಳನ್ನೂ ಇಟ್ಟುಕೊಂಡಿದ್ದಾರೆ. ಈಗ ಈ ಬೆಂಕಿಯ ಅಪಾಯದ ದೆಸೆಯಿಂದ ಆ ಸಂಸ್ಥಾನಕ್ಕೆ ಅಪಾರವಾದ ನಷ್ಟ ಸಂಭವಿಸಿರುವುದು ಮಹಾ ದುಃಖಕರವಾಗಿರುತ್ತದೆ.

ಲಾರ್ಡ್ ಕರ್ಜನರವರ ಹೆಸರನ್ನು ಹಿಂದುಸ್ಥಾನದಲ್ಲಿ ಶಾಶ್ವತಪ ಡಿಸುವ ಕಾರ್ಯಕ್ಕೆ ಚಂದಾ ಶ ಖರಿಸುತ್ತಿದ್ದಾರೆ ಈ ಫಂಡಿಗೆ ಆಗಲೇ ೨೨,೦೦೦ ರೂಪಾಯಿ ವಸೂಲಾಗಿರುವುದು.

●●●●

ಪಾಟಿಯಾಲಾ ಸಂಸ್ಥಾನದ ಬಾಲ್ಯವಯಸ್ಸಿನ ಮಹಾರಾಜರವರ ನ್ನು ಒಂದು ನಾಯಿ ಕಡಿಯಿತೆಂತಲೂ ಅವರು ಕಸೌಳಿ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಹೊಂದುತ್ತಿದ್ದಾರೆಂತಲೂ ತಿಳಿಸಿದ್ದೆವಷ್ಟೆ ಈಗ ಅ ವರು ಸಂಪೂರ್ಣವಾಗಿ ವಾಸಿಮಾಡಿಕೊಂಡು ಬಂದು, ಆ ಆಸ್ಪತ್ರೆಯ ಫಂಡಿಗೆ ೧,೦೦೦ ರೂಪಾಯನ್ನು ಕಳುಹಿಸಿಕೊಟ್ಟಿದ್ದಾರೆ.

●●●●

ರಾಜಪುಟಾನಾದಲ್ಲಿ ೬೫,೦೦೦ ಪ್ರಜೆಗಳೂ ಜೋಧಪುರ ಆಧಿಪ ತ್ಯದಲ್ಲಿ ೫,೦೦೦ ಜನರೂ ಕ್ಷಾಮಪೀಡಿತರಾಗಿ ಸರ್ಕಾರದವರ ರಿಲೀಫ್ ಕಾಮಗಾರಿಗಳಲ್ಲಿ ಸೇರಿಕೊಂಡು, ಜೀವನಮಾಡುತ್ತಿದ್ದಾರೆ. ಇದಲ್ಲದೆ ಮಧ್ಯ ಇಂಡಿಯ, ಮಧ್ಯ ಪ್ರಾಂತ್ಯಗಳಿಗೆ ಸೇರಿದ ಬಾಘಲಖಂಡ, ಮಾಲ್ವ, ಭೂಪಾವರ, ಸೌಗೋರ, ದಾಮೋ, ಈ ಪ್ರದೇಶಗಳಲ್ಲಿ ಮಳೆ ಇಲ್ಲದೆ ಪೈರುಪಚ್ಚೆ ಬೆಳೆಯದೆ ಒಣಗಿ, ಜನರು ಬಹಳ ಕಷ್ಟಪಡು ತ್ತಿರುವರು.

●●●●

ಉಣ್ಣೆ, ತೊಣಚಿ ಮೊದಲಾದ ಕ್ರೂರ ಪ್ರಾಣಿಗಳು ದನಗಳ ಮೈಮೇಲೆ ಕುಳಿತುಕೊಂಡು ರಕ್ತವನ್ನು ಹೀರಿ ಬಹಳ ತೊಂದರೆ ಮಾಡುವುವೂ, ಇದರಿಂದ ದನಗಳು ಕೃಶವಾಗಿಹೋಗುವುದೂ ಉಂಟ ಷ್ಟೆ. ದನಗಳನ್ನು ಕಟ್ಟುವ ಸ್ಥಳದಲ್ಲಿ ಸಮುದ್ರದ ನೀರನ್ನಾಗಲಿ ಏಮಾಮುತೊಳೆದ ನೀರನ್ನಾಗಲಿ ಚಲ್ಲಿದರೆ ಈ ಕೆಟ್ಟಪ್ರಾಣಿಗಳ ಹುಟ್ಟು ಅಡಗುವುದು ಆದರೆ ಸಮುದ್ರದ ನೀರಾಗಲಿ, ಏಮಾಸನ್ನು ತೊಳೆದ ನೀರಾಗಲಿ ಸಾಮಾನ್ಯವಾಗಿ ದೊರೆಯುವುದು ಕಷ್ಟ ಆದ್ದರಿಂದ ಎಲ್ಲ ಅಂಗಡಿಗಳಲ್ಲೂ ದೊರೆಯುವ ಕಾವ್‌ಲಿವರ್ ಆಯಿಲ್ ಎಂಬ ಮೀನಿನ ಎಣ್ಣೆಯನ್ನು ನೀರಿಗೆ ಬೆರಸಿ, ದನಗಳನ್ನೂ ಕೊಟ್ಟಿಗೆಯನ್ನೂ ತೊಳೆ ದಲ್ಲಿ ನಿರ್ಮೂಲವಾಗುತ್ತದೆಂದು ಒಬ್ಬ ಅನುಭವಸ್ಥನು ಬರೆಯು ತ್ತಾನೆ.

●●●●

ಪ್ರಿನ್ಸ್ ಆಫ್ ವೇಲ್ಸ್‌ರವರು ಪತ್ನಿ ಪರಿವಾರ ಸಹಿತ ಕಳೆದ ವಾರ ಕಲ್ಕತ್ತಾ ಪಟ್ಟಣದಲ್ಲಿ ಪ್ರಜೆಗಳ ಆತಿಥ್ಯವನ್ನು ಸ್ವೀಕರಿಸಿದರು. ಪೂರ್ವದಿಗ್ದೇಶದಲ್ಲಿ ಈ ನಗರವೇ ಇಂಗ್ಲೀಷರ ಪ್ರಮುಖ ಪಟ್ಟಣವಾ ಗಿರುವುದರಿಂದ ಅಲ್ಲಿ ಯುವರಾಜರವರಿಗೆ ನಡೆದ ವಿಭವೋತ್ಸವಗಳೂ ಆತಿಥ್ಯವೂ ಅದ್ವಿತೀಯಗಳಾಗಿದ್ದುವು ಯುವರಾಜರವರು ಯೂನಿವ ರ್ಸಿಟಿ ಎಂಬ ವಿದ್ಯಾಲಯಕ್ಕೆ ದಯಮಾಡಿ, ವಿದ್ಯಾಸಂಘದವರಿಂದ ಬಹು ಅಮೂಲ್ಯವಾದ ಎಲ್. ಎಲ್. ಡಿ ಎಂಬ ಬಿರುದನ್ನು ಸ್ವೀಕ ರಿಸಿದರು ಇದಲ್ಲದೆ ಲಾರ್ಡ್ ಕರ್ಜನರವರು ಲೇಟ್ ಚಕ್ರವರ್ತಿನಿ ಯವರ ಜ್ಞಾಪಕಾರ್ಥವಾಗಿ ಅಲ್ಲಿ ಕಟ್ಟಬೇಕೆಂದು ಗೊತ್ತು ಮಾಡಿ, ಲಕ್ಷಾಂತರ ರೂಪಾಯಿ ಕೂಡಿಸಿದಂಥಾ ವಿಕ್ಟೋರಿಯಾ ಮೆಮೋರಿ ಯಲ್ ಹಾಲ್ ಎಂಬ ಬಂಗಲೆಗೆ ಯುವರಾಜರವರು ಅಸ್ತಿಭಾರವನ್ನು ಹಾಕಿ, ಅಲ್ಲಿಂದ ಪತ್ನಿ ಪರಿವಾರ ಸಹಿತ ಬರ್ಮಾ ಹತ್ತಿ, ಬರ್ಮಾ ಆಧಿಪ ತ್ಯಕ್ಕೆ ದಯಮಾಡಿದರುತ್ತಾರೆ.

●●●●

ಕಳೆದ ೧೯೦೪ ನೇ ಡಿಸೆಂಬರಿನಲ್ಲಿ ಸೈದು ಎಂಬುವನು ಕ್ಯಾಂಬೇ ಕೊಲ್ಲಿಯ ಬಳಿ ಇರುವ ಧೋಲ್ಕಾ ಪಟ್ಟಣದ ಅಬುಕಾಲೆ ಎಂಬ ದರ್ಗಾವಿಗೆ ಕನ್ನ ಹಾಕಿ, ೧೦ ಸಾವಿರ ರೂಪಾಯಿನ ಬಿಂದಿಗೆಯನ್ನು ಎತ್ತಿ ಹಾಕಿ, ಎದುರಿಗೆ ಸಿಕ್ಕಿದ ಐದು ಜನರನ್ನು ಕೊಂದು ತಲೆತಪ್ಪಿಸಿ ಕೊಂಡಿದ್ದನು ಇವನನ್ನೂ ಇವನ ಜೊತೆಗಾರರನ್ನೂ ಸರ್ಕಾರದ ವರು ಬಹಳ ಸಾಹಸಮಾಡಿ ಹಿಡಿದು, ದಸ್ತಗಿರಿ ಮಾಡಿ, ಎಲ್ಲರನ್ನೂ ಗಲ್ಲಿಗೆ ಹಾಕಬೇಕೆಂದು ಗೊತ್ತು ಮಾಡಿದರು. ಅದರ ಮೇಲೆ ಅವ ರೆಲ್ಲ ಅಪೀಲ್ ಮಾಡಿಕೊಂಡಿದ್ದರು. ಇವರನ್ನು ಅಹಮ್ಮದಾಬಾದಿನ ಜೈಲ್ ಖಾನೆಯಲ್ಲಿ ಹಾಕಿದ್ದರು ಸೈದುವಿನ ಹೆಂಡತಿಯು ಅವನಿಗೆ ಮನೆಯಿಂದಲೇ ಅನ್ನ ತೆಗೆದುಕೊಂಡು ಹೋಗಿ ಹಾಕುತ್ತಿದ್ದಳು. ಅವನು ಅವಳ ಮೂಲಕ ಒಂದು ಅರದನ್ನೂ ಎರಡು ದೊಡ್ಡ ಚೂರಿ ಗಳನ್ನೂ ತರಿಸಿಕೊಂಡು, ತನ್ನ ಸಂಕೋಲೆಗಳನ್ನು ಅರದಿಂದ ಉಜ್ಜಿ ಮುರಿದು ಬಿಟ್ಟು, ಜೈಲಿನಲ್ಲಿದ್ದ ತನ್ನ ಜೊತೆಗಾರರನ್ನು ಬಿಡಿಸಿ ಕೊಂಡು, ಜೈಲಿನ ಕಾವಲುಗಾರರನ್ನೂ ಪೊಲೀಸ್ ಸೂಪರಿಂಟೆಂಡೆಂ ಟರನ್ನೂ, ಇಬ್ಬರು ಜಮಾದಾರರನ್ನೂ ಒಬ್ಬ ಸವಾರನನ್ನೂ ಕೊಂದು ಹಾಕಿ, ಬಹಳ ಗಲಭೆಯನ್ನುಂಟುಮಾಡಿದ್ದಾನೆ ಇವನನ್ನೂ ಅವನ ಜೊತೆಗಾರರನ್ನೂ ಹಿಡಿಯುವುದು ಕಷ್ಟವಾದ್ದರಿಂದ ಅದಕ್ಕಾಗಿ ಅಹ ಮ್ಮದಾಬಾದ್, ಕೈರಾ, ಕಲ್ಯಾಣ, ಈ ಪ್ರಾಂತ್ಯಗಳಿಂದ ಪೊಲೀಸಿನ ವರನ್ನೂ ಸವಾರರನ್ನೂ ತಂತೀ ವರ್ತಮಾನ ಕೊಟ್ಟು ಕರೆತರಿಸಿ ಕೊಂಡಿದ್ದಾರೆ

ಬಾತ್ಮೀದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ನಿಗಾ ಕೊಡಲಾರೆವು ಆದಕಾರಣ ಬಾತ್ಮೀದಾರರು ನಮ್ಮ ತಿಳುವಳಿಕೆಗೋ ಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕ ದ್ದು ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆ ಯಕೂಡದು; ಇಂಥವುಗಳಿಗೆ ನಾವು ನಿಗಾ ಕೊಡಲಾರೆವು.

ಪ್ರಕಟಿಸಲಾರೆವೆಂದು ಹೇಳಿ ತಿರಸ್ಕರಿಸಿದ ಬಾತ್ಮಿಗಳನ್ನು ನಾವು ಬಾತ್ಮೀದಾರರಿಗೆ ವಾಪಸು ಕಳುಹಿಸಲಾರೆವು

ಬಾತ್ಮೀದಾರರು ಪರರ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾ ಗುವುದಿಲ್ಲವೆಂಬಂಶವನ್ನು ನಿಕಟವಾಗಿ ತಿಳಿಯತಕ್ಕದ್ದು.—ಎಡಿ

ವೆಂಕಟರಮಣಾಚಾರಿ, ಬೈರಕೂರು, ಮುಳಬಾಗಲು ತಾಲ್ಲೂಕು - ನೀವು ಬರೆಯುವ ದಸ್ತು ಛಾಪಾ ಕೊಟ್ಟು ಪ್ರಸಿದ್ಧಪಡಿಸಲೀ(ಕು).

ಬಿ ಎಂ ಚೆಂಗಪ್ಪ, ವೆಂ. ರಾವ್, ಸಿ ಪಿ ಅಂತೋನ್ಯ, ಶಿವಮೊಗ್ಗ: —ಈ ಬಾತ್ಮಿಗಳನ್ನು ಪ್ರಕಟಿಸಲಾರೆವು — ಎಡಿಟರ್]

ಕರೆಸ್‌ಪಾಂಡೆನ್ಸ್.

ಹಳ್ಳಿಜನರ ವಿದ್ಯಾಭ್ಯೋತ್ಸಾಹ.

ಅಯ್ಯಾ,

ಶಿವಪುರವೆಂಬ ಊರು ದೊಡ್ಡದಾಗಿದ್ದಾಗ್ಯೂ ಸರ್ಕಾರದವರು ವಿದ್ಯಾಶಾಲೆಯನ್ನೇ ಇಡಲಿಲ್ಲ ಈ ವಿಷಯವನ್ನು ಇನ್ಸ್‌ಪೆಕ್ಟರಿಗೆ ಅರಿಕೆ ಮಾಡಿದರೂ ಗಮನಿಸಲಿಲ್ಲ. ಹೀಗೆ ಸರ್ಕಾರದವರಿಂದ ನಿರಾ ಕರಿಸಿದಾಗ್ಯೂ ಇಲ್ಲಿನ ಜನರಲ್ಲಿ ಸೊಗಯಾದುತ್ತಲೇ ಇತ್ತು ಕಳೆದ ೩ ನೆ ತಾರೀಖಿನ ದಿನ ಈ ಹೊಗೆಯು ಕೊನೆಗಂಡಿತು ಮೇಲ್ಕಂಡ ದಿನ ಇಲ್ಲಿನ ದೊಡ್ಡ ಮನುಷ್ಯರೂ, ಮಾತುಬರಸ್ತರೂ ಸಭೆ ಸೇರಿ ದರು. ಸಭೆಯವರು ಚನ್ನಪ್ಪಯ್ಯನವರನ್ನು ಅಗ್ರಾಸನರಾಗಿ ಮಾಡಿ, ಸ್ವಲ್ಪ ಹೊತ್ತು ವಾಕ್ಯಾರ್ಥವನ್ನೂ ನಡಿಸಿ, ಮೂರನೆ ತರಗತಿ ವರಿಗೂ ಸ್ಕೂಲಿಟ್ಟು ನಡಿಸಬೇಕೆಂತ ತೀರ್ಮಾನಿಸಿ ಚದರಿದರು ಮತ್ತು ಮಾರನೇ ದಿನವೇ ಸ್ಕೂಲನ್ನು ಪ್ರಾರಂಭಿಸಿದರು. ಹಳ್ಳಿಯವರು ಇಷ್ಟು ಮಟ್ಟಿಗೆ ಸರ್ಕಾರದವರ ಸಹಾಯವಿಲ್ಲದೆ ಪ್ರಯತ್ನಪಟ್ಟು ವಿದ್ಯಾಲಯವನ್ನು ಇಟ್ಟು ನಡಿಸುತ್ತಾ ಇರುವದರಿಂದ ನಾವು ಬಹಳ ಸಂತೋಷ ಪಡುತ್ತೇವೆ ಸರ್ಕಾರದವರೂ ಈ ಸ್ಕೂಲಿನ ವಿಷಯ ದಲ್ಲಿ ಸಹಾಯ ಮಾಡುವವರಾಗಿಯೂ ನಂಬುತ್ತೇವೆ

ಯಸ್ ಬಿ. ನಾರಾಯಣಮೂರ್ತಿರಾವ್.

ಹೋಬಳಿ ಸ್ಕೂಲ್ ಮಾಸ್ಟರುಗಳ ಸಂಬಳ

ಅಯ್ಯಾ,

ಈಗ ೮—೧೦ ವರುಷಗಳ ಲಾಗಾಯ್ತು ಹೋಬಳಿ ಸ್ಕೂಲ್ ಮಾಸ್ಟರುಗಳಿಗೆ ಸರಕಾರದವರು ೭ ರೂಪಾಯಿ ಸಾಮಾನ್ಯ ತಲ ಬಿದ್ದವರಿಗೆ ೧೦ ರೂಪಾಯಿನ ವರೆಗೂ ಬಡ್ತಿ ಮಾಡುವದಾಗಿ ಪ್ರೋ ತ್ಸಾಹಿಸಿದ್ದರಿಂದ ಹೋಬಳಿ ಮಾಸ್ಟರುಗಳು ವಿಶೇಷವಾಗಿ ಆಶಾಬದ್ಧ ರಾಗಿ ಬಹಳ ಸಂತೋಷಪಟ್ಟು ಆ ಲಾಗಾಯ್ತು ಪ್ರಮೋಷನ್ ದೊರ ಕೀತಾಗಿ ನಂಬಿ ಮುತುವರ್ಜಿಯಿಂದ ಸರಕಾರಿ ಕೆಲಸದಲ್ಲಿ ಆಸಕ್ತ ರಾಗಿ ಹೋಬಳಿ ಸ್ಕೂಲಿನಿಂದ ಲೋವರ್ ಸೆಕೆಂಡರಿ ತರಗತಿ ವರಿಗೆ ಬಾಲಕರನ್ನು ಪಾಠಹೇಳಿ ತೇರ್ಗಡೆ ಹೊಂದಿಸುತ್ತಾ ಬಂದರು ಈ ವರುಷ ಸರಕಾರದವರು ಟೀಚರ್ಸ್ ಎಗ್ಸಾಮಿನೇಷನಲ್ಲಿ ತೇರ್ಗಡೆ ಯಾಗಿ ಟೀಚರ್ಸ್ ಸರಟಿಫಿಕೇಟ್ ಹೊಂದಿದ್ದವರಿಗೆ ಅಂಥವರಿಗೆ ೧೦ ರೂ ಪಾಯಿ ಕೊಡುವದಾಗಿಯೂ ಹಾಗಿಲ್ಲದಿದ್ದರೆ ಬಡ್ತಿ ದೊರೆಯುವದಿಲ್ಲ ವಾಗಿಯೂ ಗೆಜೆಟಿನಲ್ಲಿ ಪಬ್ಲಿಷ್ ಮಾಡಿರುವದನ್ನು ನೋಡಿ ಬಡ್ತಿ ವಿಷಯದಲ್ಲಿ ನಿರಾಶರಾಗಿ ತಮ್ಮ ಕೆಲಸದಲ್ಲಿ ಸ್ವಲ್ಪ ಅಶ್ರದ್ಧೆಯಾಗಿ ರುವರಂತೆ ಈಗಲೂ ಸರಕಾರದವರು ತಮ್ಮ ವಾಗ್ದಾನಪ್ರಕಾರ ಹೋ ಬಳಿ ಮಾಸ್ಟರಿಗೆಲ್ಲಾ ಬಡ್ತಿ ಕೊಟ್ಟು ಅವರನ್ನು ಪ್ರೋತ್ಸಾಹಿಸಬೇಕಾಗಿ ನನ್ನ ಪ್ರಾರ್ಥನೆ

ಚಂದಾದಾರ.

ಹಾವಿನ ವಿಷಕ್ಕೆ ಔಷಧ

ಅಯ್ಯಾ,

ಮಲೆನಾಡು ಪ್ರದೇಶಗಳಲ್ಲಿ ಹೆಚ್ಚಾಗಿ ವಿಷಜಂತುಗಳ ಬಾಧೆಯಿಂದ ಅನೇಕ ಮನುಷ್ಯರೂ ಗ್ರಾಮ್ಯಪಶುಗಳೂ ಪ್ರಾಣಕಳೆದುಕೊಳ್ಳುವದು ವಿಶೇಷವಾಗಿದೆ. ಅಂಥ ಆಕಸ್ಮಾತ್ ಮರಣಕ್ಕೆ ತಡೆಯನ್ನುಂಟುಮಾ ಡುವಂಥ ಯಾವ ಔಷಧವೂ ಸುಲಭದಲ್ಲಿ ದೊರೆಯುವದಿಲ್ಲ. ಇಂಗ್ಲಿ ಷ್ ಔಷಧವಾದರೋ ಹೆಚ್ಚಿನ ಚಿಕಿತ್ಸೆಯು ಅಗತ್ಯ ಬೇಕಾಗುವದು ಹಾಗೂ ಕ್ಷಣಮಾತ್ರದಲ್ಲಿ ಎಂಥ ಮೂರ್ಛೆ ಪ್ರಾಪ್ತವಾದಾಗ್ಯೂ ಪರಿ ಹರಿಸುವಂಥಾ ನಿರಾಶೆಯಾದ ಕೆಲವು ಜನರನ್ನು ಗುಣಮಾಡಿದ ಔಷ ದವು ಈಗತಾನೇ ಬೈಂದೂರಬಾಡದ ಶೇಷಭಟ್ಟ ಕೃಷ್ಣಭಟ್ಟ ಎಂಬ ವರು ತಯಾರು ಮಾಡಿರುತ್ತಾರೆ ಕೇವಲ ವನಸ್ಪತಿಯಿಂದಲೇ ತಯಾ ರಾದ ಇಂಥ ದಿವ್ಯ ಅಮೃತದಂಥಾ ಔಷಧವು ಇನ್ನೆಲ್ಲಿಯೂ ಇಲ್ಲ ವೆಂದು ಅನೇಕರು ಹೇಳಿಕೊಳ್ಳುವರು. ವಿಷವುಳ್ಳ ಹಾವುಗಳು ಸರ್ಪ ಮುಂತಾಗಿ ಎಷ್ಟು ಬಲಾತ್ಕಾರದಿಂದ ಕಚ್ಚಿದರೂ ಆ ಔಷಧವು ಪರಿ ಹರಿಸಬಲ್ಲದು ಬಡವರಿಗೆ ಕ್ರಯವಿಲ್ಲದೇ ಕೆಲವು ಔಷಧದ ಗುಳಿಗೆ ಗಳನ್ನು ಪೋಸ್ಟೇಜಿಗೆ ಒಂದಾಣೆ ಸ್ಟಾಂಪು ಕಳುಹಿಸಿದ ಮಾತ್ರದಿಂದ ಸದರೀ ಶೇಷಭಟ್ಟರು ಕಳುಹಿಸಿಕೊಡುತ್ತಾರೆ ಬೇಕಾದವರು ತರಿಸಿ ಕೊಂಡು ಇಟ್ಟುಕೊಳ್ಳಲಿ

ಬೆಜೂರ ಬೈಂದೂರ. ಕ್ಷೇಮಚಿಂತಕ.

ಮತವೂ ದಾಯಭಾಗವೂ

ಅಯ್ಯಾ,

ಮೈಸೂರು ದೇಶದಲ್ಲಿ ಕ್ರಿಸ್ತರಾದವರಿಗೆ ದಾಯಭಾಗದ ಹಕ್ಕು ಸಿಕ್ಕುವ ವಿಚಾರದಲ್ಲಿ ಇಂಡಿಯಾ ಗೌರ್ನಮೆಂಟಿನಲ್ಲಿ ಚರ್ಚೆ ನಡದು, ಮೈಸೂರು ಗೌರ್ನಮೆಂಟಿನವರನ್ನು ಈ ವಿಚಾರದಲ್ಲಿ ಪ್ರತಿಬಂಧಕ ವೇನಿದೆ ಎಂದು ಕೇಳಿದ ವಿಷಯದಲ್ಲಿ ಮೈಸೂರು ದೇಶದ ಪ್ರಜೆಗ ಳಲ್ಲಿ ಕೆಲವು ಅನಾಗರೀಕರು ಇಲ್ಲದ ದೂಷ್ಯವನ್ನು ಉದ್ಘೋಷಿಸಿ ನಿರಾಧಾರಗಳಾದ ಕೆಲವು ವಿಜ್ಞಾಪನಾಪತ್ರಿಕೆಗಳನ್ನು ಗೌರ್ನಮೆಂಟಿಗೆ ಬರದಿರುವದು ನೋಡಿ ಬಹಳ ವಿಷಾದಪಡಬೇಕಾಗಿರುತ್ತೆ ಇಂಥಾ ನವನಾಗರೀಕಕಾಲದಲ್ಲಿಯೂ ಕೂಡಾ ಇಂಥಾ ಅಜ್ಞಾನರುಂಟೇ ಎಂದು ಊಹಿಸಬೇಕಾಗುತ್ತೆ

(೧) ಮತವೆಂದರೇನು? ಈಗ ಈ ಭರತಖಂಡದಲ್ಲಿ ಯಾ ವ್ಯಾವ ಮತಗಳಿವೆ? ಹಿಂದೂ ಮತ, ಮಹಮ್ಮದೀಯಮತ, ಕ್ರೈಸ್ತ ಮತ, ಬೌದ್ಧಮತ, ಸಿಕ್ಖಮತ, ಇತ್ಯಾದಿ ಹಿಂದೂ ಮತದಲ್ಲಿ ಸ್ಮಾರ್ತ, ವೈಷ್ಣವ ಶಾಕ್ತೇಯ, ಕಾಪಾಲಿ, ಗಾಣಾಪತ್ಯ; ಸೌರ, ಮಹ ಮದ್ ಮತದಲ್ಲಿ ಷೀಕ, ಸುನ್ನಿ, ಇತ್ಯಾದಿ; ಕ್ರೈಸ್ತಮತದಲ್ಲಿ ಪ್ರಾಟ ಸ್ಟೆಂಟ್, ರೋಮನ್ ಕ್ಯಾಥೋಲಿಕ್, ಒಳಭೇದಗಳು ಪ್ರತಿ ಒಂದು ಮತದಲ್ಲೂ ಇವೆ ಇವುಗಳಲ್ಲಿ ಯಾರ್ಯಾರಿಗೆ ಯಾವ್ಯಾವ ಮತದಲ್ಲಿ ಅಭಿರುಚಿ ಬೀಳುತ್ತೋ ಅವರಂತೆ ನಡೆಯುತ್ತಾರೆ ಹಿಂದು ಸ್ಮಾರ್ತನಾದವನು ವೈಷ್ಣವ ಇಲ್ಲವೆ ಕಾಪಾಲಿ ಮತವನ್ನು ಅವಲಂಬಿಸು ತ್ತಾನೆ. ಇಲ್ಲವೆ ಶಾಕ್ತೇಯ ಮತವನ್ನು ಅವಲಂಬಿಸುತ್ತಾನೆ. ಆಗ ಅವನು ಮತಭ್ರಷ್ಟನಾದಂತೆ ಆಗಲಿಲ್ಲವೇ? ಶಾಕ್ತೇಯ ಕಾಪಾಲಿ ಗಳು ಮದ್ಯಮಾಂಸಗಳಿಲ್ಲದೆ ಅವರು ದೇವತಾರಾಧನೆ ಮಾಡುವದೇ ಇಲ್ಲ ವೆಂದು ಸಮಸ್ತ ಹಿಂದುಗಳಿಗೂ ಗೊತ್ತೇ ಇರಬಹುದು ಆವಾಗ ರು.ಒಂದೇ ನೆರೆಯಲ್ಲಿ ಬಾಡಿಂತನ್ನು ಸದು, ಹಿಂದಕೆ ಹಿಡಿಯುವದು ಅಲ್ಲವೇ? ಅಂಥಾವರಿಗೆ ಮಾತ್ರ ದಾಯಭಾಗ ಉಂಟಾಗಬಹುದು ಕ್ರೈಸ್ತನಾದವನಿಗೆ ಮಾತ್ರ ಯಾಕೆ ದಾಯಭಾಗವಿಲ್ಲವೆಂದು ಕೇಳು ತ್ತಾರೆ? ಒಬ್ಬಾನೊಬ್ಬ ಬ್ರಾಹ್ಮಣನು ಕ್ರೈಸ್ತನಾದರೆ, ಇವನು ಮಾಂಸಾಹಾರ ಮಾಡಬೇಕು ಮದ್ಯಪಾನ ಮಾಡಬೇಕೆಂದು ಯಾ ರೂ ನಿರ್ಬಂಧ ಪಡಿಸುವದಿಲ್ಲ ಬ್ರೀಯಸುಕ್ರಿಸ್ತನೂ ಸಹ ಹಾಗೆ ಮಾಡಿರೆಂತ ಯಾವಾಗಲೂ ಹೇಳಿ ಇರುವದಿಲ್ಲ ಅವರವರ ದೇಶದ ರೀತಿ, ಜಾತಿಪ್ರಕಾರ ನಡೆಯಲು, ಯಾವದೊಂದು ತಡೆಯು ಇರುವದಿಲ್ಲ ಶಾಕ್ತೇಯರಿಗೆ ಹ್ಯಾಗೆ ಒಂದು ಮದ್ಯ ಸಹ ಅಗತ್ಯವೊ ಬೇಕೋ ಹಾಗೇ ಕ್ರೈಸ್ತರಿಗೆ ಎಂದೆಂದಿಗೂ ಅಗತ್ಯವಿಲ್ಲ ಎಂಬುವ ದಸಜನಸತವಾಗಿರುತ್ತೆ

(೨) ಜಾತಿ ಎಂದರೇನು 'ಸಮವನ್ನು ಬಿಟ್ಟರೆ ಜಾತಿಭ್ರಷ್ಟನು ಹೇಳುತ್ತಾರೆ. ಇದು ವಿಹಿತವೇ? ಆಲೋಚಿಸಿ. ಮತಕ್ಕೂ ಜಾತಿಗೂ ಅರ್ಥಾರ್ಥ ಸಂಬಂಧವಿರುವದಿಲ್ಲ. ಒಬ್ಬ ಹಿಂದುವು ಕ್ರೈಸ್ತನಾದ ಕೂಡಲೆ ಅವನನ್ನು ತಮ್ಮ ಮನೆ ಸರಹದ್ದಿಗೆ ಬರದಂತೆ ನಿರ್ಬಂಧ ಪಡಿಸುತ್ತಾರೆ. ಇದು ತಪ್ಪಲ್ಲವೇ? ಇದನ್ನು ಚನ್ನಾಗಿ ಪರಿಶೋಧಿಸ ಬೇಕು ಒಬ್ಬಾನೊಬ್ಬ ತಂದೆಗೆ ಆರು ಜನರು ಮಕ್ಕಳಿರುತ್ತಾರೆ ಅವರಲ್ಲಿ ಎಲ್ಲರ ಅಭಿಪ್ರಾಯ (ಮತ) ವೂ ಒಂದೇ ರೀತಿಯಾಗಿರುವ ದಿಲ್ಲ. ಒಬ್ಬನು ಮೃತನಾಗುತ್ತಾನೆ ಹೀಗೆ ಆರು ಜನರು ಆರು ಮತವ ನ್ನು ಅಂಗೀಕರಿಸುತ್ತಾರೆ ಹಿರಿಯವನು ಕ್ರೈಸ್ತಮತವನ್ನು ಅವ ಲಂಬಿಸುತ್ತಾರೆ ಆಗ, ಈ ಆರು ಜನರೂ ದಾಯಭಾಗಕ್ಕೆ ಅರ್ಹರು ಹಿರಿಯವನು ಮಾತ್ರ ಅನರ್ಹನೆಂದು ಹ್ಯಾಗೆ ಹೇಳಬಹುದು ಯೋಚಿಸಿ ನೋಡಿ, ಇವರೆಲ್ಲರೂ ಒಂದೇ ಮನೆಯಲ್ಲಿ ಬೇರೆ ಬೇರೆ ಇರುತ್ತಾರೆ ಅವರೆಲ್ಲರೂ ತಮ್ಮ ತಮ್ಮ ರೀತಿ ಪ್ರಕಾರ ಆರಾಧನೆ ಮಾಡುತ್ತಾರೆ. ಅವರಲ್ಲಿ ಕೆಲವರು ಹಿಂದು ತನ್ನ ಮದ್ಯ ಮದ್ಯ ಯನ್ನು ಈ ರೀತಿ ಮಾಡುತ್ತಾರೆ ಆದ್ದರಿಂದ ದಾಯಭಾಗಕ್ಕೆ ಅನರ್ಹರೆಂದು ಹೇಳುವದು ತಪ್ಪಲ್ಲವೇ? ಅಲ್ಲದೆ ಈ ಲೋಕದಲ್ಲಿ ಸ್ವಮತಕ್ಕೆ ಸರಿಯಾದ ಮತವೂ ಕ್ರಿಸ್ತನಿಗೆ ಸರಿಯಾದ ಗುರು ನಭೂತೋನಭವಿಷ್ಯತಿ; ಅನೇಕರು ಇವನ್ನು ತಿಳಿಯದೆ ಕ್ರಿಸ್ತನ ವನ್ನು ದೂರುತ್ತಾರೆ. ದೋಷವನ್ನು ಹುಡುಕುವದಕ್ಕೆ ಪ್ರಾರಂಭಿಸಿದರೆ ಎಲ್ಲಾ ಮತಗಳಲ್ಲೂ ದೋಷವಿರುತ್ತದೆ ಇದನ್ನು ತಿಳಿಯದೆ ಅವರ ಮನಸ್ಸಿಗೆ ಬಂದಂತೆ ಕೂಗುತ್ತಾರೆ, ಇದನ್ನು ಸರ್ಕಾರದವರು ಅಂಗೀ ಕರಿಸದೆ ಎಲ್ಲರಂತೆ ಕ್ರೈಸ್ತರಿಗೂ ದಾಯಭಾಗ ಕೊಡಿಸುವದು ನ್ಯಾಯ ವಾಗಿದೆ ಈಗ ಅನೇಕ ಜನ ಹಿಂದುಗಳು ಮಹಮ್ಮದ್ ಮತ ಕ್ರೈಸ್ತಮತಕ್ಕೂ ಸೇರಿ, ಇತರ ವಿಧವಾದ ಜೀವನವಿಲ್ಲದೆ ಜಗತ್ತಿನ ಜರ್ತದ ಜಕ್ಕೂ ಇಲ್ಲದೆ ತೊಂದರೆ ಪಡುತ್ತಿದ್ದಾರೆ. ದೇವಾಭಿಮಾನ ಮೇಲೆ ದೇಶವನ್ನು ಬಿಡದೆ ಇದ್ದಾರೆ ಅಂಥವರಿಗೆ ಅವರವರ ಪಿತ್ರಾರ್ಜಿ ತದಲ್ಲೇ ಸರಿಯಾದ ಹಕ್ಕು ಉಂಟಾಗುವ ಹಾಗೆ ಧರ್ಮಪ್ರಭುಗಳಾದ ಮಹಾರಾಜಾ ಸರ್ಕಾರದವರೂ ಮಾಡ್ಯುವದು ಕಾಣುತ್ತದೆ

ದೇವಿಯ ಕ್ರೈಸ್ತಾಭಿಮಾನಿ.

ಸ್ಥಳೀಕ ವರ್ತಮಾನಗಳು.

ಚಾಮರಾಜನಗರ.—ಈ ಸಲ ಈ ಊರಿನ ಸ್ಕೂಲಿನಿಂದ ಲೋವರ್ ಸೆಕೆಂಡರಿ ಪರೀಕ್ಷೆಗೆ ಹೋಗಿದ್ದವರಲ್ಲಿ ೭ ಹುಡುಗರು ಪಾ ಸಾಗಿರುವುದನ್ನು ತಿಳಿಸಲು ತುಂಬಾ ಸಂತೋಷಪಡುತ್ತೇನೆ ಸ್ಕೂಲು ಕಳೆದ ೩—೫ ವರುಷಗಳಿಂದಲೂ ವರ್ಷವರ್ಷ ಅಭಿವೃದ್ಧಿ ಸ್ಥಿತಿಗೆ ಬರುತ್ತಿರುವುದು —ಈ ತಿಂಗಳ ೨ ನೇ ತಾ ಮಂಗಳ ವಾರ ಹಳ್ಳಿ ಸಂತೆಯಲ್ಲಿ "ಯಾವ ಪೋಲೀಸಿನವನಾಗಲಿ, ಯಾವ ರೆವಿನ್ಯೂ ಜವಾನನಾಗಲಿ, ಯಾವ ಶಿಕ್ರನೇ ಆಗಲಿ ಪಸಿಗೆ ಎತ್ತ ಕೂ ಡದೆಂತಲೂ ಹಾಗೆ ಎತ್ತಿದವರಿಗೂ ಕೊಟ್ಟವರಿಗೂ ಶಿಕ್ಷೆಯಾಗುತ್ತದೆಂತ ಲೂ" ಸಾರಿಸಿದರು. ಇದರಿಂದ ಹಿಂದೆ ಎತ್ತುತ್ತಿದ್ದರೆಂಬ ಅಂಶ ವಾಚಕರಿಗೆ ಗೊತ್ತಾಗಿ ನೆನಪಿನಲ್ಲಿಟ್ಟರಬೇಕೆಂದು ಪ್ರಾರ್ಥನೆ.

ತರೀಕೆರೆ.—ಇಲ್ಲಿ ಪ್ಲೇಗ್‌ಗಲಾಟೆ ಮೊದಲಿನಷ್ಟು ಜೋರಾಗಿ ಇಲ್ಲ ಆದಾಗ್ಯೂ ಅಲ್ಲಲ್ಲಿ ಸ್ವಲ್ಪ ಇದ್ದೇ ಇದೆ —ಈ ಸಾರಿ ಮಳೆ ಕಾಲ ಸರಿಯಾಗಿ ಬಾರದಿರುವುದರಿಂದ ಬತ್ತದ ಫಸಲು ಚನ್ನಾಗಿಲ್ಲ. ಧಾನ್ಯ ಬೆಲೆ ಜಾಸ್ತಿಯಾಗಿದೆ. ಅಕ್ಕಿ ರೂಪಾಯಿಗೆ ೮—೯ ಸೇರು, ರಾಗಿ ೧೬ ಸೇರು ಮಾರುತ್ತಾರೆ —ಇದೇ ತಿಂಗಳು ೧೫ನೇ ತಾರೀಖಿನಿಂದ ಶಿವಮೊಗ್ಗ ಬೀರೂರು ರೈಲ್‌ಗಾಡಿಯನ್ನು ರೈಲ್ವೆ ಕಂಪನಿಯವರು ದಿನಕ್ಕೆ ಎರಡು ವರ್ತಿ ಬಿಡುವಂತೆ ಏರ್ಪಾಡು ಮಾಡಿರುತ್ತಾರೆ. ಇದರಿಂದ ಜನರ ಪ್ರಯಾಣಕ್ಕೆ ತುಂಬಾ ಅನುಕೂಲವಾಗಿದೆ —ಇಲ್ಲಿ ತಿಬಟೂರು ಸಂಗೀತ ನಾಟಕ ಕಂಪನಿಯವರು ಈಗ ಒಂದು ವಾರದಿಂದ ಏಳೆ ಮಾರ್ಕೆಟ್ಟಿನಲ್ಲಿ ಹಾಕಿರುವ ತಮ್ಮ ಡೇರಾದಲ್ಲಿ ನಾಟಕಗಳನ್ನು ಆಡಿದರು ಇಲ್ಲಿನ ಎ ವಿ. ಸ್ಕೂಲಿನ ಈ ಸಾರಿ ಲೋವರ್ ಸೆಕೆಂಡರಿ ಪರೀಕ್ಷೆಯ ಲ್ಲಿ ಇಂಗ್ಲೀಷಿನಲ್ಲಿ ೩ ಜನ ವಿದ್ಯಾರ್ಥಿಗಳು, ಕನ್ನಡದಲ್ಲಿ ೭ ಜನ ವಿದ್ಯಾರ್ಥಿಗಳು ಪ್ಯಾಸಾಗಿದ್ದಾರೆ

ಕ್ರಿಂಬ್‌ರಾಕ್ಸ್.—ಈ ಊರಿನ ಸಂತೆಯಲ್ಲಿ ವ್ಯಾಪಾರಿಗಳು ಜನರಿಗೆ ವಿಸ್ತಾರವಾಗಿ ದಾರಿಯನ್ನು ಬಿಡದೆ, ಅಂಗಡಿಗಳನ್ನು ಹಾಕು ವದರಿಂದ ವ್ಯಾಪಾರಕ್ಕೆ ಬರತಕ್ಕ ಜನರಿಗೆ ಬಹಳ ಅಡ್ಡಿಯಾಗಿರುತ್ತದೆ ಗಂಡಸರೂ ಹೆಂಗಸರೂ ಒಬ್ಬರಮೇಲೊಬ್ಬರು ಬೀಳುತ್ತಾರೆ. ಇದ ರಿಂದ ಮಾನಸ್ಥರಾದ ಹೆಂಗಸರಿಗೂ ಗಂಡಸರಿಗೂ ಬಹಳ ಅವಮಾನ

ಅಷ್ಟೇ ಅಲ್ಲದೆ ಕಳ್ಳರು ಜೇಬುಗಳಿಗೆ ಕೈ ಹಾಕಿ ಕದ್ದುಕೊಳ್ಳು ವುದಕ್ಕೆ ತುಂಬಾ ಅನುಕೂಲವಾಗಿರುತ್ತದೆ.—ಈ ವಿಷಯವನ್ನು ನಮ್ಮ ಸರಕಾರದವರೂ ಪೋಲೀಸ್ ಜವಾಬ್ದಾರರಾದರೂ ಗಮನಕ್ಕೆ ತಂದು ಪರಿಹರಿಸಿದರೆ ಜನರಿಗೆ ಬಹಳ ಸಹ್ಯವಾಗುತ್ತದೆ.—ಈ ಸಂದರ್ಭದ ಪೋಲೀಸರು ವಿಚಾರಿಸಿಟ್ಟು, ಇರುವ ಅನನುಕೂಲಗಳನ್ನು ಹೋಗಲಾಡಿಸಬೇಕು. ಕಳೆದ ೧೧ನೇ ತಾ. ಸಂತೆಯಲ್ಲಿ ಒಬ್ಬನು ಕೈಯಲ್ಲಿ ದುಡ್ಡು ಗಂಟುಹಾಕಿ ಜೇಬಿನಲ್ಲಿ ಇಟ್ಟುಕೊಂಡು ಜನ ಸಂದಣಿಯಲ್ಲಿ ಹೋಗುವಾಗ ಅವನಿಗೆ ತಿಳಿಯದ ಹಾಗೆ ಕಳ್ಳರು ಬಿಚ್ಚಿಕೊಂಡು ಹೋದರು. ಅವನು ನಂಬಿಕೊಂಡು, ಅವನು ದಾಗಿಯು ಆಳಿಯಿಸಿ ಜೇಬಿಗೆ ಕೈಹಾಕುವಾಗ ರೂಪಾಯಿ ಇರಲಿಲ್ಲ. ಅವನ ನನ್ನು ನೋಡಲಿಕ್ಕೆ ಆಗಲಿಲ್ಲ. ಸಂತೆಯಲ್ಲಿ ಯಾವ ಪೋಲೀಸಿನ ವರೂ ಇರಲಿಲ್ಲ.—ವ್ಯಾಪಾರಿಗಳು ಅಪ್ಪಿ ಸೇರುಗಳಲ್ಲಿ ದವಸವನ್ನು ಅಳೆದುಕೊಟ್ಟು ಜನರಿಗೆ ಮೋಸಮಾಡುತ್ತಾರೆ. ಮತ್ತು ಮಾಸಿದ ದೆಗಿ ದಾಗಿರುವುದನ್ನು ಒಳ್ಳೇ ದಾಗಿಗೆ ಮಿಶ್ರಮಾಡಿ ಮಾರುತ್ತಾರೆ. ಇದ ರಿಂದ ಜನರಿಗೆ ಬಹಳ ನಷ್ಟವಾಗುತ್ತದೆ. ಈ ವಿಷಯಕ್ಕೆ ಅಮಲ್ದಾರ ರವರು ಚೆನ್ನಾಗಿ ಪರೀಕ್ಷೆಮಾಡಿದರೆ ಪ್ರಯೋಜನವಾಗುತ್ತದೆ.

ದೊಡ್ಡ ಸೀರ್ಯ—ಈ ಪ್ರಾಂತ್ಯ ದಾರಣವಾಸಿ ಬಹಳ ಘಾಪಾಗಿರ ವುದರಿಂದ ಬಡಬಗ್ಗರ ಕಷ್ಟವನ್ನು ಹೇಳತೀರದು ಸಾಧಾರಣ ಅಕ್ಕಿ ರೂಪಾಯಿಗೆ ೭—೮ ಸೇರು ಸಿಕ್ಕುವುದು ಕಷ್ಟ; ರಾಗಿ ೧೬—೧೫ ಸೇರಿನಂತೆ ಮಾರುತ್ತಾರೆ ಇತರ ದಿನಸುಗಳಾದರೋ ಹೇಳಲಿಕ್ಕೇ ಇಲ್ಲವು ನಮ್ಮ ಅಮಲ್ದಾರ್ರವರು ಬಡಬಗ್ಗರ ಕಷ್ಟವನ್ನು ನೋಡಿ, ಅಕ್ಕಿ ೧೦ ಸೇರಿನಂತೆಯೂ, ರಾಗಿ ೨೦ ಸೇರಿನಂತೆಯೂ ಮಾರಬೇ ಕೆಂದು ವರ್ತಕರಿಗೆಲ್ಲಾ ಅಪ್ಪಣೆಮಾಡಿದರೂ ಒಂದೆರಡು ಸಂತೆಮಾತ್ರ ಅವರು ಆಜ್ಞೆಯಂತೆ ದಾಗಿ ೧೬—೧೫ ಸೇರು, ಅಕ್ಕಿ ೭—೮ ಸೇರು ಮಾರುತ್ತಾರೆ ಟಪನ್ನಿನಲ್ಲಿಯೂ ಇತರ ಹಳ್ಳಿ ಗಳಲ್ಲಿಯೂ ಕಳ್ಳರ ಉಪಟಳ ತಲೆಹಾಕುತ್ತಿದೆ.—ಕಳೆದ ಡಿಸೆಂ ಬರ್ ತಾ. ೨೫—೨೬ ರಲ್ಲಿ ತಾಲ್ಲೂಕು ಪಂಚಾಯತು ಸಾದೂರು ಸುಬೇದಾರ ಯಾಗ್ನಹಳ್ಳಿ ಕ್ಷೇತ್ರದ ಹೊಸದಾಗಿ ತಯಾರ್ಮಾಡಿರುವ ಛತ್ರವನ್ನು ನೋಡುವ ಉದ್ದೇಶ್ಯ ನಮ್ಮ ಡಿಸ್ಟ್ರಿಕ್ಟು ನಲ್ಲಿ ಆಗಿರುವ ಡೆಪ್ಯುಟಿ ಕಮಿಷನರ್ ಸಾಹೇಬರು, ಪೋಲೀಸ್ ಸೂಪರಿಂ ಟೆಂಡೆಂಟರು, ಅಮಲ್ದಾರ್ರವರು ದಯಮಾಡಿ, ಛತ್ರವನ್ನು ಇನ್ಸ್ಪೆಕ್ಷನ್ ಮಾಡಿ, ಅಲ್ಲಿಂದ ಹೊರಡುವಾಗ್ಯ ಸಾದೂರು ಗ್ರಾಮದ ಪಟೇಲ್ ಹುಸುಭೋಗನು ನಗ್ಯರೆ ದೊಡ್ಡಮನುಷ್ಯರಿಂದ ಫಲಪುಷ್ಪಾದಿಗಳನ್ನು ಸ್ವೀಕರಿಸಿ, ಸದ್ಮರು ಸಾದೂರು ಗ್ರಾಮದ ಊರುಬಾಗಿಲಲ್ಲಿರುವ ಶ್ರೀ ಆಂಜನೇಯಸ್ವಾಮಿ ದರ್ಶನವನ್ನು ಕೈಗೊಂಡು, ಸದರಿ ದೇವಾ ಲಯದಲ್ಲಿ ಬಾಲಕರಿಗೆ ವಿದ್ಯಾಭ್ಯಾಸಮಾಡಿಸುವ ಉಪಾಧ್ಯಾಯರು ಸ್ವಾಗತ ಆಶಾವಾದಿಗೆ ಗಮನೀಕರಿಸಿ, ಅಲ್ಲಿಂದ ಅರ್ಧ ಮೈಲಿ ದೂರದ ಲ್ಲಿರುವ ವಿದ್ಯಾರ್ಥಿಗಳ ಶಾಲೆಯ ಕಡೆ ದಯಮಾಡಿ, ಪೇಟೆಯಲ್ಲಿರುವ ವಿದ್ಯಾವಂತರ ಸೂಚನೆಯಂತೆ ಶ್ರೀ ಸಂಜಾಮಧೂತರ ಶಿಷ್ಯರಾದ ಗಣಪತಿಯವರು ಆ ಗ್ರಾಮದ ಪಟೇಲ್ ಬ್ಯಾಸುಭೋಗ ನಗ್ರೆರೇ ಮುಂದಾಗಿ ಹಾರ ಮಾಲೆ ಫಲಪುಷ್ಪಗಳನ್ನು ಸ್ವೀಕರಿಸಿ, ಗುರುಮಂದಿರ ಸ್ವಾಮಿಯ ದರ್ಶನವನ್ನು ಹೊಂದಿ, ಸದರೀ ಜನರ ವಿಜ್ಞಾಪನೆಗಳನ್ನು ಲಾಲಿಸಿ, ಕೆಲವು ವಿಷಯಗಳಿಗೆ ಅನು ಮತಿತ್ತು, ಹ ಜೆ ... ಕಷ್ಟಸುಖಗಳನ್ನು ವಿಚಾರಿಸಿಕೊಂಡು, ಅಲ್ಲಿಂದ ಹಾಲ್ರ್ಕಿಗ ಪ್ರಯಾಣೋನ್ಮುಖರಾದರು.—ಈಗ ಕ್ಷಾಮ ದ ದೆಸೆಯಿಂದ ಅಲ್ಲಲ್ಲಿ ನಡೆಯುವ ಕಳ್ಳತನಗಳ ವಿಷಯದಲ್ಲಿ ನಮ್ಮ ಅಮಲ್ದಾರ್ರವರು ಪೂರಾ ನಿಗಾಕೊಟ್ಟು ಈ ಭೀತಿಯನ್ನು ತಪ್ಪಿಸುವರೆಂದು ನಂಬಿರುತ್ತೇವೆ.—ಈ ಪ್ರಾಂತ್ಯ ಮಳೆಬೆಳೆ ಇಲ್ಲ ದ್ದರಿಂದ ಜನರಿಗೆ ಗೋಗ್ರಾಸಗಳಿಗೂ ಅಧಿಕವಾದ ತೊಂದರೆಯುಂ ಟಾಗುತ್ತಿರುವುದರಿಂದ ಸರ್ಕಾರ್ನವರು ಪ್ರಭುಗಳು ಪ್ರಜಾಹಿತೋಪಕಾ ರಿಗಳಾಗಿರುವುದರಿಂದ ಈ ಸಾಲಿನ ಕಂದಾಯದಲ್ಲಿ ಕೆಲವು ಭಾಗ ಮಾಫಿ ಮಾಡಬೇಕೆಂದು ಹಾರೈಸುತ್ತೇವೆ.

ವಿದೇಶ ವರ್ತಮಾನಗಳು.

ವಿಲಾಯತಿಯಲ್ಲಿ ಬರ್ಮಿಂಗ್ಹಾಂ ಡೈಲಿಪೋಸ್ಟ್ ಎಂಬುವ ವರ್ತ ಮಾನಪತ್ರಿಕೆಯ ಪ್ರೊಪ್ರೈಟರಾಗಿದ್ದು ಕಾಲವಾದ ಪಾರ್ ಹೀನೆ ಎಂಬಾತನು ತನ್ನ ಸ್ವತ್ತಿನಲ್ಲಿ ೧೫,೩೬,೦೦೦ ರೂಪಾಯನ್ನು ಧರ್ಮ ಕಾರ್ಯಗಳಿಗೆ ವಿನಿಯೋಗಿಸಬೇಕೆಂದು ಉಯಿಲು ಬರೆದಿರುತ್ತಾನೆ.

❖❖❖❖

ಚೈನಾ ದೇಶದ ಹಾಂಕಾಂಗ್ ಪಟ್ಟಣದ ಲೆಜಿಸ್ಲೆಟಿವ್ ಕೌನ್ಸಿಲ್ ನವರು ಕೌಲೂನಿಂದ ಕ್ಯಾಂಟನ್ ವರೆಗೆ ರೈಲ್ ರಸ್ತೆಯನ್ನು ಹಾಕು ವುದಕ್ಕೂ ಇತರ ರೈಲ್ವೆ ಕಾಮಗಾರಿಗಳಿಗೂ ಬೇಕಾಗುವ ೩ ಕೋಟಿ ರೂಪಾಯಿಗಳನ್ನು ಸಾಲ ತೆಗೆದು ಕೊಳ್ಳಬೇಕೆಂದು ನಿಶ್ಚಯಿಸಿ ದ್ದಾರೆ.

❖❖❖❖

ದಕ್ಷಿಣ ಆಫ್ರಿಕಕ್ಕೆ ಸೇರಿದ ನೇಟಾಲ್ ಮತ್ತು ಡರ್ಬನ್ ಪಟ್ಟ ಣಗಳಲ್ಲಿರುವ ಹಿಂದೂಸ್ಥಾನದ ಜನಗಳೆಲ್ಲಾ ಲಾಹೋರಿನಿಂದ ಅಲ್ಲಿಗೆ ಹೋದ ಪರಮಾನಂದ್, ಎಂ. ಎ. ಯವರನ್ನು ಬಹಳ ವಿದ್ಯುಕ್ತವಾಗಿ ಸ್ವಾಗತ ಮಾಡಿ ಬಹು ಮಾನಿಸಿದರೆಂದೂ ಇವರು ಭಕ್ತಿ ವಿಚಾರವಾಗಿ ಉಪನ್ಯಾಸ ಮಾಡುತ್ತಿದ್ದಾರೆಂದೂ ತಿಳಿದು ಬಂದಿದೆ.

❖❖❖❖

೧೯೦೩ ನೆ ಇಸವಿಯ ಅಖೈರಿನಲ್ಲಿ ಪ್ರಪಂಚದಲ್ಲೆಲ್ಲಾ ಒಟ್ಟು ೫,೦೬,೦೦೦ ಮೈಲಿ ರೈಲ್ ಮಾರ್ಗವಿದ್ದವು. ಅಲ್ಲಿಂದೀಚೆಗೆ ವರುಷ ೧ ಕ್ಕೆ ೧೫,೦೦೦ ಮೈಲಿಯೂ ಹೊಸದಾಗಿ ರೈಲ್ ರಸ್ತೆಯನ್ನು ಮಾಡಿ ಕೊಂಡಿರುತ್ತಾರೆ. ಇದರ ಮೂಲಧನವೆಲ್ಲಾ ಈಗ ೫೦,೦೦೦ ಕೋಟಿ ರೂಪಾಯಿ ಆಗಿದೆ ಎಂದು ಪ್ರಕಟವಾಗಿದೆ.

ಸಾಮೋವಾ ದ್ವೀಪಗಳಿಗೆ ಸೇರಿದ ಸವಾಯಿಸ್ ಎಂಬ ದ್ವೀಪದ ಲ್ಲಿ ಅಗ್ನಿ ಪರ್ವತದಿಂದ ಬೆಂಕಿಯ ಮಳೆ ಸುರಿಯುವುದಕ್ಕಾರಂಭವಾಗಿ, ಇನ್ನೊಂದು ಬೆಟ್ಟವನ್ನು ಮೊದಲಿದ್ದದ್ದಕ್ಕಿಂತಲೂ ೩,೦೦೦ ಅಡಿ ಎತ್ತ ರವಾಗಿ ಎತ್ತಿಬಿಟ್ಟಿದೆ. ಅದರಿಂದ ಬೆಂಕೀ ಕೆಂಡಗಳೂ ಸುರಿದ ಲೋಹ ನೀರೂ ಸುತ್ತಲೂ ೩೦ ಚದರಮೈಲಿ ವರೆಗೆ ವ್ಯಾಪಿಸಿದವು.

❖❖❖❖

ಫ್ರಾನ್ಸ್ ರಾಜ್ಯಕ್ಕೆ ಸೇರಿದ ನೇರ್ಲ್ಯಾ ಪಟ್ಟಣದಲ್ಲಿ ಯಾವ ಜ್ಞೇವಪ್ಪ ಸಹಾಕಸ್ತೆಯನ್ನು ಅನುಭವಿಸುತ್ತಿರುವ ಟ್ರಿಪ್ ಎಂಬ ವೃದ್ಧಿಗೆ ಅವನ ದಾಯಾದಿಯು ೬ ಲಕ್ಷ ರೂಪಾಯಿನ ಆಸ್ತಿಯನ್ನು ಬಿಟ್ಟು ಸತ್ತು ಹೋಗಿದ್ದಾನೆ. ಸಾಯುವ ತನಕ ಜೈಲಿನಲ್ಲಿರಬೇ ಕಾದ ಟ್ರಿಪ್ಪನಿಗೆ ಈ ದ್ರವ್ಯದಿಂದ ಯಾವ ಪ್ರಯೋಜನತಾನೇ ಆದೀತು!

❖❖❖❖

ರಷ್ಯಾ ರಾಜ್ಯದವರು ಜಪಾನಿನಲ್ಲಿ ಖೈದಿಗಳಾಗಿರುವ ತಮ್ಮ ಸೈ ನಿಕರನ್ನು ಅಲ್ಲಿಂದ ವಾಪಸು ಕರೆಸಿಕೊಳ್ಳುವುದಕ್ಕೂ ಅಂಥಾ ಸೈನಿ ಕರನ್ನು ಅನ್ನ ಬಟ್ಟೆ ಕೊಟ್ಟು ಸಾಕಿದ್ದಕ್ಕಾಗಿ ಜಪಾನವರಿಗೆ ಕರಾ ರಿನ ಪ್ರಕಾರ ಪಾವತಿ ಮಾಡಬೇಕಾಗಿರುವ ಖರ್ಚಿನ ಹಣಕ್ಕೂ ಇಷ್ಟ ರಲ್ಲೇ ೫೫ ಕೋಟಿಯೂ ೩೦ ಲಕ್ಷ ದ್ರವ್ಯವನ್ನು ಸಾಲ ಮಾಡುವವ ರಾಗಿದ್ದಾರೆ.

❖❖❖❖

ಜಪಾನಿನ ರಾಜಧಾನಿಯಾದ ಟೋಕಿಯೋ ನಗರದಲ್ಲಿರುವ ೪೧ ಭಾರೀ ಕಾರ್ಖಾನೆಗಳವರು ಒಂದು ಸಂಘವನ್ನು ಏರ್ಪಾಡುಮಾಡಿ ಕೊಂಡು, ೬ ಕೋಟಿ ಲಕ್ಷಾಧಿಪತಿಯಾದ ಇವೇಜ್ ಬೇಂಬಾತನನ್ನು ಪ್ರಸಿ ಡೆಂಟ್ ಕೆಲಸಕ್ಕೆ ನೇಮಿಸಿರುತ್ತಾರೆ. ಜಪಾನ್ ದ್ವೀಪದ ಕೈಗಾರಿಕೆಗ ಳನ್ನೂ ಅನ್ಯರಾಜ್ಯಗಳ ಸಂಗಡ ವ್ಯಾಪಾರವನ್ನೂ ವೃದ್ಧಿ ಮಾಡುವುದೇ ಈ ಸಂಘದ ಮುಖ್ಯೋದ್ದೇಶ.

❖❖❖❖

ಸ್ಪೈನ್ ರಾಜ್ಯದಲ್ಲೆಲ್ಲಾ ಕೂಲಿಯಿಂದ ಜೀವನ ಮಾಡತಕ್ಕ ಪ್ರಜೆಗಳ ದಾಂಧಲೆಯು ಹೆಚ್ಚಾಗುತ್ತಿದೆ. ಸವಿಲ್ಲೆ, ಸರೀಸ್ ಎಂಬ ಪ್ರಾಂತ್ಯಗಳಲ್ಲಾದರೋ ಜನರು ಕೂಲಿನಾಲಿ ಸಿಕ್ಕದೆ ಅಂಗಡಿಗಳನ್ನೂ ಮಾರ್ಕಟ್ಟು ಸಂತೆಗಳನ್ನೂ ನುಗ್ಗಿ ಲೂಟಿ ಮಾಡಲಾರಂಭಿಸಿದರು. ಸರ್ಕಾರದವರು ಕೂಲಿಯವರಿಗೆ ಜೀವನೋಪಾಯವನ್ನು ಕಲ್ಪಿಸುವು ದಕ್ಕೆ ಪ್ರಯತ್ನ ಪಡುತ್ತಿರುವರು.

❖❖❖❖

ಇಟಲಿ ರಾಜ್ಯಕ್ಕೆ ಸೇರಿದ ವಿಸೂವಿಸ್ ಮತ್ತು ಎಟ್ನಾ ಎಂಬ ಎರಡು ಅಗ್ನಿ ಪರ್ವತಗಳಿಂದಲೂ ಬೆಂಕಿಯ ಜ್ವಾಲೆಗಳು ಹೊರಡಲಾ ರಂಭವಾಗಿವೆ. ಅವುಗಳ ಮುಖದಿಂದ ಕಾದಕಲ್ಲು ಸುಣ್ಣ ಲೋಹ ಗಳು ದ್ರವರೂಪವಾಗಿ ಹರಿಯುತ್ತಿರುವವು. ಇದರಿಂದ ಒಂದೆರಡು ಕಡೆ ರೈಲ್ ರಸ್ತೆಯು ಸ್ವಲ್ಪ ದೂರ ಹಾಳಾಯಿತು. ಮುಂದೆ ಏನಾ ಗುವುದೋ ಎಂದು ಪ್ರಜೆಗಳು ಕಳವಳ ಪಡಲಾರಂಭಿಸಿದ್ದಾರೆ.

❖❖❖❖

ವಿಲಾಯತಿಯ ಮಹಾರಾಜಾಚಕ್ರವರ್ತಿಯವರು ವಿಲಾಯತಿಯ ಹೌಸ್ ಆಫ್ ಕಾಮನ್ಸ್ ಪಾರ್ಲಿಮೆಂಟ್ ಸಭೆ ಮನೆಯ ಮೆಂಬ ರುಗಳನ್ನು ವಜಾ ಮಾಡಿದರು. ಈ ತಿಂಗಳ ಅಖೈರಿನೊಳಗಾಗಿ ಆ ದಾ ಜ್ಯದ ಪ್ರಜೆಗಳೆಲ್ಲಾ ತಮ್ಮ ತಮ್ಮ ಊರಿನಲ್ಲಿ ಪಾರ್ಲಿಮೆಂಟ್ ಸಭೆಗೆ ಹೊಸ ಪ್ರತಿನಿಧಿಗಳನ್ನು ಚುನಾಯಿಸಿ ಕಳುಹಿಸಬೇಕಾಗಿದೆ. ಈಗ ವಿಲಾಯತಿಯಲ್ಲಿ ಚುನಾವಣೆಯ ಕಾರ್ಯವೇ ವಿಶೇಷ ಗಲಭೆಯ ನ್ನುಂಟುಮಾಡಿದೆ.

❖❖❖❖

ವಿದ್ಯಾಭ್ಯಾಸ ಮಾಡುತ್ತಿರುವಂಥಾ ಹುಡುಗರು ೧೫ ವರುಷದಿಂದ ಹಿಡಿದು ೧೬ ವರುಷ ತುಂಬುವ ತನಕ ಬೇಸಿಗೆಕಾಲದಲ್ಲಿ ಒಬ್ಬಕ್ಕು ಗಂಟೆಗಳ ಹೊತ್ತೂ ಮಳೆಗಾಲದಲ್ಲಿ ಒಂಬತ್ತೂವರೆ ಗಂಟೆಗಳ ಹೊತ್ತೂ ಗಾಢನಿದ್ದೆ ಮಾಡಬೇಕೆಂತಲೂ ಇದರಿಂದ ಅವರ ಬುದ್ಧಿ ಕುದುರುವುದಕ್ಕೂ ಅಂಗಾಂಗಗಳು ದೃಢವಾಗಿ ಬೆಳೆಯಲಿಕ್ಕೆ ಹೊಂದು ವುದಕ್ಕೂ ಅವಕಾಶವಾಗುವುದೆಂತಲೂ ವಿಲಾಯತಿಯ ಡಾಕ್ಟರುಗಳ ಸಮಾಜದವರು ಪ್ರಕಟಿಸಿದ್ದಾರೆ.

❖❖❖❖

ಅರಬ್ಬಿಗೆ ಸೇರಿದ ಯೇಮೆನ್ ಎಂಬ ಪ್ರಾಂತ್ಯದಲ್ಲಿ ಪ್ರಜೆಗಳು ತುರ್ಕಿ ಸರ್ಕಾರದವರ ಮೇಲೆ ದಂಗೆಯೆದ್ದು ಬಹಳ ದಾಂಧಲೆ ನಡೆಸು ತ್ತಿದ್ದಾರೆ. ಈ ದಂಗೆಯನ್ನು ಅಡಗಿಸಬೇಕೆಂದು ತುರ್ಕಿ ಸೈನಿಕರು ಬಹಳ ಸಾಹಸ ಪಟ್ಟರೂ ಕಡೆಗೆ ದಂಗೆಕೋರರ ಪರಾಕ್ರಮವೇ ಹೆಚ್ಚಾಗಿ ಸರ್ಕಾರಿ ಸೈನ್ಯಗಳು ಸೋತು ಒಂದಾ ಎಂಬಲ್ಲಿಗೆ ಓಡಿ ಹೋದರು. ಈಗ ತುರ್ಕಿಯಿಂದ ಅವರ ಬೆಂಬಲಕ್ಕೆ ೪,೦೦೦ ಸೈನ್ಯ ಗಳು ಹೊರಟು ಬರುತ್ತಿವೆ ಎಂದು ತಂತೀ ವರ್ತಮಾನ ಬಂದಿದೆ.

❖❖❖❖

ಹತ್ತು ವರುಷಗಳಿಂದೀಚೆಗೆ ವಿಲಾಯತಿಯ ರಾಜ್ಯಭಾರದ ಖರ್ಚು ಬಾಬು ವರುಷಕ್ಕೆ ೬೦ ಕೋಟಿ ರೂಪಾಯಿಗೆ ಹೆಚ್ಚಿರುತ್ತದು ವಿಶೇಷ ಭಾಗವೆಲ್ಲಾ ಭೂಸೈನ್ಯಕ್ಕೂ ನಾವೆಯ ಸೈನ್ಯಕ್ಕೂ ವಿನಿಯೋ ಗವಾಗುತ್ತದೆ. ಈ ಖರ್ಚು ಬಾಬುಗಳನ್ನು ಕೋತಾ ಮಾಡಿ, ಕಲ್ಲಿ ದ್ದಲು, ಟೇಸೊಪ್ಪು, ಸಕ್ಕರೆ, ಅದಾಯ, ಇವುಗಳ ಮೇಲೆ ಹಾಕಿರುವ ಸುಂಕಗಳನ್ನು ತಗ್ಗಿಸಬೇಕೆಂದಿದ್ದೇವೆ ಎಂಬು ದಾಗಿ ವಿಲಾಯತಿ ರಾಜ್ಯದ ಹೊಸ ಖಜಾನಾ ಛಕ್ಷಿಯವರು ತಿಳಿಸಿದ್ದಾರೆ.

❖❖❖❖

ಜರ್ಮನಿ ರಾಜಧಾನಿಯಾದ ಬರ್ಲಿನ್ ನಗರದಲ್ಲಿ ಹಿಬುಬೇನ್ ಎಂಬೊಬ್ಬ ಜರ್ಮನಿ ಸೈನಿಕನು ತನ್ನ ಬಳಿ ಇದ್ದ ಪುಸ್ತಕದಲ್ಲಿ— ನಮ್ಮ ಮಂತ್ರಿಯು ನಮ್ಮ ರಾಜ್ಯಕ್ಕೆ ಸಾವಿರಾರು ವರುಷಗಳ ತನಕ ಅವಮಾನಕರವಾಗಿರುವಂಥಾ ಕರಾರನ್ನು ರಷ್ಯಾದವರ ಸಂಗಡ ಮಾಡಿ ಕೊಂಡಿದ್ದಾರೆ. ಅದ್ದರಿಂದ ಅವರನ್ನು ಅಂದರೆ ಜರ್ಮನಿ ಮಂತ್ರಿಶ್ರೇಷ್ಠ ರಾದ ಕೌಂಟ್ ಕಾಣ್ಬೂರಿಯವರನ್ನು ಕೊಂದುಹಾಕಿ ಬಿಡುತ್ತೇನೆ ಎಂದು ಬರೆದಿಟ್ಟುಕೊಂಡಿದ್ದನು. ಈ ಸಂಗತಿಯು ಸ್ಥಾನ್ಯೋ ಸರ್ಕಾ ರದವರಿಗೆ ತಿಳಿದು, ಈಗ ಅವನನ್ನು ಹಿಡಿದು ಬಂದೀಖಾನೆಯಲ್ಲಿ ಇಟ್ಟಿದ್ದಾರೆ.

❖❖❖❖

ಆಸ್ಟ್ರೇಲಿಯಾ ದ್ವೀಪದಲ್ಲಿ ನ್ಯೂಸೌತ್ ವೇಲ್ಸಿಗೆ ಮುಖ್ಯವ ಟ್ಟಣವಾದ ಸಿಡ್ನಿಯಲ್ಲಿ ಒಂದು ವಿಚಿತ್ರವಾದ ಮೊಕದ್ದಮೆಯು ವಿಚಾರಣೆಯಾಯಿತು. ಆಲಿಂದೀನ್ ಎಂಬ ಹಿಂದೂ ದಳ್ಳಾಳಿಯು ಪೆರಿಸೊಳ್ಳ ಎಂಬುವನ ಕಿವಿಯನ್ನು ಕೊಯಿದು ಹಾಕಿದನು. ಆ ವಾದಿಯ ಕಡೆ ಇಬ್ಬರು ಸಾಕ್ಷಿಗಳು ಕಿವಿಕೊಯಿದು ಹಾಕಿದ್ದಾನೆಂದು ಒಪ್ಪಿಕೊಂಡರು. ಮೂರನೇ ಸಾಕ್ಷಿಯು ಚಾಕುವಿನಿಂದ ಕೊಯಿದು ಹಾಕಲಿಲ್ಲವೆಂದು ಹೇಳಿದನು. ಡಾಕ್ಟರುಗಳಾದರೋ ಚಾಕುವಿನಿಂದ ಲೇ ಕಿವಿಯು ಕೊಯ್ಯಲ್ಪಟ್ಟಿದೆ ಎಂದು ಹೇಳಿದರು. ಆದರ ಮೇಲೆ ಫಿರ್ಯಾದಿಗೆ ಪಟ್ಟಿಯು ಅಪರಾಧಿಯಿಂದ ೬೬೫ ರೂಪಾಯಿ ಕೊಡಿಸಿ ದನು.

❖❖❖❖

ವಿಲಾಯತಿಯ ದೊರೆಯವರು ಜಪಾನ್ ಚಕ್ರವರ್ತಿಯವರಿಗೆ "ಗಾರ್ಟರ್" ಎಂಬ ಮಹಾ ಪ್ರಶಸ್ತವಾದ ಬಿರುದನ್ನು ದಯಪಾಲಿ ಸಿದ್ದಾರೆ. ಪ್ರಿನ್ಸ್ ಆರ್ಥರ್ ಆಫ್ ಕನ್ನಾಟ್ ಎಂಬ ರಾಜಪುತ್ರನು ಪರಿವಾರ ಸಹಿತ ವಿಲಾಯತಿಯಿಂದ ಕಳೆದ ಗುರುವಾರ ಹೊರಟು, ಜಪಾನ ರಾಜಧಾನಿಗೆ ಹೋಗಿ ಚಕ್ರವರ್ತಿಯವರಿಗೆ ಆ ಬಿರುದನ್ನು ಒಪ್ಪಿಸುವನು. ಈ ರಾಜಕುಮಾರನು ದಾರಿಯಲ್ಲಿ ತಾ. ೨೨ ನೆ ಶನಿ ವಾರ ಲಂಕಾದ್ವೀಪದಲ್ಲಿ ತಂಗುವನು. ಆಗ್ಗೆ ಅಲ್ಲಿನವರು ಸಮ್ಮಾನ ಪೂರ್ವಕವಾಗಿ ಅತನನ್ನು ಪರಿವಾರ ಸಹಿತ ಎದಿರುಗೊಂಡು, ರಾಜ ಮರ್ಯಾದೆಗೆ ತಕ್ಕಂತೆ ಅವರನ್ನೆಲ್ಲಾ ಸತ್ಕರಿಸಬೇಕೆಂದು ಏರ್ಪಾಡು ಮಾಡುತ್ತಿದ್ದಾರೆ.

❖❖❖❖

ವಿಲಾಯತಿಯಲ್ಲಿ ಕೆಳಗೆ ಹೇಳುವ ದೊಡ್ಡ ಮನುಷ್ಯರು ಧರ್ಮ ಕಾರ್ಯಗಳಿಗೆ ಎಷ್ಟು ದ್ರವ್ಯ ಕೊಟ್ಟಿದ್ದಾರೆಂದರೆ—ಸರ್ ಡೊನಾಲ್ಡ್ ಕರ್ರಿ ಎಂಬಾತನು ಲಂಡನ್ ಮತ್ತು ಎಡಿಂಬರೋ ಪಟ್ಟಣಗಳ ಲ್ಲಿ ಯೂನಿವರ್ಸಿಟಿ ವಿದ್ಯಾಭ್ಯಾಸವನ್ನು ಬಲವಾಗಿಮಾಡುವುದಕ್ಕೆ ೨೦ ಲಕ್ಷವೂ ೫೦ ಸಾವಿರ ರೂಪಾಯಿ ಕೊಟ್ಟಿದ್ದಾನೆ. ಲಾರ್ಡ್ ಅಷ್ಟನ್ ಎಂಬಾತನು ಲಾಂಕ್ಯಾಸ್ಟರ್ ಪುರಾಭಿವೃದ್ಧಿಗೆ ೧೯ ಲಕ್ಷ ರೂ ಪಾಯಿ ಕೊಟ್ಟನು. ಮಿ|| ಆಂಡ್ರ್ಯು ಕಾರ್ನೆಗಿಯು ಸ್ಕಾಟ್ಲೆಂಡಿನ ವಾಚನ ವಿದ್ಯಾಲಯಗಳಿಗೆ ಐದು ವರುಷಗಳ ತನಕ ಪ್ರತಿ ವರುಷವೂ ೩ ಲಕ್ಷ ರೂಪಾಯಿನಂತೆ ಕೊಡುವುದಾಗಿ ವಾಗ್ದಾನ ಮಾಡಿರುತ್ತಾನೆ. ಲಾರ್ಡ್ ನಟ್ಸ್‌ಫೋರ್ಡ್ ಎಂಬಾತನು ಎಡ್ವರ್ಡ್ ದೊರೆಯ ಹೆಸ ರಿನ ಮೇಲೆ ಕಟ್ಟಿರುವ ಆಸ್ಪತ್ರೆಯ ಮೂಲಧನಕ್ಕೆ ೩೦ ಲಕ್ಷ ರೂ ಪಾಯಿ ಕೊಡುತ್ತೇನೆಂದು ತಿಳಿಸಿರುವನು. ವೈಕೌಂಟ್ ಓವೀ ಎಂಬಾ ತನು ಡಬ್ಲಿನ್ ಪಟ್ಟಣದ ಎರಡು ಆಸ್ಪತ್ರೆಗಳಿಗೆ ೩½ ಲಕ್ಷ ರೂಪಾ ಯಿ ಕೊಟ್ಟನು.

❖❖❖❖

ಹಾಂಕಾಂಗ್ ಪಟ್ಟಣದ ವರ್ತಕನಾದ ಮಿ|| ಜೋಸೆಫ್ ಗ ಡ್ಡಿಸ್ ಎಂಬುವನು ರಷ್ಯಾ ಜಪಾನ್ ಯುದ್ಧಕಾಲದಲ್ಲಿ ಮುಕ್ಡೆನಿನ ರಕ್ಕೆ ಹೋಗಿ ಅಲ್ಲಿ ವ್ಯಾಪಾರ ನಡೆಸುತ್ತಿದ್ದನು. ರಷ್ಯಾದವರು ಇವ ನನ್ನು ಜಪಾನವರ ಕಡೆಯ ಗೂಢಚಾರನೆಂದು ಗುಣಿಸಿ, ಹಿಡಿದು ಸೆರೆಮನೆಯಲ್ಲಿ ಹಾಕಿದರು. ಅವನು ೬ ತಿಂಗಳ ತನಕ ಕಾರಾಗೃಹ ವಾಸ ಮಾಡಿದನು. ರಷ್ಯಾ ಸೈನಿಕರು ಆ ಮಧ್ಯೆ ಸೆರೆಮನೆಗೆ ಹೋಗಿ ಅವನನ್ನು ಕೊಂದು ಹಾಕಿಬಿಡುತ್ತೇವೆಂದು ಅನೇಕಾವರ್ತಿ ಗಾಬರಿ ಪಡಿಸುತ್ತಿದ್ದರು. ತರುವಾಯ ಅವನನ್ನು ಬೇಡಿಗುದ್ದೆಗಳು ಹಾಕಿ ಮಾಸ್ಕೋ ಪಟ್ಟಣಕ್ಕೆ ಸಾಗಿಸಿದರು. ಅಲ್ಲಿ ಅವನು ಉಪಾಯಾಂತರ ದಿಂದ ಒಂದು ಕಾಗದವನ್ನು ಬರೆದು ಗುಟ್ಟಾಗಿ ಅಲ್ಲಿನ ಇಂಗ್ಲೀಷ್ ರಾಯಭಾರಿಗೆ ಕಳುಹಿಸಿಕೊಟ್ಟನು. ರಾಯಭಾರಿಯು ತನಿಖೆ ಮಾಡಿ ಸಿ ಅವನನ್ನು ಸೆರೆಯಿಂದ ಬಿಡಿಸಿದನು. ಈಗ ಈ ಗಡ್ಡಿಸ್ಸನು ವಿಲಾ ಯತಿಗೆ ಹೋಗಿ, ರಷ್ಯಾದವರು ತನ್ನನ್ನು ಅನ್ಯಾಯವಾಗಿ ಸೆರೆಮನೆಗೆ ಹಾಕಿದ್ದಕ್ಕೆ ಅವರಿಂದ ಪ್ರತಿಫಲ ಕೊಡಿಸಬೇಕೆಂದು ಸರ್ಕಾರದವರಿಗೆ ಅರ್ಜಿ ಬರೆದುಕೊಂಡಿದ್ದಾನೆ.

❖❖❖❖

ಉತ್ತರ ಅಮೇರಿಕಾ ಖಂಡದ ಐಕ್ಯನಾಡು ರಾಜ್ಯಗಳಲ್ಲಿ ಮುಖ್ಯ ನಗರವಾದ ನ್ಯೂಯಾರ್ಕ್ ಪಟ್ಟಣದಲ್ಲಿ ಗೋರಿಯಲ್ಲಿ ಹೂತಿದ್ದ ಜೋನಾಥನ್ ರೀಡ್ ಎಂಬುವನು ನಿಪಾಕಿರುವನೆಂದು ತಿಳಿದು ಬಂತು. ಕೆಲವು ಕಾಲಕ್ಕೆ ಮುಂಚೆ ಸತ್ತ ಅವನ ಹೆಂಡತಿಯ ಗೋರಿಯ ಮಗ್ಗುಲಲ್ಲೇ ಅವನು ಬಹಳ ದಿನ ವಾಸ ಮಾಡಿಕೊಂಡಿದ್ದನು. ಇವನು ಸಾಯುವ ವರೆಗೂ ತನ್ನ ಹೆಂಡತಿಯ ಮಗ್ಗುಲನ್ನು ಬಿಡುವುದಿಲ್ಲವೆಂದು ಅವಳಿಗೆ ಅವಸಾನಕಾಲದಲ್ಲಿ ಭಾಷೆ ಕೊಟ್ಟಿದ್ದನು. ಅದರಂತೆಯೇ ನಡೆದುಕೊಂಡನು. ಇವನು ಸಿಪಾಕಾಲದಲ್ಲಿಯೂ ತನ್ನ ಹೆಂಡತಿಯ ಗೋರಿಯನ್ನು ಬಿಟ್ಟು ಹೋಗುತ್ತಿರಲಿಲ್ಲ. ಸುತ್ತುಮುತ್ತಲಿನ ಜನ ರಿಗೆಲ್ಲಾ ಇವನಲ್ಲಿಯೂ, ಇವನು ಕಾಲಿತಿರುವ ಗೋರಿಯಲ್ಲಿಯೂ ಬಹಳ ಭಕ್ತಿಯುತ್ತು. ಒಂದು ಕುರ್ಚಿ, ಒಂದು ಮೇಜು, ಇನ್ನೂ ಕೆಲವು ಅವಶ್ಯವಾದ ಪದಾರ್ಥಗಳು ಅವನ ಗೋರಿಯಲ್ಲಿದ್ದವು. ಕೆಲ ವು ತಿಂಗಳ ಕೆಳಗೆ ಕೂಲಿ ಜನರು ಒಹಾರವಾಗ ಅವನನ್ನು ಕಾಣದೆ, ಗೋರಿಯ ಒಳಗಡೆ ನೋಡುವಲ್ಲಿ ಬಿಸಿಲಿನ ಏಟಿನಿಂದ ಜ್ಞಾನವಿಲ್ಲದೆ ಮಲಗಿದ್ದನು. ಈಚೆಗೆ ಅವನು ಬಿಡು ಅವನು ಆರೋಗ್ಯವಾದ ಸ್ಥಳ ದಲ್ಲಿದ್ದು ಕೆಲವು ದಿನದ ಕೆಳಗೆ ಸತ್ತು ಹೋದನು. ಅವನಿಗೆ ೬೫ ವಯಸ್ಸಾಗಿತ್ತು. ಒಟ್ಟಿ ಕಂಟ್ರಾಕ್ಟುದಾರನಾಗಿದ್ದು ಸುಮಾರು ೬೦ ಲಕ್ಷ ರೂಪಾಯಿ ಆಸ್ತಿಯನ್ನು ಇಟ್ಟಿದ್ದಾನೆ. ಇದೆಲ್ಲಾ ಅವನ ದಾಯಾ ದ್ಯರಿಗೆ ಸೇರಿತು.

P. SUBBAROY'S

World Renowned and most Efficacious Ayurvedic Medicines

ಪಿ ಸುಬ್ಬರಾಯರವರ

ಲೋಕಪ್ರಸಿದ್ಧವಾದ ಮತ್ತು ಅತ್ಯಂತ ಗುಣಕಾರಿಯಾದ ಆಯುರ್ವೇದ ಔಷಧಗಳು

11-11

೧೦ ಜ್ವರಸಂಹಾರಿ—ಎಲ್ಲಾ ವಿಧವಾದ ಜ್ವರ, ವಿಷಮಶೀತ ಜ್ವರ, ಎರಡು, ಮೂರು, ನಾಲ್ಕು ದಿವಸಗಳಿಗೊಂದಾವರ್ತಿ ಬರುವ ಜ್ವರ, ಚಳಿ, ಇನ್‍ಫ್ಲುಯಂಜಾ, ಚಳಿಜ್ವರ, ವಾತರೋಗ, ಇವುಗಳನ್ನು ಸಂಪೂರ್ಣವಾಗಿ ವಾಸಿ ಮಾಡುವದು. ಪೆಟ್ಟಿಗೆ ೧ಕ್ಕೆ ರೂ ೧ ವಿ ಪಿ ಛಾರ್ಜು ೫ ಆಣೆ

೧೧ ಕೂದಲು ಉಪಯೋಗವುವದಕ್ಕೆ—ಕೂದಲು ಬೆಳೆದಿರುವ ಸ್ಥಳಕ್ಕೆ ಹಚ್ಚಿದರೆ ಚರ್ಮಕ್ಕೆ ತೊಂದರೆಯಾಗದೆ ೫ ನಿಮಿಷದಲ್ಲೇ ಉದುರಿ ಹೋಗುವದು ಸೀಸೆ ೧ಕ್ಕೆ ೬ ಆಣೆ ವಿ ಪಿ ಛಾರ್ಜು ೩ ಸೀಸೆ ವರೆವಿಗೂ ೫ ಆಣೆ

೧೨ ಸುಗಂಧಕವಂತ ಚೂರ್ಣ—ಎಲ್ಲಾ ವಿಧವಾದ ಹಲ್ಲು ರೋಗಗಳನ್ನು ವಾಸಿಮಾಡುವದು ಸೀಸೆ ೧ಕ್ಕೆ ೬ ಆಣೆ ವಿ ಪಿ ಛಾರ್ಜು ೩ ಸೀಸೆ ವರೆಗೂ ೫ ಆಣೆ

೧೩ ಚೇಳಿನ ಔಷಧ—ಚೇಳು ಕಚ್ಚಿದ ಸ್ಥಳಕ್ಕೆ ಕೂಡಲೆ ಇದರ ಕೆಲವು ತೊಟ್ಟುಗಳನ್ನು ಬಿಟ್ಟ ತಕ್ಷಣವೇ ಉರಿಯು ನಿಲ್ಲುವುದು ಪ್ರತಿ ಕುಟುಂಬದಲ್ಲಿಯೂ ಅವಶ್ಯಕವಾಗಿರತಕ್ಕದ್ದು ಸೀಸೆ ೧ಕ್ಕೆ ೬ ಆಣೆ ವಿ ಪಿ ಛಾರ್ಜು ೧೦ ಸೀಸೆ ವರೆಗೂ ೫ ಆಣೆ ೧೨ ಸೀಸೆಗಳನ್ನು ಒಂದೇ ಆವರ್ತಿ ತರಿಸಿಕೊಂಡರೆ ಬೆಲೆ ೨-೮-೦ ರೂ ವಿ ಪಿ ಛಾರ್ಜು ಅಲಾಯದ ಸಿಲ್ಲೋವಿಗೆ ೩ ಆಣೆ

೧೪ ಮಧುರಧ್ವನಿ ಮಾತ್ರೆ—ಧ್ವನಿಯಲ್ಲಿರುವ ನ್ಯೂನತೆಗಳನ್ನು ಸರಿಮಾಡಿ ಮನೋಹರವಾದ ಧ್ವನಿಯನ್ನುಂಟುಮಾಡಿ ಸ್ಪುಟವಾಗಿ ಮಾತನಾಡುವದಕ್ಕೆ ವಿಶೇಷ ಅನುಕೂಲಪಡಿಸುವುದು ಮುಖ್ಯವಾಗಿ ಸಂಗೀತಗಾರರು, ಉಪನ್ಯಾಸಕರು ವೇದಪಾಠಕರಿಗೆ ಬಹಳ ಸಹಕಾರಿಯು ಇದರ ಸೇವನೆಯಿಂದ ಭಾರವಾದ ಧ್ವನಿಯು ಸರಿಯಾಗುವದು ಹಾಡಿದರೆ ಕಿವಿಗಿಂಪಾಗುವಂತಹ ಧ್ವನಿಯು ಹೊರಡುವದು ಸೀಸೆ ೧ಕ್ಕೆ ೮ ಆಣೆ ವಿ ಪಿ ಛಾರ್ಜು ೩ ಸೀಸೆ ವರೆಗೂ ೫ ಆಣೆ

೧೫ ಸ್ನಾನಕ್ಕೆ ಸುವಾಸನಾ ಭಸ್ಮ—ಸುವಾಸನೆಯುಳ್ಳ ಈ ಭಸ್ಮವನ್ನು ಸ್ನಾನಕಾಲದಲ್ಲಿ ಸ್ತ್ರೀಯರು ಗಂಡಸರೂ, ಹೆಂಗಸರೂ, ಮುಂತಾದವರು ಉಪಯೋಗಿಸುವದಕ್ಕೆ ಅನುಕೂಲವಾಗಿರುವದು ಚರ್ಮಗತವಾದ ಕೊಳೆಯನ್ನೂ ಬೆವರಿನ ದುರ್ಗಂಧವನ್ನೂ ಹೋಗಲಾಡಿಸಿ, ಚರ್ಮವನ್ನು ಮೃದುಮಾಡಿ, ಎಂದೂ ಕಾಂತಿ ಹೊಳಪುಳ್ಳದ್ದಾಗಿ ತಂಪನ್ನುಂಟುಮಾಡುವದು ಇದಲ್ಲದೆ ದೇಹವಲ್ಲ ಸರ್ವದಾ ಸುಗಂಧವಿರುವಂತೆ ಮಾಡುವದು ಚೂರ್ಣವು ಸ್ನಾನಕಾಲದಲ್ಲಿ ಅತ್ಯಂತೋಪಯುಕ್ತವಾದುದರಿಂದ ಪ್ರತಿಯೊಬ್ಬರೂ ಉಪಯೋಗಿಸಲಿಕ್ಕೆ ಯೋಗ್ಯವಾಗಿದೆ ಪೆಟ್ಟಿ ೧ಕ್ಕೆ ೮ ಆಣೆ ವಿ ಪಿ ಹಾಸಲು ೩ ಆಣೆ

೧೬ ಸಂಜೀವನ ಮಾತ್ರೆಗಳು—ಮಕ್ಕಳಿಗೆ ಜ್ವರ, ನರಗಳಸೆಳೆತ, ನಿದ್ರೆಯಿಲ್ಲದಿರುವದು, ಅಧಿಕವಾಗಿ ಹೋಗುವದು, ಛಳಿ, ಕೆಮ್ಮಲು, ಹಲ್ಲೇಳುವು, ನೆಗಡಿ, ಇನ್ನೂ ಮಕ್ಕಳಿಗೆ ಬರುವ ಅಜೀರ್ಣಸಂಬಂಧವಾದ ರೋಗಗಳಿಗೆ ಒಳ್ಳೇ ಮದ್ದಾಗಿರುವದು ಇದನ್ನು ದೊಡ್ಡವರು ಸಹ ಉಪಯೋಗಿಸಬಹುದು ಸೀಸೆ ೧ಕ್ಕೆ ೧೦ ಆಣೆ ವಿ ಪಿ ಛಾರ್ಜು ೩ ಸೀಸೆ ವರೆಗೂ ೫ ಆಣೆ

೧೭ ಗೋರೋಚನ ಮಾತ್ರೆ—ಎಲ್ಲಾ ವಿಧವಾದ ಜ್ವರಗಳಿಗೂ, ವಿಷಮಶೀತಜ್ವರ, ಎರಡು ಜ್ವರ, ಪ್ರತಿದಿನ ಜ್ವರ ಇವುಗಳಿಗೆ ಅದ್ವಿತೀಯವಾದ ಔಷಧವು ಮಲೇರಿಯಾ ಜ್ವರ, ಹೊಟ್ಟೆಯಲ್ಲಿ ಗಡ್ಡೆ ಆಗಿದ್ದರೆ, ಮಿದಳು ಶ್ವಾಸಕೋಶಗಳು ಕೆಟ್ಟಿದ್ದರೆ ಗುಣಮಾಡುವದು ಮಕ್ಕಳಿಗೆ ಬರುವ ಜ್ವರ, ಆಮಶಂಕೆ, ಅತಿಸಾರ, ನರಗಳ ಸೆಳೆತ, ಸಿಡಿ, ಕುಂದಿರೋಗ, ಹೆಚ್ಚಾಗಿ ಹೋಗುವದು, ಚಳಿ ಕೆಮ್ಮಲು, ತಲೆನೋವು, ಮಕ್ಕಳಿಗೂ ದೊಡ್ಡವರಿಗೂ ಅಜೀರ್ಣ, ಇವುಗಳನ್ನು ಪರಿಹಾರ ಮಾಡುವದು ಸೀಸೆ ೧ಕ್ಕೆ ೧೦ ಆಣೆ ವಿ ಪಿ ಛಾರ್ಜು ೩ ಸೀಸೆ ವರೆಗೂ ೫ ಆಣೆ

೧೮ ಚರ್ಮರೋಗಕ್ಕೆ ಔಷಧ—ಮಕ್ಕಳಿಗೆ ಬರುವ ಕರಪಾನು ಹುಳಿ, ಹುರುಕಾಲು, ಕಜ್ಜಿ, ಅನೇಕಜ್ಜಿ ಮತ್ತು ದೊಡ್ಡವರಿಗೆ ಬರುವ ನಾನಾ ವಿಧವಾದ ಕಜ್ಜಿ ಸಂಬಂಧವಾದ ವ್ಯಾಧಿಗಳು, ಸಂಜು, ಏಲಿಯ್ಲಿಯೂ ಇತರ ಕಡೆಗಳಲ್ಲಿಯೂ ಬೆಳಕ ನೋವನ್ನೂ ಅನಂದರ ಗುರಿಯನ್ನುಂಟುಮಾಡುವ ಎಲ್ಲಾ ಹುಣ್ಣುಗಳೂ ಹೊರಗೆ ಹಚ್ಚುವದರಿಂದಲೇ ಶೀಘ್ರತೆಯಾಗಿ ವಾಸಿಯಾಗುವದು ಬೆಲೆ ಸೀಸೆ ೧ಕ್ಕೆ ೮ ಆಣೆ ವಿ ಪಿ ಛಾರ್ಜು ೬ ಬಾಟ್ಲಿ ವರೆಗೆ ೫ ಆಣೆ

೧೯ ಕೇಶಸುವಾಸಿನಿ—ಈ ತೈಲವು ಪೂರ್ವಪಶ್ಚಿಮ ದೇಶಗಳ ಬಹು ಸುವಾಸನಾ ದ್ರವ್ಯಯುಕ್ತವಾಗಿ ತಯಾರು ಮಾಡಿ ಮಾರಲು ಸಿದ್ಧವಾಗಿರುತ್ತದೆ ಇದರ ಉಪಯೋಗದಿಂದ ಕೂದಲು, ಮೀಸೆ ಗಡ್ಡ ದಟ್ಟ ಸಮೃದ್ಧಿಯಾಗಿ ಬೆಳೆಯುವುದಲ್ಲದೆ ತಲೆ ಮಿದುಳು ಕಣ್ಣು, ಇವಿಗೆ ತಂಪುಕೊಡುತ್ತದೆ ಶೋಭಾಪಿತ್ತ, ಸೆಗಡು ಮುಂತಾದ್ದನ್ನು ವಾಸಿಮಾಡುತ್ತದೆ ವಿದ್ಯಾರ್ಥಿಗಳು ಬುದ್ಧಿ ವಸ್ತುಗಳಂತಹ ಪ್ರಯೋಜನಗಳಿಗೆ ಅತ್ಯಂತ ಮೆಚ್ಚಿಕೆಯಾಗಿರುತ್ತದೆ ಬೆಲೆ ರೂ ೦ ವಿ ಪಿ ಛಾರ್ಜು ಎರಡು ಬಾಟ್ಲಿ ವರೆಗೆ ೫ ಆಣೆ

ಕಾಗದವನ್ನು ಇಂಗ್ಲಿಷ್ ಅಥವಾ ತಮಿಳಿನಲ್ಲಿ ಬರೆಯಿರಿ.

Apply to —**P. SUBBAROY,**

Porto Novo South Arcot

ವಿಳಾಸ—ಪಿ ಸುಬ್ಬರಾಯ್,

ಪೋರ್ಟನೋವೋ, ದಕ್ಷಿಣ ಅರ್ಕಾಟ್ ಜಿಲ್ಲಾ.

೮೨

ಗಂಟಿನ ರೀವರ್ ಸೆಕಂಡ್ರಿ ಕನ್ನಡ ಟೆಕ್ಸ್ಟಿನ ಅತ್ಯುತ್ತಮವಾದ ನೋಟ್ಸು, ೧೯೦೫ರ ಪ್ರತಿಗಳುಳ್ಳದ್ದು ಕ್ರಯ ೫ ಆಣೆ ಡಿಸ್ಕೌಂಟು ೧೦೦ಕ್ಕೆ ೧ ಪೆಕ್ಯುಲರ್ ೫ನೆ ತರಗತಿನ ನೋಟ್ಸು ಕ್ರಯ ೬ ಆಣೆ ವಿಳಾಸ —ಕನ್ನಡ ಪುಸ್ತಕ ನಾರಾಯಣಶಾಸ್ತ್ರಿ, ಮಹಾರಾಜರವರ ಗೌರ್ನಮೆಂಟ್ ಕನ್ನಡ ಸ್ಕೂಲು, ಮೈಸೂರು

SREEMADACHARYA SUKTI MUKTAVALI

ಶ್ರೀಮದಾಚಾರ್ಯಸೂಕ್ತಿ ಮುಕ್ತಾವಳೀ

178

ಈ ಹೆಸರಿನಿಂದ ಪ್ರತಿ ತಿಂಗಳಲ್ಲಿಯೂ ಒಂದು ಸಂಚಿಕೆಯು ಪ್ರಕಟಿಸಲ್ಪಡುತ್ತಿದೆ. ಇದರಲ್ಲಿ ಶ್ರೀರಾಮಾನುಜಸಿದ್ಧಾಂತ ಸ್ಥಾಪಕರಾದ ಪೂರ್ವಾಚಾರ್ಯರುಗಳು ಮಾಡಿರುವ ಸ್ತೋತ್ರ, ಪ್ರಬಂಧ, ಗ್ರಂಥಗಳಿಗೆ ಕನ್ನಡದಲ್ಲಿ ಪ್ರತಿಪದ ಟೀಕಾ ತಾತ್ಪರ್ಯಗಳು ಸರ್ವರಿಗೂ ತಿಳಿಯುವಂತೆ ಸುಲಭಶೈಲಿಯಾಗಿ ಬರೆದು ಮುದ್ರಿಸಲ್ಪಡುತ್ತವೆ. ಶ್ರೀವಿಷ್ಣುಸಹಸ್ರನಾಮಕ್ಕೆ ದ್ವೈತಾದ್ವೈತ ವಿಶಿಷ್ಟಾದ್ವೈತವೆಂಬ ತ್ರಿಮತ ಭಾಷ್ಯಗಳೂ ಕನ್ನಡದಲ್ಲಿ ತರ್ಜುಮೆಮಾಡಿ ಮುದ್ರಿಸಲ್ಪಡುವುವು. ಈ ಸಂಪೂರ್ಣ ಗ್ರಂಥಕ್ಕೆ ಪೋಸ್ಟೇಜು ಡೆಮಿಲ್ ರೂ ೨-೩, ಶ್ರೀಮದಾಚಾರ್ಯಸೂಕ್ತಿ ಮುಕ್ತಾವಳೀ ಸಾಂವತ್ಸರಿಕ ಚಂದಾ ಪೋಸ್ಟು ಛಾರ್ಜು ಸಹಿತ ರೂ ೧-೮

ಇದರ ವಿಶೇಷವಿವರಗಳನ್ನು ತಿಳಿಯಬಯಸುವವರು ಈ ಕೆಳಗಿನ ವಿಳಾಸದಾರರಿಗೆ ಬರೆಯಬೇಕು.

ತೂಪ್ಪುಲ್ ವೇಂಕಟಾಚಾರ್ಯರು

ತುಳಸಿತೋಟ, ಬೆಂಗಳೂರು ಸಿಟಿ

118



ಅದ್ಭುತ ಜನವರಿ ಪ್ರಜೆಂಟೇಷನ್ ವಾಚು!

ಈ ತಿಂಗಳಲ್ಲಿ ತೆಗೆದುಕೊಳ್ಳುವ ಸಿಲ್ವರ್ ಎಲ್ಗಿನ್ ವಾಚುಗಳನ್ನು ಪ್ರೆಜೆಂಟ್ ಆಗಿ ಕೊಡುತ್ತೇವೆ ... ಇದರ ಗಡಿಯಾರ ಪ್ರತಿ ತಿಂಗಳಲ್ಲಿ ಈ ವಾಚುಗಳನ್ನು ಮಾರಿ ... [illegible]

ವಿಳಾಸ,—ಪ್ಯಾರಿಸ್ ವಾಚ್ ಕಂಪೆನಿ,

ಬ್ಲಾಕ್ ಟವನ್ ಮದರಾಸ್.

ಇಂಡಿಯಾ ವ್ಯವಸಾಯ ಮತ್ತು ಸಹಾಯಕ ಆಫೀಸು

14 17

[೧೯೦೩ರಲ್ಲಿ ಸ್ಥಾಪಿತವಾದದ್ದು]

ಈ ಆಫೀಸಿನ ಉದ್ದೇಶವೇನೆಂದರೆ—ಯಾವ ಜಾತಿಯವರೇ ಆಗಲಿ ಮತದವರೇ ಆಗಲಿ ಈ ಆಫೀಸಿನ ಚಂದಾದಾರರಾಗಿ ಅವರ ಭರಿಸಬೇಕಾದ್ದನ್ನು ಕೊಡುತ್ತಿದ್ದರೆ ಅವರ ಮರಣಾನಂತರ ಅವರ ಕುಟುಂಬದವರಿಗೆ ಸಹಾಯವು ಕೊಡಲ್ಪಡುವದು

ಈ ಆಫೀಸಿನ (A) ತರಗತಿಗೆ ಸೇರಿದವರು ಮರಣಹೊಂದಿದ್ದಲ್ಲಿ ಪ್ರತಿ ೧೦೦೦ ರೂಪಾಯಿಗಳ ಮೊಬಲಗಿಗೆ ನಾಮಕೆವಾಸ್ತೆ ಒಂದೊಂದು ರೂಪಾಯಿಯ ಪ್ರಕಾರ ಒಟ್ಟು ರೂ ೫೦ ನ್ನು ಮಾತ್ರವೇ ಸಲ್ಲಿಸಬೇಕಾಗುವದು.

ಆಫೀಸಿನವರು ಚಂದಾದಾರರಿಂದ ವಸೂಲಾದ ಮೊಬಲಗನ್ನು ಕ್ರಮಪ್ರಕಾರವಾಗಿ ನಡೆಸಲ್ಪಡುವ ವ್ಯವಸಾಯಕ್ಕೆ ಹಾಕಿ ಅದರಿಂದ ಬಂದ ಲಾಭದಿಂದಲೇ ಚಂದಾದಾರರ ಸಹಾಯದ್ರವ್ಯವನ್ನು ಕೊಡಲಾಗುವದು ವ್ಯವಸಾಯ ನಿಮಿತ್ತವಾಗಿ ನಾವು W I P ರೈಲ್ವೆ ಪಕ್ಕದಲ್ಲಿರುವ "ಕೊಲ್ಲಂ ಎಸ್ಟೇಟ್" ಎಂಬ ಸುಪ್ರಸಿದ್ಧವಾದ ಭೂಮಿಯನ್ನು ೯೯ ವರ್ಷಕ್ಕೆ ಸ್ವಂತವಾಗಿ ಪಡೆದಿದ್ದೇವೆ ಈ ಭೂಮಿಗೆ ಒಂದು ಹೊಳೆಯಿಂದ ಕಾಲುವೆ ಮಾಡಿ ನೀರನ್ನು ತಂದುಕೊಂಡಿರುವದರಿಂದ ಫಸಲು ಕಡಿಮೆಯಾಗುವದೆಂಬ ಭಯವೇ ಇಲ್ಲ

ಈ ಆಫೀಸಿನಲ್ಲಿ ಭರವಸೆಪತ್ರವನ್ನು ಪಡೆದಿರುವವರು ಚಂದಾದಾರರಾಗಿ ಮಾತ್ರ ಇದ್ದಾರೆ ಆದಾಯ ಪಟ್ಟಗಳಿಗೆ ಭಾಗಿಗಳಾದವರು ಭಾರಿದಾರರಾಗಿದ ನವಿಲ್ಲ ಆದರೂ ಅವರ ಹಣಕ್ಕೆ ನಮ್ಮ ಭೂಮ್ಯಿಯೂ ಆಧಾರವಾಗಿರುತ್ತದೆ

ಚಂದಾ ಮೊಬಲಗನ್ನೆಲ್ಲಾ ಪಾವತಿ ಮಾಡಿ ಭರವಸಪತ್ರವನ್ನು ಪಡೆದಿರುವ ಯಾವ ಚಂದಾದಾರರಿಗಾಗಲಿ ಆಫೀಸಿನಿಂದ ಬರತಕ್ಕ ಲಾಭವು ತೃಪ್ತಿಕರವಾಗಿ ಕಾಣದಿದ್ದರೆ ತಾನು ಸಲ್ಲಿಸಿರುವ ಚಂದಾಮೊಬಲಗನ್ನೆಲ್ಲಾ ವಾಪಸುಪಡೆಯಬಹುದು

ಈ ಆಫೀಸಿಗೆ ಸಬ್ ಏಜಂಟುಗಳು ಬೇಕಾಗಿದೆ ವಿವರವಾಗಿ ತಿಳಿಯಬಯಸುವವರು ಅರ್ಧಾಣೆ ಸ್ಟಾಂಪಿಟ್ಟು ಕೆಳಗಿನ ವಿಳಾಸಕ್ಕೆ ಇಂಗ್ಲೀಷಿನಲ್ಲಿ ಬರೆಯತಕ್ಕದ್ದು

ವಿಳಾಸ —The Manager,

The India Agricultural and Helping Office,

Vengurla Post, Bombay Presidency.

ಮೈಸೂರು ಸೀಮೆಯಲ್ಲಿ ಪ್ಲೇಗಿನ ಸ್ಥಿತಿ.

೩೦—12—1905 ರಿಂದ 5—1—1905 ರ ವರೆಗೆ

ಸ್ಥಳ	ಪ್ಲೇಗ್ ಆಗಿದ್ದು	ಪ್ಲೇಗ್ ಸತ್ತದ್ದು	ಕೋಳಿ ... ಈ ವಾರ ಸಂಖ್ಯೆ	
ಬೆಂಗಳೂರು ಪಟ್ಟಣ	31	32	29	10
ಮೈಸೂರು ,,	0	0	20	16
ಬೆಂಗಳೂರು ಡಿಸ್ಟ್ರಿಕ್ಟು	16	14	74	60
ಮೈಸೂರು ,,	4	5	74	60
ಕೋಲಾರ್ ,,	3	4	38	17
ಕೋಲಾರ್ ಚಿನ್ನದ ಗಣಿಗಳು	6	3	6	1
ತುಂಕೂರು ಡಿಸ್ಟ್ರಿಕ್ಟು	1	1	47	40
ಹಾಸನ (ಹೊರಗಿನದು)	0	0	6	6
ಚಿತ್ರದುರ್ಗ ,,	6	1	7	3
ಕಡೂರ್ ,,	2	1	1	1
ಶಿವಮೊಗ್ಗ ,,	19	20	24	10
ಜುಮ್ಲಾ	88	70	309	250

ಶಾಲಿವಾಹನ ಶಕ ವರುಷಂಗಳು ೧೮೨೮ ನೇ ವಿಶ್ವಾವಸುಸಂವತ್ಸರದ ಪುಷ್ಯ ಬಹುಳ ಅಷ್ಟಮಿ ಗುರುವಾರದಿಂದ ಪುಷ್ಯ ಬಹುಳ ಅಮಾವಾಸ್ಯೆ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ

೧೯೦೬ ನೇ ಇಸವಿ ಜನವರಿ

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಅಧಿ ಘನ ಮಾ
18	ಗುರು	ಅಷ್ಟಮಿ	13 33	ಸ್ವಾ	51 58	6
19	ಶುಕ್ರ	ನವಮಿ	7 35	ವಿ	47-50	7
20	ಶನಿವಾ	ದಶಮಿ	1 40	ಅನೂರಾ	54 36	8
21	ರವಿವಾ †	ದ್ವಾದಶಿ	50 16	ಜ್ಯೇ	10 16	9
22	ಚಂದ್ರ ,	ತ್ರಯೋದ	46-12	ಮೂ	37 12	10
23	ಕುಜ ‡	ಚತುರ್ದಶಿ	42-21	ಪೂಷಾ	34 48	11
24	ಬುಧ ¶	ಅಮಾ	39 29	ಉತ್ತರಾ	33 30	12

ಸ್ಮಾರ್ತೈಕಾದಶಿ

| ವೈಷ್ಣವಏಕಾದಶಿ, ವ್ಯತೀಪಾತ, ಬಹುಸರ

, ಸೋಮಪ್ರದೋಷ ‡ ಮಾಸಶಿವರಾತ್ರಿ

¶ ಸರ್ವತ್ರ ಅಮಾವಾಸ್ಯೆ ಗರುಡಜಯಂತಿ, ಮಕರತ್ರಿಗ್ರಹ ಯೋಗ

ಪೇಟೇ ಧಾರಣೆ.

ದಿನಸು	ಮೈಸೂರು	ಬೆಂಗಳೂರು.
ಕಡ್ಡೀ ಅಕ್ಕಿ ಪಲ್ಲ ೧ಕ್ಕೆ ರೂ	೧೨-೦-೦	೧೩-೧೨
ಕೆಂಬೂತಿ ಅಕ್ಕಿ ಅವಲ್	೧೨-೦ ೦	೧೩-೦
,, ದುಯಂ	೧೦-೮ ೦	೧೩ ೦
ಜಾಪ್ರೊತಿ ಅಕ್ಕಿ	೧೨ ೦-೦	೧೨-೮
ಸಣ್ಣಕ್ಕಿ ಅವಲ್	೧೩-೦ ೦	೧೫-೦
,, ದುಯಂ	೧೨-೮ ೦	೧೪-೦
ತೊಗರೀ ಬೇಳೆ ಪಲ್ಲ ೧ಕ್ಕೆ	೯ ೪ ೦	೧೦-೦
,, ದುಯಂ	೯-೦-೦	೯-೮
ಕೆಂಪು ರಾಗಿ ಪಲ್ಲ ೧ಕ್ಕೆ	೭ ೪ ೦	೬ ೦
ಕಾರಾಗಿ	೬-೧೨ ೦	೫-೮
ಜೋಳ	೭-೬ ೦	೮-೦
ಹಲಸಂದೆ ಪಲ್ಲ ೧ಕ್ಕೆ	೯ ೦-೦	೯-೮
ಬಿಳೀ ಅವರೆ	೯-೦ ೦	೯ ೦-೦
ಹೆಸರು	೯-೪ ೦	೧೦ ೦
ಉದ್ದು	೧೦-೦-೦	೧೦ ೦
ಕಡಲೆ	೧೨-೦-೦	೧೦-೪
ಎಳ್ಳು ಸೆ ೧೨೮ ಕ್ಕೆ	೧೮-೮-೦	೧೫-೮
ಹುರುಳಿ	೭-೬-೦	೭ ೮
ಹರಳು ೧೨೮ ಸೇರಿಗೆ	೧೨-೪-೦	೧೨-೪
ಸೀಗೇಕಾಯಿ ಮಣ ೧ಕ್ಕೆ	೫ ೦ ೦	೪-೦
ಮೆಣಸಿನಕಾಯಿ	೩-೮-೦	೩ ೮
,, ದುಯಂ	೩-೪-೦	೩-೪
ಬೆಲ್ಲ ದೊಡ್ಡ ಅಚ್ಚು	೪-೮-೦	ಮ ೧-೮
ಒಣ್ಗೆಣ್ಣೆ ಮಣ ೧ಕ್ಕೆ	೫ ೦ ೦	೪-೦
ಹರಳೆಣ್ಣೆ ,,	೪-೧೨ ೦	೪-೮
ಕೊತ್ತುಂಬರಿ ಪಲ್ಲ ೧ಕ್ಕೆ	೧೦-೮-೦	೧೦-೦
ಉಪ್ಪು ,,	೩ ೦-೦	೩ ೦
ಹುಣಸೇ ಹಣ್ಣು	೦ ೧೨ ೦	೦-೧೦
,, ಅಳೇದು	೦-೮-೦	೦ ೯
ತುಪ್ಪ	೧೨-೦-೦	೧೦ ೮
ಸೀಮೆಯೆಣ್ಣೆ ಪೆಟ್ಟಿಗೆ ೧ಕ್ಕೆ	೫-೨ ೦	೫ ೦
ತೆಂಗಿನಕಾಯಿ ೧೦೦ಕ್ಕೆ	೪-೦-೦	೪-೨
ಅಡಕೆ(ಕಾಯಿ) ಮಣ ೧ಕ್ಕೆ	೦-೧೨-೦	೦ ೧೦-೦
ಅಂಟ್ವಾಳದ ಕಾಯಿ ಮಣ ೧ಕ್ಕೆ	೦-೧೦-೦	೦ ೧೨
ಚಿನ್ನ (ಬಾರ್) ತೊಲ	೧೫-೪-೦	೧೫-೨
,, ಸಿಂಗಾಪೂರ್	೧೫-೨ ೦	೧೫-೧೦
,, ,, ಗಟ್ಟಿ ತೊಲ ೧ಕ್ಕೆ	೨೩-೧೨-೦	೨೩-೬
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ	೭೨ ೦ ೦	೮೦-೦

Printed and Published by the Rev H Spencer, B A., the Proprietor and Manager, Wesleyan Mission Press, Mysore 18/1/1906

ವೃತ್ತಾಂತ ಪತ್ರಿಕೆ.

REGISTERED No. 20

ಕ್ರಯ ೧ ದುಡ್ಡು — ಕ್ರಯ ೧ ದುಡ್ಡು

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು

ಪುಸ್ತಕ ೧೯ — ಮೈಸೂರು—ಸನ್ ೧೯೦೬ ನೇ ಇಸವಿ ಜನವರಿ ತಾರೀಖು ೨೫ ನೇ ಗುರುವಾರ. — ಸಂಚಿಕೆ ೩೪

"ವಾಗ್ದೇವಿ"

111

ಹಾಸ್ಯ ಕರುಣ ವೀರ ರಸಗಳಿಂದ ಭರಿತವಾದ ಕಾದಂಬರಿ ಕ್ರಯ ಒಂದು ರೂಪಾಯಿ. ಅಂಚೆ ಹಾಸಲು ವಿನಾ. ಬೇಕಾದವರು ಕೆಳಗಿನ ವಿಳಾಸಕ್ಕೆ ಬರೆಕೊಳ್ಳಬಹುದು

ಬೇಸೆಲ್ ಮಿಶನ್ ಬುಕ್ ಡಿಪಾಸ್, ಮಂಗಳೂರು

"ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜಂಟರ ಮೂಲಕ ತೆಗೆದುಕೊಳ್ಳುವವರಿಗೆ ೧ ವರ್ಷಕ್ಕೆ [illegible]

(ಅಡ್ವಾನ್ಸು) .. ರೂ ೧—೧—೦

ಅಂಚೆಯವರ ಆಫೀಸಿನಿಂದ ಅಂಚೆಗೆ [illegible]

[illegible] ೧ ವರ್ಷಕ್ಕೆ ೧೨ [illegible]

[illegible] ರೂ —೧೪—೦

[illegible] ೧—೧೪—೧

[illegible]

ವಿಳಾಸ—ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು

ಜ್ವರಹರಿ 211



ಈ ಸಾಧಾರಣ ಜ್ವರ, ಶೀತಜ್ವರ, ವಿಷಮಜ್ವರ, ಪಿತ್ತಜ್ವರ, ಕ್ಷಯ ಜ್ವರ ಮೊದಲಾದ ಎಲ್ಲಾ ಜ್ವರಗಳನ್ನೂ [illegible]

[illegible] ಮದ್ರಾಸ್ ಅಸಿಸ್ಟೆಂಟ್ ಸರ್ಜನ್ ವೆಂಕಟಪತಿ ಅಯ್ಯರವರು—[illegible] ಕೆಲವು ದಿವಸಗಳ ಹಿಂದೆ ಜ್ವರ ಬಿಸಿಕೊಟ್ಟ [illegible] ಸೀಸೆಯ [illegible] ಇಷ್ಟು ಸ್ವಲ್ಪ ಕಾಲದಲ್ಲೇ ಔಷಧದಿಂದ ಅನೇಕ ಮಂದಿ ಉಗ್ರಜ್ವರ [illegible] ಚೆನ್ನಾಗಿ ಗುಣಹೊಂದಿದವರು [illegible] ಜನಗಳು [illegible] ಬೇಕಾದ [illegible] ಸೀಸೆಯನ್ನು [illegible] ಉಪಕಾರವಾಗಿದೆ—ಎಂದು ಬರೆದಿದ್ದಾರೆ.

ಕ್ರಯ —ಸೀಸೆ ೧ ಕ್ಕೆ ೮ ಆಣೆ ೧ ರೂ, ೧—೮ ರೂ, [illegible] ೧೧ ರೂ [illegible] ಸೀಸೆ ತರಿಸಿಕೊಂಡರೆ [illegible] ಮಾಫಿ ಬಿಡಲಾಗುವದು.

✦✦✦✦✦✦✦✦✦

ಪಿ ಮಂ ಕ ರ್ಪೂ ರ

Punum Camphor

ಈ ಔಷಧವು ಅಜೀರ್ಣ, ಬೇಧಿ, ವಾಂತಿ, ಹೊಟ್ಟೆ ಕಳೆತ, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ [illegible] ಶೀಘ್ರವಾಗಿ [illegible] ಗುಣಕೊಡುವದು [illegible] ತಿಂಗಳಿಗೆ [illegible] ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ [illegible] ಜ್ವರಹರಿ ಎಂಬ ಔಷಧದಂತೆಯೇ ಸೀಸೆಗಳಲ್ಲಿ [illegible]

[illegible] ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—[illegible] ಕರ್ಪೂರವನ್ನು [illegible] ಮ್ಯುನಿಸಿಪಲ್ [illegible] ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣ [illegible] ರೋಗಿಷ್ಠರಿಗೆ ಕೊಡುತ್ತೇನೆ. ಕೊಟ್ಟ ಕೂಡಲೆ ರೋಗವು ಗುಣವಾಗುತ್ತಲಿವೆ. ಇದು ಬಹು ಒಳ್ಳೇ ಔಷಧವಾಗಿದೆ

[illegible] ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ [illegible] ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ದೊರಕುವದು. ಇದಲ್ಲದೆ ಕೆಳಗಿನ ವಿಳಾಸದಾರರಲ್ಲಿ ವಿಶೇಷ —

[illegible] ಗ್ರೇಟ್ ಇಂಡಿಯನ್ ಔಷಧಗಳ ಕಂಪನಿ,

[illegible] ಮದ್ರಾಸ್.

ಅದ್ಭುತ ಜನವರಿ ಪ್ರಜೆಂಟೇಷನ್ ವಾಚು!

ಈ ಪಕ್ಕದಲ್ಲಿ ತೋರಿಸಿರುವ [illegible] ಲಿವರ್ ವಾಚು [illegible] ಓಪನ್ ಫೇಸ್ [illegible] ಭದ್ರವಾದ ಗಡಿಯಾರ [illegible] ಗ್ಯಾರೆಂಟೀ ಕ್ರಯ ರೂ ೫—೮—೦

[illegible] ರೂ ೧೦೦೦೦ [illegible]

[illegible] ಕ್ರಯ ೦—೮—೦

[illegible] ಕ್ರಯ ೧—೧೦—೦

[illegible] ಕ್ರಯ ೧—೪—೦

[illegible] ಕ್ರಯ ೩—೧—೦

ವಿಳಾಸ,—ಫ್ರಾಂಕಿನ್ ವಾಚ್ ಕಂಪನಿ,

ಪಾರ್ಕ್ ಟವನ್ ಮದರಾಸ್.

ಹೋಮೋಸಿಯ

Homocea

[illegible]

ಈ [illegible] ಆಸ್ಟ್ರೇಲಿಯ [illegible] ಕೆಲವೇ ವರುಷಗಳಲ್ಲಿ ಪ್ರಸಿದ್ಧವಾಗಿದೆ

ಈ ತೈಲವು [illegible] ಉಪಯೋಗಿಸಿದ [illegible] ಗುಣವನ್ನು [illegible] ಸರ್ಟಿಫಿಕೇಟುಗಳನ್ನು ಕೊಟ್ಟಿದ್ದಾರೆ [illegible] ವಾಸಿಯಾಗುವದು

ಈ ತೈಲವು [illegible] ಸೊಂಟನೋವು, ಪಾರ್ಶ್ವವಾಯು [illegible] ಉಳುಕು, [illegible] ಗಳ್ಳೆಗಳು, [illegible] ನೋವು, [illegible] ಗಾಯಗಳು, [illegible] ಸೊಳ್ಳೆ ಮತ್ತು [illegible] ಚುಚ್ಚಿರುವದು [illegible] ಕೊಂಡದ್ದು, [illegible] ಮೊದಲಾದ ನಾನಾ ಬಾಧೆಗಳನ್ನು ಹುಟ್ಟಡಗಿಸುತ್ತದೆ [illegible] ಸೊಳ್ಳೆ ಹತ್ತಿರ ಸೇರುವದಿಲ್ಲ

ಕ್ರಯ — ಸಣ್ಣ ಡಬ್ಬಿ ೧ ಕ್ಕೆ ೧ ರೂ , ದೊಡ್ಡದಕ್ಕೆ ರೂ ೨—೮ ಆ , ಒಂದೇ ಸಲ [illegible] ಟಪ್ಪಾಲ್ ಖರ್ಚು ಮಾಫಿ [illegible] ಡಬ್ಬಿಗಳಲ್ಲಿರುವದಕ್ಕಿಂತ [illegible] ರೂ ೨—೮ ಆ [illegible] ತರಿಸಿಕೊಳ್ಳುವವರಿಗೆ ಟಪ್ಪಾಲ್ ಖರ್ಚು ಮಾಫಿ ಬಿಡುತ್ತೇವೆ

✦✦✦✦✦✦✦✦

ಹೋಮೋಸಿಯಾ ಯಂಬ್ರೋಕೇಷನ್.

ಈ ತೈಲವು [illegible] ನೋವುಗಳಿಗೆ ಉಪಯೋಗಿಸತಕ್ಕದ್ದು [illegible] ಇದರಲ್ಲಿ ಹೋಮೋಸಿಯದ ಗುಣಗಳು ಬಹು [illegible] ಇರುತ್ತವೆ ಅದಕ್ಕಿಂತಲೂ ಇದರಲ್ಲಿ [illegible] ಹೊಸ ಭಾಗವಿರುತ್ತದೆ ಇದರ [illegible] ಬಹು ಬೇಗನೆ [illegible] ಡಬ್ಬಿಗಳಲ್ಲಿ [illegible] ೧ ರೂ [illegible] ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ ಎಲ್ಲಾ ಊರುಗಳಲ್ಲಿಯೂ ದೊರೆಯುವದು

ಈ ಔಷಧಗಳ ವಿವರಣೆಯೂ, ಸರ್ಟಿಫಿಕೇಟುಗಳೂ ಉಳ್ಳ ನೋಟೀಸುಗಳನ್ನು ಅಪೇಕ್ಷಿಸಿದರೆ ಕಳಹಿಸುವೆವು

ವಿಳಾಸ —ಹೋಮೋಸಿಯಾ ಕಂಪನಿ [illegible] ಮದರಾಸ್

WANTED WILD ANIMALS.

ಬೇಕಾಗಿದೆ. ಬೇಕಾಗಿದೆ

5 41

ಎಲ್ಲಾ ಜಾತಿಯ ಕಾಡು ಮೃಗಗಳು ಮೈಸೂರು ಜೂ ಸೂಪರಿಂಟೆಂಡೆಂಟ್ ಮಿ॥ ಹ್ಯೂಜಸ್ ರವರು ಕೊಂಡುಕೊಳ್ಳುವರು

Apply to—Mr Hughes, Mysore Zoo.

"ಭೂಗೋಳ" ಸಂಗ್ರಹ—ಐದನೇ ಮುದ್ರಣ.

6 2

ಮೈಸೂರು ಶಿವರಾಂಪೇಟೆ ವೆಸ್ಲಿಯನ್ ಮಿಷನ್ ಬಾಲಿಕರ ಪಾಠಶಾಲೆಯ ಹೆಡ್ ಮಾಸ್ಟರಾದ ಮಿ॥ ಟಿ. ಎಂ ರಾಮಸ್ವಾಮಿಯವರಿಂದ ರಚಿಸಲ್ಪಟ್ಟಿರುವ ಈ ಪುಸ್ತಕವನ್ನು ಈಗ ಮೈಸೂರು ವಿದ್ಯಾಭ್ಯಾಸದ ಇಲಾಖೆಯವರು ದೇಶೀಯ ಪರೀಕ್ಷೆಗಳಿಗೂ ಎಲ್ಲಾ ಪಾಠಶಾಲೆಗಳಿಗೂ ಟೆಕ್ಸ್ಟ್ ಬುಕ್ಕಾಗಿ ನಿಯಮಿಸಿರುತ್ತಾರೆ. ಈ ಪುಸ್ತಕವನ್ನು ಬಹಳವಾಗಿ ತಿದ್ದಿ ಹೊಸ ವಿಷಯಗಳನ್ನು ಅನೇಕವಾಗಿ ಕೂಡಿಸಿ ಪ್ರಕಟಿಸಲಾಗಿದೆ ೧೦೦ ಪ್ರತಿಗಳು ಅಥವಾ ಅದಕ್ಕಿಂತಲೂ ಹೆಚ್ಚಾಗಿ ಒಂದೇ ಸಲ ಕೊಂಡುಕೊಳ್ಳುವವರಿಗೆ [illegible] ಡಿಸ್ಕೌಂಟು ಕೊಡಲಾಗುವದು ಪ್ರತಿಗಳನ್ನು ಒಟ್ಟಾಗಿ ತರಿಸಿಕೊಳ್ಳುವವರು—ದಿ ಸೂಪರಿಂಟೆಂಡೆಂಟ್, ವೆಸ್ಲಿಯನ್ ಮಿಷನ್ ಪ್ರೆಸ್, ಮೈಸೂರು—ಈ ವಿಳಾಸಕ್ಕೂ ಬಿಡಿ ಪ್ರತಿಗಳನ್ನು ತರಿಸಲಪೇಕ್ಷಿಸುವ ವಿದ್ಯಾರ್ಥಿಗಳೇ ಮುಂತಾದವರು—ದಿ ಮ್ಯಾನೇಜರ್, ಸಿ ಎಲ್. ಎಸ್. ಬುಕ್ ಡಿಪೋ, ಮೈಸೂರು—ಈ ವಿಳಾಸಕ್ಕೂ ಬರೆಯತಕ್ಕದ್ದು. ಕ್ರಯ—೧ ಪ್ರತಿಗೆ ೪ ಆಣೆ, ಪೋಸ್ಟೇಜು ೧ ಆಣೆ

ಮುದ್ರಾಮಂಜೂಷ—ಎರಡನೆಯ ಮುದ್ರಣ.

ಕ್ರಯ, ರೂ ೧—೮—೦ 7 4

ವಿದ್ಯಾರ್ಥಿಗಳೂ ವಿದ್ಯಾವಂತರೂ ಸಾಮಾನ್ಯ ಪ್ರಜೆಗಳೂ ಅಧಿಕಾರಸ್ಥರೂ ಲೋಕವ್ಯವಹಾರಾದಿಗಳನ್ನು ಪರಿಷ್ಕಾರವಾಗಿ ಕಲಿತುಕೊಳ್ಳುವುದಕ್ಕೆ ವಿಶೇಷ ಸಹಕಾರಿಯಾದ "ಮುದ್ರಾಮಂಜೂಷ" ವೆಂಬೀ ನವರಸಯುಕ್ತವಾದ ಕನ್ನಡ ಗ್ರಂಥವು ಈಗಿನ ವ್ಯಾಕರಣಕ್ಕೆ ಸರಿಯಾಗಿ ತಿದ್ದಿ, ಬಹು ದೊಡ್ಡದಾದ ಹೊಸ ಅಕ್ಷರದಿಂದ ಒಳ್ಳೇ ಗ್ಲೇಜು ಕಾಗದದ ಮೇಲೆ ಅಚ್ಚು ಹಾಕಿ, ಪ್ರಕಟಿಸಲ್ಪಟ್ಟಿದೆ. 'ಹೆಮ್ಮೆ ಅಷ್ಟಪತ್ರ, ಸೆಕ್ಷನ್ ಜೋಲಿಗೆ, ಸುಂದರವಾದ ಕ್ಯಾಲಿಕೋ ಬೈಂಡು. ಬಹು ಶುದ್ಧವಾದ ಪ್ರತಿ. ಇದಕ್ಕೆ ಚಾಣಕ್ಯರ ನೀತಿ," "ಚಂದ್ರಗುಪ್ತ ಚಾಣಕ್ಯರ ಕಥೆ" ಎಂಬೀ ಹೆಸರುಗಳೂ ಉಂಟು. ಇಂಥಾ ಸರ್ವೋತ್ತಮವಾದ ಪುಸ್ತಕವನ್ನು ಕನ್ನಡಿಗರೆಲ್ಲಾ ತರಿಸಿ ಓದಿ, ಪ್ರಯೋಜನವನ್ನು ಪಡೆಯುವರೆಂದು ಹಾರೈಸುತ್ತೇವೆ. ಕ್ರಯ ೧ ಪ್ರತಿಗೆ ರೂ ೧—೮—೦, ಪೋಸ್ಟೇಜು ೩ ಆಣೆ. ವಿ. ಪಿ. ಪಿ. ತರಿಸಿಕೊಂಡರೆ ರೂ. ೧—೧೧—೦ ಬೀಳುವುದು. ೧೦೦ ಅಥವಾ ಅದಕ್ಕಿಂತ ಹೆಚ್ಚು ಪ್ರತಿಗಳನ್ನು ತರಿಸಿಕೊಳ್ಳುವ ಪುಸ್ತಕವ್ಯಾಪಾರಿಗಳಿಗೆ ಶೇಕಡಾ ೨೫ ರೂಪಾಯಿನಂತೆ ಡಿಸ್ಕೌಂಟು ಕೊಡಲಾಗುತ್ತದೆ. ಬೇಗ ಈ ವಿಳಾಸಕ್ಕೇನೇ ಬರೆಯಿರಿ —

ವಿಳಾಸ—ಮ್ಯಾನೇಜರ್. ಸಿ. ಎಲ್. ಎಸ್. ಬುಕ್ ಡಿಪೋ,

ಮೈಸೂರು.

P. SUBBAROY'S

World Renowned and most Efficacious Ayurvedic Medicines.

ಪಿ. ಸುಬ್ಬರಾಯರವರ

ಲೋಕಪ್ರಸಿದ್ಧವಾದ ಮತ್ತು ಅತ್ಯಂತ ಗುಣಕಾರಿಯಾದ ಆಯುರ್ವೇದ ಔಷಧಗಳು.

11-12

೧. ಪುಷ್ಟಿರಸಾಯನ.—ಇದರ ಸೇವನೆಯಿಂದ ನರಗಳ ಸಂಬಂಧವಾದ ಮತ್ತು ಇತರ ವಿಧವಾದ ಎಲ್ಲಾ ಶರೀರದ ದುರ್ಬಲಗಳೂ ಹೋಗಿ, ಹೊಟ್ಟೆಯಲ್ಲಿ ಅಗ್ನಿ ಉಂಟಾಗಿ, ದೇಹವು ಪುಷ್ಟಿಹೊಂದುವದು ಪುಷ್ಟಿಯನ್ನು ಕಳೆದುಕೊಂಡ ಚಿಕ್ಕವಯಸ್ಸಿನವರಿಗೆ ಇದು ತಕ್ಕ ಔಷಧವು ಇದರಿಂದ ಶರೀರದ ಪ್ರತಿ ಅವಯವದ ನೋವೂ, ಅಶಕ್ತಿಯೂ ಹೋಗಿ, ಪುಷ್ಟಿಯೂ, ಬಲವೂ ಉಂಟಾಗುವವು. ಪೆಟ್ಟಿಗೆ ೧ಕ್ಕೆ ರೂ ೨ ವಿ ಪಿ ಛಾರ್ಜಿ ೬ ಆಣೆ

೨೦ ಅತ್ಯುತ್ತಮವಾದ ಕಸ್ತೂರಿ —ಕಾಶ್ಮೀರದಿಂದ ತರಿಸಿರುವದು ಅತ್ಯುತ್ತಮವಾದದ್ದು ಮತ್ತು ಒಂದೇ ರಖಂ ಇರತಕ್ಕದ್ದು ತೋಲಾ ೧ಕ್ಕೆ ರೂ ೬೪ ಬೆಲೆಯಾಗಿ ಒಂದು ರೂಪಾಯಿಗೂ ದೊರಕುತ್ತದೆ. ವಿ ಪಿ ಛಾರ್ಜಿ ಅಲಾಯಿದ

೨೧ ಸುಗಂಧ ನಸ್ಯಚೂರ್ಣ —ಈ ನಸ್ಯಪುಡಿಯು ಬಹಳ ಸುವಾಸನಾ ಯುಕ್ತವಾಗಿರೋಣದರಿಂದ ಇದನ್ನೇ ಪ್ರತ್ಯೇಕವಾಗಿ ಹಾಕಿಕೊಳ್ಳಬಹುದು ನೀವು ದಿನವೂ ಹಾಕಿಕೊಳ್ಳುವ ಸಾಮಾನ್ಯ ನಸ್ಯಕ್ಕೆ ಈ ಸುಗಂಧಪುಡಿಯಲ್ಲಿ ಒಂದೆರಡು ಚಿಟಿಕೆಯನ್ನು ಬೆರಸಬೇಕು ಹೀಗೆ ಬೆರಕೆಮಾಡಿದಮೇಲೆ ನಸ್ಯವು ಬಹು ಸುವಾಸನೆಯಾಗಿಯೂ ಮನೋಹರವಾಗಿಯೂ ಆಗುವುದು ಇದರಿಂದ ನಸ್ಯಹಾಕಿಕೊಳ್ಳುವವರ ಬಳಿ ಬಡಿಯುವ ಕಠಿಣವಾದ ಕೆಟ್ಟವಾಸನೆ ಇರುವುದೇ ಇಲ್ಲ ಸುವಾಸನೆಯು ಬಹಳಹೊತ್ತು ಇರುತ್ತದೆ ಈ ಪುಡಿ ಬೆರಸಿದ ನಸ್ಯ ಬಹಳ ಕಾಲದ ತನಕ ಕೆಡುವುದಿಲ್ಲ ಇಂಥಾ ನಸ್ಯಹಾಕಿಕೊಂಡಲ್ಲಿ ಶೀತ, ಅರೆತಲೆನೋವು, ವಾತ ಮೊದಲಾದವು ನಿವಾರಣೆಯಾಗುತ್ತವೆ. ಆಗಾಗ್ಗೆ ನಸ್ಯಹಾಕಿಕೊಳ್ಳಬೇಕೆಂಬ ಇಚ್ಛೆಯನ್ನು ಕಡಿಮೆಮಾಡುವುದು ಇದರಲ್ಲಿ ನಶಾಸಾಗರ ಖಂಡಿತವಾಗಿ ಸೇರಿರುವುದಿಲ್ಲ. ಇಂಥಾ ಒಂದು ಡಬ್ಬಿ ನಸ್ಯವು ಒಂದು ತಿಂಗಳ ತನಕ ಬರುತ್ತೆ ಕ್ರಯ ಒಂದು ಡಬ್ಬಿಗೆ ೬ ಆಣೆ ೧ ರಿಂದ ೩ ಡಬ್ಬಿ ತನಕ ವಿ ಪಿ ಛಾರ್ಜಿ ೩ ಆಣೆ ಹೆಚ್ಚು ವಿ ಪಿ ಛಾರ್ಜಿ ೪ ರಿಂದ ೭ ಡಬ್ಬಿ ತನಕ ೪ ಆಣೆ ೭ ರಿಂದ ೧೨ ಡಬ್ಬಿ ವರೆಗೆ ವಿ ಪಿ ಛಾರ್ಜಿ ೬ ಆಣೆ

೨೨ ರಕ್ಷಾಮೃತಂ—ಸಸ್ಯವರ್ಗಗಳಲ್ಲಿ ಸೇರಿದ ಅನೇಕ ಅಪೂರ್ವ ಮೂಲಿಕೆಗಳಿಂದ ಮಾಡಲ್ಪಟ್ಟಿರುವ ಈ ಚೂರ್ಣವು ಕಾಫಿ, ಟೀಯಲೆಗೆ ಬದಲಾಗಿ ಉಪಯೋಗಿಸುವುದಕ್ಕೋಸ್ಕರವೇ ತಯಾರುಮಾಡಲ್ಪಟ್ಟಿರುತ್ತದೆ ಕಾಫಿ, ಟೀಯಲೆಗಳಲ್ಲಿರುವ ದುರ್ಗುಣಗಳು ಇದಕ್ಕಿಲ್ಲ ಕಾಫಿ ಪುಡಿಯನ್ನು ಯಾವ ಕ್ರಮದಲ್ಲಿ ಉಪಯೋಗಿಸುತ್ತೀವೆಯೋ ಆ ಕ್ರಮದಲ್ಲಿಯೇ ಇದನ್ನೂ ಉಪಯೋಗಿಸಿದರೆ ವಿಶೇಷ ರುಚಿಕರವಾದ ಪಾನವಾಗುವುದು. ಶಿಶುಗಳು ಮೊದಲುಗೊಂಡು ವೃದ್ಧಾಪ್ಯದಲ್ಲಿರುವವರ ವರೆಗೆ ಎಲ್ಲಾ ವಯಸ್ಸಿನ ಸ್ತ್ರೀಪುರುಷರೂ ಉಪಯೋಗಿಸಬಹುದಾಗಿದೆ ಜ್ವರ, ಸನ್ನಿ ಬಸರು, ಕೆರಿಗೆ, ವಾಂತಿಭೇದಿ, ಈ ಮೊದಲಾದವುಗಳು ಸಂಭವಿಸಿರುವ ಕಾಲಗಳಲ್ಲಿಯೂ ಈ ರಕ್ಷಾಮೃತ ಚೂರ್ಣದ ಕಷಾಯವನ್ನು ಹಾಲನ್ನು ಬೆರಸಿಯಾಗಲಿ ಬೆರಸದೆಯಾಗಲಿ ಸಮಯಾನುಸಾರವಾಗಿ ಸೇವಿಸಿದರೆ ಜನರನ್ನು ಸಮಸ್ತ ವ್ಯಾಧಿಗಳಿಂದಲೂ ಖಂಡಿತವಾಗಿ ಬಿಡುಗಡೆ ಮಾಡುವುದಲ್ಲದೆ, ಯಾವದೊಂದು ರೋಗವೂ ಕಾಲುಹಾಕಿಕೊಳ್ಳದಂತೆ ಕಾಪಾಡುವುದು ಪಿತ್ತವಾಯುವು, ಗುಲ್ಮ ಉಬ್ಬಸವು, ಕ್ಷಯವು, ಅಜೀರ್ಣವು, ಮಲಬದ್ಧತೆಯು, ತಲೆನೋವು ಈ ಮೊದಲಾದ ರೋಗಗಳು ನಿವಾರಣೆಯಾಗುತ್ತವೆ ಪ್ರಾಣಾಧಾರವಾಗಿ ಇರುವಂಥಾ ರಕ್ತವನ್ನು ಶುದ್ಧಿಮಾಡಿ, ಧಾತುವನ್ನು ವೃದ್ಧಿಪಡಿಸಿ ದೇಹಾರೋಗ್ಯವನ್ನು ಕೊಡುತ್ತದೆ ಅಗ್ನಿಮಾಂದ್ಯ ಉಳ್ಳವರಿಗೂ, ಮಧುಮೂತ್ರ ಮತ್ತು ಅತಿಮೂತ್ರ ರೋಗಿಗಳಿಗೂ ವಿಶೇಷ ಅಪೂರ್ವವಾದಂಥಾ ಚೂರ್ಣವು ಇದನ್ನು ಬಿಟ್ಟರೆ ಬೇರೊಂದಿಲ್ಲ

ಇದನ್ನು ಕ್ರಮಾನುಸಾರ ತಪ್ಪದೆ ಉಪಯೋಗಿಸುತ್ತಾ ಬಂದರೆ ಮಧುಮೂತ್ರ ರೋಗಿಗಳ ಶರೀರದಿಂದ ಹೊರಡುವ ಬೆವರಿನಲ್ಲಿ ರತಕ್ತ ಸಕ್ಕರೆಯನ್ನೂ ವಿಶೇಷವಾದ ಬೆವರನ್ನೂ ಕಡಿಮೆ ಮಾಡಿ, ಮೂತ್ರರೋಗದ ಬೇರನ್ನೇ ನಿರ್ಮೂಲ ಮಾಡುವುದು ದೇಹದ ಉಷ್ಣವನ್ನು ಶಾಂತಿಮಾಡುವುದು, ಮೆದುಳನ್ನು ಬಲಪಡಿಸಿ ಜ್ಞಾಪಕಶಕ್ತಿಯನ್ನು ವೃದ್ಧಿಗೊಳಿಸುವುದು ವಿದ್ಯಾರ್ಥಿಗಳು, ವಕೀಲರು, ಉದ್ಯೋಗಸ್ಥರು, ವಿರೋಧಕಾರಿಯಾದ ಗುಣವುಳ್ಳ ಕಾಫಿ, ಟೀಯಲೆಯನ್ನು ಖಂಡಿತವಾಗಿ ಬಿಟ್ಟು, ಈ ರಕ್ಷಾಮೃತ ಚೂರ್ಣವನ್ನೇ ಉಪಯೋಗಿಸುತ್ತಾ ಬಂದಲ್ಲಿ ಇದು ಅಪೂರ್ವವಸ್ತುವಾಗಿ ಪರಿಣಮಿಸುವುದು ಇಪ್ಪತ್ತು ದಿನಗಳಿಗೆ ಸಾಕಾಗುವಷ್ಟು ಚೂರ್ಣವುಳ್ಳ ಡಬ್ಬಿ ೧ಕ್ಕೆ ಕ್ರಯ ೩ ಆಣೆ ವಿ ಪಿ ಛಾರ್ಜಿ ೩ ಆಣೆ ಹೆಚ್ಚಾಗುವುದು ಮುಂಗಡ ೪ ಆಣೆ ಸ್ಟಾಂಪುಟ್ಟು ಬರೆದಲ್ಲಿ ಒಂದು ಡಬ್ಬಿ ಟಪಾಲು ಕಳುಹಿಸಲ್ಪಡುತ್ತೆ

ಕಾಗದವನ್ನು ಇಂಗ್ಲಿಷ್ ಅಥವಾ ತಮಿಳಿನಲ್ಲಿ ಬರೆಯಿರಿ.

Apply to —**P. SUBBAROY,**

Porto Novo, South Arcot.

ವಿಳಾಸ:—ಪಿ. ಸುಬ್ಬರಾಯ್,

ಪೋರ್ಟನೋವೋ, ದಕ್ಷಿಣ ಆರ್ಕಾಟ್ ಜಿಲ್ಲಾ.

CHAMBERLAIN'S PAIN BALM.

ಚೇಂಬರ್ಲೇನ್ ಯವರು ಮಾಡಿದ ನೋವುಹರ ಔಷಧವು.



15-3

ಬೆನ್ನುಲುಬಿನಲ್ಲಿನ ನೋವು, ಪಕ್ಕೆಗಳಲ್ಲಿ ಆಗುವ ನೋವು, ಖಂಡಗಳಲ್ಲಿ ಹುಟ್ಟುವನೋವು, ತಲೆನೋವು, ಬಚ್ಚಿದ ಕತ್ತೆಗಳ ನೋವು, ವಾಯುನೋವು —ಇವುಗಳನ್ನೆಲ್ಲಾ ಸಂಪೂರ್ಣವಾಗಿ ವಾಸಿಮಾಡುವಂಥಾ ಔಷಧ ವಾಯುನೋವೆಂದರೇನು?

ಕೀಲುಗಳಲ್ಲೂ ಮಣಿಕಟ್ಟುಗಳಲ್ಲೂ ಗಾಯವಾಗುವುದು, ಊದಿಕೊಳ್ಳುವುದು, ಕಠಿಣವಾದ ಕಳೆಯುವ ಬಾಧೆ ಖಂಡಗಳಲ್ಲಿ ಇರಿಯುವುದು, ವಿಶ್ರಾಂತಿಕೊಡದೆ ಇರುವುದು, ನಿದ್ದೆಹತ್ತದೆ ಇರುವುದು—ಇದೇ ಇದೆಲ್ಲಾ ನಿಮಗೆ ಯಾವಾಗ ಉಂಟಾಗುವುದೋ ಆಗ್ಗೆ ನಿಮಗೆ ವಾಯುರೋಗ ಬಂದಿದೆ ಎಂದು ತಿಳಿಯತಕ್ಕದ್ದು

ಆಗ ಚೇಂಬರ್ಲೇನ್ ಯವರು ಮಾಡಿದ ನೋವುಹರ ಔಷಧವನ್ನು ಉಪಯೋಗಿಸಿ

ಮೊದಲನೇ ಸಲ ಇದನ್ನು ಹಾಕಿ ಉಜ್ಜಿದ ಕೂಡಲೆ ಹಿತಕರವಾದ ಒಂದು ತರಹಾ ಕಾವು ಮೈಯೊಳಕ್ಕೆ ವ್ಯಾಪಿಸುತ್ತದೆ ಒಡನೆಯೇ ನೋವೆಲ್ಲಾ ಸಂಪೂರ್ಣವಾಗಿ ಪರಿಹರಿಸಲ್ಪಡುತ್ತದೆ ಮನಸ್ಸಿಗೆ ಉಲ್ಲಾಸವಾಗುತ್ತೆ ಅದನ್ನೇ ಆಗಿಂದಾಗ್ಗೆ ಹಾಕಿ ಉಜ್ಜುತ್ತಾ ಬಂದರೆ ಈ ವಾಯುವಿನ ಜುಟ್ಟನ್ನೇ ಕಿತ್ತುಹಾಕಿಬಿಡುತ್ತದೆ

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ

ಕೈಯಿಂದ ಮುಟ್ಟಿದ್ದೇನೂ ಅಲ್ಲ.

ಇದು ಎಲ್ಲೆಲ್ಲೂ ಬಿಕರಿಯಾಗುವುದು | ಸಣ್ಣ ಸೀಸೆಗೆ ೧ ರೂಪಾಯಿ | ದೊಡ್ಡ ಸೀಸೆಗೆ ೨ ರೂಪಾಯಿ

ನೀವು ವಿಲಾಯತಿಯಿಂದ ಯಾವ ಸಾಮಾನುಗಳನ್ನಾದರೂ ತರಿಸಿಕೊಳ್ಳಬೇಕಾಗಿದ್ದರೆ 19 2

ಬ್ರೈಡ್ ಮತ್ತು ಈಸ್ಟ್ಲೆಂಡ್,

೭೯—೩೪, ಸಿಟಿ ರೋಡ್, ಲಂಡನ್, ಇ ಸಿ

ಎಂಬೀ ವಿಳಾಸಕ್ಕೆ ಬರೆ ಕಳಿಸಿ, ಕಾಗದ ಬರೆಯಿರಿ ಈ ಕಂಪನಿಯವರು ಪೇಟೆಂಟ್ ಔಷಧಿಗಳನ್ನು, ಆಹಾರಿಗ ನುಕ್ಕಳಿಗ ಕೊಡುವಂಥಾ, ಯಂತ್ರಗಳಿಂದಲೇ ತಯಾರಾದಂಥಾ ಆಹಾರಗಳನ್ನೂ, ಇನ್ನೂ ನಾನಾತರದ ಪದಾರ್ಥಗಳನ್ನೂ ಇಟ್ಟು ಬಿಕರಿಮಾಡುತ್ತಾರೆ ಅವರು ಬಹು ವಿಶೇಷವಾದ ಕಮಿಷನ್ ತೊಟ್ಟು, ಸಾಧ್ಯವಿದ್ದಷ್ಟು ಅಗ್ಗವಾಗಿ ಬೇಕಾದ ಸಾಮಾನುಗಳನ್ನೇ ಆರಿಸಿ ಮರಿಟಪಾಲಿನಲ್ಲಿ ಕಳುಹಿಸಿಕೊಡುವರು

COMMERCIAL CLASSES.

Hardwicke College, Mysore.

These classes will be opened, 8th. Jan., 1906

TEACHER—Mr S Gnanaiah, of the Reid College, Lucknow holder of the Remington Gold Medal for Typewriting

HOURS—7—10 a m, & 7—8 p m

FEES—Typewriting, Rs 1—8—0 per month, Shorthand Re 1, Bookkeeping, Re 1 Commercial Correspondence & Commercial Geography, (if desired), Re 1

SCHOOL STUDENTS AT HALF-FEES.

ADMISSION FEE—Re 1 12 6

Application for admission to be made to

The PRINCIPAL, Hardwicke College.

ಬೇಗ ಜಾಹಿರಾತ ಓದಿ ನೋಡಿರಿ.

ಲೋಕೋಪಕಾರವಾದ ಹರಪನಹಳ್ಳಿ ತೆಗ್ಗಿನ ಮಠದ ಜೋತಿಷ ಆಫೀಸಿನದ್ವಾರಾ ಈ ಹರಪನಹಳ್ಳಿಯಲ್ಲಿ ಯಾರಿಂದ ಈ ಜೋತಿಷ ಪಾಠಶಾಲೆಗಳು ಏರ್ಪಟ್ಟವೋ ಅವರಿಂದ ಮಾಡಲ್ಪಟ್ಟ ಪರಾಭವ ಪ್ಲವಂಗ ಕೀಲಕ ಸೌಮ್ಯ ಸಾಧಾರಣ ಫಲ ಸಹಿತ ೫ ವರ್ಷದ ಅನುಭವದಪ್ರಖ್ಯಾತವಾದ ಸಿದ್ಧಾಂತ ಪಂಚಾಂಗವು—ಈ ಆಫೀಸಿನವರ ತಾತ್ಪರ್ಯವೇನೆಂದರೆ—(ಪ್ರತ್ಯಕ್ಷಂ ಜ್ಯೋತಿಷಂ) ಎಂಬ ಶಾಸ್ತ್ರವಿರಲಾಗಿ (ಪಂಚಭವತಿ ಪಂಚನಭವತಿ) ಎಂದು ಹೇಳುವ ಅಶಾಸ್ತ್ರೀಯವಾದ ಮಾತನ್ನು ಭಂಗಪಡಿಸಿ ಶಾಸ್ತ್ರವು ಪೂರ್ಣ ನಿಶ್ಚಯವೆಂದು ತೋರುವದಕ್ಕಾಗಿಯೂ ಮತ್ತು ಈ ಪ್ರಪಂಚದಲ್ಲಿ ವರ್ತಮಾನ ವಿಷಯದಲ್ಲಿಯೂ ಭವಿಷ್ಯತ್ ಕಾಲಗಳ ವಿಷಯಗಳಲ್ಲಿಯೂ ಸಹ ಆಗ ತಕ್ಕ ಸುಭಿಕ್ಷ ದುರ್ಭಿಕ್ಷ ರೋಗ ನಿರೋಗ ಮಳೆ ಬೆಳೆ ಮಾರಾಟ ಪ್ಲೇಗು ರೋಗ ಭಯನಿವಾರಣ ಯಾವ ಯಾವ ಕಾಲದಲ್ಲಿ ಹ್ಯಾಗಾಗುತ್ತದೋ ಅದನ್ನು ಬಹು ಗ್ರಂಥಗಳನ್ನು ಪರಿಶೋಧಿಸಿ ಬರೆದಿದೆ ಮತ್ತು ವರ್ತಮಾನ ಕಾಲದಲ್ಲಿ ಶುಭಾಶುಭ ಕಾರ್ಯಗಳು ಮಾಡುವದಕ್ಕಾಗಿ ಇತರ ಸಿದ್ಧಾಂತಿಗಳನ್ನು ಕೇಳದೆ ಈ ಪಂಚಾಂಗ ಸಹಾಯದಿಂದ ತಿಳಿದುಕೊಳ್ಳಬಹುದು ಪಂಡಿತರು ಇದ್ದಾಗ್ಯೂ ಕೂಡಾ ತಾತ್ಕಾಲದಲ್ಲಿ ಇಷ್ಟ ಕಾರ್ಯ ವಿಷಯ ಶ್ರದ್ಧೆಯಿಂದ ಹೇಳಲಾರರು ನಾವು ಲೋಕೋಪಕಾರಕ್ಕಾಗಿ ಪಂಡಿತರಿಗೆ ಸಮ್ಮತವಾಗಿಯೂ ಇತರರಿಗೆ ಬೋಧಕರೂಪವಾಗಿಯೂ ಇತರ ಕನ್ನಡ ಪಂಚಾಂಗಗಳು ಬಹು ಸ್ಥೂಲವಾಗಿಯೂ ವಿಷಯಗಳೂ, ಪುಟಗಳೂ ಬಹಳ ಕಮ್ಮಿಯಾಗಿಯೂ ಇರುವ ಪಂಚಾಂಗಕ್ಕಿಂತ ಫಲದಿಂದ ಶತ ಶುಭಾಧಿಕ ಎಲ್ಲಾ ಫಲದಿಂದ ತುಂಬಿಕೊಂಡಿರುವ ಪಂಚಾಂಗವು ಈ ಪತ್ರಿಕೆಗೆ ಚಂದಾದಾರರಾಗಿರುವ ಸುಶೀಲರೆಲ್ಲರೂ ೧-೧ ಪ್ರತಿ ಮಾತ್ರವೇ ತರಿಸಿಕೊಂಡು ಇದರಲ್ಲಿರುವ ಸೌಲಭ್ಯವಾದ ಫಲಾಮೃತವನ್ನು ಸ್ವೀಕರಿಸಿ ಈ ಆಫೀಸನ್ನು ವೃದ್ಧಿಪಡಿಸಬೇಕೆಂದು ಈ ಪಂಚಾಂಗ ೧ಕ್ಕೆ ೩ ಆಣೆ ಕ್ರಯವು ಹೆಚ್ಚಾದ್ದಲ್ಲ ಅಂದರೆ ೫ ವರ್ಷದ ಫಲಕ್ಕೆ ವರ್ಷ ೧ಕ್ಕೆ ಹಂಚಿದರೆ ೯ ಪೈ ಬೀಳುತ್ತದೆ ಮುಂದೆ ಆಗತಕ್ಕ ಫಲಾಫಲಗಳು ತಿಳಿಯೋಣದರಿಂದ ಬುದ್ಧಿವಂತರು ದುಷ್ಟಫಲ ತಪ್ಪಿಸಿಕೊಳ್ಳಬಹುದು ಈ ಪಂಚಾಂಗವು ಒಳ್ಳೇ ಕಾಗದದ ಉತ್ತಮ ಅಕ್ಷರದಿಂದಲೂ ನಾಲ್ವತ್ತು ಪುಟಗಳುಳ್ಳದ್ದಾಗಿದೆ ಘಟವಾದರೂ ಮೊದಲ್ಲ ನಮೂನೆಯಲ್ಲೇ ಅದೆ ಕಾರಣ ನಾನು ಹೇಳದನೆಯು ವ್ಯರ್ಥ ಆಗಬಾರದಾಗಿ ನಿಮ್ಮಂಥ ಘನತೆ ಹೊವಿದವರಿಗೆ ಮನೋಲ್ಲಾಸ ಹೊಂದಿಸಬೇಕೆಂದು ಇಷ್ಟವಿದೆ ಈ ಪಂಚಾಂಗ ೧ ತರಿಸಿ ಆದಿಯಿಂದ ಅಂತ್ಯದ ವರೆಗೂ ಓದಿನೋಡಿರಿ ನಿಮ್ಮ ಮನಸ್ಸಿಗೆ ಬಂದರ ನಿಮ್ಮ ಇಷ್ಟಮಿತ್ರರಿಗೆ ಬೋಧಿಸಿರಿ ನಿಮ್ಮ ಮನಸ್ಸಿಗೆ ಬಾರದಪಕ್ಷದಲ್ಲಿ ಸದರಿ ಪಂಚಾಂಗವು ಪುನಃ ನಿಮ್ಮ ಸಹ್ಯಾ ವಿ ಪಿ ದ್ವಾರಾ ನಮಗೆ ವಾಪಸು ಕಳುಹಿಸಿರಿ ನಿಮ್ಮ ಹಣ ಕೊಟ್ಟು ವಾಪಸು ತೆಗೆದುಕೊಳ್ಳುತ್ತೇವೆ ಪಂಚಾಂಗ ವಾಪಸು ಬರೋಣದರಿಂದ ಪೋಷ್ಟು ಛಾರ್ಜಿ ಮಾತ್ರ ಅರೆ ದಂಡಾರಿ ಆಗುತ್ತದೆ ಅದು ರೂ ಚಿಂತೆಯಿಲ್ಲ. ನಿಮ್ಮಂಥ ಸಜ್ಜನರ ನೇತ್ರಕ್ಕೆ ಸೇರಿದ್ದರೆ ಸಾಕು ಅದು ನಮಗೆ ಲಾಭವಾಗುತ್ತದೆ ಹಣ ಸಂಪ್ರಹ ಮಾಡಬೇಕೆಂಬ ಉದ್ದೇಶ ಸ್ವಲ್ಪವಾದರೂ ಇಲ್ಲ ಅಲಕ್ಷ್ಯವಾದದೆ ಮರೆ ೭ ದಪ್ರಕಾರಾ ಖಂಡಿತ ಮಾಡಬೇಕೆಂದು ಆಫೀಸಿನವರ ಮುಖ್ಯಾಭಿಪ್ರಾಯವು

ಇಷ್ಟಬೇಕಾದವರು ೬ ಪೈಸೆ ಕಮ್ಮಿ ಬರೆಯಬಾರದೆಂದು ನಂಬಿದ್ದೇವೆ ನಿಮ್ಮ ಅಡ್ರೆಸ್ಸು ಊರು ಪೋಸ್ಟು ತಾ ಜಿಲ್ಲಾ ಹೆಸರು ವಗೈರೆ ಸ್ಪಷ್ಟವಾಗಿ ಬರೆಯಿರಿ

ಆರ್. ಶಾಂತಪ್ಪಾಜಿ, ಜೋತಿಷ ಆಫೀಸು,

ತೆಗ್ಗಿನ ಮಠ, ಹರಪನಹಳ್ಳಿ, ತಾ. ಹರಪನಹಳ್ಳಿ,

ಜಿಲ್ಲಾ ಬಳ್ಳಾರಿ.

ವೃತ್ತಾಂತ ಪತ್ರಿಕೆ

ಸನ್ ೧೯೦೬ ನೇ ಇಸವಿ ಜನವರಿ ತಾ|| ೨೫ ನೇ ಗುರುವಾರ.

ಜಹಜು ಮುಳುಗಿಹೋಯಿತು.

ದಕ್ಷಿಣ ಅಮೇರಿಕದಲ್ಲಿ ಬ್ರೆಜಿಲ್ ಎಂಬ ಪ್ರಜಾಪ್ರತಿನಿಧಿ ಪ್ರಭುತ್ವದ ಮುಖ್ಯ ಪಟ್ಟಣವಾದ ರಯೋ ಡಿ ಜನೈರೋ ನಗರದ ಬಳಿ ಸಮುದ್ರದಲ್ಲಿ ಮೊನ್ನೆ ಸೋಮವಾರ ಸಮರಾತ್ರಿಯಲ್ಲಿ ಅಕ್ವಿಡಾಬನ್ ಎಂಬ ಜಹಜು ಮೂರು ನಿಮಿಷಗಳಲ್ಲಿ ಅನಾಮತ್ತಾಗಿ ಮುಳುಗಿಹೋಯಿತೆಂತಲೂ, ಸರ್ಕಾರಿ ಕೆಲಸದ ಉದ್ದೇಶ್ಯ ಆ ಜಹಜಿನಲ್ಲಿ ಪ್ರಯಾಣ ಮಾಡುತ್ತಿದ್ದ ಬಬ್ಬ ಕಮ್ಯಾಂಡರರೂ, ನಾಲ್ವರು ರಿಯರ್ ಅಡ್ಮಿರಲ್ ಎಂಬ ಹುದ್ದೇದಾರರೂ ಮೊದಲುಗೊಂಡು ಮುನ್ನೂರು ಜನಗಳ ತನಕ ಸಮುದ್ರದಲ್ಲಿ ಮುಳುಗಿದರೆಂತಲೂ ತಂತೀ ವರ್ತಮಾನ ಬಂದಿದೆ. ಈ ದುಃಖಕರವಾದ ಸುದ್ದಿಯು ಎಲ್ಲರಲ್ಲೂ ಪರಿತಾಪವನ್ನುಂಟುಮಾಡುವುದು. ಆ ಜಹಜಿನಲ್ಲಿದ್ದ ಯಾವುದೋ ಒಂದು ಯಂತ್ರವು ಆಕಸ್ಮಾತ್ತಾಗಿ ಒಡೆದುದರಿಂದ ಮುಳುಗಿಕೊಂಡಿತು.

ಪ್ರಿನ್ಸ್ ಆಫ್ ವೇಲ್ಸ್ ರವರ ಆಗಮನವು.

ಪ್ರಿನ್ಸ್ ಆಫ್ ವೇಲ್ಸ್ ರವರು ನಾಳೆ ಸೋಮವಾರ ರಾಜಧಾನಿಗೆ ದಯಮಾಡತಕ್ಕ ಕಾಲವು ಸ್ವಲ್ಪ ಬದಲಾವಣೆಯಾಗಿರುತ್ತದೆ. ಅವರು ಸೋಮವಾರ ಮಧ್ಯಾಹ್ನ ೧|| ಗಂಟೆಗೆ ಬದಲಾಗಿ ೩|| ಗಂಟೆಗೆ ಮೈಸೂರು ರೈಲ್ವೆ ಸ್ಟೇಷನ್ನಲ್ಲಿ ಇಳಿಯುವರು. ಆದುದರಿಂದ ನಮ್ಮ ಮಹಾರಾಜರವರ ಭೇಟಿಯೂ, ಪ್ರಿನ್ಸ್ ಆಫ್ ವೇಲ್ಸ್ ರವರ ಮರುಭೇಟಿಯೂ ಆ ತರುವಾಯ ನಡೆಯಬೇಕಾಗಿರುವವು. ಪ್ರಿನ್ಸ್ ಆಫ್ ವೇಲ್ಸ್ ರವರ ಮರವಣಿಗೆಯು ಆ ದಿನ ಯಾವ ರೀತಿ ನಡೆಯಬೇಕೆಂಬುದನ್ನು ಮೊದಲೇ ಕ್ರಮಪಡಿಸಿಕೊಳ್ಳುವುದಕ್ಕೋಸ್ಕರ ನಾಳೇ ದಿನ ರಾಜಧಾನಿಯಲ್ಲಿ ರೈಲ್ವೆ ಸ್ಟೇಷನ್ನಿಂದ ರೆಸಿಡೆನ್ಸಿ ಬಂಗಲೆಯ ತನಕ

..., ನಾವಿದ್ದು ರೆಸಿಡೆನ್ಸಿ ಹಂಗಲೆಯಿಂದ ಜಗನ್ಮೋಹನ ...ಗಳವು ತನಕಲೂ ಎಲ್ಲಾ ಸೈನ್ಯ ಸನ್ನಾಹವಾದ್ಯ ಮೊದ ...ವುಗಳೊಡನೆ ಮೆರವಣಿಗೆಗಳನ್ನು ಮಾಡಿಸಿ ಅಭ್ಯಾಸ ...ಮಾಡುವನಾಗಿದಾರೆ.

ಯುವರಾಜರ ಆಗಮನವು.

ಪೂರ್ವಕಾಲದಲ್ಲಿ ಸಾರ್ವಭೌಮರಾದವರ ಪುತ್ರರು ತಮ್ಮ ಅಧಿ...ಕ್ಕೆ ಸೇರಿದ ಪ್ರಜೆಗಳ ದರ್ಶನಾರ್ಥವಾಗಿ ಹೊರಡುವದಕ್ಕೆ ... ಅಶ್ವಾರೋಹನಾದ ಒಬ್ಬ ರಾಯಭಾರಿಯನ್ನು ಕಳುಹಿಸಿಕೊ...ಡುತ್ತಿದ್ದರು. ಈ ರಾಯಭಾರಿಯಾದವನು ಆ ಯುವರಾಜನು ದರ್ಶ...ನವಿತ್ತಿರುವ ಪ್ರದೇಶಗಳಿಗೆಲ್ಲಾ ಹೋಗಿ ಪ್ರಜೆಗಳಿಗೆಲ್ಲಾ ತಿಳಿಸಿ ಅವ...ರೂ ತಮ್ಮ ಯುವರಾಜನನ್ನು ಇದಿರ್ಗೊಳ್ಳುವದಕ್ಕೆ ಯೋಗ್ಯ...ವ ಏರ್ಪಾಡುಗಳನ್ನು ಮಾಡುವಂತೆ ಕಟ್ಟು ಮಾಡಿ ಬರುತ್ತಿದ್ದನು. ... ರಾಯಭಾರಿಯು ಬಂದು ಯುವರಾಜನ ಆಗಮನವನ್ನು ತಿಳಿಸಿ...ದ ಬಳಿಕ ಆಯಾ ಪಟ್ಟಣಗಳಲ್ಲಿ ಸಿಂಗರಣೆಯ ಕೆಲಸಗಳು ಅತಿ...ಶಯವಾಗಿ ನಡೆಯುತ್ತಲಿರುವವು.

ನಮ್ಮ ಕಾಲದಲ್ಲಾದರೋ ಯುವರಾಜರಾದಂಥವರು ತಮ್ಮ ...ಡೆ ಇಂಥ ಅಶ್ವಾರೋಹರಾದ ರಾಯಭಾರಿಗಳನ್ನು ಕಳುಹಿಸುವ... ಅವರು ತಂತಿ ವರ್ತಮಾನದ ಮೂಲಕವೋ ಟಪಾಲಿನ ಮೂಲ...ವೋ ತಮ್ಮ ಅಭಿಪ್ರಾಯವನ್ನು ತಿಳಿಸುವದರಿಂದ ಎಷ್ಟೋ ಸಮರ್ಥ...ನು ಎಷ್ಟೇ ವೇಗವಾಗಿ ಓಡಲಿಕ್ಕೆ ಕುದುರೆಯ ಮೇಲೆ ಕೂತು ...ದು ಹೋದರೂ ಕೂಡ ಅವನಿಗಿಂತಲೂ ಅತಿತ್ವರೆಯಾಗಿ ಈಗ ಸ...ಚಾರಗಳು ಮುಟ್ಟುತ್ತವೆ. ಆದರೂ ಪೂರ್ವದಲ್ಲಿದ್ದಂತೆಯೇ ...ಗಲೂ ಕೂಡ ಯುವರಾಜರನ್ನು ಬರಮಾಡಿಕೊಳ್ಳುವ ನಿಮಿತ್ತ...ವಾಗಿ ನಡೆಯತಕ್ಕ ಸಿಂಗರಣೆಯ ಏರ್ಪಾಡುಗಳನ್ನೆಲ್ಲಾ ಪ್ರಜೆಗಳೇ ...ಮಾಡಬೇಕಾಗಿದೆ. ಆದದರಿಂದಲೇ ಈಗ ಮೈಸೂರು ರಾಜಧಾನಿಯ...ಲ್ಲೀ ಬೆಂಗಳೂರಿನಲ್ಲೋ ನಾವು ಬೀದಿಯಲ್ಲಿ ಹೋಗುತ್ತಿದ್ದರೆ ...ಕಡೆ ನೋಡಿದಾಗ್ಯೂ ಇಂಗ್ಲಾಂಡಿನ ಯುವರಾಜರನ್ನು ಇದಿರ್ಗೊ...ಳ್ಳುವದಕ್ಕಾಗಿ ಅತಿ ತ್ವರೆಯಿಂದ ನಾನಾ ಕಾರ್ಯಗಳನ್ನು ನಿಧಾನಿ...ಸುತ್ತಿರುವದನ್ನು ನೋಡಬಹುದು ಒಂದು ಕಡೆಯಲ್ಲಿ ರಸ್ತೆಗಳಿಗೆ ...ಕಲ್ಲುಗಳನ್ನು ಹಾಕಿ ಗರಸುತ್ತಲೂ ಅದರ ಮೇಲೆ ಇಂಜಿನ್ ಗಾ...ಡಿಯು ಹಿಂದಕ್ಕೂ ಮುಂದಕ್ಕೂ ಹೋಗಿ ಬಂದು ಸಮಮಾಡುತ್ತಲೂ ...ರುವದು ಮತ್ತೊಂದು ಕಡೆಯಲ್ಲಿ ಕೆಲವರು ಕಮಾನುಗಳನ್ನು ...ಕಟ್ಟುತ್ತಿರುವರು. ಯುವರಾಜರು ಯಾವ ಯಾವ ರಸ್ತೆಗಳಲ್ಲಿ ...ಹೋಗಬೇಕೆಂದು ನಿಯಮಿತವಾಗಿದೆಯೋ ಆಯಾ ರಸ್ತೆಗಳ ಇಕ್ಕೆ...ಲ್ಲಿ ಇರುವ ಮನೆಗಳಿಗೂ ಪೌಳಿಯ ಗೋಡೆಗಳಿಗೂ ಸುಣ್ಣ ...ಬಳಿಯುವ ಕೆಲಸವೂ ಆತುರವಾಗಿ ನಡೆಯುತ್ತಿದೆ

ಈ ವಿಷಯವಾದ ಉತ್ಸವ ಕಾಲದಲ್ಲಿ ನಮಗೆ ಬೇರೊಬ್ಬ ಯುವ... ಆಗಮನವು ನೆನಪಿಗೆ ಬರುವದಾಗಿದ್ದೆ. ಆ ಯುವರಾಜನು ...ಬಂದವ ರಾಜಾಧಿರಾಜನಾದ ಯೇಸುಕ್ರಿಸ್ತಸ್ವಾಮಿಯೇ, ಈತ ... ಮನುಷ್ಯರಲ್ಲಿ ಪರಲೋಕ ರಾಜ್ಯವನ್ನು ಸ್ಥಾಪಿಸುವದಕ್ಕಾಗಿ ...ಕಳುಹಿಸಲ್ಪಟ್ಟ ಇದಕ್ಕೆ ಮುಂಚೆ ಯೋಹಾನನೆಂಬೊಬ್ಬ ಮನು...ಷ್ಯನು ಬಂದು ಜನರಿಗೆ ಬೋಧಿಸಲುದ್ಯೋಗಿಸಿದನು ಈತನ ಸುದ್ದಿ...ಯನ್ನು ಕೇಳಿದ ಸಾವಿರಾರು ಮಂದಿ ಗುಂಪು ಗುಂಪಾಗಿ ಆತನು ತಪ...ಸ್ಸಾಗಿ ವಾಸಿಸುತ್ತಿದ್ದ ಅರಣ್ಯಕ್ಕೆ ಓಡಿ ಬಂದು ಆತನ ಪ್ರೊಫೋ...ರವನ್ನು ವಿಚಾರಿಸಿದರು. ಅದಕ್ಕಾತನು—ನಾನು ರಾಜನ ಕಡೆ...ಯ ಬಂದ ಮುಂದಾಳಾಗಿದ್ದೇನೆ. ಆ ರಾಜನು ಬೇಗನೆ ನಿಮ್ಮ ಮಧ್ಯ...ದಲ್ಲಿ ಕಾಣಿಸಿಕೊಳ್ಳುವದಕ್ಕಿದ್ದಾನೆ. ಆದಕಾರಣ ಆತನಿಗಾಗಿ ನೀವು ...ಮನಸ್ಸನ್ನು ಸಿದ್ಧ ಮಾಡಿಕೊಳ್ಳಿರಿ. ಆ ಪ್ರಭುವು ಬರುವದಕ್ಕಿರುವ ...ಮಾರ್ಗವನ್ನು ಸರಿಪಡಿಸಿರಿ. ಸೊಟ್ಟಸೊಟ್ಟಗೆ ಇರುವ ಹಾದಿಗಳನ್ನು ...ನೆಟ್ಟಗೆ ಮಾಡಿರಿ. ಎತ್ತರವಾಗಿರುವ ಗುಡ್ಡವನ್ನು ತಗ್ಗಿಸಿರಿ ತಗ್ಗಾಗಿ...ರುವ ಕಣಿವೆಯನ್ನು ತುಂಬಿಸಿ ಎತ್ತರ ಮಾಡಿರಿ. ಸೊಟ್ಟಗಾದವುಗಳು ...ನೆಟ್ಟಗಾಗುವವು. ಕೊರಕಲಾದವುಗಳು ನುಣ್ಣಗಾಗುವವು ಎಂದು ...ಹೇಳಿದನು.

ಈ ಯೋಹಾನನು ಹೇಳಿದ ಮಾತುಗಳನ್ನು ನೋಡುವಲ್ಲಿ ಆತನು ...ಲೋಕದ ಅಶಾಶ್ವತವಾದ ಸಂಗತಿಗಳನ್ನು ಕುರಿತು ಸೂಚಿಸಿದ...ನು ತಿಳಿಯಬಾರದು. ಆತನು ಪಾರಮಾರ್ಥಿಕವಾದಂಥ ನಿತ್ಯವಾದ ...ಷಯಗಳನ್ನು ಕುರಿತು ಭಾವಾರ್ಥವಾಗಿ ಮಾತಾಡುತ್ತಾನೆಂದು ತಿಳಿ...ಯಬೇಕಷ್ಟು. ಆ ಭಾವಾರ್ಥವೇನಂದರೆ—ಕ್ರಿಸ್ತನಲ್ಲಿಯೇ ಮನುಷ್ಯ...ರಿಗೆ ರಕ್ಷಕನೂ ಆತ್ಮೀಯ ಬೋಧಕನೂ ಆಗಿರುವ ಒಬ್ಬ ...ನು ಪುರುಷನು ಬರುವನೆಂತಲೂ, ಆತನನ್ನು ಇದಿರ್ಗೊಂಡು, ...ನ ಆಜ್ಞೆಗಳನ್ನೂ ಆತನು ತಿಳಿಸುವ ಸತ್ಯವನ್ನೂ ಸ್ವೀಕರಿಸುವದ...ಕ್ಕಾಗಿ ಜನರು ತಮ್ಮನ್ನು ಸಿದ್ಧಪಡಿಸಿಕೊಳ್ಳಬೇಕೆಂತಲೂ ತಿಳಿಸಿದನು. ...ಹೀಗೆ ಮಾಡಿಕೊಳ್ಳುವದು ಹ್ಯಾಗಂದರೆ—ತಮ್ಮ ಹೃದಯದಲ್ಲಿ ಅಹಂ...ಕಾರವೆಂಬುದು ಗುಡ್ಡದಹಾಗಿದ್ದರೆ ಅದನ್ನು ಕಡಿದು ನೆಲಸಮ ಮಾಡ...ಬೇಕು. ಅಸಂಬಿಕೆಯಿಂದ ಮನಸ್ಸು ಕುಗ್ಗಿಹೋಗಿದ್ದರೆ ಅದನ್ನು ...ಸರಿಪಡಿಸಿ ಮೇಲಕ್ಕೆ ಎತ್ತಿಕೊಳ್ಳಬೇಕು. ವಂಚನೆಯೆಂಬ ...ವಕ್ರ ಮಾರ್ಗವನ್ನು ತಿದ್ದಿಕೊಳ್ಳಬೇಕು ಬಲಾತ್ಕಾರವೆಂಬ ಕೊರಕ...ಲಾದ ಮಾರ್ಗವನ್ನು ತ್ಯಜಿಸಬೇಕು. ಯಾಕೆಂದರೆ ಯಾರು ಯಾರು ...ಗರ್ವದಿಂದಲೂ ಸಂಬಿಕೆಯಿಂದಲೂ ತುಂಬಿದವರಾಗಿಯೂ ಯುಕ್ತಿ...ಹೀನರಾಗಿಯೂ ದಾಂಡಿಗರಾಗಿಯೂ ಇದ್ದಾರೋ ಅಂಥವರನ್ನು ...ಕ್ರಿಸ್ತಸ್ವಾಮಿಯು ಮೆಚ್ಚುವನು ಎಂದು ಯೋಹಾನನು ಬೋಧಿ...ಸಿದನು.

ಮೊನ್ನೆ ದಿನ ನಾವು ಬೀದಿಯಲ್ಲಿ ಹೋಗುತ್ತಿರುವಾಗ ಒಬ್ಬ ...ನು ಒಂದು ಮನೆಯ ಮುಂದೆ ನಿಂತುಕೊಂಡಿದ್ದದನ್ನು ಕಂಡೆ ... ಸುಣ್ಣವೂ ಹಿಂತಿನ್ನ ... ನೋಡಿ—ಈ ಸ್ವಾಮಿ ...ಸಿಮಾಲಿಟಿಯವರ ತಂಟೆ ಯೇನೆಂದು ಹೇಳಲಿಷ್ಟು! ಮೊನ್ನೆ ತಾನೇ ಕಟ್ಟಿಪಟ್ಟ ಮನೆಯ ಗೋಡೆಗೆಲ್ಲಾ ಸುಣ್ಣಾ ತುಂಬಿದ್ದಾಯಿತು. ಈಗ ಈ ಯುವರಾಜರು ಬರುತ್ತಾರೆಂದು ಹೇಳಿ ತಿರಿಗಿ ಸುಣ್ಣ ಮೆತ್ತಬೇಕೆಂದು ಬಲಾತ್ಕಾರ ಮಾಡುತ್ತಾರಲ್ಲಾ! ನಿಯಮಿತವಾದ ದಿನಗಳೊಳಗಾಗಿ ಅಪ್ಪಣೆಯ ಪ್ರಕಾರ ಮಾಡದಿದ್ದರೆ ಪ್ರಾಸಿಕ್ಯೂಶನ ಮಾಡುವದಾಗಿ ಹೇಳುತ್ತಾರೆ ಎಂದು ಗೊಣಗುಟ್ಟಿಕೊಳ್ಳುತ್ತಾ ಅರುಕಾಸಿನ ಸುಣ್ಣ ತಂದು ಕೆಲಸವನ್ನು ಪೂರೈಸುವದಾಗಿ ಹೇಳಿಕೊಳ್ಳುತ್ತಿದ್ದನು. ಇಷ್ಟು ಸುಲಭವಾಗಿ ಅವನು ತನ್ನ ಮನೆಯ ಮುಂಗಡೆಯನ್ನು ಶುದ್ಧ ಮಾಡಿಕೊಂಡರೂ ಅತನ ಮನೆಯ ಒಳಗಡೆಯನ್ನು ನೋಡಿದರೆ ಎಷ್ಟು ಅಸಹ್ಯದಿಂದ ತುಂಬಿದ್ದಾಗ್ಯೂ ಲಕ್ಷ್ಯಮಾಡದೆ ಇದ್ದಾನೆಂದು ಹೇಳಬಹುದು. ಒಳಗಡೆ ಹ್ಯಾಗಿದ್ದರೂ ಇರಲಿ. ಯುವರಾಜರವರ ಕಣ್ಣಿಗೆ ಅಂದವಾಗಿ ತೋರಿದರೆ ಸಾಕೆಂದು ಹೇಳಿ ಕೆಲಸವನ್ನು ಮಾಡುತ್ತಾನೆ.

ಭೂಲೋಕದ ರಾಜಾಧಿರಾಜನಿಗೂ ಪರಲೋಕದ ಮಹಾಸ್ವಾಮಿಗೂ ಇರುವ ತಾರತಮ್ಯವು ಇಲ್ಲಿ ಎಷ್ಟು ಪರಿಷ್ಕಾರವಾಗಿ ಕಾಣುತ್ತಿದೆ! ಭೂಲೋಕದ ರಾಜರು ಹೊರಗಣ ತೋರುವಿಕೆಯನ್ನು ಮಾತ್ರ ನೋಡುತ್ತಾ ಹೊರಟು ಹೋಗುವರು. ಪರಲೋಕದರಸಾದರೋ ಸರ್ವಜ್ಞನಾಗಿರುವದರಿಂದ ಮನುಷ್ಯರ ಅಂತರ್ಯದಲ್ಲಿ ನಡೆಯುವಂಥ ಕೇವಲ ರಹಸ್ಯವಾದ ಆಲೋಚನೆಗಳನ್ನೆಲ್ಲಾ ಸಂಪೂರ್ಣವಾಗಿ ತಿಳಿದುಕೊಳ್ಳುತ್ತಾನೆ. ಹೊರಗಡೆ ಎಷ್ಟು ಅಂದವಾಗಿ ತೋರಿದರೂ ಪ್ರಯೋಜನವಿಲ್ಲ. ಮನುಷ್ಯನನ್ನು ಕೆಡಿಸುವಂಥ ಅತ್ಯಂತ ಹೇಯವಾದ ಪಾಪಗಳು ಹೊರಗಡೆ ತೋರುವದಿಲ್ಲ. ಒಳಗೇ ಅಡಗಿಕೊಂಡಿರುತ್ತವೆ ಗರ್ವ, ದುರಾಶೆ, ದ್ವೇಷ ಇನ್ನೂ ಅನೇಕ ದುರ್ಗುಣಗಳು ಒಳಗಡೆ ಇದ್ದುಕೊಂಡಿರುವಾಗ್ಗೆ ಹೊರಗೆ ಎಷ್ಟು ಸೌಮ್ಯವಾಗಿ ತೋರಿದಾಗ್ಯೂ ಆ ದಿವ್ಯ ರಾಜನು ಮೆಚ್ಚುವದಿಲ್ಲ.

ಮುಂದಣ ವಾರದಲ್ಲಿ ಮೈಸೂರಿನಲ್ಲೂ ಬೆಂಗಳೂರಿನಲ್ಲೂ ಸಾವಿರಾರು ಮಂದಿ ನಿವಾಸಿಗಳು ದೊಡ್ಡವರೂ ಚಿಕ್ಕವರೂ ಕೂಡಿ ಪ್ರಿನ್ಸ್ ಆಫ್ ವೇಲ್ಸ್ ಯುವರಾಜರವರು ಸ್ವಾರಿ ಹೊರಡುವ ಮಾರ್ಗದ ಎರಡು ಪಕ್ಕಗಳಲ್ಲಿಯೂ ಗುಂಪುಗುಂಪಾಗಿ ನಿಂತು ನೋಡುವವರಾಗಿರುವರು. ಅವರು ಶುಚಿಯಾಗಿಯೂ ಚೆನ್ನಾಗಿಯೂ ಇರುವ ಉಡುಪುಗಳನ್ನು ಧರಿಸಿದ್ದರೆ ಸಾಕು. ಅದರ ಶೋಕಿನವಾಗಿ ಆಳುವಂಥ ಆ ದಿವ್ಯರಾಜನ ಮೆಚ್ಚಿಕೆಗೆ ಪಾತ್ರರಾಗಬೇಕೆಂದು ಇಚ್ಛೈಸುವವರು ಹೊರಗೆ ಮಾತ್ರ ಶುಚಿಯಾಗಿದ್ದರೆ ಸಾಲದು. ಒಳಗೂ ಶುದ್ಧರಾಗಿರಬೇಕು.

"ಹೃದಯದಲ್ಲಿ ನಿರ್ಮಲರು ಧನ್ಯರು, ಅವರು ದೇವರನ್ನು ನೋಡುವರು"

ಒಳದೇಶದ ವೃತ್ತಾಂತಗಳು.

ದಿವಾನ್ ಸರ್ ಪಿ ಎನ್ ಕೃಷ್ಣಮೂರ್ತಿ, ಕೆ. ಸಿ. ಐ ಇ., ಯವರು ಸೆಕ್ರೆಟರಿಗಳ ಸಹಿತ ನೆನ್ನೆ ಬೆಳಿಗ್ಗೆ ರಾಜಧಾನಿಗೆ ದಯಮಾಡುವವರಾಗಿದ್ದರು.

❖❖❖❖

ಬೆಂಗಳೂರು ಸಿಟಿ ಮೆ॥ ದೊಡ್ಡಣ್ಣನವರ ಪಾಠಶಾಲೆಯಲ್ಲಿ ಹುಡುಗರಿಗೆ ಹಗಲೂ ರಾತ್ರಿ ಕನ್ನಡ ಸಂಸ್ಕೃತ ವಿದ್ಯೆಗಳನ್ನು ಹೇಳಿಕೊಡ ಲಾರಂಭವಾಗಿದೆ

❖❖❖❖

ಬೀರೂರಿನಲ್ಲಿ ಸರ್ಕಾರದವರು ಒಂದು ಕರ್ನಾಟಕ ವೈದ್ಯಶಾಲೆಯನ್ನಿಡಬೇಕೆಂದೂ ಅದಕ್ಕೆ ವರುಷಕ್ಕೆ ೩೬೫ ರೂಪಾಯಿ ಖರ್ಚು ಮಾಡಬೇಕೆಂದೂ ಸ್ಯಾಂಕ್ಷನ್ ಮಾಡಿದಾರೆ.

❖❖❖❖

ಬೆಂಗಳೂರು ಕೋಟೆಯಲ್ಲಿ ಅರಮನೆ ಹಿಂಭಾಗದಲ್ಲಿ ಸರ್ಕಾರದವರು ಮ್ಯುನಿಸಿಪಲ್ ಸ್ಕೂಲನ್ನು ಕಟ್ಟಲಾರಂಭಿಸಿದ್ದಾರೆ. ಇದಕ್ಕೆ ಸುಮಾರು ೭೦-೮೦ ಸಾವಿರ ರೂಪಾಯಿ ತನಕ ಖರ್ಚಾಗುವುದು.

❖❖❖❖

ಚಾಮರಾಜನಗರದ ಎ ವಿ ಸ್ಕೂಲಿನಲ್ಲಿ ಈ ಸಲ ಇಂಗ್ಲಿಷಿನಲ್ಲಿ ೭ ಮಂದಿಯೂ, ಕನ್ನಡದಲ್ಲಿ ೭ ಮಂದಿಯೂ ಲೋಯರ್ ಸೆಕಂಡರಿ ಪರೀಕ್ಷೆಯನ್ನು ಪ್ಯಾಸ್ ಮಾಡಿದರೆಂದು ಅಲ್ಲಿನ ಹೆಡ್ ಮಾಸ್ಟರು ತಿಳಿಸಿದಾರೆ

❖❖❖❖

ಈ ತಿಂಗಳ ೩೦ನೆ ತಾರೀಖು ಮಂಗಳವಾರ ರಾತ್ರಿ ಚಾಮುಂಡಿ ಬೆಟ್ಟದ ಮೇಲೆ ಅಪಾರವಾದ ಉರಿಯನ್ನು ಹಾಕಿಸಿ, ನೋಟಕ್ಕೆ ವಿನೋದವಾಗಿರುವಂತೆ ಮಾಡುತ್ತಾರೆಂದೂ ಆ ರಾತ್ರಿ ಪಟ್ಟಣದಲ್ಲೆಲ್ಲಾ ವಿಶೇಷವಾದ ದಿವೋತ್ಸವವಾಗುವುದೆಂದೂ ತಿಳಿದುಬಂದಿದೆ.

❖❖❖❖

ಚಿತ್ರದುರ್ಗದ ಡೆಪ್ಯುಟಿ ಕಮಿಷನರ್ ಮೆ॥ ಎಚ್. ರಾಮಾನುಜೈಯ್ಯಂಗಾರು ಕಳೆದ ವಾರ ಹಿರಿಯೂರಿನಲ್ಲಿ ಜಮಾಬಂದಿ ಕೆಲಸವನ್ನು ತೀರಿಸಿಕೊಂಡು ವಾಪಸು ದುರ್ಗಕ್ಕೆ ಹೋಗಿ ಈ ವಾರ ಅಲ್ಲಿಂದ ಹೊರಟು ರಾಜಧಾನಿಗೆ ಬರುವವರಾಗಿದ್ದಾರೆಂದು ಪ್ರಕಟವಾಗಿದೆ.

❖❖❖❖

ಮೈಸೂರು ನಿಖಿಲ ರೋಗಹಾರಿ ಕರ್ನಾಟಕ ವೈದ್ಯಶಾಲಾ ಪಂಡಿತ ಮೆ॥ ಕೃಷ್ಣಾಭಟ್ಟಪ್ಪನವರು ತಿಳಿಸುವುದೇನೆಂದರೆ—ಕಳೆದ ೧೯೦೫ನೇ ವರುಷದಲ್ಲಿ ೨೩,೭೭೧ ಜನಗಳು ಔಷಧಿ ಸೇವಿಸಿರುತ್ತಾರೆ ಇದಕ್ಕಾಗಿ ೧,೦೬೩ ರೂಪಾಯಿ ಔಷಧಿ ಖರ್ಚಾಗಿರುವುದು ಎಂಬುದೇ

❖❖❖❖

ಶ್ರೀಮನ್ಮಹಾರಾಜರವರು ಮೊನ್ನೆ ಮಂಗಳವಾರ ಸಾಯಂಕಾಲ ಶ್ರೀರಂಗಪಟ್ಟಣಕ್ಕೂ ಗಂಜಾಮಿಗೂ ಮೋಟಾರ್ ಬಂಡಿಯಲ್ಲಿ ..., ಪ್ರಿನ್ಸ್ ಆಫ್ ವೇಲ್ಸ್‌ರವರ ಆಗಮನಕ್ಕೆ ಅಲ್ಲಿ ಸ್ಥಳಗಳಲ್ಲಿ ಮಾಡಿರುವ ಏರ್ಪಾಡುಗಳನ್ನೆಲ್ಲಾ ವಿಚಾರಣೆ ಮಾಡಿಕೊಂಡು ಬಂದರು.

❖❖❖❖

ಬ್ರಿಟಿಷ್ ರೆಸಿಡೆಂಟರಾದ ಮೆ॥ ಎಸ್. ಎಂ. ಫ್ರೇಸರ್ ಯವರು ನೆನ್ನೆ ಬೆಳಿಗ್ಗೆ ಬೆಂಗಳೂರಿಂದ ರಾಜಧಾನಿಗೆ ದಯಮಾಡಿದರು. ಗೌರವಾರ್ಥವಾದ ತೋಪುಗಳು ಹಾರಿಸಲ್ಪಟ್ಟವು ಇವರು ಪ್ರಿನ್ಸ್ ಆಫ್ ವೇಲ್ಸ್ ರವರು ಬಂದು ವಾಪಸು ಪ್ರಯಾಣವಾಗುವ ತನಕ ಇಲ್ಲೇ ಇರುತ್ತಾರೆಂದು ಕೇಳಿದೆವು.

❖❖❖❖

ಕಳೆದ ೪ನೆ ತಾರೀಖು ಗುರುವಾರ ಮಧ್ಯಾಹ್ನ ಸಕಲೇಶಪುರದಲ್ಲಿ ಫಲಪುಷ್ಪಧಾನ್ಯವ್ಯವಸಾಯೋಪಕರಣಗಳ ಪ್ರದರ್ಶನವು ನಡೆಯಿತು. ಡೆಪ್ಯುಟಿ ಕಮಿಷನರೂ ಯೂರೋಪಿಯನ್ ಸರ್ದಾರರೂ ದೇಶೀಯ ದೊಡ್ಡ ಮನುಷ್ಯರೂ ಸೇರಿ ಅದನ್ನು ನಡಿಸಿದರು. ೩-೪ ಸಾವಿರ ಪ್ರಜೆಗಳು ಹೋಗಿ ನೋಡಿಬಂದರು.

❖❖❖❖

ಬೆಂಗಳೂರಿನಲ್ಲಿರುವ ಪಂಡಿತ ಕೆ ಟಿ ಗೋಪಾಲೈಯಂಗಾರಿಗೆ ಶ್ರೀಮನ್ಮಹಾರಾಜರವರು ೨,೦೦೦ ರೂಪಾಯಿ ಬಹುಮಾನವನ್ನು ದಯಪಾಲಿಸಿದರು ಈ ಪಂಡಿತರು ಬಹು ಆಶ್ಚರ್ಯಯುಕ್ತವಾದ ಒಂದು ಗಣಿತ ಯಂತ್ರವನ್ನು ತಯಾರುಮಾಡಿ, ಬೆಂಗಳೂರು ಮ್ಯೂಜಿಯಂ ಎಂಬ ತಮಾಷೆ ಬಂಗಲೆಯಲ್ಲಿಟ್ಟಿದಾರೆ.

❖❖❖❖

ರಾಜಧಾನಿಯಲ್ಲಿ ನಡೆಯುವ ಕೈಗಾರಿಕೆಗಳ ವಸ್ತು ಪ್ರದರ್ಶನಕ್ಕೆ ಬೆಂಗಳೂರಿನಿಂದ ಇಂಡಿಯನ್ ಇಂಜನಿಯರಿಂಗ್ ಕಂಪನಿಯವರು ಮೋಟಾರ್ ಕಾರ್ ಎಂಬ ಗಾಡಿಯನ್ನೂ ಬೈಸಿಕಲ್‌ಗಳನ್ನೂ ಬಹು ಮಾನಕೊಡುವುದಕ್ಕೆ ಯೋಗ್ಯವಾದಂಥಾ ಚಿತ್ರಕೆಲಸ ಮಾಡಿದ ಬೆಳ್ಳಿಯ ಬಟ್ಟಲುಗಳನ್ನೂ ತಂದಿಟ್ಟಿದಾರೆ.

❖❖❖❖

ಪ್ರಿನ್ಸ್ ಆಫ್ ವೇಲ್ಸ್‌ರವರು ರಾಜಧಾನಿಗೆ ದಯಮಾಡುವವರಾಗಿದ್ದಾರೆಂಬುದನ್ನು ಕೇಳಿ ಆಗ ನಡೆಯುವ ವಿಭವ ಉತ್ಸವಾದಿಗಳನ್ನು ನೋಡಿಕೊಂಡು ಹೋಗುವುದಕ್ಕೆ ಬಹಳ ದೂರಸ್ಥಳಗಳಿಂದ ಅನೇಕ ಪ್ರಜೆಗಳು ಇಲ್ಲಿಗೆ ಬರುತ್ತಿದ್ದಾರೆ. ಪ್ಲೇಗ್ ಉಪದ್ರವೇನಾದರೂ ತಲೆಹಾಕದಂತೆ ಪ್ಯಾಸ್‌ಪೋರ್ಟುಗಳ ಕಟ್ಟಳೆಯು ತಕ್ಕಮಟ್ಟಿಗೆ ಜಾರಿಗೆ ಹೆಚ್ಚಿಸಲ್ಪಟ್ಟಿದೆ.

❖❖❖❖

ಪ್ರಿನ್ಸ್ ಆಫ್ ವೇಲ್ಸ್‌ರವರನ್ನು ಎದುರುಗೊಳ್ಳುವುದಕ್ಕೆ ರಾಜಧಾನಿಯಲ್ಲಿ ಎರಡು ಕಡೆ ಬಹು ನೇತ್ರಾನಂದಕರವಾದ ಎರಡು ಭಾರೀ ಚಪ್ಪರಗಳನ್ನೂ ೧೭ ಕಡೆಗಳಲ್ಲಿ ಚಿತ್ರವಿಚಿತ್ರವಾದ ಕಮಾನುಗಳನ್ನೂ ಹಾಕಿಸಿರುತ್ತಾರೆ. ರೈಲ್ವೆ ಸ್ಟೇಷನಿನಲ್ಲೂ ಕರ್ಜನ್ ಪಾರ್ಕಿನಿಂದ ದೊಡ್ಡಪೇಟೆಗೆ ಹೋಗುವ ರಸ್ತೆಯಲ್ಲೂ ಹಾಕಿಸಿರುವ ಎರಡು ಭಾರೀ ಚಪ್ಪರಗಳಿಗೇ ೩,೫೦೦ ರೂಪಾಯಿ ತನಕ ಖರ್ಚಾಗಿರುವುದು

❖❖❖❖

ದಕ್ಷಿಣ ಮರಾಠಾ ರೈಲ್ವೆ ಕಂಪನಿಯವರು ಬಹು ಸುಂದರವಾದ ಆರು ಸೆಲೂನ್ ಗಾಡಿಗಳನ್ನು ಪ್ರಿನ್ಸ್ ಆಫ್ ವೇಲ್ಸ್‌ರವರ ಪ್ರಯಾಣಕ್ಕಾಗಿ ದಿನಕ್ಕೆ ಒಂದೊಂದು ಗಾಡಿಗೆ ೫೦ ರೂಪಾಯಿಯಂತೆ ಬಾಡಿಗೆ ಗೊತ್ತುಮಾಡಿ ತರಿಸಿಕೊಂಡಿದ್ದಾರೆ. ಪ್ರಿನ್ಸ್ ಆಫ್ ವೇಲ್ಸ್‌ರವರು ದಯಮಾಡುವ ಗಾಡಿಯನ್ನು ಬೆಂಗಳೂರಿಂದ ಕಳೆದ ಗುರುವಾರ ರಾಜಧಾನಿಗೆ ತಂದಿದ್ದು ವಾಪಸು ತೆಗೆದುಕೊಂಡು ಹೋದರು.

❖❖❖❖

ಬೆಂಗಳೂರಿನಲ್ಲಿರುವ ಧರ್ಮಪ್ರವರ್ತಕ ಮೆ॥ ಗುಬ್ಬಿ ತೋಟದಪ್ಪ ಶೆಟ್ಟರು ಅಲ್ಲಿನ ರೈಲ್ವೆ ಸ್ಟೇಷನ್ ಬಳಿ ಒಂದು ದೊಡ್ಡ ವಿಶಾಲವಾದ ಧರ್ಮಸತ್ರವನ್ನು ಕಟ್ಟಿಸಿ ಪೂರೈಸಿರುತ್ತಾರೆ. ಪ್ರಯಾಣಿಕರು ಇಳುಕೊಳ್ಳುವುದಕ್ಕೆ ತುಂಬಾ ಅನುಕೂಲವಾಗಿದೆ ಧರ್ಮಸತ್ರವನ್ನೂ ಇಟ್ಟಿದ್ದಾರೆ. ಧರ್ಮದ ಸಂಸ್ಕೃತ ಪಾಠಶಾಲೆಯನ್ನಿಟ್ಟಿರುವರು ಕೆಲವು ಬಡವಿದ್ಯಾರ್ಥಿಗಳು ಇರುವುದಕ್ಕೆ ಸ್ಥಳ ಏರ್ಪಾಡಾಗಿದೆ ಈ ಧರ್ಮವು ಚಿರಕಾಲ ನಡೆಯುವಂತೆ ಮೆ॥ ಶೆಟ್ಟರವರು ಸರ್ಕಾರಿ ಸೇವಿಂಗ್ಸ್ ಬ್ಯಾಂಕಿನಲ್ಲಿ ೩೦ ಸಾವಿರ ರೂಪಾಯಿ ಇಟ್ಟಿರುತ್ತಾರೆ.

❖❖❖❖

ಈ ತಿಂಗಳ ೩೦ ನೆ ತಾರೀಖು ಮಂಗಳವಾರ ರಾಜಧಾನಿಯಲ್ಲಿ ವ್ಯವಸಾಯ ಮತ್ತು ಕೈಗಾರಿಕೆಗಳ ಪ್ರದರ್ಶನೋತ್ಸವವನ್ನು ಪ್ರಾರಂಭಮಾಡಬೇಕೆಂದು ಯೋಚಿಸಿಕೊಂಡಿದ್ದಾರೆ ಇದಕ್ಕಾಗಿ ಕೌನ್ಸಿಲರ್ ಮೆ॥ ಸಿ. ಮಾದೈಯ್ಯನವರೂ ಆ॥ ಕಮಿಷನರ್ ಮೆ॥ ಎ ಆನಂದರಾಯರೂ, ಇಂಜನಿಯರಿಂಗ್ ಸ್ಕೂಲ್ ಹೆಡ್ ಮಾಸ್ಟರ್ ಮೆ॥ ಟಿ. ಲಕ್ಷ್ಮಣಾಚಾರ್ಯರೂ ಬಹಳ ಸಾಹಸಪಟ್ಟು ಏರ್ಪಾಡುಮಾಡುತ್ತಿರುವರು. ಎಲ್ಲಾ ಕಡೆಗಳಿಂದಲೂ ದಿನಸಾವರಿ ಪದಾರ್ಥಗಳು ಕಳುಹಿಸಲ್ಪಟ್ಟಿರುವವು. ಮೇಲ್ಕಂಡ ಅಧಿಕಾರಿಗಳು ಅವನ್ನೆಲ್ಲಾ ತರಗತಿವಾರಾಗಿ ವಿಂಗಡಿಸಿ ಬೇರೆ ಬೇರೆ ಕೊಠಡಿಗಳಲ್ಲಿ ಇಡಿಸುತ್ತಿದ್ದಾರೆ.

❖❖❖❖

ದಿವಾನ್ ಸರ್ ಪಿ. ಎನ್. ಕೃಷ್ಣಮೂರ್ತಿ ಯವರು ಸೆಕ್ರೆಟರಿಗಳ ಸಮೇತ ಕಳೆದ ಗುರುವಾರ ಮಧ್ಯಾಹ್ನ ೧೨ ಗಂಟೆಗೆ ರಾಜಧಾನಿಗೆ ದಯಮಾಡಿದರು. ಶುಕ್ರವಾರ ಸಾಯಂಕಾಲ ಅವರ ಪತ್ನಿಯವರಿಗೆ ಬೆಂಗಳೂರಿನಲ್ಲಿ ಹಾರ್ಪವಾಯು ಪ್ರಾಪ್ತವಾಯಿತೆಂದು ತಂತೀ ವರ್ತಮಾನ ಬಂದದ್ದರಿಂದ ದಿವಾನ್‌ರವರು ಆ ರಾತ್ರಿಯೇ ಡಾಕ್ಟರ್ ಸ್ಮಿತ್ ಯವರನ್ನು ಕರೆದುಕೊಂಡು ಬೆಂಗಳೂರಿಗೆ ಪ್ರಯಾಣಮಾಡಿದರು. ಅಂದಿನಿಂದ ಡಾಕ್ಟರು ಔಷಧ ಕೊಟ್ಟು ಉಪಚರಿಸುತ್ತಿದಾರೆ. ಅಕ್ಕಯವರಿಗೆ ಬೇಗ ವಾಸಿಯಾಗಲೆಂದು ಹಾರೈಸುತ್ತೇವೆ. ಈ ಸಲ ದಿವಾನ್‌ರವರು ಬೆಂಗಳೂರಿಂದ ಮೈಸೂರಿಗೆ ಬಂದಾಗಲೂ, ಇಲ್ಲಿಂದ ಬೆಂಗಳೂರಿಗೆ ಹೋದಾಗಲೂ ರೈಲು ಬಹಳ ಸಾವಕಾಶವಾಯಿತು.

ಪ್ರಿನ್ಸ್ ಆಫ್ ವೇಲ್ಸ್‌ರವರು ರಾಜಧಾನಿಗೆ ದಯಮಾಡುವಾಗ್ಗೆ ನಡೆಯುವ ಉತ್ಸವಾದಿಗಳು.

೧೯೦೬ ನೇ ಜನವರಿ ತಾರೀಖು ೨೯ ನೇ ಸೋಮವಾರ.

(೧) ಶ್ರೀಮನ್ ಯುವರಾಜದಂಪತಿಗಳು ರಾಜಧಾನಿಯ ರೈಲ್ವೆ ಸ್ಟೇಷನನ್ನು ಮಧ್ಯಾಹ್ನ ೧॥ ಗಂಟೆಗೆ ತಲಪುವರು

(೨) ಮಧ್ಯಾಹ್ನ ೧೨ ಗಂಟೆಯಿಂದ ಉತ್ಸವ ಬರುವ ಮಾರ್ಗಕ್ಕೆ ಅಡ್ಡಲಾಗಿರುವ ಮಾರ್ಗಗಳಲ್ಲಿ ಬಂಡಿಗಳು ತಿರುಗದಂತೆ ಕಟ್ಟಲ್ಪಡುವುದು.

ಉತ್ಸವಬರತಕ್ಕ ಮಾರ್ಗ—ರೈಲ್ವೆಸ್ಟೇಷನಿಂದ ಹೊರಟು ಸವಾರ್ ಲೈನಿನ ಮುಂದುಗಡೆಯಿಂದ ಸಯಾಜಿರಾವ್ ಚೌಕಕ್ಕೆ ಬಂದು, ಅಲ್ಲಿ ತಿರುಗಿ ಮಾರ್ಕೆಟ್ಟಿನ ಚೌಕದಿಂದ ಕರ್ಜನ್‌ಪಾರ್ಕನ್ನು ಪ್ರವೇಶಿಸಿ, ಪೋಸ್ಟಾಫೀಸಿನ ಮುಂದುಗಡೆ ದೊಡ್ಡಪೇಟೆ ಮಾರ್ಗವನ್ನು ಹಿಡಿದು ಸೆಂಟ್ರಲ್ ಪೊಲೀಸ್ ಸ್ಟೇಷನ್‌ಬಳಿ ಪ್ರಿನ್ಸ್ ಆಫ್ ವೇಲ್ಸ್ (ಕೆನಸಮುದ್ರದ ಜಹಗೀರ್ದಾರರ ಮನೆಮುಂದೆ) ಮಾರ್ಗದಿಂದ ಗವರ್ನಮೆಂಟ್ ಹೌಸನ್ನು ಸೇರುವರು

(೩) ಟಿಕೀಟನ್ನು ಪಡೆದಿರುವವರು ರೈಲ್ವೆಸ್ಟೇಷನಿಗೆ ಮಧ್ಯಾಹ್ನ ೧। ಗಂಟೆ ವರೆಗೆ ಮಾತ್ರ ಬಿಡಲ್ಪಡುವರು. ಮತ್ತು ಅವರ ಬಂಡಿಗಳು ಸ್ಟೇಷನಿನ ಹೊರ ಆವರಣದಲ್ಲಿ ನಿಲ್ಲಿಸಲ್ಪಡುವವು

(೪) ಜನರು (ಟಿಕೀಟ್ ಇಲ್ಲದವರು) ಸ್ಟೇಷನಿನಲ್ಲೂ ಹೊರ ಆವರಣದಲ್ಲೂ ಬಿಡಲ್ಪಡುವುದಿಲ್ಲ.

(೫) ಜನರು ಉತ್ಸವವನ್ನು ನೋಡುವುದಕ್ಕಾಗಿ ಮಧ್ಯಾಹ್ನ ೧। ಗಂಟೆಯೊಳಗೇ ತಂತಮ್ಮ ಸ್ಥಾನಗಳಿಗೆ ಹೋಗಿ ಸೇರಿಕೊಳ್ಳತಕ್ಕದ್ದು ಆನಂತರ ಯಾರೊಬ್ಬರೂ ಮಾರ್ಗದಲ್ಲಿ ತಿರುಗಲು ಬಿಡುವುದಿಲ್ಲ.

ಭೇಟಿ ಸಮಾರಂಭಗಳು.

ಶ್ರೀಮನ್ ಮಹಾರಾಜರವರು ಅದೇ ದಿನ ಮಧ್ಯಾಹ್ನ ೩॥ ಗಂಟೆಯಲ್ಲಿ ಶ್ರೀಮನ್ ಪ್ರಿನ್ಸ್ ಆಫ್ ವೇಲ್ಸ್‌ರವರ ದರ್ಶನವನ್ನು ತೆಗೆದುಕೊಳ್ಳುವರು

ಕಾವೇರಿ ಕಲ್ಲು ತೊಟ್ಟಿಯಿಂದ ಮಹಾರಾಜರವರು ಹೊರಡುವ ಮಾರ್ಗ—ಕೋಟೆಯ ಪಶ್ಚಿಮ ದ್ವಾರದಿಂದ ಕರ್ಜನ್ ಪಾರ್ಕನ್ನು ಪ್ರವೇಶಿಸಿ, ಆಲ್ಬರ್ಟ್ ವಿಕ್ಟರ್ ಮಾರ್ಗ ಹಿಡಿದು, ಕಬ್ಬನ್ನಿನ ತೋಟದ ಇದಿರಿಗೆ ಹೊರಟು, ಗವರ್ನಮೆಂಟ್ ಹೌಸನ್ನು ತಲಪುವರು.

೧ ಭೇಟಿಯಾದ ನಂತರ ಮಹಾರಾಜರವರು ಅದೇ ಮಾರ್ಗದಲ್ಲಿ ಹಿಂದಿರುಗುವರು

ಶ್ರೀಮನ್ ಪ್ರಿನ್ಸ್ ಆಫ್ ವೇಲ್ಸ್‌ರವರು ಅದೇ ಮಧ್ಯಾಹ್ನ ೪॥ ಗಂಟೆಯಲ್ಲಿ ಜಗನ್ಮೋಹನ ಅರಮನೆಗೆ ದಯಮಾಡಿ ಶ್ರೀಮನ್ ಮಹಾರಾಜರವರಿಗೆ ಪ್ರತಿಭೇಟಿಯನ್ನು ದಯಪಾಲಿಸುವರು

ಗವರ್ನಮೆಂಟ್ ಹೌಸಿನಿಂದ ಪ್ರಿನ್ಸ್ ಆಫ್ ವೇಲ್ಸ್‌ರವರು ಹೊರಡುವ ಮಾರ್ಗ—ಗವರ್ನಮೆಂಟ್ ಹೌಸಿನಿಂದ ಅವರು ನೈಋತ್ಯ ಮಾರ್ಗದಲ್ಲಿ ಹೊರಟು, ಮ್ಯುನಿಸಿಪಲ್ ಉದ್ಯಾನವನ್ನು (ಪಾರ್ಕ್) ದಾಟಿ, ರೆಸಿಡೆನ್ಸಿ ಮಾರ್ಗವನ್ನು ಸೇರಿ, ದೊಡ್ಡ ಕೆರೆಗೆ ನೀರು ಬರುವ ನಾಲೆಹತ್ತಿರ (ಕಬ್ಬನ್ನಿನ ತೋಟದ ಮುಂದುಗಡೆ) ತಿರುಗಿಕೊಂಡು, ಪೂರ್ವ ಬಾಗಿಲಿನಿಂದ ಕರ್ಜನ್ ಪಾರ್ಕನ್ನು ಪ್ರವೇಶಿಸಿ, ಸಯಾಜಿರಾವ್ ಮಾರ್ಗದಲ್ಲಿ ಮೆಮೋರಿಯಲ್ ಫೌಂಟನ್ ಬಳಿ ದಕ್ಷಿಣಕ್ಕೆ ತಿರುಗಿ, ಕರ್ಜನ್ ಪಾರ್ಕಿನ ದಕ್ಷಿಣಬಾಗಿಲಿನಿಂದ ಲಕ್ಷ್ಮೀವಿಲಾಸ ಮಾರ್ಗವಾಗಿ ಜಗನ್ಮೋಹನ ಅರಮನೆಯನ್ನು ಸೇರುವರು.

೨ ಹಿಂತಿರುಗುವಾಗ್ಗೆ ಲೇಟ್ ಮಹಾರಾಜರವರ ಪ್ರತಿಮೆ (ಸ್ಟ್ಯಾಚ್ಯು) ವರೆಗೆ ಹೊರಟ ಮಾರ್ಗದಲ್ಲೇ ಬಂದು, ಉತ್ತರಕ್ಕೆ ತಿರುಗಿ (ಅಂದರೆ ಪೋಸ್ಟಾಫೀಸ್ ಹತ್ತಿರ) ಕರ್ಜನ್ ಪಾರ್ಕಿನ ಉತ್ತರದ್ವಾರವನ್ನು ದಾಟಿ, ಎಳಂದೂರ್ ಜಹಗೀರ್ದಾರರ ಮನೆಯ ಮುಂದಣ ಮಾರ್ಗ ಹಿಡಿದು ಚರ್ಚ್ ರೋಡನ್ನು ಸೇರಿ ಎಲ್ಡಿನ್‌ದ್ವಾರದಿಂದ ಗವರ್ನಮೆಂಟ್ ಹೌಸನ್ನು ತಲಪುವರು.

ಮಧ್ಯಾಹ್ನ ೩ ಗಂಟೆಯಿಂದ ೫॥ ಗಂಟೆ ವರೆಗೆ ಮೇಲ್ಕಂಡ ಮಾರ್ಗಗಳಲ್ಲಿ ಬಂಡಿಗಳನ್ನೂ ಜನಗಳನ್ನೂ ಬಿಡುವುದಿಲ್ಲ.

೧೯೦೬ ನೇ ಜನವರಿ ತಾರೀಖು ೩೦ ನೇ ಮಂಗಳವಾರ. ಶ್ರೀಮನ್ ಪ್ರಿನ್ಸ್ ಆಫ್ ವೇಲ್ಸ್‌ರವರು ಚಾಮರಾಜೇಂದ್ರ ಶಿಲ್ಪವಿದ್ಯಾಲಯಕ್ಕೆ ಅಸ್ತಿಭಾರ ಶಿಲಾಸ್ಥಾಪನೆಯು ಬೆಳಗಿನ ೮। ಗಂಟೆಗೆ ಜರಗುವುದು.

ಬೆಳಿಗ್ಗೆ ೮ ಗಂಟೆಯಿಂದ ೯ ಗಂಟೆ ವರೆಗೆ ಈ ಕೆಳಗೆ ಕಂಡ ಮಾರ್ಗಗಳಲ್ಲಿ ಬಂಡಿಗಳನ್ನು ಬಿಡುವುದಿಲ್ಲ

ಮಹಾರಾಜರವರ ದರ್ಶನಕ್ಕಾಗಿ ಹೋಗಿ ಬಂದ ಮಾರ್ಗದಲ್ಲೇ ಪ್ರಿನ್ಸ್ ಆಫ್ ವೇಲ್ಸ್‌ರವರು ಮೆಮೋರಿಯಲ್ ಫೌಂಟನ್‌ವರೆಗೆ ಬಂದು, ಅಲ್ಲಿ ಸಯಾಜಿರಾವ್ ಮಾರ್ಗಕ್ಕೆ ತಿರುಗಿ, ಆಸ್ಪತ್ರೆ ಎದುರಿಗಿರುವ ಚಪ್ಪರವನ್ನು ಸೇರುವರು, ಹಿಂತಿರುಗುವಾಗ್ಗೆ ಅದೇ ಮಾರ್ಗದಲ್ಲಿ ಫೌಂಟನ್‌ವರೆಗೆ ಬಂದು, ಕರ್ಜನ್‌ಪಾರ್ಕಿಗೆ ದಕ್ಷಿಣದ್ವಾರದಿಂದ ಹೊರಟು, ಕರೀಕಲ್ಲುತೊಟ್ಟಿಯನ್ನೂ ಹೊಸ ಅರಮನೆಯನ್ನೂ ಪರಾಂಬರಿಸಿ, ಮೊದಲು ಹೊರಟ ಮಾರ್ಗದಲ್ಲೇ ಗವರ್ನಮೆಂಟ್ ಹೌಸನ್ನು ಸೇರುವರು.

ಟಿಕೀಟನ್ನು ಪಡೆದಿರುವವರ ಬಂಡಿಗಳು ಬೆಳಿಗ್ಗೆ ೮ ಗಂಟೆ ವರೆಗೆ ಪ್ರಿನ್ಸ್ ಆಫ್ ವೇಲ್ಸ್‌ರವರ ಮಾರ್ಗದ ಕಡೇ ವರೆಗೆ ಬಿಡಲ್ಪಡುವವು

ಶ್ರೀರಂಗಪಟ್ಟಣಕ್ಕೆ ಹೋಗಿ ಬರುವುದು

ಯುವರಾಜದಂಪತಿಗಳು ಮಧ್ಯಾಹ್ನ ೧ ಗಂಟೆಯಲ್ಲಿ ಉತ್ತರದ್ವಾರ (ಕನ್ನಾನಿ ದರ್ವಾಜಾ) ದಿಂದ ಕ್ಯಾಂಪ್ ಸಮೀಪದಲ್ಲಿ ಹೋಗುವ ಮಾರ್ಗದಲ್ಲಿ ಶ್ರೀರಂಗಪಟ್ಟಣಕ್ಕೆ ದಯಮಾಡಿಸುವರು

ಮೈಸೂರು ಗವರ್ನಮೆಂಟ್ ಹೌಸಿನಿಂದ ಶ್ರೀರಂಗಪಟ್ಟಣದ ವರೆಗೆ ಮಧ್ಯಾಹ್ನ ೧೨ ಗಂಟೆಯಿಂದ ಅವರ ಸವಾರಿಯು ರಾಜಧಾನಿಗೆ ಹಿಂತಿರುಗುವ ವರೆಗೆ ಬಂಡಿಗಳನ್ನು ಬಿಡುವುದಿಲ್ಲ. ರಾತ್ರಿ ಗವರ್ನಮೆಂಟ್ ಹೌಸಿನ ಬೈಲಿನಲ್ಲಿ ಮದ್ದಿನ ನೋಟವು ಜರಗುವುದು.

೧೯೦೬ ನೇ ಜನವರಿ ತಾರೀಖು ೩೧ ನೇ ಬುಧವಾರ
ಬೇಟೆಯ ಸ್ಥಳಕ್ಕೆ ಹೊರಡುವುದು.

ಯುವರಾಜ ದಂಪತಿಗಳು ಮಧ್ಯಾಹ್ನ ೨ ಗಂಟೆಗೆ ಕಾಕನಕೋಟೆ ಕ್ಯಾಂಪಿಗೆ ಶಿಕಾರಿ ಮಾಡುವುದಕ್ಕೆ ತೆರಳುವರು. ಮಧ್ಯಾಹ್ನ ೧೨ ಗಂಟೆಯಿಂದ ಮೋಟಾರ್ ಬಂಡಿಗಳಲ್ಲಿ ಹೊರಡುವ ವರೆಗೂ ಯಾವ ಬಂಡಿಗಳನ್ನೂ ಬಿಡುವುದಿಲ್ಲ.

ಮಾರ್ಗ—ರೆಸಿಡೆನ್ಸಿಯಿಂದ ದೊಡ್ಡ ಕೆರೆ ಏರಿಯ ಮೇಲೆ ಹೊರಟು ಗುಂಡುಹಾರಿಸುವ ಸ್ಥಳದ ಹತ್ತಿರವಿರುವ ಸೇತುವೆ ಬಳಿ ಚಾಮರಾಜ ಮಾರ್ಗ (೧೦೦ ಅಡಿ ರಸ್ತೆ) ಕ್ಕೆ ತಿರುಗಿಕೊಂಡು, ಮೈಸೂರಾಯ ಮತ್ತು ಚಾಮರಾಜ ಮಾರ್ಗಗಳು ಸೇರುವ ವರೆಗೂ ಹೋಗಿ, ಅಲ್ಲಿಂದ ಮೈಸೂರಾಯ ಮಾರ್ಗವನ್ನು ಹಿಡಿದು, ಹೊಸ ಹೊಲಗೇರಿಯನ್ನು ದಾಟಿ, ಚಟ್ಟಹಳ್ಳಿ ಮಾರ್ಗವಾಗಿ ಪ್ರಯಾಣಮಾಡುವರು.

೧೯೦೬ ನೇ ಫೆಬ್ರವರಿ ತಾರೀಖು ೪ ನೇ ಭಾನುವಾರ.

ಪ್ರಿನ್ಸ್ ಆಫ್ ವೇಲ್ಸ್‌ರವರು ರಾಜಧಾನಿಗೆ ಹಿಂತಿರುಗುವುದು.—ಯುವರಾಜ ದಂಪತಿಗಳು ಶಿಕಾರಿ ಕ್ಯಾಂಪಿನಿಂದ ಪ್ರಾತಃಕಾಲ ೧೧ ಗಂಟೆಗೆ ರಾಜಧಾನಿಯನ್ನು ತಲಪುವರು

ಹಿಂದೆ ತಾ. ೩೧ ರಲ್ಲಿ ಅವರು ಹೊರಟ ಮಾರ್ಗಗಳಲ್ಲೇ ಬರುವರು. ಮತ್ತು ಆ ದಿವಸ ಮಾಡಿರುವ ಪೊಲೀಸ್ ಏರ್ಪಾಡೇ ಅವರು ಬರುವಾಗಲೂ ಮಾಡಲ್ಪಡುವುದು

ಪ್ರಾತಃಕಾಲ ೨ ಗಂಟೆಯಿಂದ ಯುವರಾಜದಂಪತಿಗಳು ಗವರ್ನಮೆಂಟ್ ಹೌಸನ್ನು ತಲಪುವ ವರೆಗೆ ಯಾವ ಬಂಡಿಗಳನ್ನೂ ಬಿಡುವುದಿಲ್ಲ

ದೇವಾಲಯಕ್ಕೆ ಹೋಗುವುದು

ಯುವರಾಜ ದಂಪತಿಗಳು ೬ ನೇ ತಾ. ಸಾಯಂಕಾಲ ೬ ಗಂಟೆಯಲ್ಲಿ ದೇವಾಲಯ (ಶಕೇ ಗಡಿಯಾರದ ಹತ್ತಿರ ಇರುವ ದೇವಾಲಯ) ಕ್ಕೆ ದಯಮಾಡಿಸುವರು

ಗವರ್ನಮೆಂಟ್ ಹೌಸಿನಿಂದ ಪಶ್ಚಿಮದ್ವಾರದಲ್ಲಿ ಹೊರಟು, ಚರ್ಚ್ ಮಾರ್ಗದಲ್ಲಿ ಬರುವರು. ನಜರ್ಬಾದ್ ಮತ್ತು ರೆಸಿಡೆನ್ಸಿ ಮಾರ್ಗಗಳಲ್ಲಿ ಹಿಂದಿರುಗುವರು ಮಧ್ಯಾಹ್ನ ೫। ಗಂಟೆಯಿಂದ ಗವರ್ನಮೆಂಟ್ ಹೌಸಿಗೆ ಹಿಂತಿರುಗುವ ವರೆಗೆ ಬಂಡಿಗಳನ್ನೂ ಜನಗಳನ್ನೂ ಆ ಮಾರ್ಗಗಳಲ್ಲಿ ತಿರುಗಾಡಗೊಡಿಸುವುದಿಲ್ಲ.

ರಾಜಧಾನಿಯಿಂದ ಹಿಂದಿರುಗುವುದು.

ರಾತ್ರಿ ೯॥ ಗಂಟೆಯಿಂದ ಗವರ್ನಮೆಂಟ್ ಹೌಸಿನಿಂದ ರೈಲ್ವೆ ಸ್ಟೇಷನವರೆಗೆ ಬಂಡಿಗಳನ್ನು ಬಿಡುವುದಿಲ್ಲ

ಹೊರಡುವ ಮಾರ್ಗ

ಗವರ್ನಮೆಂಟ್ ಹೌಸಿನಿಂದ ರಾತ್ರಿ ೧೦ ಗಂಟೆಗೆ ಯುವರಾಜ ದಂಪತಿಗಳು ಪಶ್ಚಿಮ ದ್ವಾರದಲ್ಲಿ ಹೊರಟು, ಚರ್ಚ್ ಮಾರ್ಗದಲ್ಲಿ ಚರ್ಚ್ ಮತ್ತು ಯಳಂದೂರು ಜಾಗೀರ್ದಾರರ ಮನೆ ಮುಂಗಡೆಯಿಂದ ಕರ್ಜನ್ ಪಾರ್ಕನ್ನು ಪ್ರವೇಶಿಸಿ, ವಿಕ್ಟರ್ ಮಾರ್ಗದಲ್ಲಿ ಮೆಮೋರಿಯಲ್ ಫೌಂಟನ್ ಬಳಿ ಸಯಾಜಿರಾವ್ ಮಾರ್ಗದ ಮೂಲಕ ಪ್ರಿನ್ಸ್ ಆಫ್ ವೇಲ್ಸರ ಮಾರ್ಗದಲ್ಲಿ ಹೊರಟು ರೈಲ್ವೆ ಸ್ಟೇಷನನ್ನು ತಲಪುವರು

ಇಂಡಿಯಾ ದೇಶದ ವೃತ್ತಾಂತಗಳು.

ಹೈದರಾಬಾದಿನಲ್ಲಿ ನಡೆಯುವ ಕೈಗಾರಿಕೆಗಳ ಪ್ರದರ್ಶನೋತ್ಸವವು ನಾಳೆ ಶನಿವಾರ ಪ್ರಾರಂಭವಾಗಬೇಕೆಂದು ನಿಷ್ಕರ್ಷೆಯಾಗಿದೆ

❖❖❖❖

ಬಳ್ಳಾರಿಯಲ್ಲೂ ಅದರ ಸುತ್ತುಮುತ್ತಿನ ಗ್ರಾಮಗಳಲ್ಲೂ ಪ್ಲೇಗ್ ಉಪದ್ರವೂ ಕಿಡುಬಿನ ಉಪದ್ರವೂ ಪ್ರಜೆಗಳನ್ನು ಸಂಕಟಪಡಿಸುತ್ತಿರುವವು.

❖❖❖❖

ಮದರಾಸ್ ಪಟ್ಟಣದಲ್ಲಿ ಮುಸಲ್ಮಾನ್ ಪ್ರಜೆಗಳು ಲಾರ್ಡ್ ಆಂಪ್ಟಿಲ್‌ರವರ ಹೆಸರಿನ ಮೇಲೆ ಒಂದು ಬಂಗಲೆಯನ್ನು ಕಟ್ಟಿಸಬೇಕೆಂದು ಚಂದಾ ಎತ್ತುತ್ತಿದ್ದಾರೆ.

❖❖❖❖

ಬುಂದೇಲ್‌ಖಂಡಿಗೆ ಸೇರಿದ ಚರ್ಖಾರಿ ಎಂಬ ಸಂಸ್ಥಾನದ ಮಹಾರಾಜರವರ ಏಕಪುತ್ರರಾದ ರಾಜಬಹದೂರ್ ಶ್ರೀ ಕೃಷ್ಣಪ್ರತಾಪ್‌ಸಿಂಗ್‌ಯವರು ಕಳೆದವಾರ ಕಾಲವಾದರು. ಮಹಾರಾಜರವರ ಮತ್ತು ಅವರ ಪ್ರಜೆಗಳ ದುಃಖವು ಅಪಾರವಾಗಿರುತ್ತದೆ.

❖❖❖❖

ಪ್ರಯಾಗದಲ್ಲಿ ಈ ಸಲ ಸಂಕ್ರಾಂತಿ ಹಬ್ಬದ ದಿನ ಸುಮಾರು ೧೫ ಲಕ್ಷ ಪ್ರಜೆಗಳು ಸೇರಿ ಗಂಗಾಸ್ನಾನ ಮಾಡಿದರು. ಸರ್ಕಾರದವರು ಪ್ರಜಾ ಆರೋಗ್ಯವನ್ನು ಕಾಪಾಡುವುದಕ್ಕೆ ಅವರಿಗೆ ಅನೇಕ ಸೌಕರ್ಯಗಳನ್ನು ಕಲ್ಪಿಸಿ ಕೊಟ್ಟಿದ್ದರು

❖❖❖❖

ಕಳೆದ ವಾರ ಹಿಂದುಸ್ಥಾನದಲ್ಲೆಲ್ಲಾ ೫,೦೨೯ ಜನರಿಗೆ ಪ್ಲೇಗ್ ತಗುಲಿತು. ಈ ಪೈಕಿ ೬,೨೪೦ ಜನರು ಕಾಲವಾದರು. ಸಂಯುಕ್ತ ಆಧಿಪತ್ಯದಲ್ಲಿ ೧,೦೩೩ ಮಂದಿ, ಬಂಗಾಳದಲ್ಲಿ ೧,೧೪೬, ಮುಂಬಯಿ ಪಂಜಾಬಿನಲ್ಲಿ ೬೩೨ ಮಂದಿ, [illegible]ಸಲ್ಲಿ ೫೭೬ ಮಂದಿ ಕಾಲವಾಗಿದ್ದಾರೆ.

❖❖❖❖

[illegible] ಸೇರಿದ ಮಂಗ್ರಾಪಟ್ಟಣದ ಸಮುದ್ರತೀರದಲ್ಲಿ ಈ ಸಲ ಬಹು ಅಮೂಲ್ಯವಾದ ಮೂರು ಮುತ್ತುಗಳು ಸಿಕ್ಕಿರುತ್ತವೆ. ಇವುಗಳಲ್ಲಿ ಒಂದಕ್ಕೆ ೩೦ ಸಾವಿರ, ಇನ್ನೊಂದಕ್ಕೆ ೩೫ ಸಾವಿರ, ಮೂರನೆಯದಕ್ಕೆ ೪೫ ಸಾವಿರ ರೂಪಾಯಿ ಬೆಲೆಯಾಗುವುದೆಂದು ವರ್ತಕರು ಅಂದಾಜು ಹಾಕಿದ್ದಾರೆ.

ಬುರಾಕ್‌ಪುರದಲ್ಲಿ ವಿದ್ಯುಚ್ಛಕ್ತಿಯನ್ನು ತಯಾರ್‌ಮಾಡಿ ಬಿಕರಿ ಮಾಡುವುದಕ್ಕೆ ಒಂದು ಕಂಪನಿ ಏರ್ಪಾಡಾಗಿದೆ ಅದರ ಮೂಲಧನ ೨ ಲಕ್ಷ ರೂಪಾಯಿಗಳನ್ನು ಷೇರು ಒಂದಕ್ಕೆ ೧೦೦ ರೂಪಾಯಿಗಳಂತೆ ೨೦೦೦ ಷೇರು ಮಾಡಿ ಬಿಕರಿ ಮಾಡುತ್ತಿದ್ದಾರೆ. ಅನೇಕರು ಆ ಷೇರುಗಳನ್ನು ಕೊಂಡುಕೊಂಡಿರುವರು.

❖❖❖❖

ರಾಜಪುಟಾನಾಕ್ಕೆ ಸೇರಿದ ಬನ್ಸ್ವಾರಾ ಎಂಬ ಸಂಸ್ಥಾನದ ಮಹಾರಾಜಾ ರಂಬುಸಿಂಗರವರಿಗೆ ಕಳೆದ ವಾರ ರಾಜ್ಯಾಭಿಷೇಕವಾಯಿತು. ಏಜಂಟರಾದ ಮೆ॥ ಇ ಕಾಲ್ವಿನ್‌ರವರು ಹಾಜರಾಗಿದ್ದು ಮಹಾರಾಜರಿಗೆ ರಾಜ್ಯಾಧಿಕಾರವನ್ನು ವಹಿಸಿದರು, ಕಳೆದ ವಾರ ಆ ಸಂಸ್ಥಾನದಲ್ಲಿ ಈ ಪಟ್ಟಾಭಿಷೇಕೋತ್ಸವವು ಅತ್ಯಂತ ವಿಜೃಂಭಣೆಯಾಗಿ ನೆರವೇರಿಸಲ್ಪಟ್ಟಿತು.

❖❖❖❖

ಬೊಂಬಾಯಿ ಪಟ್ಟಣದಲ್ಲಿ ಭಿಕ್ಷಬೇಡುವವರ ಕಾಟವನ್ನು ತಪ್ಪಿಸಬೇಕೆಂದು ಪೋಲೀಸಿನವರು ೬ ಮಂದಿ ಭಿಕ್ಷುಕರನ್ನು ಹಿಡಿದು, ಅವರ ಮೇಲೆ ಫಿರ್ಯಾದುಮಾಡಿದರು. ಮ್ಯಾಜಿಸ್ಟ್ರೇಟರು ಅವರಿಗೆ ೧೫ ದಿನಗಳಂತೆ ಕಠಿಣಸಜಾ ವಿಧಿಸಿರುತ್ತಾರೆ. ಇದರಿಂದಲಾದರೂ ಭಿಕ್ಷುಕರು ಜನವನ್ನು ಪೀಡಿಸದೆ, ಕಸಬುಮಾಡಿ ಜೀವಿಸ್ಯಾರೆಂದು ನಿರೀಕ್ಷಿಸಲ್ಪಟ್ಟಿದೆ.

❖❖❖❖

ಉತ್ತರ ಆರ್ಕಾಟ್ ಜಿಲ್ಲೆಗೆ ಸೇರಿದ ಗುಡಿಯಾತ್ತಂ ಊರಿಗೆ ಒಳ್ಳೆ ಕುಡಿಯುವ ನೀರನ್ನು ತಂದೊದಗಿಸಬೇಕೆಂದು ೫೯,೦೦೦ ರೂಪಾಯಿಗಳನ್ನೂ ದಕ್ಷಿಣ ಆರ್ಕಾಟ್ ಜಿಲ್ಲೆಗೆ ಸೇರಿದ ವಿಳ್ಳುಪುರಂ ಎಂಬ ಊರಿನಲ್ಲಿ ಒಂದು ಸರ್ಕಾರಿ ಟ್ರೇನಿಂಗ್ ವಿದ್ಯಾಶಾಲೆಯನ್ನು ಕಟ್ಟಿಸಬೇಕೆಂದು ೬೩,೦೦೦ ರೂಪಾಯಿಯನ್ನೂ ಮದರಾಸ್ ಗವರ್ನಮೆಂಟಿನವರು ಸ್ಯಾಂಕ್ಷನ್ ಮಾಡಿದ್ದಾರೆ.

❖❖❖❖

ರಷ್ಯಾದವರು ಕೈಸೆರೆ ಹಿಡಿದಿದ್ದ ಸೈನಿಕರ ಪೈಕಿ ೨೦೦೦ ಜಪಾನ್ ಸಿಪಾಯಿಗಳು ರಷ್ಯಾದಿಂದ ವಾಪಸು ಜಪಾನಿಗೆ ಹೋಗುತ್ತಾ ದಾರಿಯಲ್ಲಿ ಅಂದರೆ ಸಿಲೋನ್ (ಲಂಕಾ) ದ್ವೀಪದಲ್ಲಿ ಒಂದೆರಡು ದಿನ ತಂಗುವರಾಗಿದ್ದಾರೆಂದು ಬಂದ ಕಾರಣ ಲಂಕಾದ್ವೀಪದವರು ಅವರನ್ನು ತಕ್ಕ ರೀತಿಯಲ್ಲಿ ಸನ್ಮಾನಪೂರ್ವಕವಾಗಿ ಎದುರುಗೊಳ್ಳುವುದಕ್ಕೂ ಅತಿ ಸತ್ಕಾರ ಮಾಡುವುದಕ್ಕೂ ಸನ್ನಾಹ ಮಾಡುತ್ತಿದ್ದಾರೆ

❖❖❖❖

ಪ್ಲೇಗ್ ಉಪದ್ರ ತಗಲಿದರೆ ಆರೋಗ್ಯವನ್ನು ಕಾಪಾಡುವಂಥ ಒಂದು ದಿವ್ಯ ಔಷಧವನ್ನು ಡಾಕ್ಟರ್ ಕ್ಲೀನ್ ಎಂಬ ವೈದ್ಯರು ಕಂಡುಹಿಡಿದಿದ್ದಾರೆಂದು ಲಂಡನ್ ಪಟ್ಟಣದಿಂದ ತಂತೀ ವರ್ತಮಾನ ಬಂದಿದೆ. ಬೊಂಬಾಯಿನ ಪ್ರೊಫೆಸರ್ ಹಾಫ್ಕಿನ್‌ರವರು ತಯಾರಿಸುವ ದ್ರವ ಔಷಧಿಗಿಂತಲೂ ಈ ಔಷಧವು ಉತ್ತಮವಾದದ್ದೆಂದೂ ಅದಕ್ಕಿಂತಲೂ ಸುಲಭವಾಗಿಯೂ ಜಾಗ್ರತೆಯಾಗಿಯೂ ಮಾಡಬಹುದೆಂದೂ ಹೇಳುತ್ತಾರೆ.

❖❖❖❖

ಅಹ್ಮದಾಬಾದ್ ಜೈಲಿನಿಂದ ತಪ್ಪಿಸಿಕೊಂಡು ಹೋಗಿ ಹಲವಾರು ಜನರನ್ನು ಕೊಂದು ಹಾಕಿದ ಸೈದೂ ಎಂಬುವನೂ ಅವನ ಜೊತೆಗಾರರೂ ಕಳೆದ ವಾರ ಒಡೆ ಹೋಗುತ್ತಾ ಮುಬಿಯಾ ಎಂಬ ಗ್ರಾಮವನ್ನು ಲೂಟಿ ಮಾಡಿ, ಕೆಲವರನ್ನು ಹೊಡೆದು ಗಾಯಪಡಿಸಿ, ೩,೦೦೦ ರೂಪಾಯಿನ ಹಣವನ್ನೂ ಎರಡು ಒಂಟೆಗಳನ್ನೂ ಕಸಿದುಕೊಂಡು ಹೋಗಿದ್ದಾರೆ. ಇವರು ಇನ್ನೂ ಸಿಕ್ಕಿಲ್ಲ. ಪೋಲೀಸಿನವರು ತಲಾಷು ಮಾಡುತ್ತಿರುವರು

❖❖❖❖

ಬರ್ದ್ವಾನ್ ಡಿವಿಜನಲ್ಲಿ ವೃದ್ಧ ಕಾಲವಾದ ಬಾಬೂರಾಮಚರಣ ಛಾರ್ ಎಂಬ ಹಿಂದುವಿನ ಪತ್ನಿ ಶ್ರೀಮತಿ ಸುಶೀಲಾಸುಂದರೀದಾಸಿ ಎಂಬಾಕೆಯು ಕೌಶಿಕನದಿಯಲ್ಲಿ ಸ್ನಾನಘಟ್ಟಗಳೇ ಮುಂತಾದುವನ್ನು ಕಟ್ಟಿಸಬೇಕೆಂದು ಅಪೇಕ್ಷೆಪಟ್ಟು ೩೫,೦೦೦ ರೂಪಾಯಿಗಳನ್ನು ಬಂಗಾಳಾ ಸರ್ಕಾರದವರ ವಶಕ್ಕೆ ಒಪ್ಪಿಸಿರುತ್ತಾಳೆ. ಗವರ್ನಮೆಂಟಿನವರು ಈ ಹಣವನ್ನು ಅಂಗೀಕರಿಸಿ, ಆಕೆಯ ಉದಾರ ಮನಸ್ಸನ್ನು ಸ್ತೋತ್ರ ಮಾಡಿದ್ದಾರೆ.

❖❖❖❖

ಮೈಸೂರು ಸಂಸ್ಥಾನದ ಭೂಗರ್ಭಶೋಧನಾ ಇಲಾಖೆಯ ಮಿ॥ ಸಾಂಬಶಿವ ಐಯ್ಯರವರು ಕಾಳಹಸ್ತಿಗೆ ಹೋಗಿ ಭೂಮಿಯನ್ನು ಆಜಮಾಯಿಷಿ ಮಾಡಿ, ಅಲ್ಲಿ ಚಿನ್ನ ಸಿಕ್ಕುತ್ತದೆಂದು ತಿಳಿಸಿದ್ದಾರೆ. ಪೂರ್ವಕಾಲದಲ್ಲಿ ಜನರು ಚಿನ್ನ ತೆಗೆಯುತ್ತಿದ್ದ ಗುಳಿಗಳೂ ಸಿಕ್ಕಿರುತ್ತವೆ. ಆ ಸ್ಥಳವು ಮದರಾಸಿನಿಂದ ೩೦ ಮೈಲಿಗಳ ದೂರದಲ್ಲಿರುವುದು ನಾಯುಡುಪೇಟೆ ರೈಲ್ ಸ್ಟೇಷನ್‌ಗೆ ೩ ಮೈಲಿಯಲ್ಲಿದೆ. ಮತ್ತು ಅಲ್ಲಿಂದ ಒಂದು ಮೈಲಿ ದೂರದಲ್ಲಿ ಭಾರೀ ರಸ್ತೆ ಇರುತ್ತದೆ.

❖❖❖❖

ಕುರಿ ಆಡುಗಳನ್ನು ಜೀವದಲ್ಲಿರುವಾಗಲೇ ಅವುಗಳ ಚರ್ಮವನ್ನು ಸುಲಿದು ಒಣಗಿಸಿ ಅಮೇರಿಕಕ್ಕೆ ಕಳುಹಿಸಿದರೆ ಹೆಚ್ಚು ಕ್ರಯ ಸಿಕ್ಕುತ್ತದೆಂದು ಕಲ್ಕತ್ತಾ ಪ್ರಾಂತ್ಯದ ಕೆಲವು ಮೂಢ ಜನರು ಊಹಿಸಿ ದುಷ್ಟನಾಗಿ ಆ ಮೂಗು ಪ್ರಾಣಿಗಳ ಚರ್ಮವನ್ನು ಸುಲಿದು ಹಾಕುತ್ತಿದ್ದರು ಅಮೇರಿಕದವರು ಈ ಸಂಗತಿಯನ್ನು ಕೇಳಿ ತುಂಬಾ ಕನಿಕರಪಟ್ಟು, ಅಂಥಾ ಕ್ರೂರಾತ್ಮರನ್ನು ಹಿಡಿದು ಅವರ ಮೇಲೆ ಮೊಕದ್ದಮೆ ಮಾಡಬೇಕೆಂದು ೨,೩೦೦ ರೂಪಾಯಿ ಕಳುಹಿಸಿದ್ದಾರೆ.

❖❖❖❖

ಪ್ರಿನ್ಸ್ ಆಫ್ ವೇಲ್ಸ್‌ರವರು ಪತ್ನೀಸಮೇತ ಈಗ ಮದರಾಸಿಗೆ ಬಂದು ಅಲ್ಲಿನ ಪ್ರಜೆಗಳ ಆತಿಥ್ಯವನ್ನು ಸ್ವೀಕರಿಸುತ್ತಿದ್ದಾರೆ ಈಗ ಅಲ್ಲಿ ಗಾಡಿಗಳ ಬಾಡಿಗೆ ದರವು ತುಂಬಾ ಹೆಚ್ಚಿರುತ್ತದೆ ದಿನ ಒಂದಕ್ಕೆ ಒಂದು ಕುದುರೆ ಕಟ್ಟಿದ ಬ್ರೋಹಂಗಾಡಿಗೆ ೨೦ ರೂಪಾಯಿ, ಎರ

...ಗಾಡಿಗೆ ೨೪ ರೂಪಾಯಿ, ಜೋಡಿ ಕುದುರೆ ಕಟ್ಟಿದ ಗಾಡಿಗೆ ೩೦ ರೂಪಾಯಿ. ಈ ದರಗಳಿಗಿಂತ ಯಾರೂ ಹೆಚ್ಚು ಬಾಡಿಗೆಯನ್ನು ...ಕೊಳ್ಳಕೂಡದೆಂದು ಸರ್ಕಾರದವರು ಗೊತ್ತು ಮಾಡಿದ್ದಾರೆ.

****

ಮೀರಟ್ ನಗರದಲ್ಲಿ ಒಂದು ವಿದ್ಯಾಶಾಲೆಯನ್ನು ಸ್ಥಾಪಿಸಬೇಕೆಂದು ಮಿ॥ ರಾಮಾನುಜದಯಾಳ್ ಎಂಬುವರೇ ಮೊದಲಾದ ಕೆಲವು ಹಿಂದೂ ದೊಡ್ಡ ಮನುಷ್ಯರು ಪ್ರಯತ್ನ ಪಟ್ಟರು. ಸರ್ಕಾರದವರು ಅವರು ನೀವೇ ೨೦,೦೦೦ ರೂಪಾಯಿ ಚಂದಾ ಕೂಡಿಸುವುದಾದರೆ ಸರ್ಕಾರದಿಂದ ೧೯,೦೦೦ ರೂಪಾಯಿ ಕೊಡುತ್ತೇವೆಂದು ತಿಳಿಸಿದರು. ಅಲ್ಲಿನ ಪ್ರಜೆಗಳೂ ದೊಡ್ಡ ಮನುಷ್ಯರೂ ಸೇರಿ ೨೦ ಸಾವಿರ ರೂಪಾಯನ್ನು ಕೂಡಿ ಹಾಕಿದ್ದಾಯಿತು. ಅವರು ಈ ಸಂಗತಿಯನ್ನು ತಿಳಿಸಿ, ಸಹಾಯ ದ್ರವ್ಯವನ್ನು ಕೊಡಬೇಕೆಂದು ಕೇಳಿದ್ದಾರೆ.

****

ನಿಕ್ಕಲ್ ಎಂಬ ಲೋಹದಲ್ಲಿ ಚಿಲ್ಲರೆ ನಾಣ್ಯಗಳನ್ನು ಮಾಡಿ, ಹಿಂದೂಸ್ಥಾನದಲ್ಲಿ ಚಲಾವಣೆಗೆ ತರುವುದೆಂದು ನಿಷ್ಕರ್ಷೆಯಾಗಿದೆಯಷ್ಟೆ. ಅದಕ್ಕೋಸ್ಕರ ಒಂದು ಕಾನೂನು ಆಗಬೇಕಾಗಿರುವುದು. ಈ ಕಾನೂನನ್ನು ಈ ವಾರ ವೈಸ್‌ರಾಯಿಯವರು ಮಂತ್ರಾಲೋಚನಾ ಸಭೆಯಲ್ಲಿ ಚರ್ಚೆಮಾಡಿ ಜಾರಿಯಲ್ಲಿ ತರುವವರಾಗಿದ್ದಾರೆ. ಈ ಹೊಸ ನಾಣ್ಯಕ್ಕೆ ಮಧ್ಯದಲ್ಲಿ ತೂತು ಹೊಡೆಯಬೇಕೆಂದು ಮೊದಲು ಯೋಚನೆ ಇತ್ತು. ಈಗ ಇದನ್ನು ತಪ್ಪಿಸಿ, ಈ ನಾಣ್ಯವನ್ನು ೧೨ ಕೋಣಗಳಿರುವಂತೆ ಅಚ್ಚು ಹಾಕಿಸಬೇಕೆಂದು ತೀರ್ಮಾನಿಸಿರುತ್ತಾರೆ.

****

ಕಲ್ಕತ್ತಾ ಪಟ್ಟಣದಲ್ಲಿ ಗತಿಸಿದ ವಿಕ್ಟೋರಿಯಾ ಮಹಾರಾಜ್ಞೀಯವರ ಜ್ಞಾಪಕಾರ್ಥವಾಗಿ ಕಟ್ಟಲ್ಪಡುವ ವಿಕ್ಟೋರಿಯಾ ಮೆಮೋರಿಯಲ್ ಹಾಲ್ ಎಂಬ ಕಟ್ಟಡಕ್ಕೆ ಪ್ರಿನ್ಸ್ ಆಫ್ ವೇಲ್ಸ್‌ರವರು ಅಸ್ತಿಭಾರಕಲ್ಲನ್ನು ಹಾಕಿದರೆಂದು ಕಳೆದ ವಾರ ತಿಳಿಸಿದ್ದೆವಷ್ಟೆ. ಈ ಕಟ್ಟಡಕ್ಕೆ ಮುಖ್ಯ ಕಾರಣರಾದವರು ಲಾರ್ಡ್ ಕರ್ಜನ್ ಪ್ರಭುಗಳಾಗಿದ್ದಾರೆ. ಅವರ ಪ್ರೇರಣೆಯಿಂದ ಹಿಂದೂಸ್ಥಾನದ ಸಮಸ್ತ ಪ್ರಜೆಗಳಿಂದಲೂ ಪ್ರಭುಗಳಿಂದಲೂ ಚಂದಾ ಹಣವನ್ನು ಕೂಡಿಸಿರುತ್ತಾರೆ. ಇದುವರೆಗೆ ಸುಮಾರು [illegible] ರೂಪಾಯಿ ವಸೂಲಾಗಿರುವುದು.

****

ಅಲಹಾಬಾದ್ (ಪ್ರಯಾಗ) ಪಟ್ಟಣದಲ್ಲಿ ಹಿಂದೂಗಳ ಮಹಾ ಸಭೆಯು ಜನವರಿ ಮೊದಲನೆ ಸೋಮವಾರ ಪ್ರಾರಂಭವಾಗಿ ಮುಂದಿನ ಸೋಮವಾರದವರೆಗೂ ನಡೆಯುವುದು. ಪುರಿ (ಜಗನ್ನಾಥ)ದ ಶ್ರೀ ಜಗದ್ಗುರು ಶಂಕರಾಚಾರ್ಯ ಗೋವರ್ಧನಮಠಾಧಿಪತಿಗಳು ಈ ಮಹಾ ಸಭೆಯ ನಾಯಕರಾಗಿರುತ್ತಾರೆ. ಕಾಶ್ಮೀರ, ರೀವಾ, ಕೋಟಾ, ಅಲ್ವಾರ, ಕೃಷ್ಣಘಡ, ಕತಾಳಿ, ದರ್ಭಾಂಗ, ಈ ಮೊದಲಾದ ಸಂಸ್ಥಾನದ ಮಹಾರಾಜರುಗಳು ಈ ಸಭೆಯ ಪೋಷಕರಾಗುತ್ತೇವೆಂದಲ್ಲದೆ ಕಾರ್ಯಗೌರವದಿಂದ ಸ್ವತಃ ಬರಲು ಆಗಲಿಲ್ಲವೆಂದೂ ಪತ್ರಗಳನ್ನು ಬರೆದಿರುತ್ತಾರೆ. ಹಿಂದೂಸ್ಥಾನದ ಎಲ್ಲಾ ಕಡೆಗಳಿಂದಲೂ ಈ ಸಭೆಗೆ ಪ್ರತಿನಿಧಿಗಳು ಹೋಗಿರುವರು.

****

ತಿರುವಾಂಕೂರು, ಕೊಚ್ಚಿ, ಮಲಬಾರ್, ಈ ಪ್ರಾಂತ್ಯಗಳಲ್ಲಿನ ಎಜವರೆಂಬ ಜನರು ಕಳೆದ ವಾರ ಆಲಪ್ಪಿ ನಗರದಲ್ಲಿ ಮಹಾ ಸಭೆಯನ್ನು ನಡೆಸಿದರು. ಸುಮಾರು ೬,೦೦೦ ಪ್ರತಿನಿಧಿಗಳು ಸೇರಿದ್ದ ಈ ಸಭೆಗೆ ಮೈಸೂರು ಸಂಸ್ಥಾನದ ಡಾಕ್ಟರ್ ಪಲ್ಪು ಯವರೂ ಹೋಗಿದ್ದರು. ಆ ಪ್ರಾಂತ್ಯದಲ್ಲೆಲ್ಲಾ ಎಜವರೆಂಬ ಪ್ರಜೆಗಳು ೧೪ ಲಕ್ಷದವರೆಗೆ ಇರುತ್ತಾರೆ. ಗಂಡು ಮಕ್ಕಳಿಗೂ ಹೆಣ್ಣು ಮಕ್ಕಳಿಗೂ ವಿದ್ಯೆ ಕಲಿಸಿವಲ್ಲದೆ ಯಾವ ಸಂಘ ಪರಿಷ್ಕರಣ ಕಾರ್ಯವೂ ಸಾಧ್ಯವಲ್ಲವೆಂತಲೂ ಮೊದಲು ವಿದ್ಯೆ ಕಲಿಸುವುದಕ್ಕೆ ಎಲ್ಲರೂ ಪ್ರೋತ್ಸಾಹ ಕೊಡಬೇಕೆಂತಲೂ ಸಭಿಕರು ತೀರ್ಮಾನ ಮಾಡಿರುತ್ತಾರೆ. ಬರುವ ವರುಷ ಈ ಸಭೆಯು ತಲಚೇರಿಯಲ್ಲಿ ನಡೆಯತಕ್ಕದ್ದಾಗಿದೆ.

****

ಕಲ್ಕತ್ತಾ ಪಟ್ಟಣದಲ್ಲಿ ಪ್ರಿನ್ಸ್ ಆಫ್ ವೇಲ್ಸ್‌ರವರು ವಿಕ್ಟೋರಿಯಾ ಮೆಮೋರಿಯಲ್ ಹಾಲ್ ಎಂಬ ಶಾಶ್ವತ ಕಟ್ಟಡಕ್ಕೆ ಅಸ್ತಿಭಾರಸ್ಥಾಪನೆ ಮಾಡಿದ್ದನ್ನೂ ಅವರ ಒಂದು ಮೆರವಣಿಗೆಯನ್ನೂ ಚಿತ್ರದಲ್ಲಿ ತಸ್ವೀರು ಬರೆಯುವುದಕ್ಕೋಸ್ಕರ ಯೂರೋಪಿನಿಂದ ಮಿ॥ ಜಾರ್ಜ್ ವಿ. ಬೀದರ್ಸ್ಟ್ ಎಂಬೊಬ್ಬ ಪ್ರಸಿದ್ಧ ಚಿತ್ರಗಾರನು ಕಳುಹಿಸಲ್ಪಟ್ಟಿದ್ದನು. ಈತನು ಆ ಉತ್ಸವಗಳ ನಕ್ಷೆಯನ್ನೆಲ್ಲಾ ಬರೆದು ತಯಾರಿಸಿಕೊಂಡು, ಸೀಮೆಗೆ ಪ್ರಯಾಣ ಮಾಡಿರುತ್ತಾನೆ. ಈ ತಸ್ವೀರುಗಳನ್ನು ಅವನು ಬರೆದು ಪೂರೈಸುವುದಕ್ಕೆ ಸುಮಾರು ಎರಡು ವರುಷಗಳ ಕಾಲವು ಹಿಡಿಯುವದೆಂದು ಹೇಳುತ್ತಾರೆ. ಇವೆಲ್ಲಾ ತಯಾರಾಗಿ ಬಂದಮೇಲೆ ಅವನ್ನು ವಿಕ್ಟೋರಿಯಾ ಮೆಮೋರಿಯಲ್ ಹಾಲ್ ಬಂಗಲೆಯಲ್ಲಿ ಕಟ್ಟುತ್ತಾರೆ.

****

ವಾಯವ್ಯಪ್ರಾಂತ್ಯಕ್ಕೆ ಸೇರಿದ ಮಹಮ್ಮದಾಬಾದ್‌ಖಾನ್, ಹಾಜಿಬ್‌ಖಾನ್ ಯವರಿಗೆ ರಾಜ್ಯಾಭಿಷೇಕ ಮಹೋತ್ಸವ ನಡೆಯಿತು. ಲೆಫ್ಟಿನೆಂಟ್ ಗವರ್ನರೇ ಮೊದಲಾದ ಯೂರೋಪ್ಯರ್ ಸರ್ದಾರರೂ, ಅಯೋಧ್ಯೆಯ ಮಹಾರಾಜರೂ, ಬಲರಾಮಪುರದ ರಾಜರೂ, ಇನ್ನೂ ಅನೇಕ ಮಂದಿ ದೇಶೀಯ ದೊಡ್ಡ ಮನುಷ್ಯರೂ ಆ ಉತ್ಸವಕ್ಕೆ ದಯಮಾಡಿದ್ದರು. ಲಖನೌಪುರವೆಂಬ ಒಂದು ಲಕ್ಷಗಿಡಗಳನ್ನುಳ್ಳ ಪ್ರಸಿದ್ಧವಾದ ಉದ್ಯಾನವನದಲ್ಲಿ ದೊಡ್ಡ ಮನುಷ್ಯರಿಗೆಲ್ಲಾ ಬಿಡಾರಗಳು ಏರ್ಪಾಡಾಗಿತ್ತು. ನವಾಬರವರು ಪಟ್ಟಾಭಿಷೇಕೋತ್ಸವ ಸಮಯದಲ್ಲಿ ೩೦,೦೦೦ ರೂಪಾಯಿ ಕಂದಾಯಗಳನ್ನು ರಿಯಾಯಿತಿಮಾಡಿದರು. ಲೇಟ್ ಚಕ್ರವರ್ತಿನಿ ವಿಕ್ಟೋರಿಯಾರವರ ಹೆಸರಿನಮೇಲೆ ಒಂದು ಧರ್ಮಛತ್ರವನ್ನೂ ಸ್ತ್ರೀಯರ ಕೋಟಕ್ಕಾಗಿ ಒಂದು ಬಂಗಲೆಯನ್ನೂ ಕಟ್ಟಿಸುವುದಾಗಿ ...ದರು.

ಬೊಂಬಾಯಿ ಪಟ್ಟಣದ ದಳ್ಳಾಳ್ ಬೀದಿಯಲ್ಲಿ ದಳ್ಳಾಳಿಗಳು ಅನೇಕ ಮಂದಿ ಸೇರಿಕೊಂಡು ಬಹಳವಾಗಿ ವಾಗ್ವಾದ ಮಾಡುತ್ತಾ ಗಲಭೆ ಮಾಡಿದರು. ಪೋಲೀಸಿನವರು ಅವರಲ್ಲಿ ಮುಖಂಡರಾಗಿದ್ದ ಒಂಭತ್ತು ಮಂದಿ ದಳ್ಳಾಳಿಗಳನ್ನು ಹಿಡಿದು, ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಫಿರ್ಯಾದು ಮಾಡಿದರು. ದರ್ಯಾಪ್ತಿ ಆದದ್ದರಲ್ಲಿ ಅಪರಾಧ ರುಜುವಾತಾದ್ದರಿಂದ ಮ್ಯಾಜಿಸ್ಟ್ರೇಟರು ದಳ್ಳಾಳಿಗಳಿಗೆ ತಲಾ ೨೫ ರೂಪಾಯಿನಂತೆ ಜುಲ್ಮಾನೆ ಹಾಕಿದರು. ಈ ದಳ್ಳಾಳಿಗಳು ಜುಲ್ಮಾನೆ ತೆತ್ತು ಹೋಗಿ ಪೇಟೆಯಲ್ಲೆಲ್ಲಾ ಸಾರಿಸಿ ವ್ಯಾಪಾರವೇ ನಿಂತು ಹೋಗುವಂತೆ ಅಡ್ಡಿ ಮಾಡಿದರು. ಪೋಲೀಸ್ ಕಮಿಷನರು ಆ ಮುಖಂಡರನ್ನು ಕರೆಸಿ, ಅವರಿಗೆಲ್ಲಾ ಸಮಾಧಾನ ಹೇಳಿ, ಇನ್ನು ಮೇಲೆ ಇಂಥಾ ಮೊಕದ್ದಮೆ ಮಾಡುವದಕ್ಕೆ ತಾವೇ ಸ್ಯಾಂಕ್ಷನ್ ಮಾಡಿದ ಹೊರತು ಕೋರ್ಟಿಗೆ ಹೋಗಕೂಡದೆಂದು ತಿಳಿಸಿ, ಗಲಭೆಯನ್ನು ಶಮನ ಮಾಡಿಸಿದರು.

****

ಬೆಳ್ಗಾವಿಕ್ಕೆ ಸೇರಿದ ಕೋಂತಿ ಎಂಬ ಸ್ಥಳದಲ್ಲಿ ಕಳೆದ ವಾರ ಎಂಟನೇ ಜೈನ ಮಹಾ ಸಭೆ ಸೇರಿತು. ದಕ್ಷಿಣ ಮಹಾರಾಷ್ಟ್ರಕ್ಕೆ ಸೇರಿದ ಸುಮಾರು ೫,೦೦೦ ಜೈನ ಮಹಾ ಜನರು ಈ ಸಭೆಗೆ ಹೋಗಿದ್ದರು. ಮೈಸೂರು ಪಟ್ಟಣದಲ್ಲಿರುವ ಸಾಹುಕಾರ್ ಮೋತೀಖಾನೆ ಅನಂತರಾಜಯ್ಯನವರು ಈ ಮಹಾ ಸಭೆಯಲ್ಲಿ ಅಗ್ರಾಸನವನ್ನು ವಹಿಸಿ, ಜೈನ ಪ್ರಜೆಗಳ ಏಳಿಗೆಯ ವಿಷಯವಾಗಿ ಉಪನ್ಯಾಸ ಮಾಡಿದರು. ಈ ಉದ್ದೇಶಕ್ಕಾಗಿ ಸಭಿಕರು ೯,೦೦೦ ರೂಪಾಯಿ ಚಂದಾ ಕೊಟ್ಟಿದ್ದಾರೆ. ತರುವಾಯ ಆ ಸ್ಥಳದಲ್ಲಿ ಜೈನ ಸ್ತ್ರೀ ಸಮಾಜವೂ ಜರುಗಿತು. ಸುಮಾರು ೨,೫೦೦ ಜೈನ ಸ್ತ್ರೀಯರು ಸೇರಿದ್ದರು. ಸ್ತ್ರೀವಿದ್ಯಾಭಿವೃದ್ಧಿ ಕಾರ್ಯಗಳಿಗಾಗಿ ಒಂದು ಫಂಡನ್ನು ಮಾಡಿದ್ದಾರೆ. ಸೇಠ್ ಮಾಣಿಕ್ ಚಂದರವರ ಕುಮಾರ್ತೆಯಾದ [illegible] ಮಗನ್ ಬಾಯಿ ಯವರು ಸಭಾ ನಾಯಕಿಯಾಗಿದ್ದರು. ಇತರೆಯೂ ಅನ್ಯ ಕೆಲವು ಮಂದಿ ಸ್ತ್ರೀಯರು ಉಪನ್ಯಾಸ ಮಾಡಿದರು.

****

ಸುಮಾರು ಎರಡು ತಿಂಗಳ ಕೆಳಗೆ ಒಬ್ಬ ಸನ್ಯಾಸಿಯು ಕಲ್ಕತ್ತೆಯ ಬಳಿಯಿರುವ ದಕ್ಷಿಣೇಶ್ವರಕ್ಕೆ ಹೋಗಿ ಅಲೆಯುತ್ತಾ ಇದ್ದನು. ಅವನು ಸರ್ವದಾ ಧ್ಯಾನಾಸಕ್ತನಾಗಿರುವಂತೆ ನಟಿಸುತ್ತಾ, ಸ್ವಹಸ್ತದಿಂದ ಆಹಾರವನ್ನು ಎತ್ತಿತಿನ್ನದೆ ಮೌನವಾಗಿರುತ್ತಿದ್ದನು. ಕೆಲವು ಮಂದಿ ಹುಡುಗರು ಅವನ ಬಳಿಗೆ ಹೋಗಿ ಮೊದಲು ಸ್ವಲ್ಪ ತಿಂಡಿಯನ್ನು ಅವನ ಬಾಯಿಗೆ ಹಾಕಿ, ಅವನ್ನು ತಿಂದಮೇಲೆ ಮರಳುಮಿಶ್ರವಾದ ನೀರನ್ನೂ ಸಗಣಿ ಮುಂತಾದ ಕೊಳಕಿನ ನೀರನ್ನೂ ಕುಡಿಸಿದರು. ಕಣ್ಣು ಮುಚ್ಚಿಕೊಂಡೇ ಸನ್ಯಾಸಿಯು ಕುಡಿದುಬಿಟ್ಟು, ಕೂಡಲೇ ಅಸ್ವಸ್ಥನಾದನು. ಕಣ್ಣುಬಿಟ್ಟು ನದೀತೀರದಲ್ಲಿ ಬಿದ್ದಿದ್ದ ಇಟ್ಟಿಗೆ ಚೂರುಗಳನ್ನು ತೆಗೆದು ಹುಡುಗರನ್ನು ಹೊಡೆದು ಓಡಿಸಿದನು. ಅಷ್ಟಕ್ಕೆ ಒಬ್ಬ ಹುಡುಗನಿಗೆ ತಲೆಬುರುಡೆ ಒಡೆದು, ಬದುಕುವುದೇ ಕಷ್ಟವಾಗಿ ಆಸ್ಪತ್ರೆಯಲ್ಲಿ ಬಿದ್ದುಕೊಂಡಿದ್ದಾನೆ. ಸರ್ಕಾರದವರು ಈ ಕಪಟಸನ್ಯಾಸಿಯನ್ನು ಹಿಡಿದು ದರ್ಯಾಪ್ತು ಮಾಡುವರು.

****

ಕಾನ್ಪುರ, ಕಲ್ಕತ್ತೆ ಮೊದಲಾದ ಪಟ್ಟಣಗಳಲ್ಲಿರುವ ಪಂಡಿತ ರಾಮನಾರಾಯಣ ಯೋಗಿಶಾಸ್ತ್ರಿ) ಎಂಬ ಹಿಂದೂ ಜೋಯಿಸನು ೧೯೦೬ನೆ ವರುಷದಲ್ಲಿ ಮುಂದೆ ಹೇಳುವ ಸಂಗತಿಗಳು ಸಂಭವಿಸುತ್ತವೆಂದು ತಿಳಿಸಿರುತ್ತಾನೆ ಏನೆಂದರೆ—ಹಿಂದೂಸ್ಥಾನದಲ್ಲಿ ೧೯೦೬—೧೯೦೮ನೇ ವರುಷಗಳಲ್ಲಿ ಕ್ಷಾಮಬಾಧೆ ಇಲ್ಲದೆ ಪ್ರಜೆಗಳು ಸುಖವಾಗಿಯೂ ನಿರುಪಾಧಿಕವಾಗಿಯೂ ಬಾಳುವರು. ಮುಂದಿನ ಫೆಬ್ರವರಿ ಅಥವಾ ಮಾರ್ಚಿಯಲ್ಲಿ ಅಕಾಲಮಳೆಯು ಆನೆಕಲ್ಲು ಸಹಿತ ಸುರಿಯುವುದು, ಪ್ರಪಂಚದ ಇತರ ಭಾಗಗಳಲ್ಲಿ ಬಹಳವಾಗಿ ಆಗುವುದು, ಇದರಿಂದ ಪ್ರಜೆಗಳಿಗೆ ತುಂಬಾ ನಷ್ಟವಾಗುವುದು. ಆಗಾಗ್ಗೆ ಹಿಂದೂಸ್ಥಾನದಲ್ಲೂ ಇತರ ದೇಶಗಳಲ್ಲೂ ಚಿಟ್ಟೆಗದ್ದು ವಿಶೇಷ ನಷ್ಟವನ್ನುಂಟು ಮಾಡುತ್ತವೆ. ಮುಂದಿನವರುಷ ಜನರು ಸಾಮಾನ್ಯವಾಗಿ ಸಾವಧಾನಚಿತ್ತರಾಗಿರುವುದಿಲ್ಲ. ಈ ವರುಷ ಜನರಿಗೆ ಮಹದಾಶ್ಚರ್ಯವನ್ನು ಉಂಟುಮಾಡುವಂಥಾ ಕೆಲವು ಸಂಗತಿಗಳು ನಡೆಯುವವು. ೧೯೦೯—೧೯೧೦ನೆ ವರುಷಗಳಲ್ಲಿ ಹಿಂದೂಸ್ಥಾನದ ಮುಕ್ಕಾಲೂ ಮೂರುವೀಸ ಪಾಲಿನ ಜನರಿಗೆ ವಿಶೇಷವಾದ ಮನಸ್ಸಮಾಧಾನವಾಗುವುದು. ಮುಂದಿನ ಮಾರ್ಚಿ ಲಾಗಾಯಿತು ೧೯೦೮ನೆ ವರುಷದ ಆಖೈರುವರೆಗೆ ಆಕಾಶದಲ್ಲಿ ಪಶ್ಚಿಮ ದಕ್ಷಿಣಭಾಗಗಳಲ್ಲಿ ಕೆಂಪುವರ್ಣವು ಕಾಣಿಸಿಕೊಳ್ಳುತ್ತದೆ. ಇದರಿಂದ ಇತರ ದೇಶಗಳಲ್ಲಿ ಯುದ್ಧಗಳು ಪ್ರಾರಂಭವಾಗಬಹುದು. ೧೯೦೬ ರಿಂದ ೧೯೦೮ರ ವರೆಗೆ ಆಕಾಶದಲ್ಲಿ ಕೆಟ್ಟಕುರುಹುಗಳು ಕಾಣಿಸಿಕೊಳ್ಳುವವು. ೧೯೦೬ನೆ ವರುಷದಲ್ಲಿ ಜನರೂ ಮೂಕಪ್ರಾಣಿಗಳೂ ವಿಶೇಷವಾಗಿ ಲಯಹೊಂದುವವು ಎಂಬುದೇ.

ವಿದೇಶ ವರ್ತಮಾನಗಳು.

ಫ್ರಾನ್ಸ್ ರಾಜ್ಯದ ಪ್ರಜಾ ಪ್ರಭುತ್ವಕ್ಕೆ ಪ್ರಜೆಗಳು ಎಂ. ಫಾಲಿಯರಿಸ್ ಯವರನ್ನು ಚುನಾಯಿಸಿ, ಪ್ರೆಸಿಡೆಂಟ್ ಕೆಲಸಕ್ಕೆ ನೇಮಿಸಿಕೊಂಡಿದ್ದಾರೆ.

****

ಸ್ಪೇಯಿನ್ ರಾಜ್ಯದಲ್ಲಿ ಈಗ ತಾನೇ ಜನೇಷುಮಾರಿ ಲೆಕ್ಕಗಳನ್ನು ತಯಾರುಮಾಡಿದರು. ಆ ರಾಜ್ಯದಲ್ಲಿ ಒಟ್ಟು [illegible] ಪ್ರಜೆಗಳಿದ್ದಾರೆಂದು ತಿಳಿದುಬಂದಿದೆ.

****

ರಷ್ಯಾ ರಾಜಧಾನಿಯಲ್ಲಿ ಸರ್ಕಾರದವರು ದಂಗೆಕೋರರ ಮುಖಂಡರ ಪೈಕಿ ೨೨ ಮಂದಿಯನ್ನು ಹಿಡಿದು ಸೆರೆಮನೆಯಲ್ಲಿ ಹಾಕಿದ್ದಾರೆ. ಇದರಿಂದ ಇನ್ನು ಮುಂದೆ ದಂಗೆಕೋರರ ಹಾವಳಿಯು ಕಡಿಮೆಯಾದೀತೆಂದು ನಿರೀಕ್ಷಿಸುವರು.

ಕಾಕೇಷಿಯಾ ಪ್ರಾಂತ್ಯದಲ್ಲಿರುವ ರಷ್ಯಾ ಪ್ರಜೆಗಳಾದ ಟಾರ್ಟರರೂ ಅರ್ಮೇನಿಯಾದವರೂ ಒಬ್ಬರ ಮೇಲೊಬ್ಬರು ಜಿದ್ದುಕಟ್ಟಿ ಪರಸ್ಪರ ಮನೆ ಮಠ ಗ್ರಾಮ ಭೂಮಿಗಳನ್ನು ಸುಟ್ಟು ನಾಶಮಾಡುತ್ತಲೂ, ಕೊಂದುಹಾಕುತ್ತಲೂ ಬಂದಿರುತ್ತಾರೆ.

****

ಕಳೆದ ವರುಷ ಅಮೇರಿಕದ ಸಂಯುಕ್ತ ಸಂಸ್ಥಾನಗಳಿಗೆ ಪರರಾಜ್ಯಗಳಿಂದ ೩೩೫ ಕೋಟಿ ರೂಪಾಯಿನ ಸರಕುಗಳು ರಫ್ತಾದವೆಂತಲೂ, ಅದೇ ವರುಷ ಅಲ್ಲಿಂದ ಪರರಾಜ್ಯಗಳಿಗೆ ೫೫೦ ಕೋಟಿ ರೂಪಾಯಿನ ಪದಾರ್ಥಗಳು ಆಮದಾದವೆಂತಲೂ ತಿಳಿದುಬರುತ್ತದೆ.

****

ಚೀನಾ ರಾಜ್ಯಕ್ಕೆ ಸೇರಿದ ಲಿಯಾಂಚೌ ಎಂಬ ಪಟ್ಟಣದಲ್ಲಿ ಅಮೇರಿಕದ ಐದು ಮಂದಿ ಪಾದ್ರಿಗಳನ್ನು ಅಲ್ಲಿನವರು ಕೆಲವು ದಿನಗಳ ಹಿಂದೆ ಕೊಂದುಹಾಕಿದರು. ಈಗ ಸರ್ಕಾರದವರು ಆ ಕೊಲೆಗಳಿಗೆ ಸಂಬಂಧಪಟ್ಟ ೨೫ ಮಂದಿ ಅಪರಾಧಿಗಳನ್ನು ಹಿಡಿದು, ದರ್ಯಾಪ್ತು ಮಾಡುತ್ತಿದ್ದಾರೆ.

****

ಅಮೇರಿಕಕ್ಕೆ ಸೇರಿದ ಮಿನಿಯಾಪೋಲಿಸ್ ಎಂಬ ನಗರದಲ್ಲಿ ಒಂದು ಭಾರೀ ಹೋಟಲಿಗೆ ಬೆಂಕಿ ಬಿದ್ದು ಅನಾಹುತವಾಗಿ ೧೦ ಜನರು ಸುಟ್ಟುಹೋದರು. ಅನೇಕರಿಗೆ ಸುಟ್ಟ ಗಾಯಗಳಾದವು. ಅಮೇರಿಕದ ರಾಯಭಾರಿಯಾದ ಮಿ॥ ಡೇವಿಡ್‌ಸನ್‌ರವರೂ ಬೆಂಕಿಯಲ್ಲಿ ಸಿಕ್ಕಿ ಬದುಕುವುದೇ ಕಷ್ಟವಾಗಿದೆ.

****

ರೋಮನ್ ಕೆಥೋಲಿಕ ಗುರುಗಳಾದ ಪೋಪ್ ಸ್ವಾಮಿಯವರು ತಮ್ಮ ಅರಮನೆಯಲ್ಲಿರುವ ಮೇರಿಮಾತೆಯ ವಿಗ್ರಹಕ್ಕೆ ಒಂದು ಅನರ್ಘ್ಯವಾದ ಕಿರೀಟವನ್ನು ಮಾಡಿಸುವವರಾಗಿದ್ದಾರೆ. ಫ್ಲಾರೆನ್ಸ್ ಪಟ್ಟಣದಲ್ಲಿ ತಯಾರಾಗುತ್ತಿರುವ ಈ ಕಿರೀಟಕ್ಕೆ ೧೨ ಲಕ್ಷ ಪವನುಗಳ ಬೆಲೆಯುಳ್ಳ ರತ್ನಗಳು ಉಪಯೋಗಿಸಲ್ಪಡುವುವು.

****

ವಿಲಾಯತಿ ರಾಜ್ಯಕ್ಕೆ ಸೇರಿದ ವೆಸ್ಟಹ್ಯಾಂ ಎಂಬ ಡಿಸ್ಟ್ರಿಕ್ಟಿನಿಂದ ೨೦೦ ಸಂಸಾರಗಳನ್ನು ಕನಡಾ ರಾಜ್ಯಕ್ಕೆ ಕಳುಹಿಸಿ ಅಲ್ಲೇ ವಾಸಮಾಡುವಂತೆ ಮಾಡಬೇಕೆಂದು ಲಾರ್ಡ್ ರಾತ್ಸ್‌ಛೈಲ್ಡ್ ಎಂಬ ಶ್ರೀಮಂತನು ಅಭಿಪ್ರಾಯಪಟ್ಟು ಅವರ ಸಮಸ್ತ ಖರ್ಚನ್ನೂ ತಾವೇ ವಹಿಸಿಕೊಳ್ಳುವುದಾಗಿ ವಾಗ್ದಾನ ಮಾಡಿರುತ್ತಾನೆ.

****

ದಕ್ಷಿಣ ಅಫ್ರಿಕದಿಂದ ಅಮೇರಿಕದ ಮೆಕ್ಸಿಕೋ ದೇಶಕ್ಕೆ ವಲಸೆಯಾಗಿ ಹೋದ ಬೋಅರರು ವ್ಯವಸಾಯ ಮಾಡಿಕೊಂಡು ಅತ್ಯಭಿವೃದ್ಧಿ ಸ್ಥಿತಿಯಲ್ಲಿದ್ದಾರೆಂದು ಗವರ್ನ್‌ಮೆಂಟು ರಿಪೋರ್ಟುಗಳಿಂದ ತಿಳಿದುಬರುತ್ತದೆ. ಇವರ ವಿದ್ಯಮಾನವನ್ನು ತಿಳಿದು ದಕ್ಷಿಣ ಅಫ್ರಿಕದಿಂದ ಬೋಅರರು ಗುಂಪುಗುಂಪಾಗಿ ಹೊರಟು ಅಲ್ಲಿಗೆ ಹೋಗುತ್ತಿರುವರು.

****

ಅಫ್ರಿಕದ ನೈಋತ್ಯ ಭಾಗದಲ್ಲಿ ಜರ್ಮನರಿಗೆ ಸೇರಿದ ಪ್ರಾಂತ್ಯದಲ್ಲಿ ಹಾಟೆಂಟಾಟರ ನಾಯಕನೊಬ್ಬನು ಜರ್ಮನರ ಸಾಮಗ್ರಿಗಳ ಗಾಡಿಗಳು ಮುಂತಾದವುಗಳ ಮೇಲೆ ಬಿದ್ದು ಸುಮಾರು ೧,೦೦೦ ದನಗಳನ್ನೂ ೧೨ ಸಾಮಾನು ಗಾಡಿಗಳನ್ನೂ ಅನೇಕ ತುಪಾಕಿಗಳನ್ನೂ ಸೂರೆಮಾಡಿಕೊಂಡು ಹೋದನು. ಆ ಸಾಮಾನು ಗಾಡಿಗಳಲ್ಲಿ ಕೆಲವು ಯುದ್ಧ ಸಾಮಗ್ರಿಗಳಿಂದ ತುಂಬಿದ್ದುವು.

****

ರಷ್ಯಾ ಜಪಾನ್ ಯುದ್ಧದಲ್ಲಿ ರಷ್ಯಾದವರು ಜಪಾನ್ನವರ ೩,೦೦೦ ಕುದುರೆ ಮತ್ತು ಗೋಕರುಗಳನ್ನು ಹಿಡಿದುಕೊಂಡಿದ್ದು, ಈಚೆಗೆ ಅವನ್ನು ಸಾಕುವುದಕ್ಕೆ ಕೈಲಾಗದೆ ಬಿಟ್ಟುಬಿಟ್ಟರು. ಅವೆಲ್ಲಾ ಕಾಡುಗಳಲ್ಲಿ ಅಲೆಯುತ್ತಾ ಇದ್ದವು. ಜಪಾನ್ನವರು ಈ ಸಂಗತಿಯನ್ನು ಕೇಳಿ ತಮ್ಮ ಜನರನ್ನು ಕಳುಹಿಸಿ ಅವನ್ನೆಲ್ಲಾ ಹಿಡಿಸಿ, ಅಲ್ಲಲ್ಲಿ ಇಟ್ಟು ಪೋಷಣೆ ಮಾಡಬೇಕೆಂದು ಪ್ರಯತ್ನ ಪಟ್ಟಿದ್ದಾರೆ.

****

ಅಮೇರಿಕಕ್ಕೆ ಸೇರಿದ ಸಂಯುಕ್ತ ಸಂಸ್ಥಾನಗಳ ಪ್ರೆಸಿಡೆಂಟ್ ರೂಸ್‌ವೆಲ್ಟ್ ಯವರು ರಷ್ಯಾ ಜಪಾನ್ ರಾಜ್ಯಗಳ ಪ್ರತಿನಿಧಿಗಳನ್ನು ಕರೆಸಿಕೊಂಡು, ಮಧ್ಯಸ್ಥಿಕೆಮಾಡಿ, ಅವರವರಿಗೆ ಕರಾರುಮಾಡಿಸಿ, ಭಯಂಕರವಾದ ಯುದ್ಧವನ್ನು ಮುಕ್ತಾಯಕ್ಕೆ ತಂದದ್ದರ ಜ್ಞಾಪಕಾರ್ಥವಾಗಿ ಕೊಲೊರ್ಯಾಡೋ ಪಟ್ಟಣದ ಪ್ರಜೆಗಳು ಮನುಷ್ಯನ ಎದೆಯಲ್ಲಿರುವಂಥಾ ಒಂದು ಹೃದಯವನ್ನು ಚಿನ್ನದ ಗಟ್ಟಿಯಲ್ಲಿ ಮಾಡಿಸಿ ಬಹುಮಾನವಾಗಿ ಅವರಿಗೆ ಒಪ್ಪಿಸಿರುತ್ತಾರೆ.

****

ಟಿಫ್ಲಿಸ್ ನಗರದಲ್ಲಿ ದಂಗೆಯೆದ್ದಿರುವ ಜನರು ಕಾಸಕ್ ಎಂಬ ಸರ್ಕಾರಿ ಸೈನಿಕರ ಮೇಲೆ ಮದ್ದಿನ ಗುಂಡುಗಳನ್ನು ಎಸೆದರು. ಅದು ಒಡೆದು ಒಬ್ಬ ಹುಡುಗ ಮೃತಪಟ್ಟನು. ನಾಲ್ಕು ಜನರಿಗೆ ಗಾಯಗಳಾದವು. ಸೈನಿಕರೆಲ್ಲಾ ಒಂದು ಮನೆಯನ್ನು ಮುತ್ತಿಕೊಂಡು, ಗುಂಡು ಹೊಡೆದರು. ಒಳಗಿದ್ದ ಮದ್ದಿನ ಗುಂಡುಗಳು ಏಕ ಕಾಲದಲ್ಲಿ ಹಾರಿ, ೩೩ [illegible] ಕೊಂದುಹಾಕಿತು. ೩೦೦ ಜನರಿಗೆ ಗಾಯವಾಯಿತು. ಇದೇ ರೀತಿ ಇನ್ನೊಂದು ಮನೆಯಲ್ಲಿದ್ದ ಗುಂಡುಗಳು ಹಾರಿ ೮ ಜನರು ಮೃತಪಟ್ಟರು.

****

ವಿಲಾಯತಿ ರಾಜ್ಯದ ಚಕ್ರವರ್ತಿ ಸಾರ್ವಭೌಮರವರ ಸಹೋದರರಾದ ಡ್ಯೂಕ್ ಆಫ್ ಕನ್ನಾಟ್‌ರವರು ಪತ್ನಿ ಪರಿವಾರ ಸಹಿತ ದಕ್ಷಿಣ ಆಫ್ರಿಕಕ್ಕೆ ಪಯಣಮಾಡಿದ್ದಾರೆ. ಇವರು ಅಲ್ಲಿ ಎರಡು ತಿಂಗಳ ತನಕ ಇದ್ದು, ಎಲ್ಲಾ ಪ್ರಾಂತ್ಯಗಳಲ್ಲೂ ಸಂಚಾರಮಾಡಿಕೊಂಡು, ಕೇಪ್ ಕಾಲನಿ, ಆರೆಂಜ್ ರಿವರ್, ಟ್ರಾನ್ಸ್‌ವಾಲ್, ನೆಟಾಲ್ ಮೊದಲಾದ ಕಡೆಗಳಲ್ಲಿರುವ ಇಂಗ್ಲಿಷ್ ಸೈನ್ಯಗಳನ್ನು ಅಜಮಾಯಿಷಿಮಾಡಿ, ಮುಖ್ಯ ಮುಖ್ಯವಾದ ಯುದ್ಧರಂಗಗಳನ್ನು ಪರಾಂಬರಿಸಿ, ವಾಪಸು ವಿಲಾಯತಿಗೆ ಪ್ರಯಾಣಮಾಡುವವರಾಗಿದ್ದಾರೆ.

ಲಂಡನ್ ಪಟ್ಟಣದಲ್ಲಿರುವ ಬಡಬಗ್ಗರ ಮಕ್ಕಳಿಗೆ ಕ್ರಿಸ್ಮಸ್ ಹಬ್ಬದ ದಿನ ಸುಖಭೋಜನ ಮಾಡಿಸಬೇಕೆಂತಲೂ ಅವರಿಗೆ ವಿನೋದಗಳನ್ನು ಕಲ್ಪಿಸಿ ಬಹುಮಾನಗಳನ್ನು ಕೊಡಬೇಕೆಂತಲೂ ದಕ್ಷಿಣ ಆಸ್ಟ್ರೇಲಿಯಾದಲ್ಲೂ ಬ್ರಿಟಿಷ್ ಕೊಲಂಬಿಯಾದಲ್ಲೂ ಇರುವ ಪುಣ್ಯವಂತರ ಮಕ್ಕಳು ನಿಶ್ಚಯಿಸಿ, ಅದಕ್ಕಾಗಿ ತಮ್ಮ ತಮ್ಮಲ್ಲೇ ಚಂದಾ ಹಣ ಕೂಡಿಸಿ ಕಳುಹಿಸಿಕೊಟ್ಟರು. ಲಂಡನ್ ಪಟ್ಟಣದ ಅಧಿಕಾರಿಗಳು ಈ ಹಣವನ್ನು ಅಂಗೀಕರಿಸಿ ಅದಕ್ಕಾಗಿ ಅವರನ್ನು ವಂದಿಸಿ, ೨,೦೦೦ ಬಡ ಮಕ್ಕಳಿಗೆ ವಿನಿಯೋಗಿಸಿ ಎಲ್ಲರನ್ನೂ ಸಂತೋಷಪಡಿಸಿದರು.

◆◆◆◆

ಪ್ರಿನ್ಸ್ ಆರ್ಥರ್ ಆಫ್ ಕನಾಟ್‌ರವರು ಎಡ್ವರ್ಡ್ ಸಾರ್ವಭೌಮರವರಿಂದ ಜಪಾನ್ ಚಕ್ರವರ್ತಿ ಮಿಕಾಡೋ ಯವರಿಗೆ ಬಹು ಪ್ರಶಸ್ತವಾದ ಬಿರುದನ್ನು ತೆಗೆದುಕೊಂಡು ಹೋಗಿ ಖಿಲ್ಲತ್ತುಗಳ ಸಹಿತ ಒಪ್ಪಿಸಿ ಬರುವುದಕ್ಕಾಗಿ ವಿಲಾಯತಿಯಿಂದ ಪ್ರಯಾಣಮಾಡಿರುತ್ತಾರಷ್ಟೆ. ಇವರು ಬಿರುದು ಒಪ್ಪಿಸುವುದು ಜಪಾನ್ ಚಕ್ರವರ್ತಿಯವರಿಗೆ ಮಾತ್ರವೇ ಅಲ್ಲವೆಂತಲೂ ಜಪಾನ್ ದಳಪತಿಗಳಾದ ಮಾರ್ಷಲ್ ಒಯಮಾ ಯವರಿಗೂ, ಅಡ್ಮಿರಲ್ ಟೋಗೋ ಯವರಿಗೂ, ಜನರಲ್ ಯಮಗಾತರವರಿಗೂ ಬೇರೆ ಬೇರೆ ಬಿರುದುಗಳನ್ನು ಒಪ್ಪಿಸುತ್ತಾರೆಂದು ಪ್ರಕಟವಾಗಿದೆ.

◆◆◆◆

ರಷ್ಯನ್ ಟ್ರಾನ್ಸ್ ಕಾಕಸಸ್ ಆಧಿಪತ್ಯಕ್ಕೆ ಸೇರಿದ ಟಿಫ್ಲಿಸ್ ನಗರದಲ್ಲಿ ಆರ್ಮೀನಿಯಾ ಜನರಿಗೆ ರಷ್ಯಾದವರು ಆಯುಧಗಳನ್ನು ಒದಗಿಸಿಕೊಡುತ್ತಿದ್ದಾರೆಂತಲೂ, ಅವರಿಂದ ಟಾರ್ಟರರೆಂಬ ತುರ್ಕಿ ಪ್ರಜೆಗಳನ್ನು ಕೊಲ್ಲಿಸುವುದಕ್ಕೆ ಪ್ರೋತ್ಸಾಹಪಡಿಸುತ್ತಿದ್ದಾರೆಂತಲೂ ಪ್ರಕಟವಾಗಿದೆ. ಹ್ಯಾಗೂ ಆರ್ಮೀನಿಯಾದವರು ಟಾರ್ಟರರ ಮನೆಮಠಗಳಿಗೆ ನುಗ್ಗಿ ಹೆಂಗಸರು ಮಕ್ಕಳೆಂದೂ ಮುದುಕರು ರೋಗಿಷ್ಟರೆಂದೂ ಲಕ್ಷ್ಯಮಾಡದೆ, ಎಲ್ಲರನ್ನೂ ಕೊಂದುಹಾಕುತ್ತಿದ್ದಾರೆ. ಇದರಿಂದ ಬಹು ಮಂದಿ ತುರ್ಕಿ ಪ್ರಜೆಗಳು ಲಯವಾದರು. ಈ ಸುದ್ದಿಯನ್ನು ಕೇಳಿ ತುರ್ಕಿ ಸುಲ್ತಾನರು ರಷ್ಯಾ ರಾಯಭಾರಿಯನ್ನು ಬಹು ಖಂಡಿತವಾಗಿ ಕೇಳುತ್ತಿದ್ದಾರೆ.

◆◆◆◆

ವಿಲಾಯತಿಯಲ್ಲಿ ಒಬ್ಬ ಡಾಕ್ಟರು ಹೇಳುವದೇನೆಂದರೆ—ಪ್ರಾಯಸಮರ್ಥರಲ್ಲದ ಸ್ತ್ರೀಪುರುಷರು ವಿವಾಹಮಾಡಿಕೊಳ್ಳಬಾರದೆಂದು ಪಾರ್ಲಿಮೆಂಟಿನವರು ನಿಬಂಧನೆ ಮಾಡಿದರೆ ಉತ್ತಮ. ಈಗ ಅಧಿಕ ಸಂಖ್ಯೆಯಾಗಿ ಕೂಸುಗಳು ಸಾಯುತ್ತಿರುವದು ಚಿಕ್ಕ ವಯಸ್ಸಿನಲ್ಲೇ ವಿವಾಹಿತರಾಗುವದರಿಂದಲೇ. ಇಂಥ ಮದುವೆಗಳನ್ನು ಬಹು ದರಿದ್ರಾವಸ್ಥೆಯಲ್ಲಿರುವಾಗಲೇ ಮಾಡಿಕೊಳ್ಳುವವರಾಗಿದ್ದಾರೆ. ಈ ಪ್ರಕಾರ ಪೂರ್ಣ ವಯಸ್ಸಿನವರಾಗಿರುವಾಗಲೆ ಮದುವೆಮಾಡಿಕೊಂಡಿರುವ ಗಂಡಸರು ೨,೦೦೦ ಮಂದಿ ತಮ್ಮ ತಮ್ಮ ಹೆಂಡತಿಯರ ಸಂಗಡ ಜೀವಿಸುತ್ತಾ ಇಲ್ಲವೆಂದು ಗೊತ್ತಾಗಿದೆ. ಬಾಲವಿವಾಹಗಳು ಇಂಡ್ಯಾದೇಶದಲ್ಲಿ ಮಾತ್ರವೇ ಎಂದು ಹೇಳುವವರು ಈ ವಿಧ ವಿದ್ಯಮಾನವು ಇಂಗ್ಲಾಂಡಿನಲ್ಲಿಯೂ ಇವೆಯೆಂದು ಕೇಳಿ ಆಶ್ಚರ್ಯಪಡದಿರಲಾರರು.

◆◆◆◆

ಅಮೇರಿಕಕ್ಕೆ ಸೇರಿದ ಚಿಕಾಗೋ ಪಟ್ಟಣದಲ್ಲಿ ೩೯ ಮಂದಿ ಸ್ತ್ರೀಯರನ್ನು ಮದುವೆಮಾಡಿಕೊಂಡು, ಆ ಪೈಕಿ ಒಬ್ಬಳಾದ ಮೇಲೆ ಒಬ್ಬಳಂತೆ ೧೨ ಮಂದಿಯನ್ನು ಕೊಂದುಹಾಕಿದ ಜೊಹಾನ್ ಹಾಕ್ ಎಂಬುವನನ್ನು ಗಲ್ಲಿಗೆ ಹಾಕಬೇಕೆಂದು ಅಲ್ಲಿನ ಕೋರ್ಟಿನವರು ಈ ಹಿಂದೆಯೇ ತೀರ್ಮಾನ ಮಾಡಿದ್ದಾರೆ. ಕಳೆದ ಜುಲೈ ತಿಂಗಳಲ್ಲೇ ಇವನನ್ನು ಗಲ್ಲಿಗೆ ಏರಿಸಬೇಕಾಗಿತ್ತು. ಆದರೆ ಅವನನ್ನು ಗಲ್ಲಿನ ಮನೆಗೆ ಕರೆದುಕೊಂಡು ಹೋಗುತ್ತಿರುವಾಗ್ಗೆ ಅವನ ಸ್ನೇಹಿತೆಯಾದ ಕೆಲವು ಮಂದಿ ಸ್ತ್ರೀಯರು ಏಕವಾಗಿ ಮೊಕದ್ದಮೆಯನ್ನು ಅಪೀಲ್ ಮಾಡುತ್ತೇವೆಂತಲೂ ಗಲ್ಲಿಗೆ ಹಾಕದೆ ಒಂದು ತಿಂಗಳ ಪರಿಯಂತ ಕೊಡಬೇಕೆಂತಲೂ ಕೋರ್ಟಿನವರನ್ನು ಬೇಡಿಕೊಂಡದ್ದಕ್ಕೆ ಕೋರ್ಟಿನ ಹುಕುಂ ಪ್ರಕಾರ ಅಪರಾಧಿಯನ್ನು ಗಲ್ಲಿಗೆ ಹಾಕಲಿಲ್ಲ. ಈಗ ಅಪೀಲ್ ಆದದ್ದರಲ್ಲಿ ಮರಣ ದಂಡನೆ ವಿಧಿಸಲ್ಪಟ್ಟಿದೆ.

◆◆◆◆

ಈಚೆಗೆ ಚೀಣೆಯವರೂ ಜರ್ಮನರೂ ಒಂದು ಕರಾರು ಮಾಡಿಕೊಂಡಿದ್ದಾರೆಂದು ಪ್ರಕಟಿಸಿರುತ್ತೇವಷ್ಟೆ. ಈ ಕರಾರಿನ ಮುಖ್ಯ ಕಲಮುಗಳೇನೆಂದರೆ—(೧) ಪೋರ್ಟ್ ಆರ್ಥರ್ ಪಟ್ಟಣದಲ್ಲಿ ರಷ್ಯಾ ಜಪಾನರಿಗೆ ನಡೆದಿರುವ ಕರಾರಿನ ಪ್ರಕಾರ ರಷ್ಯಾದವರು ಕ್ವಾಂಟಂಗ್ ಎಂಬ ಪರ್ಯಾಯ ದ್ವೀಪವನ್ನು ಜಪಾನರಿಗೆ ವಹಿಸಿರುತ್ತಾರಷ್ಟೆ. ಈ ಪರ್ಯಾಯ ದ್ವೀಪವನ್ನು ೧೯೨೩ ನೆ ಇಸವಿ ತನಕ ಜಪಾನವರು ಅನುಭೋಗಿಸಿ, ಅನಂತರ ಚೀಣೆಯವರಿಗೇ ಬಿಟ್ಟುಕೊಡತಕ್ಕದ್ದು (೨) ಅಲ್ಲಿರುವ ರೈಲ್ ರಸ್ತೆಗಳನ್ನೆಲ್ಲಾ ಜಪಾನವರು ಹಣ ತೆಗೆದುಕೊಂಡು ಚೀಣೆಯವರಿಗೆ ವಹಿಸಬೇಕು (೩) ಜಪಾನರು ತಮ್ಮ ರಾಯಭಾರಿಗಳನ್ನೂ ಸೈನಿಕರನ್ನೂ ನ್ಯೂಚಾಂಗ್ ಮುಕ್ಡೆನ್, ಆನ್ಟಂಗ್, ಕೇರಿನ್, ಚಾಂಟಂಗ್ ಎಂಬೀ ಪಟ್ಟಣಗಳಲ್ಲಿ ಇಟ್ಟು, ರೈಲ್ ರಸ್ತೆಯನ್ನು ಕಾಪಾಡಬೇಕು (೪) ಮ್ಯಾಂಚೂರಿಯಾದಲ್ಲಿ ಜಪಾನವರು ವಸೂಲ್ಮಾಡುತ್ತಿರುವ ಸುಂಕಗಳನ್ನೆಲ್ಲಾ ಚೀಣೆಯವರಿಗೆ ವಹಿಸಿಕೊಡಬೇಕು ಇವೇ.

◆◆◆◆

ಕಳೆದ ೧೮೯೬ ನೆ ಇಸವಿಯಲ್ಲಿ ಸ್ವಿಟ್ಸರ್ಲೆಂಡಿನ ಬರ್ನ್ ಎಂಬೊಬ್ಬ ಹುಡುಗಿ ಲಂಡನ್ ಪಟ್ಟಣಕ್ಕೆ ಹೋಗಿದ್ದು, ಒಂದಾನೊಂದು ದಿನ ವಿಕ್ಟೋರಿಯಾ ಮಹಾರಾಣಿಯವರನ್ನು ಕಾಣಬೇಕೆಂದು ಬಕಿಂಗ್‌ಹಂ ಎಂಬ ರಾಜಭವನದ ಬಳಿ ನಿಂತುಕೊಂಡಿದ್ದಳು. ಆಗ್ಗೆ ಒಬ್ಬ ದೊಡ್ಡ ಮನುಷ್ಯನು ಆಕಸ್ಮಾತ್ತಾಗಿ ಬಿದ್ದುದರಿಂದ ಅವನಿಗೆ ಜ್ಞಾನ ತಪ್ಪಿತು. ಅಲ್ಲಿ ನಿಂತಿದ್ದ ಈ ಹುಡುಗಿ ಅವನನ್ನು ನೋಡಿ ಕೂಡಲೇ ಓಡಿ ಹೋಗಿ ಅವನಿಗೆ ಶೈತ್ಯೋಪಚಾರಮಾಡಿ ಒಂದು ಬಾಡಿಗೆ ಗಾಡಿಯಲ್ಲಿ ಅವನನ್ನು ಮಲಗಿಸಿ ಕರೆದುಕೊಂಡು ಹೋಗಿ ಅವನ ಮನೆಯಲ್ಲಿ ಮಲಗಿಸಿದಳು. ಆಗ ಅವನಿಗೆ ಪ್ರಜ್ಞೆಯುಂಟಾಯಿತು. ಸಮೀಪದಲ್ಲಿ ಇವಳನ್ನು ನೋಡಿ, ಅವಳ ಪೂರ್ವೋತ್ತರ ಮನೆ ಮಠ ಊರು ಕೇರಿಗಳನ್ನು ವಿಚಾರಿಸಿಕೊಂಡನು. ತರುವಾಯ ಆ ಹುಡುಗಿ ವಿಲಾಯತಿಯಿಂದ ತನ್ನ ಊರಿಗೆ ಬಂದುಬಿಟ್ಟಳು. ಕಳೆದ ಡಿಸೆಂಬರಿನಲ್ಲಿ ಅವಳಿಗೆ ವಿಲಾಯತಿಯ ಒಬ್ಬ ಲಾಯರಿಂದ ಒಂದು ಕಾಗದ ಬಂದಿತು. ಅದನ್ನು ಅವಳು ಒಡೆದು ನೋಡುವಲ್ಲಿ—ನೀನು ಆ ದಿನ ಶೈತ್ಯೋಪಚಾರ ಮಾಡಿದ ದೊಡ್ಡ ಮನುಷ್ಯನು ಕಾಲವಾದನು. ಅವನು ತನ್ನ ಆಸ್ತಿಯಲ್ಲಿ ನಿನಗೆ ೩॥ ಲಕ್ಷ ರೂಪಾಯಿ ಕೊಡಬೇಕೆಂದು ಉಯಿಲು ಬರೆದಿರುತ್ತಾನೆ. ನೀನು ಬಂದು ಈ ಹಣವನ್ನು ತೆಗೆದುಕೊಂಡು ಹೋಗಬೇಕು ಎಂಬೀ ಅರ್ಥವಾಯಿತು. ಆಕೆಯ ಸಂತೋಷವನ್ನೂ ಮೃತಪಟ್ಟವನ ಕೃತಜ್ಞತೆಯನ್ನೂ ಏನೆಂದು ಹೇಳೋಣ!

ಮೈಸೂರು ಗೆಜೆಟ್ ಸಂಗ್ರಹ.

ಮೈಸೂರು ಅ॥ ನ್ಯೂರ್ಸಿಫ್ ಮೆ॥ ಬಿ ಎ ದಿನಪ್ರಕಾಶಂ ಪಿಳ್ಳೆಯವರು ಡಿಸೆಂಬರ್ ೧೬ ರಲ್ಲಿ ಕೆಲಸದ ಮೇಲೆ ಹಾಜರಾದ್ದರಿಂದ ಅವರು ಉಪಯೋಗಿಸಿಕೊಳ್ಳದ ರಜವನ್ನು ರದ್ದುಮಾಡಿದೆ.

ಪ್ರೊ॥ ಅ॥ ಕಮಿಷನರ್ ಮೆ॥ ಹಸನ್ ಅಲಿಯವರಿಗೆ ಕೊಟ್ಟದ್ದ ಮೂರು ತಿಂಗಳ ಪ್ರಿವಿಲೆಜ್ ರಜದ ಜೊತೆಗೆ ಮೂರು ತಿಂಗಳ ಕಾಯಿಲೆ ರಜಾ ಕೊಟ್ಟಿದೆ.

ದೇವನಹಳ್ಳಿ ಅಮಲ್ದಾರ್ ಮೆ॥ ಧರ್ಮರಾಜ ಚೆಟ್ಟಿಯವರನ್ನು ಎಕ್ಸ್ಟ್ರಾ ಅ॥ ಕಮಿಷನರಾಗಿ ಕೆಲಸ ನೋಡುವಂತೆ ನೇಮಿಸಿ, ಶಿವಮೊಗ್ಗಾ ಡಿಸ್ಟ್ರಿಕ್ಟ್ ಟ್ರೆಜರಿ ಛಾರ್ಜಿಗೆ ವರ್ಗಮಾಡಿದೆ.

ಕೋಲಾರ್ ಡಿಸ್ಟ್ರಿಕ್ಟ್ ಪೋಲೀಸ್ ಹೆಡ್ ಕ್ವಾರ್ಟರ್ ಇನ್ಸ್ಪೆಕ್ಟರ್ ಮೆ॥ ಪಿ ಸುಬ್ಬರಾಯರನ್ನು ಅಮಲ್ದಾರ್ ಮತ್ತು ೩ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಕೆಲಸ ನೋಡುವಂತೆ ನೇಮಿಸಿ, ದೇವನಹಳ್ಳಿ ತಾಲ್ಲೂಕಿಗೆ ವರ್ಗಮಾಡಿದೆ. ಕೂಡಲೇ ಕೆಲಸದ ಮೇಲೆ ಹಾಜರಾಗತಕ್ಕದ್ದು.

ಮೈಸೂರು ರೆವಿನ್ಯೂ ಕಮಿಷನರ್ ಮೆ॥ ಟಿ ಆನಂದರಾಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ೯೦ ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ಅವರ ಅಸಿಸ್ಟೆಂಟರು ರೆವಿನ್ಯೂ ಕಮಿಷನರ ಆಫೀಸ್ ಚಾಲ್ತಿ ಕೆಲಸಗಳನ್ನು ಚಲಾಯಿಸತಕ್ಕದ್ದು.

ಸಬ್‌ಡಿವಿಜನ್ ಆಫೀಸರ್ ಮೆ॥ ಎಂ ಕಾಂತರಾಜೇ ಅರಸಿನವರಿಗೆ ಆಗಸ್ಟ್ ೧೬ ರಲ್ಲಿ ಕೊಟ್ಟದ್ದ ಆರು ತಿಂಗಳ ಸಂಬಳವಿಲ್ಲದ ರಜವನ್ನು ಇನ್ನೂ ಆರು ತಿಂಗಳಿಗೆ ಜಾಸ್ತಿಮಾಡಿದೆ.

ಬೆಂಗಳೂರು ಡಿಸ್ಟ್ರಿಕ್ಟ್ ಪೋಲೀಸ್ ಹೆಡ್‌ಕ್ವಾರ್ಟರ್ ಇನ್ಸ್ಪೆಕ್ಟರ್ ಎಸ್ ಶ್ರೀನಿವಾಸೈಯ್ಯಂಗಾರ್ರನ್ನು ಹೆಚ್ಚಿ ಅಮಲ್ದಾರ್ ಮತ್ತು ೩ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಬದಲಿ ನೋಡುವಂತೆ ನೇಮಿಸಿ, ಪ್ರೆಂಚ್‌ರಾಕ್ಸಿಗೆ ವರ್ಗಮಾಡಿದೆ.

ಮೈಸೂರು ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡಿಗೆ ಮೆ॥ ಗಳಾದ ಇ ವೆಂಕಟನರಸಿಂಹನವರು, ಮುಹಮ್ಮದ್ ಜಾಫರ್ ಯವರು, ಎಂ ಅನಂತನಾರಾಯಣೈಯ್ಯನವರು, ಇವರನ್ನು ಮೆಂಬರುಗಳಾಗಿ ಪುನಃ ನೇಮಕ ಮಾಡಿದೆ.

ಮ್ಯುನಿಸಿಪಲ್ ಕಮಿಷನರುಗಳಾದ ಮೆ॥ ಎಂ ವೆಂಕಟಕೃಷ್ಣಯ್ಯನವರನ್ನೂ ಮೆ॥ ಎಂ ಸಿ ರಂಗೈಯ್ಯಂಗಾರ್ರನ್ನೂ ಮೈಸೂರು ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡಿನ ಮೆಂಬರುಗಳಾಗಿ ಚುನಾವಣೆ ಮಾಡಲ್ಪಟ್ಟಿರುತ್ತದೆ.

ಮಿಲಿಟರಿ ಸರ್‌ವೆಸ್ಟ್ ಇಲಾಖೆಯ ಲೆಫ್ಟಿನೆಂಟ್ ಎ ಬಿ ಇ ಡೇವಿಸ್, ಆರ್. ಇ ಯವರನ್ನು ಮೈಸೂರು ಸರ್‌ವೆ ಮತ್ತು ರೈಲ್ವೆಗಳ ಇಲಾಖೆಯಲ್ಲಿ ಚೀಫ್ ಇಂಜನಿಯರಾಗಿಯೂ ಗವರ್ನಮೆಂಟಿನ ಅಂಡರ್ ಸೆಕ್ರೆಟರಿಯಾಗಿಯೂ ನೇಮಕ ಮಾಡಿದೆ. ಇವರು ಕಳೆದ ನೊವೆಂಬರ್ ೧೬ ರಲ್ಲಿ ತಮ್ಮ ಆಫೀಸ್ ಛಾರ್ಜನ್ನು ವಹಿಸಿಕೊಂಡಿರುತ್ತಾರೆ.

ತಾಲ್ಲೋಕು ವರ್ತಮಾನಗಳು.

ದೊಡ್ಡಬಳ್ಳಾಪುರ—ಬೆಂಗಳೂರು, ಬೆಳಗಾವ, ಬಳ್ಳಾರಿ ಈ ಕಡೆಗಳಿಂದ ಸುಮಾರು ೬ ಸಾವಿರ ಇಂಗ್ಲಿಷ್ ಸೈನ್ಯದವರು ಬಂದು, ಒಂದು ತಿಂಗಳಿಂದ ಕ್ಯಾಂಪು ಪ್ರಾಕ್ಟೀಸ್ ಮಾಡಿ, ಈಗ ಹೊರಟು ಹೋಗುವದರಲ್ಲಿ ಇದ್ದಾರೆ—ಕಂದವಾರದ ಪಿಳ್ಳಪ್ಪನ ಮನೆಯಲ್ಲಿ ಒಂದು ತಿಂಗಳ ಹಿಂದೆ ಒಂದು ಸಾವಿರ ರೂಪಾಯಿ ವರೆಗೆ ಕಳುವಾಯಿತು. ಒಬ್ಬಿಬ್ಬರು ಪತ್ತೆಯಾದರೂ ಸಹ ಡಿಸ್‌ಮಿಸ್ ಆಗುವ ಹಾಗೆ ಇದೆ—ತಾ ೧೮ನೆಗುರುವಾರ ರಾತ್ರಿ ಚೌಕದಲ್ಲಿ ಪೋಲೀಸ್ ಸ್ಟೇಷನಿಗೆ ಸಮೀಪದಲ್ಲಿದ್ದ ಸಿ ನಂಜಪ್ಪನವರ ಅಂಗಡಿಯ ಮಾಳಿಗೆ ಮೇಲೆ ಕನ್ನ ಹಾಕಿ ಸುಮಾರು ೨೫೦ ರೂಪಾಯಿ ವರೆಗೆ ಚಿನ್ನ, ಬೆಳ್ಳಿ, ರೂಪಾಯಿಗಳನ್ನು ಸಹ ಕಳವು ಮಾಡಿದ್ದಾರೆ. ಈ ಕಾರ್ಯದಿಂದ ವಿಶೇಷವಾದ ವರ್ತಕರಿಗೆ ತುಂಬಾ ಗಾಬರಿಯಾಗಿದೆ. ಪೋಲೀಸ್ ಸ್ಟೇಷನಿಗೆ ಸಮೀಪವಾದ ಚೌಕದಲ್ಲಿ ಮಾಳಿಗೆ ಮೇಲೆ ಹತ್ತಿ ಜಂತಿಗಳನ್ನು ಮುರಿದು, ಇಷ್ಟು ಕಾರ್ಯವನ್ನು ಕಳ್ಳರು ಮಾಡಿರುವಾಗ್ಗೆ ಪೋಲೀಸ್‌ನವರ ಉಸ್ತುವಾರಿ ಏನಾಗಿತ್ತೋ ಎಂದು ಜನರು ಮಾತನಾಡುತ್ತಾರೆ. ಪೋಲೀಸ್ ಅಧಿಕಾರಿಗಳು ಇದಕ್ಕೆ ಗಮನ ಕೊಡದಿದ್ದರೆ ಜನರ ಅಪವಾದವು ತಪ್ಪಲಾರದು. ನಮ್ಮ ಜಮಾದಾರರು ನಿರ್ಬಂಧನೆಯಾಗಿ ಕೆಲಸಮಾಡುತ್ತಾರೆಂದು ಜನರು ಹೇಳುತ್ತಾರೆ—ಮೆಳೆಕೋಟೆಯಲ್ಲಿರುವ ಸ್ಕೂಲ್ ಮೇಸ್ಟರು ಎಲ್ಲಾದಕ್ಕಿಂತಲೂ ಮೇಲಾದ ಕಸ್ತೂರಿ ಮಾತ್ರೆ ಮಾಡುತ್ತಾರೆಂದು ಗೊತ್ತಾಗಿದೆ. ೧೦೦ ಮಾತ್ರೆಗಳುಳ್ಳ ೧ ಡಬ್ಬಿಗೆ ಒಂದು ರೂಪಾಯಿ. ಕಣ್ಣಿಗೆ ಹಾಕಿಕೊಳ್ಳುವ ನಾರಿಕೇಳಾಂಜನವನ್ನು ಸಹ ಮಾಡುತ್ತಾರೆ. ಬೇಕಾದವರು ತರಿಸಿ ಪರೀಕ್ಷಿಸಬಹುದು—ಕೋಆಪರೇಟಿವ್ ಸೊಸೈಟಿಯನ್ನು ಸ್ಥಾಪಿಸುವುದಕ್ಕೆ ನಮ್ಮ ಅಮಲ್ದಾರರು ಮೊದಲಾದವರು ಪ್ರಯಾಸಪಡುತ್ತಾರೆ. ಇದರ ವಿವರ ಮುಂದಕ್ಕೆ ತಿಳಿಯುತ್ತೆ.

ಚಿಕ್ಕಮಗಳೂರು.—ಕಳೆದ ೧೮ ನೆ ತಾರೀಖು ಗುರುವಾರ ಇಲ್ಲಿ ೧॥ ಇಂಚು ಮಳೆಯಾಯಿತು. ಈ ಊರಿನಲ್ಲಿ ದನಾರವೆ ಸಿಡುಬಿನ ಉಪದ್ರದಿಂದ ಅನೇಕ ಮಕ್ಕಳು ಕಷ್ಟಪಡುತ್ತಿದ್ದರೂ ಪ್ರಾಣಭಯವೇನೂ ಇಲ್ಲ. ಶಿವಮೊಗ್ಗಾದಿಂದ ಸರ್ಜನ್ ಜಡ್ಜಿಯವರು ಬಂದು, ಮೊಕದ್ದಮೆಗಳನ್ನು ವಿಚಾರಿಸುತ್ತಿದ್ದಾರೆ—ಕಟ್ಟಿವಾರ ಯಾರೋ ಒಬ್ಬ ವರ್ತಕನು ಮಾರ್ಕೆಟ್ ಟಿಗ ಕೊಡತಕ್ಕ ಸುಂಕವನ್ನು ಕೊಡದೆ ಸುಮಾರು ಮೂವತ್ತೈದು ಮಣ ಹೊಗೆಸೊಪ್ಪನ್ನು ಊರೊಳಗೆ ಮಾರಾಟಕ್ಕೆ ತಂದದ್ದನ್ನು ಟೌನಿನ ಇನ್ಸ್‌ಪೆಕ್ಟರ ಪೋಲೀಸು ಕಾನ್ಸ್ಟೇಬಲರು ಹಿಡಿದು ತನಿಖೆ ಮಾಡಿ, ಸರಕಾರಕ್ಕೆ ಒಪ್ಪಿಸಿದ ಹಾಗೂ, ಸರಕಾರದವರು ಮಾಲನ್ನು ಹರಾಜಿಗೆ ಹಾಕಿ ಮಾಡಿದ ಹಾಗೂ, ಕೇಳುತ್ತೇನೆ—ಕಳೆದ ೩ ನೆ ತಾರೀಖಿನಲ್ಲಿ ಇಲ್ಲಿ ಮುನಿಸಿಪಲ್ ಮೆಂಬರುಗಳ ಪೈಕಿ ಒಬ್ಬರು ಸಂತೆಯ ಕಡೆ ಹೋಗಿ ಕಮ್ಮಿಯಾಗಿದ್ದ ಒಂದು ಸೇರನ್ನು ಹಿಡಿದು, ಪೋಲೀಸ್ ಸ್ಟೇಷನಿಗೆ ತಂದು ಕಳುಹಿಸಿದ್ದರಲ್ಲಿ ಪಲ್ಲಕ್ಕೆ ಐದು ಸೇರು ಕಮ್ಮಿ ಬಂದಿತು. ಆದನ್ನು ಸ್ಟೇಷನ್ ಆಫೀಸರ ಚಾರ್ಜಿಗೆ ಒಪ್ಪಿಸಿ ಹೊರಟು ಹೋದರೆಂದೂ, ಈಚೆಗೆ ಅದರ ವಿಚಾರವೇನೂ ಮುಂದಕ್ಕೆ ಜರುಗಿಸದೆ ಪೋಲೀಸ್ ಜಮಾದಾರರು ಅದನ್ನು ಬಿಟ್ಟುಬಿಟ್ಟರೆಂದೂ ಕೇಳುತ್ತೇವೆ. ಹೀಗೆ ಕಮ್ಮಿ ಸೇರು ಕಮ್ಮಿ ತೂಕ ಇಟ್ಟು ಮಾರುವವರನ್ನು ಏನೂ ಮಾಡದೆ ಬಿಟ್ಟು ಬಿಡುವದು ಯಾವ ಧರ್ಮವೋ ಯೋಚಿಸಬೇಕಾಗಿದೆ—ಹಜ್ಜೆ ನಾಯಿಗಳ ಕಾಟ ಬಹಳವಾಗಿದೆ. ಮ್ಯುನಿಸಿಪಾಲಿಟಿಯವರು ಎಲ್ಲಿ ನೋಡಿದರೂ ಅವುಗಳೇ. ನೋಡುವದಕ್ಕೆ ಬಹಳ ಅಸಹ್ಯವಾಗಿವೆ. ಅವುಗಳಿಗೆ ಮುಚ್ಚು ಹಿಡಿಯುವದಕ್ಕೆ ಮೊದಲೇ ಮುನಿಸಿಪಾಲಿಟಿಯವರು ಅವುಗಳನ್ನು ಕೊಲ್ಲಿಸುವದು ಒಳ್ಳೇದಲ್ಲವೇ?—ಇದೇ ೨೦ ನೆ ತಾರೀಖು ಸಾಯಂಕಾಲ ಇಲ್ಲಿನ ಹೈಸ್ಕೂಲಿನಲ್ಲಿ ಶ್ರೀಮದ್ ಯೋಗೀಶ್ವರಾನಂದಸ್ವಾಮಿಗಳು ವೇದಾಂತದ ವಿಷಯ ಉಪನ್ಯಾಸ ಮಾಡುತ್ತಾರೆಂದು ಇನ್ನು ಕೆಲವು ದಿನಗಳವರೆಗೂ ಕೆಲವು ಉಪನ್ಯಾಸಗಳನ್ನು ಮಾಡುವವರಾಗಿದ್ದಾರೆಂದೂ ವರ್ತಮಾನವಿದೆ.

ಬಾತ್ಮಿದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ನಿಗಾ ಕೊಡಲಾರೆವು. ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು, ಇಂಥವುಗಳಿಗೆ ನಾವು ನಿಗಾ ಕೊಡಲಾರೆವು.

ಪ್ರಕಟಿಸಲಾರೆವೆಂದು ಹೇಳಿ ತಿರಸ್ಕರಿಸಿದ ಬಾತ್ಮಿಗಳನ್ನು ನಾವು ಬಾತ್ಮಿದಾರರಿಗೆ ವಾಪಸು ಕಳುಹಿಸಲಾರೆವು.

ಬಾತ್ಮಿದಾರರು ಸಮಾಚಾರಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಎಡಿ

ಕ ನ ಸು ಐಯರು ಮಂಡ್ಯ,—ನೀವು ಅದೇ ವಿಷಯವನ್ನು ಚೀಫ್ ಕೋರ್ಟಿಗೆ ಬರೆದ ಕಾಗದದಲ್ಲಿ ಪರಿಹಾರ ಸಿಕ್ಕೀತು.

ಕೆಂ ಎಚ್ ಪ ಬೆ—ನೀವು ಕೋರ್ಟಿನಲ್ಲಿ ವ್ಯವಹರಿಸಿಕೊಳ್ಳಬೇಕು.

ಸಜ್ಜನ ಶ್ರೇಯೋಭಿಲಾಷಿ, ಸೋಸಲೆ.—ಪೋಲೀಸ್ ಇಲಾಖೆಗೆ ತಿಳಿಸಿದರೆ ಅವರು ಪತ್ತೆ ಮಾಡಿ ಕೊಡುತ್ತಾರೆ.

ಕರೆಸ್‌ಪಾಂಡೆನ್ಸ್.

ಅರಸೀಕೆರೆ ಜಾತ್ರೆ

ಅಯ್ಯಾ,

ಈ ಊರಲ್ಲಿ ವರುಷಂಪ್ರತಿ ನಡೆಯುತ್ತಿರುವ ಶ್ರೀಗೋಪಾಲಕೃಷ್ಣ ದೇವರ ರಥೋತ್ಸವವು ವೈಶಾಖದಲ್ಲಿ ನಡೆಯುವದನ್ನು ನಿಲ್ಲಿಸಿ, ಇದೇ ವಿಶ್ವಾವಸು ಸಂವತ್ಸರದ ಮಾಘಶುದ್ಧ ಷಷ್ಠಿ ಬುಧವಾರದ ದಿವಸ ನಡೆಯುತ್ತದೆ. ವೈಶಾಖದಲ್ಲಿ ನಡೆಯುವದನ್ನು ಬದಲಾಯಿಸಿರುವುದು ಎಲ್ಲಾ ಜನರಿಗೂ ಮತ್ತು ವ್ಯಾಪಾರಸ್ಥರಿಗೂ ಬಹಳ ಅನುಕೂಲವಾಗಿದೆ. ಯಾಕೆಂದರೆ ಮಳೆ ಕಾಲದ ಉಷ್ಣಾಧಿಕ್ಯ ದೂರದೇಶದಿಂದ ಬಂದ ಜನಗಳಿಗೂ ವ್ಯಾಪಾರಸ್ಥರಿಗೂ ಬಹಳ ತೊಂದರೆ ಉಂಟಾಗುತ್ತಾ ಇತ್ತು. ಹೀಗೆ ಬದಲಾಯಿಸಿದ್ದರಿಂದ ಮುಂದೆ ಮುಂದೆ ಈ ಊರು ಅಭಿವೃದ್ಧಿಗೆ ಬರಲು ಸಂದೇಹವಿಲ್ಲ.

ಜಿ ವಿ

ಬೆಂಗಳೂರು ಸಿಟಿ ಕಿಚ್ಚಯ್ಯನ ಗಲ್ಲಿ

ಅಯ್ಯಾ,

ಬೆಂಗಳೂರು ಸಿಟಿ ತಾಲ್ಲೋಕ್‌ಕಚೇರಿ ರೋಡು ಕಿಚ್ಚಯ್ಯನ ಗಲ್ಲಿಯ ದುರವಸ್ಥೆಯನ್ನು ಏನೆಂದು ಹೇಳಲಿ! ಈ ಗಲ್ಲಿ ೨, ೩, ೪ ನಂಬರು ಮನೆಗಳ ಮಧ್ಯದಲ್ಲಿದ್ದಂಥ ಮುನಿಸಿಪಲ್ ಲಾಂದ್ರಕ್ಕೆ ಸುಮಾರು ೩—೪ ವರುಷಗಳ ಕೆಳಗೆ ಒಂದು ಸೌದೆ ಗಾಡಿಯು ಬಡಿದು ಬಿದ್ದು ಹೋಯಿತು. ಆಗ್ಗೆ ಸಿಟಿ ಮುನಿಸಿಪಾಲಿಟಿಯವರು ಗಾಡಿಯವನಿಂದ ಚಾರ್ಜು ವಸೂಲ್ ಮಾಡಿಕೊಂಡು, ಸುಮಾರು ೩—೪ ವರುಷವಾಯಿತು. ಆದರಿಂದೀಚೆಗೆ ಸಿಟಿ ಮುನಿಸಿಪಾಲಿಟಿಗೆ ಅರ್ಜಿಯನ್ನು ಕೊಟ್ಟು ಕೇಳಿಕೊಂಡಾಗ್ಯೂ ಸಹ ಈ ತನಕ ಪುನಃ ಲಾಂದ್ರವನ್ನು ಹಾಕಿಸಿಕೊಡಲೇ ಇಲ್ಲ. ಡಿಟ್ಟೋ ಗಲ್ಲಿಯಲ್ಲಿರುವ ನೀರಿನ ನಲ್ಲಿಯ ಬಟ್ಟೆಯನ್ನು ಒಗೆಯುವದಕ್ಕೂ, ಮುಖ ತೊಳೆಯುವದಕ್ಕೂ ಅಸಹ್ಯಪದಾರ್ಥಗಳನ್ನು ತೊಳೆಯುವದಕ್ಕೂ ಇಟ್ಟಂತೆ ತೋರುತ್ತೆಯೋ ಹೊರತು ನೀರು ತೆಗೆದುಕೊಂಡು ಹೋಗುವದಕ್ಕಾಗಿ ಇಟ್ಟಂತೆ ತೋರುವದಿಲ್ಲ. ಈ ಗಲ್ಲಿಯಲ್ಲಿ ಬೆಳಕು ಇಲ್ಲದ್ದರಿಂದ ರಾತ್ರಿ ವೇಳೆಯಲ್ಲಿ ಓಡಾಡುವದಕ್ಕೂ ನೀರು ವಗೈರೆ ತರುವದಕ್ಕೂ ಬಹಳ ಅನಾನುಕೂಲವಾಗಿದೆ. ಡಿಟ್ಟೋ ಗಲ್ಲಿಯಲ್ಲಿ ೨—೩—೪ ನಂಬರು

ಹೋಗುವ ಸಂದಿನಲ್ಲಿಯೂ ನಲ್ಲಿ ಬಳಿಯಲ್ಲೂ ರಾತ್ರಿ ವೇಳೆ ಅನೇಕರು ಎಡವಿ ಬೀಳುತ್ತಾರೆ. ಆದ್ದರಿಂದ ದಯಾಳುಗಳಾದ ಮುನಿಸಿಪಾಲಿಟಿಯವರು ದಯವಿಟ್ಟು ಆ ನಲ್ಲಿ ಬಳಿ ಒಂದು ಕೃತ್ರಿಮ ದೀಪವನ್ನು ಇಡಿಸಿಕೊಟ್ಟು ಪ್ರಜೆಗಳ ಕಷ್ಟವನ್ನು ಪರಿಹರಿಸುವರೆಂದು ಹಾರೈಸುತ್ತೇನೆ.

ಪ್ರಜಾ ಹಿತಚಿಂತಕ.

ಕಲ್ಕತ್ತೆಯ ಪ್ರಾವಿಡೆಂಟ್ ಫಂಡು

ಸ್ವಾಮಿ,

ಈಗ ನಾನು ಎರಡು ವರುಷಗಳ ಲಾಗಾಯತು "ಕಲ್ಕತ್ತಾ ಪ್ರಾವಿಡೆಂಟು ಇನ್‌ಸ್ಟಿಟ್ಯೂಷನು" ಎಂಬ ಫಂಡಿಗೆ ಏಜಂಟಾಗಿ ಜನಗಳನ್ನು ಫಂಡಿಗೆ ಷೇರ್ಹೋಲ್ಡರುಗಳಾಗಿ ಮಾಡಿಸಿ, ಅವರಿಂದ ವಸೂಲು ಮಾಡಿ, ರವಾನಿಸುತ್ತಿದ್ದೆನು. ಈ ಕಂಪೆನಿ ಒಬ್ಬಳು ಬಂದೂವರೆ ವರುಷವಾದರೂ, ಅವಳ ಪಾರಸ್ಪಾರನಿಗೆ ಅದರ ಪ್ರಕಾರ ಹಣ ಕಳುಹಿಸಲಿಲ್ಲ. ಇದರ ವಿಷಯವಾಗಿಯೂ ಮತ್ತು ಆರು ತಿಂಗಳಿಗೆ ಹಣಸಂದ ರಸೀತಿಗಳನ್ನು ಕಳುಹಿಸದೇ ಇರುವ ವಿಷಯವಾಗಿಯೂ ಮ್ಯಾನೇಜರಿಗೆ ಅನೇಕ ಕಾಗದಗಳು ಬರೆದೂ, ಕಾಗದವನ್ನು ರಿಜಿಸ್ಟರ್ ಮೂಲಕ ಕಳುಹಿಸಿಯೂ, ತಂತಿಗಳು ಕೊಟ್ಟು ನಾಲ್ಕು ತಿಂಗಳುಗಳಾದರೂ ಜವಾಬಿಲ್ಲವು ನಮ್ಮೆಲ್ಲರಿಗೂ ಮ್ಯಾನೇಜರು ಮೋಸಮಾಡಬೇಕೆಂದಿದ್ದಾರೋ ಏನೋ ಗೊತ್ತಿಲ್ಲವಾಗಿದೆ ಅನುಮಾನವಾಗಿದೆ. ಆದ್ದರಿಂದ ತಮ್ಮ ಪತ್ರಿಕೆಯಲ್ಲಿ ಅದರ ಸ್ಥಿತಿಯನ್ನು ಜನಗಳಿಗೆ ತಿಳುವಳಿಕೆ ಬಗ್ಗೆ ಪ್ರಕಟಿಸಬೇಕೆಂದು ಪ್ರಾರ್ಥಿಸುವ

ಮೈಸೂರು, ಆ ವೆಂಕಟಾಚಲ ಮೊದಲಿಯಾರ್,

೧೧-೧-೧೯೦೮ ಇಟ್ಟಿಗೇ ಗೂಡು

[ಈ ಕಲ್ಕತ್ತೆಯ ಪ್ರಾವಿಡೆಂಟ್ ಫಂಡಿಗೆ ನಮ್ಮ ವಾಚಕರ್‍ಯಾರೂ ಹಣವು ಕಟ್ಟಬಾರದೆಂದು ಈಗ ನಾವು ಹೇಳಿಲ್ಲದೇ ಈ ಪತ್ರಿಕೆಯ ಮೂಲಕ ಎಚ್ಚರಿಸಿದ್ದೇವೆ —ಎಡಿ.]

ಕೋಪ್ಪ ತಾಲ್ಲೂಕ್ ಕಚೇರಿ

ಕೊಪ್ಪ ತಾಲ್ಲೂಕಿನ ಐದು ಮಂದಿ ವೃದ್ಧ ಮನುಷ್ಯರು ರುಜು ಹಾಕಿ, ಆ ತಾಲ್ಲೂಕ್ ಕಚೇರಿಯ ದುರವಸ್ಥೆ ವಿಷಯವಾಗಿ ಒಂದು ಖಾತ್ರಿಯನ್ನು ಬರೆದು, ಅಲ್ಲಿನ 'ಕಚೇರಿಯಲ್ಲಿರತಕ್ಕ ಕೆಲವು ನೌಕರರು ಯಾವ ಕೆಲಸಕ್ಕಾದರೂ ಲಂಚ ಕೇಳುವುದಲ್ಲದೆ ಅನಾವಶ್ಯಕವಾಗಿ ಸ್ಥಳದ ಬಡ ಜನಗಳನ್ನು ಪೀಡಿಸುತ್ತಾರೆ" ಎಂತಲೂ, "ಮೆ॥ ಬಾಲ ಸಾಹೇಬರು ಅಮಲ್ದಾರರಾಗಿದ್ದಾಗ ನೌಕರರು ಬಡಜನಗಳ ಕೆಲಸ ಮಾಡುತ್ತಾ ಈ ವಿಧವಾದ ತೊಂದರೆಗೆ ಅವಕಾಶವಿಲ್ಲದೆ ಇತ್ತು" ಎಂತಲೂ, "ಈಗ ದಯಮಾಡಿಸಿರುವ ಮೆ॥ ಟಿ ಎಸ್ ವೆಂಕಟೇಶಯ್ಯನವರಿಗೆ ಈ ನೌಕರರು ಕೊಡುವ ತೊಂದರೆಯು ಜನಗಳ ಮೂಲಕವಾಗಿ ತಿಳಿಯಬಂದರೂ ವಿಚಾರಿಸದೆ ಇರುವುದು ನೋಡಿದರೆ ಮೆ॥ ಅಮಲ್ದಾರರು ಕೂಡಾ ಈ ವಿಧವಾದ ತೊಂದರೆಗೆ ಸಹಕರಿಸುವಂತೆ ಕಾಣುತ್ತೆ" ಎಂತಲೂ, 'ಮೆ॥ ಲಕ್ಷ್ಮಣರಾವ್ ಅವರು ಹೊರಟು ಹೋಗುವ ವರೆಗೂ ನಮ್ಮ ತಾಲ್ಲೂಕಿನಲ್ಲಿ ಲಂಚದ ತೊಂದರೆಯೇ ಇರಲಿಲ್ಲ" ಎಂತಲೂ, "ನಮ್ಮ ಪ್ರಜಾನುರಾಗರಾದ ಡೆಪ್ಯುಟಿ ಕಮಿಷನರವರು ದಯವಿರಿಸಿ, ವಿಚಾರಣೆ ಮಾಡಿ ಈ ದಾರಿಯಲ್ಲಿ ಸಮರ್ಥರಾದ ಸಬ್ ಡಿವಿಷನ್ ಆಫೀಸರನ್ನೂ ಬೇರೆ ಕಡೆಗೆ ವರ್ಗಾಯಿಸಿ ಬಡ ಜನಗಳ ಕಷ್ಟ ತಪ್ಪಿಸುವರು" ಎಂತಲೂ ಆಕ್ಷೇಪಣೆ ಮಾಡಿದ್ದಾರೆ

ಮೆ॥ ವೆಂಕಟೇಶಯ್ಯನವರ ಅಮಲ್ದಾರೀ ವಿಷಯವಾಗಿ ಇಂಥಾ ಈ ಅಂಶಗಳನ್ನು ಪ್ರಕಟಿಸುವುದು ನಮಗೆ ಹಿತಕರವಾಗಿಲ್ಲ. ಈಗ ನಮಗೆ ಬಂದು ಕಳುಹಿಸಿರತಕ್ಕ ಖಾತ್ರಿ ಪಾದರು ಯಾವ ಯಾವ ಸಂದರ್ಭದಲ್ಲಿ ಯಾರ್‍ಯಾರಿಗೆ ಎಷ್ಟೆಷ್ಟು ಮಟ್ಟಿಗೆ ಕಷ್ಟನಷ್ಟಗಳುಂಟಾಗಿವೆ ಎಂಬುದನ್ನು ರುಜುವಾತು ಸಹಿತ ವಿವರವಾಗಿಯೂ ಕಾರಣಸಹಿತವಾಗಿಯೂ ತಿಳಿಸಿದ ಪಕ್ಷದಲ್ಲಿ, ಅಂತಾ ಖಾತ್ರಿಯನ್ನು ನಾವು ಪ್ರಕಟಿಸಿ, ಆ ಪ್ರಾಂತ್ಯದ ಪ್ರಜೆಗಳಿಗೆ ಅನುಕೂಲಮಾಡಿ ಕೊಡಲು ಪ್ರಯತ್ನ ಪಡುತ್ತೇವೆ.

—ಎಡಿಟರ್.]

ವಿವೇಕೋದಯವೂ ಕ್ರೈಸ್ತ ಮತವೂ

ಸ್ವಾಮಿ,

ಹಗಲ ಸಂಜಾವಯ್ಯೇ, ಕಣ್ಣು ಮುಚ್ಚಿಕೊಂಡು ಬೆಳಕಿನ ಕಡೆ ನೋಡಿ ಬೆಳಕಿದ್ದರೂ ನಿಮಗೆ ಅಂಧಕಾರವಾಗಿ ಕಾಣುವುದಿಲ್ಲವೇ? ರೀತಿಯಲ್ಲಿ ವೇದಾಂತದ ಮಾಸಪತ್ರಿಕೆಯಾದ "ವಿವೇಕೋದಯ"ವು ಕಣ್ದೆರೆಯದೆ ಕ್ರೈಸ್ತ ಮತದ ಕಡೆ ಮುಖವನ್ನು ಹೊತ್ತು ತಿರುಗಿಸಿಕೊಂಡಿರುವಂತಿದೆ. ಕೆಲವರು "ವಿವೇಕೋದಯ"ವನ್ನು ಸ್ವಾಮಿ ಕಾಗದವೆಂದು ಹೇಳುವರು. ಅದು ಹಾಗಿರಲಿ. ಬೆಂಗಳೂರಿನ 'ಸ್ವಾಮಿ ವಿನುಖಾನಂದ' ರೆಂಬುವರು ಯೂರೋಪಿಯನ್ ಮಿಷನರಿಗಳು ಕ್ರೈಸ್ತ ಮತವನ್ನು ಬೋಧಿಸುವಂತೆ ಹಿಂದೂ ಮತವನ್ನೂ ಬೋಧಿಸುವರೆಂದೂ, ಇವರು ಈ ರೀತಿ ಮಾಡುತ್ತಾ ಬಂದಲ್ಲಿ ಕ್ರೈಸ್ತಮಿಷನರಿಗಳನ್ನು ಕೇಳುವವರು ವಿರಳರಾಗುವರೆಂದೂ, ಇನ್ನೂ ಕಾಲ ಹೀಗೆ ಬೋಧಿಸಿದರೆ ಅಜ್ಞಾನದಿಂದ ಕ್ರೈಸ್ತಮತವೆಂಬ ಅಂಧಕಾರದಲ್ಲಿ ಬೀಳುವವರು ಕಡಮೆಯಾಗುವರೆಂದೂ ತಿಳಿಸುತ್ತದೆ. ಇಂಥ ಅವಿವೇಕವನ್ನು ಈ 'ವಿವೇಕೋದಯ'ವು ಹರಡುವದ್ದರಿಂದ ಇದಕ್ಕೆ ನನ್ನದೊಂದು ನಮಸ್ಕಾರವಿರಲಿ! ರಾಜಾರಾಮ ಮೋಹನ ರಾಯರೂ, ಕೇಶವ ಚಂದ್ರರೂ, ಜಸ್ಟಿಸ್ ರಾನಡೆಯವರೂ ಇವರೆಲ್ಲರನ್ನು ಪೂರ್ಣ ಬ್ರಹ್ಮಜ್ಞಾನಿಯೆಂದೂ ಹೊಗಳಿ, ಕ್ರೈಸ್ತ ಮತವು ಶ್ರೇಷ್ಠವಾದ ಮತಗಳಲ್ಲೊಂದಾಗಿದೆ ಎಂದು ತಮ್ಮ ತಮ್ಮ ಗ್ರಂಥಗಳಲ್ಲಿ ಬರೆದಿಲ್ಲವೇ? ಅಷ್ಟೇಕೆ. 'ವಿವೇಕೋದಯ'ದ ಗುರುವಾದ ರಾಮಕೃಷ್ಣ ಪರಮಹಂಸರೂ ಪ್ರಪಂಚದ ಎಲ್ಲಾ ಮತಗಳೂ ಸತ್ಯವಾದವುಗಳೆಂದೂ, ಯಾವ ಮತವನ್ನು ದೂಷಿಸಕೂಡದೆಂದೂ ಶಿಷ್ಯಂದಿರಿಗೆ ಉಪದೇಶ ಮಾಡಲಿಲ್ಲವೇನೂ? ಇದೆಲ್ಲವೂ ವಿವೇಕೋದಯಕ್ಕೆ ತಿಳಿದಿರಬಹುದು ತಿಳಿದಿದ್ದರೂ ಪ್ರಯೋಜನವೇನು? ವೇದಾಂತಿಯು ಸರ್ವವೂ ಬ್ರಹ್ಮವೆಂದು ತಿಳಿದು ವಿಗ್ರಹಾರಾಧನೆಯಲ್ಲಿ ಕೆಡಕಿಲ್ಲವೆಂದು ಹೇಳುತ್ತಾನೆ ಕ್ರೈಸ್ತಮತದವರು ಮಾನಸಿಕಾರಾಧನೆಯನ್ನು ಮಾಡುತ್ತಾರೆ. ವೇದಾಂತಿಯು ೩೩ ಕೋಟಿ ದೇವತೆಗಳನ್ನು ಪೂಜಿಸುವದಕ್ಕೂ ಹೇಸನು. ಕ್ರೈಸ್ತ ಮತದವನು ಏಕದೇವಾರಾಧಕನು ವೇದಾಂತಿಗೆ ಜಾತಿಭೇದವವಶ್ಯಕವಾಗಿದೆ. ಕ್ರೈಸ್ತ ಮತದವನಿಗೆ ಜಾತಿಭೇದವಿಲ್ಲದೆ ಸರ್ವರನ್ನೂ ಸಹೋದರರೆಂದು ಪ್ರೀತಿಸುತ್ತಾನೆ. ವೇದಾಂತಿಯು ಸ್ತ್ರೀ ವಿದ್ಯಾಭ್ಯಾಸವು ಅನವಶ್ಯಕವೆಂದು ತಿಳಿದು, ತಮ್ಮ ಸ್ತ್ರೀಯರನ್ನು ಮೂಢತ್ವದಲ್ಲಿಯೇ ಇಟ್ಟಿರುತ್ತಾನೆ ಕ್ರೈಸ್ತ ಮತದವನು ಸ್ತ್ರೀ ವಿದ್ಯಾಭ್ಯಾಸ ಮಾಡಿಸುತ್ತಾನೆ ವೇದಾಂತಿಯು ಇತರ ಹಿಂದೂ ಮತದವರಂತೆ ಬಾಲ್ಯ ವಿವಾಹ ಮಾಡುತ್ತಾನೆ ಕ್ರೈಸ್ತ ಮತದವನು ಪ್ರಾಯ ಬಂದು ವಿವೇಚನಾಶಕ್ತಿ ಬಂದನಂತರವೇ ವಿವಾಹ ಮಾಡಿಸುತ್ತಾನೆ ಇಷ್ಟೇ ಅಲ್ಲ ಪ್ರತಿಯೊಬ್ಬ ವೇದಾಂತಿಯೂ ತಾನೇ ಬ್ರಹ್ಮನೆಂದೂ ಹೇಳುತ್ತಾನೆ. ಕ್ರೈಸ್ತ ಮತದವನಾದರೋ ತಾನು ಪಾಪಿಯೆಂದು ಒಪ್ಪಿಕೊಳ್ಳುತ್ತಾನೆ. ಇಂಥಾ ಶ್ರೇಷ್ಠನಾದ ವೇದಾಂತಿಗೂ ಮತ್ತು ಕ್ರೈಸ್ತ ಮತದವರಿಗೂ ಇಷ್ಟು ವ್ಯತ್ಯಾಸಗಳಿರುವಾಗ, ವಿವೇಕೋದಯಕ್ಕೆ ಕ್ರೈಸ್ತ ಮತವು ಅಂಧಕಾರವಾಗಿ ಕಾಣಿಸುವುದು ಆಶ್ಚರ್ಯವಲ್ಲ.

ನಾಗಭೂಷಣ

ಜಪಾನ್ ರಾಜ್ಯವೂ ಅಲ್ಲಿನ ಪ್ರಜೆಗಳೂ.

ಈ ದೇಶವು ವಿಸ್ತಾರವಾದ ನಾಲ್ಕು ದ್ವೀಪಗಳಿಂದಲೂ ಚಿಕ್ಕ ಚಿಕ್ಕ ನಡುಗಡ್ಡೆಗಳಿಂದಲೂ ಕೂಡಿದೆ. ಇದು ಚೀನಾ ದೇಶಕ್ಕೆ ಪೂರ್ವದಿಕ್ಕಿನಲ್ಲಿರುವ ಶಾಂತಮಹಾಸಾಗರದಲ್ಲಿದೆ ಜಪಾನ್ ಎಂಬ ಹೆಸರು ಚೀನರಿಂದ ಬಂದುದಾಗಿದೆ ಜಪಾನ್ಯರು ತಮ್ಮ ದೇಶಕ್ಕೆ ನಿಪ್ಪಾನ್ ಎಂದರೆ ಅರುಣೋದಯದ ರಾಜ್ಯವೆಂದು ಮತ್ತೊಂದು ಸುಂದರ ನಾಮವನ್ನು ಇಟ್ಟುಕೊಂಡಿದ್ದಾರೆ

ಅದರ ಜನಸಂಖ್ಯೆ ಮೊದಲಾದ ವಿಷಯಗಳನ್ನು ತಿಳಿದು ನೋಡುವರ ಸಾಧಾರಣವಾಗಿ ಬ್ರಿಟಿಷ್ ದ್ವೀಪಗಳಂತೆಯೇ ಇದೆ ಎಂದು ಹೇಳಬಹುದು ಈ ದೇಶದಲ್ಲಿ ಅನೇಕ ಪರ್ವತಪಂಕ್ತಿಗಳಿರುವುವಲ್ಲದೆ, ಅನೇಕ ಶಿಖರಗಳು ಜ್ವಾಲೆಯನ್ನು ಕಾರುವವುಗಳಾಗಿರುತ್ತವೆ. ಈ ಗಿರಿಗಳಲ್ಲಿ ಫ್ಯೂಜಿಯಾಮ ಎಂಬ ಗಿರಿಯು ಅತ್ಯುನ್ನತವಾಗಿದೆ. ಸಮುದ್ರ ಮಟ್ಟಕ್ಕಿಂತ ೧೨,೦೦೦ ಅಡಿಗಳಷ್ಟು ಎತ್ತರವಾಗಿರುವ ಈ ಫ್ಯೂಜಿಯಾಮಾದ್ರಿಯು ಕ್ರಿಸ್ತಪೂರ್ವ ಸುಮಾರು ಮೂರು ಶತಮಾನಗಳ ಹಿಂದೆ ಕೆಲವು ದಿನಗಳೊಳಗೆ ಹುಟ್ಟಿ ಬೆಳೆದಿತೆಂದು ಹೇಳಿದವರಿಗ ಆ ದೇಶೀಯರು ಹೇಳುತ್ತಾರೆ. ಇದು ಈಗ ಜ್ವಾಲೋದ್ಗಿರಣವನ್ನು ಮಾಡದೆ, ಶಾಂತವಾಗಿರುವ ಜ್ವಾಲಾಮುಖಿಯಾಗಿದೆ ಇದರ ಅಗ್ರಭಾಗವು ಹಿಮದಿಂದ ಬಿಳುಪಾಗಿ ಬಂಗಾರದಂತೆ ಶೋಭಿಸುವುದು

ಈ ನಾಡು ಆಗಾಗ್ಗೆ ಭೂಕಂಪದ ಅನಾಹುತಗಳಿಗೆ ಸಿಕ್ಕುತ್ತಾ ಇರುತ್ತದೆ ಕೆಲವು ಸಂವತ್ಸರಗಳ ಹಿಂದೆ ನಡೆದ ಭೂಕಂಪಗಳಿಂದುಂಟಾದ ಅನೇಕ ಹಾನಿಗಳು ಗೋಚರವಾಗುತ್ತಿವೆ. ಸಮುದ್ರ ತೀರಗಳು ಅಗಾಧವಾದ ಆಘಾತಗಳ ದೆಸೆಯಿಂದ ಕುಸಿದುಹೋಗಿರುವುವು

ಜಪಾನಿನ ವಾಯುಗುಣವು ಇಂಗ್ಲೆಂಡ್ ದೇಶದ ವಾಯುಗುಣಕ್ಕೆ ಸರಿಸಮಾನವೆಂದು ಹೇಳಬಹುದಾದರೂ ಅಯಾ ಕಾಲದಲ್ಲಿ ಉಂಟಾಗುವ ಉಷ್ಣವೂ ಅತಿಶೀತವೂ ವಿಪರೀತವಾಗಿವೆ ಬತ್ತವೂ ಚಹವೂ ಅಲ್ಲಿನ ಮುಖ್ಯ ವ್ಯವಸಾಯಗಳು ಆಹಾರ ಪದಾರ್ಥಗಳಲ್ಲಿ ಅಕ್ಕಿಯೂ ಮೀನೂ, ಪಾನಕಗಳಲ್ಲಿ ಚಹಾವೂ ವಿಶೇಷ ಪ್ರಾಧಾನ್ಯವನ್ನು ಹೊಂದಿವೆ ಜಪಾನ್ಯರ ಮನೆಗಳು ವಿಶೇಷವಾಗಿ ಮರದಿಂದಲೇ ಕಟ್ಟಲ್ಪಟ್ಟವುಗಳಾಗಿರುತ್ತವೆ ಅವರು ಕೋಣೆಗಳನ್ನು ಗೋಡೆಗಳಿಂದ ಮಾಡಿಕೊಳ್ಳದೆ ಬೇಕಾದಾಗ ಚಿಕ್ಕದಾಗಿಯೂ ದೊಡ್ಡದಾಗಿಯೂ ಮಾಡಿಕೊಳ್ಳುವುದಕ್ಕೆ ಅನುಕೂಲಿಸುವಂತೆ ಪರದೆಗಳನ್ನು ಮಾಡಿಟ್ಟುಕೊಂಡಿರುತ್ತಾರೆ, ಇವರು ಮಂದವಾಗಿಯೂ ಬಿಳುಪಾಗಿಯೂ ಇರುವ ಚಾಪೆಗಳನ್ನು ನೆಲದ ಮೇಲೆ ಹಾಸಿ ಕುಳಿತುಕೊಳ್ಳುವರು

ಜಪಾನ್ ದೇಶೀಯರು ವಿಶೇಷವಾಗಿ ನೆಲದ ಮೇಲೆಯೇ ಕುಳಿತುಕೊಳ್ಳುತ್ತಾರೆ. ಅವರು ಹೊರಗಿನಿಂದ ಬಂದಾಗ ತಮ್ಮ ಜೋಡುಗಳನ್ನು ಬಾಗಿಲಲ್ಲೇ ಕಳಚಿಟ್ಟು ಒಳಕ್ಕೆ ಪ್ರವೇಶ ಮಾಡುವರು. ಅವರಿಗೆ ಮೊದಲು ಒಂದು ವಿಧವಾದ ಪಾಲಕಿಗಳೇ ಪ್ರಯಾಣಕ್ಕೆ ಉಪಯುಕ್ತಗಳಾಗಿದ್ದುವು. ಆ ಮೇಲೆ ಅಮೇರಿಕದವನೊಬ್ಬನು ಆ ದೇಶಕ್ಕೆ ಹೋಗಿ ಒಂದು ಕುರ್ಚಿಗೆ ಎರಡು ಚಕ್ರಗಳನ್ನು ಹಾಕಿ, ಅದನ್ನು ಗಾಡಿಯಂತೆ ಉಪಯೋಗಿಸಿದನು ಇದಾದ ಮೇಲೆ ಆ ದೇಶದಲ್ಲಿ ಈ ವಿಧವಾದ ಗಾಡಿಗಳೇ ವಿಶೇಷವಾಗಿ ಉಪಯೋಗಕ್ಕೆ ಬಂದವು ಇಂಥ ಕುರ್ಚಿಯ ಎರಡು ಕೈಗಳ ನಡುವೆ ಒಬ್ಬ ಮನುಷ್ಯನು ನಿಂತು ಎಳೆದುಕೊಂಡು ಹೋಗುವುದರಿಂದ ಅದಕ್ಕೆ ಮನುಷ್ಯತ್ರಾಣ ಗಾಡಿ ಎಂದು ಕರೆಯುವುದಕ್ಕೆ ಅನುಸಾರವಾಗಿ ಜಿನ್‌ರಿಕ್‌ಷಾ ಎಂಬ ಹೆಸರು ಅದಕ್ಕೆ ರೂಢಿಯಾಯಿತು. ನಮ್ಮ ದೇಶೀಯರು ಅಂಥ ಗಾಡಿಯನ್ನು ನೋಡಿದಲ್ಲಿ ಅದು ಕೈ ಬಂಡಿ ಎಂದು ಹೇಳುವರು

ಈಚೆಗೆ ಜಪಾನ್‌ದೇಶವು ವಿಶೇಷವಾದ ಬದಲಾವಣೆಗಳನ್ನು ಹೊಂದುತ್ತಾ ಬಂದು, ತತ್ಕಾಲದಲ್ಲಿ ಅತ್ಯಧಿಕವಾದ ನಾಗರೀಕತೆಗೆ ಮುಖ್ಯಸ್ಥಾನವೆಂಬ ಯಶಸ್ಸನ್ನು ಪಡೆಯಿತು. ಕ್ರಿಸ್ತಶಕೆಗೆ ಪೂರ್ವದಲ್ಲಿ ಮಿಕಾಡೋ ಎಂಬ ಚಕ್ರವರ್ತಿಯು ತಾನು ಸೂರ್ಯವಂಶೀಯನೂ ಪೂಜ್ಯನೂ ಎನ್ನಿಸಿಕೊಂಡು, ರಾಜ್ಯಭಾರ ಮಾಡುತ್ತಿದ್ದನು ಮಿಕಾಡೋ ಎಂದರೆ ಮಾನ್ಯನೆಂದರ್ಥವು ಕ್ರಿ ಶ ೧೧೯೦ರಲ್ಲಿ ಸೇನಾನಿ ಎಂಬ ಅರ್ಥವುಳ್ಳ ಷೋಗನ್ ಎಂಬ ಅಧಿಕಾರಿಯು ರಾಜ್ಯಾಧಿಕಾರವನ್ನು ಅಪಹರಿಸಿಕೊಂಡನು ಮಿಕಾಡೊ ಇನ್ನೂ ಚಕ್ರವರ್ತಿಯಾಗಿದ್ದರೂ ಷೋಗನನು ಅವನನ್ನು ೧೮೬೦ರ ವರೆಗೂ ಕಯೋತೋ ಪಟ್ಟಣದ ಅರಮನೆಯಲ್ಲಿ ಮುಚ್ಚಿಟ್ಟಿದ್ದನು. ಡಾಯಿಮಿಯೋಸ್ ಎಂಬುವರು ಆ ದೇಶದಲ್ಲಿ ಕುಲೀನರು. ಇವರಲ್ಲಿ ಕೆಲವರು ಸಾಮ್ರಾಜ್ಯವನ್ನು ತಮ್ಮಲ್ಲಿ ಹಂಚಿಕೊಂಡು, ದೊಡ್ಡ ದೊಡ್ಡ ಸೈನ್ಯಗಳನ್ನಿಟ್ಟುಕೊಂಡು ರಾಜ್ಯದ ಆಡಳಿತಗಳನ್ನು ನಡೆಸುತ್ತಿದ್ದರು.

ಜಪಾನ್ ದೇಶೀಯರು ಪರರಿಂದ ತಮಗೆ ಅಪಮಾನ ಸಂಭವಿಸಿದ ಕಾಲದಲ್ಲಿ ಆತ್ಮಹತ್ಯಮಾಡಿಕೊಳ್ಳುವುದು ಸೌಭಾಗ್ಯಕರ ಮರಣವೆಂದು ನಂಬುತ್ತಿದ್ದರು ಈ ಕಾರಣದಿಂದ ಜಪಾನೀಯರ ಬಳಿಯಲ್ಲಿ ಸಾಧಾರಣವಾಗಿ ಚಿಕ್ಕದೊಂದು ದೊಡ್ಡದೊಂದು ಸೇರಿ ಎರಡು ಕತ್ತಿಗಳಿರುತ್ತಿದ್ದುವು. ಇವುಗಳಲ್ಲಿ ದೊಡ್ಡದು ಯುದ್ಧಪ್ರಸ್ತಕಾಲದಲ್ಲೂ ಚಿಕ್ಕದು ಆತ್ಮಸಂಹರಣಕ್ಕೂ ಉಪಯುಕ್ತವಾಗಿರುವವು.

ಜಪಾನಿನವರು ಇನ್ನೂರು ವರ್ಷಗಳ ವರೆಗೂ ತಮ್ಮ ದೇಶದೊಳಕ್ಕೆ ಡಚ್ಚರು ವಿನಾ ಇತರರ್‍ಯಾರನ್ನೂ ಬರಗೊಡಿಸುತ್ತಿರಲಿಲ್ಲ ಡಚ್ಚರೂ ಕೂಡ ವ್ಯಾಪಾರಾರ್ಥವಾಗಿ ಸಂವತ್ಸರಕ್ಕೆ ಎರಡು ಹಡಗುಗಳನ್ನು ಮಾತ್ರ ತೆಗೆದುಕೊಂಡು ಬರಬಹುದಾಗಿತ್ತು. ೧೮೫೪ ರಲ್ಲಿ ಇವರು ಅಮೇರಿಕದವರೊಡನೆ ಕರಾರುಮಾಡಿಕೊಂಡು, ಪರರಾಜ್ಯದವರ ವ್ಯಾಪಾರದ ಅನುಕೂಲ್ಯಕ್ಕಾಗಿ ಎರಡು ಬಂದರುಗಳನ್ನು ತೆರೆದರು ಆ ಲಾಗಾಯತು ಆ ದೇಶದಲ್ಲಿ ಇಂಗ್ಲೆಂಡ್, ಫ್ರಾನ್ಸ್ ಮೊದಲಾದ ದೇಶದವರು ವ್ಯಾಪಾರಮಾಡುವುದಕ್ಕೂ ವಾಸಮಾಡುವುದಕ್ಕೂ ಅಪ್ಪಣೆಯಾಯಿತು.

೧೮೬೮ರಲ್ಲಿ ಷೋಗುನನು ಸಿಂಹಾಸನಭ್ರಷ್ಟನಾದಾರಭ್ಯ ಏಳು ಶತಮಾನಗಳ ವರೆಗೂ ಕೈತಪ್ಪಿಹೋಗಿದ್ದ ಆಧಿಪತ್ಯವು ಪುನಃ ಮಿಕಾಡೊ ಚಕ್ರವರ್ತಿಯ ಕೈಗೆ ಸೇರಿತು. ಎರಡು ಸಂವತ್ಸರಗಳನಂತರ ಡಾಯಿಮಿಯೋಸ್ ಎಂಬ ಕುಲೀನರು ತಮಗಿದ್ದ ಅಧಿಕಾರಗಳನ್ನೂ ಚಕ್ರವರ್ತಿಗೇ ವಹಿಸಿಬಿಟ್ಟರು

ಮಿಕಾಡೋ ಚಕ್ರವರ್ತಿಯು ಪೂರ್ವದ ರಾಜಧಾನಿ ಎಂಬರ್ಥವುಳ್ಳ ಟೋಕಿಯೋ ನಗರದಲ್ಲಿ ಬಿಡಾರಮಾಡಿಕೊಂಡು, ವಿಲಾಯತಿಯವರ ಉಡುಗೆ ತೊಡಿಗೆಗಳನ್ನು ಧರಿಸಿ, ಅಷ್ಟು ಅಲಂಕಾರಗಳೇನೂ ಇಲ್ಲದೆ ಬಂಡಿಯ ಮೇಲೆ ಕುಳಿತು ಸ್ವಾರಿ ಮಾಡಲಾರಂಭಿಸಿದನು.

ಜಪಾನ್ಯರು ಮೊದಲು ತಮ್ಮ ದೇಶೀಯರಲ್ಲನೇಕರನ್ನು ವಿದ್ಯಾರ್ಜನೆಗಾಗಿ ಅಮೇರಿಕ, ಯೂರೋಪ್ ಖಂಡಗಳಿಗೆ ಕಳುಹಿಸಿಕೊಟ್ಟರು. ಪಾಶ್ಚಿಮಾತ್ಯರ ನಾಗರೀಕತೆ, ಅವರ ವಿದ್ಯೆ, ಅವರ ಕಸುಬುಗಳು, ಈ ಮೊದಲಾದವುಗಳನ್ನು ಜಪಾನ್ಯರಿಗೆ ಕಲಿಸಿ ಸ್ವದೇಶವನ್ನು ಉನ್ನತಸ್ಥಿತಿಗೆ ತರಬೇಕೆಂಬುದೇ ಇದಕ್ಕೆ ಮುಖ್ಯ ಕಾರಣವು. ನಾಗರೀಕತೆಯ ಅಭಿವೃದ್ಧಿಯು ಬಲು ಬೇಗನೆ ಪ್ರಬಲಸ್ಥಿತಿಗೆ ಬರುವಂತೆ ಪ್ರಯತ್ನಿಸಿದರು ಈಗ ಜಪಾನ್‌ರಾಜ್ಯದಲ್ಲಿ ಸರ್ವಕಲಾಶಾಲೆ, ವೈದ್ಯವಿದ್ಯಾಲಯ, ಇಂಜನಿಯರಿಂಗ್ ಕಾಲೇಜ್ ಇತ್ಯಾದಿ ಶಿಕ್ಷಾಲಯಗಳು ಪ್ರಸಿದ್ಧವಾಗಿ ಸ್ಥಾಪಿಸಲ್ಪಟ್ಟು ವೃದ್ಧಿಹೊಂದುತ್ತಿವೆ ದೇಶದಲ್ಲೆಲ್ಲಾ ವಿದ್ಯಾಶಾಲೆಗಳೂ, ರಾಜಮಾರ್ಗಗಳೂ, ಲೋಹಮಾರ್ಗಗಳೂ, ತಂತೀ ಟಪ್ಪಾಲುಗಳೂ, ಮಣಿಆರ್ಡರ್ ಕ್ರಮಗಳೂ, ಸೇವಿಂಗ್ಸ್ ಬ್ಯಾಂಕುಗಳೂ, ಏರ್ಪಟ್ಟು ಬಹು ಉಪಯುಕ್ತಗಳಾಗಿರುವವು ಅಂದರೆ, ಈ ಏರ್ಪಾಡುಗಳು ಇಂಡಿಯಾದೇಶದಲ್ಲಿರುವುದಕ್ಕಿಂತಲೂ ಪ್ರಥಮದಲ್ಲೇ ಆ ರಾಜ್ಯದಲ್ಲಿ ಪ್ರಚಾರಕ್ಕೆ ಬಂದವೆಂಬುದೇ ಅಲ್ಲವೆ. ಪ್ರಾರಂಭಿಸಿದ ಅಲ್ಪಕಾಲದಲ್ಲೇ ಅನನ್ಯ ಸಾಧಾರಣವಾದ ಪ್ರತಿಫಲವನ್ನು ಹೊಂದುತ್ತಾ ಬಂದವೆ ಎಂಬುದು ಇತರ ದೇಶಗಳಲ್ಲಿರುವ ಜನಾಂಗದ ಪಾರದರ್ಶಕ ಶಕ್ತಿಯ ಪ್ರೌಢಿಮೆಯನ್ನು ಸೂಚಿಸುತ್ತದೆ

ಜಪಾನ್ಯರ ಪ್ರಥಮ ವರ್ತಮಾನಪತ್ರಿಕೆಯು ೧೮೭೦ ರಲ್ಲಿ ಮುದ್ರಿತವಾಗಿ ಪ್ರಕಟವಾಯಿತು ಈ ವಿಧವಾದ ವರ್ತಮಾನಪತ್ರಿಕೆಗಳು ಸುಮಾರು ಹತ್ತು ವರ್ಷಗಳಲ್ಲಿ ೨೦೦ರ ವರೆಗೆ ವೃದ್ಧಿಯಾದವು. ೧೮೭೮ರಲ್ಲಿ ಕಬ್ಬಿಣದ ಹಾಳೆಗಳನ್ನು ಜತ್ತಿಸಿ ಒಂದು ನಾವೆಯನ್ನು ಕಟ್ಟಿ ಒಬ್ಬ ಜಪಾನಿ ಕಾಂಸೊಲನವರಿಗೆ ಕೊಟ್ಟು ಇಂಗ್ಲಾಂಡಿಗೆ ಸಾಗರ ಪ್ರಯಾಣಮಾಡಿ ಕಳುಹಿಸಿಕೊಟ್ಟರು. ಮುಂದೆ ಮುಂದೆ ಪಾಶ್ಚಿಮಾತ್ಯರ ಕಾಲಗಣನೆಯೂ ಇವರಲ್ಲಿ ರೂಢಿಗೆ ಬಂದಿತು ಮತ್ತು ಭಾನುವಾರವನ್ನು ರಜಾ ದಿನವಾಗಿ ಏರ್ಪಡಿಸಿಕೊಂಡರು ಈ ರೀತಿ ನಡೆದ ತೀವ್ರವಾದ ಬದಲಾವಣೆಗಳನ್ನು ನೋಡುವುದರಿಂದ ನಾಗರೀಕತೆಯಲ್ಲಿ ಇಷ್ಟು ಶೀಘ್ರವಾಗಿ ಪ್ರಾಬಲ್ಯಕ್ಕೆ ಬಂದ ಜನಾಂಗವು ಪ್ರಪಂಚದಲ್ಲೇ ಇಲ್ಲವೆಂದು ಹೇಳಬಹುದಾಗಿದೆ

ಶಿಂತೋ ಎಂಬ ಮತವೇ ಜಪಾನ್ಯರಲ್ಲಿ ಪುರಾತನವಾದ ಮತವು. ವೀರರನ್ನು ವಿಶೇಷವಾಗಿ ಪೂಜಿಸುವುದೇ ಈ ಮತದ ಮುಖ್ಯ ಗುರಿಯೂ ಅಭಿಪ್ರಾಯವೂ ಆಗಿದೆ ಬೌದ್ಧಮತವಾದರೋ ಚೀನಾದಿಂದ ಜಪಾನಿಗೆ ಬಂದುದಾಗಿದೆಯಷ್ಟೆ ೧೫೪೯ ರಲ್ಲಿ ರೋಮನ್ ಕ್ಯಾಥಲಿಕ್ ಮಿಷನರಿಗಳು ಈ ದೇಶಕ್ಕೆ ಪ್ರವೇಶಿಸಿ, ಅನೇಕರನ್ನು ತಮ್ಮ ಮತಾವಲಂಬಿಗಳನ್ನಾಗಿ ಮಾಡಿದರು ಅನಂತರ ಷೋಗುನರು ಕ್ರೈಸ್ತರನ್ನು ಹಿಂಸಿಸುವುದಕ್ಕೆ ತೊಡಗಿದುದಲ್ಲದೆ ಅವರನ್ನು ನಿರ್ನಾಮ ಮಾಡುವುದಕ್ಕೂ ಆರಂಭಿಸಿದರು ಇತ್ಯಾದಿ ವಿಘ್ನ ಪರಂಪರೆಗಳಿದ್ದರೂ ಕ್ರೈಸ್ತಮತವು ಆ ರಾಜ್ಯದಲ್ಲಿ ಪ್ರಬಲಿಸುತ್ತಾ ಬರುವುದಾಯಿತು.

"ನಾನು ನಿಮ್ಮ ಲೋಹಮಾರ್ಗ, ತಂತಿ ಟಪ್ಪಾಲು, ಹೊಗೆ ದಡಗು, ಮತ್ತು ನಿಮ್ಮ ಪರಮಾಶ್ಚರ್ಯಯುಕ್ತವಾದ ಯಂತ್ರಸಾಧನಗಳಿಗಾಗಿ ಮೆಚ್ಚುತ್ತೇನೆ ನಮ್ಮ ಸೀಮೆಯ ವಿದ್ಯಾಶಾಲೆಗಳಲ್ಲಿ ಬಾಲಕರಿಗೆ ನಿಮ್ಮ ವಿದ್ಯೆಗಳನ್ನು ಅಭ್ಯಾಸಮಾಡಿಸಲು ನನಗೆ ಬಹು ಸಂತೋಷ ನಿಮ್ಮ ರಾಜ್ಯದ ಕಾಯಿದೇ ಕಾನೂನುಗಳು ಸಹ ನಮ್ಮ ದೇಶದಲ್ಲಿ ಎಂದಿಗೆ ಪ್ರಚಾರಕ್ಕೆ ಬರುವವೆಂದು ಬಹು ಕಾಂಕ್ಷೆಯಿಂದ ದಿನಗಳನ್ನು ಎದುರುನೋಡುತ್ತಾ ಇರುತ್ತೇನೆ ಇವೆಲ್ಲಕ್ಕಿಂತಲೂ ಜಪಾನ್ಯರಿಗೆ ಅತ್ಯಗತ್ಯವಾದುದೊಂದುಂಟು. ಜನರ ಹೃದಯಗಳನ್ನು ಮಾರ್ಪಡಿಸುವ ಶಕ್ತಿಯೇ ಅದು ಇಂಥ ಅಮೂಲ್ಯವಾದ ಶಕ್ತಿಯು ಕ್ರೈಸ್ತಮತ ಒಂದರಲ್ಲಿ ಮಾತ್ರ ಇದೆ ಎಂದು ನಾನು ನಂಬುತ್ತೇನೆ" ಎಂಬುದಾಗಿ ಒಬ್ಬ ವೃದ್ಧನಾದ ಜಪಾನ್ಯನು ಒಂದು ಸಾರಿ ಒಬ್ಬ ವಿಲಾಯತಿಯ ಸರದಾರನ ಬಳಿಯಲ್ಲಿ ಹೇಳಿರುವನು.

ಪರಿಮಳ ನಶ್ಯದಪುಡಿ.

22-2

ಪರಿಮಳ ನಶ್ಯದಪುಡಿ ಡಬ್ಬಿ ೧ ಕ್ಕೆ . . . . . . 0—9—0
ಟಾಂಗಿ ಖರ್ಚು . . . . 0—3—0
ಸಾದಾ ನಶ್ಯದಪುಡಿ ಡಬ್ಬಿ ೧ಕ್ಕೆ . . . . . . 0—6—0
ಟಾಂಗಿ ಖರ್ಚು . . . . 0—3—0

ಈ ಪುಡಿಯನ್ನು ಮೇಲಾದ ಹೊಗೆಸೊಪ್ಪಿನಿಂದ ಸುವಾಸನೆಯುಳ್ಳದ್ದಾಗಿ ತಯಾರು ಮಾಡಲ್ಪಟ್ಟಿರುತ್ತೆ. ಇದರ ಸುವಾಸನೆ ಒಂದು ಸೇರು ಸಾಧಾರಣ ಪುಡಿಯಲ್ಲಿ ಸ್ವಲ್ಪವನ್ನು ಹಾಕಿ ಕಲಸಿದರೆ ಪುಡಿಯಲ್ಲಾ ಗಮಗಮಿಸುತ್ತೆ. ಉಪಯೋಗಿಸುವವರಿಗೆ ಸುವಾಸನೆಯನ್ನೂ ಆನಂದವನ್ನೂ ಉಂಟು ಮಾಡುತ್ತೆ.

ತಲೆನೋವು, ಪೀನಸ, ಜಲದೋಷ, ಶಿರೋವ್ಯಾಧಿ ಇವುಗಳನ್ನು ತಕ್ಷಣವೆ ಪರಿಹರಿಸುತ್ತೆ. ಮಾದರಿಗೆ ೧ ಡಬ್ಬಿಯನ್ನು ತರಿಸಿ ಪರೀಕ್ಷಿಸಿರಿ

☞ ಪ್ರತಿ ೧ ಡಬ್ಬಿಯಲ್ಲಿ ೯ ತೋಲ ನಶ್ಯದಪುಡಿ ಇರುತ್ತೆ.

ಮಾನೇಜರ್, ಧರ್ಮ ವೈದ್ಯಶಾಲಾ,

60 ಬ್ರಾಡ್ವೇ ಬಜಾರು ರೋಡ್, ಸಾಹುಕಾರ್‌ಪೇಟೆ, ಮದರಾಸು.

ಇದನ್ನು ನೋಡಿದರೆ ನೀವು ಬಹು ಆಶ್ಚರ್ಯ ಪಡುವಿರಿ!!!

23-2

ನಮ್ಮ ಪ್ರಸಿದ್ಧವಾದ ಪುಸ್ತಕಭಂಡಾರದಲ್ಲಿ ಅನೇಕ ಸಹಸ್ರ ರೂಪಾಯಿ ಬಾಳುವ ಕನ್ನಡ ಗ್ರಂಥಗಳೂ, ಪಾಠಪುಸ್ತಕಗಳೂ, ಪೇನಾ, ಪೆನ್ಸಿಲು, ನೋಟ್‌ಬುಕ್, ಅನೇಕ ವಿಧವಾದ ಕಾಗದದ ಚೀಲಗಳು, ವೃತ್ತಾಂತ ಪತ್ರಿಕೆ, ಮಹಿಳಾಸಖಿ, ಕನ್ನಡ ಗ್ರಂಥ ಮಿತ್ರ, ಪ್ರಾಗ್ರೆಸ್, ಹಾರ್ವೆಸ್ಟ್‌ಫೀಲ್ಡ್ ಮುಂತಾದ ಪ್ರಸಿದ್ಧವಾದ ವರ್ತಮಾನಪತ್ರಿಕೆಗಳು ಇಲ್ಲಿ ಅನೇಕ ಸಾವಿರಗಟ್ಟಲೆಯಾಗಿ ಮಾರಾಟವಾಗುತ್ತಿವೆ ಈ ಡಿಪೊ ಕಟ್ಟಡವು ರಾಜಧಾನಿಯಲ್ಲಿ ಬಹು ಪ್ರಸಿದ್ಧವಾದ ಸ್ಥಳದಲ್ಲಿರುವ ಮೈಸೂರು ದೇಶದಲ್ಲೆಲ್ಲಾ ಹೆಸರುಗೊಂಡಿದೆ. ಈ ಕೆಳಗೆ ನಮೂದಿಸಿರುವ ಪುಸ್ತಕಗಳನ್ನು ಸ್ವಲ್ಪ ನೋಡಿ —

ಕಥಾಸಂಗ್ರಹ	೧—೩ ಭಾಗಗಳು ಕ್ರಯ	೧—೦—೦
	ವಿ. ಪಿ. ಪಿ ಮೂಲಕ	೧—೩—೦
ಅನುಭವಸಾರ	ಕ್ರಯ	೦—೨—೦
ಗ್ರೀಕರ ಚರಿತ್ರೆ	,,	೦—೨—೦
ರೋಮನರ ಚರಿತ್ರೆ	,,	೦—೨—೦

ಕನ್ನಡ—ಇಂಗ್ಲಿಷ್—ಹಿಂದೂಸ್ತಾನಿ ಭಾಷಾಮಂಜರಿ.

ಈ ಪುಸ್ತಕದಿಂದ ಇಂಗ್ಲಿಷ್ ಮತ್ತು ಹಿಂದುಸ್ತಾನಿ ಭಾಷೆಗಳನ್ನು ಬಹು ಸುಲಭವಾಗಿ ಕಲಿಯಬಹುದು. ಇದರ ಕ್ರಯ ಎಂಟೇ ಆಣೆ.

ವಿ ಪಿ ಪಿ ಮೂಲಕ ೦—೧೦—೦

ಶ್ರೀಚಾಮರಾಜೇಂದ್ರ ಒಡೆಯರವರ ಚರಿತ್ರೆ ಉತ್ಕೃಷ್ಟವಾದ ಪುಸ್ತಕ ಅನೇಕ ಪಟ್ಟಗಳು ಇವೆ. ಇದನ್ನು ಪೂರಿತ ರಾಜಧರ್ಮಪ್ರವೀಣ ಎಂ॥ ರಾ॥ ರಂಗಾಚಾರ್ಲುರವರು ಒಂದು ಉತ್ಕೃಷ್ಟವಾದ ಅನುವಾದವನ್ನು ಬರೆದಿದಾರೆ ಕ್ರಯ ೦—೮—೦

ವಿ ಪಿ ಪಿ. ಮೂಲಕ ೦—೧೧—೦

ಎಡ್ವರ್ಡ್ ಸಾರ್ವಭೌಮರ ಜೀವಚರಿತ್ರೆ	೦—೩—೦
ಕ್ರಿಮಿವರ್ಗವರ್ಣನೆ	೦—೧—೦

ಅರೇಬಿಯನ್ ನೈಟ್ಸ್ ಅಥವಾ ಯವನಯಾಮಿನೀ ವಿನೋದ ಕಥೆಗಳು "ಈ ಪುಸ್ತಕವು ಲೋಕಪ್ರಸಿದ್ಧವಾದುದೆಂದು ಎಲ್ಲರೂ ಒಪ್ಪಿಕೊಳ್ಳುತ್ತಾರೆ. ಸಾವಿರದ ಎಪ್ಪತ್ತು ಪುಟಗಳುಳ್ಳದ್ದು. ಭಾರಿ ಪುಸ್ತಕ ಬಾಲೆಯರು ಬಹು ಸರಳವಾಗಿದೆ ಪುಸ್ತಕವನ್ನು ಒಂದಾವರ್ತಿ ಓದಿದ ಮೇಲೆ ಅದನ್ನು ಪುನಃ ಪುನಃ ಓದುವಂತೆ ಆದರ ಮನಸ್ಸನ್ನು ಆಕರ್ಷಿಸುವದು, ಇದರ ಕ್ರಯ ಎರಡೇ ರೂಪಾಯಿ, ವಿ ಪಿ ಪಿ. ಮೂಲಕ ೨—೩—೦. ಇತ್ತು ಆಥವಾ ಹದಿನೈದು ವರ್ಷಗಳ ಹಿಂದೆ ಇದರ ಕ್ರಯ ಎಂಟು ರೂಪಾಯಿ ಎಂದು ಅನೇಕರಿಗೆ ಗೊತ್ತು. ಇದನ್ನು ಬಡವರೂ, ಐಶ್ವರ್ಯವಂತರೂ ಓದುವಂತೆ ಪುನಃ ಛಾಪಿಸಿ ಇಷ್ಟು ದೊಡ್ಡ ಪುಸ್ತಕವನ್ನು ಇಷ್ಟು ಸುಲಭ ಕ್ರಯಕ್ಕೆ ಮಾರುತ್ತೇವೆ. ಚಿಲ್ಲರೆಯ ಪುಸ್ತಕಗಳನ್ನು ಒಟ್ಟಿಗೆ ಕರಿಸಿಕೊಂಡರೆ, ಪುಸ್ತಕಕ್ಕೆ ಎರಡು ಆಣೆಯಂತೆ ಕಮೀಷನ್ ಕೊಡುತ್ತೇವೆ ಜಾಗ್ರತೆ ನೋಡಿ.

ಪಕ್ಷಿಗಳ ಚರಿತ್ರೆ	೦—೧—೦
ಪ್ರಾಚೀನ ಜೀವರಾಶಿಗಳ ವರ್ಣನೆ	೦—೧—೦
ಹೆಣ್ಣುಮಕ್ಕಳಿಗೆ ಹೇಳುವ ಕಥೆಗಳು	೦—೧—೦

ಬಾಲಿಕಾಗೀತ ಮುಕ್ತಾಕಲಾಪ, ಗೀತಮಂದಾರ ೦—೨—೦, ಕಲ್ಯಾಣಗೀತಾವಳಿ ೦—೫—೦, ಈ ಸಾಧಿನ ಪುಸ್ತಕಗಳು ನಮ್ಮಲ್ಲಿ ಯಾವಾಗಲೂ ದೊರೆಯುತ್ತವೆ

ಮುಖ್ಯವಾಗಿ, ಸ್ನೇಹಿತರೇ, ತಾವು ರಾಜಧಾನಿಗೆ ಬರುವಾಗಲೆಲ್ಲಾ ನಮ್ಮ ಪುಸ್ತಕಾಲಯವನ್ನು ನೋಡಿಯೇ ಹೋಗಬೇಕೆಂದು ಕೇಳಿಕೊಳ್ಳುತ್ತೇವೆ. ನಿಮಗೆ ಪುಸ್ತಕವಲ್ಲದೆ ಬೇರೆ ಯಾವುದಾದರೂ ಪದಾರ್ಥಗಳಾಗಲೀ ಅಥವಾ ಸಂಗತಿಗಳಾಗಲೀ ಅಪೇಕ್ಷಿಸುವ ಸಂದರ್ಭದಲ್ಲಿ ನೀವು ನಮಗೆ ಒಂದು ಕಾರ್ಡು ಬರೆದರೆ ತಕ್ಷಣವೇ ಜವಾಬು ಕೊಡುವದಲ್ಲ, ಪ್ರಯತ್ನ ಮಾಡುತ್ತೇವೆ.

ವಿಳಾಸ :— ಮ್ಯಾನೇಜರ್,

ಸಿ. ಎಲ್ ಎಸ್. ಬುಕ್ ಡಿಪೋ,

ಮೈಸೂರು.

ರಬ್ಬರ್ ಸ್ಟಾಂಪುಗಳು.

23-2

ನಮ್ಮ ಕಂಪನಿಯಲ್ಲಿ ತಯಾರಾದಲ್ಪಡುವ ಇಂಗ್ಲಿಷ್ ಮೇಕ್ ರಬ್ಬರ್ ಸ್ಟಾಂಪುಗಳಿಗೆ ಬರುವ ಜನವರಿ ಆಖೈರುಗಳಾಗಿ ದರಖಾಸ್ತು



ಕಳುಹಿಸತಕ್ಕವರಿಗೆ ಅರ್ಧ ಕ್ರಯಕ್ಕೆ ತಯಾರಿಸಿ ಕಳುಹಿಸುತ್ತೇವೆ ಬಾದಾಮಿ, ರವುಂಡು, ಚಚ್ಛೌಕ, ಯಾವ ಆಕಾರವಾದರೂ ಅದರಲ್ಲಿ ಬೇಕಾದ ಅಕ್ಷರಗಳನ್ನು ಹಾಕಿ, ಸುಂದರವಾದ ರಬ್ಬರ್ ಸ್ಟಾಂಪು ೧, ಇಂಕಿ ಸೀಸಾ ೧, ರಬ್ಬರ್ ಸ್ಟಾಂಪು ಇಡಿಸುವ ಪೆಟ್ಟಿಗೆ ೧, ಬ್ರಷ್ ೧, ಪ್ಯಾಡ್ ೧, ಇವುಗಳ ಸಹಿತ ಕ್ರಯ ರೂ ೧—೮—೦, ಪೋಸ್ಟೇಜು ೩ ಆಣೆ.

ವಿಳಾಸ:—ಮ್ಯಾನೇಜರ್, ರಬ್ಬರ್ ಸ್ಟಾಂಪ್ ಮ್ಯಾನುಫ್ಯಾಕ್ಚರಿಂಗ್ ಕಂಪನಿ, ಪಾರ್ಕ್ ಟೌನ್, ಮದ್ರಾಸ್.

ಅಗ್ಗ! ಅಗ್ಗ!! 9-3 ಬಹು ಅಗ್ಗ!!!

ಮೇಲಾದ ಜರ್ಮನ್ ಸಿಲ್ವರ್ ಪುರುಷರ ಬ್ರೇಸ್‌ಲೆಟ್ ಗೋಲಸು. ಇದು ಬೆಳ್ಳಿಗೆ ಸಮಾನವಾದ ಜರ್ಮನ್ ಸಿಲ್ವರ್ ಬೆಳ್ಳಿಯಿಂದ ತಯಾರಿಸಲ್ಪಟ್ಟಿರುತ್ತೆ. ಸುಲಭವಾಗಿ ಹಾಕಿ ತೆಗೆಯುವಂತೆ ಕೀಲಿನಿಂದಲೂ



ಮಜಬೂತಾದ ತಿರುಪಿನಿಂದ ಈ ಬೆಳ್ಳಿ ಗೋಲಸಿಗೆ ಸ್ವಿಸ್ ವಾಚು ಇದರಲ್ಲಿ ಇಂದೆ ತಯಾರಿಸಲ್ಪಟ್ಟಿರುತ್ತೆ ಎಂದಿಗೂ ಜಗ್ಗಾ ಕೆಡಲಾರದು ಇದನ್ನು ನೋಡಿದವರು ಬಿಡದು ಒಂದು ಜೋಡಿಯನ್ನು ತರಿಸಿ ಪರೀಕ್ಷಿಸಿರಿ ಬಿಡ ನರಿಗೂ ಬಾಲ್ಯಪುರುಷರಿಗೂ ಉಪಯೋಗಿಸಲ್ಪಡುವ ಸುಲಭಕ್ರಯ

ಗೋಲಸುಗಳಿಗೆ ಜೊತೆ ೧ಕ್ಕೆ ರೂ. ೨—೦—೦ ಟೈಂಪೀಸಿಗೆ ರೂ ೧—೨—೦ ಮತ್ತೊಂದಕ್ಕೆ ರೂ ೦—೮—೦ ಆಣೆ

ವಿಳಾಸ—ಮ್ಯಾನೇಜರ್, ಜರ್ಮನ್ ಸಿಲ್ವರ್ ಜ್ಯುಯಲ್ ಡಿಪೋ, ಸಾಹುಕಾರ್ ಪೇಟೆ ಮದ್ರಾಸು

ಇಂಡಿಯಾ ವ್ಯವಸಾಯ ಮತ್ತು ಸಹಾಯಕ ಆಫೀಸು.

11-18

[೧೯೦೨ರಲ್ಲಿ ಸ್ಥಾಪಿತವಾದದ್ದು]

ಈ ಆಫೀಸಿನ ಉದ್ದೇಶವೇನೆಂದರೆ—ಯಾವ ಜಾತಿಯವರೇ ಆಗಲಿ ಮತದವರೇ ಆಗಲಿ ಈ ಆಫೀಸಿನ ಚಂದಾದಾರನಾಗಿ ಅವರ ಭರವಸಪತ್ರವನ್ನು ಹೊಂದಿದ್ದರೆ ಅವರ ಮರಣಾನಂತರ ಅವರ ಕುಟುಂಬದವರಿಗೆ ಸಹಾಯಿಸುತ್ತ ಕೊಡಲ್ಪಡುವದು.

ಈ ಆಫೀಸಿನ (A) ತರಗತಿಗೆ ಸೇರಿದವರು ಪಡೆಯಬೇಕೆಂದಿರುವ ಪ್ರತಿ ೧೦೦೦ ರೂಪಾಯಿಗಳ ವೊಬಲಗಿಗಾಗಿ ಸಾವಿರದೊಳಗೆ ಒಂದೊಂದು ರೂಪಾಯಿಯ ಪ್ರಕಾರ ಒಟ್ಟು ರೂ ೧೬ ನ್ನು ಮಾತ್ರವೇ ಸಲ್ಲಿಸಬೇಕಾಗುವದು.

ಆಫೀಸಿನವರು ಚಂದಾದಾರರಿಂದ ವಸೂಲಾದ ವೊಬಲಗನ್ನು ಬ್ಯಾಂಕಿನಲ್ಲಿಯಾಗಿ ಬಿಡಿಸಲ್ಪಡುವ ವ್ಯವಸಾಯಕ್ಕೆ ಹಾಕಿ ಅದರಿಂದ ಬಂದ ಲಾಭದಿಂದಲೇ ಚಂದಾದಾರ ಸಹಾಯದ್ರವ್ಯವನ್ನು ಕೊಡಲಾಗುವದು ವ್ಯವಸಾಯ ವಿಸ್ತಾರವಾಗಿ ನಾವು W.I.P. ರೈಲ್ವೆ ಪಕ್ಕದಲ್ಲಿರುವ "ಕೊಲ್ಲಂ ಎಸ್ಟೇಟ್" ಎಂಬ ಸರ್ವೋತ್ಕೃಷ್ಟವಾದ ಭೂಮಿಯನ್ನು ೯೯ ವರ್ಷಕ್ಕೆ ಸ್ವಂತವಾಗಿ ಪಡೆದಿದ್ದೇವೆ ಈ ಭೂಮಿಗೆ ಒಂದು ಹೊಳೆಯಿಂದ ಕಾಲುವೆ ಮಾಡಿ ನೀರನ್ನು ತಂದಿರೋಣದಿಂದ ಫಸಲು ಕಡಮೆಯಾಗುವದೆಂಬ ಭಯವೇ ಇಲ್ಲ.

ಈ ಆಫೀಸಿನಲ್ಲಿ ಭರವಸಪತ್ರವನ್ನು ಪಡೆದಿರುವವರು ಚಂದಾದಾರರಾಗಿ ಮಾತ್ರ ಇದ್ದಾರೆ ಅದಾಯ ನಮ್ಮಗಳಿಗೆ ಭಾಗಿಗಳಾದ ಬೇರು ದಾರರಾಗಿರುವದಿಲ್ಲ ಅವರೂ ಅವರ ನಷ್ಟಕ್ಕೆ ನಮ್ಮ ಭೂಸ್ಥಿತಿಯು ಆಧಾರವಾಗಿರುತ್ತದೆ.

ಚಂದಾ ವೊಬಲಗನ್ನೆಲ್ಲಾ ಪಾವತಿ ಮಾಡಿ ಭರವಸಪತ್ರವನ್ನು ಪಡೆದಿರುವ ಯಾವ ಚಂದಾದಾರನಿಗಾಗಲಿ ಆಫೀಸಿನಿಂದ ಬರತಕ್ಕ ಲಾಭ ಕೆ ತೃಪ್ತಿಕರವಾಗಿ ಕಂಡುಬಾರದಿದ್ದರೆ ತಾನು ಸಲ್ಲಿಸಿರುವ ಚಂದಾನ್ನೂ ಬಲಗನ್ನೆಲ್ಲಾ ವಾಪಸು ಪಡೆಯಬಹುದು.

ಈ ಆಫೀಸಿಗೆ ಸಬ್ ಏಜಂಟುಗಳು ಬೇಕಾಗಿದೆ ವಿವರವಾಗಿ ತಿಳಿಯಬೇಕೆನ್ನುವವರು ಅರ್ಧಾಣೆ ಸ್ಟಾಂಪಿಟ್ಟು ಕೆಳಗಿನ ವಿಳಾಸಕ್ಕೆ ಇಂಗ್ಲಿಷಿನಲ್ಲಿ ಬರೆದುಕೊಳ್ಳತಕ್ಕದ್ದು.

ವಿಳಾಸ:—The Manager,

The India Agricultural and Helping Office,

Vengurla Post, Bombay Presidency.

ಮೈಸೂರು ಸೀಮೆಯಲ್ಲಿ ಪ್ಲೇಗಿನ ಸ್ಥಿತಿ.

5—1—1905 ರಿಂದ 12—1—1905 ರ ವರೆಗೆ

ಸ್ಥಳ.	ಪ್ಲೇಗ್ ತಗಲಿದ್ದು	ಪ್ಲೇಗ್ ಸತ್ತದ್ದು	ಹೋದವಾರ ಈ ವಾರ ಸಂಖ್ಯೆ	[illegible]
ಬೆಂಗಳೂರು ಪಟ್ಟಣ	36	28	23	[illegible]
ಮೈಸೂರು ,,	0	0	36	1
ಬೆಂಗಳೂರು ಡಿಸ್ಟ್ರಿಕ್ಟು	16	12	63	4
ಮೈಸೂರು ,,	5	1	66	4
ಕೋಲಾರ್ ,,	0	1	24	1
ಕೋಲಾರ್ ಚಿನ್ನದ ಗಣಿಗಳು	4	4	17	
ತುಮಕೂರು ಡಿಸ್ಟ್ರಿಕ್ಟು	0	0	36	3
ಹಾಸನ (ಹೊರಗಿನದು)	3	1	6	
ಚಿತ್ರದುರ್ಗ ,,	5	5	13	1
ಕಡೂರ್ ,,	1	1	0	
ಶಿವಮೊಗ್ಗ ,,	22	13	18	4
ಜುಮ್ಲಾ	90	66	275	19

ಶಾಲಿವಾಹನ ಶಕ ವರುಷಂಗಳು ೧೮೨೬ ನೇ ವಿಶ್ವಾವಸುಸಂವತ್ಸರದ ಮಾಘ ಶುದ್ಧ ಪಾಡ್ಯಮಿ ಗುರುವಾರದಿಂದ ಮಾಘ ಶುದ್ಧ ಸಪ್ತಮಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ

೧೯೦೫ ನೇ ಇಸವಿ ಜನವರಿ.

ತಾ	ವಾರ.	ತಿಥಿ	ಘಳಿಗೆ.	ನಕ್ಷತ್ರ.	ಘಳಿಗೆ.	ಶಕ ಧನ ಮಾ
25	ಗುರು	ಪಾಡ್ಯ	37-36	ಶ್ರ	37 2	13
26	ಶುಕ್ರ	ಬಿದಿಗೆ	37-2	ಧ	33-48	14
27	ಶನಿವಾ	ತದಿಗೆ	37-50	ಶ	35-58	15
28	ರವಿವಾ	ಚೌತಿ	39 32	ಪೂಭಾ	39 9	16
29	ಸೋಮ	ಪಂಚಮಿ	42 19	ಉಭಾ	43-33	17
30	ಮಂಗಳ	ಷಷ್ಠಿ	47-2	ರೆ	49 0	18
31	ಬುಧ	ಸಪ್ತಮಿ	52-6	ಅ	55-20	19

[illegible] ವಸಂತ ಪಂಚಮಿ, ರಥಸಪ್ತಮಿ, [illegible]

ಪೇಟೇ ಧಾರಣೆ.

ವಿವರ		ಮೈಸೂರು.	ಬೆಂಗಳೂರು.
ಕಡ್ಡಿ ಅಕ್ಕಿ ಪಲ್ಲಾ ೧ಕ್ಕೆ	ರೂ	೧೨-೮-೦	೧೩-೮-೪
ಕೆಂಪು ಅಕ್ಕಿ ಅವಲ್		೧೨-೦-೦	೧೬-೦-೦
,, ದುಂಡು		೧೧-೮-೦	೧೩-೦-೦
ದಾಡ್ರಿ ಅಕ್ಕಿ		೧೨-೦-೦	೧೨-೮-೦
ಸಣ್ಣಕ್ಕಿ ಅವಲ್		೧೩-೦-೦	೧೯-೦-೦
,, ದುಂಡು		೧೨-೮-೦	೧೬-೦-೦
ತೊಗರಿ ಬೇಳೆ ಪಲ್ಲಾ ೧ಕ್ಕೆ		೯-೬-೦	೯-೧-೦
,, ದುಂಡು		೯-೦-೦	೯-೬-೦
ಸೈನ್ ರಾಗಿ ಪಲ್ಲಾ ೧ಕ್ಕೆ		೩-೬-೦	೩-೦-೦
ಕಾರ್ರಾಗಿ		೬-೧೨-೦	೫-೧೨-೦
ಜೋಳ		೩-೬-೦	೮-೦-೦
ಗಲಸಂದೆ ಪಲ್ಲಾ ೧ಕ್ಕೆ		೯-೦-೦	೯-೦-೦
ಬಿಳೀ ಅವರೆ		೯-೦-೦	೯-೧೨-೦
ಹೆಸರು		೯-೬-೦	೧೦-೬-೦
ಉದ್ದು		೧೦-೦-೦	೧೦-೦-೦
ಕಡಲೆ		೧೨-೦-೦	೧೦-೮-೦
ಎಳ್ಳು ಸೆ. ೧೭೩ ಕ್ಕೆ		೧೯-೮-೦	೧೫-೮-೦
ಮರಳೆ		೩-೬-೦	೩-೮-೦
ಹರಳು ೧೭೩ ಸೇರಿಗೆ		೧೨-೬-೦	೧೨-೮-೦
ಸೀಗೇಕಾಯಿ ಮಣ ೧ಕ್ಕೆ		೫-೦-೦	೩-೧೨-೦
ಮೆಣಸಿನಕಾಯಿ		೩-೮-೦	೩-೮-೦
,, ದುಂಡು		೩-೬-೦	೩-೬-೦
ಬೆಲ್ಲ ದೊಡ್ಡ ಅಚ್ಚು		೬-೮-೦	ಮ ೦-೮-೦
ಬೆಳ್ಳುಳ್ಳಿ ಮಣ ೧ಕ್ಕೆ		೪-೭-೦	೬-೧೨-೦
ಜಿರಿಗೆ ,,		೬-೧೨-೦	೪-೮-೦
ಕೊತ್ತುಂಬರಿ ಪಲ್ಲಾ ೧ಕ್ಕೆ		೧೦-೮-೦	೧೦-೦-೦
ಉಪ್ಪು ,,		೩-೦-೦	೩-೬-೦
ಹುಣಿಸೇ ಹಣ್ಣು		೦-೧೨-೦	೦-೧೦-೦
,, ಚಳೀದು		೦-೮-೦	೦-೯-೦
ತುಪ್ಪ		೦-೧೨-೧೨-೦	೧೦-೮-೦
ಸೀಮೆಯೆಣ್ಣೆ ಪಟ್ಟ ೧ಕ್ಕೆ		೫-೨-೦	೫-೦-೦
ತೆಂಗಿನಕಾಯಿ ೧೦೦ ಕ್ಕೆ		೬-೦-೦	೪-೨-೦
ಅಳಲೇಕಾಯಿ ಮಣ ೧ಕ್ಕೆ		೦-೧೨-೦	೦-೯-೦
ಅಂಟುವಾಳದ ಕಾಯಿ ಮಣ ೧ಕ್ಕೆ		೦-೧೨-೦	೦-೧೨-೦
ಚಿನ್ನ (ಪೌನ್) ಕೆಂಪು		೧೫-೬-೦	೧೫-೨-೦
,, ,, ಹಸಿಮೆ		೧೫-೩-೦	೧೫-೧೦-೦
,, ,, ಗಟ್ಟಿ ತೊಲ ೧ಕ್ಕೆ		೨೩-೧೨-೦	೨೬-೪-೦
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ		೭೨-೦-೦	೭೧-೦-೦

Printed and Published by the Rev. E. W. Thompson, M.A., the Proprietor and Manager, Wesleyan Mission Press. Mysore. 25/1/1905.

"VRITTANTA PATRIKE."

ವೃತ್ತಾಂತ ಪತ್ರಿಕೆ

ವಿಶೇಷ ಪತ್ರಿಕೆ

೬ ಪೈ | ಕ್ರಯ ೬ ಪೈ.

ಮೈಸೂರು ಸನ್ ೧೯೦೬ ನೆ ಇಸವಿ ಜನವರಿ ತಾರೀಖು ೩೦ ನೆ ಮಂಗಳವಾರ

ಎಡ್ವರ್ಡ್ ಸಾರ್ವಭೌಮರ ಮತ್ತು ಅಲೆಕ್ಸಾಂಡ್ರಾ ಮಹಾರಾಜ್ಞಿಯವರ ಚರಿತ್ರೆ

ಈ ವಿಶೇಷವಾದ ಪುಸ್ತಕದಲ್ಲಿ ಎಡ್ವರ್ಡ್ ಸಾರ್ವಭೌಮರ ಭಾವಚಿತ್ರವೂ ಅಲೆಕ್ಸಾಂಡ್ರಾ ಮಹಾರಾಜ್ಞಿಯವರ ಭಾವಚಿತ್ರವೂ ಅವರ ಅರಮನೆಗಳ ಚಿತ್ರಗಳೂ, ಈಗ ನಮ್ಮ ರಾಜಧಾನಿಗೆ ದಯಮಾಡಿರುವ ಯುವರಾಜರವರ ಮತ್ತು ಅವರ ಪತ್ನಿಯವರ ಭಾವಚಿತ್ರಗಳೂ ಅಡಗಿವೆ.

ರಾಜವಂಶಕ್ಕೆ ಸೇರಿದ ಇತರ ಜನಗಳ ವಿಷಯವನ್ನೂ ಬರೆದಿದೆ.

ಪುಸ್ತಕದ ಕ್ರಯ **ನಾಲ್ಕು ಆಣೆ** ಮಾತ್ರವೇ.

ಪುಸ್ತಕವನ್ನು ಕೊಂಡುಕೊಳ್ಳುವವರಿಗೆ ಪ್ರಿನ್ಸ್ ಆಫ್ ವೇಲ್ಸ್‌ರವರ ಮತ್ತು ಅವರ ಪತ್ನಿಯವರ ಪಟಗಳನ್ನೂ ಶ್ರೀಮನ್ಮಹಾರಾಜರ ಪಟವನ್ನೂ **ಉಚಿತವಾಗಿ** ಕೊಡುತ್ತೇವೆ.

ಶ್ರೀಮನ್ಮಹಾರಾಜರವರ ಪಟಗಳು ಕೆಲವು ಮಾತ್ರವಿರುವುದರಿಂದ ಜಾಗ್ರತೆಯಾಗಿ ಒಂದು ತಕೊಳ್ಳಿರಿ.

ಕಾಲವು ಮೀರಿದರೆ ಆಮೇಲೆ ದೊರಕಲಾರದು

ಸ್ಕೂಲ್ ಪುಸ್ತಕಗಳು

ಡ್ರಿಲ್ಲು ೧ ನೆಯ ೨ ನೆಯ ಭಾಗಗಳು ಪ್ರೈಮರಿ ತರಗತಿಗಾಗಿ ರಚಿತವಾಗಿರುವ ಪುಸ್ತಕಗಳಲ್ಲಿ ಇದುವರೆಗೆ ಇಂತಹ ಬ

...ವಾದ ಪುಸ್ತಕವು ಬರೆದಿಲ್ಲವೆಂದು ಧಾರಾಳವಾಗಿ ಹೇಳಬಹುದು ... ಬಹಳ ಉತ್ಕೃಷ್ಟವಾದ ಚಿತ್ರಗಳಿವೆ

ಕ್ರಯ ೧ ನೆಯ ಭಾಗ ೧ ಆಣೆ

„ ೨ „ ೨ ಆಣೆ

...ಶಾಲಾ ಉಪಯೋಗಾರ್ಥವಾಗಿ ರಚಿಸಲ್ಪಟ್ಟಿರುವ ...ಪಾಠ ಪುಸ್ತಕವೂ ಎರಡನೆಯ ಪುಸ್ತಕವೂ ಈಗ ...ವಿಕ್ರಯಕ್ಕೆ ಸಿದ್ಧವಾಗಿವೆ ಪುಸ್ತಕದ ತುಂಬಾ ಪಟಗಳಿವೆ ...ಕ್ರಯಕ್ಕೆ ದೊರಕುತ್ತವೆ

೧ ನೆಯ ಪುಸ್ತಕ — ೨ ಆ ೬ ಪೈ

೨ ನೆಯ „ — ೪ ಆ

ಭೂಗೋಳ ಪುಸ್ತಕ, ಪ್ರೈಮರಿ ತರಗತಿಗಳಿಗಾಗಿ ಮೈಸೂರು ಗವರ್ನ್‌ಮೆಂಟು ಪಾಠಕ್ರಮಗಳನ್ನನುಸರಿಸಿ ರಚಿತವಾಗಿದೆ

ಇಂಥ ಪುಸ್ತಕವು ಇದುವರೆಗೂ ಪ್ರಕಟಿಸಲ್ಪಟ್ಟಿರುವುದಿಲ್ಲ

ಒಂದನೆಯ ಭಾಗ — ಹಲವು ಚಿತ್ರಗಳಿವೆ ಮಾತ್ರವಲ್ಲ ಬಣ್ಣ ಹಾಕಿದ ಮೈಸೂರು ಸೀಮೆಯ ಪಟ ಸಮೇತ ಕ್ರಯ **೨ ಆಣೆ**



೧ ನೆಯ ಮತ್ತು ೨ ನೆಯ ಭಾಗಗಳು— ಬಣ್ಣ ಹಾಕಿದ ನಾಲ್ಕು ಪಟಗಳೂ ಮೈಸೂರು ಸೀಮೆಯಲ್ಲಿರುವ ಬೆಟ್ಟಗಳನ್ನು ಸೂಚಿಸುವಂಥ ಒಂದು ಪಟವೂ ಸೇರಿ ಕ್ರಯ **೪ ಆಣೆ.**

ಸ್ತೋತ್ರಗಳು:— ಕ್ರಯ ೪ ಆಣೆ.

ವಿಶೇಷವಾದ ಪುಸ್ತಕಗಳು.

ಚಿತ್ರಗಳಿಂದ ತುಂಬಿವೆ

ಮೈಸೂರು ಸರ್ಕಾರದವರು ಇವುಗಳಲ್ಲಿ ಅನೇಕವನ್ನು ಸ್ಕೂಲುಗಳಲ್ಲಿ ... ವಾಗಿ ... ಪುಸ್ತಕಗಳೆಂದು ಅನುಮೋದಿಸಿದ್ದಾರೆ

ಪಕ್ಷಿಗಳ ಚಿತ್ರಗಳೂ ಕಥೆಗಳೂ	೧ ಆಣೆ.
ದೇವರೆಂಬ ನನ್ನ ಮನೆ	೧ „
ಕ್ರಿಮಿವರ್ಗವರ್ಣನೆ	೧ ಆಣೆ
ಚಿಕ್ಕವರಿಗೆ ಹೇಳಿದ ಕಥೆಗಳು	೧ ಆಣೆ
ವೇದಗಳ ಕಾಲದಲ್ಲಿ ಹಿಂದೂ ದೇಶಸ್ಥಿತಿ	೧ ಆಣೆ
ದಕ್ಷಿಣ ಆಫ್ರಿಕವೂ ಅದರ ನಿವಾಸಿಗಳೂ	೨ ಆ ೬ ಪೈ
ಚೀನಾ ದೇಶವೂ ಅದರ ಜನಗಳೂ	೨ ಆ ೬ ಪೈ
ಬರ್ಮಾ ದೇಶವೂ ಬರ್ಮೀಯರೂ	೨ ಆ ೬ ಪೈ.
ಪ್ರಸಿದ್ಧರಾದ ಸ್ತ್ರೀಯರು	೨ ಆ ೬ ಪೈ
ಅನರ್ಘಚಿತ್ರವಾದ ಪತ್ರಗಳು ..	**ಕ್ರಯ ೬ ಪೈ**

ಸಾಲವನ್ನು ತೀರಿಸತಕ್ಕ ವಿಧಾನ, ಶುದ್ಧವಾದ ನೀರಿನ ಬೆಲೆ, ಆರೋಗ್ಯ ಪ್ರಕಾಶಿಕೆ, ಮಕ್ಕಳನ್ನು ಬೆಳೆಸತಕ್ಕ ವಿಧ, ಬಾಲ್ಯ ವಿವಾಹ, ಹಿಂದೂ ದೇಶದ ಬಡತನಕ್ಕೆ ಕಾರಣಗಳು, ವೇದಗಳನ್ನು ಬರೆದಿರುವರು ಯಾರು ? ಇವೇ ಮುಂತಾದ ಅನೇಕ ವಿಷಯಗಳನ್ನು ಕುರಿತು ಬರೆದಿರುವ ಈ ಪುಸ್ತಕಗಳು ಸುಲಭ ಕ್ರಯಕ್ಕೆ ದೊರಕುವವುಗಳಾಗಿದ್ದರೂ ಅತಿ ಘನವಾದ ವಿಚಾರಗಳಿಂದ ಒಪ್ಪವಾದವುಗಳಾಗಿವೆ

ಮೇಲ್ಕಂಡ ಪುಸ್ತಕಗಳು ದೊರಕುವ ಸ್ಥಳ—

ಸಿ ಎಲ್ ಎಸ್ ಬುಕ್ ಡಿಪೋ,

ಮೈಸೂರು

ಪ್ರಿನ್ಸ್ ಆಫ್ ವೇಲ್ಸ್‌ರವರ ಆತಿಥ್ಯವು.

ಮೈಸೂರು ಪಟ್ಟಣಶೃಂಗಾರ.

ವಿಜಯಾಗತಿ [illegible] ಪ್ರಿನ್ಸ್‌ವೇಲ್ಸ್‌ರವರನ್ನು ಮೈಸೂರು ಪಟ್ಟಣದಲ್ಲಿ ಎದುರುಗೊಳ್ಳುವುದಕ್ಕೋಸ್ಕರ ಶ್ರೀಮನ್ ಮಹಾರಾಜಾ ಸರ್ಕಾರದವರು ರಾಜಧಾನಿಯನ್ನು ನಾನಾಪ್ರಕಾರವಾಗಿ ಶೃಂಗಾರಮಾಡಿರುತ್ತಾರೆ. ಮೊದಲು ಅವರು ಬಂದು ಇಳಿವ ರೈಲ್ವೆ ಸ್ಟೇಷನ್ನಲ್ಲಿ ಇದಿನಾರು ಕಂಭಗಳ ಕೊಟ್ಟಣೀಮಾದರಿಯಲ್ಲಿ ಒಂದು ಚಪ್ಪರವನ್ನು ಹಾಕಿ, ಅದರ ಮಧ್ಯೆ ಮೇಲ್ಭಾಗದಲ್ಲಿ ಘಂಟಾಗೋಪುರವನ್ನು ಕಟ್ಟಿದಾರೆ. ಈ ಕಂಭಗಳೂ ಘಂಟಾಗೋಪುರವೂ ಪಾಶ್ಚಾತ್ಯರುಗಳ ಅರಮನೆಗಳಲ್ಲಿ ಯಾವ ರೀತಿಯಲ್ಲಿ ಅಲಂಕರಿಸಲ್ಪಟ್ಟು ನಾನಾತರದ ನವೀನ ಚಿತ್ರಕೆಲಸಗಳು ಮಾಡಲ್ಪಟ್ಟಿರುವವೋ ಅದೇ ರೀತಿ ಶೃಂಗರಿಸಲ್ಪಟ್ಟಿವೆ. ತೆರೆಗಳೂ, ಬೂಟೇದಾರಿ ಚಿತ್ರಗಳೂ, ಸುಭಾಗಮನವನ್ನು ಬಯಸುವ ಮಾತುಗಳು ಕೆತ್ತಲ್ಪಟ್ಟ ತರತರವಾದ ಬಾವುಟಗಳೂ, ಪರಕಿನಲ್ಲಿ ಮಾಡಿ ನಾನಾ ಪ್ರಕಾರವಾಗಿ ತಗಲಿಹಾಕಿರುವ ಕೃತಕಹೂವಿನ ದಂಡೆಗಳೂ, ಚಿತ್ರವಿಚಿತ್ರವಾದ ಮೇಲ್ಕಟ್ಟುಗಳೂ, ಇವನೆಲ್ಲಾ ಇಟ್ಟು ಬಹು ನೇತ್ರಾನಂದಕರವಾಗಿ ಮಾಡಿದಾರೆ. ನೆಲದ ಮೇಲೆ ದಿವ್ಯವಾದ ಕೆಂಪು ದಮಾಸನ್ನೂ ಅಲಮಾರ್ ಪಟ್ಟಿಗಳನ್ನೂ ಹಾಸಿದ್ದರು.

ರೈಲ್ವೆ ಸ್ಟೇಷನ್ ಪ್ಲಾಟ್‌ಫಾರಿನೊಳಕ್ಕೆ ಪ್ರವೇಶಿಸುವ ಬಾಗಿಲಲ್ಲಿ ಒಂದು ಬಿಳಿಯ ಕಮಾನನ್ನು ಕಟ್ಟಿದಾರೆ. ಅಲ್ಲಿಂದ ಪಟ್ಟಣದೊಳಕ್ಕೆ ಪ್ರವೇಶಮಾಡಿ, ಬರುವಲ್ಲಿ ಸವಾರ್ ಲೈನಿನ ಎದುರಿಗೆ ಕೆಂಪು ಬಣ್ಣದ, ಚಿತ್ರಕೆಲಸ ಮಾಡಿದ ಒಂದು ಕಮಾನನ್ನು ಹಾಕಿರುತ್ತಾರೆ. ಮುಂದೆ ಬರುತ್ತಾ ಸೈಯ್ಯಾಜೀರಾವ್ ರಸ್ತೆಯೊಳಗೆ ಎರಡು ಕಡೆಗಳಲ್ಲಿ ಎರಡು ಸುಂದರವಾದ ಕಮಾನುಗಳನ್ನು ಹಾಕಿದ್ದಾರೆ. ಈ ಎರಡು ಕಮಾನುಗಳ ನಡುವೆ ರಸ್ತೆಯ ಉಭಯಪಾರ್ಶ್ವಗಳಲ್ಲೂ ಉದ್ದಕ್ಕೂ ಗ್ಯಾಲರಿ ಅಥವಾ ಅಂತಸ್ತುಗಳನ್ನು ಕಟ್ಟಿರುವರು. ಕರ್ಜನ್ ಪಾರ್ಕಿನಲ್ಲಿ ಲೇಟ್ ಮಹಾರಾಜರವರ ಪ್ರತಿಮೆಯ ಸುತ್ತಲೂ ಬಾವುಟಗಳನ್ನೂ ತೋರಣಗಳನ್ನೂ ಉಳ್ಳ ಕಂಭಗಳನ್ನು ನೆಟ್ಟು ಅಲಂಕಾರ ಮಾಡಿದಾರೆ. ಹೊಸ್ಪೇಟೆಯ ಬಾಗಿಲಲ್ಲಿ ದಿವ್ಯವಾದ ಒಂದು ಚಪ್ಪರ ಹಾಕಲ್ಪಟ್ಟಿದೆ. ಇದು ಅತಿ ನೇತ್ರಾನಂದಕರವಾಗಿಯೂ ವಿಶಾಲವಾಗಿಯೂ ಇರುವದು. ಅಲ್ಲಿಂದ ಮುಂದೆ ದೊಡ್ಡಪೇಟೆಯಲ್ಲಿ ಕನ್ಯಕಾಪರಮೇಶ್ವರಿಯ ದೇವಸ್ಥಾನದ ಬಳಿ ಬೀದಿಯಲ್ಲಿ ಒಂದು ಕಮಾನನ್ನು ಕಟ್ಟಿ ಇದಕ್ಕೆ ಬಿಂದಿಗೆ, ಚೆಂಬು, ತಟ್ಟೆ, ಬಟ್ಟಲು, ಈ ಮೊದಲಾದ ಪಾತ್ರೆ ಅಂಗಡಿ ಪದಾರ್ಥಗಳನ್ನೇ ಸೇರಿಸಿ ಬಹು ಸುಂದರವಾಗಿ ಅಲಂಕಾರ ಮಾಡಿದಾರೆ. ಇನ್ನೂ ಮುಂದೆ ಸರಪರ್ಯಾಚಾವಡಿಯ ಉತ್ತರ ಹಾಕಿರುವ ಕಮಾನು ಅತ್ಯಂತ ನೇತ್ರಾನಂದಕರವಾದದ್ದಾಗಿರುತ್ತದೆ. ಈ ಕಮಾನಿನ ಒಂದು ಪಾರ್ಶ್ವದಲ್ಲಿ ಪ್ರಸಿದ್ಧ ಚಿತ್ರಗಾರರಾದ ರಾಜಾ ರವಿವರ್ಮರವರಿಂದ ಬರೆಯಲ್ಪಟ್ಟ ಬಹು ಸುಂದರವಾದ ಚಿತ್ರಪಟಗಳನ್ನು ಕಟ್ಟಿ ಮೇಲ್ಭಾಗದಲ್ಲಿ ನಮ್ಮ ಮಹಾರಾಜರವರ ಮತ್ತು ಮಹಾರಾಣಿಯವರ ತಸ್ವೀರುಗಳನ್ನು ಇಟ್ಟಿದಾರೆ. ಇನ್ನೊಂದು ಭಾಗದಲ್ಲಿ ಅದೇ ಚಿತ್ರಗಾರರಿಂದ ಬರೆಯಲ್ಪಟ್ಟ ತಸ್ವೀರುಗಳಿಗೆ ಬದಲು ಬೆಳ್ಳಿ ಪದಕಗಳನ್ನು ಹಾಕಿರುವುದು. ಈ ಕಮಾನನ್ನು ಎಷ್ಟು ಹೊತ್ತು ನಿಂತು ನೋಡಿದರೂ ಮನಸ್ಸು ದಣಿಯುವ ಹಾಗಿಲ್ಲ. ಅಲ್ಲದೆ ಕರ್ಜನ್ ಪಾರ್ಕಿನ ಪೂರ್ವಬಾಗಿಲಿನಿಂದಾಚೆ ಕಾಪ್ಟನ್ನಿನ ತೋಟಕ್ಕೆ ಹೋಗುವ ಮಾರ್ಗದಲ್ಲಿ ಒಂದು ದಿವ್ಯವಾದ ಕಮಾನನ್ನು ಹಾಕಿದಾರೆ.

ಇದಲ್ಲದೆ ಪ್ರಿನ್ಸ್ ಆಫ್ ವೇಲ್ಸ್‌ರವರು ಸಂಚಾರ ಮಾಡತಕ್ಕ ಸಮಸ್ತ ರಾಜಮಾರ್ಗಗಳಲ್ಲೂ ಬಾವುಟಗಳನ್ನು ಕಟ್ಟಿದ ಕಂಭಗಳೂ ವಿನಸಾವಿ ತೋರಣಗಳೂ ಉದ್ದಕ್ಕೂ ಕಟ್ಟಲ್ಪಟ್ಟಿರುತ್ತವೆ. ಕರ್ಜನ್ ಪಾರ್ಕಿನೊಳಗೆ ನಿಂತು ನೋಡಿದರೆ ಸುತ್ತಲೂ ಕಣ್ಣಿಗೆ ಕಾಣುವಂತಹ ಸಮಸ್ತ ಬಂಗಲೆಗಳ ಮೇಲ್ಗಡೆಯಲ್ಲೂ ಚಿತ್ರವಿಚಿತ್ರವಾದ ಬಾವುಟಗಳನ್ನು ಕಟ್ಟಿ ನಿಲ್ಲಿಸಿರುತ್ತಾರೆ. ಎಲ್ಲಾ ಬೀದಿಗಳಲ್ಲೂ ಇರುವ ಬಂಗಲೆ, ಮನೆ, ಪಾಠಶಾಲೆ, ಮೊದಲಾದ ಕಟ್ಟಡಗಳಿಗೂ ಹೊಸದಾಗಿ ಸುಣ್ಣ ಬಣ್ಣ ಕಾರಣೆಗಳನ್ನು ಹಚ್ಚಿ ಕಳಕಳಿಸುವಂತೆ ಮಾಡಿರುವರು. ಬಿಸಲು ಹೆಚ್ಚಾಗಿ ರಸ್ತೆಗಳಲ್ಲಿ ಏಳುವ ಪ್ರಚಂಡವಾದ ಧೂಳು ಅಣಗಿ ತಿರುಗಾಡುವವರಿಗೆ ಮನೋಹರವಾಗಿರುವಂತೆ ದಿನವೂ ಎರಡಾವರ್ತಿ ರಸ್ತೆಗಳಿಗೆ ನೀರು ಚೆಲ್ಲುತ್ತಾ ಬರುವರು. ಅಂತು ಈ ಸಲ ರಾಜಧಾನಿಯಲ್ಲಿ ಮಾಡಿರುವಷ್ಟು ಅಗಾಧವಾದ ಶೃಂಗಾರಗಳು ಹಿಂದೆ ಯಾವಾಗಲೂ ಈ ಪಟ್ಟಣದಲ್ಲಿ ಆಗಿಲ್ಲವೆಂದು ಧಾರಾಳವಾಗಿ ಹೇಳಬಹುದು.

ಜನಸ್ತೋಮ

ಪ್ರಿನ್ಸ್ ಆಫ್ ವೇಲ್ಸ್‌ರವರನ್ನೂ ಅವರಿಗೆ ರಾಜಧಾನಿಯಲ್ಲಿ ನಡೆಯುವ ನಾನಾ ಸತ್ಕಾರಗಳನ್ನೂ ಕಣ್ಣಾರ ನೋಡಿ ಹೋಗಬೇಕೆಂದು ಅನೇಕ ಪ್ರಜೆಗಳು ಬಹು ದೂರಸ್ಥಳಗಳಿಂದ ಮೈಸೂರಿಗೆ ಬಂದಿರುತ್ತಾರೆ. ಈಗ ಸುಮಾರು ನಾಲ್ಕು ದಿನಗಳಿಂದಲೂ ರೈಲಿನ ಮೇಲೂ ಗಾಡಿಗಳಲ್ಲೂ ಜನರು ಬರುತ್ತಲೇ ಇರುವರು. ಪ್ರತಿದಿನವೂ ಕಡೇಪಕ್ಷ ನಾಲ್ಕಾರು ಸ್ಪೆಷಲ್ ಗಾಡಿಗಳು ಜನರನ್ನು ತಂದು ಬಿಡುತ್ತಲಿವೆ. ಈಗ ಮೈಸೂರು ಪಟ್ಟಣದಲ್ಲಿ ಸಾಧಾರಣವಾಗಿ ತಿರುಗಾಡುವುದೇ ಪ್ರಯಾಸವಾಗಿರುವುದು. ಯಾವ ಬೀದಿಯಲ್ಲಿ ನೋಡಿದರೂ ಜನರು ಗುಂಪು ಗುಂಪಾಗಿ ರಸ್ತೆಯ ತುಂಬಾ ಕಿಕ್ಕಿರಿಯುವಂತೆ ಹೋಗಿ ಬರುತ್ತಿರುವರು. ಇವರಲ್ಲಿ ಹಳ್ಳೀ ಜನರೇ ಅಧಿಕವಾಗಿದ್ದಾರೆ. ಇಷ್ಟು ಜನರು ಈ ಪಟ್ಟಣದಲ್ಲಿ ಹಿಂದೆ ಯಾವಾಗಲೂ ಸೇರಿದ್ದಿಲ್ಲವೆಂದು ಹೇಳುವರು. ರಾಜಧಾನಿಯಲ್ಲಿರುವ ಪ್ರತಿ ಒಂದು ಮನೆಗೂ ೮—೧೦ ಜನರಾದರೂ ಹೊಸಬರು ಆಗಂತುಕರಾಗಿ ಬಂದಿರುವರು. ಮನೆವಾರ್‌ಗಳನ್ನು ಅಪೇಕ್ಷಿಸದೆ ಅಂಗಡಿ ಮಳಿಗೆ, ಕೈಸಾಲೆ, ಕಟ್ಟಡಗಳ ಹಜಾರ, ಮೈದಾನ, ಈ ಮೊದಲಾದ ಕಡೆಗಳಲ್ಲೇ ತಂಗಿಕೊಂಡು, ಅಲೆಯುತ್ತಿರುವ ಜನರ ಸಂಖ್ಯೆಯೇ ಅಪಾರವಾಗಿರುತ್ತದೆ. ಈ ವಿಭವವನ್ನು ನೋಡುವುದಕ್ಕೆ ಇದುವರೆಗೆ ರಾಜಧಾನಿಗೆ ಸುಮಾರು ಅರವತ್ತು ಎಪ್ಪತ್ತು ಸಾವಿರ ಪ್ರಜೆಗಳು ಬಂದು ಸೇರಿದ್ದಾರೆಂದು ಧಾರಾಳವಾಗಿ ಹೇಳಬಹುದು.

ಸೋಮವಾರದ ಮೊದಲನೇ ಉತ್ಸವವು.

ರೈಲ್ವೆ ಸ್ಟೇಷನ್.

ತಾ: ೨೯ ನೆ ಸೋಮವಾರ ಮಧ್ಯಾಹ್ನ ೩॥ ಗಂಟೆಗೆ ಪ್ರಿನ್ಸ್ ಆಫ್ ವೇಲ್ಸ್ ಮಹನೀಯರು ದಯಮಾಡುತ್ತಾರೆಂದು ಗೊತ್ತಾಯಿತು. ದೊಡ್ಡ ಮನುಷ್ಯರಿಗೆಲ್ಲಾ ಟಿಕೆಟ್ಟುಗಳು ಬಂದವು. ಮಧ್ಯಾಹ್ನ ೨ ಗಂಟೆಗೆ ಮುಂಚೆಯೇ ದೊಡ್ಡ ಮನುಷ್ಯರೂ ರಾಜಬಂಧುಗಳವರೂ ಹುದ್ದೇದಾರರೂ ರೈಲ್ವೆ ಸ್ಟೇಷನ್ನಲ್ಲಿ ಹಾಜರಾಗಿದ್ದರು. ಟಿಕೆಟ್ಟುಗಳನ್ನು ಪಡೆದಿದ್ದವರೆಲ್ಲಾ ಒಂದು ಭಾಗದಲ್ಲೂ ಮಿಲ್ಟೇರಿ ಅಧಿಕಾರಸ್ಥರು ಒಂದು ಭಾಗದಲ್ಲೂ ಪಂಗಡವಾಗಿಯೂ ದರ್ಜಾವಾರಾಗಿಯೂ ನಿಲ್ಲಿಸಲ್ಪಟ್ಟರು. ಮೂರು ಗಂಟೆಗೆ ಮುಂಚೆ ಎರಡಾವರ್ತಿ ಸ್ಪೆಷಲ್ ರೈಲ್ ಗಾಡಿಗಳು ಬಂದವು. ಇವೆರಡರಲ್ಲೂ ಪ್ರಿನ್ಸ್ ಆಫ್ ವೇಲ್ಸ್ ರವರ ಪರಿವಾರದಲ್ಲಿರುವ ಉದ್ಯೋಗಸ್ಥರೂ ಸರ್ದಾರರೂ ವಿಲಾಯಿತಿಯ ಕೆಲವು ವರ್ತಮಾನ ಪತ್ರಿಕೆಗಳ ಪ್ರತಿನಿಧಿಗಳೂ ಬಂದಿಳಿದರು. ಇವರು ಕೂಡಲೇ ದಿರಸುಗಳನ್ನು ಹಾಕಿಕೊಂಡು, ತಮ್ಮ ತಮ್ಮ ಸ್ಥಾನಗಳನ್ನು ಅಲಂಕರಿಸಿದರು. ಅಷ್ಟು ಹೊತ್ತಿಗೆ ನಮ್ಮ ದಿವಾನ್ ಸಿ. ಪಿ. ಎಸ್. ಕೃಷ್ಣಮೂರ್ತಿಯವರು ಮೊ॥ ತಂಬೂಚೆಟ್ಟಿಯವರು, ಚೀಫ್ ಕೋರ್ಟ್ ಜಡ್ಜಿಗಳು, ಮುಖ್ಯರಾದ ರಾಜಬಂಧುಗಳು, ಬ್ರಿಟಿಷ್ ರೆಸಿಡೆಂಟರಾದ ಮೊ॥ ಫ್ರೇಜರ್ ಯವರು, ಅವರ ಅಸಿಸ್ಟೆಂಟರು, ಚೀಫ್ ಇಂಜನಿಯರವರು. ಮೊ॥ [illegible] ಯವರೇ ಮೊದಲಾದ ಮುಖ್ಯ ಮನುಷ್ಯರೆಲ್ಲಾ ದಯಮಾಡಿದರು. ತರುವಾಯ ಶ್ರೀಮನ್ ಮಹಾರಾಜರವರೂ ಯುವರಾಜರವರೂ ಸಾರೋಟಿನಲ್ಲಿ ಬಿರುದುಗಳ ಸಮೇತ ಸ್ಟೇಷನಿಗೆ ದಯಮಾಡಿದರು. ದಿವಾನರೂ ರೆಸಿಡೆಂಟರೂ ಹೋಗಿ ಅವರನ್ನು ಗಾಡಿಯಿಂದ ಇಳಿಸಿ ಕರೆದು ತಂದರು. ಶ್ರೀಮನ್ ಮಹಾರಾಜರವರು ಒಳಕ್ಕೆ ದಯಮಾಡುತ್ತಲೇ, ಇಡಾರ್ ಸಂಸ್ಥಾನದ ಮಹಾರಾಜರವರೂ ಪ್ರಿನ್ಸ್ ಆಫ್ ವೇಲ್ಸ್‌ರವರ ಏಡಿಕಾಂಗರೂ ಆದ ಸರ್ ಪ್ರತಾಪಸಿಂಗ್‌ರವರನ್ನು ಕಂಡು, ಅವರ ಯೋಗಕ್ಷೇಮವನ್ನು ವಿಚಾರಿಸಿದರು.

ಅಲ್ಲಿಗೆ ಪ್ರಿನ್ಸ್ ರವರ ರೈಲ್ ಗಾಡಿ ಬರುತ್ತದೆಂಬ ಶಿಳ್ಳು ಕೇಳಿಸಿತು. ಕೂಡಲೇ ಎಲ್ಲರೂ ತಮ್ಮ ತಮ್ಮ ಸ್ಥಾನಗಳಲ್ಲಿ ಅದಬ್ಬಾಗಿ ನಿಂತುಕೊಂಡರು. ಗಾಡಿಯು ಸ್ಟೇಷನಿಗೆ ೩॥ ಗೆ ಸರಿಯಾಗಿ ಭುಗ್ ಭುಗ್ ಎಂದು ನುಗ್ಗಿ ಬಂತು. ಗಾಡಿಯು ನೆಲೆಗೆ ನಿಲ್ಲುವದಕ್ಕೆ ಮುಂಚೆಯೇ ಒಳಗಿನಿಂದ ಸರ್ ವಾಲ್ಟರ್ ಲಾರೆನ್ಸ್ ರವರು ಸ್ಟೇಷನ್ ಪ್ಲಾಟ್‌ಫಾರಿಗೆ ಧುಮುಕಿ ಬಂದು ಪ್ರಿನ್ಸ್ ಆಫ್ ವೇಲ್ಸ್‌ರವರ ಗಾಡಿ ಬಾಗಿಲಿಗೆ ಹೋಗಿ, ಅವರನ್ನು ಗಾಡಿಯಿಂದ ಇಳಿಸಿ, ಕೆಳಗೆ ನಿಂತಿದ್ದ ಮೈಸೂರು ಸಂಸ್ಥಾನದ ಬ್ರಿಟಿಷ್ ರೆಸಿಡೆಂಟರನ್ನೂ ಶ್ರೀಮನ್ ಮಹಾರಾಜರವರನ್ನೂ ಅವರಿಗೆ ಪರಿಚಯ ಮಾಡಿಸಿದರು. ರೆಸಿಡೆಂಟರು ತಮ್ಮ ಅಸಿಸ್ಟೆಂಟರನ್ನು ಪ್ರಿನ್ಸ್ ರವರಿಗೆ ಪರಿಚಯ ಮಾಡಿಸಿದರು. ಶ್ರೀಮನ್ ಮಹಾರಾಜರವರು ಪ್ರಿನ್ಸ್ ಆಫ್ ವೇಲ್ಸ್ ರವರ ಪತ್ನೀರವರನ್ನು ಕಂಡು, ಅವರ ಸಂಗಡ ಮಾತನಾಡಿ, ಪ್ರಿನ್ಸ್ ಆಫ್ ವೇಲ್ಸ್ ರವರನ್ನು ಕರೆದುಕೊಂಡು ಎಡಕ್ಕೆ ಹೊರಟು ಮುಂದೆ ಸಾಲಾಗಿ ನಿಂತಿದ್ದ ಯುವರಾಜರು, ದಿವಾನರು, ಮೊ॥ ಗಳೇದ ಲಕ್ಷ್ಮೀಕಾಂತರಾಜೇ ಅರಸಿನವರು, ರಂಬೂಚೆಟ್ಟಿಯರು, ಗೋಪಾಲರಾಜೇ ಅರಸಿನವರು, ಇಬ್ಬರು ಕೌನ್ಸಿಲರುಗಳು, ಭಕ್ಷಿ ಬಸಪ್ಪಾಜಿ ಅರಸಿನವರು, ಚೀಫ್ ಜಡ್ಜರವರು, ಈ ಮೊದಲಾದ ಮುಖ್ಯ ಸರ್ದಾರರುಗಳನ್ನೂ ಹುದ್ದೇದಾರರನ್ನೂ ಪ್ರಿನ್ಸ್ ಆಫ್ ವೇಲ್ಸ್ ರವರಿಗೆ ಪರಿಚಯ ಮಾಡಿಸಿದರು. ಅವರು ಬಗ್ಗಿ ಕೈ ಮುಗಿದು ನಿಂತುಕೊಂಡರು. ತರುವಾಯ ಪ್ರಿನ್ಸ್ ಆಫ್ ವೇಲ್ಸ್‌ರವರೂ ಶ್ರೀಮನ್ ಮಹಾರಾಜರವರೂ ಕರ್ನಲ್ ದೇಶರಾಜೇ ಅರಸಿನವರೂ ಅಲ್ಲಿಂದ ಮುಂದಕ್ಕೆ ದಯಮಾಡಿ, ಅಲ್ಲಿ ಸಾಲಾಗಿ ನಿಂತಿದ್ದ ಇಂಪೀರಿಯಲ್ ಸರ್ವಿಸ್, ಲೋಕಲ್ ಸರ್ವಿಸ್ ಕುದುರೇ ಸೈನ್ಯದ ಹುದ್ದೇದಾರರನ್ನೂ ಕಾಲ್ಬಲದ ಹುದ್ದೇದಾರರನ್ನೂ ನೋಡಿಕೊಂಡು ಬಂದರು. ಮಹಾರಾಜರವರ ಬ್ಯಾಂಡ್ ವಾದ್ಯಗಾರರು ಮನೋಹರವಾಗಿ ವಾದ್ಯ ನುಡಿಸುತ್ತಿದ್ದರು. ಕೋಟೆಕೊತ್ತಲದಿಂದ ಗೌರವಾರ್ಥವಾದ ೩೧ ತೋಪುಗಳು ಹಾರಿಸಲ್ಪಟ್ಟವು.

ಪ್ರಿನ್ಸ್ ಆಫ್ ವೇಲ್ಸ್‌ರವರು ಶ್ರೀಮನ್ ಮಹಾರಾಜರವರ ಸಂಗಡ ಸ್ಟೇಷನಿನಿಂದ ಹೊರಕ್ಕೆ ದಯಮಾಡಿದರು. ಹೊರಗಡೆ ಮೈದಾನಿನಲ್ಲಿ ಕುದುರೆ ಸೈನಿಕರೂ ಸಿಪಾಯಿಗಳೂ ಸಾಲುಸಾಲಾಗಿ ನಿಂತು ಅವರಿಗೆ ಮುಜರೆ ಮಾಡಿದರು. ಶ್ವೇತವಾದ ನಾಲ್ಕು ಬಿಳೀ ಕುದುರೆಗಳನ್ನು ಕಟ್ಟಿದ ಸಾರೋಟು ಸಿದ್ಧವಾಗಿ ಬಂದು ನಿಂತಿತು. ಶ್ರೀಮನ್ ಮಹಾರಾಜರವರೂ ಅವರ ಬಲಪಾರ್ಶ್ವದಲ್ಲಿ ಪ್ರಿನ್ಸ್ ಆಫ್ ವೇಲ್ಸ್‌ರವರೂ, ಎದುರಿಗೆ ಸರ್ ವಾಲ್ಟರ್ ಲಾರೆನ್ಸ್‌ಯವರೂ ಸಾರೋಟಿನಲ್ಲಿ ಕುಳಿತರು. ಹಿಂದುಗಡೆ ಶ್ವೇತಛತ್ರಿಯನ್ನೂ ಸೂರೇಪಾನವನ್ನೂ ಊಳಿಗದವರು ಎತ್ತಿ ಹಿಡಿದರು. ಸಾರೋಟಿನ ಹಿಂದೆಯೂ ಮುಂದೆಯೂ ಶ್ರೀಮನ್ ಮಹಾರಾಜರವರ ಬಾಡಿಗಾರ್ಡ್ ಸವಾರರೂ ಇಂಪೀರಿಯಲ್ ಸರ್ವಿಸ್ ಲಾನ್ಸರುಗಳೂ ಎಸ್ಕಾರ್ಟ್ ಹೊರಟರು. ವಾದ್ಯಗಳ ಘೋಷದಲ್ಲಿ ಸಾರೋಟು ಮುಂದಕ್ಕೆ ತೆರಳಿತು, ಎರಡನೆಯ ಸಾರೋಟು [illegible] ಸಿದ್ಧವಾಯಿತು. ಪ್ರಿನ್ಸ್ ಆಫ್ ವೇಲ್ಸ್‌ರವರ ಪತ್ನೀರವರು [illegible] ಹಿಡಿದು ಸಾರೋಟಿನಲ್ಲಿ ಕುಳಿತರು. ಅವರ ಸಂಗಡ ರೆಸಿಡೆಂಟರ ಪತ್ನೀ ಫ್ರೇಸರ್‌ಯವರೂ ಮೊ॥ [illegible] ಯವರೂ ಕುಳಿತುಕೊಂಡರು. ಈ ಸಾರೋಟಿನ ಹಿಂದೆಯೂ ಮುಂದೆಯೂ ಸವಾರರ ಎಸ್ಕಾರ್ಟ್ ಸಿದ್ಧವಾಗಿ ಮುಂದಕ್ಕೆ ಹೊರಟಿತು. ಪ್ರಿನ್ಸ್ ಆಫ್ ವೇಲ್ಸ್‌ರವರ ಏಡಿಕಾಂಗರುಗಳೂ ಇತರ ಅಧಿಕಾರಿಗಳೂ ಮೈಸೂರು ಸಂಸ್ಥಾನದ ಮುಖ್ಯ ಹುದ್ದೇದಾರರೇ ಮುಂತಾದವರೂ ಬೇರೆ ಬೇರೆ ಸಾರೋಟುಗಳಲ್ಲಿ ಕುಳಿತುಕೊಂಡು ಹೊರಟರು. ಈ ಮೆರವಣಿಗೆಯ ಹಿಂದೆಯೂ ಮುಂದೆಯೂ ಪಕ್ಕಗಳಲ್ಲೂ ಕುದುರೆ ಸವಾರರೂ, ಭೃತ್ಯವರ್ಗ ರಾಜಪರಿವಾರದವರೂ, ಈ ಮೊದಲಾದ ಸೈನಿಕರು ಹೊರಟರು.

ಉತ್ಸವ.

ಯುವರಾಜರವರ ಮೆರವಣಿಗೆಯನ್ನು ನೋಡುವುದಕ್ಕೆ ಸಯ್ಯಾಜೀರಾವ್ ರಸ್ತೆಯೇ ಮಹಾ ಪ್ರಶಸ್ತಸ್ಥಾನವಾಗಿತ್ತೆಂಬುದರಲ್ಲಿ ಸಂದೇಹವಿಲ್ಲ. ಈ ರಸ್ತೆಯ ಇಕ್ಕೆಲಗಳಲ್ಲಿ ೬೦೦೦ ಪಾಠಶಾಲಾ ವಿದ್ಯಾರ್ಥಿ ವಿದ್ಯಾರ್ಥಿನಿಯರೂ ಕುಳಿತು ನೋಡುವದಕ್ಕೆ ಗ್ಯಾಲರಿಗಳನ್ನು ನಿರ್ಮಿತು ಮತ್ತು ರಸ್ತೆಯ ಪಕ್ಕಗಳಲ್ಲಿಯೂ ಪಕ್ಕದಲ್ಲಿರುವ ಮನೆ ಮಾಳಿಗೆಗಳ ಮೇಲೆಯೂ ನೋಟಕರು ಬಹು ಇಕ್ಕಟ್ಟಾಗಿ ಕುಳಿತಿದ್ದು ಮಾರ್ಕೆಟ್ ಕಟ್ಟಡದ ಮೇಲಂತೂ ಜನರು ಬಹಳವಾಗಿ ಗುಂಪು ಕಟ್ಟಿದ್ದರು. ಎಲ್ಲರೂ ಯುವರಾಜರ ಆಗಮನಕಾಲವನ್ನು ಅತಿ ಕುತೂಹಲದಿಂದ ನಿರೀಕ್ಷಿಸುತ್ತಿರಲು ಫಿರಂಗಿಯವರ ಒಬ್ಬ ಸಿಪಾಯಿಯು ಬಾವುಟವನ್ನು ಹಿಡಿದು ಮೇಲಕ್ಕೆತ್ತಿ ತೋರಿಸಿದನು. ಆ ಕ್ಷಣವೇ ಕೋಟೆಯ ಬಳಿಯಲ್ಲಿ ಫಿರಂಗಿ [illegible] ಹೊಡೆದು ಯುವರಾಜರು ರೈಲ್ವೆ ಸ್ಟೇಷನನ್ನು ಸೇರಿದರೆಂಬುದಕ್ಕೆ ಇದು ಸೂಚಕವಾಯಿತು. ಕೂಡಲೆ ಪ್ರೇಕ್ಷಕರ ಕಾತುರವು ಇಮ್ಮಡಿಯಾಗಿ [illegible]ಗಳು ಇನ್ನೆಷ್ಟು ಹೊತ್ತಿಗೆ ಬಂದು ಸೇರುವರೋ ಎಂಬುದಾಗಿ [illegible] ಮಾಡಿಕೊಳ್ಳುತ್ತಿರುವ ಜನವು ಪಟ್ಟಿತು. ಹೀಗೆ ನಿರೀಕ್ಷಣಾ ಕಾಲವು ಸ್ವಲ್ಪವಾಗಿದ್ದರೂ ಪ್ರಜೆಗಳಿಗೆ ಅತ್ಯಧಿಕವೆಂದು ತೋರುತ್ತಿತ್ತು. ಸ್ಟೇಷನಿನಲ್ಲಿ ಯುವರಾಜರವರ ಆಗತಸ್ವಾಗತ ಕಾರ್ಯವು ಗಂಭೀರವಾಗಿ ನಡೆದನಂತರ ಯುವರಾಜರವರೂ ಪತ್ನೀಪರಿವಾರಸಮೇತರಾಗಿ ಸ್ಟೇಷನ್ನಿನಿಂದ ಹೊರಟರು. [illegible] ಮುಂದೆ [illegible] ವಾದ ಸೇನಾ ವಿಭಾಗವೊಂದು [illegible] ನೊಬ್ಬನ ಮೇಲೆ ಇಬ್ಬರು ಪೊಲೀಸ್ ಅಧಿಕಾರಿಗಳು ಅಶ್ವಾರೂಢರಾಗಿ [illegible]ರು. ಅನಂತರ ಹಿಂದೆ ಸ್ವಲ್ಪ ದೂರ ಇಂಪೀರಿಯಲ್ ಸರ್ವಿಸ್ ಲ್ಯಾನ್ಸರ್ಸ್ ಎಂಬ ಅಶ್ವಸೈನಿಕರಿದ್ದರು [illegible]ರು. ಇವರು ಕೈಗಳಲ್ಲಿ ಬಂದೂ[illegible]ಳನ್ನು ಹಿಡಿದಿದ್ದರು ಇವರ ಹಿಂದೆ [illegible] ಸೈನಿಕರಲ್ಲಿ ಎರಡು ಸ್ಕ್ವಾಡ್ರನ್ ಅಶ್ವಾರೋಹಕರು ಬಂದರು [illegible]ದು ಪ್ರಿನ್ಸ್ ಆಫ್ ವೇಲ್ಸ್‌ರವರೂ ನಮ್ಮ ಮಹಾರಾಜರವರೂ [illegible] ತದ್ದಂಥ ನಾಲ್ಕು ಕುದುರೆಗಳು ಕಟ್ಟಿದ ರಥವು ಬಂದಿತು. [illegible] ಕಟ್ಟಿದ ಕುದುರೆಗಳಿಗೆ ಬಂಗಾರದ ಕಡಿವಾಣಗಳನ್ನೇ ಹಾಕಿ[illegible] ಪ್ರಿನ್ಸರವರು ಬಿಳೀ ಉಡುಪುಗಳನ್ನು ಹಾಕಿಕೊಂಡಿದ್ದರು [illegible] ಪ್ರಧಾನವಾಗಿ ನಡೆಯುತ್ತಿರಲು ಇಕ್ಕಡೆಗಳ ಪ್ರಜೆಗಳೂ [illegible]ರಿಗಳೂ ಅರ್ಪಿಸುವ ವಂದನೆಗಳನ್ನು ಸ್ವೀಕರಿಸುತ್ತಾ ಪ್ರ[illegible]ಗಿ ಸಲಾಮು ಮಾಡುತ್ತಾ ಹೊರಟರು. ಗ್ಯಾಲರಿಗಳ ಮೇ[ಲೆ] ಕುಳಿತಿದ್ದ ವಿದ್ಯಾರ್ಥಿಗಳು ಬಹು ಗಟ್ಟಿಯಾಗಿ ಹರ್ಷಧ್ವನಿ ಮಾಡುತ್ತಲೂ ಕೈಚಪ್ಪಾಳೆ ಹಾಕುತ್ತಲೂ ಯುವರಾಜರಿಗೆ ಮ[illegible]ದೆ ಮಾಡಿದರು. ಪ್ರಿನ್ಸರ ರಥದ ಹಿಂದುಗಡೆಯಲ್ಲಿ ಮೈಸೂರು [illegible] ದಾರರ ಒಂದು ಸ್ಕ್ವಾಡ್ರನ್ ಸೈನಿಕರು ಬಂದರು ತರುವಾಯ [illegible] ರಾಜಪತ್ನಿಯವರೂ ಅವರೊಂದಿಗೆ ಬ್ರಿಟಿಷ್ ರೆಸಿಡೆಂಟರವರಾದ [illegible] ಫ್ರೇಜರವರೂ ಕುಳಿತಿರುವ ರಥವು ಬಂದಿತು. ಯುವರಾಜ[illegible] ಮಾಡಿದ ಮರ್ಯಾದೆಗಳನ್ನೇ ಪ್ರಜೆಗಳು ಯುವರಾಜಪತ್ನಿಯ[illegible] ಮಾಡಿದರು. ಬಳಿಕ ಯುವರಾಜರ ಪರಿವಾರ ಜನಗಳಾದ [illegible] ಮತ್ತು ಮಿಲಿಟರಿ ಆಫೀಸರುಗಳು ಕುಳಿತಿರುವ ಮೂರು ರಥಗಳು [illegible]ವು. ಈ ಮಿಲಿಟರಿ ಆಫೀಸರುಗಳು ಹಾಕಿಕೊಂಡಿದ್ದ ಟೋ[illegible] ಮೇಲೆ ಇರುವ ಪಕ್ಷಿಗರಿಗಳು ಅಪೂರ್ವವಾಗಿ ಜನಗಳ ಕೌತು[ಕವನ್ನು] ಹೆಚ್ಚಿಸಲು ಕಾರಣವಾಗಿದ್ದವು. ಇವರ ರಥದ ತರುವಾಯ ಯುವರಾ[illegible] ಇಂಡಿಯಾ ಪ್ರವಾಸದಲ್ಲಿರುವ ಸರ್ ಪ್ರತಾಪಸಿಂಗರವರೂ ಇವ[illegible]ಗೆ ಉತ್ತರ ಇಂಡಿಯಾದಿಂದ ಹೊರಟು ಬಂದಿರುವ ಇಬ್ಬರು ಉದ್ಯೋಗಸ್ಥರೂ ಕುಳಿತಿರುವ ರಥವು ಬಂದಿತು. ಉದ್ದವಾಗಿಯೂ ಕಪ್ಪಾಗಿ[ಯೂ] ಇರುವ ಇವರ ದಾಡಿಗಳು ಜನರಲ್ಲಿ ವಿಸ್ಮಯವನ್ನು ಹುಟ್ಟಿಸುತ್ತಿದ್ದ[ವು].

ಗೌರ್ನಮೆಂಟ್ ಹೌಸಿನಲ್ಲಿ ನಡೆದ ಕಾರ್ಯಗಳು

ಶ್ರೀಮನ್ ಮಹಾರಾಜರವರು ಪ್ರಿನ್ಸ್ ಆಫ್ ವೇಲ್ಸ್‌ರವ[ರನ್ನು] ಗವರ್ನಮೆಂಟ್ ಹೌಸ್ ಎಂಬ ರಾಜಭವನಕ್ಕಿಂತಲೂ ಅತಿಶಯ[ವಾಗಿ] ಅಲಂಕರಿಸಲ್ಪಟ್ಟಿರುವ ಬಂಗಲೆಗೆ ಕರೆತಂದು ಇಳಿಸಿದರು. [illegible] ಗೌರವಾರ್ಥವಾದ ೩೧ ತೋಪುಗಳು ಹಾರಿಸಲ್ಪಟ್ಟವು. ಬಂಗ[ಲೆಯ] ಎದುರು ಪಾರ್ಶ್ವದಲ್ಲಿ ಸವಾರ್ ಸೈನಿಕರೂ ಸಿಪಾಯಿಗಳೂ ಸಾಲು ಸಾಲಾಗಿ ನಿಂತು ಮುಜರೆ ಮಾಡಿದರು. ಬ್ಯಾಂಡ್ ವಾದ್ಯಗಾರರು ಇಂಗ್ಲೀ[ಷ್] ವಾದ್ಯಗಳನ್ನು ನುಡಿಸುತ್ತಿದ್ದರು. ತರುವಾಯ ಶ್ರೀಮನ್ ಮಹಾ[ರಾಜರ]ವರು ಅದೇ ಸಾರೋಟಿನಲ್ಲಿ ಕುಳಿತು, ಮರ್ಯಾದೆಗಳೊಡನೆ ಅಲ್ಲಿ[ಂದ] ಅರಮನೆಗೆ ಚಿತ್ತೈಸಿದರು.

ಮಿಜಾಜ್ ಪುರ್ಸಿ.

ಕೂಡಲೇ ಒಂದು ಸಾರೋಟಿನಲ್ಲಿ ಅಸಿಸ್ಟೆಂಟ್ ರೆಸಿಡೆಂ[ಟ್] ಮೆ॥ ಮಾರ್ಟಿಂಗ್ ಯವರೂ ಪ್ರಿನ್ಸ್ ಆಫ್ ವೇಲ್ಸ್‌ರವರ [illegible]

ಕ್ರೆಟರಿ ಜನರಲ್ ಬೀಟ್ಸನ್‌ರವರೂ ಒಬ್ಬ ಏಡಿಕಾಂಗರೂ ಸಾರೋಟಿನಲ್ಲಿ ಕುಳಿತು ಹಿಂದೆ ಮುಂದೆ ಕುದುರೆ ಸವಾರರು ಬಿಟ್ಟುಕೊಂಡು ಗವರ್ನಮೆಂಟ್ ಹೌಸಿನಿಂದ ಅರಮನೆಗೆ ಶ್ರೀಮನ್ಮಹಾರಾಜರವರನ್ನು ಕಾಣುವುದಕ್ಕಾಗಿ ಹೋದರು. ಅತ್ತಲಾಗಿ ಶ್ರೀಮನ್ಮಹಾರಾಜರವರ ಕಡೆಯಿಂದ ದಿವಾನ್ ಸರ್ ಪಿ. ಎನ್. ಕೃಷ್ಣಮೂರ್ತಿಯವರೂ ಸೀನಿಯರ್ ಕೌನ್ಸಿಲರ್ ಮ|| ಸಿ. ಶ್ರೀನಿವಾಸಯ್ಯಂಗಾರ್ಯರೂ, ಕರ್ನಲ್ ದೇಶರಾಜೇ ಅರಸಿನವರೂ, ಸರ್ದಾರ್ ಗೋಪಾಲರಾಜೇ ಅರಸಿನವರೂ ಸಾರೋಟಿನಲ್ಲಿ ಕುಳಿತು ಅರಮನೆಯಿಂದ ಇಸ್ಕಾರ್ಟ್ ಸಹಿತ ರೆಸಿಡೆನ್ಸಿ ಬಂಗಲೆಗೆ ಬಂದರು. ಇವರನ್ನು ಸರ್ ವಾಲ್ಟರ್ ಲಾರೆನ್ಸ್‌ಯವರೂ ಒಬ್ಬ ಏಡಿಕಾಂಗರೂ ಬಾಗಿಲಲ್ಲಿ ಎದುರುಗೊಂಡು ಬಂಗಲೆಯೊಳಕ್ಕೆ ಕರೆದುಕೊಂಡು ಹೋಗಿ ಶ್ರೇಷ್ಠ ಪೀಠಗಳಲ್ಲಿ ಕುಳ್ಳಿರಿಸಿ, ಅವರಿಗೆ ಅತ್ತರ್‌ಪಾನ್‌ಗಳನ್ನು ಒಪ್ಪಿಸಿದರು.

ಶ್ರೀಮನ್ಮಹಾರಾಜರವರ ಭೇಟಿ

ಅಷ್ಟರಲ್ಲೇ ೨೧ ತೋಪುಗಳ ಶಬ್ದವು ಕೇಳಿ ಬಂತು. ಶ್ರೀಮನ್ಮಹಾರಾಜರವರು ಯುವರಾಜರವರನ್ನು ಸಂಗಡ ಕರೆದುಕೊಂಡು ಸಕಲ ಮರ್ಯಾದೆಗಳೊಡನೆ ಅರಮನೆಯಿಂದ ಮೆರವಣಿಗೆಯಲ್ಲಿ ಹೊರಟು, ೩|| ಗಂಟೆಗೆ ಗವರ್ನಮೆಂಟ್ ಹೌಸ ಬಂಗಲೆಗೆ ಪ್ರವೇಶಿಸಿದರು. ಸರ್ ವಾಲ್ಟರ್ ಲಾರೆನ್ಸ್‌ರವರೂ ರೆಸಿಡೆಂಟರೂ ಬಾಗಿಲಿಗೆ ಬಂದು ಶ್ರೀಮನ್ಮಹಾರಾಜರವರನ್ನು ಸಾರೋಟಿನಿಂದ ಇಳಿಸಿ ಕರೆದುಕೊಂಡು ಹೋಗುತ್ತಿರುವಾಗ್ಗೆ ದರ್ಬಾರ್ ಕೊಠಡಿಯ ಬಾಗಿಲಿಗೆ ಪ್ರಿನ್ಸ್ ಆಫ್ ವೇಲ್ಸ್‌ರವರು ಚಿತ್ತೈಸಿ, ಶ್ರೀಮನ್ಮಹಾರಾಜರವರಿಗೆ ಸುಸ್ವಾಗತವನ್ನು ಬಯಸಿ, ಒಳಕ್ಕೆ ಕರೆದುಕೊಂಡು ಹೋಗಿ, ಶ್ರೇಷ್ಠವಾದ ಕುರ್ಚಿಗಳ ಮೇಲೆ ಕುಳಿತುಕೊಂಡರು. ಶ್ರೀಮನ್ಮಹಾರಾಜರವರು ಅವರ ಬಲಭಾಗದಲ್ಲಿ ಕುಳಿತರು. ಇವರ ಬಲಪಾರ್ಶ್ವದಲ್ಲಿ ಯುವರಾಜರವರೇ ಮೊದಲಾದವರು ಕುರ್ಚಿಗಳ ಮೇಲೆ ಕುಳಿತುಕೊಂಡರು. ಪ್ರಿನ್ಸ್ ಆಫ್ ವೇಲ್ಸ್‌ರವರ ಎಡಭಾಗದಲ್ಲಿ ಬ್ರಿಟಿಷ್ ರೆಸಿಡೆಂಟರು, ಯೂರೋಪಿಯನ್ ಸರ್ದಾರರು ಕುರ್ಚಿಗಳನ್ನು ಅಲಂಕರಿಸಿದ್ದರು. ಪ್ರಿನ್ಸ್ ಆಫ್ ವೇಲ್ಸ್‌ರವರ ಮತ್ತು ಶ್ರೀಮನ್ಮಹಾರಾಜರವರ ಕುರ್ಚಿಗಳ ಹಿಂಭಾಗದಲ್ಲಿ ಊಳಿಗದವರು ಛತ್ರಿ, ಮೋರ್ಚಲ್, ಚಾಮರ ಮೊದಲಾದವನ್ನು ಹಿಡಿದು, ಬಲಾಯಿಸುತ್ತಿದ್ದರು. ಪ್ರಿನ್ಸ್ ಆಫ್ ವೇಲ್ಸ್‌ರವರು ಶ್ರೀಮನ್ಮಹಾರಾಜರವರ ಸಂಗಡ ಸಲ್ಲಾಪ ಮಾಡುತ್ತಿರುವಾಗ ಬ್ರಿಟಿಷ್ ರೆಸಿಡೆಂಟರು ತಮ್ಮ ಕುರ್ಚಿಯಿಂದೆದ್ದು, ಪ್ರಿನ್ಸ್ ಆಫ್ ವೇಲ್ಸ್‌ರವರ ಎದುರಿಗೆ ಬಂದು, ಮರ್ಯಾದಾಪೂರ್ವಕವಾಗಿ ತಲೆಯನ್ನು ಬಗ್ಗಿಸಿ ಮುಜರೆ ಮಾಡಿ, ಬಲಪಾರ್ಶ್ವದಲ್ಲಿ ನಿಂತುಕೊಂಡರು. ಕೂಡಲೆ ಯುವರಾಜರವರು ಎದುರಿಗೆ ಬಂದು ಪ್ರಿನ್ಸ್ ಆಫ್ ವೇಲ್ಸ್‌ರವರ ಮುಜರೆ ಮಾಡಿ, ನಜರನ್ನು ಒಪ್ಪಿಸಿದರು. ಪ್ರಿನ್ಸ್ ಆಫ್ ವೇಲ್ಸ್‌ರವರು ನಜರನ್ನು ಬಲಗೈಯಿಂದ ಮುಟ್ಟಿಬಿಟ್ಟರು. ಯುವರಾಜರವರು ಅವರಿಗೆ ವಂದನಪೂರ್ವಕವಾಗಿ ಮತ್ತೊಂದು ಸಲ ಮುಜರೆ ಮಾಡಿ ತಮ್ಮ ಸ್ಥಾನವನ್ನು ಅಲಂಕರಿಸಿದರು. ಆ ಮೇಲೆ ಇದೇ ರೀತಿಯಲ್ಲಿ ದಿವಾನ್ ಸರ್ ಕೃಷ್ಣಮೂರ್ತಿಯವರೂ, ಸರ್ದಾರ್ ಕಾಂತರಾಜೇ ಅರಸಿನವರೂ, ಕರ್ನಲ್ ದೇಶರಾಜೇ ಅರಸಿನವರೂ, ಸರ್ದಾರ್ ಲಕ್ಷ್ಮೀಕಾಂತರಾಜೇ ಅರಸಿನವರೂ, ಸರ್ದಾರ್ ಗೋಪಾಲರಾಜೇ ಅರಸಿನವರೂ (ಚೀಫ್ ಜಸ್ಟಿಸ್ ಜಸ್ಟಿಸ್ ಸ್ಟೀಲಿಯವರೂ, ಕೌನ್ಸಿಲರ್ ಮ|| ಸಿ. ಶ್ರೀನಿವಾಸಯ್ಯಂಗಾರ್ಯರೂ), ಕೌನ್ಸಿಲರ್ ಮ|| ಸಿ. ಮಾನ್ಯೆಯವರು, ರಾವ್ ಬಹದೂರ್ ..., ಸರ್ದಾರ್ ಸುಬ್ರಹ್ಮಣ್ಯರಾಜೇ ಅರಸಿನವರೂ, ಶ್ರೀಮನ್ಮಹಾರಾಜರವರ ಪ್ರೈವೇಟ್ ಸೆಕ್ರೆಟರಿ ಮ|| ಇ. ಮೆಕಾನಕಿಯವರೂ, ಮೈಸೂರು ಗವರ್ನಮೆಂಟ್ ಜನರಲ್ ಮತ್ತು ರೆವಿನ್ಯೂ ಸೆಕ್ರೆಟರಿ ಮ|| ಕೆ. ವೆಂಕಟವರದಯ್ಯಂಗಾರ್ಯರೂ) ಕ್ರಮವಾಗಿ ಒಬ್ಬರಾದ ಮೇಲೊಬ್ಬರಂತೆ ಎದ್ದು ಬಂದು, ಪ್ರಿನ್ಸ್ ಆಫ್ ವೇಲ್ಸ್‌ರವರಿಗೆ ಮರ್ಯಾದೆಯೊಡನೆ ಮುಜರೆ ಮಾಡಿ, ಮುಂದಕ್ಕೆ ಹೋಗಿ ನಜರನ್ನು ಒಪ್ಪಿಸಿದರು. ಪ್ರಿನ್ಸ್ ಆಫ್ ವೇಲ್ಸ್‌ರವರು ಪ್ರತಿವಂದನೆ ಮಾಡಿ, ನಜರುಗಳನ್ನು ಮುಟ್ಟಿಬಿಟ್ಟರು. ಈ ವ್ಯಕ್ತಿ ಕರ್ನಲ್ ದೇಶರಾಜೇ ಅರಸಿನವರು ತಮ್ಮ ಕತ್ತಿಯ ಹಿಡಿಯನ್ನು ಪ್ರಿನ್ಸ್ ಆಫ್ ವೇಲ್ಸ್‌ರವರಿಗೆ ಒಪ್ಪಿಸಿದಾಗ ಅವರು ಅದನ್ನು ಮುಟ್ಟಿದರು. ಮತ್ತು ಮ|| ಜಸ್ಟಿಸ್ ಸ್ಟೀಲಿಯವರೂ ಮ|| ಮೆಕಾನಕಿಯವರೂ ನಜರನ್ನು ಒಪ್ಪಿಸಲಿಲ್ಲ. ಮುಂದೆ ಪ್ರಿನ್ಸ್ ಆಫ್ ವೇಲ್ಸ್‌ರವರಿಗೆ ಮುಜರೆ ಮಾಡಿದರು. ಅನಂತರ ಊಳಿಗದವರು ಹೊರಗಿನಿಂದ ಪಾನ್‌ದಾನ್ ತಾಂಬೂಲಗಳ ತಟ್ಟೆಗಳನ್ನು ಒಳಕ್ಕೆ ತಂದರು. ಪ್ರಿನ್ಸ್ ಆಫ್ ವೇಲ್ಸ್‌ರವರು ಎದ್ದು ಶ್ರೀಮನ್ಮಹಾರಾಜರವರಿಗೆ ಪಾನ್ ಸುಪಾರಿ, ಅತ್ತರ್ ಪಾನ್‌ಗಳನ್ನು ಒಪ್ಪಿಸಿ ಕುಳಿತುಕೊಂಡರು. ಶ್ರೀಮನ್ಮಹಾರಾಜರವರು ಎದ್ದು ನಿಂತು ಅವುಗಳನ್ನು ಅಂಗೀಕರಿಸಿ, ಪ್ರಿನ್ಸ್ ಆಫ್ ವೇಲ್ಸ್‌ರವರನ್ನು ವಂದಿಸಿ ಕುಳಿತುಕೊಂಡರು. ಅನಂತರ ಪ್ರಿನ್ಸ್ ಆಫ್ ವೇಲ್ಸ್‌ರವರ ಏಡಿಕಾಂಗರು ಎದ್ದು ಮುಂದೆ ಬಂದು, ಅವರಿಗೆ ಮುಜರೆ ಮಾಡಿ, ಯುವರಾಜರೇ ಮೊದಲಾದವರಿಗೆಲ್ಲಾ ಅತ್ತರ್ ಪಾನ್‌ಗಳನ್ನು ಒಪ್ಪಿಸಿ ಮರ್ಯಾದೆ ಮಾಡಿದರು. ಕೂಡಲೇ ಪ್ರಿನ್ಸ್ ಆಫ್ ವೇಲ್ಸ್‌ರವರು ಎದ್ದು ಶ್ರೀಮನ್ಮಹಾರಾಜರವರನ್ನು ದರ್ಬಾರ್ ಕೊಠಡಿಯ ಬಾಗಿಲ ಹೊಸಲಿನವರೆಗೆ ಕರೆದು ತಂದು ಬಿಟ್ಟು ಹಿಂತಿರುಗಿದರು. ಸರ್ ವಾಲ್ಟರ್ ಲಾರೆನ್ಸ್‌ಯವರೂ ಏಡಿಕಾಂಗರುಗಳೂ ಶ್ರೀಮನ್ಮಹಾರಾಜರವರನ್ನೂ ಯುವರಾಜರವರನ್ನೂ ಕರೆದುಕೊಂಡು ಬಂದು ಸಾರೋಟಿನಲ್ಲಿ ಕುಳ್ಳಿರಿಸಿದರು. ಶ್ರೀಮನ್ಮಹಾರಾಜರವರು ಮೆರವಣಿಗೆಯಲ್ಲಿ ಗವರ್ನಮೆಂಟ್ ಹೌಸಿನಿಂದ ಹೊರಟು, ಅರಮನೆಗೆ ಚಿತ್ತೈಸಿದರು. ಗೌರವಾರ್ಥವಾದ ೨೧ ತೋಪುಗಳು ಹಾರಿಸಲ್ಪಟ್ಟವು.

ಪ್ರಿನ್ಸ್ ಆಫ್ ವೇಲ್ಸ್‌ರವರ ಮರುಭೇಟಿ

ಪ್ರಿನ್ಸ್ ಆಫ್ ವೇಲ್ಸ್‌ರವರು ೪ ೧೦ ಕ್ಕೆ ಗವರ್ನಮೆಂಟ್ ಹೌಸ್ ಬಂಗಲೆಯಿಂದ ಸಾರೋಟಿನಲ್ಲಿ ಕುಳಿತು ಶ್ರೀಮನ್ಮಹಾರಾಜರವರ ಜಗನ್ಮೋಹನ ಬಂಗಲೆಯಲ್ಲಿ ಮರುಭೇಟಿ ಕೊಡುವ ಉದ್ದಿಶ್ಯ ಹೊರಟರು. ಗೌರವಾರ್ಥವಾದ ೩೧ ತೋಪುಗಳು ಹಾರಿಸಲ್ಪಟ್ಟವು. [illegible] ಬಹು ವಿಶೇಷವಾದ ಮರ್ಯಾದೆಗಳೊಡನೆ ಕಾದಿ ನಡೆಯಿತು. ಪ್ರಿನ್ಸ್ ಆಫ್ ವೇಲ್ಸ್‌ರವರ ಸಾರೋಟು ಜಗನ್ಮೋಹನ ಬಂಗಲೆಯ ದರ್ಬಾರ್ ಮುಂದಿರುವ ಹೊಸಲಿನ ಬಳಿಗೆ ಬಂದ ಕೂಡಲೇ ಶ್ರೀಮನ್ಮಹಾರಾಜರವರು ಸಾರೋಟಿನ ಬಳಿಗೆ ದಯಮಾಡಿ, ಪ್ರಿನ್ಸ್ ಆಫ್ ವೇಲ್ಸ್‌ರವರು ಸಾರೋಟಿನಿಂದ ಇಳಿಯುತ್ತಿದ್ದಾಗ ಅವರ ಹಸ್ತವನ್ನು ಹಿಡಿದು ಬರಮಾಡಿಕೊಂಡು, ಅವರನ್ನು ಸಂಗಡ ಕರೆದುಕೊಂಡು ದೂರದಲ್ಲಿ ಎತ್ತರವಾದ ಜಗಲಿಯ ಮೇಲೆ ಹಾಕಿದ್ದ ಶ್ರೇಷ್ಠವಾದ ಜೋಡಿ ಕುರ್ಚಿಗಳ ಬಳಿಗೆ ಚಿತ್ತೈಸಿದರು. ಅಲ್ಲಿ ಮೊದಲು ಪ್ರಿನ್ಸ್ ಆಫ್ ವೇಲ್ಸ್‌ರವರಿಗೆ ಅವರ ಆಸನವನ್ನು ತೋರಿಸಿ, ಅವರು ಕುಳಿತುಕೊಂಡ



ನಂತರ ಅವರ ಬಲಪಾರ್ಶ್ವದಲ್ಲಿರುವ ಎರಡನೇ ಕುರ್ಚಿಯಲ್ಲಿ ಶ್ರೀಮನ್ಮಹಾರಾಜರವರು ಕುಳಿತುಕೊಂಡರು.

ದರ್ಬಾರು ವಿವರಣೆಯು

ಪ್ರಿನ್ಸ್ ಆಫ್ ವೇಲ್ಸ್‌ರವರೂ ಶ್ರೀಮನ್ಮಹಾರಾಜರವರೂ ಕುಳಿತಿದ್ದ ಕುರ್ಚಿಗಳ ಹಿಂಭಾಗದಲ್ಲಿ ಮೈಸೂರು ಸಂಸ್ಥಾನದ ರಾಜ ಬಿರುದಾದ ಗಂಡಭೇರುಂಡವೂ, ಅದರ ಮೇಲೆ ಲೇಟ್ ಚಾಮರಾಜೇಂದ್ರ ಒಡೆಯರವರ ಪೂರ್ಣಾಕೃತಿಯ ತಸ್ವೀರೂ ಕಟ್ಟಲ್ಪಟ್ಟಿದ್ದವು. ಉಭಯ ಪಾರ್ಶ್ವಗಳಲ್ಲೂ ಶ್ರೀಮನ್ಮಹಾರಾಜರವರ ಹನುಮದ್ಧ್ವಜ ಗಂಡಭೇರುಂಡಗಳೇ ಮೊದಲಾದ ಬಿರುದಾವಳಿಗಳನ್ನು ಊಳಿಗದವರು ಹಿಡಿದು ನಿಂತಿದ್ದರು. ದರ್ಬಾರ್ ಮಂದಿರದಲ್ಲಿ ಬಲಗಡೆ ಒಂದು ಸಾಲು ಕುರ್ಚಿಗಳಲ್ಲಿ ಬ್ರಿಟಿಷ್ ರೆಸಿಡೆಂಟರು, ಸರ್ ವಾಲ್ಟರ್ ಲಾರೆನ್ಸ್‌ಯವರು ಮೊದಲಾದ ೨೦ ಮಂದಿ ಇಂಗ್ಲಿಷ್ ಸರ್ದಾರರೂ, ಮೂರು ಮಂದಿ ದೇಶೀಯ ಮಿಲಿಟರಿ ಉದ್ಯೋಗಸ್ಥರೂ, ಇದರ್ ಸಂಸ್ಥಾನದ ಮಹಾರಾಜಾ ಸರ್ ಪ್ರತಾಪಸಿಂಗರವರೂ ಕುಳಿತುಕೊಂಡರು. ಎಡಪಾರ್ಶ್ವದಲ್ಲಿ ಅನೇಕ ಏಪಾಡಾಗಿ ಮೂರು ಸಾಲುಗಳ ಕುರ್ಚಿಗಳಲ್ಲಿ ಯುವರಾಜರವರೇ ಮೊದಲಾದ ಸರ್ದಾರರೂ, ದಿವಾನರವರೂ, ಮ|| ತಂಬೂಚೆಟ್ಟಿಯರೂ, ಚೀಫ್ ಕೋರ್ಟ್ ಜಡ್ಜಿಗಳೂ, ಸಮಸ್ತ ಇಲಾಖೆಗಳ ಮುಖ್ಯ ಉದ್ಯೋಗಸ್ಥರೂ ಎಲ್ಲಾ ಡಿಸ್ಟ್ರಿಕ್ಟುಗಳ ಡೆಪ್ಯುಟಿ ಕಮೀಷನರುಗಳೂ, ಸೆಕ್ರೆಟರಿಗಳೂ ದರ್ಜಾನುಸಾರ ಕುಳಿತುಕೊಂಡಿದ್ದರು. ಬಲಗಡೆ ಮೇಲಂತಸ್ತಿನಲ್ಲಿ ಪರದೆಗಳನ್ನು ಕಟ್ಟಿಕೊಂಡು, ಅರಮನೆಯ ಮತ್ತು ರಾಜಬಂಧುಗಳ ಮುಖ್ಯ ಮುಖ್ಯ ಜನಾನಾ ಸ್ತ್ರೀಯರು ಕುಳಿತು ಕೆಳಗೆ ನಡೆಯುವ ದರ್ಬಾರನ್ನು ನೋಡುತ್ತಿದ್ದರು. ಎಡಗಡೆಯ ಮೇಲ್ಭಾಗದ ಅಂತಸ್ತಿನಲ್ಲಿ ಪ್ರಿನ್ಸ್ ಆಫ್ ವೇಲ್ಸ್‌ರವರ ಪತ್ನಿಯವರೂ, ಅವರ ಸಖಿಯರೂ, ಬ್ರಿಟಿಷ್ ರೆಸಿಡೆಂಟರವರ ಪತ್ನಿ ಲೇಡಿ ಫ್ರೇಸರ್‌ಯವರೂ ಶ್ರೇಷ್ಠವಾದ ಕುರ್ಚಿಗಳಲ್ಲಿ ಕುಳಿತುಕೊಂಡಿದ್ದರು. ಇದೇ ಅಂತಸ್ತಿನ ಇನ್ನೊಂದು ಪಾರ್ಶ್ವದಲ್ಲಿ ಬೇರೆ ಬೇರೆ ವರ್ತಮಾನ ಪತ್ರಿಕೆಗಳ ಪ್ರತಿನಿಧಿಗಳು ನಿಂತುಕೊಂಡು, ನೋಡಿದ್ದನ್ನೆಲ್ಲಾ ಬರೆದುಕೊಳ್ಳುತ್ತಿದ್ದರು. ಕೆಳಗಡೆ ದರ್ಬಾರ್ ಸಾಲಿನ ಪ್ರವೇಶ ಮಾರ್ಗದಲ್ಲಿ ಉಭಯ ಪಾರ್ಶ್ವಗಳಲ್ಲೂ ಇಂಪೀರಿಯಲ್ ಸರ್ವಿಸ್ ಕುದುರೆ ಸೈನ್ಯದ ಉದ್ಯೋಗಸ್ಥರೂ ಲೋಕಲ್ ಸರ್ವಿಸ್ ಸಿಲೇದಾರ್ ಸೈನ್ಯದ ಉದ್ಯೋಗಸ್ಥರೂ ಅರಮನೆಯ ಹಲವು ಇಲಾಖೆಗಳ ರಾವುತರು, ಈ ಇಲಾಖೆಗಳ ಮುಖ್ಯಸ್ಥರೂ ಬ್ಯಾಂಡು ವಾದ್ಯಗಾರರೂ ತಮ್ಮ ತಮ್ಮ ಕೆಲಸಗಳಿಗೆ ಸಂಬಂಧಪಟ್ಟ ಆಯುಧಗಳನ್ನು ಹಿಡಿದು ನಿಂತಿದ್ದರು. ಹೊರಗಡೆ ಮೈದಾನಿನಲ್ಲಿ ಕುದುರೆ ಸೈನ್ಯಗಳೂ ಸಿಪಾಯಿಗಳೂ ಕಳಶಕಂಬ ಬಿರುದುಗಳೊಡನೆ ಸಾಲು ಸಾಲಾಗಿ ನಿಂತಿದ್ದರು.

ದರ್ಬಾರು.

ಈ ಪ್ರಕಾರ ಕೂಡಿದ ದರ್ಬಾರ್ ಮಂದಿರದಲ್ಲಿ ಪ್ರಿನ್ಸ್ ಆಫ್ ವೇಲ್ಸ್‌ರವರೂ ಶ್ರೀಮನ್ಮಹಾರಾಜರವರ ಸಂಗಡ ಸಲ್ಲಾಪ ಮಾಡುತ್ತಿರುವಾಗ್ಗೆ ಬ್ರಿಟಿಷ್ ರೆಸಿಡೆಂಟ್ ಮ|| ಎಸ್. ಎಂ. ಫ್ರೇಸರ್‌ಯವರು ತಮ್ಮ ಸ್ಥಾನದಿಂದ ಎದ್ದು ಪ್ರಿನ್ಸ್ ಆಫ್ ವೇಲ್ಸ್‌ರವರ ಮುಂದಕ್ಕೆ ಬಂದು, ಅದಬ್ಬಿನಿಂದ ತಲೆಯನ್ನು ಬಗ್ಗಿಸಿ ಸಲಾಂ ಮಾಡಿ, ಬಲಪಾರ್ಶ್ವದಲ್ಲಿ ನಿಂತುಕೊಂಡರು. ತರುವಾಯ ಶ್ರೀಮನ್ ಯುವರಾಜರವರು ಎದ್ದು ಮುಂದೆ ಬಂದು, ಪ್ರಿನ್ಸ್ ಆಫ್ ವೇಲ್ಸ್‌ರವರಿಗೆ ಮುಜರೆ ಮಾಡಿ ಮೆಟ್ಟಲು ಹತ್ತಿ ಅವರ ಸಮೀಪಕ್ಕೆ ಹೋಗಿ ಎರಡು ಕೈಗಳಿಂದಲೂ ಅವರಿಗೆ ನಜರನ್ನು ಒಪ್ಪಿಸಿದರು. ಪ್ರಿನ್ಸ್ ಆಫ್ ವೇಲ್ಸ್‌ರವರು ಪ್ರತಿಯಾಗಿ ಸಲಾಂ ಮಾಡಿ ನಜರನ್ನು ಮುಟ್ಟಿ ಹಿಂದಕ್ಕೆ ಕೊಟ್ಟರು. ಯುವರಾಜರವರು ಹಾಗೇ ಹಿಂತಿರುಗಿ ಇಳಿದು ಬಂದು ದೂರದಲ್ಲಿ ಮತ್ತೆ ಮುಜರೆ ಮಾಡಿ, ತಮ್ಮ ಆಸನದಲ್ಲಿ ಹೋಗಿ ಕುಳಿತುಕೊಂಡರು. ಅದೇ ಪ್ರಕಾರ ದಿವಾನ್ ಸರ್ ಪಿ. ಎನ್. ಕೃಷ್ಣಮೂರ್ತಿಯವರೂ, ಮ|| ಗಣ್ಣದ ತಂಬೂಚೆಟ್ಟಿಯರು, ಎ. ರಂಗಸ್ವಾಮ್ಯಯ್ಯಂಗಾರ್ಯರು, ಎಚ್. ವಿ. ನಂಜುಂಡಯ್ಯನವರು, ಟಿ. ಆನಂದರಾಯರು, ಎಚ್. ಜೆ. ಭಾಭಾಯವರು, ಬಾಸಪ್ಪನವರು, ಎಂ. ಮುತ್ತಣ್ಣನವರು, ಭಕ್ಷಿ ಬಸಪ್ಪಾಜಿ ಅರಸಿನವರು, ಟಿ. ಬಸವರಾಜೇ ಅರಸಿನವರು. ಒಳವಾಯಿ ದೇವರಾಜೇ ಅರಸಿನವರು, ಇವರೆಲ್ಲಾ ಇದೇ ಕ್ರಮದಲ್ಲಿ ಒಬ್ಬರಾದಮೇಲೊಬ್ಬರಂತೆ ಎದ್ದು ಬಂದು ಪ್ರಿನ್ಸ್ ಆಫ್ ವೇಲ್ಸ್‌ರವರಿಗೆ ಬಗ್ಗಿ ಮುಜರೆ ಮಾಡಿ, ಮೇಲಕ್ಕೆ ಹತ್ತಿ ಹೋಗಿ ನಜರುಗಳನ್ನು ಎರಡು ಕೈಗಳಲ್ಲೂ ಇಟ್ಟು ಒಪ್ಪಿಸಿದರು. ಪ್ರಿನ್ಸ್ ಆಫ್‌ವೇಲ್ಸ್‌ರವರು ಅವರಿಗೆಲ್ಲಾ ಪ್ರತಿಯಾಗಿ ಸಲಾಂಮಾಡಿ, ನಜರುಗಳನ್ನು ಬಲಗೈಯಿಂದ ಮುಟ್ಟಿ ವಾಪಸು ಕೊಟ್ಟರು. ಇಲ್ಲಿಗೆ ದರ್ಬಾರಿನ ಮೊದಲನೆಯ ಭಾಗ ಪೂರೈಸಿತು.

ತರುವಾಯ ಶ್ರೀಮನ್ಮಹಾರಾಜರವರು ಪ್ರಿನ್ಸ್ ಆಫ್ ವೇಲ್ಸ್‌ರವರ ಸಂಗಡ ಸ್ವಲ್ಪ ಹೊತ್ತು ಮಾತನಾಡುತ್ತಿದ್ದರು. ಅಷ್ಟರಲ್ಲೇ ದರ್ಬಾರ್ ಭಕ್ಷಿ ಮ|| ಲಿಂಗರಾಜೇ ಅರಸಿನವರು ಇಬ್ಬರು ಕಟ್ಟಿಗೆಯವರ ಕೈಲಿ ಹಾರತುರಾಯಿ ಅತ್ತರ್‌ಪಾನ್‌ಗಳುಳ್ಳ ತಟ್ಟೆಗಳನ್ನು ತೆಗೆಸಿಕೊಂಡು, ಅದಬ್ಬಿನಿಂದ ಶ್ರೀಮನ್ಮಹಾರಾಜರವರ ಬಳಿಗೆ ಹೋದರು. ಕೂಡಲೇ ಶ್ರೀಮನ್ಮಹಾರಾಜರವರೂ ಪ್ರಿನ್ಸ್ ಆಫ್ ವೇಲ್ಸ್‌ರವರೂ ಎದ್ದು ನಿಂತುಕೊಂಡರು. ಶ್ರೀಮನ್ಮಹಾರಾಜರವರು ತಟ್ಟೆಯೊಳಗಿಂದ ದಿವ್ಯವಾದ ಜವೆ ಭಂಗಾರದ ಪುಷ್ಪಮಾಲಿಕೆಯನ್ನು ಎತ್ತಿ ಪ್ರಿನ್ಸ್ ಆಫ್ ವೇಲ್ಸ್‌ರವರ ಕೊರಳಲ್ಲಿ ಹಾಕಿ, ಬಹು ನೇತ್ರಾನಂದಕರವಾದ ತುರಾಯಿಯನ್ನೊಪ್ಪಿಸಿದ್ದಲ್ಲದೆ, ಅತ್ತರ್ ಪಾನ್‌ಗಳನ್ನು ಕೊಟ್ಟರು. ಪ್ರಿನ್ಸ್ ಆಫ್ ವೇಲ್ಸ್‌ರವರು ನಗುತ್ತಾ ಎಲ್ಲವನ್ನೂ ಸ್ವೀಕರಿಸಿ ಮಹಾರಾಜರವರನ್ನು ವಂದಿಸಿ, ತಮ್ಮ ಸ್ಥಾನವನ್ನಲಂಕರಿಸಿದರು. ಬಳಿಕ ಶ್ರೀಮನ್ಮಹಾರಾಜರವರು ಬ್ರಿಟಿಷ್ ರೆಸಿಡೆಂಟ್ ಮ|| ಫ್ರೇಸರ್‌ಯವರನ್ನೂ ಸರ್ ವಾಲ್ಟರ್ ಲಾರೆನ್ಸ್‌ಯವರನ್ನೂ ತಮ್ಮ ಸ್ಥಾನದ ಬಳಿಗೆ ಕರೆದು, ಅವರಿಬ್ಬರಿಗೂ ಹಾರ ಹಾಕಿ ತುರಾಯಿಗಳನ್ನೂ ಅತ್ತರ್‌ಪಾನ್‌ಗಳನ್ನೂ ಕೊಟ್ಟು ಕಳುಹಿಸಿ, ಯಥಾಪ್ರಕಾರ ಕುಳಿತುಕೊಂಡರು. ಕೂಡಲೆ ದಿವಾನರವರು ಮುಂದೆ ಬಂದು ಪ್ರಿನ್ಸ್ ಆಫ್ ವೇಲ್ಸ್‌ರವರ ಕಡೆಯ ೧೪ ಮಂದಿ ಸರ್ದಾರರುಗಳಿಗೆ ಹಾರ ಹಾಕಿ ತುರಾಯಿಗಳನ್ನು ಅತ್ತರ್‌ಪಾನ್ ಮುಂತಾದ್ದನ್ನು ಕೊಟ್ಟು ಹಿಂತಿರುಗಿ ತಮ್ಮ ಸ್ಥಾನಕ್ಕೆ ಹೋಗಿ ಕುಳಿತುಕೊಂಡರು. ಇಲ್ಲಿಗೆ ದರ್ಬಾರಿನ ಎರಡನೇ ಭಾಗವು ಮುಕ್ತಾಯವಾಯಿತು.

ತರುವಾಯ ಶ್ರೀಮನ್ಮಹಾರಾಜರವರೂ ಪ್ರಿನ್ಸ್ ಆಫ್ ವೇಲ್ಸ್‌ರವರೂ ಎದ್ದು ದರ್ಬಾರನ್ನು ಮುಕ್ತಾಯಮಾಡಿ, ಇಳಿದು ಮಾತನಾಡುತ್ತಾ ನಡೆದು ಬಂದು ಸಾರೋಟಿನ ಬಳಿಯನ್ನು ಸೇರಿದರು. ಅಲ್ಲಿ ಶ್ರೀಮನ್ಮಹಾರಾಜರವರು ಅವರನ್ನು ಗಾಡಿಯೊಳಕ್ಕೆ ಹತ್ತಿಸಿ ಕಳುಹಿಸಿದರು. ಪ್ರಿನ್ಸ್ ಆಫ್ ವೇಲ್ಸ್‌ರವರ ಎದುರುಭಾಗದಲ್ಲಿ ಜನರಲ್ ಬೀಟ್ಸನ್‌ರವರೂ ಸರ್ ವಾಲ್ಟರ್ ಲಾರೆನ್ಸ್‌ಯವರೂ ಕುಳಿತುಕೊಂಡರು. ಸಾರೋಟು ಮುಂದಕ್ಕೆ ಹೊರಟಿತು. ಗೌರವಾರ್ಥವಾದ ೩೧ ತೋಪುಗಳಾದವು. ವಾದ್ಯಗಳು ಘೋಷಿಸಿದವು. ಸಮಸ್ತ ಸೈನಿಕರೂ ಸಲ್ಯೂಟ್ ಮಾಡಿದರು. ಇಸ್ಕಾರ್ಟ್ ಬಿರುದುಗಳೊಂದಿಗೆ ಪ್ರಿನ್ಸ್ ಆಫ್ ವೇಲ್ಸ್‌ರವರು ಜಗನ್ಮೋಹನ ಬಂಗಲೆಯಿಂದ ೫ ಕ್ಕೆ ಹೊರಟು ರೆಸಿಡೆನ್ಸಿ ಬಂಗಲೆಯನ್ನು ತಲುಪಿದರು.

ದೀಪೋತ್ಸವ ಮುಂತಾದ್ದು.

ಅದೇ ಸೋಮವಾರ ರಾತ್ರಿ ಪಟ್ಟಣದಲ್ಲೆಲ್ಲಾ ದೀಪೋತ್ಸವ ನಡೆಯಿತು. ಎತ್ತರವಾದ ಕಟ್ಟಡಗಳ ಮೇಲೆಲ್ಲಾ ದಿನಸಾಮಯವಾಗಿ ದೀಪಗಳನ್ನು ಇಟ್ಟು ಪಟ್ಟಣವನ್ನು ಥಳಥಳನೆ ಹೊಳೆಯುವಂತೆ ಮಾಡಿದ್ದರು. ಯಾವ ಕಡೆ ತಲೆ ಎತ್ತಿ ನೋಡಿದರೂ ದೀಪಗಳ ಸಾಲುಗಳೇ ಕಾಣಿಸುತ್ತಿದ್ದವು. ಚಾಮುಂಡಿ ಬೆಟ್ಟದ ಮೇಲೆ ಬಂಗಲೆ ಬಳಿಯಲ್ಲೂ ಗಾಡಿ ರಸ್ತೆಯ ಸಮೀಪದಲ್ಲೂ ದೇವಸ್ಥಾನದ ಮೇಲೆಯೂ, ಅದರ ಸುತ್ತಲೂ, ಮೆಟ್ಟಲುಗಳ ಉದ್ದಕ್ಕೂ ದೀಪದ ಸಾಲುಗಳು ಕಾಣುತ್ತಿದ್ದವು. ಅಲ್ಲಲ್ಲಿ ದೊಡ್ಡ ದೊಡ್ಡ ಉರಿಗಳನ್ನು ಕೂಡ ಹಾಕಿದ್ದರು.

ರಾಜಧಾನಿಗೆ ಈ ಉತ್ಸವಗಳನ್ನು ನೋಡುವದಕ್ಕಾಗಿ ಬಂದಿರುವ ಎಲ್ಲಾ ಕೋಮುಗಳ ಜನರಿಗೂ ಪ್ರತ್ಯೇಕ ಪ್ರತ್ಯೇಕವಾದ ಕಡೆಗಳಲ್ಲಿ ಈ ದಿನ ಸಮಾರಾಧನೆಗಳು ನಡೆಯುವಂತೆಯೂ, ಕುಂಗಳರಿಗೆಲ್ಲಾ ಬಟ್ಟೆ ಬರೆಗಳು ಕೊಡುವಂತೆಯೂ, ಬೈರಾಗಿಗಳಿಗೆ ಸದಾವರ್ತ್ತ ಕೊಡುವಂತೆಯೂ ಏರ್ಪಾಟಾಗಿದೆ

ಮಂಗಳವಾರ ಬೆಳಗಿನ ಉತ್ಸವ

ಈ ದಿನ ಬೆಳಗ್ಗೆ ಪ್ರಿನ್ಸ ಆಫ್ ವೇಲ್ಸ್‌ರವರು ಇಲ್ಲಿನ ಜನರಲ್ ಆಸ್ಪತ್ರೆಯ ಎದುರು ಪಾರ್ಶ್ವದಲ್ಲಿ ಸೈಯ್ಯಾಜಿರಾವ್ ರಸ್ತೆಯಲ್ಲಿ ಲೇಟ್ ಚಾಮರಾಜೇಂದ್ರವಡೆಯರವರ ಹೆಸರಿನ ಮೇಲೆ ಮೈಸೂರು ಸರ್ಕಾರದವರು ಕಟ್ಟತಕ್ಕ ಕೈಗಾರಿಕೆಗಳ ವಿದ್ಯಾಶಾಲೆಗೆ ಅಸ್ತಿಭಾರವನ್ನು ಹಾಕಿದರು. ಇದಕ್ಕೋಸ್ಕರ ಆ ಸ್ಥಳದಲ್ಲಿ ನಡೆಸಲ್ಪಟ್ಟ ಮುಖ್ಯ ಕಾರ್ಯಗಳನ್ನು ನಮ್ಮ ವಾಚಕರ ತಿಳುವಳಿಕೆ ಬಗ್ಗೆ ಇಲ್ಲಿ ವಿವರಿಸುತ್ತೇವೆ

ಕೈಗಾರಿಕೆ ವಿದ್ಯಾಶಾಲೆಯನು ಕಟ್ಟುವ ಆವರಣದಲ್ಲಿ ದಕ್ಷಿಣ ಪಶ್ಚಿಮ ಭಾಗಗಳನು ಮೇಲ್ಭಾವಣಿ ಹಾಕಿ ಮುಚ್ಚಿ ಒಳಗಡೆ ನಾನಾ ಪ್ರಕಾರವಾದ ಅಲಂಕಾರಗಳನ್ನು ಮಾಡಿ ದೊಡ್ಡಮನುಷ್ಯರು ಕೂತುಕೊಳ್ಳುವದಕ್ಕೆ ಅನುಕೂಲವಾಗಿ ಕುರ್ಚಿಗಳನ್ನು ಸಾಲುಸಾಲಾಗಿ ಹಾಕಿದ್ದರು ಮಧ್ಯೆ ಅಂಗಳದಲ್ಲಿ ಸಾಗುವಾನಿ ಮರದ ಕಂಭಗಳಿಂದಲೂ ಹಲಿಗೆಗಳಿಂದಲೂ ಎತ್ತರವಾದ ಮಂಟಪವನ್ನು ಕಟ್ಟಿ ಅದನ್ನು ಬಣ್ಣಹಾಕಿ ಅಲಂಕರಿಸಿದ್ದರು ಇದರ ಒಳಭಾಗದಲ್ಲಿ ಇಟ್ಟಿಗೆ ಗಾರೆಯಿಂದ ಮೂರು ಅಡಿ ಎತ್ತರವಾದ ಜಗಲಿಹಾಕಿ, ನಡುವೆ ಒಂದು ಸಣ್ಣ ತೊಟ್ಟಿಯನ್ನು ಕಟ್ಟಿ ಇದರ ಮೇಲೆ ಅಸ್ತಿಭಾರ ಕಲ್ಲನ್ನು ಬೆಳ್ಳಿಯ ಗಿಲೀಟಿನ ಕೊಂಡಿಗೆ ತಗಲಿಸಿ, ಬಲವಾದ ಸರಪಣಿಗಳಿಂದ ಎರಡು ಅಡಿ ಎತ್ತರದಲ್ಲಿ ತೂಗಿಸಿದ್ದರು. ಈ ಮಂಟಪದದ ಮುಂಭಾಗದಲ್ಲಿ ಆ ವಿದ್ಯಾಶಾಲೆಯ ಕಟ್ಟಡದ ನಕ್ಷೆಯನ್ನು ಬರೆದು, ತಿಳಿದ ಕಂಭಗಳಿಗೆ ನೇತುಹಾಕಿದ್ದರು. ಇದರ ಉಭಯಪಾರ್ಶ್ವಗಳಲ್ಲೂ ನೀರು ಹಾರುವ ಎರಡು ಬುಗ್ಗೆಗಳನ್ನು ಏರ್ಪಡಿಸಿದ್ದರು



ಈ ಅಂಗಳದ ಸುತ್ತಲೂ ಎತ್ತರವಾದ ಜಗಲಿಗಳನ್ನು ಮಾಡಿ, ಅವುಗಳ ಮೇಲೆ ಬಹು ಮನೋಹರವಾದ ನಾನಾ ಬಗೆಯ ಗಿಡಗಳನ್ನು ಕುಂಡಗಳಲ್ಲಿ ತಂದಿಟ್ಟು ಅಲಂಕಾರ ಮಾಡಿದ್ದರು ಜಗಲಿಯಮೇಲೆಲ್ಲಾ ಬನಾತು ಅಲವಾನ ಮುಂತಾದುವನ್ನು ಹಾಸಿದ್ದರು ಅಸ್ತಿಭಾರ ಮಂಟಪದ ಎಡಬಲಗಳಲ್ಲಿ ಪ್ರಮುಖ ದೊಡ್ಡಮನುಷ್ಯರು ಕೂತುಕೊಳ್ಳುವದಕ್ಕೆ ಅನುಕೂಲವಾಗಿ ಕುರ್ಚಿಗಳನ್ನೂ ಸೋಫಾಗಳನ್ನೂ ಹಾಕಿಸಿದ್ದರು ಎದುರು ಪಾರ್ಶ್ವದ ಒಂದು ಮೂಲೆಯಲ್ಲಿ ಮಹಾರಾಣಿಯವರ ಕಾಲೇಜಿನ ಬಾಲಿಕೆಯರನ್ನು ಗ್ಯಾಲರಿಗಳ ಮೇಲೆ ಸಾಲುಸಾಲಾಗಿ ಕೂಡಿಸಿದ್ದರು ಇವರ ಎದುರುಗಡೆ ಗ್ಯಾಲರಿಗಳಲ್ಲಿ ಸಾಧಾರಣ ಜನರು ಕೂತುಕೊಳ್ಳುವದಕ್ಕೆ ಅವಕಾಶವಾಗಿದ್ದರು ಇವೆರಡು ಗ್ಯಾಲರಿಗಳ ನಡುವೆ ಇಂಡಸ್ಟ್ರಿಯಲ್ ಸ್ಕೂಲಿನ ಬಾಲಕರನ್ನೆಲ್ಲಾ ಸುಂದರವಾದ ಉಡುಪಿನಲ್ಲಿ ಸಾಲಾಗಿ ಕೂಡಿಸಿದ್ದರು. ಮೇಲ್ಕಂಡ ವಾದ್ಯ ಮಂಟಪಕ್ಕೆ ಪಶ್ಚಿಮಪಾರ್ಶ್ವದಲ್ಲಿ ಬೇರೆ ಬೇರೆ ವರ್ತಮಾನ ಪತ್ರಿಕೆಗಳ ಪ್ರತಿನಿಧಿಗಳು ಕೂತುಕೊಂಡು, ಸಂಗತಿಗಳನ್ನು ಪುಸ್ತಕಗಳಲ್ಲಿ ಗುರುತು ಹಾಕಿಕೊಳ್ಳುತ್ತಿದ್ದರು ಎದುರು ಬದಿಯಲ್ಲಿ ಪ್ರಿನ್ಸ ಆಫ್ ವೇಲ್ಸ್ ದಂಪತಿಗಳಿಗೂ ಶ್ರೀಮನ್ಮಹಾರಾಜರವರಿಗೂ ಮೂರು ಶ್ರೇಷ್ಠವಾದ ಚಿನ್ನದ ಕುರ್ಚಿಗಳನ್ನು ಹಾಕಿದ್ದರು ಇವುಗಳ ಹಿಂಭಾಗದಲ್ಲೂ ಅಕ್ಕಪಕ್ಕಗಳಲ್ಲೂ ಸೀಮೆಯ ದೊಡ್ಡ ಮನುಷ್ಯರೂ ಉದ್ಯೋಗಸ್ಥರೂ ಸಾಹೇಬ್ ಜನಗಳೂ ಕುಳಿತಿದ್ದರು.

ಮಹಾರಾಜರವರು ಬಂದದ್ದು

ಬೆಳಗ್ಗೆ ೧೦ ಗಂಟೆಗೆ ಶ್ರೀಮನ್ಮಹಾರಾಜರವರು ಯುವರಾಜರವರ ಸಹಾ ಕರ್ನಲ್ ದೇಶರಾಜೇ ಅರಸಿನವರನ್ನೂ ನಾಲ್ಕು ಕುದುರೆ ಕಟ್ಟಿದ ದಿವ್ಯವಾದ ಸಾರೋಟಿನಲ್ಲಿ ಸಂಗಡ ಕೂರಿಸಿಕೊಂಡ ಸೈನ್ಯದವರನ್ನು ಬಿಟ್ಟುಕೊಂಡು ಅರಮನೆಯಿಂದ ಮೇಲ್ಕಂಡ ಸ್ಥಳಕ್ಕೆ ಚಿತ್ತೈಸಿದರು. ಸೈಯ್ಯಾಜಿರಾವ್ ರಸ್ತೆಯ ಉಭಯ ಪಾರ್ಶ್ವಗಳ ಗ್ಯಾಲರಿಗಳ ಮೇಲೂ ಕೂತಿದ್ದ ಸಾವಿರಾರು ಮಂದಿ ಬಾಲಕರು ಜಯಘೋಷವನ್ನು ಮಾಡಿದರು. ಬಾಗಿಲಿನ ಹತ್ತಿರ ಕಮಾನಿನಲ್ಲಿ ಸಾರೋಟು ನಿಂತುಕೊಂಡಕೂಡಲೆ ಬ್ರಿಟಿಷ ರೆಸಿಡೆಂಟರೂ ಅವರ ಅಸಿಸ್ಟೆಂಟರೂ ಅಲ್ಲಿಗೆ ಬಂದು ಶ್ರೀಮನ್ಮಹಾರಾಜರವರನ್ನು ಇಳಿಸಿಕೊಂಡು ಅಲ್ಲೇ ಅವರ ಸಂಗಡ ಮಾತನಾಡುತ್ತಾ ನಿಂತುಕೊಂಡರು ಬ್ಯಾಂಡ್ ವಾದ್ಯಗಾರರು ಮನೋಹರವಾದ ಸಂಗೀತವನ್ನು ನುಡಿಸುತ್ತಾ ಇದ್ದರು.

ಪ್ರಿನ್ಸ್ ಆಫ್ ವೇಲ್ಸ್ ದಂಪತಿಗಳು.

ಪ್ರಿನ್ಸ್ ಆಫ್ ವೇಲ್ಸ್ ದಂಪತಿಗಳು ಸರ್ ವಾಲ್ಟರ್ ಲಾರೆನ್ಸ್‌ರವರನ್ನು ಕೂಡಿಸಿಕೊಂಡು ನಾಲ್ಕು ಕುದುರೆ ಕಟ್ಟಿದ ಸಾರೋಟಿನಲ್ಲಿ ಸರಿಯಾಗಿ ೧೦½ ಗಂಟೆಗೆ ರೆಸಿಡೆನ್ಸಿ ಬಂಗಲೆಯಿಂದ ಸಕಲ ಮರ್ಯಾದೆಗಳೊಡನೆ ಹೊರಟು ಮೇಲ್ಕಂಡ ಸ್ಥಳಕ್ಕೆ ದಯಮಾಡಿದರು ಸ್ಕೂಲ್ ಹುಡುಗರು ಚಪ್ಪಾಳೆಗಳನ್ನು ತಟ್ಟಿ ಜಯಘೋಷ ಮಾಡಿದರು ಬ್ಯಾಂಡಿನವರು ಸುಸ್ವಾಗತವನ್ನು ಬಯಸುವ ಸಂಗೀತವನ್ನು ಬಾರಿಸಿದರು ಶ್ರೀಮನ್ಮಹಾರಾಜರವರು ಪ್ರಿನ್ಸ್ ಆಫ್ ವೇಲ್ಸ್ ದಂಪತಿಗಳನ್ನು ಕಂಡು ಅವರಿಗೆ ಸುಸ್ವಾಗತವನ್ನು ಬಯಸಿದರು ಪ್ರಿನ್ಸ ಆಫ್ ವೇಲ್ಸ್‌ರವರು ಶ್ರೀಮನ್ಮಹಾರಾಜರವರ ಸಂಗಡಲೂ ಅವರ ಪತ್ನಿಯವರು ಬ್ರಿಟಿಷ ರೆಸಿಡೆಂಟರ ಸಂಗಡಲೂ ಒಳಕ್ಕೆ ಚಿತ್ತೈಸಿದರು ಸಭಾಸದರೇ ಮೊದಲಾದವರೆಲ್ಲಾ ಎದ್ದು ಅವರನ್ನು ವಂದಿಸಿದರು. ಪ್ರಿನ್ಸ್ ಆಫ್ ವೇಲ್ಸ್‌ರವರು ನಡುವಣ ಕುರ್ಚಿಯಲ್ಲೂ, ಅವರ ಪತ್ನಿಯವರು ಎಡಪಾರ್ಶ್ವದಲ್ಲೂ, ಶ್ರೀಮನ್ಮಹಾರಾಜರವರು ಬಲಪಾರ್ಶ್ವದಲ್ಲೂ ಕುಳಿತುಕೊಂಡರು ಶ್ರೀಮನ್ಮಹಾರಾಜರವರು ಸ್ವಲ್ಪ ಹೊತ್ತು ಅವರಸಂಗಡ ಮಾತನಾಡುತ್ತಿದ್ದು, ಎಡಗಡೆಗೆ ತಿರುಗಿ ದಿವಾನರನ್ನು ನೋಡಿದರು. ದಿವಾನ್ ಸರ್ ಪಿ ಎನ್ ಕೃಷ್ಣಮೂರ್ತಿಯವರು ಕೂಡಲೇ ಎದ್ದು ಬಂದು ಪ್ರಿನ್ಸ್ ಆಫ್ ವೇಲ್ಸ್‌ರವರನ್ನು ಕುರಿತು ಒಂದು ವಿಜ್ಞಾಪನಾ ಪತ್ರಿಕೆಯನ್ನು ಓದಿ, ಆ ಕಟ್ಟಡದ ಉದ್ದೇಶ ಮುಂತಾದ್ದನ್ನು ವಿವರಿಸಿ, ಅಸ್ತಿಭಾರಹಾಕಬೇಕೆಂದು ಅರಿಕೆಮಾಡಿದರು. ತರುವಾಯ ಶ್ರೀಮನ್ಮಹಾರಾಜರವರು ಎದ್ದು ನಿಂತು ಇದೇ ಅರ್ಥವನ್ನು ಕೆಲವು ವಾಕ್ಯಗಳಲ್ಲಿ ಹೇಳಿ, ಅಸ್ತಿಭಾರ ಹಾಕಬೇಕೆಂದು ಕೇಳಿದರು ಪ್ರಿನ್ಸ್ ಆಫ್ ವೇಲ್ಸ್‌ರವರು ಪರಮ ಸಂತೋಷದೊಡನೆ ಅವರ ವಾಕ್ಯಗಳನ್ನು ಆಲಿಸಿ, ಸಂಕ್ಷೇಪವೂ ಸಮಯೋಚಿತವೂ ಆದ ಕೆಲವು ಮಾತುಗಳಿಂದ ಪ್ರತ್ಯುತ್ತರವನ್ನಿತ್ತು ಶ್ರೀಮನ್ಮಹಾರಾಜರವರ ಸಂಗಡ ಅಂಗಳಕ್ಕೆ ಇಳಿದು ಬಂದು, ಕಟ್ಟಡದ ನಕ್ಷೆಯನ್ನು ಪರಾಂಬರಿಸಿ, ಬೆಳ್ಳಿ ಕರಣೆಯಲ್ಲಿ ಗಾರೆಯನ್ನು ಎತ್ತಿ ಎರಡಾವರ್ತಿ ಅಸ್ತಿಭಾರದ ಕಲ್ಲಿನ ಕೆಳಗೆ ಹಾಕಿದರು ಇದಕ್ಕೆ ಮುಂಚೆ ಈಗಿನ ಕಾಲದ ಕೆಲವು ನಾಣ್ಯಗಳನ್ನೂ ಕೆಲವು ವರ್ತಮಾನ ಪತ್ರಿಕೆಗಳನ್ನೂ ಒಂದು ಚಿನ್ನದ ಪರಿಕಿನ ಪೆಟ್ಟಿಯಲ್ಲಿಟ್ಟು, ಅಸ್ತಿಭಾರ ಕಲ್ಲಿನ ಕೆಳಗೆ ಮಾಡಿದ್ದ ಗಾರೆತೊಟ್ಟಿಯಲ್ಲಿಟ್ಟರು ಅದರಮೇಲೆ ಅಸ್ತಿಭಾರ ಕಲ್ಲನು ಸರಪಣಿಯಿಂದ ಇಳಿಸಿ ಕೂರಿಸಿ, ಕರಣೆಯನು ಅದರ ಮೇಲೆ ಹೊಡೆದು "ಇದು ಶಾಶ್ವತವಾಗಿರಲಿ" ಎಂದು ಅಪ್ಪಣೆಕೊಡಿಸಿ, ಈ ಕಾರ್ಯವನ್ನು ಮುಕ್ತಾಯಮಾಡಿದರು ಅಲ್ಲಿಗೆ ಸಭೆಯು ಬರಖಾಸ್ತಾಯಿತು ಪ್ರಿನ್ಸ್ ಆಫ್ ವೇಲ್ಸ್‌ರವರು ಪತ್ನಿಸಹಿತ ಮರ್ಯಾದೆಗಳೊಡನೆ ಹಿಂತಿರುಗಿ ರೆಸಿಡೆನ್ಸಿ ಬಂಗಲೆಗೆ ದಯಮಾಡಿದರು. ಶ್ರೀಮನ್ಮಹಾರಾಜರವರು ಅರಮನೆಗೆ ಚಿತ್ತೈಸಿದರು

ನೀತಿರಾಜನು.

ಈ ಲೇಖನವನ್ನು ಬರೆಯುವಾಗ್ಗೆ ಎರಡು ವಿಷಯಗಳು ನನ್ನ ಕಣ್ಣಿನ ಮುಂದೆ ಬಂದು ನಿಂತುಕೊಂಡಂತೆ ತೋರುತ್ತವೆ ಇವುಗಳಲ್ಲಿ ಒಂದು ವಿಷಯವು ಎರಡು ಸಾವಿರ ವರ್ಷಗಳ ಹಿಂದೆ ನಡೆದದ್ದು ಅದರ ವಿವರವೆಂತೆಂದರೆ—ಒಂದು ಮಹಾನಗರದ ಹೊರಗೆ ಒಂದು ಗುಡ್ಡವು ಅದರ ಶಿಖರದಲ್ಲಿ ಮೂರು ಮಂದಿಯನು ಶಿಲುಬೆಯೆಂಬ ಅಡ್ಡಮರಕ್ಕೆ ಮೊಳೆಗಳಿಂದ ಜಡಿದಿರಲಾಗಿ ಅವರನ್ನು ಜನರು ಗುಂಪುಕಟ್ಟಿಕೊಂಡು ನೋಡುತ್ತಿರುವರು ಆ ಮೂರು ಮಂದಿಯೂ ಮಹಾ ಸಂಕಟದಿಂದ ನರಳುತ್ತಾ ಸಾಯುತ್ತಿರುವರು ಇವರಲ್ಲಿಬ್ಬರು ಎರಡು ಪಕ್ಕಗಳಲ್ಲಿದ್ದುಕೊಂಡು ತಮ್ಮಿಬ್ಬರ ನಡುವೆಯಿರತಕ್ಕವನ ಕಡೆಗೆ ನೋಡುತ್ತಿರುವರು ಆ ಮಧ್ಯದ ಪುರುಷನ ಶಿಲುಬೆಯ ತಲೆಯಲ್ಲಿ—"ಇವನು ಯೆಹೂದ್ಯರ ಅರಸನು" ಎಂದು ವಿಳಾಸ ಬರೆದಿರುವದು ಹೀಗೆ ಆ ಅಡ್ಡಮರದ ಮೇಲೆ ತೂಗಾಡುತ್ತಾ ಇರುವವನೇ ಯೇಸುಸ್ವಾಮಿಯು ಆ ಗುಡ್ಡವೇ ಕಲ್ವಾರಿಯೆಂಬುದು. ಯೆರೂಸಲೇಮ್ ಪಟ್ಟಣವೇ ಆ ಮಹಾನಗರವು. ಈ ಯೇಸುಸ್ವಾಮಿಯನೂ ಆತನ ಅಕ್ಕಪಕ್ಕಗಳಲ್ಲಿ ಸಾಯುತ್ತಿರುವ ಇಬ್ಬರು ದುಷ್ಕರ್ಮಿಗಳನೂ ನೋಡುತ್ತಾ ನಿಂತಿರುವ ಗುಂಪಿನ ಜನಗಳಲ್ಲಿ ಕೆಲವರು ಯೇಸುವನು ಗೇಲಿಮಾಡುತ್ತಾ—ನೀನು ಯೆಹೂದ್ಯರ ಅರಸೆಂಬುದು ನಿಜವಾದರೆ ನಿನ್ನನ್ನು ನೀನೇ ರಕ್ಷಿಸಿಕೊಂಡು ಕೆಳಕ್ಕಿಳಿದು ಬರಬಾರದೇ! ಆಗ ನಾವು ನಿನ್ನನ್ನು ನಂಬುವೆವು ಎಂದು ಹೇಳುತ್ತಿರುವರು. ಆಗ ಆ ಪ್ರಾಂತ್ಯವೆಲ್ಲಾ ಕತ್ತಲು ಕವಿದಿರಲು ಯೇಸುವು ಮಹಾ ಧ್ವನಿಯಿಂದ ಕೂಗಿಕೊಂಡು ಪ್ರಾಣವನು ಬಿಟ್ಟನು. ಎರಡು ಸಾವಿರ ವರ್ಷಗಳ ಹಿಂದೆ ನಡೆದಿರುವ ಈ ಸಂಗತಿಯನ್ನೂ ಇನ್ನೂ ಕೆಲವು ದಿನಗಳಲ್ಲಿ ಅಂದರೆ ಮುಂದಣ ಭಾನುವಾರದಲ್ಲಿ ನಡೆಯುವದಕ್ಕಿರುವ ಸಂಗತಿಯನ್ನೂ ಆಲೋಚಿಸಿ ನೋಡಲಾಗಿ ನಮ್ಮೊಳಗೆ ಜನಿಸುವ ಬಹಳವಾದ ಮನೋಭಾವವನ್ನು ವಾಚಕರೇ ಊಹಿಸಿಕೊಳ್ಳಬೇಕಾಗಿದೆ ಭಾನುವಾರದ ಸಾಯಂಕಾಲದಲ್ಲಿ ಮೈಸೂರು ರಾಜಧಾನಿಯಲ್ಲಿರುವ ಕ್ರೈಸ್ತ ದೇವಾಲಯದಲ್ಲಿ ಕ್ರೈಸ್ತ ಧರ್ಮಕ್ಕೆ ಆಶ್ರಿತರಾಗಿ ಕಾಣಬರುವ ಮದ್ರಾಸಿನ ಲಾರ್ಡ್ ಬಿಷಪರೆಂಬ ಕ್ರೈಸ್ತ ಸಭಾಧ್ಯಕ್ಷರು ದೇವಾರಾಧನೆಯನ್ನು ನಡೆಸುವರು ಆಗ್ಗೆ ಪ್ರಿನ್ಸ್ ಆಫ್ ವೇಲ್ಸ್ ರೆಂಬ ಯುವರಾಜರು ತಮ್ಮ ಪತ್ನಿಯವರನ್ನೊಡಗೊಂಡು ಅಲ್ಲಿಗೆ ದಯಮಾಡಿ, ತಮ್ಮೊಡನೆ ಬಂದಿರುವ ದೊಡ್ಡ ದೊಡ್ಡ ಉದ್ಯೋಗಸ್ಥರೂ ಸಹ ಜಗದಾರಾಧನೆಯನ್ನು ಮಾಡುತ್ತಿರುವಲ್ಲಿ ನಡೆಯತಕ್ಕ ವಿಶೇಷವೇನಂದರೆ—ಭೂಮಂಡಲದಲ್ಲಿ ಅತಿ ವಿಸ್ತಾರವಾದದ್ದಾಗಿಯೂ ಐಶ್ವರ್ಯವುಳ್ಳದ್ದಾಗಿಯೂ ಇರುವ ಬ್ರಿಟಿಷರಾಜ್ಯದ ಸಿಂಹಾಸನಕ್ಕೆ ಮುಂದೆ ಅರಸಾಗಿ ಬರತಕ್ಕವನಾಗಿರುವ ಆ ಯುವರಾಜನಿಂದಲೂ ಸಕಲರಾದ ದೊಡ್ಡಮನುಷ್ಯರಿಂದಲೂ ಎದ್ದು ನಿಂತುಕೊಂಡು ಕೇವಲ ಭಕ್ತಿಯಿಂದ—'ಸರ್ವಶಕ್ತನಾಗಿರುವ ತಂದೆಯಾದ ದೇವರನು ನಂಬುತ್ತೇನೆ ಆತನ ಏಕ ಕುಮಾರನಾಗಿರುವ ನಮ್ಮ ಪ್ರಭುವಾದ ಯೇಸುಕ್ರಿಸ್ತನನು ನಂಬುತ್ತೇನೆ ಆತನು ಶಿಲುಬೆಗೆ ಜಡಿಯಲ್ಪಟ್ಟು ಸತ್ತು ಮೂರನೇ ದಿವಸ ಸತ್ತವರೊಳಗಿಂದ ಎದ್ದು ಬಂದು ಪರಲೋಕಕ್ಕೆ ಏರಿಹೋಗಿ ತಂದೆಯಾದ ದೇವರ ಬಲಪಾರ್ಶ್ವದಲ್ಲಿ ಕುಳಿತಿದ್ದಾನೆ' ಎಂದು ಹೇಳಿ ಬರುವಕಿತ್ತು ಪ್ರತ್ಯಕ್ಷವಾಗಿ ಮೊಣಕಾಲೂರಿ ನಿಂತುಕೊಂಡು ಆ ಯೇಸುಸ್ವಾಮಿಯ ಸರ್ವಪ್ರಭುತ್ವವನ್ನು ಒಪ್ಪಿಕೊಳ್ಳುವರು.

ಇವೆರಡು ವಿಷಯಗಳನು ಸ್ವಲ್ಪ ಹೊತ್ತು ಸಾವಧಾನದಿಂದ ಯೋಚಿಸಿದರೆ ಯೆರೂಸಲೇಮ್ ಮಹಾನಗರದ ಆಚೆಯಲ್ಲಿ ಆ ಯೇಸುವಿಗೆ ಸಂಭವಿಸಿದ ಮರಣಸಂಕಟವನ್ನೂ ಅವಮಾನವನ್ನೂ ಒಂದು ಕಡೆಯಲ್ಲಿಯೂ ಮೈಸೂರು ರಾಜಧಾನಿಯಲ್ಲಿ ಮುಂದಣ ಭಾನುವಾರ ಆತನಿಗೆ ಸಲ್ಲುವ ಮಹಾ ಘನವನ್ನು ಮತ್ತೊಂದು ಕಡೆಯಲ್ಲಿಯೂ ಇರಿಸಿ ಹೋಲಿಸಿ ನೋಡಿದರೆ ನಮ್ಮಲ್ಲಿ ಹೇಳಲಶಕ್ಯವಾದ ಆಶ್ಚರ್ಯವು ಹುಟ್ಟುತ್ತದೆ. ಮಹಾ ದುಷ್ಕರ್ಮಿಯೆಂಬುವ ಒಬ್ಬನಿಗೆ ಗುರಿಯಾಗಿ ಪ್ರಾಣವನ್ನು ಕಳಕೊಂಡ ಆ ಯೇಸುವನ್ನೆ ಈಗ ನಮ್ಮ ಕಾಲದಲ್ಲಿ ಸಾಕ್ಷಾತ್ ದೇವರೆಂದು ಭಾವಿಸತಕ್ಕ ಈ ಆಶ್ಚರ್ಯವನು ಏನೆಂದು ಹೇಳೋಣ? ಈ ಸಂಗತಿಗಳನು ಚನ್ನಾಗಿ ವಿಮರ್ಶಿಸಿದರೆ ಇದಕ್ಕೆ ಕಾರಣವೇನೆಂದು ನಿಜವಾಗಿ ಯೇಸುವು ದುಷ್ಕರ್ಮಿಯಲ್ಲ ಮಹಾ ಪರಿಶುದ್ಧನೂ ನೀತಿವಂತನೂ ಆಗಿದ್ದಾನೆ ಎಂದು ನಮ್ಮ ಕಾಲದ ಜನಗಳು ತಿಳಕೊಂಡಿದ್ದಾರೆ ಆತನು ಸಕಲ ವಿಷಯಗಳಲ್ಲಿ ನೀತಿಗೆ ಸಂಪೂರ್ಣ ವಿಧೇಯನಾಗಿ ನಡಕೊಂಡನಂತಲೂ ತಪ್ಪು ಗೆಲಸವನು ಮಾಡಿ ಜನರಂಜನೆಯನು ಸಂಪಾದಿಸುವದಕ್ಕಿಂತ ಮಹಾದ್ರೋಹಿ ಮನುಷ್ಯರ ಕೈಯಲ್ಲಿ ಪ್ರಾಣ ನೀಗುವುದನ್ನು [illegible] ತಿಳಿದು ಸತ್ತುಹೋದನಂತಲೂ ನಮ್ಮ ಕಾಲದಲ್ಲಿ ಜನರು ಗ್ರಹಿಸಿಕೊಂಡಿದ್ದಾರೆ

ಆ ಯೇಸುಸ್ವಾಮಿಯ ರಾಜ್ಯಾಧಿಕಾರವು ಖಡ್ಗದಿಂದಾಗಲಿ ಐಶ್ವರ್ಯದ ಬಲದಿಂದಾಗಲಿ ಸ್ಥಾಪಿಸಲ್ಪಡಲಿಲ್ಲ ಆತನ ನೀತಿಯಿಂದಲೂ ಶುದ್ಧತ್ವದಿಂದಲೂ ಸ್ಥಾಪಿಸಲ್ಪಟ್ಟದೆ ಆದದರಿಂದ ಆತನ ವಿಷಯದಲ್ಲಿ ಹೇಳಿರುವ ಈ ಎರಡು ವೇದವಾಕ್ಯಗಳು ನಿಜವಾಗಿವೆ ಅವುಗಳನು ಹೇಳಿ ಈ ಸಂಕ್ಷೇಪ ಲೇಖನವನು ಮುಗಿಸುತ್ತೇವೆ—

"ದೇವರೇ, ನಿನ್ನ ಸಿಂಹಾಸನವು ಸದಾಕಾಲವಿರುವದು, ನ್ಯಾಯ ದಂಡವೇ ನಿನ್ನ ರಾಜದಂಡವಾಗಿದೆ
ನೀನು ನೀತಿಯನ್ನು ಪ್ರೀತಿಸಿದಿ, ಅಧರ್ಮವನ್ನು ದ್ವೇಷಿಸಿದಿ.
ಆದದರಿಂದ ದೇವರಾಗಿರುವ ನಿನ್ನ ದೇವರು ನಿನ್ನ ಜೊತೆಗಾರರಿಗಿಂತ ನಿನ್ನನ್ನು ಆನಂದ ತೈಲದಿಂದ ಅಭಿಷೇಕಿಸಿದ್ದಾನೆ —
ಇಬ್ರಿ ೧ ೮, ೯.

"ಆತನು ದೇವಸ್ವರೂಪಿಯಾಗಿದ್ದು, ದೇವರಿಗೆ ಸರಿಸಮಾನನಾಗಿರುವದೆಂಬ ಅಮೂಲ್ಯ ಪದವಿಯನ್ನು ಬಿಡಲೊಲ್ಲೆನು ಎಂದೆಣಿಸದೆ ಆಳಿನ ರೂಪವನ್ನು ಧರಿಸಿಕೊಂಡು ಮನುಷ್ಯರಿಗೆ ಸದೃಶನಾಗಿ ತನ್ನನ್ನು ಬರಿದುಮಾಡಿಕೊಂಡನು ಹೀಗೆ ಆತನು ಆಕಾರದಲ್ಲಿ ಮನುಷ್ಯನಾಗಿ ಕಾಣಿಸಿಕೊಂಡು ಮರಣವನ್ನು ಅಂದರೆ ಶಿಲುಬೆಯ ಮರಣವನ್ನಾದರೂ ಹೊಂದುವಷ್ಟು ವಿಧೇಯನಾಗಿ ತನ್ನನ್ನು ದೀನನಾಗ ಮಾಡಿಕೊಂಡನು ಈ ಕಾರಣದಿಂದ ದೇವರು ಆತನನ್ನು ಅತ್ಯುನ್ನತ ಸ್ಥಿತಿಗೆ ತಂದು ಸ್ವರ್ಗ ಮರ್ತ್ಯ ಪಾತಾಳಗಳೊಳಗಿರುವ ಪ್ರತಿಯೊಬ್ಬನು ಯೇಸುವಿನ ಹೆಸರಿನಲ್ಲಿ ಮೊಣಕಾಲೂರಿ ನಮಸ್ಕಾರ ಮಾಡಬೇಕೆಂತಲೂ, ಯೇಸುವನು ಪ್ರಭುವೆಂದು ಪ್ರತಿಜ್ಞೆ ಮಾಡಬೇಕೆಂತಲೂ ಎಲ್ಲಾ ಹೆಸರುಗಳಿಗಿಂತ ಶ್ರೇಷ್ಠವಾದ ಹೆಸರನ್ನು ಆತನಿಗೆ ವರವಾಗಿ ಕೊಟ್ಟಿದ್ದಾನೆ."
—ಫಿಲಿಪ್ಪಿ. ೨ ೬—೧೧.

ವೃತ್ತಾಂತ ಪತ್ರಿಕೆ.
ಪ್ರತಿ ಬೃಹಸ್ಪತಿವಾರವೂ ಪ್ರಕಟಿಸಲ್ಪಡುವದು.
ವಾರ್ಷಿಕ ಚಂದಾ ಟಪಾಲು ಹಾಸಲು ಸೇರಿ ೧—೧೪—೦
ಏಜೆಂಟರು ದೊಡ್ಡ ಪಟ್ಟಣಗಳಲ್ಲೆಲ್ಲಾ ಇದ್ದಾರೆ
ಅವರಿಂದ ಪಡೆಯತಕ್ಕವರಿಗೆ ವಾರ್ಷಿಕ ಚಂದಾ
ರೂ. ೧—೦—೦

Printed and Published by the Rev E W Thompson, at Wesleyan Mission Press, Mysore. 30/1/06

ವೃತ್ತಾಂತ ಪತ್ರಿಕೆ.

REGISTERED No. 20

ಕ್ರಯ ೧ ದುಡ್ಡು | ಕ್ರಯ ೧ ದುಡ್ಡು

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಪುಸ್ತಕ ೧೯ | ಮೈಸೂರು—ಸನ್ ೧೯೦೬ ನೇ ಇಸವಿ ಫೆಬ್ರುವರಿ ತಾರೀಖು ೧ ನೇ ಗುರುವಾರ. | ಸಂಚಿಕೆ ೬ ೫

"ವಾಗ್ದೇವಿ"

112

ಶೃಂಗಾರ ಮೊದಲಾದ ನವರಸಗಳಿಂದ ಭರಿತವಾದ ಕಾದಂಬರಿ ಕ್ರಯ ಒಂದು ರೂಪಾಯಿ ಅಂಚೆ ಹಾಸಲು ಬಿನಾ ಬೇಕಾದವರು ಕೆಳಗಿನ ವಿಳಾಸಕ್ಕೆ ಬರಕೊಳ್ಳಬಹುದು

ಗೋಪಾಲ್ ಶ್ರೀನಿವಾಸರಾವ್, ಮಂಗಳೂರು.

"ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ

ಮೈಸೂರಲ್ಲೂ ಇತರ ಕಡೆಗಳಲ್ಲೂ ಸವತ್ರ ಪತ್ರಿಕೆ ಬುಕ್ ಪೋಸ್ಟು ಮೂಲಕ ಪತ್ರಿಕೆ ಒಂದು ವರುಷಕ್ಕೆ (ಅಡ್ವಾನ್ಸು) . . . ರೂ ೧—೦—೦

ಸ್ಥಳದಲ್ಲಿ ಆ ಸಿರಿಂದ ಅಂಚೆಯ ಮೇಲೆ ಬಂದ ಒಂದು ವರುಷಕ್ಕೆ ೧೨ ತಿಂಗಳ ಕಾಸಲ್

. . . ರೂ ೧—೮—೦

" . . . ೦—೧೫—೦

ಇವರ ಗತಿಬಗ್ಗೆ ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು

ವಿಳಾಸ—ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು.

ಜ್ವರಹರಿ 213

ಇದು ಸಾಧಾರಣ ಜ್ವರ ಚಳಿಜ್ವರ ಮೈಕೈಜ್ವರ ಪಿತ್ಥಜ್ವರ, [illegible], ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲವಿಧವಾದ ಜ್ವರವೂ ಬಹು ಬೇಗನೆ ವಾಸಿಯಾಗುವದು

[illegible] ವಿಸ್ಟ್ರಿಕ್ಟ್ ತಳ್ಳಕೆರೆಯಲ್ಲಿರುವ ಹುಜೂರ್ ಸಬ್ ಓವರ್ಸಿಯರ್ ಎಸ್. ಟಿ. ವೆಂಕಟಪತಿ ಅಯ್ಯನವರು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨೦ ಸೀಸೆಯೂ ತೀರಿಹೋಯಿತು ಇಷ್ಟು ಸ್ವಲ್ಪ ಕಾಲದಲ್ಲೇ ಔಷಧದಿಂದ ಅನೇಕ ಜನರು ಉಗ್ರಜ್ವರ ಪೀಡಿತರು ಚೆನ್ನಾಗಿ ಹೊಂದಿರುವರು ಇನ್ನೂ ಜನಗಳು ಕಾಹಿಲೇ ಬೀಳುತ್ತಿರುವ [illegible] ಇಟ್ಟು ಇನ್ನೊಂದು ೨೦ ಡಜನ ಸೀಸೆಯನ್ನು ವಿ. ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದ

ಕ್ರಯ—ಸೀಸೆ ೧ ಕ್ಕೆ ೮ ಆಣೆ, ೧ ರೂ ೧—೮ ರ, ೨—೧೨ ಆ, ೧೧ ರ ಹನ್ನೆರಡು ಸೀಸೆ ತರಿಸಿಕೊಂಡರೆ ಸ್ಟೇಜು ಮಾಫಿ ಬಿಡಲಾಗುವದು

****

ಓ ಮಂ ಕ ಪೂ ರ



ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆ ಕಳೆತ, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆ ಮಹೌಷಧವಾಗಿ ಪರಿಣಮಿಸಿ, ಕಂಡಲೇ ಗುಣಕೊಡುವದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಯೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ ಇದರ ದರವು ಜ್ವರಹರಿ ಎಂಬ ಔಷಧದಂತೆಯೇ ಸೀಸೆಗಳಲ್ಲಿ ಇರುವದು

[illegible] ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಕೆಮ್ಮಿಯು ಕರ್ಪೂರವನ್ನು ನಾನೂ ಸತ್ಯ ತಾಪೇದಾರರೂ ಮ್ಯುನಿಸಿಪಲ್ [illegible] ಅನೇಕ ವರುಷಗಳಿಂದಲೂ ಕಾಲರಾ ಅಜೀರ್ಣ [illegible] ರೋಗಿಷ್ಠರಿಗೆ ಕೊಡುತ್ತೇವೆ ಕೊಟ್ಟ ಕೂಡಲೆ ರೋಗವು ಗುಣವಾಗುತ್ತಲಿದೆ ಇದು ಬಹು ಒಳ್ಳೇ ಔಷಧ [illegible]

ಈ ಎರಡು ಔಷಧಗಳೂ ಊರುಗಳಲ್ಲಿರುವ ವೈದ್ಯರುಗಳ [illegible] ಹೊಸ್ತು ಶಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇದಲ್ಲದೆ ಕೆಳಗಿನ ವಿಳಾಸದಾರರಲ್ಲಿ ವಿಶೇಷ — [illegible] ಗ್ರೇಟ್ ಇಂಡಿಯನ್ ಔಷಧಗಳ ಕಂಪನಿ, [illegible]

183

ಅದ್ಭುತ ಜನಪರ ಪ್ರಜೆಂಟೇಷನ್ ವಾಚು!

ಈ ಸಚಿತ್ರದಲ್ಲಿ ತೋರಿಸಿರುವ ನಕ್ಷತ್ರ [illegible] ಲಾಕೆಟ್‌ಉಳ್ಳ ಪೇಟೆಂಟ್ ಲಿವರ್ ವಾಚು ಆರು ರತ್ನಗಳುಳ್ಳ ಓಪನ್ ಫೇಸ್ [illegible] ಕಂಪೆನ್ಸೇಷನ್ ಬ್ಯಾಲೆನ್ಸ್ ಬಹು ಭದ್ರವಾದ ಗಡಿಯಾರ. ೫ ವರುಷ ಗ್ಯಾರೆಂಟೀ ಕ್ರಯ ರೂ ೫—೮—೦ ಜನರ ಮುಕ್ತೋಪಯೋಗಕ್ಕಾಗಿ ಡಿಸೆಂಬರ್ ೧ ನೇ ತಾರೀಖು ಮೊದಲು ೫೦೦೦೦ ವಾಚುಗಳು ಮಾರಿ [illegible] ಜರ್ಮನ್ ಸಿಲ್ವರ್ ಚೈನು ಸಹ [illegible] ೦—೮—೦

ಗಡಿಯ ೮ ದಿವಸ ಕ್ರಯ ೩—೮—೦

[illegible] ಕ್ರಯ ೦—೧೦—೦

[illegible] ಕ್ರಯ ೧—೪—೦

[illegible] ಕ್ರಯ ೬—೧೦—೦

ವಿಳಾಸ,—ಫ್ಯಾರಿಕ್ ವಾಚ್ ಕಂಪೆನಿ,

ಪಾರ್ಕ್ ಟವನ್ ಮದರಾಸ್

ಹೋಮಿಯೋಸಿಯಾ

ತಪ್ಪಣೆ ಪರಿಹಾರ

ತಗಲುತ್ತಲೆ ನೋವು ವಾಸಿಯಾಗುತ್ತೆ

ಈ ಔಷಧಿಯು ಮನೆ ಸರಸ, ಕಾರ್ಖಾನೆ, ಆಸ್ಪತ್ರೆ, ಪೋಲೀಸ್ ಠಾಣಾ, ವಿದ್ಯಾಶಾಲೆ, ಕಛೇರಿ, [illegible] ಗಳಲ್ಲೆಲ್ಲಾ ಇದ್ದೇ ಇರಬೇಕು ಇದಕ್ಕೆ ಸಮಾನವಾದ ಔಷಧ ಮತ್ತೊಂದೂ ಇಲ್ಲವೆಂಬುವದು ಲೋಕಪ್ರಸಿದ್ಧವಾಗಿದೆ

ಈ ತೈಲವು ತತ್ಕಾಲದಲ್ಲಿ ಜೀವನಾಗಳಿಗೆ ಮತ್ತು [illegible] ತಕ್ಕ ಔಷಧ ಇದನ್ನು ಉಪಯೋಗಿಸಿದ ದೊಡ್ಡ ಮನುಷ್ಯರು, ಡಾಕ್ಟರುಗಳು, ಮುಂತಾದವರು ಇದರ ಗುಣವನ್ನು ಹೊಗಳಿ ಸರ್ಟಿಫಿಕೇಟುಗಳನ್ನು ಕೊಟ್ಟಿದಾರೆ ನೋವು ಕಂಡರೆ ಇದನ್ನು ಹಚ್ಚಿದ ಕೂಡಲೆ ವಾಸಿಯಾಗುವದು

ಈ ತೈಲವು ಅರೆ ತಲೆನೋವು, ಸೊಂಟನೋವು, ಪಾರ್ಶ್ವವಾಯು, ಮೂಲವ್ಯಾಧಿ, ಉಬ್ಬಸ ವಾಯುಗಳು ನರ ಹೊರಳುವದು ಉಳುಕು, ಕೀಲುವಾಯು, ಗುಳ್ಳೆಗಳು, ಹಲ್ಲುನೋವು, ಮುಖನೋವು, ಊದುಗಳು, ಗೆಡ್ಡೆಗಳು, ರಣಗಳು, ತುರಿಕಜ್ಜಿ, [illegible] ಮತ್ತು ಚೇಳು ಕಡಿದದ್ದು ಚಪ್ಪರವದು, ಬೆಂಕಿಯಲ್ಲಿ ಸುಟ್ಟುಕೊಂಡದ್ದು, ಕತ್ತಿ ಗಾಯ—ಇವೇ ಮೊದಲಾದ ನಾನಾ ಬಾಧೆಗಳನ್ನು ಪರಿಹರಿಸುತ್ತದೆ ರಾತ್ರಿ ಹಚ್ಚಿಕೊಂಡು ಮಲಗಿದರೆ ಸೊಳ್ಳೆ ಹತ್ತಿರ ಸೇರುವದಿಲ್ಲ

ಕ್ರಯ—ಸಣ್ಣ ಡಬ್ಬಿ ೧ ಕ್ಕೆ ೧ ರ, ದೊಡ್ಡದಕ್ಕೆ ರೂ ೨—೮ ಆ, ಒಂದೇ ಸಲ ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ ಬಿಡುತ್ತಾರೆ ರೂ ೨—೮ ಆಣೆ ಬಾಬ್ತು ಡಬ್ಬಿಯಲ್ಲಿ ೧ ರೂ ಡಬ್ಬಿಯಲ್ಲಿರುವದಕ್ಕಿಂತ ೪ ರಷ್ಟು ಹೆಚ್ಚು [illegible] ರೂ ೨—೮ ಆ ಈ ಡಬ್ಬಿಯನ್ನು ತರಿಸಿಕೊಳ್ಳುವವರಿಗೆ ಟಪ್ಪಾಲ್ ಖರ್ಚು ಮಾಫಿ ಬಿಡುತ್ತೆ

****

ಹೋಮಿಯೋಸಿಯಾ ಯಂಬ್ರೋಕೇಷನ್

ಈ ತೈಲವು ಪಶು ನೋವುಗಳಿಗೆ ಉಪಯೋಗಿಸತಕ್ಕದ್ದು ಚರ್ಮ ಒಡೆದ ಕಡೆ ಇದನ್ನು ಹಚ್ಚಕೂಡದು ಇದರಲ್ಲಿ ಹೋಮಿಯೋಸಿಯದ [illegible] ಗಳು ಬಹು ಅಭಿನ್ನವಾಗಿ ಇರುತ್ತವೆ ಅದಕ್ಕಿಂತಲೂ ಇದರಲ್ಲಿ ಇನ್ನೆರಡು ಗುಣಗಳುಳ್ಳ [illegible] ಭಾಗವಿರುತ್ತವೆ ಇದನ್ನು ಚರ್ಮವು ಬಹು ಬೇಗನೆ ಸೇರಿಕೊಳ್ಳಬಲ್ಲದು ಡಬ್ಬಿಗಳಲ್ಲಿ ತುಂಬಿ ೮ ಆಣೆಗೂ, ೧ ರೂ ಗೂ ಒಂದರಂತೆ ಬಿಕರಿ ಮಾಡಲ್ಪಡುವದು ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ ಎಲ್ಲಾ ಪಾತ್ರೆಗಳಲ್ಲಿಯೂ ದೊರೆಯುವದು

ಈ ಔಷಧಗಳ ವಿವರಣೆಯೂ, ಸರ್ಟಿಫಿಕೇಟುಗಳೂ ಉಳ್ಳ ನೋಟೀಸುಗಳನ್ನು ಅಪೇಕ್ಷಿಸಿದರೆ ಕಳುಹಿಸುವೆವು

ವಿಳಾಸ—ಹೋಮೋಸಿಯಾ ಕಂಪನಿ ೨೩ ಸೌಂಡ್ ಬೀಚ್ ರೋಡ್ ಮದರಾಸ್

WANTED WILD ANIMALS.

ಬೇಕಾಗಿದೆ. ಬೇಕಾಗಿದೆ.

542

ಎಲ್ಲಾ ಬಗೆಯ ಕಾಡು ಮೃಗಗಳು ಮೈಸೂರು ಜೂ ಸೂಪರಿಂಟೆಂಡೆಂಟ್ ಮಿ|| ಹ್ಯೂಜಸ್ ರವರು ಕೊಂಡುಕೊಳ್ಳುವರು

Apply to—MR HUGHES, MYSORE ZOO.

"ಭೂಗೋಳ" ಸಂಗ್ರಹ—ಐದನೇ ಮುದ್ರಣ

61

ಮೈಸೂರು ಶಿವರಾಂಪೇಟೆ ವೆಸ್ಲಿಯನ್ ಮಿಷನ್ ಬಾಲಕರ ಪಾಠಶಾಲೆಯ ಹೆಡ್ ಮಾಸ್ಟರಾದ ಮಿ|| ಟಿ. ಎಂ. ರಾಮಸ್ವಾಮಯ್ಯನವರಿಂದ ರಚಿಸಲ್ಪಟ್ಟಿರುವ ಈ ಪುಸ್ತಕವನ್ನು ಈಗ ಮೈಸೂರು ವಿದ್ಯಾಭ್ಯಾಸದ ಇಲಾಖೆಯವರು ದೇಶೀಯ ಪರೀಕ್ಷೆಗಳಿಗೂ ಎಲ್ಲಾ ಪಾಠಶಾಲೆಗಳಿಗೂ ಟೆಕ್ಸ್ಟ್ ಬುಕ್ಕಾಗಿ ನಿಯಮಿಸಿರುತ್ತಾರೆ. ಈ ಪುಸ್ತಕವನ್ನು ಬಹಳವಾಗಿ ತಿದ್ದಿ ಹೊಸ ವಿಷಯಗಳನ್ನು ಅನೇಕವಾಗಿ ಕೂಡಿಸಿ ಪ್ರಕಟಿಸಲಾಗಿದೆ ೧೦೦ ಪ್ರತಿಗಳು ಅಥವಾ ಅದಕ್ಕಿಂತಲೂ ಹೆಚ್ಚಾಗಿ ಒಂದೇ ಸಲ ಕೊಂಡುಕೊಳ್ಳುವವರಿಗೆ ಶೇಕಡಾ ೧೨½ ಯಂತೆ ಡಿಸ್ಕೌಂಟು ಕೊಡಲಾಗುವದು ಪ್ರತಿಗಳನ್ನು ಒಟ್ಟಾಗಿ ತರಿಸಿಕೊಳ್ಳುವವರು—ದಿ ಸೂಪರಿನ್‌ಟೆಂಡೆಂಟ್, ವೆಸ್ಲಿಯನ್ ಮಿಷನ್ ಪ್ರೆಸ್, ಮೈಸೂರು—ಈ ವಿಳಾಸಕ್ಕೂ ಬಿಡಿ ಪ್ರತಿಗಳನ್ನು ತರಿಸಲಪೇಕ್ಷಿಸುವ ವಿದ್ಯಾರ್ಥಿಗಳೇ ಮುಂತಾದವರು—ದಿ ಮ್ಯಾನೇಜರ್, ಸಿ ಎಲ್. ಎಸ್ ಬುಕ್ ಡಿಪೋ, ಮೈಸೂರು—ಈ ವಿಳಾಸಕ್ಕೂ ಬರೆಯತಕ್ಕದ್ದು. ಕ್ರಯ—೧ ಪ್ರತಿಗೆ ೪ ಆಣೆ, ಪೋಸ್ಟೇಜು ೧ ಆಣೆ.

ಮುದ್ರಾಮಂಜೂಷವು—ಎರಡನೆಯ ಮುದ್ರಣ

ಕ್ರಯ, ರೂ ೧—೮—೦ 75

ವಿದ್ಯಾರ್ಥಿಗಳೂ ವಿದ್ಯಾವಂತರೂ ಸಾಮಾನ್ಯ ಪ್ರಜೆಗಳೂ ಅಧಿಕಾರಸ್ಥರೂ ಲೋಕವ್ಯವಹಾರಾದಿಗಳನ್ನು ಪರಿಷ್ಕಾರವಾಗಿ ಕಲಿತುಕೊಳ್ಳುವುದಕ್ಕೆ ವಿಶೇಷ ಸಹಕಾರಿಯಾದ "ಮುದ್ರಾಮಂಜೂಷ" ವೆಂಬೇ ನವರಸಯುಕ್ತವಾದ ಕನ್ನಡ ಗ್ರಂಥವು ಈಗಿನ ವ್ಯಾಕರಣಕ್ಕೆ ಸರಿಯಾಗಿ ತಿದ್ದಿ, ಬಹು ದೊಡ್ಡದಾದ ಹೊಸ ಅಕ್ಷರದಿಂದ ಒಳ್ಳೇ ಗ್ಲೇಜು ಕಾಗದದ ಮೇಲೆ ಅಚ್ಚು ಹಾಕಿ, ಪ್ರಕಟಿಸಲ್ಪಟ್ಟಿದೆ. ರಮ್ಯ ಅಷ್ಟಪತ್ರ, ಸೆಟ್ಟ ಹೊಲಿಗೆ, ಸುಂದರವಾದ ಕ್ಯಾಲಿಕೋ ಬೈಂಡು ಬಹು ಶುದ್ಧವಾದ ಪ್ರತಿ. ಇದಕ್ಕೆ "ಚಾಣಕ್ಯರ ನೀತಿ," "ಚಂದ್ರಗುಪ್ತ ಚಾಣಕ್ಯರ ಕಥೆ" ಎಂಬೀ ಹೆಸರುಗಳೂ ಉಂಟು. ಇಂಥಾ ಸರ್ವೋತ್ತಮವಾದ ಪುಸ್ತಕವನ್ನು ಕನ್ನಡಿಗರೆಲ್ಲಾ ತರಿಸಿ ಓದಿ, ಪ್ರಯೋಜನವನ್ನು ಪಡೆಯುವರೆಂದು ಹಾರೈಸುತ್ತೇವೆ. ಕ್ರಯ ೧ ಪ್ರತಿಗೆ ರೂ ೧—೮—೦, ಪೋಸ್ಟೇಜು ೨ ಆಣೆ ವಿ. ಪಿ. ಪಿ. ತರಿಸಿಕೊಂಡರೆ ರೂ ೧—೧೧—೦ ಬೀಳುವುದು ೧೦೦ ಅಥವಾ ಅದಕ್ಕಿಂತ ಹೆಚ್ಚು ಪ್ರತಿಗಳನ್ನು ತರಿಸಿಕೊಳ್ಳುವ ಪುಸ್ತಕವ್ಯಾಪಾರಿಗಳಿಗೆ ಶೇಕಡಾ ೨೫ ರೂಪಾಯಿಯಂತೆ ಡಿಸ್ಕೌಂಟು ಕೊಡಲಾಗುತ್ತದೆ. ಬೇಗ ಈ ವಿಳಾಸಕ್ಕೇನೇ ಬರಿಯಿರಿ—

ವಿಳಾಸ—ಮ್ಯಾನೇಜರ್, ಸಿ ಎಲ್ ಎಸ್. ಬುಕ್ ಡಿಪೋ,

ಮೈಸೂರು.

ನೋಟಿಸ್.

ಬೆಂಗಳೂರು ಬಸವನಗುಡಿ ಎಕ್ಸ್‌ಟೆನ್ಷನಲ್ಲಿ ೧೧೦×೩೦, ೧೯೦×೪೪ ಅಡಿಗಳುಳ್ಳ ೫೩,೫೫ ನೆ ನಂಬರುಗಳು ಅಂದರೆ ೫೯, ೬೦ ನೆ ಮುನಿಸಿಪಲ್ ಡೋರ್ ನಂಬರುಳ್ಳ ಬಿಲ್ಡಿಂಗ್‌ಸೈಟ್‌ಗಳು ಮಾರಲ್ಪಡುತ್ತವೆ. ಇಷ್ಟಪಡುವವರು ಇದರ ಕೆಳಗೆ ಸಹಿಮಾಡಿರುವವರಿಗೆ ಬರೆಯಬಹುದು. 26-1

ಸೆಟ್ ಪಿ. ಗಂಗಾಧರಪ್ಪ,
ಮೈಸೂರು ಚಾಮರಾಜಪೇಟೆ ಗೊಲ್ಲಗೇರಿ,
೨೬೩ ನೇ ಡೋರ್ ನಂಬರು.

ನೀವು ವಿಲಾಯಿತಿಯಿಂದ ಯಾವ ಸಾಮಾನುಗಳನ್ನಾದರೂ ತರಿಸಿಕೊಳ್ಳಬೇಕಾಗಿದ್ದರೆ 19-3

ಬ್ರೈಡ್ ಮತ್ತು ಈಸ್ಟ್‌ಲೆಂಡ್,

೯೯—೩೪, ಸಿಟಿ ರೋಡ್, ಲಂಡನ್, ಇ. ಸಿ.

ಎಂಬೀ ವಿಳಾಸಕ್ಕೆ ಹಣ ಕಳಿಸಿ, ಕಾಗದ ಬರೆಯಿರಿ ಈ ಕಂಪನಿಯವರು ಪೇಟೆಂಟ್ ಔಷಧಿಗಳನ್ನು, ಅರೆತ್ತು ನಿಗೂ ಮಕ್ಕಳಿಗೂ ಕೊಡುವಂಥಾ, ಯಂತ್ರಗಳಿಂದಲೇ ತಯಾರಾದಂಥಾ ಆಹಾರಗಳನ್ನು, ಇನ್ನೂ ನಾನಾತರದ ಪದಾರ್ಥಗಳನ್ನೂ ಇಟ್ಟು ಬಿಕರಿಮಾಡುತ್ತಾರೆ. ಅವರು ಬಹು ವಿಶೇಷವಾದ ಗಮನಕೊಟ್ಟು, ಸೌಸ್ಥ್ಯವಿಷ್ಟನ್ನು ಅಗ್ಗವಾಗಿ, ಬೇಕಾದ ಸಾಮಾನುಗಳನ್ನೇ ಆರಿಸಿ, ಮರಿಟದ್ದಾಲಿಗೇನೇ ಕಳುಹಿಸಿಕೊಡುವರು.

ದೇವಾಂಗ ವಂಶಸ್ಥರಿಗೆ ಅಗತ್ಯ ಬೇಕಾದದ್ದು.

[redacted] 16-16

ಸ್ವಲ್ಪ ಪ್ರತಿಗಳವೆ ಜಾಗ್ರತೆಪಟ್ಟರೆ ಸಿಕ್ಕುತ್ತವೆ. ನಂತರ ಖಂಡಿತ ಸಿಕ್ಕುವದಿಲ್ಲ. ಸ್ವಕುಲಗುರುಗಳು ಮುದ್ದುಸಂಗ ಮುನಿಸ್ವಾಮಿಗಳು ರಚಿಸಿದ್ದು. ಅರ್ಥಸಹಿತ ದೇವಾಂಗಪುರಾಣ ಸಪ್ತಮಹಾಕಾವ್ಯ ಸುಂದರವಾದ ೧೪ ಚಿತ್ರಗಳು ಸುಲಭವಾಗಿವೆ. ೧೪ ಚಿತ್ರವಿರುವ ಪ್ರತಿ ೧ಕ್ಕೆ ವಿ ಪಿ ಖರ್ಚು ಸೇರಿ ರೂ ೨—೮. ಚಿತ್ರವಿಲ್ಲದ ಇವೆ ಪ್ರತಿ ೧ಕ್ಕೆ ವಿ ಪಿ ಖರ್ಚು ಸೇರಿ ರೂ ೧—೮. ವೇದ ಉಪನಿಷತ್ತುಗಳ ಅರ್ಥಸಹಿತ ಮೂಲಸ್ತಂಭ ೧ಕ್ಕೆ ರೂ ೧—೮. ತಕ್ಷಣ ಮನಿಆರ್ಡರಿಗೂ ವಿ ಪಿ ಆ ಕಳುಹಿಸುತ್ತೆ. ವಿಳಾಸ— ಮೈಸೂರು ದವಳ ಅಂಗಡಿ ಬ್ರಹ್ಮಶ್ರೀ ಯಜಮಾನ ಪುಟ್ಟಮಲ್ಲಯ್ಯ

ಅಪೂರ್ವ ಲಾಭ ಓದಿನೋಡಿರಿ ಬಿಟ್ಟರೆ ಸಿಕ್ಕಲಾರವು.

25 1

(೧೯೦೬ನೇ ವರುಷದ ಪಂಚಾಂಗವು)

ನಮ್ಮ ಕಂಪನಿಯಲ್ಲಿ ನೂತನವಾಗಿ ತಯಾರಾಗಲ್ಪಟ್ಟಿರುವ ೫ ವರುಷದ ಪಂಚಾಂಗಗಳು ಸುಲಭಕ್ರಯಕ್ಕೆ ಸಿಕ್ಕುತ್ತವೆ. ಪ್ರತಿಗಳು ತೀರಾ ಸ್ವಲ್ಪ ಉಳಿದಿರುತ್ತವೆ. ಕರ್ಚಾದನಂತರ ಏನು ಕೊಟ್ಟರೂ ಸಿಕ್ಕಲಾರವು. ಇದಲ್ಲದೆ ನಾವು ಮದ್ರಾಸ್ ಮೊದಲಾದ ಎಲ್ಲಾ ತರದ ಪಂಚಾಂಗಗಳನ್ನು ಕಳುಹಿಸಿಕೊಡುತ್ತೇವೆ. ಈ ಕೆಳಗಿನ ವಿಳಾಸಕ್ಕೆ ಬೇಗನೆ ಬರೆದುಕೊಳ್ಳಿರಿ.

೫ ವರುಷದ ಪಂಚಾಂಗ ೧ಕ್ಕೆ ೨ ಆಣೆ ೭ ಪೈ ನಾಲ್ಕಕ್ಕಿಂತಲೂ ಕಡಮೆಯಾಗಿ ಕಳುಹಿಸಲಾರೆವು.

ಮೆ॥ ಗುರುಶಾಂತಪ್ಪ ತಲಿಗಿಮಠ
ಹರಪನಹಳ್ಳಿ ಜಿಲ್ಲಾ ಬಳ್ಳಾರಿ.

ಸ್ಥಿರಸ್ವತ್ತುಗಳ ಅನ್ಯಾಕ್ರಾಂತ ಮಾಡೋಣವು.

27-1

ಮೈಸೂರಲ್ಲಿದ್ದ ಮೋಹಿನಿಖಾನೆ ಸಾಹುಕಾರ್ ತಿಮ್ಮಪ್ಪಯ್ಯನವರು ಬೆಂಗಳೂರು, ಮೈಸೂರು, ಹಳ್ಳಿ ಮುಂತಾದ ಕಡೆ ತಮ್ಮ ಹೆಸರಿನಲ್ಲಿಯೂ, ನೆಪಮಾತ್ರಕ್ಕೆ ತಮ್ಮ ಮಕ್ಕಳ ಹೆಸರುಗಳಲ್ಲಿಯೂ ಸ್ಥಿರ ಚರ ಸ್ವತ್ತುಗಳನ್ನು ಆರ್ಜಿಸಿ, ಕಾಲವಾದರು. ಈ ಸ್ವತ್ತುಗಳೆಲ್ಲಾ ಅವರ ಮಕ್ಕಳಾದ ಅನಂತರಾಜಯ್ಯ, ಸೂರಣ್ಣ, ಪದ್ಮನಾಭಯ್ಯ ಎಂಬುವರಿಗೂ ಮೊಮ್ಮಕ್ಕಳಾದ ಅಧಿರಾಜಯ್ಯನವರಿಗೂ ಹಿಸ್ಸೆಯಾಗತಕ್ಕ ಕುಟುಂಬದ ಒಟ್ಟು ಆಸ್ತಿಗಳಾಗಿರುತ್ತವೆ. ಇವುಗಳಲ್ಲಿದರ ವಿಷಯದಲ್ಲಿಯೂ ಹಿಸ್ಸೆದಾರರಾದ ನಮ್ಮಗಳಲ್ಲಿ ಬಹಳ ತಕರಾರುಗಳಿರುತ್ತವೆ. ಹಾಲಿ ಈ ಸ್ವತ್ತುಗಳಲ್ಲಿ ಕೆಲವುಗಳು ಎಂದರೆ ಗುಂಡಾ ನರಸಿಂಗಯ್ಯನವರಿಂದ ಕ್ರಯಕ್ಕೆ ಪಡೆದಿರುವ ಮೈಸೂರು ಬಾಳೆರಾಜೆ ಅರಸಿನವರ ಲಾಯದ ಬಳಿ ಇರುವ ಹಾಲಿ ನಿವೆ ಶನ, ಲಾಯ, ಗುರೂಜಿ ಸ್ಟೇಟ್ ಇರುವ ಬಂಗ್ಲಾ, ವಾಸ್ತ, ಮನೆ, ಇದೇ ಊರ ಬಳಿ ಇರುವ ವೀಳ್ಯದೆಲೆ ತೋಟ ಮುಂತಾದವುಗಳ ಕ್ರಯ ಪತ್ರವು ತಮ್ಮ ಹೆಸರಿನಲ್ಲಿ ಇರುವುದೊಂದು ನೆಪದ ಮೇಲೆ ಪದ್ಮನಾಭಯ್ಯನವರು ಮೋಸಮಾಡುವ ಇರಾದೆಯಿಂದ ತಾವು ಒಬ್ಬರೇ ಅನ್ಯಾಕ್ರಾಂತ ಮಾಡುವ ಪ್ರಯತ್ನದಲ್ಲಿ ಇರುವದಾಗಿ ತಿಳಿಯಬಂದಿದೆ. ಈ ಸ್ವತ್ತುಗಳನ್ನು ಗುಂಡಾನರಸಿಂಗಯ್ಯನವರು ಮೋಹಿನಿಖಾನೆ ತಿಮ್ಮಪ್ಪಯ್ಯನವರಿಗೆ ಕೊಡಬೇಕಾಗಿದ್ದ ಸಾಲಕ್ಕಾಗಿ ಸದರಿ ತಿಮ್ಮಪ್ಪಯ್ಯನವರಿಗೇನೇ ಕ್ರಯ ಮಾಡಿದ್ದು ವಾಸ್ತವ್ಯವೆಂದು ಕೋರ್ಟಿನಲ್ಲಿಯೂ ಕೂಡ ತೀರ್ಮಾನವಾಗಿದೆ. ಸಂಗತಿ ಇಳಿದಿರುವ ಹಿಸ್ಸೆದಾರರ ಪೈಕಿ ಕ್ರಯ ... ಮಾಡಿಕೊಳ್ಳತಕ್ಕವರು ನೋಡಿ ... ಈ ಮೂಲಕ ಸರ್ವರಿಗೂ ಎಚ್ಚರಿಸಿರುತ್ತೇವೆ. ಇದರ ಮೇಲೆ ಕಾರ್ಯ ಮಾಡಿಕೊಳ್ಳುವವರು ಎಲ್ಲಾ ಕರ್ತವ್ಯಗಳಿಗೂ ಗುರಿಯಾಗುವರು.

ಮೈಸೂರು, ೩೦-೧-೧೯೦೬. ಮೋ. ಸೂರಣ್ಣ

CHAMBERLAIN'S COLIC, CHOLERA AND DIARRHOEA REMEDY.

ಚೇಂಬರ್ಲೇನ್ ಯವರು ಹೊಟ್ಟೆಶೂಲೆ, ಕಾಲರಾ, ಭೇದಿಗಳಿಗೆ ಕಂಡು ಹಿಡಿದಿರುವ ಔಷಧವು.

15-4



ಕೆಳ ಹೊಟ್ಟೆಯ ನೋವು, ಬಿರೇಭೇದಿಯಾಗುವುದು, ಆಮಶಂಕೆ, ವಾಂತಿಭೇದಿ(ಕಾಲರ), ಕೀಲಿನ ನೋವು, ಹೊಟ್ಟೆಯ ನಾನಾ ತರದ ಶೂಲೆಗಳು—ಈ ರೋಗಗಳನ್ನೆಲ್ಲಾ ವಾಸಿಮಾಡುತ್ತದೆ. ಈ ಸಮಯೋಚಿತ ಯುಕ್ತವಾದ ಔಷಧವು ಜನರನ್ನು ಬದುಕಿಸಿರುವಷ್ಟು, ಮತ್ತು ನೋವನ್ನೂ ಬಾಧೆಯನ್ನೂ ನಿವಾರಿಸಿರುವಷ್ಟು ಪ್ರಪಂಚದಲ್ಲೇ ಇನ್ಯಾವ ಔಷದವೂ ಮಾಡಿರುವುದಿಲ್ಲ.

ಜ್ಞಾಪಕದಲ್ಲಿಟ್ಟುಕೊಳ್ಳಿ—ಒಂದು ಹೊತ್ತು ಈ ಔಷಧವನ್ನು ಸೇವಿಸಿದ ಕೂಡಲೇ ಹೊಟ್ಟೆಯಲ್ಲಿರುವ ಎಲ್ಲಾ ತರದ ನೋವನ್ನೂ ನಿಲ್ಲಿಸಿಬಿಡುತ್ತದೆ. ಬಹಳ ಕಠಿಣವಾದ ಭೇದಿಯನ್ನು ಕೂಡ ಮೂರೇ ಹೊತ್ತು ಈ ಔಷಧದಿಂದ ನಿರ್ಮೂಲ ಮಾಡಿ ನಿಲ್ಲಿಸುತ್ತದೆ. ಖಂಡಿತವಾಗಿ ವಾಸಿ ಮಾಡುವುದೇ ಇದರ ಗುಣ.

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ.

ಕೈಯಿಂದ ಸ್ವಲ್ಪವೂ ಮುಟ್ಟಿದ್ದಲ್ಲ.

ಇದು ಎಲ್ಲೆಲ್ಲೂ ಬಿಕರಿಯಾಗುವುದು ಸಣ್ಣ ಸೀಸೆಗೆ ೧ ರೂಪಾಯಿ ದೊಡ್ಡ ಸೀಸೆಗೆ ೨ ರೂಪಾಯಿ

ಇಂಡಿಯಾ ವ್ಯವಸಾಯ ಮತ್ತು ಸಹಾಯಕ ಆಫೀಸು

14 19

[೧೯೦೦ರಲ್ಲಿ ಸ್ಥಾಪಿತವಾದದ್ದು]

ಈ ಆಫೀಸಿನ ಉದ್ದೇಶವೇನಂದರೆ—ಯಾವ ಜಾತಿಯವರೇ ಆಗಲಿ ಮತದವರೇ ಆಗಲಿ ಈ ಆಫೀಸಿನ ಚಂದಾದಾರರಾಗಿ ಅದರ ಭರವಸೆ ಪತ್ರವನ್ನು ಹೊಂದಿದ್ದರೆ ಅವರ ಮರಣಾನಂತರ ಅವರ ಕುಟುಂಬದವರಿಗೆ ಸಹಾಯವು ಕೊಡಲ್ಪಡುವದು.

ಈ ಆಫೀಸಿನ (A) ತರಗತಿಗೆ ಸೇರಿದವರು ಪಡೆಯಬೇಕೆಂದಪೇಕ್ಷಿಸುವ ಪ್ರತಿ ೧೦೦೦ ರೂಪಾಯಿಗಳ ಮೊಬಲಗಿಗಾಗಿ ವಾಸಯಾನಾ ಒಂದೊಂದು ರೂಪಾಯಿಯ ಪ್ರಕಾರ ಒಟ್ಟು ರೂ ೫೬ ನ್ನು ಮಾತ್ರವೇ ಸಲ್ಲಿಸಬೇಕಾಗುವದು.

ಆಫೀಸಿನವರು ಚಂದಾದಾರರಿಂದ ವಸೂಲಾದ ಮೊಬಲಗನ್ನು ಶಾಸ್ತ್ರೀಯರೀತಿಯಾಗಿ ನಡೆಸಲ್ಪಡುವ ವ್ಯವಸಾಯಕ್ಕೆ ಹಾಕಿ ಅದರಿಂದ ಬಂದ ಲಾಭದಿಂದಲೇ ಚಂದಾದಾರರ ಸಹಾಯದ್ರವ್ಯವನ್ನು ಕೊಡಲಾಗುವದು. ವ್ಯವಸಾಯ ನಿಮಿತ್ತವಾಗಿ ನಾವು W I.P. ರೈಲ್ವೆ ಪಕ್ಕದಲ್ಲಿರುವ "ಕೆಲ್ಲಂ ಎಸ್ಟೇಟ್" ಎಂಬ ಸರ್ವೋತ್ಕೃಷ್ಟವಾದ ಭೂಮಿಯನ್ನು ೯೯ ವರ್ಷಕ್ಕೆ ಸ್ವಂತವಾಗಿ ಪಡೆದಿದ್ದೇವೆ. ಈ ಭೂಮಿಗೆ ಒಂದು ಹೊಳೆಯಿಂದ ಕಾಲುವೆ ಮೂಲಕ ನೀರನು ತಂದುಕೊಂಡಿರುವದರಿಂದ ಫಸಲು ಕಡಮೆಯಾಗುವದೆಂಬ ಭಯವೇ ಇಲ್ಲ.

ಈ ಆಫೀಸಿನಲ್ಲಿ ಭರವಸಪತ್ರವನ್ನು ಪಡೆದಿರುವವರು ಚಂದಾದಾರರಾಗಿ ಮಾತ್ರ ಇದ್ದಾರೆ. ಆದಾಯ ನಷ್ಟಗಳಿಗೆ ಭಾಗಿಗಳಾದ ಷೇರುದಾರರಾಗಿರುವದಿಲ್ಲ. ಆದರೂ ಅವರ ೬೦ಕ್ಕೆ ನಮ್ಮ ಜೋಸ್ತಿಯು ಆಧಾರವಾಗಿರುತ್ತದೆ.

ಚಂದಾ ವೆ ಬಿಲಗನ್ನೆಲ್ಲಾ ಪಾವತಿ ಮಾಡಿ ಭರವಸಪತ್ರವನ್ನು ಪಡೆದಿರುವ ಯಾವ ಚಂದಾದಾರನಿಗಾಗಲಿ ಆಫೀಸಿನಿಂದ ಬರತಕ್ಕ ಲಾಭವು ತೃಪ್ತಿಕರವಾಗಿ ಕಂಡುಬಾರದಿದ್ದರೆ ತಾನು ಸಲ್ಲಿಸಿರುವ ಚಂದಾಮೊಬಲಗನ್ನೆಲ್ಲಾ ವಾಪಸುಪಡೆಯಬಹುದು.

ಈ ಆಫೀಸಿಗೆ ಸಬ್ ಏಜಂಟುಗಳು ಬೇಕಾಗಿದೆ. ವಿವರವಾಗಿ ತಿಳಿಯಬಯಸುವವರು ಅರ್ಧಾಣೆ ಸ್ಟಾಂಪಿಟ್ಟು ಕೆಳಗಿನ ವಿಳಾಸಕ್ಕೆ ಇಂಗ್ಲೀಷಿನಲ್ಲಿ ಬರೆದುಕೊಳ್ಳತಕ್ಕದ್ದು.

ವಿಳಾಸ —The Manager,
The India Agricultural and Helping Office,
Vengurla Post, Bombay Presidency

ವೃತ್ತಾಂತ ಪತ್ರಿಕೆ

ಸನ್ ೧೯೦೬ ನೇ ಇಸವಿ ಫೆಬ್ರುವರಿ ತಾ॥ ೧ ನೇ ಗುರುವಾರ

ಡೆನ್ಮಾರ್ಕ್ ದೊರೆಯವರ ಮರಣವು.

ಯುರೋಪ್ ಖಂಡದ ರಾಜ್ಯಗಳಲ್ಲಿ ಒಂದಾದ ಡೆನ್ಮಾರ್ಕ್ ಸಂಸ್ಥಾನದಲ್ಲಿ ಒಂಬತ್ತನೇ ಕ್ರಿಶ್ಚಿಯನ್ ಎಂಬ ವೃದ್ಧ ದೊರೆಯು ಕಾಲವಾದರೆಂದು ಮೊನ್ನೆ ದಿನ ತಂತೀ ವರ್ತಮಾನ ಬಂದಿದೆ. ಇವರು ಕಳೆದ ೧೮೧೮ ನೇ ಏಪ್ರಲ್ ೮ ರಲ್ಲಿ ಜನಿಸಿ, ೧೮೬೩ ರಲ್ಲಿ ಸಿಂಹಾಸನವನ್ನು ಹತ್ತಿದರು. ಈಚೆಗೆ ಇವರ ಪತ್ನೀಯವರು ೮೧ ವರುಷದ ತನಕ ಬದುಕಿದ್ದು ೧೮೯೮ ರಲ್ಲಿ ಕಾಲವಾಗಿ ವಿಯೋಗದುಃಖ ಭಾಜನರನ್ನಾಗಿ ಮಾಡಿದರು. ವಿಲಾಯತಿ ರಾಜ್ಯದ ಮಹಾರಾಜ್ಞೀ ಅಲೆಕ್ಸಾಂಡ್ರಾ ರಾಣಿಯವರು ಈ ದೊರೆಯವರ ಪುತ್ರಿಯಾಗಿರುತ್ತಾರೆ. ಇವರ ಇನ್ನೊಬ್ಬ ಕುಮಾರ್ತಿಯು ಈಗಿನ ರಷ್ಯಾ ಚಕ್ರವರ್ತಿನಿಯಾಗಿರುವರು. ಈಗ ನಮ್ಮ ರಾಜಧಾನಿಗೆ ದಯಮಾಡಿ, ಇಲ್ಲಿನ ಉತ್ಸವಗಳಿಗೆ ಕಾರಣಕರ್ತರಾಗಿರುವ ಪ್ರಿನ್ಸ್ ಆಫ್ ವೇಲ್ಸ್ ರವರಿಗೆ ತಮ್ಮ ಜನಕತಾಯಿಯು ತಂದೆ ಕಾಲವಾದ ಸುದ್ದಿಯು ವ್ಯಸನವನ್ನುಂಟು ಮಾಡಿದೆ ಎಂದು ತಿಳಿಸಲು ವಿಷಾದಿಸುತ್ತೇವೆ. ಆದರೂ ಪ್ರಿನ್ಸ್ ಆಫ್ ವೇಲ್ಸ್ ರವರು ತಮ್ಮ ಮನೋ

ವ್ಯಥೆಯನ್ನು ಪ್ರಕಾಶಪಡಿಸದೆ ಉತ್ಸವಗಳಲ್ಲಿ ಸಹಭಾಗಿಗಳಾಗಿರುವುದು ವಿಶೇಷ ಸ್ತೋತ್ರಾರ್ಹವಾಗಿರುತ್ತದೆ.

ನೀತಿರಾಜನು.

ಈ ಲೇಖನವನ್ನು ಬರೆಯುವಾಗ್ಗೆ ಎರಡು ವಿಷಯಗಳು ನನ್ನ ಕಣ್ಣಿನ ಮುಂದೆ ಒಂದು ನಿಂತುಕೊಂಡಂತೆ ತೋರುತ್ತವೆ. ಅವುಗಳಲ್ಲಿ ಒಂದು ವಿಷಯವು ಎರಡು ಸಾವಿರ ವರ್ಷಗಳ ಹಿಂದೆ ನಡೆದದ್ದು. ಅದರ ವಿವರವೇನೆಂದರೆ—ಒಂದು ಮಹಾನಗರದ ಹೊರಗೆ ಒಂದು ಗುಡ್ಡವು. ಅದರ ಶಿಖರದಲ್ಲಿ ಮೂರು ಮಂದಿಯನ್ನು ಶಿಲುಬೆಯ ಅಡ್ಡಮರಕ್ಕೆ ಮೊಳೆಗಳಿಂದ ಜಡಿದಿರಲಾಗಿ ಅವರನ್ನು ಜನರು ಗುಂಪುಕಟ್ಟಿಕೊಂಡು ನೋಡುತ್ತಿರುವರು. ಆ ಮೂರು ಮಂದಿಯೂ ಮರಣಸಂಕಟದಿಂದ ನರಳುತ್ತಾ ಸಾಯುತ್ತಿರುವರು. ಇವರಲ್ಲಿಬ್ಬರು ಎರಡು ಪಕ್ಕಗಳಲ್ಲಿದ್ದುಕೊಂಡು ಮಧ್ಯೆಯಿದ್ದವರ ಸಮಯೋಚಿತಕ್ಕನನ ನೋಡುತ್ತಿರುವರು. ಆ ಮಧ್ಯದ ಪುರುಷನ ಶಿಲುಬೆಯ ತಲೆಯಲ್ಲಿ "ಇವನು ಯೆಹೂದ್ಯರ ಅರಸನು" ಎಂದು ವಿಳಾಸ ಬರೆದಿರುವ ಹೀಗೆ ಆ ಅಪಮಾನದ ಮೇಲೆ ತೂಗಾಡುತ್ತಾ ಇರುವವನೇ ಯೇಸುಸ್ವಾಮಿಯು. ಆ ಗುಡ್ಡವೇ ಕಲ್ವಾರಿಬೆಟ್ಟವು. ಯೆರೂಸಲೇಮ್ ಪಟ್ಟಣವೇ ಆ ಮಹಾನಗರವು. ಈ ಯೇಸುಸ್ವಾಮಿಯನ್ನೂ ಪಕ್ಕಗಳಲ್ಲಿ ಸಾಯುತ್ತಿರುವ ಇಬ್ಬರು ದುಷ್ಕರ್ಮಿಗಳನ್ನೂ ನೋಡುತ್ತಾ ನಿಂತಿರುವ ಗುಂಪಿನ ಜನಗಳಲ್ಲಿ ಕೆಲವರು ಯೇಸುವನ್ನು ಗೇಲಿಮಾಡುತ್ತಾ—ನೀನು ಯೆಹೂದ್ಯರ ಅರಸನೆಂಬುದು ನಿಜವಾದರೆ ನಿನ್ನನ್ನು ನೀನೇ ರಕ್ಷಿಸಿಕೊಂಡು ಕೆಳಕ್ಕಿಳಿದು ಬರಬಾರದೇ! ನಾವು ನಿನ್ನನ್ನು ನಂಬುವೆವು ಎಂದು ಹೇಳುತ್ತಿರುವರು. ಆಗ ಆ ತ್ಯಾಗಶೀಲನು ಕತ್ತಲು ಕವಿದಿರಲು ಯೇಸುವು ಮಹಾ ಧ್ವನಿಯಿಂದ ಕೂಗಿಕೊಂಡು ಪ್ರಾಣವನ್ನು ಬಿಟ್ಟನು. ಎರಡು ಸಾವಿರ ವರ್ಷಗಳ ಹಿಂದೆ ನಡೆದಿರುವ ಈ ಸಂಗತಿಯನ್ನೂ ಇನ್ನು ಕೆಲವು ದಿನಗಳಲ್ಲಿ ಮುಂದಣ ಭಾನುವಾರದಲ್ಲಿ ನಡೆಯಲಿರುವ ಸಂಗತಿಯನ್ನೂ ಆಲೋಚಿಸಿ ನೋಡಲಾಗಿ ನಮ್ಮೆಲ್ಲರಿಗೆ ಬಹು ಆಶ್ಚರ್ಯವಾದ ಮನೋಭಾವವನ್ನು ವಾಚಕರೇ ಊಹಿಸಿಕೊಳ್ಳಬೇಕಾಗಿದೆ. ಭಾನುವಾರದ ಬೆಳಗಿನ ಕಾಲದಲ್ಲಿ ಮೈಸೂರು ರಾಜಧಾನಿಯಲ್ಲಿರುವ ಕ್ರೈಸ್ತ ದೇವಾಲಯದಲ್ಲಿ ಕ್ರೈಸ್ತ ಭಕ್ತರು ಅನೇಕರಾಗಿ ಕೂಡಿರುವರು. ಸುಪ್ರಸಿದ್ಧ ಬಿಷಪರೆಂಬ ಕ್ರೈಸ್ತ ಧರ್ಮಾಧ್ಯಕ್ಷರು ದೇವಾರಾಧನೆಯನ್ನು ನಡೆಸುವರು. ಆಗ್ಗೆ ಪ್ರಿನ್ಸ್ ಆಫ್ ವೇಲ್ಸ್ ರೆಂಬ ಯುವರಾಜರು ಪತ್ನಿಯವರೊಡಗೂಡಿ ಅಲ್ಲಿಗೆ ದಯಮಾಡಿ, ತಮ್ಮೊಡನೆ ಬರುವ ದೊಡ್ಡ ದೊಡ್ಡ ಉದ್ಯೋಗಸ್ಥರೊಡನೆ ಭಗವದಾರಾಧನೆಯನ್ನು ಮಾಡುತ್ತಿರುವಲ್ಲಿ ನಡೆಯತಕ್ಕ ವಿಶೇಷವೇನಂದರೆ—ಭೂಮಂಡಲದಲ್ಲಿ ಅತಿ ವಿಸ್ತಾರವಾದದ್ದಾಗಿಯೂ ಐಶ್ವರ್ಯವುಳ್ಳದ್ದಾಗಿಯೂ ಇರುವ ಬ್ರಿಟಿಷರಾಜ್ಯದ ಸಿಂಹಾಸನಕ್ಕೆ ಮುಂದೆ ಅರಸಾಗಿ ಬರತಕ್ಕವರಾದ ಆ ಯುವರಾಜರು ಮೊದಲಾಗಿ ಸಕಲರಾದ ದೊಡ್ಡಮನುಷ್ಯರೆಲ್ಲರೂ ಎದ್ದು ನಿಂತುಕೊಂಡು ಕೇವಲ ಭಕ್ತಿಯಿಂದ—"ಸರ್ವಶಕ್ತರಾದ ತಂದೆಯಾದ ದೇವರನ್ನು ನಂಬುತ್ತೇನೆ. ಆತನ ಏಕ ಕುಮಾರನಾಗಿರುವ ನಮ್ಮ ಪ್ರಭುವಾದ ಯೇಸುಕ್ರಿಸ್ತನನ್ನು ನಂಬುತ್ತೇನೆ. ಆತನು ಶಿಲುಬೆಗೆ ಜಡಿಯಲ್ಪಟ್ಟು ಸತ್ತು ಮೂರನೇ ದಿವಸ ಸತ್ತವರೊಳಗಿಂದ ಎದ್ದುಬಂದು ಪರಲೋಕಕ್ಕೆ ಏರಿಹೋಗಿ ತಂದೆಯಾದ ದೇವರ ಬಲಪಾರ್ಶ್ವದಲ್ಲಿ ಕುಳಿತಿದ್ದಾನೆ" ಎಂದು ಹೇಳಿ ಭಯಭಕ್ತಿಪೂರ್ವಕವಾಗಿ ಮೊಣಕಾಲೂರಿ ನಿಂತುಕೊಂಡು ಆ ಯೇಸುಸ್ವಾಮಿಯ ಸರ್ವಶ್ರೇಷ್ಠತ್ವವನ್ನು ಒಪ್ಪಿಕೊಳ್ಳುವರು.

ಇವೆರಡು ವಿಷಯಗಳನ್ನು ಸ್ವಲ್ಪ ಹೊತ್ತು ನಾನಾ ರೀತಿಯಲ್ಲಿ ಯೋಚಿಸಿರಿ. ಯೆರೂಸಲೇಮ್ ಮಹಾನಗರದ ಬಳಿಯಲ್ಲಿ ಆ ಸಾವಿಗೆ ಸಂಭವಿಸಿದ ಮರಣಸಂಕಟವನ್ನೂ ಅಪಮಾನವನ್ನೂ ಬಳಿಕ ಕಡೆಯಲ್ಲಿಯೂ ಮೈಸೂರು ರಾಜಧಾನಿಯಲ್ಲಿ ಮುಂದಣ ಭಾನುವಾರ ಆತನಿಗೆ ಸಲ್ಲಿಸಲ್ಪಡುವ ಮಹಾ ಸನ್ಮಾನವನ್ನು ಮತ್ತೊಂದು ಕಡೆಯೂ ಇರಿಸಿ ಹೋಲಿಸಿ ನೋಡಿದರೆ ನಮ್ಮಲ್ಲಿ ಹೇಳಲಶಕ್ಯವಾದ ಯೋಗ್ಯತೆ ಹುಟ್ಟುತ್ತದೆ. ಮಹಾ ದುಷ್ಕರ್ಮಿಯೆಂಬುವ ಭಾವನೆಗೆ ಗುರಿಯಾಗಿ ಪ್ರಾಣವನ್ನು ಕಳೆದುಕೊಂಡ ಆ ಯೇಸುವನ್ನೇ ಈಗ ಈ ಕಾಲದಲ್ಲಿ ಸಾಕ್ಷಾತ್ ದೇವರೆಂದು ಭಾವಿಸತಕ್ಕ ಈ ಆಶ್ಚರ್ಯವನ್ನು ಏನೆಂದು ಹೇಳೋಣ? ಈ ಸಂಗತಿಗಳನ್ನು ಚೆನ್ನಾಗಿ ವಿಮರ್ಶಿ

...ಕಾರಣವೇನೆಂದು ನೋಡಲಾಗಿ ಯೋಸುವ ದುಷ್ಟನೆ ೯ರಲ್ಲಿ ...ಬಿದ್ದನೂ ಧೀವಂತನೂ ಆಗಿದ್ದನು ... ನನ್ನ ... ಕಲಿಸಿಕೊಂಡಿದ್ದನು; ಆತನು ಸಕಲ ವಿಷಯಗಳಲ್ಲಿ ... ಸತ್ಪುರುಷನೆಂದು ನಡೆದು ... ಸಂಪಾದಿಸುವದಕ್ಕಿಂತ ... ನಮ್ಮ ... ಗ್ರಹಿಸಿಕೊಂಡಿದ್ದರು.

ಆ ಯೋಸುವಿನ ರಾಜ್ಯಭಾರದಲ್ಲಿ ... ದ ಬಲವೇನೆಂದಾದರೂ ಸ್ಥಾಪಿಸಲ್ಪಟ್ಟಿಲ್ಲ; ಆತನ ನೀತಿ ... ದಿಂದಲೇ ಸ್ಥಾಪಿಸಲ್ಪಟ್ಟಿದೆ. ಆದದರಿಂದ ಆತನ ... ಹೇಳಿರುವ ಈ ಎರಡು ವೇದವಾಕ್ಯಗಳು ವಿಶ್ವಯವಾಗಿ ... ಗಳನ್ನು ಹೇಳಿ ಈ ಸಂಕ್ಷೇಪ ಲೇಖನವನ್ನು ಮುಗಿಸುತ್ತೇವೆ—

"ದೇವರೇ, ನಿನ್ನ ಸಿಂಹಾಸನವು ಸದಾಕಾಲವಿರುವದು, ನ್ಯಾಯದ ದಂಡವೇ ನಿನ್ನ ರಾಜದಂಡವಾಗಿದೆ.

ನೀನು ನೀತಿಯನ್ನು ಪ್ರೀತಿಸಿದಿ, ಅಧರ್ಮವನ್ನು ದ್ವೇಷಿಸಿದಿ. ಆದದರಿಂದ ದೇವರಾಗಿರುವ ನಿನ್ನ ದೇವರು ನಿನ್ನ ಜೊತೆಗಾರರಿಗಿಂತ ನಿನ್ನನ್ನು ಆನಂದ ತೈಲದಿಂದ ಅಭಿಷೇಕಿಸಿದ್ದಾನೆ."—
ಇಬ್ರಿ ೧ ೮, ೯

"ಆತನು ದೇವಸ್ವರೂಪಿಯಾಗಿದ್ದು, ದೇವರಿಗೆ ಸರಿಸಮಾನನಾಗಿರುವದೆಂಬ ಅಮೂಲ್ಯ ಪದವಿಯನ್ನು ಬಿಡಲೊಲ್ಲೆನು ಎಂದೆಣಿಸದೆ ಆಳಿನ ರೂಪವನ್ನು ಧರಿಸಿಕೊಂಡು ಮನುಷ್ಯರಿಗೆ ಸದೃಶನಾಗಿ ... ಆತನು ಆಕಾರದಲ್ಲಿ ಮನುಷ್ಯನಾಗಿ ಕಾಣಿಸಿಕೊಂಡು ಮರಣವನ್ನು ಅಂದರೆ ಶಿಲುಬೆಯ ಮರಣವನ್ನಾದರೂ ಹೊಂದುವಷ್ಟು ವಿಧೇಯನಾಗಿ ತನ್ನನ್ನು ... ತಗ್ಗಿಸಿಕೊಂಡನು. ಈ ಕಾರಣದಿಂದ ದೇವರು ಆತನನ್ನು ಅತ್ಯುನ್ನತ ಸ್ಥಿತಿಗೆ ತಂದು, ಸ್ವರ್ಗ ಮರ್ತ್ಯ ಪಾತಾಳಗಳಲ್ಲಿರುವ ಪ್ರತಿಯೊಬ್ಬನು ಯೇಸುವಿನ ಹೆಸರಿನಲ್ಲಿ ಮೊಣಕಾಲೂರಿ ನಮಸ್ಕಾರ ಮಾಡಬೇಕೆಂತಲೂ ... ಕರ್ತನೆಂದು ಪ್ರತಿಜ್ಞೆ ಮಾಡಬೇಕೆಂತಲೂ ಎಲ್ಲಾ ಹೆಸರುಗಳಿಗಿಂತ ಶ್ರೇಷ್ಠವಾದ ಹೆಸರನ್ನು ಆತನಿಗೆ ಉದಾರವಾಗಿ ಕೊಟ್ಟಿದ್ದಾನೆ." — ಫಿಲಿಪ್ಪಿ ೨ ೬—೧೧

ಪ್ರಿನ್ಸ್ ಆಫ್ ವೇಲ್ಸ್‌ರವರು ಬೆಂಗಳೂರು ಪಟ್ಟಣಕ್ಕೆ ಆಗಮಿಸುವದೂ ಅಲ್ಲಿ ನಡೆಯುವ ಕಾರ್ಯಗಳೂ.

ಫೆಬ್ರವರಿ ೫ನೇ ಸೋಮವಾರ

ಈ ದಿನ ಬೆಳಿಗ್ಗೆ ... ಗಂಟೆಗೆ ಸರಿಯಾಗಿ ಪ್ರಿನ್ಸ್ ಆಫ್ ವೇಲ್ಸ್ ... ಬೆಂಗಳೂರಿಗೆ ದಯಮಾಡುವರು. ಸ್ಟೇಷನಿನ ಮೇಲೆ ... ಪಟ್ಟೆಗಳ ಮಂಟಪದಲ್ಲಿ ಒಂದು ದೊಡ್ಡ ಚಪ್ಪರವು ಕಟ್ಟಲ್ಪಡುವದು. ಇವರ ಗಾಡಿ ಸರಿಯಾಗಿ ರಾಜರ ಗಾಡಿಯು ಬಂದುನಿಲ್ಲುವ ಸ್ಟೇಷನ್ ಸುತ್ತಲೂ ಅಲಂಕಾರಮಾಡಲ್ಪಡುವದು. ರಾಜರು ... ಇಳಿದ ಕೂಡಲೆ ಎನ್ಸೆನ್ ರೆಜಿಮೆಂಟಿನವರು ವಿಧಿ ಪದ್ಧತಿಯ ಪ್ರಕಾರ ಅವರಿಗೆ ಮರ್ಯಾದೆಯನ್ನು ಮಾಡುವರು. ... ತೋಪುಗಳು ಹಾರಿಸಲ್ಪಡುವವು. ಆ ಕಾಲದಲ್ಲಿ ರೆಸಿಡೆಂಟ್ ... ಬೆಂಗಳೂರು ದಂಡಿನ ಮಿಲಿಟರಿ ಆಫೀಸರರು, ಮೈಸೂರು ... ಆಫೀಸರುಗಳು ೩ ಜನ ಮುನಿಸಿಪಲ್ ಕಮಿಷನರರುಗಳು, ... ದೊಡ್ಡ ಮನುಷ್ಯರು ಇಲ್ಲಿ ಬಂದು ಸೇರಿರುವರು. ವರ್ತಕರ ... ಗಳ ಪ್ರತಿನಿಧಿಗಳು ಬಂದಿರುವರು. ಆಗ ಮ್ಯುನಿಸಿಪಾಲಿಟಿ ... ಒಂದು ವಿಜ್ಞಾಪನಾಪತ್ರಿಕೆಯನ್ನು ... ಪ್ರಿನ್ಸ್ ಆಫ್ ವೇಲ್ಸ್ ರವರು ... ಸ್ಟೇಷನಿನಿಂದ ... ಸಾರೋಟುಗಳ ಮೇಲೆ ... ಉತ್ತರ ಪಕ್ಕದಲ್ಲಿ ... ಮಾರ್ಗವಾಗಿ ರೆಸಿಡೆನ್ಸಿ ಬಂಗಲೆಗೆ ದಯಮಾಡಿಸುವರು. ... ರೆಜಿಮೆಂಟಿನ ಫೌಜಿನವರು ಪ್ರಿನ್ಸ್ ಆಫ್ ವೇಲ್ಸ್‌ರ ... ಮೆರವಣಿಗೆ ಮಾಡಿ ... ಹೋಗುವರು. ... ಆಫೀಸರು ರಾಜರ ಗಾಡಿಯ ಒಂದು ಭಾಗದಲ್ಲೂ, ಇವರ ಸಹಾಯಕ ... ಇನ್ನೊಂದು ಭಾಗದಲ್ಲೂ ಕುದುರೆ ಸವಾರಿ ಮಾಡಿಕೊಂಡು ... ರೈಲ್ ಸ್ಟೇಷನಿನಿಂದ ರೆಸಿಡೆನ್ಸಿವರೆಗೆ ಇರುವ ರಸ್ತೆಗಳು ... ಪೋಲೀಸಿನವರಿಂದ ಕಾಯಲ್ಪಟ್ಟಿರುವದು. ರಾಜರು ರೆಸಿಡೆನ್ಸಿಯನ್ನು ಸೇರಿದಾಗ ೩೧ ಗುಂಡುಗಳು ಹಾರಿಸಲ್ಪಡುವವು. ... ಸ್ಟೇಷನಿಗೆ ಹೋಗತಕ್ಕವರು ಟಿಕೆಟ್ಟುಗಳನ್ನು ಪಡೆದಿರಬೇಕು. ... ಇಲ್ಲದೆ ಯಾರನ್ನೂ ಬಿಡುವುದಿಲ್ಲ. ರಸ್ತೆಗಳು ... ಬೆಳಿಗ್ಗೆ ೩ ಗಂಟೆಯಿಂದ ೯ ಗಂಟೆವರೆಗೆ ರೈಲ್ವೆ ಸ್ಟೇಷನ್ ... ಯಾರನ್ನೂ ಬಿಡುವುದಿಲ್ಲ.

ಈ ದಿನ ಮಧ್ಯಾಹ್ನ ೪॥ ಗಂಟೆಗೆ ಪ್ರಿನ್ಸ್ ಆಫ್ ವೇಲ್ಸ್‌ರವರು ... ಪಾರ್ಕಿನಲ್ಲಿ ವಿಕ್ಟೋರಿಯಾ ಮಹಾರಾಣಿಯವರ ಪ್ರತಿಮೆ ... ಪ್ರತಿಷ್ಠೆ ಮಾಡುವರು. ಇದನ್ನು ನೋಡಲಿಕ್ಕೆ ಹೋಗತಕ್ಕ ... ಟಿಕೆಟ್ಟನ್ನು ಪಡೆದು ಹೋಗಬೇಕು. ಈ ಪ್ರಾಂತ್ಯ ಇರತಕ್ಕ ... ಗಳನ್ನು ಬೈದು ಮಾಡಲ್ಪಡುವವು. ಅಲ್ಲಿ ಕಟ್ಟಿರುವ ಒಂದು ... ದಲ್ಲಿ ಪ್ರಿನ್ಸ್ ಆಫ್ ವೇಲ್ಸ್ ದಂಪತಿಗಳು ಕೂರಿಸಲ್ಪಡು ... ಅಲ್ಲಿ ರೆಸಿಡೆಂಟರವರು ಅವರನ್ನು ಎದುರುಗೊಂಡು ಮೇಲೆ ... ಸರ್ ಪಿ ಎನ್ ಕೃಷ್ಣಮೂರ್ತಿಯವರು ಅವರಿಗೆ ಒಂದು ... ಓದಿ ಒಪ್ಪಿಸುವರು. ಅನಂತರ ಪ್ರತಿಮೆಯ ಗೌನು ತೆರೆ ... ದು. ಆಗ ೧೦೧ ತೋಪುಗಳು ಮೊದಲಾದ ಮರ್ಯಾದೆ ... ಯುವವು.

ಇದಾದ ಬಳಿಕ ರಾಜರು ಲಾಲ್ ಬಾಗ್ ಉದ್ಯಾನವನಕ್ಕೆ ದಯಮಾಡಿ, ಅಲ್ಲಿನ ವಿಚಿತ್ರವಾದ ಫಲಪುಷ್ಪಗಳನ್ನು ಪರಾಂಬರಿಸುವರು. ಈ ಕಾಲದಲ್ಲಿ ಲಾಲ್ ಬಾಗಿಗೆ ಯಾರನ್ನೂ ಬಿಡುವುದಿಲ್ಲ. ಅಲ್ಲಿಗೆ ರಸ್ತೆಗಳು ... ಈ ದಿನ ರಾತ್ರಿ ೮ ಗಂಟೆಯಲ್ಲಿ ... ಯೂರೋಪಿಯನ್ನರಿಗೋಸ್ಕರ ಒಂದು ಸಭೆಯು ... ಇದಕ್ಕೂ ಟಿಕೆಟ್ಟುಳ್ಳವರು ಮಾತ್ರ ಬರತಕ್ಕದ್ದು.

ಫೆಬ್ರವರಿ ೬ ನೇ ಮಂಗಳವಾರ

ಈ ದಿನ ಬೆಳಿಗ್ಗೆ ೮ ಗಂಟೆಗೆ ಪ್ರಿನ್ಸ್ ಆಫ್ ವೇಲ್ಸ್‌ರವರು ಒಂದು ಮಿಲಿಟರಿ ಕಂಪನಿಯವರಿಗೆ ಹೊಸದಾದ ಬಿರುದನ್ನು ಕೊಡುವುದಕ್ಕಾಗಿ ಪರೇಡ್ ಮೈದಾನಕ್ಕೆ ಹೋಗುವರು. ದಂಡು ಕವಾತ್ ಆಗತಕ್ಕ ಸ್ಥಳದಲ್ಲಿ ನೋಟವು ಆಗುವುದು. ಇದನ್ನು ನೋಡುವುದಕ್ಕೆ ಪ್ರಿನ್ಸ್ ಆಫ್ ವೇಲ್ಸ್‌ರವರೂ ದಯಮಾಡುವರು. ಇಲ್ಲಿಗೆ ಮಿಲಿಟರಿ ಆಫೀಸರುಗಳೂ ಇತರರೂ ಬರುವರು.

ಈ ದಿನ ಮಧ್ಯಾಹ್ನ ೬॥ ಗಂಟೆಗೆ ರೆಸಿಡೆನ್ಸಿ ಬಂಗಲೆಯಲ್ಲಿ ಒಂದು ಗಾರ್ಡನ್ ಪಾರ್ಟಿ ಆಗುವುದು.

ಫೆಬ್ರವರಿ ೭ ನೇ ಬುಧವಾರ

ಪ್ರಿನ್ಸ್ ಆಫ್ ವೇಲ್ಸ್ ದಂಪತಿಗಳು ಈ ದಿನ ಬೆಳಿಗ್ಗೆ ೧೦ ಗಂಟೆಗೆ ಸದರ್ನ ಮಹಾರಾಷ್ಟ್ರ ರೈಲ್ವೆ ಮಾರ್ಗವಾಗಿ ಹೈದರಾಬಾದ್ ಸಂಸ್ಥಾನವನ್ನು ಕುರಿತು ಪ್ರಯಾಣ ಮಾಡುವರು. ಆಗ ೩೧ ತೋಪುಗಳು ಹಾರಿಸಲ್ಪಡುವವು. ಇವರು ಬಂದ ದಾರಿಯಲ್ಲಿಯೇ ಸ್ಟೇಷನಿಗೆ ಮಿಲಿಟರಿ ಫೌಜಿನ ಸಮೇತ ಹೊರಡುವರು.

[ಈ ಪ್ರಕಟಣೆ ... ಈಚೆಗೆ ... ತೇವೆ —ಎಡಿ]

ಮೈಸೂರು ಗೆಜೆಟ್ ಸಂಗ್ರಹ.

ಮದರಾಸ್ ಅಧೀನದಲ್ಲಿ ಅಕ್ಟಿಂಗ್ ಸೂಪರಿಂಟೆಂಡೆಂಟರಾಗಿರುವ ಮಿ ಐ ಜಿ ಡೇವಿಡ್ ರವರನ್ನು ಕೋಲಾರ್ ಚಿನ್ನದ ಗಣಿಗಳ ಪೋಲೀಸ್ ಸುಪರಿಂಟೆಂಡೆಂಟ್ ಕೆಲಸಕ್ಕೆ ನೇಮಿಸಿಕೊಂಡಿದೆ.

ಚಾಮರಾಜ ನಗರದ ತಾಲ್ಲೂಕ್ ಅಮಲ್ದಾರ್ ಮತ್ತು ೩ ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾದ ಮೆ॥ ಸಿ ಕೃಷ್ಣರಾಯರು ಅಪರಾಧಿಗಳಿಗೆ ಚಾಟಿ ಏಟಿನ ಶಿಕ್ಷೆ ವಿಧಿಸಲು ಅಧಿಕಾರ ಕೊಡಲ್ಪಟ್ಟಿದ್ದಾರೆ.

ಕೆನ್ಸಿಲ್ ಡಿವಿಜನ್ ... ಇಂಜನಿಯರ್ ಮೆ॥ ವೆಂಕಟರಾವ್ ಬಿಇ ... ರವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ... ದಿನಗಳವರೆಗೆ ಪ್ರಿವಿಲೇಜ್ ರಜಾ ಕೊಟ್ಟಿದೆ.

ಭೂಗರ್ಭ ಶಾಸ್ತ್ರ ... ಇಲಾಖೆಯ ಜ್ಯಾಲಜಿಸ್ಟ್ ಮತ್ತು ಲೆಕ್ಚರರ್ ಮೆ॥ ವಿ ಎಸ್ ಸಾಂಬಶಿವ ಅಯ್ಯರ್ ರವರಿಗೆ ಕೊಟ್ಟಿದ್ದ ಒಂದು ತಿಂಗಳ ... ದಿನಗಳ ಪ್ರಿವಿಲೇಜ್ ರಜವನ್ನು ಅವರು ಉಪಯೋಗಿಸಿಕೊಂಡು, ವಾಪಸು ಬಂದು ಜನವರಿ ೧೬ರಲ್ಲಿ ಕೆಲಸದ ಛಾರ್ಜನ್ನು ವಹಿಸಿಕೊಂಡಿದ್ದರಿಂದ ಆ ವ್ಯಕ್ತಿ ಕೇವಲ ಉಪಯೋಗಿಸಿಕೊಳ್ಳದೆ ಇರುವ ರಜವನ್ನು ರದ್ದುಮಾಡಿದೆ.

ಗಣಿಗಳ ಚೀಫ್ ಇನ್ಸ್ಪೆಕ್ಟರಾದ ಮೆ॥ ಆರ್ ರಾಕ್ಲೆ ರವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ... ದಿನಗಳ ಪ್ರಿವಿಲೇಜ್ ರಜಾ ಕೊಟ್ಟಿದೆ.

ಪ್ರಿನ್ಸ್ ಆಫ್ ವೇಲ್ಸ್‌ರವರ ಆತಿಥ್ಯವು.

ಮೈಸೂರು ಪಟ್ಟಣಶೃಂಗಾರ

ವಿಲಾಯತಿ ರಾಜ್ಯದ ಯುವರಾಜರಾದ ಪ್ರಿನ್ಸ್ ವೇಲ್ಸ್ ರವರನ್ನು ಮೈಸೂರು ಪಟ್ಟಣದಲ್ಲಿ ಎದುರುಗೊಳ್ಳುವದಕ್ಕೋಸ್ಕರ ಶ್ರೀಮನ್ಮಹಾರಾಜಾ ಸರ್ಕಾರದವರು ರಾಜಧಾನಿಯನ್ನು ನಾನಾಪ್ರಕಾರವಾಗಿ ಶೃಂಗಾರಮಾಡಿರುತ್ತಾರೆ. ಮೊದಲು ಅವರು ಬಂದು ಇಳಿದ ರೈಲ್ವೆ ಸ್ಟೇಷನ್ನಲ್ಲಿ ... ಕಂಭಗಳ ತೋಟದಲ್ಲಿ ಒಂದು ಚಪ್ಪರವನ್ನು ಹಾಕಿ, ಅದರ ಮಧ್ಯೆ ... ಭುವನೇಶ್ವರಿಯನ್ನು ಕಟ್ಟಿದಾರೆ. ಈ ಕಂಭಗಳೂ ಭುವನೇಶ್ವರಿಯೂ ಮಹಾರಾಜರವರ ಅರಮನೆಗಳಲ್ಲಿ ಯಾವ ರೀತಿಯಲ್ಲಿ ಅಲಂಕರಿಸಲ್ಪಟ್ಟು ನಾನಾತರದ ಪಂಕ್ತಿ ಚಿತ್ರಕೆಲಸಗಳು ಮಾಡಲ್ಪಟ್ಟಿರುವವೋ ಅದೇ ರೀತಿ ಶೃಂಗರಿಸಲ್ಪಟ್ಟಿವೆ. ತೆರೆಗಳೂ, ಬಾವುಟ ಚಿತ್ರಗಳೂ, ಸುವರ್ಣ ಮನವನ್ನು ... ಮಾತುಗಳು ಕೆತ್ತಲ್ಪಟ್ಟ ತರಹವಾದಿ ಬಾವುಟಗಳೂ, ಪಂಕ್ತಿಯಲ್ಲಿ ಮಾಡಿ ನಾನಾ ಪ್ರಕಾರವಾಗಿ ತಗುಲಿಸಿರುವ ... ಚಿತ್ರವಿಚಿತ್ರವಾದ ಮೇಲ್ಕಟ್ಟುಗಳೂ, ಇವನೆಲ್ಲಾ ಇಟ್ಟು ಬಹು ನೇತ್ರಾನಂದಕರವಾಗಿ ಮಾಡಿದಾರೆ. ನೆಲದ ಮೇಲೆ ವಿಸ್ತಾರವಾದ ಕೆಂಪು ಮಖಮಲನ್ನು ಅಲ್ಲಲ್ಲಿ ಒಟ್ಟಿಗಳನ್ನೂ ಹಾಸಿದ್ದರು.

ರೈಲ್ವೆ ಸ್ಟೇಷನ್ ಮೈದಾನಿನೊಳಕ್ಕೆ ಪ್ರವೇಶಿಸುವ ಬಾಗಿಲಲ್ಲಿ ಒಂದು ಬಿಳಿಯ ಕಮಾನನ್ನು ಕಟ್ಟಿದಾರೆ. ಅಲ್ಲಿಂದ ಪಟ್ಟಣದೊಳಕ್ಕೆ ಪ್ರವೇಶಮಾಡಿ, ಬಯಲಲ್ಲಿ ಸವಾರ್ ಲೈನಿನ ಎದುರಿಗೆ ಕೆಂಪು ಬಣ್ಣದ, ಚಿತ್ರಕೆಲಸ ಮಾಡಿದ ಒಂದು ಕಮಾನನು ಹಾಕಿರುತ್ತಾರೆ. ಮುಂದೆ ಬರುತ್ತಾ ಸ್ಯೆಯ್ಯಾಜಿರಾವ್ ರಸ್ತೆಯೊಳಗೆ ಎರಡು ಕಡೆಗಳಲ್ಲಿ ಎರಡು ಸುಂದರವಾದ ಕಮಾನುಗಳನ್ನು ಹಾಕಿರುವರು. ಈ ಎರಡು ಕಮಾನುಗಳ ನಡುವೆ ರಸ್ತೆಯ ಉಭಯಪಾರ್ಶ್ವಗಳಲ್ಲೂ ಉದ್ದಕ್ಕೂ ... ಅಥವಾ ಅಂತಸ್ತುಗಳನ್ನು ... ಕಟ್ಟಿರುವರು. ಕರ್ಜನ್ ಪಾರ್ಕಿನಲ್ಲಿ ಲೇಟ್ ಮಹಾರಾಜರವರ ಪ್ರತಿಮೆಯ ಸುತ್ತಲೂ ಬಾವುಟಗಳನ್ನೂ ತೋರಣಗಳನ್ನೂ ಉಳ್ಳ ಕಂಭಗಳನ್ನು ನೆಟ್ಟು ಅಲಂಕಾರ ಮಾಡಿದಾರೆ. ದೊಡ್ಡಪೇಟೆಯ ಬಾಗಿಲಲ್ಲಿ ದಿವ್ಯವಾದ ಒಂದು ಚಪ್ಪರ ಹಾಕಲ್ಪಟ್ಟಿದೆ. ಇದು ಅತಿ ನೇತ್ರಾನಂದಕರವಾಗಿಯೂ ವಿಶಾಲವಾಗಿಯೂ ಇರುವದು. ಅಲ್ಲಿಂದ ಮುಂದೆ ದೊಡ್ಡ ಪೇಟೆಯಲ್ಲಿ ಕನ್ಯಕಾಪರಮೇಶ್ವರಿ ದೇವಸ್ಥಾನದ ಬಳಿ ಬಟ್ಟೆಯಲ್ಲಿ ಒಂದು ಕಮಾನನ್ನು ಕಟ್ಟಿ ಇಟ್ಟಿದ್ದಾರೆ. ... ಬೀದಿಗೆ ... ಕಟ್ಟಿ, ... ಈ ಮೊದಲಾದ ಪಾತ್ರೆ ... ಪದಾರ್ಥಗಳನ್ನು ಪೇರಿಸಿ ಬಹು ಸುಂದರವಾಗಿ ಅಲಂಕಾರ ಮಾಡಿದಾರೆ. ಇನ್ನೂ ಮುಂದೆ ಸರಸ್ವತೀ ಭಾವಿಯ ಹತ್ತಿರ ಹಾಕಿರುವ ... ಅತ್ಯಂತ ನೇತ್ರಾನಂದಕರವಾದದ್ದಾಗಿರುತ್ತದೆ. ಈ ಕಮಾನಿನ ... ಪಾರ್ಶ್ವದಲ್ಲಿ ಪ್ರಸಿದ್ಧ ಚಿತ್ರಗಾರರಾದ ರಾಜಾ ರವಿವರ್ಮರವರಿಂದ ಬರೆಯಲ್ಪಟ್ಟ ಬಹು ಸುಂದರವಾದ ಚಿತ್ರಪಟಗಳನ್ನು ಕಟ್ಟಿ ಮೇಲ್ಭಾಗದಲ್ಲಿ ನಮ್ಮ ಮಹಾರಾಜರವರ ಮತ್ತು ಮಹಾರಾಣಿಯವರ ... ಗಳನ್ನು ಇಟ್ಟಿದ್ದಾರೆ. ಇನ್ನೊಂದು ಭಾಗದಲ್ಲಿ ಅದೇ ಚಿತ್ರಗಾರರಿಂದ ಬರೆಯಲ್ಪಟ್ಟ ... ಚಿತ್ರಪಟಗಳನ್ನು ಹಾಕಿರುವುದು. ಈ ಕಮಾನನ್ನು ಎಷ್ಟು ಸಾರಿ ... ನಿಂತು ನೋಡಿದರೂ ... ದಣಿಯುವ ಹಾಗಿಲ್ಲ. ಅತ್ತಲಾಗಿ ಕರ್ಜನ್ ಪಾರ್ಕಿನ ಪೂರ್ವಭಾಗದಿಂದ ... ಹೋಗುವ ಮಾರ್ಗದಲ್ಲಿ ಒಂದು ವಿಸ್ತಾರವಾದ ಕಮಾನನ್ನು ಹಾಕಿದಾರೆ.

ಇದಲ್ಲದೆ ಪ್ರಿನ್ಸ್ ಆಫ್ ವೇಲ್ಸ್‌ರವರು ಸಂಚಾರ ಮಾಡತಕ್ಕ ಸಮಸ್ತ ರಾಜಮಾರ್ಗಗಳಲ್ಲೂ ಬಾವುಟಗಳನ್ನು ಕಟ್ಟಿದ ಕಂಭಗಳು ... ತೋರಣಗಳೂ ಉದ್ದಕ್ಕೂ ಕಟ್ಟಲ್ಪಟ್ಟಿರುತ್ತವೆ. ಕರ್ಜನ್ ಪಾರ್ಕಿನೊಳಗೆ ... ಸುತ್ತಲೂ ... ಬಂಗಲೆಗಳ ... ಚಿತ್ರವಿಚಿತ್ರವಾದ ಬಾವುಟಗಳನ್ನು ಕಟ್ಟಿ ... ಎಲ್ಲಾ ಬೀದಿಗಳಲ್ಲೂ ಇರುವ ಬಂಗಲೆ, ಮನೆ, ಶಾಲೆ, ... ಕಟ್ಟಡಗಳಿಗೂ ... ಮಾಡಿರುವರು. ಬಿಸಿಲು ... ರಸ್ತೆಗಳಲ್ಲಿ ... ಪ್ರಚಂಡವಾದ ಧೂಳು ... ಮನೋಹರವಾಗಿರುವಂತೆ ದಿನವೂ ಎರಡು ... ರಸ್ತೆಗಳಿಗೆ ನೀರು ... ಬರುವರು. ಅಂತು ಈ ಸಲ ರಾಜಧಾನಿಯಲ್ಲಿ ಮಾಡಿರುವಷ್ಟು ... ಶೃಂಗಾರಗಳು ಹಿಂದೆ ಯಾವಾಗಲೂ ಈ ಪಟ್ಟಣದಲ್ಲಿ ಆಗಿಲ್ಲವೆಂದು ಧಾರಾಳವಾಗಿ ಹೇಳಬಹುದು.

ಜನಸಂದಣಿ

ಪ್ರಿನ್ಸ್ ಆಫ್ ವೇಲ್ಸ್‌ರವರ ... ರಾಜಧಾನಿಯಲ್ಲಿ ನಡೆಯುವ ನಾನಾ ಸತ್ಕಾರಗಳನ್ನೂ ... ನೋಡಬೇಕೆಂದು ಅನೇಕ ಪ್ರಜೆಗಳು ... ದೇಶಗಳಿಂದ ಮೈಸೂರಿಗೆ ಬಂದಿರುತ್ತಾರೆ. ಈಗ ಸುಮಾರು ನಾಲ್ಕು ದಿನಗಳಿಂದಲೂ ... ಗಾಡಿಗಳಲ್ಲೂ ಜನರು ... ಇರುವರು. ... ಜನರನ್ನು ... ಬಿಡುತ್ತಲಿವೆ. ಈಗ ಮೈಸೂರು ಪಟ್ಟಣದಲ್ಲಿ ಸಾಧಾರಣವಾಗಿ ... ಪ್ರಯಾಸವಾಗಿರುವದು. ಯಾವ ಬೀದಿಯಲ್ಲಿ ನೋಡಿದರೂ ಜನರು ಗುಂಪು ಗುಂಪಾಗಿ ರಸ್ತೆಯ ... ಹೋಗಿ ಬರುತ್ತಿರುವರು. ಇವರಲ್ಲಿ ... ಜನರು ... ಇಷ್ಟು ಜನರು ಈ ಪಟ್ಟಣದಲ್ಲಿ ... ಹೇಳುವರು. ರಾಜಧಾನಿಯಲ್ಲಿರುವ ಪ್ರತಿ ಒಂದು ... ಜನರಾದರೂ ... ಛತ್ರಗಳು ... ಈ ಮೊದಲಾದ ... ಜನರ ಸಂಖ್ಯೆಯೇ ... ಈ ವಿಜಯವನ್ನು ನೋಡುವುದಕ್ಕೆ ಇದುವರೆಗೆ ರಾಜಧಾನಿಗೆ ... ಸಾವಿರ ಪ್ರಜೆಗಳು ಬಂದು ಸೇರಿದ್ದಾರೆಂದು ಧಾರಾಳವಾಗಿ ಹೇಳಬಹುದು.

ಸೋಮವಾರದ ದಿವಸದ ಉತ್ಸವ

ರೈಲ್ವೆ ಸ್ಟೇಷನ್

ತಾ ... ನೇ ಸೋಮವಾರ ಮಧ್ಯಾಹ್ನ ... ಗಂಟೆಗೆ ಪ್ರಿನ್ಸ್ ಆಫ್ ವೇಲ್ಸ್ ದಂಪತಿಗಳು ದಯಮಾಡುತ್ತಾರೆಂದು ... ದೊಡ್ಡ ಮನುಷ್ಯರೆಲ್ಲಾ ಟಿಕೆಟ್ಟುಗಳು ಬಂದವು. ಮಧ್ಯಾಹ್ನ ... ಗಂಟೆಗೆ ಮುಂಚೆಯೇ ದೊಡ್ಡ ಮನುಷ್ಯರು ರಾಜಬಂಧುಗಳು ... ಧಾರರೂ ರೈಲ್ವೆ ಸ್ಟೇಷನ್ನಲ್ಲಿ ಹಾಜರಾಗಿದ್ದರು. ಟಿಕೆಟ್ಟುಗಳನ್ನು ಪಡೆದಿದ್ದವರೆಲ್ಲಾ ಒಂದು ಭಾಗದಲ್ಲೂ ಮಿಲ್ಟರಿ ಅಧಿಕಾರಸ್ಥರು ಒಂದು ಭಾಗದಲ್ಲೂ ... ನಿಲ್ಲಿಸಲ್ಪಟ್ಟಿದ್ದರು. ... ಗಂಟೆಗೆ ಸ್ಪೆಷಲ್ ರೈಲ್ ... ಬಂದವು. ಇವರವರಲ್ಲದೆ ಪ್ರಿನ್ಸ್ ಆಫ್ ವೇಲ್ಸ್‌ರವರ ... ಉದ್ಯೋಗಸ್ಥರೂ ಸಹಚರರೂ ವಿಲಾಯತಿಯ ಕೆಲವು ವರ್ತಮಾನ ಪತ್ರಿಕೆಗಳ ಪ್ರತಿನಿಧಿಗಳೂ ಬಂದಿಳಿದರು. ಇದರ ಕೂಡಲೇ ... ತಮ್ಮ ತಮ್ಮ ಸ್ಥಾನಗಳನ್ನು ಅಲಂಕರಿಸಿದರು. ಅಷ್ಟು ಹೊತ್ತಿಗೆ ನಮ್ಮ ದಿವಾನ್ ಸರ್ ಪಿ ಎನ್ ಕೃಷ್ಣಮೂರ್ತಿಯವರು, ಮೆ॥ ಹಂಬೋಲ್ಟರು, ಚೀಫ್ ಕೋರ್ಟ್ ಜಡ್ಜಿಗಳು, ಮ್ಯಾಸೂರಿನ ರಾಜಬಂಧುಗಳು, ಬ್ರಿಟಿಷ್ ರೆಸಿಡೆಂಟರಾದ ಮೆ॥ ಫ್ರೇಜರ್ ರವರು, ಅವರ ಅಸಿಸ್ಟೆಂಟರು, ಚೀಫ್ ಇಂಜನಿಯರು, ಮೆ॥ ... ಯವರೇ ಮೊದಲಾದ ಮುಖ್ಯ ಮುಖ್ಯರೆಲ್ಲಾ ದಯಮಾಡಿದರು. ತರುವಾಯ ಶ್ರೀಮನ್ಮಹಾರಾಜರವರೂ ಯುವರಾಜರವರೂ ಸಾರೋಟಿನಲ್ಲಿ ಬಿರುದುಗಳ ಸಮೇತ ಸ್ಟೇಷನಿಗೆ ದಯಮಾಡಿದರು. ದಿವಾನರೂ ರೆಸಿಡೆಂಟರೂ ಹೋಗಿ ಅವರನ್ನು ಗಾಡಿಯಿಂದ ಇಳಿಸಿ ಕರೆದು ತಂದರು. ಶ್ರೀಮನ್ಮಹಾರಾಜರವರು ಒಳಕ್ಕೆ ದಯಮಾಡುತ್ತಲೇ, ಸವಾರ್ ... ಸ್ವಾಗತ ಮಹಾರಾಜರವರ ... ಪ್ರಿನ್ಸ್ ಆಫ್ ವೇಲ್ಸ್‌ರವರ ... ಆದ ಸರ್ ಪ್ರತಾಪಸಿಂಗರವರನ್ನು ಕಂಡು, ಅವರ ಯೋಗಕ್ಷೇಮವನ್ನು ...

[ಇದರ ಮುಂದಿನ ಭಾಗವನ್ನು ೩ ನೆ ಪುಟದಲ್ಲಿ ನೋಡಿ]

ಕೃತಜ್ಞತೆಯ ಪ್ರದರ್ಶನ.

ಕಳೆದ ಶುಕ್ರವಾರ ಸಾಯಂಕಾಲ ೬ ಗಂಟೆಯಿಂದ ೮ ರ ವರೆಗೆ ರಾಜಧಾನಿಯ ವಿಂಸ್ಲೀ ಸ್ಪೈ ಸ್ಕೂಲಿನಲ್ಲಿ ಒಂದು ಸಭೆ ನಡೆಯಿತು. ಇಲ್ಲಿನ ಹಾರ್ಡ್ವಿಕ್ ಕಾಲೇಜ್ ಕಟ್ಟಡದಲ್ಲಿರುವ ಕ್ರೈಸ್ತ ವಿದ್ಯಾರ್ಥಿನಿಲಯದ ಬಾಲಕರೂ ಅಲ್ಲಿನ ಪಾಠಶಾಲಾ ಮಾಸ್ಟರುಗಳೂ ಸೇರಿ, ಕಳೆದ ನಾಲ್ಕು ವರುಷಗಳಿಂದ ತಮ್ಮ ಪೋಷಕರಾಗಿಯೂ ಮುಖ್ಯಸ್ಥರಾಗಿಯೂ ಇದ್ದು ಈಗ ವಿಶ್ರಾಂತಿಪಡೆಯಲೋಸುಗ ಸೀಮೆಗೆ ಪ್ರಯಾಣ ಮಾಡತಕ್ಕವರಾದ ರೆವ್. ಡಬ್ಲ್ಯು. ಎಚ್. ಥಾರ್ಪ್ ಸಾಹೇಬರನ್ನೂ ಅವರ ಪತ್ನೀರವರನ್ನೂ ಪ್ರೀತಿಯಿಂದ ಸಭೆಗೆ ಬರಮಾಡಿಕೊಂಡು, ಅವರಿಗೆ ಬೇರೆ ಬೇರೆ ಅಡ್ರೆಸ್ಸುಗಳನ್ನು ಓದಿ ಒಪ್ಪಿಸಿದರು. ಈ ಸಭೆಯಲ್ಲಿ ರೆವ್. ಜಿ. ಡಬ್ಲ್ಯು. ಸಾರ್ಜೆ ಸಾಹೇಬರು ಅಧ್ಯಕ್ಷರಾಗಿ ನಿಂತು, ಕಾರ್ಯಗಳನ್ನು ಜರುಗಿಸಿದರು. ರಾಜಧಾನಿಯಲ್ಲಿರುವ ಕೆಲವು ಯೂರೋಪಿಯನ್ ಸರ್ದಾರರೂ ಧೊರೆಸಾನಿಯವರೂ ಬೀಡಿನಿಂದಿ ದೇಶೀಯ ದೊಡ್ಡ ಮನುಷ್ಯರೂ ದಯಮಾಡಿ ಸಭೆಯನ್ನಲಂಕರಿಸಿದ್ದರು. ಉಪಾಧ್ಯಾಯರೂ ವಿದ್ಯಾರ್ಥಿಗಳೂ ಆ ಕಾಲದಲ್ಲಿ ಕೆಲವು ವಿನೋದಗಳನ್ನು ನಡೆಸಿದ್ದರು. ವೈಣಿಕ ಶಿಖಾಮಣಿ ಮ॥ ಶೇಷಣ್ಣನವರ ವೀಣಾಗಾನವೂ ಜಲತರಂಗ ಸಭಿಕರಲ್ಲಿ ಸಂತೋಷವನ್ನುಂಟು ಮಾಡಿದವು. ಹಾರ್ಡ್ವಿಕ್ ಕಾಲೇಜಿನಲ್ಲಿ ಬಾಲಕರ ಶ್ರೇಯೋಭಿವೃದ್ಧಿಗಾಗಿ ರೆವ್ ಮತ್ತು ಮಿಸೆಸ್ ಥಾರ್ಪ್ ದಂಪತಿಗಳು ಕಳೆದ ನಾಲ್ಕು ಸಂವತ್ಸರಗಳಿಂದಲೂ ಯಾವ ಯಾವ ರೀತಿಯಲ್ಲಿ ಪ್ರೀತಿವಾತ್ಸಲ್ಯಶೀಲರಾಗಿ ನಡಿಸುತ್ತಾ ಬಂದಿರುವ ಕಾರ್ಯಗಳನ್ನೆಲ್ಲಾ ವಿವರಿಸಿ, ಅವರ ಗುಣಕಥನವನ್ನು ಮಾಡಿ, ಎಡ್ರೆಸ್ ಪತ್ರಿಕೆಗಳನ್ನು ಓದಿ ಒಪ್ಪಿಸಿ, ದೇವರು ಇಂಥಾ ಪರಾರ್ಥಪರರಾದ ದಂಪತಿಗಳನ್ನು ಚಿರಕಾಲ ಕಾಪಾಡಿ, ಅವರ ಜನ್ಮಭೂಮಿಯಲ್ಲಿ ಅವರಿಗೆ ವಿಶೇಷವಾದ ಶಾರೀರಪುಷ್ಟಿಯನ್ನೂ ಶ್ರೇಯಸ್ಸನ್ನೂ ದಯಪಾಲಿಸಿ, ಅವರನ್ನು ಯಥಾಪ್ರಕಾರ ಹಿಂದುಸ್ಥಾನಕ್ಕೆ ಕರೆದುತಂದು ಬಿಡುವನಾಗಲೆಂದು ಪ್ರಾರ್ಥಿಸಿದರು. ರೆವ್ ಥಾರ್ಪ್ ರವರು ಆ ವಿಜ್ಞಾಪನಪತ್ರಿಕೆಗಳನ್ನು ವಿಶೇಷ ಆದರಪೂರ್ವಕವಾಗಿ ಅಂಗೀಕರಿಸಿ, ಸಮಯೋಚಿತವಾದ ಉತ್ತರವನ್ನಿತ್ತರು. ಅವೆಸ್ಸುಗಳನ್ನು ದೊಡ್ಡ ರಸ್ಪೀಠಿನಂತೆ ಮಾಡಿ, ಕಟ್ಟುಹಾಕಿಸಿ ಕೊಟ್ಟಿದ್ದರು. ರೆವ್ ಥಾರ್ಪ್ ರವರ ಸ್ಥಾನಕ್ಕೆ ರೆವ್ ಎಚ್ ಸ್ಪೆನ್ಸರ್ ಮೊರಿಸರವರು ನೇಮಕವಾಗಿರುತ್ತಾರೆ. ಇವರು ಕೂಡ ಆ ಕಾಲದಲ್ಲಿ ಸಭೆಯಲ್ಲಿ ಹಾಜರಾಗಿದ್ದು, ಹಾರ್ಡ್ವಿಕ್ ಕಾಲೇಜು ಈಗ ಸಂಪಾದಿಸಿಕೊಂಡಿರುವ ಯಶಸ್ಸನ್ನು ನೋಡಿದರೆ, ಮುಂದೆ ಕಾಲದಲ್ಲಿ ಯಾವ ಭಾಗದಲ್ಲೂ ಎಷ್ಟು ನಷ್ಟವಾದರೂ ಮೇಗಿರುವಂತೆ ನಡೆಯಲು, ಅದನ್ನು ಇನ್ನೂ ಅಭಿವೃದ್ಧಿ ಸ್ಥಿತಿಗೆ ತರುವುದಕ್ಕೆ ಸಾಧನವಾಗಿರುವದಾಗಿಯೂ ಭರವಸೆಯನ್ನು ಕೊಟ್ಟರು. ಕಡೆಯಲ್ಲಿ ಸಭಾನಾಯಕರೇ ಮೊದಲಾದವರಿಗೆ ಹಾರ ತುರಾಯಿಗಳನ್ನೂ ಸಭಾಸದರಿಗೆ ಅಡಕೆಲೆಯನ್ನೂ ಕೊಟ್ಟು ಮುಕ್ತಾಯಮಾಡಿದರು.

ರಾಜಧಾನಿಯ ಮ್ಯುನಿಸಿಪಲ್ ಮೀಟಿಂಗ್.

ಕಳೆದ ಶನಿವಾರ ಸಂಧ್ಯಾ ೩ ಗಂಟೆಗೆ ಮೈಸೂರು ಪಟ್ಟಣದ ಮ್ಯುನಿಸಿಪಲ್ ಕಮಿಷನರುಗಳು ಟೌನ್ ಹಾಲ್ ಬಂಗಲೆಯಲ್ಲಿ ಸಭೆ ಸೇರಿ, ತಿಂಗಳುಗಟ್ಟಲೆಯ ಮ್ಯುನಿಸಿಪಲ್ ಮೀಟಿಂಗನ್ನು ನಡಿಸಿದರು. ಕಳೆದ ಡಿಸೆಂಬರ್ ತಿಂಗಳಲ್ಲಿ ಮ್ಯುನಿಸಿಪಾಲಿಟಿಗೆ ಎಲ್ಲಾ ಬಾಬುಗಳಿಂದಲೂ ೧೨,೪೩೯ ಚಿಲ್ಲರೆ ರೂಪಾಯಿ ಜಮಾ ಆಯಿತು. ಆ ತಿಂಗಳಲ್ಲಿ ೧೪,೨೬೩ ಚಿಲ್ಲರೆ ರೂಪಾಯಿ ಖರ್ಚಾಯಿತು ಮತ್ತು ಡಿಸೆಂಬರಿನಲ್ಲಿ ಜನನ ೧೦೮. ಮರಣ ೧೮೯ ಎಂದು ಆಳಿದುಬಂದಿವೆ. ಈ ಪೈಕಿ ಜ್ವರದಿಂದ ೭೪, ಸಿಡುಬಿನಿಂದ ೧ ಈ ರೀತಿ ಮರಣಗಳಾಗಿವೆ.

ಆಡಿಟರ ರಿಪೋರ್ಟಿನಿಂದ ಮ್ಯುನಿಸಿಪಲ್ ಆಕ್ಟ್ರಾಯ್ ಉತ್ಪತ್ತಿಯು ಡಿಸೆಂಬರ್ ತಿಂಗಳಲ್ಲಿ ೧,೦೭೦ ರೂಪಾಯಿ ಕಡಮೆ ಆಯಿತೆಂತಲೂ, ಸರಕು ಪಟ್ಟಣಕ್ಕೆ ಕಡಮೆಯಾಗಿ ಬಂದದ್ದೇ ಉತ್ಪತ್ತಿ ಕಡಮೆಯಾಗಲು ಕಾರಣವೆಂದು ವರ್ತಕರು ಸಮಾಧಾನ ಬರೆದಿದ್ದಾರೆಂತಲೂ ತಿಳಿದುಬಂತು. ಮ್ಯುನಿಸಿಪಲ್ ಕಮಿಷನರುಗಳು ಈ ರೀತಿ ಪ್ರತಿ ತಿಂಗಳಲ್ಲೂ ಆಕ್ಟ್ರಾಯ್ ಉತ್ಪತ್ತಿಯು ಕಡಮೆಯಾಗುತ್ತಲೇ ಬಂದಿರೋಣದರಿಂದ ಈ ಭಾಗದಲ್ಲಿ ವರ್ತಕರಿಂದ ಸರಿಯಾದ ಸಮಾಧಾನವನ್ನು ಬರೆಸಿ ಕಳಿಸಬೇಕೆಂಬುದಾಗಿ ಅಭಿಪ್ರಾಯಪಟ್ಟದ್ದರಿಂದ ಅದೇ ರೀತಿ ತೀರ್ಮಾನಿಸಿರುತ್ತಾರೆ. ಪೋಷಕರ್ ಮತ್ತು ಗಾಡಿ ಕಂದಾಯಗಳು ಇನ್ನೂ ಸುಮಾರು ೪೦,೬೦೦ ರೂಪಾಯಿ ತನಕ ವಸೂಲಾಗದೆ ಬಾಕಿ ಬಿದ್ದಿವೆ ಎಂದು ಗೊತ್ತಾಯಿತು.

ರಾಜಧಾನಿಯಲ್ಲಿರುವ ಪೂರ್ಣಯ್ಯನ ನಾಲಾ ನೀರನ್ನು ತೆಗೆವ ಕೆಳ ನಾಲದ ಜನಗಳು ಅದಿಗಾಗಲಿ ಕುಡಿಯುವುದಕ್ಕಾಗಲಿ ಉಪಯೋಗಿಸುತ್ತಾರೆಂಬುದಾಗಿಯೂ ಇದರಿಂದ ವಾಂತಿಭೇದಿ, ನಾರುಹುಣ್ಣು ಮೊದಲಾದ ಅಂಟುರೋಗಗಳು ಹುಟ್ಟಬಹುದೆಂತಲೂ ಪ್ರೆಸಿಡೆಂಟರು ಗವರ್ನ್ಮೆಂಟಿಗೆ ಬರೆದು ತಿಳಿಸಿದ್ದರು. ಅದಕ್ಕೆ ಗವರ್ನ್ಮೆಂಟಿನವರು ಆ ನಾಲೆಯನ್ನು ಮ್ಯುನಿಸಿಪಾಲಿಟಿಯವರಾಗಲಿ ಟ್ರಸ್ಟ್ ಬೋರ್ಡಿನವರಾಗಲಿ ಯಾಕೆ ಸಂಪೂರ್ಣವಾಗಿ ಮುಚ್ಚಿಸಬಾರದೆಂದು ಪ್ರಶ್ನೆಮಾಡಿದರು. ಮ್ಯುನಿಸಿಪಲ್ ಕಮಿಷನರು ಈ ವಿಷಯವನ್ನು ಚರ್ಚೆಮಾಡಿ, ಈ ಕೆಲಸವು ಪಟ್ಟಣವನ್ನು ಅಭಿವೃದ್ಧಿಮಾಡುವುದಕ್ಕಾಗಿ ನಿರ್ಮಿಸಲ್ಪಟ್ಟಿರುವ ಟ್ರಸ್ಟ್ ಬೋರ್ಡಿನವರು ಅವಶ್ಯವಾಗಿ ಮಾಡತಕ್ಕದ್ದಾಗಿದೆ ಎಂದು ತೀರ್ಮಾನಿಸಿರುತ್ತಾರೆ.

ನಜರಾಬಾದ್ ಮೊಹಲ್ಲೆಯಲ್ಲಿ ಮಂಜೂರಾದ ಗುಡಿಸಲುಗಳನ್ನು ಮ್ಯುನಿಸಿಪಲ್ ಸಿಬ್ಬಂದಿಯಿಂದಲೇ ಮಾಡಿಸಿ, ಅದಕ್ಕಾಗಿ ಅಲ್ಲಿನ ಪ್ರಜೆಗಳಿಗೆ ತೆರಿಗೆ ಹಾಕಬೇಕೆಂದು ಸರ್ಕಾರದವರು ಅಪ್ಪಣೆಕೊಡಿಸಿದ್ದರು. ಈ ವಿಷಯದಲ್ಲಿ ಮೆಂಬರುಗಳು ಗೊತ್ತುಮಾಡಿರುವುದೇನೆಂದರೆ, ಆ ಮೊಹಲ್ಲೆಗೆ ಮ್ಯುನಿಸಿಪಾಲಿಟಿಯವರು ಅಂಥಾ ತೆರಿಗೆ ಹಾಕುವ ವಿಷಯದಲ್ಲಿ ಅಡ್ಡಿ ಹೇಳುವುದಿಲ್ಲ. ಅದಕ್ಕೆ ಮುಂಚಿತವಾಗಿ ಟ್ರಸ್ಟ್ ಬೋರ್ಡಿನವರು ಮನೆಗಳ ರೊಚ್ಚು ನೀರು ಬಚ್ಚಲಿಗೆ ಸರಾಗವಾಗಿ ಬಂದು ಬೀಳುವಂತೆ ಮಾಡುವುದಲ್ಲದೆ, ಅವರಿಗೂ ಮ್ಯುನಿಸಿಪಾಲಿಟಿಯವರಿಗೂ ತೃಪ್ತಿಕರವಾಗಿದೆ ಎಂದು ಕಾಣುವಂತೆ ಎಲ್ಲಾ ಅಭಿವೃದ್ಧಿಕಾರ್ಯಗಳನ್ನೂ ಸಂಪೂರ್ಣವಾಗಿ ಮಾಡಿಕೊಟ್ಟಲ್ಲದೆ ಆ ಮೊಹಲ್ಲೆಯನ್ನು ಮ್ಯುನಿಸಿಪಾಲಿಟಿಯವರು ವಹಿಸಿಕೊಳ್ಳುವದಾಗಿಲ್ಲವೆಂತಲೂ ಗವರ್ನ್ಮೆಂಟಿಗೆ ಅರಿಕೆಮಾಡತಕ್ಕದ್ದು.

ಪ್ರಿನ್ಸ್ ಆಫ್ ವೇಲ್ಸ್ ರವರನ್ನು ಸತ್ಕರಿಸುವುದಕ್ಕಾಗಿ ಮ್ಯುನಿಸಿಪಾಲಿಟಿಯವರು ೨,೫೦೦ ರೂಪಾಯಿ ಮಂಜೂರು ಮಾಡಿ ಒಂದು ಚಪ್ಪರವನ್ನು ಹಾಕಬೇಕೆಂದು ಸರ್ಕಾರದವರು ಸ್ಯಾಂಕ್ಷನ್ ಮಾಡಿದ್ದಾರೆ.

ರಾಜಧಾನಿಯಲ್ಲಿ ಪ್ಲೇಗ್ ಪ್ರಾಪ್ತವಾದ ಲಾಗಾಯತು ಅನೇಕರು ತಮ್ಮ ಮನೆ ಮಾರುಗಳಿಗೆ ಬೀಗ ಹಾಕಿಕೊಂಡು ಹೋಗಿದ್ದಾರೆ. ಇಂಥಾ ಮನೆಗಳ ಮ್ಯುನಿಸಿಪಲ್ ತೆರಿಗೆ ವಸೂಲಾಗದೆ ಬಾಕಿ ಬಿದ್ದಿದೆ. ಅದಕ್ಕೆ ಏನು ಮಾಡೋಣವೆಂದು ವೈಸ್ ಪ್ರೆಸಿಡೆಂಟರು ಬೋರ್ಡಿನವರನ್ನು ಹೋದ ತಿಂಗಳಲ್ಲಿ ಕೇಳಿದ್ದಕ್ಕೆ ಅವರು ಇಂಥಾ ಸಂದರ್ಭಗಳಲ್ಲಿ ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿಯವರು ಏನು ಮಾಡುತ್ತಾರೋ ಬರೆದು ಕೇಳಬೇಕೆಂದು ತೀರ್ಮಾನ ಮಾಡಿದ್ದರು. ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿಯವರಾದರೋ ಅಂಥಾ ಮನೆಗಳ ಮಾಲೀಕರಿಗೆ ನೋಟೀಸ್ ಕೊಟ್ಟು ವಸೂಲ್ ಮಾಡುತ್ತಾರೆ. ಮಾಲೀಕರು ಸಿಕ್ಕದೆ ಹೋದರೆ ಕಂದಾಯ ರಿವಿಷನ್ ಮಾಡುತ್ತೇವೆ ಎಂಬ ಅರ್ಥಕ್ಕೆ ಜವಾಬು ಕೊಟ್ಟರು. ಈ ವಿಷಯವನ್ನು ಕುರಿತು ಮ್ಯುನಿಸಿಪಲ್ ಕಮಿಷನರು ಸ್ವಲ್ಪಹೊತ್ತು ಚರ್ಚೆಮಾಡಿ ಕೊನೆಗೆ ೮೦ ನೆ ಸೆಕ್ಷನಲ್ಲಿರುವ ಅಧಿಕಾರ ಸಾಲದಾಗಿರೋಣದರಿಂದ ಬಾಕಿ ವಸೂಲಾಗುವುದಕ್ಕೆ ಏನು ಮಾಡೋಣವೆಂದು ಸರ್ಕಾರದವರಿಗೆ ಬರೆದುಕೊಳ್ಳುವಂತೆ ತೀರ್ಮಾನಮಾಡಿದರು.

ವಿಕಾರಿ (೧೮೯೯—೧೯೦೦) ಸಾಲಿನ ಕಂದಾಯದ ರಿವಿಜನ್ ಕಮಾಯಿದಸ್ತಾಲ್ಲವೆಂದು ಹೇಳಿ ಸರ್ಕಾರದವರು ತಡೆಹಿಡಿದು ಬೇರೆ ರಿವಿಜನ್ ಮಾಡಿಸಿದರೆಂತಲೂ, ಅದ್ದರಿಂದ ವಿಕಾರಿ ಸಾಲಿನ ರಿವಿಜನ್ ಪ್ರಕಾರ ಕಂದಾಯ ವಸೂಲ್ಮಾಡುವುದು ನ್ಯಾಯವೇ ಎಂತಲೂ ಮ॥ ಶ್ರೀಕಂಠಯ್ಯನವರ ಮ॥ ಬಿ. ವೆಂಗಡ ಮೊದಲಿಯಾರರು ಪ್ರಶ್ನೆ ಮಾಡಿದರು. ಮೆಂಬರುಗಳು ಈ ಸಂಗತಿಯನ್ನು ಚರ್ಚಿಸಿ, ವಿಕಾರಿ ಸಾಲಿನ ರಿವಿಜನ್ ಬೋರ್ಡಿನಲ್ಲಿ ಸ್ಯಾಂಕ್ಷನ್ ಆಗಿರೋಣದರಿಂದ ಅದು ನ್ಯಾಯವಾದದ್ದಾಗಿದೆ ಎಂತಲೂ ಅದರಂತೆ ಕಂದಾಯ ವಸೂಲ್ಮಾಡಬಹುದೆಂತಲೂ ತೀರ್ಮಾನಮಾಡಿದರು.

ಇಂಡಿಯಾ ದೇಶದ ವೃತ್ತಾಂತಗಳು.

ಈ ತಿಂಗಳ ೩ ನೇ ತಾರೀಖು ಶನಿವಾರ ವೈಸ್‌ರಾಯಿ ಲಾರ್ಡ್ ಮಿಂಟೋ ಪ್ರಭುಗಳು ಕಲ್ಕತ್ತಾ ಪಟ್ಟಣದ ವೈದ್ಯ ವಿದ್ಯಾಶಾಲೆಯ ಕಟ್ಟಡಕ್ಕೆ ಅಸ್ತಿಭಾರವನ್ನು ಹಾಕುವವರಾಗಿದ್ದಾರೆ.

♦♦♦♦

ಹೌರಾ ಪಟ್ಟಣದಲ್ಲಿರುವ ಜೌರಿ ಎಂಬ ಹತ್ತಿ ಕಾರ್ಖಾನೆಗೆ ಬೆಂಕಿ ಬಿದ್ದು ಅರನೇ ಒಂದು ಪಾಲೆಲ್ಲಾ ಸಾಮಾನು ಸಹಿತ ಉರಿದು ಹೋಯಿತು. ಮಾಲೀಕರಿಗೆ ಇದರಿಂದ ಕೆಲವು ಲಕ್ಷ ರೂಪಾಯಿ ವರೆಗೆ ನಷ್ಟವಾಗಿರುತ್ತದೆ.

♦♦♦♦

ಪ್ರಿನ್ಸ್ ಆಫ್ ವೇಲ್ಸ್ ರವರು ಹೈದರಾಬಾದಿನಲ್ಲಿ ಈ ತಿಂಗಳ ೮ ನೇ ತಾರೀಖಿನಿಂದ ಒಂದು ವಾರ ಇದ್ದು, ನೈಜಾಮರವರ ಆತಿಥ್ಯವನ್ನು ಸ್ವೀಕರಿಸುವರು. ಆಗ್ಗೆ ಹಿಂದುಸ್ಥಾನದ ಸೈನ್ಯಾಧಿಪತಿಯಾದ ಲಾರ್ಡ್ ಕಿಚ್ನರ್ ರವರು ಹೈದರಾಬಾದಿಗೆ ಹೋಗುವರೆಂದು ಪ್ರಕಟವಾಗಿದೆ.

♦♦♦♦

ಮದರಾಸಿನಲ್ಲಿ ವಾಕೀಲರಾಗಿರುವ ಮ॥ ಸಿ. ವಿ ರಾಮರಾಯರು ವಿಲಾಯತಿಗೆ ಹೋಗಿ ಬರುವವರಾಗಿದ್ದಾರೆ. ಆ ಪಟ್ಟಣದ ಹಿಂದೂ ಸಂಘಪರಿಷ್ಕರಣ ಸಮಾಜದವರು ಅವರಿಗೆ ಔತಣ ಮಾಡಬೇಕೆಂದು ತೀರ್ಮಾನಿಸಿರುವರು. ಮ॥ ರಾಮರಾಯರು ಹಾಸನದ ಸಬ್ ಜಡ್ಜಿಗಳಾದ ಮ॥ ಸಿ. ವಿ ಶೇಷಗಿರಿರಾಯರ ತಮ್ಮಂದಿರೆಂದು ಕೇಳುತ್ತೇವೆ.

♦♦♦♦

ಕಾಶ್ಮೀರ ಸಂಸ್ಥಾನದಲ್ಲಿ ವಿದ್ಯುಚ್ಛಕ್ತಿಯನ್ನು ಉತ್ಪತ್ತಿಮಾಡಿ, ಅದರ ಬಲದಿಂದ ರೈಲ್ ಗಾಡಿಗಳನ್ನು ನಡಿಸಬೇಕೆಂದು ತೀರ್ಮಾನವಾಗಿದೆಯಷ್ಟೆ. ಈ ವಿಷಯವನ್ನು ವೈಸ್‌ರಾಯಿಯವರಿಗೆ ಅರಿಕೆಮಾಡಿ, ಅವರ ಅಪ್ಪಣೆ ಪಡೆದುಕೊಳ್ಳುವುದಕ್ಕೋಸ್ಕರ ಕಾಶ್ಮೀರದ ಬ್ರಿಟಿಷ್ ರೆಸಿಡೆಂಟರೂ, ಇಂಜಿನಿಯರ್ ಲಾಬಿನಿಯರವರೂ ಈಗ ಕಲ್ಕತ್ತೆಗೆ ಬಂದಿರುತ್ತಾರೆ.

♦♦♦♦

ಕಾಂಗ್ರಾ ಕಣಿವೆಯಲ್ಲಿ ಹೋದವರುಷ ಭೂಕಂಪಸಂಭವಿಸಿದಾಗ್ಗೆ ಕೆಲವು ದೊಡ್ಡಮನುಷ್ಯರೂ ಸೈನಿಕರೂ ಬಹಳ ಸಹಾಯಪಟ್ಟು ಪ್ರಜೆಗಳ ಕಷ್ಟನಿವಾರಣೆ ಮಾಡಿರುವ ವಿಷಯದಲ್ಲಿ ಪ್ರಿನ್ಸ್ ಆಫ್ ವೇಲ್ಸ್ ರವರು ಕಾಂಗ್ರಾ ಪಟ್ಟಣಕ್ಕೆ ದಯಮಾಡುವಾಗ್ಗೆ ಅವರನ್ನೆಲ್ಲಾ ಕರೆಸಿಕೊಂಡು, ತಲಾ ಒಂದೊಂದು ಮೆಡಲ್ ಎಂಬ ಬಿಲ್ಲೆಯನ್ನು ದಯಪಾಲಿಸುವರು.

♦♦♦♦

ಬಂಗಾಳಾ ಆಧಿಪತ್ಯಕ್ಕೆ ಸೇರಿದ ಶ್ರೀರಾಮ ಪುರದಲ್ಲಿ ಒಂದು ಭಾರೀ ಹತ್ತಿಯ ಕಾರ್ಖಾನೆ ಇರುತ್ತದೆ. ಸ್ವದೇಶಿಸಂಘದವರು ಈ ಕಾರ್ಖಾನೆಯನ್ನು ಕ್ರಯಕ್ಕೆ ತೆಗೆದುಕೊಂಡು, ಷೇರುಗಳು ಹಾಕಿ ಹಣವನ್ನು ಕೂಡಿಸುತ್ತಿದ್ದಾರೆ. ಈ ಕಾರ್ಖಾನೆಯನ್ನು ಬಂಗಾಳಾ ಆಧಿಪತ್ಯಕ್ಕೆಲ್ಲಾ ಮೊದಲನೆಯದಾಗಿರುವಂತೆ ವೃದ್ಧಿಪಡಿಸಬೇಕೆಂದು ವಿಶೇಷವಾಗಿ ಉತ್ಸಾಹ ಪಡುತ್ತಿರುವರು.

ಕಲ್ಕತ್ತೆಯಲ್ಲಿ ಪ್ರಕಟವಾಗುವ ಇಂಡಿಯನ್ ಡೇಲಿ ನ್ಯೂಸ್ ಎಂಬ ವರ್ತಮಾನ ಪತ್ರಿಕೆಯಲ್ಲಿ ಕೆಲವು ಪೋಲೀಸ್ ವಿಚಾರಗಳನ್ನು ಹಾಕಿದ್ದರು. ಪೋಲೀಸ್ ಇಲಾಖೆಗೆ ಸೇರಿದ ಕೆಲವು ಉದ್ಯೋಗಸ್ಥರು ಅದನ್ನು ನೋಡಿ, ಅದರಿಂದ ತಮಗೆ ಅವಮಾನವಾಯಿತೆಂತಲೂ ಅದಕ್ಕಾಗಿ ೩೦,೦೦೦ ರೂಪಾಯಿ ಮಾನನಷ್ಟ ಕೊಡಿಸಬೇಕೆಂತಲೂ ಆ ಪತ್ರಿಕೆಯ ಎಡಿಟರ ಮೇಲೆ ಕಲ್ಕತ್ತಾ ಹೈಕೋರ್ಟಿನಲ್ಲಿ ದಾವಾ ಹಾಕಿದ್ದಾರೆ.

♦♦♦♦

ಕಲ್ಕತ್ತಾ ಪಟ್ಟಣದಲ್ಲಿ ಸಿಡುಬಿನ ಉಪದ್ರವು ಬಹಳವಾಗಿ ನಡೆಯುತ್ತಿರುವುದನ್ನು ನೋಡಿ, ವೈಸ್‌ರಾಯಿ ಲಾರ್ಡ್ ಮಿಂಟೋ ಯವರೂ ಅವರ ಪತ್ನೀರವರೂ, ಅವರ ಮನೆವಾರ್ತೆಗೆ ಸೇರಿದವರೆಲ್ಲರೂ ಕಳೆದವಾರ ಸಿಡುಬು ಹಾಕಿಸಿಕೊಂಡರು. ಟಿಬೆಟ್ಟಿನಿಂದ ಪ್ರಿನ್ಸ್ ಆಫ್ ವೇಲ್ಸ್ ರವರ ದರ್ಶನಾರ್ಥವಾಗಿ ದಯಮಾಡಿದ್ದ ಪೇಂಬ ಎಂಬ ಗುರುಗಳೂ ಅವರ ಹಿಂಬಾಲಕರೂ ಕೂಡ ಸಿಡುಬು ಹಾಕಿಸಿಕೊಂಡು ಹೋದರು.

♦♦♦♦

ಲಾರ್ಡ್ ಕರ್ಜನ್‌ರವರ ಹೆಸರನ್ನು ಹಿಂದುಸ್ಥಾನದಲ್ಲಿ ಶಾಶ್ವತವಾಗಿಸುವ ಕಾರ್ಯಕ್ಕೆ ಈಚೆಗೆ ಜಯಪುರದ ಮಹಾರಾಜರವರು ೧೫,೦೦೦ ರೂಪಾಯಿ, ಕಾಶ್ಮೀರದ ಮಹಾರಾಜರವರು ೧,೦೦೦ ರೂಪಾಯಿ, ಬಿಕಾನೀರ್ ಸಂಸ್ಥಾನದ ಮಹಾರಾಜರವರು ೩,೦೦೦ ರೂಪಾಯಿ, ಚಂಬಾ ಸಂಸ್ಥಾನದ ಮತ್ತು ಮಾಮಡ್ ಸಂಸ್ಥಾನದ ರಾಜರುಗಳು ತಲಾ ೫೦೦ ರೂಪಾಯಿ ಚಂದಾ ಕಳುಹಿಸಿರುತ್ತಾರೆ. ಇದುವರೆಗೆ ಫಂಡಿಗೆ ಒಟ್ಟು ೮೨,೦೦೦ ರೂಪಾಯಿ ವಸೂಲಾಗಿರುವುದು.

♦♦♦♦

ರಂಗೂನ್ ಪಟ್ಟಣದ ಸೆಂಟ್ರಲ್ ಜೈಲಿನಲ್ಲಿ ಚೀಫ್ ಜೈಲರ್ ಮ॥ ಡಿಕ್ಸನ್ ರವರು ಕಳೆದ ವಾರ ಕೈದಿಗಳನ್ನು ಆಯಾ ಕೆಲಸ ಮಾಡುತ್ತಿದ್ದಾಗ ಎಂದು ಪರೀಕ್ಷಿಸುತ್ತಿದ್ದಾಗ ಒಬ್ಬ ಹಿಂದೂ ಕೈದಿಯು ಸಮೀಪದಲ್ಲಿದ್ದ ಕಾವಲುಗಾರನ ಕೈಯಲ್ಲಿದ್ದ ಕತ್ತಿಯನ್ನು ಕಿತ್ತುಕೊಂಡು, ಜೈಲರನ್ನು ಬೆನ್ನಿನ ಮೇಲೆ ಬಲವಾಗಿ ಹೊಡೆದನು. ಸಂತ್ರಿಗಳು ಕೂಡಲೇ ಅವನನ್ನು ಹಿಡಿದು ಕಟ್ಟಿಹಾಕಿದರು. ಸೂಪರಿಂಟೆಂಡೆಂಟರ ಅಪ್ಪಣೆಪ್ರಕಾರ ೩೦ ಛಡಿ ಪೆಟ್ಟುಗಳನ್ನು ಕೊಟ್ಟರು.

♦♦♦♦

ಮದರಾಸ್ ಆಧಿಪತ್ಯದ ಗವರ್ನರ್ ಕೆಲಸಕ್ಕೆ ಹೊಸದಾಗಿ ನೇಮಕವಾಗಿರುವ ಸರ್ ಆರ್ಥರ್ ಲಾಲಿಯವರು ದಕ್ಷಿಣ ಆಫ್ರಿಕಾದಿಂದ ಹೋಗಿ ವಿಲಾಯತಿಯಲ್ಲಿರುತ್ತಾರೆ. ಇವರಿಗೆ ಕಾಯಿಲೆ ಪ್ರಾಪ್ತವಾದ್ದರಿಂದ ವಾಕ್ಟರುಗಳು ವಿಶ್ರಾಂತಿ ತೆಗೆದುಕೊಳ್ಳಬೇಕೆಂದು ಹೇಳಿರುವುದರಿಂದ ಆದ್ದರಿಂದ ಅವರು ಈ ತಿಂಗಳಲ್ಲಿ ಹಿಂದುಸ್ಥಾನಕ್ಕೆ ಬರುವವರಾಗಿಲ್ಲ. ಈಗ ಗವರ್ನರಾಗಿರುವ ಲಾರ್ಡ್ ಆಂಪ್ಟಿಲ್ ರವರು ಸೀಮೆಗೆ ಹೋಗುವ ಹೋದ ಮೇಲೆ ಹೊಸಬರು ಬಂದು ಛಾರ್ಜ್ ವಹಿಸಿಕೊಳ್ಳುವ ತನಕ ಮ॥ ಜಿ. ಸ್ಟೋಕ್ಸ್ ರವರು ಮದರಾಸ್ ಗವರ್ನರಾಗಿ ಬದಲಿ ನೋಡುವವರಾಗಿದ್ದಾರೆ.

♦♦♦♦

ಬೊಂಬಾಯಿನಿಂದ ಸಿಂಧು ದೇಶಕ್ಕೆ ರೈಲ್ ಹಾಕಬೇಕೆಂದು ಯೋಚಿಸುತ್ತಿರುವುದನ್ನು ನೋಡಿ ಕಚ್ ಸಂಸ್ಥಾನದ ರಾಜರು ತಮ್ಮ ಸಂಸ್ಥಾನದ ಮೂಲಕ ಆ ರೈಲನ್ನು ಹಾಕಿಕೊಂಡು ಹೋಗಬಾರದೆಂತಲೂ ತಮ್ಮ ಸಂಸ್ಥಾನಕ್ಕೆ ರೈಲ್ ಅವಶ್ಯವಿಲ್ಲವೆಂತಲೂ ಖಂಡಿತವಾಗಿ ಹೇಳಿ ಬಿಟ್ಟರು. ಈಗ ರೈಲು ಹಾಕತಕ್ಕವರು ಆ ಸಂಸ್ಥಾನವನ್ನು ಬಿಟ್ಟು ಬೇರೆ ಸ್ಥಳದ ಮೇಲೆ ರೈಲ್ ರಸ್ತೆ ಹಾಕುವುದಕ್ಕೆ ಸನ್ನಾಹ ಮಾಡುತ್ತಿದ್ದಾರೆ. ಆ ರಾಜರು ರೈಲ್ ರಸ್ತೆಯಿಂದ ಆಗುವ ಪ್ರಯೋಜನವನ್ನು ತಿಳಿದುಕೊಳ್ಳಲಾರದೆ ಹೋದರೆಂದು ಅನೇಕರು ಆಶ್ಚರ್ಯಪಡುತ್ತಾರೆ.

♦♦♦♦

ಮದರಾಸ್ ಗವರ್ನ್ಮೆಂಟಿನವರು ಕಾಲ್ಯದಲ್ಲಿ ಪರೀಕ್ಷಾರ್ಥವಾಗಿ ಒಂದು ನೆಯಿಗೆ ಪಾಠಶಾಲೆಯನ್ನು ಇಟ್ಟು ನಡಿಸಬೇಕೆಂತಲೂ ಮ॥ ಎನ್. ಸುಬ್ರಹ್ಮಣ್ಯ ಐಯ್ಯರವರನ್ನು ಅಲ್ಲಿಗೆ ಶಿಕ್ಷಾಧ್ಯಕ್ಷರನ್ನಾಗಿ ಕಳುಹಿಸಬೇಕೆಂತಲೂ ಹುಕುಂ ಮಾಡಿದ್ದಾರೆ. ಕಾಲ್ಯದಲ್ಲಿ ಮಗ್ಗಗಳು ಅನೇಕವಾಗಿರುತ್ತವೆ. ಬಟ್ಟೆ ಬರಗಳು ಅಪಾರವಾಗಿ ತಯಾರಾಗುವುದು ಎಲ್ಲರಿಗೂ ತಿಳಿದಿರುತ್ತದೆ. ಆದ್ದರಿಂದ ಇಂಥಾ ಸ್ಥಳದಲ್ಲಿ ನೆಯಿಗೆ ಕಸಬನ್ನು ಇನ್ನೂ ಅಭಿವೃದ್ಧಿಗೆ ತರಬೇಕೆಂದು ಮದರಾಸ್ ಸರ್ಕಾರದವರು ಏರ್ಪಾಡು ಮಾಡಿರುವುದು ತುಂಬಾ ಸ್ತೋತ್ರಾರ್ಹವಾಗಿದೆ. ಮ॥ ಸುಬ್ರಹ್ಮಣ್ಯ ಐಯ್ಯರವರು ಮದರಾಸ್ ಪಟ್ಟಣದ ಸರ್ಕಾರಿ ಕೈಗಾರಿಕೆ ವಿದ್ಯಾಶಾಲೆಯಲ್ಲಿ ನೌಕರರಾಗಿದ್ದುಕೊಂಡು ನೆಯಿಗೆ ವಿಚಾರವನ್ನು ಬಹಳ ಅಕ್ಕರೆಯಿಂದ ತಿಳಿದುಕೊಂಡಿರುತ್ತಾರೆ.

♦♦♦♦

ಉತ್ತರ ದೇಶದಲ್ಲಿ ದವಸ ಧಾನ್ಯಗಳ ದಾರಣೆಯು ಜಾಸ್ತಿಯಾಗುತ್ತಿದೆ. ಮಳೆ ಆಗದೆ ಬೆಳೆಗಳು ಕೆಟ್ಟು ಹೋದಕಾರಣ ಇನ್ನು ಕೆಲವು ತಿಂಗಳ ತನಕ ಕ್ಷಾಮನಿವಾರಣೆಯ ರಿಲೀಫ್ ಕಾಮಗಾರಿಯಲ್ಲಿ ಪ್ರಜೆಗಳ ಸಂಖ್ಯೆಯು ಹೆಚ್ಚುತ್ತಲೇ ಬರುವದು. ಬೊಂಬಾಯಿ ಆಧಿಪತ್ಯದ ಅನೇಕ ಪ್ರಜೆಗಳು ಜೀವನೋಪಾಯವನ್ನು ಹುಡುಕಿಕೊಂಡು ಹೈದರಾಬಾದ್ ಸಂಸ್ಥಾನಕ್ಕೆ ಹೋಗಿ ಅಲ್ಲಿ ಕೂಲಿನಾಲಿ ಏನೂ ದೊರೆಯದೆ ಹೋದದ್ದರಿಂದ ವಾಪಸು ಬೊಂಬಾಯಿ, ಬೀರಾರ್, ಖಾನದೇಶ ಪ್ರಾಂತ್ಯಗಳಿಗೆ ಬರುತ್ತಿದ್ದಾರೆ. ಈಗ ಸಂಯುಕ್ತ ಆಧಿಪತ್ಯಗಳಲ್ಲಿ ೬೧,೦೦೦ ಪ್ರಜೆಗಳೂ, ಮಧ್ಯ ಇಂಡಿಯಾದಲ್ಲಿ ೩೩,೦೦೦ ಪ್ರಜೆಗಳೂ, ಬೊಂಬಾಯಿ ಆಧಿಪತ್ಯದಲ್ಲಿ ೯,೦೦೦ ಪ್ರಜೆಗಳೂ ಸರ್ಕಾರದ ರಿಲೀಫ್ ಕಾಮಗಾರಿಗಳನ್ನು ಮಾಡಿಕೊಂಡು, ಜೀವನ ಮಾಡುತ್ತಿರುವರು.

ಕಳೆದ ವರುಷ ಹಿಮಾಚಲದ ತಪ್ಪಲಲ್ಲಿ ಭೂಕಂಪ ಪ್ರಾಪ್ತವಾಗಿ ಅನಾಹುತಗಳು ನಡೆದದ್ದೂ, ಪ್ರಜೆಗಳ ಕಷ್ಟ ಪರಿಹಾರ ಮಾಡುವುದಕ್ಕೆ ಒಂದು ಧರ್ಮ ಫಂಡು ಏರ್ಪಾಟಾಗಿ ಅದಕ್ಕೆ ಸಕಲ ಪ್ರಜೆಗಳೂ ಚಂದಾಹಣ ವಸೂಲಾದದ್ದೂ ನಮ್ಮ ವಾಚಕರಿಗೆ ತಿಳಿದಿದೆ. ಈ ಫಂಡಿನ ದವಾಖರ್ಚನ್ನು ಈಗ ಪ್ರಕಟಿಸಿರುವರು ... ಅದರಿಂದ ತಿಳಿವುದು ... ಕಳೆದ ಡಿಸೆಂಬರ್ ಆಖೈರ್ ವರೆಗೆ ಈ ಫಂಡಿಗೆ ...೭೪೯ ರೂಪಾಯಿ ವಸೂಲಾಯಿತು. ಈ ಪೈಕಿ ಬಡಬಗ್ಗರಿಗೆ ... ಬಟ್ಟೆಗಳ ಖರ್ಚು ೧,೦೩,೪೧೦ ರೂಪಾಯಿ, ಮನೆಗಳನ್ನು ಕಟ್ಟಿಕೊಳ್ಳುವದಕ್ಕೂ ಜೀವನೋಪಾಯವನ್ನು ಕಲ್ಪಿಸುವುದಕ್ಕೂ ಖರ್ಚಾದದ್ದು ೧೧, ೩,೪೯೧ ರೂಪಾಯಿ, ಇತರ ಕಾರ್ಯಗಳಿಗೆ ವಿನಿಯೋಗಿಸಿದ್ದು ೧೫೯,೬೬೦ ರೂಪಾಯಿ ... ಇನ್ನೂ ಕೈಯಲ್ಲಿ ೩೦,೯೫೪ ರೂಪಾಯಿ ಉಳಿದಿದೆ.

❖❖❖❖

ಕಳೆದ ಗುರು ವಾರ ಮಧ್ಯಾಹ್ನ ಕಲ್ಕತ್ತಾ ಪಟ್ಟಣದ ಪೋಲೀಸ್ ಕೋರ್ಟಿನಲ್ಲಿ ಒಂದು ಅಪೂರ್ವ ಸಂಗತಿಯು ನಡೆಯಿತು. ಒಬ್ಬ ಯೂರೋಪ್ಯ ಸ್ತ್ರೀ ತನ್ನ ಮಗಳಿಗೆ ಒಬ್ಬ ವರನನ್ನು ಗೊತ್ತು ಮಾಡಿ, ವಿವಾಹ ನಡೆಯುವ ... ಆ ಮಗಳು ಆ ವರನನ್ನು ಮದುವೆಯಾಗುವುದಕ್ಕೆ ಇಷ್ಟ ಪಡದೆ, ಮದುವೆಗೆ ಮುಂಚೆ ಮನೆಯಿಂದ ಓಡಿ ಹೋಗಿ, ... ಯ ಮಿಶನ್ ಸ್ಕೂಲಿನ ... ಹೋದಳು. ತಾಯಿಯು ಪೋಲೀಸಿಗೆ ತಿಳಿಸಿದ್ದರಿಂದ ಅವರು ಆ ... ಕೋರ್ಟಿಗೆ ಹಿಡಿದು ತರಿಸಿ ವಿಚಾರಣೆ ಮಾಡಿದರು ... ತನ್ನ ತಾಯಿಯ ಮನೆಗೆ ಹೋಗುತ್ತೀಯೋ ಇಲ್ಲವೋ ಎಂದು ... ಮ್ಯಾಜಿಸ್ಟ್ರೇಟು ಅವಳನ್ನು ಅವಳ ಇಷ್ಟದಂತೆ ... ಈ ತೀರ್ಮಾನವನ್ನು ಅವಳ ತಾಯಿ ಕೇಳಿ, ... ತನ್ನ ವೈಷಮ್ಯದ ಬಟ್ಟೆಯನ್ನು ... ಮಿಸ್ಸು ... ಗಲಭೆಮಾಡಿದಳು ... ಮಗಳೇನೋ ... ಸಂಗಡ ಹೋಗುವುದಕ್ಕೆ ಒಪ್ಪಲಿಲ್ಲ.

❖❖❖❖

... ಪಟ್ಟಣ ... ಎಂಬ ಹೆಸರಿನ ಒಂದು ವರ್ತಮಾನ ಪತ್ರಿಕೆಯು ... ತಿಂಗಳಿಗೆ ... ಪ್ರಕಟವಾಗುತ್ತಾ ಬಂದು ... ಆ ಪತ್ರಿಕೆಯಲ್ಲಿ "ಸರ್ಕಾರದ ..." ಎಂಬ ... ಒಂದು ಸಂಗತಿಯನ್ನು ಬರೆದು ... ಗವರ್ನರ್ ಮೆಂಟನ್ನು ದೂಷಣೆ ಮಾಡಿ, ಪ್ರಜೆಗಳಿಗೆ ಸರ್ಕಾರದ ಮೇಲೆ ದ್ವೇಷಬುದ್ಧಿಯನ್ನು ಹುಟ್ಟಿಸುವಂತೆಯೂ ... ಭಂಗಬರುವ ... ಸರ್ಕಾರದವರು ... ಎಡಿಟರನ್ನು ಹಿಡಿದು ... ಆಫೀಸನ್ನು ... ಸಿಕ್ಕಿದ ಕಾಗದ ಪತ್ರಗಳನ್ನೂ ಲೆಕ್ಕದ ಪುಸ್ತಕಗಳನ್ನೂ ... ಪಟ್ಟಣದ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಆತನ ಮೇಲೆ ... ಮ್ಯಾಜಿಸ್ಟ್ರೇಟರು ಮೊಕದ್ದಮೆಯನ್ನು ಸ್ವಲ್ಪ ಮಾತ್ರ ತನಿಖೆಮಾಡಿ, ಆ ... ನೀನು ಹೇಳತಕ್ಕದ್ದೇನಾದರೂ ... ಎಂದು ಪ್ರಶ್ನೆ ಮಾಡಿದರು. ಆತನು—ನಾನು ಈ ಕೋರ್ಟಿನ ... ಹೇಳಬೇಕಾದ್ದಿಲ್ಲವೆಂದು ಉತ್ತರ ಕೊಟ್ಟನು. ಆಗ ಮ್ಯಾಜಿಸ್ಟ್ರೇಟರು ಈ ಮೊಕದ್ದಮೆಯು ಸೆಷನ್ಸ್ ಕೋರ್ಟಿನಲ್ಲಿ ವಿಚಾರಣೆಯಾಗತಕ್ಕದ್ದೆಂದು ... ಈಗ ಆತ ... ಜಾಮೀನಿನ ಮೇಲೆ ಬಿಟ್ಟಿದ್ದಾರೆ.

ವಿಪರೀತ ವರ್ತಮಾನಗಳು.

ರಷ್ಯಾ ರಾಜ್ಯಕ್ಕೆ ಸೇರಿದ ... ಪಟ್ಟಣದಲ್ಲಿ ದಂಗೆಕೋರ ಪ್ರಜೆಗಳ ಮುಖಂಡರನ್ನು ಸರ್ಕಾರದವರು ಹಿಡಿದು, ಆ ವ್ಯಕ್ತಿ ... ಗಂಟಲಿನ ಬಾಯಿಗೆ ಕಟ್ಟಿ ಕೊಲ್ಲಿಸಿರುತ್ತಾರೆ.

❖❖❖❖

... ಜಪಾನ್ ... ಸಮುದ್ರದಲ್ಲಿ ಕಳೆದ ವಾರ ... ಎಂಬ ... ಮುಳುಗಿಹೋಯಿತಷ್ಟೆ. ಅದರಲ್ಲಿದ್ದವರು ... ಜನರು ... ವಾದರೆಂತಲೂ, ... ಮಾತ್ರ ... ಬಂದರೆಂತಲೂ ... ತಿಳಿದುಬಂದಿದೆ.

❖❖❖❖

ಅಮೇರಿಕದ ಸಂಯುಕ್ತ ಸಂಸ್ಥಾನಗಳಲ್ಲಿರುವ ಉಪಾಧ್ಯಾಯರ ... ವಯಸ್ಸಿನಲ್ಲಿ ಜೀವನಕ್ಕೆ ಅನುಕೂಲಪಡಿಸಬೇಕೆಂದು ಪ್ರಸಿದ್ಧ ... ಮಿ|| ಅಂಡ್ರುಕಾರ್ನೆಗಿ ಎಂಬಾತನು ಮತ್ತೆ ... ಕೋಟಿ ರೂಪಾಯಿಗಳನ್ನು ಕಳುಹಿಸಿರುತ್ತಾನೆ.

❖❖❖❖

ರಷ್ಯಾ ದೇಶದಲ್ಲಿಯಾದ ಜನರಲ್ ಕುರೋ ಪಾಟ್ಕಿನ್‌ರವರು ತಮ್ಮ ... ಪೈಕಿ ೩೦|| ಲಕ್ಷ ರೂಪಾಯಿಯನ್ನು ರಷ್ಯಾ ಸರ್ಕಾರಿ ಬ್ಯಾಂಕಿನಲ್ಲಿ ... ಹಾಕಿದ್ದರು. ಈಗ ಅವರು ಆ ಹಣವನ್ನೆಲ್ಲಾ ತೆಗೆದು ವಿಲಾಯಿತಿ ... ಫ್ರಾನ್ಸಿನಲ್ಲೂ ಬ್ಯಾಂಕುಗಳ ಪತ್ರಗಳನ್ನು ಕೊಂಡು ... ರುತ್ತಾರೆ.

❖❖❖❖

ಫಿಲಿಪ್ಪೈನ್ ದ್ವೀಪಗಳನ್ನು ಅಮೇರಿಕದವರು ಸ್ಪೈಯಿನ್ ರಾಜ್ಯದವರ ... ಯುದ್ಧ ಮಾಡಿ ಗೆದ್ದುಕೊಂಡದ್ದು ನಾಲ್ಕಾರು ವರ್ಷಗಳಿಂದ ... ಇದ್ದು ಅಮೇರಿಕದವರಿಗೆ ... ನಷ್ಟವು ... ಈ ಕಾರಣಕ್ಕಾಗಿ ಆ ದ್ವೀಪಗಳನ್ನು ಜಪಾನ್ ರಾಜ್ಯದವರಿಗೆ ... ಕೊಟ್ಟು ಬಿಡಬೇಕೆಂದು ಆಲೋಚಿಸುತ್ತಿದ್ದಾರೆಂತಲೂ ವರ್ತಮಾನ ಬಂದಿದೆ.

ಮಧ್ಯಅಮೇರಿಕದಲ್ಲಿ ನಿಕರಾಗುವಾ ಎಂಬೊಂದು ಸಣ್ಣ ರಾಜ್ಯವಿರುತ್ತದೆ. ಅದರಲ್ಲಿ ಮಸಾಯಾ ಎಂಬ ಅಗ್ನಿಪರ್ವತವು ಇದ್ದಕ್ಕಿದ್ದ ಹಾಗೆ ಬೆಂಕಿಯನ್ನು ತನ್ನ ಮುಖದಿಂದ ಕಾರಿಸುತ್ತಾ ಬಂದುದರಿಂದ ಅದರ ಸುತ್ತಮುತ್ತಲೂ ಇದ್ದ ಒಂದು ದೊಡ್ಡ ಪಟ್ಟಣಕ್ಕೆ ಪಟ್ಟಣವೇ ನಾಶಹೊಂದಿತು. ಅದರಲ್ಲಿ ಸುಮಾರು ೫,೦೦೦ ಪ್ರಜೆಗಳಿದ್ದರೆಂದು ಹೇಳುತ್ತಾರೆ. ಈ ಅನಾಹುತದ ದೆಸೆಯಿಂದ ಅನೇಕಸಹಸ್ರ ಪ್ರಜೆಗಳು ಲಯವಾಗಿರುವುದಕ್ಕೆ ಸಂಶಯವಿಲ್ಲ.

❖❖❖❖

ಚೀಣಾ ರಾಜ್ಯದ ವೃದ್ಧ ಚಕ್ರವರ್ತಿನಿಯವರು ಅವರ ಯುಗಾದಿ ಹಬ್ಬದ ದಿನ ತಮ್ಮ ರಾಜ್ಯದಲ್ಲಿರುವ ಸಮಸ್ತ ಕುಲೀನ ರಾಜಪುತ್ರರುಗಳನ್ನೂ ತಮ್ಮ ಅರಮನೆಗೆ ಬರುವಂತೆ ಅಪ್ಪಣೆಕೊಡಿಸಿದ್ದಾರೆಂತಲೂ, ಆ ದಿನ ಆ ರಾಜಕುಮಾರರುಗಳ ಪೈಕಿ ಯೋಗ್ಯನಾಗಿ ಕಂಡುಬರುವ ಒಬ್ಬ ರಾಜಕುಮಾರನನ್ನು ಆರಿಸಿಕೊಂಡು, ಅವನಿಗೆ ಯುವರಾಜನೆಂಬ ನಾಮಕರಣಮಾಡಿ, ತಮ್ಮ ಬಳಿ ಅರಮನೆಯಲ್ಲಿಟ್ಟುಕೊಳ್ಳುತ್ತಾರೆಂತಲೂ ತಂತೀ ವರ್ತಮಾನ ಬಂದಿದೆ.

❖❖❖❖

ದಕ್ಷಿಣ ಆಫ್ರಿಕಕ್ಕೆ ಸೇರಿದ ಜೋಹಾನಸ್‌ಬರ್ಗನಲ್ಲಿ ಚಿನ್ನದ ಗಣಿಗಳ ಕೆಲಸಕ್ಕೂ ಕಲ್ಲಿದ್ದಲ ಗಣಿ ಕೆಲಸಕ್ಕೂ ೩೦ ಮೈಲಿ ದೂರ ವರೀನಿಗಿಂಗಿನಿಂದ ವಿದ್ಯುಚ್ಛಕ್ತಿಯನ್ನು ತಂತಿಗಳ ಮೇಲೆ ತಂದು ಬಿಡಬೇಕೆಂತಲೂ, ಈ ವಿದ್ಯುಚ್ಛಕ್ತಿಯನ್ನೇ ಆ ಪ್ರಾಂತ್ಯದಲ್ಲಿರುವ ಕೆಲವು ಪಟ್ಟಣಗಳಿಗೆ ರಾತ್ರಿ ಹೊತ್ತು ದೀಪ ಹಚ್ಚುವುದಕ್ಕೂ ವಿನಿಯೋಗಿಸಬೇಕೆಂತಲೂ, ಆ ಸ್ಥಳದಲ್ಲಿ ಒಂದು ಲಕ್ಷ ಕುದುರೆಗಳ ಬಲದಷ್ಟು ವಿದ್ಯುಚ್ಛಕ್ತಿಯನ್ನು ಉತ್ಪತ್ತಿ ಮಾಡಬಹುದಾಗಿದೆ ಎಂತಲೂ ಅಲ್ಲಿನ ಅಧಿಕಾರಿಗಳು ಆಲೋಚನೆಮಾಡಿಕೊಂಡಿದ್ದಾರೆ.

❖❖❖❖

ರಷ್ಯಾ ರಾಜ್ಯದಲ್ಲಿ ಪ್ರಜೆಗಳು ಯೆಹೂದ್ಯ ಪ್ರಜೆಗಳನ್ನು ನಾನಾ ಪ್ರಕಾರವಾದ ಕಷ್ಟನಷ್ಟ ಹಿಂಸೆಗಳಿಗೆ ಗುರಿಮಾಡುತ್ತಿರುವುದನ್ನು ಕೇಳಿ ಇತರ ರಾಜ್ಯಗಳಲ್ಲಿರುವ ಯೆಹೂದ್ಯರು ಅವರ ಕಷ್ಟಪರಿಹಾರ ಮಾಡುವುದಕ್ಕೆ ಒಂದು ಧರ್ಮದ ಫಂಡು ಏರ್ಪಡಿಸಿ ಚಂದಾ ಕೂಡಿಸಿದರು. ಈ ಫಂಡಿಗೆ ಇದುವರೆಗೆ ೯೮ ಲಕ್ಷ ರೂಪಾಯಿ ವಸೂಲಾಗಿರುತ್ತದೆ. ಈ ಪೈಕಿ ಆಸ್ಟ್ರಿಯಾ, ಫ್ರಾನ್ಸ್, ಜರ್ಮನಿ, ರಷ್ಯಾ ರಾಜ್ಯಗಳಲ್ಲಿರುವ ಯೆಹೂದ್ಯರೇ ೭೫ ಲಕ್ಷ ರೂಪಾಯಿ ಕೊಟ್ಟರು. ರಷ್ಯಾದಲ್ಲಿರುವ ಯೆಹೂದ್ಯರಿಂದಲೇ ೧೫ ಲಕ್ಷ ದ್ರವ್ಯ ಉತ್ಪತ್ತಿಯಾಯಿತು.

❖❖❖❖

ರಷ್ಯಾ ರಾಜ್ಯಕ್ಕೆ ಸೇರಿದ ಯಾರೋಸ್ಲಾವ್ ಪಟ್ಟಣದಲ್ಲಿ ಮಿ|| ಮೆಕ್ಗಿಲ್ ಎಂಬೊಬ್ಬ ಇಂಗ್ಲಿಷ್ ಪ್ರಜೆಯು ಒಂದು ದೊಡ್ಡ ಹತ್ತಿ ಕಾರ್ಖಾನೆಯನ್ನು ಇಟ್ಟು ನಡಸುತ್ತಾ ಬಂದಿರುವನು. ರಷ್ಯಾ ಸರ್ಕಾರದವರು ಆತನ ಕಾಗದ ಪತ್ರಗಳನ್ನು ಶೋಧನೆ ಮಾಡಿದಾಗ ಈಗಿನ ರಾಜ್ಯಭಾರ ಕ್ರಮಕ್ಕೆ ವಿರುದ್ಧವಾದ ಅಭಿಪ್ರಾಯಗಳುಳ್ಳ ಕೆಲವು ಕಾಗದಗಳು ಸಿಕ್ಕಿದವೆಂದು ಹೇಳಿ, ಆತನನ್ನೂ ಆತನ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದ ಸಮಸ್ತ ಜನಗಳನ್ನೂ ಹಿಡಿದು ಕಳೆದ ೧೯ ನೇ ತಾರೀಖಿನ ದಿನ ಬಂದೀಖಾನೆಗೆ ಹಾಕಿದರು. ಈ ವಿಷಯವಾಗಿ ಇಂಗ್ಲಿಷ್ ರಾಯಭಾರಿಗೂ ರಷ್ಯಾ ಸರ್ಕಾರದವರಿಗೂ ಕಾಗದಪತ್ರಗಳು ನಡೆಯುತ್ತಿವೆ.

❖❖❖❖

ಡಾಕ್ಟರ್ ಕಾಚ್ ಎಂಬ ಪ್ರಸಿದ್ಧ ವೈದ್ಯನು ಜರ್ಮನಿಯವರಿಗೆ ಸೇರಿದ ಪೂರ್ವ ಆಫ್ರಿಕಾಕ್ಕೆ ಹೋಗಿ ಅಲ್ಲಿ ಪ್ರಬಲವಾಗುತ್ತಿರುವ ನಿದ್ರಾರೋಗವನ್ನು ಪರೀಕ್ಷೆ ಮಾಡುವವನಾಗಿದ್ದಾನೆ. ಇದಕ್ಕಾಗಿ ಜರ್ಮನಿ ಸರ್ಕಾರದವರು ೯ ಲಕ್ಷ ರೂಪಾಯಿಯನ್ನು ಆತನ ವಶಕ್ಕೆ ಕೊಟ್ಟಿದ್ದಾರೆ. ಆತನು ಅಲ್ಲಿ ೧೮ ತಿಂಗಳ ತನಕ ಇದ್ದು, ಆ ರೋಗ ಲಕ್ಷಣ ಮುಂತಾದ್ದನ್ನು ಚೆನ್ನಾಗಿ ಪರೀಕ್ಷಿಸಿ ಬರಬೇಕೆಂದು ಗೊತ್ತಾಗಿದೆ. ವಿಲಾಯಿತಿ ರಾಜ್ಯದವರೂ ಈ ರೋಗ ಪರೀಕ್ಷೆಗಾಗಿ ಇದುವರೆಗೆ ೩ ಲಕ್ಷ ರೂಪಾಯಿಯನ್ನು ಖರ್ಚು ಮಾಡಿದ್ದಾರೆ. ಅವರ ವೈದ್ಯರಲ್ಲಿ ಒಬ್ಬನು ಅವರ ಕಾರ್ಯ ನಡೆಸುವುದರಲ್ಲಿ ಅಸಕ್ತನಾಗಿದ್ದು ಅದರಲ್ಲೇ ತನ್ನ ಪ್ರಾಣವನ್ನೂ ಕಳೆದುಕೊಂಡನು.

❖❖❖❖

ಅಮೇರಿಕಕ್ಕೆ ಸೇರಿದ ಚಿಕಾಗೋ ಪಟ್ಟಣದಲ್ಲಿ ಮಿ|| ಮಾರ್ಷಲ್ ಫೀಲ್ಡ್ ಎಂಬ ಪ್ರಸಿದ್ಧ ಕೋಟ್ಯಾಧೀಶ್ವರನು ಕಳೆದ ವಾರ ಕಾಲವಾದನೆಂದು ತಂತೀ ವರ್ತಮಾನ ಬಂದಿದೆ. ಈತನು ೩೦ ಕೋಟಿ ದ್ರವ್ಯವನ್ನು ಸಂಪಾದನೆ ಮಾಡಿಟ್ಟುಕೊಂಡು, ಅಮೇರಿಕದಲ್ಲೆಲ್ಲಾ ಆತನೆಯು ಮಹದೈಶ್ವರ್ಯವಂತನೆಂಬ ಹೆಸರು ಪಡೆದಿದ್ದನು. ಅದರೆ ಇತರರು ಪಡೆದಿರುವ ಐಶ್ವರ್ಯವನ್ನು ನೋಡಿದರೆ ಇದು ಗಣನೆಗೆ ಬರುವುದೇ ಇಲ್ಲ. ಹ್ಯಾಗೆಂದರೆ, ಮಿ|| ಜೆ. ಡಿ. ರಾಕ್‌ಫೆಲರ್ ಎಂಬ ಶ್ರೀಮಂತನು ೧೫೦ ಕೋಟಿ ದ್ರವ್ಯಕ್ಕಿಂತಲೂ ಹೆಚ್ಚಾಗಿಯೇ ಸಂಪಾದಿಸಿ ಇಟ್ಟುಕೊಂಡಿದ್ದಾನೆ. ಮಿ|| ಅಂಡ್ರು ಕಾರ್ನೆಗಿ ಎಂಬಾತನು ೭೫ ಕೋಟಿ ರೂಪಾಯಿನ ಯಜಮಾನನಾಗಿರುತ್ತಾನೆ.

❖❖❖❖

ವಿಲಾಯಿತಿಯಲ್ಲಿದ್ದ ಕಾಲವಾದ ಮುಂದೆ ಹೇಳುವ ಜನರು ತಮ್ಮ ಆಸ್ತಿಯನ್ನು ಧರ್ಮಕಾರ್ಯಗಳಿಗೆ ವಿನಿಯೋಗಮಾಡಬೇಕೆಂದು ಮರಣಶಾಸನವನ್ನು ಬರೆದಿಟ್ಟಿದ್ದಾರೆ. ಮ್ಯಾಂಚೆಸ್ಟರ್ ಪಟ್ಟಣದ ಅಲೆಕ್ಸಾಂಡರ್ ಮಿಲ್ಸ್ ಎಂಬ ಲೇವಿಯು ೩,೧೫,೦೦೦ ರೂಪಾಯಿ, ಮ್ಯಾಕಲ್ಸ್‌ಫೀಲ್ಡಿನ ವರ್ಬರ್ಟನ್ ಸಿಲ್ವನು ೬೫,೦೦೦ ರೂಪಾಯಿ, ಕಾರ್ನಾರ್ವನ್ ಪಟ್ಟಣದ ಫ್ರೆಡರಿಕ್ ಕಿಟ್ಟಿನ್ ಎಂಬ ತಂತಿವಾರ್ತಾಹರನು ೩,೦೬,೦೦೦ ರೂಪಾಯಿ, ಗ್ಲೋಸ್ಟರ್ ಪಟ್ಟಣದಲ್ಲಿ ರಥಗಳನ್ನು ಕಟ್ಟಿ ಪ್ರಸಿದ್ಧಿಪಡೆದಿರುವ ಎಲ್ಲಿಸ್ ಎಂಬಾತನ ಹೆಂಡತಿಯು ೧೯,೩ ೬,೦೦೦ ರೂಪಾಯಿ, ಹೆನ್ರಿ ರಿಚರ್ಡ್ಸನ್ ಎಂಬಾತನು ೧,೭೫,೦೦೦ ರೂಪಾಯಿ ಈ ಪ್ರಕಾರ ದಾನಮಾಡಿ ಕಾಲವಾಗಿರುತ್ತಾರೆ.

ರಷ್ಯಾ ರಾಜ್ಯದ ನಾವೆಗಳ ಅಧಿಪತಿಯಾದ ಅಡ್ಮಿರಲ್ ರಾಜ್‌ಜೆಸ್ಟ್ವೆನ್ಸ್ಕಿಯವರು ಅಲಕ್ಷ್ಯದಿಂದಲೂ ಅಸಮರ್ಥತೆಯಿಂದಲೂ ರಷ್ಯಾ ಜಪಾನ್ ಯುದ್ಧ ಕಾಲದಲ್ಲಿ ರಷ್ಯಾದವರ ನಾವೆಗಳನ್ನು ನಾಶಮಾಡಿದರೆಂತಲೂ ಸಾವಿರಾರು ರಷ್ಯಾ ಸೈನಿಕರನ್ನು ಬಲಿಕೊಟ್ಟರೆಂತಲೂ, ಇದಕ್ಕಾಗಿ ಆ ಅಡ್ಮಿರಲ್ ಯವರನ್ನು ದರ್ಯಾಪ್ತು ಮಾಡಬೇಕೆಂತಲೂ ರಷ್ಯಾ ಚಕ್ರವರ್ತಿ ಜಾರ್ ಯವರು ಅಪ್ಪಣೆ ಕೊಡಿಸಿದ್ದಾರೆ. ಅಡ್ಮಿರಲ್ ರಾಜ್ ಜೆಸ್ಟ್ವೆನ್ಸ್ಕಿ ಯವರು ತಮ್ಮ ದರ್ಯಾಪ್ತಿಯು ಅಂತರಂಗದಲ್ಲಿ ಆಗ ಕೂಡದೆಂತಲೂ ಬಹಿರಂಗವಾದ ಕೋರ್ಟಿನಲ್ಲಿ ಎಲ್ಲರಿಗೂ ತಿಳಿಯುವಂತೆ ನಡೆಯಬೇಕೆಂತಲೂ ಅಪೇಕ್ಷೆ ಪಟ್ಟರು. ಚಕ್ರವರ್ತಿಯವರು ಆ ದರ್ಯಾಪ್ತಿಯು ಇಷ್ಟಪ್ರಕಾರವೇ ನಡೆಯಲೆಂದು ಅಪ್ಪಣೆ ಕೊಡಿಸಿರುವರು.

❖❖❖❖

ಉಷ್ಣ ರಾಜ್ಯಗಳಲ್ಲಿ ಹುಟ್ಟಿ ಹಬ್ಬುವ ರೋಗಗಳ ಲಕ್ಷಣ ಚಿಕಿತ್ಸೆ ಮೊದಲಾದವನ್ನು ಕಲಿಸುವುದಕ್ಕೆ ವಿಲಾಯಿತಿಗೆ ಸೇರಿದ ಲಿವರ್‌ಪೂಲ್ ಪಟ್ಟಣದಲ್ಲಿ ಒಂದು ವೈದ್ಯ ವಿದ್ಯಾಶಾಲೆ ಇರುತ್ತದೆ. ಇದಕ್ಕೆ ಪ್ರೊಫೆಸರ್ ರಾಸ್ ಎಂಬುವರು ಮುಖ್ಯಸ್ಥರಾಗಿರುವರು. ಇವರು ಕಳೆದ ಸೆಪ್ಟೆಂಬರ್ ತಿಂಗಳಲ್ಲಿ ಒಂದೊಂದು ತಿಗಣೆಯನ್ನು ತಂದು ಕೊಡುವವರಿಗೆ ಅವರು ಕಾಸಿನಂತೆ ಬಹುಮಾನ ಸಿಕ್ಕುವುದೆಂದು ಪ್ರಕಟಿಸಿದ ಕೂಡಲೇ ಜನರು ಕೆಲವು ಸಾವಿರ ತಿಗಣೆಗಳ ತನಕ ತಂದು ಅವರ ವಶಕ್ಕೆ ಕೊಟ್ಟು ಪ್ರತಿಫಲ ಪಡೆದರು. ಪ್ರೊಫೆಸರ್ ರಾಸ್‌ಯವರು ಅವುಗಳನ್ನೆಲ್ಲಾ ಪರೀಕ್ಷೆ ಮಾಡಿ ತಿಗಣೆಗಳು ಸೊಳ್ಳೆಗಳಂತೆಯೇ ಕಡಿದರೆ ಅನೇಕಸಂದರ್ಭಗಳಲ್ಲಿ ಮಲೇರಿಯಾ ಎಂಬ ವಿಷಜ್ವರವೂ ... ರೋಗವೂ ಇತರ ಅಂಟು ರೋಗಗಳೂ ಉಂಟಾಗುವವು ಎಂಬುದಾಗಿ ತಿಳಿಸಿರುತ್ತಾರೆ.

❖❖❖❖

ಅಮೇರಿಕ ಸಂಸ್ಥಾನಗಳ ಮುಖ್ಯ ನಗರವಾದ ನ್ಯೂಯಾರ್ಕ್ ಪಟ್ಟಣದಲ್ಲಿ ಮಿ|| ಸಿ. ಯರ್ಕೆಸ್ ಎಂಬ ಧನಾಢ್ಯನು ಬಹು ಮನೋಹರವಾದ ಒಂದು ಬಂಗಲೆಯನ್ನು ಕಟ್ಟಿಸಿಕೊಂಡು, ಅದರಲ್ಲಿ ಅತ್ಯಂತ ಅಪೂರ್ವ ವಸ್ತುಗಳನ್ನೂ ಚಿತ್ರಕಲಾ ವಿಶೇಷಗಳನ್ನೂ ಇಟ್ಟು ಅಲಂಕರಿಸಿದ್ದನು. ಈತನು ಈಗ ಕಾಲವಾಗಿರುತ್ತಾನೆ. ತನ್ನ ಮರಣಶಾಸನದಲ್ಲಿ ಈ ಬಂಗಲೆಯನ್ನು ಚಿತ್ರವಸ್ತುಗಳ ಸಹಿತ ಆ ಪಟ್ಟಣದವರ ಸ್ವಾಧೀನ ಮಾಡಿ, ಬಂಗಲೆ (ಮ್ಯೂಜಿಯಂ) ಸಂತೆ ಪ್ರಜೆಗಳಿಗೆ ನೋಡುವುದಕ್ಕಾಗಿ ಬಿಟ್ಟುಕೊಟ್ಟು, ಆ ಬಂಗಲೆಯ ಖರ್ಚಿಗೆ ತನ್ನ ಆಸ್ತಿಯಲ್ಲಿ ೩೦ ಲಕ್ಷ ರೂಪಾಯಿ ತೆಗೆದಿಡಬೇಕೆಂತಲೂ, ತನ್ನ ಇತರ ಆಸ್ತಿಯೆಲ್ಲಾ ಅಂದರೆ ೫೦೦೬ ಲಕ್ಷ ರೂಪಾಯಿನ ಆಸ್ತಿಯನ್ನು ತನ್ನ ಹೆಂಡತಿ ... ಮಕ್ಕಳೂ ಬದುಕಿರುವ ತನಕ ಮಾತ್ರ ಅನುಭವಿಸಿ, ಅವರ ತರುವಾಯ ಅದೆಲ್ಲಾ ಆ ಪಟ್ಟಣದ ಒಂದು ಆಸ್ಪತ್ರೆಯ ಫಂಡಿಗೆ ಸೇರಿಸಲ್ಪಡಬೇಕೆಂತಲೂ ಮರಣಶಾಸನವನ್ನು ಬರೆದಿಟ್ಟಿರುತ್ತಾನೆ.

❖❖❖❖

ವಿಲಾಯಿತಿ ರಾಜ್ಯದವರು ಕಳೆದ ವರುಷ ಟಿಬೆಟ್ಟಿಗೆ ಸೈನ್ಯವನ್ನು ಕಳುಹಿಸಿದ್ದದ್ದೂ, ಅಲ್ಲಿನ ಗ್ರಾಂಡ್ ಲಾಮಾ ಎಂಬ ಮುಖ್ಯ ಗುರುವು ಈ ಸೈನ್ಯವನ್ನು ಕಂಡ ಕೂಡಲೇ ತಲೆ ತಪ್ಪಿಸಿಕೊಂಡು ಓಡಿಹೋದದ್ದೂ, ತರುವಾಯ ಇಂಗ್ಲಿಷ್ ರಾಯಭಾರಿ ಕರ್ನಲ್ ಯಂಗ್ ಹಸ್ಬೆಂಡರು ಟಿಬೆಟ್ಟಿನ ಪ್ರಜೆಗಳಿಗೆ ಯಾವ ವಿಧವಾದ ಅಪಾಯ ಕಷ್ಟನಷ್ಟವನ್ನಾದರೂ ಕೊಡುವುದಿಲ್ಲವೆಂದು ನಂಬಿಸಿ, ಹಿಂದೂಸ್ಥಾನಕ್ಕೂ ಟಿಬೆಟ್ಟಿಗೂ ವ್ಯಾಪಾರ ಸರಕುಗಳು ಧಾರಾಳವಾಗಿ ಹೋಗಿ ಬರುವಂತೆ ಮಾಡಿಕೊಂಡು, ಅಲ್ಲಿನ ಮುಖಂಡರಿಂದ ಕರಾರಿಗೆ ರುಜು ಮಾಡಿಸಿಕೊಂಡು ವಾಪಸು ಬಂದದ್ದೂ ನಮ್ಮ ವಾಚಕರಿಗೆ ಜ್ಞಾಪಕವಿರಬಹುದು. ಟಿಬೆಟ್ ರಾಜ್ಯವು ಚೀನಾದವರಿಗೆ ಅಧೀನವಾದದ್ದಾಗಿರೋಣದರಿಂದ ಮೇಲ್ಕಂಡ ಕರಾರಿಗೆ ಅವರಿಂದ ರುಜು ಹಾಕಿಸಬೇಕೆಂದು, ಅವರ ಕಡೆಯ ರಾಯಭಾರಿಯನ್ನು ಸಿಂಗ್ ಯಿಂದ ಕಲ್ಕತ್ತೆಗೆ ಕರೆಸಿಕೊಂಡಿದ್ದರು. ಈ ರಾಯಭಾರಿಯು ಕಲ್ಕತ್ತೆಯಿಂದ ವಾಪಸು ಹೋಗಿರುತ್ತಾನೆ. ಈಗಲಾದರೋ ಮೇಲ್ಕಂಡ ಕರಾರಿಗೆ ಚೀನಾದವರು ಸಮ್ಮತಿ ರುಜುವನ್ನು ಹಾಕುವುದಿಲ್ಲವೆಂದು ತಿರಸ್ಕಾರ ಮಾಡಿದ್ದಾರೆಂತಲೂ, ಚೀನಾದಲ್ಲಿ ಈಗಿನ ಕ್ರಮದಂತೆ ಅಭ್ಯಾಸವಾಗಿರುವ ಸೈನ್ಯವನ್ನು ಒಬ್ಬ ಟಾರ್ಟರ್ ಸರ್ದಾರನ ಕೈಕೆಳಗೆ ಕೊಟ್ಟು ಕಳುಹಿಸಿ, ಅವನಿಂದ ಟಿಬೆಟ್ಟನ್ನು ಆಳಿಸಬೇಕೆಂದು ಸನ್ನಾಹಮಾಡುತ್ತಿದ್ದಾರೆಂತಲೂ ತಂತೀ ವರ್ತಮಾನ ಬಂದಿದೆ.

ಬಾತ್ಮೀದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದೆ ಬರುತಕ್ಕ ಬಾತ್ಮೀಗಳಿಗೆ ನಾವು ನಿಗಾ ಕೊಡಲಾರೆವು. ಅದಕಾರಣ ಬಾತ್ಮೀದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು. ಮತ್ತು ಬಾತ್ಮೀಯನ್ನು ಕಾಗದದ ಒಂದೇ ಪಕ್ಕದಲ್ಲೂ ಬರೆಯತಕ್ಕದ್ದು; ಇಂಥವುಗಳಿಗೆ ನಾವು ನಿಗಾ ಕೊಡಲಾರೆವು.

ಪ್ರಕಟಿಸಲಾರೆವೆಂದು ನಾವು ತಿರಸ್ಕರಿಸಿದ ಬಾತ್ಮೀಗಳನ್ನು ನಾವು ಬಾತ್ಮೀದಾರರಿಗೆ ವಾಪಸು ಕಳುಹಿಸಲಾರೆವು.

ಬಾತ್ಮೀದಾರರು ಸೂಚಿಸುವ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲವೆಂಬುದನ್ನು ಸಕಲರೂ ತಿಳಿಯತಕ್ಕದ್ದು.—ಎಡಿ.

ಮಂಡ್ಯದ ಏಜೆಂಟರು:— ನೀವು ಬಾತ್ಮೀಯನ್ನು ಸ್ಪಷ್ಟವಾಗಿಯೂ ಸಂಕ್ಷೇಪವಾಗಿಯೂ ಬರೆಯಬೇಕು.

ಪ್ರಜಾಹಿತಚಿಂತಕ ... ನ್ಯಾಯದರ್ಶಿ, ತೀರ್ಥಹಳ್ಳಿ.—ನಿಮ್ಮ ಹೆಸರು ವಿಳಾಸಗಳನ್ನು ತಿಳಿಸಿಲ್ಲ.

ಬೆಂಗಳೂರು ಸಿಟಿ "ಪ್ರಜಾಮಿತ್ರ" ಎಂಬೊಬ್ಬ ಬಾತ್ಮೀದಾರರು ಅಲ್ಲಿನ ಮಾಗಡಿ ಪ್ಲೇಗ್ ಕ್ಯಾಂಪಿನ ಕಾರುಬಾರುಗಳು ಸರಿಯಾಗಿಲ್ಲವೆಂತಲೂ, ರೋಗಿಗಳನ್ನು ಕಾರಿಗಳಿಗೆ ... ತುಂಬಿದಾರೆಂತಲೂ, ಡಾಕ್ಟರು ಸರಿಯಾಗಿ ಅವರನ್ನು ನೋಡಿ ಉಪಚರಿಸುವದಿಲ್ಲವೆಂತಲೂ, ಒಂದುವರೆ ... ಲ್ಲಿ ಒಬ್ಬ ರೋಗಿಯು ಬಾಧೆಯನ್ನು ತಡೆಯಲಾರದೆ ಹೋಗಿ ಕ್ಯಾಂಪಿನ ... ದಲ್ಲಿ ಬಿದ್ದು ಸತ್ತನೆಂತಲೂ ಬರೆಯುತ್ತಾರೆ.

ಕರೆಸ್ಪಾಂಡೆನ್ಸ್.

ಆನೇಕಲ್ಲಿನಲ್ಲಿ ನಡೆದ ಅನಾಹುತಗಳು.

ಅಯ್ಯಾ,

ಈ ಆನೇಕಲ್ ತಾಲೂಕಿನಲ್ಲಿ ಈ ತಿಂಗಳು ೧೯ ನೇ ತಾರೀಖಿನಿಂದ ೨೭ ರ ವರೆವಿಗೆ ನಡೆದ ಸಂಗತಿಗಳನ್ನು ಸಂಕ್ಷೇಪವಾಗಿ ಬರೆಯುತ್ತೇನೆ.

ವಿಚಿತ್ರವಾದ ಕುಸ್ತಿ. ಇದಕ್ಕೆ ಟಿಕೇಟ್ ದರ ಉಂಟು. ಇದನ್ನು ಚಳೀ ಛತ್ರದಲ್ಲಿ ನಡೆಸಿದರು. ಕುಸ್ತಿ ಆದ ವೇಳೆ ಜನಗಳು ಹೊರಟರು. ಆಗ ಸ್ವಲ್ಪ ಗದ್ದಲವಾಯ್ತು. ಆ ಕಾಲದಲ್ಲಿ ಹೊರಗಿದ್ದವರು ಮನೇ ಗದ್ದಲ ಎಂದು ಮೇಲೆ ಹತ್ತಿ ಬಂದರು. ಆ ಛತ್ರದ ಒಂದು ಮೂಲೆಯು ೩—೪ ಅಂಗುಲ ಶಿಥಿಲವಾಗಿತ್ತು. ಅದರ ಪೈಕಿ ೨ ಅಂಕಣ ಜನರ ಭಾರವನ್ನು ಸಹಿಸಲಾರದೆ ಕೆಳಕ್ಕೆ ಉರುಳಿತು. ಅದರಲ್ಲಿ ೩ ಜನ ಕೆಳಕ್ಕೆ ಬಿದ್ದು ಉರುಳಿದರು. ಆ ಮೂರು ಜನರ ಪೈಕಿ ಇಬ್ಬರು ಲೋಕಾಂತರವನ್ನೈದಿದರು. ಒಬ್ಬನು ಈಗಲೋ ಆಗಲೋ ಎನ್ನುವ ಹಾಗಿದೆ.

ಇದಲ್ಲದೆ ಯಾರೋ ಒಬ್ಬ ಪುಣ್ಯಾತ್ಮನು ೩ ಕುದುರೆಗಳನ್ನು ಛಾರ್ಜಿಯಲ್ಲಿ ತಿವಿದು ಸಾಕಿರುತ್ತಾನೆ. ಕುದುರೆಗಳು ಸತ್ತು ಹೋದವು. ಅಲ್ಲದೆ ೧ ಕುದುರೆಯ ಬಾಲಕ್ಕೆ ಹುಲ್ಲು ಸುತ್ತಿ ಬೆಂಕಿ ಇಟ್ಟಿರುತ್ತಾನೆ. ಅಲ್ಲದೆ ಮತ್ತೊಂದಕ್ಕೆ ಮುಂದಿನ ೧ ಕಾಲು ಮುರಿದು ಹಾಕಿರುತ್ತಾನೆ.

ಅಲ್ಲದೆ ಈ ಊರು ಸುತ್ತಲೂ ೩—೪ ದಾರಿ ಮೆದೆಗಳಿಗೆ ಬೆಂಕಿ ಬಿದ್ದು ೬೦—೭೦ ಬಂಡಿಗಳ ವರೆವಿಗೂ ದವಸಗಳು ಸುಟ್ಟುಹೋದವು. ಇಂಥಾ ಅಕಸ್ಮಾತ್ತು ಸಂಗತಿಗಳನ್ನು ದೇವರು ಪರಿಹಾರಮಾಡಬೇಕೆಂದು ಸದಾ ದಾ ಕೇಳುತ್ತಿರುವ.

೨೭—೧—೦೬. ಜಾನ್ಪಿದಾರ್.

[ಇದರ ಮೊದಲು ಭಾಗ ೩ ನೆ ಪುಟದಲ್ಲಿದೆ]

ವಿಚಾರಿಸಿದರು. ಅಲ್ಲಿಗೆ ಪ್ರಿನ್ಸ್ ರವರ ಟ್ರೈನ್ ಗಾಡಿ ಬರುವುದೆಂಬ ಶಿಳ್ಳು ಕೇಳಿಸಿತು. ಕೂಡಲೇ ಎಲ್ಲರೂ ತಮ್ಮ ತಮ್ಮ ಸ್ಥಾನಗಳಲ್ಲಿ ಅದಬ್ಬಾಗಿ ನಿಂತುಕೊಂಡರು. ಗಾಡಿಯೂ ಸ್ಟೇಷನಿಗೆ ೩ ಗೆ ಸರಿಯಾಗಿ ಥಂಗ್ ಥಗ್ ಎಂದು ನುಗ್ಗಿ ಬಂತು. ಗಾಡಿಯು ನಿಲ್ಲುವುದಕ್ಕೆ ಮುಂಚೆಯೇ ಒಳಗಿಂದ ಸರ್ ವಾಲ್ಟರ್ ಲಾರೆನ್ಸ್ ರವರು ಸ್ಟೇಷನ್ ಪ್ಲಾಟ್‌ಫಾರಮಿಗೆ ಧುಮುಕಿ ಬಂದು ಪ್ರಿನ್ಸ್ ಆಫ್ ವೇಲ್ಸ್‌ರವರ ಗಾಡಿ ಬಾಗಿಲಿಗೆ ಹೋಗಿ, ಅವರನ್ನು ಗಾಡಿಯಿಂದ ಇಳಿಸಿ, ಕೂಗೆ ನಿಂತಿದ್ದ ಮೈಸೂರು ಸಂಸ್ಥಾನದ ಬ್ರಿಟಿಷ್ ರೆಸಿಡೆಂಟರು ಶ್ರೀಮನ್ಮಹಾರಾಜರವರನ್ನೂ ಅವರಿಗೆ ಪರಿಚಯ ಮಾಡಿಸಿದರು. ರೆಸಿಡೆಂಟರು ತಮ್ಮ ಅಸಿಸ್ಟೆಂಟರನ್ನು ಪ್ರಿನ್ಸ್‌ರವರಿಗೆ ಪರಿಚಯ ಮಾಡಿಸಿದರು. ಶ್ರೀಮನ್ಮಹಾರಾಜರವರು ಪ್ರಿನ್ಸ್ ಆಫ್ ವೇಲ್ಸ್ ರವರ ಹತ್ತಿರದ ಕೈ ಕುಲುಕಿ, ಅವರ ಸಂಗಡ ಮಾತನಾಡಿ, ಪ್ರಿನ್ಸ್ ಆಫ್ ವೇಲ್ಸ್‌ರವರನ್ನು ಕರೆದುಕೊಂಡು ಎಡಕ್ಕೆ ಹೊರಟು ಮುಂದೆ ಸಾಲಾಗಿ ನಿಂತಿದ್ದ ಯುವರಾಜರು, ದಿವಾನರವರು, ಮೆ॥ ಗುಡಿದ ಲಕ್ಷ್ಮೀಕಾಂತರಾಜೇ ಅರಸಿನವರು, ಗಂಜಾಂ ಚೆಟ್ಟರು, ಗೋಪಾಲರಾಜೇ ಅರಸಿನವರು, ಇಬ್ಬರು ಕೌನ್ಸಿಲರುಗಳು, ಭಕ್ಷಿ ಬಸಪ್ಪಾಜಿ ಅರಸಿನವರು, ಛೀಫ್ ಜಡ್ಜರವರು, ಈ ಮೊದಲಾದ ಮುಖ್ಯ ಸರ್ದಾರರುಗಳನ್ನೂ ಉದ್ಯೋಗಸ್ಥರನ್ನೂ ಪ್ರಿನ್ಸ್ ಆಫ್ ವೇಲ್ಸ್ ರವರಿಗೆ ಪರಿಚಯ ಮಾಡಿಸಿದರು. ಅವರು ಯೋಗ್ಯತೆ ಮುಗಿದು ನಿಂತುಕೊಂಡರು. ತರುವಾಯ ಪ್ರಿನ್ಸ್ ಆಫ್ ವೇಲ್ಸ್‌ರವರೂ ಶ್ರೀಮನ್ಮಹಾರಾಜರವರೂ ಕರ್ನಲ್ ದೇಸರಾಜೇ ಅರಸಿನವರ ಮುಂದಿನ ಮುಂದಕ್ಕೆ ದಯಮಾಡಿ, ಅಲ್ಲಿ ಸಾಲಾಗಿ ನಿಂತಿದ್ದ ಇಂಪೀರಿಯಲ್ ಸರ್ವಿಸ್, ಲೋಕಲ್ ಸರ್ವಿಸ್ ಸವಾರ ಸೈನ್ಯದ ಉದ್ಯೋಗಸ್ಥರನ್ನೂ ಕಾಲ್ಬಲದ ಉದ್ಯೋಗಸ್ಥರನ್ನೂ ನೋಡಿಕೊಂಡು ಬಂದರು. ಸವಾರ ಸೈನ್ಯದವರ ಬ್ಯಾಂಡ್ ವಾದ್ಯಗಾರರು ಮನೋಹರವಾಗಿ ವಾದ್ಯ ನುಡಿಸುತ್ತಿದ್ದರು. ಕೋಟೆಕೊತ್ತಲದಿಂದ ಗೌರವಾರ್ಥವಾದ ೩೧ ತೋಪುಗಳು ಹಾರಿಸಲ್ಪಟ್ಟವು.

ಪ್ರಿನ್ಸ್ ಆಫ್ ವೇಲ್ಸ್ ರವರು ಶ್ರೀಮನ್ಮಹಾರಾಜರವರ ಸಂಗಡ ಸ್ಟೇಷನಿನಿಂದ ಹೊರಕ್ಕೆ ದಯಮಾಡಿದರು. ಹೊರಗಡೆ ಮೈದಾನದಲ್ಲಿ ಕುದುರೆ ಸೈನಿಕರೂ ಸಿಪಾಯಿಗಳೂ ಸಾಲುಸಾಲಾಗಿ ನಿಂತು ಅವರಿಗೆ ಮುಜರೆ ಮಾಡಿದರು. ಶೃಂಗಾರವಾದ ನಾಲ್ಕು ಕರೀ ಕುದುರೆಗಳನ್ನು ಕಟ್ಟಿದ ಸಾರೋಟು ಸಿದ್ಧವಾಗಿ ಬಂದು ನಿಂತಿತು, ಶ್ರೀಮನ್ಮಹಾರಾಜರವರೂ ಅವರ ಬಲಪಾರ್ಶ್ವದಲ್ಲಿ ಪ್ರಿನ್ಸ್ ಆಫ್ ವೇಲ್ಸ್‌ರವರೂ, ಎದುರಿಗೆ ಸರ್ ವಾಲ್ಟರ್ ಲಾರೆನ್ಸ್‌ಯವರೂ ಸಾರೋಟಿನಲ್ಲಿ ಕುಳಿತರು. ಹಿಂದುಗಡೆ ಸ್ವೋತ್ಪತ್ತಿಯನ್ನು ಸೂಚಿಸುವರ್ನೂ ಉಳಿಗದವರು ಎತ್ತಿ ಹಿಡಿದರು. ಸಾರೋಟಿನ ಹಿಂದೆಯೂ ಮುಂದೆಯೂ ಶ್ರೀಮನ್ಮಹಾರಾಜರವರ ಬಾಡಿಗಾರ್ಡ್ ಸವಾರರೂ ಇಂಪೀರಿಯಲ್ ಸರ್ವಿಸ್ ಲಾನ್ಸರುಗಳೂ ಎಸ್ಕಾರ್ಟ್ ಹೊರಟರು. ವಾದ್ಯಗಳ ಘೋಷದಲ್ಲಿ ಸಾರೋಟು ಮುಂದಕ್ಕೆ ನಡೆಯಿತು, ಎರಡನೆಯ ಸಾರೋಟು ಬಾಗಿಲಲ್ಲಿ ಬಂದು ಸಿದ್ಧವಾಯಿತು. ಪ್ರಿನ್ಸ್ ಆಫ್ ವೇಲ್ಸ್‌ರವರ ಪತ್ನಿಯವರು ಛತ್ರಿಯನ್ನು ಹಿಡಿದು ಸಾರೋಟಿನಲ್ಲಿ ಕುಳಿತರು. ಅವರ ಸಂಗಡ ರೆಸಿಡೆಂಟರಾದ ಮೆ॥ ಫ್ರೇಸರ್ ರವರೂ ಮೆ॥ ಬೀಟ್ಸನ್‌ರವರೂ ಕುಳಿತುಕೊಂಡರು. ಈ ಸಾರೋಟಿಗೂ ಹಿಂದೆಯೂ ಮುಂದೆಯೂ ಸವಾರರ ಎಸ್ಕಾರ್ಟ್ ಸಿದ್ಧವಾಗಿ ಮುಂದಕ್ಕೆ ಹೊರಟಿತು. ಪ್ರಿನ್ಸ್ ಆಫ್ ವೇಲ್ಸ್ ರವರ ಪರಿವಾರದವರುಗಳೂ ಇತರ ಅಧಿಕಾರಿಗಳೂ ಮೈಸೂರು ಸಂಸ್ಥಾನದ ಮುಖ್ಯ ಮುಖ್ಯ ಉದ್ಯೋಗಸ್ಥರೇ ಮುಂತಾದವರೂ ಬೇರೆ ಬೇರೆ ಸಾರೋಟುಗಳಲ್ಲಿ ಕುಳಿತುಕೊಂಡು ಹೊರಟರು. ಈ ಮೆರವಣಿಗೆಯು, ಹಿಂದೆಯೂ ಮುಂದೆಯೂ ಪಕ್ಕಗಳಲ್ಲೂ ಕುದುರೆ ಸವಾರರೂ, ಭಲ್ಲೆದವರೂ, ಬಾಣದವರೂ, ಈ ಮೊದಲಾದ ಸೈನಿಕರು ಹೊರಟರು.

ಉತ್ಸವ.

ಯುವರಾಜರಂಥ ಮೆರವಣಿಗೆಯನ್ನು ನೋಡುವುದಕ್ಕೆ ಸಯ್ಯಾಜಿರಾವ್ ಛತ್ರದೇ ಮಹಾ ಪ್ರಶಸ್ತಸ್ಥಾನವಾಗಿತ್ತೆಂಬುದರಲ್ಲಿ ಸಂಶಯವಿಲ್ಲ. ಈ ರಸ್ತೆಯ ಇಕ್ಕೆಡೆಗಳಲ್ಲಿ ೩೦೦೦ ಪಾಠಶಾಲಾ ವಿದ್ಯಾರ್ಥಿಗಳೂ ವಿದ್ಯಾರ್ಥಿನಿಯರೂ ಕುಳಿತು ನೋಡುವುದಕ್ಕೆ ಗ್ಯಾಲರಿಗಳನ್ನು ಕಟ್ಟಿದ್ದರು ಮತ್ತು ರಸ್ತೆಯ ಪಕ್ಕಗಳಲ್ಲಿಯೂ ಪಕ್ಕದಲ್ಲಿರುವ ಮನೆಗಳ ಮಾಳಿಗೆಗಳ ಮೇಲೆಯೂ ನೋಟಕರು ಬಲು ಇಕ್ಕಟ್ಟಾಗಿ ಕುಳಿತಿದ್ದರು. ಮಾರ್ಕೆಟ್ ಕಟ್ಟಡದ ಮೇಲಂತೂ ಜನರು ಬಹಳವಾಗಿ ಗುಂಪು ಕೂಡಿದ್ದರು. ಎಲ್ಲರೂ ಯುವರಾಜರ ಆಗಮನಕಾಲವನ್ನು ಅತಿ ಕುತೂಹಲದಿಂದ ನಿರೀಕ್ಷಿಸುತ್ತಿರಲು ಫಿರಂಗಿಯವರ ಒಬ್ಬ ಸಿಪಾಯಿಯು ಬಿಳೀ ಬಾವುಟವನ್ನು ಹಿಡಿದು ಮೇಲಕ್ಕೆತ್ತಿ ತೋರಿಸಿದನು. ಆ ಸೌಜ್ಞೆಯನ್ನರಿತು ಕೋಟೆಯ ಬಳಿಯಲ್ಲಿ ಫಿರಂಗಿ ಶಬ್ದವು ಹೊರಟಿತು. ಯುವರಾಜರು ರೈಲ್ವೆ ಸ್ಟೇಷನನ್ನು ಸೇರಿದರೆಂಬುದಕ್ಕೆ ಇದು ಸೂಚನೆ. ಕೂಡಲೆ ಪ್ರೇಕ್ಷಕರ ಕುತೂಹಲವು ಇಮ್ಮಡಿಯಾಗಿ ದೊರೆಗಳು ಇನ್ನೆಷ್ಟು ಹೊತ್ತಿಗೆ ಕಾಣಿಸಿಕೊಳ್ಳುವರೋ ಎಂಬುದಾಗಿ ಜನಗಳು ಮಾತಾಡಿಕೊಳ್ಳುತ್ತಿರುವ ಶಬ್ದವು ಹೆಚ್ಚಿತು. ಹೀಗೆ ನಿರೀಕ್ಷಿಸುತ್ತಿದ್ದ ಕಾಲವು ಸ್ವಲ್ಪವಾಗಿದ್ದರೂ ಪ್ರಜೆಗಳಿಗೆ ಅತ್ಯಧಿಕವೆಂದು ತೋರುತ್ತಿರಲು ಸ್ಟೇಷನಿನಲ್ಲಿ ಯುವರಾಜರವರ ಆಗಮನಸ್ವಾಗತ ಕಾರ್ಯವು ಅತಿ ಗಂಭೀರವಾಗಿ ನಡೆದನಂತರ ಯುವರಾಜರವರು ಪತ್ನೀಸಮೇತರಾಗಿ ಸ್ಟೇಷನ್ನಿನಿಂದ ಹೊರಟರು. ಇವರ ಮುಂದೆ ಹೊರಡುವ ಮರ್ಯಾದಾರ್ಥವಾದ ಸೇನಾ ವಿವರಣೆಯೆಂತೆಂದರೆ—ಮೊಟ್ಟಮೊದಲು ಇಬ್ಬರು ಪೋಲೀಸು ಅಧಿಕಾರಿಗಳು ಅಶ್ವಾರೂಢರಾಗಿ ಬಂದರು. ಅವರ ಹಿಂದೆ ಸ್ವಲ್ಪ ದೂರವಾಗಿ ಇಂಪೀರಿಯಲ್ ಸರ್ವಿಸ್ ಲ್ಯಾನ್ಸರ್ಸ್ ಎಂಬ ಅಶ್ವಸೈನಿಕರಿಬ್ಬರು ಬಂದರು. ಇವರು ಕೈಗಳಲ್ಲಿ ಬಂದೂಕುಗಳನ್ನು ಹಿಡಿದಿದ್ದರು. ಇವರ ಹಿಂದೆ ಅದೇ ಸೈನಿಕರಲ್ಲಿ ಎರಡು ಸ್ಕ್ವಾಡ್ರನ್ ಅಶ್ವಾರೋಹಕರು ಬಂದರು. ತರುವಾಯ ಪ್ರಿನ್ಸ್ ಆಫ್ ವೇಲ್ಸ್‌ರವರೂ ಮತ್ತು ಮಹಾರಾಜರವರೂ ಕುಳಿತಿದ್ದಂಥ ನಾಲ್ಕು ಕುದುರೆಗಳು ಕಟ್ಟಿದ ರಥವು ಬಂದಿತು. ಇದಕ್ಕೆ ಕಟ್ಟಿದ ಕುದುರೆಗಳಿಗೆ ಸಿಂಗಾರದ ಕವಚಗಳನ್ನೇ ಹಾಕಿದ್ದರು. ಪ್ರಿನ್ಸ್‌ರವರು ಬಿಳೀ ಉಡುಪುಗಳನ್ನು ಹಾಕಿಕೊಂಡಿದ್ದರು. ರಥವು ನಿಧಾನವಾಗಿ ನಡೆಯುತ್ತಿರಲು ಇಕ್ಕೆಡೆಗಳ ಪ್ರಜೆಗಳೂ ವಿದ್ಯಾರ್ಥಿಗಳೂ ಅರ್ಪಿಸುವ ವಂದನೆಗಳನ್ನು ಸ್ವೀಕರಿಸುತ್ತಾ ಪ್ರತಿಯಾಗಿ ಸಲಾಮು ಮಾಡುತ್ತಾ ಹೊರಟರು. ಗ್ಯಾಲರಿಗಳ ಮೇಲೆ ಕುಳಿತಿದ್ದ ವಿದ್ಯಾರ್ಥಿಗಳು ಬಹು ಗಟ್ಟಿಯಾಗಿ ಜಯಘೋಷಗಳನ್ನು ಮಾಡುತ್ತಲೂ ಕೈತಟ್ಟಿ ಹಾಕುತ್ತಲೂ ಯುವರಾಜರಿಗೆ ಮರ್ಯಾದೆ ಮಾಡಿದರು. ಪ್ರಿನ್ಸ್‌ರ ರಥದ ಹಿಂದುಗಡೆಯಲ್ಲಿ ಮೈಸೂರು ಸಿಲದಾರರ ಒಂದು ಸ್ಕ್ವಾಡ್ರನ್ ಸೈನಿಕರು ಬಂದರು. ತರುವಾಯ ಯುವರಾಜಪತ್ನಿಯವರೂ ಅವರೊಂದಿಗೆ ಬ್ರಿಟಿಷ್ ರೆಸಿಡೆಂಟರವರಾದ ಮೆ॥ ಫ್ರೇಸರನವರೂ ಕುಳಿತಿರುವ ರಥವು ಬಂದಿತು. ಯುವರಾಜರವರಿಗೆ ಮಾಡಿದ ಮರ್ಯಾದೆಗಳನ್ನೇ ಪ್ರಜೆಗಳು ಯುವರಾಜಪತ್ನಿಯವರಿಗೂ ಮಾಡಿದರು. ಬಳಿಕ ಯುವರಾಜರ ಪರಿವಾರ ಜನಗಳಾದ ಸಿವಿಲ್ ಮತ್ತು ಮಿಲಿಟರಿ ಆಫೀಸರುಗಳು ಕುಳಿತಿರುವ ನೂರಾರು ರಥಗಳು ಬಂದವು. ಈ ಮಿಲಿಟರಿ ಆಫೀಸರುಗಳು ಹಾಕಿಕೊಂಡಿದ್ದ ಟೋಪಿಗಳ ಮೇಲೆ ಇರುವ ಪಕ್ಷಿಗರಿಗಳು ಅಪೂರ್ವವಾಗಿ ಜನಗಳ ಕೌತುಕವನ್ನು ಹೆಚ್ಚಿಸಲು ಕಾರಣವಾಗಿದ್ದವು. ಇವರ ರಥದ ಬಳಿಕ ಯುವರಾಜರ ಇಂಡಿಯಾ ಪ್ರಯಾಣದಲ್ಲಿ ಸರ್ ಪ್ರತಾಪಸಿಂಗರವರೂ ಇವರೊಂದಿಗೆ ಉತ್ತರ ಇಂಡಿಯಾದಿಂದ ಹೊರಟು ಬಂದಿರುವ ಇಬ್ಬರು ಉದ್ಯೋಗಸ್ಥರೂ ಕುಳಿತಿರುವ ರಥವು ಬಂದಿತು. ಉದ್ದವಾಗಿಯೂ ಕಪ್ಪಾಗಿಯೂ ಇರುವ ಇವರ ಪಾಗುಗಳು ಜನರಲ್ಲಿ ವಿಸ್ಮಯವನ್ನು ಹುಟ್ಟಿಸುತ್ತಿದ್ದವು.

ಗೌರ್ನಮೆಂಟ್ ಹೌಸಿನಲ್ಲಿ ನಡೆದ ಕಾರ್ಯಗಳು.

ಶ್ರೀಮನ್ಮಹಾರಾಜರವರು ಪ್ರಿನ್ಸ್ ಆಫ್ ವೇಲ್ಸ್‌ರವರನ್ನು ಗವರ್ನಮೆಂಟ್ ಹೌಸ್ ಎಂಬ ರಾಜಭವನಕ್ಕೆಂತಲೂ ಅತಿಶಯವಾಗಿ ಅಲಂಕರಿಸಲ್ಪಟ್ಟಿರುವ ಬಂಗಲೆಗೆ ಕರೆತಂದು ಇಳಿಸಿದರು. ಕೂಡಲೇ ಗೌರವಾರ್ಥವಾದ ೩೧ ತೋಪುಗಳು ಹಾರಿಸಲ್ಪಟ್ಟವು. ಬಂಗಲೆಯ ಎದುರು ಪಾರ್ಶ್ವದಲ್ಲಿ ಸವಾರ ಸೈನಿಕರೂ ಸಿಪಾಯಿಗಳೂ ಸಾಲುಸಾಲಾಗಿ ನಿಂತು ಮುಜರೆ ಮಾಡಿದರು. ಬ್ಯಾಂಡ್ ವಾದ್ಯಗಾರರು ಇಂಗ್ಲಿಷ್ ವಾದ್ಯಗಳನ್ನು ನುಡಿಸುತ್ತಿದ್ದರು. ತರುವಾಯ ಶ್ರೀಮನ್ಮಹಾರಾಜರವರು ಅದೇ ಸಾರೋಟಿನಲ್ಲಿ ಕುಳಿತು, ಮರ್ಯಾದೆಗಳೊಡನೆ ಅಲ್ಲಿಂದ ಅರಮನೆಗೆ ಚಿತ್ತೈಸಿದರು.

ವಿಸಿಟಾಚ್ ಪ್ರಸಿ.

ಕೂಡಲೇ ಒಂದು ಸಾರೋಟಿನಲ್ಲಿ ಅಸಿಸ್ಟೆಂಟ್ ರೆಸಿಡೆಂಟ್ ಮೆ॥ ಮಾಸ್‌ಕಂಗ್ ಯವರೂ ಪ್ರಿನ್ಸ್ ಆಫ್ ವೇಲ್ಸ್‌ರವರ ಮಿಲಿಟರಿ ಸೆಕ್ರೆಟರಿ ಜನರಲ್ ಬೀಟ್ಸನ್‌ರವರೂ ಒಬ್ಬ ಏಡಿಕಾಂಗರೂ ಸಾರೋಟಿನಲ್ಲಿ ಕುಳಿತು ಹಿಂದೆ ಮುಂದೆ ಕುದುರೆ ಸವಾರರನ್ನು ಬಿಟ್ಟುಕೊಂಡು ಗವರ್ನಮೆಂಟ್ ಹೌಸಿನಿಂದ ಅರಮನೆಗೆ ಶ್ರೀಮನ್ಮಹಾರಾಜರವರನ್ನು ಕಾಣುವುದಕ್ಕಾಗಿ ಹೋದರು. ಅತ್ತಲಾಗಿ ಶ್ರೀಮನ್ಮಹಾರಾಜರವರ ಕಡೆಯಿಂದ ದಿವಾನ್ ಸರ್ ಪಿ. ಎನ್. ಕೃಷ್ಣಮೂರ್ತಿಯವರೂ ಸೀನಿಯರ್ ಕೌನ್ಸಲರ್ ಮೆ॥ ಸಿ. ಶ್ರೀನಿವಾಸಯ್ಯಂಗಾರ್ಯರೂ, ಕರ್ನಲ್ ದೇಸರಾಜೇ ಅರಸಿನವರೂ, ಸರ್ದಾರ್ ಗೋಪಾಲರಾಜೇ ಅರಸಿನವರೂ ಸಾರೋಟಿನಲ್ಲಿ ಕುಳಿತು ಅರಮನೆಯಿಂದ ಇಸ್ತಿಕಬಾಲ್ ಸಹಿತ ಹೊರಟು ಬಂಗಲೆಗೆ ಬಂದರು. ಇವರನ್ನು ಸರ್ ವಾಲ್ಟರ್ ಲಾರೆನ್ಸ್‌ಯವರೂ ಒಬ್ಬ ಏಡಿಕಾಂಗರೂ ಬಾಗಿಲಲ್ಲಿ ಎದುರುಗೊಂಡು ಬಂಗಲೆಯೊಳಕ್ಕೆ ಕರೆದುಕೊಂಡು ಹೋಗಿ ಪ್ರಶಸ್ತವಾದ ಪೀಠಗಳಲ್ಲಿ ಕೂಡಿಸಿ, ಅವರಿಗೆ ಅತ್ತರ್ ಪಾನ್‌ಗಳನ್ನು ಒಪ್ಪಿಸಿದರು.

ಶ್ರೀಮನ್ಮಹಾರಾಜರವರ ಭೇಟಿ.

ಅಷ್ಟರಲ್ಲೇ ೨೧ ತೋಪುಗಳ ಶಬ್ದವು ಕೇಳಿ ಬಂತು. ಶ್ರೀಮನ್ಮಹಾರಾಜರವರು ಯುವರಾಜರನ್ನು ಸಂಗಡ ಕರೆದುಕೊಂಡು, ಸಕಲ ಮರ್ಯಾದೆಗಳೊಡನೆ ಅರಮನೆಯಿಂದ ಮೆರವಣಿಗೆಯಾಗಿ ಹೊರಟು, ೪॥ ಗಂಟೆಗೆ ಗವರ್ನಮೆಂಟ್ ಹೌಸ್ ಬಂಗಲೆಗೆ ದಯಮಾಡಿದರು. ಸರ್ ವಾಲ್ಟರ್ ಲಾರೆನ್ಸ್‌ರವರೂ ರೆಸಿಡೆಂಟರೂ ಬಾಗಿಲ ಬಳಿಗೆ ಬಂದು ಶ್ರೀಮನ್ಮಹಾರಾಜರವರನ್ನು ಸಾರೋಟಿನಿಂದ ಇಳಿಸಿ ಒಳಗೆ ಕರೆದುಕೊಂಡು ಹೋಗುತ್ತಿರುವಾಗ್ಗೆ ದರ್ಬಾರ್ ಕೊಠಡಿ ಬಾಗಿಲಿಗೆ ಪ್ರಿನ್ಸ್ ಆಫ್ ವೇಲ್ಸ್‌ರವರು ಬಿಜಯಮಾಡಿಸಿ, ಶ್ರೀಮನ್ಮಹಾರಾಜರವರಿಗೆ ಸುಸ್ವಾಗತವನ್ನು ಬಯಸಿ, ಕೈಹಿಡಿದು ಕರೆದುಕೊಂಡು ಹೋಗಿ, ಪ್ರಶಸ್ತವಾದ ಪೀಠಗಳ ಮೇಲೆ ಕುಳ್ಳಿರಿಸಿಕೊಂಡರು. ಶ್ರೀಮನ್ಮಹಾರಾಜರವರು ಅವರ ಬಲಭಾಗದಲ್ಲಿ ಕುಳಿತಿರಲು ಇವರ ಬಲಭಾಗದಲ್ಲಿ ಯುವರಾಜರವರೇ ಮೊದಲಾದವರು ಆ ಪೀಠಗಳ ಮೇಲೆ ಕುಳಿತುಕೊಂಡರು. ಪ್ರಿನ್ಸ್ ಆಫ್ ವೇಲ್ಸ್‌ರವರ ಎಡಭಾಗದಲ್ಲಿ ಬ್ರಿಟಿಷ್ ರೆಸಿಡೆಂಟರೂ, ಯುರೋಪಿಯನ್ ಸರ್ದಾರರೂ ಕುರ್ಚಿಗಳನ್ನು ಅಲಂಕರಿಸಿದರು. ಪ್ರಿನ್ಸ್ ಆಫ್ ವೇಲ್ಸ್‌ರವರ ಮತ್ತು ಶ್ರೀಮನ್ಮಹಾರಾಜರವರ ಕುರ್ಚಿಗಳ ಹಿಂಭಾಗದಲ್ಲಿ ಉಳಿಗದವರು ಚಿನ್ನದ ಚೋಪ್ದಾರ್ ಹಿಡಿದು, ಬೀಸುತ್ತಿದ್ದರು. ಪ್ರಿನ್ಸ್ ಆಫ್ ವೇಲ್ಸ್‌ರವರು ಶ್ರೀಮನ್ಮಹಾರಾಜರವರ ಸಂಗಡ ಸಲ್ಲಾಪ ಮಾಡುತ್ತಿದ್ದಾಗ ಬ್ರಿಟಿಷ್ ರೆಸಿಡೆಂಟರು ತಮ್ಮ ಕುರ್ಚಿಯಿಂದೆದ್ದು, ಪ್ರಿನ್ಸ್ ಆಫ್ ವೇಲ್ಸ್‌ರವರ ಎದುರಿಗೆ ಬಂದು, ಮರ್ಯಾದಾಪೂರ್ವಕವಾಗಿ ತಲೆಯನ್ನು ಬಗ್ಗಿಸಿ ಮುಜರೆ ಮಾಡಿ, ಬಲಪಾರ್ಶ್ವದಲ್ಲಿ ನಿಂತುಕೊಂಡರು. ಕೂಡಲೆ ಯುವರಾಜರವರು ಎದುರಿಗೆ ಬಂದು ಪ್ರಿನ್ಸ್ ಆಫ್ ವೇಲ್ಸ್‌ರವರಿಗೆ ಮುಜರೆಮಾಡಿ, ನಜರನ್ನು ಒಪ್ಪಿಸಿದರು. ಪ್ರಿನ್ಸ್ ಆಫ್ ವೇಲ್ಸ್‌ರವರು ನಜರನ್ನು ಬೆರಳಿನಿಂದ ಮುಟ್ಟಿಬಿಟ್ಟರು. ಯುವರಾಜರವರು ಹಿಂದಕ್ಕೆ ದಯಮಾಡಿ ಮತ್ತೊಂದು ಸಲ ಮುಜರೆ ಮಾಡಿ ತಮ್ಮ ಸ್ಥಾನವನ್ನು ಅಲಂಕರಿಸಿದರು. ಆ ಮೇಲೆ ಇದೇ ರೀತಿಯಲ್ಲಿ ದಿವಾನ್ ಸರ್ ಕೃಷ್ಣಮೂರ್ತಿಯವರೂ, ಸರ್ದಾರ್ ಕಾಂತರಾಜೇ ಅರಸಿನವರೂ, ಕರ್ನಲ್ ದೇಸರಾಜೇ ಅರಸಿನವರೂ, ಸರ್ದಾರ್ ಲಕ್ಷ್ಮೀಕಾಂತರಾಜೇ ಅರಸಿನವರೂ, ಸರ್ದಾರ್ ಗೋಪಾಲರಾಜೇ ಅರಸಿನವರೂ, ಚೀಫ್ ಜಡ್ಜ್ ಮೆ॥ ಜಸ್ಟಿಸ್ ಸ್ಟೀಲ್‌ರವರೂ, ಕೌನ್ಸಿಲರ್ ಮೆ॥ ಸಿ. ಶ್ರೀನಿವಾಸಯ್ಯಂಗಾರ್ಯರೂ, ಕೌನ್ಸಿಲರ್ ಮೆ॥ ಸಿ. ಮಾಧವರಾವ್ ಯವರೂ, ಸರ್ದಾರ್ ಸುಬ್ರಹ್ಮಣ್ಯರಾಜೇ ಅರಸಿನವರೂ, ಶ್ರೀಮನ್ಮಹಾರಾಜರವರ ಪ್ರೈವೇಟ್ ಸೆಕ್ರೆಟರಿ ಮೆ॥ ಇ. ಮೆಕಂಜಿಯವರೂ, ಮೈಸೂರು ಗವರ್ನಮೆಂಟ್ ಜನರಲ್ ಮತ್ತು ರೆವಿನ್ಯೂ ಸೆಕ್ರೆಟರಿ ಮೆ॥ ಟಿ. ಕೆ. ವೆಂಕಟವರದಾಚಾರ್ಯರೂ ಕ್ರಮವಾಗಿ ಒಬ್ಬೊಬ್ಬರಾಗಿ ಮೇಲೆ ಹೇಳಿದಂತೆ ಎದ್ದುಬಂದು, ಪ್ರಿನ್ಸ್ ಆಫ್ ವೇಲ್ಸ್‌ರವರಿಗೆ ಮರ್ಯಾದೆಯೊಡನೆ ಮುಜರೆ ಮಾಡಿ ಮುಂದಕ್ಕೆ ಬಂದು ನಜರನ್ನು ಒಪ್ಪಿಸಿದರು. ಪ್ರಿನ್ಸ್ ಆಫ್ ವೇಲ್ಸ್‌ರವರು ಪ್ರತಿಯೊಬ್ಬರ ನಜರುಗಳನ್ನು ಮುಟ್ಟಿಬಿಟ್ಟರು. ಈ ಪೈಕಿ ಕರ್ನಲ್ ದೇಸರಾಜೇ ಅರಸಿನವರು ಖಡ್ಗದ ಹಿಡಿಯನ್ನು ಪ್ರಿನ್ಸ್ ಆಫ್ ವೇಲ್ಸ್‌ರವರಿಗೆ ಒಪ್ಪಿಸಿದಾಗ ಅವರು ಅದನ್ನು ಮುಟ್ಟಿದರು. ಚೀಫ್ ಜಡ್ಜ್ ಮೆ॥ ಜಸ್ಟಿಸ್ ಸ್ಟೀಲ್‌ರವರೂ ಮೆ॥ ಮೆಕಂಜಿಯವರೂ ನಜರನ್ನು ಒಪ್ಪಿಸಲಿಲ್ಲ. ಆಮೇಲೆ ಪ್ರಿನ್ಸ್ ಆಫ್ ವೇಲ್ಸ್‌ರವರಿಗೆ ಮುಜರೆ ಮಾಡಿದರು. ಅನಂತರ ಉಳಿಗದವರು ಹೋಗಿ ನಿಂದ ಪಾನ್‌ದಾನ್ ಅತ್ತರ್ ಸರಾಯಿಗಳ ಪೆಟ್ಟಿಗೆಗಳನ್ನು ಒಳಕ್ಕೆ ತಂದರು. ಪ್ರಿನ್ಸ್ ಆಫ್ ವೇಲ್ಸ್‌ರವರು ಎದ್ದು ಶ್ರೀಮನ್ಮಹಾರಾಜರವರಿಗೆ ಪಾನ್ ಹಾಕಿ, ಅತ್ತರ್ ಹಾರಗಳನ್ನು ಒಪ್ಪಿಸಿ ಕುಳಿತುಕೊಂಡರು. ಶ್ರೀಮನ್ಮಹಾರಾಜರವರು ಎದ್ದುನಿಂತು ಅವುಗಳನ್ನು ಅಂಗೀಕರಿಸಿ, ಪ್ರಿನ್ಸ್ ಆಫ್ ವೇಲ್ಸ್‌ರವರನ್ನು ವಂದಿಸಿ ಕುಳಿತುಕೊಂಡರು. ಅನಂತರ ಪ್ರಿನ್ಸ್ ಆಫ್ ವೇಲ್ಸ್‌ರವರ ಏಡಿಕಾಂಗರು ಎದ್ದು ಮುಂದೆ ಬಂದು ಅವರಿಗೆ ಮುಜರೆ ಮಾಡಿ, ಯುವರಾಜರೇ ಮೊದಲಾದವರಿಗೆ ಅತ್ತರ್ ಪಾನ್‌ಗಳನ್ನು ಒಪ್ಪಿಸಿ ಮರ್ಯಾದೆ ಮಾಡಿದರು. ಕೂಡಲೇ ಪ್ರಿನ್ಸ್ ಆಫ್ ವೇಲ್ಸ್‌ರವರು ಎದ್ದು ಶ್ರೀಮನ್ಮಹಾರಾಜರವರನ್ನು ದರ್ಬಾರ್ ಕೊಠಡಿ ಬಾಗಿಲು ಹೊಸಲಿನವರೆಗೆ ಕರೆದು ತಂದು ಬಿಟ್ಟು ಹಿಂತಿರುಗಿದರು. ಸರ್ ವಾಲ್ಟರ್ ಲಾರೆನ್ಸ್ ಯವರೂ ಏಡಿಕಾಂಗರುಗಳೂ ಶ್ರೀಮನ್ಮಹಾರಾಜರವರನ್ನೂ ಯುವರಾಜರವರನ್ನೂ ಕರೆದುಕೊಂಡು ಬಂದು ಸಾರೋಟಿನಲ್ಲಿ ಕೂಡಿಸಿದರು. ಶ್ರೀಮನ್ಮಹಾರಾಜರವರು ಮೆರವಣಿಗೆಯಾಗಿ ಗವರ್ನಮೆಂಟ್ ಹೌಸಿನಿಂದ ಹೊರಟು, ಅರಮನೆಗೆ ಚಿತ್ತೈಸಿದರು. ಗೌರವಾರ್ಥವಾದ ೨೧ ತೋಪುಗಳು ಹಾರಿಸಲ್ಪಟ್ಟವು.

ಪ್ರಿನ್ಸ್ ಆಫ್ ವೇಲ್ಸ್‌ರವರ ಪ್ರತಿಭೇಟಿ.

ಪ್ರಿನ್ಸ್ ಆಫ್ ವೇಲ್ಸ್‌ರವರು ೫. ೧೦ ಕ್ಕೆ ಗವರ್ನಮೆಂಟ್ ಹೌಸ್ ಬಂಗಲೆಯಿಂದ ಸಾರೋಟಿನಲ್ಲಿ ಕುಳಿತು ಶ್ರೀಮನ್ಮಹಾರಾಜರವರಿಗೆ ಜಗನ್ಮೋಹನ ಬಂಗಲೆಯಲ್ಲಿ ಪ್ರತಿಭೇಟಿ ಕೊಡುವ ಉದ್ದೇಶದಿಂದ ಹೊರಟರು. ಗೌರವಾರ್ಥವಾದ ೩೧ ತೋಪುಗಳು ಹಾರಿಸಲ್ಪಟ್ಟವು. ಈ ಮೆರವಣಿಗೆಯು ಬಹು ವಿಶೇಷವಾದ ಮರ್ಯಾದೆಗಳೊಡನೆ ಕೂಡಿ ನಡೆಯಿತು. ಪ್ರಿನ್ಸ್ ಆಫ್ ವೇಲ್ಸ್‌ರವರ ಸಾರೋಟು ಜಗನ್ಮೋಹನ ಬಂಗಲೆಯ ದರ್ಬಾರ್ ಮಂದಿರದ ಹೊಸಲಿನ ಬಳಿಗೆ ಬಂದ ಕೂಡಲೆ ಶ್ರೀಮನ್ಮಹಾರಾಜರವರು ಸಾರೋಟಿನ ಬಳಿಗೆ ದಯಮಾಡಿ, ಪ್ರಿನ್ಸ್ ಆಫ್ ವೇಲ್ಸ್‌ರವರು ಸಾರೋಟಿನಿಂದ ಇಳಿಯುತ್ತಿದ್ದಾಗ ಅವರ ಹಸ್ತವನ್ನು ಹಿಡಿದು ಬರಮಾಡಿಕೊಂಡು, ಅವರನ್ನು ಸಂಗಡ ಕರೆದುಕೊಂಡು ದೂರದಲ್ಲಿ ಎತ್ತರವಾದ ಜಗಲಿಯ ಮೇಲೆ ಹಾಕಿದ್ದ ಶ್ರೇಷ್ಠವಾದ ಜೋಡಿ ಕುರ್ಚಿಗಳ ಬಳಿಗೆ ಚಿತ್ತೈಸಿದರು. ಅಲ್ಲಿ ಮೊದಲು ಪ್ರಿನ್ಸ್ ಆಫ್ ವೇಲ್ಸ್‌ರವರಿಗೆ ಅವರ ಆಸನವನ್ನು ತೋರಿಸಿ, ಅವರು ಕೂತುಕೊಂಡ ನಂತರ ಅವರ ಬಲಪಾರ್ಶ್ವದಲ್ಲಿಯೇ ಎರಡನೇ ಕುರ್ಚಿಯಲ್ಲಿ ಶ್ರೀಮನ್ಮಹಾರಾಜರವರು ಕುಳಿತುಕೊಂಡರು.

ದರ್ಬಾರ್ ವಿವರಣೆ.

ಪ್ರಿನ್ಸ್ ಆಫ್ ವೇಲ್ಸ್‌ರವರೂ ಶ್ರೀಮನ್ಮಹಾರಾಜರವರೂ ಕುಳಿತಿದ್ದ ಕುರ್ಚಿಗಳ ಹಿಂಭಾಗದಲ್ಲಿ ಮೈಸೂರು ಸಂಸ್ಥಾನದ ರಾಜಬಿರುದಾದ ಗಂಡಭೇರುಂಡವೂ, ಅದರ ಮೇಲೆ ಲಯನ್ ಚಾಮುಂಡೇಶ್ವರಿ ಒಡೆಯರವರ ಪೂರ್ಣಾಕೃತಿಯ ತಸ್ವೀರೂ ಕಟ್ಟಲ್ಪಟ್ಟಿದ್ದವು. ಅಕ್ಕಪಕ್ಕಗಳಲ್ಲೂ ಶ್ರೀಮನ್ಮಹಾರಾಜರವರ ಸಾಮುದ್ರಿಕ ಗಂಡಭೇರುಂಡಗಳೇ ಮೊದಲಾದ ಬಿರುದಾವಳಿಗಳನ್ನು ಉಳಿಗದವರು ಹಿಡಿದು ನಿಂತಿದ್ದರು. ದರ್ಬಾರ್ ಮಂದಿರದಲ್ಲಿ ಬಲಗಡೆ ಒಂದು ಸಾಲು ಕುರ್ಚಿಗಳಲ್ಲಿ ಬ್ರಿಟಿಷ್ ರೆಸಿಡೆಂಟರು, ಸರ್ ವಾಲ್ಟರ್ ಲಾರೆನ್ಸ್‌ಯವರು

ವೇಲ್ಸ್‌ರವರು ಜಗನ್ಮೋಹನ ಬಂಗಲೆಯಿಂದ ೫ ಗಂಟೆಗೆ ಹೊರಟು [illegible] ಬಂಗಲೆಯನ್ನು ಕಲಪಿದರು

ದೀಪೋತ್ಸವ ಮುಂತಾದ್ದು

ಅದೇ ಸೋಮವಾರ ರಾತ್ರಿ ಕಾರ್ಗಾಣಿಕೆಗಳಲ್ಲೆಲ್ಲಾ ದೀಪೋತ್ಸವ ಮಾಡುತ್ತು ವಿಸ್ತರವಾದ ಕಟ್ಟಡಗಳ ಮೇಲೆಲ್ಲಾ ದಿನತೋಪರಿಯಾಗಿ ದೀಪಗಳನ್ನು ಇಟ್ಟು ಪಟ್ಟಣವನ್ನು ಥಳಥಳಿಸಿ ಹೊಳೆಯುವಂತೆ ಮಾಡಿದ್ದರು. ಯುವರಾಜ ಅಲ್ಲಿ ಎಲ್ಲಾ ನೋಡಿದರು. ದೀಪಗಳ ಸಾಲುಗಳೇ ತೂಗಾಡಿಸುತ್ತಿದ್ದವು. ಚಾಮುಂಡಿ ಬೆಟ್ಟದ ಮೇಲೆ ಬಂಗಲೆ ಬಳಿಯಲ್ಲೂ ಗುಡಿ ರಸ್ತೆಗೂ ಸಮೀಪದಲ್ಲೂ ದೇವಸ್ಥಾನದ ಮೇಲೆಯೂ ಅದರ ಸುತ್ತಲೂ, ಮೆಟ್ಟಿಲುಗಳ ಉದ್ದಕ್ಕೂ ದೀಪಗಳ ಸಾಲುಗಳು ಕಾಣಿಸುತ್ತಿದ್ದವು. ಅಲ್ಲಲ್ಲಿ ದೊಡ್ಡ ದೊಡ್ಡ ಅಕ್ಷರಗಳನ್ನು ಕಂಡ ರಚಿಸಿದ್ದರು.

ರಾಜಧಾನಿಗೆ ಈ ಉತ್ಸವಗಳನ್ನು ನೋಡುವುದಕ್ಕಾಗಿ ಬಂದಿರುವ ಎಲ್ಲಾ ಗ್ರಾಮಗಳ ಜನರಿಗೂ ಪ್ರತ್ಯೇಕ ಪ್ರತ್ಯೇಕವಾದ ಸ್ಥಳಗಳಲ್ಲಿ ಈ ದಿನ ಸಮಾರಾಧನೆಗಳು ನಡೆಯುವಂತೆಯೂ ಬಡವರಿಗೆಲ್ಲಾ ಬಟ್ಟೆ ಬರೆಗಳು ಕೊಡುವಂತೆಯೂ, ಪೈಗಾಗಳಿಗೆ ಸಹಾಯವನ್ನು ಕೊಡುವಂತೆಯೂ ಏರ್ಪಾಡಾಗಿದೆ.

ಮಂಗಳವಾರ ದಿನದ ಉತ್ಸವ

ಈ ದಿನ ಪ್ರಿನ್ಸ್ ಆಫ್ ವೇಲ್ಸ್‌ರವರು ಇಲ್ಲಿನ ಜನರಲ್ ಆಸ್ಪತ್ರೆಯನ್ನು [illegible]

ಮಹಾರಾಜರವರು ಬಂದಿದ್ದು

ಪ್ರಿನ್ಸ್ ಆಫ್ ವೇಲ್ಸ್ ಸಂಪಾದನೆಗಳು

ದೀಪೋತ್ಸವ, ಭೋಜನ, ಬಾಣಬಿರುಸುಗಳು

ವೃತ್ತಾಂತ ಪತ್ರಿಕೆ.

REGISTERED M. 20

ಕ್ರಯ ೧ ದುಡ್ಡು ಕ್ರಯ ೧ ದುಡ್ಡು

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಪುಸ್ತಕ ೧೯ ಮೈಸೂರು—ಸನ್ ೧೯೦೬ ನೇ ಇಸವಿ ಫೆಬ್ರವರಿ ತಾರೀಖು ೮ ನೇ ಗುರುವಾರ. ಸಂಚಿಕೆ ೩೬.

೧೯೦೬ ನೇ ಲೋವರ್ ಸೆಕೆಂಡರಿ ಕನ್ನಡ ನೋಟ್ಸ್.

20-3

ಹಿಂದಿನ ವರುಷದಂತೆ ನಮ್ಮ 'ಎಗ್ಜಾಮಿನರ್' ಮಾಸ ಪುಸ್ತಕಕ್ಕೆ ಚಂದಾದಾರರಾಗತಕ್ಕವರಿಗೆ ಬೆಲೆಯಿಲ್ಲದೆ ಬಹುಮಾನವಾಗಿ ದೊರೆಯುವುದು. ಎಲ್ಲಾ ಸಂಗತಿಗೂ ನಮ್ಮ ಪ್ರಕಟನೆಯನ್ನು ತರಿಸಿ ನೋಡಿರಿ. ವಿಳಾಸ—ಮ್ಯಾನೇಜರ್, ಎಗ್ಜಾಮಿನರ್ ಆಫೀಸ್, ಬೆಂಗಳೂರು ಸಿಟಿ.

"ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ.

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜಂಟರ ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ
(ಅಡ್ವಾನ್ಸು) . . . . . ರೂ ೧—೦—೦
ಓದುವರು ಆಫೀಸಿನಿಂದ ಅಂಚೆಯ ಮೇಲೆ ತರಿಸಿಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಡಾಕ್ ಸಹಿ . . . . . ರೂ. ೧—೧೪—೦
" " ೬ " " ೦—೧೫—೦
ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು.
ಪತ್ರ ವಿಳಾಸ.—ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು.

ಜ್ವರಹರಿ. 29-1

ಇದು ಸಾಧಾರಣ ಜ್ವರ, ಚಳಿಜ್ವರ, ಮೋರೆಜ್ವರ, ಪಿತ್ತಜ್ವರ, ವಾತಜ್ವರ, ಪಾತಜ್ವರ, ಚಳಿ ಹಿಡಿಯುವದು, ಎಂಬ ಸಕಲವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಕ್ಕರಿಯಲ್ಲಿರುವ ಮರಾಮತ್ ಸಬ್ ಡಿವಿಜನ್ ಆಫೀಸರ್ ಎಸ್ ಟಿ ವೆಂಕಟಪತಿ ಅಯ್ಯರ್—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨೦ ಸೀಸೆಯು ತೀರಿಹೋಯಿತು ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಗುಣವಾಗಿ ಸುಖ ಹೊಂದಿರುವರು. ಇನ್ನೂ ಜನಗಳು ಕಾಹಿಲೇ ಬೀಳುತ್ತಿರುವ ಕಾರಣ ದಯವಿಟ್ಟು ಇನ್ನೊಂದು ೨೦ ಡಜನಿನ ಸೀಸೆಯನ್ನು ವಿ. ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿರುತ್ತಾರೆ.

ಕ್ರಯ —ಸೀಸೆ ೧ ಕ್ಕೆ ೮ ಆಣೆ, ೧ ರೂ , ೧—೮ ರೂ ; ಡ. ೫—೧೨ ಆ., ೧೧ ರೂ., ಹನ್ನೆರಡು ಸೀಸೆ ತರಿಸಿಕೊಂಡರೆ ಅಂಚೆ ಖರ್ಚು ಮಾಫಿ ಬಿಡಲಾಗುವದು.

●●●●●●●●

ಅಮೃತಾಂಜನ.

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆಕಳ್ಳ ಗುಲ್ಮ, ವಾಂತಿಭೇದಿ, ನಾನಾತರದ ಹೊಟ್ಟೆ ನೋವುಗಳು—ಮುಂತಾದ ರೋಗಗಳಿಗೆ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವುದು. ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಯೆ ಹೊಟ್ಟೆನೋವು ಮುಂತಾದ ವ್ಯಾಧಿಗಳಿಗೂ ಕೂಡ ಗುಣಪಡಿಸುತ್ತದೆ. ಇದರ ದರವು ಜ್ವರಹರಿ ಎಂಬ ಔಷಧದಂತೆಯೇ. ಸೀಸೆಗಳಲ್ಲಿ ದೊರೆಯುವದು.

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಹೆಸ್ರಿಯು ಕರ್ಪೂರವನ್ನು ನಾನೂ ನನ್ನ ತಾಬೇದಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ಸ್ಥಾನಗಳಿಂದಲೂ ಕಾಲರಾ, ಅಜೀರ್ಣ ಭೇದಿ, ಅಜೀರ್ಣ ರೋಗಿಷ್ಟರಿಗೆ ಕೊಡುತ್ತೇನೆ. ಕೊಟ್ಟ ಕೂಡಲೆ ರೋಗವು ಗುಣವಾಗುತ್ತಲಿದೆ. ಇದು ಬಹು ಒಳ್ಳೇ ಔಷಧ ಎಂದು ಬರೆದಿದ್ದಾರೆ.

ಈ ನಾಲ್ಕು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಷಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ದೊರೆಯುತ್ತವೆ. ಇದಲ್ಲದೆ ಕೆಳಗಿನ ವಿಳಾಸದಾರರಲ್ಲಿ ವಿಶೇಷ.—
ಮುಖ್ಯಸ್ಥ ಗ್ರೇಟ್ ಇಂಡಿಯನ್ ಔಷಧಗಳ ಕಂಪನಿ,
ಕೋಟ್ ಬೀಚ್ ರೈನ್ ಮದ್ರಾಸ್.

ಅದ್ಭುತ ಜನವರಿ ಪ್ರಜೆಂಟೇಷನ್ ವಾಚು!

ಈ ಚಿತ್ರದಲ್ಲಿ ತೋರಿಸಿರುವ ವಿಕ್ಟೋರಿಯಾ ರಾಣಿಯವರ ಪೇಟೆಂಟ್ ಲಿವರ್ ವಾಚು ಅದು ರತ್ನಗಳುಳ್ಳ ಟೈಮ್ ಕೀಪರ್ ಕಂಡನ್ಸರ್ ಬ್ಯಾಲನ್ಸ್ ಬಹು ಭದ್ರವಾದ ಗಡಿಯಾರ ೫ ವರುಷ ಗ್ಯಾರಂಟಿ. ಕ್ರಯ ರೂ ೫—೮—೦ ಜನವರಿ ಮಹೋತ್ಸವಕ್ಕಾಗಿ ದಿಸೆಂಬರ್ ೧ನೇ ತಾರೀಖು ಮೊದಲು ೫,೦೦೦೦ ವಾಚುಗಳು ಮಾರಿ ಮುಗಿಯುವವರೆಗೂ ಕಳುಹಿಸತಕ್ಕದ್ದು ಇವುಗಳನ್ನು ಕೊಂಡುಕೊಳ್ಳುವವರಿಗೆ ಬಹುಮಾನ ಸಹಿತ ಕಳುಹಿಸಲಾಗುವುದು.
ಅಲ್ಬರ್ಟ್ ಚೈನ್ ಚಿನ್ನದ ಕಟ್ಟು ೧—೮—೦ ಗಡಿಯಾರ ಕಪ್ಪು ಕ್ರಯ, ೦—೮—೦.
ಹಾರ್ಟ್ ಆಕಾರದ ತರಿಸತಕ್ಕದು ಗೋಲ್ಡ್ ಚೈನ್ ಬಹುಮಾನ ಕ್ರಯ, ೦—೧೦—೦.
ಜರ್ಮನ್ ಸಿಲ್ವರ್ ಚೈನ್ ಕ್ರಯ, ೦—೮—೦
ಜರ್ಮನ್ ಬೆಳ್ಳಿ ಆಭರಣ ಭದ್ರವಾದ ಕ್ರಯ, ೦—೧೦—೦.
ವಿಳಾಸ,—ಫ್ರಾಂಕ್ಲಿನ್ ವಾಚ್ ಕಂಪೆನಿ,
ಬ್ಲಾಕ್ ಟವನ್-ಮದರಾಸ್.

ಹೋಮಿಯೋಪತಿ



ಈ ಔಷಧಿಯು ಮನೆ, ಛತ್ರಮನೆ, ಕಾರ್ಖಾನೆ, ಆಸ್ಪತ್ರೆ, ಪೋಲೀಸ್ ಠಾಣಾ, ವಿದ್ಯಾಶಾಲೆ, ಕೋರ್ಟು, ಕಛೇರಿ, ಮುಂತಾದ ಸ್ಥಳಗಳಲ್ಲೆಲ್ಲಾ ಇದ್ದೇ ಇರಬೇಕು ಇದಕ್ಕೆ ಸಮಾನವಾದ ಔಷಧ ಮತ್ಯಾವದೂ ಇಲ್ಲವೆಂಬುದು ಲೋಕಪ್ರಸಿದ್ಧವಾಗಿದೆ.

ಈ ತೈಲವು ತತ್ಕಾಲದಲ್ಲಿ ಜೀವರಾಶಿಗಳಿಗೆ ಮುಖ್ಯವಾಗಿ ಸಿಕ್ಕತಕ್ಕ ಔಷಧ ಇದನ್ನು ಉಪಯೋಗಿಸಿದ ದೊಡ್ಡ ಮನುಷ್ಯರು, ಡಾಕ್ಟರುಗಳು, ಮುಂತಾದವರು ಇದರ ಗುಣವನ್ನು ಹೊಗಳಿ ಸರ್ಟಿಫಿಕೇಟುಗಳನ್ನು ಕೊಟ್ಟದ್ದಾರೆ ನೋವು ಕಂಡರೆ ಇದನ್ನು ಹಚ್ಚಿದ ಕೂಡಲೇ ವಾಸಿಯಾಗುವದು.

ಈ ತೈಲವು ಆರೆ ತಲೆನೋವು, ಸೊಂಟನೋವು, ಪಾರ್ಶ್ವವಾಯು, ಮೂಲವ್ಯಾಧಿ, ಉಳುಕು, ವಾಯುಗಳು, ನರ ಹೊರಳುವದು, ಉಳುಕು, ಕೀಲುವಾಯು, ಗುಳ್ಳೆಗಳು, ಹಲ್ಲುನೋವು, ಮುಖನೋವು, ಊದುಗಳು, ಗಡ್ಡೆಗಳು, ರಣಗಳು, ಹುಳುಕಡ್ಡಿ, ಸೊಳ್ಳೆ ಮತ್ತು ಚೇಳು ಕಡಿದದ್ದು ಚಪ್ಪರುವದು, ಬೆಂಕಿಯಲ್ಲಿ ಸುಟ್ಟುಕೊಂಡದ್ದು, ಕತ್ತಿ ಗಾಯ—ಇವೇ ಮೊದಲಾದ ನಾನಾ ಬಾಧೆಗಳನ್ನು ಹುಟ್ಟಡಗಿಸುತ್ತದೆ. ರಾತ್ರಿ ಹಚ್ಚಿಕೊಂಡು ಮಲಗಿದರೆ ಸೊಳ್ಳೆ ಹತ್ತಿರ ಸೇರುವದಿಲ್ಲ.

ಕ್ರಯ.— ಸಣ್ಣ ಡಬ್ಬಿ ೧ ಕ್ಕೆ ೧ ರೂ., ದೊಡ್ಡದಕ್ಕೆ ರೂ. ೩—೮ ಆ., ಒಂದೇ ಸಲ ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ ಬಿಡುತ್ತಾರೆ. ರೂ. ೩—೮ ಆಣೆ ಬಾಬ್ತು ಡಬ್ಬಿದಲ್ಲಿ ೧ ರೂ. ಡಬ್ಬಿದಲ್ಲಿರುವದಕ್ಕಿಂತ ೪ ರಷ್ಟು ಹೆಚ್ಚು ಔಷಧವಿರುತ್ತೆ. ರೂ. ೩—೮ ಆ. ಈ ಡಬ್ಬಿಯನ್ನು ತರಿಸಿಕೊಳ್ಳುವವರಿಗೆ ಟಪ್ಪಾಲ್ ಖರ್ಚು ಮಾಫಿ ಬಿಡುತ್ತೆ.

●●●●●●●●

ಹೋಮಿಯೋಪತಿಯಾ ಯಂಬ್ರೋಕೇಷನ್.

ಈ ತೈಲವು ಹಳೇ ನೋವುಗಳಿಗೆ ಉಪಯೋಗಿಸತಕ್ಕದ್ದು ಚರ್ಮ ಒಡೆದ ಕಡೆ ಇದನ್ನು ಹಚ್ಚಕೂಡದು ಇದರಲ್ಲಿ ಹೋಮಿಯೋಪತಿಯ ಗುಣಗಳು ಬಹು ತೀಕ್ಷ್ಣವಾಗಿ ಇರುತ್ತವೆ ಅದಕ್ಕಿಂತಲೂ ಇದರಲ್ಲಿ ಇನ್ನೆರಡು ಗುಣಗಳುಳ್ಳ ಕ್ಲೋಸ ಭಾಗವಿರುತ್ತದೆ ಇದನ್ನು ಚರ್ಮವು ಬಹು ಬೇಗನೆ ಸೇದಿಕೊಳ್ಳಬಲ್ಲದು ಡಬ್ಬಿಗಳಲ್ಲಿ ತುಂಬಿ ೮ ಆಣೆಗೂ, ೧ ರೂ. ಗೂ ಒಂದರಂತೆ ಬಿಕರಿ ಮಾಡಲ್ಪಡುವದು ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ ಎಲ್ಲಾ ಷಾಪುಗಳಲ್ಲಿಯೂ ದೊರೆಯುವದು

ಈ ಔಷಧಗಳ ವಿವರಣೆಯೂ, ಸರ್ಟಿಫಿಕೇಟುಗಳೂ ಉಳ್ಳ ನೋಟೀಸುಗಳನ್ನು ಅಪೇಕ್ಷಿಸಿದರೆ ಕಳುಹಿಸುವೆವು.

ವಿಳಾಸ:—ಹೋಮಿಯೋಪತಿಯಾ ಕಂಪನಿ. ೬೩ ಸೆಕೆಂಡು ಬೀಚ್ ಲೈನ್. ಮದರಾಸ್.

WANTED WILD ANIMALS.

ಬೇಕಾಗಿದೆ. ಬೇಕಾಗಿದೆ.

6 43

ಎಲ್ಲಾ ಬಗೆಯ ಕಾಡು ಮೃಗಗಳು ಮೈಸೂರು ಜೂ ಸೂಪರಿಂಟೆಂಡೆಂಟ್ ಮಿ॥ ಹ್ಯೂಜಸ್ ಯವರು ಕೊಂಡುಕೊಳ್ಳುವರು.

Apply to—MR. HUGHES, MYSORE ZOO.

"ಭೂಗೋಳ" ಸಂಗ್ರಹ—ಐದನೇ ಮುದ್ರಣ.

6 4

ಮೈಸೂರು ಶಿವರಾಂಪೇಟೆ ವೆಸ್ಲಿಯನ್ ಮಿಷನ್ ಬಾಲಕರ ಪಾಠಶಾಲೆಯ ಹೆಡ್ ಮಾಸ್ತರಾದ ಮ॥ ಟಿ. ಎಂ. ರಾಮಸ್ವಾಮಯ್ಯನವರಿಂದ ರಚಿಸಲ್ಪಟ್ಟಿರುವ ಈ ಪುಸ್ತಕವನ್ನು ಈಗ ಮೈಸೂರು ವಿದ್ಯಾಭ್ಯಾಸದ ಇಲಾಖೆಯವರು ದೇಶೀಯ ಪರೀಕ್ಷೆಗಳಿಗೂ ಎಲ್ಲಾ ಪಾಠಶಾಲೆಗಳಿಗೂ ಟೆಕ್ಸ್ಟ್ ಬುಕ್ಕಾಗಿ ನಿಯಮಿಸಿರುತ್ತಾರೆ. ಈ ಪುಸ್ತಕವನ್ನು ಬಹಳವಾಗಿ ತಿದ್ದಿ ಹೊಸ ವಿಷಯಗಳನ್ನು ಅನೇಕವಾಗಿ ಕೂಡಿಸಿ ಪ್ರಕಟಿಸಲಾಗಿದೆ. ೧೦೦ ಪ್ರತಿಗಳು ಅಥವಾ ಅದಕ್ಕಿಂತಲೂ ಜಬ್ತಾಗಿ ಒಂದೇ ಸಲ ಕೊಂಡುಕೊಳ್ಳುವವರಿಗೆ ಶೇಕಡಾ ೧೨॥ ಯಂತೆ ಡಿಸ್ಕೌಂಟು ಕೊಡಲಾಗುವುದು ಪ್ರತಿಗಳನ್ನು ಒಟ್ಟಾಗಿ ತರಿಸಿಕೊಳ್ಳುವವರು—ದಿ ಸೂಪರಿಂಟೆಂಡೆಂಟ್, ವೆಸ್ಲಿಯನ್ ಮಿಷನ್ ಪ್ರೆಸ್, ಮೈಸೂರು— ಈ ವಿಳಾಸಕ್ಕೂ ಬಿಡಿ ಪ್ರತಿಗಳನ್ನು ತರಿಸಲಪೇಕ್ಷಿಸುವ ವಿದ್ಯಾರ್ಥಿಗಳೇ ಮುಂತಾದವರು—ದಿ ಮ್ಯಾನೇಜರ್, ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು—ಈ ವಿಳಾಸಕ್ಕೂ ಬರೆಯತಕ್ಕದ್ದು. ಕ್ರಯ:—೧ ಪ್ರತಿಗೆ ೪ ಆಣೆ, ಪೋಸ್ಟೇಜು ೧ ಆಣೆ.

ಮುದ್ರಾಮಂಜೂಷ—ಎರಡನೆಯ ಮುದ್ರಣ.

ಕ್ರಯ, ರೂ ೧—೮—೦. 7-6

ವಿದ್ಯಾರ್ಥಿಗಳೂ ವಿದ್ಯಾವಂತರೂ ಸಾಮಾನ್ಯ ಪ್ರಜೆಗಳೂ ಅಧಿಕಾರಸ್ಥರೂ ಲೋಕವ್ಯವಹಾರಾದಿಗಳನ್ನು ಪರಿಷ್ಕಾರವಾಗಿ ಕಲಿತುಕೊಳ್ಳುವುದಕ್ಕೆ ವಿಶೇಷ ಸಹಕಾರಿಯಾದ "ಮುದ್ರಾಮಂಜೂಷ" ವೆಂಬೀ ನವರಸಯುಕ್ತವಾದ ಕನ್ನಡ ಗ್ರಂಥವು ಈಗಿನ ವ್ಯಾಕರಣಕ್ಕೆ ಸರಿಯಾಗಿ ತಿದ್ದಿ, ಬಹು ದೊಡ್ಡದಾದ ಹೊಸ ಅಕ್ಷರದಿಂದ ಒಳ್ಳೇ ಗ್ಲೇಜು ಕಾಗದದ ಮೇಲೆ ಅಚ್ಚು ಹಾಕಿ, ಪ್ರಕಟಿಸಲ್ಪಟ್ಟಿದೆ. ಚಿಮ್ಮಿ ಅಷ್ಟಪತ್ರ ಸೈಜ್ ಹಾಳೆಗೆ, ಸುಂದರವಾದ ಕ್ಯಾಲಿಕೋ ಬೈಂಡು. ಬಹು ಶುದ್ಧವಾದ ಪ್ರತಿ. ಇದಕ್ಕೆ ಚಾಣಕ್ಯರ ನೀತಿ" "ಚಂದ್ರಗುಪ್ತ ಚಾಣಕ್ಯರ ಕಥೆ" ಎಂಬೀ ಹೆಸರುಗಳೂ ಉಂಟು. ಇಂಥಾ ಸರ್ವೋತ್ತಮವಾದ ಪುಸ್ತಕವನ್ನು ಕನ್ನಡಿಗರೆಲ್ಲಾ ತರಿಸಿ ಓದಿ, ಪ್ರಯೋಜನವನ್ನು ಪಡೆಯುವರೆಂದು ಹಾರೈಸುತ್ತೇವೆ. ಕ್ರಯ ೧ ಪ್ರತಿಗೆ ರೂ. ೧—೮—೦, ಪೋಸ್ಟೇಜು ೩ ಆಣೆ. ವಿ. ಪಿ. ಪಿ. ತರಿಸಿಕೊಂಡರೆ ರೂ ೧—೧೧—೦ ಬೀಳುವುದು. ೧೦೦ ಅಥವಾ ಅದಕ್ಕಿಂತ ಹೆಚ್ಚು ಪ್ರತಿಗಳನ್ನು ತರಿಸಿಕೊಳ್ಳುವ ಪುಸ್ತಕವ್ಯಾಪಾರಿಗಳಿಗೆ ಶೇಕಡಾ ೨೫ ರೂಪಾಯಿನಂತೆ ಡಿಸ್ಕೌಂಟು ಕೊಡಲಾಗುತ್ತದೆ. ಬೇಗ ಈ ವಿಳಾಸಕ್ಕೇನೇ ಬರೆಯಿರಿ:—

ವಿಳಾಸ—ಮ್ಯಾನೇಜರ್. ಸಿ. ಎಲ್. ಎಸ್. ಬುಕ್ ಡಿಪೋ,
ಮೈಸೂರು.

ಪ್ರಕಟನೆ.

28-1

ಮುಮುಕ್ಷುಗಳಿಗೆ ಪಾರಾಯಣಕ್ಕನುಕೂಲವಾಗಿ ಪ್ರಿಂಟುಮಾಡಿರುವ ಪ್ರಶಸ್ತವಾದ ಸುಮುದ್ರಿತತಾತ್ಪರ್ಯಸಹಿತ ಪಾಕೆಟ್ಟು ಸೈಜು ಭಗವದ್ಗೀತ ಪ್ರತಿ ೧ ಕ್ಕೆ ೧೦ ಆಣೆ ೨ ಕ್ಕೆ ೧—೨—೦ (ತೆಲುಗು ಲಿಪಿ.)

ಕಂ|| ರಾಮಸ್ವಾಮಯ್ಯಂಗಾರ್
ಬುಕ್‌ಸೆಲ್ಲರು ಕುಪ್ಪಂಪೋಸ್ಟು N. A.

ಅಗ್ಗ! ಅಗ್ಗ!! 32-1 ಬಹು ಅಗ್ಗ!!!

ಮೇಲಾದ ಜರ್ಮನ್ ಸಿಲ್ವರ್ ಫ್ರೆಂಚ್ ರೋಲ್ ಕಾಲ್ ಗೋಲಸು ಇದು ಬೆಳ್ಳಿಗೆ ಸಮಾನವಾದ ಜರ್ಮನ್ ಸಿಲ್ವರ್ ಬೆಳ್ಳಿಯಿಂದ ಅಣಿಮಾಡಿಸಲ್ಪಟ್ಟಿರುತ್ತೆ. ಸುಲಭವಾಗಿ ಹಾಕಿ ತೆಗೆಯುವಂತೆ ಕೀಲಿನಿಂದಲೂ ಎಂಜಿನಿಯರ ಕೆಲಸದ ತಿರುಪಿನಿಂದಲೂ ಬೆಳ್ಳಿ ಗೋಲುಸಿಗೆ ಸ್ವಲ್ಪವೂ ವ್ಯತ್ಯಾಸವಿಲ್ಲದಂತೆ ತಯಾರಿಸಲ್ಪಟ್ಟಿರುತ್ತೆ ಎಂದಿಗೂ ಬಣ್ಣ ಕೆಡಲಾರದು ಇದನ್ನು ನೋಡಿದವರು ಬಿಡರು. ಒಂದು ಜೊತೆಯನ್ನು ತರಿಸಿ ಪರೀಕ್ಷಿಸಿರಿ. ಬಡವರಿಗೂ ಭಾಗ್ಯವಂತರಿಗೂ ಉಪಯೋಗಿಸುವಷ್ಟು ಸುಲಭಕ್ರಯ



ದೊಡ್ಡವರಿಗೆ ಜೊತೆ ೧ ಕ್ಕೆ ರೂ. ೨-೦-೦. ಚಿಕ್ಕವರಿಗೆ ರೂ ೧-೨-೦ ಮಕ್ಕಳಿಗೆ ರೂ ೧-೮-೦. ಆಣೆ

ವಿಳಾಸ—ಮ್ಯಾನೇಜರ್, ಜರ್ಮನ್ ಸಿಲ್ವರ್ ಜ್ಯೂಯಲ್ ಡಿಪೋ, ಸಾಹುಕಾರ್ ಪೇಟೆ, ಮದ್ರಾಸು

ಪ್ರತಿ ನೋಟೀಸ್ 34-1

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನೆಂದರೆ—

ಈ ಮಾಹೆ ೧ನೇ ತಾರೀಖಿನ ವೃತ್ತಾಂತ ಪತ್ರಿಕೆಯಲ್ಲಿ ಮೋ॥ ಸೂರಣ್ಣ ಎಂಬುವರು ದ್ವೇಷದಿಂದಲೂ ನನಗೆ ತೊಂದರೆ ಮತ್ತು ನಷ್ಟ ವುಂಟುಮಾಡಬೇಕೆಂಬ ಕೆಟ್ಟ ಇರಾದೆಯಿಂದಲೂ ಒಂದು ಪ್ರಸಿದ್ಧ ಪತ್ರಿಕೆಯನ್ನು ಛಾಪಿಸಿದ್ದಾರೆ. ಈ ಪ್ರಸಿದ್ಧಪತ್ರಿಕೆಯಲ್ಲಿ ಅನೇಕ ಸುಳ್ಳು ಬರವಣಿಗೆಗಳು ಮತ್ತು ಸುಳ್ಳು ಸಂಗತಿಗಳು ನಮೂದಿಸಿದ್ದಾರೆ

ನನ್ನ ತಂದೆಯವರಾದ ಮೋ॥ ಲಾಟ್ ಮೋತೀರಾನೆ ಸಾಹುಕಾರ್ ತಿಮ್ಮಪ್ಪನವರು ಮೃತಪಡುವುದಕ್ಕೆ ಸುಮಾರು ನೂರು ನಾಲ್ಕು ವರುಷಗಳ ಮುಂಚೆಯೇ ತಮ್ಮ ಮೂರುಜನ ಗಂಡುಮಕ್ಕಳಿಗೂ ಒಬ್ಬ ಮೊಮ್ಮಗನಿಗೂ ಸಹ ತಮ್ಮ ಸ್ವಯಾರ್ಜಿತವಾದ ಸ್ಥಿರಚರ ಸ್ವತ್ತುಗಳ ಪೈಕಿ ಅನೇಕ ಸ್ವತ್ತುಗಳನ್ನು ಹಂಚಿಕೊಟ್ಟು ಅವುಗಳನ್ನು ಅವರವರ ಸುಪರ್ದಿಗೆ ಕೊಟ್ಟುಬಿಟ್ಟರು ಆ ಬಾಗಾಯತು ನಿರಾತಂಕವಾಗಿ ಯಾವ ಅಭ್ಯಂತರವೂ ಇಲ್ಲದೆ ಈ ಕೆಳಗೆ ರುಜುಮಾಡಿರತಕ್ಕ ನಾನೂ ಮತ್ತು ನನ್ನ ಸಹೋದರರೂ ಸಹಾ ಬೇರೇ ಸ್ವತ್ತುಗಳನ್ನು ಅನುಭವಿಸುತ್ತಾ ಬಂದಿರುವುದಲ್ಲದೆ ಅವರವರ ಇಚ್ಛಾನುಸಾರವಾಗಿ ಅವರವರಿಗೆ ಆವಶ್ಯಕವಿಲ್ಲದ ಸ್ವತ್ತುಗಳನ್ನು ಮಾರೋಣ, ಬೇಕಾದ ಸ್ವತ್ತುಗಳನ್ನು ಕೊಂಡುಕೊಳ್ಳೋಣ ಮೊದಲಾದ ವ್ಯವಹಾರ ಕರ್ತವ್ಯಯಗಳನ್ನು ನಡೆಸುತ್ತಾ ಇದ್ದೇವೆ

ನನ್ನ ತಂದೆಯವರು ನಮ್ಮಗಳಿಗೆ ಹಂಚಿಕೊಟ್ಟ ಸ್ವತ್ತುಗಳ ಹೊರತು ಕೆಲವು ನಗಗಳು ನಗದುಯಾತು ವಗೈರೆ ಇನ್ನೂ ಕೆಲವು ಸ್ಥಿರ ಸ್ವತ್ತುಗಳನ್ನು ತಮ್ಮಲ್ಲೇ ಇಟ್ಟುಕೊಂಡಿದ್ದು ತಮ್ಮ ಕಾಲಾನಂತರ ಅವುಗಳ ಪೈಕಿ ಧರ್ಮಕ್ಕಾಗಿ ನಿಲೆ ಆಗಬೇಕಾದ್ದು ಜಾತಾ ಉಳಿದ ಸ್ವತ್ತುಗಳನ್ನು ತಮ್ಮ ಮಕ್ಕಳು ಹಂಚಿಕೊಳ್ಳಬೇಕೆಂದು ಇರಾದೆ ಇಟ್ಟುಕೊಂಡು ಇದ್ದರು. ಅವರ ಕಾಲಾನಂತರ ಅವರಲ್ಲಿದ್ದ ಸ್ವತ್ತುಗಳ ಪೈಕಿ ಕೆಲವು ನಗಗಳು ಮತ್ತು ಇತರ ಕೆಲವು ಸ್ವತ್ತುಗಳು ಸಹಾ ಅವರ ಮಕ್ಕಳು ಹಂಚಿಕೊಂಡು ಇದ್ದಾರೆ. ಬಾಕಿ ಸ್ವತ್ತುಗಳು ನನ್ನ ತಂದೆಯವರಇಚ್ಛಾನುಸಾರ ಧರ್ಮವಾಗುವುದಕ್ಕೂ ಮತ್ತು ಉಳಿದ ಸ್ವತ್ತುಗಳನ್ನು ನಾವುಗಳು ಹಂಚಿಕೊಳ್ಳುವುದಕ್ಕೂ ಅವಕಾಶಕೊಡದೆ ಸೂರಣ್ಣನವರು ವೃಥಾ ತಕರಾರುಮಾಡುತ್ತಾ ಇದ್ದಾರೆ

ಮೇಲ್ಕಂಡ ಸೂರಣ್ಣ ಎಂಬುವರ ನೋಟೀಸಿನಲ್ಲಿ ಕಂಡ ನಾನು ಕಾರ್ ಗುಂಜಾ ಸರಸುಕ್ಷಣ್ಣನವರಿಂದ ನಾನು ಖರೀದಿಗೆ ಪಡೆದಿರತಕ್ಕ ಸ್ವತ್ತುಗಳಲ್ಲೇ ಆಗಲಿ ಅಥವಾ ಮ॥ ಸಾಹುಕಾರ್ ತಿಮ್ಮಪ್ಪಯ್ಯನವರು ನನಗೆ ಹಂಚಿಕೊಟ್ಟಿರತಕ್ಕ ಸ್ವತ್ತುಗಳಲ್ಲೇ ಆಗಲಿ ಇತರ ಮಕ್ಕಳಿಗೂ ಇನ್ಯಾರಿಗೂ ಹಕ್ಕು ಇರುವುದಿಲ್ಲ.

ಈ ಕೆಳಗೆ ರುಜು ಮಾಡಿರುವ ನಾನು ಖರೀದಿ ಮಾಡುವ ಸ್ವತ್ತುಗಳ ವಿಷಯವಾಗಿ ನನ್ನ ಅಣ್ಣತಮ್ಮಂದಿರುಗಳಿಂದ ಯಾವ ವ್ಯಾಜ್ಯ ಬಂದು ಏನು ಲುಕ್ಸಾನು ಉಂಟಾದಾಗ್ಯೂ ನಾನೇ ಜವಾಬ್ದಾರನೆಂದು ಇಂವೆಸ್ಟ್ ಮೆಂಟ್ ಬಾಂಡು ಬರೆದುಕೊಡಲಿಕ್ಕೆ ಸಿದ್ಧವಾಗಿದ್ದೇನೆ.

ಆದ್ದರಿಂದ ನನ್ನಿಂದ ಸ್ಥಿರಸೊತ್ತುಗಳು ಖರೀದಿಗೆ ಪಡೆಯತಕ್ಕಂಥಾವರು ಧೈರ್ಯವಾಗಿಯೂ ನಿಶ್ಶಂಕೆಯಾಗಿಯೂ ಖರೀದಿಗೆ ಹೊಂದಬಹುದು ಮೋ॥ ಸೂರಣ್ಣನವರ ಸುಳ್ಳುಬರವಣಿಗೆಯಿಂದ ಯಾವ ಭೀತಿಯೂ ಉಂಟಾಗಲಾರದು.

ತಾ॥ ೭—೨—೦೬. ಮೋ॥ ಪದ್ಮನಾಭಯ್ಯ

CHAMBERLAIN'S COUGH REMEDY.
ಚೇಂಬರ್ಲೆನ್ ಯವರು ಕಂಡು ಹಿಡಿದ ಕೆಮ್ಮಿನ ಔಷಧವು.



15-5

ಶೀತದ ಕೆಮ್ಮು, ಗಂಟಲು ಗಾರೆನ್ನುವುದು, ಹುಪಿಗೆಮ್ಮು, ನಾಯಿಗೆಮ್ಮು, ಎಲ್ಲಾ ತರದ ಶೀತ, ಗಂಟಲು ಎದೆಯಲ್ಲಿ ಹುಟ್ಟುವ ಸಮಸ್ತ ವ್ಯಾಧಿಗಳು, ಇವಕ್ಕೆಲ್ಲಾ ಈ ಔಷಧವು ಬಾಣಪ್ರಾಯವಾಗಿದೆ

ಆ ಕೆಮ್ಮನ್ನು ಅಲಕ್ಷ್ಯಮಾಡಬೇಡಿ. ಅದು ಬಹಳ ಅಪಾಯವನ್ನುಂಟುಮಾಡತಕ್ಕದ್ದಾಗಿದೆ ಅದರ ನ್ಯೂಮೋನಿಯಾ ಎಂಬ ಅತಿ ಕಠಿಣವಾದ ಜ್ವರವು ಹುಟ್ಟುವುದು, ತರುವಾಯ ಉಗುಳಿನಲ್ಲಿ ರಕ್ತಬೀಳುವಾಗಲೇ ಕ್ಷಯರೋಗಕ್ಕೆ ಆಸ್ಪದವಾಗುವುದು

ಚೇಂಬರ್ಲೇನರು ಕಂಡುಹಿಡಿದಿರುವ ಕೆಮ್ಮಿನ ಔಷಧವು ಗಂಟಲಿನಲ್ಲಿ ಶ್ಲೇಷ್ಮಕಟ್ಟುವುದನ್ನೂ ಸ್ರವಿಸುವುದನ್ನೂ ಖಂಡಿತವಾಗಿ ನಿವಾರಣೆಮಾಡುತ್ತದೆ. ಉಸಿರು ಹೊಯ್ಯುವುದು ಕಷ್ಟವಾಗಿದ್ದರೆ ಅದನ್ನು ಕೂಡಲೆ ಪರಿಹರಿಸುತ್ತದೆ ಅಪಾಯಕರವಾದ ಕೆಮ್ಮಿನ ಶಬ್ದವನ್ನು ನಿಲ್ಲಿಸಿಬಿಡುತ್ತದೆ. ಎದೆ ಒಣಗುವಂಥಾ ಕೆಟ್ಟ ಸ್ಥಿತಿಯು ಸಂಪೂರ್ಣವಾಗಿ ವಾಸಿಮಾಡಬಲ್ಲದ್ದು ಕೆಮ್ಮನ್ನು ಶಮನಮಾಡಿ, ನೀವು ಸುಖವಾಗಿ ನಿದ್ರೆಮಾಡುವಂತೆ ಮನೋಲ್ಲಾಸಕೊಡುತ್ತದೆ

ಚೇಂಬರ್ಲೇನರವರು ಕಂಡುಹಿಡಿದಿರುವ ಕೆಮ್ಮಿನ ಔಷಧದಲ್ಲಿ ಸ್ವಲ್ಪಮಾತ್ರವಾದರೂ ಅಫೀಮನ್ನು ಸೇರಿಸುವುದಿಲ್ಲ

ಈ ಔಷಧವು ವನಸ್ಪತಿಗಳ ತಯಾರಿ.

ಕೈಯಿಂದ ಮುಟ್ಟದೆ ತಯಾರಾಗಿದೆ.

ಎಲ್ಲೆಲ್ಲೂ ಬಿಕರಿಯಾಗುವುದು. ಸಣ್ಣ ಶೀಸೆಗೆ ೧ ರೂಪಾಯಿ. ದೊಡ್ಡ ಶೀಸೆಗೆ ೨ ರೂಪಾಯಿ.

ನೋಟಿಸ್.

ಬೆಂಗಳೂರು ಬಸವನಗುಡಿ ಎಕ್ಸ್‌ಟೆನ್ಷನ್ನಲ್ಲಿ ೧೧೦×೩೦, ೧೧೦×೪೪ ಅಡಿಗಳುಳ್ಳ ೫೩,೬೧ ನೆ ನಂಬರುಗಳು ಅಂದರೆ ೫೯, ೬೦ ನೆ ಮುನಿಸಿಪಲ್ ಡೋರ್ ನಂಬರುಳ್ಳ ಬಿಲ್ಡಿಂಗ್‌ಸ್ಯೆಟ್‌ಗಳು ಮಾರಲ್ಪಡುತ್ತವೆ ಇಷ್ಟವುಳ್ಳವರು ಇದರ ಕೆಳಗೆ ನಮೂದಿಸಿರುವವರಿಗೆ ಬರೆಯಬಹುದು. 26-2

ಹೆಚ್. ಪಿ ಗಂಗಾಧರಪ್ಪ,
ಮೈಸೂರು ಚಾಮರಾಜಪೇಟೆ ಗೊಲ್ಲಗೇರಿ,
೨೬೩ ನೇ ಡೋರ್ ನಂಬರು

ನೀವು ವಿಲಾಯತಿಯಿಂದ ಯಾವ ಸಾಮಾನುಗಳನ್ನಾದರೂ ತರಿಸಿಕೊಳ್ಳಬೇಕಾಗಿದ್ದರೆ 19-4

ಬ್ರೈಡ್ ಮತ್ತು ಈಸ್ಟ್‌ಲೆಂಡ್,

೨೯—೩೪, ಸಿಟಿ ರೋಡ್, ಲಂಡನ್, ಇ. ಸಿ.

ಎಂಬೀ ವಿಳಾಸಕ್ಕೆ ಹಣ ಕಳಿಸಿ, ಕಾಗದ ಬರೆಯಿರಿ. ಈ ಕಂಪನಿಯವರು ಪೇಟೆಂಟ್ ಔಷಧಿಗಳನ್ನೂ, ಆಳಕ್ಕರಿಗೂ ಮಕ್ಕಳಿಗೂ ಕೊಡುವಂಥಾ, ಯಂತ್ರಗಳಿಂದಲೇ ತಯಾರಾದಂಥಾ ಆಹಾರಗಳನ್ನೂ, ಇನ್ನೂ ನಾನಾತರದ ಪದಾರ್ಥಗಳನ್ನೂ ಇಟ್ಟು ಬಿಕರಿಮಾಡುತ್ತಾರೆ ಅವರು ಬಹು ವಿಶೇಷವಾದ ಗಮನಕೊಟ್ಟು, ಸಾಧ್ಯವಿದ್ದಷ್ಟೂ ಅಗ್ಗವಾಗಿ, ಬೇಕಾದ ಸಾಮಾನುಗಳನ್ನೇ ಆರಿಸಿ, ಮರಿಬಪ್ಪಾಲಿನೇನೇ ಕಳುಹಿಸಿಕೊಡುವರು.

30-1
ಪರಿಮಳ ನಶ್ಯದಪುಡಿ

ಪರಿಮಳ ನಶ್ಯದಪುಡಿ ಡಬ್ಬಿ ೧ ಕ್ಕೆ ...	0—9—0
ಟಪಾಲ್ ಖರ್ಚು	0—3—0
ಸಾದಾ ನಶ್ಯದಪುಡಿ ಡಬ್ಬಿ ೧ಕ್ಕೆ	0—6—0
ಟಪಾಲ್ ಖರ್ಚು	0—3—0

ಈ ಪುಡಿಯನ್ನು ಮೇಲಾದ ಹೊಗೆಸೊಪ್ಪಿನಿಂದ ಸುವಾಸನೆಯುಳ್ಳದ್ದಾಗಿ ತಯಾರು ಮಾಡಲ್ಪಟ್ಟಿರುತ್ತೆ. ಇದರ ಸುವಾಸನೆ ಒಂದು ಸೇರು ಸಾಧಾರಣ ಪುಡಿಯಲ್ಲಿ ಸ್ವಲ್ಪವನ್ನು ಹಾಕಿ ಕಲಸಿದರೆ ಪುಡಿಯಲ್ಲಾ ಗಮಗಮಿಸುತ್ತೆ ಉಪಯೋಗಿಸುವವರಿಗೆ ಸುವಾಸನೆಯನ್ನೂ ಆನಂದವನ್ನೂ ಉಂಟು ಮಾಡುತ್ತೆ.

ತಲೆನೋವು, ಪೀನಸ, ಜಲದೋಷ, ಶಿರೋವ್ಯಾಧಿ ಇವುಗಳನ್ನು ತಪ್ಪದೆ ಪರಿಹರಿಸುತ್ತೆ. ಮಾದರಿಗೆ ೧ ಡಬ್ಬಿಯನ್ನು ತರಿಸಿ ಪರೀಕ್ಷಿಸಿರಿ ☞ ಪ್ರತಿ ೧ ಡಬ್ಬಿಯಲ್ಲಿ ೯ ತೋಲ ನಶ್ಯದಪುಡಿ ಇರುತ್ತೆ.

ಮಾನೇಜರ್, ಧರ್ಮ ವೈದ್ಯಶಾಲಾ,
69 ಬ್ಯಾಸಾಹೇಬರು ರೋಡ್, ಸಾಹುಕಾರ್‌ಪೇಟೆ, ಮದರಾಸು.

ರಬ್ಬರ್ ಸ್ಟಾಂಪುಗಳು.

31-1

ನಮ್ಮ ಕಂಪೆನಿಯಲ್ಲಿ ತಯಾರ್ಮಾಡಲ್ಪಡುವ ಇಂಗ್ಲಿಷ್ ಮೇಡ್ ರಬ್ಬರ್ ಸ್ಟಾಂಪುಗಳು ಬರುವ ಜನವರಿ ಆಖೈರೊಳಗಾಗಿ ದರಖಾಸ್ತು ಕಳುಹಿಸತಕ್ಕವರಿಗೆ ಅರ್ಧ ಕ್ರಯಕ್ಕೆ ತಯಾರಿಸಿ ಕಳುಹಿಸುತ್ತೇವೆ.



ಬಾದಾಮಿ, ರವುಂಡು, ಚಚ್ಚೌಕ, ಯಾವ ಆಕಾರವಾದರೂ ಅದರಲ್ಲಿ ಬೇಕಾದ ಅಕ್ಷರಗಳನ್ನು ಹಾಕಿ, ಸುಂದರವಾದ ರಬ್ಬರ್ ಸ್ಟಾಂಪು ೧, ಇಂಕಿ ಸೀಸಾ ೧, ರಬ್ಬರ್ ಸ್ಟಾಂಪು ಇರಿಸುವ ಪೆಟ್ಟಿಗೆ ೧, ಬ್ರಷ್ ೧, ಪ್ಯಾಡ್ ೧, ಇವುಗಳ ಸಹಿತ ಕ್ರಯ ರೂ ೧—೮—೦, ಪೋಸ್ಟೇಜು ೩ ಆಣೆ.

ವಿಳಾಸ:—ಮ್ಯಾನೇಜರ್, ರಬ್ಬರ್ ಸ್ಟಾಂಪ್ ಮ್ಯಾನುಫ್ಯಾಕ್ಚರಿಂಗ್ ಕಂಪೆನಿ, ಪಾರ್ಕ್ ಟೌನ್, ಮದ್ರಾಸ್.

ಇಂಡಿಯಾ ವ್ಯವಸಾಯ ಮತ್ತು ಸಹಾಯಕ ಆಫೀಸ

14-20

[೧೯೦೦ರಲ್ಲಿ ಸ್ಥಾಪಿತವಾದದ್ದು]

ಈ ಆಫೀಸಿನ ಉದ್ದೇಶವೇನೆಂದರೆ—ಯಾವ ಜಾತಿಯವರೇ ಆಗಲಿ ಮತದವರೇ ಆಗಲಿ ಈ ಆಫೀಸಿನ ಚಂದಾದಾರರಾಗಿ ಅದರ ಭರವಸಪತ್ರವನ್ನು ಹೊಂದಿದ್ದರೆ ಅವರ ಮರಣಾನಂತರ ಅವರ ಕುಟುಂಬರಿಗೆ ಸಹಾಯವು ಕೊಡಲ್ಪಡುವದು

ಈ ಆಫೀಸಿನ (A) ತರಗತಿಗೆ ಸೇರಿದವರು ಪಡೆಯಬೇಕೆಂದಿಷ್ಟಿಸುವ ಪ್ರತಿ ೧೦೦೦ ರೂಪಾಯಿಗಳ ಮೊಬಲಗಿಗಾಗಿ ಸಾಕೆಯ ಒಂದೊಂದು ವಯಸ್ಸಿನ ಪ್ರಕಾರ ಒಟ್ಟು ರೂ ೫೬ ನ್ನು ಮಾತ್ರ ಸಲ್ಲಿಸಬೇಕಾಗುವದು.

ಆಫೀಸಿನವರು ಚಂದಾದಾರರಿಂದ ವಸೂಲಾದ ಮೊಬಲಗು ಶಾಸ್ತ್ರೀಯವಾಗಿ ನಡೆಸಲ್ಪಡುವ ವ್ಯವಸಾಯಕ್ಕೆ ಹಾಕಿ ಅದರಿಂದ ಬಂದ ಲಾಭದಿಂದಲೇ ಚಂದಾದಾರರ ಸಹಾಯವನ್ನು ಕೊಡುವದು. ವ್ಯವಸಾಯ ನಿಮಿತ್ತವಾಗಿ ನಾವು W. I. P. ರೈಲ್ವೆ ಪಕ್ಕದಲ್ಲಿರುವ "ಕೊಲ್ಲಂ ಎಸ್ಟೇಟ್" ಎಂಬ ಸರ್ವೋತ್ಕೃಷ್ಟವಾದ ಭೂಮಿಯನ್ನು ೯೯ ವರ್ಷಕ್ಕೆ ಸ್ವಂತವಾಗಿ ಪಡೆದಿದ್ದೇವೆ. ಈ ಭೂಮಿಗೆ ಒಂದು ಹೊಳೆಯಿಂದ ಕಾಲುವೆ ಮಾಡಿ ನೀರನ್ನು ತಂದುಕೊಂಡಿರುವದರಿಂದ ಫಸಲು ಕಡಮೆಯಾಗುವದೆಂಬ ಭಯವೇ ಇಲ್ಲ.

ಈ ಆಫೀಸಿನಲ್ಲಿ ಭರವಸಪತ್ರವನ್ನು ಪಡೆದಿರುವವರು ಚಂದಾದಾರರಾಗಿ ಮಾತ್ರ ಇದ್ದಾರೆ. ಆದಾಯ ನಷ್ಟಗಳಿಗೆ ಭಾಗಿಗಳಾದ ಷೇರುದಾರರಾಗಿರುವದಿಲ್ಲ. ಆದರೂ ಅವರ ಹಣಕ್ಕೆ ನಮ್ಮ ಭೂಸ್ಥಿತಿಯು ಆಧಾರವಾಗಿರುತ್ತದೆ

ಚಂದಾ ಮೊಬಲಗನ್ನೆಲ್ಲಾ ಪಾವತಿ ಮಾಡಿ ಭರವಸಪತ್ರವನ್ನು ಪಡೆದಿರುವ ಯಾವ ಚಂದಾದಾರನಿಗಾಗಲಿ ಆಫೀಸಿನಿಂದ ಬರತಕ್ಕ ಲಾಭವು ತೃಪ್ತಿಕರವಾಗಿ ಕಂಡುಬಾರದಿದ್ದರೆ ತಾನು ಸಲ್ಲಿಸಿರುವ ಚಂದಾ ಮೊಬಲಗನ್ನೆಲ್ಲಾ ವಾಪಸು ಪಡೆಯಬಹುದು

ಈ ಆಫೀಸಿಗೆ ಸಬ್ ಏಜಂಟುಗಳು ಬೇಕಾಗಿದೆ ವಿವರವಾಗಿ ತಿಳಿಯಲಪೇಕ್ಷಿಸುವವರು ಅರ್ಧಾಣೆ ಸ್ಟಾಂಪಿಟ್ಟು ಕೆಳಗಿನ ವಿಳಾಸಕ್ಕೆ ಇಂಗ್ಲಿಷಿನಲ್ಲಿ ಬರೆದುಕೊಳ್ಳತಕ್ಕದ್ದು

ವಿಳಾಸ —The Manager,
The India Agricultural and Helping Office
Vengurla Post, Bombay Presidency.

ವೃತ್ತಾಂತ ಪತ್ರಿಕೆ

ಸನ್ ೧೯೦೬ ನೇ ಇಸವಿ ಫೆಬ್ರುವರಿ ತಾ॥ ೮ ನೇ ಗುರುವಾರ.

ರಾಜಲಕ್ಷಣಗಳು.

ಶ್ರೀಮಾನ್ ಪ್ರಿನ್ಸ್ ಆಫ್ ವೇಲ್ಸ್‌ರವರೂ ಅವರ ಪತ್ನಿಯವರೂ ಕಳೆದ ವಾರದಲ್ಲಿ ಶ್ರೀರಂಗಪಟ್ಟಣಕ್ಕೆ ದಯಮಾಡುತ್ತಿರುವಾಗ್ಗೆ ಅವರ ಮುಂದುಗಡೆ ಕಾವಲಾಳಾಗಿ ಮೋಟರ್ ಬೈಸಿಕಲ್ ಗಾಡಿಯ ಮೇಲೆ ಹೋಗುತ್ತಿದ್ದ ಒಬ್ಬ ಸವಾರನು ದಾರಿಯಲ್ಲಿ ಕೆಳಕ್ಕೆ ಬಿದ್ದು ಕಾಲು ಮುರಿದುಕೊಂಡನು ಸ್ವಲ್ಪಹೊತ್ತಿನಲ್ಲೇ ಆ ಸ್ಥಾನವನ್ನು ಮುಟ್ಟಿದ ಪ್ರಿನ್ಸ್ ಆಫ್ ವೇಲ್ಸ್‌ಯವರು ಆ ಮನುಷ್ಯನ ಸ್ಥಿತಿಯನ್ನು ನೋಡಿ ನಡೆದ ವರ್ತಮಾನವನ್ನು ಗ್ರಹಿಸಿದವರಾಗಿ ಆ ಕ್ಷಣವೇ ತಮ್ಮ ಗಾಡಿಯನ್ನು ನಿಲ್ಲಿಸಿ ಇಳಿದು ಆ ಸವಾರನು ಬಿದ್ದಿರುವ ಸ್ಥಳಕ್ಕೆ ಹೋಗಿ, ಅವನನ್ನು ಅಲ್ಲಿಂದ ಆಸ್ಪತ್ರೆಗೆ ಸಾಗಿಸುವ ವಿಷಯದಲ್ಲಿ ತಕ್ಕ ಏರ್ಪಾಡುಗಳನ್ನೆಲ್ಲಾ ಮಾಡಿಸುವ ವರೆಗೂ ಅಲ್ಲೇ ಇರುತ್ತಾ ಬಳಿಕ ಗಾಡಿಯನ್ನೇರಿ ಮುಂದಕ್ಕೆ ದಯಮಾಡಿದರು ಈ ವಿವರವನ್ನೆಲ್ಲಾ ನೋಡುತ್ತ ನಿಂತಿದ್ದ ಜನರೆಲ್ಲರೂ ಬಹಳ ಆಶ್ಚರ್ಯಯುಕ್ತರಾಗಿ—ಇಂಥ ದೊಡ್ಡ ಚಕ್ರವರ್ತಿಯವರ ಮಕ್ಕಳು ಸಾಧಾರಣವಾದ ಒಬ್ಬ ಸವಾರನ ವಿಷಯದಲ್ಲಿ ಇಷ್ಟು ಕನಿಕರವನ್ನು ಪ್ರಕಟಪಡಿಸುವದು ಎಷ್ಟು ಅಪೂರ್ವವಾದದ್ದು ಎಂದು ಹೇಳಿಕೊಳ್ಳುತ್ತಿದ್ದರು.

ಈ ವಿಷಯವನ್ನು ಪರ್ಯಾಲೋಚಿಸಲಾಗಿ ರಾಜನಿಗಿರತಕ್ಕ ಎಂಥ ಅತ್ಯಾವಶ್ಯಕವಾದ ಲಕ್ಷಣಗಳು ಈ ಸದ್ಗುಣಗಳಾದ ಯುವರಾಜರಲ್ಲಿ ಕಂಡುಬರುತ್ತಲಿವೆಯೆಂದು ನಮಗೆ ತಿಳಿಯುತ್ತದೆ ಆ ಲಕ್ಷಣಗಳು ಯಾವುವೆಂದರೆ— ಕೇವಲ ದೀನರಾದವರಲ್ಲಿಯೂ ಕೃಪೆಯೂ ಅವರನ್ನು ರಕ್ಷಿಸುವದರಲ್ಲಿ ದಾಕ್ಷಿಣ್ಯ, ಇದುವರೆಗೂ ... [illegible]

...ಪ್ತಿಯು ಸಾಧಿಸುತ ಕಾರ್ಯವನು ಸಾಬಕರ ನೆರವಿನ ಬಾರದಿರ ...ವು ಆತನೊಡನೆ ಸಂದರ್ಭದಲ್ಲಿ ತನ್ನ ಶಿಷ್ಯರು ಪಾದಗಳನ್ನು ...ಳೆದನು, ಶಿಷ್ಯರು ಅದನ್ನು ಕಂಡು—"ನೀನು ನಮ್ಮನ್ನು ಗುರು ...ವೂ ಸ್ವಾಮಿಯೆಂದೂ ಕರೆಯುತ್ತೀರಿ, ನೀವು ಕರೆಯುವುದು ಸರಿ, ...ವು ಅಂಥವನೇ ಆಗಿದ್ದು, ಸ್ವಾಮಿಯೂ ಗುರುವೂ ಆಗಿರುವ ನಾನು ...ನ್ನ ಕಾಲುಗಳನ್ನು ತೊಳೆದಿದ್ದಾಗಿ ನೀವು ಸಹ ಒಬ್ಬರ ಕಾಲನ್ನು ಒಬ್ಬ ...ರು ತೊಳೆಯುವ ಬಾಧ್ಯಸ್ಥರಾಗಿದ್ದೀರಿ ನಾನು ನಿಮಗೆ ಮಾಡಿದ ಹಾಗೆಯೇ ...ನೀವು ಸಹ ಮಾಡುವಂತೆ ನಿಮಗೆ ಮಾದರಿಯನ್ನು ತೋರಿಸಿದ್ದೇನೆ" ...ಎಂದು ಹೇಳಿದನು ಬೇರೊಂದು ಸಂದರ್ಭದಲ್ಲಿ ಅವರು ತಮ್ಮ ತಮ್ಮ ...ರಲ್ಲಿ ತಾನು ದೊಡ್ಡವನು, ತಾನು ದೊಡ್ಡವನು ಎಂದು ಕಲಹಮಾಡಲು ...ದು ಅವರಿಗೆ—ನಿಮ್ಮಲ್ಲಿ ಮೊದಲನೆಯವನಾಗ ಬೇಕೆಂದಿರುವವನು ...ರ ಆಳಾಗಿರ ಬೇಕು ಯಾಕೆಂದರೆ ಮನುಷ್ಯಕುಮಾರನು ಸೇವೆಮಾ ...ಡಿಸಿಕೊಳ್ಳುವದಕ್ಕೆ ಬರಲಿಲ್ಲ, ಸೇವೆ ಮಾಡುವದಕ್ಕೂ ಅನೇಕರನ್ನು ...ಬಿಡಿಸಿಕೊಳ್ಳುವದಕ್ಕಾಗಿ ತನ್ನ ಪ್ರಾಣವನ್ನು ಕೊಡುವದಕ್ಕೂ ...ಬಂದನು ಎಂದು ಹೇಳಿದನು

...ಯೇಸುವಿಗೆ ಆಡಂಬರವೂ ಅಹಂಕಾರವೂ ಇಷ್ಟವಿಲ್ಲದಿರುವಿಕೆಯಲ್ಲ, ತಮ್ಮ ...ಬಗ್ಗಡೆಯಿಗೆ ಕಷ್ಟ ಕಾಲದಲ್ಲಿ ಸಹಾಯಮಾಡುವದಕ್ಕೆ ಸಿದ್ಧರಾಗಿರು ...ವ ಆತನು ಕೇವಲ ಮಮತೆಯಿಂದ ಕಾಣುವುದು. ಇವೇ ಅವರಿಗೆ ...ಯೋಗ್ಯವಾದ ರಾಜಲಕ್ಷಣಗಳು

...ನಾತನ ಜನರಾದ ನಾನಾವರೋ ಕಷ್ಟಪಡುವವರನ್ನು ಕಂಡರೆ ...ಸ್ವಾರ್ಥದಿಂದಲಾಗಲಿ ಅಲಕ್ಷ್ಯಭಾವದಿಂದಲಾಗಲಿ ತಪ್ಪಿದವರಾಗಿ ...ವು ಹೀನಭಾವಿಸುವನು, ಕಷ್ಟಪಟ್ಟರೆ ಪಡಲಿ, ನನಗೇನು ? ಎಂದು ...ಕೊಳ್ಳುತ್ತಾ ಮುಂದೆ ಹೋಗದೆ ಅಲ್ಲೇ ನಿಂತು ಸಹಾಯಮಾಡು ...ವವನೇ ನಮ್ಮ ನಡತೆಯು ರಾಜಲಕ್ಷಣಗಳಿಂದ ಕೂಡಿದು ...ದೇನು

ಒಳದೇಶದ ವೃತ್ತಾಂತಗಳು.

ಮೈಸೂರು ಪಟ್ಟಣದ ಪ್ರದರ್ಶನಶಾಲೆಗೆ ...ಲ್ಲಾ ತಾಲ್ಲೂಕಿನಿಂದ ...ದೇವ ಅಮಲ್ದಾರರು) ಮುಂದಾದ ರೈತ ಜನರು ಕರೆದು ...ದುಕೊಂಡು ಬಂದು ಪ್ರದರ್ಶನವನ್ನು ನೋಡಿ ಹಿಂತಿರುಗಿದರೆಂತ ಕೇಳಿದೆವು.

❖❖❖❖

ಕ್ಯಾಪ್ಟನ್ ಬಾರ್ಟನ್ ಎಂಬೋರ್ವ ಆಫೀಸರನು ಕಳೆದವಾರ ...ನಲ್ಲಿ ಅಶ್ವಬುಟ್ಟಿಯಲ್ಲಿ ಕುಳಿತು ಆಂಜನೇಯನಿಗೆ ...ವಿ ...ತನ್ನ ಸಾಮರ್ಥ್ಯವನ್ನು ಪ್ರಕಾಶಪಡಿಸಿದನು. ಶ್ರೀಮನ್ ಮಹಾ ...ರಾಜರವರು ಆತನಿಗೆ ಗೌರವ ಬಹುಮಾನ ಕೊಡಿಸಿದರೆಂದು ಕೇಳುತ್ತೇವೆ

❖❖❖❖

ಪ್ರಿನ್ಸ್ ಆಫ್ ವೇಲ್ಸ್ ರವರ ಶ್ರೀಯುಕ್ತ ಆಗಮನದಿಂದ ಬೆಂಗ ...ಳೂರು ಶ್ರೀ ವಿಶ್ವೇಶ್ವರ ದೇವಸ್ಥಾನದ ಮೇಲಿನ ಕಡೆಗಳಲ್ಲಿ ... ಪೂಜೆ ಮಂಗಳಾರತಿಗಳನು ನಡೆಸಿದರೆಂದೂ, ದಂಡಿನ ಕೆಲವು ...ಸ್ಥರು ಬಡಬಗ್ಗರಾದ ಪ್ರಜೆಗಳಿಗೆ ಅನ್ನದಾನ ವಸ್ತ್ರದಾನಗ ...ಳು ಮಾಡಿದರೆಂತಲೂ ತಿಳಿದುಬಂದಿದೆ

❖❖❖❖

ಸಾಗರ ಬಾತ್ಮೀದಾರರು ಬರೆಯುತ್ತಾರೇನೆಂದರೆ—ಮಿ॥ ಸಾಗರದ ...ಕ್ಕು ಉಪದೇಶಕರು ಕಳೆದ ಗುರುವಾರ ಕಾಲವಾದರೆಂದು ತಿಳಿಸಲು ...ವಿಷಾದಿಸುತ್ತೇನೆ ಇವರು ಉದಾರಿಗಳಾಗಿಯೂ ಅನೇಕ ಬಡಬಗ್ಗರಿಗೆ ...ಪ್ರಿಯರಾಗಿಯೂ, ಗುಣಶಾಲಿಗಳಾಗಿಯೂ ಇದ್ದರು ಇವರಿಗೆ ಮಿ॥ ...ರು ಉಪಾಧ್ಯಾಯರೇ ಮುಂತಾದ ೪ ಜನ ಮಕ್ಕಳಿದ್ದಾರೆ.

❖❖❖❖

ಶ್ರೀಮನ್ ಮಹಾರಾಜರವರು ಈ ದಿನ ಬೆಂಗಳೂರಿಗೂ ಅಲ್ಲಿಂದ ...ಮೈಸೂರಿಗೂ ಪ್ರಯಾಣ ಮಾಡುವವರಾಗಿದ್ದಾರೆ. ಮದರಾಸ್ ಗವರ್ನರ್ ...ಲಾರ್ಡ್ ಆಂಪ್ಟಿಲ್‌ರವರು ಕ್ಷೇಮವಾಗಿ ತೆರಳುವವರಾಗಿರೋಣದರಿಂದ ಅವ ...ರ ಕಳುಹಿಸುವಿಕೆಯೇ ಈ ಪ್ರಯಾಣದ ಉದ್ದೇಶವೆಂತಲೂ, ಅಲ್ಲೇ ...ಆರೋಗ್ಯಕ್ಕಾಗಿ ಕೆಲವು ದಿನ ಇದ್ದುಬರುತ್ತಾರೆಂತಲೂ ಕೇಳುವೆವು

❖❖❖❖

ಪುದುಕೋಟೆ ಸಂಸ್ಥಾನದ ರಾಜರು ಕಳೆದ ಶುಕ್ರವಾರ ಸಾಯಂ ...ಕಾಲ ಪರಿವಾರ ಸಹಿತ ಬೆಂಗಳೂರಿಗೆ ಬಂದರು ಅಲ್ಲಿನ ಅಧಿಕಾರಿಗ ...ಳು ಒಂದು ಚಪ್ಪರವನ್ನು ಕಟ್ಟಿಸಿ, ರಾಜರನ್ನು ಎದುರುಗೊಂಡು ...ಸ್ವಾಗತವನ್ನು ಬಯಸಿದರು ಅವರು ಅಲ್ಲಿಂದ ಅಲಸೂ ...ರು ಹೋಟೆಲಿಗೆ ಹೋಗಿ ಒಂದು ದಿನ ತಂಗಿದ್ದು, ಮರುದಿನ ಹೊರಟು ...ಬಳಿ ... ಬೇಲೂರುಗಳಲ್ಲಿರುವ ದೇವಸ್ಥಾನಗಳನ್ನು ನೋಡಿ ...ಕೊಂಡು ಬಂದರು

❖❖❖❖

ಈ ವಾರದ ಮೈಸೂರು ಗೆಜೆಟ್ಟಿನಲ್ಲಿರುವ ಮುಖ್ಯ ಸಂಗತಿಗಳೇನೆಂ ...ದರೆ—ಸಾಗರದ ತಾಲ್ಲೂಕ್ ಅಮಲ್ದಾರ್ ಮಿ॥ ವಿ ಪಾರ್ಥಸಾರಥಿ ...ಅಯ್ಯಂಗಾರ್ಯರಿಗೆ ಡಿಸೆಂಬರ್ ೨೨ ರಿಂದ ೩ ತಿಂಗಳು ರಜಾ ಮಂಜೂ ...ರು ... ಅಮಲ್ದಾರ್ ಮ॥ ಎಂ ಕೃಷ್ಣಸ್ವಾಮಯ್ಯಂಗಾರ್ಯರು ಚಿಕ್ಕಬ ...ಳ್ಳಾಪುರದಿಂದ ಸಾಗರಕ್ಕೂ, ಮಿ॥ ಪಿ ರಂಗರಾಯರು ಹೊಸೂರಿ ...ನಿಂದ ಚಿಕ್ಕಬಳ್ಳಾಪುರಕ್ಕೂ, ಮಿ॥ ಸಿ ಆರ್ ನಾರಾಯಣಸ್ವಾಮಿ ...ಅಯ್ಯಂಗಾರ್ಯರನ್ನು ಪ್ರೊಬೇಷನರಿ ಡೆಪ್ಯುಟಿ ಅಮಲ್ದಾರಿಯಿಂದ ಹಾಸ ...ನ ಅಮಲ್ದಾರಿಗೂ ವರ್ಗಮಾಡಿದ್ದಾರೆ

❖❖❖❖

ಪ್ರಿನ್ಸ್ ಆಫ್ ವೇಲ್ಸ್‌ರವರು ಮೈಸೂರು ಸಂಸ್ಥಾನಕ್ಕೆ ಬಂದು ...ಹೋದ ವಿಷಯವನ್ನು ಕುರಿತು ಬೌರಿಂಗ್ ಹಾಲ್‌ನಲ್ಲಿ ಸರ್ ರೆಡ್ ವ್ಯಾ...ಲ್ ... ನಾರಾಯಣರಾಯರು ಒಂದು ಕವನವನ್ನು ಮಾಡಿ, ...ಪ್ರಿನ್ಸ್ ಆಫ್ ವೇಲ್ಸ್‌ರವರಿಗೆ ಒಪ್ಪಿಸಿದರು ಅವರ ಕೈಕೆಳಗಿನ ಮುಖ್ಯ ...ಅಧಿಕಾರಿ ಸರ್ ವಾಲ್ಟರ್ ಲಾರೆನ್ಸ್‌ರವರು ಮಿ॥ ನಾರಾಯಣರಾಯರಿಗೆ ...ಬರೆದಿರುವುದು— "ಪ್ರಿನ್ಸ್ ಆಫ್ ವೇಲ್ಸ್‌ರವರು ನಿಮ್ಮ ಕವನವ ...ನ್ನು ಸ್ವೀಕರಿಸಿ, ಅದನ್ನು ರಚಿಸಿ ಕಳುಹಿಸಿದ್ದಕ್ಕಾಗಿ ನಿಮ್ಮನ್ನು ವಂದಿ ...ಸುತ್ತಾರೆ" ಎಂಬುದಾಗಿ ತಿಳಿಸಿರುವರು

ಪ್ರಿನ್ಸ್ ಆಫ್ ವೇಲ್ಸ್‌ರವರ ಆತಿಥ್ಯ

ಮೈಸೂರು ಪಟ್ಟಣ.

ಕೆಡ್ಡಾ ಕ್ಯಾಂಪು ಮತ್ತು ಷಿಕಾರಿ

ಕಳೆದ ಬುಧವಾರ ಬೆಳಿಗ್ಗೆ ಪ್ರಿನ್ಸ್ ಆಫ್ ವೇಲ್ಸ್‌ರವರು ಪರಿವಾರ ಸಹಿತ ಮೋಟಾರ್ ಗಾಡಿಗಳಲ್ಲಿ ಕುಳಿತು, ಕಾಕನಕೋಟೆಯ ಕೆಡ್ಡಾ ಮತ್ತು ಷಿಕಾರಿ ಕ್ಯಾಂಪಿಗೆ ಹೊರಟು, ದಾರಿಯಲ್ಲಿ ಪ್ರದರ್ಶನಶಾಲೆಗೆ ದಯಮಾಡಿ, ಒಳಗಿಟ್ಟಿದ್ದ ಪ್ರದರ್ಶನ ಪದಾರ್ಥಗಳನ್ನು ಪರಾಂಬರಿಸಿ ತುಂಬಾ ಸಂತೋಷಪಟ್ಟುಕೊಂಡು ಮುಂದಕ್ಕೆ ತೆರಳಿದರು ಕ್ಯಾಂಪಿನಲ್ಲೇ ಬುಧ, ಗುರು, ಶುಕ್ರ, ಶನಿ, ಭಾನುವಾರದ ತನಕ ಇದ್ದುಕೊಂಡು, ೩೦—೪೦ ಆನೆಗಳನ್ನು ಕೆಡ್ಡಾದೊಳಕ್ಕೆ ಓಡಿಸಿ ಕಟ್ಟಿಹಾಕುವ ವಿಧಾನಗಳನ್ನೆಲ್ಲಾ ಕಣ್ಣಾರ ನೋಡಿ ಪರಮಾಶ್ಚರ್ಯಭರಿತರಾದರು. ಪ್ರಿನ್ಸ್ ಆಫ್ ವೇಲ್ಸ್‌ರವರು ಬಂದೂಕನ್ನು ಹಿಡಿದು ಕಾಡಿನಲ್ಲಿ ಸಂಚಾರವಮಾಡಿ, ಕೆಲವು ಮೃಗಗಳನ್ನು ಸಂಹಾರಮಾಡಿಕೊಂಡು ಬಂದರು

ರಾಜಧಾನಿಗೆ ದಯಮಾಡಿದ್ದು.

ಭಾನುವಾರ ಬೆಳಿಗ್ಗೆ ಅಲ್ಲಿಂದ ಮೋಟಾರ್ ಗಾಡಿಗಳಲ್ಲಿ ಕುಳಿತು ಪ್ರಿನ್ಸ್ ಆಫ್ ವೇಲ್ಸ್ ದಂಪತಿಗಳು ೧೧॥ ಗಂಟೆಗೆ ರಾಜಧಾನಿಗೆ ದಯಮಾಡಿದರು ಭೋಜನಾನಂತರ ಅವರ ಪತ್ನಿಯವರು ಸಾರೋಟಿನಲ್ಲಿ ಕುಳಿತು ಅರಮನೆಗೆ ಹೋಗಿ ಮಹಾ ಮಾತೃಶ್ರೀಯವರಿಗೆ ಭೇಟಿ ಕೊಟ್ಟು, ಅವರ ಸಂಗಡ ಮಾತನಾಡಿಕೊಂಡು ಬಂದರು ಮೈಸೂರು ಮಹಾರಾಣಿ ಕಾಲೇಜಿನ ಕೆಲವು ವಿದ್ಯಾರ್ಥಿನಿಯರನ್ನು ರೆಸಿಡೆನ್ಸಿ ಬಂಗಲೆಗೆ ಕರೆಸಿಕೊಂಡು, ಪ್ರಿನ್ಸ್ ಆಫ್ ವೇಲ್ಸ್‌ರವರ ಪತ್ನಿಯವರು ಅವರಿಗೆ ಭೇಟಿ ಕೊಟ್ಟು, ಸ್ವಲ್ಪ ಹೊತ್ತು ಅವರ ಸಂಗಡ ಸಂಭಾಷಣೆ ಮಾಡಿ ಕಳುಹಿಸಿಕೊಟ್ಟರು ಮೈಸೂರು ವಸ್ತುಪ್ರದರ್ಶನ ಶಾಲೆಯಿಂದ ಸರ್ವೋತ್ತಮವಾಗಿದ್ದ ಕೆಲವು ದಂತದ ಮತ್ತು ಗಂಧದ ಮರದ ಪದಾರ್ಥಗಳನ್ನು ತರಿಸಿ ಪರಾಂಬರಿಸಿ, ಕೊಂಡುಕೊಂಡರು ಸಾಯಂಕಾಲ ೪ ಗಂಟೆಗೆ ಪ್ರಿನ್ಸ್ ಆಫ್ ವೇಲ್ಸ್ ದಂಪತಿಗಳು ಸಾರೋಟಿನಲ್ಲಿ ಕುಳಿತು, ಚಾಮುಂಡಿ ಬೆಟ್ಟಕ್ಕೆ ದಯಮಾಡಿ, ಮೃಗಾಲಯವೇ ಮುಂತಾದ್ದನ್ನು ಪರಾಂಬರಿಸಿ, ಹಿಂತಿರುಗಿ ಅರಮನೆಗೆ ಬಂದು, ಶ್ರೀಮನ್ ಮಹಾರಾಜರವರ ಜವಾಹಿರಿ ನಗಗಳನ್ನು ಹೊಸ ಪಟ್ಟದವನ್ನೂ ನೋಡಿ ಸಂತೋಷಪಟ್ಟು, ಅಲ್ಲಿಂದ ರೆಸಿಡೆನ್ಸಿ ಬಂಗಲೆಗೆ ಚಿತ್ತೈಸಿದರು ಸಾಯಂ ೬ ಗಂಟೆಗೆ ರಾಜದಂಪತಿಗಳು ಸಾರೋಟಿನಲ್ಲಿ ಕುಳಿತು, ಇಲ್ಲಿನ ಕ್ರೈಸ್ತದೇವಾಲಯಕ್ಕೆ ಬಂದು, ಜಗದಾರಾಧನೆಯನ್ನು ನೆರವೇರಿಸಿದರು ರಾತ್ರಿ ಭೋಜನಾನಂತರ ಬಂಗಲೆಯ ಮಾಳಿಗೆಯ ಮೇಲೆ ಹತ್ತಿ ಪಟ್ಟಣದಲ್ಲಿ ಮಾಡಿದ್ದ ದೀಪೋತ್ಸವವನ್ನು ಪರಾಂಬರಿಸಿ, ಸಮರಾತ್ರಿಯಲ್ಲಿ ರೈಲ್ವೆ ಸ್ಟೇಷನ್‌ಗೆ ದಯಮಾಡಿ, ಸ್ಪೆಷಲ್ ಗಾಡಿಗಳಲ್ಲಿ ಕುಳಿತು, ಶ್ರೀಮನ್ ಮಹಾರಾಜರವರನ್ನು ಬೀಳ್ಕೊಟ್ಟು ಪ್ರತಿವಂದಿಸಿ, ಬೆಂಗಳೂರಿಗೆ ಪ್ರಯಾಣ ಮಾಡಿದರು ಮರುದಿನ ಬೆಳಿಗ್ಗೆ ಕೋಟೆಕೊತ್ತಲಗಳಿಂದ ಗೌರವಾರ್ಥವಾದ ೩೧ ತೋಪುಗಳು ಹಾರಿಸಲ್ಪಟ್ಟವು

ಬೆಂಗಳೂರು ಪಟ್ಟಣ.

ಪಟ್ಟಣ ಶೃಂಗಾರ

ಪ್ರಿನ್ಸ್ ಆಫ್ ವೇಲ್ಸ್ ದಂಪತಿಗಳನ್ನು ವಿಶೇಷ ಆಡಂಬರದಿಂದ ಎದುರುಗೊಂಡು, ಸತ್ಕಾರ ಮಾಡುವುದಕ್ಕೋಸ್ಕರ ಮೈಸೂರು ಸರ್ಕಾರದವರು ಸಿಟಿ ರೈಲ್ವೆ ಸ್ಟೇಷನ್‌ನಲ್ಲೂ ಪಟ್ಟಣದಲ್ಲೂ ದಂಡಿನ ಸರ್ಕಾರದವರು ದಂಡಿನ ನಾನಾ ಕಡೆಗಳಲ್ಲೂ ದಿವ್ಯವಾಗಿ ಅಲಂಕಾರ ಮಾಡಿದ್ದರು ರೈಲ್ವೆ ಸ್ಟೇಷನ್‌ನಲ್ಲಿ ಅವರು ಬಂದಿಳಿಯುವ ಮುಂಭಾಗದೊಳಗೆ ದಿವ್ಯವಾದ ಜಮಖಾನೆಯಿಂದ ಕೂಡಿದ ಒಂದು ಚಪ್ಪರವನ್ನು ಹಾಕಿ, ನೆಲಕ್ಕೆ ಕೆಂಪಿನ ಬನಾತನ್ನು ಹಾಸಿ, ಗೋಡೆಗಳ ಉದ್ದಕ್ಕೂ ನಾನಾರೀತಿ ಹೂವಿನ ಗಿಡಗಳನ್ನೂ ಕ್ರೋಟನ್ ಎಂಬ ನಾನಾ ಜಾತಿಯ ಎಲೆಗಿಡಗಳನ್ನೂ ಸಾಲುಸಾಲಾಗಿಯೂ ಅಂತಸ್ತುಗಳಾಗಿಯೂ ಕುಂಡಗಳಲ್ಲಿ ತಂದಿಟ್ಟಿದ್ದರು ದಿಸನಾವರಿ ಬಿಟ್ಟಗಳಿಂದ ರಂಗುದಾರಿ ಟಾಕಗಳನ್ನು ಪೋಣಿಸಿ, ಮೇಲ್ಕಟ್ಟಿನಿಂದ ಇಳಿಬಿಟ್ಟಿದ್ದರು ಅನೇಕ ಬಣ್ಣಗಳ ಜಲ್ಲೀ ಕಾಗದವನ್ನು ಕತ್ತರಿಸಿ, ಹೂ ಮಾಲಿಕೆಗಳಂತೆ ಪೋಣಿಸಿ, ದಂಡೆಗಳನ್ನು ಮಾಡಿ, ಸ್ಟೇಷನ್‌ನಲ್ಲೆಲ್ಲಾ ಕಟ್ಟಿ ಕಳಕಳನೆ ಹೊಳೆಯುವಂತೆ ಮಾಡಿದ್ದರು ಸ್ಟೇಷನ್ ಒಳಗಿನಿಂದ ನೋಡಕ್ಕೆ ಬರಬೇಕಾದಲ್ಲಿ ಕೆಲವು ಮೆಟ್ಟಲುಗಳನ್ನು ಹತ್ತಿ ಇಳಿಯಬೇಕಷ್ಟೆ ಈ ಮೆಟ್ಟಿಲ ಮೇಲ್ಭಾವಣಿಯನ್ನು ಅಲವಾನ್ ಬಟ್ಟೆಯಿಂದ ಹೊದಿಸಿ, ಸಣ್ಣ ದೊಡ್ಡ ಬಾವುಟಗಳನ್ನು ಕಟ್ಟಿ, ಉಭಯ ಪಾರ್ಶ್ವಗಳಲ್ಲೂ ಇರುವ ಕಿಟಿಕಿಗಳನ್ನೂ ಅವುಗಳ ಕಂಭಗಳನ್ನೂ ರಂಗುದಾರಿ ಬಾವುಟಗಳಿಂದಲೂ ಪಸರಿಸಿ ಗೊಂಚಲುಗಳಿಂದಲೂ ಅಲಂಕರಿಸಿದ್ದರು

ಸ್ಟೇಷನ್ ಹೊರಗಡೆ ಮೈದಾನಿನಲ್ಲಿ ಪಟ್ಟಣ ಪ್ರವೇಶ ಮಾಡುವ ಸ್ಥಳದಲ್ಲಿ ಒಂದು ಅಂದವಾದ ಕಮಾನು ಕಟ್ಟಿ, ಪ್ರಿನ್ಸ್ ಆಫ್ ವೇಲ್ಸ್ ದಂಪತಿಗಳಿಗೆ ಸುಸ್ವಾಗತವನ್ನೂ ಆಯುರಾರೋಗ್ಯಾದಿಗಳನ್ನೂ ಬಯಸುವ ಮಾತುಗಳನ್ನು ಬಿಡಿಸಿದ್ದರು ಅಲ್ಲಿಂದ ಮುಂದಕ್ಕೆ ಸಮಾರ್ ಲೈನ್ ಪ್ರಾರಂಭದಲ್ಲೂ ಅಂತ್ಯದಲ್ಲೂ ಅದೇ ರೀತಿ ಎರಡು ಸುಂದರವಾದ ಕಮಾನುಗಳನ್ನು ಕಟ್ಟಿ ಅಲಂಕಾರ ಮಾಡಿದ್ದರು ಅಲ್ಲಿಂದಾಚೆ ದಿವಾನರ ಮನೆ ಬಳಿ ಒಂದು ಸೊಗಸಾದ ಕಮಾನು ಕಟ್ಟಿ, ಅವರ ಪೂರ್ಣಪ್ರಸಾದವೆಂಬ ಬಂಗಲೆಯ ಮೇಲೆ ದಿಸನಾವರಿ ಬಾವುಟಗಳನ್ನು ನಿಲ್ಲಿಸಿದ್ದರು ವೆಸ್ಟ್ ಎಂಡ್ ಎಂಬ ಹೋಟೆಲನ್ನು ದಿವ್ಯವಾಗಿ ಅಲಂಕಾರ ಮಾಡಿದ್ದರು ಪ್ರಿನ್ಸ್ ಆಫ್ ವೇಲ್ಸ್‌ರವರು ಇಳಿಯತಕ್ಕ ರೆಸಿಡೆನ್ಸಿ ಬಂಗಲೆಯ ಮುಂದೆ ಬೆಳ್ಳಿ ಹರಿಕೆಯಿಂದ ಕಟ್ಟಿಸಿದ್ದ ಕಮಾನು ದಿವ್ಯವಾಗಿತ್ತು ಅದರ ಬಳಿ ರಸ್ತೆಯ ಉಭಯಪಾರ್ಶ್ವಗಳಲ್ಲೂ ದಂಡಿನ ಸ್ಕೂಲ್ ಮಕ್ಕಳು ಕುಳಿತುಕೊಳ್ಳುವುದಕ್ಕೆ ಗ್ಯಾಲರಿಗಳನ್ನು ಕಟ್ಟಿದ್ದರು ಸೌತ್ ಪರೇಡ್ ಎಂಬ ದೊಡ್ಡ ಬೀದಿಯ ಉದ್ದಕ್ಕೂ ಭಾರಿ ಭಾರಿ ಅಂಗಡಿಗಳಿರುತ್ತವೆ. ಅಲ್ಲಿನ ವರ್ತಕರು ತಮ್ಮ ಅಂಗಡಿಗಳ ಮುಂಭಾಗ ಮೇಲ್ಭಾಗಗಳನ್ನೂ ರಸ್ತೆಯನ್ನೂ ಚಿತ್ರವಿಚಿತ್ರವಾಗಿಯೂ ನಾನಾ ಪ್ರಕಾರವಾಗಿಯೂ ಅಲಂಕಾರ ಮಾಡಿ, ನೇತ್ರಾನಂದಕರವಾಗಿ ಮಾಡಿದ್ದರು ಪಟ್ಟಣದಲ್ಲಿ ಅಲಂಕಾರದ ಬಾಗಿಲು, ದೊಡ್ಡಪೇಟೆ ಚೌಕ, ಕೋಟೆಯ ಎರಡು ಬಾಗಿಲುಗಳು, ಈ ಮೊದಲಾದ ಮುಖ್ಯ ಮುಖ್ಯ ಸ್ಥಳಗಳೂ ರಸ್ತೆಗಳೂ ಮಂಟಪಗಳಿಂದಲೂ ಕಮಾನುಗಳಿಂದಲೂ ಶೋಭಿಸುತ್ತಿದ್ದವು ಮುಖ್ಯವಾಗಿ ದಂಡಿನಲ್ಲೂ ಪಟ್ಟಣದಲ್ಲೂ ಪ್ರಿನ್ಸ್ ಆಫ್ ವೇಲ್ಸ್ ದಂಪತಿಗಳು ಸಂಚರಿಸಿದ ಸಮಸ್ತ ಮಾರ್ಗಗಳನ್ನೂ ಮನೆ ಬಂಗಲೆಗಳನ್ನೂ ದಿಸನಾವರಿ ತೋರಣ, ಕಂಭ, ಬಾವುಟ, ಈ ಮೊದಲಾದವುಗಳಿಂದಲೂ ಸಣ್ಣ ಬಣ್ಣ ಕಾಗದಗಳಿಂದಲೂ ಅಲಂಕಾರ ಮಾಡಿದ್ದರು

ಮೊದಲನೇ ದಿವಸದ ಉತ್ಸವ

ಸೋಮವಾರ ಬೆಳಿಗ್ಗೆ ಪ್ರಿನ್ಸ್ ಆಫ್ ವೇಲ್ಸ್‌ರವರು ಪತ್ನಿ ಸಹಿತ ೮॥ ಗಂಟೆಗೆ ಸ್ಪೆಷಲ್ ರೈಲಿನಲ್ಲಿ ಮೈಸೂರಿನಿಂದ ಬರುತ್ತಾರೆಂದು ಗೊತ್ತಾಯಿತು ಅಸಿಸ್ಟೆಂಟ್ ರೆಸಿಡೆಂಟರು ಬೆಂಗಳೂರು ದಂಡಿನ ಮತ್ತು ಪಟ್ಟಣದ ಮುಖ್ಯ ಸರದಾರರನ್ನೂ ದೊಡ್ಡ ಮನುಷ್ಯರನ್ನೂ ಅಧಿಕಾರಿಗಳನ್ನೂ ಟಿಕೆಟ್ ಕೊಟ್ಟು, ರೈಲ್ವೆ ಸ್ಟೇಷನ್‌ಗೆ ಕರೆಸಿಕೊಂಡರು ಸುಮಾರು ೫೦ ಮಂದಿ ಇಂಗ್ಲಿಷ್ ಸೈನ್ಯದ ಬ್ಯಾಂಡಿನವರೂ ಸುಮಾರು ೧೦೦ ಮಂದಿ ಇಂಗ್ಲಿಷ್ ಸೈನಿಕರೂ ಸ್ಟೇಷನ್‌ನಲ್ಲಿ ಸಾಲು ಕಟ್ಟಿ ನಿಂತುಕೊಂಡರು ದಿವಾನರೂ ರೆಸಿಡೆಂಟರೂ ಆ ದಿನ ಬೆಳಿಗ್ಗೆ ೫ ಗಂಟೆ ರೈಲಿನಲ್ಲೇ ಬಂದಿಳಿದರು ಕೌನ್ಸಿಲ್ ಮೆಂಬರುಗಳೂ, ಚೀಫ್ ಕೋರ್ಟ್ ಜಡ್ಜಿಗಳೂ, ಡೆಪ್ಯುಟಿ ಕಮಿಷನರ್, ಸಿಟಿ ಮ್ಯುನಿಸಿಪಲ್ ಪ್ರೆಸಿಡೆಂಟರೂ, ದಂಡಿನ ಮ್ಯುನಿಸಿಪಲ್ ಕಮಿಷನರುಗಳೂ, ಪ್ರೆಸಿಡೆಂಟರೂ, ಸೈನ್ಯದ ಮತ್ತು ಸಿವಿಲ್ ಇಲಾಖೆಗಳ ಮುಖ್ಯಸ್ಥರೂ ಎಲ್ಲಾ ಸ್ಟೇಷನ್‌ನಲ್ಲಿ ಹಾಜರಾಗಿ, ಮೈಸೂರು ಕಡೆಯಿಂದ ಸ್ಪೆಷಲ್ ರೈಲು ಬರುವುದನ್ನೇ ಎದುರು ನೋಡುತ್ತಿದ್ದರು ೮ ಗಂಟೆಗೆ ಬಂದ ಸ್ಪೆಷಲ್ ಗಾಡಿಯಲ್ಲಿ ಪ್ರಿನ್ಸ್ ಆಫ್ ವೇಲ್ಸ್‌ರವರ ತಾಬೇದಲ್ಲಿರುವ ಉದ್ಯೋಗಸ್ಥರೂ ಮೇಜರ್ ಜನರಲ್ ಮಹಾರಾಜಾ ಸರ್ ಪ್ರತಾಪಸಿಂಗ್‌ರವರೂ ದಯಮಾಡಿ, ತಮ್ಮ ತಮ್ಮ ಬಿರುದುಗಳನ್ನು ಹಾಕಿಕೊಂಡು, ಮೇಲ್ಕಂಡವರ ಸಂಗಡ ಕಲೆತು ದರ್ಬಾರುವಾಗಿಯೂ ಸಾಲು ಸಾಲಾಗಿ ಯೂ ನಿಂತುಕೊಂಡರು ೮ ಗಂಟೆ ಆಯಿತು. ರೈಲು ದೂರದಲ್ಲಿ ಕಳ್ಳಹಾಕಿತು ಎಲ್ಲರೂ ಅವಸರವಸರವಾಗಿ ಅವರವರಿಂದ ನಿಂತುಕೊಂಡರು ಸ್ಪೆಷಲ್ ಗಾಡಿ ಸ್ಟೇಷನ್ ಪ್ಲಾಟ್‌ಫಾರಮಿಗೆ ನಿಧಾನವಾಗಿ ಸಗ್ಗಿ ಬಂತು ಕೂಡಲೇ ಒಳಗಿದ್ದ ಪ್ರಿನ್ಸ್ ಆಫ್ ವೇಲ್ಸ್‌ರವರ ಮುಖ್ಯ ತಾಬೇದಾರರಾದ ಸರ್ ವಾಲ್ಟರ್ ಲಾರೆನ್ಸ್ ಮುಂದುಗಡೆಯಿಂದ ದುಮುಕಿ ಬಂದು, ಪ್ರಿನ್ಸ್ ಆಫ್ ವೇಲ್ಸ್‌ರವರ ಅವರ ಪತ್ನಿಯವರನ್ನೂ ಕೈಹಿಡಿದು ಇಳಿಸಿಕೊಂಡರು. ಕೂಡಲೆ ಮೈದಾನಿನಲ್ಲಿ ಗೌರವಾರ್ಥವಾದ ೩೧ ತೋಪುಗಳಾದವು ಒಡನೆಯೇ ಒಬ್ಬನು ಕೆಂಪು ಛತ್ರಿಯನ್ನೂ ಇನ್ನೊಬ್ಬನು ಕೆಂಪು ಸುರಿಪಾನವನ್ನೂ ಹಿಡಿದು ಪ್ರಿನ್ಸ್ ಆಫ್ ವೇಲ್ಸ್‌ರವರ ಹಿಂಭಾಗದಲ್ಲಿ ನಿಂತರು ಬ್ರಿಟಿಷ್ ರೆಸಿಡೆಂಟ್ ಮಿ॥ ಎಸ್ ಎಂ ಫ್ರೇಸರ್‌ರವರು ಮುಂದೆ ಹೋಗಿ ಪ್ರಿನ್ಸ್ ಆಫ್ ವೇಲ್ಸ್ ದಂಪತಿಗಳಿಗೆ ಸುಸ್ವಾಗತವನ್ನು ಬಯಸಿದರು ಅವರ ಅಸಿಸ್ಟೆಂಟರು ಮುಂದೆ ಹೋಗಿ ವಂದನೆಮಾಡಿದರು ಅರುವಾಯ ರೆಸಿಡೆಂಟರು ಬೆಂಗಳೂರು ಸೈನ್ಯಾಧಿಪತಿಯನ್ನೂ, ಮೇ॥ ಮೂರ್ ಕ್ಯಾಸ್ಟರ್ ಸ್ಟೇಂಡಿಷ್, ಮಿ॥ ವಿಲ್ಕಿನ್ಸನ್, ರಾವ್ ಬಹದ್ದೂರ್ ಟಿ ಎಸ್ ಕೃಷ್ಣರಾವ್, ಖಾನ್ ಬಹದ್ದೂರ್ ಎಂ ಅಬ್ದುಲ್ ರಹಮಾನ್ ಸಾಹೆಬ್ ಎಂಬೀ ದಂಡಿನ ಅಧಿಕಾರಿಗಳನ್ನೂ, ಸೈನ್ಯದ ೧೪ ಮಂದಿ ಉದ್ಯೋಗಸ್ಥರನ್ನೂ, ದಿವಾನ್ ಸರ್ ಕೃಷ್ಣಮೂರ್ತಿಯವರು, ಕೌನ್ಸಿಲ್ ಮೆಂಬರುಗಳು, ಚೀಫ್ ಕೋರ್ಟ್ ಜಡ್ಜಿಗಳಾದ ಮಿ॥ ರಂಗಸ್ವಾಮಯ್ಯಂಗಾರ್ಯರು ಮಿ॥ ಕಂಠಯ್ಯನವರು ಚೀಫ್ ಸೆಕ್ರೆಟರಿ ಮಿ॥ ವೆಂಕಟವರದಯ್ಯಂಗಾರ್ಯರು, ಮಿ॥ ದಳವಾಯಿ ದೇವರಾಜೇ ಅರಸಿನವರು, ಮ್ಯುನಿಸಿಪಲ್ ಪ್ರೆಸಿಡೆಂಟ್ ಮಿ॥ ವಿ ಪಿ ಮಾಧವರಾವ್ ನಾಗಪ್ಪರ್‌ಯವರು ಎಂಬೀ ಮೈಸೂರು ಸಂಸ್ಥಾನದ ಉದ್ಯೋಗಸ್ಥರನ್ನೂ, ಕ್ಯಾಪ್ಟನ್ ಎ ಲಾಂಬರ್ಟ್ ಲೆಫ್ಟಿನೆಂಟ್ ಕರ್ನಲ್ ಡೆಲೋಗರ್ ಮಿ॥ ಗೌಡ ಎಚ್ ಜೆ ಪಾರ್ಸನ್ಸ್, ಎ ರಾಮೈಯ ಫುಂಡರು ರಾಯಬಹದ್ದೂರ್ ಕೊತ್ತಂಡ ರಾಮಯ್ಯನವರು, ರಾಯಬಹದ್ದೂರ್ ಅಪ್ಪಂಡ ಮಂದಣ್ಣನವರು, ರಾಯಬಹದ್ದೂರ್ ಚಪ್ಪುದೀರ ಸೋಮಯ್ಯನವರು. ಕೊರವಂಡ ಸಂಜಪ್ಪನವರು, ಅಪ್ಪರಂಡ ಬೋಪಣ್ಣನವರು, ಕೊಳವಂಡ ಅಪ್ಪಯ್ಯನವರು ಮಾಕತ್ತಿ ಐಯ್ಯಪ್ಪನವರು, ಮಹಮದ್ ಹುಸ್ಸೇನ್ ಯವರು ಎಂಬೀ ಕೊಡಗಿನ ೧೩ ಮಂದಿ ಪ್ರತಿನಿಧಿಗಳನ್ನೂ, ಮೇ॥ ಗೌಡ ಜೆ ಓಬಾಸ್ಸ ಜೆ. ಎಚ್ ವೆಬ್‌ಸ್ಟರ್ ರಾವ್ ಬಹದ್ದೂರ್ ಬಿ ಪಿ ಅಣ್ಣಾಸ್ವಾಮಿ ಮೊದಲಿಯಾರ್ರು, ರಾವ್ ಬಹದ್ದೂರ್ ಎ ಮೈಗಂಡದೇವ ಮೊದಲಿಯಾರು), ಅಹಮದ್ ಸೇಟರು ಎಂಬೀ ದಂಡಿನ ೫ ಮಂದಿ ಮ್ಯುನಿಸಿಪಲ್ ಕಮಿಷನರುಗಳನ್ನೂ ಪ್ರಿನ್ಸ್ ಆಫ್ ವೇಲ್ಸ್‌ರವರಿಗೆ ತೋರಿಸಿ, ಅವರ ಪರಿಚಯಮಾಡಿಸಿದರು ಪ್ರಿನ್ಸ್ ಆಫ್ ವೇಲ್ಸ್‌ರವರು ಮೇಲ್ಕಂಡ ಪ್ರತಿ ಒಬ್ಬರನ್ನೂ ಕಂಡು, ಆದರಪೂರ್ವಕವಾಗಿ ಅವರಿಗೆ ಪ್ರತಿವಂದನೆ ಮಾಡಿ, ಪ್ಲಾಟ್‌ಫಾರಂನಲ್ಲಿದ್ದ ಇತರ ದೊಡ್ಡ ಮನುಷ್ಯರ ವಂದನೆಗಳನ್ನು ಸ್ವೀಕರಿಸಿ ಸಂತೋಷಪಡಿಸಿ, ಸಾಲಾಗಿ ನಿಂತಿದ್ದ ಸೈನಿಕರನ್ನು ಹೋಗಿ ನೋಡಿ ಬಂದು, ದಿವ್ಯಾಲಂಕಾರಯುಕ್ತವಾದ ಚಪ್ಪರಮಂಟಪದೊಳಕ್ಕೆ ಚಿತ್ತೈಸಿದರು ಅಲ್ಲಿ ದಂಡಿನ ಮ್ಯುನಿಸಿಪಾಲಿಟಿಯವರು ಒಂದು ವಿಜ್ಞಾಪನಾಪತ್ರಿಕೆಯನ್ನು ಓದಿ, ವಿಚಿತ್ರವಾಗಿ ಕೆತ್ತನೆ ಮಾಡಿ ಹೂವುಗಿಡ ಬೊಂಬೆಗಳನ್ನು ಬಿಡಿಸಿದ್ದ ಶ್ರೀಗಂಧದ ಪೆಟ್ಟಿಗೆಯಲ್ಲಿಟ್ಟು ಪ್ರಿನ್ಸ್ ಆಫ್ ವೇಲ್ಸ್‌ರವರಿಗೆ ಒಪ್ಪಿಸಿದರು. ಅದರಲ್ಲಿ ಬರೆದಿದ್ದ ಮುಖ್ಯಾಭಿಪ್ರಾಯವೇನೆಂದರೆ—

"ಘನವನ್ನೈದಿದ ಯುವರಾಜರವರಿಗೆ,

"ಬೆಂಗಳೂರು ದಂಡಿನ ಮ್ಯುನಿಸಿಪಲ್ ಕಮಿಷನರುಗಳಾದ ನಾವುಗಳು ಅಲ್ಲಿನ ಪ್ರಜೆಗಳ ಪರವಾಗಿ ಈ ದಿನ ತಮ್ಮಗಳಿಗೆ ವಿನಯ ಭಯ

[ಇದರ ಮುಂದಿನ ಭಾಗವನ್ನು ೬ನೆ ಪುಟದಲ್ಲಿ ನೋಡಿ]

ಮೈಸೂರು ಕೈಗಾರಿಕೆ ಮತ್ತು ವ್ಯವಸಾಯೋಪಕರಣಗಳ ಪ್ರದರ್ಶನಶಾಲೆಯು.

ಮೈಸೂರು ಪಟ್ಟಣದಲ್ಲಿ ಪ್ರದರ್ಶನೋತ್ಸವ ನಡೆದು ಬಹಳ ವರುಷಗಳಾಗಿದ್ದವು. ಶ್ರೀಮನ್ಮಹಾರಾಜಾ ಸರ್ಕಾರದವರು ಕಳೆದ ಪ್ರಜಾಪ್ರತಿನಿಧಿ ಸಭೆಯಲ್ಲಿ ಮೆಂಬರುಗಳಿಗೆ ಜನವರಿ ಅಥವಾ ಫೆಬ್ರವರಿ ತಿಂಗಳಲ್ಲಿ ಪ್ರದರ್ಶನವನ್ನು ನಡೆಸುವುದಾಗಿ ಅಪ್ಪಣೆ ಕೊಡಿಸಿದರು. ಅದೇ ಪ್ರಕಾರ ಮೈಸೂರು ಪಟ್ಟಣದ ಪಟ್ಟಣಾಭಿವೃದ್ಧಿಯ ಮೈದಾನದಲ್ಲಿ ಪ್ರದರ್ಶನಶಾಲೆಯನ್ನು ಕಟ್ಟಿಸಿ, ಮೈಸೂರು ಸಂಸ್ಥಾನದ ಎಲ್ಲಾ ಡಿಸ್ಟ್ರಿಕ್ಟುಗಳಿಂದಲೂ ಕೈಗಾರಿಕೆಯ ವಸ್ತುಗಳನ್ನು ತರಿಸಿ, ತರಗತಿ ಮತ್ತು ಜಾತಿವಾರಾಗಿ ವಿಂಗಡಿಸಿ, ಬೇರೆ ಬೇರೆ ಕೋಣೆಗಳಲ್ಲಿ ಇರಿಸಿ ಪ್ರದರ್ಶನ ಮಾಡಿರುತ್ತಾರೆ. ಪ್ರದರ್ಶನವು ಕಳೆದ ೩೦ ನೆ ತಾರೀಖು ಮಂಗಳವಾರ ಮಧ್ಯಾಹ್ನದಿಂದ ಪ್ರಾರಂಭವಾಗಿ, ಪ್ರಜೆಗಳೆಲ್ಲರೂ ಹೋಗಿ ನೋಡಿಕೊಂಡು ಬರುತ್ತಿದ್ದಾರೆ. ಶ್ರೀಮನ್ಮಹಾರಾಜರವರು, ಮಹಾಮಾತೃಶ್ರೀಯವರು, ದಿವಾನರವರು, ಕೌನ್ಸಿಲ್ ಮೆಂಬರುಗಳು, ಈ ಮೊದಲಾದವರೆಲ್ಲಾ ಹೋಗಿ ಪರಾಂಬರಿಸಿದ್ದಾಯಿತು. ಪ್ರಿನ್ಸ್ ಆಫ್ ವೇಲ್ಸ್ ರವರು ಪತ್ನಿ ಪರಿವಾರ ಸಹಿತ ಕಳೆದ ಬುಧವಾರ ಬೆಳಿಗ್ಗೆ ಖೆಡ್ಡಾ ಕ್ಯಾಂಪಿಗೆ ಪ್ರಯಾಣ ಮಾಡುತ್ತಾ ಹಾಗೇ ಈ ಪ್ರದರ್ಶನಶಾಲೆಗೂ ದಯಮಾಡಿ, ಅಲ್ಲಿಟ್ಟಿರುವ ವಸ್ತುವಿಶೇಷಗಳನ್ನು ನೋಡಿ ಸಂತೋಷಪಟ್ಟುಕೊಂಡರು.

ಈ ಪ್ರದರ್ಶನಶಾಲೆಯ ಆವರಣದ ಸುತ್ತಲೂ ಓರ್ ತಗಡುಗಳನ್ನು ಎತ್ತರವಾಗಿ ನಿಲ್ಲಿಸಿ ಭದ್ರಪಡಿಸಿದ್ದಾರೆ. ಒಳಗಡೆ ಓರ್ ತಗಡುಗಳಿಂದಲೇ ಸುಮಾರು ಮೂವತ್ತು ಸಣ್ಣ ದೊಡ್ಡ ಕೋಣೆಗಳನ್ನು ಮಾಡಿ, ಇವುಗಳಲ್ಲಿ ಪ್ರದರ್ಶನವಸ್ತುಗಳನ್ನು ಮೇಜು ಬೆಂಚುಗಳ ಮೇಲೆ ಪ್ರತ್ಯೇಕ ಪ್ರತ್ಯೇಕವಾಗಿ ಇರಿಸಿರುವರು. ಜನರು ಪ್ರದರ್ಶನವಸ್ತುಗಳನ್ನು ನೋಡಿ ಸಂತೋಷಪಡುವದಕ್ಕಾಗಿ ಸಾಯಂಕಾಲದ ಹೊತ್ತು ಬ್ಯಾಂಡ್ ವಾದ್ಯಗಾರರನ್ನು ನೇಮಿಸಿ ಅವರಿಂದ ಮನೋಹರವಾದ ವಾದ್ಯಗಳನ್ನು ನಡಿಸುತ್ತಿದ್ದಾರೆ. ಮಧ್ಯಾಹ್ನ ಮೂರು ಗಂಟೆಯಿಂದ ರಾತ್ರಿ ಎಂಟು ಗಂಟೆಯ ತನಕ ಜನರು ಹೋಗಿ ನೋಡಬಹುದೆಂದು ಅವಕಾಶ ಮಾಡಿಕೊಟ್ಟು, ಆ ಮೈದಾನದಲ್ಲಿಯೂ ಪ್ರತಿ ಒಂದು ಕೋಣೆಯಲ್ಲಿಯೂ ಪ್ರಕಾಶಮಾನವಾದ ಗ್ಯಾಸ್ ದೀಪಗಳನ್ನು ಇರಿಸಿ, ಪ್ರದರ್ಶನದ ವೈಭವವನ್ನು ಅತಿಶಯಮಾಡಿರುತ್ತಾರೆ. ಪ್ರದರ್ಶನವನ್ನು ನೋಡತಕ್ಕ ಜನರು ಮೊದಮೊದಲು ತಲಾ ೮ ಆಣೆಯಂತಲೂ, ಅನಂತರ ೪ ಆಣೆಯಂತೆಯೂ, ಈಚೆಗೆ ೨ ಆಣೆಯಂತೆಯೂ ರುಸುಂ ಕೊಟ್ಟು ಟಿಕೆಟ್ ಪಡೆದು ಒಳಕ್ಕೆ ಹೋಗಬೇಕೆಂದು ವಿಧಿಸಿದರು. ಇದುವರೆಗೆ ಕೆಲವು ಸಾವಿರ ಜನರವರೆಗೂ ರುಸುಂ ಕೊಟ್ಟು ನೋಡಿಬಂದಿದ್ದಾರೆ.

ಸ್ತ್ರೀಯರು ಪ್ರದರ್ಶನ ಮಾಡಿರುವ ವಸ್ತುಗಳು.

ಪ್ರದರ್ಶನಶಾಲೆಯೊಳಕ್ಕೆ ಹೋಗಿ ಬಲಗಡೆಯ ಕೋಣೆಯನ್ನು ಪ್ರವೇಶಮಾಡಿದಲ್ಲಿ ಕಣ್ಮನಗಳನ್ನು ಸೆಳೆಯುವಂಥಾ ನಾನಾ ಪ್ರಕಾರವಾಗಿ ಅಲಂಕಾರ ಮಾಡಿದಂಥಾ ಬಿನಿಸಾವರಿ ಬೊಂಬೆಗಳೂ, ಮಣಿಗಳ ಪಟ ಬೊಂಬೆಗಳೂ ಚಿತ್ರಗಳೂ, ಬೃಂದಾವನಗಳೂ, ಪಾಲಕಿ, ದಿಂಬಿನ ಬಟ್ಟೆಗಳೂ, ಆಟದ ಸಾಮಾನುಗಳೂ ಕಾಣಿಸುವುವು. ಮಿಸೆಸ್ ಟಿ ಅನಂತರಾಯರು ತಯಾರುಮಾಡಿ ಕಳುಹಿಸಿರುವ ಉಲ್ಲನ್ ದಾರದ ಸಿಂಹವು, ಮಣಿಗಳ ಬೃಂದಾವನವೂ, ಪಾಲಕಿಯೂ, ಕೊಬ್ಬರಿಯಿಂದ ಮಾಡಿದ ಹೂವಿನ ಗಿಡ, ಕಾರ್ದಾನ ಸಹಿತವಾದ ತಟ್ಟೆ ಬಟ್ಟಲುಗಳೂ ಬಹಳ ಸೊಗಸಾಗಿರುತ್ತವೆ. ಬೆಂಗಳೂರು ಜವಾಲ್‌ದಾನಿ ಬೀಬಿಯವರಿಂದ ತಯಾರುಮಾಡಲ್ಪಟ್ಟ ಜರತಾರಿ ಸಣ್ಣ ಕೆಲಸಗಳು ನೇತ್ರಾಕರ್ಷಕಗಳಾಗಿರುತ್ತವೆ. ಲೇಡಿ ಕೃಷ್ಣಮೂರ್ತಿಯವರು ಕಳುಹಿಸಿರುವ ಮಣಿಸರ, ಬೊಂಬೆಗಳು, ಮಣಿಯುಂಡೆ, ಪಾಣಿ ಬಟ್ಟಲು ಕೈಲಿಂಗ ಈ ಮೊದಲಾದ ಪದಾರ್ಥಗಳು ಬಹು ಸುಂದರವಾಗಿರುವುವು. ಮಿಸೆಸ್ ಗೋಪಾಲಕೃಷ್ಣ ಅರಸಿನವರು ಹಾಕಿರುವ ಮಣಿಗಳ ಮೇಜಾ ಗೌಸೂ ಚನ್ನಾಗಿವೆ. ಇವೆಲ್ಲಕ್ಕಿಂತಲೂ ತುಂಕೂರು ಎಂಪ್ರೆಸ್ ಗರ್ಲ್ಸ್ ಸ್ಕೂಲಿನ ಸುಬ್ಬಮ್ಮನವರು ಹಾಕಿರುವ ಮಣಿಗಳ ಗೌನು ಬಹಳ ಉತ್ಕೃಷ್ಟವಾಗಿದೆ. ಮಿಸೆಸ್ ವೆಂಕಟಸ್ವಾಮಿನಾಯ್ಡು ಯವರು ಎರಡು ಬೊಂಬೆಗಳಿಗೆ ಅಲಂಕಾರ ಮಾಡಿರುವುದನ್ನು ನೋಡಿ ಯಾರೂ ಹೊಗಳದೆ ಇರಲಾರರು. ಇವರು ಮಾಡಿ ಕಳುಹಿಸಿರುವ ಇತರ ಕೆಲವು ವಸ್ತುಗಳು ನೋಟಕರಿಗೆ ತುಂಬಾ ಸಂತೋಷಪಡಿಸಿದವು. ಮೈಸೂರು ಕೋಟೆಯ ಮಿಸೆಸ್ ವೆಂಕಟಸುಬ್ಬಶೆಟ್ಟರಿಂದಲೂ ಸೌ॥ ಮಹಾಲಕ್ಷ್ಮಮ್ಮನವರಿಂದಲೂ ತಯಾರುಮಾಡಲ್ಪಟ್ಟ ದೇವರ ಮಂಟಪಗಳೂ, ಬೆಂಗಳೂರು ರಾಘವಮ್ಮನವರು ಮಾಡಿದ ನಾಲ್ಕು ಚಕ್ರದ ಕುದುರೆ ಗಾಡಿಯೂ ಸರ್ವೋತ್ತಮವಾಗಿ ಕಾಣುತ್ತವೆ. ಬೆಂಗಳೂರು ತಿಮ್ಮಾಬಮ್ಮನವರು ಮಣಿಗಳಿಂದ ಹಾಕಿರುವ ನವಿಲಿನ ಪಟವು ಶ್ಲಾಘ್ಯವಾಗಿರುವುದು. ಮಣಿಗಳಿಂದ ಆರು ಅಡಿ ಉದ್ದ ಮೂರು ಅಡಿ ಅಗಲವಾಗಿ ನವಿಲು ಪಕ್ಷಿಯನ್ನು ಬಿಡಿಸಿ ಸುತ್ತಲೂ ನಾಲ್ಕು ಪಟ್ಟಿಗಳಿಂದ ಅಂಚು ಕಟ್ಟಿ ಹಾಕಿರುವ ಬಾಗಿಲ ಪರದೆಯು ಬಹಳ ಚನ್ನಾಗಿರುತ್ತದೆ. ಇದಕ್ಕೆ ೧ನೆಯ ಬಹುಮಾನ ಕೊಟ್ಟರೂ ತಪ್ಪೇನೂ ಇಲ್ಲ. ದಾವಣಗೆರೆ ಗುರುಲಿಂಗಮ್ಮನವರು ಚಿನ್ನದ ದಾರದಲ್ಲಿ ಕೆಲಸಮಾಡಿ ಕಂಚುಗೆಯನ್ನು ಮಾಡಿ ಕಳುಹಿಸಿದ್ದಾರೆ. ಇದೂ ಮೊದಲನೆ ಬಹುಮಾನವನ್ನು ಪಡೆದಿದೆ. ಹಾಸನದ ಇಂಡಸ್ಟ್ರಿಯಲ್ ಸ್ಕೂಲಿನ ಎಮಿಲಿ ಎಂಬಾಕೆ ಅಲಂಕಾರ ಮಾಡಿ ಕಳುಹಿಸಿರುವ ಬೊಂಬೆಗೆ ೨ನೆಯ ಬಹುಮಾನ ದೊರಕಿರುವುದು. ಮಿಸೆಸ್ ಮಾಸ್ತನ ಮೊದಲಿಯಾರು ವೆಲ್ವೆಟ್ ಬಟ್ಟೆಯಿಂದ ಮೋಹದ ಬೊಂಬೆಗೆ ಅಲಂಕಾರ ಮಾಡಿರುವುದಕ್ಕೆ ೩ ನೆಯ ಬಹುಮಾನ ದೊರಕಿರುತ್ತದೆ. ಬೆಂಗಳೂರು ಅನಾಥಬಾಲಿಕಾ ಪಾಠಶಾಲೆಯ ನಾಗಮ್ಮನವರು ಉಲ್ಲನ್ ದಾರದಲ್ಲಿ ಹಾಕಿ ಕಳುಹಿಸಿರುವ ಟೀಪಾಯಿ ಕವರು ಬಹಳ ಸೊಗಸಾಗಿರುವುದರಿಂದ ಅದಕ್ಕೆ ೧ನೆಯ ಬಹುಮಾನ ದೊರಕಿತು. ಬೆಂಗಳೂರು ಲಂಡನ್ ಮಿಷನ್ ಗರ್ಲ್ಸ್ ಹೋಮಿನವರು ಕ್ರೋಷೆ ಕೆಲಸ ಮಾಡಿ ಕಳುಹಿಸಿದ ಚಾದರು ನೇತ್ರಾನಂದಕರವಾಗಿದೆ. ಇದಕ್ಕೆ ೧ನೆಯ ಬಹುಮಾನ ದೊರಕಿದ್ದು ಆಶ್ಚರ್ಯವಲ್ಲ. ಚಿಕ್ಕಮಗಳೂರು ಗರ್ಲ್ಸ್ ಸ್ಕೂಲಿನ ಗಫೂರ್ ಬೀಯಾ ಬೇಗಂ ಯವರು ಹಾಕಿದ ರೇಷ್ಮೆ ದಾರವು ಬಹಳ ನಾಜೂಕಾಗಿರುತ್ತದೆ. ಬೆಂಗಳೂರು ಮಿಸೆಸ್ ಇಂಡಾರ್ಸ್ ಎಂಬಾಕೆ ಮರವನ್ನು ಸುಟ್ಟು ಬಣ್ಣ ಹಾಕಿದ ಚೌಕಟ್ಟುಗಳ ಕಸವಿಸೂ, ಮೈಸೂರು ಜೋಡಿ ಧರ್ಮ ಲಕ್ಷ್ಮಮ್ಮನವರು ಮಣಿಯಲ್ಲಿ ಹಾಕಿರುವ ದೊಡ್ಡ ತಸ್ವೀರಿಗೂ ಮೊದಲನೆ ಬಹುಮಾನ ದೊರಕಿದೆ. ಬೆಂಗಳೂರು ಮಿಸ್ ಆಗಾ ಅಬ್ದುಲ್ಲಾ ಯವರು ಚಿನ್ನ ಬೆಳ್ಳಿ ಸರಿಗೆಯಿಂದ ಬಿನಿಸಾವರಿ ಚೌಕ ಪಟ್ಟಿಗಳನ್ನು ಕಳುಹಿಸಿರುತ್ತಾರೆ. ಇವು ಸರ್ವೋತ್ತಮವಾಗಿರುವದರಿಂದ ಅವುಗಳಿಗೆ ಬಹುಮಾನ ಕೊಡಲಾಗಿದೆ. ಮಿಸೆಸ್ ವೆಂಕಟಸ್ವಾಮಿನಾಯ್ಡು ಯವರು ರಾಜರವಿವರ್ಮರವರಿಂದ ಬರೆಯಲ್ಪಟ್ಟಿರುವ ಶ್ರೀಮನ್ಮಹಾರಾಜರವರ ಮತ್ತು ಮಹಾರಾಣಿಯವರ ತಸ್ವೀರಿನಲ್ಲಿ ರೇಷ್ಮೆ ಜರತಾರಿ ಬೆಳ್ಳಿ ಭಂಗಾರಗಳಿಂದ ಉಡಿಗೆ ತೊಡಿಗೆಗಳನ್ನು ಧರಿಸಿ ಅಲಂಕಾರ ಮಾಡಿರುವುದು ನೇತ್ರಾನಂದಕರವಾಗಿರುತ್ತದೆ. ಇದಕ್ಕೆ ೧ನೆಯ ಬಹುಮಾನ ಕೊಡಲಾಯಿತು. ಇಂಗ್ಲಿಷ್ ವರ್ಕ್ ಹೌಸಿನ ಮಿ॥ ಆನವಂತ್ ಸೇಟರ ಮನೆಯ ಜನಾನಾ ಸ್ತ್ರೀಯರು ಅಲಂಕಾರ ಮಾಡಿ ಕಳುಹಿಸಿರುವ ಬೊಂಬೆಯೂ, ಬೆಂಗಳೂರು ಪಟ್ಟಣದ ಮಿಸೆಸ್ ಎಸ್. ಎಫ್. ಕ್ಲಾರ್ಕ್ ಯವರು ಬರೆದಿರುವ ಕಾಶ್ಮೀರದ ತಸ್ವೀರೂ, ಮಿಸೆಸ್ ಪಳನಿ ನೇಮರಾಜೇ ಅರಸಿನವರು ಪ್ರದರ್ಶನ ಮಾಡಿರುವ ಬೊಂಬೆಯೇ ಮೊದಲಾದ ಚಿತ್ರವಸ್ತುಗಳೂ ಬಹಳ ಸುಂದರವಾಗಿರುವುವು.

ಈ ಕೋಣೆಯ ಪಕ್ಕದಲ್ಲಿರುವ ಸಣ್ಣ ಕೋಣೆಯಲ್ಲಿ ಮೈಸೂರು ಮಿಸೆಸ್ ಎಂ. ವಿ ನಾರಸಿಂಹಯ್ಯಂಗಾರ್ರಿಂದ ಬರೆಯಲ್ಪಟ್ಟ ದೊಡ್ಡ ತಸ್ವೀರೂ, ಮೈಸೂರು ತಿಮ್ಮಯ್ಯ ಮೇಸ್ತ್ರಿಯವರು ಮರದಲ್ಲಿ ಮಾಡಿರುವ ಪೂರ್ವದ ಅರಮನೆ ಆಕೃತಿಯ ಕಟ್ಟಡವೂ, ಶಿವಮೊಗ್ಗೆಯ ಮಿಸೆಸ್ ಗೋವಿಂದರಾವ್‌ಜಿ ಯವರು ಪ್ರಿನ್ಸ್ ಆಫ್ ವೇಲ್ಸ್ ದಂಪತಿಗಳಿಗೆ ಸುಸ್ವಾಗತವನ್ನು ಬಯಸುವ ಶ್ರೀವೃತ್ತವಾಕ್ಯಗಳುಳ್ಳ ದೊಡ್ಡ ತಸ್ವೀರೂ ನೇತ್ರಾನಂದಕರವಾಗಿ ಕಂಗೊಳಿಸುತ್ತಿರುವವು.

ಮರದಲ್ಲಿ ಚಿತ್ರದ ಕೆಲಸ

ಇನ್ನೊಂದು ಕೋಣೆಯಲ್ಲಿ ಮೈಸೂರು ಮೇಸ್ತ್ರಿ ಗಣೇಶಯ್ಯನವರು ಮಾಡಿರುವ ಬಹುಸುಂದರವಾದ ಪೆಟ್ಟಿಗೆ, ನೋಟ್‌ಮೇಜು, ಮೇಜು, ಕೈಪೆಟ್ಟಿಗೆ, ದೋಣಿ ಮೊದಲಾದ ಅನೇಕ ಚಿತ್ರ ಸಾಮಾನುಗಳು ಇಡಲ್ಪಟ್ಟಿವೆ. ಅರಮನೆ ದರ್ಬಾರಿನ ತಸ್ವೀರು, ನವರಂಗಬಾಗಿಲುಗಳು ಮೈಸೂರು ಆರ್ಟ್ ಸ್ಟೋರ್ ಡಿಪೋದವರಿಂದ ತಯಾರಾಗಿ ಕಂಗೊಳಿಸುತ್ತಿವೆ. ಎಸ್. ಅರುಣಾಚಲ ಪಿಳ್ಳೆಯವರು ಒಂದು ಜೊತೆ ಬೆಂಡಿನ ಮಾರ್ಕಂಡೇಯ ವಿಗ್ರಹವನ್ನು ಗಾಜಿನ ಕೇಸಿನಲ್ಲಿ ತಂದಿಟ್ಟಿದ್ದಾರೆ. ಇದರ ಚಿತ್ರ ಕೆಲಸವು ವಿಚಿತ್ರವಾಗಿದೆ.

ಇತರ ಕೋಣೆಗಳು.

ರಿಸೆಪ್ಷನ್ ಕಮಿಟಿಯವರು ಒಂದು ಕೋಣೆಯಲ್ಲಿ ಕೆಲವು ಬೊಂಬೆಗಳನ್ನು ಬಹು ನೇತ್ರಾನಂದಕರವಾಗಿ ಅಲಂಕರಿಸಿ, ಹೂಗಿಡಗಳ ನಡುವೆ ಇಟ್ಟಿರುತ್ತಾರೆ.

ಐದನೆಯ ಕೋಣೆಯಲ್ಲಿ ಪ್ರಸಿದ್ಧ ಚಿತ್ರಗಾರರಾದ ರಾಜಾ ರವಿವರ್ಮರವರು ಬರೆದಿರುವ ೬-೭ ಪುರಾಣ ಕಥೆಗಳ ತಸ್ವೀರುಗಳನ್ನು ಪರದೆ ಕಟ್ಟಿ ಕತ್ತಲುಮಾಡಿ ಅನ್ಯಮಾರ್ಗದಿಂದ ಬೆಳಕು ಅವುಗಳ ಮೇಲೆ ಬೀಳುವಂತೆ ಮಾಡಿಟ್ಟಿದ್ದಾರೆ. ಇವೆಲ್ಲಾ ಅವರ ಪ್ರಸಿದ್ಧವಾದ ಹೆಸರಿಗೆ ತಕ್ಕವುಗಳಾಗಿಯೇ ಇರುತ್ತವೆ.

ಮತ್ತೊಂದು ಕೋಣೆಯಲ್ಲಿ ವಿವೇಕಾನಂದರು, ಸರ್ ಶೇಷಾದ್ರಿ ಅಯ್ಯರು, ಮೈಸೂರು ದಿವಾನರು, ಸರ್ ಕೃಷ್ಣಮೂರ್ತಿಗಳು, ಈ ಮೊದಲಾದ ಅನೇಕ ದೊಡ್ಡ ಮನುಷ್ಯರ ತಸ್ವೀರುಗಳನ್ನೂ ಬಿನಿಸಾವರಿ ಫೋಟೋಗಳನ್ನೂ ನಾನಾ ಚಿತ್ರಗಳನ್ನೂ ಇಟ್ಟು ಪ್ರದರ್ಶನ ಮಾಡಿರುವರು. ಇವನ್ನು ತಂದಿಟ್ಟಿರುವವರು ಬೆಂಗಳೂರಿನ ಮತ್ತು ಮೈಸೂರಿನ ಚಿತ್ರಗಾರರೂ ಫೋಟೋಗ್ರಾಫರುಗಳೂ ಎಂದು ತಿಳಿದುಬಂದಿದೆ.

ಇನ್ನೊಂದು ಕೋಣೆಯಲ್ಲಿ ರಾಜಧಾನಿಯ ಕೆಪ್ಪ ಮೂಗರ ಸ್ಕೂಲು ಹುಡುಗರನ್ನು ಕೂರಿಸಿ, ಅವರಿಂದ ಹಾಡಿಸುತ್ತಲೂ ಓದಿಸುತ್ತಲೂ ನೋಟಕರಲ್ಲಿ ಆಶ್ಚರ್ಯವನ್ನುಂಟುಮಾಡಿರುವರು.

ಅಲ್ಲಿಂದ ಮುಂದೆ ಬೆಂಗಳೂರು ಸಂಪತ್‌ರಾಜರ ಮಿಲ್ ಎಂಬ ಕಾರ್ಖಾನೆಯವರು ಒಂದು ಡೇರಾ ಹಾಕಿಕೊಂಡು ಅದರಲ್ಲಿ ನೇಯುವ ವಿಧಾನವನ್ನು ತೋರಿಸುತ್ತಾರೆ. ತಮ್ಮ ಕಾರ್ಖಾನೆಯಲ್ಲೇ ತಯಾರಾಗುವ ಬಿನಿಸಾವರಿ ಬಟ್ಟೆಗಳು, ಟವಲುಗಳು, ಡ್ರಿಲ್, ಛಕ್, ಸೀರೆ, ಪಂಚೆ, ಜಮಖಾನ, ಈ ಮೊದಲಾದ ಸರಕುಗಳನ್ನು ಪ್ರದರ್ಶನ ಮಾಡಿ, ಅವುಗಳ ಕ್ರಯ ಇಷ್ಟು ಎಂದು ನೋಡುವವರಿಗೆಲ್ಲಾ ಹೇಳುತ್ತಾ ಗಿರಾಕಿಗಳನ್ನು ಸಂಪಾದಿಸಿಕೊಳ್ಳುತ್ತಿದ್ದಾರೆ.

ಮುಂದೆ ಹೊರಗಡೆ ೪೦ ಅಡಿಯ ಅಪೂರ್ವವಾದ ಒಂದು ಹಳೇ ಗಂಧದ ಮರವನ್ನು ನಿಲ್ಲಿಸಿದ್ದಾರೆ. ಇದರ ಪಕ್ಕದಲ್ಲಿರುವ ಕೋಣೆಯು ಫಾರೆಸ್ಟ್ ಇಲಾಖೆಯವರದೆಂದು ಗೊತ್ತಾಗುತ್ತದೆ. ಅದರಲ್ಲಿ ಕಾಡುಗಳ ಉತ್ಪತ್ತಿಯನ್ನೆಲ್ಲಾ ಸಾಲುಸಾಲಾಗಿ ವಿಂಗಡಿಸಿ, ಚೀಟಿಗಳನ್ನು ಬರೆದು ಇಟ್ಟಿದ್ದಾರೆ. ಬಿನಿಸಾವರಿ ಪೀಠಗಳೂ, ಪೆಟ್ಟಿಗೆಗಳೂ, ಮಂಟಪಗಳೂ, ಬೊಂಬೆಗಳೂ, ನಾರುಗಳೂ ಅಲ್ಲಿ ಪ್ರದರ್ಶನಮಾಡಲ್ಪಟ್ಟಿವೆ.

[ಸಶೇಷ]

ಪ್ರಿನ್ಸ್ ಆಫ್ ವೇಲ್ಸ್‌ರವರ ಆತಿಥ್ಯವು.

ಭಾಷಣಗಳು.

ಕೈಗಾರಿಕೆ ವಿದ್ಯಾಶಾಲೆಗೆ ಅಸ್ತಿಭಾರ ಹಾಕಿದ್ದು.

ಕಳೆದ ೩೦ ನೇ ಮಂಗಳವಾರ ಬೆಳಿಗ್ಗೆ ಪ್ರಿನ್ಸ್ ಆಫ್ ವೇಲ್ಸ್‌ರವರು ರಾಜಧಾನಿಯ ಸೈಯ್ಯಾಜಿರಾವ್ ರಸ್ತೆ ಪಕ್ಕದಲ್ಲಿ ಮೈಸೂರು ಸರ್ಕಾರದವರಿಂದ ಕಟ್ಟಲ್ಪಡುವ "ಚಾಮರಾಜೇಂದ್ರ ಟೆಕ್ನಿಕಲ್ ಇನ್‌ಸ್ಟಿಟ್ಯೂಟ್" ಎಂಬ ಕೈಗಾರಿಕೆಗಳ ವಿದ್ಯಾಶಾಲೆಗೆ ಅಸ್ತಿಭಾರಶಿಲೆಯನ್ನು ಹಾಕಿ ಪ್ರತಿಷ್ಠೆಮಾಡಿದರಷ್ಟೆ. ಮೈಸೂರು ಸಂಸ್ಥಾನದ ದಿವಾನರಾದ ಸರ್ ಪಿ. ಎನ್. ಕೃಷ್ಣಮೂರ್ತಿ ಯವರು ಆ ಸಭೆಯಲ್ಲಿ ಶ್ರೀಮನ್ಮಹಾರಾಜರವರ ಆಜ್ಞಾನುಸಾರವಾಗಿ ಪ್ರಿನ್ಸ್ ಆಫ್ ವೇಲ್ಸ್‌ರವರನ್ನು ಕುರಿತು ಓದಿ ಕೇಳಿಕೊಂಡ ಅಡ್ರೆಸ್ಸಿನ ಮುಖ್ಯ ವಾಕ್ಯವೇನೆಂದರೆ—

"ಘನವೆತ್ತಿರುವ ಸಾರ್ವಭೌಮ ಯುವರಾಜರವರೇ,

"ತಾವು ಈ ಹೊಸ ಕಟ್ಟಡಕ್ಕೆ ಅಸ್ತಿಭಾರಶಿಲೆಯನ್ನು ಹಾಕಿ ಆ ಕಟ್ಟಡದ ವಿಚಾರವಾಗಿ ಕೆಲವು ಅಂಶಗಳನ್ನು ತಮ್ಮ ಸನ್ನಿಧಿಯಲ್ಲಿ ಅರಿಕೆಮಾಡಬೇಕೆಂದು ನನಗೆ ಶ್ರೀಮನ್ಮಹಾರಾಜರವರು ಅಪ್ಪಣೆ ಕೊಡಿಸಿರುತ್ತಾರೆ. ಕೆಲವು ಕೈಗಾರಿಕೆ ಕುಶಲ ವಿದ್ಯೆಗಳಲ್ಲಿ ಹಿಂದೂಸ್ಥಾನದ ಕಸಬುದಾರರು ಪ್ರವೀಣರೆನ್ನಿಸಿಕೊಂಡಿರುತ್ತಾರೆಂಬುದನ್ನು ನಾನು ಇಲ್ಲಿ ಸೂಚಿಸಬೇಕಾದ ಅಗತ್ಯವಿಲ್ಲ. ಅವರು ಎಂಥಾ ಸೂಕ್ಷ್ಮ ಕೆಲಸಗಳನ್ನು ಮಾಡಬಲ್ಲರೋ ಅದನ್ನು ತಾವೇ ಪರಿಷ್ಕಾರವಾಗಿ ತಿಳಿದಿರೋಣವಾಗಿದೆ. ಮೈಸೂರು ಸಂಸ್ಥಾನದಲ್ಲಿ ಮರದಲ್ಲೂ ಗಂಧದಲ್ಲೂ ದಂತದಲ್ಲೂ ಹಿತ್ತಾಳೆಯಿಂದ ನಾನಾ ಪ್ರಶಸ್ತವಾದ ವಸ್ತುವಿಶೇಷಗಳನ್ನು ತಯಾರುಮಾಡುವಂಥ ಚತುರರಾದ ಕಸಬುದಾರರು ಇರುತ್ತಾರೆಂಬುದು ಪ್ರಸಿದ್ಧವಾಗಿ ಇರುವುದು. ಆದರೆ ಈ ನವನಾಗರಿಕ ಕಾಲದಲ್ಲಿ ದಿನಗಟ್ಟಲೆ ಬೇಕಾಗುವ ಸಾಮಾನ್ಯ ಪದಾರ್ಥಗಳನ್ನು ತಯಾರುಮಾಡುವಂಥಾ ಚತುರತೆಯನ್ನು ಸಂಪಾದಿಸಿಕೊಳ್ಳಬೇಕೆಂದು ಅನೇಕಾನೇಕರು ಹಂಬಲಿಸುತ್ತಿದ್ದಾರೆ. ಇಂಥಾ ಕುತೂಹಲವನ್ನು ಸಾರ್ಥಕಪಡಿಸಬೇಕೆಂದು ಸ್ಮೃತಿಯಂತರಾದ ಲೇಟ್ ಶ್ರೀ ಚಾಮರಾಜೇಂದ್ರ ಒಡೆಯರು ಮೈಸೂರು ಪಟ್ಟಣದಲ್ಲಿ ಕಳೆದ ೧೮೯೨ ನೆ ಇಸವಿಯಲ್ಲಿ ಕೈಗಾರಿಕೆ ಪಾಠಶಾಲೆಯನ್ನು ಸ್ಥಾಪನೆಮಾಡಿದರು. ಅಲ್ಲಿಂದೀಚೆ ಈ ವಿದ್ಯಾಶಾಲೆಯು ಅವರ ಹೆಸರನ್ನೇ ಪಡೆದಿರುತ್ತದೆ. ಅಂದಿನಿಂದ ಪಾಠಶಾಲೆಯಲ್ಲಿ ಎಲ್ಲಾ ಜಾತಿಯವರ ಹುಡುಗರಿಗೂ ನಕ್ಷೆ ಬರೆಯುವುದು, ಆಕೃತಿಗಳನ್ನು ಮಾಡುವುದು, ಮರಕೆಲಸ, ಕಬ್ಬಿಣದ ಕೆಲಸ, ಮಣ್ಣಿನಲ್ಲಿ ನಾಜೂಕು ಕೆಲಸಗಳನ್ನು ಮಾಡುವುದು, ಈ ಮೊದಲಾದ ಕಸಬುಗಳನ್ನು ಕಲಿಸಲಾಗಿದೆ. ಮತ್ತು ವಿದ್ಯಾರ್ಥಿಗಳ ಸಂಖ್ಯೆಯು ಇನ್ನೂರಕ್ಕಿಂತಲೂ ಹೆಚ್ಚಾಗಿರುತ್ತದೆ. ಈ ಪಾಠಶಾಲೆಯ ಪ್ರಾರಂಭದಿನದಲ್ಲಿ ಇದರ ಖರ್ಚುಗಳು ಬಹಳ ಸ್ವಲ್ಪವಾಗಿದ್ದು, ಈಗ ೩೩,೦೦೦ ರೂಪಾಯಿಗೆ ಹೆಚ್ಚಿರುವುದು. ಮತ್ತು ಆ ವಿದ್ಯಾರ್ಥಿಗಳು ತಯಾರುಮಾಡುವ ಪದಾರ್ಥಗಳಿಂದ ೧೯,೦೦೦ ರೂಪಾಯಿ ಉತ್ಪತ್ತಿಯಾದೀತೆಂದು ಅಂದಾಜಾಗಿರುತ್ತದೆ. ಮೈಸೂರ್ ಇಂಜಿನಿಯರಿಂಗ್ ಸ್ಕೂಲಿನಲ್ಲಿ ಈಗ ೩೫ ಮಂದಿ ವಿದ್ಯಾರ್ಥಿಗಳಿರುವರು. ಇವರು ಓವರ್‌ಸೀರುಗಳ ವಿದ್ಯೆಯನ್ನು ಕಲಿತು, ಮದರಾಸ್ ಇಂಜಿನಿಯರ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ, ಸಾಮಾನ್ಯ ಕೆಲಸಗಳಿಗೆ ಅನುಕೂಲರಾಗುತ್ತಾರೆ. ಇವೆರಡು ಸ್ಕೂಲುಗಳನ್ನೂ ಇದುವರೆಗೆ ಅನಾನುಕೂಲವಾದ ಬಾಡಿಗೆ ಕಟ್ಟಡಗಳಲ್ಲಿ ಇಟ್ಟು ನಡೆಸುತ್ತಿದ್ದೆವು. ಅಂಥಾ ಅನಾನುಕೂಲಗಳಿದ್ದಾಗ್ಯೂ ಅವೆರಡೂ ದಿನೇ ದಿನೇ ಅಭಿವೃದ್ಧಿ ಹೊಂದುತ್ತ ಬಂದಿರುವವು. ಸದ್ಯದಲ್ಲಿ ಅವೆರಡಕ್ಕೂ ಸಾಕಾಗುವಂಥಾ ವಿಸ್ತಾರವಾದ ಬೇರೆ ಕಟ್ಟಡವೇ ಕಟ್ಟಬೇಕಾಗಿಬಂತು. ಇನ್ನು ಮುಂದೆ "ಶ್ರೀ ಚಾಮರಾಜೇಂದ್ರ ಟೆಕ್ನಿಕಲ್ ಇನ್‌ಸ್ಟಿಟ್ಯೂಟ್" ಎಂಬೀ ಹೆಸರಿನಿಂದ ಕರೆಯಲ್ಪಡುವ ಈ ಒಂದೇ ಕಟ್ಟಡದಲ್ಲಿ ಅವೆರಡು ಪಾಠಶಾಲೆಗಳನ್ನೂ ನಡೆಸುತ್ತಾ ಬರುವೆವು. ಈಗ ಮೈಸೂರು ಪಟ್ಟಣದಲ್ಲಿ ಪ್ರತ್ಯೇಕವಾಗಿರುವ ಗವರ್ನ್‌ಮೆಂಟ್ ಬ್ರಾಂಚ್ ಪ್ರೆಸ್ಸನ್ನೂ ಮುಂದೆ ಇದೇ ಕಟ್ಟಡಕ್ಕೆ ತಂದಿಟ್ಟು, ಆ ಹುಡುಗರಿಗೆ ಅಚ್ಚುಹಾಕುವ ವಿಧಾನವನ್ನೂ ಕಲಿಸುವಂತೆ ಏರ್ಪಾಡು ಮಾಡುತ್ತೇವೆ. ಈ ಕಟ್ಟಡ ತಯಾರಾಗುವುದಕ್ಕೆ ಒಂದು ಲಕ್ಷ ರೂಪಾಯಿಗಿಂತಲೂ ಹೆಚ್ಚಾಗಿಯೇ ಖರ್ಚಾಗುವುದು. ಮೇಲ್ಕಂಡ ಕಸಬುಗಳನ್ನೆಲ್ಲಾ ಕಲಿಸುವುದಕ್ಕೆ ಅನುಕೂಲವಾಗುವಂತೆ ಮೊದಲೇ ದೊಡ್ಡದಾಗಿ ಕಟ್ಟುವೆವು. ಇದುವರೆಗೆ ಈ ಪಾಠಶಾಲೆಗಳ ಅಭಿವೃದ್ಧಿಯು ತೃಪ್ತಿಕರವಾಗಿದೆ ಎಂದು ಕಂಡುಬಂದಿರುವುದರಿಂದ ಇನ್ನು ಮುಂದೆಯೂ ಹೀಗೆಯೇ ವೃದ್ಧಿಹೊಂದುತ್ತಾ ಬಂದಾವೆಂತಲೇ ಶ್ರೀಮನ್ಮಹಾರಾಜರವರ ಗವರ್ನ್‌ಮೆಂಟಿನವರು ನಂಬಿರುವರು."

ಎಂಬೀ ರೀತಿಯಾದ ಅಡ್ರೆಸ್ಸನ್ನು ದಿವಾನರವರು ಓದಿ ತಮ್ಮ ಸ್ಥಾನದಲ್ಲಿ ಕುಳಿತುಕೊಂಡರು.

ಶ್ರೀಮನ್ಮಹಾರಾಜರವರ ಭಾಷಣ.

ತರುವಾಯ ಶ್ರೀಮನ್ಮಹಾರಾಜರವರು ತಮ್ಮ ಶ್ರೀಸ್ಥಾನದಿಂದೆದ್ದು, ಪ್ರಿನ್ಸ್ ಆಫ್ ವೇಲ್ಸ್‌ರವರನ್ನು ಕುರಿತು ಹೇಳಿದ್ದೇನೆಂದರೆ—

"ಚಾಮರಾಜೇಂದ್ರ ಟೆಕ್ನಿಕಲ್ ಇನ್‌ಸ್ಟಿಟ್ಯೂಟ್ ಎಂಬೀ ಕಟ್ಟಡದ ಮೇಲೆ ತಾವು ಕೃಪಾಕಟಾಕ್ಷವನ್ನಿಟ್ಟು, ಇದಕ್ಕೆ ತಮ್ಮ ಹಸ್ತದಿಂದ ಅಸ್ತಿಭಾರಶಿಲೆಯನ್ನು ಹಾಕಿ ಪ್ರತಿಷ್ಠೆಮಾಡಬೇಕೆಂದು ನಾನು ತಮ್ಮನ್ನು ಬೇಡಿಕೊಳ್ಳುತ್ತೇನೆ. ತಾವೂ ತಮ್ಮ ಪತ್ನಿಯವರೂ ಈ ಶುಭಕಾರ್ಯದಲ್ಲಿ ಸಹಭಾಗಿಗಳಾಗಿದ್ದೀರೆಂಬ ವಿಷಯವು ಈ ಪಾಠಶಾಲೆಗೆ ಸಂಬಂಧಪಟ್ಟವರೆಲ್ಲರಿಗೂ ಸರ್ವಕಾಲವೂ ಬಹುವಿಶೇಷವಾದ ಪ್ರೋತ್ಸಾಹವನ್ನುಂಟುಮಾಡುತ್ತಿರುವುದು. ಈ ಅವಸರದಲ್ಲಿ ಏಳುವ ಕಟ್ಟಡವು ತಾವು ಮೈಸೂರಿಗೆ ಚಿತ್ತೈಸಿದ್ದಿರೆಂಬುದನ್ನು ಯಾವಾಗಲೂ ಜ್ಞಾಪಕಪಡಿಸುವಂಥಾದ್ದಾಗಿರುವುದು ಮತ್ತು ತಾವು ನನ್ನನ್ನೂ ನನ್ನ ಸಂಸ್ಥಾನವನ್ನೂ ಸನ್ಮಾನಿಸಿದಂತೆ ಭಾವಿಸುತ್ತೇನೆ." ಎಂಬುದಾಗಿ ಹೇಳಿ, ಶ್ರೀಮನ್ಮಹಾರಾಜರವರು ಸ್ವಲ್ಪ ಹೊತ್ತು ಹಾಗೆ ನಿಂತುಕೊಂಡಿರಲು

ಪ್ರಿನ್ಸ್ ಆಫ್ ವೇಲ್ಸ್‌ರವರು

ಪ್ರತ್ಯುತ್ತರವನ್ನಿತ್ತು ಅಪ್ಪಣೆ ಕೊಡಿಸಿದ್ದೇನೆಂದರೆ—

ಘನವೆತ್ತಿರುವ ಮಹಾರಾಜರವರೇ,

"ಇಂಥಾ ಕೈಗಾರಿಕೆ ವಿಷಯವಾದ ಪ್ರದರ್ಶನಶಾಲೆಯ ಕಾರ್ಯದಲ್ಲಿ ಸೇರಬೇಕಾದವನೆಂದು ಬಹಳ ಸಂತೋಷಪಡು... ಕಸಬುದಾರರ ಮೇಲೂ ಕೆಲಸ... ಹಿಂದುಸ್ಥಾನದ ಕಸಬುದಾರರ ಮೇಲೂ ನನಗಿರುವ ಆಸಕ್ತಿಯನ್ನು ಪ್ರಕಾಶಪಡಿಸುವುದಕ್ಕೆ ಒಳ್ಳೇ ... ನಾನೂ ನನ್ನ ಪತ್ನಿಯೂ ಇದುವರೆಗೆ ಈ ... ದೇಶದಲ್ಲಿ ಸಂಚಾರಮಾಡಿದ... ಹಿಂದುಸ್ಥಾನದ ಕಾರ್ಖಾನೆಗಳಿಂದ ತಯಾರಾದ ನಾನಾ ವಸ್ತುಗಳನ್ನು ನೋಡಿ ಬಹಳ ಸಂತೋಷಪಟ್ಟಿರುವೆವು. ... ಹಿಂದುಸ್ಥಾನದ ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸತಕ್ಕ ... ಕಾರ್ಯ ... ಅದೂ ಇಲ್ಲಿನ ಕಸಬುದಾರರ ಸ್ಥಿತಿ ... ತರತಕ್ಕಂಥಾ ಯಾವ ಕಾರ್ಯವನ್ನಾಗಲಿ ಪ್ರೋತ್ಸಾಹಿಸುವುದನ್ನು ನಾನು ಮನಃಪೂರ್ವಕವಾಗಿ ಒಪ್ಪುವೆನು. ನಾವು ಕಸಬುದಾರರನ್ನು ನೋಡಲಿಲ್ಲ. ಅವರಿಂದ ತಯಾರಾದ ನಾನಾ ವಸ್ತುಗಳನ್ನು ನೋಡಿದ್ದೇವೆ. ಹಿಂದುಸ್ಥಾನದ ಪ್ರಜಾಕೋಟಿ ... ಈ ಕಸಬುದಾರರಿಗೆ ಪ್ರೋತ್ಸಾಹಕವಾಗುವುದು ಅಗತ್ಯವಾಗಿರುತ್ತದೆ. ಇದು ಆವಶ್ಯಕವೆನ್ನುವುದಕ್ಕೆ ಸಂಶಯ ... ಇಂಥಾ ಕಾರ್ಯದಲ್ಲಿ ನಾನು ಪರಮ ಸಂತೋಷದಿಂದ ಸಹಾಯ ಮಾಡಿರುವೆನು"

...ದಿಯಾಗಿ ಅಪ್ಪಣೆ ಕೊಡಿಸಿ, ಶ್ರೀಮನ್ಮಹಾರಾಜರವರ ... ಅಂಗೀಕರಿಸಿ, ...ದಿಂದ ಆ ಪ್ರದರ್ಶನಶಾಲೆಯ ಪ್ರತಿಷ್ಠೆ ಮಾಡಿದರು.

ಡಿನ್ನರ್ ಔತಣವಾದ ಮೇಲೆ
ಶ್ರೀಮನ್ಮಹಾರಾಜರವರು ಮಾಡಿದ ಭಾಷಣ.

ಕಳೆದ ೩೦ನೆ ತಾ ಮಂಗಳವಾರ ರಾತ್ರಿ ಶ್ರೀಮನ್ಮಹಾರಾಜರವರು ಪ್ರಿನ್ಸ್ ಆಫ್ ವೇಲ್ಸ್ ದಂಪತಿಗಳಿಗೆ ಗವರ್ನಮೆಂಟ್ ಹೌಸಿನಲ್ಲಿ ದೊಡ್ಡದಾದ ಔತಣವನ್ನು ಮಾಡಿದರು. ಆಗ್ಗೆ ಪ್ರಿನ್ಸ್ ಆಫ್ ವೇಲ್ಸ್ ದಂಪತಿಗಳ ಜತೆಯಲ್ಲಿ ಸುಮಾರು ೧೧೦ ಮಂದಿ ... ಭೋಜನ ಮಾಡಿದರು. ಊಟವಾದ ಮೇಲೆ ಶ್ರೀಮನ್ಮಹಾರಾಜರವರೂ ಯುವರಾಜರವರೂ ಹಲವು ... ಕೌನ್ಸಿಲ್ ಮೆಂಬರುಗಳೂ ... ಆಗ ಶ್ರೀಮನ್ಮಹಾರಾಜರವರು ಪ್ರಿನ್ಸ್ ಆಫ್ ವೇಲ್ಸ್ ದಂಪತಿಗಳನ್ನು ಕುರಿತು ಹೇಳಿದ್ದೇನೆಂದರೆ—

ಘನವೆತ್ತಿರುವ ... ಯುವರಾಜರವರೇ,

"ತಮ್ಮಗಳನ್ನು ನಮ್ಮ ರಾಜಧಾನಿಗೂ ನಮ್ಮ ಸಂಸ್ಥಾನಕ್ಕೂ ... ತಮಗೆ ಸುಸ್ವಾಗತವನ್ನು ಕೊಟ್ಟು ಸತ್ಕರಿಸಬೇಕೆಂಬ ಅಪೇಕ್ಷೆಯು ನನಗೂ ನನ್ನ ಪ್ರಜೆಗಳಿಗೂ ಅಪಾರವಾಗಿದ್ದಿತು. ಈ ಕೋರಿಕೆಯನ್ನು ತಾವುಗಳು ಕೃಪೆಯಿಟ್ಟು ನೆರವೇರಿಸಿಕೊಟ್ಟದ್ದಕ್ಕಾಗಿ ನಮ್ಮ ಕೃತಜ್ಞತೆಯೂ ಸಂತೋಷವೂ ಅಷ್ಟಿಷ್ಟೆಂದು ಹೇಳಲಾರೆವು. ತಮ್ಮ ಹಾಗೆ ತಮ್ಮ ತಂದೆಯವರು ಪ್ರಿನ್ಸ್ ಆಫ್ ವೇಲ್ಸ್‌ರವರಾಗಿದ್ದು ಹಿಂದುಸ್ಥಾನದಲ್ಲಿ ಸಂಚಾರ ಮಾಡಿದಾಗ್ಗೆ ಅವರನ್ನು ಸತ್ಕರಿಸುವಂಥಾ ಭಾಗ್ಯವು ದುರದೃಷ್ಟವಶಾತ್ ನನ್ನ ಸಂಸ್ಥಾನಕ್ಕೆ ಲಭ್ಯವಾಗದೆ ಹೋಯಿತು. ಮೂವತ್ತು ವರುಷಗಳ ಹಿಂದೆ ದೊರಕದೆ ಹೋದಂಥಾ ಭಾಗ್ಯವು ಈ ದಿನ ತಮ್ಮಗಳ ಸಂದರ್ಶನದಿಂದ ಲಭ್ಯವಾಗಿ, ಆ ಮನೋವ್ಯಥೆಯು ನಿವಾರಣವಾಗಿರುತ್ತದೆ. ಈ ದೇಶದಲ್ಲಿ ಇಂಗ್ಲಿಷ್ ಪ್ರಭುತ್ವವು ಸ್ಥಿರವಾಗಿ ಬೇರೂರುವುದಕ್ಕೆ ಮೈಸೂರಿನಲ್ಲಿ ಹಿಂದೆ ನಡೆದಿರುವ ಚರಿತ್ರಾರ್ಹ ಕಾರ್ಯಗಳು ಬಹಳ ಸಹಾಯಭೂತಗಳಾಗಿದ್ದುವು. ಡ್ಯೂಕ್ ಆಫ್ ವೆಲ್ಲಿಂಗ್‌ಟನ್‌ರವರು ಯುದ್ಧಕಾರ್ಯಗಳಲ್ಲಿ ಮೊದಲು ಖ್ಯಾತಿ ಪಡೆದದ್ದು ಮೈಸೂರಿನಲ್ಲೇ. ಮೈಸೂರಿನ ಕುಮ್ಮಕ್ ಸೈನ್ಯ ಮೈಸೂರಿನ ಟ್ರಾನ್ಸ್‌ಪೋರ್ಟ್ ಕೆಲಸದಿಂದಲೂ ಅವರ ಜಯಪ್ರಾಪ್ತಿಗೆ ಬಹಳ ಸಹಾಯ ಮಾಡಿರುತ್ತವೆ. ಈ ರಾಷ್ಟ್ರದಲ್ಲಿ ಬ್ರಿಟಿಷ್ ದೌಲತ್ತನ್ನು ಸ್ಥಿರವಾಗಿ ನಿಲ್ಲಿಸುವ ಭಾಗದಲ್ಲಿ ನಮ್ಮ ಸಂಸ್ಥಾನ ... ಸಾಹಸ ಪಟ್ಟಿರುವರು. ಈ ಸಾಯಂಕಾಲ ಶ್ರೀರಂಗಪಟ್ಟಣದಲ್ಲಿ ತಾವುಗಳು ನಡೆದ ... ಕೋಟೆಕೊತ್ತಲಗಳಲ್ಲೂ ಯುದ್ಧಭೂಮಿಗಳಲ್ಲೂ ಮಹಾ ... ಕದನಗಳು ನಡೆದಿರುತ್ತವೆ. ಈ ಯುದ್ಧಗಳಲ್ಲಿ ನಮ್ಮ ಸೈನಿಕರ ಶೌರ್ಯವೂ ಸಾಮರ್ಥ್ಯವೂ ಪ್ರಕಾಶವಾಗಿರುವುವು. ... ಹಿಂದೆಯೂ ಮುಂದೆಯೂ ... ಸೈನಿಕರು ಶ್ರೀರಂಗಪಟ್ಟಣದಲ್ಲೂ ದಕ್ಷಿಣ ದೇಶದಲ್ಲೂ ಯುದ್ಧಮಾಡಿದ ಸೈನಿಕರ ವಂಶಸ್ಥರೇ ಆಗಿರುವರು. ನಮ್ಮ ... ಇಂಪೀರಿಯಲ್ ಸರ್ವಿಸ್ ಸೈನ್ಯವು ಬಹಳ ಚನ್ನಾಗಿ ತರಬೇತಾಗಿದ್ದು ... ಯುದ್ಧಭೂಮಿಯಲ್ಲಿ ತನ್ನ ಪರಾಕ್ರಮವನ್ನು ತೋರಿಸಬೇಕೆಂದು ಕಾತರಪಡುತ್ತಿದೆ. ಅವಶ್ಯಬಿದ್ದಾಗ ಸಂಸ್ಥಾನದ ಸೈನ್ಯವನ್ನು ಕಳುಹಿಸಿಕೊಳ್ಳಬೇಕೆಂಬುದಾಗಿ ಘನವೆತ್ತ ತಮ್ಮ ತಂದೆಯವರಿಗೆ ಅರಿಕೆಮಾಡಬೇಕೆಂದು ತಮ್ಮನ್ನು ಕೇಳಿಕೊಳ್ಳುತ್ತೇನೆ. ಸುಮಾರು ಎಂಟು ವರುಷಗಳಿಂದಲೂ ಹಿಂದುಸ್ಥಾನದಲ್ಲಿ ಪ್ಲೇಗು ಹಾಗೆ ಮೈಸೂರು ಸಂಸ್ಥಾನದಲ್ಲೂ ಪ್ಲೇಗ್ ರೋಗ ಪ್ರಬಲವಾಗಿ ಅನೇಕ ಪ್ರಜೆಗಳಿಗೆ ದುಃಖ ಕಷ್ಟ ನಷ್ಟಗಳುಂಟುಮಾಡುತ್ತಿದೆ. ಅದನ್ನು ಪರಿಹರಿಸಿಕೊಳ್ಳುವುದಕ್ಕೆ ನನ್ನ ಗವರ್ನಮೆಂಟಿನವರೂ ಮಾಡುತ್ತಿರುವ ಸಾಧನಕಾರ್ಯಗಳು ... ಹೇಳಬೇಕಾಗಿದೆ. ಆದರೂ ಕೆಲವು ... ಈ ಉಪದ್ರವದ ಹಾವಳಿಯು ತಕ್ಕಮಟ್ಟಿಗೆ ಕಡಿಮೆಯಾಗುತ್ತಿರುವುದನ್ನು ನೋಡಿ, ಇದರಿಂದ ತಮ್ಮ ಭೇಟಿಯಾದ ಈ ಸುವತ್ಸರವು ಸ್ಮರಣೀಯವಾಗಿದ್ದೀತೆನ್ನುವುದಕ್ಕೆ ಸಂಶಯವಿಲ್ಲ. ಸಾರ್ವಭೌಮರಾದ ತಮ್ಮ ತಂದೆಯವರು ತಮ್ಮನ್ನು ನಮ್ಮ ಸಂಸ್ಥಾನಕ್ಕೆ ಕಳುಹಿಸಿಕೊಟ್ಟದ್ದಕ್ಕಾಗಿ ನಾನೂ ನನ್ನ ಪ್ರಜೆಗಳೂ ಅವರಿಗೆ ತುಂಬಾ ಕೃತಜ್ಞರಾಗಿರುತ್ತೇವೆ. ನಾನೂ ನನ್ನ ಪ್ರಜೆಗಳೂ ಪ್ರಭುಗಳ ವಿಷಯದಲ್ಲೂ ಅವರ ದೌಲತ್ತಿನ ವಿಷಯದಲ್ಲೂ ಮನಃಪೂರ್ವಕವಾದ ಭಕ್ತಿಪ್ರೀತಿಗಳನ್ನು ಪಡೆದಿರುತ್ತೇವೆ. ತಾವು ಈ ವಿಚಾರವನ್ನು ಕೃಪೆಯಿಟ್ಟು ತಮ್ಮ ತಂದೆಯವರಿಗೆ ಅರಿಕೆಮಾಡಬೇಕೆಂದು ತಮ್ಮನ್ನು ಕೇಳಿಕೊಳ್ಳುವೆನು. ದೇವರು ತಮಗೂ ತಮ್ಮ ಪತ್ನಿಯರಿಗೂ ದೀರ್ಘವಾದ ಆಯುರಾರೋಗ್ಯಾದಿಗಳನ್ನು ದಯಪಾಲಿಸುತ್ತಾ ಬರಲಿ" ಎಂಬುದಾಗಿ ಹೇಳಿದರು.

ಪ್ರಿನ್ಸ್ ಆಫ್ ವೇಲ್ಸ್‌ರವರ ಉತ್ತರ.

ತರುವಾಯ ಪ್ರಿನ್ಸ್ ಆಫ್ ವೇಲ್ಸ್‌ರವರು ಶ್ರೀಮನ್ಮಹಾರಾಜರವರನ್ನು ವಂದಿಸಿ, ಅಪ್ಪಣೆ ಕೊಡಿಸಿದ್ದೇನೆಂದರೆ—

"ಘನವೆತ್ತಿರುವ ಮಹಾರಾಜರವರೇ,

ಕಳೆದ ೧೮೭೫ ನೆ ಇಸವಿಯಲ್ಲಿ ನಮ್ಮ ಪ್ರಿಯ ತಂದೆಯವರು ಈ ಸಂಸ್ಥಾನಕ್ಕೆ ದಯಮಾಡಲಾಗದೆ ಹೋದದ್ದು ತುಂಬಾ ವಿಷಾದಕರವಾಗಿರುತ್ತದೆ. ನಾವು ಇಲ್ಲಿಗೆ ಬಂದು ನಿಮ್ಮ ಪರಿಚಯ ಮಾಡಿಕೊಳ್ಳುವುದಕ್ಕೆ ಅನುಕೂಲವಾಯಿತಲ್ಲಾ ಎಂದು ಸಂತೋಷಪಡುವೆವು. ಈ ಸಂಸ್ಥಾನದಲ್ಲಿ ನಡೆದಿರುವ ವಿಷಯಗಳು ಹಿಂದುಸ್ಥಾನಕ್ಕೆಲ್ಲಾ ಪ್ರಸಿದ್ಧಗಳಾಗಿರುವುವು. ನಿಮ್ಮ ಆಳಿಕೆಯ ಪ್ರಾರಂಭದಲ್ಲೇ ನಾವು ಈ ಸಂಸ್ಥಾನಕ್ಕೆ ಬಂದು ಇಲ್ಲಿನ ಸಂಗತಿಗಳನ್ನು ನೋಡಿ ತಿಳಿಯುವಂತಾದದ್ದು ತುಂಬಾ ಸಂತೋಷ. ಹಿಂದುಸ್ಥಾನದ ಅರಸರ ವಿಷಯದಲ್ಲಿ ಲೇಟ್ ಚಕ್ರವರ್ತಿನಿಯವರಿಗೂ ಈಗಿನ ಚಕ್ರವರ್ತಿಯವರಿಗೂ ಇರುವ ಪ್ರೀತಿವಿಶ್ವಾಸಗಳನ್ನು ಕುರಿತು ನಾನು ವಿಶೇಷವಾಗಿ ಪ್ರಸ್ತಾಪ ಮಾಡಬೇಕಾದದ್ದೇನೂ ಇಲ್ಲ. ಈ ರಾಷ್ಟ್ರದಲ್ಲಿ ಇದುವರೆಗೆ ನಾನು ನೋಡಿರತಕ್ಕ ಅರಸುಗಳೆಲ್ಲಾ ನಿಮ್ಮಂತೆಯೇ ಚಕ್ರವರ್ತಿಸಾರ್ವಭೌಮರ ದೌಲತ್ತಿನ ವಿಷಯದಲ್ಲಿ ಹಿತವಾದ ಭಕ್ತಿಪ್ರೀತಿಗಳನ್ನು ಪಡೆದಿರುತ್ತಾರೆ. ಬ್ರಿಟಿಷ್ ಗವರ್ನಮೆಂಟಿನವರು ಈ ಸಂಸ್ಥಾನವನ್ನು ೫೦ ವರುಷಗಳ ಕಾಲ ಆಳಿ, ಕಳೆದ ೧೮೮೧ ನೆ ಇಸವಿಯಲ್ಲಿ ನಿಮ್ಮ ತಂದೆಯವರಿಗೆ ಸಂಸ್ಥಾನದ ದೌಲತ್ತನ್ನು ವಹಿಸಿಕೊಟ್ಟರು. ಅವರ ಆಸ್ತಿಕೆಯ ಫಲವಿಶೇಷಕ್ಕೆ ಈಗ ನಿಮ್ಮ ದೊರೆತನದಲ್ಲಿ ಈ ಸಂಸ್ಥಾನದ ಪ್ರಜೆಗಳು ತೃಪ್ತಿಪಟ್ಟು ಅಭಿವೃದ್ಧಿಹೊಂದುತ್ತಿರುವುದೇ ಸಾಕ್ಷಿಯಾಗಿರುತ್ತವೆ. ಮರಮ್ಮತ್ತು, ನೀರಾವರಿ ಕಾಮಗಾರಿಗಳನ್ನೂ ಕಾವೇರಿ ವಿದ್ಯುಚ್ಛಕ್ತಿಯ ಕಾರ್ಖಾನೆಯನ್ನೂ ಇನ್ನೂ ಅನೇಕ ವಿಧ ಪ್ರಯೋಜಕಕಾರ್ಯಗಳನ್ನೂ ನಿಮ್ಮ ಸಂಸ್ಥಾನದಲ್ಲಿ ನಡಸುತ್ತಾ ಬಂದಿರುವುದು ಸರ್ವತ್ರಾ ಶ್ಲಾಘನೀಯವಾಗಿರುವುದು. ಸುಪ್ರಸಿದ್ಧರಾದ ವಿವೇಕಶಾಲಿಗಳೂ ಆದ ನಿಮ್ಮಂಥಾ ರಾಜ್ಯಭಾರನಿರ್ವಾಹಕ ರಾಜರನ್ನೂ ಲೇಟ್ ಸರ್ ಶೇಷಾದ್ರಿ ಐಯ್ಯರವರಂಥಾ ರಾಜ್ಯಧುರಂಧರರ ಸಹಾಯವನ್ನೂ ಪಡೆದಿರುವಲ್ಲಿ ಮೈಸೂರು ಸಂಸ್ಥಾನವು ಇನ್ನೂ ಬೇಗ ಬೇಗನೆ ಅಭಿವೃದ್ಧಿಹೊಂದೀತೆಂದು ನಿರೀಕ್ಷಿಸುವುದಕ್ಕೆ ಕಾರಣವಿರುತ್ತದೆ. ನೆನ್ನೆಯ ದಿವಸ ನನಗೆ ಎಸ್ಕಾರ್ಟಾಗಿ ಬಂದಿದ್ದ ಇಂಪೀರಿಯಲ್ ಸರ್ವಿಸ್ ಸೈನಿಕರು ಶ್ರೀರಂಗಪಟ್ಟಣದ ಯುದ್ಧದಲ್ಲೂ ದಕ್ಷಿಣದೇಶದಲ್ಲಿ ನಡೆದ ಕದನಗಳಲ್ಲೂ ನಿಂತು ಹೋರಾಡಿದವರ ವಂಶಕರೆಂದು ತಾವು ಹೇಳಿದ್ದನ್ನು ಕೇಳಿದಾಗ ನನಗೆ ತುಂಬಾ ಸಂತೋಷವಾಯಿತು. ಈ ಕುದುರೆ ಸವಾರರು ಬಹಳ ಚನ್ನಾಗಿ ತರಬೇತಾಗಿರುತ್ತಾರೆಂಬುದು ಅವರನ್ನು ನೋಡಿದ್ದರಲ್ಲೇ ಗೊತ್ತಾಗಿದೆ. ಇದಲ್ಲದೆ ನಿಮ್ಮ ಸಂಸ್ಥಾನದ ಟ್ರಾನ್ಸ್‌ಪೋರ್ಟ್ ಕೋರ್ ಎಂಬ ಸೈನ್ಯವಿಭಾಗವೂ ಒಳ್ಳೇ ಕ್ರಮದಲ್ಲಿದೆ ಎಂದು ಕೇಳುತ್ತೇನೆ. ನಿಮ್ಮ ಸಂಸ್ಥಾನವೂ ಹಿಂದುಸ್ಥಾನದ ಇತರ ಭಾಗಗಳಂತೆ ಪ್ಲೇಗ್ ಉಪದ್ರವಕ್ಕೆ ಸಿಕ್ಕಿ ನರಳುತ್ತಿರುವುದು ದುಃಖಕರವಾಗಿರುತ್ತದೆ. ಆದರೂ ಅದು ಈಗೀಗ ಕಡಿಮೆಯಾಗುತ್ತಾ ಬಂದಿದೆ ಎಂದು ಕೇಳಿ ಸಂತೋಷಪಟ್ಟು, ಜಗನ್ನಿಯಾಮಕನ ಕೃಪಾಕಟಾಕ್ಷದಿಂದ ಮೈಸೂರು ಸಂಸ್ಥಾನವು ಯಾವಾಗ್ಗೂ ಸುಖಸಂತೋಷಪರಿಪೂರ್ಣವೃದ್ಧಿಗಳಿಂದ ಕೂಡಿ ಮೆರೆಯಲೆಂದು ಹಾರೈಸುತ್ತೇನೆ."

ಎಂಬುದಾಗಿ ಅಪ್ಪಣೆ ಕೊಡಿಸಿ ಕುಳಿತುಕೊಂಡರು. ತರುವಾಯ ಪ್ರಿನ್ಸ್ ಆಫ್ ವೇಲ್ಸ್ ದಂಪತಿಗಳೂ ಇತರ ಯೂರೋಪ್ಯರ ಅತಿಥಿಗಳೂ ಶ್ರೀಮನ್ಮಹಾರಾಜರವರೇ ಮೊದಲಾದವರೂ ಬಿಸಿಲು ಮಾಳಿಗೆಗೆ ದಯಮಾಡಿ, ಬಾಣಬಿರುಸುಗಳ ನೋಟವನ್ನು ಪರಾಂಬರಿಸಿ, ಪರಮ ಸಂತೋಷಯುಕ್ತರಾದರು.

ತಾಲ್ಲೋಕು ವರ್ತಮಾನಗಳು.

ದೊಡ್ಡಸಿರಾ.—ಇಲ್ಲಿ ಧಾರಣೆವಾಸಿ ಚವಾಪಾಗಿಯೇ ಇದೆ. ಹೋದ ವರುಷ ಮಳೆ ಬಹಳ ಕಡಿಮೆಯಾದ್ದರಿಂದ ಕೆರೆಗಳಿಗೆ ನೀರು ಬಾರದೆ, ಗದ್ದೆ ಫಸಲು ಇಲ್ಲವೇ ಇಲ್ಲ. ಖುಷ್ಕಿ ಫಸಲು ನಾಲ್ಕರಲ್ಲಿ ಒಂದು ಭಾಗ ಆಗಿರಬಹುದು. ರೈತರು ದನಕರುಗಳನ್ನು ಸಾಕುವುದು ಕಷ್ಟ. ಈಗಲೇ ಕೆಲವು ಕಡೆ ಕುಡಿಯುವದಕ್ಕೆ ನೀರಿಲ್ಲ. ದೇವರು ಕಾಪಾಡಬೇಕಾಗಿದೆ. ಈ ಕಾಲದಲ್ಲಿ ಮೋಡ ಕಾಣಿಸುತ್ತಾ, ಒಂದೆರಡು ದಿನ ಕೆಲವು ಹನಿಗಳು ಸಹ ಬಿದ್ದವು. ಈಗ ಇಲ್ಲಿನ ಅಮಲ್ದಾರರಾದ ಮೆ|| ವೆಂಕಟರಮಣಯ್ಯ ಯವರು ಬಡವರ ಕಷ್ಟವನ್ನು ನೋಡಿ, ತಾವೇ ಖುದ್ದಾಗಿ ಇಲ್ಲಿನ ಸಂತೆಗೆ ಹೋಗಿ, ದಲ್ಲಾಳಿಗಳಿಗೆ ಧಾರಣೆ ಇಳಿಸಿ ಮಾರುವಂತೆ ಅದಕ್ಕೆ ತಕ್ಕ ಏರ್ಪಾಡು ಮಾಡಿದರು. ಇದಲ್ಲದೆ ಸುತ್ತಲೂ ಇರುವ ಕಳ್ಳರನ್ನು ಹಿಡಿಸಿ, ಪಕ್ಷಪಾತವಿಲ್ಲದೆ ತಕ್ಕ ಶಿಕ್ಷೆಮಾಡಿ, ಕ್ರಮಕ್ಕೆ ತಂದರು. ಅಂತು ಇವರು ಪ್ರಜೆಗಳಿಗೆ ತುಂಬಾ ಸಹಾಯಕರಾಗಿದ್ದಾರೆ.—ಇಲ್ಲಿಗೆ ಸುಮಾರು ೯ ಮೈಲಿ ದೂರದಲ್ಲಿರುವ ದೊಡ್ಡ ಅಗ್ರಹಾರದಲ್ಲಿರುವ ಪಟೇಲ್ ಅಪ್ಪಣ್ಣೇಗೌಡರ ಮಗಳಿಗೆ ಮದುವೆ ಆಯಿತು. ಆ ಕಾಲದಲ್ಲಿ ಮಹಿಮಾನ್ವಿತರಾದ ಆ ಗೌಡರು ತಾಲ್ಲೂಕಿನಲ್ಲಿರುವ ಸರ್ಕಾರಿ ಅಧಿಕಾರಿಗಳೆಲ್ಲರನ್ನೂ ತಮ್ಮ ಊರಿಗೆ ಕರಸಿ ಸುಭೋಜನವನ್ನು ಮಾಡಿಸಿ, ಅನೇಕ ಬಡ ಜನಾಸರಿಗೂ ಬಡವರಿಗೂ ಉಡುಪುಗಳನ್ನು ಧರ್ಮಾರ್ಥವಾಗಿ ಕೊಟ್ಟು ಕಳುಹಿಸಿದರು. ಈ ಕ್ಷಾಮ ಕಾಲದಲ್ಲಿ ವಿಶೇಷ ಖರ್ಚುಮಾಡಿ, ಬಡಜನಗಳನ್ನು ಸಾಕುವ ಈ ಗೌಡರನ್ನು ದೇವರು ಇನ್ನೂ ಹೆಚ್ಚಾಗಿ ಆಶೀರ್ವದಿಸಲೆಂದು ಕೋರುತ್ತೇನೆ.

ಚನ್ನಪಟ್ಣ.—ಇಲ್ಲಿ ಬಿಸಿಲು ಮಹಾ ತೀಕ್ಷ್ಣವಾಗಿರುತ್ತದೆ. ಮಳೆಯ ಮೋಡಗಳು ಆಡುವದನ್ನು ನೋಡಿ, ಜನರು ಕೌತುಕಪಡುತ್ತಿದ್ದಾರೆ. ಕೆರೆಯಲ್ಲಿ ನೀರಿಲ್ಲದೆ ಜನರು ಪಡುವ ಭಂಗವನ್ನು ವಿವರಿಸಲಾಗದು.—ಈ ಊರಿನಿಂದ ಸಾವಿರಾರು ಜನರು ಪ್ರಿನ್ಸ್ ಆಫ್ ವೇಲ್ಸ್‌ರವರ ದರ್ಶನಾರ್ಥವಾಗಿ ಮೈಸೂರಿಗೆ ಹೋಗಿರುವದರಿಂದ ಈ ಊರು ಪ್ಲೇಗ್ ಸಮಯದಲ್ಲಿ ಜನರಿಂದ ತಿರಸ್ಕರಿಸಲ್ಪಟ್ಟ ಪಟ್ಟಣವೋ ಎಂಬಂತೆ ನಿರ್ಜನವಾಗಿ ತೋರುತ್ತದೆ. ಬೆಂಗಳೂರಿನಿಂದ ಮೈಸೂರಿಗೆ ಅಹೋರಾತ್ರಿಗಳಲ್ಲಿಯೂ ೮—೧೦ ರೈಲ್ ಗಾಡಿಗಳು ಸಂಚರಿಸುತ್ತಾ ಇವೆ. ಸಾವಿರಾರು ಜನರು ಪ್ರಯಾಣ ಮಾಡುವದರಿಂದ ಗಾಡಿಗಳಲ್ಲಿಯೂ ಮಾರ್ಗದಲ್ಲಿಯೂ ಸ್ಥಳ ಸಾಲದೆ ಇಂಜನ್ ಗಾಡಿಯ ಮೇಲೂ ಜನಗಳನ್ನು ಕೂಡಿಸಿಕೊಂಡು ಹೋಗುತ್ತಿರುವರು. ಈ ಸ್ಟೇಷನ್ನಿನಲ್ಲಿ ದಸರಾ ಕಾಲದಲ್ಲಿ ದಿನಕ್ಕೆ ೫೦ ರೂ. ಟಿಕೆಟ್ ಹುಟ್ಟುವಳಿಯು ಬಹಳ ದುಸ್ತರವಾಗಿತ್ತು. ಈಗಲಾದರೋ ದಿನಕ್ಕೆ ೬೦೦—೩೦೦ ರೂಪಾಯಿವರೆಗೂ ಹುಟ್ಟುವಳಿಯಾಗುತ್ತದೆ ಎಂಬದಾಗಿ ತಿಳಿದು ಬಂದಿದೆ. ಹಿಂದೆ ಯಾವ ಸಂದರ್ಭದಲ್ಲಿಯೂ ಇಷ್ಟೊಂದು ಜನರು ಸಂಸ್ಥಾನದಲ್ಲಿ ಸೇರಿರಬಾರದೆಂದು ತೋರುತ್ತೆ.—ಇದೇ ಜನವರಿ ತಾ. ೨೭ ನೇ ಶನಿವಾರದ ವೇಳೆಗೆ ಇಲ್ಲಿ ಹೊಸದಾಗಿ ಕಟ್ಟಿಸಿರುವ ಜನಾನಾ ಮಿಷನ್ ಆಸ್ಪತ್ರೆಯನ್ನು ಪ್ರತಿಷ್ಠಿಸಿದರು. ಬೆಂಗಳೂರಿನಿಂದ ರೆವ. ಫರ್ಸಿಂಗರವರೂ, ೪—೫ ಮಂದಿ ಯೂರೋಪ್ಯರ ಲೇಡಿಗಳೂ ಬಂದಿದ್ದರು. ಈ ಊರಿನ ದೊಡ್ಡ ಮನುಷ್ಯರು ಜಮೀನುದಾರರೇ ಮೊದಲಾದ ನೂರಾರು ಮಂದಿ ಸಭೆ ಸೇರಿದ್ದರು. ಮೊದಲು ದೇವತಾ ಪ್ರಾರ್ಥನೆಮಾಡಿ, ಸತ್ಯವೇದದ ಕೆಲವು ವಾಕ್ಯಗಳನ್ನು (ಮಾ ಕೇ ೧೦೩: ೧—೫) ಓದಲಾಯಿತು. ಅನಂತರ ಡಾಕ್ಟರ್ ಕೆಲ್ಲಿಂಗ್‌ಸ್ಟರ್ ಮಿಸ್ಸಿಯಮ್ಮನವರು ಇಂಗ್ಲಿಷಿನಲ್ಲಿ ಸದರಿ ಆಸ್ಪತ್ರೆಯ ಉದ್ದೇಶವನ್ನೂ ಅದರಿಂದ ಜನಗಳಿಗೆ ಉಂಟಾಗುವ ಸೌಲಭ್ಯಗಳನ್ನೂ ವಿವರಿಸಿ, ಯಾವ ಪಂಗಡದ ಹೆಂಗುಸರಿಗಾದರೂ ಈ ಆಸ್ಪತ್ರೆಯು ಹಗಲೂ ರಾತ್ರಿಯೂ ತೆರೆದಿಟ್ಟಿರುತ್ತದೆ ಎಂಬದಾಗಿ ತಿಳಿಸಿದರು. ತರುವಾಯ ರೆವ. ಫರ್ಸಿಂಗರವರು ಹಿಂದುಸ್ಥಾನಿ ಭಾಷೆಯಲ್ಲಿ ಸಂಕ್ಷೇಪವಾಗಿ ಉಪನ್ಯಾಸಮಾಡಿ, ದೇವತಾಪ್ರಾರ್ಥನೆಯೊಂದಿಗೆ ಸಭೆಯನ್ನು ಮುಗಿಸಿದರು. ಹಾಜರಾಗಿದ್ದ ಸಭಿಕರಿಗೆ ಪುಷ್ಪ, ಗಂಧ, ತಾಂಬೂಲಗಳು ಹಂಚಲ್ಪಟ್ಟವು. ಕಡೆಯಲ್ಲಿ ಹಿಂದುಸ್ಥಾನಿ ಭಾಷೆಯಲ್ಲಿ ಒಂದು ಸಂಗೀತವನ್ನು ಹಾಡಿ, ಸಭಿಕರ ಮನಸ್ಸನ್ನು ಆನಂದಪಡಿಸಲಾಯಿತು. ಅನಂತರ ದೊಡ್ಡ ಮನುಷ್ಯರೆಲ್ಲಾ ಕಟ್ಟಡದ ಹೊರಗೂ ಒಳಗೂ ಹೋಗಿ, ಅಲ್ಲಿ ರೋಗಿಗಳವರಿಗೆ ಮಾಡಿರುವ ಅನುಕೂಲ ಸಲಕರಣೆಗಳನ್ನೆಲ್ಲಾ ನೋಡಿ, ಸಂತೋಷವನ್ನುಳ್ಳವರಾಗಿ ತೆರಳಿದರು. ತರುವಾಯ ಸಭಿಕರನ್ನೆಲ್ಲಾ ಕೂಡಿಸಿ ಫೋಟೋಗ್ರಾಫ್ ತೆಗೆಯಲಾಯಿತು.

ತುಂಕೂರು.—ಬಿಸಿಲು ಮೋಡ ಜಾಸ್ತಿಯಾಗಿರುವದರಿಂದ ಛಳಿ ಕಡಮೆ. ಹೋದ ಸೋಮವಾರ ಸ್ವಲ್ಪ ಮಟ್ಟಿಗೆ ಮಳೆಯಾಯಿತಾದರೂ ಇದರಿಂದ ನಷ್ಟವಾಯಿತೇ ಹೊರತು ಲಾಭವಿಲ್ಲ.—ಪ್ರಕೃತ ಸುಗ್ಗೀ ಕಾಲವೂ, ಕಂದಾಯದ ವಸೂಲಿ ಕಾಲವೂ ಆಗಿರುವದರಿಂದ ದಿನಸಿ ಗಾಡಿಗಳು ಸುಮಾರಾಗಿ ಸಂತೆಗಳಿಗೆ ಬರುತ್ತಲಿವೆ. ಧಾರಣೆವಾಸಿ ಕೊಂಚ ಮಟ್ಟಿಗೆ ಕಡಮೆಯಾಗಿದೆ.—ಶ್ರೀಮನ್ ಯುವರಾಜ ದಂಪತಿಗಳ ದರ್ಶನಾರ್ಥವಾಗಿ ನಮ್ಮ ಪ್ರಾಂತ್ಯದಿಂದಲೂ ಬಹು ಜನರು ಬೆಂಗಳೂರಿಗೆ ಹೋಗಿರುತ್ತಾರೆ.—ಈಗ್ಗೆ ಮೂರು ವರುಷಗಳಿಂದಲೂ ತುಂಕೂರು ಮಿಷನ್ ಸಭೆಗೆ ಅಧ್ಯಕ್ಷರಾಗಿದ್ದ ರೆವ. ಇ. ಎಸ್. ಎಷ್ಟರ್ ದೊರೆಯವರು ತಮ್ಮ ದೇಹಾರೋಗ್ಯಕ್ಕಾಗಿ ಸೀಮೆಗೆ ತೆರಳುವರೆಂಬದಾಗಿ ತಿಳಿದು, ನೆನ್ನೆ ತಾ. ೨೩ ನೇ ಮಂಗಳವಾರ ಇಲ್ಲಿನ ಕ್ರೈಸ್ತದೇವಾಲಯದಲ್ಲಿ ಅವರಿಗೆ ವಂದನಾಪತ್ರಿಕೆಗಳು ಒಪ್ಪಿಸಲ್ಪಟ್ಟವು. ಆ ದಿನ ಸಾಯಂಕಾಲ ದೇವಾಲಯವು ಬಹಳ ಮನೋಹರವಾಗಿ ಅಲಂಕರಿಸಲ್ಪಟ್ಟು, ಸಿದ್ಧವಾಗಿ ಕ್ರೈಸ್ತಮಂಡಲಿಯವರಿಂದಲೂ ಹಿಂದೂ ಉಪಾಧ್ಯಾಯರೇ ಮುಂತಾದ ಮಹಾಜನರಿಂದಲೂ ಕಿಕ್ಕಿರಿಯುವಂತೆ ತುಂಬಿತ್ತು. ಆಗ ಮೈಸೂರು ಸೀಮೆಯ ಛೇರ್ಮನ್ನಾಗಿರುವ ರೆವ. ಟಿ. ಎ ರೀಸ್ ದೊರೆಯವರು, ರೆವ. ಎಷ್ಟರ್ ದೊರೆಯವರು, ಅವರ ಕುಟುಂಬವೂ, ಬೆಂಗಳೂರಿಂದ ಇಲ್ಲಿಗೆ ವರ್ಗಪಟ್ಟು ಬಂದಿರುವ ರೆವ. ಡಬ್ಲ್ಯು. ಇ. ಟಾಂಲಿನ್ಸನ್ ಸಾಹೇಬರು, ಅವರ ಕುಟುಂಬವೂ, ಇಂಡಸ್ಟ್ರಿಯಲ್ ಸ್ಕೂಲಿನ ಮ್ಯಾನೇಜರ್ ಮುಂತಾದವರೆಲ್ಲಾ ದಯಮಾಡಿದ್ದರು. ರೆವ. ರೀಸ್ ದೊರೆಯವರು ಆಗ್ರಾಸನವನ್ನು ವಹಿಸಿ ದೇವರ ಪ್ರಾರ್ಥನೆ ನಡಿಸಿದರು. ಮಿಷನ್ ಸ್ಕೂಲುಗಳ ಉಪಾಧ್ಯಾಯರ ಪರವಾಗಿ ಮೆ|| ಎಲ್ ರಂಗಪ್ಪನವರು ವಂದನಾಪತ್ರಿಕೆ ಓದಿ, ಉಪಾಧ್ಯಾಯರ ಜ್ಞಾಪಕಾರ್ಥವಾಗಿ ಬೆಳ್ಳಿಯಿಂದ ತಯಾರಾಗಿದ್ದ ಎರಡು ಹೂವಿನ ದಾನಿಗಳ ಸಂಗಡ ಒಪ್ಪಿಸಿದರು. ದೊರೆಯವರು ಉಪಾಧ್ಯಾಯರುಗಳನ್ನು ಕುರಿತು "ಈ ಮೈಸೂರು ಸಂಸ್ಥಾನದ ಎಲ್ಲಾ ಮಿಷನ್ ಪಾಠಶಾಲೆಗಳಿಗಿಂತ ಈ ತುಂಕೂರು ಸರ್ಕೀಟಿನ ಮಿಷನ್ ಸ್ಕೂಲುಗಳ ವಿದ್ಯಾಭಿವೃದ್ಧಿಯೂ, ಉಪಾಧ್ಯಾಯರ ಒಗ್ಗಟ್ಟೂ, ಮತ್ತು ಅವರ ಶ್ರಮವೂ ಸಹ ಶ್ಲಾಘನೀಯಗಳೆಂಬುವದರಲ್ಲಿ ಯಾವ ಸಂದೇಹವಿಲ್ಲ" ಎಂದು ಅಪ್ಪಣೆ ಕೊಟ್ಟರು. ತರುವಾಯ ಕ್ರೈಸ್ತಮಂಡಲಿಯ ಪರವಾಗಿ ರಾ॥ ಸಾಮ್ಯುವೇಲ್ ಲಾಮೆಕ್ ಯವರು ವಂದನಾಪತ್ರಿಕೆಯನ್ನು ಓದಿ, ಸಭೆಯವರ ಜ್ಞಾಪಕಾರ್ಥವಾಗಿ "ಟಿಪ್ಪೆಂಯಾಕ್ಸ್" ಎಂಬ ಸುಂದರವಾದ ಕೈಪೆಟ್ಟಿಗೆಯನ್ನೂ ಎರಡು ಬೆಳ್ಳಿ ಬಟ್ಟಲುಗಳನ್ನೂ ಒಪ್ಪಿಸಿದರು. ಅನಂತರ ಮಿಷನ್ ಇಂಡಸ್ಟ್ರಿಯಲ್ ಸ್ಕೂಲ್ ವಿದ್ಯಾರ್ಥಿಗಳು ವಂದನಾಪತ್ರಿಕೆಯನ್ನು ಓದಿ ಒಂದು ಸಣ್ಣದಾದ ಕೈಪೆಟ್ಟಿಗೆಯನ್ನಿಟ್ಟು ಒಪ್ಪಿಸಿದರು. ಹೊಸಹಾ ಸಭೆಯವರ ಪರವಾಗಿ ರೆವ. ಟಾಂಲಿನ್ಸ—

ಸಾಹೇಬರವರಿಗೆ ವಂದನಾ ಪತ್ರಿಕೆಯನ್ನು ಓದಿ, ಎಲ್ಲರಿಗೂ ಪುಷ್ಪದ ಹಾರ ತುರಾಯಿಗಳು ಒಪ್ಪಿಸಲ್ಪಟ್ಟವು. ರೆವ್. ರೀಸ್ ದೊರೆಯು ವರು, ರೆವ್ ಎಡ್ವರ್ಡ್ಸ್ ದೊರೆಯವರು, ರೆವ್ ಟಾಂಲಿನ್ಸನ್ ಸಾಹೇಬರವರೂ ಸಭೆಯವರನ್ನು ಕುರಿತು ಸರಸಭಾಷಣ ಮಾಡಿದರು ತರುವಾಯ ದೇವರ ಪ್ರಾರ್ಥನೆಯು ಜರುಗಿ ಸಭೆಯು ಉಪಸಂಹರಿಸಲ್ಪಟ್ಟು ಎಲ್ಲರೂ ಪರಮಾನಂದಭರಿತರಾಗಿ ತಂತಮ್ಮ ನಿವಾಸಗಳಿಗೆ ತೆರಳಿದರು ೨೩ ನೇ ಗುರುವಾರ ರೆವ್ ಎಡ್ವರ್ಡ್ಸ್ ದೊರೆಯವರು ಕುಟುಂಬಸಮೇತರಾಗಿ ಮೈಸೂರಿಗೆ ದಯಮಾಡಿಸಿದರು ಅಲ್ಲಿ ಕೆಲವು ದಿನಗಳಿದ್ದು ಅನಂತರ ಶೀಮೆಗೆ ಹೊರಡುತ್ತಾರೆಂಬುದಾಗಿ ವರ್ತಮಾನ ತಿಳಿಗಿದೆ.—ಕಳೆದ ವಾರ ಇಲ್ಲಿಗೆ ಮೈಸೂರಿಂದ ಅರಮನೆ ವಿದ್ವಾಂಸರಾದ ವೆಂ॥ ಹ್ಯಾಮಿಲ್ಟನರ ಮಕ್ಕಳು ವೆಂ॥ ಸುಬ್ರಹ್ಮಣ್ಯಯ್ಯನವರು ದಯಮಾಡಿಸಿ, ಮೂರು ನಾಲ್ಕು ದಿನಗಳವರೆಗೂ ಕ್ಲಬ್ಬಿನಲ್ಲಿಯೂ, ಇನ್ನೂ ಕೆಲವು ದೊಡ್ಡ ಮನುಷ್ಯರ ಮನೆಗಳಲ್ಲಿಯೂ ವೀಣಾದಲ್ಲಿ ಸಂಗೀತ ವಿನಿಕೆಯನ್ನು ಮಾಡಿ, ಎಲ್ಲರನ್ನೂ ಸಂತೋಷಪಡಿಸಿ, ಸನ್ಮಾನಿತರಾಗಿ ದಯಮಾಡಿಸಿದರು.—ಈಗ್ಗೆ ಒಂದು ತಿಂಗಳಿಗೆ ಮುಂಚೆ ಈ ಟವರ್ನಲ್ಲಿ ಒಬ್ಬ ಪೋಸ್ಟ್ ಜವಾನ ಮನುಷ್ಯನ ಆಶ್ರಯದಲ್ಲಿರುವ ಬ್ರಾಹ್ಮಣ ವಿಧವೆಯು ಗಂಡು ಮಗುವನ್ನು ಹೆತ್ತು ಮಗು ಸಹಿತವಾಗಿ ಕ್ಷೇಮವಾಗಿರುತ್ತಾಳೆ.—ಈ ಟವರ್ನ ಮಧ್ಯದಲ್ಲಿರುವ ಓಲೆಸಕಟ್ಟೆ ಎಂಬ ಜಲಸಲೆಯು ಆಸುಪಾಸು ಮೂರು ಮೈಲಿಯಲ್ಲಿರುವ ಜಾನುವಾರುಗಳಿಗೂ ಜನರಿಗೂ ಆಧಾರವಾಗಿದೆ ಇದನ್ನು ನಮ್ಮ ಸರ್ಕಾರದವರು ಕ್ರಮವಾದ ರೀತಿಯಲ್ಲಿಟ್ಟು ಮೆಟ್ಟಿಲುಗಳನ್ನು ಕಟ್ಟಿಸಿ, ಇನ್ನೂ ಹೆಚ್ಚು ನೀರು ನಿಲ್ಲುವದಕ್ಕೆ ವಸತಿ ಮಾಡಿದರೆ ನಮ್ಮ ಊರಿಗೆ ಬಹಳ ಪ್ರಯೋಜನವಿದೆ

ದೊಡ್ಡಬಳ್ಳಾಪುರ.—ತಾ ೨೦ ರಲ್ಲಿ ತಾಲ್ಲೂಕು ಮೇಸ್ತ್ರಿಗಳ ಮನೆಗೆ ಕಳ್ಳರು ಬಿದ್ದು, ೬೦ ರೂಪಾಯಿವರೆಗೆ ಕಳುವು ಮಾಡಿದರು. ರೈಲ್ ಸ್ಟೇಷನ್ ಮಾಸ್ಟರ ಬೀಗ ಹಾಕದೆ ಸುಮ್ಮನೆ ಇದ್ದರೂ ಅಲ್ಲಿ ಎಚ್ಚರಿಕೆಯಾಗಿದ್ದುದರಿಂದ ಒಡಕೊಡದವರು ರೈಲ್ ಪತ್ರ ಒಂದು ಚಿಲ್ಲರೆ ಅಂಗಡಿಗೆ ನುಗ್ಗಿ ೩೦ ರೂಪಾಯಿ ಸಾಮಾನುವರೆಗೆ ಕದ್ದರು ಅಲ್ಲೇ ಒಂದು ಕಣದಲ್ಲಿ ೧ ಮೂಟೆ ರಾಗಿ ಕದ್ದರು —ಇಲ್ಲಿದ್ದ ಮುನ್ಸಿಫ್ ಕೋರ್ಟನ್ನು ಚಿಕ್ಕನಾಯಕನಹಳ್ಳಿಗೆ ವರ್ಗಮಾಡುತ್ತಾರಂತೆ

ಚಾಮರಾಜನಗರ—ಈ ತಾಲ್ಲೂಕಿಗೆ ಸೇರಿದ ಕಾಗಲ್ವಾಡಿ ಗ್ರಾಮದಲ್ಲಿ ಕುರುಬರ ಪೋತೇಗೌಡನ ಒಂದು ಹಸುವು ಒಂದು ವಿಚಿತ್ರವಾದ ಕರುವನ್ನು ಹಾಕಿದೆ. ಕರುವಿಗೆ ಮುಂಭಾಗದಲ್ಲಿ ಎರಡು ಕಾಲುಗಳೂ ಹಿಂಭಾಗದಲ್ಲಿ ಒಂದು ಕಾಲೂ ಎರಡು ಮೊಲೆಗಳೂ ಇವೆ ಎಂತಲೂ, ಕರುವು ಬದುಕಿದೆ ಎಂತಲೂ ಪೋಲೀಸು ಆಫೀಸಿನಿಂದ ತಿಳಿಯಬರುತ್ತೆ.—ತಾ ೩ ನೇ ಶನಿವಾರ ರಾತ್ರಿ ವೆಂಕಟಪ್ಪನವರ ಮನೆಗೆ ಚಿರುಬಿನ್ನ ಬಿದ್ದು ಒಂದು ಕರುವನ್ನು ಕೊಂದು ತಿಂದು ಹೋಯಿತು ಈಗೀಗ ಚಿರುಬಿನ್ನ ಊರೊಳಕ್ಕೆ ಬಂದು ತೊಂದರೆ ಕೊಡುತ್ತಲಿರುವದರಿಂದ ಈ ವ್ಯಾಘ್ರವನ್ನು ಶೀಘ್ರದಲ್ಲಿ ಕೊಂದು ಇನಾಮು ಪಡೆಯುವರಾಗಿ ನಂಬಿರುತ್ತೇನೆ

ಗೋಣಿಬೀಡು—ಈ ವರ್ಷ ಕಾಫಿ ಕಟಾವು ತೀರುತ್ತಾ ಬಂದಿದೆ ಪ್ಲಾಂಟರುಗಳೆಲ್ಲಾ ಕಾಫಿ ಬೀಜವನ್ನು ಮಂಗಳೂರಿಗೆ ರವಾನಿಸುತ್ತಿದ್ದಾರೆ. ಕಾಫಿ ಫಸಲು ಹೋದವರುಷಕ್ಕಿಂತ ಈ ವರುಷ ಸ್ವಲ್ಪ ಇಳಿದಿದೆ ಎಂದು ಕೇಳುತ್ತಾರೆ —ನಾಗಸಂಗಿರೆಯಲ್ಲಿ ಮಕ್ಕಳಿಗೆ ಪೂಜ್ಯ ಸಿಡುಬು ಏಳುತ್ತವೆ ಎಂದು ಹೇಳುತ್ತಾರೆ.—ಇದೇ ತಾಲ್ಲೂಕು ಕನ್ನಾಪುರದ ಶ್ರೀಕಂಠಯ್ಯ ಮತ್ತು ಸುಬ್ರಾಯ ಇವರ ಮನೆಗಳಲ್ಲಿ ಡಿಸೆಂಬರು ೨೩ ರಲ್ಲಿ ಸುಮಾರು ಸಾವಿರಾರು ರೂಪಾಯಿನ ಮಾಲುಗಳು ಕಳುವಾಗಿದ್ದುವು. ಪೋಲೀಸಿನವರು ಪತ್ತೆ ತರದೂದಿನಲ್ಲಿದ್ದು ಈಗತಾನೇ ಒಬ್ಬನನ್ನು ಹಿಡಿದಿರುವದಾಗಿ ವರ್ತಮಾನ. ಇದೇ ತಾಲ್ಲೂಕು ಕನ್ನೇನಹಳ್ಳಿ, ಕಾಡಮನೆ ರಾಮೇಗೌಡರ ಮನೆಗೆ ದಿನಾಂಕ ೨೩ ನೆ ತಾರೀಖು ರಾತ್ರಿ ಕನ್ನಾ ಹಾಕಿ ಸುಮಾರು ನೂರತೊಂಬತ್ತು ರೂಪಾಯಿನ ಚಿನ್ನಾ ಬೆಳ್ಳಿ ಸಾಮಾನುಗಳನ್ನು ಕಳುವು ಮಾಡಿದಾರೆಂದು ಕೇಳುತ್ತೇನೆ. ದಿನಸಿ ಧಾರಣೆ ಏರಿದ ಕಾಗೆಲ್ಲಾ ಕಳ್ಳತನವು ಹೆಚ್ಚುವಂತೆ ತೋರುತ್ತಿದೆ. ಈ ಪ್ರಾಂತ್ಯ ಕೆಲವು ಕಾಫೀ ತೋಟಗಳಲ್ಲಿ ನೆಲ್ಲಿನ ಫಸಲು ಕಡ ಆಗುತ್ತಿದೆ ಮನ ಪಾತ್ರಗಳಾದ ರೆಡ್ಮಂಡ್ ಸಾಹೇಬರು ಕಾಫೀ ತೋಟಗಳ ಕಡೆ ಸರ್ಕೀಟಿನಲ್ಲಿದ್ದಾರೆ

ಬಾತ್ಮೀದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮೀಗಳಿಗೆ ನಾವು ಸ್ಥಳ ಕೊಡಲಾರೆವು. ಆದಕಾರಣ ಬಾತ್ಮೀದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು, ಇಂಥವುಗಳಿಗೆ ನಾವು ಸ್ಥಳ ಕೊಡಲಾರೆವು.

ಪ್ರಕಟಿಸಲಾರೆವೆಂದು ಕೇವಲ ತಿರಸ್ಕರಿಸಿದ ಬಾತ್ಮಿಗಳನ್ನು ನಾವು ಬಾತ್ಮೀದಾರರಿಗೆ ವಾಪಸು ಕಳುಹಿಸಲಾರೆವು.

ಬಾತ್ಮೀದಾರರು ಪಡುವ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಾಗುವುದಿಲ್ಲವೆಂಬುದನ್ನು ಸಕಲರೂ ತಿಳಿಯತಕ್ಕದ್ದು.—ಎಡಿ.

ಕರೆಸ್‌ಪಾಂಡೆನ್ಸ್.

ಒಬ್ಬ ಉಪಾಧ್ಯಾಯನ ಸಂಕಟ

ಅಯ್ಯಾ,

ನನಗೆ ಮೂರು ತಿಂಗಳು ಸಂಬಳವಿಲ್ಲದೆ ಕ್ಲೇಶಪಡುತ್ತಿದ್ದಾಗ್ಯೂ ಡೆಪ್ಯುಟಿ ಇನ್ಸ್‌ಪೆಕ್ಟರವರಿಗೆ ಏಪ್ರಿಲ್, ಮೇ, ಜೂನ್ ೩ ತಿಂಗಳಿಂದ ಸಂಬಳವಿಲ್ಲ ದೊಡ್ಡ ಅಧಿಕಾರಿಗಳ ಚಿತ್ತಕ್ಕೆ ಮಡಗಾಯಿಗಳ ಅಹವಾಲ್ ಬರಲಿಲ್ಲವೆಂತ ರಿಪೋರ್ಟು ಕೊಟ್ಟದ್ದಕ್ಕೆ ಮಾತು ಹೇಳ್ತಾಯಿತೆಂತ ನನಗೆ ಒಂದು ರೂಪಾಯಿ ಜುಲ್ಮಾನೆ ವಿಧಿಸಿದರು ನರಮನಸ್ಸಿ ಜಹಾಂಗೀರ್ ವೆಂ॥ ಭಾಭಾಯಿಸಾಹೇಬರವರಿಗೆ ಬರಕೊಂಡರೆ ಪ್ರಸಕ್ತ ಜುಲ್ಮಾನೆ ಸಾಕ್ಷ್ಯವೆಂತ ಅರಿಕೆ ಮಾಡಿಕೊಳ್ಳಲಿಲ್ಲ ೧೯೦೫ನೆ ಜೂನ್ ೩ ರಲ್ಲಿಯೇ ಮಾಸ್ಟರುಗಳ್ಯಾರೂ ನೇರವಾಗಿ ತಮಗೆ ಬರಕೊಳ್ಳಕೂಡದೆಂತ ಆರ್ಡರು ಕೊಡಿಸಿರುತ್ತಾರೆ ಬಡಮಾಸ್ಟರ ಅಹವಾಲ್ ಯಾರಿಗೆ ಹೇಳಿಕೊಳ್ಳಬೇಕೋ ತಿಳಿಯದು ಸುಭಿಕ್ಷಕಾಲದಲ್ಲಿ ಮಾಹೆಯಾನಾ ೩ ರೂಪಾಯಿ ಬಂದರೂ ಜೀವನ ಜರಗುವುದಕ್ಕೆ ಕಷ್ಟ. ಅಂಥಾದ್ದರಲ್ಲಿ ಇಂಥಾ ದುರ್ಭಿಕ್ಷಕಾಲದಲ್ಲಿ ಹೇಳುವದೇನು! ಮೊದಲಿನಿಂದ ಕೆಲಸಮಾಡಿದವನು ಒಬ್ಬನೇ, ನೃಥಾ ಕಾಲಹರಣ ಮಾಡಿದವನಿಗೂ ಒಬ್ಬನೇ ಆಗಿದೆ. ನಿಯಮಿತಕನಕ ಕೆಲಸಮಾಡಿದರೂ ಪ್ರಮೋಷನ್ ಇಲ್ಲ ಮಾಸ್ಟರಿಗೆ ಸಂಬಳ ಬಡ್ತಿ ಮಾಡುವದಕ್ಕೆ ಗವರ್ನಮೆಂಟಿಗೆ ದರಿದ್ರ) ಡೆಪ್ಯುಟಿ ಇನ್ಸ್‌ಪೆಕ್ಟರವರ ಕೈಕಳಗೆ ೮ ಜನ ಅಸಿಸ್ಟೆಂಟ್ ಡೆಪ್ಯುಟಿ ಇನ್ಸ್‌ಪೆಕ್ಟರ್ ಮಾಡುವದಕ್ಕೂ, ಈಗ್ಗೆ ೧೬ ವರ್ಷದ ಲಾಗಾಯ್ತು ಸಾಲ್ ೧ ಕ್ಕೆ ೩ ಸಾವಿರ ರೂಪಾಯಿ ಪಟ್ಟಸಾಲಿ, ವಿದ್ಯಾದಾಯಿನಿ ಎಂಬ ಬುಕ್ಕು ಹಾಕಿಸಿ ಸ್ಕೂಲಿಗೆ ಹಂಚುವುದಕ್ಕೂ, ಇನ್ನೂ ಅನೇಕ ಕೆಲಸಗಳಿಗೂ ಹಣ ಒದಗುತ್ತೆ ಮಾಸ್ಟರ ಬಡ್ತಿಗೆ ಮಾತ್ರ ಇಲ್ಲ. ೧೮೯೦ನೆ ಇಸವಿ ಲಾಗಾಯಿತು ಡೆಪ್ಯುಟಿ ಇನ್ಸ್‌ಪೆಕ್ಟರವರುಗಳು ಮೈಸೂರ್ ಉತ್ತರ ಮತ್ತು ದಕ್ಷಿಣಕ್ಕೆ ಇಬ್ಬರಿದ್ದು ಕೆಲಸ ನೆರವೇರಿಸಿದ್ದು ಈಗ ಆಗಲಾರದೆ ಇರುವುದು ಹ್ಯಾಗೋ ತಿಳಿಯಲಿಲ್ಲ ಮುಂಚೆ ಇದ್ದ ಸಬ್ ಡೆಪ್ಯುಟಿ ಇನ್ಸ್‌ಪೆಕ್ಟರವರು ಕಮ್ಮಿ ಸಂಬಳ ಇದ್ದು, ಆಯಾ ತಿನ್ನುತ್ತಾರೆಂತ ವೆಂ॥ ಭಾಭಾಯಿಯವರು ವಜಾಮಾಡಿದ್ದು, ಈಗ ಅದೇ ಕಮ್ಮಿ ಸಂಬಳದವರನ್ನು ನೇಮಿಸಿರುವದು ಬಡಮಾಸ್ಟರುಗಳ ಹೀನ ಅದೃಷ್ಟವೇ ಸರಿ ಆಳುವವರ ಮೇಲೆ ಮನೆಯು ಮುರಿದು ಬಿತ್ತೆಂಬ ಗಾದೆಗೆ ಸರಿಯಾಗುತ್ತೆ

ಬಡಮಾಸ್ಟರ್

ಸ್ವಾಮಿಗಳೂ ಪಾಠಶಾಲೆಗಳೂ

ಅಯ್ಯಾ,

ಬೊಂಬಾಯಿ ರಾಷ್ಟ್ರಕ್ಕೆ ಸೇರಿದ ಗದಗಿನ ಹತ್ತಿರ ಒಂದು ಊರುಂಟು ಅದರಲ್ಲಿ ಲಿಂಗಾಯಿತರ ಗುರುವಾದ ತೋಂಟದ ಸ್ವಾಮಿಗಳು ವಾಸಮಾಡುವದು ಈ ಸ್ವಾಮಿಗಳ ಮೂಲಪುರುಷರಾದ ಶ್ರೀ ಸಿದ್ಧಲಿಂಗಸ್ವಾಮಿಯವರ ಗದ್ದಿಗೆಯು ಮೈಸೂರು ಸೀಮೆ ಕುಣಿಗಲು ತಾಲ್ಲೂಕು ಎಡಿಯೂರು ಗ್ರಾಮದಲ್ಲಿದೆ. ಗುರುಸೇವಾನಿರತರಾದ ತೋಂಟದ ಸಿದ್ಧೇಶ್ವರ ಸ್ವಾಮಿಗಳವರು ಸೇವಿಂಗ್ಸು ಬ್ಯಾಂಕಿನಲ್ಲಿ ಕೆಲವು ಸಾವಿರ ರೂಪಾಯಿಗಳನ್ನಿಟ್ಟು ಅದರಿಂದ ಲಭ್ಯವಾಗುವ ಬಡ್ಡಿ ದ್ರವ್ಯದಿಂದಲೂ ಮಠಕ್ಕೆ ಶಿಷ್ಯರಿಂದ ಕೊಡಲ್ಪಟ್ಟಿರುವ ಜಮೀನುಗಳಿಂದ ಬರುವ ಆದಾಯದಿಂದಲೂ ಒಂದು ಸಂಸ್ಕೃತ ಪಾಠಶಾಲೆಯನ್ನು ಗದಗಿನಲ್ಲಿಟ್ಟಿರುವರು ಸಾಲೆಯಲ್ಲಿ ಓದುತ್ತಿರುವ ವಿದ್ಯಾರ್ಥಿಗಳಿಗೆ ಮಠದಲ್ಲಿಯೇ ಆಹಾರ ವಸ್ತ್ರ ಮತ್ತು ಪುಸ್ತಕಗಳನ್ನೀಯುತ್ತಿರುವರು. ಮಠದ ಸುತ್ತಲೂ ವಿಶಾಲವಾಗಿಯೂ ಮತ್ತು ನಿರ್ಮಲವಾಗಿಯೂ ರಮಣೀಯವಾಗಿಯೂ ಇರುವ ಆರಾಮವಿರುವದು ಈ ಮನೋಹರವಾದ ತೋಟದಲ್ಲಿ ಅಲ್ಲಲ್ಲಿ ನಿರ್ಮಿಸಲ್ಪಟ್ಟಿರುವ ಕಲ್ಲಿನ ಬೆಂಚುಗಳ ಮೇಲೆ ಬಾಲಕರು ಕುಳಿತುಕೊಂಡು ಏಕಚಿತ್ತದಿಂದ ಪಾಠಗಳನ್ನು ಮಾಡಿಕೊಳ್ಳುತ್ತಿರುವರು ಈ ಪಾಠಶಾಲೆಯಲ್ಲಿ ವೇದ, ವ್ಯಾಕರಣ, ನ್ಯಾಯ ಮತ್ತು ಜ್ಯೋತಿಷ ಶಾಸ್ತ್ರಗಳಲ್ಲಿ ಪಾರಂಗತರಾದ ಶಿಷ್ಯರನೇಕರು ಬರುವರು. ಇವರುಗಳು ಪ್ರತಿ ರಾತ್ರಿಯಲ್ಲಿಯೂ ೩ ಗಂಟೆ ಆರಭ್ಯ ೯ ಗಂಟೆ ವರೆಗೆ ಮಠದಲ್ಲಿ ಶ್ರೀಸ್ವಾಮಿಗಳ ಎದುರು ಸಭೆಯಾಗಿ ಕುಳಿತು ತಮ್ಮ ತಮ್ಮ ಪಾಂಡಿತ್ಯ ಪ್ರದರ್ಶನವು ಮಾಡುತ್ತಿರುವರು ಶಾಸ್ತ್ರಗಳು ಪರಸ್ಪರ ವಿಚಾರಮಾಡುತ್ತಿರುವ ಎಕ್ಕ್ಯಾರ್ಥನವು ಕೇಳಿ ಆನಂದಭರಿತರಾಗಿ ಸ್ವಾಮಿಗಳು ತಮಗಾಗಿ ಮಠದಲ್ಲಿ ಕಲ್ಪಿಸಿರುವ ಉನ್ನತಾಸನದಲ್ಲಿ ಕುಳಿತಿದ್ದದ್ದನ್ನು ನಾನು ನೋಡಿ ಆನಂದಭರಿತನಾದೆನು

ಶಿಷ್ಯಾರ್ಜನೆಯಿಂದ ಕೂಡಿಸಲ್ಪಟ್ಟ ದ್ರವ್ಯವನ್ನು ಸ್ವಾಮಿಗಳವರು ತಮ್ಮ ನೆಂಟರಿಷ್ಟರಿಗೆ ಕೊಟ್ಟು ಪರೋಪಕಾರದಲ್ಲಿ ಲೇಶವೂ ಮನಸ್ಸಿಲ್ಲದಿರುವ ಅನೇಕ ಸನ್ಯಾಸಿಗಳನ್ನು ನಾನು ನೋಡಿದ್ದೇನೆ ಯಾವ ಮಠದವನಾದರೇನು ಯಾವ ಜಾತಿಯವನಾದರೇನು ಸ್ವಾರ್ಥಪರನಾದವನ ಜನ್ಮ ವ್ಯರ್ಥವೆನ್ನುವದು ಶ್ರೀ ತೋಂಟದ ಸ್ವಾಮಿಗಳವರ ಚರ್ಯೆಯಿಂದ ಸುಲಭವಾಗಿ ಅರಿಯಬಹುದು

ಮೇಲೆ ಹೇಳಿದ ಸ್ವಾಮಿಗಳು ಎಡಿಯೂರಿಗೆ ದಯಮಾಡಿಸಿ ತಮ್ಮ ಗುರುಗಳ ಶಿವದ ದರ್ಶನವು ಮಾಡಿದ ತರುವಾಯ ತಮ್ಮ ಸ್ಮಾರಕವಾಗಿ ಎಡಿಯೂರಲ್ಲೊಂದು ಸಂಸ್ಕೃತಪಾಠಶಾಲೆಯನ್ನು ಸ್ಥಾಪಿಸುವ ಇರಾದೆಯುಳ್ಳವರಾಗಿರುವಂತೆ ಕೇಳಿದೆನು.

ಸರಕಾರದವರು ಸ್ಕೂಲುಗಳನ್ನು ಪ್ರಜೆಗಳಿಗೆ ಬೇಕಾದ ಕಡೆಗಳಲ್ಲೆಲ್ಲಾ ಇಡಲಿಲ್ಲವೆಂದು ಅವರನ್ನು ದೂಷಿಸುವದಕ್ಕೆ ಬದಲಾಗಿ ಪ್ರಜೆಗಳು ಶ್ರೀಮಂತರಾದ ಮಹಾಂತರುಗಳು ಪರೋಪಕಾರವಾದ ಪಾಠಶಾಲೆಗಳನ್ನು ಸ್ಥಾಪಿಸಿ ತನ್ಮೂಲಕ ಬಾಲಕ ಮತ್ತು ಬಾಲಕೀಯರಿಗೆ ವಿದ್ಯಾದಾನವು ಮಾಡಿಸಲು ಶ್ರೀಭಗವಂತನು ಭಾಗ್ಯವಂತರಾದವರಿಗೆ ಬುದ್ಧಿಯನ್ನೀಯಲೆಂದು ಬೇಡಿಕೊಳ್ಳುತ್ತೇನೆ.

ಬೌರಿಂಗ್ ಪೇಟೆಯ ವೃತ್ತಾಂತಗಳು

ಅಯ್ಯಾ,

ಈ ಊರು ತಾಲ್ಲೂಕು ಹೆಡ್ ಕ್ವಾರ್ಟರಾಗಿಯೂ ಮದ್ರಾಸ್, ಬೆಂಗಳೂರು, ಚಿನ್ನದ ಗಣಿಯ ಮೂರು ಕಡೆಯ ರೈಲುಗಳು ಕೂಡುವಂಥ ಅಥವಾ ಸಂಗಮವಾಗತಕ್ಕ ವಿಶೇಷ ಜನಸಂದಣಿಯುಳ್ಳ ಊರು ಎಂಬುದು ಎಲ್ಲರಿಗೂ ತಿಳಿದ ಸಂಗತಿಯೇ ಆಗಿರುತ್ತದೆ ಇಲ್ಲಿನ ಜನರಿಗೆ ವಿರೋಧವಾದ ಹಲಸಂಗತಿಗಳನ್ನು ತಮ್ಮ ಪತ್ರಿಕೆಯ ಮೂಲಕ ವ್ಯಕ್ತಪಡಿಸಲು ಇಚ್ಛೈಸುತ್ತೇನೆ.—

೧ ರೈಲ್ವೆ ಸ್ಟೇಷನ್ನಲ್ಲಿ ಪ್ರಯಾಣಿಕರಿಗೆ ಇರುವ ಪ್ರಮು ಬುಕ್ಕಿಂಗ್ ಆಫೀಸಿನ ಹೊರಗೆ ಬೋರ್ಡಿನಲ್ಲಿ "ಟಿಕೆಟ್ ಕೊಡುವ ಕಿಟಕಿ ದಿನವೆಲ್ಲಾ ತೆರದಿರುತ್ತದೆ" ಎಂದು ಹಾಕಿದೆ ಆದರೆ ಕಿಟಕಿಯಲ್ಲಿ ಹೋಗಿ ಟಿಕೆಟ್ ಕೇಳಿದರೆ ಬುಕ್ಕಿಂಗ್ ಕ್ಲಾರ್ಕ "ಅದಕ್ಕೆ ಇನ್ನೂ ಅವಕಾಶವಿಲ್ಲ ಹೋ" ಅನ್ನುತ್ತಾರೆ ಆ ವೇಳೆ ನಿಶ್ಚಯವಾಗಿ ಕೊಡುವದಕ್ಕೆ ಮರುವು ಮಾಡುತ್ತಾರೆ ಇಷ್ಟರಲ್ಲಿ ಬೆ ೮ ಗಂಟೆಗೆ ಮೂರು ಕಡೆಯ ಗಾಡಿಗಳು ಹೊರಡುತ್ತವೆ ಆಯಾ ಸಮಯದಲ್ಲಿ ಬಡ ಮೂರನೇ ದರಗತಿ ಟಿಕೆಟ್ ತೆಗೆದುಕೊಳ್ಳುವ ಶ್ರಮವನ್ನು ಏನೆಂದು ಹೇಳೋಣ! ಒಬ್ಬನಮೇಲೊಬ್ಬರು ಬಿದ್ದು ಬಲಾತ್ಯದ ಬಲಿಷ್ಠನನ್ನು ತಳ್ಳಿ ಆ ಬಲಾತ್ಯನು ಇನ್ನೊಬ್ಬ ಬಲಾತ್ಯನ ತಳ್ಳಿಸಿಕೊಂಡು ಟಿಕೆಟ್ ಪಡೆಯ ಬೇಕಾಗಿದೆ ಹೀಗಿರುವಲ್ಲಿ ಹೆಂಗಸರ ಮಕ್ಕಳ, ಮುದುಕರ, ಬಲಹೀನರ ಗತಿ ಏನೆಂದು ಹೇಳೋಣ? ಇದರ ಮೇಲೆ ಟಿಕೆಟ್ ಕೊಡುವ ಕಿಟಕಿಯ ಹತ್ತಿರ ಒಂದು ಕಟಕಟೆ ಇದೆ. ಇದರಲ್ಲಿ ಜನರು ಒಂದು ಕಡೆಯಿಂದ ಹೋಗಿ ಟಿಕೆಟ್ ತಕ್ಕೊಂಡು ಇನ್ನೊಂದು ಕಡೆಯಿಂದ ಆಚೆ ಹೋಗಬೇಕೆಂಬುದು ಅರ್ಥ. ಅಭಿಪ್ರಾಯ ಕಟಕಟೆ ಮಾಡಿಸುವದಕ್ಕಿಂತ ಮುಂಚೆ ಇತ್ತೇ ಹೊರತು ಈಗ ಅದು ಒಂದು ಮೋಸವಾಗಿ ಪರಿಣಮಿಸಿದೆ ಹ್ಯಾಗೆಂದರೆ ಟಿಕೆಟ್ ತೆಗೆದುಕೊಳ್ಳುವವರು ಈ ಕಟಕಟೆಯ ಎರಡು ಪಕ್ಕಗಳಿಂದಲೂ ಒಳಕ್ಕೆ ನುಗ್ಗುತ್ತಾರೆ. ಟಿಕೆಟ್ ತೆಗೆದುಕೊಂಡವರು ಗುತ್ತೆ ಒಬ್ಬರಿಗೆ ಸ್ಥಳ ಬಿಟ್ಟು ಆಚೆ ಹೋಗುವದಕ್ಕೆ ಯತ್ನವೇ ಇಲ್ಲ ಏತನ್ಮಧ್ಯೆ ಬುಕ್ಕಿಂಗ್ ಕ್ಲಾರ್ಕ ಆಫೀಸಿನ ಒಳಗೆ ಬರುವ ದೊಡ್ಡ ಮನುಷ್ಯರ ಬಳಿ ಬಿಟ್ಟಿಯವರಿಗೆ, ಪರಿಚಯಸ್ಥರಿಗೆ ಟಿಕೆಟು ಕೊಟ್ಟು ಕಳುಹಿಸುವವರಲ್ಲಿ ಕಾಲವಿಳಂಬವಾಗುತ್ತದೆ ಮೂರನೇ ದರಗತಿಯ ಬಡಬಗ್ಗರ ಕಿಟಕಿಯಲ್ಲಿ ಅಯ್ಯಾ ಜೇಲಾರ್ ಮೇಜಿ, ಕಾಟ್ಸ್ಟೇನ ಟಿಕೆಟ್ ಕೊಡಯ್ಯಾ ಅಂದರೆ ಇಲ್ಲ ಅವಕಾಶವಿಲ್ಲ ಟೈಂ ಆಯ್ತು ಅಂದು ಬಿಡುತ್ತಾರೆ—ಹೀಗೋ ಹೀಗೋ ಪ್ರಯಾಸಪಟ್ಟು ಮುಂದುಗಡೆಯಲ್ಲಿ ಕೈ ಇಟ್ಟು ತೆಗದಂತೆ ಟಿಕೆಟ್ ತೆಗದುಕೊಂಡು ಘಟ್ಟೆಯೊಳಗೆ ಹೋಗೋಣವೆಂದು ಓಡುವದರೊಳಗೆ "ದೇವರು ವರಕೊಟ್ಟರೂ ಪೂಜಾರಿ ಕೊಡನು" ಎಂಬಂತೆ ಟಿಕೆಟ್ ಕಲೆಕ್ಟಿಂಗ್ ಮಹಾಶಯರು ಬಾಗಿಲುಗಳನ್ನು ಬೇಗ ಹಾಕಿ ಇಲ್ಲಿ ಅಲ್ಲಿ ದೀರ್ಘ ಎಂದು ನಿಂತು ಬಿಡುತ್ತಾರೆ—ಪ್ರಯಾಣಿಕರುಗಳು ಬಾಗಿಲು ತೆರೆ ಬಾಗಿಲು ತೆರೆಯೆ ಎಂದು ಘೋಷಿಸುತ್ತಿರುವಾಗ ಉಸ್ತುವಾರಿ ಒಳಗೆ ವಿಸಲ್ ಹಾಕಿ ಬಂಡಿ ಹೊರಟು ಬಿಡುತ್ತದೆ ಈ ಕಷ್ಟಗಳನ್ನು ರೈಲ್ವೆ ಕಂಪನಿಯವರು ೩ನೇ ದರಗತಿ ಪ್ರಯಾಣಿಕರಿಗೆ ಎಂದಿಗೆ ತಪ್ಪಿಸುತ್ತಾರೋ ಈ ಕಷ್ಟಗಳು ಯಾವಾಗಲೂ ಇರುವವಲ್ಲದೆ ತಿಂಗಳ ೧೫ ನೇ ತಾರೀಖಿನಲ್ಲಿ ಗಣಿ ಸಂಬಳಗಳು ಕೊಡಲ್ಪಡುವಾಗ ಈ ಕಷ್ಟಗಳು ಇನ್ನಷ್ಟು ಮಿತಿಮೀರಿ ಹೆಚ್ಚಾಗುತ್ತವೆ

ಈ ಊರಿನಲ್ಲಿ ಸ್ಯಾನಿಟರಿ ಸರಿಯಾಗಿಲ್ಲ—ಕಾಲೇಜ್ ಇಸ್ಕೂಲು ಎಂಬ ರೋಡಿನಲ್ಲಿ ಹೋಟಲ್‌ಗಳೂ, ಹೋಸ ನಂಬಿನ ತಿಂಡಿ ಪದಾರ್ಥಗಳೂ ಮಾರಲ್ಪಡುತ್ತವೆ ಆ ಬೀದಿ ಚರಂಡಿಗಳು ಹೇಳಲಾಗದಷ್ಟು ದುರ್ಗಂಧಯುಕ್ತವಾಗಿವೆ ಗಣಿಯಲ್ಲಿ ರಾಬರ್ಟ್ ಸನ್ ಪೇಟೆಯಲ್ಲಿ ಪ್ಲೇಗ್ ಇದೆ ಅಲ್ಲಿಂದಲೇ ಇಲ್ಲಿನ ಒಬ್ಬ ಬ್ರಾಹ್ಮಣರ ಮನೆಯ ತಲೆದೋರಿ ಇಲ್ಲಿನ ಪ್ಲೇಗ್ ಕ್ಯಾಂಪಿನಲ್ಲಿ ರೋಗಿಯನ್ನೂ ಮತ್ತೆ ಯಲ್ಲಿ ಮನೆಯವರನ್ನೂ ಇಡಲಾಗಿದೆ. ಈ ದಿನ ಪಾಕೀಜಾಯ ಬಹಳ ಮಾರ್ಗವರ್ಜಿಯಿಂದ ನೋಡುತ್ತಿದ್ದರು "ಮಾರಂಕಿ ಬಿದ್ದ ಮೇಲೆ ಭಾವಿ ತೋಡಿದರು" ಎಂಬ ಗಾದೆಗೆ ಸರಿಯೋಯ್ತು ಬೌರಿಂಗ್ ಪ್ಯಾಟೆಗೆ ಸ್ವಲ್ಪ ದೂರದಲ್ಲಿರುವ ದೊಡ್ಡ ಕೆರೆ ಸುತ್ತಲೂ ಜನರು ವಾಸಿಸತಕ್ಕ ಮನೆಗಳಿವೆ ಈ ಕೆರೆಯ ಸುತ್ತ ಜನಗಳು ಪ್ರತಿ ದಿನವೂ ನೂರುಗಟ್ಟಲೆಯಾಗಿ ಬಹಿರ್ಭೂಮಿಗೆ ಹೋಗಿ ಹೇಸಿಗೆಗಳನ್ನು ಮಾಡುತ್ತಲಿದ್ದಾರೆ—ಅಲ್ಲದೆ ವಾರಂ ಪ್ರತಿವಾರ ಸಂತೆ ನಡೆಯುವ ಸಮಯದಲ್ಲಿ ಸಂತೆಯ ಜನರು ಇದರ ಬಳಿ ಹೇಸಿಗೆಗಳನ್ನು ಮಾಡುತ್ತಾರೆ ಅಲ್ಲದೆ ಅದೇ ನೀರನ್ನು ಕುಡಿಯುತ್ತಾರೆ ಇದು ಊರಿನ ಜನರ ಸೌಖ್ಯಕ್ಕೆ ಹಾನಿಕರವಾಗಿದೆ. ಸರ್ಕಾರದವರು ಈ ಕೆರೆಯ ಬಳಿ ಒಂದು ಕಕ್ಕಸ್ ಕಟ್ಟಿಸಿ ದಿನ ಪ್ರತಿ ಪಾಕೀ ಮಾಡಿಸಿದರೆ ಬಹಳ ಅನುಕೂಲವಾಗಿರುತ್ತದೆ ಸಂತೆಗೆ ಬರತಕ್ಕವರಿಂದ ಸುಂಕವಸೂಲ್ ಮಾಡುತ್ತಾರೆ. ೯ ತಿಂಗಳಿಗೆ ಮೂರು ಸಾವಿರ ಚಿಲ್ಲರೆ ರೂಪಾಯಿಗಳಿಗೆ ಗುತ್ತಿಗೆ ಕೊಟ್ಟಿರುತ್ತಾರೆ ಈ ಸಂತೆಗೆ ಬರುವ ಸಾವಿರ ಗಟ್ಟಲೆ ಜನರು ಪಾನಮಾಡುವುದಕ್ಕೆ ಈ ಕೆರೆ ನೀರನ್ನೇ ಕುಡಿಯುತ್ತಾರೆ. ಇಷ್ಟು ಹಣ ಸರ್ಕಾರಕ್ಕೆ ಬರುವಾಗ್ಯೂ ಈ ಸಂತೆ ಜನರಿಗೆ ಕುಡಿಯುವ ನೀರಿಗಾಗಿ ಸಂತೆಯಲ್ಲಿ ಒಂದು ನೀರೋಣಿ ಭಾವಿಯನ್ನೂ ಕೆರೆಯ ಬಳಿ ಒಂದು ಛಾಂಡ್ರಿ ಕಟ್ಟದೆ ಇರುವದು ಬಹು ವ್ಯಸನಕರ. ಸರ್ಕಾರಕ್ಕೆ ಹಣ ಕೊಡುವ ಪರ್ಯಾಯವಾಗಿ ಸರ್ಕಾರದವರು ಜನಗಳಿಗೆ ಈ ಸೌಕರ್ಯವನ್ನು ಯಾಕೆ ಮಾಡಿಕೊಡಕೂಡದು

ಹೀಗೆ ಬೌರಿಂಗ್ ಪೇಟೆಯ ನಿವಾಸಿ

[ಇದರ ಮೊದಲು ಭಾಗ ೩ ನೆ ಪುಟದಲ್ಲಿದೆ]

ಭಕ್ತಿಪೂರ್ವಕವಾಗಿ ಸುಸ್ವಾಗತವನ್ನು ಬಯಸುತ್ತೇವೆ ಹಿಂದುಸ್ಥಾನದಲ್ಲಿ ತಾವು ಸಂಚಾರಮಾಡುತ್ತಾ ನಮ್ಮ ಸ್ಥಳಕ್ಕೂ ದಯಮಾಡಿದ್ದರಿಂದ ನಮಗೆ ವಿಶೇಷ ಗೌರವ ಉಂಟಾಗಿದೆ. ಕಳೆದ ೧೮೭೫ನೇ ಇಸವಿಯಲ್ಲಿ ತಮ್ಮ ತಂದೆಯವರು ಹಿಂದುಸ್ಥಾನಕ್ಕೆ ದಯಮಾಡಿದ್ದಾಗ ಅವರ ಸವಾರಿಯು ಬೆಂಗಳೂರಿಗೆ ಚಿತ್ತೈಸದೆ ಹೋದದ್ದು ನಮ್ಮ ದೌರ್ಭಾಗ್ಯವೆಂದು ಎಣಿಸಿದೆವು. ಇಂಗ್ಲಿಷ್ ರಾಜ್ಯದ ಯುವರಾಜರಿಗೂ ಅವರ ಪತ್ನೀಯವರಿಗೂ ಸುಸ್ವಾಗತವನ್ನು ಬಯಸುವ ವಿಶೇಷ ಸನ್ಮಾನವು ನಮಗೆ ದೊರಕಿದ್ದು ನಮ್ಮ ಸೌಭಾಗ್ಯವಾಗಿರುತ್ತದೆ ತಾವುಗಳು ದಯಮಾಡಿದ ಈ ದಿನವನ್ನು ಪುಣ್ಯದಿನವೆಂದು ಭಾವಿಸುವೆವು ಯಾಕೆಂದರೆ ಈ ದಿನ ತಾವು ಲೇಟ್ ವಿಕ್ಟೋರಿಯಾ ಚಕ್ರವರ್ತಿನಿಯವರ ಭಾವಪ್ರತಿಮೆಯನ್ನು ಕೃಪೆಯಿಟ್ಟು ಪ್ರತಿಷ್ಠೆ ಮಾಡುವ ದಿನವಾಗಿರುತ್ತದೆ ತಮಗೆ ಈ ಹಿಂದುಸ್ಥಾನದ ಸಂಚಾರವು ಸಂತೋಷದಾಯಕವಾಗಿ ಪರಿಣಮಿಸಲೆಂದೂ ತಾವು ಸುಖವಾಗಿ ತಮ್ಮ ಜನ್ಮಭೂಮಿಯನ್ನು ತಲಪುವಂತಾಗಲೆಂದೂ ವಿನಯಪೂರ್ವಕವಾಗಿ ಕೋರಿ ವಿಜ್ಞಾಪಿಸುತ್ತೇವೆ"

ಸ್ವತಃ ನಾವು ನೋಡಿದ ಅನುಭವದ ವಿವರವನ್ನು ಒಪ್ಪಿಸಿದರು. ಇದಕ್ಕೆ ಪ್ರತಿ

ಪ್ರಿನ್ಸ್ ಆಫ್ ವೇಲ್ಸ್‌ರವರು

ಈ ಉಪಚಾರವಾಕ್ಯಗಳನ್ನು ಆದರಾತಿಶಯದಿಂದ ವಂದಿಸಿ, ಸ್ವೀಕರಿಸಿ ಅಡ್ರೆಸ್ಸನ್ನು ಬಹುಸಂತೋಷದಿಂದ ಅಂಗೀಕರಿಸಿ ಕೊಳ್ಳುತ್ತೇನೆ —

"ಸ್ವಪ್ನಗಳು ಬಹು ಶೀಘ್ರದಲ್ಲಿ ಸುಸ್ವರೂಪವುಳ್ಳವಾಗಿಯೂ ಈ ಸುಭಾಗವನ್ನು ಏರ್ಪಡಿಸಿದ್ದಕ್ಕಾಗಿ ನಿಮ್ಮನ್ನು ವಂದಿಸುತ್ತೇನೆ. ಈ ಪಟ್ಟಣವು ಸುಂದರವಾದದ್ದು, ಇದರ ವಾಯುಗುಣವು ಒಳ್ಳೆಯದು. ಇಂಥಾ ಸ್ಥಳವನ್ನು ನೋಡುವುದು ನಮಗೆ ತುಂಬಾ ಸಂತೋಷಕರವಾಗಿದೆ. ಬ್ರಿಟಿಷ್ ಇಂಡಿಯಾ ದೇಶದ ಚರಿತ್ರೆಯಲ್ಲಿ ಈ ಪಟ್ಟಣದ ವಿಚಾರವು ಬಹು ಪ್ರಮುಖವಾಗಿರುತ್ತದೆ. ಮೂವತ್ತು ವರ್ಷಗಳ ಹಿಂದೆ ಚಕ್ರವರ್ತಿ ಸಾರ್ವಭೌಮರವರಿಗೆ ನಿಮ್ಮ ಪಟ್ಟಣವನ್ನು ನೋಡುವುದಕ್ಕೆ ಅವಕಾಶವಾಗಲಿಲ್ಲವೆಂದು ತಿಳಿದಿದ್ದೇನೆ. ಈ ವರ್ಷಗಳಲ್ಲಿ ಬ್ರಿಟಿಷ್ ಇಂಡಿಯಾ ಗವರ್ನಮೆಂಟಿನವರು ಪಟ್ಟಣವನ್ನು ಆಧಾರವಾಗಿ ಮಾಡಿಕೊಂಡಿರುವದರಿಂದ ಲಕ್ಷ್ಯವಿಲ್ಲದ ಪ್ರಯೋಜನವಾಗಿರುತ್ತದೆ. ಆಗಿನ ಕಾಲದಲ್ಲಿ ನಮ್ಮ ತಂದೆಯವರು ಹೋಗಿ ನೋಡುವುದಕ್ಕಾಗದೆ ಇದ್ದ ಅನೇಕಾನೇಕ ಸ್ಥಳಗಳನ್ನು ಈಗ ನಾವು ನೋಡುವುದು ಸುಲಭಸಾಧ್ಯವಾಗಿದೆ. ಬೆಂಗಳೂರು ಪಟ್ಟಣದ ಅನೇಕ ಕಷ್ಟನಷ್ಟಗಳನ್ನು ನೀವು ಸಹಿಸಿ, ಇನ್ನು ಮುಂದೆ ಶ್ರೇಯಸ್ಸನ್ನು ಹೊಂದುವಿರೆಂದು ನಿರೀಕ್ಷಿಸುತ್ತೇನೆ" ಎಂಬುದಾಗಿ ಹೇಳಿಸಿದರು.

ಸುರಂಗಿ.

ಬಳಿಕ ಪ್ರಿನ್ಸ್ ಆಫ್ ವೇಲ್ಸ್ ರವರು ಪತ್ನಿ ಪರಿವಾರ ಸಹಿತ ಅಲ್ಲಿಂದ ಹೊರಟು ಸಾಯಂಕಾಲ ೫ ಘಂಟೆಗೆ ಸೈನ್ಯದ ಪರೇಡು ಸ್ಥಳಕ್ಕೆ ಸೇರಿದ್ದ ಸೈನಿಕರನ್ನು ನೋಡಿ ಅವರ ಸಲಾಮು ಅಂಗೀಕರಿಸಿ ಅನೇಕ ಸಹಸ್ರ ಜನ ಸಮೂಹದಿಂದ ಜಯಘೋಷದಲ್ಲಿ ಬಿಳಿಯ ನಾಲ್ಕು ಕುದುರೆ ಕಟ್ಟಿದ ಸಾರೋಟಿನಲ್ಲಿ ಕುಳಿತುಕೊಂಡು, ಸೈನಿಕರು ಪ್ರಜೆಗಳಿಗೆ ಮನೋಹರ ವಂದನೆ ಮಾಡಿದರು. ಆ ಸಾರೋಟಿನಲ್ಲಿ ಪ್ರಿನ್ಸ್ ಆಫ್ ವೇಲ್ಸ್ ದಂಪತಿಗಳಿಗೆ ಇದಿರು ಎದುರಿಗೆ ಹೈಟ್ ಲಾರ್ಡ್ ಕಿಚನರ್ ಕುಳಿತರು. ಹಿಂದುಗಡೆ ಬಾಡಿಗಾರ್ಡ್ ಸೈನಿಕರು ಕುದುರೆ ಸವಾರಿಯಲ್ಲಿ ನಿಂತರು. ಇಂಗ್ಲಿಷ್ ಸಾರ್ಜಂಟರುಗಳೂ ಸೈನ್ಯಗಳೂ ಹಿಂದೆಯೂ ಮುಂದೆಯೂ ಎಸ್ಕಾರ್ಟ್ ಹೊರಟು ಪಟ್ಟಣದ ಶ್ರೀಗಂಗಾಧರೇಶ್ವರ ದೇವಾಲಯದ ಸಮೀಪದಲ್ಲಿ ಸಾರೋಟು ನಿಂತಿತು. ಉದ್ದಕ್ಕೂ ಎತ್ತರವಾದ ಸಾಲುಗಳಾಗಿ ನಿಂತಿದ್ದ ಜನರು ಚಪ್ಪಾಳೆಗಳು ಆರಂಭವಾದವು. ಮೆರವಣಿಗೆಯು ರೈಲ್ವೆ ಸ್ಟೇಷನಿನ ಧರ್ಮಾಂಬುಧಿ ಕೆರೆ ಏರಿಯ ಮೇಲೆ ಎಡಕ್ಕೆ ತಿರುಗಿ, ಡಫರಿನ್ ರಸ್ತೆಯಲ್ಲಿ ಹೊರಟು, ರೇಸ್ ಕೋರ್ಸ್ ಎಂಬ ಕುದುರೆ ರಸ್ತೆಯಲ್ಲಿ ಇದ್ದ ಅವೆನ್ಯೂ ರೋಡಿನ ಮೇಲೆ ರೆಸಿಡೆನ್ಸಿ ಬಂಗಲೆಗೆ ಮೆಟ್ಟುಬಾಗಿಲಿನ ಮಾರ್ಕ್ ರೋಡು ಸೇರಿ ಜನರು ರಸ್ತೆಯ ಎರಡು ಪಾರ್ಶ್ವಗಳಲ್ಲಿ ಉದ್ದಕ್ಕೂ ಪ್ರಿನ್ಸ್ ಆಫ್ ವೇಲ್ಸ್ ರವರನ್ನೂ ಅವರ ಪತ್ನಿಯವರನ್ನೂ ನೋಡಿ ಸಂತೋಷಪಟ್ಟು ಕೊಂಡರು. ಅವರು ರೆಸಿಡೆನ್ಸಿ ಬಂಗಲೆಯ ಹೆಬ್ಬಾಗಿಲಿಗೆ ಸಮೀಪಿಸಿದಾಗ್ಗೆ ಸರಿಯಾಗಿ ಗೌರವಾರ್ಥವಾದ ೩೧ ತೋಪುಗಳ ಹಾರಿಸಲ್ಪಟ್ಟವು. ಗ್ಯಾಲರಿಗಳ ಮೇಲೆ ಉದ್ದಕ್ಕೂ ಸಾಲುಸಾಲಾಗಿ ಸ್ಕೂಲ್ ಮಕ್ಕಳು ಚಪ್ಪಾಳೆಗಳನ್ನು ತಟ್ಟಿ ಜಯಘೋಷ ಮಾಡಿದರು. ಅಲ್ಲಿಯೂ ಇಂಗ್ಲಿಷ್ ಸೈನಿಕರು ನಿಂತಿದ್ದು ಪ್ರಿನ್ಸ್ ಆಫ್ ವೇಲ್ಸ್‌ರವರಿಗೆ ಸನ್ಮಾನ ಮಾಡಿದರು. ಇಂಗ್ಲಿಷ್ ಬ್ಯಾಂಡ್ ವಾದ್ಯದವರು ಒಳ್ಳೆಯ ಇಂಗ್ಲಿಷ್ ಸುಪದಗಳನ್ನು ಬಾರಿಸಿದರು. ಇಲ್ಲಿಗೆ ಉತ್ಸವವು ಮುಕ್ತಾಯವಾಯಿತು.

ವಿಕ್ಟೋರಿಯಾ ಮಹಾರಾಜ್ಞೀಯವರ ಪ್ರತಿಮೆ

ಸೋಮವಾರ ಮಧ್ಯಾಹ್ನ ಪ್ರಿನ್ಸ್ ಆಫ್ ವೇಲ್ಸ್ ರವರು ಮಹಾರಾಜ್ಞಿ ವಿಕ್ಟೋರಿಯಾ ಚಕ್ರವರ್ತಿನಿಯವರ ಛಾಯಾಪ್ರತಿಮೆಯನ್ನು ಪ್ರತಿಷ್ಠೆ ಮಾಡಿದರು. ಈ ಪ್ರತಿಮೆಯನ್ನು ಬೆಂಗಳೂರು ದಂಡಿನ ಮ್ಯೂಜಿಯಂ ಎಂಬ ವಸ್ತುಸಂಗ್ರಹಾಲಯದ ಬಳಿ ಪೋಲೀಸ್ ಸ್ಟೇಷನಿಗೆ ಎದುರಾಗಿ ದೊಡ್ಡ ಪೀಠದ ಮೇಲೆ ನಿಲ್ಲಿಸಿದ್ದಾರೆ. ಇದನ್ನು ಸುಮಾರು ೫೫,೦೦೦ ರೂಪಾಯಿ ವೆಚ್ಚದಲ್ಲಿ ಬ್ರಾಕ್ ಎಂಬ ಪ್ರಸಿದ್ಧ ಶಿಲ್ಪಿಯು ಸ್ವಯಂ ತಯಾರಿಸಿ ತಂದಿರುತ್ತಾನೆ. ಆ ಪ್ರತಿಮೆಯ ಬಲಗಡೆ ದೊಡ್ಡ ಸಭಿಕರು ಸವಾರರೂ ಕೂತುಕೊಳ್ಳುವುದಕ್ಕೆ ಗ್ಯಾಲರಿ ಎಂಬ ಪೀಠಗಳನ್ನು ಕಟ್ಟಿದ್ದರು. ಇದರ ಎಡಪಾರ್ಶ್ವದಲ್ಲಿ ಸುಂದರವಾದ ಚಪ್ಪರವನ್ನು ಕಟ್ಟಿ ಅದರಲ್ಲಿ ಹಿಂದೂ ದೊಡ್ಡ ಮನುಷ್ಯರ ಮನೆಯವರನ್ನು ಕೂರಿಸಿದ್ದರು. ಪೋಲೀಸ್ ಸ್ಟೇಷನ್ ಮುಂಭಾಗದಲ್ಲಿ ಕೆಲವು ಮೇಜುಗಳನ್ನು ಹಾಕಿ, ಬೇರೆ ಬೇರೆ ವರ್ತಮಾನ ಪತ್ರಿಕೆಗಳ ಪ್ರತಿನಿಧಿಗಳು ಕೂತುಕೊಳ್ಳುವುದಕ್ಕೆ ಸ್ಥಳಮಾಡಿ ಕೊಟ್ಟಿದ್ದರು. ಪ್ರತಿಮೆಯ ಎಡಪಾರ್ಶ್ವದಲ್ಲಿ ದೊಡ್ಡ ಗ್ಯಾಲರಿ ಅಂತಸ್ತು ಕಟ್ಟಿ ಸಾವಿರಾರು ಜನ ಗಂಡಸರು ಹೆಂಗಸರನ್ನೂ ಮಕ್ಕಳನ್ನೂ ಕೂರಿಸಿದರು. ಇದರ ಎಡಪಾರ್ಶ್ವದಲ್ಲಿ ಪ್ರತಿಮೆಯಿಂದ ಸುಮಾರು ೫ ಗಜಗಳ ದೂರದಲ್ಲಿ ಒಂದು ಸುಂದರವಾದ ಮಂಟಪವನ್ನು ಕಟ್ಟಿದ್ದರು. ಸೂರ್ಯ ರಶ್ಮಿಯಲ್ಲಿ ಈ ಚಿತ್ರ ಮಂಟಪವು ಕಂಗೊಳಿಸುತ್ತಿತ್ತು. ಅದರ ಮರಕಿನ ಕೆಲಸವೂ ಚಿತ್ರ ಬೊಂಬೆಗಳ ಅಲಂಕಾರಗಳೂ ಬಹು ನೇತ್ರಾನಂದಕರವಾಗಿದ್ದುವು. ಮಂಟಪದಲ್ಲಿ ಸವಾರರೂ ದೇಶೀಯ ದೊಡ್ಡ ಮನುಷ್ಯರೂ ಉದ್ಯೋಗದಲ್ಲಿದ್ದವರೂ ಹಾಕಿದ್ದ ಕಬ್ಬಿಣದ ಕುರ್ಚಿಗಳ ಮೇಲೆ ಕುಳಿತಿದ್ದರು. ೪|| ಗಂಟೆಗೆ ದಿವಾನ್ ಸರ್ ಕೃಷ್ಣಮೂರ್ತಿಯವರೂ ಅಸಿಸ್ಟೆಂಟರೂ ಸಾರೋಟುಗಳಲ್ಲಿ ಬಂದಿಳಿದರು. ಪ್ರತಿಮೆಯ ತಲೆಯ ವರೆಗೆ ಸ್ವಲ್ಪವೂ ಕಾಣದಂತೆ ನಾಲ್ಕೂ ಕಡೆಗಳಲ್ಲಿ ರಂಗುರಂಗಿನ ರೇಷ್ಮೆ ಬಟ್ಟೆಗಳಿಂದ ಪರದೆಗಳನ್ನು ಮಾಡಿ ಎತ್ತಿ ಕಟ್ಟಿದ್ದರು. ಅದರ ಮುಂಭಾಗದಲ್ಲಿ ಚಿನ್ನದ ಮಿಂಚು ಹಚ್ಚಿದ್ದ ಒಂದು ಸಣ್ಣ ಕಂಭವನ್ನು ಮಾಡಿ ನಿಲ್ಲಿಸಿ, ಆ ಪರದೆಗಳ ದಾರಗಳನ್ನು ಒಂದಾಗಿ ಮಾಡಿ, ಕಂಭದ ಮೇಲೆ ತಗಲಿಹಾಕಿದ್ದರು. ಇಂಗ್ಲಿಷ್ ಸೈನ್ಯಗಳೂ ಇಂಗ್ಲಿಷ್ ವಾಲಂಟಿಯರರೂ ಬಂದು ಪ್ರತಿಮೆಯ ಎದುರು ಭಾಗದಲ್ಲಿ ಸಾಲುಕಟ್ಟಿ ನಿಂತು ಕೊಂಡರು. ಪ್ರತಿಮೆಯ ಹಿಂಭಾಗದಲ್ಲೂ ಎಡಬಲಗಳಲ್ಲೂ ಸಿಪಾಯಿಗಳು ಬಂದೂಕುಗಳನ್ನು ಹಿಡಿದು ನಿಂತಿದ್ದರು. ಇಂಗ್ಲಿಷ್ ಸವಾರರು ರಸ್ತೆಯ ಉದ್ದಕ್ಕೂ ಸರಿಯಾಗಿ ನಿಂತುಕೊಂಡರು. ಈ ಮಧ್ಯರಂಗದ ಸುತ್ತಲೂ ಇರುವ ವಿಶಾಲವಾದ ಮೈದಾನದಲ್ಲಿ ನೋಟದ ಜನರು ಬಿಸಿಲಿನ ಲಕ್ಷ್ಯವಿಲ್ಲದೆ ಸಾವಿರಗಟ್ಟಲೆಯಾಗಿ ಕಿಕ್ಕಿರಿಯುವಂತೆ ನಿಂತುಕೊಂಡಿದ್ದರು. ೪—೧೦ ಕ್ಕೆ ಬ್ರಿಟಿಷ್ ರೆಸಿಡೆಂಟರೂ ಅವರ ಪತ್ನಿಯವರೂ ದಿವ್ಯವಾದ ಮೋಟಾರ್ ಗಾಡಿಯಲ್ಲಿ ಕುಳಿತು, ಮೇಲ್ಕಂಡ ಮಂಟಪದ ಬಳಿಗೆ ಬಂದು ಇಳಿದರು. ಪ್ರಿನ್ಸ್ ಆಫ್ ವೇಲ್ಸ್‌ರವರ ಸಿಬ್ಬಂದಿಗೆ ಸೇರಿದ ಉದ್ಯೋಗದವರೆಲ್ಲಾ ಸಾರೋಟುಗಳಲ್ಲಿ ಬಂದಿಳಿದು, ಆ ಮಂಟಪದ ಹೊರಪಾರ್ಶ್ವದಲ್ಲಿ ಸಾಲಾಗಿ ನಿಂತುಕೊಂಡರು. ರೆಸಿಡೆನ್ಸಿ ಬಂಗಲೆಯಿಂದ ಮೇಲ್ಕಂಡ ಮಂಟಪದ ತನಕ ಇರುವ ಸುಮಾರು ೫—೬ ಫರ್ಲಾಂಗ್ ರಸ್ತೆಯಲ್ಲಿ ಆ ದಿನ ಅಲಂಕಾರ ಮಾಡಿದ್ದುದನ್ನು ಎಷ್ಟು ವರ್ಣಿಸಿದರೂ ಸಾಲದಾಗಿದೆ. ರಸ್ತೆಯಲ್ಲಿ ತಲೆಯೆತ್ತಿ ನೋಡಿದರೆ ಎಡಬಲಕ್ಕೆ ತಿರುಗಿದರೆ ಕೃತಕ ದ್ವಾರಕೆಗಳಲ್ಲದೆ ಮತ್ತೇನೂ ಕಾಣಿಸುತ್ತಿರಲಿಲ್ಲ. ಈ ದಿವಸ ಹಾರಾತೋರಣಗಳು ಸಹಸ್ರಕಿರಣಗಳನ್ನು ಆ ರಸ್ತೆಯ ಮೇಲೆ ಬೀಳದಂತೆ ತಡೆ ಮಾಡಿ ಬಿಟ್ಟಿದ್ದವು.

ಪ್ರಿನ್ಸ್ ಆಫ್ ವೇಲ್ಸ್‌ರವರು ಇಂಥಾ ರಮಣೀಯವಾದ ರಸ್ತೆಯಲ್ಲಿ ಸವಾರಿಮಾಡಿಕೊಂಡು, ಮಂಟಪದ ಬಳಿಯಮೈದಾನಕ್ಕೆ ಸರಿಯಾಗಿ ೪|| ಗಂಟೆಯಾಗಿತ್ತು. ಮೊದಲು ಸುಮಾರು ೫೦ ಇಂಗ್ಲಿಷ್ ಕುದುರೆ ಸವಾರರು ಬಂದರು. ತರುವಾಯ ನಾಲ್ಕು ಕುದುರೆ ಕಟ್ಟಿದ ದಿವ್ಯವಾದ ಸಾರೋಟಿನಲ್ಲಿ ಪ್ರಿನ್ಸ್ ಆಫ್ ವೇಲ್ಸ್ ರವರೂ ಅವರ ಪತ್ನಿಯವರ ಒಂದು ಕಡೆಯೂ ಅವರೆದುರಿಗೆ ಸರ್ ವಾಲ್ಟರ್ ಲಾರೆನ್ಸ್ ಯವರೂ ಕುಳಿತಿದ್ದರು. ಹಿಂದುಗಡೆ ಕೆಂಪು ಛತ್ರಿ, ಕೆಂಪು ಸಮವಸ್ತ್ರಗಳನ್ನು ಧರಿಸಿ ಇಬ್ಬರು ಊಳಿಗದವರು ಕುಳಿತಿದ್ದರು. ಈ ಸಾರೋಟಿನ ಹಿಂದುಗಡೆಯೂ ಸುಮಾರು ೫೦ ಇಂಗ್ಲಿಷ್ ಕುದುರೆ ಸವಾರರು ಬಂದರು. ಕೂಡಲೇ ಎಲ್ಲಾ ಕಡೆಗಳಲ್ಲಿದ್ದವರೂ ಎದ್ದು ನಿಂತುಕೊಂಡರು. ಬ್ರಿಟಿಷ್ ರೆಸಿಡೆಂಟರೂ ದಿವಾನರವರೂ ಸಾರೋಟಿನ ಬಳಿಗೆ ಬಂದು, ಪ್ರಿನ್ಸ್ ಆಫ್ ವೇಲ್ಸ್ ರವರನ್ನೂ ಅವರ ಪತ್ನಿಯವರನ್ನೂ ಬ್ಯಾಂಡ್ ವಾದ್ಯಗಳು ಬಾರಿಸುತ್ತಿರುವಲ್ಲಿ ಸಾರೋಟಿನಿಂದ ಇಳಿಸಿ, ಆ ಮಂಟಪದ ಒಳಕ್ಕೆ ಕರೆದುಕೊಂಡು ಹೋಗಿ ಶ್ರೀಮತ್ ವಾದ ಚಿನ್ನದ ಕುರ್ಚಿಗಳ ಮೇಲೆ ಕೂರಿಸಿದರು. ತರುವಾಯ ರೆಸಿಡೆಂಟರವರು ದಿವಾನರವರ ಕಡೆ ತಿರುಗಿ ನೋಡಲಾಗಿ ಅವರು ಮುಂದೆ ಬಂದು ಪ್ರಿನ್ಸ್ ಆಫ್ ವೇಲ್ಸ್ ರವರನ್ನು ಕುರಿತು ಒಂದು ಅಡ್ರೆಸ್ಸನ್ನು ಓದಿ ಹೇಳಿದರು. ಮಹಾರಾಜ್ಞಿ ವಿಕ್ಟೋರಿಯಾ ಮೆಮೋರಿಯಲ್ ಫಂಡಿನ ಕಮಿಟಿ ಮೆಂಬರುಗಳೂ ಕೂಡಲೇ ಬಂದು ಎದುರಿಗೆ ನಿಂತುಕೊಂಡರು. ಅಡ್ರೆಸ್ಸಿನ ಮುಖ್ಯಾಭಿಪ್ರಾಯವೇನೆಂದರೆ—

"ಘನವನ್ನುಳ್ಳ ಯುವರಾಜ ಸಾರ್ವಭೌಮರವರೇ,

"ಮೈಸೂರು ಸಂಸ್ಥಾನದವರೆಲ್ಲಾ ಲೇಟ್ ಚಕ್ರವರ್ತಿನಿ ವಿಕ್ಟೋರಿಯಾ ರಾಣಿಯವರ ಹೆಸರನ್ನು ಈ ಸಂಸ್ಥಾನದಲ್ಲಿ ಶಾಶ್ವತವಾಗಿರಬೇಕೆಂದು ಬಹಳವಾಗಿ ಕಾಯಲಾಗಿದ್ದು ಈ ಕಾರ್ಯವನ್ನು ಪ್ರಯತ್ನಪೂರ್ವಕವಾಗಿ ಮಾಡಿರುವರು. ಇದನ್ನು ತಾವು ಈ ದಿನ ಪೂರ್ತಿಮಾಡಿ, ನಮ್ಮಗಳನ್ನು ಕೃತಾರ್ಥರನ್ನಾಗಿ ಮಾಡಬೇಕೆಂದು ಬಹುಭಕ್ತಿಪೂರ್ವಕವಾಗಿ ತಮ್ಮನ್ನು ಬೇಡಿಕೊಳ್ಳುತ್ತೇವೆ. ವೈಸ್‌ರಾಯ್ ಲಾರ್ಡ್ ಕರ್ಜನರವರು ಪ್ರಾರಂಭಿಸಿದ ಕಲ್ಕತ್ತಾ ದೇಶೀಯ ವಿಕ್ಟೋರಿಯಾ ಮೆಮೋರಿಯಲ್ ಫಂಡಿಗೆ ನಮ್ಮ ಮಹಾರಾಜರವರೂ ಪ್ರಜೆಗಳೂ ಬಹಳವಾಗಿ ದ್ರವ್ಯಸಹಾಯ ಮಾಡಿರುತ್ತಾರೆ. ಆದರೂ ದಂಡಿನ ಪ್ರಜೆಗಳೂ ಸೇರಿ ಈ ಸ್ಥಳದಲ್ಲಿ ಆಕೆಯವರ ಒಂದು ಪ್ರತಿಮೆಯನ್ನು ಇಡಬೇಕೆಂದು ಗೊತ್ತುಮಾಡಿದರು. ಗವರ್ನಮೆಂಟಿನವರು ಈ ಶಾಶ್ವತ ಕಾರ್ಯವನ್ನು ರಾಜಧಾನಿಗಿಂತಲೂ ಬೆಂಗಳೂರಿನಲ್ಲೇ ಮಾಡತಕ್ಕದ್ದು ಯುಕ್ತವೆಂದು ಕುತೂಹಲಪಟ್ಟರು. ತಾವು ಇಂಥಾ ಪ್ರತಿಮೆಯನ್ನು ಪ್ರತಿಷ್ಠೆ ಮಾಡುವುದಾಗಿ ಒಪ್ಪಿಕೊಂಡದ್ದು ನಮ್ಮ ಭಾಗ್ಯವೇ ಸರಿ. ಕಾಯಿಲೆಯಾಗಿಯೂ, ಪತಿಯಾಗಿಯೂ, ರಾಣಿಯಾಗಿಯೂ ಆಕೆಯವರು ಕೋಟ್ಯಾನುಕೋಟಿ ಪ್ರಜೆಗಳಿಗೆ ಅಸಂಖ್ಯಾತವಾದ ಉಪಕಾರಗಳನ್ನು ಮಾಡಿರುತ್ತಾರೆ. ತಾವು ಕೃಪೆಯಿಟ್ಟು ಈ ಪ್ರತಿಮೆಯನ್ನು ತಮ್ಮ ಹಸ್ತದಿಂದ ಮುಟ್ಟಿ ತೆರೆಯಬೇಕೆಂದು ಬೇಡುತ್ತೇವೆ."

ಎಂಬೀ ರೀತಿಯಲ್ಲಿ ಹೇಳಿ ವಂದಿಸಿ, ಹಿಂದೆ ಹೋಗಿ ನಿಂತುಕೊಂಡರು.

ಪ್ರಿನ್ಸ್ ಆಫ್ ವೇಲ್ಸ್ ರವರು ಎದ್ದು ನಿಂತು ಕಮಿಟಿಯವರನ್ನೂ ಸಭಾಸದರನ್ನೂ ವಂದಿಸಿ, ಸಮಯೋಚಿತವಾದ ನಾಲ್ಕಾರು ಮಾತುಗಳನ್ನು ಪ್ರತ್ಯುತ್ತರವಾಗಿ ಹೇಳಿದರು. ತರುವಾಯ ಪ್ರಿನ್ಸ್ ಆಫ್ ವೇಲ್ಸ್‌ರವರು ಬ್ರಿಟಿಷ್ ರೆಸಿಡೆಂಟರ ಮತ್ತು ಚೀಫ್ ಇಂಜನಿಯರ್ ಮಿ|| ಮೆಕ್ಹಚಿನ್ ಯವರ ಸಂಗಡ ಪ್ರತಿಮೆಯ ಸಮೀಪಕ್ಕೆ ದಯಮಾಡಿ, ಆ ಇಂಜನಿಯರ ಕೂಡೆ ಸ್ವಲ್ಪಹೊತ್ತು ಮಾತನಾಡುತ್ತಿದ್ದು ಸಣ್ಣ ಕಂಭಕ್ಕೆ ತಗಲಿಸಿದ್ದ ದಾರವನ್ನು ಹಿಡಿದು ಎಳೆದರು. ಪ್ರತಿಮೆಯ ಸುತ್ತಲೂ ಇದ್ದ ತೆರೆಯು ತಕ್ಷಣವೇ ಕೆಳಗೆ ಬಿದ್ದಿತು. ಸಮಸ್ತರೂ ಎದ್ದು ನಿಂತು, ಅದನ್ನು ನೋಡಿ ಪರಮಸಂತೋಷಭರಿತರಾಗಿ ಕೈ ಚಪ್ಪಾಳೆಗಳನ್ನು ತಟ್ಟಿದರು. ಗೌರವಾರ್ಥವಾದ ೧೦೧ ಫಿರಂಗಿ ಗುಂಡುಗಳನ್ನು ಹಾರಿಸಿದರು. ಬ್ಯಾಂಡ್ ವಾದ್ಯಗಾರರು ಮನೋಹರವೂ ಸಮಯೋಚಿತವೂ ಆದ ಇಂಗ್ಲಿಷ್ ಸುಪದವನ್ನು ಬಾರಿಸಿದರು. ಸೈನಿಕರೆಲ್ಲಾ ಸಲಾಂ ಮಾಡಿದರು. ಪ್ರಿನ್ಸ್ ಆಫ್ ವೇಲ್ಸ್‌ರವರು ಸ್ವಲ್ಪ ಹೊತ್ತು ಪ್ರತಿಮೆಯನ್ನು ನೋಡುತ್ತಿದ್ದು, ಹಿಂತಿರುಗಿ ಮಂಟಪಕ್ಕೆ ಚಿತ್ತೈಸಿದರು. ಅವರ ಸಾರೋಟು ಬಂದು ನಿಂತಿತು. ಪ್ರಿನ್ಸ್ ಆಫ್ ವೇಲ್ಸ್ ದಂಪತಿಗಳು ದಯಮಾಡಿ, ಸಾರೋಟಿನಲ್ಲಿ ಕುಳಿತುಕೊಂಡರು. ಹಿಂದೆ ಮುಂದೆ ಕುದುರೆ ಸೈನ್ಯಗಳು ಎಸ್ಕಾರ್ಟ್ ಹೊರಟವು. ಎಲ್ಲಾ ಜನರೂ ಕೈ ಚಪ್ಪಾಳೆ ತಟ್ಟಿ ಜಯಧ್ವನಿ ಮಾಡುತ್ತಿರುವಲ್ಲಿ ಸಾರೋಟು ಅಲ್ಲಿಂದ ಮುಂದಕ್ಕೆ ಹೊರಟು ಹೋಯಿತು. ತರುವಾಯ ದೊಡ್ಡ ಮನುಷ್ಯರೂ ಸವಾರರೂ ಪ್ರಜೆಗಳೂ ಪ್ರತಿಮೆಯ ಬಳಿಗೆ ಹೋಗಿ ಅದನ್ನು ನೋಡಿ ಪರಮಸಂತೋಷಪಡುತ್ತಿದ್ದರು. ಇಲ್ಲಿಗೆ ಎರಡನೇ ಉತ್ಸವವು ಮುಗಿಯಿತು.

ಪ್ರತಿಮೆಯು

ಈ ಪ್ರತಿಮೆಯನ್ನು ಬಿಳೀ ಬೆಣಚುಕಲ್ಲಿನಲ್ಲಿ ನಾಲ್ಕಾಗೆ ಕೆತ್ತಿ ಹೊಳೆಯುವ ಪೀಠದ ಮೇಲೆ ನಿಲ್ಲಿಸಿದಾರೆ. ಅದೂ ಬಿಳೀ ಕಲ್ಲಿಯಲ್ಲೇ ತಯಾರಾದದ್ದು. ರಾಣಿಯವರು ಬಹಳ ಎತ್ತರವಾಗಿ ನಿಂತಿರುವಂತಿದೆ. ಬಲಗೈಯಲ್ಲಿ ಉದ್ದವಾದ ರಾಜದಂಡವನ್ನೂ ಎಡಗೈಯಲ್ಲಿ ಪ್ರಪಂಚವೆಂಬ ಚಂಡನ್ನೂ ಹಿಡಿದಿರುವುದು. ತಲೆಯ ಮೇಲೆ ಕಿರೀಟವಿರುತ್ತೆ. ದೇಹೀಯ ಸ್ತ್ರೀಯರು ಅಂಗಾ ಕಟ್ಟಿಕೊಂಡು ಮೇಲ್ಹೊದಿಕೆಯನ್ನು ಕೆಳಗಿನಿಂದ ಎಡಗೈ ಮೇಲೆ ಎಳೆದು ಬಲಭುಜದ ಕಡೆಯಿಂದ ಕೆಳಕ್ಕೆ ಇಳೀ ಬಿಟ್ಟುಕೊಳ್ಳುವಂತೆ ಈ ಪ್ರತಿಮೆಯಲ್ಲಿ ಕೆತ್ತಿರುವುದು. ಮುಖಭಾವವು ಆಕೆಯ ಪವಿತ್ರ ಸ್ವಭಾವವನ್ನು ತೋರಿಸುವಂತೆ ಇರುತ್ತದೆ. ಪ್ರತಿಮೆಯ ದೃಷ್ಟಿಯು ದಂಡಿನ ಕಡೆಗೆ ತಿರುಗಿಕೊಂಡು ನೋಡುತ್ತಿರುವಹಾಗಿದೆ.

ಲಾಲ್ ಬಾಗಿನಲ್ಲಿ ಪ್ರದರ್ಶನ.

ಪ್ರಿನ್ಸ್ ಆಫ್ ವೇಲ್ಸ್‌ರವರು ಪತ್ನಿಸಹಿತ ಅಲ್ಲಿಂದ ಮೆರವಣಿಗೆ ಹೊರಟು ಕಬ್ಬನ್ ಪಾರ್ಕ್, ಶೇಷಾದ್ರಿ ಮೆಮೋರಿಯಲ್ ಹಾಲ್, ಸರ್ವೆ ಆಫೀಸ್, ಇವುಗಳನ್ನು ನೋಡಿಕೊಂಡು, ಮುಲ್ಲಂಗಿಯ ಬಾಗಿಲ ಬಳಿ ಹಾಕಿದ್ದ ಸುಂದರವಾದ ದೊಡ್ಡ ಚಪ್ಪರದೊಳಗೆ ನುಗ್ಗಿ, ಪಟ್ಟಣದ ದೊಡ್ಡಪೇಟೆ ಬೀದಿಗಳ ಮಾರ್ಗವಾಗಿ ಹೊರಟು, ಕೋಟೆಯ ಆಚೆ ಎಡಕ್ಕೆ ತಿರುಗಿ ಮಾವಳ್ಳಿಯ ಮೇಲೆ ಹಾಸಿ ಲಾಲ್ ಬಾಗ್ ಎಂಬ ಉದ್ಯಾನವನವನ್ನು ಪ್ರವೇಶಿಸಿ, ಅಲ್ಲಿರುವ ಗಾಜಿನ ಭವನದ ಬಳಿ ಸಾರೋಟಿನಿಂದಿಳಿದರು. ಲಾಲ್ ಬಾಗ್ ಸೂಪರಿಂಟೆಂಡೆಂಟ್ ಮಿ|| ಕ್ರೂಮ್ ಬಿಗ್ ಯವರು ಹಾಜರಾಗಿದ್ದು ಅವರನ್ನು ಒಳಕ್ಕೆ ಕರೆದುಕೊಂಡು ಹೋಗಿ, ಅಲ್ಲಿ ಪ್ರದರ್ಶನ ಮಾಡಿದ್ದ ಪುಷ್ಪಗಳನ್ನು ತೋರಿಸಿದರು. ಪ್ರಿನ್ಸ್ ಆಫ್ ವೇಲ್ಸ್ ದಂಪತಿಗಳು ಬಹಳ ಸಂತೋಷಪಟ್ಟು ಅಲ್ಲೇ ಸ್ವಲ್ಪ ಹೊತ್ತು ವಿಶ್ರಮಿಸಿಕೊಂಡು, ಫಲಾಹಾರ ಪೇಯಗಳನ್ನು ಸ್ವೀಕರಿಸಿ ಸುಮಾರು ೬ ಗಂಟೆಗೆ ಅಲ್ಲಿಂದ ಸಾರೋಟಿನಲ್ಲಿ ಹೊರಟು, ಮಿಷನ್ ರಸ್ತೆ, ಸಿಟೀಮಾರ್ಕೆಟ್, ಕಾಲರಾ ಆಸ್ಪತ್ರೆ, ಸರ್ವೆ ಆಫೀಸ್, ಕಬ್ಬನ್ ಪಾರ್ಕ್, ಈ ಮಾರ್ಗವಾಗಿ ಸವಾರಿ ಮಾಡಿಕೊಂಡು, ಯಥಾಪ್ರಕಾರ ರೆಸಿಡೆನ್ಸಿ ಬಂಗಲೆಯನ್ನು ತಲುಪಿದರು.

ಹಿಂತಿರುಗಿ ಹೋಗುವಾಗ್ಗೆ ಮುಲ್ಲಂಗಿಯ ಬಾಗಿಲ ಬಳಿ ಚಪ್ಪರದಲ್ಲಿ ಒಬ್ಬ ಬಾಲಕಿಯು ಪ್ರಿನ್ಸ್ ಆಫ್ ವೇಲ್ಸ್ ರವರ ಪತ್ನಿಯವರಿಗೆ ದಿವ್ಯವಾದ ಹಾರವನ್ನು ಒಪ್ಪಿಸಿದಳು. ಸರ್ಕಾರದವರು ಸ್ಕೂಲ್ ಬಾಲಕ ಬಾಲಕಿಯರಿಗೆ ಅಲ್ಲೇ ಮಿಠಾಯಿ ಪಟ್ಟಣಗಳನ್ನು ಕೊಡಿಸಿದರು.

ಆ ದಿನ ರಾತ್ರಿ ರೆಸಿಡೆನ್ಸಿ ಬಂಗಲೆಯಲ್ಲಿ ರಾಜದಂಪತಿಗಳಿಗೆ ದಿವ್ಯವಾದ ಭೋಜನವನ್ನು ಮಾಡಿ, ಬಾಣ ಬಿರುಸುಗಳಿಂದಲೂ ದೀಪೋತ್ಸವದಿಂದಲೂ ಮುಕ್ತಾಯಮಾಡಿದರು.

ಮೂರನೇ ದಿನದ ಉತ್ಸವ

ಮಂಗಳವಾರ ಬೆಳಿಗ್ಗೆ ೭ ಗಂಟೆಗೆ ಪ್ರಿನ್ಸ್ ಆಫ್ ವೇಲ್ಸ್‌ರವರು ಅಶ್ವಾರೂಢರಾಗಿಯೂ ಅವರ ಪತ್ನಿಯವರು ಸಾರೋಟಿನಲ್ಲೂ ರೆಸಿಡೆನ್ಸಿ ಬಂಗಲೆಯಿಂದ ಹೊರಟು, ಪರೇಡ್ ಗ್ರೌಂಡ್ ಎಂಬ ಮೈದಾನಕ್ಕೆ ದಯಮಾಡಿ, ಕ್ಯಾವಲರಿ ಇನ್‌ಫ್ಯಾಂಟ್ರಿ ಎಂಬ ಸೈನಿಕರ ಕವಾತನ್ನು ಪರಾಂಬರಿಸಿ ಅವರಿಗೆ ಹೊಸ ಧ್ವಜಗಳನ್ನು ಕೊಟ್ಟರು. ಈ ಉತ್ಸವವು ಬಹಳ ವಿನೋದವಾಗಿ ನಡೆಯಿತು.

ಅಲ್ಲಿಂದ ಪ್ರಿನ್ಸ್ ಆಫ್ ವೇಲ್ಸ್‌ರವರು ಪತ್ನಿಸಹಿತ ಸಾರೋಟಿನಲ್ಲಿ ಕುಳಿತು, ಕ್ವೀನ್ಸ್ ರೋಡ್, ಕ್ಯಾವಲ್ರಿ ರೋಡ್, ಟ್ರಿನಿಟಿ ರೋಡ್, ಈ ರಸ್ತೆಗಳಲ್ಲಿ ಹೊರಟು, ದಂಡಿನ ಆಸ್ಪತ್ರೆಗೆ ದಯಮಾಡಿದರು. ಡಾಕ್ಟರುಗಳು ಅವರನ್ನು ಎದುರುಗೊಂಡು, ಒಳಕ್ಕೆ ಕರೆದುಕೊಂಡು ಹೋಗಿ ಆಸ್ಪತ್ರೆಯ ಎಲ್ಲಾ ಭಾಗಗಳನ್ನೂ ತೋರಿಸಿದರು. ಪ್ರಿನ್ಸ್ ಆಫ್ ವೇಲ್ಸ್ ದಂಪತಿಗಳು ಆಸ್ಪತ್ರೆಯೊಳಗಿನ ಸರ್ವಾಂಗಗಳನ್ನೆಲ್ಲಾ ಪರಾಂಬರಿಸಿ ಸಂತೋಷಪಟ್ಟು, ಡಾಕ್ಟರುಗಳನ್ನು ಪ್ರಶಂಸಿಸಿ, ಅಲ್ಲಿಂದ ಸಾರೋಟನ್ನು ಹತ್ತಿ ಹಿಂತಿರುಗಿ ರೆಸಿಡೆನ್ಸಿ ಬಂಗಲೆಗೆ ದಯಮಾಡಿದರು.

ಆ ದಿನ ಸಾಯಂಕಾಲ ಬ್ರಿಟಿಷ್ ರೆಸಿಡೆಂಟರವರು ರೆಸಿಡೆನ್ಸಿ ಬಂಗಲೆಯಲ್ಲಿ ರಾಜದಂಪತಿಗಳಿಗಾಗಿ ಗಾರ್ಡನ್ ಪಾರ್ಟಿ ಎಂಬ ಸಂತೋಷೋತ್ಸವವನ್ನು ಕಲ್ಪಿಸಿ, ಸವಾರರನ್ನೂ ದೊಡ್ಡ ಮನುಷ್ಯರನ್ನೂ ಜಮೀನ್ದಾರರನ್ನೂ ಕರೆಸಿಕೊಂಡಿದ್ದರು. ಪ್ರಿನ್ಸ್ ಆಫ್ ವೇಲ್ಸ್‌ರವರು ಈ ಉತ್ಸವದಲ್ಲಿ ಸೇರಿ ತುಂಬಾ ಸಂತೋಷಪಟ್ಟರು.

ನಾಲ್ಕನೇ ದಿನದ ಉತ್ಸವ.

ನೆನ್ನೆ ಬೆಳಿಗ್ಗೆ ೧೦ ಗಂಟೆಗೆ ಪ್ರಿನ್ಸ್ ಆಫ್ ವೇಲ್ಸ್‌ರವರು ಪತ್ನಿ ಪರಿವಾರ ಸಹಿತ ರೆಸಿಡೆನ್ಸಿ ಬಂಗಲೆಯಲ್ಲಿ ದಿವ್ಯವಾದ ಸಾರೋಟಿನಲ್ಲಿ ಕುಳಿತು ಗೌರವಾರ್ಥವಾದ ೩೧ ತೋಪುಗಳು ಹಾರುತ್ತಿರುವಾಗ್ಗೆ ಹೊರಟು, ಮೊದಲನೇ ದಿನ ಬಂದ ರಸ್ತೆಯಲ್ಲೇ ಸವಾರಿ ಮಾಡಿಕೊಂಡು, ಸಿಟಿ ರೈಲ್ವೇ ಸ್ಟೇಷನ್ ತಲುಪಿದರು. ಅಲ್ಲಿ ಬ್ರಿಟಿಷ್ ರೆಸಿಡೆಂಟರೂ, ಅವರ ಅಸಿಸ್ಟೆಂಟರೂ, ಸೈನ್ಯಾಧಿಪತಿಯೂ ಕಾದಿದ್ದು, ಅವರನ್ನು ಗಾಡಿಯಿಂದ ಇಳಿಸಿ, ಸ್ಟೇಷನ್ ಮೆಟ್ಟಲ ಮೇಲೆ ಹಾಸಿ ಒಳಕ್ಕೆ ಇವರನ್ನು ಕರೆದುಕೊಂಡು ಹೋಗಿ, ಸ್ಪೆಷಲ್ ರೈಲ್ ಗಾಡಿಗಳಲ್ಲಿ ಕೂರಿಸಿದರು. ಕೂಡಲೇ ಗೌರವಾರ್ಥವಾದ ೩೧ ತೋಪುಗಳು ಹಾರಿಸಲ್ಪಟ್ಟವು. ಪ್ರಿನ್ಸ್ ಆಫ್ ವೇಲ್ಸ್‌ರವರೂ ಅವರ ಪತ್ನಿಯವರೂ ಸಮಸ್ತ ಅಧಿಕಾರಿಗಳನ್ನೂ ದೊಡ್ಡ ಮನುಷ್ಯರನ್ನೂ ವಂದಿಸುತ್ತಿರುವಲ್ಲಿ ರೈಲ್ ಗಾಡಿಯು ಬೇಗನೆ ಸಿಟಿ ಸ್ಟೇಷನಿನಿಂದ ಧುಸ್ ಧುಸ್ ಎಂದು ಶಬ್ದ ಮಾಡುತ್ತಾ ಹೊರಟಿತು. ಎಲ್ಲರೂ ಕೃತಕೃತ್ಯರಾಗಿ ಹಿಂತಿರುಗಿ ತಮ್ಮ ತಮ್ಮ ಮನೆಗಳನ್ನು ಕುರಿತು ತೆರಳಿದರು.

P. SUBBAROY'S

World Renowned and most Efficacious

Ayurvedic Medicines.

ಪಿ. ಸುಬ್ಬರಾಯಿಯವರ

ಲೋಕಪ್ರಸಿದ್ಧವಾದ ಮತ್ತು ಅತ್ಯಂತ ಗುಣಕಾರಿಯಾದ

ಆಯುರ್ವೇದ ಔಷಧಗಳು.

11-11

೧೦. ಜ್ವರಸಂಹಾರಿ—ಎಲ್ಲಾ ವಿಧವಾದ ಜ್ವರ, ವಿಷಮಶೀತ ಜ್ವರ, ಎರಡು ದಿನಕ್ಕೊಮ್ಮೆ, ಮೂರು ದಿನಕ್ಕೊಮ್ಮೆ ಬರುವ ಜ್ವರ, ಚಳಿ, ಇನ್‌ಫ್ಲುಯೆಂಜ, ಚಳಿಜ್ವರ, ವಾತರೋಗ, ಇವುಗಳನ್ನು ಸಂಪೂರ್ಣವಾಗಿ ವಾಸಿ ಮಾಡುವದು. ಪೆಟ್ಟಿಗೆ ೧ ಕ್ಕೆ ರೂ ೧ ವಿ. ಪಿ. ಛಾರ್ಜು ೫ ಆಣೆ

೧೧ ಕೂದಲು ಉದುರಿಹೋಗುವದಕ್ಕೆ—ಕೂದಲು ಬೆಳೆದಿರುವ ಸ್ಥಳಕ್ಕೆ ಹಚ್ಚಿದರೆ ಚರ್ಮಕ್ಕೆ ತೊಂದರೆಯಾಗದೆ ೫ ನಿಮಿಷದಲ್ಲೇ ಉದುರಿಹೋಗುವದು. ಸೀಸೆ ೧ ಕ್ಕೆ ೪ ಆಣೆ. ವಿ. ಪಿ ಛಾರ್ಜು ೩ ಸೀಸೆ ವರೆಗೂ ೫ ಆಣೆ.

೧೨ ಸುಗಂಧಕದಂತಚೂರ್ಣ—ಎಲ್ಲಾ ವಿಧವಾದ ಹಲ್ಲುನೋವುಗಳನ್ನು ವಾಸಿಮಾಡುವದು ಸೀಸೆ ೧ಕ್ಕೆ ೪ ಆಣೆ. ವಿ ಪಿ ಛಾರ್ಜು ೩ ಸೀಸೆ ವರೆಗೂ ೫ ಆಣೆ.

೧೩ ಚೇಳಿನ ಔಷಧ—ಚೇಳು ಕಚ್ಚಿದ ಸ್ಥಳಕ್ಕೆ ಕೂಡಲೆ ಇದರ ಕೆಲವು ತೊಟ್ಟುಗಳನ್ನು ಬಿಟ್ಟ ತಕ್ಷಣವೇ ಉರಿಯು ನಿಲ್ಲುವದು ಪ್ರತಿ ಕುಟುಂಬದಲ್ಲಿಯೂ ಆವಶ್ಯಕವಾಗಿರಬೇಕಾದದ್ದು ಸೀಸೆ ೧ಕ್ಕೆ ೪ ಆಣೆ. ವಿ ಪಿ ಛಾರ್ಜು ೧೨ ಸೀಸೆ ವರೆಗೂ ೫ ಆಣೆ ೧೨ ಸೀಸೆಗಳನ್ನು ಒಂದೇ ಆವರ್ತಿ ತರಿಸಿಕೊಂಡರೆ ಬೆಲೆ ೨-೮-೦ ರೂ. ವಿ ಪಿ ಛಾರ್ಜು ಅಲಾಯದ ಸಿಲೋನಿಗೆ ೬ ಆಣೆ.

೧೪. ಮಧುರಧ್ವನಿ ಮಾತ್ರೆ—ಧ್ವನಿಯಲ್ಲಿರುವ ನ್ಯೂನತೆಗಳನ್ನು ಸರಿಮಾಡಿ ಮನೋಹರವಾದ ಧ್ವನಿಯನ್ನುಂಟುಮಾಡಿ ಸ್ಫುಟವಾಗಿ ಮಾತನಾಡುವದಕ್ಕೆ ವಿಶೇಷ ಅನುಕೂಲಪಡಿಸಿಕೊಡುವದು ಮುಖ್ಯವಾಗಿ ಸಂಗೀತಗಾರರು, ಉಪನ್ಯಾಸಕರು ಮೊದಲಾದವರಿಗೆ ಬಹಳ ಸಹಕಾರಿಯು ಇದರ ಸೇವನೆಯಿಂದ ಭಾರವಾದ ಧ್ವನಿಯು ಸರಿಯಾಗುವದು. ಹಾಡಿದರೆ ಕಿವಿಗಿಂಪಾಗುವಂತಹ ಧ್ವನಿಯು ಹೊರಡುವದು. ಸೀಸೆ ೧ ಕ್ಕೆ ೮ ಆಣೆ ವಿ ಪಿ ಛಾರ್ಜು ೩ ಸೀಸೆ ವರೆಗೂ ೫ ಆಣೆ.

೧೫ ಸ್ನಾನಕ್ಕೆ ಸುವಾಸನಾ ಭಸ್ಮ—ಸುವಾಸನೆಯುಳ್ಳ ಈ ಭಸ್ಮವು ಸ್ನಾನಕಾಲದಲ್ಲಿ ಪ್ರಾಯದ ಗಂಡಸರೂ, ಹೆಂಗಸರೂ, ಮುದುಕರೂ ಉಪಯೋಗಿಸುವದಕ್ಕೆ ಅನುಕೂಲವಾಗಿರುವದು. ಚರ್ಮಗತವಾದ ಕೊಳೆಯನ್ನೂ ಬೆವರಿನ ದುರ್ಗಂಧವನ್ನೂ ಹೋಗಲಾಡಿಸಿ, ಚರ್ಮವನ್ನು ಮೃದುವಾಗಿ, ಮಿಂಚುವಂತೆ ಹೊಳಪುಕಟ್ಟಿ, ತಂಪನ್ನುಂಟುಮಾಡುವದು ಇದಲ್ಲದೆ ದೇಹದಲ್ಲಿ ಸರ್ವದಾ ಸುಗಂಧವಿರುವಂತೆ ಮಾಡುವದು ಚೂರ್ಣವು ಸ್ನಾನಕಾಲದಲ್ಲಿ ಅತ್ಯಂತೋಪಯುಕ್ತವಾದುದರಿಂದ ಪ್ರತಿಯೊಬ್ಬರೂ ಉಪಯೋಗಿಸಲಿಕ್ಕೆ ಯೋಗ್ಯವಾಗಿದೆ. ಪೆಟ್ಟಿ ೧ಕ್ಕೆ ೮ ಆಣೆ ವಿ. ಪಿ ಡಾಕಲು ೩ ಆಣೆ

೧೬ ಸಂಜೀವನ ಮಾತ್ರೆಗಳು—ಮಕ್ಕಳಿಗೆ ಜ್ವರ, ನರಗಳ ಸೆಳೆತ, ನಿದ್ರೆಮಾಡದಿರುವದು, ಅಧಿಕವಾಗಿ ಹೋಗುವದು, ಛಳಿ, ಕೆಮ್ಮಲು, ತಲೆನೋವು. ನೆಗಡಿ, ಇನ್ನೂ ಮಕ್ಕಳಿಗೆ ಬರುವ ಅಜೀರ್ಣಸಂಬಂಧವಾದ ರೋಗಗಳಿಗೆ ಒಳ್ಳೇ ಮದ್ದಾಗಿರುವದು ಇದನ್ನು ದೊಡ್ಡವರು ಸಹ ಉಪಯೋಗಿಸಬಹುದು. ಸೀಸೆ ೧ಕ್ಕೆ ೧೦ ಆಣೆ. ವಿ ಪಿ. ಛಾರ್ಜು ೩ ಸೀಸೆ ವರೆಗೂ ೫ ಆಣೆ.

೧೭. ಗೋರೋಜನ ಮಾತ್ರೆ—ಎಲ್ಲಾ ವಿಧವಾದ ಜ್ವರಗಳಿಗೂ, ವಿಷಮಶೀತಜ್ವರ, ವಿಷಮ ಜ್ವರ, ಪ್ರತಿದಿನ ಜ್ವರ, ಇವುಗಳಿಗೆ ಅದ್ವಿತೀಯವಾದ ಔಷಧವು. ಮಲೇರಿಯಾ ಜ್ವರ, ಹೊಟ್ಟೆಯಲ್ಲಿ ಗಡ್ಡೆ ಆಗಿದ್ದರೆ, ಮಿದುಳಿನ ಶ್ವಾಸಕೋಶಗಳು ಕೆಟ್ಟಿದ್ದರೆ ಗುಣಮಾಡುವದು, ಮಕ್ಕಳಿಗೆ ಬರುವ ಜ್ವರ, ಅಪಸ್ಮಾರ, ಅತಿಸಾರ, ನರಗಳ ಸೆಳೆತ, ನಿದ್ರೆ ಬಾರದಿರುವಿಕೆ, ಹೆಚ್ಚಾಗಿ ಹೋಗುವದು, ಛಳಿ, ಕೆಮ್ಮಲು, ತಲೆನೋವು, ಮಕ್ಕಳಿಗೂ ದೊಡ್ಡವರಿಗೂ ಅಜೀರ್ಣ, ಇವುಗಳನ್ನು ಪರಿಹಾರ, ಮಾಡುವದು ಸೀಸೆ ೧ಕ್ಕೆ ೧೦ ಆಣೆ ವಿ ಪಿ. ಛಾರ್ಜು ೩ ಸೀಸೆ ವರೆಗೂ ೫ ಆಣೆ.

೧೮ ಚರ್ಮರೋಗಕ್ಕೆ ಔಷಧ—ಮಕ್ಕಳಿಗೆ ಬರುವ ಕರಪಾನು, ತಲೆ ಹುಣ್ಣುಗಳು, ಕಜ್ಜಿ, ಆನೆಕಜ್ಜಿ ಮತ್ತು ದೊಡ್ಡವರಿಗೆ ಬರುವ ನಾನಾ ವಿಧವಾದ ಕಜ್ಜಿ ಸಂಬಂಧವಾದ ವ್ಯಾಧಿಗಳು, ಸುಂಕು, ಆಲೆಯು ಪ್ಲೇಗೂ ಇತರ ಕಾಲಗಳಲ್ಲಿಯೂ ಬಹಳ ನೋವನ್ನೂ ಅನಂತರ ಉರಿಯನ್ನೂ ಉಂಟುಮಾಡುವ ಎಲ್ಲಾ ಹುಣ್ಣುಗಳೂ ಹೊರಗೆ ಹಚ್ಚುವದರಿಂದಲೇ ಜಾಗ್ರತೆಯಾಗಿ ವಾಸಿಯಾಗುವವು. ಬೆಲೆ ಸೀಸೆ ೧ಕ್ಕೆ ೮ ಆಣೆ. ವಿ. ಪಿ. ಛಾರ್ಜು ೨ ಬಾಟ್ಲಿ ವರೆಗೆ ೫ ಆಣೆ.

೧೯. ಕೇಶಸುವಾಸಿನಿ.—ಈ ತೈಲವು ಪೂರ್ವಪಶ್ಚಿಮ ದೇಶಗಳ ಉತ್ಕೃಷ್ಟ ಸುವಾಸನಾ ದ್ರವ್ಯಯುಕ್ತವಾಗಿ ಹೆಚ್ಚು ಪರಿಮಳ ಕೊಡುವಂಥಾದ್ದಾಗಿರುತ್ತದೆ ಇದರ ಉಪಯೋಗದಿಂದ ಕೂದಲು, ಮೀಸೆ ಕಣ್ಣು ರೆಪ್ಪೆ ಸಮೃದ್ಧಿಯಾಗಿ ಬೆಳೆಯುತ್ತವೆ ತಲೆ ಮಿದುಳು ಕಣ್ಣುಗಳಿಗೆ ತಂಪುಕೊಡುತ್ತದೆ. ಹೊಳೆಯುತಲೆ, ಸುಂಕು ಮುಂತಾದ್ದನ್ನು, ವಾಸಿಮಾಡುತ್ತದೆ ವಿಲಾಯತಿಯ ಪರಿಮಳ ವಸ್ತುಗಳಮೇಲೆ ಪ್ರೀತಿ ಇರುವವರಿಗೆ ಅದ್ದು ಮೆಚ್ಚಿಕೆಯಾಗಿರುತ್ತದೆ. ಬೆಲೆ ರೂ. ೧ ವಿ ಪಿ. ಛಾರ್ಜು ಎರಡು ಬಾಟ್ಲಿ ವರೆಗೆ ೫ ಆಣೆ.

ಕಾಗದವನ್ನು ಇಂಗ್ಲಿಷ್ ಅಥವಾ ತಮಿಳಿನಲ್ಲಿ ಬರೆಯಿರಿ.

Apply to.—**P. SUBBAROY,**

Porto Novo, South Arcot.

ವಿಳಾಸ:—ಪಿ. ಸುಬ್ಬರಾಯ್,

ಪೋರ್ಟನೋವೋ, ದಕ್ಷಿಣ ಆರ್ಕಾಟ್ ಜಿಲ್ಲಾ.

COMMERCIAL CLASSES.

Hardwicke College, Mysore.

These classes will be opened, 8th. Jan., 1906.

TEACHER—Mr. S GNANAPPAH, of the Reid College, Lucknow. holder of the Remington Gold Medal for Typewriting.

HOURS—7—10 *a.m.*, & 7—8 *p.m.*

FEES—Typewriting, Rs 1—8—0 per month, Shorthand Re 1, Bookkeeping, Re 1 Commercial Correspondence & Commercial Geography, (if desired), Re 1.

SCHOOL STUDENTS AT HALF-FEES.

ADMISSION FEE—Re 1. 12-8

Application for admission to be made to

The PRINCIPAL, Hardwicke College

ಇದನ್ನು ನೋಡಿದರೆ ನೀವು ಬಹು ಆಶ್ಚರ್ಯ ಪಡುವಿರಿ!!! 23-4

ನಮ್ಮ ಪ್ರಸಿದ್ಧವಾದ ಪುಸ್ತಕಭಂಡಾರದಲ್ಲಿ ಅನೇಕ ಸಹಸ್ರ ರೂಪಾಯಿ ಬಾಳುವ ಕನ್ನಡ ಗ್ರಂಥಗಳೂ, ಪಾಠಪುಸ್ತಕಗಳೂ, ಪೇನಾ, ಪೆನ್ಸಿಲ್, ನೋಟ್‌ಬುಕ್, ಅನೇಕ ವಿಧವಾದ ಕಾಸಿನ ಟೋಪಿಗಳು, ವೃತ್ತಾಂತ ಪತ್ರಿಕೆ, ಮಹಿಳಾಸಖಿ, ಕನ್ನಡ ಗ್ರಂಥ ಚಿತ್ರ, ಪ್ರಾಗ್ರೆಸ್, ಹಾರ್ವೆಸ್ಟ್‌ಫೀಲ್ಡ್ ಮುಂತಾದ ಪ್ರಸಿದ್ಧವಾದ ವರ್ತಮಾನಪತ್ರಿಕೆಗಳು ಇಲ್ಲಿ ಅನೇಕ ಸಾವಿರಗಟ್ಟಲೆಯಾಗಿ ವ್ಯಾಪಾರವಾಗುತ್ತಿವೆ ಈ ಡಿಪೋ ಕಟ್ಟಡವು ರಾಜಧಾನಿಯಲ್ಲಿ ಬಹು ಪ್ರಸಿದ್ಧವಾದ ಸ್ಥಳವೆಂದು ಮೈಸೂರು ದೇಶವೆಲ್ಲಾ ಹೆಸರುಗೊಂಡಿದೆ. ಈ ಕೆಳಗೆ ನಮೂದಿಸಿರುವ ಪುಸ್ತಕಗಳನ್ನು ಸ್ವಲ್ಪ ನೋಡಿ ....

ಕಥಾಸಂಗ್ರಹ ೧—೩ ಭಾಗಗಳು ಕ್ರಯ ೧—೦—೦
ವಿ ಪಿ. ಪಿ. ಮೂಲಕ ೧—೩—೦

ಅನುಭವಸಾರ .. ಕ್ರಯ ೦—೧೨—೦

ಗ್ರೀಕರ ಚರಿತ್ರೆ .. " .. ೦—೨—೦

ರೋಮನರ ಚರಿತ್ರೆ .. " .. ೦—೨—೦

ಕನ್ನಡ—ಇಂಗ್ಲಿಷ್—ಹಿಂದೂಸ್ಥಾನಿ ಭಾಷಾಮಂಜರಿ. ಈ ಪುಸ್ತಕದಿಂದ ಇಂಗ್ಲಿಷ್ ಮತ್ತು ಹಿಂದೂಸ್ಥಾನಿ ಭಾಷೆಗಳನ್ನು ಬಹು ಸುಲಭವಾಗಿ ಕಲಿಯಬಹುದು. ಇದರ ಕ್ರಯ ಎಂಟೇ ಆಣೆ.
ವಿ. ಪಿ ಪಿ ಮೂಲಕ ೦—೧೦—೦

ಶ್ರೀಚಾಮರಾಜೇಂದ್ರ ಒಡೆಯರವರ ಚರಿತ್ರೆ ಉತ್ಕೃಷ್ಟವಾದ ಪುಸ್ತಕ. ಅನೇಕ ತಸ್ವೀರುಗಳು ಇವೆ. ಇದನ್ನು ಕುರಿತು ರಾಜಧರ್ಮಪ್ರವೀಣ ಮ॥ ರಾ॥ ತಂಬೂಚೆಟ್ಟಿರು ಒಂದು ಉತ್ಕೃಷ್ಟವಾದ ಅವತರಣಿಕೆಯನ್ನು ಬರೆದಿದ್ದಾರೆ ಕ್ರಯ ೦—೮—೦
ವಿ. ಪಿ. ಪಿ ಮೂಲಕ ೦—೧೧—೦

ಎಡ್ವರ್ಡ್ ಸಾರ್ವಭೌಮರ ಜೀವಚರಿತ್ರೆ ೦—೪—೦

ಕ್ರಿಮಿವರ್ಗವರ್ಣನೆ ೦—೧—೦

ಅರೇಬಿಯನ್ ನೈಟ್ಸ್ ಅಥವಾ ಯವನಯಾಮಿನೀ ವಿನೋದ ಕಥೆಗಳು "ಈ ಪುಸ್ತಕವು ಲೋಕಪ್ರಸಿದ್ಧವಾದುದೆಂದು ಎಲ್ಲರೂ ಒಪ್ಪಿಕೊಳ್ಳುತ್ತಾರೆ. ನಾನೂರು ಎಪ್ಪತ್ತು ಪುಟಗಳುಳ್ಳದ್ದು ಭಾರಿ ಪುಸ್ತಕ. ಭಾಷೆಯು ಬಹು ಸರಳವಾಗಿದೆ. ಪುಸ್ತಕವನ್ನು ಒಂದಾವರ್ತಿ ಓದಿದ ಮೇಲೆ ಅದನ್ನು ಪುನಃ ಪುನಃ ಓದುವಂತೆ ಅದು ಮನಸ್ಸನ್ನು ಆಕರ್ಷಿಸುವದು. ಇದರ ಕ್ರಯ ಎರಡೇ ರೂಪಾಯಿ ವಿ ಪಿ ಪಿ ಮೂಲಕ ೨—೩—೦. ಹತ್ತು ಅಥವಾ ಹದಿನೈದು ವರ್ಷಗಳ ಹಿಂದೆ ಇದರ ಕ್ರಯ ಎಂಟು ರೂಪಾಯಿ ಎಂದು ಅನೇಕರಿಗೆ ಗೊತ್ತು. ಇದನ್ನು ಬಡವರೂ, ಐಶ್ವರ್ಯವಂತರೂ ಓದುವಂತೆ ಪುನಃ ಛಾಪಿಸಿ ಇಷ್ಟು ದೊಡ್ಡ ಪುಸ್ತಕವನ್ನು ಇಷ್ಟು ಸುಲಭ ಕ್ರಯಕ್ಕೆ ಮಾರುತ್ತೇವೆ. ಹನ್ನೆರಡು ಪುಸ್ತಕಗಳನ್ನು ಒಟ್ಟಿಗೆ ತರಿಸಿಕೊಂಡರೆ, ಪುಸ್ತಕಕ್ಕೆ ಎರಡು ಆಣೆಯಂತೆ ಕಮಿಷನ್ ಕೊಡುತ್ತೇವೆ ಜಾಗ್ರತೆ ನೋಡಿ

ಪಕ್ಷಿಗಳ ಚರಿತ್ರೆ ೦—೧—೦

ಪ್ರಾಚೀನ ಜೀವರಾಶಿಗಳ ವರ್ಣನೆ ೦—೧—೦

ಹುಡುಗರಿಗೆ ಹೇಳುವ ಕಥೆಗಳು ೦—೧—೦

ಬಾಲಿಕಾಗೀತ ಮುಕ್ತಾಕಲಾಪ, ಗೀತಮಂದಾರ ೦—೨—೦, **ಕಲ್ಯಾಣಗೀತಾವಳಿ** ೦—೫—೦, ಈ ಹಾಡಿನ ಪುಸ್ತಕಗಳು ನಮ್ಮಲ್ಲಿ ಯಾವಾಗಲೂ ದೊರೆಯುತ್ತವೆ

ಮುಖ್ಯವಾಗಿ, ಸ್ನೇಹಿತರೇ, ತಾವು ರಾಜಧಾನಿಗೆ ಬರುವಾಗಲೆಲ್ಲಾ ನಮ್ಮ ಪುಸ್ತಕಾಲಯವನ್ನು ನೋಡಿಯೇ ಹೋಗಬೇಕೆಂದು ಕೇಳಿಕೊಳ್ಳುತ್ತೇವೆ. ನಿಮಗೆ ಪುಸ್ತಕವಲ್ಲದೆ ಬೇರೆ ಯಾವದಾದರೂ ಪದಾರ್ಥಗಳಾಗಲೀ ಅಥವಾ ಸಂಗತಿಗಳಾಗಲೀ ಅಪೇಕ್ಷಿಸುವ ಸಂದರ್ಭದಲ್ಲಿ ನೀವು ನಮಗೆ ಒಂದು ಕಾರ್ಡು ಬರೆದರೆ ತಕ್ಷಣವೇ ಜವಾಬು ಕೊಡುವದಕ್ಕೆ ಪ್ರಯತ್ನ ಮಾಡುತ್ತೇವೆ.

ವಿಳಾಸ:— ಮ್ಯಾನೇಜರ್,

ಸಿ. ಎಲ್ ಎಸ್. ಬುಕ್ ಡಿಪೋ,

ಮೈಸೂರು.

ಮೈಸೂರು ಸೀಮೆಯಲ್ಲಿ ಪ್ಲೇಗಿನ ಸ್ಥಿತಿ.

12—1—1905 ರಿಂದ 19—1—1905 ರ ವ[illegible]

ಸ್ಥಳ.	ಪ್ಲೇಗ್ ಅಗಿದ್ದು	ಪ್ಲೇಗ್ ಸತ್ತದ್ದು	ಕೊ[illegible]
ಬೆಂಗಳೂರು ಪಟ್ಟಣ	35	32	25
ಮೈಸೂರು "	0	0	28
ಬೆಂಗಳೂರು ಡಿಸ್ಟ್ರಿಕ್ಟು	11	8	70
ಮೈಸೂರು "	2	9	53
ಕೋಲಾರ್ "	0	0	28
ಕೋಲಾರ್ ಚಿನ್ನದ ಗಣಿಗಳು	1	1	27
ತುಂಕೂರು ಡಿಸ್ಟ್ರಿಕ್ಟು	0	0	41
ಹಾಸನ (ಹೊರಗಿನದು)	0	0	3
ಚಿತ್ರದುರ್ಗ "	4	5	15
ಕಡೂರ್ "	0	0	15
ಶಿವಮೊಗ್ಗ "	25	17	19
ಜುಮ್ಲಾ	78	65	301

ಬಾಲಿವಾಳನ ಲೆಕ್ಕ ವರುಷಂಗಳು ೧೮೨೮ ನೇ ವಿಶ್ವಾವಸು ಸಂವತ್ಸರದ ಮಾಘ ಶುದ್ಧ ಚತುರ್ದಶಿ ಗುರುವಾರದಿಂದ ಮಾಘ ಬಹುಳ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ

೧೯೦೬ ನೇ ಇಸವಿ ಫೆಬ್ರುವರಿ

ತಾ	ವಾರ.	ತಿಥಿ.	ಘಳಿಗೆ	ನಕ್ಷತ್ರ	ಘಳಿಗೆ.
8	ಗುರು	ಚತುರ್ದಶಿ	16 50	ಪುಷ್ಯ	27 36
9	ಶುಕ್ರ	† ಪೌರ್ಣಮಿ	15 18	ಆಶ್ಲೇಷ	26-20
10	ಶನಿವಾರ	ಪಾಡ್ಯ	11-1	ಮಘ	27 46
11	ರವಿವಾರ †	ಬಿದಿಗೆ	11-6	ಪುಬ್ಬ	26 4
12	ಚಂದ್ರ "	ತದಿಗೆ	7-10	ಉತ್ತರ	23 36
13	ಕುಜ	ಪಂಚಮಿ	2-28	ಹಸ್ತ	51 50
14	ಬುಧ	ಷಷ್ಠಿ	51-19	ಚಿತ್ತ	16 40

* ತ್ರಯೋದಶ್ಯದರ್ಶನ ಪ್ರತಿಪದ. ‡ ವ್ಯಾಸಪೂಜಾ.
ಉತ್ತರ ಸಪ್ತಮಿ.
† ಮಾರಿಹಬ್ಬ
‡ ಕೃಷ್ಣಪಕ್ಷ ಪ್ರಾರಂಭ, ಸಂಕಷ್ಟ ಚತುರ್ಥಿ

ಪೇಟೇ ಧಾರಣೆ.

ಬಿನಸಿ		ಮೈಸೂರು.	ಬೆಂಗಳೂ[illegible]
ಕಲ್ಲ ಅಕ್ಕಿ ಪಲ್ಲ ೧ಕ್ಕೆ	ರೂ	೧೨-೧೪	೧೩-[illegible]
ಕೆಂಬೂತಿ ಅಕ್ಕಿ ಅವಲ್	..	೧೨-೨-೦	೧೩-[illegible]
" ದಪ್ಪ	..	೧೧-೮-೦	೧೩-[illegible]
ಜಾಪಾನ್ ಅಕ್ಕಿ	..	೧೬ ೦-೦	೧೬-[illegible]
ಸಣ್ಣಕ್ಕಿ ಅವಲ್	..	೧೩ ೮-೦	೧೫-[illegible]
" ದಪ್ಪ	..	೧೪ -೦	೧೩-[illegible]
ತೊಗರಿ ಬೇಳೆ ಪಲ್ಲ ೧ಕ್ಕೆ	..	೯-೪-೦	೧೦-[illegible]
" ದಪ್ಪ	..	೯-೦-೦	೧೦-[illegible]
ಹೆಸರು ರಾಗಿ ಪಲ್ಲ ೧ಕ್ಕೆ	..	೨-೪-೦	[illegible]
ಕಾಬೂಗಿ	..	೩-೭-೨-೦	೫-[illegible]
ಜೋಳ	..	೩-೬-೦	೮-[illegible]
ಹಲಸಂದೆ ಪಲ್ಲ ೧ಕ್ಕೆ	..	೯ ೦-೦	೯-[illegible]
ಬಿಳೇ ಅವರೆ	..	೮ ೮-೦	೯-[illegible]
ಕಡಲೆ	..	೯-೪-೦	೧೦-[illegible]
ಉದ್ದು	..	೧೧-೨-೦	೧೧-[illegible]
ಕಡಲೆ	..	೧೮-೮-೦	೧೦-[illegible]
ಎಳ್ಳು ಸೆ. ೧೨೩ ಕ್ಕೆ	..	೧೮-೮-೦	೧೮-[illegible]
ಹುರುಳಿ	..	೩-೪-೦	೩-[illegible]
ಹರಳು ೧೨೩ ಸೇರಿಗೆ	..	೧೧-೮-೦	೧೩-[illegible]
ಸೀಗೇಕಾಯಿ ಮಣ ೧ಕ್ಕೆ	..	೨-೧-೨-೦	೨-[illegible]
ಮೆಣಸಿನಕಾಯಿ	..	೩-೮-೦	೩-[illegible]
" ದಪ್ಪ	..	೩-೪-೦	೩-[illegible]
ಬೆಲ್ಲ ದೊಡ್ಡ ಅಚ್ಚು	..	೪-೩-೦	ಮ ೧-[illegible]
ಬಳ್ಳಿಕಟ್ಟು ಮಣ ೧ಕ್ಕೆ	..	೫-೨-೦	೪-[illegible]
ಮರುಗ್ಗೆ "	..	೪-೧-೨-೦	೪-[illegible]
ಕೊತ್ತುಂಬರಿ ಪಲ್ಲ ೧ಕ್ಕೆ	..	೯-೮ ೦	೧೦-[illegible]
ಉಪ್ಪು "	..	೩-೨-೦	೩-[illegible]
ಹುಣಸೇ ಹಣ್ಣು	..	೦-೧೪-೦	೦-[illegible]
" ಹಳೇದು	..	೦-೮-೦	೦-[illegible]
ತುಪ್ಪ	..	೧೩-೦-೦	೧೦-[illegible]
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ	..	೫-೦-೦	೫-[illegible]
ತೆಂಗಿನಕಾಯಿ ೧೦೦ ಕ್ಕೆ	..	೪ ೦-೦	೪-[illegible]
ಅಡಿಕೇಕಾಯಿ ಮಣ ೧ಕ್ಕೆ	..	೦-೧೨-೦	೦-[illegible]
ಅಂಟ್ವಾಳದ ಕಾಯಿ ಮಣ ೧ಕ್ಕೆ	..	೦-೧೨-೦	೦-೧[illegible]
ಚಿನ್ನ (ಪವನ್) ಕೆಂಪು	..	೧೫-೪-೦	೧೫-[illegible]
" " ಹಸಿರು	..	೧೫-೯-೦	೧೫-[illegible]
" " ಗಟ್ಟಿ ತೊಲ ೧ಕ್ಕೆ	..	೨೩-೧೨-೦	೨೩-[illegible]
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ	..	೭೨-೦-೦	೭೦-[illegible]

Printed and Published by the Rev E. W. THOMPSON, M[illegible] the Proprietor and Manager, Wesleyan Mission P[illegible] Mysore. 8/2/1906.

ವೃತ್ತಾಂತ ಪತ್ರಿಕೆ.

REGISTERED M. 80

ಕ್ರಯ ೧ ದುಡ್ಡು ———— ಕ್ರಯ ೧ ದುಡ್ಡು

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಪುಸ್ತಕ ೧೯ ಮೈಸೂರು—ಸನ್ ೧೯೦೬ ನೇ ಇಸವಿ ಫೆಬ್ರುವರಿ ತಾರೀಖು ೧೫ ನೇ ಗುರುವಾರ. ಸಂಚಿಕೆ ೭೭

WANTED WILD ANIMALS.

ಬೇಕಾಗಿದೆ. ಬೇಕಾಗಿದೆ.

5-44

ಎಲ್ಲಾ ಬಗೆಯ ಕಾಡು ಮೃಗಗಳು ಮೈಸೂರು ಜೂ ಸೂಪರಿಂಟೆಂಡೆಂಟ್ ಮಿ॥ ಹ್ಯೂಜಸ್ ರವರು ಕೊಂಡುಕೊಳ್ಳುವರು

Apply to—Mr. Hughes, Mysore Zoo.

"ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ.

ಮೈಸೂರಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜಂಟ್ರ ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ

(ಅಡ್ವಾನ್ಸು) .. .. .. ರೂ. ೧—೦—೦

ನೇರವಾಗಿ ಆಫೀಸಿನಿಂದ ಅಂಚೆಯ ಮೇಲೆ ತರಿಸಿ ಕೊಳ್ಳುವವರಿಗೆ ೧ ಪ್ರತಿಗೆ ೧೨ ತಿಂಗಳಿಗೆ ಹಾಸಲು

... . ರೂ. ೧—೧೪—೦

" " ೬ " " ೦—೧೫—೦

ಚಂದಾದಾರರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು.

ವಿಳಾಸ:—ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು.

ಜ್ವರಹರಿ. 29 2



ಈ ಔಷಧವು ಸಾಧಾರಣ ಜ್ವರ, ಚಳಿಜ್ವರ, ಮೈಕೈಜ್ವರ, ಪಿತ್ಥಜ್ವರ, ... ವಾತಜ್ವರ, ಚಳಿ ಜ್ವರ ಮುಂತಾದ, ಎಂಬ ಸಕಲವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಜೈಲ್ ಕಚೇರಿಯಲ್ಲಿರುವ ಮಹಮದ್ ... ಸಬ್ ಡಿವಿಜನ್ ಆಫೀಸರ್ ಎಸ್. ಟಿ. ವೆಂಕಟಪತಿ ಅಯ್ಯ ... ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨೦ ... ಸೀಸೆಯು ತೀರಿಹೋಯಿತು. ಇಷ್ಟು ಸ್ವಲ್ಪ ಕಾಲದಲ್ಲೇ ... ದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಆರಾಮಾಗಿ ಹೋಗಿರುವರು. ಇನ್ನೂ ಜನಗಳು ಕಾಹಿಲೇ ಬೀಳುತ್ತಿರುವು ... ರಿಂದ, ಇನ್ನೊಂದು ೨೦ ಡಿಗ್ರಿಯಾಸಿನ ಸೀಸೆಯನ್ನು ವಿ. ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆ ದಿದ್ದಾರೆ.

ಕ್ರಯ:—ಸೀಸೆ ೧ ಕ್ಕೆ ೪ ಆಣೆ, ೧ ರೂ, ೧—೪ ರೂ ; ೨—೦ ಅ., ೧೧ ರೂ.; ಹನ್ನೆರಡು ಸೀಸೆ ತರಿಸಿಕೊಂಡರೆ ... ವನ್ನು ಬಿಡಲಾಗುವದು.

●●●●●●●●

ಬಮಂಕಭೂಗರ.

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆಕಳೆತ, ... ರಕ್ತಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದವುಗಳನ್ನು ಪರಿಣಾಮಕಾರಿಯಾಗಿ ಹೊಡೆದೋಡಿಸಿ, ಕೂಡಲೇ 'ಗುಣಕೊಡು ... ಈ ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಯೆ ... ನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ. ... ಜ್ವರಹರಿ ಎಂಬ ಔಷಧದಂತೆಯೇ. ಸೀಸೆಗಳಲ್ಲಿ ದೊರೆಯುವದು.

... ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಹೆಪ್ರಿಯು ... ರವರು ನಾನೂ ನನ್ನ ಕಾಬೇದಾರರೂ ಮ್ಯುನಿಸಿಪಲ್ ... ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣ ... ರೋಗಿಷ್ಟರಿಗೆ ಕೊಡುತ್ತೇವೆ. ಹೊಟ್ಟೆ ಕೂಡಲೆ ... ರೋಗವು ಗುಣವಾಗುತ್ತಲಿದೆ. ಇದು ಬಹು ಒಳ್ಳೇ ಔಷಧ ... ರೆ.

... ಔಷಧಗಳೂ ಊರುಗಳಲ್ಲಿರುವ ವೈದ್ಯಶಾಲೆಗಳ ... ಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯ ... ವೆ. ಇದಲ್ಲದೆ ಕೆಳಗಿನ ವಿಳಾಸದಾರರಲ್ಲಿ ವಿಶೇಷ— ... ವಸ ಗ್ರೇಟ್ ಇಂಡಿಯನ್ ಔಷಧಗಳ ಕಂಪೆನಿ,

... ಸ್ಟ್ರೀಟ್ ಮದ್ರಾಸ್.

ಅದ್ಭುತ ಜನಪರ ಪ್ರಯೋಜನಕಾರಿ ... !

[illegible]

ವಿಳಾಸ,—ಫ್ಲೂರಿಕ್ ವಾಚ್ ಕಂಪೆನಿ,

ಪಾರ್ಕ್ ಟವನ್ ಮದರಾಸ್.

ಹೋವೋಸಿಯಾ



ಈ ಔಷಧಿಯು ಮನೆ, ಅರಮನೆ, ಕಾರ್ಖಾನೆ, ಆಸ್ಪತ್ರೆ, ಪೋಲೀಸ್ ಠಾಣಾ, ವಿದ್ಯಾಶಾಲೆ, ಕೋರ್ಟ್, ಕಛೇರಿ, ಮುಂತಾದ ಸ್ಥಳಗಳಲ್ಲೆಲ್ಲಾ ಇದ್ದೇ ಇರಬೇಕು. ಇದಕ್ಕೆ ಸಮಾನವಾದ ಔಷಧ ಮತ್ಯಾವದೂ ಇಲ್ಲವೆಂಬುವದು ಲೋಕಪ್ರಸಿದ್ಧವಾಗಿದೆ.

ಈ ತೈಲವು ತತ್ಕಾಲದಲ್ಲಿ ಜೀವರಾಶಿಗಳಿಗೆ ಮಹತ್ತಾಗಿ ಸಿಕ್ಕತಕ್ಕ ಔಷಧ. ಇದನ್ನು ಉಪಯೋಗಿಸಿದ ದೊಡ್ಡ ಮನುಷ್ಯರು, ಡಾಕ್ಟರುಗಳು, ಮುಂತಾದವರು ಅದರ ಗುಣವನ್ನು ಹೊಗಳಿ ಸರ್ಟಿಫಿಕೇಟುಗಳನ್ನು ಕೊಟ್ಟಿರುವರೆ. ನೋವು ಕಂಡರೆ ಇದನ್ನು ಹಚ್ಚಿದ ಕೂಡಲೇ ವಾಸಿಯಾಗುವದು.

ಈ ತೈಲವು ಅರೆ ತಲೆನೋವು, ಸೊಂಟನೋವು, ಪಾರ್ಶ್ವವಾಯು, ಮೂಲವ್ಯಾಧಿ, ಉಬ್ಬಸ, ವಾಯುಗಳು, ನರ ಹೊರಳುವದು, ಉಳುಕು, ಕೀಲುವಾಯು, ಗುಳ್ಳೆಗಳು, ಹಲ್ಲುನೋವು, ಮುಖನೋವು, ಊದುಗಳು, ಗಡ್ಡೆಗಳು, ರಣಗಳು, ಹುಳುಕಡ್ಡಿ, ಸೊಳ್ಳೆ ಮತ್ತು ಚೇಳು ಕಡಿದದ್ದು, ಚಿಪ್ಪಿರುವದು, ಬೆಂಕಿಯಲ್ಲಿ ಸುಟ್ಟುಕೊಂಡದ್ದು, ಕತ್ತಿ ಗಾಯ—ಇವೇ ಮೊದಲಾದ ನಾನಾ ಬಾಧೆಗಳನ್ನು ಹುಟ್ಟಡಗಿಸುತ್ತದೆ. ರಾತ್ರಿ ಹಚ್ಚಿಕೊಂಡು ಮಲಗಿದರೆ ಸೊಳ್ಳೆ ಹತ್ತಿರ ಸೇರುವದಿಲ್ಲ.

ಕ್ರಯ:—ಸಣ್ಣ ಡಬ್ಬಿ ೧ ಕ್ಕೆ ೧ ರೂ., ದೊಡ್ಡದಕ್ಕೆ ರೂ. ೨—೪ ಅ., ಒಂದೇ ಸಲ ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚ ಮಾಫಿ ಬಿಡುತ್ತಾರೆ. ರೂ. ೨—೪ ಆಣೆ ಬಾಬ್ತು ಡಬ್ಬಿದಲ್ಲಿ ೧ ರೂ. ಡಬ್ಬಿದಲ್ಲಿರುವದಕ್ಕಿಂತ ೪ ರಷ್ಟು ಹೆಚ್ಚು ಔಷಧವಿರುತ್ತೆ. ರೂ. ೨—೪ ಅ. ಈ ಡಬ್ಬಿವನ್ನು ತರಿಸಿಕೊಳ್ಳುವವರಿಗೆ ಟಪ್ಪಾಲ್ ಖರ್ಚು ಮಾಫಿ ಬಿಡುತ್ತೆ.

●●●●●●●●

ಹೋವೋಸಿಯಾ ಯಾಂಟಿಸ್ರೀಕೇವರ್.

ಈ ತೈಲವು ಹಳೇ ನೋವುಗಳಿಗೆ ಉಪಯೋಗಿಸತಕ್ಕದ್ದು ಚರ್ಮ ಒಡೆದ ಕಡೆ ಇದನ್ನು ಹಚ್ಚಕೂಡದು ಇದರಲ್ಲಿ ಹೋವೋಸಿಯಾದ ಗುಣಗಳು ಬಹು ತೀಕ್ಷ್ಣವಾಗಿ ಇರುತ್ತವೆ ಅತಕ್ಕಿಂತಲೂ ಇದರಲ್ಲಿ ಇನ್ನೆರಡು ಗುಣಗಳುಳ್ಳ ಹೊಸ ಭಾಗವಿರುತ್ತದೆ. ಇದನ್ನು ಚರ್ಮವು ಬಹು ಬೇಗನೆ ಸೇದಿಕೊಳ್ಳಬಲ್ಲದು ಡಬ್ಬಿಗಳಲ್ಲಿ ಹುಂಡಿ ೪ ಆಣೆಗೂ, ೧ ರೂ. ಗೂ ಒಂದರಂತೆ ಬಿಕರಿ ಮಾಡಲ್ಪಡುವದು. ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚ ಮಾಫಿ. ಎಲ್ಲಾ ಶಾಪುಗಳಲ್ಲಿಯೂ ದೊರೆಯುವದು.

ಈ ಔಷಧಗಳ ವಿವರಣೆಯೂ, ಸರ್ಟಿಫಿಕೇಟುಗಳೂ ಉಳ್ಳ ನೋಟೀಸುಗಳನ್ನು ಅಪೇಕ್ಷಿಸಿದರೆ ಕಳುಹಿಸುವೆವು.

ವಿಳಾಸ:—ಹೋವೋಸಿಯಾ ಕಂಪೆನಿ. ೨೭ ನೇ ನಂಬರು ಬ್ರಾಡ್ ವೇ. ಮದರಾಸ್.

ಇಗೋ ನೋಡಿ—ಮತ್ತೊಂದು ಹೊಸಪುಸ್ತಕವು—ಬಹು ರಸಿಕವಾಗಿದೆ. ಅರೇಬಿಯನ್ ನೈಟ್ಸ್ ಅಥವಾ ಯವನಯಾಮಿನೀ ವಿನೋದ ಕಥೆಗಳು.

87 1

ಎಂಬ ಮಹಾಪ್ರಸಿದ್ಧವಾದ ಪುಸ್ತಕವು ಕನ್ನಡದಲ್ಲಿ ಈಗತಾನೇ ಪ್ರಕಟಿಸಲ್ಪಟ್ಟಿದೆ. ಹೆಚ್ಚು ಅಷ್ಟಪತ್ರ ನಾನೂರು ಎಪ್ಪತ್ತು ಪುಟಗಳುಳ್ಳದ್ದಾಗಿಯೂ ಆ ಬಾಲವೃದ್ಧರಿಗೆ ಪ್ರೋತ್ಸಾಹಕರವಾಗಿಯೂ, ಮಹಾ ರಸಿಕವಾಗಿಯೂ ರಚಿತವಾಗಿರುವ ಈ ಪುಸ್ತಕದ ಅಭಿರುಚಿಯನ್ನು ವಾಚಕರು ಸ್ವಾನುಭವದಿಂದಲೆ ಗ್ರಹಿಸಿ ತಿಳಿದುಕೊಳ್ಳುವರು. ಭಾಷೆಯು ಬಹು ಸರಳವಾಗಿರುವದು. ಮತ್ತು ಇದನ್ನು ಬರೆಯುವದಕ್ಕೆ ಸುಮಾರು ಎರಡು ವರ್ಷಗಳು ಹಿಡಿದಿವೆ. ಪುಸ್ತಕವನ್ನು ಒಂದಾವರ್ತಿ ಓದಿದಮೇಲೆ ಅದನ್ನು ಪುನಃ ಓದುವಂತೆ ಅದು ಮನಸ್ಸನ್ನು ಆಕರ್ಷಿಸುವದು ಇದರ ಬೆಲೆ ಎರಡು ರೂಪಾಯಿ ಮಾತ್ರವೇ ಹಾಸಲು ಎರಡು ಆಣೆಗಳು. ವಿ. ಪಿ. ಮೂಲಕ ತರಿಸಿಕೊಂಡರೆ ಎರಡು ರೂಪಾಯಿ ಮೂರು ಆಣೆಗಳಾಗುವವು. ಹೆಂಗಸರೂ ಬಹವರೂ ಎಲ್ಲರೂ ಕೊಂಡು ಓದಿ ಪ್ರಯೋಜನವನ್ನು ಪಡೆಯಬೇಕೆಂದು ಇಷ್ಟು ದೊಡ್ಡ ಪುಸ್ತಕವನ್ನು ಇಷ್ಟು ಸುಲಭಕ್ರಯಕ್ಕೆ ಮಾರುತ್ತೇವೆ.

ಪುಸ್ತಕವು ದೊರಕುವಸ್ಥಳ

ಸಿ. ಎಲ್. ಎಸ್. ಬುಕ್ ಡಿಪೋ,

ಮೈಸೂರು.

ಇಂಡಿಯಾ ವ್ಯವಸಾಯ ಮತ್ತು ಸಹಾಯಕ ಆಫೀಸು.

14-21

[೧೯೦೨ ರಲ್ಲಿ ಸ್ಥಾಪಿತವಾದದ್ದು]

ಈ ಆಫೀಸಿನ ಉದ್ದೇಶವೇನೆಂದರೆ—ಯಾವ ಜಾತಿಯವರೇ ಆಗಲಿ ಮತದವರೇ ಆಗಲಿ ಈ ಆಫೀಸಿನ ಚಂದಾದಾರರಾಗಿ ಅದರ ಭರವಸೆ ಪತ್ರವನ್ನು ಹೊಂದಿದ್ದರೆ ಅವರ ಮರಣಾನಂತರ ಅವರ ಕುಟುಂಬದವರಿಗೆ ಸಹಾಯವು ಕೊಡಲ್ಪಡುವದು.

ಈ ಆಫೀಸಿನ (A) ತರಗತಿಗೆ ಸೇರಿದವರು ಪಡೆಯಬೇಕೆಂದಿದ್ದಕ್ಕೆ ಸುವ ಪ್ರತಿ ೧೦೦೦ ರೂಪಾಯಿಗಳ ಮೊಬಲಗಿಗಾಗಿ ಮಾಹೆಯಾನಾ ಒಂದೊಂದು ರೂಪಾಯಿಯ ಪ್ರಕಾರ ಒಟ್ಟು ರೂ ೫೬ ನ್ನು ಮಾತ್ರವೇ ಸಲ್ಲಿಸಬೇಕಾಗುವದು.

ಆಫೀಸಿನವರು ಚಂದಾದಾರರಿಂದ ವಸೂಲಾದ ಮೊಬಲಗನ್ನು ಶಾಸ್ತ್ರರೀತಿಯಾಗಿ ನಡೆಸಲ್ಪಡುವ ವ್ಯವಸಾಯಕ್ಕೆ ಹಾಕಿ ಅದರಿಂದ ಬಂದ ಲಾಭದಿಂದಲೇ ಚಂದಾದಾರರ ಸಹಾಯದ್ರವ್ಯವನ್ನು ಕೊಡಲಾಗುವದು. ವ್ಯವಸಾಯ ನಿಮಿತ್ತವಾಗಿ ನಾವು W.I.P. ರೈಲ್ವೆ ಪಕ್ಕದಲ್ಲಿರುವ "ಕೊಲ್ಲಂ ಎಸ್ಟೇಟ್" ಎಂಬ ಸರ್ವೋತ್ಕೃಷ್ಟವಾದ ಭೂಮಿಯನ್ನು ೯೯ ವರ್ಷಕ್ಕೆ ಸ್ವಂತವಾಗಿ ಪಡೆದಿದ್ದೇವೆ. ಈ ಭೂಮಿಗೆ ಒಂದು ಹೊಳೆಯಿಂದ ಕಾಲುವೆ ಮಾಡಿ ನೀರನ್ನು ತಂದುಕೊಂಡಿರುವದರಿಂದ ಫಸಲು ಕಡಮೆಯಾಗುವದೆಂಬ ಭಯವೇ ಇಲ್ಲ.

ಈ ಆಫೀಸಿನಲ್ಲಿ ಭರವಸಪತ್ರವನ್ನು ಪಡೆದಿರುವವರು ಚಂದಾದಾರರಾಗಿ ಮಾತ್ರ ಇದ್ದಾರೆ. ಆದಾಯ ನಷ್ಟಗಳಿಗೆ ಭಾಗಿಗಳಾದ ಪಾಲುದಾರರಾಗಿರುವದಿಲ್ಲ. ಆದರೂ ಅವರ ಹಣಕ್ಕೆ ನಮ್ಮ ಭೂಸ್ಥಿತಿಯು ಆಧಾರವಾಗಿರುತ್ತದೆ.

ಚಂದಾ ಮೊಬಲಗನ್ನೆಲ್ಲಾ ಪೂರ್ತಿ ಮಾಡಿ ಭರವಸಪತ್ರವನ್ನು ಪಡೆದಿರುವ ಯಾವ ಚಂದಾದಾರನಿಗಾಗಲಿ ಆಫೀಸಿನಿಂದ ಬರತಕ್ಕ ಲಾಭವು ತೃಪ್ತಿಕರವಾಗಿ ಕಂಡುಬಾರದಿದ್ದರೆ ತಾನು ಸಲ್ಲಿಸಿರುವ ಚಂದಾ ಮೊಬಲಗನ್ನೆಲ್ಲಾ ಹಿಂತಿರುಗಿಸಿ ಪಡೆಯಬಹುದು.

ಈ ಆಫೀಸಿಗೆ ಸಬ್ ಏಜಂಟುಗಳು ಬೇಕಾಗಿವೆ. ವಿವರವಾಗಿ ತಿಳಿಯಲಪೇಕ್ಷಿಸುವವರು ಅರ್ಧಾಣೆ ಸ್ಟಾಂಪಿಟ್ಟು ಕೆಳಗಿನ ವಿಳಾಸಕ್ಕೆ ಇಂಗ್ಲಿಷಿನಲ್ಲಿ ಬರೆದುಕೊಳ್ಳತಕ್ಕದ್ದು.

ವಿಳಾಸ—The Manager,

The India Agricultural and Helping Office,

Vengurla Post, Bombay Presidency.

ದೇವಾಂಗ ಪಂಕಸ್ಥರಿಗೆ ಅಗತ್ಯ ಬೇಕಾದದ್ದು.

[redacted] 16 16

ಸ್ವಲ್ಪ ಪ್ರತಿಗಳು. ದಾಗ್ರತೆಯಿಟ್ಟರೆ ಸಿಕ್ಕುತ್ತವೆ. ಅಂತರ ಮುದ್ರಿತ ಶಿಕ್ಷವದಿಲ್ಲ ಸ್ವಕುಲಗುರುಗಳು ಸುಂದರ ಸಂಗ ಮುನಿಸ್ವಾಮಿಗಳು ರಚಿಸಿದ್ದು. ಅರ್ಥಸಹಿತ ದೇವಾಂಗಮತಪ್ರಕಾಶಿಕೆ ಸಪ್ತಾವತಾರಕ್ಕೆ ಸುಂದರವಾದ ೧೪ ಚಿತ್ರಗಳಿವೆ. ಕ್ರಯ ಸುಲಭವಾಗಿದೆ. ೧೪ ಚಿತ್ರಗಳಿರುವ ಪ್ರತಿ ೧ಕ್ಕೆ ವಿ. ಪಿ. ಖರ್ಚು ಸೇರಿ ರೂ ೨—೮ ಚಿತ್ರಗಳಿಲ್ಲದ ಇದೇ ಪ್ರತಿ ೧ಕ್ಕೆ ವಿ. ಪಿ. ಖರ್ಚು ಸೇರಿ ರೂ. ೧—೮. ವೇದ ಉಪನಿಷತ್ತುಗಳ ಅರ್ಥಸಹಿತ ಸಮೂಲಸ್ತಂಭ ೧ಕ್ಕೆ ರೂ. ೧—೮ ಕೇಳುವವರಿಗೂ ವಿ. ಪಿ. ಮೂಲಕ ಕಳುಹಿಸುತ್ತೇವೆ. ವಿಳಾಸ— ಮೈಸೂರು ಬನಶಂಕರಿ ಅಂಗಡಿ ಬ್ರಹ್ಮಶ್ರೀ ಯಜಮಾನ ಪುಟ್ಟಮಲ್ಲಯ್ಯ

ಹರಿಣೀಹರಣೋಕ್ತರುದ್ರವೆಂಬ ಶಿವರಾತ್ರಿ ಕಥೆ.

28-1

ಗೀರ್ವಾಣದ ಜಾಣರ ಸರಣಿಯಲ್ಲಿ ರಚಿಸಲ್ಪಟ್ಟಿದೆ ಇದರಲ್ಲಿ ಬೇಡ, ಜಿಂಕೆಗಳು, ಮತ್ತು ಪರಮೇಶ್ವರ ಇವರ ಚರಿತ್ರೆಗಳಿಂದ ಶಿವರಾತ್ರಿ ಮಹಿಮೆಯು ಉಕ್ತವಾಗಿದೆ. ಶಿವಭಕ್ತಿಯುಳ್ಳರಾದ ಸಮಸ್ತರೂ ಇದನ್ನು ಅವಶ್ಯವಾಗಿ ಓದಬೇಕಾದದ್ದು. ಅನಲ್ ಕಾಗದದ ಪ್ರತಿಗೆ ೩॥ ಆಣೆ ಸಾದಾ ಕಾಗದದ ಪ್ರತಿಗೆ ೨ ಆಣೆ. ೧೨ ಪ್ರತಿಗಳಿಗೆ ೧೩ನೆಯ ಪ್ರತಿ ಕೊಡುಗೆಯಾಗಿ ಕೊಡಲ್ಪಡುತ್ತೆ.

ವಿಳಾಸ—೧ ಅರಮನೆ ಹಾಪ್ಸಿನ ಶಿವಲಿಂಗದೇವರು ಸೋಸಿಮರದ ಮ್ಯಾನ ಗುಡಿ ಬೀದಿ. ಕೃಷ್ಣರಾಜಮೊಹಲ್ಲಾ, ಮೈಸೂರು,

ವಿಳಾಸ—೨, ಯಂ ನಂಜಿನಾದಯ್ಯ, ಜನರಲ್ ಮರ್ಚೆಂಟ್ಸ್, ಚಾಮರಾಜ ರೋಡ್, ಮೈಸೂರು.

ಕೊಡಗು ದೇಶದ ಸ್ವಚ್ಛವಾದ ಉತ್ಕೃಷ್ಟವಾದ ಕಾಫಿಯು.
ಹುರಿಯದೆ ಇರುವುದು ಅಥವಾ ಆಗತಾನೆ ಹುರಿದದ್ದು.
ಹದವಾಡಿದ ಸ್ಥಳದಿಂದಲೆ ನೆಟ್ಟಗೆ ರವಾನಿಸಲ್ಪಡುವದು.

45-1

ವ್ಯಾಪಾರದ ಹೆಗ್ಗುರ್ತು

ಕಾಡುಕೋಣದ ತಲೆಯು ನಡುವೆ ಇದೆ

ಸಂಪೂರ್ಣವಾಗಿ ಯಂತ್ರದಿಂದಲೆ ಸಿದ್ಧಪಡಿಸಿದ್ದು ಹೆಗ್ಗುರ್ತು ಉಳ್ಳ ವಿಲಾಸದ ಚೀಟಿ ಸುತ್ತಿಲ್ಲದಿರುವವು ಸ್ವಚ್ಛವಾದವುಗಳಲ್ಲ. ಅವು ನಮ್ಮದಲ್ಲ. ಏಜೆಂಟರುಗಳು ಬೇಕು ಇಂಥವರಿಗೆ ಆಲಾಯದ ದರ ಬರೆಯುವವರು ದಯವಿಟ್ಟು ಈ ಪತ್ರಿಕೆಯ ಹೆಸರನ್ನು ಸೂಚಿಸಿ. ವಿಳಾಸ—ಮ್ಯಾನೇಜರ್ ನಾರ್ಥರ್ನ್ ಕಾಫಿ ವರ್ಕ್ಸ್, ಹಾಸನ

ಪರಿಮಳ ನಶ್ಯದಪುಡಿ

30-2

ಪರಿಮಳ ನಶ್ಯದಪುಡಿ ಡಬ್ಬಿ ೧ಕ್ಕೆ	0—9—0
ಟಪಾಲು ಖರ್ಚು	0—3—0
ಸಾದಾ ನಶ್ಯದಪುಡಿ ಡಬ್ಬಿ ೧ಕ್ಕೆ	0—6—0
ಟಪಾಲು ಖರ್ಚು	0—3—0

ಈ ಪುಡಿಯನ್ನು ಮೇಲಾದ ಹೊಗೆಸೊಪ್ಪಿನಿಂದ ಸುವಾಸನೆಯುಳ್ಳದ್ದಾಗಿ ತಯಾರು ಮಾಡಲ್ಪಟ್ಟಿರುತ್ತೆ. ಇದರ ಸುವಾಸನೆ ಒಂದು ಸೇರು ಸಾಧಾರಣ ಪುಡಿಯಲ್ಲಿ ಸ್ವಲ್ಪವನ್ನು ಹಾಕಿ ಕಲಸಿದರೆ ಪುಡಿ ಉಲ್ಲಾಸಗಮಗಮಿಸುತ್ತೆ. ಉಪಯೋಗಿಸುವವರಿಗೆ ಸುವಾಸನೆಯನ್ನೂ ಆನಂದವನ್ನೂ ಉಂಟು ಮಾಡುತ್ತೆ.

ತಲೆನೋವು, ಪೀನಸ, ಜಲದೋಷ, ಶಿರೋವ್ಯಾಧಿ ಇವುಗಳನ್ನು ತಪ್ಪದೆ ಪರಿಹರಿಸುತ್ತೆ. ಮಾದರಿಗೆ ೧ ಡಬ್ಬಿಯನ್ನು ತರಿಸಿ ಪರೀಕ್ಷಿಸಿರಿ.

ಪ್ರತಿ ೧ ಡಬ್ಬಿಯಲ್ಲಿ ೯ ತೋಲ ನಶ್ಯದಪುಡಿ ಇರುತ್ತೆ.

ಮಾನೇಜರ್, ಧರ್ಮ ವೈದ್ಯಶಾಲಾ,

೫೫ ಬೈನಾಪಜಾರು ರೋಡ್, **ಸಾಹುಕಾರ್‌ಪೇಟೆ, ಮದರಾಸು.**

ಹೊಸ ಪುಸ್ತಕಗಳು.

36-1

ದೇವರನಾಮಗಳ ಪುಸ್ತಕ.—ಇದರಲ್ಲಿ ಹೆಂಗಸರಿಗೆ ಉಪಯೋಗವಾಗುವ ಹಾಡುಗಳು, ದೇವರ ಪೂಜೆಮಾಡುವ ಕೀರ್ತನೆಗಳು, ಅಧ್ಯಾತ್ಮಭಾರತ, ಭಾಗವತ, ಸಂಕ್ಷೇಪ ರಾಮಾಯಣ, ಇವುಗಳು ಇನ್ನೂ ವಿಚಿತ್ರವಾದ ಲಾವಣಿಗಳೂ ಇರುತ್ತೆ. ಕ್ರಯ ೪ ಆಣೆ.

ಪಂಚಕಥಾ —ಇದರಲ್ಲಿ ಪ್ರಹ್ಲಾದಚರಿತ್ರೆ, ಮಾಧವನಚರಿತ್ರೆ, ಅನಸೂಯಾಚರಿತ್ರೆ, ದ್ರೌಪದೀ ಮಾನರಕ್ಷಣವೆಂಬ ದ್ಯೂತಪರ್ವ, ಪೊನ್ನಾವಚರಿತ್ರೆಯೆಂಬ ಐದು ಕಥೆಗಳು ಸೇರಿರುತ್ತೆ. ೬ ಆಣೆ.

ಸೇತೂರಾಯರಕಥೆ —ಭೋಜನಕಾಲನಿರ್ಣಯ, ಅನೇಕದಾಸರ ಕಥೆ ಎಲ್ಲಾ ಒಂದರಲ್ಲಿ ಕ್ರಯ ೩ ಆಣೆ.

ಶ್ರೀಮನ್ ಮಧ್ವಸಿದ್ಧಾಂತಸಾರ —ದ್ವೈತಾದ್ವೈತ ಮತವಿಷಯಗಳನ್ನು ವಿವರಿಸಲ್ಪಟ್ಟಿವೆ ಕ್ರಯ ೬ ಆಣೆ.

ರುಕ್ಮಾಂಗದ ಮಹಾರಾಯರ ನಾಟಕ —ಕ್ರಯ ೩ ಆಣೆ.

ಒಬ್ಬ ಸಿಪಾಯಿಯ ಸಾಹಸಗಳು—"ಒಂದು ಚಿತ್ತು ಮತ್ತು ಆರು ಗುರುಗುಡಿಗಳ ಸುದ್ದಿ" —ಕ್ರಯ ೭ ಆಣೆ.

ಇಪ್ಪತ್ತನೆಯ ಶತಮಾನದ ಇರುಳು —ಕ್ರಯ ೨ ಆಣೆ.

ವಿ. ಪಿ. ಖರ್ಚು ಬೇರೆ } ವಿಳಾಸ —ಜಗದೀಶ ಎಲ್. ನಾರಾಯಣದಾಸ, ೧೬೮ ಅರಳೇಪೇಟೆ, ಬೆಂಗಳೂರು ಸಿಟಿ

CHAMBERLAIN'S PAIN BALM.

ಚೇಂಬರ್ಲೇನ್ ಯವರು ಮಾಡಿದ ನೋವುಹರ ಔಷಧವು.



15-6

ಬೆನ್ನೆಲುಬಿನಲ್ಲಿನ ನೋವು, ಪಕ್ಕಗಳಲ್ಲಿ ಆಗುವ ನೋವು, ಖಂಡಗಳಲ್ಲಿ ಹುಟ್ಟುವ ನೋವು, ತಲೆನೋವು, ಚಿಜ್ಜಿದ ಕಡೆಗಳ ನೋವು, ವಾಯುನೋವು—ಇವುಗಳನ್ನೆಲ್ಲಾ ಸಂಪೂರ್ಣವಾಗಿ ವಾಸಿಮಾಡುವಂಥಾ ಔಷಧ.

ವಾಯುನೋವೆಂದರೇನು?

ಕೀಲುಗಳೆಲ್ಲಾ ಮಾಂಸಕಟ್ಟುಗಳೆಲ್ಲಾ ಗಾಯವಾಗುವುದು, ಊದಿಕೊಳ್ಳುವುದು, ಕಠಿಣವಾಗಿ ಸೆಳೆಯುವ ಖಂಡಗಳಲ್ಲಿ ಇರಿಯುವುದು, ವಿಶ್ರಾಂತಿಕೊಡದೆ ಇರುವುದು, ನಿದ್ದೆಹತ್ತದೆ ಇರುವುದು—ಇದೇ ಇದೆಲ್ಲಾ ಯಾವಾಗ ಉಂಟಾಗುವುದೋ ಆಗ್ಗೆ ನಿಮಗೆ ವಾಯುನೋಗೆ ಬಂದಿದೆ ಎಂದು ತಿಳಿಯತಕ್ಕದ್ದು.

ಆಗ ಚೇಂಬರ್ಲೇನ್‌ಯವರು ಮಾಡಿದ ನೋವುಹರ ಔಷಧವನ್ನು ಉಪಯೋಗಿಸಿ

ಮೊದಲನೇ ಸಲ ಇದನ್ನು ಹಾಕಿ ಉಜ್ಜಿದ ಕೂಡಲೆ ಹಿತಕರವಾದ ಒಂದು ತರಹಾ ಕಾವು ನಾಳೆಯಲ್ಲಿ ವ್ಯಾಪಿಸುತ್ತದೆ. ಒಡನೆಯೇ ನೋವೆಲ್ಲಾ ಸಂಪೂರ್ಣವಾಗಿ ಪರಿಹರಿಸಲ್ಪಡುತ್ತದೆ ಮನಸ್ಸಿಗೆ ಉಲ್ಲಾಸವಾಗ ಅದನ್ನೇ ಆಗಿಂದಾಗ್ಗೆ ಹಾಕಿ ಉಜ್ಜುತ್ತಾ ಬಂದರೆ ಈ ವಾಯುವಿನ ಹುಟ್ಟನ್ನೇ ಕಿತ್ತುಹಾಕಿಬಿಡುವುದು

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ.

ಕೈಯಿಂದ ಮುಟ್ಟಿದ್ದೇನೂ ಅಲ್ಲ.

ಇದು ಎಲ್ಲೆಲ್ಲೂ ಬಿಕರಿಯಾಗುವುದು ಸಣ್ಣ ಶೀಸೆಗೆ ೧ ರೂಪಾಯಿ ದೊಡ್ಡ ಶೀಸೆಗೆ ೨ ರೂಪಾಯಿ

ಪ್ರಕಟನೆ.

28-2

ಮುಮುಕ್ಷುಗಳಿಗೆ ಪಾರಾಯಣಕ್ಕನುಕೂಲವಾಗಿ ಪ್ರಿಂಟುಮಾಡಿರುವ ಪ್ರಶಸ್ತಪತ್ರ ಸಮುದ್ರಿತತಾತ್ಪರ್ಯಸಹಿತ ಪಾಕೆಟ್ಟು ಸೈಜು ಭಗವದ್ಗೀತ ಪ್ರತಿ ೧ಕ್ಕೆ ೧೦ ಆಣೆ ೨ಕ್ಕೆ ೧—೨—೮ (ತೆಲುಗು ಲಿಪಿ.)

ಕಂಪಿ॥ ರಾಮಸ್ವಾಮಯ್ಯಂಗಾರ್

ಬುಕ್‌ಸೆಲ್ಲರು ಕಾಪ್ಪಂಫೋಸ್ಟು. N. A.

ವೃತ್ತಾಂತ ಪತ್ರಿಕೆ

೧

ಸನ್ ೧೯೦೬ ನೇ ಇಸವಿ ಫೆಬ್ರುವರಿ ತಾ॥ ೧೪ ನೇ ಗುರುವಾರ.

ಮತಾಂತರ ಹೊಂದುವವರೂ ಹೊಸ ರೆಗ್ಯುಲೇಷನೂ.

ಮೈಸೂರು ಸರ್ಕಾರದವರು ಮತಾಂತರ ಹೊಂದುವವರ ವಿಷಯವಾಗಿ ಒಂದು ಹೊಸ ರೆಗ್ಯುಲೇಷನ್ ಮಾಡಿ, ಅದರ ಮೇಲೆ ಪ್ರಜೆಗಳ ಅಭಿಪ್ರಾಯವನ್ನು ಬರೆದು ತಿಳಿಸಬಹುದೆಂದು ಕೇಳಿರುವುದೂ, ಅವಧಿಯನ್ನು ಇನ್ನೂ ಮೂರು ತಿಂಗಳ ತನಕ ಹೆಚ್ಚು ಮಾಡಿರುವುದೂ ವಾಚಕರಿಗೆ ಗೊತ್ತಿರಿಯುಷ್ಟೆ. ಈ ರೆಗ್ಯುಲೇಷನಿನ ಪಕ್ಷ ಪರಪಕ್ಷಗಳನ್ನು ಹಿಡಿದು ಸಂಪೂರ್ಣವಾಗಿಯೂ ಧಾರಾಳವಾಗಿಯೂ ಚರ್ಚೆಮಾಡುವ ಭಾಗದಲ್ಲಿ ನಾವು ತುಂಬಾ ಕಾಂಕ್ಷೆಪಡುತ್ತೇವೆ. ಈ ರೆಗ್ಯುಲೇಷನಿನ ಅರ್ಥವನ್ನು ಸರಿಯಾಗಿ ತಿಳಿದುಕೊಳ್ಳದೆ ಇರೋಣದರಿಂದಲೇ ಜನರು ಸಂಶಯಪಟ್ಟು ನಾನಾ ರೀತಿಯಲ್ಲಿ ವಿರೋಧಾಭಿಪ್ರಾಯಗಳನ್ನು ಪಡೆದಿರುವರು. ಇದನ್ನು ಮೊದಲೇ ಚನ್ನಾಗಿ ತಿಳಿದುಕೊಂಡ ಪಕ್ಷದಲ್ಲಿ ಈ ಕಾನೂನು ನ್ಯಾಯವಾದದ್ದೆಂತಲೂ ಅವಶ್ಯವಾದದ್ದೆಂತಲೂ ಎಲ್ಲರೂ ಒಪ್ಪಿಕೊಳ್ಳುವ ಭಾಗದಲ್ಲಿ ಏನೇನೂ ಸಂಶಯವಿಲ್ಲ.

ಈ ಹೊಸ ಕಾನೂನಿನ ವಿಷಯಗಳನ್ನು ಈ ಪತ್ರಿಕೆಯಲ್ಲಿ ಚರ್ಚಿಸುವುದಕ್ಕೆ ನಾವು ಬಾತ್ಮಿದಾರರಿಗೆ ಸಂಪೂರ್ಣವಾಗಿ ಅವಕಾಶಕೊಡುತ್ತೇವೆ. ಯಾವ ಜಾತಿಯವರಾದರೂ ಈ ವಿಷಯವಾಗಿ ನಮಗೆ ಬಾತ್ಮಿಗಳನ್ನು ಬರೆದು ಕಳುಹಿಸಬಹುದೆಂದು ಈ ಮೂಲಕ ಸೂಚಿಸುತ್ತೇವೆ. ಆದರೆ ಇಂಥಾ ಬಾತ್ಮಿದಾರರು ಎರಡು ವಿಷಯಗಳನ್ನು ಮಾತ್ರ ಜ್ಞಾಪಕದಲ್ಲಿಟ್ಟುಕೊಳ್ಳಬೇಕು. (೧) ಬಾತ್ಮಿದಾರರು ಬರೆಯುವ ಸಂಗತಿಗಳು ಮೊದಲು ಅವರ ಮನಸ್ಸಿನ ಸ್ವಪ್ರವವುಗಳಾಗಿ ಇರಬೇಕು; (೨) ಯಾವ ಅಭಿಪ್ರಾಯಕ್ಕೆ ವಿರೋಧವಾಗಿ ಬಾತ್ಮಿಯನ್ನು ಬರೆದರೂ ಅದೆಲ್ಲಾ ಅಲ್ಪವಾದ ಬಾಲಭಾಷೆಗಳಿಲ್ಲದೆ ಯೋಗ್ಯವಾಗಿಯೂ ಗಂಭೀರವಾಗಿಯೂ ಇರಬೇಕು; ಜನರನ್ನಾಗಲಿ ಜಾತಿ ಮತಗಳನ್ನಾಗಲಿ ಹಿಡಿದು ದೂಷಣೆಮಾಡಿ ಬರೆದು ಬರುವ ಬಾತ್ಮಿಗಳನ್ನು ಪ್ರಕಟಿಸುವುದಕ್ಕೆ ನಾವು ಈ ಪತ್ರಿಕೆಯಲ್ಲಿ ಅವಕಾಶಕೊಡಲಾರೆವು.

ಇದುವರೆಗೆ ಈ ನಮ್ಮ ಪತ್ರಿಕೆಯಲ್ಲಿ ದ್ವೇಷಾಸೂಯೆಗಳನ್ನು ಹೊರಪಡಿಸುವಂಥಾ ಯಾವ ಬಾತ್ಮಿಯನ್ನೂ ಪ್ರಕಟಿಸಿಲ್ಲವೆಂಬುವುದೂ ಹಿಂದುಗಳಾಗಲಿ, ಮುಸಲ್ಮಾನರಾಗಲಿ, ಕ್ರೈಸ್ತರಾಗಲಿ, ಇನ್ಯಾವ ಪಂಗಡದವರೇ ಆಗಲಿ ತಮ್ಮ ಅಭಿಪ್ರಾಯಗಳನ್ನು ನ್ಯಾಯವಾಗಿಯೂ ಗಂಭೀರವಾಗಿಯೂ ಪ್ರಕಾಶಪಡಿಸುವುದಕ್ಕೆ ನಮ್ಮ ಪತ್ರಿಕೆಯು ಹಿಂತೆಗೆದಿಲ್ಲವೆಂಬುವುದೂ ನಮ್ಮ ವಾಚಕರಿಗೆಲ್ಲಾ ತಿಳಿದಿರುವುದೆಂದು ನಂಬುತ್ತೇವೆ.

ಈ ಕಾನೂನಿನ ವಿಷಯವನ್ನು ಕುರಿತು ಇದು
ಚರ್ಚೆ ನಡೆದಿರುವುದನ್ನು ನೋಡಲಾಗಿ, ಬಹುಜನರು
ವಲ್ಲದ ಅನೇಕ ಸಂಗತಿಗಳನ್ನು ಹೇಳಿದ್ದಾರೆಂತಲೂ,
ದು ಪತ್ರಿಕೆಗಳಲ್ಲಿ ಪ್ರಕಟಿಸಿದ್ದಾರೆಂತಲೂ ಧಾರಾಳ
ಹೇಳುತ್ತೇವೆ. ಈ ಪೈಕಿ ಒಂದು ಸಂಗತಿಯು ಒಪ
ಶೇಷವಾಗಿರೋಣದರಿಂದ ಅದನ್ನು ಮಾತ್ರ ಸದ್ಯದಲ್ಲಿ
ಡಿಸಿ ಬರೆಯುವೆವು. ಅದೇನೆಂದರೆ, ಮಿ॥ ಬೆಸೆಂಟ್ ಎ
ಕೆ ವಿಲಾಯತಿಯಲ್ಲಿ ಕ್ರೈಸ್ತಮತವನ್ನು ತ್ಯಜಿಸಿದಾಗ
ಯ ಹಕ್ಕುಬಾಧ್ಯತೆಗಳನ್ನೆಲ್ಲಾ ಕಿತ್ತುಕೊಂಡರಂತ
ಆಕೆಯ ಮಕ್ಕಳನ್ನೂ ಆಕೆಯ ಪೋಷಣೆಯಿಂದ ತಪ್ಪಿ
ಟ್ಟರೆಂತಲೂ, ಆದಕಾರಣ ಕ್ರೈಸ್ತರು ಆಕೆಗೆ ಮಾಡಿ
ಯೇ ಹಿಂದೂಗಳು ಕ್ರೈಸ್ತರಿಗೆ ಎಲ್ಲಾ ಹಕ್ಕುಬಾಧ
ಳನ್ನೂ ತಪ್ಪಿಸಿಬಿಡಬೇಕೆಂತಲೂ ಹೇಳಲ್ಪಟ್ಟಿವೆ.

ಈ ವಿಷಯದಲ್ಲಿ ನಿಜವಾಗಿ ನಡೆದಿರುವ ಸಂಗತಿ
ನೆಂದು ಸ್ವಲ್ಪ ವಿಚಾರಮಾಡಿ ನೋಡೋಣ. ಮಿ॥ ಬೆ
ಟನ ಪತಿಯು ವೈದಿಕ ಕ್ರೈಸ್ತನಾಗಿದ್ದನು. ಮೊ
ಅವರ ದಾಂಪತ್ಯವು ಅವರವರಿಗೆ ಸುಖ ಸಂತೋಷಕ
ಗಿರಲಿಲ್ಲ. ಪರಸ್ಪರ ವೈಮನಸ್ಸುಗಳುಂಟಾದವು. ಕೆ
ಕಾಲದ ಮೇಲೆ ಮತವಿಷಯದಲ್ಲಿ ಗಂಡಹೆಂಡರಿಗೆ ಭಿ
ಭಿಪ್ರಾಯಗಳು ಹುಟ್ಟಿದವು. ಹೆಂಡತಿಯಾದ ಮಿ॥ ಬೆಸೆ
ಳು ಕಡೆಗೆ ಕ್ರೈಸ್ತ ಮತಭಕ್ತಿಯನ್ನು ತ್ಯಜಿಸಿ, ಗಂ
ಸಂಗಡ ಕರಾರು ಮಾಡಿಕೊಂಡು ಪ್ರತ್ಯೇಕವಾದಳು.
ದಂಪತಿಗಳಿಗೆ ಇಬ್ಬರು ಮಕ್ಕಳಿದ್ದರು. ಆ ಕರಾರಿನ
ಕಾರ ಹಿರಿ ಗಂಡುಮಗುವನ್ನು ಗಂಡನೂ, ಕಿರಿ ಹೆಣ್ಣು
ಗುವನ್ನು ಹೆಂಡತಿಯೂ ತಮ್ಮ ತಮ್ಮ ಪೋಷಣೆಯ
ಬೇಕೆಂದು ಒಪ್ಪಿ ಹಂಚಿಕೊಂಡರು ಹೀಗೆ ವಾಲು
ಡಿಕೊಂಡದ್ದು ಸಹಜವಲ್ಲವೆಂದು ಯಾರೂ ಆಕ್ಷೇ
ಮಾಡುವ ಹಾಗಿಲ್ಲ.

ಎರಡು ಮೂರು ಸಂವತ್ಸರಗಳಾದನಂತರ ಮಿ॥
ಸೆಂಟಳು ನಾಸ್ತಿಕನಾದ ಬ್ರಾಡ್ಲಾ ಎಂಬಾತನ ಸಂ
ಸೇರಿಕೊಂಡು, ಪ್ರಪಂಚದಲ್ಲಿರುವ ಬಡತನವನ್ನೂ ಅ
ಕಷ್ಟ ಸಂಕಟಗಳನ್ನೂ ಪರಿಹರಿಸುವುದಕ್ಕೆ ಬಡಬಗ್ಗ
ಮಕ್ಕಳನ್ನು ಹುಟ್ಟಿಸದಂತೆ ಉಪಾಯ ಮಾಡಿಕೊಳ್ಳ
ಕೆಂತಲೂ, ಹೆಂಗಸರು ಗರ್ಭ ಧರಿಸದೆ ಇರುವುದಕ್ಕೆ
ನೋ ಏರ್ಪಾಡು ಮಾಡಿಕೊಳ್ಳಬೇಕೆಂತಲೂ, ಇದರಿ
ಬಡವರ ಕಷ್ಟ ಪರಂಪರೆಗಳು ನಿರ್ಮೂಲವಾಗುವವೆ
ಲೂ ಒಂದು ಪುಸ್ತಕವನ್ನು ಬರೆದು ಪ್ರಕಟಿಸಿದಳು. (
ರೆ ಈಚೆಗೆ ಇಂಥಾ ಅಭಿಪ್ರಾಯವು ಬಹಳ ಕೆಟ್ಟದ್ದೆ
ಆಕೆಯೇ ಒಪ್ಪಿಕೊಂಡಿರುತ್ತಾಳೆ. ಪ್ರಜೆಗಳು ಆ ಪುಸ
ವನ್ನು ಓದಿ ವಿಶೇಷವಾಗಿ ಸಿಟ್ಟುಗೊಂಡು, ಅದು ಬ
ಅಯೋಗ್ಯವಾದದ್ದೆಂದೂ ಲಜ್ಜಾಸ್ಪದವಾದದ್ದೆಂದೂ
ಸ್ಕಾರ ಮಾಡಿಬಿಟ್ಟರು.

ಮಿ॥ ಬೆಸೆಂಟಳು ತನ್ನ ಹೆಣ್ಣುಮಗುವನ್ನು ದ
ಭಕ್ತಿಮಾರ್ಗದಲ್ಲೂ ಬೆಳಸುವುದಿಲ್ಲವೆಂತಲೂ ಆ ಮಗು
ನ್ನು ತನ್ನ ಪೋಷಣೆಗೆ ಕೊಡಿಸಬೇಕೆಂತಲೂ ಆಕೆಯ ಗ
ನು ಆಕೆಯ ಮೇಲೆ ದಾವಾ ತಂದನು. ಈ ಮೊಕದ್ದ
ಯನ್ನು ದರ್ಯಾಫ್ತಿ ಮಾಡಿದ ಜಡ್ಜಿಯು ಕ್ರೈಸ್ತಸ
ಹೋದಾಗಲೂ, ನ್ಯಾಯದ ರೀತಿ ಹೆಣ್ಣು ಮಗುವನ್ನು

ಪೋಷಣೆ ತಪ್ಪಿಸಿ, ತಂದೆಯು ಮನೆಗೆ ಕಳುಹಿಸಬೇಕೆಂದು ತೀರ್ಮಾನ ಹೇಳಿದನು. ಆಕೆಯು ಕೈಫಿಯತ್ತಿನಿಂದ ಆಕೆ ನಾಸ್ತಿಕಳೆಂಬುವದು ಸ್ಪಷ್ಟವಾಯಿತು. ಈ ಹೆಂಗಸು ಮೋಲ್ಯಾರ ಲಜ್ಜಾಸ್ಪದವಾದ ಪುಸ್ತಕವನ್ನು ಪ್ರಕಟ ಮಾಡಿದ್ದಳು. ಇಂಥಾ ಸ್ತ್ರೀಯು ತನ್ನ ವಶದಲ್ಲಿರುವ ಮಗುವಿಗೆ ಸದ್ಭಕ್ತಿ ಸದ್ಗುಣಗಳನ್ನು ಕಲಿಸತಕ್ಕವಳಲ್ಲವೆಂದು ಯಾರಿಗೂ ಗೊತ್ತಾಗುವದು. ಆಕೆ ಇದರ ಮೇಲೆ ಅಪೀಲ್ ಮಾಡಿದಳು. ಕೋರ್ಟಿನವರು ಕೆಳಕೋರ್ಟಿನ ತೀರ್ಮಾನವನ್ನೇ ಸ್ಥಿರಪಡಿಸಿ, ಮಕ್ಕಳ ಪೋಷಣೆಯು ತಾಯಿಗಿಂತಲೂ ಹೆಚ್ಚಾಗಿ ತಂದೆಗೆ ಸೇರಿದ್ದೆಂತಲೂ, ವಿವಾಹ ಸಂಬಂಧವನ್ನು ತ್ಯಜಿಸಿಕೊಂಡು ಹೋಗಿರುವ ತಾಯಿಗೆ ಎಷ್ಟು ಮಾತ್ರವೂ ಮಕ್ಕಳನ್ನು ಪೋಷಿಸುವ ಅಧಿಕಾರವಿರುವದಿಲ್ಲವೆಂತಲೂ ಬರೆದು ಆಕೆಯ ಅಪೀಲನ್ನು ವಜಾ ಮಾಡಿದರು. ಈ ಕಾನೂನು ಯಾವ ಮತಕ್ಕಾಗಲಿ ಮತಾನುವರ್ತಿಗಳಿಗಾಗಲಿ ಸಂಬಂಧಪಡುವದಿಲ್ಲ. ವಿಲಾಯತಿಯಲ್ಲಿ ಸಕಲ ಮತಾವಲಂಬಿಗಳಿಗೂ ಇದೇ ನ್ಯಾಯವಾಗಿರುವದು. ಆದರೆ ಈ ಕಾನೂನು ಸ್ವಲ್ಪ ಕಠಿಣವಾದದ್ದೆಂದು ಈಚೆಗೆ ಗವರ್ನಮೆಂಟಿನವರು ತಿಳಿದು, ಸುಮಾರು ೭ ವರುಷಗಳು ತುಂಬುವ ತನಕ ಮಕ್ಕಳನ್ನು ತಾಯಿಯ ಪೋಷಣೆಯಲ್ಲೇ ಬಿಟ್ಟರಬೇಕೆಂದು ಕಾನೂನನ್ನು ಈಗ ಬದಲಾವಣೆ ಮಾಡಿರುತ್ತಾರೆ.

ಮೇಲ್ಕಂಡ ಸಂಗತಿಗಳನ್ನು ನೋಡಲಾಗಿ ಮಿ ಬೆಸೆಂಟ್ ಎಂಬಾಕೆಗೆ ಮಗುವಿನ ಪೋಷಣೆ ತಪ್ಪಿ ಹೋದದ್ದು ಎಷ್ಟುಮಾತ್ರವೂ ಆಕೆ ಮತಾಂತರವನ್ನು ಹೊಂದಿದ್ದರಿಂದಾಗಿ ಅಲ್ಲವೆಂತಲೂ ಪತಿಯನ್ನು ತ್ಯಜಿಸಿದ್ದಕ್ಕಾಗಿಯೇ ಎಂತಲೂ ಪರಿಷ್ಕಾರವಾಗಿ ಗೊತ್ತಾಗುವದು ಈ ಸಂಗತಿಯನ್ನು ಆಕೆಯೇ ಬರೆದುಕೊಂಡಿರುವ ತನ್ನ ಜೀವಚರಿತ್ರೆಯಲ್ಲಿ ತೆಗೆದು ತಿಳಿಸಿರುತ್ತೇವಲ್ಲದೆ ಮತ್ತೆ ಬೇರೆಯಿಲ್ಲ.

ಕಟ್ಟಳೆಗಳಲ್ಲಿ ಮೊದಲನೆಯದೂ ದೊಡ್ಡದೂ.

ಒಂದು ಇತಿಹಾಸವುಂಟು ಅದೇನೆಂದರೆ — ಒಬ್ಬ ಮನುಷ್ಯನು ಪಂಡಿತನಾದ ಒಬ್ಬ ಶಾಸ್ತ್ರಿಯ ಬಳಿಗೆ ಹೋಗಿ — ಸ್ವಾಮಿ, ನಾನು ಒಂದು ಕಾಲಿನ ಮೇಲೆ ನಿಂತಿರುವಷ್ಟು ಹೊತ್ತಿನೊಳಗಾಗಿ ನನಗೆ ಧರ್ಮನೀತಿಗಳನ್ನೂ ಉಪದೇಶಿಸಬೇಕು ಎಂದು ಕೇಳಿಕೊಂಡನು. ಅದು ಅಸಾಧ್ಯವೆಂದು ಹೇಳಿ ಆ ಶಾಸ್ತ್ರಿಯು ಆ ಮನುಷ್ಯನನ್ನು ಓಡಿಸಿಬಿಟ್ಟನಂತೆ. ತರುವಾಯ ಆ ಮನುಷ್ಯನು ಬೇರೊಬ್ಬ ಶಾಸ್ತ್ರಿಯ ಬಳಿಗೆ ಹೋಗಿ ಅದೇ ಪ್ರಕಾರ ಕೇಳಿಕೊಳ್ಳಲು ಆತನು — ನಿನಗೆ ಯಾವದು ಅಹಿತವಾದುದೋ ಅದನ್ನು ಇತರರಿಗೆ ಮಾಡಬೇಡ ಇದುವೇ ಧರ್ಮತತ್ವವು. ಉಳಿದುದೆಲ್ಲಾ ಈ ತತ್ವಕ್ಕೆ ವ್ಯಾಖ್ಯಾನಗಳಷ್ಟೆ ಎಂದು ಹೇಳಿದನಂತೆ.

ಹಾಗಾದರೂ ನಮ್ಮ ಕರ್ತವ್ಯವನ್ನೆಲ್ಲ ಒಂದೇ ಒಂದು ಸಣ್ಣ ವಾಕ್ಯದಲ್ಲಿ ಅಡಗುವಂತೆ ಸಂಗ್ರಹಿಸಿಕೊಟ್ಟರೆ ಎಷ್ಟು ಅನುಕೂಲವಾಗುತ್ತಿತ್ತು! ನಮ್ಮ ನಮ್ಮ ಕೆಲಸಗಳನ್ನು ಮಾಡುತ್ತಿರುವಾಗ್ಗೆ ಸುಲಭವಾಗಿ ಮನಸಿನಲ್ಲಿಟ್ಟುಕೊಳ್ಳುವದಕ್ಕೆ ಅನುಕೂಲವಾಗಿದ್ದರೆ ಬಲು ಒಳ್ಳೇದು. ಕಟ್ಟಳೆಗಳು ಅನೇಕವಾಗಿದ್ದರೆ ಅವುಗಳನ್ನೆಲ್ಲಾ ಜ್ಞಾಪಕದಲ್ಲಿಟ್ಟುಕೊಳ್ಳುವದು ಬಹಳ ಕಷ್ಟ ಗ್ರಹಿಸುವದಕ್ಕೆ ಸುಲಭವಾಗಿಯೂ ಜ್ಞಾಪಕದಲ್ಲಿಟ್ಟುಕೊಳ್ಳುವದಕ್ಕೆ ಚಿಕ್ಕದಾಗಿಯೂ ಇರುವ ಒಂದು ಕಟ್ಟಳೆಯಿದ್ದರೆ ಬಹಳ ಅನುಕೂಲವಾಗಿರುವದೆಂದು ನಾವು ಅನೇಕ ಸಾರಿ ಹೇಳಿಕೊಂಡಿರುತ್ತೇವಲ್ಲವೇ? ಹೀಗಿರಲಾಗಿ ಒಂದು ಸಾರಿ ಒಬ್ಬ ಶಾಸ್ತ್ರಿಯು ಯೇಸುಸ್ವಾಮಿಯ ಬಳಿಗೆ ಹೋಗಿ — ಸ್ವಾಮಿ, ಕಟ್ಟಳೆಗಳೊಳಗೆ ಮೊದಲನೆಯದು ಯಾವದು? ಎಂದು ಪ್ರಶ್ನೆ ಮಾಡಿದನು. ಅದಕ್ಕೆ ಯೇಸುಸ್ವಾಮಿಯು ಆತನಿಗೆ — ನಮ್ಮ ದೇವರು ಒಬ್ಬನೇ ಕರ್ತನು ನಿನ್ನ ಪೂರ್ಣ ಮನಸ್ಸಿನಿಂದಲೂ ನಿನ್ನ ಪೂರ್ಣ ಪ್ರಾಣದಿಂದಲೂ ಪ್ರೀತಿಸಬೇಕು ಮತ್ತು ನೀನು ನಿನ್ನನ್ನು ಪ್ರೀತಿಸಿಕೊಳ್ಳುವಂತೆ ನಿನ್ನ ನೆರೆಯವನನ್ನು ಪ್ರೀತಿಸಬೇಕು ಎಂಬುವದೇ ಕಟ್ಟಳೆಗಳಲ್ಲಿ ಪ್ರಧಾನವಾದದ್ದು ಎಂದು ಉತ್ತರವನ್ನು ಕೊಟ್ಟನು.

ಸ್ವಾಮಿಯು ಹೇಳಿದ ಈ ಕಟ್ಟಳೆಗೆ ನಮ್ಮ ನಡತೆಯನ್ನು ಹೋಲಿಸಿಕೊಂಡರೆ ಎಷ್ಟು ವ್ಯತ್ಯಾಸವಿದೆ! ತಿನ್ನುವದಕ್ಕೆ ಅನ್ನವೂ ಉಡುವದಕ್ಕೆ ಬಟ್ಟೆಯೂ ಖರ್ಚುಮಾಡುವದಕ್ಕೆ ಹಣವೂ ಇದ್ದರೆ ಸಾಕು. ನನ್ನ ಶರೀರಕ್ಕೆ ಇವುಗಳಿಂದ ಬಹಳ ಪ್ರಯೋಜನವಿದೆ ಎಂದು ಇವುಗಳ ವಿಷಯದಲ್ಲಿ ಬಹಳ ಚಿಂತೆಪಡುತ್ತೇನೆ, ಕಣ್ಣಿನಿಂದ ಕಾಣಕೂಡದಂಥ ದೇವರನ್ನು ಸರ್ವವಸ್ತುಗಳಿಗಿಂತ ಅಧಿಕವಾದ ಮಮತೆಯಿಂದ ಕಾಣುವದು ಹ್ಯಾಗೆ ಎಂದು ಯಾರಾದರೂ ಕೇಳಬಹುದು. ಹೀಗಿದ್ದರೂ ಯೇಸುಸ್ವಾಮಿಯು ಹೇಳಿದಂಥ ನಿಯಮವು ಕೇವಲ ದರಿದ್ರರೂ ನಿಕೃಷ್ಟಸ್ಥಿತಿಯುಳ್ಳವರೂ ಆಗಿರುವವರೂ ಸಹ ಅನುಸರಿಸತಕ್ಕದ್ದಾಗಿದೆ. ಬಡತನವಾಗಲಿ ಅನಾರೋಗ್ಯವಾಗಲಿ ನಿಕೃಷ್ಟಸ್ಥಿತಿಯಾಗಲಿ ಮನುಷ್ಯನಿಗೆ ದುಃಖವನ್ನು ಉಂಟುಮಾಡತಕ್ಕ ಕಾರಣಗಳಲ್ಲ. ದೇವರ ಬಳಿಯಿಂದ ದೂರವಾಗಿ ತೊಲಗಿ ಹೋಗುವದೇ ದುಃಖಕ್ಕೆ ಕಾರಣವು ಮನುಷ್ಯನಿಗೆ ಸುಖವು ಧನದಿಂದಾಗಲಿ ಆರೋಗ್ಯದಿಂದಾಗಲಿ ಪದವಿಯಿಂದಾಗಲಿ ಬರತಕ್ಕದ್ದಲ್ಲ. ಪರಲೋಕವಾಸಿಯೂ ಸರ್ವಶಕ್ತನೂ ಆಗಿರುವ ದೇವರನ್ನು ಪೂರ್ಣಭಕ್ತಿಯಿಂದ ಸೇವಿಸುವದೇ ಸಂತೃಪ್ತಿಗೂ ಆನಂದಕ್ಕೂ ಮುಖ್ಯಕಾರಣವಾಗಿದೆ. ನಾವು ಯೇಸುಸ್ವಾಮಿಯನ್ನು ಕಂಡರೆ ಆತನನ್ನೂ ಆತನ ತಂದೆಯಾದ ದೇವರನ್ನೂ ಕಾಣಬೇಕಾಗಿದೆ. ಹ್ಯಾಗೆಂದರೆ ಆತನು ಹೇಳಿದ ಒಂದೊಂದು ಮಾತಿನಲ್ಲಿಯೂ ಆತನು ಮಾಡಿದ ಒಂದೊಂದು ಕಾರ್ಯದಲ್ಲಿಯೂ ತಂದೆಯಾದ ದೇವರ ಚಿತ್ತವನ್ನು ನೆರವೇರಿಸುವದೇ ಸ್ವಾಮಿಯ ಉದ್ದೇಶವೂ ಆಲೋಚನೆಯೂ ಆಗಿತ್ತೆಂದು ಅತಿ ಪರಿಷ್ಕಾರವಾಗಿ ತೋರುತ್ತದೆ. ಮನುಷ್ಯರ ಕಣ್ಣಿಗೆ ಕಾಣದೆ ಇರುವ ದೇವರ ಸಂಗಡ ಆತನು ಯಾವಜ್ಜೀವವೂ ಐಕಮತ್ಯವನ್ನು ನಡಸುತ್ತಲೇ ಇದ್ದನು. ಹೀಗೆ ಆತನು ಸಕಲ ಆಜ್ಞೆಗಳಲ್ಲಿ ಮೊದಲನೆಯದೂ ದೊಡ್ಡದೂ ಆಗಿರುವ ಕಟ್ಟಳೆಯನ್ನು ಸ್ವಲ್ಪವೂ ತಪ್ಪದೆ ಕೈಕೊಂಡನೆಂಬುದು ಪರಿಷ್ಕಾರವಾಗಿ ತೋರುತ್ತದೆ. ಆದಕಾರಣ ಯೇಸುಸ್ವಾಮಿಯ ಜೀವಮಾನವನ್ನು ನೋಡಿದರೆ ಆತನು ಸಕಲರಿಗೂ ಸುಲಭವಾಗಿ ತಿಳಿಯತಕ್ಕದ್ದಾಗಿಯೂ ಜ್ಞಾಪಕದಲ್ಲಿಟ್ಟುಕೊಳ್ಳುವದಕ್ಕೆ ಅನುಕೂಲವಾಗಿಯೂ ಇರುವ ಕಟ್ಟಳೆಯನ್ನು ಕೊಟ್ಟನಲ್ಲದೆ ಅದನ್ನು ಸಂಪೂರ್ಣವಾಗಿ ಕೈಕೊಂಡು ನಡೆಯುವದೂ ಸಾಧ್ಯವೆಂಬುದನ್ನು ತನ್ನ ನಡತೆಯಿಂದಲೇ ತೋರಿಸಿಕೊಟ್ಟಿದ್ದಾನೆಂಬುವದು ವ್ಯಕ್ತವಾಗುತ್ತದೆ.

ಒಳದೇಶದ ವೃತ್ತಾಂತಗಳು.

ಈ ಪತ್ರಿಕೆಯ ಕೂಡ ಪ್ರಿನ್ಸ್ ಆಫ್ ವೇಲ್ಸ್ ದಂಪತಿಗಳ ಫೋಟೋ ತಸ್ವೀರನ್ನು ನಮ್ಮ ಚಂದಾದಾರರಿಗೆ ಬಹುಮಾನವಾಗಿ ಕಳುಹಿಸಿರುತ್ತೇವೆ.

****

ಮೊನ್ನೆ ಮಂಗಳವಾರ ರಾತ್ರಿ ಬ್ರಿಟಿಷ್ ರೆಸಿಡೆಂಟರಾದ ಮೆ॥ ಫ್ರೇಸರ್ ಯವರು ಬೆಂಗಳೂರಿಂದ ಮದರಾಸಿಗೆ ಪ್ರಯಾಣ ಮಾಡಿದರು. ಅವರು ಗವರ್ನರವರನ್ನು ಸಾಗಕಳುಹಿಸಿ, ಈ ದಿನ ಬೆಂಗಳೂರಿಗೆ ವಾಪಸು ಬರುವವರಾಗಿದ್ದಾರೆಂದು ಕೇಳುತ್ತೇವೆ.

****

ಮೈಸೂರು ಮಹಾರಾಣಿ ಕಾಲೇಜಿನಲ್ಲಿ ಸೌ॥ ರುಕ್ಮಿಣಮ್ಮನವರಿಗೂ ಸೌ॥ ಶ್ರೀರಂಗಮ್ಮನವರಿಗೂ ಬಿ ಎ ಪರೀಕ್ಷೆಯ ಎಲ್ಲಾ ಭಾಗಗಳೂ ತೀರಿ, ಆದಿರಿಬ್ಬರೂ ಪೇಗ್ರಾಡ್ ಹೊಂದಿರುತ್ತಾರೆ ಇವರಿಂದ ಆ ಕಾಲೇಜಿಗೂ ನಮ್ಮ ಸಂಸ್ಥಾನಕ್ಕೂ ಕೀರ್ತಿಯುಂಟಾಗಿದೆ.

****

ಮೈಸೂರಿನಲ್ಲಿ ಒಂದು ಪರಸ್ಪರ ಸಹಾಯಕ ಸಂಘವನ್ನು ಸ್ಥಾಪಿಸಬೇಕೆಂಬ ಉದ್ದೇಶದಿಂದ ರೆಜಿಸ್ಟ್ರಾರ್ ಮೆ॥ ಎಂ. ಶಾಮರಾಯರು ಕಳೆದ ವಾರ ರಾಜಧಾನಿಗೆ ಬಂದಿರುತ್ತಾರೆ ಅವರ ಉದ್ದೇಶವು ನೆರವೇರಿ, ಒಂದು ಸಂಘ ಈ ಊರಿನಲ್ಲೂ ಏರ್ಪಾಡಾಗಲೆಂದು ಹಾರೈಸುತ್ತೇವೆ.

****

ಚೀಫ್ ಕೋರ್ಟ್ ಜಡ್ಜರಾದ ಮೆ॥ ಎಚ್ ವಿ ನಂಜುಂಡಯ್ಯನವರು ಕಳೆದ ವಾರ ರಾಜಧಾನಿಗೆ ಬಂದು, ಕೋರ್ಟುಗಳನ್ನು ನೋಡಿಕೊಂಡು, ಹಾಸನದ ಕಡೆ ಸಂಚಾರ ಹೊರಟಿರುತ್ತಾರೆಂತಲೂ, ಆ ಪ್ರಾಂತ್ಯದ ಕೋರ್ಟುಗಳನ್ನು ತನಿಖೆ ಮಾಡುತ್ತಾರೆಂತಲೂ ಕೇಳುತ್ತೇವೆ.

****

ಬೆಂಗಳೂರು ಚಾಮರಾಜಪೇಟೆಯ ಮಂಡಿ ವರ್ತಕರು ಸೇರಿ, ಪ್ರಿನ್ಸ್ ಆಫ್ ವೇಲ್ಸ್‌ರವರು ದಯಮಾಡಿಸಿದ್ದರ ಜ್ಞಾಪಕಾರ್ಥವಾಗಿ ೨,೦೦೦ ಮುಸಲ್ಮಾನ ಪ್ರಜೆಗಳಿಗೂ ೩,೦೦೦ ಹಿಂದೂ ಪ್ರಜೆಗಳಿಗೂ ಅಂತು ೫,೦೦೦ ಬಡಬಗ್ಗರಿಗೆ ಕಳೆದ ೬ ನೆ ತಾ ಸಂತರ್ಪಣೆ ಮಾಡಿಸಿ ಸುಭೋಜನ ಮಾಡಿಸಿ, ತಮ್ಮ ಉದಾರ ಮನಸ್ಸನ್ನೂ ರಾಜಭಕ್ತಿಯನ್ನೂ ಪ್ರಕಾಶಪಡಿಸಿದರು.

****

ಪ್ರಿನ್ಸ್ ಆಫ್ ವೇಲ್ಸ್‌ರವರು ದಯಮಾಡಿದ ವಾರದಲ್ಲಿ ರಾಜಧಾನಿಗೆ ರೈಲಿನಲ್ಲಿ ಮಾತ್ರ ಸುಮಾರು ೫೦ ಸಾವಿರ ಜನರು ಬಂದರೆಂತಲೂ ಆ ವಾರ ರೈಲ್ವೆಯವರಿಗೆ ಪ್ರಯಾಣಿಕರ ಟಿಕೆಟ್ಟಿನಿಂದಲೇ ಸುಮಾರು ೨೫ ಸಾವಿರ ರೂಪಾಯಿ ಉತ್ಪತ್ತಿಯಾಯಿತೆಂತಲೂ ಕೇಳುತ್ತೇವೆ ಸುತ್ತುಮುತ್ತಿನ ಗಾಡಿ ರಸ್ತೆಗಳ ಮೂಲಕ ಬಂದು ಹೋದ ಜನರ ಸಂಖ್ಯೆಯೂ ಅಷ್ಟಾಗಬಹುದೆಂದು ಊಹಿಸಲ್ಪಟ್ಟಿದೆ.

****

ಮೈಸೂರು ಹೊಲಗೇರಿಯಲ್ಲಿ ಹಾಕಲ್ಪಟ್ಟಿರುವ ಚಪ್ಪರವು ನಾನಾ ವಿಧವಾದ ಹಸಿರು ಗಿಡಗಳಿಂದಲೂ ಬಹಳ ಲಕ್ಷಣವಾಗಿ ಹಾಕಲ್ಪಟ್ಟಿತ್ತು. ಹೊಲೆಯರೆಲ್ಲರೂ ಸೇರಿ ತಮ್ಮ ಚಪ್ಪರದಲ್ಲಿ ಪ್ರಿನ್ಸ್ ಆಫ್ ವೇಲ್ಸ್‌ರವರಿಗೂ ಪ್ರಿನ್ಸೆಸ್ ಆಫ್ ವೇಲ್ಸ್‌ರವರಿಗೂ ಹಾರ, ತುರಾಯಿ, ಹಣ್ಣು ಮೊದಲಾದವುಗಳನ್ನು ಕೊಟ್ಟು ಮರ್ಯಾದೆಯನ್ನು ಮಾಡಿ ತಮ್ಮ ಜಯಧ್ವನಿಗಳಿಂದ ಅವರಿಗೆ ತುಂಬಾ ಸಂತೋಷವನ್ನುಂಟುಮಾಡಿದರು.

****

ಪ್ರಿನ್ಸ್ ಆಫ್ ವೇಲ್ಸ್‌ರವರ ಆತಿಥ್ಯಕ್ಕಾಗಿ ಮೈಸೂರು ಸರ್ಕಾರಿ ಅಧಿಕಾರಿಗಳು ನಡಸಿದ ಸುಖಸಕಾರ್ಯಗಳನ್ನು ನೋಡಿ, ಅವರು ತುಂಬಾ ಸಂತೋಷ ಪಟ್ಟು ಬಹುಮಾನಗಳನ್ನು ಕೊಡಿಸಿರುತ್ತಾರೆ. ಅವನ್ನು ಸ್ವೀಕರಿಸಿದವರ್‍ಯಾರೆಂದರೆ — ರೆಸಿಡೆಂಟರು, ದಿವಾನರವರು, ಕರ್ನಲ್ ದೇಶರಾಜೇ ಅರಸಿನವರು (ಇವರಿಗೆ ಎಂ. ವಿ ಓ. ಎಂಬ ಬಿರುದು ಕೊಡಲಾಯಿತು,) ಮೆ॥ ಕಾರ್ ಯವರು, ಮೆ॥ ಡಿ. ದೇವರಾಜೇ ಅರಸಿನವರು; ಫಾರೆಸ್ಟ್ ಕನ್ಸರ್ವೇಟರ್ ಮೆ॥ ಮುತ್ತಣ್ಣನವರಿಗೆ ಪ್ರಿನ್ಸ್ ಆಫ್ ವೇಲ್ಸ್‌ರವರೂ ಶ್ರೀಮನ್ಮಹಾರಾಜರವರೂ ವಿಶೇಷವಾದ ಪದಕಗಳನ್ನು ದಯಪಾಲಿಸಿದರು.

ಪ್ರಿನ್ಸ್ ಆಫ್ ವೇಲ್ಸ್‌ರವರು ಲಾಲ್‌ಬಾಗಿನಲ್ಲಿರತಕ್ಕ ಪುಷ್ಪಗಳನ್ನೂ ಫಲಗಳನ್ನೂ ನೋಡಿ ಅರಮನೆ ತೋಟಗಾರರಾದ ಮುನಿಸ್ವಾಮಿಯವರ ಮನಸಿಗೆ ಮೆಚ್ಚಿ ಅವರಿಗೆ ಪ್ರಿನ್ಸ್ ಆಫ್ ವೇಲ್ಸ್ ಮೆಡಲ್ ಎಂಬ ಒಂದು ಬಿರುದು ಬಿಲ್ಲೆಯನ್ನು ಕೊಟ್ಟರು. ತರುವಾಯ ಲಾಲ್‌ಬಾಗ್ ತೋಟವನ್ನೂ ಅಲ್ಲಿ ಬೋನುಗಳಲ್ಲಿ ಇಡಲ್ಪಟ್ಟಿದ್ದ ಕಾಡುಮೃಗಗಳನ್ನೂ ನೋಡಿ ಸಂತೋಷಪಟ್ಟು ಅವುಗಳನ್ನು ಚನ್ನಾಗಿ ಇಟ್ಟಿರುವದಕ್ಕಾಗಿ ಮೆ॥ ಕ್ಯಾಮರಾನ್‌ರವರು ಮಾಡಿರತಕ್ಕ ಮೇಹನತ್ತನ್ನು ಶ್ಲಾಘಿಸಿದರು.

****

ಬೊಂಬಾಯಿ ಪಟ್ಟಣದಲ್ಲಿ ಕಳೆದವಾರ ಒಂದು ಭಾರಿ ಮಹಡಿ ಬೆಂಕಿ ಬಿದ್ದು ಸುಮಾರು ೧೩ ಜನರು (ಮುಸಲ್ಮಾನರು) ಮೃತಪಟ್ಟರೆಂದು ಕೇಳಿ ವಿಷಾದಿಸುದವು ಈ ಭಾರಿಮನೆಯಲ್ಲಿ ೬ ಅಂತಸ್ತುಗಳಿದ್ದವೆಂದೂ ಸುಮಾರು ೨೦೦ ಜನರು ವಾಸವಾಗಿದ್ದರೆಂದೂ ತಿಳಿಯಿತು ಆದರೆ ಮೆಟ್ಟಿಲು ಇರುವ ಕಡೆಯೇ ಬೆಂಕಿ ಹತ್ತಿದ್ದರಿಂದ ಕೊನೆಗೆ ೬ ನೇ ಅಂತಸ್ತಿನವರು ತಪ್ಪಿಸಿಕೊಳ್ಳಲು ಯತ್ನವಾಗಲಿಲ್ಲ. ಇದರಿಂದ ಸುಮಾರು ೬ ಲಕ್ಷ ರೂಪಾಯಿ ನಷ್ಟವಾಗಿದೆ. ಗವರ್ನರವರೇ ಮೊದಲಾದವರು ಹೋಗಿ ಈ ಅನಾಹುತವನ್ನು ವಿಚಾರಿಸಿದರು ಇಂಥಾ ಭಾರಿ ಅನಾಹುತವು ಅಲ್ಲಿ ಬಹುಕಾಲದಿಂದ ಆಗಿರಲಿಲ್ಲ.

****

ಕಳೆದ ಗುರುವಾರ ಬೆಳಿಗ್ಗೆ ೧೦॥ ಗಂಟೆಗೆ ಶ್ರೀಮನ್ಮಹಾರಾಜರವರು ಮೋಟಾರ್ ಗಾಡಿಯಲ್ಲಿ ರಾಜಧಾನಿಯಿಂದ ಬೆಂಗಳೂರಿಗೆ ದಯಮಾಡಿ, ಮೊನ್ನೆ ಸೋಮವಾರದ ತನಕ ಅಲ್ಲಿದ್ದು, ಆ ರಾತ್ರಿ ಬೆಂಗಳೂರಿಂದ ಮೈಲ್ ಗಾಡಿ ಪತ್ತಿಯಲ್ಲಿ ಮದರಾಸಿಗೆ ಚಿತ್ತೈಸಿದರು. ಇವರ ಸಂಗಡ ಪ್ರೈವೇಟ್ ಸೆಕ್ರೆಟರಿ ಮೆ॥ ವೆಂಕಟಾಸಕಿಯವರೂ ಮೆ॥ ರಾಘವೇಂದ್ರರಾಯರೂ, ಡಾಕ್ಟರ್ ಟಿ. ಎಸ್ ನಂಜಪ್ಪನವರೂ ಹೋಗಿರುತ್ತಾರೆ ಮದರಾಸ್ ಪಟ್ಟಣದಲ್ಲಿ ನೆನ್ನೆ ಗವರ್ನರ್ ಲಾರ್ಡ್ ಆಂಪ್ಟಿಲ್‌ರವರಿಗೆ ಭಾರೀ ಔತಣವಾಯಿತು ಈ ಔತಣದಲ್ಲಿ ನಮ್ಮ ಮಹಾರಾಜರವರೂ ಸೇರಿ, ನೆನ್ನೆ ರಾತ್ರಿ ಗವರ್ನರವರನ್ನು ಸಾಗಕಳುಹಿಸಿದರು. ನಾಳೆ ಶನಿವಾರ ಬೆಳಿಗ್ಗೆ ಶ್ರೀಮನ್ಮಹಾರಾಜರವರು ಅಲ್ಲಿಂದ ಬೆಂಗಳೂರಿಗೆ ವಾಪಸು ಬರುವವರಾಗಿದ್ದಾರೆಂತಲೂ, ಅನಂತರ ೩—೪ ವಾರಗಳ ವರೆಗೆ ಅವರು ಬೆಂಗಳೂರಿನಲ್ಲೇ ಇದ್ದು ಯುಗಾದಿ ಹಬ್ಬಕ್ಕೆ ರಾಜಧಾನಿಗೆ ಬರುತ್ತಾರೆಂತಲೂ ತಿಳಿದುಬಂದಿದೆ.

ತಾಲ್ಲೂಕು ವರ್ತಮಾನಗಳು.

ಮಧುಗಿರಿ.— ಈ ಗ್ರಾಮದಲ್ಲಿ ಜಲಾಧಾರವು ಬಹಳ ಕಮ್ಮಿಯಾಗಿರುವದರಿಂದ ಜಾನುವಾರುಗಳಿಗೂ ಪಶುಪಕ್ಷಿಗಳಿಗೂ ತುಂಬಾ ತೊಂದರೆಯಾಗಿರುತ್ತದೆ ಈ ವಿಷಯ ವಿವರಿಸಲು ತುಂಬಾ ಅಸಾಧ್ಯವಾಗಿದೆ — ಸ್ಕೂಲ್ ಡೆಪ್ಯುಟಿ ಇನ್ಸ್‌ಪೆಕ್ಟರು ಕಳೆದ ಜನವರಿ ತಿಂಗಳಲ್ಲಿ ಇಲ್ಲಿಗೆ ದಯಮಾಡಿ ಇಲ್ಲಿನ ಎಲ್ಲಾ ಸ್ಕೂಲುಗಳನ್ನೂ ಪರೀಕ್ಷಿಸಿದರಲ್ಲದೆ, ೨೮ ನೇ ತಾ ಭಾನುವಾರ ಸಾಯಂಕಾಲ ಈ ಗ್ರಾಮದ ಪಶ್ಚಿಮ ಭಾಗದಲ್ಲಿರುವ ಟ್ರಾವೆಲರ್ಸ್ ಬಂಗ್ಲೆ ಬಳಿ ಈ ಗ್ರಾಮದ ಸ್ಕೂಲ್ ವಿದ್ಯಾರ್ಥಿಗಳಿಗೂ ಸಿರಾ ತಾಲ್ಲೂಕು ಸ್ಕೂಲ್ ವಿದ್ಯಾರ್ಥಿಗಳಿಗೂ ಫುಟ್‌ಬಾಲ್ ಮ್ಯಾಚ್ ನಡಸಿದರು ಈ ಸ್ಪರ್ಧೆ ಮಧುಗಿರಿ ಸ್ಕೂಲ್ ವಿದ್ಯಾರ್ಥಿಗಳಿಗೆ ಜಯಪ್ರದವಾಯಿತು ಈ ಸಂಭ್ರಮಕ್ಕಾಗಿ ಈ ಗ್ರಾಮದಲ್ಲಿರುವ ದೊಡ್ಡ ಮನುಷ್ಯರನ್ನೆಲ್ಲಾ ಇನ್ಸ್‌ಪೆಕ್ಟರು ಬರಮಾಡಿಕೊಂಡು ಎಲ್ಲರಿಗೂ ಟೀಪಾರ್ಟಿ ನಡಸಿದರು ಅನಂತರ ಆಂಗ್ಲೋವರ್ನಾಕ್ಯುಲರ್ ಪಾಠಶಾಲೆಯಲ್ಲಿ ದೊಡ್ಡ ಮನುಷ್ಯರೂ ಅಧಿಕಾರಿಗಳೂ ಸಹಾ ಸೇರಿ ೮ ಗಂಟೆಯಿಂದ ೧೦ ಗಂಟೆ ವರೆವಿಗೆ ಸಂಗೀತಗಾನ ನಡಸಿದರು. ಗಂಧ ಪುಷ್ಪ ತಾಂಬೂಲಾದಿಗಳಿಂದ ಮರ್ಯಾದೆಗೊಳಿಸಿ ಸಭೆ ಬರಖಾಸ್ತು ಮಾಡಲಾಯಿತು ಇನ್ಸ್‌ಪೆಕ್ಟರವರು ಬಾಲಕರಿಗೆ ವಿದ್ಯಾಭ್ಯಾಸದಲ್ಲಿ ತುಂಬಾ ಆಸಕ್ತಿಯುಂಟಾಗುವಂತೆ ನೀತಿಯನ್ನು ಬೋಧಿಸಿ ಪ್ರೋತ್ಸಾಹಪಡಿಸಿದರು.

ತಿಪ್ಟೂರು.— ಬಿಸಲು ತೀಕ್ಷ್ಣವಾಗಿರುತ್ತದೆ. ಸಿಡುಬಿನ ಉಪದ್ರದಿಂದ ಮಕ್ಕಳು ಸಾಯುತ್ತಲೇ ಇರುತ್ತವೆ ಇಂಗಳಜ್ಜರೂ ನಿಷ್ಪಕ್ಷಪಾತಿಗಳೂ ಆದ ಸಾಹುಕಾರ್ ಸದಾಫ್ ನಂಜುಂಡ ಶೆಟ್ಟರನ್ನು ಮ್ಯುನಿಸಿಪಲ್ ಮೆಂಬರಾಗಿ ಸೇರಿಸಿಕೊಂಡದ್ದಕ್ಕಾಗಿ ಎಲ್ಲರೂ ಸಂತೋಷಪಡುತ್ತಾರೆ. ಅಲಂಕಾರ ಮೂರ್ತಿಗಳಾದ ಅನೇಕರಿಗಿಂತ ಪ್ರಜಾಸೌಭಾಗ್ಯಶೀಲರು ಕೆಲವರು ಸಾಕು — ಜಮಾದಾರರು ಬೋಟಾ ನಾಣ್ಯತಯಾರ್ ಮಾಡಿ ಚಿಕರಿಮಾಡುತ್ತಿದ್ದ ಇಬ್ಬರು ಅಣ್ಣಾವಟಗಾರರನ್ನು ಪತ್ತೆಮಾಡಿ ಮೊಕದ್ದಮೆ ಮಾಡಿದ್ದರ ಮೇಲೆ ಅದು ಸೆಷನ್ ವಿಚಾರಣೆಗೆ ಕಮಿಟ್ಟಾಗಿರುತ್ತದೆಂದು ತಿಳಿಯಿತು.— ಚರಂಡಿ ಕೆಲಸಗಳು ತರಾತುರಿಯಿಂದ ನಡಿಯುತ್ತವೆ ಕೆಲಸ ಬದಾಬರಿಯಾದ ಮೇಲೆ ಕಂಟ್ರಾಕ್ಟರ ಹದಾಸರಿಯು ತಿಳಿಯುತ್ತದೆ. ನಮ್ಮ ಮ್ಯುನಿಸಿಪಲ್ ಮೆಂಬರುಗಳ ಪೈಕಿ ಕೆಲವರು ಪ್ರಸಿಡೆಂಟರ ಮುಂದೆ ಗಂಭೀರವಾಗಿ ಮೌನದಿಂದ ಕೂರುತ್ತಾರಂತೆ ಪ್ರಜಾಪಕ್ಷದಲ್ಲಿ ಇದೂ ಒಂದು ಕಾರ್ಯವಲ್ಲವೇ? — ತುಮಕೂರಿಂದ ಆಕ್ಟಿಂಗ್ ಬಂದಿರುವ ಆಸ್ಪತ್ರೆ ಅಸಿಸ್ಟೆಂಟ್ ಮೆ॥ ವಿ. ರಾತ್ರಿಗ್ಸ್ ಯವರು ಮುತುವರ್ಜಿಯಿಂದಲೂ ಪ್ರೀತಿಯಿಂದಲೂ ಕೆಲಸ ಮಾಡುತ್ತಿರುವದರಿಂದ ತಿಪ್ಟೂರಿಗೆ ವೈದ್ಯೋದಯವಾಯಿತೆಂದು ಹೇಳಿಕೊಳ್ಳುತ್ತಾ, ಅನೇಕ ದಿನಗಳಿಂದ ಮೂಲೆಯಲ್ಲಿ ಕೂತಿದ್ದ ರೋಗಿಗಳನೇಕ ಮಂದಿ ದಿನ ೧ ಕ್ಕೆ ೭೦—೭೫ ರ ವರಿಗೂ ಚಿಕಿತ್ಸೆ ಹೊಂದುತ್ತಿರುವದು ಸಂತೋಷವಾಗಿರುತ್ತದೆ. ಒಬ್ಬ ಕೂಲಿಯಾಳಿನ ಕಾಲಿನ ಮೇಲೆ ಬಿಸಿ ಮರಳಿಯು ಬಿದ್ದು ಕಾಲುಕಾಲಿನ ಎಲುವು ಚೂರುಚೂರಾಯಿತು. ಈ ಡಾಕ್ಟರ ಚಿಕಿತ್ಸೆಯಿಂದ ಎಲುವು ಕೂಡಿಕೊಳ್ಳುತ್ತಿದೆ. ಮತ್ತು ರೋಗಿಯು ಕ್ಷೇಮವಾಗಿದ್ದಾನೆಂದು ತಿಳಿಯಿತು. ಡಾಕ್ಟರ ಕೆಲಸವು ಹಿಂದಿನವರಿಗಿಂತ ಪ್ರಮಾಣವಾಗಿ ಚನ್ನಾಗಿ ನಡಿಯುತ್ತದೆಂದು ಮಾತಾಡಿಕೊಳ್ಳುತ್ತಾರೆ — ಕಳೆದ ಲೋವರ್ ಸೆಕೆಂಡರಿ ಪರೀಕ್ಷೆಯಲ್ಲಿ ಇಲ್ಲಿನ ಸ್ಕೂಲ್ ವಿದ್ಯಾರ್ಥಿಗಳು ಇಂಗ್ಲಿಷ್ ೪ ಕ್ಕೆ ೨, ಕನ್ನಡ ೬ ಕ್ಕೆ ೪ ಪ್ಯಾಸಾದರೆಂದು ತಿಳಿಯಿತು.

ಇಂಡಿಯಾ ದೇಶದ ವೃತ್ತಾಂತಗಳು.

ಅಫ್ಘಾನಿಸ್ಥಾನದ ಅಮೀರರು ಕಾಬೂಲ್ ರಾಜಧಾನಿಯಿಂದ ಜಲಾಲಾಬಾದಿಗೆ ಬಂದಿರುತ್ತಾರೆ.

●●●●

ರಂಗೂನ್ ಪಟ್ಟಣದಲ್ಲಿ ಕಳೆದ ಜನವರಿ ತಿಂಗಳಲ್ಲಿ ೧೨೮ ಜನರಿಗೆ ಪ್ಲೇಗ್ ತಗಲಿದ್ದರ ಪೈಕಿ ೧೨೬ ಜನರು ಮೃತಪಟ್ಟರು.

●●●●

ಕಳೆದವಾರ ಹಿಂದುಸ್ಥಾನದಲ್ಲಿ ೬,೩೬೦ ಜನರು ಪ್ಲೇಗ್ ಉಪದ್ರವದಲ್ಲಿ ಕಾಲವಾದರು. ಈ ಪೈಕಿ ಸಂಯುಕ್ತ ಅಧಿಪತ್ಯದಲ್ಲಿ ೯೪೮, ಬಂಗಾಳಾ ೮೯೬, ಬೊಂಬಾಯಿ ಅಧಿಪತ್ಯ ೩೦೭, ಪಂಜಾಬ್ ೩೮೧, ಮಧ್ಯಪ್ರಾಂತ್ಯಗಳು ೬೮೬, ಬರ್ಮಾ ೧೩೬, ಈರೀತಿ ಮರಣಗಳಾಗಿವೆ.

●●●●

ಕಾಶ್ಮೀರಸಂಸ್ಥಾನದಲ್ಲಿ ೨೦೦ ಮೈಲಿ ದೂರ ರೈಲ್ ರಸ್ತೆ ಹಾಕಬೇಕೆಂದು ಮೂರು ಕೋಟಿ ರೂಪಾಯಿ ಸ್ಯಾಂಕ್ಷನ್ ಆಗಿದೆ. ಈ ರೈಲ್ ರಸ್ತೆಯ ಪೈಕಿ ಅಬ್ಬಟಾಬಾದಿನಿಂದ ಶ್ರೀನಗರದ (ಕಾಶ್ಮೀರದ ರಾಜಧಾನಿ) ವರೆಗೆ ವಿದ್ಯುಚ್ಛಕ್ತಿಯಿಂದ ಗಾಡಿಗಳನ್ನು ಓಡಿಸಬೇಕೆಂದು ಏರ್ಪಾಡು ಮಾಡುತ್ತಿದ್ದಾರೆ.

●●●●

ಬೊಂಬಾಯಿಪಟ್ಟಣದಲ್ಲಿ ಹಿಂದೂ ಸ್ತ್ರೀಯರು ಸೇರಿಕೊಂಡು ಒಂದು ಸಭೆಯನ್ನು ಮಾಡಿಕೊಂಡಿದ್ದಾರೆ. ಪ್ರತಿ ವಾರವೂ ಅವರೆಲ್ಲಾ ಒಂದು ಕಡೆ ಸೇರಿ ನಾನಾ ಉಪಯುಕ್ತ ವಿಷಯಗಳನ್ನು ಕುರಿತು ಉಪನ್ಯಾಸಮಾಡಿ, ಚರ್ಚೆಮಾಡುತ್ತಾರೆ. ಚಿತ್ರಕೆಲಸಗಳನ್ನು ತಯಾರುಮಾಡಿ ವಿಕ್ರಯಮಾಡುವರು. ಈಗ ಈ ಸಂಘದಲ್ಲಿ ೧೩೬ ಮಂದಿ ದೊಡ್ಡ ಮನುಷ್ಯರ ಮನೆಯ ಸ್ತ್ರೀಯರು ಮೆಂಬರುಗಳಾಗಿ ಸೇರಿಕೊಂಡಿರುವರು.

●●●●

ಕಾಶೀಪಟ್ಟಣದಲ್ಲಿರುವ ಹಿಂದೂ ವಿದ್ಯಾಶಾಲೆಯೊಳಗೆ ಹುಡುಗರಿಗೆ ಕೈಗಾರಿಕೆಗಳನ್ನು ಕಲಿಸಬೇಕೆಂದೂ ಈ ಕಟ್ಟಡಕ್ಕೆ ಪ್ರಿನ್ಸ್ ಆಫ್ ವೇಲ್ಸ್‌ರವರ ಹೆಸರನ್ನು ಇಡಬೇಕೆಂದೂ ತೀರ್ಮಾನವಾಗಿದೆ. ಕನೌಜಿಲಾಲ್ ಎಂಬ ದೊಡ್ಡ ಮನುಷ್ಯರು ಆ ಕಟ್ಟಡಕ್ಕೆ ಒಂದು ಲಕ್ಷ ರೂಪಾಯಿ ಆಗುವುದೆಂದು ಅಂದಾಜು ಹಾಕಿ, ಧರ್ಮಾರ್ಥವಾಗಿ ಎಲ್ಲಾ ಹಣವನ್ನೂ ಕೊಡಬೇಕೆಂದು ಕೇಳಿದ್ದಾರೆ.

●●●●

ಕಲ್ಕತ್ತಾ ಪಟ್ಟಣದಲ್ಲಿ ಮಹಮದ್ ಹನೀಫ್ ಎಂಬುವನು ಕೆಲವು ಕಾಲದಿಂದಲೂ ಚಿಕ್ಕಹುಡುಗರನ್ನು ಅವರ ತಂದೆತಾಯಿ ಪೋಷಕರ ಸ್ವಾಧೀನದಿಂದ ತಪ್ಪಿಸಿ ಎತ್ತಿಕೊಂಡು ಹೋಗುತ್ತಲೂ ಆ ಹುಡುಗರಿಂದ ಭಿಕ್ಷ ಎತ್ತಿಸಿ ತನ್ನ ಮನೆಯಲ್ಲೇ ಇಟ್ಟು ಸಾಕುತ್ತಲೂ, ಈ ಮೋಸದ ಲಾಭಸಂಪಾದನೆ ಮಾಡುತ್ತಲೂ ಇದ್ದನು. ಇವನನ್ನು ಹಿಡಿದು ಮನೆ ಶೋಧನೆಮಾಡಿದಾಗ ೩೦ ಹುಡುಗರು ಸಿಕ್ಕಿದರು. ಈಗ ಅವನನ್ನು ದರ್ಯಾಫ್ತು ಮಾಡುತ್ತಿದ್ದಾರೆ.

●●●●

ಯುರೋಪ್ಯರಿಗೆ ಜನರಿಗೆ ಪ್ಲೇಗ್ ಉಪದ್ರವ ತಗಲುವುದು ಬಹಳ ಅಪರೂಪವೆಂದು ಕಾಣುತ್ತದೆ. ಹೋದ ವರುಷ ಬೊಂಬಾಯಿ ಅಧಿಪತ್ಯದಲ್ಲಿ ೨,೪೦,೦೦೦ ಜನರಿಗಿಂತಲೂ ಹೆಚ್ಚು ಜನರು ಪ್ಲೇಗ್ ತಗಲಿ ಸತ್ತರು. ಆದರೆ ಯುರೋಪ್ಯರ ಜನಗಳಲ್ಲಿ ೧೯ ಮಂದಿಗೆ ಮಾತ್ರ ತಗಲಿ ಆ ಪೈಕಿ ೧೦ ಮಂದಿ ಕಾಲವಾದರು. ಅದರ ಹಿಂದಿನ ವರುಷವೂ ಅದೇ ರೀತಿ ಒಟ್ಟು ೩,೧೬,೦೦೦ ಜನರು ಪ್ಲೇಗಿನಲ್ಲಿ ಮೃತಪಟ್ಟರಾದರೂ ಈ ಪೈಕಿ ೮ ಮಂದಿ ಮಾತ್ರ ಯುರೋಪ್ಯರೆಂದು ತಿಳಿಯುವುದು.

●●●●

ಪೋಸ್ಟ್ ಆಫೀಸುಗಳಲ್ಲಿ ಒಂದು ಕಾಗದವನ್ನು ಹಾಕಿದ್ದಕ್ಕೆ ರಸೀತಿ ಬೇಕೆಂದು ಅಪೇಕ್ಷಿಸುವವರು ಬೇರೆ ಕಾಗದದಲ್ಲಿ ಅರ್ಜಿಯನ್ನು ಹಚ್ಚಿ ಕಾಗದದ ಸಮೇತ ಕೊಟ್ಟರೆ ಅದಕ್ಕೆ ಪೋಸ್ಟ್ ಮಾಸ್ಟರವರು ಮುದ್ರೆ ಒತ್ತಿಕೊಡುತ್ತಾರಷ್ಟೆ. ಇಂಥಾ ರಸೀತಿಗೆ ಅರ್ಧಾಣೆ ತಲೆ ಚೀಟಿಯನ್ನು ಹಚ್ಚುವುದಕ್ಕೆ ಬದಲಾಗಿ ಕಾಲಾಣೆ ಚೀಟಿಯನ್ನು ಹಚ್ಚಿದರೆ ಸಾಕಾಗಿದೆ ಎಂದು ವಿಧಾಯಕಮಾಡಿದ್ದಾರೆ. ಪೋಸ್ಟ್ ಇಲಾಖೆಯವರು ಪ್ರಜೆಗಳಿಗೆ ಸೌಲಭ್ಯಗಳನ್ನು ಈರೀತಿ ಕಲ್ಪಿಸಿಕೊಡುತ್ತಿರುವುದು ತುಂಬಾ ಸಂತೋಷಕರವಾಗಿದೆ.

●●●●

ಬೊಂಬಾಯಿಪಟ್ಟಣದ ದೇಶೀಯ ಸ್ತ್ರೀಯರು ಅಂದಿನ ಪ್ರಿನ್ಸೆಸ್ ಆಫ್ ವೇಲ್ಸ್‌ರವರ ಪತ್ನೀರವರಿಗೆ ಬಹುಮಾನಪೂರ್ವಕವಾಗಿ ಸುಸ್ವಾಗತವನ್ನು ಬಯಸಿ ಸಂತೋಷಪಡಿಸಿದರು. ಈ ಹಣದಲ್ಲಿ ಇನ್ನೂ ೬,೦೦೦ ರೂಪಾಯಿ ಉಳಿದಿದೆ. ಇದನ್ನು ಖರ್ಚುಮಾಡಿ, ಸ್ತ್ರೀಯರಿಗಾಗಿ ಆ ಪಟ್ಟಣದಲ್ಲಿ ಒಂದು ಅಂತರಂಗವಾದ ಛತ್ರವನ್ನು ಏರ್ಪಾಡು ಮಾಡಬೇಕೆಂತಲೂ, ಸ್ತ್ರೀಯರೂ ಪುರುಷರಂತೆಯೇ ಸಾಧನೆಮಾಡಿ ಅಂಗಾಂಗಗಳನ್ನು ಬಲಪಡಿಸಿಕೊಳ್ಳಬೇಕಾದ್ದು ಬಹಳ ಅವಶ್ಯವೆಂತಲೂ ಮಿಸ್ ಕರ್ಸೆಟ್‌ಜಿ ಎಂಬ ಪಾರ್ಸಿ ಸ್ತ್ರೀಯು ತಿಳಿಸುತ್ತಾಳೆ. ಇದು ಒಳ್ಳೇ ಸಲಹೆ ಎಂಬುದಾಗಿ ಅಲ್ಲಿನ ಪ್ರಾಂತ್ಯದ ಇಲಾಖೆಯ ಸ್ವರಕ್ಷರವರು ಒಪ್ಪಿಕೊಂಡಿದ್ದಾರೆ.

●●●●

ಕಲ್ಕತ್ತಾ ಪಟ್ಟಣದ ಟೌನ್ ಹಾಲ್ ಬಂಗಲೆಯಲ್ಲಿ ಕಳೆದವಾರ ಬಂಗಾಳಿಗಳು ಸಭೆ ಸೇರಿದ್ದರು. ರಾಜಾ ಪಿಯಾರಿ ಮೋಹನ ಮುಖರ್ಜಿಯವರು ಸಭಾಧ್ಯಕ್ಷತೆಯನ್ನು ವಹಿಸಿ ಬಂಗಾಳಾ ವಿಭಜನೆಯ ವಿಚಾರವನ್ನು ಕುರಿತು ಉಪನ್ಯಾಸ ಮಾಡಿದರು. ಬಾಬೂ ಸುರೇಂದ್ರನಾಥ ಬ್ಯಾನರ್ಜಿಯವರೇ ಮೊದಲಾದ ಬಂಗಾಳಾ ದೇಶೀಯ ದೊಡ್ಡ ಮನುಷ್ಯರೂ ಉಪನ್ಯಾಸ ಮಾಡಿದರು. ಈವರೆಗೆ ಬಂಗಾಳಾ ಅಧಿಪತ್ಯಕ್ಕೆ ಒಬ್ಬ ಗವರ್ನರನ್ನು ನೇಮಿಸಬೇಕೆಂತಲೂ, ಇದು ಸಾಧ್ಯವಲ್ಲವಾದರೆ ಬಂಗಾಳಿ ಭಾಷೆಯನ್ನು ಆಡತಕ್ಕ ಜನರುಳ್ಳ ಪ್ರದೇಶವನ್ನೇ ಪ್ರತ್ಯೇಕ ಮಾಡಿಕೊಡಬೇಕೆಂತಲೂ ಇಂಡಿಯಾ ಸ್ಟೇಟ್ ಸೆಕ್ರೆಟರಿಯವರಿಗೆ ಅರಿಕೆ ಮಾಡುವಂತೆ ತೀರ್ಮಾನಿಸಿರುತ್ತಾರೆ.

●●●●

ಮದರಾಸ್ ಗವರ್ನರಾದ ಲಾರ್ಡ್ ಆಂಪ್ಟಿಲ್‌ರವರು ಕಳೆದ ಐದು ವರುಷಗಳಿಂದಲೂ ಆ ಅಧಿಪತ್ಯವನ್ನು ಆಳುತ್ತಾ ಅನೇಕ ಪ್ರಜಾರಂಜಕ ಕಾರ್ಯಗಳನ್ನೂ ನಡಿಸಿ ಜನರ ಭಕ್ತಿಪ್ರೀತಿಗಳನ್ನು ಸಂಪಾದಿಸಿಕೊಂಡಿದ್ದಾರೆ. ಇವರ ಅಧಿಕಾರದ ಕಾಲವು ಪೂರೈಸಿದ್ದರಿಂದ ಅವರು ಗವರ್ನರ್ ಕೆಲಸಕ್ಕೆ ರಾಜೀನಾಮೆಕೊಟ್ಟು ನೆನ್ನೆ ಮದರಾಸಿನಿಂದ ಸೀಮೆಗೆ ಪ್ರಯಾಣಮಾಡಿದರು. ಇವರಿಗೆ ಪ್ರಜೆಗಳು ತಮ್ಮ ಕೃತಜ್ಞತೆಯನ್ನೂ ಭಕ್ತಿ ಪ್ರೀತಿಗಳನ್ನೂ ಪ್ರಕಾಶಪಡಿಸುವುದಕ್ಕಾಗಿ ಬೇರೆ ಬೇರೆ ಕಡೆಗಳಲ್ಲಿ ಬೇರೆಬೇರೆ ತರದ ಔತನಗಳನ್ನು ಮಾಡಿ ಸಂತೋಷಪಡಿಸಿದರು. ಮದರಾಸ್ ಮ್ಯುನಿಸಿಪಾಲಿಟಿಯವರು ಅವರಿಗೆ ಔತನ ಮಾಡಿದ್ದು ಅಪೂರ್ವವಾಗಿರುತ್ತದೆ. ಹೊಸಗವರ್ನರಾದ ಸರ್ ಆರ್ಥರ್ ಲಾಲಿಯವರು ಮುಂದಿನ ತಿಂಗಳಲ್ಲಿ ಸೀಮೆಯಿಂದ ಬಂದು ಛಾರ್ಜು ವಹಿಸುವವರಾಗಿದ್ದಾರೆ.

●●●●

ಕಲ್ಕತ್ತಾ ಪಟ್ಟಣದಲ್ಲಿ ಮುದ್ರಾಪುಸ್ತಕಗಳನ್ನೂ ಇತರ ಪದಾರ್ಥಗಳನ್ನೂ ವಿಕ್ರಯಿಮಾಡುವ ಸ್ಮಿತ್ ಎಂಬೊಬ್ಬ ೩೦ ವಯಸ್ಸಿನ ವರ್ತಕನು ೧೯೦೨ ನೇ ಮಾರ್ಚಿಯಲ್ಲಿ ತನಗೆ ಒಬ್ಬ ಹೆಂಡತಿ ಬೇಕಾಗಿದೆ ಎಂದು ಪತ್ರಿಕೆಗಳಲ್ಲಿ ನೋಟೀಸ್ ಪ್ರಕಟಿಸಿದನು. ಮಿಸ್ ಎಮಿಲ್ ಎಂಬುವಳು ೨೪ ವರುಷದ ಹುಡುಗಿಯು ಹೋಗಿ ಅವನನ್ನು ಕಂಡು ಮಾತನಾಡಿ, ತನ್ನ ಹೆಸರಿನಲ್ಲಿ ೫,೦೦೦ ರೂಪಾಯಿ ಬಾಡಿಕೊಟ್ಟು ಸಾಕಬಹುದಾದ ಅವನನ್ನು ಮದುವೆ ಮಾಡಿಕೊಳ್ಳುತ್ತೇನೆಂದು ಹೇಳಿ, ಅವನು ಅವಳಿಗೆ ಒಪ್ಪಿಕೊಂಡದ್ದರಿಂದ ಮದುವೆ ಮಾಡಿಕೊಂಡಳು. ಆಮೇಲೆ ಅವನು ಆ ಹಣವನ್ನು ಅವಳಿಗೆ ಕೊಡಲಿಲ್ಲ. ಗಂಡಹೆಂಡರಿಗೆ ಮನೆಯಲ್ಲಿ ವಾಗ್ವಾದಗಳೂ ಜಗಳಗಳೂ ಆಗುತ್ತಾ ಬಂದವು. ಕಡೆಗೆ ಅವಳು ಅವನ ಮೇಲೆ ೫,೦೦೦ ರೂಪಾಯಿಗೆ ದಾವಾ ಮಾಡಿದಳು. ಪ್ರತಿವಾದಿಯು ಕೋರ್ಟಿಗೆ ಹಾಜರಾಗದೆ ಹೋದದ್ದರಿಂದ ಅವಳಿಗೆ ಡಿಕ್ರಿ ಕೊಟ್ಟಿರುತ್ತಾರೆ.

●●●●

ಹೈದರಾಬಾದ್ ಸಂಸ್ಥಾನದಲ್ಲಿ ಕಳೆದ ೨೮ನೇ ತಾರೀಖಿನ ದಿನ ಕೈಗಾರಿಕೆಗಳ ವಸ್ತುಪ್ರದರ್ಶನ ಶಾಲೆಯನ್ನು ಪ್ರಾರಂಭ ಮಾಡಿದರು. ಮಂತ್ರಿಯವರಾದ ಮಹಾರಾಜಾ ಸರ್ ಕಿಶೆನ್‌ಪ್ರಸಾದ್, ಕೆ. ಸಿ. ಐ. ಇ. ಯವರು ಆ ದಿನ ಸಾಯಂಕಾಲ ೫ ಗಂಟೆಗೆ ಬ್ರಿಟಿಷ್ ರೆಸಿಡೆಂಟರೇ ಮೊದಲಾದ ಸರ್ದಾರರನ್ನೂ ಹೈದರಾಬಾದ್ ಸಂಸ್ಥಾನದ ಸಾಹೇಬರುಗಳೇ ಮೊದಲಾದ ದೊಡ್ಡ ಮನುಷ್ಯರನ್ನೂ ಕರೆಸಿಕೊಂಡು, ಉಪನ್ಯಾಸಪೂರ್ವಕವಾಗಿ ಪ್ರದರ್ಶನಶಾಲೆಯನ್ನು ತೆರೆದರು. ದೇಶೀಯ ಕೈಗಾರಿಕೆಗಳನ್ನು ಅಭಿವೃದ್ಧಿಗೆ ತಂದು, ಆ ಮೂಲಕ ದೇಶೋನ್ನತಿಯನ್ನೂ ಸುಭಿಕ್ಷವನ್ನೂ ಕಾಪಾಡಿಕೊಳ್ಳಬೇಕೆಂದು ತಿಳಿಸಿದರು. ಪ್ರದರ್ಶನವನ್ನು ಅಂದಿನಿಂದ ಪ್ರತಿದಿನವೂ ಬೆಳಗ್ಗೆ ೧೦ ಗಂಟೆಯಿಂದ ಸಮರಾತ್ರಿಯವರೆಗೆ ತೆರೆದಿರುತ್ತಾರೆ. ಸಾವಿರಾರು ಜನರು ಹೋಗಿ ಪ್ರದರ್ಶನವಸ್ತುಗಳನ್ನು ನೋಡಿಬಂದು, ಅದರ ಏರ್ಪಾಡನ್ನು ಹೊಗಳುತ್ತಿರುವರು.

●●●●

ಪಾಟಿಯಾಲಾ ಸಂಸ್ಥಾನದಲ್ಲಿ ಸರ್ಕಾರದವರು ಪಂಚಾಯಿತಿ ಕೋರ್ಟುಗಳನ್ನು ಏರ್ಪಾಡು ಮಾಡಿದ್ದಾರೆ. ಪ್ರತಿಗ್ರಾಮದಲ್ಲೂ ದೊಡ್ಡ ಮನುಷ್ಯರಾಗಿಯೂ ಸಂಭಾವಿತರಾಗಿಯೂ ಪ್ರಜೆಗಳ ಪ್ರೀತಿಗೌರವಗಳನ್ನು ಪಡೆದಿರತಕ್ಕವರಾಗಿರುವವರಾಗಿಯೂ ಇರುವ ಕೆಲವರನ್ನು ಆರಿಸಿ ಪಂಚಾಯತರನ್ನಾಗಿ ನೇಮಕಮಾಡಿದ್ದಾರೆ. ಇವರು ಸಾರ್ವಜನಿಕ ಕೋರ್ಟುಮಾಡಿ, ತಮ್ಮ ಸರಹದ್ದಿಗೆ ಸೇರಿದ ಜನರಲ್ಲಿ ವ್ಯಾಜ್ಯ ಲೇವಾದೇವಿ ಮೊದಲಾದ ಮೊಕದ್ದಮೆಗಳನ್ನು ಕವಿತೆ ಮಾಡಿ, ಸಮಾಧಾನ ಹೇಳಿ ಕಕ್ಷಿಗಾರರನ್ನು ಒಂದುಮಾಡಿ, ವ್ಯಾಜ್ಯಗಳನ್ನು ಇತ್ಯರ್ಥಮಾಡುವರು. ಪ್ರಜೆಗಳು ಈ ಏರ್ಪಾಡನ್ನು ಬಹಳವಾಗಿ ಮೆಚ್ಚಿಕೊಂಡಿದ್ದಾರೆ. ಅವರು ದೂರ ಪ್ರಾಂತ್ಯಗಳಲ್ಲಿ ಅಲೆದು ಕಷ್ಟನಷ್ಟಗಳಿಗೆ ಗುರಿಯಾಗುವುದು ತಪ್ಪಿ ತುಂಬಾ ಸುಖವಿಂದಿದ್ದಾರೆ. ಈ ಪಂಚಾಯತರಿಗೆ ೨೦೦ ರೂಪಾಯಿನೊಳಗಿರುವ ಮೊಕದ್ದಮೆಗಳನ್ನೆಲ್ಲಾ ಇತ್ಯರ್ಥ ಮಾಡುವಂತೆ ಸರ್ಕಾರದವರು ಅಧಿಕಾರಕೊಟ್ಟಿರುತ್ತಾರೆ. ಇದರಿಂದ ವ್ಯವಸಾಯಗಾರರಿಗೆ ತುಂಬಾ ಅನುಕೂಲವಾಗಿರುವುದು.

●●●●

ಅಲಿಘಡದಲ್ಲಿರುವ ಮಹಮದೀಯವಿದ್ಯಾಶಾಲೆಯ ವಾರ್ಷಿಕ ರಿಪೋರ್ಟನ್ನು ಸೆಕ್ರೆಟರಿಯವರು ಈಗ ತಾನೆ ಪ್ರಕಟಿಸಿದ್ದಾರೆ. ಅದರಿಂದ ಈ ವಿದ್ಯಾಶಾಲೆಯು ದಿನೇ ದಿನೇ ತುಂಬಾ ಹೆಸರುವಾಸಿಯನ್ನು ಸಂಪಾದಿಸಿಕೊಳ್ಳುತ್ತಾ ಅಭಿವೃದ್ಧಿ ಹೊಂದುತ್ತಾ ಬಂದಿದೆ ಎಂದು ಗೊತ್ತಾಗುತ್ತದೆ. ಕಳೆದ ವರುಷ ಈ ವಿದ್ಯಾಶಾಲೆಯಲ್ಲಿ ೧,೨೭,೦೦೦ ಚಿಲ್ಲರೆ ರೂಪಾಯಿ ಉತ್ಪತ್ತಿಯೂ ೧,೧೭,೦೦೦ ಚಿಲ್ಲರೆ ರೂಪಾಯಿ ಖರ್ಚೂ ಆಯಿತೆಂತಲೂ, ಈಗ ೮೦೪ ಮಂದಿ ಮಹಮದೀಯ ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡುತ್ತಿದ್ದಾರೆಂತಲೂ, ಈ ಪೈಕಿ ೩೩೪ ಮಂದಿ ಪರಸ್ಥಳಗಳಿಂದ ಅಲ್ಲಿಗೆ ಹೋಗಿ ಅಲ್ಲಿನ ವಿದ್ಯಾರ್ಥಿನಿಲಯದಲ್ಲೇ ವಾಸಮಾಡಿಕೊಂಡಿದ್ದಾರೆಂತಲೂ, ಕಳೆದ ವರುಷ ೧,೩೬,೩೦೦ ಚಿಲ್ಲರೆ ರೂಪಾಯಿ ಖರ್ಚು ಮಾಡಿ, ಪಾಠಶಾಲೆಯ ಆವರಣದಲ್ಲಿ ನಾನಾ ವಿಧವಾದ ಕಟ್ಟಡಗಳನ್ನು ಕಟ್ಟಿ ಪೂರೈಸಿದರೆಂತಲೂ ತಿಳಿಯುತ್ತದೆ. ಇದಲ್ಲದೆ ಆ ವಿದ್ಯಾಶಾಲೆಯ ಮೂಲಧನಕ್ಕೆ ಕಳೆದ ವರುಷ ೬,೦೭,೯೦೦ ರೂಪಾಯಿ ಚಂದಾ ವಸೂಲಾಯಿತು. ಈ ಪೈಕಿ ಹೈದರಾಬಾದಿನ ನಿಜಾಮರು ೫,೦೦೦ ರೂಪಾಯಿ, ರಾಜಾ ಮಹಮುದಾಬಾದ್ ಖಾನವನ್ನೆ ವಿದ ಆಗಾಖಾನ್ ರವರು ತಲಾ ೩೧,೦೦೦ ರೂಪಾಯಿ, ರಾಜಾ ಸಹೋಕರಸೂಲ್ ರವರು ೨೦,೦೦೦ ರೂಪಾಯಿ, ನವಾಬ್ ಫರೀದ್‌ಖಾನ್ ಅಲ್ಲಿಖಾನ್ ರವರು ೧೮,೦೦೦ ರೂಪಾಯಿ, ಈ ಪ್ರಕಾರ ಕೊಟ್ಟಿದ್ದಾರೆ.

●●●●

ರಾಜಪುಟಾನಾ ಮತ್ತು ಮಧ್ಯಇಂಡಿಯಾ ಎಂಬೀ ಪ್ರಾಂತ್ಯಗಳ ಕಾಲಸ್ಥಿತಿಯು ರೈತರಿಗೂ ಕೂಲಿ ನಾಲಿ ಮಾಡುವ ಬಡಬಗ್ಗರಿಗೂ ಮೂಗು ಪ್ರಾಣಿಗಳಾದ ಗೋಕಾಯಿಗಳಿಗೂ ತುಂಬಾ ಕಷ್ಟಕರವಾಗಿದೆ ಎಂದು ಇಂಡಿಯಾ ಗವರ್ನಮೆಂಟಿನವರು ಪ್ರಕಟಿಸಿರುವ ರಿಪೋರ್ಟಿನಿಂದ ತಿಳಿದುಬರುತ್ತದೆ. ರಾಜಪುಟಾನಾಕ್ಕೆ ಸೇರಿದ ಅಲ್ವಾರದ ಢೋಲ್‌ಪುರವಲ್ಲೂ ಸ್ವಲ್ಪ ಮಳೆಯಾದರೂ ಬೆಳೆಯು ಚನ್ನಾಗಿ ವ್ಯವಸಾಯಕಾರ್ಯಗಳು ನೆಲೆಗೆ ನಿಂತಿವೆ. ಕೋಟಾ, ಜಲಾವಾರಗಳಲ್ಲಿ ಮುಂಚಿನ ದೆಸೆಯಿಂದ ಅಲ್ಪಸ್ವಲ್ಪ ಬೆಳೆ ಕೆಟ್ಟುಹೋಯಿತು. ಉತ್ತರ ಮೇವಾರ, ಜಯಪುರ, ಕೃಷ್ಣಗಢ, ಕರೌಲಿ, ಭರತಪುರ, ಮಾರ್ವಾರ, ಕೋಟಾ ಈ ಪ್ರಾಂತ್ಯಗಳಲ್ಲಿ ಗೋಕಾಯಿಗಳ ಸ್ಥಿತಿಯು ಪರಿತಾಪಕರವಾಗಿದೆ. ಆಸ್ಥಳಗಳಲ್ಲೂ ಟಾಂಕ್, ಢೋಲ್‌ಪುರ, ಅಜ್ಮೀರ ಮೇವಾರ ಪ್ರಾಂತ್ಯಗಳಲ್ಲೂ ಮಳೆ ನೀರು ಸಿಕ್ಕುವುದು ದುರ್ಲಭ. ಕೋಟಾ, ಜಲಾವಾರ, ಢೋಲ್‌ಪುರಗಳಲ್ಲಿ ನೀರಿಗೆ ಬಹಳ ಕಷ್ಟ. ಈ ಪ್ರಾಂತ್ಯಗಳಲ್ಲೆಲ್ಲಾ ಆಹಾರ ವಸ್ತುಗಳು ಬಹಳ ಪ್ರಿಯವಾಗಿವೆ. ಈ ಕಾರಣಗಳಿಂದ ಜೀವನಕ್ಕೆ ಮಾರ್ಗವಿಲ್ಲದೆ ಸರ್ಕಾರದವರ ರಿಲೀಫ್ ಕಾಮಗಾರಿಗಳಲ್ಲಿ ಸೇರಿಕೊಂಡಿರುವವರ ಸಂಖ್ಯೆಯು ವಾರವಾರಕ್ಕೆ ಹೆಚ್ಚುತ್ತಿದೆ. ಕಳೆದ ವಾರದ ಕ್ಷಾಮಪೀಡಿತರ ಸಂಖ್ಯೆಗಳಷ್ಟೇ ಅಜ್ಮೀರ್–ಮೇರ್ವಾರಾದಲ್ಲಿ ೬೨,೩೧೫ ಮಂದಿ, ದೇಶೀಯ ಸಂಸ್ಥಾನಗಳಲ್ಲಿ ಒಟ್ಟು ೨೬,೫೩೯, ಉತ್ತರ ಮೇವಾರ ೧,೯೧೬, ಪಟಾಡಿ ೩೬೭, ಟಾಂಕ್ ೬೯೫, ಜಯಪುರ ೩,೩೬೧, ಅಲ್ವಾರ ೧,೬೯೮, ಅಂತು ರಾಜಪುಟಾನಾದಲ್ಲಿ ಒಟ್ಟು ಕ್ಷಾಮಪೀಡಿತರ ಸಂಖ್ಯೆ ೩೪,೩೯೭. ಭರತಖಂಡದ ಮಧ್ಯಭಾಗಗಳಲ್ಲಿ ಕ್ಷಾಮವು ಹೆಚ್ಚಾಗಿದೆ. ಢೋಲ್‌ಪುರದಲ್ಲಿ ಕಿಡುಬಿನ ಉಪದ್ರವು ಪ್ರಾರಂಭವಾಗಿರುವುದು. ಇತ್ತಲಾಗಿ ಮಧ್ಯಇಂಡಿಯಾಕ್ಕೆ ಸೇರಿದ ಗ್ವಾಲಿಯರ್, ಬುಂದೇಲಖಂಡ, ಬಾಘೇಲಖಂಡ, ಇಂದೋರ್, ಭೋಪಾಲ, ಭೂಪಾರ, ಈ ಪ್ರಾಂತ್ಯಗಳಲ್ಲಿ ಬೆಳೆಗಳು ಕಡಿಮೆ. ಮುಂಚಿನ ದೆಸೆಯಿಂದ ಪೈರು ಅನೇಕ ಕಡೆ ಕೆಟ್ಟುಹೋಯಿತು. ಕ್ಷಾಮಸ್ಥಿತಿ ಭಯಂಕರವಾಗಿದೆ. ಗ್ವಾಲಿಯರಿನಲ್ಲಿ ೨೬,೦೦೦ ಪ್ರಜೆಗಳು ಕ್ಷಾಮಪೀಡಿತರಾಗಿ ಸರ್ಕಾರಿ ರಿಲೀಫ್ ಕಾಮಗಾರಿಗಳಲ್ಲಿ ಸೇರಿಕೊಂಡಿದ್ದಾರೆ. ಧಾತಿಯಾ, ಸಾಂಥರ್, ಓರ್ಛಾ, ಅಜಯಗಢ, ಬಿಜಾವರ, ಛತ್ತರ್‌ಪುರ, ಈ ಸ್ಥಳಗಳಲ್ಲೂ ೧೨,೫೦೦ ಜನರು ಕ್ಷಾಮಪೀಡಿತರಾಗಿರುವರು.

●●●●

ಅಲಹಾಬಾದ್ (ಪ್ರಯಾಗ) ಪಟ್ಟಣದಲ್ಲಿ ಈ ವರುಷ ಶ್ರೀಭಾರತಧರ್ಮ ಮಹಾಮಂಡಲವೆಂಬ ಸಮಾಜವು ಕಳೆದ ೩೦ನೇ ತಾರೀಖಿಗೆ ಮುಕ್ತಾಯವಾಯಿತು. ಸಭೆಯನ್ನು ಸನಾತನಧರ್ಮ ಮಹಾಸಭಾ ಮಂದಿರದಲ್ಲೂ ಮಹಾಮಂಡಲ ಮಂಟಪದಲ್ಲೂ ನಡಿಸಿದರು. ಅನೇಕ ಸಾವಿರ ಜನರು ಕೂಡಿದ್ದರು. ಸ್ವಾಮಿಗಳು, ಸಾಧುಗಳು, ಪಂಡಿತರು, ದೇಶೀಯ ರಾಜರುಗಳು, ಬಹುಮಂದಿ ದೊಡ್ಡ ಮನುಷ್ಯರು ಈ ಮೊದಲಾದ ಜಂಗಡಗಳವರೆಲ್ಲಾ ಸಭೆಯಲ್ಲಿ ಹಾಜರಾಗಿದ್ದು ಸಮಾಜದ ಕಾರ್ಯಗಳನ್ನು ವಿಶೇಷ ಉತ್ಸಾಹಪೂರ್ವಕವಾಗಿ ನೆರವೇರಿಸಿದರು. ಈ ಮಹಾಮಂಡಲಸಭೆಯಲ್ಲಿ ಗೋವರ್ಧನ ಮಠದ ಜಗದ್ಗುರುಗಳಾದ ಶ್ರೀಶಂಕರಾಚಾರ್ಯರು ಅಗ್ರಾಸನವನ್ನು ವಹಿಸಿದ್ದರು. ಶ್ರೀಭಾರತಧರ್ಮ ಮಹಾಮಂಡಲದ ಜನರಲ್ ಪ್ರೆಸಿಡೆಂಟರಾದ ದರ್ಭಾಂಗ ಸಂಸ್ಥಾನದ ಶ್ರೀಮನ್ಮಹಾರಾಜರವರು ಇಂಗ್ಲಿಷಿನಲ್ಲಿ ಒಂದು ಅಡ್ರೆಸ್ಸನ್ನು ಓದಿ ಹೇಳಿದರು. ಪಂಡಿತ ಗೋಪೀನಾಥರವರು ಅದರ ಅಭಿಪ್ರಾಯವನ್ನು ಹಿಂದಿ ಭಾಷೆಯಲ್ಲಿ ತಿಳಿಸಿದರು. ತರುವಾಯ ಈ ಮಹಾಮಂಡಲ ಸಭೆಯ ಗತವರ್ಷದ ರಿಪೋರ್ಟು ಓದಲಾಯಿತು. ಈ ಸಭೆಯಲ್ಲಿ ತೀರ್ಮಾನವಾಗಿರುವ ವಿಷಯಗಳ್ಯಾವವೆಂದರೆ—(೧) ಹಿಂದೂ ಬಾಲಕರಿಗೆ ಇನ್ನೂ ಚನ್ನಾಗಿ ಭಕ್ತಿ ವಿಚಾರವನ್ನು ಹೇಳಿಕೊಡಬೇಕು; (೨) ಹಿಂದೂಸ್ಥಾನದ ಸಮಸ್ತ ಪುಣ್ಯಕ್ಷೇತ್ರಗಳಲ್ಲೂ ದೇವಸ್ಥಾನ ಮುಂತಾದ ಕಡೆಗಳಲ್ಲಿ ಅರ್ಚನಾದಿಗಳನ್ನು ಮಾಡತಕ್ಕ ಪಂಡರಿಗೂ ಪೂಜಾರಿಗಳಿಗೂ ಚನ್ನಾಗಿ ವಿದ್ಯೆ ಕಲಿಸಿ ಸದಾಚಾರಿಗಳನ್ನಾಗಿ ಮಾಡಬೇಕು, (೩) ಉಜ್ಜಯಿನೀಪುರದಲ್ಲಿ ಜ್ಯೋತಿಷ ಪರೀಕ್ಷಾರ್ಥವಾಗಿ ಕಟ್ಟಿಸಿರುವ ಪ್ರಾಚೀನ ಕಾಲದ ಗೋಪುರವನ್ನು ಅಲ್ಲಿನ ಮಹಾರಾಜರವರು ದುರಸ್ತು ಮಾಡಿಸಬೇಕೆಂದು ಕೋರಲಪಟ್ಟು, ಜಯಪುರದ ಮಹಾರಾಜರು ಮಾಡಿರುವುದಕ್ಕಾಗಿ ಅವರನ್ನು ಈ ಸಭಿಕರೆಲ್ಲಾ ವಂದಿಸಿ, ಉಜ್ಜಯಿನೀ ಪಟ್ಟಣದಲ್ಲಿರುವ ಅಂಥಾ ಪುರಾತನ ಕಟ್ಟಡವನ್ನು ಜೀರ್ಣೋದ್ಧಾರ ಮಾಡಬೇಕೆಂದು ಗ್ವಾಲಿಯರ್ ಸಂಸ್ಥಾನದ ಮಹಾರಾಜರವರನ್ನು ವಿನಯಪೂರ್ವಕವಾಗಿ ಕೇಳಿಕೊಂಡು, ಶಾಸ್ತ್ರಿಮಾತ್ಯರು ಪಕ್ಷಪಾತವಿಲ್ಲದೆ ಮಂಡಲದಲ್ಲಿ ಕಂಡುಹಿಡಿಯುವ ವಿಚಾರಗಳನ್ನು ಈ ಕಟ್ಟಡದಲ್ಲಿ ಹಿಂದೂ ಜ್ಯೋತಿಷಜ್ಞರೇ ಪರೀಕ್ಷೆಮಾಡುವಂತೆ ಏರ್ಪಾಡಾಗಬೇಕು; (೪) ಮುಖ್ಯ ಮುಖ್ಯವಾದ ಪಟ್ಟಣಗಳಲ್ಲಿ ಹಿಂದೂ ವೈದ್ಯವನ್ನು ಕಲಿಸುವಂಥಾ ವಿದ್ಯಾಶಾಲೆಗಳನ್ನಿಟ್ಟು, ಅವುಗಳಿಗೆ ಸರ್ಕಾರದವರು ತಕ್ಕಷ್ಟುಗೆ ದ್ರವ್ಯ ಸಹಾಯ ಮಾಡುವಂತೆ ಕೇಳಿಕೊಳ್ಳಬೇಕು; (೫) ಹಿಂದೂ ಯಾತ್ರಾರ್ಥಿಗಳಿಗೆ ಎಲ್ಲಾ ಕಡೆಗಳಲ್ಲೂ ತಂಗುವುದಕ್ಕೆ ವಸತಿಯಾಗಿರುವಂಥಾ ಸತ್ರ ಮಠ ಆರಾಮುಗಳನ್ನು ಕಟ್ಟಿಸಿ, ಅವರಿಗೆ ರೈಲ್ ಪ್ರಯಾಣದಲ್ಲೂ ಸೌಲಭ್ಯಗಳನ್ನು ಕಲ್ಪಿಸಿಕೊಡುವಂತೆ ಏರ್ಪಾಡು ಮಾಡಿಕೊಡಬೇಕು; (೬) ಬಹು ಜನರು ಭಕ್ತರೆಂದು ವೇಷಹಾಕಿ ಪ್ರಜೆಗಳನ್ನು ನಾನಾ ಪ್ರಕಾರವಾಗಿ ಮರುಳುಮಾಡಿ ಮೋಸಪಡಿಸುವುದನ್ನು ತಪ್ಪಿಸುವುದಕ್ಕೆ ಪ್ರಯತ್ನ ಪಡಬೇಕು. (೭) ...

...ಗಮಾಡುತ್ತಾ, ಅವುಗಳ ಮೂಲ ಧನಕ್ಕೆ ಲೋಪ ಉಂಟಾಗದಂ... ದುರ್ವ್ಯಯವಾಗದಂತೆಯೂ ನೋಡಿಕೊಳ್ಳಬೇಕು. ಈ ...ಗಿ ಸಭಿಕರು ವಿಷಯಗಳನ್ನು ತೀರ್ಮಾನಮಾಡಿ, ಸಮಾಜವ ...ಮುಕ್ತಾಯಮಾಡಿದರು.

ವಿದೇಶ ವರ್ತಮಾನಗಳು.

...ಪಟ್ಟಣದಲ್ಲಿರುವ ವಿಲ್ಯಂಡೇವಿಸ್ ಎಂಬುವ ದೊಡ್ಡ ...ನು ಹಣ ಕಟ್ಟಿದಾರರ ಹಣವನ್ನು ತನ್ನ ಸ್ವಂತ ಖರ್ಚಿಗೆ ಬಳಸಿ ...ದ್ದು ನಿಜವೆಂದು ಒಪ್ಪಿಕೊಂಡದ್ದರಿಂದ ಮ್ಯಾಜಿಸ್ಟ್ರೇಟರು ...ಮೂರು ವರುಷ ಕಠಿಣ ಸಜವನ್ನು ವಿಧಿಸಿರುತ್ತಾರೆ.

••••

...ಲ್ ಪಟ್ಟಣದ ಬಳಿ ಇರುವ ಬಾಲ್ಟಿಕ್ ಕಡಲು ಕಾಲಿವೆಯು ...೨೦ ಗಜದಷ್ಟು ಅಗಲವಾಗಿ ಮಾಡಿ, ನೀರಿನ ವಿಸ್ತಾರವ ...ಟ್ಟಿ ಹೆಚ್ಚಿಸುವುದಕ್ಕೆ ರಷ್ಯಾ ಸರ್ಕಾರದವರು ಆರು ಕೋ... ...ವನ್ನು ಸ್ಯಾಂಕ್ಷನ್ ಮಾಡಿ, ಕಾಮಗಾರಿ ಪ್ರಾರಂಭಿಸಿದ್ದಾರೆ.

••••

...ರಾಜ್ಯಕ್ಕೆ ಸೇರಿದ ಇನಿಸ್ಟೀಲು ಎಂಬ ಪಟ್ಟಣದಲ್ಲಿ ...ಕೂಲಿ ಜನಗಳು ಒಂದು ಭಾರೀ ಗಣಿಯೊಳಗೆ ಕೆಲಸ ಮಾಡು ...ವಾಗ್ಗೆ ಒಳಗೇ ಬೆಂಕಿ ಹತ್ತಿಕೊಂಡು ೧೦೧ ಜನರು ಹತರಾದರೆಂ... ನೂರಾರು ಜನರಿಗೆ ಸುಟ್ಟಗಾಯಗಳಾದವೆಂತಲೂ ತಂತೀವ...ರ್ತಮಾನ ಬಂದಿದೆ.

••••

...ಯುತಿ ರಾಜ್ಯದ ಪಡಗಿನ ಸೈನ್ಯದ ಸಿಬ್ಬಂದಿಯಲ್ಲಿ ಅನೇಕಾ... ಈಚಿನ ವರ್ಷಕ್ಕೆ ಇಳಿಯುವೆಂದು ಸರ್ಕಾರದವರಿಗೆ ತಿಳಿದು ...ಬ್ಬರಿಂದ ಅಂಥವರಿಗೆಲ್ಲಾ ಕ್ರಮವಾಗಿ ಈಚು ಕಲಿಸಬೇಕೆಂದು ...ಕೊಟ್ಟಿದ್ದಾರೆ. ಇನ್ನು ಮುಂದೆ ಈಜುಬಾರದವರನ್ನು ಸೇರಿ... ...ಳ್ಳುವುದಿಲ್ಲ.

••••

...ಅಧಿಪತ್ಯಕ್ಕೆ ಸೇರಿದ ಜೊಹಾಂಜೋ ಪಟ್ಟಣದಲ್ಲಿ ಸೀಸ ...ರರು ಏಕವಾಗಿ, ಸೀಸದ ಧಾರಣೆಯನ್ನು ಹೆಚ್ಚಿಸಿ... ಸರ್ಕಾರದವರು ಆ ಷ್ಯಾಪಿ ಮುಖಂಡರಾದ ೧೨ ಮಂದಿ ವರ್ತಕ... ...ವಿಚಾರಣೆ ಮಾಡಿ, ಅವರಿಗೆಲ್ಲಾ ತಲಾ ೬೦೦ ರೂಪಾಯಿ ...೧,೫೦೦ ರೂಪಾಯಿವರೆಗೆ ಜುಲ್ಮಾನೆ ಹಾಕಿರುತ್ತಾರೆ.

••••

...ರಾಜ್ಯಕ್ಕೆ ಸೇರಿದ ಬಿಲ್ಬನಗರದಲ್ಲಿ ಪ್ರಜೆಗಳು ಸನ್ಮತಿ ...ಮ್ಯಾಜಿಸ್ಟ್ರೇಟರನ್ನು ಚುನಾಯಿಸಿಕೊಂಡರು. ಕೆಲವು ಪ್ರಜೆ ...ಆತನನ್ನು ಒಪ್ಪದೆ ದಾಂಧಲೆ ಮಾಡಿದರು. ಟೌನ್‌ಹಾಲ್ ಎಂಬ ...ವನ್ನು ಕೆಡಹುತ್ತಾ ಬಂದರು. ಸೈನಿಕರಿಗೂ ಆ ಜನರಿಗೂ ...ಹೊಡೆದಾಟವಾಗಿ ಪ್ರಜೆಗಳಲ್ಲಿ ಹತ್ತೊಂಬತ್ತು ಜನರೂ ಸೈನಿಕರಲ್ಲಿ ...ರು ಮಂದಿಯೂ ಕೊಲ್ಲಲ್ಪಟ್ಟರು. ಎರಡು ಕಡೆಯವರಲ್ಲಾ... ...ದು ೪೦ ಮಂದಿಗೆ ಗಾಯಗಳಾದವು.

••••

ಆಸ್ಟ್ರೇಲಿಯಾದಲ್ಲಿ ಈ ವರುಷ ಕುರಿಗಳ ತುಪ್ಪಟವನ್ನು ಕತ್ತ... ...ರಿ ಮಾಡಿದ್ದರಿಂದ ೬೪ ಕೋಟಿ ರೂಪಾಯಿ ತನಕ ...ತ್ತಿಯಾಗುವುದೆಂತಲೂ, ವಿಕ್ಟೋರಿಯಾ ಎಂಬ ಡಿಸ್ಟ್ರಿಕ್ಟಿನಲ್ಲಿ ...ಬೆಳೆದ ಗೋಧಿಯನ್ನು ಪರರಾಜ್ಯಗಳಿಗೆ ರಫ್ತು ಮಾಡೋಣ... ...೩೩ ಕೋಟಿ ರೂಪಾಯಿ ಆದಾಯವಾಗುವುದೆಂತಲೂ ಅಲ್ಲಿನ ...ರು ಹೇಳುತ್ತಾರೆ. ಇದರಿಂದ ಅಲ್ಲಿನ ರೈತಪ್ರಜೆಗಳು ಎಷ್ಟು ...ಗೆ ಕಷ್ಟಪಡುತ್ತಾರೆಂಬುವುದು ಗೊತ್ತಾಗುತ್ತದೆ.

••••

ಬೆಲ್ಜಿಯಂನ ರಾಜಕುಮಾರನಾದ ಪ್ರಿನ್ಸ್ ಫಿಲಿಪ್ ಎಂಬಾತ ...ಯ ರಾಜಕುಮಾರ್ತೆಯನ್ನು ವಿವಾಹ ಮಾಡಿಕೊಂಡಿದ್ದ... ...ಗೆ ಈ ದಂಪತಿಗಳಲ್ಲಿ ಪರಸ್ಪರ ಪ್ರೀತಿವಾತ್ಸಲ್ಯಾದಿಗಳು ಕಡಿಮೆ ...ದ್ದರಿಂದ ಅವರವರ ವಿವಾಹ ಸಂಬಂಧವನ್ನು ಪರಿತ್ಯಾಗ ಮಾಡಿ... ...ರು. ಈ ರಾಜಕುಮಾರನು ಆಕೆಯ ಜೀವನಕ್ಕೆ ಲಕ್ಷಾಂತರ ...ಉತ್ಪತ್ತಿಯಾಗುವ ಸ್ಥಿರ ಸ್ವತ್ತುಗಳನ್ನೂ ತಿಂಗಳಿಗೆ ೬೦,೦೦೦ ...ಹಾಗೆ ಮಾಸಾಶನವನ್ನೂ ಕೊಡುವುದಕ್ಕೆ ಒಪ್ಪಿಕೊಂಡ ...ಲ್ಲದೆ ಕರಾರು ಹುಟ್ಟಿದ ದಿನ ೬ ಲಕ್ಷ ದ್ರವ್ಯವನ್ನು ಆಕೆಗೆ ...ನು ನಗದಾಗಿ ಎಣಿಸಿಕೊಟ್ಟನು. ತಂದೆಯಾದ ಬೆಲ್ಜಿಯಂ ...ವೂ ಆ ತನ್ನ ಮಗಳಿಗೆ ವರುಷಕ್ಕೆ ೩೦ ಸಾವಿರ ರೂಪಾಯಿ ...ತ್ತಾ ಬರುವುದಕ್ಕೆ ಒಪ್ಪಿರುತ್ತಾನೆ.

••••

...ಜಿಲ್ ಸರ್ಕಾರದವರು ರಬ್ಬರ್ ಗಿಡಗಳ ವ್ಯವಸಾಯವನ್ನು ...ವೃದ್ಧಿಪಡಿಸಬೇಕೆಂದು ಅಲ್ಲಿನ ಜಮೀನ್ದಾರರನ್ನು ...ತೇಜಿಸುವುದೇನೆಂದರೆ—ನೋಟಿಸ್ ಪ್ರಕಟಿಸಿದ ೧೮ ತಿಂಗ... ...ಗಿ ಯಾವ ರೈತನು ತನ್ನ ಜಮೀನಿನಲ್ಲಿ ಒಂದು ಲಕ್ಷ ರಬ್ಬರ್ ...ನ್ನು ಬೆಳಸಿ ತೋರಿಸುತ್ತಾನೋ ಅವನಿಗೆ ೩೦,೦೦೦ ರೂಪಾ... ...ಅದಕ್ಕಿಂತ ಕಡಿಮೆ ಗಿಡಗಳನ್ನು ಬೆಳೆಸಿದವರಿಗೆ ದರ್ಜಾವಾ... ...೧,೦೦,೫ ಸಾವಿರ ರೂಪಾಯಿಯಂತೆಯೂ ಬಹುಮಾನ ಕೊಡು... ಇದರ ಬಹುಮಾನ ಪಡೆಯಲಪೇಕ್ಷಿಸುವವನು ಕಡೇಪಕ್ಷ ...ಗಿಡಗಳನ್ನಾದರೂ ಬೆಳಸಿ ತೋರಿಸಬೇಕು. ಇದರಿಂದ ರಬ್ಬ... ...ಸಾಯವು ತುಂಬಾ ಅಭಿವೃದ್ಧಿಗೆ ಬರುವುದಕ್ಕೆ ಸಂಶಯವಿಲ್ಲ. ...ರ್ಗವು ಈಗ ಪ್ರಪಂಚದ ಎಲ್ಲಾ ಭಾಗಗಳಲ್ಲೂ ವಿಶೇಷ ಉ... ...ಗಕ್ಕೆ ಬಂದಿರುವುದು. ಇದಲ್ಲದೆ ಆ ದೇಶದಲ್ಲಿ ಕಾಫಿ ತೋಟ ...ಹೆಚ್ಚಾಗಿರುವುದರಿಂದ ಅಂಥಾ ತೋಟಗಳಲ್ಲಿ ರಬ್ಬರ್ ಗಿಡಗ... ...ಳ ಬೆಳೆಸಿದರೆ ಕಾಫಿ ಗಿಡಗಳೂ ತುಂಬಾ ಹುಲುಸಾಗಿ ಫಲ... ...ಡುವುವು ಹೇಳುತ್ತಾರೆ.

ಡಾಕ್ಟರ್ ಟ್ಯಾನರ್ ಎಂಬಾತನು ೬೫ ವರುಷಗಳ ಕೆಳಗೆ ಅಮೇರಿಕದಿಂದ ವಿಲಾಯತಿಗೆ ಬಂದು ೪೦ ದಿವ ಉಪವಾಸ ಮಾಡಿ ತನ್ನ ಸಾಮರ್ಥ್ಯವನ್ನು ಪ್ರಕಾಶಪಡಿಸಿ ಪ್ರಸಿದ್ಧಿ ಹೊಂದಿರುತ್ತಾನೆ. ಈಗ ಇವನಿಗೆ ೭೫ ವರುಷವಾಗಿರುವುದು. ಮಿ॥ ವಾರ್‌ವಿಲ್‌ಕಾಕ್ಸ್ ಎಂಬ ಇನ್ನೊಬ್ಬ ಗಟ್ಟಿಗನು ನ್ಯೂಯಾರ್ಕ್ ಪಟ್ಟಣದಲ್ಲಿ ಈಚೆಗೆ ೬೦ ದಿನ ಉಪವಾಸ ಮಾಡಿ, ಮಾರನೆದಿವಸ ಅಲ್ಲಿಂದ ಹೊರಟು ಕಾಲುನಡೆಯಲ್ಲೇ ೩,೬೧೮ ಮೈಲಿ ದೂರ ಹೋಗಿ, ಡಾಕ್ಟರ್ ಟ್ಯಾನರ್ ಎಂಬಾತನನ್ನು ಕಂಡು, ಆತನ ಸ್ನೇಹ ಮಾಡಿಕೊಂಡನು. ವಿಲ್‌ಕಾಕ್ಸ್ ೬೦ ದಿನ ಉಪವಾಸ ಮಾಡಿದ ಮೇಲೆ ತೂಗಿಸಿಕೊಂಡಾಗ ಮೊದಲಿಗಿಂತಲೂ ೩೦ ಪೌಂಡು ಹೆಚ್ಚಾದನಂತೆ. ಈಗ ಅವರಿಬ್ಬರೂ ಆಹಾರವಿಲ್ಲದೆ ಎಷ್ಟು ದಿನಗಳ ತನಕ ಬದುಕಿರಬಹುದು ಎಂಬುವುದನ್ನು ಪರೀಕ್ಷೆ ಮಾಡಬೇಕೆಂದು ಪಂಧಕಟ್ಟಿಕೊಂಡಿದ್ದಾರೆ. ಇವರ ಮೇಲೆ ಪಣ ಕಟ್ಟುವುದಕ್ಕೆ ಸತ್ಯವಂತರಾದ ಕೆಲವು ದೊಡ್ಡ ಮನುಷ್ಯರು ಒಪ್ಪಿಕೊಂಡಿದ್ದಾರೆ. ಡಾಕ್ಟರ್ ಟ್ಯಾನರ್ ಹೇಳುವುದೇನೆಂದರೆ—ಜನರು ಆಹಾರವನ್ನು ಕಡಿಮೆಯಾಗಿ ತಿನ್ನಲಿ. ತುಂಬಾ ಕಷ್ಟ ಕೆಲಸಗಳನ್ನು ಮಾಡಲಿ. ಆಗ್ಗೆ ಡಾಕ್ಟರುಗಳ ಅವಶ್ಯಕತೆ ಸ್ವಲ್ಪವೂ ಬೇಕಾಗುವುದಿಲ್ಲ. ಈ ಸಾಹಸದ ವಿಷ್ಯಾಸೋಜನವಾದದ್ದೆಂದು ಯಾರೂ ತಿಳಿದುಕೊಳ್ಳಬಾರದು ಎಂಬುದೇ.

••••

ಅಮೇರಿಕ ಸಂಸ್ಥಾನಕ್ಕೆ ಸೇರಿದ ಸೂಯಾರ್ಕ್ ಪಟ್ಟಣದಲ್ಲಿ ಮಿ॥ ಮಾರ್ಷಾಲ್‌ಫೀಲ್ಡ್ ಎಂಬ ಕೋಟ್ಯಾಧೀಶ್ವರರು ೭೦ ವರುಷ ಬದುಕಿದ್ದು ಕಳೆದ ವಾರ ಕಾಲವಾದರೆಂದು ತಿಳಿದು ಬಂದಿದೆ. ಅಲ್ಲಿರುವ ಮೆ॥ ಜಾರ್ಜಿ. ರಾಕ್‌ಫೆಲರ್, ಮಿ॥ ಆಂಡ್ರೂ ಕಾರ್ನಿಗಿ ಎಂಬೀ ಕೋಟ್ಯಾಧೀಶ್ವರರನ್ನು ಬಿಟ್ಟರೆ ಮಿ॥ ಮಾರ್ಷಾಲ್‌ಫೀಲ್ಡನೇ ಅಮೇರಿಕದ ಮಹದೈಶ್ವರ್ಯವಂತನಾಗಿದ್ದನು. ಕಡೆಕಡೆಗೆ ಆತನಿಗೆ ಇದ್ದ ಆಸ್ತಿ ಎಷ್ಟೋ ಅವನಿಗೇ ಗೊತ್ತಿರಲಿಲ್ಲ. ಸಾಯುವಾಗ್ಗೆ ಅವನು ೪೫೦ ಕೋಟಿ ದ್ರವ್ಯವನ್ನು ಕೂಡಿಸಿದ್ದನೆಂಬುವುದಕ್ಕೆ ಸಂಶಯವಿಲ್ಲವೆಂದು ಹೇಳುತ್ತಾರೆ. ಚಿಕಾಗೋ ಪಟ್ಟಣದಲ್ಲಿರುವ ಸ್ಥಿರಸ್ವತ್ತುಗಳಿಗಾಗಿ ಆತನು ಸರ್ಕಾರಕ್ಕೆ ೧೨ ಕೋಟಿ ರೂಪಾಯಿ ಕಂದಾಯ ಕೊಡುತ್ತಿದ್ದನು. ಈ ಮಹದೈಶ್ವರ್ಯವಂತನ ಪೂರ್ವಚರಿತ್ರೆ ಏನೆಂದರೆ, ಅವನು ಒಬ್ಬ ರೈತನ ಹೊಟ್ಟೆಯಲ್ಲಿ ಹುಟ್ಟಿ, ಇಷ್ಟೊಂದು ಅಪಾರವಾದ ದ್ರವ್ಯವನ್ನೂ ಸಂಪಾದಿಸಿ ಕೂಡಿ ಹಾಕಿರುತ್ತಾನೆ. ಈ ಆಸ್ತಿಯಲ್ಲಿ ಒಂದು ಕಾಸಾದರೂ ಅನ್ಯಾಯವಾಗಿ ಆಗಲಿ ಮೋಸದಿಂದಲೇ ಆಗಲಿ ಸಂಪಾದಿಸಿದ್ದಲ್ಲ. ಮೊದಲು ಚಿಕಾಗೋ ಪಟ್ಟಣದಲ್ಲಿ ಅವನು ಒಂದು ಅಂಗಡಿಯನ್ನಿಟ್ಟು, ಬೇರೆ ಬೇರೆ ಸರಕುಗಳನ್ನು ಮಾರುತ್ತಾ ಬಂದನು. ಪಟ್ಟಣವು ವೃದ್ಧಿಹೊಂದುತ್ತಾ ಬಂದ ಹಾಗೆಲ್ಲಾ ಆತನ ವ್ಯಾಪಾರವೂ ಆತನ ಐಶ್ವರ್ಯವೂ ಹೆಚ್ಚಾದವು. ಕೆಲವು ವರುಷಗಳ ಹಿಂದೆ ಆತನಿಗೆ ಪತ್ನೀವಿಯೋಗ ಉಂಟಾಗಿ, ಹೋದವರುಷ ತಾನೇ ಎರಡನೇ ಮದುವೆ ಮಾಡಿಕೊಂಡಿದ್ದನು. ಇವನಿಗಿದ್ದ ಏಕಪುತ್ರನೂ ಕಳೆದ ನೋವೆಂಬರ್ ತಿಂಗಳಲ್ಲಿ ಆಕಸ್ಮಾತ್ತಾದ ಗುಂಡೇಟು ತಗುಲಿ ಸತ್ತುಹೋದನು.

ಬಾತ್ಮೀದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ನಿಗಾ ಕೊಡಲಾರೆವು. ಆದಕಾರಣ ಬಾತ್ಮೀದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು; ಇಂಥವುಗಳಿಗೆ ನಾವು ನಿಗಾ ಕೊಡಲಾರೆವು.

ಪ್ರಕಟಿಸಲಾರೆವೆಂದು ಹೇಳಿ ತಿರಸ್ಕರಿಸಿದ ಬಾತ್ಮಿಗಳನ್ನು ವಾಪಸ್ ಬಾತ್ಮೀದಾರರಿಗೆ ವಾಪಸು ಕಳುಹಿಸಲಾರೆವು.

ಬಾತ್ಮೀದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಎಡಿ.

ಕರೆಸ್‌ಪಾಂಡೆನ್ಸ್.

ಉತ್ಸವವೂ ಅನ್ನದಾನವೂ.

ಅಯ್ಯಾ,

ಘನವನ್ನು ಹೊಂದಿದ ವಿಲಾಯತಿಯ ಸಾರ್ವಭೌಮ ಯುವರಾಜರವರು ಮೈಸೂರು ದೇಶಕ್ಕೆ ದಯಮಾಡಿಸಿದುದರ ಜ್ಞಾಪಕಾರ್ಥ ಈ ದೇಶದ ಮಹನೀಯರುಗಳನೇಕರು ಅಲ್ಲಲ್ಲಿ ಧರ್ಮಕಾರ್ಯಗಳನ್ನು ನಡೆಯಿಸಿದುದು ಸರಿಯಷ್ಟೆ. ಇಂತಹವರ ಪೈಕಿ ಬೆಂಗಳೂರು ಪಟ್ಟಣದಲ್ಲಿ ಜವಳಿ ವ್ಯಾಪಾರಿಗಳಾದ ಮ॥ ಡಿ. ಆದಪ್ಪನವರು ಒಬ್ಬರು. ಇವರು ೬ ನೇ ತಾ॥ ಮಂಗಳವಾರ ದೇವಾಂಗದವರ ಸಾವಿರಾರು ಜನರಿಗೆ ತಮ್ಮ ಸ್ವಗೃಹದಲ್ಲಿ ಸಂತರ್ಪಣೆಮಾಡಿಸಿ, ತೃಪ್ತಿಪಡಿಸಿದರು. ಈ ರೀತಿ ಉದಾರಮನಸ್ಕರಾಗಿ ಇವರು ರಾಜಭಕ್ತಿ ಸೂಚಕವಾದ ಧರ್ಮಗುಣವನ್ನು ಪ್ರಕಾಶಪಡಿಸಿದುದು ಶ್ಲಾಘನೀಯವಾಗಿರುವುದು. ಇವರು ಸ್ವಾಭಾವಿಕವಾಗಿ ಉದಾರಿಗಳೂ, ಕರುಣಾಶಾಲಿಗಳೂ, ಪಾಪಭೀತರೂ, ಧರ್ಮಬುದ್ಧಿಯುಳ್ಳವರೂ ಆಗಿರುವರು. ಕಣಗಾರರುಗಳಲ್ಲಿ ಇಂತಹ ಸದ್ಗುಣಯುತರಾದ ಮಹನೀಯರುಗಳು ಅತಿ ವಿರಳ.

ಡಿ. ಸಿ. ಎಚ್.

ಕಾಣದೇ ಕಳವು.

ಅಯ್ಯಾ,

ದೊಡ್ಡಬಳ್ಳಾಪುರದ ತಾಲ್ಲೂಕು ಕೋಡಿಹಳ್ಳಿ ಗ್ರಾಮದಲ್ಲಿ ಪ್ಲೇಗ್ ಗಲಾಟೆಗೋಸ್ಕರ ಊರುಬಿಟ್ಟು ಇರುವದರಿಂದ ನನ್ನ ಹೊಲದಲ್ಲಿ ಕಣಮಾಡಿಕೊಂಡು ಕಣದ ಸಮೀಪದಲ್ಲಿಯೇ ಗುಡಿಸಲು ಹಾಕಿಕೊಂಡು ಸಂಸಾರಸಮೇತ ನನ್ನ ಬಾಬ್ತು ಜಾನುವಾರುಗಳಾದ ದನ, ಕುರಿ, ಮೇಕೆ, ಎತ್ತು, ಎಮ್ಮೆ, ಕುದುರೆ ವಗೈರೆ ಜಾನುವಾರುಗಳೊಡನೆ ವಾಸಮಾಡುತ್ತಾ ಇದ್ದೆನು. ಹೀಗಿರುವಲ್ಲಿ ಈ ತಿಂಗಳ ೨ ನೆ ತಾರೀಖಿನ ರಾತ್ರಿ ಗುಡಿಸಲು ಬಳಿ ಕಟ್ಟಹಾಕಿದ್ದ ೧೫ ರೂಪಾಯಿ ಖರೀದಿಗೆ ಬಡೆದಿದ್ದ ನನ್ನ ಬಾಬ್ತು ಹೆಣ್ಣು ಕುದುರೆ ಅಗಾಡಿ ಪಿಚಾಡಿ ಹಗ್ಗಗಳನ್ನು ಕೊಯ್ದು, ಕುದುರೆ ಮೇಲೆ ಕಟ್ಟಿದ್ದ ಜೂಲು ಸಮೇತ ಕುದುರೆಯನ್ನು ಕಳುವು ಮಾಡಿಕೊಂಡು ಹೋಗಿರುತ್ತಾರೆ. ಇದನ್ನು ಪತ್ತೆಮಾಡಿ ಕೊಡುವವರಿಗೆ ೧೫ ರೂಪಾಯಿ ಬಹುಮಾನ ಕೊಡುತ್ತೇನೆ.

ಚನ್ನವೀರೇಗೌಡ.

ಅರಸೀಕೆರೆ ತಾಲ್ಲೂಕ್ ಸಾತನಗೆರೆ.

ಅಯ್ಯಾ,

ಈ ಗ್ರಾಮಕ್ಕೆ ಎರಡು ವರುಷದ ಬಾಗಾಯ್ತು ಮಳೆ ಇಲ್ಲದೆ ಪೈರುಗಳು ಕೈಗೆ ಬರಲಿಲ್ಲ. ಹೋದ ವರುಷದಷ್ಟು ಈ ವರುಷ ಪೈರು ಆಗುತ್ತಿದ್ದರೆ ಜನಗಳಿಗೆ ಬಹಳ ಅನುಕೂಲವಿರುತ್ತಿ. ಸ್ವಲ್ಪವೂ ಬೆಳೆ ಕೈಗೆ ಬಾರದೇ ಇದ್ದದ್ದರಿಂದ ದೊಡ್ಡ ದೊಡ್ಡ ಭೂಮಿ ಉಳ್ಳವರು ಪ್ರತಿ ದಿನವೂ ಕೂಲಿಗೋಸ್ಕರ ಬೇರೆ ಹಳ್ಳಿಗಳಿಗೆ ಹೋಗುತ್ತಾರೆ. ದನಕರುಗಳು ಒಂದೂ ಬದುಕುವ ಹಾಗಿಲ್ಲ. ಅಲ್ಲದೆ ಕುಡಿಯುವುದಕ್ಕೆ ನೀರೂ ಸಹಾ ಸಿಕ್ಕುವದು ಕಷ್ಟ. ತೋಟದಲ್ಲಿರುವ ಸಿಂಗೇ ಭಾವಿ ಒಣಗಿಹೋಗಿ ಅದನ್ನು ಆಗಾಗ್ಗೆ ತೋಡುತ್ತಲೇ ಇದ್ದಾರೆ. ನೀರು ದುರ್ವಾಸನೆಯಾಗಿ ಕುಡಿದವರಿಗೆ ರೋಗ ವ್ಯಾಪಿಸಿಕೊಳ್ಳುವ ಕಾರಣವಾಗಿತ್ತು. ಅಷ್ಟರಲ್ಲೇ ಮಸ್ತಾನಸಾಹೇಬರ ಮಕ್ಕಳು ಮಹಮೂದ್ ಸಾಹೇಬರು ತಮ್ಮ ತೋಟದಲ್ಲಿ ಒಂದು ಭಾವಿ ತೆಗಿಸಿದರು. ಗ್ರಾಮಸ್ಥರೆಲ್ಲರೂ ಅಲ್ಲಿಂದಲೇ ನೀರು ತರುತ್ತಾರೆ. ಇದರ ಸ್ವಲ್ಪ ದೂರವಾದರೂ ನೀರು ಚನ್ನಾಗಿದೆ. ಕೆರೆಯಲ್ಲಿರುವ ನೀರು ಇನ್ನು ೧೦—೧೫ ದಿನಗಳ ವರಿವಿಗೆ ನಿಲ್ಲುವದು. ಆ ಮೇಲೆ ಪಶುಕರುಗಳಿಗೆ ಎಲ್ಲಿಯೂ ನೀರು ಸಿಕ್ಕುವದಿಲ್ಲ.

ಇಲ್ಲಿ ಮುಂಚೆ ಇದ್ದ ಸ್ಕೂಲ್ ಮಾಸ್ತರು ವರ್ಗವಾಗಿ ಬೇರೆ ಮಾಸ್ತರು ಬಂದಿರುತ್ತಾರೆ. ಇವರು ಮೆತ್ತಗೆ ಸಾತನಹಳ್ಳಿಯ ಮೆಂಬರುಗಳಲ್ಲಿ ಕೆಲವರು ಒಂದಾಗಿ ಮಾಸ್ತರನ್ನು ತಮ್ಮ ಚೇಳೆ ಪ್ರಕಾರ ಕೇಳುವಂತೆ ಮಾಡಿಕೊಳ್ಳಬೇಕೆಂದು ಆಗಾಗ ಸ್ಕೂಲಿಗೆ ಬಂದು, ತಮಗೆ ಮೆಂಬರತನವು ದೊರಕಿದ ಲಾಗಾಯ್ತು ಮುಂಚೆ ಇದ್ದ ಮಾಸ್ತರುಗಳ ಮೇಲೆ ಬರೆದ ಅರ್ಜಿಗಳು ಮತ್ತು ಅವರ ಮೇಲೆ ನಡಿಸಿದ ಅಧಿಕಾರಗಳೆಲ್ಲಾ (ಮಾಸ್ತರಿಗೆ ಪರಿಚಯವಾಗುವಂತೆ) ಹೇಳುವರು. ಹೀಗೆ ಇರುವಲ್ಲಿ ಗ್ರಾಮದಲ್ಲಿ ಒಬ್ಬನ ಸಂಗಡ ಜಗಳ ಮಾಡಿ ಆತನ ಮಕ್ಕಳನ್ನು ಸ್ಕೂಲಿನಿಂದ ಹಿಂದಕ್ಕೆ ಕಳುಹಿಸಬೇಕೆಂದು ಮಾಸ್ತರ ಬಳಿಗೆ ಬಂದು ಮೇಷ್ಟರೇ, (ಹೆಸರು ಹೇಳಿ) ಆತನ ಮಕ್ಕಳನ್ನು ವಜಾ ಮಾಡಿಬಿಡಿ ಎಂದು ಹೇಳಿದರು. ಮಾಸ್ತರು ಕಾರಣ ಕೇಳಿದ್ದಕ್ಕೆ, ಓಹೋ! ನೀವು ನಮ್ಮನ್ನು ಕಾರಣ ಕೇಳುತ್ತೀರೋ? ಕೇಳತಕ್ಕದ್ದೇನಿಲ್ಲ. ಸುಮ್ಮನೆ ವಜಾ ಮಾಡಿಬಿಡಿ ಎಂದು ಸ್ವಲ್ಪ ಘಟ್ಟಿಯಾಗಿ ಹೇಳಿದರು. ರೂಲ್ಸಿಗೆ ವಿರೋಧ, ಮಾಡಲಾರೆನೆಂದು ಮಾಸ್ತರು ಹೇಳಿದ್ದಕ್ಕೆ ಅವರಲ್ಲಿ ಸ್ವಲ್ಪ ಒದುಬಿದ್ದವರೊಬ್ಬರು ಬಹಳ ಸಿಟ್ಟಿನಿಂದ ಮಾಸ್ತರನ್ನು ನೋಡಿ, ನೀನು ಯಾಕೆಯ್ಯಾ ಇಷ್ಟು ಮಾತಾಡುತ್ತೀಯಾ! ಅದೆಷ್ಟು ನಮ್ಮ ಪಾಠಶಾಲೆ ಕಿತ್ತು ಹಿಡಿಯಲ್ಲೋ! ಈಗ ಒಂದು ವಾರದಲ್ಲಿ ನಾನು ನಿನ್ನ ಚಾಕರಿ ತೆಗೆಸ್ತೇನಿ ನೋಡು, ನಮ್ಮ ಪಟ್ಟು ಎಂದು ಹೇಳಿ ಹೋಗಿ ಎಲ್ಲರೂ ಮಾಸಲತ್ತು ಮಾಡಿ ಮಾಸ್ತರ ಮೇಲೆ ಅರ್ಜಿ ಬರೆದು ಟಪಾಲಿಗೆ ಹಾಕಿದರು. ಅಷ್ಟರಲ್ಲೇ ಇನ್‌ಸ್ಪೆಕ್ಟರ್ ಸಾಹೇಬರು ಬಂದದ್ದರಿಂದ ಈ ಮೆಂಬರುಗಳು ಎಲ್ಲಿಯೋ ಹೋಗಿಬಿಟ್ಟರು. ಇನ್‌ಸ್ಪೆಕ್ಟರು ಅರ್ಜಿ ಬರೆದ ಜನರನ್ನು ಕರೆಸಿದಾಗ ಅವರು ಬಾರದೇ ಹೋದ್ದರಿಂದ ಮಾಸ್ತರ ಸ್ಟೇಟ್‌ಮೆಂಟು ತೆಗೆದುಕೊಂಡು, ಇಲ್ಲಿಂದ ಸ್ಕೂಲ್ ವಜಾ ಮಾಡುತ್ತೇನೆಂದು ಹೇಳಿ ಹೋಗುತ್ತಿರುವಾಗ ಗ್ರಾಮಸ್ಥರೆಲ್ಲರೂ ಒಂದಾಗಿ ಸ್ಕೂಲ್ ಖಾಯಂ ಮಾಡಬೇಕೆಂದು ಬಹಳವಾಗಿ ಕೇಳಿಕೊಂಡಿದ್ದರಿಂದ ಇವರ ನಿಗೆ ಸ್ಕೂಲು ನಿಂತಿರುತ್ತೆ. ಮೆಂಬರುಗಳ ಅಧಿಕಾರ ನೋಡಿದಿರಾ!

ಸ್ಕೂಲಿನ ಅಭಿಮಾನಿ

ರೈಲ್ವೆ ಪ್ಯಾಸೆಂಜರುಗಳ ಪಾಡು.

ಅಯ್ಯಾ,

ಪ್ರಿನ್ಸ್ ಆಫ್ ವೇಲ್ಸ್‌ರವರ ಆಗಮನವನ್ನು ಅನೇಕ ಜನರಲ್ಲಿ ಮೈಸೂರಿನಲ್ಲಿ ನೋಡಬೇಕೆಂಬ ಕಾಂಕ್ಷೆಯನ್ನುಂಟುಮಾಡಿದ್ದರಿಂದ ರೈಲ್ವೆ ಕಂಪೆನಿಯವರು ಈ ವಿಷಯವನ್ನು ಪ್ರಥಮದಲ್ಲಿಯೇ ನಿರೀಕ್ಷಿಸದ್ದರಿಂದ ಕೇವಲ ಗಲಭೆಗೂ ಅನೇಕ ಕಷ್ಟಗಳಿಗೂ ಪ್ಯಾಸೆಂಜರನ್ನು ಗುರಿಮಾಡಿದ್ದು ಬಹು ವಿಷಾದಕರವಾಗಿದೆ.

ದುಷ್ಟಿನ ಆಕೆಯಿಂದ ಹೆಸರು ಮಾತ್ರಕ್ಕೆ ಸ್ಪೆಷಲ್ ರೈಲುಗಳೆಂದು ತಿಳಿಸಿ, ಗೂಡ್ಸ್ (ಸಾಮಾನು) ಗಾಡಿಗಳೇ ಸೇರಿಸಿದರು. ಒಂದೊಂದು ಗಾಡಿಯಲ್ಲಿ ಸುಮಾರು ೩೦ ಜನರಂತೆ ಒಬ್ಬರ ಮೇಲೊಬ್ಬರು ಏರಿಕೊಳ್ಳುವಂತಾಯ್ತು. ಹೆಂಗಸರ ಗಾತಿ ಏನು ವರ್ಣಿಸಲಾಯ್ತು. ಹೋಗಲಿ ಹೆಂಗಸರಿಗೆ ಪ್ರತ್ಯೇಕವಾದ ಗಾಡಿಯು ಹೇಗೆ ತಾನೇ ದೊರಕೀತು? ಗಲಾಟೆ ಕಾಲವೆನ್ನಬಹುದು ಹೌದು, ಗಲಾಟೆಯೇ ಸರಿ ಗಲಾಟೆ ಇದ್ದದ್ದರಿಂದಲೇ ರೈಲ್ವೆಯವರು ಹೆಚ್ಚು ಅದಕ್ಕೆ ಸರಿಯಾಗಿ ಗಾಡಿಯಾಗಗಳನ್ನು ಏರ್ಪಡಿಸಿಕೊಡಲಿಲ್ಲ? ಇದಂತಿರಲಿ. ಪೊಲೀಸಿನವರಾದರೋ ಅಂದಿನಿಂದ ಅವರ ತಿಂಗಳುಗಟ್ಟಲೆ ಸಂಬಳವನ್ನು ನಿರಾಯಾಸವಾಗಿ ಸಂಪಾದಿಸಿಕೊಂಡರು. ಕಂಟೋನ್ಮೆಂಟ್ ಸ್ಟೇಷನ್ ಪೊಲೀಸಿನವರೇ ಇವರಲ್ಲಿ ಅಗ್ರಗಣ್ಯರೆಂದು ಹೇಳಬಹುದು.

ಹೆಂಗಸರು ಮಕ್ಕಳ ಪಾಡು ಹೇಳಲಸದಳವು. ಬೆಂಗಳೂರಿಂದ ಪ್ರಯಾಣಿಕರು ಯಾವತ್ ಕಷ್ಟಗಳನ್ನನುಭವಿಸಿ ಮೈಸೂರಿಗೆ ಬರಲು ಅಲ್ಲಿಯೂ ಗ್ರಹಚಾರವು ಮಾತ್ರ ಭವಿಸಿದಂತೆ ನೂತನನೂತನವಾದ ಭಯಂಗಳುತ್ಪನ್ನವಾದವು. ಪ್ಯಾಸ್ ಪೋರ್ಟುಗಳನ್ನು ತೆಗೆದುಕೊಳ್ಳಬೇಕೆಂತಲೂ, ಕೈಯನ್ನು ಹಿಡಿದು ಪರೀಕ್ಷಿಸುವರೆಂತಲೂ ಕೇಳಿ...

ಕೊನೆಗೆ ಮೈಸೂರನ್ನು ಮುಟ್ಟಿದೆವು. ಯಮಭಟರಂತಿರುವ ಪೋಲೀಸಿನವರನ್ನು ನೋಡಿದೆವು ಪ್ರತಿಯೊಂದು ಗೇಟೂ ತಕ್ಷಣದಲ್ಲಿಯೇ ಮುಚ್ಚಲ್ಪಟ್ಟಿತು ಕಾಯ್ಯೋ ಪಾರ್ರ್ಯೋ ಎಂಬ ಧ್ವನಿಯು ಸ್ಟೇಷನಿನಲ್ಲಿ ಪ್ರತಿಧ್ವನಿಯುವಿಸಿತು. ಬೆಂಗಳೂರಿಗಿಂತಲೂ ಇಲ್ಲಿನ ಸಂಕಟವು ಮಿತಿಮೀರಿತ್ತು. ಪೋಲೀಸಿನವರ ಕಾಟವೇ ಕಾಟ ಅವರು ಸೂಚಿಸಿರುವ ಜನರಿಂದ ಪ್ರಯೋಜನ ಹೊಂದದೆ ಗೇಟ್ ದ್ವಾರಾ ಬಿಡಲಿಲ್ಲ. ಇತರರು ದಿಕ್ಕಿಲ್ಲದೆ ತಟಸ್ಥರಾಗಿ ನಿಂತರು ಕೆಲವರು ಪ್ಯಾಸುಗಳನ್ನು ತೋರಿಸಿದಾಗ್ಯೂ ಅವರಿಗೆ ಅರ್ಧಚಂದ್ರಪ್ರಯೋಗವಾಯಿತು. ಯಾವ ಕಡೆ ನೋಡಿದಾಗ್ಯೂ ಅನಾಯಕತ್ವವು ಸೂಚಿಸುತ್ತಿತ್ತು. ನಾನಾದರೋ ದಿವಿ ೯ ಗಂಟೆಯ ವರಿವಿಗೂ ಅಲ್ಲಿಂದಿಲ್ಲಿಗೆ ದೊಬ್ಬಲ್ಪಟ್ಟು, ಅಲ್ಲಿಂದಿಲ್ಲಿಗೆ ಓಡಿಸಲ್ಪಟ್ಟು ಭಗವಂತನೇ ಎಂದು ನಿಟ್ಟುಸಿರು ಬಿಟ್ಟೆನು ನನ್ನ ವಿಧಿಯು ಅರೇಬಿಯನ್ ನೈಟ್ಸ್‌ನಲ್ಲಿ ಹೇಳಿದಂತೆ ಅಲಿಬಾಬಾ ಕಥೆಯಂತಾಯಿತು. ಇಂದಿಗೆ ರೈಲಿನ ಸುಖ ಸಾಕು.

... ಇಲ್ಲಿ ಬಹು ಕಾಲದಿಂದಲೂ ... ನಡೆಸುವ ... ಕಾರ್ಖಾನೆಯವರು ಅಲ್ಲಿ ... ಬೆಂಚು, ... ಮೇಜು ... ಸಾಮಾನುಗಳನ್ನು ... ಮೊದಲಾದ ಮರದ ಸಾಮಾನುಗಳನ್ನೂ ... ಕಾಫಿ ಪುಡಿಗಳನ್ನೂ, ... ಇತ್ಯಾದಿಗಳ ... ಪ್ರದರ್ಶನ ... ಇದಲ್ಲದೆ ಅವರು ಯಂತ್ರದ ಬೆಲೆಯನ್ನಿಟ್ಟು ... ಕಾಫಿ ... ತಯಾರು ... ಕಾಫಿ ಪುಡಿಯ ... ಉತ್ಪತ್ತಿಯನ್ನು ... ಈ ಕಂಪನಿಯ ಪ್ರದರ್ಶನ ಪದಾರ್ಥಗಳ ಪೈಕಿ ... ಪರೀಕ್ಷಕರು ಕಂಚಿನ ಮೆಡಲುಗಳನ್ನು ಕೊಟ್ಟಿರುವರು.

ಧಾನ್ಯಗಳ ಪ್ರದರ್ಶನ

ಒಂದು ಕೋಣೆಯಲ್ಲಿ ಪ್ರತಿ ಒಂದು ಧಾನ್ಯದಲ್ಲೂ ... ಜಾತಿಯ ಕಾಳುಗಳನ್ನು ಗೊಸಗೆಗಳಲ್ಲಿ ಹಾಕಿ ಸಾಲು ಸಾಲಾಗಿ ಜೋಡಿಸಿಟ್ಟು ಪ್ರದರ್ಶನ ಮಾಡಿರುವರು. ಭೂಸಾಗುವಳಿಯಲ್ಲಿ ಆಸಕ್ತರಾಗಿರುವ ಜನಸ್ತು ರೈತರಿಗೂ ಇದನ್ನು ಚೆನ್ನಾಗಿ ನೋಡಿ ಪರೀಕ್ಷಿಸಿ ... ತಿಳಿದುಕೊಳ್ಳುವುದರಿಂದ ... ಪ್ರಯೋಜನವಾಗುವುದರಲ್ಲಿ ಸಂದೇಹವಿಲ್ಲ. ಯಾವ ಯಾವ ಧಾನ್ಯದಲ್ಲಿ ಯಾವ ಯಾವ ಜಾತಿಯದು ಎಲ್ಲೆಲ್ಲಿ ಬೆಳೆಯುತ್ತದೆ ... ಗೊತ್ತಾಗುವುದು. ಪರೀಕ್ಷಕರು ಈ ಧಾನ್ಯಜಾತಿಗಳನ್ನೆಲ್ಲಾ ಸೂಕ್ಷ್ಮವಾಗಿ ಪರಿಶೋಧನೆ ಮಾಡಿ ... ವಿಶೇಷಗಳ ... ಬಹುಮಾನಗಳನ್ನು ಕೊಟ್ಟು ... ಈ ಪ್ರದರ್ಶನದ ಇನ್ನೊಂದು ಭಾಗದ ವಸ್ತುಗಳಿಗೂ ಇನ್ನೊಂದು ಬಹುಮಾನಗಳನ್ನು ಕೊಟ್ಟಂತೆ ಇಲ್ಲ. ಪರೀಕ್ಷಕರು ಹೀಗೆ ವಿಶೇಷವಾದ ಬಹುಮಾನಗಳನ್ನು ಕೊಟ್ಟಿರುವುದು ರೈತ ಪ್ರಜೆಗಳಿಗೆ ತುಂಬಾ ಪ್ರೋತ್ಸಾಹಕರವಾಯಿತೆಂದು ಸಂತೋಷಪಡುತ್ತೇನೆ.

ಚಕ್ಕಳ, ಕಾಗದ ಮುಂತಾದ ಪ್ರದರ್ಶನ.

ಇನ್ನೊಂದು ಕೋಣೆಯಲ್ಲಿ ಬೇರೆ ಬೇರೆ ಊರುಗಳಲ್ಲಿ ಬೂಟುಗಳು ಮತ್ತು ಚಾವುಗಳನ್ನು ತಯಾರುಮಾಡುವ ಜೋಡು, ಚಕ್ಕಳ, ವಿನಿಸಾದ ಬೂಟ್ಸ್, ಜೀನು, ಲಗಾಮು, ಮುಂತಾದ ಕುದುರೆಯ ಮತ್ತು ಗಾಡಿಯ ಸಾಮಾನುಗಳನ್ನು ತಂದಿಟ್ಟು ಪ್ರದರ್ಶನ ಮಾಡಿದ್ದಾರೆ. ಈ ಪೈಕಿ ಬೆಂಗಳೂರು ಬಟ್ಲರ್ ಕಂಪೆನಿಯವರು ತಯಾರುಮಾಡಿರುವ ಚಕ್ಕಳದ ಗಾಡಿ ಸಾಮಾನಿಗೆ ಬೆಳ್ಳಿಯ ಮೆಡಲು, ಅನೇಕ ಕಂಪೆನಿಯಲ್ಲಿ ತಯಾರಾದ ಜೀನು ಲಗಾಮುಗಳಿಗೆ ಕಂಚಿನ ಬಿಲ್ಲೆಯೂ ಕೊಡಲಾಗಿವೆ. ಮೈಸೂರು ವಿರ್ಷ ಪ್ರೆಸ್ಸಿನಲ್ಲಿ ತಯಾರಾದ ಫ್ರೋಟೋ ಆಲ್ಬಂ ಎಂಬ ಚಿತ್ರಗಳನ್ನು ಹೂಡುವ ಪುಸ್ತಕಗಳಿಗೆ ಕಂಚಿನ ಮೆಡಲನ್ನೂ ಅದೇ ಪ್ರೆಸ್ಸಿನವರು ಮಾಡಿ ಕಳುಹಿಸಿರುವ ಲೆಕ್ಕದ ಪುಸ್ತಕ ಮುಂತಾದವುಗಳಿಗೆ ಬೇರೆ ಬಹುಮಾನಗಳನ್ನೂ ಕೊಟ್ಟಿರುತ್ತಾರೆ.

ಯಂತ್ರ, ಬೈಸಿಕಲ್ ಮುಂತಾದವುಗಳ ಪ್ರದರ್ಶನ

ಮತ್ತೊಂದು ಕೋಣೆಯಲ್ಲಿ ಬೇರೆ ಬೇರೆ ಜಾತಿಯ ಬೈಸಿಕಲ್ ಗಾಡಿಗಳು, ಯಂತ್ರಗಳು, ಹೊಲಿಯುವಂತೆ ತಂದಿಟ್ಟು ಪ್ರದರ್ಶನ ಮಾಡಿದ್ದಾರೆ. ಬೆಂಗಳೂರಿನಲ್ಲಿರುವ ಇಂಪೀರಿಯಲ್ ಸೈಕಲ್ ಕಂಪೆನಿಯವರ ಬೈಸಿಕಲ್ ಗಾಡಿಗಳಿಗೆ ಬೆಳ್ಳಿಯ ಮೆಡಲನ್ನೂ, ಅದೇ ಕಂಪೆನಿಯಲ್ಲಿ ತಯಾರಾದ ಮೋಟಾರ್ ಕಾರ್ ಗಾಡಿಗೆ ಬೆಂಗಳೂರಿನ ಮೆಡಲನ್ನೂ, ಚಾಮರಾಜನಗರದ ಮಿ॥ ಕೃಷ್ಣಯ್ಯಂಗಾರು ತಯಾರುಮಾಡಿರುವ ಪುಸ್ತಕದ ಬೆಲೆಯ ಸೀಲ ಅಚ್ಚು ಮುದ್ರೆ ಮೊದಲಾದ ಬೇಲಿಗಳನ್ನು ಬಿಡಿಸುವ ಯಂತ್ರಕ್ಕೆ ಬೆಳ್ಳಿಯ ಮೆಡಲನ್ನೂ, ಇನ್ನೇ ತಯಾರುಮಾಡಿರುವ ಕಬ್ಬಿಣ ಬಾಕ್ಸುಗಳನ್ನು ಕತ್ತರಿಸಿ ಹೊಲಿಸುವ ಹೊಡಿನ ಲಕ್ಷಿಯ ಯಂತ್ರಕ್ಕೆ ಕಂಚಿನ ಮೆಡಲನ್ನೂ ಕೊಟ್ಟಿರುವರು. ಇದಲ್ಲದೆ ಶ್ರೀಮತ್ ಮಹಾರಾಜರವರು ಬೈಸಿಕಲ್ ಗಾಡಿಗಳನ್ನು ಪರಾಂಬರಿಸಿ, ಮಣ್ಣಿನ ಪಿರುಗುವಂಥಾ ಎರಡು ಸಣ್ಣ ಮತ್ತು ಸುಂದರವಾದ ಬೈಸಿಕಲ್ ಗಾಡಿಗಳನ್ನು ಕೊಂಡುಕೊಂಡಿರುತ್ತಾರೆ.

[illegible]

[illegible]

[illegible]

[illegible]

[illegible]

[illegible]

ವತ್ತೆ ಜಗತ್ತಿಗೆ ವಿಪತ್ತಾಗಿ ಈ ಹಿಂಸೆಕರವಾದ ಕೆಲಸ ನಡೆಸುವವರು ನೇರ ಸಾಹಸ್ತ್ರ ಮನರು. ಕೆಲವು ಕೇಳಿ ಕೋಳಿ ಹಿಂದಿನ ಮನುಷ್ಯರ ಮೇಲೆ ಸಾರಿ ಮಾಡುವುದರಿನ್ನು ಹಿಂ ... ಕೊಲ್ಲುವದೂ ಉಂಟು. ಇಂಥ ಹಿಂಸೆಕರವಾದ ... ಕೆಲಸಗಳನ್ನು ಸ್ವಾಧೀನಕರವೇ ಸಾರಿ ನಡೆ ... ಯಾರಿಗೆ ತಾನೇ ಸಿಟ್ಟು ಉಂಟಾಗಲಾರದು?

... ಪೈಠರು ಪ್ರದರ್ಶನ ... ನಾಟಿ. ಇಲ್ಲಿ ... ಬಿಡದು ತಮ್ಮ ಸ್ವಾಧೀನ ಹೊಂದುವಂತೆ ... ಮಾಡಿದರು. ... ಇದರಲ್ಲಿ ಕಳೆದುದಲ್ಲಿ ಕಳವು ... ಯುನ್ಯೆಟೆಡ್ ಆರ್ಟಿಸನಲ್ಲಿ ಕಳು ... ಮತ್ತು ಪೇಲಿನ ಒಳಿಯಲ್ಲಿ ಒಂದು ಮನೆಯು ಹಂತ ... ಬಾಗಿಲು ಒಡೆದು ಹಾಕಿದ್ದರು. ಆದರೆ ಸಿಸ ... ಕೊಂಡು ಹೋದರೋ ಚಿಲ್ಲರೆ ಅಂಗಡಿಯಾಗ್ಯ ... ಕನ್ನವಾಯಿತು ... ಕಳ್ಳರು ಹೋಗಿಲ್ಲ. ವಿಷಯ ... ಪೋಲೀಸಿನವರು ... ಕಾಣಲಾ ... ಈ ವಿಷಯದಲ್ಲಿ ನಮ್ಮ ಅನುಭವ ... ರಾಗಿ ... ಮಾಡಬೇಕೆಂದು ನಾವು ಕೋರುತ್ತೇನೆ.

... ಗವರ್ನಮೆಂಟ್ ಎ ವಿ ಸ್ಕೂಲಿನಲ್ಲಿ ಕಳೆದ ಎಲ್ ... ವಿದ್ಯಾರ್ಥಿಗಳು ಕಟ್ಟಿದ್ದರು. ಇವರಲ್ಲಿ ಇಂಗ್ಲೀ ... ಸ್ಕೂಲಿನಲ್ಲಿ ... ಇವರು ... ವಿದ್ಯಾರ್ಥಿಗಳು ... ಇದರಿಂದ ಉಪಾಧ್ಯಾ ... ಅದರಲ್ಲಿ ... ವಿದ್ಯಾರ್ಥಿಗಳ ... ಇಲ್ಲಿಯ ಎ ವಿ ಸ್ಕೂಲ ... ಸ್ಥಿತಿಯನ್ನು ಹೊಂದಬೇಕು ಬಯಸುವ ...

ಪ್ರಾ ... ಮತ್ತು ... ಯವರಿ ...

ಕೃಷಿಗಾರಿಕೆ ಮತ್ತು ವ್ಯವಸಾಯೋಪಯೋಗಿಕರಣ ವಸ್ತು ಪ್ರದರ್ಶನಶಾಲೆಯು.

—————

... ರಾಜಧಾನಿಯು ... ನಡೆದ ... ಪ್ರದರ್ಶನದ ... ಈ ... ವಿಷಯದಲ್ಲಿ ... ಈ ಬಾರಿ ಇನ್ನು ಕೆಲವು ಬಗ್ಗೆ ... ಸುವೆವು.

... ಬೇಗನೆ ... ಪರದರ್ಶನ ... ಸರಿ ... ಆಗದವ ಪ್ರದರ್ಶನ ... ನಡೆಸಿದ್ದರು ...

... ಒಂದಕ್ಕೆ ಒಂದು ... ಪರದರ್ಶನ ... ಅವರ ... ಬಂದಿದ್ದ ... ಪ್ರದರ್ಶನ ...

ಬಿಕ್ಕಾಗಾರರ ಪ್ರದರ್ಶನ

... ಮಾಡಿದ್ದರು. ಈ ... ರಂಗಸ್ವಾಮಿ ... ಬೆಳ್ಳಿ ಮೆಡಲ ... ಆರಸಿನವರಿಗೆ ಕಂಚಿನ ... ಕೊಟ್ಟಿರುತ್ತಾರೆ. ಈ ಬಿಕ್ಕಾಗಾರರು ಬಹು ಸುಂದರ ... ಪದಾರ್ಥಗಳನ್ನು ... ತರವಾಗಿಯೂ ಇದ್ದವು.

ಆಭರಣಗಳ ಪ್ರದರ್ಶನ

... ಒಂದು ಕೋಣೆಗಳಲ್ಲಿ ಇಟ್ಟು ಪ್ರದರ್ಶನ ... ಕೋಣೆಯಲ್ಲಿ ಆರಮನೆಯೊ ವರದ ... ದೊಡ್ಡಮನುಷ್ಯರ ಮನೆಗಳಿಂದಲೂ ... ಬೆಳ್ಳಿ ಬಂಗಾರದ ಕೆತ್ತನೆ ಚಿತ್ರವಸ್ತುಗಳನ್ನು ... ರಮನೆಯು ಬಾಗಿಲು ... ಗಂಧದ ಮರ, ಇತ್ತಗಳಲ್ಲಿ ... ಚಿತ್ರವಿಚಿತ್ರವಾಗಿ ತಯಾರಾಗಿರುವ ಪದಾರ್ಥಗಳು ... ನಾನಾ ವಿಧಗಳು, ಗಂಧ ... ಗಳು, ... ವಿಧಿಗಳೂ ... ಬೇರೆ ಬೇರೆ ... ಚಿತ್ರ ... ಗಳು, ಬಹು ಸೂಕ್ಷ್ಮವಾಗಿ ... ಅಂಗಾಂಗಗಳನ್ನೂ ... ಮನೋಹರವಾಗಿಯೂ ಬಹು ತಯಾರಾದರು ... ಗಳು, ಬೆಳ್ಳಿಗಂಬದಲ್ಲಿ ... ವಿಗ್ರಹಗಳಿಂದಲೂ ... ಚಿಂತಗಳು, ಮೂರ್ತಿಗಳನ್ನು ... ಅಂಬಾರಿಯನ್ನು ... ಆನೆಗಳು, ಸಿಂಹ ... ಬೆಳ್ಳಿಯಲ್ಲಿ ಬಿಡಿ ... ಸರ್ಪವನ್ನು ... ಚಿತ್ರಗಳನ್ನು, ... ಚಿತ್ರಕೆಲಸ ಮಾಡಿದ ದಂತದ ... ಪಕ್ಷಿಗಳು, ಸಣ್ಣ ಸಣ್ಣ ವಿಮಾನಗಳು, ... ರಾಜಿಗಳು, ದಿವ್ಯವಾದ ಆಟದ ಸಾಮಾನುಗಳು, ... ಅಮಿಲ್ದಾರರು ... ಗಂಧದ ವಿಗ್ರಹಗಳು, ... ಗಳು, ಕಿಟ್ಟಿಗೆಗಳು, ... ಮೊದಲಾದ ಚಿತ್ರದ ವಸ್ತುಗಳನ್ನು ... ಅಲಂಕಾರವಾಗಿ ಇಡಿಸಿರುತ್ತಾರೆ. ಈ ಕೋಣೆಯಲ್ಲಿಟ್ಟಿರತಕ್ಕ ವಸ್ತುಗಳನ್ನು ಎಷ್ಟು ವರ್ಣಿಸಿದರೂ ಮನಸ್ಸು ತೃಪ್ತಿ ಹೊಂದುವದಾಗಿಲ್ಲ.

ಇನ್ನೊಂದು ಕೋಣೆಯಲ್ಲಿ ಬಹುಮಾನಗಳನ್ನು ಪಡೆಯಬೇಕೆಂಬ ಇರಾದೆಯಿಂದ, ಬೆಳ್ಳಿ ಬಂಗಾರದ ಚಿತ್ರಕೆಲಸಗಳನ್ನು ಮಾಡುವುದರಲ್ಲಿ ಹೆಸರು ಪಡೆದಿರುವಂಥ ನಾನಾ ಕಂಸಾಗಾರರು ಕಣ್ಣು ಕೋರೈಸುವ ಅಂಥಾ ಚಿತ್ರವಸ್ತುಗಳನ್ನೂ ಆಭರಣಗಳನ್ನೂ ಮಾಡಿ ತಂದಿಟ್ಟಿದ್ದಾರೆ. ಈ ಆಭರಣಗಳನ್ನೂ ಇತರ ಚಿತ್ರವಿಚಿತ್ರವಾದ ವಸ್ತುಗಳನ್ನೂ ವಿವರಿಸುವುದು ಶಕ್ಯವಲ್ಲ. ಈ ಪೈಕಿ ಬಹುಮಾನಗಳನ್ನು ಪಡೆದಿರುವ ಒಡವೆಗಳನ್ನು ಗ್ರಾಹ್ಯಮಾಡಿದರೆ—

ಬೆಂಗಳೂರು ಮೆ॥ ಸಿ ಕೃಷ್ಣಯ್ಯಶೆಟ್ಟರು ತಂದಿಟ್ಟಿದ್ದ ಸೊಗಸಾದ ಕೆತ್ತನೆ ಕೆಲಸದ ಚಿನ್ನ ಬೆಳ್ಳಿ ಪದಾರ್ಥಗಳಿಗೆ ಚಿನ್ನದ ಮೆಡಲು ದೊರಕಿರುತ್ತದೆ. ಬೆಂಗಳೂರು ಯುನೈಟೆಡ್ ಸರ್ವಿಸ್ ಸ್ಟೋರಿನಿಂದ ಮೆ॥ ವರ್ಕ್ ಯವರು ಕಳುಹಿಸಿರುವ ಬೆಳ್ಳಿಯ ನಾನಾ ಪದಾರ್ಥಗಳಿಗೂ ಆಭರಣಗಳಿಗೂ ಚಿನ್ನದ ಮೆಡಲನ್ನು ಕೊಟ್ಟಿರುವುದೇನು ಹೆಚ್ಚಲ್ಲ. ಬೆಂಗಳೂರಿನ ... ಕಂಪನಿಯವರ ಬೆಳ್ಳಿಯ ... ಗೆಗಳೂ ಚಿಟ್ಟುಗಳೂ ಬಹಳ ಸುಂದರವಾಗಿವೆ. ಇವಕ್ಕೆಲ್ಲಾ ಬೆಳ್ಳಿಯ ಮೆಡಲು ದೊರಕಿತು. ಬೆಂಗಳೂರಿನ ಮೆ॥ ಪಿ. ಶಂಕರಯ್ಯಶೆಟ್ಟರ ... ಬೆಳ್ಳಿಯ ಪಾತ್ರೆ ಪದಾರ್ಥಗಳೂ ಒಡವೆ ವಸ್ತುಗಳೂ ಬಹು ನೇತ್ರಾನಂದಕರವಾಗಿರುತ್ತವೆ. ಇವಕ್ಕೂ ಪರೀಕ್ಷಕರು ಬಹಳ ಸಂತೋಷಪಟ್ಟು ಬೆಳ್ಳಿಯ ಮೆಡಲನ್ನು ಕೊಡಿಸಿದಾರೆ. ಬೆಂಗಳೂರು ಕರ್ನಾಟಿಕ್ ಪೇಪರ್ ಹೌಸ್ ಮಾಲಿಕ ಮೆ॥ ಬಿ. ವೆಂಕಟನಾರಾಯಣಯವರು ... ಕೆಲಸವು ಚಿತ್ರಗಳ ... ಇಂಥಾ ಅಪೂರ್ವ ವಸ್ತುಗಳಿಗೆ ... ಕೊಟ್ಟಿರುವುದಕ್ಕಾಗಿ ... ಸಂತೋಷಪಡುವರು ... ಮೆ॥ ವೆಂಕಟಪ್ಪನವರು ... ಮೊದಲಾದ ಪದಾರ್ಥಗಳಿಗೆ ಪರೀಕ್ಷಕರು ಒಂದು ... ಕೊಡಬೇಕೆಂದು ಶಿಫಾರಸು ಮಾಡಿರುವುದು ತೃಪ್ತಿಕರ ... ಮೆ॥ ... ರಂಗಾಚಾರ್ಯ ... ಗಳಲ್ಲಿ ... ಕೆತ್ತಿರುವುದು ... ಗಮನಾರ್ಹ ... ಚಿನ್ನದಲ್ಲಿ ... ಬೆಳ್ಳಿಯ ... ಪಟ್ಟಿಗಳನ್ನು ಇಟ್ಟು ಕೊಡುವ ಕೆಲಸ ... ವುದಕ್ಕೆ ಬಹಳ ... ಈ ... ಕಂಚಿನ ... ರೂಪಾಯಿ ಬಹುಮಾನ ಕೊಡಲ್ಪಟ್ಟಿದೆ.

ಬಟ್ಟೆಯ ಉತ್ಪನ್ನಗಳ ಪ್ರದರ್ಶನ.

ಮೈಸೂರು ಸಂಸ್ಥಾನದ ನಾನಾ ಕಡೆಗಳಲ್ಲಿ ಉತ್ಪತ್ತಿಯಾಗುವ ನಾನಾ ಜಾತಿಯ ಬಟ್ಟೆಗಳನ್ನು ಒಂದು ಕೋಣೆಯಲ್ಲಿ ತಂದಿಟ್ಟು ವಾರ್ಷಿಕ ... ಪ್ರದರ್ಶನ ಮಾಡಿರುತ್ತಾರೆ. ಅವುಗಳ ಪೈಕಿ ಬಹುಮಾನಗಳನ್ನು ಪಡೆದ ಪದಾರ್ಥಗಳ್ಯಾವುವೆಂದರೆ— ... ಕಂಚಿನ ... ಪುರಾತನ ಗಂಧದ ... ಬೆಳ್ಳಿ ಮೆಡಲು ಕೊಡಲಾಯಿತು. ನಾನಾ ತರದ ... ಮಾಡುವ ... ಮುಂತಾದ್ದನ್ನು ಮಾಡಿ ... ಬಹಳ ... ಒಂದೊಂದು ... ಪ್ರದರ್ಶನ ಮಾಡಿದಾರೆ. ಇವುಗಳಿಗೆ ... ಮೆಡಲು ದೊರಕಿರುವುದು. ಬೇರೆ ಬೇರೆ ತರದ ... ಪರೀಕ್ಷಕರು ... ಅವುಗಳಿಗೆ ಬೆಳ್ಳಿಯ ಮೆಡಲ್ ಕೊಟ್ಟರು. ... ಶಾಲು, ವಸ್ತ್ರ, ಚಿರತೆ ಮೊದಲಾದ ... ಗಳ ಚಿಕ್ಕ ... ಪ್ರದರ್ಶನ ಮಾಡಿರುವರು. ಅದಕ್ಕೆ ಕಂಚಿನ ಮೆಡಲ್ ಕೊಟ್ಟಿರುತ್ತಾರೆ. ನಾಲ್ಕಾರು ತಂದ ಜೇನುತುಪ್ಪಗಳು, ಜೇನುಮೇಣಗಳು, ಅನೇಕ ಜಾತಿಯ ನಾರುಗಳು, ಚಕ್ಕೆಗಳು, ... ಶೆಲವಟ್ಟಗಳು ... ಜಾತಿಯ ತೊಗಟೆಗಳು, ... ಮೊದಲಾದ ಪದಾರ್ಥಗಳನ್ನೂ ನೋಡಲು ... ಕೊಟ್ಟಿರುವರು. ಇದಲ್ಲದೆ ಆರು ಅಡಿ ಅಗಲವಿರುವಂಥಾ ಬಹು ಅಪೂರ್ವವಾದ ಶ್ರ್ಯಾಗ ಭಾರಿ ... ಈ ಕೋಣೆಯ ಪೂರ್ವಭಾಗದಲ್ಲಿ ಇಟ್ಟಿದ್ದಾರೆ. ಇದನ್ನು ನೋಡಿದವರೆಲ್ಲರೂ ತುಂಬಾ ಆಶ್ಚರ್ಯಪಡುವರು.

ಚಿತ್ರಪಟಗಳ ಪ್ರದರ್ಶನ

ಈ ಕೋಣೆಯಲ್ಲಿ ಪ್ರಸಿದ್ಧ ಚಿತ್ರಗಳನ್ನೂ ಫೋಟೋ ಮೊದಲಾದವುಗಳನ್ನೂ ಇಟ್ಟಿರುವರು. ಅವುಗಳ ಪೈಕಿ ಉತ್ಕೃಷ್ಟವಾಗಿಯೂ ಸುಂದರವಾಗಿಯೂ ಇರುವಂಥಾ ಚಿತ್ರಗಳಿಗೆ ಬಹುಮಾನಗಳನ್ನು ಕೊಟ್ಟಿದ್ದಾರೆ. ಬೆಂಗಳೂರು ವೈಲಿ ಕಂಪನಿಯವರು ಸರ್ ಪಿ. ಎನ್. ಕೃಷ್ಣಮೂರ್ತಿಯವರ ಚಿತ್ರವನ್ನು ಬಹಳ ಸುಂದರವಾಗಿ ಎಣ್ಣೆ ರಂಗಿನಲ್ಲಿ ಬರೆದಿರುವರು. ಇದಕ್ಕೆ ಬೆಳ್ಳಿಯ ಮೆಡಲ್ ಕೊಡಲಾಗಿದೆ. ಮೈಸೂರಿನ ಮೆ॥ ಕೇಶವಯ್ಯನವರಿಂದ ಬರೆಯಲ್ಪಟ್ಟ ಎಣ್ಣೆ ರಂಗಿನ ಚಿತ್ರಕ್ಕೂ ಬೆಳ್ಳಿ ಬಿಲ್ಲೆಯನ್ನು ಸಂಭಾವಿಸಲಾಯಿತು. ಬೆಂಗಳೂರು ಮೆ॥ ... ಲಂಕಾಚಿತ್ರಗಳನ್ನು ಬರೆದಿರುವ ಚಿತ್ರಪಟಕ್ಕೆ ಬೆಳ್ಳಿಯ ಮೆಡಲ್ ಕೊಡಲಾಗಿದೆ. ಮೈಸೂರಿನ ಮೆ॥ ಅಬ್ದುಲ್ ಅಜೀಜ್ ಯವರು ... ಬರೆದಿರುವ ಪತ್ರಗಳಿಗೆ ... ಇದಕ್ಕೂ ಬೆಳ್ಳಿಯ ಮೆಡಲನ್ನು ಕೊಟ್ಟಿದ್ದಾರೆ. ಬೆಂಗಳೂರಿನ ಜಾರ್ಜ್ ಕಂಪನಿಯವರೂ, ನೆಲ್ಸ್ ಫೋಟೋ ಕಂಪನಿಯವರೂ ಪ್ರದರ್ಶನ ಮಾಡಿರತಕ್ಕ ನಾನಾ ಫೋಟೋ ಪಟಗಳು ಎರಡು ಬೆಳ್ಳಿಯ ಮೆಡಲನ್ನು ಸಂಪಾದಿಸಿಕೊಂಡಿವೆ. ಅಂತು ಈ ಕೋಣೆಯೊಳಗಿಟ್ಟಿರುವ ನಾನಾ ಚಿತ್ರಪಟಗಳೂ ಬಹು ನೇತ್ರಾನಂದಕರವಾಗಿರುವವೆನ್ನುವುದಕ್ಕೆ ಸಂಶಯವಿಲ್ಲ.

ಕೈಗಾರಿಕೆ ಶಾಲೆಗಳ ವಸ್ತುಗಳು

ಮೈಸೂರು ಸರ್ಕಾರಿ ಕೈಗಾರಿಕೆ ಶಾಲೆಗಳಲ್ಲಿಯೂ ಇತರ ಕೈಗಾರಿಕೆ ಶಾಲೆಗಳಲ್ಲಿಯೂ ತಯಾರಾಗತಕ್ಕ ಬಟ್ಟೆಗಳು, ಮರದ ಸಾಮಾನು, ಸಣ್ಣಸಣ್ಣ ಯಂತ್ರಗಳು ಚಿತ್ರದ ಪಟಗಳ ಪದಾರ್ಥಗಳು, ಬೆಂಚು ಮೊದಲಾದ ಮರದ ಸಾಮಾನುಗಳು ಮುಂತಾದ ಪದಾರ್ಥಗಳು, ಇವೆಲ್ಲಾ ಪ್ರದರ್ಶನವಾದವಲ್ಪಟ್ಟಿವೆ. ಈ ಪದಾರ್ಥಗಳು ನಾಜೂಕಾಗಿಯೂ, ಅಲ್ಪ ಕ್ರಯದವುಗಳಾಗಿಯೂ, ಬಾಳಿಕೆ ಬರತಕ್ಕವುಗಳಾಗಿಯೂ ಇರುತ್ತವೆ. ಸಂಸಾರಕ್ಕೆ ಅನುಕೂಲವೂ ಅವಶ್ಯವೂ ಆದ ಇಂಥಾ ವಸ್ತುಗಳನ್ನು ತಯಾರುಮಾಡಿಸುತ್ತಲೂ ಅವುಗಳನ್ನು ಮಾಡುವ ಕ್ರಮವನ್ನು ಹುಡುಗರಿಗೆ ಕಲಿಸುತ್ತಲೂ ಇರುವುದು ತುಂಬಾ ಶ್ಲಾಘನೀಯವಾಗಿದೆ. ಈಗ ಪ್ರದರ್ಶನವಾದವಲ್ಪಟ್ಟಿರುವ ವಸ್ತುಗಳ ಪೈಕಿ ಮೇಲ್ಕೋಟೆಯ ಮತ್ತು ಚಿಕ್ಕನಾಯಕನಹಳ್ಳಿಯ ಸ್ಕೂಲಿನ ... ಮೊದಲಾದ ಬಟ್ಟೆಗಳಿಗೆ ಬಹುಮಾನಗಳು ದೊರಕಿರುತ್ತವೆ. ಮೈಸೂರು ಇಂಡಸ್ಟ್ರಿಯಲ್ ಸ್ಕೂಲಿನಲ್ಲಿ ತಯಾರಾದ ಕಟ್ಟಿಗೆಯ ಪಟ್ಟಿಗೆ, ಬತ್ತ ಕುಟ್ಟುವ ಯಂತ್ರ, ಜೇನುತುಪ್ಪ ಸಿದ್ಧಪಡಿಸುವ ಯಂತ್ರ, ಇವಕ್ಕೆಲ್ಲಾ ಒಂದೊಂದು ಬೆಳ್ಳಿಯ ಮೆಡಲನ್ನು ಕೊಟ್ಟಿದ್ದಾರೆ. ಕೆತ್ತನೆಕೆಲಸಕ್ಕೆ ಪಟ್ಟಿಗೆ ಮುಂತಾದವುಗಳಿಗೆ ಬಹುಮಾನವೂ, ದಾರಿಗೆ ... ಒಳಗೆ ಕಂಚಿನ ಮೆಡಲು ದೊರಕಿದ್ದು ... ವತ್ತಿಯಲ್ಲಿ ತಯಾರಾಗಿರುವ ಬಿಡುಗಡೆ ಆದ ನಾನಾನಾಗಳಿಗೆ ಬೆಳ್ಳಿಯ ಮೆಡಲು ಸಿಕ್ಕಿದ್ದೇನೂ ಆಶ್ಚರ್ಯವಲ್ಲ. ಮೈಸೂರು ಇಂಡಸ್ಟ್ರಿಯಲ್ ಸ್ಕೂಲಿನಲ್ಲಿ ತಯಾರಾದ ಮಣ್ಣಿನ ಪಾತ್ರೆ ಪದಾರ್ಥಗಳು ತುಂಬಾ ಸೊಗಸಾಗಿದ್ದವಾದ್ದರಿಂದ ಅದಕ್ಕೆ ಕಂಚಿನ ಬಿಲ್ಲೆಯನ್ನು ಬಹುಮಾನ ಕೊಟ್ಟರು. ಅತ್ತಲಾಗಿ ಹೊಳೆನರಸೀಪುರದ ಇಂಡಸ್ಟ್ರಿಯಲ್ ಸ್ಕೂಲಿನ ಬಾಗಿಲಿನಿಂದ ಪ್ರದರ್ಶನವಾದವಲ್ಪಟ್ಟಿರುವ (೧) ನಾರನ್ನು ಬಿಡಿಸುವ ಯಂತ್ರ, (೨) ಹೊಸ ತರಹಾ ನೆಗ್ಗಿಲು, (೩) ಆಕ್ಯಾಲಿಯನ್ನು ಇವೆ ಸುವ ಯಂತ್ರಕ್ಕೂ ಮೂರು ಬೆಳ್ಳಿಯ ಮೆಡಲನ್ನು ಕೊಟ್ಟಿರುತ್ತಾರೆ. ಇದರಿಂದಲೂ ಈ ಇಂಡಸ್ಟ್ರಿಯಲ್ ಸ್ಕೂಲುಗಳಲ್ಲಿ ಅನೇಕ ಪದಾರ್ಥಗಳು ಬಹಳ ಚನ್ನಾಗಿರುವವೆಂದು ವ್ಯಕ್ತವಾಗುತ್ತದೆ.

ಪೂಣಸಿಂಗರು ಪೆಂಥಿಸ್ಟ್ ಕಾರ್ಖಾನೆ.

... ಬಹು ಕಾಲದಿಂದಲೂ ಹೆಸರು ಪಡೆದಿರುವ ಪೆಂಥಿಸ್ಟ್ ರವರ ಕಾರ್ಖಾನೆಯವರು ಅಲ್ಲಿ ತಯಾರಾಗುವ ಬೆಂಚು, ಕುರ್ಚಿ, ಪಟ್ಟಿಗೆ, ಬೀರು, ಮಂಚ, ಪೀಠ ಮೊದಲಾದ ಮರದ ಸಾಮಾನುಗಳನ್ನೂ ಬಿಸ್ಕತ್ತು, ಕಾಫಿ ಪುಡಿಗಳನ್ನೂ, ಜೋಳದ ಗಂಜಿ ಮುಂತಾದ ಅನೇಕ ಪದಾರ್ಥಗಳನ್ನೂ ... ಪ್ರದರ್ಶನಮಾಡಿದ್ದಾರೆ. ಇದಲ್ಲದೆ ಆವರು ಯಂತ್ರದ ಸಹಾಯದಿಂದ ... ಕಾಫಿಯನ್ನು ... ತಮ್ಮ ಕಾಫಿ ಪುಡಿಯ ಉತ್ಕೃಷ್ಟತೆಯನ್ನು ವ್ಯಕ್ತಪಡಿಸಿದ್ದಾರೆ. ಈ ಕಂಪನಿಯವರು ಪ್ರದರ್ಶನ ಪದಾರ್ಥಗಳ ಪೈಕಿ ಬೇರೆಬೇರೆ ತಂದ ... ಗಳಿಗೆ ... ಪರೀಕ್ಷಕರು ಕಂಚಿನ ಮೆಡಲುಗಳನ್ನು ಕೊಟ್ಟಿರುವರು.

ಧಾನ್ಯಗಳ ಪ್ರದರ್ಶನ.

ಒಂದು ಕೋಣೆಯಲ್ಲಿ ಪ್ರತಿ ಒಂದು ಧಾನ್ಯದಲ್ಲೂ ... ಜಾತಿಯ ಕಾಳುಗಳನ್ನು ಸೀಸೆಗಳಲ್ಲಿ ಹಾಕಿ ಸಾಲು ಸಾಲಾಗಿ ಜೋಡಿಸಿಟ್ಟು ಪ್ರದರ್ಶನ ಮಾಡಿರುವರು. ಧಾನ್ಯವಸಾಯದಲ್ಲಿ ಆಸಕ್ತರಾಗಿರುವ ಸಮಸ್ತ ರೈತರಿಗೂ ಇದನ್ನು ಚನ್ನಾಗಿ ನೋಡಿ ಪರೀಕ್ಷೆ ಮಾಡಿ ತಿಳಿದುಕೊಳ್ಳುವುದರಿಂದ ತುಂಬಾ ಪ್ರಯೋಜನವಾಗದೇ ಇರುವುದಿಲ್ಲ. ಯಾವ ಯಾವ ಧಾನ್ಯದಲ್ಲಿ ಯಾವ ಯಾವ ಜಾತಿಯದು ಎಲ್ಲೆಲ್ಲಿ ಬೆಳೆಯುವುದೋ ಸುಲಭವಾಗಿ ಗೊತ್ತಾಗುವುದು. ಸರ್ಕಾರದ ಈ ಸಸ್ಯಶಾಸ್ತ್ರಜ್ಞರಾದವರು ಸೂಕ್ಷ್ಮವಾಗಿ ಪರೀಕ್ಷೆಮಾಡಿ ಮೂರು ಸಾವಿರ ... ಧಾನ್ಯಾದಿಗಳಿಗೆ ಬಹುಮಾನಗಳನ್ನು ಕೊಟ್ಟಿದ್ದಾರೆ. ಈ ಪ್ರದರ್ಶನಶಾಲೆಯ ಇನ್ನಾವ ಭಾಗದ ಪ್ರಾಸ್ತುಗಳಿಗೂ ಇಷ್ಟೊಂದು ಬಹುಮಾನಗಳನ್ನು ಕೊಟ್ಟಿರುವುದಿಲ್ಲ. ಪರೀಕ್ಷಕರು ಒಳಗೆ ವಿಶೇಷವಾದ ಬಹುಮಾನಗಳನ್ನು ಕೊಟ್ಟಿರುವುದು ರೈತ ಪ್ರಜೆಗಳಿಗೆ ತುಂಬಾ ಪ್ರೋತ್ಸಾಹಕವಾಯಿತೆಂದು ಸಂತೋಷಪಡತಕ್ಕದ್ದಾಗಿದೆ.

ಚಕ್ಕರೆ, ಕಾಗದ ಮುಂತಾದ ಪ್ರದರ್ಶನ.

ಇನ್ನೊಂದು ಕೋಣೆಯಲ್ಲಿ ಬೇರೆ ಬೇರೆ ಊರುಗಳಲ್ಲಿ ತಯಾರಾಗಿ ... ಮತ್ತು ... ತಯಾರಾದ ಬೆಲ್ಲ, ಸಕ್ಕರೆ, ದಿನಸಾರಿ ... ಜೇನು, ... ಮುಂತಾದ ... ಮತ್ತು ... ಸಾಮಾನುಗಳನ್ನು ತಂದಿಟ್ಟು ಪ್ರದರ್ಶನ ಮಾಡಿರುತ್ತಾರೆ. ಈ ಪೈಕಿ ಬೆಂಗಳೂರು ಬಟ್ಲರ್ ಕಂಪನಿಯವರು ತಯಾರುಮಾಡಿರುವ ಚಕ್ಕರೆಯ ಗಾಡಿ ಸಾಮಾನಿಗೆ ಬೆಳ್ಳಿಯ ಮೆಡಲೂ, ಅದೇ ಕಂಪನಿಯಲ್ಲಿ ತಯಾರಾದ ಜೇನು ಬಾನಾಗಳಿಗೆ ಕಂಚಿನ ಬಿಲ್ಲೆಯೂ ಕೊಡಲಾಗಿದೆ. ಮೈಸೂರು ವಿಂಸ್ಟರ್ ಪ್ರೆಸ್ಸಿನಲ್ಲಿ ತಯಾರಾದ ಫೋಟೋ ಆಲ್ಬಂ ಎಂಬ ಚಿತ್ರಗಳ ಪುಸ್ತಕಗಳಿಗೆ ಕಂಚಿನ ಮೆಡಲನ್ನೂ ಅದೇ ಪ್ರೆಸ್ಸಿನವರು ಮಾಡಿ ಕಳುಹಿಸಿರುವ ಪೋಣಿಸಿ ಆಲ್ಲದ ಪುಸ್ತಕ ಮುಂತಾದವುಗಳಿಗೆ ಬೇರೆ ಬಹುಮಾನಗಳನ್ನೂ ಕೊಟ್ಟಿರುತ್ತಾರೆ.

ಯಂತ್ರ, ಬೈಸಿಕಲ್ ಮುಂತಾದವುಗಳ ಪ್ರದರ್ಶನ.

ಮತ್ತೊಂದು ಕೋಣೆಯಲ್ಲಿ ಬೇರೆ ಬೇರೆ ಜಾತಿಯ ಬೈಸಿಕಲ್ ಗಾಡಿಗಳೂ ಯಂತ್ರಗಳೂ ಮೊದಲಾದವನ್ನು ತಂದಿಟ್ಟು ಪ್ರದರ್ಶನ ಮಾಡಿದಾರೆ. ಬೆಂಗಳೂರಿನಲ್ಲಿರುವ ಇಂಡಿಯನ್ ಸೈಕಲ್ ಕಂಪನಿಯವರ ಬೈಸಿಕಲ್ ಗಾಡಿಗಳಿಗೆ ಬೆಳ್ಳಿಯ ಮೆಡಲನ್ನೂ, ಅದೇ ಕಂಪನಿಯಲ್ಲಿ ತಯಾರಾದ ಮೋಟಾರ್ ಕಾರ್ ಗಾಡಿಗೆ ಬಂಗಾರದ ಮೆಡಲನ್ನೂ, ಚಾಮರಾಜನಗರದ ಮೆ॥ ಕೃಷ್ಣಯ್ಯಂಗಾರರು ತಯಾರುಮಾಡಿರುವ ಸೂಜಿ ... ಅಕ್ಷರ ... ಮೊದಲಾದ ಬೇಲುಗಳನ್ನು ಬಿಡಿಸುವ ಯಂತ್ರಕ್ಕೆ ಬೆಳ್ಳಿಯ ಮೆಡಲನ್ನೂ, ಇನ್ನೇ ತಯಾರುಮಾಡಿರುವ ಕಟ್ಟಿಗೆಯ ಬುಕ್ಕುಗಳನ್ನು ಕತ್ತರಿಸಿ ಹೊಳೆಸುವ ಕೊಡುವ ಲಘಿ ಯಂತ್ರಕ್ಕೆ ಕಂಚಿನ ಮೆಡಲನ್ನೂ ಕೊಟ್ಟಿರುವರು. ಇದಲ್ಲದೆ ಶ್ರೀಮನ್ಮಹಾರಾಜರವರು ಬೈಸಿಕಲ್ ಗಾಡಿಗಳನ್ನು ಉಪಯೋಗಿಸಿ, ಮಹಾ ಕರ ತಿರುಗುವಂಥಾ ಎರಡು ಸಣ್ಣ ಮತ್ತು ಸುಂದರವಾದ ಬೈಸಿಕಲ್ ಗಳನ್ನು ಕೊಂಡುಕೊಂಡಿರುತ್ತಾರೆ.

ಪ್ರಿನ್ಸ್ ಆಫ್ ವೇಲ್ಸ್ ರವರು ಮೈಸೂರು ಸಂಸ್ಥಾನಕ್ಕೆ ದಯಮಾಡಿದ್ದು.

ಸನ್ ೧೯೦೬ ನೇ ಜನವರಿ ೨೯ ರಿಂದ ಫೆಬ್ರವರಿ ೭ ರ ವರೆಗೆ.

ಜನನ—೧೮೬೫ ನೇ ಜೂನ್ ೩.

ಜನನ—೧೮೬೭ ನೇ ಮೇ ೨೬.

ವಿವಾಹಮಹೋತ್ಸವ—೧೮೯೩ ನೇ ಜುಲೈ ೬.

P. SUBBAROY'S

World Renowned and most Efficacious

Ayurvedic Medicines.

ಪಿ. ಸುಬ್ಬರಾಯಿಯವರ

ಲೋಕಪ್ರಸಿದ್ಧವಾದ ಮತ್ತು ಅತ್ಯಂತ ಗುಣಕಾರಿಯಾದ

ಆಯುರ್ವೇದ ಔಷಧಗಳು.

11-14

೧. ಪುಷ್ಟಿರಸಾಯನ.—ಇದರ ಸೇವನೆಯಿಂದ ಪರಗಳ ಸಂಬಂಧವಾದ ಮತ್ತು ಇತರ ವಿಧವಾದ ಎಲ್ಲಾ ಶರೀರದ ದುರ್ಬಲಗಳೂ ಹೋಗಿ, ಹೊಟ್ಟೆಯಲ್ಲಿ ಅಗ್ನಿ ಉಂಟಾಗಿ, ದೇಹವು ಪುಷ್ಟಿಗೊಂಡು ಹದಾ. ಪುಷ್ಟಿಯನ್ನು ಕಳೆದುಕೊಂಡ ಚಿಕ್ಕವಯಸ್ಸಿನವರಿಗೆ ಇದು ಅಕ್ಕ ಔಷಧವು. ಇದರಿಂದ ಶರೀರದ ಪ್ರತಿ ಅವಯವದ ನೋವು, ಅಶಕ್ತಿಯೂ ಹೋಗಿ, ಪುಷ್ಟಿಯೂ, ಬಲವೂ ಉಂಟಾಗುವವು. ಪೆಟ್ಟಿಗೆಕ್ಕೆ ರೂ. ೨ ವಿ. ಪಿ. ಸಾಂಗಿ ೭ ಆಣೆ.

೨೦. ಅತ್ಯುತ್ತಮವಾದ ಕಸ್ತೂರಿ —ಕಾಶ್ಮೀರದಿಂದ ತರಿಸಿರುವದು. ಅತ್ಯುತ್ತಮವಾದದ್ದು ಮತ್ತು ಒಂದೇ ರಖಂ ಇರತಕ್ಕದ್ದು. ತೋಲಾ ೧ಕ್ಕೆ ರೂ. ೬೮ ಬೆಲೆಯಾಗಿ ಒಂದು ರೂಪಾಯಿಗೂ ದೊರಕುತ್ತದೆ. ವಿ. ಪಿ. ಚಾರ್ಜು ಅಲಾಯಿದೆ

೨೧ ಸುಗಂಧ ನಸ್ಯಪುಡಿ —ಈ ನಸ್ಯಪುಡಿಯು ಬಹಳ ಸುವಾಸನಾಯುಕ್ತವಾಗಿರೋಣದರಿಂದ ಇದನ್ನೇ ಪ್ರತ್ಯೇಕವಾಗಿ ಹಾಕಿಕೊಳ್ಳಕೂಡದು. ನೀವು ದಿನವಹಿ ಹಾಕಿಕೊಳ್ಳುವ ಸಾಮಾನ್ಯ ನಸ್ಯಕ್ಕೆ ಈ ಸುಗಂಧಪುಡಿಯಲ್ಲಿ ಒಂದೆರಡು ಚಿಟಿಕೆಯಷ್ಟನ್ನು ಬೆರಸಬೇಕು ಹೀಗೆ ಬೆರಕೆಮಾಡಿದಮೇಲೆ ನಸ್ಯವು ಬಹು ಸುವಾಸನೆಯುಳ್ಳದ್ದಾಗಿಯೂ ಮನೋಹರವಾಗಿಯೂ ಆಗುವುದು ಇದರಿಂದ ನಸ್ಯಹಾಕಿಕೊಳ್ಳುವವರ ಬಳಿ ಬಡಿಯುವ ಕಾಣವಾದ ಕೆಟ್ಟವಾಸನೆ ಇರುವುದೇ ಇಲ್ಲ. ಸುವಾಸನೆಯು ಬಹಳಹೊತ್ತು ಇರುತ್ತದೆ. ಈ ಪುಡಿ ಬೆರಸಿದ ನಸ್ಯ ಬಹಳ ಕಾಲದ ತನಕ ಕೆಡುವುದಿಲ್ಲ. ಇಂಥಾ ನಸ್ಯಹಾಕಿಕೊಂಡಲ್ಲಿ ಶೀತ, ಅರೆತಲೆನೋವು, ವಾತ ಮೇದಲಾದವು ನಿವಾರಣೆಯಾಗುತ್ತವೆ. ಆದ್ದರಿಂದ ನಸ್ಯಹಾಕಿಕೊಳ್ಳಬೇಕೆಂಬ ಇಚ್ಛೆಯನ್ನು ಕಡಿಮೆಮಾಡುವುದು. ಇದರಲ್ಲಿ ನಮಾಸಾಗರ ಖಂಡಿತವಾಗಿ ಸೇರಿರುವುದಿಲ್ಲ. ಇಂಥಾ ಒಂದು ಡಬ್ಬಿ ನಸ್ಯವು ಒಂದು ತಿಂಗಳ ತನಕ ಬರುತ್ತೆ. ಕ್ರಯ ಒಂದು ಡಬ್ಬಿಗೆ ೬ ಆಣೆ ೧ ರಿಂದ ೩ ಡಬ್ಬಿ ತನಕ ವಿ ಪಿ. ಚಾರ್ಜು ೩ ಆಣೆ ಹೆಚ್ಚು. ವಿ. ಪಿ ಛಾರ್ಜು ೪ ರಿಂದ ೬ ಡಬ್ಬಿ ತನಕ ೫ ಆಣೆ ೭ ರಿಂದ ೧೨ ಡಬ್ಬಿ ವರೆಗೆ ವಿ ಪಿ ಛಾರ್ಜು ೭ ಆಣೆ.

೨೨. ರಕ್ಷಾಮೃತಂ—ಸಸ್ಯವರ್ಗಗಳಲ್ಲಿ ಸೇರಿದ ಅನೇಕ ಅಪೂರ್ವ ಮೂಲಿಕೆಗಳಿಂದ ಮಾಡಲ್ಪಟ್ಟಿರುವ ಈ ಚೂರ್ಣವು ಕಾಫಿ, ತೇಯಿಲೆಗೆ ಬದಲಾಗಿ ಉಪಯೋಗಿಸುವುದಕ್ಕೋಸ್ಕರವೇ ತಯಾರುಮಾಡಲ್ಪಟ್ಟಿರುತ್ತದೆ. ಕಾಫಿ, ತೇಯಿಲೆಗಳಲ್ಲಿರುವ ದುರ್ಗುಣಗಳು ಇದಕ್ಕಿಲ್ಲ.

ಕಾಫಿ ಪುಡಿಯನ್ನು ಯಾವ ಕ್ರಮದಲ್ಲಿ ಉಪಯೋಗಿಸುತ್ತೇವೆಯೋ ಆ ಕ್ರಮದಲ್ಲಿಯೇ ಇದನ್ನೂ ಉಪಯೋಗಿಸಿದರೆ ವಿಶೇಷ ರುಚಿಕರವಾದ ಪಾನವಾಗುವುದು ಶಿಶುಗಳು ಮೊದಲುಗೊಂಡು ವೃದ್ಧಾಪ್ಯದಲ್ಲಿರುವವರ ವರೆಗೆ ಎಲ್ಲಾ ವಯಸ್ಸಿನ ಸ್ತ್ರೀಪುರುಷರೂ ಉಪಯೋಗಿಸಬಹುದಾಗಿದೆ ಜ್ವರ, ಸನ್ನಿ ಬಸರು, ಹೆರಿಗೆ, ವಾಂತಿಭೇದಿ, ಈ ಮೊದಲಾದವುಗಳು ಸಂಭವಿಸಿರುವ ಕಾಲಗಳಲ್ಲಿಯೂ ಈ ರಕ್ಷಾಮೃತ ಚೂರ್ಣದ ಕಷಾಯವನು ಹಾಲನು ಬೆರಸಿಯಾಗಲಿ ಬೆರಸದೆಯಾಗಲಿ ಸಮಯಾನುಸಾರವಾಗಿ ಸೇವಿಸಿದರೆ ಜನರನ್ನು ಸಮಸ್ತ ವ್ಯಾಧಿಗಳಿಂದಲೂ ಖಂಡಿತವಾಗಿ ಬಿಡುಗಡೆ ಮಾಡುವುದಲ್ಲದೆ, ಯಾವದೊಂದು ರೋಗವೂ ಕಾಲಿಡಾಕಿಕೊಳ್ಳದಂತೆ ಕಾಪಾಡುವುದು ಪಿತ್ತವಾಯುವು, ಗೂಲ್ಮ ಉಷ್ಣವು. ಕ್ಷಯವು, ಅಜೀರ್ಣವು, ಮಲಬದ್ಧತೆಯು, ತಲೆನೋವು ಈ ಮೊದಲಾದ ರೋಗಗಳು ನಿವಾರಣೆಯಾಗುತ್ತವೆ. ಪ್ರಾಣಾಧಾರವಾಗಿ ಇರುವಂಥಾ ರಕ್ತವನ್ನು ಶುದ್ಧಿಮಾಡಿ, ಧಾತುವನ್ನು ವೃದ್ಧಿಪಡಿಸಿ, ದೇಹಾರೋಗ್ಯವನ್ನು ಕೊಡುತ್ತದೆ ಅಗ್ನಿಮಾಂದ್ಯ ಉಳ್ಳವರಿಗೂ, ಮಧುಮೂತ್ರ ಮತ್ತು ಅತಿಮೂತ್ರ ರೋಗಿಗಳಿಗೂ ವಿಶೇಷ ಅಪೂರ್ವವಾದಂಥಾ ಚೂರ್ಣವು ಇದನ್ನು ಬಿಟ್ಟರೆ ಬೇರೊಂದಿಲ್ಲ.

ಇದನ್ನು ಕ್ರಮಾನುಸಾರ ತಪ್ಪದೆ ಉಪಯೋಗಿಸುತ್ತಾ ಬಂದರೆ ಮಧುಮೂತ್ರ ರೋಗಿಗಳ ಶರೀರದಿಂದ ಹೊರಡುವ ಬೆವರಿನಲ್ಲಿ ರಕ್ತಕ್ಕೆ ಸಕ್ಕರೆಯನ್ನೂ ವಿಶೇಷವಾದ ಬೆವರನ್ನೂ ಕಡಿಮೆ ಮಾಡಿ, ಮೂತ್ರರೋಗದ ಬೇರನ್ನೇ ನಿರ್ಮೂಲ ಮಾಡುವುದು ದೇಹದ ಉಷ್ಣವನ್ನು ಶಾಂತಿಮಾಡುವುದು; ಮೆದುಳನ್ನು ಬಲಪಡಿಸಿ ಜ್ಞಾಪಕಶಕ್ತಿಯನ್ನು ವೃದ್ಧಿಗೊಳಿಸುವುದು ವಿದ್ಯಾರ್ಥಿಗಳು, ವಕೀಲರು, ಉದ್ಯೋಗಸ್ಥರು, ವಿರೋಧಕಾರಿಯಾದ ಗುಣವುಳ್ಳ ಕಾಫಿ, ತೇಯಿಲೆಯನ್ನು ಖಂಡಿತವಾಗಿ ಬಿಟ್ಟು, ಈ ರಕ್ಷಾಮೃತ ಚೂರ್ಣವನ್ನೇ ಉಪಯೋಗಿಸುತ್ತಾ ಬಂದಲ್ಲಿ ಇದು ಅಪೂರ್ವವಸ್ತುವಾಗಿ ಪರಿಣಮಿಸುವುದು. ಇಪ್ಪತ್ತು ದಿನಗಳಿಗೆ ಸಾಕಾಗುವಷ್ಟು ಚೂರ್ಣವುಳ್ಳ ಡಬ್ಬಿ ೧ಕ್ಕೆ ಕ್ರಯ ೬ ಆಣೆ. ವಿ ಪಿ ಛಾರ್ಜು ೩ ಆಣೆ ಹೆಚ್ಚಾಗುವುದು ಮುಂಗಡ ೮ ಆಣೆ ಸ್ಟಾಂಪಿಟ್ಟು ಬರೆದಲ್ಲಿ ಒಂದು ಡಬ್ಬಿ ಚೂರ್ಣ ಕಳುಹಿಸಲ್ಪಡುತ್ತೆ

ಕಾಗದವನ್ನು ಇಂಗ್ಲೀಷ್ ಅಥವಾ ತಮಿಳಿನಲ್ಲಿ ಬರೆಯಿರಿ.

Apply to.—**P. SUBBAROY,**

Porto Novo, South Arcot.

ವಿಳಾಸ:—ಪಿ. ಸುಬ್ಬರಾಯ್,

ಪೋರ್ಟನೋವೋ, ದಕ್ಷಿಣ ಆರ್ಕಾಟ್ ಜಿಲ್ಲಾ.

ನಿಮ್ಮ ನಿಲಾಯತಿಯಿಂದ ಯಾವ ಸಾಮಾನುಗಳನ್ನು ದಗೂ ತರಿಸಿಕೊಳ್ಳಬೇಕಾಗಿದ್ದರೆ 19-5

ಬ್ರೈಡ್ ಮತ್ತು ಈಸ್ಟ್‌ಲೆಂಡ್,

—೩೫, ಸಿಟಿ ರೋಡ್, ಲಂಡನ್, ಇ. ಸಿ.

ಎಂಬೀ ವಿಳಾಸಕ್ಕೆ ಜಣ ಕಳಿಸಿ, ಕಾಗದ ಬರಿಯಿರಿ. ಈ ಕಂಪನಿಯವರು ಪೇಟೆಂಟ್ ಔಷಧಿಗಳನ್ನೂ, ಆಕತ್ತರಿಗೂ ಮಕ್ಕಳಿಗೂ ಕೊಡುವಂಥಾ, ಯಂತ್ರಗಳಿಂದಲೇ ತಯಾರಾದಂಥಾ ಆಹಾರಗಳನ್ನೂ, ಇನ್ನೂ ನಾನಾತರದ ಪದಾರ್ಥಗಳನ್ನು ಇಟ್ಟು ಬ್ಯಾರಿಮಾಡುತ್ತಾರೆ. ಅವರು ಬಹು ವಿಶೇಷವಾದ ಗಮನಕೊಟ್ಟು, ಸಾಧ್ಯವಿದ್ದಷ್ಟು ಅಗ್ಗವಾಗಿ, ಬೇಕಾದ ಸಾಮಾನುಗಳನ್ನೇ ಆರಿಸಿ, ಮರಿಟಪಾಲಿಗೇನೇ ಕಳುಹಿಸಿಕೊಡುವರು.

ಇದನ್ನು ನೋಡಿದರೆ ನೀವು ಬಹು ಆಶ್ಚರ್ಯಪಡುವಿರಿ!!! 23-5

ನಮ್ಮ ಪ್ರಸಿದ್ಧವಾದ ಪುಸ್ತಕಭಂಡಾರದಲ್ಲಿ ಅನೇಕ ಸಹಸ್ರ ರೂಪಾಯಿ ಬಾಳುವ ಕನ್ನಡ ಗ್ರಂಥಗಳೂ, ಶಾಲಾಪುಸ್ತಕಗಳೂ, ಪೇನಾ, ಪೆನ್ಸಿಲ್, ನೋಟ್‌ಬುಕ್, ಅನೇಕ ವಿಧವಾದ ಕಾಪಿಗಳು, ವೃತ್ತಾಂತ ಪತ್ರಿಕೆ, ಮಹಿಳಾಸಖಿ, ಕನ್ನಡ ಗ್ರಂಥ ಮಿತ್ರ, ಪ್ರಾಗ್ರೆಸ್, ಹಾರ್ವೆಸ್ಟ್‌ಫೀಲ್ಡ್ ಮುಂತಾದ ಪ್ರಸಿದ್ಧವಾದ ವರ್ತಮಾನಪತ್ರಿಕೆಗಳು ಇಲ್ಲಿ ಅನೇಕ ಸಾವಿರಗಟ್ಟಳೆಯಾಗಿ ಮಾರಾಟವಾಗುತ್ತಿವೆ. ಈ ಡಿಪೋ ಕಟ್ಟಡವು ರಾಜಧಾನಿಯಲ್ಲಿ ಬಹು ಪ್ರಸಿದ್ಧವಾದ ಸ್ಥಳವೆಂದು ಮೈಸೂರು ದೇಶವೆಲ್ಲೆಲ್ಲಾ ಹೆಸರುಗೊಂಡಿದೆ. ಈ ಕೆಳಗೆ ನಮೂದಿಸಿರುವ ಪುಸ್ತಕಗಳನ್ನು ಸ್ವಲ್ಪ ನೋಡಿ —

ಕಥಾಸಂಗ್ರಹ ೧—೩ ಭಾಗಗಳು ಕ್ರಯ ೧—೦—೦
ವಿ. ಪಿ. ಪಿ. ಮಾಲಕ ೧—೩—೦

ಅನುಭವಸಾರ .. .. ಕ್ರಯ ೦—೧೨—೦

ಗ್ರೀಕರ ಚರಿತ್ರ .. .. ,, .. ೦—೬—೦

ರೋಮನರ ಚರಿತ್ರ .. .. ,, .. ೦—೨—೦

ಕನ್ನಡ—ಇಂಗ್ಲಿಷ್—ಹಿಂದುಸ್ಥಾನಿ ಭಾಷಾಮಂಜರಿ. ಈ ಪುಸ್ತಕದಿಂದ ಇಂಗ್ಲಿಷ್ ಮತ್ತು ಹಿಂದುಸ್ಥಾನಿ ಭಾಷೆಗಳನ್ನು ಬಹು ಸುಲಭವಾಗಿ ಕಲಿಯಬಹುದು. ಇದರ ಕ್ರಯ ಎಂಟೇ ಆಣೆ.
ವಿ. ಪಿ ಪಿ. ಮಾಲಕ ೦—೧೦—೦

ಶ್ರೀಚಾಮರಾಜೇಂದ್ರ ಒಡೆಯರವರ ಚರಿತ್ರೆ ಉತ್ಕೃಷ್ಟವಾದ ಪುಸ್ತಕ ಅನೇಕ ಚಿತ್ರಗಳು ಇವೆ. ಇದನ್ನು ಕಾರಿತಾ ರಾಜಧರ್ಮಪ್ರವೀಣ ಮ|| ರಾ|| ತಂಬೋಚೆಟ್ಟರು ಒಂದು ಉತ್ಕೃಷ್ಟವಾದ ಅವತರಣಿಕೆಯನ್ನು ಬರೆದಿದ್ದಾರೆ. ಕ್ರಯ ೧—೮—೦
ವಿ ಪಿ ಪಿ ಮಾಲಕ ೧—೧೧—೦

ಎಡ್ವರ್ಡ್ ಸಾರ್ವಭೌಮರ ಜೀವಚರಿತ್ರ ೦—೬—೦

ಕ್ರಿಮಿವರ್ಗವರ್ಣನೆ ೦—೧—೦

ಭೂಗೋಳಸಂಗ್ರಹ—ಐದನೇ ಮುದ್ರಣ:—ಈಗ ಮೈಸೂರು ವಿದ್ಯಾಭ್ಯಾಸದ ಇಲಾಖೆಯವರು ಈ ಪುಸ್ತಕವನ್ನು ದೇಶೀಯ ಪರೀಕ್ಷೆಗೂ ಎಲ್ಲಾ ಶಾಲೆಗಳಿಗೂ ಟೆಕ್ಸ್ಟ್ ಬುಕ್ಕಾಗಿ ನೇಮಿಸಿರುತ್ತಾರೆ. ಈ ಪುಸ್ತಕವನ್ನು ಬಹಳವಾಗಿ ತಿದ್ದಿ ಹೊಸವಿಷಯಗಳನ್ನು ಅನೇಕವಾಗಿ ಕೂಡಿಸಿ ಪ್ರಕಟಿಸಲಾಗಿದೆ ಕ್ರಯ ಪ್ರತಿ ೧ಕ್ಕೆ ೬ ಆಣೆ, ಪೋಸ್ಟೇಜು ೧ ಆಣೆ.

ಮುದ್ರಾಮಂಜೂಷವು.—ಎರಡನೇ ಮುದ್ರಣ.—ವಿದ್ಯಾರ್ಥಿಗಳೂ ವಿದ್ವಾಂತರೂ ಸಾಮಾನ್ಯಪ್ರಜೆಗಳೂ ಅಧಿಕಾರಸ್ಥರೂ ಲೋಕವ್ಯವಹಾರದಿಗಳನ್ನು ಪರಿಷ್ಕಾರವಾಗಿ ತಿಳಿದುಕೊಳ್ಳುವುದಕ್ಕೆ ವಿಶೇಷ ಸಹಕಾರಿಯಾದ "ಮುದ್ರಾಮಂಜೂಷ" ವೆಂಬೀ ನವರಸಯುಕ್ತವಾದ ಕನ್ನಡ ಗ್ರಂಥವು ಈಗಿನ ವಾಕ್ಸರಣಿಗೆ ಸರಿಯಾಗಿ ತಿದ್ದಿ, ಬಹು ಶುದ್ಧವಾಗಿಯೂ ಅಂದವಾಗಿಯೂ ಪ್ರಕಟಿಸಲ್ಪಟ್ಟಿದೆ ಇದಕ್ಕೆ "ಚಾಣಕ್ಯರ ನೀತಿ," "ಚಂದ್ರಗುಪ್ತ ಚಾಣಕ್ಯರ ಕಥೆ" ಎಂಬೀ ಹೆಸರುಗಳೂ ಉಂಟು. ಇಂಥಾ ಸರ್ವೋತ್ತಮವಾದ ಪುಸ್ತಕವನ್ನು ಕನ್ನಡಿಗರೆಲ್ಲಾ ತರಿಸಿ ಓದಿ, ಪ್ರಯೋಜನ ಪಡೆಯಬೇಕೆಂದು ಹಾರೈಸುತ್ತೇವೆ. ಕ್ರಯ ೧ ಪ್ರತಿಗೆ ರೂ ೧—೮—೦, ಪೋಸ್ಟೇಜು ೨ ಆಣೆ, ವಿ. ಪಿ. ಪಿ ರೂ ೧—೧೧—೦

ಪಕ್ಷಿಗಳ ಚರಿತ್ರ ೦—೧—೦

ಪ್ರಾಚೀನ ಜೀವರಾಶಿಗಳ ವರ್ಣನೆ ೦—೧—೦

ಸಣ್ಣವರಿಗೆ ಹೇಳುವ ಕಥೆಗಳು ೦—೧—೦

ಬಾಲಿಕಾಗೀತ ಮುಕ್ತಾಕಲಾಪ, ಗೀತಮಂದಾರ ೦—೨—೦, **ಕಲ್ಯಾಣಗೀತಾವಳಿ** ೦—೫—೦, ಈ ಹಾಡಿನ ಪುಸ್ತಕಗಳು ನಮ್ಮಲ್ಲಿ ಯಾವಾಗಲೂ ದೊರೆಯುತ್ತವೆ.

ಮುಖ್ಯವಾಗಿ, ಸ್ನೇಹಿತರೇ, ತಾವು ರಾಜಧಾನಿಗೆ ಬರುವಾಗಲೆಲ್ಲಾ ನಮ್ಮ ಪುಸ್ತಕಾಲಯವನ್ನು ನೋಡಿಯೇ ಹೋಗಬೇಕೆಂದು ಕೇಳಿಕೊಳ್ಳುತ್ತೇವೆ ನಿಮಗೆ ಪುಸ್ತಕವಲ್ಲದೆ ಬೇರೆ ಯಾವದಾದರೂ ಪದಾರ್ಥಗಳಾಗಲೀ ಅಥವಾ ಸಂಗತಿಗಳಾಗಲೀ ಅಪೇಕ್ಷಿಸುವ ಸಂದರ್ಭದಲ್ಲಿ ನೀವು ನಮಗೆ ಒಂದು ಕಾರ್ಡು ಬರೆದರೆ ತಕ್ಷಣವೇ ಜವಾಬು ಕೊಡುವದಕ್ಕೆ ಪ್ರಯತ್ನ ಮಾಡುತ್ತೇವೆ.

ವಿಳಾಸ:— ಮ್ಯಾನೇಜರ್,

ಸಿ. ಎಲ್ ಎಸ್. ಬುಕ್ ಡಿಪೋ,

ಮೈಸೂರು.

ಮೈಸೂರು ಸೀಮೆಯಲ್ಲಿ ಪ್ಲೇಗಿನ ಸ್ಥಿತಿ.

26—1—1906 ರಿಂದ 2—2—1906 ರ ವರೆಗೆ

ಸ್ಥಳ.	ಪ್ಲೇಗ್ ತಗಲಿದ್ದು	ಪ್ಲೇಗ್ ಸತ್ತದ್ದು.	ಹೋದ ವಾರ... ಈ ವಾರ ಸಂಖ್ಯೆ
ಬೆಂಗಳೂರು ಪಟ್ಟಣ	55	48	44
ಮೈಸೂರು ,,	0	0	6
ಬೆಂಗಳೂರು ಡಿಸ್ಟ್ರಿಕ್ಟ್	10	9	89
ಮೈಸೂರು ,,	0	1	51
ಕೋಲಾರ್ ,,	2	9	25
ಕೋಲಾರ್ ಚಿನ್ನದ ಗಣಿಗಳು	6	4	27
ತುಮಕೂರು ಡಿಸ್ಟ್ರಿಕ್ಟ್	0	0	6.
ಹಾಸನ (ಹೊರಗಿನದು)	9	1	6
ಚಿತ್ರದುರ್ಗ ,,	8	7	41
ಕಡೂರ್ ,,	1	1	2
ಶಿವಮೊಗ್ಗ ,,	34	10	5
ಜುಮ್ಲ	86	66	301

ಶಾಲಿವಾಹನ ಶಕ ವರುಷಂಗಳು ೧೮೨೭ ನೇ ವಿಶ್ವಾವಸು ಸಂವತ್ಸರದ ಮಾಘ ಬಹುಳ ಸಪ್ತಮಿ ಗುರುವಾರದಿಂದ ಮಾಘ ಬಹುಳ ತ್ರಯೋದಶಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ.

೧೯೦೬ ನೇ ಇಸವಿ ಫೆಬ್ರವರಿ.

ತಾ.	ವಾರ.	ತಿಥಿ.	ಘಳಿಗೆ.	ನಕ್ಷತ್ರ.	ಘಳಿಗೆ.
15	ಗುರು	ಸಪ್ತಮಿ	4?-28	ಸ್ವಾ	12 38
16	ಶುಕ್ರ *	ಅಷ್ಟಮಿ	39 29	ವಿ	8-30
17	ಶನಿವಾ ‡	ನವಮಿ	33 58	ಅ	4-32
18	ರವಿ	ದಶಮಿ	26 28	ಜ್ಯೇ	0-28
19	ಚಂದ್ರ ‡	ಏಕಾದಶಿ	23 58	ಪೂರ್ವಾಷಾ	54-52
20	ಕುಜ †	ದ್ವಾದಶಿ	20-12	ಉ	53 23
21	ಬುಧ ,,	ತ್ರಯೋ	17-29	ಶ್ರ	52 48

* ದಗ್ಧಯೋಗ ‡ ದಗ್ಧಯೋಗ
ಸರ್ವತ್ರ ಏಕಾದಶಿ, ದಗ್ಧಯೋಗ, ಸರ್ವೇಷಾಂ.
† ತಿಥಿದ್ವಯಂ, ಪ್ರದೋಷ
,, ಮಹಾಶಿವರಾತ್ರಿ, ಸಂಜೆಗೂಡಿಸಲ್ಲಿ ಬೆಳ್ಳಿಕೈಲಾಸವಾಹನ

ಪೇಟೇ ಧಾರಣೆ.

ದಿನಸಿ		ಮೈಸೂರು.	ಬೆಂಗಳೂ
ಕಡ್ಡೀ ಅಕ್ಕಿ ಪಲ್ಲ ೧ಕ್ಕೆ	ರೂ	೧೨-೦-೦	೧೩-
ಕೆಂಬೂತಿ ಅಕ್ಕಿ ಅವಲ್ ..	..	೧೨-೦-೦	೧೩
,, ದುಯ್ಯಂ	..	೧೧-೮-೦	೧೩
ಜಾಪಾನ್ ಅಕ್ಕಿ ..	..	೧೨-೦-೦	೧೨-
ಸಣ್ಣಕ್ಕಿ ಅವಲ್ ..	..	೧೩-೮-೦	೧೬-
,, ದುಯ್ಯಂ ..	..	೧೩-೦-೦	೧೬
ತೊಗರೀ ಬೇಳೆ ಪಲ್ಲ ೧ಕ್ಕೆ	..	೯-೬-೦	೧೧
,, ದುಯ್ಯಂ ..	..	೯-೦-೦	೧೦-
ಕ್ಯಾರಾಗಿ ಪಲ್ಲ ೧ಕ್ಕೆ ..	..	೭-೬-೦	೪
ಕಾದ್ರಿಗಿ	..	೭-೧೨-೦	೫-೧
ಜೋಳ	..	೩-೭-೦	೮-
ಹಲಸಂದೆ ಪಲ್ಲ ೧ಕ್ಕೆ ..	..	೯-೦-೦	೯-
ಬಿಳೀ ಅವರೆ ..	..	೮-೦-೦	೯
ಹೆಸರು . ..	..	೯-೬-೦	೧೦-
ಉದ್ದು . ..	..	೧೧-೦-೦	೧೧-
ಕಡಲೆ	..	೧೦-೦-೦	೧೦-೦
ಎಳ್ಳು ಸೇ. ೧೨೭ಕ್ಕೆ ..	..	೧೮-೮-೦	೧೬
ಹುರುಳಿ	..	೭-೬-೦	೩-
ಹರಳು ೧೨೭ ಸೇರಿಗೆ ..	..	೧೧-೮-೬	೧೩-
ಸೀಗೇಕಾಯಿ ಮಣ ೧ಕ್ಕೆ	..	೨-೧೨-೦	೨-೧
ಮೆಣಸಿನಕಾಯಿ ..	..	೩-೮-೦	೩-
,, ದುಯ್ಯಂ ..	..	೩-೬-೦	೩-
ಬೆಲ್ಲ ದೊಡ್ಡ ಅಚ್ಚು ..	..	೬-೬-೦	ಮ ೧-
ಬಳ್ಳೊಳ್ಳಿ ಮಣ ೧ಕ್ಕೆ ..	..	೫-೨-೦	೬-೧
ಹರಳೆಣ್ಣೆ ,, ..	..	೬-೧೨-೦	೬-
ಕೊತ್ತುಂಬರಿ ಪಲ್ಲ ೧ಕ್ಕೆ ..	..	೯-೮-೦	೧೦-
ಉಪ್ಪು ,, ..	..	೭-೧-೦	೩-
ಹುಣಿಸೇ ಹಣ್ಣು ..	..	೦-೧೬-೦	೦-೧
,, ಹಳೇದು ..	..	೦-೮-೦	೦-
ತುಪ್ಪ	..	೧೩-೦-೦	೧೧-
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ	..	೪-೦-೦	೫-
ತೆಂಗಿನಕಾಯಿ ೧೦೦ಕ್ಕೆ	..	೬-೦-೦	೬-
ಅರಳೇಕಾಯಿ ಮಣ ೧ಕ್ಕೆ	..	೦-೧೨-೦	೦-
ಅಂಟ್ವಾಳದ ಕಾಯಿ ಮಣ ೧ಕ್ಕೆ	..	೦-೧೨-೦	೦-೧
ಚಿನ್ನ (ಬಾರ್) ಕೆಂಪು	..	೧೫-೬-೦	೧೫-
,, ,, ಹಸಿಮೆ	..	೧೫-೭-೦	೧೫-
,, ,, ಗಟ್ಟಿ ತೊಲ ೧ಕ್ಕೆ	..	೨೩-೧೨-೦	೨೬-
ಬೆಳ್ಳಿ ಗಟ್ಟಿ ತೊಲ ೧೦೦ಕ್ಕೆ	..	೭೨-೦-೦	೮೧-

Printed and Published by the Rev. E. W. Thompson, M... the Proprietor and Manager, Wesleyan Mission Pr... Mysore 15/2/1906.

ವೃತ್ತಾಂತ ಪತ್ರಿಕೆ.

REGISTERED M. 80

ಕ್ರಯ ೧ ದುಡ್ಡು ———— ಕ್ರಯ ೧ ದುಡ್ಡು

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಪುಸ್ತಕ ೧೯ — ಮೈಸೂರು—ಸನ್ ೧೯೦೬ ನೇ ಇಸವಿ ಫೆಬ್ರವರಿ ತಾರೀಖು ೨೨ ನೇ ಗುರುವಾರ. — ಸಂಚಿಕೆ ೭೮

WANTED WILD ANIMALS.

ಬೇಕಾಗಿದೆ. ಬೇಕಾಗಿದೆ.

5-45

ಎಲ್ಲಾ ಬಗೆಯ ಕಾಡು ಮೃಗಗಳನ್ನು ಮೈಸೂರು ಜೂ ಸೂಪ ರಿಂಟೆಂಡೆಂಟ್ ಮಿ॥ ಹ್ಯೂಜಸ್ ಯವರು ಕೊಂಡುಕೊಳ್ಳುವರು.

Apply to—Mr Hughes, Mysore Zoo.

"ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ.

ಮೈಸೂರಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜಂಟ್ರ
ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ
(ಅಡ್ವಾನ್ಸು) .. .. .. ರೂ ೧—೦—೦
ನೇರವಾಗಿ ಆಫೀಸಿನಿಂದ ಅಂಚೆಯ ಮೇಲೆ ತರಿಸಿ
ಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಪೋಸಲ್
ಸಹ . . . . . . ರೂ ೧—೧೪—೦
" " ೬ " " ೦—೧೫—೦
ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ
ಬರೆಯಬೇಕು.
ವಿಳಾಸ —ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು.

ಜ್ವರಹರಿ. 29 3



ಈ ಸಾಧಾರಣ ಜ್ವರ, ಚಳೀಜ್ವರ, ಮೈಕೆಜ್ವರ, ಪಿತ್ಥಜ್ವರ, ಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮರಾಮತ್ ಸಬ್ ಡಿವಿಜನ್ ಆಫೀಸರ್ ಎಸ್ ಟಿ ವೆಂಕಟಪತಿ ಅಯ್ಯ ರವರು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨೦ ಸೀಸೆಯು ತೀರಿಹೋಯಿತು ಇಷ್ಟು ಸ್ವಲ್ಪ ಕಾಲದಲ್ಲೇ ಈ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚನ್ನಾಗಿ ಗುಣಹೊಂದಿರುವರು ಇನ್ನೂ ಜನಗಳು ಕಾಟೇ ಬೇಕೆಂತ್ತಿರುವ ಕಾರಣ ದಯವಿಟ್ಟು ಇನ್ನೊಂದು ೨೦ ಡಜನಿನ ಸೀಸೆಯನ್ನು ವಿ. ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದ್ದಾರೆ.

ಕ್ರಯ.—ಸೀಸೆ ೧ ಕ್ಕೆ ೮ ಆಣೆ, ೧ ರೂ , ೧—೮ ರೂ ; ಡಜನ್ ೨—೧೨ ಆ., ೧೧ ರೂ , ಹನ್ನೆರಡು ಸೀಸೆ ತರಿಸಿಕೊಂಡರೆ ಅಂಚೆಯ ಮಾಫಿ ಬಿಡಲಾಗುವದು.

••••••••

ಬಿಮಂಕಪೂರ ರ.

[illegible]

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆಕಳೆತ, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುತ್ತದೆ. ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಯೆ ಬರುವ ನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ. ಇದು ಜ್ವರಹರಿ ಎಂಬ ಔಷಧದಂತೆಯೇ, ಸೀಸೆಗಳಲ್ಲಿ ದೊರೆಯುವದು.

ಮೈಸೂರು ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಕೆಪ್ರಿಯ ಕ್ಲೋರ್ ರವನ್ನು ನಾನೂ ನನ್ನ ಕಾಬೇದಾರರೂ ಮ್ಯುನಿಸಿಪಲ್ ಪ್ರಾಂತ್ಯದಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣ ಮುಂತಾದ ರೋಗಿಷ್ಟರಿಗೆ ಕೊಡುತ್ತೇವೆ ಕೊಟ್ಟ ಕೂಡಲೆ ರೋಗವು ಗುಣವಾಗುತ್ತಲಿದೆ. ಇದು ಬಹು ಒಳ್ಳೇ ಔಷಧ ವಾಗಿದೆ.

ಈ ಎರಡು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯ ಕ್ಕೆ ದೊರೆಯುತ್ತವೆ. ಅಲ್ಲದೆ ಕೆಳಗಿನ ವಿಳಾಸದಾರರಲ್ಲಿ ವಿಳಾಸ — [illegible] ಗ್ರೇಟ್ ಇಂಡಿಯನ್ ಔಷಧಗಳ ಕಂಪನಿ, [illegible] ಮದ್ರಾಸ್.

ಅದ್ಭುತ ಜನವರಿ ಪ್ರೈಜೆಟ್ಸ್ ಆಫರ್!

[illegible]

ವಿಳಾಸ,—ಫ್ಲ್ಯಾಂಕ್ ವಾಚ್ ಕಂಪನಿ, ಪಾರ್ಕ್ ಟವನ್ ಮದರಾಸ್.

ಹೂರಿ ವೆ ಸೀ ಸಿ ಯಾ.

ಅಪ್ಪಣೆ ಪರಿಹಾರ

ತಗಲುತ್ತಲೇ ನೋವು ವಾಸಿಯಾಗುತ್ತೆ

ಈ ಔಷಧಿಯು ಮನೆ, ಅರಮನೆ, ಕಾರ್ಖಾನೆ, ಆಸ್ಪತ್ರೆ, ಪೊಲೀಸ್ ಠಾಣಾ, ವಿದ್ಯಾಶಾಲೆ, ಕೋರ್ಟು, ಕಛೇರಿ, ಮುಂತಾದ ಸ್ಥಳ ಗಳಲ್ಲೆಲ್ಲಾ ಇದ್ದೇ ಇರಬೇಕು ಇದಕ್ಕೆ ಸಮಾನವಾದ ಔಷಧ ಮತ್ತ್ಯಾವದೂ ಇಲ್ಲವೆಂಬುವದು ಲೋಕಪ್ರಸಿದ್ಧವಾಗಿದೆ

ಈ ತೈಲವು ತತ್ಕಾಲದಲ್ಲಿ ಜೀವಾಣಿಗಳಿಗೆ ಮರಣಾಂತಿಕ ಸಿಕ್ಕ ತಕ್ಕ ಔಷಧ ಇದನ್ನು ಉಪಯೋಗಿಸಿದ ದೊಡ್ಡ ಮನುಷ್ಯರು ಡಾಕ್ಟರುಗಳು, ಮುಂತಾದವರು ಇದರ ಗುಣವನ್ನು ಹೊಗಳಿ ಸರ್ಟಿಫಿಕೇಟುಗಳನ್ನು ಕೊಟ್ಟಿದಾರೆ ನೋವು ಕಂಡರೆ ಇದನ್ನು ಹಚ್ಚಿದ ಕೂಡಲೇ ವಾಸಿಯಾಗುವದು.

ಈ ತೈಲವು ಅರೆ ತಲೆನೋವು, ಸೊಂಟನೋವು, ಪಾರ್ಶ್ವವಾಯು, ಮೂಲವ್ಯಾಧಿ, ಉಬ್ಬಸ, ವಾಯುಗಳು, ನರ ಹೋರಳುವದು, ಉಳುಕು, ಕೀಲುವಾಯು, ಗುಳ್ಳೆಗಳು, ಹಲ್ಲುನೋವು, ಮುಖ ನೋವು, ಊದುಗಳು, ಗಡ್ಡೆಗಳು, ರಣಗಳು, ಮುಳ್ಳುತಾಗ್ಗಿ, ಸೊಳ್ಳೆ ಮತ್ತು ಚೇಳು ಕಡಿದದ್ದು ಚಿಪ್ಪಿರುವದು, ಬೆಂಕಿಯಲ್ಲಿ ಸುಟ್ಟು ಕೊಂಡದ್ದು, ಕತ್ತಿ ಗಾಯ—ಇವೇ ಮೊದಲಾದ ನಾನಾ ಬಾಧೆಗಳನ್ನು ಹುಟ್ಟಡಗಿಸುತ್ತದೆ. ರಾತ್ರಿ ಹಚ್ಚಿಕೊಂಡು ಮಲಗಿದರೆ ಸೊಳ್ಳೆ ಹತ್ತಿರ ಸೇರುವದಿಲ್ಲ.

ಕ್ರಯ:— ಸಣ್ಣ ಡಬ್ಬಿ ೧ ಕ್ಕೆ ೧ ರೂ., ದೊಡ್ಡದಕ್ಕೆ ರೂ. ೨—೮ ಆ.; ಒಂದೇ ಸಲ ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ ಬಿಡುತ್ತಾರೆ ರೂ ೨—೮ ಆಣೆ ಬಾಬ್ತು ಡಬ್ಬಿದಲ್ಲಿ ೧ ರೂ. ದಬ್ಬಿದಲ್ಲಿರುವದಕ್ಕಿಂತ ೪ ರಷ್ಟು ಹೆಚ್ಚು ಔಷಧವಿರುತ್ತೆ. ರೂ. ೨—೮ ಆ. ಈ ಡಬ್ಬಿವನ್ನು ತರಿಸಿಕೊಳ್ಳುವವರಿಗೆ ಟಪ್ಪಾಲ್ ಖರ್ಚು ಮಾಫಿ ಬಿಡುತ್ತೆ.

••••••••

ಹೋಮಿಯೋಪಿಯಾ ಯುಂಬ್ರೋಕೇಷನ್.

ಈ ತೈಲವು ಹಳೇ ನೋವುಗಳಿಗೆ ಉಪಯೋಗಿಸತಕ್ಕದ್ದು ಚರ್ಮ ಒಡೆದ ಕಡೆ ಇದನ್ನು ಹಚ್ಚಕೂಡದು. ಇದರಲ್ಲಿ ಹೋಮಿಯೋಪಿಯದ ಗುಣಗಳು ಬಹು ತೀಕ್ಷ್ಣವಾಗಿ ಇರುತ್ತವೆ ಅದಕ್ಕಿಂತಲೂ ಇದರಲ್ಲಿ ಇನ್ನೆರಡು ಗುಣಗಳುಳ್ಳ ಹೊಸ ಭಾಗವಿರುತ್ತದೆ. ಇದನ್ನು ಚರ್ಮವು ಬಹು ಬೇಗನೆ ಸೇದಿಕೊಳ್ಳಬಲ್ಲದು. ಡಬ್ಬಿಗಳಲ್ಲಿ ತುಂಬಿ ೮ ಆಣೆಗೂ, ೧ ರೂ. ಗೂ ಒಂದರಂತೆ ಬಿಕರಿ ಮಾಡಲ್ಪಡುವದು. ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ. ಎಲ್ಲಾ ಊರುಗಳಲ್ಲಿಯೂ ದೊರೆಯುವದು.

ಈ ಔಷಧಗಳ ವಿವರಣೆಯೂ, ಸರ್ಟಿಫಿಕೇಟುಗಳೂ ಉಳ್ಳ ನೋಟೀಸುಗಳನ್ನು ಅಪೇಕ್ಷಿಸಿದರೆ ಕಳುಹಿಸುವೆವು.

ವಿಳಾಸ:—ಹೋಮಿಯೋಪಿಯಾ ಕಂಪನಿ. ೨೬ ಸೌಂಡು [illegible] ಮದ್ರಾಸ್.

ಇಗೋ! ನೋಡಿ—ಮತ್ತೊಂದು ಹೊಸಪುಸ್ತಕವು—ಬಹು ರಸಿಕವಾಗಿದೆ. ಅರೇಬಿಯನ್ ನೈಟ್ಸ್ ಅಥವಾ ಯವನಯಾಮಿನೀ ವಿನೋದ ಕಥೆಗಳು

37 2

ಎಂಬ ಮಹಾಪ್ರಸಿದ್ಧವಾದ ಪುಸ್ತಕವು ತೆಲುಗಿನ ಲ್ಲಿ ಈಗತಾನೇ ಪ್ರಕಟಿಸಲ್ಪಟ್ಟಿದೆ. ಡೆಮ್ಮಿ ಅಷ್ಟಪತ್ರ. ನಾನೂರು ಎಪ್ಪತ್ತು ಪುಟಗಳುಳ್ಳದ್ದಾಗಿಯೂ ಆ ಬಾಲವೃದ್ಧರಿಗೆ ಪ್ರೋತ್ಸಾಹಕರವಾಗಿಯೂ, ಮಹಾ ರಸಿಕವಾಗಿಯೂ ರಚಿತವಾಗಿರುವ ಈ ಪುಸ್ತಕದ ಅಭಿರುಚಿಯನ್ನು ವಾಚಕ ರು ಸ್ವಾನುಭವದಿಂದಲೆ ಗ್ರಹಿಸಿ ತಿಳಿದುಕೊಳ್ಳುವರು. ಭಾಷೆಯು ಬಹು ಸರಳವಾಗಿರುವದು. ಮತ್ತು ಇದನ್ನು ಬರೆಯುವದಕ್ಕೆ ಸುಮಾರು ಎರಡು ವರ್ಷಗಳು ಹಿಡಿದಿವೆ. ಪುಸ್ತಕವನ್ನು ಒಂದಾವರ್ತಿ ಓದಿದಮೇಲೆ ಅದನ್ನು ಪುನಃ ಓದುವಂತೆ ಅದು ಮನಸ್ಸನ್ನು ಆಕರ್ಷಿಸುವದು ಇದರ ಬೆಲೆ ಎರಡು ರೂಪಾಯಿ ಮಾತ್ರವೇ ಹಾಸಲು ಎರಡು ಆಣೆಗಳು. ವಿ. ಪಿ. ಮೂಲಕ ತರಿಸಿಕೊಂಡರೆ ಎರಡು ರೂಪಾಯಿ ಮೂರು ಆಣೆಗಳಾಗುವವು. ಹೊಸರೂ ಬಡವರೂ ಎಲ್ಲರೂ ಕೊಂಡು ಓದಿ ಪ್ರಯೋಜನವನ್ನು ಪಡೆಯಬೇಕೆಂದು ಇಷ್ಟು ದೊಡ್ಡಪುಸ್ತಕವನ್ನು ಇಷ್ಟು ಸುಲಭಕ್ರಯಕ್ಕೆ ಮಾರುತ್ತೇವೆ.

ಪುಸ್ತಕವು ದೊರಕುವ ಸ್ಥಳ

ಸಿ. ಎಲ್. ಎಸ್, ಬುಕ್ ಡಿಪೋ,

ಮೈಸೂರು.

ಇಂಡಿಯಾ ವ್ಯವಸಾಯ ಮತ್ತು ಸಹಾಯಕ ಆಫೀಸು.

14 22

[೧೯೦೩ ರಲ್ಲಿ ಸ್ಥಾಪಿತವಾದದ್ದು]

ಈ ಆಫೀಸಿನ ಉದ್ದೇಶವೇನಂದರೆ—ಯಾವ ಜಾತಿಯವರೇ ಆಗಲಿ ಮತದವರೇ ಆಗಲಿ ಈ ಆಫೀಸಿನ ಚಂದಾದಾರರಾಗಿ ಇದರ ಭರವಸ ಪತ್ರವನ್ನು ಹೊಂದಿದ್ದರೆ ಅವರ ಮರಣಾನಂತರ ಅವರ ಕುಟುಂಬದವರಿಗೆ ಸಹಾಯವು ಕೊಡಲ್ಪಡುವದು.

ಈ ಆಫೀಸಿನ (A) ತರಗತಿಗೆ ಸೇರಿದವರು ಪಡೆಯಪೇಕ್ಷಿಸುವ ಪ್ರತಿ ೧೦೦೦ ರೂಪಾಯಿಗಳ ಮೊಬಲಗಿಗಾಗಿ ಮಾಸೆಯಾವಾ ಒಂದೊಂದು ರೂಪಾಯಿಯ ಪ್ರಕಾರ ಒಟ್ಟು ರೂ ೪೬ ನ್ನು ಮಾತ್ರವೇ ಸಲ್ಲಿಸಬೇಕಾಗುವದು.

ಆಫೀಸಿನವರು ಚಂದಾದಾರರಿಂದ ವಸೂಲಾದ ಮೊಬಲಗನ್ನು ಶಾಸ್ತ್ರರೀತಿಯಾಗಿ ನಡೆಸಲ್ಪಡುವ ವ್ಯವಸಾಯಕ್ಕೆ ಹಾಕಿ ಅದರಿಂದ ಬಂದ ಲಾಭದಿಂದಲೇ ಚಂದಾದಾರರ ಸಹಾಯದ್ರವ್ಯವನ್ನು ಕೊಡಲಾಗುವದು ವ್ಯವಸಾಯ ನಿಮಿತ್ತವಾಗಿ ನಾವು W.I.P. ರೈಲ್ವೆ ಪಕ್ಕದಲ್ಲಿರುವ "ಕೊಲ್ಲಂ ಎಸ್ಟೇಟ್" ಎಂಬ ಸರ್ವೋತ್ಕೃಷ್ಟವಾದ ಭೂಮಿಯನ್ನು ೯೯ ವರ್ಷಕ್ಕೆ ಸ್ವಂತವಾಗಿ ಪಡೆದಿದ್ದೇವೆ. ಈ ಭೂಮಿಗೆ ಒಂದು ಹೊಳೆಯಿಂದ ಕಾಲುವೆ ಮಾಡಿ ನೀರನ್ನು ತಂದುಕೊಂಡಿರುವದರಿಂದ ಫಸಲು ಕಡಮೆಯಾಗುವದೆಂಬ ಭಯವೇ ಇಲ್ಲ.

ಈ ಆಫೀಸಿನಲ್ಲಿ ಭರವಸಪತ್ರವನ್ನು ಪಡೆದಿರುವವರು ಚಂದಾದಾರರಾಗಿ ಮಾತ್ರ ಇದ್ದಾರೆ. ಆದಾಯ ನಷ್ಟಗಳಿಗೆ ಭಾಗಿಗಳಾದ ಷೇರುದಾರರಾಗಿರುವದಿಲ್ಲ ಆದರೂ ಅವರ ಹಣಕ್ಕೆ ನಮ್ಮ ಭೂಸ್ಥಿತಿಯು ಆಧಾರವಾಗಿರುತ್ತದೆ.

ಚಂದಾ ಮೊಬಲಗನ್ನೆಲ್ಲಾ ಪಾವತಿ ಮಾಡಿ ಭರವಸಪತ್ರವನ್ನು ಪಡೆದಿರುವ ಯಾವ ಚಂದಾದಾರನಿಗಾಗಲಿ ಆಫೀಸಿನಿಂದ ಬರತಕ್ಕ ಲಾಭವು ತೃಪ್ತಿಕರವಾಗಿ ಕಂಡುಬಾರದಿದ್ದರೆ ತಾನು ಸಲ್ಲಿಸಿರುವ ಚಂದಾಮೊಬಲಗನ್ನೆಲ್ಲಾ ವಾಪಸು ಪಡೆಯಬಹುದು

ಈ ಆಫೀಸಿಗೆ ಸಬ್ ಏಜಂಟುಗಳು ಬೇಕಾಗಿದೆ. ವಿವರವಾಗಿ ತಿಳಿಯಲಪೇಕ್ಷಿಸುವವರು ಅರ್ಧಾಣೆ ಸ್ಟಾಂಪಿಟ್ಟು ಕೆಳಗಿನ ವಿಳಾಸಕ್ಕೆ ಇಂಗ್ಲಿಷಿನಲ್ಲಿ ಬರೆದುಕೊಳ್ಳತಕ್ಕದ್ದು.

ವಿಳಾಸ:—The Manager,

The India Agricultural and Helping Office,

Vengurla Post, Bombay Presidency.

೧೯೦೬ ನೇ ವರ್ಷದ ಲೋಯರ್ ಸೆಕೆಂಡರಿ ಕನ್ನಡ ಟೆಕ್ಸ್ಟ್ ನೋಟ್ಸ್.

45 1

ಎಲ್ಲಾ ನೋಟ್ಸುಗಳಿಗಿಂತಲೂ ಉತ್ತಮವಾದದ್ದು. ಕ್ರಯ ೩ ಆಣೆ. ನಮ್ಮ ನೋಟ್ಸನ್ನೂ ಇತರರ ನೋಟ್ಸನ್ನೂ ಹೋಲಿಸಿ ನೋಡಿರಿ. ಇತರರ ಪ್ರೋತ್ಸಾಹನೆಗೆ ಮರುಳಾಗಬೇಡಿರಿ.

ಯಂ. ಆರ್. ವೆಂಕಟಸುಬ್ಬಾಚಾರ್ಯ, ಮೈಸೂರು.

ಪ್ರಿಂಟಿನ ಯಂತ್ರ ಕ್ರಯಕ್ಕೆ ಬಂದಿದೆ.

41 1

ಡಬ್ಬಲ್ ಡಿಮ್ಮಿ ಸೈಜು. ಬಹು ಜಾಗ್ರತೆಯಾಗಿ ಪ್ರಿಂಟುಮಾಡತಕ್ಕದ್ದು; ರೂಲರುಗಳು, ಬೇಸುಗಳು ಚಕ್ರಗಳು ಎಲ್ಲಾ ಸೇರಿ ಕೊಡಲಾಗುತ್ತೆ. ಇದಕ್ಕೆ ಒಂದೆರಡು ಕಡೆ ಸ್ವಲ್ಪ ರಿಪೇರಿ ಆಗಬೇಕಾಗಿರುವುದು. ಅಗ್ಗವಾಗಿ ಕೊಡುತ್ತೇವೆ. ಯಂತ್ರವನ್ನು ಖುದ್ದಾಗಿ ಬಂದು ನೋಡಲೂಬಹುದು. ಈ ವಿಳಾಸಕ್ಕೆ ಬರೆದು ಕೇಳಿ:—

ದಿ ಸೂಪರಿಂಟೆಂಡೆಂಟ್, ವೆಸ್ಲಿಯನ್ ಮಿಷನ್ ಪ್ರೆಸ್, ಮೈಸೂರು.

ಹರಿಶ್ಚಂದ್ರೋದ್ಧರಣವೆಂಬ ಶಿವರಾತ್ರಿ ಕಥೆ.

36-2

ಗೋವಿನ ಹಾಡಿನ ಸರಣಿಯಲ್ಲಿ ರಚಿಸಲ್ಪಟ್ಟಿದೆ ಇದರಲ್ಲಿ ಬೇಡ, ಜಿಂಕೆಗಳು, ಮತ್ತು ಪರಮೇಶ್ವರ ಇವರ ಚರಿತ್ರೆಗಳಿಂದ ಶಿವರಾತ್ರಿ ಮಹಿಮೆಯು ಉಕ್ತವಾಗಿದೆ ಶಿವಭಕ್ತಿಯುಕ್ತರಾದ ಸಮಸ್ತರೂ ಇದನ್ನು ಅವಶ್ಯವಾಗಿ ಓದಬೇಕಾದದ್ದು. ಆನಲ್ ಕಾಗದದ ಪ್ರತಿಗೆ ೨|| ಆಣೆ. ಸಾದಾ ಕಾಗದದ ಪ್ರತಿಗೆ ೨ ಆಣೆ. ೧೨ ಪ್ರತಿಗಳಿಗೆ ಒಂದು ಪ್ರತಿ ಹೆಚ್ಚಾಗಿ ಕೊಡಲ್ಪಡುತ್ತೆ.

ವಿಳಾಸ—೧. ಅರಮನೆ ಹುವ್ವಿನ ಶಿವಲಿಂಗದೇವರು, ನೋಸಿಮರದ ಯ್ಯಾನ ಗುಡಿ ಬಳಿ, ಕೃಷ್ಣರಾಜಮೊಹಲ್ಲಾ, ಮೈಸೂರು;

ವಿಳಾಸ—೨ ಯಂ ಮರಿಮಾದಯ್ಯ, ಜನರಲ್ ಮರ್ಚೆಂಟ್ಸ್, ಚಾಮುಂಡಿ ರೋಡ್, ಮೈಸೂರು

ರಬ್ಬರ್ ಸ್ಟಾಂಪುಗಳು.

43-1

ನಮ್ಮ ಕಂಪೆನಿಯಲ್ಲಿ ತಯಾರ್ಮಾಡಲ್ಪಡುವ ಇಂಗ್ಲಿಷ್ ಮೇಡ್ ರಬ್ಬರ್ ಸ್ಟಾಂಪುಗಳು ಬರುವ ಜನವರಿ ಆಖೈರೊಳಗಾಗಿ ದರಖಾಸ್ತು

ಕಳುಹಿಸತಕ್ಕವರಿಗೆ ಅರ್ಧ ಕ್ರಯಕ್ಕೆ ತಯಾರಿಸಿ ಕಳುಹಿಸುತ್ತೇವೆ ಬಾದಾಮಿ, ರವುಂಡು, ಚಚ್ಚೌಕ, ಯಾವ ಆಕಾರವಾದರೂ ಅದರಲ್ಲಿ ರಬೇಕಾದ ಅಕ್ಷರಗಳನ್ನು ಹಾಕಿ, ಸುಂದರವಾದ ರಬ್ಬರ್ ಸ್ಟಾಂಪು ೧, ಇಂಕಿ ಸೀಸಾ ೧, ರಬ್ಬರ್ ಸ್ಟಾಂಪು ಇರಿಸುವ ಪೆಟ್ಟಿಗೆ ೧, ಬ್ರಷ್ ೧, ಪ್ಯಾಡ್ ೧, ಇವುಗಳ ಸಹಿತ ಕ್ರಯ ರೂ ೧—೮—೦, ಪೋಸ್ಟೇಜು ೩ ಆಣೆ.

ವಿಳಾಸ:—ಮ್ಯಾನೇಜರ್, ರಬ್ಬರ್ ಸ್ಟಾಂಪ್ ಮ್ಯಾನುಫ್ಯಾಕ್ಚರಿಂಗ್ ಕಂಪೆನಿ, ಜಾರ್ಜ್ ಟೌನ್, ಮದ್ರಾಸ್.

ಹೊಸ ಪುಸ್ತಕಗಳು.

36-2

ದೇವರನಾಮಗಳ ಪುಸ್ತಕ —ಇದರಲ್ಲಿ ಹೆಂಗಸರಿಗೆ ಉಪಯೋಗವಾಗುವ ಹಾಡುಗಳು, ದೇವರ ಪೂಜೆಮಾಡುವ ಕೀರ್ತನೆಗಳು, ಅಧ್ಯಾತ್ಮಭಾರತ, ಭಾಗವತ, ಸಂಕ್ಷೇಪ ರಾಮಾಯಣ, ಇವುಗಳು ಇನ್ನೂ ವಿಚಿತ್ರವಾದ ಲಾವಣಿಗಳೂ ಇರುತ್ತೆ. ಕ್ರಯ ೮ ಆಣೆ.

ಪಂಚಕಥಾ —ಇದರಲ್ಲಿ ಪ್ರಹ್ಲಾದಚರಿತ್ರೆ, ಮಾಧವನಚರಿತ್ರೆ, ಅನಸೂಯಾಚರಿತ್ರೆ, ದ್ರೌಪದೀ ಮಾನರಕ್ಷಣವೆಂಬ ದ್ಯೂತಪರ್ವ, ದೂರ್ವಾಸಚರಿತ್ರೆಯೆಂಬ ಐದು ಕಥೆಗಳು ಸೇರಿರುತ್ತೆ. ೬ ಆಣೆ.

ಸೇತೂರಾಯರಕಥೆ —ಭೋಜನಕಾಲನಿರ್ಣಯ, ಕನಕದಾಸರ ಕಥೆ ಎಲ್ಲಾ ಒಂದರಲ್ಲಿ ಕ್ರಯ ೩ ಆಣೆ.

ಶ್ರೀಮನ್ ಮಧ್ವಸಿದ್ಧಾಂತಸಾರ —ದ್ವೈತಾದ್ವೈತ ಮತವಿಷಯಗಳನ್ನು ವಿವರಿಸಲ್ಪಟ್ಟಿದೆ ಕ್ರಯ ೩ ಆಣೆ.

ರುಕ್ಮಾಂಗದ ಮಹಾರಾಯನ ನಾಟಕ .—ಕ್ರಯ ೩ ಆಣೆ.

ಒಬ್ಬ ಸಿಪಾಯಿಯ ಸಾಹಸಗಳು —"ಒಂದು ಎತ್ತು ಮತ್ತು ಆರು ಗುರುಗೇಜಿಗಳ ಸುದ್ದಿ" —ಕ್ರಯ ೪ ಆಣೆ.

ಇಪ್ಪತ್ತನೆಯ ಶತಮಾನದ ಇರುಳು—ಕ್ರಯ ೨ ಆಣೆ.

ವಿ ಪಿ. ಚಾರ್ಜ್ ಬೇರೆ. | ವಿಳಾಸ —ಜಗದೀಶಪುರ ನಾರಾಯಣದಾಸ, ೧೬೮ ಅರಳೇಪೇಟೆ, ಬೆಂಗಳೂರು ಸಿಟಿ.

CHAMBERLAIN'S COLIC, CHOLERA AND DIARRHOEA REMEDY.

ಚೇಂಬರ್ಲೇನ್ ಯವರು ಹೊಟ್ಟೆಕೂಲೆ, ಕಾಲರಾ, ಭೇದಿಗಳಿಗೆ ಕಂಡುಹಿಡಿದಿರುವ ಔಷಧವು.

15-7



ಕೆಳ ಹೊಟ್ಟೆಯ ನೋವು, ಬರೀ ಭೇದಿಯಾಗುವುದು, ಆಮಶಂಕೆ, ವಾಂತಿಭೇದಿ ಉಪದ್ರ, ಕೀಲುಗಳ ನೋವು, ಹೊಟ್ಟೆಯ ನಾನಾ ತರದ ಶೂಲೆಗಳು—ಈ ರೋಗಗಳನ್ನೆಲ್ಲಾ ನಾಶಮಾಡುತ್ತದೆ. ಈ ಪರನಾಶ್ಚರ್ಯಯುಕ್ತವಾದ ಔಷಧವು ಜನರನ್ನು ಬದುಕಿಸಿರುವಷ್ಟು ಮತ್ತು ನೋವನ್ನೂ ಬಾಧೆಯನ್ನೂ ನಿವಾರಣೆ ಮಾಡಿರುವಷ್ಟು ಪ್ರಪಂಚದಲ್ಲೇ ಇನ್ಯಾವ ಔಷಧವೂ ಮಾಡಿರುವುದಿಲ್ಲ.

ಜ್ಞಾಪಕದಲ್ಲಿಟ್ಟುಕೊಳ್ಳಿ—ಒಂದು ಹೊತ್ತು ಈ ಔಷಧವನ್ನು ಸೇವಿಸಿದ ಕೂಡಲೇ ಹೊಟ್ಟೆಯೊಳಗಿರುವ ಎಲ್ಲಾ ತರದ ನೋವನ್ನೂ ನಿಲ್ಲಿಸಿಬಿಡುತ್ತದೆ ಬಹಳ ಕಠಿಣವಾದ ಭೇದಿಯೂ ಕೂಡ ಮೂರೇ ಹೊತ್ತು ಈ ಔಷಧದಿಂದ ನಿರ್ಮೂಲಮಾಡಿ ನಿಲ್ಲಿಸುತ್ತದೆ. ಖಂಡಿತವಾಗಿ ನಾಶಮಾಡುವುದೇ ಇದರ ಗುಣ.

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ

ಕೈಯಿಂದ ಸ್ವಲ್ಪವೂ ಮುಟ್ಟಿದ್ದಲ್ಲ.

ಇದು ಎಲ್ಲೆಲಲ್ಲ ಬಿಕರಿಯಾಗುವುದು. ಸಣ್ಣ ಶೀಸೆಗೆ ೧ ರೂಪಾಯಿ ದೊಡ್ಡ ಶೀಸೆಗೆ ೨ ರೂಪಾಯಿ.

ತ್ವರೆಮಾಡಿ! ಸುಲಭ ಖರೀದಿ!!

ಕ್ರಯ ರೂ ೩. ಕ್ರಯ ರೂ. ೪

39—1

ಗೆಜ್ಜೆ ನಾಗರ.

ಈ ಗೆಜ್ಜೆನಾಗರವನ್ನ ಎಂದಿಗೂ ಕಪ್ಪಾಗದಿರುವ ಸೀಮೆ ಹಿತ್ತಾಳೆಯಿಂದ ಅತಿಸುಂದರವಾದ ಪೋಗರೆ ಕೆಲಸವನ್ನು ಮಾಡಿ, ಶುದ್ಧ ಬಂಗಾರದ ಗಿಲೀಟು ಮಾಡಲ್ಪಟ್ಟಿದೆ ಬಂಗಾರದಿಂದ ಮಾಡಿದ ಗೆಜ್ಜೆನಾಗರಕ್ಕೂ ಇದಕ್ಕೂ ಸ್ವಲ್ಪವೂ ಭೇದ ತೋರುವದಿಲ್ಲ ಇಷ್ಟು ಸುಲಭ ಖರೀದಿಗೆ ಯಾರಿಂದಲೂ ಇದುವರೆಗೆ ಮಾರಲ್ಪಟ್ಟಿಲ್ಲವು ಇದನ್ನು ಉಪಯೋಗಿಸಿದರೆ ಗೊತ್ತಾಗುವದು ನಾವು ಹೊಗಳುವದರಿಂದ ಪ್ರಯೋಜನವಿಲ್ಲ.

ಕ್ರಯ ರೂ. ೪—೦—೦

ವಿ ಪಿ. ಪಿ. ಖರ್ಚು. ೦—೩—೦

ಬೇಕಾದವರು ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು.

ಗುರುಬಸವ ಅಂಡು ಕಂಪನಿ,
ಸಾಹುಕಾರಪೇಟೆ, ಮದರಾಸ್.

ಶುಕಸಪ್ತತಿ ಕಥೆಗಳು.

42-1

ಈ ಪುಸ್ತಕವು ಹೊಸದಾಗಿ ಸಂಸ್ಕೃತದಿಂದ ಭಾಷಾಂತರ ಮಾಡಲ್ಪಟ್ಟಿದೆ ಕೇವಲ ವೈರಾಗ್ಯವನ್ನೂ ಸ್ತ್ರೀಪಾತಿವ್ರತ್ಯವನ್ನೂ ಬೋಧಿಸುತ್ತದೆ ಕ್ಷೇತ್ರಮಾಹಾತ್ಮ್ಯಗಳೂ, ಸತ್ಪುರುಷರ ಚರಿತ್ರೆಗಳೂ, ರೋಗಕಾರಣ, ಚಿಕಿತ್ಸೆ, ರಸವಾದ, ಧರ್ಮಶಾಸ್ತ್ರ, ರತ್ನಪರೀಕ್ಷೆ, ಸಂತಾನೋತ್ಪತ್ತಿ.....ಮೊದಲಾದ ಅನೇಕ ಸಂದರ್ಭಗಳು ಈ ಒಂದೇ ಪುಸ್ತಕದಲ್ಲಿಯೇ ಅಡಗಿರುತ್ತವೆ ಅವಲೋಕಿಸಿ ನೋಡಿದರೆ, ಇವೆಲ್ಲಾ ನಿಶ್ಚಯವೆಂದು ನೀವೇ ಹೇಳುತ್ತೀರಿ.

ಬೆಲೆ:—ಅವ್ವಲ್ ಪ್ರತಿ ೧ ಕ್ಕೆ ರೂ. ೨—೮—೦ (ಇವು ಕೆಲವು ಪ್ರತಿಗಳು ಮಾತ್ರ ಉಳಿದಿರುವದರಿಂದ ಜಾಗ್ರತೆಯಾಗಿ ತರಿಸಿಕೊಳ್ಳುವವರಿಗೆ ಮಾತ್ರ ದೊರೆಯುವವು)

ದುಯ್ಯಂ ಪ್ರತಿ ೧ ಕ್ಕೆ ರೂ ೧—೮—೦

ಮೈಸೂರು ಲೋವರ್ ಸೆಕೆಂಡರಿ ವಿದ್ಯಾರ್ಥಿಗಳಿಗೆ ಉಪಯುಕ್ತವಾದ

೧. ಚರಿತ್ರ ಚಿಂತಾಮಣಿ—ಎಂಬ ಪ್ರಶ್ನೋತ್ತರ ರೂಪವಾದ ಹಿಂದೂ ದೇಶದ ಚರಿತ್ರೆಯು ೧ ಗಂಟೆ ಹೊತ್ತಿನಲ್ಲಿ ಚರಿತ್ರೆಯನ್ನೆಲ್ಲಾ ಅವಗಾಹನೆಗೆ ತರುತ್ತದೆ ಬೆಲೆ —೮ ಆ

೨. ಗಣಿತಾಬ್ಧಿಭಾಸ್ಕರ—ವೆಂಬ 'ಪರ್ಕಿಂಗ್ ಸಮೇತನಾದ ಗಣಿತ ಶಾಸ್ತ್ರವು. ಪರೀಕ್ಷಾರ್ಹವಾದ ಉದಾಹರಣೆಗಳು ಬೆಲೆ — ೪ ಆ

ಪ್ರತಿ ಪುಸ್ತಕಕ್ಕೂ ಟಪಾಲ್ ಖರ್ಚು ಪ್ರತ್ಯೇಕವಾಗಿ ಬೀಳುತ್ತದೆ.

ಅಪೇಕ್ಷೆಯುಳ್ಳವರು ಕೆಳಗೆ ನಮೂದಿಸುವ ವಿಳಾಸದಾರರಿಂದ ವಿ. ಪಿ ಮೂಲಕ ಪಡೆಯಬಹುದು.

ಟಿ. ವಾಮದೇವ ಶಾಸ್ತ್ರಿ,
ಹಲಸೂರು ಪೇಟೆ—ಬೆಂಗಳೂರು ಸಿಟಿ

ಪ್ರಶ್ನೋತ್ತರ ರತ್ನಮಾಲಿಕೆ.

44-1

ಶ್ರೀಮಚ್ಛಂಕರ ಭಗವತ್ಪಾದಾಚಾರ್ಯರಿಂದ ಭಕ್ತಿ ನೀತಿ, ಜ್ಞಾನಪ್ರತಿಪಾದಕವಾಗಿರುವಂತೆ ರಚಿಸಲ್ಪಟ್ಟ ಈ ಗ್ರಂಥವು ಕನ್ನಡ ಪ್ರಶ್ನೋತ್ತರಗಳೊಡನೆ ಪ್ರಕಟಿಸಲ್ಪಟ್ಟಿದೆ. ಬಾಲ್ಯದಿಂದಲೇ ಮಕ್ಕಳನ್ನು ಸುಗುಣಸುಜ್ಞಾನವಂತರನ್ನಾಗಿ ಮಾಡಲಪೇಕ್ಷಿಸುವ ತಂದೆತಾಯಿಗಳೂ ಉಪಾಧ್ಯಾಯರೂ ಗ್ರಂಥರೂಪವಾದ ಈ ರತ್ನಮಾಲಿಕೆಯು ಅಲಂಕರಿಸಬೇಕೆಂದು ಪ್ರಾರ್ಥನೆ. ಹಾಸಲು ಸಹಿತ ೨ ಆ ೬ ಪೈ ೬ ಪ್ರತಿಗಳಿಗೆ ಕಮ್ಮಿ ವಿ. ಪಿ ಮಾಡುವುದಿಲ್ಲ. ೧೨ ಕ್ಕೆ ೧ ಪ್ರತಿ ಇನಾಂ ನಿಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಿರಿ.

೧ ಸುಬ್ಬನರಸಿಂಹಯ್ಯ, ಶಿವರಾಂಪೇಟೆ ಸ್ಕೂಲ್, ಮೈಸೂರು

೨ ಎಚ್ ಎ ನರಸಿಂಹಯ್ಯಂಗಾರ್, ಮಿಷನ್ ಪ್ರೆಸ್, ಮೈಸೂರು

ಕೊಡಗು ದೇಶದ ಸ್ವಚ್ಛವಾದ ಉತ್ಕೃಷ್ಟ ಕಾಫಿಯು.

ಗುರುತಿರುವ ಇರುವದು ಅಥವಾ ಆಗತಾನೆ ಹುರಿದದ್ದು, ನವಮಾಡಿದ ಸ್ಥಳದಿಂದಲೆ ನೆಟ್ಟಗೆ ರವಾನಿಸಲ್ಪಡುವದು.

05-2

ವ್ಯಾಪಾರದ C C E C ಹೆಗ್ಗುರ್ತು

ಕಾಡುಕೋಣದ ತಲೆಯ ಮುದ್ರೆ ಇದೆ.

ಸಂಪೂರ್ಣವಾಗಿ ಯಂತ್ರದಿಂದಲೆ ಸಿದ್ಧಪಡಿಸಿದ್ದು. ಹೆಗ್ಗುರುತುಳ್ಳ ವಿಳಾಸದ ಚೀಟಿ ಸುತ್ತಿಲ್ಲದಿರುವವು ಸ್ವಚ್ಛವಾದವುಗಳಲ್ಲ. ಈ ನಮ್ಮದಲ್ಲ. ಏಜಂಟರುಗಳು ಬೇಕು. ಇಂಥವರಿಗೆ ಅಲಾಯದ ಕಮೀಷನ್ ಬರೆಯುವವರು ದಯವಿಟ್ಟು ಈ ಪತ್ರಿಕೆಯ ಹೆಸರನ್ನು ಸೂಚಿಸಿ.

ವಿಳಾಸ.—ಮ್ಯಾನೇಜರ್, ಮ್ಯಾಥಿಸನ್ಸ್ ಕಾಫಿ ವರ್ಕ್ಸ್, ಹುಣಸೂರು

೫,೦೦೦ ಪವುಂಡ್ ಉಲ್ಲನ್ ದಾರ ಮಾತ್ರ ಇದೆ

40—1

೧ ಚೇಟಿಯಿರುವ ಉಲ್ಲನ್	ಪವುಂಡ್ ೧ ಕ್ಕೆ				೧—೧೨—
೨ ಪರ್ಸ್ ಸೂಪರ	"	"	"		೧—೧೪—
೩ ಸುಪೀರಿಯರ್	"	"	"		೨—೩—
೪ ನೊವುರಸಟ್	"	"	"		೩—೪—

ಉಲ್ಲನ್ ಟೋಪಿ ಡಜನ್ ೧ ಕ್ಕೆ ೬—೦—೦. ಒಂದೇ ದಫೆ ೬ ಡಜನ್ ತರಿಸಿಕೊಳ್ಳುವವರಿಗೆ ೬—೧೨—೦.

ಹೊಸ ನಮೂನೆ ದೊಡ್ಡ ಸೈಜು ಪೋಸ್ಟು ಕಾರ್ಡುಗಳು.

೧ ಸಿಂಗಲ್ ಕಲರ್ ೧೦೦ ಕ್ಕೆ ೦-೨-೬, ೧೦೦೦, ೦-೪

೨ ಡಬಲ್ ಕಲರ್ ೧೦೦ ಕ್ಕೆ ೦-೩-೦ ೧೦೦೦ ೧-೧೦

೫೦ ರಿಂದ ೧೦೦ ಪವುಂಡ್ ತರಿಸಿಕೊಳ್ಳುವವರಿಗೆ ಪವುಂಡ್ ೧ ಕ್ಕೆ ೨ ಆಣೆ ಕಮಿಷನ್ ಕೊಡಲ್ಪಡುತ್ತೆ. ವಿ. ಪಿ. ಪಿ. ಮೂಲಕ ತರಿಸಿಕೊಳ್ಳುವವರು ಮಾತ್ರ ೧೦೦ ಕ್ಕೆ ೨೫ ರಂತೆ ಮುಂಚಿತವಾಗಿ ಕಳುಹಿಸದ ಹೊರತು ವಿ ಪಿ. ಮೂಲಕ ಕಳುಹಿಸಲಾರೆವು.

ಯಲ್, ಯಮ್ ಪೋರವಾಲ್ ಅಂಡ್ ಕಂಪನಿ,
ಬೆಂಗಳೂರು

ವೃತ್ತಾಂತ ಪತ್ರಿಕೆ

—:೦:—

೧೯೦೬ ನೇ ಇಸವಿ ಫೆಬ್ರವರಿ ತಾ|| ೨೨ ನೇ ಗುರುವಾರ.

ಮೈಸೂರು ಕೈಗಾರಿಕೆ ಪ್ರದರ್ಶನವು.

ಮೈಸೂರು ಸರ್ಕಾರದವರು ರಾಜಧಾನಿಯಲ್ಲಿ ನಡೆಸಿದ ಕೈಗಾರಿಕೆ ಮತ್ತು ವ್ಯವಸಾಯೋಪಕರಣಗಳ ಪ್ರದರ್ಶನದ ವಿವರವನ್ನು ಪ್ರಕಟಿಸಿರುತ್ತೇವಷ್ಟೆ. ಈ ಪ್ರದರ್ಶನವು ಮುಕ್ತಾಯವಾಯಿತು. ಇದರ ವಿಷಯದಲ್ಲಿ ನಮಗೆ ತೋರುಬಂದ ಕೆಲವು ವಿಷಯಗಳನ್ನು ಕುರಿತು ಈಗ ಬರೆಯುವೆವು.

(೧) ಸೆಕ್ರೆಟರಿ ಮೆ|| ಎ. ಆನಂದರಾಯರೂ ಅವರ ಕೆಳಗಿನ ಉದ್ಯೋಗಸ್ಥರೂ ಪ್ರದರ್ಶನ ಶಾಲೆಯಲ್ಲಿ ಸರಿಯಾಗಿ ಇದ್ದುಕೊಂಡು, ತೃಪ್ತಿಕರವಾದ ಏರ್ಪಾಡುಗಳನ್ನು ಮಾಡಿದ್ದುದಕ್ಕಾಗಿ ಸಂತೋಷಪಡುತ್ತೇವೆ. ಸಾವಿರಾರು ಪ್ರಜೆಗಳು ಕುತೂಹಲಯುಕ್ತರಾಗಿ ಪ್ರದರ್ಶನಕ್ಕೆ ಹೋಗಿ ಅಲ್ಲಿಟ್ಟಿದ್ದ ವಸ್ತುವಿಶೇಷಗಳನ್ನು ನೋಡಿ ಸಂತೋಷಪಡುತ್ತಿದ್ದುದನ್ನು ನೋಡಿದರೆ ಅವರಿಗೆ ಇಂಥಾ ಪ್ರದರ್ಶನಗಳಲ್ಲಿ ತುಂಬಾ ಅಭಿಲಾಷೆ ಇರುವುದೆಂತಲೂ, ಕೌಶಲ್ಯಯುಕ್ತಗಳಾದ ಅಪೂರ್ವ ಪದಾರ್ಥಗಳನ್ನು ನೋಡುವುದಕ್ಕೆ ಹಣ ಕೊಡಲು ಹಿಂತೆಗೆಯುವುದಿಲ್ಲವೆಂತಲೂ ತಿಳಿದು ಬರುವುದು. ಇದಲ್ಲದೆ ಪ್ರದರ್ಶನ ಶಾಲೆಯನ್ನು ಇನ್ನೂ ನಾಲ್ಕು ದಿನ ಮುಂಚಿತವಾಗಿ ತೆರೆದಿದ್ದರೆ ಇನ್ನೂ ಅನೇಕರು ಪ್ರಜೆಗಳು ಹೋಗಿ ನೋಡಿಬರುತ್ತಿದ್ದರೆನ್ನುವುದಕ್ಕೆ ಸಂಶಯವಿಲ್ಲ.

ಇಂಥಾ ಪ್ರದರ್ಶನಗಳನ್ನು ರಾಜಧಾನಿಯಲ್ಲಿ ಪ್ರತಿ ವರುಷಗಳಿಗಾದರೂ ಒಂದೊಂದಾವರ್ತಿ ನವರಾತ್ರಿಯಲ್ಲಿ ನಡಿಸುವುದು ಸಾಧ್ಯವಲ್ಲವೋ? ಇದಕ್ಕಾಗಿ ಕಷ್ಟಪಟ್ಟರೆ ಪ್ರಯೋಜನವಿಲ್ಲ; ಪ್ರದರ್ಶನವಾಗುವುದಕ್ಕೆ ಮುಂಚೆ ಇನ್ನೂ ಸ್ವಲ್ಪ ಹೆಚ್ಚು ಸಮಯವಿದ್ದರೆ ಅದರ ಕೆಲಸವನ್ನು ತೃಪ್ತಿಕರವಾಗಿ ನಡಿಸ ಬಹುದು. ಪ್ರದರ್ಶನಕ್ಕಾಗಿಯೇ ಪ್ರತ್ಯೇಕವಾದಂಥಾ ಶಾಶ್ವತ ಕಟ್ಟಡಗಳನ್ನು ವಿಶೇಷ ಖರ್ಚಿಲ್ಲದೆ ಮಾಡಿಸ ಬಹುದು. ಇದರಿಂದ ಜನಗಳೆಲ್ಲಾ ಪ್ರದರ್ಶನಕಾಲವನ್ನು ಬಹಳ ಕುತೂಹಲದಿಂದ ಎದುರು ನೋಡುವುದಕ್ಕೆ ಅವಕಾಶವಾಗುವುದು.

(೨) ಪ್ರದರ್ಶನ ವಸ್ತುಗಳನ್ನು ಈ ಸಲದಂತೆ ಪ್ರತ್ಯೇಕ ಪ್ರತ್ಯೇಕವಾದ ಸಣ್ಣ ಕೊಠಡಿಗಳಲ್ಲಿ ಇಡುವುದು ಅಷ್ಟು ಯುಕ್ತವಾದ ಏರ್ಪಾಡಲ್ಲವೆಂದು ನಮಗೆ ತೋರುತ್ತದೆ. ವಿಶಾಲವಾಗಿಯೂ ವಿಸ್ತಾರವಾಗಿಯೂ ಇರುವಂಥಾ ಒಂದು ಕಟ್ಟಡಕ್ಕೆ ಅನೇಕ ಬಾಗಿಲುಗಳನ್ನಿಟ್ಟು ಕಟ್ಟಿ, ಒಳಗೆ ಉದ್ದಕ್ಕೂ ಉಭಯ ಪಾರ್ಶ್ವಗಳಲ್ಲೂ ನೋಟಕರು ನೋಡುವಂತೆ ಮಾರ್ಗಬಿಟ್ಟು, ನಡುವೆ ಉದ್ದಕ್ಕೂ ಪ್ರದರ್ಶನ ವಸ್ತುಗಳನ್ನೆಲ್ಲಾ ಸಾಲುಸಾಲಾಗಿಯೂ ಜಾತಿ ಜಾತಿಯಾಗಿಯೂ ಇಡಿಸುವಂತೆ ಮಾಡಿದರೆ ಬಹಳ ಅಂದವಾಗುವುದು; ಮತ್ತು ಖರ್ಚು ಕೂಡಾ ವಿಶೇಷವಾಗುವುದಿಲ್ಲ. ಈ ಸಲ ಕಾಶೀ ಪಟ್ಟಣದ ಪ್ರದರ್ಶನ ಶಾಲೆಯನ್ನೂ ಈ ರೀತಿ ಕಟ್ಟಿಸಿದ್ದರು. ಈ ವರುಷ ಕಟ್ಟಿದ್ದ ಸಣ್ಣ ಸಣ್ಣ ಕೋಣೆಗಳು ನೋಟಕ್ಕೆ ಚೆನ್ನಾಗಿರಲಿಲ್ಲ. ಒಂದೇ ಕಡೆಯಲ್ಲಿ ನೋಟಕರ ಗುಂಪು ಹೋಗುವುದೂ ಬರುವುದೂ ತುಂಬಾ ಕಷ್ಟವಾಗಿತ್ತು. ಒಳಗಡೆ ಧೂಳೂ ಸಕೆಯೂ ಬಹಳವಾಗಿತ್ತು.

(೩) ಇಲ್ಲಿನ ಮುಖ್ಯವಾದ ಕಸಬು ವ್ಯವಸಾಯವಾದ್ದರಿಂದ ವ್ಯವಸಾಯಕ್ಕೆ ಸಂಬಂಧಪಟ್ಟ ವಸ್ತುಗಳು ವಿಶೇಷವಾಗಿ ಪ್ರದರ್ಶನ ಮಾಡಿರಲಿಲ್ಲ. ಇದಲ್ಲದೆ ಕೈಗಾರಿಕೆಗಳ ಜೊತೆಗೆ ಒಳ್ಳೊಳ್ಳೆ ಗೋಕಾಯಿಗಳನ್ನೂ ಬೇರೆಯಾಗಿ ಪ್ರದರ್ಶನ ಮಾಡಬೇಕು. ಇದರಿಂದ ಎತ್ತು, ಹಸು, ಕುರಿ, ಆಡು, ಈ ಮೊದಲಾದುವನ್ನು ರೈತರು ಚೆನ್ನಾಗಿ ಸಾಕಿ ಬೆಳಸುವುದಕ್ಕೆ ವಿಶೇಷ ಪ್ರೋತ್ಸಾಹವಾದೀತು. ಫಲಪುಷ್ಪಾದಿಗಳ ಪ್ರದರ್ಶನವೂ ಅವಶ್ಯವಾಗಿರುತ್ತದೆ.

ಸನಾತನ ಧರ್ಮವೆಂದರೇನು?

ಕಳೆದ ಡಿಸೆಂಬರ್ ತಿಂಗಳಿನ ೩ನೇ ತಾರೀಖಿನಲ್ಲಿ ಕಾಶೀ ಕ್ಷೇತ್ರದಲ್ಲಿ ಪರಿಷ್ಕರಣಾರ್ಥವಾದ ಸಭೆಯು ನಡೆಯಿತಷ್ಟೆ. ಅಗ್ಗ ಅ ... ಜನರಲ್ ಸೆಕ್ರೆಟರಿಗಳಾದ ಅವರುಗಳಲ್ಲಿ ಜಸ್ಟಿಸ್ ಚಂದಾವರ್ಕರ್ ರವರು ಸಭೆಯನ್ನು ಉಪಕ್ರಮಿಸಿದರು. ಹಿಂದುಗಳಿಗೆಲ್ಲಾ ಮಹಾ ಪವಿತ್ರಸ್ಥಾನವೆಂದು ಹೆಸರುಗೊಂಡಿರುವ ಕಾಶೀಕ್ಷೇತ್ರದಲ್ಲಿ ಸಂಘಸಮ್ಮೇಳನ ಕಾರ್ಯವು ಆರಂಭಿಸಿರುವ ಜನರ ಪ್ರಯತ್ನವು ಕಂಡು ಆ ಕ್ಷೇತ್ರದ ಪಂಡಿತ ಮಹಾಜನಗಳು ಸ್ವಲ್ಪ ಭಯಗ್ರಸ್ತರಾದರಂತೆ. ಹೀಗಿರುವಲ್ಲಿ ಅವರ ಭಯಕ್ಕೆ ಯಾವ ಕಾರಣವೂ ಇಲ್ಲವೆಂದು ತೋರಿಸುವುದಕ್ಕೋಸ್ಕರ ಮೇಲ್ಕಂಡ ಚಂದಾವರ್ಕರರು ಹೇಳಿದುದೇನೆಂದರೆ—ಸಂಘಸಮ್ಮೇಳನ ಕಾರ್ಯಕ್ಕೂ ಸನಾತನ ಧರ್ಮವೆಂಬುದಕ್ಕೂ ಯಾವ ಭೇದವೂ ಇಲ್ಲ. ಪುರಾತನ ಋಷಿಗಳಾದವರು ಯಾವ ಕಾಲದಲ್ಲೂ ಒಂದು ಜಗತ್ತಿಗೆ ಸೇರಿದ ಜನರು ಅನುಸರಿಸಬೇಕಾದ ಧರ್ಮಕರ್ತವ್ಯಗಳು ಇಂಥವುಗಳೆಂದೂ ವಿಂಗಡಿಸಿ ವಿಧಿಸಿದರು. ಎಂದರೆ ಮೊದಲನೆಯದು ಯಾವದೋ ಒಂದು ಮುಖ್ಯವಾದ ಕಾಲಕ್ಕೆ ಮಾತ್ರ ಸಲ್ಲತಕ್ಕ ಪ್ರಕೃತೋಚಿತವಾದ ಮತವೆಂತಲೂ ಎರಡನೆಯದು ಸಕಲ ಕಾಲಕ್ಕೂ ಶಾಶ್ವತವಾಗಿ ಸಲ್ಲತಕ್ಕ ಮತವೆಂತಲೂ ವಿಭಾಯಿಸಿ ಮಾಡಿದರು. ಈ ಎರಡನೆಯದೇ ಸನಾತನ ಧರ್ಮ ಅಥವಾ ಶಾಶ್ವತ ಧರ್ಮವು. ಆಯಾಕಾಲಕ್ಕೆ ಮಾತ್ರ ಉಪಯುಕ್ತವಾದುದು ವರ್ಣಾಶ್ರಮ ಧರ್ಮವು. ಮಹಾಭಾರತದಲ್ಲಿ ಧರ್ಮವನ್ನು ಕುರಿತು ಹೇಳಿರುವುದೇನೆಂದರೆ—ಸನಾತನ ಧರ್ಮವೆಂದರೆ ಸತ್ಯವೇ; ಆ ಸತ್ಯವೆಂಬುದರ ಲಕ್ಷಣಗಳು—ಶಮತ, ದಮ, ಅಮಾತ್ಸರ್ಯ, ಕ್ಷಮಾ, ಹ್ರೀ, ತಿತಿಕ್ಷಾ, ಅನಸೂಯತಾ, ತ್ಯಾಗ, ಧ್ಯಾನ, ಆರ್ಯತ್ವ, ಧೃತಿ, ದಯಾ, ಅಹಿಂಸಾ. ಹಿಂದೂ ಮತಸ್ಥನಾದವನು ಬೆಳಕನ್ನು ಹುಡುಕತಕ್ಕವನಾಗಿರಬೇಕೆಂಬುದೇ ಋಷಿಗಳ ಅಭಿಮತವು. ಅವರು ಕಲಿಸಿಕೊಟ್ಟಿರುವ ಗಾಯತ್ರೀ ಜಪವೇ ಇದಕ್ಕೆ ಸಾಕ್ಷಿಯಾಗಿದೆ. ಜ್ಞಾನವನ್ನು ಅಥವಾ ಬೆಳಕನ್ನು ಅನುಗ್ರಹಿಸೆಂದು ದೇವರನ್ನು ಬೇಡಿಕೊಳ್ಳಬೇಕೆಂಬುದಾಗಿ ಗಾಯತ್ರಿ ಮಂತ್ರದಲ್ಲಿ ಬೋಧಿಸಲಾಗಿರಲು ನಿತ್ಯವೂ ಮನೆಯಲ್ಲಿ ಯಾವ ಅಗ್ನಿಯ ಮುಂದೆ ನಾಲ್ಕು ವಿಧ ಕರ್ಮಾಚರಣೆಗಳನು ಮಾಡುತ್ತಾರೋ ಆ ಅಗ್ನಿಯೇ ಬೆಳಕನ್ನು ಅಥವಾ ಜ್ಞಾನವನ್ನು ಸೂಚಿಸುವ ಚಿಹ್ನವಾಗಿದೆ.

ಹೀಗಿರುವುದರಿಂದ ಹಿಂದೂ ಮತಸ್ಥನಾಗಿರುವ ಪ್ರತಿಯೊಬ್ಬನೂ ತನಗೆ ತಿಳಿದಿರುವುದಕ್ಕಿಂತಲೂ ಹೆಚ್ಚಾದ ಜ್ಞಾನವನ್ನು ಪಡೆಯುವದೇ ಅವಶ್ಯ ಕರ್ತವ್ಯವಾಗಿ ನಾವು ಯಾವ ಯಾವ ಕಾಲದಲ್ಲಿ ಜೀವಿಸುತ್ತಾ ಎಷ್ಟೆಷ್ಟು ತಿಳುವಳಿಕೆಯನ್ನು ಪಡೆಯುತ್ತೇವೋ ಅಷ್ಟರಮಟ್ಟಿಗೆ ನಮ್ಮ ಸನಾತನಧರ್ಮದ ಸೂತ್ರಗಳನ್ನು ವ್ಯವಹರಿಸಿಕೊಳ್ಳುತ್ತಲೂ ಇರಬೇಕೇ ಹೊರತು ಪುರಾತನ ಪದ್ಧತಿಗಳನ್ನು ಕಣ್ಣು ಮುಚ್ಚಿಕೊಂಡು ಅನುಸರಿಸುತ್ತಾ ನಡೆಯುವುದು ಯುಕ್ತವಲ್ಲ.

ಹಿಂದುಗಳಿಗೆ ವಿದೇಶ ಸಂಚಾರದಿಂದ ಮಾಹಾತ್ಮ್ಯವು ಹೋಗುವುದು, ಸ್ತ್ರೀಯರಿಗೆ ವಿದ್ಯೆಯನ್ನು ಕಲಿಸುವುದರಿಂದ ಜನ ಸಾಮಾನ್ಯಕ್ಕೆ ಮೇಲುಂಟಾಗುವುದು. ವಿದೇಶಸಂಚಾರವನ್ನೂ ಸ್ತ್ರೀವಿದ್ಯಾಭ್ಯಾಸವನ್ನೂ ಹಿಂದೂ ಮತಸ್ಥರು ತಮ್ಮ ಜನಗಳಿಗೆ ಅನುಕೂಲಪಡಿಸಿಕೊಡದೆ ಹೋಗಿರುವ ಕಾರಣ ಹಿಂದೂ ಜನರು ಕೇವಲ ಮೂಢತ್ವದಲ್ಲಿ ಮುಳುಗಿಹೋಗಿದ್ದಾರೆ. ಇಷ್ಟೇ ಅಲ್ಲ. ಸನಾತನಧರ್ಮದಲ್ಲಿ ಅತಿ ವಿಶೇಷ ಲಕ್ಷಣವಾಗಿರುವ ಅಹಿಂಸೆ ಎಂಬ ವಿಷಯದಲ್ಲಿ ನೋಡಿದರೆ ಹಿಂದುಗಳು ತಮ್ಮಲ್ಲಿ ನಿಕೃಷ್ಟ ಜಾತಿಯವರನ್ನು ಬಹಳವಾಗಿ ನೋಯಿಸುತ್ತಲಿದ್ದಾರೆ.

ಮಿ|| ಚಂದಾವರ್ಕರ್ ರವರು ಹೇಳಿರುವ ಈ ಅಭಿಪ್ರಾಯವು ಕೇವಲ ಸತ್ಯವಾದುದೆಂದು ನಾವು ಸಂಪೂರ್ಣವಾಗಿ ನಂಬಿದ್ದೇವೆ. ಈ ದೊಡ್ಡ ಮನುಷ್ಯರು ಹೇಳಿರುವದನ್ನು ಕೇಳುವಾಗ್ಗೆ ಕ್ರೈಸ್ತ ಸದ್ಧರ್ಮಗ್ರಂಥದಲ್ಲಿ ಬರೆದಿರುವ ಒಂದು ಮಾತು ನಮ್ಮ ನೆನಪಿಗೆ ಬರುತ್ತದೆ. ಅದೇನಂದರೆ—

"ಓ ಮಾನವನೇ, ನೀತಿಯನ್ನು ನಡಿಸುವುದು, ಕನಿಕರವನ್ನು ಪ್ರೀತಿಸುವದು, ನಿನ್ನ ದೇವರೊಂದಿಗೆ ವಿನಯವಾಗಿ ನಡೆದುಕೊಳ್ಳುವದು ಎಂಬಿವೇ ಅಲ್ಲದೆ ನಿನ್ನಿಂದ ಅಪೇಕ್ಷಿಸಲ್ಪಡುವಂಥಾದ್ದು ಮತ್ತೇನಿದೆ?"

ಒಳದೇಶದ ವೃತ್ತಾಂತಗಳು.

ಮೈಸೂರು ಸಂಸ್ಥಾನದ ಛೀಫ್ ಜಡ್ಜರಾದ ಮಿ|| ಸ್ಟೇಲಿಯವರು ಮುಂದಿನ ಆಗೋಷ್ಟ ತಿಂಗಳಲ್ಲಿ ಕೆಲಸ ಬಿಟ್ಟು ಸೀಮೆಗೆ ಹೊರಟು ಹೋಗುವರೆಂದು ಕೇಳುತ್ತೇವೆ.

◆◆◆◆

ಹರಿಹರಪುರದಲ್ಲಿ ಬಹುಕಾಲದಿಂದಲೂ ಇದ್ದ ಆಸ್ಪತ್ರೆಯನ್ನು ತೆಗೆದುಹಾಕಿ, ಹಿರಿಯೂರಿನಲ್ಲಿ ಇಡಬೇಕೆಂದು ಕಡೂರು ಡಿಸ್ಟ್ರಿಕ್ಟ್ ಬೋರ್ಡಿನವರು ತೀರ್ಮಾನಮಾಡಿದ್ದಾರೆ.

◆◆◆◆

ತಿರುವಾಂಕೂರು ಸಂಸ್ಥಾನಕ್ಕೆ ದಿವಾನರಾಗಿ ಹೋಗಿರುವ ಮಿ|| ವಿ. ಪಿ. ಮಾಧವರಾಯರು ನಮ್ಮ ಸಂಸ್ಥಾನದ ದಿವಾನಗಿರಿಗೆ ನೇಮಕವಾಗುವರೆಂದು ಕೇಳುತ್ತೇವೆ.

◆◆◆◆

ಮೈಸೂರು ಸಂಸ್ಥಾನದಲ್ಲಿ ಖೈದಿಗಳನ್ನು ಬಿಡುಗಡೆ ಮಾಡುವಾಗ್ಗೆ ಅವರಿಗೆ ಭೋಜನಮಾಡಿಸಿ, ರೈಲು ಹೊರಡುವುದಕ್ಕೆ ಮುಂಚೆ ಕಳುಹಿಸಬೇಕೆಂದು ಸರ್ಕಾರದವರು ಹುಕುಂಕೊಟ್ಟಿದ್ದಾರೆ.

◆◆◆◆

ಕೊಡಗಿನ ಸರಹದ್ದಿನಲ್ಲಿ ನಮ್ಮ ಸರ್ಕಾರದವರು ಎರಡು ಆನೆಗಳನ್ನು ಕಳೆದ ತಿಂಗಳಲ್ಲಿ ಹಿಪ್ಪಿಗೆ ಕೆಡವಿದರು. ಆದರೆ ಒಂದು ಆನೆ ಸತ್ತು ಹೋಯಿತು. ಇನ್ನೊಂದನ್ನು ಜೊತೆ ಆನೆಗಳನ್ನಿಟ್ಟು ಅಲ್ಲಿಂದ ಹಿಡಿದು ತಂದಿದ್ದಾರೆ.

◆◆◆◆

ಮೈಸೂರು ಸರ್ಕಾರದವರು ಕಾಕನಕೋಟೆ ಖೆದ್ದಾಗಳಲ್ಲಿ ಹಿಡಿದಿರುವ ಎಪ್ಪತ್ತು ಆನೆಗಳನ್ನು ಸ್ವಲ್ಪಮಟ್ಟಿಗೆ ಒಗ್ಗಿಸಿ, ಹುಣಸೂರಿನಲ್ಲಿ ತಂದು ಕಟ್ಟಿಹಾಕಿ, ಬೇಕಾದವರು ನೋಡಿ ಕೊಂಡುಕೊಳ್ಳಬಹುದೆಂದು ಘೋಷಣೆ ಮಾಡಿರುತ್ತಾರೆ.

◆◆◆◆

ಮೈಸೂರು ಪೋಲೀಸ್ ನೌಕರರು ಅಪರಾಧಿಗಳನ್ನು ಕಂಪೆನೀ ಸೀಮೆಯಲ್ಲಿ ವಾರಂಟಿನ ಮೇಲೆ ಹಿಡಿದು ತರುತ್ತಾರೆಂತಲೂ ನಮ್ಮ ಸೀಮೆಯ ಎಲ್ಲೆಯಿಂದಾಚೆ ಯಾರನ್ನೂ ಹಾಗೆ ಹಿಡಿದು ತರಕೂಡದೆಂತಲೂ ಗವರ್ನಮೆಂಟಿನವರು ತಿಳಿಸಿರುತ್ತಾರೆ.

◆◆◆◆

ಶ್ರೀಮನ್ಮಹಾರಾಜರವರು ಮದರಾಸ್ ಗವರ್ನರವರನ್ನು ಸಾಗಕಳುಹಿಸಿ, ಕಳೆದ ರವಿವಾರ ಬೆಳಿಗ್ಗೆ ಮದರಾಸಿನಿಂದ ವಾಪಸು ಬೆಂಗಳೂರಿಗೆ ದಯಮಾಡಿದರು. ಅವರು ಯುಗಾದಿ ಹಬ್ಬಕ್ಕೆ ಬೆಂಗಳೂರಿಂದ ರಾಜಧಾನಿಗೆ ಚಿತ್ತೈಸುವರೆಂದು ಕೇಳುತ್ತೇವೆ.

◆◆◆◆

ನಾಯು ಕಡಿಗೊಳಗಾದ ಕೆಲವರು ಉತ್ತರ ದೇಶದಲ್ಲಿರುವ ಕಸೌಲಿ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಮಾಡಿಸಿಕೊಂಡು ಬರುವುದಾದರೆ ಅವರ ಪ್ರಯಾಣದ ಖರ್ಚನ್ನೂ ಅವರ ಸಂಗಡ ಹೋಗಿ ಬರುವ ಒಬ್ಬರ ಪ್ರಯಾಣದ ಖರ್ಚನ್ನೂ ಸರ್ಕಾರದವರು ವಹಿಸಿಕೊಂಡು ಕೊಡುವಂತೆ ಹುಕುಂ ಕೊಡಿಸಿರುತ್ತಾರೆ.

◆◆◆◆

ಮೈಸೂರು ಪಟ್ಟಣದ ಕೂಡ್ಲು ಬಡಾವಣೆಯಲ್ಲಿ ಕಟ್ಟಿ ನಡಸುತ್ತಿರುವ ದೊಡ್ಡ ಆಸ್ಪತ್ರೆಯ ಖರ್ಚಿಗೆ ತಿಂಗಳೊಂದಕ್ಕೆ ೨೦೦೦ ರೂಪಾಯಿಗಿಂತ ಹೆಚ್ಚಾಗದಂತೆ ಸಹಾಯ ದ್ರವ್ಯವನ್ನು ಕೊಡಬೇಕೆಂತಲೂ, ಕಟ್ಟಡದ ಖರ್ಚಿಗೆ ೨೫,೦೦೦ ರೂಪಾಯಿ ಕೊಡುವುದಾಗಿಯೂ ಸರ್ಕಾರದವರು ಸ್ವೀಕರಿಸಿ ಮಾಡಿದ್ದಾರೆ.

◆◆◆◆

ಅರಸೀಕೆರೆ ತಾಲ್ಲೂಕು ಬಾಣಾವಾರದಲ್ಲಿ ಮಾವಿನಕೆರೆ ಅಂಗಳದಲ್ಲಿರುವ ಸೇದುವ ಭಾವಿಗೆ ಕಳೆದವಾರ ಒಬ್ಬ ಹುಡುಗಿ ಹೋಗಿ ನೀರು ಸೇದುತ್ತಾ ಒಳಕ್ಕೆ ಬಿದ್ದು ಸತ್ತು ಹೋದಳೆಂತಲೂ, ಹಿಂದೆಯೂ ೨—೩ ಜನ ಹೆಂಗಸರು ಈ ಬಾವಿಯಲ್ಲಿ ಬಿದ್ದು ಸತ್ತಿದ್ದಾರೆಂತಲೂ, ಈ ಅಪಾಯವನ್ನು ತಪ್ಪಿಸುವುದಕ್ಕೆ ಗ್ರಾಮದವರು ಸೇರಿ ಅದಕ್ಕೆ ಸುತ್ತಲೂ ಕೈಪಿಡಿ ಹಾಕಿಸಿದರೆ ಅನುಕೂಲವೆಂತಲೂ ಒಬ್ಬ ಬಾತ್ಮೀದಾರರು ಬರೆದಿದ್ದಾರೆ.

◆◆◆◆

ಮೈಸೂರು ಸಂಸ್ಥಾನದ ರೆಸಿಡೆಂಟರೂ ಕೊಡಗಿನ ಛೀಫ್ ಕಮಿಷನರೂ ಆದ ಮಿ|| ಎಸ್. ಎಂ. ಫ್ರೇಸರ್ ರವರು ಕೊಡಗಿನ ಪ್ರಾಂತ್ಯ ಸಂಚಾರಕ್ಕೆ ಹೊರಡುತ್ತಾರೆ. ಈ ಸಂಚಾರದ ವಿವರವೇನೆಂದರೆ—ಫೆಬ್ರವರಿ ೨೩ರಲ್ಲಿ ಅವರು ಬೆಂಗಳೂರು ಬಿಟ್ಟು, ಮೈಸೂರು, ಪಿರಿಯಾ ಪಟ್ಟಣ, ಫ್ರೇಸರ್‌ಪೇಟೆ, ಮಡಿಕೇರಿ, ವೀರಾಜಪೇಟೆ, ನಾಲ್ಕುಬೆಟ್ಟ, ಹುಣಸವಳ್ಳಿ, ಈ ಪ್ರಾಂತ್ಯ ಸಂಚಾರಮಾಡಿಕೊಂಡು ಮಾರ್ಚಿ ೧೯ ಕ್ಕೆ ಹುಣಸೂರಿಂದ ಮೈಸೂರಿಗೆ ವಾಪಸು ಬರುವವರಾಗಿದ್ದಾರೆ.

◆◆◆◆

ರಾಜಧಾನಿಯಲ್ಲಿ ನಡೆದ ವಸ್ತು ಪ್ರದರ್ಶನ ಶಾಲೆಯನ್ನು ಪ್ರಿನ್ಸ್ ಆಫ್ ವೇಲ್ಸ್ ರವರೂ ಅವರ ಪತ್ನೀಯವರೂ ಹೋಗಿ ಪರಾಂಬರಿಸಿದಾಗ್ಗೆ ಮಹಮದ್ ಮಹಾಸಾಯರವರ ಪತ್ನಿಯವರು ಬೆಳ್ಳಿ ಬಂಗಾರದ ದಾರಗಳಿಂದ ಬಹು ಸುಂದರವಾಗಿ ಕಟ್ಟಿದ್ದ ತುರಾಯಿಗಳನ್ನು ಅವರಿಗೆ ಒಪ್ಪಿಸಿದರು. ಪ್ರಿನ್ಸ್ ಆಫ್ ವೇಲ್ಸ್ ರವರ ಪತ್ನೀಯವರು ಅದನ್ನು ಸ್ವೀಕರಿಸಿ, ಬಹಳ ಸಂತೋಷಪಟ್ಟು ಆಕೆಯನ್ನು ಬಹಳವಾಗಿ ವಂದಿಸಿದ್ದಲ್ಲದೆ, ಆಕೆಯ ಬುದ್ಧಿಕುಶಲತೆಯನ್ನು ತುಂಬಾ ಹೊಗಳಿರುತ್ತಾರೆಂದು ತಿಳಿದು ಬಂದಿದೆ.

◆◆◆◆

ರಾಜಧಾನಿಯಲ್ಲಿ ಪ್ರಜೆಗಳು ೮—೧೦ ದಿನಗಳಿಂದ ಕುಡಿಯುವ ನೀರಿಗೆ ಬಹಳ ಕಷ್ಟಪಡುತ್ತಿದ್ದಾರೆ. ಇಂಥಾ ಕಷ್ಟವು ಆಗಾಗ್ಗೆ ಪ್ರಾಪ್ತವಾಗುತ್ತಲೇ ಇರೋಣದರಿಂದ ಗವರ್ನಮೆಂಟಿನವರು ಕೂಡಲೇ ಈ ವಿಷಯಕ್ಕೆ ಗಮನಕೊಟ್ಟು, ಈ ಕಷ್ಟ ಮತ್ತೆ ಸಂಭವಿಸದ ಹಾಗೆ ಅವಶ್ಯವಾದ ಏರ್ಪಾಡು ಮಾಡಬೇಕು. ಇಲ್ಲದಿದ್ದರೆ ಸರ್ಕಾರದವರು ಇದಕ್ಕಾಗಿ ಖರ್ಚುಮಾಡಿರುವ ನೂರಾರುಲಕ್ಷ ರೂಪಾಯಿ ನಿಷ್ಪ್ರಯೋಜನವೆನಿಸುವುದು. ರಾಜಧಾನಿಯಲ್ಲೇ ಪ್ರಜೆಗಳು ಆಗಾಗ್ಗೆ ಹಗಲು ರಾತ್ರಿ ಎನ್ನದೆ ಬಿಂದಿಗೆ ಪಾತ್ರೆ ಇತ್ಯಾದಿಗಳನ್ನು ಹೊತ್ತು ನೀರಿಗಾಗಿ ಬೀದಿ ಬೀದಿ ಅಲೆಯುವುದು ಪ್ರಜಾಪಾಲಕರಿಗೆ ಯಶಸ್ಕರವಾದುದಲ್ಲ.

ಮೈಸೂರು ಗೆಜೆಟ್ ಸಂಗ್ರಹ.

ಪೋಲೀಸ್ ಪ್ರೊ. ಅ|| ಸೂಪರಿಂಟೆಂಡೆಂಟ್ ಮಿ|| ಮಿರ್ಜಾ ಮಹಮದ್ ಇಸ್ಮೈಲ್ ರವರಿಗೆ ಫೆಬ್ರವರಿ ೧೦ ರಿಂದ ಸಂಬಳವಿಲ್ಲದ ಒಂದು ತಿಂಗಳ ರಜಾ ಕೊಟ್ಟಿದೆ.

ನಂಜನಗೂಡು ಆಸ್ಪತ್ರೆಯ ಅ: ಸಬ್ ಅ|| ಸರ್ಜನ್ ಮಿ|| ಬಿ. ಚಂಗಲ್ರಾಯ ಮೊದಲಿಯಾರ್ರನ್ನು ಚಿಕ್ಕಮಗಳೂರು ಸಿವಿಲ್ ಆಸ್ಪತ್ರೆಗೆ ವರ್ಗ ಮಾಡಿದೆ.

ಅ. ಸಬ್ ಅ|| ಸರ್ಜನ್ ಮಿ|| ವಿ. ಪಿ. ಸದಾಶಿವರಾಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಎರಡು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಅರಕಲಗೂಡು ತಾಲ್ಲೂಕು ಅಮಲ್ದಾರ್ ಮಿ|| ಎಂ. ಸದಾಶಿವರಾಯರಿಗೆ ಕೊಟ್ಟಿದ್ದ ಸಂಬಳವಿಲ್ಲದ ಮೂರು ತಿಂಗಳ ರಜವನ್ನು ಕಾಯಿಲೆ ರಜಾಕ್ಕೆ ಬದಲಾವಣೆಮಾಡಿದೆ.

ಸೀಮೆಯಿಂದ ವಾಪಸು ಬಂದ ಅ|| ಇಂಜನಿಯರ್ ಮಿ|| ಜಾರ್ಜ್ ಥೋರ್ ರವರನ್ನು ಬೆಂಗಳೂರು ಸ್ಯಾನಿಟರಿ ರೇಂಜಿನ ಛಾರ್ಜಿಗೆ ವರ್ಗಮಾಡಿದೆ.

ಎಕ್ಸಿಕ್ಯೂಟಿವ್ ಇಂಜನಿಯರ್ ಮಿ|| ಕೆ. ಪ್ರಹ್ಲಾದರಾಯರನ್ನು ಚಿತ್ರದುರ್ಗದ ಡಿವಿಜನಿಗೆ ವರ್ಗಮಾಡಿದೆ.

ಸಬ್ ಅ|| ಇಂಜನಿಯರುಗಳಾದ ಮಿ|| ಎ. ಶಾಮಣ್ಣರಾಯರನ್ನು ಕೋಲಾರಕ್ಕೂ, ಮಿ|| ವಿ. ಎ. ಕರ್ನಿಯವರನ್ನು ಮೈಸೂರಿಗೂ ವರ್ಗಮಾಡಿದೆ.

ಮಿ|| ಎಸ್. ವೆಂಕಟಸುಬ್ಬಶೆಟ್ಟರನ್ನು ೨ನೆ ಕ್ಲಾಸ್ ಸಬ್ ಅ|| ಸರ್ಜನರಾಗಿ ನೇಮಿಸಿ, ಹಾಲಿಗೆಳ ಡಿವಿಜನಿಗೆ ವರ್ಗಮಾಡಲಾಗಿದೆ.

ಮೈಸೂರು ಕೈಗಾರಿಕೆ ಮತ್ತು ವ್ಯವಸಾಯೋಪಕರಣಗಳ ವಸ್ತುಪ್ರದರ್ಶನೋತ್ಸವ.

ಈ ಪ್ರದರ್ಶನೋತ್ಸವವು ಕಳೆದ ಜನವರಿ ೩೦ ನೆ ತಾ. ಮಂಗಳವಾರದಿಂದ ಪ್ರಾರಂಭವಾಗಿ ಈ ತಿಂಗಳ ೨೦ ನೆ ತಾ. ಮಂಗಳವಾರದ ತನಕ ತೆರೆಯಲ್ಪಟ್ಟಿತ್ತು. ಈ ಮೂರು ವಾರಗಳಲ್ಲಿ ಈ ಸಂಸ್ಥಾನದ ಎಲ್ಲಾ ಭಾಗಗಳಿಂದಲೂ ಸಾವಿರಾರು ಪ್ರಜೆಗಳು ಬಂದು ಪ್ರದರ್ಶನ ವಸ್ತುಗಳನು ನೋಡಿ, ಸಂತೋಷ ಪಟ್ಟುಕೊಂಡು ಹೋದರು. ಪ್ರದರ್ಶನ ಶಾಲೆಯ ಏರ್ಪಾಡುಗಳೆಲ್ಲಾ ತಕ್ಕ ಮಟ್ಟಿಗೆ ತೃಪ್ತಿಕರವಾಗಿದ್ದವೆನ್ನುವುದಕ್ಕೆ ಸಂಶಯವಿಲ್ಲ. ಪ್ರದರ್ಶನಮಾಡಲ್ಪಟ್ಟ ವಸ್ತುಗಳನ್ನೆಲ್ಲಾ ಪರೀಕ್ಷಕರು ಚೆನ್ನಾಗಿ ಅವಲೋಕಿಸಿ ನೋಡಿ, ಆ ಪೈಕಿ ಸರ್ವೋತ್ಕೃಷ್ಟವಾಗಿದ್ದ ಪದಾರ್ಥಗಳಿಗೆಲ್ಲಾ ಚಿನ್ನದ ಮೆಡಲು, ಬೆಳ್ಳಿಯ ಮೆಡಲು, ಕಂಚಿನ ಮೆಡಲು, ರೂಪಾಯಿನ ಬಹುಮಾನಗಳನು ಕೊಟ್ಟಿದ್ದಾರೆ. ಸುಮಾರು ೩೦ ಪ್ರದರ್ಶನ ಪದಾರ್ಥಗಳು ಭಂಗಾರದ ಮೆಡಲನ್ನೂ, ೧೦೦ ವಸ್ತುಗಳು ಬೆಳ್ಳಿಯ ಮೆಡಲನ್ನೂ ೨೫೦ ವಸ್ತುಗಳು ಕಂಚಿನ ಮೆಡಲನ್ನೂ ೩೪೦ ಪದಾರ್ಥಗಳು ರೂಪಾಯಿ ಬಹುಮಾನವನ್ನೂ ಸಂಪಾದಿಸಿಕೊಂಡಿರುವವು. ಈ ಪ್ರಕಾರ ಪ್ರದರ್ಶನ ಶಾಲೆಯನು ಏರ್ಪಡಿಸಿ ಈ ಸಂಸ್ಥಾನದ ಕೈಗಾರಿಕೆಗಳನ್ನೂ ವ್ಯವಸಾಯ ಪದಾರ್ಥಗಳನ್ನೂ ಈಗಿನ ಕಾಲಕ್ಕೆ ತಕ್ಕ ಹಾಗೆ ಉತ್ತಮ ಸ್ಥಿತಿಗೆ ತರಬೇಕೆಂದು ಗವರ್ನಮೆಂಟಿನವರು ಪಟ್ಟ ಉದ್ದೇಶವು ಸಾರ್ಥಕವಾಗಲೀತೆಂದು ಹಾರೈಸುವೆವು.

ಚಿನ್ನದ ಗಣಿ ಶಾಖೆ.

ಈ ಶಾಖೆಯಲ್ಲಿ ಚಿನ್ನದ ಗಣಿಯ ಉತ್ಪತ್ತಿಯನ್ನೂ, ಇತರ ಲೋಹಗಳು ಸಿಕ್ಕುವಂಥಾ ದಿನಸಾವರಿ ಕಲ್ಲುಗಳನ್ನೂ ಕಟ್ಟಡಗಳಿಗೂ ಚಿತ್ರ ಕೆಲಸಗಳಿಗೂ ಉಪಯೋಗಿಸುವಂಥಾ ಶಿಲೆಗಳನ್ನೂ ತಂದಿಟ್ಟು ಪ್ರದರ್ಶನ ಮಾಡಿದ್ದಾರೆ. ಭಂಗಾರದ ಗಣಿಗಳಲ್ಲಿ ಕಳೆದ ವರುಷ ಉತ್ಪತ್ತಿಯಾದ ಚಿನ್ನ ಇಷ್ಟೆಂದು ಒಂದು ಪೆಟ್ಟಿಗೆಯ ಆಕೃತಿಯನ್ನು ಮಾಡಿ ತೋರಿಸಿದ್ದರು ಇದಕ್ಕೆ ಭಂಗಾರದ ಮೆಡಲನ್ನು ಕೊಟ್ಟಿದ್ದಾರೆ. ಶ್ರೀರಂಗಪಟ್ಟಣದ ತಾಲ್ಲೂಕಿನಲ್ಲಿ ಸಿಕ್ಕುವಂಥಾ ಬಹು ಸುಂದರವಾದ ಕಲ್ಲುಗಳ ಮಾದ್ರಿಗೆ ಬೆಳ್ಳಿಯ ಮೆಡಲು ಕೊಡಲಾಗಿದೆ. ಬೆಗ್ಗರೆ ಲಕ್ಷ್ಮೀನರಸೈಯ್ಯನವರ ಬಾಬತು ಬೌಳಪ್ಪಗೂ, ಕೋಲಾರದಲ್ಲಿ ಚಿನ್ನ ಸಿಕ್ಕುವ ಒಂದು ರ್ಟ ಕಲ್ಲುಗಳಿಗೂ, ಚಿತ್ರ ಕೆಲಸ ಮಾಡುವುದಕ್ಕೆ ಅನುಕೂಲವಾದ ಮಾದ್ರಿ ಕಲ್ಲುಗಳಿಗೂ ಕಂಚಿನ ಮೆಡಲನ್ನು ಕೊಟ್ಟಿದ್ದಾರೆ.

ವ್ಯವಸಾಯೋಪಕರಣಗಳು.

ವ್ಯವಸಾಯಕ್ಕೆ ಅನುಕೂಲವಾದ ನೇಗಿಲುಗಳು, ಗುಳಗಳು, ಗಾಡಿಗಳು, ನೀರು ಎತ್ತುವ ಪಂಪುಗಳು, ಕೂಲಿಗೆ ಬಟ್ಟೆಗಳು, ಈ ಮೊದಲಾದ ಪದಾರ್ಥಗಳನು ಜಾತಿವಾರಾಗಿ ವಿಂಗಡಿಸಿ ಪ್ರದರ್ಶನ ಮಾಡಿದ್ದರು ಗತಿಸಿದ ಪ್ರಿನ್ಸ್ ವಿಕ್ಟರ್ ಆಫ್ ವೇಲ್ಸ್‌ರವರು ಕಳೆದ ೧೮೮೯ ರಲ್ಲಿ ಮೈಸೂರು ಸಂಸ್ಥಾನಕ್ಕೆ ದಯಮಾಡಿದ್ದಾಗ್ಗೆ ಅವರು ಕೆಡ್ಡಾ ಕ್ಯಾಂಪಿನಲ್ಲಿ ಸ್ಥಳದಿಂದ ಸ್ಥಳಕ್ಕೆ ಹೋಗಿಬರುವುದಕ್ಕೆ ಉಪಯೋಗಿಸುತ್ತಿದ್ದ ಬಂಗಲಿ ಗಾಡಿಯನ್ನೂ ತಂದಿಟ್ಟಿದ್ದರು. ದೊಡ್ಡಬಳ್ಳಾಪುರದ ತಾ ಅರಕೆರೆ ಪಟೇಲ್ ತಿಮ್ಮೇಗೌಡರ ಬಾಬತು ಮರದ ನೇಗಿಲಿಗೆ ಕಂಚಿನ ಮೆಡಲೂ, ಕೋಲಾರದ ಗುಲಾಂ ಮಹಮದ್ ಸಾಬರು ತಯಾರ್ಮಾಡಿರುವ ಎತ್ತಿನ ಗಾಡಿಗೆ ಬೆಳ್ಳಿ ಮೆಡಲೂ ಕೊಟ್ಟಿದಾರೆ. ಒಳ್ಳೊಳ್ಳೇ ರಬ್ಬರ್ ಚಕ್ರಗಳುಳ್ಳ ಗಾಡಿಗಳನ್ನು ಕಾರ್ಖಾನೆಗಳವರು ಪ್ರದರ್ಶನ ಮಾಡಿದ್ದರು ಈ ಪೈಕಿ ಬೆಂಗಳೂರು ಹಾಜಿ ಇಸ್ಮಾಯಿಲ್ ಸೇಟರ ಬಾಬತು ಒಂದು ಬಗ್ಗಿಗೆ ಒಂದು ಬೆಳ್ಳಿ ಮೆಡಲೂ, ಇನ್ನೊಂದಕ್ಕೆ ಕಂಚಿನ ಮೆಡಲೂ ದೊರಕಿದವು ಬೆಂಗಳೂರು ವಾರ್ಟ್ಸ್ ಕಂಪನಿಯ ವಿಕ್ಟೋರಿಯಾ ಗಾಡಿಗೆ ಕಂಚಿನ ಮೆಡಲು ಸಿಕ್ಕಿತು. ಕ್ಯಾಷ್ ಬಜಾರಿನ ಟಾಂಗಾ ಗಾಡಿಗೂ, ವಿಕ್ಟೋರಿಯಾ ಗಾಡಿಗೂ, ಜೇಕಬ್ ಸೇಟರ ಲಾಂಡೋ ಗಾಡಿಗೂ ಬೆಳ್ಳಿಯ ಮೆಡಲುಗಳೂ, ಒಂದು ಬಗ್ಗಿ ಗಾಡಿಗೆ ಕಂಚಿನ ಮೆಡಲೂ ಕೊಡಲಾಯಿತು ಕೋಲಾರ್ ಇನ್ಸ್ಟಿಟ್ಯೂಟಿನಲ್ಲಿ ತಯಾರಾದ ಕಬ್ಬಿಣದ ನೇಗಿಲುಗಳಿಗೆ ಬೆಳ್ಳಿ ಮೆಡಲನ್ನು ಕೊಟ್ಟಿದಾರೆ.

ನಾನಾ ವಸ್ತುಗಳು.

ಇದಲ್ಲದೆ ಬೆಳ್ಳಿಯ ಮೆಡಲನ್ನು ಪಡೆದಿರುವ ಇತರ ಪದಾರ್ಥಗಳ್ಯಾವವೆಂದರೆ—ಮೈಸೂರು ಇಂಡಸ್ಟ್ರಿಯಲ್ ಸ್ಕೂಲ್ ಮರಕೆಲಸದ ಮೇಸ್ತ್ರಿ ರೊಜೇರಿಯೋಯವರೂ, ಚಿಕ್ಕಬಳ್ಳಾಪುರದ ನರಸಿಂಹಯ್ಯನವರೂ ಮಾಡಿರುವ ಭತ್ತಕುಟ್ಟುವ ಯಂತ್ರಗಳಿಗೆ, ಬೆಂಗಳೂರು ಸುಬ್ಬಯ್ಯನವರೂ, ಚಿಕ್ಕಗುರುವರೆಡ್ಡಿಯವರೂ, ಮಂಡ್ಯ ತಾ. ಕೊಪ್ಪದ ಶ್ಯಾ ಕೊಮಾರಯ್ಯನವರೂ ಪ್ರದರ್ಶನ ಮಾಡಿದ ಫಲಪುಷ್ಪಗಳಿಗೆ; ಚಿಕ್ಕಮಗಳೂರು ಲಂಡ್ ಸಾಹೇಬರೂ, ಮಂಜರಾಬಾದ್ ನಂಜೇಗೌಡರೂ, ಬೆಂಗಳೂರು ಬಿನ್ನಿ ಕಂಪನಿಯವರೂ, ಸಕಲೇಶಪುರದ ಕ್ರಾಫರ್ಡ್ ಸಾಹೇಬರೂ ಕಳುಹಿಸಿದ್ದ ಬೇರೆ ಬೇರೆ ಜಾತಿಯ ಕಾಫಿ ಬೀಜಗಳಿಗೆ; ಲ್ಯಾಂಬ್‌ಯವರ ಯೀಲಕ್ಕಿಗೆ, ಕಳ್ಳಾರಯ್ಯನವರ ಮತ್ತು ಮಾಕೈಯ್ಯನವರ ಅವಿಕೆಗೆ, ಬಿನ್ನಿ ಕಂಪನಿಯವರ ಗೋಟ್ಟುರಗಳಿಗೆ, ಮೈಸೂರು ಗಿಡ್ಡಣ್ಣಮೇಸ್ತ್ರಿಯವರ ಅರು ಮತ್ತು ಇಟ್ಟಿಗೆ ಕುಯ್ಯುವ ಯಂತ್ರಗಳಿಗೆ, ಗೋಪಾಲಕೃಷ್ಣೇ ಅರಸಿನವರ ಕಲ್ಲಿನ ವೀಣೆಗೆ; ಅರಮನೆ ಇಂಜಿನಿಯರ್ ಇಲಾಖೆಯ ಮರಕೆಲಸ, ಚಿತ್ರಕೆಲಸ, ಕಲ್ಲುಕೆತ್ತನೆಕೆಲಸ, ವಿಗ್ರಹ ಕೆಲಸಗಳಿಗೆ; ಬೆಂಗಳೂರು ಗೋವಿಂದಸಾಹುಜೆಯವರ ಮತ್ತು ಕಾಳಪ್ಪಬಾಣಪ್ಪನವರ ಸೀರೆಗಳಿಗೆ, ಆದಪ್ಪನವರ ರವಿಕೆ ಕಣಗಳಿಗೆ, ಚಿಕ್ಕಮುನಿಸಿಹಮ್ಮನವರ ರುಮಾಲು ಪೇಟಾಗಳಿಗೆ, ಬಿ. ಕೆ. ಸುಬ್ಬಯ್ಯಶೆಟ್ಟರ ಜಮಖಾನಗಳಿಗೆ, ದಾವಣಗೆರೆ ದುಗ್ಗಪ್ಪನವರ ಮತ್ತು ಚಿತ್ರದುರ್ಗದ ಎಚ್. ಕೃಷ್ಣಪ್ಪನವರ ಕಂಬಳಿಗಳಿಗೆ, ಮೈಸೂರಿನಲ್ಲಿರುವ ಮುಸ್ತಫಾ ಅಲ್ಲಿಯವರ ಕೊಂಬಿನ ಪದಾರ್ಥಗಳಿಗೆ, ಹಾಸನದ ಕಾಗಾಬಾರ್ಯ ನಾಹುಕತ್ತಿಗೆ, ಮೈಸೂರು ಇಂಡಸ್ಟ್ರಿಯಲ್ ಸ್ಕೂಲ್ ಸೈಯದ್ ಮನ್ಸೂರ್ಯವರ ಕಬ್ಬಿಣದ ಪೆಟ್ಟಿಗೆಗೆ, ಕೋಲಾರದ ಟ್ರೇನಿಂಗ್ ಇನ್ಸ್ಟಿಟ್ಯೂಟಿನ ಮರಕೆಲಸದ ಸಾಮಾನುಗಳಿಗೆ, ಮೈಸೂರು ಎಂ. ಶಾಮರಾಯರ ಬಟ್ಟಲು ಡಾಬ್ರಗಳಿಗೆ, ಮೈಸೂರು ಗಣೇಶಯ್ಯನವರ ಮತ್ತು ಯುಸುಫಲ್ಲಿಯವರ ಚಿತ್ರಕೆಲಸಗಳಿಗೆ—ಈ ಮೊದಲಾದ ವಸ್ತುಗಳಿಗೆ ಬೆಳ್ಳಿಯ ಮೆಡಲನ್ನು ಕೊಟ್ಟಿದಾರೆ.

ಮತಾಂತರ ಹೊಂದಿದವರ ವಿಷಯವಾದ ಹೊಸಕಾನೂನು.

೧. ಇದು ಮಹಾರಾಜ್ಞೀಯರು ಕೊಟ್ಟಿರುವ ಇಷ್ತಿಹಾರ್ನಾಮೆಗೆ ಅನುಸಾರವಾಗಿರುವುದೋ?

ಮೈಸೂರು ಸರ್ಕಾರದವರು ಮತಾಂತರವನು ಹೊಂದುವಂಥಾ ತಮ್ಮ ಪ್ರಜೆಗಳ ಹಕ್ಕು ಬಾಧ್ಯತೆಗಳನ್ನು ಕಾಪಾಡಬೇಕೆಂಬ ಉದ್ದೇಶದಿಂದ ಒಂದು ಮಸೂದೆ ಕಾನೂನನು ಮಾಡಿ, ಅದರ ವಿಷಯದಲ್ಲಿ ಪ್ರಜೆಗಳ ಅಭಿಪ್ರಾಯವನು ತಿಳಿಯಬೇಕೆಂದಪೇಕ್ಷಿಸಿ, ಪ್ರಕಟಿಸಿರುತ್ತಾರಷ್ಟೆ ಈ ಮಸೂದೆಯ ವಿಷಯವಲ್ಲಿ ಇದುವರೆಗೆ ನಾನಾಪ್ರಕಾರವಾದ ಆಕ್ಷೇಪಣೆಗಳು ಮಾಡಲ್ಪಟ್ಟಿರುತ್ತವೆ ಈ ಆಕ್ಷೇಪಣೆಗಳಲ್ಲಿ ಪ್ರತಿ ಒಂದನ್ನೂ ತೆಗೆದುಕೊಂಡು, ಅದು ಎಷ್ಟು ಮಟ್ಟಿಗೆ ಸಹಜವಾದದ್ದೋ ಚರ್ಚೆಮಾಡಲಿಚ್ಛೈಸುವೆವು. ಈ ಪೈಕಿ ಒಂದು ಆಕ್ಷೇಪಣೆಯನು ಕುರಿತು ಸದ್ಯಕ್ಕೆ ಪ್ರಸ್ತಾಪಮಾಡುತ್ತೇವೆ ಅದೇನೆಂದರೆ—ಗತಿಸಿದ ವಿಕ್ಟೋರಿಯಾ ಮಹಾರಾಜ್ಞೀರವರು ೧೮೫೭ ನೆ ಇಸವಿಯಲ್ಲಿ ಒಂದು ಪ್ರಸಿದ್ಧಪತ್ರಿಕೆಯನ್ನು ಪ್ರಕಟಿಸಿ, ಅದರಲ್ಲಿ ಹಿಂದುಗಳ ಮತಭಕ್ತಿ ಆಚರಣೆಗಳಿಗೆ ಕುಂದಕವನು ಬಾರಮಾಡುವುದಿಲ್ಲವೆಂದು ಅಪ್ಪಣೆ ಕೊಡಿಸಿರುತ್ತಾರೆ ಎಂಬುದೇ. ಈ ಆಕ್ಷೇಪಣೆಗೆ ಸಮಾಧಾನ ಹೇಳುವದೇನೂ ಕಷ್ಟವಲ್ಲ.

(೧) ಕಳೆದ ೧೮೫೦ ನೆ ಇಸವಿಯಲ್ಲಿ ಇಂಡಿಯಾ ಗವರ್ನಮೆಂಟಿನವರು ಕುಂಫಣೀ ಸರ್ಕಾರದಲ್ಲಿ ಮತಾಂತರವನ್ನು ಹೊಂದುವವರ ಹಕ್ಕುಬಾಧ್ಯತೆಗಳನು ಸಂರಕ್ಷಣೆಮಾಡುವುದಕ್ಕಾಗಿ ೨೧ ನೆ ನಂಬರುಳ್ಳ ಕಾನೂನನ್ನು ಮಾಡಿ ಜಾರಿಗೆ ತಂದಿದಾರೆ ಮೈಸೂರು ಸರ್ಕಾರದವರು ಯಾವ ಉದ್ದೇಶ ಅಭಿಪ್ರಾಯಗಳೊಡನೆ ಈ ಮಸೂದೆಯನ್ನು ಮಾಡಿರುವರೋ ಇಂಡಿಯಾ ಗವರ್ನಮೆಂಟಿನವರೂ ಅದೇ ಉದ್ದೇಶ ಅಭಿಪ್ರಾಯಗಳೊಡನೆ ಮೇಲ್ಕಂಡ ಕಾನೂನ್ ಮಾಡಿರುವರೆಂದು ತಿಳಿಯತಕ್ಕದ್ದು ಒಂದು ಮತವನು ಬಿಟ್ಟು ಇನ್ನೊಂದು ಮತಕ್ಕೆ ಹೋಗಿ ಸೇರಿಕೊಳ್ಳುವದನು ಗವರ್ನಮೆಂಟಿನವರು ಅಪರಾಧವೆಂದು ಪರಿಗಣಿಸುವುದಿಲ್ಲ. ಆಪಕಾರಣ ಅಂಥವರು ಯಾವ ಹಕ್ಕು ಬಾಧ್ಯತೆಯನ್ನಾದರೂ ಕಳೆದುಕೊಳ್ಳುವುದು ತರವಲ್ಲ. ಆ ೨೧ ನೆ ನಂಬರುಳ್ಳ ಕಾನೂನು ಮೇಲ್ಕಂಡ ಪ್ರಸಿದ್ಧಪತ್ರಿಕೆಗೆ ವಿರೋಧವಾಗಿದ್ದಲ್ಲಿ ಈವರೆಗೆ ಅದನ್ನು ಯಾಕೆ ರದ್ದುಮಾಡಲಿಲ್ಲವೋ? ಈಗಲೂ ಅದು ಜಾರಿಯಲ್ಲಿರುತ್ತದೆ ಸದ್ಯವಲ್ಲಿ ಅದೇನೂ ರದ್ದಾಗುವ ಸಂಭವ ಕಾಣುವುದಿಲ್ಲ.

(೨) ಸ್ವಭಾವಜನ್ಯವಾದ ಧರ್ಮಕ್ಕಾಗಲಿ, ಸರ್ವಜನ ಸಮ್ಮತವಾದ ನಡತೆಗಳಿಗಾಗಲಿ, ನವನಾಗರಿಕರ ಕಾನೂನಿಗಾಗಲಿ ವಿರೋಧವೆನಿಸುವಂಥಾ ಪ್ರತಿ ಒಂದು ಮತಾಚರಣೆಯನ್ನೂ ಯಾವ ಕಾಲದಲ್ಲಿ ಬೇಕಾದರೂ ನಿಲ್ಲಿಸುವುದಕ್ಕೆ ಇಂಡಿಯಾಗವರ್ನಮೆಂಟಿನವರಿಗೆ ಸ್ವಾತಂತ್ರ್ಯವಿದ್ದೇ ಇರುವದು ಇದಕ್ಕೆ ದೃಷ್ಟಾಂತವೇನಂದರೆ, ಸಹಗಮನವನ್ನು ಗವರ್ನಮೆಂಟಿನವರು ನಿಲ್ಲಿಸಿ ಬಿಟ್ಟರು. ಯಾಕಂದರೆ ಮನುಷ್ಯ ಜನ್ಮವು ಜೀವರಾಶಿಗಳಲ್ಲಿ ಪ್ರಧಾನವಾದದ್ದು ಇಂಥಾ ಪುರುಷನ ಅಥವಾ ಸ್ತ್ರೀಯ ಸಹಗಮನವು ಕೊಲೆ ಇಲ್ಲವೇ ಆತ್ಮಹತ್ಯವೆನಿಸುವುದು ಇದೇ ರೀತಿ ಬೊಂಬಾಯಿ ಆಧಿಪತ್ಯದಲ್ಲಿ ಜನರು ಖಂಡೋಬನಿಗೆ ಕೊಟ್ಟು ಮದುವೆ ಮಾಡುತ್ತೇವೆಂದು ಹೇಳಿ ಹೆಣ್ಣು ಮಕ್ಕಳನ್ನು ಕರಾರಿಗೆ ವಿವಾಹ ಮಾಡುತ್ತಿದ್ದರು ಇದು ಮದುವೆಯೆನಿಸಿಕೊಳ್ಳುವುದೇ ಇಲ್ಲವೆಂದು ಅಲ್ಲಿನ ಹೈ ಕೋರ್ಟಿನವರು ತೀರ್ಮಾನ ಹೇಳಿ, ಈ ದುಷ್ಟ ಪದ್ಧತಿಯನ್ನು ನಿಲ್ಲಿಸಿರುತ್ತಾರೆ. ಇಂಥಾ ಮದುವೆಯು ಜನರ ಸದ್ಗುಣ ಸಚ್ಚರಿತ್ರಗೆ ವಿರೋಧವಾಗಿರುವುದೆಂದು ಯಾರೂ ಹೇಳಬಲ್ಲರು. ಹೀಗೆಯೇ ಮತಾಂತರ ಹೊಂದಿದ ಮನುಷ್ಯನನ್ನು ಮೃತನಂತೆಯೂ, ಸಮಸ್ತ ಹಕ್ಕು ಬಾಧ್ಯತೆಗಳನ್ನೂ ಕಳೆದುಕೊಂಡವನಂತೆಯೂ ಎಣಿಸುವುದು ನಾಗರಿಕ ಸರ್ಕಾರದವರಿಗೆ ಸಹಜಧರ್ಮವಾಗಿರುವುದೇ? ಇದು ಸಹಜವಲ್ಲವೆನ್ನುವ ಪಕ್ಷಕ್ಕೆ ಬ್ರಿಟಿಷ್ ಗವರ್ನಮೆಂಟಿನವರು ತಲೆ ಹಾಕಿ, ಅದನ್ನು ಬದಲಾಯಿಸ ಮಾಡುವುದೇನೂ ಅನ್ಯಾಯವೆನಿಸಿಕೊಳ್ಳಲಾರದು.

(೩) ಯಥಾರ್ಥ ಸಂಗತಿಯೇನೆಂದು ವಿಚಾರಿಸಲಾಗಿ ಇಂಡಿಯಾ ಗವರ್ನಮೆಂಟಿನವರು ಈ ಕಾನೂನ್ ವಿಷಯದಲ್ಲಿ ಮೈಸೂರು ಸರ್ಕಾರದವರನು ಬಲಾತ್ಕಾರ ಪಡಿಸಿರುವುದಿಲ್ಲ. ಕಳೆದ ೧೮೩೩ ನೆ ಇಸವಿಯಲ್ಲಿ ಮೇಲ್ಕಂಡ ೨೧ ನೆ ನಂಬರುಳ್ಳ ಕಾನೂನನ್ನೇ ಮೈಸೂರು ಸಂಸ್ಥಾನಕ್ಕೂ ಜಾರಿಗೆ ತರಬೇಕೆಂದು ಚರ್ಚೆಯಾದಾಗ ಮೈಸೂರು ಸೀಮೆಯ ಅಧಿಕಾರಿಗಳಲ್ಲಿ ಬಹು ಮಂದಿ ಆಗ ಬಹುದೆಂದು ಅಭಿಪ್ರಾಯ ಪಟ್ಟಾಗ್ಯೂ ಇಂಡಿಯಾ ಗವರ್ನಮೆಂಟಿನವರು ಜಾರಿಗೆ ತರದೆ ನಿಲ್ಲಿಸಿದರು. ಯಾಕಂದರೆ ಆಗ್ಗೆ ಮೈಸೂರು ದೇಶೀಯ ರಾಜರಿಗೆ ಪ್ರತಿಯಾಗಿ ಈ ಸಂಸ್ಥಾನವನು ಗವರ್ನಮೆಂಟಿನವರು ವಹಿಸಿಕೊಂಡು ಆಳುತ್ತಿದ್ದರು ಅಂಥಾ ರಾಜರ ಅನುಮತಿಯನ್ನೂ ಒಪ್ಪಿಗೆಯನ್ನೂ ಪಡೆಯದೆ ಜಾರೀಗೆ ತರುವದು ಸಹಜವಲ್ಲವೆಂದು ಸುಮ್ಮನಾದರು

ಈಚೆಗೆ ಮೈಸೂರು ಸಂಸ್ಥಾನವನ್ನು ರೀಜಂಟರವರು ಆಳುತ್ತಿದ್ದಲ್ಲಿಯೂ ಆ ಕಾನೂನನು ಮೇಲ್ಕಂಡ ಕಾರಣಗಳಿಗಾಗಿಯೇ ಜಾರೀಗೆ ತರಲಿಲ್ಲ. ಈ ರೀತಿ ಇಂಡಿಯಾ ಗವರ್ನಮೆಂಟಿನವರು ತಟಸ್ಥರಾಗಿದ್ದದ್ದು ನ್ಯಾಯವೆಂಬುದಾಗಿ ನಾವು ಒಪ್ಪಿಕೊಳ್ಳುವೆವು. ಆದರೆ ಹೊರಗಿನ ಬಲವಂತವೇನೂ ಇಲ್ಲದೆ ಶ್ರೀಮನ್ಮಹಾರಾಜರವರೂ ಅವರ ಸರ್ಕಾರದವರೂ ತಾವಾಗಿಯೇ ಇಂಥಾ ಕಾನೂನ್ ಮಾಡಿ ಜಾರಿಯಲ್ಲಿ ತರುವುದೇ ಶ್ರೇಯಸ್ಕರವೆನಿಸುವದು.

(೪) ಕಳೆದ ೧೮೮೦ ರಲ್ಲಿ ಸರ್ ಜೇಂಸ್ ಗಾರ್ಡನ್‌ರವರು ಸಂಸ್ಥಾನದ ಛೀಫ್ ಕಮಿಷನರಾಗಿದ್ದಾಗ ಅವರು ಹೇಳಿರುವುದೇನೆಂದರೆ—"ಯಾವ ಮತದ ವಿಷಯದಲ್ಲೂ ಪಕ್ಷಪಾತವನ್ನು ತೋರಿಸಬಾರದೆಂಬ ಉದ್ದೇಶದಿಂದ ಈ ಕಾನೂನು ರಚಿಸಲಾಗಿದೆ. ಮಹಾರಾಜ್ಞೀರವರ ಇಷ್ತಿಹಾರ್ನಾಮೆಗೆ ಅನುಸಾರವಾಗಿದೆ ಎನ್ನುವುದಕ್ಕೆ ಈ ಉದ್ದೇಶ ಒಂದೇ ಸಾಕಾಗಿರುವುದು."

ಚಕ್ರವರ್ತಿನಿಯವರಾದರೋ ಆ ಪ್ರಸಿದ್ಧಪತ್ರಿಕೆಯಲ್ಲಿ ತಿಳಿಸುವುದೇನೆಂದರೆ—"ನಾನು ಪೂರ್ಣ ಕ್ರೈಸ್ತಭಕ್ತಳು. ಆದರೆ ಯಾವನ ಮೇಲಾದರೂ ಅವನ ಭಕ್ತಿ ಮಾರ್ಗಕ್ಕೆ ವಿರೋಧವಾಗುವಂತೆ ನನ್ನ ರಾಜದಂಡನವನ್ನು ಪ್ರಯೋಗಮಾಡಲಾರೆನು." ಒಬ್ಬನು ಮತಾಂತರವನು ಹೊಂದಿದ್ದಕ್ಕಾಗಿ ಅವನ ಜಾತಿಯವರೋ ಕುಲದವರೋ ಅವನ ಆಸ್ತಿಯನ್ನಾಗಲಿ ಮಕ್ಕಳನ್ನಾಗಲಿ ಕಿತ್ತುಕೊಳ್ಳುವುದು ಚಕ್ರವರ್ತಿನಿಯವರ ಪ್ರಸಿದ್ಧಪತ್ರಿಕೆಗೆ ವಿರೋಧವಾದದ್ದೇ ಸರಿ. ಈಗ ಮೈಸೂರು ಸರ್ಕಾರದವರು ಮಾಡಿರುವ ಮಸೂದೆ ಕಾನೂನು ಆ ಇಷ್ತಿಹಾರ್ನಾಮೆಗೆ ವಿರೋಧವಾಗಿಲ್ಲ. ಅದು ಅವರ ಅಭಿಪ್ರಾಯಕ್ಕೆ ಅನುಸಾರವಾದದ್ದಾಗಿರುವುದು.

ಪರಸ್ಪರ ಸಹಾಯಕ ಸಂಘವು.

ಮೈಸೂರು ಪಟ್ಟಣದಲ್ಲಿ ನಡೆದ ದೊಡ್ಡ ಸಭೆಯು.

ಕಳೆದ ಗುರುವಾರ ಸಾಯಂಕಾಲ ರಾಜಧಾನಿಯ ಟೌನ್‌ಹಾಲ್ ಬಂಗಲೆಯಲ್ಲಿ ಒಂದು ದೊಡ್ಡ ಸಭೆ ನಡೆಯಿತು. ಎಲ್ಲಾ ಕೋಮಿನ ಜನರು ವಿಶೇಷವಾಗಿ ಸೇರಿದ್ದರು ಸಭೆಯಲ್ಲಿ ಹಾಜರಾಗಿದ್ದ ಮುಖ್ಯ ಮುಖ್ಯ ದೊಡ್ಡ ಮನುಷ್ಯರ್‍ಯಾರೆಂದರೆ—ಮೆ॥ ಗಳಾದ ಬಿ. ಸೀತಾರಾಮರಾಯರು, ಸಿ ಕೃಷ್ಣರಾಯರು, ಎಂ. ಶಾಮರಾಯರು, ಮಹಮದ್ ಜಾಫರ್‌ಯವರು, ಅಂಬಳೇ ಅಣ್ಣೈಯ್ಯಪಂಡಿತರು ಬಿ. ರಾಮಕೃಷ್ಣರಾಯರು, ಸುಬ್ಬಸ್ವಾಮಿ ಅಯ್ಯರವರು. ಕೆ ನಾರಸೈಯಂಗಾರ್ಯರು, ಬಿ. ಸುಬ್ಬರಾಯರು, ಎಂ. ವೆಂಕಟಕೃಷ್ಣಯ್ಯನವರು, ಎಂ. ಸಿ ರಂಗೈಯಂಗಾರು, ವಿ ರಾಘವಾಚಾರ್ರು ಕೆ ಸಂಜೀವಸೆಟ್ಟರು, ಮಲ್ಲಪ್ಪನವರು, ತಿರುವೆಂಗಡಂ ಮೊದಲಿಯಾರ್ರು, ರಾಮಚಂದ್ರರಾಯರು ಡಾಕ್ಟರ್ ಅಚ್ಯುತರಾಯರು, ಬಿ. ಕೃಷ್ಣರಾಯರು, ಸಾ॥ ಬಿಜ್ಜಣ್ಣನವರು, ಎ. ಮಹದೇವಶಾಸ್ತ್ರಿಗಳು, ಎ. ವೆಂಕಟೇಶೈಯ್ಯನವರು ಎಚ್. ನಂಜುಂಡರಾಜೇ ಅರಸಿನವರು, ಎ. ಸುಬ್ಬಣ್ಣನವರು, ಕಸ್ತೂರೈಯ್ಯಂಗಾರ್ರು, ಸಾ॥ ಸುಬ್ಬಣ್ಣನವರು, ಎಲ್. ನರಸಿಂಹೈಯರು, ಟಿ ಎನ್. ದಾಸಪ್ಪನವರು, ಸಿ, ಕೃಷ್ಣಮೂರ್ತಿರಾಯರು, ರಾಮರಾಯರು, ಎಂ. ಡಿ. ನಾರಸೈಯ್ಯಂಗಾರ್ರು, ಬಿ ವೆಂಕಟರಾಮಯ್ಯನವರು, ಕೆ. ಲಕ್ಷ್ಮೀನಾರಣಪ್ಪನವರು. ಚಿಂತಾಮಣಿರಾಯರು ಈ ಮೊದಲಾದವರೂ ವೈದಿಕರಲ್ಲಿ ಕೆಲವರೂ ಬಹುಮಂದಿ ವರ್ತಕರೇ ಮುಂತಾದವರೂ ಸಭಾಸದರಾಗಿದ್ದರು.

ಡಾಕ್ಟರ್ ಪಿ. ಎಚ್. ಅಚ್ಯುತರಾಯರು ಎದ್ದು ಅವಿನ ಸರ್ಕಾರಿ ಅಡ್ವೊಕೇಟ್ ಮೆ॥ ಎಂ ಸಿ. ರಂಗೈಯ್ಯಂಗಾರ್ರು ಪ್ರಸಿಡೆಂಟರಾಗಿ ಸಭೆಯ ಕಾರ್ಯಗಳನು ಜರುಗಿಸಬೇಕೆಂದು ಸೂಚಿಸಿದರು. ಎಂ ವೆಂಕಟಕೃಷ್ಣಯ್ಯನವರು ಈ ಅಭಿಪ್ರಾಯವನು ಅನುಮೋದಿಸಿದರು ತರುವಾಯ ಸಭಾಸದರೆಲ್ಲಾ ಅದರಂತೆಯೇ ಒಪ್ಪಿಕೊಂಡರು.

ಮೆ॥ ರಂಗೈಯಂಗಾರ್ರು ಸಭಿಕರ ಅಭಿಪ್ರಾಯದಂತೆ ಅಗ್ರಾಸನವನ್ನು ವಹಿಸಿ, ಆಗಿನ ಸಭೆಯಲ್ಲಿ ನಡೆಯಬೇಕಾಗಿರುವ ಕಾರ್ಯಗಳನ್ನೆಲ್ಲಾ ಮೆ॥ ಎಂ. ಶಾಮರಾವ್, ಎಂ. ಎ. ಯವರು ತಿಳಿಸುವರೆಂದು ಹೇಳಿ ಕೂತುಕೊಂಡರು.

ಮೈಸೂರು ಸಂಸ್ಥಾನದಲ್ಲಿ ಕೋಆಪರೆಟಿವ್ ಕ್ರೆಡಿಟ್ (ಪರಸ್ಪರ ಸಹಾಯಕ ಸಂಘಗಳ) ರೆಜಿಸ್ಟ್ರಾರ್ ಮೆ॥ ಎಂ. ಶಾಮರಾವ್ ಎಂ. ಎ, ಯವರು ಎದ್ದು ಬಂದು ಸಭಿಕರನ್ನು ಕುರಿತು ಹೇಳಿದ್ದೇನಂದರೆ—

ಮೈಸೂರು ಪುರನಿವಾಸಿಗಳಾಗಿಯೂ ವಿದ್ಯಾವಂತರಾಗಿಯೂ ಪ್ರಜೆಗಳ ಮುಖಂಡರಾಗಿಯೂ ಇರುವ ಈ ಸಭಿಕರು ಪರಸ್ಪರ ಸಹಾಯ ಅಭಿವೃದ್ಧಿಗಳಿಗೆ ಅನುಕೂಲಿಸುವಂಥಾ ಸಂಘಗಳನು ಮಾಡಿಕೊಳ್ಳಬೇಕು. ಇದರಿಂದ ನಮ್ಮ ದೇಶದ ವ್ಯಾಪಾರವನ್ನೂ ವ್ಯವಸಾಯವನ್ನೂ ಕೈಗಾರಿಕೆಗಳನ್ನೂ ವೃದ್ಧಿಮಾಡಿಕೊಳ್ಳಬಹುದಾಗಿದೆ. ಈಗಿನ ಸ್ಥಿತಿಯು ಅಷ್ಟು ಸಂತೋಷಕರವಾಗಿಲ್ಲ. ಇದಕ್ಕೆ ಒಂದೆರಡು ದೃಷ್ಟಾಂತಗಳನು ಹೇಳುವೆನು. ಕಳೆದ ತಿಂಗಳಲ್ಲಿ ಬೆಂಗಳೂರಿನ ಸೋಜರು ಪಟಾಲಮಿನವರು ದೊಡ್ಡಬಳ್ಳಾಪುರದ ಪ್ರಾಂತ್ಯ ಕಲ್ಯಾಂಪು ಹಾಕಿಕೊಂಡಿದ್ದರು. ಆಗ್ಗೆ ಅಷ್ಟೊಂದು ಸೈನಿಕರಿಗೂ ಆ ಮೊದಲಾದ ಪದಾರ್ಥಗಳು ಅಪಾರವಾಗಿ ಬೇಕಾಗಿದ್ದವಷ್ಟೆ. ಅವುಗಳ ಪೈಕಿ ಯಾವ ಒಂದು ವಸ್ತುವನ್ನಾದರೂ ಅವರು ನಮ್ಮ ಕಡೆಯಿಂದ ಕೊಂಡುಕೊಳ್ಳಲಿಲ್ಲ. ಸಮಸ್ತ ಪದಾರ್ಥಗಳನ್ನೂ ಇಂಗ್ಲೀಷ್ ಕಂಪನಿಗಳಿಂದಲೇ ತರಿಸಿಕೊಂಡರು. ಅವರಿಗಾಗಿ ನೀರು ಹೊತ್ತು ಒದಗಿಸಿ ಕೊಡುವದೊಂದೇ ನಮ್ಮ ಜನರ ಕೆಲಸವಾಗಿತ್ತು. ... ವ ವಿಧವಾಗಿಯೂ ನಮ್ಮ ಜನರಿಗೆ ಅವರಿಂದ ಪ್ರಯೋಜನವಾಗಲಿಲ್ಲ. ಇದು ಹಾಗಿರಲಿ, ಕೋಲಾರದ ಭಂಗಾರದ ಗಣಿಗಳನ್ನು ನೋಡಿ ಪಾಶ್ಚಿಮಾತ್ಯರೇ ಸೇರಿ ಅದರಲ್ಲಿ ಇದುವರೆಗೆ ೩೨ ಕೋಟಿ ರೂಪಾಯಿನಷ್ಟು ಚಿನ್ನವನು ತೆಗೆದು ಸಾಗಿಸಿಕೊಂಡು ಹೋಗಿದ್ದಾರೆ. ಇದರಲ್ಲೆಲ್ಲಾ ನಮ್ಮ ಸರ್ಕಾರಕ್ಕೆ ಒಂದೆರಡು ಕೋಟಿ ರೂಪಾಯಿಯು ಬಂದಿರುವುದೋ ಇಲ್ಲವೋ. ಇವೆರಡು ದೃಷ್ಟಾಂತಗಳಿಂದ

...ಷ್ಟು ಮಟ್ಟಿಗೆ ಒಟ್ಟಾಗಿ ಸೇರಿ, ಪರಸ್ಪರಸಹಾಯಕರಾಗಿ ...ಧನಗಳನ್ನು ಕೂಡಿಸಿ, ಏರ್ಪಡಿಸಿಕೊಂಡು ಅಪಾರವಾದ ...ವಿಶೇಷವಾದ ನಂಬಿಕೆಯಿಂದಲೂ ಜಿತಮನಸ್ಸಿನಿಂದಲೂ ...ವನ್ನು ನಡಿಸುತ್ತಾ ಬಂದಿದ್ದಾರೆಂದು ಗೊತ್ತಾಗುತ್ತದೆ ಅಪ ...ವಷ್ಟು ಪರಸ್ಪರವಾದ ಐಕಮತ್ಯವೂ ಕಾರ್ಯಸಾಧನೆ ...ಚರ್ಯವೂ ನಮ್ಮ ಜನರಲ್ಲಿ ಕಾಣುವದಿಲ್ಲ ಅವರು ಬೆಲ್ಲ ...ಧಾನ್ಯ, ಸಕ್ಕರೆ, ಈ ಮೊದಲಾದ ಪದಾರ್ಥಗಳ ತಯಾರಿಗೂ ...ಡು ಮಾಡಿಕೊಂಡು, ತಲಾ ಅಷ್ಟಷ್ಟು ಹಣಹಾಕಿ, ಲೋಕ ...ಸ್ತು ವ್ಯಾಪಾರಮಾಡುತ್ತಾ ಲಾಭಸಂಪಾದನೆ ಮಾಡಿ ಅಭಿ ...ಮುತ್ತಿದ್ದಾರೆ ನಮ್ಮ ಜನರಲ್ಲಾದರೋ ಪರಸ್ಪರವಾದ ನಂ ...ಕೆಗಳು ಕಡಿಮೆ ಸಾಮರ್ಥ್ಯವೂ ಸಾಹಸ ಚಮತ್ಕಾರ ...ಲೂ ಅಭಿವೃದ್ಧಿ ಹೊಂದಬೇಕೆಂತಲೂ ಐಶ್ವರ್ಯ ಸಂಪಾ ...ಸಬೇಕೆಂಬ ಅಭಿಲಾಷೆಯೊಂದು ಮಾತ್ರ ಇದೆಯಲ್ಲದೆ ಅದಕ್ಕೆ ...ಕರ ಸಾಧನಗಳನ್ನು ಒದಗಿಸಿಕೊಂಡಿಲ್ಲವು ಅರ್ಬತ್‌ನಾ ...ಕಂಪನಿಯವರು ಷೇರುಗಳ ಮೂಲಕ ಹಣ ಕೂಡಿಸಿ, ...ಮೂರಿನಲ್ಲಿ ಸಕ್ಕರೆ ಕಾರ್ಖಾನೆ ಮುಂತಾದ್ದನ್ನಿಟ್ಟಿಲ್ಲವೇ? ...ಸೋಡಿ ನಾವುಗಳು ಸಂಕಟಪಡುವಹಾಗಲ್ಲ ಮೊಟ್ಟೆಕಿಟ್ಟು ...ಲಿ ತರವಲ್ಲ ಇತರರು ನಮ್ಮ ಮಧ್ಯೆ ಬಂದು ನಿಂತು ...ಕೂಲಿಮಾಡಿಕೊಂಡು ಧನಾರ್ಜನೆ ಮಾಡುತ್ತಾರೆ ನಾವಾ ...ಬದ್ಧಸ್ಥಿತಿಯಲ್ಲೇ ಇರುವೆವೆಂಬೇ ಹೇಳಬಹುದು ನಾವೂ ...ಹೊಂದಬೇಕಾದರೆ ನಮಗೆ ಯಂತ್ರಗಳೂ ಶಕ್ತಿಯೂ ಬೇ ...ಯಂತ್ರಗಳನ್ನೇನೋ ಯಾರು ಬೇಕಾದರೂ ದುಡ್ಡುಕೊ ...ಕೊಳ್ಳಬಹುದು ಅವುಗಳನ್ನಿಟ್ಟು ಕೆಲಸ ಮಾಡುವದ ...ಸಾಮರ್ಥ್ಯಗಳೂ ಜಿತಮನಸ್ಸೂ ನಮ್ಮಲ್ಲಿ ಇಲ್ಲ ಇಂಥಾ ...ಸಹಾಯಕ ಸಂಘಗಳನ್ನು ಮಾಡಿಕೊಂಡರೆ ಈ ಉದ್ದೇಶ ...ಪ್ರಸುವಾಗಿ ನೆರವೇರುತ್ತಾ ಬಂದೀತು ಇಂಥಾ ಸಂಘಗಳ ...ಲ್ಲಿ ಕೈಲ್ ಕಸ್ತಿಗಳನ್ನು ನಾಕಿ ಗಾಡಿಗಳನ್ನು ಓಡಿಸುತ್ತವೆ ...ಸ್ಥಳಗಳ ತಂತಿ ಟಪಾಲನ್ನು ಇಟ್ಟಿರುತ್ತವೆ ಇಂಥಾ ಸಂಘ ...ಏರ್ಪಟ್ಟ ಕಾರ್ಖಾನೆಗಳಿಂದಲೇ ಪ್ರಪಂಚಕ್ಕೆ ಬೇಕಾಗುವ ...ತರಿಗೆ ಮೊದಲಾದ ಪದಾರ್ಥಗಳು ತಯಾರಾಗಿ ಸೀಮೆಯಿಂ ...ಟ ಸಾಗಿಬಂದು, ನಮ್ಮ ಮನೆ ಬಾಗಿಲಮುಂದೆ ಬಿದ್ದು ಬಿಕ ...ತ್ತವೆ ಜರ್ಮನ ಸಗುವಳಿಯನ್ನು ನೋಡೋಣ ಇದರ ...ಷ್ಟು ಹೊಸ ಕ್ರಮಗಳನ್ನು ಕಲಿತು ಅಭಿವೃದ್ಧಿಗೆ ಬರತಕ್ಕ ...ಸು ರೂಢಿಸುತ್ತಾ ಬಂದಲ್ಲ ಪರಸ್ಪರ ಸಹಾಯಕಸಂಘ ...ವೆ ಅವುಗಳಿಂದ ಜಮೀನ ವ್ಯವಸಾಯವನ್ನು ವಿಶೇಷವಾಗಿ ...ಕೈತನಿಗೆ ಪುಷ್ಟಿಯನ್ನು ಸಂಘಕ್ಕೆ ಲಾಭವನ್ನೂ ಉಂಟುಮಾ ...ಮ ಹೀಗಿಯೇ, ಕ್ಷೀಣಗತಿಗೆ ಬರುತ್ತಿರುವಂಥಾ ನಮ್ಮ ದೇಶದ ...ವು ಕೃಷ್ಣಪಕ್ಷದ ಚಂದ್ರನಂತೆ ವೃದ್ಧಿಪಡಿಸಬಹುದು ವ್ಯಾ ...ಸು ಹೆಚ್ಚಿಸಿ ತುಂಬಾ ಲಾಭಸಂಪಾದನೆ ಮಾಡಿ, ಪರದೇಶದವ ...ರ ಸರಕುಗಳ ಮಾರಾಟಕ್ಕೂ ಅವಕಾಶವನ್ನೇ ತಪ್ಪಿಸಿಬಿಡ ...ಬಹುದು ಸಂಸ್ಥಾನದ ಕಾಲದಲ್ಲಿ ಜಮೀನಿನ ಉತ್ಪತ್ತಿಯು ...ಕೋ ಈಗಲೂ ಅಷ್ಟೇ ಆಗುತ್ತಿವೆ ಬೆಳೆಯಲ್ಲಿ ವ್ಯತ್ಯಾಸವೇ ...ವುದಿಲ್ಲ ಆದರೆ ಧಾರಣೆವಾಸಿಗಳು ಆಗ್ಗಿಂತ ಹೆಚ್ಚಾಗಿರುತ್ತ ...ಣೆ ಹೆಚ್ಚಿದನ್ನು ರೈತನಿಗೆ ಒಳ್ಳೇದು ಎಂದು ಕೆಲವರು ಹೇಳ ...ಆದರೆ ಈ ಹೆಚ್ಚು ಹಣವು ರೈತನಿಗೆ ಸಿಕ್ಕುವುದಂತಾರ್ನೆ ದಲ್ಲಾ ...ಳಿಗಳಿಗೂ ಗಾಡಿಗಳಿಗೂ ಮರ್ಕರಿಗೂ ಹಂಚಿಕೆಯಾಗೀ ...ಧಾರಣೆ ಹೆಚ್ಚಿದರೆ ರೈತನಿಗೆ ಅದರಿಂದ ಪ್ರಯೋಜನವಾಗು ...

...ಕಾರಣ ನೀವುಗಳು ಇಂಥಾ ಪರಸ್ಪರ ಸಹಾಯಕ ಸಂಘವ ...ಪಿಸಿಕೊಂಡು, ಕಸಬುದಾರರಿಗೆ ವಿಳುವಳಿಕೆ ಹೇಳಿ ಪ್ರೋತ್ಸಾ ...ಸಬೇಕು ಅವರಿಂದ ತಯಾರಾಗುವ ಬಟ್ಟೆ ಬರೆ ಮುಂತಾದವುಗ ...ನ್ನು ಕೊಂಡು ಕೊಂಡು, ಅವರ ಕಸಬನ್ನು ಅಭಿವೃದ್ಧಿಗೆ ತರ ...ವ್ಯಾಪಾರಸ್ಥರಿಗೆ ವಿವೇಕ ಹೇಳಿ ದ್ರವ್ಯಸಹಾಯ ಮಾಡಿ ವ್ಯಾ ...ಸು ಹೆಚ್ಚಾಗುವ ಹಾಗೆ ಅಲ್ಪ ವರಮಾನ ಇರತಕ್ಕ ಪ್ರಜೆ ...ದ್ರವ್ಯಸಹಾಯ ಮಾಡಿ ಆರೋಗ್ಯಕರವಾದ ಮನೆ ಮಠಗಳನ್ನು ...ಕೊಳ್ಳುವಂತೆ ಮಾಡಬೇಕು ಸರ್ಕಾರದವರು ಇಂಥಾ ಪರಸ್ಪ ...ಯಕ ಸಂಘಗಳಿಗೆ ಅನೇಕ ಸೌಕರ್ಯಗಳನ್ನು ಕಲ್ಪಿಸಿಕೊ ...ವೆ ಒಂದು ಸಂಘವನ್ನಿಟ್ಟುಕೊಳ್ಳಬೇಕಾದರೆ ಕನಿಷ್ಠಪಕ್ಷ ಹತ್ತು ...ಗಳಾದರೂ ಇರಬೇಕು ಮೆಂಬರುಗಳು ನಂಬಿಕೆಗೆ ಅರ್ಹ ...ಸಚ್ಚರಿತ್ರರಾಗಿಯೂ ಇರಬೇಕು ಇಂಥಾ ಸಂಘಗಳ ...ಪತ್ರಗಳಿಗೆ ಸ್ಟಾಂಪಿಲ್ಲ ರಿಜಿಸ್ಟ್ರೇಷನ್ ಫೀಜೂ ಇಲ್ಲ ...ಕೋರ್ಟ್ ಡಿಕ್ರಿಗಳು ಈ ಸಂಘದ ಷೇರುಗಳನ್ನು ಜಪ್ತಿಮಾ ...ಸಂಘದಲ್ಲಿ ಮೆಂಬರಾಗಿರತಕ್ಕವರಿಗಲ್ಲದೆ ಹೊರಗಿನವರಿಗೆ ...ಲಾಭಗಳನ್ನು ಕೊಡುವದಿಲ್ಲ ಇಂಥಾ ಸಂಘಗಳನ್ನು ಮಾಡಿ ...ದರು ರೈತರಿಗೂ, ವ್ಯಾಪಾರಸ್ಥರಿಗೂ, ಕೈಗಾರಿಕೆ ನಡಸುವವ ...ಕಸಬುದಾರರಿಗೂ ತುಂಬಾ ಅನುಕೂಲ.

...ರುವ ಬ್ಯಾಂಕುಗಳ ನಡವಳಿಕೆಗೆ ಈ ಸಂಘಗಳ ಏರ್ಪಾಡು ...ಕುಂದಕವನ್ನುಂಟುಮಾಡುವದಿಲ್ಲ ಈ ಪಟ್ಟಣದಲ್ಲಿ ತಿಳಿವ ...ಳ್ಳವರು ಬಹು ಜನರಿದ್ದಾರವರಿಂದ ಇಲ್ಲಿ ಮೊದಲು ಒಂದು ...ಮಾಡಿದರೆ ಸುತ್ತುಮುತ್ತಲೂ ಇರತಕ್ಕ ಊರು ಗ್ರಾಮ ...ಅವರ ಪ್ರೇಲ್ಪತ್ತಿಯನ್ನು ಅನುಸರಿಸಿ ತಮ್ಮ ಮಧ್ಯೆ ಒಂ ...ಸಂಘವನ್ನು ಮಾಡಿಕೊಳ್ಳುವುದಕ್ಕೆ ತುಂಬಾ ಪ್ರೋತ್ಸಾಹವಾ ...ಇದಲ್ಲದೆ ಶ್ರೀಮನ್ಮಹಾರಾಜರವರು ಪ್ರಜೆಗಳಲ್ಲಿ ವಿಶೇಷ ...ಪ್ರೀತಿಯನ್ನಿಟ್ಟು, ಅವರನ್ನು ಅಭಿವೃದ್ಧಿಗೆ ತರಬೇಕೆಂದು ಕಾ ...ಈ ಕಾನೂನನ್ನು ಜಾರಿಗೆ ತಂದಿರುತ್ತಾರೆ ಪ್ರಜೆ ...ಸ್ಪರ ಸಹಾಯಕ ಸಂಘಗಳನ್ನು ಸ್ಥಾಪಿಸಿಕೊಂಡಲ್ಲಿ ಅವರ ...ಕನಾದೀತು ಎಂಬುದೇ

ತರುವಾಯ ಮೆ॥ ಅಂಬಳೆ ಅಣ್ಣಯ್ಯ ಪಂಡಿತರು ಮುಂದೆ ಬಂದು, ಇಂಥಾ ಸಂಘದಿಂದಾಗುವ ಫಲಗಳನ್ನು ವಿವರಿಸಿ, ಈಗ ನಮ್ಮ ಜನರಲ್ಲಿ ಆತ್ಮಸಹಾಯವಲ್ಲದೆ ಪರಸ್ಪರ ಸಹಾಯವಿಲ್ಲವೆಂತಲೂ, ಮೆಂಬರುಗಳು ಹಣ ಹಾಕುತ್ತಾರಾದ್ದರಿಂದ ಪ್ರತಿ ಒಬ್ಬರೂ ಸಂಘದ ವಿಷಯದಲ್ಲಿ ಸಹಾಯಮಾಡಿ ಅಭಿವೃದ್ಧಿಗೆ ತರುತ್ತಾರೆಂಬ ಭರವಸೆ ಇದೆ ಎಂತಲೂ, ಬ್ಯಾಂಕುಗಳು ದಿವಾಳಿಯಾಗುವುದು ಸುಲಭವಾದರೂ ಇಂಥಾ ಸಂಘಗಳು ಕೆಟ್ಟು ಹೋಗಲಾರವೆಂತಲೂ, ಇದರಿಂದ ಜನರಲ್ಲಿ ದುರ್ಗುಣ ಅಪನಂಬಿಕೆಗಳು ಕ್ರಮೇಣ ಕಡಮೆಯಾಗಿ ಸತ್ಪ್ರಜೆಗಳಾಗುವುದಕ್ಕೆ ಅವಕಾಶವಿದೆ ಎಂತಲೂ ತಿಳಿಸಿದರು.

ಅನಂತರದಲ್ಲಿ ಅಡ್ವೊಕೇಟ್ ಮೆ॥ ವಿ ರಾಘವಾಚಾರ್ಯರು ಎದ್ದು, ಕಂಪನಿಗಳ ಕಾನೂನು ಜಾರಿಯಲ್ಲಿ ಮೊದಲೇ ಇತ್ತು ಅದನ್ನು ಪ್ರಜೆಗಳಿಗೆ ಉಪಯೋಗವಾಗುವಂತೆ ಬದಲಾಯಿಸಿದ್ದಾರೆ ಇದು ದೊಡ್ಡ ಪಟ್ಟಣ ಅಂಥಾ ಸಂಘಗಳು ೯—೧೦ ಆದರೂ ಏರ್ಪಾಡಾಗಬಹುದು ಸರ್ಕಾರಿ ವ್ಯವಸಾಯದ ಬ್ಯಾಂಕುಗಳಲ್ಲಿ ನಷ್ಟವಾಯಿತು ಈ ಸಂಘಗಳಲ್ಲಿ ಅಂಥಾ ನಷ್ಟವೇ ಆಗುವುದಿಲ್ಲ ಎಂಬುದಾಗಿ ಹೇಳಿದರು

ಡಾಕ್ಟರ್ ಪಿ ಎಸ್ ಅಚ್ಯುತರಾಯರು ಎದ್ದು, ವ್ಯವಸಾಯದ ಬ್ಯಾಂಕುಗಳಲ್ಲಿ ಜನರಿಗೆ ಸುಲಭವಾಗಿ ಹಣ ಸಿಕ್ಕಿತು ಅದರ ಮೆಂಬರುಗಳೇ ದುಡ್ಡು ತಿಂದು ಹಾಕಿದ್ದರಿಂದ ಹಾಳಾಯಿತು ಇದರ ಕಂಪನಿ ಬ್ಯಾಂಕುಗಳು ಹಾಳಾದದ್ದಕ್ಕೂ ಇದೇ ಕಾರಣ ಈ ಪರಸ್ಪರ ಸಹಾಯಕ ಸಂಘಗಳಲ್ಲಿ ಹೀಗಾಗುವುದಿಲ್ಲ ಯಾಕೆಂದರೆ ಈ ಸಂಘದ ಹಣವನ್ನು ಮೆಂಬರುಗಳಲ್ಲದೆ ಇತರರ್ಯಾರಿಗೂ ಸಾಲಕೊಡುವುದಿಲ್ಲ, ಮೆಂಬರುಗಳ ಯೋಗ್ಯತೆ ನೋಡಿ ತಕ್ಕಷ್ಟೇ ಕೊಡಲಾಗುತ್ತದೆ ಎಂಬುದಾಗಿ ತಿಳಿಸಿದರು

ತರುವಾಯ ಕೆಲವರು ಇಂಥಾ ಸಂಘದ ಹಣ ಕಾಸಿಗಳಿಗೆ ಸರ್ಕಾರದವರು ಜಾಮೀನುದಾರರಾಗಬೇಕೆಂತಲೂ, ಸರ್ಕಾರದವರೂ ಸಂಘಕ್ಕೆ ದ್ರವ್ಯಸಹಾಯ ಮಾಡಬೇಕೆಂತಲೂ, ಹೀಗಾದರೆ ಈ ಸಂಘಗಳು ಅಭಿವೃದ್ಧಿ ಹೊಂದುವವೆಂತಲೂ ಆಕ್ಷೇಪಣೆ ಮಾಡಿದ್ದಕ್ಕೆ ಮೆ॥ ಎಂ ಶಾಮರಾಯರು ಈ ವಿಷಯಗಳನ್ನೆಲ್ಲಾ ಸರ್ಕಾರದವರು ಕಾನೂನಿನಲ್ಲಿ ಕಾಣಿಸಿ ಅನುಕೂಲಮಾಡಿ ಕೊಟ್ಟಿದ್ದಾರೆಂತಲೂ, ಸಂಘಗಳು ಸರಿಯಾಗಿ ನಡೆಯುತ್ತಾ ಬಂದಲ್ಲಿ ಸರ್ಕಾರದವರೂ ಬೇಕಾದ ಪ್ರೋತ್ಸಾಹಗಳನ್ನು ಕಲ್ಪಿಸಿ ಕೊಡುತ್ತಾರೆಂತಲೂ, ಮೊದಲೇ ಅಂಥಾ ಸಾಲಭ್ಯಗಳನ್ನು ಕೊಡಲಾರರೆಂತಲೂ ಹೇಳಿದರು

ಮೆ॥ ಎಂ ವೆಂಕಟಕೃಷ್ಣಯ್ಯನವರು ಎದ್ದು, ಮೈಸೂರು ಪಟ್ಟಣದಲ್ಲಿ ಸದ್ಯ ಒಂದು ಸಂಘವನ್ನು ಸ್ಥಾಪಿಸೋಣವೆಂದು ಸೂಚಿಸಿದರು ಇದು ಅವಶ್ಯವೆಂದು ಮೆ॥ ಸಿ ಕೃಷ್ಣರಾಯರು ಅನುಮೋದಿಸಿದರು. ಸಭಿಕರೆಲ್ಲಾ ಅದಕ್ಕೆ ಸಮ್ಮತಿ ಹಾಕಿದರು. ತರುವಾಯ ಈ ಸಂಘಕ್ಕೆ ಮೆಂಬರುಗಳಾಗುತ್ತೇವೆಂದು ಒಪ್ಪಿಕೊಂಡಿದ್ದ ಕೆಲವು ದೊಡ್ಡ ಮನುಷ್ಯರ ಹೆಸರನ್ನು ಓದಿದರು ಸದ್ಯದಲ್ಲಿ ಮೆ॥ ವೆಂಕಟಕೃಷ್ಣರಾಯರೇ ಈ ಸಂಘದ ಸೆಕ್ರೆಟರಿಯಾಗಿರಬೇಕೆಂದು ತೀರ್ಮಾನವಾಯಿತು.

ಸಭಿಕರೆಲ್ಲಾ ಪ್ರಸಿಡೆಂಟರನ್ನೂ ಮೆ॥ ಎಂ ಶಾಮರಾಯರನ್ನೂ ವಂದಿಸಿ ಸಭೆಯನ್ನು ಮುಕ್ತಾಯ ಮಾಡಿದರು

ಖಾತ್ರಿದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಖಾತ್ರಿಗಳಿಗೆ ನಾವು ನಿಗಾ ಕೊಡಲಾರೆವು ಆದಕಾರಣ ಖಾತ್ರಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು ಮತ್ತು ಖಾತ್ರಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು, ಇಂಥವುಗಳಿಗೆ ನಾವು ನಿಗಾ ಕೊಡಲಾರೆವು

ಪ್ರಕಟಿಸಲಾರೆವೆಂದು ಹೇಳಿ ತಿರಸ್ಕರಿಸಿದ ಖಾತ್ರಿಗಳನ್ನು ನಾವು ಖಾತ್ರಿದಾರರಿಗೆ ವಾಪಸು ಕಳುಹಿಸಲಾರೆವು

ಖಾತ್ರಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು —ಎಡಿ

ಕರೆಸ್‌ಪಾಂಡೆನ್ಸ್.

ಪ್ರಜಾ ಮನೋ ಸಂಖ್ಯವಿವಾದಿಶೋ ಭವಿಷ್ಯದ್ವಾರ್ತಾ.

ಅಯ್ಯಾ,

ಜ್ಯೋತಿಶ್ಶಾಸ್ತ್ರದಲ್ಲಿ ಹೇಳಿರುವ ಭವಿಷ್ಯದ್ವಿಷಯವಾಗಿ ಈ ಮಾಸದ ೧೪ ಶುಕ್ರವಾರ ರಾತ್ರಿ ವಿಗೋಳದಲ್ಲಿ ಚಂದ್ರನ ಸಂಚಾರವನ್ನು ಚೆನ್ನಾಗಿ ನೋಡಲಾಗಿ, ಪಿತೃ, ಬ್ರಹ್ಮ, ದೇವ ರಾಕ್ಷಸ, ಸೈಶಾಚಗನೆಂಬ ಐದು ನಕ್ಷತ್ರಗಳಾದ ಮಘಾ ನಕ್ಷತ್ರದಲ್ಲಿ ಪಿತೃ, ಬ್ರಹ್ಮ ನಕ್ಷತ್ರಗಳ ಅಂತರ್ಭಾಗದಲ್ಲಿ ಚಂದ್ರನು ಸಂಚಾರ ಮಾಡುತ್ತಾನೆ. ಇದರಿಂದ ಮುಂದೆ ಬರುವ ಶೋಭಾನನಾಮ ಸಂವತ್ಸರದಲ್ಲಿ ಅತ್ಯಂತ ಸುವೃಷ್ಟಿಯಾಗಿ ಸರ್ವಸಸ್ಯಗಳೂ ಅಪ್ರತಿಹತದಿಂದ ಫಲಿಸುವವು. ಪ್ರಜೆಗಳು ಆಯುರಾರೋಗ್ಯಗಳಿಂದಲೂ ತಮ್ಮ ತಮ್ಮ ವರ್ಣಾಶ್ರಮಾಚಾರದಿಂದಲೂ ಯುಕ್ತರಾಗಿ, ಸದಾ ದೇವದ್ಭಕ್ತಿಯುಕ್ತರಾಗಿ ಇರುತ್ತಾರೆನ್ನುವದೇ ಇದರ ಫಲ.

ಏಳುಕೋಟಿ ಜೋಯಿ.

ಮತವೂ ದಾಯಭಾಗವೂ.

೧.

ಅಯ್ಯಾ,

ಒಂದು ದೇಶದಲ್ಲಿ ನೂತನವಾಗಿ ನಿರ್ಮಾಣವಾಗುವ ಯಾವದಾದರೊಂದು ನ್ಯಾಯನಿಬಂಧನೆಯೂ ಸರ್ವತ್ರವೂ ಪ್ರಜಾಕೋಟಿಯ ಏಳಿಗೆಗೆ ಬಾಧಕವಾಗದಂತಿರಬೇಕು. ಹಾಗಿರದೆ ಬಲತ್ಕಾರವಾದ ಬದಲಾವಣೆಯು ಪ್ರಜೆಗಳ ಅತೃಪ್ತಿಯ ದೆಸೆಯಿಂದ ಊರ್ಜಿತವಾಗದೆ, ಅನೇಕ ಅನರ್ಥಗಳಿಗೆ ಆಸ್ಪದವಾಗುವುದು ಆದ್ದರಿಂದ ಯಾವ ಪ್ರಜಾಸಮುದಾಯಕ್ಕೆ ಸಂಬಂಧಪಡುವ ಕೆಲಸವನ್ನೂ ತಕ್ಕ ವಿವೇಚನೆಯಿಂದ ನೆರವೇರಿಸುವುದೇ ಪ್ರಭುಗಳ ಪರಮೋದ್ದೇಶವೆಂಬು ವ್ಯಕ್ತವಾಗುತ್ತದೆ.

ಇದಕ್ಕೋಸ್ಕರವೇ ಈಗ್ಗೆ ೫೦ ವರ್ಷಗಳಿಂದಲೂ ಉತ್ತರದೇಶದಲ್ಲಿ ಜಾರಿಯಲ್ಲಿದ್ದು, ಈಗೀಗ ಈ ದೇಶಕ್ಕೆ ತಲೆಯಿಟ್ಟು, ಮತಾಂತರವನ್ನು ಹೊಂದಿದವರಿಗೆ ಪಿತ್ರಾರ್ಜಿತದ ಆಸ್ತಿಯಲ್ಲಿ ಹಕ್ಕುದಾರಿಯನ್ನುಂಟುಮಾಡುವ ವಿಧಿಯ ವಿಷಯದಲ್ಲಿ ಪ್ರಭುಗಳು ಪ್ರಜೆಗಳ ಇರಾದೆಯನ್ನು ತಿಳಿಯುವುದಕ್ಕಾಗಿ ಎರಡನೇ ಸಾರಿಯೂ ಅವಧಿಯನ್ನು ದಯಪಾಲಿಸಿರುತ್ತಾರೆ

ಈ ವಿಷಯವಾದ ವಿವಾದವನ್ನು ನೋಡಿದರೆ ಹಿಂದೂ ಮತಕ್ಕೆ ಮೈಸೂರು ದೇಶವೇ ಬಹು ಮುಖ್ಯಸ್ಥಾನವಾಗಿರುತ್ತೆಂದೂ ಈ ಮತ ಸಂಬಂಧವಾದ ವಿಧಾಯಕಗಳು ಈ ದೇಶದಲ್ಲಿ ಪರಿಶೀಲನೆಯನ್ನು ಹೊಂದುವಂತೆ ಮತ್ತೆಲ್ಲಿಯೂ ಹೊಂದಲಾರವೆಂಬುವುದೂ ಇದಕ್ಕೆಲ್ಲಾ ತಕ್ಕ ಅನುಕೂಲಗಳು ಈ ದೇಶದಲ್ಲಿವೆಯೆಂಬುವುದೂ ಸ್ಪಷ್ಟವಾಗುತ್ತದೆ

ಹ್ಯಾಗೆಂದರೆ, ಹಿಂದೂಗಳ ಪ್ರತಿ ವರ್ಣದವರೂ ಅವರ ಮುಖ್ಯ ಮುಖ್ಯರಾದ ಪ್ರಸಿದ್ಧ ಗುರುಗಳು ಸಹಾ ಈ ದೇಶದಲ್ಲಿದ್ದಾರೆ ಮತ್ತು ಹಿಂದೂ ಮತಧರ್ಮವನ್ನು ಪರಿಪಾಲಿಸತಕ್ಕ ಪ್ರಭುಗಳೂ ಈ ಪ್ರಭುಗಳಿಂದ ಪರಿಪೋಷಿತರಾಗಿ ನಾನಾ ಶಾಸ್ತ್ರಪಾರಂಗತರಾದ ಆಸ್ತಿಕ ವಿದ್ವಾಂಸ ಮಹನೀಯರೂ ಈ ದೇಶದವರಾಗಿದ್ದಾರೆ ವರ್ಣಾಶ್ರಮಾಚಾರವನ್ನು ಕಾಪಾಡುವದೇ ಪ್ರಜಾಪಾಲಕರ ಮುಖ್ಯಧರ್ಮವೆಂಬ ಮತವು ಗ್ರಂಥಗಳಲ್ಲಿ ಘಂಟಾಘೋಷವಾಗಿ ಸಾರುತ್ತಿದೆ ಇಂಥಾದ್ದರಲ್ಲಿ ಈ ನೂತನವಾದ ಕಾನೂನನ್ನು ಏರ್ಪಡಿಸುವುದು ಮತಾಂತರವನ್ನು ಹೊಂದತಕ್ಕವರಿಗೆ ಪ್ರೋತ್ಸಾಹ ಮಾಡಿದಂತಾಗುವುದಿಲ್ಲವೇ? ಈ ಸಂದರ್ಭದಲ್ಲಿ ಮೇಲಿನ ಗಾದೆ ಒಳ್ಳೆಯ ಉಪಮಾನವಾದೆ ಹೊಟ್ಟೆ ಪಾಡಿನ ಯೋಚನೆಯನ್ನು ಅರಿಯದವನು ಹುಟ್ಟಿದ ಮತವನ್ನು ಬಿಡುವ ಯೋಚನೆಯನ್ನು ಹ್ಯಾಗೆ ತಿಳಿದನು? ಇಂಥಾ ಅಸ್ಥಿರಮನಸ್ಕನಿಗೆ ಕಟ್ಟಿಕೊಟ್ಟ ಬುತ್ತಿಯು ಸ್ಥಿರವೇ? ಹಿಂದೂ ಮತವು ತನಗೆ ಬೇಡ, ಆ ಮತದವರ ಕಷ್ಟಾರ್ಜಿತವು ಬೇಕೋ? ಪಿತೃ ಋಣವನ್ನು ತೀರಿಸದವನಿಗೆ ಪಿತೃವಿನ ಹಣವು ಹ್ಯಾಗೆ ಬಂದೀತು? ಆದ್ದರಿಂದ ದಯಾಳು ಪ್ರಭುಗಳು ಈ ವಿಷಯದಲ್ಲಿ ತಮ್ಮ ಹಿಂದೂ ಪ್ರಜೆಗಳ ಇಷ್ಟವನ್ನು ಈಡೇರಿಸುವರೆಂದು ಪ್ರಾರ್ಥಿಸುತ್ತೇವೆ

ಕೆ ಆರ್ ರಂಗಪ್ಪ.

[ಮನು ಮೊದಲಾದ ಧರ್ಮಶಾಸ್ತ್ರಕಾರರು ಶ್ರಾದ್ಧಾದಿ ಕರ್ಮಗಳನ್ನು "ದ್ವಿಜ" ರಿಗೆ ಮಾತ್ರ ವಿಧಾಯಕ ಮಾಡಿದ್ದಾರಲ್ಲದೆ ಬ್ರಾಹ್ಮಣೇತರವಾದ ಶೂದ್ರಾದಿ ಜಾತಿಗಳಿಗೆ ವಿಧಿಸಿಲ್ಲ —ಎಡಿ]

೨

ಅಯ್ಯಾ,

ಒಬ್ಬನು ತಾನಿರುವ ಮತವನ್ನು ಬಿಟ್ಟು ಅನ್ಯಮತವನ್ನವಲಂಬಿಸುವದರಿಂದ ಮೊದಲ್ ಮತದಲ್ಲಿ ತನಗಿದ್ದ ಹಕ್ಕಿನ ಬಾಧ್ಯತೆಯನ್ನು ಹೋಗಲಾಡಿಸಿಕೊಳ್ಳುವನೆಂಬ ವಿಷಯದಲ್ಲಿ ಅನೇಕರು ಅನೇಕ ವಿಧವಾಗಿ ತಮ್ಮ ಮತ್ತು ಇತರ ಪತ್ರಿಕೆ ದ್ವಾರ ತಿಳಿಸಿರುವದನ್ನು ನೋಡಿದೆನು ಅನ್ಯರ ಮತದಲ್ಲಿ ತವಗುಂಟಾಗಿರುವ ದ್ವೇಷವೇ ಉಪನ್ಯಾಸಕರ್ತರಿಗೆ ಆಧಾರ ಹೊರತು ಮತ್ಯಾವ ಸಕಾರಣವೂ ಕಾಣುವದಿಲ್ಲ. ಇದು ಹ್ಯಾಗೆಂದರೆ.

ಪುತ್ರನಾದವನು ತನ್ನ ತರುವಾಯ ಉತ್ತರಕ್ರಿಯಾದಿಗಳು ಮಾಡುತ್ತಾನಾಗಿ ಮೃತನಾದ ತಾನು ಯಾವ ಲೋಕದಲ್ಲಿದ್ದಾಗ್ಯೂ ಮಗನು ಮಾಡುವ ಸತ್ಕ್ರಿಯೆಗಳಿಂದ ಸ್ವರ್ಗಾದಿ ಲೋಕವನ್ನೈದುತ್ತಾನೆ. ಮತಾಂತರದಲ್ಲಿ ಈ ವಿಧವಾದ ಶ್ರಾದ್ಧಾದಿ ಉತ್ತರಕ್ರಿಯೆಗಳನ್ನು ಮಾಡುವವಿಲ್ಲವಾಗಿ ಅನ್ಯಮತಾವಲಂಬಿಗಳಾದ ಪುತ್ರಾದಿಗಳಿಂದ ಪಿತೃವಿಗೆ ಏನೊಂದವೂ ಪ್ರಯೋಜನವು ಇರುವದಿಲ್ಲವಾಗಿ ಸ್ವಮತದಲ್ಲಿರುವ ಮಗನಿಗಾಗಿಯೇ ಪಿತೃವಿನ ಆಸ್ತಿಯು ಸಲ್ಲತಕ್ಕದ್ದೆಂದು ಎಲ್ಲರೂ ಹೇಳುವರು ಮತ್ತು ತಮ್ಮ ಹೇಳಿಕೆಗೆ ಶಾಸ್ತ್ರಾಧಾರವನ್ನೂ ತೋರಿಸುವರು ತಾನು ಜೀವಿತನಾಗಿರುವಾಗ ಸನ್ಮಾರ್ಗವರ್ತಿಯಾಗದೆ ಅನೇಕ ವಿಧವಾದ ಕೆಟ್ಟ ಕೆಲಸಗಳನ್ನು ಮಾಡುತಲಿದ್ದರೆ ತನ್ನ ತರುವಾಯ ಪುತ್ರನಾದವನು ತಂದೆಗೋಸ್ಕರ ಮಾಡುವ ಶ್ರಾದ್ಧದಿಂದಲೆ ತಂದೆಗೆ ಸ್ವರ್ಗಪ್ರಾಪ್ತಿ ಆಗುತ್ತದೆಯೆ? ಶ್ರಾದ್ಧವನ್ನು ಮಾಡಬೇಕಾದರೆ ಕರ್ತೃ ಭೋಕ್ತೃಗಳು ಎಂಥಾವರಾಗಿರಬೇಕೆನ್ನುವದು ಮನು ಮತ್ತು ಪರಾಶರಸ್ಮೃತಿಗಳಲ್ಲಿ ವಿಶದವಾಗಿ ಹೇಳಿದೆ ಶ್ರಾದ್ಧವನ್ನು ಮಾಡುವವರೆಲ್ಲರೂ ಮೇಲ್ಕಂಡ ಸ್ಮೃತ್ಯನುಸಾರ ನಡಿಯುತ್ತಾರೆಯೋ? ಶ್ರಾದ್ಧವನ್ನು ತಪ್ಪು ಮಾಡುವ ಶ್ರಾದ್ಧದಿಂದ ಏನು ಫಲವಾಗುವದು? ಒಂದು ದಿವಸವೂ ತ್ರಿಕಾಲದಲ್ಲಿಯೂ ಸಂಧ್ಯಾವಂದನೆ ಮಾಡದೇನೇ ಬಿಟ್ಟವನಿಗೆ ಬ್ರಾಹ್ಮಣಿಕೆಯೇ ಹೋಗುತ್ತೆಂದು ಶಾಸ್ತ್ರಗಳಲ್ಲಿ ಸ್ಪಷ್ಟವಾಗಿರುವದು ಸಂಧ್ಯಾವಂದನೆ ಮಾಡುವದಕ್ಕೆ ಕ್ಲುಪ್ತ ಕಾಲವನ್ನು ಹೇಳಿರುವದು ಬ್ರಾಹ್ಮಣನಾದ ಪ್ರತಿ ಒಬ್ಬನು ಕ್ಲುಪ್ತ ಕಾಲಗಳಲ್ಲಿ ಸಂಧ್ಯಾವಂದನೆಯಂ ನಿತ್ಯವೂ ಮಾಡುವನೇ? ಹಾಗೆ ಮಾಡದೆ ತಪ್ಪಿದವನು ಯಾವ ಜಾತಿಯವನಾಗುವನು? ವೇದದಲ್ಲಿ "ಉಳ್ಳಿಯ ಗಡ್ಡೆಯನ್ನು ತಿನಬೇಡ. ಸುರಾಪಾನವನ್ನು ಮಾಡಬೇಡ. ಸುಳ್ಳನ್ನು ಆಡಬೇಡ" ವೆಂತ ಹೇಳಿದೆ, ಪಿತೃಕಾರ್ಯಧ್ವಂಸಿಯಾದ ಪರಮತಾವಲಂಬಿಗೆ ಪಿತೃವಿನ ಸ್ವತ್ತಿನಲ್ಲಿ ಯಾವ ವಿಧವಾದ ಹಕ್ಕನ್ನೂ ಕೊಡಲಾಗದೆಂತ ವಾದಿಸುವ ಮಹಂತರುಗಳು ಮೇಲೆ ಉದಹರಿಸಿರುವ ವೇದೋಕ್ತಿಗನುಸಾರ ಎಷ್ಟರಮಟ್ಟಿಗೆ ನಡೆದುಕೊಳ್ಳುವರೆನ್ನುವದು ತಮ್ಮ ಸ್ವಾನುಭವದಿಂದ ನನ್ನ ಪ್ರಶ್ನೆಗೆ ಉತ್ತರವನ್ನೀಯಲಿ ಹಿಂದೂ ಮತಾವಲಂಬಿಗಳಾದ ಪಿತೃ ಪುತ್ರರಿಗೂ ಸಹೋದರರಿಗೂ ಪರಸ್ಪರವಿರುವ ಸ್ನೇಹಭಾವವನ್ನು ಈಗಲಿರುವ ಕೋರ್ಟು ಕಚೇರಿಯಲ್ಲಿನ ರಿಕಾರ್ಡುಗಳ

ಳಿಂದ ಸರ್ವರೂ ತಿಳಿಯಬಹುದು. ಇವು ಅನುಭವಸಿದ್ಧವಾಗಿದ್ದಾಗ್ಯೂ ತಾನು ಬದುಕಿ ಇರುವ ವರೆಗೂ ತನಗೆ ಮುಂದೆ ಆಗಬೇಕಾದ ಸದ್ಗತಿಯನ್ನು ಉಚಿತ ಪ್ರಯತ್ನ ಮಾಡದೇನೇ ತನ್ನ ಪುತ್ರನು ಮಾಡುವ ಶ್ರಾದ್ಧದ ಮೂಲಕ ತಾನು ಮುಕ್ತಿಯನ್ನು ಪಡೆಯುತ್ತೇನೆನ್ನುವದು ಎಷ್ಟರಮಟ್ಟಿಗೆ ಫಲಕಾರಿಯಾಗುವದೋ ವಾಚಕರೇ ಊಹಿಸಬಹುದು. ಈ ವಿಷಯದಲ್ಲಿ ವಿಶದವಾಗಿ ಇನ್ನೊಂದು ವೇಳೆ ವಿಚಾರಮಾಡುವೆನು

ಸತ್ಯವಾದಿ

[ಪ್ರತಿ ಮನುಷ್ಯನೂ ತನ್ನ ನಡೆನುಡಿಗಳಿಂದ ತನ್ನ ಮುಕ್ತಿ ಮಾರ್ಗವನ್ನು ತಾನೇ ಏರ್ಪಡಿಸಿಕೊಳ್ಳಬೇಕಾಗಿದೆಯಲ್ಲದೆ ತನ್ನ ಮಗ ಮಾಡುವ ಶ್ರಾದ್ಧಾದಿ ಕ್ರಿಯೆಗಳಿಂದ ಎಷ್ಟು ಮಾತ್ರವೂ ಮುಕ್ತಿಯನ್ನು ಪಡೆಯಲಾರನೆಂದು ನಾವು ಒಪ್ಪಿಕೊಳ್ಳುವೆವು. —ಎಡಿ.]

ನಾಲಾ ನೌಕರರೂ ರೈತರೂ.

ಅಯ್ಯಾ,

ತುಮಕೂರು ತಾಲ್ಲೋಕು ಕೋಳಾಲದ ಸಂಪ್ಯಾಗು ಪೊವತ್ತೂರು ಗ್ರಾಮದ ಬಳಿ ಗೌರ್ನಮೆಂಟಿನವರು ೭ ಲಕ್ಷ ರೂಪಾಯಿ ನವರೆಗೂ ಖರ್ಚುಮಾಡಿ ಇನ್ನು ಕೊಂಗಳ್ತಾಯಿದ್ದ ಗರುಡಾಚಲನದಿಗೆ ಅಡ್ಡಲಾಗಿ ಒಂದು ಭಾರಿ ಕೆರೆಯನ್ನು ಕಟ್ಟಿಸಿದ್ದಾರೆ ಇದರಲ್ಲಿ ೩೦ ಅಡಿ ನೀರು ನಿಲ್ಲುತ್ತದೆ ಇದಕ್ಕೆ ೭ ತೂಬುಗಳು ಇವೆ. ಈ ಪ್ರಾಂತ್ಯ ಬೆಂಗಾಡಾಗಿ ಜಲಸತಿಯಿಲ್ಲದೆ ಜನಗಳು ಬಹಳ ಶ್ರಮ ಪಡುತ್ತಿದ್ದರು. ಸರ್ಕಾರದವರು ದಯಮಾಡಿ ಕೊಡಿಸಿಕೊಟ್ಟರು ಈ ಕೆರೆಗೆ ನಾಲಾಮೇಸ್ತ್ರಿಗಾರಿಕೆಗೆ ಒಬ್ಬರು ಕ್ಯಾಮರಾಯರೆಂಬುವರನ್ನೂ ಒಬ್ಬರು ನೌಕರಿಗಳು ಒಬ್ಬ ಮಾದಿಗ ಒಬ್ಬ ಬ್ಯಾಡರವನು ಇವರು ಸ್ಥಳವಂದಿಗರಲ್ಲ ಕಡಪದ ದೇಶದವರು ಇವರುಗಳಿಗೆ ಯಾವ ಆಸ್ತಿಯೂ ಇಲ್ಲ ಸಾಯಂಕಾಲದಲ್ಲಿ ಇವರನ್ನು ಮಾತನಾಡಿಸುವದಕ್ಕೆ ಆಗುವದಿಲ್ಲ ಈ ಸಾಲಿಗೆ ನವಂಬರು ಡಿಸೆಂಬರು ತಿಂಗಳಲ್ಲಿ ಕೆರೆಯಲ್ಲಿ ೧೫ ಅಡಿಗಳ ವರೆಗೂ ನೀರು ಇತ್ತು ರೈತರು ಪ್ರಾನುಗಾಲ ನೀರು ಕಮ್ಮಿ ಎಂದು ಜುಜುಬಿಗದ್ದೆ ಜುಜುಬಿಜೋಳ ಕಾರೀತಿ ಅನೇಕ ಬೆಳಗಳು ಕೊಂಡುಕೊಂಡಿದ್ದಾರೆ ಈ ಮಾನೆಗಾರರು ತಮಗೆ ರೈತರಿಂದ ಯಾವವಿಧವಾದ ಮಾಮೂಲಿಯೂ ಸಲೀಸು ಬರುವದಿಲ್ಲವೆಂದು ಎಕರೆ೧ ಇಷ್ಟು ಭತ್ತ ಕೊಡುತ್ತೇವೆಂದು ಗೊತ್ತು ಮಾಡಿಕೊಂಡರೆ ಫಸಲು ಪೂರೈಸುವವರೆಗೂ ನೀರು ಸರಬರಾಯಿಸುತ್ತೇನೆ ಇಲ್ಲವಾದ ಪಕ್ಷದಲ್ಲಿ ಫಸಲಾಗಲಿ ಹೋಗಲಿ ನನ್ನ ಇಷ್ಟಬಂದಂತೆ ನೀರುಬಿಡಿಸುತ್ತೇನೆ ಎಂದುಕೊಂಡು ಮನಸ್ಸಿಗೆ ಬಂದಹಾಗೆ ನೀರುಬಿಡಿಸಿ ರೈತರಿಗೆ ಉಪಯೋಗವಿಲ್ಲದಂತೆ ಹಳ್ಳ ಕೊಳ್ಳಗಳಲ್ಲಿ ನೀರು ಬಿಡುತ್ತಾನೆ ಏಕೆ ಈರೀತಿ ಮಾಡುತ್ತೀಯೆಂದು ಯಾರಾದರೂ ರೈತರು ಕೇಳಿದಲ್ಲಿ ಚಪ್ಪಡಿಗಳು ಸಣ್ಣಮಾತುಗಳನ್ನಾಡುತ್ತಾರೆ. ಈತನನ್ನು ಕೇಳಿದರೆ ನನ್ನ ಇಷ್ಟ ಪ್ರಾಸಿಕ್ಯೂಷನ್ ಮಾಡುತ್ತೇನೆಂದು ಹೇಳುತ್ತಾನೆ. ೩೦೦—೪೦೦ ಈ ರೀತಿ ಭಾರಿ ಐವಿರ್ಗ ಕಂದಾಯ ಕೊಡತಕ್ಕ ರೈತರಿಗೇ ಆಗಲಿ ಸರ್ಕಾರಕ್ಕೆ ಎಷ್ಟು ಯಾಕರೆಯಿಂದ ಎಷ್ಟು ನಷ್ಟ ಕಷ್ಟಪಟ್ಟಾಗ್ಯೂ ಅವರುಗಳಿಗೆ ಯಾವ ಗೌರವವೂ ಇಲ್ಲ ಈ ಮಾಣೇಗಾರಿಗೆ ವೈಗೇಜು ನೋಡುವದಕ್ಕೆ ೧೦ ರೂಪಾಯಿಗಳು ಮಾಣೆಗಾರಿಗಾಗಿ ೧೨ ರೂಪಾಯಿಯು ಸಲಬು ಬರುತ್ತದೆ ಕೆರೆ ಮುಂದೆ ಕೆಲವು ಜನ ರೈತರು ನೀರುಗಂಟಿಗಳ ಸಣ್ಣಮಾತುಗಳಿಗೂ ಇವರ ಬೆದರಿಕೆಗೂ ಹೆದರಿಕೊಂಡು ಕೊಡುವ ಭತ್ತಗಳಿಂದ ಜೀವನವಾಗುತ್ತದೆ ವೃಥಾ ಬರುವ ಸಂಬಳ ಗಂಟಾಗುತ್ತದೆ ಈಗ ಉಂಟಾಗಿರುವ ನೀರಿನ ಕ್ಷೋಭೆ ವಿಷಯವು ಸರ್ವರಿಗೂ ಗೊತ್ತಿರುತ್ತದೆ ಪಾಪಿಗಳಿಗೆ ಸಮುದ್ರ ವಿದ್ದಾಗ್ಯೂ ನಿಷ್ಫಲವಾಗುವಂತೆ ಈ ಕಾಲಕ್ಕೆ ಉಂಟಾಯಿತು ಕೆರೆ ಕೆಳಗಣ ಜವಿರ್ಗ ದಾರರುಗಳಿಗೆ ಉಂಟಾಗಿರುವ ಕಷ್ಟಗಳನ್ನು ಈ ಮೂಲಕ ತಿಳಿಸಲು ಲಾಚಾರಿಯಾದ್ದೇನೆ ರಾತ್ರಿ ಕಾಲ ಎಡಭಾಗದ ಕಾಲ್ವೆಯಿಂದ ನೀರು ತೆಗೆದುಕೊಂಡು ಹೋಗಿ ಧರ್ಮಸಾಗರದ ಕೆರೆಗೆ ಕಾಲ್ವೆ ಸರಿದಂತೆ ನಿರ್ಮಾಣಮಾಡಿ ನೀರು ಅವರಿಗೆ ಹೋದರೆ ಅವರಿಂದ ಇವರು ಪಾವನವ ಹೊಂದುವ ಒಳರಹಸ್ಯವಾದ ಆಸ್ತಿ ಮಳಿಕೆ ಮಾಡಿಕೊಂಡಿದ್ದಾರೆ ಈಗ ಸರ್ಕಾರದವರು ಸಾವಿರಾರು ಜನಗಳು ೧೦—೨೦ ಗ್ರಾಮದವರು ಜೀವನೋಪಾಯಕ್ಕೆ ಕುಂದಕ ಬಾರದಂತೆ ತಕ್ಷಣ ದಯತೋರಿಸಿ ನೀರಿನ ವಿಷಯ ಚನ್ನಾಗಿ ಅಜಮಾಯಿಷಿಮಾಡಿ ಗರೀಬರಾದ ಬಡ ರೈತರನ್ನೆಲ್ಲಾ ಉದ್ಧಾರಮಾಡುತ್ತಾರೆಂದು ಈ ಪ್ರಾಂತ್ಯದ ಜನಗಳು ಹಂಬಲಿಸುತ್ತಿದ್ದಾರೆ.

ಪ್ರತ್ಯಕ್ಷದರ್ಶಿ

ಮೈಸೂರು ಸರ್ಕಾರವೂ ಸೂಲಗಿತ್ತಿಯರೂ

ಅಯ್ಯಾ,

ಮೈಸೂರು ಸರ್ಕಾರದ ವೈದ್ಯ ಇಲಾಖೆಯ ಸೂಲಗಿತ್ತಿಯರು ತಾವು ಹೆರಿಗೆ ಮಾಡಿದ ಸ್ಥಳದಲ್ಲಿ ಸರಿಯಾಗಿ ಉಪಚಾರಮಾಡುವಂತೆ ಹೇಳಿದ್ದು ತಮ್ಮ ಕೆಲಸವೇ ಅಲ್ಲವೆಂದು ಅಲಕ್ಷ್ಯಮಾಡುವರೆಂಬ ಪ್ರಮಾಣವು ನಂಟ್ಟಿ, ಇನ್ನು ಮುಂದೆ ಹಾಗೆ ಮಾಡಿದರೆ ಕೆಲಸದಿಂದ ವಜಾ ಮಾಡುವುದಾಗಿ ಹುಕುಂ ಹುಟ್ಟಿರುವುದಾಗಿ ಕೇಳುತ್ತೇನೆ ಈ ವಿಚಾರದಲ್ಲಿ ನನ್ನ ಸ್ನೇಹಿತರೊಬ್ಬರು ವಿಶ್ವಾಸಪೂರ್ವಕವಾಗಿ ನನಗೆ ತಿಳಿಸಿದ ಅಂಶವನ್ನು ಈ ಇಲಾಖೆಯವರಿಗೆ ಅರಿಕೆಮಾಡಿಕೊಳ್ಳಲು ಉತ್ಸಾಹಿತನಾಗಿದ್ದೇನೆ

ಈಗಿನ ಸೂಲಗಿತ್ತಿ ಕೆಲಸವು ತುಂಬಾ ಅನುಭವವುಳ್ಳದ್ದಾಗಿಯೂ ಅನುಭವಕ್ಕೆ ತಕ್ಕ ಧೈರ್ಯವುಳ್ಳದ್ದಾಗಿಯೂ, ಕಠಿಣ ಕೆಲಸವಾದ ಪರೋಪಕಾರವಾಗಿಯೂ ಇರುತ್ತೆಂಬುದು ವಾಚಕರೆಲ್ಲರಿಗೂ ಗೊತ್ತಿರಬಹುದು. ಇದರಂತೆಯೇ ಸೂಲಗಿತ್ತಿಯರು ನಡೆಸಿಕೊಂಡುಬರುತ್ತಾ ಹೆಸರನ್ನು ಪಡೆಯುತ್ತಿರುವರು ಈಗಿನ ಡಾಕ್ಟರುಗಳು ತಮ್ಮ ಕೈಕೆಳಗಿನ ಸೂಲಗಿತ್ತಿಗಳು ಬೆಳಿಗ್ಗೆ ೭ ರಿಂದ ೧೧ ರ ವರೆಗೂ, ಸಾಯಂಕಾಲ ೪ ರಿಂದ ೬ ರ ವರೆಗೂ - ಕೆಲಸಕ್ಕೆ ಹಾಜರಾಗಬೇಕೆಂಬ ನಿರ್ಬಂಧವನ್ನು ಕಲ್ಪಿಸಿರುವರು. ಒಂದುವೇಳೆ ಸೂಲಗಿತ್ತಿಯು ರಾತ್ರಿಯೆಲ್ಲಾ ಕಷ್ಟಪಟ್ಟು ನಿದ್ದೆಗೆಟ್ಟು, ಹೆರಿಗೆಮಾಡಿ ಬೆಳಿಗ್ಗೆ ಡ್ಯೂಟಿಗೆ ಹಾಜರಾಗುವುದು ಹ್ಯಾಗೆತಾನೇ ಆಗುವುದು? ದೇಹಕ್ಕೆ ಅನಾರೋಗ್ಯಕರವಲ್ಲವೇ? ನಿದ್ದೆಗೆಟ್ಟರೆ ಬುದ್ಧಿವಿಕಲ್ಪವಾಗಿ ತಮ್ಮ ಕೆಲಸದಲ್ಲಿ ವ್ಯತ್ಯಾಸಗಳು ನಡೆದರೆ ಜವಾಬ್ದಾರರು ಯಾರು?

ಅಲ್ಲದೆ ೭ ರಿಂದ ೧೧ ರ ವರೆಗೆ ಕೆಲಸಮಾಡಿ ಅನಂತರ ಬಾಣಂತಿಯರ ಉಪಚಾರಕ್ಕೆ ಹೊರಟರೆ ಮಧ್ಯಾಹ್ನ ೧—೨ ಘಂಟೆಗಳಿಗೆ ಮನೆಗೆ ಬಂದು ಸ್ನಾನಪಾನಾದಿಗಳನ್ನು ತೀರಿಸಿಕೊಳ್ಳುವ ಹೊತ್ತಿಗೆ ೩ ಘಂಟೆ ಆಗಿ ೪ ರಿಂದ ೬ರ ವರೆಗೆ ಕೆಲಸಕ್ಕೆ ಹಾಜರಾಗಬೇಕು. ಆಗ ವಿಶ್ರಾಂತಿ ಎಲ್ಲಿ? ಮನೆಕೆಲಸಗಳನ್ನೂ ದೇಹಸೌಖ್ಯವನ್ನೂ ತಲೆಬಾಚಿಕೊಳ್ಳುವುದೇ ಮೊದಲಾದ ದೇಹನಿರ್ಮಲತ್ವವನ್ನೂ ಮಾಡಿಕೊಳ್ಳುವುದು ಯಾವಾಗ. ರಾತ್ರಿ ನಿದ್ದೆಗೆಟ್ಟು ಹಗಲು ೮ ಸಲಿಸಲ್ಲಿ ಅಲೆದರೆ ನಂತರ ಉಂಟಾಗುವ ಅಪಾಯಕ್ಕೆ ಜವಾಬ್ದಾರರು ಯಾರು? ವೈದ್ಯ ಇಲಾಖೆಗೆ ಸಂಬಂಧಪಟ್ಟ ಸ್ಥಿತಿಗಳೇ ಇವುಗಳಾಗಿರುವುದರಿಂದ ಪರ್ಯಾಲೋಚಿಸಕೂಡದೆ? ರಾತ್ರಿ ಹಗಲು ಕೆಲಸಮಾಡಿ, ಬೇಸರಿಕೆಯನ್ನು ತೋರ್ಪಡಿಸಿ ತಮ್ಮ ಕೆಲಸದಲ್ಲಿ ಅಲಕ್ಷ್ಯಮಾಡಿದರೆ ಯಾರಪ್ಪ? ಸರ್ಕಾರದವರು ಇದನ್ನು ಆಲೋಚಿಸಿ ತುರ್ತು ಕೆಲಸಗಳಿಗೆ ವಿನಃ ವಿಳಂಬಕಾಲದಲ್ಲಿ ವಿಶ್ರಾಂತಿಕೊಡಬೇಕು ರಾತ್ರಿ ಹೆರಿಗೆಗೆಹೋದ ಸೂಲಗಿತ್ತಿಯು ಹಗಲು ಡ್ಯೂಟಿಗೆ ಬರಲು ಅವಶ್ಯಕವಿಲ್ಲ. ಹೆರಿಗೆಗೆ ಹೋಗದ ಕಾಲದಲ್ಲಿ ಉಪಚಾರಕ್ಕೆ ಹೋಗುವವಳಿಗೆ ಮಧ್ಯಾಹ್ನ ೪ ರಿಂದ ೬ರ ವರೆಗಿನ ಡ್ಯೂಟಿಗೆ ಹಾಜರಾಗತಕ್ಕ ಅವಶ್ಯವಿಲ್ಲ. ಎಂಟೇ ಎರಡು ಬಾಬುಗಳನ್ನು ಸರ್ಕಾರದವರು ಸರಿಪಡಿಸಿಕೊಟ್ಟರೆ ಕೆಲಸ ಸರಿಯಾಗಿಯೂ ಸಮರ್ಪಕವಾಗಿಯೂ ನಡೆಯುವುದು.

ಗಾಂಜಾ ಮೊಕದ್ದಮೆ—ಈ ಊರಿನಲ್ಲಿ ಕೆಲವರು ಕೆಲವು ಕಾಲ ದಿಂದಲೂ ಗಾಂಜಾವನ್ನು ಕದ್ದು ಬಿಕರಿ ಮಾಡುತ್ತಿದ್ದನ ಹಾಗೆ ತಿಳಿದು, ನಮ್ಮ ಟೌನ್ ಇಲಾಖಾ ಸೀತಾರಾಮಯ್ಯನವರು ತಮ್ಮ ಛಪರಾಸಿಗಳ ಸಂಗಡ ಕಾದು, ಚಿಕ್ಕದಾಸಿ ಎಂಬಾತನನ್ನು ಹಿಡಿದು ಆತನಲ್ಲಿದ್ದ ೭ ಸೇರು ಗಾಂಜಾವನ್ನು ಪತ್ತೆಮಾಡಿ ವಿಚಾರಣೆಗೆ ಗುರಿಮಾಡಿರುವರು ಆಸಾಮಿಯನ್ನು ಜಾಮೀನಿನಮೇಲೆ ಬಿಟ್ಟಿರುತ್ತಾರೆ. ಮೈಸೂರು ಸರ್ಕಾರದವರು ಅವ್ವಲ್‌ತರದ ಗಾಂಜಾ ಬೆಳೆಮಾಡಿ ಕೊಡದಿರುವದೇ ಇದಕ್ಕೆ ಕಾರಣವೆಂದು ತಿಳಿಯಬರುತ್ತದೆ.

ಸಿ. ವಿ. ರಾ.

ತಾಲ್ಲೋಕು ವರ್ತಮಾನಗಳು.

ಚಿಕ್ಕಬಳ್ಳಾಪುರ.—ಬಿಸಿಲು ಹೆಚ್ಚಾಗಿರುವದರಿಂದ ಬಳಿ ಕದಮೆ ಪ್ರಕೃತ ಸುಗ್ಗಿಕಾಲವೂ ಕಂದಾಯ ವಸೂಲಿ ಕಾಲವೂ ಆಗಿರುವದರಿಂದ ಪಿಸಸು ಗಾಡಿಗಳು ಸಮಾನಾಗಿ ಮಂಡಿಗಳಿಗೆ ಬರುತ್ತಲಿವೆ.—ನಮ್ಮ ಅಮಲ್ದಾರ್ ಮೆ॥ ಎಂ. ಕೃಷ್ಣಸ್ವಾಮಿಯ್ಯಂಗಾರರು ಸಾಗರಕ್ಕೆ ಹೊರಟುಹೋದರೆಂದು ತಿಳಿಸಲು ವಿಷಾದಿಸುತ್ತೇವೆ ಇವರು ಉದಾರಿಗಳಾಗಿಯೂ ಅನೇಕ ಬಡಬಗ್ಗರಿಗೆ ಆಶ್ರಯದಾಗಿಯೂ ಗುಣಶಾಲಿಗಳಾಗಿಯೂ ಇದ್ದರು. ಇವರನ್ನು ಇಲ್ಲಿನ ದೊಡ್ಡ ಮನುಷ್ಯರೆಲ್ಲರೂ ಸೇರಿ ಮರ್ಯಾದೆ ಮಾಡಿ ಸಾಗಕಳುಹಿಸಿದರು. ಹೊಸ ಅಮಲ್ದಾರ್ ಮೆ॥ ಪಿ. ರಂಗರಾಯರು ಇವರ ಹಾಗೆಯೇ ಹೆಸರು ಪಡೆಯಬೇಕೆಂಬುದೇ ನಮ್ಮ ಕೋರಿಕೆಯಾಗಿದೆ.—ಈಗ್ಗೆ ಸುಮಾರು ಒಂದು ತಿಂಗಳ ಕೆಳಗೆ ಇಲ್ಲಿನ ಪೇಟೆಯಲ್ಲಿ ಟ್ರಾನ್ಸಿಟ್ ಕಂಪೆನಿ ಎದುರಿಗಿರುವ ಎರಡು ಅಂಗಡಿಗಳಿಗೆ ಕಳ್ಳರು ಬಿದ್ದು ಸುಮಾರು ೭೦೦ ರೂ. ನವಿವಿಗೂ ಕಳವು ಮಾಡಿಕೊಂಡು ಹೋದರು ಪೋಲೀಸಿನವರು ರಾತ್ರಿ ವೇಳೆ ಬೀಟ್ ಮಾಡುವದೂ ಇಲ್ಲದ್ದು ಇದರಿಂದ ಗೊತ್ತಾಗುತ್ತದೆ ಈ ಕಳುವು ಇನ್ನೂ ಪತ್ತೆಯಾಗಲಿಲ್ಲ.—ಈ ಸಲ ಈ ಊರಿನ ಹೈಸ್ಕೂಲಿನಿಂದ ಮೆಟ್ರಿಕ್ಯುಲೇಷನ್ ಪರೀಕ್ಷೆಗೆ ಹೋಗಿದ್ದವರಲ್ಲಿ ೭ ಹುಡುಗರು ಪ್ಯಾಸಾಗಿದ್ದಾರೆ ಇಲ್ಲಿ ಹೊಸದಾಗಿ ಸ್ಟೂಡೆಂಟ್ಸ್ ಹೋಂ ಏರ್ಪಾಡು ಮಾಡಿದಾರೆ ಪರಸ್ಥಳದ ಹುಡುಗರು ಬಂದು ಓದಲು ಅನುಕೂಲವಾಗಿದೆ ಹೆಡ್ ಮಾಸ್ಟರು ಇದರ ವಿಷಯದಲ್ಲಿ ತುಂಬಾ ಮುತುವರ್ಜಿಯುಳ್ಳವರಾಗಿಯೂ ಗುಣಶಾಲಿಗಳಾಗಿಯೂ ಇರುವರು

ತಿಪಟೂರು.—ಸ್ವಾಮಿಯ ಕೃಪೆಯಿಂದ ಈ ವರ್ಷ ಪ್ಲೇಗು ಇಲ್ಲ. ವ್ಯಾಪಾರ ಸರಿಯಾಗಿ ನಡೆಯುತ್ತೆ ಪ್ರಜೆಗಳೆಲ್ಲರೂ ಆರೋಗ್ಯವಾಗಿದ್ದರೂ ಮಕ್ಕಳಿಗೆ ಸಿಡುಬು ರೋಗ ತಪ್ಪಿಲ್ಲ. ಆದರೆ ಮಹಾನುಭಾವರಾದ ಎಡಿಟರೇ, ಮುನಿಸಿಪಾಲಿಟಿ ಮಾತ್ರ ಚನ್ನಾಗಿಲ್ಲ ದೂಷಣೆ ಮಾಡಿದರೆ ಇದಕ್ಕೆ ಸಂಬಂದಪಟ್ಟ ಮುಖಂಡರ ದ್ವೇಷಕ್ಕೆ ಪಾತ್ರರಾಗಬೇಕಾಗುತ್ತೆ ಮಾಡತಕ್ಕದ್ದೇನು? ಹೊಸದಾಗಿ ಕಟ್ಟುವ ಉದ್ದೇಶ್ಯ ಕೆಲವು ಕಡೆ ಚರಂಡಿಗಳನ್ನು ಕಿತ್ತುಹಾಕಿರುವುದರಿಂದ ಗ್ರಾಮಸ್ಥರೆಲ್ಲಾ ಕೆಲವು ಕಡೆ ಜಮಾಯಿಸಿ, ದಾರಿಗರು ಆ ಸ್ಥಳವನ್ನು ದಾಟಿದರೆ ಮುಂದೆ ಸಿಕ್ಕುವುದು ಸ್ವರ್ಗವೇದೇ ಬೋಧೆಯಾಗುತ್ತೆ ಕತ್ತಲೆ ಕಾಲದಲ್ಲಂತೂ ನೊರಜುಕಲ್ಲುಗಳ ತಾಡನೆಯೂ, ಈ ಮುನಿಸಿಪಲ್ ಸುವಾಸನಾಸ್ವಾದನೆಯೂ ಸೇರಿ, ಅಲ್ಲಿನ ದಾರಿಗರು ತಮ್ಮ ಪಾಪಕೃತ್ಯಗಳಿಗಾಗಿ ಸಜೀವರಾಗಿ ನರಕಕ್ಕೆ ಬಂದೆವೋ ಏನೋ ಎಂದು ಭಯಭ್ರಾಂತರಾಗಬೇಕಾಗುತ್ತೆ. ಕಾಮಗಾರಿಯೇನೋ ಜಾಗ್ರತೆ ಪೂರೈಸಬಹುದು. ಆದರೆ ಅದುವರಿಗೆ ತಡಿಯುವುದು ಕಷ್ಟ. ಅಲ್ಲದೆ ಕೆರೆ ಅಂಗಳದಲ್ಲಿ ಕಡಿಸಿಬಿಡುವುದು ಅತಿಯಾಗಿದೆ. ಈ ಊರಲ್ಲಿ ಕಕ್ಷಿಗಳು ಇಲ್ಲ. ಪ್ರಜಾಹಿತೈಷಿಗಳಾಗಿ ಬಹಳ ದಿವಸಗಳಿಂದ ಸರ್ವೀಸ್ ಮಾಡಿರುವ ನಮ್ಮ ಅಮಲ್ದಾರರವರು ಕೊಂಚ ನಿಗಾಕೊಟ್ಟರೆ ಇದೆಲ್ಲವೂ ಮಾಯವಾಗುವುದು ಈಗ ಬಂದಿರುವ ಬದಲಿ ಆಸ್ಪತ್ರೆ ಡ್ರಸ್ಸರು ತುಂಬಾ ಜನಾನುರಾಗಿಗಳು. ರೋಗಿಗಳಿಗೆ ಇವರು ಮಾಡುವ ಆದರಣೆಯನ್ನು ಈ ಮೂಲಕ ತಿಳಿಸಲಸಾಧ್ಯ. ಇವರು ಇನ್ನು ಕೆಲವು ದಿವಸ ಇದ್ದರೆ ತುಂಬಾ ಅನುಕೂಲವಾಗುತ್ತೆ.

ಚಿಕ್ಕಮಗಳೂರು:—ಈ ಊರಿನಲ್ಲಿ ದಜಾರವೆಂಬ ಸಿಡುಬು ಉಪದ್ರವು ದೇವರ ದಯದಿಂದ ಕಮ್ಮಿಯಾಯಿತು. ಬಿಸಿಲು ಈಗಲೇ ಹೆಚ್ಚುತ್ತಲಿದೆ. ಇನ್ನು ಮುಂದಿನ ಬಿಸಿ ತಿಂಗಳಲ್ಲಿ ಕಷ್ಟ ದೋ ದೇವರೇ ಬಲ್ಲನು—ಕಳೆದ ಡಿಸೆಂಬರಿನಲ್ಲಿ ಇಲ್ಲಿನ ಕೋರ್ಟಿಯಲ್ಲಿ ಕಳವು ಮಾಡಿದ ಮೂವರ ಪೈಕಿ ೧ ನೆ ಅಪರಾಧಿಗೆ ೧ ವರ್ಷ ಸಜ ೨೦ ರೂ ಜುಲ್ಮಾನೆಯೂ, ೨ ನೆ ಅಪರಾಧಿಗೆ ೬ ತಿಂಗಳು ೧೫ ರೂ. ಜುಲ್ಮಾನೆಯೂ, ೩ ನೆ ಯವನಿಗೆ ಬಿಡುಗಡೆಯೂ, ಆಯಿತೆಂದು ಕೇಳುತ್ತೇನೆ ಸುಂಕ ತೀರಿಸದೆ ಹೊಗೇಸೊಪ್ಪನ್ನು ಪಟ್ಟಣಕ್ಕೆ ತಂದಿದ್ದ ಹೊಸದುರ್ಗದ ವೀರಪ್ಪನೆಂಬವನಿಗೆ ಕೋರ್ಟು ೩ ರೂ. ಜುಲ್ಮಾನೆ ಹಾಕಿತೆಂತಲೂ ಹೊಗೆಸೊಪ್ಪನ್ನು ಜಪ್ತಿ ಮಾಡಿ ಬಂದ ಹಣದಲ್ಲಿ ಪತ್ತೆ ಮಾಡಿದ ನಾಲ್ಕು ಜನ ಪೋಲೀಸಿನವರಿಗೆ ತಲಾ ಹತ್ತು ರೂಪಾಯಿನಂತೆ ಇನಾಮು ಕೊಡುವಂತೆ ತೀರ್ಮಾನವಾದಂತೆಯೂ ಕೇಳುತ್ತೇನೆ—ಸ್ಕೂಲುಗಳ ಡೆಪ್ಯುಟಿ ಇನ್ಸ್‌ಪೆಕ್ಟರ್ ಮೆ॥ ತಿರುಮಲಾಚಾರ್ಯರು ಇಲ್ಲಿಗೆ ಬಂದು ಇಲ್ಲಿನ ಎಲ್ಲಾ ಸ್ಕೂಲುಗಳನ್ನೂ ಪರೀಕ್ಷೆ ಮಾಡುತ್ತಲಿದ್ದಾರೆ. ಇದೇ ತಿಂಗಳು ೬ ನೆ ತಾರೀಖು ಇಲ್ಲಿನ ತಾಲೋಕ್ ಮ್ಯಾಜಿಸ್ಟ್ರೇಟರ ಕೋರ್ಟಿಗೆ ತಂದ ಒಂದು ಫಿರ್ಯಾದನ್ನು ಅಮಲ್ದಾರರು ಹಿಡಿದು ವಿಚಾರಿಸಿದ್ದರಲ್ಲಿ ಫಿರ್ಯಾದಿಯು ಕಂಡದ್ದು ಸುಳ್ಳೆಂದು ಕಂಡು ಬಂದದ್ದರಿಂದ ಫಿರ್ಯಾದಿಗೆ ಕಸೆಯಿಂದ ಅಪರಾಧಿಗೆ ೧೫ ರೂ. ನಷ್ಟಕೊಡಿಸಿದರೆಂದು ಕೇಳುತ್ತೇನೆ ಹೀಗೆ ಮಾಡಿದ್ದರಿಂದ ಇನ್ನು ಮೇಲೆ ಸುಳ್ಳು ಫಿರ್ಯಾದುಗಳು ಕೋರ್ಟಿಗೆ ಬಾರದಂತೆ ಎಚ್ಚರಿಸಿದ ಹಾಗಾಯಿತು—ಇದೇ ತಿಂಗಳು ೨೦ ನೆ ತಾರೀಖಿಗೆ ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್ ಸಾಹೇಬರವರು ಇಲ್ಲಿಗೆ ಬರುತ್ತಾರೆಂದು ತಿಳಿದು ಬಂದಿದೆ. ಮಾರ್ಚಿ ೧ ನೆ ತಾರೀಖಿಗೆ ಚೀಫ್ ಕೋರ್ಟ್ ಜಡ್ಜಿಯವರಾದ ಮೆ॥ ನಂಜುಂಡಯ್ಯನವರು ಇಲ್ಲಿಗೆ ಬಂದು ನಾಲ್ಕು ದಿನಸಗಳ ವರೆಗೂ ಇಲ್ಲಿಯೇ ಮೊಕ್ಕಾಂ ಮಾಡಿ, ಇಲ್ಲಿನ ಕೋರ್ಟು ಕೆಲಸಗಳನ್ನೆಲ್ಲಾ ತನಿಖೆ ಮಾಡುವರೆಂದು ಹೇಳಿಕೊಳ್ಳುತ್ತಾರೆ.

ಹರಿಹರ.—ಬೇಸಿಗೆಯ ಬಿಸಿಲಿನ ತಾಪ ಈಗಲೇ ಬಹು ಜಾಸ್ತಿ ಆಗಿದೆ ಹುಲ್ಲು ನೆಲದಲ್ಲಿ ಒಣಗಿಹೋಗಿ ಇದೆ ಜಿನಸು ಧಾರಣೆ ಪ್ರಿಯವಾಗಿ ಜನ ಮತ್ತು ದನಗಳಿಗೆ ಬಹು ತೊಂದರೆಯಾಗಿದೆ. ಈ ಊರಿನಲ್ಲಿ ಬೇರೆ ಕಲ್ಲಂಗಡಿ ಕರಬೂಜ ಫಲಗಳು ಮಾರಾಟಕ್ಕೆ ಈಗಲೆ ಬರುತ್ತಿವೆ ದಾವಣಗೆರೆಯಲ್ಲಿ ಪ್ಲೇಗ್ ಇದೆ ಎಂದು ಈ ಗ್ರಾಮದಲ್ಲಿ ಪ್ಯಾಸುಗಳನ್ನು ಜಾರೀಮಾಡಿದ್ದಾರೆ. ಈ ರೂಲಸು ಬೇರೆ ವರಿಗೆ ಮಾತ್ರವೇ ಹೊರತು ಸರ್ವರಿಗೂ ಇಲ್ಲವೆಂದು ನ್ಯಾಯ ವಿಧ್ಯಮಾನದಿಂದ ಗೊತ್ತಾಗುತ್ತದೆ—ತಾ ೧೧ ರಲ್ಲಿ ಬಸ್ಸಾಪುರಿಯ ಒಬ್ಬ ಬಡವಳ ಮನೆಗೆ ಆಕಸ್ಮಾತ್ ಬೆಂಕಿಬಿದ್ದು ಸಂಪೂರ್ಣವಾಗಿ ಸುಟ್ಟುಹೋಯಿತು ಪ್ರಾಣದ ಭಯದಲ್ಲೂ ಇಂಥಾ ಕಷ್ಟ! ಅಲ್ಲದೆ ಬೆಳೆ ಸಾಧಾರಣವಾಗಿದೆ—ಸರ್ಕಾರಿ ಕಂದಾಯದ ವಸೂಲಿ ಕಾಲ ಸಮೀಪವಾಗಿದೆ ಈ ಗ್ರಾಮದಲ್ಲಿ ನಾಟಕ ಕಂಪನಿಗಳು ಏರ್ಪಟ್ಟು ಆಗಾಗ್ಗೆ ಜನಗಳಿಗೆ ನೇತ್ರಾನಂದಮಾಡಿಸಿ, ದುಡ್ಡು ಸುಲಿಯುತ್ತಿವೆ ಜಾತ್ರೆಯಲ್ಲಿ ದಾವಣಗೆರೆಯಿಂದ ಅನೇಕ ವ್ಯಾಪಾರಸ್ಥರು ವ್ಯಾಪಾರಕ್ಕಾಗಿ ಬಂದಿದ್ದರು. ಆ ಪೈಕಿ ಒಬ್ಬ ಬಳೆ ವ್ಯಾಪಾರಿಯನ್ನು ಪೋಲೀಸಿನವರು ಮತ್ತು ಕೆಲವು ದೊಡ್ಡಮನುಷ್ಯರು ಸೇರಿ ಅಂಗಡಿ ಹಾಕಕೂಡದೆಂದು ತಡೆಮಾಡಿದ್ದೂ ಅಲ್ಲದೆ ಹಾಕಿದ ಅಂಗಡಿಯನ್ನು ಸಹಾ ಕಿತ್ತುಹಾಕಿಸಿದರು ಜಾತ್ರೆಯ ಉತ್ಸವದ ಉಸ್ತುವಾರಿ ದಯಮಾಡಿಸಿದ ದಾವಣಗೆರೆ ಅಮಲ್ದಾರರಲ್ಲಿ ಹೇಳಿಕೊಂಡ ಬಳಿಕ ಅಂಗಡಿ ಹಾಕಿಕೊಳ್ಳುವದಕ್ಕೆ ಅಪ್ಪಣೆಕೊಟ್ಟ ಹಾಗೂ ವರ್ತಮಾನ ಕೇಳುತ್ತೇನೆ ಹೀಗಿದ್ದಾಗ್ಯೂ ಇಲ್ಲಿನ ಪೋಲೀಸ್ ಆಫೀಸರು ಆತನ ಮೇಲೆ ಪಹರೆ ಇಟ್ಟು, ಗ್ರಾಮದಿಂದ ಕಳುಹಿಸಬಿಟ್ಟರು ಇವರಲ್ಲಿ ಕೆಲವರು ಅದೇ ಸ್ಥಳದಿಂದ ಬಂದವರಾದಾಗ್ಯೂ ಅವರ ವಿಷಯದಲ್ಲಿ ಯಾವ ತೊಂದರೆಯೂ ಇಲ್ಲದೆ ಈತನ ವಿಷಯದಲ್ಲಿ ಆಗಿರುವ ತೊಂದರೆಯನ್ನು ನೋಡಿ ತುಂಬಾ ವಿಷಾದವಾಗಿದೆ ದಾವಣಗೆರೆಯಿಂದ ಪ್ರತಿ ಒಂದು ಜಿನಸೂ ಈ ಹರಿಹರಕ್ಕೆ ಬಂದಕೊರ್ತು ಮಾರ್ಗವಿಲ್ಲವಾಗಿದೆ ಹೀಗಿದ್ದೂ ಈ ವ್ಯಾಪಾರಿಯನ್ನು ಹೊರಡಿಸಿದ್ದು ಯಾವ ಧರ್ಮವೋ ನನಗೆ ತಿಳಿಯದು.

ನಂಜನಗೂಡು.—ಹಿಂದಿನವಾರ ಇಲ್ಲಿಗೆ ಛತ್ರೆಯವರು ತಮ್ಮ ಸರ್ಕಸ್ ಆಟವನ್ನು ತೆಗೆದುಕೊಂಡು ಬಂದು ಮೈದಾನದಲ್ಲಿ ಡೇರೆ ಹೊಡೆದು ೩ ದಿನ ತಮ್ಮ ಸಾಧನೆಗಳನ್ನು ತೋರಿಸಿದರು. ಆದರೆ ರಬಿಕರ್ ಜಾಸ್ತಿಯಾಯಿತೇ ಹೊರ್ತು ಆದಾಯ ಬೇರೆ ಜಾಸ್ತಿಯಾಗಲಿಲ್ಲ. ಅವರು ಬಹು ಸಾಮರ್ಥ್ಯದಿಂದಲೂ ಚಮತ್ಕಾರದಿಂದಲೂ ಸರ್ಕಸ್ ಆಡುವರು—ವಿವರ್ಣ ಇಂಗ್ಲಿಷ್ ಸ್ಕೂಲಿನಲ್ಲಿ ಹೋದ ತಿಂಗಳು ೨೫ ವಿದ್ಯಾರ್ಥಿಗಳು ಮಾತ್ರ ವ್ಯಾಸಂಗ ಮಾಡುತ್ತಿದ್ದರು. ಈ ತಿಂಗಳಲ್ಲಿ ೪೩ ವಿದ್ಯಾರ್ಥಿಗಳು ವ್ಯಾಸಂಗ ಮಾಡುವುದನ್ನು ನೋಡಿದರೆ ಹೆಡ್ಮಾಸ್ಟರು ಬಹುಮಟ್ಟಿಗೆ ಸ್ಕೂಲ್ ಅಭಿವೃದ್ಧಿಯ ವಿಷಯದಲ್ಲಿ ಮೆಹನತ್ತು ಮಾಡುತ್ತಿದ್ದಾರೆಂದು ಗೊತ್ತಾಗುತ್ತೆ. ಈಗಿನ ಮಾಸ್ಟರು ಈ ಸ್ಕೂಲಿನ ಅಭಿವೃದ್ಧಿಗಾಗಿ ಒಂದು ಕೂಟವನ್ನು ಏರ್ಪಡಿಸಿ, ಅದಕ್ಕೆ ಡಿಬೇಟಿಂಗ್ ಸೊಸೈಟಿ ಎಂಬ ಹೆಸರನ್ನು ಕೊಟ್ಟಿದ್ದಾರೆ. ಈ ಕೂಟದವರು ಪ್ರತಿ ಶನಿವಾರದಲ್ಲೂ ತಾವು ಸ್ಕೂಲಿನಲ್ಲಿ ವ್ಯಾಸಂಗ ಮಾಡುವ ಪಾಠಗಳಲ್ಲಿ ಒಂದೊಂದು ಅಂಶವನ್ನು ಆರಿಸಿಕೊಂಡು, ಒಂದು ಉಪನ್ಯಾಸ ಬರೆದು ಸರ್ಕಾರಿ ಉದ್ಯೋಗಸ್ಥರಲ್ಲಿ ಒಬ್ಬರನ್ನು ಚೇರ್ಮನ್ನರಾಗಿರುವಂತೆ ಆದುಕೊಂಡು, ಉಪನ್ಯಾಸವನ್ನು ಅವರ ಮುಂದೆ ಓದುತ್ತಾರೆ, ಓದಿದ ಮೇಲೆ ಇತರ ವಿದ್ಯಾರ್ಥಿಗಳು ಕೇಳಿ ತಮ್ಮ ತಮ್ಮ ಅಭಿಪ್ರಾಯಗಳನ್ನು ಹೇಳುತ್ತಾರೆ. ನಿನ್ನೆ ದಿವಸ ಫುಟ್‌ಬಾಲ್ ವಿಷಯ ಒಂದು ಉಪನ್ಯಾಸವಾಯಿತು. ಆಗ್ಗೆ ಇಲ್ಲಿನ ಸಬ್‌ರಿಜಿಸ್ಟ್ರಾರ್ ಅಗ್ರಾಸನವಹಿಸಿ ವಿದ್ಯಾರ್ಥಿಗಳಿಗೆ ಬಹು ವಿಧವಾಗಿ ಬುದ್ಧಿವಾದಗಳನ್ನು ಹೇಳಿದ್ದಲ್ಲದೆ, ಈ ವಿದ್ಯಾರ್ಥಿಗಳಿಗೆ ತಮ್ಮಿಂದಾದ ಸಹಾಯಗಳನ್ನು ಮಾಡುವುದಾಗಿ ವಾಗ್ದಾನ ಮಾಡಿದರು ಮತ್ತು ಇಂಥಾ ಕೂಟ

...ನಿಸಿಕೊಂಡು ಬರುವಂತೆ ಬುದ್ಧಿವಾದಗಳನ್ನು ಹೇಳಿದರು.- ...ಫುಟ್‌ಬಾಲ್ ಕ್ಲಬ್‌ನ್ನು ಹೊಸದಾಗಿ ಏರ್ಪಡಿಸಿರುತ್ತಾರೆ. ...ರ್ಥಿಗಳ ಅಂಗಸಾಧನೆಗೂ ಸಂತೋಷಕ್ಕೂ ಮತ್ತೊಂದು ...ಗಿದೆ. ಈ ರೀತಿಯಲ್ಲಿ ಮಾಸ್ಟರು ತಮ್ಮ ವಿದ್ಯಾರ್ಥಿಗಳ ...ಯನ್ನು ಚಿಂತಿಸಿ, ಸ್ಕೂಲನ್ನು ಅಭಿವೃದ್ಧಿಗೆ ತರುವದನ್ನು ...ಲ್ಲಿ ಇನ್ನು ಮುಂದೆ ಇನ್ನು ಹೆಚ್ಚು ವಿದ್ಯಾರ್ಥಿಗಳು ಗಮನ ...ಸ್ಕೂಲಿಗೆ ಸೇರಿ ವಿದ್ಯಾಭಿವೃದ್ಧಿಯನ್ನು ಹೊಂದ್ಯಾರೆಂಬದ ...ಯವಿಲ್ಲ.

ಇಂಡಿಯಾ ದೇಶದ ವೃತ್ತಾಂತಗಳು.

...ಪಟ್ಟಣದಲ್ಲಿ ಛತ್ರಪಾಲ್ ಸಿಂಗ್ ಎಂಬ ಭಾರೀ ...ನು ಕಳೆದವಾರ ದಿವಾಳಿಯಾದನು. ಆತನ ಸಾಲವು ೨೮ ಲ...ಯ ಎಂತಲೂ ಆಸ್ತಿ ಒಂದು ಕಾಸೂ ಇಲ್ಲವೆಂತಲೂ ತಿಳಿ...ದೆ

●●●●

...ರ್ನಾ ಮಹಾರಾಜಾಧಿರಾಜರವರು ಪರಿವಾರಸಹಿತ ಮುಂದಿ...ನ ತಿಂಗಳಲ್ಲಿ ಜಹಜು ಹತ್ತಿ ವಿಲಾಯತಿಗೂ, ಯೂರೋಪ್ಪಿ...ನ ರಾಜ್ಯಗಳಿಗೂ ಹೋಗಿ ದೇಶಾಟನೆಮಾಡಿಕೊಂಡು ಬರುವ...ರು.

●●●●

...ರಾಬಾದ್ ಸಂಸ್ಥಾನದಲ್ಲಿರುವ "ಫಾಲಕ್‌ನಾಮಾ" ಎಂಬ ...ಮನೆಯೇ ಹಿಂದುಸ್ಥಾನದ ಸಮಸ್ತ ಅರಮನೆಗಳಲ್ಲೂ ಅತ್ಯಂತ ...ವಾದದ್ದೆಂದು ಪ್ರಿನ್ಸ್ ಆಫ್ ವೇಲ್ಸ್‌ರವರು ಅಪ್ಪಣೆ ಕೊಡಿ...ರೆ

●●●●

...ಯ ಪಟ್ಟಣದಲ್ಲಿ ಪ್ರಜೆಗಳೆಷ್ಟು ಮಂದಿ ಇದ್ದಾರೆಂದು ...ಮಾಡುವುದಕ್ಕಾಗಿ ಸರ್ಕಾರದವರು ಕಳೆದ ವಾರ ಖಾನೇಷು...ಮಾರಿಗಳನ್ನು ಕೂಡಿಸಿದರು. ಇದರಿಂದ ಆ ಪಟ್ಟಣದಲ್ಲಿ ಒಟ್ಟು ...,೦೦೦ ಪ್ರಜೆಗಳಿದ್ದಾರೆಂದು ತಿಳಿದು ಬಂದಿದೆ.

●●●●

ಅಫ್ಘಾನಿಸ್ಥಾನದ ಅಮೀರರು ಕಾಬೂಲಿನಿಂದ ಜಲಾಲಾಬಾದಿಗೆ ...ಗ ಅವರ ಸೇನಾಪತಿಯನ್ನೂ ಕೆಲವು ಮಲಿಕರುಗಳನ್ನೂ ಗುಂ...ಯಿಗೆ ಕಟ್ಟಿಸಿ ಹೊಡೆದು ಕೊಲ್ಲಿಸಿದರೆಂಬುದಾಗಿ ಖಬಾವರಿನ...ಲ್ಲಿ ವರ್ತಮಾನ ಉಂಟಾಗಿದೆ. ಇದರ ನಿಜಸ್ಥಿತಿ ಇನ್ನೂ ...ವಾಗಿಲ್ಲ.

●●●●

ಕಳೆದ ವಾರ ಪ್ರಿನ್ಸ್ ಆಫ್ ವೇಲ್ಸ್‌ರವರನ್ನು ಹೈದರಬಾದಿನಲ್ಲಿ ...ರವರು ವಿಶೇಷ ಅಟ್ಟಹಾಸ ಯುಕ್ತವಾಗಿ ಸತ್ಕಾರಮಾಡುತ್ತಿ... ನೈಜಾಮರವರ ದೊಡ್ಡ ಮಗಳು ಕಾಲವಾಗಿ ಅವರಿಗೆ ಮಹ...ದುಃಖವುಂಟುಮಾಡಿತು. ಪ್ರಿನ್ಸ್ ಆಫ್ ವೇಲ್ಸ್‌ರವರೂ ಅವರ ... ಬಹಳವಾಗಿ ಮರುಗಿ ತಮ್ಮ ಸಂತಾಪವನ್ನು ನೈಜಾಮ...ರಿಗೆ ತಿಳಿಸಿದರು.

●●●●

...ರ್ ಪಾರ್ಟ್, ಕ್ಯಾಪ್ಟನ್ ಪಾರ್ಕರ್‌ಫೋರ್ಡ್, ಲೆಫ್ಟಿನೆಂಟ್ ...ರ್, ಈ ಮೂರು ಯುದ್ಧೋದ್ಯೋಗಸ್ಥರೂ ವಿಶಾರಟ್ ಪಟ್ಟಣದ ಹತ್ತಿ...ರಕ್ಕೆ ಹೋಗಿದ್ದಾಗ ಚಿರತೆಗಳು ಅವರ ಮೇಲೆ ಬಿದ್ದು ಬಹಳ ...ಗೊಳಿಸಿರುತ್ತವೆ. ಈಗ ಆ ಮೂವರು ಮುಂಬಯಿಯ ಆಸ್ಪತ್ರೆಯಲ್ಲಿ ...ದ್ದು ಚಿಕಿತ್ಸೆ ಹೊಂದುತ್ತಿದ್ದಾರೆ. ಅವರು ಬದುಕುವುದು ಕ...ಷ್ಟವೆಂದು ಹೇಳುವರು

●●●●

...ಪಟ್ಟಣದಲ್ಲಿ ಹೆಣಗಳನ್ನು ಯಂತ್ರಕ್ಕೆ ಕೊಟ್ಟು ಸು...ಡುವ ಕಾರ್ಯವು ನಡೆಯುತ್ತಿವೆ. ಇದಕ್ಕಾಗಿ ಫ್ರಾನ್ಸಿನಿಂದ ಇಂಜಿನಿ...ಯರು ಬಂದು, ಯಂತ್ರಗಳನ್ನಿಟ್ಟು, ಕಟ್ಟಡವನ್ನು ತಯಾ...ರಿಸಿದ್ದರು. ಕಳೆದವಾರ ಕಾಮಗಾರಿಯೆಲ್ಲಾ ಪೂರೈಸಿದ್ದರಿಂದ ...ಶವವನ್ನು ಯಂತ್ರಕ್ಕೆ ಕೊಟ್ಟು ಸುಡಿಸಿ ಪರೀಕ್ಷೆ ಮಾಡಿ...ದರು. ಎಲ್ಲಾ ಸಮರ್ಪಕವಾಗಿದೆ ಎಂದು ಅಧಿಕಾರಿಗಳು ಹೇಳಿ... ಇಂಜಿನಿಯರುಗಳು ವಾಪಸು ಫ್ರಾನ್ಸಿಗೆ ಪ್ರಯಾಣ ಮಾ...

●●●●

...ಪಟ್ಟಣದಲ್ಲಿ ಹಂಟ್ ಎಂಬೋಬ್ಬನು ದಳಾಲ್ಸ್ ಎಂಬೊ...ಬ್ಬನ ಅಂಗಳವನ್ನು ೫೦ ರೂಪಾಯಿ ಬಾಡಿಗೆಗೆ ಕೊಟ್ಟನು. ...ಸ್ಥಳದಲ್ಲಿ ಜಾರಿ ದಾಳಗಳನ್ನು ಹಾಕಿಕೊಂಡು, ಜೂಜಿನ ...ಷ್ಟು ಲಾಭ ಸಂಪಾದಿಸುತ್ತಿದ್ದನು. ಪೋಲೀಸ್ ಸೂಪರಿಂ...ಟು ಅಲ್ಲಿಗೆ ಹೋಗಿ ಅಜಮಾಯಿಷಿಮಾಡಿ, ದಳಾಲ್ಸ್ ಮತ್ತು ...ಟ್ಟರನ್ನೂ ಹಿಡಿದು, ಅವರ ಮೇಲೆ ಫಿರ್ಯಾದು ಮಾಡಿದ ...ಮ್ಯಾಜಿಸ್ಟ್ರೇಟರು ಅವರಿಬ್ಬರಿಗೂ ತಲಾ ೨೫ ರೂಪಾಯಿ ...ಹಾಕಿಬಿಟ್ಟರು.

●●●●

...ಪಟ್ಟಣದಲ್ಲಿರುವ ಹತ್ತಿಯ ಮತ್ತು ರೇಷ್ಮೆ ಕಾರ್ಖಾನೆ ...ದಾರರು ಇನ್ನೊಂದು ಸ್ವದೇಶೀ ಕಾರ್ಖಾನೆಯನ್ನು ಇಟ್ಟು...ಕೊಂಡು ಯೋಚಿಸಿ, ಅದಕ್ಕೆ ಬೇಕಾಗುವ ಎರಡು ಲಕ್ಷ ರೂ...ಗಳನ್ನು ಇಟ್ಟು ಷೇರುಗಳ ಮೂಲಕ ಕೂಡಿಸುತ್ತಿದ್ದಾರೆ. ಪ್ರ... ೨೫೦ ರೂಪಾಯಿ ಇಟ್ಟಿದ್ದಾರೆ. ಕಾರ್ಖಾನೆ ಪ್ರಾರಂಭ...ಯಾದ ಐದು ವರುಷಗಳ ತನಕ ವರುಷಕ್ಕೆ ಶೇಕಡಾ ೭ ...ಕ್ಕಿಂತ ಕಡಮೆಯಾಗದಂತೆ ಬಡ್ಡಿ ಉತ್ಪತ್ತಿಯಾಗುವುದೆಂ... ಹೇಳುತ್ತಿದ್ದಾರೆ

●●●●

...ನ ಬಳಿ ಇರುವ ಅಮಲೋಲಿ ರೈಲ್ವೆ ಸ್ಟೇಷನಿನಲ್ಲಿ ...ಎರಡು ರೈಲ್‌ಗಾಡಿಗಳು ಢಕ್ಕಾ ಬಡಿದು ತುಂಬಾ ನಷ್ಟ ...ದೇವರ ದಯದಿಂದ ಯಾರಿಗೂ ಅಪಾಯವೇನೂ ಆಗಲಿಲ್ಲ. ಸಾಮಾನು ಭರ್ತಿಯಾಗಿದ್ದ ೨೦ ಗಾಡಿಗಳು ಕೆಂಬು ತಪ್ಪಿ ಉರುಳಿಕೊಂಡು, ಎಲ್ಲಾ ಒಡೆದು ಹಾಳಾದವು. ಆ ಪೈಕಿ ೧೪ ಛಂಡಿಗಳ ತುಂಬಾ ಹತ್ತಿ ಮೂಟೆಗಳು ಭರ್ತಿಯಾಗಿದ್ದವು. ಇವೆಲ್ಲಾ ಬೆಂಕಿ ಬಿದ್ದು ಸುಟ್ಟುಹೋದವು. ಅಂತು ಈ ಅಪಾಯದಿಂದ ಒಂದು ಲಕ್ಷ ರೂಪಾಯಿಗೆ ಕಡಿಮೆಯಿಲ್ಲದೆ ನಷ್ಟವಾಗಿರುತ್ತದೆ.

●●●●

ಕಳೆದ ಡಿಸೆಂಬರ್ ಆಖೈರಿಗೆ ಮುಕ್ತಾಯವಾದ ಒಂಭತ್ತು ತಿಂಗಳಲ್ಲಿ ಹಿಂದುಸ್ಥಾನಕ್ಕೆ ಒಂದು ಕೋಟಿ ರೂಪಾಯಿನ ಚಿನ್ನವೂ ಏಳು ಕೋಟಿ ರೂಪಾಯಿನ ಬೆಳ್ಳಿಯೂ ರಫ್ತಾಗಿ ಬಂದಿರುವುದು. ಈ ಪೈಕಿ ಗವರ್ನಮೆಂಟಿನವರು ಟಂಕಸಾಲೆಗಳಲ್ಲಿ ನಾಣ್ಯಗಳ ತಯಾರಿಗಾಗಿ ಐದು ಕೋಟಿ ರೂಪಾಯಿನ ಬೆಳ್ಳಿಯನ್ನು ಕೊಂಡು ಕೊಂಡರು. ಅದೇ ಒಂಭತ್ತು ತಿಂಗಳಲ್ಲಿ ಗವರ್ನಮೆಂಟಿನಲ್ಲಿ ೯॥ ಕೋಟಿ ರೂಪಾಯಿಗಳನ್ನೂ, ೫೦ ಲಕ್ಷ ಅರ್ಧ ರೂಪಾಯಿಗಳನ್ನೂ, ೫ ಲಕ್ಷ ಅರ್ಧ ಡಾಲರೆಂಬ ನಾಣ್ಯಗಳನ್ನೂ ಛಾಪು ಹಾಕಿದರು.

●●●●

ಉತ್ತರ ದೇಶದಲ್ಲಿ ಕ್ಷಾಮಬಾಧೆಯು ಹೆಚ್ಚುತ್ತಾ ಇದೆ. ಸುಮಾರು ೨,೮೦,೦೦೦ ಪ್ರಜೆಗಳು ಕ್ಷಾಮಪೀಡಿತರಾಗಿರುವರು. ಈ ಪೈಕಿ ಸಂಯುಕ್ತ ಅಧಿಪತ್ಯಗಳಲ್ಲಿ ೧,೧೫,೦೦೦ ಜನರು, ರಾಜಪುಟಾಣದಲ್ಲಿ ೯೦,೦೦೦ ಜನರು, ಮಧ್ಯ ಇಂಡಿಯಾದಲ್ಲಿ ೪೯,೦೦೦ ಜನರು, ಬರೋಡಾದಲ್ಲಿ ೩,೮೦೦ ಜನರು, ಬೊಂಬಾಯಿ ಅಧಿಪತ್ಯದಲ್ಲಿ ೨೨,೦೦೦ ಜನರು ಸರ್ಕಾರದವರ ಪೋಷಣೆಯಲ್ಲಿರುತ್ತಾರೆ. ಈಚೆಗೆ ಆ ಪ್ರಾಂತ್ಯದಲ್ಲಿ ಒಂದೆರಡು ಹದ ಮಳೆ ಸುರಿಯಿತೆಂದು ಸಮಾಚಾರ ಬಂದಿದೆ. ಹಿಂದುಸ್ಥಾನದ ಕ್ಷಾಮನಿವಾರಣೆಯ ಮೂಲಧನದಲ್ಲಿ ಈಗ ೩೨ ಲಕ್ಷ ರೂಪಾಯಿತನಕ ಉಳಿದಿರುವುದು.

●●●●

ಮದರಾಸ್ ಅಧಿಪತ್ಯದ ಗವರ್ನರಾಗಿದ್ದ ಲಾರ್ಡ್ ಆಂಟ್‌ಹಿಲ್‌ರವರು ಐದು ವರುಷಗಳಿಂದ ಆಳುತ್ತಾ ಪ್ರಜಾವತ್ಸಲರೆಂಬ ಬಿರುದನ್ನು ಪಡೆದು, ಕಳೆದ ವಾರ ಸೀಮೆಗೆ ಪ್ರಯಾಣ ಮಾಡಿದರು. ಇವರಿಗೆ ಆ ಅಧಿಪತ್ಯದ ಪ್ರಜೆಗಳೂ ಜಮೀನ್ದಾರರೂ ಎಲ್ಲಾ ಕೋಮಿನವರೂ ಮಾಡಿದ ಔತನಗಳು ಅಪೂರ್ವಗಳಾಗಿದ್ದವು. ಇಷ್ಟು ಮಟ್ಟಿಗೆ ಜನಾನುರಾಗವನ್ನು ಪಡೆದ ಅಧಿಪತಿಗಳು ತುಂಬಾ ವಿರಳರೆಂದು ಹೇಳಬಹುದಾಗಿದೆ ಇವರ ಸ್ಥಾನಕ್ಕೆ ಬರುವವರಾಗಿರುವ ಸರ್ ಆರ್ಥರ್ ಲಾಲಿಯವರು ಮುಂದಿನ ತಿಂಗಳ ೭ ನೆ ತಾರೀಖಿನ ದಿನ ಸೀಮೆಯಿಂದ ಹೊರಡುವರು. ಅವರು ಬಂದು ಛಾರ್ಜು ವಹಿಸುವ ತನಕ ಮಿ॥ ಜಿ. ಸ್ಟೋಕ್ಸ್ ಯವರು ಗವರ್ನರಾಗಿ ಬದಲಿ ನೋಡುವರು.

●●●●

ಫರಿಡ್ ಕೋಟೆ ಸಂಸ್ಥಾನದ ರಾಜರು ಅಕಸ್ಮಾತ್ತಾಗಿ ಕಳೆದ ಭಾನುವಾರ ಕಾಲವಾದರೆಂದು ತಂತೀವರ್ತಮಾನ ಬಂದಿದೆ. ಅದಕ್ಕೆ ೩-೪ ದಿನಗಳ ಹಿಂದೆ ಆ ಪ್ರಾಂತ್ಯ ಸರ್ಕೀಟು ಹೋಗಿದ್ದ ಕಮಿಷನರ ಸಂಗಡ ಈ ರಾಜರು ಮಾತನಾಡಿಕೊಂಡು ಬರುವಾಗ್ಗೆ ಅವರು ಆರೋಗ್ಯವಾಗಿದ್ದರು. ಈಚೆಗೆ ಅವರಿಗೆ ಸ್ವಲ್ಪ ಚಳಿಜ್ವರ ಪ್ರಾಪ್ತವಾಯಿತು ಹಾಗೇ ಕಾಲವಾಗಿಬಿಟ್ಟರು. ಈ ರಾಜರಿಗೆ ಇನ್ನೂ ೩೪ ವರುಷ ವಯಸ್ಸಾಗಿತ್ತು. ಗಂಡುಮಕ್ಕಳ್ಯಾರೂ ಇಲ್ಲ. ಇವರ ತಮ್ಮನೂ ಚಿಕ್ಕಂದಿನಲ್ಲೇ ಕಾಲವಾದರು ಈ ತಮ್ಮನ ಮಗನು ಇನ್ನೂ ಸಣ್ಣ ಹುಡುಗನಾಗಿರುತ್ತಾನೆ ಈ ಹುಡುಗನಿಗೆ ಪಟ್ಟಕಟ್ಟಿ, ಇನ್ನು ಬಹುಕಾಲದವರೆಗೂ ಸಂಸ್ಥಾನವನ್ನು ಗವರ್ನಮೆಂಟಿನವರು ಮೇಲ್ವಿಚಾರಣೆ ನೋಡಿಕೊಳ್ಳಬೇಕಾಗಿದೆ.

●●●●

ಕಥ್ಯವಾಡ ಅಧಿಪತ್ಯಕ್ಕೆ ಸೇರಿದ ಭಾವನಗರ ಸಂಸ್ಥಾನದಲ್ಲಿ ಮಹಾರಾಜರವರು ಕಳೆದವಾರ ಒಂದು ಭಾರೀ ಚಿರತೆಯನ್ನು ಗುಂಡಿನಿಂದ ಹೊಡೆದು ಕೊಂದು ಹಾಕಿದರು. ಅದು ಬೆಟ್ಟದಲ್ಲಿ ಇದೆ ಎಂಬ ಸುದ್ದಿ ಬಂದ ಕೂಡಲೇ ಮಹಾರಾಜರವರು ಮೋಟಾರ್ ಗಾಡಿಯಲ್ಲಿ ಕುಳಿತು ೩೦ ಮೈಲಿ ದೂರ ಹೋಗಿ ಆಸ್ಥಳವನ್ನು ಸೇರಿ, ಬೇಡರಿಂದ ಚಿರತೆಯನ್ನು ರೇಗಿಸಿ ಪೊದೆಯಿಂದ ಹೊರಡಿಸಿ, ಅದಕ್ಕೆ ಗುರಿಕಟ್ಟಿ ಒಂದು ಗುಂಡು ಹೊಡೆದರು. ಈ ಗೋಲೀ ಏಟು ಬಿದ್ದರೂ ಚಿರತೆಯು ಓಡಿಹೋಗುತ್ತಲೇ ಇತ್ತು. ಕೂಡಲೇ ಮಹಾರಾಜರವರು ಇನ್ನೊಂದು ಗುಂಡು ಹೊಡೆದರು. ಈ ಗೋಲಿಯೂ ತಗಲಿ ಅದು ಸತ್ತು ಬಿದ್ದುಕೊಂಡಿತು. ಈ ಚಿರತೆಯು ಬಹು ಭಾರಿಯಾಗಿ ಹತ್ತು ಅಡಿ ಪ್ರಮಾಣವುಳ್ಳದ್ದಾಗಿತ್ತು. ಆ ಪ್ರಾಂತ್ಯದಲ್ಲಿ ಇಷ್ಟು ದೊಡ್ಡ ಚಿರತೆಯನ್ನು ಇದುವರೆಗೆ ಯಾರೂ ಶಿಕಾರಿಮಾಡಲಿಲ್ಲ.

●●●●

ಪೂನಾಪಟ್ಟಣದಲ್ಲಿ ಭಾಸ್ಕರ ಬಲವಂತ ಭೋಪಟ್ಕಾರ್ ಎಂಬಾತನು "ಭಲ್ಯ" ವೆಂಬ ಮರಾಟೆ ವರ್ತಮಾನಪತ್ರಿಕೆಯನ್ನು ನಡಿಸುತ್ತಾ ಬಂದು, ಈಚೆಗೆ ಆ ಪತ್ರಿಕೆಯಲ್ಲಿ "ನರಕದಲ್ಲಿ ನಡೆದ ದರ್ಬಾರ್" ಎಂಬೀ ವಿಷಯವನ್ನು ಕುರಿತು ಬರೆದು, ಅದರಲ್ಲಿ ಗವರ್ನಮೆಂಟಿನವರನ್ನು ಬಹಳವಾಗಿ ದೂಷಣೆಮಾಡಿದ್ದನು. ಇದನ್ನು ನೋಡಿ ಸರ್ಕಾರದವರು ಕೋಪಯುಕ್ತರಾಗಿ ಅವನನ್ನು ಹಿಡಿದು, ಬೊಂಬಾಯಿ ಸೆಷನ್ಸ್ ಕೋರ್ಟಿನಲ್ಲಿ ಅವನ ಮೇಲೆ ಫಿರ್ಯಾದುಮಾಡಿದರು. ಸೆಷನ್ಸ್ ಜಡ್ಜರಾದ ಮಿ॥ ಬ್ಯಾಟಿಯವರು ಈ ಮೊಕದ್ದಮೆಯನ್ನು ದರ್ಯಾಫ್ತುಮಾಡಿ, ಕಳೆದವಾರ ಅಪರಾಧಿಯಾದ ಭಾಸ್ಕರ ಬಲವಂತ ಭೋಪಟ್ಕಾರನಿಗೆ ಆರು ತಿಂಗಳ ಸಿವಲ್ ಜೈಲನ್ನೂ ೧,೦೦೦ ರೂಪಾಯಿ ಜುಲ್ಮಾನೆಯನ್ನೂ ಜುಲ್ಮಾನೆ ಕೊಡದಿದ್ದರೆ ಇನ್ನೊಂದು ತಿಂಗಳು ಸಿವಲ್ ಜೈಲನ್ನೂ ಅನುಭವಿಸಬೇಕೆಂದು ಶಿಕ್ಷೆ ವಿಧಿಸಿರುತ್ತಾರೆ.

●●●●

ಮದರಾಸಿನಲ್ಲಿ ಕೋಟ್ಯಾಧೀಶ್ವರನೆನಿಸಿಕೊಂಡಿದ್ದ ಮಿ॥ ಲಾಡ್ ಕೃಷ್ಣದಾಸ್ ಬಾಲಮುಕುಂದದಾಸ್ ಎಂಬ ಸಾಹುಕಾರನು ಕಳೆದ ವಾರ ೮೪ ನೆ ವಯಸ್ಸಿನಲ್ಲಿ ಕಾಲವಾದನೆಂದು ತಿಳಿಸಲು ವಿಷಾದಿಸುತ್ತೇವೆ. ಬಹು ಧಾರಾಳಿಯಾಗಿಯೂ, ಮಿತವ್ಯಯಗಾರನಾಗಿಯೂ, ಆಚಾರವಂತನಾಗಿಯೂ ಇದ್ದ. ಈತನು ೧೮೩೮ ರಲ್ಲಿ ಮದರಾಸಿಗೆ ಬಂದು ಬ್ಯಾಂಕು, ವ್ಯಾಪಾರಾದಿಗಳನ್ನು ಮಾಡುತ್ತಾ, ಮಹದೈಶ್ವರ್ಯವಂತನಾದನು. ಈ ಐಶ್ವರ್ಯವನ್ನು ನಾನಾ ಧರ್ಮಕಾರ್ಯಗಳ ವಿನಿಯೋಗಕ್ಕೂ ಪ್ರಯೋಗ ಮಾಡಿದನು. ಮದರಾಸ್ ಗವರ್ನಮೆಂಟ್ ಹೌಸಿನ ಎದುರಿಗೆ ಮೌಂಟ್ ರೋಡಿನಲ್ಲಿ ನಿಲ್ಲಿಸಿರುವ ಮಹಾರಾಜ ಚಕ್ರವರ್ತಿಯವರ ಪ್ರತಿಮೆಯನ್ನು ಈತನೇ ಸ್ವಂತ ಖರ್ಚಿಟ್ಟು ಸೀಮೆಯಿಂದ ಮಾಡಿಸಿ ತರಿಸಿಕೊಟ್ಟು, ತನ್ನ ಹೆಸರನ್ನು ಶಾಶ್ವತಗೊಳಿಸಿಕೊಂಡನು. ಈತ ಮಾಡಿರುವ ಇನ್ನೂ ಅನೇಕ ಧರ್ಮಕಾರ್ಯಗಳೂ ಆತನ ಹೆಸರನ್ನು ಚಿರಸ್ಮರಣೀಯವಾಗಿ ಮಾಡತಕ್ಕವುಗಳಾಗಿವೆ.

●●●●

ತಿರುವಾಂಕೂರು (ಅನಂತಶಯನ) ಸಂಸ್ಥಾನದಲ್ಲಿ ರೈತರು ಪೂರ್ವಕಾಲದಿಂದಲೂ ಸರ್ಕಾರಕ್ಕೆ ಕಂದಾಯವನ್ನು ಧಾನ್ಯರೂಪವಾಗಿಯೇ ಪಾವತಿಮಾಡುತ್ತಿದ್ದರು. ಇದರಿಂದ ರೆವಿನ್ಯೂ ಇಲಾಖೆಯ ಸಣ್ಣ ನೌಕರರಿಗೆ ಹೇಳಿಕೊಳ್ಳತಕ್ಕಷ್ಟು ಅನುಕೂಲವೂ, ರೈತ ಪ್ರಜೆಗಳಿಗೆ ವಿವರಿಸಕೊಳ್ಳದಷ್ಟು ಕಷ್ಟನಷ್ಟಗಳೂ ಇದ್ದವು. ದಿವಾನ್ ವಿ. ಪಿ. ಮಾಧವರಾಯರು ಈ ಧಾನ್ಯರೂಪದ ಕಂದಾಯವನ್ನು ಈ ತಿಂಗಳ ಪ್ರಾರಂಭದಿಂದ ವಜಾ ಮಾಡಿದೆ ಎಂತಲೂ ಅದಕ್ಕೆ ಪ್ರತಿಯಾಗಿ ರೈತರು ಇಷ್ಟಿಷ್ಟು ಹಣವನ್ನು ನಗದಾಗಿ ಪಾವತಿ ಮಾಡತಕ್ಕದ್ದೆಂತಲೂ ಅಲ್ಲಿನ ಸರ್ಕಾರಿ ಗೆಜೆಟ್ಟಿನಲ್ಲಿ ಫರಮಾಯಿಷ್ ಮಾಡಿರುತ್ತಾರೆ. ಹೀಗೆ ಮಾಮೂಲನ್ನು ತಪ್ಪಿಸಿ ಹೊಸ ಪದ್ಧತಿಯನ್ನು ಜಾರಿಗೆ ತರುವುದಕ್ಕೆ ಅಲ್ಲಿನ ಸಮಸ್ತ ಪ್ರಜೆಗಳೂ ಈ ರೀತಿ ಬದಲಾವಣೆ ಆದುದಕ್ಕಾಗಿ ಶ್ರೀಮನ್ಮಹಾರಾಜರವರನ್ನೂ ದಿವಾನರವರನ್ನೂ ಬಹಳವಾಗಿ ಕೊಂಡಾಡುತ್ತಿದ್ದಾರೆ. ಮಿ॥ ಮಾಧವರಾಯರು ಸನಾಗರೀಕವಾದ ಮೈಸೂರು ಸಂಸ್ಥಾನದಲ್ಲಿ ಸಂಪಾದಿಸಿಕೊಂಡ ರಾಜ್ಯಭಾರದ ಅನುಭವವನ್ನು ಇನ್ನೂ ಹಳೇ ಕಂದಾಚಾರವೆನಿಸುವ ಅನಂತಶಯನ ಸಂಸ್ಥಾನದಲ್ಲಿ ಸಾರ್ಥಕವಾಗುವಂತೆ ವ್ಯವಹರಿಸುತ್ತಾ, ನಾನಾ ಶಿಸ್ತುಗಳನ್ನು ಮಾಡುತ್ತಾ ಬಂದಿರುವುದರಿಂದ ಎಲ್ಲರೂ ಅವರನ್ನು ಹೊಗಳುತ್ತಿರುವರು.

ವಿದೇಶ ವರ್ತಮಾನಗಳು.

ದಕ್ಷಿಣ ಆಫ್ರಿಕಕ್ಕೆ ಸೇರಿದ ಡಾಂಡ್ ಎಂಬ ಗಣಿಯಲ್ಲಿ ಅಕಸ್ಮಾತ್ತಾಗಿ ನೀರು ಹುಟ್ಟಿ ತುಂಬಿಕೊಂಡಿತು. ಒಳಗೆ ಕೂಲಿಮಾಡುತ್ತಿದ್ದ ೩೫ ಮಂದಿ ಕಾಫರರು ನೀರಿನಲ್ಲಿ ಮುಳುಗಿ ಸತ್ತರು.

●●●●

ಸ್ಪೇಯಿನ್ ರಾಜ್ಯದ ದೊರೆಯು ಏನ ಎಂಬ ರಾಜಕುಮಾರಿಯನ್ನು ವರಿಸಿ ವಿವಾಹ ಮಾಡಿಕೊಳ್ಳುವರು. ಮದುವೆಯು ಜೂನ್ ೨ ಕ್ಕೆ ನಡೆಯುವದು. ಸ್ಪೇಯಿನ್ ರಾಜ್ಯದ ಮಂತ್ರಿಗಳು ಆ ವಿವಾಹಮಹೋತ್ಸವಕ್ಕಾಗಿ ಆಗಲೇ ಏರ್ಪಾಡು ಮಾಡಲಾರಂಭಿಸಿದ್ದಾರೆ.

●●●●

ಅಮೇರಿಕಕ್ಕೆ ಸೇರಿದ ಸೆಂಟ್ ಲೂಯಿಸ್ ಪಟ್ಟಣದಲ್ಲಿ ಒಬ್ಬನೊಬ್ಬ ಹುಚ್ಚನು ಎರಡು ಅಲಗುಗಳುಳ್ಳ ಒಂದು ದೊಡ್ಡ ಕತ್ತಿಯನ್ನು ಹಿಡಿದು ಬೀದಿಗಳಲ್ಲಿ ನುಗ್ಗಿ ಓಡಿಹೋಗುತ್ತಾ, ಸಿಕ್ಕಿದ ಹೆಂಗಸರನ್ನೇ ತಿವಿದು ಕೆಡವಿದನು ಇದುವರೆಗೆ ಹದಿನಾಲ್ಕು ಮಂದಿ ಸ್ತ್ರೀಯರು ಈತನ ಕೈಯಿಂದ ಮೃತಪಟ್ಟಿದ್ದಾರೆ.

●●●●

ರಷ್ಯಾರಾಜಧಾನಿಯಾದ ಸೆಂಟ್‌ಪೀಟರ್ಸ್‌ಬರ್ಗಿನಲ್ಲಿ ಕೂಲಿಮಾಡಿ ಜೀವಿಸುವ ಜನರಿಗೆ ಬೇಕಾದ ಸಲಹೆಗಳನ್ನು ಕೊಡುತ್ತಿದ್ದ ೬೫ ಮಂದಿ ದೊಡ್ಡ ಮನುಷ್ಯರನ್ನು ಸರ್ಕಾರದವರು ಹಿಡಿದು, ಆ ಪಟ್ಟಣದಿಂದ ಗಡೀಪಾರುಮಾಡಿ, ಆರ್ಖೇಂಜಲ್, ಟೊಬಾಲ್ಸ್ಕ್, ಯೆನಿಸಿಸ್ಕ್ ಎಂಬೀ ನಗರಗಳಿಗೆ ಕಳುಹಿಸಿ ಬಿಟ್ಟರು.

●●●●

ಡೆನ್ಮಾರ್ಕ್ ರಾಜ್ಯದ ದೊರೆಯಾದ ಕ್ರಿಶ್ಚಿಯನ್ ಎಂಬ ರಾಜರು ಕಾಲವಾದರೆಂದು ಮೊದಲೇ ತಿಳಿಸಿರುತ್ತೇವಷ್ಟೆ. ಆ ದೊರೆಯ ಶವವನ್ನು ಪ್ರಜೆಗಳೆಲ್ಲಾ ಬಂದು ನೋಡಲೆಂದು ದೇವಸ್ಥಾನದಲ್ಲಿ ೧೦-೧೨ ದಿವಸಗಳ ತನಕ ಇಟ್ಟಿದ್ದರು. ಸುಮಾರು ಎಪ್ಪತ್ತು ಸಹಸ್ರ ಜನರು ಹೋಗಿ ನೋಡಿಬಂದರೆಂದು ತಂತೀವರ್ತಮಾನ ಬಂದಿದೆ.

●●●●

ದಕ್ಷಿಣ ಆಫ್ರಿಕಕ್ಕೆ ಸೇರಿದ ನಟಾಲಿನಲ್ಲಿ ಸರ್ಕಾರದವರು ತಲೆತೆರಿಗೆಯನ್ನು ವಿಧಿಸಿದರು. ಈ ತೆರಿಗೆಯನ್ನು ಕೊಡಕೂಡದೆಂತಲೂ ಸರ್ಕಾರದವರ ಮೇಲೆ ಪ್ರತಿಭಟಿಸಬೇಕೆಂತಲೂ ಕೆಲವು ಮುಖಂಡರು ಹೊರಟು ಜನರನ್ನು ಚಿತಾವಣೆಮಾಡುತ್ತಾ ಬಂದರು. ಗವರ್ನಮೆಂಟಿನವರು ಅಂಥಾ ಮುಖಂಡರನ್ನು ಹಿಡಿದು ಬಂಧನದಲ್ಲಿ ಹಾಕಿದ್ದರಿಂದ ಪ್ರಜಾನೆಮ್ಮದಿಗೆ ಯಾವ ಅಪಾಯವೂ ಉಂಟಾಗಲಿಲ್ಲ.

●●●●

ಅಮೇರಿಕದ ಮುಖ್ಯಪಟ್ಟಣವಾದ ನ್ಯೂಯಾರ್ಕ್ ನಗರದಲ್ಲಿ ಕೆಲವರು ಸೇರಿ "ಜೀವದಾನ" ವೆಂಬ ಒಂದು ಕಂಪನಿಯನ್ನು ಮಾಡಿಕೊಂಡು, ಒಂದುತರಹಾ ಮಾತ್ರೆಯನ್ನು ತಯಾರುಮಾಡಿ, ಅದನ್ನು ಸಮಸ್ತ ರೋಗಿಗಳಿಗೂ ಕೊಟ್ಟು ವ್ಯಾಧಿಗಳನ್ನು ನಿವಾರಣೆ ಮಾಡುತ್ತೇವೆಂದು ಹೇಳುತ್ತಾ ಬಂದರು. ಸುಮಾರು ಹತ್ತು ಲಕ್ಷ ರೋಗಿಗಳು ಆತುರಪಟ್ಟು, ಈ ವೈದ್ಯರ ಕಂಪನಿಯಿಂದ ಮಾತ್ರೆಗಳನ್ನು ತರಿಸಿಕೊಂಡು ಚಿಕಿತ್ಸೆ ಹೊಂದುತ್ತಿದ್ದಾರೆ. ಇದಲ್ಲದೆ ಈ ಕಂಪನಿಯವರು ಶವಕ್ಕೂ ಜೀವಕಳೆಯನ್ನು ಈ ಮಾತ್ರೆಯಿಂದ ತುಂಬಬಲ್ಲೆವೆಂದು ಹೇಳುತ್ತಿದ್ದರು ಸರ್ಕಾರದವರಿಗೆ ಅನುಮಾನ ಹುಟ್ಟಿ, ಅವರನ್ನೂ ಅವರ ಔಷಧಗಳನ್ನೂ ಪರೀಕ್ಷೆ ಮಾಡಿಸಿದರು. ಎಲ್ಲಾ ಬರೀ ಮೋಸವೇ ಎಂದು ವ್ಯಕ್ತಾಂತವಾಯಿತು. ಈಗ ಆ ಕಂಪನಿಯ ಮುಖ್ಯಸ್ಥರಾದ ಇಬ್ಬರು ಡೈರೆಕ್ಟರುಗಳನ್ನೂ ಕೆಲವು ನೌಕರಮಾನೆಯವರನ್ನೂ ಹಿಡಿದು ತನಿಖೆ ಮಾಡುತ್ತಿದ್ದಾರೆ. ಈ ಸಂಗತಿಯು ಅಲ್ಲಿ ತುಂಬಾ ಗಲಭೆಯನ್ನು ಉಂಟುಮಾಡಿದೆ.

P. SUBBAROY'S

World Renowned and most Efficacious Ayurvedic Medicines.

ಪಿ. ಸುಬ್ಬರಾಯರವರ

ಲೋಕಪ್ರಸಿದ್ಧವಾದ ಮತ್ತು ಅತ್ಯಂತ ಗುಣಕಾರಿಯಾದ ಆಯುರ್ವೇದ ಔಷಧಗಳು.

11-15

೧. ಪುಷ್ಟಿರಸಾಯನ.—ಇದರ ಸೇವನೆಯಿಂದ ನರಗಳ ಸಂಬಂಧವಾದ ಮತ್ತು ಇತರ ವಿಧವಾದ ಎಲ್ಲಾ ಶರೀರದ ದುರ್ಬಲಗಳೂ ಹೋಗಿ, ಹೊಟ್ಟೆಯಲ್ಲಿ ಅಗ್ನಿ ಜಾಸ್ತಿಯಾಗಿ, ದೇಹವು ಪುಷ್ಟಿಹೊಂದುವದು. ಪುಷ್ಟಿಯನ್ನು ಕಳೆದುಕೊಂಡ ಚಿಕ್ಕವಯಸ್ಸಿನವರಿಗೆ ಇದು ಒಳ್ಳೆ ಔಷಧವು. ಇದರಿಂದ ಶರೀರದ ಪ್ರತಿ ಅವಯವದ ನೋವೂ, ಅಶಕ್ತಿಯೂ ಹೋಗಿ, ಪುಷ್ಟಿಯೂ, ಬಲವೂ ಉಂಟಾಗುವವು. ಪೆಟ್ಟಿಗೆ ೧ಕ್ಕೆ ರೂ. ೨ ವಿ. ಪಿ. ಛಾಂಗಿ ೩ ಆಣೆ.

೨. ಅಜೀರ್ಣ ಗುಳಿಗೆ.—ಅಜೀರ್ಣ, ತೇಗುವುದು, ಹೊಟ್ಟೆಯಲ್ಲಿ ಉರಿ, ಮತ್ತಾಗಿರುವಿಕೆ, ಹಸಿವಿಲ್ಲದಿರುವದು, ಪಿತ್ಥ, ಬಾಯಿಯ ದುರ್ಗಂಧ, ಹೊಟ್ಟೆಶೂಲೆ, ನಿಷ್ಠೆ ಇತ್ತದಿರುವಿಕೆ, ತಲೆತಿರುಗುವದು, ಇವೆಲ್ಲಾ ನಿವಾರಣವಾಗುವವು. ಪೆಟ್ಟಿ ೧ಕ್ಕೆ ೮ ಆಣೆ. ವಿ. ಪಿ. ೨ ಪೆಟ್ಟಿಗೆ ವರೆಗೆ ಛಾಂಗಿ ಛಾರ್ಜು ೫ ಆಣೆ.

೩. ಲಕ್ಷ್ಮೀಶರ ಕಸ್ತೂರಿಮಾತ್ರೆ.—ಇದು ತಾಂಬೂಲಕ್ಕೆ ಪ್ರಾಣ ಮಿತ್ರನು. ಇದರಿಂದ ಬಾಯಿಯ ದುರ್ಗಂಧವು ಹೋಗುವದು, ಭೋಜನಾನಂತರ ತಾಂಬೂಲದ ಸಂಗಡ ೧—೨ ಮಾತ್ರೆಗಳನ್ನು ಸೇವಿಸಿದರೆ, ಇತರ ಸುವಾಸನಾದ್ರವ್ಯಗಳು ಅನಾವಶ್ಯಕವಾಗಿರುವುದಲ್ಲದೆ, ಅಲ್ಪಕಾಲದಲ್ಲಿ ಅತ್ಯಂತ ಕಠಿಣವಾದ ಆಹಾರವನ್ನು ಕೂಡ ಜೀರ್ಣಕ್ಕೆ ತರುವುದು. ಬೆಳಿಗ್ಗೆ ಊಟಕ್ಕೆ ಮುಂಚೆ ೨ ಮಾತ್ರೆಗಳನ್ನು ಕ್ರಮವಾಗಿ ಸೇವಿಸುತ್ತಿದ್ದರೆ ಅಜೀರ್ಣ, ಮಂದ, ಹಲ್ಲುವೇದನೆ, ಹೊಟ್ಟೆಯ ಉರಿ, ಇವುಗಳು ವಾಸಿಯಾಗುವವು. ಇದರಲ್ಲಿ ಅಕ್ಷೇಪಣೀಯವಾದ ಮತ್ತು ಪ್ರತಿಬಂಧಕವಾದ ಯಾವ ವಸ್ತುವೂ ಇಲ್ಲದ್ದರಿಂದಲೂ, ಇದರ ತಯಾರಿಗೆ ಕಸ್ತೂರಿ ಸುವರ್ಣ ವರಕು ಮುಂತಾದ ಅಮೂಲ್ಯ ವಸ್ತುಗಳು ಸೇರಿರುವದರಿಂದಲೂ ಎಳೇ ಮಕ್ಕಳಿಂದ ಮುದುಕರವರಿಗೆ ಎಲ್ಲರೂ ತಾಂಬೂಲದೊಂದಿಗೆ ಅಥವಾ ಬರಿಬಾಯಲ್ಲಿ ಹಾಕಿಕೊಂಡು ಉಪಯೋಗಿಸಬಹುದು. ಕ್ರಮವಾಗಿ ಸೇವಿಸುವದರಿಂದ ದೇಹದಲ್ಲಿ ರೋಗಕ್ಕೆ ಆಸ್ಪದ ಕೊಡದೆ ಸಹ ನೋಡಿಕೊಳ್ಳುವದು. ಜ್ವರ, ನೆಗಡಿ, ಕೆಮ್ಮಲು ಮುಂತಾದವುಗಳಿಗೆ ಸಣ್ಣ ಮಕ್ಕಳಿಂದ ದೊಡ್ಡವರಿಗೆ ೧ ರಿಂದ ೪ ಮಾತ್ರೆಗಳಂತೆ ಕೊಟ್ಟರೆ ಗುಣ ಕಾಣುವದು. ಸುಮಾರು ೨೦೦ ಮಾತ್ರೆ ಉಳ್ಳ ಸೀಸೆ ೧ಕ್ಕೆ ೪ ಆಣೆ. ೧ ರಿಂದ ೧೨ ಸೀಸೆಗೆ ವಿ. ಪಿ. ಛಾಂಗಿ ಛಾರ್ಜು ೫ ಆಣೆ.

೪. ಮೇದಸಾಪರಿಹಾರಕ ತೈಲವು.—ಇದನ್ನು ಮೇಲ್ಭಾಗದಲ್ಲಿ ಮಾತ್ರ ಹಚ್ಚುವದರಿಂದ ಕೈಕಾಲು ಹಿಡಿದುಕೊಳ್ಳುವದು, ವಾತರೋಗ, ಪಾರ್ಶ್ವವಾಯು, ನರಗಳ ಸೆಳೆತ, ಮೊಣಕಾಲು ಸೊಂಟ ಮತ್ತು ಎದೆ ಇವುಗಳ ನೋವು, ತೋಳು ಮುಂತಾದ ಅಂಗಗಳ ಕೀಲಿನ ನೋವು, ತಲೆಶೂಲೆ, ಹಲ್ಲುನೋವು, ಕಿವಿನೋವು, ಚಳಿ, ಕೆಮ್ಮು ಮುಂತಾದ ಎಲ್ಲಾ ವಿಧವಾದ ನೋವುಗಳೂ ಖಂಡಿತವಾಗಿ ವಾಸಿಯಾಗುವವು. ಸೀಸೆ ೧ಕ್ಕೆ ೧ ರೂ. ೩ ಬಾಟ್ಲಿ ವರೆಗೆ ವಿ. ಪಿ. ಛಾಂಗಿ ಛಾರ್ಜು ೫ ಆಣೆ.

೫. ಲೋಕಪ್ರಸಿದ್ಧವಾದ ಪರಿಮಳ ಕೇಶತೈಲವು.—ಬೋಳುತಲೆ, ಹೊಟ್ಟು ಅಥವಾ ಹೊಟ್ಟು ಉದುರುವಿಕೆ, ಇವು ಸಂಪೂರ್ಣವಾಗಿ ವಾಸಿಯಾಗುವದಲ್ಲದೆ, ತಲೆಯನ್ನೂ ಮೆದುಳನ್ನೂ ತಣ್ಣಗಿರುವಂತೆ ಮಾಡಿ, ತಲೆ, ಮೀಸೆ, ಹುಬ್ಬುಕೂದಲುಗಳನ್ನು ಹೇರಳವಾಗಿ ಬೆಳಸುವದು ಮತ್ತು ಕಣ್ಣು ಮಿದುಳು ಸಂಬಂಧವಾದ ರೋಗಗಳನ್ನೆಲ್ಲಾ ವಾಸಿ ಮಾಡುವದು. ಬಹಳ ಮನೋರಂಜಕವಾಗಿ ಪರಿಮಳಿಸುವದು. ಬೆಲೆ ಸೀಸೆ ೧ಕ್ಕೆ ೮ ಆಣೆ. ೨ ಸೀಸೆ ವರೆಗೆ ವಿ. ಪಿ. ಛಾರ್ಜು ೫ ಆಣೆ.

೬. ನೇತ್ರಬಿಂದು.—ಸವಿಕಾಸದೃಷ್ಟಿ, ಕಣ್ಣಿನಲ್ಲಿ ನೀರು ಸುರಿಯುವದು, ಕಣ್ಣುನೋವು, ಹೂವು ಬರುವುದು, ಉರಿ ಮುಂತಾದ ನೇತ್ರರೋಗಗಳು ಇದರಿಂದ ಗುಣವಾಗುವವು. ಸೀಸೆ ೧ಕ್ಕೆ ೮ ಆಣೆ. ವಿ. ಪಿ. ಛಾರ್ಜು ೬ ಸೀಸೆ ವರೆಗೂ ೫ ಆಣೆ.

೭. ಶ್ರೋತ್ರಬಿಂದು.—ಕಿವಿಯು ಎಷ್ಟು ಹೆಚ್ಚಾಗಿ ನೋಯುತ್ತಿದ್ದರೂ ಅದನ್ನೂ ಕೀವು ಸುರಿಯುವುದು, ಕಿವಿಯ ಮಾಂದ್ಯವು, ಕಿವುಡು ಮುಂತಾದ್ದನ್ನೂ ಜಾಗ್ರತೆ ಪರಿಹರಿಸುವುದು, ಬೆಲೆ ಸೀಸೆ ೧ಕ್ಕೆ ೮ ಆಣೆ. ವಿ. ಪಿ. ಛಾರ್ಜು ೬ ಸೀಸೆ ವರೆಗೂ ೫ ಆಣೆ.

೮. ನವಿಕಪ್ಪಿಗೆ ಔಷಧಿ.—ಚರ್ಮರೋಗಕ್ಕೂ, ಚರ್ಮಗತವಾದ ಎಲ್ಲಾ ವ್ಯಾಧಿಗಳಿಗೂ ಅತ್ಯುತ್ತಮವಾದ ಮದ್ದು. ಒಂದು ಸಾರಿ ವಾಸಿಯಾದ ಮೇಲೆ ಪುನಃ ತಲೆದೋರುವದಿಲ್ಲ. ಸೀಸೆ ೧ಕ್ಕೆ ೪ ಆಣೆ. ವಿ. ಪಿ. ಛಾರ್ಜು ೬ ಸೀಸೆ ವರೆಗೂ ೫ ಆಣೆ.

೯. ಸುಖಭೇದಿ.—ಹೊಟ್ಟೆನೋವು, ಆಯಾಸ ಯಾವದೂ ಸ್ವಲ್ಪವೂ ಉಂಟಾಗದಂತೆ ಸುಖವಾಗಿ ಭೇದಿಯಾಗುವದು. ಮಲಬಂಧ, ಅಜೀರ್ಣ, ವಾಯು, ಎದೆಯುರಿಯುವುದು, ಪಿತ್ತ, ಜ್ವರ, ಇವುಗಳನ್ನು ವಾಸಿಮಾಡುವುದು. ಸೀಸೆ ೧ಕ್ಕೆ ೮ ಆಣೆ. ವಿ. ಪಿ. ಛಾರ್ಜು ೬ ಸೀಸೆ ವರೆಗೂ ೫ ಆಣೆ.

ಕಾಗದವನ್ನು ಇಂಗ್ಲಿಷ್ ಅಥವಾ ತಮಿಳಿನಲ್ಲಿ ಬರೆಯಿರಿ.

Apply to:—**P. SUBBAROY,**
Porto Novo, South Arcot.

ವಿಳಾಸ:—ಪಿ. ಸುಬ್ಬರಾಯರ್,
ಪೋರ್ಟೊನೋವೋ, ದಕ್ಷಿಣ ಅರ್ಕಾಟ್ ಜಿಲ್ಲಾ.

ನೀವು ವಿಲಾಯತಿಯಿಂದ ಯಾವ ಸಾಮಾನುಗಳನ್ನಾದರೂ ತರಿಸಿಕೊಳ್ಳಬೇಕಾಗಿದ್ದರೆ 19-6

ಬ್ರೈಡ್ ಮತ್ತು ಈಸ್ಟ್ಲೆಂಡ್,

೬೯—೭೫. ಸಿಟಿ ರೋಡ್, ಲಂಡನ್, ಇ. ಸಿ.

ಎಂಬೀ ವಿಳಾಸಕ್ಕೆ ಹಣ ಕಳಿಸಿ, ಕಾಗದ ಬರೆಯಿರಿ. ಈ ಕಂಪನಿಯವರು ಪೇಟೆಂಟ್ ಔಷಧಿಗಳನ್ನೂ, ಅಶಕ್ತರಿಗೂ ಮಕ್ಕಳಿಗೂ ಕೊಡುವಂಥಾ, ಯಂತ್ರಗಳಿಂದಲೇ ತಯಾರಾದಂಥಾ ಆಹಾರಗಳನ್ನೂ, ಇನ್ನೂ ನಾನಾತರದ ಪದಾರ್ಥಗಳನ್ನೂ ಇಟ್ಟು ಬಿಕರಿಮಾಡುತ್ತಾರೆ. ಅವರು ಬಹು ವಿಶೇಷವಾದ ಗಮನಕೊಟ್ಟು, ಸಾಧ್ಯವಿದ್ದಷ್ಟು ಅಗ್ಗವಾಗಿ, ಬೇಕಾದ ಸಾಮಾನುಗಳನ್ನೇ ಆರಿಸಿ, ಮರಿಟಪ್ಪಾಲಿಗೇನೇ ಕಳುಹಿಸಿಕೊಡುವರು.

ಇದನ್ನು ನೋಡಿದರೆ ನೀವು ಬಹು ಆಶ್ಚರ್ಯ ಪಡುವಿರಿ!!! 23-6

ನಮ್ಮ ಪ್ರಸಿದ್ಧವಾದ ಪುಸ್ತಕಭಂಡಾರದಲ್ಲಿ ಅನೇಕ ಸಹಸ್ರ ರೂಪಾಯಿ ಬಾಳುವ ಕನ್ನಡ ಗ್ರಂಥಗಳೂ, ಶಾಲಾಪುಸ್ತಕಗಳೂ, ಪೆನ್ನು, ಪೆನ್ಸಿಲ್, ನೋಟ್‌ಬುಕ್, ಅನೇಕ ವಿಧವಾದ ಕಾಗದದ ಟೋಪಿಗಳು, ವೃತ್ತಾಂತ ಪತ್ರಿಕೆ, ಮಹಿಳಾಸಖಿ, ಕನ್ನಡ ಗ್ರಂಥಮಿತ್ರ, ಪ್ರಾಗ್ರಸ್, ಹಾರ್ವೆಸ್ಟ್‌ಫೀಲ್ಡ್ ಮುಂತಾದ ಪ್ರಸಿದ್ಧವಾದ ವರ್ತಮಾನಪತ್ರಿಕೆಗಳು ಇಲ್ಲಿ ಅನೇಕ ಸಾವಿರಗಟ್ಟಲೆಯಾಗಿ ಮಾರಾಟವಾಗುತ್ತವೆ. ಈ ಡಿಪೊ ಕಟ್ಟಡವು ರಾಜಧಾನಿಯಲ್ಲಿ ಬಹು ಪ್ರಸಿದ್ಧವಾದ ಸ್ಥಳವೆಂದು ಮೈಸೂರು ದೇಶದಲ್ಲೆಲ್ಲಾ ಹೆಸರುಗೊಂಡಿದೆ. ಈ ಕೆಳಗೆ ನಮೂದಿಸಿರುವ ಪುಸ್ತಕಗಳನ್ನು ಸ್ವಲ್ಪ ನೋಡಿ:—

ಕಥಾಸಂಗ್ರಹ ೧—೩ ಭಾಗಗಳು ಕ್ರಯ ೧—೦—೦
ವಿ. ಪಿ. ಪಿ. ಮೂಲಕ ೧—೩—೦

ಅನುಭವಸಾರ .. .. ಕ್ರಯ ೦—೧೨—೦

ಗ್ರೀಕರ ಚರಿತ್ರೆ .. .. ,, .. ೦—೨—೦

ರೋಮನರ ಚರಿತ್ರೆ .. .. ,, .. ೦—೨—೦

ಕನ್ನಡ—ಇಂಗ್ಲಿಷ್—ಹಿಂದೂಸ್ಥಾನಿ ಭಾಷಾಮಂಜರಿ. ಈ ಪುಸ್ತಕದಿಂದ ಇಂಗ್ಲಿಷ್ ಮತ್ತು ಹಿಂದುಸ್ಥಾನಿ ಭಾಷೆಗಳನ್ನು ಬಹು ಸುಲಭವಾಗಿ ಕಲಿಯಬಹುದು. ಇದರ ಕ್ರಯ ಎಂಟೇ ಆಣೆ.
ವಿ. ಪಿ. ಪಿ. ಮೂಲಕ ೦—೧೧—೦

ಶ್ರೀಚಾಮರಾಜೇಂದ್ರ ಒಡೆಯರವರ ಚರಿತ್ರೆ ಉತ್ಕೃಷ್ಟವಾದ ಪುಸ್ತಕ. ಅನೇಕ ಚಿತ್ರಗಳು ಇವೆ. ಇದನ್ನು ಕಾರಿತು ರಾಜಧರ್ಮಪ್ರವೀಣ ಮ॥ ರಾ॥ ತಂಬೂಚೆಟ್ಟರು ಒಂದು ಉತ್ಕೃಷ್ಟವಾದ ಅವತರಣಿಕೆಯನ್ನು ಬರೆದಿದ್ದಾರೆ. ಕ್ರಯ ೧—೮—೦
ವಿ. ಪಿ. ಪಿ. ಮೂಲಕ ೧—೧೧—೦

ಎಡ್ವರ್ಡ್ ಸಾರ್ವಭೌಮರ ಜೀವಚರಿತ್ರೆ ೦—೪—೦

ಕ್ರಿಮಿವರ್ಗವರ್ಣನೆ ೦—೧—೦

ಭೂಗೋಳಸಂಗ್ರಹ—ಐದನೇ ಮುದ್ರಣ:—ಈಗ ಮೈಸೂರು ವಿದ್ಯಾಭ್ಯಾಸದ ಇಲಾಖೆಯವರು ಈ ಪುಸ್ತಕವನ್ನು ದೇಶೀಯ ಪರೀಕ್ಷೆಗೂ ಎಲ್ಲಾ ಪಾಠಶಾಲೆಗಳಿಗೂ ಟೆಕ್ಸ್ಟ್ ಬುಕ್ಕಾಗಿ ನೇಮಿಸಿರುತ್ತಾರೆ. ಈ ಪುಸ್ತಕವನ್ನು ಬಹಳವಾಗಿ ತಿದ್ದಿ ಹೊಸವಿಷಯಗಳನ್ನು ಅನೇಕವಾಗಿ ಕೂಡಿಸಿ ಪ್ರಕಟಿಸಲಾಗಿದೆ. ಕ್ರಯ ಪ್ರತಿ ೧ಕ್ಕೆ ೪ ಆಣೆ, ಪೋಸ್ಟೇಜು ೧ ಆಣೆ.

ಮುದ್ರಾಮಂಜೂಷವು.—ಎರಡನೇ ಮುದ್ರಣ:—ವಿದ್ಯಾರ್ಥಿಗಳೂ ವಿದ್ಯಾವಂತರೂ ಸಾಮಾನ್ಯಪ್ರಜೆಗಳೂ ಅಧಿಕಾರಸ್ಥರೂ ಲೋಕವ್ಯವಹಾರಾದಿಗಳನ್ನು ಪರಿಷ್ಕಾರವಾಗಿ ಕಲಿತುಕೊಳ್ಳುವುದಕ್ಕೆ ವಿಶೇಷ ಸಹಕಾರಿಯಾದ "ಮುದ್ರಾಮಂಜೂಷ" ವೆಂಬೀ ನವರಸಯುಕ್ತವಾದ ಕನ್ನಡ ಗ್ರಂಥವು ಈಗಿನ ವ್ಯಾಕರಣಕ್ಕೆ ಸರಿಯಾಗಿ ತಿದ್ದಿ, ಬಹು ಶುದ್ಧವಾಗಿಯೂ ಅಂದವಾಗಿಯೂ ಪ್ರಕಟಿಸಲ್ಪಟ್ಟಿದೆ. ಇದಕ್ಕೆ "ಚಾಣಕ್ಯರ ನೀತಿ," "ಚಂದ್ರಗುಪ್ತ ಚಾಣಕ್ಯರ ಕಥೆ" ಎಂಬೀ ಹೆಸರುಗಳೂ ಉಂಟು. ಇಂಥಾ ಸರ್ವೋತ್ತಮವಾದ ಪುಸ್ತಕವನ್ನು ಕನ್ನಡಿಗರೆಲ್ಲಾ ತರಿಸಿ ಓದಿ, ಪ್ರಯೋಜನ ಪಡೆಯುವರೆಂದು ಹಾರೈಸುತ್ತೇವೆ. ಕ್ರಯ ೧ ಪ್ರತಿಗೆ ರೂ ೧—೮—೦, ಪೋಸ್ಟೇಜು ೨ ಆಣೆ. ವಿ. ಪಿ. ಪಿ. ರೂ. ೧—೧೧—೦.

ಪಕ್ಷಿಗಳ ಚರಿತ್ರೆ ೦—೧—೦

ಪ್ರಾಚೀನ ಜೀವರಾಶಿಗಳ ವರ್ಣನೆ ೦—೧—೦

ಸಣ್ಣವರಿಗೆ ಹೇಳದ ಕಥೆಗಳು ೦—೧—೦

ಬಾಲಿಕಾಗೀತ ಮುಕ್ತಾಕಲಾಪ, ಗೀತಮಂದಾರ ೦—೨—೦, **ಕಲ್ಯಾಣಗೀತಾವಳಿ** ೦—೫—೦, ಈ ಹಾಡಿನ ಪುಸ್ತಕಗಳು ನಮ್ಮಲ್ಲಿ ಯಾವಾಗಲೂ ದೊರೆಯುತ್ತವೆ.

ಮುಖ್ಯವಾಗಿ, ಸ್ನೇಹಿತರೇ, ತಾವು ರಾಜಧಾನಿಗೆ ಬರುವಾಗಲೆಲ್ಲಾ ನಮ್ಮ ಪುಸ್ತಕಾಲಯವನ್ನು ನೋಡಿಯೇ ಹೋಗಬೇಕೆಂದು ಕೇಳಿಕೊಳ್ಳುತ್ತೇವೆ. ನಿಮಗೆ ಪುಸ್ತಕವಲ್ಲದೆ ಬೇರೆ ಯಾವದಾದರೂ ಪದಾರ್ಥಗಳಾಗಲೀ ಅಥವಾ ಸಂಗತಿಗಳಾಗಲೀ ಅಪೇಕ್ಷಿಸುವ ಸಂದರ್ಭದಲ್ಲಿ ನೀವು ನಮಗೆ ಒಂದು ಕಾರ್ಡು ಬರೆದರೆ ತಕ್ಷಣವೇ ಜವಾಬು ಕೊಡುವದಕ್ಕೆ ಪ್ರಯತ್ನ ಮಾಡುತ್ತೇವೆ.

ವಿಳಾಸ:— **ಮ್ಯಾನೇಜರ್,**
ಸಿ. ಎಲ್. ಎಸ್. ಬುಕ್ ಡಿಪೊ,
ಮೈಸೂರು.

ಮೈಸೂರು ಸೀಮೆಯಲ್ಲಿ ಪ್ಲೇಗಿನ ಸ್ಥಿತಿ.

3—2—1905 ರಿಂದ 9—2—1905 ರ ವರೆಗೆ

ಸ್ಥಳ.	ಪ್ಲೇಗ್ ಆಗಲಿ ದದ್ದು	ಪ್ಲೇಗ್ ಸತ್ತ ದದ್ದು	ಕೋ...
ಬೆಂಗಳೂರು ಪಟ್ಟಣ	16	13	40
ಮೈಸೂರು ,,	0	0	7
ಬೆಂಗಳೂರು ಡಿಸ್ಟ್ರಿಕ್ಟು	4	4	62
ಮೈಸೂರು ,,	1	1	44
ಕೋಲಾರ್ ,,	0	0	47
ಕೋಲಾರ್ ಚಿನ್ನದ ಗಣಿಗಳು	9	4	22
ತುಂಕೂರು ಡಿಸ್ಟ್ರಿಕ್ಟು	0	0	57
ಹಾಸನ (ಹೊರಗಿನದು)	4	3	8
ಚಿತ್ರದುರ್ಗ ,,	6	4	27
ಕಡೂರ್ ,,	1	1	16
ಶಿವಮೊಗ್ಗ ,,	31	21	5
ಜುಮ್ಲಾ	75	53	384

ಶಾಲಿವಾಹನ ಶಕ ವರುಷಂಗಳು ೧೮೨೮ ನೇ ವಿಶ್ವಾವಸು ರದ ಮಾಘ ಬಹುಳ ಚತುರ್ದಶಿ ಗುರುವಾರದಿಂದ ಫಾಲ್ಗುಣ ಪಂಚಮಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ.

೧೯೦೬ ನೇ ಇಸವಿ ಫೆಬ್ರವರಿ.

ತಾ.	ವಾರ.	ತಿಥಿ.	ಘಳಿಗೆ	ನಕ್ಷತ್ರ.	ಘಳಿಗೆ.
22	ಗುರು ¶	ಚತುರ್ದಶಿ	15-32	ಧ	53 22
23	ಶುಕ್ರ *	ಅಮಾವಾ	14-50	ಶ	52-2
24	ಶನಿ ‡	ಪಾಡ್ಯ	15-42	ಪೂಭಾ	58-2
25	ರವಿವಾ §	ಬಿದಿಗೆ	17-38	ಉಭಾ	60 0
26	ಚಂದ್ರ .	ತದಿಗೆ	20-58	ಉಭಾ	2-18
27	ಕುಜ †	ಚೌತಿ	25-20	ರೇ	7-28
28	ಬುಧ ,,	ಪಂಚಮಿ	30-12	ಅ	13-30

¶ ಸರ್ವತ್ರ ಅಮಾವಾಸ್ಯ, ಶ್ರೀರಂಗಪಟ್ಟಣದಲ್ಲಿ ಗಂಗಾಸ್ನಾನ ವಿಶೇಷ. * ಶತಭಿಷನಕ್ಷತ್ರಯುಕ್ತ ಅಮಾವಾಸ್ಯೆ ಅರ್ಧೋದಯ, ಪಂಚಗ್ರಹಯೋಗ ‡ ಚಂದ್ರೋದಯ § ತೃತೀಯಾ ಮೋ ರಂ ಆರಂಭ . ಕೂಷ್ಮಾಂಡ ಗೌರೀವ್ರತ † ಚಂದ್ರ ... ಮಹಾವೈಪ್ರ.

ಪೇಟೇ ಧಾರಣೆ.

ದಿನಸಿ.	ಮೈಸೂರು.	ಬೆಂಗ...
ಕಡ್ಡಿ ಅಕ್ಕಿ ಪಲ್ಲಾ ೧ಕ್ಕೆ ರೂ	೧೧-೧-೨-೦	
ಕೆಂಬೂತಿ ಅಕ್ಕಿ ಅಸಲ್	೧-೨-೦-೦	
,, ದುಯಂ ..	೧೧-೮-೦	
ಜಾಪಾತಿ ಅಕ್ಕಿ	೧-೨-೦-೦	
ಸಣ್ಣಕ್ಕಿ ಅಸಲ್	೧೩-೮-೦	
,, ದುಯಂ	೧೩-೦-೦	
ತೊಗರೀ ಬೇಳೆ ಪಲ್ಲಾ ೧ಕ್ಕೆ .	೯-೮-೦	
,, ದುಯಂ	೯-೦-೦	
ಪೈರ್ ರಾಗಿ ಪಲ್ಲಾ ೧ಕ್ಕೆ	೬-೧-೨-೦	
ಕಾರಾಗಿ	೬-೮-೦	
ಜೋಳ	೩-೦-೦	
ಹಲಸಂದೆ ಪಲ್ಲಾ ೧ಕ್ಕೆ	೮-೮-೦	
ಬಿಳೀ ಅವರೆ	೮-೦-೦	
ಹೆಸರು	೧೦-೦-೦	
ಉದ್ದು	೧-೨-೦-೦	
ಕಡಲೆ	೧೦-೮-೦	
ಎಳ್ಳು ಸೆ. ೧೨೩ ಕ್ಕೆ	೧೮-೮-೦	
ಹುರುಳಿ	೩-೮-೦	
ಹರಳು ೧೨೩ ಸೇರಿಗೆ	೧೧-೧-೨-೦	
ಸೀಗೇಕಾಯಿ ಮಣ ೧ಕ್ಕೆ ..	೨-೧-೨-೦	
ಮೆಣಸಿನಕಾಯಿ	೩-೮-೦	
,, ದುಯಂ	೩-೪-೦	
ಬೆಲ್ಲ ದೊಡ್ಡ ಅಚ್ಚು	೪-೪-೦	ವ
ಒಳ್ಳೆಣ್ಣೆ ಮಣ ೧ಕ್ಕೆ	೫-೪-೦	
ಹರಳೆಣ್ಣೆ ,, ...	೪-೧-೨-೦	
ಕೊತ್ತುಂಬರಿ ಪಲ್ಲಾ ೧ಕ್ಕೆ	೧೦-೦-೦	
ಉಪ್ಪು ,, ...	೩-೦-೦	
ಹೊಗೆಸೊಪ್ಪು	೦-೧-೨-೦	
,, ಹಳೇದು	೦-೮-೦	
ತುಪ್ಪ	೧೩-೦-೦	
ಸೀಮೆಯೆಣ್ಣೆ ಪಟ್ಟ ೧ಕ್ಕೆ ..	೫-೪-೦	
ತೆಂಗಿನಕಾಯಿ ೧೦೦ ಕ್ಕೆ ..	೪-೦-೦	
ಅಳಲೇಕಾಯಿ ಮಣ ೧ಕ್ಕೆ ..	೦-೧-೨-೦	
ಅಂಟುವಾಳದ ಕಾಯಿ ಮಣ ೧ಕ್ಕೆ ..	೦-೦-೨-೦	
ಚಿನ್ನ (ಪೌನ್) ಕೆಂಪು ..	೧೫-೪-೦	
,, ,, ಪಸಿಮೆ ..	೧೫-೩-೦	
,, ,, ಗಟ್ಟಿ ತೊಲ ೧ಕ್ಕೆ ..	೨೩-೧-೨-೦	
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ ..	೩-೨-೦-೦	

Printed and Published by the Rev. E. W. Thomp... the Proprietor and Manager, Wesleyan Missio... Mysore. 22/2/1906.

ವೃತ್ತಾಂತ ಪತ್ರಿಕೆ.

REGISTERED M. 80

ಕ್ರಯ ೧ ದುಡ್ಡು — ಕ್ರಯ ೧ ದುಡ್ಡು

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಸಂಪುಟ ೧೯ — ಮೈಸೂರು—ಸನ್ ೧೯೦೬ ನೇ ಇಸವಿ ಮಾರ್ಚಿ ತಾರೀಖು ೧ ನೇ ಗುರುವಾರ. — ಸಂಚಿಕೆ ೩೯

WANTED WILD ANIMALS.

ಬೇಕಾಗಿದೆ. ಬೇಕಾಗಿದೆ

546

ಎಲ್ಲಾ ವಿಧವಾದ ಕಾಡು ಮೃಗಗಳು ಮೈಸೂರು ಜೂ ಗೋಸ್ಕರ ಮಿಸ್ಟರ್ ಹ್ಯೂಜಸ್ ಯವರು ಕೊಂಡುಕೊಳ್ಳುವರು

Apply to—Mr. Hughes, Mysore Zoo

"ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ

ಮೈಸೂರಲ್ಲಿ ಇತರ ಕಡೆಗಳಲ್ಲಿ (ಅಂಚೆ ವೆಚ್ಚ ಸಹಾ)

ಮೂಲಕ ಒಂದು ವರುಷಕ್ಕೆ ೧ ಪ್ರತಿಗೆ ೦-೦-೦ ...

(ಅಡ್ವಾನ್ಸು) . . . ರೂ ೧—೦—೦

ಚಂದಾದಾರರು ಅಫೀಸಿನಿಂದ ಅಂಚೆಯ ಮೂಲಕ ...

ಹಳ್ಳಿಗಳಿಗೆ ೧ ಪ್ರತಿಗೆ ೦-೦ ತಿಂಗಳಿಗೆ ...

... ರೂ ೧—೧೪—೦

" " " " ೧—೧೪—೦

ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸ ಇವನ್ನು ಸ್ಪಷ್ಟವಾಗಿ ಬರೆಯಬೇಕು

ವಿಳಾಸ — ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು

ಈ ನಕ್ಷೆಯಲ್ಲಿ ತೋರಿಸಿರುವ ನಿಕ್ಕಲ್ ... ದಾಸ್‌ಕೋಪು ಪೇಟೆಂಟ್ ಲಿವರ್ ವಾಚು ಅರು ... ಚಲಿಸ ... ಕಂಪೆನಿಯ ... ಬಹು ಭದ್ರವಾದ ಗಡಿಯಾರ. ... ಕ್ರಯ ರೂ ... ಜನರ ಮನೋಹರ ... ೧೦೦೦೦ ವಾಚುಗಳು ಮಾರ ... ಇದರಲ್ಲಿ ... ನಕ್ಷೆಗಿಷ್ಟವಿಲ್ಲದಿರುತ್ತ ...

ಜರ್ಮನ್‌ಸಿಲ್ವರ್ ಚೈನ್ ... ಕ್ರಯ ೦—೮—೦

... ಕ್ರಯ, ೦—೮—೦

... ಗೋಲ್ಡ್ ... ಬಹುಚು. ಕ್ರಯ, ೦—೧೦—೦.

... ಜರ್ಮನ್‌ಸಿಲ್ವರ್ ... ಕ್ರಯ ೦—೧—೦

... ಕ್ರಯ ೦—೧೦—೦

ವಿಳಾಸ,—ಫ್ಯಾರಿಸ್ ವಾಚ್ ಕಂಪೆನಿ,

ಜಾರ್ಜ್ ಟವನ್ ಮದರಾಸ್.

ಜ್ವರಹರಿ. 201

ಇದು ಸಾಧಾರಣ ಜ್ವರ, ಚಳಿಜ್ವರ, ಮೈರೇಜ್ವರ, ಪಿತ್ಥಜ್ವರ, ಜೀರ್ಣಜ್ವರ ... ಎಂಬ ಸಕಲವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮಹಾಮಹಾ ... ಸಬ್ ಡಿವಿಜನ್ ಆಫೀಸರ್ ಎಸ್ ಟಿ ವೆಂಕಟಪತಿ ಅಯ್ಯ ... ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ... ಸೀಸೆಯು ತೀರಿಹೋಯಿತು. ಇಷ್ಟು ಸ್ವಲ್ಪ ಕಾಲದಲ್ಲೇ ... ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ... ಹೊಂದಿರುವರು ಇನ್ನೂ ಜನಗಳು ಕಾಹಿಲೇ ಬೀಳುತ್ತಿರುವ ... ಕಳುಹಿಸಿಕೊಟ್ಟು ... ಸೀಸೆಯನ್ನು ವಿ. ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದ್ದಾರೆ

ಕ್ರಯ —ಸೀಸೆ ೧ ಕ್ಕೆ ೮ ಅಣೆ, ೧ ರೂ , ೧—೮ ರೂ , ... ೧೧ ರೂ , ಡಜನ್ ಸೀಸೆ ತರಿಸಿಕೊಂಡರೆ ... ಮಾಫಿ ಬಿಡಲಾಗುವದು

ಬಿ ಮಂ ಆ ಕ ಪೂ ರ ದ.

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆಕಳೆ ... ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದವುಗಳಿಗೆ ... ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುತ್ತದೆ. ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಯೆ ... ನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ ... ಜ್ವರಹರಿ ಎಂಬ ಔಷಧದಂತೆಯೇ ಸೀಸೆಗಳಲ್ಲಿ ದೊರೆಯುವದು

... ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಹೆವ್ರಿಯ ... ಕರ್ಪೂರವನ್ನು ನಾನೂ ನನ್ನ ಡಾಕ್ಟರುಗಳೂ ಮ್ಯುನಿಸಿಪಲ್ ... ಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣ ... ರೋಗಿಷ್ಟರಿಗೆ ಕೊಡುತ್ತೇವೆ ಕೊಟ್ಟ ಕೂಡಲೆ ರೋಗವು ಗುಣವಾಗುತ್ತಲಿದೆ ಇದು ಬಹು ಒಳ್ಳೇ ಔಷಧವಾಗಿದೆ

ಈ ಎಲ್ಲಾ ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲಿಯೂ ... ಔಷಧ ವ್ಯಾಪಾರಿಗಳಲ್ಲೂ ಕ್ರಯ ... ಇದಲ್ಲದೆ ಕೆಳಗಿನ ವಿಳಾಸದಾರರಲ್ಲಿ ವಿಶೇಷ — ... ಗ್ರೇಟ್ ಇಂಡಿಯನ್ ಔಷಧಗಳ ಕಂಪೆನಿ,

ಸೈಂಟ್ ಥಾಮಸ್ ಮೌಂಟ್ ಮದ್ರಾಸ್.

ಹೋಮಿಯೋಸಿಯಾ

ಈ ಔಷಧಿ ... ಅರಮನೆ, ಸರ್ಕಾರದ ಆಸ್ಪತ್ರೆ, ಪೋಲೀಸ್ ದಾಣಾ, ವಿದ್ಯಾಶಾಲೆ, ... ಕ್ಲಬ್‌ಗಳು ... ಸ್ಥಳಗಳಲ್ಲೆಲ್ಲಾ ಇದ್ದೇ ಇರುತ್ತದೆ. ಇದಕ್ಕೆ ಸಮಾನವಾದ ಔಷಧ ಮತ್ತೊಂದೂ ಇಲ್ಲವೆಂಬ ... ರೋಗ ... ಸಿದ್ಧವಾಗಿದೆ

ಈ ತೈಲವು ... ಒಂದು ... ಗಳಿಗೆ ಮುಖ್ಯವಾಗಿ ಸಿಕ್ಕ ಒಳ್ಳೆ ಔಷಧ ... ಉಪಯೋಗಿಸಿದ ನೂರಾರು ಮನುಷ್ಯರು, ಡಾಕ್ಟರುಗಳು, ಮುಂತಾದವರು ಇದರ ಗುಣವನ್ನು ಹೊಗಳಿ ... ಟುಗಳನ್ನು ಕೊಟ್ಟಿರುವರು ನೋವು ಕಂಡರೆ ಇದನ್ನು ಉಪಯೋಗಿಸಿದರೆ ವಾಸಿಯಾಗುವದು

ಈ ತೈಲವು ಅರೆ ತಲೆನೋವು, ಸೊಂಟನೋವು ... ವಾಯು, ಪಾರ್ಶ್ವವಾಯು, ... ಉಳುಕು, ಕೀಲುವಾಯು, ಗುಳ್ಳೆಗಳು, ... ಮುಖ ನೋವು, ಊತಗಳು, ಗಡ್ಡೆಗಳು, ರಣಗಳು, ... ಸೊಳ್ಳೆ ಮತ್ತು ಚೇಳು ಕಡಿದದ್ದು, ... ಬೆಂಕಿಯಲ್ಲಿ ಸುಟ್ಟುಕೊಂಡದ್ದು, ಕತ್ತಿ ಗಾಯ—ಇವೇ ಮೊದಲಾದ ನಾನಾ ಬಾಧೆಗಳನ್ನು ಹುಟ್ಟಡಗಿಸುತ್ತದೆ ರಾತ್ರಿ ಹಚ್ಚಿಕೊಂಡು ಮಲಗಿದರೆ ... ಸೇರುವದಿಲ್ಲ

ಕ್ರಯ — ಸಣ್ಣ ಡಬ್ಬಿ ೧ ಕ್ಕೆ ೧ ರೂ , ದೊಡ್ಡದಕ್ಕೆ ರೂ. ... ಒಂದೇ ಸಲ ... ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ ಬಿಡುತ್ತಾರೆ ರೂ ... ಅಣೆ ... ಡಬ್ಬದಲ್ಲಿ ೧ ರೂ ಡಬ್ಬದಲ್ಲಿರುವದಕ್ಕಿಂತ ೪ ರಷ್ಟು ಹೆಚ್ಚು ಔಷಧವಿರುತ್ತೆ ರೂ ... ಈ ಡಬ್ಬವನ್ನು ತರಿಸಿಕೊಳ್ಳುವವರಿಗೆ ಟಪ್ಪಾಲ್ ಖರ್ಚು ಮಾಫಿ ಬಿಡುತ್ತೆ

ಹೋಮೋಸಿಯಾ ಯಂಬ್ರೋಕೇಷನ್.

ಈ ತೈಲವು ಹಳೇ ನೋವುಗಳಿಗೆ ಉಪಯೋಗಿಸತಕ್ಕದ್ದು ... ಒಡೆದ ಕಡೆ ಇದನ್ನು ಹಚ್ಚಕೂಡದು ಇದರಲ್ಲಿ ಹೋಮೋಸಿಯದ ಗುಣಗಳು ಬಹು ತೀಕ್ಷ್ಣವಾಗಿ ಇರುತ್ತವೆ ಅದಕ್ಕಿಂತಲೂ ಇದರಲ್ಲಿ ಇನ್ನೆರಡು ಗುಣಗಳುಳ್ಳ ಹೊಸ ... ಇದನ್ನು ... ಬಹು ಬೇಗನೆ ... ಡಬ್ಬಿಗಳಲ್ಲಿ ... ೮ ಅಣೆಗೂ, ೧ ರ ... ಗೂ ಒಂದರಂತೆ ಬಿಕರಿ ಮಾಡಲ್ಪಡುವದು ... ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ ಎಲ್ಲಾ ಷಾಪುಗಳಲ್ಲಿಯೂ ದೊರೆಯುವದು

ಈ ಔಷಧಗಳ ವಿವರಣೆಯೂ, ಸರ್ಟಿಫಿಕೇಟುಗಳೂ ಉಳ್ಳ ನೋಟೀಸುಗಳನ್ನು ಅಪೇಕ್ಷಿಸಿದರೆ ಕಳುಹಿಸುವೆವು

ವಿಳಾಸ —ಹೋಮೋಸಿಯಾ ಕಂಪೆನಿ ... ನೆಂಬರು ... ಸ್ಟ್ರೀಟ್ ಮದರಾಸ್.

ಇಗೋ ನೋಡಿ—ಮತ್ತೊಂದು ಹೊಸಪುಸ್ತಕವು—ಬಹು ರಸಿಕವಾಗಿವೆ ಅರೇಬಿಯನ್ ನೈಟ್ಸ್ ಅಥವಾ ಯಾಮಿನೀ ವಿನೋದ ಕಥೆಗಳು

71

ಎಂಬ ಮಹಾಪ್ರಸಿದ್ಧವಾದ ಪುಸ್ತಕವು ತೆಲುಗಿನಲ್ಲಿ ಈಗತಾನೇ ಪ್ರಕಟಿಸಲ್ಪಟ್ಟಿದೆ. ಹೆಮ್ಮೆ ... ನಾನೂರು ಎಪ್ಪತ್ತು ಪುಟಗಳುಳ್ಳದ್ದಾಗಿಯೂ ಆ ಬಾಲ ... ದರಿಗೆ ಶ್ರೋತ್ರಾನಂದಕರವಾಗಿಯೂ, ... ರಸಿಕವಾಗಿಯೂ ರಚಿತವಾಗಿರುವ ಈ ಪುಸ್ತಕದ ... ವಾಚಕರು ... ತಿಳಿದುಕೊಳ್ಳುವರು. ಭಾಷೆಯು ಬಹು ಸರಳವಾಗಿರುವದು ಮತ್ತು ಇದನ್ನು ಬರೆದ ಇವನಿಗೆ ಸುಮಾರು ಎರಡು ವರ್ಷಗಳು ಹಿಡಿದಿವೆ. ಪುಸ್ತಕವನ್ನು ಒಂದಾವರ್ತಿ ಹಿಡಿದಮೇಲೆ ಅದನ್ನು ಪುನಃ ಓದುವಂತೆ ಓದು ಮನಸ್ಸನ್ನು ಆಕರ್ಷಿಸುವದು ಇದರ ಬೆಲೆ ಎರಡು ರೂಪಾಯಿ ಮಾತ್ರವೇ ಡಾಸಲು ಎರಡು ಆಣೆಗಳು. ವಿ ಪಿ ಮೂಲಕ ಬಿಸಿಕೊಂಡರೆ ಎರಡು ರೂಪಾಯಿ ಮೂರು ಆಣೆಗಳಾಗುವವು ಹೊಸ್ತರೂ ಬಹ ... ಎಲ್ಲರೂ ಕೊಂಡು ಓದಿ ಪ್ರಯೋಜನವನ್ನು ಪಡೆಯಬೇಕೆಂದು ಇಷ್ಟು ದೊಡ್ಡ ಪುಸ್ತಕವನ್ನು ಇಷ್ಟು ಸುಲಭಕ್ರಯಕ್ಕೆ ಮಾರುತ್ತೇವೆ

ಪುಸ್ತಕವು ದೊರಕುವ ಸ್ಥಳ

ಸಿ. ಎಲ್ ಎಸ್ ಬುಕ್ ಡಿಪ್ಪೋ,

ಮೈಸೂರು.

ಇಂಡಿಯಾ ವ್ಯವಸಾಯ ಮತ್ತು ಸಹಾಯಕ ಅಫೀಸು

14 23

[೧೯೦೨ ರಲ್ಲಿ ಸ್ಥಾಪಿತವಾದದ್ದು]

ಈ ಅಫೀಸಿನ ಉದ್ದೇಶವೇನೆಂದರೆ—ಯಾವ ಜಾತಿಯವರೇ ಆಗಲಿ ಮತದವರೇ ಆಗಲಿ ಈ ಅಫೀಸಿನ ಚಂದಾದಾರನಾಗಿ ಅದರ ಭರವಸೆ ಪತ್ರವನ್ನು ಹೊಂದಿದ್ದರೆ ಅವನ ಮರಣಾನಂತರ ಅವನ ಕುಟುಂಬದವರಿಗೆ ಸಹಾಯವು ಕೊಡಲ್ಪಡುವದು.

ಈ ಅಫೀಸಿನ (A) ತರಗತಿಗೆ ಸೇರಿದವರು ಪಡೆಯಬೇಕೆಂದರೆ ... ಪ್ರತಿ ೧೦೦೦ ರೂಪಾಯಿಗಳ ಮೊಬಲಗಿಗಾಗಿ ಮಾಸೆಯಾದ ಒಂದೊಂದು ರೂಪಾಯಿಯು ಪ್ರಕಾರ ಒಟ್ಟು ರೂ ೪೬ ನ್ನು ಮಾತ್ರವೇ ಸಲ್ಲಿಸಬೇಕಾಗುವದು.

ಅಫೀಸಿನವರು ಚಂದಾದಾರರಿಂದ ವಸೂಲಾದ ಮೊಬಲಗು ... ದಾಸ್ತಾನೀತಿಯಾಗಿ ನಡೆಸಲ್ಪಡುವ ವ್ಯವಸಾಯಕ್ಕೆ ಹಾಕಿ ಅದರಿಂದ ಬಂದ ಲಾಭದಿಂದಲೇ ಚಂದಾದಾರರ ಸಹಾಯದ್ರವ್ಯವನ್ನು ಕೊಡಲಾಗುವದು ವ್ಯವಸಾಯ ನಿಮಿತ್ತವಾಗಿ ನಾವು W. I. P. ರೈಲ್ವೆ ... ದಲ್ಲಿರುವ "ಕೊಲ್ಲಂ ಎಸ್ಟೇಟ್" ಎಂಬ ಸರ್ವೋತ್ಕೃಷ್ಟವಾದ ಭೂಮಿಯನ್ನು ೯೯ ವರ್ಷಕ್ಕೆ ಸ್ವಂತವಾಗಿ ಪಡೆದಿದ್ದೇವೆ ಈ ಭೂಮಿಗೆ ಒಂದು ಹೊಳೆಯಿಂದ ಕಾಲುವೆ ಮೂಲಕ ನೀರನ್ನು ತಂದುಕೊಂಡಿರುವದರಿಂದ ಫಸಲು ಕಡಿಮೆಯಾಗುವದೆಂಬ ಭಯವೇ ಇಲ್ಲ

ಈ ಅಫೀಸಿನಲ್ಲಿ ಭರವಸೆಪತ್ರವನ್ನು ಪಡೆದಿರುವವರು ಚಂದಾದಾರರಾಗಿ ಮಾತ್ರ ಇದ್ದಾರೆ ಆದಾಯ ನಷ್ಟಗಳಿಗೆ ಭಾಗಿಗಳಾದ ಷೇರುದಾರರಾಗಿರುವದಿಲ್ಲ ಆದರೂ ಅವರ ಹಣಕ್ಕೆ ನಮ್ಮ ಭೂಸ್ಥಿತಿಯು ಆಧಾರವಾಗಿರುತ್ತದೆ

ಚಂದಾ ಮೊಬಲಗನ್ನೆಲ್ಲಾ ಪಾವತಿ ಮಾಡಿ ಭರವಸೆಪತ್ರವನ್ನು ಪಡೆದಿರುವ ಯಾವ ಚಂದಾದಾರನಾಗಲಿ ಅಫೀಸಿನಿಂದ ಹಿರಿಯ ... ತೃಪ್ತಿಕರವಾಗಿ ಕಂಡು ಬಾರದಿದ್ದರೆ ತಾನು ಸಲ್ಲಿಸಿರುವ ಚಂದಾಮೊಬಲಗನ್ನೆಲ್ಲಾ ವಾಪಸು ಪಡೆಯಬಹುದು

ಈ ಅಫೀಸಿಗೆ ಸಬ್ ಏಜಂಟುಗಳು ಬೇಕಾಗಿದೆ ವಿವರವಾಗಿ ತಿಳಿಯಲಪೇಕ್ಷಿಸುವವರು ಅರ್ಧಾಣೆ ಸ್ಟಾಂಪಿಟ್ಟು ಕೆಳಗಿನ ವಿಳಾಸಕ್ಕೆ ಇಂಗ್ಲಿಷಿನಲ್ಲಿ ಬರೆದುಕೊಳ್ಳತಕ್ಕದ್ದು

ವಿಳಾಸ —The Manager,

The India Agricultural and Helping Office,

Vengurla Post, Bombay Presidency.

P. SUBBAROY'S

World Renowned and most Efficacious Ayurvedic Medicines.

ಪಿ. ಸುಬ್ಬರಾಯರವರ

ಲೋಕಪ್ರಸಿದ್ಧವಾದ ಮತ್ತು ಅತ್ಯಂತ ಗುಣಕಾರಿಯಾದ ಆಯುರ್ವೇದ ಔಷಧಗಳು.

11-15

೧. ಪುಷ್ಟಿರಸಾಯನ.—ಇದರ ಸೇವನೆಯಿಂದ ನರಗಳ ಸಂಬಂಧವಾದ ಮತ್ತು ಇತರ ವಿಧವಾದ ಎಲ್ಲಾ ಶರೀರದ ದುರ್ಬಲಗಳೂ ಹೋಗಿ, ಹೊಟ್ಟೆಯಲ್ಲಿ ಅಗ್ನಿ ಉಂಟಾಗಿ, ದೇಹವು ಪುಷ್ಟಿಹೊಂದುವದು. ಪುಷ್ಟಿಯನ್ನು ಕಳೆದುಕೊಂಡ ಚಿಕ್ಕವಯಸ್ಸಿನವರಿಗೆ ಇದು ಒಳ್ಳೇ ಔಷಧವು ಇದರಿಂದ ಶರೀರದ ಪ್ರತಿ ಅವಯವದ ನೋವೂ, ಅಶಕ್ತಿಯೂ ಹೋಗಿ, ಪುಷ್ಟಿಯೂ, ಬಲವೂ ಉಂಟಾಗುವವು. ಪೆಟ್ಟಿ ೧ಕ್ಕೆ ರೂ ೨ ವಿ. ಪಿ. ಛಾರ್ಜಿ ೬ ಆಣೆ.

೨ ಅಜೀರ್ಣ ಗುಳಿಗೆ.—ಅಜೀರ್ಣ, ತೇಗುವುದು, ಹೊಟ್ಟೆಯಲ್ಲಿ ಉರಿ, ಮಲಬದ್ಧವಾಗಿರುವಿಕೆ, ಹಸಿವಿಲ್ಲದಿರುವದು, ಪಿತ್ಥ, ಬಾಯಿಯ ದುರ್ಗಂಧ, ಹೊಟ್ಟೆಶೂಲೆ, ನಿದ್ದೆ ಹತ್ತದಿರುವಿಕೆ, ತಲೆತಿರುಗುವದು, ಇವೆಲ್ಲಾ ನಿರ್ಮೂಲವಾಗುವವು. ಪೆಟ್ಟಿ ೧ಕ್ಕೆ ೮ ಆಣೆ ವಿ. ಪಿ. ೨ ಪೆಟ್ಟಿಗೆ ವರೆಗೆ ಛಾಂಗಿ ಛಾರ್ಜಿ ೫ ಆಣೆ.

೩. ಲಕ್ಷ್ಮೀಕರ ಕಸ್ತೂರಿಮಾತ್ರೆ.—ಇದು ತಾಂಬೂಲಕ್ಕೆ ಪ್ರಾಣಮಿತ್ರನು ಇದರಿಂದ ಬಾಯಿಯ ದುರ್ಗಂಧವು ಹೋಗುವದು, ಭೋಜನಾನಂತರ ತಾಂಬೂಲದ ಸಂಗಡ ೧—೨ ಮಾತ್ರೆಗಳನ್ನು ಸೇವಿಸಿದರೆ, ಇತರ ಸುವಾಸನಾದ್ರವ್ಯಗಳು ಅನಾವಶ್ಯಕವಾಗಿರುವುದಲ್ಲದೆ, ಅಲ್ಪಕಾಲದಲ್ಲಿ ಅತ್ಯಂತ ಕಠಿಣವಾದ ಆಹಾರವನ್ನು ಕೂಡ ಜೀರ್ಣಕ್ಕೆ ತರುವುದು ಬೆಳಿಗ್ಗೆ ಊಟಕ್ಕೆ ಮುಂಚೆ ೨ ಮಾತ್ರೆಗಳನ್ನು ಕ್ರಮವಾಗಿ ಸೇವಿಸುತ್ತಿದ್ದರೆ ಅಜೀರ್ಣ, ಮಂದ, ಹಲ್ಲುವೇದನೆ, ಹೊಟ್ಟೆಯುರಿ, ಇವುಗಳು ವಾಸಿಯಾಗುವುವು. ಇದರಲ್ಲಿ ಅಕ್ಷೇಪಣೀಯವಾದ ಮತ್ತು ಪ್ರತಿಬಂಧಕವಾದ ಯಾವ ವಸ್ತುವೂ ಇಲ್ಲದ್ದರಿಂದಲೂ, ಇದರ ತಯಾರಿಗೆ ಕಸ್ತೂರಿ ಸುವರ್ಣ ವರಕು ಮುಂತಾದ ಅಮೂಲ್ಯ ವಸ್ತುಗಳು ಸೇರಿರುವದರಿಂದಲೂ ಎಳೇ ಮಕ್ಕಳಿಂದ ಮುದುಕರವರಿಗೆ ಎಲ್ಲರೂ ತಾಂಬೂಲದೊಂದಿಗೆ ಅಥವಾ ಬರಿಬಾಯಲ್ಲಿ ಹಾಕಿಕೊಂಡು ಉಪಯೋಗಿಸಬಹುದು. ಕ್ರಮವಾಗಿ ಸೇವಿಸುವದರಿಂದ ದೇಹದಲ್ಲಿ ರೋಗಕ್ಕೆ ಆಸ್ಪದ ಕೊಡದೆ ಸದಾ ನೋಡಿಕೊಳ್ಳುವದು. ಜ್ವರ, ನೆಗಡಿ, ಕೆಮ್ಮಲು ಮುಂತಾದವುಗಳಿಗೆ ಸಣ್ಣ ಮಕ್ಕಳಿಂದ ದೊಡ್ಡವರಿಗೆ ೧ ರಿಂದ ೪ ಮಾತ್ರೆಗಳಂತೆ ಕೊಟ್ಟರೆ ಗುಣ ಕಾಣುವದು ಸುಮಾರು ೨೦೦ ಮಾತ್ರೆ ಉಳ್ಳ ಸೀಸೆ ೧ಕ್ಕೆ ೪ ಆಣೆ. ೧ ರಿಂದ ೧೨ ಸೀಸೆಗೆ ವಿ. ಪಿ. ಛಾಂಗಿ ಛಾರ್ಜಿ ೫ ಆಣೆ.

೪. ವೇದನಾಪರಿಹಾರಕ ತೈಲವು.—ಇದನ್ನು ಮೇಲ್ಭಾಗದಲ್ಲಿ ಮಾತ್ರ ಹಚ್ಚುವದರಿಂದ ಕೈಕಾಲು ಒಡೆದುಕೊಳ್ಳುವದು, ವಾತರೋಗ, ಪಾರ್ಶ್ವವಾಯು, ನರಗಳ ಸೆಳೆತ, ಮೊಣಕಾಲು ಸೊಂಟ ಮತ್ತು ಎದೆ ಇವುಗಳ ನೋವು, ತೋಳು ಮುಂತಾದ ಅಂಗಗಳ ಕೀಲಿನ ನೋವು, ತಲೆಶೂಲೆ, ಹಲ್ಲುನೋವು, ಕಿವಿನೋವು, ಚಳಿ, ಕೆಮ್ಮು ಮುಂತಾದ ಎಲ್ಲಾ ವಿಧವಾದ ನೋವುಗಳೂ ಖಂಡಿತವಾಗಿ ವಾಸಿಯಾಗುವವು. ಸೀಸೆ ೧ಕ್ಕೆ ೧ ರೂ. ೩ ಬಾಟ್ಲು ವರೆಗೆ ವಿ. ಪಿ. ಛಾಂಗಿ ಛಾರ್ಜಿ ೫ ಆಣೆ.

೫. ಲೋಕಪ್ರಸಿದ್ಧವಾದ ಪರಿಮಳ ಕೇಶತೈಲವು.—ಬೋಳುತಲೆ, ಹೊಂಡು ಅಥವಾ ಹೊಟ್ಟು ಉದುರುವಿಕೆ, ಇವು ಸಂಪೂರ್ಣವಾಗಿ ವಾಸಿಯಾಗುವದಲ್ಲದೆ, ತಲೆಯನ್ನೂ ಮೆದುಳನ್ನೂ ತಣ್ಣಗಿರುವಂತೆ ಮಾಡಿ, ತಲೆ, ಮೀಸೆ, ಹುಬ್ಬುಕೂದಲುಗಳನ್ನು ಹೇರಳವಾಗಿ ಬೆಳಸುವದು ಮತ್ತು ಕಣ್ಣು ವಿಮಳು ಸಂಬಂಧವಾದ ರೋಗಗಳನ್ನೆಲ್ಲಾ ವಾಸಿಮಾಡುವದು. ಬಹಳ ಮನೋರಂಜಕವಾಗಿ ಪರಿಮಳಿಸುವದು. ಬೆಲೆ ಸೀಸೆ ೧ಕ್ಕೆ ೮ ಆಣೆ. ೨ ಸೀಸೆ ವರೆಗೆ ವಿ. ಪಿ. ಛಾರ್ಜಿ ೫ ಆಣೆ

೬. ನೇತ್ರಬಿಂದು.—ಸವಿಶಾಪವೃಷ್ಟಿ, ಕಣ್ಣಿನಲ್ಲಿ ನೀರು ಸುರಿಯುವದು, ಕಣ್ಣುನೋವು, ಹೂವು ಬರುವುದು, ಉರಿ ಮುಂತಾದ ನೇತ್ರರೋಗಗಳು ಇದರಿಂದ ಗುಣವಾಗುವವು ಸೀಸೆ ೧ಕ್ಕೆ ೮ ಆಣೆ. ವಿ ಪಿ. ಛಾರ್ಜಿ ೬ ಸೀಸೆ ವರೆಗೂ ೫ ಆಣೆ.

೭. ಶ್ರೋತ್ರಬಿಂದು.—ಕಿವಿಯು ಎಷ್ಟು ಕೆಟ್ಟಾಗಿ ನೋಯುತ್ತಿದ್ದರೂ ಅದನ್ನೂ ಕೀವು ಸುರಿಯುವುದು, ಕಿವಿಯು ಮಾಂದ್ಯವು, ಕಿವುಡು ಮುಂತಾದ್ದನ್ನೂ ಜಾಗ್ರತೆ ಪರಿಹರಿಸುವುದು, ಬೆಲೆ ಸೀಸೆ ೧ಕ್ಕೆ ೮ ಆಣೆ ವಿ ಪಿ. ಛಾರ್ಜಿ ೬ ಸೀಸೆ ವರೆಗೂ ೫ ಆಣೆ

೮. ಹುಳುಕಡ್ಡಿಗೆ ಔಷಧಿ.—ಚರ್ಮ ರೋಗಗಳ್ಗೂ, ಚರ್ಮಗತವಾದ ಎಲ್ಲಾ ವ್ಯಾಧಿಗಳಿಗೂ ಅತ್ಯುತ್ತಮವಾದ ಮದ್ದು ಒಂದು ಸಾರಿ ವಾಸಿಯಾದ ಮೇಲೆ ಪುನಃ ತಲೆದೋರುವದಿಲ್ಲ ಸೀಸೆ ೧ಕ್ಕೆ ೪ ಆಣೆ. ವಿ ಪಿ. ಛಾರ್ಜಿ ೬ ಸೀಸೆ ವರೆಗೂ ೫ ಆಣೆ.

೯. ಸುಖಭೇದಿ.—ಹೊಟ್ಟೆನೋವು, ಆಯಾಸ ಯಾವದೂ ಸ್ವಲ್ಪವೂ ಉಂಟಾಗದಂತೆ ಸುಖವಾಗಿ ಭೇದಿಯಾಗುವದು ಮಲಬಂಧ, ಅಜೀರ್ಣ, ವಾಯು, ಎದೆಯುರಿಯುವುದು, ಪಿತ್ತ, ಜ್ವರ, ಇವುಗಳನ್ನು ವಾಸಿಮಾಡುವುದು. ಸೀಸೆ ೧ಕ್ಕೆ ೮ ಆಣೆ. ವಿ. ಪಿ. ಛಾರ್ಜಿ ೬ ಸೀಸೆ ವರೆಗೂ ೫ ಆಣೆ

ಕಾಗದವನ್ನು ಇಂಗ್ಲೀಷ್ ಅಥವಾ ತಮಿಳಿನಲ್ಲಿ ಬರೆಯಿರಿ.

Apply to :—P. SUBBAROY,
Porto Novo, South Arcot.

ವಿಳಾಸ:—ಪಿ. ಸುಬ್ಬರಾಯ್,
ಪೋರ್ಟೊನೋವೊ, ದಕ್ಷಿಣ ಆರ್ಕಾಟ್ ಜಿಲ್ಲಾ.

ನೀವು ವಿಲಾಯತಿಯಿಂದ ಯಾವ ಸಾಮಾನುಗಳನ್ನಾದರೂ ತರಿಸಿಕೊಳ್ಳಬೇಕಾಗಿದ್ದರೆ 19-6

ಬ್ರೈಡ್ ಮತ್ತು ಈಸ್ಟ್‌ಲೆಂಡ್,

೯—೩೫, ಸಿಟಿ ರೋಡ್, ಲಂಡನ್, ಇ. ಸಿ.

ಎಂಬೀ ವಿಳಾಸಕ್ಕೆ ಹಣ ಕಳಿಸಿ, ಕಾಗದ ಬರೆಯಿರಿ ಈ ಕಂಪನಿಯವರು ಪೇಟೆಂಟ್ ಔಷಧಿಗಳನ್ನೂ, ಅಕ್ಕಸಾಲಿಗರಿಗೂ ಮತ್ತು ಕಮ್ಮಾರರಿಗೂ ಬೇಕಾಗುವಂಥಾ, ಯಂತ್ರಗಳಿಂದಲೇ ತಯಾರಾದಂಥಾ ಆಭಾರಣಗಳನ್ನೂ, ಇನ್ನೂ ನಾನಾತರದ ಪದಾರ್ಥಗಳನ್ನೂ ಇಟ್ಟು ಬಿಕರಿಮಾಡುತ್ತಾರೆ ಅವರು ಬಹು ವಿಶೇಷವಾದ ಗಮನಕೊಟ್ಟು, ಸಾಧ್ಯವಿದ್ದಷ್ಟೂ ಅಗ್ಗವಾಗಿ, ಬೇಕಾದ ಸಾಮಾನುಗಳನ್ನೇ ಆರಿಸಿ, ವಾರಿಟಪ್ಪಲಿಗೇನೇ ಕಳುಹಿಸಿಕೊಡುವರು.

ಇದನ್ನು ನೋಡಿದರೆ ನೀವು ಬಹು ಆಶ್ಚರ್ಯಪಡುವಿರಿ!!! 23-6

ನಮ್ಮ ಪ್ರಸಿದ್ಧವಾದ ಪುಸ್ತಕಭಂಡಾರದಲ್ಲಿ ಅನೇಕ ಸಹಸ್ರ ರೂಪಾಯಿ ಬಾಳುವ ಕನ್ನಡ ಗ್ರಂಥಗಳೂ, ಶಾಲಾಪುಸ್ತಕಗಳೂ, ಪೇನಾ, ಪೇನ್ಸಿಲ್, ನೋಟ್‌ಬುಕ್, ಅನೇಕ ವಿಧವಾದ ಕಾಗದದ ಟೋಪಿಗಳು, ವೃತ್ತಾಂತ ಪತ್ರಿಕೆ, ಮಹಿಳಾಸಖಿ, ಕನ್ನಡ ಗ್ರಂಥಮಿತ್ರ, ಪ್ರಾಗ್ರೆಸ್, ಹಾರ್ವೆಸ್ಟ್‌ಫೀಲ್ಡ್ ಮುಂತಾದ ಪ್ರಸಿದ್ಧವಾದ ವರ್ತಮಾನಪತ್ರಿಕೆಗಳು ಇಲ್ಲಿ ಅನೇಕ ಸಾವಿರಗಟ್ಟಲೆಯಾಗಿ ಮಾರಾಟವಾಗುತ್ತಿವೆ. ಈ ಡಿಪೊ ಕಟ್ಟಡವು ರಾಜಧಾನಿಯಲ್ಲಿ ಬಹು ಪ್ರಸಿದ್ಧವಾದ ಸ್ಥಳವೆಂದು ಮೈಸೂರು ದೇಶದಲ್ಲೆಲ್ಲಾ ಹೆಸರುಗೊಂಡಿದೆ ಈ ಕೆಳಗೆ ನಮೂದಿಸಿರುವ ಪುಸ್ತಕಗಳನ್ನು ಸ್ವಲ್ಪ ನೋಡಿ.—

ಕಥಾಸಂಗ್ರಹ	೧—೩ ಭಾಗಗಳು ಕ್ರಯ	೧—೦—೦
	ವಿ. ಪಿ. ಪಿ. ಮೂಲಕ	೧—೩—೦
ಅನುಭವಸಾರ	ಕ್ರಯ	೦—೧೨—೦
ಗ್ರೀಕರ ಚರಿತ್ರೆ	,,	೦—೨—೦
ರೋಮನರ ಚರಿತ್ರೆ	,,	೦—೨—೦

ಕನ್ನಡ—ಇಂಗ್ಲಿಷ್—ಹಿಂದೂಸ್ಥಾನಿ ಭಾಷಾಮಂಜರಿ. ಈ ಪುಸ್ತಕದಿಂದ ಇಂಗ್ಲಿಷ್ ಮತ್ತು ಹಿಂದುಸ್ಥಾನಿ ಭಾಷೆಗಳನ್ನು ಬಹು ಸುಲಭವಾಗಿ ಕಲಿಯಬಹುದು. ಇದರ ಕ್ರಯ ಎಂಟೇ ಆಣೆ. ವಿ. ಪಿ. ಪಿ. ಮೂಲಕ ೦—೧೦—೦

ಶ್ರೀಚಾಮರಾಜೇಂದ್ರ ಒಡೆಯರವರ ಚರಿತ್ರೆ ಉತ್ಕೃಷ್ಟವಾದ ಪುಸ್ತಕ ಅನೇಕ ತಸ್ವೀರುಗಳು ಇವೆ. ಇದನ್ನು ಚಾರಿತ್ರ-ರಾಜಧರ್ಮಪ್ರವೀಣ ಮ॥ ರಾ॥ ತಂಬೂಶೆಟ್ಟರು ಒಂದು ಉತ್ಕೃಷ್ಟವಾದ ಅವತರಣಿಕೆಯನ್ನು ಬರೆದಿದ್ದಾರೆ ಕ್ರಯ ೦—೮—೦
ವಿ ಪಿ. ಪಿ ಮೂಲಕ ೦—೧೧—೦

ಎಡ್ವರ್ಡ್ ಸಾರ್ವಭೌಮರ ಜೀವಚರಿತ್ರೆ	೦—೪—೦
ಕ್ರಿಮಿವರ್ಗವರ್ಣನೆ	೦—೧—೦

ಭೂಗೋಳಸಂಗ್ರಹ—ಐದನೇ ಮುದ್ರಣ:—ಈಗ ಮೈಸೂರು ವಿದ್ಯಾಭ್ಯಾಸದ ಇಲಾಖೆಯವರು ಈ ಪುಸ್ತಕವನ್ನು ದೇಶೀಯ ಪರೀಕ್ಷೆಗೂ ಎಲ್ಲಾ ಶಾಲೆಗಳಿಗೂ ಟೆಕ್ಸ್ಟ್ ಬುಕ್ಕಾಗಿ ನೇಮಿಸಿರುತ್ತಾರೆ. ಈ ಪುಸ್ತಕವನ್ನು ಬಹಳವಾಗಿ ತಿದ್ದಿ ಹೊಸವಿಷಯಗಳನ್ನು ಅನೇಕವಾಗಿ ಕೂಡಿಸಿ ಪ್ರಕಟಿಸಲಾಗಿದೆ. ಕ್ರಯ ಪ್ರತಿ ೧ಕ್ಕೆ ೪ ಆಣೆ, ಪೋಸ್ಟೇಜು ೧ ಆಣೆ.

ಮುದ್ರಾಮಂಜೂಷವು.—ಎರಡನೇ ಮುದ್ರಣ:—ವಿದ್ಯಾರ್ಥಿಗಳೂ ವಿದ್ಯಾವಂತರೂ ಸಾಮಾನ್ಯಪ್ರಜೆಗಳೂ ಅಧಿಕಾರಸ್ಥರೂ ಲೋಕವ್ಯವಹಾರಾದಿಗಳನ್ನು ಪರಿಷ್ಕಾರವಾಗಿ ಕಲಿತುಕೊಳ್ಳುವುದಕ್ಕೆ ವಿಶೇಷ ಸಹಕಾರಿಯಾದ "ಮುದ್ರಾಮಂಜೂಷ" ವೆಂಬೀ ನವರಸಯುಕ್ತವಾದ ಕನ್ನಡ ಗ್ರಂಥವು ಈಗಿನ ವ್ಯಾಕರಣಕ್ಕೆ ಸರಿಯಾಗಿ ತಿದ್ದಿ, ಬಹು ಶುದ್ಧವಾಗಿಯೂ ಅಂದವಾಗಿಯೂ ಪ್ರಕಟಿಸಲ್ಪಟ್ಟಿದೆ. ಇದಕ್ಕೆ "ಚಾಣಕ್ಯರ ನೀತಿ," "ಚಂದ್ರಗುಪ್ತ ಚಾಣಕ್ಯರ ಕಥೆ" ಎಂಬೀ ಹೆಸರುಗಳೂ ಉಂಟು. ಇಂಥಾ ಸರ್ವೋತ್ತಮವಾದ ಪುಸ್ತಕವನ್ನು ಕನ್ನಡಿಗರೆಲ್ಲಾ ತರಿಸಿ ಓದಿ, ಪ್ರಯೋಜನ ಪಡೆಯುವರೆಂದು ಹಾರೈಸುತ್ತೇವೆ. ಕ್ರಯ ೧ ಪ್ರತಿಗೆ ರೂ. ೧—೮—೦, ಪೋಸ್ಟೇಜು ೨ ಆಣೆ, ವಿ. ಪಿ. ಪಿ. ರೂ. ೧—೧೧—೦

ಪಕ್ಷಿಗಳ ಚರಿತ್ರೆ	೦—೧—೦
ಪ್ರಾಚೀನ ಜೀವರಾಶಿಗಳ ವರ್ಣನೆ	೦—೧—೦
ಸಣ್ಣವರಿಗೆ ಹೇಳಿದ ಕಥೆಗಳು	೦—೧—೦

ಬಾಲಿಕಾಗೀತ ಮುಕ್ತಾಫಲಹಾರ, ಗೀತಮಂದಾರ ೦—೨—೦, **ಕಲ್ಯಾಣಗೀತಾವಳಿ** ೦—೫—೦, ಈ ಹಾಡಿನ ಪುಸ್ತಕಗಳು ನಮ್ಮಲ್ಲಿ ಯಾವಾಗಲೂ ದೊರೆಯುತ್ತವೆ.

ಮುಖ್ಯವಾಗಿ, ಸ್ನೇಹಿತರೇ, ತಾವು ರಾಜಧಾನಿಗೆ ಬರುವಾಗಲೆಲ್ಲಾ ನಮ್ಮ ಪುಸ್ತಕಾಲಯವನ್ನು ನೋಡಿಯೇ ಹೋಗಬೇಕೆಂದು ಕೇಳಿಕೊಳ್ಳುತ್ತೇವೆ. ನಿಮಗೆ ಪುಸ್ತಕವಲ್ಲದೆ ಬೇರೆ ಯಾವದಾದರೂ ಪದಾರ್ಥಗಳಾಗಲೀ ಅಥವಾ ಸಂಗತಿಗಳಾಗಲೀ ಅಪೇಕ್ಷಿಸುವ ಸಂದರ್ಭದಲ್ಲಿ ನೀವು ನಮಗೆ ಒಂದು ಕಾರ್ಡು ಬರೆದರೆ ತಕ್ಷಣವೇ ಜವಾಬು ಕೊಡುವದಕ್ಕೆ ಪ್ರಯತ್ನಮಾಡುತ್ತೇವೆ.

ವಿಳಾಸ:— ಮ್ಯಾನೇಜರ್,
ಸಿ. ಎಲ್ ಎಸ್. ಬುಕ್ ಡಿಪೊ,
ಮೈಸೂರು.

ಮೈಸೂರು ಸೀಮೆಯಲ್ಲಿ ಪ್ಲೇಗಿನ ಸ್ಥಿತಿ.

೨—೨—1905 ರಿಂದ ೨—೨—1905 ರ ವರೆಗೆ

ಸ್ಥಳ.	ಪ್ಲೇಗ್ ತಗಲಿದ್ದು	ಪ್ಲೇಗ್ ಸತ್ತದ್ದು	ಹೋದವಾರ ಈ ವಾರ ಸಂಖ್ಯೆ
ಬೆಂಗಳೂರು ಪಟ್ಟಣ	1[illegible]	18	49
ಮೈಸೂರು ,,	0	0	7
ಬೆಂಗಳೂರು ಡಿಸ್ಟ್ರಿಕ್ಟು	4	4	62
ಮೈಸೂರು ,,	1	1	46
ಕೋಲಾರ್ ,,	0	0	67
ಕೋಲಾರ್ ಚಿನ್ನದ ಗಣಿಗಳು	8	4	22
ತುಮಕೂರು ಡಿಸ್ಟ್ರಿಕ್ಟು	0	0	57
ಹಾಸನ (ದೊರಗಿನದು)	4	5	6
ಚಿತ್ರದುರ್ಗ ,,	6	4	27
ಕಡೂರ್ ,,	1	1	18
ಶಿವಮೊಗ್ಗ ,,	31	21	5
ಜುಮ್ಲಾ	75	58	334

ಶಾಲಿವಾಹನ ಶಕ ವರುಷಂಗಳು ೧೮೨೬ ನೇ ವಿಶ್ವಾವಸು ಸಂವತ್ಸರದ ಮಾಘ ಬಹುಳ ಚತುರ್ದಶಿ ಗುರುವಾರದಿಂದ ಫಾಲ್ಗುಣ ಬಹುಳ ಪಂಚಮಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ

೧೯೦೫ ನೇ ಇಸವಿ ಫೆಬ್ರುವರಿ.

ತಾ	ವಾರ.	ತಿಥಿ.	ಘಳಿಗೆ	ನಕ್ಷತ್ರ.	ಘಳಿಗೆ.	[illegible]
22	ಗುರು ●	ಚತುರ್ದಶಿ	15-32	ಧ	53 22	1[illegible]
23	ಶುಕ್ರ *	ಅಮಾವಾ	14-50	ಶ	52-2	1[illegible]
24	ಶನಿವಾ †	ಪಾಡ್ಯ	15-42	ಪೂಭಾ	58-2	1[illegible]
25	ರವಿವಾ §	ಬಿದಿಗೆ	17 38	ಉ ಭಾ	60-0	1[illegible]
26	ಚಂದ್ರ .	ತದಿಗೆ	20-58	ಉ ಭಾ	2-18	1[illegible]
27	ಕುಜ ‡	ಚೌತಿ	25-20	ರೆ	7-28	1[illegible]
28	ಬುಧ ,,	ಪಂಚಮಿ	30-12	ಅ	13-30	1[illegible]

● ಸರ್ವತ್ರ ಅಮಾವಾಸ್ಯೆ, ಶ್ರೀರಂಗಪಟ್ಟಣದಲ್ಲಿ ಗಂಗಾಧರಸ್ವಾಮಿರಥ. * ಶತಭಿಷ ನಕ್ಷತ್ರ [illegible] ಪಂಚಗ್ರಹಯೋಗ † ಚಂದ್ರೋದಯ § ತೃತೀಯಾ [illegible] ಮೋಹಂ ಆರಂಭ . ಶೂನ್ಯತಿಥಿ, ಮಾಸಶಿವ. ‡ ಸಂಕಷ್ಟ ;, ಮಹಾವೈಧೃತ

ಪೇಟೇ ಧಾರಣೆ.

ದಿನಸಿ.	ಮೈಸೂರು.	ಬೆಂಗಳೂರು.
ಕಸ್ತೂರಿ ಅಕ್ಕಿ ಪಲ್ಲ ೧ಕ್ಕೆ ರೂ	೧೧-೧೨-೦	೧೪-[illegible]
ಕೆಂಪುಮೋತಿ ಅಕ್ಕಿ ಅಸಲ್	೧೨-೦-೦	೧೪-[illegible]
,, ದುಯ್ಯಂ	೧೧-೮-೦	೧೪-[illegible]
ಜಾಪಾನ್ ಅಕ್ಕಿ	೧೨-೦-೦	[illegible]
ಸಣ್ಣಕ್ಕಿ ಅವಲ್	೧೩-೮-೦	೧೭-[illegible]
,, ದುಯ್ಯಂ	೧೩-೦-೦	೧೬-[illegible]
ತೊಗರೀ ಬೇಳೆ ಪಲ್ಲ ೧ಕ್ಕೆ	೯-೮-೦	೧೦-[illegible]
,, ದುಯ್ಯಂ	೯-೦-೦	೧೦-[illegible]
ಪೈರ್ ರಾಗಿ ಪಲ್ಲ ೧ಕ್ಕೆ	೬-೦-೦-೦	[illegible]
ಕಾರ್ರಾಗಿ	೬-೮-೦	[illegible]
ಜೋಳ	೫-೦-೦	೮-[illegible]
ಹಲಸಂದೆ ಪಲ್ಲ ೧ಕ್ಕೆ	೮-೮-೦	೯-[illegible]
ಬಿಳೀ ಅವರೆ	೮-೦-೦	[illegible]
ಹೆಸರು	೧೦-೦-೦	೧೧-[illegible]
ಉದ್ದು	೧೨-೦-೦	೧೦-[illegible]
ಕಡಲೆ	೧೦-೮-೦	೧೧-[illegible]
ಎಳ್ಳು ಸೆ ೧—೩ ಕ್ಕೆ	೧೮-೮-೦	೧೪-[illegible]
ಹುರುಳಿ	೫-೮-೦	[illegible]
ಹರಳು ೧—೩ ಸೇರಿಗೆ	೧೧-೦-೨-೦	೧೪-[illegible]
ಸೀಗೇಕಾಯಿ ಮಣ ೧ಕ್ಕೆ	೨-೧೨-೦	೨-೦[illegible]
ಮೆಣಸಿನಕಾಯಿ	೩-೮-೦	[illegible]
,, ದುಯ್ಯಂ	೩-೪-೦	[illegible]
ಬೆಲ್ಲ ದೊಡ್ಡ ಅಚ್ಚು	೪-೪-೦	ಮ ೦-[illegible]
ಒಳ್ಳೆಣ್ಣೆ ಮಣ ೧ಕ್ಕೆ	೫-೪-೦	[illegible]
ಹರಳೆಣ್ಣೆ ,,	೪-೧೨-೦	[illegible]
ಕೊತ್ತಂಬರಿ ಪಲ್ಲ ೧ಕ್ಕೆ	೧೦-೦-೦	೯-೧[illegible]
ಉಪ್ಪು ,,	೩-೦-೦	[illegible]
ಹುಣಸೇ ಹಣ್ಣು	೦-೧೨-೦	೦-[illegible]
,, ಹಳೇದು	೦-೮-೦	[illegible]
ತುಪ್ಪ	೧೩-೦-೦	೧೦-[illegible]
ಸೀಮೆಯೆಂಣ್ಣೆ ಪಟ್ಟಿ ೧ಕ್ಕೆ	೫-೪-೦	[illegible]
ತೆಂಗಿನಕಾಯಿ ೧೦೦ ಕ್ಕೆ	೪-೦-೦	[illegible]
ಅಳಲೇಕಾಯಿ ಮಣ ೧ಕ್ಕೆ	೦-೧೨-೦	[illegible]
ಅಂಟ್ವಾಳದ ಕಾಯಿ ಮಣ ೧ಕ್ಕೆ	೦-೧೨-೦	[illegible]
ಚಿನ್ನ (ಪೌನ್) ಕೆಂಪು	೧೫-೪-೦	೦೫-[illegible]
,, ,, ಪಸಿಮೆ	೧೫-೩-೦	೦೫-[illegible]
,, ,, ಗಟ್ಟಿ ತೊಲ ೧ಕ್ಕೆ	೨೩-೧೨-೦	[illegible]
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ	೩೨-೦-೦	೮೦-[illegible]

Printed and Published by the Rev. E. W. Thompson, the Proprietor and Manager, Wesleyan Mission [illegible] Mysore. 22/2/1905.

ವೃತ್ತಾಂತ ಪತ್ರಿಕೆ.

REGISTERED M. 30

ಕ್ರಯ ೧ ದುಡ್ಡು ಕ್ರಯ ೧ ದುಡ್ಡು

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಸಂಪುಟ ೧೯ ಮೈಸೂರು—ಸನ್ ೧೯೦೬ ನೇ ಇಸವಿ ಮಾರ್ಚಿ ತಾರೀಖು ೧ ನೇ ಗುರುವಾರ. ಸಂಚಿಕೆ ೩೯

WANTED WILD ANIMALS.

ಬೇಕಾಗಿದೆ. ಬೇಕಾಗಿದೆ.

5 16

ಎಲ್ಲಾ ಬಗೆಯ ಕಾಡು ಮೃಗಗಳು ಮೈಸೂರು ಜೂ ಸೂಪರಿಂಟೆಂಡೆಂಟ್ ಮಿ॥ ಹ್ಯೂಜಸ್ ಯವರು ಕೊಂಡುಕೊಳ್ಳುವರು.

Apply to—Mr Hughes, Mysore Zoo

"ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ

ಪ್ರಕಟಿಸಲ್ಪಡುವ ಇತರ ಕಾಗದಗಳೆಲ್ಲಾ ನಮ್ಮ ಏಜಂಟ್ರು ಮೂಲಕ ಖರೀದಿಮಾಡುವರಿಗೆ ೧ ಪ್ರತಿಗೆ ೧ ದುಡ್ಡಿನ ಪ್ರಕಾರ

(ಅಡ್ವಾನ್ಸು) .. .. .. ರೂ ೧—೦—೦

ಆಫೀಸಿನಿಂದ ಅಂಚೆಯ ಮೇಲೆ ಒಂದು ವರ್ಷಕ್ಕೆ ೧ ಪ್ರತಿಗೆ ೨೨ ತಿಂಗಳಿಗೆ ಸಾಗಲ್

.. .. ರೂ ೧—೧೨—೦

" " " ೦—೧೫—೦

ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು.

ವಿಳಾಸ —ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು

ಜ್ವರಹರಿ. 29 1



ಇದು ಸಾಧಾರಣ ಜ್ವರ, ಚಳೀಜ್ವರ, ಮೊರೇಜ್ವರ, ಪಿತ್ತಜ್ವರ, ಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮರಾಮತ್ ಸಬ್ ಓವರ್‌ಸಿಯರ್ ಆಫೀಸರ್ ಎಸ್. ಟಿ. ವೆಂಕಟಪತಿ ಅಯ್ಯರ್—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ಒಂದು ಸೀಸೆಯು ತೀರಿಹೋಯಿತು ಇಷ್ಟು ಸ್ವಲ್ಪ ಕಾಲದಲ್ಲೇ ಈ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣಹೊಂದಿರುವರು ಇನ್ನೂ ಜನಗಳು ಕಾಹಿಲೇ ಬೀಳುತ್ತಿರುವ ದರಿಂದ ದಯವಿಟ್ಟು ಇನ್ನೊಂದು ೬೦ ಡೋಸಿನ ಸೀಸೆಯನ್ನು ವಿ. ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದ್ದಾರೆ.

ಕ್ರಯ.—ಸೀಸೆ ೧ ಕ್ಕೆ ೮ ಆಣೆ, ೧ ರೂ , ೧—೮ ರೂ , ೨—೧೨ ಆ., ೧೧ ರೂ ; ಎನ್ನೆರಡು ಸೀಸೆ ತರಿಸಿಕೊಂಡರೆ ಅಂಚೆ ಖರ್ಚು ಮಾಫಿ ಬಿಡಲಾಗುವದು.

••••••••

ಓಮಂಕಘೂರ.

ಈ ಔಷಧವು ಅಜೀರ್ಣ, ರಕ್ತಭೇದಿ, ಸಾಧಾರಣ ಹೊಟ್ಟೆಕಳ ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡು ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಯೆ ನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ ಇದರವು ಜ್ವರಹರಿ ಎಂಬ ಔಷಧದಂತೆಯೇ. ಸೀಸೆಗಳಲ್ಲಿ ದೊರೆಯುವದು.

ಹಿರಿಯ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಕ್ರೆಯು ಕರ್ಪೂರವನ್ನು ನಾನೂ ನನ್ನ ಡಾಕ್ಟರರೂ ಮ್ಯುನಿಸಿಪಲ್ ಡಿಸ್ಪೆನ್ಸರಿಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣ ರೋಗಿಷ್ಟರಿಗೆ ಕೊಡುತ್ತೇವೆ. ಕೊಟ್ಟ ಕೂಡಲೆ ರೋಗವು ಗುಣವಾಗುತ್ತಲಿದೆ. ಇದು ಬಹು ಒಳ್ಳೇ ಔಷಧ ವಾಗಿದೆ

ಈ ಎಲ್ಲಾ ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲಿಯೂ ದೊಡ್ಡ ಶಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯ ಕ್ಕೆ ಸಿಕ್ಕುತ್ತವೆ. ಇದಲ್ಲದೆ ಕೆಳಗಿನ ವಿಳಾಸದಾರ್ರಲ್ಲಿ ವಿಶೇಷ:— ದೊರೆಯುವ ಗ್ರೇಟ್ ಇಂಡಿಯನ್ ಔಷಧಗಳ ಕಂಪನಿ,

ಸೆಂಟ್ ಮೇರೀಸ್ ರೋಡ್ ಮದ್ರಾಸ್.

ಅದ್ಭುತ ಜನಪ್ರಿಯ ಪ್ರದರ್ಶನ ವಾಚು!

ಈ ನಕ್ಷೆಯಲ್ಲಿ ತೋರಿಸಿರುವ ಸಿಲ್ವರ್ ಹಂಟಿಂಗ್ ಕಾಮನ್ ವಾಚು ... ... ಬಹು ಭದ್ರವಾದ ... ಕ್ರಯ ರೂ ೫—೮—೦ ... ಕಾರಣ ... ೫,೦೦೦ ... ಜನಗಳು ... ಕ್ರಯ, ೬—೮—೦.

... ಕ್ರಯ, ೭—೧೦—೦.

... ಕ್ರಯ, ೧—೪—೦.

... ಕ್ರಯ, ೬—೧೦—೦.

ವಿಳಾಸ,—ಇಂಪೀರಿಯಲ್ ವಾಚ್ ಕಂಪೆನಿ,

ಜಾರ್ಜ್ ಟವನ್ ಮದರಾಸ್.

ಹಿಮೋಸಿಯಾ.

ಗಡ್ಡೆ ಪರಿಹಾರ

ತಗಲುತ್ತಲೇ ನೋವು ವಾಸಿಯಾಗುತ್ತೆ

ಈ ಔಷಧಿಯು ಮನೆ, ಅರಮನೆ, ಕಾರ್ಖಾನೆ ಆಸ್ಪತ್ರೆ, ಪೋಲೀಸ್ ಠಾಣಾ, ವಿದ್ಯಾಲಯ, ಕೋರ್ಟು, ಕಛೇರಿ, ಮುಂತಾದ ಸ್ಥಳಗಳಲ್ಲೆಲ್ಲಾ ಇದ್ದೇ ಇರಬೇಕು. ಇದಕ್ಕೆ ಸಮಾನವಾದ ಔಷಧ ಮತ್ತ್ಯಾವದೂ ಇಲ್ಲವೆಂಬುವದು ಲೋಕಪ್ರಸಿದ್ಧವಾಗಿದೆ

ಈ ತೈಲವು ತತ್ಕಾಲದಲ್ಲಿ ಜೀವರಾಶಿಗಳಿಗ ಮಹತ್ತಾಗಿ ಸಿಕ್ಕತಕ್ಕ ಔಷಧ ಇದನ್ನು ಉಪಯೋಗಿಸಿದ ದೊಡ್ಡ ಮನುಷ್ಯರು, ಡಾಕ್ಟರುಗಳು, ಮುಂತಾದವರು ಇದರ ಗುಣವನ್ನು ಹೊಗಳಿ ಸರ್ಟಿಫಿಕೇಟುಗಳನ್ನು ಕೊಟ್ಟಿರುವರು ನೋವು ಕಂಡರೆ ಇದನ್ನು ಒತ್ತಿದ ಕೂಡಲೇ ವಾಸಿಯಾಗುವದು

ಈ ತೈಲವು ಅರೆ ತಲೆನೋವು, ಸೊಂಟನೋವು, ಬಾವು ಗಂಟು ರೋಗ, ಮೂಲವ್ಯಾಧಿ, ಉಬ್ಬಸ, ಹಾವುಗಳು, ನರ ಬೊರಳುವದು, ಉಳುಕು, ಕೀಲುವಾಯು, ಗುಳ್ಳೆಗಳು, ಹಲ್ಲುನೋವು, ಮುಖ ನೋವು, ಊದುಗಳು, ಗಡ್ಡೆಗಳು, ರಣಗಳು, ಸುಳುಕು, ಸೊಳ್ಳೆ ಮತ್ತು ಚೇಳು ಕಚ್ಚಿದದ್ದು ಚಿಪ್ಪಿರುವದು, ಬೆಂಕಿಯಲ್ಲಿ ಸುಟ್ಟುಕೊಂಡದ್ದು, ಕತ್ತಿ ಗಾಯ—ಇವೇ ಮೊದಲಾದ ನಾನಾ ಬಾಧೆಗಳನ್ನು ಪರಿಹರಿಸುತ್ತದೆ ರಾತ್ರಿ ಹಚ್ಚಿಕೊಂಡು ಮಲಗಿದರೆ ಸೊಳ್ಳೆ ಹತ್ತರ ಸೇರುವದಿಲ್ಲ.

ಕ್ರಯ.— ಸಣ್ಣ ಡಬ್ಬಿ ೧ ಕ್ಕೆ ೧ ರೂ., ದೊಡ್ಡದಕ್ಕೆ ರೂ. ೨—೮ ಆ., ಒಂದೇ ಸಲ ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ ಬಿಡುತ್ತಾರೆ ರೂ ೨—೮ ಆಣೆ ಬಾಬ್ತು ಡಬ್ಬಾದಲ್ಲಿ ೧ ರೂ. ಡಬ್ಬಾದಲ್ಲಿರುವದಕ್ಕಿಂತ ೪ ರಷ್ಟು ಹೆಚ್ಚು ಔಷಧವಿರುತ್ತೆ, ರೂ. ೨—೮ ಆ ಈ ಡಬ್ಬವನ್ನು ತರಿಸಿಕೊಳ್ಳುವವರಿಗೆ ಟಪ್ಪಾಲ್ ಖರ್ಚು ಮಾಫಿ ಬಿಡುತ್ತೆ

••••••••

ಹೋಮೋಸಿಯಾ ಯಂಬ್ರೋಕೇಷನ್.

ಈ ತೈಲವು ಹಳೇ ನೋವುಗಳಿಗೆ ಉಪಯೋಗಿಸತಕ್ಕದ್ದು ಚರ್ಮ ಒಡೆದ ಕಡೆ ಇದನ್ನು ಹಚ್ಚಕೂಡದು. ಇದರಲ್ಲಿ ಹೋಮೋಸಿಯದ ಗುಣಗಳು ಬಹು ಹೆಚ್ಚಾಗಿ ಇರುತ್ತವೆ ಅದಕ್ಕಿಂತಲೂ ಇದರಲ್ಲಿ ಇನ್ನೆರಡು ಗುಣಗಳುಳ್ಳ ಹೊಸ ಭಾಗವಿರುತ್ತದೆ. ಇದನ್ನು ಚರ್ಮವು ಬಹು ಬೇಗನೆ ಹೀರಿಕೊಳ್ಳಬಲ್ಲದು ಡಬ್ಬಿಗಳಲ್ಲಿ ತುಂಬಿ ೮ ಆಣೆಗೂ, ೧ ರೂ. ಗೂ ಒಂದರಂತೆ ವಿಕರಿ ಮಾಡಲ್ಪಡುವದು. ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫು ಎಲ್ಲಾ ಶಾಪುಗಳಲ್ಲಿಯೂ ದೊರೆಯುವದು.

ಈ ಔಷಧಗಳ ವಿವರಣೆಯೂ, ಸರ್ಟಿಫಿಕೇಟುಗಳೂ ಉಳ್ಳ ನೋಟೀಸುಗಳನ್ನು ಅಪೇಕ್ಷಿಸಿದರೆ ಕಳುಹಿಸುವೆವು.

ವಿಳಾಸ.—ಹೋಮೋಸಿಯಾ ಕಂಪೆನಿ. ೬೩ ಸೆಕೆಂಡು ಲೇನ್ ಬೀಚ್. ಮದರಾಸ್.

ಇಗೋ ನೋಡಿ—ಮತ್ತೊಂದು ಹೊಸಪುಸ್ತಕವು—ಬಹು ರಸಿಕವಾಗಿದೆ. ಅರೇಬಿಯನ್ ನೈಟ್ಸ್ ಅಥವಾ ಯುವನಯಾಮಿನೀ ವಿನೋದ ಕಥೆಗಳು

37 3

ಎಂಬ ಮಹಾಪ್ರಸಿದ್ಧವಾದ ಪುಸ್ತಕವು ತಿಳಿಗನ್ನಡದಲ್ಲಿ ಈಗತಾನೇ ಪ್ರಕಟಿಸಲ್ಪಟ್ಟಿದೆ. ಡೆಮ್ಮಿ ಅಷ್ಟಪತ್ರ. ನಾನೂರು ಎಪ್ಪತ್ತು ಪುಟಗಳುಳ್ಳದ್ದಾಗಿಯೂ ಆ ಬಾಲವೃದ್ಧರಿಗೆ ಪ್ರೋತ್ಸಾಹಕರವಾಗಿಯೂ, ಮಹಾ ರಸಿಕವಾಗಿಯೂ ರಚಿತವಾಗಿರುವ ಈ ಪುಸ್ತಕದ ಅಭಿರುಚಿಯನ್ನು ವಾಚಕರು ಸ್ವಾನುಭವದಿಂದಲೇ ಗ್ರಹಿಸಿ ತಿಳಿದುಕೊಳ್ಳುವರು. ಭಾಷೆಯು ಬಹು ಸರಳವಾಗಿರುವದು. ಮತ್ತು ಇದನ್ನು ಬರೆಯುವದಕ್ಕೆ ಸುಮಾರು ಎರಡು ವರ್ಷಗಳು ಹಿಡಿದಿವೆ. ಪುಸ್ತಕವನ್ನು ಒಂದಾವರ್ತಿ ಓದಿದಮೇಲೆ ಅದನ್ನು ಪುನಃ ಓದುವಂತೆ ಅದು ಮನಸ್ಸನ್ನು ಆಕರ್ಷಿಸುವದು ಇದರ ಬೆಲೆ ಎರಡು ರೂಪಾಯಿ ಮಾತ್ರವೇ ಹಾಸಲು ಎರಡು ಆಣೆಗಳು. ವಿ. ಪಿ. ಮೂಲಕ ತರಿಸಿಕೊಂಡರೆ ಎರಡು ರೂಪಾಯಿ ಮೂರು ಆಣೆಗಳಾಗುವವು. ಹೀಗಿರುವುದರಿಂದ ಬಡವರೂ ಎಲ್ಲರೂ ಕೊಂಡು ಓದಿ ಪ್ರಯೋಜನವನ್ನು ಪಡೆಯಬೇಕೆಂದು ಇಷ್ಟು ದೊಡ್ಡ ಪುಸ್ತಕವನ್ನು ಇಷ್ಟು ಸುಲಭಕ್ರಯಕ್ಕೆ ಮಾರುತ್ತೇವೆ.

ಪುಸ್ತಕವು ದೊರಕುವ ಸ್ಥಳ

ಸಿ. ಎಲ್. ಎಸ್. ಬುಕ್ ಡಿಪ್ಪೋ,

ಮೈಸೂರು.

ಇಂಡಿಯಾ ವ್ಯವಸಾಯ ಮತ್ತು ಸಹಾಯಕ ಆಫೀಸು.

14-23

[೧೯೦೨ ರಲ್ಲಿ ಸ್ಥಾಪಿತವಾದದ್ದು]

ಈ ಆಫೀಸಿನ ಉದ್ದೇಶವೇನೆಂದರೆ—ಯಾವ ಜಾತಿಯವರೇ ಆಗಲಿ ಮತದವರೇ ಆಗಲಿ ಈ ಆಫೀಸಿನ ಚಂದಾದಾರರಾಗಿ ಅವರ ಭರವಸೆ ಪತ್ರವನ್ನು ಹೊಂದಿದ್ದರೆ ಅವರ ಮರಣಾನಂತರ ಅವರ ಕುಟುಂಬದವರಿಗೆ ಸಹಾಯವು ಕೊಡಲ್ಪಡುವದು.

ಈ ಆಫೀಸಿನ (A) ತರಗತಿಗೆ ಸೇರಿದವರು ಪಡೆಯಬೇಕೆಂದಪೇಕ್ಷಿಸುವ ಪ್ರತಿ ೧೦೦೦ ರೂಪಾಯಿಗಳ ಮೊಬಲಗಿಗಾಗಿ ಮಾಸೆಯಾ ಒಂದೊಂದು ರೂಪಾಯಿಯ ಪ್ರಕಾರ ಒಟ್ಟು ರೂ ೫೬ ನ್ನು ಮಾತ್ರವೇ ಸಲ್ಲಿಸಬೇಕಾಗುವದು.

ಆಫೀಸಿನವರು ಚಂದಾದಾರರಿಂದ ವಸೂಲಾದ ಮೊಬಲಗನ್ನು ಶಾಸ್ತ್ರರೀತಿಯಾಗಿ ನಡೆಸಲ್ಪಡುವ ವ್ಯವಸಾಯಕ್ಕೆ ಹಾಕಿ ಅದರಿಂದ ಬಂದ ಲಾಭದಿಂದಲೇ ಚಂದಾದಾರರ ಸಹಾಯದ್ರವ್ಯವನ್ನು ಕೊಡಲಾಗುವದು ವ್ಯವಸಾಯ ನಿಮಿತ್ತವಾಗಿ ನಾವು W.I.P. ರೈಲ್ವೆ ಲೈನ್ ದಲ್ಲಿರುವ "ಕೊಲ್ಲಂ ಎಸ್ಟೇಟ್" ಎಂಬ ಸರ್ಕಾರಕ್ಕೆ ಸೇರಿದ ಭೂಮಿಯನ್ನು ೯೯ ವರ್ಷಕ್ಕೆ ಸ್ವಂತವಾಗಿ ಪಡೆದಿದ್ದೇವೆ. ಈ ಭೂಮಿಗೆ ಒಂದು ಹೊಳೆಯಿಂದ ಕಾಲುವೆ ಮೂಲಕ ನೀರನ್ನು ತಂದುಕೊಂಡಿರುವದರಿಂದ ಫಸಲು ಕಡಮೆಯಾಗುವದೆಂಬ ಭಯವೇ ಇಲ್ಲ.

ಈ ಆಫೀಸಿನಲ್ಲಿ ಭರವಸಪತ್ರವನ್ನು ಪಡೆದಿರುವವರು ಚಂದಾದಾರರಾಗಿ ಮಾತ್ರ ಇದ್ದಾರೆ. ಆದಾಯ ನಷ್ಟಗಳಿಗೆ ಭಾಗಿಗಳಾದ ಷೇರುದಾರರಾಗಿರುವದಿಲ್ಲ ಆದರೂ ಅವರ ಹಣಕ್ಕೆ ನಮ್ಮ ಭೂಸ್ಥಿತಿಯು ಆಧಾರವಾಗಿರುತ್ತದೆ.

ಚಂದಾ ಮೊಬಲಗನ್ನೆಲ್ಲಾ ಪಾವತಿ ಮಾಡಿ ಭರವಸಪತ್ರವನ್ನು ಪಡೆದಿರುವ ಯಾವ ಚಂದಾದಾರನಿಗಾಗಲಿ ಆಫೀಸಿನಿಂದ ಬರತಕ್ಕ ಲಾಭವು ತೃಪ್ತಿಕರವಾಗಿ ಕಂಡುಬಾರದಿದ್ದರೆ ತಾನು ಸಲ್ಲಿಸಿರುವ ಚಂದಾ ಮೊಬಲಗನ್ನೆಲ್ಲಾ ವಾಪಸು ಪಡೆಯಬಹುದು

ಈ ಆಫೀಸಿಗೆ ಸಬ್ ಏಜಂಟುಗಳು ಬೇಕಾಗಿದೆ. ವಿವರವಾಗಿ ತಿಳಿಯಬೇಕೆನ್ನುವವರು ಅರ್ಧಾಣೆ ಸ್ಟಾಂಪಿಟ್ಟು ಕೆಳಗಿನ ವಿಳಾಸಕ್ಕೆ ಇಂಗ್ಲಿಷಿನಲ್ಲಿ ಬರೆದುಕೊಳ್ಳತಕ್ಕದ್ದು.

ವಿಳಾಸ.—The Manager,

The India Agricultural and Helping Office,

Vengurla Post, Bombay Presidency.

ಪ್ರಿಂಟಿನ ಯಂತ್ರ ಕ್ರಯಕ್ಕೆ ಬಂದಿದೆ.

41-2

ಹಬ್ಬರ್ ಡಿಮ್ಮಿ ಸೈಜು. ಬಹು ಜಾಗ್ರತೆಯಾಗಿ ಪ್ರಿಂಟುಮಾಡತಕ್ಕದ್ದು; ಉರುಳೆಗಳು, ಛೇಸುಗಳು ಚಕ್ರಗಳು ಎಲ್ಲಾ ಸೇರಿ ಕೊಡಲಾಗುತ್ತೆ. ಇವಕ್ಕೆ ಒಂದೆರಡು ಕಡೆ ಸ್ವಲ್ಪ ರಿಪೇರಿ ಆಗಬೇಕಾಗಿರುವುದು. ಅಗ್ಗವಾಗಿ ಕೊಡುತ್ತೇವೆ. ಯಂತ್ರವನ್ನು ಖುದ್ದಾಗಿ ಬಂದು ನೋಡಲೂ ಬಹುದು. ಈ ವಿಳಾಸಕ್ಕೆ ಬರೆದು ಕೇಳಿ:—

ದಿ ಸೂಪರಿಂಟೆಂಡೆಂಟ್, ವೆಸ್ಲಿಯನ್ ಮಿಷನ್ ಪ್ರೆಸ್,

ಮೈಸೂರು.

ದೇವಾಂಗ ವಂಶಸ್ಥರಿಗೆ ಅಗತ್ಯ ಬೇಕಾದದ್ದು.

[redacted] 16-18

ಸ್ವಲ್ಪ ಪ್ರತಿಗಳಿವೆ ಜಾಗ್ರತೆಪಟ್ಟರೆ ಸಿಕ್ಕುತ್ತವೆ ನಂತರ ಖಂಡಿತ ಸಿಕ್ಕುವದಿಲ್ಲ. ಸ್ವಕುಲದವರುಗಳು ಮುದ್ದುಸಂಗ ಮುನಿಸ್ವಾಮಿಗಳು ರಚಿಸಿದ್ದು. ಅರ್ಥಸಹಿತ ದೇವಾಂಗಮತಪ್ರಕಾಶಿಕೆ. ಸಪ್ತಾವತಾರಕ್ಕೆ ಸುಂದರವಾದ ೧೪ ತಸ್ವೀರಿದೆ. ಕ್ರಯ ಸಂಭಾವನೆಮಾಡಿದೆ ೧೪ ತಸ್ವೀರಿರುವ ಪ್ರತಿ ೧ಕ್ಕೆ ವಿ. ಪಿ. ಖರ್ಚು ಸೇರಿ ರೂ. ೨—೮. ತಸ್ವೀರಿಲ್ಲದ ಇದೇ ಪ್ರತಿ ೧ಕ್ಕೆ ವಿ. ಪಿ. ಖರ್ಚು ಸೇರಿ ರೂ. ೧—೮. ವೇದ ಉಪನಿಷತ್ತುಗಳ ಅರ್ಥಸಹಿತ ಮೂಲಸ್ತಂಭ ೧ಕ್ಕೆ ರೂ. ೧—೮. ತಕ್ಷಣ ಮನಿಆರ್ಡರಿಗೂ ವಿ. ಪಿ. ಯೂ ಕಳುಹಿಸುತ್ತೆ. ವಿಳಾಸ— ಮೈಸೂರು ಜವಳಿ ಅಂಗಡಿ ಬ್ರಹ್ಮಶ್ರೀ ಯಜಮಾನ ಪುಟ್ಟಮಲ್ಲಯ್ಯ.

ಪ್ರಶ್ನೋತ್ತರ ರತ್ನಮಾಲಿಕೆ.

41-2

ಶ್ರೀಮಚ್ಛಂಕರ ಭಗವತ್ಪಾದಾಚಾರ್ಯರಿಂದ ಭಕ್ತಿ, ನೀತಿ, ಜ್ಞಾನಪ್ರತಿಪಾದಕವಾಗಿರುವಂತೆ ರಚಿಸಲ್ಪಟ್ಟ ಈ ಗ್ರಂಥವು ಕನ್ನಡ ಪ್ರಶ್ನೋತ್ತರಗಳೊಡನೆ ಪ್ರಕಟಿಸಲ್ಪಟ್ಟಿದೆ. ಬಾಲ್ಯದಿಂದಲೇ ಮಕ್ಕಳನ್ನು ಸುಗುಣಸುಜ್ಞಾನವಂತರನ್ನಾಗಿ ಮಾಡಲಪೇಕ್ಷಿಸುವ ತಂದೆತಾಯಿಗಳೂ ಉಪಾಧ್ಯಾಯರೂ ಗ್ರಂಥರೂಪವಾದ ಈ ರತ್ನಮಾಲಿಕೆಯಿಂದ ಅಲಂಕರಿಸಬೇಕೆಂದು ಪ್ರಾರ್ಥನೆ. ಹಾಸಲು ಸಹಿತ ೨ ಆ. ೬ ಪೈ ೬ ಪ್ರತಿಗಳಿಗೆ ಕಮ್ಮಿ ವಿ. ಪಿ. ಮಾಡುವುದಿಲ್ಲ. ೧೨ಕ್ಕೆ ೧ ಪ್ರತಿ ಇನಾಂ. ನಿಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಿರಿ.

೧. ಸುಬ್ಬನರಸಿಂಹಯ್ಯ, ಶಿವರಾಂಪೇಟೆ ಸ್ಕೂಲ್, ಮೈಸೂರು;
೨. ಎಚ್. ಎ. ನರಸಿಂಹೈಯ್ಯಂಗಾರ್, ಮಿಷನ್‌ಪ್ರೆಸ್, ಮೈಸೂರು.

ರಬ್ಬರ್ ಸ್ಟಾಂಪುಗಳು.

43-2

ನಮ್ಮ ಕಂಪೆನಿಯಲ್ಲಿ ತಯಾರಾಗಲ್ಪಡುವ ಇಂಗ್ಲಿಷ್ ಪೇಟೆಂಟ್ ರಬ್ಬರ್ ಸ್ಟಾಂಪುಗಳು ಬರುವ ಜನರು ಅಪ್ಪರೊಳಗಾಗಿ ದರಖಾಸ್ತು

ಕಳುಹಿಸತಕ್ಕವರಿಗೆ ಅರ್ಧ ಕ್ರಯಕ್ಕೆ ತಯಾರಿಸಿ ಕಳುಹಿಸುತ್ತೇವೆ ಬಾದಾಮಿ, ರೌಂಡು, ಚಚ್ಚೌಕ, ಯಾವ ಆಕಾರವಾದರೂ ಅದರಲ್ಲಿ ಬೇಕಾದ ಅಕ್ಷರಗಳನ್ನು ಹಾಕಿ, ಸುಂದರವಾದ ರಬ್ಬರ್ ಸ್ಟಾಂಪು ೧, ಇಂಕಿ ಸೀಸಾ ೧, ರಬ್ಬರ್ ಸ್ಟಾಂಪು ಇರಿಸುವ ಪೆಟ್ಟಿಗೆ ೧, ಬ್ರಷ್ ೧, ಪ್ಯಾಡ್ ೧, ಇವುಗಳ ಸಹಿತ ಕ್ರಯ ರೂ. ೧—೮—೦; ಪೋಸ್ಟೇಜು ೬ ಆಣೆ.

ವಿಳಾಸ:—ಮ್ಯಾನೇಜರ್, ರಬ್ಬರ್ ಸ್ಟಾಂಪ್ ಮ್ಯಾನುಫ್ಯಾಕ್ಚರಿಂಗ್ ಕಂಪೆನಿ, ಬ್ಲಾಕ್ ಟೌನ್, ಮದ್ರಾಸ್.

ಬೆಂಗಳೂರು ಚಿಕ್ಕಬಳ್ಳಾಪುರ ಲೈಟ್ ರೈಲ್ವೆ ಕಂಪೆನಿ ಲಿಮಿಟೆಡ್ ನಿಯಮಿತ ಮೂಲಧನ.

46-1

ಷೇರು ಒಂದಕ್ಕೆ ೨೫ ರೂಪಾಯಿಗಳು ಬೆಲೆಯುಳ್ಳ ೪೮ ಸಾವಿರ ಷೇರುಗಳಿಂದಾಗುವ ೧೨ ಲಕ್ಷ ರೂಪಾಯಿಗಳು ಈ ಷೇರು ಮೊಬಲಗು ೫೦ ಅಥವಾ ಷೇರು ಒಂದಕ್ಕೆ ಒಂದು ರೂಪಾಯಿನಂತೆ ಅಪ್ಲಿಕೇಷನ್ ಕೊಟ್ಟು ೧೨ ಕಿಸ್ತುಗಳಲ್ಲಿ ಭಾವತಿ ಮಾಡತಕ್ಕದ್ದು. ಈ ರೈಲಿನ ಸರ್ವೆ ಪೂರೈಸಲ್ಪಟ್ಟಿದೆ.

ಶ್ರೀಮನ್ ಮೈಸೂರು ಮಹಾರಾಜರವರ ಸರ್ಕಾರದವರು ಈ ಕಂಪೆನಿಯ ಮೂಲಧನಕ್ಕೆ ಶೇಕಡ ವರುಷ ೧ಕ್ಕೆ ೪ ರೂಪಾಯಿನಂತೆ ಬಡ್ಡಿ ಕೊಡಲು ತಾವು ಜಾಮೀನಾಗಿರಲು ಅನುಮತಿಯನ್ನು ಕಂಪೆನಿಗೆ ಲಿಖಿತ ಮೂಲಕ ತಿಳಿಸಿರುತ್ತಾರೆ.

ಈ ಕಂಪೆನಿಯ ಷೇರುಗಳನ್ನು ಅಪೇಕ್ಷಿಸತಕ್ಕಂಥವರು ಈ ಕೆಳಗೆ ರುಜು ಮಾಡಿರುವವರಿಗೆ ದರಖಾಸ್ತು ಮಾಡಿಕೊಳ್ಳಬೇಕು

ಈ ಕಂಪೆನಿಯ ಷೇರುಗಳನ್ನು ಕಮಿಷನ್ ಸಬ್ ಏಜಂಟರಾಗಿ ವಿಕರಿಮಾಡಲು ಅಪೇಕ್ಷೆಯುಳ್ಳ ಖಾತರಿಯಾದ ಜನರು ಸದರಿ ಯವರಿಗೇನೆ ಬರೆದುಕೊಳ್ಳಬಹುದು.

(ಸೈನ್) ಸಿ. ವಿ. ರಾಮಸ್ವಾಮಿ ಶೆಟ್ಟಿ, ಬಿ. ಎ.,
ಅಡ್ವೊಕೇಟ್ ಮತ್ತು ಬೆಂಗಳೂರು ಚಿಕ್ಕಬಳ್ಳಾಪುರ
ಲೈಟ್ ರೈಲ್ವೆ ಕಂಪೆನಿಯ ಚೀಫ್ ಏಜಂಟ್,
ನಗರ್ತಪೇಟೆ, ಬೆಂಗಳೂರು ಸಿಟಿ.

CHAMBERLAIN'S COUGH REMEDY.

ಚೇಂಬರ್ಲೀನ್ ಯವರು ಕಂಡು ಹಿಡಿದ ಕೆಮ್ಮಿನ ಔಷಧವು.



15 6

ಕೀಳಿಪ ಕೆಮ್ಮು, ಗಂಟಲು ಗೂರಿನಿಸುವುದು, ಹುಡಿಗೆಮ್ಮು, ನಾಯಿಗೆಮ್ಮು, ಎಲ್ಲಾ ತರಹ ಶೀತ, ಗಂಟಲು ಎದೆಯಲ್ಲಿ ಹುಟ್ಟುವ ಸಮಸ್ತ ವ್ಯಾಧಿಗಳು—ಇವಕ್ಕೆಲ್ಲಾ ಈ ಔಷಧವು ಬಹುಪ್ರಯೋಜನವಾಗಿದೆ.

ಆ ಕೆಮ್ಮನ್ನು ಅಲಕ್ಷ್ಯಮಾಡಬೇಡಿ ಅದು ಮಹಾ ಅಪಾಯವನ್ನುಂಟುಮಾಡತಕ್ಕದ್ದಾಗಿದೆ. ಅದರ ನ್ಯುಮೋನಿಯಾ ಎಂಬ ಅತಿ ಕಠಿಣವಾದ ಜ್ವರವು ಹುಟ್ಟುವುದು. ತರುವಾಯ ಉಗುಳಿನಲ್ಲಿ ರಕ್ತಬೀಳು ಹಾಗೆಯೇ ಕ್ಷಯರೋಗಕ್ಕೆ ಆಸ್ಪದವಾಗುವುದು.

ಚೇಂಬರ್ಲೀನರವರು ಕಂಡುಹಿಡಿದಿರುವ ಕೆಮ್ಮಿನ ಔಷಧವು ಗಂಟಲಿನಲ್ಲಿ ಶ್ಲೇಷ್ಮ ಕಟ್ಟುವುದನ್ನೂ ಶ್ಲೇಷ್ಮ ವುದನ್ನೂ ಖಂಡಿತವಾಗಿ ನಿವಾರಣೆಮಾಡುತ್ತದೆ. ಉಸುರು ಹೋಯ್ಯುವುದು ಕಷ್ಟವಾಗಿದ್ದರೆ ಅದನ್ನು ಹರಿಸುತ್ತದೆ. ಅಪಾಯಕರವಾದ ಕೆಮ್ಮಿನ ಶಬ್ದವನ್ನು ನಿಲ್ಲಿಸಿಬಿಡುತ್ತದೆ ಎದೆ ಒಣಗುವಂಥಾ ಕೆಟ್ಟಸ್ಥಿತಿ ಸಂಪೂರ್ಣವಾಗಿ ವಾಸಿಮಾಡಬಲ್ಲದು ಕೆಮ್ಮನ್ನು ಶಮನಮಾಡಿ, ನೀವು ಸುಖವಾಗಿ ನಿದ್ರೆಮಾಡುವಂತೆ ಉಲ್ಲಾಸಕೊಡುತ್ತದೆ.

ಚೇಂಬರ್ಲೀನರವರು ಕಂಡುಹಿಡಿದಿರುವ ಕೆಮ್ಮಿನ ಔಷಧದಲ್ಲಿ ಸ್ವಲ್ಪಮಾತ್ರವಾದರೂ ಅಫೀಮನ್ನು ಸೇರಿ ವುದಿಲ್ಲ.

ಈ ಔಷಧವು ವನಸ್ಪತಿಗಳ ತಯಾರಿ

ಕೆಯಿಂದ ಮಾಡಲ್ಪಟ್ಟಿದೆ ತಯಾರಾಗಿದೆ.

ಎಲ್ಲೆಲ್ಲೂ ವಿಕರಿಯಾಗುವುದು | ಸಣ್ಣ ಶೀಸೆಗೆ ೧ ರೂಪಾಯಿ. | ದೊಡ್ಡ ಶೀಸೆಗೆ ೨ ರೂಪಾಯಿ.

ಪರಿಮಳ ನಶ್ಯಪುಡಿ

50-1

ಪರಿಮಳ ನಶ್ಯದಪುಡಿ ಡಬ್ಬಿ ೧ಕ್ಕೆ	0—9—0
ಟಪಾಲ್ ಖರ್ಚು	0—3—0
ಸಾದಾ ನಶ್ಯದಪುಡಿ ಡಬ್ಬಿ ೧ಕ್ಕೆ	0—6—0
ಟಪಾಲ್ ಖರ್ಚು	0—3—0

ಈ ಪುಡಿಯನ್ನು ಮೇಲಾದ ಹೊಗೆಸೊಪ್ಪಿನಿಂದ ಸುವಾಸನೆಯುಳ್ಳದ್ದಾಗಿ ತಯಾರು ಮಾಡಲ್ಪಟ್ಟಿರುತ್ತೆ. ಇದರ ಸುವಾಸನೆ ಒಂದು ಸೇರು ಸಾಧಾರಣ ಪುಡಿಯಲ್ಲಿ ಸ್ವಲ್ಪವನ್ನು ಹಾಕಿ ಕಲಸಿದರೆ ಪುಡಿಯಲ್ಲಾ ಗಮಗಮಿಸುತ್ತೆ. ಉಪಯೋಗಿಸುವವರಿಗೆ ಸುವಾಸನೆಯನ್ನೂ ಆನಂದವನ್ನೂ ಉಂಟು ಮಾಡುತ್ತೆ.

ತಲೆನೋವು, ಪೀನಸ, ಜಲದೋಷ, ಶಿರೋವ್ಯಾಧಿ ಇವುಗಳನ್ನು ತಪ್ಪದೆ ಪರಿಹರಿಸುತ್ತೆ. ಮಾದರಿಗೆ ೧ ಡಬ್ಬಿಯನ್ನು ತರಿಸಿ ಪರೀಕ್ಷಿಸಿರಿ.

☞ ಪ್ರತಿ ೧ ಡಬ್ಬಿಯಲ್ಲಿ ೯ ತೊಲ ನಶ್ಯದಪುಡಿ ಇರುತ್ತೆ.

ಮಾನೇಜರ್, ಧರ್ಮ ಫಾರ್ಮಸಿ,

69 ಬ್ಯಾಂಕ್ ಬಜಾರು ರೋಡ್, ಸಾಹುಕಾರ್ ಪೇಟೆ, ಮದರಾಸು.

BOOKS! BOOKS!!

MORLEY'S "LIFE OF GLADSTONE."

Published in 15 monthly parts,

(unabridged) 8 annas each.

First four parts ready ! and orders registered for the remaining monthly parts.

47-1

BOOKS FOR THE BAIRNS—

1 ANNA EACH.

Fully illustrated—about 100 vols. in set. Can be bought singly. Complete List on application.

No home should be without these books. The children never tire of them. They are instructive and inculcate a desire for the right kind of reading in after-life.

COMBRIDGE & CO., MADRAS.

೫೫,೦೦೦ ಪವುಂಡ್ ವುಲನ್ ದಾರ ಮಾತ್ರ ಇದೆ.

40—3

೧	ಚೇಟಿಯಿರುವ ವುಲನ್ ಪವುಂಡ್ ೧ಕ್ಕೆ				೧—೧೨—೦
೨	ಪರ್ನ ಸೂಪರ	,,	,,	,,	೧—೧೪—೦
೩	ಸುಪೀರಿಯರ್	,,	,,	,,	೨—೦—೦
೪	ಸೊವರಿನ್	,,	,,	,,	೩—೪—೦

ವುಲನ್ ಟೋಪಿ ಡಜನ್ ೧ಕ್ಕೆ ೩—೮—೦. ಒಂದೇ ದಫೆ ೧೦ ಡಜನ್ ತರಿಸಿಕೊಳ್ಳುವವರಿಗೆ ೬—೧೨—೦

ಹೊಸ ನಮೂನೆ ದೊಡ್ಡ ಸೈಜು ಪೋಸ್ಟು ಕಾರ್ಡುಗಳು.

೧ ಸಿಂಗಲ್ ಕಲರ್ ೧೦೦ ಕ್ಕೆ ೦—೨—೬. ೧೦೦೦ ೧—೪—೦

೨ ಡಬಲ್ ಕಲರ್ ೧೦೦ ಕ್ಕೆ ೦—೩—೧. ೧೦೦೦. ೧—೧೦—೦

☞ ೫೦ ರಿಂದ ೧೦೦ ಪವುಂಡ್ ತರಿಸಿಕೊಳ್ಳುವವರಿಗೆ ಪವುಂಡ್ ೧ಕ್ಕೆ ೨ ಆಣೆ ಕಮಿಷನ್ ಕೊಡಲ್ಪಡುತ್ತೆ. ವಿ. ಪಿ. ಪಿ. ಮೂಲಕ ತರಿಸಿಕೊಳ್ಳುವವರು ಮಾತ್ರ ೧೦೦ ಕ್ಕೆ ೨೫ ರಂತೆ ಮುಂಚಿತವಾಗಿ ಕಳುಹಿಸದ ಹೊರತು ವಿ. ಪಿ. ಮೂಲಕ ಕಳುಹಿಸಲಾರೆವು.

ಯಲ್. ಗೋಪಾಲ್ ಅಂಡ್‌ಕಂಪನಿ,

ಬೆಂಗಳೂರು ಸಿಟಿ.

ಕೊಡಗು ದೇಶದ ಶ್ರೇಷ್ಠವಾದ ಉತ್ಕೃಷ್ಟ ಕಾಫಿಯು

ಹುರುಪು ಇರುವವನು ಅಥವಾ ಆಗತಾನೆ ಹುರಿದದ್ದು

ಬೆಳೆಯುವ ಸ್ಥಳದಿಂದಲೆ ನೆಟ್ಟಗೆ ರವಾನಿಸಲ್ಪಡುವದು.

55-3

ವ್ಯಾಪಾರದ ಹೆಗ್ಗುರುತು

ಕಾಡುಕೋಣದ ತಲೆಯ ಮುದ್ರೆ ಇದೆ.

ಸಂಪೂರ್ಣವಾಗಿ ಯಂತ್ರದಿಂದಲೆ ಸಿದ್ಧಪಡಿಸಿದ್ದು. ಸಗ್ಗು ಉಳ್ಳ ವಿಲಾಸದ ಚೀಟಿ ಸುತ್ತಿಲ್ಲದಿರುವವು ಸ್ವಚ್ಛವಾದವುಗಳಲ್ಲ. ನಮ್ಮದಲ್ಲ. ಏಜಂಟರುಗಳು ಬೇಕು. ಇಂಥವರಿಗೆ ಅಲಾಯಿದ ಬರೆಯುವವರು ದಯವಿಟ್ಟು ಈ ಪತ್ರಿಕೆಯ ಹೆಸರನ್ನು ಸೂಚಿಸಿ.

ವಿಳಾಸ.—ಮ್ಯಾನೇಜರ್, ಮ್ಯಾಥಿಸನ್

ಕಾಫಿ ವರ್ಕ್ಸ್, ಹುಣಸೂ

ಪುದುಚೇರಿ ಬೋಲ್‌ಕಾಲು ಗೊಲಸು ಮತ್ತು ಕಡಗಗಳೂ.

49-1

ಮೇಲಾದ ಜರ್ಮನ್ ಸಿಲ್ವರಿಂದ ಮಾಡಲ್ಪಟ್ಟಿವೆ. ನೋಡ ಬೆಳ್ಳಿಯವುಗಳಂತೆ ತೋರುವದು ಈ ಒಡವೆಗಳ ಸಂದು ಕೀಲು ಬೆಳ್ಳಿ ಪಟ್ಟಿಯಿಂದ ಬೆಸೆದು ಸುಲಭವಾಗಿ ಹಾಕಿ ತೆಗೆಯುವಂತೆ ಮಾಡ ಕೆಲಸಮಾಡಿರುತ್ತದೆ ಬಣ್ಣ ಕೆಡುವುದಿಲ್ಲ. ಎಲ್ಲರೂ ಉಪಯೋಗಿಸಬೇಕೆಂಬ ಉದ್ದೇಶದಿಂದ ಸುಲಭಕ್ರಯಕ್ಕೆ ವಿಕ್ರಯಿಸುತ್ತೇವೆ



ಬೋಲ್‌ಗೊಲಸು.

ನಂ.	೧	ದೊಡ್ಡವರಿಗೆ	೨—೮—
,,	೨	ಚಿಕ್ಕವರಿಗೆ	೨—೪—
,,	೩	ಮಕ್ಕಳಿಗೆ	೨—೦—

ಕಾಲುಕಡಗಗಳು.

ನಂ.	೧	ದೊಡ್ಡವರಿಗೆ	೧—೮—
,,	೨	ಚಿಕ್ಕವರಿಗೆ	೧—೪—
,,	೩	ಮಕ್ಕಳಿಗೆ	೧—೦—

ಒಂದು ಜತೆಯನ್ನ ಕೊಳ್ಳಿ ಕೊಂಡು ಇತರರವನ್ನು ನಮ್ಮ ಪರೀಕ್ಷಿಸಿದರೆ ವ್ಯತ್ಯಾಸವೂ ಅಗ್ಗವೂ ಸಹಾ ತಿಳಿಯಬರುವದು. ಕಂಪನಿಯಿಂದ ಕೊಂಡವುಗಳಿಗೆ ಜವಾಬ್ದಾರಿಯನ್ನು ಮಾಡ ನಮ್ಮ ಹೆಸರನ್ನು ನನ್ನೂಡಿಸದೆ ಬರೆದರೆ ನಮ್ಮ ಕಂಪನಿ ವೆಗಳು ಸೇರಲಾರವು.

ವಿಳಾಸ—ಪಿ. ಕೀ. ನರಸಯ್ಯ ಅಂಡ್ ಕಂಪನಿ, ಸಿಲ್ವರ್ ಮರ್ಚಂಟ್ಸ್ ನಂ|| ೩೦, ಕಾಳಮತ್ತಪಿಳ್ಳೆ ಸ್ಟ್ರೀ ಸಾಹುಕಾರಪೇಟ ಪೋಸ್ಟ್, ಮದ್ರಾಸು.

ವೃತ್ತಾಂತ ಪತ್ರಿಕೆ

೧೯೦೬ ನೇ ಇಸವಿ ಮಾರ್ಚಿ ತಾ॥ ೧ ನೇ ಗುರುವಾರ.

ಸ್ವದೇಶೀ ವಿವರ್ಧನ ಸಂಘವೂ.

ಸ್ವದೇಶೀ ವಿವರ್ಧನಗಳನ್ನು ಪ್ರೋತ್ಸಾಹಪಡಿಸುವುದಕ್ಕಾಗಿ ಕಳೆದ ವಾರ ಮದರಾಸ್ ಪಟ್ಟಣದಲ್ಲಿ ಒಂದು ದೊಡ್ಡ ಸಭೆ ನಡೆಯಿತು. ಈ ವಿವರ್ಧನದಲ್ಲಿ ಎರಡು ಉದ್ದೇಶಗಳಿರುತ್ತವೆ. ಮೊದಲನೆಯದು ರಾಜ್ಯಭಾರಕ್ಕೆ ಸಂಬಂಧಪಟ್ಟದ್ದು. ಈ ಮೂಲಕ ಗವರ್ನಮೆಂಟಿಗೆ ಎಚ್ಚರಿಕೆಕೊಟ್ಟು, ಅವರು ಮಾಡಿರುವ ಸರ್ಕಾರಿ ಬದಲಾವಣೆಯನ್ನು ಅಂದರೆ ಬಂಗಾಳಾ ವಿಭಜನೆಯನ್ನು ಅವರೇ ರದ್ದುಮಾಡುವಂತೆ ಸೂಚನೆ ಕೊಡುವುದು. ಇದಕ್ಕೋಸ್ಕರ ಪರದೇಶಗಳಿಂದ ಬರುವ ಅಂದರೆ ವಿಲಾಯಿತಿಯಿಂದ ಬರುವ ಸರಕುಗಳನ್ನು ಯಾರೂ ಕೊಂಡುಕೊಳ್ಳಕೂಡದೆಂದು ನಿಶ್ಚಯಿಸಿ ಕಟ್ಟುಮಾಡಿಕೊಳ್ಳುವುದು. ಇಂಥಾ ಉದ್ದೇಶವನ್ನು ನಾವು ಪ್ರೋತ್ಸಾಹಪಡಿಸಲಾರೆವು. ಈ ಮೂಲಕ ಈ ಉದ್ದೇಶವು ಎಷ್ಟುಮಾತ್ರಕ್ಕೂ ನೆರವೇರುವುದಿಲ್ಲವೆಂದು ನಾವು ಖಂಡಿತವಾಗಿ ತಿಳಿದಿರುತ್ತೇವೆ. ಹಿಂದುಸ್ಥಾನವನ್ನು ಸಂಪದ್ಯುಕ್ತವಾದದ್ದನ್ನಾಗಿ ಮಾಡಬೇಕೆಂಬ ಸ್ವಭಾವಸಿದ್ಧ ಸ್ವದೇಶವಾತ್ಸಲ್ಯವೇ ಈ ವಿವರ್ಧನದ ಎರಡನೆಯ ಉದ್ದೇಶವು. ಈ ಉದ್ದೇಶ ನೆರವೇರುವುದಕ್ಕೆ ಈ ದೇಶದಲ್ಲಿ ತಯಾರಾಗುವ ವಸ್ತುಗಳನ್ನೇ ಪ್ರಜೆಗಳು ಕೊಂಡು ಉಪಯೋಗಿಸುವಂತೆ ಪ್ರೋತ್ಸಾಹಪಡಿಸುವುದೂ, ಇಲ್ಲಿ ತಯಾರಾಗದೆ ಪರದೇಶಗಳಿಂದ ಬರತಕ್ಕಂಥಾ ಅವಶ್ಯವಾದ ಸರಕುಗಳನ್ನು ಈ ದೇಶದಲ್ಲೇ ತಯಾರಾಗುವಂತೆ ಕಾರಖಾನೆಗಳೇ ಮೊದಲಾದ ಸಲಕರಣೆಗಳನ್ನು ಏರ್ಪಾಡು ಮಾಡಿಕೊಳ್ಳುವುದೂ ಸಾಧಕಗಳಾಗಿರುತ್ತವೆ. ಈ ರೀತಿ ದೇಶೋನ್ನತಿಗೆ ಸಹಕಾರಿಯಾದಂಥಾ ಉದ್ದೇಶದ ವಿಷಯದಲ್ಲಿ ನಾವು ತುಂಬಾ ಸಂತೋಷಪಟ್ಟು ಪ್ರೋತ್ಸಾಹವನ್ನು ಕೊಡುವೆವು.

ಮೊನ್ನೆ ಮದರಾಸಿನಲ್ಲಿ ನಡೆದ ಸಭೆಯು ಈ ಎರಡನೆಯ ಉದ್ದೇಶಕ್ಕೆ ಸಂಬಂಧಪಟ್ಟದ್ದಾಗಿತ್ತು. ಆಗ್ಗೆ ಮಾತನಾಡಿದವರ ಪೈಕಿ ಮೆ॥ ಗೋವಿಂದರಾಘವೈಯ್ಯಂಗಾರ್ರು ಹೇಳಿದಂತೆ "ರಾಜಕೀಯ ಬದಲಾವಣೆಗಳಿಂದಲೇ ಈ ರಾಜ್ಯವನ್ನು ಉಚ್ಛ್ರಾಯಸ್ಥಿತಿಗೆ ತರಲಾಗದೆಂತಲೂ ಬೇರೆ ಬೇರೆ ತರದ ಕಾರ್ಖಾನೆಗಳನ್ನು ಏರ್ಪಡಿಸಿ, ಕಸುಬುಗಳನ್ನು ವಿಶೇಷವಾಗಿ ಹೆಚ್ಚಿಸುವುದರಿಂದ ಅಭಿವೃದ್ಧಿ ಹೊಂದಬೇಕಾಗಿರುವುದೆಂತಲೂ ಈ ದೇಶದ ಪ್ರಜಾವರ್ಗವು ಈಗೀಗ ಕಂಡುಕೊಳ್ಳುತ್ತಿದ್ದಾರೆ."

ಸದ್ಯದಲ್ಲಿ ನೆಯ್ಗೆ ಕಸಬೇ ಬಹಳ ಆವಶ್ಯವಾದದ್ದು. ಇದನ್ನು ವಿಚಾರಕ್ಕೆ ಎಲ್ಲರೂ ಗಮನಕೊಟ್ಟು, ಈ ಕಸಬನ್ನು ವಿಶೇಷವಾಗಿ ಪ್ರೋತ್ಸಾಹಪಡಿಸಬೇಕು. ಈ ದೇಶದ ಜನರುಗಳ ಪೈಕಿ ವ್ಯವಸಾಯವನ್ನು ಬಿಟ್ಟರೆ ನೆಯ್ಗೆಯೇ ಪ್ರಧಾನವಾದದ್ದು. ಹಿಂದುಸ್ಥಾನದಲ್ಲಿ ಈ ಕಸಬಿನವರು ೬ ಲಕ್ಷಕ್ಕಿಂತಲೂ ಹೆಚ್ಚಾಗಿರುವರು. ನಮ್ಮ ಮೈಸೂರು ಸಂಸ್ಥಾನದಲ್ಲೂ ಮಗ್ಗಗಳನ್ನಿಟ್ಟು ಜೀವನ ಮಾಡತಕ್ಕವರ ಸಂಖ್ಯೆ ಅಪಾರವಾಗಿರುತ್ತದೆ. ಪೂರ್ವ ಕಾಲದಲ್ಲಿ ಈ ರಾಷ್ಟ್ರದ ಪ್ರಜೆಗಳು ಇಲ್ಲಿಗೆ ಬೇಕಾದಷ್ಟು ಬಟ್ಟೆಬರೆಗಳನ್ನು ಇಲ್ಲೇ ತಯಾರುಮಾಡಿಕೊಳ್ಳುತ್ತಿದ್ದರಲ್ಲದೆ ಇನ್ನೂ ಇತರ ದೇಶಗಳಿಗೂ ರಫ್ತು ಮಾಡುತ್ತಿದ್ದರು. ಢಾಕಾ ನಗರದ ಮಜಲಿನ್ ಬಟ್ಟೆಯು ಯೂರೋಪಿನಲ್ಲೆಲ್ಲಾ ಬಹಳ ಹೆಸರುವಾಸಿಯನ್ನು ಸಂಪಾದಿಸಿಕೊಂಡಿತ್ತು. ಹಬೆ ಯಂತ್ರಗಳ ಮಗ್ಗಗಳು ರೂಢಿಗೆ ಬಂದದ್ದರಿಂದ ಹಿಂದುಸ್ಥಾನದ ಈ ಕಸಬು ಹಿಂದಕ್ಕೆ ಬಿದ್ದುಹೋಯಿತು. ಈಗಲಾದರೆ ಹಿಂದುಸ್ಥಾನದಲ್ಲಿ ಎಷ್ಟು ಬಟ್ಟೆಗಳು ತಯಾರಾಗುವವೋ ಇನ್ನಷ್ಟು ಬಟ್ಟೆಗಳನ್ನು ಇತರ ಕಡೆಗಳಿಂದ ತರಿಸಿಕೊಳ್ಳುತ್ತಿದಾರೆ. ಪರದೇಶಗಳಿಂದ ಇಲ್ಲಿಗೆ ೨೧೧ ಕೋಟಿ ಗಜಗಳ ಬಟ್ಟೆ ಬರುತ್ತಿದೆ ಎಂತಲೂ ಈ ದೇಶದ ಕಾರಖಾನೆಗಳಲ್ಲಿ ೬೭ ಕೋಟಿ ಗಜಗಳಷ್ಟೂ, ಕೈಮಗ್ಗಗಳಿಂದ ೮೪ ಕೋಟಿ ಗಜಗಳಷ್ಟೂ ಬಟ್ಟೆ ತಯಾರಾಗುತ್ತಿದೆ ಎಂತಲೂ ತಿಳಿದುಬಂದಿದೆ. ಯೂರೋಪಿನ ಬಟ್ಟೆಗಳು ಉತ್ತಮವಾಗಿರೋಣದರಿಂದ ಅವುಗಳ ಕ್ರಯವೂ ಹೆಚ್ಚಾಗಿದೆ. ಪಶ್ಚಿಮ ರಾಜ್ಯಗಳಲ್ಲಿ ಈಗ ಯಾರೂ ಕೈಮಗ್ಗಗಳನ್ನು ಇಟ್ಟುಕೊಂಡಿಲ್ಲ. ಈ ದೇಶದ ಕೈಮಗ್ಗಗಳಲ್ಲಿ ಸ್ವಲ್ಪ ಬದಲಾವಣೆ ಮಾಡಿಕೊಂಡರೆ ಇನ್ನೂ ನಾಜೂಕಾದ ಬಟ್ಟೆಗಳನ್ನು ಹೆಚ್ಚಾಗಿ ತಯಾರುಮಾಡಬಹುದೆಂದು ಯೂರೋಪಿಯನ್ ಕಸಬುದಾರರು ಹೇಳುತ್ತಾರೆ. ಈ ವಿಷಯವನ್ನು ಗ್ರಹಿಸಿ ಕಲ್ಕತ್ತೆಯ ಮೆ॥ ಹಾವೆಲ್ ಯವರೂ, ಅಹಮದ್ ನಗರದ ಮಿಷನ್ ಮೆ॥ ಚರ್ಚಿಲ್ ಯವರೂ, ಬರೋಡಾ ಸಂಸ್ಥಾನದ ಮೆ॥ ರಾವ್‌ಜಿ ಪಟೇಲ್ ಯವರೂ ಈ ಕೈಮಗ್ಗಗಳನ್ನು ಹ್ಯಾಗೆ ಬದಲಾಯಿಸಬಹುದೆಂದು ಸಾಹಸಪಡುತ್ತಿದಾರೆ.

ನೆಯ್ಗೆಯವರೆಲ್ಲಾ ಈ ಕಸಬಿನ ವಿಷಯದಲ್ಲಿ ಆಗಾಗ್ಗೆ ನಡೆಯುವ ಬದಲಾವಣೆಗಳನ್ನು ತಿಳಿದುಕೊಳ್ಳುತ್ತಾ ಬಂದು, ಅನುಕೂಲವಾದ ಒಳ್ಳೇ ಮಗ್ಗಗಳನ್ನು ಕಂಡು ಹಿಡಿದ ಕೂಡಲೇ ಅವನ್ನು ತರಿಸಿಕೊಂಡು, ಬುದ್ಧಿಯನ್ನು ಉಪಯೋಗಿಸಿ ಚುರುಕಾಗಿ ಬೇಗ ಬೇಗನೆ ಕೆಲಸ ಮಾಡುವರೆಂದು ಹಾರೈಸುತ್ತೇವೆ. ಕಸುಬುದಾರರು ಧೈರ್ಯವನ್ನೂ ಬುದ್ಧಿವಂತಿಕೆಯನ್ನೂ ಉಪಯೋಗಿಸಿ ಕಾರ್ಯಸಾಧನೆ ಮಾಡಿದಲ್ಲಿ ಈ ರಾಷ್ಟ್ರದ ಕಸಬುಗಳು ಉತ್ತಮಸ್ಥಿತಿಗೆ ಬಂದು ದೇಶೋನ್ನತಿಗೆ ಕಾರಣವಾಗುವುದು.

ಒಳದೇಶದ ವೃತ್ತಾಂತಗಳು.

ನಿನ್ನೆ ಮೊನ್ನೆಯಿಂದ ರಾಜಧಾನಿಯಲ್ಲಿ ಮೋಡ ಮುಸುಕಿದ್ದು ಪ್ರಾರಂಭವಾಗಿದೆ. ಇಷ್ಟರಲ್ಲೇ ಮಳೆ ಬೀಳುತ್ತದೆಂದು ಕಾಣುತ್ತದೆ.

****

ತಿರುವಾಂಕೂರು ಸಂಸ್ಥಾನದ ದಿವಾನ್ ಮೆ॥ ಮಾಧವರಾಯರು ಕಳೆದ ವಾರ ಕುಟುಂಬ ಸಹಿತ ಬೆಂಗಳೂರಿನಲ್ಲಿ ಬಂದು ಇಳಿದುಕೊಂಡಿದ್ದಾರೆ.

****

ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್‌ರವರು ಬೆಂಗಳೂರಿನಲ್ಲಿ ಪೋಲೀಸಿನವರಿಗೆ ಕ್ವಾರ್ಟರ್ಸ್‌ಗಳನ್ನು ಕಟ್ಟಿಸಿಕೊಡುವುದಕ್ಕೆ ಅಂದಾಜು ಪಟ್ಟಿಯನ್ನು ತಯಾರುಮಾಡಿ ಗವರ್ನಮೆಂಟಿಗೆ ಕಳುಹಿಸಿರುತ್ತಾರೆ.

****

[illegible] ಹುಲ್ಲನ್ನು ತೆಗೆದುಕೊಂಡು ಹೋಗುವ [illegible] ಬಂಡಿಗಳಿಗೆ ಟೋಲ್‌ಗೇಟುಗಳಲ್ಲಿ ಸುಂಕವನ್ನು ವಸೂಲ್ಮಾಡಕೂಡದೆಂದು ಸರ್ಕಾರದವರು ವಿನಾಯಿತಿ ಮಾಡಿದಾರೆ.

****

ಪ್ರಿನ್ಸ್ ಆಫ್ ವೇಲ್ಸ್‌ರವರು ಮೈಸೂರು ಸಂಸ್ಥಾನಕ್ಕೆ ದಯಮಾಡಿದ ವೇಳೆ ಇಲ್ಲಿನ ಪೋಲೀಸ್ ಕಾನ್ಸ್‌ಟೇಬಲ್‌ಗಳು ಬಹಳ ಮೆಹನತ್ತು ಮಾಡಿದರೆಂದು ಇನ್ಸ್‌ಪೆಕ್ಟರ್ ಜನರಲ್‌ರವರು ಅವರಿಗೆಲ್ಲಾ ಮೆಡಲು ಕೊಡುವಂತೆ ತೀರ್ಮಾನಮಾಡಿದಾರೆ.

****

ಕಳೆದ ಶಿವರಾತ್ರಿಯದಿನ ಶ್ರೀಮನ್ ಮಹಾರಾಜರವರು ಬೆಂಗಳೂರಿಂದ ಮೋಟಾರ್ ಗಾಡಿಯಲ್ಲಿ ನಂದನಗೂಡಿಗೆ ದಯಮಾಡುವರೆಂದು ಶ್ರೀ ಅರಮನೆ ಇಲಾಖೆಯವರು ಏರ್ಪಾಡು ಮಾಡಿದ್ದರು ಆದರೆ ಶ್ರೀಮನ್ ಮಹಾರಾಜರವರು ದಯಮಾಡಲಿಲ್ಲವೆಂದು ತಿಳಿದುಬಂದಿದೆ.

****

ಬೆಂಗಳೂರು ಸಿಟಿ ಮಾರ್ಕೆಟ್ಟಿನ ಉತ್ತರ ಮದರಾಸ್ ರೈಲ್ವೆ ಕಂಪನಿಯವರು ಹೊಸದಾಗಿ ಒಂದು ಬುಕಿಂಗ್ ಆಫೀಸನ್ನು ಇಟ್ಟಿರೋಣದರಿಂದ ಪ್ರಯಾಣಿಕರು ಟಿಕೆಟ್ ಕೊಂಡುಕೊಳ್ಳುವುದಕ್ಕೂ ಸಾಮಾನು ಸಾಗಿಸುವುದಕ್ಕೂ ಅನುಕೂಲವಾಯಿತು.

****

ಮೈಸೂರು ಸಂಸ್ಥಾನದ ಕೌನ್ಸಿಲರುಗಳಾದ ಮೆ॥ ಸಿ. ಶ್ರೀನಿವಾಸೈಯ್ಯಂಗಾರರು ಮೆ॥ ರಾವ್ ಬಹದೂರ್ ಸಿ. ಮಾಧವ್ಯಯ್ಯನವರೂ ತಮ್ಮ ಕೆಲಸಕ್ಕೆ ರಾಜೀನಾಮೆ ಕೊಟ್ಟರೆಂತಲೂ, ಶ್ರೀಮನ್ ಮಹಾರಾಜರವರು ಅದನ್ನು ಅಂಗೀಕರಿಸಿಕೊಂಡಿದಾರೆಂತಲೂ ತಿಳಿದುಬಂದಿದೆ.

****

ಮೈಸೂರು ರೆವಿನ್ಯೂ ಸರ್ವೆ ಇಲಾಖೆ ಅ. ಸೂಪರಿಂಟೆಂಡೆಂಟರಾದ ಮೆ॥ ಕೆ. ರಾಮಸ್ವಾಮೈಯ್ಯಂಗಾರ್ರ ಕುಮಾರ ಕೃಷ್ಣಸ್ವಾಮೈಯಂಗಾರ್ರಿಗೆ ವಿಲಾಯಿತಿಯಲ್ಲಿ ವೈದ್ಯವನ್ನು ಕಲಿತು ಬರುವುದಕ್ಕೆ ಗವರ್ನಮೆಂಟಿನವರು ವರುಷಕ್ಕೆ ೩,೬೦೦ ರೂಪಾಯಿ ವೇತನ ಕೊಡುವಂತೆ ಸ್ಯಾಂಕ್ಷನ್ ಮಾಡಿದಾರೆ.

****

ಪ್ರಿನ್ಸ್ ಆಫ್ ವೇಲ್ಸ್‌ರವರು ಮೈಸೂರು ಸಂಸ್ಥಾನಕ್ಕೆ ದಯಮಾಡಿದಾಗ್ಗೆ ದಕ್ಷಿಣಮರಾಟಾ ರೈಲ್ವೆ ನೌಕರರಿಗೆ ಸಾಮಾನುಗಳನ್ನೂ ಪ್ರಯಾಣಿಕರನ್ನೂ ಸಾಗಿಸುವ ಕೆಲಸ ತುಂಬಾ ಇದ್ದ ಕಾರಣ ಅಂಥಾ ನೌಕರರಿಗೆಲ್ಲಾ ಅವರ ಸಂಬಳದಲ್ಲಿ ಶೇಕಡಾ ೨೦ ರಂತೆ ಇನಾಮನ್ನು ಕೊಡಬೇಕೆಂದು ಕಂಪನಿಯವರು ತೀರ್ಮಾನಿಸಿದಾರೆ. ಇದಲ್ಲದೆ ರಾಜವರ್ಗದವರು ಪ್ರಯಾಣ ಮಾಡಿದ ಗಾಡಿಗಳ ಲೋಕೋ ಫೋರ್‌ಮೆನ್, ಡ್ರೈವರ್, ಗಾರ್ಡುಗಳಿಗೆ ಬೆಳ್ಳಿಯ ಮೆಡಲನ್ನು ಕೊಡುವರು.

****

ಮೈಸೂರು ಸಂಸ್ಥಾನದಲ್ಲಿ ಕೆಲವು ವರುಷಗಳಿಂದ ಇಂಪೀರಿಯಲ್ ಸರ್ವಿಸ್ ಸೈನ್ಯಗಳ ಹುದ್ದೇದಾರರಾಗಿದ್ದ ಮೇಜರ್ [illegible] ಯವರು ಹೈದರಾಬಾದಿಗೆ ವರ್ಗವಾಗಿ ಕಳೆದ ವಾರ ಪ್ರಯಾಣವಾದರು. ಆಗ್ಗೆ ಆ ಸೈನ್ಯದ ಹುದ್ದೇದಾರರುಗಳೆಲ್ಲಾ ಅವರಿಗೆ ವಿಶೇಷವಾದ ಮರ್ಯಾದೆಗಳನ್ನು ಮಾಡಿದರು. ಕಾಮಾಂಡಾಂಟ್ ಮೆ॥ ಚಾಮರಾಜೇ ಅರಸಿನವರು ಅವರ ಕಾಲದಲ್ಲಿ ನಡೆದ ಕಾರ್ಯಗಳನ್ನೂ ಸೈನ್ಯದ ಒಳ್ಳೇ ಸ್ಥಿತಿಯನ್ನೂ ಕುರಿತು ಪ್ರಸ್ತಾಪಮಾಡಿ, ಕಡೆಗೆ ಸೈನ್ಯದ ಪರವಾಗಿ ಅವರನ್ನು ವಂದಿಸಿ ಸಾಗಕಳುಹಿಸಿದರು.

****

ಕಳೆದ ಶನಿವಾರ ಅರಮನೆಯಲ್ಲಿ ಎರಡನೇ ಮಹಾರಾಜಕುಮಾರಿಯವರ ಜ್ಯೇಷ್ಠ ರಾಜಕುಮಾರಿಯ ವರ್ಧಂತಿ ಆಯಿತು. ಅಕ್ಷತೆ ಮಹೋತ್ಸವವು ಬೆಳಿಗ್ಗೆ ನಡೆಯಿತು. ಸಾಯಂಕಾಲ ರಾಜಕುಮಾರಿಯು ಪಲ್ಲಕ್ಕಿಯಲ್ಲಿ ಕುಳಿತು ಸಕಲ ಮರ್ಯಾದೆಯೊಡನೆ ಕೋಟೆಯ ನಾಲ್ಕು ಬೀದಿಗಳಲ್ಲೂ ಮೆರವಣಿಗೆ ಬಂದು, ದೇವಸ್ಥಾನಗಳಿಗೆ ಹೋಗಿ ತೀರ್ಥಪ್ರಸಾದವನ್ನು ಸ್ವೀಕರಿಸಿ, ಅರಮನೆಗೆ ಚಿತ್ತೈಸಿದರು. ಈ ಉತ್ಸವವನ್ನು ನೋಡುವುದಕ್ಕೆ ಸಾವಿರಾರು ಜನರು ಕೋಟೆಯ ನಾಲ್ಕು ಬೀದಿಗಳಲ್ಲೂ ತುಂಬಿಕೊಂಡಿದ್ದರು.

****

ರಾಜಧಾನಿಯ ಶಿವರಾಮಪೇಟೆಯಲ್ಲಿರುವ ಮುನಸಿಪಲ್ [illegible] ಅಂಗಡಿಯ ಇಬ್ಬರು ಬ್ರಾಹ್ಮಣರು [illegible] ವರುಷದ [illegible] ಕಳೆದ ವಾರ ಮೊಕದ್ದಮೆ ಆಯಿತು. ಸಾವಿರಾರು [illegible] ಆ ಇಬ್ಬರು ಬ್ರಾಹ್ಮಣರ ಮೇಲೆ [illegible] ಎಂದರು. ಸಿಟಿ ಮ್ಯಾಜಿಸ್ಟ್ರೇಟರು ಪ್ರತಿ ಒಬ್ಬನಿಗೂ ಒಂದೂವರೆ ತಿಂಗಳ ಕಠಿಣ ಶಿಕ್ಷೆಯನ್ನೂ ೨೫ ರೂಪಾಯಿ ಜುಲ್ಮಾನೆಯನ್ನೂ ಹಾಕಿ, ಜುಲ್ಮಾನೆ ಹಣವನ್ನು [illegible] ಪರಿಹಾರಕ್ಕಾಗಿ ಕೊಡಬೇಕೆಂದು ತೀರ್ಮಾನಮಾಡಿದಾರೆ.

****

ಬೆಂಗಳೂರಿಂದ ಚಿಕ್ಕಬಳ್ಳಾಪುರಕ್ಕೆ ರೈಲ್ ಹಾಕುವುದಕ್ಕೆ ಮೊದಲು ೩೦ ಲಕ್ಷ ರೂಪಾಯಿ ಮೂಲಧನ ಬೇಕಾದೀತೆಂದು ಅಂದಾಜು ಕಟ್ಟಿದ್ದರು. ಈಗ ಅಷ್ಟು ಸ್ವಲ್ಪ [illegible] ಸಾಲದೆಂದು ಕಂಪನಿಯವರು ಮೂಲಧನವನ್ನು [illegible] ಲಕ್ಷ ರೂಪಾಯಿಗೆ ಹೆಚ್ಚಿಸಿ, ಬೇಕಾದವರು ಷೇರುಗಳನ್ನು ಕೊಂಡುಕೊಳ್ಳಬಹುದೆಂದು ಪ್ರಕಟಿಸಿರುತ್ತಾರೆ. ಗವರ್ನಮೆಂಟಿನವರು ಈ ಹಣಕ್ಕೆ ಶೇಕಡಾ ವರುಷಕ್ಕೆ ೪ ರೂಪಾಯಿ ಬಡ್ಡಿ ಕೊಡಿಸುವದಾಗಿ ವಾಗ್ದಾನಮಾಡಿರುವರು. ಇಂಥಾ ಸ್ವದೇಶೀ ವಿವರ್ಧನವನ್ನು ಪ್ರಜೆಗಳು ಪ್ರೋತ್ಸಾಹಪಡಿಸಿ, ಬಲಾವಸ್ಥೆಗೆ ಬರುವಂತೆ ಸಹಾಯಮಾಡುವರೆಂದು ಹಾರೈಸುತ್ತೇವೆ.

****

ಕಳೆದ ಶಿವರಾತ್ರಿಯ ದಿನ ಮೈಸೂರಿಗೂ ಶ್ರೀರಂಗಪಟ್ಟಣಕ್ಕೂ ನಡುವೆ ಗಾಡಿ ರಸ್ತೆಯಲ್ಲಿ ಮೂರು ಕಡೆ ದರೋಡೆಗಳು ನಡೆದವು. ಎರಡು ಮೂರು ಜನರಿಗೆ ಪೆಟ್ಟುಗಳು ಬಿದ್ದವು. ಕಳ್ಳರು ಗಾಡಿಗಳಲ್ಲಿದ್ದ ಸಾಮಾನ್ ಮುಂತಾದ್ದನ್ನು ಅಪಹರಿಸಿದ್ದಾರೆಂತಲೂ ಪೋಲೀಸಿನವರು ಕೆಲವರನ್ನು ಹಿಡಿದು ತನಿಖೆ ಮಾಡುತ್ತಿದಾರೆಂತಲೂ ತಿಳಿಯುತ್ತೇವೆ. ಪೂರ್ವದಲ್ಲಿ ಇಂಥಾ ಅಪಾಯಗಳು ಸಂಭವಿಸದಂತೆ ಪ್ರತಿ ರಾತ್ರಿಯೂ ಸಿಲ್ಲೇದಾರ್ ಸವಾರರು ಈ ರಸ್ತೆಯಲ್ಲಿ [illegible] ಹೋಗಿಬರುವ ಏರ್ಪಾಡು ಇತ್ತು. ಈಚೆಗೆ ಇದು ತಪ್ಪಿದ್ದರಿಂದ ಇಂಥಾ ಕಂಟಕಗಳಿಗೆ ಅವಕಾಶವಾಗುವುದು. ಸರ್ಕಾರದವರು ಆ ಪದ್ಧತಿಯನ್ನು ಪುನಃ ರೂಢಿಗೆ ತಂದರೆ ಬಹಳ ಸಹಾಯವಾಗುತ್ತೆ.

ಮೈಸೂರು ಗೆಜೆಟ್ ಸಂಗ್ರಹ.

ಮೈಸೂರು ಸಿಟಿ ಇಂಪ್ರೂವ್‌ಮೆಂಟ್ ಡಿವಿಜನ್ ಎಕ್ಸಿಕ್ಯುಟಿವ್ ಇಂಜನಿಯರ್ ಮೆ॥ ಜೆ ಇ ಎ ಡಿಕ್ರೂಸ್ ಯವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಮೂರು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಅರಮನೆ ಡಿವಿಜನ್ ಅ॥ ಇಂಜನಿಯರ್ ಮೆ॥ ಟಿ ಎಸ್. ಶೇಷೈಯ್ಯಂಗಾರು ಮತ್ತೊಂದು ಹುಕುಂ ಕೊಡಲ್ಪಡುವ ತನಕ ಸಿಟಿ ಇಂಪ್ರೂವ್‌ಮೆಂಟ್ ಡಿವಿಜನಲ್ಲಿ ಎಕ್ಸಿಕ್ಯುಟಿವ್ ಇಂಜನಿಯರಾಗಿ ಕೆಲಸ ನೋಡತಕ್ಕದ್ದು.

ಮೈಸೂರು ಅಡಿಷನಲ್ ಮುನ್ಸಿಫ್ ಮೆ॥ ಬಿ. ಎ ಶಿವಪ್ರಕಾಶಂ ಪಿಳ್ಳೆಯವರಿಗೆ ಫೆಬ್ರುವರಿ ೮ ರಿಂದ ಆರು ತಿಂಗಳ ಕಾಯಿಲೆ ರಜಾ ಕೊಟ್ಟಿದೆ.

ಅಡ್ವೊಕೇಟ್ ಮೆ॥ ಎಸ್ ವೆಂಕಟಕೃಷ್ಣಯ್ಯನವರು ಮತ್ತೊಂದು ಹುಕುಂ ಕೊಡಲ್ಪಡುವ ತನಕ ಮೈಸೂರು ಅಡಿಷನಲ್ ಮುನ್ಸಿಫರಾಗಿರತಕ್ಕದ್ದು.

ಫಾರೆಸ್ಟ್ ಸಬ್ ಅ॥ ಕನ್ಸರ್ವೇಟರ್ ಮೆ॥ ಎಂ. ಶ್ರೀನಿವಾಸರಾಯರಿಗೆ ಒಂದು ತಿಂಗಳು [illegible] ದಿನಗಳ ಪ್ರಿವಿಲೆಜ್ ರಜವನ್ನೂ ಒಂದು ವರುಷ, ಒಂದು ತಿಂಗಳು, ಹನ್ನೆರಡು ದಿನಗಳ ಕಾಯಿಲೆ ರಜವನ್ನೂ ಕೊಟ್ಟಿದೆ.

೧ನೇ ಕ್ಲಾಸ್ ಡೆಪ್ಯುಟಿ ಕಮಿಷನರ್ ಮೆ॥ ಎಂ. ನಾರಾಯಣರಾಯರು ಕಾಯಿಲೆ ರಜದ ಮೇಲಿರುವುದರಿಂದ ಮುಂದೆ ಕೆಳಗಿನ ಬಡ್ತಿಗಳು ಹುಕುಂ ಮಾಡಲ್ಪಟ್ಟಿದೆ —

ಡೆಪ್ಯುಟಿ ಕಮಿಷನರ್ ಮೆ॥ ಎಂ ಎಸ್. ನಾರಾಯಣರಾಯರು, ೧ನೇ ಕ್ಲಾಸಿಗೆ; ಡೆಪ್ಯುಟಿ ಕಮಿಷನರ್ ಮೆ॥ ಎಚ್. ರಾಮಾನುಜೈಯ್ಯಂಗಾರ್ರು, ೨ನೇ ಕ್ಲಾಸಿಗೆ.

ಕೋಲಾರ್ ತಾಲ್ಲೂಕ್ ಅಮಲ್ದಾರ್ ಮೆ॥ ಎ. ಮೃತ್ಯುಂಜಯ ಐಯ್ಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಶಿರಸ್ತೆದಾರ್ ಎಂ. ಲಕ್ಷ್ಮೀನಾರಾಯಣಪ್ಪನವರು ಕೋಲಾರ್ ತಾಲ್ಲೂಕಿನ ಚಾಲ್ತಿ ಕೆಲಸಗಳ ಛಾರ್ಜನ್ನು ವಹಿಸತಕ್ಕದ್ದು.

ವೃತ್ತಾಂತ ಪತ್ರಿಕೆ

೧೯೦೬ ನೇ ಇಸವಿ ಮಾರ್ಚಿ ತಾ|| ೧ ನೇ ಗುರುವಾರ.

ಸ್ವದೇಶೀ ಪ್ರದರ್ಶನವೂ ನೆಯ್ಗೆಯೂ.

ಸ್ವದೇಶೀ ಪದಾರ್ಥಗಳನ್ನು ಪ್ರೋತ್ಸಾಹಪಡಿಸುವುದಕ್ಕಾಗಿ ಕಳೆದ ವಾರ ಮದರಾಸ್ ಪಟ್ಟಣದಲ್ಲಿ ಒಂದು ದೊಡ್ಡ ಸಭೆ ನಡೆಯಿತು. ಈ ಪ್ರದರ್ಶನದಲ್ಲಿ ಎರಡು ಉದ್ದೇಶಗಳಿರುತ್ತವೆ. ಮೊದಲನೆಯದು ರಾಜ್ಯಭಾರಕ್ಕೆ ಸಂಬಂಧಪಟ್ಟದ್ದು. ಈ ಮೂಲಕ ಗವರ್ನಮೆಂಟಿಗೆ ಎಚ್ಚರಿಕೊಟ್ಟು, ಅವರು ಮಾಡಿರುವ ಸರ್ಕಾರಿ ಬದಲಾವಣೆಗಳನ್ನು ಅಂದರೆ ಬಂಗಾಳಾ ವಿಭಜನೆಯನ್ನು ಅವರೇ ರದ್ದುಮಾಡುವಂತೆ ಸೂಚನೆ ಕೊಡುವುದು. ಇದಕ್ಕೋಸ್ಕರ ಪರದೇಶಗಳಿಂದ ಬರುವ ಅಂದರೆ ವಿಲಾಯತಿಯಿಂದ ಬರುವ ಸರಕುಗಳನ್ನು ಯಾರೂ ಕೊಂಡುಕೊಳ್ಳಕೂಡದೆಂದು ಬಹಿಷ್ಕರಿಸಿ ಕಟ್ಟುಮಾಡಿಕೊಳ್ಳುವುದು. ಇಂಥಾ ಉದ್ದೇಶವನ್ನು ನಾವು ಪ್ರೋತ್ಸಾಹಪಡಿಸಲಾರೆವು. ಈ ಮೂಲಕ ಈ ಉದ್ದೇಶವು ಎಷ್ಟುಮಾತ್ರಕ್ಕೂ ನೆರವೇರುವುದಿಲ್ಲವೆಂದು ನಾವು ಖಂಡಿತವಾಗಿ ತಿಳಿದಿರುತ್ತೇವೆ. ಹಿಂದುಸ್ಥಾನವನ್ನು ಸಮೃದ್ಧವಾದದ್ದನ್ನಾಗಿ ಮಾಡಬೇಕೆಂಬ ಸ್ವಾಭಾವಿಕವಾದ ಸ್ವದೇಶವಾತ್ಸಲ್ಯವೇ ಈ ಪ್ರದರ್ಶನದ ಎರಡನೆಯ ಉದ್ದೇಶವು. ಈ ಉದ್ದೇಶ ನೆರವೇರುವುದಕ್ಕೆ ಈ ದೇಶದಲ್ಲಿ ತಯಾರಾಗುವ ವಸ್ತುಗಳನ್ನೇ ಪ್ರಜೆಗಳು ಕೊಂಡು ಉಪಯೋಗಿಸುವಂತೆ ಪ್ರೋತ್ಸಾಹಪಡಿಸುವುದೂ, ಇಲ್ಲಿ ತಯಾರಾಗದೆ ಪರದೇಶಗಳಿಂದ ಬರತಕ್ಕಂಥಾ ಅವಶ್ಯವಾದ ಸರಕುಗಳನ್ನು ಈ ದೇಶದಲ್ಲೇ ತಯಾರುಮಾಡುವಂತೆ ಕಾರ್ಖಾನೆಗಳೇ ಮೊದಲಾದ ಸಲಕರಣೆಗಳನ್ನು ಏರ್ಪಾಡು ಮಾಡಿಕೊಳ್ಳುವುದೂ ಸಾಧಕಗಳಾಗಿರುತ್ತವೆ. ಈ ರೀತಿ ದೇಶೋನ್ನತಿಗೆ ಸಹಕಾರಿಯಾದಂಥಾ ಉದ್ದೇಶದ ವಿಷಯದಲ್ಲಿ ನಾವು ತುಂಬಾ ಸಂತೋಷಪಟ್ಟು ಪ್ರೋತ್ಸಾಹಪಡಿಸುವೆವು.

ಮೊನ್ನೆ ಮದರಾಸಿನಲ್ಲಿ ನಡೆದ ಸಭೆಯು ಈ ಎರಡನೆಯ ಉದ್ದೇಶಕ್ಕೆ ಸಂಬಂಧಪಟ್ಟದ್ದಾಗಿತ್ತು. ಆಗ್ಗೆ ಮಾತನಾಡಿದವರ ಪೈಕಿ ಮ|| ಗೋವಿಂದರಾಘವಯ್ಯಂಗಾರ್ಯರು ಹೇಳಿದಂತೆ "ರಾಜಕೀಯ ಬದಲಾವಣೆಗಳಿಂದಲೇ ಈ ರಾಷ್ಟ್ರವನ್ನು ಉಚ್ಛ್ರಾಯಸ್ಥಿತಿಗೆ ತರಲಾಗದೆಂತಲೂ ಬೇರೆ ಬೇರೆ ತರದ ಕಾರ್ಖಾನೆಗಳನ್ನು ಏರ್ಪಡಿಸಿ, ಕಸುಬುಗಳನ್ನು ವಿಶೇಷವಾಗಿ ಹೆಚ್ಚಿಸುವುದರಿಂದ ಅಭಿವೃದ್ಧಿ ಹೊಂದಬೇಕಾಗಿರುವುದೆಂತಲೂ ಈ ದೇಶದ ಪ್ರಜಾವತ್ಸಲರು ಈಗೀಗ ಕಂಡುಕೊಳ್ಳುತ್ತಿದ್ದಾರೆ."

ಸದ್ಯದಲ್ಲಿ ನೆಯ್ಗೆ ಕಸಬೇ ಬಹಳ ಅವಶ್ಯವಾದದ್ದು. ಇದನ್ನು ವಿಚಾರಕ್ಕೆ ಎಲ್ಲರೂ ಗಮನಕೊಟ್ಟು, ಈ ಕಸಬನ್ನು ವಿಶೇಷವಾಗಿ ಪ್ರೋತ್ಸಾಹಪಡಿಸಬೇಕು. ಈ ದೇಶದ ಜನಗಳ ಪೈಕಿ ವ್ಯವಸಾಯವನ್ನು ಬಿಟ್ಟರೆ ನೆಯ್ಗೆಯೇ ಪ್ರಧಾನವಾದದ್ದು. ಹಿಂದುಸ್ಥಾನದಲ್ಲಿ ಈ ಕಸಬಿನವರು ೬ ಲಕ್ಷಕ್ಕಿಂತಲೂ ಹೆಚ್ಚಾಗಿರುವರು. ನಮ್ಮ ಮೈಸೂರು ಸಂಸ್ಥಾನದಲ್ಲೂ ಮಗ್ಗಗಳನ್ನಿಟ್ಟು ಜೀವನ ಮಾಡತಕ್ಕವರ ಸಂಖ್ಯೆ ಅಪಾರವಾಗಿರುತ್ತದೆ. ಪೂರ್ವ ಕಾಲದಲ್ಲಿ ಈ ರಾಷ್ಟ್ರದ ಪ್ರಜೆಗಳು ಇಲ್ಲಿಗೆ ಬೇಕಾದಷ್ಟು ಬಟ್ಟೆಗಳನ್ನು ಇಲ್ಲೇ ತಯಾರುಮಾಡಿಕೊಳ್ಳುತ್ತಿದ್ದರಲ್ಲದೆ ಇನ್ನೂ ಇತರ ದೇಶಗಳಿಗೂ ರಫ್ತು ಮಾಡುತ್ತಿದ್ದರು. ಢಾಕಾನಗರದ ಮಸ್ಲಿನ್ ಬಟ್ಟೆಯು ಯೂರೋಪಿನಲ್ಲೆಲ್ಲಾ ಒಳ್ಳೆ ಹೆಸರುವಾಸಿಯನ್ನು ಸಂಪಾದಿಸಿಕೊಂಡಿತ್ತು. ಹಬೆ ಯಂತ್ರಗಳ ಮಗ್ಗಗಳು ರೂಢಿಗೆ ಬಂದದ್ದರಿಂದ ಹಿಂದುಸ್ಥಾನದ ಈ ಕಸಬು ಹಿಂದಕ್ಕೆ ಬಿದ್ದುಹೋಯಿತು. ಈಗಲಾದರೆ ಹಿಂದುಸ್ಥಾನದಲ್ಲಿ ಎಷ್ಟು ಬಟ್ಟೆಗಳು ತಯಾರಾಗುವವೋ ಇನ್ನಷ್ಟು ಬಟ್ಟೆಗಳನ್ನು ಇತರ ಕಡೆಗಳಿಂದ ತರಿಸುತ್ತಾರೆ. ಪರದೇಶಗಳಿಂದ ಇಲ್ಲಿಗೆ ೨೧೧ ಕೋಟಿ ಗಜಗಳ ಬಟ್ಟೆ ಬರುತ್ತದೆ ಎಂತಲೂ ಈ ದೇಶದ ಕಾರ್ಖಾನೆಗಳಲ್ಲಿ ೬೬ ಕೋಟಿ ಗಜಗಳಷ್ಟೂ, ಕೈಮಗ್ಗಗಳಿಂದ ೯೩ ಕೋಟಿ ಗಜಗಳಷ್ಟೂ ಬಟ್ಟೆ ತಯಾರಾಗುತ್ತಿದೆ ಎಂತಲೂ ತಿಳಿದುಬಂದಿದೆ. ಯೂರೋಪಿನ ಬಟ್ಟೆಗಳು ಉತ್ಕೃಷ್ಟವಾಗಿರೋಣದರಿಂದ ಅವುಗಳ ಕ್ರಯವೂ ಹೆಚ್ಚಾಗಿದೆ. ಪಶ್ಚಿಮ ರಾಜ್ಯಗಳಲ್ಲಿ ಈಗ ಯಾರೂ ಕೈಮಗ್ಗಗಳನ್ನು ಇಟ್ಟುಕೊಂಡಿಲ್ಲ. ಈ ದೇಶದ ಕೈಮಗ್ಗಗಳಲ್ಲಿ ಸ್ವಲ್ಪ ಬದಲಾವಣೆ ಮಾಡಿಕೊಂಡರೆ ಇನ್ನೂ ನಾಜೂಕಾದ ಬಟ್ಟೆಗಳನ್ನು ಹೆಚ್ಚಾಗಿ ತಯಾರುಮಾಡಬಹುದೆಂದು ಯೂರೋಪ್ಪಿಯನ್ ಕಸಬುದಾರರು ಹೇಳುತ್ತಾರೆ. ಈ ವಿಷಯವನ್ನು ಗ್ರಹಿಸಿ ಕಲ್ಕತ್ತೆಯ ಮ|| ಹಾವೆಲ್ ಯವರೂ, ಅಹಮದ್ ನಗರದ ಮಿಸ್ಟರ್ ಮ|| ಚರ್ಚಿಲ್ ಯವರೂ, ಬರೋಡಾ ಸಂಸ್ಥಾನದ ಮ|| ರಾವ್‌ಜಿ ಪಟೇಲ್ ಯವರೂ ಈ ಕೈಮಗ್ಗಗಳನ್ನು ಹ್ಯಾಗೆ ಬದಲಾಯಿಸಬಹುದೆಂದು ಸಾಹಸಪಡುತ್ತಿದ್ದಾರೆ.

ನೆಯ್ಗೆಯವರೆಲ್ಲಾ ಈ ಕಸಬಿನ ವಿಷಯದಲ್ಲಿ ಆಗಾಗ್ಗೆ ನಡೆಯುವ ಬದಲಾವಣೆಗಳನ್ನು ತಿಳಿದುಕೊಳ್ಳುತ್ತಾ ಬಂದು, ಅನುಕೂಲವಾದ ಒಳ್ಳೇ ಮಗ್ಗಗಳನ್ನು ಕಂಡುಹಿಡಿದ ಕೂಡಲೇ ಅವನ್ನು ತರಿಸಿಕೊಂಡು, ಬುದ್ಧಿಯನ್ನು ಪ್ರಯೋಗಿಸಿ ಚುರುಕಾಗಿ ಬೇಗ ಬೇಗನೆ ಕೆಲಸ ಮಾಡುವರೆಂದು ಹಾರೈಸುತ್ತೇವೆ. ಕಸಬುದಾರರು ಧೈರ್ಯವನ್ನೂ ಬುದ್ಧಿವಂತಿಕೆಯನ್ನೂ ಉಪಯೋಗಿಸಿ ಕಾರ್ಯಸಾಧನೆ ಮಾಡಿದಲ್ಲಿ ಈ ರಾಷ್ಟ್ರದ ಕಸಬುಗಳು ಉತ್ತಮಸ್ಥಿತಿಗೆ ಬಂದು ದೇಶೋನ್ನತಿಗೆ ಕಾರಣವಾಗುವುದು.

ಒಳದೇಶದ ವೃತ್ತಾಂತಗಳು.

ನೆನ್ನೆ ಮೊನ್ನೆಯಿಂದ ರಾಜಧಾನಿಯಲ್ಲಿ ಮೋಡವಾಗುತ್ತಿರುವುದರಿಂದ ಪ್ರಾರಂಭದಲ್ಲಿಯೇ ಇಷ್ಟರಲ್ಲೇ ಮಳೆ ಬೀಳುವುದೆಂದು ಕಾಣುತ್ತದೆ.

❖❖❖❖

ತಿರುವಾಂಕೂರು ಸಂಸ್ಥಾನದ ದಿವಾನ್ ಮ|| ಮಾಧವರಾಯರವರು ಕಳೆದ ವಾರ ಕುಟುಂಬ ಸಹಿತ ಬೆಂಗಳೂರಿನಲ್ಲಿ ಬಂದು ಇಳಿದುಕೊಂಡಿರುತ್ತಾರೆ.

❖❖❖❖

ಪೊಲೀಸ್ ಇನ್ಸ್‌ಪೆಕ್ಟರ್ ಜನರಲ್‌ರವರು ಬೆಂಗಳೂರಿನಲ್ಲಿ ಪೊಲೀಸಿನವರಿಗೆ ಲೈನ್‌ಮನೆಗಳನ್ನು ಕಟ್ಟಿಸಿಕೊಡುವುದಕ್ಕೆ ಅಂದಾಜು ಪಟ್ಟಿಯನ್ನು ತಯಾರುಮಾಡಿ ಗವರ್ನಮೆಂಟಿಗೆ ಕಳುಹಿಸಿರುತ್ತಾರೆ.

❖❖❖❖

ಮೈಸೂರಿಗೆ ಬರುವ ಮಾರ್ಗದಲ್ಲಿ ಟಪ್ಪಾಲನ್ನು ತೆಗೆದುಕೊಂಡು ಹೋಗುವ ಮೂರು ತರದ ಮೆಯಿಲ್ ಟಾಂಗಾಗಳ ಕಂಟ್ರಾಕ್ಟುದಾರರಿಗೆ ಟೋಲ್‌ಗೇಟುಗಳಲ್ಲಿ ಸುಂಕವನ್ನು ವಸೂಲ್‌ಮಾಡಕೂಡದೆಂದು ಸರ್ಕಾರದವರು ವಿನಾಯಿತಿ ಮಾಡಿದಾರೆ.

❖❖❖❖

ಪ್ರಿನ್ಸ್ ಆಫ್ ವೇಲ್ಸ್‌ರವರು ಮೈಸೂರು ಸಂಸ್ಥಾನಕ್ಕೆ ದಯಮಾಡಿದ ಕಾಲ ಇಲ್ಲಿನ ಪೊಲೀಸ್ ಕಾನ್ಸ್‌ಟೇಬಲ್‌ಗಳು ಬಹಳ ಸೇವೆ ಮಾಡಿದರೆಂದು ಇನ್ಸ್‌ಪೆಕ್ಟರ್ ಜನರಲ್‌ರವರು ಅವರಿಗೆಲ್ಲಾ ಮೆಡಲು ಕೊಡುವಂತೆ ತೀರ್ಮಾನಮಾಡಿದಾರೆ.

❖❖❖❖

ಕಳೆದ ಶಿವರಾತ್ರಿಯಂದು ಶ್ರೀಮನ್ ಮಹಾರಾಜರವರು ಬೆಂಗಳೂರಿಂದ ಮೋಟಾರ್ ಗಾಡಿಯಲ್ಲಿ ನಂಜನಗೂಡಿಗೆ ದಯಮಾಡುವರೆಂದು ಕೇಳಿ ಅರಮನೆ ಇಲಾಖೆಯವರು ಏರ್ಪಾಡು ಮಾಡಿದ್ದರು. ಆದರೆ ಶ್ರೀಮನ್ ಮಹಾರಾಜರವರು ದಯಮಾಡಲಿಲ್ಲವೆಂದು ತಿಳಿದುಬಂದಿದೆ.

❖❖❖❖

ಬೆಂಗಳೂರು ಸಿಟಿ ಮಾರ್ಕೆಟ್ಟಿನ ಹತ್ತಿರ ಮದರಾಸ್ ರೈಲ್ವೆ ಕಂಪನಿಯವರು ಹೊಸದಾಗಿ ಒಂದು ಬುಕಿಂಗ್ ಆಫೀಸನ್ನು ಇಟ್ಟಿರೋಣದರಿಂದ ಪ್ರಯಾಣಿಕರು ಟಿಕೆಟ್ ಕೊಂಡುಕೊಳ್ಳುವುದಕ್ಕೂ ಸಾಮಾನು ಸಾಗಿಸುವುದಕ್ಕೂ ಅನುಕೂಲವಾಯಿತು.

❖❖❖❖

ಮೈಸೂರು ಸಂಸ್ಥಾನದ ಕೌನ್ಸಿಲರುಗಳಾದ ಮ|| ಸಿ. ಶ್ರೀನಿವಾಸಯ್ಯಂಗಾರ್ಯರೂ ಮ|| ರಾವ್ ಬಹದೂರ್ ಸಿ. ಮಾದೈಯ್ಯನವರೂ ತಮ್ಮ ಕೆಲಸಕ್ಕೆ ರಾಜೀನಾಮೆ ಕೊಟ್ಟರೆಂತಲೂ, ಶ್ರೀಮನ್ ಮಹಾರಾಜರವರು ಅದನ್ನು ಅಂಗೀಕರಿಸಿಕೊಂಡಿದಾರೆಂತಲೂ ತಿಳಿದುಬಂದಿದೆ.

❖❖❖❖

ಮೈಸೂರು ರೆವಿನ್ಯೂ ಸರ್ವೆ ಇಲಾಖಾ ಅ. ಸೂಪರಿಂಟೆಂಡೆಂಟರಾದ ಮ|| ಕೆ. ರಾಮಸ್ವಾಮಯ್ಯಂಗಾರ್ಯರ ಕುಮಾರ ಕೃಷ್ಣಸ್ವಾಮಯ್ಯಂಗಾರ್ಯರಿಗೆ ವಿಲಾಯತಿಯಲ್ಲಿ ವೈದ್ಯವನ್ನು ಕಲಿತು ಬರುವುದಕ್ಕೆ ಗವರ್ನಮೆಂಟಿನವರು ವರುಷಕ್ಕೆ ೩,೨೫೦ ರೂಪಾಯಿ ವೇತನ ಕೊಡುವಂತೆ ಸ್ಕಾಲರ್‌ಷಿಪ್ ಮಾಡಿದಾರೆ.

❖❖❖❖

ಪ್ರಿನ್ಸ್ ಆಫ್ ವೇಲ್ಸ್‌ರವರು ಮೈಸೂರು ಸಂಸ್ಥಾನಕ್ಕೆ ದಯಮಾಡಿದ್ದಾಗ್ಗೆ ದಕ್ಷಿಣಮರಾಠಾ ರೈಲ್ವೆ ನೌಕರರಿಗೆ ಸಾಮಾನುಗಳನ್ನೂ ಪ್ರಯಾಣಿಕರನ್ನೂ ಸಾಗಿಸುವ ಕೆಲಸ ತುಂಬಾ ಇದ್ದ ಕಾರಣ ಆ ನೌಕರರಿಗೆಲ್ಲಾ ಅವರ ಸಂಬಳದಲ್ಲಿ ಶೇಕಡಾ ೨೦ ರಂತೆ ಇನಾಮನ್ನು ಕೊಡಬೇಕೆಂದು ಕಂಪನಿಯವರು ತೀರ್ಮಾನಿಸಿದಾರೆ. ಇದಲ್ಲದೆ ರಾಜವರ್ಗದವರು ಪ್ರಯಾಣ ಮಾಡಿದ ಗಾಡಿಗಳ ಲೋಕೋ ಫೈರ್‌ಮೆನ್, ಡ್ರೈವರ್, ಗಾರ್ಡುಗಳಿಗೆ ಬೆಳ್ಳಿಯ ಮೆಡಲನ್ನು ಕೊಡುವರು.

❖❖❖❖

ಮೈಸೂರು ಸಂಸ್ಥಾನದಲ್ಲಿ ಕೆಲವು ವರುಷಗಳಿಂದ ಇಂಪೀರಿಯಲ್ ಸರ್ವಿಸ್ ಸೈನ್ಯಗಳ ಸುಪರ್ದಾರರಾಗಿದ್ದ ಮೇಜರ್ ಮೆಕ್ಕಾಯಿಪ್ ರವರು ಹೈದರಾಬಾದಿಗೆ ವರ್ಗಪಟ್ಟು ಕಳೆದ ವಾರ ಪ್ರಯಾಣವಾದರು. ಆಗ್ಗೆ ಆ ಸೈನ್ಯದ ಸುಪರ್ದಾರರುಗಳೆಲ್ಲಾ ಅವರಿಗೆ ವಿಶೇಷವಾದ ಮರ್ಯಾದೆಗಳನ್ನು ಮಾಡಿದರು. ಕಮಾಂಡಾಂಟ್ ಮ|| ಚಾಮರಾಜೇ ಅರಸಿನವರು ಅವರ ಕಾಲದಲ್ಲಿ ನಡೆದ ಕಾರ್ಯಗಳನ್ನೂ ಸೈನ್ಯದ ಒಳ್ಳೇ ಸ್ಥಿತಿಯನ್ನೂ ಕುರಿತು ಪ್ರಸ್ತಾಪಮಾಡಿ, ಕಡೆಗೆ ಸೈನ್ಯದ ಪರವಾಗಿ ಅವರನ್ನು ವಂದಿಸಿ ಸಾಗಕಳುಹಿಸಿದರು.

❖❖❖❖

ಕಳೆದ ಶನಿವಾರ ಅರಮನೆಯಲ್ಲಿ ಎರಡನೇ ಮಹಾರಾಜಕುಮಾರಿಯವರ ಜ್ಯೇಷ್ಠ ರಾಜಕುಮಾರಿಯ ವರ್ಧಂತಿ ಆಯಿತು. ಅರಮನೆಯಲ್ಲಿ ಮಂಗಳವಾದ್ಯ ಬೆಳಗ್ಗೆ ನಡೆಯಿತು. ಸಾಯಂಕಾಲ ರಾಜಕುಮಾರಿಯು ಪಲ್ಲಕ್ಕಿಯಲ್ಲಿ ಕುಳಿತು ಸಕಲ ಮರ್ಯಾದೆಗಳೊಡನೆ ಕೋಟೆಯ ನಾಲ್ಕು ಬೀದಿಗಳಲ್ಲೂ ಮೆರವಣಿಗೆ ಬಂದು, ದೇವಸ್ಥಾನಗಳಿಗೆ ಹೋಗಿ ತೀರ್ಥಪ್ರಸಾದವನ್ನು ಸ್ವೀಕರಿಸಿ, ಅರಮನೆಗೆ ಚಿತ್ತೈಸಿದರು. ಈ ಉತ್ಸವವನ್ನು ನೋಡುವುದಕ್ಕೆ ಸಾವಿರಾರು ಜನರು ಕೋಟೆಯ ನಾಲ್ಕು ಬೀದಿಗಳಲ್ಲೂ ತುಂಬಿಕೊಂಡಿದ್ದರು.

❖❖❖❖

ರಾಜಧಾನಿಯ ಶಿವರಾಮಪೇಟೆಯಲ್ಲಿರುವ ಮುಸಲ್ಮಾನರ ಮಸೀತಿಯ [illegible] ಬಜಾರ್ ಸ್ಟ್ರೀಟ್ ಅಂಗಡಿಯ ಇಬ್ಬರು ಬ್ರಾಹ್ಮಣರು [illegible] ವರುಷದ [illegible] ಎತ್ತಹಾಕಿಸಿದರೆಂದು ಕಳೆದ ವಾರ ಹೊಡೆದಾಟ ಆಯಿತು. ಸಾವಿರಾರು ಮುಸಲ್ಮಾನ ಪ್ರಜೆಗಳು ಸೇರಿ ಆ ಇಬ್ಬರು ಬ್ರಾಹ್ಮಣರ ಮೇಲೆ ಫಿರ್ಯಾದು ಮಾಡಿದರು. ಸಿಟಿ ಮ್ಯಾಜಿಸ್ಟ್ರೇಟರು ಪ್ರತಿ ಒಬ್ಬನಿಗೂ ಒಂದೊಂದು ತಿಂಗಳ ಕಠಿಣ ಶಿಕ್ಷೆಯನ್ನೂ [illegible] ರೂಪಾಯಿ ಜುಲ್ಮಾನೆಯನ್ನೂ ಹಾಕಿ, ಜುಲ್ಮಾನೆ ಹಣವನ್ನು ಮಸೀತಿಯ ಅಧಿಕಾರಿಗಳಿಗೆ ಪರಿಹಾರಕ್ಕಾಗಿ ಕೊಡಬೇಕೆಂದು ತೀರ್ಮಾನಮಾಡಿದಾರೆ.

❖❖❖❖

ಬೆಂಗಳೂರಿಂದ ಚಿಕ್ಕಬಳ್ಳಾಪುರಕ್ಕೆ ರೈಲ್ ಮಾರ್ಗದಲ್ಲಿ [illegible] ೫೪ ಲಕ್ಷ ರೂಪಾಯಿ ಮೂಲಧನವಾದರೆ ಸಾಕೆಂದು ಅಂದಾಜು ಹಾಕಿದ್ದರು. ಈಗ ಅಷ್ಟು ಸ್ವಲ್ಪ ಹಣ ಸಾಲದೆಂದು ಕಂಡುಬಂದದ್ದರಿಂದ ಮೂಲಧನವನ್ನು ೭೦ ಲಕ್ಷ ರೂಪಾಯಿಗೆ ಹೆಚ್ಚಿಸಿ, ಷೇರುದಾರರು ಷೇರುಗಳನ್ನು ಕೊಂಡುಕೊಳ್ಳಬಹುದೆಂದು ಪ್ರಕಟಿಸಿರುತ್ತಾರೆ. ಗವರ್ನಮೆಂಟಿನವರು ಈ ಕಂಪನಿಗೆ ಪ್ರತಿ ವರುಷಕ್ಕೆ ಶೇಕಡಾ ೪ ರಂತೆ ಬಡ್ಡಿ ಕೊಡುವುದಾಗಿ ವಾಗ್ದಾನಮಾಡಿರುವರು. ಇಂಥ ಸ್ವದೇಶೀ ಏರ್ಪಾಡನ್ನು ಪ್ರಜೆಗಳು ಪ್ರೋತ್ಸಾಹಪಡಿಸಿ, [illegible] ಬರುವಂತೆ ಸಹಾಯಮಾಡುವರೆಂದು ಹಾರೈಸುತ್ತೇವೆ.

❖❖❖❖

ಕಳೆದ ಶಿವರಾತ್ರಿಯ ದಿನ ಮೈಸೂರಿಗೂ ಶ್ರೀರಂಗಪಟ್ಟಣಕ್ಕೂ ನಡುವೆ ಗಾಡಿ ರಸ್ತೆಯಲ್ಲಿ ಮೂರು ಕಡೆ ದರೋಡೆಗಳು ನಡೆದವು. ಎರಡು ಮೂರು ಜನಗಳಿಗೆ ಪೆಟ್ಟುಗಳು ಬಿದ್ದವು. ಕಳ್ಳರು ಗಾಡಿಗಳಲ್ಲಿದ್ದ ಸಾಮಾನು ಮುಂತಾದ್ದನ್ನು ಅಪಹರಿಸಿರುತ್ತಾರೆಂತಲೂ ಪೊಲೀಸಿನವರು ಕಳ್ಳರನ್ನು ಹಿಡಿದು ತನಿಖೆ ಮಾಡುತ್ತಿದ್ದಾರೆಂತಲೂ ತಿಳಿಯುತ್ತದೆ. ಪೂರ್ವದಲ್ಲಿ ಇಂಥಾ ಅಪಾಯಗಳು ಸಂಭವಿಸದಂತೆ ಪ್ರತಿ ರಾತ್ರಿಯೂ ಸಿಲ್ಲೇದಾರ್ ಸ್ವಾರರು ಈ ರಸ್ತೆಯಲ್ಲಿ ಗಸ್ತು ತಿರುಗುತ್ತಾ ಹೋಗಿಬರುವ ಏರ್ಪಾಡು ಇತ್ತು. ಈಚೆಗೆ ಇದು ತಪ್ಪಿದ್ದರಿಂದ ಇಂಥಾ ಕಂಟಕಗಳಿಗೆ ಅವಕಾಶವಾಗುವುದು. ಸರ್ಕಾರದವರು ಆ ಪದ್ಧತಿಯನ್ನು ಮತ್ತೆ ರೂಢಿಗೆ ತಂದರೆ ಬಹಳ ಸಹಾಯವಾಗುತ್ತದೆ.

ಮೈಸೂರು ಗೆಜೆಟ್ ಸಂಗ್ರಹ.

ಮೈಸೂರು ಸಿಟಿ ಇಂಪ್ರೂವ್‌ಮೆಂಟ್ ಡಿವಿಜನ್ ಎಕ್ಸಿಕ್ಯೂಟಿವ್ ಇಂಜನಿಯರ್ ಮ|| ಜೆ. ಇ. ಎ. ಡಿಕ್ರೂಸ್ ಯವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಮೂರು ತಿಂಗಳ ಪ್ರಿವಿಲೇಜ್ ರಜಾ ಕೊಟ್ಟಿದೆ.

ಅರಮನೆ ಡಿವಿಜನ್ ಅ|| ಇಂಜನಿಯರ್ ಮ|| ಟಿ. ಎಸ್. ಶೇಷೈಯ್ಯಂಗಾರ್ಯರು ಮತ್ತೊಂದು ಹುಕುಂ ಕೊಡಲ್ಪಡುವ ತನಕ ಸಿಟಿ ಇಂಪ್ರೂವ್‌ಮೆಂಟ್ ಡಿವಿಜನ್ನಲ್ಲಿ ಎಕ್ಸಿಕ್ಯೂಟಿವ್ ಇಂಜನಿಯರಾಗಿ ಕೆಲಸ ನೋಡತಕ್ಕದ್ದು.

ಮೈಸೂರು ಅಡಿಷನಲ್ ಮುನ್‌ಸಿಫ್ ಮ|| ಪಿ. ಎ. ಶಿವಪ್ರಕಾಶಂ ಪಿಳ್ಳೆಯವರಿಗೆ ಫೆಬ್ರುವರಿ ೮ ರಿಂದ ಆರು ತಿಂಗಳ ಕಾಯಲೆ ರಜಾ ಕೊಟ್ಟಿದೆ.

ಅಡ್ವೊಕೇಟ್ ಮ|| ಎಸ್. ವೆಂಕಟಕೃಷ್ಣಯ್ಯನವರು ಮತ್ತೊಂದು ಹುಕುಂ ಕೊಡಲ್ಪಡುವ ತನಕ ಮೈಸೂರು ಅಡಿಷನಲ್ ಮುನ್‌ಸಿಫರಾಗಿರತಕ್ಕದ್ದು.

ಫಾರೆಸ್ಟ್ ಸಬ್ ಅ|| ಕನ್ಸರ್‌ವೇಟರ್ ಮ|| ಎಂ. ಶ್ರೀನಿವಾಸರಾಯರಿಗೆ ಒಂದು ತಿಂಗಳು ಹದಿನೇಳು ದಿನಗಳ ಪ್ರಿವಿಲೇಜ್ ರಜವನ್ನೂ ಒಂದು ವರುಷ, ಒಂದು ತಿಂಗಳು, ಹನ್ನೆರಡು ದಿನಗಳ ಕಾಯಲೆ ರಜವನ್ನೂ ಕೊಟ್ಟಿದೆ.

೧ನೇ ಕ್ಲಾಸ್ ಡೆಪ್ಯುಟಿ ಕಮಿಷನರ್ ಮ|| ಎಂ. ನಾರಾಯಣರಾಯರು ಕಾಯಲೆ ರಜದ ಮೇಲಿರುವುದರಿಂದ ಮುಂದೆ ಕಂಡ ಬಡ್ತಿಗಳು ಹುಕುಂ ಮಾಡಲ್ಪಟ್ಟಿವೆ —

ಡೆಪ್ಯುಟಿ ಕಮಿಷನರ್ ಮ|| ಎಂ. ಎಸ್. ನಾರಾಯಣರಾಯರು, ೧ನೇ ಕ್ಲಾಸಿಗೆ, ಡೆಪ್ಯುಟಿ ಕಮಿಷನರ್ ಮ|| ಎಚ್. ರಾಮಾನುಜಯ್ಯಂಗಾರ್ಯರು, ೨ನೇ ಕ್ಲಾಸಿಗೆ.

ಕೋಲಾರ್ ತಾಲ್ಲೂಕ್ ಅಮಲ್ದಾರ್ ಮ|| ಎ. ಮೃತ್ಯುಂಜಯ ಐಯ್ಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳ ಪ್ರಿವಿಲೇಜ್ ರಜಾ ಕೊಟ್ಟಿದೆ.

ಶಿರಸ್ತೇದಾರ್ ಎಂ. ಲಕ್ಷ್ಮೀನಾರಾಯಣಪ್ಪನವರು ಕೋಲಾರ್ ತಾಲ್ಲೂಕಿನ ಖಾಲಿ ಕೆಲಸಗಳ ಛಾರ್ಜನ್ನು ವಹಿಸತಕ್ಕದ್ದು.

ರಾಜಧಾನಿಯ ಮ್ಯುನಿಸಿಪಲ್ ಮೀಟಿಂಗ್.

ಕಳೆದ ಶನಿವಾರ ಬೆಳಿಗ್ಗೆ ಮೈಸೂರು ಪಟ್ಟಣದ ಮ್ಯುನಿಸಿಪಲ್ ಕಮಿಷನರರು ಟೌನ್ ಹಾಲ್ ಬಂಗಲೆಯಲ್ಲಿ ಸಭೆಸೇರಿ ತಿಂಗಳು ಕಟ್ಟಳೆಯ ಮ್ಯುನಿಸಿಪಲ್ ಮೀಟಿಂಗನ್ನು ನಡಿಸಿದರು. ಕಳೆದ ಜನವರಿ ತಿಂಗಳ ಜಮಾಖರ್ಚು ಪಟ್ಟಿಯಿಂದ ಆ ತಿಂಗಳಲ್ಲಿ ಮ್ಯುನಿಸಿಪಾಲಿಟಿಗೆ ೧೦,೬೭೯ ಚಿಲ್ಲರೆ ರೂಪಾಯಿ ಜಮಾ ಆಯಿತೆಂತಲೂ ೧೦,೯೬೪ ಚಿಲ್ಲರೆ ರೂಪಾಯಿ ಖರ್ಚಾಯಿತೆಂತಲೂ ತಿಳಿದುಬರುವುದು. ಆ ತಿಂಗಳಲ್ಲಿ ಜನನ ೧೩೫; ಮರಣ—ಸಿಡುಬಿನಲ್ಲಿ ೪, ಜ್ವರದಲ್ಲಿ ೧೧, ಇತರ ಕಾರಣಗಳಿಂದ ೧೪೬, ಒಟ್ಟು ೧೬೧.

ಮ್ಯುನಿಸಿಪಲ್ ಆಡಿಟರ ರಿಪೋರ್ಟು ಓದಲಾಯಿತು. ಈ ಟವಿನ ಆಕ್ಟ್ರಾಯಿ ಉತ್ಪತ್ತಿಯು ತಿಂಗಳು ತಿಂಗಳಿಗೆ ಕಡಿಮೆಯಾಗುತ್ತಿದೆ ಎಂತಲೂ ಈ ಬಾಬನ್ನು ಸರಿಯಾಗಿ ಮೇಲ್ವಿಚಾರಣೆ ಮಾಡಬೇಕಾಗಿದೆ ಎಂತಲೂ, ಖಾಲಿಕಾತ್ ಬಾಬಿನಲ್ಲಿ ನೌಕರರು ಎಷ್ಟೆಷ್ಟು ಕೆಲಸಮಾಡಿದ್ದಾರೋ ತಿಳಿಯುವುದಿಲ್ಲವಾದ್ದರಿಂದ ಅವರು ಮಾಡಿದ ಕೆಲಸಗಳ ವಿವರಣೆಯನ್ನು ತಿಳಿಸುವಂತೆ ಪ್ರತಿ ತಿಂಗಳೂ ಒಂದು ಪಟ್ಟಿಯನ್ನು ತಯಾರುಮಾಡಿಸಬೇಕೆಂತಲೂ, ಈ ಪಟ್ಟಣದಲ್ಲಿ ಮ್ಯುನಿಸಿಪಾಲಿಟಿಗೆ ಸೇರಿದ ಕಟ್ಟಡಗಳೂ ಖಾಲಿ ನಿವೇಶನಗಳೂ ಎಷ್ಟಿವೆ? ಅವುಗಳಿಂದ ಮ್ಯುನಿಸಿಪಾಲಿಟಿಗೆ ಎಷ್ಟು ಬಾಡಿಗೆ ಉತ್ಪತ್ತಿಯಾಗುವುದು? ಎಂಬೀ ವಿಷಯಗಳನ್ನು ತಿಳಿಸಬೇಕೆಂತಲೂ ಆಡಿಟರುಗಳು ತಿಳಿಸಿದ್ದರು.

ಆಕ್ಟ್ರಾಯಿ ಉತ್ಪತ್ತಿ ಕಡಿಮೆಯಾಗುವುದಕ್ಕೆ ಸರಕುಗಳು ಟವನಿಗೆ ಬಾರದೆ ಹೋದದ್ದೇ ಕಾರಣವೆಂತಲೂ ಜಾಸ್ತಿ ಬಂದಾಗ ಹೆಚ್ಚು ಉತ್ಪತ್ತಿಯಾಗುತ್ತೆಂತಲೂ ದರೋಗರು ಸಮಾಧಾನ ಬರೆದಿದ್ದರು. ಮ್ಯುನಿಸಿಪಲ್ ಕಮಿಷನರರು ಈ ಸಮಾಧಾನವು ತೃಪ್ತಿಕರವಾಗಿಲ್ಲವೆಂತಲೂ, ನಾಯಿಂದ್ ಕಟ್ಟೆಯನ್ನು ಈಗಿರುವ ಸ್ಥಳವನ್ನು ತಪ್ಪಿಸಿ, ಪಟ್ಟಣದ ಮಧ್ಯರಾಷ್ಟ್ರದಲ್ಲಿ ಮಾಡಬೇಕಾದದ್ದೇ ಅವಶ್ಯವೆಂತಲೂ, ಆಗ್ಗೆ ಆ ಇಲಾಖೆಯನ್ನು ಚನ್ನಾಗಿ ಮೇಲ್ವಿಚಾರಣೆ ಮಾಡುವುದಕ್ಕೆ ಅನುಕೂಲವಾಗುತ್ತೆಂತಲೂ ಗವರ್ನಮೆಂಟಿಗೆ ಮತ್ತೆ ಅರಿಕೆ ಮಾಡಿಕೊಳ್ಳಬೇಕೆಂದು ಒಪ್ಪಿ ತೀರ್ಮಾನಿಸಿರುತ್ತಾರೆ.

ವೈಸ್ ಪ್ರಸಿಡೆಂಟರು ಖಾಲಿಕಾತಿನವರು ಮಾಡಿದ ಕೆಲಸಗಳ ಪಟ್ಟಿಯನ್ನೂ, ಮುನಿಸಿಪಲ್ ಕಟ್ಟಡ ಮತ್ತು ಖಾಲಿ ನಿವೇಶನಗಳನ್ನೂ ಇವುಗಳ ಉತ್ಪತ್ತಿಯನ್ನೂ ಮುಂದಿನ ತಿಂಗಳ ಮೀಟಿಂಗಿನಲ್ಲಿ ತಿಳಿಸುವುದಾಗಿ ಹೇಳಿದರು

ಮ್ಯುನಿಸಿಪಲ್ ತೆರಿಗೆಗಳಲ್ಲಿ ಮನೆ ಕಂದಾಯವು ಇನ್ನೂ ೨೩,೦೦೦ ರೂಪಾಯಿಗಿಂತಲೂ ಹೆಚ್ಚಾಗಿ ಬಾಕಿ ನಿಂತಿದೆ. ಗಾಡಿ ಕಂದಾಯವೂ ಬಹಳ ಉಳಿದಿರುವುದು. ಇದನ್ನು ವಸೂಲ್ಮಾಡುವುದಕ್ಕೆ ವೈಸ್ ಪ್ರಸಿಡೆಂಟರು ತುಂಬಾ ಸಾಹಸಪಡುತ್ತಿದ್ದಾರೆ. ಈ ಸ್ಥಿತಿ ಬಹಳ ಮಟ್ಟಿಗೆ ವಸೂಲಾಗುವುದು ಕಷ್ಟವೆಂತಲೂ ಅನೇಕ ಹಣವನ್ನು ರಿಮಿಷನ್ ಮಾಡಬೇಕಾಗುವುದೆಂತಲೂ ತಿಳಿಸಿದರು.

ದೊಡ್ಡ ಪೇಟೆಯಲ್ಲಿ ಹಳೇ ತಾಲೂಕ್ ಕಛೇರಿ ಹತ್ತಿರ ಟ್ರಸ್ಟ್ ಬೋರ್ಡಿನವರು ಒಡೆದು ಹಾಕಿ ಖಾಲಿ ಬಿಟ್ಟಿರುವ ಹಳೇ ನಾಯಿಂದ್ ಕಟ್ಟೆಯ ನಿವೇಶನವನ್ನು ವಿಕ್ರಿಮಾಡಬಹುದೇ ಎಂದು ಸರ್ಕಾರದವರು ಕೇಳಿದ್ದರು. ಈ ನಿವೇಶನವನ್ನು ಮಾರಬಹುದೇ ಕೂಡದೇ ಎಂಬುದನ್ನು ಗೊತ್ತುಮಾಡುವುದಕ್ಕಾಗಿ ಪ್ರಸಿಡೆಂಟರೂ, ಮೆ॥ ಅನಂತಾಚಾರ್ಯರವರೂ, ಮೆ॥ ಹಸನಲ್ಲಿ ಬೇಗ್‌ರವರೂ ಹೋಗಿ ಆ ಸ್ಥಳವನ್ನು ನೋಡಿ ರಿಪೋರ್ಟು ಕೊಡಬೇಕೆಂದು ಮೆಂಬರುಗಳು ಗೊತ್ತುಮಾಡಿದರು.

ಸಂತೇಪೇಟೆಯಲ್ಲಿ ಮಿಲಿಟರಿ ಭಕ್ಷಿ ಮೆ॥ ಬಸವರಾಜೇ ಅರಸಿನವರಿಗೆ ಸೇರಿದ ಮನೆಗೆ ಮೊದಲು ಮ್ಯುನಿಸಿಪಲ್ ತೆರಿಗೆ ೩೦ ರೂಪಾಯಿ ಇದ್ದದ್ದು ರಿವಿಜನಲ್ಲಿ ೫೦ ರೂಪಾಯಿ ಆಯಿತೆಂತಲೂ, ಎರಡನೇ ರಿವಿಜನಲ್ಲಿ ೬೪ ರೂಪಾಯಿ ಆಯಿತೆಂತಲೂ, ಆಗ ಜಾಸ್ತಿಮಾಡಿದ ೨೦ ರೂಪಾಯನ್ನು ಮೂರು ಸಾಲಿಗೂ ವಜಾ ಆಗಬೇಕೆಂತಲೂ ವೈಸ್ ಪ್ರಸಿಡೆಂಟರು ಸೂಚಿಸಿದರು. ಮೆಂಬರುಗಳೆಲ್ಲಾ ಅದರಂತೆ ಒಪ್ಪಿಕೊಂಡಿರುತ್ತಾರೆ.

ಪಟ್ಟಣದಲ್ಲಿ ಬೀಳುವ ಕಚರಾ ಮತ್ತು ಗೊಬ್ಬರವನ್ನು ಬೇರೆ ಬೇರೆ ಕಡೆಗಳಲ್ಲಿ ಕೂಡಿಟ್ಟು ವಿಕರಿ ಮಾಡುವ ವಿಷಯದಲ್ಲಿ ಯಾವ ಕೆಲಸವನ್ನು ಮಾಡಿದ್ದೀರೆಂದು ಸರ್ಕಾರದವರು ಕೇಳಿದ್ದರು. ಬೆಳಿಗ್ಗೆ ೮ ಗಂಟೆಯೊಳಗಾಗಿ ಕಚರಾ ಮತ್ತು ಗೊಬ್ಬರವನ್ನು ಮನೆಗಳಿಂದಲೂ ಬೀದಿಗಳಿಂದಲೂ ತೆಗೆದು, ಆಯಾ ಮೊಹಲ್ಲೆಯಲ್ಲಿ ಸಿವಿಲ್ ಸರ್ಜನರವರು ಒಪ್ಪಿರುವ ಸ್ಥಳಗಳಲ್ಲಿ ಕೂಡಿಟ್ಟು, ವ್ಯವಸಾಯಗಾರರಿಗೆ ವಿಕರಿ ಮಾಡುತ್ತೇವೆಂಬುದಾಗಿ ಮೆಂಬರುಗಳು ಒಪ್ಪಿಕೊಂಡಿದಾರೆ.

ಚಾಮರಾಜ ಮೊಹಲ್ಲೆಯ ಮ್ಯುನಿಸಿಪಲ್ ಕಮಿಷನರಾಗಿದ್ದ ರೆವ್. ಮೆ॥ ಥಾರ್ಪ್‌ಯವರು ಶೀಮೆಗೆ ಪ್ರಯಾಣ ಮಾಡಿದ್ದರಿಂದ ತಮ್ಮ ಕೆಲಸಕ್ಕೆ ರಾಜೀನಾಮೆ ಕೊಟ್ಟರು. ಅವರು ಮ್ಯುನಿಸಿಪಲ್ ವಿಷಯಗಳಲ್ಲಿ ತುಂಬಾ ಶ್ರದ್ಧೆಯಿಂದ ಕೆಲಸ ಮಾಡಿದರೆಂಬ ಸಂಗತಿಯನ್ನು ಮೆಂಬರುಗಳು ವಂದನಾಪೂರ್ವಕವಾಗಿ ಒಪ್ಪಿಕೊಂಡು, ಅವರ ರಾಜೀನಾಮೆಯನ್ನು ಅಂಗೀಕರಿಸಿದರು. ಅವರ ಬದಲಿಗೆ ಅದೇ ಮೊಹಲ್ಲೆಯಲ್ಲಿರುವ ಅಡ್ವೋಕೇಟ್ ಮೆ॥ ಕೆ. ಚಂದ್ರಶೇಖರಯ್ಯನವರನ್ನು ನೇಮಕ ಮಾಡಬೇಕೆಂದು ಆ ಮೊಹಲ್ಲೆಯ ನಿವಾಸಿಗಳು ಒಂದು ಮಹಜರನ್ನು ಬರೆದು ಕಳುಹಿಸಿದ್ದರು. ಇದಲ್ಲದೆ ಹಿಂದೆ ಗವರ್ನಮೆಂಟಿನವರೇ ರೆವ್. ಮೆ॥ ಥಾರ್ಪ್‌ಯವರನ್ನು ನೇಮಿಸಿದಾಗ ಮುಂದೆ ಖಾಲೀಬೀಳುವ ಸಂದರ್ಭದಲ್ಲಿ ಮೆ॥ ಚಂದ್ರಶೇಖರಯ್ಯನವರ ಹೆಸರನ್ನು ನಮೂದು ಮಾಡಬಹುದೆಂದು ಹುಕುಂ ಕೊಟ್ಟಿದ್ದರು. ಇದನ್ನೆಲ್ಲಾ ಪರಿಗಣಿಸಿ ಮ್ಯುನಿಸಿಪಲ್ ಕಮಿಷನರುಗಳು ಮೆ॥ ಚಂದ್ರಶೇಖರಯ್ಯನವರೇ ಆ ಮೊಹಲ್ಲೆಗೆ ಮೆಂಬರಾಗಿ ನೇಮಕವಾಗಬೇಕೆಂದು ತೀರ್ಮಾನಮಾಡಿದರು.

ವೈಸ್ ಪ್ರಸಿಡೆಂಟರು ಬೇರೆ ಬೇರೆ ಮೊಹಲ್ಲೆಗಳಲ್ಲಿ ವಸೂಲಾಗುವುದೇ ಇಲ್ಲವೆಂದು ಕಂಡುಬಂದ ಕಂದಾಯಗಳನ್ನು ಸ್ವಲ್ಪ ಮಟ್ಟಿಗೆ ಪಟ್ಟಿಯಲ್ಲಿ ಬರೆದು, ಅದನ್ನು ರಿಮಿಷನ್ ಮಾಡಬೇಕೆಂದು ಸೂಚಿಸಿದರು. ಅವೆಲ್ಲಾ ಒಟ್ಟು ೩೨೩೯ ಚಿಲ್ಲರೆ ರೂಪಾಯಿ ಆಯಿತು. ಆಯಾ ಮೊಹಲ್ಲೆಯ ಮ್ಯುನಿಸಿಪಲ್ ಕಮಿಷನರರೂ ಅದರಂತೆ ಒಪ್ಪಿಕೊಂಡದ್ದರಿಂದ ರಿಮಿಷನ್ ಮಾಡಬಹುದೆಂದು ತೀರ್ಮಾನವಾಗಿದೆ.

ಇಂಡಿಯಾ ದೇಶದ ವೃತ್ತಾಂತಗಳು.

ಕಳೆದ ಮೂರು ವರುಷಗಳಿಂದ ೪೬,೪೪೪ ಮಂದಿ ಹಿಂದುಸ್ಥಾನದ ಮುಸಲ್ಮಾನರು ಬೊಂಬಾಯಿಗೆ ಹೋಗಿ ಅಲ್ಲಿ ಜಹಜು ಹತ್ತಿ ಮಕ್ಕಾಪಟ್ಟಣಕ್ಕೆ ಯಾತ್ರೆ ಹೋಗಿ ಬಂದರೆಂದು ಪ್ರಕಟವಾಗಿದೆ.

ಕಲ್ಕತ್ತಾ ಪಟ್ಟಣದ ಏಬ್ರಹಂ ಸಾಲವರ್ ಕಂಪನಿಯ ನೌಕರರಾದ ತಿಮೋಲ್, ಮುಲ್‌ಜಿ ಎಂಬುವರು ಕಂಪನಿ ಬಾಬತು ೧೪ ಲಕ್ಷ ರೂಪಾಯಿಗಳನ್ನು ದುರುಪಯೋಗಪಡಿಸಿ ಮೋಸಮಾಡಿದರೆಂದು ಮೊಕದ್ದಮೆ ಆಗಿದೆ

ಕಲ್ಕತ್ತಾ ಪಟ್ಟಣದಲ್ಲಿ ಒಂದು ಹೋಮಿಯೋಪತಿ ಆಸ್ಪತ್ರೆಯನ್ನು ಕಟ್ಟುವುದಕ್ಕೆ ಮಹಾರಾಜಾ ಸರ್ ಜ್ಯೋತೀಂದ್ರ ಮೋಹನ ಟಾಗೂರ್‌ಯವರು ೮,೦೦೦ ರೂಪಾಯನ್ನೂ ಮೆ॥ ಶಿವಪ್ರಸಾದ ಝುನ್‌ಝುನ್‌ವಾಲಾಯವರು ೧,೦೦೦ ರೂಪಾಯನ್ನೂ ಚಂದಾ ಕೊಟ್ಟಿದಾರೆ.

ರಂಗೂನ್ ಪಟ್ಟಣದಲ್ಲಿ ಕಳೆದ ವಾರ ನಾಲ್ಕು ಭಾರೀ ಕಾರ್ಖಾನೆಗಳಿಗೆ ಬೆಂಕಿ ಬಿದ್ದು ಸುಟ್ಟು ಹೋದವು. ಅಪಾರವಾದ ಸಾಮಾನುಗಳೂ ಯಂತ್ರ ಮೊದಲಾದ ಸಾಧನಗಳೂ ಹಾಳಾಗಿ ಮಾಲೀಕರಿಗೆ ೧೦—೧೫ ಲಕ್ಷ ರೂಪಾಯಿ ತನಕ ನಷ್ಟ ಪ್ರಾಪ್ತವಾಗಿರುತ್ತದೆ.

ಹಿಂದುಸ್ಥಾನದಲ್ಲಿ ಕಳೆದ ವಾರ ೬,೮೯೦ ಜನರು ಪ್ಲೇಗ್ ತಗಲಿ ಕಾಲವಾದರು. ಹಿಂದಿನ ವಾರಕ್ಕಿಂತ ೮೪೮ ಜನ ಹೆಚ್ಚು. ಈ ಪೈಕಿ ಸಂಯುಕ್ತ ಆಧಿಪತ್ಯ ೧,೫೪೯, ಬಂಗಾಳಾ ೭,೬೮೦, ಬೊಂಬಾಯಿ ೮೧೫, ಪಂಜಾಬ್ ೩೦೯, ಮಧ್ಯ ಪ್ರಾಂತ್ಯಗಳು ೭೩೬, ಬರ್ಮಾ ೧೫೫.

ಕಲ್ಕತ್ತಾ ಯೂನಿವರ್ಸಿಟಿ ವಿದ್ಯಾಸಂಘದವರು ಇನ್ನು ಮೇಲೆ ಟೆಕ್ಸ್ಟ್ ಬುಕ್ಕುಗಳಿಗೆ ವ್ಯಾಖ್ಯಾನ ನೋಟ್ಸು ಮುಂತಾದವುಗಳನ್ನು ಬರೆದು ವಿಕರಿ ಮಾಡುವಂಥಾ ವಿದ್ಯಾವಂತರನ್ನು ಯೂನಿವರ್ಸಿಟಿ ಪರೀಕ್ಷಕರನ್ನಾಗಿ ನೇಮಕ ಮಾಡಲೇ ಕೂಡದೆಂದು ತೀರ್ಮಾನಿಸಿಕೊಂಡಿದಾರೆ.

ಮದರಾಸ್ ಗವರ್ನರಾಗಿದ್ದ ಲಾರ್ಡ್ ಆಂಪ್ಟ್ಹಿಲ್ ಯವರು ಪತ್ನಿಪರಿವಾರ ಸಹಿತ ಕಳೆದ ೧೭ ನೆ ತಾರೀಖಿನ ಮಧ್ಯಾಹ್ನ ಬೊಂಬಾಯಿನಲ್ಲಿ ಮೆಯಿಲ್ ಜಹಜನ್ನು ಹತ್ತಿ ವಿಲಾಯತಿಗೆ ಪ್ರಯಾಣ ಮಾಡಿದರು. ಬಹು ಜನ ದೊಡ್ಡ ಮನುಷ್ಯರೂ ಸರ್ದಾರರೂ ಬಂದರದಲ್ಲಿ ಕಾದಿದ್ದು ಅವರನ್ನು ಸಾಗಕಳುಹಿಸಿ ಬಂದರು.

ಕಲ್ಕತ್ತಾ ಪಟ್ಟಣದಲ್ಲಿರುವ ಶ್ರೀಶ ಚಂದ್ರಗುಪ್ತ ಎಂಬೊಬ್ಬ ಬಂಗಾಳಿಯು ಹಿಂದೂ ಮತಚರಿತ್ರೆಯನ್ನು ಬಹು ವಿಸ್ತಾರವಾಗಿ ಬರೆದು, ಮೂರು ಭಾಗಗಳಾಗಿ ವಿಂಗಡಿಸಿ, ಮೂರು ಪುಸ್ತಕಗಳಾಗಿ ಅಚ್ಚುಹಾಕಿಸಿರುತ್ತಾನೆ ಇದನ್ನು ಅಚ್ಚು ಹಾಕುವುದಕ್ಕೆ ಗಾಯಕವಾಡ ಮಹಾರಾಜರವರು ಬಹಳವಾಗಿ ದ್ರವ್ಯಸಹಾಯ ಮಾಡಿರುತ್ತಾರೆ.

ರಂಗೂನ್ ಪಟ್ಟಣದ ಛಾರ್ಟರ್ ಬ್ಯಾಂಕಿನಲ್ಲಿ ನಾಗು ಎಂಬ ಒಬ್ಬ ನೌಕರನು ೩೦,೦೦೦ ರೂಪಾಯಿನ ಒಂದು ಛಕ್ಕನ್ನು ಫೋರ್ಜರಿ ಮಾಡಿ, ಹಣ ತೆಗೆದುಕೊಳ್ಳಬೇಕೆಂದು ಪ್ರಯತ್ನ ಪಟ್ಟನು. ಆದರೆ ಅವನ ಉದ್ದೇಶವು ನೆರವೇರದೆ ಸಿಕ್ಕಿ ಬಿದ್ದು, ದರ್ಯಾಫ್ತು ಆಗಿ ಮೂರುವರೆ ವರುಷ ಕಠಿಣ ಸಜವನ್ನು ಅನುಭವಿಸುವಂತಾಯಿತು.

ಕಲ್ಕತ್ತಾ ಪಟ್ಟಣದಲ್ಲಿ ಸ್ಥಾಪನೆಯಾಗಿರುವ ಲಾರ್ಡ್ ಕರ್ಸನ್‌ರವರ ಮೆಮೋರಿಯಲ್ ಫಂಡಿಗೆ ಇದುವರೆಗೆ ೯೪,೦೦೦ ರೂಪಾಯಿ ಚಂದಾ ವಸೂಲಾಯಿತು. ಈಚೆಗೆ ಬೆಟ್ಟಿಯಾ ಮಹಾರಾಣಿಯವರು ೧,೦೦೦ ರೂಪಾಯನ್ನೂ ಮಹಾರಾಜ ಬಹದೂರ್ ಕೃಷ್ಣ ಪ್ರಸಾದರವರು ೩೦೦ ರೂಪಾಯನ್ನೂ ಆ ಫಂಡಿಗೆ ಚಂದಾ ಕೊಟ್ಟಿದ್ದಾರೆ.

ಜಯಪುರದಲ್ಲಿ ಕ್ಷಾಮವು ಬಹು ಉಗ್ರವಾಗಿರುವುದು. ಹೊಟ್ಟೆಗಿಲ್ಲದ ಸಾವಿರಾರು ಪ್ರಜೆಗಳು ಅಂಗಡಿ ಮುಂಗಟ್ಟುಗಳನ್ನು ಲೂಟಿ ಮಾಡುತ್ತಲೇ ಇದಾರೆ. ಭಿಕ್ಷುಕರ ಕಾಟ ಅಪಾರವಾಗಿದೆ. ಕುಡಿಯುವುದಕ್ಕೆ ನೀರು ಸಿಕ್ಕುವುದಿಲ್ಲ. ಗೋಕಾಯಿಗಳನ್ನು ೮ ಆಣೆ ಮೊದಲುಗೊಂಡು ೬ ರೂಪಾಯಿ ವರೆಗೆ ವಿಕರಿ ಮಾಡುತ್ತಿದಾರೆ. ಕ್ಷಾಮನಿವಾರಣೆಗೆ ಮಹಾರಾಜರವರು ಕೆಲವು ನಾಲೆಗಳನ್ನು ತೋಡಿಸುತ್ತಾ, ಜನರಿಗೆ ಜೀವನವನ್ನು ಕಲ್ಪಿಸಿರುವರು.

ರಂಗೂನ್ ಪಟ್ಟಣದಲ್ಲಿ ಒಬ್ಬ ದೊಡ್ಡ ಮನುಷ್ಯನಾದ ಬರ್ಮಾಯನ ಮಗಳನ್ನು ಒಬ್ಬ ಪ್ರಾಯಸ್ಥನಾದ ಬರ್ಮಿಯನು ಎತ್ತಿಹಾಕಿಕೊಂಡು ಹೋದನೆಂದು ಮೊಕದ್ದಮೆ ನಡಿಯುತ್ತಿದ್ದು ಕಳೆದ ವಾರ ಮುಕ್ತಾಯವಾಯಿತು. ಅಪರಾಧಿಯು ಆ ಹುಡುಗಿಯನ್ನು ಎತ್ತಿಕೊಂಡು ಹೋಗಲಿಲ್ಲವೆಂತಲೂ ಅವಳೇ ತನ್ನ ಮನಃಪೂರ್ವಕವಾಗಿ ಒಪ್ಪಿ ಅವನ ಸಂಗಡ ಹೋದಳೆಂತಲೂ ರುಜುವಾತು ಬಂದದ್ದರಿಂದ ಜಡ್ಜಿಯು ಅವನನ್ನು ಖುಲಾಸ್ ಮಾಡಿದನು.

ಕಳೆದ ವಾರ ಉತ್ತರದೇಶದ ಕೆಲವು ಕಡೆಗಳಲ್ಲಿ ಸ್ವಲ್ಪ ಮಳೆ ಆದದ್ದರಿಂದ ಗೋಕಾಯಿಗಳಿಗೆ ಸ್ವಲ್ಪವಾದರೂ ಹುಲ್ಲು ನೀರು ಸಿಕ್ಕುವಂತಾಯಿತು. ಆದರೂ ಕ್ಷಾಮದ ಕಷ್ಟವೇನೂ ಕಡಿಮೆಯಾಗಿಲ್ಲ. ಧಾರಣೆಮಾಸಿಗಳು ಬಹಳ ಹೆಚ್ಚಾಗಿರುತ್ತವೆ. ರಿಲೀಫ್ ಕಾಮಗಾರಿಯನ್ನು ಮಾಡಿ ಜೀವನಮಾಡುತ್ತಿರುವವರ ಸಂಖ್ಯೆ ಈ ವಾರ ಎಷ್ಟೆಂದರೆ, ಸಂಯುಕ್ತ ಆಧಿಪತ್ಯ ೧,೪೩,೦೦೦, ರಾಜಪುಟಾನಾ ೯೮,೦೦೦, ಮಧ್ಯ ಇಂಡಿಯಾ ೫೦,೦೦೦, ಬೊಂಬಾಯಿ ೧೫,೦೦೦.

ಸಿಲೋನ್ (ಲಂಕಾ) ದ್ವೀಪದ ಸಮುದ್ರ ತೀರದಲ್ಲಿ ಮುತ್ತಿನ ಚಿಪ್ಪುಗಳನ್ನು ತೆಗೆದುಕೊಳ್ಳುವುದಕ್ಕೆ ಲಂಡನ್ ಪಟ್ಟಣದ ಒಂದು ಕಂಪನಿಯವರು ಕಂಟ್ರಾಕ್ಟು ವಹಿಸಿಕೊಂಡು, ಕಳೆದ ಜನವರಿಯಿಂದ ೨೦ ವರುಷಗಳ ತನಕ ಪ್ರತಿ ವರುಷವೂ ೩ ಲಕ್ಷ ರೂಪಾಯಿ ಕೊಡುವುದಾಗಿ ಕರಾರು ಬರೆದು ಕೊಟ್ಟಿದ್ದಾಯಿತು. ಆ ದ್ವೀಪದ ಮುಖ್ಯಾಲೋಚನಾ ಸಂಘದ ಮೆಂಬರುಗಳು ಈ ಕರಾರನ್ನು ಒಪ್ಪಿಕೊಳ್ಳದೆ ತುಂಬಾ ವಾಗ್ವಾದಮಾಡಿದರೂ ಪ್ರಯೋಜನವಾಗಲಿಲ್ಲ.

ಕಲ್ಕತ್ತಾ ಪಟ್ಟಣದಲ್ಲಿ ಮಹಮದ್ ಹಾನಿಫ್ ಎಂಬೊಬ್ಬ ಮುಸಲ್ಮಾನನು ಹುಡುಗರನ್ನು ಹಿಡಿದುಕೊಂಡು ಹೋಗಿ ತನ್ನ ಮನೆಯಲ್ಲಿಟ್ಟುಕೊಂಡು, ಅವರಿಂದ ಭಿಕ್ಷವೃತ್ತಿ ಕರಿಸಿ ತಾನು ತಿನ್ನುತ್ತಾ ಅವರಿಗೆ ಅನ್ನ ಸತ್ರಗಳಲ್ಲಿ ಅನ್ನ ಹಾಕಿಸುತ್ತಾ ಇದ್ದನು. ಹುಡುಗರನ್ನು ಕಳೆದುಕೊಂಡ ತಂದೆತಾಯಿಗಳು ನಾನಾ ಪ್ರಕಾರವಾಗಿ ಗೋಳಿಡುತ್ತಿದ್ದರು. ಅವನು ಕಳೆದ ವಾರ ಸಿಕ್ಕಿ ಬಿದ್ದನು. ಮ್ಯಾಜಿಸ್ಟ್ರೇಟರು ಅವನಿಗೆ ಒಂದು ವರುಷ ಕಠಿಣ ಸಜವನ್ನು ವಿಧಿಸಿರುತ್ತಾರೆ.

ಬೊಂಬಾಯಿ ಪಟ್ಟಣದಲ್ಲಿ ಪಾರ್ಸಿ ಜನರೆಲ್ಲಾ ಸೇರಿ ತಮ್ಮ ಜಾತಿಯ ರೋಗಿಗಳಿಗೆ ಪ್ರತ್ಯೇಕವಾದ ಆಸ್ಪತ್ರೆಯನ್ನು ಕಟ್ಟಿಸಿಕೊಳ್ಳಬೇಕೆಂದು ಯೋಚಿಸಿ, ಅದಕ್ಕಾಗಿ ೬,೩೫,೦೦೦ ರೂಪಾಯಿ ಚಂದಾ ಕೂಡಿಸಿಕೊಂಡಿದಾರೆ. ಈ ಸಂಗತಿಯನ್ನು ಒಬ್ಬ ಪಾರ್ಸಿ ಧನಿಕನು ಕೇಳಿ, ತಾನು ಈ ಪುಣ್ಯಕಾರ್ಯಕ್ಕೆ ಕೆಲವು ಲಕ್ಷ ರೂಪಾಯಿಗಳನ್ನೇ ದರ್ಮಶೀಲವಾಗಿ ಮಾತು ಕೊಟ್ಟಿರುವನೆಂದು ತಿಳಿಯುವುದು. ಆದರೆ ಈ ಪುಣ್ಯಾತ್ಮನ್ಯಾರೋ ಅವನ ಹೆಸರು ಇನ್ನೂ ಪ್ರಕಟವಾಗಲಿಲ್ಲ.

ಬೊಂಬಾಯಿ ಪಟ್ಟಣದ ಚಕ್ಲಾರ್ ಬೀದಿಯಲ್ಲಿ ಅಲಿಮಹಮದ್ ಗು: ೩೦ ದುಸ್ತೀನ್ ಎಂಬ ಭಾರೀ ವರ್ತಕನ ಐದು ಉಪ್ಪರಿಗೆ ಮನೆಗೆ ಹಿಂದಿನ ಸೋಮವಾರ ರಾತ್ರಿ ೬॥ ಗಂಟೆಯಲ್ಲಿ ಬೆಂಕಿ ಬಿದ್ದು, ಮಾಲೀಕನಿಗೆ ೩,೮೬,೦೦೦ ರೂಪಾಯಿ ನಷ್ಟವಾಯಿತು. ೮—೧೦ ಜನರು ಪ್ರಾಣ ಕಳಕೊಂಡದ್ದಲ್ಲದೆ, ಜನರನ್ನು ಬದುಕಿಸಬೇಕೆಂದೂ ಸಾಮಾನನ್ನು ಹೊರಕ್ಕೆ ಸಾಗಿಸಬೇಕೆಂತಲೂ ಪ್ರಯತ್ನಪಟ್ಟ ಒಬ್ಬ ಸಬ್ ಇನ್ಸ್‌ಪೆಕ್ಟರೂ ಮೈಸುಟ್ಟುಕೊಂಡು, ಆಸ್ಪತ್ರೆಯಲ್ಲಿ ಬಿದ್ದು ಹೊಂದುತ್ತಿದಾರೆ

ಹೈದರಾಬಾದ್ ಸ್ಕೂಲಿನ ಒಬ್ಬ ಹುಡುಗನು ಕಳೆದ ವರುಷ ಮದರಾಸ್ ಮೆಟ್ರಿಕ್ಯುಲೇಷನ್ ಪರೀಕ್ಷೆಗೂ ಬೊಂಬಾಯಿನ ಮೆಟ್ರಿಕ್ಯುಲೇಷನ್ ಪರೀಕ್ಷೆಗೂ ಹಣ ಕಟ್ಟಿ, ಎರಡು ಪರೀಕ್ಷೆಗಳಿಗೂ ಹೋಗಿ ಪ್ರಶ್ನಪತ್ರಿಕೆಗಳನ್ನು ತೆಗೆದುಕೊಂಡು ಉತ್ತರಗಳನ್ನು ಬರೆದು ಬಂದನು. ಮದರಾಸ್ ಪರೀಕ್ಷೆಯಲ್ಲಿ ಅವನಿಗೆ ತೇರ್ಗಡೆಯಾಗದಿದ್ದರೂ ಬೊಂಬಾಯಿ ಪರೀಕ್ಷೆಯಲ್ಲಿ ತೇರ್ಗಡೆಹೊಂದಿದನಾದ್ದರಿಂದ ಈಗ ಎಫ್. ಎ. ಪರೀಕ್ಷೆಗೆ ಓದಬಹುದಾಗಿದೆ. ಆ ಹುಡುಗನ ಉಪಾಯವನ್ನು ಕೇಳಿ ಎಲ್ಲರೂ ಆಶ್ಚರ್ಯಪಡುವರು.

ಹಿಂದುಸ್ಥಾನದ ನಾನಾ ಕಡೆಗಳಲ್ಲಿ ನೀರಾವರಿ ಕಾಮಗಾರಿಗಳನ್ನು ಅಪಾರವಾಗಿ ಮಾಡಬೇಕೆಂದು ಗವರ್ನಮೆಂಟಿನವರು ಸ್ಯಾಂಕ್ಷನ್ ಮಾಡಿ, ಹಣ ಒದಗಿದ ಹಾಗೆಲ್ಲಾ ಒಂದೊಂದನ್ನು ಪ್ರಾರಂಭಿಸಿ ಮಾಡಿಸಬೇಕೆಂದು ಹುಕುಂ ಕೊಟ್ಟಿದ್ದಾರೆ. ಈ ನಾಲೆಗಳ ಕಾಮಗಾರಿಗೆ ಹದಿಮೂರು ಕೋಟಿ ರೂಪಾಯಿಗಿಂತಲೂ ಹೆಚ್ಚಾಗಿಯೇ ಖರ್ಚಾಗುವುದು. ಈ ನಾಲೆಗಳಿಂದ ೩೦ ಲಕ್ಷ ಎಕರೆ ಜಮೀನು ಕರೀಸಾಗುವಳಿಗೆ ಬರುತ್ತದೆಂತಲೂ, ಪ್ರತಿ ವರುಷವೂ ಒಂದು ಕೋಟಿ ರೂಪಾಯಿಗೆ ಕಮ್ಮಿ ಇಲ್ಲದೆ ಉತ್ಪತ್ತಿಯಾಗುವುದೆಂತಲೂ ತಿಳಿದು ಬಂದಿದೆ.

ಸಿಂಧು ದೇಶಕ್ಕೆ ಸೇರಿದ ಸಿಯಾಲ್‌ಕೋಟಿನಲ್ಲಿ ಸರ್ಕಾರದವರು ಬಂದೀವಾನರಿಂದ ಕಂಬಳಿ ನೂಲಿನ ಬಟ್ಟೆಬರೆಗಳನ್ನು ಮಾಡಿಸಬೇಕೆಂದು ಶೀಮೆಯಿಂದ ಅವಶ್ಯವಾದ ಯಂತ್ರ ಸಾಮಾನನ್ನು ತರಿಸುವರಾಗಿದಾರೆ. ಈ ಜೈಲಿನ ಕಾರ್ಖಾನೆಗೆ ೬೦,೦೦೦ ರೂಪಾಯಿ ಸ್ಯಾಂಕ್ಷನ್ ಆಗಿರುವುದನ್ನು ನೋಡಿ, ಸರ್ಕಾರದವರು ವರ್ತಕರ ಕೆಲಸಕ್ಕೆ ಹಾಕುವುದರಿಂದ ದೇಶೀಯ ಕಸಬುಗಳು ಕ್ಷೀಣ ಹೊಂದುವುವೆಂತಲೂ ಅವರು ಈ ಕಾರ್ಖಾನೆಯನ್ನು ಏರ್ಪಾಡು ಮಾಡುವುದು ಸರಿಯಲ್ಲವೆಂತಲೂ ಆ ಪ್ರಾಂತ್ಯದ ಜನರು ಆಕ್ಷೇಪಣೆ ಮಾಡುತ್ತಿದಾರೆ.

ಕಳೆದ ವಾರ ಕಾಶೀ ಪಟ್ಟಣದಲ್ಲಿ ಸರ್ ದಿನಕರ ರಾವರ ಸ್ಥಾನದೊಳಗೆ ಹಿಂದೂ ವೈದಿಕ ಮಂಡಲಿಯವರು ಒಂದು ದೊಡ್ಡ ಸಭೆಯನ್ನು ನಡಿಸಿ, ಘನವನ್ನೈದಿದ ಮುನ್ಷಿ ಮಾಧವಲಾಲ್ ರವರಿಗೆ ವೇದಶಾಸ್ತ್ರ ಪುಸ್ತಕಗಳನ್ನು ಕೊಟ್ಟು, ಅವುಗಳನ್ನು ಸುರಕ್ಷಿತವಾಗಿ ಕಾಪಾಡಿಕೊಂಡು ಬರಬೇಕೆಂತಲೂ, ಅವುಗಳ ಅಭಿಪ್ರಾಯವನ್ನು ಲೋಕಕ್ಕೆಲ್ಲಾ ಪ್ರಚಾರಪಡಿಸಬೇಕೆಂತಲೂ ತಿಳಿಸಿದರು. ಆ ಸಭೆಯಲ್ಲಿ ಮುನ್ಷಿ ಮಾಧವಲಾಲರ ಯೋಗ್ಯತಾ ಪತ್ರವನ್ನು ಕುರಿತು ಮಹಾ ಮಹೋಪಾಧ್ಯಾಯ ಗಂಗಾಧರ ಶಾಸ್ತ್ರಿಗಳು ಒಂದು ಉಪನ್ಯಾಸವನ್ನು ಹೇಳಿದರು.

...ಕ್ಕರ್ ಲೋಕದಲ್ಲಿ ಒಂದಾಣೆಯ ನಾಣ್ಯಗಳನ್ನು ಛಾಪಾ ...ಲಯದವರಿಗೆ ತರಬೇಕೆಂದು ಇಂಡಿಯಾ ಗವರ್ನಮೆಂಟಿನವರು ...ರ್ ಮಾಡಿದ್ದಾರಷ್ಟೆ. ಇದನ್ನು ಈಗ ಕಲ್ಕತ್ತೆಯ ಟಂಕಸಾಲೆ ...ಛಾಪಾ ಹಾಕಿಸುತ್ತಿದ್ದಾರೆ. ಈ ನಾಣ್ಯವು ಬೆಳ್ಳಿಯ ದೊಡ್ಡ ...ಕ್ಕಿಂತ ಸ್ವಲ್ಪ ಅಗಲವಾಗಿರುವುದು. ಅದರ ಅಂಚು ಸುತ್ತಲೂ ...ನ್ಯವಾಗಿರುತ್ತೆ. ಒಂದು ಕಡೆ ಚಕ್ರವರ್ತಿಯವರ ತಲೆಯು ...ಟ ಸಹಿತ ಕಾಣುವಂತೆಯೂ ಇನ್ನೊಂದು ಕಡೆ ದೊಡ್ಡ ಅಕ್ಷರ ...೧ ಆಣೆ ಎಂಬ ಅಂಕಿಯು ಕಾಣುವಂತೆಯೂ ಮಾಡಿದ್ದಾರೆ. ಈ ...ವನ್ನು ಚಕ್ರವರ್ತಿಯವರಿಗೆ ಕಳುಹಿಸಿ ಚಲಾವಣೆಗೆ ತರಬಹುದು ...ವುದಕ್ಕೆ ಅವರ ಅಪ್ಪಣೆ ಪಡೆಯುವವರಾಗಿದ್ದಾರೆ.

••••

ಬೊಂಬಾಯಿ ಪಟ್ಟಣದಲ್ಲಿ ಡಾಕ್ಟರ್ ಬೋಮಾಂಜಿ ಎಂಬೊ ...ಬ್ಯಾಂಕಿನಲ್ಲಿ ಛೆಕ್ಕು ಕೊಟ್ಟು ೧,೩೬೭ ರೂಪಾಯಿಗೆ ನೋ... ...ನ್ನು ಚಿಲ್ಲರೆ ರೂಪಾಯಿಗಳನ್ನೂ ತೆಗೆದುಕೊಂಡನು ೧,೨೦೦ ...ಯ ನೋಟುಗಳನ್ನು ಗಂಟುಕಟ್ಟಿ ಕೈಲಿ ಹಿಡಿದುಕೊಂಡು ...ಗುತ್ತಿರುವಲ್ಲಿ ಒಬ್ಬ ಪ್ರಾಣಿಯು ಅಕಸ್ಮಾತ್ತಾಗಿ ಅವನ ...ಬಿದ್ದು ಹೊಡೆದು ಕೆಡವಿ, ಅವನ ಕೈಲಿದ್ದ ನೋಟುಗಳ ಗಂಟ ...ಪಹರಿಸಿಕೊಂಡು ಹೋದನು. ಅವನು ಪ್ರಿಡ್ಜ್ ಬೀದಿ ಮೇಲೆ ...ಕಳ್ಳನನ್ನು ಹುಡುಕಿಕೊಂಡು ಹೋದನು. ಕಳ್ಳನಾದರೋ ...ಸಿಕ್ಕಲೇ ಇಲ್ಲ. ಹಗಲಿನಲ್ಲಿ ರಾಜಾರೋಷವಾಗಿ ಈ ರೀತಿ ...ಬಿದ್ದು ದರೋಡೆ ಮಾಡಿದ್ದು ಆಶ್ಚರ್ಯವೂ ಆಗಿದೆ.

••••

...ಗಳೂರ ಪಟ್ಟಣದ ಮ್ಯುನಿಸಿಪಾಲಿಟಿಯವರು ಪ್ರಜೆಗಳಿಗೆ ...ಕುಡಿಯುವ ನೀರನ್ನು ತಂದೊದಗಿಸಬೇಕೆಂದು ಯೋಚಿಸಿ, ...೧೦,೦ ರೂಪಾಯಿ ಖರ್ಚು ಮಾಡಿ, ಕಾಮಗಾರಿ ಮಾಡಿಸಿ ...ಗಳ ಮೂಲಕ ನೀರು ತಂದು ಬಿಟ್ಟರು. ಈ ನೀರು ಊರಿನ ಕೆಲ ...ಭಾಗಕ್ಕೆ ಸರಿಯಾಗಿ ಸರಬರಾಯಿ ಆಗುವುದಿಲ್ಲವೆಂದು ಅನೇಕರು ...ಲು ಮಾಡಲಾರಂಭಿಸಿದರು. ಇದರ ನಿಜಸ್ಥಿತಿಯನ್ನು ಪರೀಕ್ಷೆ ...ರಿಪೋರ್ಟು ಕಳುಹಿಸಬೇಕೆಂದು ಗವರ್ನಮೆಂಟಿನವರು ಗ ...ಣದ ಮೂವರು ಇಂಜನಿಯರುಗಳನ್ನು ನೇಮಕ ಮಾಡಿದರು. ...ಎಲ್ಲಾ ಸಂಗತಿಗಳನ್ನೂ ಅವಲೋಕಿಸಿ ಮಾಡಿ, ಕಾಮಗಾರಿ ...ತೃಪ್ತಿಕರವಾಗಿದೆ ಎಂತಲೂ ಪಟ್ಟಣಕ್ಕೆ ಎಷ್ಟು ನೀರು ಬೇಕಾ... ...ತಂದು ಒದಗಿಸಬಹುದೆಂತಲೂ ರಿಪೋರ್ಟು ಕೊಟ್ಟಿದ್ದಾರೆ.

••••

...ಪಟ್ಟಣದ ಮ್ಯುನಿಸಿಪಾಲಿಟಿಯವರು ಅಲ್ಲಿಗೆ ಊಟ ಪದಗಳ ...ಳ ಬರುವ ಪದಾರ್ಥಗಳಿಗೆ ಸುಂಕವನ್ನು ಹಾಕಿ ವಸೂಲ್ಮಾಡ್ಡ... ...ಸಾಲದೆಂದು ಯೋಚಿಸಿ, ಆ ಪಟ್ಟಣಕ್ಕೆ ಬೇರೆ ಬೇರೆ ಕಡೆಗಳಿಂ... ...ರು ಮೇಲೆ ಬರುವ ಪದಾರ್ಥಗಳಿಗೂ ಆಯಾ ವಿಳಾಸದಾರ ...ಸುಂಕವನ್ನು ವಸೂಲ್ಮಾಡಿ, ತಮ್ಮ ಆದಾಯ ಉತ್ಪತ್ತಿಯ ...ಜಾಸ್ತಿ ಮಾಡಿಕೊಳ್ಳಬೇಕೆಂದು ಪ್ರಯತ್ನ ಪಡುತ್ತಿದ್ದಾರೆ. ಈ ಉದ್ದೇ... ...ಮ್ಯುನಿಸಿಪಾಲಿಟಿಯವರು ಅಂಚೆ ಇಲಾಖೆಯವರನ್ನು ಛಾಂಗಿ ...ಕೊಡಬೇಕೆಂದು ಕೇಳಿದರು. ಅಂಚೆಯವರು ಆ ಲಿಷ್ಟುಗ... ...ಕೊಡಲಾಗುವುದಿಲ್ಲವೆಂದು ಹೇಳಿಬಿಟ್ಟರು. ಆದರೆ ಮ್ಯುನಿ... ...ಸಿಪಾಲಿಟಿಯವರು ಕರಾಚಿ ಮತ್ತು ಅಹಮದಾಬಾದುಗಳ ...ಸಲ್ ಇಲಾಖೆಗೆ ಬರೆದು ಅಲ್ಲಿನ ನಡವಳಿಕೆಯನ್ನು ಕೇಳಿದ್ದಾರೆ.

••••

...ಗಳೂರ ಪಟ್ಟಣದ ಸ್ಪ್ರಾಂಡ್ ಹೊಟೇಲಿನಲ್ಲಿ ಇಳುಕೊಂಡಿದ್ದ ...ಆಲ್ಬರ್ಟ್ ಫಿಷರ್ ಎಂಬ ಭಾರೀ ಜವಾಹಿರಿ ವ್ಯಾಪಾರಸ್ಥನು ...ಪಟ್ಟಣದಿಂದ ರಂಗೂನಿಗೆ ರಾತ್ರಿ ಗಾಡಿಯಲ್ಲಿ ಹೋಗುತ್ತಿದ್ದಾಗ ...ಯೇ ಒಬ್ಬ ಕಳ್ಳನು ಅವನ ಕೊಠಡಿಗೆ ಹೋಗಿ ಅವನ ಬಳಿ ...ಟ್ಟುಕೊಂಡಿದ್ದ ದೊಡ್ಡ ಚಕ್ಕಳದ ಪೆಟ್ಟಿಗೆಯನ್ನು ಅಪಹರಿಸಿಬಿಟ್ಟ ...ಅದರಲ್ಲಿ ಸುಮಾರು ಮೂರು ಲಕ್ಷ ರೂಪಾಯಿನ ಜವಾಹಿರಿ ನಗ ...ಗಳು. ಅದನ್ನು ಪತ್ತೆ ಮಾಡಿ ಕೊಡುವವರಿಗೆ ೨೦,೦೦೦ ರೂಪಾ ...ಯಿ ಬಹುಮಾನ ಸಿಕ್ಕುವುದೆಂದು ತಿಳಿಸಿದ್ದಾನೆ. ಆ ಕೈ ಪೆಟ್ಟಿಗೆಯಲ್ಲಿ ...ಭಾರೀ ವಜ್ರಗಳೂ, ೨೦೬೦ ಕೆಂಪುಗಳೂ, ೬೯೩ ಗೋಮೇ... ...ಧಿಕ, ೪೬೪ ಪುಷ್ಯರಾಗಗಳೂ, ೨೩೩ ಸುಂದರವಾದ ಮುತ್ತಿನ ...ಸರ, ೬೨೫ ಅಮೇರಿಕದ ಚಿನ್ನದ ನಾಣ್ಯಗಳೂ ಇದ್ದುವೆಂದು ...ಳಿಸಿರುತ್ತಾನೆ.

••••

ಉತ್ತರ ದೇಶಕ್ಕೆ ಸೇರಿದ ಷಹರನ್ಪುರದಲ್ಲಿ ಕಳೆದ ೧೯೦೨ ನೆ ...ಯಲ್ಲಿ ೨೫೦ ಮಂದಿ ಹಿಂದುಗಳು ಒಂದು ಸಂಘ ಮಾಡಿಕೊಂಡು, ...ಪುನರ್ವಿವಾಹವೇ ಮೊದಲಾದ ಸಂಘ ಪರಿಷ್ಕರಣ ಕಾರ್ಯಗ... ...ಳನ್ನು ಮುತುವರ್ಜಿಯಾಗಿ ಮಾಡುತ್ತಾ ಬಂದಿದ್ದಾರೆ. ಈ ಸಂ... ...ಘ ಪ್ರೋತ್ಸಾಹ ಬಲದಿಂದ ಈ ಮೂರು ವರುಷಗಳಲ್ಲಿ ೧೨೩ ...ರಿಗೆ ಪುನರ್ವಿವಾಹವಾಯಿತು. ಹೋದ ವರುಷ ತಿಂಗಳಿಗೆ ...ಕ ಈ ವಿವಾಹಗಳನ್ನು ಮಾಡಿಸಿರುತ್ತಾರೆ. ಈ ವಿವಾಹಗಳೆಲ್ಲಾ ...ವ ವರ್ಣದವರೆನಿಸಿಕೊಂಡ ಬ್ರಾಹ್ಮಣರಲ್ಲೇ ನಡೆದಿರುವವು ...ಪುಣ್ಯಕಾರ್ಯವನ್ನು ಮಾಡಿಸುತ್ತಿರುವುದಕ್ಕಾಗಿ ಎಲ್ಲರೂ ...ಸಂಘವನ್ನು ಕೊಂಡಾಡುವರು. ೧೯೦೧ ನೆ ಇಸವಿಯ ಜಾನೇ ...ವಾರಿ (ಸೆನಸಸ್) ಲೆಕ್ಕಗಳ ಪ್ರಕಾರ ಹಿಂದುಸ್ಥಾನದಲ್ಲಿ ...೬,೪೯,೬೪೯ ಮಂದಿ ಹಿಂದೂ ವಿಧವೆಯರು ಇರುತ್ತಾರೆಂತಲೂ ...ಲ್ಲಿ ೩,೨೧,೬೩೦ ಮಂದಿ ವಿಧವೆಯರು ೧೫ ವರುಷಕ್ಕಿಂತಲೂ ...ವಯಸ್ಸಿನವರೆಂತಲೂ ತಿಳಿದು ಬರುತ್ತದೆ. ಆದಕಾರಣ ಇಂಥಾ ...ಗಳು ಇನ್ನೂ ಎಷ್ಟು ಮಟ್ಟಿಗೆ ಹೆಚ್ಚಿದರೂ ಅಷ್ಟು ಅನುಕೂಲ ...ಕ್ಕೆ ಸಂಶಯವಿಲ್ಲ.

••••

...ವರಿ ತಿಂಗಳಲ್ಲಿ ಪ್ರಿನ್ಸ್ ಆಫ್ ವೇಲ್ಸ್‌ರವರು ಪೆಷಾವರ್ ...ನಲ್ಲಿ ಹಿಂದುಸ್ಥಾನದ ೩೦–೪೦ ಸಹಸ್ರ ಸೈನಿಕರ ಕವಾತು ...ನ್ನು ನೋಡಿ ಬಂದರಷ್ಟೆ. ಆ ಸೈನಿಕರ ಪೈಕಿ ಒಬ್ಬ ಇಂ... ...ಗ್ಲಿಷ್ ಹುದ್ದೇದಾರನು ಅದೇ ಸಂದರ್ಭದಲ್ಲಿ ಒಂದು ಹೊಳೆಯನ್ನು ದಾಟಿಕೊಂಡು ಬರುತ್ತಿರುವಾಗ್ಗೆ ನಡುನೀರಿನಲ್ಲಿ ಸಿಕ್ಕಿ ಮುಳುಗಿ ಕೊಂಡನು. ದಫೇದಾರ್ ದಿಲಾವರ್ ಖಾನ್ ಎಂಬುವನು ಅದನ್ನು ನೋಡಿ ಕೂಡಲೇ ಹೊಳೆಗೆ ಧುಮುಕಿ, ಮುಳುಗಿದ್ದ ಆ ಹುದ್ದೇದಾರನನ್ನು ಮೇಲಕ್ಕೆತ್ತಿ ಬದುಕಿಸಿದನು. ಆದರೆ ತಾನು ನೀರು ದಾಟಿ ಬರುವಾಗ್ಗೆ ಒಂದು ಸುಳಿಯಲ್ಲಿ ಸಿಕ್ಕಿ ಸತ್ತೇ ಹೋದನು. ಈ ಸುದ್ದಿಯು ಪತ್ರಿಕೆಗಳಲ್ಲಿ ಪ್ರಕಟವಾದುದನ್ನು ಪ್ರಿನ್ಸ್ ಆಫ್ ವೇಲ್ಸ್‌ರವರು ಓದಿ ನೋಡಿಕೊಂಡು, ದಿಲಾವರ್ ಖಾನನ ಸಹೋದರವಾತ್ಸಲ್ಯವನ್ನೂ ಅದಕ್ಕಾಗಿ ಅವನು ತನ್ನ ಪ್ರಾಣವನ್ನೇ ಕೊಟ್ಟದ್ದನ್ನೂ ಬಹಳವಾಗಿ ಕೊಂಡಾಡಿ, ತುಂಬಾ ವ್ಯಸನಪಟ್ಟು, ಮೃತಪಟ್ಟವನ ಹೆಂಡತಿ ಮಕ್ಕಳಿಗೆ ಇನಾಮು ಕೊಡಬೇಕೆಂದು ತಮ್ಮ ಕೈಯಿಂದ ೫೦೦ ರೂಪಾಯಿ ಕಳುಹಿಸಿರುತ್ತಾರೆ. ರಾಜವರ್ಗದವರ ಕನಿಕರವು ಎಷ್ಟು ಮಟ್ಟಿನದೋ ಇದರಿಂದಲೇ ಪ್ರಕಾಶವಾಗುವುದು.

••••

ಮದರಾಸ್ ಅಧಿಪತ್ಯದಲ್ಲಿ ವಿಧವೆಯರಿಗೆ ಪುನರ್ವಿವಾಹ ಮಾಡಬೇಕೆಂಬುದನ್ನು ಪ್ರಾರಂಭಿಸಿ, ಅದಕ್ಕಾಗಿ ತುಂಬಾ ಸಾಹಸ ಪಡುತ್ತಿರುವ ರಾವ್ ಬಹದೂರ್ ವೀರೇಶಲಿಂಗಂ ಪಂತುಲು ಯವರು ಉತ್ತಮ ವರ್ಣದ ಬ್ರಾಹ್ಮಣರಾಗಿರುತ್ತಾರೆ. ಇವರು ಕಳೆದ ವಾರ ಜನಿವಾರವನ್ನು ತೆಗೆದುಹಾಕಿ, ಎಲ್ಲಾ ಕೋಮುಗಳ ಪ್ರತಿನಿಧಿಗಳನ್ನೂ ತಮ್ಮ ಮನೆಗೆ ಕರೆಸಿಕೊಂಡು, ಅವರ ಪಂಕ್ತಿಯಲ್ಲಿ ಕುಳಿತು ಭೋಜನಾದಿಗಳನ್ನು ಮಾಡಿದರು. ಹಿಂದುಸ್ಥಾನದಲ್ಲಿ ಜಾತಿಯೆಂಬ ರಾಕ್ಷಸನು ಜನರನ್ನು ಅಭಿವೃದ್ಧಿಗೆ ಬಾರದಂತೆ ತಡೆದಿರುತ್ತಾನೆ. ಮಿ॥ ಪಂತುಲು ಯವರು ಬ್ರಾಹ್ಮಣಿಕೆಯು ಜನಿವಾರದಲ್ಲಿ ಇರುತ್ತಿಲ್ಲವೆಂಬುದನ್ನು ದೃಷ್ಟಾಂತ ಪಡಿಸುವುದಕ್ಕೂ ಸಕಲ ಪ್ರಜೆಗಳೂ ಸಮಸ್ತ ವಿಷಯಗಳಲ್ಲೂ ಕಾಲ ದೇಶ ವರ್ತಮಾನಗಳಿಗನುಸಾರವಾಗಿ ತಮ್ಮ ನಡೆನುಡಿ ಆಚಾರ ವ್ಯವಹಾರಗಳನ್ನು ಬದಲಾಯಿಸಿ ಮಾಡಿಕೊಂಡು, ಏಕೀಭವಿಸಿದ ಶ್ರೇಷ್ಠತೆಗಾಗಿ ಕಾರ್ಯಗಳನ್ನು ಮಾಡುತ್ತಾ ಬರಬೇಕೆಂಬುದನ್ನು ದೃಷ್ಟಾಂತ ಪಡಿಸುವುದಕ್ಕೂ ತಮ್ಮ ಕೊರಳಲ್ಲಿದ್ದ ಜನಿವಾರವನ್ನು ತೆಗೆದು ಹಾಕಿ, ಇತರರಿಗೆ ಒಳ್ಳೆ ಮೇಲ್ಪಂಕ್ತಿಯನ್ನು ತೋರಿಸಿ ಕೊಟ್ಟರು. ದೇಶವತ್ಸಲರು ಅವರನ್ನು ಕೊಂಡಾಡದಿರಲಾರರು.

ಬಾತ್ಮೀದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಜಾಗಾ ಕೊಡಲಾರೆವು. ಆದಕಾರಣ ಬಾತ್ಮೀದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು, ಇಂಥವುಗಳಿಗೆ ನಾವು ಜಾಗಾ ಕೊಡಲಾರೆವು.

ಪ್ರಕಟಿಸಲಾರೆವೆಂದು ಹೇಳಿ ತಿರಸ್ಕರಿಸಿದ ಬಾತ್ಮಿಗಳನ್ನು ವಾಪಸು ಬಾತ್ಮೀದಾರರಿಗೆ ವಾಪಸು ಕಳುಹಿಸಲಾರೆವು.

ಬಾತ್ಮೀದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಎಡಿ.

"ಸರ್ವಮತ ಶ್ರೇಯಃಕಾಮಿ"—ನೀವು "ಮತವೂ ದಾಯಭಾಗವೂ" ಎಂಬೀ ವಿಷಯವಾಗಿ ಬರೆದಿರುವ ಬಾತ್ಮಿಯಿಂದ ನಿಮ್ಮ ಅಭಿಪ್ರಾಯವೇನೆಂಬುವುದು ನಮಗೆ ಗೊತ್ತಾಗುವುದಿಲ್ಲ. ನಿಮ್ಮ ಆಶಯವನ್ನು ಸ್ಪಷ್ಟವಾಗಿಯೂ, ಸುಲಭವಾದ ಮಾತುಗಳುಳ್ಳದ್ದಾಗಿಯೂ, ನಮಗೂ ನಮ್ಮ ವಾಚಕರಿಗೂ ಬೇಗ ಅರ್ಥವಾಗುವಂತೆಯೂ ಬರೆದು ಕಳುಹಿಸಿದಲ್ಲಿ ನಾವು ಅದನ್ನು ಪ್ರಕಟಿಸಿ ನಮ್ಮ ಅಭಿಪ್ರಾಯವನ್ನು ತಿಳಿಸಲು ಅನುಕೂಲವಾಗುತ್ತೆ. ಈಗ ನೀವು ಬರೆದಿರುವುದು ನಮ್ಮ ವಾಚಕರಿಗೆ ಅರ್ಥವಾಗುವಂತಿಲ್ಲವೆಂದು ತಿಳಿಸಲು ವಿಷಾದಿಸುತ್ತೇವೆ. ಹೊಸಕನ್ನಡ ಪದಗಳನ್ನು ಉಪಯೋಗಿಸಿ ಬರೆದರೆ ಅನುಕೂಲವೆಂದು ಸೂಚಿಸುತ್ತೇವೆ. —ಎಡಿ.]

ಕರೆಸ್‌ಪಾಂಡೆನ್ಸ್.

ಪ್ರದರ್ಶನೋತ್ಸವ.

ಅಯ್ಯಾ,

ನಿಮ್ಮ ಹೋದವಾರ ಪತ್ರಿಕೆಯಲ್ಲಿ ಮೈಸೂರ್ ವಸ್ತುಪ್ರದರ್ಶನದ ಆರ್ಟಿಕಲ್‌ನಲ್ಲಿ ಎಚ್. ಸಂಕಪ್ಪ ಬಸಪ್ಪ ಎಂಬ ಹೆಸರಿಗೆ ಮೆ॥ ಕಾಳಪ್ಪ ಬಾನಪ್ಪ ಎಂಬದಾಗಿ ತಾವು ಪ್ರಕಟಿಸಿರುವದು ಸರಿಯಷ್ಟೆ. ಈ ಹೆಸರು ತಪ್ಪಾಗಿ ಪ್ರಿಂಟಾಗಿದೆ. ಇವರ ಹೆಸರುಗಳು ತಮ್ಮ ಪತ್ರಿಕೆಗೆ ಚಂದಾದಾರರಾಗಿರುತ್ತಾರೆ. ಇವರುಗಳಿಗೆ ಮೆಡಲ್ ಬಂದಿರುತ್ತೆ. ಆದರೂ ಹೆಸರುಗಳು ಬದಲಾಗಿರುವದರಿಂದ ದಯವಿಟ್ಟು ಈ ವಾರದ ಪತ್ರಿಕೆಯಲ್ಲಿ ಹೆಚ್. ಸಂಕಪ್ಪ, ಬಸಪ್ಪ ಎಂದು ನಿಮ್ಮ ಪತ್ರಿಕೆಯಲ್ಲಿ ಪ್ರಿಂಟ್‌ಮಾಡಬೇಕು.

ಚಂದಾದಾರ.

ಕೊಪ್ಪ ತಾ॥ ನಾರ್ವೆಯಲ್ಲಿ ಕಳವು.

ಅಯ್ಯಾ,

ಈ ಊರಲ್ಲಿ ಇದೇ ತಿಂಗಳು ೧೫ ನೆ ತಾ. ನದಿಯಲ್ಲಿ ಸ್ನಾನಕ್ಕಾಗಿ ಇಟ್ಟಿದ್ದ ೩ ತಾಂಬ್ರದ ಪಂಚೆಗಳನ್ನು ರಾತ್ರಿ ಕಳ್ಳರು ಕಳವು ಮಾಡಿಕೊಂಡು ಹೋಗಿರುತ್ತಾರೆ. ಆದರೆ ಈ ಊರಲ್ಲಿ ಯಾವಾಗಲೂ ಈ ರೀತಿ ಕಳವು ಆಗಿರಲಿಲ್ಲ. ಈಗೀಗ ಎಚ್ಚತ್ತುಕೊಳ್ಳಬೇಕಾಗಿದೆ. ಆದರೆ ಇಲ್ಲಿನವರು ವೈದೀಕರಾದ್ದರಿಂದ ಆ ದಿವಸ ಗ್ರಾಮಾಂತರಕ್ಕೆ ದಾನ ದಕ್ಷಿಣೆಗೆ ಹೋಗಿದ್ದರು. ಒಂದು ವೇಳೆ ಅವರು ಮನೆಯಲ್ಲಿದ್ದರೂ ಆ ನದಿಯಲ್ಲಿ ಕಾದುಕೊಳ್ಳಲು ಈ ಸಂಗತಿ ತಿಳಿದಿತ್ತೇ? ಇಲ್ಲ. ಈಗ ಸರ್ಕಾರಕ್ಕೆ ಫಿರ್ಯಾದು ಕೊಟ್ಟಿರುತ್ತಾರೆ. ಮುಂದೆ ಈ ರೀತಿ ಹಳ್ಳಿಗಳಲ್ಲಾ ಕಳ್ಳತನ ಹೆಚ್ಚುತ್ತಾ ಬರುವುದರಿಂದ ಕಾಲಕ್ಷೇಪ ಮಾಡುವುದು ಬಹು ಕಷ್ಟವೆಂಬುದು ವಾಚಕರಿಗೆಲ್ಲಾ ತಿಳಿದೇ ಇದೆ.

ಬಾತ್ಮೀದಾರ.

ಗೋರೀಬಿದನೂರು ವೃತ್ತಾಂತ.

ಅಯ್ಯಾ,

ಮಳೆ ಇಲ್ಲದೆ ಎಲ್ಲೆಲ್ಲೂ ಸರಕು ತುಂಬಾ ಹೆಚ್ಚು ಖರೀದಿಯಾಗಿರುತ್ತೆ. ಬಡವರಿಗೆ ತುಂಬಾ ಬರಗಾಲ ಪ್ರಾಪ್ತವಾದಂತಿದೆ. ಈಗ ತುಂಬಾ ಬಿಸಲುಕಾಲದ ಬಿಸಲಿನಂತೆ ಬೇಗೆಯು ಪ್ರಾಬಲ್ಯವಾಗಿಯೇ ಇರುತ್ತೆ. ನೀರು ಭಾವಿಗಳಿಂದ ಸಾಗುವಳಿಗೆ ಕಪಿಲೆಯೆತ್ತುವದರಿಂದ ತುಂಬಾ ಶ್ರಮವಾಗಿರುತ್ತೆ. ಸರ್ಕಾರಿ ದೀಪಗಳು ಆಫೀಸರುಗಳು ಓಡಾಡುವ ರೋಡುಗಳಲ್ಲಿ ತುಂಬಾ ಪ್ರಕಾಶವಾಗಿಯೂ ರಾತ್ರಿಯೆಲ್ಲಾ ಉರಿಯುತ್ತೆ. ಜೂಜಾಟಗಾರರು ಮತ್ತು ಕೆಲಸವಿಲ್ಲದ ಹೊಸ ಜವಾನರು ತುಂಬಾ ಹೆಚ್ಚುತ್ತಲಿರುತ್ತಾರೆ. ಕೆಲವು ಕಾಲದಿಂದ ಆಗಾಗ್ಗೆ ಕಳವುಗಳು ಆಗುತ್ತಲೇ ಇರುತ್ತವೆ. ಖರೀದಾರರ ಮನೆಯಲ್ಲಿಯೇ ಒಂದು ತಂಬಿಗೆ ಕಳವಾಯಿತು. ಈಗಾದರೂ ಪತ್ತೆಯಾಗುತ್ತೆಂದು ನಂಬುತ್ತೇನೆ. ಪೋಲೀಸು ಜವಾನರಂತೂ ಅಬ್ಕಾರಿಗೆ ತುಂಬಾ ಸಹಾಯಕರಾಗಿರುತ್ತಾರೆ.

ಕರುಣಾಳಿ.

ಗೋಕಾಯಿಗಳ ಗೋಳು.

ಅಯ್ಯಾ,

ಈ ಬೌರಿಂಗಪ್ಯಾಟೆ ತಾಲ್ಲೂಕು ಆಮಸಮುದ್ರ ಮತ್ತು ಬೂದೀಕೋಟೆ, ಈ ಹೋಬಳಿಗಳಿಗೆ ಸೇರಿದ ಕೆಲವು ಹಳ್ಳಿಗಳಲ್ಲಿರುವ ಹಸು ಎತ್ತು ಎಮ್ಮೆ ಕುರಿ ವಗೈರೆ ಮೂಗುಪ್ರಾಣಿಗಳಿಗೆ ಈಗ ಒಂದು ವಿಧವಾದ ರೋಗವು ಹರಡುತ್ತಿದೆ. ೧. ಮೈ ನಡುಗುವುದು. ೨. ಹುಲ್ಲು ಮೇಯುವುದಿಲ್ಲ. ೩ನೆ ದಿನ ಕಾಲಿನ ಗೊರಸುಗಳು ಹುಣ್ಣಾಗಿ ನಡೆಯಲು ಬಹಳ ಕಷ್ಟಪಡುವವು. ೩ನೆ ದಿನ ಹಿಂದೂ ಗೊರಸುಗಳ ಸಂದಿನಲ್ಲಿ ಸ್ವಲ್ಪ ವಾಸನೆ ಉಂಟಾಗಿ ನೊಣಗಳು ಹೋಗುವದು ಬರುವದು, ಈ ರೀತಿಯಾಗುತ್ತೆ. ಆಗ ಈ ಮೂಗು ಪ್ರಾಣಿಗಳು ಕಾಲುಗಳನ್ನು ಝಾಡಿಸುತ್ತಾ ಬಹಳ ಸಂಕಟಪಡುವವು. ೫ನೇ ದಿನ ಗೊರಸುಗಳು ವಾಸನೆ ಬಡಿಯುವದಲ್ಲದೆ, ಸಣ್ಣ ಸಣ್ಣ ಕ್ರಿಮಿಗಳು ಕಾಣಿಸಿಕೊಳ್ಳುವವು. ಈ ಕಾಲದಲ್ಲಿ ಅವು ಪಡುವ ಕಷ್ಟವನ್ನು ಬರೆಯಲು ಶಕ್ಯವಲ್ಲ. ಈ ವಿಧವಾದ ರೋಗದಿಂದ ಕೆಲವು ದನಗಳು ಪ್ರಾಣಗಳನ್ನು ಬಿಡುವವು. ಆದ್ದರಿಂದ ಭೂತದಯಾ ಪತ್ತಾಪ ಪರರಾದ ತಾವು ದಯವಿಟ್ಟು ತಮ್ಮ ಪತ್ರಿಕೆಯಲ್ಲಿ ಪ್ರಕಟಿಸಿದರೆ ಯಾರಾದರೂ ಪುಣ್ಯಾತ್ಮರು ದಯವಿಟ್ಟು ಈ ರೋಗಕ್ಕೆ ತಕ್ಕ ಔಷಧ ಯ ಕ್ರಿಯೂ ಉಪಯೋಗಿಸುವ ಕ್ರಮ ತಿಳಿಸುತ್ತಾರೆಂದು ಈ ಮೂಲಕ ಶ್ರುತಪಡಿಸಿರುತ್ತೇನೆ.

ಚಂದಾದಾರ.

ಬಾಣಾವಾರದ ಸಂಗತಿಗಳು.

ಅಯ್ಯಾ,

ಇದೇ ಊರು ರಾಮಾಚಾರ್ಯರ ಭಾವಿಯಲ್ಲಿ ಸುಮಾರು ೧೨ ವರುಷದ ಹುಡುಗಿಯು ನೀರುಸೇದುತ್ತಾ ಅಕಸ್ಮಾತ್ ಕಾಲುಜಾರಿ ಬಿದ್ದು ಸತ್ತುಹೋಯಿತು. ಹತ್ತಿರದಲ್ಲಿದ್ದವರು ಯಾರೊಬ್ಬರೂ ಪ್ರಾಣಹೋಗುವ ಕಾಲದಲ್ಲಿ ಸಹಾಯಮಾಡದೆ ಪಲಾಯನವಾದರು. ಭಾವಿಗೆ ಗಡಗಡೆ ಇಲ್ಲದಿರುವುದು ತುಂಬಾ ಅಪಾಯಕರ ಮತ್ತು ಒಂಟಿಯಾಗಿ ಮಕ್ಕಳನ್ನು ಭಾವಿಗೆ ಕಳುಹಿಸುವುದು ಪ್ರಾಣಾಪಾಯವಲ್ಲದೆ ಹೆತ್ತವರಿಗೆ ದುಃಖಕರವಾದದ್ದಾಗಿದೆ. ಇನ್ನಾದರೂ ಜನಗಳು ಒಂಟಿಯಾಗಿ ಮಕ್ಕಳನ್ನು ಕಳುಹದೆ ಜಾಗರೂಕರಾಗಿದ್ದಾರೆಂದು ನಂಬುವೆನು.

ಇದೇ ಊರು ವೈಲಾರ ದೇವರ ದೇವಸ್ಥಾನದಲ್ಲಿದ್ದ ಉತ್ಸವ ಮೂರ್ತಿಯನ್ನು ಯಾರೋ ಸಂಚಾರಕ್ಕೆ ತೆಗೆದುಕೊಂಡು ಹೋದರು. ಇವರ ಆಶಯವು ಏನಾಗಿರುವುದೋ ತಿಳಿಯದು. ಈ ಕಾಲದಲ್ಲಿ ಸದರಿ ದೇವರ ಜಾತ್ರೆ ನಡೆಯಬೇಕಾಗಿತ್ತು. ಇದನ್ನು ತಪ್ಪಿಸಲು ಈ ಯೋಚನೆ ಮಾಡಿದಂತೆ ಕಾಣುತ್ತೆ. ಇವರು ಎಷ್ಟು ಪುಣ್ಯಾತ್ಮರೋ ಕಾಣೆ! ದೇವರು ಇದ್ದಲ್ಲಿ ಇದ್ದರೇನು? ಇಲ್ಲದೆ ಹೋದರೇನು? ಇದರಿಂದ ದೇವರಿಗೆ ಉಂಟಾದ ಕುಂದಕವೇನು? ಜನಗಳ ಮೂಢತನವು ದೇವರ ಕೆಲಸಕ್ಕೆ ಹಾನಿಕರ. ಈ ಮುಂಚೆ ಇದರ ವೈವಾಟು ನೋಡುತ್ತಿದ್ದು ಗತಿಸಿಹೋದ ಪುಣ್ಯಾತ್ಮರಾದವರ ಹೆಸರನ್ನು ಕೆಡಿಸಲು ಈ ಯೋಚನೆ ಮಾಡಿರಬಹುದೆಂದು ಜನಗಳು ಹೇಳಿಕೊಳ್ಳುತ್ತಾರೆ. ಏಕೆ? ದೇವರು ಇಲ್ಲದಾಗ್ಯೂ ಸರಪಣಿ ಜಾತ್ರೆ ಎಂಬ ಪರಿಷೆಯೊಂದು ಆಗೇ ಹೋಯಿತು.

ಚಂದಾದಾರ.

ಹಾಸನ ತಾ॥ ಅಂಬುಗದ ವೃತ್ತಾಂತ.

ಅಯ್ಯಾ,

ಈ ನಮ್ಮ ಗ್ರಾಮಕ್ಕೆ ಮೂರು ವರುಷಗಳಿಂದ ಮಳೆ ಇಲ್ಲದೆಲೂ ಇಲ್ಲಿರತಕ್ಕ ಭಾರಿ ಕೆರೆಯನ್ನು ಕಾಂಗಾರಿ ಮಾಡಲೋಸ್ಕರ ಸರ್ಕಾರದವರು ಹಾಳ್ಗೆಡಿಸಿದ್ದರಿಂದಲೂ ಕೊಂಚಮಟ್ಟಿಗೆ ನೀರು ಹೊರಟು ಹೋದ್ದರಿಂದ ಈಗ ಪೈರುಗಳಿಗೆ ನೀರಿಲ್ಲದೆ ಜನಗಳು ಪಡುವ ಕಷ್ಟ ಅಷ್ಟಿಷ್ಟೆಂದು ಹೇಳಲಾಗುವದಿಲ್ಲ. ಇದಲ್ಲದೆ ದನಗಳಿಗೆ ಒಂದು ವಿಧವಾದ ಜ್ವರ ಪ್ರಾಪ್ತವಾಗಿ ಎಲ್ಲವೂ ಮೃತಿಯನ್ನೈದುತ್ತಲಿವೆ.

ಇಲ್ಲಿನ ಸ್ಕೂಲ್ ಮಾಸ್ಟರು ಮೆ॥ ಕೇಶವಾಚಾರ್ರಿಗೆ ಗ್ರಾಮಾಂತರಕ್ಕೆ ವರ್ಗವಾಗಿ ಅವರ ಬದಲಿಗೆ ಹೆರಗು ಸ್ಕೂಲ್ ಮಾಸ್ಟರು ಬರುವ ಪದ್ಧತಿಯಿದೆ. ಈ ಸ್ಕೂಲ್ ಮಾಸ್ಟರು ಇಲ್ಲಿಗೆ ಬಂದಲಾಗಾಯಿತು ಇಲ್ಲಿನ ಜನಗಳ ಪ್ರೀತಿ ಗೌರವಕ್ಕೆ ಪಾತ್ರರಾಗಿ ತಮ್ಮ ಕೆಲಸದಲ್ಲಿ ಬಹಳ ಆಸಕ್ತರಾಗಿ ತಮಗಿರುವ ಪೋಸ್ಟ್ಮಾಸ್ಟರ್ ಕೆಲಸವನ್ನು ಸಹಾ ಮಾಡುತ್ತ ನಮ್ಮ ಬಾಲಕರಿಗೆ ಕೊಂಚ ಅಕ್ಷರಮಾರ್ಗವನ್ನು ತೋರಿಸಿದ್ದರು. ಮುಂದೆ ಬರುವ ಮಾಸ್ಟರು ಇವರಂತೆಯೇ ಸ್ಕೂಲ್ ಅಭಿವೃದ್ಧಿಗೆ ತಂದಾರೆಂದು ಕೋರುತ್ತೇವೆ.

ಕಳೆದ ೧೨ ನೆ ತಾ॥ ರಾತ್ರಿ ಶ್ರೀ ನರಸಿಂಹಾಚಾರ್ಯರ ತೋಟಕ್ಕೆ ಕೋಡಗಗಳ್ಯಾರು ಪ್ರವೇಶಿಸಿ ಎಳೆಯ ಕೊಸಿನೋಡಾದಿಯಲ್ಲಿದ್ದ ಬಾಳೇ ಕಂಬಗಳನ್ನು ವಿಳ್ಳೇದೆಲೆ ಹಂಬುಗಳ ಮೇಲೂ ತಮ್ಮ ಶಕ್ತಿಯನ್ನು ತೋರಿಸಿ ಎಲ್ಲವನ್ನು ಕತ್ತರಿಸಿಹಾಕಿ ತಮ್ಮ ವೈರತ್ವವನ್ನು ತೀರಿಸಿಕೊಂಡು ತೋಟಗಾರರಿಗೆ ನೂರಾರು ರೂಪಾಯಿ ನಷ್ಟವನ್ನುಂಟುಮಾಡಿದರು. ಈಗ ೧೫ ದಿವಸಗಳ ಒಳಗೆ ಇದೇ ರೀತಿ ಇನ್ನೊಬ್ಬರ ತೋಟದಲ್ಲಿ ನಡಿಸಿದ್ದರು. ಈ ಘಾತಕರನ್ನು ನಮ್ಮ ಪಟೇಲರು ಪತ್ತೇಮಾಡಿ ಬಂದೋಬಸ್ತು ಮಾಡ್ಯಾರೆಂದು ಕೋರುತ್ತೇವೆ. ಇಲ್ಲಿರುವ ಕರ್ಣಾಟಕ ಪಂಡಿತ ಲಕ್ಷ್ಮೀನರಸಿಂಹಾಚಾರ್ಯರು ಖಾಯಿಲೆಗಳಿಗೆ ಚಿಕಿತ್ಸೆ ಮಾಡುವದು ಜನಗಳಿಗೆ ಬಹಳ ಉಪಕಾರವಾಗಿದೆ.

ಚಂದಾದಾರ.

ಬೆಳ್ಳೂರು ವರ್ತಮಾನಗಳು.

ಅಯ್ಯಾ,

ಈ ಪ್ರಾಂತ್ಯ ಸುಗ್ಗಿ ಕಾಲವಾದ್ದರಿಂದ ಧಾರಣೆಬಾಸಿಗಳು ರೂ. ಗೆ ೨೦ ಸೇರು ರಾಗಿಯೂ ೮—೯ ಸೇರು ಅಕ್ಕಿಯೂ ಮಾರಲ್ಪಡುತ್ತೆ. ದೇವರು ಮುಂದೆಯೂ ಯಥಾಸ್ಥಿತಿಯಲ್ಲಿರುವಂತೆ ಮಾಡಲಿ ಎಂದು ಪ್ರಾರ್ಥಿಸುತ್ತೇವೆ.— ಈ ಊರು ಕೆರೆಯಲ್ಲಿ ಸುಮಾರು ೧—೨ ತಿಂಗಳು ನೀರಿದ್ದರೂ ಕೂಡ ನಾಲೆಯಲ್ಲಿ ಬಿಡದೆ ಕುಡಿಯುವ ನೀರಿಗೆ ಬಹು ತೊಂದರೆಯಾಗಿದೆ. ಗ್ರಾಮಾಧಿಕಾರಿಗಳು ಇದಕ್ಕೆ ಗಮನಕೊಟ್ಟು ಈ ತೊಂದರೆಯನ್ನು ನಿವಾರಣೆ ಮಾಡಿಕೊಡುವರೆಂದು ನಂಬಿದ್ದೇವೆ. ಇದೇ ಊರು ಶ್ರೀ ಆದಿಮಾಧವರಾಯಸ್ವಾಮಿ ಉತ್ಸವ ನಡೆಯುತ್ತಾ ಬಂದು ರಥೋತ್ಸವವೂ, ಮೂರನೇ ದಿವಸ ಶ್ರೀಯವರ ಪಲ್ಲಕ್ಕಿ ಉತ್ಸವವೂ ಕೋಟೆ ಪೇಟೆಗಳಲ್ಲಿ ನಡೆದವು. ಆದರೆ ಕಳೆದ ವರ್ಷ ಇದೇ ದಿನ ಜೈನ್ನೇ ದೇವರ ಉತ್ಸವವು ನಡೆಸಬೇಕಾಗಿ ಆ ಮತದವರು ಲೈಸೆನ್ಸು ಹೊಂದಿದ್ದದ್ದರಿಂದ ಶ್ರೀಯವರ ಉತ್ಸವವು ನಿಂತು ಹೋಗಿತ್ತು. ಈ ವರ್ಷ ಅವರಿಗೆ ಲೈಸೆನ್ಸು ಸಿಕ್ಕಲಿಲ್ಲವಾಗಿ ಶ್ರೀಯವರ ಉತ್ಸವವು ನಡೆಸಲ್ಪಟ್ಟಿತು. ಗೈರ ಮಾಮೂಲ್ ನಡೆಯುತಕ್ಕದ್ದು ಒಂದೊಂದು ಕೋಮಿನವರಿಗೆ ಮನಸ್ತಾಪವೂ ಮತ್ತು ಕಲಹವೂ ಉಂಟಾಗುವದಕ್ಕೆ ಕಾರಣವೇ ಹೊರ್ತು ಪ್ರಯೋಜನ ಕಾಣುವದಿಲ್ಲ. ಕಳೆದ ವಸಂತ ದಿನ ಗ್ರಾಮ ದೇವತೆ ಉತ್ಸವವನ್ನು ನಡೆಸಿದರು. ಈ ಉತ್ಸವವು ಕೋಟೆ ಪೇಟೆಗಳಲ್ಲಿ ಹೋಗುವಾಗ ಗ್ರಾಮಶಾಂತಿಗಾಗಿ ದಿಕ್ಕು ದಿಕ್ಕಿಗೂ ಅಲ್ಲಲ್ಲೆ ಕುರಿ ಕೋಣಗಳನ್ನು ಕಡಿಯುತಕ್ಕ ಪದ್ಧತಿಯು ಬಹು ಕಾಲದಿಂದಲೂ ಆಚರಣೆಯಲ್ಲಿರುತ್ತೆ. ಅದೇ ಮೇರೆ ಆ ದಿನವೂ ನಡೆಸಿದರು. ಜೈನ ಮತಸ್ಥರಿಗೂ ಮತ್ತು ಇತರರಿಗೂ ಕಲಹಕ್ಕೆ ಅವಕಾಶವಿಲ್ಲದಂತೆ ಆ ಕಾಲದಲ್ಲಿ ನಮ್ಮ ಅಮಲ್ದಾರರವರೂ ಪೋಲೀಸ್ ಇನ್ಸ್ಪೆಕ್ಟರವರೂ ಹಾಜರಿದ್ದು ಕಾಲ ವ್ಯತ್ಯಾಸದಿಂದ ಎರಡು ಉತ್ಸವಗಳನ್ನು ನಡೆಸಿದರು. ಆದರೆ ಗ್ರಾಮ ದೇವತೆಯ ಉತ್ಸವವನ್ನು ನಡೆಸಿದ್ದು ಜೈನ ಮತಸ್ಥರು ತಮ್ಮ ಮತಪದ್ಧತಿಗೆ ವಿರೋಧವೆಂದು ಬಾಕಿ ಕೋಮಿನ ಮುಖಂಡರ ಪೈಕಿ ೧೦—೧೨ ಜನಗಳ ಮೇಲೆ ಮ್ಯಾಜಿಸ್ಟ್ರೇಟರವರ ಕೋರ್ಟಿನಲ್ಲಿ ಫಿರ್ಯಾದು ಮಾಡಿರುವದಾಗಿ ವರ್ತಮಾನ ಕೇಳುತ್ತೇನೆ. ಇದರ ಪರ್ಯವಸಾನ ಮುಂದೆ ತಿಳಿಯಬೇಕು.

ಪ್ರಜಾ ಹಿತಚಿಂತಕ.

ಉಪಾಧ್ಯಾಯರ ಸಂಘ ಬೇಕು.

ಅಯ್ಯಾ,

ಸಕಲ ಜನೋಪಯುಕ್ತವಾಗಿಯೂ, ಶಾಸ್ತ್ರಾಭಿವೃದ್ಧಿಗೆ ಮೂಲಕಾರಣವಾಗಿಯೂ, ಐಹಿಕಾಮುಷ್ಮಿಕ ಭೋಗಗಳಿಗೆ ಸಾಧಕವಾಗಿಯೂ, ಜನಗಳಿಗೆ ನಾಗರೀಕತೆಯನ್ನುಂಟು ಮಾಡುವದಾಗಿಯೂ ಇರುವ ವಿದ್ಯಾ ಸುಖವನ್ನು ಸರ್ವರೂ ಅನುಭವಿಸಬೇಕಾದದ್ದೇ ಸಹಜವಾಗಿರೆಯಷ್ಟೆ. ರಾಜವರ್ಗದವರು ತಮ್ಮ ತಮ್ಮ ರಾಷ್ಟ್ರದಲ್ಲಿ ವಿದ್ಯಾಭಿವೃದ್ಧಿಯನ್ನುಂಟು ಮಾಡುವದಕ್ಕಾಗಿ ವಿಶೇಷ ಧನವ್ಯಯದಿಂದ ಅನೇಕ ಪಾಠಶಾಲೆಗಳನ್ನೇರ್ಪಡಿಸಿ, ತನ್ಮೂಲಕ ಪ್ರಜೆಗಳಿಗೆ ವಿದ್ಯಾಭ್ಯಾಸಮಾಡಿಸಿ, ಅನೇಕ ಪರೀಕ್ಷೆಗಳನ್ನೇರ್ಪಡಿಸಿ, ಆ ಪರೀಕ್ಷೆಗಳಲ್ಲಿ ಉತ್ತೀರ್ಣರಾದವರಿಗೆ ಬಹುಮಾನಗಳನ್ನು ಮಾಡುತ್ತಾ ಇರುವದು ಸರ್ವರಿಗೆ ವೇದ್ಯವಾಗಿರುತ್ತೆ. ಅದರ ಪ್ರಕೃತ ನಮ್ಮ ಮೈಸೂರು ದೇಶದಲ್ಲಿ ಕಾಲೇಜುಗಳಿಗೂ ಹೈ ಸ್ಕೂಲುಗಳಿಗೂ ಕೆಲವು ಆಂಗ್ಲೋ ವರ್ನಾಕ್ಯುಲರ್ ಸ್ಕೂಲುಗಳಿಗೂ ತಮ್ಮ ಪೋಷಕರಾದ ರಾಜವರ್ಗದವರ ಕೃಪಾವಿಶೇಷವು ಪೂರ್ತಿಯಾಗಿ ಸ್ಫುರಿಸಿರುವದರಿಂದಲೂ ಪದೇ ಪದೇ ಆ ಪೋಷಕರು ಅಲ್ಲಿಗೆ ದಯಮಾಡಿ ಅಲ್ಲಿ ಉಂಟಾಗುವ ದೋಷಗಳನ್ನು ಕುರಿತು ಪಾಠಶಾಲೋಪಾಧ್ಯಾಯರಿಗೆ ತಿಳಿಯಪಡಿಸಿ ಸರಿಪಡಿಸಿಕೊಳ್ಳಲು ಸಹಾಯ ಮಾಡುವದರಿಂದಲೂ ಎಷ್ಟೋ ಅಭಿವೃದ್ಧಿಯನ್ನು ಪಡೆದಿರುತ್ತವೆ. ಪರಂತು ಗ್ರಾಮಪಾಠಶಾಲೆಗಳ ಸ್ಥಿತಿಯು ಹೀಗಿಲ್ಲ. ಏಕೆಂದರೆ ಇವುಗಳಿಂದ ಪ್ರಯೋಜನವನ್ನು ಹೊಂದುವ ಪ್ರಜೆಗಳು ವಿಶೇಷವಾಗಿದ್ದಾಗ್ಯೂ ತಮ್ಮ ಮೌಢ್ಯದಿಂದ ಈ ವಿದ್ಯೆಯಿಂದುಂಟಾಗುವ ಉಪಯೋಗಗಳನ್ನು ಸ್ವಲ್ಪವೂ ಯೋಚಿಸದೆ ಇರುವದರಿಂದಲೂ, ಈ ಪಾಠಶಾಲೆಗಳು ತಮ್ಮ ಗ್ರಹಚಾರದೋಷದಿಂದ ರಾಜವರ್ಗದವರ ದರ್ಶನವನ್ನು ವರ್ಷಕ್ಕೊಂದುಬಾರಿಯಾದರೂ ಪಡೆಯೋಣವೆಂದರೆ ಅವೂ ನೆರವೇರದೆ, ಕಿಂಚಿತ್ ಭಾಗ್ಯಫಲದಿಂದ ಆಕಸ್ಮಾತ್ ಯಾವಾಗಲಾದರೂ ದರ್ಶನವನ್ನು ಪಡೆದು ತನ್ನ ಸ್ಥಿತಿಗತಿಗಳನ್ನು ತನ್ನ ಪೋಷಕನ ಮೂಲಕ ವಿನ್ನೈಸಿಕೊಂಡಾಗ್ಯೂ ದರಿದ್ರನನ್ನು ಕಂಡರೆ ಎಲ್ಲರೂ ಉದಾಸೀನಮಾಡುವಂತೆ ಇದರ ಕೋರಿಕೆಗಳೊಂದೂ ಕೈಗೂಡುವದಿಲ್ಲ. ತನ್ನ ಯಜಮಾನನು ತನ್ನನ್ನು ಅಭಿವೃದ್ಧಿಗೆ ತರಲು ಎಷ್ಟು ಕಷ್ಟಪಟ್ಟಾಗ್ಯೂ ನಿಷ್ಫಲವಾಗಿರುತ್ತದೆ. ಹೀಗಿರುವದರಿಂದ ತನ್ನನ್ನೇ ಆಶ್ರಯಿಸಿಕೊಂಡವರಿಗೆ ಯಾವ ರೀತಿ ಉಪಕಾರಮಾಡಬಲ್ಲದು? "ನರೀ ಕೂಗು ಗಿರೀ ಮುಟ್ಟೀತೇ" ಎಂಬ ಸಾಮತಿಗೆ ಸರಿಯಾಗಿ ಒಂದು ಪಾಠಶಾಲೆಯ ಯಜಮಾನನು ತನ್ನ ಪಾಠಶಾಲಾಭಿವೃದ್ಧಿಗೆ ತಕ್ಕ ಏರ್ಪಾಡುಗಳನ್ನು ಮಾಡಲು ಎಷ್ಟು ಸಾಹಸಪಟ್ಟಾಗ್ಯೂ ನೆರವೇರಲಾರದು. ಆದ್ದರಿಂದ ಪ್ರತಿ ವರ್ಷವೂ ಲೋವರ್ ಸೆಕೆಂಡರಿ ಪರೀಕ್ಷಾಕಾಲದಲ್ಲಿ ಅನೇಕ ಉಪಾಧ್ಯಾಯರು ಒಂದೆಡೆ ಸೇರುವದರಿಂದ ಆ ಕಾಲದಲ್ಲಿ ಯಾದರೂ ಎಲ್ಲರೂ ಸೇರಿ ಅಲ್ಲಿನ ಮುಖ್ಯಾಧಿಕಾರಿಗಳಲ್ಲಿ ಪ್ರಜಾಹಿತೈಷಿಗಳಾಗಿಯೂ ಸದ್ಗುಣಿಗಳಾಗಿಯೂ ಕರುಣಾಶಾಲಿಗಳಾಗಿಯೂ ಇರುವವರೊಬ್ಬರನ್ನು ಅಧ್ಯಕ್ಷರನ್ನಾಗಿ ಮಾಡಿಕೊಂಡು, ಒಂದು ಸಭೆಮಾಡಿ ತಮ್ಮ ಪಾಠಶಾಲೆಗಳಲ್ಲಿಯ ನ್ಯೂನಾತಿರೇಕಗಳನ್ನು ಚರ್ಚಿಸಿ, ಎಲ್ಲರೂ ಅನುಮೋದಿಸಿದ ವಿಷಯಗಳನ್ನು ಅಧ್ಯಕ್ಷರ ಇಚ್ಛೆಯೊಡನೆ ಮೇಲ್ಪಟ್ಟ ಅಧಿಕಾರಿಗಳಿಗೆ ವಿಜ್ಞಾಪಿಸಿಕೊಳ್ಳುತ್ತಾ ಬಂದರೆ ಆಗಲಾದರೂ ದಯಾಳು ಸರ್ಕಾರದವರು ಇತ್ತ ಕಡೆ ತಿರುಗಿನೋಡಿ, ತಕ್ಕ ಅನುಕೂಲ್ಯಗಳನ್ನು ಮಾಡಿಕೊಟ್ಟು, ವಿದ್ಯಾಭಿವೃದ್ಧಿಯನ್ನುಂಟುಮಾಡಿಯಾರು. ಈ ನನ್ನ ವಿಜ್ಞಾಪನೆಯನ್ನು ಮೈಸೂರು ದೇಶದ ಪಾಠಶಾಲೆಗಳಲ್ಲಿರುವ ಉಪಾಧ್ಯಾಯರೆಲ್ಲರೂ ಅನುಮೋದಿಸಿ ತಕ್ಕ ಏರ್ಪಾಡುಗಳನ್ನು ಯೋಚಿಸುತ್ತಾರೆಂದು ನಂಬಿರುತ್ತೇನೆ.

ವಿದ್ಯಾ ಪಕ್ಷಪಾತಿ

ದೇವತ್ವವನ್ನು ಸ್ಥಾಪಿಸುವದಕ್ಕೆ ಅತಿ ಬಲವಾದ ಸಾಕ್ಷ್ಯ.

ನಮ್ಮ ಸಿಂಗರಾಚಾರ್ಯರು ಬಹು ನೇಮಾನುವರ್ತರು. ಇವರು ನಿತ್ಯವೂ ತಪ್ಪದೆ ವೇದಪಾರಾಯಣವನ್ನು ಭಕ್ತಿಯಿಂದ ಮಾಡುವವರು. ತಮ್ಮ ಸ್ವಂತ ವೇದಶಾಸ್ತ್ರಪುರಾಣಗಳನ್ನು ಮಾತ್ರವಲ್ಲದೆ ಕ್ರೈಸ್ತರ ಧರ್ಮಗ್ರಂಥವನ್ನೂ ಓದುವದುಂಟು. ಅದರೊಳಗೂ ಕ್ರಿಸ್ತನ ಚರಿತ್ರೆಯನ್ನು ಒಳಗೊಂಡಿರುವ ನಾಲ್ಕು ಸುವಾರ್ತಾಪುಸ್ತಕಗಳನ್ನು ಓದುವರು. ಒಂದು ದಿನ ಅವರು ನನ್ನ ಬಳಿಗೆ ಬಂದು ನಡಸಿದ ಸಂವಾದವನ್ನು ಪತ್ರಿಕಾವಾಚಕರಿಗೂ ತಿಳಿಸುತ್ತೇನೆ.

ಸಿಂ—ಸ್ವಾಮಿ, ನಿಮ್ಮ ಸುವಾರ್ತಾ ಪುಸ್ತಕಗಳನ್ನು ಓದುತ್ತಾ ಬರಲಾಗಿ ನನ್ನಲ್ಲಿ ಸಂದೇಹವು ಬಹಳ ಬಾಧಿಸುತ್ತಿರುವದು. ಆ ಸಂದೇಹವನ್ನು ನೀವು ಪರಿಹಾರ ಮಾಡಬಲ್ಲಿರಾ!

ನಾನು—ಸ್ವಾಮಿ, ನಿಮ್ಮ ಸಂಶಯವೇನೆಂಬುದನ್ನು ತಿಳಿಯುವದಕ್ಕೆ ಮುಂಚಿತವಾಗಿಯೇ ಅದನ್ನು ಪರಿಹರಿಸುತ್ತೇನೆಂದು ಹ್ಯಾಗೆ ತಾನೆ ಹೇಳಲಿ?

ಸಿಂ—ಹಾಗೋ? ಒಳ್ಳೇದು. ನಿಮ್ಮ ಯೇಸುಸ್ವಾಮಿಯೆಂಬುವರು ಯಾವದೋ ಒಂದು ಮಹತ್ಕಾರ್ಯವನ್ನು ನಡಸಿದ ಮೇಲೆ ಅವನ್ನು ಪ್ರಸಿದ್ಧಪಡಿಸುತ್ತೇನೆಂದು ಹೇಳಿದ ಜನಗಳಿಗೆ ಬೇಡವೆಂದು ಅಪ್ಪಣೆ ಕೊಟ್ಟಿರಲ್ಲ, ಅದು ಯಾಕೆ? ದೃಷ್ಟಾಂತವಾಗಿ—ದೆವ್ವಹಿಡಿದವನೊಬ್ಬನು ಆತನನ್ನು ನೋಡಿ—ನೀನು ದೇವಕುಮಾರನೇ ಹೌದು ಎಂದು ಹೇಳಲು ಆತನು ಆ ದೆವ್ವಗಳ ಬಾಯಿ ಮುಚ್ಚಿಸಿದನು. ಮತ್ತೊಂದು ವೇಳೆಯಲ್ಲಿ ಆತನು ಕುರುಡನಾದವನೊಬ್ಬನನ್ನು ಸ್ವಸ್ಥಪಡಿಸಿದಾಗ್ಯೆ ಈ ವಿಷಯವನ್ನು ಒಬ್ಬರಿಗೂ ಹೇಳಬೇಡ ನೋಡಿಕೋ ಎಂದು ಅಪ್ಪಣೆಯನ್ನು ಕೊಟ್ಟನು.

ನಾನು—ಓಹೋ! ನಿಮ್ಮ ಸಂದೇಹವಿಷ್ಟೇನೇ? ಅದನ್ನು ನಾನು ವಿವರಿಸಬಲ್ಲೆ.

ಸಿಂ—ಒಳ್ಳೇದು ವಿವರಿಸಿ ಹೇಳಿರಿ, ನೋಡೋಣ. ಯೇಸುಸ್ವಾಮಿಯು ಇಂಥವನೆಂದು ಜನಗಳು ತಿಳಿದುಕೊಳ್ಳುವದು ಅವಶ್ಯವಾಗಿತ್ತೋ ಇಲ್ಲವೋ? ಹಾಗೆ ತಿಳಿಯಪಡಿಸತಕ್ಕವರನ್ನು ಬೇಡವೆಂದು ಅಡ್ಡಿ ಮಾಡುವದು ಯಾಕೆ?

ನಾನು—ಯೇಸುವಿನ ಕಾಲದಲ್ಲಿ ಜೀವಿಸಿದ ಜನರು ಮಹತ್ತರವಾದ ಆಶ್ಚರ್ಯಕೃತ್ಯಗಳನ್ನು ನಡಸುವಂಥ ಒಬ್ಬ ಉದ್ಧಾರಕನು ಹುಟ್ಟುವದಕ್ಕಿದ್ದಾನೆಂದು ಬಹಳವಾಗಿ ನಿರೀಕ್ಷಣೆ ಮಾಡುತ್ತಿದ್ದರು. ಮಹತ್ಕಾರ್ಯಗಳನ್ನು ನಡಸುವಂಥ ಶಕ್ತಿಯು ಯಾರಲ್ಲಿರುವದೋ ಅವರೇ ದೈವಲಕ್ಷಣಗಳನ್ನುಳ್ಳವರು. ಮಹತ್ಕಾರ್ಯಗಳನ್ನು ನಡಸುವದೇ ದೇವತ್ವಕ್ಕೆ ಸಾಕ್ಷಿಯೆಂದು ಅವರು ನಂಬಿದ್ದರು.

ಸಿಂ—ದೇವತ್ವವನ್ನು ಸ್ಥಾಪಿಸುವದಕ್ಕೆ ಮಹತ್ಕಾರ್ಯಗಳ ನಡಸುವ ಶಕ್ತಿಗಿಂತಲೂ ಹೆಚ್ಚಾದ ಲಕ್ಷಣವಿನ್ಯಾವದುಂಟು?

ನಾನು—ನೀವೇನೋ ಹಾಗೆ ಹೇಳುತ್ತೀರಿ. ನನ್ನ ಮಾತು ಕೇಳಿರಿ. ದೇವರು ತನ್ನ ತತ್ವದಲ್ಲಿ ಕೇವಲ ಪವಿತ್ರನೂ ಸತ್ಯಸ್ವರೂಪನೂ ಆಗಿದ್ದಾನಷ್ಟೆ. ಹಾಗಿರಲಾಗಿ ಆತನಲ್ಲಿ ಪ್ರಸಿದ್ಧವಾಗಿರತಕ್ಕ ಲಕ್ಷಣಗಳು ಯಾವವು? ಸತ್ಯತೆಯೂ ಸಾತ್ವಿಕತ್ವವೂ ಇವೇ ಅಲ್ಲವೇ? ಕೇವಲ ಮನುಷ್ಯರಿಗೆ ಸಾಧ್ಯವಲ್ಲದ ಮಹತ್ಕಾರ್ಯಗಳನ್ನು ಮಾಡುವ ಶಕ್ತಿಗಿಂತಲೂ ದೇವರಿಗೆ ಯೋಗ್ಯವಾದ ಲಕ್ಷಣಗಳು ಪವಿತ್ರತೆಯೂ ಸತ್ಯವೂ ಅಲ್ಲವೇ? ಇದಕ್ಕೊಂದು ದೃಷ್ಟಾಂತವನ್ನು ಹೇಳುತ್ತೇನೆ ಕೇಳಿರಿ. ಒಬ್ಬ ಸನ್ಯಾಸಿಯು ಯೋಗಾಭ್ಯಾಸವನ್ನು ಮಾಡಿ ಪ್ರಾಣಬಂಧನವನ್ನು ಮಾಡತಕ್ಕ ಬಲವನ್ನು ಪಡೆಯಬಹುದು. ಅಥವಾ ಇತರರು ತನ್ನಿಚ್ಛೆಯಂತೆ ನಡೆಯುವಂತೆ ಮಾಡಿಕೊಳ್ಳುವ ವಶೀಕರಣಶಕ್ತಿಯನ್ನು ಪಡೆಯಬಹುದು. ಇಂಥ ಸಮರ್ಥನಾಗಿದ್ದರೂ ಕೂಡ ದುಷ್ಟನಾಗಿಯೂ ಕೇವಲ ಪೈಶಾಚಗುಣವುಳ್ಳವನಾಗಿಯೂ ಇರಬಹುದು. ಅಂಥವನನ್ನು ದೇವರೆಂದು ಹೇಳಲಾದೀತೇ?

ಸಿಂ—ಎಷ್ಟುಮಾತ್ರಕ್ಕೂ ಕೂಡದು. ನೀವು ಸನ್ಯಾಸಿಯ ವಿಷಯವಾಗಿ ಹೇಳಿದಾಗ್ಯ ನಮ್ಮೂರಿಗೆ ಕೆಲವು ದಿನಗಳ ಹಿಂದೆ ಒಬ್ಬನು ಸನ್ಯಾಸಿಯ ವೇಷವನ್ನು ಹಾಕಿಕೊಂಡು ಬಂದಿದ್ದದ್ದು ನೆನಪಿಗೆ ಬರುತ್ತೆ. ಅವನು ಏನೇನೋ ಸಾಮರ್ಥ್ಯವನ್ನು ತೋರಿಸಿ, ತಾನು ತಾಮ್ರವನ್ನು ಚಿನ್ನವಾಗಮಾಡುತ್ತೇನೆಂದು ಹೇಳಿ ಕಂಡವರನ್ನೆಲ್ಲಾ ಸೂರೆ ಮಾಡಿಕೊಂಡು ಓಡಿಹೋದನು!

ನಾನು—ಇಂಥ ಕಳ್ಳರ ಮಾತೇನು ಬಿಡಿ. ಈ ಕಪಟಸನ್ಯಾಸಿಯ ದೃಷ್ಟಾಂತದಿಂದಲೇ ಯೇಸುಸ್ವಾಮಿಯ ವಿಷಯದಲ್ಲಿ ನಿಮಗುಂಟಾಗಿರುವ ಸಂಶಯವು ಪರಿಹಾರವಾಗಬೇಕಾಗಿದೆ. ಸುವಾರ್ತಾಪುಸ್ತಕಗಳಲ್ಲಿನ ಯೇಸುಸ್ವಾಮಿಯ ಚರಿತ್ರೆಯನ್ನು ಚೆನ್ನಾಗಿ ಪರೀಕ್ಷಿಸಿದರೆ ಹಿಂದೇ ಒಂದು ಮಾತಿನಿಂದಲೇ ರೋಗಿಯನ್ನು ಗುಣಪಡಿಸಿದಾಗ್ಯೂ ಇಲ್ಲವೇ ಸತ್ತವರನ್ನು ಜೀವಿಸಮಾಡಿದಾಗ್ಯೂ ದೆವ್ವ ಬಿಡಿಸಿದಾಗ್ಯೂ ಇಷ್ಟು ಮಾತ್ರದಿಂದ ತನ್ನನ್ನು ಸಕಲರೂ ದೇವಕುಮಾರನೆಂದು ತಕ್ಕದ್ದು ಎಂದು ಯೇಸುಸ್ವಾಮಿಯು ಹೇಳಲೇ ಇಲ್ಲ. ಜನ ಮೆಚ್ಚಿಸುವದರ ನಿಮಿತ್ತವಾಗಿ ಆತನು ಮಹತ್ಕಾರ್ಯಗಳನ್ನು ಲಿಲ್ಲ. ಒಂದಾನೊಂದು ಸಂದರ್ಭದಲ್ಲಿ ಕೆಲವರು ಫರಿಸಾಯರು ನು ಹೇಳಿದ್ದು ನಿಮ್ಮ ನೆನಪಿಗೆ ಬರಬಹುದು. ದುಷ್ಟರೂ ಆದ ಸಂತತಿಯವರು ಗುರುತನ್ನು ನೋಡಬೇಕೆಂದಪೇಕ್ಷಿಸು ಎಂದು ಆತನು ಹೇಳಲಿಲ್ಲವೇ? ಜನರು ತನ್ನ ಒಳ್ಳೇತನವನ್ನೂ ರ್ರತೆಯನ್ನೂ ನಿಷ್ಕಳಂಕವಾದ ನೀತಿಯನ್ನೂ ನೋಡಿ ಈತನೇ ಕುಮಾರನೆಂದು ನಂಬಬೇಕೆಂಬುದಾಗಿ ಆತನು ಅಭಿಪ್ರಾಯವುಳ್ಳ ಒಳ್ಳೇತನವೇ ದೇವತ್ವಕ್ಕೆ ಲಕ್ಷಣವೇ ಹೊರತು ಮಹತ್ಕಾರ್ಯಗ ಮಾಡುವ ಶಕ್ತಿಯೊಂದೇ ಆ ಲಕ್ಷಣವಲ್ಲ.

ತಾಲ್ಲೋಕು ವರ್ತಮಾನಗಳು.

ಬೇಲೂರು.—ಕಳೆದ ೨೩ ನೇ ತಾ ಶುಕ್ರವಾರ ಮಧ್ಯಾಹ್ನ ೧೨ ಘಂಟೆಗೆ ನಮ್ಮ ಸ್ಕೂಲ್ ಸೂಪರಿಂಟೆಂಡೆಂಟರು ಫಸಲ್ ನ್ಯೂಟಾಂ ದೊರೆಗಳವರು ಬಾಲಕಿಯರಿಗೆ ಬಹುಮಾನ ಪ್ರ ಪತ್ನಿ ಸಹಿತ ನಮ್ಮ ಸ್ಕೂಲಿಗೆ ದಯಮಾಡಿದರು. ಆಗ್ಯೆ ನಮ್ಮ ವಿಧವಿಧವಾದ ಪತಾಕೆಗಳಿಂದಲೂ, ನಿಶಾನೆ ಧ್ವಜಗಳಿಂದಲೂ, ದಲೂ, ಕದಳೀಸ್ತಂಭ ಮತ್ತು ತೋರಣಗಳಿಂದಲೂ ಅಲಂಕರಿಸಲ್ಪಟ್ಟು ಒಂದು ಕಡೆ ಬಾಲಕಿಯರೂ ಮತ್ತೊಂದು ಕಡೆ ಸಭಿಕರು ಕುಳಿತಿದ್ದರು. ಹೆಡ್ ಮಾಸ್ಟರು ಸ್ಕೂಲಿನ ರಿಪೋರ್ಟನ್ನು ಓದಿದ ನಂತರ ಪಾಠಶಾಲಾ ಪಂಡಿತರು ಮ॥ ರಾಮಾಜೋಯಿಸರು ಸ್ತ್ರೀವಿದ್ಯಾಭ್ಯಾಸದ ಆವಶ್ಯಕತೆಯನ್ನು ಕುರಿತು, ಸರ್ವ ಸಮ್ಮತದಿಂದ ಸ್ತ್ರೀಯರು ಪಡೆಯಬೇಕಾಗಿದೆಯೆಂದು ಸಕಾರಣಗಳಿಂದ ಉಪನ್ಯಾಸಿಸಿದರು. ಸ್ತ್ರೀಜಾತಿಗೆ ವಿದ್ಯೆಯೇ ಬೇಕೆಂಬವನ್ನು ಪಾತಿವ್ರತ್ಯವೇ ಮುಖ್ಯವುಗಳನ್ನೂ ಉಚಿತ ಹಾಡುಗಳನ್ನೂ ಬಾಲಕಿಯರು ಹಾಡಿದಂದ ನಾಳಿಯನ್ನು ಕುರಿತು ಸಂಭಾಷಣೆಯಿಂದಲೂ, ಸಭಿಕರ ಮನ ಗೊಳಿಸಿದರು. ಚೇರ್ಮನ್ ರಾಗಿದ್ದ ಸಬ್ ರಿಜಿಸ್ಟ್ರಾರ್ ಮ॥ ರಾಮಯ್ಯರೂ, ಡೆಪ್ಯುಟಿ ನ್ಯೂಟಾಂ ಸಾಹೇಬರವರೂ, ಧನ ಸಹಾಯ ಮಾಡಿದವರೂ, ಪೂರ್ವಾರ್ಗಕತೆಯಿಂದ ಮಿಶ್ಚನರಿ ಸಂಘದವರು ಲೆಯನ್ನಿಟ್ಟಿರುವ ಸಮುದ್ದೇಶವು ಸ್ತ್ರೀವಿದ್ಯಾಭ್ಯಾಸಕ್ಕೋ ವಿನಹಾ ಯಾವದೊಂದು ಗುಟ್ಟಿಯಿಂದಲ್ಲವೆಂದೂ ಸಕಾರಣಗಳಿಂದ ತಿಳಿ ಸಿದನಂತರ ವಿಧವಿಧವಾದ ಬೊಂಬೆ, ಬಟ್ಟೆಗೆ ಮುಂತಾದವುಗಳನ್ನು ಬಾಲಕಿಯರಿಗೆ ನಮ್ಮ ಫಸ ನ್ಯೂಟಾಂ ದೊರೆಗಳವರ ಪತ್ನಿಯವರು ದಾನವರ ಮೂಲಕ ಬಾಲಕಿಯರನ್ನು ಸಂತೋಷಪಡಿಸಿದರು. ಸಭಿಕರಿಗೂ, ಸಭಾಧ್ಯಕ್ಷರಿಗೂ, ಬಾಲಕಿಯರಿಗೂ, ಹಾರ ತುರಾಯಿ ಎಲೆ ಅಡಿಕೆ, ಗಂಧ ಹೂವು, ಸಕ್ಕರೆ, ಮುಂತಾದ ವಿನಿಯೋಗವಾಯಿತು. ಆ ದಿನ ಸಭೆಯು ಉಪಸಂಹಾರ ಮಾಡಲ್ಪಟ್ಟಿತು. ವಾಲೆಗೆ ಈ ಊರಿನ ಭಾರಿ ಭಾರಿ ಉದ್ಯೋಗಸ್ಥರೂ ದೊಡ್ಡ ಷ್ಯರೂ ಬಂದು ಸಭಾಲಂಕೃತರಾಗಿದ್ದರು.—ಪೋಲೀಸ್ ಇನ್ಸ್ಪೆಕ್ಟರ್ ಜನರಲ್ ಸಾಹೇಬರವರು ಸಕಲೇಶಪುರದ ಮಾರ್ಗವಾಗಿ ಈ ಊರಿಗೆ ದಯಮಾಡಿಸಿ, ಪೋಲೀಸ್ ಇನ್ಸ್ಪೆಕ್ಷನ್ ಮಾಡಿಕೊಂಡು, ಚಿಕ್ಕಮಗಳೂರು ಮಾರ್ಗವಾಗಿ ದಯಮಾಡಿದರು. ಅವರು ನಮ್ಮ ಇನ್ಸ್ಪೆಕ್ಟರ ನಿರ್ವಾಹದಲ್ಲಿ ಬಹಳ ಸಂತುಷ್ಟರಾದಂತೆ ಕೇಳುತ್ತೇನೆ. ಅವರು ರಿಗೆ ದಯಮಾಡಿಸಿ ಈ ಟವನಿಗೆ ಒಂದು ಟವ್ನ್ ಪೋಲೀಸ್ ಡು ಮಾಡುತ್ತಿರುವರು.—ಈ ಊರು ಎ. ವಿ. ಸ್ಕೂಲ್ ಹೆಡ್ ಮಾಸ್ಟರಿಗೆ ಬೀರೂರಿಗೆ ವರ್ಗವಾದ ಹುಕುಂ ಬಂತೆಂದು ಕೇಳುತ್ತೇನೆ. ರು ಈ ಊರಿಗೆ ಬಂದು ಬಹು ದಿವಸಗಳಾಗಿದ್ದವು. ಇವರು ವರ್ಗವಾದ ಸ್ಥಳದಲ್ಲಿ ಜನಾನುರಾಗ ಸಂಪಾದಿಸುವರೆಂದು ನಂಬುತ್ತೇನೆ.—೨೦ ನೆ ತಾ. ಸಾಯಂಕಾಲ ರಾತ್ರಿ ೯ ಗಂಟೆಯ ವರೆಗೆ ಗರ್ಲ್ಸ್ ಸ್ಕೂಲ್ ಅಲಂಕರಿಸುವದಕ್ಕೆ ಬಹಳ ಸಹಾಯಮಾಡಿ ವಿಧೇಯನೂ ದೃಢಾಂಗನೂ ಆಗಿದ್ದ ವೆಂಗಟಮ್ಮನ ೧೮ ವರ್ಷದ ಮಗನು ಆಕಸ್ಮಾತ್ತಾಗಿ ಎರಡು ಸಾರಿ ರಕ್ತ ವಾಂತಿಮಾಡಿ, ಜ್ವರತಾಪದಿಂದ ೨೩ ನೆ ಶನಿವಾರ ತೀರಿಹೋದನು. ಪತಿವಿಹೀನೆಯೂ ನಿರಾಶ್ರಯಳೂ ಕೇವಲ ಸಣ್ಣ ಸಣ್ಣ ಮಕ್ಕಳುಳ್ಳ ಬಡವಳೂ ಆದ ಆ ಹೆಂಗಸಿಗೆ ಈ ಪುತ್ರಶೋಕ ಪ್ರಾಪ್ತಿಯಾಯಿತು.

ಬೌರಿಂಗ್‌ಪೇಟೆ.—ವಿಷರಾಗಿ—ಈ ಊರಿನಲ್ಲಿ ನಡೆಯುವ ಸಂತೆಯಲ್ಲಿ ಕಳೆದ ೧೬ ನೇ ತಾರೀಕಿನ ಶುಕ್ರವಾರದ ಸಂತೆಯಲ್ಲಿ ಘಾತಕರು ಹೊಟ್ಟೆ ಊದುವ ಹುಳಿ ರಾಗಿಯನ್ನು ತಂದು ಮಾರುತ್ತಾರೆ. ಬಡ ಕೂಲಿನಾಲಿ ಮಾಡುವ ಈ ಊರಿನವರೂ ಅಕ್ಕಪಕ್ಕದ ಗ್ರಾಮಗಳವರೂ ಸದರೀ ರಾಗಿಯನ್ನು ತಕ್ಕೊಂಡು ಹೋಗಿ ಚೇರಿಯಲ್ಲಿ ೬ ಮಂದಿಯೂ ಹುಣಸನಹಳ್ಳಿಯಲ್ಲಿ ೧೨ ಮಂದಿಯೂ ಕಾಲ್ಯದ ಗುಡಿಸಲುಗಳಲ್ಲಿ ೭ ಮಂದಿಯೂ ಸೋರೆಗೌಡನ ಯಲ್ಲಿ ೬ ಮಂದಿಯೂ ಈ ರೀತಿ ೩೯ ಮಂದಿ ಹೊಟ್ಟೆ ಊದಿ ದು ನಾನಾ ರೀತಿ ಕ್ರಮ ಪಡುತ್ತಿದ್ದಾರೆ. ಇವರಲ್ಲಿ ಕಾಲ್ಯದ ಗುಡಿ ಸೇರಿದ ಮಕ್ಕಳೊಂದಿಗಳಾದ ಒಬ್ಬ ಹೆಂಗಸು ಮೃತ್ಯು ಮಿಕ್ಕವರನ್ನೆಲ್ಲಾ ಆಸ್ಪತ್ರೆಯವರು ಬಹಳ ಮನಃಪೂರ್ವಕವಾಗಿ ಮಾಡುತ್ತಿದ್ದಾರೆ. ಈ ರಾಗಿಯನ್ನು ತಿಂದವರು ಇನ್ನೂ ಇರಬಹುದು. ಆದರೆ ತಿಳಿಸಿದರೆ ಏನು ಪೀಕಲಾಟವೋ ಎಂದು ತಮ್ಮ ಸ್ವಂತ ಔಷಧಗಳಿಂದಲೇ ವಾಸಿಮಾಡಿಕೊಳ್ಳುತ್ತಲಿದ್ದಾರೆ. ಲೀಸ್ ಸ್ಟೇಷನ್ನಲ್ಲಿ ಒಂದು ಮೂಟೆ ರಾಗಿಯನ್ನೂ ಒಬ್ಬ ಮಾರಿದ ಆಸಾಮಿಯನ್ನೂ ತಂದು ಹಾಕಿಕೊಂಡಿದ್ದಾರೆ. ಇಂಥಾ ರಾಗಿಯನ್ನು ಮಾರಿದ ಬೇರೆ ಆಸಾಮಿಗಳು ಇದ್ದರೆಂದು ವರ್ತಮಾನ ಕಂಡುಬರುವವರನ್ನು ಇನ್ನೂ ಹಿಡಿದು ಲಾಕಪ್ ಮಾಡಿ ವರನ್ನು ಪ್ರಾಸಿಕ್ಯೂಷನ್ ಮಾಡದೆ ಇರುವದಕ್ಕೆ ಕಾರಣ ಗೊತ್ತಾಗಲಿಲ್ಲ. ಸರ್ಕಾರದವರು ಈ ರೀತಿ ಈ ಸ್ಥಾನ ಇಂಥಾ ಕೆಟ್ಟ ಧಾನ್ಯದಿನಸುಗಳನ್ನು ಮಾರದಾಸೆಯಿಂದ ತಂದು

...ವಾದ ಪ್ರಜೆಗಳ ಪ್ರಾಣಗಳಿಗೆ ಹಾನಿ ತರುವಂಥವರನ್ನು ಹಿಡಿದು ...ಪಡಿಸುವದು ನ್ಯಾಯವಾಗಿದೆ ಅಲ್ಲದೆ ಆಯಾ ಸಂತೆಯ ಸ್ಥಳಗಳಲ್ಲಿ ... ಆಲಾಟೆಯಲ್ಲಿ ಯಾರನ್ನಾದರೂ ನೇಮಿಸಿ ಸರಕುಗಳನ್ನು ...ಸುವದು ಧರ್ಮವಾಗಿದೆ ಪ್ಲೇಗ್—ಈ ಊರಿನಲ್ಲಿ ಪ್ಲೇಗ್ ...ವಾಗಿ ಈಗಾಗಲೇ ಐದಾರು ಮಂದಿಯನ್ನು ಆಹುತಿ ಮಾಡಿಕೊಂ... ಸರ್ಕಾರದವರು ಇದನ್ನು ಈಗಲೇ ಅಣಗಿಸುವ ಪ್ರಯತ್ನ ...ದ ಹೋದರೆ ದೊಡ್ಡದಾದ ಪ್ಲೇಗಿನ ಬಹಳ ಪ್ರಯಾಸಕ್ಕೆ ಕಾರಣ... ರೈಲ್ವೆ ಪೋಲೀಸ್—ಈ ಊರಿನ ರೈಲ್ವೆ ಸ್ಟೇಷನ್ ಭಂಗಾರದ ...ಗೆಯಿಂದ ಬಹಳ ಜನ ಸಂದಣಿಯುಳ್ಳದ್ದೆಂದು ಹಿಂದೆಯೇ ...ಯ ಮೂಲಕ ತಿಳಿಸಿದೆ ಹೀಗಿದ್ದರೂ ರೈಲ್ವೆ ಪೋಲೀಸಿನವ... ಕಾನ್ಸ್ಟೇಬಲ್‍ರವರೂ ಬಹಳ ಮೊದಲಿನಿಂದ ಉಸ್ತುವಾರಿ ...ಡುತ್ತಿದ್ದಾರೆ ಪ್ರತಿ ರೈಲು ಬರುವಾಗಲೂ ಹೆಡ್ ಕಾನ್ಸ್ಟೇಬಲ್ ...ತಮ್ಮ ಸಿಬ್ಬಂದಿಯೊಂದಿಗೆ ಹಾಜರಾಗಿ ಪ್ಲಾಟ್‍ಫಾರಮನ್ನು ಗ... ಮಾಡುತ್ತಿದ್ದಾರೆ ಈ ಕಾರಣದಿಂದ ಸ್ಟೇಷನಿನಲ್ಲಿ ಯಾವ ಕಳ್ಳ ...ಪಾಕೆಟ್ ಕೆಲಸಗಳು ಜರಗುವದು ದುರ್ಲಭವಾಗಿದೆ ಆದ... ಇಲ್ಲಿನ ವಾಚ್ ಮನ್ ರಾಮಾಮೃತಿ... ಎಂಬಾತನು ಮ... ಒಂದು ಸೇರು ಅಕ್ಕಿಯನ್ನು ಕದ್ದದ್ದನ್ನು ಸ್ಟೇಷನ್‍ಮಾಸ್ತರ ...ಹಿಡಿದು ದರ್ಯಾಪ್ತಿಯಾಗಿ ಒಂದು ತಿಂಗಳು ಜುಲ್ಮಾನೆ ಕಟ್ಟ... ...ಪ್ಪಟ್ಟದ್ದಲ್ಲದೆ ಕೆಲಸವೇ ಹೋಯಿತು ಈ ರೀತಿ ಸ್ಟೇಷನ್ ಮಾ... ...ಗಳೇ ಈ ಕೆಲಸಕ್ಕೆ ತಗಲಿದರೆ ಯಾರು ತಾನೇ ಆಶ್ಚರ್ಯ... "ಬೇಲಿ ಎದ್ದು ಹೊಲ ಮೇದ" ಹಾಗಾಯಿತಲ್ಲವೇ! ...ನ ಸಂತೆಗೆ ಬರುವ ಅನೇಕ ಜನರು ಗಲೀಜಿನಲ್ಲಿ ಮಾತ್ರ ...ಮಾಡಿ ಇರುವ ಹೊಸ ಕೆರೆಯ ನೀರನ್ನು ಕುಡಿಯುತ್ತಾ... ಈ ನೀರು ಬಹಳ ಗಲೀಜಾಗಿದೆ. ಖಾಲಿ ಇರುವ ಪ್ಲೇಗಿನೊಂ... ...ಶಿಭ್ರಾಂತಿ ಎಲ್ಲಿ ಜೋರಾಗುವದೋ ಎಂದು ಭಯಪಡಬೇ... ...ದು. ಆದಕಾರಣ ಸರ್ಕಾರದವರು ಸಂತೆ ಬೀದಿಯಲ್ಲಿ ಒಂದು ಕ... ...ವ ನೀರಿನ ನೇರೋ ಭಾವಿಯನ್ನು ಅಲ್ಲದೆ ಸಂತೆ ಸ್ಥಳವು ...ವಾಗಿಯೂ ಈ ಊರಿನ ಜರಸೆ ಕೊಡುವ ಸ್ಥಳವಾಗಿಯೂ ...ದರಿಂದ ಸಾಲುಸಾಲಾಗಿ ಹಸರಿ ಜವಡೆ ಇತ್ಯಾದಿ ನೆರಳು ...ವ ಕೊಂಬೆಗಳನ್ನು ನೋಡಿಸಿ ಕೆಲವು ಕಾಲ ನಿರು ನುಕಾವ ...ವು ಮಾಡಿದರೆ ಕೊಳ್ಳುವ ಮಾರುವ ಜನಗಳಿಗೆ ಉತ್ತಮವಾದ ...ರ ಸರ್ಕಾರದವರಿಗೆ ಕೀರ್ತಿಯೂ ಸಂತೆಯಲ್ಲಿ ವಸೂಲಾಗುವ ...ಣದ ಪ್ರಯೋಗವೂ ಶಾಶ್ವತವಾಗಿ ನಿಲ್ಲುವದು ಸರ್ಕಾರ ...ಸಂತೆಯಲ್ಲಿ ವಿಶೇಷ ಹಣ ವ್ಯಯಮಾಡಿ ಜಗಲಿಗಳನ್ನು ಹಾಕಿ... ...ರೆ ಕುಡಿಯುವ ನೀರಿನ ಭಾವಿಯೂ ನೆರಳು ಕೊಡುವ ...ಗಳೂ ಅತ್ಯಂತವಶ್ಯಕವಾಗಿವೆ ಪೋಸ್ಟಾಫೀಸು—ಈ ಊರಿನಲ್ಲಿ ...ವರಿಗೆ ಬ್ರಾಂಚ್ ಪೋಸ್ಟಾಫೀಸು ಇತ್ತು ಈ ಫೆಬ್ರವರಿ ...ಆಗಾಯಿತು ಇದನ್ನು ಹೆಡ್ಡಾಫೀಸಾಗಿ ಮಾಡಿ ಕೋಲಾರಿನ ...ಫೀಸನ್ನು ವಜಾ ಮಾಡಿರುತ್ತಾರೆ ಹೆಡ್ಡಾಫೀಸಿಗೆ ಅನುಕೂಲ ...ವಂತೆ ಒಂದು ಹೊಸ ಕಟ್ಟಡವನ್ನು ಬಾಡಿಗೆಗೆ ತೆಗೆದು ಇದು ...ಕಟ್ಟಡವು ಆಫೀಸಿಗೆ ಅನುಕೂಲವಾಗಿರಬಹುದು ಆದರೆ ...ದಲ್ಲಿ ಒಂದು ರಿಜಿಸ್ಟ್ರರು ಮಣಿಆರ್ಡರು ತೊಡಲು ಬಂದು ...ದ ಜನಗಳಿಗೆ ಬಿಸಲು ವಿಪರೀತ ಹಿಂಸೆ ಕೊಡುತ್ತಾ ಇದೆ ...ದೊಡ್ಡದು ಮಾಡಿಸತಕ್ಕದ್ದು ಅತಿ ಆವಶ್ಯಕ ಇಲ್ಲಿ ...ಚ್ ಪೋಸ್ಟಾಫೀಸು ಆಗಿರುವಾಗ್ಗೆ ಯಾವಾಗಲೂ ಆಫೀಸಿನ ...ದಲ್ಲಿ ಒಬ್ಬ ಪ್ಯೂನ್ ಎಲ್ಲಾ ಬಗೆಯ ಸ್ಟಾಂಪು ಕವರುಗಳನ್ನು ...ವ ಪದ್ಧತಿ ಇತ್ತು ಈಗ ಅದು ನಿಲ್ಲಿಸಲ್ಪಟ್ಟಿದೆ ಕಾರಣ ...ಗೊತ್ತಿಲ್ಲ ಇದು ಹೆಡ್ಡಾಫೀಸು ಆಗಿದ್ದಕ್ಕೆ ಫಲವೋ? ...ಮುಂದಕ್ಕೆ ಬೌರಿಂಗ್‍ಪ್ಯಾಟೆ ಡಿಸ್ಟ್ರಿಕ್ಟ್ ಹೆಡ್‍ಕ್ವಾರ್ಟರ್ ...ಮು ಅಂದುಕೊಳ್ಳುತ್ತಾರೆ ಒಂದುವೇಳೆ ಆದರೂ ಆಗ... ...ಯಾಕೆಂದರೆ ಈಗಾಗಲೇ ಹಜರತ್ ಡೆಪ್ಯುಟಿ ಕಮಿಷನರ ...ಬರು ತಿಂಗಳಲ್ಲಿ ಬಹಳ ದಿನಗಳನ್ನು ಗಣಿಯಲ್ಲಿ ಕಳೆಯು... ...ದೆ—"ಪದ್ಧತಿಯೇ? ಪ್ರಾಬಲ್ಯವೋ? ಯಾವುದು ಶ್ರೇ... ...ಪ್ರಾಬಲ್ಯವೇ—ಮೊದಮೊದಲು ಬೌರಿಂಗ್‍ಪ್ಯಾಟೆ ಆಯಿತು—ಬಂ... ...ಗಣಿಯಾಯಿತು—ಬ್ರಾಂಚ್ ಆಫೀಸು ಹೆಡ್ಡಾಫೀಸಾಯಿತು—ಇ... ...ಲ್ಲೂಕ್ ಹೆಡ್‍ಕ್ವಾರ್ಟರಾಗುವದು ಬಾಕಿಯಲ್ಲಿದೆ"

ವಿದೇಶ ವರ್ತಮಾನಗಳು.

...ಲಂಬಿಯಾ ಶೀಮೆಯಲ್ಲಿ ಒಂದು ವಾರ ಏಕಪ್ರಕಾರವಾಗಿ ...ಹಾದ್ದರಿಂದ ನಾನಾ ಅನಾಹುತಗಳು ನಡೆದವು ಉತ್ತರ ಭಾ... ...ಸ್ಯಾಡಾರಿನಲ್ಲಿ ದಕ್ಷಿಣ ಭಾಗದ ಕೊಲಂಬಿಯಾದಲ್ಲೂ ಅನೇ... ...ಗಳು ನಾಶವಾದವು ನೂರಾರು ಮಂದಿ ಪ್ರಾಣ ಕಳೆದು ...ರು

●●●●

...ನ್ಸ್ ಮುಖ್ಯ ಪಟ್ಟಣವಾದ ಪ್ಯಾರಿಸ್‍ನಗರದಲ್ಲಿ ಎಂ ಎ ... ಎಂಬ ಪ್ರಸಿದ್ಧ ವೈದ್ಯನು ಒಂದು ತರಹ ಹಾಲನ್ನು ತಯಾ... ...ರಿಸಿದ್ದಾನೆ ಈ ಹಾಲನ್ನು ಬೇಸಿಗೆ ಬರುವುದಕ್ಕೆ ಮುಂಚೆ ...ಗೆ ಕೊಟ್ಟು ನಾಕಿದಂತೆ ಹಾಕಿದಲ್ಲಿ ಆ ನಾಯಿಗಳಿಗೆ ಹುಚ್ಚು ...ಹಿಡಿಯುವದೇ ಇಲ್ಲ

●●●●

...ಮೇರಿಕಕ್ಕೆ ಸೇರಿದ ವಾಷಿಂಗ್‍ಟನ್ ಎಂಬ ದೊಡ್ಡ ಪಟ್ಟಣದ ...ಹೇನಾರ್ಡ ಎಂಬೊಬ್ಬ ಪುಣ್ಯಾತ್ಮನಿಗೆ ಒಂದು ವರುಷದ ...ಮ್ಮ ಕುರುಡಾಯಿತು ನೂರಾರು ವೈದ್ಯರುಗಳು ಸೇರಿಕೊಂಡು, ಮೊ... ...ಲಗುಡ್ಡೆಗಳನ್ನು ಕಿತ್ತು ತಂದು, ಮಿ॥ ಹೇನಾರ್ಡನ ಕಣ್ಣಿಗ ...ಹೊಲಿದು, ಚಿಕಿತ್ಸೆಮಾಡುತ್ತಾ ಬಂದರು ಈಗ ಈ ಹೊಸ ...ಗು ಸರಿಯಾಗಿ ಬೆಳೆದು ಇರುತ್ತವೆಂತಲೂ, ಸ್ವಲ್ಪ ಸ್ವಲ್ಪ ...ಗೆ ಕಣ್ಣು ಕಾಣಿಸಲಾರಂಭವಾಗಿದೆ ಎಂತಲೂ ಆ ಡಾಕ್ಟ... ...ತಿಳಿಸಿರುತ್ತಾರೆ

ಸಿಂಗಪುರದಲ್ಲಿ ಇಬ್ಬರು ಜಪಾನವರು ಬಂದರಿನ ಮತ್ತು ಕೋಟೆ ಕೊತ್ತಲಗಳ ನಕ್ಷೆಗಳನ್ನು ಗುಟ್ಟಾಗಿ ಬರೆದು ತೆಗೆದುಕೊಂಡು ಹೋಗುತ್ತಿದ್ದರೆಂತಲೂ ಸರ್ಕಾರದವರು ಅವರನ್ನು ಹಿಡಿದು ಅವರಿಗೆ ತಲಾ ೩೦೦ ರೂಪಾಯಿನಂತೆ ಜುಲ್ಮಾನೆ ಹಾಕಿ ಅವರ ಬಳಿ ಇದ್ದ ಆ ನಕ್ಷೆಗಳನ್ನು ಕಿತ್ತುಕೊಂಡರೆಂತಲೂ ಅಲ್ಲಿನ ಪತ್ರಿಕೆ ತಿಳಿಸುತ್ತದೆ

●●●●

ಪಶ್ಚಿಮ ಆಫ್ರಿಕದಲ್ಲಿ ಕಾಪಿ ರ್‍ಗಳೆಂಬ ಜನರ ದೊರೆಯಾದ ಅಕ್ವಾ ಎಂಬಾತನೂ ಆತನ ಆಸ್ಥಾನಕ್ಕೆ ಸೇರಿದ ಕೆಲವು ದೊಡ್ಡ ಮನುಷ್ಯರೂ ಜರ್ಮನಿ ಗವರ್ನಮೆಂಟನ್ನು ದೂಷಣೆಮಾಡಿದರು ಇದಕ್ಕಾಗಿ ಜರ್ಮನಿ ಸರ್ಕಾರದವರು ಆ ದೊರೆಗೆ ೯ ವರುಷ ಗಡೀಪಾರಿನ ಸಜವನ್ನೂ ಆ ದೊಡ್ಡ ಮನುಷ್ಯರಿಗೆ ತಲಾ ಒಂದರಿಂದ ಏಳು ವರುಷಗಳ ತನಕ ಕಠಿಣ ಸಜವನ್ನೂ ವಿಧಿಸಿರುತ್ತಾರೆ

●●●●

ಅಮೇರಿಕ ಸಂಸ್ಥಾನಗಳ ಪ್ರೆಸಿಡೆಂಟ್ ರೂಸ್‍ವೆಲ್ಟ್ ಯವರ ಪುತ್ರಿಯು ಮಿ॥ ನಿಕೊಲಸ್ ಲಾಂಗ್‍ವರ್ತ್ ಎಂಬಾತನನ್ನು ವರಿಸಿ ಕಳೆದ ವಾರ ವಿವಾಹಮಾಡಿಕೊಂಡಳು ಸಾವಿರಾರು ದೊಡ್ಡ ಮನುಷ್ಯರಿಗೂ ಲಕ್ಷಾಂತರ ಪ್ರಜೆಗಳಿಗೂ ಭಾರಿ ಔತನ ಉಡಿಗೆರೆಗಳು ನಡೆದವು ಬಹು ಮಂದಿ ವಿಚಿತ್ರವಾದ ನಾನಾ ವಸ್ತುವಿಶೇಷಗಳನ್ನು ತಂದು ನೂತನ ದಂಪತಿಗಳಿಗೆ ಬಹುಮಾನ ಮಾಡಿದರು

●●●●

ರಷ್ಯಾ ರಾಜ್ಯದ ಸ್ಥಿತಿಯು ಈಗ ಬಹಳ ಅಲ್ಲೋಲಕಲ್ಲೋಲವಾಗುತ್ತಿದೆಯಷ್ಟೆ ಅದರ ಸ್ಥಿತಿಗತಿಯನ್ನು ಕುರಿತು ಟಿಪ್ಪಣಿಗಳನ್ನು ಬರೆದುಕೊಟ್ಟರೆ, ಪ್ರತಿ ಒಂದು ಪದಕ್ಕೂ ೬ ರೂಪಾಯಿನಂತೆ ರುಸುಂ ಕೊಡುತ್ತೇವೆಂದು ಅಮೇರಿಕದ ವರ್ತಮಾನ ಪತ್ರಿಕೆಗಳವರು ಕೌಂಟ್ ಲಿಯೋ ಟಾಲ್‍ಸ್ಟಾಯಿ ಎಂಬ ರಷ್ಯಾ ದೊಡ್ಡ ಮನುಷ್ಯನನ್ನು ಕೇಳಿದರು ಆತನು ಇದಕ್ಕೆ ಒಪ್ಪದೆಹೋದನು

●●●●

ಸಯಾಂ ರಾಜ್ಯದ ರಾಜಧಾನಿಯಾದ ಬ್ಯಾಂಕಾಕ್ ಪಟ್ಟಣದಲ್ಲೂ ಅದರ ಆಜೂಬಾಜಿನಲ್ಲೂ ಸುಮಾರು ಐವತ್ತು ಭತ್ತ ಕುಟ್ಟುವ ಯಂತ್ರಗಳಿರುತ್ತವೆ ಈ ಕಾರ್ಖಾನೆಗಳಲ್ಲಿ ೧೯೦೫ ನೆ ವರುಷದಲ್ಲಿ ೮,೩೬,೦೦೦ ಟನ್ ಅಕ್ಕಿ ತಯಾರಾಗಿ ರಫ್ತಾಗಿರುತ್ತದೆ. ಕಳೆದ ವರುಷ ೭,೬೪೦೦೦ ಟನ್ ಅಕ್ಕಿ ಅಲ್ಲಿಂದ ರಫ್ತಾಯಿತು ಅಲ್ಲಿ ತಯಾರಾಗುವ ಅಕ್ಕಿಯೆಲ್ಲಾ ಸಿಂಗಪುರಕ್ಕೂ ಹಾಂಕಾಂಗಿಗೂ ಸಾಗಿ ಹೋಗುವುದು ಈಗೀಗ ಅಲ್ಲಿನ ಅಕ್ಕಿಯನ್ನು ದಕ್ಷಿಣ ಆಫ್ರಿಕದವರೂ ತರಿಸಿಕೊಳ್ಳುತ್ತಾರೆ ಇದನ್ನು ತಿಳಿದು ಅಲ್ಲಿನವರು ದಿವಾನಗಳಲ್ಲಿ ಹೆಚ್ಚು ಹೆಚ್ಚಾಗಿ ಭತ್ತದ ಬೆಳೆಯನ್ನೇ ಮಾಡಲಾರಂಭಿಸಿರುವರು

●●●●

ವಿಲಾಯತಿ ರಾಜ್ಯದ ಪ್ರಿನ್ಸ್ ಆರ್ಥರ್ ಆಫ್ ಕನಾಟ್ ಎಂಬ ರಾಜಕುಮಾರರು ಪರಿವಾರ ಸಹಿತ ಜಪಾನ್ ರಾಜ್ಯಕ್ಕೆ ಹೋಗಿ ಇಳಿದರು ಮಿಕಾಡೋ ಚಕ್ರವರ್ತಿಯವರು ತಾವೇ ಸ್ವತಃ ಹೋಗಿ ಸ್ಟೇಷನಿನಲ್ಲಿ ಪ್ರಿನ್ಸ್ ಅರ್ಥರನ್ನು ಎದುರುಗೊಂಡು ಕರೆದುತಂದರು ಜಪಾನ್ ಚಕ್ರವರ್ತಿಯವರು ಇಂಗ್ಲಿಷ್ ರಾಜಕುಮಾರರಿಗೆ ಇಂಗೆ ಬಹು ವಿಶೇಷವಾದ ಸನ್ಮಾನ ಮಾಡಿದ್ದು ವಿಲಾಯತಿ ರಾಜ್ಯದಲ್ಲೆಲ್ಲಾ ಪರಮ ಸಂತೋಷವನ್ನುಂಟುಮಾಡಿದೆ ಟೋಕಿಯೋ ರಾಜಧಾನಿಯಲ್ಲಿ ಪ್ರಜೆಗಳು ಬಹು ಉತ್ಸಾಹಪೂರ್ವಕವಾಗಿ ಈ ರಾಜಕುಮಾರರನ್ನು ಕಂಡು ಜಯಧ್ವನಿಯನ್ನು ಮಾಡಿದರು ರಾಜಕುಮಾರರು ಅರಮನೆಗೆ ಹೋಗಿ ಮಹಾ ವಿಶೇಷವಾದ ದರ್ಬಾರಿನಲ್ಲಿ ಮಿಕಾಡೋ ಚಕ್ರವರ್ತಿಯವರನ್ನು ಕಂಡು, ವಿಲಾಯತಿಯ ದೊರೆಯವರು ತಮ್ಮ ಮೂಲಕ ಕಳುಹಿಸಿದ್ದ ಬಹು ಪ್ರಶಸ್ತವಾದ ಬಿರುದನ್ನೂ ಚಿಹ್ನೆಗಳನ್ನೂ ಮಿಕಾಡೋಯವರಿಗೆ ಒಪ್ಪಿಸಿದರು ಜಪಾನ್ ಚಕ್ರವರ್ತಿಯವರು ಅದನ್ನು ಬಹಳ ಸಂತೋಷದೊಡನೆ ಸ್ವೀಕರಿಸಿ, ವಿಲಾಯತಿ ದೊರೆಯವರನ್ನೂ ರಾಜಕುಮಾರರನ್ನೂ ವಂದನೆಮಾಡಿದರು ರಾಜಕುಮಾರರು ಜಪಾನಿನಲ್ಲೇ ಇನ್ನೂ ಅತಿಥಿಗಳಾಗಿರುತ್ತಾರೆ

ಪ್ರಕಟನೆಗಳು.

ಅಗ್ಗ! ಅಗ್ಗ!! 48-1 ಬಹು ಅಗ್ಗ!!!

ಮೇಲಾದ ಜರ್ಮನ್ ಸಿಲ್ವರ್ ಪ್ರದುಚೇರಿ ಬೋಲ್ ಕಾಲ್ ಗೊಲಸು ಇದು ಬೆಳ್ಳಿಗೆ ಸಮಾನವಾದ ಜರ್ಮನ್ ಸಿಲ್ವರ್ ಬೆಳ್ಳಿಯಿಂದ ತಯಾರಿಸಲ್ಪಟ್ಟಿರುತ್ತೆ ಸುಲಭವಾಗಿ ಹಾಕಿ ತೆಗೆಯುವಂತೆ ಕೀಲಿನಿಂದಲೂ ಮಜಬೂತಾದ ತಿರುಪಿನಿಂದಲೂ



ಬೆಳ್ಳಿಗೂ ಇದಕ್ಕೂ ಸ್ವಲ್ಪವೂ ವ್ಯತ್ಯಾಸವಿಲ್ಲದಂತೆ ತಯಾರಿಸಲ್ಪಟ್ಟಿರುತ್ತೆ ಎಂದಿಗೂ ಬಣ್ಣ ಕೆಡಲಾರದು ಇದನ್ನು ನೋಡಿದವರು ಬಿಡದೆ ಒಂದು ಜೋತೆಯನ್ನು ತರಿಸಿ ಪರೀಕ್ಷಿಸಿರಿ ಬಡವರಿಗೂ ಭಾಗ್ಯವಂತರಿಗೂ ಉಪಯೋಗಿಸುವಷ್ಟು ಸುಲಭ ಕ್ರಯ

ದೊಡ್ಡವರಿಗೆ ಜೋತೆ ೧ಕ್ಕೆ ರೂ ೨-೦-೦ ಚಿಕ್ಕವರಿಗೆ ರೂ ೧-೮-೦ ಮಕ್ಕಳಿಗೆ ರೂ ೧-೪-೦ ಆಣೆ

ವಿಳಾಸ—ಮ್ಯಾನೇಜರ್, ಜರ್ಮನ್ ಸಿಲ್ವರ್ ಜ್ಯುಯೆಲ್ ಡಿಪೋ,
ಸಾಹುಕಾರ್ ಪೇಟೆ, ಮದ್ರಾಸು

ತ್ವರೆಮಾಡಿ! ಸುಲಭ ಖರೀದಿ!!

ಕ್ರಯ ರೂ ೪

ಕ್ರಯ ರೂ ೪.

39—2

ಗೆಜ್ಜೆ ನಾಗರ.

ಈ ಗೆಜ್ಜೆನಾಗರವನ್ನ ಎಂದಿಗೂ ಕಪ್ಪಾಗದಿರುವ ಸೀಮೆ ಬೆಳ್ಳಿಯಿಂದ ಅತಿಸುಂದರವಾದ ಕೋಗರೆ ಕೆಲಸವನ್ನು ಮಾಡಿ, ಒಳ್ಳೆ ಬಂಗಾರದ ಗಿಲೀಟು ಮಾಡಲ್ಪಟ್ಟಿದೆ ಬಂಗಾರದಿಂದ ಮಾಡಿದ ಗೆಜ್ಜೆನಾಗರಕ್ಕೂ ಇದಕ್ಕೂ ಸ್ವಲ್ಪವೂ ಭೇದ ತೋರುವದಿಲ್ಲ ಇಷ್ಟು ಸುಲಭ ಖರೀದಿಗೆ ಯಾರಿಂದಲೂ ಇದುವರೆಗೆ ಮಾರಲ್ಪಟ್ಟಿಲ್ಲವು. ಇದನ್ನು ಉಪಯೋಗಿಸಿದರೆ ಗೊತ್ತಾಗುವದು ನಾವು ಹೊಗಳುವದರಿಂದ ಪ್ರಯೋಜನವಿಲ್ಲ.

ಕ್ರಯ ರೂ. ೪—೦—೦

ವಿ ಪಿ ಪಿ. ಖರ್ಚು ೦—೪—೦

ಬೇಕಾದವರು ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು.

ಗುರುಬಸವ ಅಂಡುಕಂಪನಿ,
ಸಾಹುಕಾರಪೇಟೆ, ಮದರಾಸ್.

ಹೊಸ ಪುಸ್ತಕಗಳು.

36-3

ದೇವರನಾಮಗಳ ಪುಸ್ತಕ—ಇದರಲ್ಲಿ ಹೆಂಗಸರಿಗೆ ಉಪಯೋಗವಾಗುವ ಹಾಡುಗಳು, ದೇವರ ಪೂಜೆಮಾಡುವ ಕೀರ್ತನೆಗಳು, ಅಧ್ಯಾತ್ಮಭಾರತ, ಭಾಗವತ, ಸಂಕ್ಷೇಪ ರಾಮಾಯಣ, ಇವುಗಳು ಇನ್ನೂ ವಿಚಿತ್ರವಾದ ಲಾವಣಿಗಳೂ ಇರುತ್ತೆ ಕ್ರಯ ೮ ಆಣೆ

ಪಂಚಕಥಾ—ಇದರಲ್ಲಿ ಪ್ರಹ್ಲಾದಚರಿತ್ರೆ, ಮಾಧವನಚರಿತ್ರೆ, ಅನಸೂಯಾಚರಿತ್ರೆ, ದ್ರೌಪದೀ ಮಾನರಕ್ಷಣವೆಂಬ ದ್ಯೂತಪರ್ವ, ದೂರ್ವಾಸಚರಿತ್ರೆಯೆಂಬ ಐದು ಕಥೆಗಳು ಸೇರಿರುತ್ತೆ. ೬ ಆಣೆ.

ಸೇತುರಾಯರಕಥೆ—ಭೋಜನಕಾಲನಿರ್ಣಯ, ಅನೇಕಹಾಸ್ಯಕಥೆ ಎಲ್ಲಾ ಒಂದರಲ್ಲಿ ಕ್ರಯ ೩ ಆಣೆ.

ಶ್ರೀಮನ್ ಮಧ್ವಸಿದ್ಧಾಂತಸಾರ—ದ್ವೈತಾದ್ವೈತ ಮತವಿಷಯಗಳನ್ನು ವಿವರಿಸಲ್ಪಟ್ಟಿದೆ ಕ್ರಯ ೬ ಆಣೆ

ರುಕ್ಮಾಂಗದ ಮಹಾರಾಯನ ನಾಟಕ—ಕ್ರಯ ೩ ಆಣೆ.

ಒಬ್ಬ ಸಿಪಾಯಿಯ ಸಾಹಸಗಳು—"ಒಂದು ಎತ್ತು ಮತ್ತು ಆರು ಗುರುಗಂಜಿಗಳ ಸುದ್ದಿ"—ಕ್ರಯ ॥ ಆಣೆ

ಇಪ್ಪತ್ತನೆಯ ಶತಮಾನದ ಇರುಳು—ಕ್ರಯ ೨ ಆಣೆ

ವಿ ಪಿ ಚಾರ್ಜು ಬೇರೆ | ವಿಳಾಸ—ಜಗದೀಶವಿಠಲ ನಾರಾಯಣದಾಸ,
೧೩೮ ಅರಳೇಪೇಟೆ, ಬೆಂಗಳೂರು ಸಿಟಿ.

ಶುಕಸಪ್ತತಿ ಕಥೆಗಳು.

42 2

ಈ ಪುಸ್ತಕವು ಹೊಸದಾಗಿ ಸಂಸ್ಕೃತದಿಂದ ಭಾಷಾಂತರ ಮಾಡಲ್ಪಟ್ಟಿದೆ ಕೇವಲ ವೈರಾಗ್ಯವನ್ನೂ ಸ್ತ್ರೀಪಾತಿವ್ರತ್ಯವನ್ನೂ ಬೋಧಿಸುತ್ತದೆ ಕ್ಷೇತ್ರಮಹಾತ್ಮ್ಯಗಳೂ, ಸತ್ಪುರುಷರ ಚರಿತ್ರೆಗಳೂ, ರೋಗಕಾರಣ, ಚಿಕಿತ್ಸೆ, ರಸವಾದ, ಧರ್ಮಶಾಸ್ತ್ರ, ರತ್ನಪರೀಕ್ಷೆ, ಸಂತಾನೋತ್ಪತ್ತಿ . ಮೊದಲಾದ ಅನೇಕ ಸಂದರ್ಭಗಳು ಈ ಒಂದೇ ಪುಸ್ತಕದಲ್ಲಿಯೇ ಅಡಗಿರುತ್ತವೆ ಅಜಮಾಯಿಷಿ ಮಾಡಿರಿ, ಇವೆಲ್ಲಾ ನಿಜ್ಜವೆಂದು ನೀವೇ ಹೇಳುತ್ತೀರಿ

ಬೆಲೆ—ಅವ್ವಲ್ ಪ್ರತಿ ೧ಕ್ಕೆ ರೂ ೨—೮—೦ (ಇನ್ನು ಕೆಲವೆ ಪ್ರತಿಗಳು ಮಾತ್ರ ಉಳಿದಿರುವದರಿಂದ ಜಾಗ್ರತೆಯಾಗಿ ತರಿಸಿಕೊಳ್ಳುವವರಿಗೆ ಮಾತ್ರ ದೊರೆಯುವವು)

ದುಯ್ಯಂ ಪ್ರತಿ ೧ಕ್ಕೆ ರೂ ೧—೮—೦.

ಮೈಸೂರು ಲೋವರ್ ಸೆಕೆಂಡರಿ ವಿದ್ಯಾರ್ಥಿಗಳಿಗೆ ಉಪಯುಕ್ತವಾದ

೧ ಚರಿತ್ರ ಚಿಂತಾಮಣಿ—ಎಂಬ ಪ್ರಶ್ನೋತ್ತರ ರೂಪವಾಗಿ ಹಿಂದೂ ದೇಶದ ಚರಿತ್ರೆಯು ೧ ಗಂಟೆ ಹೊತ್ತಿನಲ್ಲಿ ಚರಿತ್ರೆಯನ್ನೆಲ್ಲಾ ಅವಗಾಹನೆಗೆ ತರುತ್ತದೆ ಬೆಲೆ—೪ ಆ

೨ ಗಣಿತಾಬ್ಧಿಭಾಸ್ಕರ—ವೆಂಬ 'ಪರ್ಸೆಂಗ್' ಸಮೇತವಾದ ಗಣಿತ ಶಾಸ್ತ್ರವು ಪರೀಕ್ಷಾರ್ಹವಾದ ಉದಾಹರಣೆಗಳು ಬೆಲೆ—೪ ಆ.

ಪ್ರತಿ ಪುಸ್ತಕಕ್ಕೂ ಟಪಾಲ್ ಛಾರ್ಜ ಪ್ರತ್ಯೇಕವಾಗಿ ಬೀಳುತ್ತದೆ.

ಅಪೇಕ್ಷೆಯುಳ್ಳವರು ಕೆಳಗೆ ನಮೂದಿಸುವ ವಿಳಾಸದಾರರಿಂದ ವಿ. ಪಿ ಮೂಲಕ ಪಡೆಯಬಹುದು

ಟಿ ರಾಮಕೃಷ್ಣ ಶಾಸ್ತ್ರಿ,
ಹಲಸೂರು ಪೇಟೆ—ಬೆಂಗಳೂರು ಸಿಟಿ.

P. SUBBAROY'S

World Renowned and most Efficacious Ayurvedic Medicines.

ಪಿ. ಸುಬ್ಬರಾಯರವರ

ಲೋಕಪ್ರಸಿದ್ಧವಾದ ಮತ್ತು ಅತ್ಯಂತ ಗುಣಕಾರಿಯಾದ ಆಯುರ್ವೇದ ಔಷಧಗಳು.

11-16

೧೦. ಜ್ವರಸಂಹಾರಿ—ಎಲ್ಲಾ ವಿಧವಾದ ಜ್ವರ, ವಿಷಮಶೀತ ಜ್ವರ, ..., ಚಳಿ, ಇನ್‌ಫ್ಲುಯೆಂಜಾ, ಚಳಿಜ್ವರ, ವಾತರೋಗ, ಇವುಗಳನ್ನು ಸಂಪೂರ್ಣವಾಗಿ ಶಮನಮಾಡುವದು. ಪೆಟ್ಟಿಗೆ ೧ ಕ್ಕೆ ರೂ. ೧. ವಿ. ಪಿ. ಛಾರ್ಜು ೫ ಆಣೆ.

೧೧. ಕೂದಲು ಉದುರಿಹೋಗುವದಕ್ಕೆ—ಕೂದಲು ಬೆಳೆದಿರುವ ಸ್ಥಳಕ್ಕೆ ಹಚ್ಚಿದರೆ ಚರ್ಮಕ್ಕೆ ತೊಂದರೆಯಾಗದೆ ೫ ನಿಮಿಷದಲ್ಲೇ ಉದುರಿ ಹೋಗುವದು. ಸೀಸೆ ೧ ಕ್ಕೆ ೪ ಆಣೆ. ವಿ. ಪಿ. ಛಾರ್ಜು ೬ ಸೀಸೆ ವರಿವಿಗೂ ೫ ಆಣೆ.

೧೨. ಸುಗಂಧಕದಂತಚೂರ್ಣ.—ಎಲ್ಲಾ ವಿಧವಾದ ಹಲ್ಲುನೋವುಗಳನ್ನು ವಾಸಿಮಾಡುವದು. ಸೀಸೆ ೧ಕ್ಕೆ ೪ ಆಣೆ ವಿ. ಪಿ. ಛಾರ್ಜು ೬ ಸೀಸೆ ವರೆಗೂ ೫ ಆಣೆ.

೧೩. ಚೇಳಿನ ಔಷಧ—ಚೇಳು ಕಚ್ಚಿದ ಸ್ಥಳಕ್ಕೆ ಕೂಡಲೆ ಇದರ ಕೆಲವು ತೊಟ್ಟುಗಳನ್ನು ಬಿಟ್ಟ ತಕ್ಷಣವೇ ಉರಿಯು ನಿಲ್ಲುತ್ತದೆ ಪ್ರತಿ ಕುಟುಂಬದಲ್ಲಿಯೂ ಅವಶ್ಯಕವಾಗಿರಬೇಕಾದದ್ದು ಸೀಸೆ ೧ಕ್ಕೆ ೪ ಆಣೆ. ವಿ ಪಿ. ಛಾರ್ಜು ೧೨ ಸೀಸೆ ವರೆಗೂ ೫ ಆಣೆ. ೧೨ ಸೀಸೆಗಳನ್ನು ಒಂದೇ ಆರ್ಡರ್ ತರಿಸಿಕೊಂಡರೆ ಬೆಲೆ ೨-೮-೦ ರೂ. ವಿ. ಪಿ ಛಾರ್ಜು ಅಲಾಯಿದ. ಸಿಲೋನಿಗೆ ೬ ಆಣೆ.

೧೪. ಮಧುರಧ್ವನಿ ಮಾತ್ರೆ—ಧ್ವನಿಯಲ್ಲಿರುವ ನ್ಯೂನತೆಗಳನ್ನು ಸರಿಮಾಡಿ ಮನೋಹರವಾದ ಧ್ವನಿಯನ್ನುಂಟುಮಾಡಿ ಸ್ಫುಟವಾಗಿ ಮಾತನಾಡುವದಕ್ಕೆ ವಿಶೇಷ ಅನುಕೂಲಪಡಿಸಿಕೊಡುವದು. ಮುಖ್ಯವಾಗಿ ಸಂಗೀತಗಾರರು, ಉಪನ್ಯಾಸಕರು ಮೊದಲಾದವರಿಗೆ ಬಹಳ ಸಹಕಾರಿಯು ಇದರ ಸೇವನೆಯಿಂದ ಭಾರವಾದ ಧ್ವನಿಯು ಸರಿಯಾಗುವದು ಹಾಡಿದರೆ ಕಿವಿಗಿಂಪಾಗುವಂತಹ ಧ್ವನಿಯು ಹೊರಡುವದು. ಸೀಸೆ ೧ ಕ್ಕೆ ೮ ಆಣೆ ವಿ. ಪಿ ಛಾರ್ಜು ೬ ಸೀಸೆ ವರೆಗೂ ೫ ಆಣೆ.

೧೫. ಸ್ನಾನಕ್ಕೆ ಸುವಾಸನಾ ಭಸ್ಮ—ಸುವಾಸನೆಯುಳ್ಳ ಈ ಭಸ್ಮವನ್ನು ಸ್ನಾನಕಾಲದಲ್ಲಿ ಪ್ರಾಯದ ಗಂಡಸರೂ, ಹೆಂಗಸರೂ, ಮಕ್ಕಳೂ ಉಪಯೋಗಿಸುವದಕ್ಕೆ ಅನುಕೂಲವಾಗಿರುವದು. ಚರ್ಮಗತವಾದ ಕೊಳೆಯನ್ನೂ ಬೆವರಿನ ದುರ್ಗಂಧವನ್ನೂ ಹೋಗಲಾಡಿಸಿ, ಚರ್ಮವನ್ನು ಮೃದುಮಾಡಿ, ಮಿಂಚುವಂತೆ ಹೊಳಪುಕೊಟ್ಟು, ತಂಪನ್ನುಂಟುಮಾಡುವದು. ಇದಲ್ಲದೆ ದೇಹದಲ್ಲಿ ಸರ್ವದಾ ಸುಗಂಧವಿರುವಂತೆ ಮಾಡುವದು. ಚೂರ್ಣವು ಸ್ನಾನಕಾಲದಲ್ಲಿ ಅತ್ಯಂತೋಪಯುಕ್ತವಾದುದರಿಂದ ಪ್ರತಿಯೊಬ್ಬರೂ ಉಪಯೋಗಿಸಲಿಕ್ಕೆ ಯೋಗ್ಯವಾಗಿದೆ. ಪೆಟ್ಟಿ ೧ಕ್ಕೆ ೮ ಆಣೆ. ವಿ. ಪಿ. ಹಾಸಲು ೩ ಆಣೆ.

೧೬. ಸಂಜೀವನ ಮಾತ್ರೆಗಳು—ಮಕ್ಕಳಿಗೆ ಜ್ವರ, ನರಗಳಸೆಳೆತ, ಪ್ರಿದೊಡವಿರುವದು, ಅಧಿಕವಾಗಿ ಹೋಗುವದು, ಛಳಿ, ಕೆಮ್ಮಲು, ಹಲ್ಲನೋವು, ಸೆಗತಿ, ಇನ್ನೂ ಮಕ್ಕಳಿಗೆ ಬರುವ ಅಜೀರ್ಣಸಂಬಂಧವಾದ ರೋಗಗಳಿಗೆ ಒಳ್ಳೇ ಮದ್ದಾಗಿರುವದು ಇದನ್ನು ದೊಡ್ಡವರು ಸಹ ಉಪಯೋಗಿಸಬಹುದು. ಸೀಸೆ ೧ಕ್ಕೆ ೧೦ ಆಣೆ. ವಿ ಪಿ. ಛಾರ್ಜು ೬ ಸೀಸೆ ವರೆಗೂ ೫ ಆಣೆ.

೧೭. ಗೋರೋಚನ ಮಾತ್ರೆ—ಎಲ್ಲಾ ವಿಧವಾದ ಜ್ವರಗಳಿಗೂ ವಿಷಮಶೀತಜ್ವರ. ಎರಡರ ಜ್ವರ, ಪ್ರತಿದಿನ ಜ್ವರ, ಇವುಗಳಿಗೆ ಅದ್ವಿತೀಯವಾದ ಔಷಧವು. ಮಲನಾಡು ಜ್ವರ, ಹೊಟ್ಟೆಯಲ್ಲಿ ಗಡ್ಡೆ ಆಗಿದ್ದರೆ, ಮಿಡಳು ಶ್ವಾಸಕೋಶಗಳು ಕೆಟ್ಟಿದ್ದರೆ ಗುಣಮಾಡುವದು. ಮಕ್ಕಳಿಗೆ ಬರುವ ಜ್ವರ, ಆಮಶಂಕೆ, ಅತಿಸಾರ, ನರಗಳ ಸೆಳೆತ, ನಿದ್ರೆ ಬಾರದಿರೋಣ, ಹೆಚ್ಚಾಗಿ ಹೋಗುವದು, ಚಳಿ, ಕೆಮ್ಮಲು, ತಲೆನೋವು, ಮಕ್ಕಳಿಗೂ ದೊಡ್ಡವರಿಗೂ ಅಜೀರ್ಣ, ಇವುಗಳನು ಪರಿಹಾರ, ಮಾಡುವದು ಸೀಸೆ ೧ಕ್ಕೆ ೧೦ ಆಣೆ ವಿ. ಪಿ ಛಾರ್ಜು ೬ ಸೀಸೆ ವರೆಗೂ ೫ ಆಣೆ.

೧೮. ಚರ್ಮರೋಗಕ್ಕೆ ಔಷಧ—ಮಕ್ಕಳಿಗೆ ಬರುವ ಕರಪಾನು, ಕುರಿ, ಹುರುಕಾಲು, ಕಜ್ಜಿ, ಆನೆಕಜ್ಜಿ ಮತ್ತು ದೊಡ್ಡವರಿಗೆ ಬರುವ ನಾನಾ ವಿಧವಾದ ಕಜ್ಜಿ ಸಂಬಂಧವಾದ ವ್ಯಾಧಿಗಳು, ಸುಂಡು, ತಲೆಯಲ್ಲಿಯೂ ಇತರ ಕಡೆಗಳಲ್ಲಿಯೂ ಬಹಳ ನೋವನ್ನೂ ಅನಂತರ ಉರಿಯನ್ನೂ ಉಂಟುಮಾಡುವ ಎಲ್ಲಾ ಹುಣ್ಣುಗಳೂ ಹೊರಗೆ ಹಚ್ಚುವದರಿಂದಲೇ ಜಾಗ್ರತೆಯಾಗಿ ವಾಸಿಯಾಗುವವು. ಬೆಲೆ ಸೀಸೆ ೧ಕ್ಕೆ ೮ ಆಣೆ. ವಿ. ಪಿ. ಛಾರ್ಜು ೨ ಬಾಟ್ಲಿ ವರೆಗೆ ೫ ಆಣೆ

೧೯. ಕೇಶಸುವಾಸಿನಿ.—ಈ ತೈಲವು ಪೂರ್ವಪಶ್ಚಿಮ ದೇಶಗಳ ಅಮೂಲ್ಯ ಸುವಾಸನಾ ದ್ರವ್ಯಯುಕ್ತವಾಗಿ ತುಂಬಾ ಪರಿಮಳ ಕೊಡುತಕ್ಕದ್ದಾಗಿರುತ್ತದೆ ಇದರ ಉಪಯೋಗದಿಂದ ಕೂದಲು, ಮೀಸೆ ಕಣ್ಣು ರೆಪ್ಪೆ ಸಮೃದ್ಧಿಯಾಗಿ ಬೆಳೆಯುತ್ತವೆ ತಲೆ ಮೆದಳು ಕಣ್ಣುಗಳಿಗೆ ತಂಪುಕೊಡುತ್ತದೆ ಬೋಳುತಲೆ, ಸುಂಡು ಮುಂತಾದ್ದನ್ನು, ವಾಸಿಮಾಡುತ್ತದೆ. ವಿಲಾಯತಿಯ ಪರಿಮಳ ವಸ್ತುಗಳಮೇಲೆ ಪ್ರೀತಿ ಇರುವವರಿಗೆ ಅಚ್ಚು ಮೆಚ್ಚಿನದಾಗಿರುತ್ತದೆ. ಬೆಲೆ ರೂ. ೧ ವಿ. ಪಿ. ಛಾರ್ಜು ಎರಡು ಬಾಟ್ಲಿ ವರೆಗೆ ೫ ಆಣೆ.

ಕಾಗದವನ್ನು ಇಂಗ್ಲೀಷ್ ಅಥವಾ ತಮಿಳಿನಲ್ಲಿ ಬರೆಯಿರಿ.

Apply to:—**P. SUBBAROY,**

Porto Novo, South Arcot.

ವಿಳಾಸ:—ಪಿ. ಸುಬ್ಬರಾಯ್,

ಪೋರ್ಟೋನೋವೋ, ದಕ್ಷಿಣ ಆರ್ಕಾಟ್ ಜಿಲ್ಲಾ.

ನೀವು ವಿಲಾಯಿತಿಯಿಂದ ಯಾವ ಸಾಮಾನುಗಳನ್ನಾದರೂ ತರಿಸಿಕೊಳ್ಳಬೇಕಾಗಿದ್ದರೆ 19-7

ಬ್ರೈಟ್ ಮತ್ತು ಈಸ್ಟ್‌ಲೆಂಟ್,

೬೯—೩೪, ಸಿಟಿ ರೋಡ್, ಲಂಡನ್. ಇ. ಸಿ.

ಎಂಬೀ ವಿಳಾಸಕ್ಕೆ ಪಣ ಕಳಿಸಿ ಕಾಗದ ಬರೆಯಿರಿ. ಈ ಕಂಪನಿಯವರು ಪೇಟೆಂಟ್ ಔಷಧಿಗಳನ್ನೂ, ಆಸಕ್ತರಿಗೂ ಮಕ್ಕಳಿಗೂ ಕೊಡುವಂಥಾ, ಯಂತ್ರಗಳಿಂದಲೇ ತಯಾರಾದಂಥಾ ಆಹಾರಗಳನ್ನೂ, ಇನ್ನೂ ನಾನಾತರದ ಪದಾರ್ಥಗಳನ್ನೂ ಇಟ್ಟು ಬಿಕರಿಮಾಡುತ್ತಾರೆ. ಅವರು ಬಹು ವಿಶೇಷವಾದ ಗಮನಕೊಟ್ಟು, ಸಾಧ್ಯವಿದ್ದಷ್ಟು ಅಗ್ಗವಾಗಿ, ಬೇಕಾದ ಸಾಮಾನುಗಳನ್ನೇ ಆರಿಸಿ, ಮರಿಟಪ್ಪಾಲಿಗೇನೆ ಕಳುಹಿಸಿಕೊಡುವರು.

ಇದನ್ನು ನೋಡಿದರೆ ನೀವು ಬಹು ಆಶ್ಚರ್ಯಪಡುವಿರಿ!!! 23-7

ನಮ್ಮ ಪ್ರಸಿದ್ಧವಾದ ಪುಸ್ತಕಭಂಡಾರದಲ್ಲಿ ಅನೇಕ ಸಹಸ್ರ ರೂಪಾಯಿ ಬಾಳುವ ಕನ್ನಡ ಗ್ರಂಥಗಳೂ, ಪಾಠಪುಸ್ತಕಗಳೂ, ಪೇನಾ, ಪೆನ್ಸಿಲ್, ನೋಟ್‌ಬುಕ್, ಅನೇಕ ವಿಧವಾದ ಹಾಸನದ ಟೋಪಿಗಳು, ವೃತ್ತಾಂತ ಪತ್ರಿಕೆ, ಮಾಹಿತಾನಬಿ, ಕನ್ನಡ ಗ್ರಂಥ ಮಿತ್ರ, ಪ್ರಾಗ್ರೆಸ್, ಹಾರ್ವೆಸ್ಟ್‌ಫೀಲ್ಡ್ ಮುಂತಾದ ಪ್ರಸಿದ್ಧವಾದ ವರ್ತಮಾನಪತ್ರಿಕೆಗಳು ಇಲ್ಲಿ ಅನೇಕ ಸಾವಿರಗಟ್ಟಲೆಯಾಗಿ ಮಾರಾಟವಾಗುತ್ತಿವೆ ಈ ಡಿಪೊ ಕಟ್ಟಡವು ರಾಜಧಾನಿಯಲ್ಲಿ ಬಹು ಪ್ರಸಿದ್ಧವಾದ ಸ್ಥಳವೆಂದು ಮೈಸೂರು ದೇಶದಲ್ಲೆಲ್ಲಾ ಹೆಸರುಗೊಂಡಿದೆ. ಈ ಕೆಳಗೆ ನಮೂದಿಸಿರುವ ಪುಸ್ತಕಗಳನ್ನು ಸ್ವಲ್ಪ ನೋಡಿ ....

ಕಥಾಸಂಗ್ರಹ ೧—೩ ಭಾಗಗಳು	ಕ್ರಯ	೧—೦—೦
	ವಿ. ಪಿ. ಪಿ. ಮೂಲಕ	೧—೩—೦
ಅನುಭವಸಾರ	ಕ್ರಯ	೦—೧೨—೦
ಗ್ರೀಕರ ಚರಿತ್ರೆ	,,	೦—೨—೦
ರೋಮನರ ಚರಿತ್ರೆ	,,	೦—೨—೦

ಕನ್ನಡ—ಇಂಗ್ಲಿಷ್—ಹಿಂದೂಸ್ಥಾನಿ ಭಾಷಾಮಂಜರಿ. ಈ ಪುಸ್ತಕದಿಂದ ಇಂಗ್ಲಿಷ್ ಮತ್ತು ಹಿಂದುಸ್ಥಾನಿ ಭಾಷೆಗಳನ್ನು ಬಹು ಸುಲಭವಾಗಿ ಕಲಿಯಬಹುದು. ಇದರ ಕ್ರಯ ಎಂಟೇ ಆಣೆ, ವಿ. ಪಿ. ಪಿ. ಮೂಲಕ ೦—೧೧—೦

ಶ್ರೀಚಾಮರಾಜೇಂದ್ರ ಒಡೆಯರವರ ಚರಿತ್ರೆ. ಉತ್ಕೃಷ್ಟವಾದ ಪುಸ್ತಕ ಅನೇಕ ಚಿತ್ರಗಳು ಇವೆ. ಇದನ್ನು ಕವಿತಾ ರಾಜಧರ್ಮಪ್ರವೀಣ ಮ॥ ರಾ॥ ರಂಗಾಚಾರ್ಯರು ಒಂದು ಉತ್ಕೃಷ್ಟವಾದ ಅವತರಣಿಕೆಯನ್ನು ಬರೆದಿದ್ದಾರೆ. ಕ್ರಯ ೧—೮—೦ ವಿ. ಪಿ. ಪಿ. ಮೂಲಕ ೧—೧೧—೦

ಎಡ್ವರ್ಡ್ ಸಾರ್ವಭೌಮರ ಜೀವನಚರಿತ್ರೆ	೦—೪—೦
ಕ್ರಿಮಿವರ್ಗವರ್ಣನೆ	೦—೧—೦

ಭೂಗೋಳಸಂಗ್ರಹ—ಐದನೇ ಮುದ್ರಣ:—ಈಗ ಮೈಸೂರು ವಿದ್ಯಾಭ್ಯಾಸದ ಇಲಾಖೆಯವರು ಈ ಪುಸ್ತಕವನ್ನು ದೇಶೀಯ ಪರೀಕ್ಷೆಗೂ ಎಲ್ಲಾ ಪಾಠಶಾಲೆಗಳಿಗೂ ಟೆಕ್ಸ್ಟ್ ಬುಕ್ಕಾಗಿ ನೇಮಿಸಿರುತ್ತಾರೆ. ಈ ಪುಸ್ತಕವನ್ನು ಬಹಳವಾಗಿ ತಿದ್ದಿ ಹೊಸವಿಷಯಗಳನ್ನು ಅನೇಕವಾಗಿ ಕೂಡಿಸಿ ಪ್ರಕಟಿಸಲಾಗಿದೆ. ಕ್ರಯ ಪ್ರತಿ ೧ಕ್ಕೆ ೪ ಆಣೆ, ಪೋಸ್ಟೇಜು ೧ ಆಣೆ.

ಮುದ್ರಾಮಂಜೂಷವು.—ಎರಡನೇ ಮುದ್ರಣ:—ವಿದ್ಯಾರ್ಥಿಗಳೂ ವಿದ್ಯಾವಂತರೂ ಸಾಮಾನ್ಯಪ್ರಜೆಗಳೂ ಅಧಿಕಾರಸ್ಥರೂ ಲೋಕವ್ಯವಹಾರಾದಿಗಳನ್ನು ಪರಿಷ್ಕಾರವಾಗಿ ಕಲಿತುಕೊಳ್ಳುವದಕ್ಕೆ ವಿಶೇಷ ಸಹಕಾರಿಯಾದ "ಮುದ್ರಾಮಂಜೂಷ" ವೆಂಬೀ ನವರಸಯುಕ್ತವಾದ ಕನ್ನಡ ಗ್ರಂಥವು ಈಗಿನ ವ್ಯಾಕರಣಕ್ಕೆ ಸರಿಯಾಗಿ ತಿದ್ದಿ, ಬಹು ಶುದ್ಧವಾಗಿಯೂ ಅಂದವಾಗಿಯೂ ಪ್ರಕಟಿಸಲ್ಪಟ್ಟಿದೆ. ಇದಕ್ಕೆ "ಚಾಣಕ್ಯರ ನೀತಿ," "ಚಂದ್ರಗುಪ್ತ ಚಾಣಕ್ಯರ ಕಥೆ" ಎಂಬೀ ಹೆಸರುಗಳೂ ಉಂಟು. ಇಂಥಾ ಸರ್ವೋತ್ತಮವಾದ ಪುಸ್ತಕವನ್ನು ಕನ್ನಡಿಗರೆಲ್ಲಾ ತರಿಸಿ ಓದಿ, ಪ್ರಯೋಜನ ಪಡೆಯುವರೆಂದು ಹಾರೈಸುತ್ತೇವೆ. ಕ್ರಯ ೧ ಪ್ರತಿಗೆ ರೂ ೧—೮—೦, ಪೋಸ್ಟೇಜು ೨ ಆಣೆ. ವಿ. ಪಿ. ಪಿ ರೂ. ೧—೧೧—೦.

ಪಕ್ಷಿಗಳ ಚರಿತ್ರೆ	೦—೧—೦
ಪ್ರಾಚೀನ ಜೀವರಾಶಿಗಳ ವರ್ಣನೆ	೦—೧—೦
ಸಣ್ಣವರಿಗೆ ಹೇಳುವ ಕಥೆಗಳು	೦—೧—೦

ಬಾಲಿಕಾಗೀತ ಮುಕ್ತಾಕಲಾಪ, ೪ನೆ. ಗೀತಮಂದಾರ ೦—೬—೦, **ಕಲ್ಯಾಣಗೀತಾವಳಿ** ೦—೫—೦, ಈ ಹಾಡಿನ ಪುಸ್ತಕಗಳು ನಮ್ಮಲ್ಲಿ ಯಾವಾಗಲೂ ದೊರೆಯುತ್ತವೆ.

ಮುಖ್ಯವಾಗಿ, ಸ್ನೇಹಿತರೇ, ತಾವು ರಾಜಧಾನಿಗೆ ಬರುವಾಗಲೆಲ್ಲಾ ನಮ್ಮ ಪುಸ್ತಕಾಲಯವನ್ನು ನೋಡಿಯೇ ಹೋಗಬೇಕೆಂದು ಕೇಳಿಕೊಳ್ಳುತ್ತೇವೆ. ನಿಮಗೆ ಪುಸ್ತಕವಲ್ಲದೆ ಬೇರೆ ಯಾವದಾದರೂ ಪದಾರ್ಥಗಳಾಗಲೀ ಅಥವಾ ಸಂಗತಿಗಳಾಗಲೀ ಅಪೇಕ್ಷಿಸುವ ಸಂದರ್ಭದಲ್ಲಿ ನೀವು ನಮಗೆ ಒಂದು ಕಾರ್ಡು ಬರೆದರೆ ತಕ್ಷಣವೇ ಜವಾಬು ಕೊಡುವದಕ್ಕೆ ಪ್ರಯತ್ನ ಮಾಡುತ್ತೇವೆ.

ವಿಳಾಸ:— **ಮ್ಯಾನೇಜರ್,**

ಸಿ. ಎಲ್ ಎಸ್. ಬುಕ್ ಡಿಪೊ,

ಮೈಸೂರು.

ಮೈಸೂರು ಸೀಮೆಯಲ್ಲಿ ಪ್ಲೇಗಿನ ಸ್ಥಿತಿ.

೯—೨—1905 ರಿಂದ 16—2—1905 ರ ವರೆಗೆ

ಸ್ಥಳ.	ಪ್ಲೇಗ್ ತಗಲಿದ್ದು.	ಪ್ಲೇಗ್ ಸತ್ತದ್ದು.	ಜೋಡಿಸಿ... ಈ ವಾರ ಸಂಖ್ಯೆ	[illegible]
ಬೆಂಗಳೂರು ಪಟ್ಟಣ	14	12	44	[illegible]
ಮೈಸೂರು ,,	0	0	10	[illegible]
ಬೆಂಗಳೂರು ಡಿಸ್ಟ್ರಿಕ್ಟ	7	2	94	[illegible]
ಮೈಸೂರು ,,	1	0	50	[illegible]
ಕೋಲಾರ್ ,,	2	1	22	[illegible]
ಕೋಲಾರ್ ಚಿನ್ನದ ಗಣಿಗಳು	34	28	16	[illegible]
ತುಮಕೂರು ಡಿಸ್ಟ್ರಿಕ್ಟ	2	[illegible]	46	[illegible]
ಹಾಸನ (ಹೊರಗಿನದು)	0	0	0	[illegible]
ಚಿತ್ರದುರ್ಗ ,,	3	2	23	[illegible]
ಕಡೂರ್ ,,	0	0	5	[illegible]
ಶಿವಮೊಗ್ಗಾ ,,	40	17	5	[illegible]
ಜುಮ್ಲಾ	69	42	317	[illegible]

ಶಾಲಿವಾಹನ ಶಕ ವರುಷಂಗಳು ೧೮೨೮ ನೇ ವಿಶ್ವಾವಸು ಸಂವತ್ಸರದ ಫಾಲ್ಗುಣ ಶುದ್ಧ ಷಷ್ಠಿ ಗುರುವಾರದಿಂದ ಫಾಲ್ಗುಣ ಶುದ್ಧ ದ್ವಾದಶಿ ಬುಧವಾರದ ವರಗಿನ ಒಂದು ವಾರದ ಪಂಚಾಂಗ ೧೯೦೬ ನೇ ಇಸವಿ ಮಾರ್ಚಿ.

ತಾ.	ವಾರ.	ತಿಥಿ.	ಘಳಿಗೆ.	ನಕ್ಷತ್ರ.	ಘಳಿಗೆ.	[illegible]
1	ಗುರು	ಷಷ್ಟಿ	35-28	ಭ	27 56	19
2	* ಶುಕ್ರ	ಸಪ್ತಮಿ	38-40	ಕೃ	26-30	19
3	ಶನಿವಾ ‡	ಅಷ್ಟಮಿ	45-20	ರೋ	32-32	[illegible]
4	ರವಿವಾ	ನವಮಿ	49-19	ಮೃ	37-56	[illegible]
5	ಚಂದ್ರ	ದಶಮಿ	53-2	ಆ	42 16	[illegible]
6	ಕುಜ †	ಏಕಾದಶಿ	53-15	ಪು	45 28	[illegible]
7	ಬುಧ ;,	ದ್ವಾದಶಿ	51-2	ಪು	47-36	[illegible]

‡ ಅಮೃತಸಿದ್ಧಿಯೋಗ.

† ಸ್ಮಾರ್ತರಿಗೆ ಏಕಾದಶೀ ... ಕೇಶವಸ್ವಾಮಿಯವರ ..., ... ರಥೋತ್ಸವ, ... ಚಂದ್ರಪ್ರದವ ..., ತೊಂಡನೂರು ಗೋಪಾಲಸ್ವಾಮಿ ರಥ

ಪೇಟೇ ಧಾರಣೆ.

ದಿನಸಿ.	ಮೈಸೂರು.	ಬೆಂಗಳೂರು.
ಕಸ್ತೂರಿ ಅಕ್ಕಿ ಪಲ್ಲಾ ೧ಕ್ಕೆ	ರೂ. ೧೦-೧೨-೦	[illegible]
ಕೆಂಬತಿ ಅಕ್ಕಿ ಆವಲ್	೧೨-೦-೦	[illegible]
,, ದುಯಂ	೧೦-೮-೦	[illegible]
ಜಾಪ್ರೀಸ ಅಕ್ಕಿ	೧೨-೦-೦	[illegible]
ಸಣ್ಣಕ್ಕಿ ಅವಲ್	೧೩-೧೨-೦	[illegible]
,, ದುಯಂ	೧೩-೦-೦	[illegible]
ತೊಗರೀ ಬೇಳೆ ಪಲ್ಲಾ ೧ಕ್ಕೆ	೯-೮-೦	[illegible]
,, ದುಯಂ	೯-೪-೦	[illegible]
ಹೈಕ ರಾಗಿ ಪಲ್ಲಾ ೧ಕ್ಕೆ	೬-೧೨-೦	[illegible]
ಕಾರ್ರಾಗಿ	೬-೬-೦	[illegible]
ಜೋಳ	೩-೪-೦	[illegible]
ಹಲಸಂದೆ ಪಲ್ಲಾ ೧ಕ್ಕೆ	೯-೧೨-೦	[illegible]
ಬಿಳೀ ಅವರೆ	೩-೮-೦	[illegible]
ಹೆಸರು	೧೦-೦-೦	[illegible]
ಉದ್ದು	೧೨-೦-೦	[illegible]
ಕಡಲೆ	೧೧-೮-೦	[illegible]
ಎಳ್ಳು ಸೆ. ೧೨೩ ಕ್ಕೆ	೧೮-೮-೦	[illegible]
ಹುರುಳಿ	೩-೧೨-೦	[illegible]
ಹರಳು ೧೨೩ ಸೇರಿಗೆ	೧೧-೧೨-೦	[illegible]
ಸೀಗೇಕಾಯಿ ಮಣ ೧ಕ್ಕೆ	೨-೧೨-೦	[illegible]
ಮೆಣಸಿನಕಾಯಿ	೩-೮-೦	[illegible]
,, ದುಯಂ	೩-೪-೦	[illegible]
ಬೆಲ್ಲ ದೊಡ್ಡ ಅಚ್ಚು	೪-೪-೦	[illegible]
ಒಣಗಿದ್ದ ಮಣ ೧ಕ್ಕೆ	೫-೪-೦	[illegible]
ಅರಶಿನ ,,	೪-೧೨-೦	[illegible]
ಕೊತ್ತುಂಬರಿ ಪಲ್ಲಾ ೧ಕ್ಕೆ	೧೦-೦-೦	[illegible]
ಉಪ್ಪು ,,	೬-೦-೦	[illegible]
ಹುಣಸೇ ಹಣ್ಣು	೦-೧೩-೦	[illegible]
,, ಹಳೇದು	೦-೮-೦	[illegible]
ತುಪ್ಪ	೧೩-೪-೦	[illegible]
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ	೫-೪-೦	[illegible]
ತೆಂಗಿನಕಾಯಿ ೧೦೦ ಕ್ಕೆ	೭-೦-೦	[illegible]
ಅಡಕೇಕಾಯಿ ಮಣ ೧ಕ್ಕೆ	೦-೧೨-೦	[illegible]
ಹಂಬ್ಯಾಳದ ಕಾಯಿ ಮಣ ೧ಕ್ಕೆ	೦-೧೨-೦	[illegible]
ಚಿನ್ನ (ಪೌನ್) ಕೆಂಪು	೧೫-೭-೦	[illegible]
,, ,, ಹಸಿರು	೧೫-೩-೦	[illegible]
,, ,, ಗಟ್ಟಿ ತೊಲ ೧ಕ್ಕೆ	೨೩-೧೨-೦	[illegible]
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ	೭೨-೦-೦	[illegible]

Printed and Published by the Rev E. W. Thompson, the Proprietor and Manager, Wesleyan Mission Press, Mysore. 1/3/1906.

ವೃತ್ತಾಂತ ಪತ್ರಿಕೆ.

REGISTERED M. 20

ಕ್ರಯ ೧ ದುಡ್ಡು ——— ಕ್ರಯ ೧ ದುಡ್ಡು

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು

ಸಂಪುಟ ೧೯ ಮೈಸೂರು—ಸನ್ ೧೯೦೬ ನೇ ಇಸವಿ ಮಾರ್ಚಿ ತಾರೀಖು ೮ ನೇ ಗುರುವಾರ. ಸಂಖ್ಯೆ ೪೦

ನೋಡಿ—ಮತ್ತೊಂದು ಹೊಸಪುಸ್ತಕವು—ಒಹು ರಸಿಕವಾಗಿದೆ. ಅರೇಬಿಯನ್ ನೈಟ್ಸ್ ಅಥವಾ ಯವನಯಾಮಿನೀ ವಿನೋದ ಕಥೆಗಳು

37 1

ಎಂಬ ಮಹಾಪ್ರಸಿದ್ಧವಾದ ಪುಸ್ತಕವು ತಿಳಗನ್ನಡ ಈಗತಾನೇ ಪ್ರಕಟಿಸಲ್ಪಟ್ಟಿದೆ. ಹೆಮ್ಮಿ ಅಷ್ಟಪತ್ರ ಸುರು ಎಪ್ಪತ್ತು ಪುಟಗಳುಳ್ಳದ್ದಾಗಿಯೂ ಆ ಬಾಲವೃ ಉತ್ಸಾಹಕರವಾಗಿಯೂ, ಮಹಾ ರಸಿಕವಾಗಿಯೂ ವಾಗಿರುವ ಈ ಪುಸ್ತಕದ ಅಭಿರುಚಿಯನ್ನು ವಾಚಕ ರ ಸ್ವಾನುಭವದಿಂದಲೆ ಗ್ರಹಿಸಿ ತಿಳಿದುಕೊಳ್ಳುವರು. ಷೆಯು ಬಹು ಸರಳವಾಗಿರುವದು. ಮತ್ತು ಇದನ್ನು ಸುವದಕ್ಕೆ ಸುಮಾರು ಎರಡು ವರ್ಷಗಳು ಹಿಡಿದಿವೆ. ಸ್ತಕವನ್ನು ಒಂದಾವರ್ತಿ ಓದಿದಮೇಲೆ ಅದನ್ನು ಪುನಃ ವಂತೆ ಅದು ಮನಸ್ಸನ್ನು ಆಕರ್ಷಿಸುವದು. ಇದರ ಎರಡು ರೂಪಾಯಿ ಮಾತ್ರವೇ ಪಾಸಲು ಎರಡು ಣೆ. ವಿ. ಪಿ. ಮೂಲಕ ತರಿಸಿಕೊಂಡರೆ ಎರಡು ಯಿ ಮೂರು ಆಣೆಗಳಾಗುವವು. ಹೇಗಾದರೂ ಬಡ ರು ಎಲ್ಲರೂ ಕೊಂಡು ಓದಿ ಪ್ರಯೋಜನವನ್ನು ಪಡೆ ರೆಂದು ಇಷ್ಟು ದೊಡ್ಡಪುಸ್ತಕವನ್ನು ಇಷ್ಟು ಸುಲ ಕ್ರಯಕ್ಕೆ ಮಾರುತ್ತೇವೆ.

ಪುಸ್ತಕವು ದೊರಕುವ ಸ್ಥಳ

ಸಿ. ಎಲ್. ಎಸ್. ಬುಕ್ ಡಿಪೋ,

ಮೈಸೂರು.

ಇಂಡಿಯಾ ವ್ಯವಸಾಯ ಮತ್ತು ಸಹಾಯಕ ಆಫೀಸು.

14-21

[೧೯೦೨ ರಲ್ಲಿ ಸ್ಥಾಪಿತವಾದದ್ದು.]

ಈ ಆಫೀಸಿನ ಉದ್ದೇಶವೇನಂದರೆ—ಯಾವ ಜಾತಿಯವರೇ ಆಗಲಿ ಯವರೇ ಆಗಲಿ ಈ ಆಫೀಸಿನ ಚಂದಾದಾರರಾಗಿ ಅದರ ಭರವಸ ಪತ್ರವನ್ನು ಹೊಂದಿದ್ದರೆ ಅವರ ಮರಣಾನಂತರ ಅವರ ಕುಟುಂಬದವ ರಿಗೆ ಸಹಾಯವು ಕೊಡಲ್ಪಡುವದು.

ಈ ಆಫೀಸಿನ (A) ತರಗತಿಗೆ ಸೇರಿದವರು ಪಡೆಯಬೇಕೆಂದಿದ್ದ ಪ್ರತಿ ೧೦೦೦ ರೂಪಾಯಿಗಳ ಮೊಬಲಗಿಗಾಗಿ ಮಾಸಿಕವಾಗಿ ಒಂದು ರೂಪಾಯಿಯ ಪ್ರಕಾರ ಒಟ್ಟು ರ ೯ ೪೩ ನ್ನು ಮಾತ್ರವೇ ಕೊಡಬೇಕಾಗುವದು.

ಆಫೀಸಿನವರು ಚಂದಾದಾರರಿಂದ ವಸೂಲಾದ ಮೊಬಲಗನ್ನು ರೀತಿಯಾಗಿ ನಡೆಸಲ್ಪಡುವ ವ್ಯವಸಾಯಕ್ಕೆ ಹಾಕಿ ಅದರಿಂದ ಲಾಭದಿಂದಲೇ ಚಂದಾದಾರರ ಸಹಾಯದ್ರವ್ಯವನ್ನು ಕೊಡಲಾ ಈ ವ್ಯವಸಾಯ ನಿಮಿತ್ತವಾಗಿ ನಾವು W.I.P. ರೈಲ್ವೆ ಪಕ್ಕ ದಲ್ಲಿರುವ "ಕೊಲ್ಲಂ ಎಸ್ಟೇಟ್" ಎಂಬ ಸರ್ವೋತ್ಕೃಷ್ಟವಾದ ಭೂಮಿಯನ್ನು ೯೯ ವರ್ಷಕ್ಕೆ ಸ್ವಂತವಾಗಿ ಪಡೆದಿದ್ದೇವೆ. ಈ ಭೂ ಮಿಯಲ್ಲಿ ಹೊಳೆಯಿಂದ ಕಾಲುವೆ ಮಾಡಿ ನೀರನ್ನು ತಂದುಕೊಂ ಡಿರುವದರಿಂದ ಫಸಲು ಕಡಮೆಯಾಗುವದೆಂಬ ಭಯವೇ ಇಲ್ಲ.

ಈ ಆಫೀಸಿನಲ್ಲಿ ಭರವಸಪತ್ರವನ್ನು ಪಡೆದಿರುವವರು ಚಂದಾದಾ ರರು ಮಾತ್ರ ಇದ್ದಾರೆ. ಆದಾಯ ನಷ್ಟಗಳಿಗೆ ಭಾಗಿಗಳಾದ ಪೇರು ದಾರರು ಇರುವದಿಲ್ಲ. ಆದರೂ ಅವರ ಹಣಕ್ಕೆ ನಮ್ಮ ಭೂಸ್ಥಿತಿಯು ಜಾಮೀನಾಗಿರುತ್ತದೆ.

ಚಂದಾ ಮೊಬಲಗನ್ನೆಲ್ಲಾ ಪಾವತಿ ಮಾಡಿ ಭರವಸಪತ್ರವನ್ನು ಪಡೆದಿರುವ ಯಾವ ಚಂದಾದಾರನಿಗಾಗಲಿ ಆಫೀಸಿನಿಂದ ಬರತಕ್ಕ ಬಾಬ ತ್ತು ಬೇಕಾದರಾಗಿ ಕಂಡುಬಾರದಿದ್ದರೆ ತಾನು ಸಲ್ಲಿಸಿರುವ ಚಂದಾಮೊ ಬಲಗನ್ನು ವಾಪಸುಪಡೆಯಬಹುದು.

ಈ ಆಫೀಸಿಗೆ ಸಬ್ ಏಜಂಟುಗಳು ಬೇಕಾಗಿವೆ. ವಿವರವಾಗಿ ಅಪೇಕ್ಷಿಸುವವರು ಅರ್ಧಾಣೆ ಸ್ಟಾಂಪಿಟ್ಟು ಕೆಳಗಿನ ವಿಳಾಸಕ್ಕೆ ಕಾಗದಬರೆದುಕೊಳ್ಳತಕ್ಕದ್ದು.

ವಿಳಾಸ:—The Manager,

India Agricultural and Helping Office,

Vengurla Post, Bombay Presidency.

WANTED WILD ANIMALS.

ಬೇಕಾಗಿದೆ. ಬೇಕಾಗಿದೆ.

5-47

ಎಲ್ಲಾ ಬಗೆಯ ಕಾಡು ಮೃಗಗಳು. ಮೈಸೂರು ಜೂ ಸೂಪ ರಿಂಟೆಂಡೆಂಟ್ ಮಿ॥ ಹ್ಯೂಜಸ್ ಅವರು ಕೊಂಡುಕೊಳ್ಳುವರು.

Apply to—Mr Hughes, Mysore Zoo.

"ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ.

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜಂಟರ ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ (ಅಡ್ವಾನ್ಸು) .. .. .. ರೂ. ೧—೮—೦

ಪರಸ್ಥಳದವರು ಆಫೀಸಿನಿಂದ ಅಂಚೆಯ ಮೇಲೆ ತರಿಸಿ ಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಹಾಸಲ್ ಸೇರಿ .. .. ರೂ. ೦—೧೪—೦

" " ೬ " " ೦—೧೫—೦

ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು.

ನಮ್ಮ ವಿಳಾಸ —ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು

ಜ್ವರ ಹರಿ. 29-5

ಇದು ಸಾಧಾರಣ ಜ್ವರ, ಚಳೀಜ್ವರ, ಮರೇಜ್ವರ, ಪಿತ್ಥಜ್ವರ, ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮರಾಮತ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್ ಟಿ ವೆಂಕಟಪತಿ ಅಯ್ಯ ರವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨೦ ಔನ್ಸಿನ ಸೀಸೆಯು ತೀರಿಹೋಯಿತು. ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಆರಾಮಾಗಿ ಗುಣ ಹೊಂದಿರುವರು ಇನ್ನೂ ಜನಗಳು ಕಾಹಿಲೇ ಬೀಳುತ್ತಿರುವ ದರಿಂದ ದಯವಿಟ್ಟು ಇನ್ನೊಂದು ೨೦ ಔನ್ಸಿನ ಸೀಸೆಯನ್ನು ವಿ. ಪಿ ಪಿ ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆ ದಿದ್ದಾರೆ

ಕ್ರಯ:—ಸೀಸೆ ೧ ಕ್ಕೆ ೮ ಆಣೆ, ೧ ರೂ., ೧—೮ ರೂ.; ರೂ. ೨—೧೨ ಆ., ೧೧ ರೂ; ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು.

****

ಜಿ ಮ ೦ ಕ ಘೂ ೯ ರ.



ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆಕಳ ಕುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾ ದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡು ವದು. ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಯೆ ಹೊಟ್ಟೇನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ. ಕ್ರಯದ ವರವು ಜ್ವರಹರಿ ಎಂಬ ಔಷಧದಂತೆಯೇ. ಸೀಸೆಗಳಲ್ಲಿ ದೊರಕುವದು.

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಹೆಪ್ರಿಯ ಒಮಂ ಕರ್ಪೂರವನ್ನು ನಾನೂ ನನ ಕಾಲೇದಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣ ಭೇದಿ, ಅಜೀರ್ಣ ರೋಗಿಷ್ಠರಿಗೆ ಕೊಡುತ್ತೇವೆ. ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ. ಇದು ಬಹು ಒಳ್ಳೇ ಔಷಧ ವೆಂದ ಬರೆದಿದ್ದಾರೆ.

ಈ ನಾಲ್ಕು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗ ಳಲ್ಲೂ, ದೊಡ್ಡ ದಾಸ್ತಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯ ಕ್ಕೆ ಸಿಕ್ಕುತ್ತವೆ. ಇದಲ್ಲದೆ ಕೆಳಗಿನ ವಿಳಾಸದಾರರಲ್ಲಿ ವಿಶೇಷ:— ಹೆಪ್ರಿಯವರ ಗ್ರೇಟ್ ಇಂಡಿಯನ್ ಔಷಧಗಳ ಕಂಪನಿ, ಸೌತ್ ಬೀಚ್ ಸ್ಟ್ರೀಟ್ ಮದ್ರಾಸ್.

ಅದ್ಭುತ ಜನವರಿ ಪ್ರಜೆಂಟೇಷನ್ ಪಾರ್ಸಲು!

33

[illegible]

ವಿಳಾಸ,—ಫ್ರಾಂಕ್ ವಾಚ್ ಕಂಪನಿ,

ಜಾರ್ಜ್ ಟವನ್ ಮದರಾಸ್.

ಹೋಮಿಯೋಪಿಯ.

ತಕ್ಷಣ ಪರಿಹಾರ

ತಗಲುತ್ತಲೇ ನೋವು ವಾಸಿ ಯಾಗುತ್ತೆ

ಈ ಔಷಧಿಯು ಮನೆ, ಅರಮನೆ, ಕಾರ್ಖಾನೆ, ಆಸ್ಪತ್ರೆ, ಪೊಲೀಸ್ ಠಾಣಾ, ವಿದ್ಯಾಶಾಲೆ, ಕೋರ್ಟು, ಕಛೇರಿ, ಮುಂತಾದ ಸ್ಥಳ ಗಳಲ್ಲೆಲ್ಲಾ ಇದ್ದೇ ಇರಬೇಕು ಇದಕ್ಕೆ ಸಮಾನವಾದ ಔಷಧ ಮತ್ತಾ ವದೂ ಇಲ್ಲವೆಂಬುವದು ಲೋಕಪ್ರಸಿದ್ಧವಾಗಿದೆ.

ಈ ತೈಲವು ತತ್ಕಾಲದಲ್ಲಿ ಜೀವದಾಶೆಗಳಿಗೆ ಮುಖ್ಯವಾಗಿ ಸಿಕ್ಕ ತಕ್ಕ ಔಷಧ. ಇದನ್ನು ಉಪಯೋಗಿಸಿದ ದೊಡ್ಡ ಮನುಷ್ಯರು, ಡಾಕ್ಟ ರುಗಳು, ಮುಂತಾದವರು ಅದರ ಗುಣವನ್ನು ಹೊಗಳಿ ಸರ್ಟಿಫಿಕೇ ಟುಗಳನ್ನು ಕೊಟ್ಟಿದ್ದಾರೆ ನೋವು ಕಂಡರೆ ಇದನ್ನು ಹಚ್ಚಿದ ಕೂಡಲೇ ವಾಸಿಯಾಗುವದು.

ಈ ತೈಲವು ಅರೆ ತಲೆನೋವು, ಸೊಂಟನೋವು, ಪಾರ್ಶ್ವವಾ ಯು, ಮೂಲವ್ಯಾಧಿ, ಉಬ್ಬಸ, ವಾಯುಗಳು, ನರ ಹೊರಳುವದು, ಉಳುಕು, ಕೀಲುವಾಯು, ಗುಳ್ಳೆಗಳು, ಹಲ್ಲುನೋವು, ಮುಖ ನೋವು, ಊದುಗಳು, ಗಜ್ಜೆಗಳು, ರಣಗಳು, ಹುಳುಕಡ್ಡಿ, ಸೊಳ್ಳೆ ಮತ್ತು ಚೇಳು ಕಚ್ಚಿದ್ದು, ಚಿಪ್ಪಿರುವದು, ಬೆಂಕಿಯಲ್ಲಿ ಸುಟ್ಟು ಕೊಂಡದ್ದು, ಕತ್ತಿ ಗಾಯ—ಇವೇ ಮೊದಲಾದ ನಾನಾ ಬಾಧೆಗಳನ್ನು ಹುಟ್ಟಡಗಿಸುತ್ತದೆ ರಾತ್ರಿ ಹಚ್ಚಿಕೊಂಡು ಮಲಗಿದರೆ ಸೊಳ್ಳೆ ಹತ್ತಿರ ಸೇರುವದಿಲ್ಲ.

ಕ್ರಯ – ಸಣ್ಣ ಡಬ್ಬಿ ೧ ಕ್ಕೆ ೧ ರೂ., ದೊಡ್ಡದಕ್ಕೆ ರೂ. ೨—೮ ಆ.; ಒಂದೇ ಸಲ ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚ ಮಾಫಿ ಬಿಡುತ್ತಾರೆ. ರೂ. ೨—೮ ಆಣೆ ಬಾಬ್ತು ಡಬ್ಬದಲ್ಲಿ ೧ ರೂ. ಡಬ್ಬದಲ್ಲಿರುವದಕ್ಕಿಂತ ೪ ರಷ್ಟು ಹೆಚ್ಚು ಔಷಧವಿರುತ್ತೆ. ರೂ. ೨—೮ ಆ. ಈ ಡಬ್ಬವನ್ನು ತರಿಸಿಕೊಳ್ಳುವವರಿಗೆ ಟಪ್ಪಾಲ್ ಖರ್ಚ ಮಾಫಿ ಬಿಡುತ್ತೆ.

****

ಹೋಮಿಯೋಪಿಯಾ ಯಂಬ್ರೋಕೇಷನ್

ಈ ತೈಲವು ಹಳೇ ನೋವುಗಳಿಗೆ ಉಪಯೋಗಿಸತಕ್ಕದ್ದು. ಚರ್ಮ ಒಡೆದ ಕಡೆ ಇದನ್ನು ಹಚ್ಚಕೂಡದು ಇದರಲ್ಲಿ ಹೋಮಿಯೋ ಪಿಯದ ಗುಣಗಳು ಬಹು ತೀಕ್ಷ್ಣವಾಗಿ ಇರುತ್ತವೆ ಅದಕ್ಕಿಂತಲೂ ಇದರಲ್ಲಿ ಇನ್ನೆರಡು ಗುಣಗಳುಳ್ಳ ಹೊಸ ಭಾಗವಿರುತ್ತದೆ. ಇದನ್ನು ಚರ್ಮವು ಬಹು ಬೇಗನೆ ಸೇದಿಕೊಳ್ಳಬಲ್ಲದು. ಡಬ್ಬಗಳಲ್ಲಿ ತುಂಬಿ ೮ ಆಣೆಗೂ, ೧ ರೂ. ಗೂ ಒಂದರಂತೆ ಬಿಕರಿ ಮಾಡಲ್ಪಡುವದು. ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚ ಮಾಫಿ. ಎಲ್ಲಾ ದಾಸ್ತಗಳ ಲ್ಲಿಯೂ ದೊರೆಯುವದು

ಈ ಔಷಧಗಳ ವಿವರಣೆಯೂ, ಸರ್ಟಿಫಿಕೇಟುಗಳೂ ಉಳ್ಳ ನೋಟೀಸುಗಳನ್ನು ಅಪೇಕ್ಷಿಸಿದರೆ ಕಳುಹಿಸುವೆವು.

ವಿಳಾಸ:—ಹೋಮಿಯೋಪಿಯಾ ಕಂಪನಿ. ೨೩ ಸೌಂಡ್ ಬೀಚ್ ಸ್ಟ್ರೀಟ್. ಮದ್ರಾಸ್.

ನೋಟಿಗೆ ಬಹುಮಾನ.

52 1

ನಮ್ಮ ಬಾಬತು F A 29—46975 ನೇ 100 ರೂಪಾಯಿನ ಪೂರಾ ನೋಟು, T A 19—01534 ನೇ 20 ರೂಪಾಯಿನ ಪೂರಾ ನೋಟು ಇವೆರಡು ಬೆಂಗಳೂರಲ್ಲಿ ಕಳೆದು ಹೋಗಿದೆ ಅದನ್ನು ನನಗೆ ತಂದುಕೊಟ್ಟವರಿಗೆ 10 ರೂಪಾಯಿ ಬಹುಮಾನಕೊಡುತ್ತೇನೆ ವಿಳಾಸ—ಯಂ ವೆಂಕಟಸುಬ್ಬಯ್ಯ IV ನೇ ಫಾರಂ ವಿದ್ಯಾರ್ಥಿ ಮಹಾರಾಜಾ ಕಾಲೇಜ್, ಮೈಸೂರು

ನೀವು ವಿಲಾಯತಿಯಿಂದ ಯಾವ ಸಾಮಾನುಗಳನ್ನಾದರೂ ತರಿಸಿಕೊಳ್ಳಬೇಕಾಗಿದ್ದರೆ 19 8

ಪ್ರೈತ್ ಮತ್ತು ಈಸ್ಟ್‌ಲೆಂಡ್,

೨೯—೩೪, ಸಿಟಿ ರೋಡ್, ಲಂಡನ್, ಇ. ಸಿ

ಎಂಬೀ ವಿಳಾಸಕ್ಕೆ ಬರೆಯಿರಿ, ಕಾಗದ ಬರೆಯಿರಿ ಈ ಕಂಪನಿಯವರು ಪೇಟೆಂಟ್ ಔಷಧಿಗಳನ್ನೂ, ಆಸ್ಪತ್ರೆಗಳಿಗೂ ಕ್ಲಿನಿಕ್ ಕೊಡು ... ಯಂತ್ರಗಳಿಂದಲೇ ತಯಾರಾದಂಥಾ ಆಹಾರಗಳನ್ನೂ, ಇನ್ನೂ ನಾನಾತರದ ಪದಾರ್ಥಗಳನ್ನೂ ಇಟ್ಟು ವಿಕರಿಮಾಡುತ್ತಾರೆ ಅವರು ಬಹು ವಿಶೇಷವಾದ ಗಮನಕೊಟ್ಟು, ಸಾಧ್ಯವಿದ್ದಷ್ಟು ಅಗ್ಗವಾಗಿ, ಬೇಕಾದ ಸಾಮಾನುಗಳನ್ನೇ ಆರಿಸಿ, ಮರಿಟಪ್ಪಾಲಿಗೇನೇ ಕಳುಹಿಸಿಕೊಡುವರು

ಪರಿಮಳ ನಶ್ಯಪಾಡಿ

50 2

ಪರಿಮಳ ನಶ್ಯದಪುಡಿ ಡಬ್ಬಿ ೧ ಕ್ಕೆ	0—9—0
ಟಪಾಲಿ ಖರ್ಚು	0—3—0
ಸಾದಾ ನಶ್ಯದಪುಡಿ ಡಬ್ಬಿ ೧ಕ್ಕೆ	0—6—0
ಟಪಾಲಿ ಖರ್ಚು	0—3—0

ಈ ಪುಡಿಯನ್ನು ಮೇಲಾದ ಹೊಗೆಸೊಪ್ಪಿನಿಂದ ಸುವಾಸನೆಯುಳ್ಳದ್ದಾಗಿ ತಯಾರು ಮಾಡಲ್ಪಟ್ಟಿರುತ್ತೆ ಇದರ ಸುವಾಸನೆ ಒಂದು ಸೇರು ಸಾಧಾರಣ ಪುಡಿಯಲ್ಲಿ ಸ್ವಲ್ಪವನ್ನು ಹಾಕಿ ಕಲಸಿದರೆ ಪುಡಿಯೆಲ್ಲಾ ಗಮಗಮಿಸುತ್ತೆ ಉಪಯೋಗಿಸುವವರಿಗೆ ಸುವಾಸನೆಯನ್ನೂ ಆನಂದವನ್ನೂ ಉಂಟು ಮಾಡುತ್ತೆ

ತಲೆನೋವು ಪೀನಸ, ಜಲದೋಷ, ಶಿರೋವ್ಯಾಧಿ ಇವುಗಳನ್ನು ತಪ್ಪದೆ ಪರಿಹರಿಸುತ್ತೆ ಮಾದರಿಗೆ ೧ ಡಬ್ಬಿಯನ್ನು ತರಿಸಿ ಪರೀಕ್ಷಿಸಿರಿ

☞ ಪ್ರತಿ ೧ ಡಬ್ಬಿಯಲ್ಲಿ ೯ ತೋಲ ನಶ್ಯದಪುಡಿ ಇರುತ್ತೆ

ಮಾನೇಜರ್, ಧರ್ಮ ವೈದ್ಯಶಾಲಾ

69 ಬೈನಾಬಜಾರು ರೋಡ್, **ಸಾಹುಕಾರ್‌ಪೇಟೆ, ಮದರಾಸು.**

ಪುದುಚೇರಿ ಬೋಲ್‌ಕಾಲು ಗೊಲಸು

ಮತ್ತು ಕಡಗಗಳೂ.

49 2

ಮೇಲಾದ ಜರ್ಮನ್ ಸಿಲ್ವರಿಂದ ಮಾಡಲ್ಪಟ್ಟವೆ ನೋಟಕ್ಕೆ ಬೆಳ್ಳಿಯವುಗಳಂತೆ ತೋರುವದು ಈ ಒಡವೆಗಳ ಸಂಪು ಕೀಲುಗಳಿಗೆ ಬೆಳ್ಳಿ ಪುಡಿಯಿಂದ ಬೆಸೆದು ಸುಲಭವಾಗಿ ಹಾಕಿ ತೆಗೆಯುವಂತೆ ಮಜಭೂತಾದ ಕೆಲಸಮಾಡಿರುತ್ತದೆ ಬಣ್ಣ ಕೆಡುವುದಿಲ್ಲ ಎಲ್ಲರೂ ಉಪಯೋಗಿಸಬೇಕೆಂಬ ಉದ್ದೇಶದಿಂದ ಸುಲಭಕ್ರಯಕ್ಕೆ ವಿಕ್ರಯಿಸುತ್ತೇವೆ



ಬೋಲ್‌ಗೊಲಸು

ನಂ	೧	ದೊಡ್ಡವರಿಗೆ	೨—೮—೦
,,	೨	ಚಿಕ್ಕವರಿಗೆ	೨—೪—೦
,,	೩	ಮಕ್ಕಳಿಗೆ	೨—೦—೦



ಕಾಲುಕಡಗಗಳು.

ನಂ	೧	ದೊಡ್ಡವರಿಗೆ	೧—೮—೦
,,	೨	ಚಿಕ್ಕವರಿಗೆ	೧—೪—೦
,,	೩	ಮಕ್ಕಳಿಗೆ	೧—೦—೦

ಒಂದು ಜತೆಯನ್ನ ತರಿಸಿಕೊಂಡು ಇತರರದನ್ನು ನಮ್ಮವುಗಳನ್ನು ಪರೀಕ್ಷಿಸಿದರೆ ವ್ಯತ್ಯಾಸವೂ ಅಗ್ಗವೂ ಸಹಾ ತಿಳಿಯಬರುವದು ನಮ್ಮ ಕಂಪನಿಯಿಂದ ತರಿಸಿಕೊಂಡವುಗಳಿಗೆ ದುರಸ್ತಿಯನ್ನು ಮಾಡುವೆವು ನಮ್ಮ ಹೆಸರನ್ನು ನಮೂದಿಸದೆ ಬರೆದರೆ ನಮ್ಮ ಕಂಪನಿಯ ಬಹುಮಾನಗಳು ದೊರಕಲಾರವು

ವಿಳಾಸ—ಟಿ ಶೀ. ನರಸಯ್ಯ ಅಂಡ್ ಕಂಪನಿ, ಜರ್ಮನ್ ಸಿಲ್ವರ್ ಮರ್ಚಂಟ್ಸ್ ನಂ॥ ೩೦, ಕಾಳಯುತ್ತಪಿಳ್ಳೆ ಸ್ಟ್ರೀಟ್, **ಸಾಹುಕಾರಪೇಟೆ ಪೋಸ್ಟ್, ಮದ್ರಾಸು.**

CHAMBERLAIN'S PAIN BALM.

ಚೇಂಬರ್ಲೇನ್ ಯವರು ಮಾಡಿದ ನೋವುಹರ ಔಷಧವು.



159

ಬೆನ್ನೆಲುಬಿನಲ್ಲಿನ ನೋವು, ಪಕ್ಕಗಳಲ್ಲಿ ಆಗುವ ನೋವು, ಖಂಡಗಳಲ್ಲಿ ಹುಟ್ಟುವ ನೋವು, ತರಚೊಟ್ಟು ... ಜಜ್ಜಿದ ಗಾಯಗಳ ನೋವು, ವಾಯು ನೋವು—ಇವುಗಳನ್ನೆಲ್ಲಾ ಸಂಪೂರ್ಣವಾಗಿ ವಾಸಿಮಾಡುವಂಥಾ ಔಷಧ

ವಾಯುನೋವೆಂದರೇನು?

ಕೀಲುಗಳಲ್ಲೂ ಮಣಿಕಟ್ಟುಗಳಲ್ಲೂ ಗಾಯವಾಗುವುದು, ಊದಿಕೊಳ್ಳುವುದು, ಕಠಿಣವಾಗಿ ಕಳೆಯುವ ... ಖಂಡಗಳಲ್ಲಿ ಇರಿಯುವುದು, ವಿಶ್ರಾಂತಿಕೊಡದೆ ಇರುವುದು, ನಿದ್ದೆಹತ್ತದೆ ಇರುವುದು—ಇದೇ ಇದೆಲ್ಲಾ ... ಯಾವಾಗ ಉಂಟಾಗುವುದೋ ಆಗ್ಗೆ ನಿಮಗೆ ವಾಯುರೋಗ ಬಂದಿದೆ ಎಂದು ತಿಳಿಯತಕ್ಕದ್ದು

ಆಗ ಚೇಂಬರ್ಲೇನ್‌ಯವರು ಮಾಡಿದ ನೋವುಹರ ಔಷಧವನ್ನು ಉಪಯೋಗಿಸಿ

ಮೊದಲನೇ ಸಲ ಇದನ್ನು ಹಾಕಿ ಉಜ್ಜಿದ ಕೂಡಲೆ ಹಿತಕರವಾದ ಒಂದು ತರಹಾ ಶಾಖವು ಮೂಳೆ ... ವ್ಯಾಪಿಸುತ್ತದೆ ಒಡನೆಯೇ ನೋವೆಲ್ಲಾ ಸಂಪೂರ್ಣವಾಗಿ ಪರಿಹರಿಸಲ್ಪಡುತ್ತದೆ ಮನಸ್ಸಿಗೆ ಉಲ್ಲಾಸವಾಗುತ್ತ ... ಆವತ್ತೇ ಆಗಿಂದಾಗ್ಗೆ ಹಾಕಿ ಉಜ್ಜುತ್ತಾ ಬಂದರೆ ಈ ವಾಯುವಿನ ಹುಟ್ಟನ್ನೇ ಕಿತ್ತುಹಾಕಿಬಿಡುವುದು

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ

ಕೈಯಿಂದ ಮುಟ್ಟಿದ್ದೇನೂ ಅಲ್ಲ

ಇದು ಎಲ್ಲೆಲ್ಲೂ ವಿಕರಿಯಾಗುವುದು ಸಣ್ಣ ಸೀಸೆಗೆ ೧ ರೂಪಾಯಿ ದೊಡ್ಡ ಸೀಸೆಗೆ ೨ ರೂಪಾಯಿ

ಪ್ರಶ್ನೋತ್ತರ ರತ್ನಮಾಲಿಕೆ.

44 3

ಶ್ರೀಮಚ್ಛಂಕರ ಭಗವತ್ಪಾದಾಚಾರ್ಯರಿಂದ ಭಕ್ತಿ, ನೀತಿ, ಜ್ಞಾನಪ್ರತಿಪಾದಕವಾಗಿರುವಂತೆ ರಚಿಸಲ್ಪಟ್ಟ ಈ ಗ್ರಂಥವು ಕನ್ನಡ ಪ್ರಶ್ನೋತ್ತರಗಳೊಡನೆ ಪ್ರಕಟಿಸಲ್ಪಟ್ಟಿದೆ ಬಾಲ್ಯದಿಂದಲೇ ಮಕ್ಕಳನ್ನು ಸುಗುಣಸುಜ್ಞಾನವಂತರನ್ನಾಗಿ ಮಾಡಲಪೇಕ್ಷಿಸುವ ತಂದೆತಾಯಿಗಳೂ ಉಪಾಧ್ಯಾಯರೂ ಗ್ರಂಥರೂಪವಾದ ಈ ರತ್ನಮಾಲಿಕೆಯಿಂದ ಅಲಂಕರಿಸಬೇಕೆಂದು ಪ್ರಾರ್ಥನೆ ಹಾಸಲು ಸಹಿತ ೨ ಆ ೬ ಪೈ ೬ ಪ್ರತಿಗಳಿಗೆ ಕಮ್ಮಿ ವಿ ಪಿ ಮಾಡುವುದಿಲ್ಲ ೧೨ ಕ್ಕೆ ೧ ಪ್ರತಿ ಇನಾಂ ಇಷ್ಟವುಳ್ಳವರು ಸ್ಟಾಂಪು ಕಳಿಸಿ

೧ ಸುಬ್ಬನರಸಿಂಹಯ್ಯ, ಶಿವರಾಂಪೇಟೆ ಸ್ಕೂಲ್, ಮೈಸೂರು,

೨ ಎಚ್ ಎ ನರಸಿಂಹೈಯಂಗಾರ್ ವಿ ಪ್ರೆಸ್, ಮೈಸೂರು

ಹೊಸ ಪುಸ್ತಕಗಳು.

36 4

ದೇವರನಾಮಗಳ ಪುಸ್ತಕ —ಇದರಲ್ಲಿ ಹೆಂಗಸರಿಗೆ ಉಪಯೋಗವಾಗುವ ಹಾಡುಗಳು, ದೇವರ ಪೂಜೆಮಾಡುವ ಕೀರ್ತನೆಗಳು, ಅಧ್ಯಾತ್ಮರಾಮಾಯಣ, ಭಾಗವತ ಸಂಕ್ಷೇಪ ರಾಮಾಯಣ, ಇವುಗಳು ಇನ್ನೂ ವಿಚಿತ್ರವಾದ ಲಾವಣಿಗಳೂ ಇರುತ್ತೆ ಕ್ರಯ ೮ ಆಣೆ

ಪಂಚಕಥಾ —ಇದರಲ್ಲಿ ಪ್ರಹ್ಲಾದಚರಿತ್ರೆ ಮಾಧವನಚರಿತ್ರೆ ಅನಸೂಯಾಚರಿತ್ರೆ, ದ್ರೌಪದೀ ಮಾನರಕ್ಷಣವೆಂಬ ದ್ಯೂತಪರ್ವ, ಸುದ್ಧ್ಯಾಸಚರಿತ್ರೆಯೆಂಬ ಐದು ಕಥೆಗಳು ಸೇರಿರುತ್ತೆ ೬ ಆಣೆ

ಸೇತುಬಂಧರಕಥೆ —ಭೋಜನಕಾಲನಿರ್ಣಯ, ಶನಿಕಥಾಸರ ಕಥೆ ಎಲ್ಲಾ ಒಂದರಲ್ಲಿ ಕ್ರಯ ೩ ಆಣೆ

ಶ್ರೀಮನ್ ಮಧ್ವಸಿದ್ಧಾಂತಸಾರ —ದ್ವೈತಾದ್ವೈತ ಮತವಿಷಯಗಳನ್ನು ವಿವರಿಸಲ್ಪಟ್ಟಿದೆ ಕ್ರಯ ೬ ಆಣೆ

ರುಕ್ಮಾಂಗದ ಮಹಾರಾಯರ ನಾಟಕ —ಕ್ರಯ ೩ ಆಣೆ

ಒಬ್ಬ ಸಿಪಾಯಿಯ ಸಾಹಸಗಳು —"ಒಂದು ಎತ್ತು ಮತ್ತು ಆರು ಗುರುಗುಂಜಿಗಳ ಸುದ್ದಿ" —ಕ್ರಯ ೪ ಆಣೆ

ಇಪ್ಪತ್ತನೆಯ ಶತಮಾನದ ಇರುಳು —ಕ್ರಯ ೨ ಆಣೆ

ವಿ ಪಿ ಖರ್ಚು ಬೇರೆ | ವಿಳಾಸ —ಜಗದೀಶವಿಠಲ ನಾರಾಯಣದಾಸ, ೧೩೮ ಅರಳೇಪೇಟೆ, ಬೆಂಗಳೂರು ಸಿಟಿ

ತ್ವರೆಮಾಡಿ! **ಸುಲಭ ಖರೀದಿ!!**

ಕ್ರಯ ರೂ ೪ ಕ್ರಯ ರೂ ೪

39 3

ಗೆಜ್ಜೆ ನಾಗರ.

ಈ ಗೆಜ್ಜೆನಾಗರವನ್ನ ಎಂದಿಗೂ ಕಪ್ಪಾಗದಿರುವ ಸೀಮೆ ಹಿತ್ತಾಳೆಯಿಂದ ಅತಿಸುಂದರವಾದ ಪೋಗರೆ ಕೆಲಸವನ್ನು ಮಾಡಿ, ಶುದ್ಧ ಬಂಗಾರದ ಗಿಲೀಟು ಮಾಡಲ್ಪಟ್ಟಿದೆ ಬಂಗಾರದಿಂದ ಮಾಡಿದ ಗೆಜ್ಜೆನಾಗರಕ್ಕೂ ಇದಕ್ಕೂ ಸ್ವಲ್ಪವೂ ಭೇದ ತೋರುವದಿಲ್ಲ ಇಷ್ಟು ಸುಲಭ ಖರೀದಿಗೆ ಯಾರಿಂದಲೂ ಇದುವರೆಗೆ ಮಾರಲ್ಪಟ್ಟಿಲ್ಲವು ಇದನ್ನು ಉಪಯೋಗಿಸಿದರೆ ಗೊತ್ತಾಗುವದು ನಾವು ಹೊಗಳುವದರಿಂದ ಪ್ರಯೋಜನವಿಲ್ಲ

ಕ್ರಯ ರೂ. ೪—೦—೦

ವಿ ಪಿ ಪಿ ಖರ್ಚು ೦—೪—೦

ಬೇಕಾದವರು ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು

ಗುರುಬಸವ ಅಂಡುಕಂಪನಿ,

ಸಾಹುಕಾರಪೇಟೆ, ಮದರಾಸ್

BOOKS! BOOKS!!

MORLEY'S "LIFE OF GLADSTONE."

Published in 15 monthly parts,

(unabridged) 8 annas each.

First four parts ready ! and orders registered for the remaining monthly parts

471

BOOKS FOR THE BAIRNS—

1 ANNA EACH

Fully illustrated—about 100 vols in set Can be bought singly Complete List on application

No home should be without these books The children never tire of them They are instructive and inculcate a desire for the right kind of reading in after life

COMBRIDGE & CO., MADRAS.

ಅಗ್ಗ! ಅಗ್ಗ!! 53-1 **ಬಹು ಅಗ್ಗ**

ಇದರಿಂದ ನಮ್ಮ ಏಜಂಟ್‌ದಾರರಿಗೂ ಮತ್ತು ಮಹಾ... ತಿಳಿಸುವದೇನಂದರೆ —

ಜರಮನ್ ಸಿಲವರ್ ಕಂಚಿ ಮತ್ತು ತಗಡುಗಳನ್ನು ಸ್ವ... ದರು ಕೊಟ್ಟು ಆಸ್ಟ್ರೇಲಿಯಾ ದೇಶದಿಂದ ತಯಾರಿಸಿ ತರಿಸಿ... ಳಿಂದ ಸಕಲ ಆಭರಣಗಳನ್ನೂ ತಯಾರಿಸುತ್ತೇವೆ ಅದ... ಗಳ ರಂಗು ಇತರ ಕಮ್ಮಿಕ್ರಯದ ಜರಮನ್ ಸಿಲವರ್ ಬೆಳ್ಳಿ... ಆರಿಸಿನಬಣ್ಣಕ್ಕೆ ತಿರಗದೆ ಎಷ್ಟು ವರುಷಗಳ ವರಿಗಾದರೂ ... ರಂಗಿಗೆ ಸಮಾನವಾಗಿ ಇರುತ್ತೆ ಮತ್ತು ಆಭರಣಗಳಿಗೆ ... ದಷ್ಟು ಕಮ್ಮಿ ಕ್ರಯವನ್ನು ನಮೂದಿಸಿರುತ್ತೇವೆ

ಆಭರಣದ ಕೆಲಸವು ಅಚ್ಚಬೆಳ್ಳಿಯ ಕೆಲಸಕ್ಕೆ ಸಮಾ... ಅನುಭವದಿಂದ ನಿಜಸ್ಥಿತಿಯು ತಿಳಿಯಬಹುದು

ಆಸ್ಟ್ರೇ... ತಗಡಿನಿಂದ ... ರಿಸಿರಿದ ಗೊ... ಕಾಯಿ ಗೊ...

ದೊಡ್ಡವರಿಗ ಜೊತೆ ೧ ಕ್ಕೆ	ರೂ	೨—೮—...
ಚಿಕ್ಕವರಿಗೆ ಜೊತೆ ೧ ಕ್ಕೆ	,,	೨—೪—...
ಸಣ್ಣ ಹುಡುಗಿಯರಿಗ ಜೊತೆ ೧ ಕ್ಕೆ		೧—೧—...



ಮೇಲೆ ಹೇಳಿದ ... ತಗಡಿನಿಂದ ತ... ಪುದುಚೇರಿ ಬೋಲ್ ... ಗೊಲಸು

ದೊಡ್ಡವರಿಗೆ ಜೊತೆ ... ರೂ ೨—೦—೦ ಚಿಕ್ಕ... ಜೊತೆ ೧ ಕ್ಕೆ ೧—... ಸಣ್ಣ ಹುಡುಗಿಯರಿಗೆ ಜೊತೆ ೧ ಕ್ಕೆ ೧—೮—೦.

ವಿಳಾಸ—ಮ್ಯಾ... ಜರ್ಮನ್ ಸಿಲ್ವರ್ ... ಯಲ್ ಆಫೀಸ್, ... ರ್ ಪೇಟೆ, ಮದ್ರಾ...

ವೃತ್ತಾಂತ ಪತ್ರಿಕೆ

೧೯೦೬ ನೇ ಇಸವಿ ಮಾರ್ಚಿ ತಾ॥ ೮ ನೇ ಗುರುವಾರ.

ವಿಲಾಯತಿ ಪಾರ್ಲಿಮೆಂಟೂ ಹಿಂದುಸ್ಥಾನವೂ.

ವಿಲಾಯತಿ ರಾಜ್ಯದಲ್ಲಿ ಗವರ್ನಮೆಂಟನ್ನು ನಡಿಸು ತ್ತಿದ್ದ ಮಿ॥ ಬಾಲ್ಫರ್ ಮಂತ್ರಿಯೂ ಇವರ ಪಕ್ಷದ ಕನ್ಸರ್ವೇಟಿವ್ ಪಾರ್ಟಿಯವರೂ ಕೆಲಸ ಬಿಟ್ಟರು. ಈಗ ಲಿಬರಲ್ ಪಾರ್ಟಿಯವರು ರಾಜ್ಯಭಾರವನ್ನು ವಹಿಸಿಕೊಂಡಿರುವರು. ಸರ್ ಹೆನ್ರಿ ಕ್ಯಾಂಬೆಲ್ ಬ್ಯಾನರ್ಮನ್ ಯವರು ಮುಖ್ಯಮಂತ್ರಿಯಾಗಿರುವರು. ಪ್ರಜೆಗಳಿಗಿರುವ ನಿರ್ಬಂಧಗಳ ನ್ನು ಆದಷ್ಟು ಮಟ್ಟಿಗೂ ಕಡಿಮೆಮಾಡಿ, ಅವರೇ ತಮ್ಮ ತಮ್ಮ ಒಳದೇಶದ ಕಾರುಬಾರುಗಳನ್ನು ನೋಡಿಕೊಳ್ಳುವ ಸ್ವಾತಂತ್ರ್ಯಗಳನ್ನು ವಹಿಸಬೇಕೆಂಬುವುದೇ ಈಗಿನ ಲಿಬರಲ್ ಪಾರ್ಟಿಯವರ ಅಭಿಮತವು. ಆದಕಾರಣ ಈ ರಾಜ್ಯದಲ್ಲಿ ಸ್ವತಂತ್ರಾಧಿಕಾರವನ್ನು ಹೆಚ್ಚು ಹೆಚ್ಚಾಗಿ ಕೊಡಬೇಕೆಂದು ಕುತೂಹಲಪಡುತ್ತಿರುವಂಥಾವರು ಹಿಂದಿನ ಗವರ್ನಮೆಂಟಿನಲ್ಲಿ ಕನ್ಸರ್ವೇಟಿವ್ ಪಾರ್ಟಿಗಿಂತ ಲಿಬರಲ್ ಪಾರ್ಟಿಯವರೇ ಅಧಿಕಾರಕ್ಕೆ ಬರಲೆಂದೂ ಅವರಿಂದ ಸೌಲಭ್ಯಗಳನ್ನು ಪಡೆಯಬಹುದೆಂದೂ ಹಂಬಲಪಟ್ಟು ಎದುರುನೋಡುತ್ತಾರೆ.

ಇಂಡಿಯಾ ಗವರ್ನಮೆಂಟಿನವರು ನಡಿಸತಕ್ಕ ಕಾರುಬಾರುಗಳನ್ನು ವಿಲಾಯತಿಯ ಪಾರ್ಲಿಮೆಂಟಿನವರು ಪ್ರಸ್ತಾಪ ಮಾಡುವರು. ಬ್ರಿಟಿಷ್ ಕ್ಯಾಬಿನೆಟ್ ಎಂಬ ಮಂತ್ರಿಗಳ ಸಭೆಯಲ್ಲಿ ಇಂಡಿಯಾ ಸ್ಟೇಟ್ ಸೆಕ್ರೆಟರಿ ಎಂಬ ಮಂತ್ರಿ ಇರುವನು. ಈ ಮಂತ್ರಿಗೆ ಹಿಂದುಸ್ಥಾನದ ವೈಸ್‌ರಾಯಿಯ ನಡವಳಿಕೆಯನ್ನು ಮೇಲ್ವಿಚಾರಣೆ ಮಾಡತಕ್ಕ ಅಧಿಕಾರವಿರುವುದು. ವೈಸ್‌ರಾಯಿ ಯವರು ನಡಿಸುವ ವಿಶೇಷ ವಿಷಯಗಳನ್ನು ಈ ಸ್ಟೇಟ್ ಸೆಕ್ರೆಟರಿ ಎಂಬ ಮೇಲ್ದಂಡೆ ಮಂತ್ರಿಗೆ ತಿಳಿಸಿ, ಅವರ ಸಮ್ಮತಿಯನ್ನು ಪಡೆಯಬೇಕಾಗಿದೆ. ಈಗ ಸ್ಟೇಟ್ ಸೆಕ್ರೆಟರಿಯಾಗಿರತಕ್ಕವರು ಮಿ॥ ಜಾನ್ ಮಾರ್ಲಿ ಎಂಬುವರು. ಇವರು ಮಹಾ ಗ್ರಂಥಕರ್ತರೆಂಬ ಪ್ರಖ್ಯಾತಿಯನ್ನು ಪಡೆದಿದ್ದಾರೆ; ಬಹಳ ಗುಣಜ್ಞರೆಂತಲೂ ಧೈರ್ಯಸ್ಥೈರ್ಯಾದಿ ಸಾಮರ್ಥ್ಯಗಳನ್ನು ಪಡೆದವರೆಂತಲೂ ಎಲ್ಲರ ಸನ್ಮಾನಿತರಾಗಿದ್ದಾರೆ. ಈಗ ವಿಲಾಯತಿ ಪಾರ್ಲಿಮೆಂಟಿಗೆ ಹೊಸ ಮೆಂಬರುಗಳು ಚುನಾವಣೆಯಾಗಿ ಬಂದಿದ್ದಾರೆ; ಅವರಲ್ಲಿ ಕೆಲವರು ಹಿಂದುಸ್ಥಾನಕ್ಕೆ ಸಂಬಂಧಪಟ್ಟ ಕೆಲವು ವಿಷಯಗಳನ್ನು ಕುರಿತು ಪ್ರಶ್ನೆಗಳನ್ನು ಹಾಕಿ ಚರ್ಚೆ ನಡಿಸಿದರು. ಈ ಕೆಳಕಂಡ ಮೂರು ವಿಷಯಗಳನ್ನು ಇಲ್ಲಿ ಪ್ರಸ್ತಾಪಮಾಡುವೆವು.

(೧) ಬಂಗಾಳಾ ವಿಭಜನೆಯು.—ಬಂಗಾಳಾ ಆಧಿಪತ್ಯವನ್ನು ಗವರ್ನಮೆಂಟಿನವರು ಎರಡು ಭಾಗ ಮಾಡಿದ್ದರಿಂದ ಹಿಂದುಸ್ಥಾನದ ಪ್ರಜೆಗಳಲ್ಲಿ ಬಹಳವಾದ ಅತೃಪ್ತಿ ಉಂಟಾಗಿದೆ ಎಂತಲೂ, ಮೊದಲಿದ್ದ ಆಧಿಪತ್ಯವು ದೊಡ್ಡದಾಗಿದ್ದಾದರೂ ಅದನ್ನು ಬೇರೇ ವಿಧವಾಗಿ ವಿಭಾಗ ಮಾಡಬೇಕೆಂತಲೂ, ಅಸ್ಸಾಮನ್ನು ಬಂಗಾಳಾವಿಗೇ ಸೇರಿಸಿ ಹಿಂದಿ ಮಾತಾಡುವ ಪ್ರಾಂತ್ಯವನ್ನೆಲ್ಲಾ ಕೂಡಿಸಿ, ಒಂದು ವಿಭಾಗ ಮಾಡಿ, ಈ ವಿಭಾಗಕ್ಕೆ ಪಾಟ್ನಾ ನಗರವನ್ನು ಹೆಡ್ ಕ್ವಾರ್ಟರ್ಸಾಗಿ ಮಾಡಬೇಕೆಂತಲೂ ಸರ್ ಹೆನ್ರಿ ಕಾಟನ್ ಎಂಬುವರು ಗವರ್ನಮೆಂಟಿನವರಿಗೆ ತಿಳಿಸಿದರು. ಇದಕ್ಕೆ ಮಿ॥ ಮಾರ್ಲಿಯವರು ಜವಾಬು ಹೇಳಿದ್ದೇನೆಂದರೆ—ಬಂಗಾಳವನ್ನು ವಿಭಾಗಮಾಡಿದ್ದು ಆಗಿಹೋಯಿತು. ಹಿಂದಿನ ಗವರ್ನಮೆಂಟಿನವರು ಮಾಡಿರುವ ಏರ್ಪಾಡನ್ನು ತಳ್ಳಿಹಾಕುವುದು ಈಗಿನ ಲಿಬರಲ್ ಗವರ್ನಮೆಂಟಿನವರಿಗೆ ಸರಿಯೆಂದು ಕಾಣುವುದಿಲ್ಲ. ಹಿಂದಿನ ಗವರ್ನಮೆಂಟಿನವರು ಈ ವಿಭಜನೆಯನ್ನು ಮಾಡುವುದಕ್ಕಿಂತ ಮುಂಚೆ ಪ್ರಜೆಗಳ ಅಭಿಪ್ರಾಯವನ್ನು ಕೇಳಿ ತಿಳಿದುಕೊಳ್ಳದೆಹೋದದ್ದು ವ್ಯಸನಕರವಾಗಿದೆ. ಆದರೂ ಈ ವಿಷಯದಲ್ಲಿ ಈ ಪ್ರಜೆಗಳ ಬೊಬ್ಬೆಯು ಕಡಿಮೆಯಾಗುತ್ತಾ ಬಂದಿರುವುದು. ತಿಳಿದುಬರುವ ಕಾರಣ ಬದಲಾವಣೆಯೇನೂ ಅವಶ್ಯವಾಗಿಲ್ಲ.

(೨) ದೊಡ್ಡ ದೊಡ್ಡ ಅಧಿಕಾರಗಳನ್ನು ಹಿಂದುಸ್ಥಾನದವರಿಗೆ ಇನ್ನೂ ಹೆಚ್ಚಾಗಿ ಕೊಡಬೇಕು; ಮತ್ತು ಹಿಂದುಸ್ಥಾನದಲ್ಲಿ ಸ್ವತಂತ್ರಾಧಿಕಾರವು ಅಭಿವೃದ್ಧಿಗೆ ಬರುವಂತೆ ಪ್ರೋತ್ಸಾಹಿಸಬೇಕು.—ಈ ವಿಷಯವನ್ನು ಪಾರ್ಲಿಮೆಂಟಿನಲ್ಲಿ ಕೆಲವು ಮೆಂಬರುಗಳು ಎತ್ತಿ ಮಾತನಾಡಿದರು. ಅವರಿಗೆ ಮಿ॥ ಮಾರ್ಲಿ ಯವರು—ಹಿಂದುಸ್ಥಾನದವರು ಚುರುಕುಬುದ್ಧಿಯುಳ್ಳವರಾಗಿಯೂ ಸಮರ್ಥರಾಗಿಯೂ ಇರೋಣದರಿಂದ ಅವರನ್ನು ಸ್ವತಂತ್ರಾಧಿಕಾರವನ್ನು ವಹಿಸುವ ಭಾಗದಲ್ಲಿ ತರಬೇಕು ಮಾಡಬಹುದಾಗಿದೆ. ಇದು ಕಾಲಕ್ರಮದಲ್ಲಿ ನಡೆಯಬೇಕಲ್ಲದೆ ಸದ್ಯದಲ್ಲಿ ಆಗ ತಕ್ಕದ್ದಲ್ಲ ಎಂಬುದಾಗಿ ಪ್ರತ್ಯುತ್ತರವನ್ನಿತ್ತರು.

(೩) ಟ್ರಾನ್ಸ್‌ವಾಲಿನಲ್ಲಿ ಹಿಂದುಸ್ಥಾನದ ಪ್ರಜೆಗಳ ಸ್ಥಿತಿ.—ಟ್ರಾನ್ಸ್‌ವಾಲ್ ಸೀಮೆಯಲ್ಲಿ ಸೇವಾವೃತ್ತಿ ಮಾಡುವುದಕ್ಕೂ ವ್ಯಾಪಾರಾದಿಗಳನ್ನು ನಡಸುವುದಕ್ಕೂ ಹಿಂದುಸ್ಥಾನದಿಂದ ಬಹು ಜನರು ಹೋಗಿದ್ದಾರೆ. ಅದರಲ್ಲೂ ಮದರಾಸ್ ಪ್ರಾಂತ್ಯದಿಂದ ಹೋಗಿರತಕ್ಕವರೇ ಹೆಚ್ಚು. ಇವರು ಅಲ್ಲಿ ಗೊತ್ತಾದ ಪ್ರದೇಶಗಳಲ್ಲೇ ವಾಸಮಾಡಬೇಕೆಂತಲೂ, ರಾಜಬೀದಿಗಳಲ್ಲಿ ಇವರು ಮನೆಗಳನ್ನಾಗಲಿ ಅಂಗಡಿಮುಂಗಟ್ಟುಗಳನ್ನಾಗಲಿ ಕಟ್ಟಿಕೊಳ್ಳಕೂಡದೆಂತಲೂ ನಿರ್ಬಂಧವಿರುವುದು. ಇಂಥಾ ವಿಧಿಯನ್ನು ಕುರಿತು ಪಾರ್ಲಿಮೆಂಟ್ ಮೆಂಬರುಗಳು ಚರ್ಚೆ ಮಾಡಿದರು. ಸ್ವಾಸ್ಥ್ಯಗಳ ಇಲಾಖಾ ಅಂಡರ್ ಸೆಕ್ರೆಟರಿ ಮಿ॥ ವಿನ್‌ಸ್ಟನ್ ಚರ್ಚಿಲ್ ಯವರು—ಈ ವಿಷಯವನ್ನು ಕುರಿತು ತನಿಖೆಮಾಡಿ, ಹಿಂದುಸ್ಥಾನದವರೂ ಬ್ರಿಟಿಷ್ ರಾಜ್ಯಭಾರದ ಪ್ರಜೆಗಳಂತೆ ಒಂದೇ ಸಮನಾದ ಹಕ್ಕು ಬಾಧ್ಯತೆಗಳನ್ನು ಪಡೆಯುವ ರೀತಿ ಏರ್ಪಾಡು ಮಾಡುವೆವು ಎಂದು ಹೇಳಿದ್ದಾರೆ.

ತಂದೆ ತಾಯಿಗಳ ಮಾತು ಕೇಳಬೇಕೋ? ದೇವರ ಮಾತು ಕೇಳಬೇಕೋ?

ಮೊನ್ನೆ ದಿವಸ ನಾವು ಒಬ್ಬ ಹೋಟೆಲಿನವರ ಮುದುಕನನ್ನು ಕಂಡು ಏನಯ್ಯಾ, ನಿನಗೇನುಬೇಕು? ಮೋಕ್ಷಕ್ಕೆ ಹೋಗುವದು ಬೇಕೋ, ನರಕಕ್ಕೆ ಹೋಗುವದು ಬೇಕೋ? ಎಂದು ಕೇಳಿದೆವು. ಅವನದಕ್ಕೆ ಪ್ರತ್ಯುತ್ತರವಾಗಿ—ನನಗೇನು ತಿಳಿಯೋದು, ಸ್ವಾಮಿ? ನಮ್ಮಪ್ಪ ಹ್ಯಾಟಿಗೆ ಹೋಗವ್ನೆ. ಅವನು ಬಂದಮೇಲೆ ಕೇಳಿ ಹೇಳ್ತೀನಿ! ಎಂದನು. ನಮಗೆ ತಡೆಯಲಾರದಷ್ಟು ನಗುವು ಬಂತು. ಅದರಲ್ಲೂ ಇಷ್ಟು ಮುದುಕನಾದವನು ಇಂಥ ಉತ್ತರವನ್ನು ಕೊಡುವದು ಮತ್ತಷ್ಟು ನಗುವದಕ್ಕೆ ಕಾರಣವಲ್ಲವೇ?

ಮಕ್ಕಳು ಯಾವಾಗಲೂ ಮಕ್ಕಳಾಗಿರುವದಿಲ್ಲ. ತಾವೇ ಸ್ವಂತವಾಗಿ ಯಾವದನ್ನೂ ತೀರ್ಮಾನಿಸಿಕೊಂಡು ನಡೆಯತಕ್ಕ ಕಾಲವು ಬಂದೇಬರುವದು. ಹಾಗೆಯೇ ದೊಡ್ಡವರೂ ಸಹಾ ಒಂದೊಂದು ವಿಷಯದಲ್ಲಿ ಇತರರ ಮಾತನ್ನು ಕೇಳದೆ ತಾವೇ ಸ್ವತಂತ್ರವಾಗಿ ಭಾರವನ್ನು ವಹಿಸಿ ನಡೆಯಬೇಕಾಗಿ ಬರುತ್ತದೆ. ಪ್ರತಿಯೊಬ್ಬರೂ ತಾವು ಮಾಡಬೇಕಾದ ತೀರ್ಮಾನವನ್ನು ಇತರರಿಗೆ ವಹಿಸದೆ ತಾವೇ ವಹಿಸಬೇಕಾಗಿರುತ್ತದೆ. ಆ ಇತರರು ನಮ್ಮ ಹಿರಿಯರಾದ ತಂದೆತಾಯಿಗಳಾಗಿದ್ದರೂ ಅವರನ್ನು ನಾವು ಬಹಳ ಘನತೆಯಿಂದ ಕಂಡು ಅವರ ಮಾತನ್ನು ತಪ್ಪದೆ ನಡೆಯತಕ್ಕವರಾಗಿದ್ದಾಗ್ಯೂ ಕೂಡ ಅಂಥವರನ್ನೂ ವಿನಾಯಿಸಿ ನಾವುನಾವೇ ಕೆಲವು ವಿಷಯಗಳಲ್ಲಿ ನಡೆದುಕೊಳ್ಳಬೇಕಾಗಿ ಬರುತದೆ.

ನಮ್ಮ ತಂದೆತಾಯಿಗಳ ಅಪೇಕ್ಷೆಗೆ ವಿರುದ್ಧವಾಗಿ ನಡೆದುಕೊಳ್ಳುವದು ಎಂದಿಗಾದರೂ ಸರಿಯೆಂದೆನಿಸಿಕೊಳ್ಳುವದೇ? ಇದಕ್ಕೆ ನಾವು ಹೇಳುವದೇನೆಂದರೆ—ದೇವರ ಅಪ್ಪಣೆಯ ಪ್ರಕಾರ ನಡೆಯುವದೇ ಪ್ರತಿಯೊಬ್ಬರ ಮೊದಲನೇ ಕರ್ತವ್ಯವಾಗಿದೆ. ಆದರೆ ದೇವರು ನಮಗೆ ನಮ್ಮ ತಂದೆತಾಯಿಗಳ ಅಪೇಕ್ಷೆಗೆ ವಿರುದ್ಧವಾದ ಅಪ್ಪಣೆಯನ್ನು ಕೊಡುವದುಂಟೇ? ಭೂಲೋಕದಲ್ಲಿ ಬಲುದೊಡ್ಡವರೂ ಬಲು ಒಳ್ಳೆಯವರೂ ಆಗಿದ್ದವರೆಂದು ಹೆಸರುಗೊಂಡಿದ್ದ ಮಹಾ ಪುರುಷರ ಚರಿತ್ರೆಗಳನ್ನು ಓದಿ ನೋಡಿದರೆ ದೇವರು ಹೀಗೆ ಮಾಡುವದುಂಟೆಂಬುವದು ಗೊತ್ತಾಗುತ್ತದೆ. ತಮ್ಮ ತಂದೆತಾಯಿಗಳು ಯಾವ ಪಥವನ್ನು ಆ ಮಕ್ಕಳು ಅನುಸರಿಸುವದು ತಮಗಿಷ್ಟವಿಲ್ಲವೆಂದು ಹೇಳುವರೋ ಅದನ್ನೇ ಅನುಸರಿಸತಕ್ಕದ್ದೆಂದು ದೇವರೇ ಪ್ರೇರಿಸುತ್ತಿದ್ದಾನೆಂಬುವದು ಅವನಿಗೆ ಹ್ಯಾಗೋ ನಿಸ್ಸಂದೇಹವಾಗಿ ಗೊತ್ತಾಗಿರುವದುಂಟು. ಅಂಥ ಸಂದರ್ಭದಲ್ಲಿ ಆ ಮಗನು ಏನುಮಾಡಬೇಕು? ತಂದೆತಾಯಿಗಳ ಮಾತನ್ನು ಕೇಳದೆ ಅಲಕ್ಷ್ಯಮಾಡಬೇಕೋ, ದೇವರ ಮಾತನ್ನು ಅಲಕ್ಷ್ಯಮಾಡಬೇಕೋ?

ಕೆಲವು ವೇಳೆ ಒಬ್ಬ ಮನುಷ್ಯನಿಗೂ ದೇವರಿಗೂ ಇರುವ ಸಂಬಂಧವನ್ನು ಅವನ ನೆಂಟರಿಷ್ಟರು ತಿಳಿಯದೆ ಅವನಿಗೆ ಅಭ್ಯಂತರವಾಗಿ ಬರಬಹುದು. ಯೇಸುಸ್ವಾಮಿಯ ವಿಷಯದಲ್ಲೇ ಹೀಗೆ ನಡೆಯಿತು. ಆತನ ನೆಂಟರಿಷ್ಟರೂ ಸಹೋದರರೂ ಸಹೋದರಿಯರೂ ಆತನ ವಿಷಯದಲ್ಲಿ ಮೊದಲು—ಈತನು ಸಾಧಾರಣ ಮನುಷ್ಯನೆಂದು ತಿಳಿದಿದ್ದರು. ಅವರಲ್ಲಿ ಕೆಲವರು—ಈತನಿಗೆ ಹುಚ್ಚು ಹಿಡಿದಿದೆ ಎಂತಲೂ ಹೇಳಿದರು. ಒಂದೊಂದು ವೇಳೆ ಏಕಬೀಜೋತ್ಪನ್ನರಾಗಿಯೂ ಅಥವಾ ಏಕೋದರರಾಗಿಯೂ ಇದ್ದ ಕಾರಣದಿಂದ ಒಬ್ಬನ ಗುಣಕ್ಕೆ ಮತ್ತೊಬ್ಬರ ಗುಣವೂ, ಒಬ್ಬರ ಆಕೃತಿಯಂತೆ ಮತ್ತೊಬ್ಬರ ಆಕೃತಿಯೂ ಅನುಸರಿಸಿರಬಹುದು. ಆದರೂ ದೇಹಸಂಬಂಧವಾದ ಈ ಐಕ್ಯವು ಆತ್ಮಸಂಬಂಧವಾಗಿಲ್ಲದಿರಬಹುದು. ಯಾವ ಕುಟುಂಬದಲ್ಲಿ ತಂದೆತಾಯಿಗಳೂ ಮಕ್ಕಳೂ ದೇಹಸಂಬಂಧವಾಗಿ ಮಾತ್ರವಲ್ಲದೆ ಆತ್ಮಸಂಬಂಧವಾಗಿಯೂ ಪರಸ್ಪರ ಐಕಮತ್ಯದಿಂದ ಜೀವಿಸುತ್ತಿರುವರೋ ಆ ಕುಟುಂಬದಲ್ಲಿ ನಿಜವಾಗಿ ಬಹಳ ಸುಖವುಂಟು. ಅಂಥ ಕುಟುಂಬಕ್ಕೆ ಸೇರಿದವರು ಧನ್ಯರೇ ಸರಿ.

ದೇವರ ವಾಕ್ಯವನ್ನು ಕೇಳಿ ಅದರಂತೆ ನಡೆಯತಕ್ಕವರೇ ನನ ಸಹೋದರರೂ ಸಹೋದರಿಯರೂ ಆಗಿದ್ದಾರೆ ಎಂದು ಯೇಸುಸ್ವಾಮಿಯು ಹೇಳಿದನು. ಈ ಮಾತಿನಲ್ಲಿ ಸೂಚಿಸಿರುವ ಸಂಬಂಧವೇ ಆತ್ಮವಿಷಯಕವಾದ ಸಂಬಂಧವು.

ಎಷ್ಟು ಧನ್ಯತೆಯನ್ನು ಪಡೆದಿರುವ ಕುಟುಂಬವಾಗಲಿ ಅದರೊಳಗಿರುವವರಲ್ಲಿ ಒಬ್ಬೊಬ್ಬರು ತಮ್ಮ ತಮ್ಮ ಜವಾಬ್ದಾರಿಯ ಮೇಲೆಯೇ ನಡೆಯತಕ್ಕವರಾಗಿದಾರೆ. ಆದಕಾರಣ ಒಂದು ವೇಳೆ ಮಗನಾದವನು ತಂದೆಯನ್ನು ಕುರಿತು—ಅಯ್ಯಾ, ನನ್ನ ಕರ್ತವ್ಯವು ಹೀಗೆ ಹೀಗೆ ಇದೆ ಎಂದು ಮನಸ್ಸಿನಲ್ಲಿ ನಿಸ್ಸಂದೇಹವಾಗಿ ತಿಳಿದಿದ್ದೇನೆ ಎಂದು ಹೇಳಬಹುದು. ಆದಕ್ಕಾ ತಂದೆಯು ಒಪ್ಪದವನಾಗಿರಬಹುದು. ಆದರೂ ಕೂಡ ಆತನು ಮಗನಿಗೆ—ಅಪ್ಪಾ, ನನ್ನ ಅಭಿಪ್ರಾಯವು ಹೀಗಿದೆ. ನಿನ್ನ ಅಭಿಪ್ರಾಯವೂ ಹಾಗೇ ಇದ್ದರೆ ಸಂತೋಷವೇ. ಹಾಗಿಲ್ಲದಿದ್ದ ಪಕ್ಷದಲ್ಲಿ ನಿನ್ನಿಷ್ಟದಂತೆ ನೀನು ಸ್ವತಂತ್ರನಾಗಿ ನಡೆದುಕೊಳ್ಳಬೇಕೆಂಬುವದೇ ಉತ್ತಮಮಾರ್ಗವು ಎಂದು ಹೇಳತಕ್ಕದ್ದು. ಹೆಸರುಗೊಂಡ ಗ್ಲಾಡ್‌ಸ್ಟನ್ ಮಹಾನುಭಾವನ ತಂದೆಯು ಮಗನಿಗೆ ಇದೇ ಮಾತನ್ನು ಹೇಳಿದನು.

ಹೀಗೆ ಮಾಡದೆ ಮಕ್ಕಳನ್ನು ಬಲಾತ್ಕಾರ ಪಡಿಸುವ ತಂದೆಯು ಆ ಮಗನ ಮನಸ್ಸಾಕ್ಷಿಯನ್ನು ನಾಶಮಾಡುತ್ತಾನೆ. ಆ ಬಲಾತ್ಕಾರದ ದೆಸೆಯಿಂದ ಆ ಮಕ್ಕಳು ವಂಚಕರೂ ಕಪಟಿಗಳೂ ಆಗುತ್ತಾರೆ

ಒಳದೇಶದ ವೃತ್ತಾಂತಗಳು.

ಶ್ರೀಮನ್ಮಹಾರಾಜರವರು ತಾ. ೧೨ ನೆ ಸೋಮವಾರ ಮೋಟಾರ್ ಗಾಡಿಯಲ್ಲಿ ಬೆಂಗಳೂರಿಂದ ದಯಮಾಡುವವರಾಗಿದ್ದಾರೆ.

◆◆◆◆

ಕೋಲಾರಕ್ಕೆ ಸೇರಿದ ಬಾಲಾಘಾಟೆಂಬ ಗಣಿಯಲ್ಲಿ ಕಳೆದ ವಾರ ಎರಡು ಅನಾಹುತಗಳಾಗಿ ಮೂರು ಮಂದಿ ಮೃತಪಟ್ಟರು.

◆◆◆◆

ಕಳೆದ ಶನಿವಾರ ರಾತ್ರಿ ರಾಜಧಾನಿಯ ಮಿಡ್ಲ್ ಹೈ ಸ್ಕೂಲಿನ ಹಿಂದೆ ಮುಸಲ್ಮಾನರ ಗುಡಿಯಲ್ಲಿ ಬೆಳ್ಳಿಬಟ್ಟಲನ್ನು (ಪಂಚಾ ಪಾತ್ರ) ಕಳುವಾಯಿತೆಂದು ಕೇಳುತ್ತೇವೆ.

◆◆◆◆

ಬ್ರಿಟಿಷ್ ರೆಸಿಡೆಂಟ್ ಮಿ॥ ಎಸ್. ಎಂ. ಫ್ರೇಸರ್‌ಯವರು ಕೋಡಗಿನಿಂದ ಸರ್ಕೀಟು ತೀರಿಸಿಕೊಂಡು ಬಂದು, ತಾ ೧೩ಕ್ಕೆ ಚಿನ್ನದ ಗಣಿಗಳನ್ನು ನೋಡುವುದಕ್ಕೆ ಅಲ್ಲಿಗೆ ದಯಮಾಡುವರೆಂದು ತಿಳಿದು ಬಂದಿದೆ.

◆◆◆◆

ಸರ್ಕಾರದವರು ಮೈಸೂರು ಡಿಸ್ಟ್ರಿಕ್ಟ್ ಮತ್ತು ಸೆಷನ್ಸ್ ಜಡ್ಜರಾದ ಮಿ॥ ಜೆ. ರಾಮಸ್ವಾಮಯ್ಯನವರನ್ನು ಬೆಂಗಳೂರಿಗೂ ಬೆಂಗಳೂರಿನ ಮಿ॥ ವೆಂಕಟವರದಯ್ಯಂಗಾರರನ್ನು ಮೈಸೂರಿಗೂ ವರ್ಗ ಮಾಡಿರುತ್ತಾರೆ.

◆◆◆◆

ಕೋಲಾರ ಚಿನ್ನದ ಗಣಿಗೆ ಸೇರಿದ ರಾಬರ್ಟ್‌ಸನ್ ಪೇಟೆಯಲ್ಲಿ ಒಬ್ಬ ಮಹಮದೀಯನು ಹೊಸದಾಗಿ ಮದುವೆ ಮಾಡಿಕೊಂಡು, ಆ ಎರಡನೆಯ ದಿನವೇ ನೇಣುಹಾಕಿಕೊಂಡು ಸತ್ತುಹೋದನು. ಕಾರಣವೇನೋ ಪ್ರಕಟವಾಗಲಿಲ್ಲ.

◆◆◆◆

ಕೋಲಾರಕ್ಕೆ ಸೇರಿದ ರಾಬರ್ಟ್‌ಸನ್ ಪೇಟೆಯಲ್ಲಿ ಸಿಂಗರ್ ಹೊಲಿಯುವ ಯಂತ್ರಗಳ ಅಂಗಡಿ ವಿಚಾರಕನಾಗಿದ್ದ ಸಿ. ಸ್ಟೀಫನ್‌ಸನ್ ಎಂಬಾತನು ಆ ಅಂಗಡಿ ಹಣದಲ್ಲಿ ೫೦೦ ರೂಪಾಯಿ ತಿಂದು ಹಾಕಿದನೆಂದು ಮೊಕದ್ದಮೆ ಆಗಿ, ಸೆಷನ್ಸ್ ವಿಚಾರಣೆಗೆ ಗುರಿಯಾಗಿರುವನು.

◆◆◆◆

ಕಳೆದ ವಾರ ಹುಣಸೂರಿನಲ್ಲಿ ಮಿ॥ ಬಿ ಕೇ ಸಾಹೇಬರು ಒಂದು ಭಾರೀ ಹುಲಿಯನ್ನು ಶಿಕಾರಿಮಾಡಿದರು. ರಾಜಧಾನಿಯ ಮಿ॥ ಬಸಪ್ಪಾಜಿ ಅರಸಿನವರು ಹೆಗ್ಗದದೇವನಕೋಟೆ ಪ್ರಾಂತ್ಯದಲ್ಲಿ ಒಂದು ಭಾರೀ ಹುಲಿಯನ್ನು ಬೋನಿಗೆ ಕೂಡಿ, ಮೈಸೂರಿಗೆ ಸಾಗಿಸಿಕೊಂಡು ಬಂದಿರುತ್ತಾರೆ.

◆◆◆◆

ಕೌನ್ಸೆಲರ್ ಮಿ॥ ಸಿ. ಶ್ರೀನಿವಾಸಯ್ಯಂಗಾರರು ಬೆಂಗಳೂರಿನಲ್ಲಿ ವಾಸಮಾಡುವ ಬಂಗಲೆಯು ಮಿ॥ ವಿ. ಪಿ. ಮಾಧವರಾಯರಿಗೆ ಸೇರಿದ್ದಾದ್ದರಿಂದ ಅವರು ಆ ಬಂಗಲೆಯನ್ನು ಈ ತಿಂಗಳ ೨೦ ನೆ ತಾರೀಖಿನೊಳಗಾಗಿ ಖಾಲಿಮಾಡಿ ಬಿಟ್ಟುಕೊಡಬೇಕೆಂದು ಮಿ॥ ಮಾಧವರಾಯರು ಅವರಿಗೆ ತಿಳುವಳಿಕೆಯಿಂದ ತಿಳಿವಳಿಕೆ ಕೊಟ್ಟಿದ್ದಾರೆಂದು ಕೇಳುತ್ತೇವೆ.

◆◆◆◆

ಶ್ರೀಮನ್ಮಹಾರಾಜರವರು ಕಳೆದ ವಾರ ಬೆಂಗಳೂರಿನಲ್ಲಿ ಪರಸ್ಪರ ಸಹಾಯಕಸಂಘಗಳ ರೆಜಿಸ್ಟ್ರಾರ್ ಮಿ॥ ಎಂ. ಕಾಮರಾಯರನ್ನು ಅರಮನೆಗೆ ಕರೆಸಿಕೊಂಡು, ಅಂಥಾ ಸಂಘಗಳ ಏರ್ಪಾಡಿನ ವಿಚಾರವಾಗಿ ಅವರ ಸಂಗಡ ಬಹಳ ಹೊತ್ತು ಮಾತನಾಡಿ, ಮಿ॥ ಕಾಮರಾಯರಿಂದ ಎಲ್ಲಾ ಸಂಗತಿಗಳನ್ನೂ ತಿಳಿದುಕೊಂಡು, ಅಂಥಾ ಸಂಘಗಳ ಮೂಲಧನಕ್ಕೆ ಗವರ್ನಮೆಂಟಿನಿಂದ ಸ್ವಲ್ಪ ದ್ರವ್ಯ ಸಹಾಯ ಮಾಡುವುದಾಗಿ ವಾಗ್ದಾನವನ್ನಿತ್ತರೆಂದೂ. ಆ ಸಂಘಗಳ ಪ್ರರೋಧ್ಭವೃದ್ಧಿಯ ವಿಷಯದಲ್ಲಿ ಶ್ರೀಮನ್ಮಹಾರಾಜರವರು ತುಂಬಾ ಉತ್ಸಾಹವುಳ್ಳವರಾಗಿದ್ದಾರೆಂದೂ ತಿಳಿದು ಬಂದಿದೆ

◆◆◆◆

ಆಸ್ಯಾ ಖಂಡದಲ್ಲಿ ತುರ್ಕಿ ರಾಜ್ಯಕ್ಕೆ ಸೇರಿದ ಒಬ್ಬ ಅರ್ಮೇನಿಯಾ ಕ್ರೈಸ್ತನು ನಮ್ಮ ಮಹಾರಾಜರವರಿಗೆ ಒಪ್ಪಿಸುವುದಕ್ಕೋಸ್ಕರ ಎರಡು ಚಿತ್ರವಸ್ತುಗಳನ್ನು ರಾಜಧಾನಿಗೆ ತಂದಿಟ್ಟುಕೊಂಡು, ಅವರ ಆಗಮನವನ್ನು ಎದುರುನೋಡುತ್ತಾ ಇದಾನೆ. ಬಾಗಲಿಗೆ ಜೋಡಿಸಬಹುದಾದ ಹಲಿಗೆಗಳೆರಡನ್ನೂ, ಬಾಗಲಿಗೆ ಅಡ್ಡಲಾಗಿ ನಿಲ್ಲಿಸಬಹುದಾದ ಮರದ ಕಾಲುಗಳುಳ್ಳ ಒಂದು ಪರದೆಯನ್ನೂ ತಂದಿರುವನು. ಇವುಗಳ ಮೇಲೆ ದಂತದಲ್ಲೇ ರಂಗುದಾರಿ ಹೂಗಳೂ ಪಕ್ಷಿಪಕ್ಷಿಗಳೂ ಕಮಲಗಳೂ ಅತಿ ಸೂಕ್ಷ್ಮವಾಗಿ ಕೆತ್ತಿ ಬಿಡಿಸಲ್ಪಟ್ಟಿರುವವು. ಇಂಥಾ ಅಪೂರ್ವವಸ್ತುಗಳು ರಾಜಯೋಗ್ಯವಾದವುಗಳೆನ್ನುವುದಕ್ಕೆ ಸಂದೇಹವಿಲ್ಲ.

ಇಂಡಿಯಾ ದೇಶದ ವೃತ್ತಾಂತಗಳು.

ಬರ್ಮಾ ದೊಡ್ಡ ಮನುಷ್ಯರಿಬ್ಬರು ಕಳೆದ ವಾರ ಕಲ್ಕತ್ತಾ ಪಟ್ಟಣಕ್ಕೆ ಬಂದು, ಬರ್ಮನವರ ಸ್ಥಿತಿಗತಿಯನ್ನೂ ಅವರ ಉದ್ದೇಶ ಕಾರ್ಯಸಾಧನೆ ಮುಂತಾದ್ದನ್ನೂ ಕುರಿತು ಉಪನ್ಯಾಸ ಮಾಡುತ್ತಿದ್ದಾರೆ.

◆◆◆◆

ಕಳೆದ ವಾರ ಬೊಂಬಾಯಿ ಪಟ್ಟಣದಲ್ಲಿ ಫಲ ಪುಷ್ಪ ಪ್ರದರ್ಶನ ನಡೆಯಿತು. ಗವರ್ನರವರೇ ಹೋಗಿ ಪ್ರದರ್ಶನವನ್ನು ಪ್ರಾರಂಭಮಾಡಿದರು. ಇಂಥಾ ಪ್ರದರ್ಶನೋತ್ಸವವು ಅಲ್ಲಿ ೨೦ ವರುಷಗಳಿಂದ ನಡೆದಿರಲಿಲ್ಲ.

◆◆◆◆

ಸಿಲೋನ್ (ಲಂಕಾ) ದ್ವೀಪದ ಬಳಿ ಸಮುದ್ರದಲ್ಲಿ ಮುತ್ತಿನ ಚಿಪ್ಪುಗಳನ್ನು ತೆಗೆಯುವುದಕ್ಕೆ ವಿಲಾಯತಿ ಕಂಟ್ರಾಕ್ಟರ ಪರವಾಗಿ ೧,೦೦೦ ಮಂದಿ ನೀರುಮುಳುಗುಗಳವರು ೬೦೩ ದೋಣಿಗಳನ್ನಿಟ್ಟುಕೊಂಡು ಕೆಲಸಮಾಡುತ್ತಿದ್ದಾರೆ.

◆◆◆◆

ಬರೋಡಾ ಸಂಸ್ಥಾನದ ರಾಜಧಾನಿಯಲ್ಲಿ ಯುವರಾಜರಾದ ಫತ್ತೇಸಿಂಗ್‌ರಾವ್ ಯವರು ಮಹಾರಾಜಾ ಮಿಲ್ಸ್ ಎಂಬ ಕಸಬುದಾರಿ ಕಾರ್ಖಾನೆಯ ಕಟ್ಟಡಕ್ಕೆ ಕಳೆದವಾರ ಅಸ್ತಿಭಾರಶಿಲೆಯನ್ನು ಹಾಕಿ, ಕಾಮಗಾರಿ ಪ್ರಾರಂಭಮಾಡಿಸಿದರು.

◆◆◆◆

ಹೈದರಾಬಾದಿನಲ್ಲಿ ಈ ವರುಷ ೨೫,೩೭,೭೧೦ ಎಕರೆ ಜಮೀನಿನಲ್ಲಿ ಹತ್ತಿ ಬೆಳೆಯಾಗಿರುವುದು. ಇದರಿಂದ ಈ ಸಲ ೧,೯೩,೧೧೬ ಗಟ್ಟಿ ಹತ್ತಿ ಸಿಕ್ಕಿದರೂ ಹೋದ ವರುಷದ ಬೆಳೆಗಿಂತಲೂ ೯,೭೮೦ ಗಟ್ಟಿಗಳಷ್ಟು ಕಡಿಮೆಯಾಗಿರುತ್ತದೆ.

◆◆◆◆

ಮದರಾಸ್ ಆಧಿಪತ್ಯದಲ್ಲಿ ಸೇಂದಿ, ಸಾರಾಯಿ, ಬ್ರಾಂದಿ ಮೊದಲಾದ ಮದ್ಯಗಳನ್ನು ಇಟ್ಟು ಬಿಕರಿಮಾಡುವ ವರ್ತಕರ್ಯಾರೂ ೧೬ ವರುಷಕ್ಕಿಂತ ಚಿಕ್ಕ ಹುಡುಗರಿಗೆ ಯಾವ ಮದ್ಯವನ್ನೂ ಬಿಕರಿಮಾಡಲೇ ಕೂಡದೆಂದು ಹುಕುಂ ಕೊಟ್ಟಿದ್ದಾರೆ.

◆◆◆◆

ರಂಗೂನ್ ಪಟ್ಟಣಕ್ಕೆ ಹೋಗುವ ಉಡ್ಡಿಷ್ಯ ನದಿಯನ್ನು ದಾಟುತ್ತಿದ್ದ ಒಂದು ದೋಣಿಯು ಅಕಸ್ಮಾತ್ತಾಗಿ ಮುಳುಗಿಕೊಂಡಿತು. ಇಬ್ಬರು ಯುವತಿಯರು ನೀರಿನ ಪಾಲಾದರು. ಇವರು ರಂಗೂನ್ ಪಟ್ಟಣದಲ್ಲಿ ಮದುವೆ ಮಾಡಿಕೊಳ್ಳುವುದಕ್ಕಾಗಿ ಹೋಗುತ್ತಿದ್ದರೆಂದು ತಿಳಿಯುವುದು.

◆◆◆◆

ಕಳೆದ ಬುಧವಾರ ಬೆಳಗಿನ ಝಾವದಲ್ಲಿ ಲಾಹೋರ್, ಡೆಹಲಿ, ಸಿಮ್ಲಾ, ಈ ಮೊದಲಾದ ಪಟ್ಟಣಗಳಲ್ಲಿ ಎರಡು ನಿಮಿಷಗಳ ತನಕ ಭೂಮಿಯು ಕಂಪಿಸುತ್ತಿತ್ತು. ನಿದ್ದೆ ಮಾಡುತ್ತಿದ್ದವರು ಎಚ್ಚತ್ತು ಗಾಬರಿಬಿದ್ದು ಅಂಗಳ ರಸ್ತೆ ಮೈದಾನುಗಳಿಗೆ ಓಡಿಹೋದರು. ಭಗವಂತನ ಕೃಪೆಯಿಂದ ಎಲ್ಲೂ ಅನಾಹುತವೇನೂ ಆಗಲಿಲ್ಲ.

◆◆◆◆

ಇಂಡಿಯಾ ಗವರ್ನಮೆಂಟಿನವರಿಗೆ ಹಿಂದುಸ್ಥಾನದಲ್ಲಿ ಈಗ ಒಂದು ವರುಷಕ್ಕೆ ೭೫ ಕೋಟಿ ರೂಪಾಯಿ ಉತ್ಪತ್ತಿಯಾಗುವುದೆಂತಲೂ ಈ ಪೈಕಿ ೩೦ ಕೋಟಿಯನ್ನು ಅವರು ಸೈನ್ಯದ ಇಲಾಖೆಗೆ ಖರ್ಚು ಮಾಡುತ್ತಾರೆಂತಲೂ ಮಿ॥ ಅಪ್ಕಾರ್ ಎಂಬ ದೊಡ್ಡ ಮನುಷ್ಯರು ಕಲ್ಕತ್ತೆಯಲ್ಲಿ ಕಳೆದ ವಾರ ಉಪನ್ಯಾಸಮಾಡುತ್ತಾ ಹೇಳಿದರು.

◆◆◆◆

ಕಳೆದ ಭಾನುವಾರ ರಂಗೂನ್ ಪಟ್ಟಣದಿಂದ ೪ ಮೈಲಿ ದೂರದಲ್ಲಿದ್ದ ಒಂದು ಗ್ರಾಮಕ್ಕೆ ಗ್ರಾಮವೇ ಬೆಂಕಿ ಬಿದ್ದು ಉರಿದು ಹೋಯಿತು. ಸುಮಾರು ೨೦೦—೨೫೦ ಮನೆಗಳು ಸಂಪೂರ್ಣವಾಗಿ ಸುಟ್ಟುಹೋದವು. ಸುಮಾರು ೫೦—೬೦ ಜನರು ಸೇರಿಕೊಂಡು ತುಂಬಾ ಸಾಹಸಪಟ್ಟು ಪ್ರಾಣನಷ್ಟವೇನೂ ಆಗದಂತೆ ಉರಿಯಿಂದ ತಪ್ಪಿಸಿದರು.

◆◆◆◆

ಈ ಸಲ ಉತ್ತರ ದೇಶದ ಕ್ಷಾಮವು ಸೈತಪ್ರದೇಶಗಳಿಗೆ ತುಂಬಾ ಕಷ್ಟವನ್ನುಂಟುಮಾಡಿದೆ. ಸರ್ಕಾರದವರು ಸಂಯುಕ್ತ ಆಧಿಪತ್ಯ ಒಂದರಲ್ಲೇ ಕ್ಷಾಮ ನಿವಾರಣೆಗೆ ೬೦ ಲಕ್ಷ ರೂಪಾಯಿಗಿಂತಲೂ ಹೆಚ್ಚಾಗಿ ಖರ್ಚು ಮಾಡಬೇಕಾಗಿದೆ. ಮಧ್ಯ ಇಂಡಿಯಾ, ರಾಜಪುಟಾನಾ, ದಕ್ಷಿಣ ದೇಶಗಳಲ್ಲಿ ಖರ್ಚು ಮಾಡಬೇಕಾಗಿರುವ ಹಣ ಬೇರೆ ಇದೆ.

◆◆◆◆

ಕಳೆದ ವಾರ ಹಿಂದುಸ್ಥಾನದಲ್ಲಿ ೯,೨೧೭ ಜನರಿಗೆ ಪ್ಲೇಗ್ ತಗಲಿ ೮,೩೧೭ ಮಂದಿ ಕಾಲವಾದರು. ಈ ಪೈಕಿ ಬಂಗಾಳಾ ೨,೯೩೦, ಬೊಂಬಾಯಿ ೧,೧೧೩, ಸಂಯುಕ್ತ ಆಧಿಪತ್ಯ ೧,೯೬೮, ಮಧ್ಯ ಪ್ರಾಂತ್ಯ ೭೬೦, ಬಿಹಾರ್ ೨೫೩, ಹೈದರಾಬಾದ್ ೧೫೦, ಮೈಸೂರು ೩೨, ಕಾಶ್ಮೀರ ೫೩, ಮಧ್ಯ ಇಂಡಿಯಾ ೬೨, ರಾಜಪುಟಾನಾ ೯, ಈ ರೀತಿ ಮರಣಗಳಾಗಿವೆ

◆◆◆◆

ಉತ್ತರ ದೇಶದಲ್ಲಿ ಕ್ಷಾಮಬಾಧೆಯು ಸುಳಿಯಾದ ಈಚೆಗೆ ಸ್ವಲ್ಪ ಕಡಿಮೆಯಾಗಿರುವುದು. ಕ್ಷಾಮಪೀಡಿತರ ಸಂಖ್ಯೆ ಇಳಿಯುತ್ತಿದೆ ಸಂಯುಕ್ತ ಆಧಿಪತ್ಯದಲ್ಲಿ ೧,೫೯೯,೦೦೦, ರಾಜಪುಟಾನಾ ಮತ್ತು ಅಜ್ಮೀರ ಮೇರ್ವಾರಾಗಳಲ್ಲಿ ೯೯,೦೦೦, ಮಧ್ಯ ಇಂಡಿಯಾ ೫೫,೦೦೦ ಬೊಂಬಾಯಿನಲ್ಲಿ ೧೪,೦೦೦, ಈ ರೀತಿ ಜನರು ರಿಲೀಫ್ ಕಾಮಗಾರಿಗಳನ್ನು ಮಾಡಿ, ಹೊಟ್ಟೆ ಹೊರಕೊಳ್ಳುತ್ತಿದ್ದಾರೆ.

◆◆◆◆

ಇಂಡಿಯಾ ಗವರ್ನಮೆಂಟಿನವರು ಈ ದೇಶದ ಕಸಬುಗಳನ್ನು ಪ್ರೋತ್ಸಾಹಪಡಿಸುವುದಕ್ಕಾಗಿ ಎಲ್ಲಾ ಇಲಾಖೆಗಳವರೂ ಈ ದೇಶದಲ್ಲಿ ತಯಾರಾಗತಕ್ಕ ವಸ್ತುಗಳನ್ನೇ ಸ್ವಲ್ಪ ಹೆಚ್ಚು ಕ್ರಯವಾದರೂ ಲಕ್ಷ್ಯಮಾಡದೆ ಕೊಂಡುಕೊಳ್ಳಬೇಕೆಂತಲೂ ಪರದೇಶಗಳಿಂದ ಬರತಕ್ಕ ಪದಾರ್ಥಗಳನ್ನು ಆದಷ್ಟು ಕಡಿಮೆಯಾಗಿ ಕೊಂಡುಕೊಳ್ಳಬೇಕೆಂತಲೂ ಹುಕುಂ ಕೊಡಿಸಿರುತ್ತಾರೆ.

◆◆◆◆

ರಂಗೂನ್ ಪಟ್ಟಣದಿಂದ ಚೀನರು ಸುಂಕದ ಕಟ್ಟೆಯವರಿಗೆ ಮೋಸಪಡಿಸಿ ೧೫,೭೨೦ ತೊಲಾ ಅಫೀಮನ್ನು ಒಂಟೆಗಳ ಮೇಲೆ ಸಾಗಿಸಿಕೊಂಡು ಹೋಗುತ್ತಿದ್ದರು. ಸುಂಕದ ಇಲಾಖೆಯವರು ಇದರ ಸುಳಿವನ್ನು [illegible] ಪತ್ತೆಮಾಡಿ, ಅಫೀಮನ್ನೆಲ್ಲಾ ಸ್ವಾಧೀನಪಡಿಸಿಕೊಂಡು, ಆ ಮೋಸಗಾರರನ್ನು ಹಿಡಿದು ದರ್ಯಾಫ್ತು ಮಾಡಿಸುತ್ತಿದ್ದಾರೆ ಇಷ್ಟು ಭಾರೀ ಮೋಸವನ್ನು ಇದುವರೆಗೆ ಯಾರೂ ಮಾಡಿದ್ದಿಲ್ಲ.

◆◆◆◆

ಹಿಂದುಸ್ಥಾನದಿಂದ ಎಲ್ಲ ಕಟ್ಟನ್ನು ದಾಟಿಕೊಂಡು ಅಫ್ಘಾನಿಸ್ಥಾನಕ್ಕೆ ಹೋಗಬೇಕೆಂದು ಅಪೇಕ್ಷಿಸುವವರು ಇಂಡಿಯಾ ಗವರ್ನಮೆಂಟಿನ ಯಾವನಾದರೂ ಒಬ್ಬ ಇಂಗ್ಲಿಷ್ ಅಧಿಕಾರಿಯಿಂದ ಸರ್ಟಿಫಿಕೇಟನ್ನು ಪಡೆದಿರಬೇಕೆಂತಲೂ, ಹಾಗೆ ಪಡೆಯದೆ ಹೋಗತಕ್ಕವರನ್ನು ಅಫ್ಘಾನಿಸ್ಥಾನದೊಳಕ್ಕೆ ಬಿಡಕೂಡದೆಂತಲೂ ಅಮೀರರವರು ತಮ್ಮ ಕೈಕೆಳಗಣ ಸೈನಿಕರಿಗೆ ಇಸ್ತಿಹಾರ್‌ಮೊಂದನ್ನು ಕೊಟ್ಟಿದ್ದಾರೆ

◆◆◆◆

ತಿರುಚನಾಪಳ್ಳಿಯಲ್ಲಿ ಒಂದು ದೇವಸ್ಥಾನದ ಚಿನ್ನದ ಕಲಶಗಳನ್ನು ಒಬ್ಬ ಬ್ರಾಹ್ಮಣ ಪೂಜಾರಿಯು ಕದ್ದು, ಒಂದು ಗ್ರಾಮದಲ್ಲಿದ್ದ ಕೆಲವು ವರ್ತಕರಿಗೆ ಬಿಕರಿಮಾಡಿದನು. ಪೋಲೀಸಿನವರು ಆ ಬ್ರಾಹ್ಮಣನ ಮೂಲಕ ಆ ವರ್ತಕರ ಗುಂಪನ್ನೆಲ್ಲಾ ಹಿಡಿದಿರುತ್ತಾರೆ. ಅವರ ಬಳಿಯಲ್ಲಿ ಇಂಥಾ ಕಲಶಗಳು ಅನೇಕವಾಗಿ ಸಿಕ್ಕಿದವು ೫೭ ಸೇರು ಚಿನ್ನವೂ [illegible] ಕಲಶಗಳನ್ನು ಅಪಹರಿಸಿ, ಅವುಗಳ ಚಿನ್ನವನ್ನು ತೆಗೆದುಕೊಳ್ಳುವುದೇ ಅವರ ಉದ್ಯೋಗವಾಗಿದೆ ಎಂದು ಗೊತ್ತಾಯಿತು.

◆◆◆◆

ಕಲ್ಕತ್ತಾ ಪಟ್ಟಣದಲ್ಲಿ ಕೆಲವರು ಸೇರಿಕೊಂಡು ಒಬ್ಬ ಪಂಜಾಬಿನವನಿಗೆ ಸ್ಮರಣೆತಪ್ಪುವ ಮದ್ದನ್ನಿಟ್ಟು, ಅವನನ್ನು ಕೊಂದು ಒಂದು ಗೋಣೀಚೀಲದಲ್ಲಿ ಹಾಕಿ ಬಾಯಿ ಹೊಲಿದು ಹಾಕಿದ್ದರು. ಪೋಲೀಸಿನವರು ಅದನ್ನು ನೋಡಿ ಪತ್ತೆ ತರದೂದು ನಡಸಿ ಅಪರಾಧಿಗಳನ್ನು ಹಿಡಿದಿರುತ್ತಾರೆ ಈ ಅಪರಾಧಿಗಳ ಪೈಕಿ ಒಬ್ಬನ ಹೆಂಡತಿಯು ತನ್ನ ಗಂಡ ಅವನಿಗೆ ಮದ್ದು ಹಾಕಿದ್ದನ್ನೂ ಇತರರು ಸುತ್ತಿಕೊಂಡು ಅವನನ್ನು ಕೊಂದುಬಿಟ್ಟದ್ದನ್ನೂ ಕಣ್ಣಾರ ನೋಡುತ್ತಿದ್ದೆನೆಂದು ವಾಙ್ಮೂಲ ಕೊಟ್ಟಿದ್ದಾಳೆ.

◆◆◆◆

ಕಳೆದ ತಿಂಗಳ ೨೧—೨೨ ನೆ ತಾರೀಖುಗಳಲ್ಲಿ ಜೇಲಂ ನದೀ ಪ್ರಾಂತ್ಯದಲ್ಲಿ ಅಪೂರ್ವವಾಗಿ ಹಿಡಿದ ಮಳೆ ಬಿಡದೆ ೪೦ ಗಂಟೆ ಹೊತ್ತು ಸುರಿಯಿತು. ಅನೇಕ ಭಾರೀ ಬಂಗಲೆಗಳೇ ಕಳಚಿ ಬಿದ್ದುಕೊಂಡವು. ಬಡಬಗ್ಗರ ಮನೆ ಮಠಗಳ ಪಾಡನ್ನು ವಿವರಿಸಿ ತೀರದು. ಲಕ್ಷಾಂತರ ರೂಪಾಯಿನ ಕಟ್ಟಡಗಳೂ ಸಾಮಾನುಗಳೂ ಪಾತ್ರೆಪದಾರ್ಥಗಳೂ ಕೊಚ್ಚಿ ಹೋದವು ನದಿಯಲ್ಲಿ ಬಹಳ ಪ್ರವಾಹ ಬಂದು ಪೈರು ಪಚ್ಚೆಯನ್ನೆಲ್ಲಾ ಕೊಚ್ಚಿ ಹಾಳುಮಾಡಿತು. ಇಂಥಾ ಅತಿವೃಷ್ಟಿಯಾದದ್ದು ಅಪೂರ್ವವೆಂದು ಹೇಳುವರು.

◆◆◆◆

ಮದರಾಸ್ ಪಟ್ಟಣದಲ್ಲಿ ಯಾರ ಮನೆಯಲ್ಲಿ ಜನನವಾದರೂ ಕೂಡಲೇ ಅದರ ವರ್ತಮಾನ ಮಿಸ್ ಪೋಲ್ ಎಂಬಾಕೆಗೆ ತಿಳಿಸಬೇಕೆಂತಲೂ, ಆಕೆ ಕೂಡಲೇ ಅಂಥಾ ಮನೆಗಳಿಗೆ ಹೋಗಿ, ಮಕ್ಕಳನ್ನು ಸಾಕಿ ಬೆಳೆಸುವ ವಿಧಾನವನ್ನೆಲ್ಲಾ ಪುರಸ್ಕಾರವಾಗಿ ಹೇಳಿಕೊಟ್ಟು ಬರುತ್ತಾಳೆಂತಲೂ ಸರ್ಕಾರದವರು ಪ್ರಕಟಿಸಿದ್ದಾರೆ. ಆಕೆಗೆ ಮದರಾಸ್ ಪಟ್ಟಣದ ಛೀಫ್ ಸ್ಯಾನಿಟರಿ ಇನ್ಸ್ಪೆಕ್ಟರೆಂಬ ಕೆಲಸ ನೇಮಕವಾಗಿರುವುದು ಈ ಏರ್ಪಾಟಿನಿಂದ ಮಕ್ಕಳ ಸಾವು ಕಮ್ಮಿ ಆಗಿ, ಬೆಳೆವಳಿಗೆ ಹೆಚ್ಚುವುದೆನ್ನುವುದಕ್ಕೆ ಸಂಶಯವಿಲ್ಲ.

◆◆◆◆

ಪಾಲ್ಘಾಟಿಗೆ ಸೇರಿದ ಮಂಜೆರಿಯಲ್ಲಿ ಮಿ॥ ಜಿ. ಕೆ. ನಿಕೋಲಸ್ ಎಂಬ ವಕೀಲನು ಬಹಳ ಐಶ್ವರ್ಯವಂತನಾಗಿ ಒಳ್ಳೇ ಹೆಸರುವಾಸಿ ಪಡೆದಿದ್ದನು ಇವನು ಒಂದು ಸುಳ್ಳು ಸಾಕ್ಷಿ ಮೊಕದ್ದಮೆಯಲ್ಲಿ ಸಾಕ್ಷಿ ಕೊಡುವುದಕ್ಕಾಗಿ ಮಂಜೇರಿಯಿಂದ ಕಳೆದ ಮಂಗಳವಾರ ಮ್ಯಾಜಿಸ್ಟ್ರೇಟ್ ಕೋರ್ಟಿಗೆ ಬಂದಿದ್ದನು ಮ್ಯಾಜಿಸ್ಟ್ರೇಟರ ಎದುರಿಗೆ ನಿಂತು ಕೈಫಿಯತ್ತು ಬರೆಸುತ್ತಿರುವಾಗ್ಗೆ ಅವನು ಅಕಸ್ಮಾತ್ತಾಗಿ ಜ್ಞಾನತಪ್ಪಿ ಬಿದ್ದು ಎಷ್ಟು ಉಪಚಾರ ಮಾಡಿದರೂ ಪ್ರಯೋಜನವಾಗದೆ ಸತ್ತುಹೋದನು. ಈತನಿಗೆ ೮ ಮಂದಿ ಮಕ್ಕಳಿರುತ್ತಾರೆ

◆◆◆◆

ಕಲ್ಕತ್ತಾ ಪಟ್ಟಣದ ಬಳಿ ಇರುವ ಮಧುಪುರದಲ್ಲಿ ಪತ್ನೀವಿಹೀನನೂ ಎಂಟು ಮಕ್ಕಳ ತಂದೆಯೂ ಆದ ಮಿ॥ ಕ್ಲೇರ್ ಎಂಬುವವನು ಡ್ಯೇರಿ ಎಂಬ ಹೆಂಗಸನ್ನು ವರಿಸಿ, ಏನವನೇ ಮದುವೆ ಮಾಡಿಕೊಳ್ಳಬೇಕೆಂದು ಪ್ರಯತ್ನಪಟ್ಟನು ಅವಳೂ ಒಪ್ಪಿಕೊಂಡಿದ್ದಳು. ಕಳೆದ ಗುರುವಾರ ಇವರಿಬ್ಬರಿಗೂ ಮಾತು ನಡೆದು ಜಗಳವಾಯಿತು. ಅವನು ಪಿಸ್ತೂಲಿನಿಂದ ಎರಡಾವರ್ತಿ ಅವಳನ್ನು ಗುಂಡು ಹೊಡೆದು ಕೊಂದುಹಾಕಿ, ಕೂಡಲೇ ತಾನೂ ಗುಂಡು ಹೊಡೆದುಕೊಂಡು ಪ್ರಾಣಬಿಟ್ಟನು. ಅವನ ಎಂಟು ಮಂದಿ ಮಕ್ಕಳೂ ದಿಕ್ಕಿಲ್ಲದ ಅನಾಥರಾದರು.

◆◆◆◆

ಬೊಂಬಾಯಿ ಪಟ್ಟಣದ ಮ್ಯುನಿಸಿಪಾಲಿಟಿಯವರು ಅಲ್ಲಿನ ಸಮಸ್ತ ಹುಡುಗರನ್ನು ಅಕ್ಷರಸ್ಥರನ್ನಾಗಿ ಮಾಡಬೇಕೆಂದು ತೀರ್ಮಾನಿಸಿ ಬಲಾತ್ಕಾರವಾಗಿ ವಿದ್ಯೆ ಕಲಿಸಬೇಕೆಂಬ ಕಾನೂನನ್ನು ಜಾರಿಗೆ ತರುವುದುಚಿತವೆಂದು ಗವರ್ನಮೆಂಟಿಗೆ ಬರೆದುಕೊಂಡರು ಗವರ್ನರವರು ಈಗಾಗಲೇ ಇಂಥಾ ಬಲಾತ್ಕಾರದ ಕಾನೂನನ್ನು ಜಾರಿಗೆ ತರುವ ವಿಷಯದಲ್ಲಿ ಸ್ವಲ್ಪ ಸಂಶಯಪಟ್ಟು, ಆ ಪಟ್ಟಣದ ಮಕ್ಕಳಿಗೆಲ್ಲಾ ವಿದ್ಯೆ ಕಲಿಸುವಂತೆ ಯಾವತರದ ಏರ್ಪಾಡುಗಳನ್ನು ಮಾಡಬೇಕೆಂಬುದನ್ನು ಕೆಲವು ದೊಡ್ಡ ಮನುಷ್ಯರನ್ನು ನೇಮಿಸಿ ಇವರ ಮೂಲಕ ವಿಚಾರ ಮಾಡಿಸುತ್ತಿದ್ದಾರೆ

◆◆◆◆

ಆಗ್ರಾ ಪಟ್ಟಣದ ಬಳಿ ಬೇಳನಗಂಜ್ ಎಂಬ ಮೊಹಲ್ಲೆಯಲ್ಲಿ ಜಿ. ಎ. ಜಾನ್ ಎಂಬ ಕಂಪನಿಯವರು ಒಂದು ಹೊಸ ನೆಯ್ಗೆ ಕಾರ್ಖಾನೆಯನ್ನು ಕಟ್ಟುತ್ತಿದ್ದಾರೆ ಈ ಕಾರ್ಖಾನೆಗೆ ಸೀಮೆಯಿಂದ ೫,೦೦ ಮಗ್ಗಗಳೂ ಇತರ ಯಂತ್ರಗಳೂ ಬರುತ್ತಲಿವೆ. ಈ ತಿಂಗಳ ಕೊನೆಯೊಳಗಾಗಿ ಕಾರ್ಖಾನೆಯಲ್ಲಿ ಕೆಲಸ ಪ್ರಾರಂಭವಾಗಿ, ೧,೦೦೦ ಜನಕ್ಕೆ ಕಮ್ಮಿ ಇಲ್ಲದೆ ಕೆಲಸಕ್ಕೆ ನೇಮಿಸಲ್ಪಡುವರು ಈಗ ಆ ಪ್ರಾಂತ್ಯ ಕ್ಷಾಮ ಪ್ರಾಪ್ತವಾಗುವಂತಿರುವುದರಿಂದ ಬೇಗನೆ ಈ ಕಾರ್ಖಾನೆಯಲ್ಲಿ ಕೆಲಸ ಪ್ರಾರಂಭವಾದೀತೆಂದು ಎಲ್ಲರೂ ಆತುರಪಟ್ಟು ಎದುರು ನೋಡುತ್ತಿದ್ದಾರೆ.

◆◆◆◆

ಜಯಪುರ ಸಂಸ್ಥಾನದ ಶ್ರೀಮನ್ಮಹಾರಾಜರವರು ಪ್ರಿನ್ಸ್ ಆಫ್ ವೇಲ್ಸ್‌ರವರನ್ನು ಕಂಡು ಬರುವ ಉದ್ದಿಶ್ಯ ಕಳೆದ ವಾರ ಲಕ್ನೋ ಪಟ್ಟಣಕ್ಕೆ ದಯಮಾಡಿದ್ದರು. ಅವರ ಸಂಗಡ ಕೌನ್ಸಿಲ್ ಮೆಂಬರುಗಳಾದ ರಾವ್ ಸಾಹೇಬ್ ಠಾಕೂರ್ ಉಮರಾವ್ ಸಿಂಗ್‌ಜಿಯವರೂ ಬಾಬು ಸಂಸಾರ ಚಂದ್ರಜಿ ಸೇನರವರೂ, ಪ್ರೈವೇಟ್ ಸೆಕ್ರಟರಿ ಬಾಬು ಅವಿನಾಶ ಚಂದ್ರಜಿ ಸೇನರವರೂ ಹೋಗಿದ್ದರು ಮಹಾರಾಜರವರು ಪ್ರಿನ್ಸ್ ಆಫ್ ವೇಲ್ಸ್‌ರವರ ಭೇಟಿ ತೆಗೆದುಕೊಂಡು, ಆ ಪಟ್ಟಣದಲ್ಲಿರುವ ಮುಖ್ಯ ಮುಖ್ಯ ಸ್ಥಳಗಳನ್ನೂ ಕಾರ್ಖಾನೆಗಳನ್ನೂ ನೋಡಿಕೊಂಡು ವಾಪಸು ಜಯಪುರಕ್ಕೆ ಪ್ರಯಾಣಮಾಡಿದರು.

◆◆◆◆

ಬೊಂಬಾಯಿ ಪಟ್ಟಣದ ಮ್ಯುನಿಸಿಪಾಲಿಟಿಯ ಹೆಲ್ತ್ ಆಫೀಸರವರು ಆ ಪಟ್ಟಣದಲ್ಲಿ ಪ್ರತಿತಿಂಗಳಿಗೆ ೩೦,೦೦೦ ಹೆಗ್ಗಣ ಇಲಿಗಳನ್ನು ಹಿಡಿಸಿ, ಪರಿಶೋಧನಾ ಇಲಾಖೆಗೆ ಕಳುಹಿಸುತ್ತಿದ್ದಾರೆ. ಆ ಇಲಾಖೆಯವರು ಅಂಥಾ ಇಲಿ ಹೆಗ್ಗಣಗಳನ್ನು ಪರೀಕ್ಷೆ ಮಾಡಿ, ಯಾವ ಮೊಹಲೆಯಿಂದ ಯಾವ ಬೀದಿಯಿಂದ ಬಂದದ್ದು ಪ್ಲೇಗ್ ಉಪದ್ರಕ್ಕೆ ಕಾರಣವಾಗುವುದೋ ಅಂಥಾದ್ದನ್ನು ಕಂಡುಹಿಡಿದು, ಕೂಡಲೇ ಹೆಲ್ತ್ ಆಫೀಸರಿಗೆ ಬರೆದು ತಿಳಿಸುವರು ಇವರು ತಮ್ಮ ಸಿಬ್ಬಂದಿಯವರ ಕೈಯಿಂದ ಅಂಥಾ ಬೀದಿಗಳನ್ನು ಶುದ್ಧಿಮಾಡಿಸುತ್ತಲೂ ಬಹಳ ಎಚ್ಚರಿಕೆ ಹೇಳುತ್ತಲೂ ಬಂದಿದ್ದಾರೆ. ಇದರಿಂದ ಆ ಪಟ್ಟಣದಲ್ಲಿ ಪ್ಲೇಗಿನ ಅವಾಂತ್ರ ಬಹು ಮಟ್ಟಿಗೆ ಕಡಿಮೆಯಾಗಿರುವುದು.

◆◆◆◆

ಪ್ರಿನ್ಸ್ ಆಫ್ ವೇಲ್ಸ್‌ರವರು ಕಾಶೀಪಟ್ಟಣಕ್ಕೆ ದಯಮಾಡಿದ್ದರಿಂದ ಒಂದು ವಿಷಯಕ್ಕೆ ತುಂಬಾ ಪ್ರೋತ್ಸಾಹವಾಯಿತು. ಸಂಸ್ಕೃತ ಮೊದಲಾದ ಪ್ರಾಚೀನ ಗ್ರಂಥಗಳ ಸರಸ್ವತೀ ಭಂಡಾರವು ಜೀರ್ಣಕ್ಷೀಣದೆಸೆಯಲ್ಲಿತ್ತು. ಸರಿಯಾದ ಕಟ್ಟಡವಿರಲಿಲ್ಲ ಗ್ರಂಥಗಳನ್ನಿಡುವುದಕ್ಕೆ ಸಾಕಾದಷ್ಟು ಸಲಕರಣೆಗಳೂ ಇರಲಿಲ್ಲ. ಮುನ್ಷಿ ಮಾಧವಲಾಲ್‌ಯವರು ಪ್ರಿನ್ಸ್ ಆಫ್ ವೇಲ್ಸ್‌ರವರ ಹೆಸರಿನ ಮೇಲೆ ಒಂದು ಸರಸ್ವತೀ ಭಂಡಾರವನ್ನು ಕಟ್ಟಿಸಬೇಕೆಂದು ಪ್ರಯತ್ನಪಟ್ಟು ಈ ಫಂಡಿಗೆ ಬೇಕಾದ ಒಂದು ಲಕ್ಷ ರೂಪಾಯಿನಲ್ಲಿ ತಮ್ಮ ಕೈಯಿಂದ ೨೫,೦೦೦ ರೂಪಾಯಿ ಹಾಕಿದರು. ಕಾಶೀ ಮಹಾರಾಜರವರು ೩೦,೦೦೦ ರೂಪಾಯಿ ಕೊಟ್ಟಿದ್ದಾರೆ ಅಂತು ಒಂದು ಲಕ್ಷ ರೂಪಾಯಿ ಚಂದಾಮೂಲಕ ಕೂಡಿಸಲ್ಪಟ್ಟಿದೆ.

◆◆◆◆

ತಿರುಚನಾಪಳ್ಳಿಯಲ್ಲಿ ಒಬ್ಬ ಕುರುಬರವನ ಮಗನು ಮನೆ ಮುರಿದು ಕಳವುಮಾಡಿದನು. ಪೋಲೀಸಿನವರು ಅವನ ಮೇಲೆ ಮೊಕದ್ದಮೆ ತಂದಾಗ ಅವನ ತಂದೆಯೇ ಕೋರ್ಟಿಗೆ ಹೋಗಿ ತನ್ನ ಮಗನ ಮೇಲೆ ಸಾಕ್ಷಿ ಹೇಳಿದನು ಇದರ ಮೇಲೆ ಮ್ಯಾಜಿಸ್ಟ್ರೇಟರು ಅವನಿಗೆ ಶಿಕ್ಷೆ ವಿಧಿಸಿದರು. ಆ ಮಗನು ತಂದೆಯ ಮೇಲೆ ಸಿಟ್ಟು ಇಟ್ಟುಕೊಂಡಿದ್ದು, ಕಳೆದ ವಾರ ಅವನನ್ನು ಕೊಂದುಹಾಕಿಬಿಟ್ಟನು ಪೋಲೀಸಿನವರು ಈ ಸುಪುತ್ರನನ್ನು ಮ್ಯಾಜಿಸ್ಟ್ರೇಟರ ಮುಂದೆ ನಿಲ್ಲಿಸಿದಾಗ ಅವನು ಮ್ಯಾಜಿಸ್ಟ್ರೇಟರನ್ನು ಕುರಿತು—ನಾನು ನನ್ನ ತಂದೆಯನ್ನು ಕೊಂದುಹಾಕಿರುತ್ತೇನೆ ಇದರಲ್ಲಿ ಅನುಮಾನವೇನೂ ಇಲ್ಲ. ಆದರೆ ನನ್ನನ್ನು ಜೈಲಿಗೆ ಕಳುಹಿಸಬೇಡಿ. ಗಾಂಜಾ ಇಲ್ಲದಿದ್ದರೆ ನಾನು ಬದುಕಲಾರೆ ನನ್ನನ್ನು ಗಲ್ಲಿಗೇ ಹಾಕಿಬಿಡಿ ಎಂದು ಕೇಳಿಕೊಂಡನು

◆◆◆◆

ಲಾರ್ಡ್ ಕರ್ಜನರವರ ಕಾಲದಲ್ಲಿ ಹಿಂದುಸ್ಥಾನದ ಎಲ್ಲಾ ಭಾಗಗಳ ರೈಲ್ವೇ ಪಟ್ಟಣಗಳಲ್ಲೂ ದಿನಚರ್ಯದ ಗಂಟೆ ಹೊತ್ತನ್ನು ಒಂದೇ ರೀತಿ ಬದಲಾವಣೆ ಇಲ್ಲದೆ ಇರಬೇಕೆಂದು ಗೊತ್ತುಮಾಡಿದರು ಅವರು ಅಪ್ಪಣೆ ಕೊಟ್ಟಪ್ರಕಾರ ಬೊಂಬಾಯಿನವರು ವಿನಹಾ ಉಳಿದ [illegible]ಗಳವರೆಲ್ಲಾ ಗಡಿಯಾರದ ಹೊತ್ತನ್ನು ಬದಲಾಯಿಸಿ ಒಂದೇ ರೀತಿ [illegible]ಡಿಟ್ಟುಕೊಂಡರು. ಬೊಂಬಾಯಿ ಪಟ್ಟಣದಲ್ಲಿ ಕಳೆದ ವಾರ [illegible] ಸಹಸ್ರ ಹಿಂದುಗಳು ಸಭೆ ಸೇರಿ, ಈ ರೀತಿ ಗಂಟೆ ಹೊತ್ತನ್ನು ಬದಲಾವಣೆ ಮಾಡಿಕೊಳ್ಳಕೂಡದೆಂತಲೂ ಹಿಂದು ಜೋಯಿಸರ [illegible]ಚಾರ ಹೆಚ್ಚುಕಡಿಮೆಯಾಗಿ ಜಾತಕಗಳನ್ನು ಬರೆಯುವುದಕ್ಕೂ [illegible]ಗಳ ಗುಣಾಕಾರಕ್ಕೂ ತುಂಬಾ ವ್ಯತ್ಯಾಸವಾಗುವುದೆಂತಲೂ ಗೊತ್ತುಮಾಡಿ, ಒಂದು ವಿಜ್ಞಾಪನೆಯನ್ನು ಬರೆದು ೧೫,೦೦೦ ಪ್ರಜೆಗಳ[illegible]ಗೂ ರುಜುಹಾಕಿ ಗವರ್ನಮೆಂಟಿಗೆ ಒಪ್ಪಿಸಿರುತ್ತಾರೆ ಆ ದಿನ [illegible] ಚಂದ್ರ ಕೃಷ್ಣರವರು ಸಭಾನಾಯಕರಾಗಿದ್ದು, ಕಾರ್ಯಗಳನ್ನು [illegible]ಸಿದರು.

ವಿದೇಶ ವರ್ತಮಾನಗಳು.

ಹಸ್ಸಿ ರಾಜ್ಯದ ಕೆಲವು ಪ್ರಾಂತ್ಯಗಳಲ್ಲಿ ಪ್ರಜೆಗಳು ಸ್ವಾಧೀನಪಡಿಸಿಕೊಂಡಿದ್ದನ್ನು ಬಿಟ್ಟು ಸರಕಾರದವರು ಕೇಳಿ ೩೬,೦೦೦ ಜನರ ಸೈನ್ಯವನ್ನು ಕೊಂಡು ಅಲ್ಲಿಗೆ ರವಾನೆಮಾಡಿದರು

✦✦✦✦

ಲಂಡನ್ ಪಟ್ಟಣದ ಚಾರಿಂಗ್ ಕ್ರಾಸ್ ರೈಲ್ವೆ ಸ್ಟೇಷನಿನ ಮೇಲ್ಛಾವಣಿ ಬಿದ್ದು ನಷ್ಟವು ಹೋಯಿತಷ್ಟೆ ಅದನ್ನು ಮತ್ತೆ ಕಟ್ಟುವುದಕ್ಕೆ ರೈಲ್ವೆ ಕಂಪನಿಯವರು ಒಂಬತ್ತು ಲಕ್ಷ ದ್ರವ್ಯ ವೆಚ್ಚವಾಗುವುದೆಂದು ಗೊತ್ತು ಮಾಡಿದ್ದಾರೆ

✦✦✦✦

ಫ್ರಾನ್ಸಿನ ವರ್ತಕರು ಚೀನಾ ವರ್ತಕರಿಗೆ ೩೦ ಸಾವಿರ ತುಪಾಕಿಗಳನ್ನು ತಯಾರುಮಾಡಿ ಕಳುಹಿಸುವಂತೆ ಕಂಟ್ರಾಕ್ಟು ವಹಿಸಿರುವರು ಚೀನಾ ಗವರ್ನಮೆಂಟಿನವರು ಈಗಿನ ಕಾಲಕ್ಕೆ ತಕ್ಕಂತೆ ಯುದ್ಧಸಾಮಗ್ರಿಗಳನ್ನೂ ಒದಗಿಸಿಕೊಳ್ಳುತ್ತಿದ್ದಾರೆ.

✦✦✦✦

ಪ್ಯಾರಿಸ್ ಪಟ್ಟಣದಲ್ಲಿ ಮುಮುಕ್ಷರ ಮಂದಿರವನ್ನು ಇಟ್ಟು ಸಾವಿರ ಧರ್ಮಸತ್ರಗಳು ಬೆಂಕಿಬಿದ್ದು ಉರಿದುಹೋದವು, ೧೦೦ ಜನ ರೋಗಿಷ್ಟರೂ ಚೈತನ್ಯವಿಲ್ಲದೆ ಉರಿಯಲ್ಲಿ ಸಿಕ್ಕಿ ಸತ್ತರು. ಮುನ್ನೂರು ಜನರನ್ನು ಬಹಳ ಪ್ರಯಾಸಮಾಡಿ ಬದುಕಿಸಿದ್ದಾರೆ

✦✦✦✦

ಮಿ|| ವಾಲಕ್, ಮಿ|| ಮಾರ್ಬರ್‌ಡೇಲ್ ಎಂಬಿಬ್ಬರು ವಿಲಾಯತಿಗೆ ಸೇರಿದ ನ್ಯೂಪೋರ್ಟ್ ಎಂಬ ಪಟ್ಟಣದಿಂದ ಆಕಾಶಬುಟ್ಟಿಯಲ್ಲಿ ಕುಳಿತು ಅಂತರಿಕ್ಷಕ್ಕೆ ಏರಿಹೋಗಿ ಅಂತರಿಕ್ಷಮಾರ್ಗದಲ್ಲೇ ಸಂಚಾರ ಮಾಡುತ್ತಾ ಇಂಗ್ಲಿಷ್ ಕಡಲುಕಾಲುವೆಯನ್ನು ದಾಟಿ ಫ್ರಾನ್ಸಿಗೆ ಸೇರಿದರು ಅಲ್ಲಿಂದಲ್ಲಿಗೆ ೨೦೦ ಮೈಲಿ ದೂರವಿರುವುದನು ಆಕಾಶಬುಟ್ಟಿ ತಲಪುವುದಕ್ಕೆ ೩ ಗಂಟೆ ೪೦ ನಿಮಿಷಗಳು ಹಿಡಿದವು

✦✦✦✦

ರಷ್ಯಾ ರಾಜ್ಯಕ್ಕೆ ಸೇರಿದ ೧೨ ಛಾರ್ ಪಟ್ಟಣಗಳ ಜೈಲ್ ಅಧಿಕಾರಿಯು ಮಂತ್ರಿಯವರಿಗೆ ತಂತಿವರ್ತಮಾನ ಕೊಟ್ಟು, ಆ ಬಂದೀಖಾನೆಗಳು ರಾಜದ್ರೋಹ ಮಾಡಿದ ಅಪರಾಧಿಗಳಿಂದ ತುಂಬಿ ತುಳುಕುತ್ತಿವೆಯಾದ್ದರಿಂದ, ಅಪರಾಧಿಗಳು ಹೊಸದಾಗಿ ಬಂದರೆ ಎಲ್ಲಿ ಇಡಬೇಕೋ ತಿಳಿಯದೆಂತಲೂ ಕೇಳಿರುತ್ತಾರೆ ಇದರಿಂದ ಅಲ್ಲಿನ ರಾಜದ್ರೋಹಿಗಳು ಎಷ್ಟು ಮಟ್ಟಿಗೆ ಹೆಚ್ಚಾಗಿರುವರೋ ಊಹಿಸಿಕೊಳ್ಳಬಹುದು

✦✦✦✦

ಚೀನಾ ರಾಜ್ಯದಲ್ಲಿ ಪತ್ತೆ ಬಾಕ್ಸರುಗಳೆಂಬ ದಂಗೆಕೋರರು ಕ್ರೈಸ್ತ ಮಿಷನರಿಗಳನ್ನೆಲ್ಲಾ ಕೊಳ್ಳೆಹೊಡೆದು, ಧ್ವಂಸಮಾಡಿ ಹಾಳುಗೆಡವಿ ಗಲಭೆಯನ್ನುಂಟುಮಾಡಿದ್ದಾರೆ ಅವರು ೪—೧೦ ಮಂದಿ ಮಿಷನರಿಗಳನ್ನು ಕೊಂದುಬಿಟ್ಟರು ಸುಮಾರು ಒಂದೂವರೆ ಲಕ್ಷ ರೂಪಾಯಿ ಸ್ವತ್ತನ್ನು ಹಾಳುಮಾಡಿದರು ಚೀನಾ ಸರ್ಕಾರದವರು ಸತ್ತವರ ವಾರಸುದಾರರಿಗೆ ಪ್ರತಿಫಲವನ್ನು ಕೊಡುವುದಾಗಿ ಒಪ್ಪಿಕೊಂಡಿದ್ದಾರೆ

✦✦✦✦

ಯಮುನಾ ಪಟ್ಟಣದಲ್ಲಿ ಸಣ್ಣ ಸಣ್ಣ ಮಕ್ಕಳು ಸಾವಿರಾರುಮಂದಿ ಒಂದು ದೇವಸ್ಥಾನಕ್ಕೆ ಹೋಗಿ ದೇವರ ಪ್ರಾರ್ಥನೆ ಮಾಡುತ್ತಿರುವಲ್ಲಿ ಯಾರೋ “ ಬೆಂಕಿ ” ಎಂಬ ಕೂಗು ಆಕಸ್ಮಾತ್ತಾಗಿ ಹುಟ್ಟಿತು ಆ ಗಾಬರಿ ಬಿದ್ದು ತಮ್ಮ ಪ್ರಾಣಗಳನ್ನು ಕಾಪಾಡಿಕೊಳ್ಳಬೇಕೆಂದು ಏಕಕಾಲದಲ್ಲಿ ದೇವಸ್ಥಾನದ ಬಾಗಿಲಿನ ಕಡೆ ನುಗ್ಗಿದರು ಈ ನೂಕಾಟದಲ್ಲಿ ೬—೮ ಮಕ್ಕಳು ಸಿಕ್ಕಿ ಸತ್ತರು, ೩೦—೪೦ ಮಂದಿಗೆ ಭಾರಿ ಗಾಯಗಳಾದವು

✦✦✦✦

ವಿಲಾಯತಿ ರಾಜ್ಯದ ಪೂರ್ವ ದಿಕ್ಕಿನಲ್ಲೂ ದಕ್ಷಿಣ ಭಾಗದಲ್ಲೂ ಸಮುದ್ರವು ದಿನಕ್ರಮೇಣ ಭೂಮಿಯನ್ನು ಕೊರೆದು ಹಾಳುಮಾಡುತ್ತಿದೆ ಎಂತಲೂ ಇದನ್ನು ತಪ್ಪಿಸುವುದಕ್ಕಾಗಿ ಗವರ್ನಮೆಂಟಿನವರು ಏನಾದರೂ ಮಾಡಬೇಕಾಗಿದೆ ಎಂತಲೂ, ಸಮುದ್ರದ ಅಲೆಗಳಿಂದ ಅನೇಕ ಹಳ್ಳಿ ಗ್ರಾಮಗಳೂ ಕಟ್ಟಡಗಳೂ ನಾಶವಾಗಿ ಪ್ರತಿವರುಷವೂ ೯ ಎಕರೆಯಷ್ಟು ಭೂಮಿ ಸಮುದ್ರವಾಗುತ್ತಿದೆ ಎಂತಲೂ ಪ್ರಜೆಗಳು ಅರಿಕೆ ಮಾಡಿಕೊಂಡಿದ್ದಾರೆ

✦✦✦✦

ದಕ್ಷಿಣ ಅಮೆರಿಕದಲ್ಲಿ ಅಂಟೋಪಾಗಸ್ಟಾ ಎಂಬ ಪಟ್ಟಣದ ಬಳಿ ರಸ್ತೆಯ ಕಾಮಗಾರಿ ಮಾಡುತ್ತಿದ್ದ ಸಾವಿರಾರು ಕೂಲಿ ಜನರು ಕೂಲಿ ಬರುವುದಿಲ್ಲವೆಂದು ಹಟ ಹಿಡಿದು ನಿಂತುಬಿಟ್ಟರು ಕಡೆಗೆ ಅಲ್ಲಿ ಗಲಭೆಗಳುಂಟಾಗಿ ನೂರಾರು ಜನರು ಹತರಾದರೆಂತಲೂ ಕೂಲಿಜನರು ಇನ್ನೂ ಹತೋಟಿಗೆ ಬಂದಿಲ್ಲವೆಂತಲೂ ಈ ಗಲಭೆಯನ್ನು ಅಡಗಿಸುವುದಕ್ಕೆ ಸರ್ಕಾರದವರು ಅಲ್ಲಿಗೆ ಹಡಗುಗಳಲ್ಲಿ ಸೈನ್ಯವನ್ನು ಕಳುಹಿಸಿದ್ದಾರೆಂತಲೂ ತಂತಿವರ್ತಮಾನ ಬಂದಿದೆ

✦✦✦✦

ರಷ್ಯಾ ಗವರ್ನಮೆಂಟಿನವರು ಪೋಲೆಂಡಿನಲ್ಲಿಟ್ಟಿರುವ ತಮ್ಮ ಸೈನ್ಯವನ್ನು ಕರಾರಿನ ಪ್ರಕಾರ ವಾಪಸು ತರಿಸಿಕೊಳ್ಳದೆ ಇನ್ನೂ ತಾವು ಇಟ್ಟುಕೊಂಡಿದ್ದಾರಲ್ಲದೆ ಆಮುರ್ ನದಿಯಿಂದ ೧೫೦ ಮೈಲಿ ದೂರದವರೆಗೂ ಚೀನಾ ಜನರು ಬರಕೂಡದೆಂದು ತಿಳಿಸಿ, ಆ ಪ್ರಾಂತ್ಯದಲ್ಲಿ ೩೦,೦೦೦ ಸೈನ್ಯವನ್ನು ಇಟ್ಟಿರಬೇಕೆಂದು ತೀರ್ಮಾನ ಮಾಡಿ ಈ ಸೈನ್ಯಕ್ಕೆ ನಿಜನಿ ನೌಗರಾಡಿನಲ್ಲಿ ಮಾಜಿ ಗವರ್ನರಾಗಿದ್ದ ಬ್ಯಾರನ್ ಅಂಟರ್ ಬರ್ಜರ್ ಎಂಬಾತನನ್ನು ಅಧಿಪತಿಯನ್ನಾಗಿ ನೇಮಿಸಿದ್ದಾರೆ

ಅಮೆರಿಕದ ಗಣಿಗಳಲ್ಲಿ ಕೂಲಿ ಮಾಡುವ ಸುಮಾರು ನಾಲ್ಕು ಲಕ್ಷ ಜನರು ತಮ್ಮ ಯಜಮಾನರಿಂದ ದರವನ್ನು ಹೆಚ್ಚು ಮಾಡಿಕೊಡದಿದ್ದರೆ ತಾವು ಕೆಲಸಕ್ಕೆ ಹೋಗಲಾಗದೆಂದು ನಿಶ್ಚಯ ಮಾಡಿಕೊಂಡು, ಕೆಲಸ ಬಿಟ್ಟಾಗ ತಮ್ಮ ಜೀವನಕ್ಕೆ ಲೋಪ ಬಾರದಂತೆ ಈಗಿನಿಂದಲೂ ಅಲ್ಪ ಸ್ವಲ್ಪ ಹಣವನ್ನು ಕೂಡಿಡುತ್ತಾ ಬಂದಿದ್ದಾರೆ ಹೀಗೆ ಕೂಡಿಡುವ ಫಂಡು ಒಂದೂವರೆ ಕೋಟಿ ರೂಪಾಯಿ ಆದ ಕೂಡಲೇ ಎಲ್ಲರೂ ಏಕಕಾಲದಲ್ಲಿ ಕೆಲಸ ಬಿಟ್ಟು ನಿಂತುಬಿಡಬೇಕೆಂದು ನಿಶ್ಚಯಿಸಿಕೊಂಡಿರುವರು ಈ ಹಣವೆಲ್ಲಾ ಮುಂದಿನ ಏಪ್ರಿಲ್ ಆಖೈರಿನೊಳಗಾಗಿ ಜಮಾವಣೆಯಾದೀತೆಂದು ತಿಳಿದು ಬಂದಿದೆ

✦✦✦✦

ಅಮೇರಿಕಕ್ಕೆ ಸೇರಿದ ಚಿಕಾಗೋ ಪಟ್ಟಣದಲ್ಲಿ ಮಿ|| ಫಾಲಿ ಎಂಬುವನೂ ಒಂದು ಹೋಟೇಲಿನಲ್ಲಿ ಕುಳಿತಿದ್ದನು ಮಿ|| ಡೇವಿಡ್‌ಸನ್ ಎಂಬುವನು ಆ ಹೋಟೇಲಿಗೆ ಹೋಗಿ ಸ್ವಲ್ಪ ಹೊತ್ತು ಮಾತನಾಡುತ್ತಿದ್ದು, ಚುಟ್ಟಾ ಸೇದುವುದಕ್ಕೆ ಮಿ|| ಫಾಲಿ ಎಂಬುವನನ್ನು ಕೇಳಿ ಒಂದು ದೀಪದ ಕಡ್ಡಿಯನ್ನು ತೆಗೆದುಕೊಂಡು ಅದನ್ನು ಗೋಡೆಯ ಮೇಲೆ ಗೀಚಿ, ತನ್ನ ಚುಟ್ಟಾ ಹತ್ತಿಸಿಕೊಳ್ಳುತ್ತಿರುವಲ್ಲಿ ಮಿ|| ಫಾಲಿ ಎಂಬುವನು ಆಕಸ್ಮಾತ್ತಾಗಿ ಕೆಮ್ಮಿಬಿಟ್ಟದ್ದರಿಂದ ದೀಪ ಆರಿಹೋಯಿತು ಇಷ್ಟಕ್ಕೇ ಮಿ|| ಡೇವಿಡ್‌ಸನ್ ಎಂಬುವನಿಗೆ ಕೋಪ ಬಂದು, ಅವನ ಸಂಗಡ ಜಗಳವಾಡಿದನು ಪೋಲೀಸಿನವರು ಮಿ|| ಫಾಲಿಯನ್ನು ಹಿಡಿದು ಲಾಕಪ್ಪಿನಲ್ಲಿ ಹಾಕಿದರು ಮಿ|| ಡೇವಿಡ್‌ಸನ್ ಎಂಬುವನು ಈಗ ಮಿ|| ಫಾಲಿಯ ಮೇಲೆ ೧| ಲಕ್ಷ ರೂಪಾಯಿ ಡಾಮೇಜ್ ದಾವಾ ತಂದಿದ್ದಾನೆ ಒಂದು ಕೆಮ್ಮಿನ ಫಲ ಎಂಥಾದ್ದೋ ಇದರಿಂದ ಗೊತ್ತಾಗುವುದು

✦✦✦✦

ಅಮೇರಿಕಕ್ಕೆ ಸೇರಿದ ಮೇರಿಲ್ಯಾಂಡ್ ಮತ್ತು ನ್ಯೂಕಾರ್ಸಿಕ ಡಿಸ್ಟ್ರಿಕ್ಟುಗಳಲ್ಲಿ ಕೊಲೆಪಾತಕರನ್ನು ಗಲ್ಲಿಗೆ ಹಾಕಕೂಡದೆಂತಲೂ, ಅವರಿಗೆ ಸಜಾ ಶಿಕ್ಷೆಯನ್ನು ವಿಧಿಸಬೇಕೆಂತಲೂ, ಎರಡನೇ ಸಲ ಕೊಲೆ ಮಾಡಿದ ಅಪರಾಧಿಗಳನ್ನು ಮಾತ್ರ ಗಲ್ಲಿಗೆ ಏರಿಸಬೇಕೆಂತಲೂ ಹುಕುಂ ಆಗಿ ಜಾರಿಯಲ್ಲಿದೆ ಈಗ ಓಹಿಯೋ ಎಂಬ ಇನ್ನೊಂದು ಡಿಸ್ಟ್ರಿಕ್ಟಿನ ಅಧಿಕಾರಿಗಳೂ ಇದೇ ರೀತಿಯಾದ ಹುಕುಮನ್ನು ಜಾರಿಗೆ ತಂದುಕೊಂಡಿರುತ್ತಾರೆ ಇನ್ನು ಕೆಲವು ಡಿಸ್ಟ್ರಿಕ್ಟುಗಳಲ್ಲಿ ಕೊಲೆಯಲ್ಲದೆ ಇತರ ಅಪರಾಧಗಳನ್ನು ಮಾಡುವವರಿಗೆ ಮರಣದಂಡನೆ ವಿಧಿಸುವುದನ್ನು ಇಟ್ಟುಕೊಂಡಿದ್ದಾರೆ ರಾಜದ್ರೋಹ, ಹೆಂಗಸರ ಮೇಲೆ ಬಿದ್ದು ಮಾನಭಂಗ ಮಾಡುವುದು, ವಿಷಹಾಕುವುದು, ರೈಲುಗಾಡಿಗೆ ಅಪಘಾತ ತಂದಿಟ್ಟು ಪ್ರಾಣಗಳನ್ನು ಕಳೆವ ಅನಾಹುತವನ್ನುಂಟು ಮಾಡುವುದು, ಕಳ್ಳತನ ದರೋಡೆಗಳನ್ನು ನಡಿಸುವುದು, ಹುಡುಗರುಗಳನ್ನು ಅಪಹರಿಸುವುದು, ಈ ರೀತಿಯಾದ ಅಪರಾಧಗಳನ್ನು ಮಾಡತಕ್ಕವರಿಗೆ ಅಮೇರಿಕದ ಕೆಲವು ಡಿಸ್ಟ್ರಿಕ್ಟುಗಳಲ್ಲಿ ಮರಣಶಿಕ್ಷೆಯನ್ನು ವಿಧಿಸುತ್ತಾರೆ

ಬಾತ್ಮಿದಾರರಿಗೆ ನೋಟೀಸು

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಸ್ಥಳ ಕೊಡಲಾರೆವು. ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು, ಇಂಥವುಗಳಿಗೆ ನಾವು ಸ್ಥಳ ಕೊಡಲಾರೆವು

ಪ್ರಕಟಿಸಲಾರೆವೆಂದು ಹೇಳಿ ತಿರಸ್ಕರಿಸಿದ ಬಾತ್ಮಿಗಳನ್ನು ನಾವು ಬಾತ್ಮಿದಾರರಿಗೆ ವಾಪಸು ಕಳುಹಿಸಲಾರೆವು

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬುದನ್ನು ಸಕಲರೂ ತಿಳಿಯತಕ್ಕದ್ದು —ಎಡಿ.

ಕರೆಸ್ಪಾಂಡೆನ್ಸ್.

ದನಗಳ ರೋಗಕ್ಕೆ ಔಷಧ.

ಅಯ್ಯಾ,

ತಾ|| ೧—೨—೦೬ ನೆ ಮೈಸೂರು ವೃತ್ತಾಂತ ಪತ್ರಿಕೆಯಲ್ಲಿ ಬೌರಿಂಗ್‌ಪೇಟೆ ತಾಲ್ಲೂಕಿನ ಕಡೆ ಗೋವುಗಳಿಗೆ ಒಂದು ವಿಧ ರೋಗ ಸಂಭವಿಸಿರುತ್ತೆಂತಲೂ, ಚಿಕಿತ್ಸೆಯನ್ನು ತಿಳಿಸಬೇಕೆಂತಲೂ ಚಂದಾದಾರರೊಬ್ಬರು ಕೇಳಿರುತ್ತಾರಷ್ಟೆ ಇದಕ್ಕಾಗಿ ಬಹಳ ಶ್ರಮಪಡಬೇಕಾಗಿಲ್ಲ ಈ ರೋಗವನ್ನು ನಮ್ಮ ಕಡೆ “ ಕಾಲುಬಾಯಿ ಜ್ವರ ” ಎನ್ನುತ್ತಾರೆ ವಿಷಾನು ತೊಳೆದ ನೀರನ್ನಾಗಲಿ, ವಿಷಾನನ್ನು ತಂದು ನೆನೆಹಾಕಿದ್ದ ನೀರನ್ನಾಗಲಿ ತಂದು, ದಾಸಿನ ಮಣ್ಣು, ಕಾಲುಗಳನ್ನು ದಿನಕ್ಕೆ ಮೂರಾವರ್ತಿ ತೊಳೆದು, ದಾಸಿನ ಹೆಚ್ಚಿಗೆಯಲ್ಲಿ ಇಲ್ಲದರೆ ತಕ್ಷಣ ಗುಣ ಕಾಣಬರುವುದು ಚೆನ್ನಾಗಿ ಬಿಸಲಿನಲ್ಲಿ ಕಾದ ಮಣ್ಣಿನಲ್ಲಿ ದನವನ್ನು ನಿಲ್ಲಿಸಿದರೆ ಅದರ ಗೊರಸಿನ ನೋವಿಗೆ ಹಿತವಾಗುವುದು

ಸಿ ವಿ ರಾಮಕೃಷ್ಣಶೆಟ್ಟಿ

ದನಗಳ ರೋಗದ ವಿಷಯ

ಅಯ್ಯಾ

ಬೌರಿಂಗ್‌ಪೇಟೆ ತಾಲ್ಲೂಕು ಕಾಮಸಮುದ್ರ ಮತ್ತು ಬೂದಿಕೋಟೆ ಈ ಹೋಬಳಿಗಳಿಗೆ ಸೇರಿದ ಕೆಲವು ಗ್ರಾಮಗಳಲ್ಲಿ ದನ ಪಶು ಮತ್ತು ಎಮ್ಮೆ, ಕುರಿ ಮೇಕೆ ಮೊದಲಾದ ಪ್ರಾಣಿಗಳಿಗೆ ಒಂದು ವಿಧವಾದ ರೋಗವು ಸಂಭವಿಸಿರುವುದೆಂದು ಮೊನ್ನೆ ತಮ್ಮ ಪತ್ರಿಕೆಯಲ್ಲಿ ಪ್ರಕಟಿಸಿರುವುದನ್ನು ನೋಡಿ, ನಾನು ತುಂಬಾ ಪಶ್ಚಾತ್ತಾಪ ಪಟ್ಟೆನು ಮೇಲ್ಕಂಡ ರೋಗಗಳಿಗೆ ನಮ್ಮಲ್ಲಿ ಔಷಧಿ ಸಿದ್ಧವಾಗಿದೆ ಧರ್ಮಾರ್ಥವಾಗಿ ಕಳುಹಿಸಿ ಕೊಡುತ್ತೇವೆ ಪೋಸ್ಟೇಜ್ ಮತ್ತು ಪ್ಯಾಕಿಂಗ್ ಚಾರ್ಜು ಐದು ಆಣೆ ಆಗುತ್ತೆ ಇದು ೫ ಪ್ರಾಣಿಗಳಿಗೆ ಆಗುವಷ್ಟಿರುತ್ತದೆ ಅದರ ಸಂಗಡ ಅನುಪಾನ ಉಪಯೋಗಿಸತಕ್ಕ ವಿಧಾನವೆಲ್ಲಾ ಬರೆದಿರುತ್ತದೆ ಎಲ್ಲಾ ಪ್ರಾಣಿಗಳ ವಿಷಕ್ಕೂ ಉತ್ತಮವಾಯಿ ಕಡಿದ ವಿಷಕ್ಕೂ ಸಹಾ ನಮ್ಮಲ್ಲಿ ಔಷಧಿ ಕೊಡಲ್ಪಡುತ್ತೆ ದನಗಳ ಮಾಲೀಕರು ತರಿಸಿಕೊಳ್ಳಬಹುದು

೩—೩—೧೯೦೬ } ಪಂಡಿತ ಕೃಷ್ಣಾಚಾರ್ಯಪ್ಪ,
ಮೈಸೂರು } ನಿಖಿಲ ರೋಗಹರಿ ವೈದ್ಯಶಾಲಾ.

ಸ್ಕೂಲ್ ಪರೀಕ್ಷೆ

ಅಯ್ಯಾ,

ದಾವಣಗೆರೆ ತಾ|| ಬಾಡದ ಗೌರ್ನಮೆಂಟ್ ಹೋಬಳಿ ಸ್ಕೂಲ್ ಪರೀಕ್ಷಾರ್ಥವಾಗಿ ಚಿತ್ರದುರ್ಗ ಡಿ. ಸ್ಕೂಲ್‌ಗಳ ಡೆ|| ಇ|| ರವರಾದ ಮಿ|| ಎ. ಶ್ಯಾಮರಾಯರವರು ತಾ ೨೬ ನೆ ಶುಕ್ರವಾರ ಮಧ್ಯಾಹ್ನ ದಯಮಾಡಿಸಿ ಆ ಹೊಸ್ಕೂಲನ್ನು ಪರೀಕ್ಷಿಸುವುದಕ್ಕೆ ಆರಂಭಿಸಿ ಎಲ್ಲಾ ತರಗತಿಗಳನ್ನು ರಾತ್ರಿ ೯—೧೦ ಘಂಟೆ ವರಿಗೂ ಪರೀಕ್ಷಿಸಿದರು. ತದನಂತರ ದಿ ಕೃಷ್ಣಸ್ವಾಮಯ್ಯಂಗಾರ್ರಿಂದ ತೋರಿಸಲ್ಪಡುವ ಚಿತ್ರಪಟಗಳ ವೈಖರಿಯು ತೋರಿಸಲ್ಪಟ್ಟಿತು ಈ ವರ್ಷ ಕಳೆದ ವರ್ಷಗಳಿಗಿಂತಲೂ ನೂತನವಾಗಿಯೂ, ಮತ್ತು ವಿಚಿತ್ರವಾಗಿಯೂ ಇರುವಂಥಾ ಅನೇಕ ಚಮತ್ಕಾರವಾದ ಪಟಗಳನ್ನು ತೋರಿಸಲ್ಪಟ್ಟಿತು. ಡೆ ಇ|| ಸಾ|| ರವರು ತಮ್ಮಗಳ ಸರ್ಕ್ಯೂಟಿನೊಂದಿಗೆ ಕೇವಲ ವಾಕ್ಚಾತುರ್ಯದಿಂದ ಬಾಲಕರಿಗೆಲ್ಲಾ ಜ್ಞಾನೋದಯ ವುಂಟಾಗುವಂತೆ ಚೆನ್ನಾಗಿ ಪರಿಶೀಲನೆಯಿಂದ ತೋರಿಸಲ್ಪಟ್ಟಿತೆಂತಲೂ ಮತ್ತೆ ಈ ವೇಳಾಪಟ್ಟಿಯನ್ನು ಹಾಕಿರುವ ಇಲಾಖಾ ಅಧ್ಯಕ್ಷರಾದ ಇ|| ಬಿ| ರವರಾದ ಭಾಬಾ ಸಾ|| ರವರಿಗೂ ಕೃತಜ್ಞರಾಗಿದ್ದೇವೆಂದು ನಮ್ಮ ತಾಲ್ಲೂಕು ಪ್ರವರಾದ ಅಶ್ವತ್ಥನಾರಾಯಣರಾಯರವರು ತಿಳಿಸಿದರು ಅನಂತರ ವಿದ್ಯಾ ವಿಷಯದಲ್ಲಿ ಲೆಕ್ಚರ್ ಒಪ್ಪಲ್ಪಟ್ಟ ಮೇಲೆ ಮಾ|| ರಾ|| ರುದ್ರಾಶಾಸ್ತ್ರಿಗಳಿಂದ ಸಂಗೀತ ಶ್ರವಣವಾಗಲು, ಸಭಾಧ್ಯಕ್ಷರಾದ ಡೆ ಇ|| ಸಾ|| ರವರು ಎದ್ದು ಇಂಥಾ ಹಳ್ಳಿಯಲ್ಲಿ ಸ್ಕೂಲ್ ಮಿ|| ನರಸಿಂಗರಾಯರು ಎ ಬಿ ಮೊದಲ್ಗೊಂಡು ಲೋವರ್ ಸೆಕಂಡರಿ ವರಿಗೂ ಕ್ಲಾಸುಗಳನ್ನು ಇಟ್ಟುಕೊಂಡು ಶ್ರಮಪಟ್ಟು ವರ್ಷ ವರ್ಷ ಪ್ಯಾಸ್ ಮಾಡಿಸುತ್ತಾ ಅಭಿವೃದ್ಧಿಗೆ ತಂದು ಗೌರವಸ್ಥರಾಗಿರುತ್ತಾರೆಂಬುವ ವಿಷಯದಲ್ಲಿ ತುಂಬಾ ಸಂತೋಷವಾಯಿತೆಂದು ವಿದ್ಯಾ ವಿಷಯದಲ್ಲಿ ಸರ್ವರಿಗೂ ತಿಳುವಳಿಕೆಯ ಲೆಕ್ಚರ್ ಅಪ್ಪಣೆ ಕೊಟ್ಟರು ತದನಂತರ ಸ್ಕೂಲ್ ಬಾಲಕರಿಂದ ಶ್ರೀ ಮಹಾರಾಜರವರ ಶ್ರೇಯಃ ಪ್ರಾರ್ಥನೆಯೂ ಮತ್ತೆ ಮಂಗಳ ಪದ್ಯವನ್ನು ಸಹಾ ಹೇಳಲಾಗಿ, ಅಲ್ಲಿ ನೆರೆದಿದ್ದ ಗ್ರಾಮದ ಮುಖಂಡರು ಮತ್ತು ಸಾಹುಕಾರರೇ ಮೊದಲಾಗಿ ಸರ್ವರಿಗೂ ಗಂಧ ಪುಷ್ಪ ತಾಂಬೂಲಾದಿಗಳನ್ನು ಕೊಟ್ಟ ಮೇಲೆ ಸಭೆಯು ಬರಖಾಸ್ತಾಯಿತು

ಸಂಪಾದಕ.

ಮೈಸೂರು ದಿವಾನರವರೂ ಪತ್ರಿಕಾ ಲೇಖಕರೂ

ಅಯ್ಯಾ,

ದಿವಾನರವರ ಪತ್ನಿಯವರಿಗೆ ದೇಹಾಲಸ್ಯವಾಗಿರುವ ಕಾರಣ ಅವರು ಶ್ರೀಮನ್ಮಹಾರಾಜರವರ ಸಂಗಡ ಮದ್ರಾಸಿಗೆ ಹೋಗದೆ ಇದ್ದದ್ದನ್ನು ನೋಡಿ ಜನಗಳು ನಾನಾ ವಿಧವಾದ ಅಭಿಪ್ರಾಯವನ್ನು ಹೊಂದಲು ಕಾರಣವಾಯಿತು ಸರ್ ಕೃಷ್ಣಮೂರ್ತಿಗಳು ತಮ್ಮ ದಿವಾನಗಿರಿ ಕೆಲಸವನ್ನು ಬಿಡುವರೆನ್ನುತ್ತಲೂ ಅವರ ಬದಲಿಗೆ ಮಿ|| ಮಾಧವರಾಯರವರು ಮೈಸೂರಿಗೆ ಬರುವರೆನ್ನುತ್ತಲೂ ಅನೇಕರು ಹೇಳಿಕೊಳ್ಳುವರು. ಸರ್ ಕೃಷ್ಣಮೂರ್ತಿಗಳು ಬೇಕಾದಷ್ಟು ಜಾಣ್ಮೆಯಲ್ಲಿಯೂ ಕೆಲಸಗಳ ಅನುಭವದಲ್ಲಿಯೂ ಕಾರ್ಯನಿರ್ವಾಹಕತೆಯಲ್ಲಿಯೂ ಜನಮನೋರಂಜಕತೆಯಲ್ಲಿಯೂ ಮಿ|| ಮಾಧವರಾಯರಿಗಿಂತಲೂ ದಕ್ಷರಾಗಿರಲಾಗಿ, ಇವರು ಕೆಲಸ ಬಿಡುತ್ತಾರೆನ್ನುವುದಕ್ಕೆ ಯಾವದೊಂದು ಆಧಾರವೂ ಕಾಣುವುದಿಲ್ಲವು ಮತಾಂತರವನ್ನೈದುವವರಿಗೆ ಪಿತ್ರಾರ್ಜಿತದಲ್ಲಿ ಹಕ್ಕು ಉಂಟೆನ್ನುವ ಕಾನೂನಿಗೆ ಸರ್ ಕೃಷ್ಣಮೂರ್ತಿಗಳು ಸಹಾಯಕರಾಗಿರುತ್ತಾರೆಂದು ಪ್ರಜೆಗಳು ಅವರಲ್ಲಿ ಅಸಮಾಧಾನವಂ ಪಟ್ಟಿರಬಹುದು ವಿದ್ಯಾವಂತರಾಗಿಯೂ ಬುದ್ಧಿಶಾಲಿಗಳಾಗಿಯೂ ಪಕ್ಷಪಾತವಿಲ್ಲದವರಾಗಿಯೂ ಇರುವ ಪಂಚಾಯತರ ತೀರ್ಮಾನದ ಪ್ರಕಾರ ಮಸೂದೆ ಆಕ್ಟನ್ನು ಬರೆಯಲ್ಪಟ್ಟಿರಲಾಗಿ ದಿವಾನರವರ ಅಪರಾಧವು ಇದರಲ್ಲಿ ಏನು ಇದೆ ಎನ್ನುವದು ಬುದ್ಧಿಶಾಲಿಗಳೆಲ್ಲರೂ ಚೆನ್ನಾಗಿ ಊಹಿಸಬಹುದು

ಮೈಸೂರು ದೇಶದ ದಿವಾನ ಪದವಿಯು ಅನ್ಯ ದೇಶದವರ ಸ್ವಾಧೀನವಾಗಿದ್ದ ಕಾಲದಲ್ಲಿ ಪ್ರಜೆಗಳು ಎಷ್ಟು ಮಟ್ಟಿಗೆ ಸಂಕಟಪಟ್ಟು, ಮೈಸೂರು ದೇಶದವರೇ ತಮಗೆ ದಿವಾನರಾಗಬೇಕೆಂತ ಶ್ರೀಮನ್ಮಹಾರಾಜರವರಿಗೂ ಮೈಸೂರು ರೆಸಿಡೆಂಟರವರಿಗೂ ಮೊರೆಯಿಟ್ಟದ್ದು ಪ್ರಜೆಗಳು ಇಷ್ಟು ಜಾಗ್ರತೆಯಿಂದ ಮರೆತಿರುವುದಕ್ಕಾಗಿ ವ್ಯಸನಪಡಬೇಕಾಗಿದೆ. ಮಿ|| ಮಾಧವರಾಯರವರು ಕೆಲಸದಲ್ಲಿ ದಕ್ಷತೆಯನ್ನು ಪಡೆದಿಲ್ಲವೆಂದಿಲ್ಲವು ಮತ್ತು ಅವರು ಮೈಸೂರು ದೇಶದ ದಿವಾನರಾಗಲು ಯಾರ ಆಕ್ಷೇಪಣೆಯೂ ಇಲ್ಲವು ಆದರೆ ಕೆಲಸವನ್ನು ದಿವಾನ್ ಮಾಡಲು ಯೋಗ್ಯರಾದವರನ್ನೆಲ್ಲಾ ಒಟ್ಟಿಗೆ ಮೈಸೂರು ದಿವಾನರನ್ನಾಗಿ ಮಾಡಲು ಸಾಧ್ಯವೇ? ಸರ್ ಕೃಷ್ಣಮೂರ್ತಿಗಳವರು ಶ್ರೀಮಂತರಾದ ಕಾರಣ ಹಣದ ಆಸೆಗೆ ದಿವಾನಗಿರಿಯನ್ನು ಮಾಡುವವರಲ್ಲ. ಗೃಹಕೃತ್ಯದಲ್ಲಿ ಉಂಟಾಗಿರುವ ಮನೋವ್ಯಾಕುಲದ ದೆಸೆಯಿಂದ ಅವರು ದಿವಾನಗಿರಿಯ ಬಿಡುವುದಕ್ಕೆ ಯೋಚಿಸಿದಾಗ್ಯೂ ಶ್ರೀಮನ್ಮಹಾರಾಜರವರು ಸರ್ ಕೃಷ್ಣಮೂರ್ತಿಗಳವರ ವಿಷಯದಲ್ಲಿ ವಿಶ್ವಾಸಯುಕ್ತರಾಗಿದ್ದಾರೆ. ತಮ್ಮ ತಂದೆ ಮತ್ತು ತಾತಂದಿರ ದಿವಸಗಳಿಂದಲೂ ಮೈಸೂರು ದೇಶಕ್ಕೆ ಉಪಕಾರಿಯಾಗಿರುವ ದಿವಾನರವರಿಗೆ ಇನ್ನೂ ಕೆಲವು ವರ್ಷಗಳು ದಿವಾನರಾಗಿರಬೇಕೆಂತ ಕೇಳಬೇಕಲ್ಲದೆ, ನೊಂದಿರುವ ದಿವಾನರವರ ಮನಸ್ಸನ್ನು ಸಮಾಧಾನಪಡಿಸುವದಕ್ಕಾಗಿ ಅವರಿಗೆ ಕೆಲವು ಕಾಲದವರೆಗೂ ರಜಾ ಕೊಡಿಸುವದು ಸಾಧ್ಯವಾದಷ್ಟೆಂತ ನಂಬುತ್ತೇನೆ.

ಬಾಲಕೃಷ್ಣ.

ನೊಳಕಾಲ್ಮೂರು ತಾ॥ ಆನೆಬಿದ್ದಹಳ್ಳದ ನಾಲಾ ಕಾಮಗಾರಿ.

ಅಯ್ಯಾ,

ಈ ಗ್ರಾಮದಲ್ಲಿ ಪೂರ್ವದಲ್ಲಿ ಶ್ರೀ ಚಿಕ್ಕಣ್ಣನಾಯಕರೆಂಬ ಮಹಾತ್ಮರಿಂದ ಜನಗಳ ಬಳಕೆಗೆ ಅನುಕೂಲಕ್ಕೆ ಹಾಕಿಸಿ, ನಾಲಾ ತೆಗೆದುಕೊಂಡು ಬಂದು, ಈ ತಾಲ್ಲೋಕು ಪೈಕಿ ಭಾರಿಯಾಗಿರತಕ್ಕ ಒಂದು ಕೆರೆಯನ್ನು ಆ ಮಹನೀಯರು ಅಗ್ಗ ನಿರ್ಮಾಣ ಮಾಡಿದಾರೆ. ಈ ಕೆರೆಯ ಕೆಳಗೆ ಬೀಜವರೀ ಆಗತಕ್ಕ ಜಮೀನು ಸುಮಾರು ೩೦ ಖಂಡುಗವಾಗಬಹುದೆಂತ ಹೇಳುತ್ತಾರೆ. ಈ ಗ್ರಾಮದ ಆದಾಯವೂ ವರುಷಕ್ಕೆ ಸುಮಾರು ೫—೬ ಸಾವಿರ ರೂಪಾಯಿ ವರಿಗೂ ಇರುತ್ತದೆ. ಅಲ್ಲದೆ ಅದು ಸುಮಾರು ೩೦೦—೪೦೦ ಮನೆಗಳವರಿಗೂ ಇರತಕ್ಕಸ್ಥಳವಾಗಿದೆ ಈ ಗ್ರಾಮದ ಕೆರೆಯ ಕೆಳಗೆ ಇರತಕ್ಕ ಜಮೀನುಗಳು ಬೆಳೆದು, ಸುಗ್ಗೀಕಾಲದಲ್ಲಿ ಅನೇಕ ಜನ ಬಡಬಗ್ಗರುಗಳಿಗೂ, ಅನಾಥರಿಗೂ, ಅಕ್ಕಪಕ್ಕ ಗ್ರಾಮದವರಿಗೂ ನಿರಾಯಾಸವಾಗಿ ಜೀವನೋಪಾಯಕ್ಕೆ ಆಧಾರವಾಗಿರುವಕ್ಕ ಪ್ರದೇಶವಾಗಿತ್ತು ಇಂಥಾ ಪರೋಪಕಾರಾರ್ಥವಾದ ಕೆರೆಗೆ ಬರತಕ್ಕ ನಾಲೆಯ ಕಟ್ಟೆಯು ಈ ತಾಲ್ಲೋಕು ಅಮಕುಂದಿ ಗ್ರಾಮದ ಬಳಿ ಇರುವ ಬಂಡೆಯ ಹತ್ತಿರ ಸುಮಾರು ಈಗ ೩—೪ ವರ್ಷಗಳ ಹಿಂದೆ ಆಕಸ್ಮಾತ್ತಾಗಿ ಮಳೆ ಜಾಸ್ತಿಯಾಗಿ ಹಳ್ಳಕ್ಕೆ ಸುಗ್ಗಿ ಕಿತ್ತುಕೊಂಡು ಹೋಗಿರುತ್ತದೆ. ಆಗಿನ ಲಾಗಾಯತು ಸರ್ಕಾರದವರಿಗೆ ಸದರಿ ನಾಲಾದ ಕಾಮಗಾರಿ ಬಗ್ಗೆ ಹುಕುಂ ಆಗಬೇಕೆಂದು ಎಷ್ಟು ವಿಧವಾಗಿ ರೈತರುಗಳೆಲ್ಲರೂ ಅರಮಾಲ್ ಮೂಲಕವಾಗಿಯೂ, ಟೆಲಿಗ್ರಾಫ್ ಮೂಲಕವಾಗಿಯೂ ಅರಿಕೆ ಮಾಡಿಕೊಂಡಿದ್ದಲ್ಲದೆ ಬಂದಬಂದ ಆಫೀಸರುಗಳಿಗೆಲ್ಲಾ ತಮಗೆ ಉಂಟಾದ ದುರವಸ್ಥೆಯನ್ನು ನಿವಾರಣೆ ಮಾಡಬೇಕಾಗಿ ಮೊರೆಯಿಟ್ಟಿದ್ದಾರೆ ಆದಾಗ್ಯೂ ಈತನಕವರಿಗೂ ಸದರಿ ನಾಲಾದ ಕಾಮಗಾರಿಗೆ ಹುಕುಂ ಬರಲಿಲ್ಲ. ಆದ ಕಾರಣ ಆಗಿನ ಲಾಗಾಯತು ಕೆರೆಗೆ ನೀರು ಬಾರದೆ, ಕೆರೆ ಕೆಳಗಿನ ಜಮೀನುಗಳ್ಯಾವತ್ತೂ ಬಂಜರುಬಿದ್ದು, ರೈತರುಗಳೆಲ್ಲಾ ಭೀಳುಕಂದಾಯ ತೆತ್ತು ತೆತ್ತು ಸಾಕಾಗಿ ಜೀವನೋಪಾಯಕ್ಕೆ ಮಾರ್ಗವಿಲ್ಲದೆಯೂ, ದನ ಜಾನುವಾರುಗಳಿಗೆ ಆಹಾರ ಪಾನಾದಿಗಳಿಗೆ ದುಸ್ತರವಾಗಿಯೂ, ಅಹೋರಾತ್ರಿಯಲ್ಲಿಯೂ ವ್ಯಸನಪಡುತ್ತಾ, ಈ ಕಷ್ಟವನ್ನು ನೀಗಲಾರದೆ ಗ್ರಾಮದಲ್ಲಿದ್ದ ಅನೇಕಜನ ರೈತರುಗಳು ಜೀವನೋಪಾಯಕ್ಕೆ ಸ್ವಂತ ಮನೆಬಾಳು ಬಿಟ್ಟು ದೇಶಾಂತರವನ್ನೈದಿರುತ್ತಾರೆ. ಅಲ್ಲದೆ ಊರೊಳಗೆಲ್ಲಾ ಎಲ್ಲಿ ನೋಡಿದಾಗ್ಯೂ ಮನೆಗಳ ಬಾಗಿಲು ಮುಚ್ಚಿರುವದೇ ಕಂಡುಬರುತ್ತದೆ. ಆ ಗ್ರಾಮಕ್ಕೆ ಎಂಥಾ ಕಲ್ಲುಹೃದಯನಾದರೂ ಹೋಗಿ ನೋಡಿದರೆ ಅವನ ಮನಸ್ಸಿಗೆ ಪಶ್ಚಾತ್ತಾಪ ಉಂಟಾಗದೇ ಇರಲಾರದು ನಮ್ಮ ದಯಾಳುಗಳಾದ ಸರ್ಕಾರದವರೋ ನಾಲಾದ ಕಾಮಗಾರಿಗೆ ಇವತ್ತು ನಾಳೆ ಹುಕುಂ ಬರುತ್ತದೆಂಬುದರಲ್ಲಿಯೇ ಆಗಲಾಯಿತು ಇದುವರಿಗೂ ದಿವಸಗಳು ಜರುಗುತ್ತಾ ಬಂದಂತೆ ಆಗಿರುತ್ತದೆ ಆದಕಾರಣ ದಯಾಳುಗಳಾಗಿಯೂ, ಪ್ರಜಾಹಿತಚಿಂತಕರಾಗಿಯೂ, ಯಶಸ್ಸನ್ನು ಹೊಂದಿರುವ ಈ ಸರ್ಕಾರದವರಿಗೆ, ಅನಾಥರಕ್ಷಕನಾಗಿರುವ ಶ್ರೀ ಭಗವಂತನು ಆ ಗ್ರಾಮದ ರೈತರುಗಳಿಗೆಲ್ಲಾ ಉಂಟಾಗಿರುವ ದುರವಸ್ಥೆಯನ್ನು ನೋಡಿ, ಶೀಘ್ರವಾಗಿ ಕಾಮಗಾರಿಬಗ್ಗೆ ಹುಕುಂ ಅಪ್ಪಣೆ ಕೊಡಿಸೋಣವಾಗುವಂತೆ ಕರುಣಾಳುಗಳಾದ ಸರ್ಕಾರದವರಿಗೆ ಪರಮಾನುಗ್ರಹಂ ಗೈಯ್ಯಲೆಂದು ಅಹೋರಾತ್ರಿಯೂ ಪ್ರಾರ್ಥಿಸುತ್ತೇನೆ

ಪ್ರಜಾಹಿತಚಿಂತಕ

ಶೇಕದಾರರೂ ಗ್ರಾಮಪಾಠಶಾಲೆಗಳೂ.

ಅಯ್ಯಾ,

ಶೇಕದಾರರುಗಳನ್ನು ಲೋಕಲ್ ಸ್ಕೂಲುಗಳ ಇನ್ಸ್‌ಪೆಕ್ಟರ್ ಆಫೀಸರನ್ನಾಗಿ ನಿಯಮಿಸುವುದು ಉತ್ತಮವೆಂದು ವಗೈರೆ ಒಬ್ಬಾನೊಬ್ಬ ಬಾತ್ಮಿದಾರರು ಪತ್ರಿಕೆಗೆ ಬಾತ್ಮಿಯನ್ನು ಕೊಟ್ಟಿರುವರು. ಇದರಿಂದುಂಟಾಗುವ ಬಾಧಕಗಳನ್ನೂ ವಿದ್ಯಾಭ್ಯಾಸದ ಇಲಾಖೆಯ ಯೋಗ್ಯತಾಪಕ್ಷವನ್ನೂ ಸದರಿ ಬಾತ್ಮಿದಾರರು ಸಾವಧಾನವಾಗಿ ಆಲೋಚಿಸಿರುವಲ್ಲಿ ಇಂಥಾ ಬಾತ್ಮಿಯನ್ನು ಅವರು ಖಂಡಿತವಾಗಿ ಬರೆಯುತ್ತಿರಲಿಲ್ಲವೆಂದು ಹೇಳಬೇಕಾಗಿದೆ ನಮ್ಮ ಸಂಸ್ಥಾನದಲ್ಲಿರುವ ಅನೇಕ ಶೇಕದಾರುಗಳು ಯಾವ ಪ್ಯಾಸನ್ನೂ ಮಾಡಿದವರಲ್ಲ ಏನೋ! ಸರ್ವಿಸ್ಸು ಮಾಡಿರುವದರಿಂದ ಗುತ್ತಿಲ್ಲದೆ ಅವರಿಗೆ ಸಂಬಂಧಪಟ್ಟ ರೆವಿನ್ಯೂ ಕೆಲಸಗಳನ್ನು ಮಾತ್ರ ಹಾಗೋ ಹೀಗೋ ನೆರವೇರಿಸಬಲ್ಲರೇ ಹೊರತು ವಿದ್ಯಾಭ್ಯಾಸದ ಅಭಿವೃದ್ಧಿಯೂ ನ್ಯೂನತೆಗಳೂ ಮಾಸ್ಟರುಗಳ ಯೋಗ್ಯತಾಪಕ್ಷಗಳೂ ಮತ್ತು ಕಷ್ಟಗಳೂ ಇವರಿಗೆ ಖಂಡಿತವಾಗಿಯೂ ಗೊತ್ತಾಗುವುದಿಲ್ಲವೆಂಬ ಅಂಶವು ಕೆಳಗಿನ ಕಾರಣಗಳಿಂದ ವ್ಯಕ್ತವಾಗುವದು

ಮಾಸ್ಟರುಗಳ ತಲಬನ್ನು ಶೇಕದಾರರು ತಾಲ್ಲೋಕಿನಿಂದ ತಂದು ಕೊಡುವ ಮಾತ್ರಕ್ಕೆ ಮಾಸ್ಟರುಗಳನ್ನು ಶಿಕ್ಷಿಸತಕ್ಕ ಅಧಿಕಾರವು ತಮಗಿರುತ್ತೆಂದು ಭಾವಿಸಿ, "ಮೇಷ್ಟರೇ ಈ ತಿಂಗಳಲ್ಲಿ ನಿಮಗೆ ಸಂಬಳ ಕೊಡುವುದಕ್ಕೆ ಆಗಲಾರದು ನನಗೆ ವಿಪರೀತ ತೊಂದರೆಗಳಿರುತ್ತೆ. ಹಾಗೇ ಸುಮ್ಮನೆ ನನ್ನನ್ನು ಕೇಳಬೇಡ, ತಿಳಿಯಿತೋ" ಎಂದು ವಗೈರೆ ಬೆದರಿಸುತ್ತಲೂ, ಸಕಾಲಕ್ಕೆ ತಲಬು ಬರದೆ ಮಾಸ್ಟರುಗಳ ಗೋಳು ಹುಯ್ದು ಅಮಲ್ದಾರರವರ ತನಕ ಮುಟ್ಟಿ ಕೇಳಿದ್ದಾದರೂ ಆವರು ಈ ತಗಾದೆ ಶೇಕದಾರರು "ಮೇಷ್ಟರೇ, ನಿಮ್ಮ ಜವಾನನಿಗೂ ೩ ರೂ ಸಂಬಳ ಬರುತ್ತೆ, ನಿಮಗೂ ೩ ರೂ ಸಂಬಳ ಬರುತ್ತೆ. ನೀವೇ ಇಷ್ಟು ದೂರದಿಂದ ರಿಪೋರ್ಟು ಮಾಡಿದರೆ ನಮ್ಮ ತಿಗಲ್ಲಾ ಒಟ್ಟಾರೆಯಾಗಿ ೧೫—೨೦ ರೂಪಾಯಿ ಸಂಬಳ ಇರುವ ನಾನು ಎಷ್ಟು ರಿಪೋರ್ಟುಗಳನ್ನು ಮಾಡಲಾರೆನು? ರೈತರೆಲ್ಲರೂ ನನ್ನ ವಶದಲ್ಲಿರುತ್ತಾರೆ ಇವರಿ ನೀವು ಸರಿಯಾಗಿ ಹುಡುಗರಿಗೆ ಪಾಠ ಹೇಳುವದಿಲ್ಲವೆಂತಲೂ ಇಸ್ಕೂಲು ಬಿಡುತ್ತೀರೆಂತಲೂ ರಿಪೋರ್ಟು ಮಾಡಿ, ರೈತರಿಂದಲೂ ಬರೆಸುತ್ತೇನೆ ಅನಂತರ ನಿಮ್ಮ ಅಬನೆ ನೋಡು" ಎಂದು ವಗೈರೆ ದಂಭ ಮಾಡುತ್ತಲೂ, ಸಂದರ್ಭಾನುಸಾರಗಳಾಗಿ ಮಾಡುತ್ತಲೂ ಇರುವ ಅಂಶಗಳು ಮಹಾಜನರಿಗೆ ತಿಳಿಯದೇ ಇಲ್ಲ. ಇವರ ಮೇಲೂ ಗ್ರಾಮಾಂತರಗಳನ್ನು ಸುತ್ತುತ್ತಿರುವದೇ ಇವರ ಕರ್ತವ್ಯವಾದುದರಿಂದ ಮೂರುಮೂರು ದಿನಕ್ಕೊ 'ಗಿಂಡಾಯನಮಃ' ಎಂದು ಸ್ಕೂಲಿನಲ್ಲಿ ಬಂದು ಕೂತುಕೊಂಡರೆ ಇವರ ಸರಫರಾಜಿಗೆ ಮಾಸ್ಟರು ಯಾರ ಮನೆಯನ್ನು ಹಾಳು ಮಾಡಬೇಕು? ಇವರ ಇನ್ಸ್‌ಪೆಕ್ಷನ್ ಜೊತೆಯಲ್ಲಿ ನಿರಕ್ಷರಕುಕ್ಷಿಗಳಾದ ಕೆಲವು ಮೆಂಬರು ಸಾಹೇಬರುಗಳ ಜೊತೆ ಬೇರೆ ಅಂತು ಮಾಸ್ಟರುಗಳ ಯೋಗ್ಯತೆಯು ಕಾಸಿಗೂ ಕಡೆಯಾಗಿ ಭಾವಿಸುವ ಕಾಲವು ಒದಗಿತು. ಪರಂತು ಸಂಸ್ಥಾನದಲ್ಲಿರತಕ್ಕ ಸಮಸ್ತ ನೌಕರರೂ ಬುಷ್‌ಬುಷ್ ಜನಗಳೂ ಮಾಸ್ಟರುಗಳ ಮೇಲೆ ಆಫೀಸರಾಗಲು ಅರ್ಹರಾಗಿರುತ್ತಾರೆಂತಲೂ ಇತರ ಇಲಾಖಾ ನೌಕರರಿಗೆ ಮಾತ್ರ ಆಯಾ ಇಲಾಖೆಯ ಮೇಲ್ದರ್ಜೆಯವರೇ ಆಫೀಸರಾಗಿರಬೇಕೆಂತಲೂ ಆ ಬಾತ್ಮಿದಾರರ ಅಭಿಪ್ರಾಯವಿರಬಹುದು ಶೇಕದಾರುಗಳಂತೆ ಇತರ ಬುಷ್‌ಬುಷ್ ಪೋಲೀಸ್ ದಫೇದಾರರು, ಎಕ್ಸೈಸ್ ಇನ್ಸ್‌ಪೆಕ್ಟರು, ದೇವೀಪ ಶೇಮರು, ಇವರೂ ಏತಕ್ಕೆ ಆಗಬಾರದು? ಹೀಗೆ ಶೇಕದಾರ್ ಮುಂತಾದವರೆಲ್ಲರೂ ಸ್ಕೂಲ್‌ಗಳನ್ನು ಪರೀಕ್ಷೆ ಮಾಡತಕ್ಕ ಅಧಿಕಾರವನ್ನು ಹೊಂದಿದ ಮೇಲೆ ಬಿ. ಎ., ಎಲ್ ಟಿ ಮುಂತಾದ ಪ್ಯಾಸುಗಳನ್ನು ಮಾಡಿರತಕ್ಕವರನ್ನು ವಿದ್ಯಾಭ್ಯಾಸದ ಇನ್ಸ್‌ಪೆಕ್ಟರ್ ಆಫೀಸರನ್ನಾಗಿ ನಿಯಮಿಸುವ ವಾಡಿಕೆಯು ಅನ್ಯಾಯವಷ್ಟೆ? ಇವರನ್ನು ವಜಾಮಾಡಿ, ಶೇಕದಾರರನ್ನು ನಿಯಮಿಸುವುದು ಉತ್ತಮವೆಂದು ಆ ಬಾತ್ಮಿದಾರರ ಅಭಿಪ್ರಾಯವೋ? ಇಲ್ಲವೇ, ವಿದ್ಯಾಭ್ಯಾಸದ ಇಲಾಖಾ ಆಫೀಸರು ವರುಷಕ್ಕೋ ಆರು ತಿಂಗಳಿಗೋ ಬರುತ್ತಾರೆ ಅದುವರಿಗೆ ಈ ಚೋಟಾ ಆಫೀಸರು ಮಾಸ್ಟರುಗಳನ್ನು ಸರಿಮಾಡಿಬಿಟ್ಟದ್ದರೆ ತೊಂದರೆ ಇಲ್ಲವೆಂಬ ಭಾವವೋ? ತಿಳಿಯಲಿಲ್ಲ ಈ ಅನಾನುಕೂಲಕ್ಕೂ ಅವಕಾಶವಿಲ್ಲದಂತೆ ನಮ್ಮ ಗವರ್ನಮೆಂಟಿನವರು ಇನ್ನು ೮ ಮಂದಿ ಅ॥ ಡಿ॥ ಇನ್ಸ್‌ಪೆಕ್ಟರುಗಳನ್ನೂ ಇಬ್ಬರು ಸ್ಕೂಲ್ ಇನ್ಸ್‌ಪೆಕ್ಟರುಗಳನ್ನೂ ನಿಯಮಿಸಿರುತ್ತಾರೆ ವಿದ್ಯಾಭ್ಯಾಸದ ಇಲಾಖೆ ಮಾಸ್ಟರುಗಳಿಗೆ ತಲಬು ಕಮ್ಮಿ ಆದ ಮಾತ್ರಕ್ಕೇ ಇನ್ಸ್‌ಪೆಕ್ಟರ್ ಆಫೀಸರುಗಳೇನೂ ಕಮ್ಮಿಯಾಗಿಲ್ಲ. ಮತ್ತು ಶೇಕದಾರರುಗಳನ್ನು ಆಫೀಸರನ್ನಾಗಿ ಚುನಾಯಿಸುವದಕ್ಕೆ ಬದಲಾಗಿ ಲೋಕಲ್ ಸ್ಕೂಲ್ ಮಾಸ್ಟರುಗಳಿಗೆಲ್ಲ ತಿಲೋದಕವನ್ನು ಬಿಡುವುದು ಉತ್ತಮಕಾರ್ಯವಾಗಿರುತ್ತೆ. ಮಾಸ್ಟರುಗಳಿಗೆ ತಲಬು ಕಮ್ಮಿಯಾದ ಮಾತ್ರಕ್ಕೇನೇ ವಿದ್ಯದಲ್ಲಿ ಮಾತ್ರ ಶೇಕದಾರರಿಗಿಂತಲೂ ಕಮ್ಮಿಯಾಗಿರುವುದು ಬಹಳ ಅಪೂರ್ವ ಈಗಿನ ಶೇಕದಾರರನೇಕರು ಯಾವ ಪ್ಯಾಸೂ ಇಲ್ಲದೆ, ಹೊಸ ರೂಲ್ಸಿನಂತೆ ಕೆಲಸವನ್ನು ತೂಗಿಸಲಾರದೆ ಬಹು ತೊಂದರೆ ಪಡುತ್ತಿರುವ ಅಂಶವೂ, ಅಮಲ್ದಾರರವರು ತಮಗಿರುವ ಹಲವು ಕೆಲಸಗಳ ತೊಂದರೆಯಿಂದ ಪದೇ ಪದೇ ಶೇಕದಾರರಿರುವ ಹಳ್ಳಿಗೆ ಬಂದು, ಇವರ ಮೇಲ್ತನಿಖೆ ತೆಗದುಕೊಂಡು ಇವರಿಗೆ ತಕ್ಕ ತಿಳುವಳಿಕೆ ಕೊಡುವುದಕ್ಕೆ ಅವಕಾಶವಿಲ್ಲವೆಂಬುದು ಎಲ್ಲರಿಗೂ ತಿಳಿದೇ ಇದೆ. ಅನೇಕ ಸ್ಕೂಲ್ ಮಾಸ್ಟರುಗಳು ಇಂಗ್ಲಿಷಿನಲ್ಲಿ ದೊಡ್ಡ ಪ್ಯಾಸುಗಳನ್ನು ಮಾಡಿ, ಇದರ ಮೇಲೆ ರೆವಿನ್ಯೂ ಕ್ರಿಮಿನಲ್ ಮುಂತಾದ ಪ್ಯಾಸುಗಳನ್ನು ಮಾಡಿ, ರೆವಿನ್ಯೂ ಇಲಾಖೆಯಲ್ಲಿ ಕೆಲಸ ದೊರಕೀತೇ, ದೇವರೇ! ಎಂದು ಗೋಳಾಡುತ್ತಿರುವರು ಇಂಥ ವಿದ್ಯಾವಂತರಾದ ಒಬ್ಬೊಬ್ಬ ಮಾಸ್ಟರನ್ನು ಪ್ರತಿ ತಾಲ್ಲೋಕು ಸ್ಕೂಲಿನಲ್ಲೂ ಇಟ್ಟು, ಇವರ ತಲಬಿನ ಜೊತೆಗೆ ಉಚಿತವಾದ ಅಲೋಯನ್ಸನ್ನೂ ಗೊತ್ತುಮಾಡಿ, ಈ ಮಾಸ್ಟರು ಪ್ರತಿ ಭಾನುವಾರವೂ ಒಂದೊಂದು ಹಳ್ಳಿಗೆ ಹೋಗಿ ಶೇಕದಾರರುಗಳ ಮೇಲ್ತನಿಖೆಯನ್ನೂ ಮಾಡುತ್ತಾ, ಶೇಕದಾರರಿಗೆ ತಿಳಿಯದೆ ಇರತಕ್ಕ ಹೊಸ ವಿಷಯಗಳನ್ನು ಬೋಧಿಸುತ್ತಾ ಬಂದರೆ ಮಾಸ್ಟರುಗಳಿಗೆ ಪ್ರೋತ್ಸಾಹವೂ, ಸರ್ಕಾರಕ್ಕೆ ಆದಾಯವೂ, ರೈತರಿಗೆ ಸಹಾಯವೂ, ದೇಶದ ಏಳಿಗೆಗೆ ಔನ್ನತ್ಯವೂ ಆಗುವದರಲ್ಲಿ ಸಂಶಯವಿಲ್ಲ

ನಿಷ್ಪಕ್ಷಪಾತಿ.

ಮತವೂ ದಾಯಭಾಗವೂ

ಅಯ್ಯಾ,

ಹಿಂದೂ ಮತವನ್ನು ಬಿಟ್ಟು ಬೇರೆ ಮತವನ್ನು ಅನುಸರಿಸಿದವರಿಗೆ ದಾಯಭಾಗ ಸಲ್ಲತಕ್ಕ ವಿಷಯದಲ್ಲಿ ಮೈಸೂರು ಗವರ್ನಮೆಂಟಿನವರು ಒಂದು ಕಾನೂನು ಮಸೂದೆಮಾಡಿ ಅದನ್ನು ಜಾರಿಯಲ್ಲಿ ತರಲು ಪ್ರಜೆಗಳ ತಾತ್ಪರ್ಯವನ್ನು ಅಪೇಕ್ಷಿಸಿರುತ್ತಾರಷ್ಟೆ. ಅದಕ್ಕಾಗಿ ನಾನು ಈ ಕೆಳಗೆ ಹೇಳತಕ್ಕ ನನ್ನ ತಾತ್ಪರ್ಯವನ್ನು ದಯವಿಟ್ಟು ತಮ್ಮ ಪೇಪರಿನಲ್ಲಿ ಪ್ರಸಿದ್ಧಪಡಿಸಬೇಕಾಗಿ ತಮ್ಮನ್ನು ಪ್ರಾರ್ಥಿಸುತ್ತೇನೆ.

ಈ ಕಾನೂನು ಗವರ್ನಮೆಂಟಿನವರು ಮುಂಬೂರು ಮಾಡಿ ಈ ಮೈಸೂರು ದೇಶದಲ್ಲಿ ಜಾರೀಲಿ ತರೋಣದರಿಂದ ಮೈಸೂರು ಪ್ರಜೆಗಳ ಮುಂಗಡೆ ಅಭಿವೃದ್ಧಿಗೂ ಅವರ ಸಂಕಟ ಪರಿಹಾರಕ್ಕೂ ಕಾರಣವಾದದ್ದರಿಂದ ಅದನ್ನು ಜಾರಿಯಲ್ಲಿ ತರತಕ್ಕದ್ದೇ ಯುಕ್ತವಾದದ್ದೆಂತ ನಾನು ಅರಿಕೆಮಾಡುತ್ತೇನೆ.

ಕಾರಣ ಹೇಳುವದಕ್ಕೆ ಮೊದಲು ಈ ದೇಶದಲ್ಲಿರತಕ್ಕ ಕೆಲವು ಪ್ರಜೆಗಳು ಇದು ಜಾರೀಲಿ ತರಬಾರದೆಂತ ಅಭ್ಯಂತರಗಳು ಹೇಳಿದಾರೆ. ಅದಕ್ಕೆ ವ್ಯತಿರಿಕ್ತನಾಗಿ ನಾನು ಹೇಳತಕ್ಕದ್ದರಲ್ಲಿ ಆ ದೊಡ್ಡಮನುಷ್ಯರು ನನ್ನನ್ನು ನಿಂದಿಸುವದಕ್ಕೆ ಮೊದಲು ನಾನು ಹೇಳತಕ್ಕ ಕಾರಣಗಳು ಯುಕ್ತವೇ, ಅಯುಕ್ತವೇ ಎಂಬುವದನ್ನು ಯೋಚಿಸಿ, ನನ್ನ ಬರವಣಿಗೆ ಅಯುಕ್ತವಾಗಿದ್ದರೆ ಅದನ್ನು ನ್ಯೂಸ್‌ಪೇಪರಿನಲ್ಲೇ ಅಪ್ಪಣೆ ಕೊಡಿಸಬೇಕೇ ಹೊರತು ನನ್ನನ್ನು ನಿಂದಿಸಬಾರದಾಗಿ ಪ್ರಾರ್ಥಿಸಿ ನಂತರ ಕಾರಣಗಳು ಅರಿಕೆ ಮಾಡುತ್ತೇನೆ.

ಕಾರಣ.—ಜನ್ಮತಃ ನಾನು ಬ್ರಾಹ್ಮಣ. ಈಗಲೂ ಅದೇ ಮತದಲ್ಲಿ ಇದ್ದೇನೆ. ನನ್ನ ಜನ್ಮಾವಧಿ ಈ ಮತದಲ್ಲೇ ಇರತಕ್ಕವನಾಗಿದೇನೆ ನನ್ನ ವಯಸ್ಸು ೫೮ ವರ್ಷವಾಗಿದೆ ಹಾಗೂ ನಾನು ಮೈಸೂರು ದೇಶದಲ್ಲಿ ೩೩ ವರ್ಷ ಪೋಲೀಸ್ ಇನ್ಸ್‌ಪೆಕ್ಟರಾಗಿಯೂ ತಾಲ್ಲೋಕು ಅಮಲ್ದಾರ್ ಮೆಜಿಸ್ಟ್ರೇಟರಾಗಿಯೂ ಕೆಲಸ ಮಾಡಿ ನಾನಾಗಿಯೇ ಗವರ್ನಮೆಂಟ್ ಸರ್ವಿಸಿನಿಂದ ರಿಟೈರಾಗಿ ಹಾಲಿ ಪೆನ್ಷನ್ ಪಡೆಯುತ್ತಾ ಇದ್ದೇನೆ. ಈ ಸರ್ವಿಸೆಲ್ಲಾ ನನ್ನ ಅಧಿಕಾರ ಸರಹದ್ದಿನಲ್ಲಿರತಕ್ಕ ಪ್ರಜೆಗಳ ಮಾನ, ಪ್ರಾಣ, ಧನ, ಇವುಗಳನ್ನು ರಕ್ಷಿಸತಕ್ಕ ಕೆಲಸವೇ ಆಗಿತ್ತು. ಅಂಥಾದ್ದಕ್ಕೆ ಅಪಾಯ ಬರುವದ… ದಲು ಅದು ಗಡಿಯಂತೆ ತಡೆಯತಕ್ಕದ್ದು ಉತ್ತಮವಾದ ಸ… ಯೆಂತ ಈಗಲೂ ಜಾರೀಲಿರತಕ್ಕ 'ಲಾ' ನೇ ಹೇಳುತ್ತಿದೆ ಅ… ನಾನು ನಡದದ್ದರಲ್ಲಿ ನಮ್ಮ ಮತದ ಬಾಧಕಗಳೇ ಹೆಚ್ಚಾಗಿ ನ… ತೋರುವರೆ ಪಟಿಸಿತು ಅಂದರೆ—

(೧) ಬಾಲವಿಧವೆಯರ ವ್ಯಭಿಚಾರ, ಇಂಡಿಯನ್ ಪೀನಲ್‌ಕೋಡ್ ೩೧೨ ಮತ್ತು ೩೧೮ ನೇ ಈ ಸೆಕ್ಷನ್ ತಪ್ಪಿತಗಳು

(೨) ಈ ಅಂತರಂಗ ವ್ಯಭಿಚಾರದಿಂದ ನಡೆಯತಕ್ಕ … ಖೂನಿ, ಪ್ರಜೆಗಳಲ್ಲಿ ದ್ವೇಷ

(೩) ನಮ್ಮ ಜನಗಳಲ್ಲಿ ಇರತಕ್ಕ ಜಾತಿಸಂಬಂಧವಾದ …ಚಾರ, ಮನುಷ್ಯನ ಆದಾಯವಷ್ಟೇ ಗೊತ್ತಿಲ್ಲದೆ ಬಡು… ರೀತಿ. ಅಲ್ಪ ವರಮಾನ ಇರತಕ್ಕವರಿಗೆ ಅವರ ಯೋಗ್ಯತೆಗೆ ಮಿ… ಖರ್ಚು ಇರತಕ್ಕದ್ದು, ಜಾತಿ ನಡವಳಿಕೆಯ ಮೌಢ್ಯ ಕಟ್ಟಳೆ… ವುಗಳು ಸಂಪಾದನೆ ಕರ್ತನಾದ ಯಜಮಾನನನ್ನು ಕೆಡಿಸತಕ್ಕವಾ… ಗಿವೆ. ಅವನ ಪೋಷಣೆಯಲ್ಲಿ ಹೊಂಬೇರಿಗಳಾಗಿ ತಿಂದುಕೊಂಡಿ… ಮರ್ಕಡತೆ

(೪) ಜಾತಿಭೇದ, ಮತಭೇದ, ಪರಸ್ಪರ ದ್ವೇಷ, ಅದರಿಂದ … ರತಕ್ಕ ಅನಾಹುತ.

ಈ ವಗೈರೆ ತೊಂದರೆಗಳೇ ನನ್ನನ್ನು ಬಾಧಕಪಡಿಸಿದವು … ಕ್ಷಪಾತವಾಗಿ ನಮ್ಮಗಳ ಒಪ್ಪಿಕೆಯಿಂದಲೇ ಈಗ ಜಾರೀಲಿರ… 'ಲಾ' ಗಳನ್ನು ಧರ್ಮಿಷ್ಠರಾದ ಇಂಗ್ಲೀಷ್ ಪ್ರಭುಗಳು ಈ… ವಲ್ಲಿ ಜಾರೀಲಿ ತಂದಿರತಕ್ಕದ್ದನ್ನು ಯೋಚಿಸಿದರೆ ಅದಕ್ಕೆ ಪಕ್ಷ… ಪಾತವಿಲ್ಲದೆ ಜಗತ್ಕರ್ತನಾದ ಭಗವಂತನಿಗೆ ಪ್ರಜೆಗಳಲ್ಲಿ ಸಕ್ಕರೆ ಭಾಷವೋ, ಈ 'ಲಾ' ಗಳಲ್ಲೂ ಅದೇ ಭಾವ ತೋರುತ್ತೆ. ನ… ಲ್ಲಿರತಕ್ಕ ನಿರ್ಬಂಧಗಳಲ್ಲಿ ಇವು ಯುಕ್ತವಾದ್ದೇ. ಇವು ಅಯುಕ್ತ… ವೆಂಬ ವಿಷಯ ನಮ್ಮಗಳ ಅನುಭವ, ವಿದ್ಯಾಶಕ್ತಿ, ವಿವತ್ತು, ಇವು… ದ ಯೋಚಿಸಿದರೆ ನಮ್ಮ ನಡವಳಿಕೆಯೂ ಅನೇಕ ವಿಷಯದಲ್ಲಿ ನ… ಆಚರಣೆಯೂ ತಪ್ಪಾದ್ದೆಂತ ನಮಗೇನೆ ತೋರಿಬಂದಾಗ್ಯೂ ಹ… ದೋ ಕಾಲದಲ್ಲಿ ಬೀಜಬಿದ್ದು ಬೆಳೆದಿರತಕ್ಕ ವೃಕ್ಷವಲ್ಲಿನ ಫಲಕೆ… ತೆಂಬ ಒಂದೇ ಕಾರಣದಿಂದ ನಾವು ಸಹಿಸಿಕೊಳ್ಳದೇ ಇದ್ದೇವೆ.

ಪ್ರಜೆಗಳೆಲ್ಲಾ ಸಮಾನತ್ವದಿಂದ ಹೊರತು ಎಷ್ಟು ವಿದ್ಯಾ… ರಾದಾಗ್ಯೂ ಪ್ರಜೆಗಳನ್ನು ಆಳಲಿಕ್ಕೆ ನಾವು ಶಕ್ತರಾಗುವದಿಲ್ಲ.

ನಿಷ್ಪಕ್ಷಪಾತಿಗಳಾದ ಮಿಷನರಿ ಪಾದ್ರಿಗಳನ್ನು ನಾವೆಂದಿಗೂ ಮಿಸಬಾರದು ಅವರು ನಮ್ಮ ಇಂಡಿಯಾಕ್ಕೆ ಇಂಗ್ಲೀಷ್ ದವಲ… ಸೂರ್ಯೋದಯವಾಗುವ ಮೊದಲೇ ಬಂದು, ನಮ್ಮಗಳಿಗೆ ವಿದ್ಯಾ… ಮಾಡಿ ಉದ್ಧಾರ ಮಾಡಿದವರಾಗಿದ್ದಾರೆ. ಮೌಢ್ಯವನ್ನು ಬಿಟ್ಟು … ವಾಗಿ ನಡೆಯಬೇಕೆಂತ ಹೇಳುತ್ತಿರತಕ್ಕ ಇವರೇ ಜುಲುಮಿನಿಂದ … ತೀ ಕೆಡಿಸುತ್ತಾರೆಂತ ಹೇಳಬಹುದೇ? ಇಷ್ಟವಿದ್ದವರು ಯಾವ … ಕ್ಕಾದರೂ ಹೋಗಿ ಜನವಾಗಿ ಬದುಕಲಿ ನಾವೇತಕೆ ಅಭ್ಯಂತರ … ಬೇಕು? ಹಿಂದಲ ಮೌಢ್ಯಕಾಲ ಇನ್ನೆಂದಿಗೂ ನಮಗೆ ಬರು… ನಮ್ಮ ನಿಬಸ್ಥಿತಿ ನಮಗೆ ತಿಳಿಸಿ ನಮ್ಮನ್ನು ಮಕ್ಕಳಂತೆ ಸಂರಕ್ಷಿಸು… ಇಂಗ್ಲಿಷ್ ಪ್ರಭುಗಳಲ್ಲಿರತಕ್ಕ ನಿಜತ್ವ, ಸದ್ಗುಣ, ಇವುಗಳನ್ನು … ಕಲಿತು, ನಾವು ಯೋಗ್ಯರೆಂತ ಹೆಸರುಗೊಂಡು ಸೌಖ್ಯವಾ… ತಕ್ಕದ್ದೇ ನಮ್ಮ ಪ್ರಯತ್ನವಾಗಿದೆ ಸದ್ಯಕ್ಕೆ ಇಷ್ಟೇ ನನ್ನ ಅರಿಕೆ.

ಒಬ್ಬ ಪೆನ್ಷನ್ ಆಫೀಸರು.

[೧ ಧರ್ಮಶಾಸ್ತ್ರವು (ಲಾ) ಜಾತಿ ಕುಲ ಗೋತ್ರಗಳ … ತವಿಲ್ಲದೆ ಇರಬೇಕೆಂದು ನಮ್ಮ ಬಾತ್ಮಿದಾರರು ಹೇಳಿರುವುದು ನ್ಯಾ… ವಾಗಿರುತ್ತದೆ

[೨. ಮಿಷನರಿ ಪಾದ್ರಿಗಳ ವಿಷಯದಲ್ಲಿ ಇಷ್ಟು ಪ್ರೀತಿಯ… ವಾದ ಮಾತುಗಳನ್ನು ಹೇಳಿರುವದಕ್ಕಾಗಿ ನಾವು ಅವರನ್ನು ವಂ… ತ್ತೇವೆ. ಆದರೂ ಈ ಕಾನೂನು ಜಾರೀಗೆ ಬರಬೇಕೆಂಬು… ಕ್ರೈಸ್ತಮತಾವಲಂಬಿಗಳ ಹಕ್ಕು ಬಾಧ್ಯತೆಗಳನ್ನು ಮಾತ್ರವೇ … ಕಾಡುವುದಕ್ಕಲ್ಲವೆಂತಲೂ, ಮತಬಿಟ್ಟು ಬೇರೆ ಮತಕ್ಕೆ ಹೋಗು… ಸಮಸ್ತ ಪ್ರಜೆಗಳಿಗೂ ಇದರಿಂದ ಅನುಕೂಲವಾಗುವುದೆಂತಲೂ … ಚಿಸುವೆವು.—ಎಡಿ]

ಮೈಸೂರು ಗೆಜೆಟ್ ಸಂಗ್ರಹ.

ಡೆಪ್ಯುಟಿ ಕಮಿಷನರ್ ಮೆ॥ ಎಂ. ನಾರಾಯಣರಾಯರಿಗೆ ಕೊ… ರುವ ಹನ್ನೆರಡು ತಿಂಗಳ ರಜವನ್ನು ಇನ್ನೂ ಮೂರು ತಿಂಗಳು ಹೆ… ಮಾಡಿದೆ.

ಕಡೂರ್ ತಾಲ್ಲೋಕು ಅಮಲ್ದಾರ್ ಮೆ॥ ಎಂ. ಎಸ್. ರಾ… ಚಂದ್ರರಾಯರಿಗೆ ಕೊಟ್ಟಿರುವ ಪ್ರಿವಿಲೆಜ್ ರಜವನ್ನು ಇನ್ನೂ ಮೂ… ದಿನ ಜಾಸ್ತಿ ಮಾಡಿದೆ.

ಅ॥ ಕೆಮಿಸ್ಟ್ ಮೆ॥ ಎಚ್. ವಿ. ಕೃಷ್ಣಯ್ಯನವರಿಗೆ ಫೆಬ್ರು… ೧೫ ರಿಂದ ಇಪ್ಪತ್ತೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಪೊಲೀಸ್ ಇಲಾಖೆಯಲ್ಲಿ ಮುಂದೆ ಹೇಳುವ ವರ್ಗಾ… ಮತ್ತು ಬದಲಾವಣೆಗಳು ಹುಕುಂ ಮಾಡಲ್ಪಟ್ಟವೆ :—

ಪ್ರೊ): ಅ॥ ಸೂಪರಿಂಟೆಂಡೆಂಟ್ ಮೆ॥ ಎ. ಸಿ. ಬಸವ… ಅರಸಿನವರನ್ನು ಫ್ರೆಂಚ್‌ರಾಕ್ಸಿಗೆ,

ಆ ಅ॥ ಸೂಪರಿಂಟೆಂಡೆಂಟ್ ಮೆ॥ ಎಸ್. ವಿಶ್ವೇಶ್ವ… ನ್ನು ಫ್ರೆಂಚ್‌ರಾಕ್ಸಿನಿಂದ ಕಡೂರಿಗೆ ;

ಆ. ಎ. ಅ॥ ಕಮಿಷನರ್ ಮೆ॥ ಬಿ ರಾಮಸ್ವಾಮಯ್ಯ… ರನ್ನು ಕಡೂರಿಂದ ತುಮಕೂರಿಗೆ,

ಸೂಪರಿಂಟೆಂಡೆಂಟ್ ಮೆ॥ ಎಲ್. ಕೃಷ್ಣರಾಯರನ್ನು ತುಮ… ರಿನಿಂದ ಬೆಂಗಳೂರಿಗೆ, ಇವರು ಇನ್ಸ್‌ಪೆಕ್ಟರ್ ಜನರಲ್‌ರವರ ಅಸಿಸ್ಟೆಂಟರಾಗಿ ಕೆಲಸ ನೋಡತಕ್ಕದ್ದು.

...ಹೆಡ್ ಕ್ವಾರ್ಟರ್ ಅಸಿಸ್ಟೆಂಟರಾಗಿರುವ ಮಿ॥ ನಗರ್ ಸುಬ್ಬ...ರನು ರೆವಿನ್ಯೂ ಎಕ್‌ಸ್ಟ್ರಾ ಅ॥ ಕಮಿಷನರಾಗಿ ಶಿವಮೊಗ್ಗೆಗೆ ...ಮಾಡಿದೆ.

...ಚಿಂತಾಮಣಿ ತಾಲ್ಲೂಕ್ ಅಮಲ್ದಾರ್ ಮೆ॥ ಬಿ. ಎಸ್. ಚನ್ನಿಗ...ರನು ತಿರುಮಕೂಡ್ಲು ನರಸೀಪುರ ತಾಲ್ಲೂಕಿಗೂ, ಅಲ್ಲಿನ ...ರ್ ಮೆ॥ ಎಸ್. ಎನ್. ರಾಘವಾಚಾರ್ರನು ಚಿಂತಾಮಣಿ ...ಕಿಗೂ ವರ್ಗ ಮಾಡಿದೆ. ...ಜೂರ್ ಜಮಾಬಂದಿ ಪೂರೈಸಿದ ...ಈ ಹುಕುಂ ಜಾರಿಗೆ ಬರತಕ್ಕದ್ದು.

ಸೂಪರಿಂಟೆಂಡಿಂಗ್ ಇಂಜಿನಿಯರ್ ಮಿ॥ ಜೆ. ಜೆ. ಪೈಸ್ಟ್ಲಿಯು ...ರದಿಂದ ವಾಪಸು ಬಂದು, ತಾ ೨೩ ರಲ್ಲಿ ಫಸ್ಟ್ ಸರ್ಕಲ್ ...ನ ಛಾರ್ಜು ವಹಿಸಿಕೊಂಡಿದಾರೆ.

ಎಕ್ಸಿಕ್ಯುಟಿವ್ ಇಂಜಿನಿಯರ್ ಮೆ॥ ವೈ. ಶ್ರೀನಿವಾಸರಾಯರಿಗೆ ...೧೪ ರಿಂದ ಮೂರು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

...ಜೆಗರ್ ಇಲಾಖಾ ಸೆಕ್ರೆಟರಿ ಮಿ॥ ಡಬ್ಲ್ಯು. ಎಫ್. ಸ್ಮಿತ್ ...ರಿಗೆ ಕೊಟ್ಟಿರುವ ಹದಿನೈದು ತಿಂಗಳ ಫರ್ಲೋ ರಜವನ್ನು ...ಒಂದು ತಿಂಗಳು ಜಾಸ್ತಿ ಮಾಡಿದೆ.

ಕಂದಾಯದ ರಿಮಿಷನ್.

ಮೈಸೂರು ಸರ್ಕಾರಿ ಹುಕುಮು.

ಮೈಸೂರು ಸರ್ಕಾರದವರು ಕೋಲಾರ್ ಡಿಸ್ಟ್ರಿಕ್ಟಿನಲ್ಲಿ ಈ ...ಪ್ರಜೆಗಳಿಗೂ ಗೋಕಾಯಿಗಳಿಗೂ ದುಷ್ಕಾಲ ಪ್ರಾಪ್ತವಾಗಿದೆ ...ವುದನ್ನು ತಿಳಿದು, ಅದರ ಪರಿಹಾರಕ್ಕಾಗಿ ಕಳೆದ ಆಗಷ್ಟ್ ತಿಂಗ...ಲ್ಲಿ ೨೫,೦೦೦ ರೂಪಾಯಿಗಳನ್ನು ಸ್ಯಾಂಕ್ಷನ್ ಮಾಡಿದ್ದರು. ಅಲ್ಲಿಂದೀ ...ಆ ಪ್ರಾಂತ್ಯ ರಕ್ಷಣೆ ಪಟ್ಟಿಗೆ ಮಳೆ ಆದದ್ದರಿಂದ ಕಾಲಸ್ಥಿತಿಯು ...ಜನರಿಗೆ ಕೊಂಚ ಪುರಾಕಷ್ಟಗಳಿಗೆ ಅನುಕೂಲವಾಯಿತು. ಧಾರಣೆ ...ಸ್ವಲ್ಪ ಇಳಿಮುಖವಾಯಿತು. ಗೋಕಾಯಿಗಳ ಮೇವಿಗೆ ಮಾ...ದಾಯಿತು. ಕ್ಷಾಮ ಪ್ರಾಪ್ತವಾಗುತ್ತೆಂಬ ಭೀತಿಯು ನಿವಾರಣೆಯಾ...ರಿಲೀಫ್ ಕಾಮಗಾರಿಗಳ ಆವಶ್ಯಕತೆಯೂ ತಪ್ಪಿಹೋಯಿತು. ...ಕಮಿಷನರವರು ಆ ಡಿಸ್ಟ್ರಿಕ್ಟಿನ ಕಾಲಸ್ಥಿತಿಯ ರಿಪೋರ್ಟನ್ನು ...ಯು, ಬೆಳೆಯು, ಗೋಕಾಯಿಗಳ ರೈತಪ್ರಜೆಗಳ ಸ್ಥಿತಿಗತಿಯನ್ನೂ ...ಸಂಪೂರ್ಣವಾಗಿ ವಿವರಿಸಿ ಗವರ್ನಮೆಂಟಿಗೆ ತಿಳಿಸಿರುತ್ತಾರೆ. ...ತರ್ಫಸಲು ಬೆಳೆ ಕೆಟ್ಟುಹೋಗಿರುವುದರಿಂದ ಡೆಪ್ಯುಟಿ ಕಮಿ...ರು ಸ್ವಲ್ಪವೂ ...ಆಗದೆ ಇರುವಂಥಾ ತರಿಜಮೀನಿನ ಕಂದಾಯ...ಲ್ಲ ನಾಲ್ಕಾಣೆಯಷ್ಟಕ್ಕಿಂತಲೂ ಕಮ್ಮಿ ಪೈರಾಗಿರುವ ತರಿಜಮಿ...ಕಂದಾಯದಲ್ಲೂ ಅರೆವಾಸಿಯನ್ನು ರಿಮಿಷನ್ ಮಾಡಬೇಕಾ...ಎಂದು ಸೂಚಿಸಿರುತ್ತಾರೆ. ಅದರ ೬೨,೪೯೧ ರೂಪಾಯಿ ಕಂದಾ...ಉತ್ಪತ್ತಿಯಾಗಬೇಕಾದ ಕಬ್ಬಿನ ಮತ್ತು ಹಿಪ್ಪನೇರಳೆ ಬೆಳೆಗ...ಜಮೀನುಗಳ ವಿಚಾರವನ್ನಾಗಲಿ, ೪೬,೦೦೦ ರೂಪಾಯಿ ಕಂದಾ...ಬಟ್ಟುವಳಿ ಆಗಬಹುದಾದ ನಾಟಿಗಳ ಮತ್ತು ಬಾವಿಗಳ ಆಸರೆ...ರತಕ್ಕ ತರಿ ಜಮೀನುಗಳ ವಿಚಾರವನ್ನಾಗಲಿ ಡೆಪ್ಯುಟಿ ಕಮಿಷನ...ತಿಳಿಸಿಲ್ಲ. ೨,೯೬,೧೯೩ ರೂಪಾಯಿ ಕಂದಾಯ ಉತ್ಪತ್ತಿ...ಗಬಹುದಾದ, ಕೆರೆ ಆಸರೆಯಲ್ಲಿರುವ ತರಿಜಮೀನುಗಳಿಗೆ ಮಾತ್ರ ...ರಿಯಾಯತಿಯನ್ನು ತೋರಿಸಬೇಕಾಗಿರುತ್ತದೆ. ಈ ಪ್ರಕಾರ ಡೆಪ್ಯುಟಿ ...ಷನರು ಎರಡು ಲಕ್ಷ ರೂಪಾಯಿನ ಕಂದಾಯದ ಜಮೀನುಗಳಿಗೆ ...ಇಂದರೆ ಒಂದು ಲಕ್ಷ ರೂಪಾಯಿನಷ್ಟು ರಿಮಿಷನ್ ಆಗಬೇ...ದೆ ಎಂದು ಸೂಚಿಸಿರುತ್ತಾರೆ.

ಶ್ರೀಮನ್ಮಹಾರಾಜಾ ಸರ್ಕಾರದವರು ಕೋಲಾರ್ ಡಿಸ್ಟ್ರಿ...ಸ್ಥಿತಿಯನ್ನು ನೋಡಿ, ೧೯೦೫—೦೬ನೆ ಸಾಲಿನ ತರೀಕಂದಾ...ಲ್ಲಿ ಅರೆವಾಸಿಯನ್ನು ಮುಂದ್ಕಂಡಂತೆ ರಿಮಿಷನ್ ಮಾಡಿರುತ್ತಾರೆ. ...ಯಲ್ಲಿ ನೀರಿಲ್ಲದೆ, ಅಥವಾ ನೀರು ಸರಬರಾಯಿ ಆಗದೆ, ಕಾರ್ತೀಕ ...ವೈಶಾಖ ಬೆಳೆ ಆಗದೆ, ಅಥವಾ ಬೆಳೆ ನಾಲ್ಕಾಣೆಯಷ್ಟಾಗಲಿ ...ಕ್ಕಿಂತಲೂ ಕಡಿಮೆಯಾಗಾಗಲಿ ಆಗಿರುವಂಥಾ ಕೆರೆ ಕೆಳಗಣ ತರೀ ...ನುಗಳ ಕಂದಾಯದ ವಿಷಯದಲ್ಲಿ ಮಾತ್ರ ಈ ರಿಯಾಯತಿ ...ಯುತ್ತದೆಂದು ತಿಳಿಯತಕ್ಕದ್ದು. ಗ್ರಾಮಾಂತರಗಳಲ್ಲಿ ಕಂದಾ...ವಸೂಲಿಗೆ ಪ್ರಾರಂಭವಾಗುವುದಕ್ಕೆ ಮೊದಲೇ ಡೆಪ್ಯುಟಿ ಕಮಿಷನರು ...ಲ್ಲಾ ಈ ಹುಕುಮನ್ನು ಚೆನ್ನಾಗಿ ತಿಳಿಯಪಡಿಸಬೇಕು. ಪ್ರತಿ ...ಅಸಿಸ್ಟೆಂಟ್ ಕಮಿಷನರೂ ಪಹಣಿ ಲೆಕ್ಕವನ್ನು ಸರಿಯಾಗಿ ಬರೆ...ದೆ ಇಲ್ಲವೇ ಎಂಬುದನ್ನು ಖುದ್ದಾಗಿ ನೋಡಿ ಕ್ರಮಪಡಿಸ...ರು. ಪ್ರತಿ ಒಂದು ಗ್ರಾಮದಲ್ಲೂ ಎಷ್ಟೆಷ್ಟು ಜಮೀನುಗಳು ಈ ...ಯತಿಗೆ ದಾಖಲಾಗಬೇಕೋ ಅವನ್ನೆಲ್ಲಾ ಗ್ರಾಮವಾರಾಗಿಯೂ ...ರ್ವೆ ನಂಬರುವಾರಾಗಿಯೂ ಪಟ್ಟಿಗಳನ್ನು ತಯಾರುಮಾಡಿ ಡೆಪ್ಯುಟಿ ...ಷನರಿಗೆ ಕಳುಹಿಸಬೇಕು. ಡೆಪ್ಯುಟಿ ಕಮಿಷನರು ಅವನ್ನೆಲ್ಲಾ ...ಬೇರೆ ತಾಲ್ಲೂಕುವಾರಾಗಿ ವಿಂಗಡಿಸಿ, ಗೋಷ್ವಾರ ಮಾಡಿ ರೆವಿನ್ಯೂ ...ನರ ಮೂಲಕ ಗವರ್ನಮೆಂಟಿಗೆ ಕಳುಹಿಸಬೇಕು.

ಮೊದಲನೇ ಎರಡು ಕಿಸ್ತುಗಳ ಕಂದಾಯವನ್ನು ನಾಲ್ಕನೇ ಕಿಸ್ತಿ...ನ ವಸೂಲ್ಮಾಡಬೇಕು. ಕಡೇ ಎರಡು ಕಿಸ್ತಿನ ಕಂದಾಯವನ್ನು ...ಲ್ಮಾಡದೆ, ಗವರ್ನಮೆಂಟ್ ಹುಕುಂ ನಿರೀಕ್ಷಣೆಯಲ್ಲಿ, ಇಡತ...ಈ ರಿಯಾಯತಿಯು ರೈತರಿಗೆ ದೊರಕದೆ ಗ್ರಾಮನೌಕರರು ...ಹಾಕದಂತೆ ಅಮಲ್ದಾರರೂ, ಅ॥ ಕಮಿಷನರರೂ, ಡೆಪ್ಯುಟಿ ...ಷನರೂ ವಿಶೇಷವಾದ ನಿಗಾ ಇಟ್ಟಿರಬೇಕು. ಇದಲ್ಲದೆ ಡೆಪ್ಯುಟಿ ...ಷನರು ಇನ್ನೂ ಹೆಚ್ಚು ರಿಯಾಯತಿ ಆಗಬೇಕೆಂದು ಕಂಡು ...ನ ಸಂದರ್ಭಗಳೇನಾದರೂ ತೋರಿಬಂದಲ್ಲಿ ಅಂಥಾದ್ದನ್ನೂ ಗವ...ಮೆಂಟಿಗೆ ತಿಳಿಸಬೇಕು.

ತಾಲ್ಲೂಕು ವರ್ತಮಾನಗಳು.

ಚನ್ನಪಟ್ಟಣ.—ಇಲ್ಲಿ ನೀರಿನ ಕ್ಷೋಭೆ ಹೇಳಲಸಾಧ್ಯ. ಇದನ್ನು ...ಮ್ಯುನಿಸಿಪಲ್ ಕಮಿಷನರುಗಳು ತಮ್ಮ ಸಾಕ್ ಲಾಗೋತಿ...ಗೂ ದನಗಳಿಗೂ ಅನುಕೂಲವಾದ ಬಾವಿಗಳನ್ನು ತೆಗಿಸಿ ಕೊಟ್ಟಿದಾರೆ. ಪದೇ ಪದೇ ನೀರಿನ ಕ್ಷಾಮ ಬರುತ್ತಿರುವ ಚನ್ನಪಟ್ಟಣವೆಂಬ ೧೪ ಸಾವಿರ ಪ್ರಜೆಗಳುಳ್ಳ ಈ ದೊಡ್ಡ ಟವುನಿಗೆ ಸರ್ಕಾರದವರು ಸರಿಯಾದ ಅನುಕೂಲತೆ ಮಾಡಿಕೊಡದೆ ಇರುತ್ತಾರೆ. ಸಾಮಾನ್ಯವಾಗಿ ಊರುಮುಂದೆ ನದಿಗಳಿರುವ ಯಂಡತೊರೆ, ನಂಜನಗೂಡು ಮತ್ತು ಕ್ಲೋಸ್‌ಪೇಟೆಗಳಲ್ಲಿ ನಲ್ಲಿ ಇಟ್ಟು ನೀರಿನ ವಸತಿ ಮಾಡಿಕೊಟ್ಟಿದಾರೆ. ದಯಾಳುವಾದ ಸರ್ಕಾರದವರು ಪ್ರಜೆಗಳ ಪ್ರಾಣವನ್ನು ಪರಾಂಬರಿಸಿ, ಸರಿಯಾದ ಏರ್ಪಾಡು ಮಾಡಲ್ಕೊಟ್ಟಾರೆಂದು ನಂಬಿದೇವೆ.—ನೆನ್ನೆ ಬುಧವಾರ ರಾತ್ರಿ ದಾಯಿರ ಮುಸಲ್ಮಾನರ ಜಾತಿ ಗೋರಿಖಾನ್ ಎಂಬುವನು ಪೋಲೀಸ್ ಇನ್ಸ್‌ಪೆಕ್ಟರನ್ನು ಮನಸ್ವಿ ಬೈದುದರಿಂದ ಡಿವಿಜನ್ ಆಫೀಸರವರು ಕಠಿಣಶಿಕ್ಷೆಯೂ ಜುಲ್ಮಾನೆ ಮತ್ತು ನೇಕ್‌ಚಾಲ್ ಜಾಮೀನಿಗೂ ಆರ್ಡರ್ ಮಾಡಿದರು.—ಈ ಟವುನಿನಲ್ಲಿ ಪೋಜ್ದಾರಿ ದಸ್ತಾವೇಜುಗಳು ಮತ್ತು ಲೆಕ್ಕಗಳು ಅನೇಕ ನಡೆಯುತ್ತಲಿವೆ. ಆ ಸ್ಟೇಷನ್ ಮಂಗಳವಾರಪೇಟೆ ಮೊಕದ್ದಮೆಯಲ್ಲಿ ಸೆಷನ್ಸ್ ಕೋರ್ಟಿನಲ್ಲಿ ಎಲ್ಲರಿಗೂ ಕಠಿಣಸಜಾ ವಿಧಿಸಿದರು. ಪುನಹಾ ಈಗ ಆರುಸಾವಿರ ರೂಪಾಯಿಗಳ ಒಂದು ಗೋಜಾವರ್ಗದ ಲೆಕ್ಕ ಸಬ್ ಜಡ್ಜರ ಕೋರ್ಟಿನಲ್ಲಿ ದಾವಾ ದಾಖಲಾಗಿ ಜಡ್ಜರವರು ದಾವಾ ಮಾತ್ರ ಡಿಸ್‌ಮಿಸ್ ಮಾಡಿದರು. ಈಗ ಚೀಫ್ ಕೋರ್ಟಿನಲ್ಲಿ ಅಪೀಲ್ ದಾಖಲಾಗಿದೆ.

ಚಿಕ್ಕಬಳ್ಳಾಪುರ.—ಈ ಸಲ ನಂದಿ ಪರ್ಷೆಯಲ್ಲಿ ಉತ್ಸವ ಬಹು ವಿಜೃಂಭಣೆಯಿಂದ ಜರುಗಿತು. ಬ್ಯಾಂಡ್, ಕಂಪೆನಿಗಳ, ಬಾಣಬಿರುಸು ಮೊದಲಾದ್ದು ತರಿಸಿದ್ದರು.—ಎತ್ತಿನ ಪರ್ಷೆ ವಿಶೇಷವಾಗಿ ಕೂಡಿತ್ತು. ನಮ್ಮ ಅಮಲ್ದಾರರು ಪರ್ಷೆಯಲ್ಲಿ ೧೦—೧೨ ಜೊತೆ ಎತ್ತುಗಳನ್ನು ತರಿಸಿ, ಅವುಗಳಲ್ಲಿ ಉತ್ತಮವಾದವುಗಳಿಗೆ ಬಹುಮಾನ ಕೊಡಲು ಡೆಪ್ಯುಟಿ ಕಮಿಷನರ್‌ಸಾಹೇಬರಿಗೆ ಈ ಎತ್ತುಗಳ ಬೆಲೆ, ಪೋಷಣೆ ಮೊದಲಾದದ್ದನ್ನು ತಿಳಿಸಿರುತ್ತಾರೆ.—ಕೋಲಾರ್ ಡಿಸ್ಟ್ರಿಕ್ಟ್ ಪ್ರಾಸಿಕ್ಯೂಟಿಂಗ್ ಇನ್ಸ್‌ಪೆಕ್ಟರವರೂ ಗೌರಿಬಿದನೂರು ತಾ॥ ಪೋಲೀಸ್ ಇನ್ಸ್‌ಪೆಕ್ಟರೂ ಈ ಪರ್ಷೆ ನೋಡಲು ನಂದಿಸ್ಕೂಲಿನಲ್ಲಿ ಬಿಡಾರಬಿಟ್ಟಿದ್ದರು. ಇವರು ಹೊರಗೆ ಹೋಗಿರುವಾಗ ಇವರ ಬಟ್ಟೆಗಳನ್ನು ಯಾರೋ ಕದ್ದುಕೊಂಡು ಹೋಗಿದಾರೆ. ಈ ಕಾಲದಲ್ಲಿ ಆಫೀಸರುಗಳ ಬಟ್ಟೆಗಳನ್ನೇ ತೆಗೆದುಕೊಂಡು ಹೋದರೆ ಬಡವರುಗಳ ಮಾಲು ಸುಮ್ಮನೆ ಬಿಡುವರೇ?—ಇಷ್ಟು ದಿವಸವೂ ಬೆಂಗಳೂರು ಟಪ್ಪಾಲ್ ದೊಡ್ಡಬಳ್ಳಾಪುರದ ಮಾರ್ಗವಾಗಿ ಹೋಗುತ್ತಿತ್ತು. ಈಗ ಅದನ್ನು ಈ ಮಾರ್ಗದಿಂದ ತಪ್ಪಿಸಿ, ಸೀದಾ ಬೆಂಗಳೂರು ಮಾರ್ಗವಾಗಿ ಬಿಡುತ್ತಿದಾರೆ.—ಈ ಊರು ಧರ್ಮಸತ್ರದ ಬಳಿ ನಂದಿಯಾಲ ತಾಲ್ಲೂಕು ಸುರ್ಪಿ ಗ್ರಾಮದ ತೆಲುಗು ನಾಟಕದವರು ಹಾಕಿರುವ ಡೇರಾ ಪಕ್ಕದಲ್ಲಿ ಹಾಳು ಬಾವಿ ಮುಚ್ಚಿಸಲು ಕೆಲವು ಮಂದಿ ಕೂಲಿಯವರನ್ನು ನೇಮಕ ಮಾಡಿ ಕೆಲಸ ಮಾಡಿಸುತ್ತಿರುವಾಗ ಟಿಂಡೆ ಸೀಳಿ ಒಬ್ಬನು ಬಾವಿಯೊಳಕ್ಕೆ ಬಿದ್ದನು. ಅಷ್ಟರಲ್ಲಿ ಮಿಕ್ಕವರು ಅವನನ್ನು ಮೇಲಕ್ಕೆ ಎತ್ತಿದರು. ಅವನಿಗೆ ಪೂರಾ ಗಾಯಗಳಾಗಿವೆ. ಕಂಪೆನಿ ಮ್ಯಾನೇಜರು ಪೆಟ್ಟುತಿಂದವನ ತಂದೆತಾಯಿಗಳಿಗೆ ೩೦ ರೂಪಾಯಿ ಕೊಡಲು ಒಪ್ಪಿಕೊಂಡರು.

ಚಾಮರಾಜನಗರ.—ಇಲ್ಲಿನ ಮ್ಯುನಿಸಿಪಾಲಿಟಿಯ ಕೆಲವು ಏರ್ಪಾಡುಗಳು ಅಸಮರ್ಪಕವಾಗಿ ನಡೆಯುತ್ತಿರುವುದರಿಂದ ಜನರ ಆರೋಗ್ಯ ಕೆಟ್ಟು ರೋಗಾದಿಗಳಿಗೆ ಕಾರಣವಾಗುವುದು. ಊರಿನ ಕೆಲವು ಬೀದಿಗಳಲ್ಲಿ ಪಾಳುಜಾಗಗಳು ಜನರ ಹೇಸಿಗೆಗೆ ಅನುಕೂಲವಾಗಿಯೂ, ಅಲ್ಲಿ ಬೆಳೆದಿರುವ ಗಿಡಬಳ್ಳಿಗಳು ಹಾವು ಚೇಳು ಮೊದಲಾದ ವಿಷಜಂತುಗಳಿಗೆ ಆವಾಸಸ್ಥಾನವಾಗಿಯೂ ಇರುತ್ತವೆ. ಇವುಗಳ ಕಡೆಗೆ ನಮ್ಮ ಮ್ಯುನಿಸಿಪಾಲಿಟಿಯವರು ಗಮನಿಸಿದರೆ ಬಾಧೆ ಕಡಮೆಯಾಗಬಹುದು. ಸಂದಿಗೊಂದಿಗಳಲ್ಲಿ ಕಸಕಡ್ಡಿ ವಗೈರೆ ಬಿದ್ದಿದ್ದು ಮುನಿಸಿಪಾಲಿಟಿ ಗಾಡಿಯು ಆಗಮಿಸುವುದನ್ನು ಎದುರುನೋಡುತ್ತಿದೆ. ಅನೇಕ ಸ್ಥಳಗಳಲ್ಲಿ ಮ್ಯುನಿಸಿಪಾಲಿಟಿ ಟ್ಯಾಂ ಅವಶ್ಯಕವಾಗಿ ಬೇಕು. ಲಾಂದ್ರಗಳೂ ಬೇಕಾಗಿವೆ. ಮುನಿಸಿಪಾಲಿಟಿಯ ಸರಹದ್ದಿನೊಳಗೆ ಪಾಪಾಸುಕಳ್ಳಿ ದಟ್ಟವಾಗಿ ಬೆಳೆದು ಸಾಯಂಕಾಲಾನಂತರ ಬರುವ ದುಷ್ಟಮೃಗಾದಿಗಳು ಅಡಗಿಕೊಂಡಿದ್ದು ಮನೆಗೆ ನುಗ್ಗಿ ಗೋಕಾಯಿಗಳನ್ನು ಸಂಹರಿಸುವುದಕ್ಕೆ ಸಹಾಯವಾಗಿವೆ. ನಮ್ಮ ಅಮಲ್ದಾರರ ಸವಾರಿ ಅಪರೂಪ. ಸ್ಯಾನಿಟರಿ ವಿಷಯದಲ್ಲಿ ಪ್ರಜೆಗಳು ಸಹಾಯ ಹೊಂದಲು ಕಷ್ಟವಾಗಿವೆ. ಅಮಲ್ದಾರರಿಗೆ ಅಸ್ವಸ್ಥವಾಗಿರುವಂತೆ ತಿಳಿಯಬರುತ್ತೆ. ಝಾಡಮಾಲಿಗಳಾದರೋ ಮಧ್ಯಾಹ್ನದ ವೇಳೆ ಬರುವರು. ಇದರಿಂದ ಬಾಲಕರು ಸ್ಕೂಲಿನಲ್ಲಿರುವಾಗ್ಗೆ ಧೂಳು ಕವಿದು ಪಾಠಕ್ಕೆ ಅಡಚಣೆಯಾಗುತ್ತೆ. ಮಳೆಯಂತೂ ಇಲ್ಲ. ಬಿಸಲು ಜೋರಾಗಿದೆ. ಧಾರಣೆ ವಾಸಿಗಳು ಸುಮಾರಾಗಿವೆ. ಪೋಲೀಸಿನವರು ಈಗೀಗ ಎಲ್ಲಾ ವಿಷಯಗಳಲ್ಲೂ ಪ್ರವೃತ್ತರಾಗಿರುತ್ತಾರೆ. ಗಾಂಜಾ ಮೊಕದ್ದಮೆಯಲ್ಲಿನ ಅಪರಾಧಿಗೆ ೫೦ ರೂ. ಜುಲ್ಮಾನೆ ವಿಧಿಸಿದರು. ಈ ಊರಿಗೆ ಕೆಲವು ಕಕ್ಕಸುಗಳು ಅವಶ್ಯಕವಾಗಿ ಬೇಕು.

ಸೊಳ್ಳೆಪೈಲ್ ಪ್ರಾಂತ್ಯ.—ಈ ಪ್ರಾಂತ್ಯ ಬಿಸಿಲು ಬಹಳವಾಗಿದೆ. ಒಂಬತ್ತು ದಿವಸಗಳಿಂದ ಮೋಡವಾಗುತ್ತಾ, ಕಳೆದ ೨೮ ನೆ ತಾ॥ ಬಾಳೆಹೊನ್ನೂರಿನಲ್ಲಿ ಸುಮಾರಾಗಿ ಒಂದು ಜಡ ಮಳೆಯಾಯಿತು. ಈ ಕಡೆ ಸುಮಾರು ಎರಡು ಅಂಗುಲದಷ್ಟು ಮಳೆ ಬಂದು ಭೂಮಿ ಸ್ವಲ್ಪ ತಂಪಾದರೆ ಈಗ ಸೊಗ್ಗಾಗಿರುವ ಕಾಫಿಯೆಲ್ಲಾ ಹೂವಾಗುವದೆಂದು ಹೇಳುತ್ತಾರೆ. ಕಾಫಿ ತೋಟಗಳ ಕೆಲಸವೆಲ್ಲಾ ಮುಗಿಯುತ್ತಾ ಬಂದಿದೆ. ಈ ತಿಂಗಳ ಅಂತ್ಯದಲ್ಲಿ ಕೂಲಿ ಆಳುಗಳೆಲ್ಲಾ ತಮ್ಮ ತಮ್ಮ ಊರುಗಳಿಗೆ ಹೋಗಿ ಮೇ, ಜೂನ್ ತಿಂಗಳಲ್ಲಿ ಮತ್ತೆ ತೋಟಗಳ ಕೆಲಸಕ್ಕೆ ಬರುವವರಾಗಿದಾರೆ.—ಮೂಡಿಗೆರೆ ಕೊಪ್ಪ ತಾಲ್ಲೂಕುಗಳಲ್ಲಿ ಕೆಲವು ಕಡೆ ರಸ್ತೆಗಳ ಮೇಲೆ ಬಂದಿರುವ ಮರಗಳ ಕೊನೆಗಳೂ ಬೇಲಿಮುಳ್ಳು ಬಿದುರೂ ಮುಳ್ಳಿನ ಕೊನೆಗಳೂ ಕವಿದು ಪ್ರಯಾಣಸ್ಥರ ಗಾಡಿಗಳ ಸಂಚಾರಕ್ಕನುಕೂಲವಾಗಿಸುವದು ಒಳ್ಳೇದೆಂದು ಕಾಣುತ್ತದೆ. ಮಲನಾಡಿನ ರಸ್ತೆಗಳ ಪಕ್ಕಗಳಲ್ಲಿ ದೊಡ್ಡ ದೊಡ್ಡ ಕಾಡುಮರಗಳು ಬೆಳೆದಿರುತ್ತವೆ. ಅಂಥಾ ಮರಗಳಲ್ಲಿ ಕೆಲವು ಬಿದ್ದು ಪ್ರಯಾಣಸ್ಥರ ಸಂಚಾರವನ್ನು ನಿಲ್ಲಿಸುವದುಂಟು. ಕೆಲವು ಸಮಯಗಳಲ್ಲಿ ಜನರು ಮರಗಳ ಬುಡಗಳಲ್ಲಿ ಬೆಂಕಿ ಹಾಕುತ್ತಾರೆ. ಇದರಿಂದ ಮಾಗುಂಡಿಗೂ ಬಾಳೆಹೊನ್ನೂರಿಗೂ ಮಧ್ಯದಲ್ಲಿ ದಾರಿಯನ್ನು ಅಡ್ಡಕಟ್ಟಿದ ಭಾರಿ ಮರವನ್ನು ಯಾರೂ ಕಡಿದು ಪ್ರಯಾಣಸ್ಥರಿಗೆ ಅನುಕೂಲಪಡಿಸದ್ದರಿಂದ ಉಭಯಕಡೆಯ ಗಾಡಿಗಳು ಪ್ರಯಾಣ ಮಾಡುವ ಯೂರೋಪಿಯನ್ ದೊಡ್ಡ ಮನುಷ್ಯರೂ ಕೂಡ ರಾತ್ರಿಯೆಲ್ಲಾ ಗಾಡಿಯಲ್ಲಿಯೇ ಇದ್ದು, ಬೆಳಗ್ಗೆ ಇತರರ ಸಹಾಯದಿಂದ ಗಾಡಿಯನ್ನು ಅಡ್ಡಲಾಗಿದ್ದ ಮರದ ಮೇಲೆ ಎತ್ತಿ ಇಳಿಸಿ, ಮುಂದೆ ಪ್ರಯಾಣ ಮಾಡಬೇಕಾಗಿದೆ. ಈ ಮರ ಬಿದ್ದಿರುವ ಸಂಗತಿ ಮಾಗುಂಡಿ ಪೋಲೀಸ್ ಸ್ಟೇಷನಿಗೆ ವರ್ತಮಾನ ಬಂದಂತೆ ಕಾಣುತ್ತೆ. ಹಾಗೆ ತಿಳಿದ್ದ ಪಕ್ಷದಲ್ಲಿ ಅದನ್ನು ಕತ್ತರಿಸಿ ತೆಗೆದು ಪ್ರಯಾಣಸ್ಥರಿಗೆ ಅನುಕೂಲ ಮಾಡದೆ ಹೋದದ್ದು ತಪ್ಪೆಂದು ಕಾಣುವದಿಲ್ಲವೇ?

ಫ್ರೆಂಚ್‌ರಾಕ್ಸ್.—ಈ ಊರಿನಲ್ಲಿ ೨ ತಿಂಗಳಿಂದಲೂ ಪ್ಲೇಗ್ ಇಲ್ಲ. ಅ॥ ಕಮಿಷನರ್ ಸಾಹೇಬರು ತುಂಬಾ ಮೆಹನತ್ತು ಮಾಡಿ ಮನೆಗಳನ್ನು ಸರಕಾರದಿಂದಲೇ ಬಹಳ ಚನ್ನಾಗಿ ಶುದ್ಧಿಮಾಡಿಸಿದಾರೆ. ಜೋಪಡಿಗಳಲ್ಲಿ ವಾಸ ಮಾಡುತ್ತಿದ್ದವರೆಲ್ಲಾ ಅವರವರ ಮನೆಗಳನ್ನು ಸೇರಿಕೊಂಡರು. ಸ್ಕೂಲುಗಳೆಲ್ಲಾ ತೆರೆಯಲ್ಪಟ್ಟಿವೆ. ಕಳೆದ ಶನಿವಾರ ಸ್ಯಾನಿಟರಿ ಕಮಿಷನರ್ ಸಾಹೇಬರು ಬಂದು ಊರಿನ ಸ್ಥಿತಿಯನ್ನು ಪರೀಕ್ಷೆ ಮಾಡಿಕೊಂಡು ಹೋದರು. ಈ ಕಾಲದಲ್ಲಿ ನಮ್ಮ ಅಮಲ್ದಾರರು ಊರಿನ ಪಾಕೀಜಾ ವಿಷಯ ಹೆಚ್ಚಾಗಿ ಗಮನಕೊಡಬೇಕು. ಊರಿನ ಕಚಡಾ ಸರಿಯಾಗಿ ಹೊರಗೆ ಹೋಗುವದಿಲ್ಲ. ಎಲ್ಲಾ ಬೀದಿ ಸಂದು ಗಲ್ಲಿ ಚರಂಡಿಗಳಲ್ಲಿ ಕಚರ ಹಾಗೇನೇ ಇರುತ್ತದೆ. ಇದರಿಂದ ಸಾಂಕ್ರಾಮಿಕ ರೋಗಗಳಿಗೆ ಆಸ್ಪದ ಉಂಟು. ಅಮಲ್ದಾರರು ಆಗಾಗ್ಗೆ ಊರನ್ನು ಗಸ್ತುಮಾಡಿದರೆ ಊರಿನ ಸ್ಥಿತಿ ತಿಳಿಯುತ್ತದೆ. ಝಾಡಮಾಲಿಗಳು ಬಹು ಕೊಂಚ ಮಂದಿ ಇದಾರೆ. ಈಗ ಇರುವವರಿಂದಲೇ ಊರೆಲ್ಲಾ ಶುಚಿಯಾಗಲಾರದು.—ಈ ಊರಿನ ಜನರಿಗೆಲ್ಲಾ ಕೆರೆಯ ನೀರೇ ಆಧಾರವಾಗಿತ್ತು. ಈಗ ಕೆರೆ ಬತ್ತಿ ಹೋಗಿದೆ, ಜನರು ನೀರಿಗೆ ಬಹಳ ಶ್ರಮಪಡುತ್ತಾರೆ. ಈ ವಿಷಯಕ್ಕೆ ಸರಕಾರದವರು ಗಮನ ಕೊಟ್ಟು, ಕೆರೆಯಲ್ಲಿ ಕೆಲವು ಬಾವಿಗಳನ್ನು ತೋಡಿಸಿದರೆ ಸದ್ಯಕ್ಕೆ ಅನುಕೂಲವಾಗಬಹುದು. ಹೊಳೆ ಸಮೀಪವಾಗಿರುವ ನಂಜನಗೂಡು, ಕ್ಲೋಸ್‌ಪೇಟೆ ಮುಂತಾದ ಸ್ಥಳಗಳಲ್ಲಿ ಜನ ಪ್ರಜೆಗಳ ಸಹಾಯಕ್ಕಾಗಿ ನಲ್ಲಿಗಳನ್ನು ಇಟ್ಟು ನೀರನ್ನು ಸರಕಾರದವರು ಸರಬರಾಯಿ ಮಾಡುತ್ತಾರೆ. ಯಾವ ಆಧಾರವೂ ಇಲ್ಲದ ಈ ಗ್ರಾಮಕ್ಕೆ ದಯವುಳ್ಳ ಸರಕಾರದವರು ನಲ್ಲಿಗಳನ್ನು ಇಟ್ಟು ನೀರನ್ನು ಕರೆಸಿ ಜನರ ಕಷ್ಟ ನೀಗಿಸಬಾರದೇ?—ಈ ಊರಿನಲ್ಲಿ ಸೂಲಗಿತ್ತಿ ಇಲ್ಲ. ಒಬ್ಬ ಕರ್ನಾಟಕ ಸೂಲಗಿತ್ತಿ ಇದ್ದಳು. ಅಕೆಯಿಂದ ಜನರಿಗೆ ಬಹಳ ಸಹಾಯವಾಗಿತ್ತು. ಅಕೆ ಕಾಲವಾದಳು. ಅಮಲ್ದಾರರು ಈ ವಿಷಯಕ್ಕೆ ಬಹಳ ಗಮನ ಕೊಟ್ಟು, ಸರಕಾರದ ಸೂಲಗಿತ್ತಿಯನ್ನು ಕರೆಸಿದರೆ ಕೀರ್ತಿಯುಂಟು. ಎಲ್ಲಾ ಜನರಿಗೆ ಪ್ರಯೋಜನವೂ ಆಗುತ್ತದೆ.—ಇಲ್ಲಿದ್ದ ಸ್ಟ್ಯಾಂಪುವೆಂಡರನ್ನು ತೆಗೆದು ಹಾಕಿ, ಅದೇ ಕೆಲಸವನ್ನು ಅವರ್ಲ್ದಾರನು ಇಲ್ಲಿನ ಪೋಸ್ಟ್‌ಮಾಸ್ಟರಾದ ಅಬ್ರಹಾಮೈಯ್ಯನವರಿಗೆ ಒಪ್ಪಿಸಿದ್ದಾರೆ. ಇವರು ಜನರಿಗೆ ಯಾವ ತೊಂದರೆಯೂ ಇಲ್ಲದೆ ಅಷ್ಟು ಕೆಲಸವನ್ನು ಬಹು ಜಾಗ್ರತೆಯಿಂದ ನಡಿಸುತ್ತಾರೆ.

ಪ್ರಕಟನೆಗಳು.

ಬೇಕಾದ ಎಷ್ಟು ರಂತೆ ಕಮಿಷನ್ ದೊರೆಯುತ್ತೆ!

ಬೇಗನೋಡಿ. ಮುಗಿದುಹೋದೀತು.

ವ್ಯಸನಪಡಬೇಕಾಗುತ್ತೆ.

51-1

ಈ ಕೆಳಗೆ ನಮೂದಿಸಿರುವ ಎರಡು ರೂಪಾಯಿ ಕ್ರಯದ ಹದಿನೇಳು ಪುಸ್ತಕಗಳನ್ನು ಒಟ್ಟಿಗೆ ತರಿಸಿಕೊಂಡರೆ ೧॥ ರೂಪಾಯಿಗೆ ದೊರಕುವದು. ಆಹಾ! ಪುಸ್ತಕಗಳನ್ನು ಸುಲಭಕ್ಕೆ ಪಡೆಯುವದು ಇದೇ ಸಮಯ.

೧	ಕ್ರಿಮಿವರ್ಗವರ್ಣನೆ ೪೩ ಚಿತ್ರಗಳಿಂದ ಕೂಡಿದ್ದು		೦—೧—೬
೨	ಪಕ್ಷಿಗಳ ಚಿತ್ರಗಳೂ, ಕಥೆಗಳೂ ೪೨	,,	೦—೧—೬
೩	ದೇಹವೆಂಬ ನನ್ನ ಮನೆ ೨೬	,,	೦—೧—೬
೪	ಪುರಾತನ ರೋಮನರ ಕಥೆಗಳು ೨೨	,,	೦—೨—೦
೫	ಖಗೋಳ ಸಿದ್ಧಾಂತ ಶಾಸ್ತ್ರ ೩ ೨೮	,,	೦—೧—೬
೬	ಜಾರ್ಜ್ ಸ್ಟೀವನ್ಸನ ಚರಿತ್ರೆ ೨	,,	೦—೧—೬
೭	ಪ್ರಾಚೀನಕಾಲದ ವಿಲಕ್ಷಣ ಜೀವರಾಶಿಗಳ ವರ್ಣನೆ ೪೭	,,	೦—೧—೦
೮	ಎಡ್ವರ್ಡ್ ಚಕ್ರವರ್ತಿಯವರ ಚರಿತ್ರೆ ೧೫	,,	೦—೪—೬
೯	ಎಡ್ವರ್ಡ್ ಸಾರ್ವಭೌಮರ ಕಿರೀಟಧಾರಣೆ ೧೯	,,	೦—೨—೬
೧೦	ದಕ್ಷಿಣ ಆಫ್ರಿಕಾ ಲಡಾಯಿ ವರ್ಣನೆ ೪೪	,,	೦—೨—೬
೧೧	ಬಿಮರ್ಜಡೇಡವು ಬವಿಶಾಗಾಂಧಿ ೨೮	,,	೦—೨—೬
೧೨	ಘನತೆಯುಳ್ಳ ಸ್ತ್ರೀಯರ ಚರಿತ್ರೆ ೨೦	,,	೦—೨—೬
೧೩	ಪುರಾತನ ಗ್ರೀಕರ ಕಥೆಗಳು ೧೬	,,	೦—೨—೬
೧೪	ಚಿಕ್ಕವರಿಗೆ ಹೇಳಿದ ಕಥೆಗಳು	,,	೦—೧—೬
೧೫	ಸ್ವಪ್ರಯಾಸ ಫಲವಿಶೇಷ ಬಹು ಉತ್ಕೃಷ್ಟವಾದ ಪುಸ್ತಕ		೦—೪—೦
೧೬	ವೇದಗಳ ಕಾಲದಲ್ಲಿ ಹಿಂದೂದೇಶದ ಸ್ಥಿತಿ ೪ ಚಿತ್ರಗಳಿಂದ ಕೂಡಿದ್ದು	,,	೦—೧—೬
೧೭	ಜಾತಿಪದ್ಧತಿ		೦—೨—೬

ವಿ. ಪಿ. ಮೂಲಕ ತರಿಸಿಕೊಳ್ಳಬಹುದು.

ಮ್ಯಾನೇಜರ್, ಸಿ. ಎಲ್. ಎಸ್. ಬುಕ್ ಡಿಪೋ,

ಮೈಸೂರು.

ಮೇಲಿನ ಪುಸ್ತಕಗಳನ್ನು ಬಿಡಿಯಾಗಿಯೂ ತರಿಸಿಕೊಳ್ಳಬಹುದು. ಆದರೆ ಕಮಿಷನ್ ದೊರೆಯುವದಿಲ್ಲ.

P. SUBBAROY'S

World Renowned and most Efficacious

Ayurvedic Medicines

ಪಿ ಸುಬ್ಬರಾಯಿಯವರ

ಲೋಕಪ್ರಸಿದ್ಧವಾದ ಮತ್ತು ಅತ್ಯಂತ ಗುಣಕಾರಿಯಾದ

ಆಯುರ್ವೇದ ಔಷಧಗಳು

11 17

೧ ಪುಷ್ಟಿರಸಾಯನ —ಇದರ ಸೇವನೆಯಿಂದ ನರಗಳ ಸಂಬಂಧವಾದ ಮತ್ತು ಇತರ ವಿಧವಾದ ಎಲ್ಲಾ ಶರೀರದ ದುರ್ಬಲಗಳು ಹೋಗಿ, ಹೊಟ್ಟೆಯಲ್ಲಿ ಅಗ್ನಿ ಉಂಟಾಗಿ, ದೇಹವು ಪುಷ್ಟಿಯೊಂದುವದು ಪುಷ್ಟಿಯನ್ನು ಕಳೆದುಕೊಂಡ ಚಿಕ್ಕವಯಸ್ಸಿನವರಿಗೆ ಇದು ಅತ್ಯ ಔಷಧವು ಇದರಿಂದ ಶರೀರದ ಪ್ರತಿ ಅವಯವದ ನೋವೂ, ಅಶಕ್ತಿಯೂ ಹೋಗಿ, ಪುಷ್ಟಿಯೂ, ಬಲವೂ ಉಂಟಾಗುವವು ಪೆಟ್ಟಿಗೆ ೧ಕ್ಕೆ ರೂ ೨ ವಿ ಪಿ ಛಾರ್ಜಿ ೩ ಆಣೆ.

೨ ಅತ್ಯುತ್ತಮವಾದ ಕಸ್ತೂರಿ —ಕಾಶ್ಮೀರದಿಂದ ತರಿಸಿರುವದು ಅತ್ಯುತ್ತಮವಾದದ್ದು ಮತ್ತು ಒಂದೇ ರೀತಿ ಇರತಕ್ಕದ್ದು ತೋಲಾ ೧ಕ್ಕೆ ರೂ ೩೮ ಚಿಲ್ಲರೆಯಾಗಿ ಒಂದು ರೂಪಾಯಿಗೆ ೨ ಬೇಳ ಕೊಡುತ್ತದೆ ವಿ. ಪಿ ಛಾರ್ಜಿ ಅಲಾಯಿದ

೩ ಸುಗಂಧ ನಶ್ಯಪುಡಿ —ಈ ನಶ್ಯಪುಡಿಯು ಬಹಳ ಸುವಾಸನಾ ಯುಕ್ತವಾಗಿರೋಣದರಿಂದ ಇದನ್ನೇ ಪ್ರತ್ಯೇಕವಾಗಿ ಹಾಕಿಕೊಳ್ಳಬಹುದು ನೀವು ದಿನವಹಿ ಹಾಕಿಕೊಳ್ಳುವ ಸಾಮಾನ್ಯ ನಶ್ಯಕ್ಕೆ ಈ ಸುಗಂಧಪುಡಿಯಲ್ಲಿ ಒಂದೆರಡು ಚಿಟಿಕೆಯ ಷ್ಟನ್ನು ಉಪಯೋಗಕ್ಕೆ ಹೀಗೆ ಬೆರಳು ಮಾಡಿದರೆ ನಶ್ಯವು ಬಹು ಸುವಾಸನೆಯುಳ್ಳದಾಗಿಯೂ ಮನೋಹರವಾಗಿಯೂ ಆಗುವುದು ಇದರಿಂದ ನಶ್ಯಹಾಕಿಕೊಳ್ಳುವವರ ಬಳಿ ಬರುವ ಕಾಣವಾದ ಕೆಟ್ಟವಾಸನೆ ಇರುವುದೇ ಇಲ್ಲ ಸುವಾಸನೆಯು ಬಹಳ ಹೊತ್ತು ಇರುತ್ತದೆ ಈ ಪುಡಿ ಬೆರಸಿದ ನಶ್ಯ ಬಹಳ ಕಾಲದ ತನಕ ಕೆಡುವುದಿಲ್ಲ ಇಂಥಾ ನಶ್ಯಹಾಕಿಕೊಂಡಲ್ಲಿ ಶೀತ, ಅರೆತಲೆನೋವು, ವಾತ ಮೊದಲಾದವು ನಿವಾರಣೆಯಾಗುತ್ತವೆ ಆದಾಗ್ಯೂ ನಶ್ಯಹಾಕಿಕೊಳ್ಳಬೇಕೆಂಬ ಇಚ್ಛೆಯನ್ನು ಕಡಮೆಮಾಡುವುದು ಇದರಲ್ಲಿ ನಮಸಾಗರ ಖಂಡಿತವಾಗಿ ಸೇರಿರುವುದಿಲ್ಲ ಇಂಥಾ ಒಂದು ಡಬ್ಬಿ ನಶ್ಯವು ಒಂದು ತಿಂಗಳ ವರಿಗೆ ಬರುತ್ತೆ ಕ್ರಯ ಒಂದು ಡಬ್ಬಿಗೆ ೪ ಆಣೆ ೧ ರಿಂದ ೩ ಡಬ್ಬಿ ತನಕ ವಿ ಪಿ ಛಾರ್ಜಿ ೩ ಆಣೆ ಹೆಚ್ಚು ವಿ ಪಿ ಛಾರ್ಜಿ ೪ ರಿಂದ ೬ ಡಬ್ಬಿ ತನಕ ೫ ಆಣೆ. ೭ ರಿಂದ ೧೨ ಡಬ್ಬಿ ವರೆಗೆ ವಿ ಪಿ ಛಾರ್ಜಿ ೩ ಆಣೆ

೪ ರಕ್ಷಾಮೃತಂ—ಸಸ್ಯವರ್ಗಗಳಲ್ಲಿ ಸೇರಿದ ಅನೇಕ ಅಪೂರ್ವ ಮೂಲಿಕೆಗಳಿಂದ ಮಾಡಲ್ಪಟ್ಟಿರುವ ಈ ಚೂರ್ಣವು ಕಾಫಿ ಟೀಯಲೆಗೆ ಬದಲಾಗಿ ಉಪಯೋಗಿಸುವುದಕ್ಕೋಸ್ಕರವೇ ತಯಾರುಮಾಡಲ್ಪಟ್ಟಿರುತ್ತದೆ. ಕಾಫಿ ಟೀಯಲೆಗಳಲ್ಲಿರುವ ದುರ್ಗುಣಗಳು ಇದಕ್ಕಿಲ್ಲ,

ಕಾಫಿ ಪುಡಿಯನ್ನು ಯಾವ ಕ್ರಮದಲ್ಲಿ ಉಪಯೋಗಿಸುತ್ತೇವೆಯೋ ಆ ಕ್ರಮದಲ್ಲಿಯೇ ಇದನ್ನೂ ಉಪಯೋಗಿಸಿದರೆ ವಿಶೇಷ ರುಚಿಕರವಾದ ಪಾನವಾಗುವುದು ಶಿಶುಗಳು ಮೊದಲುಗೊಂಡು ವೃದ್ಧಾಪ್ಯದಲ್ಲಿರುವವರ ವರೆಗೆ ಎಲ್ಲಾ ವಯಸ್ಸಿನ ಸ್ತ್ರೀಪುರುಷರೂ ಉಪಯೋಗಿಸಬಹುದಾಗಿದೆ

ಜ್ವರ, ಸನ್ನಿ ಬಸರು ಹೆರಿಗೆ, ವಾಂತಿಭೇದಿ, ಈ ಮೊದಲಾದವುಗಳು ಸಂಭವಿಸಿರುವ ಕಾಲಗಳಲ್ಲಿಯೂ ಈ ರಕ್ಷಾಮೃತ ಚೂರ್ಣದ ಕಷಾಯವನ್ನು ಹಾಲನ್ನು ಬೆರಸಿಯಾಗಲಿ ಬೆರಸದೆಯಾಗಲಿ ಸಮಯಾನುಸಾರವಾಗಿ ಸೇವಿಸಿದವರ್ಜನರನ್ನು ಸಮಸ್ತ ವ್ಯಾಧಿಗಳಿಂದಲೂ ಖಂಡಿತವಾಗಿ ಬಿಡುಗಡೆ ಮಾಡುವುದಲ್ಲದೆ, ಯಾವದೊಂದು ರೋಗವೂ ಕಾಲಿಟ್ಟಿಕೊಳ್ಳದಂತೆ ಕಾಪಾಡುವುದು ಪಿತ್ತವಾಯುವು, ಗೂಲ್ಮ ಉಬ್ಬಸವು ಕ್ಷಯವು, ಅಜೀರ್ಣವು, ಮಲಬದ್ಧತೆಯು, ತಲೆನೋವು ಈ ಮೊದಲಾದ ರೋಗಗಳು ನಿವಾರಣೆಯಾಗುತ್ತವೆ ಪ್ರಾಣಾಧಾರವಾಗಿ ಇರುವಂಥಾ ರಕ್ತವನ್ನು ಶುದ್ಧಿಮಾಡಿ, ಧಾತುವನ್ನು ವೃದ್ಧಿಪಡಿಸಿ, ದೇಹಾರೋಗ್ಯವನ್ನು ಕೊಡುತ್ತದೆ ಅಗ್ನಿಮಾಂದ್ಯ ಉಳ್ಳವರಿಗೂ, ಮಧುಮೂತ್ರ ಮತ್ತು ಅತಿಮೂತ್ರ ರೋಗಿಗಳಿಗೂ ವಿಶೇಷ ಅಪೂರ್ವವಾದಂಥಾ ಚೂರ್ಣವು ಇದನ್ನು ಬಿಟ್ಟರೆ ಬೇರೊಂದಿಲ್ಲ

ಇದನ್ನು ಕ್ರಮಾನುಸಾರ ತಪ್ಪದೆ ಉಪಯೋಗಿಸುತ್ತಾ ಬಂದರೆ ಮಧುಮೂತ್ರ ರೋಗಿಗಳ ಶರೀರದಿಂದ ಹೊರಡುವ ಬೆವರಿನಲ್ಲಿ ರತಕ್ತ ಸಕ್ಕರೆಯನ್ನೂ ವಿಶೇಷವಾದ ಬೆವರನ್ನೂ ಕಡಿಮೆ ಮಾಡಿ, ಮೂತ್ರರೋಗದ ಬೇರನ್ನೇ ನಿರ್ಮೂಲ ಮಾಡುವುದು ದೇಹದ ಉಷ್ಣವನ್ನು ಶಾಂತಿಮಾಡುವುದು, ಮೆದುಳನ್ನು ಬಲಪಡಿಸಿ ಜ್ಞಾಪಕಶಕ್ತಿಯನ್ನು ವೃದ್ಧಿಗೊಳಿಸುವದು ವಿದ್ಯಾರ್ಥಿಗಳು, ವಕೀಲರು, ಉದ್ಯೋಗಸ್ಥರು, ವಿರೋಧಕಾರಿಯಾದ ಗುಣವುಳ್ಳ ಕಾಫಿ, ಟೀಯಲೆಯನ್ನು ಖಂಡಿತವಾಗಿ ಬಿಟ್ಟು, ಈ ರಕ್ಷಾಮೃತ ಚೂರ್ಣವನ್ನೇ ಉಪಯೋಗಿಸುತ್ತಾ ಬಂದಲ್ಲಿ ಇದು ಅಪೂರ್ವವಸ್ತುವಾಗಿ ಪರಿಣಮಿಸುವುದು ಇಪ್ಪತ್ತು ದಿವಸಗಳಿಗೆ ಸಾಕಾಗುವಷ್ಟು ಚೂರ್ಣವುಳ್ಳ ಡಬ್ಬಿ ೧ಕ್ಕೆ ಕ್ರಯ ೬ ಆಣೆ ವಿ ಪಿ ಛಾರ್ಜಿ ೩ ಆಣೆ ಹೆಚ್ಚಾಗುವುದು ಮುಂಗಡ ೮ ಆಣೆ ಕಳುಹಿಸಿದವರಿಗೆ ಒಂದು ಡಬ್ಬಿ ಚೂರ್ಣ ಕಳುಹಿಸಲ್ಪಡುತ್ತೆ

ಕಾಗದವನ್ನು ಇಂಗ್ಲಿಷ್ ಅಥವಾ ತಮಿಳಿನಲ್ಲಿ ಬರೆಯಿರಿ.

Appl, to —P. SUBBAROY

Porto Novo, South Arcot

ವಿಳಾಸ.—ಪಿ. ಸುಬ್ಬರಾಯರ್,

ಪೋರ್ಟೊನೋವೋ, ದಕ್ಷಿಣ ಆರ್ಕಾಟ್ ಜಿಲ್ಲಾ.

ರಬ್ಬರ್ ಸ್ಟಾಂಪುಗಳು.

43 3

ನಮ್ಮ ಕಂಪನಿಯಲ್ಲಿ ತಯಾರುಮಾಡಲ್ಪಡುವ ಇಂಗ್ಲಿಷ್ ಮಾದರಿ ರಬ್ಬರ್ ಸ್ಟಾಂಪುಗಳಿಗೆ ಪದಾರ್ಥವನ್ನು ಕಳುಹಿಸತಕ್ಕವರಿಗೆ ಆರ್ಡರ್ ಪ್ರಕಾರ ತಯಾರಿಸಿ ಕಳುಹಿಸುತ್ತೇವೆ ಬಾದಾಮಿ, ದಪ್ಪಂಡು, ಚಚ್ಚೌಕ, ಯಾವ ಆಕಾರವಾದರೂ ಅದರಲ್ಲಿ ರೂಪಕವಾದ ಅಕ್ಷರಗಳನ್ನು ಹಾಕಿ, ಸುಂದರವಾದ ರಬ್ಬರ್ ಸ್ಟಾಂಪು ೧, ಇಂಕಿ ಸೀಸಾ ೧, ರಬ್ಬರ್ ಸ್ಟಾಂಪು ಇರಿಸುವ ಪೆಟ್ಟಿಗೆ ೧, ಬ್ರಷ್ ೧, ಪ್ಯಾಡ್ ೧, ಇವುಗಳ ಸಂತ ಕ್ರಯ ರೂ ೧—೮—೦, ಪೋಸ್ಟೇಜು ೩ ಆಣೆ

ವಿಳಾಸ:—ಮ್ಯಾನೇಜರ್, ರಬ್ಬರ್ ಸ್ಟಾಂಪ್ ಮ್ಯಾನುಫ್ಯಾಕ್ಚರಿಂಗ್ ಕಂಪನಿ, ಪಾರ್ಕ್ ಟೌನ್, ಮದ್ರಾಸ್

ಬೆಂಗಳೂರು ಚಿಕ್ಕಬಳ್ಳಾಪುರ ಲೈಟ್ ರೈಲ್ವೆ ಕಂಪನಿ ಲಿಮಿಟೆಡ್ ನಿಯಮಿತ ಮೂಲಧನ.

46 2

ಷೇರು ಒಂದಕ್ಕೆ ೨೫ ರೂಪಾಯಿಗಳು ಬೆಲೆಯುಳ್ಳ ೬೮ ಸಾವಿರ ಷೇರುಗಳಿಂದಾಗ ೧೭ ಲಕ್ಷ ರೂಪಾಯಿಗಳು ಈ ಷೇರು ಮೊಬಲಗು ೪ ಆದವಾ ಷೇರು ಒಂದಕ್ಕೆ ಒಂದು ರೂಪಾಯಿಯಂತೆ ಅಪ್ಲಿಕೇಷನ್ ಫೀ ಕೊಟ್ಟು ೧೨ ಕಿಸ್ತುಗಳಲ್ಲಿ ಪಾವತಿ ಮಾಡತಕ್ಕದ್ದು ಈ ರೈಲಿನ ಸರ್ವೆ ಪೂರೈಸಲ್ಪಟ್ಟಿದೆ

ಶ್ರೀಮನ್ ಮೈಸೂರು ಮಹಾರಾಜರವರ ಸರ್ಕಾರದವರು ಈ ಕಂಪನಿಯ ಮೂಲಧನಕ್ಕೆ ನೂರಕ್ಕೆ ೪ ರೂಪಾಯಿಯಂತೆ ಬಡ್ಡಿ ಕೊಡಲು ತಾವು ಜಾಮೀನಾಗಿರಲು ಅನುಮತಿಯನ್ನು ಕಂಪನಿಗೆ ಲಿಖಿತ ಮೂಲಕ ತಿಳಿಸಿರುತ್ತಾರೆ

ಈ ಕಂಪನಿಯ ಷೇರುಗಳನ್ನು ಅಪೇಕ್ಷಿಸತಕ್ಕದವರು ಈ ಕೆಳಗೆ ರುಜು ಮಾಡಿರುವವರಿಗೆ ದರಖಾಸ್ತು ಮಾಡಿಕೊಳ್ಳಬೇಕು

ಈ ಕಂಪನಿಯ ಷೇರುಗಳನ್ನು ಕಮಿಷನಿಗೆ ಸಬ್ ಏಜಂಟರಾಗಿ ಬಿಕರಿಮಾಡಲು ಅಪೇಕ್ಷೆಯುಳ್ಳ ಖಾತರಿಯಾದ ಜನರು ಸದರಿ ಯವರಿಗೇನೆ ಬರೆದುಕೊಳ್ಳಬಹುದು

(ಸ್ವರ) ಬಿ ವಿ ರಾಮಸ್ವಾಮಿ ಶೆಟ್ಟಿ ಬಿ ಎ,

ಅಡ್ವೊಕೇಟ್ ಮತ್ತು ಬೆಂಗಳೂರು ಚಿಕ್ಕಬಳ್ಳಾಪುರ ಲೈಟ್ ರೈಲ್ವೆ ಕಂಪನಿಯ ಚೀಫ್ ಏಜಂಟ್,

ನಗರ್ತಪೇಟೆ, ಬೆಂಗಳೂರು ಸಿಟಿ

೫,೦೦೦ ಪವನ್ ಉಲ್ಲನ್ ದಾರ ಮಾತ್ರ ಇದೆ

40—3

೧ ಜೇಡಿಯಿರುವ ಫೈನ್ ಬ್ರಾಂಡ್ ೧ ಕ್ಕೆ				೧—೧೦—೦
೨ ಪರ್ಲ ಸುಪೀರಿಯರ	,,	,,	,,	೧—೧೪—೦
೩ ಸುಪೀರಿಯರ್	,,	,,	,,	೨—೦—೦
೪ ಸೊಮರಸೆಟ್	,,	,,	,,	೩—೪—೦

ಫೈನ್ ಟೀಬಿ ಪಾರ್ಸೆಲ್ ೧ ಕ್ಕೆ ೬—೦—೦ ಒಂದೇ ದಫಾ ೧೦ ಪಾರ್ಸೆಲ್ ತರಿಸಿಕೊಳ್ಳುವವರಿಗೆ ೬—೧೨—೦

ಹೊಸ ನಮೂನೆ ದೊಡ್ಡ ಸೈಜು ಪೋಸ್ಟು ಕಾರ್ಡುಗಳು

೧ ಸಿಂಗಲ್ ಕಲರ್ ೧೦೦ ಕ್ಕೆ ೦-೨-೬ ೧೦೦೦ ೧-೪-೦

೨ ಡಬಲ್ ಕಲರ್ ೧೦೦ ಕ್ಕೆ ೦-೩-೦ ೧೦೦೦ ೧-೧೦-೦

ವಿ ಪಿ. ಮೂಲಕ ತರಿಸಿಕೊಳ್ಳುವವರು ಮಾತ್ರ ೧೦೦ ಕ್ಕೆ ೨೫ ರಂತೆ ಮುಂಚಿತವಾಗಿ ಕಳುಹಿಸದ ಹೊರತು ವಿ ಪಿ ಮೂಲಕ ಕಳುಹಿಸಲಾರೆವು

ಯಲ್, ಯಂ. ಪೋರವಾಲ್ ಕಂಪನಿ, ಬೆಂಗಳೂರು ಸಿಟಿ.

ಕೊಡಗು ದೇಶದ ಶ್ರೇಷ್ಠವಾದ ಉತ್ಕೃಷ್ಟ ಕಾಫಿಯು.

ಪುಡಿಯಾಗಿ ಇರುವದು ಅಥವಾ ಆಗತಾನೆ ಹುರಿದದ್ದು.

ತಯಾರಾದ ಸ್ಥಳದಿಂದಲೆ ನೆಟ್ಟಗೆ ರವಾನಿಸಲ್ಪಡುವದು.

854

ವ್ಯಾಪಾರದ C E C C ಹೆಗ್ಗುರುತು

ಕಾಡುಕೋಣದ ತಲೆಯ ಮುದ್ರೆ ಇದೆ

ಸಂಪೂರ್ಣವಾಗಿ ಯಂತ್ರದಿಂದಲೆ ಸಿದ್ಧಪಡಿಸಿದ್ದು ಹೆಗ್ಗುರುತುಳ್ಳ ವಿಲಾಸದ ಚೀಟಿ ಸುತ್ತಿಲ್ಲದಿರುವವು ಸ್ವಚ್ಛವಾದವುಗಳಲ್ಲ. ಅವು ನಮ್ಮದಲ್ಲ, ಏಜಂಟರುಗಳು ಬೇಕು. ಅಂಥವರಿಗೆ ಅಲಾಯಿದ ದರ ಬರೆಯುವವರು ದಯಮಾಡಿಟ್ಟು ಈ ಪತ್ರಿಕೆಯ ಹೆಸರನ್ನು ಸೂಚಿಸಿ

ವಿಳಾಸ.—ಮ್ಯಾನೇಜರ್, ಮ್ಯಾಥಿಸನ್ಸ್ ಕಾಫಿ ವರ್ಕ್ಸ್, ಹುಣಸೂರು

ಮೈಸೂರು ಸೀಮೆಯಲ್ಲಿ ಪ್ಲೇಗಿನ ಸ್ಥಿತಿ

16—2—1905 ರಿಂದ 21—2—1905 ರ ವರೆಗೆ

ಸ್ಥಳ.	ಪ್ಲೇಗ್ ತಗಲಿದ್ದು	ಪ್ಲೇಗ್ ಸತ್ತದ್ದು	ಕೊ (ಡಿಸೆಂ…) ಈ ವರ್ಷದ ಸಂಖ್ಯೆ	
ಬೆಂಗಳೂರು ಪಟ್ಟಣ	21	12	69	[illegible]
ಮೈಸೂರು ,,	0	0	13	[illegible]
ಬೆಂಗಳೂರು ಡಿಸ್ಟ್ರಿಕ್ಟ್	12	7	76	[illegible]
ಮೈಸೂರು ,,	0	0	23	[illegible]
ಕೋಲಾರ್ ,,	1	2	31	[illegible]
ಕೋಲಾರ್ ಚಿನ್ನದ ಗಣಿಗಳು	18	7	20	[illegible]
ತುಮಕೂರು ಡಿಸ್ಟ್ರಿಕ್ಟ್	0	0	10	[illegible]
ಹಾಸನ (ಹೊರಗಿನದು)	0	0	4	1
ಚಿತ್ರದುರ್ಗ ,,	7	4	26	[illegible]
ಕಡೂರ್ ,,	0	0	14	[illegible]
ಶಿವಮೊಗ್ಗ ,,	10		13	[illegible]
ಜುಮ್ಲಾ	70	13	261	[illegible]

ಶಾಲಿವಾಹನ ಶಕ ವರುಷಂಗಳು ೧೮೨೮ ನೇ ವಿಶ್ವಾವಸು ಸಂವತ್ಸರದ ಫಾಲ್ಗುಣ ಶುದ್ಧ ತ್ರಯೋದಶಿ ಗುರುವಾರದಿಂದ ಫಾಲ್ಗುಣ ಬಹುಳ ಚೌತಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ

೧೯೦೬ ನೇ ಇಸವಿ ಮಾರ್ಚಿ

ತಾ	ವಾರ		ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಅರಬಿ ಧಮ ಮಾಸ
8	ಗುರು	*	ತ್ರಯೋ	3 33	ಪ್ತೂ	48 1	25
9	ಶುಕ್ರ		ಚತುರ್ದಶಿ	50 58	ಮ	47 56	26
10	ಶನಿ	‡	ಪೌರ್ಣಮಿ	47 48	ಪು	16 18	27
11	ರವಿ	|	ಪಾಡ್ಯ	43 [illegible]	ಉ	41 3	28
12	ಚಂದ್ರ		ಬಿದಿಗೆ	29 0	ಹ	40 50	29
13	ಕುಜ		ತದಿಗೆ	33-23	ಚಿ	37 8	1
14	ಬುಧ	,,	ಚೌತಿ	27 10	ಸ್ವಾ	33 18	2

* ಪ್ರದೋಷ

‡ ಕಾಮದಹನ, ಹೋಳಿಹಬ್ಬ ಹುಣ್ಣಿಮೆ ಪ್ರಸನ್ನ ನಂಜುಂಡೇಶ್ವರ

| ಕಾರ್ವಿಪಟ್ಟದ ಶ್ರೀನಿವಾಸ ಸ್ವಾಮಿ ರಥ

ಮಹಾವೈಪ್ರ) ಪಾಡ್ಯ ತ್ರಿಕಾಲ

ಪೇಟೇ ಧಾರಣೆ.

ವಿನಸಿ		ಮೈಸೂರು	ಬೆಂಗಳೂರು
ಕಷ್ಟಿ ಅಕ್ಕಿ ಪಲ್ಲ ೧ಕ್ಕೆ	ರೂ	೧೧-೧೨-೦	[illegible]
ಕೆಂಬೂತಿ ಅಕ್ಕಿ ಅವಲ್		೧೨-೦-೦	[illegible]
,, ದುಯಂ		೧೧-೮-೦	[illegible]
ಜಾಪಾಣಿ ಅಕ್ಕಿ		೯-೨-೦-೦	[illegible]
ಸಣ್ಣಕ್ಕಿ ಅವಲ್		೧೩ ೧೨ ೦	[illegible]
,, ದುಯಂ		೧೩-೬ ೦	[illegible]
ತೊಗರೀ ಬೇಳೆ ಪಲ್ಲ ೧ಕ್ಕೆ		೯ ೮-೦	[illegible]
,, ದುಯಂ		೯ ೪-೦	[illegible]
ಕೈರ್ ರಾಗಿ ಪಲ್ಲ ೧ಕ್ಕೆ		೬-೧೦ ೦	[illegible]
ಕಾರಾಗಿ		೬-೬ ೦	[illegible]
ಜೋಳ		೭-೩-೦	[illegible]
ಹಲಸಂದೆ ಪಲ್ಲ ೧ಕ್ಕೆ		೯ ೧೨-೦	[illegible]
ಬಿಳೀ ಅವರೆ		೩-೮ ೦	[illegible]
ಹೆಸರು		೧೦-೦ ೦	[illegible]
ಉದ್ದು		೧೨-೦-೦	[illegible]
ಕಡಲೆ		೧೧-೮-೦	[illegible]
ಎಳ್ಳು ಸೆ ೧೨೩ ಕ್ಕೆ		೧೮-೮-೦	[illegible]
ಹುರಳಿ		೭-೧೨-೦	[illegible]
ಹರಳು ೧೨೩ ಸೇರಿಗೆ		೧೯-೯-೩-೦	[illegible]
ಸೀಗೇಕಾಯಿ ಮಣ ೧ಕ್ಕೆ		೨ ೯-೨ ೦	[illegible]
ಮೆಣಸಿನಕಾಯಿ		೩-೮-೦	[illegible]
,, ದುಯಂ		೩ ೪ ೦	[illegible]
ಬೆಲ್ಲ ದೊಡ್ಡ ಅಚ್ಚು		೪-೪-೦	[illegible]
ಒಳ್ಳೆಣ್ಣೆ ಮಣ ೧ಕ್ಕೆ		೫-೪-೦	[illegible]
ಹರಳೆಣ್ಣೆ ,,		೪-೧೨-೦	[illegible]
ಕೊತ್ತುಂಬರಿ ಪಲ್ಲ ೧ಕ್ಕೆ		೧೦-೦-೦	[illegible]
ಉಪ್ಪು ,,		೭-೦-೦	[illegible]
ಹುಣಸೇ ಹಣ್ಣು		೦-೧೩-೦	[illegible]
,, ಹಳೇದು		೦-೮-೦	[illegible]
ತುಪ್ಪ		೧೩ ೪-೦	[illegible]
ಸೀಮೆಯೆಂಣೆ ಪಟ್ಟಿ ೧ಕ್ಕೆ		೫-೪-೦	[illegible]
ತೆಂಗಿನಕಾಯಿ ೧೦೦ ಕ್ಕೆ		೪-೦-೦	[illegible]
ಅಳಲೇಕಾಯಿ ಮಣ ೧ಕ್ಕೆ		೦-೧೨-೦	[illegible]
ಅಂಟ್ವಾಳದ ಕಾಯಿ ಮಣ ೧ಕ್ಕೆ		೦-೯-೨-೦	[illegible]
ಚಿನ್ನ (ಪೌನ್) ಸಾವರಿ		೧೫-೪-೦	[illegible]
,, ,, ಪಸಿಮೆ		೧೫-೩ ೦	[illegible]
,, ,, ಗಟ್ಟಿ ತೊಲ ೧ಕ್ಕೆ		೨೩-೧-೨-೦	[illegible]
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ		೭-೨-೦ ೦	[illegible]

Printed and Published by the Rev E W Thompson, B.A., the Proprietor and Manager, Wesleyan Mission Press, Mysore. 8/3/1906.

ವೃತ್ತಾಂತ ಪತ್ರಿಕೆ.

REGISTERED M. 20

ಕ್ರಯ ೧ ದುಡ್ಡು ಕ್ರಯ ೧ ದುಡ್ಡು

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಪುಸ್ತಕ ೧೯ ಮೈಸೂರು—ಸನ್ ೧೯೦೬ ನೇ ಇಸವಿ ಮಾರ್ಚಿ ತಾರೀಖು ೧೫ ನೇ ಗುರುವಾರ. ಸಂಚಿಕೆ ೪೧

ನೋಡಿ—ಮತ್ತೊಂದು ಹೊಸಪುಸ್ತಕವು—ಬಹು ರಸಿಕವಾಗಿದೆ. ಅರೇಬಿಯನ್ ನೈಟ್ಸ್ ಅಥವಾ ಯುವನಯಾಮಿನೀ ವಿನೋದ ಕಥೆಗಳು

37.5

ಎಂಬ ಮಹಾಪ್ರಸಿದ್ಧವಾದ ಪುಸ್ತಕವು ತಿಳಿಗನ್ನಡ ಭಾಗದಲ್ಲೀಗ ಪ್ರಕಟಿಸಲ್ಪಟ್ಟಿದೆ. ಡೆಮ್ಮಿ ಅಷ್ಟಪತ್ರ ಸುಮಾರು ಎಪ್ಪತ್ತು ಪುಟಗಳುಳ್ಳದ್ದಾಗಿಯೂ ಆ ಬಾಲವೃದ್ಧರಿಗೆ ಪ್ರೋತ್ಸಾಹಕರವಾಗಿಯೂ, ಮಹಾ ರಸಿಕವಾಗಿಯೂ ಇರುವಾಗಿರುವ ಈ ಪುಸ್ತಕದ ಅಭಿರುಚಿಯನ್ನು ವಾಚಕರು ಸ್ವಾನುಭವದಿಂದಲೆ ಗ್ರಹಿಸಿ ತಿಳಿದುಕೊಳ್ಳುವರು. ಭಾಷೆಯು ಬಹು ಸರಳವಾಗಿರುವದು. ಮತ್ತು ಇದನ್ನು ಬರೆಯುವದಕ್ಕೆ ಸುಮಾರು ಎರಡು ವರ್ಷಗಳು ಹಿಡಿದಿವೆ. ಪುಸ್ತಕವನ್ನು ಒಂದಾವರ್ತಿ ಓದಿದಮೇಲೆ ಅದನ್ನು ಪುನಃ ಓದುವಂತೆ ಅದು ಮನಸ್ಸನ್ನು ಆಕರ್ಷಿಸುವದು. ಇದರ ಬೆಲೆ ಎರಡು ರೂಪಾಯಿ ಮಾತ್ರವೇ ಹಾಸಲು ಎರಡು ಆಣೆಗಳು. ವಿ. ಪಿ. ಮೂಲಕ ತರಿಸಿಕೊಂಡರೆ ಎರಡು ರೂಪಾಯಿ ಮೂರು ಆಣೆಗಳಾಗುವವು. ಹೊಸದರೂ ಬಡವರೂ ಎಲ್ಲರೂ ಕೊಂಡು ಓದಿ ಪ್ರಯೋಜನವನ್ನು ಪಡೆಯಲೆಂದು ಇಷ್ಟು ದೊಡ್ಡಪುಸ್ತಕವನ್ನು ಇಷ್ಟು ಸುಲಭ ಕ್ರಯಕ್ಕೆ ಮಾರುತ್ತೇವೆ.

ಪುಸ್ತಕವು ದೊರಕುವ ಸ್ಥಳ

ಸಿ. ಎಲ್. ಎಸ್. ಬುಕ್ ಡಿಪ್ಪೋ,

ಮೈಸೂರು.

ಇಂಡಿಯಾ ವ್ಯವಸಾಯ ಮತ್ತು ಸಹಾಯಿಕ ಆಫೀಸು.

14-25

[೧೯೦೩ ರಲ್ಲಿ ಸ್ಥಾಪಿತವಾದದ್ದು.]

ಈ ಆಫೀಸಿನ ಉದ್ದೇಶವೇನಂದರೆ—ಯಾವ ಜಾತಿಯವನೇ ಆಗಲಿ ಯಾವನೇ ಆಗಲಿ ಈ ಆಫೀಸಿನ ಚಂದಾದಾರನಾಗಿ ಅವರ ಭರವಸ ಪತ್ರವನ್ನು ಹೊಂದಿದ್ದರೆ ಅವರ ಮರಣಾನಂತರ ಅವರ ಕುಟುಂಬದವರಿಗೆ ಹಣವು ಕೊಡಲ್ಪಡುವದು.

ಈ ಆಫೀಸಿನ (A) ತರಗತಿಗೆ ಸೇರಿದವರು ಪಡೆಯಬೇಕೆಂದಿರುವ ಪ್ರತಿ ೧೦೦೦ ರೂಪಾಯಿಗಳ ಮೊಬಲಗಿಗಾಗಿ ಮಾಹೆಯಾನಾ ಒಂದು ರೂಪಾಯಿಯ ಪ್ರಕಾರ ಒಟ್ಟು ರೂ ೫೩ ನ್ನು ಮಾತ್ರವೇ ಕೊಡಬೇಕಾಗುವದು.

ಆಫೀಸಿನವರು ಚಂದಾದಾರರಿಂದ ವಸೂಲಾದ ಮೊಬಲಗನ್ನು ಯೋಗ್ಯರೀತಿಯಾಗಿ ನಡೆಸಲ್ಪಡುವ ವ್ಯವಸಾಯಕ್ಕೆ ಹಾಕಿ ಅದರಿಂದ ಬರುವ ಲಾಭದಿಂದಲೇ ಚಂದಾದಾರರ ಸಹಾಯದ್ರವ್ಯವನ್ನು ಕೊಡಲು ಈ ವ್ಯವಸಾಯ ನಿಮಿತ್ತವಾಗಿ ನಾವು W.I.P. ರೇಲ್ವೆ ಪಕ್ಕದಲ್ಲಿರುವ "ಕೊಲ್ಲಂ ಎಸ್ಟೇಟ್" ಎಂಬ ಸರ್ವೋತ್ಕೃಷ್ಟವಾದ ಭೂಮಿಯನ್ನು ೯೯ ವರ್ಷಕ್ಕೆ ಸ್ವಂತವಾಗಿ ಪಡೆದಿದ್ದೇವೆ. ಈ ಭೂಮಿಯು ಒಂದು ಹೊಳೆಯಿಂದ ಕಾಲುವೆ ಮಾಡಿ ನೀರನ್ನು ತಂದುಕೊಂಡಿರುವದರಿಂದ ಫಸಲು ಕಡಮೆಯಾಗುವದೆಂಬ ಭಯವೇ ಇಲ್ಲ.

ಈ ಆಫೀಸಿನಲ್ಲಿ ಭರವಸಪತ್ರವನ್ನು ಪಡೆದಿರುವವರು ಚಂದಾದಾರರು ಮಾತ್ರ ಇದ್ದಾರೆ. ಆದಾಯ ನಷ್ಟಗಳಿಗೆ ಭಾಗಿಗಳಾದ ಷೇರುದಾರರು ಯಾರೂ ಇರುವದಿಲ್ಲ. ಆದರೂ ಅವರ ಹಣಕ್ಕೆ ನಮ್ಮ ಭೂಸ್ಥಿತಿಯು ಜಾಮೀನಾಗಿರುತ್ತದೆ.

ಚಂದಾ ಮೊಬಲಗನ್ನೆಲ್ಲಾ ಪಾವತಿ ಮಾಡಿ ಭರವಸಪತ್ರವನ್ನು ಪಡೆಯುವ ಯಾವ ಚಂದಾದಾರನಿಗಾಗಲಿ ಆಫೀಸಿನಿಂದ ಬರತಕ್ಕ ಲಾಭ ತೃಪ್ತಿಕರವಾಗಿ ಕಂಡುಬಾರದಿದ್ದರೆ ತಾನು ಸಲ್ಲಿಸಿರುವ ಚಂದಾ ಮೊಬಲಗೆಲ್ಲಾ ವಾಪಸುಪಡೆಯಬಹುದು.

ಈ ಆಫೀಸಿಗೆ ಸಬ್ ಏಜಂಟುಗಳು ಬೇಕಾಗಿದೆ. ವಿವರವಾಗಿ ಅಪೇಕ್ಷಿಸುವವರು ಅರ್ಧಾಣೆ ಸ್ಟ್ಯಾಂಪಿಟ್ಟು ಕೆಳಗಿನ ವಿಳಾಸಕ್ಕೆ ಇಂಗ್ಲಿಷಿನಲ್ಲಿ ಬರೆದುಕೊಳ್ಳತಕ್ಕದ್ದು

ವಿಳಾಸ:—The Manager,

India Agricultural and Helping Office,

Vengurla Post, Bombay Presidency.

WANTED WILD ANIMALS.

ಬೇಕಾಗಿದೆ. ಬೇಕಾಗಿದೆ.

5-48

ಎಲ್ಲಾ ಬಗೆಯ ಕಾಡು ಮೃಗಗಳು. ಮೈಸೂರು ಜೂ ಸೂಪರಿಂಟೆಂಡೆಂಟ್ ಮಿ|| ಹ್ಯೂಜಸ್ ರವರು ಕೊಂಡುಕೊಳ್ಳುವರು.

Apply to—Mr. Hughes, Mysore Zoo.

"ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ.

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜಂಟ್ರ ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ (ಅಡ್ವಾನ್ಸು) .. .. .. ರೂ. ೧—೦—೦

ಪರಸ್ಥಳದವರು ಆಫೀಸಿನಿಂದ ಅಂಚೆಯ ಮೇಲೆ ತರಿಸಿಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಹಾಸಲ್ ಸೇರಿ .. .. ರೂ. ೧—೧೪—೦

" " " " " ೦—೧೫—೦

ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು.

ಪತ್ರ ವಿಳಾಸ:—ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು.

ಜ್ವರಹರಿ. 29 6



ಇದು ಸಾಧಾರಣ ಜ್ವರ, ಪಕ್ಷೀಜ್ವರ, ವೇಳೆಜ್ವರ, ಪಿತ್ಥಜ್ವರ, ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮರಾಮತ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್. ಟಿ. ವೆಂಕಟಪತಿ ಅಯ್ಯಂಗಾರವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨೦ ಡೋಸಿನ ಸೀಸೆಯು ತೀರಿಹೋಯಿತು ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣ ಹೊಂದಿರುವರು ಇನ್ನೂ ಜನಗಳು ಕಾಹಿಲೇ ಬೀಳುತ್ತಿರುವ ಕಾರಣ ದಯವಿಟ್ಟು ಇನ್ನೊಂದು ೨೦ ಡೋಸಿನ ಸೀಸೆಯನ್ನು ವಿ. ಪಿ. ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದ್ದಾರೆ

ಕ್ರಯ:—ಸೀಸೆ ೧ ಕ್ಕೆ ೮ ಆಣೆ, ೧ ರೂ., ೧—೮ ರೂ.; ರೂ. ೨—೧೨ ಆ., ೧೧ ರೂ.; ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು.

ಬಿ ಮಂ ಕ ಪ್ಲೂ ರ.

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆಕಳೆಯುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ ವ್ಯಾಧಿಗಳಿಗೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು. ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಯೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ. ಕ್ರಯದ ದರವು ಜ್ವರಹರಿ ಎಂಬ ಔಷಧದಂತೆಯೇ ಸೀಸೆಗಳಲ್ಲಿ ಕೊಡಲಾಗುವದು.

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಹೆಪ್ರಿಯ ಬಿಮಂ ಕರ್ಪೂರವನ್ನು ನಾನೂ ನನ್ನ ತಾಬೇದಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣ ಭೇದಿ, ಅಜೀರ್ಣ ರೋಗಿಷ್ಠರಿಗೆ ಕೊಡುತ್ತೇವೆ. ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ. ಇದು ಬಹು ಒಳ್ಳೇ ಔಷಧವೆಂತ ಬರೆದಿದ್ದಾರೆ.

ಈ ನಾಲ್ಕು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಬಾಜಾರುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇಲ್ಲದೆ ಕೆಳಗಿನ ವಿಳಾಸದಾರರಲ್ಲಿ ವಿಶೇಷ.—

ಹೆಪ್ರಿಯವರ ಗಾರ್ಟ್ ಕಂಪನಿ ಔಷಧಗಳ ಕಂಪನಿ,

ಕಲ್ಕತ್ ಸ್ಟ್ರೀಟ್ ಮದ್ರಾಸ್.

50-3 ಪರಿಮಳ ನಶ್ಯದಪುಡಿ

ಪರಿಮಳ ನಶ್ಯದಪುಡಿ ಡಬ್ಬಿ ೧ ಕ್ಕೆ ...... 0—9—0
ಟಪಾಲು ಖರ್ಚು .... 0—3—0
ಸಾದಾ ನಶ್ಯದಪುಡಿ ಡಬ್ಬಿ ೧ಕ್ಕೆ .... 0—6—0
ಟಪಾಲು ಖರ್ಚು .... 0—3—0

ಈ ಪುಡಿಯನ್ನು ಮೇಲಾದ ಹೊಗೆಸೊಪ್ಪಿನಿಂದ ಸುವಾಸನೆಯುಳ್ಳದ್ದಾಗಿ ತಯಾರು ಮಾಡಲ್ಪಟ್ಟಿರುತ್ತೆ. ಇದರ ಸುವಾಸನೆ ಒಂದು ಸೇರು ಸಾಧಾರಣ ಪುಡಿಯಲ್ಲಿ ಸ್ವಲ್ಪವನ್ನು ಹಾಕಿ ಕಲಸಿದರೆ ಪುಡಿಯಲ್ಲಾ ಗಮಗಮಿಸುತ್ತೆ. ಉಪಯೋಗಿಸುವವರಿಗೆ ಸುವಾಸನೆಯನ್ನೂ ಆನಂದವನ್ನೂ ಉಂಟು ಮಾಡುತ್ತೆ.

ತಲೆನೋವು, ಪೀನಸ, ಜಲದೋಷ, ಶಿರೋವ್ಯಾಧಿ ಇವುಗಳನ್ನು ತಪ್ಪದೆ ಪರಿಹರಿಸುತ್ತೆ. ಮಾದರಿಗೆ ೧ ಡಬ್ಬಿಯನ್ನು ತರಿಸಿ ಪರೀಕ್ಷಿಸಿರಿ.

☞ ಪ್ರತಿ ೧ ಡಬ್ಬಿಯಲ್ಲಿ ೯ ತೊಲ ನಶ್ಯದಪುಡಿ ಇರುತ್ತೆ.

ಮಾನೇಜರ್, ಧರ್ಮ ವೈದ್ಯಶಾಲಾ,

69 ಟೈನಾಪಜಾರು ರೋಡ್, ಸಾಹುಕಾರ್ ಪೇಟೆ, ಮದರಾಸು.

ಹೋ ಮೋ ಸಿ ಯಾ.

ತಕ್ಷಣ ಪರಿಹಾರ



ಕಗಲುತ್ತಲೇ ನೋವು ವಾಸಿಯಾಗುತ್ತೆ.

ಈ ಔಷಧಿಯು ಮನೆ, ಅರಮನೆ, ಕಾರ್ಖಾನೆ, ಆಸ್ಪತ್ರೆ, ಪೋಲೀಸ್ ಠಾಣಾ, ವಿದ್ಯಾಶಾಲೆ, ಕೋರ್ಟು, ಕಛೇರಿ, ಮುಂತಾದ ಸ್ಥಳಗಳಲ್ಲೆಲ್ಲಾ ಇದ್ದೇ ಇರಬೇಕು. ಇದಕ್ಕೆ ಸಮಾನವಾದ ಔಷಧ ಮತ್ಯಾವದೂ ಇಲ್ಲವೆಂಬುವದು ಲೋಕಪ್ರಸಿದ್ಧವಾಗಿದೆ.

ಈ ತೈಲವು ಪತ್ಯಾಲದಲ್ಲಿ ದೇವರಾಶಿಗಳಿಗೆ ಮಹತ್ತಾಗಿ ಸಿಕ್ಕತಕ್ಕ ಔಷಧ. ಇದನ್ನು ಉಪಯೋಗಿಸಿದ ದೊಡ್ಡ ಮನುಷ್ಯರು, ಡಾಕ್ಟರುಗಳು, ಮುಂತಾದವರು ಇದರ ಗುಣವನ್ನು ಹೊಗಳಿ ಸರ್ಟಿಫಿಕೇಟುಗಳನ್ನು ಕೊಟ್ಟಿದ್ದಾರೆ. ನೋವು ಕಂಡರೆ ಇದನ್ನು ಹಚ್ಚಿದ ಕೂಡಲೇ ವಾಸಿಯಾಗುವದು.

ಈ ತೈಲವು ಅರೆ ತಲೆನೋವು, ಸೊಂಟನೋವು, ಪಾರ್ಶ್ವವಾಯು, ಮೂಲವ್ಯಾಧಿ, ಉಬ್ಬಸ, ವಾಯುಗಳು, ನರ ಹೊರಳುವದು, ಉಳುಕು, ಕೀಲುವಾಯು, ಗುಳ್ಳೆಗಳು, ಹಲ್ಲುನೋವು, ಮುಖನೋವು, ಊದುಗಳು, ಗಡ್ಡೆಗಳು, ರಣಗಳು, ಮಚ್ಚೆ, ಕಡಿತ, ಸೊಳ್ಳೆ ಮತ್ತು ಚೇಳು ಕಚ್ಚಿದ್ದು, ಚಿಪ್ಪಿರುವದು, ಬೆಂಕಿಯಲ್ಲಿ ಸುಟ್ಟುಕೊಂಡದ್ದು, ಕತ್ತಿ ಗಾಯ—ಇವೇ ಮೊದಲಾದ ನಾನಾ ಬಾಧೆಗಳನ್ನು ಹುಟ್ಟಡಗಿಸುತ್ತದೆ. ರಾತ್ರಿ ಹಚ್ಚಿಕೊಂಡು ಮಲಗಿದರೆ ಸೊಳ್ಳೆ ಹತ್ತಿರ ಸೇರುವದಿಲ್ಲ.

ಕ್ರಯ:— ಸಣ್ಣ ಡಬ್ಬಿ ೧ ಕ್ಕೆ ೧ ರೂ., ದೊಡ್ಡದಕ್ಕೆ ರೂ. ೨—೮ ಆ.; ಒಂದೇ ಸಲ ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ ಬಿಡುತ್ತಾರೆ. ರೂ. ೨—೮ ಆಣೆ ಬಾಟ್ಲು ಡಬ್ಬಿಯಲ್ಲಿ ೧ ರೂ. ಡಬ್ಬಿಯಲ್ಲಿರುವದಕ್ಕಿಂತ ೪ ರಷ್ಟು ಹೆಚ್ಚು ಔಷಧವಿರುತ್ತೆ. ರೂ. ೨—೮ ಆ. ಈ ಡಬ್ಬಿಯನ್ನು ತರಿಸಿಕೊಳ್ಳುವವರಿಗೆ ಟಪ್ಪಾಲ್ ಖರ್ಚು ಮಾಫಿ ಬಿಡುತ್ತೆ.

ಹೋಮೋಸಿಯಾ ಯಂಬ್ರೋಕೇಷನ್

ಈ ತೈಲವು ಹಳೇ ನೋವುಗಳಿಗೆ ಉಪಯೋಗಿಸತಕ್ಕದ್ದು. ಚರ್ಮ ಒಡೆದ ಕಡೆ ಇದನ್ನು ಹಚ್ಚಕೂಡದು. ಇದರಲ್ಲಿ ಹೋಮೋಸಿಯದ ಗುಣಗಳು ಬಹು ತೀಕ್ಷ್ಣವಾಗಿ ಇರುತ್ತವೆ. ಅದಕ್ಕಿಂತಲೂ ಇದರಲ್ಲಿ ಇನ್ನೆರಡು ಗುಣಗಳುಳ್ಳ ಹೊಸ ಭಾಗವಿರುತ್ತೆ. ಇದನ್ನು ಚರ್ಮವು ಬಹು ಬೇಗನೆ ಹೀರಿಕೊಳ್ಳಬಲ್ಲದು. ಡಬ್ಬಿಗಳಲ್ಲಿ ತುಂಬಿ ೮ ಆಣೆಗೂ, ೧ ರೂ. ಗೂ ಒಂದರಂತೆ ಮಾರಿ ಮಾಡಲ್ಪಡುವದು. ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫ಼. ಎಲ್ಲಾ ಶಾಪುಗಳಲ್ಲಿಯೂ ದೊರೆಯುವದು

ಈ ಔಷಧಗಳ ವಿವರಣೆಯೂ, ಸರ್ಟಿಫಿಕೇಟುಗಳೂ ಉಳ್ಳ ನೋಟೀಸುಗಳನ್ನು ಅಪೇಕ್ಷಿಸಿದರೆ ಕಳುಹಿಸುವೆವು.

ವಿಳಾಸ:—ಹೋಮೋಸಿಯಾ ಕಂಪೆನಿ. ೨೪ ಸೆಕೆಂಡು ಬೀಚ್ ಲೈನ್. ಮದರಾಸ್.

ಪ್ರಿಂಟಿನ ಯಂತ್ರ ಕ್ರಯಕ್ಕೆ ಬಂದಿದೆ.

41-3

ಡಬ್ಬಲ್ ಡಿಮ್ಮಿ ಸೈಜು. ಬಹು ಜಾಗ್ರತೆಯಾಗಿ ಪ್ರಿಂಟುಮಾಡತಕ್ಕದ್ದು; ಉರಳೆಗಳು, ಛೇಸುಗಳು ಚಕ್ರಗಳು ಎಲ್ಲಾ ಸೇರಿ ಕೊಡಬಾಗುತ್ತೆ. ಇದಕ್ಕೆ ಬಂದರದು ಕಡೆ ಸ್ವಲ್ಪ ರಿಪೇರಿ ಆಗಬೇಕಾಗಿರುವುದು. ಅಗ್ಗವಾಗಿ ಕೊಡುತ್ತೇವೆ. ಯಂತ್ರವನ್ನು ಮುದ್ದಾಗಿ ಬಂದು ನೋಡಲೂ ಬಹುದು. ಈ ವಿಳಾಸಕ್ಕೆ ಬರೆದು ಕೇಳಿ:—

ದಿ ಸೂಪರಿಂಟೆಂಡೆಂಟ್, ವೆಸ್ಲಿಯನ್ ಮಿಷನ್ ಪ್ರೆಸ್,
ಮೈಸೂರು.

ನೀವು ವಿಲಾಯತಿಯಿಂದ ಯಾವ ಸಾಮಾನುಗಳನ್ನಾದರೂ ತರಿಸಿಕೊಳ್ಳಬೇಕಾಗಿದ್ದರೆ 19-9

ಬ್ರೈಡ್ ಮತ್ತು ಈಸ್ಟ್‌ಲೆಂಡ್,
೯—೩೩, ಸಿಟಿ ರೋಡ್, ಲಂಡನ್, ಇ. ಸಿ.

ಎಂಬೀ ವಿಳಾಸಕ್ಕೆ ಪತ್ರ ಕಳುಹಿ, ಕಾಗದ ಬರೆಯಿರಿ. ಈ ಕಂಪನಿಯವರು ಪೇಟೆಂಟ್ ಔಷಧಿಗಳನ್ನೂ, ಅಡಕ್, ರಿಗೂ ಮಾಕ್ಕೆಳಿಗೂ ಕೊಡುವಂಥಾ, ಯಂತ್ರಗಳಿಂದಲೇ ತಯಾರಾದಂಥಾ ಆಹಾರಗಳನ್ನೂ, ಇನ್ನೂ ನಾನಾತರದ ಪದಾರ್ಥಗಳನ್ನೂ ಇಟ್ಟು ಬಿಕರಿಮಾಡುತ್ತಾರೆ. ಅವರು ಬಹು ವಿಶೇಷವಾದ ಗಮನಕೊಟ್ಟು, ಸಾಧ್ಯವಿದ್ದಷ್ಟೂ ಅಗ್ಗವಾಗಿ, ಬೇಕಾದ ಸಾಮಾನುಗಳನ್ನೇ ಆರಿಸಿ, ಮರಿಟಪ್ಪಾಲಿಗೇನೇ ಕಳುಹಿಸಿಕೊಡುವರು.

ಪ್ರಶ್ನೋತ್ತರ ರತ್ನಮಾಲಿಕೆ.

44-4

ಶ್ರೀಮಚ್ಛಂಕರ ಭಗವತ್ಪಾದಾಚಾರ್ಯರಿಂದ ಭಕ್ತಿ, ನೀತಿ, ಜ್ಞಾನಪ್ರತಿಪಾದಕನಾಗಿರುವಂತೆ ರಚಿಸಲ್ಪಟ್ಟ ಈ ಗ್ರಂಥವು ಕನ್ನಡ ಪ್ರಶ್ನೋತ್ತರಗಳೊಡನೆ ಪ್ರಕಟಿಸಲ್ಪಟ್ಟಿದೆ. ಬಾಲ್ಯದಿ-ದಲೂ ಮಕ್ಕಳು ಸುಗುಣಸುಜ್ಞಾನವಂತರನ್ನಾಗಿ ಮಾಡಲಪೇಕ್ಷಿಸುವ ತಂದೆತಾಯಿಗಳೂ ಉಪಾಧ್ಯಾಯರೂ ಗ್ರಂಥರೂಪವಾದ ಈ ರತ್ನಮಾಲಿಕೆಯಿಂದ ಅಲಂಕರಿಸಬೇಕೆಂದು ಪ್ರಾರ್ಥನೆ. ಪಾಸಲು ಸಹಿತ ೦-೩-೬ ಪ್ರತಿ ಪ್ರತಿಗಳಿಗೆ ಕಮ್ಮಿ ವಿ. ಪಿ. ಮಾಡುವುದಿಲ್ಲ. ೧೨ಕ್ಕೆ ೧ ಪ್ರತಿ ಇನಾಂ. ಇಷ್ಟಪಟ್ಟವರು ಸ್ಟಾಂಪು ಕಳುಹಿಸಿ.

೧. ಸುಬ್ಬನರಸಿಂಹಯ್ಯ, ಓರಿಯಂಟಲ್ ಸ್ಕೂಲ್, ಮೈಸೂರು.
೨. ಎಚ್.ಎ ನರಸಿಂಹಯ್ಯಂಗಾರ್, ಮಿರ್ಜಾಪ್ರೆಸ್, ಮೈಸೂರು.

ದೇವಾಂಗ ವಂಶಸ್ಥರಿಗೆ ಅಗತ್ಯ ಬೇಕಾದದ್ದು.

16 19

ಸ್ವಲ್ಪ ಕಾಲಗಳಲ್ಲೇ ಮುದ್ರಿತವಾಗುತ್ತಿರುವ... ಪಂಡಿತರಿಂದಲ್ಲಿ ಸ್ವಕುಲಗುರುಗಳು ಮುದ್ದುಸಂಗ ಮುನಿಸ್ವಾಮಿಗಳು ರಚಿಸಿದ್ದು. ಅರ್ಥಸಹಿತ ದೇವಾಂಗಮತಪ್ರಕಾಶಿಕೆ ಸರ್ವಾಂಗ ಸುಂದರವಾದ ೧೪ ಚಿತ್ರ ಸಹಿತ ಕ್ರಯ ಸುಲಭಮಾಡಿದೆ. ೧೪ ಚಿತ್ರವಿರುವ ಪ್ರತಿ ೧ಕ್ಕೆ ವಿ. ಪಿ. ಖರ್ಚು ಸೇರಿ ರೂ. ೨—೮ ಚಿತ್ರವಿಲ್ಲದ ಇದೇ ಪ್ರತಿ ೧ಕ್ಕೆ ವಿ. ಪಿ. ಖರ್ಚು ಸೇರಿ ರೂ. ೧—೮ ವೇದ ಉಪನಿಷತ್ತುಗಳ ಅರ್ಥಸಹಿತ ಮೂಲಸ್ತಂಭ ೧ಕ್ಕೆ ರೂ. ೧—೮. ತಕ್ಷಣ ಮನಿಆರ್ಡರಿಗೂ ವಿ. ಪಿ. ಯೂ ಕಳುಹಿಸುತ್ತೆ. ವಿಳಾಸ— ಮೈಸೂರು ಜವಳಿ ಅಂಗಡಿ ಬ್ರಹ್ಮಶ್ರೀ ಸುಬ್ರಮಾನ ಪುಟ್ಟಮಲ್ಲಯ್ಯ.

ಮೈಸೂರು ಪ್ರಿನ್ಸಿಪಲ್ ಮುನ್ಸಿಫ್ ಕೋರ್ಟಿನಲ್ಲಿ.

51 1

೧೯೦೫—೦೬ ನೆ ಇಸವಿ ಸಿವಿಲ್ ನಂಬರು—೩೨೩.
೧೯೦೫—೦೬ ನೆ ಇಸವಿ ಮಿಸ್ ನಂಬರು—೩೯೭.

ವಾದಿಗಳು.	ಪ್ರತಿವಾದಿಗಳು.
೧ ನೆ ಪುಟ್ಟಣ್ಣ.	೧ ನೆ ಬೈರಪ್ಪ,
೨ ನೆ ದೇವಣ್ಣ.	೨ ನೆ ದೊಡ್ಡಯ್ಯ,
	೩ ನೆ ದಾಸಣ್ಣ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನೆಂದರೆ— ಮೈಸೂರು ಅಗ್ರಹಾರ ಮತ್ತು ಮುಂದಿ ಮೊಹಲ್ಲಾದಲ್ಲಿರುವ ಗಂಗಡಿಕಾರ ಒಕ್ಕಲಿಗರ ಜನಗಳು ಒಂದು ಸಮೂಹವಾಗಿದ್ದುಕೊಂಡು, ಜಾತಿ ವಿಷಯದಲ್ಲಿ ತಪ್ಪು ಮುಂತಾದ್ದು ಬಂದರೆ ಅವರಿಗಳಿಂದ ದಂಡದ ಹಣಗಳನ್ನು ವಸೂಲ್ಮಾಡಿ, ಸಮೂಹದ್ವಯೇನ ಖರ್ಚು ಮಾಡುವುದು, ಉಳಿದದ್ದನ್ನು ದಿಬಾಜಟ್ಟು ಇಡುವ ಪದ್ಧತಿ ಇದ್ದು, ಈಗ್ಗೆ ಸಮಾರು ಎರಡೂವರೆ ವರುಷಗಳ ಕೆಳಗೆ ಕಾರಣಾಂತರದಿಂದ ಈ ಸಮೂಹವು ಎರಡು ಪಂಗಡವಾಗಿ, ಮೇಲೆ ನಮೂದಾಗುವ ವಾದಿಗಳು ಪ್ರತಿವಾದಿಗಳ ಮೇಲೆ ಈ ಕೋರ್ಟಿನಲ್ಲಿ ಸದರಿ ಸಮುದಾಯಕ್ಕೆ ಸಂಬಂಧಪಟ್ಟ ಹಣದ ಪೈಕಿ ರೂ. ೨೬—೦೩—೯ ನ್ನು ಬರಮಾಡಿಕೊಳ್ಳಲು ದಾವಾಮಾಡಿದಾರೆ. ಸಿವಿಲ್ ಪ್ರೊಸೀಜರ್ ಕೋಡು ೩೦ ನೆ ಸೆಕ್ಷನ್ ಪ್ರಕಾರ ಮೇಲ್ಕಂಡ ದಾವಾವಿಚಾರದಲ್ಲಿ ಪಕ್ಷಿಕಾರಕ್ಕೆ ಸದರಿ ಸಮುದಾಯದ ಜನಗಳು ಇಷ್ಟವಿದ್ದರೆ ಕಕ್ಷಿಗಾರರಾಗಿ ಸೇರಬಹುದು.

ಆ ಬಗ್ಗೆ ೧೯೦೬ ನೆ ಇಸವಿ ಮಾರ್ಚಿ ೨೬ ನೇ ತಾರೀಖು ದಿವಿ ೧೧ ಗಂಟೆಗೆ ಈ ಕೋರ್ಟಿನ ರೂಬರೂಬು ಹಾಜರಾಗಿ ಮುಂದಿನ ವಿಚಾರಣೆ ಕೊಳ್ಳತಕ್ಕದ್ದಿದೆ. ಹಾಗೆ ಹಾಜರಾದ ತಪ್ಪಿದರೆ ಊಲಸು ಮೇರೆ ನಡಿಸಲಾಗುತ್ತೆ.

ತಾ॥ 10—3—1906 B. S. Krishnaswamiengar, *Principal Munsiff.*

CHAMBERLAIN'S COLIC, CHOLERA AND DIARRHOEA REMEDY.

ಚೇಂಬರ್ಲೇನ್ ಯವರು ಹೊಟ್ಟೆಶೂಲೆ, ಕಾಲರಾ, ಭೇದಿಗಳಿಗೆ ಕಂಡುಹಿಡಿದಿರುವ ಔಷಧವು.

15 10



ಈ ಹೊಟ್ಟೆಯ ನೋವು, ಬರೀ ಭೇದಿಯಾಗುವುದು, ಆಮಶಂಕೆ, ವಾಂತಿಭೇದಿ ಇದ್ದರೆ, ಶೀತದ ನೋವು, ಹೊಟ್ಟೆಯ ನಾನಾ ತರದ ಶೂಲೆಗಳು—ಈ ರೋಗಗಳನ್ನೆಲ್ಲಾ ವಾಸಿಮಾಡುತ್ತದೆ. ಈ ಪರಮೋಪಯೋಗವಾದ ಔಷಧವು ಜನರನ್ನು ಬದುಕಿಸಿರುವಷ್ಟು ಮತ್ತು ನೋವನ್ನೂ ಬಾಧೆಯನ್ನೂ ನಿವಾರಣೆ ಮಾಡಿರುವಷ್ಟು ಪ್ರಪಂಚದಲ್ಲೇ ಇನ್ನಾವ ಔಷಧವೂ ಮಾಡಿರುವುದಿಲ್ಲ.

ಜ್ಞಾಪಕದಲ್ಲಿಟ್ಟುಕೊಳ್ಳಿ—ಒಂದು ಹೊತ್ತು ಈ ಔಷಧವನ್ನು ಸೇವಿಸಿದ ಕೂಡಲೇ ಹೊಟ್ಟೆಯೊಳಗಿರುವ ಎಲ್ಲಾ ತರದ ನೋವನ್ನೂ ನಿಲ್ಲಿಸಿಬಿಡುತ್ತದೆ. ಬಹಳ ಕಠಿಣವಾದ ಭೇದಿಯೂ ಕೂಡ ಮೂರೇ ಹೊತ್ತಿಗೆ ಈ ಔಷಧದಿಂದ ನಿರ್ಮೂಲವಾಗಿ ನಿಲ್ಲಿಸುತ್ತದೆ. ಖಂಡಿತವಾಗಿ ವಾಸಿಮಾಡುವುದೇ ಇದರ ಗುಣ.

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ

ಕೈಯಿಂದ ಸ್ವಲ್ಪವೂ ಮುಟ್ಟಿದ್ದಲ್ಲ.

ಇದು ಎಲ್ಲೆಲ್ಲೂ ಬಿಕರಿಯಾಗುತ್ತದೆ. ಸಣ್ಣ ಸೀಸೆಗೆ ೧ ರೂಪಾಯಿ. ದೊಡ್ಡ ಸೀಸೆಗೆ ೨ ರೂಪಾಯಿ.

ಹೊಸ ಪುಸ್ತಕಗಳು.

36 5

ದೇವರನಾಮಗಳ ಪುಸ್ತಕ—ಇದರಲ್ಲಿ ಹೆಂಗಸರಿಗೆ ಉಪಯೋಗವಾಗುವ ಹಾಡುಗಳು, ದೇವರ ಪೂಜೆಮಾಡುವ ಕೀರ್ತನೆಗಳು, ಅಧ್ಯಾತ್ಮಭಾರತ, ಭಾಗವತ, ಸಂಕ್ಷೇಪ ರಾಮಾಯಣ, ಇವುಗಳು ಇನ್ನೂ ವಿಚಿತ್ರವಾದ ಲಾವಣಿಗಳೂ ಇರುತ್ತೆ. ಕ್ರಯ ೮ ಆಣೆ.

ಪಂಚಕಥೆ—ಇದರಲ್ಲಿ ಪ್ರಹ್ಲಾದಚರಿತ್ರೆ, ಮಾಧವನಚರಿತ್ರೆ, ಅನಸೂಯಾಚರಿತ್ರೆ, ದ್ರೌಪದೀ ಮಾನಸಂರಕ್ಷಣೆ ಎಂಬ ದ್ಯೂತಪರ್ವ, ದೂರ್ವಾಸಚರಿತ್ರೆ ಎಂಬ ಐದು ಕಥೆಗಳು ಸೇರಿರುತ್ತೆ. ೬ ಆಣೆ.

ಸೇತುರಾಮರಕ್ಷೆ—ಭೋಜನಕಾಲವೀರ್ಣಯ, ಕನಕದಾಸರ ಕಥೆ ಎಲ್ಲಾ ಒಂದರಲ್ಲಿ ಕ್ರಯ ೩ ಆಣೆ.

ಶ್ರೀಮನ್ ಮಧ್ವಸಿದ್ಧಾಂತಸಾರ—ದ್ವೈತಾದ್ವೈತ ಮತವಿಷಯಗಳನ್ನು ವಿವರಿಸಲ್ಪಟ್ಟಿದೆ. ಕ್ರಯ ೬ ಆಣೆ.

ರುಕ್ಮಾಂಗದ ಮಹಾರಾಯರ ನಾಟಕ—ಕ್ರಯ ೩ ಆಣೆ.

ಒಬ್ಬ ಸಿಪಾಯಿಯ ಸಾಹಸಗಳು—"ಒಂದು ಏತ್ತು ಮತ್ತು ಆರು ಗುರುಗಳ ಚೀಲ ಸುದ್ದಿ"—ಕ್ರಯ ೪ ಆಣೆ.

ಇಪ್ಪತ್ತನೆಯ ಶತಮಾನದಹಾಡುಗಳು—ಕ್ರಯ ೨ ಆಣೆ.

ವಿ. ಪಿ. ಚಾ। ವಿಳಾಸ—ಜಗದೀಶವಿಠಲ ನಾರಾಯಣದಾಸ, ದುರ್ಗಾ ಬೀದಿ, ... ಆರ ಗೇಟು, ಬೆಂಗಳೂರು ಸಿಟಿ.

ಪುದುಚೇರಿ ಚೋಲ್‌ಕಾಲು ಗೊಲಸು ಮತ್ತು ಕಡಗಗಳೂ.

49-3

ಮೇಲಾದ ಜರ್ಮನ್ ಸಿಲ್ವರಿಂದ ಮಾಡಲ್ಪಟ್ಟಿವೆ. ನೋಟಕ್ಕೆ ಬೆಳ್ಳಿಯವುಗಳಂತೆ ತೋರುವವು. ಈ ಒಡವೆಗಳ ಸೊದು ಶೀಲಿಗಳಿಗೆ ಬೆಳ್ಳಿ ಪುಡಿಯಿಂದ ಗೆಲಸವೆ ಸುಲಭವಾಗಿ ಹಾಕಿ ತೆಗೆಯುವಂತೆ ಮಜಬೂತಾದ ಕೆಲಸಮಾಡಿರುತ್ತದೆ. ಬಣ್ಣ ಕೆಡುವುದಿಲ್ಲ. ಎಲ್ಲರೂ ಉಪಯೋಗಿಸಬೇಕೆಂಬ ಉದ್ದೇಶದಿ ಬಿ ಸುಲಭಕ್ರಯಕ್ಕೆ ವಿಕ್ರಯಿಸುತ್ತೇವೆ.

ಚೋಲ್‌ಗೊಲಸು.

ನಂ			
ನಂ	೧	ದೊಡ್ಡವರಿಗೆ	೨—೮—೦
,,	೨	ಚಿಕ್ಕವರಿಗೆ	೨—೪—೦
,,	೩	ಮಕ್ಕಳಿಗೆ	೨—೦—೦

ಕಾಲು ಕಡಗಗಳು.

ನಂ			
ನಂ	೧	ದೊಡ್ಡವರಿಗೆ	೧—೮—೦
,,	೨	ಚಿಕ್ಕವರಿಗೆ	೧—೪—೦
,,	೩	ಮಕ್ಕಳಿಗೆ	೧—೦—೦

ಒಂದು ಜತೆಯನ್ನ ತರಿಸಿಕೊಂಡು ಇತರರದನ್ನು ನಮ್ಮವುಗಳನ್ನು ಪರೀಕ್ಷಿಸಿದರೆ ವ್ಯತ್ಯಾಸವೂ ಅಗ್ಗವೂ ಸಹಾ ತಿಳಿಯಬಹುದು. ನಮ್ಮ ಕಂಪನಿಯಿಂದ ತರಿಸಿಕೊಂಡವುಗಳಿಗೆ ಜವಾಬ್ದಾರಿಯನ್ನು ಮಾಡುವೆವು. ನಮ್ಮ ಹೆಸರನ್ನು ನನೂದಿಸದೆ ಬರೆದರೆ ನಮ್ಮ ಕಂಪನಿಯು ಒಡವೆಗಳು ದೊರಕಲಾರವು.

ವಿಳಾಸ—ಟಿ. ಕೇ. ನರಸಯ್ಯ ಅಂಡ್ ಕಂಪೆನಿ, ಜರ್ಮನ್ ಸಿಲ್ವರ್ ಮರ್ಚಂಟ್ಸ್ ನಂ॥ ೩೦, ಕಾಳಿಯತ ಪಿಳ್ಳೆ ಸ್ಟ್ರೀಟ್, ಸಾಹುಕಾರಪೇಟೆ ಪೋಸ್ಟು, ಮದ್ರಾಸು.

ತ್ವರೆಮಾಡಿ! ಸುಲಭ ಖರೀದಿ!!

ಕ್ರಯ ರೂ. ೪. ಕ್ರಯ ರೂ.

39 4

ಗೆಜ್ಜೆ ನಾಗರ.

ಈ ಗೆಜ್ಜೆನಾಗರವನ್ನು ಎಂದಿಗೂ ಕಪ್ಪಾಗದಿರುವ ಸೀಸದ ಬೆಳ್ಳಿಯಿಂದ ಅತಿಸುಂದರವಾದ ಪೋಗರೆ ಕೆಲಸವನ್ನು ಮಾಡಿ, ಚಿನ್ನ ಬಂಗಾರದ ಗಿಲೀಟು ಮಾಡಲ್ಪಟ್ಟಿದೆ. ಬಂಗಾರದಿಂದ ಮಾಡಿದ ಗೆಜ್ಜೆ ನಾಗರಕ್ಕೂ ಇದಕ್ಕೂ ಸ್ವಲ್ಪವೂ ಭೇದ ತೋರುವದಿಲ್ಲ. ಇಷ್ಟು ಸುಲಭ ಖರೀದಿಗೆ ಯಾರಿಂದಲೂ ಇದುವರೆಗೆ ಮಾರಲ್ಪಟ್ಟಿಲ್ಲ. ಇದನ್ನು ಉಪಯೋಗಿಸಿದರೆ ಗೊತ್ತಾಗುವದು. ನಾವು ಹೊಗಳುವದರಿಂದ ಪ್ರಯೋಜನವಿಲ್ಲ.

ಕ್ರಯ ರೂ. ೪—೦—೦
ವಿ. ಪಿ. ಪಿ ಖರ್ಚು ೦—೪—೦

ಬೇಕಾದವರು ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು.
ಗುರುಬಸವ ಅಂಡು ಕಂಪನಿ,
ಸಾಹುಕಾರಪೇಟೆ, ಮದರಾಸು.

ಶೇಕಡ ೫೦ ರಂತೆ ಕಮಿಷನ್ ದೊರೆಯುತ್ತೆ!
ಬೇಗನೋಡಿ. ಮುಗಿದುಹೋದೀತು.
ವ್ಯಸನಪಡಬೇಕಾಗುತ್ತೆ.

51-2

ಈ ಕೆಳಗೆ ನಮೂದಿಸಿರುವ ಎರಡು ರೂಪಾಯಿ ಕ್ರಯದ ಹದಿನೇಳು ಪುಸ್ತಕಗಳನ್ನು ಒಟ್ಟಿಗೆ ತರಿಸಿಕೊಂಡರೆ ೧॥ ರೂಪಾಯಿಗೆ ದೊರಕುವವು. ಆಹಾ! ಪುಸ್ತಕಗಳನ್ನು ಸುಲಭಕ್ಕೆ ಪಡೆಯುವದು ಇದೇ ಸಮಯ.

೧	ಶ್ರೀಮನ್ನಗರವರ್ಣನೆ ೩೩ ಚಿತ್ರಗಳಿಂದ ಕೂಡಿದ್ದು		೦—೧—೦
೨	ಪಕ್ಷಿಗಳ ಚಿತ್ರಗಳೂ, ಕಥೆಗಳೂ ೩೦	,,	೦—೧—೦
೩	ನೇಕವೆಂಬ ನನ್ನ ಮನೆ ೨೩	,,	೦—೧—೦
೪	ಪುರಾತನ ರೋಮನರ ಕಥೆಗಳು ೨೦	,,	೦—೧—೦
೫	ಖಗೋಳ ಸಿದ್ಧಾಂತ ಶಾಸ್ತ್ರವು ೨೮	,,	೦—೧—೦
೬	ಜಾರ್ಜ್ ಸ್ಟೀವೆನ್ಸನ ಚರಿತ್ರೆ ೨೮	,,	೦—೧—೦
೭	ಪ್ರಾಚೀನಕಾಲದ ವಿಲಕ್ಷಣ ಜೀವರಾಶಿಗಳ ವರ್ಣನೆ ೨೬	,,	೦—೧—೦
೮	ಎಡ್ವರ್ಡ್ ಚಕ್ರವರ್ತಿಯವರ ಚರಿತ್ರೆ ೧೪	,,	೦—೧—೦
೯	ಎಡ್ವರ್ಡ್ ಸಾರ್ವಭೌಮರ ಕಿರೀಟಧಾರಣೆ ೧೯	,,	೦—೧—೦
೧೦	ದಕ್ಷಿಣ ಆಫ್ರಿಕವೂ ಅದರಲ್ಲಿನ ಜನಗಳೂ ೩೪	,,	೦—೧—೦
೧೧	ಬರ್ಮಾದೇಶವೂ ಬರ್ಮಿಯರೂ ೨೮	,,	೦—೧—೦
೧೨	ಘನತೆಯುಳ್ಳ ಸ್ತ್ರೀಯರಚರಿತ್ರೆ ೨೧	,,	೦—೧—೦
೧೩	ಪುರಾತನ ಗ್ರೀಕರ ಕಥೆಗಳು ೧೬	,,	೦—೧—೦
೧೪	ಚಿಕ್ಕವರಿಗೆ ಹೇಳಿದ ಕಥೆಗಳು	,,	೦—೧—೦
೧೫	ಸ್ವಪ್ರಯೋಜನ ಫಲದಾಯಿಕ ಬಹು ಉತ್ಕೃಷ್ಟವಾದ ಪುಸ್ತಕ	,,	
೧೬	ವೇದಗಳ ಕಾಲದಲ್ಲಿ ಹಿಂದೂದೇಶವಿದ್ದ ಸ್ಥಿತಿ ೪ ಚಿತ್ರಗಳಿಂದ ಕೂಡಿದ್ದು	,,	
೧೭	ಜಾತಿಪದ್ಧತಿ	,,	

ವಿ. ಪಿ. ಮೂಲಕ ತರಿಸಿಕೊಳ್ಳಬಹುದು.
ಮ್ಯಾನೇಜರ್, ಸಿ. ಎಲ್. ಎಸ್. ಬುಕ್ ಡಿಪೋ,
ಮೈಸೂರು.

ಮೇಲಿನ ಪುಸ್ತಕಗಳನ್ನು ಬಿಡಿಯಾಗಿಯೂ ತರಿಸಿಕೊಳ್ಳಬಹುದು. ಆದರೆ ಕಮಿಷನ್ ದೊರೆಯುವದಿಲ್ಲ.

ವೃತ್ತಾಂತ ಪತ್ರಿಕೆ

:o:

೧೯೦೬ ನೇ ಇಸವಿ ಮಾರ್ಚಿ ತಾ|| ೧೫ ನೇ ಗುರುವಾರ.

ರಾಜಧಾನಿಯ ನೀರಿನ ಸರಬರಾಜು.

ಮೈಸೂರು ಪಟ್ಟಣದಲ್ಲಿ ಕುಡಿಯುವ ನೀರಿಗೆ ಕೆಲವು ದಿನಗಳಿಂದ ಬಹಳ ಕಷ್ಟವಾಗಿದೆ. ಮ್ಯುನಿಸಿಪಾಲಿಟಿಯವರು ಒದಗಿಸುವ ನೀರು ಪಟ್ಟಣದ ಪ್ರಜೆಗಳಿಗೆ ಸಾಲದು. ಕೆಲವು ಭಾಗಗಳಲ್ಲಿ ಒಂದು ದಿನಕ್ಕೆ ಒಂದೇ ಒಂದು ಘಂಟೆ ಮಾತ್ರ ಹೊತ್ತು ಬಿಡುತ್ತಾರೆ. ಆದಕಾರಣ ಪ್ರಜೆಗಳು ಬಿಂದಿಗೆ ಮೊದಲಾದ ಪಾತ್ರೆಗಳನ್ನು ಹೊತ್ತುಕೊಂಡು ಸಮರಾತ್ರಿಯವರೆಗೆ ಬೀದಿ ಬೀದಿ ಅಲೆಯುತ್ತಾ ನೀರು ಹೊರುತ್ತಿರುವರು. ಬೆಳಕು ಹರಿಯುವದಕ್ಕೆ ಮೊದಲೇ ನಲ್ಲಿಗಳ ಹತ್ತಿರ ಗುಂಪು ಕಟ್ಟಿಕೊಂಡು, ನೀರಿಗಾಗಿ ಕಾದಿರುವರು. ಇನ್ನು ಕೆಲವರು ನಲ್ಲಿಗಳ ನೀರು ಬಂದ ಮೇಲೆ ಮುಚ್ಚಿಬಿಟ್ಟಿದ್ದ ಭಾವಿಗಳನ್ನು ಪುನಹ ತೆರೆದು, ಬಹು ಕಾಲದಿಂದ ಉಪಯೋಗಿಸದೆ ಬಿಟ್ಟಿದ್ದ ನೀರನ್ನೇ ಸೇದಿ ಉಪಯೋಗಿಸಲಾರಂಭಿಸಿದಾರೆ.

ಹೀಗೆ ರಾಜಧಾನಿಗೆ ನೀರಿನ ಸರಬರಾಯಿ ಸಾಲದೆ ಇರುವುದಕ್ಕೆ ಕಾರಣವೇನೆಂದು ವಿಚಾರಿಸುವಲ್ಲಿ ಬೇಸಿಗೆ ಆದುದರಿಂದ ಕಾವೇರಿಯಲ್ಲಿ ನೀರು ಈ ಸಲ ಬಹಳ ಕಡಿಮೆಯಾಗಿದೆ ಎಂತಲೂ ಈ ನೀರಿನ ಶಕ್ತಿಯಿಂದಲೇ ಯಂತ್ರವನ್ನು ನಡಿಸಿ, ಅದೇ ನೀರನ್ನು ರಾಜಧಾನಿಗೆ ನಲ್ಲಿಯ ಮೂಲಕ ಎತ್ತಿ ತರಬೇಕೆಂತಲೂ, ಹೊಳೆಯಲ್ಲಿ ಪ್ರವಾಹವೇ ತುಂಬಾ ಕಮ್ಮಿಯಾಗಿರೋಣದರಿಂದ ನೀರು ಬರುವುದಿಲ್ಲವೆಂತಲೂ ತಿಳಿದುಬರುತ್ತದೆ. ಇದನ್ನು ನೋಡಲಾಗಿ ರಾಜಧಾನಿಗೆ ನೀರನ್ನು ಸರಬರಾಯಿ ಮಾಡತಕ್ಕ ಏರ್ಪಾಡು ಯೋಗ್ಯವಾದದ್ದಾಗಿಲ್ಲವೆಂದು ಕಾಣುವುದು. ಯಾವಕಾಲದಲ್ಲಿ ಪ್ರಜೆಗಳಿಗೆ ನೀರು ಬಹಳ ಅಗತ್ಯವಾಗಿ ಬೇಕೋ ಆ ಕಾಲದಲ್ಲೇ ನೀರು ಎತ್ತುವ ಯಂತ್ರದ ಶಕ್ತಿಯು ನಿಶ್ಶಕ್ತಿಯಾಗುತ್ತದೆ. ಇಂಥಾ ಏರ್ಪಾಡಿಗೆ ಸರ್ಕಾರದವರೂ ಮ್ಯುನಿಸಿಪಾಲಿಟಿಯವರೂ ಇದುವರೆಗೆ ನಾಲ್ಕು ಲಕ್ಷ ರೂಪಾಯಿತನಕ ಖರ್ಚುಮಾಡಿರುವರು.

ಸದ್ಯ ಪಟ್ಟಣದ ಒಂದು ಭಾಗಕ್ಕೆ ಕಾವೇರಿ ನೀರನ್ನು ಕೊಡುತ್ತಾರೆ. ತಗ್ಗಾಗಿರುವ ಭಾಗಗಳಿಗೆ ಕುಕ್ಕರಹಳ್ಳಿ ಕೆರೆಯ ನೀರನ್ನು ಕೊಡುವರು. ಕುಕ್ಕರಹಳ್ಳಿ ಕೆರೆಗೆ ನೀರು ಬರತಕ್ಕ ಮೈದಾನವು ಈಗ ಮೊದಲಿನ ಹಾಗಿಲ್ಲ. ಅದರಲ್ಲಿ ಒಂದು ಅರಮನೆ ಬಂಗಲೆಯೂ ಅನೇಕ ವಾಸದ ಮನೆಗಳೂ ಇರುತ್ತವೆ. ಆದ್ದರಿಂದ ಆ ಪ್ರದೇಶವು ನಿರ್ಮಲವಾಗಿದೆ ಎಂದು ಯಾರೂ ಹೇಳಲಾರರು. ಇದಲ್ಲದೆ ಈ ಕೆರೆಯ ನೀರನ್ನು ಚನ್ನಾಗಿ ಶೋಧಿಸುವುದಕ್ಕೂ ಮಾರ್ಗವಿಲ್ಲ. ಇದನ್ನೆಲ್ಲಾ ನೋಡಲಾಗಿ ಮೈಸೂರು ಪಟ್ಟಣಕ್ಕೆ ಬಹಳ ಭಯಂಕರವಾದ ಸ್ಥಿತಿ ಪ್ರಾಪ್ತವಾಗುವಂತೆ ಕಾಣುತ್ತದೆ. ಈ ನೀರಿನಲ್ಲೇನಾದರೂ ವಾಂತಿಭೇದಿಯನ್ನುಂಟುಮಾಡತಕ್ಕ ಕ್ರಿಮಿಗಳು ಸೇರಿಕೊಂಡ ಪಕ್ಷದಲ್ಲಿ ಈ ಪಟ್ಟಣಕ್ಕೆ ಎಂಥಾ ಅಪಾರವಾದ ಗಂಡಾಂತರ ಪ್ರಾಪ್ತವಾಗುವುದೋ ಯಾರುತಾನೇ ಹೇಳಬಲ್ಲರು?

ಈಗ ಬೇಸಿಗೆಯು ಪ್ರಾರಂಭವಾಗಿದೆ. ಇನ್ನೂ ಆರೇಳು ವಾರಗಳ ತನಕ ಬಿಸಲಿನ ಧಗೆಯು ಕಡಿಮೆಯಾಗುವುದಾಗಲಿ ಮಳೆ ಬಂದೀತೆಂದಾಗಲಿ ನಿರೀಕ್ಷಿಸುವುದಕ್ಕಿಲ್ಲ. ಆದ್ದರಿಂದ ಈಗ ಕುಡಿಯುವ ನೀರಿನ ಗೊಟ್ಟಿನಿಂದ ರಾಜಧಾನಿಗೆ ಪ್ರಾಪ್ತವಾಗಬಹುದಾದ ದುಷ್ಕಾಲದ ವಿಷಯವನ್ನು ಮ್ಯುನಿಸಿಪಾಲಿಟಿಯವರು ಜಾಗ್ರತೆಯಾಗಿ ಗವರ್ನಮೆಂಟಿಗೆ ಅರಿಕೆಮಾಡಿ, ಅದರ ನಿವಾರಣೆಗೆ ತಕ್ಕ ಏರ್ಪಾಡು ಮಾಡಬೇಕೆಂದು ಕೇಳಿಕೊಳ್ಳಬೇಕಾಗಿದೆ. ಬೆಳಗೊಳದಲ್ಲಿರುವ ಯಂತ್ರಗಳಿಂದ ಇಂಥಾ ಬೇಸಿಗೇ ಕಾಲದಲ್ಲಿ ನೀರು ಎತ್ತುವುದು ಸಾಧ್ಯವಲ್ಲದೆಹೋದಲ್ಲಿ ಕೆಲವು ಕಾಲದ ಮಟ್ಟಿಗಾದರೂ ಆ ಯಂತ್ರಗಳು ಹಬೆಯ ಸಹಾಯದಿಂದ ನಡೆಯುವಂತೆಯೂ ಆ ಮೂಲಕ ರಾಜಧಾನಿಗೆ ಬೇಕಾಗುವಷ್ಟು ನೀರು ಕೊರತೆಯಿಲ್ಲದೆ ಸರಬರಾಜಾಗುವಂತೆಯೂ ಏರ್ಪಾಡು ಮಾಡಬೇಕು. ರಾಜಧಾನಿಯಾದ ಮೈಸೂರು ಪಟ್ಟಣದಲ್ಲೇ ಬೇಕಾದಾಗ ನೀರಿಗೇ ಅಭಾವವಾದರೆ ಪ್ರಜೆಗಳಿಗೆ ಕಷ್ಟ ಅಪಾರವೆನಿಸುವುದು. ಅಂತು ಈ ವಿಚಾರಕ್ಕೆ ಮ್ಯುನಿಸಿಪಾಲಿಟಿಯವರೂ ಗವರ್ನಮೆಂಟಿನವರೂ ಕೂಡಲೆ ಗಮನಕೊಟ್ಟು, ಸಾಧ್ಯವಾದಷ್ಟು ಬೇಗ ತೃಪ್ತಿಕರವಾದ ಏರ್ಪಾಡನ್ನು ಮಾಡುವರೆಂದು ನಿರೀಕ್ಷಿಸುತ್ತೇವೆ.

ಫ್ರಾನ್ಸಿನಲ್ಲಿ ಗಣಿಯ ಅನಾಹುತವು.

ಫ್ರಾನ್ಸ್ ಪ್ರಭುತ್ವಕ್ಕೆ ಸೇರಿದ ಲಿಲ್ಲೆ ಎಂಬ ಪಟ್ಟಣದಲ್ಲಿ ಕೊರಿಯರ್ರೀಸ್ ಎಂಬ ಭಾರೀ ಕಲ್ಲಿದ್ದಲ ಗಣಿಯಲ್ಲಿ ಕಳೆದ ವಾರ ಬಹು ಭಯಂಕರವಾದ ಅನಾಹುತ ಸಂಭವಿಸಿತೆಂದು ತಂತೀವರ್ತಮಾನ ಬಂದಿದೆ. ಆ ಸಮಯದಲ್ಲಿ ೧,೮೦೦ ಜನರು ಗಣಿಯೊಳಗೆ ಕೆಲಸಮಾಡುತ್ತಿದ್ದರು. ಈ ಪೈಕಿ ೧,೧೫೦ ಮಂದಿ ಪ್ರಾಣಕೊಟ್ಟರೆಂದು ತಿಳಿಯುವುದು. ಅವರಿಂದ ಜೀವನಮಾಡುತ್ತಿದ್ದ ಸುಮಾರು ೨೫೦೦೦ ಮಂದಿ ಹೆಂಗಸರು ಮಕ್ಕಳೇ ಮೊದಲಾದ ದೇಹಸಂಬಂಧಿಗಳು ಆ ಗಣಿಯ ಬಳಿ ಗುಂಪುಸೇರಿ ನಾನಾ ಪ್ರಕಾರವಾಗಿ ಗೋಳಾಡುತ್ತಿದ್ದಾರೆ. ಈ ಗಣಿಯು ಭೂಮಿಯೊಳಗೆ ೩೦೦ ಅಡಿ ಆಳವಾಗಿರುವುದು ಒಳಗಿನಿಂದ ಶವಗಳನ್ನು ಹೊರಕ್ಕೆ ಸಾಗಿಸುವುದು ಮಹಾ ಪ್ರಯಾಸವಾಗಿರುತ್ತದೆ. ಅದರಲ್ಲಿ ಕೆಲವು ದಿನಗಳಿಂದಲೂ ಯಾರಿಗೂ ಗೋಚರವಿಲ್ಲದಂತೆ ಒಂದುಕಡೆ ಬೆಂಕಿ ಹುಟ್ಟಿ ಹೊಗೆಯಾಡುತ್ತಿದ್ದ ಹಾಗೂ ಇದರ ದೆಸೆಯಿಂದ ವಿಷಗಾಳಿಯು ಹತ್ತಿಕೊಂಡು ಮಹಾ ಶಬ್ದದೊಡನೆ ಹಾರಿ ಅನಾಹುತವನ್ನುಂಟುಮಾಡಿತೆಂತಲೂ ಊಹಿಸಲ್ಪಟ್ಟಿದೆ. ಗಣಿಯೊಳಗೆಲ್ಲಾ ಈಗ ವಿಷಗಾಳಿಗಳು ತುಂಬಿಕೊಂಡಿರುವುದರಿಂದ ಹೆಣಗಳನ್ನು ತರುವುದೂ ತುಂಬಾ ಅಪಾಯಕರವಾಗಿದೆ. ಆದರೆ ಇದುವರೆಗೆ ತೊಂಬತ್ತು ಹೆಣಗಳನ್ನು ಮಾತ್ರ ಗಣಿಯಿಂದ ಈಚೆಗೆ ತಂದಿರುತ್ತಾರೆ. ಗಣಿಯ ಅನಾಹುತಗಳು ಇದುವರೆಗೆ ಅನೇಕ ಕಡೆಗಳಲ್ಲಿ ನಡೆದಿದ್ದಾಗ್ಯೂ ಆ ಪೈಕಿ ಇದೇ ಅತ್ಯಂತ ಘೋರವಾದದ್ದೆನ್ನುವುದಕ್ಕೆ ಸಂಶಯವಿಲ್ಲ. ಇದು ಫ್ರಾನ್ಸಿನಲ್ಲೆಲ್ಲಾ ಅಪಾರವಾದ ದುಃಖವನ್ನೂ, ಪ್ರಪಂಚದಲ್ಲೆಲ್ಲಾ ವಿಶೇಷವಾದ ಅನಿಕರವನ್ನೂ ಉಂಟುಮಾಡಿರುವುದು. ಇಂಥಾ ಅನಾಹುತಕ್ಕೆ ಸಿಕ್ಕಿ ಮೃತಪಟ್ಟವರ ಸಂಸಾರಗಳನ್ನು ಕಾಪಾಡುವುದಕ್ಕೋಸ್ಕರ ಆಗಲೇ ಒಂದು ಧರ್ಮಫಂಡು ಏರ್ಪಾಡಾಗಿ ಹಣ ವಸೂಲಾಗುತ್ತಿದೆ.

ಒಳದೇಶದ ವೃತ್ತಾಂತಗಳು.

ಕಾಶೀಪಟ್ಟಣದಲ್ಲಿ ಮಿಸೆಸ್ ಬೆಸೆಂಟ್‌ರವರು ಸ್ಥಾಪಿಸಿ ನಡೆಸುತ್ತಿರುವ ಸೆಂಟ್ರಲ್ ಹಿಂದೂ ಕಾಲೇಜ್ ಎಂಬ ವಿದ್ಯಾಶಾಲೆಯ ಏಳಿಗೆಗೆ ನಮ್ಮ ಶ್ರೀಮನ್ಮಹಾರಾಜರವರು ೧೦,೦೦೦ ರೂಪಾಯನ್ನು ಧರ್ಮಾರ್ಥವಾಗಿ ಕಳುಹಿಸಿರುತ್ತಾರೆ.

****

ಬ್ರಿಟಿಷ್ ರೆಸಿಡೆಂಟರಾದ ಮಿ|| ಎಸ್. ಎಂ. ಫ್ರೇಸರ್‌ರವರೂ ಅವರ ಅಸಿಸ್ಟೆಂಟರೂ ಕೊಡಗಿನ ಪ್ರಾಂತ್ಯ ಸಂಚಾರಮಾಡಿಕೊಂಡು, ಮೊನ್ನೆ ಶನಿವಾರ ಬೆಳಗ್ಗೆ ೧೦ ಗಂಟೆಗೆ ರಾಜಧಾನಿಯನ್ನು ತಲುಪಿ, ಫೋಜನಾದಿಗಳನ್ನು ತೀರಿಸಿಕೊಂಡು ಮಧ್ಯಾಹ್ನ ೧೧ ಗಂಟೆ ಸ್ಪೆಷಲ್‌ಗಾಡಿಯಲ್ಲಿ ಬೆಂಗಳೂರಿಗೆ ಪ್ರಯಾಣಮಾಡಿದರು.

****

ಮೈಸೂರು ಲೋಯರ್‌ಸೆಕಂಡರಿ ಪರೀಕ್ಷೆಗೆ ಇಟ್ಟಿರುವ ಕನ್ನಡ ಗದ್ಯಪದ್ಯಗಳ ಪ್ರತಿಗಳು ಕೆಲವು ವಿದ್ಯಾರ್ಥಿಗಳಿಗೆ ಸಿಕ್ಕಲಿಲ್ಲವೆಂತಲೂ ಸರ್ಕಾರದವರು ಹೆಚ್ಚು ಪ್ರತಿಗಳನ್ನು ತಯಾರುಮಾಡಿಸಬೇಕಾಗಿದೆ ಎಂತಲೂ ಒಬ್ಬ ಓದುಗರು ಬರೆಯುತ್ತಾರೆ. ಇದರ ನಿಜಸ್ಥಿತಿಯನ್ನು ವಿದ್ಯಾಭ್ಯಾಸದ ಇಲಾಖೆಯವರು ತನಿಖೆಮಾಡಬೇಕಾಗಿದೆ.

****

ಕಳೆದವಾರ ದೊಡ್ಡಬಳ್ಳಾಪುರದ ಕಸಬೆಯಲ್ಲಿ ಹಗಲು ೧೦ ಗಂಟೆಯ ಸಮಯದಲ್ಲೇ ಹಾವು, ಮುಂಗಿಸಿಗಳು ಒಂದರ ಮೇಲೊಂದು ಬಿದ್ದು ಜಗಳವಾಡಿದ್ದನ್ನು ಕೆಲವು ಜನರು ನಿಂತು ನೋಡಿದರೆಂತಲೂ, ಕಡೆಗೆ ಎರಡೂ ತಪ್ಪಿಸಿಕೊಂಡು ಓಡಿಹೋದವೆಂತಲೂ, ಎರಡನ್ನೂ ಹಿಡಿಯಬೇಕೆಂದು ಮಾಡಿದ ಪ್ರಯತ್ನ ಸಫಲವಾಗಲಿಲ್ಲವೆಂತಲೂ ಕೇಳುತ್ತೇವೆ

****

ಅರಸೀಕೆರೆ ತಾಲ್ಲೂಕು ಬಾಣಾವಾರದ ಒಬ್ಬ ಬಾತ್ಮಿದಾರರು ಬರೆಯುವುದು:—ಒಂದು ಹುಲಿಯು ರಾತ್ರಿವೇಳೆ ಈ ಊರೊಳಕ್ಕೆ ಪ್ರವೇಶಿಸಿ ಈ ವರೆಗೆ ೬—೭ ಜಾನುವಾರುಗಳನ್ನು ತಿಂದುಬಿಟ್ಟಿತು. ಈ ದುಷ್ಟಮೃಗವನ್ನು ಕೊಂದುಹಾಕುವದಕ್ಕೆ ಶಿಕಾರಿಗಾರರು ಪ್ರಯತ್ನಪಡಬೇಕು. ಈ ಸಮಯದಲ್ಲಿ ಮೊಹರಂ ಇಲಿಗಳ ಕಾಟವು ಜಾಸ್ತಿ ಆಗಿದೆ. ನಿಜವಾದ ಹುಲಿಯನ್ನು ಯಾರೂ ಕೇಳುವವರಿಲ್ಲ ಎಂಬುದೇ.

****

ಒಬ್ಬ ಬಾತ್ಮಿದಾರರು ಬರೆಯುವುದೇನೆಂದರೆ—ಕಳೆದ ಫೆಬ್ರವರಿ ೨೩ ರಲ್ಲಿ ಮುಳಬಾಗಲ ತಾಲ್ಲೂಕು ಅವನಿ ಗ್ರಾಮದಲ್ಲಿ ದೊಡ್ಡ ಪರಿಷೆ ಜರುಗಿತು. ಆಗ ೧೦ ವರುಷದ ಒಬ್ಬ ವೈಶ್ಯರ ಹುಡುಗಿಯು ೩೦೦ ರೂಪಾಯಿನ ಒಡವೆಗಳನ್ನು ಇಟ್ಟುಕೊಂಡು, ಗುಂಪಿನಲ್ಲಿ ರುವಾಗ್ಗ ಕಳ್ಳನು ಅವಳನ್ನು ಎಲ್ಲಿಗೋ ಎತ್ತಿಕೊಂಡು ಹೋಗಿಬಿಟ್ಟನು. ಇದುವರೆಗೆ ಕಳ್ಳನಾಗಲಿ ಆ ಹುಡುಗಿಯಾಗಲಿ ಸಿಕ್ಕಲಿಲ್ಲ ಎಂಬುದೇ.

****

ಕಳೆದ ಸೋಮವಾರ ಬೆಳಗ್ಗೆ ಶ್ರೀಮನ್ಮಹಾರಾಜರವರು ಮೋಟಾರ್ ಗಾಡಿಯಲ್ಲಿ ಸುಮಾರು ೬|| ಗಂಟೆಗೆ ಬೆಂಗಳೂರಿಂದ ಹೊರಟು ೧೦ ಗಂಟೆಗೆ ಸುರಕ್ಷಿತವಾಗಿ ರಾಜಧಾನಿಯನ್ನು ತಲುಪಿದರು. ಅವರ ಸಂಗಡ ವಾಲ್ಟರ್ ಮೆಗ್ರೇಗರವರೂ ಚಿಕ್ಕ ಯುವರಾಜರವರೂ, ಮಿ|| ವೆಂಕಟಕೃಷ್ಣಯ್ಯನವರೂ, ಮಿ|| ರಾಘವೇಂದ್ರರಾಯರೇ ಮುಂತಾದವರೆಲ್ಲಾ ಯುಗಾದಿ ಹಬ್ಬಕ್ಕೆ ಮುಂಚೆ ರಾಜಧಾನಿಗೆ ಬಂದು ಸೇರುವವರಾಗಿದಾರೆ.

****

ಶಿವಗಂಗಾ ಸ್ವಾಮಿಗಳು ಈಗ ಧಾರವಾಡಕ್ಕೆ ಹೋಗಿ ಹಿಂದೂ ಮತಧರ್ಮವಿಚಾರವನ್ನು ಕುರಿತು ಉಪನ್ಯಾಸಮಾಡುತ್ತಿದಾರೆಂತಲೂ ಅಲ್ಲಿನ ಪ್ರಜೆಗಳು ಅವರನ್ನು ಬಹು ಆದರದಿಂದ ಉಪಚರಿಸಿ ಸತ್ಕರಿಸುತ್ತಿದಾರೆಂತಲೂ ತಿಳಿದು ಬಂದಿದೆ ಇವರು ಕನ್ನಡದಲ್ಲೂ ಸಂಸ್ಕೃತದಲ್ಲೂ ಪಂಡಿತರೆನಿಸಿಕೊಂಡಿರುವುದೇನೋ ನಿಜ. ಆದರೆ ಈ ಸ್ವಾಮಿಗಳು ಇಂಗ್ಲಿಷ್ ಎಫ್. ಎ. ಪರೀಕ್ಷೆಯಲ್ಲಿ ತೇರ್ಗಡೆಹೊಂದಿದ್ದಾರೆನ್ನುವುದು ಮಾತ್ರ ಬರೀ ವರ್ತಮಾನವಾಗಿರುತ್ತದೆ.

****

ಬೆಂಗಳೂರು ಚಿಕ್ಕಬಳ್ಳಾಪುರದ ಲೈಟ್ ರೈಲ್ವೆ ಕಂಪೆನಿಯ ಮ್ಯಾನೇಜಿಂಗ್ ಡೈರೆಕ್ಟರುಗಳಾದ ಮಿ|| ಬಿ. ವೆಂಕಟಪತಿ ಐಯ್ಯಂಗಾರರೂ, ಮಿ|| ಕೆ. ರಾಮಸ್ವಾಮೈಯ್ಯನವರೂ, ಏಜಂಟರಾದ ಮಿ|| ಬಿ. ವಿ. ರಾಮಸ್ವಾಮಿಶೆಟ್ಟರೂ ಕಳೆದ ಗುರುವಾರ ದೇವನಹಳ್ಳಿಗೂ, ಭಾನುವಾರ ಚಿಕ್ಕಬಳ್ಳಾಪುರಕ್ಕೂ ಹೋಗಿ ಪುರಜನರನ್ನೂ ಸರ್ಕಾರಿ ಅಧಿಕಾರಿಗಳೇ ಮುಂತಾದವರನ್ನೂ ಕರೆಸಿಕೊಂಡು ಸಭೆಗಳನ್ನು ನಡಿಸಿ, ಆ ಕಂಪನಿಯ ಉದ್ದೇಶ, ಸ್ಥಿತಿಗತಿ, ಪ್ರಯೋಜನಾದಿಗಳನ್ನು ಕುರಿತು ಉಪನ್ಯಾಸಮಾಡಿ, ಸಭಿಕರಿಗೆಲ್ಲಾ ತಿಳುವಳಿಕೆಕೊಟ್ಟು, ಎಲ್ಲರೂ ಕಂಪನಿಯ ಷೇರುಗಳನ್ನು ತಮ್ಮ ಶಕ್ತ್ಯನುಸಾರ ಕೊಂಡುಕೊಳ್ಳಬೇಕೆಂತಲೂ ಇಂಥಾ ದೇಶೀಯ ಪ್ರಯತ್ನವನ್ನು ಪ್ರೋತ್ಸಾಹಪಡಿಸಬೇಕೆಂತಲೂ ಹೇಳಿದರು. ಆದರ ಮೇಲೆ ದೇವನಹಳ್ಳಿಯ ಸಭಿಕರು ೨೫೦ ಷೇರುಗಳನ್ನೂ ಚಿಕ್ಕಬಳ್ಳಾಪುರದವರು ೫೦೦ ಷೇರುಗಳನ್ನೂ ಕೊಂಡುಕೊಂಡಿರುತ್ತಾರೆಂದು ಕೇಳಿ ಸಂತೋಷಿಸುವೆವು.

****

ಮೈಸೂರು ಸಂಸ್ಥಾನದ ದಿವಾನಗಿರಿಯು ಅನಂತಶಯನದ ದಿವಾನ್ ಮಿ|| ಮಾಧವರಾಯರಿಗೆ ನೇಮಕವಾಯಿತೆಂತಲೂ ಅವರು ಈ ತಿಂಗಳ ೧೬ ಕ್ಕೆ ಅಲ್ಲಿಂದ ಹೊರಟು ೧೯ ಕ್ಕೆ ಬೆಂಗಳೂರಿಗೆ ಬರುತ್ತಾರೆಂತಲೂ ಅನಂತಶಯನದ ಬಾತ್ಮಿದಾರರು ಮದರಾಸ್ ಪತ್ರಿಕೆಗೆ ತಂತೀವರ್ತಮಾನ ಕೊಟ್ಟು ತಿಳಿಸಿದಾರೆ ಆದರೆ ಕಲ್ಕತ್ತಾ ಪಟ್ಟಣದಲ್ಲಿ ಪ್ರಕಟವಾಗುವ ಒಂದು ಪತ್ರಿಕೆಯು—ಮೈಸೂರು ಸಂಸ್ಥಾನದ ದಿವಾನಗಿರಿ ವಿಚಾರ ಇನ್ನೂ ಇತ್ಯರ್ಥವಾಗಲಿಲ್ಲವೆಂತಲೂ, ಸರ್ ಕೃಷ್ಣಮೂರ್ತಿಯವರಿಗೆ ಇನ್ನೆರಡು ವರುಷ ದಿವಾನಗಿರಿ ಆಗುವುದೋ, ಅಥವಾ ಮಹಾರಾಜರವರು ಇನ್ನೊಬ್ಬರನ್ನು ಆ ಕೆಲಸಕ್ಕೆ ನೇಮಿಸಿಕೊಳ್ಳುವರೋ ಇನ್ನು ತೀರ್ಮಾನವಾಗಿಲ್ಲವೆಂತಲೂ, ಅಂತು ಇವರಿಬ್ಬರ ಪೈಕಿ ಒಬ್ಬರನ್ನು ಮಹಾರಾಜರವರು ಇಷ್ಟರಲ್ಲೇ ನೇಮಕ ಮಾಡಿಕೊಂಡ ಸಂಗತಿ ಪ್ರಕಟವಾಗುವುದೆಂತಲೂ ಹೇಳುತ್ತದೆ. ಅನಾಯಾಸವಾಗಿ ಈ ವಾರದೊಳಗಾಗಿ ಇತ್ಯರ್ಥ ಪಡುವುದೆಂದು ನಿರೀಕ್ಷಿಸುವೆವು

****

ಬೆಂಗಳೂರು ಪಟ್ಟಣದ ಕೋಟೆಯ ಬಳಿ ಸಾಹುಕಾರ್ ದೊಡ್ಡಣ್ಣಶೆಟ್ಟರು ಒಂದು ಲಕ್ಷ ರೂಪಾಯಿಗಿಂತಲೂ ಹೆಚ್ಚಾಗಿ ಖರ್ಚು ಮಾಡಿ, ಒಂದು ಧರ್ಮ ವಿದ್ಯಾಶಾಲೆಯನ್ನು ಕಟ್ಟಿಸಿರುತ್ತಾರೆ. ಈ ಕಟ್ಟಡದಲ್ಲಿ ಬಾಲಕರಿಗೆ ವಿದ್ಯೆಯನ್ನೂ ಕಸಬುಗಳನ್ನೂ ಕಲಿಸುವುದಕ್ಕೂ ರಾತ್ರಿಹೊತ್ತು ನಾಟಕ ಮೊದಲಾದ ಸಂತೋಷಕಾರ್ಯಗಳನ್ನು ನಡಿಸುವುದಕ್ಕೂ ಬಹಳ ಅನುಕೂಲವಿರುವುದು. ಈ ಕಟ್ಟಡವನ್ನು ಮೊನ್ನೆ ಶನಿವಾರ ಬೆಳಗ್ಗೆ ಶ್ರೀಮನ್ಮಹಾರಾಜರವರು ಪ್ರತಿಷ್ಠೆಮಾಡಿ ಸಾಹುಕಾರ್ ದೊಡ್ಡಣ್ಣಶೆಟ್ಟರ ಔದಾರ್ಯವನ್ನೂ ದೇಶೋನ್ನತಿಗೆ ಸಹಾಯಮಾಡುವುದರಲ್ಲಿ ಅವರಿಗಿರುವ ಪ್ರೀತಿ ಉತ್ಸಾಹಗಳನ್ನೂ ಕುರಿತು ಬಹು ಸಂತೋಷದಿಂದ ಉಪನ್ಯಾಸಮಾಡಿದರು. ತರುವಾಯ ಚೀಫ್‌ಕೋರ್ಟ್ ಜಡ್ಜಿಗಳಾದ ಮಿ|| ಎಚ್. ವಿ. ನಂಜುಂಡಯ್ಯನವರು ಸಾಹುಕಾರ್ ದೊಡ್ಡಣ್ಣನವರ ಪರವಾಗಿ ಶ್ರೀಮನ್ಮಹಾರಾಜರವರನ್ನು ಬಹಳವಾಗಿ ವಂದಿಸಿದ್ದಲ್ಲದೆ, ಈ ಸಂಸ್ಥಾನದಲ್ಲಿ ವಿದ್ಯಾಭಿವೃದ್ಧಿಯೂ ಕಸಬುಗಳ ಜೀರ್ಣೋದ್ಧಾರವೂ ಶ್ರೀಮನ್ಮಹಾರಾಜರವರ ಪ್ರೋತ್ಸಾಹಬಲದಿಂದಲೂ ದಿವಾನ್ ಸರ್ ಕೃಷ್ಣಮೂರ್ತಿಯವರ ಸಾಹಸಕಾರ್ಯಗಳಿಂದಲೂ ದಿನೇದಿನೇ ಸ್ಥಿರಪಟ್ಟು ನೆಲಗೊಳ್ಳುವಂತಾಯಿತೆಂತಲೂ, ಇದರಿಂದ ಈ ಸಂಸ್ಥಾನವು ಇನ್ನೂ ಅತಿಶಯವಾದ ಕೀರ್ತಿಯನ್ನು ಪಡೆಯುವುದರಲ್ಲಿ ಸಂಶಯವಿಲ್ಲವೆಂತಲೂ ತಿಳಿಸಿದರು.

****

ತಿಪಟೂರಿನ ಒಬ್ಬ ಬಾತ್ಮಿದಾರರು ಬರೆಯುವದೇನೆಂದರೆ—ಬಿಸಲು ಅತ್ಯಂತ ತೀಕ್ಷ್ಣವಾಗಿದೆ ಮ್ಯುನಿಸಿಪಲ್ ಕೆಲಸಗಳು ತ್ವರಿತವಾಗಿ ನಡೆಯುತ್ತಾ ಇವೆ ವರ್ತಕರುಗಳಿಗೂ ಪರಸ್ಥಳದವರು ಮುಂತಾದವರಿಗೂ ಕರೆಯಲ್ಲಿ ನೀರಿದೆ. ರೈಲ್‌ಸ್ಟೇಷನ್ ಹತ್ತಿರ ಮಾತ್ರ ನೀರಿನ ಕಷ್ಟ ಬಹಳ. ಪ್ರಸ್ತುತ್ತರು ಆ ಬಳಿ ಒಂದು ಭಾವಿ ತೋಡಿಸಿದರೆ ಅನುಕೂಲ ಈಚೆಗೆ ನಮ್ಮ ಅಮಲ್ದಾರ್ರವರು ವಹಿಸಿರುವ ಮುತುವರ್ಜಿಯಿಂದ ಕೆರೆ ಅಂಗಳ ಮುಂತಾದ ಕಡೆ ಕಡಿಸತ್ಕಾರದ ಸಾಮಿಲ್ ಕೆಲಸ ಮೇಯಾಗುತ್ತಾ ಇದೆ ಕೆಲವರಿಗೆ ಜುಲ್ಮಾನೆಯನ್ನು ವಿಧಿಸಿದರು. ಈ ಊರಲ್ಲಿ ಕಕ್ಕಸುಗಳು ಇಲ್ಲದ್ದರಿಂದ ಬಾಳ ತೊಂದರೆಯಾಗಿದೆ ಕೆಲವು ಕಕ್ಕಸುಗಳನ್ನು ಕಟ್ಟಿಸಿದರೆ ಗ್ರಾಮವು ಒಳ್ಳೇ ಸ್ಥಿತಿಗೆ ಬಂದೀತು. ಹಾಳುಗೋಡೆಗಳಲ್ಲಿ ಕೆಡಿಸುವುದು ತಪ್ಪುತ್ತೆ.—ಚಿಕ್ಕನಾಯಕನ ಹಳ್ಳಿಯ ಕೆಲವರು ಸದಾ ಜೂಜಾಡುತ್ತಾ ಇರುವರು. ಪೋಲೀಸಿನವರು ಈ ವಿಷಯದಲ್ಲಿ ನಿಗಾ ಇಡಬೇಕು. ಈಗ ಹೊಸದಾಗಿ ಬಂದಿರುವ ಡಾಕ್ಟರನ್ನು ಇಲ್ಲೇ ಇರುವಂತೆ ಮಾಡಬೇಕೆಂಬುವದೇ ಈ ಊರಿನ ಅನೇಕರ ಇಷ್ಟವಾಗಿದೆ ಇವರು ತುಂಬಾ ಜನಾನುರಾಗಿಗಳು. ಗ್ರಾಮದಲ್ಲಿರುವ ಹಾಳು ನಿವೇಶನಗಳ ಖಾಲೀಜಾ ವಿಷಯದಲ್ಲಿಯೂ, ಕಕ್ಕಸುಗಳನ್ನು ಕಟ್ಟಿಸುವ ವಿಷಯದಲ್ಲಿಯೂ ಅಮಲ್ದಾರ್ರವರು ಇನ್ನು ಕೊಂಚ ಮುತುವರ್ಜಿ ವಹಿಸಿದರೆ ಒಳ್ಳೇದು ಬಾಡಿಗೆ ಮನೆಗಳು ಸಿಕ್ಕದೆ ಪರಸ್ಥಳದವರು ಶ್ರಮಪಡುತ್ತಾರೆ ಎಂಬುದೇ.

ಪ್ರಿಂಟಿನ ಯಂತ್ರ ಕ್ರಯಕ್ಕೆ ಬಂದಿದೆ.

41-3

ಡಬ್ಬಲ್ ಡಿಮ್ಮಿ ಸೈಜು. ಬಹು ಜಾಗ್ರತೆಯಾಗಿ ಪ್ರಿಂಟುಮಾಡತಕ್ಕದ್ದು; ಉರಳೆಗಳು, ಛೇಸುಗಳು ಚಕ್ರಗಳು ಎಲ್ಲಾ ಸೇರಿ ಕೊಡಲಾಗುತ್ತೆ. ಇದಕ್ಕೆ ಒಂದೆರಡು ಕಡೆ ಸ್ವಲ್ಪ ರಿಪೇರಿ ಆಗಬೇಕಾಗಿರುವುದು. ಅಗ್ಗವಾಗಿ ಕೊಡುತ್ತೇವೆ. ಯಂತ್ರವನ್ನು ಖುದ್ದಾಗಿ ಬಂದು ನೋಡಲೂ ಬಹುದು. ಈ ವಿಳಾಸಕ್ಕೆ ಬರೆದು ಕೇಳಿ:—

ದಿ ಸೂಪರಿಂಟೆಂಡೆಂಟ್, ವೆಸ್ಲಿಯನ್ ಮಿಷನ್ ಪ್ರೆಸ್,
ಮೈಸೂರು.

ನೀವು ವಿಲಾಯತಿಯಿಂದ ಯಾವ ಸಾಮಾನುಗಳನ್ನಾದರೂ ತರಿಸಿಕೊಳ್ಳಬೇಕಾಗಿದ್ದರೆ 19-9

ಬ್ರೈಡ್ ಮತ್ತು ಈಸ್ಟ್ಲೆಂಡ್,

೨೯—೩೫, ಸಿಟಿ ರೋಡ್, ಲಂಡನ್, ಇ. ಸಿ.

ಎಂಬೀ ವಿಳಾಸಕ್ಕೆ ಹಣ ಕಳಿಸಿ, ಕಾಗದ ಬರೆಯಿರಿ. ಈ ಕಂಪನಿಯವರು ಪೇಟೆಂಟ್ ಔಷಧಿಗಳನ್ನೂ, ಆರೋಗ್ಯಕ್ಕೆ ಪುಷ್ಟಿಯನ್ನು ಕೊಡುವಂಥಾ, ಯಂತ್ರಗಳಿಂದಲೇ ತಯಾರಾದಂಥಾ ಆಹಾರಗಳನ್ನೂ, ಇನ್ನೂ ನಾನಾತರದ ಪದಾರ್ಥಗಳನ್ನೂ ಇಟ್ಟು ವಿಕರಿಮಾಡುತ್ತಾರೆ. ಅವರು ಬಹು ವಿಶೇಷವಾದ ಗಮನಕೊಟ್ಟು, ಸಾಧ್ಯವಿದ್ದಷ್ಟೂ ಅಗ್ಗವಾಗಿ, ಬೇಕಾದ ಸಾಮಾನುಗಳನ್ನೇ ಆರಿಸಿ, ಮರಿಟಪಾಲಿನಲ್ಲೇ ಕಳುಹಿಸಿಕೊಡುವರು.

ಪ್ರಶ್ನೋತ್ತರ ರತ್ನಮಾಲಿಕ.

44-4

ಶ್ರೀಮಚ್ಛಂಕರ ಭಗವತ್ಪಾದಾಚಾರ್ಯರಿಂದ ಭಕ್ತಿ, ನೀತಿ, ಜ್ಞಾನಪ್ರತಿಪಾದಕವಾಗಿರುವಂತೆ ರಚಿಸಲ್ಪಟ್ಟ ಈ ಗ್ರಂಥವು ಕನ್ನಡ ಪ್ರಶ್ನೋತ್ತರಗಳೊಡನೆ ಪ್ರಕಟಿಸಲ್ಪಟ್ಟಿದೆ. ಬಾಲ್ಯದಿ ಬಾಲಿಕಾ ಪಾಠಕರನ್ನು ಸುಗುಣಸುಜ್ಞಾನಸಂತರನ್ನಾಗಿ ಮಾಡಲಪೇಕ್ಷಿಸುವ ತಂದೆತಾಯಿಗಳೂ ಉಪಾಧ್ಯಾಯರೂ ಗ್ರಂಥರೂಪವಾದ ಈ ರತ್ನಮಾಲಿಕೆಯಿಂದ ಅಲಂಕರಿಸಬೇಕೆಂದು ಪ್ರಾರ್ಥನೆ. ಡಾಕಲು ಸಹಿತ ೨ ಆ ೬ ಪೈ ೬ ಪ್ರತಿಗಳಿಗೆ ಕಮ್ಮಿ ವಿ. ಪಿ ಮಾಡುವುದಿಲ್ಲ. ೧೨ ಕ್ಕೆ ೧ ಪ್ರತಿ ಇನಾಂ. ಇಷ್ಟವುಳ್ಳವರು ಸ್ಟಾಂಪು ಕಳುಹಿಸಿ

೧. ಸುಬ್ಬನರಸಿಂಹಯ್ಯ, ಶಿವರಾಂಪೇಟೆ ಸ್ಕೂಲ್, ಮೈಸೂರು,

೨. ಎಚ್.ಎ ನರಸಿಂಹೈಯ್ಯಂಗಾರ್, ವಿಜಯಪ್ರೆಸ್, ಮೈಸೂರು.

ದೇವಾಂಗ ವೆಂಕಸ್ವಾಮಿಗೆ ಅಗತ್ಯ ಬೇಕಾದದ್ದು

16-19

ಸ್ವಲ್ಪ ಪ್ರತಿಗಳವೆ ಮಾತ್ರ ಉಳಿದಿವೆ. ಇಂತಿರ ಬಂದಿತ ಸಿಕ್ಕುವದಿಲ್ಲ. ಸ್ವಕುಲಗುರುಗಳು ಮುದ್ದುಸಂಗ ಮುನಿಸ್ವಾಮಿಗಳು ರಚಿಸಿದ್ದು. ಅರ್ಥಸಹಿತ ದೇವಾಂಗಮತಪ್ರಕಾಶಿಕೆ ಸಪ್ತಾವತಾರಕ್ಕೂ ಸುಂದರವಾದ ೧೪ ತಸ್ವೀರಿವೆ ಕ್ರಯ ಸುಲಭಮಾಡಿದೆ ೧೪ ತಸ್ವೀರಿರುವ ಪ್ರತಿ ೧ ಕ್ಕೆ ವಿ. ಪಿ ಖರ್ಚು ಸೇರಿ ರೂ ೨—೮

ತಸ್ವೀರಿಲ್ಲದ ಇದೇ ಪ್ರತಿ ೧ ಕ್ಕೆ ವಿ. ಪಿ. ಖರ್ಚು ಸೇರಿ ರೂ. ೧—೮.

ವೇದ ಉಪನಿಷತ್ತುಗಳ ಅರ್ಥಸಹಿತ ಮೂಲಸ್ತಂಭ ೧ ಕ್ಕೆ ರೂ. ೧—೮

ತಕ್ಷಣ ಮಣಿಆರ್ಡರಿಗೂ ವಿ. ಪಿ. ಯೂ ಕಳುಹಿಸುತ್ತೆ. ವಿಳಾಸ— ಮೈಸೂರು ಜವಳಿ ಅಂಗಡಿ ಬ್ರಹ್ಮಶ್ರೀ ಯಜಮಾನ ಪುಟ್ಟಪಲ್ಲಯ್ಯ.

ಮೈಸೂರು ಪ್ರಿನ್ಸಿಪಲ್ ಮುನ್ಸಿಫ್ ಕೋರ್ಟಿನಲ್ಲಿ.

51-1

೧೯೦೫—೦೬ ನೆ ಇಸವಿ ಸಿವಿಲ್ ನಂಬರು—೩೨೩.

೧೯೦೫—೦೬ ನೆ ಇಸವಿ ಮಿಸ್ ನಂಬರು—೩೯೩.

ವಾದಿಗಳು.	ಪ್ರತಿವಾದಿಗಳು.
೧ ನೆ ಪುಟ್ಟಣ್ಣ,	೧ ನೆ ಬೈರಪ್ಪ,
೨ ನೆ ದೇವಣ್ಣ.	೨ ನೆ ದೊಡ್ಡಯ್ಯ
	೩ ನೆ ದಾಸಣ್ಣ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನೆಂದರೆ — ಮೈಸೂರು ಅಷ್ಟರ್ ಮತ್ತು ಮುಡಿ ವೆಂಕಟಪ್ಪದಲ್ಲಿರುವ ಗಂಗಡಿಕಾರ ಒಕ್ಕಲಿಗರ ಜನಗಳು ಒಂದು ಸಮೂಹವಾಗಿದ್ದುಕೊಂಡು, ಜಾತಿ ವಿಷಯದಲ್ಲಿ ತಪ್ಪು ಮಾಡಿದ್ದು ಬಂದವರ ಕುಳಿಗಳಿಂದ ದಂಡದ ಹಣಗಳನ್ನು ವಸೂಲ್ಮಾಡಿ, ಸಮೂಹದ್ದೇನ ಖರ್ಚು ಮಾಡುವದು, ಉಳಿದದ್ದನ್ನು ಡಿಪಾಜಿಟ್ಟು ಇಡುವದು ಪದ್ಧತಿ ಇದ್ದು, ಈಗ್ಗೆ ಸುಮಾರು ಎರಡೂವರೆ ವರುಷಗಳ ಕೆಳಗೆ ಕಾರಣಾಂತರದಿಂದ ಈ ಸಮೂಹವು ಎರಡು ಪಂಗಡವಾಗಿ, ಮೇಲೆ ನಮೂದಾಗುವ ವಾದಿಗಳು ಪ್ರತಿವಾದಿಗಳ ಮೇಲೆ ಈ ಕೋರ್ಟಿನಲ್ಲಿ ಸದರಿ ಸಮುದಾಯಕ್ಕೆ ಸಂಬಂಧಪಟ್ಟ ಹಣದ ಪೈಕಿ ರೂ. ೨೬—೧೩—೯ ಪೈ ವಸೂಲಮಾಡಿಕೊಳ್ಳಲು ದಾವಾಮಾಡಿದಾರೆ. ಸಿವಿಲ್ ಪ್ರೊಸೀಜರ್ ಕೋಡು ೩೦ ನೆ ಸೆಕ್ಷನ್ ಮೇರೆ ಮೇಲ್ಕಂಡ ದಾವಾವಿಚಾರದಲ್ಲಿ ಪಕ್ಷಕಾರರಾಗಲು ಸದರಿ ಸಮುದಾಯದ ಜನಗಳು ಇಷ್ಟವಿದ್ದರೆ ಕಕ್ಷಿಗಾರರಾಗಿ ಸೇರಬಹುದು.

ಈ ಬಗ್ಗೆ ೧೯೦೬ ನೆ ಇಸವಿ ಮಾರ್ಚಿ ೨೬ ನೇ ತಾರೀಖು ದಿವಿ ೧೧ ಗಂಟೆಗೆ ಈ ಕೋರ್ಟು ರೂಬರೂಬು ಹಾಜರಾಗಿ ಮನವಿ ಮಾಡಿಕೊಳ್ಳತಕ್ಕದ್ದಿದೆ. ಹಾಗೆ ಮಾಡದೆ ತಪ್ಪಿದರೆ ರೂಲಸು ಮೇಲೆ ಇತ್ಯರ್ಥವಾದೀತು.

ತಾ॥ 10—3—1906. B S KRISHNASWAMIENGAR,
Principal Munsiff.

CHAMBERLAIN'S COLIC, CHOLERA AND DIARRHOEA REMEDY.

ಚೇಂಬರ್ಲಿನ್ ಯವರು ಹೊಟ್ಟೆಶೂಲೆ, ಕಾಲರಾ, ಭೇದಿಗಳಿಗೆ ಕಂಡುಹಿಡಿದಿರುವ ಔಷಧವು.

15-10



ಕೆಳ ಹೊಟ್ಟೆಯ ನೋವು, ಬರೀ ಭೇದಿಯಾಗುವುದು, ಆಮಶಂಕೆ, ವಾಂತಿಭೇದಿ ಉಪದ್ರ, ಕೀಲುಗಳ ನೋವು, ಹೊಟ್ಟೆಯ ನಾನಾ ತರದ ಶೂಲೆಗಳು—ಈ ರೋಗಗಳನ್ನೆಲ್ಲಾ ವಾಸಿಮಾಡುತ್ತದೆ ಈ ಪರಮಾಶ್ಚರ್ಯಯುಕ್ತವಾದ ಔಷಧವು ಜನರನ್ನು ಬದುಕಿಸಿರುವಷ್ಟು ಮತ್ತು ನೋವನ್ನು ಬಾಧೆಯನ್ನೂ ನಿವಾರಣೆ ಮಾಡಿರುವಷ್ಟು ಪ್ರಪಂಚದಲ್ಲೇ ಇನ್ಯಾವ ಔಷಧವೂ ಮಾಡಿರುವುದಿಲ್ಲ.

ಜ್ಞಾಪಕದಲ್ಲಿಟ್ಟುಕೊಳ್ಳಿ—ಒಂದು ಹೊತ್ತು ಈ ಔಷಧವನ್ನು ಸೇವಿಸಿದ ಕೂಡಲೇ ಹೊಟ್ಟೆಯೊಳಗಿರುವ ಎಲ್ಲಾ ತರದ ನೋವನ್ನೂ ನಿಲ್ಲಿಸಿಬಿಡುತ್ತದೆ. ಬಹಳ ಕಠಿಣವಾದ ಭೇದಿಯೂ ಕೂಡ ಮೂರೇ ಹೊತ್ತಿನ ಈ ಔಷಧದಿಂದ ನಿರ್ಮೂಲವಾಗಿ ನಿಲ್ಲಿಸುತ್ತದೆ. ಖಂಡಿತವಾಗಿ ವಾಸಿಮಾಡುವುದೇ ಇದರ ಗುಣ.

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ

ಕೈಯಿಂದ ಸ್ವಲ್ಪವೂ ಮುಟ್ಟಿದ್ದಲ್ಲ.

ಇದು ಎಲ್ಲೆಲ್ಲೂ ವಿಕರಿಯಾಗುವುದು ಸಣ್ಣ ಸೀಸೆಗೆ ೧ ರೂಪಾಯಿ ದೊಡ್ಡ ಸೀಸೆಗೆ ೨ ರೂಪಾಯಿ.

ಹೊಸ ಪುಸ್ತಕಗಳು.

36-5

ದೇವರನಾಮಗಳ ಪುಸ್ತಕ—ಇದರಲ್ಲಿ ಹೆಂಗಸರಿಗೆ ಉಪಯೋಗವಾಗುವ ಹಾಡುಗಳು, ದೇವರ ಪೂಜೆಮಾಡುವ ಕೀರ್ತನೆಗಳು, ಅಧ್ಯಾತ್ಮಭಾರತ, ಭಾಗವತ, ಸಂಕ್ಷೇಪ ರಾಮಾಯಣ, ಇವುಗಳು ಇನ್ನೂ ವಿಚಿತ್ರವಾದ ಲಾವಣಿಗಳೂ ಇರುತ್ತೆ ಕ್ರಯ ೮ ಆಣೆ.

ಪಂಚಕಥಾ—ಇದರಲ್ಲಿ ಪ್ರಹ್ಲಾದಚರಿತ್ರೆ, ಮಾಧವನಚರಿತ್ರೆ, ಅನಸೂಯಾಚರಿತ್ರೆ, ದ್ರೌಪದೀ ಮಾನಸಂರಕ್ಷಣವೆಂಬ ದ್ಯೂತಪರ್ವ, ದೂರ್ವಾಸಚರಿತೆ ಎಂಬ ಐದು ಕಥೆಗಳು ಸೇರಿರುತ್ತೆ. ೬ ಆಣೆ

ಸೇತುಮಾಹಾತ್ಮೆಕಥೆ—ಭೀಷ್ಮದಶಕಾಲನಿರ್ಣಯ, ಕನಕದಾಸರ ಕಥೆ ಎಲ್ಲಾ ಒಂದರಲ್ಲಿ ಕ್ರಯ ೩ ಆಣೆ

ಶ್ರೀಮನ್ಮಧ್ವಸಿದ್ಧಾಂತಸಾರ—ದ್ವೈತಾದ್ವೈತ ಮತವಿಷಯಗಳನ್ನು ವಿವರಿಸಲ್ಪಟ್ಟಿದೆ ಕ್ರಯ ೬ ಆಣೆ.

ರುಕ್ಮಾಂಗದ ಮಹಾರಾಜನ ನಾಟಕ—ಕ್ರಯ ೩ ಆಣೆ

ಒಬ್ಬ ಸಿಪಾಯಿಯ ಸಾಹಸಗಳು—"ಒಂದು ಎತ್ತು ಮತ್ತು ಆರು ಗುರುಗಳ ಸುದ್ದಿ"—ಕ್ರಯ ೪ ಆಣೆ.

ಇಪ್ಪತ್ತನೆಯ ಶತಮಾನದ ಹಾಡುಗಳು—ಕ್ರಯ ೨ ಆಣೆ.

ವಿ ಪಿ ಚಾರ್ಜ್ ಸೇರಿ } ವಿಳಾಸ—ಬಿಗಿಬೀರವಿರಲ ನಾರಾಯಣದಾಸ, ೧೨೮ ಆರ ಪೇಟೆ, ಬೆಂಗಳೂರು ಸಿಟಿ.

ಪುದುಚೇರಿ ಜೋಲ್ ಕಾಲು ಗೊಲುಸು ಮತ್ತು ಕಡಗಗಳೂ.

49-3

ಮೇಲಾದ ಜರ್ಮನ್ ಸಿಲ್ವರಿಂದ ಮಾಡಲ್ಪಟ್ಟವೆ. ನೋಟಕ್ಕೆ ಬೆಳ್ಳಿಯವುಗಳಂತೆ ತೋರುವದು ಈ ಒಡವೆಗಳ ಸದಾ ಕೀಲುಗಳಿಗೆ ಬೆಳ್ಳಿ ಪುಡಿಯಿಂದ ಗಿಲೀಟು ಸುಲಭವಾಗಿ ಹಾಕಿ ತೆಗೆಯುವಂತೆ ಮಜಭೂತಾದ ಕೆಲ್ಸಮಾಡಿರುತ್ತದೆ ಬಣ್ಣ ಕೆಡುವದಿಲ್ಲ. ಎಲ್ಲರೂ ಉಪಯೋಗಿಸಬೇಕೆಂಬ ಉದ್ದೇಶದಿಂದ ಸುಲಭಕ್ರಯಕ್ಕೆ ವಿಕ್ರಯಿಸುತ್ತೇವೆ.



ಜೋಲ್‌ಗೊಲಸು.

ನಂ	೧	ದೊಡ್ಡವರಿಗೆ	೨—೮—೦
,,	೨	ಚಿಕ್ಕವರಿಗೆ	೨—೪—೦
,,	೩	ಮಕ್ಕಳಿಗೆ	೨—೦—೦



ಕಾಲುಕಡಗಗಳು.

ನಂ	೧	ದೊಡ್ಡವರಿಗೆ	೧—೮—೦
,,	೨	ಚಿಕ್ಕವರಿಗೆ	೧—೪—೦
,,	೩	ಮಕ್ಕಳಿಗೆ	೧—೦—೦

ಒಂದು ಪತ್ರವನ್ನ ತರಿಸಿಕೊಂಡು ಇತರರದನ್ನು ನಮ್ಮವುಗಳನ್ನು ಪರೀಕ್ಷಿಸಿದರೆ ವ್ಯತ್ಯಾಸವೂ ಅಗ್ಗವೂ ಸಹಾ ತಿಳಿಯಬರುವದು. ನಮ್ಮ ಕಂಪನಿಯಿಂದ ತರಿಸಿಕೊಂಡವುಗಳಿಗೆ ಜವಾಬ್ದಾರಿಯನ್ನು ಮಾಡುವೆವು. ನಮ್ಮ ಹೆಸರನ್ನು ನಮೂದಿಸದೆ ಬರೆದರೆ ನಮ್ಮ ಕಂಪನಿಯ ಒಡವೆಗಳು ದೊರಕಲಾರವು

ವಿಳಾಸ—ಟಿ ಶೀ. ನರಸಯ್ಯ ಅಂಡ್ ಕಂಪನಿ, ಜರ್ಮನ್ ಸಿಲ್ವರ್ ಮರ್ಚೆಂಟ್ಸ್ ನಂ॥ ೩೦, ಕಾಳಿಯತ್ತ ಪಿಳ್ಳೆ ಸ್ಟ್ರೀಟ್, ಸಾಹುಕಾರಪೇಟೆ ಪೋಸ್ಟ್, ಮದ್ರಾಸು.

ತ್ವರೆಮಾಡಿ! ಸುಲಭ ಖರೀದಿ!!

ಕ್ರಯ ರೂ ೪. ಕ್ರಯ ರೂ.

39-1

ಗೆಜ್ಜೆ ನಾಗರ.

ಈ ಗೆಜ್ಜೆನಾಗರವನ್ನ ಎಂದಿಗೂ ಕಪ್ಪಾಗದಿರುವ ಸೀಮೆ ಬೆಳ್ಳಿಯಿಂದ ಅತಿಸುಂದರವಾದ ಫೋಗರೆ ಕೆಲಸವನ್ನು ಮಾಡಿ, ಚಿನ್ನ ಬಂಗಾರದ ಗಿಲೀಟು ಮಾಡಲ್ಪಟ್ಟಿದೆ. ಬಂಗಾರದಿಂದ ಮಾಡಿದ ಗೆಜ್ಜೆನಾಗರಕ್ಕೂ ಇವಕ್ಕೂ ಸ್ವಲ್ಪವೂ ಭೇದ ತೋರುವದಿಲ್ಲ. ಇಷ್ಟು ಸುಲಭ ಖರೀದಿಗೆ ಯಾರಿಂದಲೂ ಇದುವರೆಗೆ ಮಾರಲ್ಪಟ್ಟಿಲ್ಲವು. ಇದನ್ನು ಉಪಯೋಗಿಸಿದರೆ ಗೊತ್ತಾಗುವದು. ನಾವು ಹೊಗಳುವದರಿಂದ ಪ್ರಯೋಜನವಿಲ್ಲ.

ಕ್ರಯ ರೂ. ೪—೦—೦

ವಿ. ಪಿ. ಪಿ ಖರ್ಚು ೦—೩—೦

ಬೇಕಾದವರು ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು.

ಗುರುಬಸವ ಅಂಡುಕಂಪನಿ,
ಸಾಹುಕಾರಪೇಟೆ, ಮದರಾಸ್.

ಬೇಕಾದ ೨೫ ರಂತೆ ಕಮಿಷನ್ ದೊರೆಯುತ್ತೆ! ಬೇಗನೋಡಿ. ಮುಗಿದುಹೋದೀತು. ವ್ಯಸನಪಡಬೇಕಾಗುತ್ತೆ.

51-2

ಈ ಕೆಳಗೆ ನಮೂದಿಸಿರುವ ಎರಡು ರೂಪಾಯಿ ಕ್ರಯದ ಹದಿನೇಳು ಪುಸ್ತಕಗಳನ್ನು ಒಟ್ಟಿಗೆ ತರಿಸಿಕೊಂಡರೆ ೧॥ ರೂಪಾಯಿಗೆ ದೊರಕುವದು. ಆಹಾ! ಪುಸ್ತಕಗಳನ್ನು ಸುಲಭಕ್ಕೆ ಪಡೆಯುವದು ಇದೇ ಸಮಯ.

೧	ಕ್ರಿಮಿವರ್ಗವರ್ಣನೆ ೪೩ ಚಿತ್ರಗಳಿಂದ ಕೂಡಿದ್ದು		೦—೧—೬
೨	ಪಕ್ಷಿಗಳ ಚಿತ್ರಗಳೂ, ಕಥೆಗಳೂ ೪೨	,,	೦—೧—೬
೩	ದೇವವೆಂಬ ನನ್ನ ಮನೆ ೨೩	,,	೦—೧—೬
೪	ಪುರಾತನ ರೋಮನರ ಕಥೆಗಳು ೨೨	,,	೦—೨—೬
೫	ಖಗೋಳ ಸಿದ್ಧಾಂತ ಶಾಸ್ತ್ರವು ೨೮	,,	೦—೧—೬
೬	ಜಾರ್ಜ್ ಸ್ಟೀಫೆನ್ಸನ್ ಚರಿತ್ರೆ ೨	,,	೦—೧—೬
೭	ಪ್ರಾಚೀನಕಾಲದ ವಿಲಕ್ಷಣ ಜೀವರಾಶಿಗಳ ವರ್ಣನೆ ೪೭	,,	೦—೧—೬
೮	ಎಡ್ವರ್ಡ್ ಚಕ್ರವರ್ತಿಯವರ ಚರಿತ್ರೆ ೧೫	,,	೦—೪—೬
೯	ಎಡ್ವರ್ಡ್ ಸಾರ್ವಭೌಮರ ಕಿರೀಟಧಾರಣ ೧೯	,,	೦—೨—೬
೧೦	ದಕ್ಷಿಣ ಆಫ್ರಿಕವೂ ಅದರಲ್ಲಿನ ಜನಗಳೂ ೪೪	,,	೦—೨—೬
೧೧	ಬಹುಪ್ರದೇಶವೂ ಬಹಿರ್ಗಾಯರೂ ೨೮	,,	೦—೨—೬
೧೨	ಘನತೆಯುಳ್ಳ ಸ್ತ್ರೀಯರಚರಿತ್ರೆ ೨೧	,,	೦—೨—೬
೧೩	ಪುರಾತನ ಗ್ರೀಕರ ಕಥೆಗಳು ೧೬	,,	೦—೨—೬
೧೪	ಚಿಕ್ಕವರಿಗೆ ಹೇಳಿದ ಕಥೆಗಳು	,,	೦—೧—೬
೧೫	ಸ್ವಪ್ರಯಾಸ ಫಲದೀಪಿಕೆ ಬಹು ಉತ್ಕೃಷ್ಟವಾದ ಪುಸ್ತಕ		೦—೪—೬
೧೬	ವೇದಗಳ ಕಾಲದಲ್ಲಿ ಹಿಂದೂದೇಶವಿದ್ದ ಸ್ಥಿತಿ ೪ ಚಿತ್ರಗಳಿಂದ ಕೂಡಿದ್ದು	,,	೦—೧—೬
೧೭	ಜಾತಿಪದ್ಧತಿ		೦—೨—೬

ವಿ. ಪಿ ಮೂಲಕ ತರಿಸಿಕೊಳ್ಳಬಹುದು.

ಮ್ಯಾನೇಜರ್, ಸಿ. ಎಲ್. ಎಸ್. ಬುಕ್ ಡಿಪೋ,
ಮೈಸೂರು.

ಮೇಲಿನ ಪುಸ್ತಕಗಳನ್ನು ಬಿಡಿಯಾಗಿಯೂ ತರಿಸಿಕೊಳ್ಳಬಹುದು. ಆದರೆ ಕಮಿಷನ್ ದೊರೆಯುವದಿಲ್ಲ.

ವೃತ್ತಾಂತ ಪತ್ರಿಕೆ

———:೦:———

೧೯೦೬ ನೇ ಇಸವಿ ಮಾರ್ಚಿ ತಾ॥ ೧೫ ನೇ ಗುರುವಾರ.

ರಾಜಧಾನಿಯ ನೀರಿನ ಸರಬರಾಯಿ.

ಮೈಸೂರು ಪಟ್ಟಣದಲ್ಲಿ ಕುಡಿಯುವ ನೀರಿಗೆ ಕೆಲವು ದಿನಗಳಿಂದ ಬಹಳ ಕಷ್ಟವಾಗಿದೆ. ಮ್ಯುನಿಸಿಪಾಲಿಟಿಯವರು ಒದಗಿಸುವ ನೀರು ಪಟ್ಟಣದ ಪ್ರಜೆಗಳಿಗೆ ಸಾಲದು. ಕೆಲವು ಭಾಗಗಳಲ್ಲಿ ಒಂದು ದಿನಕ್ಕೆ ಒಂದೇ ಒಂದು ಘಂಟೆ ಹೊತ್ತು ಬಿಡುತ್ತಾರೆ. ಅದಕಾರಣ ಪ್ರಜೆಗಳು ಬಿಂದಿಗೆ ಮುಂತಾದ ಪಾತ್ರೆಗಳನ್ನು ಹೊತ್ತುಕೊಂಡು ಸಮರಾತ್ರಿಯಲ್ಲಿ ಬೀದಿ ಬೀದಿ ಅಲೆಯುತ್ತಾ ನೀರು ಹೊರುತ್ತಿರುವರು. ಬೆಳಕುಹರಿಯುವದಕ್ಕೆ ಮೊದಲೇ ನಲ್ಲಿಗಳ ಹತ್ತಿರ ಗುಂಪು ಕಟ್ಟಿಕೊಂಡು, ನೀರಿಗಾಗಿ ಕಾದಿರುವರು. ಇನ್ನು ಕೆಲವರು ನಲ್ಲಿಗಳ ನೀರು ಬಂದ ಮೇಲೆ ಮುಚ್ಚಿಬಿಟ್ಟಿದ್ದ ಭಾವಿಗಳನ್ನು ಪುನಃ ತೆರೆದು, ಬಹು ಕಾಲದಿಂದ ಉಪಯೋಗಿಸದೆ ಬಿಟ್ಟಿದ್ದ ನೀರನ್ನೇ ಸೇದಿ ಉಪಯೋಗಿಸಲಾರಂಭಿಸಿದಾರೆ.

ಹೀಗೆ ರಾಜಧಾನಿಗೆ ನೀರಿನ ಸರಬರಾಯಿ ಸಾಲದೆ ಇರುವುದಕ್ಕೆ ಕಾರಣವೇನೆಂದು ವಿಚಾರಿಸುವಲ್ಲಿ ಬೇಸಿಗೆ ಯಾದುದರಿಂದ ಕಾವೇರಿಯಲ್ಲಿ ನೀರು ಈ ಸಲ ಬಹಳ ಕಡಿಮೆಯಾಗಿದೆ ಎಂತಲೂ ಈ ನೀರಿನ ಶಕ್ತಿದಿಂದಲೇ ಯಂತ್ರವನ್ನು ನಡಿಸಿ, ಅದೇ ನೀರನ್ನು ರಾಜಧಾನಿಗೆ ನಲ್ಲಿಯ ಮೂಲಕ ಎತ್ತಿ ತರಬೇಕೆಂತಲೂ, ಹೊಳೆಯಲ್ಲಿ ಪ್ರವಾಹವು ತುಂಬಾ ಕಮ್ಮಿಯಾಗಿರೋಣದಿಂದ ನೀರು ಬರುವುದಿಲ್ಲವೆಂತಲೂ ತಿಳಿದುಬರುತ್ತದೆ. ಇದನ್ನು ನೋಡಲಾಗಿ ರಾಜಧಾನಿಗೆ ನೀರನ್ನು ಸರಬರಾಯಿ ಮಾಡತಕ್ಕ ಏರ್ಪಾಡು ಯೋಗ್ಯವಾದದ್ದಾಗಿಲ್ಲವೆಂದು ಕಾಣುವುದು. ಯಾವಕಾಲದಲ್ಲಿ ಪ್ರಜೆಗಳಿಗೆ ನೀರು ಬಹಳ ಅಗತ್ಯವಾಗಿ ಬೇಕೋ ಆ ಕಾಲದಲ್ಲೇ ನೀರು ಎತ್ತುವ ಯಂತ್ರದ ಶಕ್ತಿಯು ನಿಶ್ಶಕ್ತಿಯಾಗುತ್ತದೆ. ಇಂಥಾ ಏರ್ಪಾಡಿಗೆ ಸರ್ಕಾರದವರೂ ಮ್ಯುನಿಸಿಪಾಲಿಟಿಯವರೂ ಇದುವರೆಗೆ ನಾಲ್ಕು ಲಕ್ಷ ರೂಪಾಯಿತನಕ ಖರ್ಚುಮಾಡಿರುವರು.

ಸದ್ಯ ಪಟ್ಟಣದ ಒಂದು ಭಾಗಕ್ಕೆ ಕಾವೇರಿ ನೀರನ್ನು ಕೊಡುತ್ತಾರೆ. ತಗ್ಗಾಗಿರುವ ಭಾಗಗಳಿಗೆ ಕುಕ್ಕರಹಳ್ಳಿ ಕೆರೆಯ ನೀರನ್ನು ಕೊಡುವರು. ಕುಕ್ಕರಹಳ್ಳಿ ಕೆರೆಗೆ ನೀರು ಬರತಕ್ಕ ಮೈದಾನವು ಈಗ ಮೊದಲಿನ ಹಾಗಿಲ್ಲ. ಅದರಲ್ಲಿ ಈಗ ಅರಮನೆ ಬಂಗಲೆಯೂ ಅನೇಕ ವಾಸದ ಮನೆಗಳೂ ಇರುತ್ತವೆ. ಆದ್ದರಿಂದ ಆ ಪ್ರದೇಶವು ನಿರ್ಮಲವಾಗಿದೆ ಎಂದು ಯಾರೂ ಹೇಳಲಾರರು. ಇದಲ್ಲದೆ ಈ ಕೆರೆಯ ನೀರನ್ನು ಚನ್ನಾಗಿ ಶೋಧಿಸುವುದಕ್ಕೂ ಮಾರ್ಗವಿಲ್ಲ. ಇದನ್ನೆಲ್ಲಾ ನೋಡಲಾಗಿ ಮೈಸೂರು ಪಟ್ಟಣಕ್ಕೆ ಯಾವಾಗ ಭಯಂಕರವಾದ ಸ್ಥಿತಿ ಪ್ರಾಪ್ತವಾಗುವಂತೆ ಕಾಣುವುದು. ಈ ನೀರಿನಲ್ಲೇನಾದರೂ ವಾಂತಿಭೇದಿಯನ್ನುಂಟುಮಾಡತಕ್ಕ ಕ್ರಿಮಿಗಳು ಸೇರಿಕೊಂಡ ಪಕ್ಷದಲ್ಲಿ ಈ ಪಟ್ಟಣಕ್ಕೆ ಎಂಥಾ ಅಪಾರವಾದ ಗಂಡಾಂತರ ಪ್ರಾಪ್ತವಾಗುವುದೋ ಯಾರುತಾನೇ ಹೇಳಬಲ್ಲರು?

ಈಗ ಬೇಸಿಗೆಯು ಪ್ರಾರಂಭವಾಗಿದೆ. ಇನ್ನೂ ಆರೇಳು ವಾರಗಳ ತನಕ ಬಿಸಲಿನ ಧಗೆಯು ಕಡಿಮೆಯಾಗುವುದಾಗಲಿ ಮಳೆ ಬಂದೀತೆಂದಾಗಲಿ ನಿರೀಕ್ಷಿಸುವುದಕ್ಕಿಲ್ಲ. ಆದ್ದರಿಂದ ಈಗ ಕುಡಿಯುವ ನೀರಿನ ಗೊಟ್ಟಿನಿಂದ ರಾಜಧಾನಿಗೆ ಪ್ರಾಪ್ತವಾಗಬಹುದಾದ ದುಷ್ಕಾಲದ ವಿಷಯವನ್ನು ಮ್ಯುನಿಸಿಪಾಲಿಟಿಯವರು ಜಾಗ್ರತೆಯಾಗಿ ಗವರ್ನಮೆಂಟಿಗೆ ಅರಿಕೆಮಾಡಿ, ಅದರ ನಿವಾರಣೆಗೆ ತಕ್ಕ ಏರ್ಪಾಡು ಮಾಡಬೇಕೆಂದು ಕೇಳಿಕೊಳ್ಳಬೇಕಾಗಿದೆ. ಬೆಳಗೊಳದಲ್ಲಿರುವ ಯಂತ್ರಗಳಿಂದ ಇಂಥಾ ಬೇಸಿಗೇ ಕಾಲದಲ್ಲಿ ನೀರು ಎತ್ತುವುದು ಸಾಧ್ಯವಲ್ಲದೆಹೋದಲ್ಲಿ ಕೆಲವು ಕಾಲದ ಮಟ್ಟಿಗಾದರೂ ಆ ಯಂತ್ರಗಳು ಹಬೆಯ ಸಹಾಯದಿಂದ ನಡೆಯುವಂತೆಯೂ ಆ ಮೂಲಕ ರಾಜಧಾನಿಗೆ ಬೇಕಾಗುವಷ್ಟು ನೀರು ಕೊರತೆಯಿಲ್ಲದೆ ಸರಬರಾಜಾಗುವಂತೆಯೂ ಏರ್ಪಾಡು ಮಾಡಬೇಕು. ರಾಜಧಾನಿಯಾದ ಮೈಸೂರು ಪಟ್ಟಣದಲ್ಲೇ ಬೇಕಾದಾಗ ನೀರಿಗೇ ಅಭಾವವಾದರೆ ಪ್ರಜೆಗಳ ಕಷ್ಟ ಅಪಾರವೆನಿಸುವುದು. ಅಂತು ಈ ವಿಚಾರಕ್ಕೆ ಮ್ಯುನಿಸಿಪಾಲಿಟಿಯವರೂ ಗವರ್ನಮೆಂಟಿನವರೂ ಕೂಡಲೇ ಗಮನಕೊಟ್ಟು, ಸಾಧ್ಯವಾದಷ್ಟು ಬೇಗ ತೃಪ್ತಿಕರವಾದ ಏರ್ಪಾಡನ್ನು ಮಾಡುವರೆಂದು ನಿರೀಕ್ಷಿಸುತ್ತೇವೆ.

ಫ್ರಾನ್ಸಿನಲ್ಲಿ ಗಣಿಯ ಅನಾಹುತವು.

ಫ್ರಾನ್ಸ್ ಪ್ರಭುತ್ವಕ್ಕೆ ಸೇರಿದ ಲಿಲ್ಲೆ ಎಂಬ ಪಟ್ಟಣದಲ್ಲಿ ಕೊರಿಯರ್ರೀಸ್ ಎಂಬ ಭಾರೀ ಕಲ್ಲಿದ್ದಲ ಗಣಿಯಲ್ಲಿ ಕಳೆದ ವಾರ ಬಹು ಭಯಂಕರವಾದ ಅನಾಹುತ ಸಂಭವಿಸಿತೆಂದು ತಂತೀವರ್ತಮಾನ ಬಂದಿದೆ. ಆ ಸಮಯದಲ್ಲಿ ೧,೮೦೦ ಜನರು ಗಣಿಯೊಳಗೆ ಕೆಲಸಮಾಡುತ್ತಿದ್ದರು. ಈ ಪೈಕಿ ೧,೧೯೩ ಮಂದಿ ಪ್ರಾಣಕೊಟ್ಟರೆಂದು ತಿಳಿಯುವುದು. ಅವರಿಂದ ಜೀವನಮಾಡುತ್ತಿದ್ದ ಸುಮಾರು ೨೫೦೦೦ ಮಂದಿ ಹೆಂಗಸರು ಮಕ್ಕಳೇ ಮೊದಲಾದ ದೇಹಸಂಬಂಧಿಗಳು ಆ ಗಣಿಯ ಬಳಿ ಗುಂಪುಸೇರಿ ನಾನಾ ಪ್ರಕಾರವಾಗಿ ಗೋಳಾಡುತ್ತಿದಾರೆ. ಈ ಗಣಿಯು ಭೂಮಿಯೊಳಗೆ ೭೦೦ ಅಡಿ ಆಳವಾಗಿರುವುದು. ಒಳಗಿನಿಂದ ಶವಗಳನ್ನು ಹೊರಕ್ಕೆ ಸಾಗಿಸುವುದು ಮಹಾ ಪ್ರಯಾಸವಾಗಿರುತ್ತದೆ. ಅದರಲ್ಲಿ ಕೆಲವು ದಿನಗಳಿಂದಲೂ ಯಾರಿಗೂ ಗೋಚರವಿಲ್ಲದಂತೆ ಒಂದುಕಡೆ ಬೆಂಕಿ ಹುಟ್ಟಿ ಹೊಗೆಯಾಡುತ್ತಿದ್ದು ಹಾಗೂ ಅದರ ಬಿಸಿಯಿಂದ ವಿಷಗಾಳಿಯು ಹತ್ತಿಕೊಂಡು ಮಹಾ ಶಬ್ದದೊಡನೆ ಹಾರಿ ಅನಾಹುತವನ್ನುಂಟುಮಾಡಿತೆಂತಲೂ ಊಹಿಸಲ್ಪಟ್ಟಿದೆ. ಗಣಿಯೊಳಗೆಲ್ಲಾ ಈಗ ವಿಷಗಾಳಿಗಳು ತುಂಬಿಕೊಂಡಿರುವುದರಿಂದ ಹೆಣಗಳನ್ನು ತರುವುದೂ ತುಂಬಾ ಅಪಾಯಕರವಾಗಿದೆ. ಆದರೆ ಇದುವರೆಗೆ ತೊಂಬತ್ತು ಹೆಣಗಳನ್ನು ಮಾತ್ರ ಗಣಿಯಿಂದ ಹೊರಗೆ ತಂದಿರುತ್ತಾರೆ. ಗಣಿಯ ಅನಾಹುತಗಳು ಇದುವರೆಗೆ ಅನೇಕ ಕಡೆಗಳಲ್ಲಿ ನಡೆದಿದ್ದಾಗ್ಯೂ ಆ ಪೈಕಿ ಇದೇ ಅತ್ಯಂತ ಘೋರವಾದದ್ದೆನ್ನುವುದಕ್ಕೆ ಸಂಶಯವಿಲ್ಲ. ಇದು ಫ್ರಾನ್ಸಿನಲ್ಲೆಲ್ಲಾ ಅಪಾರವಾದ ದುಃಖವನ್ನೂ ಪ್ರಪಂಚದಲ್ಲೆಲ್ಲಾ ವಿಶೇಷವಾದ ಕನಿಕರವನ್ನೂ ಉಂಟುಮಾಡಿರುವುದು. ಇಂಥಾ ಅನಾಹುತಕ್ಕೆ ಸಿಕ್ಕಿ ಮೃತಪಟ್ಟವರ ಸಂಸಾರಗಳನ್ನು ಕಾಪಾಡುವುದಕ್ಕೋಸ್ಕರ ಆಗಲೇ ಒಂದು ಧರ್ಮಫಂಡು ಏರ್ಪಾಡಾಗಿ ಹಣ ವಸೂಲಾಗುತ್ತಿದೆ.

ಒಳದೇಶದ ವೃತ್ತಾಂತಗಳು.

ಕಾಶೀಪಟ್ಟಣದಲ್ಲಿ ಮಿಸೆಸ್ ಬೆಸೆಂಟ್‌ಯವರು ಸ್ಥಾಪಿಸಿ ನಡಸುತ್ತಿರುವ ಸೆಂಟ್ರಲ್ ಹಿಂದೂ ಕಾಲೆಜ್ ಎಂಬ ವಿದ್ಯಾಶಾಲೆಯ ಸಹಾಯಕ್ಕೆ ನಮ್ಮ ಶ್ರೀಮನ್ಮಹಾರಾಜರವರು ೧೦,೦೦೦ ರೂಪಾಯಿಯನ್ನು ಧರ್ಮಾರ್ಥವಾಗಿ ಕಳುಹಿಸಿರುತ್ತಾರೆ.

❖❖❖❖

ಬ್ರಿಟಿಷ್ ರೆಸಿಡೆಂಟರಾದ ಮೇ॥ ಎಸ್. ಎಂ. ಫ್ರೇಸರ್‌ಯವರೂ ಅವರ ಅಸಿಸ್ಟೆಂಟರೂ ಕೊಡಗಿನ ಪ್ರಾಂತ್ಯ ಸಂಚಾರಮಾಡಿಕೊಂಡು, ಮೊನ್ನೆ ಶನಿವಾರ ಬೆಳಿಗ್ಗೆ ೮ ಗಂಟೆಗೆ ರಾಜಧಾನಿಯನ್ನು ತಲಪಿ, ಭೋಜನಾದಿಗಳನ್ನು ತೀರಿಸಿಕೊಂಡು ಸಂಧ್ಯಾ ೬॥ ಗಂಟೆ ರೈಲ್‌ಗಾಡಿಯಲ್ಲಿ ಬೆಂಗಳೂರಿಗೆ ಪ್ರಯಾಣಮಾಡಿದರು.

❖❖❖❖

ಮೈಸೂರು ಲೋವರ್‌ಸೆಕಂಡರಿ ಪರೀಕ್ಷೆಗೆ ಇಟ್ಟಿರುವ ಕನ್ನಡ ಗದ್ಯಪದ್ಯಗಳ ಪ್ರತಿಗಳು ಕೆಲವು ವಿದ್ಯಾರ್ಥಿಗಳಿಗೆ ಸಿಕ್ಕಲಿಲ್ಲವೆಂತಲೂ ಸರ್ಕಾರದವರು ಹೆಚ್ಚು ಪ್ರತಿಗಳನ್ನು ತಯಾರುಮಾಡಿಸಬೇಕಾಗಿದೆ ಎಂತಲೂ ಒಬ್ಬ ಬಾತ್ಮೀದಾರರು ಬರೆಯುತ್ತಾರೆ. ಇದರ ನಿಜಸ್ಥಿತಿಯನ್ನು ವಿದ್ಯಾಭ್ಯಾಸದ ಇಲಾಖೆಯವರು ತನಿಖೆಮಾಡಬೇಕಾಗಿದೆ.

❖❖❖❖

ಕಳೆದವಾರ ದೊಡ್ಡಬಳ್ಳಾಪುರದ ಕಸಬೆಯಲ್ಲಿ ಹಗಲು ೮ ಗಂಟೆಯ ಸಮಯದಲ್ಲೇ ಹಾವು, ಮುಂಗಸಿಗಳು ಒಂದರ ಮೇಲೊಂದು ಬಿದ್ದು ಜಗಳವಾಡುತ್ತಿದ್ದನ್ನು ಕೆಲವು ಜನರು ನಿಂತು ನೋಡಿದರೆಂತಲೂ, ಕಡೆಗೆ ಎರಡೂ ತಪ್ಪಿಸಿಕೊಂಡು ಓಡಿಹೋದುವೆಂತಲೂ, ಅವೆರಡನ್ನೂ ಹೊಡೆಯಬೇಕೆಂದು ಮಾಡಿದ ಪ್ರಯತ್ನ ಸಫಲವಾಗಲಿಲ್ಲವೆಂತಲೂ ಕೇಳುತ್ತೇವೆ.

❖❖❖❖

ಅರಸೀಕೆರೆ ತಾಲ್ಲೂಕು ಬಾಣಾವರದ ಒಬ್ಬ ಬಾತ್ಮೀದಾರರು ಬರೆಯುವುದು—ಒಂದು ಹುಲಿಯು ರಾತ್ರಿವೇಳೆ ಈ ಊರಿನೊಳಕ್ಕೆ ಪ್ರವೇಶಿಸಿ ಈ ವರೆಗೆ ೨—೩ ಜಾನುವಾರುಗಳನ್ನು ತಿಂದುಬಿಟ್ಟಿತು. ಈ ದುಷ್ಟಮೃಗವನ್ನು ಕೊಂದುಹಾಕುವದಕ್ಕೆ ಶಿಕಾರಿಗಾರರು ಪ್ರಯತ್ನಪಡಬೇಕು. ಈ ಸಮಯದಲ್ಲಿ ಮೊಹರಂ ಇಲಿಗಳ ಕಾಟವು ಜಾಸ್ತಿ ಆಗಿದೆ. ನಿಜವಾದ ಹುಲಿಯನ್ನು ಯಾರೂ ಕೇಳುವವರಿಲ್ಲ ಎಂಬುದೇ.

❖❖❖❖

ಒಬ್ಬ ಬಾತ್ಮೀದಾರರು ಬರೆಯುವುದೇನೆಂದರೆ—ಕಳೆದ ಫೆಬ್ರುವರಿ ೨೩ ರಲ್ಲಿ ಮಳವಳ್ಳಿ ತಾಲ್ಲೂಕು ಅವನಿ ಗ್ರಾಮದಲ್ಲಿ ದೊಡ್ಡ ಪರಿಷೆ ನಡೆಯಿತು. ಆಗ ೧೨ ವರುಷದ ಒಬ್ಬ ವೈಶ್ಯರ ಹುಡುಗಿಯು ೩೦೦ ರೂಪಾಯಿನ ಒಡವೆಗಳನ್ನು ಇಟ್ಟುಕೊಂಡು, ಗುಂಪಿನಲ್ಲಿರುವಾಗ್ಗ ಕಳ್ಳನು ಅವಳನ್ನು ಎಲ್ಲಿಗೋ ಎತ್ತಿಕೊಂಡು ಹೋಗಿಬಿಟ್ಟನು. ಇದುವರೆಗೆ ಕಳ್ಳನಾಗಲಿ ಆ ಹುಡುಗಿಯಾಗಲಿ ಸಿಕ್ಕಲಿಲ್ಲ ಎಂಬುದೇ.

❖❖❖❖

ಕಳೆದ ಸೋಮವಾರ ಬೆಳಿಗ್ಗೆ ಶ್ರೀಮನ್ಮಹಾರಾಜರವರು ಮೋಟಾರ್ ಗಾಡಿಯಲ್ಲಿ ಸುಮಾರು ೬॥ ಗಂಟೆಗೆ ಬೆಂಗಳೂರಿಂದ ಹೊರಟು ೧೧ ಗಂಟೆಗೆ ಸುರಕ್ಷಿತವಾಗಿ ರಾಜಧಾನಿಯನ್ನು ತಲಪಿದರು. ಅವರ ಸಂಗಡ ಡಾಕ್ಟರ್ ಮೆಗ್ಗಾರರವರೂ ಬಂದರು. ಯುವರಾಜರವರೂ, ಮೇ॥ ವೆಂಕಟಕೃಷ್ಣಯ್ಯನವರೂ, ಮೇ॥ ರಾಘವೇಂದ್ರರಾಯರೇ ಮುಂತಾದವರೆಲ್ಲಾ ಯುಗಾದಿ ಹಬ್ಬಕ್ಕೆ ಮುಂಚೆ ರಾಜಧಾನಿಗೆ ಬಂದು ಸೇರುವವರಾಗಿದಾರೆ.

❖❖❖❖

ಶಿವಗಂಗಾ ಸ್ವಾಮಿಗಳು ಈಗ ಧಾರವಾಡಕ್ಕೆ ಹೋಗಿ ಹಿಂದೂ ಮತಧರ್ಮವಿಚಾರವನ್ನು ಕುರಿತು ಉಪನ್ಯಾಸಮಾಡುತ್ತಿದಾರೆಂತಲೂ ಅಲ್ಲಿನ ಪ್ರಜೆಗಳು ಅವರನ್ನು ಬಹು ಆದರದಿಂದ ಉಪಚರಿಸಿ ಸತ್ಕರಿಸುತ್ತಿದಾರೆಂತಲೂ ತಿಳಿದು ಬಂದಿದೆ. ಇವರು ಕನ್ನಡದಲ್ಲೂ ಸಂಸ್ಕೃತದಲ್ಲೂ ಪಂಡಿತರೆನಿಸಿಕೊಂಡಿರುವದೇನೋ ನಿಜ. ಆದರೆ ಈ ಸ್ವಾಮಿಗಳು ಇಂಗ್ಲೀಷ್ ಎಫ್. ಎ. ಪರೀಕ್ಷೆಯಲ್ಲಿ ತೇರ್ಗಡೆಹೊಂದಿದ್ದಾರೆನ್ನುವುದು ಮಾತ್ರ ಬರೀ ವರ್ತಮಾನವಾಗಿರುತ್ತದೆ.

❖❖❖❖

ಬೆಂಗಳೂರು ಚಿಕ್ಕಬಳ್ಳಾಪುರದ ಲೈಟ್ ರೈಲ್ವೆ ಕಂಪೆನಿಯ ಮ್ಯಾನೇಜಿಂಗ್ ಡೈರೆಕ್ಟರುಗಳಾದ ಮೆ॥ ಟಿ. ವೆಂಕಟಪತಿ ಐಯ್ಯಂಗಾರರೂ, ಮೆ॥ ಕೆ. ರಾಮಸ್ವಾಮಯ್ಯಂಗಾರರೂ, ಏಜೆಂಟರಾದ ಮೆ॥ಟಿ ವಿ ರಾಮಸ್ವಾಮಿಚೆಟ್ಟರೂ ಕಳೆದ ಗುರುವಾರ ದೇವನಹಳ್ಳಿಗೂ, ಭಾನುವಾರ ಚಿಕ್ಕಬಳ್ಳಾಪುರಕ್ಕೂ ಹೋಗಿ ಪುರಜನರನ್ನೂ ಸರ್ಕಾರಿ ಅಧಿಕಾರಿಗಳೇ ಮುಂತಾದವರನ್ನೂ ಕರೆಸಿಕೊಂಡು ಸಭೆಗಳನ್ನು ನಡಿಸಿ, ಆ ಕಂಪೆನಿಯ ಉದ್ದೇಶ, ಸ್ಥಿತಿಗತಿ, ಪ್ರಯೋಜನಾದಿಗಳನ್ನು ಕುರಿತು ಉಪನ್ಯಾಸಮಾಡಿ, ಸಭಿಕರಿಗೆಲ್ಲಾ ತಿಳುವಳಿಕೆಕೊಟ್ಟು, ಎಲ್ಲರೂ ಕಂಪೆನಿಯ ಷೇರುಗಳನ್ನು ತಮ್ಮ ಶಕ್ತ್ಯನುಸಾರ ಕೊಂಡುಕೊಳ್ಳಬೇಕೆಂತಲೂ ಇಂಥಾ ದೇಶೀಯ ಪ್ರಯತ್ನವನ್ನು ಪ್ರೋತ್ಸಾಹಪಡಿಸಬೇಕೆಂತಲೂ ಹೇಳಿದರು. ಆದರ ಮೇಲೆ ದೇವನಹಳ್ಳಿಯ ಸಭಿಕರು ೨೫೦ ಷೇರುಗಳನ್ನೂ ಚಿಕ್ಕಬಳ್ಳಾಪುರದವರು ೪೦೦ ಷೇರುಗಳನ್ನೂ ಕೊಂಡುಕೊಂಡಿರುತ್ತಾರೆಂದು ಕೇಳಿ ಸಂತೋಷಿಸುವೆವು.

❖❖❖❖

ಮೈಸೂರು ಸಂಸ್ಥಾನದ ದಿವಾನಗಿರಿಯು ಅನಂತಶಯನದ ದಿವಾನ್ ಮೇ॥ ಮಾಧವರಾಯರಿಗೆ ನೇಮಕವಾಯಿತೆಂತಲೂ ಇವರು ಈ ತಿಂಗಳ ೨೭ ಕ್ಕೆ ಅಲ್ಲಿಂದ ಹೊರಟು ೩೧ ಕ್ಕೆ ಬೆಂಗಳೂರಿಗೆ ಬರುತ್ತಾರೆಂತಲೂ ಅನಂತಶಯನದ ಬಾತ್ಮೀದಾರರು ಮದರಾಸ್ ಪತ್ರಿಕೆಗೆ ತಂತೀವರ್ತಮಾನ ಕೊಟ್ಟು ತಿಳಿಸಿದಾರೆ. ಆದರೆ ಕಲ್ಕತ್ತಾ ಪಟ್ಟಣದಲ್ಲಿ ಪ್ರಕಟವಾಗುವ ಒಂದು ಪತ್ರಿಕೆಯು—ಮೈಸೂರು ಸಂಸ್ಥಾನದ ದಿವಾನಗಿರಿ ವಿಚಾರ ಇನ್ನೂ ಇತ್ಯರ್ಥವಾಗಲಿಲ್ಲವೆಂತಲೂ, ಸರ್ ಕೃಷ್ಣಮೂರ್ತಿಯವರಿಗೆ ಇನ್ನೊಂದು ವರುಷ ದಿವಾನಗಿರಿ ಆಗುವುದೋ, ಅಥವಾ ಮಹಾರಾಜರವರು ಇನ್ನೊಬ್ಬರನ್ನು ಆ ಕೆಲಸಕ್ಕೆ ನೇಮಿಸಿಕೊಳ್ಳುವರೋ ಇನ್ನೂ ತೀರ್ಮಾನವಾಗಲಿಲ್ಲವೆಂತಲೂ, ಅಂತು ಇವರಿಬ್ಬರ ಪೈಕಿ ಒಬ್ಬರನ್ನು ಮಹಾರಾಜರವರು ಇಷ್ಟರಲ್ಲೇ ನೇಮಕ ಮಾಡಿಕೊಂಡ ಸಂಗತಿ ಪ್ರಕಟವಾಗುವುದೆಂತಲೂ ಹೇಳುತ್ತಿದೆ. ಅಂತು ಯಾವದೂ ಈ ವಾರದೊಳಗಾಗಿ ಇತ್ಯರ್ಥ ಪಡುವುದೆಂದು ನಿರೀಕ್ಷಿಸುವೆವು.

❖❖❖❖

ಬೆಂಗಳೂರು ಪಟ್ಟಣದ ಕೋಟೆಯ ಬಳಿ ಸಾಹುಕಾರ್ ದೊಡ್ಡಣ್ಣಶೆಟ್ಟರು ಒಂದು ಲಕ್ಷ ರೂಪಾಯಿಗಿಂತಲೂ ಹೆಚ್ಚಾಗಿ ಖರ್ಚುಮಾಡಿ, ಒಂದು ಧರ್ಮ ವಿದ್ಯಾಶಾಲೆಯನ್ನು ಕಟ್ಟಿಸಿರುತ್ತಾರೆ. ಈ ಕಟ್ಟಡದಲ್ಲಿ ಬಾಲಕರಿಗೆ ವಿದ್ಯವನ್ನೂ ಕಸಬುಗಳನ್ನೂ ಕಲಿಸುವುದಕ್ಕೂ ರಾತ್ರಿಹೊತ್ತು ನಾಟಕ ಮೊದಲಾದ ಸಂತೋಷಕಾರ್ಯಗಳನ್ನು ನಡಸುವುದಕ್ಕೂ ಬಹಳ ಅನುಕೂಲವಿರುವುದು. ಈ ಕಟ್ಟಡವನ್ನು ಮೊನ್ನೆ ಶನಿವಾರಬೆಳಿಗ್ಗೆ ಶ್ರೀಮನ್ಮಹಾರಾಜರವರು ಪ್ರತಿಷ್ಠೆಮಾಡಿ ಸಾಹುಕಾರ್ ದೊಡ್ಡಣ್ಣಶೆಟ್ಟರ ಔದಾರ್ಯವನ್ನೂ ದೇಶೋನ್ನತಿಗೆ ಸಹಾಯಮಾಡುವುದರಲ್ಲಿ ಅವರಿಗಿರುವ ಪ್ರೀತಿ ಉತ್ಸಾಹಗಳನ್ನೂ ಕುರಿತು ಬಹು ಸಂತೋಷದಿಂದ ಉಪನ್ಯಾಸಮಾಡಿದರು. ತರುವಾಯ ಟ್ರಸ್ಟಿಗಳಲ್ಲೊಬ್ಬರಾದ ಮೆ॥ ಎಚ್ ವಿ. ನಂಜುಂಡಯ್ಯನವರು ಸಾಹುಕಾರ್ ದೊಡ್ಡಣ್ಣನವರ ಪರವಾಗಿ ಶ್ರೀಮನ್ಮಹಾರಾಜರವರನ್ನು ಬಹಳವಾಗಿ ವಂದಿಸಿದ್ದಲ್ಲದೆ, ಈ ಸಂಸ್ಥಾನದಲ್ಲಿ ವಿದ್ಯಾಭಿವೃದ್ಧಿಯೂ ಕಸಬುಗಳ ಜೀರ್ಣೋದ್ಧಾರವೂ ಶ್ರೀಮನ್ಮಹಾರಾಜರವರ ಪ್ರೋತ್ಸಾಹಬಲದಿಂದಲೂ ದಿವಾನ್ ಸರ್ ಕೃಷ್ಣಮೂರ್ತಿಯವರ ಸಾಹಸಕಾರ್ಯಗಳಿಂದಲೂ ದಿನೇದಿನೇ ಸ್ಥಿರಪಟ್ಟು ನೆಲಗೊಳ್ಳುತ್ತಿರುವುವೆಂತಲೂ, ಇದರಿಂದ ಈ ಸಂಸ್ಥಾನವು ಇನ್ನೂ ಅತಿಶಯವಾದ ಕೀರ್ತಿಯನ್ನು ಪಡೆಯುವುದರಲ್ಲಿ ಸಂಶಯವಿಲ್ಲವೆಂತಲೂ ತಿಳಿಸಿದರು.

❖❖❖❖

ತಿಪಟೂರಿನ ಒಬ್ಬ ಬಾತ್ಮೀದಾರರು ಬರೆಯುವುದೇನೆಂದರೆ—ಬಿಸಲು ಅತ್ಯಂತ ತೀಕ್ಷ್ಣವಾಗಿದೆ. ಮ್ಯುನಿಸಿಪಲ್ ಕೆಲಸಗಳು ತ್ವರಿತವಾಗಿ ನಡೆಯುತ್ತಾ ಇವೆ. ಜಾನುವಾರುಗಳಿಗೂ ಬಡಸ್ಥಳದವರು ಮುಂತಾದವರಿಗೂ ಕೆರೆಯಲ್ಲಿ ನೀರಿದೆ. ರೈಲ್‌ಸ್ಟೇಷನ್ ಹತ್ತಿರ ಮಾತ್ರ ನೀರಿನ ಕಷ್ಟ ಬಹಳ. ಪ್ರಯಾಣಿಕರು ಆ ಬಳಿ ಒಂದು ಭಾವಿ ತೋಡಿಸಿದರೆ ಅನುಕೂಲ. ಈಚೆಗೆ ನಮ್ಮ ಅಮಲ್ದಾರರವರು ವಹಿಸಿರುವ ಮುತುವರ್ಜಿಯಿಂದ ಕೆರೆ ಅಂಗಳ ಮುಂತಾದ ಕಡೆ ಕೆಡಿಸತಕ್ಕವರ ಹಾವಳಿ ಕಡಿಮೆಯಾಗುತ್ತಾ ಇದೆ. ಕೆಲವರಿಗೆ ಜುಲ್ಮಾನೆಯನ್ನು ವಿಧಿಸಿದರು. ಈ ಊರಲ್ಲಿ ಕಕ್ಕಸುಗಳು ಇಲ್ಲದ್ದರಿಂದ ಬಹಳ ತೊಂದರೆಯಾಗಿದೆ. ಕೆಲವು ಕಕ್ಕಸುಗಳನ್ನು ಕಟ್ಟಿಸಿದರೆ ಗ್ರಾಮವು ಒಳ್ಳೇ ಸ್ಥಿತಿಗೆ ಬಂದೀತು. ಕಾಳುಗೋಣಿಗಳಲ್ಲಿ ಕೆಡಿಸುವುದು ತಪ್ಪುತ್ತೆ—ಚಿಕ್ಕನಾಯಕನ ಹಳ್ಳಿಯ ಕೆಲವರು ಸದಾ ಜೂಜಾಡುತ್ತಾ ಇರುವರು. ಪೋಲೀಸಿನವರು ಈ ವಿಷಯದಲ್ಲಿ ನಿಗಾ ಇಡಬೇಕು. ಈಗ ಹೊಸದಾಗಿ ಬಂದಿರುವ ಡಾಕ್ಟರನ್ನು ಇಲ್ಲೇ ಇರುವಂತೆ ಮಾಡಬೇಕೆಂಬುದೇ ಈ ಊರಿನ ಅನೇಕರ ಇಷ್ಟವಾಗಿದೆ. ಇವರು ತುಂಬಾ ಜನಾನುರಾಗಿಗಳು. ಗ್ರಾಮದಲ್ಲಿರುವ ಹಾಳು ನಿವೇಶನಗಳ ಹಾಕೀಜಾ ವಿಷಯದಲ್ಲಿಯೂ, ಕಕ್ಕಸುಗಳನ್ನು ಕಟ್ಟಿಸುವ ವಿಷಯದಲ್ಲಿಯೂ ಅಮಲ್ದಾರರವರು ಇನ್ನು ಕೊಂಚ ಮುತುವರ್ಜಿ ವಹಿಸಿದರೆ ಒಳ್ಳೇದು. ಬಾಡಿಗೆ ಮನೆಗಳು ಸಿಕ್ಕದೆ ಪರಸ್ಥಳದವರು ಶ್ರಮಪಡುತ್ತಾರೆ ಎಂಬುದೇ.

ಇಂಡಿಯಾ ದೇಶದ ವೃತ್ತಾಂತಗಳು.

ಬೊಂಬಾಯಿ ಹೈ ಕೋರ್ಟ ಬಂಗಲೆಯಲ್ಲಿ ಮೂರು ಇಲಿಗಳು ಸತ್ತು ಬಿದ್ದಿದ್ದವು. ಸರ್ಕಾರದವರು ಅದಕ್ಕಾಗಿ ಆ ಕಟ್ಟಡವನ್ನೆಲ್ಲಾ ಸಂಪೂರ್ಣವಾಗಿ ಶುದ್ಧಿ ಮಾಡಿಸಿರುತ್ತಾರೆ.

◆◆◆◆

ಸರ್ ಜೆ. ಲು ಎಂಬ ದೊಡ್ಡ ವೈದ್ಯನು ಹಿಂದುಸ್ಥಾನದ ಡಫ್ರಿನ್ ಫಂಡಿಗೆ ೧೦,೦೦೦ ರೂಪಾಯಿ ಧರ್ಮಕೊಟ್ಟು, ಈ ಹಣದಲ್ಲಿ ಸೂಲಗಿತ್ತಿಯರನ್ನು ತರಪೇತು ಮಾಡಿಸಬೇಕೆಂದು ತಿಳಿಸಿರುತ್ತಾನೆ.

◆◆◆◆

ಐಡಾರ್ ಸಂಸ್ಥಾನದ ಮಹಾರಾಜಾ ಸರ್ ಪ್ರತಾಪಸಿಂಗ್‌ಜಿಯವರ ಕುಮಾರನನ್ನು ಷಿಕಾರಿ ಮಾಡುತ್ತಿದ್ದಾಗ ಒಂದು ಹುಲಿ ಮೇಲೆ ಬಿದ್ದು ಬಗರಿ ಗಾಯ ಮಾಡಿತು. ಈ ರಾಜಕುಮಾರನಿಗೆ ಡಾಕ್ಟರುಗಳು ಔಷಧ ಹಾಕಿ ವಾಸಿಮಾಡುತ್ತಿದಾರೆ

◆◆◆◆

ಬರ್ಮಾ ಅಧಿಪತ್ಯದ ರೈಲ್ ಕಂಪನಿಯವರ ಬಳಿ ಇರುವ ಸಾಮಾನು ಭರ್ತಿ ಮಾಡುವ ವಾಗೀನುಗಳು ಅವರು ರಫ್ತಿಗೆ ಸಾಲವೆಂದು ತಿಳಿದು ಬಂದದ್ದರಿಂದ ಸರ್ಕಾರದವರು ಹೊಸದಾಗಿ ೫೦೦ ವಾಗೀನುಗಳನ್ನು ಮಾಡಿಸಿ ತರಿಸುವಂತೆ ಹುಕುಂ ಕೊಟ್ಟು, ಅದಕ್ಕಾಗಿ ೧೦ ಲಕ್ಷ ರೂಪಾಯಿ ಸ್ಯಾಂಕ್ಷನ್ ಮಾಡಿದಾರೆ.

◆◆◆◆

ಮದರಾಸ್ ಗವರ್ನಮೆಂಟಿನವರು ೧೯೦೫—೦೬ ನೆ ಸಾಲಿನಲ್ಲಿ ಮದರಾಸ್ ಅಧಿಪತ್ಯದೊಳಗೆ ಕ್ಷಾಮಪ್ರಾಪ್ತವಾಗಬಹುದೆಂದು ನಿರೀಕ್ಷಿಸಿ, ಅದರ ನಿವಾರಣೆಗಾಗಿ ಮೊದಲೇ ಹತ್ತು ಲಕ್ಷ ರೂಪಾಯಿ ತೆಗೆದಿಟ್ಟಿದ್ದರು. ಆದರೆ ಈವರೆಗೆ ಅಂಥಾ ಕಷ್ಟ ಎಲ್ಲೂ ಪ್ರಾಪ್ತವಾಗದೆ ಹೋದದ್ದರಿಂದ ಈ ಖರ್ಚನ್ನು ಈಗ ವಜಾ ಮಾಡಿದರು.

◆◆◆◆

ಸಿಲೋನ್ (ಲಂಕಾ) ದ್ವೀಪದ ಸಮುದ್ರ ತೀರದಲ್ಲಿ ಮುತ್ತಿನ ಚಿಪ್ಪುಗಳನ್ನು ತೆಗೆದುಕೊಳ್ಳುವಂತೆ ಸರ್ಕಾರದವರು ಲಂಡನ್ ಪಟ್ಟಣದ ಒಂದು ಕಂಪನಿ ವರ್ತಕರಿಗೆ ಕಂಟ್ರಾಕ್ಟು ಕೊಟ್ಟದಾರಷ್ಟೆ ಇದರಲ್ಲಿ ಪ್ರತಿ ವರುಷವೂ ಸರ್ಕಾರಕ್ಕೆ ೫,೫೪,೭೦೬ ರೂಪಾಯಿಯಂತೆ ಉತ್ಪತ್ತಿಯಾಗುವುದೆಂದು ಸಿಲೋನ್ ಗವರ್ನರವರು ತಿಳಿಸಿದಾರೆ

◆◆◆◆

ಧಾರಿ ಸಂಸ್ಥಾನದ ಮಹಾರಾಜರವರು ಬೊಂಬಾಯಿ ಪಟ್ಟಣದಲ್ಲಿ ಮೋಟಾರ್ ಗಾಡಿಯನ್ನು ಬಹು ವೇಗವಾಗಿ ಬಿಟ್ಟುಕೊಂಡು ಹೋದರೆಂದು ಮೊಕದ್ದಮೆ ಆಗಿ ಅವರಿಗೆ ೧೦೦ ರೂಪಾಯಿ ಜುಲ್ಮಾನೆ ವಿಧಿಸಲ್ಪಟ್ಟಿತು ಇದಲ್ಲದೆ ಅವರು ಲೈಸೆನ್ಸು ಪಡೆಯದೆ ಮೋಟಾರ್ ಗಾಡಿಯಲ್ಲಿ ಸಂಚಾರ ಮಾಡಿದ್ದಕ್ಕಾಗಿ ಒಂದು ರೂಪಾಯಿ ದಂಡ ತೆತ್ತರು

◆◆◆◆

ಕಲ್ಕತ್ತಾ ಪಟ್ಟಣದಲ್ಲಿ ಲಾರ್ಡ ಕರ್ಜನರವರ ಹೆಸರನ್ನು ಶಾಶ್ವತಪಡಿಸಬೇಕೆಂದು ಕೆಲವು ದೊಡ್ಡ ಮನುಷ್ಯರು ಸೇರಿ ಚಂದಾ ಕೂಡಿಸುತ್ತಿದಾರಷ್ಟೆ ಈ ಫಂಡಿಗೆ ಕೋಲಾರ್ ಚಿನ್ನದ ಗಣಿ ಕಂಪನಿಯವರು ೧,೫೦೦ ರೂಪಾಯನ್ನೂ ಅಲ್ವಾರ್ ಸಂಸ್ಥಾನದವರು ೧,೦೦೦ ರೂಪಾಯನ್ನೂ ಕಳುಹಿಸಿದರು ಈಗ ಆ ಫಂಡಿನಲ್ಲಿ ಒಟ್ಟು ೯೩,೦೦೦ ರೂಪಾಯಿ ಕೂಡಿರುತ್ತದೆ.

◆◆◆◆

ಪೂನಾಪಟ್ಟಣದ ಯರ್‌ಡಾ ಪೋಸ್ಟಾಫೀಸಿಗೆ ಕಳ್ಳರು ಬಿದ್ದು ಪೋಸ್ಟ ಮಾಸ್ಟರನ್ನೂ ಅವನ ಹೆಂಡತಿ ಮಕ್ಕಳನ್ನೂ ಕಟ್ಟಹಾಕಿ, ಚೆನ್ನಾಗಿ ಹೊಡೆದು ಅವರ ನಗನಾಣ್ಯಗಳನ್ನೂ ಅಂಚೆ ಇಲಾಖೆಯ ಕೆಲವು ಸಾಮಾನನ್ನೂ ಅಪಹರಿಸಿಕೊಂಡು ಹೋದರು ಒಡೆದು ಹಾಕಿದ್ದ ಕೆಲವು ಪೆಟ್ಟಿಗೆ ಕಾಗದ ಪತ್ರಗಳು ಸ್ವಲ್ಪ ದೂರ ಸಿಕ್ಕಿದವು ಕಳ್ಳರು ಯಾರೋ ಇನ್ನೂ ಪತ್ತೆ ಆಗಿಲ್ಲ.

◆◆◆◆

ಬಳ್ಳಾರಿ ಡಿಸ್ಟ್ರಿಕ್ಟಿನಲ್ಲಿ ಹರಿಯುವ ಹಗರಿ ನದಿಯ ಬಳಿ ಮದರಾಸ್ ಸರ್ಕಾರದವರು ಪರಿಕ್ಷಾರ್ಥವಾಗಿ ಒಂದು ಜಮೀನ್ ಮಾಡಿ, ಅದರಲ್ಲಿ ಯಂತ್ರದ ಮೂಲಕ ನೀರೆತ್ತಿ ಹಾಯಿಸಿ ವ್ಯವಸಾಯ ಮಾಡಬೇಕೆಂತಲೂ ಹೊಸ ಪೈರುಗಳನ್ನು ಬೆಳೆದು ವ್ಯವಸಾಯಗಾರರಿಗೆ ಕಲಿಸಬೇಕೆಂತಲೂ ಏರ್ಪಾಡು ಮಾಡಿರುತ್ತಾರೆ. ಈ ಏರ್ಪಾಡಿಗೆ ಸಧ್ಯ ೨೧,೧೦೦ ರೂಪಾಯಿ ಸ್ಯಾಂಕ್ಷ ಆಗಿದೆ.

◆◆◆◆

ಭಾವನಗರದ ಮಹಾರಾಜರವರು ತಮ್ಮ ಸಂಸ್ಥಾನದಲ್ಲಿ ಸಂಚಾರ ಮಾಡುತ್ತಾ ಕಳೆದ ವಾರ ಛತ್ರ ಎಂಬ ಗ್ರಾಮದಲ್ಲಿ ಒಂದು ದಿನ ಮೊಕ್ಕಾಂ ಮಾಡಿದರು. ಅವರ ಕುದುರೆಗಳನ್ನು ಒಂದು ಜೋಪಡಿಯಲ್ಲಿ ಕಟ್ಟಿದ್ದರು ಈ ಜೋಪಡಿಗೆ ಬೆಂಕಿ ಬಿದ್ದು, ಸುಮಾರು ೨೦,೦೦೦ ರೂಪಾಯಿನ ಏಳು ಕುದುರೆಗಳು ಸುಟ್ಟು ಹೋಗಿ, ಮಹಾರಾಜರಿಗೆ ತುಂಬಾ ವ್ಯಸನವನ್ನುಂಟುಮಾಡಿದೆ.

◆◆◆◆

ಕಳೆದ ವಾರ ಹಿಂದುಸ್ಥಾನದಲ್ಲಿ ೧೦,೭೮೦ ಜನರಿಗೆ ಪ್ಲೇಗ್ ತಗಲಿ, ೮,೩೩೦ ಜನರು ಕಾಲವಾದರು. ಬೇರೆ ಬೇರೆ ಅಧಿಪತ್ಯಗಳ ಸಂಖ್ಯೆ ಎಷ್ಟೆಂದರೆ—ಬಂಗಾಳಾ ೨,೯೩೭, ಸಂಯುಕ್ತ ಅಧಿಪತ್ಯ ೧,೨೩೪, ಬೊಂಬಾಯಿ ೧,೧೮೭೬, ಮಧ್ಯಪ್ರಾಂತ್ಯ ೧,೦೩೭, ಬರ್ಮಾ ೦೪೫, ಮೈಸೂರು ಸಂಸ್ಥಾನ ೮೮, ಹೈದರಾಬಾದು ೭೮, ಕಾಶ್ಮೀರ ಸಂಸ್ಥಾನ ೩೩, ಮಧ್ಯ ಇಂಡಿಯಾ ೫೧, ಈ ರೀತಿ ಮರಣಗಳಾಗಿವೆ

ಉತ್ತರ ದೇಶದಲ್ಲಿ ಕ್ಷಾಮದ ಸ್ಥಿತಿಯು ಹಿಂದಿನ ವಾರ ಇದ್ದ ಹಾಗೇ ಇದೆ ಎಂದು ಹೇಳಬಹುದು. ಬೇರೆ ಬೇರೆ ಕಡೆಗಳ ಕ್ಷಾಮಪೀಡಿತ ಸಂಖ್ಯೆ ಎಷ್ಟೆಂದರೆ—ಸಂಯುಕ್ತ ಅಧಿಪತ್ಯದಲ್ಲಿ ೧,೫೧,೦೦೦; ಪಂಜಾಬಿನಲ್ಲಿ ೩,೮೦೦, ರಾಜಪುಟಾನಾ ಮತ್ತು ಅಜ್ಮೀರ ಮೇರ್ವಾ ಡಾಗಳಲ್ಲಿ ೧,೦೪,೦೦೦; ಬೊಂಬಾಯಿ ಅಧಿಪತ್ಯದಲ್ಲಿ ೧,೦೦೦; ಬರೋಡಾ ಸಂಸ್ಥಾನದಲ್ಲಿ ೩,೪೦೦. ಈ ರೀತಿ ೨,೯೩,೨೦೦ ಪ್ರಜೆಗಳು ಕ್ಷಾಮಪೀಡಿತರಾಗಿ ಸರ್ಕಾರದವರ ಪೋಷಣೆಯಲ್ಲಿರುತ್ತಾರೆ.

◆◆◆◆

ಪ್ರಿನ್ಸ್ ಆಫ್ ವೇಲ್ಸ್‌ರವರು ಷಿಕಾರಿ ಮಾಡುವುದಕ್ಕೋಸ್ಕರ ನೇಪಾಳ ಸಂಸ್ಥಾನದ ಮಂತ್ರಿಗಳಾದ ಮಹಾರಾಜಾ ಸರ್ ಚಂದ್ರಸೋಮೇಶ್ವರರವರು ಅಲ್ಲಿನ ಕಾಡುಗಳಲ್ಲಿ ೧೦,೦೦೦ ಜನರನ್ನು ಬಿಟ್ಟು, ಎಲ್ಲಾ ಸನ್ನಾಹಗಳನ್ನೂ ಮಾಡಿಸಿದ್ದರು ಆದರೆ ಆ ಕ್ಯಾಂಪಿನಲ್ಲಿ ವಾಂತಿಭೇದಿ ಉಪದ್ರ ಪ್ರಾರಂಭವಾಗಿ ಮುಖ್ಯಮುಖ್ಯರಾದ ಷಿಕಾರಿದಾರರೇ ಸತ್ತು ಹೋದರು. ಇದನ್ನು ಕೇಳಿ ಪ್ರಿನ್ಸ್ ಆಫ್ ವೇಲ್ಸ್‌ರವರು ತುಂಬಾ ವ್ಯಸನಪಟ್ಟು, ಆ ಪ್ರಾಂತ್ಯ ದಯಮಾಡುವುದನ್ನೇ ನಿಲ್ಲಿಸಿ ಬಿಟ್ಟರು.

◆◆◆◆

ಹಿಂದುಸ್ಥಾನದ ಸೈನ್ಯದ ಇಲಾಖೆಯಲ್ಲಿ ಸೇನಾಪತಿಯಾದ ಲಾರ್ಡ ಕಿಚ್ಚನರ್ ಯವರು ಅನೇಕ ಹೊಸ ಬದಲಾವಣೆಗಳನ್ನು ಮಾಡಬೇಕೆಂದು ಗೊತ್ತು ಮಾಡಿದಾರೆ ಇದಕ್ಕೆಲ್ಲಾ ಒಟ್ಟು ಹದಿನೈದು ಕೋಟಿ ರೂಪಾಯಿ ಬೇಕಾಗುವುದೆಂದು ಅವರು ಇಂಡಿಯಾ ಸ್ಟೇಟ್ ಸೆಕ್ರೆಟೆರಿಯವರಿಗೆ ತಿಳಿಸಿದ್ದಕ್ಕೆ ಸೆಕ್ರೆಟರಿ ಮೆ॥ ಜಾನ್ ಮಾರ್ಲಿಯವರು ಅದರಂತೆ ಸ್ಯಾಂಕ್ಷನ್ ಮಾಡಿ, ಹಿಂದುಸ್ಥಾನದ ಹುಟ್ಟುವಳಿಯಲ್ಲಿ ಇನ್ನು ಐದು ವರುಷಗಳ ತನಕ ಪ್ರತಿವರುಷವೂ ಮೂರು ಕೋಟಿ ರೂಪಾಯಿಯಂತೆ ಈ ಸೈನ್ಯದ ಖರ್ಚಿಗೆ ವಿನಿಯೋಗಿಸುತ್ತಾ ಬರಬೇಕೆಂದು ತಿಳಿಸಿರುತ್ತಾರೆ.

◆◆◆◆

ಸಿಲೋನ್ (ಲಂಕಾ) ದ್ವೀಪದಲ್ಲಿ ರಬ್ಬರ್ ಬೆಳೆ ಮಾಡಿರುವ ಒಂದು ದೊಡ್ಡ ತೋಟವು ಮಾರಾಟವಾಯಿತು ಅದನ್ನು ಕೊಂಡು ಅಭಿವೃದ್ಧಿಪಡಿಸುವುದಕ್ಕೆ ವಿಲಾಯತಿಯವರು ಒಂದು ಕಂಪನಿ ಮಾಡಿ ೧೨॥ ಲಕ್ಷ ರೂಪಾಯಿ ಕೂಡಿಸಿರುತ್ತಾರೆ. ೬೦೦ ಎಕರೆ ವಿಸ್ತಾರವುಳ್ಳ ಈ ತೋಟದಲ್ಲಿ ಈಗ ೭೮,೦೦೦ ರಬ್ಬರ್ ಗಿಡಗಳಿರುತ್ತವೆ ಈ ವರುಷದ ಕೊನೆಗೆ ಒಂದು ಲಕ್ಷ ರೂಪಾಯಿನ ರಬ್ಬರು ಆ ಗಿಡಗಳಲ್ಲಿ ಉತ್ಪತ್ತಿಯಾಗುವುದೆಂತಲೂ, ಇನ್ನೈದು ವರುಷಗಳ ಮೇಲೆ ಪ್ರತಿ ವರುಷವೂ ನಾಲ್ಕು ಲಕ್ಷ ರೂಪಾಯಿನ ರಬ್ಬರ್ ಬೆಳೆಯಾಗುವುದೆಂತಲೂ ಅಂದಾಜು ಕಟ್ಟಿದಾರೆ.

◆◆◆◆

ಬೊಂಬಾಯಿ ಪಟ್ಟಣದಲ್ಲಿ ರಾವ್ ಬಹದ್ದೂರ್ ಪರ್ಸಿಜಿ ಎಂಬ ಸಾಹುಕಾರನು ದಾಯಾಬಾಯಿ ಎಂಬ ತನ್ನ ಸೇವಕನನ್ನು ಬ್ಯಾಂಕಿನಿಂದ ನೋಟಿಗೆ ೧೮,೦೦೦ ರೂಪಾಯಿ ತರಬೇಕೆಂದು ಕಳುಹಿಸಿದನು ಅವನು ಬ್ಯಾಂಕಿನಲ್ಲಿ ಕುಳಿತು ಹಣ ಎಣಿಸಿ ಗಂಟು ಕಟ್ಟುತ್ತಿರುವಾಗ ಒಬ್ಬ ಕಳ್ಳನು ಅವನ ಬಳಿ ಇದ್ದ ೨,೦೦೧ ರೂಪಾಯಿನ ಒಂದು ಗಂಟನ್ನು ಎತ್ತಿಕೊಂಡು ಹೋದನು ಸ್ವಲ್ಪ ಹೊತ್ತಿನ ಮೇಲೆ ಹಣ ಕಳುವಾದ ಸಂಗತಿ ಪೊಲೀಸಿಗೆ ತಿಳಿಯಿತು ವೇಷಧರಿಸಿ ಬ್ಯಾಂಕಿನಲ್ಲೇ ಪಹರೆ ಕೊಡುತ್ತಿದ್ದ ಒಬ್ಬ ಪೊಲೀಸಿನವನು ಕಳ್ಳನನ್ನು ಹಣ ಸಹಿತ ಹಿಡಿದು ತಂದು, ಲಾಕಪ್ಪಿಗೆ ಕೊಟ್ಟದಾನೆ.

◆◆◆◆

ಗುಜರಾತಿಗೆ ಸೇರಿದ ಸೂರ್ಟ ಎಂಬ ಊರಿನಲ್ಲಿ ಜೈನಮಹಿಳೆಯರ ಮೊದಲನೆ ಸಮಾಜವು ಕಳೆದ ವಾರ ನಡೆಯಿತು ಸುಮಾರು ೧೨,೦೦೦ ಮಂದಿ ಜೈನಸ್ತ್ರೀಯರು ಸಭೆ ಸೇರಿದ್ದರು. ರಾಜಕಾವೇರಿ ಬಾಯಿ ಧಾಧಾ ಎಂಬಾಕೆಯು ಸಭಾನಾಯಕಿಯಾಗಿ ನಿಂತು, ಕಾರ್ಯ ನಡೆಸಿದಳು ಮಿಸೆಸ್ ಮೋತಿಬಾಯಿ ಪೂನಾಮಚಂದ್, ಕರಮ ಚಂದ್ ಕೊತ್ವಾಲಾ ಎಂಬಾಕೆಯೂ ಇತರರೂ ಜೈನಸ್ತ್ರೀಯರ ಅಭಿವೃದ್ಧಿಗೆ ಅವಶ್ಯವಾದ ಅನೇಕ ವಿಷಯಗಳನ್ನು ಕುರಿತು ಉಪನ್ಯಾಸ ಮಾಡಿದರು ಸಾಂಸರಿಕವಾದ ಬದಲಾವಣೆಗಳನ್ನು ಮಾಡಿಕೊಳ್ಳುವುದಕ್ಕೂ ಸ್ತ್ರೀವಿದ್ಯಾಭಿವೃದ್ಧಿಗೂ ಜೈನಸ್ತ್ರೀಯರೆಲ್ಲಾ ಸಾಹಸಪಡಬೇಕಾಗಿದೆ ಎಂದು ತೀರ್ಮಾನ ಮಾಡಿರುತ್ತಾರೆ.

◆◆◆◆

ಮರ್ವಿ ಸಂಸ್ಥಾನದ ಥಾಕೂರ್ ಸಾಹೇಬ್ ಸರ್ ವಾಘಜೀಬಹದ್ದೂರ್, ಜಿ. ಸಿ. ಐ. ಇ. ಯವರು ಆ ಸಂಸ್ಥಾನದಲ್ಲಿ ಅನೇಕವಾದ ಪ್ರಜಾರಂಜಕಕಾರ್ಯಗಳನ್ನು ನಡಸಿ, ರೈಲ್ ಬಂದಾವಸ್ತೆ, ನೀರಾವರಿ ಕಾಮಗಾರಿ, ಕೈಗಾರಿಕೆ ಕಾರ್ಖಾನೆ, ವ್ಯಾಪಾರಾದಿಗಳಲ್ಲಿಯೂ, ವಿದ್ಯಾಭಿವೃದ್ಧಿಯಲ್ಲೂ ವಿಶೇಷವಾದ ಉತ್ಸಾಹವನ್ನೂ ಪ್ರಜಾವಾತ್ಸಲ್ಯವನ್ನೂ ಪ್ರಕಾಶಪಡಿಸುತ್ತಾ ಬಂದಿರುವುದರಿಂದ ಅಲ್ಲಿನ ಪ್ರಜೆಗಳು ಇಂಥಾ ಮಹಾರಾಜರವರ ಹೆಸರನ್ನು ಶಾಶ್ವತಪಡಿಸುವುದಕ್ಕಾಗಿ ಚಂದಾ ಕೂಡಿಸಿ, ಅವರ ಛಾಯಾಪ್ರತಿಮೆಯನ್ನು ಶಿಲೆಯಿಂದ ಮಾಡಿಸಿ ತರಿಸಿ ರಾಜಧಾನಿಯಲ್ಲಿ ನಿಲ್ಲಿಸಿರುತ್ತಾರೆ. ಇದನ್ನು ಮೆ॥ ವೈಟ್ ಸಾಹೇಬರು ಪ್ರತಿಷ್ಠೆ ಮಾಡಿ, ಮಹಾರಾಜರವರ ಗುಣಾತಿಶಯವನ್ನೂ ಪ್ರಜಾಪ್ರೀತಿಯನ್ನೂ ಕುರಿತು ಉಪನ್ಯಾಸ ಮಾಡಿದರು.

◆◆◆◆

ಗುಜರಾತಿಗೆ ಸೇರಿದ ಸೂರ್ಟ ಎಂಬ ಊರಿನಲ್ಲಿ ಕಳೆದ ವಾರ ನಾಲ್ಕನೇ ಶ್ವೇತಾಂಬರ ಜೈನರ ಸಮಾಜ ನಡೆಯಿತು. ೧೨,೦೦೦ ಜೈನರು ಸೇರಿ ಸಭೆಯನ್ನು ನಡಿಸಿದರು ವೀರಚಂದ್ ದೀಪಚಂದ್, ಸಿ ಐ ಇ ಎಂಬ ಸೇಟರು ಸಭಾನಾಯಕರಾಗಿದ್ದರು ಅವರು ತೀರ್ಮಾನ ಮಾಡಿಕೊಂಡ ವಿಷಯಗಳ್ಯಾವವೆಂದರೆ—ಧರ್ಮಫಂಡನ್ನು ಕೂಡಿಸುವುದು, ಜೈನರಲ್ಲಿ ಬಡಬಗ್ಗರಿಗೆ ಸಹಾಯ ಮಾಡುವುದು, ಕ್ಷಾಮಪೀಡಿತರಾದ ಜೈನರಿಗೂ ಅವರ ಹೆಂಡಿರುಮಕ್ಕಳಿಗೂ ಅನಾಥರಿಗೂ ವಿಧವೆಯರಿಗೂ ಕಸಬುಗಳನ್ನು ಏರ್ಪಡಿಸಿ ಕಲಿಸುವುದು, ಮುದುಕರನ್ನೂ ಅನಾಥರನ್ನೂ ಸಾಕುವುದು, ಬಾಲ್ಯವಿವಾಹವನ್ನು ನಿರೋಧಿಸುವುದು, ಮದುವೆ ಪ್ರಸ್ತಗಳಲ್ಲಿ ಮಿತಿ ಮಾಡುವುದು, ಮಿತವ್ಯಯ ಮಾಡುವುದು, ಸಾಂಸರಿಕವಾದ ಆಚಾರವ್ಯವಹಾರಗಳನ್ನು ಈಗಿನ ಕಾಲಕ್ಕೆ ತಕ್ಕಂತೆ ಬದಲಾವಣೆ ಮಾಡಿಕೊಳ್ಳುವುದು. ಈ ಕಾರ್ಯಗಳನ್ನೆಲ್ಲಾ ತೃಪ್ತಿಕರವಾಗಿ ನೆರವೇರಿಸುವುದಕ್ಕೆ ಸೇಟರು ಆ ದಿನ ಒಂದು ಧರ್ಮಫಂಡನ್ನು ಏರ್ಪಡಿಸಿ ಚಂದಾ ಕೂಡಿಸಲಾರಂಭಮಾಡಿದಾರೆ.

◆◆◆◆

ರಂಗೂನ್ ಪಟ್ಟಣದ ಕೋರ್ಟಿನಲ್ಲಿ ಕಳೆದ ವಾರ ಒಂದು ಆಶ್ಚರ್ಯಯುಕ್ತವಾದ ಮೊಕದ್ದಮೆ ತೀರ್ಮಾನವಾಯಿತು ಒಬ್ಬ ಬರ್ಮಿಯನು ತನ್ನ ಕಂಟೀಸರವನ್ನು ಕಳಕೊಂಡು, ಅದನ್ನು ಪತ್ತೆ ಮಾಡಿಕೊಟ್ಟವರಿಗೆ ೫೦೦ ರೂಪಾಯಿ ಇನಾಮು ಸಿಕ್ಕುತ್ತದೆಂದು ಪ್ರಕಟಿಸಿದನು. ಅದನ್ನು ಕೇಳಿ ಇನ್ನೊಬ್ಬ ಬರ್ಮಿಯನು ಉಪಾಯಾಂತರದಿಂದ ಆ ಕಂಟೀಸರ ಪತ್ತೆ ಆಗುವಂತೆ ಮಾರ್ಗ ಹೇಳಿಕೊಟ್ಟನು ಇದರ ಮೇಲೆ ಪೊಲೀಸಿನವರು ತರಬೂದು ನಡಿಸಿ, ಕಂಟೀಸರವನ್ನು ಕಳ್ಳನಿಂದ ತರಿಸಿಕೊಟ್ಟರು. ಅವನು ೫೦೦ ರೂಪಾಯಿ ಬಹುಮಾನವನ್ನು ಆ ಬರ್ಮಿಯನಿಗೂ ಪೊಲೀಸಿನವರಿಗೂ ಸರಿಯಾಗಿ ಹಂಚಿಕೊಡುತ್ತೇನೆಂದು ಹೇಳಿದನು ಆದರೆ ಆ ಬರ್ಮಿಯನು ೫೦೦ ರೂಪಾಯಿಯೂ ತನಗೇ ಬರಬೇಕೆಂದೂ ಪೊಲೀಸಿನವರಿಗೆ ಕೊಡಕೂಡದೆಂದೂ ಹಟ ಹಿಡಿದು, ದಾವಾ ಮಾಡಿದನು ಜಡ್ಜಿಯವರು ಅದೇ ಪ್ರಕಾರ ಆ ಬರ್ಮಿಯನಿಗೇ ೫೦೦ ರೂಪಾಯಿಯು ಸಲ್ಲತಕ್ಕದ್ದೆಂದು ತೀರ್ಮಾನ ಮಾಡಿ, ಪೊಲೀಸಿನವರು ಪತ್ತೆ ತರಬೂದು ನಡಿಸುವುದು, ಕಳ್ಳರನ್ನು ಹಿಡಿಯುವುದೂ ಅವರ ಕರ್ತವ್ಯವಾಗಿರುವುದರಿಂದ ಅವರಿಗೆ ಇನಾಮು ಸಲ್ಲಬೇಕಾದ್ದಿಲ್ಲವೆಂದು ಜಡ್ಜಮೆಂಟು ಹೇಳಿದರು

◆◆◆◆

ಪ್ರಿನ್ಸ್ ಆಫ್ ವೇಲ್ಸ್‌ರವರು ಕಳೆದ ವಾರ ಗ್ವಾಲಿಯರ್ ಸಂಸ್ಥಾನಕ್ಕೆ ದಯಮಾಡಿ, ಕ್ಷಾಮನಿವಾರಣೆಗೋಸ್ಕರ ಮಹಾರಾಜಾ ಸಿಂಧಿಯಾಯವರಿಂದ ಏರ್ಪಾಡಾಗಿರುವ ರಿಲೀಫ್ ಕಾಮಗಾರಿ ಸ್ಥಳಗಳಿಗೆ ಹೋಗಿ ಪರಾಂಬರಿಸಿ ಬಂದರು. ಆ ರಿಲೀಫ್ ಕ್ಯಾಂಪಿನಲ್ಲಿ ೬,೦೦೦ ಪ್ರಜೆಗಳು ಹೆಂಗಸರು ಮಕ್ಕಳ ಸಹಿತ ಬಂದು, ಅಲ್ಲಿಯ ಕಾಮಗಾರಿ ಮಾಡುತ್ತಿದ್ದರು. ಇನ್ನೊಂದು ಕಡೆ ಕೆಲಸ ಮಾಡುವುದಕ್ಕೆ ಕೈಲಾಗದವರನ್ನು ಇಟ್ಟು, ಅವರಿಗೆಲ್ಲಾ ಅನ್ನಹಾಕುತ್ತಿದ್ದರು ರೋಗಿಗಳನ್ನು ಆಸ್ಪತ್ರೆಗಳಲ್ಲಿಟ್ಟು ಚಿಕಿತ್ಸೆ ಮಾಡಿಸುತ್ತಿದ್ದರು. ಅಂಗಡಿ, ದೋಪಡಿ, ಮೊದಲಾದವೂ ಇದ್ದವು ಪ್ರಿನ್ಸ್ ಆಫ್ ವೇಲ್ಸ್‌ರವರು ಅಪೂರ್ವವಾಗಿ ಈ ಭಾಗಗಳನ್ನೆಲ್ಲಾ ಕಣ್ಣಾರ ನೋಡಿ, ಹಿಂದುಸ್ಥಾನದಲ್ಲಿ ಮಳೆ ಬಾರದೆ ಬೆಳೆಗಳು ಒಣಗಿ ಹೋಗೋಣದರಿಂದ ಪ್ರದೇಶಗಳಿಗೆ ಪ್ರಾಪ್ತವಾಗುವ ಕ್ಷಾಮವೆಂಥಾದ್ದೆಂದು ಗೊತ್ತು ಮಾಡಿಕೊಂಡರು. ಕ್ಷಾಮಪೀಡಿತರ ಸೌಕರ್ಯಕ್ಕೆ ಮಹಾರಾಜರ ಸರ್ಕಾರದವರು ಮಾಡಿದ್ದ ಏರ್ಪಾಡುಗಳನ್ನೆಲ್ಲಾ ಪರಾಂಬರಿಸಿ, ಎಲ್ಲಾ ಬಹಳ ತೃಪ್ತಿಕರವಾಗಿದೆ ಎಂದು ಅಪ್ಪಣೆ ಕೊಟ್ಟು, ವಾಪಸು ದಯಮಾಡುವಲ್ಲಿ ಆ ಕೂಲಿಕಾರರಿಗೆಲ್ಲಾ ಒಂದು ದಿನದ ಕೂಲಿಯನ್ನು ಜಬ್ಬಾಗಿ ಕೊಡಬೇಕೆಂದು ತಮ್ಮ ಕೈಯಿಂದ ಹಣವನ್ನು ದಯಪಾಲಿಸಿದರು ಪ್ರಿನ್ಸ್ ಆಫ್ ವೇಲ್ಸ್‌ರವರು ದಯಮಾಡಿ ಕ್ಷಾಮಪೀಡಿತರನ್ನು ಈ ರೀತಿ ಪರಾಂಬರಿಸಿದ್ದು ಸ್ತೋತ್ರಾರ್ಹವಾಗಿರುತ್ತದೆ

ವಿದೇಶ ವರ್ತಮಾನಗಳು.

ಮುಂದಿನ ವರುಷ ಲಂಡನ್‌ಪಟ್ಟಣದಲ್ಲಿ ದೊಡ್ಡ ಪ್ರದರ್ಶನೋತ್ಸವವನ್ನು ನಡಸಬೇಕೆಂದು ಏರ್ಪಾಡು ಮಾಡುತ್ತಿದಾರೆ. ಇದಕ್ಕಾಗಿ ೧೦೦ ಎಕರೆಯಷ್ಟು ವಿಸ್ತಾರವಾದ ಜಮೀನಿನಲ್ಲಿ ಬೇಕಾದ ಕಟ್ಟಡಗಳನ್ನು ಕಟ್ಟಿಸುವದಕ್ಕಾರಂಭವಾಗಿದೆ.

◆◆◆◆

ಜರ್ಮನ್ ರಾಜ್ಯದಲ್ಲಿ ಪ್ರಾಪ್ತವಾಗಿರುವ ಕ್ಷಾಮವನ್ನು ನಿವಾರಣೆ ಮಾಡುವುದಕ್ಕೋಸ್ಕರ ಲಂಡನ್ ಪಟ್ಟಣದಲ್ಲೂ ಆಸ್ಟ್ರೇಲಿಯಾದಲ್ಲೂ ಕೆನಡಾದಲ್ಲೂ ಧರ್ಮ ಫಂಡುಗಳನ್ನು ಆಯಾ ಸ್ಥಳದ ಇಂಗ್ಲಿಷ್ ಪ್ರಜೆಗಳು ಸ್ಥಾಪಿಸಿ, ಚಂದಾ ಕೂಡಿಸುತ್ತಿದಾರೆ.

◆◆◆◆

ಸೊಸೈಟಿ ಎಂಬ ದ್ವೀಪಗಳ ಸಮುದಾಯದ ಪೈಕಿ ಟಾಪೈತಿ ಎಂಬ ದ್ವೀಪದೊಳಗೆ ಅಕಸ್ಮಾತ್ತಾದ ಸುಂಟರಗಾಳಿಯೂ ಮಳೆಯೂ ಪ್ರಾಪ್ತವಾಗಿ ೩೨೩ ಮನೆಗಳು ನೆಲಸಮನಾದವು ಆದರೆ ಒಬ್ಬನು ಮಾತ್ರ ಪ್ರಾಣ ಕಳೆದುಕೊಂಡದ್ದು ಆಶ್ಚರ್ಯವಾಗಿದೆ.

◆◆◆◆

ವಿಲಾಯತಿ ಸರ್ಕಾರದವರು ಚಾಲ್ತಿ ವರುಷದಲ್ಲಿ ತಮ್ಮ ಸೈನ್ಯದ ಇಲಾಖೆಗೆ ೪೪ ಕೋಟಿ ೯ ಲಕ್ಷದ ೪೦ ಸಾವಿರ ರೂಪಾಯಿ ಖರ್ಚು ಮಾತ್ರವಾಗಿ ಅಂದಾಜು ಕಟ್ಟಿದಾರೆ. ಈ ಪೈಕಿ ಸೈನಿಕರ ದಿರಸಿಗೂ ಇತರ ಸಾಮಾನುಗಳಿಗೂ ೪೩॥ಲಕ್ಷವನ್ನು ತೆಗೆದಿಟ್ಟಿರುವರು.

◆◆◆◆

ಆಸ್ಟ್ರೇಲಿಯಾ ಪಾರ್ಲಿಮೆಂಟಿನವರು ೬೫ ವರುಷ ಮೀರಿದ ಮುದುಕರಿಗೆಲ್ಲಾ ವಾರಕ್ಕೆ ೩। ರೂಪಾಯಿಯಂತೆ ಸರ್ಕಾರದಿಂದ ಪೆನ್ಷನ್ ಕೊಡುವುದಾಗಿಯೂ, ಅಂಥಾ ಮುದುಕರು ೨೫ ವರುಷಗಳಿಂದ ಅಲ್ಲೇ ಇರತಕ್ಕವರಾಗಬೇಕೆಂತಲೂ ಗೊತ್ತು ಮಾಡಿಕೊಂಡಿದಾರೆ. ಇದಕ್ಕೆಲ್ಲಾ ಸರ್ಕಾರಕ್ಕೆ ೧೫ ಲಕ್ಷ ಪೌಂಡು ಖರ್ಚಾಗುತ್ತೆ.

◆◆◆◆

ವಿಲಾಯತಿಯಲ್ಲಿ ಬಡಬಗ್ಗರ ಮಕ್ಕಳಿಗೆ ಸರ್ಕಾರದವರು ಅನ್ನ ಹಾಕಿ ವಿದ್ಯೆ ಕಲಿಸುವಂತೆಯೂ ಅವರ ಖರ್ಚನ್ನು ಅಂಥವರ ತಂದೆ ತಾಯಿಗಳಿಂದ ಅವರವರ ಯೋಗ್ಯತಾನುಸಾರ ಹಂಚಿಹಾಕಿ ವಸೂಲ್ಮಾಡಿ

...ವಂತೆಯೂ, ಅನಾನುಕೂಲವಾದಲ್ಲಿ ಮಾಫಿ ಬಿಡುವಂತೆಯೂ ...ಕಾನೂನುಮಾಡಿ, ಅದನ್ನು ಜಾರಿಗೆ ತರಬೇಕೆಂದು ಪಾರ್ಲಿ...ಯಲ್ಲಿ ಚರ್ಚೆಮಾಡುತ್ತಿದ್ದಾರೆ.

* * * *

...ಟ್ಲೆಂಡಿಗೆ ಸೇರಿದ ಡಂಡಿ ಪಟ್ಟಣದಲ್ಲಿ ನಾರಿನ ಬಟ್ಟೆ ತಯಾ...ವ ನೂರಾರು ಕಾರ್ಖಾನೆಗಳಲ್ಲಿ ಸುಮಾರು ೨೩,೦೦೦ ...ಜನರು ಹೆಚ್ಚು ಕೂಲಿ ಕೊಟ್ಟಲ್ಲದೆ ಕೆಲಸಕ್ಕೆ ಬರುವುದಿ...ವು ಹೇಳಿ, ಏಕಕಾಲದಲ್ಲಿ ನಿಂತುಬಿಟ್ಟರು. ಒಂದು ವಾರದ ...ಕಾರ್ಖಾನೆಗಳ ಯಜಮಾನರು ಕೂಲಿಯ ದರವನ್ನು ಸ್ವಲ್ಪ ...ಮಾಡಿದ್ದರಿಂದ ಅವರೆಲ್ಲಾ ಯಥಾಪ್ರಕಾರ ಹೋಗಿ ಕೆಲಸಮಾ...ಡಾರೆ.

* * * *

...ಪ್ಲೇಗ್ ರೋಗವು ಆಫ್ರಿಕಾಕ್ಕೆ ಸೇರಿದ ವಿಕ್ಟೋರಿಯಾ ನಿಯಾಂ...ಪ್ರೊವಿನ್ಸಿನಲ್ಲಿ ಮಾತ್ರ ಹರಡಿಕೊಂಡಿತ್ತು. ಈಚೆಗೆ ಅದು ...ನಿಯವರ ಪೂರ್ವ ಆಫ್ರಿಕಾವಿಗೂ ವ್ಯಾಪಕವಾಗಿರುತ್ತದೆ. ...ನೋತಿ ಜರ್ಮನಿ ಸರ್ಕಾರದವರು ಆ ರೋಗವನ್ನು ಪರೀಕ್ಷೆ...ಕೊಂಡು ಬರುವಂತೆ ಕಾಷ್ ಎಂಬ ಪಂಡಿತರನ್ನು ಅಲ್ಲಿಗೆ ಕಳು...ಹಿಸಿದರು. ಇವರು ಪರಿವಾರ ಸಹಿತ ಅಲ್ಲಿ ೧೮ ತಿಂಗಳ ತನಕ ಇದ್ದು ...ರೋಗದ ಲಕ್ಷಣವನ್ನೂ ಪರಿಹಾರವನ್ನೂ ಕಂಡುಹಿಡಿಯುವರು.

* * * *

...ಲಾಯಿತಿಯಲ್ಲಿ ವರ್ತಕರ ಹಡಗುಗಳೊಳಗೆ ಸೇವಾವೃತ್ತಿ ಮಾ...ಡುವ ವಿಲಾಯಿತಿ ಪ್ರಜೆಗಳಲ್ಲದೆ ಪರರಾಜ್ಯಗಳ ಜನರನ್ನೂ ನೇ...ಮಿಸುತ್ತಾರೆಂತಲೂ, ಹೀಗೆ ಹೊರಗಿನವರನ್ನು ನೇಮಿಸಿಕೊಂ...ಡು ಇಂಗ್ಲಿಷ್ ಜನರಿಗೆ ಜೀವನೋಪಾಯ ದೊರಕುವುದು ಕಷ್ಟವಾ...ದ್ದರಿಂದ ಅಂಥಾ ಪರದೇಶಿಗಳನ್ನು ಯಾವ ವರ್ತಕನೂ ನೇಮಿ...ಸಿಕೊಳ್ಳಕೂಡದೆಂದು ಒಂದು ಕಾನೂನುಮಾಡಿ ಜಾರಿಗೆ ತರಬೇಕೆಂ...ದು ಇಂಗ್ಲಿಷ್ ಪ್ರಜೆಗಳು ಒಂದು ವಿಜ್ಞಾಪನಾ ಪತ್ರಿಕೆಯನ್ನು ...ದಕ್ಕೆ ೨೦,೦೦೦ ಜನರ ರುಜು ಹಾಕಿಸಿ ಗವರ್ನಮೆಂಟಿಗೆ ...ಸಿದ್ದಾರೆ.

* * * *

ಜೂಸೆಫ್ ಬಂತಕ್ಕೆ ಸೇರಿದ ಆಲ್ಸೈನಿಗೂ ಲೋರೇನಿಗೂ ನಡು...ವೆ ಜಂಗಲುಗಳಿರುತ್ತವೆ. ಈ ಜಂಗಲುಗಳ ಮರವನ್ನು ಸರ್ಕಾ...ರು ಕತ್ತರಿಸಿಕೊಳ್ಳಬೇಕೋ ಮ್ಯುನಿಸಿಪಾಲಿಟಿಯವರು ಕಡಿದು ...ಕೊಳ್ಳಬೇಕೋ ಎಂಬುದಾಗಿ ವ್ಯಾಜ್ಯವು ಆಯಿತು. ಈ ವ್ಯಾಜ್ಯ...ವು ೯೯೦ ವರುಷಗಳಿಂದಲೂ ಹರಿಯದೆ ನಡೆಯುತ್ತಾ ಬಂದು ...ಈಗ ತಾನೇ ತೀರ್ಮಾನವಾಗಿದೆ ಸಾಕ್ಷಿಗಳ ಕೈಫಿಯತ್ತನ್ನೆ...ಲ್ಲಾ ಹಾಕಿ, ಕೆಲವು ನೂರು ಪುಸ್ತಗಳಾಗಿ ಮಾಡಿದ್ದಾರೆ. ಕಡೆಗೆ ...ಸರ್ಕಾರದವರು ಕಡಿಯಕೂಡದೆಂತಲೂ ಮ್ಯುನಿಸಿಪಾಲಿ...ಟಿಯವರೇ ಕಡಿದು ಸಾಗಿಸಿಕೊಳ್ಳತಕ್ಕದ್ದೆಂತಲೂ ತೀರ್ಮಾನವಾಗಿ...ರುವುದರಿಂದ ಈ ವ್ಯಾಜ್ಯವುಗೆ ತಗಲಿದ ಅಪಾರವಾದ ಖರ್ಚೆಲ್ಲಾ ...ಸರ್ಕಾರದವರ ತಲೆಯ ಮೇಲೆ ಬಿದ್ದಿತು.

* * * *

ವಿಲಾಯತಿ ಪಾರ್ಲಿಮೆಂಟಿನಲ್ಲಿ ಮೆಂಬರುಗಳಾಗಿ ಚುನಾಯಿಸ...ಲ್ಪಡುವ ಪ್ರಜಾಪ್ರತಿನಿಧಿಗಳಿಗೆ ಇದುವರೆಗೆ ವಿಲಾಯತಿ ಸರ್ಕಾರ...ದಿಂದ ಯಾವ ವಿಧವಾದ ತಲಬೂ ಪಾವತಿ ಆಗುತ್ತಿರಲಿಲ್ಲ. ಆದರೆ ಅವ...ರಿಗೆ ಸ್ವಲ್ಪ ರುಸುಂ ಕೊಡುವುದು ಅವಶ್ಯವೆಂದು ಆಗಿಂದಾ...ಗ್ಗೆ ವಾದ ನಡೆಯುತ್ತಿತ್ತು. ಈಗಿನ ಲಿಬರಲ್ ಪಾರ್ಟಿಯ ...ರುಗಳು ಈ ವಿಷಯವನ್ನು ಕಳೆದವಾರ ಚರ್ಚೆಮಾಡಿ, ಪ್ರತಿ...ಯೊಬ್ಬರಿಗೂ ಒಂದು ವರುಷಕ್ಕೆ ೩,೬೦೦ ರೂಪಾಯಿನಂತೆ ರುಸುಂ ...ಕೊಡಬೇಕೆಂದು ತೀರ್ಮಾನ ಮಾಡಿದ್ದಾರೆಂದು ತಂತೀವರ್ತಮಾನ...ವು. ಇದನ್ನು ಮಂತ್ರಿಶ್ರೇಷ್ಠರಾದ ಸರ್ ಹೆನ್ರಿ ಕ್ಯಾಂಬೆಲ್ ಬಾನ...ರ್ಮನ್ನರವರು ಕೇಳಿ, ಮೆಂಬರುಗಳಿಗೆ ರುಸುಂ ಕೊಡಬೇಕಾದ ಭಾಗ...ವನ್ನು ಗವರ್ನಮೆಂಟಿನವರು ಒಪ್ಪಿಕೊಳ್ಳುತ್ತಾರೆಂತಲೂ, ಆದರೆ ...ತೀರ್ಮಾನವಾಗಿರುವಂತೆ ರುಸುಂ ಕೊಡುವ ವಿಚಾರಕ್ಕೆ ...ರದ ಮಾನವು ಸದ್ಯದಲ್ಲಿ ಅವಕಾಶಕೊಡುವ ಹಾಗಿಲ್ಲವೆಂತ ...ಜವಾಬು ಕೊಟ್ಟಿದ್ದಾರೆ.

* * * *

ಅಮೇರಿಕದ ವರ್ತಕಮಂಡಲಿಯವರು ಪ್ರಪಂಚದಲ್ಲಿ ಈಗ ...ರವು ಎಷ್ಟು ಮಟ್ಟಿಗೆ ಅಭಿವೃದ್ಧಿಯಾಗಿದೆ ಎಂಬ ವಿಚಾರವನ್ನು ...ಒಂದು ರಿಪೋರ್ಟನ್ನು ಬರೆದು ಪ್ರಕಟಿಸಿರುತ್ತಾರೆ. ಇದ...ರಲ್ಲಿ ಕಂಡುಬರುವ ವಿಶೇಷ ಸಂಗತಿಗಳೇನೆಂದರೆ—ಈಗ ಪ್ರಪಂಚದ...ಲ್ಲಿರುವ ಜನರಲ್ಲಿ ಬಹಳ ಹಳಬರಾಗಿರುವವರು ಕಂಡ ಹಾಗೆ ...ರೈಲ್ ಗಾಡಿಯೂ ಇರಲಿಲ್ಲ, ಒಂದು ಹಡಗಾಗಲಿ ಪಟವಾಗಲಿ ...ಲ್ಲ. ಈಗಲಾದರೋ ಪ್ರಪಂಚದಲ್ಲೆಲ್ಲಾ ೫,೮೦,೦೦೦ ಮೈಲಿ ರೈ...ಲ್ಲುಗಳು ಆಗಿರುತ್ತವೆ. ೧೮೦ ಲಕ್ಷ ಟನ್ನುಗಳ ಭಾರವುಳ್ಳ ಹಡಗು ...ಪಟಗಳೂ ಸಂಚಾರಮಾಡುವವು. ಕಳೆದ ೧೮೦೦ ನೆ ಇಸವಿ...೯ ಕೋಟಿ ೬೦ ಲಕ್ಷ ಪೌಂಡುಗಳ ಬೆಲೆಯುಳ್ಳಷ್ಟು ಸರಕು ...ಶದಿಂದ ದೇಶಕ್ಕೆ ಸಾಗಿಹೋಗಿ ವ್ಯಾಪಾರವಾದವು. ಈಗ ...ನೆ ವರುಷದಲ್ಲಿ ೪೫೦ ಕೋಟಿ ಪೌಂಡುಗಳ ಬೆಲೆ ಆಗುವ ...ಗಳು ತಯಾರಾಗಿ ವಿಕ್ರಯವಾಗಿರುತ್ತವೆ. ಇದರಿಂದ ಪ್ರಪಂ...ಚ ಕಳೆದ ನೂರು ವರುಷಗಳಲ್ಲಿ ವ್ಯಾಪಾರವು ಬಹಳವಾಗಿ ಅಭಿ...ವೃದ್ಧಿಯಾಗಿದೆ ಎಂದು ಗೊತ್ತಾಗುವುದು.

* * * *

ವಿಲಾಯತಿಯಲ್ಲಿ ಅನಾಥಶಾಲೆಗಳನ್ನು ಸ್ಥಾಪಿಸಿ, ಮಕ್ಕಳನ್ನು ...ಹೊಟ್ಟೆ ಕೊಟ್ಟು ಸಾಕುತ್ತಾ, ಅವರಿಗೆ ವಿದ್ಯೆಯನ್ನೂ ಕೈಗಾರಿಕೆ...ಯನ್ನೂ ಹೇಳಿಕೊಡುತ್ತಾ, ಸತ್ಪ್ರಜೆಗಳನ್ನಾಗಿ ಬೆಳೆಸುತ್ತಾ ಲೋ...ಕದಲ್ಲಿ ಬಹಳ ಹೆಸರುವಾಸಿಯನ್ನು ಪಡೆದ ಡಾ॥ ಬರ್ನಾರ್ಡೋ...ರವರು ಕಾಲವಾದರೆಂದು ನಮ್ಮ ವಾಚಕರಿಗೆ ತಿಳಿಸಿರುತ್ತೇವಷ್ಟೆ. ಆತನ ತರುವಾಯ ಆ ಅನಾಥಶಾಲೆಗಳನ್ನು ಮೊದಲಿದ್ದಂತೆಯೇ ನಡಸುವುದಕ್ಕೆ ಮಿ॥ ವಿಲ್ಲಿಯಂ ಬಾರ್ಕರ್ ಎಂಬಾತನು ಚುನಾಯಿಸಲ್ಪಟ್ಟಿದ್ದಾನೆ. ಈತ ಐರ್ಲಾಂಡಿನಲ್ಲಿ ಹುಟ್ಟಿದವನು, ಲಾಯರಾಗಿದ್ದು ಬಹಳ ಹಣ ಸಂಪಾದನೆಮಾಡುತ್ತಾ ಪ್ರಜೆಗಳಲ್ಲೂ ನ್ಯಾಯಾಧಿಪತಿಗಳಲ್ಲೂ ವಿಶೇಷವಾದ ಗೌರವವನ್ನು ಪಡೆದಿದ್ದನು. ಮಹಾ ವಾಚಾಳಿ ಎಂತಲೂ, ವಿಶೇಷವಾದ ಭೂತದಯೆ ಪಶ್ಚಾತ್ತಾಪಗಳನ್ನು ಪಡೆದವನೆಂತಲೂ, ಬಡಬಗ್ಗರ ಮಕ್ಕಳ ಮೇಲೆ ತುಂಬಾ ಪ್ರೀತಿಯುಳ್ಳವನೆಂತಲೂ ಬಹು ಕಾಲದಿಂದಲೂ ಯಶಸ್ಸನ್ನು ಸಂಪಾದಿಸಿಕೊಂಡಿರುವನು. ಇಂಥಾ ಪುಣ್ಯಪುರುಷನು ಈ ಅನಾಥಶಾಲೆಗಳ ಮೇಲ್ವಿಚಾರಣೆಗೆ ದೊರಕಿದ್ದರಿಂದ ಅವು ಇನ್ನೂ ಹೆಚ್ಚಾಗಿ ಅಭಿವೃದ್ಧಿಹೊಂದುವುವೆಂದು ಧಾರಾಳವಾಗಿ ಹೇಳಬಹುದು.

* * * *

ವಿಲಾಯತಿಯಲ್ಲಿ ಅನೇಕ ಪ್ರಜೆಗಳು ಜೀವನಕ್ಕೆ ಮಾರ್ಗವಿಲ್ಲದೆ ಕೂಲಿ ಸಿಕ್ಕದೆ ತುಂಬಾ ಕಷ್ಟಪಡುತ್ತಿದ್ದಾರೆ. ಇದನ್ನು ಪರಿಹಾರ ಮಾಡುವದಕ್ಕೆ ಕೆಲವು ದೊಡ್ಡ ಮನುಷ್ಯರು ಸೇರಿ ಒಂದು ಫಂಡನ್ನು ಕೂಡಿಸಿ, ಈ ಹಣದಿಂದ ೧,೦೦೦ ಸಂಸಾರಗಳನ್ನು ಅಮೇರಿಕ, ಕನಡಾ, ಆಸ್ಟ್ರೇಲಿಯಾ ಮೊದಲಾದ ಸ್ಥಳಗಳಿಗೆ ಕಳುಹಿಸಿ, ಅಲ್ಲಿ ಅವರೆಲ್ಲಾ ಭೂವ್ಯವಸಾಯವೇ ಮೊದಲಾದ ಕಸಬುಗಳನ್ನು ಅವಲಂಬಿಸುವಂತೆ ಮಾಡಬೇಕೆಂದು ಪ್ರಯತ್ನಪಡುತ್ತಿದ್ದಾರೆ. ಈ ಸಭೆಯ ಪ್ರತಿನಿಧಿಗಳು ವಿಲಾಯತಿಯ ದೊರೆಯವರ ಭೇಟಿಮಾಡಿ, ತಮ್ಮ ಉದ್ದೇಶವನ್ನು ಅವರಿಗೆ ಅರಿಕೆಮಾಡಿದರು. ದೊರೆಯವರು ಬಹಳವಾಗಿ ಸಂತೋಷಪಟ್ಟು, ಅವರ ಸಾಹಸವನ್ನು ಮೆಚ್ಚಿಕೊಂಡು, "ಮನುಷ್ಯನಾದವನು ಕೆಲಸ ಮಾಡುವುದರಲ್ಲಿ ಉದ್ಯುಕ್ತನಾದರೆ ಅವನಿಗೆ ಅನ್ನ ಬಟ್ಟೆಗೂ ಮನೆಗೂ ಎಂದಿಗೂ ಚ್ಯುತಿಯಾಗಲಾರದು. ಸಂಸಾರವನ್ನು ಇಟ್ಟುಕೊಂಡಿರುವವರು ಕೆಲಸದಲ್ಲಿ ಆಸಕ್ತರಾಗಿರಬೇಕಾದದ್ದು ತುಂಬಾ ಶ್ರೇಯಸ್ಕರವಾಗಿದೆ. ಪ್ರಜೆಗಳಿಗೆ ವಿಲಾಯತಿಯಲ್ಲಿ ಕೆಲಸ ಸಿಕ್ಕುವುದಿಲ್ಲವೆಂದು ಅವರನ್ನು ಇತರ ಸ್ಥಳಗಳಿಗೆ ಕಳುಹಿಸಿಕೊಡುವಂತೆ ನೀವುಗಳು ಏರ್ಪಾಡು ಮಾಡಿರುವುದು ಸ್ತೋತ್ರಾರ್ಹವಾಗಿರುತ್ತದೆ. ಅವರಿಗೆ ಹೊಸ ಭೂಮಿಯಲ್ಲಿ ಮನೆಮಠ ಆಸ್ತಿಪಾಸ್ತಿಗಳು ದೊರಕಿ, ಅವರು ಅಭಿವೃದ್ಧಿಗೆ ಬರುವುದರಲ್ಲಿ ಸಂಶಯವಿಲ್ಲ. ಅವರು ಎಷ್ಟು ದೂರ ಸ್ಥಳದಲ್ಲಿ ಹೋಗಿ ನಿಂತಾಗ್ಯೂ ನಮ್ಮ ರಾಜ್ಯದೊಳಗೇ ನಮ್ಮ ಪ್ರಜೆಗೆ ಸೇರಿದವರಾಗಿಯೇ ಇರುತ್ತಾರೆ. ಕಷ್ಟ ಮಾಡುವುದರಲ್ಲಿ ತುಂಬಾ ಅನುಕೂಲವೂ ಆನಂದವೂ ಉಂಟು. ನಾನು ಕೂಡ ಪ್ರತಿ ದಿನವೂ ಹನ್ನೆರಡು ಗಂಟೆಗಳ ಹೊತ್ತು ಕೆಲಸ ಮಾಡುತ್ತಿದ್ದೇನೆ" ಎಂಬೀ ರೀತಿ ಅಪ್ಪಣೆಕೊಡಿಸಿದರು.

ಬಾತ್ಮಿದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ನಿಗಾ ಕೊಡಲಾರೆವು. ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು, ಇಂಥವುಗಳಿಗೆ ನಾವು ನಿಗಾ ಕೊಡಲಾರೆವು.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಾಗುವುದಿಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು —ಎಡಿ.

"ಸರ್ವಜನತ ಶ್ರೇಯಃಕಾಮಿ," ಬಸವಾಪುರ, ಬೆಂಗಳೂರು - ನಿಮ್ಮ ಬಾತ್ಮಿಯಿಂದ ನಿಮ್ಮ ಅಭಿಪ್ರಾಯವೇನೆಂಬುವುದು ನಮ್ಮ ವಾಚಕರಿಗೆ ಗೊತ್ತಾಗುವ ಹಾಗಿಲ್ಲ. ನೀವು ಹೊಸ ಕನ್ನಡ ಮಾತುಗಳನ್ನು ಉಪಯೋಗಿಸಿ, ನಿಮ್ಮ ಅಭಿಪ್ರಾಯಗಳನ್ನು ಸುಲಭವಾಗಿ ತಿಳಿಯಕೊಳ್ಳುವಂತೆ ಸ್ಪಷ್ಟವಾಗಿಯೂ ಸಂಕ್ಷೇಪವಾಗಿಯೂ ಬರೆಯಬೇಕು. ಇಲ್ಲವಾದರೆ ನಿಮ್ಮ ಬಾತ್ಮಿಗಳಿಗೆ ಗಮನಕೊಡಲಾರೆವು. —ಎಡಿ]

ಶಿಡ್ಲಘಟ್ಟದ ತಾಲ್ಲೂಕು ಸಾದಲಿ ಸಮ್ಮತು ತಲಕಾಯಲ ಬೆಟ್ಟದ ರಥೋತ್ಸವ ಮತ್ತು ಎತ್ತುಗಳ ಪರಿಷೆ ಕಾಲದಲ್ಲಿ ಧರ್ಮಕರ್ತರಾ॥ ವೆಂಕಟರಾಯಪ್ಪನೆಂಬುವರು ಅಂಗಡಿಯವರಿಂದ ರೂಪಾಯಿ ವಸೂಲ್ಮಾಡುತ್ತಾ ವ್ಯಾಪಾರಸ್ಥರನ್ನು ತುಂಬಾ ಕಷ್ಟಪಡಿಸುತ್ತಿದ್ದಾರೆಂತಲೂ ಈ ಹಣವು ದೇವಸ್ಥಾನದ ಫಂಡಿಗೂ ಸೇರುವದಿಲ್ಲವೆಂತಲೂ, ಈ ಎತ್ತುಗಳ ಪರಿಷೆ ಕಾಲದಲ್ಲಿ ಮಾಪರದ್ದಿಯವರು ಒಕ್ಕಲುಮಕ್ಕಳಿಗೆ ಅನ್ಯಾಯ ಹಾಕಿಸುತ್ತಿದ್ದದ್ದು ಈ ಸಾರಿ ನಿಲ್ಲಿಸಿಬಿಟ್ಟರೆಂತಲೂ ಇದಕ್ಕಾಗಿ ಇವರಿಗೆ ಸರಾಚಿಲ್ಲದೆ ಕೊಟ್ಟಿರುವ ಈ ತಲಕಾಯಲ ಬೆಟ್ಟದ ಗ್ರಾಮದ ಬಳಿ ಖುಷ್ಕಿ ಜಮೀನಲ್ಲಿ ಸುಮಾರು ೫೦ ಖಂಡಿ ರಾಗಿ ಆಗುತ್ತೆಂತಲೂ, ಇದೆಲ್ಲಾ ಮಾಪರದ್ದಿಯವರು ಸ್ವಂತಕ್ಕೇನೇ ಉಪಯೋಗಿಸಿಕೊಂಡ ಹಾಗೂ ಒಬ್ಬ ಬಾತ್ಮಿದಾರರು ಬರೆಯುತ್ತಾರೆ. ಈ ವಿಷಯದಲ್ಲಿ ಅಲ್ಲಿನ ಕೆಲವು ಜನರು ಸೇರಿ ನಿಜಸ್ಥಿತಿಯನ್ನು ಕುರಿತು ಅರ್ಜಿ ಬರೆದು ರುಜು ಹಾಕಿ ಮುಜರಾಯಿ ಸೂಪರಿಂಟೆಂಡೆಂಟರಿಗೆ ಮೊದಲು ಬರೆದುಕೊಂಡಲ್ಲಿ ಅವರು ತನಿಖೆಯಿಂದ ಎಲ್ಲಾ ಸಂಗತಿಗಳನ್ನೂ ಕ್ರಮಪಡಿಸುತ್ತಾರೆನ್ನುವುದಕ್ಕೆ ಸಂಶಯವಿಲ್ಲವೆಂದು ಈ ಬಾತ್ಮಿದಾರರಿಗೆ ಈ ಮೂಲಕ ತಿಳಿಸುತ್ತೇವೆ. —ಎಡಿ.]

ಕರೆಸ್ಪಾಂಡೆನ್ಸ್.

ಗಾಡಿಗಳನ್ನು ಬಿಟ್ಟಿಹಿಡಿಯುವ ಹಿಂಸೆ.

ಅಯ್ಯಾ,

ಕಡೂರು ಡಿಸ್ಟ್ರಿಕ್ಟು ಯಡೇಹಳ್ಳಿಯಲ್ಲಿ ಕೊತವಾಲ, ದಂಡಿಗಳು ಅನೇಕ ಖಾಲಿ ಗಾಡಿಗಳನ್ನು ಹಿಡಿದು ಬಿಟ್ಟಿಗೆ ಹೊರಡಬೇಕಾಗಿಯೂ, ಹಾಗೆ ಬಿಟ್ಟಿಗೆ ಹೊರಡದಿದ್ದರೆ ಬಹಳವಾಗಿ ತೊಂದರೆಪಡಿಸಿ ಹೊಡೆದುಬಿಡುತ್ತಾರೆ. ಬಡಸ್ಥಿತರು ಹೆದರಿ ೧ ರೂ., ೨ ರೂ. ಲಂಚಾ ಕೊಟ್ಟರೆ ಸುಮ್ಮನೆ ಬಿಡುತ್ತಾರೆ. ಈ ರೀತಿ ಅನೇಕ ಜನರು ದುಃಖಪಡುತ್ತಾ, ಕೈಲಿದ್ದ ಹಣವನ್ನು ಕಳೆಕೊಂಡುಹೋದದ್ದನ್ನು ನಾನು ರೂಬರೂಬು ನೋಡಿದ್ದೇನೆ. ಈ ಬಡಪ್ರಜೆಗಳ ದುಃಖವನ್ನು ಯಾರು ತಾನೇ ನೋಡ್ಯಾರು? ಮತ್ತು ಹಾಗೆ ಮ್ಯಾಜಿಸ್ಟ್ರೇಟರು ಮುಂತಾದ ದೊಡ್ಡಮನುಷ್ಯರಿಗೆ ತಿಳಿಸಿದರೆ ಏನೂ ಹೇಳದೆ ಬಾಯಿಗೆ ಬಂದ ಹಾಗೆ ಬೈಯುತ್ತಾರೆ. ಈ ರೀತಿ ಆದರೆ ನಾವು ಹ್ಯಾಗೆ ಜೀವನ ಮಾಡಬೇಕು? ನಾವುಗಳು ಯಾವಾಗಲೂ ಗಾಡಿಯಲ್ಲಿ ಜೀವನಮಾಡಬೇಕಾಗಿ ಇರುವದರಿಂದ ನಾವುಗಳು ಮಾಕೊಪ್ಪದ ಸಂತೆಗೆ ಬರುತ್ತೇವೆ. ಕೊಪ್ಪದ ಸಂತೆಗೆ ಬಂದು, ೬—೭ ರೂ. ಗೆ ವ್ಯಾಪಾರಮಾಡಿ, ಬಂದ ದುಡ್ಡನ್ನು ದಂಡಿ, ಕೊತವಾಲಗೆ ಕೊಟ್ಟರೆ ನಾವು ಜೀವನಮಾಡುವದು ಹ್ಯಾಗೋ ತಾವೇ ಊಹಿಸಬೇಕು. ಬಟ್ಟೆ ಹಿಡಿಯತಕ್ಕದ್ದು ಕಾಲುಭಾಗ ಆದರೆ ಲಂಚಾ ತಿನ್ನುವುದು ಮುಕ್ಕಾಲುಭಾಗ. ಈ ದುರ್ಭಿಕ್ಷಕಾಲದಲ್ಲಿ ಈ ರೀತಿ ಆದರೆ ಹ್ಯಾಗೆ ಕಾಲಮಾಡಬೇಕು?

ಪ್ರಜಾ ಹಿತಚಿಂತಕ.

ಬೆಂಗಳೂರು ಸಿಟಿ ಮುನಿಸಿಪಲ್ ಸ್ಕೂಲ್ ಕಟ್ಟಡವು, ಬಜಾರ್.

ಅಯ್ಯಾ,

ಬೆಂಗಳೂರು ಸಿಟಿಯು ಸುಮಾರು ೮—೧೦ ವರುಷಗಳ ಹಿಂದೆ ಇದ್ದದ್ದಕ್ಕೂ ತತ್ಕಾಲದಲ್ಲಿರುವದಕ್ಕೂ ತಾರತಮ್ಯವನ್ನು ನೋಡಲಾಗಿ ಎಷ್ಟೋ ವ್ಯತ್ಯಾಸವನ್ನು ಕಂಡು ಹಿಡಿಯಬಹುದು. ಶಿಥಿಲವಾದ ಕಟ್ಟಡಗಳು ನಿಬಿಡೀಕೃತವಾಗಿ ಕಿಕ್ಕಿರಿಸುತ್ತಿದ್ದವು. ಈಗ ಯಾವಕಡೆ ನೋಡಿದಾಗ್ಯೂ ಪಟ್ಟಣವು ಉತ್ಕೃಷ್ಟವಾದ ಕಟ್ಟಡಗಳಿಂದ ದಿನೇದಿನೇ ಅಭಿವೃದ್ಧಿಹೊಂದುತ್ತಾ, ನೋಟಕರಿಗೆ ನೇತ್ರಾನಂದವನ್ನುಂಟುಮಾಡುತ್ತದೆ ಎಂಬುವದನ್ನು ಯಾರೂ ಹೇಳದಿರಲಾರರು. ಆದರೂ ಕಟ್ಟಡಗಳನ್ನು ಕಟ್ಟುವದಕ್ಕೆ ಪ್ರಾರಂಭಿಸುವಾಗಲೇ ಮುಂದಾಲೋಚನೆಯನ್ನು ಮಾಡಿ, ಕೆಲವು ನ್ಯೂನತೆಗಳನ್ನು ತಿದ್ದಿಕೊಂಡ ಪಕ್ಷದಲ್ಲಿ, ಜನರಿಗೆ ಶ್ರೇಯಸ್ಸೂ, ಮುನಿಸಿಪಾಲಿಟಿಯವರಿಗೆ ಲಾಭವೂ, ಗೌರವವೂ ಸಂಪಾದಿಸಿ ಕೊಳ್ಳುವರೆಂತಲೂ ನಾವು ನಿಸ್ಸಂದೇಹವಾಗಿ ಹೇಳಬಹುದು. ಏಕೆಂದರೆ, ಸ್ವಲ್ಪ ನೋಡಿರಿ. ಒಂದು ಉದಾಹರಣೆಯು ಸಾಕಾಗಿರುತ್ತದೆ.

ಕೋಟೆಯಲ್ಲಿ ರಿಜರ್ವ್ ಪೋಲೀಸ್ ಇಲಾಖೆಯ ಎದುರಿಗೆ ಒಂದು ಮುನಿಸಿಪಲ್ ಸ್ಕೂಲನ್ನು ಕಟ್ಟಬೇಕೆಂದು ಆರು ತಿಂಗಳಿಂದಲೂ ಕಾಮಗಾರಿ ನಡೆಯುತ್ತಿದೆಯಷ್ಟೆ. ಇದಕ್ಕೆ ೪೬ ಸಾವಿರ ರೂಪಾಯಿಗಳನ್ನು ಸ್ಯಾಂಕ್ಷನ್ ಮಾಡಿರುತ್ತಾರೆಂದು ಕೇಳಿದ್ದೇನೆ. ದೊಡ್ಡ ಅಸ್ತಿಭಾರವನ್ನು ಹಾಕುವದಕ್ಕೆ ಸುಮಾರು ೧೪ ಅಡಿ ಪ್ರಮಾಣವುಳ್ಳ ಆಳವನ್ನು ತೋಡಿಸಿರುತ್ತಾರೆ. ಇದರ ಫಲಿತಾಂಶವೇನು? ಬೆಟ್ಟವನ್ನು ಕೊರೆದು, ಇಲಿಯನ್ನು ಹಿಡಿದಂತೆ ಪ್ರಕೃತದಲ್ಲಿ ಇಲಿ ಹಿಡಿದಷ್ಟು ಪ್ರಯೋಜನ ಕಾರ್ಯವು ಕಂಡುಬರಲಿಲ್ಲ. ಏಕೆಂದರೆ, ಆರು ತಿಂಗಳಿಂದಲೂ ಕಣ್ಣುಮುಚ್ಚಿಕೊಂಡು, ನೂರಾರು ರೂಪಾಯಿಗಳನ್ನು ನಷ್ಟಪಡಿಸಿಕೊಂಡು, ಕಡೆಯಲ್ಲಿ ಭೂಮಿಯು ಬಹು ಮೆತ್ತಗಿದೆ ಎಂತಲೂ, ಅದರ ಮುಂಭಾಗವು ಅಸಹ್ಯವನ್ನುಂಟುಮಾಡುವದೆಂತಲೂ ಕಣ್ಣುಗಳನ್ನು ಈಗ ತೆರೆದು ನೋಡಿ, ಬೇರೆ ಸ್ಥಳದಲ್ಲಿ ಕಾಮಗಾರಿಯನ್ನು ಪ್ರಾರಂಭಿಸಿರುತ್ತಾರೆ. ನೋಡಿದಿರಾ, ಇಂಜನಿಯರವರ ಸಾಮರ್ಥ್ಯವು! ಕಂಟ್ರಾಕ್ಟರವರ ಕೌಶಲ್ಯವು! ಮುನಿಸಿಪಾಲಿಟಿಯವರ ಔದಾರ್ಯಗುಣವು!

ಈ ಕಟ್ಟಡಕ್ಕೋಸ್ಕರ ಖರೀದಾರ್ಜಿತವಾದ ಕೋಟೆಯ ಕೆಲವು ಭಾಗಗಳನ್ನು ಕೆಡವಿದರು. ತೆಗೆದಿದ್ದ ಹಳ್ಳವನ್ನು ಈ ಮಣ್ಣು ಕಲ್ಲುಗಳಿಂದ ಮುಚ್ಚಿದರು. ಪುನಹಾ ಪ್ರತ್ಯೇಕಸ್ಥಳದಲ್ಲಿ ಪಾಯಾ ಹಾಕಲು ಹಳ್ಳವನ್ನು ಅಗೆಯುವದಕ್ಕೆ ಪ್ರಾರಂಭಿಸಿರುತ್ತಾರೆ. ಇದು ಎಷ್ಟು ಸ್ಥಳವೋ ಯಾರಿಗೆ ತಾನೇ ಗೊತ್ತು? ಆದ್ದರಿಂದ ಒಳ್ಳೇ ಇಂಜನಿಯರನ್ನು ಕರೆಸಿ ಒಂದೇ ಸ್ಥಳದಲ್ಲಿ ಭೂಮಿಯನ್ನು ಅಗೆದು, ಭೂಮಿಯು ಗಟ್ಟಿಯಾದದ್ದೋ, ಮೆತುವೋ ತಿಳಿದುಕೊಂಡು, ಕಾರ್ಯ ಸಾಧಿಸುವದಕ್ಕೆ ಪ್ರಯತ್ನಪಟ್ಟಲ್ಲಿ ದ್ವಿಗುಣವಾದ ದುಂದುಖರ್ಚಿಗೆ ಮುನಿಸಿಪಾಲಿಟಿಯವರು ಒಳಪಡಲಾರರೆಂದು ನಂಬುತ್ತೇನೆ.

ಬೆಂಗಳೂರು ಸಿಟಿ. ಯಂ. ರ್ಜ. ರಿಂಗ್.

ಗೋಕಾಯಿಗಳ ವ್ಯಾಧಿನಿವಾರಣೌಷಧೋಪಚಾರಗಳು.

ಅಯ್ಯಾ,

ಬೌರಿಂಗ್‌ಪೇಟೆ ತಾಲ್ಲೂಕಿನ ತಮ್ಮ ಚಂದಾದಾರರಲ್ಲೊಬ್ಬರು ಗೋಕಾಯಿಗಳ ಗೋಳಾಟವನ್ನು ಕುರಿತು ಕೆಲವು ಸಂಗತಿಗಳನ್ನು ತಮ್ಮ ಪತ್ರಿಕೆಗೆ ಬರೆದದ್ದಕ್ಕೆ ಪ್ರತ್ಯುತ್ತರವಾಗಿ ಈ ಕೆಳಗಿನ ಸಂಗತಿಗಳನ್ನು ತಮ್ಮ ಪತ್ರಿಕೆಯಲ್ಲಿ ಪ್ರಕಟಿಸಿ ಮೂಗು ಪ್ರಾಣಿಗಳ ಕಷ್ಟ ನಿವಾರಣೆ ಮಾಡಬೇಕಾಗಿ ಪ್ರಾರ್ಥಿಸುತ್ತೇನೆ.

ಅಲ್ಲಿನವರ ಕಾಲ್ನಡೆಗಳಿಗೆ ಹಾಲಿ ಸಂಭವಿಸಿರುವುದು ಒಂದು ವಿಧವಾದ ಸಾಂಕ್ರಾಮಿಕ ಸಂಬಂಧವಾದ ಜ್ವರ. ಶುದ್ಧವಾದ ನೀರು ಕಾಲ್ನಡೆಗಳಿಗೆ ದೊರೆಯದೆ ಇರುವ ಕಾರಣದಿಂದ ಈ ರೋಗವು ಉಂಟಾಗುವದು. ಒಂದು ಕಾಲ್ನಡೆಯಿಂದ ಮತ್ತೊಂದಕ್ಕೆ ವ್ಯಾಪಿಸುತ್ತಾ ವೃದ್ಧಿಯನ್ನು ಹೊಂದುತ್ತಾ ಬರುವುದು. ಈ ರೋಗವು ಕೆಲವು ವೇಳೆ ಬಾಯಿಯ ಮೂಲಕವೂ ಕಾಲುಗಳ ಮೂಲಕವೂ ವ್ಯಾಪಿಸುವುದು. ಯಾವ ಭಾಗದ ಮೂಲಕವಾಗಿ ಈ ರೋಗವು ಬರುವುದೋ ಆ ಭಾಗವು ಹುಣ್ಣಾಗುವುದು. ಆ ಹುಣ್ಣು ತಕ್ಷಣವೇ ಹೊರಗೆ ಕಾಣಿಸದೆ, ಕಾಲಕ್ರಮವಾಗಿ ಹೊರಗೆ ಕಾಣಿಸುವುದು. ಈ ರೋಗವು ಬಂದ ಕೂಡಲೆ ಹಾಲೇ ಸೊಪ್ಪಿನ ಕಡಿ ಒಂದು ಹಿಡಿ, ಬೇವಿನ ಒಂದು ತೋಲ, ಕಡ್ಡೆಪ್ಪ ಮುಕ್ಕಲು ತೋಲ, ಕರ್ಪೂರದ ಕಾಲು ತೋಲ, ಇವುಗಳನ್ನೆಲ್ಲಾ ಚನ್ನಾಗಿ ೨॥ ಸೇರು ತಕ್ರದಲ್ಲಿ ಅರೆದು, ದಿನಕ್ಕೆ ಮೂರು ಸಾರಿ ೨ ೩ ದಿನಗಳು ಹೊಟ್ಟೆಗೆ ಹುಯ್ಯಬೇಕು.

ಬಾಯಿಯಲ್ಲಿ ಅಥವಾ ಕಾಲುಗಳಲ್ಲಿರತಕ್ಕ ಹುಣ್ಣುಗಳನ್ನು ನಿಂಬೇಮಾನು ತೊಳೆದ ನೀರಿನಿಂದ ತೊಳೆದು, ಕಳದಿ ಜಾಜಿ ಸೊಪ್ಪು ಹಾಕಿ ಕಲಸಿದ ತುಪ್ಪವನ್ನು ಮೊದಲು ಆ ಗಾಯಗಳಿಗೆ ಲೇಪಿಸಬೇಕು.

ಕಾಲುಗಳಲ್ಲಿ ಹುಣ್ಣುಗಳಿದ್ದರೆ ಕ್ರಿಮಿಗಳು ವೃದ್ಧಿಯೊಂದುವುದರಿಂದ ಕಾಲ್ನಡೆಗಳನ್ನು ಪ್ರತಿ ನಿತ್ಯವೂ ಬೆಳಿಗ್ಗೆ ಸಾಯಂಕಾಲ ೧-೨ ಗಂಟೆಗಳ ಪರಿಯಂತರ ಗೊರಸುಗಳು ಮುಳುಗುವ ವರಿವಿಗೂ ಕೆಸರಿನಲ್ಲಿ ನಿಲ್ಲಿಸಬೇಕು ಮತ್ತು ಹೊಂಗೆ ಎಣ್ಣೆ, ಬೇವಿನ ಎಣ್ಣೆ, ಕರ್ಪೂರ, ಕೀಲೆಣ್ಣೆ (ಟಾರು), ಆಲುವಾಣದ ಎಲೆಗಳು, ಇವುಗಳನ್ನೆಲ್ಲಾ ಮಿಶ್ರಮಾಡಿ ಚನ್ನಾಗಿ ಕಾಸಿ ಸುಮಾರಾಗಿ ಬೆಚ್ಚಗಿರುವುದನ್ನು ಗಾಯಗಳಿರುವ ಗೊರಸುಗಳ ಒಳಪ್ರದೇಶಕ್ಕೆಲ್ಲಾ ಸವರಬೇಕು.

ಕಾಲ್ನಡೆಗಳು ಹುಲ್ಲು ತಿನ್ನದೆ ಇರುವುದರಿಂದ ಕತ್ತುಬಾಳೆಯ ಕಳಿತ ಹಣ್ಣುಗಳನ್ನು ಬೇಯಿಸಿದ ಹೆಸರುಕಾಳುಗಳೊಂದಿಗೆ ಕಲಸಿ, ಉಪ್ಪನ್ನು ಸೇರಿಸಿ ಅದನ್ನು ೨-೩ ದಿನಗಳ ವರಿವಿಗೂ ತಿನ್ನಿಸುತ್ತಾ ಬರಬೇಕು.

ಈ ರೋಗ ತಗಲಿದ ಕಾಲ್ನಡೆಗಳನ್ನು ಪ್ರತ್ಯೇಕವಾಗಿ ಒಳ್ಳೇ ಗಾಳಿ, ಬೆಳಕು ಇರತಕ್ಕ ಸ್ಥಳದಲ್ಲಿ ಕಟ್ಟಿ ದಿನಕ್ಕೆ ೨-೩ ಸಾರಿ ಮಿಳ್ಳೇ ವಿಷಾಸು ತೊಳೆದ ನೀರನ್ನು ಆ ಸ್ಥಳದಲ್ಲಿ ಚಲ್ಲುತ್ತಾ ಬರಬೇಕು ಮತ್ತು ಸಗಣಿ ಮೊದಲಾದದ್ದನ್ನು ಆಗಾಗ್ಗೆ ಆ ಸ್ಥಳದಿಂದ ದೂರವಾಗಿ ಸಾಗಿಸಬೇಕು.

ಈ ರೀತಿಯಾಗಿ ಮಾಡುತ್ತಾ ಬಂದರೆ ಆ ರೋಗವು ಹಾಯವಾಗಿ ಗೇಕಾಯಿಗಳ ಸಂಕಟವು ತಪ್ಪುವುದು. ಕುರಿಗಳಿಗೆ ಈ ರೋಗವು ಬಂದರೆ ಮೇಲೆ ಹೇಳಿರತಕ್ಕ ಔಷಧಗಳ ಪ್ರಮಾಣದಲ್ಲಿ ಅರ್ಧ ಭಾಗವನ್ನು ಕೊಡುವುದು. ಆರೋಗ್ಯವಾಗಿರುವ ಕಾಲ್ನಡೆಗಳನ್ನು ರೋಗದಿಂದ ನರಳುವ ಕಾಲ್ನಡೆಗಳೊಂದಿಗೆ ಸೇರಿಸದೆ, ಪ್ರತ್ಯೇಕವಾಗಿ ಕಟ್ಟಬೇಕು. ಮತ್ತು ಕತ್ತುಬಾಳೆಯ ಕಳಿತ ಹಣ್ಣು, ಸ್ವಲ್ಪ ಕಡ್ಡುಪ್ಪು ಸಹ ಮಿಶ್ರಮಾಡಿ ತಿನ್ನಿಸಬೇಕು ಮಿಳ್ಳೇ ವಿಷಾಸುಗಳನ್ನು ತೊಳೆದ ನೀರನ್ನೂ ಆಗಾಗ್ಗೆ ಕೊಟ್ಟಿಗೆಯಲ್ಲಿ ಚಲ್ಲುತ್ತಾ ಬರಬೇಕು

ಟಿ. ಗುರುಚನ್ನಬಸವಯ್ಯ, ತುಮಕೂರು.

ಜಾತಿಬಿಟ್ಟವರಿಗೆ ದಾಯಭಾಗ.

ಅಯ್ಯಾ

ತಮ್ಮ ತಾ. ೧೫-೨-೦೬ ನೇ ವೃತ್ತಾಂತ ಪತ್ರಿಕೆಯಲ್ಲಿ ಈ ಹೊಸ ರೆಗ್ಯುಲೇಷನಿನ ವಿಷಯ ಚರ್ಚಿಸುವದಕ್ಕೆ ಬಾತ್ಮಿದಾರರಿಗೆ ಅವಕಾಶಕೊಟ್ಟದ್ದಕ್ಕಾಗಿ ನಿಮ್ಮನ್ನು ಬಹಳವಾಗಿ ವಂದಿಸುತ್ತೇನೆ.

ಈ ಭರತಖಂಡದಲ್ಲಿ ಅನೇಕ ಮತಗಳೂ, ಅನೇಕ ಜಾತಿ ಭೇದಗಳೂ ಇರುತ್ತವೆಂಬುವದು ಸರ್ವರಿಗೂ ತಿಳಿದಿರುವ ಸಂಗತಿಯೇಸು ಈ ಎಲ್ಲಾ ಮತದವರನ್ನೂ ಆಯಾಯ ಅರಸ್ತಾನದವರು ಅವರವರ ಮತಧರ್ಮಕ್ಕನುಸಾರವಾಗಿಯೇ ಸಂರಕ್ಷಿಸುತ್ತಾರಲ್ಲದೆ ಹಿಂದೆ ಪೋರ್ಚುಗೀಸಿನವರೂ (ರೋಮನ್ ಕ್ರೈಸ್ತ ಮತದವರು), ಟೀಪ್ಪುಸುಲ್ತಾನ (ಮಹಮ್ಮದೀ ಮತದವರು) ಮುಂತಾದ ಅರಸುಗಳೂ ನಡಸಿದಂಥ ಬಲಾತ್ಕಾರವನ್ನು ಈಗ ಯಾವ ಅರಸರೂ ನಡಸುವದು ಕಂಡು ಬರುವದಿಲ್ಲ. ಇದರಂತೆಯೇ ಈ ಮೈಸೂರು ಮಹಾರಾಜಾ ಗವರ್ನಮೆಂಟಿನವರು ಸಹಾ ತಮ್ಮ ಪ್ರಜಾಕೋಟಿಯನ್ನು ಅವರವರ ಮತಧರ್ಮಕ್ಕನುಸಾರವಾಗಿಯೇ ಸಂರಕ್ಷಿಸಿ ಒಳ್ಳೇ ಕೀರ್ತಿಯನ್ನು ಪಡೆದಿದ್ದಾರೆಂಬುವದು ನಿಶ್ಚಯ. ಹೀಗಿರುವಲ್ಲಿ ಈಗ ಏನೋ ಕಾರಣಾಂತರದಿಂದ ಈ ಹೊಸ ರೆಗ್ಯುಲೇಷನ್ (ಕಾನೂನು) ತಯಾರುಮಾಡಿ, ಇದನ್ನು ಜಾರಿಗೆ ತರುವದು ನ್ಯಾಯವೋ ? ಯಾ ಅನ್ಯಾಯವೋ ? ಎಂಬ ಈ ಸುವಿಚಾರದಿಂದ ಸರ್ವರ ಅನುಮತಿಯನ್ನು ಪಡೆಯಲಪೇಕ್ಷಿಸಿದ್ದೂ ಮತ್ತು ಇದಕ್ಕೆ ನಿಶ್ಚಯಿಸಿದ ಅವಧಿಯನ್ನು ಪುನಹ ಮುಂದರಿಸಿದ್ದೂ ಸಹ ಬಹಳ ಶ್ಲಾಘನೀಯವೇ ಸರಿ ಇಂಥಾ ಸುಗುಣಯುತರಾದ ಸದರಿ ಮಹಾರಾಜಾ ಗವರ್ನಮೆಂಟಿನವರು ಈ ಹೊಸ ರೆಗ್ಯುಲೇಷನ್ನನ್ನು ಎಂದಿಗೂ ಜಾರಿಗೆ ತರಲಾರರೆಂಬುದು ನಿಶ್ಚಯ

(೧) ಯಾತಕ್ಕೆಂದರೆ ತಾ ೧೩-೧೦-೦೫ ರಲ್ಲಿ ಪ್ರಕಟಿಸಿರುವ ಇಸ್ತಿಹಾರನಾಮೆಯಲ್ಲಿ ''. . ಯಾವ ಮನುಷ್ಯನಾಗಲಿ ಮತ್ತು ಅವನ ವಾರಸುದಾರ ಅಥವಾ ಪ್ರತಿನಿಧಿಯಾಗಲಿ ಸ್ವತ್ತಿಗೆ ಅಥವಾ ಸ್ವತ್ತಿನಲ್ಲಿ ಅವನಿಗಿರುವ ಬಾಧ್ಯತೆಯಿಂದಾಗಲಿ ನಿವೃತ್ತನಾಗಿ ಮಾಡಲ್ಪಡುವದಿಲ್ಲ'' ಎಂದು ಸೂಚಿಸಿದೆ ಇದರಿಂದ ಕಾಣುವದೇನಂದರೆ—''ಸ್ವತ್ತಿನಲ್ಲಿ ಅವನಿಗಿರುವ ಬಾಧ್ಯತೆ'' ಎಂಬ ಈ ಮುಖ್ಯ ಮಾತೇ ಈ ರೆಗ್ಯುಲೇಷನಿನ ಮೂಲಾಧಾರವಾಗಿ ಕಾಣಬರುತ್ತದೆ. ಆದ್ದರಿಂದ ಈ ಮುಖ್ಯ ಮಾತನ್ನೇ ಹಿಡಿದು ಆಲೋಚಿಸುವದೆಂದರೆ ಬಾಧ್ಯತೆ ಎಂಬದೇನು ? ಆ ಬಾಧ್ಯತೆ ಅವನಿಗೆ ಹ್ಯಾಗುಂಟಾಯಿತು ? ಎಂತ ಸಹ ಯೋಚಿಸಬೇಕಾಗುತ್ತದಲ್ಲ ? ಯಾತಕ್ಕೆಂದರೆ ಕ್ರಿಮಿನಲ್ ಮೊಕದ್ದಮೆಯ ವಿಧಿಯು (ಪೆನಲ್ ಕೋಡು) ಸರ್ವ ಮಂದಿಗೂ ಏಕಪ್ರಕಾರವಾದ ವಿಧಿಯನ್ನೇ ವಿಧಿಸುತ್ತದಲ್ಲದೆ ಆಯಾ ಮತಧರ್ಮಕ್ಕನುಸಾರವಾಗಿ ವರ್ತಿಸುವದಿಲ್ಲವು ಆದರೆ ಈ ಹಕ್ಕುಬಾಧ್ಯತೆಗಳನ್ನು ನಿರ್ಣಯಿಸುವ ಸಿವಿಲ್ ಮೊಕದ್ದಮೆಯ ವಿಧಿಯು ಸರ್ವ ಮತದವರಿಗೂ ಏಕಪ್ರಕಾರವಾದ ವಿಧಿಯನ್ನೇ ವಿಧಿಸದೆ, ಅವರವರ ಮತಧರ್ಮಕ್ಕನುಸಾರವಾಗಿ ಪ್ರತ್ಯೇಕ ಪ್ರತ್ಯೇಕವಾದ ವಿಧಿಯನ್ನೇ ಅವರವರಿಗೆ ವಿಧಿಸುತ್ತದೆ ಹ್ಯಾಗೆಂದರೆ ಹಿಂದೂ ಧರ್ಮಶಾಸ್ತ್ರಾನುಸರಿಸುವರಲ್ಲಿ ಮಕ್ಕಳ ಸಂತಾನವೆಂದೂ ಅಳಿಯ ಸಂತಾನವೆಂದೂ ಎರಡು ವಿಧವು. ಮಕ್ಕಳ ಸಂತಾನದಲ್ಲಿ ತಂದೆಯ (ಹಿರಿಯರ) ಸ್ವತ್ತಿಗೆ ಗಂಡುಮಕ್ಕಳೇ ಪ್ರಥಮತಾ ಬಾಧ್ಯರು, ಆದರೆ ಅಳಿಯ ಸಂತಾನದಲ್ಲಿ ತಂದೆಯ ಆಸ್ತಿಯು ಮಕ್ಕಳಿಗೆ ಸಿಕ್ಕುವದೇ ಇಲ್ಲವು ಇದಕ್ಕೆ ಸೋದರಳಿಯನೇ ಬಾಧ್ಯನು. ಮಹಮ್ಮದೀಯರಲ್ಲಿ ಮಾತ್ರ ಧರ್ಮಪತ್ನಿಯು ೮ನೇ ೧ ದಂಶಕ್ಕೆ ಬಾಧ್ಯಳು, ಮಕ್ಕಳಿದ್ದಲ್ಲಿ ಎರಡಂಶಕ್ಕೆ ಗಂಡುಮಕ್ಕಳೂ ಒಂದಂಶಕ್ಕೆ ಹೆಣ್ಣುಮಕ್ಕಳೂ ಪ್ರಥಮತಾ ಬಾಧ್ಯರು. ಹೀಗಿರುವದರಿಂದ ಅವನಿಗಿರುವ ಬಾಧ್ಯತೆ ಎಂಬುವದು ಅವನ ಮತಧರ್ಮದಿಂದಲೇ ಉಂಟಾಯಿತಲ್ಲದೆ ಸರ್ವ ಮತದವರಿಗೂ ಏಕಪ್ರಕಾರವಾದ ಬಾಧ್ಯತೆ ಉಂಟಾಗುವದಿಲ್ಲ ಎಂಬುವದು ನಿರ್ವಿವಾದದ ಸಂಗತಿಯಲ್ಲವೋ ? ಹೀಗಾದ ಮೇಲೆ ಸದರಿ ಮಹಾರಾಜಾ ಗವರ್ನಮೆಂಟಿನವರು ಪ್ರಜೆಗಳಲ್ಲಿ ಅವನ ಬಾಧ್ಯತೆಯನ್ನು ನಿರ್ಣಯಿಸಿ ಊರ್ಜಿತಪಡಿಸುವ ಸಂದರ್ಭದಲ್ಲಿ ಅವನ ಮತಧರ್ಮವನ್ನು ಮಾನಿಸುವದೂ, ಅವನ ಧರ್ಮದಿಂದುಂಟಾದ ಬಾಧ್ಯತೆಯು ಅವನ ಮತಧರ್ಮವೇ ರದ್ದುಪಡಿಸುತ್ತದೆಂಬ ಸಂದರ್ಭದಲ್ಲಿ ಮೊದಲು ಮಾನಿಸಿದ ಆ ಮತಧರ್ಮವನ್ನೇ ಇಲ್ಲಿ ಪುನಹ ಮಾನಿಸದೆ ಅದನ್ನು ಅಲಕ್ಷಿಸುವುದೂ ಧಿಕ್ಕರಿಸುವುದೂ ಇದ್ಯಾವ ನ್ಯಾಯವು ? ಇದು ನ್ಯಾಯವೆಂದು ಯಾರು ತಾನೇ ಹೇಳ್ಯಾರು ? ಆದ್ದರಿಂದ ಈ ಕಾನೂನು ಜಾರಿಗೆ ತರಲಾರರು

(೨) ಮತ್ತು ಪ್ರಜೆಗಳಲ್ಲಿ ಅಧಿಕ ಪಕ್ಷದವರೂ, ಮತಗಳಲ್ಲಿ ಹಿಂದು, ಮಹಮ್ಮದ್, ಕ್ರೈಸ್ತ, ಈ ಮೂರು ಮತಧರ್ಮಗಳೂ ಸಹ ಈ ಹೊಸ ಕಾನೂನಿಗೆ ಎಂದಿಗೂ ಒಪ್ಪಿಗೆ ಕೊಡುವದಿಲ್ಲವಲ್ಲ ? ಹ್ಯಾಗೆಂದರೆ ಹಿಂದು ಮತ್ತು ಮಹಮ್ಮದೀಯ ಮತದವರು ಅಲ್ಲಲ್ಲಿ ಸಭೆ ಸೇರಿ, ಈ ಹೊಸ ಕಾನೂನು ಎಂದೂ ಜಾರಿಗೆ ತರಕೂಡದೆಂದೂ ಜಾರಿಗೆ ತಂದರೆ ತಮ್ಮ ಮತಧರ್ಮಕ್ಕೆ ನಿಜವಾಗಿ ವಿರೋಧ ಉಂಟಾಗುತ್ತದೆಂದೂ, ಕೆಲವು ಕಾರಣಗಳನ್ನು ತೋರಿಸಿ ಅತಿ ದೈನ್ಯದಿಂದ ಮೊರೆಯಿಟ್ಟು ಮೈಸೂರು ಗವರ್ನಮೆಂಟಿನವರನ್ನು ಕೇಳಿಕೊಂಡಿರುವ ಸಂಗತಿ ಸರ್ವರಿಗೂ ವಿದಿತವಾಗಿಯೇ ಇದೆ. ಆದ್ದರಿಂದ ಅದನ್ನು ಇಲ್ಲಿ ಪುನಹ ಎತ್ತಿ ವಿವರಿಸುವದೇಕೆ ? ಪತ್ರಿಕಾ ಹಾಳ್ಯಕ್ಕೆ ಅಂಜಿ ಈ ಎರಡು ಮತದವರ ಅಭಿಪ್ರಾಯ ಇಷ್ಟಕ್ಕೇನೇ ನಿಲ್ಲಿಸುವೆನು

ಆದರೆ ಕ್ರೈಸ್ತಮತದವರು ಮಾತ್ರ ಈ ಹೊಸ ರೆಗ್ಯುಲೇಷನ್ ಜಾರಿಗೆ ತರಬೇಕೆಂದು ಪ್ರಯತ್ನಪೂರ್ವಕವಾಗಿ ಸಾಧಿಸುತ್ತಾರೆ ಇದಕ್ಕೆ ಕಾರಣವೇನಿರಬಹುದೋ ಎಂಬುವದು ತಿಳಿದುಕೊಳ್ಳುವದಕ್ಕೆ ಅಸಾಧ್ಯ ಯಾತಕ್ಕೆಂದರೆ ಅವರ ಬೈಬಲ್ ಇದಕ್ಕೆ ಏನು ಹೇಳುತ್ತದೆಂದು ನೋಡುವ

(ಥೆಸ್ಸ. ೩, ೧೨) ನಿಮ್ಮ ಸ್ವಂತ ಕೈಗಳಿಂದ ಕಷ್ಟ ಮಾಡಬೇಕೆಂದೂ ನಿಮಗೆ ಬುದ್ಧಿ ಹೇಳುತ್ತೇವೆ. (ಮತ್ತಾ ೧೯, ೨೪) ಐಶ್ವರ್ಯವಂತನು ದೇವರ ರಾಜ್ಯದಲ್ಲಿ ಪ್ರವೇಶಿಸುವದಕ್ಕಿಂತ ಒಂಟೆಯು ಸೂಜಿಯ ಕಣ್ಣಿನಲ್ಲಿ ತೂರುವದು ಸುಲಭ (ಮತ್ತಾ. ೬, ೨೪) ಯಾವನಾದರೂ ಇಬ್ಬರು ಯಜಮಾನರಿಗೆ ದಾಸನಾಗಿರಲಾರನು . . ನೀವು ದೇವರಿಗೂ, ಮಮ್ಮೋನಿಗೂ ದಾಸರಾಗಿರಲಾರಿರಿ (ಮಮ್ಮೋನೆಂದರೆ ಅರಾಮಿಯದಲ್ಲಿ ಐಶ್ವರ್ಯವೆಂದರ್ಥ.) (ಮತ್ತಾ. ೬, ೨೧.) ಯಾತಕ್ಕೆಂದರೆ ನಿಮ್ಮ ದ್ರವ್ಯವು ಎಲ್ಲಿಯೋ ಅಲ್ಲಿ ನಿಮ್ಮ ಹೃದಯವೂ ಇರುವದು. (೧ ತಿಮೊ. ೬, ೯—೧೦, ೧೧) ಐಶ್ವರ್ಯವಂತರಾಗಲು ಇಚ್ಛೈಸುವವರು ಶೋಧನೆಯಲ್ಲಿಯೂ, ಉರುಲಿನಲ್ಲಿಯೂ, ಬುದ್ಧಿ ಇಲ್ಲದ ನಷ್ಟವುಳ್ಳ ಅನೇಕ ಆಸೆಗಳಲ್ಲಿಯೂ ಬೀಳುತ್ತಾರೆ ಅವು ಮನುಷ್ಯರನ್ನು ನಾಶದಲ್ಲಿಯೂ, ಲಯದಲ್ಲಿಯೂ, ಮುಣುಗಿಸುತ್ತವೆ ಯಾತಕ್ಕೆಂದರೆ ದ್ರವ್ಯಾಶೆಯು ಸಕಲ ಕೇಡುಗಳ ಬೇರಾಗಿದೆ. (೨ ಥೆಸ್ಸ ೩, ೧೨) ಅಂಥವರಿಗೆ ಸಮಾಧಾನದಿಂದ ಕೆಲಸಮಾಡಿ ಸ್ವಂತ ರೊಟ್ಟಿಯನ್ನು ತಿನಬೇಕೆಂದು ನಮ್ಮ ಕರ್ತನಾದ ಯೇಸುಕ್ರಿಸ್ತನಿಂದ ಬುದ್ಧಿ ಹೇಳಿ ಆಜ್ಞಾಪಿಸುತ್ತೇವೆ (ಮತ್ತಾ. ೧೯, ೨೯) ನನ್ನ ಹೆಸರಿನ ನಿಮಿತ್ತ ಮನೆಗಳನ್ನಾದರೂ, ಸಹೋದರರನ್ನಾದರೂ, ಸಹೋದರಿಗಳನ್ನಾದರೂ, ತಂದೆಯನ್ನಾದರೂ, ತಾಯಿಯನ್ನಾದರೂ, ಹೆಂಡತಿಯನ್ನಾದರೂ, ಮಕ್ಕಳನ್ನಾದರೂ, ಹೊಲಗಳನ್ನಾದರೂ ಬಿಟ್ಟವನಾವನೋ ಅವನು ನೂರರಷ್ಟು ಹೊಂದಿ ನಿತ್ಯಜೀವವನ್ನು ಸಹ ಬಾಧ್ಯವಾಗಿ ಹೊಂದುವನು (ಲೂಕ ೯, ೬೨) ತನ್ನ ಕೈಯನ್ನು ನೇಗಲಿಗೆ ಹಾಕಿ ಹಿಂದಕ್ಕೆ ನೋಡುವವನ್ಯಾವನಾದರೂ, ದೇವರ ರಾಜ್ಯಕ್ಕೆ ತಕ್ಕವನಲ್ಲ

ಈ ಎಲ್ಲಾ ವಾಕ್ಯಗಳಿಂದ ತೋರುವದೇನಂದರೆ— ಕ್ರೈಸ್ತಮತಕ್ಕೆ ಸೇರುವವನು ಬರೀ ಮೋಕ್ಷಾಪೇಕ್ಷೆಯಿಂದಲೇ ಸೇರಬೇಕಲ್ಲದೆ ತನ್ನ ಪಿತ್ರಾರ್ಜಿತ ಆಸ್ತಿ ಸಿಕ್ಕಬೇಕೆಂತಾಗಲಿ ಯಾ ಅಂಥಾ ದ್ರವ್ಯದ ಮೇಲೆ ಆಶೆಯಿಡುವದರಿಂದಾಗಲಿ ಕ್ರೈಸ್ತಮತಕ್ಕೆ ಸೇರಬಾರದು ಯಾತಕ್ಕೆಂದರೆ (ಕೈಯನ್ನು ನೇಗಲಿಗೆ ಹಾಕಿ ಹಿಂದಕ್ಕೆ ನೋಡುವದು) ಹೀಗೆ ಮಾಡುವದರಿಂದ ದೇವರ ರಾಜ್ಯಕ್ಕೆ ತಕ್ಕವನಲ್ಲದೇ ಹೋಗುತ್ತಾನಲ್ಲ ? ಇದು ಯೇಸುಕ್ರಿಸ್ತನ ಮಹಾವಾಕ್ಯವಲ್ಲವೋ ? ಮೋಕ್ಷಾಪೇಕ್ಷೆಯಿಂದ ಕ್ರೈಸ್ತಮತಕ್ಕೆ ಸೇರಿದ ಮೇಲೆ ಅಂಥಾ ಮೋಕ್ಷಕ್ಕೆ ಹಾನಿತರುವ ಈ ದ್ರವ್ಯಾಸೆಯು ದಾಯಭಾಗದ ಬಾಧ್ಯತೆಯು, ಹೊಸ ಕ್ರೈಸ್ತರಿಗೆ (ಕ್ರೈಸ್ತಮತಕ್ಕೆ ಸೇರಿದ ಸ್ವಜಾತಿಭ್ರಷ್ಟರಿಗೆ) ಅವಶ್ಯವಾಗಿ ಸಿಕ್ಕಲೇಬೇಕೆಂದು ಕ್ರೈಸ್ತರು ಪಟ್ಟುಹಿಡಿದು ಸಾಧಿಸುವದೂ, ಈ ಸಾಧನೆಗೆ ಸರಿಯಾದ ಈ ಹೊಸ ರೆಗ್ಯುಲೇಷನ್ ಜಾರಿಗೆ ತರಲೇಬೇಕೆಂದು ಪ್ರಯತ್ನ ಮಾಡುವದೂ ನೋಡಿದರೆ ನಿಜಕ್ರೈಸ್ತರು (ವೇದವಚನದಂತೆ ವರ್ತಿಸುವವರು) ಇದಕ್ಕೆ ನಾಚಿಕೆಪಡಲಿಕ್ಕಿಲ್ಲವೋ ? ಅಥವಾ ಹೊಸದಾಗಿ ಕ್ರೈಸ್ತಮತಕ್ಕೆ ಸೇರುವವರಿಗೆ ಪ್ರೋತ್ಸಾಹಗೊಳಿಸಬೇಕೆಂಬ ಇಚ್ಛೆಯಿಂದ ಹೀಗೆ ಮಾಡುತ್ತಾರೋ ? ಏನೆಂಬುವದು ತಿಳಿಯುವದಿಲ್ಲ.

ಏನಂಬಾ ಈ ಹೊಸ ರೆಗ್ಯುಲೇಷನ್ ಹಿಂದೂ, ಮಹಮ್ಮದ್, ಕ್ರೈಸ್ತ, ಈ ಮೂರು ಮತಗಳಿಗೂ ವಿರೋಧವಾಗಿರುವದರಿಂದ ಸುಜ್ಞರಾದ ಮೈಸೂರು ಮಹಾರಾಜಾ ಗವರ್ನಮೆಂಟಿನವರು ಇದನ್ನು ಎಂದಿಗೂ ಜಾರಿಗೆ ತರಲಾರರೆಂಬುವದೇ ನಿಶ್ಚಯ ಇದರಂತೆಯೇ ಭಗವಂತನು ಸಹ ಅನುಗ್ರಹಿಸಲಿ ಎಂದು ಈ ಮೂರು ಮತದವರು ಕೂಡಿ ಭಗವಂತನನ್ನು ಪ್ರಾರ್ಥಿಸುವ.

ಪತ್ರವಿಸ್ತಾರಕ್ಕೆ ಕ್ಷಮೆ ಬೇಡಿಕೊಳ್ಳುವ

ಪೆರಡೂರು ರ. ಮ.

ಮೇಲ್ಕಂಡ ಬಾತ್ಮಿಗೆ ಉತ್ತರ.

[I. ಪಿತ್ರಾರ್ಜಿತ ಆಸ್ತಿಯಲ್ಲಿ ಎಲ್ಲಾ ಮತಸ್ಥರಿಗೂ ಏಕಪ್ರಕಾರವಾದ ಹಕ್ಕುಬಾಧ್ಯತೆಗಳಿರುವುದಿಲ್ಲವೆಂತಲೂ ಆಯಾ ಮತಧರ್ಮಕ್ಕೆ ಅನುಸಾರವಾಗಿ ಬಾಧ್ಯತೆ ಬರುವುದೆಂತಲೂ ಈ ಬಾತ್ಮಿದಾರರು ಹೇಳುವುದನ್ನು ನಾವು ಸರಿ ಎಂದು ಒಪ್ಪಿಕೊಳ್ಳುವೆವು. ಹಿಂದೂ ಮತಸ್ಥರಲ್ಲಿ ಇವರು ಹೇಳಿರುವಂತೆ ಪಿತ್ರಾರ್ಜಿತದ ಹಕ್ಕು ತಂದೆಯಿಂದ ಮಕ್ಕಳಿಗೂ ಸೋದರಳಿಯನಿಗೂ ರಕ್ತಸಂಬಂಧವಿರುವಂತೆ ಉಂಟಾಗುವುದು. ಕ್ರೈಸ್ತರಲ್ಲಿ ತಂದೆಯಾದವನು ಆಸ್ತಿಯನ್ನು ತನ್ನಿಷ್ಟಬಂದವರಿಗೆ ಕೊಟ್ಟುಬಿಡುವುದಕ್ಕೆ ಅಧಿಕಾರ ಉಳ್ಳವನಾಗಿರುತ್ತಾನೆ. ಈ ಬಾತ್ಮಿದಾರರು ಈ ಹೊಸ ರೆಗ್ಯುಲೇಷ ನೂನು) ಹಿಂದೂ ಧರ್ಮಶಾಸ್ತ್ರವನ್ನು ತಲೆಕೆಳಗು ಮಾಡುವದು ಹೇಳುವ ಮಾತನ್ನು ಯಥಾರ್ಥವೆಂದು ಯಾರೂ ಒಪ್ಪ ಅದರ ಮುಖ್ಯಾಭಿಪ್ರಾಯವೇನೆಂದರೆ, ಹಿಂದುಗಳಾಗಲಿ ಕ[illegible]ಗಲಿ ಮಹಮ್ಮದೀಯರಾಗಲಿ ಆಯಾ ಮತವನ್ನೇ ಅನುಸರಿಸಿ ಬರುವ ಜನಕ ಆಯಾ ಮತಾನುಸಾರವಾಗಿ ಹಕ್ಕುಬಾಧ್ಯತೆ ಪಡೆದಿರುವರು. ಒಂದು ವೇಳೆ ಯಾವನಾದರೂ ಹುಟ್ಟಿದ ಮ ಬಿಟ್ಟು ಬೇರೆ ಮತವನ್ನು ಅವಲಂಬಿಸಿದ ಪಕ್ಷದಲ್ಲಿ ಅದಕ್ಕೆ ಅವನ ಹಕ್ಕುಬಾಧ್ಯತೆಗಳಿಗೆ ಕುಂದಕವಾಗಕೂಡದು. ಇದು ಧರ್ಮಶಾಸ್ತ್ರದಲ್ಲಿ ಜಾತಿಕೆಟ್ಟವರ ವಿಷಯವಾದ ಒಂದು ಸ ವನ್ನು ಮಾತ್ರ ತಿದ್ದುಪಡಿ ಮಾಡುವುದಲ್ಲದೆ ಆ ಧರ್ಮಶಾಸ್ತ್ರ ಲ್ಲಾ ಬದಲಾಯಿಸುವುದಿಲ್ಲ. ಯಾರೂ ಮತಾಂತರವನ್ನು ಹೊ ಹೋಗುವ ಪಕ್ಷದಲ್ಲಿ ಈ ಕಾನೂನು ಹಿಂದೂ ಜನಸಮುದಾಯ ಯಾವದೊಂದು ಕುಂದುಕೊರತೆಯನ್ನಾದರೂ ಉಂಟುಮಾಡಲಾ ಹಾಗೆ ಮತಾಂತರವನ್ನು ಹೊಂದಿದರೂ ಈ ಹೊಸ ಕಾನೂನು ವರಿಗೂ ಅವರ ರಕ್ತಸಂಬಂಧಿಗಳಿಗೂ ಅನ್ವಯಿಸುತ್ತದಲ್ಲದೆ ಗೋಜಿಗೆ ಬರುವುದಿಲ್ಲ.

ಈ ಬಾತ್ಮಿದಾರರಿಗೆ ನಮ್ಮ ಪ್ರಶ್ನೆ ಏನೆಂದರೆ— ಹಿಂದೂಮತ ತ್ಯಜಿಸಿದವನ ವಿಷಯದಲ್ಲಿ ಹೇಳಿರುವ ಹಿಂದೂ ಧರ್ಮಶಾಸ್ತ್ರಗಳು ಧರ್ಮವಾದವುಗಳೋ ? ಅದ ಈ ಧರ್ಮಶಾಸ್ತ್ರ ಪೋರ್ಚುಗೀಸಿನವರ ಮತ್ತು ಟೀಪ್ಪುಸುಲ್ತಾನ ಮುಂತಾದ ಬಲಾತ್ಕಾರಪೂರ್ವಕವಾದ ಅಧರ್ಮವಿಧಿಗಳಿಗೆ ಸರಿಸಮಾನವಾದವುಗಳೋ ? ನಮ್ಮನ್ನು ಕೇಳಿದರೆ ಅವು ಅಧರ್ಮವಿಧಿಗಳೆಂತಲೂ ರವಾದವುಗಳೆಂತಲೂ ಬಿಚ್ಚಿ ಹೇಳುವೆವು. ಸದ್ಯದಲ್ಲಿ ಸಕ ಕರಾದ ಸರ್ಕಾರದವರೆಲ್ಲಾ ತಮ್ಮ ಪ್ರಜೆಗಳಿಗೆ ಮತವಿಷಯ ಸಂಪೂರ್ಣ ಸ್ವಾತಂತ್ರ್ಯವನ್ನು ಕೊಟ್ಟಿರುತ್ತಾರೆ ಅಂಥಾ ಸರ್ಕಾರದವರು ಮತಾಂತರವನ್ನು ಹೊಂದಿದ ಪ್ರಜೆಗಳನ್ನು ಕಷ್ಟನಷ್ಟಗುರಿಮಾಡುವುದಿಲ್ಲ. ಇಂಥಾ ಸರ್ಕಾರ ನ್ಯಾಯವಾದ ವಿಷಯದಲ್ಲಿ ಧರ್ಮಶಾಸ್ತ್ರವು ವಿರೋಧಾಭಿಪ್ರಾಯವನ್ನು ಹೇಳುವುದಾದ ಭಾಗವನ್ನು ಮಾತ್ರ ರದ್ದುಮಾಡಿ, ಈಗಿನ ಕಾಲಕ್ಕೆ ತಕ್ಕ ಹಾಗೆ ನ್ನು ಬದಲಾಯಿಸಿಕೊಳ್ಳಬೇಕಾಗಿದೆ.

II ನಮ್ಮ ಬಾತ್ಮಿದಾರರು ಯೇಸುಕ್ರಿಸ್ತನ ವಾಕ್ಯಗಳನ್ನು ಉದಾಹರಿಸಿ, ಆತನ ಶಿಷ್ಯರು ಆತನ ಅಪ್ಪಣೆಯಾಗಿರುವಂತೆ ವಿಧವಾದ ಕಷ್ಟನಷ್ಟಗಳನ್ನೂ ಗಣನೆ ಬಿಡದೆ ತಾಳ್ಮೆಯಿಂದ ಸಹಿಸಬೇಕೆಂತಲೂ ದ್ರವ್ಯಾಶೆಯನ್ನು ತ್ಯಜಿಸಬೇಕೆಂತಲೂ ಹೇಳುವ ಇದು ನಮಗೆ ಸಂತೋಷಕರವಾಗಿರುವದು. ಆದರೆ (೧) ಹಿಂದೂಮತವನ್ನು ಬಿಟ್ಟು ಬೇರೆ ಮತಕ್ಕೆ ಸೇರಿಕೊಂಡವನು ತನ್ನ ಮತನ ಪೋಷಣೆಯಲ್ಲಿರಬೇಕೆಂದು ತೋರುವುದೇ ? ಇದರಲ್ಲಿ ನಿಗೆ ಏನಾದರೆ ಇರುವದೋ ? ಅಥವಾ, ಅವನಲ್ಲಿರುವ ಸಹ ಮತ್ತು ನ್ಯಾಯವಾದ ಹಣವನ್ನಾಗಿ ಅಪೇಕ್ಷಿಸುವನೋ ? ಐಶ್ವರ್ಯವಂತನಾಗಬೇಕೆಂದಪೇಕ್ಷಿಸದೆ ಜೀವನೋಪಾಯಕ್ಕೆ ಸಾಕಾಗುವಷ್ಟನ್ನು ಮಾತ್ರ ಕಾಪಾಡಿಕೊಂಡರೆ ಸಾಕೆಂದು ಕೋರಬಹುದು ಅನ್ಯಮತಾವಲಂಬಿಯು ದ್ರವ್ಯಾಪೇಕ್ಷೆಪಡುವಕ್ಕವನಾದನೋ ? ನನು ಇತರರಿಗೆ ಹೊರೆಯಾಗದಂತೆ ತಕ್ಕ ಮಟ್ಟಿಗೆ ಮಾನವಾಗಿ ಜೀವನ ಮಾಡಿಕೊಳ್ಳಬೇಕೆಂದು ಅಪೇಕ್ಷಿಸುವುದು ಸಾಜನ್ಯ ಧರ್ಮ ಅಲ್ಲವೋ ? (೨) ಕ್ರೈಸ್ತರು ಎಷ್ಟು ಮಟ್ಟಿನ ಅನ್ಯಾಯವನ್ನೂ ತಾಳ್ಮೆಯಿಂದ ಸಹಿಸಿಕೊಂಡು, ತಮಗೆ ಕೇಡುಮಾಡುವವರನ್ನು ಪ್ರೀತಿಸಿ, ಅವರಿಗೆ ಒಳ್ಳೇದನ್ನೇ ಪ್ರತಿಯಾಗಿ ಮಾಡುವುದಕ್ಕೆ ಬದ್ಧರಾಗಿರುತ್ತಾರೆ ಆದಮಾತ್ರಕ್ಕೆ ಹಿಂಸೆಪಡಿಸುತಕ್ಕವರ ಕೆಲಸಗಳು ಧರ್ಮವೆನಿಸುವುವೋ ? ಹಿಂದುವು ಕ್ರೈಸ್ತನಾದವನ ಸರ್ವಸ್ವವನ್ನೂ ಅಪಹರಿಸಿದಾಗ್ಯೂ ಕ್ರೈಸ್ತನು ಅದಕ್ಕಾಗಿ ದುಃಖಪಟ್ಟು ಕ್ರೋಧವನ್ನು ತೋರಿಸದೆ ಆನಂದಿತನಾಗಿಯೂ ಸಂತೋಷನಾಗಿಯೂ ಇರಬೇಕು ಯಾಕಂದರೆ, ಅಪೊಸ್ತಲನಾದ ಪೌಲನು ''ಇತರರು ನಿಮ್ಮ ಸರ್ವಸ್ವವನ್ನೂ ನಾಶಮಾಡಿದಾಗ್ಯೂ ಆನಂದಿಸಿರಿ'' ಎಂದು ಹೇಳಿರುವನು ಆದರೆ ಹೀಗೆ ಅಪಹರಿಸತಕ್ಕವರು ರ್ಮಗಳೂ ಪರೋಪಕಾರರೂ ಅಲ್ಲವೋ ? ಹಿಂದುಗಳು ಮತಾಂತರಹೊಂದಿದವನನ್ನು ಅತ್ಯಂತ ದ್ವೇಷದಿಂದ ಹೊಡೆದು, ಅವನಿಗೆ ''ನೀನು ಎಲ್ಲವನ್ನೂ ಸಹಿಸಿಕೊಳ್ಳಬೇಕಲ್ಲಾ ! ನಷ್ಟನಾಯಕ ದುಃಖಪಡದೆ ನಮ್ಮನ್ನು ಪ್ರೀತಿಸಯ್ಯಾ ! ಎಂಬೀ ರೀತಿಯಾಗಿ ವಿ ಹೇಳುವುದು ಯಾವ ಧರ್ಮ ? ಹಿಂದುಗಳು ಮಕ್ಕಳ ಮೇಲಿನ ಕಾರವನ್ನೂ ಆಸ್ತಿಯ ಹಕ್ಕುಬಾಧ್ಯತೆಗಳನ್ನೂ ಕ್ರೈಸ್ತನಿಗೆ ತ ಕಿತ್ತುಕೊಂಡು,—''ಅದೆಲ್ಲಾ ಹೋದರೆ ಹೋಗಲಿ, ಆದ ಚಿಂತಪಡದೆ ತಾಳ್ಮೆಯಿಂದ ಸೈರಿಸಿಕೋ'' ಎಂದು ಧರ್ಮಬೋಧೆ ಮಾಡುವುದು ಯೋಗ್ಯವಾದದ್ದೋ ? ಈ ರೀತಿಯಾಗಿ ಹೇಳುವ ರು ನಾನಾ ಹಿಂಸೆಯನ್ನನುಭವಿಸಿದ ಯೇಸುಕ್ರಿಸ್ತನ ಮಾತ ಹಿಂಸೆ ಕಷ್ಟನಷ್ಟಗಳನ್ನುಂಟುಮಾಡುವವರು ಇಂಥಾ ಮಾತನ್ನು ಹೇಳುವುದಕ್ಕೆ ಅವರಿಗೆ ಅಧಿಕಾರವೇನುಂಟು ? ಇದನ್ನೆಲ್ಲಾ ನೋಡಿ ಹುಲಿಯು ಪಶುವಿಗೆ ಕನಿಕರವನ್ನೂ ಪ್ರೀತಿಯನ್ನೂ ತೋರಿಸು ಹೇಳಿದ ಕಥೆಯು ಜ್ಞಾಪಕಕ್ಕೆ ಬರುವುದು.

ಈ ಬಾತ್ಮಿದಾರರು ಇಷ್ಟು ಚನ್ನಾಗಿಯೂ ಪರಿಷ್ಕಾರವಾಗಿ ಈ ಸಂಗತಿಯನ್ನು ಚರ್ಚಿಸಿ ತಮ್ಮ ಅಭಿಪ್ರಾಯಗಳನ್ನು ಬರೆದಿದಕ್ಕಾಗಿ ನಾವು ಸಂತೋಷಪಟ್ಟು ಅವರನ್ನು ವಂದಿಸುವೆವು —ಎಡಿ.

ಮೈಸೂರು ಗೆಜೆಟ್ ಸಂಗ್ರಹ.

ಚಿಕ್ಕಬಳ್ಳಾಪುರದ ಮುನ್ಸಿಫ್ ಮೆ|| ಎ. ನರಸಿಂಹಯ್ಯ ರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಹದಿನೇಳು ಗಳ ಕನಕ ಅರ್ಧ ಸಂಬಳದ ಮೇಲೆ ಪ್ರಿವಿಲೇಜ್ ರಜಾ ಕೊಟ್ಟಿ

...ಸ್ಟೆಂಟ್ ಮೆ॥ ಎ. ನಾರಣೇಪ್ಪೆಯ್ಯನವರು, ಮತ್ತೊಂದು ಸುವ ತನಕ, ಚಿಕ್ಕಬಳ್ಳಾಪುರದ ಮುನ್ಸಿಫರಾಗಿ ...ದ್ದೆಂದು ನೇಮಿಸಲ್ಪಟ್ಟಿದಾರೆ.

ಮುನ್ಸಿಫ್ ಮೆ॥ ಎ. ನರಸಿಂಹೈಯ್ಯಂಗಾರು ...೧೦ ರಲ್ಲಿ ರಜವಿಂದ ಬಂದು ಕೆಲಸದ ಛಾರ್ಜನ್ನು ವಹಿಸಿ ...ದ್ದರಿಂದ ಅವರು ಉಪಯೋಗಿಸಿಕೊಳ್ಳದ ಆದಿನೆಂಟು ದಿನಗಳ ...ರದ್ದು ಮಾಡಿದೆ.

...ಸೂರು ಸಿಟಿ ಅ॥ ಕಮಿಷನರ್ ಮ್ಯಾಜಿಸ್ಟ್ರೇಟ್ ಮೆ॥ ...ಕಟರಾಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿ ...ನಿಂದ್ಲು ದಿನಗಳ ಪ್ರಿವಿಲೇಜ್ ರಜಾ ಕೊಟ್ಟಿದೆ.

...ಸೂರು ಸಿಟಿ ಮ್ಯುನಿಸಿಪಾಲಿಟಿ ವೈಸ್ ಪ್ರೆಸಿಡೆಂಟ್ ಮೆ॥ ...ಕಟರಾಯರು ಮ್ಯಾಜಿಸ್ಟ್ರೇಟ್ ಕೋರ್ಟಿನ ಛಾರ್ಜನ್ನು ...ಕೊಳ್ಳದ್ದು ಇವರಿಗೆ ೧ನೆ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರ ...ಕೊಟ್ಟಿದೆ.

...ತ್ರದುರ್ಗದ ಅಮಲ್ದಾರ್ ಮೆ॥ ಟಿ. ರಾಮಚಂದ್ರರಾಯರಿಗೆ ...ನ ತಿಂಗಳ ಪ್ರಿವಿಲೇಜ್ ರಜಾ ಕೊಟ್ಟಿದೆ.

...ನಹಳ್ಳಿ ಆಕ್ಟಿಂಗ್ ಅಮಲ್ದಾರ್ ಮೆ॥ ಬಿ. ಸುಬ್ಬರಾಯರು, ...ದು ಕೆಲಸ ಕೊಡಲ್ಪಡುವ ತನಕ, ಚಿತ್ರದುರ್ಗದ ತಾ...ಅಮಲ್ದಾರ್ ಮತ್ತು ೩ನೆ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ...ಸತಕ್ಕದ್ದು.

...ಸ್ಟೆಸ್ ಎಕ್ಸೈಜ್ ಅ॥ ಕಮಿಷನರ್ ಮೆ॥ ಕೆ. ಶ್ರೀಕಂ...ಮಾಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ೩ದಿ ...ದಿನಗಳ ಪ್ರಿವಿಲೇಜ್ ರಜಾ ಕೊಟ್ಟಿದೆ. ಮೆ॥ ಬಿ. ಶ್ರೀನಿವಾ...ಸ್ಟ್ರೆಸ್ ಆಫೀಸ್ ಛಾರ್ಜನ್ನೂ ವಹಿಸಿರತಕ್ಕದ್ದು.

...ನೆಗ್ಲ್ ಡಿಸ್ಟ್ರಿಕ್ಟ್ ಫಾರೆಸ್ಟ್ ಅ॥ ಕನ್ಸರ್ವೇಟರ್ ಮೆ॥ ...ಮಾಟ್ಟಿ(ರೇ)ಯವರಿಗೆ ಅವರು ಉಪಯೋಗಿಸಿಕೊಳ್ಳುವ ...ದಿಂದ ಒಂದು ತಿಂಗಳ ಪ್ರಿವಿಲೇಜ್ ರಜಾ ಕೊಟ್ಟಿದೆ. ...ಬಿ ಎಸ್ ಗೋವಿಂದರಾಯರು ಶಿವಮೊಗ್ಗ ಡಿಸ್ಟ್ರಿಕ್ಟ್ ...ಆಫೀಸ್ ಛಾರ್ಜನ್ನು ವಹಿಸಿರತಕ್ಕದ್ದು.

...ಸೂರು ಸೆಷನ್ಸ್ ಜಡ್ಜ್ ಮೆ॥ ಎಂ ರಾಮಸ್ವಾಮಯ್ಯರ ...ಪೆಗಳೂರಿಗೆ ಮೆ॥ ಎಚ್. ವೆಂಕಟವರದ ಅಯ್ಯಂಗಾರ್ರು ...ಡರಿಗೂ ವರ್ಗ ಆ ದೆ

...ಅ॥ ಇಂಜಿನಿಯರ್ ಮೆ॥ ... ಅನಂದಾಳ್ವಾರ್‌ಯವರಿಗೆ ...ಳಿಗೂ ಐದು ವಾರಗಳ ... ರಜಾ ಕೊಟ್ಟಿದೆ.

...ಸೂರು ಇ...ನ್ಸ್ ಸರ್ವೆ ಡಿಪಾರ್ಟ್‌ಮೆಂಟ್ ವಹಿದಾರ್ ...ರ್ ಸ್ಟೈಫ್ ಅಪ್ರೈಲ್ ... ಯವರನ್ನು ಜಮಾದಾರ್ ...ಕಮ್ಯಾಂಡರ್ ದರ್ಜೆಗೆ ಬಡ್ತಿ ಮಾಡಿದೆ

ತಾಲ್ಲೋಕು ವರ್ತಮಾನಗಳು.

...ಕ್ಕರು.—ಈ ಊರು ಯಾವನರ್ಕಾರಿಗೆ ಸೇರಿ ಗ್ರಾಮ ಪ್ರ...ಯೋಜನಗಳು ತಯಾರಾಗ ತಾ ಇವೆ ಇನ್ನು ಅನೇಕ ಬೀದಿ ...ಯಾಗಿಲ್ಲ ... ಒಂದು ಬೀದಿಯ ... ...ದ ಕೋರಿಕೆ ... ಸೇರಿಸುವದು ಗ್ರಾಮಸ್ಥರ ಅಭಿಲಾಷ ...ಯಾಗಿ ಊರು ಬಾಗಿಲಲ್ಲಿ ಬಿಟ್ಟಿರುವರು ಇಲ್ಲಿ ರಾತ್ರಿ ...ರು ಕರಗಲು ... ಇರುವರು, ಮೆಂಬರುಗಳು ...ಭೀತಿ ತಪ್ಪಿಸುವ ಬಗ್ಗೆ ಸಿಪಾಯಿ ರೋಡು ಮಾಡುವ ಅಭ್ಯಾ...ನಡಸಲು ... ಯುಕ್ತ ವಾಗಿರುವರೆಂದು ಗ್ರಾಮಸ್ಥರು ಹಾರೈಸು ...ಳೆದ ದಸರಾದಲ್ಲಿ ಜೈನಮತಸ್ಥರ ದೇವರ ಉತ್ಸವಕ್ಕೆ ಭಂಗ ...ದು ಹಿಂದೆ ... ರೇವತಿಯ ನೆಪದಿಂದ ಕರಿ ಕೋ...ರ್ಟಿನಲ್ಲಿ ಕಡದ ... ಚಿಕಿತ್ಸೆಯನ್ನು ಮಾಡದ ವಿಷಯ ...ದಲ್ಲಿದೆ ಈ ಊರು ಮುಸಲ್ಮಾನರು ಬಕರೀದ್ ಹಬ್ಬದ ...ರ್ ತೆಗೆದದ್ದು ಬ್ರಾಹ್ಮಣರ ಆಗರಕ್ಕೆ ಬಾಧಕವಾಯಿತೆಂ...ರ್ಯಾದು ಮಾಡಿದಾರೆ

...ಲ್ಲೋಕು.—ಈ ಪ್ರಾಂತ್ಯ ... ಸಲೀಸು ಸಿಕ್ಕುವದೆ ಇದ್ದ ...ಸಗ್ಗಿಯ ಕಾಲವಾದಾಗ್ಯೂ ಈ ಊರಿನಲ್ಲಿ ಧಾನ್ಯಾದಿಗಳ ...ತ್ತಲಿವೆ ಇಲ್ಲಿನ ವರ್ತಕರು ಸುತ್ತಮುತ್ತ ಹಳ್ಳಿಗ...ಳಿಗೆ ಬರತಕ್ಕ ಬಡಪ್ರಾಯರಾದ ರೈತಾಪಿ ಜನಗಳು ...ವ, ಧಾನ್ಯ ಮಗ್ಗೆರೆಗಳನ್ನು ಬೆಸ್ತೆ ಮಗ್ಗೆದ ತೂಗುವ ಪಡಾ ...ವ್ಯಾಯಕ್ಕೆ ಸಲ್ಲದ ಸೇರು ಮತ್ತು ತೂಕದಿಂದಲೂ ...ಸಿ ತೆಗೆದುಕೊಳ್ಳುತ್ತಾರೆ. ರೈತರಿಗೂ ಇತರರಿಗೂ ಬಿಡಾ ...ಕೊಡಬೇಕಾದರೆ ಚಟ್ಟಿ ಸೇರಿನಿಂದಲೂ ಕಮ್ಮಿ ತೂಕ ...ಕೊಡುತ್ತಾರೆ ಈ ರೀತಿ ಈ ಕ್ಷಾಮಗಾಲದಲ್ಲಿ ... ...ಮಾಡುತ್ತಿರುವ ಪಿತಲಾಟಗಳನ್ನು ನಮ್ಮ ಡೆಪ್ಯೂಟಿ ಅಮಲ್ದಾ...ಸಿದ್ದು, ಮುಂದೆ ಇಂಥ ಅನ್ಯಾಯದ ಅಳತೆ, ತೂಕಗ...ಯೋಗಿಸದಂತೆ ಬಂದೋಬಸ್ತು ಮಾಡ್ಯಾರೆಂದು ನಂಬು...ದರೆ ಈ ವಿಚಾರದಲ್ಲಿ ಪೋಲೀಸಿನವರು ನಿಗಾಕೊಡದಿರು...ವುದು ಶೋಚನೀಯವಾಗಿದೆ.—ಇಲ್ಲಿನ ಮ್ಯುನಿಸಿಪಾಲಿಟಿ ...ಗಳು ಮ್ಯುನಿಸಿಪಲ್ ಮೀಟಿಂಗಿನಲ್ಲಿ ಆರೋಗ್ಯದ ವಿಷಯ ...ಊರಿನ ಅಭಿವೃದ್ಧಿ ವಿಷಯವಾಗಿಯೂ ಎಷ್ಟರಮಟ್ಟಿಗೆ ...ರೆಂಬ ವಿಷಯವನ್ನು ತಿಳಿಸುವದು ಅನಾವಶ್ಯಕ. ಮ್ಯು ...ಕೆಲಸಗಳ್ಯಾವವೂ ಸಮರ್ಪಕವಾಗಿ ನಡೆಯುತ್ತಿಲ್ಲ. ವಿದ್ಯಾ...ವಂತರಾಗಿಯೂ ಆರೋಗ್ಯವಿಷಯವನ್ನು ಚೆನ್ನಾಗಿ ತಿಳಿದವ...ರು ಮತ್ತು ದಕ್ಷರಾಗಿಯೂ ಇರತಕ್ಕ ಮೆಂಬರುಗಳನ್ನು ...ವರು ಚುನಾಯಿಸಿಯಾರೆಂದು ನಂಬುತ್ತೇನೆ.—ಇಲ್ಲಿನ ...ಕೆಡ್ ಮಾಸ್ಟರಿಗೆ ಸಂಬಳ ಬಡ್ತಿ ಆಯಿತೆಂದು ಕೇಳಿ ಈ ...ಲ್ಲ ಬಹಳ ಸಂತೋಷಿಸುತ್ತಾರೆ. ಜನರ ಅನುರಾಗವನ್ನು ...ಸಂಪಾದಿಸಿಟ್ಟ ವಿದ್ಯವನ್ನು ಹೇಳತಕ್ಕ ಇಂಥಾವರಿಗೆ ಪ್ರೋತ್ಸಾಹ ...ಕೊಡುವದ್ದು ನ್ಯಾಯವೆ. ಇದುವರಿಗೆ ಈ ಸ್ಕೂಲಿನಿಂದ ಲೋ...

...ವರ್ ಸೆಕಂಡರಿ ಪರಿಕ್ಷೆಗೆ ಹೋದ ಬಾಲಕರಲ್ಲಿ ಶೇಕಡ ಎಪ್ಪತ್ತೈದ ರಂತೆ ಉತ್ತೀರ್ಣರಾಗಿರುತ್ತಾರೆ. ಆದರೆ ಲೋವರ್ ಸೆಕಂಡರಿ ತರಗತಿಯನ್ನು ಪ್ರಾತಃಕಾಲಮಾತ್ರ ಮಾಡುವದರಿಂದ ಈ ರೀತಿ ಒಳ್ಳೇ ಫಲಿತಾಂಶ ಉಂಟಾಗುತ್ತಿರುವಾಗ್ಗೆ ಎರಡುಹೊತ್ತೂ ಕ್ಲಾಸು ನಡದು ಪಾಠಪ್ರವಚನಗಳು ನಡೆದರೆ ಇನ್ನೆಷ್ಟರಮಟ್ಟಿಗೆ ಫಲಿತಾಂಶ ಉತ್ತಮವಾಗಬಹುದು? ಆದ್ದರಿಂದ ದಯಾಳುಗಳಾದ ನಮ್ಮ **ಡೆಪ್ಯುಟಿ ಇನ್ಸ್ಪೆಕ್ಟರು** ಈ ಕುಂದಕವನ್ನು ನಿವಾರಣೆಮಾಡಿ, **ವಿದ್ಯಾರ್ಥಿಗಳ ಆಶಯವನ್ನು** ನೆರವೇರಿಸುತ್ತಾರೆಂದು ನಂಬಿದೇನೆ.—**ಅವಿಚಾರವಾಗಿ ಡೈರಿಗಳನ್ನು** ಪ್ರಕಟಿಸುವದರಿಂದ ಬ-ಳ ಜನಗಳಿಗೆ **ಅನಾನುಕೂಲಗಳು** ಸಂಭವಿಸುತ್ತವೆ. ಹ್ಯಾಗೆಂದರೆ, ಮೈಸೂರು ದೇಶದ ಡೈರಿಗಳಲ್ಲೊಂದರಲ್ಲಿ ಮೇಲುಗೋಟೆಯ ವೈರಮುಡಿ ಉತ್ಸವವು ಮಾರ್ಚಿ ೩ ಕ್ಕೆ ನಡಿಯುತ್ತದೆಂದೂ, ಇನ್ನೊಂದರಲ್ಲಿ ತಾ. ೭ ಕ್ಕೆ ನಡಿಯುತ್ತೆಂದೂ ಹಾಕಿದೆ. ಇದನ್ನು ನೋಡಿ ಅನೇಕರು ಬಹಳ ದೂರಸ್ಥಳದಿಂದ ಬಂದು, ತಮ್ಮ ಆಶಾಭಂಗವಾದ್ದಕ್ಕಾಗಿಯೂ ಅರ್ಥಹಾನಿಯಾದ್ದಕ್ಕಾಗಿಯೂ ತುಂಬಾ ವ್ಯಸನಪಟ್ಟು, ಹಿಂತಿರುಗಿ ಹೋಗುತ್ತಲಿದಾರೆ. ಆದರೆ ಈ ಉತ್ಸವವು ಏಪ್ರಲ್ ೪ ಕ್ಕೆ ನಡಿಯುತ್ತೆ. ಆದ್ದರಿಂದ ಡೈರಿಗಳನ್ನು ಬರೆಯತಕ್ಕವರು ಇನ್ನು ಮೇಲಾದರೂ ವಿಷಯಗಳನ್ನು ಚನ್ನಾಗಿ ವಿಚಾರಿಸಿ ಪ್ರಕಟಿಸುವರೆಂದು ನಂಬುತ್ತೇನೆ.—ಮಾರ್ಚಿ ತಾ. ೬ ನೆ ಮಂಗಳವಾರ ಸಾಯಂಕಾಲ ಅ॥ ಇಂಜನಿಯರ್ ಮೆ॥ ಛೋರ್ ಸಾಹೇಬರು ಪತ್ನಿ ಸಮೇತ ಇಲ್ಲಿಗೆ ಬಂದು ತಾ ೭ ನೆ ಬುಧವಾರ ಊರೆಲ್ಲ ಇನ್ಸ್ಪೆಕ್ಟ್ ಮಾಡಿ, ೮ ನೆ ಗುರುವಾರ ಮುಂದಕ್ಕೆ ಪ್ರಯಾಣ ಮಾಡಿದರು. ಈ ಊರಿನಲ್ಲಿ ಸಂದಿಗೊಂದಿಗಳನ್ನು ಯಾವ ರೀತಿ ವಿಸ್ತಾರಪಡಿಸಬೇಕೆಂಬುವದನ್ನು ನೋಡಿಕೊಂಡು ಹೋಗುವದಕ್ಕೆ ಇವರು ಬಂದಿದ್ದರೆಂದು ಗೊತ್ತಾಗುತ್ತೆ.

ತುಂಕೂರು.—ಬೇಸಿಗೆಯ ಬಿಸಲು ತುಂಬಾ ದುಸ್ಸಹವಾಗಿದ್ದರೂ ರಾತ್ರಿ ಕಾಲದಲ್ಲಿ ಮಂಜುಮಾರುತವು ಜನರಿಗೆ ಹಿತಕರವಾಗಿದೆ ಜನರು ರೋಗಾದಿ ಉಪದ್ರಗಳಿಲ್ಲದೆ ಕ್ಷೇಮವಾಗಿರುತ್ತಾರೆ. ಧಾರಣೆ ವಾಸಿಗಳು ಇಳಿತರವಾಗಿಲ್ಲ. ಸೀಯರ್, ಮಧುಗಿರಿ ಪ್ರಾಂತ್ಯಗಳಲ್ಲಿ ಸುಭಿಕ್ಷವಿಲ್ಲದ್ದರಿಂದ ದಿನವೂ ಗಾಡಿಗಳು ವಿಶೇಷ ಬಾಡಿಗೆ ಮಂಡಿಗಳ ವ್ಯಾಪಾರವು ಸುವ್ಯಸ್ಥವಾಗಿರುತ್ತೆ.—ಈ ಟೌನಿನ ಆಸ್‌ಪಾಸ್ ಗ್ರಾಮಗಳಲ್ಲಿ ಮತ್ತೆ ಸರ್ವೆ ಸೆಟ್ಲ್‌ಮೆಂಟು ನಡಿಯುತ್ತಲಿವೆ. ಈ ಕಾಲದಲ್ಲೇ ಕಂದಾಯ ವಸೂಲಿಯೂ ಪೂರಾವಾಗಿ ಉತ್ಪತ್ತಿ ಕಡಿಮೆಯಾಗಿರುವದರಿಂದ ರೈತರು ತುಂಬಾ ವೈಯರ್ಗುಂದಿದವರಾಗಿ ಕಣ್ಣು ಬಿಡುತ್ತಿದಾರೆ ಈ ಸಾಲಿನಲ್ಲಿ ನಮ್ಮ ಪ್ರಾಂತ್ಯದ ಯಾವ ಕೆರೆಯಾದರೂ ಸರಿ ಒಂದು ಕಾಳಾದರೂ ಸರಿ ಭತ್ತವನ್ನು ಬೆಳೆದದ್ದೇ ಇಲ್ಲ. ಆದ್ದರಿಂದ ನಮ್ಮ ಸರ್ಕಾರದವರು ಕೋಲಾರದ ಪ್ರಾಂತ್ಯದವರಿಗೆ ತೋರಿಸಿರುವ ರಿಯಾಯಿತಿಯನ್ನು ಇಲ್ಲಿಯೂ ದಯಮಾಡಿ ತರೀ ಜಮೀನಿನ ಕಂದಾಯ ರಿಮಿಷನ್ ಮಾಡಿಸಬೇಕಾಗಿ ಪ್ರಾರ್ಥನೆ.—ಈ ತುಂಕೂರು ಟೌನಿನಲ್ಲಿ ಹಾಲಿ ಉಂಟಾಗಿರತಕ್ಕ ನೀರಿನ ಕ್ಷೋಭೆಯನ್ನು ಏನ ವಣಿಗೆಯಿಂದ ತಿಳಿಸಲಸಾಧ್ಯ. ಸಾಮಾನ್ಯವಾಗಿ ಸುಭಿಕ್ಷದಲ್ಲೇ ಇಲ್ಲಿ ನೀರಿಗೆ ಗೋಟ್ಟು. ಈಗ ಇನ್ನು ಎಷ್ಟವ ನುಟ್ಟಿಗಿದೆಯೋ ವಾಚಕರೇ ಯೋಚಿಸಲಿ ... ಭಾಗಾಯತು ಫಸಲು ಬಲಾಕಯಗಳೆಲ್ಲ ಬತ್ತಿಹೋದ್ದರಿಂದ ಕಂಗೆಟ್ಟು ಉರಿದುಹೋಗಿವೆ ಜನರು ಸ್ನಾನಪಾನಗಳಿಗೆ ಸಾಕಾದಷ್ಟು ನೀರು ಸಿಕ್ಕದ್ದರಿಂದ ನೀರೆಂಬ ಪದಾರ್ಥ ತುಪ್ಪಕ್ಕೆ ಸಮಾನವಾಗಿದೆ ಎಂದು ಹೇಳುತ್ತಿದಾರೆ ಈಗ ಮ್ಯುನಿಸಿಪಾಲಿಟಿಯವರು ಅಲ್ಲಲ್ಲಿ ಭಾವಿಗಳನ್ನು ತೆಗಿಸಿಕೊಟ್ಟರೆ ಜನರಿಗೆ ನೀರಿನ ಕ್ಷಾಮವಾದರೂ ಇಂಗೀತೆಂಬ ನಿರೀಕ್ಷೆ ಇದೆ —ಹಾಲಿ ನಮ್ಮ ಡಿಸ್ಟ್ರಿಕ್ಟಿನಲ್ಲಿ ಪೋಲೀಸ್ ಸೂ॥ ರಾಗಿದ್ದ ಮೆ॥ ಎಲ್ ಕೃಷ್ಣರಾಯರಿಗೆ ಬೆಂಗಳೂರಿಗೆ ಇನ್ನು ಭಾರಿ ಕೆಲಸಕ್ಕೆ ವರ್ಗವಾಗಿ, ಇಲ್ಲಿಗೆ ಕಡೂರಿಂದ ಮೆ॥ ಬಿ ರಾಮಸ್ವಾಮಯ್ಯನವರು ಪೋಲೀಸ್ ಸೂ॥ ರಾಗಿ ದಯಮಾಡಿಸುತ್ತಾರೆಂತ ವರ್ತಮಾನ ಕೇಳುತ್ತೇನೆ ಈಗ ದಯಮಾಡಿಸುವ ಹೊಸ ಸೂಪರಿಂಟೆಂಡೆಂಟರವರು ಹಿಂದೆ ನಮ್ಮ ತಾಲ್ಲೋಕಿನಲ್ಲಿ ಅಮಲ್ದಾರರಾಗಿ ಇಲ್ಲಿನ ಜನರ ಸುಖದುಃಖಗಳನ್ನು ಅರಿತವರಾಗಿರುವದರಿಂದ ಮೆ॥ ಎಲ್ ಕೃಷ್ಣರಾಯರಂತೆ ಜನಾನುರಾಗಿಗಳಾಗಲು ಯಾವ ಸಂಶಯವಿರಲಾರದು.—ಈ ಊರು ಸ್ಟೂಡೆಂಟ್ಸ್ ಹೋಂನ ಕಾರಬಾರು ವಿಚಾರವಾಗಿ ವಿದ್ಯಾರ್ಥಿಗಳ ಉಪಯೋಗಕ್ಕಾಗಿರುವ ಪದಾರ್ಥಗಳು ಅಧಿಕಾರಿಗಳ ಸ್ವಂತಕ್ಕೆ ವಿನಿಯೋಗವಾಗುತ್ತೆಂದು ವಿದ್ಯಾರ್ಥಿಗಳ ಗುಣಗುಟ್ಟುವಿಕೆ ವಿಶೇಷವಾಗಿದೆ. ಈ ವಿಷಯದಲ್ಲಿ ನಮ್ಮ ಹೈ ಸ್ಕೂಲ್ ಹೆಡ್ ಮಾಸ್ಟರವರು ತನಿಖೆಯಿಂದ ಕ್ರಮಪಡಿಸುವರೆಂದು ನಂಬುತ್ತೇನೆ —ಕಳೆದ ವಾರ ಒಬ್ಬಾನೊಬ್ಬ ಬ್ರಾಹ್ಮಣ ವಿಧವೆಯು ಇತರರ ಮನೆಗೆ ಭೋಜನಕ್ಕೆ ಹೋಗಿ ಅವರ ಮನೆಯಲ್ಲಿ ಒಂದು ಮಗುವನ್ನು ಕಳವು ಮಾಡಿದಳೆಂದು ರುಜುವಾತಾಗಿ ಆಕೆಗೆ ಕೋರ್ಟು ಬರಖಾಸ್ತಾಗುವ ವರಿಗೂ ಸಜಾ ಶಿಕ್ಷೆಯಾಯಿತು.—ಈ ವರುಷ ಮೊಹರಂ ಮತ್ತು ಕಾಮನ ಹಬ್ಬಗಳೆರಡೂ ಒಂದೇ ವಾರದಲ್ಲಿ ಬಂದದ್ದರಿಂದ ಇವೆರಡೂ ತುಂಬಾ ವಿಜೃಂಭಣೆಯಾಗಿ ಜರುಗಿದವು. ಈ ಸಂದರ್ಭಗಳಲ್ಲಿ ಉಂಟಾಗಬಹುದಾಗಿದ್ದ ಜನರ ಗಲಾಟೆಗಳನ್ನು ಪೋಲೀಸ್ ನೌಕರರು ತುಂಬಾ ಮೆಹನತ್ತಿನಿಂದ ಹೋಗಲಾಡಿಸಿ, ಯಾವದೊಂದು ಅಪಾಯವೂ ಪ್ರಕಾರೂ ಉಂಟಾಗದಂತೆ ಮಾಡಿದಾರೆ.—ಈ ಊರು ಯಾವಾಗಲೂ ಬೂಜಾಟದ ಗುಂಪುಗಳಿಗೆ ಮಾತೃಸ್ಥಾನವಾಗಿರುತ್ತೆ. ಅದರಲ್ಲೂ ಈಗ ಆ ಕಸಬು ವಿಪರೀತವಾಗಿ ಪರಿಣಮಿಸಿರುತ್ತೆ. ಈ ವಿಷಯವನ್ನು ಪೋಲೀಸ್ ಆಫೀಸರುಗಳು ಗಮನಕ್ಕೆ ತಂದುಕೊಂಡು ಸಂಸಾರಿಗಳನ್ನು ಮುಣುಗಿಸುತ್ತಿರುವ ಆ ನೀಚರಿಗೆ ತಕ್ಕ ಬುದ್ಧಿ ಕಲಿಸಬೇಕಾಗಿ ಪ್ರಾರ್ಥಿಸುತ್ತೇನೆ.—ಮ್ಯುನಿಸಿಪಲ್ ಲಾಂದ್ರಗಳಿಗೆಲ್ಲಾ ಕ್ಷಯಜಾಡ್ಯ ಪ್ರಾಪ್ತವಾಗಿದೆ. ಆದ್ದರಿಂದ ಜಾಗ್ರತೆಯಾಗಿ ಆ ರೋಗವು ವಾಸಿಯಾಗುವಂಥ ಔಷಧಿಯನ್ನು ನಮ್ಮ ವೈಸ್ ಪ್ರೆಸಿಡೆಂಟರು ದಯಪಾಲಿಸಬೇಕಾಗಿದೆ. ಇಲ್ಲದಿದ್ದರೆ ಜನರಿಗೆ ಲಾಂದ್ರಗಳಿಂದ ಸ್ವಲ್ಪವೂ ಉಪಯೋಗವಿಲ್ಲ. ಸಾಯಂಕಾಲ ೭ ಗಂಟೆಯಾಗುತ್ತಲೂ ದೀಪಗಳು ನರಳುವದಕ್ಕೆ ಪ್ರಾರಂಭವಾಗಿ ಎಂಟು ಗಂಟೆಯೊಳಗಾಗಿ ಪ್ರಾಣಬಿಡುತ್ತವೆ —ಈ ವಾರದ ಸಂತೆಯಲ್ಲಿ ಸರ್ಕಾರದವರು ಕಮ್ಮಿ ಅಳತೆ ಇಟ್ಟಿರುವ ವರ್ತಕರ ಸೇರು, ಬಟ್ಟು ಮೊದಲಾದವುಗಳನ್ನು ತನಿಖೆ ಮಾಡಿದರೆಂಬುದಾಗಿ ಕೇಳಿ ತುಂಬಾ ಸಂತೋಷವಾಯ್ತು. ಈ ದುರ್ಭಿಕ್ಷ ಕಾಲದಲ್ಲಿ ಒಂದಕ್ಕೆ ನಾಲ್ಕರಷ್ಟು ಕ್ರಯ ಕೊಟ್ಟು ಕೊಂಡಾಗ್ಯೂ ಪಿಕ್ಕೇ ಸೇರಿಸ ಅನ್ಯಾಯ ಇದೆಯಲ ಸಾಧ್ಯವಾಗಿರುವದರಿಂದ ಇದೇ ರೀತಿ ಆಗಾಗ್ಗೆ ಅಜಮಾಯಿಷಿ ಮಾಡುತ್ತಿದ್ದರೆ ಜನರಿಗೆ ಬಹಳ ಅನುಕೂಲವೆಂದು ತೋರಬಂದಿದೆ.

ಪ್ರಕಟನೆಗಳು.

JUST OUT

54-1

A most handsome picture of 40 Indian Princes Rs 3. 46 Mahatmas, Sadhus, Yogis, Rs 1-4-0. 74 Ruling Indian, Burmese and Nepalese chiefs Re 1-0-0 44 Ruling Indian chiefs with Maharana Udiapur Re 1 68 Great men of Bharatkhund Re 1-4-0 Kashi Bishwanath and Annapurna Temple 6as. Empire Builders Rs. 2 Benares Coloured map Re. 1. Silk Pitambar various coloured made in Banares. Jurry Pitambar Rs 15 to 30. Jurry Cholkhiund, fashonable silk of different colours Rs 5 to 20. Sanskrit Books, Rudraksh garlands, etc.

To be had from K. L. Dass & Sons, 36 Gopal Mandir, Benar-s City

Please write the address in English.

BOOKS! BOOKS!!

Orders now Registered for Sir Oliver Lodge's Marvellous Book entitled "LIFE AND MATTER." A Controversial Work on "Hæckel" of Importance to all Scientists. (First supply exhausted.) Rs. 2-3.

47-3

THE LIVING RACES OF MANKIND.

(A NEW WORK)

To be issued in 24 Fortnightly Parts.

Beautifully illustrated. 8 annas each Part.

HUMAN IMMORTALITY. Two supposed Objections to the Doctrine. By Professor James, of Harvard University 5th Edition Re. 1-14.

Now in stock, "DAILY MAIL" Year Book 1906, a Handbook to all the Questions of the Day Re 1-5.

COMBRIDGE & CO.,
BOOKSELLERS, MADRAS.

ಅಗ್ಗ! ಅಗ್ಗ!! 53-2 ಬಹು ಅಗ್ಗ!!!

ಇದರಿಂದ ನಮ್ಮ ಏಜಂಟ್‌ದಾರರಿಗೂ ಮತ್ತು ವರ್ತಕರಿಗೂ ತಿಳಿಸುವದೇನಂದರೆ.—

ಜರ್ಮನ್ ಸಿಲವರ್ ಕಂಬಿ ಮತ್ತು ತಗಡುಗಳನ್ನು ಸ್ಪೆಷಲ್ ಆರ್ಡರು ಕೊಟ್ಟು ಆಸ್ಟ್ರೇಲಿಯಾ ದೇಶದಿಂದ ತಯಾರಿಸಿ ತರಿಸಿ ಅವುಗಳಿಂದ ಸಕಲ ಆಭರಣಗಳನ್ನೂ ತಯಾರಿಸುತ್ತೇವೆ ಆದಕಾರಣ ಇವುಗಳ ರಂಗು ಇತರ ಕಮ್ಮಿ ಕ್ರಯದ ಜರ್ಮನ್ ಸಿಲವರ್ ಬೆಳ್ಳಿಯ ಹಾಗೆ ಆಗಿಸನಬಣ್ಣಕ್ಕೆ ತಿರುಗದೆ ಎಷ್ಟು ವರುಷಗಳ ವರಿಗಾದರೂ ಬೆಳ್ಳಿಯ ರಂಗಿಗೆ ಸಮಾನವಾಗಿ ಇರುತ್ತೆ. ಮತ್ತು ಆಭರಣಗಳಿಗೆ ಸಾಧ್ಯವಾದಷ್ಟು ಕಮ್ಮಿ ಕ್ರಯವನ್ನು ನಮೂದಿಸಿರುತ್ತೇವೆ.

ಆಭರಣದ ಕೆಲಸವು ಅಚ್ಚಬೆಳ್ಳಿಯ ಕೆಲಸಕ್ಕೆ ಸಮಾನವಾಗಿದೆ. ಅನುಭವದಿಂದ ನಿಜಸ್ಥಿತಿಯು ತಿಳಿಯಬಹುದು.



ಆಸ್ಟ್ರೇಲಿಯಾ ತಗಡಿನಿಂದ ತಯಾರಿಸಿದ ಗೋಟ್ಟು ಕಾಯಿ ಗೋಲುಸು.

ದೊಡ್ಡವರಿಗೆ ಜೋತೆ ೧ ಕ್ಕೆ	ರೂ. ೨—೮—೦
ಚಿಕ್ಕವರಿಗೆ ಜೋತೆ ೧ ಕ್ಕೆ	,, ೨—೪—೦
ಸಣ್ಣ ಹುಡುಗಿಯರಿಗೆ ಜೋತೆ ೧ ಕ್ಕೆ	,, ೧—೧೨—೦



ಮೇಲೆ ಹೇಳಿದ ದೇಶದ ತಗಡಿನಿಂದ ತಯಾರಿಸಿದ ಪ್ರದಾಚೇರಿ ಬೋರ್‌ಕಾಯಿ ಗೋಲಸು.

ದೊಡ್ಡವರಿಗೆ ಜೋತೆ ೧ ಕ್ಕೆ ರೂ. ೨-೦-೦. ಚಿಕ್ಕವರಿಗೆ ಜೋತೆ ೧ ಕ್ಕೆ ೧-೧೨-೦. ಸಣ್ಣ ಹುಡುಗಿಯರಿಗೆ ಜೋತೆ ೧ ಕ್ಕೆ ೧-೮-೦.

ವಿಳಾಸ—ಮ್ಯಾನೇಜರ್, ಜರ್ಮನ್ ಸಿಲ್ವರ್ ಮ್ಯಾಯಲ್ ಡಿಪೋ, ಸಾಹುಕಾರ್ ಪೇಟೆ, ಮದ್ರಾಸು.

P. SUBBROYA'S

World Renowned and most Efficacious

Ayurvedic Medicines.

ಪಿ. ಸುಬ್ಬರಾಯಿಯವರ

ಲೋಕಪ್ರಸಿದ್ಧವಾದ ಮತ್ತು ಅತ್ಯಂತ ಗುಣಕಾರಿಯಾದ ಆಯುರ್ವೇದ ಔಷಧಗಳು.

11-18

೧. ಪುಷ್ಟಿರಸಾಯನ.—ಇದರ ಸೇವನೆಯಿಂದ ನರಗಳ ಸಂಬಂಧವಾದ ಮತ್ತು ಇತರ ವಿಧವಾದ ಎಲ್ಲಾ ಶರೀರದ ದುರ್ಬಲಗಳೂ ಹೋಗಿ, ಹೊಟ್ಟೆಯಲ್ಲಿ ಅಗ್ನಿ ಉಂಟಾಗಿ, ದೇಹವು ಪುಷ್ಟಿಹೊಂದುವದು. ಪುಷ್ಟಿಯನ್ನು ಕಳೆದುಕೊಂಡ ಚಿಕ್ಕವಯಸ್ಸಿನವರಿಗೆ ಇದು ಶ್ರೇಷ್ಠ ಔಷಧವು. ಇದರಿಂದ ಶರೀರದ ಪ್ರತಿ ಅವಯವದ ನೋವೂ, ಅಶಕ್ತಿಯೂ ಹೋಗಿ, ಪುಷ್ಟಿಯೂ, ಬಲವೂ ಉಂಟಾಗುವವು. ಪೆಟ್ಟಿಗೆಗೆ ರೂ ೨ ವಿ. ಪಿ. ಛಾರ್ಜಿ ೬ ಆಣೆ.

೨. ಅಜೀರ್ಣ ಗುಳಿಗೆ.—ಅಜೀರ್ಣ, ತೇಗುವುದು, ಹೊಟ್ಟೆಯಲ್ಲಿ ಉರಿ, ಮತ್ತಾಗಿರುವಿಕೆ, ಹಸಿವಿಲ್ಲದಿರುವದು, ಪಿತ್ಥ, ಬಾಯಿಯ ದುರ್ಗಂಧ, ಹೊಟ್ಟೆಶೂಲೆ ನಿಶ್ಶಕ್ತಿ ಹತ್ತದಿರುವಿಕೆ, ತಲೆತಿರುಗುವದು, ಇವೆಲ್ಲಾ ನಿರ್ಮೂಲವಾಗುವವು. ಪೆಟ್ಟಿಗೆ ೧ಕ್ಕೆ ೮ ಆಣೆ ವಿ. ಪಿ ೨ ಪೆಟ್ಟಿಗೆ ವರೆಗೆ ಛಾಂಗಿ ಛಾರ್ಜಿ ೫ ಆಣೆ.

೩. ಲಕ್ಷ್ಮೀಶರ ಕಸ್ತೂರಿಮಾತ್ರೆ.—ಇದು ತಾಂಬೂಲಕ್ಕೆ ಪ್ರಾಣ ಮಿತ್ರನು. ಇದರಿಂದ ಬಾಯಿಯ ದುರ್ಗಂಧವು ಹೋಗುವದು, ಭೋಜನಾನಂತರ ತಾಂಬೂಲದ ಸಂಗಡ ೧—೨ ಮಾತ್ರೆಗಳನ್ನು ಸೇವಿಸಿದರೆ, ಇತರ ಸುವಾಸನಾದ್ರವ್ಯಗಳು ಅನಾವಶ್ಯಕವಾಗಿರುವುದಲ್ಲದೆ, ಅಲ್ಪಕಾಲದಲ್ಲಿ ಅತ್ಯಂತ ಕಠಿಣವಾದ ಆಹಾರವನ್ನು ಕೂಡ ಜೀರ್ಣಕ್ಕೆ ತರುವುದು. ಬೆಳಿಗ್ಗೆ ಊಟಕ್ಕೆ ಮುಂಚೆ ೨ ಮಾತ್ರೆಗಳನ್ನು ಕ್ರಮವಾಗಿ ಸೇವಿಸುತ್ತಿದ್ದರೆ ಅಜೀರ್ಣ, ಮಂದ, ಹಲ್ಲುವೇದನೆ, ಹೊಟ್ಟೆಯ ಉರಿ, ಇವುಗಳು ವಾಸಿಯಾಗುವುವು. ಇದರಲ್ಲಿ ಅಕ್ಷೇಪಣೆಯಾದ ಮತ್ತು ಪ್ರತಿಬಂಧಕವಾದ ಯಾವ ವಸ್ತುವೂ ಇಲ್ಲದ್ದರಿಂದಲೂ, ಇದರ ತಯಾರಿಗೆ ಕಸ್ತೂರಿ ಸುವರ್ಣ ವರಕು ಮುಂತಾದ ಅಮೂಲ್ಯ ವಸ್ತುಗಳು ಸೇರಿರುವದರಿಂದಲೂ, ಎಳೇ ಮಕ್ಕಳಿಂದ ಮುದುಕರವರಿಗೆ ಎಲ್ಲರೂ ತಾಂಬೂಲದೊಂದಿಗೆ ಅಥವಾ ಬರೀಬಾಯಲ್ಲಿ ಹಾಕಿಕೊಂಡು ಉಪಯೋಗಿಸಬಹುದು. ಕ್ರಮವಾಗಿ ಸೇವಿಸುವವರಿಂದ ದೇಹದಲ್ಲಿ ರೋಗಕ್ಕೆ ಆಸ್ಪದ ಕೊಡದೆ ಸಹ ನೋಡಿಕೊಳ್ಳುವದು. ಜ್ವರ, ನೆಗಡಿ, ಕೆಮ್ಮಲು ಮುಂತಾದವುಗಳಿಗೆ ಸಣ್ಣ ಮಕ್ಕಳಿಂದ ದೊಡ್ಡವರಿಗೆ ೧ ರಿಂದ ೪ ಮಾತ್ರೆಗಳಂತೆ ಕೊಟ್ಟರೆ ಗುಣ ಕಾಣುವದು. ಸುಮಾರು ೨೦೦ ಮಾತ್ರೆ ಉಳ್ಳ ಸೀಸೆ ೧ಕ್ಕೆ ೪ ಆಣೆ ೧ ರಿಂದ ೧೨ ಸೀಸೆಗೆ ವಿ. ಪಿ ಛಾಂಗಿ ಛಾರ್ಜಿ ೫ ಆಣೆ.

೪. ವೇದನಾಪರಿಹಾರಕ ತೈಲವು.—ಇದನ್ನು ಮೇಲ್ಭಾಗದಲ್ಲಿ ಮಾತ್ರ ಹಚ್ಚುವದರಿಂದ ಕೈಕಾಲು ಹಿಡಿದುಕೊಳ್ಳುವದು ವಾತರೋಗ, ಪಾರ್ಶ್ವವಾಯು, ನರಗಳ ಸೆಳೆತ, ಮೊಣಕಾಲು ಸೊಂಟ ಮತ್ತು ಎದೆ ಇವುಗಳ ನೋವು, ತೋಳು ಮುಂತಾದ ಅಂಗಗಳ ಕೀಲಿನ ನೋವು, ತಲೆಶೂಲೆ, ಹಲ್ಲುನೋವು ಕಿವಿನೋವು, ಚಳಿ, ಕೆಮ್ಮು ಮುಂತಾದ ಎಲ್ಲಾ ವಿಧವಾದ ನೋವುಗಳೂ ಖಂಡಿತವಾಗಿ ವಾಸಿಯಾಗುವವು. ಸೀಸೆ ೧ಕ್ಕೆ ೧ ರೂ ೩ ಬಾಟ್ಲಿ ವರೆಗೆ ವಿ ಪಿ ಛಾಂಗಿ ಛಾರ್ಜಿ ೫ ಆಣೆ

೫. ಲೋಕಪ್ರಸಿದ್ಧವಾದ ಪರಿಮಳ ಕೇಶತೈಲವು.—ಬೋಳುತಲೆ, ಬುಂಡು ಅಥವಾ ಕೂದಲು ಉದುರುವಿಕೆ, ಇವು ಸಂಪೂರ್ಣವಾಗಿ ವಾಸಿಯಾಗುವದಲ್ಲದೆ, ತಲೆಯನ್ನೂ ಮೆದುಳನ್ನೂ ತಣ್ಣಗಿರುವಂತೆ ಮಾಡಿ, ತಲೆ, ಮೀಸೆ, ಹುಬ್ಬುಕೂದಲುಗಳನ್ನು ಸ್ಥಿರವಾಗಿ ಬೆಳೆಸುವದು ಮತ್ತು ಕಣ್ಣು ಮಿದುಳು ಸಂಬಂಧವಾದ ರೋಗಗಳನ್ನೆಲ್ಲಾ ವಾಸಿ ಮಾಡುವದು. ಬಹಳ ಮನೋರಂಜಕವಾಗಿ ಪರಿಮಳಿಸುವದು. ಬೆಲೆ ಸೀಸೆ ೧ಕ್ಕೆ ೭ ಆಣೆ ೨ ಸೀಸೆ ವರೆಗೆ ವಿ ಪಿ ಛಾರ್ಜಿ ೫ ಆಣೆ

೬. ನೇತ್ರಬಿಂದು.—ಸಮೀಪದೃಷ್ಟಿ, ಕಣ್ಣಿನಲ್ಲಿ ನೀರು ಸುರಿಯುವುದು, ಕಣ್ಣುನೋವು ಗೂಡು ಬರುವುದು, ಉರಿ ಮುಂತಾದ ನೇತ್ರರೋಗಗಳು ಇದರಿಂದ ಗುಣವಾಗುವವು. ಸೀಸೆ ೧ಕ್ಕೆ ೭ ಆಣೆ ವಿ. ಪಿ. ಛಾರ್ಜಿ ೬ ಸೀಸೆ ವರೆಗೂ ೫ ಆಣೆ

೭. ಶ್ರೋತ್ರಬಿಂದು.—ಕಿವಿಯು ಎಷ್ಟು ಹೆಚ್ಚಾಗಿ ನೋಯುತ್ತಿದ್ದರೂ ಅದನ್ನೂ ಶೀಘ್ರ ನಿಲ್ಲಿಸುವುದು, ಕಿವಿಯ ಮಾಂದ್ಯವು, ಕಿವುಡು ಮುಂತಾದ್ದನ್ನೂ ಜಾಗ್ರತೆ ಪರಿಹರಿಸುವುದು, ಬೆಲೆ ಸೀಸೆ ೧ಕ್ಕೆ ೭ ಆಣೆ ವಿ ಪಿ ಛಾರ್ಜಿ ೬ ಸೀಸೆ ವರೆಗೂ ೫ ಆಣೆ.

೮. ಹುಳುಕಡ್ಡಿಗೆ ಔಷಧಿ.—ಚರ್ಮ ರೋಗಕ್ಕೂ, ಚರ್ಮಗತವಾದ ಎಲ್ಲಾ ವ್ಯಾಧಿಗಳಿಗೂ ಅತ್ಯುತ್ತಮವಾದ ಮದ್ದು. ಒಂದು ಸಾರಿ ವಾಸಿಯಾದ ಮೇಲೆ ಪುನಃ ತಲೆದೋರುವದಿಲ್ಲ. ಸೀಸೆ ೧ಕ್ಕೆ ೪ ಆಣೆ. ವಿ ಪಿ ಛಾರ್ಜಿ ೬ ಸೀಸೆ ವರೆಗೂ ೫ ಆಣೆ

೯. ಸುಖಭೇದಿ.—ಹೊಟ್ಟೆನೋವು, ಆಯಾಸ ಯಾವದೂ ಸ್ವಲ್ಪವೂ ಉಂಟಾಗದಂತೆ ಸುಲಭವಾಗಿ ಭೇದಿಯಾಗುವದು. ಮಲಬಂಧ, ಅಜೀರ್ಣ, ವಾಯು, ಎದೆಯುರಿಯುವದು, ಪಿತ್ಥ ಜ್ವರ, ಇವುಗಳನ್ನು ನಾಶಮಾಡುವುದು. ಸೀಸೆ ೧ಕ್ಕೆ ೭ ಆಣೆ. ವಿ ಪಿ ಛಾರ್ಜಿ ೬ ಸೀಸೆ ವರೆಗೂ ೫ ಆಣೆ.

ಕಾಗದವನ್ನು ಇಂಗ್ಲಿಷ್ ಅಥವಾ ತಮಿಳಿನಲ್ಲಿ ಬರೆಯಿರಿ.

Apply to —**P. SUBBAROY,**

Porto Novo, South Arcot.

ವಿಳಾಸ.—ಪಿ. ಸುಬ್ಬರಾಯ್,

ಪೋರ್ಟನೋವೋ, ದಕ್ಷಿಣ ಆರ್ಕಾಟ್ ಜಿಲ್ಲಾ.

ರಬ್ಬರ್ ಸ್ಟಾಂಪುಗಳು.

43-4

ನಮ್ಮ ಕಂಪೆನಿಯಲ್ಲಿ ತಯಾರಾಗಲ್ಪಡುವ ಇಂಗ್ಲಿಷ್ ಮೇಡ್ ರಬ್ಬರ್ ಸ್ಟಾಂಪುಗಳಿಗೆ ದರಖಾಸ್ತು ಕಳುಹಿಸತಕ್ಕವರಿಗೆ ಅರ್ಧ ಕ್ರಯಕ್ಕೆ ತಯಾರಿಸಿ ಕಳುಹಿಸುತ್ತೇವೆ.

ಚಾದರ, ರವುಂಡು, ಚಚ್ಚೌಕ, ಯಾವ ಆಕಾರವಾದರೂ ಆದರಲ್ಲಿ ಬೇಕಾದ ಅಕ್ಷರಗಳನ್ನು ಹಾಕಿ, ಸಂಬಂಧಪಟ್ಟ ರಬ್ಬರ್ ಸ್ಟಾಂಪು ೧, ಇಂಕಿ ಸೀಸಾ ೧, ರಬ್ಬರ್ ಸ್ಟಾಂಪು ಇರಿಸುವ ಪೆಟ್ಟಿಗೆ ೧, ಬ್ರಷ್ ೧, ಪ್ಯಾಡ್ ೧, ಇವುಗಳ ಸಹಿತ ಕ್ರಯ ರೂ ೧—೮—೦, ಪೋಸ್ಟೇಜು ೩ ಆಣೆ

ವಿಳಾಸ:—ಮ್ಯಾನೇಜರ್, ರಬ್ಬರ್ ಸ್ಟಾಂಪ್ ಮ್ಯಾನುಫ್ಯಾಕ್ಚರಿಂಗ್ ಕಂಪೆನಿ, ಜಾರ್ಜ್ ಟೌನ್, ಮದ್ರಾಸ್.

ಬೆಂಗಳೂರು ಚಿಕ್ಕಬಳ್ಳಾಪುರ ಲೈಟ್ ರೈಲ್ವೆ ಕಂಪೆನಿ ಲಿಮಿಟೆಡ್ ನಿಯಮಕ ಮೂಲಧನ.

46 3

ಷೇರು ಒಂದಕ್ಕೆ ೨೫ ರೂಪಾಯಿಗಳು ಬೆಲೆಯುಳ್ಳ ೪೮ ಸಾವಿರ ಷೇರುಗಳಿಂದಾಗುವ ೧೨ ಲಕ್ಷ ರೂಪಾಯಿಗಳು ಈ ಷೇರು ಮೊಬಲಗು ೫ ಅಥವಾ ಷೇರು ಒಂದಕ್ಕೆ ಒಂದು ರೂಪಾಯಿನಂತೆ ಅಪ್ಲಿಕೇಷನ್ ಫೀ ಕೊಟ್ಟು ೧೨ ಕಿಸ್ತುಗಳಲ್ಲಿ ಪಾವತಿ ಮಾಡತಕ್ಕದ್ದು. ಈ ಲೈನಿನ ಸರ್ವೆ ಪೂರೈಸಲ್ಪಟ್ಟಿದೆ.

ಶ್ರೀಮತ್ ಮೈಸೂರು ಮಹಾರಾಜರವರ ಸರ್ಕಾರದವರು ಈ ಕಂಪೆನಿಯ ಮೂಲಧನಕ್ಕೆ ಶೇಕಡ ವರುಷ ೧ಕ್ಕೆ ೪ ರೂಪಾಯಿನಂತೆ ಬಡ್ಡಿ ಕೊಡಲು ತಾವು ಜಾಮೀನಾಗಿರಲು ಅನುಮತಿಯನ್ನು ಕಂಪೆನಿಗೆ ಲಿಖಿತ ಮೂಲಕ ತಿಳಿಸಿರುತ್ತಾರೆ.

ಈ ಕಂಪೆನಿಯ ಷೇರುಗಳನ್ನು ಅಪೇಕ್ಷಿಸತಕ್ಕಂಥವರು ಈ ಕೆಳಗೆ ರುಜು ಮಾಡಿರುವವರಿಗೆ ದರಖಾಸ್ತು ಮಾಡಿಕೊಳ್ಳಬೇಕು.

ಈ ಕಂಪೆನಿಯ ಷೇರುಗಳನ್ನು ಕಮಿಷನಿಗೆ ಸಬ್ ಏಜೆಂಟರಾಗಿ ಬಿಕರಿಮಾಡಲು ಅಪೇಕ್ಷೆಯುಳ್ಳ ಖಾತರಿಯಾದ ಜನರು ಸದರಿಯವರಿಗೇನೆ ಬರೆದುಕೊಳ್ಳಬಹುದು

(ಸ್ವರ್ಗ) ಬಿ. ಪಿ ರಾಮಸ್ವಾಮಿ ಶೆಟ್ಟಿ, ಬಿ ಎ,

ಅಡ್ವೊಕೇಟ್ ಮತ್ತು ಬೆಂಗಳೂರು ಚಿಕ್ಕಬಳ್ಳಾಪುರ ಲೈಟ್ ರೈಲ್ವೆ ಕಂಪೆನಿಯ ಚೀಫ್ ಏಜೆಂಟ್

ನಗರ್ತಪೇಟೆ, ಬೆಂಗಳೂರು ಸಿಟಿ

೫,೦೦೦ ಪವುಂಡ್ ವುಲ್ಲನ್ ದಾರ ಮಾತ್ರ ಇದೆ.

40 4

೧ ಚೀಟಿಯಿರುವ ವುಲನ್ ಒನ್ಸ್	೧ಕ್ಕೆ			೦—೧೦—೦
೨ ಪರ್ಷಿಯನ್	,,	,,	,,	೦—೧೪—೦
೩ ಸುಪೀರಿಯರ್	,,	,,	,,	೨—೦—೦
೪ ಸೋಮರಸಟ್	,,	,,	,,	೩—೪—೦

ವುಲನ್ ಟೋಪಿ ಡಜನ್ ೧ಕ್ಕೆ ೬—೦—೦ ಒಂದೇ ಸಲ ೧೦ ಡಜನ್ ತರಿಸಿಕೊಳ್ಳುವವರಿಗೆ ೬—೧೨—೦.

ಹೊಸ ನಮೂನೆ ದೊಡ್ಡ ಸೈಜು ಪೋಸ್ಟು ಕಾರ್ಡುಗಳು

೧ ಸಿಂಗಲ್ ಕಲರ್ ೧೦೦ಕ್ಕೆ ೦-೨-೬. ೧೦೦೦. ೦-೪-೦

೨ ಡಬಲ್ ಕಲರ್ ೧೦೦ಕ್ಕೆ ೦ ೩-೦ ೧೦೦೦ ೧-೧೦-೦

ವಿ. ಪಿ. ಮೂಲಕ ತರಿಸಿಕೊಳ್ಳುವವರು ಮಾತ್ರ ೧೦೦ಕ್ಕೆ ೨೫ ರಂತೆ ಮುಂಚಿತವಾಗಿ ಕಳುಹಿಸದ ಹೊರತು ವಿ. ಪಿ ಮೂಲಕ ಕಳುಹಿಸಲಾರೆವು

ಯೆಲ್, ಯಿ. ಪೂರವಾಲ್ ಕಂಪನಿ, ಬೆಂಗಳೂರು ಸಿಟಿ.

ಕೊಡಗು ದೇಶದ ಶ್ರೇಷ್ಠವಾದ ಉತ್ಕೃಷ್ಟ ಕಾಫಿಯು

ಹುರಿಯದೆ ಇರುವದು ಅಥವಾ ಆಗತನೆ ಹುರಿದದ್ದು.

ಸರಬರಾಜು ಮಾಡಿದ ಸ್ಥಳದಿಂದಲೆ ನೆಟ್ಟಗೆ ರವಾನಿಸಲ್ಪಡುವದು.

86 5

ವ್ಯಾಪಾರದ ಚಿಗ್ಗುರ್ತು

ಕಾಡುಕೋಣದ ತಲೆಯ ಮುದ್ರೆ ಇದೆ

ಸಂಪೂರ್ಣವಾಗಿ ಯಂತ್ರದಿಂದಲೆ ಸಿದ್ಧಪಡಿಸಿದ್ದು. ಈ ಗುರ್ತು ಉಳ್ಳ ವಿಲಾಸದ ಚೀಟಿ ಸುತ್ತಿಲ್ಲದಿರುವವು ಸ್ವಚ್ಛವಾದವುಗಳಲ್ಲ. ಅವು ನಮ್ಮದಲ್ಲ. ಏಜೆಂಟರುಗಳು ಬೇಕು. ಇಂಥವರಿಗೆ ಅಲಾಯಿದ ಪರ ಬರೆಯುವವರು ದಯವಿಟ್ಟು ಈ ಪತ್ರಿಕೆಯ ಹೆಸರನ್ನು ಸೂಚಿಸಿ

ವಿಳಾಸ.—ಮ್ಯಾನೇಜರ್, ಮ್ಯಾಥಿಸನ್ಸ್

ಕಾಫಿ ವರ್ಕ್ಸ್, ಹುಣಸೂರು.

ಮೈಸೂರು ಸೀಮೆಯಲ್ಲಿ ಪ್ಲೇಗಿನ ಸ್ಥಿತಿ.

23—2—1905 ರಿಂದ 2—3—1905 ರ ವರೆ

ಸ್ಥಳ.	ಪ್ಲೇಗ್ ತಗಲಿದ್ದು	ಪ್ಲೇಗ್ ಸತ್ತದ್ದು	ಕೋ[illegible]
ಬೆಂಗಳೂರು ಪಟ್ಟಣ	23	11	26
ಮೈಸೂರು ,,	0	0	1
ಬೆಂಗಳೂರು ಡಿಸ್ಟ್ರಿಕ್ಟು	13	7	75
ಮೈಸೂರು ,,	4	2	34
ಕೋಲಾರ್ ,,	8	1	23
ಕೋಲಾರ್ ಚಿನ್ನದ ಗಣಿಗಳು	15	11	8
ತುಂಕೂರು ಡಿಸ್ಟ್ರಿಕ್ಟು	0	0	45
ಹಾಸನ (ಹೊರಗಿನದು)	11	4	2
ಚಿತ್ರದುರ್ಗ ,,	5	7	3
ಕಡೂರ್ ,,	4	3	4
ಶಿವಮೊಗ್ಗಾ ,,	16	9	4
ಜುಮ್ಲಾ	91	61	235

ಶಾಲಿವಾಹನ ಶಕ ವರುಷಂಗಳು ೧೮೨೭ ನೇ ವಿಶ್ವಾವಸು ಸಂವತ್ಸರದ ಫಾಲ್ಗುಣ ಬಹುಳ ಪಂಚಮಿ ಗುರುವಾರದಿಂದ ಫಾಲ್ಗುಣ ದ್ವಾದಶಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ

೧೯೦೬ ನೇ ಇಸವಿ ಮಾರ್ಚಿ.

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ.
15	ಗುರು *	ಪಂಚಮಿ	21 38	ವಿ	20 9
16	ಶುಕ್ರ †	ಷಷ್ಟಿ	16 0	ಅ	25-20
17	ಶನಿ	ಸಪ್ತಮಿ	10 10	ಜೆ	21 28
18	ರವಿ ‖	ಅಷ್ಟಮಿ	4-48	ಮೂ	18 0
19	ಚಂದ್ರ .	ನವಮಿ	0-10	ಪೂಷಾ	56 30
20	ಕುಜ §	ಏಕಾದಶಿ	53-40	ಉಷಾ	13 32
21	ಬುಧ ,,	ದ್ವಾದಶಿ	51-19	ಶ್ರ	12 36

* ಸಿಂದ್ವಯ † ಪೆಟ್ಟದಲ್ಲಿ ಮಹಾಬಲೇಶ್ವರ ರಥ ‖ ಸಿದ್ಧಿಯೋಗ ‡ ಶ್ರಾದ್ಧಯೋಗ § ಸ್ಮಾರ್ತರ ಏಕಾದಶಿ ,, ವೈಷ್ಣವ ಏಕಾದಶಿ, ಪರಿವಾಸರ ಶಿವಮೊಗ್ಗೆ ಪಾಲಸ್ವಾಮಿ ರಥ

ಪೇಟೇ ಧಾರಣೆ.

ದಿನಸಿ.		ಮೈಸೂರು	ಬೆಂಗಳೂ
ಕಪ್ಪು ಅಕ್ಕಿ ಪಲ್ಲಾ ೧ಕ್ಕೆ	ರೂ	೧೧-೯-೯-೦	೧೩-೦
ಕೆಂಬೂತಿ ಅಕ್ಕಿ ಅವಲ್	..	೯-೨-೦-೦	೧೩.
,, ದುಯಂ	..	೯೦-೭-೦	೯೩
ಜಾಪಾಳೆ ಅಕ್ಕಿ	..	೮-೨-೦-೦	೧೨-೧
ಸಣ್ಣಕ್ಕಿ ಅವಲ್	..	೯-೯-೦	೯೫.
,, ದುಯಂ	..	೯೩-೦-೦	೧೪.
ತೊಗರೀ ಬೇಳೆ ಪಲ್ಲಾ ೧ಕ್ಕೆ	..	೯-೬-೮	೧೦.
,, ದುಯಂ	..	೯-೮-೦	೯೦.
ಕೈನ್ ರಾಗಿ ಪಲ್ಲಾ ೧ಕ್ಕೆ	..	೬- ೦	೫-೦
ಕಾದ್ರಾಗಿ	..	೬-೮ ೦	೫
ಜೋಳ	..	೭-೪-೦	೭-
ಹಲಸಂದೆ ಪಲ್ಲಾ ೧ಕ್ಕೆ	..	೯-೧೨-೦	೯-೦
ಬಿಳೀ ಅವರೆ	..	೭-೭-೦	೭-
ಹೆಸರು	..	೧೦-೦-೦	೧೦-೦
ಉದ್ದು	..	೯-೨-೦-೦	೧-೨
ಕಡಲೆ	..	೧೦-೭-೦	೧-೨
ಎಳ್ಳು ಸೆ ೧೨೯ ಕ್ಕೆ	..	೧೯-೦-೦	೯೩-
ಹುರುಳಿ	..	೩-೭-೦	೭-
ಹರಳು ೧೨೬ ಸೇರಿಗೆ	..	೧೧-೧೨-೮	೯-೨
ಸೀಗೇಕಾಯಿ ಮಣ ೧ಕ್ಕೆ	..	೨-೧೨-೦	೨-
ಮೆಣಸಿನಕಾಯಿ	.	೩-೧೨-೦	೩-
,, ದುಯಂ	..	೩-೪-೦	೩-
ಬೆಲ್ಲ ದೊಡ್ಡ ಅಚ್ಚು	..	೪-೪-೦	ಮ ೧-
ಒಳ್ಳೆನ್ನೆ ಮಣ ೧ಕ್ಕೆ	..	೫-೨-೦	೪-೧
ಹರಳೆಣ್ಣೆ ,,	..	೪-೧೨-೦	೬-
ಕೊತ್ತುಂಬರಿ ಪಲ್ಲಾ ೧ಕ್ಕೆ	..	೩-೭-೦	೯-
ಉಪ್ಪು ,,	..	೭-೦-೦	೬-
ಹುಣಸೇ ಹಣ್ಣು	..	೦-೧೨-೦	೦-೯
,, ಹಳೇದು	..	೦-೭-೦	೦-೧
ತುಪ್ಪ	..	೧೩-೪-೦	೧-೨
ಸೀಮೆಯೆಂಣೆ ಪೆಟ್ಟಿ ೧ಕ್ಕೆ	..	೫-೬-೦	೪-
ತೆಂಗಿನಕಾಯಿ ೯೦೦ ಕ್ಕೆ	..	೪-೦-೦	೫-
ಅಳಲೇಕಾಯಿ ಮಣ ೧ಕ್ಕೆ	.	೦-೯-೨-೦	೦-
ಅಂಟ್ವಾಳದ ಕಾಯಿ ಮಣ ೧ಕ್ಕೆ	..	೦-೯-೨-೦	೦-೧
ಚಿನ್ನ (ಪವನ್) ಕೆಂಪು	.	೧೫-೪-೦	೧೫-
,, ,, ಹಸಿರು	..	೧೫-೩-೦	೧೫
,, ,, ಗಟ್ಟಿ ತೊಲ ೧ಕ್ಕೆ	..	೨೩-೧೨-೦	೨೪
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ	..	೭೨-೦-೦	೭೦-

Printed and Published by the Rev I. W Thomson, M the Proprietor and Manager, Wesleyan Mission Pre Mysore. 15/3/1906.

ವೃತ್ತಾಂತ ಪತ್ರಿಕೆ.

REGISTERED M 20

ಕ್ರಯ ೧ ದುಡ್ಡು — ಕ್ರಯ ೧ ದುಡ್ಡು

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಸಂಪುಟ ೧೯ — ಮೈಸೂರು—ಸನ್ ೧೯೦೬ ನೇ ಇಸವಿ ಮಾರ್ಚಿ ತಾರೀಖು ೨೨ ನೇ ಗುರುವಾರ. — ಸಂಚಿಕೆ ೩೨

ಈ ನೋಡಿ—ಮತ್ತೊಂದು ಹೊಸಪುಸ್ತಕವು—ಬಹು ರಸಿಕವಾಗಿದೆ ಅರೇಬಿಯನ್ ನೈಟ್ಸ್ ಅಥವಾ ಯವನಯಾಮಿನೀ ವಿನೋದ ಕಥೆಗಳು.

ಎಂಬ ಮಹಾಪ್ರಸಿದ್ಧವಾದ ಪುಸ್ತಕವು ತೆಳಗನ್ನಡ ಈಗ ತಾನೇ ಪ್ರಕಟಿಸಲ್ಪಟ್ಟಿದೆ ಡೆಮಿ ಅಷ್ಟಪತ್ರ ನೂರು ಎಪ್ಪತ್ತು ಪುಟಗಳುಳ್ಳದ್ದಾಗಿಯೂ ಆ ಬಾಲವೃದ್ಧರಿಗೆ ಉತ್ಸಾಹಕರವಾಗಿಯೂ, ಮಹಾ ರಸಿಕವಾಗಿಯೂ ಇರುವಾಗಿರುವ ಈ ಪುಸ್ತಕದ ಅಭಿರುಚಿಯನ್ನು ವಾಚಕರು ಸ್ವಾನುಭವದಿಂದಲೆ ಗ್ರಹಿಸಿ ತಿಳಿದುಕೊಳ್ಳುವರು. ಭಾಷೆಯು ಬಹು ಸರಳವಾಗಿರುವದು. ಮತ್ತು ಇದನ್ನು ಓದುವದಕ್ಕೆ ಸುಮಾರು ಎರಡು ವರ್ಷಗಳು ಹಿಡಿದಿವೆ. ಪುಸ್ತಕವನ್ನು ಒಂದಾವರ್ತಿ ಓದಿದಮೇಲೆ ಅದನ್ನು ಪುನಃ ಓದುವಂತೆ ಅದು ಮನಸ್ಸನ್ನು ಆಕರ್ಷಿಸುವದು. ಇದರ ಬೆಲೆ ಎರಡು ರೂಪಾಯಿ ಮಾತ್ರವೇ ಹಾಸಲು ಎರಡು ಆಣೆಗಳು. ವಿ ಪಿ ಮೂಲಕ ತರಿಸಿಕೊಂಡರೆ ಎರಡು ರೂಪಾಯಿ ಮೂರು ಆಣೆಗಳಾಗುವವು. ಹೀಗಿರಲು ಬಡವರೂ ಎಲ್ಲರೂ ಕೊಂಡು ಓದಿ ಪ್ರಯೋಜನವನ್ನು ಪಡೆಯಬೇಕೆಂದು ಇಷ್ಟು ದೊಡ್ಡಪುಸ್ತಕವನ್ನು ಇಷ್ಟು ಸುಲಭಕ್ರಯಕ್ಕೆ ಮಾರುತ್ತೇವೆ

ಪುಸ್ತಕವು ದೊರಕುವ ಸ್ಥಳ

ಸಿ ಎಲ್. ಎಸ್. ಬುಕ್ ಡಿಪೋ,

ಮೈಸೂರು.

ಪುದುಚೇರಿ ಬೋಲ್ ಕಾಲು ಗೊಲಸು ಮತ್ತು ಕಡಗಗಳೂ.

194

ಮೇಲಾದ ಜರ್ಮನ್ ಸಿಲ್ವರಿಂದ ಮಾಡಲ್ಪಟ್ಟವೆ ನೋಟಕ್ಕೆ ಇವುಗಳು ಚಿನ್ನದವು ಈ ಒಡವೆಗಳ ಸಂದು ಕೀಲುಗಳಿಗೆ ಪ್ರಕೃತಿಯಿಂದ ಬೇಕಾದ ಸುಲಭವಾಗಿ ಹಾಕಿ ತೆಗೆಯುವಂತೆ ಮಾಡಿರುವ ಕೆಲಸವಾಗಿರುತ್ತವೆ ಇನ್ನು ಕೆಡುವುದಿಲ್ಲ ಎಲ್ಲರೂ ಉಪಯೋಗಿಸಬೇಕೆಂಬ ಉದ್ದೇಶದಿಂದ ಸುಲಭಕ್ರಯಕ್ಕೆ ವಿಕ್ರಯಿಸುತ್ತೇವೆ



ಬೋಲ್ ಗೊಲಸು.

ನಂ	೧	ದೊಡ್ಡವರಿಗೆ	೨—೮—೦
,,	೨	ಚಿಕ್ಕವರಿಗೆ	೨—೪—೦
,,	೩	ಮಕ್ಕಳಿಗೆ	೨—೦—೦

ಕಾಲುಕಡಗಗಳು.

ನಂ	೧	ದೊಡ್ಡವರಿಗೆ	೧—೮—೦
,,	೨	ಚಿಕ್ಕವರಿಗೆ	೧—೪—೦
,,	೩	ಮಕ್ಕಳಿಗೆ	೧—೦—೦

ಒಂದು ಜತೆಯನ್ನು ತರಿಸಿಕೊಂಡು ಇತರರವನ್ನು ನಮ್ಮವುಗಳನ್ನು ಹೋಲಿಸಿದರೆ ವ್ಯತ್ಯಾಸವೂ ಅಗ್ಗವೂ ಸಹಾ ತಿಳಿಯಬರುವದು ನಮ್ಮ ಕಂಪನಿಯಿಂದ ತರಿಸಿಕೊಂಡವುಗಳಿಗೆ ಜವಾಬ್ದಾರಿಯನ್ನು ಮಾಡುವೆವು ಈ ಪತ್ರಿಕೆಯ ಹೆಸರನ್ನು ನಮೂದಿಸದೆ ಬರೆದರೆ ನಮ್ಮ ಕಂಪನಿಯ ಒಡವೆಗಳು ದೊರಕಲಾರವು.

ವಿಳಾಸ—ಟಿ. ಶೀ. ನರಸಯ್ಯ ಅಂಡ್ ಕಂಪನಿ, ಜರ್ಮನ್ ಸಿಲ್ವರ್ ಮರ್ಚೆಂಟ್ಸ್ ನಂ॥ ೩೦, ಕಾಳಯುತ್ತಪಿಳ್ಳೆ ಸ್ಟ್ರೀಟ್, ಸಾಹುಕಾರಪೇಟೆ ಪೋಸ್ಟ್, ಮದ್ರಾಸು.

WANTED WILD ANIMALS.

ಬೇಕಾಗಿದೆ. ಬೇಕಾಗಿದೆ.

5 49

ಎಲ್ಲಾ ಬಗೆಯ ಕಾಡು ಮೃಗಗಳು ಮೈಸೂರು ಜೂ ಸೂಪರಿಂಟೆಂಡೆಂಟ್ ಮ॥ ಹ್ಯೂಜಸ್ ರವರು ಕೊಂಡುಕೊಳ್ಳುವರು

Apply to—Mr Hughes, Mysore Zoo

"ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ.

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜಂಟ್ರು ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರ್ಷಕ್ಕೆ (ಅಡ್ವಾನ್ಸ್) .. .. .. ರೂ ೧—೦—೦

ಪರಸ್ಥಳದವರ ಆಫೀಸಿನಿಂದ ಅಂಚೆಯ ಮೇಲೆ ತರಿಸಿಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಹಾಸಲ್ ಸೇರಿ .. .. ರೂ. ೧—೧೪—೦

,, ,, ,, ,, ೧—೧೫—೦

ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು

ನಮ್ಮ ವಿಳಾಸ —ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು

ಜ್ವರಹರಿ. 29 7

ಇದು ಸಾಧಾರಣ ಜ್ವರ, ಚಳಿಜ್ವರ, ಮರೇಜ್ವರ, ಪಿತ್ಥಜ್ವರ, ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮರಾಮತ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್ ಟಿ ವೆಂಕಟಪತಿ ಅಯ್ಯರವರು ...ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ... ಬಾಟಲು ... ತೀರಿಹೋಯಿತು ಇಷ್ಟು ಸ್ವಲ್ಪ ಕಾಲದಲ್ಲೇ ನಮ್ಮ ... ಉಗ್ರಜ್ವರ ... ಚನ್ನಾಗಿ ... ಜನಗಳು ಕಾಯಿಲೆ ಬೀಳುತ್ತಿರುವ ವರಿಂದ ದಯವಿಟ್ಟು ಇನ್ನೊಂದು ... ಬಾಟಲು ವಿ ಪಿ ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದ್ದಾರೆ

ಕ್ರಯ —ಸಣ್ಣ ೧ ಕ್ಕೆ ೮ ಆಣೆ, ೧ ರೂ , ೧—೮ ರೂ , ... ಎರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ... ಮಾಫಿಯಾಗುವದು

✦✦✦✦✦✦✦✦✦

ಈ ... ಶೀತಭಾದಿ, ಸಾಧಾರಣ ಹೊಟ್ಟೆಕಳೆ ... ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ... ಬಲಿಯಿಸಿ, ಕೂಡಲೆ ಗುಣಕೊಡುವದು ... ಒಂದಾವರ್ತಿ ... ಆಗುವ ... ಹೊಟ್ಟೆನೋವು ... ಕೂಡಾ ಗುಣಪಡಿಸುತ್ತದೆ. ಕ್ರಯದ ... ಔಷಧದಂತೆಯೇ ಸೀಸೆಗಳಲ್ಲಿ ದೊರಕುವದು

... ಗಣಪತಿಯವರು—ಹೆನ್ರಿಯ ... ನನ್ನ ತಾಬೇದಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ... ಕಾಲರಾ, ಅಜೀರ್ಣ ಭೇದಿ, ಅಜೀರ್ಣ ರೋಗಗ್ರಸ್ತರಿಗೆ ಕೊಡುತ್ತೇವೆ ಕೊಟ್ಟ ಕೂಡಲೆ ಅವರ ರೋಗಗಳು ಗುಣವಾಗುತ್ತಲಿದೆ. ಇದು ಬಹು ಒಳ್ಳೇ ಔಷಧ ವೆಂತ ಬರೆದಿದ್ದಾರೆ

ಈ ... ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ... ಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇವಲ್ಲದೆ ಕೆಳಗಿನ ವಿಳಾಸದಾರರಲ್ಲಿ ವಿಶೇಷ:—

ಹೆನ್ರಿಯವರ ಗ್ರೇಟ್ ಇಂಡಿಯನ್ ಔಷಧಗಳ ಕಂಪೆನಿ,

ಸೆಕೆಂಡ್ ಬೀಚ್ ಲೈನ್ ಮದ್ರಾಸ್.

ಪರಿಮಳ ನಸ್ಯಪುಡಿ

80-4

ಪರಿಮಳ ನಸ್ಯಪುಡಿ ಡಬ್ಬಿ ೧ ಕ್ಕೆ ..	0—9—0
ಚಿಕ್ಕ ಡಬ್ಬಿ ...	0—3—0
ಗಾಡಾ ನಸ್ಯಪುಡಿ ಡಬ್ಬಿ ೧ಕ್ಕೆ	0—6—0
ಚಿಕ್ಕ ಡಬ್ಬಿ ...	0—3—0

ಈ ಪುಡಿಯನ್ನು ಮೇಲಾದ ಹೊಗೆಸೊಪ್ಪಿನಿಂದ ಸುವಾಸನೆಯುಳ್ಳದ್ದಾಗಿ ತಯಾರು ಮಾಡಲ್ಪಟ್ಟಿರುತ್ತೆ ಇದರ ಸುವಾಸನೆ ಬಂದು ಸೇರು ಸಾಧಾರಣ ಪುಡಿಯಲ್ಲಿ ಸ್ವಲ್ಪವನ್ನು ಹಾಕಿ ಕಲಸಿದರೆ ಪುಡಿಯೆಲ್ಲಾ ಗಮಗಮಿಸುತ್ತೆ ಉಪಯೋಗಿಸುವವರಿಗೆ ಸುವಾಸನೆಯನ್ನೂ ಆನಂದವನ್ನೂ ಉಂಟುಮಾಡುತ್ತೆ.

ತಲೆನೋವು, ಪೀನಸ, ಜಲದೋಷ, ಶಿರೋವ್ಯಾಧಿ ಇವುಗಳನ್ನು ತಪ್ಪದೆ ಪರಿಹರಿಸುತ್ತೆ ಮಾದರಿಗೆ ಡಬ್ಬಿಯನ್ನು ತರಿಸಿ ಪರೀಕ್ಷಿಸಿರಿ.

☞ ಪ್ರತಿ ೧ ಡಬ್ಬಿಯಲ್ಲಿ ೯ ತೋಲ ನಸ್ಯಪುಡಿ ಇರುತ್ತೆ.

ಮ್ಯಾನೇಜರ್, ಧರ್ಮ ವೈದ್ಯಶಾಲಾ,

60 ಬ್ರಾಡ್ವೇ ಬಜಾರು ರೋಡ್, ಸಾಹುಕಾರ್ ಪೇಟೆ, ಮದರಾಸು.

ಹೋಮೋಸಿಯಾ.

ತಕ್ಷಣ ಪರಿಹಾರ

ತಗಲುತ್ತಲೇ ನೋವು ವಾಸಿಯಾಗುತ್ತೆ.

ಈ ಔಷಧಿಯು ಮನೆ, ಅರಮನೆ, ಕಾರ್ಖಾನೆ, ಆಸ್ಪತ್ರೆ, ಪೋಲೀಸ್ ಠಾಣಾ, ವಿದ್ಯಾಶಾಲೆ, ಕಚೇರಿ, ಕಛೇರಿ, ಮುಂತಾದ ಸ್ಥಳಗಳಲ್ಲೆಲ್ಲಾ ಇದ್ದೇ ಇರಬೇಕು ಇದಕ್ಕೆ ಸಮಾನವಾದ ಔಷಧ ಮತ್ತಾವದೂ ಇಲ್ಲವೆಂಬುವದು ಲೋಕಪ್ರಸಿದ್ಧವಾಗಿದೆ

ಈ ತೈಲವು ತತ್ಕಾಲದಲ್ಲಿ ಜೀವರಾಶಿಗಳಿಗೆ ಉಪಕಾರಕ್ಕಾಗಿ ಸಿಕ್ಕತಕ್ಕ ಔಷಧ ಇದನ್ನು ಉಪಯೋಗಿಸಿದ ದೊಡ್ಡ ಮನುಷ್ಯರು, ಡಾಕ್ಟರುಗಳು, ಮುಂತಾದವರು ಇದರ ಗುಣವನ್ನು ಹೊಗಳಿ ಸರ್ಟಿಫಿಕೇಟುಗಳನ್ನು ಕೊಟ್ಟಿದ್ದಾರೆ ನೋವು ಕಂಡರೆ ಇದನ್ನು ಇಟ್ಟ ದಕ್ಷಣವೇ ವಾಸಿಯಾಗುವದು

ಈ ತೈಲವು ಅರೆ ತಲೆನೋವು, ಸೊಂಟನೋವು, ಪಾರ್ಶ್ವವಾಯು ಮೂಲವ್ಯಾಧಿ, ಉಬ್ಬಸ, ವಾಯುಗಳು, ನರ ಸೆಳೆಯುವದು, ಉಳುಕು, ಕೀಲುವಾಯು, ಗುಳ್ಳೆಗಳು, ಹಲ್ಲುನೋವು, ಮುಖನೋವು, ಊತಗಳು, ಗಡ್ಡೆಗಳು, ರಣಗಳು, ಕಜ್ಜಿ, ಸೊಳ್ಳೆ ಮತ್ತು ಚೇಳು ಕಡಿದದ್ದು, ಬಿದ್ದಿರುವದು, ಬೆಂಕಿಯಲ್ಲಿ ಸುಟ್ಟು ಕೊಂಡದ್ದು, ಕತ್ತಿ ಗಾಯ—ಇವೇ ಮೊದಲಾದ ನಾನಾ ಬಾಧೆಗಳನ್ನು ಹುಟ್ಟಡಗಿಸುತ್ತದೆ ರಾತ್ರಿ ಹಚ್ಚಿಕೊಂಡು ಮಲಗಿದರೆ ಸೊಳ್ಳೆ ಹತ್ತಿರ ಸೇರುವದಿಲ್ಲ.

ಕ್ರಯ – ಸಣ್ಣ ಡಬ್ಬಿ ೧ ಕ್ಕೆ ೧ ರೂ., ದೊಡ್ಡದಕ್ಕೆ ರೂ. ೨—೮ ಆ., ಒಂದೇ ಸಲ ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ ಬಿಡುತ್ತಾರೆ ರೂ ೨—೮ ಆಣೆ ಬೆಲೆಯುಳ್ಳ ಡಬ್ಬಿಯಲ್ಲಿ ೧ ರೂ ಡಬ್ಬಿಯಲ್ಲಿರುವದಕ್ಕಿಂತ ೪ ರಷ್ಟು ಹೆಚ್ಚು ಔಷಧವಿರುತ್ತೆ. ರೂ ೨—೮ ಆ ಈ ಡಬ್ಬಿಯನ್ನು ತರಿಸಿಕೊಳ್ಳುವವರಿಗೆ ಟಪ್ಪಾಲ್ ಖರ್ಚು ಮಾಫಿ ಬಿಡುತ್ತೆ.

✦✦✦✦✦✦✦✦✦

ಹೋಮೋಸಿಯಾ ಯಂಬ್ರೋಕೇಷನ್.

ಈ ತೈಲವು ಹಳೇ ನೋವುಗಳಿಗೆ ಉಪಯೋಗಿಸತಕ್ಕದ್ದು ಚರ್ಮ ಒಡೆದ ಕಡೆ ಇದನ್ನು ಹಚ್ಚಕೂಡದು ಇದರಲ್ಲಿ ಹೋಮೋಸಿಯದ ಗುಣಗಳು ಬಹು ತೀಕ್ಷ್ಣವಾಗಿ ಇರುತ್ತವೆ ಅದಕ್ಕಿಂತಲೂ ಇದರಲ್ಲಿ ಇನ್ನೆರಡು ಗುಣಗಳುಳ್ಳ ಹೊಸ ಭಾಗವಿರುತ್ತದೆ ಇದನ್ನು ಚರ್ಮವು ಬಹು ಬೇಗನೆ ಸೇದಿಕೊಳ್ಳಬಲ್ಲದು. ಡಬ್ಬಿಗಳಲ್ಲಿ ತುಂಬಿ ೮ ಆಣೆಗೂ, ೧ ರೂ. ಗೂ ಒಂದರಂತೆ ಬಿಕರಿ ಮಾಡಲ್ಪಡುವದು ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ. ಎಲ್ಲಾ ಷಾಪುಗಳಲ್ಲಿಯೂ ದೊರೆಯುವದು

ಈ ಔಷಧಗಳ ವಿವರಣೆಯೂ, ಸರ್ಟಿಫಿಕೇಟುಗಳೂ ಉಳ್ಳ ನೋಟೀಸುಗಳನ್ನು ಅಪೇಕ್ಷಿಸಿದರೆ ಕಳುಹಿಸುವೆವು.

ವಿಳಾಸ:—ಹೋಮೋಸಿಯಾ ಕಂಪನಿ ೨೩ ಸೆಕೆಂಡು ಬೀಚ್ ಲೈನ್. ಮದರಾಸ್.

ನೀವು ವಿಲಾಯತಿಯಿಂದ ಯಾವ ಸಾಮಾನುಗಳನ್ನಾದರೂ ತರಿಸಿಕೊಳ್ಳಬೇಕಾಗಿದ್ದರೆ 19-10

ಬ್ರೈಡ್ ಮತ್ತು ಈಸ್ಟ್‌ಲೆಂಡ್,

೨೯—೩೧, ಸಿಟಿ ರೋಡ್, ಲಂಡನ್, ಇ. ಸಿ.

ಎಂಬೀ ವಿಳಾಸಕ್ಕೆ ಹಣ ಕಳಿಸಿ, ಕಾಗದ ಬರೆಯಿರಿ. ಈ ಕಂಪನಿಯವರು ಪೇಟೆಂಟ್ ಔಷಧಿಗಳನ್ನೂ, ಆಕಸ್ಮಾತ್ತಾಗಿಯೂ ವ್ಯಾಕ್ಸಿನ್ ಕೊಡುವಂಥಾ, ಯಂತ್ರಗಳಿಂದಲೇ ತಯಾರಾದಂಥಾ ಆಹಾರಗಳನ್ನೂ, ಇನ್ನೂ ನಾನಾತರದ ಪದಾರ್ಥಗಳನ್ನೂ ಇಟ್ಟು ವಿಕ್ರಯಿಸುತ್ತಾರೆ. ಅವರು ಬಹು ವಿಶೇಷವಾದ ಗಮನಕೊಟ್ಟು, ಸಾಧ್ಯವಿದ್ದಷ್ಟು ಅಗ್ಗವಾಗಿ, ಬೇಕಾದ ಸಾಮಾನುಗಳನ್ನೇ ಆರಿಸಿ, ಮರಿಟಪ್ಪಲಿನಲ್ಲೇ ಕಳುಹಿಸಿಕೊಡುವರು

ಮೈಸೂರು ಪ್ರಿನ್ಸಿಪಲ್ ಮುನ್ಸಿಫ್ ಕೋರ್ಟಿನಲ್ಲಿ.

51-2

೧೯೦೫—೦೬ ನೆ ಇಸವಿ ಸಿವಿಲ್ ನಂಬರು—೩೨೩

೧೯೦೬—೦೬ ನೆ ಇಸವಿ ಮಿಸ್ ನಂಬರು—೩೯೭.

ವಾದಿಗಳು.	ಪ್ರತಿವಾದಿಗಳು
	೧ ನೆ ಬೈರಪ್ಪ,
೧ ನೆ ಪುಟ್ಟಣ್ಣ,	೨ ನೆ ದೊಡ್ಡಯ್ಯ,
೨ ನೆ ದೇವಣ್ಣ.	೩ ನೆ ದಾಸಣ್ಣ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನೆಂದರೆ —

ಮೈಸೂರು ಡಿಸ್ಟ್ರಿಕ್ಟ್ ಮತ್ತು ತಾಲ್ಲೂಕಿನಲ್ಲಿರುವ ಗಂಗವಿಕಾರ ಒಕ್ಕಲಿಗರ ಜನಗಳು ಒಂದು ಸಮಾಜವಾಗಿದ್ದುಕೊಂಡು, ಜಾತಿ ವಿಷಯದಲ್ಲಿ ತಪ್ಪು ಮಾಡಿದವರಿಂದ ಬರತಕ್ಕ ದಂಡಗಳನ್ನು ವಸೂಲ್ಮಾಡಿ, ಸಮಾಜದ ಖರ್ಚು ಮಾಡುವದು, ಉಳಿದದ್ದನ್ನು ಬಡ್ಡಿಗೆ ಇಡುವದು ಪದ್ಧತಿ ಇದ್ದು, ಈಗ್ಗೆ ಸುಮಾರು ಎರಡುವರೆ ವರುಷಗಳ ಕೆಳಗೆ ಕಾರಣಾಂತರದಿಂದ ಈ ಸಮಾಜವು ಎರಡು ಭಂಗವಾಗಿ, ಮೇಲೆ ನಮೂದಾಗಿರುವ ವಾದಿಗಳು ಪ್ರತಿವಾದಿಗಳ ಮೇಲೆ ಈ ಕೋರ್ಟಿನಲ್ಲಿ ಸದರಿ ಸಮುದಾಯಕ್ಕೆ ಸಂಬಂಧಪಟ್ಟ ಹಣದ ಪೈಕಿ ರೂ. ೨೩— ೧೨—೯ ನ್ನು ವಸೂಲ್ಮಾಡಿಕೊಳ್ಳಲು ದಾವಾ ಹಾಕಿರುವ ಸಿವಿಲ್ ಪ್ರೊಸೀಜರ್ ಕೋಡು ೩೦ ನೆ ಸೆಕ್ಷನ್ ಮೇರೆ ಕೊಟ್ಟಿರುವ ಅರ್ಜಿ ವಿಚಾರದಲ್ಲಿ ಕಕ್ಷಿಯರಕ್ಕೆ ಸದರಿ ಸಮುದಾಯದ ಜನಗಳು ಇಷ್ಟವಿದ್ದರೆ ಕಕ್ಷಿಗಾರರಾಗಿ ಸೇರಬಹುದು.

ಆ ಬಗ್ಗೆ ೧೯೦೬ ನೆ ಇಸವಿ ಮಾರ್ಚಿ ೨೩ ನೇ ತಾರೀಖು ಬೆಳಿಗ್ಗೆ ೧೧ ಗಂಟೆಗೆ ಈ ಕೋರ್ಟಿನ ರೂಬರೂವಿಗೆ ಹಾಜರಾಗಿ ಸಾಧನೆ ಮಾಡಿಕೊಳ್ಳತಕ್ಕದ್ದಿದೆ. ಹಾಗೆ ಮಾಡದೆ ತಪ್ಪಿದರೆ ರೂಲಸು ಮೇರೆ ನಡೆಸಲಾಗುವದು

ತಾ॥ 10—3—1906. B. S. KRISHNASWAMIENGAR, *Principal Munsiff.*

ಅಗ್ಗ! ಅಗ್ಗ!! 53-3 ಬಹು ಅಗ್ಗ!!!

ಇದರಿಂದ ನಮ್ಮ ಏಜಂಟ್‌ದಾರರಿಗೂ ಮತ್ತು ವರ್ತಕರಿಗೂ ತಿಳಿಸುವದೇನೆಂದರೆ —

ಜರ್ಮನ್ ಸಿಲ್ವರ್ ಕಂಬಿ ಮತ್ತು ತಗಡುಗಳನ್ನು ಸ್ಪೆಷಲ್ ಆರ್ಡರು ಕೊಟ್ಟು ಆಸ್ಟ್ರೇಲಿಯಾ ದೇಶದಿಂದ ತಯಾರಿಸಿ ತರಿಸಿ ಅವುಗಳಿಂದ ಸಕಲ ಆಭರಣಗಳನ್ನೂ ತಯಾರಿಸುತ್ತೇವೆ ಆದಕಾರಣ ಇವುಗಳ ರಂಗು ಇತರ ಕಮ್ಮಿ ಕ್ರಯದ ಜರ್ಮನ್ ಸಿಲ್ವರ್ ಬೆಳ್ಳಿಯ ಹಾಗೆ ಆರಿಸಿನಬಣ್ಣಕ್ಕೆ ತಿರುಗದೆ ಎಷ್ಟು ವರುಷಗಳ ವರಿಗಾದರೂ ಬೆಳ್ಳಿಯ ರಂಗಿಗೆ ಸಮಾನವಾಗಿ ಇರುತ್ತೆ. ಮತ್ತು ಆಭರಣಗಳಿಗೆ ಸಾಧ್ಯವಾದಷ್ಟು ಕಮ್ಮಿ ಕ್ರಯವನ್ನು ನಮೂದಿಸಿರುತ್ತೇವೆ.

ಆಭರಣದ ಕೆಲಸವು ಅಚ್ಚಬೆಳ್ಳಿಯ ಕೆಲಸಕ್ಕೆ ಸಮಾನವಾಗಿದೆ. ಅನುಭವದಿಂದ ನಿಜಸ್ಥಿತಿಯು ತಿಳಿಯಬಹುದು.

ಆಸ್ಟ್ರೇಲಿಯಾ ತಗಡಿನಿಂದ ತಯಾರಿಸಿರಿದ ಗೊಬ್ಬಳಿಕಾಯಿ ಗೊಲುಸು.

ದೊಡ್ಡವರಿಗೆ ಜೊತೆ ೧ ಕ್ಕೆ	ರೂ	೨—೮—೦
ಚಿಕ್ಕವರಿಗೆ ಜೊತೆ ೧ ಕ್ಕೆ	,,	೨—೪—೦
ಸಣ್ಣ ಹುಡುಗಿಯರಿಗೆ ಜೊತೆ ೧ ಕ್ಕೆ	,,	೧-೧೨-೦



ಮೇಲೆ ಹೇಳಿದ ದೇಶದ ತಗಡಿನಿಂದ ತಯಾರಿಸಿದ ಪುದುಚೇರಿ ಬೋಲ್‌ಕಾಯಿ ಗೊಲುಸು.

ದೊಡ್ಡವರಿಗೆ ಜೊತೆ ೧ ಕ್ಕೆ ರೂ ೨-೦-೦. ಚಿಕ್ಕವರಿಗೆ ಜೊತೆ ೧ ಕ್ಕೆ ೧-೧೨-೦. ಸಣ್ಣ ಹುಡುಗಿಯರಿಗೆ ಜೊತೆ ೧ ಕ್ಕೆ ೧-೮-೦.

ವಿಳಾಸ—ಮ್ಯಾನೇಜರ್, ಜರ್ಮನ್ ಸಿಲ್ವರ್ ಜ್ಯುಯಲ್ ಡಿಪೋ, ಸಾಹುಕಾರ್ ಪೇಟೆ, ಮದ್ರಾಸು.

CHAMBERLAIN'S COUGH REMEDY.

ಚೇಂಬರ್ಲೆನ್ ಯವರು ಕಂಡು ಹಿಡಿದ ಕೆಮ್ಮಿನ ಔಷಧವು.



15-11

ಶೀತದ ಕೆಮ್ಮು, ಗಂಟಲು ಗೂರೆಯುವುದು, ಕುಡಿಗೆಮ್ಮು, ನಾಯಿಕೆಮ್ಮು, ಎಲ್ಲಾ ತರದ ಶೀತ, ಗಂಟಲಲ್ಲೂ ಎದೆಯಲ್ಲೂ ಹುಟ್ಟುವ ಸಮಸ್ತ ವ್ಯಾಧಿಗಳು—ಇವಕ್ಕೆಲ್ಲಾ ಈ ಔಷಧವು ಬಾಣವಾಗಿಯುವಾಗಿದೆ.

ಆ ಕೆಮ್ಮನ್ನು ಅಲಕ್ಷ್ಯಮಾಡಬೇಡಿ ಅದು ಮಹಾ ಅಪಾಯವನ್ನುಂಟುಮಾಡತಕ್ಕದ್ದಾಗಿದೆ ಅದರ ಮೇಲೆ ನ್ಯೂಮೋನಿಯಾ ಎಂಬ ಅತಿ ಕಠಿಣವಾದ ಜ್ವರವು ಹುಟ್ಟುವುದು. ತರುವಾಯ ಉಗುಳಿನಲ್ಲಿ ರಕ್ತಬೀಳುವುದು ಹಾಗಿಯೇ ಕ್ಷಯರೋಗಕ್ಕೆ ಆಸ್ಪದವಾಗುವುದು

ಚೇಂಬರ್ಲೆನರವರು ಕಂಡುಹಿಡಿದಿರುವ ಕೆಮ್ಮಿನ ಔಷಧವು ಗಂಟಲಲ್ಲಿ ಶ್ಲೇಷ್ಮ ಕಟ್ಟುವುದನ್ನೂ ಶ್ಲೇಷ್ಮಬೀಳುವುದನ್ನೂ ಖಚಿತವಾಗಿ ನಿವಾರಣೆಮಾಡುತ್ತದೆ ಉಸುರು ಬಿಡುವುದು ಕಷ್ಟವಾಗಿದ್ದರೆ ಅದನ್ನು ಹೋದರೆ ಪರಿಹರಿಸುತ್ತದೆ ಅಪಾಯಕರವಾದ ಕೆಮ್ಮಿನ ಶಬ್ದವನ್ನು ನಿಲ್ಲಿಸಿಬಿಡುತ್ತದೆ. ಎದೆ ಒಣಗುವಂಥಾ ಕೆಟ್ಟಸ್ಥಿತಿಯನ್ನು ಸಂಪೂರ್ಣವಾಗಿ ವಾಸಿಮಾಡಬಲ್ಲದು ಕೆಮ್ಮನ್ನು ಶಮನಮಾಡಿ, ನೀವು ಸುಖವಾಗಿ ನಿದ್ರೆಮಾಡುವಂತೆ ಮನಸ್ಸಿಗೆ ಉಲ್ಲಾಸಕೊಡುತ್ತದೆ.

ಚೇಂಬರ್ಲೆನರವರು ಕಂಡುಹಿಡಿದಿರುವ ಕೆಮ್ಮಿನ ಔಷಧದಲ್ಲಿ ಸ್ವಲ್ಪಮಾತ್ರವಾದರೂ ಅಫೀಮನ್ನು ಸೇರಿಸಿರುವುದಿಲ್ಲ

ಈ ಔಷಧವು ವನಸ್ಪತಿಗಳ ತಯಾರಿ

ಕೈಯಿಂದ ಮುಟ್ಟದೆ ತಯಾರಾಗಿದೆ

ಎಲ್ಲೆಲ್ಲೂ ವಿಕ್ರಯಿಸಲಾಗುವುದು ಸಣ್ಣಸೀಸೆಗೆ ೧ ರೂಪಾಯಿ ದೊಡ್ಡಸೀಸೆಗೆ ೨ ರೂಪಾಯಿ

ಪ್ರಿಂಟಿನ ಯಂತ್ರ ಕ್ರಯಕ್ಕೆ ಬಂದಿದೆ

11-1

ಡಬ್ಬಲ್ ಡೆಮ್ಮಿ ಸೈಜು. ಬಹು ಜಾಗ್ರತೆಯಾಗಿ ಪ್ರಿಂಟುಮಾಡತಕ್ಕದ್ದು; ರೂಲರುಗಳು, ಛೇಸುಗಳು ಚಕ್ರಗಳು ಎಲ್ಲಾ ಸೇರಿ ಕೊಡಲಾಗುತ್ತೆ. ಇವಕ್ಕೆ ಬಾಬತ್ತು ಕಡೆ ಸ್ವಲ್ಪ ರಿಪೇರಿ ಆಗಬೇಕಾಗಿರುವುದು. ಅಗ್ಗವಾಗಿ ಕೊಡುತ್ತೇವೆ. ಯಂತ್ರವನ್ನು ಖುದ್ದಾಗಿ ಬಂದು ನೋಡಲೂ ಬಹುದು. ಈ ವಿಳಾಸಕ್ಕೆ ಬರೆದು ಕೇಳಿ:—

ದಿ ಸೂಪರಿಂಟೆಂಡೆಂಟು, ವೆಸ್ಲಿಯನ್ ಮಿಷನ್ ಪ್ರೆಸ್,
ಮೈಸೂರು.

BOOKS! BOOKS!!

Orders now Registered for Sir Oliver Lodge's Marvellous Book entitled "LIFE AND MATTER" A Controversial Work on "Haeckel" of Importance to all Scientists (First supply exhausted) Rs. 2-3.

47-4

THE LIVING RACES OF MANKIND.

(A NEW WORK)

To be issued in 24 Fortnightly Parts. Beautifully illustrated. 8 annas each Part

HUMAN IMMORTALITY Two supposed Objections to the Doctrine. By Professor James, of Harvard University. 5th Edition Re 1-11

Now in stock, "DAILY MAIL" Year Book 1906, a Handbook to all the Questions of the Day Re 1-5.

COMBRIDGE & CO.,
BOOKSELLERS, MADRAS.

ಹಿಂದುಸ್ಥಾನದಲ್ಲಿ ಮಕ್ಕಳು

ಬಹಳ ಉಷ್ಣಪ್ರಾಧಾನ್ಯದ್ದರಿಂದ ನಾನಾ ದೇಹಬಾಧೆಗಳನ್ನು ಸಹಿಸಿಕೊಂಡು ಬೆಳೆಯಬೇಕಾಗಿದೆ.

ಅವರ ಸಣ್ಣ ಸಣ್ಣ ಮೂಳೆಗಳೂ ಮಾಂಸಖಂಡಗಳೂ ಸರಿಯಾಗಿ ಬಲಹೊಂದಿ ಬೆಳೆಯುವುದಕ್ಕೆ ಅವರಿಗೆ ಚಿಕ್ಕಂದಿನಿಂದಲೇ ಬಲಕಾರಿಯಾದ ಸೇವನಾ ಔಷಧವನ್ನು ಕೊಡುವುದು ಅವಶ್ಯಕ

SCOTT'S EMULSION 57-1

(ಸ್ಕಾಟ್ಸ್ ಇಮಲ್‌ಷನ್)

ಎಂಬೀ ಸೇವನಾ ಔಷಧದಲ್ಲಿ ಮಕ್ಕಳ ಸಮಸ್ತ ಅಂಗಗಳನ್ನೂ ಬಲಪಡಿಸಿ ಬೆಳೆಸುವಂಥಾ ಬಹು ಉತ್ಕೃಷ್ಟವಾದ ಗುಣಗಳಿರುತ್ತವೆ.

ಇಂಥಾ ಮೀನುಮನುಷ್ಯನೇ ಈ ಔಷಧದ ಗುರುತು.

ಇವಕ್ಕೆ ಸಮಾನವಾದದ್ದು ಮತ್ತಾವುದೂ ಇಲ್ಲ.

ಈ ಔಷಧವನ್ನು ಸೇವನೆ ಮಾಡುತ್ತಾ ಬಂದ ಒಡನೆಯೇ ಇದರ ಗುಣಗಳು ಕಂಡು ಬರುವವು.

ಕೈಯಿಂದ ಮುಟ್ಟದೇನೇ ತಯಾರಾದದ್ದು.

ಎಲ್ಲಾ ಔಷಧ ವ್ಯಾಪಾರಸ್ಥರಲ್ಲೂ ವಿಕ್ರಯಿಸಲಾಗುತ್ತಿದೆ

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,
ಔಷಧಗಳ ಕಾರ್ಖಾನೆ,
ಲಂಡನ್, ಇಂಗ್ಲೆಂಡ್.

ಇದಕ್ಕೆ ಸಮಾನವಾದ ಪುಸ್ತಕ ಉಂಟೋ?

56-1

ಕನ್ನಡ ಭಾಷೆಯಲ್ಲಿ ಇದುವರೆವಿಗೂ ಇಂಥಾ ನೋಡ ಸಿದ ಪುಸ್ತಕವು ಪ್ರಕಟವಾಗಲಿಲ್ಲ. ಸ್ವಲ್ಪ ನೋಡಿ.

"ಹಿಂದೂದೇಶಪ್ರದಕ್ಷಿಣ"

ಎಂಬ ಕರೆಯಲ್ಪಡುವ ಈ ನೂತನ ಪುಸ್ತಕದಲ್ಲಿ ಸುಮಾರು ಸಾವಿರತ್ತು ಉತ್ಕೃಷ್ಟವಾದ ಚಿತ್ರಗಳು ಅಡಗಿವೆ. ಕಣ್ಣಾರ ನೋಡಿ ಹಿಂದೂದೇಶವೆಲ್ಲಾ ಸಂಚಾರ ಮಾಡುವುದಕ್ಕೆ ಬದಲಾಗಿ ಈ ಪುಸ್ತಕವನ್ನು ಕೊಂಡು ಓದಿದರೆ ಎಲ್ಲಾ ಸ್ಥಳಗಳ ಪೂರ್ವ ಸ್ಥಿತಿಗತಿಗಳು ಬಹು ಪರಿಷ್ಕಾರವಾಗಿ ಗೊತ್ತಾಗುವುದು ಇದರಲ್ಲಿರುವ ಚಿತ್ರಗಳನ್ನು ಸ್ವಲ್ಪ ನೋಡಿ. ಅಗ್ರಾಪಟ್ಟಣದ ಹತ್ತಿರದಲ್ಲಿರುವ ಜಗತ್ಪ್ರಸಿದ್ಧವಾದ ತಾಜ್‌ಮಹಲ್, ಮಧುರಾನಗರದ ಗೋಪುರ, ಇಂಗ್ಲೀಷರು, ಕಲ್ಕತ್ತಾನಗರ, ಕಲ್ಕತ್ತಾ ಮೈದಾನ, ಕಾಳಿಕಾದೇವಿ, ಚಂದ್ರನಗರ, ಬಂಗಾಳಿಯರ ಮನೆಗಳು, ಜಗನ್ನಾಥಸ್ವಾಮಿ, ಭುವನೇಶ್ವರವೆಂಬ ದೇವಸ್ಥಾನ, ಜಗನ್ನಾಥನ ರಥೋತ್ಸವ, ಕನಾರಕ ದೇವಸ್ಥಾನ, ವಿದರಸ್ ಶಿಖರ, ಚಿತ್ರಕೂಟನಗರದ ಬೀದಿ, ಚಿತ್ರಕೂಟನಗರದ ದೇವಸ್ಥಾನಗಳು, ಜನಕಪುರಗಳು, ಅಂಬಿಗರು ಜನಗಳನ್ನು ಏಳಕೊಂಡು ಹೋಗುವುದು, ಗಯಾದಲ್ಲಿರುವ ಬುದ್ಧನ ದೇವಸ್ಥಾನ, ಶ್ರೀರಂಗಜೇಬನು ಕಟ್ಟಿಸಿದ ಮಸೀತಿ ಕಾಶೀಪಟ್ಟಣ(ಕ್ಷೇತ್ರ)ದಲ್ಲಿರುವ ದಶಾಶ್ವಮೇಧಘಟ್ಟ, ಕಪಿಗಳಿಗೆ ತಿಂಡಿ ಹಾಕುವದು, ಕಾಶೀಕ್ಷೇತ್ರದ ದೇವಸ್ಥಾನಗಳು, ಅಲಹಾಬಾದ್‌ನಗರ ಮತ್ತು ಅದರ ಕೋಟೆ, ಅಲಹಾಬಾದ್‌ನಲ್ಲಿರುವ ಖುಸ್ರುಬಾಗ್ ಅರಮನೆ, ಯಮುನಾನದಿಯಲ್ಲಿ ಯಾತ್ರಿಕರು ಮುಳುಗುವದು, ಕಾನ್ಪುರದಲ್ಲಿರುವ ಶಿಲಾಶಾಸನ, ಕಾನ್ಪುರದ ಹತ್ತಿರ ಗಂಗಾನದಿಯ ಮೇಲೆ ಕಟ್ಟಿರುವ ಸೇತುವೆ, ಲಕ್ನೋ ನಗರದ ರೆಸಿಡೆನ್ಸಿ ಬಂಗಲೆ, ಲಕ್ನೋ ಪಟ್ಟಣದ ಬಾಗಿಲು, ಸರ್ ಹೆನ್ರಿ ಹ್ಯಾವಲಾಕನು, ಗೋಮತಿನದಿಯ ಮೇಲಿರುವ ಅರಮನೆ, ಸ್ನಾನದಲ್ಲಿ ಜನರ ಸ್ಥಿತಿ, ಹರಿದ್ವಾರಘಟ್ಟ, ಗಂಗೋತ್ರಿ ದೇವಸ್ಥಾನ, ಹಿಮವತ್ಪರ್ವತಗಳ ಮೇಲಿರುವ ಪಟ್ಟಣ ಹಿಮಪ್ರವಾಹಗಳು, ಅಗ್ರಾಪಟ್ಟಣದ ಕೋಟೆ, ಯಮುನಾನದಿಯು, ದೂರದಲ್ಲಿ ತೋರುತ್ತಿರುವ ತಾಜ್‌ಮಹಲ್ ಗೋರಿಯು, ತಾಜ್‌ಮಹಲಿನ ಕಲ್ಲಿನಲ್ಲಿ ಕೆತ್ತಿರುವ ಪರದೆ, ಅಕ್ಬರನ ಅರಮನೆ. ಆಗ್ರಾಪಟ್ಟಣದ ಮುತ್ತಿನ ಮಸೀತಿ, ಫತ್ತೆಪುರ್ ಸಿಕ್ರಿಯಲ್ಲಿರುವ ಪಾಂಚ್‌ಮಹಲ್ ಅರಮನೆ, ರಾಜಪುತ್ರರು, ಭರತಪುರದ ಕೋಟೆ, ಅಲ್ವಾರಿನಲ್ಲಿ ಮಹಾರಾಜಬಕ್ತಾವರ್‌ಸಿಂಗರ ಗೋರಿ, ಅಲೆಕ್ಸಾಂಡರನ ಪ್ರೊಕ್ಲಮೇಷನ, ಡೆಲ್ಲಿ ನಗರದ ದೊಡ್ಡ ಮಸೀತಿ, ಪುರಾತನ ಡೆಲ್ಲಿಯ ಬಾಗಿಲು, ರಾಜದೇವನು ಸ್ಥಾಪಿಸಿದ ಕಬ್ಬಿಣದ ಸ್ತಂಭ, ನಾದರ್‌ಷಹಾನು ಡೆಲ್ಲಿನಗರದಲ್ಲಿ ಪ್ರಜಾಸಂಹಾರವನ್ನು ನೋಡುತ್ತಿರುವದು ಡೆಲ್ಲಿಯ ಬಳಿಯಲ್ಲಿರುವ ಕುತುಬ್‌ಮಿನಾರ್, ಚಾಂದ್ನಿಚೌಕವೆಂಬ ಬೀದಿ, ಸಿಮ್ಲಾಕ್ಕೆ ಹೋಗುವ ದಾರಿ, ಸಿಮ್ಲಾ, ಅಮೃತಸರದ ಸುವರ್ಣಾಲಯ, ಲಾಹೋರಿನಲ್ಲಿರುವ ರಣಜಿತಸಿಂಗನ ಗೋರಿ, ಲಾಹೋರ್ ಪಟ್ಟಣ, ಇವೇ ಮುಂತಾದ ಅನೇಕ ರಮಣೀಯವಾದ ಸ್ಥಳಗಳ ಚಿತ್ರಗಳು ಈ ಪುಸ್ತಕದಲ್ಲಿ ಅಡಗಿವೆ. ಅವುಗಳನ್ನೆಲ್ಲಾ ಇಲ್ಲಿ ವಿವರಿಸುವದಕ್ಕೆ ಸ್ಥಳ ಸಾಲದು.

ಪ್ರಾಯಶಃ ಒಂದು ಅಂಶದ ವಿವರಣೆಯೂ ಬಹು ಪರಿಷ್ಕಾರವಾಗಿರುತ್ತದೆ ದಕ್ಷಿಣ ದೇಶದಲ್ಲಿರುವ ಅನೇಕ ಪ್ರಸಿದ್ಧವಾದ ಸ್ಥಳಗಳ ಚಿತ್ರಗಳೂ, ಅವುಗಳ ವಿವರಣೆಗಳೂ ಇದರಲ್ಲಿವೆ ಪುಸ್ತಕವು ಹತ್ತೊಂದು ಅಂಗುಲ ಉದ್ದವಾಗಿಯೂ ಒಂಬತ್ತು ಅಂಗುಲ ಅಗಲವಾಗಿಯೂ ಇರುತ್ತದೆ ಪುಸ್ತಕವು ಛಾಪಿಸಲಾಗಿದೆ ಇಂಥಾ ಪುಸ್ತಕವನ್ನು ಪ್ರಚಾರಪಡಿಸುವದಕ್ಕೆ ಬಹಳ ಸಮಯವನ್ನೂ ಹಣವನ್ನೂ ವ್ಯಯ ಮಾಡಿರುತ್ತೇವೆ. ಪುಸ್ತಕದ ಅಚ್ಚು ಮತ್ತು ಬೈಂಡು ಬಹು ಸುಂದರವಾಗಿವೆ ಇದರ ಕ್ರಯ ಎಂಟೇ ಆಣೆ. ವಿ. ಪಿ. ಪಿ ಮೂಲಕ ಪಡೆದರೆ ಅಂಚೆ ಕೂಲಿ ಆಣೆಗಳಾಗುವವು. ಪುಸ್ತಕವು ಜಾಗ್ರತೆಯಲ್ಲಿ ಮಾರಾಟವಾಗುತ್ತಿದೆಯಾದ್ದರಿಂದ ಪ್ರತಿಗಳೆಲ್ಲರೂ ಕೆಳಗೆ ಕಂಡ ವಿಳಾಸದಾರರಿಗೆ ಬೇಗ ಬರೆದು ತರಿಸಿಕೊಳ್ಳಬೇಕು.

ಮ್ಯಾನೇಜರ್,
ಸಿ. ಎಲ್. ಎಸ್. ಬುಕ್ ಡಿಪೋ,
ಮೈಸೂರು.

ವೃತ್ತಾಂತ ಪತ್ರಿಕೆ

೧೯೦೬ ನೇ ಇಸವಿ ಮಾರ್ಚಿ ತಾ|| ೨೨ ನೇ ಗುರುವಾರ

ಪ್ರಿನ್ಸ್ ಆಫ್ ವೇಲ್ಸ್‌ರವರ ದೇಶಸಂಚಾರವು ಮುಕ್ತಾಯವಾಯಿತು

ಇಂಗ್ಲಿಷ್ ಪ್ರಭುತ್ವದ ಯುವರಾಜರಾದ ಪ್ರಿನ್ಸ್ ಆಫ್ ವೇಲ್ಸ್‌ರವರು ಪತ್ನಿ ಪರಿವಾರ ಸಹಿತ ಕಳೆದ ನೊವೆಂಬರ್ ತಿಂಗಳಲ್ಲಿ ಬೊಂಬಾಯಿ ಪಟ್ಟಣಕ್ಕೆ ಬಂದದ್ದು ಮೊದಲುಗೊಂಡು ಇದುವರೆಗೆ ಈ ರಾಷ್ಟ್ರದ ನಾಲ್ಕು ಭಾಗಗಳಲ್ಲೂ ಸಂಚಾರಮಾಡಿ, ದೇಶ ಪಟ್ಟಣ ಗ್ರಾಮ ಭೂಮಿಗಳನ್ನು ಪರಾಂಬರಿಸಿ, ಸಮಸ್ತ ಪ್ರಜೆಗಳಿಂದಲೂ ಸಂಘಗಳಿಂದಲೂ ದೇಶೀಯ ರಾಜರುಗಳಿಂದಲೂ ರಾಜಭಕ್ತಿಪ್ರೇಮಪೂರಿತವಾಗಿ ಮಾಡಲ್ಪಟ್ಟ ನಾನಾಪ್ರಕಾರವಾದ ಸತ್ಕಾರಗಳನ್ನೂ ಮರ್ಯಾದೆಗಳನ್ನೂ ಸ್ವೀಕರಿಸಿ, ಮೊನ್ನೆ ೧೯ ನೇ ತಾ. ಸೋಮವಾರ ಸಾಯಂಕಾಲ ಕರಾಚಿ ಪಟ್ಟಣದಲ್ಲಿ ರಿನೌನ್ ಎಂಬ ಜಹಜಿನಲ್ಲಿ ಕುಳಿತು ಹಿಂತಿರುಗಿ ವಿಲಾಯಿತಿಯನ್ನು ಕುರಿತು ಪ್ರಯಾಣ ಮಾಡಿದರು. ಬೊಂಬಾಯಿನ ಗವರ್ನರಾದ ಲಾರ್ಡ್ ಲಾಮಿಂಗ್ಟನ್‌ರವರೂ, ಸಿಂಧುದೇಶದ ಕಮಿಷನರಾದ ಮಿ|| ಯಂಗ್‌ಹಸ್‌ಬೆಂಡರವರೂ ಸೈನ್ಯಾಧಿಪತಿಗಳೂ, ಕರಾಚಿ ಪಟ್ಟಣದ ಸಮಸ್ತ ಅಧಿಕಾರಿಗಳೂ ಬಂದರದಲ್ಲಿ ಕಾದಿದ್ದು, ಪ್ರಿನ್ಸ್ ಆಫ್ ವೇಲ್ಸ್ ದಂಪತಿಗಳನ್ನು ವಂದಿಸಿ, ಜಹಜಿನ ಮೇಲೆ ಕೂರಿಸಿ ಸಾಗಕಳುಹಿಸಿ ಬಂದರು. ಯುವರಾಜದಂಪತಿಗಳಿಗೆ ಅಲ್ಲಿ ಬಹು ವೈಭವಪೂರ್ಣವಾದಂಥಾ ಮರ್ಯಾದೆಗಳು ನಡೆದವು. ಪ್ರಿನ್ಸ್ ಆಫ್ ವೇಲ್ಸ್‌ರವರು ಹಿಂದುಸ್ಥಾನದಲ್ಲಿ ಸಂಚಾರ ಮಾಡುವಾಗ್ಗೆ ತಮಗುಂಟಾದ ಅನುಭವವನ್ನು ಕುರಿತು ಆ ದಿನ ಅಪ್ಪಣೆ ಕೊಡಿಸಿರುವುದೇನಂದರೆ—

ನಾನು ಈ ರಾಷ್ಟ್ರದಲ್ಲಿ ಅನುಭೋಗಿಸಿದ ಸಕಲ ವಿಧವಾದ ಸುಖಸಂತೋಷಗಳನ್ನೂ ಜ್ಞಾಪಿಸಿಕೊಂಡರೆ ಈ ದೇಶಾಟನೆಯು ಮುಗಿದುಹೋಯಿತಲ್ಲಾ ಎಂದು ವ್ಯಸನವಾಗುತ್ತದೆ. ನಾವು ಕೃತಜ್ಞತೆಯಿಂದಲೂ ಮಮಕಾರದಿಂದಲೂ ಈ ವಿಸ್ತಾರವಾದ ಮತ್ತು ಆಶ್ಚರ್ಯಯುಕ್ತವಾದ ರಾಷ್ಟ್ರದಿಂದ ಹಿಂತಿರುಗಿ ಪ್ರಯಾಣಮಾಡುವೆವೆಂದು ಸಮಸ್ತ ಪ್ರಜೆಗಳೂ ತಿಳಿಯುವವರಾಗಲಿ. ನಾವು ಇಲ್ಲಿ ಅನೇಕ ಸಂಗತಿಗಳನ್ನು ನೋಡಿ ಗ್ರಹಿಸಿಕೊಂಡಿರುತ್ತೇವೆ. ಹಿಂದುಸ್ಥಾನದ ವಿಷಯದಲ್ಲಿ ನಮಗೆ ಯಾವಾಗಲೂ ವಿಶೇಷವಾದ ಉತ್ಸಾಹವೂ ಪ್ರೀತಿ ವಿಶ್ವಾಸಗಳೂ ಇರುವುವು. ಜಾತಿ ಮತಗಳ ತಾರತಮ್ಯವಿಲ್ಲದೆ ಸಕಲ ಪ್ರಜೆಗಳ ವಿಷಯದಲ್ಲೂ ನಮಗೆ ಅಪಾರವಾದ ಸಹತಾಪವೂ ಕುತೂಹಲವೂ ಉಂಟಾಗಿರುತ್ತವೆ. ಎಲ್ಲಾ ಕಡೆಗಳಲ್ಲೂ ನಮಗಾಗಿ ಮಾಡಿದ ಸತ್ಕಾರಗಳೆಲ್ಲಾ ವೈಭವಯುಕ್ತವಾಗಿಯೂ ಮನೋಲ್ಲಾಸಕರವಾಗಿಯೂ ಇದ್ದವು. ಸಹಸ್ರಾರು ಪ್ರಜೆಗಳು ಸುಖಸಂತೋಷಯುಕ್ತರಾಗಿ ನಮಗೆ ಸುಸ್ವಾಗತವನ್ನು ಬಯಸಿದರು. ಆದರೂ ವೈದಾ ಪ್ರದೇಶಗಳಲ್ಲಿ ಮಳೆಯ ಅಭಾವದಿಂದ ಪ್ರಜೆಗಳು ಎಷ್ಟುಮಟ್ಟಿಗೆ ಕಷ್ಟ ಮನೋವ್ಯಥೆಗಳನ್ನು ಅನುಭವಿಸುವರೋ, ರೋಗಾದಿಗಳಲ್ಲಿ ಸಿಕ್ಕಿ ನರಳುವವರ ಸಂಕಟವೆಷ್ಟುಮಟ್ಟಿನದೋ ನಾವು ಕಣ್ಣಾರ ನೋಡಿ ಅರಿಯಲಾದೆವು. ನಾವು ಇಲ್ಲಿಗೆ ಬಂದು ಎಲ್ಲಾ ಸಂಗತಿಗಳನ್ನೂ ಸ್ವತಹಾ ನೋಡಿದ್ದೇವಾದ್ದರಿಂದ ಇನ್ನು ಮುಂದೆ ಈ ರಾಷ್ಟ್ರಕ್ಕೆ ಸಂಬಂಧಪಡುವ ವಿಷಯಗಳನ್ನು ಪರಿಷ್ಕಾರವಾಗಿ ಮಂದಟ್ಟುಮಾಡಿಕೊಳ್ಳುವುದಕ್ಕೆ ನಮಗೆ ತುಂಬಾ ಸಹಾಯವಾಗಿರುತ್ತದೆ. ಹಿಂದುಸ್ಥಾನದಲ್ಲಿ ನಮ್ಮ ಸಂಚಾರವು ನಮಗೆ ವಿಶೇಷವಾದ ಸುಖಸಂತೋಷಗಳನ್ನುಂಟುಮಾಡಿರುವುದು. ಈ ಭಾಗದಲ್ಲಿ ಸಕಲ ಪ್ರಜೆಗಳೂ ಪ್ರೀತಿಯನ್ನೂ ಸೌಹಾರ್ದವನ್ನೂ ಪ್ರಕಾಶಪಡಿಸಿರುತ್ತಾರಾದಕಾರಣ ಎಲ್ಲರನ್ನೂ ಮನಃಪೂರ್ವಕವಾಗಿ ವಂದಿಸುತ್ತೇವೆ. ಹಿಂದುಸ್ಥಾನದ ಯಾವ ಭಾಗದಲ್ಲಿ ನೋಡಿದರೂ ರಾಜಭಕ್ತಿ ವಿಶ್ವಾಸಗಳು ಮೂರ್ತಿವತ್ತಾಗಿ ಮೆರೆಯುತ್ತಲಿವೆ. ಹದಿನಾರು ಸಂವತ್ಸರಗಳ ಕೆಳಗೆ ಈ ರಾಷ್ಟ್ರದಲ್ಲಿ ಸಂಚಾರ ಮಾಡಿದ ನಮ್ಮ ಸಹೋದರರ ವಿಷಯವನ್ನು ಯಾರೂ ಮರೆಯದೆ ಇರುವುದನ್ನೂ ಅವರ ವಿಷಯದಲ್ಲಿ ಎಲ್ಲರೂ ವಿಶೇಷವಾದ ಪ್ರೀತಿಯುಕ್ತರಾಗಿರುವುದನ್ನೂ ನೋಡಿ ನಾನು ಪರಮ ಸಂತೋಷಪಡುತ್ತಿದ್ದೇನೆ. ಸಕಲ ವಿಷಯಗಳಲ್ಲೂ ಸರ್ವದಾ ನಮಗೆ ಅವಿಚ್ಛಿನ್ನವಾದ ಸುಖಸಂತೋಷಗಳನ್ನೇ ಉಂಟುಮಾಡಿದ ಈ ಹಿಂದುಸ್ಥಾನದ ಸಂಚಾರವನ್ನು ಕೃತಜ್ಞತಾಪೂರ್ವಕವಾಗಿ ಮುಕ್ತಾಯಮಾಡಿ, ಹಿಂತಿರುಗಿ ಪ್ರಯಾಣ ಮಾಡುವೆನು.

ಈ ರೀತಿಯಾಗಿ ಪ್ರಿನ್ಸ್ ಆಫ್ ವೇಲ್ಸ್‌ರವರು ಈ ರಾಷ್ಟ್ರದಲ್ಲಿ ದೇಶಾಟನೆಯನ್ನು ಪೂರೈಸಿಕೊಂಡು ವಿಲಾಯತಿಗೆ ಪ್ರಯಾಣ ಮಾಡಿದರು. ಈ ದೇಶಾಟನೆಯು ಸಕಲ ಪ್ರಜೆಗಳಲ್ಲೂ ರಾಜಭಕ್ತಿ ವಿಶ್ವಾಸಗಳನ್ನು ವಿಶೇಷವಾಗಿ ವೃದ್ಧಿಪಡಿಸುತ್ತದೆಂತಲೂ ಈ ರಾಷ್ಟ್ರಕ್ಕೂ ಇಂಗ್ಲಿಷ್ ಪ್ರಭುತ್ವಕ್ಕೂ ಇರುವ ಋಣಾನುಬಂಧಗಳನ್ನು ಪರಸ್ಪರವಾಗಿ ಹೆಚ್ಚಿಸುತ್ತದೆಂತಲೂ ಸಂಶಯವಿಲ್ಲದೆ ಹೇಳಬಲ್ಲೆವು. ಇನ್ನು ಮುಂದೆ ದೇವರ ದಯದಿಂದ ಯುವರಾಜರವರು ಇಂಗ್ಲಿಷ್ ರಾಜ್ಯಭಾರವನ್ನು ವಹಿಸುವಾಗ್ಗೆ ಈ ರಾಷ್ಟ್ರವು ಇನ್ನೂ ಅತಿಶಯವಾಗಿ ವೃದ್ಧಿಹೊಂದುವುದಕ್ಕೆ ಅವರ ಈಗಿನ ಅನುಭವವು ತುಂಬಾ ಸಹಾಯ ಮಾಡುವುದು. ಈ ಯುವರಾಜದಂಪತಿಗಳಿಗೆ ಪ್ರಯಾಣ ಸುಖವಾಗಿ ಬೆಳೆದು, ಅವರು ಸುರಕ್ಷಿತರಾಗಿ ತಮ್ಮ ಜನ್ಮಭೂಮಿಯನ್ನು ತಲಪುವಂತಾಗಲೆಂದು ಪ್ರಾರ್ಥಿಸುತ್ತೇವೆ.

ಒಳದೇಶದ ವೃತ್ತಾಂತಗಳು.

ಸದ್ಯ ರಾಜಧಾನಿಯಲ್ಲಿ ಬಿಸಿಲು ಬಹಳ ಜೋರಾಗಿದೆ. ಪ್ರಜೆಗಳು ನೀರಿಗೆ ತುಂಬಾ ಕಷ್ಟಪಡುತ್ತಾರೆ. ದಾರವಾಡಸೀಮೆಗೂ ಹೆಚ್ಚುತ್ತಿರುವವು. ಕಳೆದ ಶನಿವಾರ ರಾತ್ರಿ ಬೆಂಗಳೂರಿನಲ್ಲೂ ನಿನ್ನೆ ರಾತ್ರಿ ರಾಜಧಾನಿಯಲ್ಲೂ ಚೆನ್ನಾಗಿ ಒಂದು ಜಡಿ ಮಳೆ ಸುರಿಯಿತು.

****

ಶ್ರೀಮನ್ಮಹಾರಾಜರವರು ಈ ತಿಂಗಳ ೩೦ ನೆ ತಾರೀಖು ಶುಕ್ರವಾರ ಬೇಸಿಗೆಗಾಗಿ ರಾಜಧಾನಿಯಿಂದ ನೀಲಗಿರಿ ಬೆಟ್ಟವನ್ನು ಕುರಿತು ಪ್ರಯಾಣ ಮಾಡುವವರಾಗಿದ್ದಾರೆ.

****

ಕೋಲಾರ ಚಿನ್ನದ ಗಣಿಗಳ ಡಾಕ್ಟರಾದ ಮಿ|| ಇ ಎಸ್ ಕೃಷ್ಣಸ್ವಾಮಿ ಐಯ್ಯರವರ ಪತ್ನಿಯವರು ಹಿಂದಿನ ಬುಧವಾರ ರಾತ್ರಿ ಟರ್ನರ್ [illegible]ಯಲ್ಲಿ ಕಾಲವಾದರೆಂದು ತಿಳಿಸಲು ವಿಷಾದಿಸುತ್ತೇವೆ.

****

ಕುಣಿಗಲಿನಲ್ಲಿ ತಂತೀವರ್ತಮಾನದ ಆಫೀಸನ್ನು ಇಡಬೇಕೆಂತಲೂ ಪ್ರೈವೆಟ್ ರೀತಿಗೆ ಒಬ್ಬ ಸರ್ಕಾರಿ ಸೂಲಗಿತ್ತಿಯನ್ನು ನೇಮಿಸಿ ಕಳುಹಿಸಬೇಕೆಂತಲೂ ಗವರ್ನಮೆಂಟಿನವರು ಸ್ಯಾಂಕ್ಷನ್ ಮಾಡಿದ್ದಾರೆ.

****

ಕಳೆದ ಫೆಬ್ರುವರಿ ೨೮ ನೆ ತಾರೀಖಿನ ವಿಕ್ಟೋರಿಯಾಟನಿಂದ ಇಬ್ಬರು ಕಾನ್ಸ್‌ಟೇಬಲುಗಳು ಆರಸೀಕೆರೆಗೆ ಬಂದು ೨ ಅಥವ ೪ ಜನ [illegible] ಎರಡು ಭಾರೀ ಹುಲಿಗಳನ್ನು ಶಿಕಾರಿಮಾಡಿಕೊಂಡು ಹೋದರೆಂದು ತಿಳಿದುಬಂದಿದೆ.

****

ಕೆಂಚನ್ಕನಹೊಸಕೋಟೆ ಮಲ್ಲಪುರದ ಕಾಫಿ ಎಸ್ಟೇಟಿನಲ್ಲಿ ಕಳೆದ ಶುಕ್ರವಾರ ೨೦೦ ರೂಪಾಯಿನ ೧೦ ಬುಷಲ್ ಕಾಫೀ ಬೀಜ ಕಳುವಾಯಿತೆಂತಲೂ, ಅದು ಇನ್ನೂ ಪತ್ತೆ ಆಗಿಲ್ಲವೆಂತಲೂ ಬಾತ್ಮಿದಾರರು ತಿಳಿಸುತ್ತಾರೆ.

****

ಕೋಲಾರ್ ಚಿನ್ನದ ಗಣಿಗಳ ಪೋಲೀಸ್ ಸೂಪರಿಂಟೆಂಡೆಂಟಾದ ಮಿ|| ಬಿ ಇ ತೇವಿತ್‌ಯವರು ಕಾಯಿಲೆಯಾಗಿರುವ ಕಾರಣ ಕೆಲಸಕ್ಕೆ ರಾಜೀನಾಮೆ ಕೊಟ್ಟಿದ್ದಾರೆ. ಇವರು ನಾಳೆ ಸೋಮವಾರ ಅಲ್ಲಿಂದ ಹೊರಟು ಸೀಮೆಗೆ ಪ್ರಯಾಣ ಮಾಡುವರೆಂದು ಕೇಳುತ್ತೇವೆ.

****

ಬೆಂಗಳೂರು ದಂಡಿನಲ್ಲಿರುವ ರಾಯಬಹದೂರ್ ಮಿ|| ಬಿ ಪಿ ಅಣ್ಣಾಸ್ವಾಮಿ ಮೊದಲಿಯಾರ್‌ರಿಗೆ ಕೇಸರಿ ಹಿಂದ್ ಎಂಬ ಬಿರುದು ಬಿಲ್ಲೆಯನ್ನು ಒಪ್ಪಿಸುವುದಕ್ಕಾಗಿ ಬ್ರಿಟಿಷ್ ರೆಸಿಡೆಂಟರು ನಾಳೆ ಸೋಮವಾರ ಅಲ್ಲಿನ ಮೇಯೋ ಹಾಲ್ ಬಂಗಲೆಯಲ್ಲಿ ದರ್ಬಾರ್ ನಡಸುವರು.

****

ಶ್ರೀಮನ್ಮಹಾರಾಜರವರು ಮಿ|| ವಿ ಪಿ ಮಾಧವರಾಯರನ್ನು ಈ ಸಂಸ್ಥಾನದ ದಿವಾನರನ್ನಾಗಿ ನೇಮಿಸಿಕೊಳ್ಳಬೇಕೆಂದು ಇಷ್ಟಪಟ್ಟು ಇಂಡಿಯಾ ಗವರ್ನಮೆಂಟಿಗೆ ಬರೆದಿರುತ್ತಾರೆಂತಲೂ, ಅವರಿಂದ ಅನುಮತಿ ಕೊಟ್ಟ ಜವಾಬು ಇನ್ನೂ ಬಂದಿಲ್ಲವೆಂತಲೂ ಕೇಳುತ್ತೇವೆ.

****

ಎರಡನೇ ಮಹಾರಾಜ ಕುಮಾರಿಯವರ ಇಬ್ಬರು ಮಕ್ಕಳಿಗೆ ಕಳೆದ ೯ರ ರಾಜಧಾನಿಯಲ್ಲಿ ವರ್ಧಂತಿ ಉತ್ಸವಗಳು ನಡೆದವು. ಆ ದಿನ ಅರಮನೆಯಲ್ಲಿ ಅವರಿಗೆ ಅಕ್ಷತೆ ಮುಂತಾದ್ದು, ಸಾಯಂಕಾಲ ಕೋಟೆಯ ನಾಲ್ಕು ಬೀದಿಗಳಲ್ಲೂ ಮೆರವಣಿಗೆಯು ಪದ್ಧತಿಯ ಪ್ರಕಾರ ನೆರವೇರಿದವು.

****

ತಿರುಮಕೂಡ್ಲು ನರಸೀಪುರದ ತಾಲ್ಲೂಕು ರಂಗಸಮುದ್ರದ ಕೋಟೆಬಳಿ ಪಿಲ್ಲಹಳ್ಳಿ ಗ್ರಾಮದಲ್ಲಿ ಈರಾಸ್ವಾಮಿ ಎಂಬ ಕೊರಮರವನ ಮನೆಯನ್ನು ಪೋಲೀಸಿನವರು ಗುಮಾನಿಯ ಮೇಲೆ ಶೋಧನೆ ಮಾಡಿದಾಗ ಅನೇಕ ಪಾತ್ರೆಪದಾರ್ಥಗಳೂ ಬಟ್ಟೆಬರೆಗಳೂ ಚಿನ್ನ ಬೆಳ್ಳಿ ಒಡವೆವಸ್ತುಗಳೂ ಸಿಕ್ಕಿರುತ್ತವೆ.

ಗುಂಡ್ಲುಪೇಟೆ ತಾಲ್ಲೂಕು ತೆರಕಣಾಂಬಿ ಸಂತೆಯಲ್ಲಿ ಇನ್ನೂ ಒಂಬತ್ತು ಅಂಗಡಿಗಳನ್ನು ಕಟ್ಟುವುದಕ್ಕೆ ೧,೩೦೦ ರೂಪಾಯಿಯನ್ನೂ, ಹುಣಸೂರು ತಾಲ್ಲೂಕು ಅತ್ತಿಗೊಡೆ ಸಂತೆಯಲ್ಲಿ ಮಾರ್ಕೆಟ್ ಶೆಡ್ಡುಗಳನ್ನು ಕಟ್ಟುವುದಕ್ಕೆ ೧೦,೯೩೨ ರೂಪಾಯಿಯನ್ನೂ ಗವರ್ನಮೆಂಟಿನವರು ಸ್ಯಾಂಕ್ಷನ್ ಮಾಡುವವರಾಗಿದ್ದಾರೆ.

****

ಬೆಂಗಳೂರಿನಲ್ಲಿ ಕೆಲವು ವರುಷಗಳಿಂದಿದ್ದ ೧,೦೦೦ ಮಂದಿ ಪಂಜಾಬಿ ಸೈನಿಕರನ್ನು ಸಿಂಧು ದೇಶಕ್ಕೆ ಸೇರಿದ ಡೇರಾ ಇಸ್ಮೈಲ್ ಖಾನ್ ಎಂಬ ಪಟ್ಟಣಕ್ಕೆ ಕಳುಹಿಸಬೇಕೆಂದು ಸೈನ್ಯಾಧಿಪತಿಯಿಂದ ಅಪ್ಪಣೆ ಬಂದ ಪ್ರಕಾರ ಅವರನ್ನೆಲ್ಲಾ ಕಳೆದವಾರ ಎರಡು ಸ್ಪೆಷಲ್ ರೈಲ್ ಗಾಡಿಗಳಲ್ಲಿ ಕೂರಿಸಿ ರವಾನೆಮಾಡಿದರು.

****

ಗ್ರಾಮಾಂತರಗಳ ಆರೋಗ್ಯವಿಚಾರವನ್ನು ಅಭಿವೃದ್ಧಿಪಡಿಸುವುದಕ್ಕೆ ಸರ್ಕಾರದವರು ಪಟೇಲರುಗಳಿಗೆ ಪ್ರತಿ ವರುಷವೂ ಬಹುಮಾನಗಳನ್ನು ಕೊಡುವಂತೆ ಏರ್ಪಾಡುಮಾಡಬೇಕೆಂದು ಯೋಚಿಸುತ್ತಿದ್ದಾರೆ. ಪಟೇಲರುಗಳಲ್ಲಿ ಸ್ಪರ್ಧೆಯನ್ನುಂಟುಮಾಡಿ ಅವರಿಂದ ಗ್ರಾಮಗಳನ್ನು ಸಾಫಾಗಿ ಇಡಿಸುವುದಕ್ಕೆ ಇದೂ ಒಂದು ಅನುಕೂಲವಾದ ಏರ್ಪಾಡೇ.

****

ರಾಜಧಾನಿಯ ಪ್ರಜೆಗಳು ಸದ್ಯ ಕುಡಿಯುವ ನೀರಿಗೆ ಪಡುತ್ತಿರುವ ಕಷ್ಟವನ್ನು ಕುರಿತು ಕಳೆದ ವಾರ ಬರೆದಿದ್ದೆವಷ್ಟೆ. ಶ್ರೀಮನ್ಮಹಾರಾಜರವರು ಕಳೆದ ಶನಿವಾರ ಬೆಳಗೊಳಕ್ಕೆ ದಯಮಾಡಿಸಿ, ಅಲ್ಲಿಟ್ಟಿರುವ ನೀರಿನ ಯಂತ್ರಗಳನ್ನೆಲ್ಲಾ ಪರಾಂಬರಿಸಿ ಬಂದರು. ಈ ನೀರಿನ ವಿಷಯದಲ್ಲಿ ಸರಿಯಾದ ಏರ್ಪಾಡನ್ನು ಸೂಚಿಸುವುದಕ್ಕಾಗಿ ಸಂಸ್ಥಾನದ ಛೀಫ್ ಇಂಜನಿಯರವರೂ ಕ್ಯಾಪ್ಟನ್ ಟ್ರಯಾಲ್‌ರವರೂ ಬಂದು ಆ ಸ್ಥಳವನ್ನು ನೋಡಿಕೊಂಡು ಹೋಗುವಂತೆ ಹುಕುಂ ಆಗಿದೆ ಎಂದು ತಿಳಿಯಲಾದವು.

****

ಮಿಲಿಟರಿ ಭಕ್ಷಿ ಬಸಪ್ಪಾಜಿ ಅರಸಿನವರು ಹಿಂದಿನವಾರ ಕಾಕನಕೋಟೆ ಬಳಿ ಹಿಡಿಸಿತಂದ ಹುಲಿಯನ್ನು ಶ್ರೀಮನ್ಮಹಾರಾಜರವರು ನೋಡಿ ತುಂಬಾ ಸಂತೋಷಪಟ್ಟು, ಅದನ್ನು ಜಾನ್‌ಬಂಗಲೆಯಲ್ಲಿಡುವಂತೆ ಅಪ್ಪಣೆ ಕೊಡಿಸಿದರು. ಈಚೆಗೆ ನಂಜನಗೂಡು ತಾಲ್ಲೂಕಿನಲ್ಲಿ ಒಂದು ಹುಲಿ ಇರುವುದೆಂದು ತಿಳಿದು ಬಂದದ್ದರಿಂದ ಅದನ್ನು ಹಿಡಿಯುವುದಕ್ಕೆ ಬಕ್ಷಿಯವರನ್ನು ಆ ಪ್ರಾಂತ್ಯಕ್ಕೆ ಕಳುಹಿಸಿದ್ದಾರೆ. ಅದು ಸಿಕ್ಕಿದ ವರ್ತಮಾನ ಬಂದಲ್ಲಿ ಶ್ರೀಮನ್ಮಹಾರಾಜರವರು ಅಲ್ಲಿಗೆ ದಯಮಾಡಿ ಅದನ್ನು ಶಿಕಾರಿಮಾಡುತ್ತಾರೆಂದು ಕೇಳುತ್ತೇವೆ.

****

ಮೈಸೂರು ಸರ್ಕಾರದವರು ಪೋಲೀಸ್ ಇನ್ಸ್‌ಪೆಕ್ಟರುಗಳ ಸಂಬಳವನ್ನು ಜಾಸ್ತಿಮಾಡಿ [illegible] ಮೈಸೂರಿಗೂ ಬೆಂಗಳೂರಿಗೂ ಇಬ್ಬರು ಚೀಫ್ ಇನ್ಸ್‌ಪೆಕ್ಟರುಗಳು. ಇವರ ತಲಬು ೧೫೦ ರಿಂದ ೨೦೦ ರೂ, ೧೦ ಮಂದಿ ಇನ್ಸ್‌ಪೆಕ್ಟರುಗಳಿಗೆ ೧೦೦ ರೂ ನಿಂದ ೧೫೦ ರೂ. ವರೆಗೆ; ೭೫ ರೂಪಾಯಿ ತಲಬಿನ ೧೦ ಮಂದಿ ಇನ್ಸ್‌ಪೆಕ್ಟರುಗಳು, ೬೦ ರೂ ತಲಬಿನ ಮೇಲೆ ೧೫ ಮಂದಿ, ಇದೇ ರೀತಿ ೩ ನೆ ಗ್ರೇಡ್ ಇನ್ಸ್‌ಪೆಕ್ಟರಿಗೆ ೫೦ ರೂಪಾಯಿ ತಲಬು ಸಲ್ಲುವಂತೆ ಗೊತ್ತು ಮಾಡಿದಾರೆ. ಸಬ್ ಇನ್ಸ್‌ಪೆಕ್ಟರ [illegible] ಚೀಫ್ ಕಾನ್‌ಸ್ಟೇಬಲ್‌ರ ದರ್ಜೆಗಳನ್ನೇ ವಜಾಮಾಡಿದರು.

****

ಮೈಸೂರು ಸರ್ಕಾರದವರು ಕೆಲವು ಸ್ಕೂಲ್ ಮಾಸ್ತರುಗಳನ್ನು ಬೆಂಗಳೂರು ತಾತಾರವರ ರೇಷ್ಮೆ ಕಾರ್ಖಾನೆಯಲ್ಲಿಟ್ಟು, ರೇಷ್ಮೆ ವಿಚಾರವನ್ನೆಲ್ಲಾ ಅವರು ಕಲಿತ ಮೇಲೆ ಅವರಿಗೆ ಸಂಬಳ ಗೊತ್ತುಮಾಡಿ, ತಾಲ್ಲೂಕುಗಳ ಮೇಲೆ ಸಂಚಾರಮಾಡುವಂತೆ ನೇಮಿಸಿದಾರಷ್ಟೆ. ಇವರನ್ನು ನೇಮಕಮಾಡಿದ ಅವಧಿಯು ಪೂರೈಸಿತು. ಸರ್ಕಾರದವರು ಅವರನ್ನು ಇನ್ನೆರಡು ವರುಷಗಳ ತನಕ ಹಂಗಾಮಿಯಾಗಿ ಇಟ್ಟು, ಪ್ರತಿ ವರುಷದ ಅಂತ್ಯದಲ್ಲೂ ಅವರು ಮಾಡಿದ ಕೆಲಸಗಳ ವಿಷಯದಲ್ಲಿ ಗವರ್ನಮೆಂಟಿಗೆ ರಿಪೋರ್ಟು ಬರೆದು ಕಳುಹಿಸಬೇಕೆಂತಲೂ, ಸದ್ಯಕ್ಕೆ ಹೊಸದಾಗಿ ಉಪಾಧ್ಯಾಯರನ್ನು ತಾತಾರವರ ಕಾರ್ಖಾನೆಯಲ್ಲಿಟ್ಟು ರೇಷ್ಮೆ ವಿಚಾರವನ್ನು ಕಲಿಸಬೇಕಾದದ್ದಿಲ್ಲವೆಂತಲೂ ಹುಕುಂ ಕೊಟ್ಟಿದ್ದಾರೆ.

ಮೈಸೂರು ಗೆಜೆಟ್ ಸಂಗ್ರಹ.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಫಾರೆಸ್ಟ್ ಅ|| ಕನ್ಸರ್ವೇಟರ್ ಮಿ|| ಬಿ ರಾಮಸ್ವಾಮಿ ಐಯ್ಯಂಗಾರರಿಗೆ ಫೆಬ್ರುವರಿ ೧೦ ರಿಂದ ಏಳು ದಿನಗಳ ಪ್ರಿವಿಲೇಜ್ ರಜಾ ಕೊಟ್ಟಿದೆ.

ಕೃಷ್ಣರಾಜಪೇಟೆ ತಾಲ್ಲೂಕ್ ಅಮಲ್ದಾರ್ ಮಿ|| ಎಂ. ರಂಗನಾಥರಾಯರಿಗೆ ಜನವರಿ ೨೩ ರಿಂದ ಒಂದು ತಿಂಗಳು ಹತ್ತು ದಿವಸಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ಶಿರಸ್ತೇದಾರರು ಆ ಕಾಲದಲ್ಲಿ ತಾಲ್ಲೂಕಿನ ಚಾಲ್ತಿ ಕೆಲಸಗಳ ಛಾರ್ಜನ್ನು ವಹಿಸಿದ್ದರು.

ವೈದ್ಯ ಇಲಾಖೆಯಲ್ಲಿ ಮುಂದೆ ಹೇಳುವ ಬಡ್ತಿಗಳು ಹುಕುಂ ಮಾಡಲ್ಪಟ್ಟಿವೆ:—ಮಿ|| ಗ್ಲಾಡ ಸಿ ಅಪ್ಪಾದೊರೆ ಮೊದಲಿಯಾರರನ್ನೂ, ಪಿ ಮುತ್ತುಸ್ವಾಮಿ ದಾಸರನ್ನೂ, ಎಂ ಜಗನ್ನಾಥಂ ಪಿಳ್ಳೆಯವರನ್ನೂ ೪ ನೆ ಕ್ಲಾಸ್ ಅ|| ಸರ್ಜನ್ ದರ್ಜೆಗೆ ಬಡ್ತಿ ಮಾಡಿದೆ. ಮಿ|| ಪಿ. ಮಾಧವರಾಯರನ್ನೂ, ಮಿ|| ಸಿ ಕುಪ್ಪುಸ್ವಾಮಿ ಪಿಳ್ಳೆಯವರನ್ನೂ ೩ ನೆ ಕ್ಲಾಸ್ ಸಬ್ ಅ|| ಸರ್ಜನ್ ದರ್ಜೆಗೆ ಬಡ್ತಿ ಮಾಡಿದೆ.

ಇಂಜನಿಯರ್ ಇಲಾಖೆಯಲ್ಲಿ ಮುಂದೆ ಹೇಳುವ ವರ್ಗಾವರ್ಗಿಗಳು ಹುಕುಂಮಾಡಲ್ಪಟ್ಟಿವೆ :—ಅ|| ಎಕ್ಸಿಕ್ಯುಟಿವ್ ಇಂಜನಿಯರ್ ಮಿ|| ಆರ್ ವಿ ಸುಂದರಂ ಐಯ್ಯರವರನ್ನು ಶಿವಮೊಗ್ಗೆಯಿಂದ ಹಾಸನದ ಡಿವಿಜನಿಗೆ, ಎಕ್ಸಿಕ್ಯುಟಿವ್ ಇಂಜನಿಯರ್ ಮಿ|| ಸಿ ಎ ಮಹಾದೇವ ಶಾಸ್ತ್ರಿಗಳನ್ನು ಹಾಸನದಿಂದ ಶಿವಮೊಗ್ಗ ಡಿವಿಜನಿಗೆ

ಸಾ॥ ದೊಡ್ಡಣ್ಣಶೆಟ್ಟರ ಧರ್ಮದ ಸ್ಕೂಲು.

ಮಾರ್ಚಿ ತಿಂಗಳು ೧೦ ನೇ ತಾರೀಖು ಶನಿವಾರ ಬೆಳಿಗ್ಗೆ ೮ ಗಂಟೆಗೆ ಸರಿಯಾಗಿ ಶ್ರೀಮನ್ಮಹಾರಾಜರವರು ಬೆಂಗಳೂರು ಕೋಟೆಯ ಬಳಿ ಮೆ॥ ದೊಡ್ಡಣ್ಣಶೆಟ್ಟರವರಿಂದ ನೂತನವಾಗಿ ಕಟ್ಟಿಸಲ್ಪಟ್ಟಿರುವ ಸ್ಕೂಲಿಗೆ ದಯಮಾಡಿಸಿ, ಅಗ್ರಾಸನಾಧಿಪತ್ಯವನ್ನು ವಹಿಸಿದ್ದರು. ಸ್ಕೂಲ್ ಗೇಟ್ ಮುಂದೆಯೂ ರಸ್ತೆಯಲ್ಲಿಯೂ ನಿಶಾನಿಗಳಿಂದ ಬಹಳ ರಮ್ಯವಾಗಿ ಅಲಂಕಾರ ಮಾಡಿದ್ದರು. ಒಳಗೆ ಸಹಾ ಪುಷ್ಪಗಳಿಂದ ಅಲಂಕಾರ ಮಾಡಿದ್ದರು. ಶ್ರೀಮನ್ಮಹಾರಾಜರವರು ಕೂತುಕೊಂಡ ಎದುರು ಭಾಗದಲ್ಲಿ ಲೇಟ್ ಚಾಮರಾಜ ಒಡೆಯರವರ ತಸಬೀರನ್ನು ಇಟ್ಟಿದ್ದರು. ಸಂಸ್ಥಾನದ ದಿವಾನರು, ಕೌನ್ಸಿಲರುಗಳು, ಇನ್ನೂ ಅನೇಕ ಪ್ರಾಮುಖ್ಯ ದೊಡ್ಡಮನುಷ್ಯರೂ, ವರ್ತಕರೂ ಸಹಾ ದಯಮಾಡಿಸಿದ್ದರು. ಮಿಲಿಟರಿ ಬ್ಯಾಂಡ್ ವಾದ್ಯಗಳು ಬಹಳ ಇಂಪಾಗಿದ್ದವು. ಮೆ॥ ದೊಡ್ಡಣ್ಣಶೆಟ್ಟರವರು ಕನ್ನಡದಲ್ಲಿ ಅಡ್ರೆಸ್ಸನ್ನು ಓದಿ ಶ್ರೀಮನ್ಮಹಾರಾಜರವರಿಗೆ ಒಪ್ಪಿಸಿದರು. ಮಹಾರಾಜರವರು ಸದರಿ ಶೆಟ್ಟರು ಮಾಡಿರುವ ಕೆಲಸವನ್ನು ಬಹಳವಾಗಿ ಮೆಚ್ಚಿ, ತುಂಬಾ ಸಂತೋಷವಾಗಿರುವಂತೆ ಅಪ್ಪಣೆ ದಯಪಾಲಿಸಿದರು. ಅನಂತರ ಮೆ॥ ಎಚ್. ವಿ. ನಂಜುಂಡೈಯ್ಯನವರು ಶ್ರೀಮನ್ಮಹಾರಾಜರವರಿಗೆ ಕಮಿಟಿಯವರ ಅನೇಕ ವಂದನೆಗಳನ್ನು ಅರ್ಪಿಸಿದರು. ಸಕಲರಿಗೂ ಗಂಧ ಪುಷ್ಪ ತಾಂಬೂಲಾದಿಗಳು ವಿನಿಯೋಗಿಸಲ್ಪಟ್ಟ ಮೇಲೆ ಸಭೆಯು ಬರಖಾಸ್ತಾಯಿತು.

ಸಾಹುಕಾರ್ ಮೆ॥ ದೊಡ್ಡಣ್ಣನವರು ಒಪ್ಪಿಸಿದ ಅಡ್ರೆಸ್ಸಿನ ವಿವರವೇನೆಂದರೆ—

ಮೈಸೂರು ಮಹಾ ಸಂಸ್ಥಾನದ ಶ್ರೀಮನ್ಮಹಾರಾಜಾಧಿರಾಜ ರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರವರ ಪಾದಪದ್ಮಗಳಿಗೆ

ಸ್ವಾಮಿ ಪಾದಸೇವಕ ದೊಡ್ಡಣ್ಣ ಶೆಟ್ಟಿಯಾದ ನಾನು ಅತಿ ವಿನಯ ಭಯ ಭಕ್ತಿಯಿಂದ ಅರಿಕೆಮಾಡಿಕೊಳ್ಳುವದೇನೆಂದರೆ ಮಹಾಸ್ವಾಮಿ —

ತಮ್ಮ ಸಂಸ್ಥಾನದ ಮುಖ್ಯಪಟ್ಟಣವಾದ ಈ ಬೆಂಗಳೂರು ನಗರದಲ್ಲಿ ವಿದ್ಯೆಯನ್ನು ಕಲಿಯಲು ಇಚ್ಛಿಸುವ ಅನೇಕರಿಗೆ ತಕ್ಕ ಖರ್ಚು ಮಾಡಲು ಶಕ್ತಿಯಿಲ್ಲದೆ ಇರುವದನ್ನು ತಿಳಿದು, ಅವರ ಜಾತಿ ಕುಲ ಭೇದಗಳನ್ನು ನೋಡದೆ, ಅವರಿಗೆ ನನ್ನ ಅಲ್ಪ ಶಕ್ತ್ಯನುಸಾರವಾಗಿ ಸಹಾಯ ಮಾಡಬೇಕೆಂದು ತಮ್ಮ ಅನುಗ್ರಹದಿಂದ ನನಗೆ ಶ್ರೀಹರಿಯು ಪ್ರೇರೇಪಿಸಲಾಗಿ ಈ ಕಟ್ಟಡದಲ್ಲಿ ಸ್ಕೂಲನ್ನಿಡಬೇಕೆಂದು ಉದ್ದೇಶಿಸಿರುವೆನು. ಇದಕ್ಕೆ ತಗಲಿದ ಖರ್ಚಲ್ಲದೆ ಸ್ಕೂಲಿನ ಉಪಾಧ್ಯಾಯರಿಗೆ ಸಂಬಳ ಮುಂತಾದ ಖರ್ಚುಗೋಸ್ಕರ ನೂರು ವರ್ಷದ ಕೆಳಗೆ ತಮ್ಮ ಸರ್ಕಾರಕ್ಕೆ ಮೂವತ್ತು ಸಾವಿರ ರೂಪಾಯನ್ನು ಠೇವಣಾತಿಯಾಗಿಟ್ಟಿರುವೆನು. ಅದನ್ನು ಧರ್ಮದ ಹಣದಂತೆ ಅಂಗೀಕರಿಸಿ, ಹುಕುಂ ದಯಪಾಲಿಸಿದ್ದಕ್ಕಾಗಿ ಮಹಾಸ್ವಾಮಿಯವರ ಸನ್ನಿಧಾನದಲ್ಲಿ ನಾನು ಅತಿ ಕೃತಜ್ಞನಾಗಿರುವೆನು ಮಹಾಸ್ವಾಮಿ

ಸ್ಕೂಲಿನಲ್ಲಿ ಸಧ್ಯ ಲೋವರ್ ಸೆಕೆಂಡರಿ ಪರೀಕ್ಷೆಯ ವರೆಗೂ—ಇಂಗ್ಲೀಷಿನಲ್ಲಿಯೂ, ಕನ್ನಡದಲ್ಲಿಯೂ—ವಿದ್ಯೆ ಹೇಳಲಿಕ್ಕೆ ಏರ್ಪಾಡು ಮಾಡುತ್ತೇನೆ. ತಮ್ಮ ತಮ್ಮ ಜೀವನವನ್ನು ಸಂಪಾದಿಸಿಕೊಳ್ಳಲು ಬೇಕಾಗುವ ತೋಟದ ಕೃಷಿ, ಬಡಿಗೆ ಮತ್ತು ಲೋಹಾರ್ ಕೆಲಸಗಳು, ಚಿತ್ರದ ಕೆಲಸ, ನೇಗೆ ಮುಂತಾದ ಕೆಲವು ಕೈಗಾರಿಕೆಯ ಕೆಲಸಗಳನ್ನು ಪ್ರತಿಯೊಬ್ಬ ವಿದ್ಯಾರ್ಥಿಯೂ ತಲಿಯುವಂತೆ ತಕ್ಕ ಏರ್ಪಾಡನ್ನು ಶೀಘ್ರದಲ್ಲಿಯೇ ಮಾಡಬೇಕೆಂದು ಉದ್ದೇಶಿಸಿದೆ ಮಹಾಸ್ವಾಮಿ

ಇತರ ಮಾರ್ಗವಿಲ್ಲದೆ ಇರುವ ಬಡವರನ್ನೇ ಆರಿಸಿ, ಸ್ಕೂಲಿಗೆ ಸೇರಿಸಿಕೊಳ್ಳಬೇಕೆಂದಿರುವದರಿಂದ ಅವರಿಂದ ಮಾಸಗಟ್ಟಲೆ ಫೀ ಏನೂ ವಸೂಲ್ಮಾಡದೆ, ಧರ್ಮಕ್ಕೆ ವಿದ್ಯೆ ಕಲಿಸಬೇಕೆಂದು ಉದ್ದೇಶವಾಗಿದೆ. ನಾನೇ ಸ್ವತಃ ಇದನ್ನೆಲ್ಲಾ ನಿರ್ವಹಿಸಲು ಅಶಕ್ತನಾದ್ದರಿಂದ ವಿದ್ಯಾವಂತರೂ, ಮಹನೀಯರೂ ಆದ ಈ ದೊಡ್ಡ ಮನುಷ್ಯರು ಕಮಿಟಿಯಾಗಿ ನಿಂತು, ತಮ್ಮ ಸಹಾಯವನ್ನೂ ಸೇರಿಸಿಕೊಂಡು, ನನ್ನ ಸಂಕಲ್ಪವು ನೆರವೇರುವಂತೆ ಮಾಡಿಕೊಡಬೇಕೆಂದು ಬೇಡಿಕೊಂಡಿದೆ ಮಹಾಸ್ವಾಮಿ.

ಮೆ॥ ಗಳಾದ ಎಚ್. ವಿ. ನಂಜುಂಡೈಯ್ಯನವರು, ಎಂ. ಎ, ಎಂ. ಎಲ್, ವೈ. ಶ್ರೀನಿವಾಸರಾವ್, ಯಂ. ಎ., ವಿ. ಸಾಂಬಶಿವ ಐಯ್ಯರ್, ಬಿ. ಎ, ಯಲ್ ಸಿ. ಇ, ಡಿ. ವೆಂಕಟರಾಮಯ್ಯ, ಬಿ ಎ, ಸಿ ಕೃಷ್ಣರಾವ್, ಬಿ. ಎ., ಎಚ್. ವಿ. ಕೃಷ್ಣಯ್ಯ, ಬಿ. ಎ, ಎ. ವೆಂಕಟೇಶೈಯ್ಯಂಗಾರ್, ಬಿ. ಎ., ಬಿ ಆದವರು.

ಅತ್ಯಂತ ವಿಶ್ವಾಸದೊಡನೆ ಈ ಮಂದಿರವನ್ನು ತಮ್ಮ ಪಾದಧೂಳಿಯಿಂದ ಪಾವನಮಾಡಿ, ಅಲ್ಲಿ ಕಾರ್ಯಪ್ರವೇಶಕ್ಕೆ ಅವಕಾಶ ಉಂಟುಮಾಡಿಕೊಡುವ ಮಹಾ ಸ್ವಾಮಿಯವರ ಮಹಿಮೆಯ ಬಲದಿಂದಲೂ, ಶ್ರೇಷ್ಠರಾದ ಗುರು ಹಿರಿಯರ ಆಶೀರ್ವಾದಗಳಿಂದಲೂ ಅಲ್ಪನಾದ ನನ್ನ ಯೋಗ್ಯತೆಯನ್ನು ಮೀರಿರುವ ಈ ಕಾರ್ಯವು ಫಲಿಸಿ, ನನ್ನ ಆಶೆಯು ನೆರವೇರಬೇಕಾಗಿದೆ ಮಹಾಸ್ವಾಮಿ.

ತಮ್ಮ ಮಹಾ ಕಾರ್ಯಗಳ ಮಧ್ಯೆ ಪಾದಸೇವಕನ ಅರಿಕೆಯನ್ನು ಲಾಲಿಸಿ ಇಲ್ಲಿಗೆ ದಯಮಾಡಿ, ನನ್ನನ್ನು ಕೃತಾರ್ಥನಾಗಿ ಮಾಡಿರುವ ಈ ಮಹಾ ಉಪಕಾರವನ್ನೂ, ಅದರಿಂದ ನನಗೆ ಉಂಟಾಗಿರುವ ಮನೋಲ್ಲಾಸವನ್ನೂ ಬಾಯಿಮಾತಿನಿಂದ ಬಣ್ಣಿಸುವುದು ನನಗೆ ಅಸಾಧ್ಯವಾಗಿರುವುದು. ತಮ್ಮ ಪಾದಕಟಾಕ್ಷದಿಂದ ಅಲ್ಪನಾದ ನನಗೆ ಬಹಳ ಸನ್ಮಾನವಾಯಿತು. ನಾನು ಉದ್ದೇಶಮಾಡಿರುವ ಕಾರ್ಯವು ಕೆಲವರಿಗಾದರೂ ಉಪಕಾರವಾಗಿ ಶ್ರೀಹರಿಗೆ ಅರ್ಪಿತವಾದರೆ ನನ್ನ ಹಿರಿಯರೆಲ್ಲರೂ ಪಾವನರಾಗುವರು ಮಹಾಸ್ವಾಮಿ.

ಈ ಪಾಠಶಾಲೆಯನ್ನು ಪ್ರತಿಷ್ಠೆ ಮಾಡಿ, ಶ್ರೀಮನ್ಮಹಾರಾಜರವರು ಅಪ್ಪಣೆ ಕೊಡಿಸಿದ ಅಭಿಪ್ರಾಯವೇನೆಂದರೆ—

ಈ ಕಟ್ಟಡದ ಉದ್ದೇಶವನ್ನೂ ಅವರ ಸ್ವಭಾವವನ್ನೂ ಸಾಹುಕಾರ್ ದೊಡ್ಡಣ್ಣಶೆಟ್ಟರು ಹೇಳಿರುತ್ತಾರೆ. ಇಂಥಾ ಕಾರ್ಯವನ್ನು ಪ್ರಾರಂಭಿಸುವುದರಲ್ಲಿ ನಾವು ತುಂಬಾ ಸಂತೋಷಪಡುವೆವು. ಇದಲ್ಲದೆ ಪ್ರಜಾರಂಜಕರೂ ಧರ್ಮಿಷ್ಠರೂ ನಡಸುವ ಕಾರ್ಯಗಳಿಗೆ ಸಹಾಯ ಮಾಡುವುದು ನಮಗೆ ಸಂತೋಷಕರವಾಗಿಯೂ ನಮ್ಮ ಕರ್ತವ್ಯಾಂಶವಾಗಿಯೂ ಇರುತ್ತದೆ. ಸಾಹುಕಾರ್ ದೊಡ್ಡಣ್ಣನವರು ಇಷ್ಟು ಧಾರಾಳವಾಗಿ ಹಣ ಖರ್ಚು ಮಾಡಿ ಕಟ್ಟಿಸಿರುವ ಈ ಕಟ್ಟಡದಲ್ಲಿ ಬಾಲಕರಿಗೆ ಧರ್ಮಕ್ಕೆ ವಿದ್ಯೆ ಹೇಳಿಕೊಟ್ಟು, ತರುವಾಯ ಉಪಯುಕ್ತವಾದ ಕೈಕಸಬುಗಳನ್ನು ಕಲಿಸುವುದಕ್ಕೆ ಏರ್ಪಾಡು ಮಾಡಿ, ಇದೆಲ್ಲಾ ಶಾಶ್ವತವಾಗಿ ನಡೆಯುವಂತೆ ತುಂಬಾ ಹಣವನ್ನು ಮೂಲಧನವಾಗಿ ಕೊಟ್ಟಿರುತ್ತಾರೆ. ಈಗಿನ ಕಾಲದಲ್ಲಿ ಅಭಿವೃದ್ಧಿಗೆ ಬಂದಿರತಕ್ಕ ರಾಜ್ಯಗಳಲ್ಲೂ ದೇಶಗಳಲ್ಲೂ ಈ ವಿಧವಾದ ವಿದ್ಯೆಯೇ ಅವಶ್ಯವಾದದ್ದೆಂದು ಒಪ್ಪಿ, ಅದರಂತೆ ಏರ್ಪಾಡು ಮಾಡಿಕೊಂಡು ನವನಾಗರಿಕರೆನಿಸಿಕೊಂಡಿದಾರೆ. ಇಂಥಾ ಶ್ರೇಷ್ಠವಾದ ಉದ್ದೇಶವು ನಮ್ಮ ಸಾಹುಕಾರ್ ದೊಡ್ಡಣ್ಣಶೆಟ್ಟರ ಮನಸ್ಸಿನಲ್ಲಿ ನಾಟಿ, ಅವರು ಅದನ್ನು ನೆರವೇರಿಸಿದ್ದಕ್ಕಾಗಿ ನಾವು ತುಂಬಾ ಸಂತೋಷಪಡುತ್ತೇವೆ. ವಯಸ್ಸು ಕಳೆದವರಾದರೂ ಅವರು ಚಿರಕಾಲ ಬದುಕಿದ್ದು ತಮ್ಮಿಂದ ಪ್ರಾರಂಭಿಸಲ್ಪಟ್ಟ ಈ ಕಾರ್ಯವು ಸಾಫಲ್ಯವಾಗಿ ನಡೆಯುವ ಹಾಗೆ ಮೇಲ್ವಿಚಾರಣೆ ನೋಡಿಕೊಳ್ಳುತ್ತಾ ಇರಬೇಕೆಂದು ಹಾರೈಸುತ್ತೇವೆ. ಮೇಲ್ವಿಚಾರಣಾ ಕಮಿಟಿಯ ಮೆಂಬರುಗಳ ಹೆಸರನ್ನು ಕೇಳಿದಾಗಲೇ ಅವರ ಮೂಲಕ ಈ ಪಾಠಶಾಲೆಯು ಚೆನ್ನಾಗಿ ನಡೆಸಲ್ಪಟ್ಟು, ಬೇಗ ಅಭಿವೃದ್ಧಿ ಹೊಂದುವುದೆಂಬ ಭರವಸ ಉಂಟಾಗುತ್ತದೆ. ಎರಡು ವರುಷಗಳ ಕೆಳಗೆ ಸಾಹುಕಾರ್ ಗುಬ್ಬಿ ತೋಟದಪ್ಪನವರು ಬಹು ಧಾರಾಳ ಮಾಡಿ ಕಟ್ಟಿಸಿರುವ ದೊಡ್ಡ ಧರ್ಮಛತ್ರವನ್ನು ಪ್ರತಿಷ್ಠೆ ಮಾಡಿದೆವು. ಅದು ಚಿರಕಾಲ ತೃಪ್ತಿಕರವಾಗಿ ನಡೆಯುವಂತೆ ಫಂಡು ಹಾಕಿರುತ್ತಾರೆ. ಅವರ ಮೇಲ್ಪಂಕ್ತಿಯನ್ನು ಸಾಹುಕಾರ್ ದೊಡ್ಡಣ್ಣಶೆಟ್ಟರು ಹಿಡಿದು ಈ ಮಹಾ ಪರೋಪಕಾರಕವಾದ ಕಾರ್ಯವನ್ನು ಮಾಡಿರುವುದು ಸ್ತೋತ್ರಾರ್ಹವಾಗಿರುತ್ತದೆ. ಈ ಪಾಠಶಾಲೆಯು ಚಿರಕಾಲ ಪ್ರಜೆಗಳಿಗೆ ತುಂಬಾ ಪ್ರಯೋಜನವಾಗಿ ನಡೆಯುತ್ತಾ ಅಭಿವೃದ್ಧಿಗೆ ಬರಲೆಂದು ಹಾರೈಸುವೆವು ಎಂಬುದೇ

ಇಂಡಿಯಾ ದೇಶದ ವೃತ್ತಾಂತಗಳು.

ತಿರುವಾಂಕೂರು (ಅನಂತಶಯನ) ಸಂಸ್ಥಾನದಲ್ಲಿ [illegible] ರಾಜರವರಿಗೆ ಮೇ ತಿಂಗಳ ಮೊದಲನೇ ವಾರದಲ್ಲಿ ಷಷ್ಟ್ಯಬ್ದಪೂರ್ತಿಯ ವಿಧಿಯು ಆಗಬೇಕೆಂದು ಗೊತ್ತಾಗಿ, ಅದಕ್ಕಾಗಿ ಸನ್ನಾಹ ಮಾ[illegible]ದಾರೆ

****

ಹಿಂದಿನ ವಾರ ಕಲ್ಕತ್ತೆಯಲ್ಲಿ ರಾಲಿ ಬ್ರದರ್ಸ್ ಎಂಬ ಕಂಪನಿಯವರ ಭಾರೀ ಕಾರ್ಖಾನೆಗೆ ಬೆಂಕಿ ಬಿದ್ದು ಸುಟ್ಟು ಹೋಯಿತೆಂದು ತಿಳಿಸಿದೆವಷ್ಟೆ. ಇದರಿಂದ ೧೦ ಲಕ್ಷ ರೂಪಾಯಿ ಮಾಲೀಕರಿಗೆ ನಷ್ಟವಾಗಿದೆ ಎಂದು ತಂತೀ ವರ್ತಮಾನ ಹೇಳುತ್ತದೆ.

****

ಇಂಡಿಯಾ ಗವರ್ನಮೆಂಟಿನವರು ಹಿಂದೂಸ್ಥಾನದಲ್ಲಿ ಹೊಸದಾಗಿ ರೈಲ್ ರಸ್ತೆಗಳನ್ನೂ ನೀರಾವರಿ ಕಾಮಗಾರಿಗಳನ್ನೂ ಮಾಡಿಸಬೇಕೆಂದು ಗೊತ್ತುಮಾಡಿ, ಇದಕ್ಕೋಸ್ಕರ ಮುಂದಿನ ವರುಷ ೭॥ ಕೋಟಿ ರೂಪಾಯನ್ನು ಸಾಲ ಮಾಡುವವರಾಗಿದಾರೆ

****

ಹಿಂದುಸ್ಥಾನದ ರಾಜಾದಾಯದಲ್ಲಿ ಈ ವರುಷ ಖರ್ಚು ಕಳೆದು ಸರ್ಕಾರಕ್ಕೆ ೫,೦೮,೪೦,೫೦೦ ರೂಪಾಯಿ ಆದಾಯವಾಗುವುದೆಂದು ಅಂದಾಜು ಕಟ್ಟಿದಾರೆ. ಇದರ ನಿಜಸ್ಥಿತಿಯು ಮುಂದಿನ ವಾರ ಪ್ರಕಟವಾಗುವ ಸರ್ಕಾರಿ ಲೆಕ್ಕಗಳಿಂದ ಗೊತ್ತಾಗುವುದು.

****

ಕೊಚ್ಚಿ ಸಂಸ್ಥಾನಕ್ಕೆ ಸೇರಿದ ತ್ರಿಚ್ಚೂರಿನಲ್ಲಿ ಒಂದು ಬಾಲಿಕಾ ಪಾಠಶಾಲೆ ಇರುತ್ತದೆ. ಈಗ ಅದರಲ್ಲಿ ಬಾಲಿಕೆಯರಿಗೆ ಮೆಟ್ರಿಕ್ಯುಲೇಷನ್ ಪರಿಕ್ಷೆ ವರೆಗೆ ವಿದ್ಯೆ ಹೇಳಿಕೊಡುವಂತೆ ಶಿಬ್ಬಂದಿಯನ್ನು ಹೆಚ್ಚು ಮಾಡಿದಾರೆ. ಮಿಸ್ ಗುಂತೂರ್, ಬಿ ಎ., ಎಲ್. ಟಿ ಎಂಬಾಕೆಯು ಸದ್ಯ ಈ ಸ್ಕೂಲಿನ ಮುಖ್ಯ ಉಪಾಧ್ಯಾಯಿನಿಯಾಗಿರುವಳು.

****

ಭಾವಲ್ಪುರದ ನವಾಬರವರು ತಮ್ಮ ಜ್ಯೇಷ್ಠ ಪುತ್ರರಾದ ಯುವರಾಜರ ಹೆಸರಿನ ಮೇಲೆ ಒಂದು ಹೊಸ ಪಟ್ಟಣವನ್ನು ಕಟ್ಟ ಆರಂಭಿಸಿದಾರೆ. ಈ ಪಟ್ಟಣವು ವ್ಯಾಪಾರಕ್ಕೆ ಮಧ್ಯ ರಾಷ್ಟ್ರವಾಗಿಯೂ, ರೈಲ್ವೆ ಸ್ಟೇಷನ್ ಉಳ್ಳದ್ದಾಗಿಯೂ ಇರೋಣದರಿಂದ ಬೇಗನೆ ಆಬಾದಿಗೆ ಬರುವುದೆಂದು ಹೇಳುತ್ತಾರೆ. ಅಸ್ತಿಭಾರ ಹಾಕಿದ್ದಾಯಿತು. ಪ್ರಜೆಗಳು ಸಾವಿರಾರು ಮನೆಗಳನ್ನು ಕಟ್ಟುತ್ತಿದಾರೆ

****

ಅಫ್ಘಾನಿಸ್ಥಾನದ ಸೈನ್ಯಾಧಿಪತಿಯಾಗಿದ್ದ ಜನರಲ್ ಗುಲಾಂ ಹುಸ್ಸೇನ್ ಎಂಬಾತನು ಕಾಬುಲಿಯಾಗಿ ಜಲಾಲಾಬಾದಿನಲ್ಲಿದ್ದನು. ಅಮೀರರ ಹುಕುಂ ಪ್ರಕಾರ ಆತನನ್ನು ಕೆಲಸದಿಂದ ವಜಾಮಾಡಿದರು. ಆತನ ಆಸ್ತಿಯನ್ನೆಲ್ಲಾ ಅಮೀರರು ತಮ್ಮ ಖಜಾನೆಗೆ ಸೇರಿಸಿಕೊಂಡರು. ಈ ವರ್ತಮಾನವನ್ನು ಆತನು ಕೇಳಿ ತುಂಬಾ ದುಃಖಪಟ್ಟು, ಹಾಗೇ ಕಳೆದವಾರ ಕಾಲವಾದನೆಂದು ತಂತೀ ವರ್ತಮಾನ ಬಂದಿದೆ.

****

ಕೊಚ್ಚಿ ಸಂಸ್ಥಾನದಲ್ಲಿ ಬ್ರಿಟಿಷ್ ರೆಸಿಡೆಂಟರು ವಾಸಮಾಡುವ ಬಂಗಲೆಯ ಉಸ್ತುವಾರಿಗೆ ಲಾಗಾಯತಿನಿಂದಲೂ ಮಹಿಯಾನಾ ೨೩೦ ರೂಪಾಯಿ ಖರ್ಚಾಗಿ ಸಿಬ್ಬಂದಿಯನ್ನು ಇಟ್ಟಿದ್ದರು. ಈ ಸಿಬ್ಬಂದಿಯನ್ನು ವಜಾ ಮಾಡಬೇಕೆಂತಲೂ, ಬ್ರಿಟಿಷ್ ರೆಸಿಡೆಂಟರು ಅಲ್ಲಿ ಯಾವಾಗ ಹೋಗಿ ಇಳುಕೊಂಡರೂ ಅದಕ್ಕೆ ತಕ್ಕ ಹಾಗೆ ಅವರು ಬಾಡಿಗೆ ಕೊಡಬೇಕೆಂತಲೂ ಮದರಾಸ್ ಸರ್ಕಾರದವರು ಹುಕುಂ ಕೊಟ್ಟಿದಾರೆ

****

ಕಳೆದ ವಾರ ಹಿಂದುಸ್ಥಾನದಲ್ಲಿ ೧೦,೬೭೫ ಜನರಿಗೆ ಪ್ಲೇಗ್ ತಗಲಿತು; ೯,೦೫೮ ಜನರು ಕಾಲವಾದರು. ಬೇರೆ ಬೇರೆ ಆಧಿಪತ್ಯಗಳ ಸಂಖ್ಯೆ ಎಷ್ಟೆಂದರೆ—ಬಂಗಾಳ ೨,೬೨೩, ಸಂಯುಕ್ತ ಪ್ರತ್ಯ ೧,೮೯೭, ಪಂಜಾಬ್ ೧,೪೦೩, ಬೊಂಬಾಯಿ ೧,೩೬೨; ಮಧ್ಯಪ್ರಾಂತ್ಯಗಳು ೮೬೩, ಬರ್ಮಾ ೩೦೨, ಹೈದರಾಬಾದ್ ಸಂಸ್ಥಾನ ೧೧೨; ಮೈಸೂರು ೮೨, ಕಾಶ್ಮೀರ ೫೬; ಮಧ್ಯ ಇಂಡಿಯ ೭೯, ವಾಯುವ್ಯ ಆಧಿಪತ್ಯ ೩೫, ಮದರಾಸ್ ಆಧಿಪತ್ಯ ೩೦

****

ಮದರಾಸ್ ಆಧಿಪತ್ಯದ ಹೊಸ ಗವರ್ನರಾದ ಸರ್ ಆರ್ಥರ್ ಲಾಲಿಯವರು ಪರಿವಾರ ಸಹಿತ ಈ ತಿಂಗಳ ೨೮ ನೆ ತಾ ಬುಧವಾರ ಬೆಳಿಗ್ಗೆ ಮದರಾಸಿಗೆ ಬಂದು, ಗವರ್ನರ್ ಪದವಿಯ ಛಾರ್ಜನ್ನು ವಹಿಸಿಕೊಳ್ಳುವವರಾಗಿದಾರೆ.

****

ಹಿಂದುಸ್ಥಾನದ ವೈಸ್‌ರಾಯಿ ಲಾರ್ಡ್ ಮಿಂಟೋರವರು ತಿಂಗಳ ಕೊನೆಯಲ್ಲಿ ಕಲ್ಕತ್ತೆಯಿಂದ ಹೊರಟು, ಲಕ್ನೋ, ಆಗ್ರ ಪಟ್ಟಣಗಳಿಗೆ ದಯಮಾಡಿ, ಅಲ್ಲಿಂದ ಅಜ್ಮೀರದಲ್ಲಿ ಕ್ಷಾಮ ನಿವಾರಣೆಯ ಏರ್ಪಾಡುಗಳನ್ನು ಪರಾಂಬರಿಸಿಕೊಂಡು ಡೆಹಲಿ ನಗರಕ್ಕೆ ಬಂದು ಅಲ್ಲಿ ನಿಕಾಲ್ಸನರ ಮೆಮೋರಿಯಲ್ಲನ್ನು ಪ್ರತಿಷ್ಠೆ ಮಾಡಿ, ನೌಷೇರಾಕ್ಕೆ ಹೋಗಿ ಸೈನಿಕರ ಸಾಹಸಕಾರ್ಯಗಳನ್ನು ಪರಾಂಬರಿಸಿ, ಪಿಷಾವರ್, ಮಾಲಾಖಂಡ್ ಪಟ್ಟಣಗಳ ಮೇಲೆ ಸಂಚಾರಮಾಡಿಕೊಂಡು, ಏಪ್ರಿಲ್ ೧೯ಕ್ಕೆ ಸಿಮ್ಲಾ ಪಟ್ಟಣವನ್ನು ತಲಪುವವರಾಗಿದಾರೆ

****

ಹಿಮಾಚಲ ಪರ್ವತದ ತಪ್ಪಲಲ್ಲಿರುವ ಬಿಷಾಹರ್ ಎಂಬ ಸಣ್ಣ ಸಂಸ್ಥಾನದಲ್ಲಿ ಕಳೆದ ಫೆಬ್ರವರಿ ೨೮ ನೆ ತಾರೀಖಿನ ರಾತ್ರಿ ೧೨ ಗಂಟೆ ಹೊತ್ತಿನಲ್ಲಿ [illegible] ಭೂಕಂಪವಾಯಿತು. ಇಬ್ಬರು ಮೃತಪಟ್ಟರೆಂತಲೂ ೨೫ ಮಂದಿಗೆ ಗಾಯಗಳಾದವೆಂತಲೂ ಪ್ರಕಟವಾಗಿದೆ. ಸರ್ಕಾರದ ಇಂಜಿನಿಯರ್ ಕಛೇರಿ ಕಟ್ಟಡಗಳೂ, ಪೋಸ್ಟ್ ಆಫೀಸ್, ಪೊಲೀಸ್ ಠಾಣಾ ಮೊದಲಾದ ಬಂಗಲೆಗಳೂ ಉರುಳಿಹೋದವು. ರಾಂಪುರ[illegible] ಕೆಲವು ಮನೆಗಳು ನಾಶವಾದವು. ಅದರ ಜನರಿಗೆ ಪೆಟ್ಟು ಬಿದ್ದು ಇಬ್ಬರು ತುಂಬಾ ಗಾಯಪಟ್ಟಿದಾರೆ

****

ಪ್ರಿನ್ಸ್ ಆಫ್ ವೇಲ್ಸ್ ರವರೂ ಅವರ ಪತ್ನಿಯವರೂ ರೈಲ್ವೆ ಪ್ರಯಾಣದಲ್ಲಿ [illegible] ಗಳನ್ನು ಎಳೆದುಕೊಂಡು ಹೋಗುವ ಎಂಜಿನ್ ಎಂಬ ಮುಂದಿನ [illegible]ಲ್ಲಿ ಕೂತುಕೊಳ್ಳಬೇಕೆಂದು ಕುತೂಹಲಪಟ್ಟರು. ಅದರಂತೆಯೇ ಅವರನ್ನು ಕಳೆದವಾರ [illegible] ಎಂಜಿನ್ನಿನಲ್ಲಿ ಕೂರಿಸಿದರು. ಅವರು ಒಂದು ಗಂಟೆಯ ಕಾಲ ಅದರಲ್ಲಿ ಕುಳಿತು ಆ ಬೆಟ್ಟ ಮಾರ್ಗವನ್ನೂ ಸುತ್ತಲೂ ಇರುವ ರಮ್ಯವಾದ ಪ್ರದೇಶಗಳನ್ನೂ ನೋಡಿ ತುಂಬಾ ಸಂತೋಷಪಟ್ಟರು. ದಾರಿಗೆ [illegible] ಸುರಿಯಿತು. ಆದರೂ ಒಂದು ಗಂಟೆಯ ಹೊತ್ತು ಎಂಜಿನ್ನಿನಲ್ಲಿ ಕೂತಿರುವ ನೇತ್ರಾನಂದವನ್ನು ಹೊಂದಿದರು.

****

ಬೆಲ್ಗಾಮದಲ್ಲಿರುವ ಪಂಜಾಬಿ ಸಿಪಾಯಿಗಳು ಈಚೆಗೆ ಕೆಲವು ಕೆಟ್ಟ ಕೃತ್ಯಗಳನ್ನು ನಡಿಸಿ, ಅಪಖ್ಯಾತಿಯನ್ನು ಪಡೆದುಕೊಂಡಿದಾರೆ. ಅವರಲ್ಲಿ ಕೆಲವರು ಸೇರಿ ಒಂದು ದಿನ ಸಮರಾತ್ರಿಯಲ್ಲಿ ಮೆ॥ ಮಾಟಾವಕೇಲ್ ಎಂಬ ಹಿಂದೂವಿನ ಮನೆಗೆ ನುಗ್ಗಿದರು. ಆದರೆ ವಕೀಲನು ಕೈಲಿ ಕತ್ತಿ ಹಿಡಿದು ಬಾಗಿಲಲ್ಲಿ ನಿಂತು, ಮೊದಲು ನುಗ್ಗಿದ ಸಿಪಾಯಿಯನ್ನು ಕೊಂದನು. ಕೂಡಲೇ ಉಳಿದವರೆಲ್ಲಾ ಹಿಂದಕ್ಕೆ ಓಡಿ ಹೋದರು. ಅದರ ಮೇಲೆ ಆ ಪಟಾಲಮಿಂದ ಸಿಪಾಯಿಯ ಹೇಳಿಕೆ ಪ್ರಕಾರ ೧೧ ಮಂದಿ ಸಿಪಾಯಿಗಳು ಸಿಕ್ಕಿಬಿದ್ದರು. ಸೆಷನ್ಸ್ ಜಡ್ಜರು ಅವರನ್ನೆಲ್ಲಾ ದರ್ಯಾಫ್ತು ಮಾಡಿ, ೯ ಮಂದಿಗೆ ತಲಾ ಏಳೇಳು ವರುಷಗಳ ಕಠಿಣ ಸಜಾ ವಿಧಿಸಿರುತ್ತಾರೆ

****

ಮದರಾಸ್ ಪಟ್ಟಣದಲ್ಲಿ ಕೆಲವು ಹಿಂದೂ ದೊಡ್ಡ ಮನುಷ್ಯರು ಸೇರಿ ಒಂದು ಸಂಸ್ಕೃತ ವಿದ್ಯಾಶಾಲೆಯನ್ನು ಇಟ್ಟು ನಡಸುತ್ತಿದಾರೆ. ಈ ವಿದ್ಯಾಶಾಲೆಯ ಮೂಲಧನಕ್ಕೆ ಹೈ ಕೋರ್ಟ್ ವಕೀಲರಾದ ಮೆ॥ ವಿ ಕೃಷ್ಣಸ್ವಾಮಿ ಐಯ್ಯರವರು ೨೫,೦೦೦ ರೂಪಾಯಿ ಕೊಟ್ಟಿರುವರು. ಇತರರೂ ದ್ರವ್ಯ ಸಹಾಯ ಮಾಡುವುದಾಗಿ ಮಾತುಕೊಟ್ಟಿದಾರೆ. ಈಗ ೨೦ ವಿದ್ಯಾರ್ಥಿಗಳು ಈ ಪಾಠಶಾಲೆಯಲ್ಲೇ ಭೋಜನ ಮಾಡಿಕೊಂಡು ವೇದ ಶಾಸ್ತ್ರ ವೇದಾಂತಗಳನ್ನೂ ಇಂಗ್ಲೀಷನ್ನೂ ಕಲಿಯುತ್ತಿರುವರು. ಇವರಿಗಾಗಿ ಧರ್ಮಸತ್ರವು ಏರ್ಪಾಡಾಗಿದೆ. ಮೆ॥ ಎಸ್. ಕುಪ್ಪುಸ್ವಾಮಿ ಶಾಸ್ತ್ರಿ, ಎಂ. ಎ. ಯವರು ಈ ಪಾಠಶಾಲೆಯ ಅಧ್ಯಕ್ಷ (ಪ್ರಿನ್ಸಿಪಲ್) ರಾಗಿರುವರು.

****

ಅಂಬಾಲಾ ಪಟ್ಟಣದಲ್ಲಿ ಮೊಹರಂ ಕಡೇ ದಿನ ಹಿಂದು ಮುಸಲ್ಮಾನರಿಗೆ ದೊಂಬಿ ಜಗಳವಾಯಿತು. ಮುಸಲ್ಮಾನರು ಲೈಸೆನ್ಸು ಪಡೆಯದೇನೇ ಹಿಂದೂಗಳ ಬೀದಿಯಲ್ಲಿ ತಮ್ಮ ತಾಬೂತುಗಳನ್ನು ಹಿಡಿದು ಮೆರವಣಿಗೆ ಮಾಡಿಕೊಂಡು ಹೋದರು. ಜಗಳ ಪ್ರಾರಂಭವಾಯಿತು. ಪೋಲೀಸಿನವರು ಮೊದಲೇ ಇದರ ಹಿವಾರೆಯನ್ನು ತಿಳಿದಿದ್ದು ತಕ್ಕ ಸಲಕರಣೆಗಳನ್ನು ಒದಗಿಸಿಕೊಂಡಿದ್ದರು. ಇಲ್ಲವಾದರೆ ಅನೇಕರ ತಲೆಗಳು ಒಡೆದು ರಕ್ತಪ್ರವಾಹ ಹರಿಯುತ್ತಿತ್ತೆನ್ನುವುದಕ್ಕೆ ಅಡ್ಡಿಯಿಲ್ಲ. ಸೈನಿಕರೂ ಪೋಲೀಸಿನವರೂ ತುಂಬಾ ಸಾಹಸಮಾಡಿ, ದೊಂಬಿ ಜಗಳವನ್ನು ನಿಲ್ಲಿಸಿ, ೧೯ ಮಂದಿ ಮಹಮದೀಯರನ್ನು ಹಿಡಿದು ಲಾಕಪ್ಪಿನಲ್ಲಿಟ್ಟಿರು. ಈಗ ಇವರ ವಿಚಾರಣೆ ನಡೆಯುತ್ತಿದೆ.

****

ಪಿಷಾವರ್ ಪಟ್ಟಣದ ಬಳಿ ಲಂಡಾಯಿ ಹೊಳೆಯನ್ನು ದಾಟುತ್ತಿದ್ದ ಮುಳುಗಿಕೊಂಡ ಲೆಫ್ಟಿನೆಂಟ್ ರಾಬರ್ಟ್‌ಸನ್ ಎಂಬ ಸೈನ್ಯದ ಉದ್ಯೋಗಸ್ಥನನ್ನು ದಫೇದಾರ್ ದಿಲ್ವರ್ ಖಾನ್ ಎಂಬ ಸಿಪಾಯಿಯು ಈಜುಬಿದ್ದು ಎತ್ತಿ ಬದುಕಿಸಿದ್ದೂ, ತರುವಾಯ ತಾನೇ ಸುಳಿಯಲ್ಲಿ ಸಿಕ್ಕಿ ಮೃತಪಟ್ಟದ್ದೂ ಪ್ರಿನ್ಸ್ ಆಫ್ ವೇಲ್ಸ್‌ರವರಿಗೆ ತಿಳಿದಾಗ ಅವ

...ದಲ್ಲಿದ್ದ ಸ್ವಾಮಿಭಕ್ತಿ ಪ್ರೀತಿಗಳನ್ನು ಕಂಡು ಆತನ ಹೆಂ...೧೦ ರೂಪಾಯಿ ಇನಾಮು ದಯಪಾಲಿಸಿದರಷ್ಟೆ ಈಚೆಗ... ಹೆಂಡತಿಗೆ ಅಮರಣಾಂತವೂ ಇಂಡಿಯಾ ಸರ್ಕಾರ... ಪೆನ್ಶನ್ ಕೊಡಬೇಕೆಂದು ಸೈನ್ಯಾಧಿಪತಿಗೆ ಶಿಫಾರಸು ಮಾಡಿ... ಸೈನ್ಯಾಧಿಪತಿಯು ಅದೇ ಪ್ರಕಾರ ಆಕೆಗೆ ಪೆನ್ಶನ್ ಕೊಡುವ... ದಯಪಾಲಿಸಿರುತ್ತಾರೆ

****

...ದುಸ್ಥಾನದಲ್ಲಿ ಕಳೆದ ವಾರದ ಕಾಲಸ್ಥಿತಿಯ ರಿಪೋರ್ಟಿನಿಂ... ಇಂಡಿಯಾ, ಮಧ್ಯ ಪ್ರಾಂತ್ಯಗಳು, ರಾಜಪುಟಾನ, ಹೈದರಾ... ಬೊಂಬಾಯಿ ಮದರಾಸು, ಈ ಪ್ರಾಂತ್ಯಗಳಲ್ಲಿ ಮಳೆ ಬರಲಿ... ಸೈರುಗಳು ಒಣಗುತ್ತಾ ಬಂದಿವೆ ಎಂತಲೂ, ಇತರ ಕಡೆ... ಬೆಳೆಗಳು ತೃಪ್ತಿಕರವಾಗಿಲ್ಲವೆಂತಲೂ ತಿಳಿದುಬರುತ್ತದೆ... ಜನರ ... ಜೀವನ ಮಾತ್ರ ... ದಿನೇ ದಿನೇ ಹೆಚ್ಚುತ್ತಾ ಬಂದಿದೆ ಕಳೆದ ವಾರ ಸಂಯು... ಪ್ರಾಂತ್ಯಗಳಲ್ಲಿ ೧೬೭೦೦೦ ಪ್ರಜೆಗಳೂ, ಪಂಜಾಬಿನಲ್ಲಿ ೯,೯೫೩... ರಾಜಪುಟಾನಾದಲ್ಲಿ ೧,೦೯,೦೦೦ ಜನರೂ, ಮಧ್ಯ ಇಂಡಿಯಾ... ೭೭,೦೦೦ ಜನರೂ ... ಸಂಸ್ಥಾನದಲ್ಲಿ ೧೯,೯೦೦ ಜ... ಕ್ಷಾಮಪೀಡಿತರಾಗಿ ಸರ್ಕಾರದವರ ಪೋಷಣೆಯಲ್ಲಿರುತ್ತಾರೆ

****

...ದಸ್ಥಾನದ ವಾಯವ್ಯ ಸರಹದ್ದಿನಲ್ಲಿರುವ ವಜೀರಿಗಳೆಂಬ ಜ... ತಿಂಗಳಲ್ಲಿ ಮೂರು ಮಂದಿ ಇಂಗ್ಲಿಷ್ ಉದ್ಯೋಗಸ್ಥರನ್ನು... ಕೊಂದುಹಾಕಿದರು ಕೊಲೆಗಾರರನ್ನು ಕಂಡುಹಿಡಿ... ಇಂಡಿಯಾ ಗವರ್ನಮೆಂಟಿನವರು ಬಹಳ ಪ್ರಯತ್ನಪಟ್ಟ... ಅವರು ಸಿಕ್ಕಲಿಲ್ಲ ಅದ್ದರಿಂದ ಆ ವಜೀರಿ ಜನರಿಗೆ... ಇಂಡಿಯಾ ಗವರ್ನಮೆಂಟಿನಿಂದ ಸಲ್ಲುತ್ತಿರುವ... ಸಂಬಳ ... ನಿಲ್ಲಿಸಿದರು ಈ... ನಡೆದದ್ದಕ್ಕಾಗಿ ಆ ಜನರಿಂದ ... ೦೦೦ ರೂಪಾಯಿ... ಕೇಳಿಕೊಂಡಿತಲೂ ... ಕೊಟ್ಟು ಆ ಪ್ರಾಂತ್ಯ... ಇದನ್ನು ಕೇಳಿ ಆ ವಜೀರಿ ಜನರೆಲ್ಲಾ ... ಕೊಲೆಗಾರರನ್ನು ಹುಡುಕಿ, ತಮ್ಮ ಪ್ರತಿನಿಧಿಗಳ ಮೂಲಕ... ತಂದು ಗವರ್ನಮೆಂಟಿನವರಿಗೆ ಒಪ್ಪಿ... ಸಿದ್ದರೆಂದು ಮಾತುಕೊಟ್ಟಿದ್ದಾರೆ

****

...ನಾಗಪುರ ... ರೈಲ್ವೆಯಲ್ಲಿ ಸಿ ನಿ ಎಂಬ ಒಂದು ... ಅಲ್ಲಿಂದ ಐವತ್ತು ಮೈಲಿ ದೂರದಲ್ಲಿರುವ ... ಬೆಟ್ಟಗಳಲ್ಲಿ ಬಹು ಉತ್ಕೃಷ್ಟವಾದ ಕಬ್ಬಿಣ ಅದಿರು... ಪ್ರತ್ಯಕ್ಷವೆಂದು ... ಕಂಡುಹಿಡಿದಿದ್ದಾರೆ ... ಕಂಪೆನಿಯವರು ಸಿನಿ ಎಂಬ ಸ್ಥಳದಲ್ಲಿ ಉಕ್ಕಿನ ರೈಲ್ ಕಂಬಿ ಮೊದಲಾದ ಪದಾರ್ಥಗಳನ್ನು ತಯಾರುಮಾಡುವುದಕ್ಕೆ ಒಂದು ಕಾರ್ಖಾನೆಯನ್ನು ಇಟ್ಟು ನಡಸಬೇಕೆಂದು ತೀರ್ಮಾನಮಾಡಿ... ಈ ಕಂಪೆನಿಯ ಮೂಲಧನ ಎರಡು ಕೋಟಿ ರೂಪಾಯಿ... ಪಾಲುದಾರರು ಲಂಡನ್ ಬೊಂಬಾಯಿ, ಕಲ್ಕತ್ತಾ ಪಟ್ಟಣ... ಟಿಕಿಮಾಡು, ... ದವರಾಗಿದ್ದಾರೆ ಈ ಕಾರ್ಖಾನೆ... ಒಂದು ವರುಷಕ್ಕೆ ೧೨೦೦೦ ಟನ್ನುಗಳ ಕಬ್ಬಿಣವನ್ನು ತೆಗೆದು... ೩೦,೦೦೦ ಟನ್ನುಗಳ ಉಕ್ಕು ತಯಾರುಮಾಡುವರು ಗವರ್ನ... ಮೆಂಟಿನವರು ಈ ಕಂಪೆನಿಯವರ ಪ್ರೋತ್ಸಾಹಕ್ಕಾಗಿ ಸಿನಿಯಿಂದ ... ತನಕ ರೈಲ ಹಾಕಿಕೊಡುತ್ತಾರೆ ಈ ಕಾರ್ಖಾನೆಗೆ ಬೇಕಾ... ಕಲ್ಲಿದ್ದಲೂ ಸುಣ್ಣಕಲ್ಲೂ ಅಲ್ಲಿಗೆ ಸಮೀಪದಲ್ಲೇ ವಿಶೇಷ... ದೊರಕುವವು ಇಂಥಾ ಭಾರೀ ಕಾರ್ಖಾನೆಗೆ ಬೇಕಾಗುವ... ಸಾಮಗ್ರಿಗಳೆಲ್ಲಾ ಈ ವರುಷವೂ ಮುಂದಿನ ವರುಷವೂ ... ದಿಂದ ಬಂದಿಳಿಯುವವು ಮುಂದಿನವರುಷದ ಆಖೈರಿನಲ್ಲಿ ... ನೆಯ ಕೆಲಸ ಆರಂಭವಾಗುವಂತೆ ಹೇಳುತ್ತಾರೆ.

****

...ಟ್ಟಿಗೆ ಇಂಡಿಯಾ ಗವರ್ನಮೆಂಟಿನವರು ಸೈನ್ಯವನ್ನು ಕಳು... ಚೀನ ಅಧಿಕಾರಿಗಳ ಸಂಗಡ ಕರಾರುಮಾಡಿಕೊಂಡು ಬಂದರ... ಚೀನಾ ಸರ್ಕಾರದವರು ಆ ಕರಾರಿನ ಪ್ರಕಾರ ಇಂಡಿಯಾ ಸ... ೬೯ ಲಕ್ಷ ರೂಪಾಯಿ ಸೈನ್ಯದ ಖರ್ಚು ಕೊಡುವುದಾಗಿ... ದರು ಈ ಹಣವನ್ನು ಮೂರು ಕಂತುಗಳಲ್ಲಿ ಕೊಡು... ಮೊದಲನೇ ಕಂತು ಕಳೆದ ಜನವರಿಯಲ್ಲೇ ಪಾವತಿ ಆ... ಕರಾರಾಗಿತ್ತು ಆದರೆ ಜನವರಿಯಲ್ಲಿ ಅವರು ಮೊದ... ಕಂತನ್ನು ತಂದುಕೊಡಲಿಲ್ಲ ಈಗ ಟಿಬೆಟ್ಟಿನ ಸಾರ್ಜಂಗ್ ... ಅಧಿಕಾರಿಯು ೪೦ ಮಂದಿ ಪರಿವಾರದವರೊಡನೆ ಕೂಡಿ, ... ದಿನಗಳ ತನಕ ಕುದುರೆ ಸವಾರಿಮಾಡಿಕೊಂಡು, ಕಳೆದ ... ಕಲ್ಕತ್ತಾ ಪಟ್ಟಣಕ್ಕೆ ಬಂದು ಗವರ್ನಮೆಂಟಿನವರ ಸಂಗಡ ಆ ... ವಿಚಾರವಾಗಿ ಮಾತನಾಡುತ್ತಿದ್ದಾನೆ ಈ ಹಣವೆಲ್ಲಾ ಪೂರ್ತ... ಆಗುವ ತನಕ ಚುಂಬಿ ಕಣಿವೆಯನ್ನು ಇಂಡಿಯಾ ಗವರ್ನ... ಮೆಂಟಿನವರು ತಮ್ಮ ಸ್ವಾಧೀನದಲ್ಲೇ ಇಟ್ಟುಕೊಂಡಿರಬೇಕೆಂದು ಕ... ರುವುದನ್ನು ನೋಡಿ, ಚೀನಾ ಸರ್ಕಾರದವರು ಈ ಕಂತುಗಳ... ಕೊಟ್ಟುಬಿಟ್ಟು ಆ ಕಣಿವೆಯನ್ನು ಇಂಗ್ಲಿಷರ ವಶದಿಂದ ಬಿಡಿಸಿ... ಬೇಕೆಂದು ಪ್ರಯತ್ನಪಟ್ಟು, ಈಗ ಈ ಅಧಿಕಾರಿಯನ್ನು ... ಕಳುಹಿಸಿರುವಂತೆ ಪ್ರಕಟವಾಗಿದೆ ಆದರೆ ಈಗ ಬಂದಿರ... ಸರಿಯಾದ ಸರ್ಟಿಫಿಕೇಟುಗಳನ್ನು ತಂದಿಲ್ಲವಾಗಿ ಇಂಡಿ... ಗವರ್ನಮೆಂಟಿನವರು ಈತನ ಮಾತನ್ನು ಲಾಲಿಸುವವರಾಗಿಲ್ಲ... ಪ್ರಕಟವಾಗಿದೆ

****

...ಟಾಲಾ ಪಟ್ಟಣಕ್ಕೆ ೪೦ ಮೈಲಿ ದೂರದಲ್ಲಿರುವ ಯೋಗೀದ್ರಿ... ಯಲ್ಲಿ ಒಂದು ಭಯಂಕರವಾದ ಮಾನುಷ ರಕ್ತಸ್ನಾನವು... ಅದರ ವಿವರವೇನೆಂದರೆ—ಐಶ್ವರ್ಯವಂತನಾದ ಒಬ್ಬ... ಸಾಹುಕಾರನಿಗೆ ಪುತ್ರಸಂತಾನವಿಲ್ಲದೆ ಬಹಳ ವ್ಯಾಕುಲ ಉಂಟಾಗಿತ್ತು ಅವನಿಗಾದ ಮಕ್ಕಳೆಲ್ಲಾ ಸ್ವಲ್ಪ ಕಾಲ ಬೆಳೆದು ಸತ್ತುಹೋದವು ಮಕ್ಕಳು ಫಲವಾಗಬೇಕೆಂದು ಅವನೂ ಅವನ ಹೆಂಡತಿಯೂ ಏನೇನೋ ಮಾಡುತ್ತಿದ್ದರು ಕಡೆಗೆ ಹೆಂಡತಿಯು ಗರ್ಭಿಣಿಯಾದಳು ಈ ಮಗುವೂ ಸತ್ತುಹೋದೀತೇನೋ ಎಂದು ಸಾಹುಕಾರನು ಚಿಂತೆಪಟ್ಟು ಅದನ್ನಾದರೂ ಉಳುಹಿಸಿಕೊಳ್ಳಬೇಕೆಂದು ಸಾಹಸಮಾಡುತ್ತಿದ್ದನು ಅಷ್ಟರಲ್ಲಿ ಯಾವನೋ ಒಬ್ಬ ಮೋಸಗಾರನು ಯೋಗಿಯಾಗಿ ಅವನ ಮನೆಗೆ ಹೋಗಿ ಸಾಹುಕಾರನ ಮನೋವ್ಯಥೆಯನ್ನು ಕೇಳಿದವನಾಗಿ ಸಾಹುಕಾರನನ್ನು ಕುರಿತು—ನಿನ್ನ ಹೆಂಡತಿ ಹೆರುವುದರೊಳಗಾಗಿ ಮಾನುಷ ರಕ್ತದಿಂದ ಅವಳಿಗೆ ಸ್ನಾನಮಾಡಿಸು, ಹುಟ್ಟುವ ಮಗುವು ಬದುಕಿಕೊಳ್ಳುತ್ತದೆ ಎಂದು ಹೇಳಿ ಹೋದನು ಇಂಥಾ ದುಷ್ಟವೂ ಹೇಯವೂ ಆದ ಮಾತಿನಲ್ಲಿ ಆ ಸಾಹುಕಾರನು ನಂಬಿಕೆಯಿಟ್ಟು, ಮೂವರು ಜನರನ್ನು ತನ್ನ ಅಂತರಂಗಕ್ಕೆ ಸೇರಿಸಿಕೊಂಡು, ತಾನು ತನ್ನ ಹೆಂಡತಿ ಆ ಮೂವರು ಮಂದಿ ಕೂಡಿ ಉಪಾಯ ಮಾಡಿ, ನೆರಮನೆಯಲ್ಲಿದ್ದ ೩ ವರುಷದ ಒಬ್ಬ ಹುಡುಗನನ್ನು ಹಿಡಿದುಕೊಂಡು ಹೋಗಿ ಮೊದಲು ಅವನ ಕತ್ತು ಕತ್ತರಿಸಿಹಾಕಿ, ತರುವಾಯ ಅಂಗಾಂಗಗಳನ್ನೆಲ್ಲಾ ... ಸುರಿದ ರಕ್ತವನ್ನು ಕೂಡಿಸಿ, ಆ ಹೆಂಡತಿಗೆ ಸ್ನಾನಮಾಡಿಸಿದರು ಈ ಐದು ಮಂದಿಯ ಮೇಲೂ ಮೊಕದ್ದಮೆ ಆಯಿತು ಅಂಬಾಲಾ ಸೆಷನ್ಸ್ ಜಡ್ಜರು ಆ ಸಾಹುಕಾರನಿಗೂ ಇನ್ನಿಬ್ಬರಿಗೂ ಫಾಸೀ ಸಜವನ್ನೂ ಅವನ ಹೆಂಡತಿಗೂ ಇನ್ನೊಬ್ಬನಿಗೂ ಕರಿನೀರು ಸಜವನ್ನೂ ವಿಧಿಸಿರುತ್ತಾರೆ ಮೊಕದ್ದಮೆ ನಡೆಯುತ್ತಿರುವಾಗ್ಗೆ ಸಾಹುಕಾರನ ಹೆಂಡತಿಯು ಲಾಕಪ್ಪಿನಲ್ಲಿ ಒಂದು ಮಗುವನ್ನು ಹೆತ್ತಳೆಂದು ತಿಳಿದುಬಂದಿದೆ.

ವಿದೇಶ ವರ್ತಮಾನಗಳು.

ಜರ್ಮನಿ ಚಕ್ರವರ್ತಿ ... ಪೀಡಿತರಾದ ಪ್ರಜೆಗಳಿಗೆ ... ಚಕ್ರವರ್ತಿನಿಯವರು ಒಂದು ಲಕ್ಷ ದ್ರವ್ಯವನ್ನು ಧರ್ಮಾರ್ಥವಾಗಿ ಕಳುಹಿಸಿದ್ದಾರೆ

****

ಬ್ರಿಟಿಷ್ ... ಒಂದು ಹಡಗು ನೋವಾಸ್ಕೋಷಿಯಾದ ... ಮುಳುಗಿಹೋಯಿತೆಂತಲೂ ಅದರಲ್ಲಿದ್ದ ೨೯ ಮಂದಿ ಸಮುದ್ರದ ಪಾಲಾದರೆಂತಲೂ ತಂತಿ ವರ್ತಮಾನ ಬಂದಿದೆ

****

... ಪೆಸಿಫಿಕ್ ಸಾಗರದ ... ದ್ವೀಪಗಳಲ್ಲಿ ಪರ್ವತಗಳಲ್ಲಿ ಅಕಸ್ಮಾತ್ತಾಗಿ ಅಗ್ನಿಕಾರುವದಕ್ಕಾರಂಭಿಸಿದೆ ಇದರ ದೆಸೆಯಿಂದ ಇದುವರೆಗೆ ... ಗ್ರಾಮಗಳು ನಾಶವಾದವೆಂದು ತಂತೀ ವರ್ತಮಾನ ಬಂದಿದೆ

****

ವಿಲಾಯಿತಿಗೆ ಸೇರಿದ ಪ್ಲೈಮತ್ ಪಟ್ಟಣದಲ್ಲಿ ಐವರ್ ... ಎಂಬ ... ದ್ದ ಮನುಷ್ಯನು ಅಪುತ್ರವಂತನಾಗಿ ಕಾಲವಾದನು ಈತನು ತನ್ನ ಆಸ್ತಿಯನ್ನೆಲ್ಲಾ ಅಂದರೆ ಸುಮಾರು ೪೫ ಲಕ್ಷ ರೂಪಾಯಿಯನ್ನು ... ವಿನಿಯೋಗಿಸಬೇಕೆಂದು ಉಯಿಲು ಬರೆದಿರುತ್ತಾನೆ

****

ಲಂಡನ್ ಪಟ್ಟಣದಲ್ಲಿ ಕಾಲವಾದ ಮಿಸ್ ಮೇರಿ ಎಂಬಾಕೆಯೂ, ಇವಳ ಸಹೋದರಿಯೂ ತಮ್ಮಲ್ಲಿ ಬಹು ವಿಶ್ವಾಸ ಪ್ರೀತಿಗಳಿಂದ ಸೇವಾವೃತ್ತಿ ಮಾಡುತ್ತಿದ್ದ ಇಬ್ಬರು ಸೇವಕರಿಗೆ ತಮ್ಮ ಆಸ್ತಿಯಿಂದ ೧,೦೫,೦೦೦ ರೂಪಾಯಿ ಕೊಡತಕ್ಕದ್ದೆಂದು ಉಯಿಲು ಬರೆದಿದ್ದಾರೆ

****

ಜರ್ಮನಿಯಲ್ಲಿ ಪ್ರಾಪ್ತವಾಗಿರುವ ಕ್ಷಾಮವನ್ನು ನಿವಾರಣೆ ಮಾಡುವುದಕ್ಕೆ ಲಂಡನ್ ಪಟ್ಟಣದ ಲಾರ್ಡ್ ಮೇಯರ್ ಅವರು ಒಂದು ಫಂಡನ್ನು ಏರ್ಪಾಡುಮಾಡಿ ಹಣ ಕೂಡಿಸುತ್ತಿದ್ದಾರೆ ಇದುವರೆಗೆ ಈ ಫಂಡಿಗೆ ೨,೪೦,೦೦೦ ರೂಪಾಯಿ ವಸೂಲಾಯಿತು ಈ ಹಣವನ್ನು ಅವರು ಕ್ಷಾಮಪೀಡಿತರಿಗಾಗಿ ಜರ್ಮನಿಗೆ ರವಾನೆಮಾಡಿದರು

****

ಅಮೇರಿಕದಲ್ಲಿ ಪೋರ್ಟ್ಲೆಂಡ್ ನಗರದ ಬಳಿ ಕಳೆದ ಶುಕ್ರವಾರ ಎರಡು ಎಕ್ಸ್‌ಪ್ರೆಸ್ ರೈಲ್ ಗಾಡಿಗಳು ಎದುರುಬದುರಾಗಿ ಬಂದು ಬಡಿದಾಡಿ ಎರಡೂ ಬೆಂಕಿ ಹತ್ತಿ ಉರಿದುಹೋದವೆಂತಲೂ, ಈ ಉರಿಯಲ್ಲಿ ಸಿಕ್ಕಿ ೨೫ ಮಂದಿ ಪ್ರಯಾಣಿಕರು ಸುಟ್ಟುಹೋದರೆಂತಲೂ ೦೫ ಜನರಿಗೆ ಗಾಯಗಳಾದವೆಂತಲೂ ತಂತೀವರ್ತಮಾನ ಬಂದಿದೆ

****

ವಿಲಾಯಿತಿಗೆ ಸೇರಿದ ಫಿಲಿಮೌತ್ ಗಾರ್ಡನ್ ಪಟ್ಟಣದಲ್ಲಿದ್ದು ಕಾಲವಾದ ಮಿಸೆಸ್ ಕೆಲ್ಲಿ ಕೇಲರ್ ಎಂಬ ವಿಧವೆಯು ತನ್ನ ಆಸ್ತಿಯ ವಿಷಯದಲ್ಲಿ ಯಾವ ವಿಧವಾದ ಉಯಿಲನ್ನೂ ಬರೆದಿಡಲಿಲ್ಲ ಆಕೆಗೆ ರಕ್ತಸಂಬಂಧಿಗಳು ಯಾರೂ ಇರಲಿಲ್ಲ ಆದಕಾರಣ ಆಕೆಯ ಆಸ್ತಿಯೆಲ್ಲಾ ಅಂದರೆ ೩,೭೫,೦೦೦ ರೂಪಾಯಿ ಸರ್ಕಾರಿ ಖಜಾನೆಗೆ ಸೇರಿತು

****

ಫ್ರಾನ್ಸ್ ಆಧಿಪತ್ಯದಲ್ಲಿ ಕಲ್ಲಿದ್ದಲ ಗಣಿಗಳಲ್ಲಿ ಕೆಲಸ ಮಾಡುವ ಕೂಲಿಕಾರರು ೪೦,೦೦೦ ಜನರು ಹೆಚ್ಚು ಕೂಲಿ ಕೊಟ್ಟಲ್ಲದೆ ಕೆಲಸಕ್ಕೆ ಬರುವುದಿಲ್ಲವೆಂದು ನಿಂತು ನಿಂತುಬಿಟ್ಟರು ಗಣಿಗಳ ಯಜಮಾನರು ಕೂಲಿಯ ದರವನ್ನು ಸ್ವಲ್ಪ ಹೆಚ್ಚು ಮಾಡಿದ್ದಾರೆ ಕೂಲಿಕಾರರು ಈ ದರವು ತಮಗೆ ಅನುಕೂಲವಾಗಿದೆಯೋ ಇಲ್ಲವೋ ಎಂದು ಚರ್ಚೆ ಮಾಡುತ್ತಿದ್ದಾರೆ

****

ವಿಲಾಯಿತಿಗೆ ಸೇರಿದ ಮ್ಯಾಂಚೆಸ್ಟರ್ ಪಟ್ಟಣದ ಬಳಿ ... ಎಂಬ ಊರಿನಲ್ಲಿ ೯೦ ವರುಷದ ಮಿ॥ ಐಸಕ್ ಲಾಯಿಡ್ ಎಂಬಾತನು ೬೦ ವರುಷದ ಮಿಸೆಸ್ ಎಲಿಸಾ ಗಿಲ್ಮೋರ್ ಎಂಬ ವಿಧವೆಯನ್ನು ವರಿಸಿ ದ್ವಿತೀಯ ವಿವಾಹ ಮಾಡಿಕೊಂಡನು. ಆತನಿಗೆ ೯೦ ವರುಷಗಳಾಗಿದ್ದರೂ ಇನ್ನೂ ೬೦—೭೦ ವರುಷದವನಂತೆ ಕಾಣಿಸಿಕೊಳ್ಳುತ್ತಾ ದೇಹದಾರ್ಢ್ಯ ಉಳ್ಳವನಾಗಿರುತ್ತಾನೆ

****

ಕಳೆದವಾರ ಉತ್ತರಸಾಗರದಲ್ಲಿ ಭಯಂಕರವಾದ ಗಾಳಿ ಪ್ರಾಪ್ತವಾದದ್ದರಿಂದ ನಾನಾ ಅನಾಹುತಗಳು ನಡೆದವು ಒಂದು ಹಡಗು ಮುಳುಗಿ ೧೩ ಮಂದಿ ಸಮುದ್ರದ ಪಾಲಾದರು, ಇನ್ನೊಂದು ಕಡೆ ಒಂದು ಭಾರೀ ದೋಣಿ ಮುಳುಗಿ ನಾಲ್ಕು ಮಂದಿ ಸತ್ತರು ಹಾಲೆಂಡಿನ ಸಮುದ್ರತೀರದಲ್ಲಿ ಸಮುದ್ರವು ಉಕ್ಕಿ ಭೂಮಿಯ ಮೇಲೆ ಉರುಳಿದ್ದರಿಂದ ಬಹಳ ನಷ್ಟ ಉಂಟಾಗಿರುವುದು ಅನೇಕರು ಪ್ರಾಣ ಕಳೆದುಕೊಂಡರು

****

ವಿಲಾಯಿತಿ ರಾಜ್ಯದ ಹೌಸ್ ಆಫ್ ಕಾಮನ್ಸ್ ಎಂಬ ಪ್ರಜಾಪತಿನಿಧಿ ಸಭೆಯಲ್ಲಿ ವಿಲಾಯಿತಿಯಲ್ಲಿರುವ ಬಡಬಗ್ಗರಾದ ಮುದುಕರಿಗೆ ಸರ್ಕಾರದ ಹಣದಿಂದ ಪೆನ್ಶನ್ ಕೊಡಬೇಕೆಂದು ಮೆಂಬರುಗಳು ಚರ್ಚೆಮಾಡಿ ಆ ರೀತಿ ಜಾರೀಲಿತರಬೇಕೆಂದು ಒಪ್ಪಿಕೊಂಡಿರು ಆದರೆ ಖಜಾನೆಯ ಮಿ॥ ಆಸ್ಕ್ವಿತ್ ಎಂಬ ಮಂತ್ರಿಯವರು—ರಾಜ್ಯದ ಖರ್ಚು ಕಮ್ಮಿಮಾಡಿದಲ್ಲದೆ ಈ ಪೆನ್ಶನ್ನಿನ ಏರ್ಪಾಡು ಜಾರೀಲಿ ತರುವುದಕ್ಕಾಗುವುದಿಲ್ಲವೆಂದು ಹೇಳಿದರು

****

ಕಳೆದ ೦೩ ನೇ ತಾರೀಖಿನ ದಿನ ಓರಾಲಿಯ ಎಂಬ ಹಡಗು ಲಂಡನ್ ಪಟ್ಟಣಕ್ಕೆ ಮೆಲ್ಬೂರು ಪಟ್ಟಣಗಳಲ್ಲಿ ಚಿನ್ನವನ್ನು ಸಾಗಿಸಿಕೊಂಡು ಹೋಯಿತು ಈ ಚಿನ್ನವು ೨,೯೯,೫೪,೯೫೪ ರೂಪಾಯಿ ಬೆಲೆಯಾಗುತ್ತಿದೆ ಇದರಲ್ಲಿ ... ಲಕ್ಷ ರೂಪಾಯಿನ ಚಿನ್ನ ಹಿಂದುಸ್ಥಾನದ್ದು, ಉಳಿದದ್ದೆಲ್ಲಾ ಆಸ್ಟ್ರೇಲಿಯಾ ದ್ವೀಪದ ಗಣಿಗಳದ್ದಾಗಿತ್ತು ಈ ಪ್ರಕಾರ ೩ ಕೋಟಿ ರೂಪಾಯಿನ ಚಿನ್ನವನ್ನು ಇದುವರೆಗೆ ಒಂದೇ ಸಲ ಯಾವ ಹಡಗೂ ಸಾಗಿಸಿಕೊಂಡು ಹೋಗಿರುವುದಿಲ್ಲ

****

ವಿಲಾಯಿತಿ ರಾಜ್ಯದ ಸ್ವಾಧೀನ ದೇಶಗಳಲ್ಲಿ ... ಗಳಿರುವುದರಿಂದ ಪ್ರಜಾಪ್ರತಿನಿಧಿಗಳು ... ಉಪಯೋಗಿಸಲ್ಪಡುವುದು ... ಈ ಸರ್ಕಾರದವರು ... ದವರು ... ಕೆನಡಾದಲ್ಲಿ ಒಬ್ಬ ಮೆಂಬರಿಗೆ ವರುಷಕ್ಕೆ ... ೦೦೦ ರೂಪಾಯಿ ಕೊಡುವರು, ಆಸ್ಟ್ರೇಲಿಯಾದಲ್ಲಿ ೬ ... ರೂ, ನ್ಯೂಜಿಲಾಂಡಿನಲ್ಲಿ ೩,೬೦೦ ರೂ, ವಿಕ್ಟೋರಿಯಾದಲ್ಲಿ ೩ ೦೦೦ ರೂ, ... ದಕ್ಷಿಣ ಆಸ್ಟ್ರೇಲಿಯಾದಲ್ಲಿ ೧೫೦೦ ರೂ, ಈ ರೀತಿ ರುಸುಂ ಪಾವತಿ ಆಗುತ್ತಿದೆ

****

ಸ್ಕಾಟ್‌ಲೆಂಡಿಗೆ ಸೇರಿದ ಪರ್ಕ್ ನಗರದಲ್ಲಿ ... ಪ್ರದರ್ಶನ ನಡೆಯಿತು ಅರ್ಜಂಟೈನ್ ದೇಶದ ವರ್ತಕರು ಅಲ್ಲಿಗೆ ಹೋಗಿ ಬಹು ಕೋಮಲವಾಗಿಯೂ ಶ್ರೇಷ್ಠಜಾತಿಗೆ ಸೇರಿಯೂ ಇದ್ದ ಕೆಲವು ದನಗಳನ್ನು ಕೊಂಡು, ತಮ್ಮ ದೇಶಕ್ಕೆ ಕಳುಹಿಸಿರುತ್ತಾರೆ ಒಂದೊಂದು ದನಕ್ಕೆ ೨೩,೭೫೯ ರೂಪಾಯಿನಿಂದ ಹಿಡಿದು ೬,೩೦೦ ರೂ. ವರೆಗೆ ಕ್ರಯ ಕೊಟ್ಟು ಅವರು ಕೊಂಡುಕೊಳ್ಳಬೇಕಾಗಿದ್ದರೆ ಆ ದನಗಳು ಎಷ್ಟು ಉತ್ಕೃಷ್ಟವಾದವುಗಳೋ ಅಲ್ಲಿನವರು ಗೋವುಗಳನ್ನು ಎಷ್ಟು ಚೆನ್ನಾಗಿಯೂ ಪ್ರೀತಿಯಿಂದಲೂ ಸಾಕುತ್ತಾರೋ ವಾಚಕರು ಊಹಿಸಿಕೊಳ್ಳಬಹುದು

****

ಫಿಲಿಪೈನ್ ದ್ವೀಪಗಳಲ್ಲಿ ಕೆಲವು ಜನರು ದಂಗೆ ಎದ್ದು, ... ರಾದ ಅಮೇರಿಕದವರ ಮೇಲೆ ತಿರುಗಿಬಿದ್ದರು ಅಮೇರಿಕದ ಸೈನಿಕರು ದಂಗೆಕೋರರನ್ನು ಎದುರಿಸಿ ಯುದ್ಧಮಾಡಿ, ಅನೇಕರನ್ನು ಕೊಂದುಬಿಟ್ಟರು ಹೀಗೆ ಸತ್ತವರಲ್ಲಿ ಹೆಂಗಸರೇ ಬಹುಮಂದಿ ಇದ್ದುದರಿಂದ ಅಮೇರಿಕಕ್ಕೆ ಈ ವರ್ತಮಾನ ತಿಳಿದಾಗ ಅಲ್ಲಿನವರೆಲ್ಲಾ ಗವರ್ನಮೆಂಟಿನವರ ಮೇಲೆ ಆಕ್ಷೇಪಣೆಮಾಡಿ, ಹೆಂಗಸರುಮಕ್ಕಳನ್ನು ಕೊಂದದ್ದು ಅಜ್ಞಾನದವೂ ಹೇಯವೂ ಆದದ್ದೆಂದು ಗುಲ್ಲೆಬ್ಬಿಸಿದರು ಸರ್ಕಾರದವರು ಅದರ ನಿಜಸ್ಥಿತಿ ಏನೆಂದು ಫಿಲಿಪೈನ್ ದ್ವೀಪಕ್ಕೆ ಬರೆದು ಕೇಳಿದರು ಅಧಿಕಾರಿಗಳು ಪ್ರತ್ಯುತ್ತರಕೊಟ್ಟು,— ದಂಗೆಕೋರರಾದ ಗಂಡಸರು ಹಿಂದೆ ನಿಂತು, ಹೆಂಗಸರಿಗೆ ಗಂಡುವೇಷ ಹಾಕಿ ಮುಂದೆ ನಿಲ್ಲಿಸಿದ್ದರೆಂತಲೂ, ಈ ಹೆಂಗಸರು ಬಹು ಸಾಹಸ ಪರಾಕ್ರಮಗಳಿಂದ ಪುರುಷರಂತೆ ಯುದ್ಧಮಾಡಿ ಮಡಿದುಹೋದರೆಂತಲೂ ತಿಳಿಸಿದ್ದಾರೆ ಅಂತು ಈ ಯುದ್ಧದಲ್ಲಿ ಗಂಡಸರೂ ಹೆಂಗಸರೂ ಸೇರಿ ೬೦೦ ಮಂದಿ ಹತರಾಗಿರುತ್ತಾರೆ

****

ವಿಲಾಯಿತಿ ದೊರೆಯವರನ್ನು ಕಾಣುವುದಕ್ಕೆ ... ಒಬ್ಬ ಯೌವನವತಿಯು ಹೋದಳು ದೊರೆಯವರೂ ಅವರ ಸ್ನೇಹಿತರೂ ಈ ಹೆಂಗಸೂ ಕೂತುಕೊಂಡು ಸಂಭಾಷಣೆ ಮಾಡುತ್ತಿರುವಲ್ಲಿ ಎಲ್ಲರೂ ಸೇರಿ ಸ್ವಲ್ಪಹೊತ್ತು ಸಂತೋಷವಾಗಿ ಇಸ್ಪೀಟು ಆಡೋಣವೆಂದು ದೊರೆಯವರು ಹೇಳಿದರು ಆ ಹೆಂಗಸು ತನಗೆ ಇಸ್ಪೀಟಿನ ಆಟವೇ ತಿಳಿಯದೆಂದೂ ತಾನು ಸೇರಲಾರೆನೆಂದೂ ಆಕ್ಷೇಪಮಾಡಿದಳು. ಆದರೂ ದೊರೆಯವರು ಆಕೆಯನ್ನು ಆಟಕ್ಕೆ ಸೇರಬೇಕೆಂದು ಬಲವಂತಮಾಡಿದರು. ಆಗ ಆಕೆ—"ನನಗೆ ಮೊದಲು ಗುಲಾಮನಿಗೂ ವ್ಯತ್ಯಾಸವೇ ತಿಳಿಯದಲ್ಲಾ ' ನಾನು ಹ್ಯಾಗೆ ಆಡಲಿ ' ಎಂದು ಉತ್ತರ ಕೊಟ್ಟಳು ಕೂಡಲೇ ಅಲ್ಲಿ ಸೇರಿದ್ದವರಿಗೆಲ್ಲಾ ಮನಸ್ಸು ವಿಕಾರವಾಗಿ ಎಲ್ಲರೂ ಆಕೆಯ ಮುಖವನ್ನೇ ನೋಡಿದರು ದೊರೆಯವರು ಆಕೆಯ ಮಾತಿನಲ್ಲಿ ದುರಭಿಪ್ರಾಯ ಪಡದೆ ತಾವೂ ಪರಿಹಾಸ್ಯಮಾಡಿ ಸಂತೋಷಪಟ್ಟರೆಂದು ಪ್ರಕಟವಾಗಿದೆ ರಾಜಾಸ್ಥಾನದಲ್ಲಿ ಮಾತನಾಡುವವರು ಬಹು ನಿಪುಣರಾಗಿರದಿದ್ದರೆ ಸಮಯದಲ್ಲಿ ಆಭಾಸವಾಗುವದೆಂದು ನಾವು ಹೇಳಬೇಕಾಗಿಲ್ಲ.

ಕಾಯಿನನ ಹೆಂಡತಿಯು ಯಾರು?

ಬೆಂಗಳೂರಿನಿಂದ ಇಬ್ಬರು ಬಾತ್ಮೀದಾರರು ನಮಗೆ ಮೇಲ್ಕಂಡ ವಿಷಯವನ್ನು ಕುರಿತು ಬರೆದಿರುವರು. ಇವರು ಬೈಬಲ್ ಎಂಬ ಸತ್ಯವೇದವನ್ನು ಓದುತ್ತಿರುವವರಾಗಿಯೂ, ಅದರಲ್ಲಿ ಮೊದಲನೆಯ ಗ್ರಂಥವಾದ ಉತ್ಪತ್ತಿಯೆಂಬ ಪುಸ್ತಕದ ಆದಿಭಾಗದಲ್ಲಿ ಹೇಳಿರುವಂಥ ಮನುಷ್ಯೋತ್ಪತ್ತಿಯನ್ನು ಕುರಿತು ಓದಿರುವವರಾಗಿಯೂ ಆ ವಿಷಯದಲ್ಲಿ ತಮಗೆ ಸಂಶಯವುಂಟಾಗಿರುವದಾಗಿಯೂ ಬರೆದಿರುವರು. ಅದರ ವಿವರವೆಂತೆಂದರೆ—ಭೂಲೋಕದಲ್ಲಿರುವ ಸಕಲ ಮನುಷ್ಯಜಾತಿಯವರೂ ಒಬ್ಬ ತಂದೆತಾಯಿಗಳಿಂದ ಹುಟ್ಟಿದವರೆಂತಲೂ ಆ ಆದಮ್ ಹವ್ವಳೆಂಬ ತಂದೆತಾಯಿಗಳಿಗೆ ಕಾಯಿನೆಂಬುವನೇ ಮೊದಲನೆಯ ಪುತ್ರನೆಂತಲೂ ಹೇಳುವದರಿಂದ ಕಾಯಿನನಿಗೆ ಹೆಂಡತಿಯು ಯಾರು? ಎಂದು ಈ ಬಾತ್ಮೀದಾರರು ಕೇಳಿದ್ದಾರೆ. ಇವನು ಮದುವೆಯಾಗಿದ್ದರೆ ತನ ತಂಗಿಯನ್ನೇ ಮದುವೆಯಾಗಿದ್ದಿರಬೇಕು ಎಂದು ಮೊದಲಾಗಿ ಇವರು ಕೇಳಿರುವ ಪ್ರಶ್ನೆಯನ್ನು ನೋಡುವಲ್ಲಿ—ನಮ್ಮ ಅಭಿಪ್ರಾಯವು ಈಗಿನ ಕಾಲದಲ್ಲಿ ಜೀವಿಸುತ್ತಲಿರುವ ಕ್ರೈಸ್ತಮತಾಚಾರ್ಯರ ಅಭಿಪ್ರಾಯವು ಏನಾಗಿದೆಯೆಂದರೆ ಉತ್ಪತ್ತಿ ಗ್ರಂಥದ ಆದಿಭಾಗದಲ್ಲಿ ಹೇಳಿರುವ ಕಥೆಯನ್ನು ಸುವ್ಯವಸ್ಥವಾಗಿ ಭಾವಿಸಲ್ಪಡಬೇಕು. ಈ ಕಾವ್ಯಗಳಿಂದ ಮತಸಂಬಂಧವಾದ ಕೆಲವು ಸತ್ಯಾಂಶಗಳು ಪ್ರಕಟವಾಗುತ್ತವೆ. ಆ ಅಂಶಗಳು ಯಾವವೆಂದರೆ—ಈ ಭೂಲೋಕವನ್ನು ದೇವರೇ ಸೃಷ್ಟಿಸಿದನು; ಇದರಲ್ಲಿರುವ ಸ್ಥಾವರ ಜಂಗಮಾದಿ ಸೃಷ್ಟಿಗೆಲ್ಲ ಮನುಷ್ಯನೇ ಮೇಲಾದವನು. ಅವನಿಗೆ ಮಣ್ಣಿನಿಂದ ಮಾಡಿದ ದೇಹವೂ ದೇವರಿಂದ ಬಂದ ಆತ್ಮವೂ ಎಂಬ ಎರಡು ಸ್ವಭಾವಗಳುಂಟು. ಅವನಿಗೆ ಸ್ವಾತಂತ್ರ್ಯವುಂಟು. ಅವನು ದೇವರೊಡನೆ ಸಂಭಾಷಣೆಯನ್ನು ಮಾಡಬಲ್ಲವನು. ಅವನು ಪಾಪಕ್ಕಾಗಿ ದೇವರಿಗೆ ಅವಿಧೇಯನಾಗಿ ಹೋದನು. ಅದ್ದರಿಂದ ಆ ದೋಷದಿಂದ ದುಃಖವು ಫಲವಾಗಿ ಬಂದಿತೆಂಬ ಈ ಸತ್ಯಾಂಶಗಳು ಉತ್ಪತ್ತಿ ಗ್ರಂಥದಲ್ಲಿ ಅತಿ ಪುರಸ್ಕಾರವಾಗಿಯೂ ಸ್ಪಷ್ಟವಾಗಿಯೂ ಬೋಧಿಸಲ್ಪಟ್ಟಿವೆ. ಭೂಗರ್ಭಶಾಸ್ತ್ರ, ಜ್ಯೋತಿಶ್ಶಾಸ್ತ್ರ, ಪುರಾತನಲಿಪಿಶಾಸ್ತ್ರ ಮೊದಲಾದ ಶಾಸ್ತ್ರಗಳನ್ನು ಅನ್ವೇಷಣೆ ಮಾಡಿ ತಿಳಿಯಬೇಕಾದ ಸಂಗತಿಗಳನ್ನು ಬೋಧಿಸಬೇಕೆಂಬುದು ಉತ್ಪತ್ತಿ ಪುಸ್ತಕದ ಉದ್ದೇಶವಲ್ಲ. ಮನುಷ್ಯರೆಲ್ಲರೂ ಇಬ್ಬರೆ ಆದಂಥ ಆದಿಪಿತೃಮಾತೆಯರಿಂದ ಹುಟ್ಟಿದವರೆಂಬ ಅಂಶವನ್ನು ತಿಳಿಯಪಡಿಸುವದೇ ಈ ಉತ್ಪತ್ತಿ ಪುಸ್ತಕದ ಕಥೆಗಳಿಂದ ನಿರ್ಣಯಿಸತಕ್ಕ ವಿಷಯವಾಗಿದೆಯೆಂದು ಈ ನಮ್ಮ ಬಾತ್ಮೀದಾರರು ಅಭಿಪ್ರಾಯಪಡುವಂತೆ ತೋರುತ್ತದೆ. ಇದನ್ನು ನಾವು ಒಪ್ಪಲಾರೆವು. ಏತಕ್ಕೆಂದರೆ ಕಾಯಿನನು ತನ ತಮ್ಮನನ್ನು ಕೊಂದಬಳಿಕ ದೇವರು ಅವನನ್ನು ಪಟ್ಟಣದಿಂದ ಹೊರಡಿಸಿಬಿಟ್ಟನು. ಆಗ ಅವನು ದೇವರನ್ನು ಕುರಿತು—ನನ್ನನ್ನು ಯಾರಾದರೂ ಕಂಡರೆ ಕೊಲ್ಲುವರು ಎಂಬದಾಗಿ ಮೊರೆಯಿಟ್ಟುಕೊಂಡನು. ಇದನ್ನು ನೋಡುವಲ್ಲಿ—ಆಗ ಜೀವಿಸುತ್ತಿದ್ದವರು ಆದಮ್ ಹವ್ವಳೂ ಅವರ ಮಕ್ಕಳೂ ಮಾತ್ರವೇ ಆಗಿದ್ದರೆ ಕಾಯಿನನು ಕೊಲ್ಲುವವರು ಯಾರು? ಇದಲ್ಲದೆ ಕಾಯಿನನು ಹೊರಟುಹೋಗಿ ಒಂದು ಪಟ್ಟಣವನ್ನು ಕಟ್ಟಿದನೆಂತಲೂ ಹೇಳಿದೆ. ಭೂಲೋಕದೊಳಗಿನ ಮನುಷ್ಯರೆಲ್ಲ ಕಾಯಿನನೂ ಅವನ ತಂದೆತಾಯಿಗಳೂ ಮಾತ್ರವೇ ಆಗಿರುವಲ್ಲಿ ಅವನು ಕಟ್ಟಿದ ಪಟ್ಟಣದಲ್ಲಿ ಯಾರು ಜೀವಿಸುತ್ತಿದ್ದರು? ಆದರೆ ಅಲ್ಲಿಂದ ಬಂದರು?

ಈ ಮೊದಲಾದ ಸಂಗತಿಗಳನ್ನು ಉತ್ಪತ್ತಿ ಪುಸ್ತಕದಿಂದಲೇ ಉದಾಹರಿಸಿ ನೋಡುವಲ್ಲಿ—ಭೂಮಂಡಲದ ಸಕಲ ಮನುಷ್ಯರೂ ಒಂದೇ ಒಂದು ಜೋತೆ ಸ್ತ್ರೀಪುರುಷರಿಂದ ಹುಟ್ಟಿದರೆಂಬುವದೇ ಆ ಪುಸ್ತಕದ ಅಭಿಪ್ರಾಯವೆಂದು ಸ್ಥಾಪಿಸುವದಕ್ಕೆ ಆಧಾರವಿಲ್ಲವೆಂಬುವದು ಸ್ಥಿರಪಡುತ್ತದೆ. ಪರಂತು ಉತ್ಪತ್ತಿ ಗ್ರಂಥದ ಅಭಿಪ್ರಾಯವು ಒಂದು ವಿಷಯದಲ್ಲಿ ನಿಸ್ಸಂದೇಹವಾಗಿರುತ್ತದೆ. ಅದೇನಂದರೆ—ಸಕಲ ಮನುಷ್ಯರೂ ಹ್ಯಾಗೆ ಹುಟ್ಟಿದ್ದರೂ ಹುಟ್ಟಿರಲಿ, ಒಂದು ಜತೆ ಸ್ತ್ರೀಪುರುಷರಿಂದಲೇ ಹಲವು ಜತೆಗಳಿಂದಲೇ ಹುಟ್ಟಿರಲಿ, ಧರ್ಮಾತ್ಮದ ವಿಷಯದಲ್ಲಿ ಮಾತ್ರ ಪರಸ್ಪರ ಸಹೋದರರಾಗಿದ್ದಾರೆಂಬುದೂ ಸರ್ವರೂ ಪಾಪಮಾಡಿದ್ದಾರೆಂಬುದೂ ಮತ್ತು ದುಷ್ಕೃತ್ಯದಲ್ಲಿ ತಂದೆಗಳಾಗಿರುವ ಭಾವವು ಮಗನಿಗೆ ಸೇರುವದೆಂಬುದೂ ಕಾಯಿನನ ಕಥೆ ಕಾಣಿಸುತ್ತದೆ.

ಮನುಷ್ಯಜಾತಿಯು ಒಂದೇ ಜೋತೆ ಸ್ತ್ರೀಪುರುಷರಿಂದಲೋ ಅಥವಾ ಹಲವು ಜತೆಗಳಿಂದಲೋ ಹ್ಯಾಗೆ ಹುಟ್ಟಿದರೆಂಬುವದನ್ನು ನಿಸ್ಸಂದೇಹವಾಗಿ ನಿರೂಪಿಸಲು ಸಯನ್ಸ್ ಎಂಬ ಭೌತಿಕ ಶಾಸ್ತ್ರದಿಂದ ಸಾಧ್ಯವಾಗುತ್ತದೆ. ಶುದ್ಧ ಮತಾಭಿಪ್ರಾಯದಿಂದ ನಿರ್ಣಯಿಸಲ್ಪಡಲಿಕ್ಕಿಲ್ಲ.

ಜಪಾನಿನಿಂದ ಇಂಡಿಯಾಕ್ಕೆ ಬಂದಿರುವ ಪ್ರತಿನಿಧಿಗಳು.

ರಷ್ಯಾದೇಶಸ್ಥರನ್ನು ಸದೆಬಡಿದು ಜಾಹೀರಾದಂಥ ಜಪಾನ್ ದೇಶೀಯರಲ್ಲಿ ಇಬ್ಬರು ಈಗ ನಮ್ಮ ಈ ಇಂಡಿಯಾ ದೇಶದ ರಾಜಧಾನಿಯಾದ ಕಲ್ಕತ್ತಾನಗರಕ್ಕೆ ಬಂದು ಉಪನ್ಯಾಸಿಸುತ್ತಲಿರುವರು. ಇವರು ಹೇಳಿದ ಕೆಲವು ವಿಷಯಗಳನ್ನು ನಮ್ಮ ಸಪ್ರಕಾಶವಾಚಕರ ಲಕ್ಷ್ಯಕ್ಕೆ ತರಬೇಕೆಂಬ ಕಾರಣವಾಗಿ ಇವನ್ನು ಇಲ್ಲಿ ಬರೆದಿದ್ದೇವೆ.

ಮತ ವಿಷಯಗಳಲ್ಲಿ ಸಕಲರಿಗೂ ಸ್ವಾತಂತ್ರ್ಯವಿರಬೇಕೆಂಬುದು ಜಪಾನ್ಯರ ಅನುಮತಿ. ಯಾವನಾದರೊಬ್ಬನು ಬೌದ್ಧಮತಸ್ಥನಾಗಿರಬೇಕೆಂಬುದು ಅವನ ಅಭಿಪ್ರಾಯವಾಗಿದ್ದರೆ ಯಾರೂ ಅವನನ್ನು ಆಕ್ಷೇಪಿಸುವದಿಲ್ಲ. ಅವನು ತನಗೆ ತೋರುವ ಪ್ರಕಾರವಾಗಿ ನಂಬತಕ್ಕ ಸ್ವತಂತ್ರವುಳ್ಳವನಾಗಿದ್ದಾನೆಂದು ನಿರ್ಣಯಿಸುವರು. ಅವನ ಮತಾಭಿಪ್ರಾಯದ ದೆಸೆಯಿಂದ ಯಾವನಾದರೂ ಅವನನ್ನು ಹೀಯಾಳಿಸುವದಿಲ್ಲ. ಹಾಗೆಯೇ ಯಾವನಾದರೊಬ್ಬನು ಕ್ರೈಸ್ತನಾದರೆ ಅವನು ಸಾಮಾಜಿಕವಾದ ಯಾವ ಪ್ರತಿಬಂಧಕಕ್ಕೂ ಗುರಿಯಾಗುವದಿಲ್ಲ. ಅವನು ಆ ಮತಾನುಸಾರಿಯಾಗುವದಕ್ಕಿಂತ ಮೊದಲು ಇತರರಾದ ನೆರೆಹೊರೆಯವರ ಗಣನೆಗೆ ಎಷ್ಟರಮಟ್ಟಿಗೂ ಪಾತ್ರನಾಗಿದ್ದನೋ ಅಷ್ಟರ ಮಟ್ಟಿಗೆ ಈಗಲೂ ಪಾತ್ರನಾಗಿರುವನು. ದೇಶಸ್ಥಿತಿಯು ಇಂಥಾದ್ದಾಗಿರುವದರಿಂದಲೇ ಶ್ರೇಷ್ಠತ್ವವುಳ್ಳದ್ದಾದ ಮತವು ತಾನಾಗಿ ಅಭಿವೃದ್ಧಿಯನ್ನು ಹೊಂದುವದಕ್ಕೆ ಬಹಳ ಅವಕಾಶವಿರುತ್ತದೆ. ಯಾವದು ಬಲೀಯವಾದುದೋ ಅದೇ ಕಡೆಯವರೆಗೂ ನೆಲೆಗೊಳ್ಳುವದು. ಆದಕಾರಣ ಜಪಾನ್ ದೇಶದ ಅಭಿವೃದ್ಧಿಗೆ ಯಾವ ಮತವು ಅತಿ ಯೋಗ್ಯವಾದದ್ದಾಗಿರುವದೋ ಆ ಮತವೇ ಆ ದೇಶವನ್ನೆಲ್ಲಾ ವ್ಯಾಪಿಸಿಕೊಳ್ಳತಕ್ಕಂಥಾದ್ದಾಗಿರುವದು.

ಕ್ರೈಸ್ತಮತವು ಅನ್ಯದೇಶೀಯವಾದದ್ದೆಂದು ಜಪಾನ್ಯರು ಹೇಳುತ್ತಿರುವದಿಲ್ಲವೋ ನಿಶ್ಚಯವೇ. ಆದರೆ ಸತ್ಯವೆಂಬುವದಕ್ಕೆ ಸ್ವದೇಶ ಪರದೇಶಗಳೆಂಬ ಭೇದವಿಲ್ಲ. ಅದಕ್ಕೆ ಮೂಡಣ ಪಡುವಣ ಸೀಮೆಗಳೆಂಬ ವ್ಯತ್ಯಾಸವಿಲ್ಲ. ಅದು ಸಕಲ ದೇಶಸ್ಥರ ಆಸ್ತಿಯೆಂದು ಆ ದೇಶಸ್ಥರು ತಿಳಿದಿರುವರು. ಆ ದೇಶೀಯರು ಪಶ್ಚಿಮಾತ್ಯರ ದೆಸೆಯಿಂದ ರೇಲ್ವೆ, ಟೆಲಿಗ್ರಾಫ್, ಟೆಲಿಫೋನ್ ಎಂಬ ಐಹಿಕ ಸುಖಪ್ರದಗಳಾದ ವಿಷಯಗಳನ್ನು ಪರಿಗ್ರಹಿಸಿರಲಾಗಿ ಆ ಪಾಶ್ಚಿಮಾತ್ಯರಿಗೆ ಕ್ರೈಸ್ತಮತವು ಸುಖಪ್ರದವಾದ ಸತ್ಯಮತವೆಂದು ಕಂಡುಬಂದರೆ ಅದನ್ನು ಯಾಕೆ ಪರಿಗ್ರಹಿಸಬಾರದು? ತಾವು ಯಾವ ದೇಶದಿಂದಲಾಗಲಿ ಯಾವದನ್ನು ತಂದುಕೊಂಡರೂ ಅದನ್ನು ಕ್ಷಿಪ್ರದಲ್ಲಿಯೇ ದೇಶೀಯವಾದದ್ದನ್ನಾಗಿ ಮಾಡಿಕೊಳ್ಳುವರು. ಇದೀಗ ಪರದೇಶೀಯ ವಿಷಯಗಳಲ್ಲಿ ಜಪಾನ್ಯರು ಅನುಸರಿಸುವ ಕ್ರಮವು!

ಪಾಶ್ಚಿಮಾತ್ಯರಿಂದ ಜಪಾನ್ಯರು ಪ್ರಾಮುಖ್ಯವಾದ ಮೂರು ವಿಷಯಗಳನ್ನು ಹೊಂದಿರುವರಂತೆ. ಯಾವವೆಂದರೆ—ಮೊದಲನೇದು, ಸಮಾಜದಲ್ಲಿರುವ ಪ್ರತಿಯೊಬ್ಬನೂ ಗಣನೆಗೆ ಯೋಗ್ಯನೆಂಬುದು. ಈ ಇಂಡಿಯಾ ದೇಶದಲ್ಲಿರುವಂತೆಯೇ ಜಪಾನಿನಲ್ಲಿಯೂ ಪೂರ್ವದಲ್ಲಿ ಕುಲಸಂಬಂಧವಾದ ಕಟ್ಟುಕಟ್ಟಳೆಗಳು ಬಹು ಬಲಿಷ್ಠವಾಗಿದ್ದವು. ಆದರೆ ಪಾಶ್ಚಿಮಾತ್ಯರ ನಾಗರಿಕತೆಯು ಸಮೀಪಿಸುತ್ತ ಬಂದನಂತರ ಸಾಮಾಜಿಕ ಪ್ರಾಮುಖ್ಯತೆಗೆ ಅವರಲ್ಲಿರುವ ಪ್ರತಿಯೊಬ್ಬ ವ್ಯಕ್ತಿಯನ್ನೂ ಗಣನೆಗೆ ತಂದುಕೊಳ್ಳತಕ್ಕ ವಿಷಯವು ಅತ್ಯಾವಶ್ಯಕವೆಂದು ಗ್ರಹಿಸಲ್ಪಟ್ಟಿರುವದು. ಆದಕಾರಣ ಸ್ತ್ರೀಯರ ಸ್ಥಿತಿಯನ್ನು ಅಭಿವೃದ್ಧಿಪಡಿಸುವದಕ್ಕೆ ಪ್ರಯತ್ನಿಸುವವರಾದರು. ಸ್ತ್ರೀಯರೆಂದರೆ ಪೂರ್ವದಲ್ಲಿ ಕೇವಲ ನಿಕೃಷ್ಟಜೀವಿಗಳೆಂದು ಎಣಿಸಲ್ಪಡುತ್ತಿದ್ದರು. ಈಗಲಾದರೋ ಗಂಡಸರಿಗೆ ಎಷ್ಟು ವಿಧದಲ್ಲಿ ವಿದ್ಯಾಪ್ರೋತ್ಸಾಹವುಂಟೋ ಅಷ್ಟು ವಿಧದಲ್ಲಿ ಹೆಂಗಸರಿಗೂ ಪ್ರೋತ್ಸಾಹವನ್ನು ಕಲ್ಪಿಸಿಕೊಟ್ಟು ವಿದ್ಯಾವತಿಯರಾದ ಸ್ತ್ರೀಯರಿಂದಲೂ ಸಹಾಯವುಂಟಾಗುವಂತೆ ಮಾಡಿಕೊಳ್ಳುವರು. ಸಾಮಾಜಿಕವಾದಂಥ ಮತ್ತು ಮತಸಂಬಂಧವಾದ ಸಕಲ ವಿಷಯಗಳಲ್ಲಿಯೂ ಜಪಾನ್ ದೇಶದಲ್ಲಿ ಗಂಡಸರಿಗೆ ಎಷ್ಟು ಹಕ್ಕುಬಾಧ್ಯತೆಗಳು ಹೆಂಗಸರಿಗೂ ಉಂಟು. ಮಕ್ಕಳಿಗೆ ವಿದ್ಯೆಯನ್ನು ಅಭ್ಯಾಸಮಾಡಿಸುವದರಲ್ಲಿ ಗಂಡಸರಿಗಿಂತ ಸ್ತ್ರೀಯರಿಗೇ ಯೋಗ್ಯತೆಯು ಹೆಚ್ಚಾಗಿರುವದೆಂದು ತಿಳಿದು ಜಪಾನ್ ದೇಶದಲ್ಲಿ ಮಕ್ಕಳ ವಿದ್ಯಾಭ್ಯಾಸಕಾರ್ಯವನ್ನು ಬಹುಮಟ್ಟಿಗೆ ಸ್ತ್ರೀಯರ ವಶಕ್ಕೇ ಬಿಟ್ಟಿದ್ದಾರೆ. ಎರಡನೇದು—ಕಾಲದ ಬೆಲೆ. ಇದನ್ನು ಪಾಶ್ಚಿಮಾತ್ಯರಿಂದ ಜಪಾನ್ಯರು ಕಲಿತುಕೊಂಡಿರುವರು. ಪೂರ್ವಿಕರಲ್ಲಿ ಕಾಲದ ಗಣನೆಯು ಎಷ್ಟು ಮಾತ್ರವೂ ಭಾವಿಸಲ್ಪಡುತ್ತಿರಲಿಲ್ಲ. ಈಗಲಾದರೋ ಪ್ರತಿಯೊಂದು ನಿಮಿಷದಲ್ಲಿಯೂ ಗಣನೆಯಾದರುಂಟು. ಗತಿಯಾದವಿಲ್ಲದವನು ನಾಗರಿಕತೆಯುಳ್ಳವನಲ್ಲವೆಂದು ಈಗ ದೇಶಸ್ಥರೆಲ್ಲರೂ ತಿಳಿದಿರುವರು. ಯಾವ ಕಾರ್ಯವನ್ನಾದರೂ ಕ್ಲುಪ್ತಕಾಲಕ್ಕೆ ಸರಿಯಾಗಿ ತಪ್ಪದೆ ಮಾಡುವಂಥ ಅಭ್ಯಾಸವನ್ನು ಜಪಾನ್ಯರು ಪಾಶ್ಚಿಮಾತ್ಯರಿಂದ ಕಲಿತಿದ್ದಾರೆ. ಮೂರನೇದು—ನಮ್ಮ ಪ್ರೀತಿಗೂ ಉಪಕಾರಕ್ಕೂ ಇತರರು ಭಾಗಿಗಳೆಂಬ ಭಾವವು ಹೆಚ್ಚಾಗಿರಬೇಕೆಂದು ತಿಳಿದುಕೊಂಡರು. ಅವರ ಮತದೊಳಕ್ಕೆ ಇತರ ದೇಶೀಯರು ಯಾರೂ ಬರಬಾರದೆಂದು ನಿರ್ಣಯಿಸಿದ್ದ ಕಾಲದಲ್ಲಿ ಅವರು ದೇಶೀಯರಾದ ನೆರೆಹೊರೆಯವರಲ್ಲಿ ಬಹು ಮಮತೆಯುಳ್ಳವರಾಗಿದ್ದರು. ಇಷ್ಟೇ ಹೊರತು ಅವರನ್ನು ಬಿಟ್ಟರೆ ಬೇರೆಯವರು ತಮ್ಮ ಪ್ರೀತಿಗೆ ಅರ್ಹರಲ್ಲವೆಂದು ತಿಳಿದಿದ್ದರು. ಈಗಲಾದರೋ ಈ ಭಾವವು ತಪ್ಪಿ ಹೋಯಿತು. ಈಗ ಎಲ್ಲಿ ನೋಡಿದರೂ ಅನಾಥಶಾಲೆಗಳು ಸ್ಥಾಪಿಸಲ್ಪಡುತ್ತಲಿವೆ. ಈಗ ಜಪಾನಿನಲ್ಲಿರುವ ಬಲು ದೊಡ್ಡದಾದ ಅನಾಥಾಲಯವು ಒಬ್ಬನೊಬ್ಬ ಜಪಾನ್ಯ ಕ್ರೈಸ್ತನಿಂದ ಸ್ಥಾಪಿಸಲಾಯಿತು. ಅವರು ಸಕಲ ಮನುಷ್ಯರನ್ನೂ ಸಹೋದರರೆಂದೇ ಭಾವಿಸಿ ಅವರೆಲ್ಲರ ವಿಷಯದಲ್ಲಿ ಉಪಕಾರಿಗಳಾಗಿರುವದು ತಮ್ಮ ಧರ್ಮವೆಂದು ತಿಳಿದಿರುವರು.

ಬಾತ್ಮೀದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ನಿಗಾ ಕೊಡಲಾರೆವು. ಆದಕಾರಣ ಬಾತ್ಮೀದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ನಿಜವಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು, ಇಂಥವುಗಳಿಗೆ ನಾವು ನಿಗಾ ಕೊಡಲಾರೆವು.

ಬಾತ್ಮೀದಾರರು ಪಡುವ ಅಭಿಪ್ರಾಯಗಳಿಗೆ ನಾವು ಜವಾಬುದಾರರಾಗುವುದಿಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಎಡಿ.

ಕರೆಸ್‌ಪಾಂಡೆನ್ಸ್.

ಆನೆಯ ಕಾಟ.

ಅಯ್ಯಾ,

ಚಾಮರಾಜನಗರದ ತಾಲ್ಲೂಕಿಗೆ ಸೇರಿದ ಸರ್ವಮಾನ್ಯ ಕೊಟಕನಪಳ್ಳಿ ಕಾಡಿನಲ್ಲಿ ಕೆಲವು ದಿವಸಗಳಿಂದ ಒಂದು ಪಳಗಿದ ಗಂಡು ಆನೆಯು ಬಂದು ಸೇರಿಕೊಂಡು, ಜನಗಳಿಗೂ ಜಾನುವಾರುಗಳಿಗೂ ತೊಂದರೆಕೊಡುತ್ತಿರುವುದಲ್ಲದೆ ತೋಟಗಳನ್ನು ಹಾಳುಮಾಡುತ್ತಿರುವುದು. ಜನರೆಲ್ಲರೂ ಈ ಅಲ್ಪಕಾಡಿಗೆ ಹೋಗಲು ಬಹು ಹೆದರುತ್ತಾರೆ. ಇದು ನೆನ್ನೆ ನಡೆದ ಕೆಡ್ಡಾದಿಂದ ತಪ್ಪಿಸಿಕೊಂಡು ಬಂದ ಆನೆಯಾಗಿರಬಹುದು. ಸರ್ಕಾರದವರು ಶೀಘ್ರದಲ್ಲಿಯೇ ಇದರ ಬಾಧೆಯನ್ನು ನಿವಾರಣೆಮಾಡಬೇಕು.

ಸಿ. ವಿ. ಆರ್.

ರಬ್ಬರ್ ಗಿಡ—ಪ್ರಶ್ನೆ

ಅಯ್ಯಾ,

ನಾವು ನಮ್ಮ ಜಮೀನಿನಲ್ಲಿ ರಬ್ಬರ್ ಗಿಡವನ್ನು ಹಾಕಿ ಬೆಳಸಬೇಕೆಂದು ವಿಶೇಷ ಅಭಿಲಾಷೆ ಇರುವದರಿಂದ ಇದನ್ನು ಬೆಳೆಸತಕ್ಕ ವಿಧಾನವನ್ನೂ, ಅದಕ್ಕೆ ತರೀ ಅಥವಾ ಖುಷ್ಕಿ ಜಮೀನು ಬೇಕೋ ಅದನ್ನೂ, ಬೀಜಗಳು ದೊರೆಯತಕ್ಕ ಸ್ಥಳವನ್ನೂ ದಯವಿಟ್ಟು ತಾವಾಗಲಿ ಅಥವಾ ತಮ್ಮ ವಾಚಕರೇ ಆಗಲಿ ತಿಳಿಸಬೇಕೆಂದು ಕೋರುತ್ತೇನೆ. ಅಲ್ಲದೆ ಇದನ್ನು ಬೆಳೆಸತಕ್ಕ ವಿಚಾರವಾಗಿ ಪುಸ್ತಕವೇನಾದರೂ ಇದ್ದರೆ ಅದರ ಹೆಸರನ್ನೂ ಅದು ಸಿಕ್ಕತಕ್ಕ ಸ್ಥಳವನ್ನೂ ತಿಳಿಸಬೇಕೆಂದು ಪ್ರಾರ್ಥನೆ.

ತಲ್ಲಂ ಲಕ್ಷ್ಮಣಶೆಟ್ಟಿ,
ಮಂಟೇನಹಳ್ಳಿ.

ರೈಲಿನಲ್ಲಿ ಚುಟ್ಟಾ ಸೇದುವದು

ಅಯ್ಯಾ,

೩ ನೇ ತರಗತಿಯ ರೈಲ್‌ಗಾಡಿಯಲ್ಲಿ ಜನರು ಪ್ರಯಾಣಮಾಡುತ್ತಿರುವಾಗ ಕೆಲವರು ಬೀಡಿ, ಸಿಗರೇಟುಗಳನ್ನು ವಿಶೇಷವಾಗಿ ಸೇದುವರು. ಅವರ ಬಾಯಿಂದ ಹೊರಟ ಹೊಗೆಯು ಗಾಡಿಯಲ್ಲಿ ತುಂಬಿಕೊಂಡು, ಅಲ್ಲಿರುವವರ ಮೂಗುಬಾಯಿಗಳನ್ನು ಹೊಕ್ಕು ಹೊರಡುತ್ತಿರುವದು. ಬಹುಜನಗಳಿಗೆ ಇದು ಸೇರದೆ ಅಸಹ್ಯದಿಂದ ಮೂಗುಬಾಯಿಗಳನ್ನು ಮುಚ್ಚಿಕೊಂಡು ಅಸಮಾಧಾನಪಡುವರು. ಕೆಲವರು ಪಕ್ಕದಲ್ಲಿರುವ ಕಿಟಕಿಗಳಲ್ಲಿ ತಲೆ ಇಟ್ಟುಕೊಳ್ಳುವರು. ಆದರೂ ಅದರ ವಾಸನೆಯನ್ನು ನಿವಾರಣೆಮಾಡಿಕೊಳ್ಳಲಾರರು. ಈ ಸಂಗತಿ ಉಪೇಕ್ಷೆಯಲ್ಲ. ಆದ್ದರಿಂದ ಪ್ರಜಾವತ್ಸಲರಾದ ಸರ್ಕಾರದವರೂ ಕಂಪೆನಿಯವರೂ ೩ ನೇ ತರಗತಿಯ ರೈಲ್‌ಗಾಡಿಗಳ ಪ್ರಯಾಣಿಕರು ಬೀಡಿ, ಸಿಗರೇಟುಗಳನ್ನು ಸೇದಕೂಡದೆಂತಲೂ ಸ್ಟೇಷನಿನಲ್ಲಿ ಗಾಡಿ ನಿಂತಾಗ ಅವಶ್ಯವಾದರೆ ಕೆಳಗಿಳಿದು ಸೇದಿಕೊಳ್ಳಬಹುದೆಂತಲೂ ನಿಬಂಧನೆಮಾಡಿದರೆ ರೈಲಿನ ಸೌಕರ್ಯಗಳನ್ನು ಉಪಯೋಗಿಸುವ ಪ್ರಯಾಣಿಕರಿಗೆ ನಿರ್ಬಾಧಕವಾದ ಸುಖಸೌಕರ್ಯಗಳುಂಟಾಗುವವು. ಇದರಿಂದ ರೈಲ್ವೆ ಆದಾಯಕ್ಕೆ ಕುಂದಕವೇನೂ ಉಂಟಾಗುವದಿಲ್ಲ.

ಕೆ. ಆರ್. ರ.

ದಾಯಭಾಗದ ಕಾನೂನಿನಿಂದ ಕ್ರೈಸ್ತರಿಗೆ ಮಾತ್ರ ಪ್ರಯೋಜನವಾಗುತ್ತೇ? ಇತರರಿಗೆ ಅದರಿಂದ ಪ್ರಯೋಜನವಿಲ್ಲವೋ?

ಅಯ್ಯಾ,

ಈಗ ಚರ್ಚೆಯಲ್ಲಿರುವ ದಾಯಭಾಗದ ಕಾನೂನಿನ ವಿಷಯವಾಗಿ "ನವೀನಗನ್ನಡಿ"ಯಲ್ಲಿಯೂ, "ವೃತ್ತಾಂತ ಚಿಂತಾಮಣಿ"ಯಲ್ಲಿಯೂ ಪ್ರಕಟಿಸಲ್ಪಟ್ಟ ಸಂಗತಿಗಳಲ್ಲಿ ಆ ಬರವಣಿಗೆದಾರರು ದಾಯಭಾಗದ ಕಾನೂನಿನಿಂದ ಕ್ರೈಸ್ತರಿಗೆ ಮಾತ್ರ ಪ್ರಯೋಜನವಾಗುತ್ತೇ ಹೊರತು ಇತರರಿಗೆ ಅದರಿಂದ ಏನೇನೂ ಪ್ರಯೋಜನವಾಗುವದಿಲ್ಲವೆಂದು ಪದೇ ಪದೇ ಹೇಳುತ್ತಿರುವದನ್ನು ವಿಚಾರಿಸಿದರೆ ಕೇಳಿ ವ್ಯಸನಪಡದೆ ಇರಲಾರೆನೆಂದು ನಂಬುತ್ತೇನೆ.

ಮೈಸೂರು ಸಂಸ್ಥಾನದಲ್ಲೆಲ್ಲಾ ಕ್ರೈಸ್ತರು ಮಾತ್ರ ಜಾತಿಭ್ರಷ್ಟರಾಗಿದ್ದಾರೋ? ಬೇರೆ ಮತಗಳಲ್ಲಿ ಜಾತಿಭ್ರಷ್ಟರಿಲ್ಲವೋ? ಮೈಸೂರು ಸರ್ಕಾರದವರು ಬಹು ದೂರಾಲೋಚನೆಯಿಂದ ಪರ್ಯಾಲೋಚಿಸಿರುವ ಕಾನೂನು ಕ್ರೈಸ್ತರಿಗೆ ಮಾತ್ರವೇ ಅಲ್ಲ. ನಿಷ್ಕಾರಣ ಪ್ರಯೋಜನಕ್ಕಾಗಿದೆ ಎಂದು ಏಕೆ ತಿಳಿಸಿದ್ದಾರೆಂದು ನನಗೆ ಬಹಳ ಚಿಂತೆಯಾಗಿ ಹೇಳ್ಲಿನಾ ನ್ಯಾಯವೆಂದರೆ—

೧. ಜಾತಿಪದ್ಧತಿಯಿಂದ ಕಷ್ಟನಷ್ಟಗಳನ್ನನುಭವಿಸುವವರಿಗೆ ಈ ಕಾನೂನು ತುಂಬಾ ಸಹಾಯಮಾಡುತ್ತದೆ. ಹ್ಯಾಗೆಂದರೆ, ಜಾತಿಪದ್ಧತಿಯ ಪ್ರಯೋಜನಗಳಿಗೂ ಜನರ ಏಳಿಗೆಗೂ ಪ್ರಜೆಗಳ ನವನಾಗರೀಕತೆಗೂ ಐಕಮತ್ಯದ ಶಕ್ತಿಗೂ ವ್ಯಾಪಾರಾಭಿವೃದ್ಧಿಗೂ ಪ್ರಜೆಗಳ ಅನ್ಯೋನ್ಯತೆಗೂ ಶತ್ರುವಾಗಿರುವದನ್ನು ತಿಳುವಳಿಕೆಯುಳ್ಳ ಒಬ್ಬ ಧೀರಪುರುಷನು ಕಂಡುಕೊಂಡು, ಇಂಥಾ ಕೆಟ್ಟ ಪದ್ಧತಿಯನ್ನು ಎದುರಿಸಿ, ಮನಃಪೂರ್ವಕವಾಗಿ ಅದಕ್ಕೆ ಪ್ರತಿಭಟಿಸಿ ನಿಂತುಕೊಂಡಿರುವಾಗ ಅನೇಕ ನಷ್ಟಗಳಿಗೆ ಗುರಿಯಾಗಿರುತ್ತಾನಲ್ಲವೋ? ಅಂಥವನಿಗೆ ಸಹಾಯ ಮಾಡುವ ಹಾಗೆ ಈ ಕಾನೂನು ಬೇಕಾಗಿದೆಯಲ್ಲವೋ?

೨. ಒಬ್ಬ ಹಿಂದೂ ಮನುಷ್ಯನು ವಿದೇಶದ್ಯಾಭ್ಯಾಸಕ್ಕಾದರೂ ತನ್ನ ವ್ಯಾಪಾರಾಭಿವೃದ್ಧಿಗಾದರೂ ಇತರ ಪ್ರಯೋಜನಕರವಾದ ಕಾರ್ಯಗಳ ಉದ್ದೇಶದಿಂದ ಸಮುದ್ರಯಾನಮಾಡುತ್ತಾನೆ. ಅವನು ತಿರುಗಿಬಂದು ಜಾತಿಪದ್ಧತಿಯ ಪ್ರಕಾರ ಪ್ರಾಯಶ್ಚಿತ್ತವೇ ಮೊದಲಾದ ಕರ್ಮಗಳಿಂದ ಜಾತಿಯಲ್ಲಿ ಸೇರಲಿಕ್ಕೆ ಮನಸ್ಸಿಲ್ಲದೆ ಪ್ರತ್ಯೇಕವಾಗಿರುವಾಗ ತನ್ನ ಹಕ್ಕುಬಾಧ್ಯತೆಗಳನ್ನು ಕಳಕೊಳ್ಳುವದನ್ನು ಸರ್ಕಾರದವರು ನೋಡಿ, ಅವನ ಸಹಾಯಕ್ಕಾಗಿ ಒಂದು ಕಾನೂನನ್ನು ಮಾಡಬಾರದೋ? ಈ ಹೊಸ ಕಾನೂನಲ್ಲದೆ ಬೇರೆ ಮಾರ್ಗದಿಂದ ಅವನು ತನ್ನ ಹಕ್ಕುಗಳನ್ನು ಉರ್ಜಿತಪಡಿಸಿಕೊಳ್ಳುವದು ಹ್ಯಾಗೆ?

೩. ಒಬ್ಬ ತಂದೆಯ ಹೊಟ್ಟೆಯಲ್ಲಿ ಜನ್ಮಿಸಿದ ನಾಲ್ಕು ಮಂದಿ ಮಕ್ಕಳಲ್ಲಿ ಅಂಗಹೀನರಾದ ಇಬ್ಬರಿಗೆ ಹಕ್ಕುಬಾಧ್ಯತೆ ಇಲ್ಲವೆಂದು ಹಿಂದೂ ಶಾಸ್ತ್ರವಿಧಿ ಇದ್ದರೆ ತಂದೆತಾಯಿಗಳ ತರುವಾಯ ಆ ಮಕ್ಕಳು ತಮ್ಮ ಅಣ್ಣತಮ್ಮಂದಿರ ಮನೆಗಳಲ್ಲಿ ಅತ್ತಿಗೆ ನಾದಿನಿಯರ ಹಿಂಸೆಗೆ ಗುರಿಯಾಗುತ್ತಿರುವದನ್ನು ಸ್ವತಃ ನೋಡುತ್ತಿದ್ದೇವಷ್ಟೆ. ಆ ಅಂಗಹೀನರಿಗೆ ಹಕ್ಕುಬಾಧ್ಯತೆ ಇದ್ದರೆ ಆದರೆ ಎಲ್ಲರ ಹಾಗೆ ಸುಖಪಡುತ್ತಿರುವರಲ್ಲವೋ? ಇದು ಸತ್ಯವಾಗಿದ್ದ ಪಕ್ಷದಲ್ಲಿ ಈ ಕಾನೂನು ಅವರಿಗೆ ಸಹಾಯವಾಗುತ್ತದಲ್ಲವೇ?

೪. ವಿತಂತುಗಳು ತಮ್ಮ ಮಾನಪ್ರಾಣಗಳನ್ನು ಸಂರಕ್ಷಣೆ ಮಾಡಿಕೊಳ್ಳುವದಕ್ಕೂ ವಿಶಿಷ್ಟಾದವರ ಹಾಗೆ ಲೋಕದಲ್ಲಿ ಸುಖ

ಅವರು ಪುನರ್ವಿವಾಹ ಮಾಡಿಕೊಳ್ಳುವದು ಧರ್ಮವೆಂದು ತಿಳಿದವರನ್ನು ನೋಡಿ ಮರುಕಪಡುವ ದೊಡ್ಡಮನುಷ್ಯರೆ ಒಪ್ಪಿಕೊಂಡರೆ ಆ ಅಬಲೆಯರು ಕಳಕೊಳ್ಳುವ ಆಸ್ತಿಪಾಸ್ತಿ ಸಂಪಾದಿಸಿದ ಅರ್ಜಿತಪಡಿಸುವದಕ್ಕೆ ಈ ಕಾನೂನು ಅವರಿಗೆ ಸಹಾಯವಾಗುವದಲ್ಲವ್ರೋ?

ವಿವಾಹಕ್ಕೆ ಮುಂಚಿತವಾಗಿಯೇ ಕ್ರೈಸ್ತರೆದು ಪ್ರಾಯಕ್ಕೆ ಬಂದ ಮಕ್ಕಳು ಸಹಾ ಜಾತಿ ಭ್ರಷ್ಟರಾಗಿ ತಮ್ಮ ವಿವಾಹಕಾಲ ಹಕ್ಕುಗಳನ್ನು ಕಳಕೊಂಡರೆ ತಮ್ಮದಲ್ಲದ ತಪ್ಪಿತಕ್ಕಾಗಿ ಹಕ್ಕುಗಳನ್ನು ಕಳಕೊಳ್ಳುವ ಈ ನಿರ್ಭಾಗ್ಯರಿಗಾದ ಅಬ ಹಕ್ಕನ್ನು ಸ್ಥಾಪಿಸುವದಕ್ಕಾಗಿ ಸರ್ಕಾರದವರು ಒಂದು ಕಾನೂನು ಹಿಡಿಸುವದು ನ್ಯಾಯವೆಂದು ಒಪ್ಪಿಕೊಂಡರೆ ಅವರಿಗೂ ಈ ಕಾನೂನು ಸಹಾಯಕಾರಿಯಾಗಿರುತ್ತದಲ್ಲವ್ರೋ?

ಪತ್ರಿಕೆಯವರು ಈ ಕಾನೂನು ತಮಗೆ ಅನುಕೂಲವಾಗುವದು ಯೋಚಿಸದೆ ಇರುವದು ಆಶ್ಚರ್ಯವಾಗಿದೆ. ಇವರು ಕಾನೂನಿನ ವಿಷಯ ದೂರದಲ್ಲಿರುವಂಥ ವಿದ್ಯಾವಂತರ ಬುದ್ಧಿ ಆದಂಥ ದೊಡ್ಡ ಮನುಷ್ಯರನ್ನು ಕೇಳಿದರೆ ಸದರಿಯವರು ಕಾನೂನಿನಿಂದ ತಮಗೂ ತಮ್ಮ ಮತಕ್ಕೂ ಮೇಲೇ ಹೊರ ಬಿದ್ದಿತೆಂದು ಬುದ್ಧಿ ಹೇಳುತ್ತಾರೆನ್ನುವದಕ್ಕೆ ಏನೇನೂ ಸಂಶಯ

ನೆಲಸಿಕೊಂಡಿದ ಸರ್ಕಾರದವರು ತಮ್ಮ ರಾಜ್ಯದ ಪ್ರಜೆಗಳಲ್ಲಿ ನಡೆಯುತ್ತಿರುವ ಕೆಟ್ಟ ಪದ್ಧತಿಗಳಿಂದ ಪ್ರಜೆಗಳಿಗುಂಟಾಗಿರುವ ದುಃಖವನ್ನು ನೋಡುತ್ತಾ ಇರುತ್ತಾರಾದ್ದರಿಂದ ಕ್ರೈಸ್ತರಿಗೆ ಮಾತ್ರವಲ್ಲ, ಕ್ರೈಸ್ತರು ಹಾಗೆ ಕಷ್ಟನಷ್ಟಗಳಿಗೆ ಗುರಿಯಾಗಿರುವವರ ಹಿತಕ್ಕೆ ನ್ಯಾಯಗಳು ತೋರ್ಪಡಿಸಲ್ಪಡುವ ಹಾಗೆ ಇದು ಪ್ರಯೋಜನಕಾರಿಯಾಗಿದೆ. ಎಂಬುವದಕ್ಕೆ ಏನೇನೂ ಸಂಶಯವಿಲ್ಲ. ಕ್ರೈಸ್ತರು ಪಕ್ಷಪಾತವಿಲ್ಲದೆ ಇವುಗಳನ್ನು ವಿಚಾರಿಸಿ ಕಾನೂನು ಜಾರಿಗೆ ಬರುವಂತೆ ತಮ್ಮಿಂದಾದ ಮಟ್ಟಿಗೂ ಮಾಡುವರೆಂದು ಅಪೇಕ್ಷಿಸುವ

ಒಬ್ಬ ಸತ್ಯವಾದಿ

ಸ್ವಾಮಿ ಯೋಗೀಶ್ವರಾನಂದರವರ ಉಪನ್ಯಾಸವು

ಕಳೆದ ಶನಿವಾರ ಸಾಯಂಕಾಲ ೬ ಘಂಟೆ ಮೊದಲ್ಗೊಂಡು ಇದಕ್ಕಾಗಿ ಕಟ್ಟಿಸಲ್ಪಟ್ಟ ದೆ ಸ್ಟ್ರೀಟ್‍ನ ಪಾಠಶಾಲೆಯಲ್ಲಿ ಯೋಗೀಶ್ವರಾನಂದರವರು ರಾಮಕೃಷ್ಣ ಪರಮಹಂಸರ ಜೀವನ ಚರಿತ್ರೆಯನ್ನು ಉಪನ್ಯಾಸ ಮಾಡಿದರು. ಇದರಲ್ಲಿ ಕಂಡುಬರುವ ಮುಖ್ಯಾಂಶಗಳು ಯಾವುವೆಂದರೆ—

ರಾಮಕೃಷ್ಣ ಪರಮಹಂಸರವರು ಸ್ಪಿನೋಜಾ, ಹರ್ಬರ್ಟ್ ಸ್ಪೆನ್ಸರ್ ಮತ್ತು ಕ್ಯಾಂಟ್ ಮುಂತಾದ ತತ್ವಜ್ಞರು ಹುಟ್ಟುವದಕ್ಕೆ ಮುಂಚೆಯೇ ಹಿಂದುಸ್ಥಾನದಲ್ಲಿ ಅದ್ವೈತಮತವು ಹೇರಳವಾಗಿ ಹಬ್ಬಿತ್ತು. ಅದು ಕ್ಷೀಣವಾಗಲು ಅದನ್ನು ಜೀರ್ಣೋದ್ಧಾರಮಾಡಿ ರಾಮಕೃಷ್ಣ ಪರಮಹಂಸರು ಉಪ್ಪಬಿಸಿದರು.

ಜೀವ ಪರಮೇಶ್ವರ ಭೇದವು ಅಜ್ಞಾನ ಆವರಣೆಯೆಂತಲೂ, ಉಪಾಧಿಯಿಂದ ಇವೆರಡರ ಏಕತ್ವಕ್ಕೆ ಭಂಗಬಂದಿತೆಂತಲೂ, ಪ್ರತಿಯೊಬ್ಬನೂ ಸಮಾಧಿಯಲ್ಲಿಯೂ 'ಅಹಂ ಬ್ರಹ್ಮಾಸ್ಮಿ' ಬ್ರಹ್ಮನಾಗುವನೆಂತಲೂ ಅರುಹಿದರು.

ಸರ್ವಮತಸ್ಥರೂ ತಮ್ಮ ತಮ್ಮ ಮತಗಳಲ್ಲಿಯೇ ಇದ್ದು ತಮ್ಮ 'ಮನಸ್ಸಿನಂತೆ ಮಹಾದೇವ' ಎಂಬುವಂತೆ ಯಾವ ರೀತಿಯಾದರೂ ಭಗವಂತನಿಗೆ ಅರ್ಚನೆ ಮಾಡಬಹುದೆಂತಲೂ, ಶ್ರುತಿಪ್ರಮಾಣಗಳೇ—

"ಏಕೋದೇವಸ್ಸರ್ವಭೂತೇಷುಗೂಢಃ"

"ಏಕಂ ರೂಪಂ ಬಹುಧಾಯಃ ಕರೋತಿ"

ಎಂದು ಘೋಷವಾಗಿ ಹೊಗಳುವದರಿಂದ ಸಕಲವೂ ತಾನಾಗಿ ಕಾಣಿಸಿಗುವನೆಂತಲೂ ಬಹುವಿಧ ಉದಾಹರಣೆಗಳಿಂದ ಸ್ಥಾಪಿಸಿದರು.

ರಾಮಕೃಷ್ಣ ಪರಮಹಂಸರು ಕೇಶವ ಚಂದ್ರಸೇನರನ್ನು ಶಿಷ್ಯನಾಗಿ ಮಾಡಿಕೊಂಡರೆಂತಲೂ, ಮತ್ತು ಅವರು ಪರಬ್ರಹ್ಮ ಅವತಾರವೆಂದು ಹೇಳಿದರು.

ಇವರ ಹೇಳಿರುವ ಪ್ರತಿಯೊಂದು ಅಂಶವನ್ನೂ ಚರ್ಚಿಸುವದಕ್ಕೆ ಸ್ಥಳಾವಕಾಶ ಸಾಲದೆಯಿರುವದರಿಂದ ಒಂದೆರಡು ವಿಷಯಗಳನ್ನು ಮಾತ್ರವೇ ವಿಮರ್ಶಿಸಿ ನೋಡೋಣ.

ಸ್ಪಿನೋಜಾ, ಕ್ಯಾಂಟ್, ಸ್ಪೆನ್ಸರ್ ಮುಂತಾದವರೆಲ್ಲರೂ ಪರಮೇಶ್ವರನ ಹೊರತು ಲವಲೇಶವಾದರೂ ಆಸ್ತಿಕಮತಸ್ಥರಲ್ಲವು. ಇವರೆಲ್ಲಾ ಭಗವಂತನು ಇಲ್ಲವೆಂದು ಸ್ಥಾಪಿಸಿದ್ದು ಅಲ್ಲದೆ ಆದಿಯಲ್ಲಿ ಒಂದು ಹುಟ್ಟುಕುರುಡನಂತೆ ಒಂದು ಶಕ್ತಿಯು ಪ್ರಕೃತಿಯಲ್ಲಿ ಕಂಡುಬರುವದೆಂತಲೂ, ಇದು ಎಂದಿಗೂ ಜ್ಞಾನಸ್ವರೂಪವಲ್ಲ, ತಿಳಿಯಲು ಅಸಾಧ್ಯವೆಂತಲೂ, ಪ್ರೀತಿಪೂರ್ವಕನಲ್ಲವೆಂದು ಹೇಳಿದವನು ಶುದ್ಧ ಅದ್ವೈತಮತವು ನಾಸ್ತಿಕನನ್ನೇ ಹುಟ್ಟಾಗಿ ಪರಮಾತ್ಮನನ್ನು 'ನಿರ್ಗುಣಸ್ವರೂಪಿ' ಎಂದು ಹೇಳುವದರಿಂದ ಅಜ್ಞಾನನು, ಅಸಾಧ್ಯನು' ಮುಂತಾದ ಪದಗಳ್ಯಾವತ್ತೂ ಬ್ರಹ್ಮವೆಂಬ ಪರ್ಯಾಯನಾಮವನ್ನು ಹೊಂದಿ, ನಾಸ್ತಿಕತ್ವಕ್ಕೆ ಸರಿಹೊಂದು ಹೋಗುವವೇ ವಿನಹಾ ಎಂದೆಂದಿಗೂ ಆಸ್ತಿಕವನ್ನಿಸುವದು ಹೀಗಿರುವ ಕಾರಣ ಅದ್ವೈತವು ಒಂದು ಕೇವಲ ನಾಸ್ತಿಕಮತವೇ ಆಗಿರುತ್ತದೆ.

ಸ್ವಾಮಿ, ಯೋಗೀಶ್ವರಾನಂದರು ಅದ್ವೈತಮತವನ್ನು ವೇದಪ್ರಮಾಣವಾಗಿ ಸ್ಥಾಪಿಸಿ, ಜನರು ಮೆಚ್ಚುವಂತೆ ನೂತನವಾದ ಪ್ರಶಂಸೆಯನ್ನು ಸಂಪಾದಿಸಿಕೊಂಡದ್ದು ನೋಡಿದರೆ ಎಷ್ಟರಮಟ್ಟಿಗೆ 'ಪಾಮರರೋ, ಪಾತ್ರರೋ?' ಎಂಬ ಸಾಮತಿಯು ನಿಜವಾಯಿತೆನ್ನುವದು ಸ್ಪಷ್ಟವಾಗುತ್ತದೆ.

ವೇದಗಳೇ ಆಧಾರಭೂತವಾಗಿದ್ದ ಪಕ್ಷದಲ್ಲಿ ಆ ವೇದಗಳೇ ದ್ವೈತಮತವನ್ನೂ ವಿಶಿಷ್ಟಾದ್ವೈತವನ್ನೂ ಏಕೆ ಸಾರುತ್ತವೆ?

"ದ್ವಾಸುಪರ್ಣಾಸಯುಜಾ ಸಖಾಯಾಸಮಾನಂ ವೃಕ್ಷಂಪರಿಷ್ವಜಾತೆ ॥ ತಯೋರನ್ಯಃ ಪಿಪ್ಪಲಂಸ್ವಾದ್ವತ್ತ್ಯನ ಶ್ನನ್ನನ್ಯೋ ಅಭಿಚಾಕಶೀತಿ॥"

ಎಂಬ ಶ್ರುತಿಪ್ರಮಾಣದಲ್ಲಿ ದ್ವೈತಮತಕ್ಕೆ ಎಷ್ಟು ನಿದರ್ಶಕವಾದ ಮಾತು ಹೇಳಲ್ಪಡಲಿಲ್ಲವು? ಇದಕ್ಕಿಂತಲೂ ಮತ್ತೊಂದು ಶ್ಲೋಕದಲ್ಲಿ ಸಾರಿ ಸಾರಿ ಹೇಳುವದನ್ನು ನೋಡಿರಿ:

"ಸಮಾನೇ ವೃಕ್ಷೇ ಪುರುಷೋನಿಮಗ್ನೋ ಅನೀಶಯಾ ಶೋಚತಿ ಮುಹ್ಯಮಾನಃ ॥ ಜುಷ್ಟಂಯದಾಪಶ್ಯತಿ ಚಾನ್ಯಮೀಶಮಸ್ಯ ಮಹಿಮಾನ ಮಿತಿವೀತ ಶೋಕಃ॥"— ಯಜುರ್ವೇದ ಮುಂಡಕೋಪನಿಷತ್.

ಇನ್ನೇ ಮುಂತಾದ ವೇದೋಕ್ತಿಗಳು ನೂರಾರು ಉದಹರಿಸಬಲ್ಲೆನು.

ಜೀವಪರಮೇಶ್ವರ ಭೇದವಿಲ್ಲದಿದ್ದರೆ ಉಪಾಧಿಯು ಯಾರಿಗೆ ಆವರಿಸಿತು? ಚೇತನ ಅಚೇತನ ವಸ್ತುಗಳ್ಯಾವತ್ತೂ ಪರಬ್ರಹ್ಮಸ್ವರೂಪವಾದರೆ ನಾನು ಬರೆಯುವ ಲೇಖಣಿಯೂ, ನಾನು ಭುಂಜಿಸುವ ಊಟವೂ, ನಾನು ಓದುವ ಪುಸ್ತಕವೂ ಭಗವಂತನೆಯೇ ಅಲ್ಲವೇ? ಹಾಗಾದರೆ ನಾನೂ ಬ್ರಹ್ಮನು. ಬ್ರಹ್ಮವು ಬ್ರಹ್ಮವಾದ ಊಟವನು ಊಟ ಮಾಡುತ್ತದೆ! ಬ್ರಹ್ಮವು ಬ್ರಹ್ಮವಾದ ಪುಸ್ತಕವನ್ನೋದುತ್ತದೆ! ಬ್ರಹ್ಮವು ಅಜ್ಞಾನ ಆವರಣದಿಂದ ಕೆಲವುವೇಳೆ ದುಷ್ಕೃತ್ಯವನ್ನೆಸಗುವದು! ಹಲವು ಸಮಯಗಳಲ್ಲಿ ಸುಕೃತಿಯನ್ನು ಮಾಡುವದು! ಆಹಾ, ಆಗಬಹುದು. ಒಳ್ಳೇ ತರ್ಕವು! ಇದು ಶಿವಲೀಲೆಯೋ? ನರಾಟವೋ? ಅಜ್ಞಾನದ ಪುಂಜವೋ? ಮಾಯಾ ಜಾಲವೋ? ನಾನರಿಯೆನು! ಭಗವಂತನು ಸ್ವೇಚ್ಛಾಮಾತ್ರವಾಗಿ ತನ್ನ ಅಚಂಚಲಸ್ವರೂಪವನು ಚಂಚಲವನ್ನೈದು, ವಾಸಾರ್ಪಿಸಿ, ಭಕ್ತರ ಮನಸ್ಸಿನಂತೆ ದೃಶ್ಯನಾಗಿ ಮೋಕ್ಷವನ್ನೀಯುವದರಿಂದ ಆಯಾ ಮಾನವರು ತಮ್ಮ ಮತಗಳಲ್ಲಿಯೇ ಇದ್ದುಕೊಂಡು ಇಚ್ಛಾನುಸಾರದಂತೆ ಆತನನ್ನು ಆರಾಧಿಸುವದೇ ವೇದಾಂತದ ಸಾರವಾಗಿದ್ದಲ್ಲಿ ಯೋಗೀಶ್ವರಾನಂದರು ಕಲ್ಕತ್ತಾ ಪಟ್ಟಣದಿಂದ ವೃಥಾ ಕಷ್ಟಪಟ್ಟು ಇಲ್ಲಿ ಬಂದು ಏಕೆ ಬೋಧಿಸುವರೋ ನಮಗೆ ತಿಳಿಯದು. ಹಾಗಾದರೆ ಇವರ ಹೇಳಿಕೆಯ ಮೇಲೆಯೇ ತುಚ್ಛವಾಗಿಯೂ ಕೇವಲ ಹೇಯವಾಗಿಯೂ ಇರುವ ಕ್ಷುದ್ರದೇವತೆಗಳನ್ನು ಆರಾಧಿಸುವವರೆಲ್ಲರೂ, ಕುಡಿದು ಉನ್ಮತ್ತರಾಗಿ ವಿಗ್ರಹಗಳಿಗೆ ಆಹುತಿ, ಬಲಿಗಳನ್ನು ಕೊಡುವ ಸಾವಿರಾರು ಭಕ್ತಾದಿವರ್ಗದವರೂ ವೇದಾಂತ ಮತದವರಿಗೆ ಬಹು ಯೋಗ್ಯರಾಗಿಯೂ ನ್ಯಾಯವಾಗಿಯೂ ಇರಬಹುದೆಂದು ಕಂಡುಬರುತ್ತದೆ. ಇಂತಹ ಬೋಧನೆಯಲ್ಲಿ ಎಷ್ಟರಮಟ್ಟಿಗೆ ಪ್ರಾಜ್ಞತೆಯುಂಟೋ ವಾಚಕರುಗಳಾದಿಯರೇ ನಿರ್ಭಯವಾಗಿ ಆಲೋಚಿಸಲಿ.

ಇನ್ನೇ ಪಕ್ಷ ಒಂದು ನೂತನಾದಿ ಮುಕ್ತಾಯವು ಮಾಡುವೆನು. ರಾಮಕೃಷ್ಣ ಪರಮಹಂಸರೇ ಅನೇಕಾವರ್ತಿ ತಮ್ಮ ಶಿಷ್ಯರು ಬಂದು "ಒಸ್ವಾಮಿ" ಎಂದು ಪ್ರಶಂಸಿಸುವದಕ್ಕೆ ಅವರು ಅವರನ್ನು ನಿವರಿಸಿ ಹೇಳಿದ್ದೇನಂದರೆ—"ನಾನು ಸ್ವಾಮಿಯಾಗಿದ್ದಪಕ್ಷದಲ್ಲಿ ಏಕೆ ಈ ದೇಹಬಾಧೆಗಳಿಗನುಭವಿಸುವೆನು? ಆದ್ದರಿಂದ ಓ! ಮಕ್ಕಳೇ, ತೊಲಗಿರಿ."

ಕೇಶವ ಚಂದ್ರಸೇನರು ಯಾರಿಗೂ ದಾಸರಾಗಲಿಲ್ಲವು. ಯಾರನ್ನೂ ತಿರಸ್ಕರಿಸಲಿಲ್ಲವು. ಅವರಿಗೆ ಕ್ರಿಸ್ತನೂ ಒಂದೇ, ಚೈತನ್ಯನೂ ಒಂದೇ. ಅವರು ಯಾರಲ್ಲಾದರೂ ಲೇಶಮಾತ್ರ ಜ್ಞಾನಸಂಪಾದನೆ ಮಾಡುವದಕ್ಕೆ ಶ್ರೀಸ್ವರ ಧರ್ಮಗಳನುಸ್ಸರಿಸಿ ಅಪಿಸಾರರಿಂದಲೂ ಫಕೀರರಿಂದಲೂ ನಮ್ರ ಮನಸ್ಕರಾದನ್ನೇ ವಿನಹಾ ಯಾರನ್ನೂ ಗುರುವೆಂದು ಕರೆಯಲಿಲ್ಲವು. ಬ್ರಹ್ಮ ಸಮಾಜದವರ ಬಿರುದಾಂಕಿತವೇ ಇದು.

ಬೆಂಗಳೂರು ಸಿಟಿ. ಎಂ ನಾರಾಯಣಿಂಗ್

ತಾಲ್ಲೋಕು ವರ್ತಮಾನಗಳು.

ತರೀಕೆರೆ.—ಈ ಪ್ರಾಂತ್ಯ ಬಿಸಲು ಬಲವಾಗಿದೆ. ಬೈಲು ಸೀಮೆಗಿಂತಲೂ ಮಲನಾಡಿನಲ್ಲಿ ಬಿಸಲು ಹೆಚ್ಚೆಂದು ಕಾಣುತ್ತದೆ. ಕಳೆದ ೯ ನೇ ತಾರೀಖಿನಲ್ಲಿ ಕೊಪ್ಪತಾಲ್ಲೋಕು ಎಲ್ಲೋಣಿ ತೋಟದಲ್ಲಿ ಒಂದು ಎತ್ತನ್ನು ಕೊಂದಿದ್ದ ಒಂದು ಚಿರತೆಯನ್ನು ಮೆ॥ ನರ್ಸ್ ಸಾಹೇಬರು ಕೊಂದರು.—ಶಿವಮೊಗ್ಗಾ ಪ್ರಾಂತ್ಯ ತೀಕ್ಷ್ಣಸಲು ಕೆಟ್ಟು ಹೋಯಿತೆಂದೂ ಬೆಂಕಿಪುರದ ಕಡೆಯಿಂದ ಅನೇಕ ಜನರು ಬಿಡರಕ್ಕಿಯನ್ನು ಗುಡಿಸಿಕೊಂಡು ಹೋಗಲು ಯಮೇಹಳ್ಳಿ ಪ್ರಾಂತ್ಯ ಹೋಗುತ್ತಲಿದ್ದಾರೆಂದೂ ಕೇಳುತ್ತೇನೆ. ಇವರ ದುರಾದೃಷ್ಟಕ್ಕೆ ಕೆಲವು ಕಡೆ ಕಾಡಿಗೆ ಬೆಂಕಿ ಬಿದ್ದು, ಬಿದರಕ್ಕಿಯೆಲ್ಲಾ ಸುಟ್ಟು ಹೋಗಿರುವದರಿಂದ ಬೇರೇ ಕಡೆಗೆ ಹೋಗಿ ಅಲ್ಲಾ ಶಿಕ್ಕುವ ಜಾಗದಲ್ಲಿ ಕೆಲವು ದಿವಸ ಗಳಿದ್ದು ತಮಗೆ ಬೇಕಾದಷ್ಟನ್ನು ಸಂಗ್ರಹಿಸಿಕೊಂಡು ಹೋಗುತ್ತಲಿದ್ದಾರೆ.—ಶಿವಮೊಗ್ಗೆಯಲ್ಲಿಯೂ ಬೆಂಕೀಪುರದಲ್ಲಿಯೂ ಪ್ಲೇಗ್ ಇರುತ್ತದೆ. ಅನೇಕ ಜನರು ಷೆಡ್ಡುಗಳಲ್ಲಿ ವಾಸ ಮಾಡುತ್ತಲಿದ್ದಾರೆ.—ಶಿವಮೊಗ್ಗಾದಲ್ಲಿರುವ ಘನ ಪಾದ್ರಿಗಳಾದ ನೈಟಿಂಗೇಲ್ ದೊರೆಯವರು ತಮ್ಮ ಉಪದೇಶಿಗಳ ಜೊತೆಯಲ್ಲಿ ೨೧ ನೆ ತಾರೀಖಿನಿಂದ ಪ್ರಸಂಗಪ್ರಯಾಣಕ್ಕೆ ಹೊರಡುವರೆಂದು ಕೇಳುತ್ತೇನೆ. ಘನ ರೆಡ್ಮಂಡ್ ದೊರೆಯವರು ಮೂಡಿಗೆರೆ, ಕೊಪ್ಪ ತಾಲ್ಲೋಕುಗಳಲ್ಲಿ ತಮ್ಮ ಕೆಲಸವನ್ನು ತೀರಿಸಿಕೊಂಡು, ಈಗ ತರೀಕೆರೆ, ಸಂತೆಮೇರಿ ಪ್ರಾಂತ್ಯದಲ್ಲಿ ತಮ್ಮ ಕೆಲಸವನ್ನು ನಡಿಸುತ್ತಲಿದ್ದಾರೆ. ಇನ್ನೂ ತಮ್ಮ ಹೆಡ್ ಕ್ವಾರ್ಟರಿಗೆ ಹೋಗುವದಕ್ಕೊಂದು ವಾರವಾದೀತೆಂದು ತೋರುತ್ತದೆ.

ಚನ್ನಪಟ್ಣ.—ಬಿಸಿಲಿನ ತಾಪ ರುಂಬಾ ದುಸ್ಸಹವಾಗಿದೆ. ಜನರು ನೀರಿಗೋಸ್ಕರ ಪಡುವ ಶ್ರಮೆಯನು ವಿವರಿಸಲಶಕ್ಯವು. ಗೋಕಾಯಿಗಳಿಗಂತೂ ತೀರದ ಕಷ್ಟ.—ಕಳೆದ ವಾರ ಇಲ್ಲಿಗೆ ನಾಲ್ಕು ಮೈಲಿಗಳ ದೂರದಲ್ಲಿರುವ ಮುದುಗೆರೆ ಹೊಬಳಿ ಸೀಬಿನಹಳ್ಳಿಗೆ ಬೆಂಕಿ ಹತ್ತಿ ಊರಿಗೂರೇ ಸುಟ್ಟು ಬೂದಿಯಾಯಿತು. ಮತ್ತು ಇದೇ ತಾಲ್ಲೂಕು ನಿಳಕಂಠನಹಳ್ಳಿ ಗ್ರಾಮದಲ್ಲಿ ಜನರು ಕುಡಿಯುವ ನೀರಿಗೆ ಬಹಳವಾಗಿ ತೊಂದರೆ ಪಡುತ್ತಿರುವರು. ಜನರ ಗತಿಯೇ ಹೀಗಿರುವಾಗ್ಗೆ ಜಾನುವಾರುಗಳ ಪಾಡು ಹ್ಯಾಗಿರಬಹುದು! ಇಲ್ಲಿನ ಕೆರೆಯಲ್ಲಿ ಒಂದು ಭಾವಿ ತೆಗಿಸಬೇಕೆಂದು ನಮ್ಮ ಸಬ್ ಡಿವಿಜನ್ ಸಾಹೇಬರು ತಾವೇ ಆ ಗ್ರಾಮದ ಶ್ರಮವನ್ನು ಕಣ್ಣಾರ ನೋಡಿ ಭಾವಿ ತೆಗಿಸಿಕೊಡುವದಾಗಿ ಅಪ್ಪಣೆ ಪಾಲಿಸಿರುವದಾಗಿ ಕೇಳುತ್ತೇನೆ. ಪಯಾಳು ಪ್ರಭುಗಳು ಆದಷ್ಟು ಬೇಗ ಈ ಕಾರ್ಯ ಸಾಗಿಸಿಕೊಟ್ಟರೆ ತುಂಬಾ ಉಪಕಾರವಾದೀತು.—ಈ ಟವನಿನಲ್ಲಿ ಕಳ್ಳತನಗಳೂ ದೊಂಬಿಗಳೂ ದಿನೇದಿನೇ ವೃದ್ಧಿಯಾಗುತ್ತಲೇ ಇವೆ. ಕೋರ್ಟಿನಲ್ಲಿ ಒಂದರ ಮೇಲೊಂದು ವರ್ಯಾಪ್ತಿಗಳು ಪುರಸತ್ತಿಲ್ಲದೆ ನಡೆಯುತ್ತಿರುವವು.—ತಾ. ೧೦ ನೇ ಭಾನುವಾರ ಕಾಮದಹನದ ಮೆರವಣಿಗೆ ಆಗಬೇಕಾಯಿತು. ಪೇಟೆಯವರು ತಮ್ಮ ಕಾಮನ ಹೆಣವನ್ನು ಮೆರವಣಿಗೆ ತಂದರು. ಆದರೆ ಕೋಟೆಯವರೂ ಮತ್ತು ಎರೇಕೇರಿಯವರೂ ಮೆರವಣಿಗೆ ಬರುವ ದಾರಿ ಮುಸಲ್ಮಾನರು ತಡೆದದ್ದರಿಂದ ಈಗಿನವರೆಗೂ ದಹನಮಾಡದೆ ಮುಚ್ಚಿಡಿಸಲ್ಪಟ್ಟಿವೆ. ಬೇಕಾಗಿ ಬಂದಿದೆ. ಇಂದೋ ನಾಳೆಯೋ ನಮ್ಮ ಸಬ್ ಡಿವಿಜನ್ ಆಫೀಸರು ಬಂದು ಕಾಮನಿಗನ ಆಗಮಾಡುವರೆಂಬ ನಿರೀಕ್ಷೆಯಲ್ಲಿದ್ದಾರೆ.

ಕಾರೆಕಾನಹಳ್ಳಿ.—ಇಲ್ಲಿ ಮಳೆ ಇಲ್ಲದೆ ಬೆಳೆಗಳೆಲ್ಲಾ ನಾಶವಾಗಿ ಹೋಯಿತು. ೧೦—೧೫ ಖಂಡುಗ ಭತ್ತ ಬೆಳೆಯುತಕ್ಕವರು ೨—೩ ಖಂಡುಗ ಬೆಳೆಯುವದೇ ಪ್ರಯಾಸವಾಯಿತು. ನೀರಿನ ಕ್ರಮವಂತೂ ಹೇಳಬೇಕಾದ್ದೇ ಇಲ್ಲ. ಜನಗಳೇನೋ ಹಾಗೋ ಹೀಗೋ ಕಾಲ ಹಾಕಿಕೊಳ್ಳುವರು. ದನಗಳ ಕ್ರಮವನ್ನು ಕಣ್ಣಿನಿಂದ ನೋಡುವದು ತುಂಬಾ ಪ್ರಯಾಸವಾಗಿರುತ್ತೆ. ಇದಕ್ಕೆ ನಮ್ಮ ಅಮಲ್ದಾರ್ ಮೆ॥ ಸಿ ಕೃಷ್ಣಮಾಚಾರ್ಯುಲುಯವರು ನಿಗಾಕೊಟ್ಟು ತಕ್ಕ ಏರ್ಪಾಟು ಮಾಡುತ್ತಾರೆಂತ ನಂಬಿರುತ್ತೇನೆ.—ಕಳೆದ ೧೯೦೨ ನೇ ಇಸವಿಯಲ್ಲಿ ನಡೆದ ಕನ್ನಡ ಲೋವರ್ ಸೆಕಂಡರೀ ಪರೀಕ್ಷೆಗೆ ಈ ತಾಲ್ಲೂಕು ಎ. ವಿ ಸ್ಕೂಲಿನಲ್ಲಿ ೧೨ ಜನ ಹೋಗಿದ್ದರು. ಆ ಪೈಕಿ ಒಬ್ಬ ವಿನಹಾ ಬಾಕಿ ೧೧ ಜನಗಳೂ ತೇರ್ಗಡೆಯಾಗಿದ್ದಾರೆ. ಇದಕ್ಕೆ ಆ ತರಗತಿಯಲ್ಲಿ ಮೆ॥ ಎಂ. ಸುಬ್ರಹ್ಮಣ್ಯಶಾಸ್ತ್ರಿಗಳು ಶ್ರಮಪಟ್ಟು ಪಾಠಹೇಳುವದೇ ಮುಖ್ಯಕಾರಣವಾಗಿರುತ್ತೆ. ಇವರು ಬಂದ ಬಾಗಾಯಿತು. ಈ ಕಾನಕಾನಹಳ್ಳಿಯ ವಿದ್ಯಾಶಾಲೆಯು ಬಾಗಿಲು ತೆರೆದು ಬಿಟ್ಟಿರುತ್ತೆಂದು ಹೇಳಬಹುದು.—ನಮ್ಮ ಅಮಲ್ದಾರ್ ಮೆ॥ ಸಿ. ಕೃಷ್ಣಮಾಚಾರ್ಯುಲುಯವರು ಇದುವರಿವಿಗೂ ಪ್ರಜೆಗಳೆಲ್ಲರಲ್ಲಿಯೂ ಏಕರೀತಿಯಾದ ವಿಶ್ವಾಸವನ್ನು ಇಟ್ಟು, ಬಹಳ ಮರ್ಯಾದೆಯಿಂದ ಕಾಪಾಡಿಕೊಂಡು ಬಂದಿರುತ್ತಾರೆ. ಈಗ ಅವರಿಗೆ ವರ್ಗವೆಂಬುದಾಗಿ ಪದಂತಿ ಹುಟ್ಟಿರುವದರಿಂದ ನಮ್ಮಗಳಿಗೆಲ್ಲಾ ತುಂಬಾ ವ್ಯಾಕುಲಕ್ಕೆ ಕಾರಣವಾಗಿದೆ. ಸರ್ಕಾರದವರು ದಯವಿಟ್ಟು ಇನ್ನೂ ಕೆಲವು ದಿನ ಇವರನ್ನು ಇಲ್ಲಿಯೇ ಇರುವ ಹಾಗೆ ಮಾಡಿದರೆ ಬಹಳ ಸಂತೋಷವಾಗುತ್ತೆ.

ಕೋಲಾರ್ ಗೋಲ್ಡ್ ಫೀಲ್ಡ್.—ಬಿಸಲು ಬಹು ಕಠಿಣವಾಗಿದೆ. ಜಲವಸತಿ ಸಾಲದು. ಆದರೂ ಆಕಾಶವರೆ ನದಿಯಲ್ಲೂ ಬಾವಿಗಳಲ್ಲೂ ಜಲವು ಸಾಕಾದಷ್ಟು ಪ್ರಯಾಸಪಟ್ಟರೆ ಸಿಕ್ಕಬಹುದು. ಕಳೆದ ವರ್ಷ ಮಳೆ ಕಮ್ಮಿಯಾದ್ದರಿಂದ ಅನೇಕ ಬಾವಿಗಳು ಬತ್ತಿದವು. ದೆಹ್ಯಾಟ ಅಮಲ್ದಾರ್ ಮುತುವರ್ಜಿಯಿಂದ ಗ್ರಾಮ ಚಾಕರೀದಾರರು ಶ್ರಮಪಡುತ್ತಿದೆ. ಆದರೆ ಕಚರಾ ಗಾಡಿಯವರಿಗೂ ಬೀದಿ ಗುಡಿಸುವವರಿಗೂ ತಕ್ಕ ಕಾಲದಲ್ಲಿ ಸಂಬಳ ದೊರೆತರೆ ಕೆಲಸದಲ್ಲಿ ಆಸಕ್ತಿ ಹುಟ್ಟುತ್ತೆ.—ಪರ್ಕ್ ಇನ್ಸ್ಪೆಕ್ಟರ ಮನೆಗೆ ಆಕಸ್ಮಾತ್ ಬೆಂಕಿ ಬಿದ್ದು ಅವರಿಗಿದ್ದ ಸುಮಾರು ೩೦೦೦ ರೂ. ಬಾಳುವಷ್ಟು ಆಸ್ತಿ ನಾಶವಾಯಿತು. ಬಹಳ ದುಃಖ. ಹೊದಿಯುವ ಬಟ್ಟೆ ಮಾತ್ರ ಉಳಿಯಿತು.—ಮೊಹರಂ ಗಲಾಟೆಯಲ್ಲಿ ದೊಂಬಿ ಮಾರಾಮಾರಿ ನಡೆಯದೆ ಇದ್ದರೂ ಕಾಮನ ಮೆರವಣಿಗೆ ದಿವಸ ಪಾಳ್ಯಗಾರ ವೇಷ ಧರಿಸಿದ್ದವನ್ನು ಮಾರ್ಗದಲ್ಲಿ ವಿರೋಧಿಸಿದಂತೆಯೋ ಮತ್ತ್ಯಾವ ಕಾರಣದಿಂದಲೋ ಮಹಮ್ಮದೀಯರು ಹೊಡೆದರು. ಅನಂತರ ಅಮಲ್ದಾರರವರು ಸಮಾಧಾನಪಡಿಸಿದಂತೆ ತೋರುತ್ತೆ. ಇಲ್ಲಿ ಮಾರಾಮಾರಿ ಕೆಲಸಗಳು ಅತಿಯಾಗಿ ಅವಿದ್ಯಾವಂತರಲ್ಲಿ ಜಾಸ್ತಿ.—ಸೇಬಿಯಲ್ಲಿ ಕಮ್ಮಿ ತೂಕದ ಬಟ್ಟುಗಳೂ ಸೇರುಗಳೂ ತಪ್ಪಿಲ್ಲ.—ಇಲ್ಲಿಗೆ ಮಿಸ್ಟರ್ ಘನ ರೀಸ್ ದೊರೆಗಳು ಕಳೆದ ವಾರ ದಯಮಾಡಿ ಇಂಗ್ಲಿಷ್ ಮತ್ತು ಪಂಚಮಶಾಲೆಗಳ ವಿಚಾರಣೆಮಾಡಿ, ಮಿಷನ್ ಕೆಲಸವನ್ನು ಪರಾಂಬರಿಸಿದರು.—ಹಳ್ಳಿಗಳಲ್ಲಿ ದಂಡಿನ ಸರಬರಾಯಿಗೆ ಎಂದು ಸೇರಿ ಅನೇಕ ಸಾರಿ ಬೇರೆ ಬೇರೆ ಗ್ರಾಮಗಳಿಗೆ ಠೀಕದಾರರೂ ಪಟೇಲರೂ ತೋಟಿತಳವಾರ ಪಾರಪತ್ಯಗಾರ ಸರ್ಕಾರಿ ನೌಕರಮಾರ್ಗದ ಬಲಾತ್ಕಾರದಿಂದಲೋ ರಾಜಿಯಿಂದಲೋ ಮನೆಗೆ ನುಗ್ಗಿ ಹಿಡಿಯುವರೋ ಬಡಿದು ಬೀಸಿ ಸಿಕ್ಕಿಸಿಕೊಳ್ಳುವರೋ ಅಂತು ಅನೇಕ ವಿಧವಾಗಿ ತೆಗೆದುಕೊಂಡು ಹೋಗುವ ಕುರಿ, ಮೇಕೆ, ಕೋಳಿ, ಮೊಟ್ಟೆ, ಹುಲ್ಲಿಗೆ ನಾಲ್ಕನೇ ಒಂದು ಭಾಗ ಮಾತ್ರ ಕ್ರಯ ದಂಡಿನ ಶಿಪಾಯಿಗಳು ಸಮರ್ಪಿಸಿ ಕೊಡುತ್ತಾರೆಂತಲೂ, ರಾತ್ರಿ ಕಾಲದಲ್ಲಿ ಕತ್ತಲೆಯಲ್ಲಿ ವ್ಯಾಪಾರ ಮಾಡುತ್ತಾರೆಂತಲೂ, ಕಡೆಗೆ ಈ ನಾಲ್ಕನೇ ಭಾಗವೂ ಕೂಡ ಮಾಲೀಕರಿಗೆ ದಕ್ಕುವದಿಲ್ಲವೆಂತಲೂ, ಅವರ ಸಂಗದ ಸವಾಲುಗಳು ಅವರು ಹೇಳುವ ಸ್ಥಳಕ್ಕೆ ಮಾಲೀಕರೇ ಕೂಲಿ ಇಲ್ಲದೆ ಸಾಗಿಸಬೇಕೆಂತಲೂ ಕೆಲವು ಕಡೆ ವರ್ತಮಾನ ಉಂಟು. ಅಲ್ಲದೆ ಸರಬರಾಯಿನ ಇಲಾಖೆ ಅದಕ್ಕೆ ಸಂಬಂಧಪಟ್ಟ ನೌಕರರಿಗೂ ಆದಾಯ ಲಾಭಗಳುಂಟೆಂತ ಅಂತರಂಗ ವರ್ತಮಾನವಿದೆ.—ಇಲ್ಲಿನ ಪೋಲೀಸ್ ಇನ್ಸ್ಪೆಕ್ಟರಿಗೆ ಮುಳಬಾಗಲಿಗೆ ವರ್ಗವಾಯಿತು. ಜಮಾದಾರರು ಅವರ ಮೇಲವಿನ ಇನ್ಸ್ಪೆಕ್ಟರ್ ದರ್ಜೆಗೆ ಸೇರಲು ಅಪ್ಪಣೆ ಎದುರು ನೋಡುತ್ತಿದ್ದಾರೆ.—ಹೆಂಡದಂಗಡಿಯನ್ನೂ ಹುಟ್ಟಿ ಮಾರುವ ವಿಶಾನಿನ ಅಂಗಡಿಯನ್ನೂ ಕೊಂಚ ದೂರದಲ್ಲಿ ಇಡಿಸುವದು ಉತ್ತಮ.—ಇಲ್ಲಿ ಹೊಸದಾಗಿ ಪೋಸ್ಟಾಫೀಸಿಗೆಂದು ಕಟ್ಟಿಸಿರುವ ಸಾಹುಕಾರಿ ಕಟ್ಟಡವನ್ನು ಸೂಪರಿಂಟೆಂಡೆಂಟರು ನೋಡಿ ಅನುಕೂಲವಾಗಿಲ್ಲವೆಂದು ಹೇಳಿ ಸದ್ಯ ಹಳೇ ಕಟ್ಟಡದಲ್ಲೇ ಕೆಲಸ ನಡಿಸುತ್ತಿದ್ದಾರೆ.

P. SUBBROYA'S

World Renowned and most Efficacious

Ayurvedic Medicines

ಪಿ. ಸುಬ್ಬರಾಯಿಯವರ

ಲೋಕಪ್ರಸಿದ್ಧವಾದ ಮತ್ತು ಅತ್ಯಂತ ಗುಣಕಾರಿಯಾದ ಆಯುರ್ವೇದ ಔಷಧಗಳು.

11-19

೧೦. ಜ್ವರಸಂಹಾರಿ—ಎಲ್ಲಾ ವಿಧವಾದ ಜ್ವರ, ವಿಷಮಶೀತ ಜ್ವರ, ೨ ರ, ೩ ರ ಚಳಿ, ಇನ್‌ಫ್ಲುಯೆಂಜಾ ಚಳಿಜ್ವರ, ವಾತರೋಗ, ಇವುಗಳನ್ನು ಸಂಪೂರ್ಣವಾಗಿ ವಾಸಿ ಮಾಡುವದು ಪಟ್ಟಿಗೆ ೧ಕ್ಕೆ ರೂ ೧. ವಿ ಪಿ ಛಾರ್ಜು ೫ ಆಣೆ.

೧೧ ಕೂದಲು ಉದುರಿಸೋ ಗುಳಿಗೆ—ಕೂದಲು ಬೆಳೆದಿರುವ ಸ್ಥಳಕ್ಕೆ ಹಚ್ಚಿದರೆ ಚರ್ಮಕ್ಕೆ ತೊಂದರೆಯಾಗದೆ ೫ ನಿಮಿಷದಲ್ಲೇ ಉದುರಿ ಹೋಗುವದು ಸೀಸೆ ೧ ಕ್ಕೆ ೪ ಆಣೆ ವಿ ಪಿ ಛಾರ್ಜು ೬ ಸೀಸೆ ವರಿವಿಗೂ ೫ ಆಣೆ

೧೨ ಸುಗಂಧ ದಂತಚೂರ್ಣ—ಎಲ್ಲಾ ವಿಧವಾದ ಹಲ್ಲುನೋವುಗಳನ್ನು ವಾಸಿಮಾಡುವದು ಸೀಸೆ ೧ಕ್ಕೆ ೪ ಆಣೆ ವಿ ಪಿ ಛಾರ್ಜು ೬ ಸೀಸೆ ವರೆಗೂ ೫ ಆಣೆ

೧೩ ಚೇಳಿನ ಔಷಧ—ಚೇಳು ಕಚ್ಚಿದ ಸ್ಥಳಕ್ಕೆ ಕೂಡಲೆ ಇದರ ಕೆಲವು ತೊಟ್ಟುಗಳನ್ನು ಬಿಟ್ಟ ತಕ್ಷಣವೇ ಉರಿಯು ನಿಲ್ಲುವುದು ಪ್ರತಿ ಕುಟುಂಬದಲ್ಲಿಯೂ ಆವಶ್ಯಕವಾಗಿರಬೇಕಾದದ್ದು ಸೀಸೆ ೧ಕ್ಕೆ ೪ ಆಣೆ ವಿ ಪಿ ಛಾರ್ಜು ೧೨ ಸೀಸೆ ವರೆಗೂ ೫ ಆಣೆ ೧೨ ಸೀಸೆಗಳನ್ನು ಒಂದೇ ಆರ್ಡರ್ ತರಿಸಿಕೊಂಡರೆ ಬೆಲೆ ೨ ೮ ೦ ರೂ ವಿ ಪಿ ಛಾರ್ಜು ಅಲಾಯಿದ ಸಿಲಿಂಡರಿಗೆ ೬ ಆಣೆ

೧೪ ಮಧುರಧ್ವನಿ ಮಾತ್ರೆ—ಧ್ವನಿಯಲ್ಲಿರುವ ನ್ಯೂನತೆಗಳನ್ನು ಸರಿಮಾಡಿ ಮನೋಹರವಾದ ಧ್ವನಿಯನ್ನುಂಟುಮಾಡಿ ಸ್ಫುಟವಾಗಿ ಮಾತನಾಡುವದಕ್ಕೆ ವಿಶೇಷ ಅನುಕೂಲಪಡಿಸಿಕೊಡುವದು ಮುಖ್ಯವಾಗಿ ಸಂಗೀತಗಾರರು, ಉಪನ್ಯಾಸಕಾರರು ಮೊದಲಾದವರಿಗೆ ಬಹಳ ಸಹಕಾರಿಯು ಇದರ ಸೇವನೆಯಿಂದ ಬೊಬ್ಬರವಾದ ಧ್ವನಿಯು ಸರಿಯಾಗುವದು ಕಾಪಡದ ಕಿವಿಗಿಂಪಾಗುವಂತಹ ಧ್ವನಿಯು ಹೊರಡುವದು ಸೀಸೆ ೧ ಕ್ಕೆ ೮ ಆಣೆ ವಿ ಪಿ ಛಾರ್ಜು ೬ ಸೀಸೆ ವರೆಗೂ ೫ ಆಣೆ.

೧೫ ಸ್ನಾನಕ್ಕೆ ಸುವಾಸನಾ ಭಸ್ಮ—ಸುವಾಸನೆಯುಳ್ಳ ಈ ಭಸ್ಮವನ್ನು ಸ್ನಾನಕಾಲದಲ್ಲಿ ಪ್ರಾಯದ ಗಂಡಸರೂ ಹೆಂಗಸರೂ, ಮಕ್ಕಳು ಕೂಡ ಉಪಯೋಗಿಸುವದಕ್ಕೆ ಅನುಕೂಲವಾಗಿರುವದು ಚರ್ಮಗತವಾದ ಕೊಳೆಯನ್ನು ... ಮಾರ್ದವವನ್ನೂ ಹೋಗಲಾಡಿಸಿ, ಚರ್ಮವನ್ನು ಸ್ವಚ್ಛ ಮಾಡಿ, ... ತಂಪನ್ನುಂಟುಮಾಡುವದು ... ಸರ್ವದಾ ಸುಗಂಧವಿರುವಂತೆ ಮಾಡುವದು ಚರ್ಮವು ಸ್ನಾನಕಾಲದಲ್ಲಿ ಅತ್ಯಂತೋಪಯುಕ್ತವಾದುದರಿಂದ ಪ್ರತಿಯೊಬ್ಬರೂ ಉಪಯೋಗಿಸಲಿಕ್ಕೆ ಯೋಗ್ಯವಾಗಿದೆ ಪೆಟ್ಟಿ ೧ಕ್ಕೆ ೮ ಆಣೆ ವಿ ಪಿ ಹಾಸಲು ೩ ಆಣೆ

೧೬ ಸಂಜೀವನ ಮಾತ್ರೆಗಳು—ಮಕ್ಕಳಿಗೆ ಜ್ವರ, ನರಗಳ ಸೆಳೆತ, ನಿದ್ದೆ ಬಾರದಿರುವದು, ಅಧಿಕವಾಗಿ ಹಾಲುಗುಡುವದು, ಛಳಿ ಕೆಮ್ಮಲು, ತಲೆನೋವು, ನೆಗಡಿ ಇನ್ನೂ ಮಕ್ಕಳಿಗೆ ಬರುವ ಅಜೀರ್ಣಸಂಬಂಧವಾದ ರೋಗಗಳಿಗೆ ಒಳ್ಳೇ ಮದ್ದಾಗಿರುವದು ಇದನ್ನು ವೈದ್ಯರು ಸಹ ಉಪಯೋಗಿಸಬಹುದು ಸೀಸೆ ೧ಕ್ಕೆ ೧೦ ಆಣೆ ವಿ ಪಿ ಛಾರ್ಜು ೬ ಸೀಸೆ ವರೆಗೂ ೫ ಆಣೆ

೧೭ ಗೋರೋಜನ ಮಾತ್ರೆ—ಎಲ್ಲಾ ವಿಧವಾದ ಜ್ವರಗಳಿಗೂ, ವಿಷಮಶೀತಜ್ವರ, ವಿರಮ ಜ್ವರ, ಪ್ರತಿದಿನ ಜ್ವರ, ಇವುಗಳಿಗೆ ಅದ್ವಿತೀಯವಾದ ಔಷಧವು ... ಜ್ವರ, ಹೊಟ್ಟೆಯಲ್ಲಿ ಗಡ್ಡೆ ಆಗಿದ್ದರೆ, ಮಿಂದಳು ... ಹಚ್ಚಿದ್ದರೆ ಗುಣಮಾಡುವದು. ಮಕ್ಕಳಿಗೆ ಬರುವ ಜ್ವರ, ಆಮಶಂಕೆ, ಅತಿಸಾರ, ನರಗಳ ಸೆಳೆತ, ನಿದ್ರೆ ಬಾರದಿರೋಣ, ಹೊಟ್ಟೆ ಉಬ್ಬಿ ಹೋಗುವದು, ಛಳಿ ಕೆಮ್ಮಲು, ತಲೆನೋವು, ಮಕ್ಕಳಿಗೂ ದೊಡ್ಡವರಿಗೂ ಅಜೀರ್ಣ, ಇವುಗಳನ್ನು ಪರಿಹಾರ ಮಾಡುವದು ಸೀಸೆ ೧ಕ್ಕೆ ೧೦ ಆಣೆ ವಿ ಪಿ ಛಾರ್ಜು ೬ ಸೀಸೆ ವರೆಗೂ ೫ ಆಣೆ

೧೮ ಚರ್ಮರೋಗಕ್ಕೆ ಔಷಧ—ಮಕ್ಕಳಿಗೆ ಬರುವ ಕರಪಾನು, ತುರಿ, ಹುಣ್ಣು ... ಕಜ್ಜಿ, ಆನೆಕಜ್ಜಿ ಮತ್ತು ದೊಡ್ಡವರಿಗೆ ಬರುವ ನಾನಾ ವಿಧವಾದ ಕಜ್ಜಿ ಸಂಬಂಧವಾದ ವ್ಯಾಧಿಗಳು, ಸೊಂಡು, ತಲೆಯಲ್ಲಿಯೂ ಇತರ ಕಡೆಗಳಲ್ಲಿಯೂ ಬಹಳ ನವೆಯನ್ನೂ ಅನಂತರ ಉರಿಯನ್ನೂ ಉಂಟುಮಾಡುವ ಎಲ್ಲಾ ಹುಣ್ಣುಗಳೂ ಹೊರಗೆ ಹಚ್ಚುವದರಿಂದಲೇ ಜಾಗ್ರತೆಯಾಗಿ ವಾಸಿಯಾಗುವವು ಬೆಲೆ ಸೀಸೆ ೧ಕ್ಕೆ ೮ ಆಣೆ ವಿ ಪಿ ಛಾರ್ಜು ೨ ಬಾಟ್ಲು ವರೆಗೆ ೫ ಆಣೆ

೧೯ ಕೇಶವಾಸಿನಿ—ಈ ತೈಲವು ಪೂರ್ವಪಶ್ಚಿಮ ದೇಶಗಳ ಅಮೂಲ್ಯ ಸುವಾಸನಾ ದ್ರವ್ಯಯುಕ್ತವಾಗಿ ತುಂಬಾ ಪರಿಮಳ ಕೊಡುವಂಥಾದ್ದಾಗಿರುತ್ತದೆ ಇದರ ಉಪಯೋಗದಿಂದ ಕೂದಲು, ಹುಬ್ಬು ... ರೆಪ್ಪೆ ಸಮೃದ್ಧಿಯಾಗಿ ಬೆಳೆಯುತ್ತವೆ ತಲೆ ಮಿದುಳು ಕಣ್ಣುಗಳಿಗೆ ತಂಪುಕೊಡುತ್ತದೆ ನೋಳುತರ, ಸೊಂಡು ಮುಂತಾದ್ದನ್ನು ವಾಸಿಮಾಡುತ್ತದೆ ವಿಲಾಯತಿಯ ಪರಿಮಳ ವಸ್ತುಗಳ ಮೇಲೆ ಪ್ರೀತಿ ಇರುವವರಿಗೆ ಅಚ್ಚುಮೆಚ್ಚಿನದಾಗಿರುತ್ತದೆ ಬೆಲೆ ರೂ ೧ ವಿ ಪಿ ಛಾರ್ಜು ಎರಡು ಬಾಟ್ಲು ವರೆಗೆ ೫ ಆಣೆ

ಕಾಗದವನ್ನು ಇಂಗ್ಲೀಷ್ ಅಥವಾ ತಮಿಳಿನಲ್ಲಿ ಬರೆಯಿರಿ.

Apply to —**P. SUBBAROY,**

Porto Novo, South Arcot.

ವಿಳಾಸ—ಪಿ. ಸುಬ್ಬರಾಯ್,

ಪೋರ್ಟನೋವೋ, ದಕ್ಷಿಣ ಆರ್ಕಾಟ್ ಜಿಲ್ಲಾ.

ರಬ್ಬರ್ ಸ್ಟಾಂಪುಗಳು.

43 5

ನಮ್ಮ ಕಂಪೆನಿಯಲ್ಲಿ ತಯಾರಾಗಲ್ಪಡುವ ಇಂಗ್ಲೀಷ್ ಮೇಕ್ ರಬ್ಬರ್ ಸ್ಟಾಂಪುಗಳಿಗೆ ದರಖಾಸ್ತು ಕಳುಹಿಸತಕ್ಕವರಿಗೆ ಅರ್ಧ ಕ್ರಯಕ್ಕೆ ತಯಾರಿಸಿ ಕಳುಹಿಸುತ್ತೇವೆ ... ಚೌಕ, ಯಾವ ಆಕಾರವಾದರೂ ಅದರಲ್ಲಿ ಬೇಕಾದ ಅಕ್ಷರಗಳನ್ನು ಹಾಕಿ, ಸುಂದರವಾದ ರಬ್ಬರ್ ಸ್ಟಾಂಪು ೧, ಇಂಕಿ ಸೀಸಾ ೧, ರಬ್ಬರ್ ಸ್ಟಾಂಪು ಇರಿಸುವ ಪೆಟ್ಟಿಗೆ ೧, ಬ್ರಷ್ ೧, ಪ್ಯಾಡ್ ೧, ಇವುಗಳ ಸಹಿತ ಕ್ರಯ ರೂ ೧—೮—೦, ಪೋಸ್ಟೇಜು ೩ ಆಣೆ

ವಿಳಾಸ:—ಮ್ಯಾನೇಜರ್, ರಬ್ಬರ್ ಸ್ಟಾಂಪ್ ಮ್ಯಾನುಫ್ಯಾಕ್ಚರಿಂಗ್ ಕಂಪೆನಿ, ಬ್ಲಾಕ್ ಟೌನ್, ಮದ್ರಾಸ್

ಬೆಂಗಳೂರು ಚಿಕ್ಕಬಳ್ಳಾಪುರ ಲೈಟ್ ರೈಲ್ವೆ ಕಂಪೆನಿ ಲಿಮಿಟೆಡ್ ನಿಯಾಮಕ ಮೂಲಧನ.

46 1

ಷೇರು ಒಂದಕ್ಕೆ ೨೫ ರೂಪಾಯಿಗಳ ಬೆಲೆಯುಳ್ಳ ೬೯ ಸಾವಿರ ಷೇರಗಳಿಂದಾಗುವ ೧೭ ಲಕ್ಷ ರೂಪಾಯಿಗಳು ಈ ಷೇರು ಮೊಬಲಗು ೫ ಅಥವಾ ಷೇರು ಒಂದಕ್ಕೆ ಒಂದು ರೂಪಾಯಿನಂತೆ ಅಪ್ಲಿಕೇಷನ್ ಫೀ ಕೊಟ್ಟು ೧೨ ಕಿಸ್ತುಗಳಲ್ಲಿ ಪಾವತಿ ಮಾಡತಕ್ಕದ್ದು ಈ ಲೈನಿನ ಸರ್ವೆ ಪೂರೈಸಲ್ಪಟ್ಟದೆ

ಶ್ರೀಮನ್ ಮೈಸೂರು ಮಹಾರಾಜರವರ ಸರ್ಕಾರದವರು ಈ ಕಂಪನಿಯ ಮೂಲಧನಕ್ಕೆ ಶೇಕಡ ವರುಷ ೧ಕ್ಕೆ ೪ ರೂಪಾಯಿನಂತೆ ಬಡ್ಡಿ ಕೊಡಲು ತಾವು ಜಾಮೀನಾಗಿರಲು ಅನುಮತಿಯನ್ನು ಕಂಪೆನಿಗೆ ಲಿಖಿತ ಮೂಲಕ ತಿಳಿಸಿರುತ್ತಾರೆ.

ಈ ಕಂಪನಿಯ ಷೇರುಗಳನ್ನು ಅಪೇಕ್ಷಿಸತಕ್ಕಂಥವರು ಈ ಕೆಳಗೆ ರುಜು ಮಾಡಿರುವವರಿಗೆ ದರಖಾಸ್ತು ಮಾಡಬೇಕಾಗಿದೆ

ಈ ಕಂಪನಿಯ ಷೇರುಗಳನ್ನು ಕಮಿಷನಿಗೆ ಸಬ್ ಏಜಂಟರಾಗಿ ಬಿಕರಿಮಾಡಲು ಅಪೇಕ್ಷೆಯುಳ್ಳ ಯೋಗ್ಯರಾದ ಜನರು ಸದರಿ ಯವರಿಗೇನೆ ಬರೆಯಬೇಕಾಗಿದೆ.

(ಸೈನ್) ಬಿ ವಿ ರಾಮಸ್ವಾಮಿ ಶೆಟ್ಟಿ, ಬಿ ಎ,

ಅಡ್ವೊಕೇಟ್ ಮತ್ತು ಬೆಂಗಳೂರು ಚಿಕ್ಕಬಳ್ಳಾಪುರ

ಲೈಟ್ ರೈಲ್ವೆ ಕಂಪೆನಿಯ ಚೀಫ್ ಏಜಂಟ್

ನಗರ್ತಪೇಟೆ, ಬೆಂಗಳೂರು ಸಿಟಿ

೫೫,೦೦೦ ಪವುಂಡು ವುಲ್ಲಿನ ದಾರ ಮಾತ್ರ ಇದೆ

40 5

೧ ಬೇಟೆಯರುವ ವುಲ್ಲಿನ ಸೇರು ೧ ಕ್ಕೆ		೧—೧೦—೦
೨ ಪರ್ಸ ಸೊಪೂರ ,,	,, ,,	೧—೧೪—೦
೩ ಸುಪೀರಿಯರ್ ,,	,, ,,	೨—೦—೦
೪ ಸೋಮರಸೆಟ್ ,,	,, ,,	೩—೪—೦

ವುಲ್ಲಿನ ಟೋಪಿ ಡಜನ್ ೧ ಕ್ಕೆ ೬—೦—೦ ಒಂದೇ ದಫಾ ೧೦ ಡಜನ್ ತರಿಸಿಕೊಳ್ಳುವವರಿಗೆ ೬—೧೨—೦

ಹೊಸ ನಮೂನೆ ದೊಡ್ಡ ಸೈಜು ಪೋಸ್ಟ್ ಕಾರ್ಡುಗಳು

೧ ಸಿಂಗಲ್ ಕಲರ್ ೧೦೦ ಕ್ಕೆ ೬—೨—೬		೧೦೦೦. ೧—೪—೦
೨ ಡಬಲ್ ಕಲರ್ ೧೦೦ ಕ್ಕೆ ೦ ೩ ೦		೧೦೦೦ ೧—೧೦—೦

☞ ವಿ ಪಿ ಮೂಲಕ ತರಿಸಿಕೊಳ್ಳುವರು ಮಾತ್ರ ೧೦೦ ಕ್ಕೆ ೨೫ ರಂತೆ ಮುಂಚಿತವಾಗಿ ಕಳುಹಿಸದ ಹೊರತು ವಿ ಪಿ ಮೂಲಕ ಕಳುಹಿಸಲಾರೆವು

ಯೆಲ್, ಯೆ. ಫೊರವಾಲ್ ಕಂಪನಿ, ಬೆಂಗಳೂರು ಸಿಟಿ.

ಕೊಡಗು ದೇಶದ ಶ್ರೇಷ್ಠವಾದ ಉತ್ಕೃಷ್ಟ ಕಾಫಿಯು

ಹುರಿಯದೆ ಇರುವದು ಅಥವಾ ಜಾಗ್ರತೆ ನೆ ಹುರಿದದ್ದು.

ಬೆಳೆಮಾಡಿದ ಸ್ಥಳದಿಂದಲೆ ನೆಟ್ಟಗೆ ರವಾನಿಸಲ್ಪಡುವದು.

35 6

ವ್ಯಾಪಾರದ C C B C ಹೆಗ್ಗುರ್ತು

ಕಾಡುಕೋಣದ ಮುಖ ಮುದ್ರೆ ಇದೆ

ಸಂಪೂರ್ಣವಾಗಿ ಯಂತ್ರದಿಂದಲೆ ಸಿದ್ಧಪಡಿಸಿದ್ದು ಹೆಗ್ಗುರ್ತು ಉಳ್ಳ ವಿಲಾಸದ ಚೀಟಿ ಸುತ್ತಿಲ್ಲದಿರುವವು ಸ್ವಚ್ಛವಾದವುಗಳಲ್ಲ. ಅವು ನಮ್ಮದಲ್ಲ. ಏಜಂಟರುಗಳು ಬೇಕು ಇಂಥವರಿಗೆ ಅಲಾಯಿದ ದರ ಬರೆಯುವವರು ದಯವಿಟ್ಟು ಈ ಪತ್ರಿಕೆಯ ಹೆಸರನ್ನು ಸೂಚಿಸಿ

ವಿಳಾಸ,—ಮ್ಯಾನೇಜರ್, ಮ್ಯಾಥಿಸನ್ಸ್

ಕಾಫಿ ವರ್ಕ್ಸ್, ಹುಣಸೂರು.

ಮೈಸೂರು ಸೀಮೆಯಲ್ಲಿ ಪ್ಲೇಗಿನ ಸ್ಥಿತಿ.

9—3—1906 ರಿಂದ 9—3—1906 ರ ವರೆಗೆ

ಸ್ಥಳ	ಪ್ಲೇಗ್ ತಗಲಿದ್ದು	ಪ್ಲೇಗ್ ಸತ್ತದ್ದು	ಹೋದವಾರ ... ಸಂಖ್ಯೆ
ಬೆಂಗಳೂರು ಪಟ್ಟಣ	10	11	40
ಮೈಸೂರು ,,	0	0	5
ಬೆಂಗಳೂರು ಡಿಸ್ಟ್ರಿಕ್ಟ್	11	7	52
ಮೈಸೂರು ,,	0	0	91
ಕೋಲಾರ್ ,,	0	0	20
ಕೋಲಾರ್ ಚಿನ್ನದ ಗಣಿಗಳು	9	3	9
ತುಂಕೂರು ಡಿಸ್ಟ್ರಿಕ್ಟ್	0	0	21
ಹಾಸನ (ಹೊರಗಿನದು)	4	4	3
ಚಿತ್ರದುರ್ಗ ,,	12	8	3
ಕಡೂರ್ ,,	0	0	12
ಶಿವಮೊಗ್ಗಾ ,,	29	28	4
ಜುಮ್ಲಾ	74	55	[illegible]

ಶಾಲಿವಾಹನ ಶಕ ವರುಷಂಗಳು ೧೮೨೮ ನೇ ವಿಶ್ವಾವಸು ಸಂವತ್ಸರದ ಫಾಲ್ಗುಣ ಬಹುಳ ತ್ರಯೋದಶಿ ಗುರುವಾರದಿಂದ ಪರಾಭವ ಸಂವತ್ಸರದ ಚೈತ್ರ ಶುದ್ಧ ಚೌತಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ

೧೯೦೬ ನೇ ಇಸವಿ ಮಾರ್ಚಿ.

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ
22	ಗುರು *	ತ್ರಯೋ	51 21	ಧ	13 0
23	ಶುಕ್ರ	ಚತುರ್ದ	51 56	ಶ	14 33
24	ಶನಿ ‡	ಅಮಾವಾ	53 56	ಪೂಭಾ	17 7
25	ರವಿ †	ಪಾಡ್ಯ	57 12	ಉಭಾ	21 13
26	ಸೋಮ	ಬಿದಿಗೆ	60 0	ರೇ	26 16
27	ಕುಜ	ತದಿಗೆ	1-12	ಅ	33 6
28	ಬುಧ ,,	ಚೌತಿ	6 16	ಭ	38 28

* ಪ್ರದೋಷ ‡ ಸರ್ವತ್ರ ಅಮಾವಾಸ್ಯೆ † ಮನ್ವಾದಿ, ... ಪ್ರಸಂವತ್ಸರಾರಂಭ ನಿಂಬಕದಳಭಕ್ಷಣ ಆರೋಗ್ಯಪ್ರತಿಪ... ಚಂದ್ರೋದಯ ಸೌಭಾಗ್ಯಗೌರೀವ್ರತ, ಸೌಭಾಗ್ಯಗೌರಿ ... ದಗ್ಧಯೋಗ

ಪೇಟೇ ಧಾರಣೆ.

ದಿನಸಿ	ಮೈಸೂರು.	ಬೆಂಗಳೂರು
ಕಸ್ತೂರಿ ಅಕ್ಕಿ ಪಲ್ಲಾ ೧ಕ್ಕೆ	ರೂ ೧೯-೦-೨-೦	[illegible]
ಕೆಂಬತಿ ಅಕ್ಕಿ ಅವಲ್	೧೨-೦-೦	[illegible]
,, ದುಯಂ	೧೧ ೮ ೦	[illegible]
ಜಾಪಾನ್ ಅಕ್ಕಿ	೧೨-೦-೦	[illegible]
ಸಣ್ಣಕ್ಕಿ ಅವಲ್	೧೬-೦-೦	[illegible]
,, ದುಯಂ	೧೩-೦-೦	[illegible]
ತೊಗರೀ ಬೇಳೆ ಪಲ್ಲಾ ೧ಕ್ಕೆ	೯ ೮-೦	[illegible]
,, ದುಯಂ	೯-೦ ೦	[illegible]
ಹೆಸರು ಬೇಳೆ ಪಲ್ಲಾ ೧ಕ್ಕೆ	೩-೦-೦	[illegible]
ಕಾರಾಗಿ	೬ ೦ ೦	[illegible]
ಜೋಳ	೩-೪-೦	[illegible]
ಹಲಸಂದೆ ಪಲ್ಲಾ ೧ಕ್ಕೆ	೯-೧-೨ ೦	[illegible]
ಬಿಳೇ ಅವರೆ	೯-೮-೦	[illegible]
ಹೆಸರು	೧೦-೦-೦	[illegible]
ಉದ್ದು	೧-೨-೦ ೦	[illegible]
ಕಡಲೆ	೧೦-೮-೦	[illegible]
ಎಳ್ಳು ಸೆ ೧೨೩ ಕ್ಕೆ	೧೯-೦ ೦	[illegible]
ಹುರುಳಿ	೩-೮-೦	[illegible]
ಹರಳು ೧೨೦ ಸೇರಿಗೆ	೧೦-೧-೨ ೬	[illegible]
ಸೀಗೇಕಾಯಿ ಮಣ ೧ಕ್ಕೆ	೨ ೦-೨-೦	[illegible]
ಮೆಣಸಿನಕಾಯಿ	೩-೧-೨ ೦	[illegible]
,, ದುಯಂ	೩ ೬-೦	[illegible]
ಬೆಲ್ಲ ದೊಡ್ಡ ಅಚ್ಚು	೬-೨-೦	[illegible]
ಒಳ್ಳೆಣ್ಣೆ ಮಣ ೧ಕ್ಕೆ	೫-೨-೦	[illegible]
ಹರಳೆಣ್ಣೆ ,,	೪-೧-೨-೦	[illegible]
ಕೊತ್ತುಂಬರಿ ಪಲ್ಲಾ ೧ಕ್ಕೆ	೯-೮-೦	[illegible]
ಉಪ್ಪು ,,	೩ ೦ ೦	[illegible]
ಹುಣಸೇ ಹಣ್ಣು	೦-೧-೨-೦	[illegible]
,, ಹಳೇದು	೦-೮ ೦	[illegible]
ತುಪ್ಪ	೧೩-೪-೦	[illegible]
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ	೫-೪-೦	[illegible]
ತೆಂಗಿನಕಾಯಿ ೧೦೦ ಕ್ಕೆ	೪-೦-೦	[illegible]
ಅಳಲೇಕಾಯಿ ಮಣ ೧ಕ್ಕೆ	೦-೧-೨-೦	[illegible]
ಅಂಟ್ವಾಳದ ಕಾಯಿ ಮಣ ೧ಕ್ಕೆ	೦-೧-೨ ೦	[illegible]
ಚಿನ್ನ (ಪೌನ್) ಕೆಂಪು	೧೫-೪-೦	[illegible]
,, ,, ಪಸಿಮು	೧೫-೩-೦	[illegible]
,, ,, ಗಟ್ಟಿ ತೊಲ ೧ಕ್ಕೆ	೨೩ ೧-೨-೦	[illegible]
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ	೭೨-೦ ೦	[illegible]

Printed and Published by the Rev E. W. THOMPSON, the Proprietor and Manager, Wesleyan Mission Press, Mysore 22/3/1906.

REGISTERED M. 20

ವೃತ್ತಾಂತ ಪತ್ರಿಕೆ.

ಕ್ರಯ ೧ ದುಡ್ಡು — ಕ್ರಯ ೧ ದುಡ್ಡು

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಪುಸ್ತಕ ೧೯ — ಮೈಸೂರು—ಸನ್ ೧೯೦೭ ನೇ ಇಸವಿ ಮಾರ್ಚಿ ತಾರೀಖು ೨೮ ನೇ ಗುರುವಾರ. — ಸಂಚಿಕೆ ೪೩

WANTED WILD ANIMALS.

ಬೇಕಾಗಿದೆ. ಬೇಕಾಗಿದೆ.

5-50

ಎಲ್ಲಾ ಬಗೆಯ ಕಾಡು ಮೃಗಗಳು. ಮೈಸೂರು ಜೂ ಸೂಪರಿಂಟೆಂಡೆಂಟ್ ಮಿ॥ ಹ್ಯೂಸ್ ಯವರು ಕೊಂಡುಕೊಳ್ಳುವರು.

Apply to—Mr. Hughes, Mysore Zoo.

ಇದಕ್ಕೆ ಸಮಾನವಾದ ಪುಸ್ತಕ ಉಂಟೋ?

50-2

ಕನ್ನಡ ಭಾಷೆಯಲ್ಲಿ ಇದುವರಿವಿಗೂ ಇಂಥಾ ಸೊಗಸಾದ ಪುಸ್ತಕವು ಪ್ರಚುರವಾಗಲಿಲ್ಲ. ಸ್ವಲ್ಪ ನೋಡಿ.

"ಹಿಂದೂದೇಶ ಪ್ರದಕ್ಷಿಣ."

ಹಿಂದೂ ಕರೆಯಲ್ಪಡುವ ಈ ನೂತನ ಪುಸ್ತಕದಲ್ಲಿ ಸುಮಾರು ನೂರಕ್ಕೂ ಹೆಚ್ಚು ಉತ್ಕೃಷ್ಟವಾದ ಚಿತ್ರಗಳು ಅಡಗಿವೆ. ಹಣವ್ಯಯ ಮಾಡಿ ಹಿಂದೂ ದೇಶವನ್ನೆಲ್ಲಾ ನೋಡುವದಕ್ಕೆ ಬದಲಾಗಿ ಈ ಪುಸ್ತಕವನ್ನು ಕೊಂಡು ಓದಿದರೆ ಎಲ್ಲಾ ಸ್ಥಳಗಳೂ, ಜನರ ಸ್ಥಿತಿಗತಿಗಳೂ ಕಣ್ಣಿಗೆ ಕಟ್ಟಿದ ಹಾಗೆ ಕಂಡುಬರುವವು. ಇದರಲ್ಲಿರುವ ಚಿತ್ರಗಳನ್ನು ಸ್ವಲ್ಪ ನೋಡಿ. (ಆಗ್ರಾ)ಪಟ್ಟಣದ ಬಳಿಯಲ್ಲಿರುವ ಜಗತ್ಪ್ರಸಿದ್ಧವಾದ (ತಾಜ್‌ಮಹಲ್) ಮಮ್ತಾಜ್‌ಮಹಲನ ಗೋರಿ, ಕೃಷ್ಣಾನದಿ, ಕಲ್ಕತ್ತಾ ನಗರ, ಕಲ್ಕತ್ತಾ ಹೈಕೋರ್ಟು, ಕಾಳಿಕಾದೇವಿ, ಚಂದ್ರನಗರ, ಬಂಗಾಳಿಯರ ಮನೆಗಳು, ಜಗನ್ನಾಥ ಪಟ್ಟಣ, ಭುವನೇಶ್ವರದ ದೇವಸ್ಥಾನ, ಜಗನ್ನಾಥದ ರಥೋತ್ಸವ, ಕನರಾಕ್ ದೇವಸ್ಥಾನ, ಬುದ್ಧಗಯಾ, ಬಿಟ್ಮಂಡ್ ನಗರದ ಬೀದಿ, ಬಿಟ್ಮಂಡ್ ನಗರದ ದೇವಸ್ಥಾನ, ಬೌದ್ಧರ ಚಕ್ರಗಳು, ಟಿಬೆಟ್ ದೇಶವನ್ನು ನೋಡುವದು, ಗಯಾದಲ್ಲಿರುವ ಬುದ್ಧನ ದೇವಸ್ಥಾನ, ಬರಂಗಜೇಬನು ಕಟ್ಟಿಸಿದ ಮಸೀದಿ, ಕಾಶೀ(ಪುಣ್ಯಕ್ಷೇತ್ರ)ದಲ್ಲಿರುವ ದಶಾಶ್ವಮೇಧ ಘಟ್ಟ, ಕವಿಗಳಿಗೆ ತೀರ್ಥ ಹಾಕುವದು, ಕಾಶೀಕ್ಷೇತ್ರದ ದೇವಸ್ಥಾನಗಳು, ಅಲಹಾಬಾದ್‌ನಗರ ಮತ್ತು ಅದರ ಕೋಟೆ, ಅಲಹಾಬಾದ್‌ನಲ್ಲಿರುವ ಪ್ಲೇಗ್ ಆರಮನೆ, ಯಮುನಾನದಿಯಲ್ಲಿ ಯಾತ್ರಿಕರು ಮಿಂದುವದು, ಕಾನ್ಪುರದಲ್ಲಿರುವ ಶಿಲಾಶಾಸನ, ಕಾನ್ಪುರದ ಹತ್ತಿರ ಗಂಗಾನದಿಯ ಮೇಲೆ ಕಟ್ಟಿರುವ ಸೇತುವೆ, ಲಕ್ನೋ ನಗರದ ರೆಸಿಡೆನ್ಸಿ, ಲಕ್ನೋ ಪಟ್ಟಣದ ಬಾಗಿಲು, ಸರ್ ಹೆನ್ರಿ ಲ್ಯಾರೆನ್ಸ್ ರವರು, ಗೋಮತಿನದಿಯ ಮೇಲಿರುವ ಅರಮನೆ, ಕ್ಷಾಮದಲ್ಲಿ ಜನರ ಸ್ಥಿತಿ, ಹರಿದ್ವಾರ, ಗಂಗೋತ್ರಿ ದೇವಸ್ಥಾನ, ಹಿಮವತ್ಪರ್ವತಗಳ ಮೇಲಿನ ಪಟ್ಟಣ, ಹಿಮಪ್ರವಾಹಗಳು, ಆಗ್ರಾಪಟ್ಟಣದ ಕೋಟೆ, ಯಮುನಾನದಿಯು, ದೂರದಲ್ಲಿ ತೋರುತ್ತಿರುವ ತಾಜ್‌ಮಹಲ್ ಗೋರಿ, ತಾಜ್‌ಮಹಲಿನ ಕಲ್ಲಿನಲ್ಲಿ ಕೆತ್ತಿರುವ ಪರದೆ, ಅಕ್ಬರನ ಆಗ್ರಾಪಟ್ಟಣದ ಮುತ್ತಿನ ಮಸೀದಿ, ಫತ್ತೆಪುರ್ ಸಿಕ್ರಿಯಲ್ಲಿ ಪಂಚ್‌ಮಹಲ್ ಅರಮನೆ, ರಾಜಪುತ್ರರು, ಭರತಪುರದ ಅಲ್ವಾರಿನಲ್ಲಿ ಮಹಾರಾಜ ಭಕ್ತಾವರ್‌ಸಿಂಗರ ಗೋರಿ, ಅಲಿ ವರಿನ ಪೋರಸನೂ, ಡೆಲ್ಲಿ ನಗರದ ದೊಡ್ಡ ಮಸೀದಿ, ಪುರಾತನದ ಬಾಗಿಲು, ರಾಜದೇವನು ಸ್ಥಾಪಿಸಿದ ಕಬ್ಬಿಣದ ಸ್ತಂಭ, ಇಂಗ್ಲೀಷರು ಡೆಲ್ಲಿನಗರದಲ್ಲಿ ಪ್ರಜಾಸಂಹಾರವನ್ನು ನೋಡುತ್ತಿದ್ದ ಡೆಲ್ಲಿಯ ಬಳಿಯಲ್ಲಿರುವ ಕುಟುಬ್‌ಮಿನಾರ್, ಚಾಂದ್ನಿಚೌಕ್ ಬೀದಿ, ಸಿಮ್ಲಾಕ್ಕೆ ಹೋಗುವ ದಾರಿ. ಸಿಮ್ಲಾ, ಅಮೃತಸಾರದ ದೇವಾಲಯ, ಲಾಹೋರಿನಲ್ಲಿರುವ ರಣಜಿತಸಿಂಗನ ಗೋರಿ, ಲಾಹೋರ್ ಪಟ್ಟಣ, ಇವೇ ಮುಂತಾದ ಅನೇಕ ರಮಣೀಯವಾದ ಸ್ಥಳ ಚಿತ್ರಗಳು ಈ ಪುಸ್ತಕದಲ್ಲಿ ಅಡಗಿವೆ. ಅವುಗಳನ್ನೆಲ್ಲಾ ಇಲ್ಲಿ ಬರೆಯುವದಕ್ಕೆ ಸ್ಥಳ ಸಾಲದು.

ಪ್ರತಿಯೊಂದು ಅಂಶದ ವಿವರಣೆಯೂ ಬಹು ಪರಿಷ್ಕಾರವಾಗಿರುವದು. ದಕ್ಷಿಣ ದೇಶದಲ್ಲಿರುವ ಅನೇಕ ಪ್ರಸಿದ್ಧವಾದ ಸ್ಥಳಗಳ ಚಿತ್ರಗಳೂ ಅವುಗಳ ವಿವರಣೆಗಳೂ ಇದರಲ್ಲಿವೆ. ಪುಸ್ತಕವು ಹನ್ನೊಂದು ಅಂಗುಲ ಉದ್ದವಾಗಿಯೂ ಒಂಬತ್ತು ಅಂಗುಲ ಅಗಲವಾಗಿಯೂ ಇದೆ. ಪುಸ್ತಕವು ಭಾರಿಯಾಗಿದೆ. ಇಂಥಾ ಪುಸ್ತಕವನ್ನು ಪ್ರಚುರಪಡಿಸುವದಕ್ಕೆ ಬಹಳ ಸಮಯವನ್ನೂ ಹಣವನ್ನೂ ವ್ಯಯ ಮಾಡಿರುವೆವು. ಪುಸ್ತಕದ ಅಚ್ಚು ಮತ್ತು ಬೈಂಡು ಬಹು ಸುಂದರವಾಗಿದೆ. ಇದರ ಕ್ರಯ ಎಂಟೇ ಆಣೆ. ವಿ. ಪಿ. ಪಿ. ಮೂಲಕ ಕಳುಹಿಸಲಾಗುವದು. ಪುಸ್ತಕವು ಜಾಗ್ರತೆಯಲ್ಲಿ ಮಾರಾಟವಾಗುತ್ತಿರುವದರಿಂದ ತಾವುಗಳೆಲ್ಲರೂ ಕೆಳಗೆ ಕಂಡ ವಿಳಾಸದಾರರಿಗೆ ಬೇಗನೆ ಬರೆದು ತರಿಸಿಕೊಳ್ಳಬೇಕು.

ಮ್ಯಾನೇಜರ್.

ಸಿ. ಎಲ್. ಎಸ್. ಬುಕ್ ಡಿಪೋ,

ಮೈಸೂರು.

"ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ.

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜಂಟ್ರ ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ (ಅಡ್ವಾನ್ಸು) .. .. .. ರೂ. ೧—೦—೦

ಪತ್ರಿಕೆಯನ್ನು ಆಫೀಸಿನಿಂದ ಅಂಚೆಯ ಮೇಲೆ ತರಿಸಿಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಪೋಸ್ಟೇಜ್ ಸಹ .. .. ರೂ. ೧—೪—೦

" " ೬ " " ೦—೧೨—೦

ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು.

ನಮ್ಮ ವಿಳಾಸ — ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು.

ರಬ್ಬರ್ ಸ್ಟಾಂಪುಗಳು

43-6

ನಮ್ಮ ಕಂಪನಿಯಲ್ಲಿ ದಯಾಮಾಡಲ್ಪಡುವ ಇಂಗ್ಲಿಷ್ ಮೇಡ್ ರಬ್ಬರ್ ಸ್ಟಾಂಪುಗಳಿಗೆ ದರಖಾಸ್ತು ಕಳುಹಿಸತಕ್ಕವರಿಗೆ ಆರ್ಡರ್ ಪ್ರಕಾರ

ಕ್ಕೆ ತಯಾರಿಸಿ ಕಳುಹಿಸುತ್ತೇವೆ. ಓವಲ್, ರೌಂಡು, ಚಚ್ಚೌಕ, ಯಾವ ಆಕಾರವಾದರೂ ಅದರಲ್ಲಿ ೨ ಲೈನಿನ ಅಕ್ಷರಗಳನ್ನು ಹಾಕಿ, ಸುಂದರವಾದ ರಬ್ಬರ್ ಸ್ಟಾಂಪು ೧, ಇಂಕ್ ಪ್ಯಾಡ್ ೧, ರಬ್ಬರ್ ಸ್ಟಾಂಪು ಇರಿಸುವ ಪೆಟ್ಟಿಗೆ ೧, ಬ್ರಷ್ ೧, ಬ್ರಷ್ ೧, ಇವುಗಳ ಸಹಿತ ಕ್ರಯ ರೂ. ೧—೮—೦. ಪೋಸ್ಟೇಜು ೩ ಆಣೆ.

ವಿಳಾಸ:—ಮ್ಯಾನೇಜರ್, ರಬ್ಬರ್ ಸ್ಟಾಂಪ್ ಮ್ಯಾನುಫ್ಯಾಕ್ಚರಿಂಗ್ ಕಂಪನಿ, ಪಾರ್ಕ್ ಟೌನ್, ಮದ್ರಾಸ್.

ಪರಿಮಳ ನಶ್ಯದಪುಡಿ.

50-5

ಪರಿಮಳ ನಶ್ಯದಪುಡಿ ಡಬ್ಬಿ ೧ ಕ್ಕೆ	0—9—0
ಬಾಂಗಿ ಖರ್ಚು	0—3—0
ಸಾದಾ ನಶ್ಯದಪುಡಿ ಡಬ್ಬಿ ೧ ಕ್ಕೆ	0—6—0
ಬಾಂಗಿ ಖರ್ಚು	0—3—0

ಈ ಪುಡಿಯನ್ನು ಮೇಲಾದ ಹೊಗೆಸೊಪ್ಪಿನಿಂದ ಸುವಾಸನೆಯುಳ್ಳದ್ದಾಗಿ ತಯಾರು ಮಾಡಲ್ಪಟ್ಟಿರುತ್ತೆ. ಇದರ ಸುವಾಸನೆ ಒಂದು ಸೇರು ಸಾಧಾರಣ ಪುಡಿಯಲ್ಲಿ ಸ್ವಲ್ಪವನ್ನು ಹಾಕಿ ಕಲಸಿದರೆ ಪುಡಿಯೆಲ್ಲಾ ಗಮಗಮಿಸುತ್ತೆ. ಉಪಯೋಗಿಸುವವರಿಗೆ ಸುವಾಸನೆಯನ್ನೂ ಆನಂದವನ್ನೂ ಉಂಟು ಮಾಡುತ್ತೆ.

ತಲೆನೋವು, ಪೀನಸ, ಜಲದೋಷ, ಶಿರೋವ್ಯಾಧಿ ಇವುಗಳನ್ನು ತಪ್ಪದೆ ಪರಿಹರಿಸುತ್ತೆ. ಮಾದರಿಗೆ ೧ ಡಬ್ಬಿಯನ್ನು ತರಿಸಿ ಪರೀಕ್ಷಿಸಿರಿ.

☞ ಪ್ರತಿ ೧ ಡಬ್ಬಿಯಲ್ಲಿ ೯ ತೋಲ ನಶ್ಯದಪುಡಿ ಇರುತ್ತೆ.

ಮಾನೇಜರ್, ಧರ್ಮ ವೈದ್ಯಶಾಲಾ,

69 ಟ್ಯಾನಾಬಜಾರು ರೋಡ್, ಸಾಹುಕಾರ್‌ಪೇಟೆ, ಮದರಾಸು.

ಕೊಡಗು ದೇಶದ ಶ್ರೇಷ್ಠವಾದ ಉತ್ಕೃಷ್ಟ ಕಾಫಿಯು.

ಹುರಿಯದೆ ಇರುವದು ಅಥವಾ ಆಗತಾನೆ ಹುರಿದದ್ದು.

ಬೆಳೆಯುವ ಸ್ಥಳದಿಂದಲೆ ನೆಟ್ಟಗೆ ರವಾನಿಸಲ್ಪಡುವದು.

35-7

ವ್ಯಾಪಾರದ [C C E C] ಹೆಗ್ಗುರ್ತು

ಕಾಡುಕೋಣದ ತಲೆಯ ಮುದ್ರೆ ಇದೆ.

ಸಂಪೂರ್ಣವಾಗಿ ಯಂತ್ರದಿಂದಲೆ ಸಿದ್ಧಪಡಿಸಿದ್ದು. ಹೆಗ್ಗುರ್ತುಳ್ಳ ವಿಲಾಸದ ಚೀಟಿ ಇಲ್ಲದಿರುವವು ಸ್ವಚ್ಛವಾದವುಗಳಲ್ಲ. ಅವು ನಮ್ಮದಲ್ಲ. ಏಜಂಟರುಗಳು ಬೇಕು. ಇಂಥವರಿಗೆ ಅಲಾಯಿದ ದರ. ಬರೆಯುವವರು ದಯವಿಟ್ಟು ಈ ಪತ್ರಿಕೆಯ ಹೆಸರನ್ನು ಸೂಚಿಸಿ.

ವಿಳಾಸ.—ಮ್ಯಾನೇಜರ್, ಮ್ಯಾಥಿಸನ್ಸ್ ಕಾಫಿ ವರ್ಕ್ಸ್, ಹುಣಸೂರು.

ಬೆಂಗಳೂರು ಚಿಕ್ಕಬಳ್ಳಾಪುರ ಲೈಟ್ ರೈಲ್ವೆ ಕಂಪೆನಿ ಲಿಮಿಟೆಡ್ ನಿಯಮಿತ ಮೂಲಧನ.

46-5

ಷೇರು ಒಂದಕ್ಕೆ ೨೫ ರೂಪಾಯಿಗಳು ಬೆಲೆಯುಳ್ಳ ೩೨ ಸಾವಿರ ಷೇರುಗಳಿಂದಾಗುವ ೮ ಲಕ್ಷ ರೂಪಾಯಿಗಳು ಈ ಷೇರು ಮೊಬಲಗು ೫ ಅಥವಾ ಷೇರು ಒಂದಕ್ಕೆ ಒಂದು ರೂಪಾಯಿನಂತೆ ಅಪ್ಲಿಕೇಷನ್ ಫೀ ಕೊಟ್ಟು ೨೪ ಕಿಸ್ತುಗಳಲ್ಲಿ ಪಾವತಿ ಮಾಡತಕ್ಕದ್ದು. ಈ ಲೈನಿನ ಸರ್ವೆ ಪೂರೈಸಲ್ಪಟ್ಟಿದೆ.

ಶ್ರೀಮನ್ ಮೈಸೂರು ಮಹಾರಾಜರವರ ಸರ್ಕಾರದವರು ಈ ಕಂಪೆನಿಯ ಮೂಲಧನಕ್ಕೆ ಶೇಕಡ ವರುಷ ೧ ಕ್ಕೆ ೪ ರೂಪಾಯಿನಂತೆ ಬಡ್ಡಿ ಕೊಡಲು ತಾವು ಜಾಮೀನಾಗಿರಲು ಅನುಮತಿಯನ್ನು ಕಂಪೆನಿಗೆ ಲಿಖಿತ ಮೂಲಕ ತಿಳಿಸಿರುತ್ತಾರೆ.

ಈ ಕಂಪೆನಿಯ ಷೇರುಗಳನ್ನು ಅಪೇಕ್ಷಿಸತಕ್ಕಂಥವರು ಈ ಕೆಳಗೆ ರುಜು ಮಾಡಿರುವವರಿಗೆ ದರಖಾಸ್ತು ಮಾಡಿಕೊಳ್ಳಬೇಕು.

ಈ ಕಂಪೆನಿಯ ಷೇರುಗಳನ್ನು ಕಮಿಷನಿಗೆ ಸಬ್ ಏಜಂಟರಾಗಿ ಬಿಕರಿಮಾಡಲು ಅಪೇಕ್ಷೆಯುಳ್ಳ ಖಾತರಿಯಾದ ಜನರು ಸದರಿ ಯವರಿಗೇನೆ ಬರೆದುಕೊಳ್ಳಬಹುದು.

ಷೇರು ಮೊಬಲಗುಗಳನ್ನು ಮೈಸೂರಿನಲ್ಲಿ, ಬೆಂಗಳೂರಿನಲ್ಲಿರುವ ಮುದರಾಸು ಬ್ಯಾಂಕಿಗೆ, ಚೀಫ್ ಏಜಂಟರಿಗೆ ಅಥವಾ ಇವರಿಂದ ಹಣವನ್ನು ವಸೂಲು ಮಾಡುವಂತೆ ಲಿಖಿತ ಮೂಲಕವಾಗಿ ಅಧಿಕಾರ ಪಡೆದಿರುವ ಸಬ್ ಏಜಂಟರಿಗೆ ಪಾವತಿ ಮಾಡಬೇಕು.

(ಸೈ) ಬಿ. ವಿ. ರಾಮಸ್ವಾಮಿ ಶೆಟ್ಟಿ, ಬಿ. ಎ.,

ಅಡ್ವೊಕೇಟ್, ಮತ್ತು ಬೆಂಗಳೂರು ಚಿಕ್ಕಬಳ್ಳಾಪುರ ಲೈಟ್ ರೈಲ್ವೆ ಕಂಪೆನಿಯ ಚೀಫ್ ಏಜಂಟ್,

ನಗರ್ತಪೇಟೆ, ಬೆಂಗಳೂರು ಸಿಟಿ.

ಅಗ್ಗ! ಅಗ್ಗ!! 53-4 ಬಹು ಅಗ್ಗ!!!

ಇದರಿಂದ ನಮ್ಮ ಏಜಂಟ್‌ದಾರರಿಗೂ ಮತ್ತು ವರ್ತಕರಿಗೂ ತಿಳಿಸುವದೇನೆಂದರೆ.—

ಜರ್ಮನ್ ಸಿಲ್ವರ್ ಕಂಬಿ ಮತ್ತು ತಗಡುಗಳನ್ನು ಸ್ಪೆಷಲ್ ಆರ್ಡರು ಕೊಟ್ಟು ಆಸ್ಟ್ರೇಲಿಯಾ ದೇಶದಿಂದ ತರಿಸಿ ಅವುಗಳಿಂದ ಸಕಲ ಆಭರಣಗಳನ್ನೂ ತಯಾರಿಸುತ್ತೇವೆ. ಆದಕಾರಣ ಇವುಗಳ ರಂಗು ಇತರ ಕಮ್ಮಿ ಕ್ರಯದ ಜರ್ಮನ್ ಸಿಲ್ವರ್ ಬೆಳ್ಳಿಯ ಹಾಗೆ ಆರಿಸಿನಬಣ್ಣಕ್ಕೆ ತಿರುಗದೆ ಎಷ್ಟು ವರುಷಗಳ ವರಿಗಾದರೂ ಬೆಳ್ಳಿಯ ರಂಗಿಗೆ ಸಮಾನವಾಗಿ ಇರುತ್ತೆ. ಮತ್ತು ಆಭರಣಗಳಿಗೆ ಸಾಧ್ಯವಾದಷ್ಟು ಕಮ್ಮಿ ಕ್ರಯವನ್ನು ನಮೂದಿಸಿರುತ್ತೇವೆ.

ಆಭರಣದ ಕೆಲಸವು ಅಚ್ಚಬೆಳ್ಳಿಯ ಕೆಲಸಕ್ಕೆ ಸಮಾನವಾಗಿದೆ. ಅನುಭವದಿಂದ ನಿಜಸ್ಥಿತಿಯು ತಿಳಿಯಬಹುದು.



ಆಸ್ಟ್ರೇಲಿಯಾ ತಗಡಿನಿಂದ ತಯಾರಿಸಿರಿದ ಗೊಟ್ಟಳಿ ಕಾಯಿ ಗೋಲುಸು.

ದೊಡ್ಡವರಿಗೆ ಜೊತೆ ೧ ಕ್ಕೆ	ರೂ.	೨—೮—೦
ಚಿಕ್ಕವರಿಗೆ ಜೊತೆ ೧ ಕ್ಕೆ	"	೨—೪—೦
ಸಣ್ಣ ಹುಡುಗಿಯರಿಗೆ ಜೊತೆ ೧ ಕ್ಕೆ	"	೧-೧೨-೦



ಮೇಲೆ ಹೇಳಿದ ದೇಶದ ತಗಡಿನಿಂದ ತಯಾರಿಸಿದ ಪುದುಚೇರಿ ಬೋಲ್‌ಕಾಯಿ ಗೋಲುಸು.

ದೊಡ್ಡವರಿಗೆ ಜೊತೆ ೧ ಕ್ಕೆ ರೂ. ೨-೦-೦. ಚಿಕ್ಕವರಿಗೆ ಜೊತೆ ೧ ಕ್ಕೆ ೧-೧೨-೦. ಸಣ್ಣ ಹುಡುಗಿಯರಿಗೆ ಜೊತೆ ೧ ಕ್ಕೆ ೧-೮-೦.

ವಿಳಾಸ—ಮ್ಯಾನೇಜರ್, ಜರ್ಮನ್ ಸಿಲ್ವರ್ ಜ್ಯೂಯಲ್ ಡಿಪೋ, ಸಾಹುಕಾರ್ ಪೇಟೆ, ಮದ್ರಾಸು.

P. SUBBROYA'S

World Renowned and most Efficacious

Ayurvedic Medicines.

ಪಿ. ಸುಬ್ಬರಾಯಿಯವರ

ಲೋಕಪ್ರಸಿದ್ಧವಾದ ಮತ್ತು ಅತ್ಯಂತ ಗುಣಕಾರಿಯಾದ

ಆಯುರ್ವೇದ ಔಷಧಗಳು.

11-20

೧. ಪುಷ್ಟಿರಸಾಯನ.—ಇದರ ಸೇವನೆಯಿಂದ ನರಗಳ ಸಂಬಂಧವಾದ ಮತ್ತು ಇತರ ವಿಧವಾದ ಎಲ್ಲಾ ಶರೀರದ ದುರ್ಬಲಗಳೂ ಹೋಗಿ, ಹೊಟ್ಟೆಯಲ್ಲಿ ಅಗ್ನಿ ಉಂಟಾಗಿ, ದೇಹವು ಪುಷ್ಟಿಹೊಂದುವದು. ಪುಷ್ಟಿಯನ್ನು ಕಳೆದುಕೊಂಡ ಚಿಕ್ಕವಯಸ್ಸಿನವರಿಗೆ ಅದು ಅಕ್ಕ ಔಷಧವು. ಇದರಿಂದ ಶರೀರದ ಪ್ರತಿ ಅವಯವದ ನೋವು, ಅಶಕ್ತಿಯೂ ಹೋಗಿ, ಪುಷ್ಟಿಯೂ, ಬಲವೂ ಉಂಟಾಗುವವು. ಪಟ್ಟಿ ಒಕ್ಕೆ ರೂ ೨ ವಿ. ಪಿ ಛಾರ್ಜಿ ೩ ಆಣೆ.

೨. ಅತ್ಯುತ್ತಮವಾದ ಕಸ್ತೂರಿ.—ಕಾಶ್ಮೀರದಿಂದ ತರಿಸಿರುವದು. ಅತ್ಯುತ್ತಮವಾದದ್ದು, ಮತ್ತು ಒಂದೇ ರಥಂ ಇರತಕ್ಕದ್ದು. ತೋಲಾ ೧ಕ್ಕೆ ರೂ. ೪೮ ಚಿಲ್ಲರೆಯಾಗಿ ಒಂದು ರೂಪಾಯಿಗೂ ದೊರಕುತ್ತದೆ. ವಿ. ಪಿ. ಛಾರ್ಜು ಅಲಾಯದ.

೩. ಸುಗಂಧ ನಸ್ಯವು.—ಈ ನಸ್ಯವು ಬಹಳ ಸುವಾಸನಾಯುಕ್ತವಾಗಿರೋಣದರಿಂದ ಇವನ್ನೇ ಪ್ರತ್ಯೇಕವಾಗಿ ಹಾಕಿಕೊಳ್ಳಕೂಡದು. ನಿತ್ಯ ದಿನವೂ ಹಾಕಿಕೊಳ್ಳುವ ಸಾಮಾನ್ಯ ನಸ್ಯಕ್ಕೆ ಈ ಸುಗಂಧನಸ್ಯವನ್ನು ಒಂದೆರಡು ಚಿಟಿಕೆಯಷ್ಟನ್ನು ಬೆರಸಬೇಕು. ಹೀಗೆ ಬೆರಸಿದ ನಸ್ಯವು ಬಹು ಸುವಾಸನೆಯುಳ್ಳದ್ದಾಗಿಯೂ ಮನೋಹರವಾಗಿಯೂ ಆಗುತ್ತದೆ. ಇದರಿಂದ ನಸ್ಯಹಾಕಿಕೊಳ್ಳುವವರ ಬಳಿ ಬಿಡಿಯುವ ಕಟ್ಟವಾಸನೆ ಇರುವುದೇ ಇಲ್ಲ. ಸುವಾಸನೆಯು ಬಹಳ ಹೊತ್ತು ಇರುತ್ತದೆ. ಈ ಪುಡಿ ಬೆರಸಿದ ನಸ್ಯ ಬಹಳ ಕಾಲದ ವರೆಗೆ ಕೆಡುವುದಿಲ್ಲ. ಇಂಥಾ ನಸ್ಯಹಾಕಿಕೊಂಡಲ್ಲಿ ಶೀತ, ತಲೆನೋವು, ವಾತ ಮೊದಲಾದವು ನಿವಾರಣೆಯಾಗುತ್ತವೆ. ಆಗಾಗ್ಗೆ ನಸ್ಯಹಾಕಿಕೊಳ್ಳುವವರಿಗೆ ಇದು ಬಹು ಉಪಯೋಗವಾದದ್ದು. ಇದರಲ್ಲಿ ಅಪಾಯಕರ ಪದಾರ್ಥವೇನೂ ಸೇರಿರುವದಿಲ್ಲ. ಇಂಥಾ ಒಂದು ಡಬ್ಬಿ ನಸ್ಯವು ಒಂದು ತಿಂಗಳ ವರಿಗೆ ಬರುತ್ತದೆ. ಇಂಥಾ ಒಂದು ಡಬ್ಬಿಗೆ ೬ ಆಣೆ ೧ ರಿಂದ ೩ ಡಬ್ಬಿ ವರೆಗೆ ವಿ. ಪಿ. ಛಾರ್ಜಿ ೩ ಆಣೆ ಹೆಚ್ಚು. ವಿ. ಪಿ. ಛಾರ್ಜಿ ೪ ರಿಂದ ೬ ಡಬ್ಬಿ ವರೆಗೆ ೪ ಆಣೆ ೭ ರಿಂದ ೨೦ ಡಬ್ಬಿ ವರೆಗೆ ವಿ. ಪಿ. ಛಾರ್ಜಿ ೭ ಆಣೆ.

೪. ರಕ್ಷಾಮೃತಂ.—ಸಸ್ಯವರ್ಗಗಳಲ್ಲಿ ಸೇರಿದ ಅನೇಕ ಅಪೂರ್ವ ಮೂಲಿಕೆಗಳಿಂದ ಮಾಡಲ್ಪಟ್ಟಿರುವ ಈ ಚೂರ್ಣವು ಕಾಫಿ, ಚಹಾಗಳಿಗೆ ಬದಲಾಗಿ ಉಪಯೋಗಿಸುವುದಕ್ಕೋಸ್ಕರವೇ ತಯಾರಾಗಿದ್ದುಪಟ್ಟಿರುತ್ತದೆ. ಕಾಫಿ, ಚಹಾಗಳಲ್ಲಿರುವ ದುರ್ಗುಣಗಳು ಇದರಲ್ಲಿಲ್ಲ.

ಕಾಫಿ ಪುಡಿಯನ್ನು ಉಪಯೋಗಿಸುವ ಕ್ರಮದಲ್ಲಿ ಉಪಯೋಗಿಸುವ ರೀತಿಯಲ್ಲೇ ಇದನ್ನೂ ಉಪಯೋಗಿಸಿದರೆ ವಿಶೇಷ ರುಚಿಕರವಾದ ಪಾನವಾಗುವುದು. ಶಿಶುಗಳು ಮೊದಲುಗೊಂಡು ವೃದ್ಧಾಪ್ಯದಲ್ಲಿ ಇರುವವರ ವರೆಗೆ ಎಲ್ಲಾ ವಯಸ್ಸಿನ ಸ್ತ್ರೀಪುರುಷರೂ ಉಪಯೋಗಿಸಬಹುದಾಗಿದೆ.

ಜ್ವರ, ಸನ್ನಿ, ಬಸರು, ಶೀತ, ವಾಂತಿಭೇದಿ, ಈ ಮೊದಲಾದವುಗಳು ಸಂಭವಿಸಿರುವ ಕಾಲಗಳಲ್ಲಿಯೂ ಈ ರಕ್ಷಾಮೃತ ಚೂರ್ಣದ ಕಷಾಯವನು ಹಾಲನ್ನು ಬೆರಸಿಯಾಗಲಿ ಬೆರಸದೆಯಾಗಲಿ ಸಮಯೋಚಿತವಾಗಿ ಸೇವಿಸಿದರೆ ಜನರನ್ನು ಸಮಸ್ತ ವ್ಯಾಧಿಗಳಿಂದಲೂ ಬಿಡಿಸತಕ್ಕದ್ದಾಗಿ ಬಿಡುಗಡೆ ಮಾಡುವುದಲ್ಲದೆ, ಯಾವದೊಂದು ರೋಗವೂ ಕಾಲುಹಾಕಿಕೊಳ್ಳದಂತೆ ಕಾಪಾಡುವುದು. ಪಿತ್ತವಾಯುವು, ಗೂಲ್ಮ ಉಬ್ಬಸವು, ಕ್ಷಯವು, ಅಜೀರ್ಣವು, ಮಲಬದ್ಧತೆಯು, ತಲೆನೋವು ಈ ಮೊದಲಾದ ರೋಗಗಳು ನಿವಾರಣೆಯಾಗುತ್ತವೆ. ಪ್ರಾಣಾಧಾರವಾಗಿ ಇರುವಂಥಾ ರಕ್ತವನು ಶುದ್ಧಿ ಮಾಡಿ, ಧಾತುವನ್ನು ವೃದ್ಧಿ ಪಡಿಸಿ, ದೇಹಾರೋಗ್ಯವನು ಕೊಡುತ್ತದೆ. ಅಗ್ನಿಮಾಂದ್ಯ ಕಾಲ್ಲರಿಗೂ, ಮಧುಮೂತ್ರ ಮತ್ತು ಅತಿಮೂತ್ರ ರೋಗಿಗಳಿಗೂ ವಿಶೇಷ ಅಪೂರ್ವವಾದಂಥಾ ಚೂರ್ಣವು ಇದನ್ನು ಬಿಟ್ಟರೆ ಬೇರೊಂದಿಲ್ಲ.

ಇದನ್ನು ಕ್ರಮಾನುಸಾರ ತಪ್ಪದೆ ಉಪಯೋಗಿಸುತ್ತಾ ಬಂದರೆ ಮಧುಮೂತ್ರ ರೋಗಿಗಳ ಶರೀರದಿಂದ ಹೊರಡುವ ಬೆವರಿನಲ್ಲಿ ರಕ್ತಕ್ಕೆ ಸಕ್ಕರೆಯನ್ನೂ ವಿಶೇಷವಾದ ಬೆವರನ್ನೂ ಕಡಿಮೆ ಮಾಡಿ, ಮೂತ್ರರೋಗದ ಬೇರನ್ನೇ ನಿರ್ಮೂಲ ಮಾಡುವುದು. ದೇಹದ ಉಷ್ಣವನ್ನು ಶಾಂತಿಮಾಡುವುದು; ಮೆದುಳನ್ನು ಬಲಪಡಿಸಿ ಜ್ಞಾಪಕಶಕ್ತಿಯನ್ನು ವೃದ್ಧಿಗೊಳಿಸುವುದು. ವಿದ್ಯಾರ್ಥಿಗಳು, ವಕೀಲರು, ಉದ್ಯೋಗಸ್ಥರು, ದೇಹಾರೋಗ್ಯಕಾರಿಯಾದ ಗುಣವುಳ್ಳ ಕಾಫಿ, ಚಹಾಗಳನ್ನು ಖಂಡಿತವಾಗಿ ಬಿಟ್ಟು ಈ ರಕ್ಷಾಮೃತ ಚೂರ್ಣವನ್ನೇ ಉಪಯೋಗಿಸುತ್ತಾ ಬಂದಲ್ಲಿ ಇದು ಅಪೂರ್ವವಸ್ತುವಾಗಿ ಪರಿಣಮಿಸುವುದು. ಇಪ್ಪತ್ತು ದಿನಗಳಿಗೆ ಸಾಕಾಗುವಷ್ಟು ಚೂರ್ಣವುಳ್ಳ ಡಬ್ಬಿ ಒಕ್ಕೆ ಕ್ರಯ ೬ ಆಣೆ. ವಿ. ಪಿ. ಛಾರ್ಜಿ ೩ ಆಣೆ ಹೆಚ್ಚಾಗುವುದು. ಮುಂಗಡ ೯ ಆಣೆ ಸ್ಟಾಂಪು ಬರೆದಲ್ಲಿ ಒಂದು ಡಬ್ಬಿ ಟಪಾಲ ಕಳುಹಿಸಲ್ಪಡುತ್ತೆ.

ಕಾಗದವನ್ನು ಇಂಗ್ಲಿಷ್ ಅಥವಾ ತಮಿಳಿನಲ್ಲಿ ಬರೆಯಿರಿ.

Apply to:—**P. SUBBAROY,**

Porto Novo, South Arcot.

ವಿಳಾಸ:—ಪಿ. ಸುಬ್ಬರಾಯ್,

ಪೋರ್ಟನೋವೋ, ದಕ್ಷಿಣ ಅರ್ಕಾಟ್ ಜಿಲ್ಲಾ.

CHAMBERLAIN'S PAIN BALM.

ಚೇಂಬರ್ಲೇನ್ ಯವರು ಮಾಡಿದ ನೋವುಹರ ಔಷಧವು.

15-12



ಬೆನ್ನು ಬಿಗಿತದಲ್ಲಿನ ನೋವು, ಪಕ್ಕೆಗಳಲ್ಲಿ ಆಗುವ ನೋವು, ಖಂಡಗಳಲ್ಲಿ ಹುಟ್ಟುವ ನೋವು, ತರಚಿದ ಜಜ್ಜಿದ ಕಡೆಗಳ ನೋವು, ವಾಯುನೋವು—ಇವುಗಳನ್ನೆಲ್ಲಾ ಸಂಪೂರ್ಣವಾಗಿ ವಾಸಿಮಾಡುವಂಥಾ ಔಷಧ.

ವಾಯುನೋವೆಂದರೇನು?

ಕೀಲುಗಳಲ್ಲಿ ಮುಚ್ಚಿಕಟ್ಟುಗಳಲ್ಲೂ ಗಾಯವಾಗುವುದು, ಊದಿಕೊಳ್ಳುವುದು, ಕಠಿಣವಾಗಿ ಬಿಗಿಯುವ ಬಾಧೆ, ಖಂಡಗಳಲ್ಲಿ ಇರಿಯುವುದು, ನಿಬ್ಬೆರಗುವುದು, ಸೆಳೆತವಿರುವುದು—ಇದೇ. ಇದೆಲ್ಲಾ ನಿಮಗೆ ಯಾವಾಗ ಉಂಟಾಗುವುದೋ ಆಗ್ಗೆ ನಿಮಗೆ ವಾಯುರೋಗ ಬಂದಿದೆ ಎಂದು ತಿಳಿಯತಕ್ಕದ್ದು.

ಆಗ ಚೇಂಬರ್ಲೇನ್‌ಯವರು ಮಾಡಿದ ನೋವುಹರ ಔಷಧವನ್ನು ಉಪಯೋಗಿಸಿ.

ಮೊದಲನೇ ಸಲ ಇದನ್ನು ಹಾಕಿ ಉಜ್ಜಿದ ಕೂಡಲೆ ಹಿತಕರವಾದ ಒಂದು ತರಹಾ ಗಾಂಭೀರ್ಯ ವ್ಯಾಪಿಸುತ್ತದೆ. ಒಡನೆಯೇ ನೋವೆಲ್ಲಾ ಸಂಪೂರ್ಣವಾಗಿ ಪರಿಹರಿಸಲ್ಪಡುತ್ತದೆ. ಮನಸ್ಸಿಗೆ ಉಲ್ಲಾಸವಾಗುತ್ತೆ. ಆದನ್ನೇ ಆಗಿಂದಾಗ್ಗೆ ಹಾಕಿ ಉಜ್ಜುತ್ತಾ ಬಂದರೆ ಈ ವಾಯುವಿನ ಕಷ್ಟವನ್ನೇ ಕಿತ್ತುಹಾಕಿಬಿಡುತ್ತದೆ.

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ.

ಕೈಯಿಂದ ಮುಟ್ಟಿದ್ದರಿಂದ ಅಲ್ಲ.

ಇದು ಎಲ್ಲೆಲ್ಲೂ ವಿಕರಿಯಾಗುವುದು. ಸಣ್ಣ ಶೀಸೆಗೆ ೧ ರೂಪಾಯಿ. ದೊಡ್ಡ ಶೀಸೆಗೆ ೨ ರೂಪಾಯಿ.

ನೋಟೀಸು.

591

ನನ್ನ ಭಾವನಾದ ಅಣ್ಣ ಮೊದ್ಡರಂಗಣ್ಣನವರ ಹೆಂಡತಿ ನನ್ನ ಹೆಸರಿಗೆ ಕೆಂಪನೂರಿನಲ್ಲಿರ ಹೆಸರಿಗೆ ನನ್ನ ಪಿತ್ರಾರ್ಜಿತವಾದ ಜಮೀನುಗಳ ಖಾತೆ ನಿರ್ದಿಷ್ಟವಾಗಿ ನನ್ನ ವಿಚಾ ಮಲ್ಲರ ಬಳಿಯಲ್ಲಿ... [illegible] ನನಗೆ ಜೀವನಕ್ಕೆ ಯಾವ ಆಧಾರ... ಈ ನೋಟೀಸಿನ ಮೂಲಕ ತಿಳಿಸಿದ್ದೇನೆ.

CHEAP, CHEAP, VERY CHEAP.

69

English School Books for all standards. Mangalore and Mysore Govt. Book Depot publications.

BOOKS FOR F. A AND B. A STUDENTS.

Notes for L. S. and Matriculation Texts for 1905.

Matriculation Texts for 1906, in Kanarese, Tamil, Telugu, and Sanskrit.

N. B.—Postage is free when 5 copies of Texts are purchased at a time. A discount of 5 % is allowed when 12 copies are taken.

Apply:—Mission Book Depot, Bangalore City.

ನೋಟೀಸು.

33-6

ಇದರಿಂದ ನಮ್ಮ ಏಜಂಟರುಗಳಿಗೂ ಮತ್ತು ವಿದೇಶದಲ್ಲಿರುವ ನಮ್ಮ ಕಂಪನಿ ವ್ಯಾಪಾರಸ್ಥರಿಗೂ ತಿಳಿಸುವುದೇನೆಂದರೆ—

ಹೆಸರು, ಊರು, ವಿಳಾಸವು ಇವುಗಳನ್ನು ಸ್ಪಷ್ಟವಾಗಿ ತಿಳಿಸದೇ ನಮ್ಮ ಕಂಪನಿಗೆ ಬರೆದಿರುವ ಕೆಲವು ಆರ್ಡರುಗಳು, ಮತ್ತು ಮಣಿಆರ್ಡರುಗಳು ಬಂದಿರುತ್ತವೆ. ಅವುಗಳನ್ನು ಕಳುಹಿಸಿಕೊಟ್ಟವರ ಹೆಸರು, ಹಾಗೂ ಪತ್ತೆಯು ಈ ಕಛೇರಿಯ ವರೆಗೂ ನಮಗೆ ಗೊತ್ತಿಲ್ಲದೇ ಇರುವದರಿಂದ ಈಗಲಾದರೂ ದಯಮಾಡಿ ತಮ್ಮ ಹೆಸರು, ಊರು, ಹಾಗೂ ನಮಗೆ ತಿಳಿಸಿದ ತಾರೀಖು, ಇವುಗಳನ್ನು ಬೇಗನೆ ಬರೆದು ತಿಳಿಸಬೇಕೆಂದು ಈ ಜಾಹೀರಾತಿನ ಮೂಲಕ ಸರ್ವರಿಗೂ ವಿನಯದಿಂದ ಅರಿಕೆ ಮಾಡಿಕೊಳ್ಳುತ್ತೇವೆ.

ನಮ್ಮ ವಿಳಾಸ.—ಮ್ಯಾನೇಜರ್, ಘೋರ್ಪಡೆ ಕಂಪನಿ, ಮಾರ್ಕೆಟರ್, ಮದರಾಸು.

ಪ್ರಶ್ನೋತ್ತರ ಲೇಖ್ಯಬೋಧಿನಿ.

58—7

೨ ನೇ ಭಾವಿ. ಮಾರಾಟಕ್ಕೆ ಸಿದ್ಧವಾಗಿರುತ್ತೆ. ದಪ್ಪವಾದ ಕಾಗದ, ಭದ್ರವಾದ ಬೈಂಡುಳ್ಳದ್ದು. ಪುಸ್ತಕದಲ್ಲಿರುವ ಸಂಗತಿಯನ್ನು ದಯವಿಟ್ಟು ಓದಿನೋಡಿ —

ಕ್ಷೇಮಸಮಾಚಾರ ಕಾಗದಗಳು, ಅರ್ಜಿಗಳು, ಸಿವಿಲ್, ಕ್ರಿಮಿನಲ್, ರೆವಿನ್ಯೂ, ಮುಜ್ರಿ, ಇಂಜನಿಯರ್, ಪಾರೆಸ್ಟು, ಎಕ್ಸೈಜು, ವಿದ್ಯಾಭ್ಯಾಸ, ವ್ಯವಸಾಯ, ಮುನಿಸಿಪಲ್, ಮತ್ತು ಇತರ ಎಲ್ಲಾ ಇಲಾಖೆಗಳ ಬಗೆಬಗೆ ಸಂಗತಿಗಳು, ಸಿವಿಲ್ ಪ್ರೊಸೀಜರ್ ಕೋಡು, ಕ್ರಿಮಿನಲ್ ಪ್ರೊಸೀಜರ್ ಕೋಡು, ಪಿನಲ್ ಕೋಡು ಹಿಂದೂಲಾ, ಮಹಮದಿಲಾ, ಕಂಟ್ರಾಕ್ಟು, ಡಾಮೇಜು, ಪಾರಸು, ವೈಸರು, ಲಿವಿಟೇಷನ್, ಸ್ಟಾಂಪು, ಕೋರ್ಟುಪೀಜು, ಪೊಲೀಸು, ಸ್ಯಾನಿಟರಿ, ಮುನಿಸಿಪಲ್, ರೆವಿನ್ಯೂ ಕೋಡು, ರೂಲ್ಸು, ಲ್ಯಾಂಡ್ ಇಂಪ್ರೂವ್ ಲ್ಯಾಂಡು ಅಕ್ವಿಜಿಷನ್, ಬೊಕ್ಕಿ, ಆರಂಸು, ಮೊದಲಾದ ಎಲ್ಲಾ ಆಕ್ಟುಗಳ ಸಾರಾಂಶಗಳು, ಲೇವಾದೇವಿ, ರೆವಿನ್ಯೂ ರೂಲ್ಸು ಪ್ರಕಾರ ಗ್ರಾಮದ ಲೆಕ್ಕಗಳನ್ನು ಬರೆಯುವದು, ಮುಂತಾದ ವ್ಯಾಪಾರಿಗಳ ಲೆಕ್ಕಗಳನ್ನು ಬಗೆಬಗೆ ಸಂಗತಿಗಳು, ಲೋಚನಾ... ಮೊದಲಾದ ವರ್ತಕರ ಲೆಕ್ಕಗಳನ್ನು ಬರೆಯುವ ರೀತಿ, ಮೊದಲಾದ ಅನೇಕ ಸಂಗತಿಗಳು ಸ್ವಲ್ಪವಿದ್ಯಾವಂತರು ಓದಿ ಬಲ್ಲವರಿಗೂ ಸುಲಭವಾಗಿ ತಿಳಿಯುವಂತೆ ಪ್ರಶ್ನೋತ್ತರ ರೀತಿಯಾಗಿ ಬರೆದಿದೆ. ಪುಸ್ತಕದಲ್ಲಿರುವ ಎಲ್ಲಾ ಸಂಗತಿಗಳನ್ನೂ ವಿವರಿಸುವದು ಸಾಧ್ಯವಲ್ಲವಾಗಿ ಸೂಕ್ಷ್ಮದಿಂದ ತಿಳಿಸಿರುತ್ತೆ.

ವಿಳಾಸ ಬದಲಾಯಿಸಿದೆ. ವಿಳಾಸ —ಬಿ. ಕೆ. ಮೂರ್ತಿ ಕಂಪನಿ, ಅಗ್ರಹಾರ ಪೋಸ್ಟು, ಕೋಲಾರ ಡಿಸ್ಟ್ರಿಕ್ಟು.

ಇಗೋ! ನೋಡಿ ಅಪರೂಪವಾದ ಹೊಸಪುಸ್ತಕ!

611

"ಶ್ರೀ ಚಾಮರಾಜೇಂದ್ರ ಒಡೆಯರವರ ಚರಿತ್ರೆ" ಎಂಬ ಈ ಪುಸ್ತಕವು ಕನ್ನಡವನ್ನು ಕಲಿತಿರತಕ್ಕ ಪ್ರತಿಯೊಬ್ಬ ಮನುಷ್ಯನೂ ಓದಲಿಕ್ಕೆ ಅರ್ಹಕರವಾದದ್ದಾಗಿದೆ. ಮೈಸೂರು ಸಂಸ್ಥಾನದ ಚರಿತ್ರೆಯೂ, ರಾಜರ ಶ್ರೀಮದ್ ಪೂರ್ವ ಚರಿತ್ರೆಯೂ, ಲೇಟ್ ಶ್ರೀ ಚಾಮರಾಜೇಂದ್ರ ಒಡೆಯರವರ ಅಂತರಂಗ ಬಹಿರಂಗ ಕಾರ್ಯಗಳೂ, ಅವರಿಗಿದ್ದ ಅಧಿಕಾರಿಗಳಾದ ಪ್ರಜಾ ವಾತ್ಸಲ್ಯವೂ ಅವರ ಕಾಲದಲ್ಲಿ ನಡೆದ ನಾನಾ ಉತ್ಕೃಷ್ಟವಿಷಯಗಳು ಬಾಲ್ಯದಿಂದ ನೀವು ಓದುವಂತೆ ನೀವೇ ನಲ್ಪುಟವ ... ರವರ ಅಂತರ್ಯವರು ಈ ಪುಸ್ತಕವನ್ನು ... ಬರೆದಿದ್ದಾರೆ. ಇವರ ಅನೇಕ ಕರಣಿಕೆಯ ... ಬರೆದಿದ್ದಾರೆ. ಇದರಲ್ಲಿ ... ಕಾಗದ ಪತ್ರಗಳು, ... ಬರೆದ ಸ್ವೀಚುಗಳೂ ... ಬರಸಿದ್ದಾರೆ. ಇವರಲ್ಲಿ ರತಕ್ಕ ಅಪೂರ್ವವಾದ ಚಿತ್ರಗಳು ಇಂಗ್ಲೆಂಡಿನಲ್ಲಿ ಪ್ರತ್ಯೇಕವಾಗಿ ತಯಾರುಮಾಡಿಸಿದ್ದುಗಳಾಗಿವೆ. ಈ ಪುಸ್ತಕವು ಮೈಸೂರು ಸಂಸ್ಥಾನದ ಪ್ರತಿಯೊಂದು ಮನೆಯಲ್ಲೂ ಇರಬೇಕಾದ್ದು. ಪ್ರತಿಯೊಬ್ಬ ಗೃಹಸ್ಥನೂ ಅತ್ಯವಶ್ಯವಾಗಿ ಓದಬೇಕಾದ್ದು. ಇದುವರೆಗೂ ಯಾರೂ ನೋಡಿರಲಾರದ ಒಂದಾವರ್ತಿ ಓದಿದರೆ ಪುನಃ ಪುನಃ ಓದುವಂತೆ ಮನಸ್ಸನ್ನು ಆಕರ್ಷಿಸುವದು. ಇದರ ಬೆಲೆ ೧ ರೂಪಾಯಿ ಮಾತ್ರವೇ. ಅಂಚೆ ಕೂಲಿ ಸೇರಿ ವಿ. ಪಿ. ಮೂಲಕ ತರಿಸಿಕೊಂಡರೆ ೧—೧೦—೦ ಬೀಳುವದು.

೧ ಜನರಲ್ ಏಜಂಟ್, ೨ ೩ ಬಿಂಗ್ರಯ್ಯ, | ಕೃಷ್ಣರಾಜಮೊಹಲ್ಲಾ, ಮೈಸೂರು.

೧೮೯೯ ರಿಂದ ೧೯೦೬ ರವರೆಗೆ.

ಕಾಲದ ಪರೀಕ್ಷೆ!

ಮೂವತ್ತೇಳು ವರ್ಷಗಳಿಗಿಂತಲೂ ಹೆಚ್ಚಾಗಿ

SCOTT'S EMULSION.

57-2

(ಸ್ಕಾಟ್ಸ್ ಇಮಲಷನ್)

ಎಂಬೀ ಸೇವನಾ ಔಷಧಿಯನ್ನು ಘನ ಪಂಡಿತರೆಲ್ಲಾ ಅನೇಕ ವೇಳೆ ಪರೀಕ್ಷೆಮಾಡಿದರು. ಸರ್ವೋತ್ತಮವಾದದ್ದೆಂದು ಹೇಳಿರುತ್ತಾರೆ. ಆದದರಿಂದ ಮುಂದಿನ ರೋಗಗಳಿಗೆ ಪ್ರಪಂಚದಲ್ಲೆಲ್ಲಾ ಈಗ ಈ ಔಷಧವು ಸರ್ವ ಶ್ರೇಷ್ಠವಾದದ್ದಾಗಿ ಪರಿಣಮಿಸಿದೆ —

ಶ್ವಾಸಕೋಶದ ಅಕ್ರಮಗಳು; ನಾನಾ ತರದ ಕೆಮ್ಮಲು,

ಸಕಲವಿದ ಕೃಶತೆಗಳು, ನರಸಂಬಂಧಗಳ ಕ್ಷೀಣತೆ,

ಆಹಾರದಲ್ಲಿ ಅರುಚಿ.



ಇದಲ್ಲದೆ ದೊಡ್ಡವರಿಗೂ ಮಕ್ಕಳಿಗೂ ಬಲಕಾರಿಯಾದ ಮತ್ತು ಅಂಗ ಬೆಳೆಸುವ ಸೇವನಾ ಔಷಧವೂ ಇದೇ.

ಕೈ ಸೋಕದೆ ತಯಾರಾದದ್ದು.

ಔಷಧಗಳ ಅಂಗಡಿಗಳಲ್ಲೆಲ್ಲಾ ವಿಕರಿಯಾಗುವದು.

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,

ಔಷಧಗಳ ಕಾರ್ಖಾನೆ,

ಲಂಡನ್, ಇಂಗ್ಲೆಂಡ್.

ಈ ನಿಶಾನಿಯನ್ನು ಇರುವ ಔಷಧವನ್ನೇ ಕೊಂಡುಕೊಳ್ಳಿ.

ವೃತ್ತಾಂತ ಪತ್ರಿಕೆ

೧೯೦೬ ನೇ ಇಸವಿ ಮಾರ್ಚಿ ತಾ|| ೨೯ ನೇ ಗುರುವಾರ

ಮೈಸೂರು ಗವರ್ನಮೆಂಟಿನ ಹೊಸ ಏರ್ಪಾಡುಗಳು

ಮ|| ವಿ. ಪಿ. ಮಾಧವರಾವ್, ಸಿ. ಐ. ಇ. ಯವರು ಸಂಸ್ಥಾನದ ದಿವಾನರಾಗಿಯೂ, ಮ|| ಟಿ. ಆನಂದರಾಯರೂ ಮ|| ಕೆ. ಪಿ. ಪುಟ್ಟಣ್ಣಚೆಟ್ಟಿಯವರೂ ಕೌನ್ಸಿಲ್ ಮೆಂಬರುಗಳಾಗಿಯೂ ನೇಮಕವಾಗಿರುತ್ತಾರೆಂದು ಸರ್ಕಾರದವರು ಪ್ರಕಟಿಸಿದ್ದಾರೆ. ಸರ್ ಪಿ. ಎನ್. ಕೃಷ್ಣಮೂರ್ತಿಯವರ ದಿವಾನಗಿರಿಯು ವಿವೇಚನೆಯಿಲ್ಲದ ದೂರುಗಳಿಗೂ ಹೊಗಳಿಕೆಗೂ ಗುರಿಯಾಯಿತು. ಆದುದರಿಂದ ಈ ಭಾಗದಲ್ಲಿ ಏನು ಹೇಳುವುದಕ್ಕೂ ನಮಗೆ ಇಷ್ಟವಿಲ್ಲ. ಸರ್ ಕೃಷ್ಣಮೂರ್ತಿಯವರು ತಮ್ಮ ದಿವಾನಗಿರಿಯ ಕಾಲದಲ್ಲಿ ಸಂಸ್ಥಾನದ ಅನೇಕ ಭಾರೀ ಕಾರ್ಯಗಳನ್ನೂ ಏರ್ಪಾಡುಗಳನ್ನೂ ನಡಿಸಿ ಪೂರೈಸಿರುತ್ತಾರೆ. ಈ ಭಾಗದಲ್ಲಿ ನಾವು ಅವರಿಗೆ ಕೃತಜ್ಞರಾಗಿರಬೇಕಾದದ್ದು ನ್ಯಾಯವಾಗಿದೆ. ಆದರೆ ಅವರ ದಿವಾನಗಿರಿಯ ಕೊನೇ ಕಾಲದಲ್ಲಿ ಅವರ ಶಕ್ತಿಯವರಿಗೆ ಪ್ರಾಪ್ತವಾದ ವಿಶೇಷ ರೋಗದ ಕಾಯಿಲೆಯು ತುಂಬಾ ವ್ಯಸನವನ್ನುಂಟುಮಾಡಿತು. ಅವರು ಈ ವಿಶ್ರಾಂತಿಸುಖವನ್ನು ಚಿರಕಾಲ ಅನುಭೋಗಿಸುವಂತಾಗಲೆಂದೂ ಈ ಸಂಸ್ಥಾನದ ಕಾರ್ಯಗಳಿಗೆ ಅವರ ವಿವೇಕಪೂರ್ವಕವಾದ ಸಲಹೆಗಳು ದೊರಕುವಂತಾಗಲೆಂದೂ ಹಾರೈಸುತ್ತೇವೆ.

ಮ|| ಮಾಧವರಾಯರು ಎರಡು ವರುಷಕಾಲ ಮೈಸೂರನ್ನು ಬಿಟ್ಟು ಹೊರಗಡೆ ಇದ್ದು ಬಂದದ್ದು ತುಂಬ ಅನುಕೂಲವಾಯಿತೆನ್ನುವುದಕ್ಕೆ ಸಂಶಯವಿಲ್ಲ. ಇನ್ನುಮೇಲೆ ಅವರ ದೃಷ್ಟಿಯು ಹೊಸದರಿಯಾಗುವುದು; ಅವರ ಶಕ್ತಿಸಾಹಸಗಳು ನೂತನವೆನಿಸುವುವು. ಅವರು ಈವರೆಗೂ ಸಂಸ್ಥಾನದಲ್ಲಿ ಇದುವರೆಗೆ ಪಡೆದಿರುವ ಅನುಭವವು ನಮ್ಮ ಮೈಸೂರು ಸಂಸ್ಥಾನವನ್ನು ಇನ್ನೂ ಹೆಚ್ಚಾಗಿ ಅಭಿವೃದ್ಧಿಹೊಂದುವಂತೆಯೂ ಕಾರಬಾರು ಚುರುಕಾಗಿ ನಡೆಯುವಂತೆಯೂ ಮಾಡುವುದೆಂದು ನಿರೀಕ್ಷಿಸುತ್ತೇವೆ. ಗವರ್ನಮೆಂಟಿನ ಉದ್ದೇಶ, ಕಾರ್ಯಭಾಗ, ಇವೆರಡೂ ಪ್ರಜೆಗಳನ್ನು ಸುಸ್ಥಿತಿಯಲ್ಲೂ ಐಶ್ವರ್ಯದಲ್ಲೂ ಅಭಿವೃದ್ಧಿಹೊಂದುವಂತೆ ಮಾಡುವುದಾಗಿರಬೇಕೆಂದು ನಾವು ಹೇಳಬೇಕಾದದ್ದಿಲ್ಲ.

ಅನ್ಯಮತಸ್ಥರ ವಿಷಯದಲ್ಲಿ ಹ್ಯಾಗೆ ನಡೆಕೊಳ್ಳಬೇಕು?

ಅನ್ಯಮತಗಳ ವಿಷಯದಲ್ಲಿ ಹ್ಯಾಗೆ ನಡೆದುಕೊಳ್ಳಬೇಕು? ಸಕಲ ಮತ ವಿಷಯದಲ್ಲಿಯೂ ಅಲಕ್ಷ್ಯವನ್ನು ತಾಳಬಹುದೇ? ಯಾವಾತನು ಯಾವ ಮತವನ್ನೂ ನಂಬದೆ ಅಲಕ್ಷ್ಯಮಾಡದೆ ಇದ್ದಾನೋ ಅವನು ಎಲ್ಲಾ ಮತಗಳನ್ನೂ ಒಂದೇ ವಿಧವಾಗಿ ಉದಾಸೀನನಾಗಿದ್ದಾನೆ. ಅವನು ಒಂದು ಮತವು ಹೆಚ್ಚು ಮತ್ತೊಂದು ಮತವು ಕಡಮೆ ಎಂಬ ಭೇದಬುದ್ಧಿಯಿಂದಾಗಲಿ ಸಂಶಯದಿಂದಾಗಲಿ ಅಧಿಕ ನಿಷ್ಠೆಯನ್ನು ಇಟ್ಟುಕೊಂಡಿದ್ದಾನೆ. ಆದದರಿಂದ ಸರ್ವಮತಗಳನ್ನೂ ಏಕಪ್ರಕಾರವಾದ ತಿರಸ್ಕಾರದಿಂದ ಕಾಣುತ್ತಾನೆ. ಒಂದಕ್ಕಿಂತ ಹೆಚ್ಚಾಗಿ ಬೇರೊಂದು ಮತವನ್ನು ಮಾಡುವವನಲ್ಲ. ಹೀಗಿರುವವನು ಯೋಗ್ಯನಾದಾನೇ? ಹುಟ್ಟಿ ಮನುಷ್ಯನಿದ್ದಾನೆಂದು ಇಟ್ಟುಕೊಳ್ಳೋಣ. ಇವನು ಸಕಲ ಮತಗಳೂ ಒಳ್ಳೆಯವುಗಳೇ ಎಂದು ತಿಳಿದುಕೊಂಡಿದ್ದಾನೆ. ನದಿಗಳೆಲ್ಲಾ ಸಮುದ್ರವನ್ನು ಸೇರುವಹಾಗೆ ಸಕಲಮತಗಳೂ ಒಂದೇ ಗುರಿಯನ್ನು ಸೇರುತ್ತವೆ; ಬೇರೆ ಬೇರೆ ಮಾರ್ಗಗಳಾಗಿವೆಯಷ್ಟೆ ಎಂದು ಹೇಳುವ ವಾಕ್ಯಕ್ಕೆ ಸಮ್ಮತನೆಂದು ತಿಳಿದಿದ್ದಾನೆ. ಆದಕಾರಣ ಸಕಲ ಮತಗಳನ್ನೂ ಏಕಪ್ರಕಾರವಾದ ಗೌರವದಿಂದ ಕಾಣುತ್ತಾನೆ. ಇದೇ ಯೋಗ್ಯವಾದ ನಡತೆಯೆಂದು ತಿಳಿಯಬೇಕೇ?

ಈ ವಿಷಯದಲ್ಲಿ ನಮ್ಮ ಅಭಿಪ್ರಾಯವೇನೆಂದರೆ—ಇವೆರಡು ವಿಧ ಮಾರ್ಗಗಳೂ ಯೋಗ್ಯವಾದ ನಡತೆಯನ್ನು ಬೋಧಿಸುವದಿಲ್ಲ. ಯೋಗ್ಯವಾದ ನಡತೆಯು ಎಂಥ ಮನುಷ್ಯನಲ್ಲಿ ದೊರಕುತ್ತದೆಂದರೆ—ಯಾವನು ತಾನು ನಂಬಿರುವ ಮತವೇ ಸತ್ಯವಾದದ್ದೂ ಉತ್ಕೃಷ್ಟವಾದದ್ದೂ ಆಗಿದೆಯೆಂದೂ ಬೇರೆ ಯಾವ ಮತದಲ್ಲಿಯೂ ತಿಳಿಸಲ್ಪಡದೆ ಇರುವ ಸತ್ಯಾಂಶಗಳು ತನ್ನ ಮತದಲ್ಲಿ ಮಾತ್ರ ದೊರಕತಕ್ಕದ್ದಾಗಿವೆಯೆಂದೂ ನಿಸ್ಸಂದೇಹವಾಗಿ ತಿಳಿದಿರುತ್ತಾನೋ ಅಂಥವನಲ್ಲಿಯೇ ಆ ಯೋಗ್ಯವಾದ ನಡತೆಯಿರುತ್ತದೆ. ಅಂಥವನು ಇತರ ಮತಗಳ ವಿಷಯದಲ್ಲಿ ಹ್ಯಾಗೆ ನಡೆದುಕೊಳ್ಳುತ್ತಾನೆಂಬಿರಾ? ಅಂಥವನು ಸ್ವಲ್ಪವೂ ವಿಚಾರವಿಲ್ಲದೆ ಸಕಲ ಪರಮತಗಳನ್ನೂ ದೂಷಿಸುತ್ತಲೂ ಪರಮತಗಳನ್ನು ಅನುಸರಿಸುವವರೆಲ್ಲರೂ ದುಷ್ಟರೆಂದು ತೀರ್ಮಾನಿಸುತ್ತಲೂ, ಮತ್ತು ಅನುಚಿತ ಮಾರ್ಗಗಳಿಂದ ಅಂದರೆ ಬಲಾತ್ಕಾರದ ಮೂಲಕವೂ ಹಿಂಸೆಯ ಮೂಲಕವೂ ಪರಮತಧ್ವಂಸವನ್ನು ಮಾಡುವದಕ್ಕೆ ಯೋಚಿಸುತ್ತಲೂ ಇರುವನೋ? ಈ ವಿಧಗಳಲ್ಲಿ ಯಾವನು ಸ್ವಮತವನ್ನು ಹೆಚ್ಚಿಸಿಕೊಳ್ಳ ಪ್ರಯತ್ನಿಸುತ್ತಾನೋ ಅವನು ಯೋಗ್ಯನಲ್ಲ. ಅವನು ಮತಾಭಿಮಾನಿಯಾಗಿದ್ದಾನಷ್ಟೆ. ಆದರೆ ಅವನು ಸ್ವಮತದಲ್ಲಿ ವಿಶ್ವಾಸಿಯಾಗಿದ್ದರೂ ಪರಮತಸ್ಥರಾದವರನ್ನೆಲ್ಲಾ ಕೇವಲ ದಯೆಯಿಂದಲೂ ಪ್ರೀತಿಯಿಂದಲೂ ಮನ್ನಿಸಿಮಾಡುವಂಥವನಾಗಿಯೂ, ತನ್ನ ಮತವನ್ನು ಪ್ರಬಲಪಡಿಸುವದಕ್ಕೆ ಕೇವಲ ಸೌಮ್ಯವಾದ ರೀತಿಯನ್ನು ಅನುಸರಿಸುವವನಾಗಿಯೂ ಇದ್ದರೆ ಅಂಥವನಲ್ಲಿಯೇ ನಿಜವಾದ ಯೋಗ್ಯತೆಯಿರುವುದೆಂದು ನಾವು ದೃಢವಾಗಿ ಹೇಳಬಹುದು.

ಇದಕ್ಕೆ ದಿಗ್ದರ್ಶನಕವಾದ ಕೀರ್ತಿಯನ್ನು ಪಡೆದ ಗ್ಲಾಡ್‌ಸ್ಟನ್ ಶ್ರೀಮಂತನ ಚರಿತ್ರೆಯೇ ದೊಡ್ಡ ನಿದರ್ಶನವಾಗಿದೆ. ಈತನು ತನ್ನ ಜೀವಿತಕಾಲವೆಲ್ಲವೂ ಮಹಾ ಕ್ರಿಸ್ತಭಕ್ತನಾಗಿದ್ದನು. ಯೇಸುಸ್ವಾಮಿಯು ಮನುಷ್ಯರೂಪಿಯಾದ ದೇವರೆಂತಲೂ ಆತನು ಕನ್ಯಾಗರ್ಭೋತ್ಪನ್ನನಾಗಿದ್ದನೆಂತಲೂ, ಆತನು ಸತ್ತವರನ್ನು ಬದುಕಿಸುವದೇ ಮೊದಲಾದ ಮಹತ್ಕಾರ್ಯಗಳನ್ನು ಮಾಡಿದನೆಂತಲೂ, ಆತನು ಶಿಲುಬೆಯಮೇಲೆ ಪ್ರಾಣತ್ಯಾಗವನ್ನು ಮಾಡಿ ಮೂರನೆಯ ದಿನದಲ್ಲೆದ್ದು ದಿವಾರೋಹಣವನ್ನು ಹೊಂದಿದನೆಂತಲೂ ಹೇಳುತ್ತಾ ಇರುವ ಆ ಕ್ರಿಸ್ತನಲ್ಲಿ ನಂಬಿಕೆಯಿಟ್ಟು ದೇವರ ಚಿತ್ತಾನುಸಾರ ನಡೆಯುವವರೆಲ್ಲಾ ಮೋಕ್ಷವನ್ನು ಹೊಂದುವರೆಂತಲೂ ಆ ಗ್ಲಾಡ್‌ಸ್ಟನ್ ಶ್ರೀಮಂತನು ನಿಸ್ಸಂದೇಹವಾಗಿ ನಂಬಿದ್ದನು. ಬೈಬಲ್ ಎಂಬ ಸತ್ಯವೇದವನ್ನು ಪಾರಾಯಣಮಾಡುವದರಲ್ಲಿಯೂ, ವೇದಾಧ್ಯಯನೆಯ ನಿಮಿತ್ತ ದೇವಾಲಯಕ್ಕೆ ಹೋಗುವದರಲ್ಲಿಯೂ ಮಹಾ ಪ್ರೀತಿಯ ನಿಮಿತ್ತ ಕ್ರಿಸ್ತನೇ ಆಶ್ರಯವೆಂದು ಸೂಚಿಸುವಂಥ ಆ ಪರಿಶುದ್ಧವಾದ ಮತಸಂಸ್ಕಾರಗಳನ್ನು ಆಚರಿಸುವದರಲ್ಲಿಯೂ ಗ್ಲಾಡ್‌ಸ್ಟನ್ ಶ್ರೀಮಂತನು ಕೇವಲ ನಿಷ್ಠನಾದ ಕ್ರೈಸ್ತನಾಗಿದ್ದನು.

ಇಷ್ಟೇ ಅಲ್ಲ ಮೊಟ್ಟಮೊದಲು ಧರ್ಮವೆಂದರೆ ಅದಕ್ಕೆ ಸೇರಿದ ವಿಧ ಮತ್ತು ಶಿಷ್ಟರಾದ ಸದಾಚಾರವು ಹುಟ್ಟಿ ಪ್ರವರ್ಧಮಾನವಾಗುತ್ತಿರುವದೂ ಈ ಕಾರ್ಯಗಳನ್ನು ಯಾವಾತನು ಹಿಡಿದಿರುವದಿಲ್ಲವೋ ಅವನಾದರೂ, ಅಂಥ ಜನರಿಂದ ಕೂಡಿದ ರಾಜ್ಯವಾದರೂ ಬಹುಕಾಲ ಉತ್ಕೃಷ್ಟವಾದ ಸದಾಚಾರದಲ್ಲಿ ನೆಲೆಗೊಂಡಿರಬಾರದೆಂದೂ ಆತನು ಸದಾ ಬೋಧಿಸುತ್ತಲಿದ್ದನು. ಆತನು ತನ್ನ ವಿಷಯದಲ್ಲಿ ಹೇಳಿ ಬರೆದಿರುವುದೇನೆಂದರೆ—ಕ್ರಿಸ್ತನಾದ ಬೋಧನೆಗಳನ್ನು ನಾನು ಕೇವಲ ಶ್ರದ್ಧಾಭಕ್ತಿಯಿಂದ ಕಾಣುತ್ತಿದ್ದೇನೆ ಮತ್ತು ಆ ಮತದಲ್ಲಿ ಯಾವ ಮಹಾಪುರುಷನ ಗುಣಾನುವರ್ಣನೆಯನ್ನು ಮಾಡುತ್ತದೆಯೋ ಆ ಕ್ರಿಸ್ತಸ್ವಾಮಿಯ ನಾಮಕ್ಕೆ ಅಗತ್ಯವಾದ ಸದ್ಗುಣ ಸಂಪದಕ್ಕೆ ಸ್ವಲ್ಪವಾದರೂ ಅರ್ಹನಾಗಿದ್ದೇನೆಂದು ನಾನು ನಂಬಿದ್ದೇನೆ ಎಂಬುದಾಗಿ ಹೇಳಿದ್ದಾನೆ.

ಗ್ಲಾಡ್‌ಸ್ಟನ್ ಶ್ರೀಮಂತನು ಸಕಲ ಜನರೂ ಕ್ರೈಸ್ತಮತಾವಲಂಬಿಗಳಾಗಬೇಕೆಂದು ಅಪೇಕ್ಷಿಸಿದನು. ಇದಕ್ಕೇನು ನಿದರ್ಶನವೆಂದರೆ—ಅನ್ಯದೇಶಗಳಲ್ಲಿ ಕ್ರೈಸ್ತಮತ ಪ್ರಚಾರಕಾರ್ಯವನ್ನು ಕೈಗೊಂಡಿರುವ ಸಮಾಜಗಳಲ್ಲಿ ಆತನೂ ಒಬ್ಬ ಕಾರ್ಯದರ್ಶಿಯಾಗಿದ್ದನು. ಈ ಸಂಬಂಧವಾದ ಕೂಟಗಳಲ್ಲಿ ಪದೇ ಪದೇ ತನ್ನ ಆಲೋಚನೆಯನ್ನು ಹೇಳಿ ಪ್ರೋತ್ಸಾಹಿಸುವುದರಲ್ಲಿ ತತ್ಪರನಾಗಿದ್ದನು. ಇಂಥ ಕ್ರೈಸ್ತಭಕ್ತನು ಇತರ ಮತಸ್ಥರ ವಿಷಯದಲ್ಲಿ ಹ್ಯಾಗೆ ನಡೆದುಕೊಂಡನೆಂದು ಕೇಳುತ್ತೀರಾ? ಕ್ರೈಸ್ತರಲ್ಲದವರನ್ನು ಸರ್ಕಾರದವರಾಗಲಿ ಪ್ರಜೆಗಳಾಗಲಿ ಹಿಂಸೆಪಡಿಸಬಾರದೆಂದು ಬಹು ಬಲವಾಗಿ ಸ್ಥಾಪಿಸುವಂಥವನಾಗಿದ್ದನು. ಪ್ರತಿಯೊಬ್ಬನೂ ತನ್ನ ತನ್ನ ನಂಬಿಕೆಗೆ ಅನುಸಾರವಾಗಿ ನಡೆಯುವದರಲ್ಲಿ ಕೇವಲ ಸ್ವತಂತ್ರನಾಗಿರತಕ್ಕದ್ದು ಎಂದು ಆತನು ವಾದಿಸುತ್ತಿದ್ದನು. ಮತ್ತು ಸತ್ಯವೆಂಬುವದು ಬಹುಚೆನ್ನಾಗಿ ಪ್ರಕಾಶಮಾನವಾಗಬೇಕಾದರೆ ಸ್ವಾತಂತ್ರ್ಯವೆಂಬ ಕ್ಷೇತ್ರವೇ ಅದಕ್ಕೆ ಅತ್ಯನುಕೂಲವಾದದ್ದಾಗಿದೆ. ಯಾವುದು ಸತ್ಯವೋ ಅದರ ಶ್ರೇಷ್ಠತೆಯು ಬೇಗನೆ ಬೆಳಗದೆ ಇರಲಾರದು.

ಹೀಗಿರಲಿ. ಸ್ವಮತಪ್ರಸಾರಕನಿಗೆ ಉಚಿತವಾದ ಮಾರ್ಗಗಳು ಯಾವುವು ಎಂದರೆ ಇಲ್ಲಿ ಮೂರು ವಿಧಗಳನ್ನು ಸೂಚಿಸುತ್ತೇವೆ—

೧. ದೇವರ ಪ್ರಾರ್ಥನೆ—ಸಕಲ ಜನರೂ ಸತ್ಯವನ್ನು ತಿಳಿದುಕೊಳ್ಳುವವರಾಗುವಂತೆ ದೇವರು ಅನುಗ್ರಹಿಸಲೆಂದು ಭಕ್ತನಾದ ಪ್ರತಿಯೊಬ್ಬನೂ ದೇವರನ್ನು ಪ್ರಾರ್ಥಿಸುತ್ತಿರುವನು. ಪ್ರಾರ್ಥನೆಯ ಶಕ್ತಿಯು ಎಷ್ಟು ಅತಿಶಯವಾದದ್ದೋ! ಎಷ್ಟು ಮಂದಿ ದುಷ್ಟರು ದೇವರ ಪ್ರಾರ್ಥನೆಯ ಮುಖಾಂತರವೇ ಸಜ್ಜನರಾಗಿದ್ದಾರೆ! ಎಷ್ಟೋ ಮಂದಿ ನಾಸ್ತಿಕರು ಅಗೋಚರವಾದ ಯಾವುದೋ ಒಂದು ಮಹಾಶಕ್ತಿಗೆ ಒಳಪಟ್ಟವರಾಗಿ ಆಸ್ತಿಕರಾಗಿರುವರು! ಇದು ಪ್ರಾರ್ಥನೆಯ ಫಲವಲ್ಲವೇ?

೨. ಬೋಧಿಸುವಿಕೆ—ನಾವು ನಮ್ಮ ಮತಾಭಿಪ್ರಾಯಗಳನ್ನು ಕುರಿತು ಬಹಿರಂಗದಲ್ಲಿಯೂ ಅಂತರಂಗದಲ್ಲಿಯೂ ಮಾತಾಡತಕ್ಕದ್ದು. ಬುದ್ಧಿಗೂ ಮನಸ್ಸಾಕ್ಷಿಗೂ ತಗಲುವಂತೆ ನ್ಯಾಯಗಳನ್ನು ಉದಾಹರಿಸಬೇಕು. ಪ್ರಸಂಗ ಮಾಡುವವರಾಗಲೀ ಸಂಭಾಷಣೆ ಮಾಡುವವರಾಗಲೀ ಈ ವಿಧಗಳನ್ನು ಸಾರ್ವಜನಿಕ ಪ್ರಯೋಜನಕರವಾಗಿ ಉಪಯೋಗಿಸುವದು.

೩. ಒಳ್ಳೇ ನಡತೆ—ಭಕ್ತನಾದವನ ಒಳ್ಳೇ ನಡತೆಯು ಅವನು ಹಿಡಿದಿರುವ ಮತದ ಸತ್ಯಕ್ಕೆ ಒಳ್ಳೇ ಸಾಕ್ಷಿಯಾಗಿದೆ. "ನಿಮ್ಮ ಒಳ್ಳೇ ನಡತೆಯನ್ನು ನೋಡಿ ಜನರೆಲ್ಲರೂ ಪರಲೋಕದಲ್ಲಿರುವ ನಿಮ್ಮ ತಂದೆಯನ್ನು ಮಹಿಮೆಪಡಿಸುವವರಾಗುವಂತೆ ನಿಮ್ಮಲ್ಲಿರುವ ಬೆಳಕು ಜನರ ಮುಂದೆ ಪ್ರಕಾಶಿಸಲಿ" ಎಂದು ಸ್ವಾಮಿಯು ಹೇಳಿದ್ದಾನೆ.

ಈ ಮೂರು ವಿಧಗಳೂ ಸ್ವಾತಂತ್ರ್ಯವೆಂಬುದಕ್ಕೂ ನಾವು ಇತರರ ವಿಷಯದಲ್ಲಿ ಪ್ರಕಟಿಸಬೇಕಾದ ಮರ್ಯಾದೆಗೂ ಅನುಗುಣವಾಗಿವೆ. ನಿಜವಾಗಿ ಯೋಗ್ಯತೆಯನ್ನು ಪಡೆದಿರುವವನು ಯಾವನೆಂದರೆ—ತನ್ನ ಮತವೇ ಸರ್ವಶ್ರೇಷ್ಠವಾದದ್ದೆಂದು ನಿಸ್ಸಂದೇಹವಾಗಿ ತಿಳಿದಿದ್ದರೂ ಸಕಲರ ವಿಷಯದಲ್ಲಿ ನ್ಯಾಯವಾಗಿಯೂ ಮರ್ಯಾದಾಪೂರ್ವಕವಾಗಿಯೂ ನಡೆದುಕೊಳ್ಳುವದಲ್ಲದೆ ಸ್ವಮತವನ್ನು ಪ್ರಬಲಪಡಿಸುವ ಕಾರ್ಯದಲ್ಲಿ ನ್ಯಾಯವಾದ ರೀತಿಗಳನ್ನು ಅನುಸರಿಸತಕ್ಕವನೇ. ತನ್ನ ಕಾರ್ಯವನ್ನು ಸಫಲಪಡಿಸಿಕೊಳ್ಳುವದಕ್ಕೆ ಹಿಂಸೆಯನ್ನು ಮಾಡುವದೂ ಬಲಾತ್ಕಾರವನ್ನು ನಡೆಸುವದೂ ಯೋಗ್ಯವಾದ ಮಾರ್ಗಗಳಲ್ಲ.

ಮತವೂ ದಾಯಭಾಗವೂ.

"ಒಬ್ಬ ನಿಷ್ಪಕ್ಷಪಾತಿ," ಅವರಿಗೆ—ನೀವು ಮೇಲ್ಕಂಡ ವಿಷಯವನ್ನು ಕುರಿತು ಬರೆದಿರುವ ಚಾತ್ರಯು ಬಹು ವಿಸ್ತಾರವಾಗಿರುತ್ತದೆ. ಅದನ್ನೆಲ್ಲಾ ಪ್ರಕಟಿಸಿದರೆ ಈ ಪತ್ರಿಕೆಯಲ್ಲಿ ಮೂರು ಕಾಲಂ ಸ್ಥಳ ತುಂಬಿಕೊಳ್ಳುವುದಾದ್ದರಿಂದ ಅದನ್ನು ಪ್ರಕಟಿಸಲು ಮಾನಸಿಕ ಮಾಡಿರುವೆವು. ಈ ಚಿಟ್ಟಿಯಲ್ಲಿ ವಿವರಿಸಲ್ಪಟ್ಟಿರುವ ಅನೇಕ ವಿಷಯಗಳು ಇದುವರೆಗೆ ಅನೇಕ ವೇಳೆ ಈ ಪತ್ರಿಕೆಯಲ್ಲಿ ಚರ್ಚೆಯಾಗಿರುತ್ತವೆ. ಅದರಲ್ಲಿ ಕಂಡುಬರುವ ಒಂದೆರಡು ಹೊಸ ಸಂಗತಿಗಳನ್ನು ಇಲ್ಲಿ ಸೂಚಿಸಿ, ಸಮಾಧಾನಗಳನ್ನು ಹೇಳುವೆವು.

(೧) ಹಿಂದೂಧರ್ಮಶಾಸ್ತ್ರವನ್ನು ಪೋರ್ಚುಗೀಸರ ಮತ್ತು ಟೀಪೂಸುಲ್ತಾನರ ನಡವಳಿಕೆಗೆ ಹೋಲಿಸಿ, ಕ್ರೂರವಾದದ್ದೆಂತಲೂ ಅನ್ಯಾಯವಾದದ್ದೆಂತಲೂ ಹೇಳಿದ್ದಕ್ಕೆ ನಿಮಗೆ ಅಸಮಾಧಾನ ಉಂಟಾಗಿದೆಯಷ್ಟೆ. ಹಿಂದುಗಳು ಸಾಮಾನ್ಯವಾಗಿ ಇತರರನ್ನು ತಮ್ಮ ಮತಕ್ಕೆ ಸೇರಿಸಿಕೊಳ್ಳುವುದಿಲ್ಲವೆಂಬುದನ್ನು ನಾವು ಒಪ್ಪಿಕೊಳ್ಳುತ್ತೇವೆ. ಸಾಮಾನ್ಯವಾಗಿ ಎಂದು ನಾವು ಯಾಕೆ ಹೇಳುತ್ತೇವೆಂದರೆ—ಅನೇಕ ಹಿಂದುಗಳು ಯೂರೋಪಿಗೂ ಅಮೇರಿಕಕ್ಕೂ ಹೋಗಿ ಅಲ್ಲಿನ ಜನರಿಗೆ ವೇದಾಂತಮತವನ್ನು ಕುರಿತು ಉಪನ್ಯಾಸ ಮಾಡಿ, ವೇದಾಂತಿಗಳನ್ನಾಗಿ ಮಾಡುವುದು ಈಚೆಗೆ ರೂಢಿಯಲ್ಲಿದೆ. ಈ ಭಾಗದಲ್ಲಿ ನಾವು ಆಕ್ಷೇಪಣೆ ಮಾಡುವುದಿಲ್ಲ. ವೇದಾಂತಮತವು ಸತ್ಯಮತವಾಗಿದ್ದ ಪಕ್ಷದಲ್ಲಿ ಅದನ್ನು ಪ್ರಪಂಚದಲ್ಲೆಲ್ಲಾ ಬೋಧನೆ ಮಾಡಲಿ. ಸತ್ಯವೆಂಬುದು ಎಲ್ಲರಿಗೂ ಬೇಕಾದದ್ದೇ, ಒಂದು ಜನಾಂಗದವರಿಗೆ ಮಾತ್ರವೇ ಬೇಕಾದದ್ದಲ್ಲ. ಆದರೆ ಸಾಮಾನ್ಯವಾಗಿ ಹಿಂದುಗಳು ಇತರ ಮತಸ್ಥರ ಗೋಜಿಗೆ ಹೋಗತಕ್ಕವರಲ್ಲ, ಪ್ರತಿ ಒಂದು ಮತದಲ್ಲೂ ಮೋಕ್ಷಮಾರ್ಗವು ಇದ್ದೇ ಇರುತ್ತದೆಂದು ಹೇಳುವರು. ಹೀಗೆ ಹೇಳಿದ ಮಾತ್ರಕ್ಕೇ ಅದು ಇತರ ಮತಗಳ ವಿಷಯದಲ್ಲಿ ನಿರ್ದುಷ್ಟವಾದ ಸಹನಭಾವವೆಂದು ಹೇಳುವ ಹಾಗಿಲ್ಲ. ಈ ಸಹನಭಾವದ ವಿಷಯವನ್ನು ಕುರಿತು ಇನ್ನೊಂದು ಕಡೆ ತಕ್ಕಮಟ್ಟಿಗೆ ವಿಸ್ತಾರವಾಗಿ ಬರೆದಿರುವೆವು.

ಹಿಂದುಗಳಲ್ಲಿ ಅನ್ಯಮತಗಳ ಮೇಲೆ ನಿರ್ದುಷ್ಟವಾದ ಸಹನಭಾವವಿದೆ ಇಲ್ಲ ಎಂಬುವುದು, ಒಬ್ಬ ಹಿಂದುವು ಅನ್ಯಮತಾವಲಂಬಿಯಾದಾಗ ಪ್ರಕಾಶಕ್ಕೆ ಬರುತ್ತದೆ. ಹಿಂದುಗಳು ಆ ಥರಾ ಅನ್ಯಮತಾವಲಂಬಿಯನ್ನು ಕುರಿತು—"ನಿನ್ನ ಭಕ್ತಿಮಾರ್ಗದಲ್ಲಿ ನನಗೆ ನಂಬಿಕೆ ಇಲ್ಲ. ಅದು ಸುಳ್ಳಾದ ಮಾರ್ಗವೆಂದು ನನಗೆ ತೋರುತ್ತಿದೆ. ನೀನು ಮತಾಂತರ ಹೊಂದಿದ ಭಾಗದಲ್ಲಿ ನನಗೂ ನಮ್ಮ ಸಂಸಾರಕ್ಕೂ ಅಪಾರವಾದ ಸಂಕಟಪ್ರಾಪ್ತವಾಗಿದೆ. ಆದರೆ ನೀನು ಸ್ವತಂತ್ರನಾಗಿದ್ದೀಯೆ. ನಿನ್ನ ಇಷ್ಟಬಂದಂತೆ ಬೇರೆ ಮತಕ್ಕೆ ಹೋಗಬಹುದು" ಎಂಬೀ ರೀತಿಯಾಗಿ ಹೇಳುವ ಪಕ್ಷದಲ್ಲಿ ಇದು ಯಥಾರ್ಥವಾದ ಸಹನಭಾವವೇ ಸರಿ. ಹಾಗೆ ಹೇಳದೆ ಹಿಂದುಗಳು ಅವನನ್ನು ಹೊಡೆದು ಹಿಂಸಿಸಿ, ಅವನಿಗೆ ಮದ್ದು ವಿಷಗಳನ್ನು ಹಾಕಿ, ಅವನ ಜೀವನವನ್ನು ಹಾಳುಮಾಡಿ, ಅವನ ಮಕ್ಕಳನ್ನು ಕಿತ್ತುಕೊಂಡು, ನಾನಾ ನಷ್ಟಗಳಿಗೆ ಗುರಿಮಾಡುವಲ್ಲಿ ಇದು ಅನ್ಯಮತದಲ್ಲಿ ಅಸಹನವನ್ನು ಪ್ರಕಾಶಪಡಿಸಿದಂತಾಗುತ್ತದೆ. ಹಿಂದೂ ಧರ್ಮಶಾಸ್ತ್ರದಲ್ಲಿ ಅನ್ಯಮತಾವಲಂಬಿಯನ್ನು ಬಹಿಷ್ಕರಿಸಿ ಮಹಾಪಾತಕಿಗೂ ಸರಿಸಮಾನ ಮಾಡುವ ಶಾಸ್ತ್ರವಿಧಿಯು ನ್ಯಾಯವಾದ ವಿಧಿಯಲ್ಲವೆಂತಲೂ ಅದು ಪೋರ್ಚುಗೀಸರೂ ಟೀಪುವೂ ಪ್ರಯೋಗಿಸಿದ ನಡತೆಗೆ ಸರಿ ಹೋಲುವದರಿಂದ ಕ್ರೂರವಾದದ್ದೆಂತಲೂ ಮಾತ್ರ ಹೇಳುವೆವು.

(೨) "ದರೋಡೆ ಕೋರರು" ಎಂಬ ಪದವನ್ನು ನಾವು ಉಪಯೋಗಿಸಿದ್ದು ನ್ಯಾಯವಲ್ಲವೆಂದು ಹೇಳುತ್ತೀರಿ. ನಿಮ್ಮ ಮನಸ್ಸು ನೋಯುವಂಥಾ ಪದವನ್ನು ಪ್ರಯೋಗಿಸಬೇಕೆಂಬುದು ನಮ್ಮ ಅಪೇಕ್ಷೆಯಲ್ಲ. ನಮ್ಮ ಅಭಿಪ್ರಾಯವೇನೆಂದರೆ—ಅನ್ಯಮತಾವಲಂಬಿಯು ತನ್ನ ಪಾಲನ್ನು ಕೇಳಿದ್ದನ್ನಾಗಲಿ ಅದಕ್ಕಿಂತಲೂ ಹೆಚ್ಚಾದ್ದನ್ನಾಗಲಿ ತನಗೆ ಕೊಡಬೇಕೆಂದು ಕೇಳುವುದಿಲ್ಲ. ಸಕಲ ರಾಜ್ಯಗಳಲ್ಲೂ ಸಮಸ್ತ ಕಾನೂನುಗಳನ್ನೂ ನೋಡಿದಾಗ್ಯೂ ಮಕ್ಕಳನ್ನು ಸಾಕಿ ಬೆಳಸುವ ಅಧಿಕಾರ ತಂದೆಗಲ್ಲದೆ ಇತರರಿಗಿಲ್ಲ. ಇಂಥಾದ್ದರಲ್ಲಿ ತಂದೆಯು ಮಹಾ ದುಷ್ಟ ಚಾಲಿಸುವನಾಗಲಿ, ವಿಶೇಷ ಅಯೋಗ್ಯನಾಗಲಿ ಇದ್ದ ಹೊರತು ಅವನ ಮಕ್ಕಳ ಪೋಷಣೆಯನ್ನು ಅವನಿಂದ ತಪ್ಪಿಸಿ ಬಿಡುವುದು ಯಾರಿಂದ ಸಾಧ್ಯ?

ಇದಕ್ಕೆ ಪ್ರತಿಯಾಗಿ ನೀವು—ಮಕ್ಕಳ ಪೋಷಣೆಯ ವಿಚಾರವನ್ನು ನಾನು ಮಾತನಾಡುವುದಿಲ್ಲ. ಪಿತ್ರಾರ್ಜಿತದ ಆಸ್ತಿಯ ವಿಷಯವನ್ನು ಕೇಳುವೆನು ಎಂದು ಹೇಳಬಹುದು. ಈಗಿರುವ ಕಾನೂನಿನ ಪ್ರಕಾರ ಮತಾಂತರವನ್ನು ಹೊಂದಬೇಕೆಂದು ಅಪೇಕ್ಷಿಸುವವನು ಪಿತ್ರಾರ್ಜಿತ ಆಸ್ತಿಯ ಪಾಲಿಗೆ ದಾವಾಮಾಡಿ, ತನ್ನ ಭಾಗವನ್ನು ಪಡೆದು ಅನಂತರ ತನ್ನಿಷ್ಟಬಂದ ಮತವನ್ನು ಅಂಗೀಕರಿಸಬಹುದಾಗಿದೆ. ಆಗ್ಗೆ ಯಾರೂ ಅವನ ಭಾಗವನ್ನು ಮುಟ್ಟಲಾರರು. ಈ ಸಂಗತಿ ನಿಮಗೆ ತಿಳಿದಿರುವಂತೆ ಕಾಣುವದಿಲ್ಲ. ಮತಾಂತರವನ್ನು ಹೊಂದಿದವನಿಂದ ಅವನ ಸರ್ವಸ್ವವನ್ನೂ ಕಿತ್ತುಕೊಳ್ಳುವುದು ಅವನಿಗೆ ನಷ್ಟವಲ್ಲವೋ?

ಹತ್ತು ಸಾವಿರ ರೂಪಾಯಿನ ಆಸ್ತಿಯುಳ್ಳ ಅವಿಭಕ್ತರಾದ ಅಣ್ಣತಮ್ಮಂದಿರಬ್ಬರಿದ್ದರೆಂದು ಇಟ್ಟುಕೊಳ್ಳೋಣ. ಇವರಲ್ಲಿ ಒಬ್ಬ ಕ್ರೈಸ್ತನಾಗುವಪಕ್ಷಕ್ಕೆ ಇನ್ನೊಬ್ಬನಿಗೇ ಹತ್ತು ಸಾವಿರ ರೂಪಾಯಿಯೂ ಸೇರಬೇಕೇ? ಹೀಗೆ ಸಹೋದರನಿಗೆ ವಂಚನೆಮಾಡುವುದು ನ್ಯಾಯವೇ? ಇದು ದರೋಡೆ ಕಳ್ಳತನವಲ್ಲವೇ? ಪ್ರಪಂಚಕ್ಕೆ ದ್ರವ್ಯಾಕಾಂಕ್ಷೆಯು ಹತ್ತು ಸಾವಿರವನ್ನೂ ಅನುಭವಿಸುವವನಿಗಿರುವುದೋ, ಅಥವಾ ತನ್ನ ಪಾಲಷ್ಟನ್ನು ಮಾತ್ರ ಕೊಡೆಂದು ಕೇಳುವವನಿಗಿರುವುದೋ ನೀವೇ ಹೇಳಿ.

(೩) ಯೇಸುಕ್ರಿಸ್ತನಂಥಾ ಅವತಾರಪುರುಷನು ಮನುಷ್ಯರಿಗೆ ಶಿಕ್ಷೆರಕ್ಷೆಗಳನ್ನು ವಿಧಿಸುವ ವಿಷಯದಲ್ಲಿ ನಮ್ಮ ಆಕ್ಷೇಪಣೆಯೇನೂ ಇರುವದಿಲ್ಲ. ಯಾಕೆಂದರೆ ಆತನು ಸರ್ವಸ್ವತಂತ್ರನಾಗಿರುವನು. ಆತನ ವಿಧಿಯು ಪಕ್ಷಪಾತವಿಲ್ಲದ್ದಾಗಿಯೂ ನಿರ್ದುಷ್ಟವಾದದ್ದಾಗಿಯೂ ಇರುವುದು. ಮತಬಿಟ್ಟು ಬೇರೆ ಮತಕ್ಕೆ ಸೇರಿಕೊಂಡ ಮಾತ್ರಕ್ಕೇ ಒಬ್ಬನಿಗೆ ಮನುಷ್ಯರು ಮಾಡಿಕೊಂಡಿರುವ ಕಾನೂನಿನಂತೆ ಕಷ್ಟನಷ್ಟಗಳು ಪ್ರಾಪ್ತವಾಗುವ ಭಾಗದಲ್ಲಿ ನಾವು ಆಕ್ಷೇಪಿಸದೆ ಇರುವುದಿಲ್ಲ. ಹಾಗೆ ಬೇರೆ ಮತಕ್ಕೆ ಸೇರಿಕೊಳ್ಳುವವನ ಅಭಿಪ್ರಾಯಗಳೂ ಉದ್ದೇಶಗಳೂ ಸರ್ವಶ್ರೇಷ್ಠವಾದವುಗಳಾಗಿಯೂ ಪರಮಪವಿತ್ರವಾದವುಗಳಾಗಿಯೂ ಇರಬಹುದು. ಅಂಥವನನ್ನು ತಪ್ಪಿತಸ್ಥನೆಂದಾಗಲಿ ಅಕೃತ್ಯ ಮಾಡಿದವನೆಂದಾಗಲಿ ನೀವು ಎಣಿಸುವದಕ್ಕೆ ನಿಮಗೆ ಯಾವ ಅಧಿಕಾರವೂ ಇರುವುದಿಲ್ಲ.

—ಎಡಿ]

ಇಂಡಿಯಾ ದೇಶದ ವೃತ್ತಾಂತಗಳು.

ರಂಗೂನ್ ಪಟ್ಟಣದಲ್ಲಿ ಕಲಾಗಾ ಎಂಬ ಸ್ಥಳದಲ್ಲಿ ಸರ್ಕಾರದವರು ಕಟ್ಟಿಸಿದ್ದ ಆಸ್ಪತ್ರೆಯು ಕೆಟ್ಟು ಕೆಲವು ಭಾಗ ಜಖಮಾ ಆಗಿರುವುದರಿಂದ ಅದನ್ನು ದುರಸ್ತು ಮಾಡಿಸಬೇಕೆಂದು ಅಲ್ಲಿನ ಮ್ಯುನಿಸಿಪಾಲಿಟಿಯವರು ೧,೩೨,೦೦೦ ರೂಪಾಯಿ ಸ್ಯಾಂಕ್ಷನ್ ಮಾಡಿದ್ದಾರೆ

••••

ಪಂಜಾಬಿನಲ್ಲಿ ಆಗುವ ಗೋಧಿ ಬೆಳೆಯು ಹಿಂದುಸ್ಥಾನದ ಗೋಧಿ ಬೆಳೆಯಲ್ಲಿ ಮೂರನೇ ಒಂದು ಪಾಲಿನಷ್ಟಾಗುವುದು ಈ ವರುಷ ಆ ಆಧಿಪತ್ಯದಲ್ಲಿ ೯೩,೮೩,೦೦೦ ಎಕರೆ ಜಮೀನಿನಲ್ಲಿ ಗೋಧಿ ಫಸಲಾಗಿರುತ್ತದೆ ಅಂದರೆ ಹೋದ ವರುಷಕ್ಕಿಂತ ಶೇಕಡ ೧೮। ರಷ್ಟು ಹೆಚ್ಚು

••••

ಬರ್ಮಾ ಆಧಿಪತ್ಯದಿಂದ ಪ್ರತಿ ದಿನವೂ ಅಪಾರವಾದ ಅಕ್ಕಿ ಹಡಗು ಪಡವುಗಳಲ್ಲಿ ಬತ್ತಿಯಾಗಿ ಜಪಾನ್ ರಾಜ್ಯಕ್ಕೆ ಸಾಗಿ ಹೋಗುತ್ತಿದೆ, ಅಲ್ಲಿ ಈಗ ಕ್ಷಾಮ ಪ್ರಾಪ್ತವಾಗಿರೋಣದರಿಂದ ಈ ಸಲ ಅಲ್ಲಿಗೆ ಅವಶ್ಯವಾಗಿರುವಷ್ಟು ಅಕ್ಕಿ ಹಿಂದೆ ಯಾವಾಗಲೂ ರವಾನೆಯಾಗಲಿಲ್ಲ ಜಪಾನಿನ ವರ್ತಕರು ಅನೇಕವಾಗಿ ಬಂದು ಅಕ್ಕಿಯನ್ನು ಖರ್ತಿ ಮಾಡುತ್ತಿರುವರು

••••

ಬರ್ಮಾ ಆಧಿಪತ್ಯಕ್ಕೆ ಸೇರಿದ ಇನ್‌ಸೀನ್ ಎಂಬ ಊರಿನಲ್ಲಿ ಸೆಂಟ್ರಲ್ ಜೈಲಿನ ಚಿಟ್ಟಿಗಾರನು ಟಿಕೆಟ್ ಕಲೆಕ್ಟರೆಂದು ನಟಿಸುತ್ತಾ, ರೈಲು ಗಾಡಿಗಳಲ್ಲಿ ಪ್ರಯಾಣ ಮಾಡುವವರನ್ನು ಹಿಂಸೆಪಡಿಸಿ, ಅವರಿಂದ ದುಡ್ಡು ಕಿತ್ತುಕೊಳ್ಳುತ್ತಿದ್ದನು ಪೋಲೀಸಿನವರು ಈ ಮೋಸಗಾರನನ್ನು ಹಿಡಿದರೆ ಸೆಷನ್ಸ್ ಜಡ್ಜರು ಅವನಿಗೆ ಒಂದು ವರುಷ ಕಠಿಣ ಸಜಾ ವಿಧಿಸಿರುತ್ತಾರೆ

••••

ಕಲ್ಕತ್ತಾ ಪಟ್ಟಣದಲ್ಲಿ ಕಾಗದ ಕಾಟದಿಂದ ಪ್ರಜೆಗಳಿಗೆ ತಪ್ಪಿಸಬೇಕೆಂದು ಮ್ಯುನಿಸಿಪಾಲಿಟಿಯವರು ಪ್ರಯತ್ನಪಟ್ಟು, ಕಾಗದದ ಪೆಟ್ಟಿಗೆಗಳನ್ನು ತಂದು ಆಸ್ಪತ್ರೆಗೆ ಕಾಣದಿದ್ದವರೆಲ್ಲಾ ಇನಾಮುಗಳನ್ನು ಕೊಡುತ್ತಿದ್ದಾರೆ ಕಳೆದ ವರುಷ ೨೨,೦೦೦ ಕಾಗದ ಪೆಟ್ಟಿಗೆಗಳನ್ನು ನಾಶಮಾಡಿದರು ಬೆಂಗಾಲಿನಲ್ಲೂ ಇದರಂತೆಯೇ ನಾಶ ಮಾಡಬೇಕೆಂದು ಪ್ರಯತ್ನ ಪಡುತ್ತಿದ್ದಾರೆ

••••

ಹೈದರಾಬಾದ್ ಸಂಸ್ಥಾನದ ಕಲೆ ವಸ್ತು ಪ್ರದರ್ಶನಶಾಲೆಯ ಉತ್ಪತ್ತಿಯು ಅದರ ಖರ್ಚಿಗಿಂತಲೂ ಹೆಚ್ಚಾಯಿತೆಂದು ಪ್ರಕಟವಾಗಿದೆ ಕಳೆದ ಮುಂಗಳವಾರ ನೈಜಾಮರವರು ಮುಖ್ಯಮಂತ್ರಿಯವರೇ ಮೊದಲಾದ ದೊಡ್ಡ ದೊಡ್ಡ ಉದ್ಯೋಗಸ್ಥರ ಸಮೇತ ಪ್ರದರ್ಶನಶಾಲೆಗೆ ದಯಮಾಡಿ, ಪ್ರದರ್ಶನ ಪದಾರ್ಥಗಳನ್ನೆಲ್ಲಾ ಚನ್ನಾಗಿ ಪರಾಂಬರಿಸಿ ತುಂಬಾ ಸಂತೋಷಪಟ್ಟು ಬಂದರೆಂದು ಕೇಳುತ್ತೇವೆ

••••

ಹೈದರಾಬಾದ್ ಸಂಸ್ಥಾನದಲ್ಲೆಲ್ಲಾ ತುಂಬಾ ಐಶ್ವರ್ಯವಂತನಾಗಿರುವ ನವಾಬ್ ಖೈರುದ್ದೀನ್ ಎಂಬ ಜಮೀನ್ದಾರನು ನೈಜಾಮರವರಿಗೆ ಒಂದು ಗ್ರಾಮವನ್ನು ಇನಾಮಾಗಿ ಒಪ್ಪಿಸಿರುತ್ತಾನೆ ಇದರಲ್ಲಿ ವರುಷಕ್ಕೆ ಎರಡು ಲಕ್ಷ ರೂಪಾಯಿ ಉತ್ಪತ್ತಿಯಾಗುವುದು ಆ ನವಾಬನು ಇನ್ನೂ ೧೮ ವರುಷ ವಯಸ್ಸಿನ ಹುಡುಗನಾಗಿದ್ದಾಗ್ಯೂ ತನ್ನ ತಂದೆಯಂತೆ ಬಹಳ ವಿತರಣೆಯಿಂದ ಆಸ್ತಿಯನ್ನೆಲ್ಲಾ ರೂಢಿಸುತ್ತಿದ್ದಾನೆ

••••

ರಂಗೂನ್ ಪಟ್ಟಣದಲ್ಲಿ ಕಳೆದ ೧೮ ನೆ ತಾ ಭಾನುವಾರವೂ ೧೯ ನೆ ತಾ ಸೋಮವಾರವೂ ರಾತ್ರಿಹೊತ್ತು ಎರಡು ಕಡೆ ಬೆಂಕಿಬಿದ್ದು ಅಪಾರವಾದ ನಷ್ಟವನ್ನುಂಟುಮಾಡಿರುತ್ತದೆ ಮೊದಲನೆಯ ದಿನ ೨೪ ಸಾವಿರ ರೂಪಾಯಿನ ಮಾಲುಗಳು ಸುಟ್ಟುಹೋದವು ಎರಡನೆಯ ದಿನ ೩೦—೪೦ ಭಾರೀ ಅಂಗಡಿಗಳು ಸಾಮಾನು ಸಹಿತ ನಾಶವಾದವು ಇವರಲ್ಲಿ ೨೪—೨೬ ಲಕ್ಷ ರೂಪಾಯಿನ ಸರಕು ಸುಟ್ಟು ಹೋದಂತೆ ವರ್ತಮಾನ ಬಂದಿದೆ

••••

ಡಾಕ್ಟರ್ ಕಿಟಸಾಟೋ ಎಂಬ ಜಪಾನ್ ವೈದ್ಯನು ಇಷ್ಟರಲ್ಲೇ ಹಿಂದುಸ್ಥಾನಕ್ಕೆ ಬಂದು, ಇಲ್ಲಿನ ಪ್ಲೇಗ್ ಪ್ರದೇಶಗಳಲ್ಲಿ ಸಂಚಾರ ಮಾಡಿ ಅಂಥಾ ಸ್ಥಳಗಳಿಂದ ಹತ್ತಿ ಮೊದಲಾದ ವ್ಯಾಪಾರ ಸರಕುಗಳನ್ನು ಜಪಾನ್ ರಾಜ್ಯಕ್ಕೆ ಸಾಗಿಸಬಹುದೇ ಕೂಡದೇ ಎಂಬೀ ವಿಚಾರವಾಗಿ ತನಿಖೆ ಮಾಡಿಕೊಂಡು ಹೋಗುವನು ಜಪಾನಿನಲ್ಲಿ ಪ್ರಾಪ್ತವಾಗಿರುವ ಕ್ಷಾಮದ ಜೊತೆಗೆ ಪ್ಲೇಗ್ ಉಪದ್ರವೂ ಸೇರಿಕೊಂಡರೆ ಅಲ್ಲಿನವರ ಗತಿಯೇನು ?

••••

ಕಳೆದ ಸೆಪ್ಟಂಬರ್ ೨ ನೆ ತಾರೀಖಿನ ದಿನ ಹೈದರಾಬಾದಿಗೆ ಸೇರಿದ ಸಿಕಂದ್ರಾಬಾದ್ ಪಟ್ಟಣದಲ್ಲಿ ವೆಂಕಣ್ಣ, ಮುತ್ತಣ್ಣ, ಧರ್ಮಯ್ಯ, ಈ ಮೂರು ಮಂದಿಯೂ ಸೇರಿ ರಂಗನಾಯಕಮ್ಮನೆಂಬೊಬ್ಬ ಐಶ್ವರ್ಯವತಿಯಾದ ವೈಶ್ಯ ವಿಧವೆಯ ಮನೆಗೆ ನುಗ್ಗಿ, ಅವಳನ್ನು ಬಹು ಕ್ರೂರವಾಗಿ ಕಡಿದುಬಿಟ್ಟು, ಅವಳ ಬಾಬತು ೨೦ ಸಾವಿರ ರೂಪಾಯಿನ ನಗನಾಣ್ಯಗಳನ್ನು ಅಪಹರಿಸಿಕೊಂಡು ಹೋದರು ಪೋಲೀಸಿನವರು ನಾಲ್ಕೈದು ತಿಂಗಳ ಮೇಲೆ ಇಬ್ಬರು ಅಪರಾಧಿಗಳನ್ನು ಹಿಡಿದರು ಮೂರನೆಯವನು ಕಳೆದ ತಿಂಗಳಲ್ಲಿ ಸಿಕ್ಕಿಬಿದ್ದನು ಸೆಷನ್ಸ್ ಜಡ್ಜರು ಅವರನ್ನೆಲ್ಲಾ ದರ್ಯಾಪ್ತು ಮಾಡಿ, ಮೂವರಿಗೂ ಫಾಸೀ ಸಜಾ ವಿಧಿಸಿದರು ಅದೇ ಪ್ರಕಾರ ಆ ಮೂರು ಮಂದಿಯನ್ನೂ ಕಳೆದ ವಾರ ಗಲ್ಲಿಗೆ ಹಾಕಿರುತ್ತಾರೆ. ಕಳುವಾದ ೨೦ ಸಾವಿರ ರೂಪಾಯಿನ ನಗನಾಣ್ಯಗಳೂ ಸಿಕ್ಕಿಬಿಟ್ಟವು

••••

[illegible] ಬರ್ಮಾ ಲೆಫ್ಟಿನೆಂಟ್ ಗವರ್ನರವರು ಕಳೆದ ವಾರ ಅಲ್ಲಿನ [illegible] ಮೋ ಎಂಬ ನಾಲೆಯನ್ನು ಪ್ರತಿಷ್ಠೆಮಾಡಿ, ಅದರಲ್ಲಿ ವ್ಯವಸಾಯಕ್ಕೆ ನೀರು ಬಿಡುವುದನ್ನು ಪ್ರಾರಂಭಮಾಡಿದರು [illegible] ಅವರು— ಈ ನಾಲೆಯು ಕಾಮಗಾರಿಗೆ ೪೯ ಲಕ್ಷ ರೂಪಾಯಿ ಖರ್ಚಾಗಿದೆ ಇದರಿಂದ ೧,೪೯,೦೦೦ ಎಕರೆ ಜಮೀನಿನಲ್ಲಿ ಭತ್ತದ ಫಸಲು ಬೆಳೆಯುವುದು ಈ ಮೂಲಧನಕ್ಕೆ ಶೇಕಡ ವರುಷಕ್ಕೆ ೮ ರೂಪಾಯಿನಂತೆ ಬಡ್ಡಿ ಉತ್ಪತ್ತಿಯಾಗುತ್ತದೆ ಎಂದು ತಿಳಿಸಿದರು

••••

ಮದರಾಸ್ ಪಟ್ಟಣದಲ್ಲಿ ಮೂಗಪ್ರಾಣಿಗಳ ರೋಗಕ್ಕೆ ಚಿಕಿತ್ಸೆ ಮಾಡುವಂಥಾ ಧರ್ಮದ ಆಸ್ಪತ್ರೆಯು ಇರುತ್ತದೆ ಆಗ ಮುದಿಯಾದ ಮತ್ತು ಅಂಗಹೀನವಾದ ಮೂಗಪ್ರಾಣಿಗಳನ್ನು ಇಟ್ಟು ಸಾಕುವುದಕ್ಕೋಸ್ಕರ ಒಂದು ಧರ್ಮದ ಆಲಯವನ್ನು ಸ್ಥಾಪಿಸಬೇಕೆಂದು ಅಲ್ಲಿನ ಕೆಲವು ಮಾರವಾಡಿ ಸೇಠುಗಳು [illegible] ಮಾಡಿ ಅದಕ್ಕಾಗಿ ದ್ರವ್ಯವನ್ನು ಕೂಡಿಸಲಾರಂಭಿಸಿದಾರೆ ಆ ಪಟ್ಟಣದಲ್ಲಿರುವ ಈ ಪರ್ಮಾತಿಗೆ ವಿಶೇಷ ಸಹಾಯ ಮಾಡುವರೆಂದು ತಿಳಿಸಲು ಸಂತೋಷ ಪಡುತ್ತೇವೆ

••••

[illegible] ಸಂಸ್ಥಾನದ ಶ್ರೀಯುತ ರಾಜರವರ ಸ್ವಂತ ಉಪ್ಪರಿಗೆ ಮಾಳಿಗೆಯ ಮಹಲಿನ ಮನೆಯಲ್ಲಿ ಸಂಗೀತ [illegible] ಇರುವುದು ಮಹಾರಾಜರವರು ಅದರ ಮೇಲೆ ಕತ್ತಿ [illegible] ಲ ಅದರ ಭಾರಕ್ಕೆ [illegible] ಸಂಗೀತವನ್ನು [illegible] ನಿಲ್ಲಿಸಿದ [illegible] ಯಾಗಿ ಕಾವ್ಯಗಳನ್ನು [illegible] ತಂಪಾದ [illegible] ಯನ್ನುಂಟುಮಾಡುವವು

••••

ಪ್ಲೇಗ್ ಉಪದ್ರದ ಹಾವಳಿಯು ದಿನೆ ದಿನೇ ಹೆಚ್ಚುತ್ತಾ ಬರುತ್ತಿದೆ ಕಳೆದ ವಾರ ಹಿಂದುಸ್ಥಾನದಲ್ಲೆಲ್ಲಾ [illegible] ಜನರಿಗೆ ಪ್ಲೇಗ್ ತಗಲಿದ್ದರಲ್ಲಿ [illegible] ಜನರು ಸತ್ತುಹೋದರು ಬೇರೆ ಬೇರೆ ಕಡೆಗಳ ಸಂಖ್ಯೆ ಎಷ್ಟೆಂದರೆ ಬಂಗಾಳ [illegible] ಸಂಯುಕ್ತ ಆಧಿಪತ್ಯ [illegible] ಬೊಂಬಾಯಿ [illegible] ಮಧ್ಯಪ್ರಾಂತ್ಯಗಳು [illegible] ಬರ್ಮಾ [illegible], ಮೈಸೂರು ಸಂಸ್ಥಾನ [illegible] ಹೈದರಾಬಾದ್ ಸಂಸ್ಥಾನ [illegible], ರಾಜಪುಟಾನಾ [illegible] ಮದರಾಸ್ ಆಧಿಪತ್ಯ [illegible] ವಾಯುವ್ಯ ಸರಹದ್ದು ಪ್ರಾಂತ್ಯ [illegible] ಮಧ್ಯ ಇಂಡಿಯಾದಿಂದಲೂ ಸಂಖ್ಯೆಗಳು ಪ್ರಕಟವಾಗಲಿಲ್ಲ ಅವೂ ಬಂದಿದ್ದರೆ ಒಟ್ಟು ಸಂಖ್ಯೆಯು ಇನ್ನೂ ಹೆಚ್ಚಾಗುತ್ತಿತ್ತು

••••

ಸಿಲೋನ್ (ಲಂಕಾ) ದ್ವೀಪಕ್ಕೆ ಸೇರಿದ ಜ್ಯಾಫ್ನ ಎಂಬ ಊರಿನಲ್ಲಿ ಒಂದೇ ಮನೆಯೊಳಗೆ ಬಿಡಿಗಿಯಂತ ಎರಡು ಸಂಸಾರಗಳಿದ್ದವು ಆ ಬಿಡಿಗಿಯವರು ತುಂಬಾ ಸ್ನೇಹಿತರಾಗಿದ್ದರು ಕಳೆದ ವಾರ ಒಂದು ದಿನ ರಾತ್ರಿ ಒಬ್ಬ ಬಿಡಿಗಿಯವನು ದೇಹಬಾಧೆ ನಿಮಿತ್ತ ರಾತ್ರಿಯಲ್ಲೆದ್ದು ಬೀದಿಯ ಕದವನ್ನು ತೆರೆದು ಹೊರಕ್ಕೆ ಹೋಗುತ್ತಿದ್ದಾಗ ಇನ್ನೊಬ್ಬ ಬಿಡಿಗಿಯು ಬಾಗಿಲ ಸಬ್ದವನ್ನು ಕೇಳಿ ಕಳ್ಳ ಬಂದನೆಂದು ಗಾಬರಿಬಿದ್ದು ಒಂದು ಕತ್ತಿಯನ್ನು ಹಿಡಿದುಕೊಂಡು ಹೋಗಿ ಆ ಬಿಡಿಗಿಯನ್ನು ಬಲದ ಮೋಲೂ ತೊಡೆಯ ಮೇಲೂ ಎರಡೇಟು ಹೊಡೆದನು ಅವನು ಕೆಳಕ್ಕೆ ಬಿದ್ದು ಕಿರಿಚಿಕೊಂಡಾಗ ಅವನು ತನ್ನ ಸ್ನೇಹಿತನೆಂದು ಗೊತ್ತಾಯಿತು ಈಗ ಅವನನ್ನು ಆಸ್ಪತ್ರೆಯಲ್ಲಿಟ್ಟು ಚಿಕಿತ್ಸೆ ಮಾಡುತ್ತಿದ್ದಾರೆ

••••

ಸಿಂಧು ದೇಶದಲ್ಲಿ ದೋಣಿಗಳೇ ಮೊದಲಾದವುಗಳನ್ನು ಇಟ್ಟುಕೊಂಡು ನಾನಾ ಚಿಲ್ಲರೆ ಕೂಲೀ ಕೆಲಸಗಳನ್ನು ಮಾಡಿ ಜೀವನ ಮಾಡುತ್ತಿರುವ ಪ್ರಜೆಗಳಿಗೆ ಸರ್ಕಾರದವರು ಒಂದು ಕಂದಾಯವನ್ನು ಹಾಕಿ ವಸೂಲ್ಮಾಡುತ್ತಿದ್ದರು ಇದರಿಂದ ಆ ಜನರಿಗೆ ಬಹಳ ಕಷ್ಟವಾಗಿತ್ತು ಪ್ರಿನ್ಸ್ ಆಫ್ ವೇಲ್ಸ್‌ರವರು ಅಲ್ಲಿಗೆ ದಯಮಾಡಿದ್ದರ ಜ್ಞಾಪಕಾರ್ಥವಾಗಿ ಗವರ್ನಮೆಂಟಿನವರು ಈ ಮೊಬಲಗನ್ನೆಲ್ಲಾ ಮಾಫ್ ಮಾಡಿಬಿಟ್ಟಿದ್ದಾರೆ ಇದುವರೆಗೆ ವಸೂಲಾಗದೆ ಬಾಕಿ ನಿಂತಿದ್ದ ಕಂದಾಯಗಳನ್ನೂ ಮಾಫ್ ಮಾಡಿಬಿಟ್ಟರು ಇನ್ನು ಮುಂದೆ ಆ ಅಂಬಿಗರು ತೆರಿಗೆ ಇಲ್ಲದೇನೇ ತಮ್ಮ ಕಸಬನ್ನು ನಡಸಬಹುದಾಗಿದೆ ಇದಕ್ಕಾಗಿ ಆ ಪ್ರಜೆಗಳು ಗವರ್ನಮೆಂಟಿನವರನ್ನೂ ಯುವರಾಜರವರನ್ನೂ ಬಹಳವಾಗಿ ಕೊಂಡಾಡುತ್ತಿದ್ದಾರೆ

••••

ಹೋದ ವರುಷ ಏಪ್ರಿಲ್ ತಿಂಗಳಲ್ಲಿ ಹಿಮಾಲಯ ಪರ್ವತದ ತಪ್ಪಲಿಗೆ ಸೇರಿದ ಕಾಂಗ್ರಾ ಕಣಿವೆಯಲ್ಲಿ ಭೂಕಂಪದ ಅನಾಹುತ ನಡೆದು, ಅದರಲ್ಲಿ ನಷ್ಟಪಟ್ಟವರಿಗೆ ಸಹಾಯ ಮಾಡುವುದಕ್ಕಾಗಿ ಧರ್ಮದ ಫಂಡು ವಸೂಲಾಯಿತಷ್ಟೆ ಈ ಫಂಡಿನ ಕಾರ್ಯವು ಮುಕ್ತಾಯವಾಗಿದೆ. ಈಗ ಪ್ರಕಟವಾದ ರಿಪೋರ್ಟಿನಿಂದ ತಿಳಿಯುವುದೇನೆಂದರೆ— ಈ ಫಂಡಿಗೆ ಒಟ್ಟು ೧೩,೫೧,೭೩೮ ರೂಪಾಯಿ ಚಂದಾ ವಸೂಲಾಯಿತು ಈ ಪೈಕಿ ಆಫೀಸ್ ಖರ್ಚಿಗೆ ೩,೪೦೯ ರೂಪಾಯಿ ಮಾತ್ರ ವಿನಿಯೋಗಿಸಿ, ಕಾಂಗ್ರಾ ಕಣಿವೆಯಲ್ಲಿ ನಷ್ಟ ಪರಿಹಾರಕ್ಕೆ ೧,೯೦,೨೦೩ ರೂಪಾಯಿಯನ್ನೂ, ಅಲ್ಲಿ ಗ್ರಾಮಾಂತರ ಪ್ರಜೆಗಳ ಕಷ್ಟ ನಿವಾರಣೆಗೆ ೬,೭೯,೯೬೬ ರೂಪಾಯಿಯನ್ನೂ, ಕೂಲೂ ಕಣಿವೆಯ ಪ್ರಜೆಗಳಿಗೆ ೯೩,೧೯೦ ರೂಪಾಯಿಯನ್ನೂ, ಬುಷಾಹರ್ ಸಂಸ್ಥಾನದ ಪ್ರಜೆಗಳಿಗಾಗಿ ೯,೩೧೪ ರೂಪಾಯಿಯನ್ನೂ, ಧರ್ಮಶಾಲಾದಲ್ಲಿ ಮನೆಮಠಗಳನ್ನು ಕಳೆದುಕೊಂಡವರಿಗೆ ೧,೬೪,೦೦೦ ರೂಪಾಯಿಯನ್ನೂ, ಟೀ ತೋಟಗಳನ್ನು ಹಾಳುಮಾಡಿಕೊಂಡು ಬಹಳ ನಷ್ಟಪಟ್ಟಿದ್ದ ಯುರೋಪ್ಯರ್ ಮತ್ತು ದೇಶೀಯ ಪ್ಲಾಂಟರುಗಳಿಗೆ ೧,೨೫, ೦೦೦ ರೂಪಾಯಿಯನ್ನೂ ಹಂಚಿಕೊಟ್ಟಿರುತ್ತಾರೆ.

ಕಳೆದ ವಾರ ಬಂಗಾಳಾ, ಪೂರ್ವಬಂಗಾಳಾ ಮತ್ತು ಅಸ್ಸಾಂ, ಪಂಜಾಬ್, ಮಧ್ಯ ಪ್ರಾಂತ್ಯಗಳು, ವಾಯುವ್ಯ ಸರಹದ್ದು ಪ್ರಾಂತ್ಯ ಈ ಕಡೆಗಳಲ್ಲಿ ಸುಮಾರಾಗಿ ಒಳ್ಳೇ ಮಳೆಗಳು ಬಿದ್ದಿರುವುದರಿಂದ ಬೆಳೆಗೆ ಸ್ವಲ್ಪ ಅನುಕೂಲವಾಗಿ ಕಾಲಸ್ಥಿತಿಯು ತೃಪ್ತಿಕರವಾಗುವಂತೆ ಕಾಣುತ್ತದೆ ಆದರೂ ಕೆಲವು ಕಡೆಗಳಲ್ಲಿ ಕ್ಷಾಮನಿವಾರಣೆಯಾಗಿಲ್ಲವಾದಕಾರಣ ಪ್ರಜೆಗಳು ಸರ್ಕಾರದವರ ರಿಲೀಫ್ ಕಾಮಗಾರಿಗಳನ್ನು ಅವಲಂಬಿಸುತ್ತಿದ್ದಾರೆ ರಾಜಪುಟಾನಾ ಮತ್ತು ಅಜ್ಮೀರ ಮಾರ್ವಾರಗಳಲ್ಲಿ ೯೯,೦೦೦ ಜನರು ಸಂಯುಕ್ತ ಆಧಿಪತ್ಯಗಳಲ್ಲಿ ೧,೯೦೦ ಜನರು, ಮಧ್ಯ ಇಂಡಿಯಾದಲ್ಲಿ ೯೩,೦೦೦ ಜನರು, ಬೊಂಬಾಯಿ ಆಧಿಪತ್ಯದಲ್ಲಿ ೨೬,೦೦೦ ಜನರು, ಪಂಜಾಬಿನಲ್ಲಿ ೧೦,೦೦೦ ಜನರು ಬರೋಡಾ ಸಂಸ್ಥಾನದಲ್ಲಿ ೩,೦೦೦ ಜನರು, ಈ ರೀತಿ ಒಟ್ಟು ೩,೯೬,೦೦೦ ಜನರು ಸರ್ಕಾರದವರ ಪೋಷಣೆಯಲ್ಲಿರುತ್ತಾರೆ

••••

ತಿರುವಾಂಕೂರು (ಅನಂತಶಯನ) ಸಂಸ್ಥಾನದಲ್ಲಿ ರೈತರು ಸರ್ಕಾರಕ್ಕೆ ಕಂದಾಯವನ್ನು ಧಾನ್ಯರೂಪದಲ್ಲಿ ಕಟ್ಟುತ್ತಿದ್ದರಷ್ಟೆ ಇದನ್ನು ಕಾಟಿಗೆ [illegible] ಮಾಡಿ, ಹಣಕ್ಕೆ ಪ್ರತಿಯಾಗಿ [illegible] ವನ್ನು ಕೊಡಬೇಕೆಂದು ದಿವಾನ್ ಮಿ॥ ಮಾಧವರಾಯರು [illegible] ಕಟ್ಟು ಮಾಡಿ ತಂದರು ಆದರೆ ಕೆಲವು [illegible] ರೈತರು ಹೀಗೆ ಬದಲಾವಣೆ ಮಾಡಿದ್ದು ತಮಗೆ ಬಹಳ ಕಷ್ಟವೆಂದು ಸರ್ಕಾರಕ್ಕೆ ಅನೇಕ ಅರ್ಜಿಗಳನ್ನು ಒಪ್ಪಿಸಿಕೊಂಡರು ಈಗ ಸರ್ಕಾರದವರು ಅದನ್ನು ಒಪ್ಪಿ, ಯಾವ ಗ್ರಾಮದಲ್ಲಿ ಎಷ್ಟು ರೈತರು ಹಣದ ಬದಲು ಧಾನ್ಯ ರೂಪವಾಗಿಯೇ ಕಂದಾಯ ಕಟ್ಟುವುದಕ್ಕೆ ಒಪ್ಪುವರೋ [illegible] ಗ್ರಾಮಕ್ಕೆ [illegible] ಈ [illegible] ಉಳಿದ ಕಡೆಯಲ್ಲಿ ರೈತರು ಹಣ ಕಟ್ಟುವ [illegible] ಪ್ರಕಾರ [illegible] ಕರೆದುಕೊಳ್ಳಬೇಕೆಂತಲೂ [illegible] ಆಜ್ಞೆ ಕೊಟ್ಟಿದ್ದಾರೆ

••••

ಸಿಂಧು ದೇಶಕ್ಕೆ ಸೇರಿದ ಮಿ॥ ಇಸ್ಮೈಲ್ [illegible] ಎಂಬ ಜಮೀನ್ದಾರನಾಗಿರುವವರು [illegible] ಹಿಂದುಸ್ಥಾನದ ದಾರಿದ್ರ್ಯಸ್ಥಿತಿಯನ್ನು [illegible] ಇದು ಈ ರಾಜ್ಯದ [illegible] ನಾನಾ ಪ್ರಕಾರವಾಗಿ [illegible] ಆದರೆ ಈ ದಾರಿದ್ರ್ಯಕ್ಕೆ ಕಾರಣವಾಗಿರುವ [illegible] ಹಿಂದುಸ್ಥಾನದಲ್ಲಿ ಅನಾವಶ್ಯಕ ಅಂದರೆ [illegible] ಕೋಟಿ ರೂಪಾಯಿಗೆ ಕಮ್ಮಿ ಇಲ್ಲದೆ ಪ್ರಜೆಗಳು ಖರ್ಚುಮಾಡಿ, ಸೋಮಾರಿಗಳಾದ ಐವತ್ತೆರಡು ಲಕ್ಷ ಮಂದಿ ಸಾಧುಗಳನ್ನು ಪಕೀರರನ್ನೂ ಪ್ರತಿ ವರ್ಷ ಅನ್ನ ಬಟ್ಟೆ ಹಾಕಿ ಸಾಕುತ್ತಿರುವರು ಈ ಪಕ್ವತೆಯ ನಾನಾ ಸೋಮಾರಿಗಳಿಗೆ ಪ್ರತಿ ವರುಷವೂ ಹಿಂದುಸ್ಥಾನದ ಪ್ರಜೆಗಳು ತಮ್ಮ ಸಂಪಾದಿಸಿದ ಹಣವನ್ನು ಖರ್ಚು ಮಾಡುತ್ತಾ ಬರುವರಲ್ಲ ! ಈ ದಂಡ ಖರ್ಚನ್ನು ನಿಲ್ಲಿಸಿಬಿಟ್ಟರೆ ಐವತ್ತು ಕೋಟಿ ರೂಪಾಯಿ ಪ್ರತಿ ವರುಷವೂ ಉಳಿದು ಈ ರಾಷ್ಟ್ರದ ಐಶ್ವರ್ಯವನ್ನು ಹೆಚ್ಚು ಮಾಡುವುದಲ್ಲದೆ ಈ ಸೋಮಾರಿಗಳೆಲ್ಲಾ ಬೇರೆ ಬೇರೆ ಕಸಬುಗಳನ್ನು ಕಲಿತು ತಮ್ಮ ಜೀವನವನ್ನೂ ಮಾಡಿಕೊಂಡು, ದೇಶದ ಏಳಿಗೆಗೆ ಸಹಾಯ ಮಾಡುವಂತಾಗುವುದು ಆದಕಾರಣ ಈ ರಾಷ್ಟ್ರದ ವಿದ್ಯಾವಂತರಾದ ಪ್ರಜೆಗಳಲ್ಲಿ ಮುಖಂಡರು ಈ ವಿಷಯಕ್ಕೆ ಮೊದಲು ಗಮನಕೊಟ್ಟು, ಪ್ರತಿ ವರುಷವೂ ವ್ಯರ್ಥವಾಗಿ ಖರ್ಚಾಗುತ್ತಿರುವ ಐವತ್ತು ಕೋಟಿ ರೂಪಾಯಿಯನ್ನು ಉಳಿಸಿಕೊಳ್ಳುವ ಏರ್ಪಾಡು ಮಾಡಬೇಕಾಗಿದೆ ಎಂಬುದೇ

••••

ಕಲ್ಕತ್ತಾ ಪಟ್ಟಣದಲ್ಲಿ ಪ್ರಕಟವಾಗುವ 'ಅಮೃತ ಬಜಾರ್ ಪತ್ರಿಕಾ'' ಎಂಬ ವರ್ತಮಾನಪತ್ರಿಕೆಯ ಎಡಿಟರ್ ಮಿ॥ ಮೋತಿಲಾಲ್ ಘೋಷ್‌ರವರು ಪ್ರಿನ್ಸ್ ಆಫ್ ವೇಲ್ಸ್‌ರವರನ್ನು ಕಂಡು ಸ್ವಲ್ಪ ಹೊತ್ತು ಮಾತನಾಡಬೇಕೆಂದು ಅವರನ್ನು ಕೇಳಿಕೊಂಡರು ಇದಕ್ಕೆ ಪ್ರಿನ್ಸ್ ಆಫ್ ವೇಲ್ಸ್‌ರವರು ಸಮ್ಮತಿಪಟ್ಟು ಕೇಳಿಕಳುಹಿಸಿದರು ಮಿ॥ ಮೋತಿ ಲಾಲ್‌ರವರು ಅದೇ ಪ್ರಕಾರ ಪ್ರಿನ್ಸ್ ಆಫ್ ವೇಲ್ಸ್‌ರವರನ್ನು ಹೋಗಿ ಕಾಣಿಸಿಕೊಂಡ ಕೂಡಲೆ ಪ್ರಿನ್ಸ್ ಆಫ್ ವೇಲ್ಸ್‌ರವರು ತಮ್ಮ ಸ್ಥಾನದಿಂದೆದ್ದು ಎಡಿಟರಿಗೆ ತಮ್ಮ ಹಸ್ತವನ್ನು ನೀಡಿದರು ಆಗ ಎಡಿಟರು ಪ್ರಿನ್ಸ್ ಆಫ್ ವೇಲ್ಸ್‌ರವರನ್ನು [illegible] ತು ಬಹು ಭಕ್ತಿಯಿಂದ—ಮಹಾಸ್ವಾಮಿ, ತಾವು ಮಾಂದ್ಯ ನಮ್ಮನ್ನಾಳುವ ದೊರೆಯಾಗಿದ್ದೀರಿ ತಮ್ಮಂಥಾವರಿಗೆ ನಾವು ನಮಸ್ಕಾರ ಮಾಡದೆ ತಮ್ಮ ಹಸ್ತದಾನವನ್ನು ಮಾಡುವುದು ನಮಗೆ ಯೋಗ್ಯವಾದದ್ದಲ್ಲ ಎಂದು ಹೇಳಿ ಪ್ರಿನ್ಸ್ ಆಫ್ ವೇಲ್ಸ್‌ರವರ ಎದುರಿಗೆ ಮೊಣಕಾಲೂರಿಕೊಂಡು ಕೈ ಜೋಡಿಸಿ—ಮಹಾಸ್ವಾಮಿ, ನಾನು ಅಲ್ಪಮಾನ್ಯನಾಗಿದ್ದೇನೆ ತಾವು ನನಗೆ ಈ ರೀತಿ ಭೇಟಿಯನ್ನು ದಯಪಾಲಿಸಿದ್ದು ನನಗೆ ಎಷ್ಟೋ ಸನ್ಮಾನವಾಯಿತು ಯಾವಜ್ಜೀವವೂ ನಾನು ಇದನ್ನು ಸ್ಮರಿಸುತ್ತಿರುವೆನು ನಮ್ಮ ಭವಿಷ್ಯತ್ ಚಕ್ರವರ್ತಿ ಮಹಾರಾಜರವರ ಸಾನ್ನಿಧ್ಯವು ದೊರಕಿರುವ ಇಂಥಾ ಅಪೂರ್ವಸಮಯದಲ್ಲಿ ನಾನು ಭಯಭಕ್ತಿ ವಿನಯಪೂರ್ವಕವಾಗಿ ಮಹಾಸ್ವಾಮಿಯವರನ್ನು ಬೇಡಿಕೊಳ್ಳುವುದೇನೆಂದರೆ, ಈ ದರಿದ್ರ ಹಿಂದುಸ್ಥಾನವು ಬಹಳ [illegible] ಸ್ಥಿತಿಯಲ್ಲಿದೆ ಇದು ತಮ್ಮಿಂದ ಸಂರಕ್ಷಿಸಲ್ಪಡಬೇಕು ತಾವೇ ನಮ್ಮ ಭವಿಷ್ಯತ್ ಚಕ್ರವರ್ತಿಸಾರ್ವಭೌಮರಾಗಿರುತ್ತೀರಿ ನಮ್ಮನ್ನು ಮರೆಯಕೂಡದೆಂತಲೂ, ವಿಲಾಯತಿಯಲ್ಲಿರುವ ನಾಲ್ಕು ಕೋಟಿ ಪ್ರಜೆಗಳಂತೆಯೇ ತಾವು ನಮ್ಮನ್ನೂ ಎಣಿಸಿ, ನಮ್ಮ ವಿಷಯವನ್ನು ಜ್ಞಾಪಕದಲ್ಲಿಟ್ಟುಕೊಂಡಿರಬೇಕೆಂತಲೂ ತಮ್ಮನ್ನು ಪ್ರಾರ್ಥಿಸಿಕೊಳ್ಳುತ್ತೇನೆ ಎಂಬೀ ರೀತಿಯಾಗಿ ಬೇಡಿಕೊಂಡರು ಇಂಥಾ ಪ್ರಾರ್ಥನೆಯನ್ನು ಲಾಲಿಸಿ ಪ್ರಿನ್ಸ್ ಆಫ್ ವೇಲ್ಸ್‌ರವರು ಕರುಣಾರ್ದ್ರಹೃದಯರಾಗಿ, ಮೊಣಕಾಲೂರಿ ನಿಂತಿದ್ದ ಎಡಿಟರನ್ನು ಎಬ್ಬಿಸಿ, ಅವರನ್ನು

ನಮ್ಮನ್ನು ಕಂಡದ್ದರಿಂದ ನಮಗೆ ತುಂಬಾ ಸಂತೋಷವಾಯಿತು ಹಿಂದುಸ್ಥಾನದವರನ್ನು ಮರೆತು ಬಿಡುವುದಿಲ್ಲವೆಂಬ ನು ಇನ್ನಿಂದ ಹೇಳಬೇಕೆಂದು ಅಪೇಕ್ಷಿಸುತ್ತಿರಲಿಲ್ಲವೋ ನಾನು ಹಿಂದುಸ್ಥಾನದವರನ್ನು ಮರೆಯುವುದಿಲ್ಲವೆಂತಲೂ ಮರೆಯುವ ಆಸೆಯಿಂತಲೂ ಧೃಢವಾಗಿ ತಿಳಿಯಬೇಕಲ್ಲ ಅವರನ್ನು ಸ್ಮರಿಸಿಕೊಳ್ಳುತ್ತೇನೆ ಇದಲ್ಲದೆ ಹಿಂದು ಪ್ರಜೆಗಳು ನನ್ನನ್ನು ನಾನಾ ಅಟ್ಟಹಾಸ ಪೂರ್ವಕವಾಗಿಯೂ ಐಕ್ಯಮತ್ಯವಾಗಿಯೂ ಎದುರುಗೊಂಡು ಸತ್ಕಾರಮಾಡಿದ ಸಂಗತಿಯನ್ನು ನನ್ನ ತಂದೆಯ ಸಿಂಹಾಸನಾರೋಹಣದವರೆಗೆ ಜ್ಞಾಪಕವಾಗಿಯೂ ಅರಿಕೆ ಮಾಡುವೆನು ಎಂಬೀ ಉತ್ತರವನ್ನು ದಯಪಾಲಿಸಿ, ಅಪ್ಪಣೆ ಕೊಟ್ಟು ಕಳುಹಿಸಿದರು ಅವರು ಅಪೂರ್ವವಾದ ಪ್ರತ್ಯುತ್ತರವನ್ನು ಹೊಂದಿ ಬಹಳ ಸಂತುಷ್ಟರಾಗಿ ಹೊರಟುಹೋದರು.

ವಿದೇಶ ವರ್ತಮಾನಗಳು.

ಮಹಾರಾಣಿ ಸರ್ಕಾರದವರು ಚಿಲ್ಲಿ ಸಾಲಿನಲ್ಲಿ ಅಲ್ಲಿನ ವಿದ್ಯಾ ಶಾಲೆಗಳಿಗೆ ೧೦ ಕೋಟಿ ರೂಪಾಯಿಯನ್ನು ಖರ್ಚು ಮಾಡುವ ರಾದೆ

❖❖❖❖

ಅಮೇರಿಕಕ್ಕೆ ಸೇರಿದ ಬ್ರೆಜಿಲ್ ರಾಜ್ಯದಲ್ಲಿ ಪ್ರಜೆಗಳ ಪಿಸಿ ಭಾವಿ ಹೊಸದಾಗಿ ಈಡಿದ್ದರಿಂದಲೂ ೨೭ ಮಂದಿ ಪೊಟ್ಟಾಗಿ ಪ್ರಾಣ ಕಳೆದುಕೊಂಡರೆಂದು ಸಂತಿ ವರ್ತಮಾನ ವಿದೆ

❖❖❖❖

ಯೂರೋಪಿನ ಖಂಡಕ್ಕೆ ಸೇರಿದ ಫ್ರಾನ್ಸ್ ದೇಶದಲ್ಲಿ ಎಪ್ಪತ್ತು ಬೇಸಿಗೆ ಪ್ರಯುಕ್ತ ಸೈನ್ಯವನ್ನು ಹೆಚ್ಚು ಮಾಡಿಕೊಳ್ಳಲು ಕೆಲವು ಸಂಗತಿಗಳು ತಂತಿವರ್ತಮಾನ ಬಂದಿವೆ

❖❖❖❖

ನ್ಯೂಯಾರ್ಕ್ ಸೇರಿದ ಪಟ್ಟಣದಲ್ಲಿ ೨೦ ಮಂದಿ ಕಳ್ಳರು ಒಂದು ಬ್ಯಾಂಕಿಗೆ ನುಗ್ಗಿ ಅಲ್ಲಿದ್ದ ಕಾವಲುಗಾರರನ್ನು ಕೊಂದು ೩೦,೦೦೦ ಡಾಲರ್ ದ್ರವ್ಯವನ್ನು ಅಪಹರಿಸಿಕೊಂಡು ಹೋಗಿದ್ದಾರೆ

❖❖❖❖

ಟರ್ಕಿ ದೇಶದಲ್ಲಿರುವ ಪ್ರಜೆಗಳಲ್ಲಾ ಎರಡು ಪಂಗಡಗಳ ಕ್ರೈಸ್ತ ಸಿ ಹಿ ಹಿಂದಿನ ಕಾರ್ಯಗಳನ್ನು ಆಬ್ಯಾಸ ಮಾಡಿ ಕಾರ್ಯವಿಲ್ಲದೆ ಚಕ್ರವರ್ತಿಯವರು ಆಜ್ಞೆ ಕೊಟ್ಟಿದ್ದಾರೆ ಇದರಿಂದ ಆ ದೇಶದಲ್ಲೆಲ್ಲಾ ಅತ್ಯವಶ್ಯಕವಾಗಿ ಸೈನಿಕರಾಗಿ ನಿಂತು ಯುದ್ಧ ಮಾಡುವುದಕ್ಕೆ ಅನುಕೂಲವಾಗುವುದು.

❖❖❖❖

ದಕ್ಷಿಣ ಅಮೇರಿಕಕ್ಕೆ ಸೇರಿದ ಈಕ್ವೆಡಾರಿನ ಬಳಿ ಪುರುಷರು ಮಿಡತೆಗಳಿಂದ ಕಷ್ಟಗಳಿರುತ್ತವೆ ಬೆಳೆಯು ಪೂರ್ತಿ ಒಂದು ಕಾಳೂ ಇಲ್ಲ ಆ ಕಾಲ ಬೆಳೆಗಳು ಮನೆಗಳಲ್ಲಿದ್ದು ಇಲಿ ಗಳನ್ನು ಹಿಡಿದು ತಿನ್ನುವುದಲ್ಲ ಬೆಟ್ಟದ ತಪ್ಪಲಲ್ಲಿ ಅವು ಸತ್ತರೆ, ನಲ್ಲಿ, ಆನೆ, ಏನಾದರೂ ಪಲತರಗಳನ್ನೇ ತಂದು ತಿನ್ನುತ್ತವೆ.

❖❖❖❖

ಮುಂದಿನ ತಿಂಗಳಲ್ಲಿ ರಷ್ಯಾದ ರಾಜ್ಯದೊಳಗೆ ಪ್ರಜೆಗಳು ದಂಗೆಯೆದ್ದಾರೆನ್ನುವ ಮೊದಲನ್ನು ಕೆಡಿಸಬೇಕೆಂದು ಗವರ್ನರುಗಳವರಿಗೆ ಬಲವಾಗಿರುವ ಕಾರಣ ಇಲ್ಲಿ ಕಡೆಗಳಲ್ಲೂ ಪೋಲೀಸ ಸೈನಿಕರು ಹೊರಡುವುದಕ್ಕೆ ಸಿದ್ಧರಾಗಿರಬೇಕೆಂತ ನವರನ್ನು ಸಾಗಿಸ ಪುದಕ್ಕೆ ರೈಲುಗಾಡಿಗಳು ತಯಾರಾಗಿರಬೇಕೆಂ ಬುದ್ಧಿಗಳು, ವಿದ್ಯಾರ್ಥಿಗಳು ಪಾಠಶಾಲೆಗಳಿಗೆ ಬಾರದೆ ಬೀದಿಯಲ್ಲಿ ಅಂಥವರನ್ನು ಹಿಡಿದು ಚನ್ನಾಗಿ ಶಿಕ್ಷಿಸಬೇಕೆಂದು ಅಧ್ಯಾಪಕರುಗಳಲ್ಲಾ ಎಚ್ಚರಿಕೆ ಕೊಟ್ಟಿದ್ದಾರೆ

❖❖❖❖

ಜರ್ಮನಿ ಚಕ್ರಾಧಿಪತ್ಯಕ್ಕೆ ರಾಜಧಾನಿಯಾದ ಬರ್ಲಿನ್ ಪಟ್ಟಣದಲ್ಲಿ ಹಿಂದುಸ್ಥಾನದ ಒಬ್ಬ ಫಕೀರನು ಹೋಗಿ ಸರ್ಕಸ್ ಆಟವನ್ನಾಡಿ ಆ ಪಟ್ಟಣದ ಜನರನ್ನು ಸಂತೋಷಪಡಿಸುತ್ತಿದ್ದಾನೆ ಆತ ಮಾಡುವ ಒಂದು ಅದ್ಭುತ ಸಾಧನೆ ಏನೆಂದರೆ—ಅವನು ಒಬ್ಬ ಹುಡುಗನನ್ನು ಕೆಲ್ಲ ರಪ್ಪೆಗಳ ಮೇಲೆ ಎತ್ತಿ ನಿಲ್ಲಿಸಿಕೊಳ್ಳುವನು ಇದನ್ನು ನೋಡುವವರೆಲ್ಲಾ ಅವನ ಸಾಮರ್ಥ್ಯವನ್ನು ಕೊಂಡಾಡುತ್ತಿದ್ದಾರೆ ಅವನು ಮಾಡುವ ಉಪಾಯವೇನೆಂದರೆ—ಒಬ್ಬ ಹುಡುಗನನ್ನು ಒಂದು ಬಲೆ ಚೀಲದಲ್ಲಿ ಕೂರಿಸಿ ಚಿಕ್ಕದಾಗಿ ಮೂಟೆಕಟ್ಟಿ ಅದರ ಗೂಡುಗಳಿರುವಷ್ಟು ಅಗಲವಾದ ಎರಡು ಬಟ್ಟೆಗಳ ಮೇಲೆ ಹಾಕಿ ಕೆಲವು ನಿಮಿಷ ರಪ್ಪೆಗಳಮೇಲೆ ನಿಲ್ಲಿಸಿಕೊಂಡು ನಿದಾನವಾಗಿ ನೇತುಕೊಳ್ಳುತ್ತಾನೆ, ಹಾಗೇ ನಿದಾನವಾಗಿ ಕೂತುಕೊಂಡು ಕೆಳಗಿನ ಅಂಗತಂಗನಾಗಿ ಮಲಗುತ್ತಾನೆ ಇದು ಅಲ್ಲಿನ ನೋಟಕ್ಕೆ ಮಹದಾಶ್ಚರ್ಯವನ್ನುಂಟುಮಾಡಿದೆ

ತಾಲ್ಲೋಕು ವರ್ತಮಾನಗಳು.

ಹೆಗ್ಗಡದೇವನಕೋಟೆ.—ಹದಿನೈದು ದಿವಸಗಳಿಂದ ಈ ಊರಿನಲ್ಲಿ ಪ್ಲೇಗ್, ಆರಂಭವಾಗಿ ಹೆಚ್ಚಾಗಿ, ಇದರಿಗಳಿಂದ ಜನರು ತುಂಬಾ ಹೆದರುತ್ತಾ, ಅರ್ಧಭಾಗದ ಜನರು ಷೆಡ್ಡುಗಳಿಗೆ ಹೋಗಿರುತ್ತಾರೆ ಕೆಲವರು ಬಿಡುತ್ತಾ ಇದ್ದಾರೆ ಇದಕ್ಕಾಗಿ ಅಪೋತಿಕರಿ, ಸರ್ಜನ್ ಡಾಕ್ಟರು ಮತ್ತು ಡ್ರೆಸ್ಸರ್ ಮುಂತಾದವರು ಬಹಳ ಮುತುವರ್ಜಿಯಿಂದ ಎಲ್ಲಾ ವಿಷಯಗಳಲ್ಲಿಯೂ ಸಹಾಯಮಾಡಿ ನೀರು ಕೊಡುತ್ತಿದ್ದಾರೆ ಕೆರೆಯಲ್ಲಿ ಕೊಂಚ ನೀರು ಮಾತ್ರವಿದೆ ಈ ಊರಿನ ಜನರು ಪ್ಲೇಗ್ ಅನ್ನುವ ಮಾತನ್ನು ನಂಬಿ, ಕೆಲವರು ಊರನ್ನು ಬಿಡುವುದಿಲ್ಲವೆಂದು ಗಟ್ಟಿಯಾಗಿ ಮಾತಾಡುತ್ತಾರೆ ಇವರ ಹಾಗೆ ಓಡಿ ಜನರೂ ಪ್ಲೇಗ್ ಅನ್ನುವ ಮಾತನ್ನು ನಂಬದೆ ಊರನ್ನು ಬಿಡುವರೆಂದು ನಿಶ್ಚಯಿಸುತ್ತೇನೆ

ಮಂಡ್ಯ.—ಬಿಸಿಲು ತೀಕ್ಷ್ಣವಾಗಿದ್ದರೂ ಎರಡು ವಾರಗಳ ಕೆಳಗೆ ಇಲ್ಲಿ ಪ್ಲೇಗ್ ವ್ಯಾಧಿಯು ಪ್ರಾರಂಭವಾಗಿದೆ ಎಂತಲೂ, ವ್ಯಾಧಿಯಿಂದ ೧೦ ಜನರು ಮೃತಪಟ್ಟರೆಂತಲೂ, ಇಲಿಗಳು ಸಾಯುತ್ತಿವೆ ಎಂತಲೂ ಊರಿನ ಅಮಲ್ದಾರರವರು ಆಸ್ಪಿಟಲ್ ಅಸಿಸ್ಟೆಂಟರವರು ತಿಳಿದು, ಜನಗಳು ಊರುಬಿಟ್ಟು ಗುಡಿಸಲುಗಳಿಗೆ ಹೋಗುವ ಹಾಗೆ ಟಾಂಟಾಂ ಮಾಡಿಸಿ ತಿಳಿಯಪಡಿಸಿದರು ಈ ಸಂಗತಿಯು ನಿಜವಾಗಿದ್ದರೂ ಈಚೆಗೆ ಯಾರೂ ಹೊಸದಾಗಿ ಕಾಯಿಲೆ ಬೀಳದಿದ್ದರಿಂದಲೂ ಬಿಸಿಲು ಮತ್ತು ನೀರಿನ ಕಷ್ಟ ಬಹಳವಾಗಿರುವುದರಿಂದಲೂ ಜನರು ಊರು ಬಿಟ್ಟು ಹೋಗುವುದಕ್ಕೆ ಇನ್ನೂ ಉದ್ಯುಕ್ತರಾಗಿಲ್ಲ ಆದರೆ ಇನ್ನೂ ಇಲಿಗಳು ಬ್ರಾಹ್ಮಣರಕೇರಿ, ಒಕ್ಕಲಿಗರಕೇರಿ ಮುಂತಾದ ಜಾಗಗಳಲ್ಲಿ ಸಾಯುತ್ತಾ ಇರುವುದರಿಂದ ಕೆಲವರು ಊರುಬಿಟ್ಟು ಹೋಗಿರುತ್ತಾರೆ ಇನ್ನು ಕೆಲವರು ಹೋಗುವುದರಲ್ಲಿದ್ದಾರೆ ಊರಿನ ಸ್ಥಿತಿಯನ್ನು ನೋಡಿಕೊಂಡು ಹೋಗುವ ಹಾಗೆ ಮೈಸೂರಿನಿಂದ ಡಾಕ್ಟರ್ ಆಚ್ಯುತರಾಯರವರು ೧೩ ರಲ್ಲಿ ಇಲ್ಲಿಗೆ ದಯಮಾಡಿಸಿದ್ದರು. ಪಾಕ್ಕರವರು ಊರೆಲ್ಲಾ ಸಂಚಾರಮಾಡಿ, ಜನರು ಊರುಬಿಟ್ಟು ಹೋಗುವ ಹಾಗೆ ಹೇಳಿರುತ್ತಾರೆ. ಊರಿನಲ್ಲಿ ಲಾಂದ್ರು ಕಂಬಗಳು ಪ್ರಕಾಶವಾಗಿ ರಾತ್ರಿಕಾಲದಲ್ಲಿ ಉರಿಯುವುದಿಲ್ಲ ಪೋಲೀಸಿನವರು ಇದನ್ನು ಗಮನಿಸಿದರೂ ಇದ್ದಾಗ್ಯೂ ಒಂದು ಲಾಂದ್ರು ಕಂಬವಿದ್ದರೂ ಇಲ್ಲ, ರಾತ್ರಿಕಾಲದಲ್ಲಿ ಜನರು ಸಂಚರಿಸುವುದು ಕಷ್ಟವಾಗಿದೆ ಮ್ಯುನಿಸಿಪಾಲಿಟಿಯವರು ಈ ವಿಷಯವನ್ನು ಗಮನಕ್ಕೆ ತಂದುಕೊಳ್ಳುವರೆಂದು ನಿರೀಕ್ಷಿಸುತ್ತೇವೆ

ಮಧುಗಿರಿ ತಾ ಬಡಕೋಡನಹಳ್ಳಿ.—ಈ ಪ್ರಾಂತ್ಯ ಬಿಸಿಲಿನ ತಾಪವು ಈಗಲೇ ಪ್ರಬಲ ತಿಂಗಳನ್ನು ವಿಚಾರುತ್ತಲಿದೆ ಈ ಊರಿನಲ್ಲಿರುವ ಉತ್ತರದಿಕ್ಕಿನ ಬಾವಿಗಳ ಸೈಕಿ ಒಂದರಲ್ಲಿ ಮಾತ್ರ ಕೆಲವು ದಿಂದಿಗೆ ನೀರ ಸಿಕ್ಕುವಹಾಗಿದೆ ಆ ನೀರು ತರುವುದಕ್ಕೆ ಊರಾಚೆ ೧½ ಫರ್ಲಾಂಗ್ ದೂರದಲ್ಲಿರುವ ಕಪಿಲೆ ಬಾವಿಗಳಿಗೆ ಹೋಗಬೇಕಾಗಿದೆ ೩ ವರ್ಷಗಳಿಂದ ಸರಿಯಾಗಿ ಮಳೆ ಬಾರದಿರುವುದರಿಂದಲೂ, ಈ ಭಾವಿಗಳ ಪಕ್ಕದಲ್ಲಿ ಹಳೇ ಬಾವಿಗಳ ಗುಂಡಿಗಳು ತೋರಿ ಜನ ನೀರನ್ನು ಮಾವತಕ್ಕಂತ ಕೆರೆಗೆ ತಿರುಗಿಸಿರುವುದರಿಂದಲೂ, ಕೆಸರಿ ಬಾವಿಗಳಿಗೆ ಬರುವ ಜವು ಕಡಿಮೆಯಾಗಿದೆ ಇದರಿಂದ ದನಕರು ಮತ್ತು ಜಾನುವಾರುಗಳಿಗೆ ನೀರು ಸಾಲದೆ ಕೆಲವು ಕಡೆ ಹೆಂಡಗೆ ಬಂದಿರುವ ಜೋಳ ಎಡಿಸುತ್ತಿರುವ ಭತ್ತದ ಪೈರುಗಳು ಬರಲೆಂದು ಹೊಸ ಭಾವಿಗಳನ್ನು ತೋಡುತ್ತಿರುವರು. ಜೀವನಾಧಾರಗಳಿಗೆ ಮತ್ತು ಒಡವೆರಿಗೆ ಜೀವನಾಧಾರಕ್ಕೆ ತುಂಬಾ ತೊಂದರೆಯಾಗಿದೆ—ಈ ಪ್ರಾಂತ್ಯ ಸರ್ವೇ ಮಾಡುವುದಕ್ಕೆ ಬಂದಿರುವ ಪೇಜಣಿದಾರರು ಆಗಲೇ ಕೆಲವು ಗ್ರಾಮಗಳ ಸರ್ವೇ ತೀರಿಸಿದ್ದಾರೆ ಇದನ್ನು ಜನಗಳ ಪ್ರಯೋಜನಕ್ಕಾಗಿ ಯೇ ಕರ್ಸ್ಕರ್ಗಳಾದ ಸರ್ಕಾರದವರು ಏರ್ಪಡಿಸಿರುವುದರಲ್ಲಿ ಅನುಮಾನವಿಲ್ಲ ಆದರೆ ಸರ್ವೇಯಿಂದ ರೈತರಿಗೆ ನಷ್ಟವೂ ಕಷ್ಟವೂ ಭಯವೂ ಹೆಚ್ಚಾಗಿವೆ. ಬಾಂಧುಗಳನ್ನೂ ಪಹಣೆಕಲ್ಲುಗಳನ್ನೂ ಹೆಚ್ಚಾಗಿ ಹಾಕಬೇಕೆಂದು ಹೆದರಿಸುವರು ಅನುಕೂಲವನ್ನು ಭೂಮಿ ಸರಿಹಾಕುವಲ್ಲಿ ನಿವನ ಭೂಮಿ ಇದ್ದರೆ ಆ ಎರಡು ಹೊಲಗಳಿಗೂ ಮಧ್ಯೆ ಇರುವ ಮರಗಳನ್ನು ಲೀಲೆಯ ಮೊದಲಿನಿಂದ ಗರೀಬನ ಅನುಭವದಲ್ಲಿದ್ದದ್ದನ್ನು ಸ್ಥಿತಿವಂತನ ನನ್ನದೆಂದು ಹೆದರಿಸಿಕೊಂಡಿರುವುದು ಹಾಗೆ ಸರ್ವೇ ಮಾಡುವ ಕಾಲದಲ್ಲಿ ಮೋಜಣಿದಾರರಲ್ಲಿ—ಸ್ವಾಮಿ, ಇದು ಯಾರಿಗೆ ಸೇರಿದೆ ದಯವಿಟ್ಟು ತಿಳಿಸಬೇಕೆಂದು ಕೇಳಿಕೊಂಡಾಗ ಆಳತೆ ಮಾಡಿಸಿ ತಾವೇ ಪಹಣೆಕಲ್ಲನ್ನು ನೆಡಿಸಿ, ಇದು ನಿಮಗೆ ಸೇರಿದೆ ಎಂದು ಹೇಳಿದ ಮೇಲೆ ತಿರಿಗಿ ೩ ದಿನಗಳ ನಂತರ ತಾವು ನೆಡಿಸಿದ ಕಲ್ಲನ್ನು ಕೀಳಿಸಿ ಬೇರೆ ಸ್ಥಳಕ್ಕೆ ನೆಡಿಸಿ, ಗರೀಬರ ಹಕ್ಕನ್ನು ಹಾಳುಮಾಡಿದರೆ ಯಾವ ಅಭಿಪ್ರಾಯವಾಗುವದು? ಮೊದಲನೇ ಸಾರಿಯೇ ಈ ರೀತಿ ಮಾಡಿದ್ದರೆ ಯಾರಿಗೂ ಅನುಮಾನವಿರುತ್ತಿರಲಿಲ್ಲ ಎರಡನೇ ಸಾರಿ ನಿಸಾರಿಗಾಗಿ ಅಳತೆಮಾಡಿ ನೆಡಿಸಿದ್ದರೂ ಅನುಮಾನವಲ್ಲವೇ? ಪ್ರತಿಯೊಬ್ಬ ರೈತನಲ್ಲೂ ಅವನವನ ಕಂದಾಯದಂತೆ ೧ ರೂಪಾಯಿಗೆ ೧, ೨, ೩, ೪ ಆಣೆಗಳಂತೆ ವಸೂಲ್ ಮಾಡಿಕೊಡುವ ಕ್ರಮವಿದೆ ಎಂದು ರೈತರು ಹೇಳಿಕೊಂಡು ಕೊರಗುವರು ಅಲ್ಲದೆ ಕಂಭಳೀ ರೇವೆಯಲ್ಲಿ ಬಾಂಡುಗಳಿಗೆ ಬದಲಾಗಿ ಈ ಪಹಣೆಕಲ್ಲುಗಳನ್ನು ಹಾಕಿಸಿರುವರೆಂದು ಕೇಳುತ್ತೇನೆ ಅದರಂತೆ ನಮ್ಮ ಸರ್ಕಾರದವರೂ ಜಾರಿಯಲ್ಲಿ ತರುವುದಾದರೆ ರೈತರಿಗೆ ಸಮಯವನ್ನೂ ತೊಂದರೆಯನ್ನೂ ಉಳಿಸಿಕೊಟ್ಟಂತಾಗುವುದರಲ್ಲಿ ಅನುಮಾನವಿಲ್ಲ—ನಿಟ್ರಹಳ್ಳಿ, ಕೆರೆಯ ಏರಿ ಒಡೆದಿರುವಾಗ ಕೆಲವು ಗ್ರಾಮದ ರೈತರಿಗೆ ತುಂಬಾ ನಷ್ಟವಾಗಿತ್ತು ಈ ವಿಷಯವನ್ನು ರೈತರು ಸರ್ಕಾರಕ್ಕೆ ಅರಿಕೆಮಾಡಿ ಪ್ರಾರ್ಥಿಸಿಕೊಂಡದ್ದರ ಮೇರೆ ೩ ಗ್ರಾಮಗಳ ರೈತರೆಲ್ಲಾ ಸೇರಿ ೧ ಸಾವಿರದ ನೂರು ರೂಪಾಯಿಗಳನ್ನು ಕಂಟ್ರಿಬ್ಯೂಷನ್ನಾಗಿ ಕೊಡುವುದಾದರೆ ಬಾಕಿಯದ್ದನ್ನು ಸರ್ಕಾರದವರು ಹಾಕಿಕೊಂಡು ಕಾಮಗಾರಿ ಮಾಡಿಸುತ್ತಾರೆಂದು ಹೇಳಿ, ರೈತರಿಂದ ಮುಚ್ಚಳಿಕೆ ಬರೆದುಕೊಂಡರು ಮತ್ತು ಮಣ್ಣಿನ ಕಾಮಗಾರಿಯನ್ನು ಪೂರೈಸಿದೆ ಎಂದು ಹೇಳಬಹುದು ಆ ಗ್ರಾಮಗಳ ರೈತರೆಲ್ಲರೂ ತುಂಬಾ ಆಸೆಯಿಂದ ನೀರಿನ ಬಿಸಿನ ಹಣವನ್ನು ಸರ್ಕಾರದವರು ನೇಮಿಸಿರುವ ಮುಖ್ಯಸ್ಥರ ಕೈಯಲ್ಲಿ ಕೊಟ್ಟು ಸ್ವಾಮಿಭಾಗದಿಂದ ರಶೀತಿಗಳನ್ನು ಪಡೆದಿರುವರು ಸರ್ಕಾರಕ್ಕೆ ವಸೂಲಾಗಿರುವ ಹಣವನ್ನು ತೆಗೆದುಕೊಂಡು ಹೊರಟರೆ ಸ್ವಾಮಿಭಾಗರು ಈಗ ಬೇಡವೆಂದು ತಡೆಯುವರಂತೆ ಕಾರಣವೇನು? ರೈತರಿಂದ ಹಣ ಬಂದಿಲ್ಲವೋ? ಅಥವ ಈ ಹಣವನ್ನು ಸ್ವಂತ ಖರ್ಚಿಗಾಗಿ ಉಪಯೋಗಿಸಿರುವರೋ? ರೈತರು ಪಡೆದಿರುವ ರಶೀತಿಗಳನ್ನು ಮೇಲಿನ ಅಧಿಕಾರಿಗಳು ಪರಾಂಬರಿಸಿದರೆ ಯಾವುದೂ ಪರಿಷ್ಕಾರವಾಗುವುದು ೧೧ ವರ್ಷಗಳಿಂದ ೧ ತಿಂಗಳಾದರೂ ಅದು ಸರ್ಕಾರಕ್ಕೂ ಹಾನಿಯಾಗಿದೆ, ಅದರಿಂದ ಕೆರೆ ಕಾಮಗಾರಿಯ ನಡೆಯದೆ ಇಲ್ಲವೇ ಅವರಿಗೆ ಸಾಲವು ಹಾವಡಿಯಾಗದಿರುವುದು ರೈತರ ವ್ಯಸನಕ್ಕೆ ಕಾರಣವಾಗಿದೆ ಅಧಿಕಾರಿಗಳು ಈ ವಿಷಯವನ್ನು ಗಮನಿಸಿ ಸರಿಪಡಿಸಬೇಕೆಂದು ನಿರೀಕ್ಷಿಸಲ್ಪಟ್ಟಿದೆ—ಈ ಊರಿನ ಸುತ್ತ ಕೆಲವು ಪ್ರದೇಶಗಳಲ್ಲಿ ಊರಿನವರು ಹಾಕುವ ಕಸಕಡ್ಡಿಯು ಜಲಮಲ ವಿಸರ್ಜನೆಯ ದುರ್ಗಂಧವು ತಲೆಕೆಲೆಯನ್ನು ಹೊಸದಾಗಿ ಉಂಟುಮಾಡುವದು ಇದರ ವಿಷಯ ರೌಡಿ ಸ್ಯಾನಿಟರಿಗಳಲ್ಲಿ ಎಷ್ಟು ಸಾರಿ ಹೇಳಿಕೊಂಡರೂ ವಿನಾಯಕರಿಗೆ ಲಗಾವಾದಂತೆ ಉತ್ತರಕೊಡುವರು ಸ್ವಚ್ಛತೆಗೆ ಈ ಗ್ರಾಮಕ್ಕೆ ಶ್ರೇಯಾವಾಗಲಿಲ್ಲಾ ಒದುತ್ತಬಿದ್ದರೂ ಈ ಕಡರ ಅವರ ದೃಷ್ಟಿಗೆ ಬೀಳದು ಈ ಊರಿನಲ್ಲಿ ಸೊಳ್ಳೆಗಳ ಕಾಟ ರಾತ್ರಿ ಯಾಗಿದೆ ಮತ್ತು ಗತಿವಿನ ಜ್ವರವು ತಲೆಹಾಕಿದಂತಿದೆ. ಸೊಳ್ಳೆಗಳು ಬೇಯವರಿಗೆ ಇನಾಕ್ಯುಲೇಷನ್ ಮಾಡಿಯಾಗೆಂಬ ಭಯವಿದೆ ಸೊಳ್ಳೆಗಳ ತೊರತನವೆಯಾದ ಗಲೀಜನ್ನು ಊರುಕತ್ತೆಗಳು ಬಹಳ ಮಟ್ಟಿಗೆ ಕಡಿಮೆಮಾಡುತ್ತವೆ ಅಸಾಧ್ಯವಾದದ್ದನ್ನು ಗೌರವ ಸ್ಯಾನಿಟರಿಗಳು ತೆಗೆಸುವ ಏರ್ಪಾಡು ಮಾಡಿದರೆ ಪ್ರಜೆಗಳಿಗೆ ಮಹೋಪಕಾರವಾದೀತು

ತುಂಕೂರು.—ದಿನ ದಿನಕ್ಕೆ ಬಿಸಿಲು ಜಾಸ್ತಿಯಾಗುತ್ತಿರುವದರಿಂದ ಸಹಿಸುವದಕ್ಕಾಗದಷ್ಟು ಸೆಕೆಯಾಗಿದೆ ಊರಿನಲ್ಲಿ ಜನರು ಅಲ್ಲಲ್ಲಿ ಮಂಡಿಕಲು ಜ್ವರ, ಏಡಿಬು, ಇವುಗಳಿಂದ ತೊಂದರೆಪಡುತ್ತಿದ್ದಾರೆ ಸುತ್ತಣ ಗ್ರಾಮಾಂತರಗಳ ಜಾನುವಾರುಗಳು ಮೇವು, ನೀರಿನ ಅಭಾವದಿಂದ ಕೃಶವಾಗಿ ಸೊರಗುವಂತಹ ಮೃತಪಡುತ್ತಲಿವೆ ಸದ್ಯದಲ್ಲಿ ಜನರ ತೊಂದರ ಎಷ್ಟಿದ್ದರೂ ಕಾಲರೆಗೆ ಉಂಟಾಗಿರತಕ್ಕ ಪ್ರಭಾವವನ್ನು ಕಣ್ಣಾರೆ ನೋಡಲು ತುಂಬಾ ಭಯಂಕರವಾಗಿದೆ ನಮ್ಮ ಪ್ರಾಂತ್ಯ ಜನರನೇಕರು ರಕ್ಷಣೆ ಜೀವನ ಸ್ವಾಯ ಜಾಗದೆ ಒಪ್ಪತ್ತಿನ ಊಟಕ್ಕೆ ನಿಂದಿರುತ್ತಾರೆ ಇಷ್ಟಾದರೂ ಗವರ್ನಮೆಂಟಿನವರು ನಮ್ಮ ಡಿಸ್ಟ್ರಿಕ್ಟ್ ಕಾಲಸ್ಥಿತಿಯ ರಿಪೋರ್ಟ್ ಏರ್ಪಾಡಿಯೇ ಇವೆ ವಿಚಾರಮಾಡಿದರು ಎಂದು ಬಿಟ್ಟಿಕೊಳ್ಳುತ್ತಲಿದೆ ನನ್ನದಕ್ಕೆ ನಮ್ಮ ಪ್ರಾಂತ್ಯ ರಿಲೀಫ್ ಕಾಮಗಾರಿಗಳನ್ನು ಪ್ರಾರಂಭಿಸುವದು ಬಹು ಮಂದಿ ಸಂಸಾರಿಗಳಿಗೆ ಶ್ರೇಯಸ್ಕರವಾದೀತೆಂದು ನಿರೀಕ್ಷಿಸಲ್ಪಟ್ಟಿದೆ. ದಾರಣೆ ಪದಾರ್ಥಗಳು ಜಾಸ್ತಿಯಾಗುತ್ತಲಿವೆ ಜನರಿಗೆ ಬೇಕಾಗುವಷ್ಟು ಧವಸ ಕ್ರಯ ಕೊಟ್ಟರೂ ದೊರೆಯುತ್ತಿಲ್ಲ ಈ ರೀತಿ ತೊಂದರೆಗಳು ಜನರನ್ನು ಅನುಭವಿಸ ನೀರಿನ ತೊಂದರೆ ವಿಷಯ ದ್ವಿಗುಣಿಸಿತು ಹೊರತು ಯಾವ ಮಹನೀಯರಿಂದಲೂ ಹೋಗಲಿಲ್ಲ ನಮ್ಮ ತುಂಕೂರಿನ ಧನಿಕರಿಗೆ ಮನುಕುಲವಾದರೂ ಈ ಕಾಲದಲ್ಲಿ ಮನಸ್ಸರಿಸಿ ಜನರಿಗೆ ಜಲದಾನಮಾಡಿ ಈ ಮಹತ್ತರವಾದ ಪುಣ್ಯಸಂಪಾದನೆ ಪಡೆದುಕೊಳ್ಳಬೇಕೆಂಬುದು ನಮ್ಮ ಪ್ರಾರ್ಥನೆಯೆಂದು ಕೇಳಲ್ಪಟ್ಟಿದೆ—ಹೋದ ವಾರ ತಾ ೧೬ ನೇ ಮಂಗಳವಾರ ನಮ್ಮ ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್ ಮಿ ಎಸ್ ಸಿ ಕಾಲ್ ಸಾಹೇಬರು ಇಲ್ಲಿಗೆ ದಯಮಾಡಿಸಿದರು ಆ ದಿನ ಇಲ್ಲಿನ ಸರ್ಕಾರಿ ಅಧಿಕಾರಿಗಳು ವರ್ತಕರು ಮೊದಲಾದವರು ಹೋಗಿ ಕಾಣಿಸಿಕೊಂಡು ಸತ್ಕಾರಪೂರ್ವಕವಾಗಿ ರೈಲ್ವೆ ಬಳಿ ಇರುವ ಟ್ರಾವಲರ್ಸ್ ಬಂಗಲೆಯಲ್ಲಿ ಇಳಿಸಿ ಸುಧಾರಿಸಿದನು ಬಿಡುಸಿದರು ಮಾರನೇ ದಿನ ಸಾಯಂಕಾಲ ಮಿ ಕಾರ್ ಸಾಹೇಬರು ತಮ್ಮ ಇಲಾಖಾ ನೌಕರರಿಂದ ಸ್ಪೋರ್ಟ್ಸ್‌ವನ್ನು ಆಟಗಳನ್ನು ಆಡಿಸಿ ಅದರಲ್ಲಿ ಜಯಶೀಲರಾದವರಿಗೆ ಬಹುಮಾನವಾಗಿ ಮತ್ತು ತಿಬಟೂರು ತಾಲ್ಲೂಕು ಸೂಗೂರು ಗ್ರಾಮದ ಪಟೇಲ್ ಮಿ ನಂಜೇಗೌಡ ಎಂಬುವರಿಗೆ ದಳಾಯತಿ ಕಳವನ್ನು ಪತ್ತೆಮಾಡಿದ್ದರಿಂದ ಬಿ ವಿಷಯವು ಸರ್ಕಾರದವರಿಗೆ ತಿಳಿದುಬಂದದ್ದರಿಂದ ಅವರ ಸೇವನ ತ್ತಿಗಾಗಿ ಗವರ್ನಮೆಂಟಿನವರಿಂದ ಸಂತೋಷಪೂರ್ವಕವಾಗಿ ದಯಪಾಲಿಸಿದ್ದ ಬೆಳ್ಳಿ ಮೆಡಲನ್ನು ದಯಪಾಲಿಸಿದರು ಅನಂತರ ಜಾಣಬರನಾಮು ತಾದ ನುದ್ದಿನ ಕೆಲಸಗಳು ತುಂಬಾ ವಿಜೃಂಭಣೆಯಿಂದ ಜರುಗಿದವು ೧೭ ನೆ ತಾ. ಗ ರುವಾರ ಈ ಟವ್‌ನಿನ ಆಸ್‌ಪಾಸ್‌ನಲ್ಲಿದ್ದ ಸಬ್ ಸ್ಟೇಷನ್‌ಗಳಿಗೆ ದಯಮಾಡಿ, ರಿಕಾರ್ಡುಗಳನ್ನು ಪರಾಂಬರಿಸಿದರು ೧೮ ನೆ ತಾ ಟೌನಿನಲ್ಲಿ ರುವ ತಮ್ಮ ಇಲಾಖೆಗಳೆಲ್ಲವನ್ನೂ ಪರಾಂಬರಿಸಿ, ಕೆಲವು ಅಧಿಕಾರಿಗಳ ಮನೆಗೆ ದಯಮಾಡಿಸಿ, ಸತ್ಕರಿಸಲ್ಪಟ್ಟರು ಆಗ ಈ ಊರಿನ ಪುರಾಜನರು ಆಗಾಲವನ್ನು ಆಲಿಸಿ ಬಹಳ ಸಂತುಷ್ಟರಾಗಿ ಜನರ ನೆಮ್ಮದಿಗೆ ಇನ್ನೂ ಸಹಾಯ ಉಂಟಾಗುವಂತೆ ಈ ಟವ್‌ನಿನಲ್ಲಿ ಪೋಲೀಸ್ ಸಿಬ್ಬಂದಿಯನ್ನು ಹೆಚ್ಚಿಸುವಂತೆ ಪ್ರಾರ್ಥನ ಮಾಡಿದರು ಇನ್ನೂ ೧೦ ಜನ ಕಾನ್ಸ್‌ಟೆಬಲ್‌ಗಳೂ ಒಬ್ಬ ಹವಲ್ದಾರನೂ ನೂತನವಾಗಿ ಕಟ್ಟಿರುವ ಮನ್ನದಲ್ಲಿ ಒಂದು ಸ್ಟೇಷನ ಹೊಸದಾಗಿ ಸ್ಥಾಪನೆ ಮಾಡಿದ ಹಾಗೆ ತಿಳಿದುಬಂತು ಆ ದಿನ ಸಾಯಂಕಾಲಕ್ಕೆ ಸ್ಕೂಲಿನಲ್ಲಿ ಗವರ್ನಮೆಂಟು ಯಂಗ್ರಸ್ ಗರ್ಲ್ ಸ್ಕೂಲಿನ ವಿದ್ಯಾರ್ಥಿನಿಯರಿಗೆ ಬಹುಮಾನಗಳನ್ನು ಕೊಡಲು ಅವರು ಪತ್ನಿ ಸಮೇತರಾಗಿ ದಯಮಾಡಿಸಿದರು ಮೊದಲೇ ಏರ್ಪಾಡು ನಡೆದಂತೆ ಈಶ್ವರ ಪತ್ನಿಯವರು ಸ್ವಹಸ್ತದಿಂದ ಬಾಲಿಕೆಯರಿಗೆ ಬಹುಮಾನಗಳನ್ನು ದಯಪಾಲಿಸಿ, ಅಲ್ಲಿ ನಡೆದ ವಿಷಯಗಳನ್ನು ಬಲ್ಲಾಗಿ ಹೋಗಿ ತುಂಬಾ ಸಂತೋಷಪಡೆದರು ಸ್ವಸ್ಥಾನಕ್ಕೆ ತೆರಳಿ, ಆ ರಾತ್ರಿ ರೈಲಿನಲ್ಲಿ ಬೆಂಗಳೂರಿಗೆ ದಯಮಾಡಿಸಿದರು—ಈ ಊರಿನಲ್ಲಿ ಈಗ ಕೆಲವು ಕಾಲದಿಂದ ಇನ್ನು ಹಿಂದೂ ಜನರ ಉಪಯೋಗಾರ್ಥವಾಗಿ ಪುಸ್ತಕ ಭಂಡಾರವನ್ನು ಸ್ಥಾಪಿಸಬೇಕೆಂಬದಾಗಿ ಮೇಲೆ ಟ ವಿ ವೆಂಕಟಕೃಷ್ಣ ಜೋಯಿಸರೆಂಬ ಮಹನೀಯರು ಬಹಳ ಪ್ರಯಾಸಪಟ್ಟು ಅನೇಕ ಪುಸ್ತಕಗಳನ್ನು ಶೇಖರಿಸುತ್ತಿದ್ದಾರೆ ಇವರ ಪ್ರಯತ್ನಕ್ಕೆ ಇಲ್ಲಿನ ಮಹನೀಯರು ತಮ್ಮ ಉದಾರಕೃಪೆಯನ್ನಿಟ್ಟು ಅವರ ಕೋರಿಕೆಯನ್ನು ನೆರವೇರಿಸುವರಾಗಲಿ ಎಂದು ಅಪೇಕ್ಷಿಸುತ್ತೇವೆ.—ಈ ವಾರ ತಾ. ೨೩ ನೆ ಶನಿವಾರ

ಸವ. ಮೈಸೂರು ಕ್ರೆಡಿಟ್ ಪರಸ್ಪರ ಸಹಾಯಕ ಸಂಘದ ರಿಜಿಸ್ಟ್ರಾರ್ ಮೆ॥ ಎಂ ಶಾಮರಾವ್, ಎಂ ಎ ಯವರು ದಯಮಾಡಿಸಿ, ಇಲ್ಲಿನ ಸ್ಕೂಲಿನಲ್ಲಿ ಎಲ್ಲಾ ಸರ್ಕಾರಿ ಆಫೀಸರುಗಳೂ ವರ್ತಕರೂ ಇನ್ನೂ ಅನೇಕ ಮುಖಂಡರನ್ನು ಸೇರಿಸಿ ಸಭೆಮಾಡಿದರು ಆಗ ಬೆಂಗಳೂರಿಂದ ಇಲ್ಲಿಗೆ ದಯಮಾಡಿಸಿದ್ದ ಮಿಸ್ಟರ್ ಫ್ರೆಡರಿಕ್ ರೆವ್ ಡಿ ಎ ರೀಸ್ ದೊರೆಯವರು ಅಗ್ರಾಸನಾಧಿಕಾರಿಗಳಾಗಿ ಪರಸ್ಪರ ಸಹಾಯಕ ಸಂಘದ ಉದ್ದೇಶಗಳನ್ನು ಇಂಗ್ಲೀಷಿನಲ್ಲಿ ಭಾಷಣಮಾಡಿದರು ಬಳಿಕ ಮೆ॥ ಶ್ಯಾಮರಾಯರು ಗವರ್ನಮೆಂಟಿನವರು ಮಾಡಿರುವ ಈ ಪರಸ್ಪರ ಸಹಾಯಕ ಸಂಘದ ಪ್ರಯೋಜನ ಉದ್ದೇಶಗಳನ್ನು ಕನ್ನಡದಲ್ಲಿ ಸಭಾಸದರೆಲ್ಲರಿಗೂ ವಿವರಿಸಿದರು ಆಗ ಈ ವಿಷಯವು ಸಮಸ್ತ ಪ್ರಜಾಸಮುದಾಯಕ್ಕೆ ಬಹಳ ಅನುಕೂಲವೆಂದು ಸಭಾಸದರು ಒಪ್ಪಿ, ಅದರಂತೆ ಇಲ್ಲಿಯೂ ಸಂಘಗಳನ್ನು ಏರ್ಪಾಡು ಮಾಡಲು ಅನುಮೋದಿಸಿದರು ಇದಾದ ಮೇಲೆ ಸಭೆಯು ಮುಕ್ತಾಯವಾಯಿತು ಮೈಸೂರು ಬೆಂಗಳೂರಿನಲ್ಲಿ ಈ ಸಂಘಗಳು ಏರ್ಪಾಡಾಗಿರುವಂತೆ ಇಲ್ಲಿಯೂ ಬೇರೂರಿದಲ್ಲಿ ಬಹು ಜನರಿಗೆ ಪ್ರಯೋಜನವಾಗುವದರಲ್ಲಿ ಸಂಶಯವಿಲ್ಲ

ಸೊರಬ.—ಈ ತಾಲ್ಲೂಕಿಗೆ ಸರ್ಕಾರಿ ಸೂಲಗಿತ್ತಿಯಾಗಿ ಬಂದಿದ್ದ ಮಿಸೆಸ್ ಮೇರಿ ಸೆನಸ್ ಎಂಬುವರು ಕಳೆದ ಎರಡೂಕಾಲು ವರ್ಷಗಳಿಂದಲೂ ಈ ತಾಲ್ಲೂಕಿನ ಎಲ್ಲಾ ಜನಗಳಲ್ಲಿಯೂ ಪ್ರೀತಿ ವಿಶ್ವಾಸಗಳನ್ನು ಸಂಪಾದಿಸಿ, ಇಷ್ಟು ಶೀಘ್ರವಾಗಿ ಗುಬ್ಬಿ ತಾಲ್ಲೂಕಿಗೆ ವರ್ಗಹೊಂದಿ ಹೋಗುವದು ಈ ತಾಲ್ಲೂಕಿನ ಹೆಣ್ಣು ಮಕ್ಕಳ ದುರಾದೃಷ್ಟವಾಗಿದೆ. ಇವರು ಬಂದ ಈಚೆಗೆ ಹೆರಿಗೆ ವಿಷಯದಲ್ಲಿ ಏನೊಂದೂ ಅಪಾಯ ಸಂಭವಿಸದಂತೆ ಬಹು ಜಾಗರೂಕತೆಯಿಂದ, ಹೆರಿಗೆಯಾದ ಮನೆಯಲ್ಲಿಯೇ ಹಗಲೂ ರಾತ್ರಿ ೨—೩ ದಿವಸದ ವರಿಗೂ ಆಹಾರ ನಿದ್ರೆಗಳನ್ನು ತ್ಯಜಿಸಿ ಬಹಳ ಜನರನ್ನು ಕಾಪಾಡಿದಾರೆ ಮತ್ತು ಈ ಟವನ್ನಿನಲ್ಲಿ ಶಸ್ತ್ರಪ್ರಯೋಗದಿಂದ ಮಗುವನ್ನು ಹೊರಗೆ ತೆಗೆಯುತ ಕ್ಷೇಮ ವಾಗಿ ನಾಲ್ಕಾರು ಹೆರಿಗೆಗಳನ್ನು ತುಂಬಾ ಮೇಲಾಗಿ ನಡಿಸಿ ಜನರ ಮರ್ಯಾದೆ ಕಾಪಾಡಿಸಿದಾರೆ ಹೆರಿಗೆ ಕೆಲಸಗಳಲ್ಲಿಯೂ ಹೆಣ್ಣುಮಕ್ಕಳಿಗೆ ಒದಗುವ ಯಾವ ಕಾಯಿಲೆಯಲ್ಲಿಯೂ ಇವರ ಕೈಗೆ ಪರಿಶ್ರಮವಿದ್ದು ಕಾಪಾಡಿದ ಹಾಗೆ ಈ ನಮೂನೆ ಈ ತಾಲ್ಲೂಕಿಗೆ ಯಾರೂ ಬಂದಿರಲಿಲ್ಲ ಇಂಥವರನ್ನು ಇಷ್ಟು ಬೇಗನೆ ಕಳಕೊಳ್ಳುವದಕ್ಕೆ ಈ ನಗರ ಹೆಣ್ಣುಮಕ್ಕಳಿಗೆ ತುಂಬಾ ವ್ಯಸನವಾಗಿದೆ ಸರ್ಕಾರದವರು ಇಷ್ಟು ಬೇಗನೆ ಅವರನ್ನು ವರ್ಗ ಮಾಡುತ್ತಿರಲಿಲ್ಲ. ಇನಿಗ ಈ ತರವು ಸಹಾ ಬಂದಿದೆ ಎರಡು ವರ್ಷಗಳಿಂದಲೂ ಆಗಾಗ್ಗೆ ಕಾಯಿಲೆಯಿಂದ ತೊಂದರೆಪಡುತ್ತಿದ್ದ ಕಾರಣ ಅರ್ಜಿ ಬರೆದುಕೊಂಡು ದ್ದಕ್ಕೆ ವರ್ಗವಾಗಿದೆ ಇವರು ಹೋದೆಡೆಗೆ ಬರತಕ್ಕಂಥ ಸೂಲಗಿತ್ತಿಯು ಇವರಂತೆಯೇ ಎಲ್ಲಾ ಜನಗಳಲ್ಲಿಯೂ ಪ್ರೀತಿ ವಿಶ್ವಾಸಗಳನ್ನು ಸಂಪಾದಿಸಿಕೊಂಡು ಒಳ್ಳೇ ಹೆಸರನ್ನು ಪಡೆಯುತ್ತಾರೆಂದು ನಂಬಿದ್ದೇವೆ

ದಾಸನ ತಿಪ್ಪೆ ಗ್ರಾಮ—ಈ ಗ್ರಾಮದ ದೊಡ್ಡ ಕೆರೆಯನ್ನು ಕಾಮಗಾರಿ ಬಗ್ಗೆ ಈಗ್ಗೆ ಎರಡು ವರ್ಷಗಳಲ್ಲಿ ಒಡೆದು ಕಾಮಗಾರಿ ಮಾಡಿದರು. ಆ ಕೆಲಸವು ಪೂರ್ತಿಯಾಗುತ್ತಾ ಬಂತು ಆದರೆ ಕೆರೆ ಒಡೆದ ಕಾರಣದಿಂದಲೂ ಮಳೆ ಕಡಿಮೆಯಾದ ಕಾರಣದಿಂದಲೂ ಕಳೆದ ಎರಡು ಸಾಲ್ ಬಾಗಾಯ್ತು ಪೈರು ಇಲ್ಲದೆ ಜನರು ಪಡುವ ಕಷ್ಟವನ್ನು ಹೇಳಲು ಸಾಧ್ಯವಿಲ್ಲ. ಈಗಿನ ಧಾರಣೆಯಲ್ಲಿ ಪ್ರತಿ ಮನೆಯ ತಿಂಗಳಿಗೆ ೧೫—೨೦ ರೂಪಾಯಿನ ವರಿಗೆ ಅಕ್ಕಿ ಒಂದೇ ಬೇಕಾಗಿದೆ. ಅಕ್ಕಿಯೂ ಈ ಸ್ಥಳದಲ್ಲಿ ಸರಿಯಾಗಿ ಸಿಕ್ಕುವದೂ, ಸಿಕ್ಕಿದರೂ ಅಳತೆ ಸರಿಯಾಗಿ ದೊರೆಯುವದೂ ತುಂಬಾ ಪ್ರಯಾಸವಾಗಿದೆ ಈ ಮುಖ್ಯ ಕಾರಣಕ್ಕಾಗಿ ಗ್ರಾಮಸ್ಥರು ಕೊಡತಕ್ಕ ತೊಂದರೆಯೂ ಬಹಳವಾಗಿದೆ ಈ ಕಷ್ಟಗಳಿಂದ ಈ ಗ್ರಾಮದ ಜನಗಳು [illegible]

[illegible]

[illegible]—[illegible]

[illegible]

ಎಲ್ಲದಾಗ್ಗೆ ಅವರಲ್ಲಿ ಇದ್ದ ಪವರ್ (ಶಕ್ತಿ) ಇವರಿಗೂ ಬರಲಿ, ಕೋಣಿಚ ನೋಡಾಯಿತು. ತಪ್ಪಣಿಸೇ ದಾಕ್ಟರ್ ಮಳವಳ್ಳಿ ಆಸ್ಪಿಟಲ್ ಅಸಿಸ್ಟೆಂಟರೂ ಸೇರಿ ಪವರ್ ಹಿಡಿದಿದ್ದ ಗಾಯಗಳಿಗೂ ಪ್ರಾಣಕ್ಕೆ ಬಂದ ಕಷ್ಟಗಳಿಗೂ ಸರಿಯಾದ ಉಪಚಾರ ಮಾಡುವಲ್ಲಿ ಒಂದು ಗಂಟೆಯು ಮೇಲ್ಪಟ್ಟು ಅವರಿಗೆ ಜ್ಞಾನೋದಯವಾಯಿತು ಅವರೆ ಅನೇಕರು ಈ ದಾಸನಿಂದಾಗಲಿ ವೈದ್ಯರಿಂದಾಗಲಿ ಮುಟ್ಟಿಸಿಕೊಂಡವರಿಗೆ ಇದೇ ಸರಿಯಾದ ಶಿಕ್ಷೆ ಎಂದು ಜ್ಞಾಪಕವಿರಲಿ —ಇದಕ್ಕೆ ನೇರವ ಆಸುವಳ್ಳಿ ಎಂಬ ಗ್ರಾಮದಲ್ಲಿ ಒಂದು ದೇವತೆಯ ಜಾತ್ರೆಯು ನಡೆಯಿತು ಅದರ ಕ್ರಮವೇನೆಂದರೆ—ಬಲಗ್ಯಜಾತಿಯವರು ಜಾತ್ರೆ ದಿವಸ ಆ ದೇವತೆಯನ್ನು ನೋಡಿಕೊಂಡವೆಂತಲೂ ನೋಡುವರೆ ಅಪಾಯ ಸಭವಿಸಾವನೆಂತಲೂ ಹಿರಿಯರ ಸಂಪ್ರದಾಯವನ್ನೇ ಕೈಕೊಂಡು ಬಿಡಿಸಿದಾಗಿ ಅನವರ ಮನೆಯಲ್ಲಿ ಗಟ್ಟಿಗಿರುವ ಕಾಲದಲ್ಲಿ ಅವನ ಮೇಲೆ ಹೊಟ್ಟೆಕಿಚ್ಚು ಇರುವಂಥವನ್ನು ದೇವತೆಯ ತಲೆ ಮೇಲೆ ಹಾಕಿ ಬಸವನ ಮನೆಗೆ ಬೆಂಕಿ ಇಟ್ಟು ಸುಟ್ಟುಬಿಟ್ಟರು. ಕೇಳುವರೆ ದೇವತೆ ಮೇಲೆ ಮಾತು ವಿಚಾರಿಸೋಣವೆಂದರೆ ಮಾತೇ ಇಲ್ಲ.

ಒಳದೇಶದ ವೃತ್ತಾಂತಗಳು.

ಮೆ॥ ವಿ ಪಿ ಮಾಧವರಾಯರು ಈ ದಿನ ಬೆಳಗ್ಗೆ ಬೆಂಗಳೂರಿಗೆ ಬಂದು, ರೈಲ್ವೇ ಸ್ಟೇಷನ್ನಿನಲ್ಲಿ ಒಂದು ಅಡ್ರೆಸ್ಸನ್ನು ಅಂಗೀಕರಿಸಿ, ಕೂಪರ್ಲೇ ರೈಲು ಹತ್ತಿ ಮಧ್ಯಾಹ್ನ ೧॥ ಗಂಟೆಗೆ ರಾಜಧಾನಿಯನ್ನು ತಲಪುವವರಾಗಿದಾರೆಂದು ಕೇಳುತ್ತೇವೆ

****

ಕಳೆದ ಶನಿವಾರ ಸಾಯಂಕಾಲ ರಾಜಧಾನಿಯ ಮಹಾರಾಣಿ ಗರ್ಲ್ಸ್ ಹೈಸ್ಕೂಲಿನಲ್ಲಿ ಹೈಸ್ಕೂಲಿನ ವಿದ್ಯಾರ್ಥಿಗಳಿಗೆ ಬಹುಮಾನಗಳನ್ನು ಕೊಟ್ಟರು ಶ್ರೀ ಮಹಾರಾಜರವರ ಪ್ರೈವೇಟ್ ಸೆಕ್ರೆಟರಿ ಮೆ॥ ಪೇಟೆನಾಕಿಯವರು ಅಗ್ರಾಸನವನ್ನು ವಹಿಸಿದ್ದರು ಬಹುಜನ ದೊಡ್ಡ ಮನುಷ್ಯರೂ ಅಧಿಕಾರಿಗಳೂ ಹಾಜರಾಗಿದ್ದರು ಹೆಡ್ ಮಾಸ್ಟರಿಣಿ ವರ್ಷವಿಸಿದ್ದ ಸಂವತ್ಸರ ಕಾರ್ಯಗಳು ತೃಪ್ತಿಕರವಾಗಿ ನಡೆದವು ಬಹುಮಾನಗಳನ್ನು ಕೊಟ್ಟ ಮೇಲೆ ಮೆ॥ ಪೇಟೆನಾಕಿಯವರು ಬಾಲಿಕೆಗೆ ಕೈ ಬರವಣಿಗೆಯನ್ನು ಬಹಳ ಚನ್ನಾಗಿ ಮಾಡಿಕೊಳ್ಳಬೇಕೆಂದೂ ಇಲ್ಲವಾದರೆ ಅಭಿವೃದ್ಧಿಗೆ ಬರಲಾರದೆಂದೂ ಬುದ್ಧಿ ಮಾತನ್ನು ಹೇಳಿದರು

****

ಕಳೆದ ಸೋಮವಾರದಿಂದ ಮೈಸೂರು ಮಿಂಟೋ ಆಸ್ಪತ್ರೆಯಲ್ಲಿ ರೋಗಿಗಳಿಗೆ ಔಷಧಗಳನ್ನು ಕೊಡಲಾರಂಭವಾಗಿದೆ ಪ್ರತಿದಿನವೂ ಬೆಳಗ್ಗೆ ೩ ರಿಂದ ೧೦ ಗಂಟೆಯ ತನಕ ಚಿಕಿತ್ಸೆ ಮಾಡುವರು ಆಸ್ಪತ್ರೆಯಲ್ಲಿ ಮಿಸ್ ಪೀಟ್ಸ್ ಎಂಬ ಇಬ್ಬರು ಸ್ತ್ರೀವೈದ್ಯರು ಔಷಧಗಳನ್ನು ಕೊಡುತ್ತಾರೆ ಇವರಲ್ಲಿ ಒಬ್ಬಾಕೆಯು ಲಂಡನ್ ಪಟ್ಟಣದ ವೈದ್ಯವಿದ್ಯಾಶಾಲೆಯಲ್ಲಿ ಎಂ ಬಿ ಎಂಬ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದವರು ಇನ್ನೊಬ್ಬಾಕೆಯು ಎಂ ಬಿ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರುವದಲ್ಲದೆ ಉಷ್ಣದೇಶಗಳಲ್ಲಿ ಪ್ರಾಪ್ತವಾಗತಕ್ಕ ರೋಗಗಳ ಚಿಕಿತ್ಸೆಯನ್ನೂ ಲಂಡನ್ ಪಟ್ಟಣದ ಆಸ್ಪತ್ರೆಯಲ್ಲಿ ಕಲಿತು ಬಂದಿರುತ್ತಾರೆ. ಈ ಆಸ್ಪತ್ರೆಯ ಮಧ್ಯದ ಕಟ್ಟಡವು ಇನ್ನು ನಾಲ್ಕಾರು ತಿಂಗಳೊಳಗಾಗಿ ಪೂರೈಸಿ, ರೋಗಿಗಳನ್ನು ಅಲ್ಲೇ ಇಟ್ಟು ಚಿಕಿತ್ಸೆ ಮಾಡುವುದಕ್ಕೆ ಏರ್ಪಾಡು ಮಾಡುವವರಾಗಿದಾರೆಂದು ಕೇಳುತ್ತೇವೆ

ಬಾತ್ಮಿದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ನಿಗಾ ಕೊಡಲಾರೆವು ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು, ಇಂಥವುಗಳಿಗೆ ನಾವು ನಿಗಾ ಕೊಡಲಾರೆವು.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬುದನ್ನು ಸಕಲರೂ ತಿಳಿಯತಕ್ಕದ್ದು —ಎಡಿ

ಕರೆಸ್ಪಾಂಡೆನ್ಸ್

ಹೆಗ್ಗಡದೇವನಕೋಟೆ ರೈತರಿಗೆ ರಿಯಾಯಿತಿ ಬೇಕು

ಅಯ್ಯಾ,

ಈ ದಫೆ ಘನವನ್ನು ಹೊಂದಿದ ಪ್ರಿನ್ಸ್ ಆಫ್ ವೇಲ್ಸ್ ದೊರೆಗಳವರ ಸವಾರಿಯು ಮೈಸೂರು ಸಂಸ್ಥಾನಕ್ಕೆ ದಯಮಾಡಿಸಿ ಇದ್ದದ್ದು ಸರಿಯಷ್ಟೆ ಇವರ ಮನಸ್ಸಂತೋಷಕರವಾಗಿ ಗೌರ್ನಮೆಂಟಿನವರು ಏರ್ಪಡಿಸಿದ್ದ ಆನೆ ಶಿಕಾರಿಯಲ್ಲಿಯೂ, ಕ್ಯಾಂಪಿನ ಕೆಲಸದಲ್ಲಿಯೂ ಈ ತಾಲ್ಲೋಕಿನ ಪ್ರಜೆಗಳು ಮಾಡಿದ ಮೆಹನತ್ತು ಸರ್ವರಿಗೂ ತಿಳಿದಿರತಕ್ಕ ಅಂಶವಾಗಿ ಇರುತ್ತೆ ಈ ತಾಲ್ಲೋಕು ರೈತರು ಇಂಥಾ ಅಗಾಧವಾದ ಸಮಸ್ತ ಕೆಲಸಗಳಿಗೂ ಗೌರ್ನಮೆಂಟಿನ ಅಪ್ಪಣೆಯಂತೆ ಮನಸ್ಸು ತೃಪ್ತಿಕರವಾದ ಕೆಲಸಗಳನ್ನು ಮಾಡಿದ್ದಕ್ಕಾಗಿ ಗೌರ್ನಮೆಂಟಿನವರು ದಯಮಾಡಿಟ್ಟು ಈ ತಾಲ್ಲೋಕು ರೈತರಿಗೆ ಉಂಟಾಗಿರುವ ತೊಂದರೆಯನ್ನು ಅಂದರೆ ಇವರ ಗೋಮಾಳಗಳು ಮೇಯುವ ಬಾರಕಟ್ಟು ಮತ್ತು ಜೋಡಿಗೆ ಸಂಬಂಧಪಟ್ಟ ಕೆಲವು ಜಾತಿ ಮಂಗಳನ್ನು ಅವರ ಇಷ್ಟ ಪ್ರಕಾರ ರಿಯಾಯ್ತಿಯನ್ನು ಮಾಡಿಕೊಡುವರೆಂದು ಸಪ್ರಾರ್ಥಿಸುವ ಪ್ರಜಾಭಿಮಾನಿ.

ಕಂದಾಯದ ರಿಮಿಷನ್ ವಿಚಾರ.

ಅಯ್ಯಾ,

ಈ ತಿಂಗಳು ತಾ॥ ೯ ನೆ ಶುಕ್ರವಾರ ಯಂಗಟಿ ಹೋಬಳಿ ಬಮಾ ಹುಂಡೀಗೋಸ್ಕರ ಕಡೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್ ಸಾಹೇಬರವರು ದಯಮಾಡಿಸಿದ್ದ ಕಾಲದಲ್ಲಿ ಈ ಹೋಬಳಿಗೆ ಸೇರಿದ ಯಳ್ಳಂಬಳಸೆ ವಗೈರೆ ಗ್ರಾಮಗಳ ರೈತರು ಈ ವರುಷ ಕೆರೆಯಲ್ಲಿ ನೀರು ಇಲ್ಲದೆ ಹೋದ್ದರಿಂದಲೂ, ಮಳೆಯೂ ಬಾರದೆ ಬೆಳೆಯೂ ಇಲ್ಲದೆ ಹೋದ್ದರಿಂದಲೂ, ಉತ್ಪತ್ತಿಯೂ ಇಲ್ಲದೆ ಕಂದಾಯವನ್ನು ತೆರಲು ಶ್ರೀಮಾನ್ ಡೆಪ್ಯುಟಿ ಕಮಿಷನರ್ ಸಾಹೇಬರವರ ಸನ್ನಿಧಾನದಲ್ಲಿ ಮೊರೆಯಿಟ್ಟುಕೊಂಡಿದ್ದದ್ದಕ್ಕೆ ಅವರು ಬಡ ರೈತರುಗಳು ನಿಜವಾಗಿಯೂ ತೊಂದರೆಪಡುತ್ತಿರುವದನ್ನು ನೋಡಿ ಪಶ್ಚಾತ್ತಾಪಪಟ್ಟು ಕನಿಕರದಿಂದ ಸ್ಥಳ ಪರಿಶೀಲನೆ ಮಾಡಿ ಎರಡು ಕಿಸ್ತುಗಳ ತಲೆ ಕಂದಾಯವನ್ನು ಮಾತ್ರ ಕೊಟ್ಟರು. ರಿಮಿಷನ್ ವಿಚಾರದಲ್ಲಿ ನೋಡೋಣ ಎಂದು ಆಶ್ವಾಸನೆ ಕೊಟ್ಟರು ತಾತ್ತ್ವಿಕವಾಗಿ ಮುಂದೆ ಅರಿತು ರಿಮಿಷನ್ ಮಾಡಿ ಅನುಕೂಲ ದಯಪಾಲಿಸುವರೆಂದು ನಂಬಿಕೊಂಡು ಇದ್ದೇವೆ ಆದರೆ ಗ್ರಾಮನೌಕರರ ಮಾತ್ರ "ದೇವರು ವರವನ್ನು ಕೊಟ್ಟರೂ ಪೂಜಾರಿ ವರವನ್ನು ಕೊಡನು" ಎಂಬ ಗಾದೆಗೆ ಅನುಸಾರವಾಗಿದೆ ಇದನ್ನು ಕರುಣಾಳುಗಳಾದ ನಮ್ಮ ಶ್ರೀಮಾನ್ ಡೆಪ್ಯುಟಿ ಕಮಿಷನರ್ ಸಾಹೇಬರವರು ಚನ್ನಾಗಿ ಆಲೋಚನೆ ಮಾಡುವವರಾಗಿ ನಂಬಿದ್ದೇವೆ

ರೈತ

ದನಗಳ ರೋಗಕ್ಕೆ ಔಷಧ

ಅಯ್ಯಾ,

ತಾ ೧—೩—೧೦ನೆ ನಂಬರ್ ೯ ವೃತ್ತಾಂತ ಪತ್ರಿಕೆಯಲ್ಲಿ ಚಿಂಗ್ಲೇಟ ತಾಲ್ಲೋಕಿನ ಕಡೆ ಗೋಮಾಳಗಳಿಗೆ ಬಂದು ವಿಧ ಸಂಭವಿಸಿರುತ್ತೆಂತಲೂ ಚಿಕಿತ್ಸೆಯನ್ನು ತಿಳಿಸಬೇಕೆಂತಲೂ ಪಶುವೈದ್ಯರು ಕೇಳಿರುತ್ತಾರಷ್ಟೆ. ಇದಕ್ಕಾಗಿ ಬಹಳ ಶ್ರಮ ಪಟ್ಟು ಬೇರೆ ಈ ರೋಗವನ್ನು ನಮ್ಮ ಈ ಕಡೆ ಕಾಲುಬಾರ, ಬಾಯಿ ಎಂದು ಹೇಳುತ್ತಾರೆ ಈ ರೋಗಕ್ಕೆ ದಿವ್ಯಔಷಧಿ ನಾನು ಭಾಂಗಿ ಲಕ ಕೊಟ್ಟು ಕಳುಹಿಸುತ್ತೇನೆ ಈ ಔಷಧಿ ೭ ಪಾಲು ಮಾತ್ರಲನ್ನು ಮುಕ್ಕಾಲು ಕಂಡ್ರಿ ತೆಂಗಿನಕಾಯಿ (ಕೊಬ್ಬರಿ) ರಸವನ್ನಾಗಿ ಅರೆದು ಕಾಲು ಕಂಡ್ರಿ ಎಳ್ಳೆಣ್ಣೆ ಈ ರಸಕ್ಕೆ ಹಾಕಿ ಪರಿಷ್ಕರಿಸಿ ಬೆಳಗ್ಗೆ ಒಂದು ದನಕ್ಕೆ ಕೊಡುವದು ಹೀಗೆ ಕಾಕಿ ೩ ಪಾಲು ಔಷಧಿಯನ್ನು ಇದೇ ರೀತಿಯಿಂದ ೩ ದಿವಸವೂ ಕೊಟ್ಟ ಹಾಗೆ ಕೊಟ್ಟ ನಂತರ ೩ ದಿವಸವೂ ಸ್ವಲ್ಪ ಬಿಸಿಗಂಜಿ ರ ಮಾಲು ತೂಕ ಉಪ್ಪನ್ನು ಬೆರಸಿ ಸ್ವಲ್ಪ ತಣಿದನಂತರ ಆ ದನವಿಗೆ ಕೊಡಬೇಕು ಮತ್ತು ಕಾಲುಗೊರಸು ಮಧ್ಯದಲ್ಲಿ ಬಾಯಲ್ಲಿ ಅಥವಾ ಕಜ್ಜಲಲ್ಲಿ ಬೆಕ್ಕೆ ಆಗಿ ಒಡೆದರೆ ಹುಣ್ಣುಗಳು ಕೊಳ್ಳದ ಹಾಗೆ ಕರ್ಪೂರದ ಎಣ್ಣೆ ಅಥವಾ ಕಾರ್ಬಾಲಿಕ್ ಕಟ್ಟುಮಾಡಿ ಮೇಲಿಂದ ಕಟ್ಟಬೇಕು ಮತ್ತು ದನವಿಗೆ ಒಳಗೆ ಕರಿಗೆ ಬೆಲ್ಲಿನ ಮೇಲೆ ಬಿಡದೆ ಆಹಾರ ಕೊಡಬೇಕು ಇಂಥಾ ಹಸುವಿಗೆ ಕೊಡುವ ಆಹಾರ ಧಾನ್ಯದ ಹೊಟ್ಟು, ಬಿಳಿ ಅಕ್ಕಿ ಎಳೆಯಲ್ಲು ಚನ್ನಾಗಿ ಬೆಂದ ಬೇಗಿ ಕೊಡಬೇಕು ಈ ಔಷಧಿ ೧ ರ ಕಳುಹಿಸಿದರ ೧ ದನಕ್ಕೆ ಮಾತ್ರ ೩ ದಿವಸಕ್ಕೆ ಆಗುತ್ತೆ ದನಕ್ಕೆ ಬೇಕಾದರೆ ಕಾಸು ಕೊಟ್ಟು ಕಳುಹಿಸುವ ೧ ದನದ ದಿವಸದ ಔಷಧಿಗೆ ೩ ಆಣೆ ಭಾಂಗಿ ಚಾರ್ಜು ಆದೀತು ಈ ರೀತಿಯಲ್ಲಿ ಎಷ್ಟು ಬೇಕಾದರೂ ಕಳುಹಿಸುವ ದನಗಳ ಮಾಲೀಕರು ತಕೊಳ್ಳಲಿ ಔಷಧಿ ಧರ್ಮಾರ್ಥ ಇನ್ನು ಇತರ ಎಲ್ಲಾ ದನಗಳ ರೋಗಕ್ಕೆ ಹುಚ್ಚುನಾಯಿ ವಿಷಕ್ಕೂ ನಮ್ಮಲ್ಲಿ ಔಷಧಿ ಇದೆ ಅಪೇಕ್ಷೆ ಇದ್ದವರು ತರಿಸಿಕೊಳ್ಳಿ

ಮಾಲಿಂಗ ಪಂಡಿತರ ಮಗ ವಿಶ್ವೇರ ಪಂಡಿತ,

ನೇಟಿವ್ ವೈದ್ಯರ್, ಕಾಸ್ರಗೋಡು ತಾಲ್ಲೂ॥

ನವೀನ ವ್ಯವಸಾಯ—ಆಕ್ಷೇಪ

ಅಯ್ಯಾ,

ಲೋಕದಲ್ಲಿ ದ್ರವ್ಯಾರ್ಜನೆಗೆ ಮುಖ್ಯಕಾರಣಗಳಲ್ಲಿ ವ್ಯವಸಾಯವು ಒಂದನೆಯದಾಗಿರುತ್ತದೆ ಇದು ರೈತರಿಗೆ ಪಾರಂಪರ್ಯವಾಗಿ ನಡೆದುಕೊಂಡು ಬರುತ್ತಲಿದೆ ಆದರೆ ಭೂಮಿಯ ಗುಣಾವಗುಣಗಳನ್ನು ಕಂಡುಹಿಡಿದು, ಶಾಸ್ತ್ರೋಕ್ತ ವಿಧಾನದಿಂದ ವ್ಯವಸಾಯ ಮಾಡಿದಲ್ಲಿ ಹೆಚ್ಚಾಗಿ ಲಾಭ ದೊರಕುವದೆಂಬ ಭಾಗವನ್ನು ಹೇಳಬೇಕಾದ್ದಿಲ್ಲ ಈ ರೀತಿಯಲ್ಲೇ ಪಾಶ್ಚಿಮಾತ್ಯ ರೈತರು ಸಕಲ ಸಂಪತ್ತನ್ನು ಪಡೆದಿರುತ್ತಾರೆ.

ಆದರ ಈ ದೇಶದ ಬಡರೈತರಿಗೆ ಮಾಮೂಲೆಂಬ ಪಿಶಾಚಿ ಹಿಡಿದಿರೋದರಿಂದ ಹೊಸದಾದ ಮತ್ತು ಲಾಭಕರವಾದ ಮಾರ್ಗವನ್ನನುಸರಿಸುವದಿಲ್ಲ ಇದಕ್ಕೆ ಮುಖ್ಯಕಾರಣವು ದಾರಿದ್ರ್ಯ ಮತ್ತು ಮೌಢ್ಯ ಈ ಮೌಢ್ಯನಿವೃತ್ತಿಗೂ, ಶಾಸ್ತ್ರೋಕ್ತ ವ್ಯವಸಾಯದಿಂದ ಹೆಚ್ಚಿದ ಲಾಭವನ್ನು ತೋರಿಸುವದಕ್ಕೂ ಘನವನ್ನು ಹೊಂದಿದ ಸರ್ಕಾರದವರು ಅನೇಕ ಕಡೆಗಳಲ್ಲಿ ಎಕ್ಸ್‌ಪರಿಮೆಂಟಲ್ ಫಾರಂಸ್ (ಪರೀಕ್ಷಾರ್ಥವಾದ ಜಮೀನು)ಗಳನ್ನು ಸ್ಥಾಪಿಸಿರುತ್ತಾರೆ ಇದೇ ರೀತಿಯಾಗಿ ಮೈಸೂರು ನಾರ್ಮಲ್ ಸ್ಕೂಲಿನಲ್ಲಿ ಉಪಾಧ್ಯಾಯರುಗಳಿಗೆ ವ್ಯವಸಾಯಕ್ರಮವನ್ನು ಕಲಿಸುವದಕ್ಕಾಗಿ ವಿಶೇಷ ದ್ರವ್ಯವ್ಯಯವನ್ನೂ ಜಮೀನು ಮೊದಲಾದ ಸಕಲಕರಣೆಗಳನ್ನೂ ಸಾಭಿಮಾನದಿಂದ ಕೊಟ್ಟಿರುತ್ತಾರೆ

ಇಲ್ಲಿನ ವ್ಯವಸಾಯಕ್ರಮವನ್ನು ಹೋಗಿ ನೋಡಿದ್ದರಲ್ಲಿ ತಿಳಿಯಬಂದದ್ದೇನೆಂದರೆ—ಈ ಸ್ಕೂಲಿನ ವ್ಯವಸಾಯಶಾಸ್ತ್ರಜ್ಞರೊಬ್ಬರು ಸುಮಾರು ೨೦—೩೦ ರೂಪಾಯಿ ಖರ್ಚು ಮಾಡಿ, ಯಾವುದೋ ದೂರದೇಶದಿಂದ ಕಬ್ಬಿನ ಬೀಜವನ್ನು ತರಿಸಿದರಂತೆ. ಅದು ಇಲ್ಲಿಗೆ ತಲುಪುವದರೊಳಗಾಗಿ ಸುಮಾರು ೧೫—೨೦ ದಿನಗಳು ಕಳೆದು ಹೋಗಿ ಒಣಗುವ ಸ್ಥಿತಿಗೆ ಬಂದಕಾರಣ ನೀರಿನಲ್ಲಿ ನೆನೆಹಾಕಿ ಆನಂತರ ನೆಟ್ಟರಂತೆ. ಆ ಪೈಕಿ ಎಲ್ಲೋ ನಾಲ್ಕಾರು ಬೀಜಗಳು ಮೊಳೆತು "ರಾಮನ ತಮ್ಮನ ಹೆಸರು" ಹೇಳುತ್ತಿದ್ದ ಹಾಗೂ, ಇದರಿಂದ ಉಪಯೋಗವಿಲ್ಲವೆಂತ ಅದನ್ನೂ ಮೂಲೋತ್ಪಾಟನ ಮಾಡಿದಂತೆಯೂ ತಿಳಿದುಬರುತ್ತದೆ

ಎರಡನೇ ಫಸಲಾಗಿ ನೆಲಗಡಲೆ ವ್ಯವಸಾಯವನ್ನು ತೋರಿಸಲು ಸುಮಾರು ಒಂದುಗುಂಟವನ್ನು ಕೆಡಿದು ಬೀಜಬಿತ್ತಿ ಮೊಳೆತು ಬಂದ ಆದ ಮೇಲೆ ನೀರು ಕಟ್ಟದರಂತೆ ಇದರಿಂದ ಮುಂದಕ್ಕೆ ಬೀಜಬಿತ್ತುವ ಕ್ರಮವನ್ನು ತಪ್ಪಿಸಿಕೊಂಡ ಹಾಗಾಯಿತು "ಏನು ವ್ಯವಸಾಯ!" ಮೂಢರಾದ ರೈತರು ಹೋಗಿ ತಿಳಿದುಕೊಂಡು ಇದರಂತೆ ವ್ಯವ

ಹಾ, ದೇಶದ ಸ್ವತ್ವವನ್ನು ಉಪಯೋಗಿಸಬಾರದೇ! ಅಯ್ಯೋ, ಬಡವೈತರ (ಹಣವು) ಈ ರೀತಿ ವಿನಿಯೋಗವಾಗಿ ರೈತರಿಗೆ ಕ್ಲೇಶವನ್ನುಂಟುಮಾಡಿದ ಹಾಗಾಯಿತು? ಸುಮಾರು ... ಖರ್ಚು ಮಾಡಿ ಈ ಪಾಠಶಾಲೆಯ ಉಪಯೋಗಕ್ಕಾಗಿ ... ಇರುವ ೩-೪ ಇಂಗ್ಲಿಷ್ ನೇಗಿಲುಗಳು ಎರಡು ಗೋಡೆ ... ತಪಸ್ಸುಮಾಡುತ್ತಾ, ಗೆಜ್ಜಲುಹುಳುಗಳಿಗೆ ಉಪದೇಶವನ್ನು ... ರುವಂತೆ ಕಾಣಬರುತ್ತೆ. ಅಯ್ಯೋ, ಪಾಪ! ನಾತತಕ್ಕ ... ಬಡವೈತರಿಂದ ವಸೂಲಾದ ದ್ರವ್ಯವು ಎಷ್ಟರಮಟ್ಟಿಗೆ ... ಇದನೆಂಬುದನ್ನು ವಾಚಕರೇ ಊಹಿಸಿಕೊಳ್ಳಬೇಕಾಗಿದೆ ...

ಪ್ರತ್ಯಕ್ಷದರ್ಶಿ.

ಹಿಂದುಸ್ಥಾನದ ಜಮಾ ಖರ್ಚು.

... ೨೧ ನೆ ತಾರೀಖು ಬುಧವಾರ ಕಲ್ಕತ್ತಾ ಪಟ್ಟಣದಲ್ಲಿ ... ಲಾರ್ಡ್ ಮಿಂಟೋ ರವರು ಮಂತ್ರಾಲೋಚನಾ ಮಂದಿರ ... ನ್ಸಿಲ್ ಸಭೆಯನ್ನು ನಡಿಸಿದರು. ಹಿಂದುಸ್ಥಾನದ ಖಜಾನಾ ... ದ ಮಿ॥ ಬೇಕರ್ ಯವರು ಕಳೆದ ವರುಷದ, ಚಾಲ್ತಿ ... ಮತ್ತು ಮುಂದಿನ ವರುಷದ ವರಮಾನ ಖರ್ಚುಗಳನ್ನು ... ಸಭೆಗೆ ತಿಳಿಸಿರುತ್ತಾರೆ. ಪ್ರಾರಂಭದಲ್ಲಿ ಅವರು ಹೇಳಿದ್ದೇ ...

... ಸ್ಥಾನದ ಕೆಲವು ಮುಖ್ಯ ವಿಭಾಗಗಳ ಕಾಲಸ್ಥಿತಿಯು ... ಲ್ಲಿ ಹೋದ ವರುಷಕ್ಕಿಂತಲೂ ಸುಭಿಕ್ಷವಾಗಿರಲಿಲ್ಲ. ಸಂ ... ಅಧಿಪತ್ಯಗಳು, ಪಂಜಾಬು, ಬೊಂಬಾಯಿಗೆ ಸೇರಿದ ದಕ್ಷಿಣ ... ಗಳು, ರಾಜಪುಟಾನಾ ಈ ಪ್ರಾಂತ್ಯಗಳಲ್ಲಿ ಎಂದಿನಷ್ಟು ... ಮದರಾಸ್ ಅಧಿಪತ್ಯದಲ್ಲಿ ... ಆದರೆ ... ಉತ್ತರ ದೇಶದಲ್ಲಿ ... (ಗಿ ರೈತಪ್ರಜೆಗಳಿಗೆ ತುಂಬಾ ಕಷ್ಟ ... ಉಂಟುಮಾಡಿದವು. ಇದರ ದೆಸೆಯಿಂದ ದಕ್ಷಿಣ ಬ್ರಿಟಿಷ್ ... ಗಳಲ್ಲೂ ರಾಜಪುಟಾನದ ಸೇರಿದ ಹಲವು ಪ್ರದೇಶ ... ಪ್ರಾಪ್ತವಾಗಿರುತ್ತವೆ. ಕಳೆದ ಫೆಬ್ರವರಿ ... ೩,೦೦೦ ಜನಗಳಿಗಿಂತಲೂ ಹೆಚ್ಚಾಗಿ ಸರ್ಕಾರದವರ ... ಕಾರ್ಯಗಳಲ್ಲಿ ಸೇರಿ ಜೀವನ ಮಾಡುತ್ತಿದ್ದರು. ಅದಲ್ಲದೆ ... ಕಷ್ಟ ದೆಸೆ ಪ್ರಾಪ್ತವಾದದ್ದರಿಂದ ಸರ್ಕಾರದವರು ಬಹಳ ... ಕಂದಾಯ ಕಿಸ್ತುಗಳನ್ನು ರಿಮಿಷನ್ ಮಾಡಬೇಕಾಯಿತು. ಬಹಳ ... ಗಳನ್ನು ಮುಂದೆ ಸುಭಿಕ್ಷ ಕಾಲದಲ್ಲಿ ವಸೂಲ್ಮಾಡುವಂತೆ ... ಬಿಡಬೇಕಾಯಿತು. ಇದಲ್ಲದೆ ಕ್ಷಾಮನಿವಾರಣೆಗಾಗಿ ... ಖರ್ಚು ಮಾಡಬೇಕಾಯಿತು.

... ಕಡೆಗಳಲ್ಲೆಲ್ಲಾ ಎಂದಿನಂತೆ ಸರಿಯಾದ ಮಳೆ ಬೆಳೆಗಳು ... ಸ್ಥಿತಿಯು ತೃಪ್ತಿಕರವಾಗಿತ್ತು. ಮುಂದೆ ಅಂದರೆ ೧೯೦೬-೦೭ ... ಕ್ಷಾಮನಿವಾರಣೆಯೇ ಮೊದಲಾದ ವಿಶೇಷ ಖರ್ಚುಗಳಿಗೆ ... ಖರ್ಚು ಮಾಡಿದರೂ ಖರ್ಚು ಕಳೆದು ೧೬,೮೭,೯೦೦ ... ಉತ್ಪತ್ತಿಯಲ್ಲಿ ಉಳಿಯುವುದೆಂದು ಗೊತ್ತು ಮಾಡಿದ್ದಾರೆ ... ಇಷ್ಟು ಹಣ ಉಳಿಸಿಕೊಳ್ಳುವುದು ತರವಲ್ಲವೆಂದು ಗವರ್ನ ... ರು ಕೆಲವು ಕಂದಾಯ ಕಿಸ್ತುಗಳನ್ನು ಕಡಿಮೆ ಮಾಡಿ, ... ಯನ್ನು ಇಳಿಸಬೇಕೆಂದು ತೀರ್ಮಾನಮಾಡಿ, ಇನ್ನು ... ವರುಷವೂ ೫,೭೬,೩೦೦ ಪೌಂಡು ಕಂದಾಯಗಳನ್ನು ... ಮಾಡಿರುತ್ತಾರೆ.

ಮೂರು ಸಾಲಿನ ಒಟ್ಟು ಜಮಾ ಖರ್ಚಿನ ಲೆಕ್ಕಗಳು.

(೧ ಪೌಂಡಿಗೆ ೧೫ ರೂಪಾಯಿ.)

		ಪೌಂಡು.
... ರಲ್ಲಿ ಉತ್ಪತ್ತಿ (ನಿಶ್ಚಿತ)	..	೮,೪೭,೧೨,೯೩೦
ಖರ್ಚು	.. ..	೮,೧೩,೫೬,೯೦೫
	ಶಿಲ್ಕು	೩೩,೫೬,೦೬೬
... ರಲ್ಲಿ ಉತ್ಪತ್ತಿ (ಶೋಧನೆಯು)	.	೮,೪೮,೨೯,೫೦೦
ಖರ್ಚು	,,	೮,೩೦,೬೩,೮೦೦
	ಶಿಲ್ಕು ..	೧೭,೬೫,೭೦೦
... ರಲ್ಲಿ ಉತ್ಪತ್ತಿ (ಅಂದಾಜು)	..	೮,೬೩,೯೫,೧೦೦
ಖರ್ಚು	,, ..	೮,೫೬,೨೭,೦೦೦
	ಶಿಲ್ಕು ..	೮,೬೮,೧೦೦

... ವರುಷ ಅಂದರೆ ೧೯೦೫-೦೬ ನೆ ಸಾಲಿನ ಪ್ರಾರಂಭದಲ್ಲಿ ... ಕಳೆದು ೯,೦೩,೮೦೦ ಪೌಂಡು ಶಿಲ್ಕು ಉಳಿಯುತ್ತೆಂದು ಅಂ ... ದ್ದರು. ಈಗಿನ ಜಮಾಖರ್ಚಿನಿಂದ ೧೭,೬೫,೭೦೦ ಪೌಂ ... ಉಳಿಯುತ್ತೆಂದು ಗೊತ್ತಾಗಿದೆ. ಜಮಾ ಬಾಬುಗಳಲ್ಲಿ ಉ ... ಯಾಗಿರತಕ್ಕ ಬಾಬುಗಳ್ಯಾವವೆಂದರೆ—ಜಮೀನ್ ಕಂ ... ೪೭,೦೦೦ ಪೌಂಡು, ಸುಂಕಗಳು ೩೯,೦೦೦ ಪೌಂಡು; ... ೧,೦೮,೦೦೦ ಪೌಂಡು.

... ಯಲ್ಲಿ ಅಂದಾಜಿಗಿಂತಲೂ ಜಾಸ್ತಿ ಕಂಡುಬಂದಿರುವ ... ವವೆಂದರೆ—ಉಪ್ಪು ೭೬,೫೦೦ ಪೌಂಡು, ... ಪೌಂಡು; ಸ್ಟಾಂಪುಗಳು ೬೦,೪೦೦ ಪೌಂಡು, ... ಪೌಂಡು, ಪೋಸ್ಟ್ ಆಫೀಸ್ ೩೧,೭೦೦ ಪೌಂಡು ... ೨೦,೪೦೦ ಪೌಂಡು; ರೈಲ್ವೆ ರವಿನ್ಯೂ ಲೆಕ್ಕ; ... ಪೌಂಡು, ಈ ಮುಂತಾದ ಬಾಬುಗಳು.

ಉಪ್ಪಿನ ಸುಂಕ ಕಡಿಮೆಯಾದದ್ದು.

... ಫೆಬ್ರವರಿ ಆಖೈರ್ ವರೆಗೆ ಹಿಂದಿನ ಸಾಲಿನಲ್ಲಿ ಖರ್ಚಾದ ... ೧೫,೩೮,೦೦೦ ಮಣಗಳ ಉಪ್ಪು ಹೆಚ್ಚಾಗಿ ಖರ್ಚಾಗಿ ... ಮಾರ್ಚ್ ಆಖೈರಿನಲ್ಲಿ ೧೬ ಲಕ್ಷ ಮಣಗಳು ಖರ್ಚಾಗ ಬಹುದೆಂದು ಹೇಳಬಹುದಾಗಿದೆ. ಮೊದಲನೆ ವರುಷ ಮಣಕ್ಕೆ ಎಂಟಾಣೆ ಸುಂಕವನ್ನು ಮಾಫಿ ಮಾಡಲಾಯಿತು. ಮಾರನೇ ವರುಷ ಒಂದು ರೂಪಾಯಿ ಮಾಫಿ ಆಯಿತು. ಇದರಿಂದ ಉಪ್ಪಿನ ಬಿಕರಿಯು ಮೊದಲಿಗಿಂತಲೂ ಅಪಾರವಾಗಿ ಹೆಚ್ಚುತ್ತಲಿದೆ. ಅತ್ಯಂತ ದರಿದ್ರರಾದವರೂ ಕೂಡ ಉಪ್ಪನ್ನು ಹೆಚ್ಚಾಗಿ ಕೊಂಡು ಉಪಯೋಗಿಸುವರು. ಹಳ್ಳಿಯವರು ಇತರ ಪದಾರ್ಥಗಳನ್ನು ವರ್ತಕರಲ್ಲಿ ಕೊಂಡುಕೊಳ್ಳುವಾಗ್ಗೆ ಕೊನೆಗೆ ಉಪ್ಪು ಕೊಡಿ ಎಂದು ಕೇಳಿ ಪಡೆಯುವ ಪದ್ಧತಿಯುಂಟು. ಈ ರೀತಿ ಕೊಡುವ ಕೊಸರು ಕೂಡ ಮೊದಲಿಗಿಂತ ಎರಡು ಭಾಗ ಹೆಚ್ಚಾಗಿದೆ. ಮೊದಲು ಮನೆಯ ಒಂದಾಣೆಗೆ ಕೊಂಡುಕೊಂಡ ಉಪ್ಪು ೩-೪ ದಿನಗಳಿಗೆ ಸಾಕಾಗುತ್ತಿದ್ದರೆ ಈಗ ಅದೇ ಒಂದಾಣೆಯ ಉಪ್ಪನ್ನು ೫-೬ ದಿನಗಳ ವರೆಗೆ ಉಪಯೋಗಿಸಬಹುದಾಗಿದೆ. ಗೋಕಾಲುಗಳಿಗೆ ಈಗ ಹೆಚ್ಚಾಗಿ ಉಪ್ಪು ಬೆರಸಿ ಆಹಾರಕೊಡುವರು. ಕೆಲವು ಪ್ರಾಂತ್ಯಗಳಲ್ಲಿ ಪ್ರಜೆಗಳು ಶೇಕಡಾ ೧೦ ರಷ್ಟು ಜಾಸ್ತಿ ಉಪ್ಪನ್ನು ಉಪಯೋಗಿಸುತ್ತಾರೆ. ಇದರಿಂದ ಪ್ರಜೆಗಳಿಗೆ ಒಂದು ದಿನದ ಕೂಲಿಯಷ್ಟು ದುಡ್ಡು ಮಿಗತೆ ಆಗಿದೆ ಎಂದು ಧಾರಾಳವಾಗಿ ಹೇಳಬಹುದು.

೧೯೦೬-೦೭ ನೆ ಸಾಲಿನ ಬಜೆಟ್ಟು.

ಖಜಾನಾ ಛಕ್ಷಿಯವರು ತಿಳಿಸಿರುವ ಮುಂದಿನ ಸಾಲಿನ ಜಮಾ ಖರ್ಚಿನ ಅಂದಾಜು ಪಟ್ಟಿಯನ್ನು ಮೇಲೆ ನಮೂದು ಮಾಡಿರುತ್ತೇವಷ್ಟೆ. ಅದರಂತೆ ಮುಂದಿನ ವರುಷ ಖರ್ಚು ಕಳೆದು ೮,೬೮,೧೦೦ ಪೌಂಡು ಶಿಲ್ಕು ಉಳಿಯುವುದು.

ಚಾಲ್ತಿ ಸಾಲಿಗಿಂತಲೂ ಮುಂದಿನ ಸಾಲಿನಲ್ಲಿ ಜಮೀನ್ ಕಂದಾಯದ ಉತ್ಪತ್ತಿಯು ಹೆಚ್ಚುವರಿಯಾಗುವುದಕ್ಕೆ ಸಂಶಯವಿಲ್ಲ. ಸಂಯುಕ್ತ ಅಧಿಪತ್ಯಗಳಲ್ಲಿ ರಾಗಿ, ಪೈರುಪಚ್ಚೆಗಳು ಸುಭಿಕ್ಷವನ್ನು ಸೂಚಿಸುತ್ತವೆ. ಅಲ್ಲಿ ರಿಮಿಷನ್ ಮಾಡುವ ಮತ್ತು ಸಸ್ಪೆನ್ಸದಲ್ಲಿ ನಷ್ಟವಾಗುವ ಕಂದಾಯ ೩೭,೩೦,೦೦೦ ರೂಪಾಯಿ ಕಡಿಮೆಯಾದಾಗ್ಯೂ ಈ ಸಾಲಿನಲ್ಲಿ ವಸೂಲಾಗಿರುವದಕ್ಕಿಂತಲೂ ೩೬,೯೯,೦೦೦ ರೂಪಾಯಿ ಜಾಸ್ತಿ ಹುಟ್ಟುವಳಿ ಆಗುವುದು. ಬೊಂಬಾಯಿ ಅಧಿಪತ್ಯದಲ್ಲಿ ಸದ್ಯ ಕಾಲಸ್ಥಿತಿಯು ತೃಪ್ತಿಕರವಾಗಿಲ್ಲದಿದ್ದರೂ ಮುಂದಿನ ವರುಷ ೨೯,೨೦,೦೦೦ ರೂಪಾಯಿ ಜಾಸ್ತಿ ಹುಟ್ಟುವಳಿ ಆಗುತ್ತದೆ. ಈ ಪ್ರಾಂತ್ಯ ೪೯,೮೮,೦೦೦ ರೂಪಾಯಿ ಮಟ್ಟಿಗೆ ಕಂದಾಯ ಕಿಸ್ತುಗಳನ್ನು ರಿಮಿಷನ್ ಮಾಡಲಾಗುವುದು. ಬಿಹಾರ್, ಮದರಾಸ್, ಪಂಜಾಬ್, ಈ ಅಧಿಪತ್ಯಗಳಲ್ಲಿ ಹೊಸ ಜಮೀನುಗಳು ವ್ಯವಸಾಯಕ್ಕೆ ಬರೋಣವಿಂದ ಉತ್ಪತ್ತಿಯು ಹೆಚ್ಚುವುದರಲ್ಲಿ ಸಂಶಯವಿಲ್ಲ. ಅಫೀಮು ಬಿಕರಿ ದರವು ಇಳಿದಿರುವ ಕಾರಣ ಚಾಲ್ತಿ ವರುಷಕ್ಕಿಂತಲೂ ಮುಂದಿನ ವರುಷದ ಉತ್ಪತ್ತಿಯು ೧೧೧॥ ಲಕ್ಷ ರೂಪಾಯಿ ಕಡಿಮೆಯಾಗುವುದು. ಪ್ರಜೆಗಳು ಉಪ್ಪನ್ನು ಹೆಚ್ಚು ಹೆಚ್ಚಾಗಿ ಉಪಯೋಗಿಸುತ್ತಾ ಬಂದಿರೋಣವರಿಂದ ಮುಂದಿನ ವರುಷ ಇನ್ನೂ ೧೨ ಲಕ್ಷ ಮಣಗಳು ಜಾಸ್ತಿ ಬಿಕರಿ ಆಗಬಹುದೆಂತಲೂ, ಈ ಬಾಬಿನಲ್ಲಿ ೬೩,೩೦೦ ಪೌಂಡು ಉತ್ಪತ್ತಿ ಹೆಚ್ಚಬಹುದೆಂತಲೂ ಅಂದಾಜು ಕಟ್ಟಿದೆ. ಸುಂಕಗಳ ಬಾಬಿನಲ್ಲಿ ೧,೩೯,೩೦೦ ಪೌಂಡು ಉತ್ಪತ್ತಿ ಹೆಚ್ಚುವುದಕ್ಕೆ ಅವಕಾಶವುಳ್ಳದೆಂದು ಕಾಣುವುದು.

ರೈಲ್ವೆಗಳ ಉತ್ಪತ್ತಿ.

೧೯೦೪-೦೫ ನೆ ಸಾಲಿನಲ್ಲಿ ಹಿಂದುಸ್ಥಾನದ ರೈಲ್ವೆ ಬಾಬಿನಲ್ಲಿ ಉತ್ಪತ್ತಿಯಾದಷ್ಟು ಹಿಂದೆ ಯಾವ ವರುಷದಲ್ಲೂ ಆಗಲಿಲ್ಲ. ಚಾಲ್ತಿ ಸಾಲಿನಲ್ಲಿ ಅಷ್ಟು ಹೆಚ್ಚು ಹುಟ್ಟುವಳಿ ಆಗುವುದಿಲ್ಲವೆಂದು ಅಂದಾಜನ್ನು ಕಮ್ಮಿ ಮಾಡಿದ್ದೆವು. ಆದರೆ ಈ ಹುಟ್ಟುವಳಿಯು ನಮ್ಮ ಅಂದಾಜಿಗಿಂತಲೂ ಹೆಚ್ಚಾಗಿರುತ್ತದೆ. ಇನ್ನು ಮುಂದೆಯೂ ಈ ಬಾಬಿನ ಉತ್ಪತ್ತಿ ಹೆಚ್ಚುತ್ತಾ ಬರುವುದಲ್ಲದೆ ಕಡಿಮೆಯಾಗುವುದಕ್ಕೆ ಕಾರಣವೇನೂ ಕಂಡುಬರುವುದಿಲ್ಲ. ಕಳೆದ ವರುಷದ, ಚಾಲ್ತಿ ಸಾಲಿನ, ಮತ್ತು ಮುಂದಿನ ವರುಷದ ರೈಲ್ವೆ ಆದಾಯವ್ಯಯಗಳನ್ನು ಕೆಳಗಿನ ಪಟ್ಟಿಯಿಂದ ತಿಳಿಯಬಹುದು.—

			ಪೌಂಡು
೧೯೦೪-೦೫ ರಲ್ಲಿ ಉತ್ಪತ್ತಿ (ನಿಶ್ಚಿತ)		..	೨,೪೦,೨೨,೪೬೫
,,	ಖರ್ಚು ,,	..	೨,೧೯,೧೩,೦೨೩
		ಶಿಲ್ಕು	೨೧,೦೫ ೪೩೮
೧೯೦೫-೦೬ ರಲ್ಲಿ ಉತ್ಪತ್ತಿ (ಶೋಧನೆಯು)			೨,೪೬,೫೮,೨೦೦
,,	ಖರ್ಚು ,,		೨,೨೬,೩೨,೭೦೦
		ಶಿಲ್ಕು	೨೦,೨೫,೫೦೦
೧೯೦೬-೦೭ ರಲ್ಲಿ ಉತ್ಪತ್ತಿ (ಅಂದಾಜು)		..	೨,೬೧,೪೪,೬೦೦
,,	ಖರ್ಚು ,,	..	೨,೩೯,೨೫,೩೦೦
		ಶಿಲ್ಕು	೨೨,೨೯,೩೦೦

ಕ್ಷಾಮನಿವಾರಣೆಗೆ ಗ್ರಾಂಟು.

ಕ್ಷಾಮನಿವಾರಣೆಗಾಗಿ ಗವರ್ನಮೆಂಟಿನವರು ೮೦,೮೬,೦೦೦ ರೂಪಾಯನ್ನು ಮುಂದಿನ ವರುಷ ವಿನಿಯೋಗಿಸುವವರಾಗಿದ್ದಾರೆ. ಈ ಪೈಕಿ ಬೊಂಬಾಯಿಗೆ ೪೦ ಲಕ್ಷ, ಸಂಯುಕ್ತ ಅಧಿಪತ್ಯಗಳಿಗೆ ೨೦ ಲಕ್ಷ, ರಾಜಪುಟಾನಾವಿಗೆ ೧೩॥ ಲಕ್ಷ, ರಾಯಭಾರಿಗಳಿಗೆ ... ಇದಲ್ಲದೆ ಮದರಾಸಿಗೂ ಪಂಜಾಬಿಗೂ ಅಲ್ಪ ಸ್ವಲ್ಪ ಹಣವನ್ನು ಕೊಡುತ್ತಾರೆ.

ಕಂದಾಯ ಕಿಸ್ತುಗಳನ್ನು ಈ ವರುಷ ಇದ್ದಂತೆಯೇ ಮುಂದಿನ ವರುಷವೂ ನಡಿಸಿಕೊಂಡು ಬರುವರು. ಆದರೆ ಪೋಲೀಸು, ವಿದ್ಯಾಭ್ಯಾಸ, ವ್ಯವಸಾಯಾಭಿವೃದ್ಧಿ, ಈ ಬಾಬುಗಳಿಗೆ ಮುಂದಿನ ವರುಷ ವಿಶೇಷ ದ್ರವ್ಯವನ್ನು ಕೊಡುತ್ತಾರೆ. ಪೋಲೀಸ್ ಶಿಕ್ಷೆಗೆ ಚಾಲ್ತಿ ವರುಷ ೫೦ ಲಕ್ಷ ರೂಪಾಯಿ ಸ್ಯಾಂಕ್ಷನ್ ಮಾಡಿದ್ದರು; ಮುಂದಿನ ವರುಷ ಮತ್ತೆ ೨೫ ಲಕ್ಷ ರೂಪಾಯಿ ಕೊಡುತ್ತಾರೆ. ವ್ಯವಸಾಯಾಭಿವೃದ್ಧಿಗೆ ಚಾಲ್ತಿ ಸಾಲಿನಲ್ಲಿ ೨೦ ಲಕ್ಷ ರೂಪಾಯಿ ಕೊಟ್ಟರು. ಮುಂದಿನ ವರುಷ ಈ ಬಾಬಿಗೆ ೨೪ ಲಕ್ಷ ರೂಪಾಯಿ ಖರ್ಚುಮಾಡುತ್ತಾರೆ. ಶಾಲೆಗಳ ವಿದ್ಯಾ ಪ್ರೋತ್ಸಾಹಕ್ಕೆ ಮುಂದಿನ ವರುಷ ೨॥ ಲಕ್ಷ ರೂಪಾಯಿ ಸ್ಯಾಂಕ್ಷನ್ ಆಗಿದೆ. ಈ ಹಣವನ್ನು ಬೇರೆ ಬೇರೆ ಅಧಿಪತ್ಯಗಳಿಗೆ ವಿನಿಯೋಗಿಸುವದು ಹ್ಯಾಗೆಂದರೆ—

ಬೊಂಬಾಯಿ ಅಧಿಪತ್ಯಕ್ಕೆ	..	ರೂಪಾಯಿ.	೧,೬೩,೦೦೦
ಬಂಗಾಳಾ	,, ..	,,	೩೫,೦೦೦
ಸಂಯುಕ್ತ	,, ..	,,	೨೦,೦೦೦
ಮಧ್ಯಪ್ರಾಂತ್ಯಗಳು	,, ..	,,	೨೨,೦೦೦

ಕಂದಾಯಗಳ ರಿಯಾಯಿತಿ

ಮುಂದಿನ ಸಾಲಿನ ಉತ್ಪತ್ತಿಯಲ್ಲಿ ಶಿಲ್ಕು ತುಂಬಾ ಉಳಿಯಬಹುದೆಂದು ಕಂಡುಬಂದದ್ದರಿಂದ ಅದರಲ್ಲಿ ಕೆಲವು ಭಾಗವನ್ನು ಕೆಲವು ಜುಜಿವಿ ಕಂದಾಯಗಳ ಮಜಾಮಾಡೋಣವರ ಮೂಲಕ ಪ್ರಜೆಗಳಿಗೆ ಬಿಟ್ಟುಕೊಡಬೇಕೆಂದು ತೀರ್ಮಾನಮಾಡಿದಾರೆ. ಇದು ರೈತಪ್ರಜೆಗಳಿಗೆ ಸಹಾಯವಾಗುವುದು. ಕಳೆದ ವರುಷ ಉತ್ತರದೇಶದಲ್ಲೂ ಮಧ್ಯಪ್ರಾಂತ್ಯಗಳಲ್ಲೂ ಕ್ಷಾಮನಿವಾರಣಾರ್ಥವಾದ ಸಣ್ಣ ತೆರಿಗೆಗಳನ್ನು ಮಜಾಮಾಡಲಾಯಿತು. ಮುಂದಿನ ವರುಷ ಕೆಲವು ಚಿಲ್ಲರೆ ಕಂದಾಯ ಮತ್ತು ವರಿಗಳನ್ನು ಮಜಾಮಾಡಬೇಕೆಂದು ಗವರ್ನಮೆಂಟಿನವರು ನಿಶ್ಚಯಿಸಿಕೊಂಡಿದಾರೆ. ಈ ಸಣ್ಣ ವರಿಗಳು ಗ್ರಾಮಾಂತರಗಳಲ್ಲಿ ಪಟ್ವಾರಿ ತೆರಿಗೆ, ಗ್ರಾಮನೌಕರಿ ತೆರಿಗೆ, ಮೊದಲಾದ ಹೆಸರುಗಳನ್ನು ಪಡೆದು ರೈತಪ್ರಜೆಗಳಿಗೆ ಜಾಗುಸ್ಸೆಯನ್ನುಂಟುಮಾಡಿರುತ್ತವೆ. ಈ ತೆರಿಗೆಗಳು ಮದರಾಸು, ಮಧ್ಯಪ್ರಾಂತ್ಯಗಳು, ಸಂಯುಕ್ತ ಅಧಿಪತ್ಯಗಳು, ಪಂಜಾಬು, ವಾಯುವ್ಯ ಸರಹದ್ದು ಪ್ರಾಂತ್ಯ, ಅಜ್ಮೀರ, ಕೊಡಗು, ಈ ಮೊದಲಾದ ಪ್ರದೇಶಗಳಲ್ಲಿ ಜಾರಿಯಲ್ಲಿರುತ್ತವೆ. ಗವರ್ನಮೆಂಟಿನವರು ಈ ವರಿಗಳನ್ನು ಮುಂದಿನ ಸಾಲಿನಿಂದ ಮಜಾಮಾಡಿ, ಆ ಚಿಲ್ಲರೆ ... ಖರ್ಚನ್ನೆಲ್ಲಾ ತಾವೇ ವಹಿಸಿಕೊಳ್ಳುವದಾಗಿ ಮಾಡ್ಡನ ಮಾಡಿದಾರೆ. ಇದಲ್ಲದೆ ಲೋಕಲ್ ಫಂಡು ಮತ್ತು ಡಿಸ್ಟ್ರಿಕ್ಟ್ ಫಂಡ್ ಬೋರ್ಡುಗಳ ಉತ್ಪತ್ತಿಯಲ್ಲಿ ಕೆಲವು ಭಾಗಗಳನ್ನು ಗವರ್ನಮೆಂಟಿನವರು ತೆಗೆದುಕೊಳ್ಳುತ್ತಿದ್ದರು. ಇದನ್ನು ಇನ್ನು ಮುಂದೆ ತೆಗೆದುಕೊಳ್ಳದೆ ಆಯಾ ಬೋರ್ಡುಗಳವರು ವಸೂಲ್ಮಾಡಿದ ಒಟ್ಟು ... ನ್ನೆಲ್ಲಾ ಸಂಪೂರ್ಣವಾಗಿ ಆಯಾ ಬೋರ್ಡುಗಳಿಗೇ ವಹಿಸಿಕೊಡು... ಬಂಗಾಳಾದಲ್ಲೂ ಜಮೀನ್ದಾರರಿಂದ ವಸೂಲಾಗುತ್ತಿದ್ದ ಕೆಲವು ವರಿಗಳನ್ನು ಮಜಾ ಮಾಡುವರು. ಒಟ್ಟಾಗಿ ಈ ತೆರಿಗೆಗಳಿಂದ ವರುಷ ೧ ಕ್ಕೆ ೮೨,೧೯,೦೦೦ ರೂಪಾಯಿ ಹುಟ್ಟುವಳಿ ಆಗುತ್ತಿದ್ದವು. ಇಷ್ಟನ್ನು ಸರ್ಕಾರದವರು ಪ್ರಜೆಗಳಿಗೆ ಬಿಟ್ಟುಕೊಟ್ಟಿದಾರೆ. ಇದಲ್ಲದೆ ಲೋಕಲ್ ಮತ್ತು ಡಿಸ್ಟ್ರಿಕ್ಟ್ ಫಂಡ್ ಬೋರ್ಡುಗಳಿಗೆ ಈ ರಿಯಾಯಿತಿಯಿಂದ ವರುಷಕ್ಕೆ ೫೧,೨೭,೦೦೦ ರೂಪಾಯಿ ಸರ್ಕಾರದವರು ವಹಿಸಿ ಕೊಡುವಂತಾಯಿತು.

ರೈಲ್ವೆ ಮತ್ತು ನೀರಾವರಿ ಕಾಮಗಾರಿ.

ಈಚೆಗೆ ಇಂಡಿಯಾ ಗವರ್ನಮೆಂಟಿನವರು ಹಿಂದುಸ್ಥಾನದಲ್ಲಿ ರೈಲ್ವೆ ಮತ್ತು ನೀರಾವರಿ ಕಾಮಗಾರಿಗಳಿಗೆ ವರುಷೇ ವರುಷ ಹೆಚ್ಚು ಹೆಚ್ಚಾಗಿ ಹಣವನ್ನು ಸ್ಯಾಂಕ್ಷನ್ಮಾಡುತ್ತಾ ಬಂದಿದಾರೆ. ಈ ಬಾಬುಗಳಿಗೆ ಸ್ಯಾಂಕ್ಷನ್ಮಾಡಿರುವ ಹಣ ಎಷ್ಟೆಂದರೆ—

ರೈಲ್ವೆ ಬಾಬಿನಲ್ಲಿ	ರೂಪಾಯಿ
೧೯೦೪—೦೫ ರಲ್ಲಿ ಕೊಟ್ಟದ್ದು (ನಿಶ್ಚಿತ)	೧೯,೬೬,೩೧,೧೩೨
೧೯೦೫—೦೬ ರಲ್ಲಿ ,, (ಶೋಧನೆಯು)	೨೩,೫೦,೮೯,೦೦೦
೧೯೦೬—೦೭ ರಲ್ಲಿ ಕೊಡುವುದು (ಅಂದಾಜು)	೧೯ ೬೦,೯೨,೦೦೦

ನೀರಾವರಿ ಕಾಮಗಾರಿಗಳಿಗೆ.

೧೯೦೪—೦೫ ರಲ್ಲಿ ಕೊಟ್ಟದ್ದು (ನಿಶ್ಚಿತ)	೭೪,೦೬,೫೮೦
೧೯೦೫—೦೬ ರಲ್ಲಿ ,, (ಶೋಧನೆಯು)	೭೧,೦೭,೦೦೦
೧೯೦೬—೦೭ ರಲ್ಲಿ ಕೊಡುವುದು (ಅಂದಾಜು)	೧,೨೫,೦೦,೦೦೦

ಪ್ರಕಟನೆಗಳು.

ನೀವು ವಿಲಾಯತಿಯಿಂದ ಯಾವ ಸಾಮಾನುಗಳನ್ನಾದರೂ ತರಿಸಿಕೊಳ್ಳಬೇಕಾಗಿದ್ದರೆ 19-11

ಪ್ರೈಡ್ ಮತ್ತು ಕ್ಲಾರ್ಕ್ ಲೆಂಡ್,

೨೯—೩೫, ಸಿಟಿ ರೋಡ್, ಲಂಡನ್, ಇ. ಸಿ.

ಎಂಬೀ ವಿಳಾಸಕ್ಕೆ ಹಣ ಕಳಿಸಿ, ಕಾಗದ ಬರಿಯಿರಿ. ಈ ಕಂಪನಿಯವರು ಪೇಟೆಂಟ್ ಔಷಧಿಗಳನ್ನೂ, ಆಕಸ್ತುರಿಗೂ ಮಕ್ಕಳಿಗೂ ಕೊಡುವಂಥಾ, ಟಿಂಟು ಗಳಿಂದಲೇ ತಯಾರಾದಂಥಾ ಆಹಾರಗಳನ್ನೂ, ಇನ್ನೂ ನಾನಾತರ ಪದಾರ್ಥಗಳನ್ನೂ ಇಟ್ಟು ವಿಕರಿಮಾಡುತ್ತಾರೆ. ಅವರು ಬಹು ವಿಶೇಷವಾದ ಗಮನಕೊಟ್ಟು, ಸಾಧ್ಯವಿದ್ದಷ್ಟು ಅಗ್ಗವಾಗಿ, ಬೇಕಾದ ಸಾಮಾನುಗಳನ್ನೇ ಆರಿಸಿ, ಮರಿಟಪಾಲಿಗೇನೇ ಕಳುಹಿಸಿಕೊಡುವರು

ದೇವಾಂಗ ವಂಶಸ್ಥರಿಗೆ ಅಗತ್ಯ ಬೇಕಾದದ್ದು.



16-20

ಸ್ವಲ್ಪ ಪ್ರತಿಗಳಿವೆ. ಜಾಗ್ರತೆಪಟ್ಟರೆ ಸಿಕ್ಕುತ್ತವೆ. ನಂತರ ಖಂಡಿತ ಸಿಕ್ಕುವದಿಲ್ಲ. ಸ್ವಕುಲಗುರುಗಳು ಮುದ್ದುಸಂಗ ಮುನಿಸ್ವಾಮಿಗಳು ರಚಿಸಿದ್ದು ಅರ್ಥಸಹಿತ ದೇವಾಂಗಪುರಾಣ ಪ್ರಕಾಶಿಕೆ ಸಪ್ತಪಕಾರವೂ ಸುಂದರವಾದ ೧೪ ತಸ್ವೀರಿವೆ. ಕ್ರಯ ಸುಲಭವಾಗಿದೆ. ೧೪ ತಸ್ವೀರಿರುವ ಪ್ರತಿ ೧ ಕ್ಕೆ ವಿ ಪಿ ಖರ್ಚು ಸೇರಿ ರೂ. ೨—೮. ತಸ್ವೀರಿಲ್ಲದ ಇದೇ ಪ್ರತಿ ೧ ಕ್ಕೆ ವಿ. ಪಿ. ಖರ್ಚು ಸೇರಿ ರೂ. ೧—೮. ವೇದ ಉಪನಿಷತ್ತುಗಳ ಅರ್ಥಸಹಿತ ಮೂಲಸ್ತಂಭ ೧ ಕ್ಕೆ ರೂ. ೧—೮. ತಕ್ಷಣ ಮನಿಆರ್ಡರಿನೂ ವಿ. ಪಿ. ಲೂ ಕಳುಹಿಸುತ್ತೆ. ವಿಳಾಸ— ಮೈಸೂರು ಜವಳಿ ಅಂಗಡಿ ಬ್ರಹ್ಮಶ್ರೀ ಯಜಮಾನ ಪುಟ್ಟಮಲ್ಲಯ್ಯ-

ಪ್ರಿಂಟಿನ ಯಂತ್ರ ಕ್ರಯಕ್ಕೆ ಬಂದಿದೆ.

41-5

ಡಬ್ಬಲ್ ಡಿಮ್ಮಿ ಸೈಜು. ಬಹು ಜಾಗ್ರತೆಯಾಗಿ ಪ್ರಿಂಟುಮಾಡತಕ್ಕದ್ದು; ಉರಳೆಗಳು, ಫೇಸುಗಳು ಚಕ್ರಗಳು ಎಲ್ಲಾ ಸೇರಿ ಕೊಡಲಾಗುತ್ತೆ. ಇವಕ್ಕೆ ಒಂದೆರಡು ಕಡೆ ಸ್ವಲ್ಪ ರಿಪೇರಿ ಆಗಬೇಕಾಗಿರುವುದು. ಅಗ್ಗವಾಗಿ ಕೊಡುತ್ತೇವೆ. ಯಂತ್ರವನ್ನು ಖುದ್ದಾಗಿ ಬಂದು ನೋಡಲೂ ಬಹುದು. ಈ ವಿಳಾಸಕ್ಕೆ ಬರೆದು ಕೇಳಿ:—

ದಿ ಸೂಪರಿಂಟೆಂಡೆಂಟ್, ವೆಸ್ಲಿಯನ್ ಮಿಷನ್ ಪ್ರೆಸ್,
ಮೈಸೂರು.

೫,೦೦೦ ಪವುಂಡ ವುಲ್ಲನ ದಾರ ಮಾತ್ರ ಇದೆ.

40-6

೧ ಬೇಟೆಯಾಡುವ ವುಲನ ಪವುಂಡ ೧ ಕ್ಕೆ	೧—೧೦—೦
೨ ಪರ್ಸಿ ಸೂಪರ ,, ,, ,,	೧—೧೪—೦
೩ ಸುಪೀರಿಯರ್ ,, ,, ,,	೨—೦—೦
೪ ಸೊವರಿನ್ ,, ,, ,,	೩—೪—೦

ವುಲನ ಟೋಪಿ ಡಜನ ೧ ಕ್ಕೆ ೩—೦—೦ ಒಂದೇ ಪಟ್ಟಾ ೧೦ ಡಜನ ತರಿಸಿಕೊಳ್ಳುವವರಿಗೆ ೬—೧೨—೦.

ಹೊಸ ನಮೂನೆ ದೊಡ್ಡ ಸೈಜು ಪೋಸ್ಟು ಕಾರ್ಡುಗಳು.

೧ ಸಿಂಗಲ್ ಕಲರ್ ೧೦೦ ಕ್ಕೆ ೦-೨-೬. ೧೦೦೦ ೧-೪-೦

೨ ಡಬಲ್ ಕಲರ್ ೧೦೦ ಕ್ಕೆ ೦-೩-೦. ೧೦೦೦ ೧-೧೦-೦

☞ ವಿ. ಪಿ. ಮೂಲಕ ತರಿಸಿಕೊಳ್ಳುವವರು ಮಾತ್ರ ೧೦೦ ಕ್ಕೆ ೨೫ರಂತೆ ಮುಂಚಿತವಾಗಿ ಕಳುಹಿಸದ ಹೊರತು ವಿ. ಪಿ. ಮೂಲಕ ಕಳುಹಿಸಲಾರೆವು.

ಯೆಲ್, ಯು. ಪೊರವಾಲ್ ಕಂಪನಿ, ಬೆಂಗಳೂರು ಸಿಟಿ.

ಹೋಮೋಸಿಯಾ.

ಪಕ್ಷವಾತ ಪರಿಹಾರ

ತಗಲುತ್ತಲೇ ನೋವು ವಾಸಿಯಾಗುತ್ತೆ

ಈ ಔಷಧಿಯು ಮನೆ, ಅರಮನೆ, ಕಾರ್ಖಾನೆ, ಆಸ್ಪತ್ರೆ, ಪೋಲೀಸ್ ಠಾಣಾ, ವಿದ್ಯಾಶಾಲೆ, ಕೋರ್ಟು, ಕಚೇರಿ, ಮುಂತಾದ ಸ್ಥಳಗಳಲ್ಲೆಲ್ಲಾ ಇದ್ದೇ ಇರಬೇಕು. ಇದಕ್ಕೆ ಸಮಾನವಾದ ಔಷಧ ಮತ್ತಾವದೂ ಇಲ್ಲವೆಂಬುವದು ಲೋಕಪ್ರಸಿದ್ಧವಾಗಿದೆ

ಈ ತೈಲವು ತತ್ಕಾಲದಲ್ಲಿ ಜೀವರಾಶಿಗಳಿಗೆ ಮಹತ್ತಾಗಿ ಸಿಕ್ಕತಕ್ಕ ಔಷಧ. ಇದನ್ನು ಉಪಯೋಗಿಸಿದ ದೊಡ್ಡ ಮನುಷ್ಯರು, ಡಾಕ್ಟರುಗಳು, ಮುಂತಾದವರು ಅದರ ಗುಣವನ್ನು ಹೊಗಳಿ ಸರ್ಟಿಫಿಕೇಟುಗಳನ್ನು ಕೊಟ್ಟಿದ್ದಾರೆ. ನೋವು ಕಂಡರೆ ಇದನ್ನು ಹಚ್ಚಿದ ಕೂಡಲೇ ನಾಶಿಯಾಗುವದು.

ಈ ತೈಲವು ಅರೆ ತಲೆನೋವು, ಸೊಂಟನೋವು, ಪಾರ್ಶ್ವವಾಯು, ಮೂಲವ್ಯಾಧಿ, ಉಬ್ಬಸ, ವಾಯುಗಳು, ನರ ಹೊರಳುವದು, ಉಳುಕು, ಕೀಲುವಾಯು, ಗುಳ್ಳೆಗಳು, ಹಲ್ಲುನೋವು, ಮುಖನೋವು, ಬಾವುಗಳು, ಗಡ್ಡೆಗಳು, ರಣಗಳು, ಸುಳುಕಿದ್ದು, ಸೊಳ್ಳೆ ಮತ್ತು ಚೇಳು ಕಚ್ಚಿದ್ದು, ಚಿಬ್ಬಿರುವದು, ಬೆಂಕಿಯಲ್ಲಿ ಸುಟ್ಟುಕೊಂಡದ್ದು, ಕತ್ತಿ ಗಾಯ—ಇವೇ ಮೊದಲಾದ ನಾನಾ ಬಾಧೆಗಳನ್ನು ಹುಟ್ಟಡಗಿಸುತ್ತದೆ. ರಾತ್ರಿ ಹಚ್ಚಿಕೊಂಡು ಮಲಗಿದರೆ ಸೊಳ್ಳೆ ಹತ್ತಿರ ಸೇರುವದಿಲ್ಲ.

ಕ್ರಯ.— ಸಣ್ಣ ಡಬ್ಬಿ ೧ ಕ್ಕೆ ೧ ರೂ., ದೊಡ್ಡದಕ್ಕೆ ರೂ ೨—೮ ಆ., ಒಂದೇ ಸಲ ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ ಬಿಡುತ್ತಾರೆ. ರೂ. ೨—೮ ಆಣೆ ಬಾಟ್ಲು ಡಬ್ಬಿಯಲ್ಲಿ ೧ ರೂ. ಡಬ್ಬಿಯಲ್ಲಿರುವದಕ್ಕಿಂತ ೪ ರಷ್ಟು ಹೆಚ್ಚು ಔಷಧವಿರುತ್ತೆ. ರೂ. ೨—೮ ಆ. ಈ ಡಬ್ಬಿಯನ್ನು ತರಿಸಿಕೊಳ್ಳುವವರಿಗೆ ಟಪ್ಪಾಲ್ ಖರ್ಚು ಮಾಫ ಬಿಡುತ್ತೆ.

ಹೋಮೋಸಿಯಾ ಯುಕಲಿಪ್ಟೋಲೀನ್.

ಈ ತೈಲವು ಹಳೇ ನೋವುಗಳಿಗೆ ಉಪಯೋಗಿಸತಕ್ಕದ್ದು. ಜ್ವರ ಬಂದ ಕಡೆ ಇದನ್ನು ಹಚ್ಚಕೂಡದು. ಇದರಲ್ಲಿ ಹೋಮೋಸಿಯಾದ ಗುಣಗಳು ಬಹು ತೀಕ್ಷ್ಣವಾಗಿ ಇರುತ್ತವೆ. ಅದಕ್ಕಿಂತಲೂ ಇದರಲ್ಲಿ ಇನ್ನೆರಡು ಗುಣಗಳುಳ್ಳ ಹೊಸ ಭಾಗವಿರುತ್ತದೆ. ಇದನ್ನು ಚರ್ಮವು ಬಹು ಬೇಗನೆ ಸೇದಿಕೊಳ್ಳಬಲ್ಲದು. ಡಬ್ಬಿಗಳಲ್ಲಿ ತುಂಬಿ ೮ ಆಣೆಗೂ, ೧ ರೂ. ಗೂ ಬಂದರಂತೆ ಮಾರಿ ಮಾಡಲ್ಪಡುವದು ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫ. ಎಲ್ಲಾ ಡಾಕ್ಟರುಗಳಲ್ಲಿಯೂ ದೊರೆಯುವದು.

ಈ ಔಷಧಗಳ ವಿವರಣೆಯೂ, ಸರ್ಟಿಫಿಕೇಟುಗಳೂ ಉಳ್ಳ ನೋಟೀಸುಗಳನ್ನು ಅಪೇಕ್ಷಿಸಿದರೆ ಕಳುಹಿಸುವೆವು.

ವಿಳಾಸ :—ಹೋಮೋಸಿಯಾ ಕಂಪನಿ ೨೩ ಸೇಂಟು ಜಾರ್ಜ್ ಸ್ಟ್ರೀ. ಮದರಾಸ್.

ಇಗೋ ನೋಡಿ—ಮತ್ತೊಂದು ಹೊಸಪುಸ್ತಕವು—ಬಹು ರಸಿಕವಾಗಿದೆ. ಅರೇಬಿಯನ್ ನೈಟ್ಸ್ ಅಥವಾ ಯವನಯಾಮಿನೀ ವಿನೋದ ಕಥೆಗಳು.

377

ಎಂಬ ಮಹಾಪ್ರಸಿದ್ಧವಾದ ಪುಸ್ತಕವು ತೆಳಗನ್ನಡದಲ್ಲಿ ಈಗತಾನೇ ಪ್ರಕಟಿಸಲ್ಪಟ್ಟಿದೆ. ಡೆಮ್ಮಿ ಅಷ್ಟಪತ್ರ. ನಾನೂರು ಎಪ್ಪತ್ತು ಪುಟಗಳುಳ್ಳದ್ದಾಗಿಯೂ ಆಬಾಲವೃದ್ಧರಿಗೆ ಪ್ರೋತ್ಸಾಹಕರವಾಗಿಯೂ, ಮಹಾ ರಸಿಕವಾಗಿಯೂ ರಚಿತವಾಗಿರುವ ಈ ಪುಸ್ತಕದ ಅಭಿರುಚಿಯನ್ನು ವಾಚಕರು ಸಾನುಭವದಿಂದಲೆ ಗ್ರಹಿಸಿ ತಿಳಿದುಕೊಳ್ಳುವರು. ಭಾಷೆಯು ಬಹು ಸರಳವಾಗಿರುವದು. ಮತ್ತು ಇದನ್ನು ಬರೆಯುವದಕ್ಕೆ ಸುಮಾರು ಎರಡು ವರ್ಷಗಳು ಹಿಡಿದಿವೆ. ಪುಸ್ತಕವನ್ನು ಒಂದಾವರ್ತಿ ಓದಿದಮೇಲೆ ಅದನ್ನು ಪುನಃ ಓದುವಂತೆ ಅದು ಮನಸ್ಸನ್ನು ಆಕರ್ಷಿಸುವದು. ಇದರ ಬೆಲೆ ಎರಡು ರೂಪಾಯಿ ಮಾತ್ರವೇ. ಹಾಸಲು ಎರಡು ಆಣೆಗಳು. ವಿ. ಪಿ. ಮೂಲಕ ತರಿಸಿಕೊಂಡರೆ ಎರಡು ರೂಪಾಯಿ ಮೂರು ಆಣೆಗಳಾಗುವವು. ಹಣಸ್ಥರೂ ಬಡವರೂ ಎಲ್ಲರೂ ಕೊಂಡು ಓದಿ ಪ್ರಯೋಜನವನ್ನು ಪಡೆಯಬೇಕೆಂದು ಇಷ್ಟು ದೊಡ್ಡಪುಸ್ತಕವನ್ನು ಇಷ್ಟು ಸುಲಭಕ್ರಯಕ್ಕೆ ಮಾರುತ್ತೇವೆ.

ಪುಸ್ತಕವು ದೊರಕುವ ಸ್ಥಳ

ಸಿ. ಎಲ್. ಎಸ್. ಬುಕ್ ಡಿಪೋ,
ಮೈಸೂರು.

ಜ್ವರಹರಿ 29-5



ಇದು ಸಾಧಾರಣ ಜ್ವರ, ಚಳೀಜ್ವರ, ದೋಷಜ್ವರ, ಪಿತ್ತಜ್ವರ, ಶೀತಜ್ವರ, ವಾತಜ್ವರ ಚಳಿ ಕಾಯುವದು, ಎಂಬ ಸಕಲವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು

ಚಿತ್ರದುರ್ಗದ ಡಿಸ್ಟ್ರಿಕ್ಟ ಚಳ್ಳಕೆರೆಯಲ್ಲಿರುವ ಮರಾಮತ್ ಇಲಾಖಾ ಸಬ್ ಡಿವಿಜನ ಆಫೀಸರ್ ಎಸ್. ಟಿ. ವೆಂಕಟಪತಿ ಅಯ್ಯಂಗಾರರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨೦ ಡೋಸಿನ ಸೀಸೆಯು ತೀರಿಹೋಯಿತು. ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚನ್ನಾಗಿ ಗುಣ ಹೊಂದಿರುವರು. ಇನ್ನೂ ಜನಗಳು ಕಾಹಿಲೇ ಬೀಳುತ್ತಿರುವುದರಿಂದ ದಯವಿಟ್ಟು ಇನ್ನೊಂದು ೨೦ ಡೋಸಿನ ಸೀಸೆಯನ್ನು ವಿ. ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದ್ದಾರೆ.

ಕ್ರಯ —ಸೀಸೆ ೧ ಕ್ಕೆ ೮ ಆಣೆ, ೧ ರೂ., ೧—೮ ರೂ ; ರೂ. ೨—೧೨ ಆ., ೧೧ ರೂ.; ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫ ಬಿಡಲಾಗುವದು

ಓಮಂ ಕರ್ಪೂರ.



ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆಕಳೆತುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು. ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಯೆ ಹೊಟ್ಟೇನೋವು ಮುಂತಾದ ವ್ಯಾಧಿಗಳನ್ನು ಶೀಘ್ರ ಗುಣಪಡಿಸುತ್ತದೆ. ಕ್ರಯದ ದರವು ಜ್ವರಹರಿ ಎಂಬ ಔಷಧದಂತೆಯೇ. ಸೀಸೆಗಳಲ್ಲಿ ದೊರೆಯುವದು.

ಕಡಪದ ಅಸಿಸ್ಟೆಂಟ್ ಸರ್ಜನ ಗಣಪತಿಯವರು—ಹೆಪ್ರಿಯ ಓಮಂ ಕರ್ಪೂರವನ್ನು ನಾನೂ ನನ್ನ ತಾಬೇದಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣ ಭೇದಿ, ಅಜೀರ್ಣ ರೋಗಿಷ್ಟರಿಗೆ ಕೊಡುತ್ತೇವೆ. ಕೊಟ್ಟ ಕೂಡಲೆ ಆ ರೋಗವು ಗುಣವಾಗುತ್ತಲಿದೆ. ಇದು ಬಹು ಒಳ್ಳೇ ಔಷಧವೆಂದು ಬರೆದಿದ್ದಾರೆ

ಈ ನಾಲ್ಕು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಷಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇವಲ್ಲದೆ ಕೆಳಗಿನ ವಿಳಾಸದಾರರಲ್ಲಿ ವಿಶೇಷ:—

ಹೆಪ್ರಿಯವರ, ಗ್ರೇಟ್ ಇಂಡಿಯನ್ ಔಷಧಗಳ ಕಂಪನಿ,
ಕೆನೆಡ್ ಲೇನ್ ಸ್ಟ್ರೀ ಮದ್ರಾಸ್.

ಮೈಸೂರು ಸೀಮೆಯಲ್ಲಿ ಪ್ಲೇಗಿನ ಸ್ಥಿತಿ.

9—3—1906 ರಿಂದ 16—3—1906 ರ ವರೆಗೆ

ಸ್ಥಳ.	ಪ್ಲೇಗ್ ತಗಲಿದ್ದು.	ಸತ್ತದ್ದು.	ಕೋರಂಟೈನ್ ಈ ವಾರದ ಸಂಖ್ಯೆ	
ಬೆಂಗಳೂರು ಪಟ್ಟಣ	11	7	41	3
ಮೈಸೂರು ,,	0	0	7	
ಬೆಂಗಳೂರು ಡಿಸ್ಟ್ರಿಕ್ಟು	9	7	46	3
ಮೈಸೂರು ,,	15	11	10	
ಕೋಲಾರ ,,	2	2	40	1
ಕೋಲಾರ ಚಿನ್ನದ ಗಣಿಗಳು	7	4	2	
ತುಂಕೂರು ಡಿಸ್ಟ್ರಿಕ್ಟು	7	5	9	
ಹಾಸನ (ಹೊರಗಿನವು)	0	0	3	
ಚಿತ್ರದುರ್ಗ ,,	7	6	4	
ಕಡೂರು ,,	0	0	4	
ಶಿವಮೊಗ್ಗ ,,	22	18	1	
ಜುಮ್ಲಾ	80	60	178	1[illegible]

ಶಾಲಿವಾಹನ ಶಕ ವರುಷಂಗಳು ೧೮೨೮ ನೇ ಪರಾಭವ ಸಂವತ್ಸರದ ಚೈತ್ರ ಶುದ್ಧ ೪ ಗುರುವಾರದಿಂದ ಚೈತ್ರ ಶುದ್ಧ ೧೦ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ.

೧೯೦೬ ನೇ ಇಸವಿ ಮಾರ್ಚ.

ತಾ.	ವಾರ	ತಿಥಿ.	ಘಳಿಗೆ.	ನಕ್ಷತ್ರ.	ಘಳಿಗೆ	[illegible]
29	ಗುರು †	ಚೌತಿ	11-48	ಕೃ	45 5	17
30	ಶುಕ್ರ ☨	ಪಂಚಮಿ	16 42	ರೋ	50-18	18
31	ಶನಿ ‡	ಷಷ್ಠಿ	21 20	ಮೃ	56 58	19
1	ರವಿ †	ಸಪ್ತಮಿ	25 10	ಆ	60 0	20
2	ಚಂದ್ರ	ಅಷ್ಟಮಿ	27-56	ಆ	1-48	2[illegible]
3	ಕುಜ ●	ನವಮಿ	29-12	ಪು	5 23	2[illegible]
4	ಬುಧ ,,	ದಶಮಿ	29-39	ಪು	7-36	2[illegible]

† ಲಕ್ಷ್ಮೀಗಣಪತೀ ವ್ರತ, ಸೌಭಾಗ್ಯಗೌರೀ ವ್ರತ, ದಗ್ಧಯೋಗ
☨ ಲಕ್ಷ್ಮೀ ಪಂಚಮಿ, ಷಷ್ಠೀತಿಥಿ. ‡ ಶೂನ್ಯತಿಥಿ, ಸ್ಕಂದಷಷ್ಠೀ ವ್ರತ
ᵀ ಸಂತಾನ ಸಪ್ತಮಿ, ಭಾನುಸಪ್ತಮೀವ್ರತ . ಅಶೋಕಾಷ್ಟಮಿ
ನಂದಾಸಗೂಬಿನಲ್ಲಿ ಶ್ರೀಕಂಠಮೂರ್ತಿ ಉತ್ಸವ ● ಶ್ರೀರಾಮನವಮಿ
ಮೇಲುಕೋಟೆಯಲ್ಲಿ ವೈರಮುಡಿ ಉತ್ಸವ ,, ಧರ್ಮರಾಜದಶಮಿ

ಪೇಟೇ ಧಾರಣೆ.

ದಿನಸು	ಮೈಸೂರು.	ಬೆಂಗಳೂರು
ಕಡ್ಡೀ ಅಕ್ಕಿ ಪಲ್ಲಾ ೧ಕ್ಕೆ ರೂ	೧-೨-೦-೦	೧೪-[illegible]
ಕೆಂಬುತಿ ಅಕ್ಕಿ ಅವಲ್	೧-೨-೮-೦	೧೩-೮
,, ದುಂಡು ..	೧೯-೮-೦	೧೩-[illegible]
ಜಾವಾಳಿ ಅಕ್ಕಿ	೧೨-೦-೦	೧೨-೦[illegible]
ಸಣ್ಣಕ್ಕಿ ಅವಲ್ ..	೧೪-೦-೦	೧೪-೧[illegible]
,, ದುಂಡು	೧೩-೦-೦	೧೪-೮
ತೊಗರೀ ಬೇಳೆ ಪಲ್ಲಾ ೧ಕ್ಕೆ ..	೯-೪-೦	೧೦-[illegible]
,, ದುಂಡು ..	೯-೦-೦	೯-೪
ಕೈಣ ರಾಗಿ ಪಲ್ಲಾ ೧ಕ್ಕೆ	೬-೧೪-೦	೫-೮
ಕಾರಾಗಿ	೬-೮-೦	೫-[illegible]
ಜೋಳ	೩-೧-೦	೮-[illegible]
ಹಲಸಂದೆ ಪಲ್ಲಾ ೧ಕ್ಕೆ	೯-೧೨-೦	೧೦-[illegible]
ಬಿಳೀ ಅವರೆ	೩-೮-೦	೮-[illegible]
ಹೆಸರು	೧೦-೮-೦	೧೧-[illegible]
ಉದ್ದು	೧೨-೪-೦	೧೨-[illegible]
ಕಡಲೆ	೧೦-೮-೦	೧೨-[illegible]
ಎಳ್ಳು ಸೆ ೧೨೩ ಕ್ಕೆ	೧೯-೦-೦	೧೮-[illegible]
ಹುರುಳಿ	೩-೮-೦	೬-೧[illegible]
ಹರಳು ೧೨೩ ಸೇರಿಗೆ	೧೦-೧೨-೬	೧೨-[illegible]
ಸೀಗೇಕಾಯಿ ಮಣ ೧ಕ್ಕೆ ..	೩-೦-೦	೨-೧[illegible]
ಮೆಣಸಿನಕಾಯಿ	೪-೬-೦	೩-[illegible]
,, ದುಂಡು	೩-೭-೦	೩-[illegible]
ಬೆಲ್ಲ ದೊಡ್ಡ ಅಚ್ಚು	೪-೦-೦	ಮ ೧-೩[illegible]
ಒಳ್ಳೆಣ್ಣೆ ಮಣ ೧ಕ್ಕೆ ..	೫-೩-೦	೪-೧[illegible]
ಹರಳೆಣ್ಣೆ ,, ...	೪-೯-೦	೪-[illegible]
ಕೊತ್ತುಂಬರಿ ಪಲ್ಲಾ ೧ಕ್ಕೆ	೧೦-೦-೦	೧೦-[illegible]
ಉಪ್ಪು ,, ...	೩-೦-೦	೬-೮[illegible]
ಹುಣಿಸೇ ಹಣ್ಣು	೦-೧೦-೦	೦-೧೦[illegible]
,, ಹಳೇದು	೦-೮-೦	೦-೯[illegible]
ತುಪ್ಪ	೧೩-೪-೦	೧೧-೮[illegible]
ಸೀಮೆಯೆಂಡೆ ಪೆಟ್ಟಿ ೧ಕ್ಕೆ ..	೫-೪-೦	೪-[illegible]
ತೆಂಗಿನಕಾಯಿ ೧೦೦ ಕ್ಕೆ ..	೪-೦-೦	೪-೧[illegible]
ಅಳಲೇಕಾಯಿ ಮಣ ೧ಕ್ಕೆ .	೦-೧೨-೦	೦-೯[illegible]
ಅಂಟುವಾಳದ ಕಾಯಿ ಮಣ ೧ಕ್ಕೆ ..	೦-೧೨-೦	೦-೧೦[illegible]
ಚಿನ (ಬೇರ) ಕೆಂಪು ..	೧೫-೪-೦	೧೫-೩[illegible]
,, ,, ಬಿಳಿದು ..	೧೫-೩-೦	೧೫-೧[illegible]
,, ,, ಗಟ್ಟಿ ತೊಲ ೧ಕ್ಕೆ ..	೨೩-೧೨-೦	೨೪-೬[illegible]
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ ..	೩೨-೨-೦	೮೦-[illegible]

Printed and Published by the Rev E. W. Thompson, M.A. the Proprietor and Manager, Wesleyan Mission Press, Mysore. 29/3/1906.

ವೃತ್ತಾಂತ ಪತ್ರಿಕೆ.

REGISTERED M. 20

೨ಯ ೧ ದು ಡ್ಡು — ಕ್ರಯ ೧ ದುಡ್ಡು

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಸಂಪುಟ ೧೯ — ಮೈಸೂರು—ಸನ್ ೧೯೦೬ ನೇ ಇಸವಿ ಏಪ್ರಿಲ್ ತಾರೀಖು ೫ ನೇ ಗುರುವಾರ. — ಸಂಚಿಕೆ ೪೪

WANTED WILD ANIMALS.

ಬೇಕಾಗಿದೆ. ಬೇಕಾಗಿದೆ.

5-51

ಎಲ್ಲಾ ಬಗೆಯ ಕಾಡು ಮೃಗಗಳು. ಮೈಸೂರು ಜೂ ಸೂಪರಿಂಟೆಂಡೆಂಟ್ ಮಿ। ಹ್ಯೂಜಸ್ ಯವರು ಕೊಂಡುಕೊಳ್ಳುವರು.

Apply to—Mr. Hughes, Mysore Zoo.

ಇದಕ್ಕೆ ಸಮಾನವಾದ ಪುಸ್ತಕ ಉಂಟೋ ?

56-?

ಕನ್ನಡ ಭಾಷೆಯಲ್ಲಿ ಇದುವರಿವಿಗೂ ಇಂಥಾ ಸೊಗಸಾದ ಪುಸ್ತಕವು ಪ್ರಕಟವಾಗಲಿಲ್ಲ. ಸ್ವಲ್ಪ ನೋಡಿ.

"ಹಿಂದೂದೇಶ ಪ್ರದಕ್ಷಿಣ"

ಎಂದು ಕರೆಯಲ್ಪಡುವ ಈ ನೂತನ ಪುಸ್ತಕದಲ್ಲಿ ಸುಮಾರು ೫೦ ಉತ್ಕೃಷ್ಟವಾದ ಚಿತ್ರಗಳು ಅಡಗಿವೆ. ಹಣವ್ಯಯ ಮತ್ತು ಶ್ರಮವನ್ನು ತೆಗೆದುಕೊಳ್ಳದೆ ಸುಲಭವಾಗಿ ಈ ಪುಸ್ತಕವು ತೋರಿಸುವ ಎಲ್ಲಾ ಸ್ಥಳಗಳೂ, ಜನರ ಸ್ಥಿತಿಗತಿಗಳು ಮನಸ್ಸಿಗೆ ಸ್ಪಷ್ಟವಾಗಿ ಹೊಳೆಯುವವು. ಇದರಲ್ಲಿರುವ ಚಿತ್ರಗಳಲ್ಲಿ ಸ್ವಲ್ಪ ನೋಡಿ. ಆಗ್ರಾಪಟ್ಟಣದ ಬಳಿಯಲ್ಲಿರುವ ಜಗತ್ಪ್ರಸಿದ್ಧ ತಾಜ್‌ಮಹಲ್, ಹುಮಾಯೂನನ ಗೋರಿ, ಅಮೃತಸರ, ಕಲ್ಕತ್ತಾ ಹೈಕೋರ್ಟು, ಕಾಳಿಕಾದೇವಿ, ಚಂದ್ರನಗರ, ಜಗನ್ನಾಥಸ್ವಾಮಿ, ಭುವನೇಶ್ವರವೆಂಬ ಸ್ಥಾನ, ಬನಾರಸ್ ದೇವಸ್ಥಾನ, ಏಕಾಂಬರ, ಚಿತ್ರ, ಮಧುರೆ ನಗರದ ದೇವಸ್ಥಾನ, ಆಂಟಿಗೆ ತೇಕೋಟೆಯನ್ನು ಎಳೆದುಕೊಂಡು ಹೋಗುವ, ಗಯಾದಲ್ಲಿರುವ ಬುದ್ಧನ ದೇವಸ್ಥಾನ, ಔರಂಗಜೇಬ ಕಟ್ಟಿಸಿದ ಮಸೀದಿ, ಕಾಶೀವಿಶ್ವೇಶ್ವರದಲ್ಲಿರುವ ಮಹಾಸ್ಮಶಾನ, ಯಾತ್ರಿಕರಿಗೆ ಸ್ನಾನಘಟ್ಟಗಳು, ಕಾಶೀಕ್ಷೇತ್ರದ ದೇವಸ್ಥಾನಗಳು, ಶ್ರೀರಂಗನಾಥ ಮತ್ತು ಆದರ ಕೋಟೆ, ಅಲಹಾಬಾದ್‌ನಲ್ಲಿರುವ ಪ್ರಯಾಗ ಅರಮನೆ, ಯಮುನಾನದಿಯಲ್ಲಿ ಯಾತ್ರಿಕರು ಸ್ನಾನಮಾಡುವದು, ಕಾನ್ಪುರದಲ್ಲಿರುವ ಶಿಲಾಶಾಸನ, ಕಾನ್ಪುರದ ಗಂಗಾನದಿಯ ಮೇಲೆ ಕಟ್ಟಿರುವ ಸೇತುವೆ, ಲಖ್ನೋ ನಗರದ ರೆಸಿಡೆನ್ಸಿ, ಲಖ್ನೋ ಪಟ್ಟಣದ ಬಾಗಿಲು, ಸರ್ ಹೆನ್ರಿ ಲ್ಯಾರೆನ್ಸ್, ಯಮುನಾನದಿಯ ಮೇಲಿರುವ ಅರಮನೆ, ಸ್ನಾನದಲ್ಲಿ ಜನರ ಸ್ಥಿತಿ, ಡಾರ್ಜಿಲಿಂಗ್, ಗಂಗೋತ್ರಿ ದೇವಸ್ಥಾನ, ಹಿಮಾಲಯ ಪರ್ವತಗಳ ಮೇಲಿನ ಬೆಟ್ಟಗಳು, ಹಿಂದೂಸ್ಥಾನಗಳು, ಆಗ್ರಾ ಪಟ್ಟಣದ ಕೋಟೆ, ಯಮುನಾನದಿ, ದೂರದಲ್ಲಿ ತೋರುತ್ತಿರುವ ತಾಜ್‌ಮಹಲ್ ಗೋರಿ, ತಾಜ್‌ಮಹಲಿನ ಕಲ್ಲಿನಲ್ಲಿ ಕೆತ್ತಿರುವ ಪರದೆ, ಅಕ್ಬರನ ಆಗ್ರಾಪಟ್ಟಣದ ಮುತ್ತಿನ ಮಸೀದಿ, ಫತೇಪುರ್ ಸಿಕ್ರಿಯಲ್ಲಿ ಪಂಚ್‌ಮಹಲ್ ಅರಮನೆ, ರಾಜಪುತ್ರರು, ಭರತಪುರದ ಡಿಲ್ಲಿಯಲ್ಲಿ ಮಹಾರಾಜಜಶ್ವಂತಸಿಂಗರ ಗೋರಿ, ಅಲಿ ಪೋರಸನ ದೆಹಲಿ ನಗರದ ದೊಡ್ಡ ಮಸೀದಿ, ಕುತುಬ್ ಮಿನಾರು, ರಾಜದೇವನು ಸ್ಥಾಪಿಸಿದ ಕಬ್ಬಿಣದ ಸ್ತಂಭ, ನಾನಾಸಾಹೇಬನು ದೆಹಲಿ ನಗರದಲ್ಲಿ ಪ್ರಜಾಸಂಹಾರವನ್ನು ನೋಡುತ್ತಿದ್ದ ಸ್ಥಳ, ಲಾಹೋರಿನಲ್ಲಿರುವ ಕಾಬೂಲ್ ದರವಾಜ, ಜಮ್ಮು ಬೀದಿ, ಸಿಖ್ಖರ ಯೋಗಿಗಳ ಪಾರಿ, ಸಿಖ್ಖ, ಅಮೃತಸರದ ದೇವಾಲಯ, ಲಾಹೋರಿನಲ್ಲಿರುವ ರಣಜಿತಸಿಂಗನ ಗೋರಿ, ಲಾಹೋರ್ ಪಟ್ಟಣ, ಇನ್ನೂ ಮುಂತಾದ ಅನೇಕ ರಮಣೀಯವಾದ ಸ್ಥಳ ಚಿತ್ರಗಳು ಈ ಪುಸ್ತಕದಲ್ಲಿ ಅಡಗಿವೆ. ಅವುಗಳನ್ನೆಲ್ಲಾ ಇಲ್ಲಿ ಹೇಳುವುದಕ್ಕೆ ಸ್ಥಳ ಸಾಲದು.

ಕ್ರಮೇಣವಾಗಿ ಎರಡನೆಯ ಭಾಗವೂ ಬೇಗ ಪರಿಷ್ಕಾರವಾಗಿರುವ ದಕ್ಷಿಣ ದೇಶದಲ್ಲಿರುವ ಅನೇಕ ಪ್ರಸಿದ್ಧವಾದ ಸ್ಥಳಗಳ ಚಿತ್ರಗಳೂ ಅವುಗಳ ವಿವರಣೆಗಳೂ ಇದರಲ್ಲಿವೆ. ಪುಸ್ತಕವು ಹನ್ನೊಂದು ಅಂಗುಲ ಉದ್ದವಾಗಿಯೂ ಒಂಬತ್ತು ಅಂಗುಲ ಅಗಲವಾಗಿಯೂ ಇದೆ. ಪುಸ್ತಕವು ಭಾರಿಯಾಗಿದೆ. ಇಂಥಾ ಪುಸ್ತಕವನ್ನು ಪ್ರಚುರಪಡಿಸುವದಕ್ಕೆ ಬಹಳ ಸಮಯವನ್ನೂ ಹಣವನ್ನೂ ವ್ಯಯ ಮಾಡಿದೆ. ಪುಸ್ತಕದ ಅಚ್ಚು ಮತ್ತು ಬೈಂಡು ಬಹು ಸುಂದರವಾಗಿದೆ. ಇದರ ಕ್ರಯ ಎಂಟೇ ಆಣೆ. ವಿ. ಪಿ. ಪಿ. ಪೋಸ್ಟೇಜ್ ಒಂದಾಣೆ. ಕೆಲವೇ ಪ್ರತಿಗಳಾಗುವವು. ಪುಸ್ತಕವು ಜಾಗ್ರತೆಯಲ್ಲಿ ಮಾರಾಟವಾಗುತ್ತಿರುವದರಿಂದ ತಾವುಗಳೆಲ್ಲರೂ ಕೆಳಗೆ ಕಂಡ ವಿಳಾಸದವರಿಗೆ ಬೇಗ ತರಿಸಿಕೊಳ್ಳಬೇಕು.

ಮ್ಯಾನೇಜರ್,

ಸಿ. ಎಲ್. ಎಸ್. ಬುಕ್ ಡಿಪೋ,

"ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯು.

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜೆಂಟ್ರ ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ (ಅಡ್ವಾನ್ಸು)	ರೂ. ೧—೦—೦
ಪರಸ್ಥಳದವರು ಆಫೀಸಿನಿಂದ ಅಂಚೆಯ ಮೇಲೆ ತರಿಸಿಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಪೋಸಲ್ ಸೇರಿ	ರೂ. ೧—೧೪—೦
,, ,, ,, ,,	೦—೧೫—೦

ಚಂದಾದಾರರಾಗಿರತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು.

ನಮ್ಮ ವಿಳಾಸ.—ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು.

ರಬ್ಬರ್ ಸ್ಟಾಂಪುಗಳು.

43 7

ನಮ್ಮ ಕಂಪೆನಿಯಲ್ಲಿ ತಯಾರುಮಾಡಲ್ಪಡುವ ಇಂಗ್ಲಿಷ್ ಮೇಡ್ ರಬ್ಬರ್ ಸ್ಟಾಂಪುಗಳಿಗೆ ದರಖಾಸ್ತು ಕಳುಹಿಸತಕ್ಕವರಿಗೆ ಅರ್ಧ ಕ್ರಯಕ್ಕೆ ತಯಾರಿಸಿ ಕಳುಹಿಸುತ್ತೇವೆ.



ಚಾದಾವಿ, ರನ್ನಂಬ, ಚಚ್ಚೌಕ, ಯಾವ ಆಕಾರವಾದರೂ ಅದರಲ್ಲಿ ಬೇಕಾದ ಅಕ್ಷರಗಳನ್ನು ಹಾಕಿ, ಸುಂದರವಾದ ರಬ್ಬರ್ ಸ್ಟಾಂಪು ೧, ಇಂಕಿ ಸೀಸೆ ೧, ರಬ್ಬರ್ ಸ್ಟಾಂಪು ಇರಿಸುವ ಪೆಟ್ಟಿಗೆ ೧, ಇಂಕ್ ಪ್ಯಾಡ್ ೧, ಬ್ರಷ್ ೧, ಇವುಗಳ ಸಹಿತ ಕ್ರಯ ರೂ. ೦—೮—೦, ಪೋಸ್ಟೇಜು ೩ ಆಣೆ.

ವಿಳಾಸ:—ಮ್ಯಾನೇಜರ್, ರಬ್ಬರ್ ಸ್ಟಾಂಪ್ ಮ್ಯಾನುಫ್ಯಾಕ್ಚರಿಂಗ್ ಕಂಪನಿ, ಜಾರ್ಜ್ ಟೌನ್, ಮದ್ರಾಸ್.

ಪರಿಮಳ ನಶ್ಯದ ಪುಡಿ.

50-6

ಪರಿಮಳ ನಶ್ಯದಪುಡಿ ಪೆಟ್ಟಿಗೆ ೧ಕ್ಕೆ	0—9—0
ಚಿಕ್ಕ ಬುರುಡೆ	0—3—0
ಸಾದಾ ನಶ್ಯದಪುಡಿ ಪೆಟ್ಟಿಗೆ ೧ಕ್ಕೆ	0—6—0
ಚಿಕ್ಕ ಬುರುಡೆ	0—3—0

ಈ ಪುಡಿಯನ್ನು ಮೇಲಾದ ಹೊಗೆಸೊಪ್ಪಿನಿಂದ ಸುವಾಸನೆಯುಳ್ಳದ್ದಾಗಿ ತಯಾರು ಮಾಡಲ್ಪಟ್ಟಿರುತ್ತೆ. ಇದರ ಸುವಾಸನೆ ಒಂದು ಸೇರು ಸಾಧಾರಣ ಪುಡಿಯಲ್ಲಿ ಸ್ವಲ್ಪವನ್ನು ಹಾಕಿ ಕಲಸಿದರೆ ಪುಡಿಯೆಲ್ಲಾ ಗಮಗಮಿಸುತ್ತೆ. ಉಪಯೋಗಿಸುವವರಿಗೆ ಸುವಾಸನೆಯನ್ನೂ ಆನಂದವನ್ನೂ ಉಂಟುಮಾಡುತ್ತೆ.

ತಲೆನೋವು, ಪೀನಸ, ಜಲದೋಷ, ಶಿರೋವ್ಯಾಧಿ ಇವುಗಳನ್ನು ತಪ್ಪದೆ ಪರಿಹರಿಸುತ್ತೆ. ಮಾದರಿಗೆ ೧ ಡಬ್ಬಿಯನ್ನು ತರಿಸಿ ಪರೀಕ್ಷಿಸಿರಿ.

ಸೂಚನೆ:—ಪ್ರತಿ ೧ ಡಬ್ಬಿಯಲ್ಲಿ ೯ ತೊಲ ನಶ್ಯದಪುಡಿ ಇರುತ್ತೆ.

ಮ್ಯಾನೇಜರ್, ಧರ್ಮ ವೈದ್ಯಶಾಲಾ,

69 ಬ್ಯಾಸಾರು ರೋಡ್, ಸಾಹುಕಾರ್‌ಪೇಟೆ, ಮದರಾಸು.

ಕೊಡಗು ದೇಶದ ಶ್ರೇಷ್ಠವಾದ ಉತ್ಕೃಷ್ಟ ಕಾಫಿಯು.

ಹುರಿಯದೆ ಇರುವದು ಅಥವಾ ಆಗತಾನೆ ಹುರಿದದ್ದು, ತೋಟದಿಂದ ನೇರವಾಗಿ ನಿಮ್ಮ ಸ್ಥಳಗಳಿಗೆ ನೆಟ್ಟಗೆ ರವಾನಿಸಲ್ಪಡುವದು.

85-8

ವ್ಯಾಪಾರದ C C E C ಹೆಗ್ಗುರ್ತು

ಕಾಟುಕೋಣದ ತಲೆಯ ಮುದ್ರೆ ಇದೆ.

ಸಂಪೂರ್ಣವಾಗಿ ಯಂತ್ರದಿಂದಲೇ ಸಿದ್ಧಪಡಿಸಿದ್ದು. ಹೆಗ್ಗುರ್ತು ಉಳ್ಳ ವಿಳಾಸದ ಚೀಟಿ ಸುತ್ತಿಲ್ಲದಿರುವವು ಸ್ವಚ್ಛವಾದವುಗಳಲ್ಲ. ಅವು ನಮ್ಮದಲ್ಲ. ಏಜಂಟರುಗಳು ಬೇಕು. ಇಂಥವರಿಗೆ ಅಲಾಯಿದ ದರ. ಬರೆಯುವವರು ದಯಮಾಡಿ ಈ ಪತ್ರಿಕೆಯ ಹೆಸರನ್ನು ಸೂಚಿಸಿ.

ವಿಳಾಸ.—ಮ್ಯಾನೇಜರ್, ಮ್ಯಾಥಿಸನ್ಸ್

ಕಾಫಿ ವರ್ಕ್ಸ್ ಸುಂಟಿಕೊಪ್ಪ

ಬೆಂಗಳೂರು ಚಿಕ್ಕಬಳ್ಳಾಪುರ ಲೈಟ್ ರೈಲ್ವೆ ಕಂಪೆನಿ ಲಿಮಿಟೆಡ್ ನಿಯಮಿತ ಮೂಲಧನ.

46-6

ಷೇರು ಒಂದಕ್ಕೆ ೨೫ ರೂಪಾಯಿಗಳು ಬೆಲೆಯುಳ್ಳ ೪೮ ಸಾವಿರ ಷೇರುಗಳಿಂದಾಗುವ ೧೨ ಲಕ್ಷ ರೂಪಾಯಿಗಳು ಈ ಷೇರು ಮೊಬಲಗು ೫ ಅಥವಾ ಷೇರು ಒಂದಕ್ಕೆ ಒಂದು ರೂಪಾಯಿನಂತೆ ಅಪ್ಲಿಕೇಷನ್ ಫೀ ಕೊಟ್ಟು ೧೨ ಕಿಸ್ತುಗಳಲ್ಲಿ ಪಾವತಿ ಮಾಡತಕ್ಕದ್ದು. ಈ ಲೈನಿನ ಸರ್ವೆ ಪೂರೈಸಲ್ಪಟ್ಟಿದೆ.

ಶ್ರೀಮನ್ ಮೈಸೂರು ಮಹಾರಾಜರವರ ಸರ್ಕಾರದವರು ಈ ಕಂಪೆನಿಯ ಮೂಲಧನಕ್ಕೆ ಶೇಕಡ ವರುಷ ೧ಕ್ಕೆ ೪ ರೂಪಾಯಿನಂತೆ ಬಡ್ಡಿ ಕೊಡಲು ತಾವು ಜಾಮೀನಾಗಿರಲು ಅನುಮತಿಯನ್ನು ಕಂಪೆನಿಗೆ ಲಿಖಿತ ಮೂಲಕ ತಿಳಿಸಿರುತ್ತಾರೆ.

ಈ ಕಂಪೆನಿಯ ಷೇರುಗಳನ್ನು ಅಪೇಕ್ಷಿಸತಕ್ಕಂಥವರು ಈ ಕೆಳಗೆ ರುಜು ಮಾಡಿರುವವರಿಗೆ ದರಖಾಸ್ತು ಮಾಡಿಕೊಳ್ಳಬೇಕು.

ಈ ಕಂಪೆನಿಯ ಷೇರುಗಳನ್ನು ಕಮಿಷನಿಗೆ ಸಬ್ ಏಜಂಟರಾಗಿ ಬಿಕರಿಮಾಡಲು ಅಪೇಕ್ಷೆಯುಳ್ಳ ಖಾತರಿಯಾದ ಜನರು ಸದರಿ ಯವರಿಗೇನೆ ಬರೆದುಕೊಳ್ಳಬಹುದು.

ಷೇರು ಮೊಬಲಗುಗಳನ್ನು ಕಂಪೆನಿಗೆ, ಬೆಂಗಳೂರಿನಲ್ಲಿರುವ ಮದರಾಸು ಬ್ಯಾಂಕಿಗೆ, ಚೀಫ್ ಏಜಂಟರಿಗೆ ಅಥವಾ ಇವರಿಂದ ಹಣವನ್ನು ವಸೂಲು ಮಾಡುವಂತೆ ಲಿಖಿತ ಮೂಲಕವಾಗಿ ಅಧಿಕಾರ ಪಡೆದಿರುವ ಸಬ್ ಏಜಂಟರಿಗೆ ಪಾವತಿ ಮಾಡಬೇಕು.

(ಸ್ವಾ) ಬಿ. ಪಿ. ರಾಮಸ್ವಾಮಿ ಶೆಟ್ಟಿ, ಬಿ. ಎ.,

ಅಡ್ವೊಕೇಟ್, ಮತ್ತು ಬೆಂಗಳೂರು ಚಿಕ್ಕಬಳ್ಳಾಪುರ

ಲೈಟ್ ರೈಲ್ವೆ ಕಂಪೆನಿಯ ಚೀಫ್ ಏಜಂಟ್,

ನಗರ್ತಪೇಟೆ, ಬೆಂಗಳೂರು ಸಿಟಿ.

ನೀವು ವಿಲಾಯತಿಯಿಂದ ಯಾವ ಸಾಮಾನುಗಳನ್ನಾದರೂ ತರಿಸಿಕೊಳ್ಳಬೇಕಾಗಿದ್ದರೆ 19-12

ಬ್ರೈಟ್ ಮತ್ತು ಕೋಸ್ಟ್‌ಲೆಟ್,

೬೯—೭೫, ಸಿಟಿ ರೋಡ್, ಲಂಡನ್, ಇ. ಸಿ.

ಎಂಬೀ ವಿಳಾಸಕ್ಕೆ ಹಣ ಕಳಿಸಿ, ಕಾಗದ ಬರೆಯಿರಿ. ಈ ಕಂಪೆನಿಯವರು ಪೇಟೆಂಟ್ ಔಷಧಿಗಳನ್ನೂ, ಆಕಸ್ಮಿಕಗಳಿಗೂ ಮಕ್ಕಳಿಗೂ ಕೊಡತಕ್ಕಂಥಾ, ಯಂತ್ರಗಳಿಂದಲೇ ತಯಾರಾದಂಥಾ ಆಹಾರಗಳನ್ನೂ, ಇನ್ನೂ ನಾನಾತರದ ಪದಾರ್ಥಗಳನ್ನೂ ಇಟ್ಟು ಬಿಕರಿಮಾಡುತ್ತಾರೆ. ಅವರು ಬಹು ವಿಶೇಷವಾದ ಗಮನಕೊಟ್ಟು, ಸಾಧ್ಯವಿದ್ದಷ್ಟೂ ಅಗ್ಗವಾಗಿ, ಬೇಕಾದ ಸಾಮಾನುಗಳನ್ನೇ ಆರಿಸಿ, ಮರಿಟಪ್ಪಾಲಿಗೇನೆ ಕಳುಹಿಸಿಕೊಡುವರು.

ಪ್ರಶ್ನೋತ್ತರ ಲೋಕಬೋಧಿನಿ.

59—8

೨ ನೇ ಭಾಗ ಮಾರಾಟಕ್ಕೆ ಸಿದ್ಧವಾಗಿರುತ್ತೆ, ದಪ್ಪವಾದ ಕಾಗದ, ಭದ್ರವಾದ ಬೈಂಡಾಗಿದ್ದು, ಪುಸ್ತಕದಲ್ಲಿರುವ ಸಂಗತಿಯನ್ನು ದಯವಿಟ್ಟು ಓದಿನೋಡಿ.—ಇದರ ಕ್ರಯ ೧ ರೂ. ೪ ಆ ಸ್ವಲ್ಪ ಪ್ರತಿ ಇರುವುದು ಬೇಗ ತರಿಸಿಕೊಳ್ಳಿ. ಕ್ಷೇಮಸಮಾಚಾರ ಕಾಗದಗಳು, ಅರ್ಜಿಗಳೂ, ಸಿವಿಲ್, ಕ್ರಿಮಿನಲ್, ರೆವಿನ್ಯೂ, ಮುಫ್ಸಿ, ಇಂಜನಿಯರ್, ಫಾರೆಸ್ಟು, ಎಕ್ಸೈಜು, ವಿದ್ಯಾಭ್ಯಾಸ, ವ್ಯವಸಾಯ, ಮುನಿಸಿಪಲ್, ಮತ್ತು ಇತರ ಎಲ್ಲಾ ಇಲಾಖೆಗಳ ಬಗೆಬಗೆ ಸಂಗತಿಗಳು, ಸಿವಿಲ್ ಪ್ರೊಸೀಜರ್ ಕೋಡು, ಕ್ರಿಮಿನಲ್ ಪ್ರೊಸೀಜರ್ ಕೋಡು, ಪೀನಲ್ ಕೋಡು, ಹಿಂದೂಲಾ, ಮಹಮದೀಯಾ, ಕಂಟ್ರಾಕ್ಟು, ಜಾಮೀನು, ವಾರಸು, ಮೈನರು, ಲಿಮಿಟೇಷನ್, ಸ್ಟಾಂಪು, ಕೋರ್ಟುಫೀಜು ಪೋಲೀಸು, ಸ್ಯಾನಿಟರಿ, ಮುನಿಸಿಪಲ್, ರೆವಿನ್ಯೂ ಕೋಡು, ರೂಲ್ಸು, ಲ್ಯಾಂಡ್ ಇಂಪ್ರೂವ್, ಲ್ಯಾಂಡ್ ಆಕ್ವಿಜಿಷನ್, ರೈಲ್ವೆ, ಆರಂಸು, ಮೊದಲಾದ ಎಲ್ಲಾ ಆಕ್ಟುಗಳ ಸಾರಾಂಶಗಳು, ಲೇವಾದೇವಿ, ರೆವಿನ್ಯೂ ರೂಲ್ಸು ಪ್ರಕಾರ ಗ್ರಾಮದ ಲೆಕ್ಕಗಳನ್ನು ಬರೆಯುವದು, ಮುಂತಾದ ಗ್ರಾನಭಾವಿಕೆಯ ಬಗೆಬಗೆ ಸಂಗತಿಗಳು, ರೋಜುಮರ್ಗ ಮೊದಲಾದ ವರ್ತಕರ ಲೆಕ್ಕಗಳನ್ನು ಬರೆಯುವ ರೀತಿ, ಮೊದಲಾದ ಅನೇಕ ಸಂಗತಿಗಳು ಸ್ವಲ್ಪಮಟ್ಟಿಗೆ ಓದು ಬರಹ ಬಂದವರು ಕೂಡಾ ಸುಲಭವಾಗಿ ತಿಳಿಯುವಂತೆ ಪ್ರಶ್ನೋತ್ತರ ರೀತಿಯಾಗಿ ಬರೆದಿದೆ. ಪುಸ್ತಕದಲ್ಲಿರುವ ಎಲ್ಲಾ ಸಂಗತಿಗಳನ್ನೂ ವಿವರಿಸುವದು ಸಾಧ್ಯವಲ್ಲವಾಗಿ ಸೂಕ್ಷ್ಮದಿಂದ ತಿಳಿಸಿರುತ್ತೆ.

ವಿಳಾಸ ಬದಲಾಯಿಸಿದೆ. ವಿಳಾಸ:—ಬಿ. ಕೆ. ಮೂರ್ತಿ ಕಂಪೆನಿ,

P. SUBBROYA'S
World Renowned and most Efficacious
Ayurvedic Medicines.

ಪಿ. ಸುಬ್ಬರಾಯರವರ

ಲೋಕಪ್ರಸಿದ್ಧವಾದ ಮತ್ತು ಅತ್ಯಂತ ಗುಣಕಾರಿಯಾದ

ಆಯುರ್ವೇದ ಔಷಧಗಳು.

11 21

೧. ಪುಷ್ಟಿರಸಾಯನ —ಇದರ ಸೇವನೆಯಿಂದ ನರಗಳ ಸಂಬಂಧವಾದ ಮತ್ತು ಇತರ ವಿಧವಾದ ಎಲ್ಲಾ ಶರೀರದ ದುರ್ಬಲಗಳೂ ಹೋಗಿ, ಹೊಟ್ಟೆಯಲ್ಲಿ ಅಗ್ನಿ ಉಂಟಾಗಿ, ದೇಹವು ಪುಷ್ಟಿಹೊಂದುವದು. ಪುಷ್ಟಿಯನ್ನು ಕಳೆದುಕೊಂಡ ಚಿಕ್ಕವಯಸ್ಸಿನವರಿಗೆ ಇದು ಅತ್ಯಂತ ಔಷಧವು ಇದರಿಂದ ಶರೀರದ ಪ್ರತಿ ಅವಯವದ ನೋವೂ, ಅಶಕ್ತಿಯೂ ಹೋಗಿ, ಪುಷ್ಟಿಯೂ, ಬಲವೂ ಉಂಟಾಗುವವು ಪೆಟ್ಟಿಗೆಗೆ ರೂ. ೨ ವಿ. ಪಿ ಛಾರ್ಜಿ ೩ ಆಣೆ.

೨ ಅಜೀರ್ಣ ಗುಳಿಗೆ —ಅಜೀರ್ಣ, ತೇಗುವುದು, ಹೊಟ್ಟೆಯಲ್ಲಿ ಉರಿ, ಮತ್ತಾಗಿರುವಿಕೆ, ಹಸಿವಿಲ್ಲದಿರುವದು, ಪಿತ್ಥ, ಬಾಯಿಯ ದುರ್ಗಂಧ, ಹೊಟ್ಟೆಶೂಲೆ, ನಿಸ್ಥಿ ರತ್ತದಿರುವಿಕೆ, ತಲೆತಿರುಗುವದು, ಇವೆಲ್ಲಾ ನಿರ್ಮೂಲವಾಗುವವು ಪೆಟ್ಟಿಗೆಕ್ಕೆ ೮ ಆಣೆ ವಿ ಪಿ ೨ ಪೆಟ್ಟಿಗೆ ವರೆಗೆ ಛಾರ್ಜಿ ೫ ಆಣೆ.

೩ ಲಕ್ಷ್ಮೀ(ಕರ ಕಸ್ತೂರಿಮಾತ್ರೆ)—ಇದು ತಾಂಬೂಲಕ್ಕೆ ಪಾತ್ರವಿತ್ರವು. ಇದರಿಂದ ಬಾಯಿಯ ದುರ್ಗಂಧವು ಹೋಗುವದು, ಭೋಜನಾನಂತರ ತಾಂಬೂಲದ ಸಂಗಡ ೧—೨ ಮಾತ್ರೆಗಳನ್ನು ಸೇವಿಸಿದರೆ, ಇತರ ಸುವಾಸನಾದ್ರವ್ಯಗಳು ಅನಾವಶ್ಯಕವಾಗಿರುವುದಲ್ಲದೆ, ಅಲ್ಪಕಾಲದಲ್ಲಿ ಅತ್ಯಂತ ಕಠಿಣವಾದ ಆಹಾರವನ್ನು ಕೂಡ ಜೀರ್ಣಕ್ಕೆ ಕಳುವ್ಯದು ಬೆಳಿಗ್ಗೆ ಊಟಕ್ಕೆ ಮುಂಚೆ ೨ ಮಾತ್ರೆಗಳನ್ನು ಕ್ರಮವಾಗಿ ಸೇವಿಸುತ್ತಿದ್ದರೆ ಅಜೀರ್ಣ, ಮಂದ, ಹಲ್ಲುವೇದನೆ ಹೊಟ್ಟೆಯ ಉರಿ, ಇವುಗಳು ವಾಸಿಯಾಗುವವು ಇದರಲ್ಲಿ ಅಕ್ಷೇಪಣೀಯವಾದ ಮತ್ತು ಪ್ರತಿಬಂಧಕವಾದ ಯಾವ ವಸ್ತುವೂ ಇಲ್ಲದ್ದರಿಂದಲೂ, ಇದರ ತಯಾರಿಗೆ ಕಸ್ತೂರಿ ಸುವರ್ಣ ವರಕು ಮುಂತಾದ ಅಮೂಲ್ಯ ವಸ್ತುಗಳು ಸೇರಿರುವದರಿಂದಲೂ ಎಳೇ ಮಕ್ಕಳಿಂದ ಮುದುಕರವರಿಗೆ ಎಲ್ಲರೂ ತಾಂಬೂಲದೊಂದಿಗೆ ಅಥವಾ ಬರಿದಾಗಿಯಲ್ಲಿ ತಾಕಿಕೊಂಡು ಉಪಯೋಗಿಸಬಹುದು ಕ್ರಮವಾಗಿ ಸೇವಿಸುವದರಿಂದ ದೇಹದಲ್ಲಿ ರೋಗಕ್ಕೆ ಆಸ್ಪದ ಕೊಡದೆ ಸಂರಕ್ಷಿಸಿಕೊಳ್ಳುವದು ಜ್ವರ, ನೆಗಡಿ, ಕೆಮ್ಮು ಮುಂತಾದವುಗಳಿಗೆ ಸಣ್ಣ ಮಕ್ಕಳಿಂದ ದೊಡ್ಡವರಿಗೆ ೧ ರಿಂದ ೪ ಮಾತ್ರೆಗಳಂತೆ ಕೊಟ್ಟರೆ ಗುಣ ಕಾಣುವದು. ಸುಮಾರು ೨೦೦ ಮಾತ್ರೆ ಉಳ್ಳ ಸೀಸೆ ೧ಕ್ಕೆ ೪ ಆಣೆ ೧ ರಿಂದ ೧೨ ಸೀಸೆಗೆ ವಿ. ಪಿ ಛಾರ್ಜಿ ೫ ಆಣೆ

೪ ವೇದನಾಪರಿಹಾರಕ ತೈಲವು —ಇದನ್ನು ನೋಯುವ ಸ್ಥಳಗಳಲ್ಲಿ ಮಾತ್ರ ಹಚ್ಚುವದರಿಂದ ಕೈಕಾಲು ಸೆಳೆದುಕೊಳ್ಳುವದು ವಾತರೋಗ, ಪಾರ್ಶ್ವವಾಯು, ನರಗಳ ಸೆಳೆತ ಮೊಣಕಾಲು ನೋವು ಮತ್ತು ಎದೆ ಇವುಗಳ ನೋವು, ಬೋಳು ಮುಂತಾದ ಅಂಗಗಳ ಮೇಲಿನ ನೋವು, ಶಲೆಶೂಲೆ, ಹಲ್ಲುನೋವು, ಕಿವಿನೋವು, ಚಳಿ, ಕೆಮ್ಮು ಮುಂತಾದ ಎಲ್ಲಾ ವಿಧವಾದ ನೋವುಗಳೂ ಖಂಡಿತವಾಗಿ ವಾಸಿಯಾಗುವವು ಸೀಸೆ ೧ಕ್ಕೆ ೧ ರೂ ೩ ಬಾಟ್ಲಿ ವರೆಗೆ ವಿ ಪಿ ಛಾರ್ಜಿ ೫ ಆಣೆ

೫. ಲೋಕಪ್ರಸಿದ್ಧವಾದ ಪರಿಮಳ ಕೇಶತೈಲವು —ಬೋಳುತಲೆ, ಸುಡು ಅಥವಾ ಹೊಟ್ಟು ಉದುರುವಿಕೆ, ಇವು ಸಂಪೂರ್ಣವಾಗಿ ವಾಸಿಯಾಗುವದಲ್ಲದೆ, ತಲೆಯನ್ನೂ ಮೆದುಳನ್ನೂ ತಣ್ಣಗಿರುವಂತೆ ಮಾಡಿ, ತಲೆ, ಮೀಸೆ, ಮುಖ್ಯಕೂದಲುಗಳನ್ನು ಹೇರಳವಾಗಿ ಬೆಳಸುವದು ಮತ್ತು ಕಣ್ಣು ಮಿದುಳು ಸಂಬಂಧವಾದ ರೋಗಗಳನ್ನೆಲ್ಲಾ ವಾಸಿಮಾಡುವದು, ಬಹಳ ಮನೋರಂಜಕವಾಗಿ ಪರಿಮಳಿಸುವದು ಬೆಲೆ ಸೀಸೆ ೧ಕ್ಕೆ ೮ ಆಣೆ ೨ ಸೀಸೆ ವರೆಗೆ ವಿ ಪಿ ಛಾರ್ಜಿ ೫ ಆಣೆ.

೬. ನೇತ್ರಬಿಂದು.—ಸಮೀಪದೃಷ್ಟಿ, ಕಣ್ಣಿನಲ್ಲಿ ನೀರು ಸುರಿಯುವುದು, ಕಣ್ಣುನೋವು, ಗೂಡ ಬರುವುದು, ಉರಿ ಮುಂತಾದ ನೇತ್ರರೋಗಗಳು ಇದರಿಂದ ಗುಣವಾಗುವವು ಸೀಸೆ ೧ಕ್ಕೆ ೮ ಆಣೆ ವಿ. ಪಿ ಛಾರ್ಜಿ ೬ ಸೀಸೆ ವರೆಗೆ ೫ ಆಣೆ

೭. ಶ್ರೋತ್ರಬಿಂದು — ಕಿವಿಯು ಎಷ್ಟು ಹೆಚ್ಚಾಗಿ ನೋಯುತ್ತಿದ್ದರೂ ಅದನ್ನು ಕೀವು ಸುರಿಯುವುದು ಕಿವಿಯ ಮಾಂದ್ಯವು, ಕಿವುಡು ಮುಂತಾದ್ದನ್ನೂ ಜಾಗ್ರತೆ ಪರಿಹರಿಸುವದು, ಬೆಲೆ ಸೀಸೆ ೧ಕ್ಕೆ ೮ ಆಣೆ ವಿ ಪಿ ಛಾರ್ಜಿ ೬ ಸೀಸೆ ವರೆಗೂ ೫ ಆಣೆ.

೮ ಬಿಳಿಕಷ್ಟಿಗೆ ಔಷಧಿ.—ಚರ್ಮ ರೋಗಕ್ಕೂ, ಚರ್ಮಗತವಾದ ಎಲ್ಲಾ ವ್ಯಾಧಿಗಳಿಗೂ ಅತ್ಯುತ್ತಮವಾದ ಮದ್ದು ಒಂದು ಸಾರಿ ವಾಸಿಯಾದ ಮೇಲೆ ಪುನಃ ತಲೆದೋರುವದಿಲ್ಲ ಸೀಸೆ ೧ಕ್ಕೆ ೪ ಆಣೆ. ವಿ. ಪಿ. ಛಾರ್ಜಿ ೬ ಸೀಸೆ ವರೆಗೂ ೫ ಆಣೆ.

೯ ಸುಖಭೇದಿ —ಹೊಟ್ಟೆನೋವು, ಆಯಾಸ ಯಾವದೂ ಸ್ವಲ್ಪವೂ ಉಂಟಾಗದಂತೆ ಸುಖವಾಗಿ ಭೇದಿಯಾಗುವದು ಮಲಬಂಧ, ಅಜೀರ್ಣ, ವಾಯು, ಎದೆಯುರಿಯುವದು, ಪಿತ್ಥ, ಜ್ವರ, ಇವುಗಳನ್ನು ವಾಸಿಮಾಡುವುದು ಸೀಸೆ ೧ಕ್ಕೆ ೮ ಆಣೆ. ವಿ. ಪಿ. ಛಾರ್ಜಿ ೬ ಸೀಸೆ ವರೆಗೂ ೫ ಆಣೆ.

ಕಾಗದವನ್ನು ಇಂಗ್ಲಿಷ್ ಅಥವಾ ತಮಿಳಿನಲ್ಲಿ ಬರೆಯಿರಿ.

Apply to.—**P. SUBBAROY,**
Porto Novo, South Arcot.

ವಿಳಾಸ:—ಪಿ. ಸುಬ್ಬರಾಯ್,
ಪೋರ್ಟನೋವೋ, ದಕ್ಷಿಣ ಆರ್ಕಾಟ್ ಜಿಲ್ಲಾ.

CHAMBERLAIN'S COLIC, CHOLERA AND DIARRHOEA REMEDY.

ಚೇಂಬರ್ಲಿನ್ ರವರು ಹೊಟ್ಟೆಶೂಲೆ, ಕಾಲರಾ, ಭೇದಿಗಳಿಗೆ ಕಂಡುಹಿಡಿದಿರುವ ಔಷಧವು.

15-13



ಕೆಳ ಹೊಟ್ಟೆಯ ನೋವು, ಬರೀ ಭೇದಿಯಾಗುವುದು, ಆಮಶಂಕೆ, ವಾಂತಿಭೇದಿ ಉಪದ್ರ, ಶೀತದ ನೋವು, ಹೊಟ್ಟೆಯ ನಾನಾ ತರದ ಶೂಲೆಗಳು—ಈ ರೋಗಗಳನ್ನೆಲ್ಲಾ ವಾಸಿಮಾಡುತ್ತದೆ ಈ ಪರಮಾಶ್ಚರ್ಯಯುಕ್ತವಾದ ಔಷಧವು ಜನರನ್ನು ಬದುಕಿಸಿರುವಷ್ಟು ಮತ್ತು ನೋವನ್ನೂ ಬಾಧೆಯನ್ನೂ ನಿವಾರಣೆ ಮಾಡಿರುವಷ್ಟು ಪ್ರಪಂಚದಲ್ಲೇ ಇನ್ಯಾವ ಔಷಧವೂ ಮಾಡಿರುವುದಿಲ್ಲ

ಜ್ಞಾಪಕದಲ್ಲಿಟ್ಟುಕೊಳ್ಳಿ—ಒಂದು ಹೊತ್ತು ಈ ಔಷಧವನ್ನು ಸೇವಿಸಿದ ಕೂಡಲೇ ಹೊಟ್ಟೆಯೊಳಗಿರುವ ಎಲ್ಲಾ ತರದ ನೋವನ್ನೂ ನಿಲ್ಲಿಸಿಬಿಡುತ್ತದೆ. ಬಹಳ ಕಠಿಣವಾದ ಭೇದಿಯೂ ಕೂಡ ಮೂರೇ ಹೊತ್ತು ಈ ಔಷಧದಿಂದ ನಿರ್ಮೂಲಮಾಡಿ ನಿಲ್ಲಿಸುತ್ತದೆ ಖಂಡಿತವಾಗಿ ವಾಸಿಮಾಡುವುದೇ ಇದರ ಗುಣ.

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ.

ಕೈಯಿಂದ ಸ್ವಲ್ಪವೂ ಮುಟ್ಟಿದ್ದಲ್ಲ.

ಇದು ಎಲ್ಲೆಲ್ಲೂ ಬಿಕರಿಯಾಗುವುದು ಸಣ್ಣ ಸೀಸೆಗೆ ೧ ರೂಪಾಯಿ ದೊಡ್ಡ ಸೀಸೆಗೆ ೨ ರೂಪಾಯಿ.

CHEAP, CHEAP, VERY CHEAP.

60 2

English School Books for all standards Mangalore and Mysore Govt Book Depot publications.

BOOKS FOR F. A AND B. A. STUDENTS.
Notes for L S and Matriculation Texts for 1906.
Matriculation Texts for 1906 in Kanarese, Tamil, Telugu, and Sanskrit.

N B—Postage is free when 5 copies of Texts are purchased at a time A discount of 5 % is allowed when 12 copies are taken

Apply —Mission Book Depot,
Bangalore City



ಅದ್ಭುತ ಜನವರಿ ಪ್ರೆಸೆಂಟೇಷನ್ ವಾಚು!

ನಕ್ಷೆಯಲ್ಲಿ ತೋರಿಸಿರುವ ನಿಕ್ಕಲ್ ಸಿಲ್ವರ್ ರಾಸ್ಕೋಪ್ ಪೇಟೆಂಟ್ ರಿವರ್ ವಾಚು ಅದು ರತ್ನಗಳುಳ್ಳ ಓಪನ್ ಫೇಸ್ ಕೀಲೆಸ್ ಕಂಪೆನ್ಸೇಟೆಡ್ ಬ್ಯಾಲನ್ಸ್ ಬಹು ಭದ್ರವಾದ ಗಡಿಯಾರ. ೫ ವರುಷ ಗ್ಯಾರಂಟೀ. ಕ್ರಯ ರೂ. ೫—೮—೦ ಜನವರಿ ಮಹೋತ್ಸವಕ್ಕಾಗಿ ಡಿಸಂಬರ್ ೧ನೇ ತಾರೀಖು ಮೊದಲು ೫೦೦೦೦ ವಾಚುಗಳು ಮುಗಿಯುವದರೊಳಗಾಗಿ ದರವಾಸ್ತು ಕಳುಹಿಸತಕ್ಕದ್ದು ಇದರಲ್ಲಿ ಕಂಡ ಸಾಮಾನುಗಳನ್ನು ಬಹುಮಾನ ಕೊಡುವದು ನಕ್ಷೆಗೆ ಸ್ವಲ್ಪವೂ ವ್ಯತ್ಯಾಸವಿಲ್ಲದೆಯಿರುತ್ತೆ.

ಜರ್ಮನ್‌ಸಿಲ್ವರ್ ಚೈನು ಸಹ ಕ್ರಯ, ೦—೮—೦

ಗಡಿಯಾರದ ಸರಪಣಿ ಕ್ರಯ, ೦—೯—೦.

ಮುಂಗುರವಂತೆ ಕುಚ್ಚುಳ್ಳ ಮೋಹದ ಮೇಲೆ ಹಾಕಿಸಬಹುದು ಗೋಲ್ಡಿಗೆ ಹಾಕಿಸ ಬಹುದು. ಕ್ರಯ, ೦—೧೦—೦.

ತರಹ ಗುಂಡಿಗಳು ಜರ್ಮನ್‌ಸಿಲ್ವರ್ ನಿಂದ ತಯಾರಿಸಿಯುತ್ತ ಕ್ರಯ, ೧—೮—೦

ತಂಡದ ಪೆಟ್ಟಿಗೆಗಳು ಅಥವಾ ಭದ್ರವಾಗಿ ಇರಿಸಬಹುದು. ಕ್ರಯ, ೦—೧೦—೦.

ವಿಳಾಸ,—ಪ್ಲಾರಿನ್ ವಾಚ್ ಕಂಪೆನಿ.
ಜಾರ್ಜ್ ಟವನ್ ಮದರಾಸ್.

ಮಕ್ಕಳ ಹಿತಕಾರಿ

ಎಂದು

SCOTT'S EMULSION. 57-3
(ಸ್ಕಾಟ್ಸ್ ಇಮಲ್‌ಷನ್)

ಎಂಬೀ ಸೇವನಾ ಔಷಧಕ್ಕೆ ಕೋಟ್ಯಾಂತರ ತಾಯಂದಿರುಗಳು ಹೆಸರಿಟ್ಟಿರುತ್ತಾರೆ, ಯಾಕಂದರೆ ಇದು ಮಕ್ಕಳ ಆರೋಗ್ಯವನ್ನು ವೃದ್ಧಿಪಡಿಸಿ ದೇಹವನ್ನು ಪುಷ್ಟಿಯಾಗಿ ಬೆಳೆಸಿರುತ್ತದೆ

ಇದು ಬಹಳ ರುಚಿಯಾಗಿರುವದರಿಂದ ಮಕ್ಕಳು ಬಹು ಸಂತೋಷವಾಗಿ ಸೇವನೆಮಾಡುತ್ತಾರೆ.

ಇದು ಕಾಯಿಲೆ ಮಕ್ಕಳನ್ನು ಆರೋಗ್ಯಮಾಡುತ್ತದೆ, ಅಶಕ್ತರಾದ ಮಕ್ಕಳನ್ನು ಬಲಿಷ್ಠರನ್ನಾಗಿ ಮಾಡುವದು.

ಕೈಸೋಕದೆ ತಯಾರಾದದ್ದು.

ಎಲ್ಲಾ ಔಷಧ ವ್ಯಾಪಾರಸ್ಥರಲ್ಲಿ ಬಿಕರಿಯಾಗುತ್ತೆ.

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,
ಔಷಧಗಳ ಕಾರ್ಖಾನೆ,
ಲಂಡನ್, ಇಂಗ್ಲೆಂಡ್

ಈ ಮೀನು ಮನುಷ್ಯ ಇರುವ ಔಷಧವನ್ನೇ ಕೊಂಡುಕೊಳ್ಳಿ.

ನೋಟೀಸು.

63-1

ಮೈಸೂರು ಚಾಮರಾಜ ಮೊಹಲ್ಲಾದಲ್ಲಿರುವ ಕಾಂಟ್ರಾಕ್ಟರನ ಹೆಂಡತಿ ಜಮ್ಮನು ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ —

ಸ್ವ.ತಸಟ್ಟ ನನ್ನ ಗಂಡ ಚಿಕ್ಕ ಅಲ್ಲೈಯ್ಯ ಈತನ ಅಣ್ಣ ದೊಡ್ಡ ಅಲ್ಲೈಯ್ಯ ಎಂಬುವರಿಬ್ಬರು ಏಕೋದರರಾಗಿದ್ದು ನನ್ನ ಭಾವ ದೊಡ್ಡ ಅಲ್ಲೈಯ್ಯನೆಂಬುವರಿಗೆ ಹೆಂಡತಿ ಈರಮ್ಮ ಉರಫ್ ಅವ್ವಾಜಮ್ಮ ಹತ್ತು ವರುಷದ ಒಬ್ಬ ಹೆಣ್ಣುಮಗಳು ನನಗೆ ಹತ್ತು ವರುಷದ ಕಾವೈಯ್ಯನೆಂಬ ಒಬ್ಬ ಗಂಡು ಮಗನು ಸಹಾ ನಾವು ನಾಲ್ಕು ಜನಗಳಿರುತ್ತೇವೆ ಈ ನಮ್ಮ ಉಭಯರ ಆಸ್ತಿಗಳಿಗೂ ಹೆಣ್ಣುಗಳ ಪೋಷಣೆ ವಗೈರೆ ನನ್ನ ಭಾವನ ಹೆಂಡತಿ ಈರಮ್ಮ ಉರಫ್ ಅವ್ವಾಜಮ್ಮನ ಅನಂತರ ನನ್ನ ಮತ್ತು ನನ್ನ ಮಗ ಕಾವೈಯ್ಯನಿಗೆ ಸೇರಬೇಕಾಗಿದೆ ಸದರಿ ಈರಮ್ಮ ಉರಫ್ ಅವ್ವಾಜಮ್ಮನೆಂಬುವರಿಗೆ ಜನಗಳು ದುರ್ಬೋಧನೆ ಮಾಡಿ ಅವರಲ್ಲಿರತಕ್ಕ ಒಂಗಾರ ನಗಗಳು ನಗದು ಮೊಬಲಗು ಚಾಮರಾಜ ಮೊಹಲ್ಲೆಯಲ್ಲಿ ಅವರು ವಾಸವಾಗಿರತಕ್ಕ ನಂಬರ್ ೪೧—೪೨ ನೆ ಹೆಂಚಿನ ಮನೆ ಖಾಲಿ ಜಾಗ ವಗೈರೆ ಚರ ಮತ್ತು ಸ್ಥಿರ ಸ್ವತ್ತುಗಳನ್ನು ಸ್ವಾಧೀನ ಮಾಡಿಕೊಂಡು ತೆಗೆದುಕೊಳ್ಳುತ್ತೇನೆ. ಹಾಗೆ ಯಾರಾದರೂ ಯಾವ ವಿಧವಾಗಿಯೇ ಆಗಲಿ ತಮ್ಮ ಅಧೀನ ಪಡಿಸಿಕೊಂಡಲ್ಲಿ ಅಂದರೆ ಪಡೆದು ಕೊಂಡಿದ್ದರೆ ಇದರ ವಿಷಯ ಬಾಧ್ಯತೆಯು ನನ್ನ ಮತ್ತು ನನ್ನ ಮಗ ಕಾವೈಯ್ಯನದಾಗಿರುತ್ತೆ, ತಿಳಿಯುವದು.

೧ ಈರಮ್ಮನ ಗುರುತು

ವೃತ್ತಾಂತ ಪತ್ರಿಕೆ

೧೯೦೬ನೇ ಇಸವಿ ಏಪ್ರಿಲ್ ತಾ|| ೫ನೇ ಗುರುವಾರ.

ವಿದ್ಯಾವಂತರಿಗೆ ಬುದ್ಧಿವಾದ.

ಮದರಾಸ್ ಅಧಿಪತ್ಯದಲ್ಲಿ ಬಿ. ಎ. ಮೊದಲಾದ ಗೌರವಯುಕ್ತವಾದ ಪರೀಕ್ಷೆಗಳಲ್ಲಿ ಈ ಸಲ ತೇರ್ಗಡೆಹೊಂದಿದ ವಿದ್ಯಾರ್ಥಿಗಳಿಗೆ ಕಳೆದ ಶುಕ್ರವಾರ ಮದರಾಸ್ ಪಟ್ಟಣದಲ್ಲಿ ಮಿ' ನಾಗೋಜಿರಾಯರು ಕೆಲವು ಸೂಕ್ತಿಗಳನ್ನು ಹೇಳಿದರು. ಮೈಸೂರು ಮಹಾರಾಣಿಯವರ ಕಾಲೇಜಿನಲ್ಲಿ ಓದಿ ಬಿ. ಎ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ಸೌ|| ರುಕ್ಮಿಣಮ್ಮನವರೂ ಸೌ|| ಶ್ರೀರಂಗಮ್ಮನವರೂ ಆ ಮಹಾ ಸಭೆಯಲ್ಲಿ ವಿಶೇಷವಾದ ಸನ್ಮಾನವನ್ನು ಹೊಂದಿದರು. ಯಾಕಂದರೆ ಅವರು ಸಂಸಾರವನ್ನು ಮಾಡುತ್ತಾ ಮಕ್ಕಳವಂದಿಗರಾಗಿ ನಾನಾ ಕಷ್ಟಗಳಿಗೆ ಗುರಿಯಾಗಿದ್ದರೂ ವಿಶೇಷ ಉತ್ಸಾಹಪೂರ್ವಕವಾಗಿಯೂ ಅಸಾಧಾರಣವಾದ ಮನಸ್ಸಂಕಲ್ಪದಿಂದಲೂ ಬಿಡದೆ ವಿದ್ಯಾಭ್ಯಾಸಮಾಡುವುದು ಅಪೂರ್ವವೂ ಸ್ತೋತ್ರಾರ್ಹವೂ ಆಗಿರುತ್ತದೆ. ಮೈಸೂರು ಮಹಾರಾಣಿಯವರ ಕಾಲೇಜಿಗೂ ಅವನ್ನು ವಿತರಣೆಯಿಂದ ನಡಿಸಿಕೊಂಡು ಬರುವವರಿಗೂ ಇವರಿಂದ ತುಂಬಾ ಸನ್ಮಾನ ಉಂಟಾಗಿರುವುದು. ಸ್ತ್ರೀಯರು ವಿದ್ಯಾವತಿಯರಾಗುವುದೇನೂ ಅಸಾಧ್ಯವಲ್ಲವೆಂಬುವುದು ಇವರಿಂದ ದೃಷ್ಟಾಂತಪೂರ್ವಕವಾಗಿ ಸ್ಥಿರಪಟ್ಟಿತು. ಬ್ರಾಹ್ಮಣಸ್ತ್ರೀಯರಲ್ಲಿ ಇಷ್ಟುಮಟ್ಟಿಗೆ ಇದುವರೆಗೆ ಯಾರೂ ವಿದ್ಯಾಭ್ಯಾಸ ಮಾಡಿರುವುದಿಲ್ಲ. ಇತರ ದೇಶಗಳ ಹೆಣ್ಣುಮಕ್ಕಳಲ್ಲಿ ಬಹುಮಂದಿ ಹೆಚ್ಚಾಗಿ ವಿದ್ಯಾಭ್ಯಾಸ ಮಾಡಿರುತ್ತಾರೆ ಬ್ರಾಹ್ಮಣರಲ್ಲಿ ಹೆಣ್ಣುಮಕ್ಕಳನ್ನು ಶಾಲೆಗೆ ಕಳುಹಿಸಿದರೂ ಅವರು ಅಕ್ಷರಸ್ಥೆಯರಾಗುವದರೊಳಗಾಗಿ ಅವರನ್ನು ಬಿಡಿಸಿಕೊಳ್ಳುತ್ತಾರೆ. ತಕ್ಕಮಟ್ಟಿಗಾದರೂ ತಮ್ಮ ಕರ್ತವ್ಯವನ್ನೂ ಪ್ರಪಂಚಜ್ಞಾನ

ಸಂಪಾದಿಸಿಕೊಳ್ಳುವಷ್ಟು ವಿದ್ಯೆ ಕಲಿಯುವ ತನಕ ಮಕ್ಕಳನ್ನು ಪಾಠಶಾಲೆಯಲ್ಲಿ ಇಟ್ಟಿರಬೇಕು. ಅವಿದ್ಯಾವಂತ ಸ್ತ್ರೀಯರು ಎಲ್ಲಿಯವರೆಗೆ ಹಿಂದುಸ್ಥಾನದಲ್ಲಿ ತಾಯಿಗಳಾಗಿರುವರೋ ಅಲ್ಲಿಯವರೆಗೂ ಈ ರಾಷ್ಟ್ರವು ಅಂಧಕಾರಮಯವಾಗಿರುವುದು. ಇದರ ಮರ್ಮವನ್ನು ವಿದ್ಯಾಭ್ಯಾಸವನ್ನಾಳುವವರು ಮೊದಲೇ ತಿಳಿದು, ಈ ಅಂಧಕಾರವನ್ನು ನಿವಾರಣೆಮಾಡುವುದಕ್ಕಾಗಿಯೇ ಬಾಲಿಕಾ ಪಾಠಶಾಲೆಗಳೆಂಬ ತೀಕ್ಷ್ಣವಾದ ಸೂರ್ಯಕಿರಣಗಳನ್ನು ಅನೇಕವಾಗಿ ಕಲ್ಪಿಸಿರುವರು. ಪ್ರಜೆಗಳು ಗಂಡುಮಕ್ಕಳಿಗೆ ವಿದ್ಯೆ ಕಲಿಸುವುದರಲ್ಲಿ ಎಷ್ಟು ಉತ್ಸಾಹವುಳ್ಳವರಾಗಿರುವರೋ ಹೆಣ್ಣುಮಕ್ಕಳ ವಿದ್ಯಾಭಿವೃದ್ಧಿಯ ವಿಷಯದಲ್ಲಿಯೂ ಉತ್ಸಾಹ ಪಡೆಯುವವರಾಗಲೆಂದು ಹಾರೈಸುತ್ತೇವೆ. ಯುವಕರು ಒಂದೇ ಮನಸ್ಸಿನಿಂದ ವಿದ್ಯಾಭ್ಯಾಸವೂ ದೇಶದ ಶ್ರೇಯೋಭಿವೃದ್ಧಿಗಾಗಿ ಕಷ್ಟಪಡುವುದಕ್ಕೆ ಬಾಲ್ಯವಿವಾಹವೆಂಬುವುದು ದೊಡ್ಡ ಅಡಚಣೆಯಾಗಿರುತ್ತದೆ. ವಿದ್ಯಾಭ್ಯಾಸಮಾಡುತ್ತಿರುವಾಗಲೇ ವಿದ್ಯಾರ್ಥಿಗಳು ತಂದೆಗಳಾಗಿರುತ್ತಾರೆ. ಅವರು ಅದಷ್ಟು ಬೇಗ ವಿದ್ಯಾಭ್ಯಾಸವನ್ನು ಬಿಟ್ಟು, ಅಲ್ಪಸ್ವಲ್ಪ ವರಮಾನವುಳ್ಳ ಕೆಲಸಗಳನ್ನು ಹುಡುಕಿಕೊಂಡು, ಕಾಲಯಾಪನೆ ಮಾಡುವುದರಿಂದ ದೇಶೋನ್ನತಿಯು ಅವರ ದೃಷ್ಟಿಗೆ ಅಗೋಚರವಾಗಿರುವುದು. ಆದಕಾರಣ ತಂದೆ ತಾಯಿಗಳು ಮಕ್ಕಳ ಬ್ರಹ್ಮಚರ್ಯಾಶ್ರಮದ ಉದ್ದೇಶವೆಲ್ಲಾ ಸಂಪೂರ್ತಿಯಾಗುವ ತನಕ ಮದುವೆ ಮಾಡದಂತೆ ತಡೆಯುವುದೂ, ಅಸಮರ್ಥರಾದ ವಿದ್ಯಾರ್ಥಿಗಳು ವಿದ್ಯಾಪಾರಂಗತರಾಗುವುದಕ್ಕೆ ಮೊದಲು ವಿವಾಹ ಮಾಡಿಕೊಳ್ಳುವುದಿಲ್ಲವೆಂದು ಶಪಥಮಾಡಿಕೊಳ್ಳುವುದೂ ಬಹು ಅವಶ್ಯವಾಗಿರುವುದು. ದೇಶಾಭಿವೃದ್ಧಿಗೆ ಅಡ್ಡಿಯಾಗಿರುವಂಥಾ ದುರಾಚಾರ ಪದ್ಧತಿಗಳೆಂಬ ಸಂಕೋಲೆಗಳನ್ನು ಕ್ರಮಕ್ರಮವಾಗಿ ಕಿತ್ತು ಬಿಸಾಕುತ್ತಾ ಬರಬೇಕು.

"ವಿಶ್ರಮ ದಿನವನ್ನು ಪರಿಶುದ್ಧವಾಗಿ ಆಚರಿಸುವಂತೆ ಜ್ಞಾಪಕ ಮಾಡಿಕೋ"

ವಾರಕ್ಕೊಂದು ದಿನವನ್ನು ದೇವರ ಸೇವೆಯಲ್ಲಿ ವೆಚ್ಚಮಾಡಬೇಕೆಂದು ದೇವರು ಯೆಹೂದ್ಯರಿಗೆ ಕೊಟ್ಟ ಕಟ್ಟಳೆಗಳಲ್ಲೊಂದು (ವಿಮೋ. ೨೦. ೮—೧೧). ಈ ಕಟ್ಟಳೆಯ ಅಭಿಪ್ರಾಯವನ್ನು ಯೇಸುವು ಹೀಗೆ ವಿವರಿಸಿದ್ದನು.

ಅದು ಹ್ಯಾಗೆಂದರೆ—ಆ ದಿನವು ಮನುಷ್ಯನಿಗೆ ಆನಂದಕರವಾದ ದಿನವು ಪವಿತ್ರವಾದ ದಿನವು. ಅದನ್ನು ಘನಪಡಿಸಬೇಕೆಂದು ಕಾಣುತ್ತದೆ. ಸ್ವಂತ ಸುಖಸಂತೋಷಗಳಲ್ಲಿ ಅದನ್ನು ವೆಚ್ಚ ಮಾಡತಕ್ಕದ್ದಲ್ಲ. ಭಗವಂತನ ಸೇವೆಯಲ್ಲಿ ವೆಚ್ಚಮಾಡುವವರ ಆಗ ಸ್ವಾಮಿಯನ್ನು ವಿನೋದಕರವಾದ ದಿನವಾಗಿ ಮಾಡುವನು ಎಂದು ಯೆಶಾಯನು (ಯೆಶಾ. ೫೮: ೧೩, ೧೪). ಆದರೆ ಯೆಹೂದ್ಯರ ಮತಾಧಿಕಾರಿಗಳಾದ ಶಾಸ್ತ್ರಿಗಳೂ ಫರಿಸಾಯರೂ ದೇವರು ಕೊಟ್ಟ ಕಟ್ಟಳೆಗೆ ಸ್ವಂತವಾಗಿ ಅನೇಕ ಕಟ್ಟಳೆಗಳನ್ನು ಕಲ್ಪಿಸಿಕೊಟ್ಟಿದ್ದ ಕಾರಣ ಆ ದಿನವು ನಿಜವಾಗಿ ವಿಶ್ರಾಂತಿಯ ದಿನವಾಗಿ ಆಚರಿಸುವದು ಪ್ರಯಾಸವಾಗಿತ್ತು. ಮತ್ತಾಯನು ಸುವಾರ್ತೆಯಲ್ಲಿ ಈ ವಿಷಯ ಬರೆದಿರುವದನ್ನು ನೋಡಿದರೆ (ಮತ್ತಾಯ ೧೨: ೧—೧೪) ಸ್ವಾಮಿಯು, ಈ ವಿಶ್ರಾಂತಿ ದಿನದ ಆಚರಣೆಯ ವಿಷಯದಲ್ಲಿ ಬೋಧಿಸಿದ್ದು ಚನ್ನಾಗಿ ಗೊತ್ತಾಗುತ್ತದೆ. ಅದೇನಂದರೆ—

ಅದಿನೊಂದು ವಿಶ್ರಾಂತಿ ದಿನದಲ್ಲಿ ಯೇಸುಸ್ವಾಮಿಯು ತನ್ನ ಶಿಷ್ಯರ ಸಂಗಡ ಪೈರು ತುಂಬಿದ ಹೊಲದಲ್ಲಿ ಹಾದು ಹೋಗುತ್ತಿದ್ದನು. ಹಸಿವಿನಿಂದಿದ್ದ ಶಿಷ್ಯರು ತೆನೆಗಳನ್ನು ಕಿತ್ತು ಕೈಯಲ್ಲಿ ಹೊಸಗಿ ತಿನ್ನುತ್ತಿದ್ದರು. ಹೀಗೆ ಮಾಡುವದು ನ್ಯಾಯಕ್ಕೆ ವಿರೋಧವೇನೂ ಅಲ್ಲ (ಧರ್ಮೋ. ೨೩: ೨೫). ಆದರೆ ಇದನ್ನು ಫರಿಸಾಯರು ನೋಡಿ—ಸಬ್ಬತ್ ದಿನದಲ್ಲಿ ಮಾಡಬಾರದ ಕೆಲಸವು ಕೊಯ್ಯುವದೆ ತೆನೆಯಿಂದ ಕಾಳನ್ನು ಕೈಯಿಂದ ಹೊಸಗುವದು ಒಕ್ಕುವದು, ಧಾನ್ಯವನ್ನು ಕೈಯಿಂದ ಹೊಸಗಿದ್ದು ಪೈರನ್ನು ಕಣದಲ್ಲಿ ತುಳಿಸಿದ ಹಾಗಾಯಿತು. ಆದದರಿಂದ ಇದು ಕಟ್ಟಳೆಗೆ ವಿರೋಧವೆಂದು ಹೇಳಿದರು. ಇದಕ್ಕೆ ಪ್ರತ್ಯುತ್ತರವಾಗಿ ಯೇಸುಸ್ವಾಮಿಯು—ಕಟ್ಟಳೆಯನ್ನು ಅಕ್ಷರಶಃ ಮೀರಿದರೂ ಅದರ ಅರ್ಥವನ್ನು ನೆರವೇರಿಸಲೂ ಬಹುದು ಎಂದು ಹೇಳಿದನು. ಇದಕ್ಕೆ ದೃಷ್ಟಾಂತಗಳು—೧. ದಾವೀದನೆಂಬುವನನ್ನು ಸೌಲನೆಂಬ ರಾಜನು ಕೊಲ್ಲುವದಕ್ಕೆ ಯತ್ನಿಸುತ್ತಿರಲು ಆ ದಾವೀದನು ಅಹಿಮೆಲೇಕ ಯಾಜಕನ ಬಳಿಗೆ ಹೋದನು. ಆ ದಾವೀದನೂ ಅವನ ಜೊತೆಯವರೂ ಹಸಿವಿನಿಂದ ಬಹಳ ಕಷ್ಟಪಡುತ್ತಿದ್ದರು. ಆ ಯಾಜಕನ ಬಳಿಯಲ್ಲಿ ಸಾಧಾರಣವಾದ ಆಹಾರಪದಾರ್ಥವಿರಲಿಲ್ಲ. ಯಾಜಕರು ಮಾತ್ರ ತಿನ್ನಬಹುದೆಂದು ಕಟ್ಟಳೆಯಿದ್ದ ಪವಿತ್ರವಾದ ನೈವೇದ್ಯಪದಾರ್ಥಗಳು ಮಾತ್ರವಿದ್ದವು. ದಾವೀದನೂ ಅವನ ಜೊತೆಯವರೂ ಅನ್ನವಿಲ್ಲದೆ ಸಾಯುವದನ್ನು ನೋಡುವದಕ್ಕಿಂತ ಆ ನೈವೇದ್ಯಪದಾರ್ಥಗಳನ್ನು ಕೊಟ್ಟು ಕಾಪಾಡುವದು ಉತ್ತಮವೆಂದು ಆ ಯಾಜಕನು ನೆನಸಿ (೧ ಸಮು. ೨೧: ೧—೬). ಆ ಯಾಜಕನು ಕಟ್ಟಳೆಯನ್ನು ಮೀರಿದನು. ಹೇಳಿದ್ದರೆ ಆ ಕಟ್ಟಳೆಯು ದೇವರಿಂದ ಕೆಲವರಿಗೆ ಮಾತ್ರವಾಗುತ್ತಿತ್ತು. ಆದರೆ ಕಟ್ಟಳೆಯ ಉದ್ದೇಶವು ಅದಲ್ಲ. ಪ್ರಾಣವನ್ನು ಪರಿಪಾಲಿಸುವದೇ ಕಟ್ಟಳೆಯ ಉದ್ದೇಶವು. ಸಕಲವಿಧವಾದ ಕಟ್ಟಳೆಗಳ ಉದ್ದೇಶವೆಲ್ಲಾ ಇದೇ.

ಸ್ವಾಮಿಯು ಹೇಳಿದ ಎರಡನೇ ದೃಷ್ಟಾಂತವೇನಂದರೆ—ಯಾಜಕರು ಕೆಲಸವನ್ನು ಮಾಡದೆ ಹೋದರೆ ದೇವಾಲಯದ ಸೇವೆಯು ನಡೆಯುತ್ತಿರಲಿಲ್ಲ. ಆದಕಾರಣ ವಿಶ್ರಮ ದಿನದ ವಿಷಯದಲ್ಲಿ ದೇವರು ನೇಮಿಸಿರುವ ಕಟ್ಟಳೆಯನ್ನು ಆರಾಧಕರು ನೆರವೇರಿಸುವದಕ್ಕೆ ಅವಕಾಶವುಂಟಾಗುವಂತೆ ಯಾಜಕರು ಆ ಕಟ್ಟಳೆಯನ್ನು ಮೀರುವದು ಅವಶ್ಯವಾಯಿತು. ಮೊದಲನೆಯ ದೃಷ್ಟಾಂತದಿಂದ ತಿಳಿದುಬರುವದೇನಂದರೆ—ವಿಶ್ರಮ ದಿನದಲ್ಲಾದರೂ ಕನಿಕರವುಳ್ಳ ಕಾರ್ಯವನ್ನಾಗಲಿ ಅವಶ್ಯವಾಗಿ ಮಾಡಬೇಕಾದ ಕಾರ್ಯವನ್ನಾಗಲಿ ಮಾಡಬಹುದು. ಎರಡನೇ ದೃಷ್ಟಾಂತದಿಂದ ತಿಳಿಯುವದೇನಂದರೆ—ದೇವಾರಾಧನೆಗೆ ಸಂಬಂಧಪಟ್ಟ ಕೆಲಸಗಳನ್ನು ವಿಶ್ರಮ ದಿನದಲ್ಲಿ ಮಾಡಬಹುದು.

ಮೂರನೇ ದೃಷ್ಟಾಂತವು ಒಂದು ಸಭಾಮಂದಿರದಲ್ಲಿ ನಡೆಯಿತು. ಅಲ್ಲಿ ಯೇಸುಸ್ವಾಮಿಯು ಬೋಧಿಸುವದಕ್ಕೆ ಹೋಗಿರಲು ಅಲ್ಲಿ ಕೈ ಬತ್ತಿಹೋಗಿದ್ದ ಒಬ್ಬ ಮನುಷ್ಯನನ್ನು ಸ್ವಸ್ಥಪಡಿಸಿದನು (೯—೧೪). ಆಗ ಅಲ್ಲಿದ್ದವರು ಆತನ ಮೇಲೆ ತಪ್ಪು ಹೊರಿಸಿದರು. ಅದಕ್ಕಾತನು—ನಿಮ್ಮಲ್ಲಿ ಯಾರಿಗಾದರೂ ಒಂದೇ ಒಂದು ಕುರಿ ಇದೆಯೆಂದು ಹೇಳೋಣ. ಅದು ವಿಶ್ರಾಂತಿ ದಿನದಲ್ಲಿ ಗುಣಿಯೊಳಗೆ ಬಿದ್ದರೆ ಅವನು ಅದನ್ನು ಹಿಡಿದು ಮೇಲಕ್ಕೆ ತೆಗೆಯದೆ ಇರುವನೇ? ಕುರಿಯು ನಷ್ಟವಾಗುವದನ್ನು ನೋಡಲಾರದೆ ವಿಶ್ರಾಂತಿ ದಿನವನ್ನು ಭಂಗಪಡಿಸಲು ಸ್ವಲ್ಪವೂ ಹಿಂದೆಗೆಯುವದಿಲ್ಲ. ಕುರಿಗಿಂತ ಮನುಷ್ಯನು ಎಷ್ಟೋ ಹೆಚ್ಚಲ್ಲವೇ? ಆದಕಾರಣ ವಿಶ್ರಾಂತಿ ದಿನದಲ್ಲಿ ಒಳ್ಳೇ ಕೆಲಸಮಾಡುವದು ತಪ್ಪಲ್ಲ. ಪರೋಪಕಾರದ ನಿಮಿತ್ತವಾಗಿ ವಿಶ್ರಾಂತಿ ದಿನದಲ್ಲಿ ಕೆಲಸವನ್ನು ಮಾಡುವದರ ದೇವರ ಕಟ್ಟಳೆಯನ್ನು ಮೀರಿದಂತಾಗುವದಿಲ್ಲ ಎಂದನು. ಯೆಹೂದ್ಯರಿಗೆ ಶನಿವಾರವು ವಿಶ್ರಾಂತಿ ದಿನವು. ಕ್ರೈಸ್ತರಿಗೆ ಭಾನುವಾರವು ವಿಶ್ರಾಂತಿ ದಿನವು. ಆಗಿರುವ ವಾರದ ಏಳು ದಿನಗಳಲ್ಲಿ ಒಂದೊಂದು ದಿನವು ದೇವಾರಾಧನೆಗಾಗಿಯೇ ನಿರೂಪಿಸಲ್ಪಟ್ಟಿದೆ. ಆ ದಿನದಲ್ಲಿ ಸ್ವಂತ ಕೆಲಸಗಳನ್ನು ಮಾಡುವದಕ್ಕಿಂತ ಹೆಚ್ಚಾಗಿ ಭಗವಂತನ ಸೇವೆಯನ್ನೇ ವಿಶೇಷವಾಗಿ ಮಾಡಬೇಕು. ಆದರೂ ಮನುಷ್ಯರು ನೇಮಿಸಿಕೊಂಡಿರುವ ಇಂಥಿಂಥ ಕೆಲಸಗಳನ್ನು ಆ ದಿನದಲ್ಲಿ ಮಾಡಬಾರದು. ಇಂಥಿಂಥ ಕೆಲಸವನ್ನು ಮಾಡಬಹುದು ಎಂದು ನಿರ್ಣಯಿಸಿಕೊಂಡಿರುವರು. ಹೀಗಿರುವಲ್ಲಿ ಮನುಷ್ಯರು ನೇಮಿಸಿದ ಸ್ವಂತ ಕಟ್ಟಳೆಗಳು ಪ್ರಯೋಜನಕರವಲ್ಲದ ನಿರ್ಬಂಧಗಳಾಗಿಯೇ ಇರುವವು. ಆದರೆ ಯೇಸುಸ್ವಾಮಿಯು ಹೇಳಿದಂತೆ ವಿಶ್ರಾಂತಿ ದಿನಗಳ ಆಚರಣೆಯ ವಿಷಯದಲ್ಲಿ ಶ್ರೇಷ್ಠವಾದ ಕಟ್ಟಳೆಯನ್ನು ನಾವು ತಿಳಿದುಬರುವದೇನಂದರೆ—

ವಿಶ್ರಾಂತಿ ದಿನವು ನಮ್ಮ ಸ್ವಂತ ದಿನವಲ್ಲ, ಅದು ದೇವರ ದಿನ. ಆ ದಿನದಲ್ಲಿ ನಮ್ಮ ಸ್ವಂತ ಲಾಭವನ್ನಾಗಲಿ ಸುಖಸಂತೋಷಗಳನ್ನಾಗಲಿ ನೋಡಿಕೊಳ್ಳಬಾರದು. ಆ ದಿನವನ್ನು ದೇವಾರಾಧನೆಯಲ್ಲಿಯೂ ಪರೋಪಕಾರದಲ್ಲಿಯೂ ವೆಚ್ಚಮಾಡತಕ್ಕದ್ದು. ಈ ಉದ್ದೇಶವನ್ನು ಮರೆತುಬಿಟ್ಟರೆ ಆ ದಿನವನ್ನು ನಾವು ವೆಚ್ಚಮಾಡುತ್ತೇವೋ ಅದೇ ನಮಗೆ ಕೇವಲ ಸುದಿನವಾಗಿರುವದು. ಆ ಉತ್ತಮ ದಿನಗಳೆಂತಾ ಮಹಾ ಪುಣ್ಯದಿನಗಳಾಗಿ ಪರಿಣಮಿಸುವವು.

ಒಳದೇಶದ ವೃತ್ತಾಂತಗಳು.

ಮೇ ಮಾಧವರಾಯರು ಸುಮಾರು ಇನ್ನೊಂದು ವಾರದಲ್ಲಿ ಬೆಂಗಳೂರಿಂದ ನೀಲಗಿರಿಗೆ ದಯಮಾಡುವರೆಂಬ ವರ್ತಮಾನವಿದೆ

❖❖❖❖

ಜಪಾನಿನ ಪ್ರಜೆಗಳಿಬ್ಬರು ನಾಳೆ ಭಾನುವಾರ ಬೆಂಗಳೂರಿಗೆ ಬಂದು, ತಮ್ಮ ದೇಶ ಮತ್ತು ತಮ್ಮ ಜನಗಳ ಸ್ಥಿತಿಗಳ ವಿಷಯವಾಗಿ ೨—೩ ಉಪನ್ಯಾಸ ಮಾಡುವವರಾಗಿದಾರೆಂದು ಕೇಳುತ್ತೇವೆ

❖❖❖❖

ಸಕಲೇಶಪುರದ ಕಂಟ್ರಾಕ್ಟರ್ ಸೋಮೇಗೌಡರ ಮಗ ಚನ್ನೇಗೌಡನೂ ಅವನ ದಾಯಾದಿಯೂ ಹೇಮಾವತಿ ನದಿಯಲ್ಲಿ ಈಜು ಕಲಿಯುವುದಕ್ಕೆ ಹೋಗಿ ಮುಳುಗಿ ಸತ್ತು ಹೋದರೆಂದು ತಿಳಿದು ಬಂದಿದೆ

❖❖❖❖

ಶ್ರೀಮನ್ಮಹಾರಾಜರವರು ಸರ್ ಕೃಷ್ಣಮೂರ್ತಿಯವರ ಅಳಿಯ ಮೇ॥ ರಾಜಾರಾವ್ ಸಾಹೇಬ್‌ರವರಿಗೆ ೧೦೦ ರೂಪಾಯಿ ತಲಬನ್ನು ಗೊತ್ತುಮಾಡಿ, ಪಿರ್ಯಾರ ಆಫೀಸಿನಲ್ಲಿ ಕೆಲಸ ಕಲಿಯುವಂತೆ ಅಪ್ಪಣೆ ಕೊಟ್ಟಿದಾರೆ.

❖❖❖❖

ಶ್ರೀಮನ್ಮಹಾರಾಜರವರ ಡಾಕ್ಟರಾಗಿರುವ ಕರ್ನಲ್ ಮೆಗ್ಗಾರ್ ಯವರು ಕೆಲಸ ಬಿಟ್ಟು ಶೀಘ್ರ ತೆರಳುವರಾಗಿದಾರೆಂತಲೂ, ಅವರ ಸ್ಥಾನಕ್ಕೆ ಮೇಜರ್ ಕೆಲ್ಲಿ ಎಂಬ ಡಾಕ್ಟರು ನೇಮಕವಾಗಿ ಬರುವರೆಂತಲೂ ಪ್ರಕಟವಾಗಿದೆ.

❖❖❖❖

ಇದುವರೆಗೆ ಕೌನ್ಸಲರುಗಳ ಸಂಬಳವು ೨,೦೦೦ರೂ. ಇದ್ದದ್ದನ್ನು ಈಗ ೧,೫೦೦ ರೂಪಾಯಿಗೆ ಇಳಿಸಿದಾರೆ. ಅವರಿಗೆ ಸರ್ಕಾರಿ ಗಾಡಿ ಕೊಡುವುದನ್ನು ತಪ್ಪಿಸಿದರು. ಅವರು ದಿನದಿನ ದಿವಾನ್ ಆಫೀಸಿಗೆ ಹೋಗಿ ಕೆಲಸಮಾಡುವಂತೆ ಏರ್ಪಾಟಾಗಿದೆ

❖❖❖❖

ಮೇ॥ ವಿ. ಪಿ. ಮಾಧವರಾಯರಿಗೆ ದಿವಾನಗಿರಿ ಆದದ್ದಕ್ಕಾಗಿ ಬೆಂಗಳೂರು ಪಟ್ಟಣದ ಮತ್ತು ದಂಡಿನ ಪ್ರಜೆಗಳು ಲಾಲ್‌ಬಾಗಿನಲ್ಲಿ ಅವರನ್ನು ಕರೆಸಿಕೊಂಡು, ಅವರಿಗಾಗಿ ಒಂದು ಗಾರ್ಡನ್ ಪಾರ್ಟಿ ಎಂಬ ಉತ್ಸವವನ್ನು ಮಾಡಿಸುವವರಾಗಿದಾರೆ.

❖❖❖❖

ಏಳು ಆನೆಗಳು, ಎರಡು ಹುಲಿಗಳು, ಒಂದು ಚಿರತೆ, ಇಷ್ಟೂ ಕಳೆದ ತಿಂಗಳಲ್ಲಿ ಮೈಸೂರಿಂದ ಬೊಂಬಾಯಿಗೆ ಕಳುಹಿಸಲಾಯಿತು. ಅವನ್ನು ಅಲ್ಲಿಂದ ಜಹಜಿನ ಮೇಲೆ ಹತ್ತಿಸಿ, ಯೂರೋಪಿಗೆ ಸೇರಿದ ಹ್ಯಾಂಬರ್ಗ್ ನಗರಕ್ಕೆ ರವಾನೆಮಾಡಿದರು.

❖❖❖❖

ಮೈಸೂರು ಸಂಸ್ಥಾನದಲ್ಲಿ ಗೋಕಾಯಿಗಳೇ ಮೊದಲಾದ ಮೂಗು ಪ್ರಾಣಿಗಳಿಗೆ ಸಂಭವಿಸುವ ರೋಗಗಳನ್ನು ಪರೀಕ್ಷೆಮಾಡಿ, ಅವುಗಳ ಚಿಕಿತ್ಸೆ ಪರಿಹಾರಗಳನ್ನು ತಿಳಿಸುವುದಕ್ಕೆ ಪಶುವೈದ್ಯರಾದ ಮೇ॥ ಎ. ನರಸಿಂಹಯ್ಯಂಗಾರ್ರನ್ನು ಸರ್ಕಾರದವರು ಸ್ಪೆಶಲ್ಲಾಗಿ ನೇಮಿಸಿರುತ್ತಾರೆ.

❖❖❖❖

ಶಿವಸಮುದ್ರದ ವಿದ್ಯುಚ್ಛಕ್ತಿಯ ಕಾರ್ಖಾನೆಯಲ್ಲಿ ಸರ್ಕಾರದವರು ಇನ್ನೂ ೨,೦೦೦ ಕುದುರೆಗಳ ಬಲದಷ್ಟು ವಿದ್ಯುಚ್ಛಕ್ತಿಯನ್ನು ಹೆಚ್ಚಾಗಿ ಉತ್ಪತ್ತಿಮಾಡಿ, ವಿನಿಯೋಗಕ್ಕೆ ಅವಕಾಶ ಮಾಡಿಕೊಟ್ಟಿದಾರೆ. ಇದನ್ನು ಇಂಡಿಯಾ ಗವರ್ನಮೆಂಟಿನ ಸ್ಯಾಂಕ್ಷನ್ ಆದ ಕೂಡಲೆ ವಿನಿಯೋಗಪಡಿಸುವರು

❖❖❖❖

ಮೈಸೂರು ಸರ್ಕಾರದವರಿಗೆ ಅವಶ್ಯವೆಂದು ಕಂಡುಬರುವ ಸ್ಥಳಗಳಲ್ಲಿ ಪ್ರಜೆಗಳನ್ನು ನಿರ್ಬಂಧಪಡಿಸಿ, ಅವರಿಗೆ ಸಿಡುಬು ಹಾಕಿಸುತ್ತೇವೆಂತಲೂ, ಇಂಥಾ ನಿರ್ಬಂಧವನ್ನು ಉಲ್ಲಂಘನೆ ಮಾಡುವವರಿಗೆ ೫೦ ರೂಪಾಯಿ ತನಕ ಜುಲ್ಮಾನೆ ವಿಧಿಸುತ್ತೇವೆಂತಲೂ ಒಂದು ಹೊಸ ಕಾನೂನುಮಾಡಿ, ಸರ್ಕಾರಿ ಗಜೆಟ್ಟಿನಲ್ಲಿ ಪ್ರಕಟಿಸಿದಾರೆ

❖❖❖❖

ನೆಲಮಂಗಲದ ತಾಲ್ಲೂಕು ಮಲ್ಲರ ಬಾಣವಾಡಿ ಸುರಿಯಣ್ಣನವರ ಮಕ್ಕಳು ಹುಚ್ಚಯ್ಯನವರು ಕಳೆದ ವಾರ ಪ್ರಕಟಿಸಿರುವ ನೋಟೀಸಿನಲ್ಲಿ "ನನ್ನ ಮಾವ ಅಣ್ಣ ದೊಡ್ಡ ರಂಗಣ್ಣನವರ ಹೆಂಡತಿ" ಇದಕ್ಕೆ ಬದಲಾಗಿ "ನನ್ನ ಮಾವ ಅಣ್ಣ ದೊಡ್ಡ ಗಂಗಣ್ಣನವರ ಹೆಂಡತಿ" ಎಂದು ಇರಬೇಕೆಂದು ತಿಳಿಸುತ್ತಾರೆ.

❖❖❖❖

ಅಸ್ಪೃಶ್ಯ(?)ವಂಶಾವಳಿಗಳ ದಾಯಭಾಗದ ವಿಷಯದಲ್ಲಿ ಸರ್ಕಾರದವರು ಪ್ರಕಟಿಸಿರುವ ಮಸೂದೆ ಕಾನೂನನ್ನು ಇನ್ನೂ ಕೆಲವು ತಿಂಗಳ ತನಕ್ಕ ಜಾರಿಯಲ್ಲಿ ತರುವುದಿಲ್ಲವೆಂತಲೂ, ಅದುವರೆಗೆ ಈ ಕಾನೂನಿನ ವಿಷಯದಲ್ಲಿ ಪ್ರಜೆಗಳು ತಮ್ಮ ಅಭಿಪ್ರಾಯವನ್ನು ಅರಿಕೆ ಮಾಡಿಕೊಳ್ಳಬಹುದೆಂತಲೂ ಸರ್ಕಾರದವರು ಮೊದಲು ಇಟ್ಟಿದ್ದ ಕಾಲಾವಧಿಯನ್ನು ವಿಳಂಬ ಮಾಡಿರುತ್ತಾರೆ.

❖❖❖❖

ಶ್ರೀಮನ್ಮಹಾರಾಜರವರು ಕಳೆದ ಬುಧವಾರ ಬೆಳಿಗ್ಗೆ ಮೋಟಾರ್ ಗಾಡಿಯಲ್ಲಿ ರಾಜಧಾನಿಯಿಂದ ಹೊರಟು, ಅದಿನ ಸಾಯಂಕಾಲವೇ ನೀಲಗಿರಿ ಬೆಟ್ಟವನ್ನು ಸುರಕ್ಷಿತವಾಗಿ ಸೇರಿದರು. ಆ ದಿನ ಬೆಳಿಗ್ಗೆ ಮಹಾ ಮಾತೃಶ್ರೀಯವರೂ ಮಹಾರಾಣಿಯವರೂ ರಾಜಕುಮಾರಿಯವರೂ . ಸ್ಪೆಶಲ್ ರೈಲಿನಲ್ಲಿ ರಾಜಧಾನಿಯಿಂದ ಹೊರಟು, ಮಾರನೇ ದಿನ ನೀಲಗಿರಿಬೆಟ್ಟವನ್ನು ಸುಖವಾಗಿ ಸೇರಿದರು.

❖❖❖❖

ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಚಿಕಿತ್ಸೆಯ ಕೆಲಸಗಳು ವಿಶೇಷವಾಗಿರೋಣದರಿಂದ ಅಲ್ಲಿನ ಡಾಕ್ಟರುಗಳಿಗೆ ಹೊರಗಡೆ ಸಂಪಾದನೆ ಏನೂ ಇಲ್ಲವೆಂದು ತಿಳಿದು ಸರ್ಕಾರದವರು ಸೂಪರಿಂಟೆಂಡೆಂಟ್ ಡಾಕ್ಟರ್ ಟಿ. ವಿ ಅರುಮುಗಂ ಮೊದಲಿಯಾರ್ರಿಗೆ ೩೦೦ ರೂಪಾಯನ್ನೂ ರೆಸಿಡೆಂಟ್ ಸರ್ಜನ್ ಡಾಕ್ಟರ್ ಸಿ ನಂಜಪ್ಪನವರಿಗೆ ೨೦೦ ರೂಪಾಯನ್ನೂ ಅಲೋಯನ್ಸು ಕೊಡತಕ್ಕದ್ದೆಂದು ಸ್ಯಾಂಕ್ಷನ್ ಮಾಡಿದಾರೆ.

❖❖❖❖

ರಾಜಧಾನಿಯ ಕರ್ಜನ್ ಪಾರ್ಕಿನಲ್ಲಿರುವ ವಿಕ್ಟರ್ ಜನ್ಸನ ಸ್ಟೋರ್ ಕಾಲೆಯ ಕಟ್ಟಡವನ್ನು ಸರ್ಕಾರದವರು ೧೯,೦೦೦ ರೂಪಾಯಿಗೆ ಕೊಂಡುಕೊಂಡು, ಕೆಡವಿ ಪಾರ್ಕಿಗೆ ಸೇರಿಸಬೇಕೆಂತಲೂ, ವಿಕ್ಟರ್ ಸ್ಕೂಲನ್ನು ಕಟ್ಟುವುದಕ್ಕೆ ಜನರಲ್ ಆಸ್ಪತ್ರೆಯ ಎದುರಿಗಿರುವ ಮೈದಾನದಲ್ಲಿ ಸ್ಥಳವನ್ನು ಕೊಡಬೇಕೆಂತಲೂ, ಶಿವಮೊಗ್ಗಾ ಟೌನ್ ಅಭಿವೃದ್ಧಿಗಾಗಿ ಸ್ಯಾಂಕ್ಷನ್ ಆಗಿರುವ ೩೦,೦೦೦ ರೂಪಾಯಿನಲ್ಲಿ ಮೇಲ್ಕಂಡ ಕ್ರಯದ ಹಣವನ್ನು ಕೊಡಬೇಕೆಂತಲೂ ಸರ್ಕಾರದವರು ಹುಕುಂ ಕೊಟ್ಟಿದಾರೆ.

❖❖❖❖

ಮೈಸೂರು ಗವರ್ನಮೆಂಟಿನ ಭೂಗರ್ಭ ಇಲಾಖೆಯ ಮುಖ್ಯಾಧಿಕಾರಿಯಾದ ಡಾಕ್ಟರ್ ಸ್ಮಿತ್ ಯವರಿಗೆ ಚಿನ್ನದ ಗಣಿಗಳ ಕಂಪನಿಯವರು ಸರ್ಕಾರದ ಅನುಮತಿಯಿಂದ ೩,೫೦೦ ರೂಪಾಯಿ ಬಹುಮಾನವನ್ನು ಕೊಟ್ಟಿದಾರೆ. ಇದಲ್ಲದೆ ಅವರು ನಾರ್ವೇ, ಸ್ವೀಡನ್, ದಕ್ಷಿಣ ಆಫ್ರಿಕಾ, ಕೆನಡಾ, ಮೊದಲಾದ ಕಡೆಗಳಿಗೆ ಹೋಗಿ, ಆಯಾ ಸ್ಥಳಗಳಲ್ಲಿ ವಿದ್ಯುಚ್ಛಕ್ತಿಯ ವಿಚಾರವನ್ನೂ ಗಣಿಗಳ ವಿಚಾರವನ್ನೂ ತಿಳಿದುಕೊಂಡು ಬರುವಂತೆ ಮೈಸೂರು ಸರ್ಕಾರದವರು ಅವರಿಗೆ ೩,೦೦೦ ರೂಪಾಯಿ ಸ್ಯಾಂಕ್ಷನ್ ಮಾಡಿದರೆಂದು ಕೇಳುತ್ತೇವೆ.

❖❖❖❖

ಜರ್ಮನಿ ರಾಜ್ಯದಿಂದ ಗ್ರಾಂಡ್ ಡ್ಯೂಕ್ ಆಫ್ ಸ್ಯಾಕ್ಸ್ ವೀಮಾರ್ ಎಂಬ ರಾಜಕುಮಾರರು ಮೊನ್ನೆ ಮಂಗಳವಾರ ಮಧ್ಯಾಹ್ನ ರಾಜಧಾನಿಗೆ ದಯಮಾಡಿದರು. ಮೇ॥ ಕಾಂತರಾಜೇ ಅರಸಿನವರೂ, ಮೇ॥ ಲಕ್ಷ್ಮೀಕಾಂತರಾಜೇ ಅರಸಿನವರೂ, ಮಿಲಿಟರಿ ಸೆಕ್ರೆಟರಿ ಕರ್ನಲ್ ಜೋನ್ಸ್, ಮೇ॥ ಪಾರ್ ಮೊದಲಾದವರೂ ರೈಲ್ವೆ ಸ್ಟೇಷನ್ನಿನಲ್ಲಿ ರಾಜಕುಮಾರರನ್ನು ಎದುರುಗೊಂಡು, ಸಾರೋಟಿನಲ್ಲಿ ಕೂರಿಸಿ ಕುದುರೆಗಳ ಅಸ್ತಕಾವಲಿನೊಡನೆ ಕರೆದುಕೊಂಡು ಬಂದು, ರೆಸಿಡೆನ್ಸಿ ಬಂಗಲೆಯಲ್ಲಿ ಇಳಿಸಿದರು. ಈ ರಾಜಕುಮಾರರ ಸಂಗಡ ಒಬ್ಬ ಛೇಂಬರ್ಲೇನ್, ಒಬ್ಬ ಮಿಲಿಟರಿ ಸೆಕ್ರೆಟರಿ, ಒಬ್ಬ ಡಾಕ್ಟರು, ಕೆಲವು ಸೇವಕರು ಬಂದಿರುತ್ತಾರೆ. ಇವರೆಲ್ಲಾ ಈ ದಿನ ಬೆಳಿಗ್ಗೆ ಗುಂಡ್ಲುಪೇಟೆ ತಾಲ್ಲೂಕು ಮದ್ದೂರಿನ ಬಳಿ ಮೂಲೆಹೊಳೆ ಕ್ಯಾಂಪಿಗೆ ಶಿಕಾರಿಮಾಡುವುದಕ್ಕಾಗಿ ಪ್ರಯಾಣಮಾಡುವರು.

ಇಂಡಿಯಾ ದೇಶದ ವೃತ್ತಾಂತಗಳು.

ಕಲ್ಕತ್ತಾ ಪಟ್ಟಣದಲ್ಲಿ ಸಿಡುಬಿನ ಉಪದ್ರ ಮತ್ತೆ ತುಂಬಾ ಕಠಿಣವಾಗಿದೆ. ಕಳೆದ ಮಾರ್ಚಿ ತಿಂಗಳಲ್ಲಿ ೭೦೦ ಮಂದಿಗಿಂತಲೂ ಹೆಚ್ಚಾಗಿಯೇ ಸಿಡುಬಿದ್ದು ಸತ್ತರು.

❖❖❖❖

ಸಿಂಲಾ ಪಟ್ಟಣದ ಪೋಸ್ಟು ಆಫೀಸ್ ಕಟ್ಟಡದ ಎದುರಿಗೆ ಅಂಗಡೀ ಬೀದಿಗೆ ಬೆಂಕಿ ಬಿದ್ದು ಕೆಲವು ಅಂಗಡಿಗಳು ಸುಟ್ಟು ಹೋಗಿ, ಸುಮಾರು ಒಂದು ಲಕ್ಷ ರೂಪಾಯಿನ ಸಾಮಾನು ನಷ್ಟವಾಯಿತು.

❖❖❖❖

ಔರಂಗಾಬಾದ್ ಪಟ್ಟಣದಲ್ಲಿ ಕಟ್ರಾ ಎಂಬೀ ಬೀದಿಯಲ್ಲಿ ಒಬ್ಬ ಭಾರೀ ವರ್ತಕನ ಶೀಮೆಯಲ್ಲಿ ಮಳಿಗೆಗೆ ಬೆಂಕಿ ಬಿದ್ದು ಮೂರು ಲಕ್ಷ ರೂಪಾಯಿನ ಉಣ್ಣೆ ಮೊದಲಾದ ಸರಕುಗಳು ನಷ್ಟವಾದವು.

❖❖❖❖

ಕಳೆದ ವಾರ ಬೊಂಬಾಯಿ ಪಟ್ಟಣದಲ್ಲಿ ಮಾತ್ರ ಸ್ವಲ್ಪ ಭೂಕಂಪವಾಯಿತು. ಕೆಲವು ಬಂಗಲೆಗಳ ಗೋಡೆಯ ಗಾರೆ ಹಲ್ಲೆಗಳು ಕಳಚಿ ಉದುರಿದವು ಅನೇಕ ಹಳೇ ಮನೆಗಳಲ್ಲಿ ಅಲ್ಪ ಸ್ವಲ್ಪ ನಷ್ಟವಾಯಿತು.

❖❖❖❖

ಇಂಡಿಯಾ ಗವರ್ನಮೆಂಟಿನಿಂದ ಅಫ್ಘಾನಿಸ್ಥಾನದ ಅಮೀರರಿಗೆ ೧೮ ಲಕ್ಷ ರೂಪಾಯಿ ವರ್ಷಾಶನ ದೊರಕುತ್ತಿದೆ. ಈ ಹಣವನ್ನು ಅವರು ಕೆಲವು ವರುಷಗಳಿಂದ ತರಿಸಿಕೊಂಡಿರಲಿಲ್ಲ. ಈ ವರುಷ ಅಮೀರರು ಆ ಪೈಕಿ ೩೩ ಲಕ್ಷ ರೂಪಾಯಿಯನ್ನು ತರಿಸಿಕೊಂಡಿರುತ್ತಾರೆ.

❖❖❖❖

ಕಲ್ಕತ್ತಾ ಪಟ್ಟಣದಲ್ಲಿ ಏರ್ಪಾಡಾಗಿರುವ ಲಾರ್ಡ್ ಕರ್ಜನರವರ ಮೆಮೋರಿಯಲ್ ಫಂಡಿಗೆ ೧ ಲಕ್ಷ ರೂಪಾಯಿ ಚಂದಾ ಕೂಡಿದೆ. ಈಚಿಗೆ ಭಾವನಗರದ ಮಹಾರಾಜರವರು ೧೫೦೦೦ ರೂಪಾಯಿಯನ್ನೂ ಭೂಪಾಲ್ ಸಂಸ್ಥಾನದ ನವಾಬ್ ಬೇಗಂರವರು ೧೦೦೦೦ ರೂಪಾಯಿನ್ನೂ ಕೊಟ್ಟಿದಾರೆ.

❖❖❖❖

ಸಿಲೋನ್ (ಲಂಕಾ) ದ್ವೀಪದಲ್ಲಿ ಮುಂದಿನ ಸೆಪ್ಟಂಬರ್ ತಿಂಗಳಲ್ಲಿ ರಬ್ಬರ್ ಬೆಳೆಯ ಪ್ರೋತ್ಸಾಹಕ್ಕೋಸ್ಕರಲೇ ಒಂದು ಪ್ರದರ್ಶನೋತ್ಸವವನ್ನು ನಡಿಸಬೇಕೆಂದು ಸರ್ಕಾರದವರು ಗೊತ್ತು ಮಾಡಿ, ಅದರ ಏರ್ಪಾಡಿಗೆ ಸರ್ಕಾರದಿಂದ ೧೦,೦೦೦ ರೂಪಾಯಿಯನ್ನು ಸ್ಯಾಂಕ್ಷನ್ ಮಾಡಿದಾರೆ.

❖❖❖❖

ಢಕ್ಕಾ ನಗರದ ಕಲೀಜಿಯೇಟ್ ಸ್ಕೂಲಿನಲ್ಲಿ ಒಬ್ಬ ಹುಡುಗನಿಗೂ ಉಪಾಧ್ಯಾಯನಾದ ಮೆ॥ ಪರ್ಸಿವಲ್ ಎಂಬಾತನಿಗೂ ವಾಗ್ವಾದ ನಡೆದು, ವಿದ್ಯಾರ್ಥಿಯು ಆತನನ್ನು ಬಹಳ ಕಠಿಣವಾಗಿ ಹೊಡೆದದ್ದರಿಂದ ಆತನಿಗೆ ತಲೆಯಲ್ಲಿ ಪೂರಾ ಗಾಯವಾಗಿ ಆಸ್ಪತ್ರೆಯಲ್ಲಿ ಚಿಕಿತ್ಸೆಮಾಡಿಸಿಕೊಳ್ಳುತ್ತಿದಾನೆ.

❖❖❖❖

ರಂಗೂನ್ ಪಟ್ಟಣದಲ್ಲಿ ರೈಲು ಸ್ಟೇಷನ್ನಿಂದ ಹೊರಟಕೂಡಲೆ ಒಬ್ಬ ಕಳ್ಳನು ಗಾಡಿಯ ಸಲಿಗೆಯ ಮೇಲೆ ಹಾರಿ ನಿಂತುಕೊಂಡು, ಚಿನ್ನದ ಒಡವೆ ಹಾಕಿಕೊಂಡಿದ್ದ ಒಬ್ಬ ಹೆಂಗಸಿನ ಕೈಯನ್ನು ಹಿಡಿದು, ಬಲವಾಗಿ ಎಳೆದು ಗಾಯಮಾಡಿ, ಆ ಬಳೆಯನ್ನು ಅಪಹರಿಸಿಕೊಂಡು ಅದೃಶ್ಯನಾದನು.

❖❖❖❖

ಪಂಜಾಬ್ ಆಧಿಪತ್ಯಕ್ಕೆ ಸೇರಿದ ಜೇಲಂ ನದೀ ಪ್ರಾಂತ್ಯದಲ್ಲಿ ಸಾರಗೋಧಾ ಎಂಬ ಸ್ಥಳದಲ್ಲಿ ಇಂಡಿಯಾ ಗವರ್ನಮೆಂಟಿನವರು ರೈತರ ಬೇಸಾಯಕ್ಕೆ ಅವಶ್ಯವಾದ ಒಳ್ಳೇ ಜಾತಿಯ ದನಗಳನ್ನು ಸಾಕಿ ಬೆಳಸಿ, ಸುಲಭಕ್ರಯಕ್ಕೆ ರೈತರಿಗೆ ಕೊಡುವಂಥಾ ಏರ್ಪಾಡು ಮಾಡಬೇಕೆಂದು ೧,೨೦,೦೦೦ ರೂಪಾಯಿ ಸ್ಯಾಂಕ್ಷನ್ ಮಾಡಿದಾರೆ.

❖❖❖❖

ಫರೀದ್‌ಕೋಟ ಸಂಸ್ಥಾನದಲ್ಲಿ ರಾಜಾ ಬ್ರಿಜ ಇಂದ್ರಸಿಂಗ್‌ಯವರಿಗೆ ಜಲಂಧರದ ಕಮಿಷನರವರು ಕಳೆದವಾರ ಪಟ್ಟಕಟ್ಟಿದರು. ರಾಜರು ಇನ್ನೂ ಬಾಲ್ಯವಯಸ್ಸಿನವರಾಗಿರುವುದರಿಂದ ಅವರು ದೊಡ್ಡವರಾಗುವತನಕ ಸಂಸ್ಥಾನದ ಕಾರುಬಾರುಗಳನ್ನು ಕೌನ್ಸಿಲ್ ಎಂಬ ಸಭೆಗಳು ನಡಿಸುತ್ತಾ ಬರಬೇಕೆಂದು ವಿಧಾಯಕ ಮಾಡಿರುತ್ತಾರೆ.

❖❖❖❖

ತೇನಕಾಶಿಯಲ್ಲಿ ಒಬ್ಬನು ಪೊಲೀಸ್ ಹೆಡ್ ಕಾನ್ಸ್ಟೆಬಲ್‌ನನ್ನು ಕೊಂದು ಹಾಕಿ ತಿನ್ನವೆಲ್ಲಿ ಜೈಲಿನಲ್ಲಿ ಇದ್ದನು. ಸೆಷನ್ಸ್ ಜಡ್ಜರು ಅವನಿಗೆ ಮರಣದಂಡನೆಯನ್ನು ವಿಧಿಸಿದರು. ಅದರ ಮೇಲೆ ಅಪೀಲ್ ಮಾಡಿಕೊಂಡಿದ್ದನು. ಅಲ್ಲೂ ಕೆಳಕೋರ್ಟಿನ ತೀರ್ಪೇ ಖಾಯಂಮಾಡಲ್ಪಟ್ಟಿತೆಂದು ಕೇಳಿ ಆ ಖೈದಿಯು ಜೈಲಿನಲ್ಲಿ ಆತ್ಮಹತ್ಯ ಮಾಡಿಕೊಂಡನು.

❖❖❖❖

ಲಕ್ನೋ ಪಟ್ಟಣದ ಹೊಷಿಯಾರಾಬಾದ್ ಸ್ಕೂಲಿನ ವಿದ್ಯಾರ್ಥಿಗಳಿಗೋಸ್ಕರ ಒಂದು ಸ್ಟೂಡೆಂಟ್ಸ್ ಹೋಮನ್ನು ಕಟ್ಟುವುದಕ್ಕೆ ಲೆಫ್ಟಿನೆಂಟ್ ಗವರ್ನರವರು ಅಸ್ತಿಭಾರ ಕಲ್ಲನ್ನು ಹಾಕಿದರು. ಈ ವಿದ್ಯಾರ್ಥಿನಿಲಯಕ್ಕೆ ೬೫,೦೦೦ ರೂಪಾಯಿ ಖರ್ಚಾಗುವುದು. ಈ ಪೈಕಿ ೨೦,೦೦೦ ರೂಪಾಯಿಯನ್ನು ಸರ್ಕಾರದವರು ಕೊಡುವರು. ಉಳಿದ ಹಣವನ್ನು ಚಂದಾ ಮೂಲಕ ಕೂಡಿಸಿದಾರೆ.

ಬೊಂಬಾಯಿ ಪಟ್ಟಣದಲ್ಲಿ ಮಲೇರಿಯಾ ಮೊದಲಾದ ಕೆಟ್ಟಜ್ವರಗಳು ಹುಟ್ಟಿ ಅನೇಕ ಪ್ರಜೆಗಳು ಸಾಯುತ್ತಿರುವುದರಿಂದ ಅದಕ್ಕೆ ಕಾರಣವನ್ನೂ ಪರಿಹಾರವನ್ನೂ ಕಂಡುಹಿಡಿದು ರಿಪೋರ್ಟ್ ಕೊಡಬೇಕೆಂದು ಗವರ್ನರವರು ಸರ್ ಬಾಲಚಂದ್ರಕೃಷ್ಣ, ಮೇಜರ್ ಮಿಯರ್ ಮೆ॥ ವಿ. ವಿಶ್ವೇಶ್ವರಯ್ಯ ಎಂಬೀ ಮೂರು ಮಂದಿಯನ್ನು ಒಂದು ಕಮಿಟಿಯಾಗಿ ನೇಮಕಮಾಡಿದಾರೆ.

❖❖❖❖

ಕಾಶ್ಮೀರ ಸಂಸ್ಥಾನದಲ್ಲಿ ಕಳೆದ ವಾರ ಅಪಾರವಾದ ಮಳೆ ಸುರಿಯಿತು. ಅನೇಕ ಕಡೆಗಳಲ್ಲಿ ರಸ್ತೆಗಳೆಲ್ಲಾ ಕಟ್ಟಿ ಹೋಗಿವೆ ನಾಲ್ಕು ಸೇತುವೆಗಳು ಕೊಚ್ಚಿ ಹೋದವು. ಅನೇಕ ಬಸ್ತು ನಿಂತಿವೆ ಅಂಚೆ ಬಸ್ತುಗಳನ್ನು ಬಹಳ ಪ್ರಯಾಸಪಟ್ಟು ಸಾಗಿಸುತ್ತಿದಾರೆ ಈಗ ರಸ್ತೆಗಳನ್ನು ದುರಸ್ತು ಮಾಡುತ್ತಿರುವುದರಿಂದ ಈ ತಿಂಗಳ ೫ ನೆ ತಾರೀಖು ತನಕ ಜನಸಂಚಾರವನ್ನು ತಡೆದಿರುವರು.

❖❖❖❖

ಬೊಂಬಾಯಿಪಟ್ಟಣದಲ್ಲಿ ಬೆರ್ಜ್ ಎಂಬಾತನು ಗಂಟೆಗೆ ೧೫ ಮೈಲಿ ಪ್ರಕಾರ ಬಲು ವೇಗವಾಗಿ ಮೋಟಾರ್ ಗಾಡಿಯನ್ನು ಓಡಿಸಿಕೊಂಡು ಹೋಗುತ್ತಿದ್ದದ್ದರಿಂದ ದಾರಿಯಲ್ಲಿ ಒಬ್ಬನು ಎದುರಿಗೆ ಸಿಕ್ಕಿ ಢಕ್ಕಾ ಬಿದ್ದು ಬಿದ್ದುಕೊಂಡನು. ಇದಕ್ಕಾಗಿ ಆ ಬೆರ್ಜ್ ಎಂಬಾತನಿಗೆ ಮ್ಯಾಜಿಸ್ಟ್ರೇಟರು ೨೦೦ ರೂಪಾಯಿ ಜುಲ್ಮಾನೆ ವಿಧಿಸಿದ್ದಲ್ಲದೆ ಅವನು ಕೆಲವು ಕಾಲದ ತನಕ ಮೋಟಾರ್ ಗಾಡಿಯಲ್ಲಿ ತಿರುಗಕೂಡದೆಂದು ತಡೆಮಾಡಿರುತ್ತಾರೆ.

❖❖❖❖

ಕಲ್ಕತ್ತಾ ಪಟ್ಟಣದಲ್ಲಿ ವಿಕ್ಟೋರಿಯಾ ಮೆಮೋರಿಯಲ್ ಹಾಲ್ ಎಂಬ ಅಪೂರ್ವವಾದ ಬಂಗಲೆಯನ್ನು ಕಟ್ಟಬೇಕೆಂದು ಹಿಂದುಸ್ಥಾನದಲ್ಲೆಲ್ಲಾ ಲಾರ್ಡ್ ಕರ್ಜನರವರು ಚಂದಾಮೂಲಕ ಹಣವನ್ನು ಕೂಡಿಸಿದರಷ್ಟೆ. ಈ ಫಂಡಿನ ಕಮಿಟಿಯವರು ಕಳೆದವಾರ ಸೆರಿ ರಿಪೋರ್ಟನ್ನು ಓದಿ ಪ್ರಕಟಿಸಿದಾರೆ. ಅದರಿಂದ ಈ ಫಂಡಿಗೆ ಕಳೆದ ಡಿಸೆಂಬರ್ ಆಖೈರ್ ವರೆಗೆ ಒಟ್ಟಿಗೆ ೫೭ ೧ ರೂಪಾಯಿ ಚಂದಾ ವಸೂಲಾಯಿತು. ಇದನ್ನು ಬ್ಯಾಂಕಿನಲ್ಲಿ ಇಟ್ಟದ್ದರಿಂದ ೬ ಲಕ್ಷ ರೂಪಾಯಿ ಬಡ್ಡಿ ಉತ್ಪತ್ತಿಯಾಗಿದೆ, ಈ ಹಣದಲ್ಲಿ ಇದುವರೆಗೆ ಕಟ್ಟಡದ ಸಾಮಾನುಗಳಿಗೆ ೩,೬೦,೦೦೦ ರೂಪಾಯಿ ವಿನಿಯೋಗವಾಗಿ ಕಮಿಟಿಯವರ ಕೈಯಲ್ಲಿ ೬೦ ಲಕ್ಷ ರೂಪಾಯಿ ಉಳಿದಿವೆ; ಇಂಗ್ಲೆಂಡಿನ ಚಂದಾದಾರರಿಂದ ಇನ್ನೂ ೩ ಲಕ್ಷ ರೂಪಾಯಿ ವಸೂಲಾಗದೆ ಬಾಕಿ ನಿಂತಿದೆ ಎಂದು ಗೊತ್ತಾಗುವುದು.

❖❖❖❖

ಲೇಟ್ ಮಹಾರಾಜ ಸರ್ ಯತೀಂದ್ರಮೋಹನರ ಹೆಸರನ್ನು ಶಾಶ್ವತ ಪಡಿಸುವುದಕ್ಕೋಸ್ಕರ ಬಂಗಾಳ ಆಧಿಪತ್ಯದಲ್ಲಿ ಪ್ರಜೆಗಳು ಚಂದಾ ಹಾಕಿ ೩,೨೨,೦೦೦ ರೂಪಾಯಿ ಕೂಡಿಸಿದರು. ಈ ಪೈಕಿ ಕಲ್ಕತ್ತಾ ಪಟ್ಟಣದ ಮೆಮೋರಿಯಲ್ ಹಾಲ್ ಕಟ್ಟುವಿಕೆಗೆ ೭೦,೦೦೦ ರೂಪಾಯಿ ವಿನಿಯೋಗಿಸಿ, ಆಗ್ರ, ಅಲಹಾಬಾದ್, ಕಾಶಿ, ಬುಲಂದ್‌ಷಹರ್, ಬುಡಾಂವ್, ಎಟಾ, ಎಟಾವ, ಫರಕ್ಕಾಬಾದ್, ಗೋರಖ್‌ಪುರ, ಮಥುರಾ, ಮೊರಾದಾಬಾದ್, ಮುಜಫರ್ ನಗರ ಈ ಸ್ಥಳಗಳಲ್ಲಿ ವಿಕ್ಟೋರಿಯಾ ಮಹಾರಾಜ್ಞೀಯವರ ಚಾರು ಪ್ರತಿಮೆಗಳನ್ನು ಪ್ರತಿಷ್ಠೆ ಮಾಡಿರುತ್ತಾರೆ ಈ ಪ್ರತಿಮೆಗಳೆಲ್ಲಾ ವಿಲಾಯಿತಿಯಲ್ಲಿ ಪ್ರಖ್ಯಾತಿ ಪಡೆದ ಮೆ॥ ವಾಡೆ ಎಂಬ ಶಿಲ್ಪಿಯು ಕೆತ್ತಿ ಕಳುಹಿಸಿರುವನು. ಪ್ರಯಾಗದಲ್ಲಿ ಕಳೆದ ವಾರ ಪ್ರತಿಷ್ಠೆ ಮಾಡಿದ ಪ್ರತಿಮೆಗೆ ಅದರ ಕಟ್ಟಡಕ್ಕೂ ೧,೪೦,೦೦೦ ರೂಪಾಯಿ ಖರ್ಚಾಗಿದೆ. ಕೆಲವು ಕಡೆಗಳಲ್ಲಿ ಆಳೆಯ ಹೆಸರಿನ ಮೇಲೆ ಉದ್ಯಾನವನ, ಆಸ್ಪತ್ರೆ, ದೊಡ್ಡ ಗಡಿಯಾರ, ದೊಡ್ಡ ಬಂಗಲೆ, ಈ ಮೊದಲಾದವುಗಳನ್ನು ಕಟ್ಟಿಸಿರುತ್ತಾರೆ.

❖❖❖❖

ಕೊಚ್ಚಿ ಸಂಸ್ಥಾನದ ಸೆಂಟ್ರಲ್ ಜೈಲಿನಲ್ಲಿ ಬಂದೀಖಾನರು ಸೂಪರಿಂಟೆಂಡನ್ನು ಹೊಡೆದು ಬಲು ದೇಹಬಾಧೆ ಮಾಡಿದೆಂತಲೂ ಅವರನ್ನು ಸರ್ಕಾರದವರು ತನಿಖೆ ಮಾಡಿಸುತ್ತಿದಾರೆಂತಲೂ, ಗಾಯಪಟ್ಟ ಅಧಿಕಾರಿಯನ್ನು ಆಸ್ಪತ್ರೆಯಲ್ಲಿ ಇಟ್ಟಿದಾರೆ ಮಾಡುತ್ತಿದಾರೆಂತಲೂ ಬರೆದಿದೆಯಷ್ಟೆ. ಆ ಬಂದೀಖಾನೆ ವ್ಯಕ್ತಿ ಮೂರು ಮಂದಿಗೆ ಸೆಷನ್ಸ್ ಜಡ್ಜರು ಮರಣ ದಂಡನೆಯನ್ನು ಒಬ್ಬನಿಗೆ [illegible] ಶಿಕ್ಷೆಯನ್ನೂ ವಿಧಿಸಿದರು. ಅವರು ಅಪೀಲ್ ಮಾಡಿಕೊಂಡಾಗ ಕೆಳಗಿನ ಕೋರ್ಟಿನ ತೀರ್ಮಾನವೆ ಖಾಯಂ ಆಯಿತು. ಅವರನ್ನು ಗಲ್ಲಿಗೆ ಹಾಕುವುದಕ್ಕೆ ಏರ್ಪಾಡು ಮಾಡುತ್ತಿದಾರೆ. ಕೊಚ್ಚಿ ರಾಜ ಮನೆತನಕ್ಕೆ ಸೇರಿದವರ ಸ್ತ್ರೀಯರು ಶುಭಸೂಚನೆಯನ್ನು ಹೊಂದಿಯಾಗಿ ಯಾರನ್ನೂ ಗಲ್ಲಿಗೆ ಹಾಕಕೂಡದೆಂಬ ಪದ್ಧತಿ ಇರುತ್ತೆ. ಆದ್ದರಿಂದ ಅರಮನೆಯಿಂದ ಇಂಥಾ ದಿನ ಇಷ್ಟು ಹೊತ್ತಿಗೆ ಅವರನ್ನು ಗಲ್ಲಿಗೆ ಎತ್ತಬೇಕೆಂದು ಹುಕುಂ ಬಂದಹೊರತು ಅವರನ್ನು ಗಲ್ಲಿಗೆ ಹಾಕುವುದಿಲ್ಲ. ಅರಮನೆಯ ಹುಕುಮನ್ನೇ ಎದುರು ನೋಡುತ್ತಿದಾರೆ.

❖❖❖❖

ಕಳೆದ ೨೯ನೆ ತಾ॥ ಬುಧವಾರ ಬೆಳಿಗ್ಗೆ ಸರ್ ಆರ್ಥರ್ ಲಾಲಿಯವರು ಮದರಾಸಿಗೆ ದಯಮಾಡಿ, ಆ ಆಧಿಪತ್ಯದ ಗವರ್ನರ್ ಪದವಿಯನ್ನು ವಹಿಸಿಕೊಂಡರು. ಆ ದಿನ ಅಲ್ಲಿನ ಮ್ಯುನಿಸಿಪಾಲಿಟಿಯವರು ಹೊಸ ಗವರ್ನರವರಿಗೆ ಅಡ್ರೆಸ್ಸನ್ನು ಮಧ್ಯಾಹ್ನ ೧೨ ಗಂಟೆಗೆ ಒಪ್ಪಿಸಬೇಕೆಂದು ಮೊದಲೇ ಗೊತ್ತುಮಾಡಿಕೊಂಡಿದ್ದರು. ಆದರೆ ಮ್ಯುನಿಸಿಪಲ್ ಕಮಿಷನರುಗಳಲ್ಲಿ ಹಲವುಮಂದಿ ಹಿಂದೂಗಳಾಗಿರುವುದರಿಂದ ಇವರು ೧೨॥ ಗಂಟೆಗೆ ರಾಹುಕಾಲವಿರುತ್ತೆಂತಲೂ ಅಂಥಾ ಕೆಟ್ಟಗಳಿಗೆಯಲ್ಲಿ ಹೊಸ ಗವರ್ನರಿಗೆ ಅಡ್ರೆಸ್ಸು ಒಪ್ಪಿಸಿ ಅವರ ದರ್ಶನಮಾಡುವುದರಿಂದ ಕೆಡುಕಾದೀತೆಂತಲೂ ಯೋಚನೆಮಾಡಿ, ಆ ಗಳಿಗೆಯನ್ನು ತಪ್ಪಿಸಿ, ಅದಕ್ಕಿಂತ ಮುಂಚೆ ಅಂದರೆ ೧೧॥ ಗಂಟೆಗೇ ಅಡ್ರೆಸ್ಸು ಒಪ್ಪಿಸಬೇಕೆಂದು ಗೊತ್ತುಮಾಡಿ, ಅದೇ ಪ್ರಕಾರ ಕಾರ್ಯವನ್ನು ನೆರವೇರಿಸಿದರು. ದಕ್ಷಿಣದೇಶಕ್ಕೆಲ್ಲಾ ಮುಖ್ಯ ಪಟ್ಟಣವೆನಿಸಿಕೊಂಡಿರಾನ ಮದರಾಸ್ ನಗರದಲ್ಲೇ ಇಂಥಾ ಅಭಿಪ್ರಾಯವು ಪ್ರಬಲವಾಗಿ ಇರುವುದಾದರೆ ಇತರ ಕಡೆಗಳ ಸ್ಥಿತಿ ಹ್ಯಾಗಿರುವುದೋ ಹೇಳಬೇಕಾದದ್ದೇ ಇಲ್ಲ.

❖❖❖❖

ಇಂಗ್ಲಿಷ್ ಗವರ್ನಮೆಂಟಿಗೂ ಟಿಬೆಟ್ಟಿನವರಿಗೂ ನಡೆದ ಕರಾರಿನ ಪ್ರಕಾರ ಟಿಬೆಟ್ಟಿನವರು ೨೫ ಲಕ್ಷ ರೂಪಾಯಿ ನಷ್ಟಪರಿಹಾರವನ್ನು ಕೊಡುತ್ತಾ ಬರಬೇಕಾಗಿದೆ. ಇದೆಲ್ಲಾ ಪಾವತಿ ಆಗುವವರೆಗೂ ಇಂಗ್ಲಿಷ್ ಸೈನಿಕರು ಚುಂಬಿ ಕಣಿವೆಯನ್ನು ಆಕ್ರಮಿಸಿಕೊಂಡಿರಬೇಕೆಂತಲೂ ಪ್ರತಿ ವರುಷವೂ ಜನವರಿ ೧ ನೆ ತಾರೀಖಿನ ದಿನ ಚುಂಬಿ ಕಣಿವೆಯಲ್ಲಿರತಕ್ಕ ಇಂಗ್ಲಿಷ್ ಅಧಿಕಾರಿಗೆ ಟಿಬೆಟ್ಟಿನವರು ಒಂದು ಲಕ್ಷ ರೂಪಾಯಿನಂತೆ ಕಂತುಕೊಟ್ಟು ರಶೀತಿ ಪಡೆಯುವಂತೆಯೂ ಆ ಕರಾರಿನಲ್ಲಿ ಸಮ್ಮತವಾಗಿರುವುದು. ಈಗ ಚೀಣೆಯವರು ಚುಂಬಿ ಕಣಿವೆಯನ್ನು ಬೇಗ ಬಿಡಿಸಿಕೊಳ್ಳಬೇಕೆಂದು ಯೋಚಿಸಿ, ೨೫ ಲಕ್ಷ ರೂಪಾಯಿಯನ್ನೂ ಮೂರು ಕಿಸ್ತುಗಳಲ್ಲೇ ಕೊಟ್ಟುಬಿಡುವುದಾಗಿ ತಿಳಿಸಿದರು. ಆದರೆ ಇಂಗ್ಲಿಷ್ ಗವರ್ನಮೆಂಟಿನವರು ಚೀಣೆಯವರ ಸಂಗಡ ಕರಾರುಮಾಡಿಕೊಂಡಿಲ್ಲವಾದಕಾರಣ ಈ ಹಣವನ್ನು ಚೀಣೆಯವರಿಂದ ತೆಗೆದುಕೊಳ್ಳುವುದಕ್ಕೆ ಇಷ್ಟಪಡುವುದಿಲ್ಲ. ಆದ್ದರಿಂದ ಟಿಬೆಟ್ಟಿನಿಂದ ಈಗ ಕಲ್ಕತ್ತೆಗೆ ಬಂದಿರುವ ಷಾಪೇ ಎಂಬ ರಾಯಭಾರಿಯು ಕಲ್ಕತ್ತೆಯಲ್ಲಿರುವ ಚೀಣಾ ರಾಯಭಾರಿಗಳಿಂದ ೮॥ ಲಕ್ಷ ರೂಪಾಯನ್ನು ಪಡಕೊಂಡು, ವಾಪಸು ಚುಂಬಿ ಕಣಿವೆಗೆ ಹೋಗಿ ಅಲ್ಲಿರುವ ಇಂಗ್ಲಿಷ್ ಹುದ್ದೇದಾರರಿಗೆ ಪಾವತಿಮಾಡಿ ಅವರಿಂದ ರಶೀತಿ ಪಡೆಯಬೇಕಾಗಿದೆ. ಇದರಿಂದ ಚೀಣೆಯವರು ಮೂರೇ ವರುಷಗಳಲ್ಲಿ ೨೫ ಲಕ್ಷವನ್ನೂ ಪಾವತಿಮಾಡಿಬಿಡುವವರಾಗಿದಾರೆಂದು ಕಾಣುವುದು. ಇಂಗ್ಲಿಷ್ ಸರ್ಕಾರದವರು ಅದಕ್ಕೆ ಒಪ್ಪುವುದಾದರೂ ಆ ಮೂರು ವರುಷಗಳೊಳಗಾಗಿ (ಈಗ ಒಂದು ವರುಷ ಮುಗಿದೇ ಹೋಯಿತು) ಟಿಬೆಟ್ಟಿಗೂ ಹಿಂದುಸ್ಥಾನಕ್ಕೂ ಜನರೂ ವರ್ತಕರೂ ವ್ಯಾಪಾರದ ಸರಕುಗಳೂ ಸರಾಗವಾಗಿ ಹೋಗಿಬರುವುದಕ್ಕೆ ಅನುಕೂಲವಾದಂಥಾ ಭಾರಿ ಮಾರ್ಗವನ್ನು ತಯಾರುಮಾಡಿಸಬೇಕೆಂದು ಯೋಚಿಸಿಕೊಂಡಿದಾರೆ. ಇದಕ್ಕೆ ಕಡೇ ಪಕ್ಷ ೬೦ ಲಕ್ಷ ರೂಪಾಯಿಯಾದರೂ ಬೇಕಾಗುವುದು. ಈ ರಸ್ತೆ ತಯಾರಾದಲ್ಲಿ ಆ ದೇಶದ ಅಮದು ರಫ್ತುಗೆ ತುಂಬಾ ಅನುಕೂಲವಾದೀತು.

ವಿದೇಶ ವರ್ತಮಾನಗಳು.

ಹಂಗೇರೀ ರಾಜ್ಯದಲ್ಲಿ ಒಬ್ಬ ವೈದ್ಯನು ಜನರು ಕಪ್ಪೂರವನ್ನು ವಿಶೇಷವಾಗಿ ಉಪಯೋಗಿಸುತ್ತಾ ಬಂದಲ್ಲಿ ಅದರಿಂದ ಮೂರ್ಛಾರೋಗ ಹುಟ್ಟುವುದೆಂದು ಹೇಳುತ್ತಾನೆ.

❖❖❖❖

ಫಿಲಿಪೈನ್ ದ್ವೀಪಗಳಲ್ಲಿ ಸರ್ಕಾರದವರು ಸ್ಟಾಂಪುಗಳನ್ನು ಮುದ್ರಿಸುವ ಕೊಠಡಿಯೊಳಗೆ ಗಳ್ಳರು ನುಗ್ಗಿ ೫ ಲಕ್ಷ ರೂಪಾಯಿನ ಸ್ಟಾಂಪುಗಳನ್ನು ತಿಂದುಹಾಕಿದವೆಂದು ತಿಳಿದು ಬಂದಿದೆ.

❖❖❖❖

ವಿಲಾಯತಿ ಸರ್ಕಾರದವರು ೧೯೦೭-೮ ನೆ ಸಾಲಿನಲ್ಲಿ ತಮ್ಮ ಸೈನ್ಯದ ಇಲಾಖೆಯನ್ನು ಬಲಪಡಿಸಿಕೊಳ್ಳುವುದಕ್ಕೆ ೪೨,೬೯,೬೦,೦೦೦ ರೂಪಾಯಿ ಖರ್ಚು ಮಾಡುವಂತೆ ಅಂದಾಜು ಕಟ್ಟಿದಾರೆ.

❖❖❖❖

ವಿಲಾಯತಿ ರಾಜ್ಯದಲ್ಲಿ ಚಿಕ್ಕ ಮಕ್ಕಳಿಗೆ ಸಿಗರೆಟ್, ಹೊಗೆಸೊಪ್ಪು ಮುಂತಾದ್ದನ್ನು ಕ್ರಯಕ್ಕೆ ಕೊಡಕೂಡದೆಂದೂ ಹಾಗೆ ಕೊಟ್ಟವರಿಗೆ ಜುಲ್ಮಾನೆ ಹಾಕಬೇಕೆಂತಲೂ ಕಾನೂನು ಮಾಡಿ ಜಾರಿಗೆ ತರಬೇಕೆಂದು ಪಾರ್ಲಿಮೆಂಟಿನಲ್ಲಿ ಚರ್ಚೆ ನಡೆಯುತ್ತಿದೆ.

❖❖❖❖

ಫಿನ್‌ಲಾಂಡಿನ ಮುಖ್ಯ ಪಟ್ಟಣವಾದ ಹೆಲ್ಸಿಂಗ್‌ಫರ್ಸ್ ನಗರದಲ್ಲಿರುವ ಕೆಲವು ರಷ್ಯಾ ಪ್ರಜೆಗಳು ಪರದೇಶಗಳಿಂದ ೧೦,೦೦೦ ಬಂದೂಕುಗಳನ್ನು ಗುಟ್ಟಾಗಿ ತರಿಸುತ್ತಿದ್ದರು. ಸರ್ಕಾರದವರು ಹ್ಯಾಗೋ ಅದನ್ನು ತಿಳಿದು, ಆ ಬಂದೂಕುಗಳ ಪೆಟ್ಟಿಗೆಗಳನ್ನೆಲ್ಲಾ ಹಿಡಿದು ಸ್ವಾಧೀನಪಡಿಸಿಕೊಂಡಿದಾರೆ.

❖❖❖❖

ಲಂಡನ್ ಪಟ್ಟಣದಲ್ಲಿ ಗಿಲಿಯಟ್ ಮೇಟ್‌ಫೀಲ್ಡ್ ಎಂಬುವನು ನಶ್ಯ, ಹೊಗೇ ಸೊಪ್ಪು, ಇವೆರಡನ್ನೇ ಇಟ್ಟು ವಿಕರಿಮಾಡುತ್ತಾ ಸಾಯುವ ಕಾಲಕ್ಕೆ ೧೯೫ ಲಕ್ಷ ರೂಪಾಯಿ ಆಸ್ತಿಯನ್ನು ಕೂಡಿಟ್ಟನು. ಈ ಹಣವನ್ನು ಆತನು ತನ್ನ ಇಬ್ಬರು ಹೆಣ್ಣು ಮಕ್ಕಳಿಗೆ ಸಮನಾಗಿ ಹಂಚಿಕೊಟ್ಟಿರುವನು. ಇದರಲ್ಲಿ ಸರ್ಕಾರಕ್ಕೆ ೧೮ ಲಕ್ಷ ರೂಪಾಯಿ ಸೇರುವುದು.

❖❖❖❖

ಜರ್ಮನಿ ರಾಜ್ಯದಲ್ಲಿ ಮೋಟಾರ್ ಕಾರ್ ಎಂಬ ಗಾಡಿಗಳಲ್ಲಿ ಸಂಚಾರ ಮಾಡತಕ್ಕವರು ತಮ್ಮ ಗಾಡಿಯ ದೆಸೆಯಿಂದ ಯಾರಿಗಾದರೂ ಗಾಯವಾದರೆ ಅವರಿಗೆ ಪರಿಹಾರ ದ್ರವ್ಯವನ್ನು ಕೊಡಬೇಕೆಂತಲೂ ಕೈಕಾಲು ಶಾಶ್ವತವಾಗಿ ಮುರಿದು ಹೋದರೆ ಅಂಥವರಿಗೆ ಬದುಕಿರುವ ತನಕ ಜೀವನ ನಡಿಸಬೇಕೆಂತಲೂ, ಅವರ ಔಷಧ ಚಿಕಿತ್ಸೆಗಳ ಖರ್ಚನ್ನು ಕೊಡಬೇಕೆಂತಲೂ ಪಾರ್ಲಿಮೆಂಟಿನಲ್ಲಿ ಚರ್ಚೆ ಮಾಡುತ್ತಿದಾರೆ.

❖❖❖❖

ಕಳೆದ ೧೯೦೬ ನೆ ವರುಷದಲ್ಲಿ ರಷ್ಯಾ ರಾಜ್ಯದೊಳಗೆ ಕೊಲೆ ಕಲಹಗಳಲ್ಲೂ ದಂಗೆಗಳಲ್ಲೂ ಒಟ್ಟು ೧೪,೧೩೦ ಜನರು ಮೃತರಾದರೆಂತಲೂ, ೧೯,೫೨೭ ಜನರಿಗೆ ಗಾಯಗಳಾದವೆಂತಲೂ ಸರ್ಕಾರದವರು ಪ್ರಕಟಿಸಿದಾರೆ. ಈ ಸಂಖ್ಯೆಗಳನ್ನು ಅವರು ಬಹಳ [illegible]

...ಸ್ವರೂಪದಲ್ಲಿ ಸಂಶಯವಿಲ್ಲವೆಂತಲೂ ಅನೇಕರು ಊಹಿಸು[ತ್ತಾರೆ].

****

ರಷ್ಯಾ ಜಪಾನ್ ಯುದ್ಧದಲ್ಲಿ ಜಪಾನಿನವರು ಪೋರ್ಟ್ ಆರ್ಥರ್ [ಅನ್ನು] ಬಹು ದಿನಗಳ ವರೆಗೆ ಮುತ್ತಿಗೆ ಹಾಕಿಕೊಂಡಿದ್ದು ಅದನ್ನು ಸ್ವಾಧೀನ ಪಡಿಸಿಕೊಂಡಮೇಲೆ ಆ ಮುತ್ತಿಗೆಯು [ಕಾಲದಲ್ಲಿ] ಒಳಗಿದ್ದ ೫,೦೦೦ ಜನರು ತಮ್ಮ ಆಸ್ತಿಪಾಸ್ತಿಗಳು ನಷ್ಟ[ವಾದದ್ದಕ್ಕೆ] ಸರ್ಕಾರದವರಿಗೆ ಅರ್ಜಿ ಬರೆದುಕೊಂಡರು. ಇವರಿಗೆಲ್ಲಾ ... ರೂಪಾಯಿನಂತೆ ಪ್ರತಿಫಲ ಕೊಡಬೇಕೆಂದು ವಿಧಾಯ[ಕ] ಮಾಡಿಸಿರುತ್ತಾರೆ.

****

ರಷ್ಯಾ ರಾಜ್ಯದಲ್ಲಿ ಒಳದೇಶದ ಕ್ಷಾಮ, ದಂಗೆ ಕಲಹ ಮೊದಲಾದ [ಕಾರಣ]ಗಳಿಂದಲೂ ಯುದ್ಧದ ದೆಸೆಯಿಂದಲೂ ಹುಟ್ಟುವಳಿ ಕಮ್ಮಿಯಾಗಿ[ರುವುದ]ರಿಂದ ಅಲ್ಲಿನ ಖಜಾನಾ ಅಧಿಕಾರಿಗಳು ಹೊಸ ತೆರಿಗೆ ಸುಂಕ [ಗಳನ್ನು] ಹಾಕಿ ವಸೂಲು ಮಾಡಬೇಕಾಗಿ ತಿಳಿಸಿದ್ದಾರೆ. ಆದಾಯದ ಮೇಲೆ [ತೆರಿಗೆ], ಹೊಗೆಸೊಪ್ಪಿನ ಮತ್ತು ಸಕ್ಕರೆಯ ಸುಂಕವನ್ನು ಹೆಚ್ಚಿ[ಸಿ], ವಿದ್ಯುಚ್ಛಕ್ತಿ, ದೀಪ, ಗ್ಯಾಸ್, ಮೋಂಬತ್ತಿ, ಕಾಗದ, ಇವುಗ[ಳಿಗೆ] ತೆರಿಗೆ ಹಾಕುವಂತೆ ಹೇಳಿದ್ದಾರೆ.

****

ಅಮೇರಿಕ ರಾಜ್ಯದಲ್ಲಿ ಹಿಂದೂ ವೇದಾಂತ ಮತಬೋಧನೆಯು [ಆರಂ]ಭವಾಗಿ ಐದು ವರುಷಗಳಾದವು. ಆಗಿಂದಾಗ್ಗೆ ಕೆಲವರು ಈ [ಮತ]ವನ್ನು ನಂಬಿ ಅದನ್ನು ಅವಲಂಬಿಸುತ್ತಿದ್ದಾರೆ. ಈಗ ೬೦ ಮಂದಿ [ಈ] ಮಠಕ್ಕೆ ಸೇರಿದ್ದಾರೆ. ಸ್ವಾಮಿ ತ್ರಿಗುಣಾತೀತರೆಂಬ ಹಿಂದೂ [ಸನ್ಯಾ]ಸಿಗಳು ಅಲ್ಲಿದ್ದುಕೊಂಡು, ಆ ಮತವನ್ನು ಪ್ರಚುರ ಮಾಡುತ್ತಿ[ರುವರೆಂ]ತಲೂ, ಕಳೆದ ಜನವರಿ ತಿಂಗಳಲ್ಲಿ ಅಲ್ಲಿ ಒಂದು ಹಿಂದೂ [ದೇವಸ್ಥಾ]ನವನ್ನು ಕಟ್ಟಿಸಿ ಪ್ರತಿಷ್ಠೆ ಮಾಡಿದರೆಂತಲೂ ಅಲ್ಲಿನ ಪತ್ರಿಕೆ[ಗಳು] ತಿಳಿಸುತ್ತಿವೆ.

****

ಈಗಿನ ಚಕ್ರವರ್ತಿ ದೊರೆಯವರು ಚಿಕ್ಕಂದಿನಲ್ಲಿ ಕನಡಾ ಎಂಬ [ಬ್ರಿ]ಟಿಷ್ ಸ್ವಾಸ್ಥ್ಯಕ್ಕೆ ಹೋಗಿದ್ದಾಗ್ಗೆ ಸೇಂಟ್ ಲಾರೆನ್ಸ್ ನದಿ[ಗೆ ಕಟ್ಟಿದ ಸೇತು]ವೆಯನ್ನು ಪ್ರತಿಷ್ಠೆಮಾಡಿ ಬಂದರು. ಈಗ ಆ ಸ್ವಾಸ್ಥ್ಯದವರು [ಅದೇ ಸ್ಥ]ಳದಲ್ಲಿ ಇನ್ನೊಂದು ಬಾರಿ ಸೇತುವೆಯನ್ನು ಕಟ್ಟಿಸಿರುತ್ತಾರೆ. [ಇ]ದನ್ನು ಎಡ್ವರ್ಡ್ ದೊರೆಯವರೇ ಬಂದು ಪ್ರತಿಷ್ಠೆ ಮಾಡ[ಬೇಕೆಂದು] ... ಕೇಳಿಕೊಳ್ಳಬೇ[ಕೆಂದು] ಅಲ್ಲಿನ ಪಾರ್ಲಿಮೆಂಟ್ ಸಭೆಯಲ್ಲಿ ಒಬ್ಬ ಮೆಂಬರು [ಪ್ರಸ್ತಾಪಿ]ಸಿ ಚರ್ಚೆ ಮಾಡಿದರು.

****

ರೊಮ್ಯಾನಿಯಾಕ್ಕೆ ಸೇರಿದ ಬುಕಾರೆಸ್ಟ್ ನಗರದಲ್ಲಿ ವಿದ್ಯಾರ್ಥಿ[ಗಳು] ಒಂದು ನಾಟಕವನ್ನು ಆಡಬಾರದೆಂದು ಗಲಭೆ ಮಾಡಿ[ದ]ರು. ಪ್ರಜಾಸಮೂಹದ ಸಮಾಧಾನಕ್ಕೆ ಪೋಲೀಸಿನವ[ರೂ] ಸೈನಿಕರೂ ಬಂದು, ವಿದ್ಯಾರ್ಥಿಗಳನ್ನೆಲ್ಲಾ ನಾಟಕಶಾಲೆಯಿಂದ [ಹೊರ]ಡಿಸುವುದಕ್ಕೆ ಪ್ರಯತ್ನ ಪಟ್ಟರು. ಅಲ್ಲಿ ಕಲಹವಾಯಿತು. ... ವಿದ್ಯಾರ್ಥಿಗಳು ... ೧೫೦ ಮಂದಿ ಪೋಲೀಸಿನವರು ... ಇವರಿಗೆಲ್ಲಾ ಪೂರಾ ಗಾಯಗಳಾಗಿವೆ ... ಸಲ್ಲಿ ಹತ್ತಾರು ಮಂದಿ ಸತ್ತರೆಂದು ತಿಳಿಯುತ್ತದೆ.

****

ಪಾಲಿನೇಷ್ಯಾ ಎಂಬ ದ್ವೀಪಸಮುದಾಯಕ್ಕೆ ಸೇರಿದ ಸೊಸೈಟಿ, ಕುಕ್ ಎಂಬೀ ದ್ವೀಪಗಳಲ್ಲಿ ಕಳೆದ ಫೆಬ್ರವರಿ ೭ ನೇ [ಮತ್ತು ೮] ನೇ ತಾರೀಖುಗಳಲ್ಲಿ ಭಯಂಕರವಾದ ಸುಂಟರಗಾಳಿಯೂ ಮಳೆ[ಯೂ] ಪ್ರವಾಹಗಳೂ ಪ್ರಾಪ್ತವಾಗಿ ಕೆಲವು ಸಣ್ಣ ಸಣ್ಣ ದ್ವೀಪಗಳೇ [ಸಮು]ದ್ರದಲ್ಲಿ ಮುಳುಗಿ ಹೋದವು. ೩,೦೦೦ ಪ್ರಜೆಗಳು ಲಯವಾದ[ರು]. ಕುಕ್ ದ್ವೀಪಗಳಲ್ಲಿ ೫೦೦ ಬ್ರಿಟಿಷ್ ಪ್ರಜೆಗಳು ಮನೆ ಮಠಗ[ಳನ್ನು] ಕಳೆದುಕೊಂಡು ಬಹಳ ಕಷ್ಟಪಡುತ್ತಿದ್ದಾರೆ. ತಾಹಿತಿ ದ್ವೀಪದಲ್ಲಿ [ಸುಮಾರು] ೧೦,೦೦೦ ಪ್ರಜೆಗಳು ಮೃತಪಟ್ಟರೆಂದು ಹೇಳುವರು.

****

ಚೀನಾ ರಾಜ್ಯಕ್ಕೆ ಸೇರಿದ ನಾನ್‌ಚಾಂಗ್ ಎಂಬ ಪಟ್ಟಣದಲ್ಲಿ [ಜನ]ಗಳು ದಂಗೆಯೆದ್ದು ಕೆಲವು ಜನ ಕ್ರೈಸ್ತರನ್ನು ಕೊಂದು ಹಾಕಿ[ದರು]. ಕೂಡಲೇ ಆ ಪಟ್ಟಣದಲ್ಲಿದ್ದ ಪರದೇಶಿಗಳೆಲ್ಲಾ ಇತರ ಕಡೆಗೆ ಹೊರಟು ಹೋದರು. ಫ್ರೆಂಚರು ಪಟ್ಟಣವನ್ನು ತಮ್ಮ ಸ್ವಾಧೀನ[ಪಡಿ]ಸಿಕೊಂಡು, ಅಲ್ಲಿನ ಮುಖ್ಯ ಚೀನಾ ಅಧಿಕಾರಿಯೂ ಈ ಕೊಲೆ[ಯಲ್ಲಿ] ಸೇರಿರುತ್ತಾನೆಂತಲೂ, ಅವನನ್ನು ಅಧಿಕಾರ ತಪ್ಪಿಸಿ ಓಡಿಸ[ಬೇ]ಕೆಂತಲೂ, ಈಗ ಕೊಲ್ಲಲ್ಪಟ್ಟವರ ಬಂಧುಗಳಿಗೆ ಪರಿಹಾರ ದ್ರವ್ಯ[ವನ್ನು] ಕೊಟ್ಟು ಸಮಾಧಾನ ಪಡಿಸಬೇಕೆಂತಲೂ ಚೀನಾ ಸರ್ಕಾರದವ[ರನ್ನು] ಕೇಳಿರುತ್ತಾರೆ.

****

ಇಟಲಿ ರಾಜ್ಯದಲ್ಲಿ ಕಳೆದ ಆರು ವರುಷಗಳಿಂದಲೂ ಮದ್ಯ[ಪಾನ]ಗಳ ಬಿಕರಿಯು ಕಮ್ಮಿಯಾಗುತ್ತಾ ಬಂದಿದೆ. ಪ್ರಜಾ ಸಂಖ್ಯೆ [ಅಭಿ]ವೃದ್ಧಿಹೊಂದುತ್ತಿದ್ದರೂ ಈ ಮದ್ಯದ ವ್ಯಾಪಾರ ಕಡಿಮೆಯಾ[ಗುತ್ತಿರು]ವುದು ದೇಶದ ಏಳಿಗೆಗೆ ತುಂಬಾ ಸಹಕಾರಿಯಾಗಿರುವುದು. ೧೯೦೪ [ನೇ ವರು]ಷದಲ್ಲಿ ಬಿಕರಿ ಆದ ಮದ್ಯಕ್ಕಿಂತಲೂ ೧೯೦೫ ರಲ್ಲಿ ಏಳೂ[ವರೆ] ಕೋಟಿ ರೂಪಾಯಿನ ಮದ್ಯಗಳು ಕಮ್ಮಿಯಾಗಿ ಬಿಕರಿ ಆದವು. [ಇದ]ಕ್ಕೆ ಕಾರಣಗಳೇನೆಂದರೆ—ಜನರು ಹೊಗೆ ಬತ್ತಿಯನ್ನು ವಿಶೇಷ[ವಾಗಿ] ಸೇದುತ್ತಾರೆ, ಬೈಸಿಕಲ್ ಗಾಡಿಯ ಮೇಲೆ ಸಂಚಾರಮಾಡ[ುವು]ದು ಕುತೂಹಲ ಹೆಚ್ಚಾಗಿದೆ, ಅಂಗಸಾಧನೆಯಲ್ಲಿ ತುಂಬಾ [ಆಸಕ್ತಿ]ಯುಂಟಾಗಿದೆ, ಟೀ ಕಾಫಿಯನ್ನೇ ವಿಶೇಷವಾಗಿ ಉಪಯೋಗಿ[ಸು]ತ್ತಾರೆ.

ನ್ಯೂಜೀಲಾಂಡಿಗೆ ಸೇರಿದ ವೆಲ್ಲಿಂಗ್‌ಟನ್ ಪುರನಿವಾಸಿಯಾದ ಹಾರ್‌ಕಾರ್ಟರ್ ಎಂಬಾತನು ಕಾಲುದಾರಿಯಲ್ಲೇ ಪ್ರಪಂಚವನ್ನೆಲ್ಲಾ ಸುತ್ತಿಕೊಂಡು ಬರಬೇಕೆಂದು ಶಪಥಮಾಡಿಕೊಂಡು ೧೯೦೬ ನೆ ಜನವರಿ ೨೧ ನೆ ತಾರೀಖಿನ ದಿನ ತನ್ನ ಜನ್ಮಭೂಮಿಯನ್ನು ಬಿಟ್ಟು, ಇದುವರೆಗೆ ೨೫,೦೦೦ ಮೈಲಿ ದೂರ ಸಂಚಾರಮಾಡಿಕೊಂಡು, ಫ್ರಾನ್ಸ್ ಸಂಸ್ಥಾನಕ್ಕೆ ಸೇರಿದ ಡನ್‌ಕರ್ಕ್ ಪಟ್ಟಣಕ್ಕೆ ಬಂದಿರುತ್ತಾನೆ. ರಷ್ಯಾ ರಾಜ್ಯದಲ್ಲೂ ತುರ್ಕಿ ರಾಜ್ಯದಲ್ಲೂ ಅವನನ್ನು ಗೂಢಚಾರನೆಂದು ಊಹಿಸಿ, ಸರ್ಕಾರದವರು ಹಿಡಿದು ಬಂದೀಖಾನೆಯಲ್ಲಿ ಹಾಕಿದ್ದರು. ಇನ್ನು ಕೆಲವು ಕಡೆ ಇವನನ್ನು ಕೊಲ್ಲಬೇಕೆಂದು ಗುಂಡಿನಿಂದ ಹೊಡೆದರು. ತೋಳಗಳೂ ಕರಡಿಗಳೂ ಅವನನ್ನು ನುಂಗಬೇಕೆಂದು ಪ್ರಯತ್ನಪಟ್ಟವು. ಅವನು ಯಾವುದಕ್ಕೂ ಜಗ್ಗದೆ ಎಲ್ಲಾ ಕಷ್ಟಗಳನ್ನೂ ಪರಿಹರಿಸಿಕೊಂಡು ಬಂದಿರುತ್ತಾನೆ.

****

ಫಿನ್‌ಲಾಂಡಿನ ಮುಖ್ಯ ಪಟ್ಟಣವಾದ ಹೆಲ್ಸಿಂಗ್‌ಫರ್ಸ್ ನಗರದಲ್ಲಿ ಕಳ್ಳರು ಸರ್ಕಾರಿ ಬ್ಯಾಂಕಿಗೆ ನುಗ್ಗಿ ಒಂದೂಕಾಲು ಲಕ್ಷ ರೂಪಾಯನ್ನು ಅಪಹರಿಸಿಕೊಂಡು ಹೋದರು. ಆ ಪೈಕಿ ಒಬ್ಬ ಕಳ್ಳನನ್ನು ಹಿಡಿಯುವುದು ಪೋಲೀಸಿನವರಿಗೆ ಮಹಾ ಪ್ರಯಾಸವಾಯಿತು. ಅವನು ಒಂದು ಗ್ರಾಮದಲ್ಲಿದ್ದಾನೆಂದು ತಿಳಿದು ಪೋಲೀಸಿನವರು ಹೋಗಿ ಗಸ್ತುಗಿರಿ ಮಾಡಬೇಕೆಂದು ಪ್ರಯತ್ನಪಟ್ಟಾಗ ಅವನು ಪಿಸ್ತೂಲಿನಿಂದ ಹೊಡೆದು ಒಬ್ಬ ಪೋಲೀಸಿನವನನ್ನು ಕೊಂದು ಕೆಡವಿ, ಇನ್ನು ಮೂವರು ಮಂದಿಗೆ ಗಾಯ ಪಡಿಸಿ, ಒಂದು ಕೋಣೆಯೊಳಗೆ ಸೇರಿಕೊಂಡು, ಕಿಟಕಿಯ ಮೂಲಕ ಗುಂಡು ಹೊಡೆಯುತ್ತಾ ಬಂದನು. ಸವಾರರೇ ಮೊದಲಾದ ಸೈನಿಕರು ಪೋಲೀಸಿನವರ ಸಹಾಯಕ್ಕೆ ಹೋದರು. ಆದಾಗ್ಯೂ ಅವನು ಸಿಕ್ಕಿಬೀಳುವಾಗ್ಗೆ ಇನ್ನೂ ಒಂಬತ್ತು ಮಂದಿಗೆ ಗುಂಡು ಹೊಡೆದು ಗಾಯಮಾಡಿಬಿಟ್ಟನು.

****

ಬ್ರಿಟಿಷ್ ಚಕ್ರಾಧಿಪತ್ಯದ ವಿಸ್ತಾರವನ್ನೂ ಪ್ರಜಾ ಸಂಖ್ಯೆಯನ್ನೂ ಈಗಾಗಲೇ ಪ್ರಕಟಿಸಿರುತ್ತಾರೆ. ಈ ರಿಪೋರ್ಟಿನಿಂದ ತಿಳಿದುಬರುವುದೇನೆಂದರೆ—೧೮೬೧ ನೆ ಇಸವಿಯಲ್ಲಿ ಬ್ರಿಟಿಷ್ ಚಕ್ರಾಧಿಪತ್ಯವು ೮೫ ಲಕ್ಷ ಚದರ ಮೈಲಿ ವಿಸ್ತೀರ್ಣ ಉಳ್ಳದ್ದಾಗಿಯೂ ಪ್ರಜಾಸಂಖ್ಯೆಯು ೨೬ ಕೋಟಿಯಾಗಿಯೂ ಇತ್ತು. ಈಗ ಈ ರಾಜ್ಯವು ೧೨೦ ಲಕ್ಷ ಚದರ ಮೈಲಿ ವಿಸ್ತಾರವಾಗಿಯೂ ೪೦ ಕೋಟಿ ಪ್ರಜಾಸಂಖ್ಯೆಯುಳ್ಳದ್ದಾಗಿಯೂ ಇರುತ್ತದೆ. ಈ ಪ್ರಜಾ ಸಂಖ್ಯೆಯು ಹಂಚಿಕೆ ಹ್ಯಾಗೆಂದರೆ—ಯೂರೋಪ್ ಖಂಡದಲ್ಲಿ ೪೨೦ ಲಕ್ಷ, ಅಮೇರಿಕದಲ್ಲಿ ೭೫ ಲಕ್ಷ, ಆಫ್ರಿಕದಲ್ಲಿ ೪೩೦ ಲಕ್ಷ, ಆಸ್ಟ್ರೇಲಿಯಾದಲ್ಲಿ ೫೦ ಲಕ್ಷ, ಏಷ್ಯಾದಲ್ಲಿ ೩೦ ಕೋಟಿ, ಈ ಪ್ರಕಾರ ಜನರು ವಿಭಾಗಿಸಿಕೊಂಡಿರುತ್ತಾರೆ. ಈ ಪ್ರಜೆಗಳನ್ನು ಅವರವರ ಮತಗಳ ಪ್ರಕಾರ ವಿಂಗಡಿಸಿದರೆ—ಕ್ರೈಸ್ತರು ೫೮೦ ಲಕ್ಷ, ೨೦ ಕೋಟಿ ೮೬ ಲಕ್ಷ ಹಿಂದುಗಳು, ೯ ಕೋಟಿ ೪೦ ಲಕ್ಷ ಮುಸಲ್ಮಾನರು, ೧೨೦ ಲಕ್ಷ ಬೌದ್ಧರು, ಉಳಿದ ೩೦ ಲಕ್ಷ ಪ್ರಜೆಗಳಲ್ಲಿ ಸಿಕ್ಕರು, ಜೈನರು, ಯಹೂದ್ಯರು, ಈ ಮೊದಲಾದ ಮತಗಳವರು ಸೇರಿರುತ್ತಾರೆ. ಬ್ರಿಟಿಷ್ ಚಕ್ರಾಧಿಪತ್ಯದಲ್ಲಿ ೫೦,೦೦೦ ಪ್ರಜಾಸಂಖ್ಯೆಗಿಂತ ಹೆಚ್ಚಾಗಿ ಜನವಿರುವ ಪಟ್ಟಣಗಳು ೧೮೭ ಇರುತ್ತವೆ. ಈ ಪೈಕಿ ಹಿಂದೂಸ್ಥಾನದಲ್ಲಿ ೭೮ ನಗರಗಳಿರುವುವು. ಲಂಡನ್ ಪಟ್ಟಣವನ್ನು ಬಿಟ್ಟು ನೋಡಿದಲ್ಲಿ ಬ್ರಿಟಿಷ್ ರಾಜ್ಯದಲ್ಲೆಲ್ಲಾ ಕಲ್ಕತ್ತಾ ಪಟ್ಟಣವೇ ಅತ್ಯಂತ ಜನಪೂರ್ಣವಾದ ನಗರವೆನಿಸಿಕೊಂಡಿದೆ. ಆ ಪಟ್ಟಣದಲ್ಲಿ ೮ ಲಕ್ಷದ ೫೦ ಸಾವಿರ ಪ್ರಜೆಗಳಿರುತ್ತಾರೆ.

ಬಾತ್ಮಿದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ನಿಗಾ ಕೊಡಲಾರೆವು. ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು, ಇಂತವುಗಳಿಗೆ ನಾವು ನಿಗಾ ಕೊಡಲಾರೆವು.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬುದನ್ನು ಸಕಲರು ತಿಳಿಯತಕ್ಕದ್ದು.—ಎಡಿ.

ಕರೆಸ್‌ಪಾಂಡೆನ್ಸ್.

ಹಳ್ಳಿ ಸ್ಕೂಲು ವಿಚಾರ

ಅಯ್ಯಾ,

ಚಳ್ಳಕೆರೆ ತಾಲ್ಲೋಕು ಕಿಲ್ಲೇಗನಹಳ್ಳಿ ಸ್ಕೂಲಿನಲ್ಲಿ ಏಳು ರೂಪಾಯಿ ತಲಬಿನ ಮಾಸ್ತರು ಇದ್ದರು. ಇದು ೮—೧೦ ಜನ ಬಾಲಕರಿಂದ ಶೋಭಿಸುತ್ತಲಿರುತ್ತೆ. ಇಂಥಾ ಸ್ಕೂಲಿಗೆ ಹತ್ತು ರೂಪಾಯಿ ತಲಬಿನ ಮಾಸ್ತರನ್ನು ವರ್ಗಾಯಿಸಿರುತ್ತಾರೆ. ಇವರು ಸ್ಕೂಲನ್ನು ಅಭಿವೃದ್ಧಿಗೆ ತಂದಾರೆಂದು ವರ್ಗಾಯಿಸಿರಬಹುದು. ಆದರೆ ೮—೧೦ ಜನ ಬಾಲಕರು ಬರುವಂಥಾ ಸ್ಕೂಲಿನಿಂದ ಸರ್ಕಾರಕ್ಕೆ ನಷ್ಟವೂ ಮಾಸ್ತರಿಗೆ ಕಾಲಹರಣಕ್ಕೆ ಕಾರಣವೂ ಆಗುತ್ತೆಯೇ ಹೊರತು ಪ್ರಯೋಜನವಿಲ್ಲ. ಈ ವಿಷಯವನ್ನು ಇನ್ಸ್‌ಪೆಕ್ಟರ್ ಜನರಲ್ ಸಾಹೇಬರವರು ಯೋಚಿಸಬೇಕಾಗಿದೆ.

ಪ್ರೇಕ್ಷಕ.

ಕಳುವಿನ ಆಕ್ಷೇಪಣೆ

ಅಯ್ಯಾ,

ಚಳ್ಳಕೆರೆ ತಾಲ್ಲೋಕು ಚನ್ನಮನಾಗತಿಹಳ್ಳಿ ಗ್ರಾಮದಲ್ಲಿ ತಾ. ೨೫-೩ ೦೬ ನೆ ಭಾನುವಾರ ರಾತ್ರಿ ಸುಮಾರು ೧೦ ಗಂಟೆ ಸಮಯದಲ್ಲಿ ಒಂದು ಮೇಕೆಯನ್ನು ಕೊಂದು ಕಳುವಿನಿಂದ ಕೆಲವು ಜನಗಳು ಸೇರಿ ತೆಗೆದುಕೊಂಡು ಬರುತ್ತಿದ್ದದ್ದನ್ನು ಮಾಲೀಕನು ಕಂಡುಹಿಡಿದು ಸದರಿ ಗ್ರಾಮದ ಪಟೇಲ್ ಶ್ಯಾನುಭೋಗರಿಗೆ ಫಿರ್ಯಾದು ತಿಳಿಸಿದ್ದರಲ್ಲಿ ಸದರಿಯವರು ಇಂಥಾ ಕಳವು ಕೇಸನ್ನು ಖಬರು ಮಾಡಿರುತ್ತಾರೆ. ಗ್ರಾಮಸ್ಥರೆಲ್ಲ ಕಂಡ ಇಂಥಾ ಕಳವು ಕೇಸನು! ಗವುಡ ಶ್ಯಾನುಭೋಗರು ಹಜಂ ಮಾಡಿರುವದು ನೋಡಿದರೆ ಮುಂದೆ ದೊಡ್ಡ ದೊಡ್ಡ ಕೃತ್ಯಗಳು ನಡೆಯಬಹುದು. ಈ ವಿಷಯದಲ್ಲಿ ಅಮಲ್ದಾರರು ತುಂಬಾ ನಿಗಾ ಕೊಡುವರೆಂದು ನಂಬಿದ್ದೇನೆ.

ಪ್ರೇಕ್ಷಕ

ಕಂದಾಯ ರಿಮಿಷನ್ ಆಗಬೇಕು—ಪಿರಿಯಾಪಟ್ಟಣ

ಅಯ್ಯಾ,

ಈ ಕಡೆ ಪಿರಿಯಾಪಟ್ಟಣದ ಪ್ರಾಂತ್ಯದಲ್ಲಿ ಕ್ರೋಧಿ ಮತ್ತು ವಿಶ್ವಾವಸು ಈ ಎರಡು ಸಾಲಿನಲ್ಲಿ ಮಳೆ ಆಗದೆ ಕೆರೆಗಳಿಗೆ ನೀರು ಬಾರದೆ ಜನಗಳಿಗೂ ಜಾನುವಾರುಗಳಿಗೂ ಕುಡಿಯುವದಕ್ಕೆ ನೀರು ಇಲ್ಲದೆ ಕಷ್ಟಪಡುತ್ತಾ ಇರುವದು ಸರಿಯಷ್ಟೆ. ಮೇಲ್ಕಂಡ ಎರಡು ಸಾಲ್‌ಗಳಲ್ಲಿಯೂ ಕೆರೆ ಕೆಳಗಣ ಜಮೀನುದಾರರು ತರೀ ಫಸಲ್ ಇಲ್ಲದೆ ಕಂದಾಯ ಕೊಡಲು ಮಾರ್ಗವಿಲ್ಲದೆ ತಿನ್ನುವದಕ್ಕೆ ಕೂಡಾ ಗತಿಯಿಲ್ಲದೆ ರೈತರು ಕಷ್ಟಪಡುತ್ತಾ ಇರುವದನ್ನು ಈಗ್ಗೆ ಸುಮಾರು ಒಂದು ತಿಂಗಳಲ್ಲಿ ಡೆಪ್ಯುಟಿ ಕಮಿಷನರ್ ಸಾಹೇಬರವರು ಪಿರಿಯಾಪಟ್ಟಣಕ್ಕೆ ಬಂದಿದ್ದಾಗ್ಗೆ ಅರಿಕೆಮಾಡಿಕೊಂಡೆವು. ದಯಾಳುಗಳು ಇದುವರಿಗೂ ಯಾವದೊಂದು ಹುಕ್ಕುಮನ್ನೂ ದಯಪಾಲಿಸಲಿಲ್ಲ. ಕೋಲಾರ ಮತ್ತು ಕಡೂರು ಡಿಸ್ಟ್ರಿಕ್ಟುಗಳಲ್ಲೂ ಇದೇ ರೀತಿ ಆಗಿ ರೈತರು ಡೆಪ್ಯುಟಿ ಕಮಿಷನರ್ ಸಾಹೇಬರುಗಳಿಗೆ ಅರಿಕೆಮಾಡಿಕೊಂಡದ್ದರ ಮೇಲೆ ಅವರು ವಿಚಾರಮಾಡಿ ತರೀ ಕಂದಾಯವನ್ನು ರಿಮಿಷನ್ ಮಾಡಿರುವದಾಗಿ ತಮ್ಮ ಪತ್ರಿಕೆಯಿಂದಲೇ ತಿಳಿಯಬರುತ್ತೆ. ಈ ವಿಷಯವನ್ನು ತಮ್ಮ ಪತ್ರಿಕೆಯಲ್ಲಿ ಪ್ರಕಟಿಸಿದರೆ ಸರ್ಕಾರಕ್ಕೆ ತಿಳಿದು ತರೀ ಕಂದಾಯ ರಿಮಿಷನ್ ಮಾಡಿಸ್ಯಾರೆಂಬ ಭರವಸದಿಂದ ಈ ವಿಜ್ಞಾಪನವನ್ನು ತಮಗೆ ತಿಳಿಸಿರುತ್ತೇನೆ.

ರೈತನ ಬಿನ್ನಹ

ತುಮಕೂರು ಸ್ಟೂಡೆಂಟ್ಸ್ ಹೋಂ

ಅಯ್ಯಾ,

ತುಮಕೂರು ಸ್ಟೂಡೆಂಟ್ಸ್ ಹೋಮಿನಲ್ಲಿ ಬಾಲಕರಿಗಾಗಿ ಉಪಯೋಗಿಸುವ ಪದಾರ್ಥಗಳನ್ನು ಅಧಿಕಾರಿಗಳು ಸ್ವಂತಕ್ಕೆ ಉಪಯೋಗಿಸಿಕೊಳ್ಳುತ್ತಾರೆಂದೂ ವಿದ್ಯಾರ್ಥಿಗಳ ಗುಣಗಳು ಶಿಥಿಲವಾಗಿವೆಯೆಂದೂ ಮಾರ್ಚಿ ೧೯ ನೇ ತಾ ನಲ್ಲಿ ತಿಳಿಸಿದ ಸಮಾಚಾರವು ಸುಳ್ಳಾಗಿರುವ ಪ್ರಯುಕ್ತ ಇಲ್ಲಿನ ೫೦ ಮಂದಿ ಬೋರ್ಡರುಗಳು ಮೀಟಿಂಗ್ ಮಾಡಿ, ಇಲ್ಲಿ ನಡೆದ ಸಮಾಚಾರವನ್ನು ತಮಗೆ ತಿಳಿಸಿರುತ್ತೇನೆ. ಇಲ್ಲಿನ ಅನುಕೂಲತೆಗಳನ್ನು ತಿಳಿಯುವ ತಮ್ಮ ಪತ್ರಿಕೆಯಲ್ಲಿ ಹಾಕಿಸಿರುವ ವಾಚಕರಿಗೆ ತಿಳುವಳಿಕೆ ಬರುವ ಸಲುವಾಗಿ ನಮೂದಿಸಬೇಕಾಗಿ ಕೋರುವೆನು. ಸಂಗತಿ ಏನೆಂದರೆ—

ಈಗ ಅನೇಕ ದಿವಸಗಳಿಂದಲೂ ತುಮಕೂರು ಸ್ಟೂಡೆಂಟ್ಸ್ ಹೋಮಿನ ಸ್ಟೋರ್ ಬಾಗಿಲಿಗೆ ಎರಡು ಬೀಗಗಳನ್ನು ಹಾಕಿರುತ್ತೇವೆ. ಅದರಲ್ಲಿ ಒಂದರ ಬೀಗದಕೈಯನ್ನು ... ಹೋಮಿನ ಬೋರ್ಡರುಗಳಲ್ಲಿ ಸರದಿಯ ಪ್ರಕಾರ ... ಬಾಲಕನಲ್ಲಿಯೂ ಮತ್ತೊಂದು ಜವಾಬ್ದಾರಿ ವಹಿಸಿರುವ ಮ್ಯಾನೇಜರ ವಶದಲ್ಲಿಯೂ ಇರುತ್ತದೆ. ದಿನಂಪ್ರತಿ ಪದಾರ್ಥಗಳನ್ನು ಕೊಡತಕ್ಕ ಕಾಲಗಳಲ್ಲಿ ಮೇಲೆ ನಮೂದಿಸಿರುವ ಮ್ಯಾನೇಜರು ಮತ್ತು ಬೀಗದಕೈಯುಳ್ಳ ಬಾಲಕನೂ ಒಟ್ಟಿಗೆ ಕಲೆತ ಹೊರತು ಬಾಗಿಲು ತೆರೆಯುವುದು ಅಸಾಧ್ಯವಾಗಿರುತ್ತದೆ. ಹಾಗೆ ಬಾಗಿಲು ತೆರೆದ ಬಳಿಕ ಮತ್ತೊಬ್ಬ ಬೋರ್ಡರನು ನಿಲ್ಲಿಸಿಕೊಂಡು ಅಡಿಗೆಗೆ ಕೊಟ್ಟ ಪದಾರ್ಥಗಳನ್ನು ಕೊಟ್ಟ ತರುವಾಯ ಬಾಗಿಲು ಮುಚ್ಚಲ್ಪಡುತ್ತದೆ. ಹೊರಗಿನಿಂದ ಬಂದ ಪದಾರ್ಥಗಳು ಸ್ಟೋರಿಗೆ ಹೋಗುವದಕ್ಕೆ ಮೊದಲು ಬೋರ್ಡರುಗಳ ಅಜಮಾಯಿಷಿ ವಿನಾ ಒಳಗೆ ಹೋಗುವುದು ಅಸಾಧ್ಯವಾಗಿದೆ. ಮತ್ತು ತರಕಾರಿ ಮೊದಲಾದವುಗಳು ಹೋಮಿಗೆ ಬಂದ ಒಡನೆಯೇ ತೂಕ ಅಜಮಾಯಿಷಿ ಮೊದಲಾದದ್ದು ನಡೆದ ಹೊರತು ಅಡಿಗೆಯವರಿಗೆ ಸಲ್ಲುತ್ತಿಲ್ಲ. ಹಾಗೆ ಸಂದ ಕಾಲದಲ್ಲಿ ಪದಾರ್ಥವು ಸರಿಯಾಗಿ ವಿನಿಯೋಗವಾಗುತ್ತದೆಯೋ ಎಂಬತಕ್ಕ ವಿಚಾರದಲ್ಲಿ ಸರಿಯಾದ ಮ್ಯಾನೇಜುಮೆಂಟು ನಡೆದು ... ಬಾಲಕರ ತನಿಖೆಯಿಂದ ನಡೆಸಲ್ಪಡುತ್ತದೆಯಾಗಿ ನಮ್ಮ ಮೈಸೂರು ದೇಶದಲ್ಲಿ ಮಾಡಲ್ ಸ್ಟೂಡೆಂಟ್ಸ್ ಹೋಂ ತುಮಕೂರು ಎಂದು ಕರೆಯಬಹುದಾದ ಅಭಿವೃದ್ಧಿಯನ್ನು ಹೊಂದಿದ ಈ ಸ್ಟೂಡೆಂಟ್ಸ್ ಹೋಮನ್ನು ಅಸೂಯೆಯಿಂದ ನಿಂದಿಸಿರುವ ಮಹನೀಯರು ಇದನ್ನು ಓದಿಕೊಂಡು ಮುಂದಾದರೂ ಹೋಮಿನ ರಹಸ್ಯಗಳನ್ನು ತಿಳಿದುಕೊಂಡು ತಮ್ಮ ವಿದ್ಯಾಭಿವೃದ್ಧಿಯಲ್ಲಿ ಗಮನಕೊಟ್ಟು ಶ್ರೇಯಸ್ಸನ್ನು ಪಡೆಯುತ್ತಾರೆಂದು ನಂಬಿರುವ

ಟಿ. ಕೃಷ್ಣಮೂರ್ತಿ, ಮ್ಯಾನೇಜರ್.

ದೊಂಬಿಕಲಹ

ಅಯ್ಯಾ,

ಸೀಯಗದ ತಾಲ್ಲೋಕು ಬುಕ್ಕಾಪಟ್ಟಣದಲ್ಲಿ ವೈಶ್ಯರ ಸಾಹುಕಾರ ಕೃಷ್ಣಶೆಟ್ಟರಿಗೂ ಆ ಗ್ರಾಮದ ಚಿಕ್ಕಲಿಂಗೇಗೌಡನಿಗೂ ಕಳೆದ ತಿಂಗಳು ೩೦ ರಲ್ಲಿ ವಿಪರೀತ ಹೊಡೆದಾಟವಾಯ್ತು. ಆಗ್ಗೆ ವೈಶ್ಯರ ಪಕ್ಷ ಒಬ್ಬನಾದರೂ ಇರಲಿಲ್ಲ. ಚಿಕ್ಕಲಿಂಗೇಗೌಡನ ಕಡೆ ಗ್ರಾಮದ ಪ್ರಜೆಗಳಲ್ಲಿ ಮುಕ್ಕಾಲು ಪಾಲು ಜನ ಸೇರಿದ್ದರೆಂತ ತಿಳಿಯುತ್ತೆ. ಈ ಕಲಹದ ಆದಿಭಾಗದಲ್ಲಿ ಸುಮಾರಾಗಿದ್ದು, ಸಾಹುಕಾರ್ ಮತ್ತು ಡಿಸ್ಟ್ರಿಕ್ಟ್ ಮೆಂಬರಾದ ದೊಡ್ಡಮಲ್ಲಪ್ಪನವರು ತೋಟದಿಂದ ಬಂದನಂತರ ಈ ಜನಗಳು ಇನ್ನೂ ಹೆಚ್ಚಾಗಿ ಸಾಹುಕಾರ್ ಕೃಷ್ಣಶೆಟ್ಟರ ಮೇಲೆ

ಯನ್ನೂ ಅಲ್ಲಿನ ವೈಶ್ಯರ ಮನೆಗಳನ್ನೂ ಹಗಲು ಹೊತ್ತಿನಲ್ಲೇ ಲೂಟಿ ಮಾಡಬೇಕೆಂದು ಸಮಸ್ತ ಆಯುಧಗಳನ್ನೂ ಮತ್ತು ಬಾಗಲು ಮುಚ್ಚಿದ್ದ ಮನೆಗಳನ್ನೂ ನೂಕಿ ಬಾಗಿಲು ಒಡೆಯುವದಕ್ಕೂ ತೆರಗೆ ತಬ್ಬುವದಕ್ಕೂ ತಕ್ಕ ಸಲಕರಣೆಗಳನ್ನೆಲ್ಲಾ ಒದಗಿಸಿಕೊಂಡು ಬಂದು ಹಗಲು ೯—೧೦ ಗಂಟೆಯಿಂದ ಸಾಯಂಕಾಲ ನಾಲ್ಕು ಗಂಟೆಯ ವರೆಯುಂತರವೂ ಪ್ರಯತ್ನ ಮಾಡುತ್ತಿದ್ದರೆಂತಲೂ, ಪೋಲೀಸ್ ಶೇಕ್‌ದಾರರಿಂದ ಈ ಕಲಹಕ್ಕೆ ಅಂಕುರಾರ್ಪಣವಾದ್ದರಿಂದ ಶೇಕ್‌ದಾರರಿಗೆ ಸರ್ಕಾರದವರಿಂದ ಏನಾದರೂ ನಷ್ಟವಾಗಬಹುದೆಂಬ ಯೋಚನೆಯಿಂದ ಪಟೇಲರು ದಾಕ್ಷಿಣ್ಯಭಾವದಿಂದ ಕಂಡೂ ಕಾಣದವರಂತೆ ಇಲ್ಲವೇ ಹೆಂಟೆ ಚದರಿಸುವವನಂತೆ ಖಂಡಿತೋಕ್ತಿಯಿಲ್ಲದೆ ಚದರಿಸುತ್ತಿದ್ದರೆಂತಲೂ, ಈ ಕ್ರೂರಕೃತ್ಯಕ್ಕೆ ಸರ್ಕಾರಿ ನೌಕರರಲ್ಲಿ ಕೆಲವರೂ ಗ್ರಾಮದ ಮುಖಂಡರಲ್ಲಿ ಕೆಲವರೂ ಅಂತರಂಗದಲ್ಲಿ ಚಿಕ್ಕಲಿಂಗೇಗೌಡನ ಕಡೆ ಜನಗಳಿಗೆ ಕೈ ಸನ್ನೆ ಕಣ್ಣು ಸನ್ನೆಯಿಂದ ಪ್ರೋತ್ಸಾಹ ಕೊಡುತ್ತಿದ್ದರೆಂತಲೂ, ಆ ದಿನ ಸಾಹುಕಾರ್ ಕೃಷ್ಣಶೆಟ್ಟರು ಓಡಿಹೋಗಿ ಮನೆ ಬಾಗಿಲು ಹಾಕಿಕೊಳ್ಳದೆ ಇದ್ದರೆ ದೇವಿಹಳ್ಳಿಯಲ್ಲಿ ಕೆಲವು ವರ್ಷಗಳ ಹಿಂದೆ ವೈಶ್ಯರ ಪಾಳೆಯಲ್ಲಿ ನಡೆದಂತೆ ಖೂನಿಗಳು ಖಂಡಿತವಾಗಿ ಆಗುತ್ತಿದ್ದದ್ದಲ್ಲದೆ, ಸದರಿ ಸಾಹುಕಾರನ ಮತ್ತು ವೈಶ್ಯರ ಮನೆಗಳನ್ನೆಲ್ಲ ಲೂಟಿಮಾಡಲು ಪ್ರಯತ್ನಪಟ್ಟಿದ್ದರೆಂತಲೂ, ಆ ಕಾಲದಲ್ಲಿ ದೈವಾನುಗ್ರಹದಿಂದ ಕೆಲವು ಸುತ್ತುಮುತ್ತಿನ ಗ್ರಾಮಗಳ ರೈತರು ಕಂದಾಯ ಕಟ್ಟಲಿಕ್ಕೆ ಹೋಬಳಿಗೆ ಬಂದದ್ದರ ಮೇಲೆ ದಂಗೆಗೆ ಉಪಕ್ರಮಿಸಿದ್ದವರು ನಿಲ್ಲಿಸಲು ಕಾರಣವಾಯಿತೆಂತಲೂ, ಹೊರಗಿನಿಂದ ಬಂದಿದ್ದ ರೈತರುಗಳಲ್ಲಿ ಅನೇಕರು ಕದನ ಈ ದಂಗೆಯನ್ನು ನೋಡಲಾರದೆ ಭಯ ಉಂಟಾಗಿ ತಮ್ಮ ಗ್ರಾಮಗಳಿಗೆ ಓಡಿಹೋದರೆಂತಲೂ, ಉಪಕಾರಿಯೂ ಸಾಧುವೂ ಆದ ಈ ಕೃಷ್ಣಶೆಟ್ಟಿ ಸಾಹುಕಾರರನ್ನು ಹೊಡೆದು ಜಗಲೀ ಲೂಟಿಮಾಡುವದಕ್ಕೆ ಸಾಹಸಪಡುತ್ತಿದ್ದ ಜನರ ವಿಷಯದಲ್ಲೂ ಅವರಿಗೆ ಅಂತರಂಗದಲ್ಲಿ ಕುಮ್ಮಕ್ಕು ಮಾಡುತ್ತಿದ್ದವರ ವಿಷಯದಲ್ಲೂ ಸರ್ಕಾರದವರು ನಿಗಾಸಪಟ್ಟು ಪತ್ತೆ ಮಾಡಿ, ತಕ್ಕ ಬಂದೋಬಸ್ತು ಮಾಡದೆ ಬಿಡುವದಾದರೆ ಇವರ ಪುಂಡು ಉತ್ತರೋತ್ತರ ಹೆಚ್ಚಿ, ಈ ಪ್ರಾಂತ್ಯದ ಬಡ ಪ್ರಜೆಗಳಿಗೆ ತುಂಬಾ ಕಷ್ಟ ಪ್ರಾಪ್ತಿಯಾಗುವದರಲ್ಲಿ ಯಾವ ಸಂದೇಹವೂ ಇಲ್ಲವೆಂದೂ, ಅನೇಕ ಗ್ರಾಮಗಳವರು ಹುಜೂರ್ ಡೆಪ್ಯುಟಿ ಕಮಿಷನರ್ ಸಾಹೇಬರವರಲ್ಲಿ ಅರ್ಜಿ ಗುಜರಾಯಿಸಿಕೊಳ್ಳಬೇಕೆಂದೂ, ಅನೇಕರು ಯೋಚಿಸುತ್ತಲೂ ಇನ್ನು ಕೆಲವು ಗ್ರಾಮಸ್ಥರು ಆಗಲೇ ಅರ್ಜಿ ಗುಜರಾಯಿಸಿಕೊಂಡಿರುವಂತೆಯೂ ವರ್ತಮಾನವಿರುತ್ತೆ.

ಈ ವಿಷಯದಲ್ಲಿ ಕೆಲವರ ಅಭಿಪ್ರಾಯವೇನೆಂದರೆ— ಬುಕ್ಕಾಪಟ್ಟಣವೂ ಕಂಪೀಹಳ್ಳಿಯೂ ಸೀರ್ಯದ ತಾಲ್ಲೋಕಿನಲ್ಲಿ ಸುಖವಸತಿ ಗ್ರಾಮಗಳು. ಈ ಪ್ರಾಂತ್ಯ ನಿವಾಸಿಗಳು ಪೂರ್ವದಿಂದಲೂ ಅಭಿವೃದ್ಧಿಹೊಂದಿ, ದಿನವೂ ಇಷ್ಟೇಟು ಮುಂತಾದ ದೂಬುಗಳಿಂದಲೂ, ತನಗೆ ಆಗದವರ ಮನೆ ನಾಶಮಾಡುವ ಯೋಚನೆಯಿಂದಲೂ ಸದಾ ಬಳಸುತ್ತಿರುವರು. ಇಲ್ಲಿ ಸಡದ ಕಳವು, ಕೊಲೆ, ದರೋಡೆ, ತೋಟಗಳಲ್ಲಿ ಫಲ ಗಿಡಗಳನ್ನು ಕಡಿದು ನಾಶಮಾಡುವದೂ, ಕಳವಿ ಮಾಲ್ಗಳನ್ನು ಮಾಡುವದೂ, ಹುಲ್ಲುಮನೆಗೆ ಕೆರುವದೂ, ಇವುಗಳಿಗೆ ಮಾತ್ರ ನ್ಯಾಯವಾಗಿರುತ್ತವೆ ಸರ್ಕಾರದವರ ಗಮನಕ್ಕೆ ಬರುವದೇ ಕಷ್ಟ; ಅಥವಾ ಬಂದರೂ ರುಜುವಾತು ಆಗದಂತೆ ಮಾಡಬೇಕಾದದ್ದೆಲ್ಲಾ ಮಾಡುತ್ತಾರೆ. ಇಲ್ಲಿನ ಚಿಲ್ಲರೆ ನೌಕರ ಮತ್ತು ಕಪಟಸನ್ಯಾಸಿಗಳಂಥಾ ದೊಡ್ಡ ಮನುಷ್ಯರ ಶಿಫಾರಸೂ ಮೇಲಧಿಕಾರಿಗಳಿಗೆ ಬಹಳವಾಗಿರುತ್ತೆ. ಸರ್ಕಾರಕ್ಕೆ ತಿಳಿಸಿದವನೇ ಕೆಡಬೇಕಾಗುತ್ತೆ. ಮೇಲಧಿಕಾರಿಗಳಿಗೆ ಇವರ ದ್ರೋಹದ ಶಿಫಾರಸು ತಿಳಿಯದೆ ಇರುವದು ಆಶ್ಚರ್ಯ.

ನಿಮ್ಮ ಪತ್ರಿಕಾ ಪಾಠಕ.

ಮೆ॥ ವಿ. ಪಿ. ಮಾಧವರಾವ್, ಸಿ. ಐ. ಇ., ಯವರು.

ಕಳೆದ ಮಾರ್ಚಿ ೨೯ ನೆ ತಾರೀಖು ಶುಕ್ರವಾರ ಶ್ರೀಮನ್ಮಹಾರಾಜರವರು ಮೆ॥ ವಿಶ್ವನಾಥ ಪಟಂಕರ ಮಾಧವರಾವ್, ಸಿ ಐ ಇ., ಯವರನ್ನು ಮೈಸೂರು ಸಂಸ್ಥಾನದ ದಿವಾನರನ್ನಾಗಿ ನೇಮಕ ಮಾಡಿದ ಇಸ್ತಿಹಾರ್ನಾಮೆಯನ್ನು ಇನ್ನೊಂದು ಕಡೆ ಪ್ರಕಟಿಸಿರುತ್ತೇವೆ. ಮೆ॥ ಮಾಧವರಾಯರು ತಿರುವಾಂಕೂರು ಸಂಸ್ಥಾನದಿಂದ ಅದೇ ಗುರುವಾರ ಮಧ್ಯಾಹ್ನದ ರೈಲಿನಲ್ಲಿ ರಾಜಧಾನಿಗೆ ದಯಮಾಡಿದರು ರೈಲ್ವೆ ಸ್ಟೇಷನ್ನಲ್ಲಿ ಮೆ॥ ಕಾಂತರಾಜೇ ಅರಸಿನವರು, ಪ್ರೈವೆಟ್ ಸೆಕ್ರಟರಿ ಮೆ॥ ಮೆಕಾನಿಕಿಯವರು, ಡೆಪ್ಯುಟಿ ಕಮಿಷನರ್ ಮೆ॥ ಸ್ಪಾರ್ಕ್ಸ್‌ಯವರು, ಟ್ರಸ್ಟ್ ಬೋರ್ಡ್ ಪ್ರೆಸಿಡೆಂಟ್ ಮೆ॥ ಸೀತಾರಾಮರಾಯರು, ಈ ಮೊದಲಾದ ಅಧಿಕಾರಸ್ಥರೂ ಪಟ್ಟಣದ ದೊಡ್ಡಮನುಷ್ಯರೂ ಪಾರ್ಸಿ ಜನರಲ್ಲಿ ಮುಖಂಡರೂ, ಮ್ಯುನಿಸಿಪಲ್ ಕಮಿಷನರುಗಳೂ, ಲಾಯರುಗಳೂ, ವರ್ತಕರೂ, ವೈದಿಕರೂ, ಸುಮಾರು ೩೦೦—೩೫೦ ಮಂದಿಯ ವರೆಗೆ ಕಾದಿದ್ದು, ಮೆ॥ ಮಾಧವರಾಯರನ್ನು ಎದುರುಗೊಂಡು, ಹತ್ತಾರು ಹಾರ ತುರಾಯಿಗಳನ್ನು ಒಪ್ಪಿಸಿದರು.

ಮೆ॥ ಮಾಧವರಾಯರು ಆ ದಿನವೇ ಸುಮಾರು ೫ ಗಂಟೆಗೆ ಅರಮನೆಗೆ ದಯಮಾಡಿ, ಕರೀಕಲ್ಲು ತೊಟ್ಟಿಯಲ್ಲಿ ಶ್ರೀಮನ್ಮಹಾರಾಜರವರ ದರ್ಶನ ಮಾಡಿದರು ಆಗ ಶ್ರೀಮನ್ಮಹಾರಾಜರವರು ಅವರಿಗೆ ಹಾರ ವೀಳ್ಯಗಳನ್ನು ಕೊಡಿಸಿ, ಎಲ್ಲರಲ್ಲೂ ಪ್ರೀತಿ ವಿಶ್ವಾಸ ಗೌರವಗಳನ್ನು ಸಂಪಾದಿಸಿ ಕೊಳ್ಳುವಂತೆಯೂ ನಮ್ಮ ಸಂಸ್ಥಾನವು ಎಲ್ಲಾ ಭಾಗಗಳಲ್ಲೂ ಅಭಿವೃದ್ಧಿಗೆ ಬರುವಂತೆಯೂ ನೀವು ಸಾಹಸಪಡಬೇಕು ಎಂಬೀ ಅರ್ಥಕ್ಕೆ ಅಪ್ಪಣೆಯನ್ನಿತ್ತು ಕಳುಹಿಸಿ ಕೊಟ್ಟರು. ಅದೇ ರೀತಿ ಶ್ರೀಮನ್ಮಹಾರಾಜರವರು ಮೊದಲನೇ ಕೌನ್ಸಲರ್ ಮೆ॥ ಟಿ ಆನಂದರಾಯರನ್ನೂ, ಎರಡನೇ ಕೌನ್ಸಲರ್ ಮೆ॥ ಕೆ ಪಿ ಪುಟ್ಟಣ್ಣಚೆಟ್ಟಿಯವರನ್ನೂ ಅರಮನೆಗೆ ಕರೆಸಿಕೊಂಡು, ಹಾರ ವೀಳ್ಯಗಳನ್ನು ಕೊಡಿಸಿ, ಏಕಮನಸ್ಸಿನಿಂದಲೂ ಶ್ರದ್ಧೆಯಿಂದಲೂ ಕಾರ್ಯಗಳನ್ನು ನಡಿಸಿಕೊಂಡು ಬರುವವರಾಗಿ ಎಂಬರ್ಥಕ್ಕೆ ಅಪ್ಪಣೆಯನ್ನಿತ್ತು ಕಳುಹಿಸಿಕೊಟ್ಟರು

ಶುಕ್ರವಾರ ಬೆಳಿಗ್ಗೆ ಮೈಸೂರು ಪುರನಿವಾಸಿಗಳು ಟೌನ್ ಹಾಲ್ ಬಂಗಲೆಯಲ್ಲಿ ಸಭೆಸೇರಿ, ಹೊಸ ದಿವಾನ್ ಮೆ॥ ಮಾಧವರಾಯರಿಗೆ ಅಡ್ರೆಸ್ಸುಗಳನ್ನು ಓದಿ ಒಪ್ಪಿಸಿದರು. ಮುಸಲ್ಮಾನರ ಪರವಾಗಿ ಮೌಲ್ವಿ ವರ್ಕರ್ ಖಾನ್‌ಯವರು ಹಿಂದುಸ್ಥಾನಿ ಭಾಷೆಯಲ್ಲಿ ಅಡ್ರೆಸ್ಸನ್ನು ಓದಿದರು. ಮೈಸೂರು ಸಂಸ್ಥಾನದಲ್ಲಿ ಮುಸಲ್ಮಾನ್ ಪ್ರಜೆಗಳು ಬಹಳ ಹೀನಸ್ಥಿತಿಯಲ್ಲಿದ್ದಾರಾದಕಾರಣ ಅವರನ್ನು ಉತ್ತಮ ಸ್ಥಿತಿಗೆ ತರಬೇಕೆಂದು ಕೇಳಿಕೊಂಡರು. ತರುವಾಯ ಮೆ॥ ಎಂ. ವೆಂಕಟಕೃಷ್ಣಯ್ಯನವರು ಹಿಂದೂಪ್ರಜೆಗಳ ಪರವಾಗಿ ಓದಿದ ವಿಜ್ಞಾಪನಾ ಪತ್ರಿಕೆಯ ಒಕ್ಕಣೆ ಎಂತೆಂದರೆ—

“ ಮೈಸೂರು ಸಂಸ್ಥಾನದ ದಿವಾನರವರಾದ ಮೆ॥ ಮಾಧವರಾಯರವರ ಚರಣಸನ್ನಿಧಿಯಲ್ಲಿ ಮೈಸೂರು ನಿವಾಸಿಗಳ ಭಕ್ತಿ ವಿಶ್ವಾಸ ಪೂರ್ವಕ ವಿಜ್ಞಾಪನೆಗಳು —

ನಮ್ಮ ಸಂಸ್ಥಾನದ ಅಧಿಕಾರಗಳಲ್ಲಿ ೩೦ ವರುಷಗಳಿಗಿಂತಲೂ ಹೆಚ್ಚಾಗಿ ಅಧಿಕಾರಮಾಡಿ, ರಾಜತಂತ್ರಗಳಲ್ಲಿ ನಿಪುಣರೆಂಬದಾಗಿಯೂ ಈ ದೇಶದ ಜನಗಳ ಯೋಗಕ್ಷೇಮ ಚಿಂತೆಯನ್ನು ಮಾಡುವದರಲ್ಲಿ ಬದ್ಧಾದರರೆಂಬದಾಗಿಯೂ ಯೋಚಿಸಿ, ನಮ್ಮ ಶ್ರೀಮನ್ಮಹಾರಾಜರವರು ಸಚಿವಶಿಖಾಮಣಿಗಳಾದ ಮೆ॥ ರಂಗಾಚಾರ್ಯರಿಂದಲೂ, ಸರ್ ಶೇಷಾದ್ರಿ ಐಯ್ಯರ್‌ರಿಂದಲೂ, ಸರ್ ಕೃಷ್ಣಮೂರ್ತಿಗಳಿಂದಲೂ ಅಲಂಕರಿಸಲ್ಪಟ್ಟಿದ್ದ ಈ ದಿವಾನಪದವಿಗೆ ತಮ್ಮನ್ನು ನಿಯಮಿಸಿದ್ದಕ್ಕೋಸ್ಕರ ನಾವು ತುಂಬಾ ಸಂತೋಷವುಳ್ಳವರಾಗಿದ್ದೇವೆ ತಮಗೆ ದೇವರು ಆರೋಗ್ಯಭಾಗ್ಯವನ್ನು ಕೊಟ್ಟು, ಈ ಸಂಸ್ಥಾನದ ಪ್ರಜೆಗಳನ್ನು ಪುತ್ರನಿರ್ವಿಶೇಷವಾದ ಪ್ರೀತಿಯಿಂದ ಕಾಪಾಡಿ, ನಮ್ಮ ಸನಾತನ ಧರ್ಮಗಳನ್ನು ರಕ್ಷಿಸೋಣವರ ಮೂಲಕ ತಮ್ಮ ಪ್ರಖ್ಯಾತವಾದ ಸಚಿವಪ್ರಸಿದ್ಧಿಯು ಹಿಂದಿನ ಸಚಿವರ ಪ್ರಸಿದ್ಧಿಗಿಂತಲೂ ಅಧಿಕವಾಗುವಂತೆ ಮಾಡುವಿರೆಂದು ನಂಬಿದ್ದೇವೆ ಈ ಪ್ರಯತ್ನದಲ್ಲಿ ಸರ್ವೇಶ್ವರನಾದ ದೇವರು ತಮಗೂ ತಮ್ಮ ಜೊತೆಯಲ್ಲಿ ರಾಜ್ಯಭಾರವನ್ನು ವಹಿಸುವಂತೆ ನಿಯಮಿಸಲ್ಪಟ್ಟಿರುವ ಕೌನ್ಸಿಲರುಗಳಿಗೂ ಆರೋಗ್ಯವನ್ನೂ ಮಂತ್ರಶಕ್ತಿಯನ್ನೂ ಸಮಗ್ರವಾಗಿ ಕೊಟ್ಟು ಸಲಹಲೆಂದು ನಾವು ಪ್ರಾರ್ಥಿಸುತ್ತೇವೆ.”

ತರುವಾಯ ಹಿಂದುಸ್ಥಾನೀ ಭಾಷೆಯಲ್ಲಿ ಓದಿದ ಅಡ್ರೆಸ್ಸಿನ ಇಂಗ್ಲಿಷ್ ತರ್ಜುಮೆಯನ್ನು ಮೆ॥ ಮಹಮದ್ ಜಾಫರ್ ಅಲಿಖಾನರವರು ಓದಿದರು ಆ ವೇಳೆ ಮೆ॥ ಮಾಧವರಾಯರು ಎದ್ದು ಸಭಿಕರನ್ನು ಕುರಿತು ಹೇಳಿದ ಮುಖ್ಯಾಂಶವೇನೆಂದರೆ—

“ಇಷ್ಟು ವಿಶ್ವಾಸಪೂರ್ವಕವಾಗಿಯೂ ಸಂತೋಷದಿಂದಲೂ ನನಗೆ ಈ ರೀತಿ ಮರ್ಯಾದೆ ಮಾಡಿ, ಈ ವಿಜ್ಞಾಪನಾ ಪತ್ರಿಕೆಗಳನ್ನು ಒಪ್ಪಿಸಿರುವುದಕ್ಕಾಗಿ ನಿಮ್ಮಗಳನ್ನೆಲ್ಲಾ ಮನಃಪೂರ್ವಕವಾಗಿ ವಂದಿಸುತ್ತೇನೆ ನಾನು ಈ ಸಂಸ್ಥಾನಕ್ಕೇನೂ ಹೊಸಬನಲ್ಲ. ಈ ಪಟ್ಟಣದಲ್ಲೇ ನಾನು ಮೊದಲು ಉದ್ಯೋಗವನ್ನು ಮಾಡಿಕೊಂಡು ೩೦ ವರುಷಗಳಿಗಿಂತಲೂ ಹೆಚ್ಚಾಗಿ ಕೆಲಸಮಾಡಿರುತ್ತೇನೆ ನೀವುಗಳೆಲ್ಲಾ ವಿಶೇಷವಾದ ಪ್ರೀತಿವಿಶ್ವಾಸಗಳಿಂದ ಕೂಡಿ, ನನಗೆ ಇಷ್ಟು ಅಗಾಧವಾದ ಅಭಿನಂದನವನ್ನು ಹೇಳಿರುತ್ತೀರಿ ಈ ಸಂಸ್ಥಾನದ ಜನರು ಮತ್ತು ಮತಗಳ ಸ್ಥಿತಿ ತಾರತಮ್ಯಗಳು ನನಗೆ ತಿಳಿದೇ ಇರುವವು ಈಗ ಮುಸಲ್ಮಾನರು ಅವರ ಅಡ್ರೆಸ್ಸಿನಲ್ಲಿ ಸೂಚಿಸಿರುವ ವಿಚಾರವಾಗಿ ಸದ್ಯ ನಾನು ಯಾವ ಮಾತನ್ನೂ ಹೇಳುವವನಾಗಿಲ್ಲವು ಆದರೆ ಇನ್ನೊಂದು ಕಡೆ ನೌಕರಿ ಮಾಡುತ್ತಿದ್ದ ನನ್ನನ್ನು ಶ್ರೀಮನ್ಮಹಾರಾಜರವರು ಇಲ್ಲಿಗೆ ಕರೆಸಿಕೊಂಡ ಬಗೆಯಲ್ಲಿ ಅವರಿಗೆ ಸಂಪೂರ್ಣವಾದ ತೃಪ್ತಿಯುಂಟಾಗುವಂತೆ ನಾನು ನನ್ನ ಕೈಲಾಗುವ ಮಟ್ಟಿಗೂ ಸಾಹಸಪಟ್ಟು ಕೆಲಸಮಾಡಬೇಕೆಂಬ ಅಭಿಪ್ರಾಯವುಳ್ಳವನಾಗಿದ್ದೇನೆ ನನಗೆ ಈ ದಿವಾನಗಿರಿ ಆಗಿರುವ ಸಂದರ್ಭವು ಅಸಾಧಾರಣವಾದದ್ದಾಗಿರುತ್ತದೆ ನೀವು ನನ್ನ ವಿಷಯವಾಗಿ ಹೇಳಿರುವ ಕಾರ್ಯಭಾಗಗಳನ್ನೆಲ್ಲಾ ಭಗವಂತನ ಅನುಗ್ರಹದಿಂದ ನಾನು ಸಾರ್ಥಕಪಡಿಸುವ ಭಾಗದಲ್ಲಿಯೂ ನನ್ನ ವಿಷಯದಲ್ಲಿ ನಿಮ್ಮ ಗೌರವ, ಪ್ರೀತಿ, ವಿಶ್ವಾಸಗಳನ್ನು ಸ್ಥಿರಪಡಿಸಿಕೊಳ್ಳುವ ಭಾಗದಲ್ಲೂ ನಾನು ವಿಶೇಷವಾಗಿ ಸಾಹಸಪಡುವೆನು ಶ್ರೀಮನ್ಮಹಾರಾಜರವರ ವಿಷಯದಲ್ಲೂ ಅವರಲ್ಲಿ ಭಕ್ತಿಪ್ರೀತಿಗಳನ್ನಿಟ್ಟುಕೊಂಡಿರುವ ಪ್ರಜೆಗಳಾದ ನಿಮ್ಮಗಳ ವಿಷಯದಲ್ಲೂ ನನ್ನ ಕರ್ತವ್ಯವನ್ನು ಮನಃಪೂರ್ವಕವಾಗಿಯೂ ಸರ್ವಶಕ್ತಿಯಿಂದಲೂ ನೆರವೇರಿಸುವೆನು.”

ತರುವಾಯ ಮೆ॥ ಮಾಧವರಾಯರಿಗೆ ದಿವ್ಯವಾದ ಹೂವಿನ ಹಾರ ಹಾಕಿ ತುರಾಯಿ ಒಪ್ಪಿಸಿದರು. ಹಾಗೇ ಅವರ ಅಕ್ಕಪಕ್ಕಗಳಲ್ಲಿ ಪೀಠಗಳ ಮೇಲೆ ಕುಳಿತಿದ್ದ ಮೆ॥ ಎಂ ಕಾಂತರಾಜೇ ಅರಸಿನವರು, ಮೆ॥ ಸಿ. ಶ್ರೀನಿವಾಸೈಯ್ಯಂಗಾರರು, ಮೆ॥ ಟಿ. ಆನಂದರಾಯರು, ಮೆ॥ ಕೆ ಪಿ. ಪುಟ್ಟಣ್ಣಚೆಟ್ಟಿಯವರು, ಇವರಿಗೂ ಹಾರ ಹಾಕಿ ತುರಾಯಿ ಕೊಟ್ಟರು. ಬ್ಯಾಂಡಿನವರು ಮಂಗಳವನ್ನು ನುಡಿಸುತ್ತಿದ್ದಾಗ ಸಭೆಯು ಬರಖಾಸ್ತಾಯಿತು.

ಆ ದಿನ ಸಾಯಂಕಾಲ ಇನ್ನೊಂದು ಸಂಗಡದ ಮುಸಲ್ಮಾನರೂ, ಲಿಂಗಾಯತರೂ, ರಣಾವಳ ನಾಟಕ ಸಂಘದವರೂ, ವೈದಿಕಮಂಡಲಿಯವರೂ ಮೆ॥ ಮಾಧವರಾಯರನ್ನು ಅವರ ಬಂಗಲೆಯಲ್ಲಿ ಕಂಡು, ಅವರಿಗೆ ವಿಜ್ಞಾಪನಾಪತ್ರಿಕೆಗಳನ್ನು ಓದಿ ಒಪ್ಪಿಸಿ ಬಂದರು.

ಅದೇ ಶುಕ್ರವಾರ ರಾತ್ರಿ ದಿವಾನರವರೂ ಕೌನ್ಸಿಲ್ ಮೆಂಬರುಗಳೂ ಬೆಂಗಳೂರಿಗೆ ಪ್ರಯಾಣಮಾಡಿ, ಶನಿವಾರ ಛಾರ್ಜ್ ವಹಿಸಿ, ಕೆಲಸಗಳನ್ನು ಚಲಾಯಿಸುತ್ತಿದ್ದಾರೆ

ಮೆ॥ ಕೆ. ಪಿ. ಪುಟ್ಟಣ್ಣಶೆಟ್ಟರಿಗೆ ಸನ್ಮಾನಮಾಡಿದ್ದು.

ಮಾರ್ಚಿ ತಿಂಗಳ ಪ್ರಾರಂಭದಿಂದಲೇ ಈ ಕೋಲಾರದ ಪ್ರಜೆಗಳೂ ಉದ್ಯೋಗಸ್ಥರೂ ಮೆ॥ ಪುಟ್ಟಣ್ಣಶೆಟ್ಟರವರು ನಮ್ಮ ಅತಿ ಪ್ರೇಮುಳ್ಳ ಘನವನ್ನೈದಿದ ಶ್ರೀಮನ್ಮಹಾರಾಜರವರ ಆಲೋಚನಾ ಸಭೆಗೆ ಮೆಂಬರಾಗಿ ಚುನಾಯಿಸಲ್ಪಡುತ್ತಾರೆಂಬ ಸುದ್ದಿಯನ್ನು ಕೇಳಿ, ಅವರನ್ನು ಈ ಡಿಸ್ಟ್ರಿಕ್ಟಿನಿಂದ ಕಳುಹಿಸಿಕೊಳ್ಳುವ ವಿಷಯದಲ್ಲಿ ಎಲ್ಲರೂ ತುಂಬಾ ವಿಷಾದಿಸುವವರಾದರು ಆದಾಗ್ಯೂ ಭಗವಂತನು ಶಾಂತಮೂರ್ತಿಗಳಾದ ಈ ಪ್ರೇಮ ಪ್ರಭುಗಳಿಗೆ ಉತ್ಕೃಷ್ಟ ಪದವಿಯನ್ನು ಅನುಗ್ರಹಿಸಿದ್ದಕ್ಕೆ ಎಲ್ಲರೂ ಬಹು ಸಂತೋಷಪಡುತ್ತಾರೆ ಮೆ॥ ಪುಟ್ಟಣ್ಣಶೆಟ್ಟರು ಯಾವಾಗಲೂ ಪರನ್ಮುಖಿಗಳಾಗಿಯೂ, ಚಟುವಟಿಕೆಯುಳ್ಳವರಾಗಿಯೂ, ಇರುವೆಯು ರಾತ್ರಿ ಹಗಲು ಕೆಲಸ ಮಾಡುವ ಪ್ರಕಾರ ತಮ್ಮ ವಶಕ್ಕೆ ಕೊಡಲ್ಪಟ್ಟ ಡಿಸ್ಟ್ರಿಕ್ಟಿನ ಕೆಲಸವನ್ನು ಬಹು ಸಮರ್ಥತೆಯಿಂದ ಸರ್ಕಾರಕ್ಕೂ ಪ್ರಜೆಗಳಿಗೂ ಅನುಕೂಲವಾಗಿ ನಡೆಸುವವರಾಗಿಯೂ ಇದ್ದರು.

ಮೆ॥ ಪುಟ್ಟಣ್ಣಶೆಟ್ಟರು ಈ ಡಿಸ್ಟ್ರಿಕ್ಟಿಗೆ ಬಂದು ಸರಿಯಾಗಿ ಎರಡು ವರುಷಗಳಾದವು. ಈ ಎರಡು ವರುಷಗಳಲ್ಲಿ ಅವರು ಇಲ್ಲಿನ ಪ್ರಜೆಗಳ ಪ್ರೀತಿ ಗೌರವಗಳನ್ನು ಸಂಪೂರ್ಣವಾಗಿ ಸಂಪಾದಿಸಿಕೊಂಡದ್ದಲ್ಲದೆ ಬಡಬಗ್ಗರಲ್ಲಿ ಬಹು ಕರುಣಾಳುವಾಗಿಯೂ, ಪ್ರಜೆಗಳ ಹಿತವನ್ನೇ ಯಾವಾಗಲೂ ಬಯಸುವವರಾಗಿಯೂ, ಎಂದಿಗೂ ನ್ಯಾಯವನ್ನು ಬಿಡದೆ ತಮ್ಮ ಅಧೀನರಾದವರ ಮೇಲೆ ದಯಾರಸವುಳ್ಳವರಾಗಿಯೂ, ಮನನ್ನರಿತು ಕೆಲಸ ಕಾರ್ಯಗಳನ್ನು ಜರುಗಿಸುವವರಾಗಿಯೂ ಇದ್ದರು. ಆದ್ದರಿಂದಲೇ ಕರುಣಾನಿಧಿಯಾದ ಭಗವಂತನು ಮೆ॥ ಪುಟ್ಟಣ್ಣಶೆಟ್ಟರು ಪಟ್ಟ ಯಾವತ್ತೂ ಮೆಹನತ್ತುಗಳನ್ನು ಕಟಾಕ್ಷಿಸಿ, ಅವರಿಗೆ ಇಷ್ಟು ಕ್ಷಿಪ್ರದಲ್ಲಿಯೇ ಉನ್ನತ ಪದವಿಯನ್ನು ಅನುಗ್ರಹಿಸಿದನು ಈ ಮಹಾಪ್ರಭುಗಳನ್ನು ಸನ್ಮಾನಿಸುವುದಕ್ಕೋಸ್ಕರ ಇದೇ ಕೋಲಾರದ ಮ್ಯುನಿಸಿಪಲ್ ಪಾರ್ಕಿನಲ್ಲಿ ಈ ಟೌನ್ ಪ್ರಜೆಗಳೂ ಟೌನ್ ಹಾಲಿನ ಮೆಂಬರುಗಳೂ ಉತ್ಸವಗಳನ್ನು ಏರ್ಪಡಿಸಿದರು. ಟೌನ್ ಹಾಲಿನ ಮುಂಗಟ್ಟು ಅತ್ಯುತ್ತಮ ಚಪ್ಪರ ಹಾಕಿತ್ತು. ಸುತ್ತುಮುತ್ತಲೂ ತೋರಣಾದಿಗಳೂ, ಬಾವುಟಗಳು ಕಂಗೊಳಿಸುತ್ತಿದ್ದವು. ಸುತ್ತುಮುತ್ತಲಿನ ಗ್ರಾಮಾಂತ್ರಗಳಿಂದ ಕೋಲಾರ್ ತಾಲ್ಲೂಕ್ ಅಮಲ್ದಾರ್ ಮೆ॥ ವೆಂಕಟರಾಯರವರ ಆಜ್ಞಾನುಸಾರ ಕೋಲಾಟಗಾರರೂ, ಗಾರುಡಿಗರೂ, ಕುಸ್ತಿಗಾರರೂ ಯಕ್ಷಿಣಿಗಾರರೂ ವೇಳೆಗೆ ಸರಿಯಾಗಿ ಹಾಜರಾದರು. ಈ ಉತ್ಸವ ಕಮಿಟಿಯ ಸೆಕ್ರೆಟರಿ ಮೆ॥ ಸಿ ಬಿ ಗೋಪಾಲರಾಯರು ಈ ಉತ್ಸವಕ್ಕೆ ಮಹಾಜನಗಳನೇಕರಿಗೆ ಪತ್ರಗಳನ್ನು ಕಳುಹಿಸಿ ಸಕಾಲಕ್ಕೆ ಎಲ್ಲರನ್ನೂ ಬರಮಾಡಿಕೊಂಡು, ವಿನಾಯಂಗನ್ನು ಬಹು ಚೆನ್ನಾಗಿ ನೆರವೇರಿಸಿದರು. ಮಹಾಜನಗಳು ಶಿಷ್ಟಪಟ್ಟದ ಸಬ್ ರಿಜಿಸ್ಟ್ರಾರ್ ಯವರು ವೀಣೆಯ ಮೂಲಕ ಪಲವು ಸಂಗೀತಗಳನ್ನು ಹಾಡಲು ಕೇಳಿ ತುಂಬಾ ಸಂತೋಷಪಟ್ಟರು. ಎಕ್ಸೈಸ್ ಅ. ಕಮಿಷನರ್ ಮೆ॥ ರಾಮಣ್ಣನವರು ಪ್ರೋಗ್ರಾಮಿನ ಮನೋಗ್ರಾಹ್ಯಯ ಕೆಲವು ಇಂಗ್ಲಿಷ್, ತೆಲುಗು, ಹಿಂದೂಸ್ಥಾನಿ ಭಾಷೆಗಳಲ್ಲಿ ಹಾಡಲ್ಪಟ್ಟ ಪದ್ಯಗಳಿಂದ ಬಂದಿದ್ದ ಪ್ರಜೆಗಳನ್ನು ಆನಂದಪಡಿಸಿದರು ಮೆ॥ ಗೋಪಾಲರಾಯರು ಮೆ॥ ಪುಟ್ಟಣ್ಣಶೆಟ್ಟರವರನ್ನು ಕುರಿತು ಹೇಳಿದ್ದೇನೆಂದರೆ— ನಾನು ಮೆ॥ ಕೆ. ಪಿ ಪುಟ್ಟಣ್ಣಶೆಟ್ಟರನ್ನು ೨೫ ವರುಷಗಳಿಂದ ಬಲ್ಲೆನು ಅವರು ಅಂದಿನಿಂದ ಈ ವರೆಗೆ ಭಗವತ್ಕೃಪೆಯಿಂದ ತಮಗೆ ಕೊಡಲ್ಪಟ್ಟ ಎಲ್ಲಾ ಕೆಲಸಗಳನ್ನೂ ಅಂದರೆ, ಸದರ್ನ್ ಮರಾಟಾ ರೈಲಿನ ಟ್ರಾಫಿಕ್ ಮ್ಯಾನೇಜರ್ ಕೆಲಸವನ್ನೂ, ಮೆ॥ ರಿಕೆಟ್ಸ್ ಸಾಹೇಬರ ಕಾಲದಲ್ಲಿ ಪೊಲೀಸ್ ಅ ಸೂಪರಿಂಟೆಂಡೆಂಟ್ ಕೆಲಸವನ್ನೂ ಬಹು ತೃಪ್ತಿಕರವಾಗಿ ಮಾಡಿದರು. ಇಲ್ಲಿಯವರೆಗೆ ಭಗವತ್ಕಟಾಕ್ಷದಿಂದ ಅವರಿಗೆ ಬಡ್ತಿಯ ಮೇಲೆ ಬಡ್ತಿ ಆಗುತ್ತಾ ಬಂದು, ಈಗ ನಾವೆಲ್ಲರೂ ಕೇಳಿರುವ ಪ್ರಕಾರ ಮಂತ್ರಾಲೋಚನಾ ಕೆಲಸಕ್ಕೆ ಚುನಾಯಿಸಲ್ಪಟ್ಟಿರುವದು ತುಂಬಾ ಶ್ರೇಯಸ್ಕರವಾಗಿದೆ. ಆದರೆ ಅವರನ್ನು ಇಲ್ಲಿಂದ ಕಳುಹಿಸಿಕೊಳ್ಳುವದರಲ್ಲಿ ನಮಗೆ ತುಂಬಾ ವ್ಯಸನವಾಗಿದೆ

ಅನಂತರ ಮೆ॥ ಲಾಯರ್ ರಾಮಾಚಾರ್ಯರು ಹೇಳಿದ್ದು—ಮೆ॥ ಪುಟ್ಟಣ್ಣಶೆಟ್ಟರು ಇಲ್ಲಿಗೆ ದಯಮಾಡಿಸಿದ ಲಾಗಾಯ್ತು ಈವರೆಗೆ ಅವರ ಪ್ರತಿ ಒಂದು ಕಾರ್ಯವನ್ನೂ ನಾನು ಬಹು ಜಾಗ್ರತೆಯಿಂದ ಕಾಯುತ್ತಾ ಇದ್ದೆ ಅವರ ಗುಣ ನಡತೆಗಳು ಬಹು ಉತ್ಕೃಷ್ಟವಾದವು, ಮತ್ತು ಕೀರ್ತಿಕರವಾದವು ಅವರ ನೌಕರಿಯಲ್ಲಿ ದೋಷಾರೋಪಣೆಗೆ ಕಿಂಚಿತ್ತಾದರೂ ಅವಕಾಶವಿರಲಿಲ್ಲ ಈ ಡಿಸ್ಟ್ರಿಕ್ಟಿನ ಯಾವ ಮೂಲೆಗೆ ಹೋದಾಗ್ಯೂ ಪ್ರತಿ ಒಬ್ಬರೂ ಮೆ॥ ಪುಟ್ಟಣ್ಣಶೆಟ್ಟರನ್ನು ಕುರಿತು—ಇಂಥಾ ಧೊರೆಯನ್ನು ನಾವು ಎಲ್ಲಿಯೂ ನೋಡಲಿಲ್ಲ. ಇವರು ಇಲ್ಲಿಂದ ಹೋಗಿಬಿಡುತ್ತಾರಲ್ಲಾ ಎಂಬ ಚಿಂತೆಯೇ ನಮಗೆ ಬಹು ವ್ಯಸನವನ್ನುಂಟುಮಾಡಿದೆ ಎಂದು ಹೇಳುವದನ್ನು ನಾನು ಕಿವಿಯಾರ ಕೇಳಿದ್ದೇನೆ.

ಕಡೆಗೆ ಈ ಡಿಸ್ಟ್ರಿಕ್ಟಿನ ಇಂಜಿನಿಯರ್ ಮೆ॥ ಕೃಷ್ಣಸ್ವಾಮಿ ಐಯ್ಯರವರು ರೀಡಿಂಗ್ ರೂಮಿನವರ ಪರವಾಗಿ—ಮೆ॥ ಪುಟ್ಟಣ್ಣಶೆಟ್ಟರು ಈ ರೀಡಿಂಗ್ ರೂಮಿನ ಪ್ರೆಸಿಡೆಂಟರಾಗಿದ್ದದ್ದು ನಮ್ಮೆಲ್ಲರಿಗೂ ಬಹು ಹರ್ಷವನ್ನೂ ಶ್ರೇಯಸ್ಸನ್ನೂ ಉಂಟುಮಾಡಿತ್ತು. ಅವರ ದರ್ಶನವಾಗುವಾಗಲೆಲ್ಲಾ ರೀಡಿಂಗ್ ರೂಮಿನ ಪ್ರತಿ ಒಬ್ಬ ಮೆಂಬರೂ ವಿಶ್ವಾಸಾನಂದದಿಂದ ಅವರನ್ನು ಕಾಣುತ್ತಿದ್ದರಲ್ಲದೆ, ಅವರು ಸಮಯೋಚಿತವಾದ ಆಲೋಚನೆಯನ್ನೂ ಕೊಡುತ್ತಿದ್ದರು ಇಂಥಾ ಮಹನೀಯರನ್ನು ಕಳುಹಿಸಿಕೊಳ್ಳುವ ವಿಷಯಕ್ಕೆ ರೀಡಿಂಗ್ ರೂಮಿನ ಅಂಗಗಳೆಲ್ಲರೂ ತುಂಬಾ ಶೋಕವಾಗಿದೆಯಾದಾಗ್ಯೂ ಭಗವಂತನು ಬುದ್ಧಿಶಾಲಿಗಳೂ, ಚಟುವಟಿಕೆಯುಳ್ಳವರೂ, ಪ್ರೀತಿಯೂ ಕರುಣೆಯೂ ಉಳ್ಳವರೂ ಆದ ಮೆ॥ ಪುಟ್ಟಣ್ಣಶೆಟ್ಟರವರನ್ನು ಇಷ್ಟು ಕ್ಷಿಪ್ರದಲ್ಲಿಯೇ ಉತ್ಕೃಷ್ಟ ಪದವಿಗೆ ಏರಿಸಿದ್ದಕ್ಕಾಗಿ ಬಹಳ ಸಂತೋಷಿಸಿ, ಕೊಂಡಾಡುತ್ತೇವೆಂದು ಮಾತಾಡಿ ಮುಗಿಸಿದರು.

ಮೆ॥ ಪುಟ್ಟಣ್ಣಶೆಟ್ಟರು ಎದ್ದುನಿಂತು ಪ್ರತ್ಯುತ್ತರ ಕೊಟ್ಟಿದ್ದೇನೆಂದರೆ— ಧನಿಕರುಗಳೇ, ಧೊರೆಗಳೇ, ದೊಡ್ಡಮನುಷ್ಯರೇ, ನೀವಿಷ್ಟು ಮಂದಿಯೂ ನನ್ನ ಕಡೆಗೆ ತೋರಿಸಿರುವ ಪ್ರೀತಿ ಗೌರವಾದಿಗಳಿಗಾಗಿ ನಾನು ನಿಮ್ಮೆಲ್ಲರನ್ನೂ ಬಹಳವಾಗಿ ವಂದಿಸುತ್ತೇನೆ. ಇದರಿಂದ ನೀವುಗಳು ನನ್ನನ್ನು ಎಷ್ಟಾಗಿ ಪ್ರೀತಿಸುತ್ತೀರೆಂಬುವದು ವ್ಯಕ್ತವಾಯಿತು. ಇಷ್ಟು ಹೊತ್ತು ಮಾತಾಡಿದ ಮೆ॥ ಗೋಪಾಲರಾಯರೂ, ಮೆ॥ ರಾಮಾಚಾರ್ಯರೂ, ಮೆ॥ ಕೃಷ್ಣಸ್ವಾಮಿಯರವರೂ ನನ್ನ ಗುಣ ನಡತೆಗಳ ವಿಷಯವೂ ಬುದ್ಧಿ ಕುಶಲತೆಗಳ ವಿಷಯವೂ ಎಲ್ಲಾ ನನ್ನಲ್ಲಿತ್ತೆಂದು ನನಗೆ ತಿಳಿದಿರಲಿಲ್ಲ. ನನ್ನಲ್ಲಿ ಅಂಥಾ ಸುಲಕ್ಷಣಗಳು ಕಂಡುಬಂದಿದ್ದಲ್ಲಿ ಅದು ಭಗವಂತನ ಕಟಾಕ್ಷದಿಂದಲೇ ಎಂಬುವದಕ್ಕೇನೂ ಆಕ್ಷೇಪ

ನಾನು ಈ ಡಿಸ್ಟ್ರಿಕ್ಟ್ ಛಾರ್ಜಿಗೆ ಬಂದು ಈಗ್ಯೆ ಸರಿಯಾಗಿ ... ವರುಷವಾದವು. ಮಲೆಯಿರುವ ಪ್ರಾಂತ್ಯವಾದ ಶಿವಮೊಗ್ಗೆಯಲ್ಲಿ ... ಮಾಡುತ್ತಿದ್ದೆನಾದಕಾರಣ ಜ್ವರದಲ್ಲಿ ಬಿದ್ದು ಕೃಶಿಸಿಬಿಟ್ಟು ಇಲ್ಲಿಗೆ ... ಬಲು ಕ್ಷೀಣ ಬಲಹೀನನಾಗಿದ್ದೆನು. ಆದರೆ ಕೆಲವು ದಿನಗಳ ... ಪೂರ್ಣ ಆರೋಗ್ಯವನ್ನು ಪಡೆಕೊಂಡೆನು. ನಾನು ಈ ಡಿಸ್ಟ್ರಿ... ... ಬಗ್ಗೆ ಕೆಲವು ದೌರ್ಭಾಗ್ಯ ಪ್ರಜೆಗಳು ನನ್ನನ್ನು ಬಹು ಭಕ್ತಿ ... ದಿಂದ ಕಾಣುತ್ತಿದ್ದರು ಕೆಲವು ಸಂದರ್ಭಗಳಲ್ಲಿ ಬಹುದೈತರ ... ನನ್ನು ನೋಡಿ ಬಹಳ ವ್ಯಥೆಪಟ್ಟಿರುತ್ತೇನೆ ಅಂಥಾ ಬಡದೈತ ... ದಾಯವು ಆರೋಗ್ಯ ಪಡೆಯಾಗಬೇಕೆಂದು ನನಗೆ ತೋಂದು ... ಈ ವಿಷಯವಾಗಿ ನಾನು ಸರ್ಕಾರಕ್ಕೆ ಬರಕೊಂಡಾಗ ದಯಾ ... ದ ಸರ್ ವಿ. ಪಿ. ಕೃಷ್ಣಮೂರ್ತಿಗಳು ನನ್ನ ಶಿಫಾರಸನ್ನು ... ನಮ್ಮ ಮಹಾರಾಜರವರ ಸನ್ನಿಧಿಗೆ ಕಳುಹಿಸಲು ಅವರು ಅದ ... ಅಂಗೀಕರಿಸಿ, ತಕ್ಕ ಫಂಡಾಯವನ್ನು ಅರ್ಡರ್ ಮಾಡಿದ್ದು ... ಬಹು ಸಂತೋಷವಾಯಿತು. ನಾನು ಈ ಡಿಸ್ಟ್ರಿಕ್ಟ್ ಛಾರ್ಜ ... ಬಿಟ್ಟು ಹೋಗುವದಕ್ಕಿಂತ ಮುಂಚೆಯೇ ಈ ಹುಕುಂ ಬಂದದ್ದು ... ಬಹು ಸಂತೋಷವಾಯಿತು ಭಗವತ್ಕೃಪಾಕ್ಷದಿಂದ ನಾನೂ, ... ಸಂಸಾರವೂ, ಮಕ್ಕಳೂ, ಇಲ್ಲಿಗೆ ಬಂದಾರಭ್ಯ ಆರೋಗ್ಯಭಾಗ್ಯ ... ಹೊಂದಿದ್ದೇವೆ ಇಂಥಾ ಉತ್ತಮ ಸ್ಥಳವನ್ನು ಬಿಟ್ಟುಹೋಗುವ್ದು ... ಬಹು ವ್ಯಸನವೇ ಆದಾಗ್ಯೂ ಭಗವಂತನ ಕೃಪೆಯಿಂದ ಮುಂ ... ದೆ ಹೋಗುತ್ತಾ ಇವೇನೆ ನಿಮ್ಮೆಲ್ಲರನ್ನೂ ನಾನು ಯಾವಾಗಲೂ ... ಜ್ಞಾಪಕಮಾಡಿಕೊಳ್ಳುವೆನು

... ನಾಯ ಮಿ॥ ಫುಟ್ಟಣ್ಣಶೆಟ್ಟರಿಗೂ ಸಹಿತವಾಗಿ ಹಾರಾ ತುರಾ ... ಪಾನಸುಪಾರಿ, ಗಂಧ, ಪನ್ನೀರುಗಳು ವಿನಿಯೋಗವಾಗಿ ... ಸಭೆ ಮುಕ್ತಾಯವಾಯಿತು ಟೌನ್ ಹಾಲಿನಲ್ಲಿ ಕೂಡಿದ್ದವರು ... ಫುಟ್ಟಣ್ಣಶೆಟ್ಟರನ್ನು ಓ ಂದ್ ವಾದ್ಯಗಳೊಡನೆ ಒಂದಿಗೆ ಕಳುಹಿ ... ಮರುದಿನ ಬೆಳಿಗ್ಗೆ ಮಿ॥ ಫುಟ್ಟಣ್ಣಶೆಟ್ಟರು ಬೆಂಗಳೂರಿನ ಕಡೆ ... ಪ್ರಯಾಣ ಇಲ್ಲಿನ ನಿಃಶ್ರೇಣಿಗಳೂ, ಮಿಡ್ಲ್ ಸ್ಕೂಲಿನ ಬಾಲಕ ಬಾಲಕಿ ... ಬಾಗಿಲ ಬಳಿ ಕೂಡಿದ್ದು ಅವರಿಗೆ ವಂದನೆಗಳನ್ನು ಸಲಿಸಿ, ... ಕಳುಹಿದರು ದೇವರು ಇವರು ಸುಗುಣಶೀಲರಾದ ಮಿ॥ ಫುಟ್ಟ ... ಶೆಟ್ಟರವರಿಗೆ ಆಯುರಾರೋಗ್ಯಾದಿಗಳನ್ನು ಅನುಗ್ರಹಿಸಲೆಂದು ಪ್ರಾ ... ರ್ಥನೆ ಜೆ ಜೆ

ತಾಲೋಕು ವರ್ತಮಾನಗಳು.

ಚಿಕ್ಕಮಗಳೂರು.—ಬಿಸಿಲು ಹೆಚ್ಚು ನೀರಿಗೆ ಕಷ್ಟ ನಮ್ಮ ... ಬಜಾರ್ ಕೆರೆಯಲ್ಲಿ ಒಂದೆರಡು ಗುಡಿಗಳ ಕಾಲ ಮಾತ್ರ ನಿಲ್ಲುವ ... ದಷ್ಟು ನೀರು ಇರುವುದರಿಂದ ಅದನ್ನು ಸಾಕಾಗಿಲ್ಲ ಇಟ್ಟು ... ... ವನ್ನು ಊರಿಗೆ ತಿರುಗಿಸಿದಾರೆ. ಅದು ಮಂದವಾಗಿಯೂ ಕ್ರಿಮಿ ... ತುಂಬಿಯೂ ಇರುವದರಿಂದ ಕಾಯಿಸಿ ಕುಡಿಯಬೇಕೆಂದು ... ಈ ನೀರನ್ನಾದರೂ ಕ್ರಮವಾಗಿ ಎಲ್ಲಾ ನಲ್ಲಿಗಳಲ್ಲಿಯೂ ... ಬಿಟ್ಟರೆ ಒಳ್ಳೇದು ಕೆಲವು ಸಮಯಗಳಲ್ಲಿ ಒಂದು ಸ್ಥಳದಿಂದ ... ಒಂದು ಸ್ಥಳಕ್ಕೆ ನೀರು ಬಿಡುವ ನಲ್ಲಿಗೆ ಹೋಗಿ ನೀರು ತರಬೇ ... ... ಇರುವ ನೀರನ್ನೇ ಮುಂಚಿನಷ್ಟು ಕೆರೆಗೆ ನೀರು ಬರುವ ವರೆ ... ಎಲ್ಲಾ ನಲ್ಲಿಗಳಲ್ಲಿಯೂ ನೀರು ಬರುವಂತೆ ಮಾಡುವದು ... ಉಚಿತವೆಂದು ತೋರುತ್ತದೆ ... ಊರಿನಲ್ಲಿರುವ ಪ್ರಜೆಗ ... ... ನಲ್ಲ ಕಾಡು ಮೃಗಗಳಿಗೂ ಬಹಳ ಕಷ್ಟವಾಗಿರುವಂತೆ ಕಾಣು ... ... ಹ್ಯಾಗೆಂದರೆ ಅಷ್ಟೂರಿನಲ್ಲಿ ಕೆಲವು ಕಾಡು ... ಂದಿಗಳು ಈ ... ಹತ್ತಿರದಲ್ಲಿರುವ ದುರ್ಗದ ಕಡೆಯಿಂದ ಬಸವನಹ ... ... ಗೆ ಬಂದ ಅಲ್ಲಿ ನೀರಿಲ್ಲದೆ ಇರಲು ಕೋಟೆ ಕೆರೆಗೆ ... ಕುಡಿದು ಹೋಗುವಾಗ ಇಲ್ಲಿನ ಕೊಲೆಗಾರಿಯಲ್ಲಿ ಕೆಲವರು ... ... ಆಪ್ತಗಳಲ್ಲಿ ಒಂದನ್ನು ಕೊಡೆದು ಕೊಂದರಂತ ಹೇಳುತ್ತಾ ... ... ಚಿಕ್ಕಮಗಳೂರು ತಾಲ್ಲೂಕು ... ಮಾಡುವ ... ... ತನ ಬಿಡಾರ ... ಕೇಳಿ, ತನ್ನ ಸ್ವಂತ ... ... ಕೊಂದು ಸಾಕಿದನೆಂದು ಪೋಲೀಸಿಗೆ ... ಬಂದದ್ದ ... ... ಆಸಾಮಿಯನ್ನು ... ವಿಚಾರಣೆ ಗುರಿಮಾಡಿ ... ... ಮಾರ್ಚಿ ೨೯ ನೆ ... ... ೨೦ ಮನೆಗಳು ಸುಟ್ಟು ಹೋದವು ಆ ಜನರ ... ... ಇಲ್ಲಿನ ... ಅಮಿಲ್ದಾರರೇ ಮೊದಲಾದ ... ... ಇತರ ದೊಡ್ಡ ಮನುಷ್ಯರೂ ಸೇರಿ ಸುಮಾರು ಮುನ್ನೂರು ... ... ಪಾಯಿ ... ಸೇರಿಸಿ, ಆ ಬಡ ಜನರಿಗೆ ಸಹಾಯ ... ಮಾಡಿದ್ದಾರೆ ... ಈಗಾಗಲೇ ನೂರು ರೂಪಾಯಿಗಿಂತ ಹೆ ... ... ಕೊಡಿಸಿದಾರೆ ... ವರ್ತಮಾನವಿದೆ —ಮಾರ್ಚಿ ೨೬ ರಲ್ಲಿ ... ... ಬೆಂಕಿಬಿದ್ದು ಸುಮಾರು ೧೪ ಮನೆಗಳೂ ೧ ಕರುವೂ ... ... ಹೋದವೆಂದೂ ಕೇಳುತ್ತೇನೆ ಹಿರೇಮಗಳೂರಿನವರಿಗಾಗಿ ... ... ಪಾಯಿ ... ಮಾಡುವವರು ಯಾರಾದರೂ ... ... ಮಾಡಬಾರದೇ!—ತಾ ೨೯ ರಲ್ಲಿ ಯಾರೋ ಒಬ್ಬ ... ... ಹೋದವನು ಹತ್ತು ಇಲ್ಲಿನ ಜೈಲ್ ಮುಂಭಾಗ ... ... ತೋಪಿನ ಪಕ್ಕದಲ್ಲಿರುವ ಮಾವಿನ ತೋಪಿನಲ್ಲಿ ... ... ಮರಣವು ಸಂಭವಿಸಿತು

ಚೆನ್ನರಾಯಪಟ್ಟಣ.—ಇಲ್ಲಿ ಬಿಸಲಿನ ತಾಪ ಅಧಿಕವಾಗಿದೆ. ... ಮಳೆಯಾಗಿಲ್ಲ ಈ ಊರಿನ ಜನರಲ್ಲಿ ಕೆಲವರು ಮುಂದಕ್ಕೆ ... ಗಲಾಟೆಯಾದರೆ ಹೊರಟುಹೋಗೋಣವೆಂದು ಹಣಗಳನ್ನು ... ... ಇದಾವುದೂ ಕೊರತೆ ಹೋಗಿಲ್ಲ. ಮತ್ತು ಇಲ್ಲಿಯ ... ವ್ಯಾಪಾರದಿಂದ ಜೀವನ ಮಾಡಿಕೊಳ್ಳುವವರಾಗಿದಾರೆ ಆದರೆ ... ಪೇಟೆಗಳಿಗೆ ಹೋಗಿ ವ್ಯಾಪಾರ ನಡೆಯದೇ ಇರುವದರಿಂದ ... ಚಿಂತೆಪಡುತ್ತಿರುವ ಹಾಗಾಗಿದೆ —ತಾಲ್ಲೋಕಿನ ರೆವಿನ್ಯೂ ... ... ಚೌಡನಾಯ್ಕನೆಂಬುವವನು ತಿಮ್ಮನಹಳ್ಳಿ ಹೊಲೆಯರ ... ... ಯವಳನ್ನು ಮಾನಭಂಗ ಮಾಡಬೇಕೆಂದು ಅವಳ ಮೈಮೇಲೆ ಕೈ ಹಾಕಿದ್ದಕ್ಕೆ ಎರಡನೇ ಕ್ಲಾಸ್ ಜನರಲ್ ಅಸಿಸ್ಟೆಂಟರ ಕೋರ್ಟಿನಲ್ಲಿ ಫಿರ್ಯಾದು ಮಾಡಿದ್ದರ ಮೇಲೆ ವಿಚಾರಣೆ ಬಗ್ಗೆ ಚಿಕ್ಕನಾಯ್ಕನಹಳ್ಳಿ ತಾಲ್ಲೂಕ್ ಕಚೇರಿಗೆ ವರ್ಗ ಮಾಡಲಾಯಿತು. ಆಗ ಫಿರ್ಯಾದಿ ಹಾಜರಿಲ್ಲವೆಂದು ಸದರೀ ಕೋರ್ಟಿಗೆ ತಿಳಿಸಿದ್ದರಿಂದ ಕೊಕ್ಕದ್ದಮೆಯನ್ನು ವಜಾ ಮಾಡಿದೇವೆಂಬ ಅಪ್ಪಣೆಯನ್ನು ತಿಳಕೊಂಡು, ಪುನಃ ಫಿರ್ಯಾದಿಯು ಕಾಪಿಯನ್ನು ತೆಗೆದುಕೊಂಡು ಅಪೀಲ್ ದಾಖಲ್ ಮಾಡಿದ್ದಕ್ಕೆ ಇದು ಈ ತಿಂಗಳ ೨೩ ಕ್ಕೆ ಹೀರಿಂಗ್ ಇಟ್ಟಿದಾರೆ. ಇದರ ತೀರ್ಮಾನವನ್ನು ಮುಂದೆ ತಿಳಿಸುತ್ತೇನೆ —ಸದರಿ ತಾಲ್ಲೂಕಿಗೆ ೨ ಮೈಲಿ ಫಾಸಲೆಯಲ್ಲಿರುವ ನೌಲೆ ಎಂಬ ಗ್ರಾಮದಲ್ಲಿ ಒಬ್ಬ ಬ್ರಾಹ್ಮಣ ಹೆಂಗಸು ತನ್ನ ಮಗಳನ್ನು ಯಾರೋ ಕದ್ದುಕೊಂಡು ಹೋಗಿದಾರೆಂದು ಪಟೇಲರ ಬಳಿ ರಿಪೋರ್ಟು ಮಾಡಿದ್ದಕ್ಕೆ ಅವರು ಕೂಡಲೆ ಪೋಲೀಸಿಗೆ ತಿಳಿಸಿದರು ಸದರೀ ೪ ವರುಷದ ಹುಡುಗಿಯನ್ನು ಕಟ್ಟೆಕೆರೆಯ ಬ್ರಾಹ್ಮಣರಲ್ಲಿ ಕೆಲವರು ಕದ್ದುಕೊಂಡು ಪತ್ತೆ ಇಲ್ಲದೆ ಎತ್ತಿಕೊಂಡು ಹೋಗಿ ಅವರ ಊರಿನಲ್ಲಿ ಅದೇ ರಾತ್ರಿ ಮದುವೆ ಮಾಡಿದರು ಆಗ ಪೋಲೀಸ್ ಇನ್ಸ್‌ಪೆಕ್ಟರು ತಲಾಷ್ ಮಾಡಿ, ಹುಡುಗಿಯನ್ನು ಕದ್ದುಕೊಂಡು ಬಂದ ೩ ಮಂದಿ ಬ್ರಾಹ್ಮಣರನ್ನು ಚಿಕ್ಕನಾಯಕನಹಳ್ಳಿ ತಾಲ್ಲೂಕ್ ಲಾಕಪ್ಪಿನಲ್ಲಿ ಇಟ್ಟಿದಾರೆ ಹೀಗೆ ಹೊಸದಾಗಿ ಬಂದ ನಮ್ಮ ಇನ್ಸ್‌ಪೆಕ್ಟರು ಕೃತ್ಯನಡೆದ ಕೂಡಲೆ ತುಂಬಾ ಪ್ರಯಾಸಪಟ್ಟು ಪತ್ತೆ ಮಾಡುವುದರಿಂದ ನಾವೆಲ್ಲರೂ ತುಂಬಾ ಕೃತಜ್ಞರಾಗಿದ್ದೇವೆ —ಸದರಿ ತಾಲ್ಲೂಕಿಗೆ ೧ ಮೈಲಿ ಫಾಸಲೆಯಲ್ಲಿರುವ ದಬ್ಬೆಘಟ್ಟ ಎಂಬ ಗ್ರಾಮದಲ್ಲಿ ಮರುಳೇಶ್ವರಸ್ವಾಮಿ ಪರಿಷೆ ಆಗುವದಕ್ಕೆ ಮುಂಚೆ ತಾ. ೨೯ ನೇ ರಾತ್ರಿ ಪರ್ವ ನಡೆಯಿತು ಈ ಪರ್ವಕ್ಕೆ ಇದೇ ಗ್ರಾಮದ ಕುಂಬಾರನು ಕೆಲವು ಹರವಿಗಳನ್ನು ಅದೇ ದಿವಸ ಬಿಗಿಸಿ, ಗಾವಿಗೆಯಲ್ಲಿ ಅರ್ಧ ಬೇಗಾಗಿ ಸುಟ್ಟು, ೫ ಹರವಿಗಳನ್ನು ಪರ್ವದ ಅಡಿಗೆಗಾಗಿ ಕ್ರಯಕ್ಕೆ ಕೊಟ್ಟನು ಅಡಿಗೆ ಪಕ್ವವಾಗುವ ಸಮಯದಲ್ಲಿ ಎಸರಿನ ಹರವಿ ೧, ಮುದ್ದೆಯ ಹರವಿ ೩, "ಢಮಾರ್" "ಢಮಾರ್" ಎಂಬ ಶಬ್ದದಿಂದ ಬಿರಿದು ಹೋಗಿ ಪದಾರ್ಥವೆಲ್ಲಾ ಒಲೆಯಪಾಲಾಗಿ, ಭೋಜನಕ್ಕೆ ಬಂದಿದ್ದ ೭ ಗ್ರಾಮದವರು ಕಣ್ಣುಕಣ್ಣು ಬಿಡುತ್ತಾ, ರಾತ್ರಿ ೧೧ ಘಂಟೆಯಲ್ಲಿ ಮಂತ್ರದಿಂದ ಬಡಿಸಿದ ಬರೇ ಎಸರಿನ ಊಟವನ್ನು ಮಾಡುವಾಗ ಪ್ರತಿಯೊಬ್ಬನೂ—"ನನಗೆ ಕಾಳೇ ಬೀಳಲಿಲ್ಲ ಕಾಳೇ ಬೀಳಲಿಲ್ಲ ನಂತಕ್ಕೆ ಇಲ್ಲದೇ ಬರೇ ಮುದ್ದೆಯನ್ನು ಎಂಗ ನುಂಗೋದು" ಎಂದೂ, ಅದಕ್ಕೆ ಇನ್ನೊಬ್ಬನು — "ಎಟೂ ಕಿರಿಬಟ್ಟು ನುಂಗಿಕೊಳ್ಳೋ" ಎಂದೂ ಅಂದದ್ದಲ್ಲದೆ, ಈ ಕುಂಬಾರ ಬಿಟ್ಟಿ ಮಾಡಿದ ಕೆಲಸಕ್ಕೆ ಪರವಕ್ಕೆ ಒಂದೊಂದು ಮಾತಿನಂತೆ ಆಡಿದ್ದಲ್ಲದೆ, ಊಟ ತೀರಿಸಿಕೊಂಡು ತಮ್ಮ ತಮ್ಮ ಗ್ರಾಮಕ್ಕೆ ಹೋಗುವ ಜನರು ಸದರೀ ದೇವಸ್ಥಾನದ ಮುಂದೆ ಎರಡು ಕೈ ಕಾಲುಗಳನ್ನು ಜೋಡಿಸಿ,—"ಮರುಳಪ್ಪಾ, ನೀನೇ ನೋಡಿಕೊಳ್ಳೋ ಯಾನಿನಲ್ಲಿ ಒಂದು ಕಾಳಾದರೂ ಬೀಳಲಿಲ್ಲವಪ್ಪಾ" ಎಂದ್ಹೇಳಿ, ಜಗಾತವಾಗಿ ಹೋದರು ಸದರೀ ಪರ್ವದಲ್ಲಿ ೫೦—೬ ರೂಪಾಯಿ ನಷ್ಟವಾಯಿತೆಂದು ತಿಳಿಯಬಂದಿದೆ ಇದರಿಂದ ಕುಂಬಾರಪಟ್ಟಿಗೆ ಮರುಳೇಶ ಸ್ವಾಮಿಯಲ್ಲಿ ಪರಿಭಕ್ತಿಯೇ, ಈ ಮರುಳೇಶ ಸ್ವಾಮಿಯ ಆಶೀರ್ವಾದವು ತನ ಭಕ್ತರ ಮೇಲೆಯೂ ಇಲ್ಲವೆಂತಲೂ, ತನ್ನ ಭಕ್ತರು ತಿಂದು ಹೋಗಲೆಂದೂ ತಿಳಿಯ ಬರುತ್ತದೆ

ಮೈಸೂರು ಗೆಜೆಟು ಸಂಗ್ರಹ.

ಮೈಸೂರು ಸಿಟಿ ಮ್ಯಾಜಿಸ್ಟ್ರೇಟ್ ಮಿ॥ ಎಂ. ವೆಂಕಟರಾಯರಿಗೆ ಐದು ವಾರಗಳ ಕ್ಯಾಜುಲ್ ರಜಾ ಕೊಟ್ಟಿದೆ

ಮೊದಲನೆ ಕೌನ್ಸಿಲರ್ ರಾಜಮಂತ್ರ ಪ್ರವೀಣ ಮಿ॥ ಸಿ ಶ್ರೀನಿವಾಸಯ್ಯಂಗಾರ್ರಿಗೆ ಮೂರು ತಿಂಗಳ ಪ್ರಿವಿಲೆಜ್ ರಜವನ್ನೂ, ಎರಡನೆ ಕೌನ್ಸಿಲರ್ ರಾವ್ ಬಹದೂರ್ ಮಿ॥ ಸಿ ಮಾಧವಯ್ಯನವರಿಗೆ ೯ ತಿಂಗಳೂ ೨೪ ದಿನಗಳ ಪ್ರಿವಿಲೆಜ್ ರಜವನ್ನೂ ಕೊಟ್ಟಿದೆ ಈ ರಜಾ ಪೂರೈಸಿದ ಮೇಲೆ ಇವರುಗಳು ಕೆಲಸದಿಂದ ನಿವೃತ್ತರಾಗತಕ್ಕದ್ದು

ಹಾಸನದ ಡಿಸ್ಟ್ರಿಕ್ಟ್ ಛಾಜನ್ನು ವಹಿಸಿರುವ ಸಬ್ ಅಸಿ॥ ಸರ್ಜನ್ ಮಿ॥ ಸಿ ಅಪ್ಪಾದೊರೈ ಮೊದಲಿಯಾರ್ರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಎರಡು ತಿಂಗಳ ಪ್ರಿವಿಲೇಜ್ ರಜಾ ಕೊಟ್ಟಿದೆ

ಅಸಿ॥ ಸರ್ಜನ್ ಮಿ॥ ಸಿ ರಾಜಾರಾಮರಾಯರನ್ನು ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಯಿಂದ ಹಾಸನದ ಡಿಸ್ಟ್ರಿಕ್ಟ್ ಮೆಡಿಕಲ್ ಆಫೀಸರಾಗಿ ವರ್ಗಮಾಡಿದೆ

ಪಿ ಗಣಪತಿರಾವ್ ಬಾಸ್ಕರ್‌ರಾವ್ ಹಬ್ಲಿಕರ್‌ಯವರನ್ನು ಪೋಲೀಸ್ ಪ್ರೊ॥ ಅ ಸೂಪರಿಂಟೆಂಡೆಂಟಾಗಿ ನೇಮಿಸಿದೆ

ಮಿ॥ ಎ ಸಿ ದೇವರಾಜೇ ಅರಸಿನವರನ್ನು ೩ ನೆ ಕ್ಲಾಸ್ ಪೋಲೀಸ್ ಅ ಸೂಪರಿಂಟೆಂಡೆಂಟರಾಗಿ ನೇಮಿಸಿದೆ

ಅಸಿ॥ ಕಮಿಷನರ್ ಮಿ॥ ಸಿ ರಾಮರಾಯರನ್ನು ಕೋಲಾರ್ ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮಿಷನರ್ ಮತ್ತು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಾಗಿ ಕೆಲಸನೋಡುವಂತೆ ಹಂಗಾಮಿಯಾಗಿ ನೇಮಿಸಿದೆ

ಅಸಿ॥ ಕಮಿಷನರ್ ಮಿ॥ ಸಿ ಕೇಶವಿ ಐಯ್ಯಂಗಾರ್ರನ್ನು ಕೋಲಾರ್ ಡಿಸ್ಟ್ರಿಕ್ಟ್ ಖಜಾನೆಯಿಂದ ಚಿಕ್ಕಬಳ್ಳಾಪುರದ ಸಬ್ ಡಿವಿಜನ್ ಛಾರ್ಜಿಗೆ ವರ್ಗಮಾಡಿದೆ

ಮಿ॥ ಟಿ ಕೆ ಸುಂದರರಾಜೈಯ್ಯಂಗಾರ್ರನ್ನು ಬೆಂಗಳೂರಿನಿಂದ ಕೋಲಾರದ ಡಿಸ್ಟ್ರಿಕ್ಟ್ ಖಜಾನೆಯ ಛಾರ್ಜಿಗೆ ವರ್ಗಮಾಡಿದೆ

ಅಸಿ॥ ಕಮಿಷನರ್ ಮಿ॥ ಟಿ ತಂಬೂ ಚೆಟ್ಟಿಯವರು ಮಿ॥ ಸುಂದರರಾಜೈಯ್ಯಂಗಾರ್ರ ಕೆಲಸದ ಛಾರ್ಜನ್ನು ವಹಿಸತಕ್ಕದ್ದು

ಅಸಿ॥ ಕಮಿಷನರ್ ಮಿ॥ ಟಿ ರಾಯಲುಚೆಟ್ಟಿಯವರನ್ನು ತುಂಕೂರಿನಿಂದ ಬೆಂಗಳೂರು ಡಿಸ್ಟ್ರಿಕ್ಟ್ ಖಜಾನೆಗೆ ವರ್ಗಮಾಡಿದೆ.

ಇದುವರೆಗೆ ದಿವಾನರವರ ಪ್ರೈವೆಟ್ ಸೆಕ್ರೆಟರಿಯಾಗಿದ್ದ ಅಸಿ॥ ಕಮಿಷನರ್ ಮಿ॥ ಎಂ ಶ್ರೀನಿವಾಸ ಮೂರ್ತಿಯವರನ್ನು ತುಂಕೂರು ಡಿಸ್ಟ್ರಿಕ್ಟ್ ಖಜಾನೆಯ ಛಾರ್ಜಿಗೆ ವರ್ಗಮಾಡಿದೆ.

ಅಸಿ॥ ಎಗ್ಸಿಕ್ಯೂಟಿವ್ ಇಂಜನಿಯರ್ ಮೆ॥ ಆರ್ ವಿ ಸುಂದರಂ ಐಯ್ಯರವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಮೂರು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಮಿ॥ ಎಫ್ ಎ ಸ್ಟೀಲ್‌ಯವರನ್ನು ಹಾಸನದ ಡಿವಿಜನಿಗೆ ಅಸಿ ಎಕ್ಸಿಕ್ಯೂಟಿವ್ ಇಂಜನಿಯರಾಗಿ ಕೆಲಸ ನೋಡುವಂತೆ ವರ್ಗ ಮಾಡಿದೆ

ಮೈಸೂರ್ ಇನ್‌ಫೆಂಟ್ರಿ ೧ನೆ ಬೆಟಾಲಿಯನ್ನಿನಲ್ಲಿ ಜಂಗಮನಾಯಕ್, ಸೈಯ್ಯದ್ ಹುಸ್ಸೇನ್, ಹೋಬಳಿ ನಾಯಕ್, ಈ ಮೂರು ಮಂದಿ ಹುದ್ದೇದಾರರನ್ನೂ ೩ನೆ ಗ್ರೇಡ್ ಜಮಾದಾರಿಗೆ ಬಡ್ತಿ ಮಾಡಿದೆ.

ಅಸಿ॥ ಸ್ಯಾನಿಟರಿ ಕಮಿಷನರಾದ ಮಿ॥ ಪಿ ಪಲ್ಪುಯವರಿಗೆ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ ಮಿ॥ ಟಿ. ಎಸ್ ಸುಬ್ಬಪ್ಪನವರು ತಮ್ಮ ಇತರ ಕೆಲಸಗಳೊಂದಿಗೆ ಅವರ ಕೆಲಸಗಳ ಛಾರ್ಜನ್ನೂ ವಹಿಸತಕ್ಕದ್ದು

ಟಿ ನರಸೀಪುರದ ತಾಲ್ಲೋಕಿಗೆ ವರ್ಗಪಟ್ಟಿರುವ ಅಮಲ್ದಾರ್ ಮಿ॥ ಬಿ ಎನ್ ಚನ್ನಿಗಪ್ಪನವರಿಗೆ ಮೂರು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಶಿವಮೊಗ್ಗೆಯ ಹೆಡ್ ಕ್ವಾರ್ಟರ್ ಪೋಲೀಸ್ ಇನ್ಸ್‌ಪೆಕ್ಟರ್ ಮಿ॥ ನಾರಾಯಣರಾಯರನ್ನು ಚಿಂತಾಮಣಿ ತಾಲ್ಲೂಕಿನ ಅಮಲ್ದಾರ್ರನ್ನಾಗಿ ಬದಲಿ ನೇಮಿಸಿದೆ

ಎಕ್‌ಸ್ಟ್ರಾ ಅಸಿ॥ ಕಮಿಷನರ್ ಮಿ॥ ಜಾರ್ಜ್ ಡನ್ನಿಂಗ್ ಯವರಿಗೆ ಕೊಟ್ಟಿರುವ ೩ ತಿಂಗಳ ಪ್ರಿವಿಲೆಜ್ ರಜಾ ಜೊತೆಗೆ ೩ ತಿಂಗಳ ಫರ್ಲೋ ರಜಾ ಕೊಟ್ಟಿದೆ

ಸಿವಿಲ್ ಸರ್ಜನ್ ಮಿಸ್ ಆರ್. ಗೋವಿಂದರಾಜುಲು ಯವರನ್ನು ವಿಕ್ಟೋರಿಯಾ ಆಸ್ಪತ್ರೆಯಿಂದ ಬೆಂಗಳೂರು ಮೆಟರ್ನಿಟಿ ಆಸ್ಪತ್ರೆಗೂ, ಮಿಸ್ ಐಯ್ಯಾಚಮ್ಮಾಳ್ ಯವರನ್ನು ವಿಕ್ಟೋರಿಯಾ ಆಸ್ಪತ್ರೆಗೂ ವರ್ಗಮಾಡಿದೆ

ಮಿ॥ ಎಸ್ ಹರಿಯಣ್ಣಯ್ಯನವರನ್ನು ೪ ನೆ ಕ್ಲಾಸ್ ಮುನ್ಸಿಫರಾಗಿ ನೇಮಕಮಾಡಿದೆ

ವಿದ್ಯಾಭ್ಯಾಸದ ಇಲಾಖೆಯಲ್ಲಿ ಮುಂದೆ ಹೇಳುವ ಪಕಾರವರ್ಗಗಳು ಹುಕುಂ ಮಾಡಲ್ಪಟ್ಟಿವೆ —

ಮಿ॥ ಟಿ ವೆಂಕಟಸ್ವಾಮಿನಾಯ್ಡುಯವರು ಮೈಸೂರು ಮಹಾರಾಜಾ ಕಾಲೇಜಿನಲ್ಲಿ ಗಣಿತವನ್ನು ಕಲಿಸುವ ಉಪಾಧ್ಯಾಯರಾಗಿರತಕ್ಕದ್ದು

ತುಂಕೂರು ಹೈ ಸ್ಕೂಲ್ ಹೆಡ್ ಮಾಸ್ಟರ್ ಮಿ॥ ಸಿ. ಕೃಷ್ಣರಾಯರು ಪೂರ್ವ ಸರ್ಕಲ್ ಇನ್ಸ್‌ಪೆಕ್ಟರಾಗಿರತಕ್ಕದ್ದು.

ಡಿಪ್ಟಿ ಇನ್ಸ್‌ಪೆಕ್ಟರ್ ಮಿ॥ ಎಂ. ಶ್ರೀನಿವಾಸರಾಯರು ಪಶ್ಚಿಮ ಸರ್ಕಲ್ ಇನ್ಸ್‌ಪೆಕ್ಟರಾಗಿರತಕ್ಕದ್ದು.

ಮೈಸೂರು ಇನ್‌ಫೆಂಟ್ರಿ ೧ನೆ ಬೆಟಾಲಿಯನ್ನಿನಲ್ಲಿ ಮಹಮದ್ ಅಲಿಮುಲ್ಲಾಖಾನ್ ಯವರನ್ನು ೩ನೆ ಗ್ರೇಡ್ ಸುಬೇದಾರಿಗೆ ಬಡ್ತಿ ಮಾಡಿದೆ

೩ ನೆ ಸ್ಟೇಟ್ ಜಿಯಾಲಜಿಸ್ಟ್ ಮಿ॥ ಎಚ್ ಕೆ ಸ್ಲೇಟರ್ ಯವರಿಗೆ ಮಾರ್ಚಿ ೧೭ ರಿಂದ ಮೂರು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ವಿಶೇಷ ಪತ್ರಿಕೆ.

ಸರ್ ಪೂರ್ಣಯ್ಯ ನರಸಿಂಗರಾವ್ ಕೃಷ್ಣಮೂರ್ತಿ, ಕೆ. ಸಿ. ಐ ಇ ಯವರು ಉದ್ಯೋಗದಿಂದ ನಿವೃತ್ತರಾಗಿ ಮೈಸೂರು ಸಂಸ್ಥಾನದ ದಿವಾನ್ ಕೆಲಸವು ಖಾಲಿಯಾದುದರಿಂದ ನಾವು ವಿಶ್ವನಾಥ ಪಟ್ಟಣಕರ್ ಮಾಧವರಾವ್, ಸಿ ಐ ಇ ಯವರ ರಾಜಭಕ್ತಿ, ಸಾಮರ್ಥ್ಯ ಮತ್ತು ವಿವೇಕಗಳಲ್ಲಿ ನಮಗೆ ವಿಶ್ವಾಸಗಳನ್ನಿಟ್ಟು ಇಂಡಿಯಾ ಸರ್ಕಾರದವರ ಅನುಮತಿಯೊಡನೆ ಮೈಸೂರು ಸಂಸ್ಥಾನದ ದಿವಾನರಾಗಿರುವುದಕ್ಕೆ ಮೇಲ್ಕಂಡ ವಿಶ್ವನಾಥ ಪಟ್ಟಣಕರ್ ಮಾಧವರಾವ್, ಸಿ, ಐ ಇ ಯವರನ್ನು ಈ ಮೂಲಕ ನೌಕರರು ಮಾಡಿರುತ್ತೇವೆ ಮತ್ತು ಉದ್ಯೋಗ ಪ್ರಯುಕ್ತವಾದ ಕೌನ್ಸಿಲಿನ ಪ್ರೆಸಿಡೆಂಟ್ ಎಕ್ಸ್ ಅಫಿಷಿಯೋ ಸಭಾಧ್ಯಕ್ಷರಾಗಿರುವುದಕ್ಕೂ ಕೂಡ ಮೇಲ್ಕಂಡ ವಿಶ್ವನಾಥ ಪಟ್ಟಣಕರ್ ಮಾಧವರಾವ್, ಸಿ ಐ ಇ ಯವರನ್ನು ನಾವು ನೌಕರರು ಮಾಡಿರುತ್ತೇವೆ

ಈ ೧೯೦೬ ನೆಯ ಮಾರ್ಚ್ ೨೯ ನೆಯ ತಾರೀಖಿನಲ್ಲಿ ಮೈಸೂರಿನಲ್ಲಿ ನಮ್ಮ ದಸ್ತು ನೊಂದಿನಿ ಕೊಡಲ್ಪಟ್ಟಿರುತ್ತದೆ

ಮೊಹರು. ಕೃಷ್ಣರಾಜ ಒಡೆಯರ್

ಇಸ್ತಿಹಾರ್ ನಾಮಾ.

೧೯೦೬ನೆಯ ಮಾರ್ಚಿ ೨೯ನೆಯ ತಾರೀಖು

ಮೊದಲನೆಯ ಮತ್ತು ಎರಡನೆಯ ಕೌನ್ಸಿಲರುಗಳಾದ ಮಿ॥ ರಾಜಮಂತ್ರ ಪ್ರವೀಣ ಸಿ ಶ್ರೀನಿವಾಸೈಯ್ಯಂಗಾರ್, ಮತ್ತು ಸಿ ಮಾಧವಯ್ಯ ಇವರುಗಳು ಮಾರ್ಚಿ ಮಾಹೆ ೨೯ನೆಯ ತಾರೀಖಿನ ಅಪರಾಹ್ನದಿಂದ ಕೌನ್ಸಿಲರ್ ಕೆಲಸವನ್ನು ಬಿಟ್ಟು, ಅವರಿಗೆ ಸ್ವಲ್ಪಕಾಲ ಪ್ರಿವಿಲೇಜ್ ರಜಾ ತೀರಿದ ನಂತರ ನೌಕರಿಯಿಂದ ನಿವೃತ್ತರಾಗುವುದಕ್ಕೆ ಅಪ್ಪಣೆ ಕೊಟ್ಟಿರುವುದರಿಂದ ಮೈಸೂರು ಶ್ರೀಮನ್ಮಹಾರಾಜರವರು ಮಾರ್ಚ ಮಾಹೆ ೨೯ನೆಯ ತಾರೀಖಿನಿಂದ ೩ ವರ್ಷಗಳ ಕಾಲ ಅಥವಾ ಶ್ರೀಮನ್ಮಹಾರಾಜರವರು ಅಪ್ಪಣೆಕೊಡುವ ಕಾಲ ಪರ್ಯಂತರ ಮೊದಲನೆಯ ಕೌನ್ಸಿಲರಾಗಿರುವುದಕ್ಕೆ ಮಿ॥ ಟಿ ಆನಂದರಾವ್, ಬಿ ಎ ಯವರನ್ನೂ, ಎರಡನೆಯ ಕೌನ್ಸಿಲರಾಗಿರುವುದಕ್ಕೆ ಮಿ॥ ಕೆ ಪಿ ಪುಟ್ಟಣ್ಣಶೆಟ್ಟಿಯವರನ್ನೂ ದಯಪಾಲಿಸಿ ನೌಕರರು ಮಾಡಿರುತ್ತಾರೆ

ಹಿಜೂರ್ ಹುಕುಂ,

ಬಿ ಕೆ. ವೆಂಕಟವರದೈಯ್ಯಂಗಾರ್,

ಸರ್ಕಾರದ ಜನರಲ್ ಮತ್ತು ರೆವಿನ್ಯೂ ಇಲಾಖೆಯ ಸೆಕ್ರೆಟರಿ.

ಪ್ರಿಂಟಿನ ಯಂತ್ರ ಕ್ರಯಕ್ಕೆ ಬಂದಿದೆ.

416

ಡಬ್ಬಲ್ ಡಿಮ್ಮಿ ಸೈಜು. ಬಹು ಜಾಗ್ರತೆಯಾಗಿ ಪ್ರಿಂಟುಮಾಡತಕ್ಕದ್ದು; ಉರುಳೆಗಳು, ಛೇಸುಗಳು ಚಕ್ರಗಳು ಎಲ್ಲಾ ಸೇರಿ ಕೊಡಲಾಗುತ್ತ. ಇದಕ್ಕೆ ಬಂದೆರಡು ಕಡೆ ಸ್ವಲ್ಪ ರಿಪೇರಿ ಆಗಬೇಕಾಗಿರುವುದು. ಅಗ್ಗವಾಗಿ ಕೊಡುತ್ತೇವೆ. ಯಂತ್ರವನ್ನು ಖುದ್ದಾಗಿ ಬಂದು ನೋಡಬಹುದು. ಈ ವಿಳಾಸಕ್ಕೆ ಬರೆದು ಕೇಳಿ:—

ದಿ ಸೂಪರಿಂಟೆಂಡೆಂಟ್, ವೆಸ್ಲಿಯನ್ ಮಿಷನ್ ಪ್ರೆಸ್,

ಮೈಸೂರು.

೫,೦೦೦ ಪರ್ಲ್ ಫ್ಲರ್ಲ ದಾರ ಮಾತ್ರ ಇದೆ

407

೧ ಟೇಬಿಂಬರುವ ಪರ್ಲ್ ಪರ್ಲ್ ೧ ಕ್ಕೆ ... ೧—೧೦—೦
೨ ಹೆಸ್ ಸೂಪರ " " " ... ೧—೧೪—೦
೩ ಸುಪೀರಿಯರ್ " " " ... ೨—೦—೦
೪ ಸೂಪರಸಟ್ " " " ... ೩—೪—೦

ಪರ್ಲ್ ಟೋಪಿ ಹರ್ಜ ೧ ಕ್ಕೆ ೩—೦—೦ ಒಂದೇ ದಪಾ ೧೦ ಹರ್ಜ ತರಿಸಿಕೊಳ್ಳುವವರಿಗೆ ೩—೦—೨—೦

ಹೊಸ ನಮೂನೆ ದೊಡ್ಡ ಸೈಜು ಫೋಸ್ಟು ಕಾರ್ಡುಗಳು

೧ ಸಿಂಗಲ್ ಕಲರ್ ೧೦೦ ಕ್ಕೆ ೦—೩ ... ೧೦೦೦ ೧ ೪—೦

೨ ಡಬಲ್ ಕಲರ್ ೧೦೦ ಕ್ಕೆ ೦ ೩—೦ ... ೧೦೦೦ ೧—೧೦—೦

☞ ವಿ ಪಿ ಮೂಲಕ ತರಿಸಿಕೊಳ್ಳುವವರು ಮಾತ್ರ ೧೦೦ ಕ್ಕೆ ೨—೪ ರಂತೆ ಮುಂಚಿತವಾಗಿ ಕಳುಹಿಸಿದ ಹೊರ್ತು ವಿ ಪಿ ಮೂಲಕ ಕಳುಹಿಸಲಾರೆವು

ಯೆಲ್, ಯೆ ಫೋರವಾಲ್ ಕಂಪನಿ, ಬೆಂಗಳೂರು ಸಿಟಿ.

ಹೋಮೋಸಿಯಾ

ತಕ್ಷಣ ಪರಿಹಾರ — Homocea — ತಗಲುತ್ತಲೇ ನೋವು ವಾಸಿಯಾಗುತ್ತೆ

ಈ ಔಷಧವು ಮನೆ ಅರಮನೆ, ಕಾರ್ಖಾನೆ, ಆಸ್ಪತ್ರೆ, ಪೋಲೀಸ್ ಠಾಣಾ, ವಿದ್ಯಾಶಾಲೆ, ... ಮುಂತಾದ ಸ್ಥಳಗಳಲ್ಲೆಲ್ಲಾ ಇದ್ದೇ ಇರಬೇಕು. ಇದಕ್ಕೆ ಸಮಾನವಾದ ಔಷಧ ಮತ್ತಾವದೂ ಇಲ್ಲವೆಂಬುದು ... ಪ್ರಸಿದ್ಧವಾಗಿದೆ

ಈ ತೈಲವು ತಕ್ಕಾಲದಲ್ಲಿ ಜನರುಗಳಿಗೆ ಮಹತ್ತಾಗಿ ಸಿಕ್ಕಿ ಈ ಔಷಧ ಇದನ್ನು ಉಪಯೋಗಿಸಿದ ದೊಡ್ಡ ಮನುಷ್ಯರು, ಪಾಡ್ರಿಗಳು, ಮುಂತಾದವರು ಅದರ ಗುಣವನ್ನು ಹೇಳಿ ಸರ್ಟಿಫಿಕೇಟುಗಳನ್ನು ಕೊಟ್ಟಿರುತ್ತಾರೆ ನೋವು ಕಂಡರೆ ಇದನ್ನು ಹಚ್ಚಿದ ಕೂಡಲೇ ವಾಸಿಯಾಗುವದು

ಈ ತೈಲವು ಅರೆ ತಲೆನೋವು, ಸೊಂಟನೋವು, ಪಾರ್ಶ್ವವಾಯು, ಮೂಲವ್ಯಾಧಿ, ಉಬ್ಬಸ, ಗಾಯಗಳು, ನರ ಹೊರಳುವದು, ಉಳುಕು, ಕೀಲು ವಾಯು, ಗುಳ್ಳೆಗಳು, ಬಲ್ಲನೋವು, ಮುಖ ನೋವು, ಊದುಗಳು, ಗಡ್ಡೆಗಳು, ರಣಗಳು, ಹುಳುಕಡ್ಡಿ, ಸೊಳ್ಳೆ ಮತ್ತು ಚೇಳು ಕಡಿದದ್ದು ಚರ್ಮ ಬಿರಿಯುವದು, ಬೆಂಕಿಯಲ್ಲಿ ಸುಟ್ಟುಕೊಂಡದ್ದು, ಕತ್ತಿ ಗಾಯ—ಇವೇ ಮೊದಲಾದ ನಾನಾ ವ್ಯಾಧಿಗಳನ್ನು ಹುಟ್ಟಡಗಿಸುತ್ತದೆ ರಾತ್ರಿ ಹಚ್ಚಿಕೊಂಡು ಮಲಗಿದರೆ ಸೊಳ್ಳೆ ಹತ್ತಿರ ಸೇರುವದಿಲ್ಲ

ಕ್ರಯ — ಸಣ್ಣ ಡಬ್ಬಿ ೧ ಕ್ಕೆ ೧ ರೂ, ದೊಡ್ಡದಕ್ಕೆ ರೂ ೨—೮ ಆ, ಒಂದೇ ಸಲ ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ ಬಿಡುತ್ತಾರೆ ರ೨ ... ೨—೮ ಆ ... ಡಬ್ಬಿಯಲ್ಲಿ ೧ ರೂ. ಡಬ್ಬಿಯಲ್ಲಿರ ವದಕ್ಕಿಂತ ೪ ರಷ್ಟು ಹೆಚ್ಚು ಔಷಧವಿರುತ್ತೆ ರೂ ೨—೮ ಆ ಈ ಡಬ್ಬಿಯನ್ನು ತರಿಸಿಕೊಳ್ಳುವವರಿಗೆ ಟಪ್ಪಾಲ್ ಖರ್ಚು ಮಾಫಿ ಬಿಡುತ್ತೆ.

❖❖❖❖❖❖❖❖❖

ಹೋಮೋಸಿಯಾ ಯಂಬ್ರೋಕೇಷನ್.

ಈ ತೈಲವು ಹಳೇ ನೋವುಗಳಿಗೆ ಉಪಯೋಗಿಸತಕ್ಕದು ಚರ್ಮ ಒಡೆದ ಕಡೆ ಇದನ್ನು ಹಚ್ಚಕೂಡದು ಇದರಲ್ಲಿ ಹೋಮೋಸಿಯಾದ ಗುಣಗಳು ಬಹು ತೀಕ್ಷ್ಣವಾಗಿ ಇರುತ್ತವೆ ಅದಕ್ಕಿಂತಲೂ ಇದರಲ್ಲಿ ಇನ್ನೆರಡು ಗುಣಗಳು ಹೊಸ ಭಾಗವಿರುತ್ತದೆ ಇದನ್ನು ಚರ್ಮವು ಬಹು ಬೇಗನೆ ಸೇವಿಸಿಕೊಳ್ಳಬಲ್ಲದು ಡಬ್ಬಿಗಳಲ್ಲಿ ತುಂಬಿ ೮ ಆಣೆಗೂ, ೧ ರೂ ಗೂ ಬಂದರಂತೆ ಬಿಕರಿ ಮಾಡಲ್ಪಡುವದು ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫು ಎಲ್ಲಾ ಷಾಪುಗಳಲ್ಲಿಯೂ ದೊರೆಯುವದು

ಈ ಔಷಧಗಳ ವಿವರಣೆಯೂ, ಸರ್ಟಿಫಿಕೇಟುಗಳೂ ಉಳ್ಳ ನೋಟೀಸುಗಳನ್ನು ಅಪೇಕ್ಷಿಸಿದರೆ ಕಳುಹಿಸುವೆವು

ವಿಳಾಸ.—ಹೋಮೋಸಿಯಾ ಕಂಪೆನಿ ೨೨ ಸೆಂಕಾಂ ಬೀಚ್ ಸ್ಟ್ರೀಟ್ ಮದ್ರಾಸ್.

ನೂತನವಾದ ಪುಸ್ತಕ!!!

ಎಲ್ಲರೂ ಓದಿ ಸಂತೋಷಪಡತಕ್ಕದ್ದು!!!

ಕಥೆಗಳು ಬಹು ರಸಿಕವಾಗಿವೆ!!!

ಇವರ ಹೆಸರು

ಅರೇಬಿಯನ್ ನೈಟ್ಸ್ ಅಥವಾ ಯುವನಯಾಮಿನೀ ವಿನೋದ ಕಥೆಗಳು.

378

ಈ ಆಶ್ಚರ್ಯಕರವಾದ ಪುಸ್ತಕವು ಲೋಕದ ಎಲ್ಲಾ ಭಾಷೆಗಳಲ್ಲಿ ಪ್ರಚುರಿಸಲ್ಪಟ್ಟು ಅನೇಕ ಕೋಟಿ ಪ್ರತಿಗಳು ಮಾರಾಟವಾಗಿವೆ ಈಗಲೂ ಇಂಗ್ಲಿಷ್ ಭಾಷೆಯಲ್ಲಿ ಇದನ್ನು ವರುಷ ವರುಷವೂ ಅನೇಕ ಸಹಸ್ರ ಜನರು ಕೊಂಡು ಓದಿ ಅತ್ಯಾನಂದ ಭರಿತರಾಗುವರು ಇಂಥಾ ಉತ್ಕೃಷ್ಟವಾದ ಪುಸ್ತಕವನ್ನು ಕನ್ನಡ ಭಾಷೆಗೆ ತರ್ಜುಮೆ ಮಾಡುವದರಲ್ಲಿ ಅನೇಕ ತಿಂಗಳುಗಳ ಸಮಯವನ್ನೂ ಹೇರಳವಾದ ದ್ರವ್ಯವನ್ನೂ ವಿನಿಯೋಗಿಸಿರುತ್ತೇವೆ ಭಾಷೆಯು ಬಹು ರಸಿಕವಾಗಿದೆ. ನಾನೂರು ಎಪ್ಪತ್ತು ಪುಟಗಳುಳ್ಳದ್ದು. ಅಚ್ಚು ಮತ್ತು ಬೈಂಡು ಬಹು ನಾಜೂಕಿಯುವಾಗಿವೆ ಇದರ ಬೆಲೆ ಎರಡೇ ರೂಪಾಯಿ ವಿ ಪಿ ಪಿ. ಮೂಲಕ ಎರಡು ರೂಪಾಯಿ ಮೂರು ಆಣೆಗಳು ಜಾಗ್ರತೆ ನೋಡಿ!!! ಜಾಗ್ರತಗ ಚೂಡಂಡಿ!!! ಅವಸರಮು ಪಾರುಂಗಳ್!!! ಜಲ್ದಿ ದೇಖ್ಯಾ!!!

ಮ್ಯಾನೇಜರ್,

ಸಿ. ಎಲ್ ಎಸ್ ಬುಕ್ ಡಿಪೋ,

ಮೈಸೂರು.

ಜ್ವರ ಪರಿ

209

ಇದು ಸಾಧಾರಣ ಜ್ವರ, ಹಳೇಜ್ವರ, ಬೇರೆಜ್ವರ, ಪಿತ್ತಜ್ವರ, ಶೀತಜ್ವರ, ವಾತಜ್ವರ, ಚಳಿ ಜ್ವರ ಬಿಡುವದು, ಎಂಬ ಸಕಲವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮರಾಮತ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್ ಟಿ ವೆಂಕಟಪತಿ ಅಯ್ಯರವರು—ನೀವು ಕಳುಹಿ ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨೦ ಬಾಟಲಿನ ಸೀಸೆಯು ತೀರಿಹೋಯಿತು. ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣ ಹೊಂದಿರುವರು ಇನ್ನೂ ಜನಗಳು ಕಾಯಿಲೆ ಬೀಳುತ್ತಿರುವ ಪ್ರಯುಕ್ತ ದಯವಿಟ್ಟು ಇನ್ನೊಂದು ೨೦ ಬಾಟಲಿನ ಸೀಸೆಯನ್ನು ವಿ ಪಿ ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದ್ದಾರೆ

ಕ್ರಯ —ಸೀಸೆ ೧ ಕ್ಕೆ ೮ ಆಣೆ, ೧ ರೂ , ೧—೮ ರೂ , ರೂ ೨—೦ ಆ , ೧೦ ರೂ , ಪನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು

❖❖❖❖❖❖❖❖❖

ಓಮುಂ ಕರ್ಪೂರ

Omum Carpoor

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆಕಳೆಯುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು ಇದು ಹೆಂಗರು ತಿಂಗಳಿಗೆ ಬಂದಾವರ್ತಿ ಹೊರಗೆ ಆಗುವಾಗ್ಯೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ ಕ್ರಯದ ವರಪು ಜ್ವರಪರಿ ಎಂಬ ಔಷಧದಂತೆಯೇ ಸೀಸೆಗಳಲ್ಲಿ ದೊರೆಯುವದು

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಹೆನ್ರಿಯ ಓಮಂ ಕರ್ಪೂರವನ್ನು ನಾನೂ ನನ್ನ ಹಾಜರಿದಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣ ಭೇದಿ, ಅಜೀರ್ಣ ರೋಗಿಷ್ಟರಿಗೆ ಕೊಡುತ್ತೇವೆ. ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ ಇದು ಬಹು ಒಳ್ಳೇ ಔಷಧದಂತ ಬರೆದಿದ್ದಾರೆ

ಈ ನಾಲ್ಕು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಷಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇಲ್ಲದೆ ಕೆಳಗಿನ ವಿಳಾಸದವರಲ್ಲಿ ವಿಚಾರಿ.—

ಹೆನ್ರಿ ಎಂಡ್ ಗ್ರೇಟ್ ಇಂಡಿಯನ್ ಔಷಧಗಳ ಕಂಪೆನಿ,

ನೆಂ ಬೀಚ್ ಸ್ಟ್ರೀಟ್ ಮದ್ರಾಸ್.

ಮೈಸೂರು ಸೀಮೆಯಲ್ಲಿ ಪ್ಲೇಗಿನ ಸ್ಥಿತಿ

16—3—1906 ರಿಂದ 23—3—1906 ರ ವರೆಗೆ

ಸ್ಥಳ	ಪ್ಲೇಗ್ ಹಿಡಿದದ್ದು	ಪ್ಲೇಗ್ ಸತ್ತದ್ದು	ರೋಗದವರ ಈ ವಾರದ ಸಂಖ್ಯೆ	
ಬೆಂಗಳೂರು ಪಟ್ಟಣ	18	8	31	9
ಮೈಸೂರು "	0	0	4	
ಬೆಂಗಳೂರು ಡಿಸ್ಟ್ರಿಕ್ಟು	2	3	40	3
ಮೈಸೂರು "	1	2	1	
ಕೋಲಾರ್ "	3	3	15	1
ಕೋಲಾರ್ ಚಿನ್ನದ ಗಣಿಗಳು	10	4	2	
ತುಮಕೂರು ಡಿಸ್ಟ್ರಿಕ್ಟು	2	3	0	
ಹಾಸನ (ಹೊರಗಿನದು)	3	1	0	
ಚಿತ್ರದುರ್ಗ "	7	6	0	
ಕಡೂರ್ "	1	.	2	
ಶಿವಮೊಗ್ಗ "	11	13	1	
ಜುಮ್ಲಾ	54	42	86	61

ಶಾಲಿವಾಹನ ಶಕ ವರುಷಂಗಳು ೧೮೨೮ ನೇ ಪರಾಭವ ಸಂವತ್ಸರದ ಚೈತ್ರ ಶುದ್ಧ ಏಕಾದಶಿ ಗುರುವಾರದಿಂದ ಚೈತ್ರ ಬಹುಳ ಬಿದಿಗೆ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ

೧೯೦೬ ನೇ ಇಸವಿ ಏಪ್ರಿಲ್

ತಾ	ವಾರ	ತಿಥಿ.	ಘಳಿಗೆ	ನಕ್ಷತ್ರ	ಘಳಿಗೆ	ತಾ[illegible]
5	ಗುರು *	ಏಕಾದಶಿ	25 36	ಪ್ಲೇ	9 30	23
6	ಶುಕ್ರ ನ	ದ್ವಾದಶಿ	26 16	ಮ	8 28	24
7	ಶನಿ +	ತ್ರಯೋ	23 0	ಪು	7 18	25
8	ರವಿ †	ಚತುರ್ದ	15 50	ಉ	5 12	26
9	ಸೋಮ	ಪೌರ್ಣಮಿ	14 1	[illegible]	1 36	27
10	ಕುಜ	ಪಾಡ್ಯ	8 20	ಸ್ವಾ	51 36	28
11	ಬುಧ	ಬಿದಿಗೆ	2 26	ವಿಶಾ	51 2	29

* ಸರ್ವತ್ರ ಏಕಾದಶಿ, ನಂಜನಗೂಡು ರಥ ... ತಿರುಮಕೂಡಲು ... ರಥ ... ಪ್ರದೋಷ ... ಚಲುವರಾಯಸ್ವಾಮಿ ... ರಂಗ ... ಪೌರ್ಣಮಾತಿಥಿ ... ದತ ಪೂರ್ಣಿಮಾ, ... ವಗ್ಗಯೋಗ

ಪೇಟೇ ಧಾರಣೆ.

ಬಿನಸಿ	ಮೈಸೂರು	ಬೆಂಗಳೂರು
ಕಪ್ಪೇ ಅಕ್ಕಿ ಪಲ್ಲಾ ೧ಕ್ಕೆ	೧—೬ ೬—೦	೧೪—[illegible]
ಕೆಂಬೂತಿ ಅಕ್ಕಿ ಅನಲ್	೧೨—೮—೦	೧೩—೮—[illegible]
" ದುಯಂ	೧೧—೮—೦	೧೩—[illegible]
ಜಾವಾಕ್ಕೆ ಅಕ್ಕಿ	೧೨ ೦ ೦	೧೭ ೧[illegible]
ಸಣ್ಣಕ್ಕಿ ಅನಲ್	೧೭—೦—೦	೧೪—೧೭[illegible]
" ದುಯಂ	೧೩ ೬—೦	೧೪ ೮[illegible]
ತೊಗರೀ ಬೇಳೆ ಪಲ್ಲಾ ೧ಕ್ಕೆ	೯ ೪—೦	೧೦ [illegible]
" ದುಯಂ	೯—೬ ೦	೯—೮[illegible]
ಪೈರ್ ದಾಗಿ ಪಲ್ಲಾ ೧ಕ್ಕೆ	೬ ೧೪—೦	೫—೮[illegible]
ಕಾದ್ರಾಗಿ	೬ ೮—೦	೫ ೪[illegible]
ಜೋಳ	೨—೧—೦	೮ [illegible]
ಹಲಸಂದೆ ಪಲ್ಲಾ ೧ಕ್ಕೆ	೯—೧೨ ೦	೧೦—[illegible]
ಬಿಳೀ ಅವರೆ	೨—೮—೦	೮—[illegible]
ಹೆಸರು	೧೦ ೮ ೦	೧೧ [illegible]
ಉದ್ದು	೧೨—೪—೦	೧೨—[illegible]
ಕಡಲೆ	೧೦ ೮ ೦	೧೨—[illegible]
ಎಳ್ಳು ಸೆ ೧೨ ಕ್ಕೆ	೧೯—೦—೦	೧೮—[illegible]
ಹುರುಳಿ	೩ ೮—೦	೩ ೧[illegible]
ಹರಳು ೧೨ ಸೇರಿಗೆ	೧೧—೧೨—೦	೧೨—[illegible]
ಸೀಗೇಕಾಯಿ ಮಣ ೧ಕ್ಕೆ	೩—೦—೦	೨ ೮[illegible]
ಮೆಣಸಿನಕಾಯಿ	೪ ೬—೦	೩—೪[illegible]
" ದುಯಂ	೩—೪—೦	೩ [illegible]
ಬೆಲ್ಲ ದೊಡ್ಡ ಅಚ್ಚು	೪—೬ ೦	ಮ ೦—[illegible]
ಬಳ್ಳೊಳ್ಳಿ ಮಣ ೧ಕ್ಕೆ	೫—೩—೦	೪—೬[illegible]
ಹರಳೆಣ್ಣೆ "	೪—೧—೦	೪ [illegible]
ಕೊತ್ತುಂಬರಿ ಪಲ್ಲಾ ೧ಕ್ಕೆ	೧೦ ೬—೦	೧೦—[illegible]
ಉಪ್ಪು "	೩—೦—೦	೩ ೮
ಮೆಣಸೇ ಬೀಜ	೦ ೧೦ ೦	೦—೧೧
" ಹಳೇದು	೦—೮—೦	೦ ೯
ತುಪ್ಪ	೧೩—೪—೦	೧೧—೮
ಸೀಮೆ ಯೆಂಣೆ ಪೆಟ್ಟಿ ೧ಕ್ಕೆ	೫—೪—೦	೪—[illegible]
ತೆಂಗಿನಕಾಯಿ ೧೦೦ ಕ್ಕೆ	೪—೦—೦	೪—೦—[illegible]
ಅಳಲೆಕಾಯಿ ಮಣ ೧ಕ್ಕೆ	೦—೧—೨—೦	೦—೯—[illegible]
ಅಂಟ್ವಾಳದ ಕಾಯಿ ಮಣ ೧ಕ್ಕೆ	೦—೧—೨—೦	೦—೧೧—[illegible]
ಚಿನ (ಪವನ್) ಕೆಂಪು	೧೫—೪—೦	೧೫—೩—[illegible]
" " ಪಸಿಮೆ	೧೫—೩—೦	೧೫—೧೦—[illegible]
" " ಗಟ್ಟಿ ತೊಲ ೧ಕ್ಕೆ	೨೩—೧—೨—೦	೨೪—೬—[illegible]
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ	೩—೨—೧—೦	೮೦—[illegible]

Printed and Published by the Rev E W Thompson, B.A. the Proprietor and Manager, Wesleyan Mission Press, Mysore 5/4/1906.

ವೃತ್ತಾಂತ ಪತ್ರಿಕೆ.

REGISTERED M. 20

ಕ್ರಯ ೧ ಪ ಡ್ಡು —— ಕ್ರಯ ೧ ದು ಡ್ಡು

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಪುಸ್ತಕ ೧೯ | ಮೈಸೂರು—ಸನ್ ೧೯೦೬ ನೇ ಇಸವಿ ಏಪ್ರಿಲ್ ತಾರೀಖು ೧೨ ನೇ ಗುರುವಾರ. | ಸಂಚಿಕೆ ೩೪

೫೦೦೦ ಪವನ್ ಪ್ರೈಜ್ ದಾರ ಪಾತ್ರ ಇದೆ

40 5

[illegible]

ತುಲ್, ಯು ಪ್ರೋವಿಷನ್ ಕಂಪನಿ, ಬೆಂಗಳೂರು ಸಿಟಿ

ಹೀ ಮೋ ಸಿ ಯ

ತಗಲ ತ ಕ್ಷೇ ನೋವು ವಾಸಿ ಯಾಗುತ್ತೆ

● ಬಿಷನಿಯು ಮನೆ, ಅರಮನೆ, ಕಾರ್ಖಾನೆ, ಆಸ್ಪತ್ರೆ, ಸ್ಕೂಲು, ವಿದ್ಯಾಶಾಲೆ, ಹೋಟೆಲ್, ಕಛೇರಿ ಮುಂತಾದ ಸ್ಥಳಗಳಲ್ಲಿ ಇದ್ದೇ ಇರಬೇಕು. ಇದಕ್ಕೆ ಸಮಾನವಾದ ಔಷಧ ಪ್ರಪಂಚದಲ್ಲಿಯೇ ಇಲ್ಲವೆಂದು ... ಲೋಕಪ್ರಸಿದ್ಧವಾಗಿದೆ.

● ತೈಲವು ತತ್ಕಾಲದಲ್ಲಿ ಜೇನುಹುಳುಗಳ ಮತ್ತು ... ಔಷಧ ಇದನ್ನು ಉಪಯೋಗಿಸಿದ ದೊಡ್ಡ ಮನುಷ್ಯರ ... ಮುಂತಾದವರು ಇದರ ಗುಣವನ್ನು ... ಸರ್ಟಿಫಿಕೇಟು ... ನೋವು ಕಂಡರೆ ಇದನ್ನು ... ಮಾಡಬೇಕಾಗುವದು.

● ತೈಲವು ಅರೆ ತಲೆನೋವು, ಸೊಂಟನೋವು ... ಮೂಲವ್ಯಾಧಿ, ಉಬ್ಬಸ, ವಾಯುಗಳು, ನರ ಹೊರಳುವದು, ..., ಕೀಲುವಾಯು, ಗುಳ್ಳೆಗಳು, ಹಲ್ಲುನೋವು, ... ಊದುಗಳು, ಗಡ್ಡೆಗಳು, ರಣಗಳು, ..., ಸೊಳ್ಳೆ ... ಕಡಿದದ್ದು, ಚಿಪ್ಪಿರುವದು, ಬೆಂಕಿಯಲ್ಲಿ ಸುಟ್ಟದ್ದು, ಕತ್ತಿ ಗಾಯ—ಇವೇ ಮೊದಲಾದ ನಾನಾ ಬಾಧೆಗಳನ್ನು ... ಮಾಡುತ್ತದೆ. ರಾತ್ರಿ ಹಚ್ಚಿಕೊಂಡು ಮಲಗಿದರೆ ಸೊಳ್ಳೆ ಹತ್ತಿರ ಬರುವದಿಲ್ಲ.

ಕ್ರಯ — ಸಣ್ಣ ಡಬ್ಬಿ ೧ ಕ್ಕೆ ೧ ರೂ, ದೊಡ್ಡದಕ್ಕೆ ... ಒಂದೇ ಸಲ ... ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ... ಬಿಡುತ್ತಾರೆ ರೂ ... ಡಬ್ಬಿಯಲ್ಲಿ ... ಡಬ್ಬಿಯಲ್ಲಿರುವದಕ್ಕಿಂತ ... ಹೆಚ್ಚು ಔಷಧವಿರುತ್ತೆ. ... ಈ ಡಬ್ಬಿಯನ್ನು ತರಿಸಿಕೊಳ್ಳುವವರಿಗೆ ಟಪ್ಪಾಲ್ ... ಮಾಫ್ ಬಿಡುತ್ತೆ.

●●●●●●●●

ಹೋಮಿಯೋಪತಿಯಾ ಯಂತ್ರೋಪಕರಣ.

● ತೈಲವು ಹಳೇ ನೋವುಗಳಿಗೆ ಉಪಯೋಗಿಸತಕ್ಕದ್ದು ... ಇದನ್ನು ಹಚ್ಚಕೂಡದು ... ಗುಣವು ಶೀಘ್ರವಾಗಿ ಆಗುತ್ತದೆ ... ಇನ್ನೂ ಗುಣಗಳನ್ನು ... ಬೇಗನೆ ... ಡಬ್ಬಿಗಳಲ್ಲಿ ... ಟಪ್ಪಾಲ್ ಖರ್ಚು ಮಾಫ ... ಕೊಡಲ್ಪಡುವದು.

● ಔಷಧಗಳ ವಿವರಪಟ್ಟಿ, ಸರ್ಟಿಫಿಕೇಟುಗಳು ಉಳ್ಳ ... ಪುಸ್ತಕವನ್ನು ... ಕಳುಹಿಸುವೆವು.

ವಿಳಾಸ—ಹೋಮಿಯೋಪತಿ ಕಂಪನಿ ... ಬೀಚ್

ಕೊಡಗು ದೇಶದ ಶ್ರೇಷ್ಠವಾದ

ಉತ್ಕೃಷ್ಟ ಕಾಫಿಯು.

ಹುರಿಯದೆ ಇರುವದು ಅಥವಾ ಆಗತಾನೆ ಹುರಿದದ್ದು.

ಬೆಳೆಯಾಗಿದ ಸ್ಥಳದಿಂದಲೆ ನೆಟ್ಟಗೆ ರವಾನಿಸಲ್ಪಡುವದು.

359

ವ್ಯಾಪಾರದ ಹೆಗ್ಗುರ್ತು

ಕಾಡುಕೋಣದ ತಲೆಯ ಮುದ್ರೆ ಇದೆ

ಸಂಪೂರ್ಣವಾಗಿ ಯಂತ್ರದಿಂದಲೆ ಸಿದ್ಧಪಡಿಸಿದ್ದು ... ಉಳ್ಳ ... ಸ್ವಚ್ಛವಾದವುಗಳಲ್ಲ ... ಏಜಂಟರುಗಳು ಬೇಕು ... ಬರೆಯುವವರು ದಯವಿಟ್ಟು ಈ ಪತ್ರಿಕೆಯ ಹೆಸರನ್ನು ಸೂಚಿಸಿ

ವಿಳಾಸ—ಮ್ಯಾನೇಜರ್, ಮ್ಯಾಥಿಸನ್ಸ್

ಕಾಫಿ ವರ್ಕ್ಸ್, ಹುಣಸೂರು

ಜ್ವ ರ ಹ ರಿ 29 10



ಇದು ಸಾಧಾರಣ ಜ್ವರ, ಹಳೇಜ್ವರ, ಘೋರಜ್ವರ, ಪಿತ್ಥಜ್ವರ, ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮುದಾಮ್ ... ಸಬ್ ಡಿವಿಜನ್ ಆಫೀಸರ್ ಎಸ್ ಟಿ ವೆಂಕಟಪತಿ ಅಯ್ಯಂಗಾರವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ... ಔನ್ಸಿನ ಸೀಸೆಯು ತೀರಿಹೋಯಿತು. ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಆರಾಮ ಹೊಂದಿರುವರು. ಇನ್ನೂ ಜನಗಳು ಕಾಹಿಲೇ ಬೀಳುತ್ತಿರುವ ಕಾರಣ ದಯವಿಟ್ಟು ಇನ್ನೊಂದು ... ಔನ್ಸಿನ ಸೀಸೆಯನ್ನು ವಿ ಪಿ ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದ್ದಾರೆ.

ಕ್ರಯ —ಸೀಸೆ ೧ ಕ್ಕೆ ... ಆಣೆ, ೧ ರೂ, ೧—... ರೂ, ... ೧೧ ರೂ, ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು.

●●●●●●●●

ಪಿ ಮು ೦ ಕ ಪು ರ.

● ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆಕಳೆಯುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು. ಇದು ಹೆಂಗಸರು ತಿಂಗಳಿಗೆ ಬಂದಾವರ್ತಿ ಜೋರಾಗಿ ಆಗುವಾಗ್ಯೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ. ಕ್ರಯದ ದರವು ಜ್ವರಹರಿ ಎಂಬ ಔಷಧದಂತೆಯೇ ಸೀಸೆಗಳಲ್ಲಿ ಕೊಡುವದು.

... ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ನೆವ್ರೋಯ ... ಕಾರ್ಖಾನೆ ... ನಾನು ನನ್ನ ... ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣಭೇದಿ, ಅಜೀರ್ಣ ರೋಗಿಷ್ಟರಿಗೆ ಕೊಡುತ್ತೇವೆ. ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ. ಇದು ಬಹು ಒಳ್ಳೇ ಔಷಧವೆಂತ ಬರೆದಿದ್ದಾರೆ.

● ನಾಲ್ಕು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ... ಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇದಲ್ಲದೆ ಕೆಳಗಿನ ವಿಳಾಸದಾರರಲ್ಲಿ ವಿಶೇಷ—

... ಗ್ರೇಟ್ ಇಂಡಿಯನ್ ಔಷಧಗಳ ಕಂಪೆನಿ,

... ಬೀಚ್ ... ಮದ್ರಾಸ್.

"ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜಂಟ್ರ ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ (ಅಡ್ವಾನ್ಸು)	ರೂ ೧—೮—೦
ಪತ್ರಿಕೆ ಕಳಿಸುವ ಆಫೀಸಿನಿಂದ ಅಂಚೆಯ ಮೇಲೆ ತರಿಸಿಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಪೋಸ್ಟೇಜ್ ಸೇರಿ	ರೂ ೧—೧೪—೦
" " " "	೮—೧೫—೦

ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು.

ನಮ್ಮ ವಿಳಾಸ —ಮ್ಯಾನೇಜರ್, ವೃತ್ತಾಂತ ಪತ್ರಿಕೆ ಮೈಸೂರು.

ದೇವಾಂಗ ವಂಶಸ್ಥರಿಗೆ ಅಗತ್ಯ ಬೇಕಾದದ್ದು.

16 21

ಸ್ವಲ್ಪ ... ಜಾಗ್ರತೆಪಟ್ಟರೆ ಸಿಕ್ಕುತ್ತವೆ ... ಬಂದಿಲ್ಲ ... ಸ್ವಕುಲಗುರುಗಳು ... ರಚಿಸಿದ್ದು ಅರ್ಥಸಹಿತ ದೇವಾಂಗಪುರಾಣ ... ಸುಂದರವಾದ ... ರುವ ಪ್ರತಿ ೧ ಕ್ಕೆ ವಿ ಪಿ ಖರ್ಚು ಸೇರಿ ರೂ ... ಪೌಸ್ಟೇಜಿಲ್ಲದ ಇದೇ ಪ್ರತಿ ೧ ಕ್ಕೆ ವಿ ಪಿ ಖರ್ಚು ಸೇರಿ ರೂ ೧—... ವೇದ ಉಪನಿಷತ್ತುಗಳ ಅರ್ಥಸಹಿತ ... ರೂ ೧—... ... ವಿ ಪಿ ... ಕಳುಹಿಸುತ್ತೆ. ವಿಳಾಸ— ಮೈಸೂರು ... ಅಂಗಡಿ ...

ಪರಿಮಳ ನಶ್ಯದ ಪುಡಿ.

50 7

ಪರಿಮಳ ನಶ್ಯದಪುಡಿ ಡಬ್ಬಿ ೧ ಕ್ಕೆ	0—9—0
ಟಪಾಲ್ ಖರ್ಚು	0—3—0
ಸಾದಾ ನಶ್ಯದಪುಡಿ ಡಬ್ಬಿ ೧ ಕ್ಕೆ	0—6—0
ಟಪಾಲ್ ಖರ್ಚು	0—3—0

ಈ ಪುಡಿಯನ್ನು ಮೇಲಾದ ಹೊಗೆಸೊಪ್ಪಿನಿಂದ ಸುವಾಸನೆಯುಳ್ಳದ್ದಾಗಿ ತಯಾರು ಮಾಡಲ್ಪಟ್ಟಿರುತ್ತೆ. ಇದರ ಸುವಾಸನೆ ಒಂದು ಸೇರು ಸಾಧಾರಣ ಪುಡಿಯಲ್ಲಿ ಸ್ವಲ್ಪವನ್ನು ಹಾಕಿ ಕಲಸಿದರೆ ಪುಡಿಯಲ್ಲಾ ಗಮಗಮಿಸುತ್ತೆ. ಉಪಯೋಗಿಸುವವರಿಗೆ ಸುವಾಸನೆಯೂ ಆನಂದವೂ ಉಂಟು ಮಾಡುತ್ತೆ.

ತಲೆನೋವು, ಪೀನಸ, ದಲದೋಷ, ಶಿರೋವ್ಯಾಧಿ ಇವುಗಳನ್ನು ತಪ್ಪದೆ ಪರಿಹರಿಸುತ್ತೆ. ಮಾದರಿಗೆ ೧ ಡಬ್ಬಿಯನ್ನು ತರಿಸಿ ಪರೀಕ್ಷಿಸಿರಿ.

☞ ಪ್ರತಿ ೧ ಡಬ್ಬಿಯಲ್ಲಿ ... ತೊಲ ನಶ್ಯದಪುಡಿ ಇರುತ್ತೆ.

ಮಾನೇಜರ್, ಧನ್ವಂತ್ರಿ ವೈದ್ಯಶಾಲಾ,

69 ಕೃಷ್ಣಾಚಾರು ರೋಡ್, ಸಾಹುಕಾರ್‌ಪೇಟೆ, ಮದರಾಸು.

ಅತ್ಯುತ್ತಮ ... ಪ್ರಜೆಂಟೇಷನ್ ವಾಚು!

[illegible]

ವಿಳಾಸ—... ವಾಚ್ ಕಂಪೆನಿ,

... ಮದರಾಸ್.

P. SUBBROYA'S
World Renowned and most Efficacious

Ayurvedic Medicines.

ಪಿ. ಸುಬ್ಬರಾಯರವರ

ಲೋಕಪ್ರಸಿದ್ಧವಾದ ಮತ್ತು ಅತ್ಯಂತ ಗುಣಕಾರಿಯಾದ

ಆಯುರ್ವೇದ ಔಷಧಗಳು.

11-22

೧೦. ಜ್ವರಸಂಹಾರಿ—ಎಲ್ಲಾ ವಿಧವಾದ ಜ್ವರ, ವಿಷಮಶೀತ ಜ್ವರ, ೨ ರ, ೩ ರ, ಚಳಿ, ಇನ್‌ಫ್ಲುಯಂಜಾ, ಚಳಿಜ್ವರ, ವಾತರೋಗ, ಇವುಗಳನ್ನು ಸಂಪೂರ್ಣವಾಗಿ ವಾಸಿ ಮಾಡುವದು. ಪೆಟ್ಟಿಗೆ ೧ಕ್ಕೆ ರೂ. ೧. ವಿ. ಪಿ. ಛಾರ್ಜು ೪ ಆಣೆ.

೧೧. ಕೂದಲು ಉದುರಿಹೋಗುವದಕ್ಕೆ—ಕೂದಲು ಬೆಳೆದಿರುವ ಸ್ಥಳಕ್ಕೆ ಹಚ್ಚಿದರೆ ಚರ್ಮಕ್ಕೆ ತೊಂದರೆಯಾಗದೆ ೫ ನಿಮಿಷದಲ್ಲೇ ಉದುರಿ ಹೋಗುವವು. ಸೀಸೆ ೧ಕ್ಕೆ ೬ ಆಣೆ. ವಿ. ಪಿ. ಛಾರ್ಜು ೩ ಸೀಸೆ ವರೆವಿಗೂ ೪ ಆಣೆ.

೧೨. ಸುಗಂಧಕದಂತಚೂರ್ಣ.—ಎಲ್ಲಾ ವಿಧವಾದ ಹಲ್ಲುನೋವುಗಳನ್ನು ವಾಸಿಮಾಡುವದು. ಸೀಸೆ ೧ಕ್ಕೆ ೬ ಆಣೆ. ವಿ. ಪಿ. ಛಾರ್ಜು ೩ ಸೀಸೆ ವರೆಗೂ ೪ ಆಣೆ

೧೩. ಚೇಳಿನ ಔಷಧ—ಚೇಳು ಕಚ್ಚಿದ ಸ್ಥಳಕ್ಕೆ ಕೂಡಲೆ ಇದರ ಕೆಲವು ತೊಟ್ಟುಗಳನ್ನು ಬಿಟ್ಟ ತಕ್ಷಣವೇ ಉರಿಯು ನಿಲ್ಲುವುದು. ಪ್ರತಿ ಕುಟುಂಬದಲ್ಲಿಯೂ ಅವಶ್ಯಕವಾಗಿರಬೇಕಾದದ್ದು ಸೀಸೆ ೧ಕ್ಕೆ ೬ ಆಣೆ. ವಿ ಪಿ. ಛಾರ್ಜು ೧೨ ಸೀಸೆ ವರೆಗೂ ೪ ಆಣೆ. ೧೨ ಸೀಸೆಗಳನ್ನು ಒಂದೇ ಆವರ್ತಿ ತರಿಸಿಕೊಂಡರೆ ಬೇರೆ ೨-೮-೦ ರೂ. ವಿ. ಪಿ ಛಾರ್ಜು ಅಲಾಯಿದ ಸಿಲೋನಿಗೆ ೩ ಆಣೆ.

೧೪. ಮಧುರಧ್ವನಿ ಮಾತ್ರೆ—ಧ್ವನಿಯಲ್ಲಿರುವ ನ್ಯೂನತೆಗಳನ್ನು ಸರಿಮಾಡಿ ಮನೋಹರವಾದ ಧ್ವನಿಯನ್ನುಂಟುಮಾಡಿ ಸ್ಫುಟವಾಗಿ ಮಾತನಾಡುವದಕ್ಕೆ ವಿಶೇಷ ಅನುಕೂಲಪಡಿಸಿಕೊಡುವದು. ಮುಖ್ಯವಾಗಿ ಸಂಗೀತಗಾರರು, ಉಪನ್ಯಾಸಕರು ಮೊದಲಾದವರಿಗೆ ಬಹಳ ಸಹಕಾರಿಯು. ಇದರ ಸೇವನೆಯಿಂದ ಭಾರವಾದ ಧ್ವನಿಯು ಸರಿಯಾಗುವದು ಹಾಡಿದರೆ ಕಿವಿಗಿಂಪಾಗುವಂತಹ ಧ್ವನಿಯು ಹೊರಡುವದು. ಸೀಸೆ ೧ ಕ್ಕೆ ೮ ಆಣೆ. ವಿ. ಪಿ. ಛಾರ್ಜು ೩ ಸೀಸೆ ವರೆಗೂ ೪ ಆಣೆ.

೧೫. ಸ್ನಾನಕ್ಕೆ ಸುವಾಸನಾ ಭಸ್ಮ—ಸುವಾಸನೆಯುಳ್ಳ ಈ ಭಸ್ಮವನ್ನು ಸ್ನಾನಕಾಲದಲ್ಲಿ ಪ್ರಾಯದ ಗಂಡಸರೂ, ಹೆಂಗಸರೂ, ಮುದುಕರೂ ಉಪಯೋಗಿಸುವದಕ್ಕೆ ಅನುಕೂಲವಾಗಿರುವದು. ಚರ್ಮಗತವಾದ ಕೊಳೆಯನ್ನೂ ಬೆವರಿನ ದುರ್ಗಂಧವನ್ನೂ ಹೋಗಲಾಡಿಸಿ, ಚರ್ಮವನ್ನು ಮೃದುಮಾಡಿ, ಮಿಂಚುವಂತೆ ಹೊಳಪುಕೊಟ್ಟು, ತಂಪನ್ನುಂಟುಮಾಡುವದು. ಇದಲ್ಲದೆ ದೇಹದಲ್ಲಿ ಸರ್ವದಾ ಸುಗಂಧವಿರುವಂತೆ ಮಾಡುವದು ಚೂರ್ಣವು ಸ್ನಾನಕಾಲದಲ್ಲಿ ಅತ್ಯಂತೋಪಯುಕ್ತವಾದುದರಿಂದ ಪ್ರತಿಯೊಬ್ಬರೂ ಉಪಯೋಗಿಸಲಿಕ್ಕೆ ಯೋಗ್ಯವಾಗಿದೆ. ಪೆಟ್ಟಿ ೧ಕ್ಕೆ ೮ ಆಣೆ ವಿ. ಪಿ. ಹಾಸಲು ೩ ಆಣೆ.

೧೬. ಸಂಜೀವನ ಮಾತ್ರೆಗಳು—ಮಕ್ಕಳಿಗೆ ಜ್ವರ, ಹಸಿರುಬೇಧಿ, ಪ್ರಿದೆಬಾರದಿರುವದು, ಅಧಿಕವಾಗಿ ಹೋಗುವದು, ಛಳಿ, ಕೆಮ್ಮಲು, ತಲೆನೋವು, ನೆಗಡಿ, ಇನ್ನೂ ಮಕ್ಕಳಿಗೆ ಬರುವ ಅಜೀರ್ಣಸಂಬಂಧವಾದ ರೋಗಗಳಿಗೆ ಒಳ್ಳೇ ಮದ್ದಾಗಿರುವದು. ಇದನ್ನು ದೊಡ್ಡವರು ಸಹ ಉಪಯೋಗಿಸಬಹುದು. ಸೀಸೆ ೧ಕ್ಕೆ ೧೦ ಆಣೆ. ವಿ. ಪಿ. ಛಾರ್ಜು ೩ ಸೀಸೆ ವರೆಗೂ ೪ ಆಣೆ

೧೭. ಗೋರೋಜನ ಮಾತ್ರೆ—ಎಲ್ಲಾ ವಿಧವಾದ ಜ್ವರಗಳಿಗೂ, ವಿಷಮಶೀತಜ್ವರ, ಎರಡರ ಜ್ವರ, ಪ್ರತಿದಿನ ಜ್ವರ, ಇವುಗಳಿಗೆ ಅದ್ವಿತೀಯವಾದ ಔಷಧವು. ಮಲನಾಡು ಜ್ವರ, ಹೊಟ್ಟೆಯಲ್ಲಿ ಗಡ್ಡೆ ಆಗಿದ್ದರೆ, ಮಿದಳು ಶ್ವಾಸಕೋಶಗಳು ಕೆಟ್ಟಿದ್ದರೆ ಗುಣಮಾಡುವದು. ಮಕ್ಕಳಿಗೆ ಬರುವ ಜ್ವರ, ಆಮಶಂಕೆ, ಅತಿಸಾರ, ಹಸಿರು ಬೇಧಿ, ನಿದ್ರೆಬಾರದಿರೋಣ, ಹೆಚ್ಚಾಗಿ ಹೋಗುವದು, ಚಳಿ, ಕೆಮ್ಮಲು, ತಲೆನೋವು, ಮಕ್ಕಳಿಗೂ ದೊಡ್ಡವರಿಗೂ ಅಜೀರ್ಣ, ಇವುಗಳನ್ನು ಪರಿಹಾರ ಮಾಡುವದು. ಸೀಸೆ ೧ಕ್ಕೆ ೧೦ ಆಣೆ ವಿ ಪಿ. ಛಾರ್ಜು ೩ ಸೀಸೆ ವರೆಗೂ ೪ ಆಣೆ.

೧೮. ಚರ್ಮರೋಗಕ್ಕೆ ಔಷಧ—ಮಕ್ಕಳಿಗೆ ಬರುವ ಕರಪಾನ, ಹುಚ್ಚಿ, ಸುರುಕಾಲು, ಕಜ್ಜಿ, ಆನೆಕಜ್ಜಿ ಮತ್ತು ದೊಡ್ಡವರಿಗೆ ಬರುವ ನಾನಾ ವಿಧವಾದ ಕಜ್ಜಿ ಸಂಬಂಧವಾದ ವ್ಯಾಧಿಗಳು, ಸುಂಡು, ತಲೆಯಲ್ಲಿಯೂ ಇತರ ಕಡೆಗಳಲ್ಲಿಯೂ ಬಹಳ ನೋವನ್ನೂ ಅನಂತರ ಉರಿಯನ್ನೂ ಉಂಟುಮಾಡುವ ಎಲ್ಲಾ ಹುಣ್ಣುಗಳೂ ಹೊರಗೆ ಹಚ್ಚುವದರಿಂದಲೇ ಜಾಗ್ರತೆಯಾಗಿ ವಾಸಿಯಾಗುವವು. ಬೆಲೆ ಸೀಸೆ ೧ಕ್ಕೆ ೮ ಆಣೆ, ವಿ. ಪಿ. ಛಾರ್ಜು ೨ ಬಾಟ್ಲಿ ವರೆಗೆ ೪ ಆಣೆ.

೧೯. ಕೇಶಸುವಾಸಿನಿ.—ಈ ತೈಲವು ಪೂರ್ವಪಶ್ಚಿಮ ದೇಶಗಳ ಅಮೂಲ್ಯ ಸುವಾಸನಾ ದ್ರವ್ಯಯುಕ್ತವಾಗಿ ತುಂಬಾ ಪರಿಮಳ ಕೊಡುವಂಥಾದ್ದಾಗಿರುತ್ತದೆ. ಇದರ ಉಪಯೋಗದಿಂದ ಕೂದಲು, ಮೀಸೆ ಗಡ್ಡ, ರೆಪ್ಪೆ ಸಮೃದ್ಧಿಯಾಗಿ ಬೆಳೆಯುತ್ತವೆ. ತಲೆ ಮಿದುಳು ಕಣ್ಣುಗಳಿಗೆ ತಂಪುಕೊಡುತ್ತದೆ. ಚೋಳಂತರ, ಸುಂಡು ಮುಂತಾದ್ದನ್ನು ವಾಸಿಮಾಡುತ್ತದೆ. ವಿಲಾಯಿತಿಯ ಪರಿಮಳ ವಸ್ತುಗಳಮೇಲೆ ಪ್ರೀತಿ ಇರುವವರಿಗೆ ಅಚ್ಚು ಮೆಚ್ಚಿನದಾಗಿರುತ್ತದೆ. ಬೆಲೆ ರೂ. ೧ ವಿ ಪಿ ಛಾರ್ಜು ಎರಡು ಬಾಟ್ಲಿ ವರೆಗೆ ೪ ಆಣೆ.

ಕಾಗದವನ್ನು ಇಂಗ್ಲೀಷ್ ಅಥವಾ ತಮಿಳಿನಲ್ಲಿ ಬರೆಯಿರಿ.

Apply to:—P. SUBBAROY,

Porto Novo, South Arcot.

ವಿಳಾಸ:—ಪಿ. ಸುಬ್ಬರಾಯ್,

ಪೋರ್ಟನೋವೋ, ದಕ್ಷಿಣ ಆರ್ಕಾಟ್ ಜಿಲ್ಲಾ.

CHAMBERLAIN'S COUGH REMEDY.

ಚೇಂಬರ್ಲೈನ್ ಯವರು ಕಂಡು ಹಿಡಿದ ಕೆಮ್ಮಿನ ಔಷಧವು.



15-14

ಶೀತದ ಕೆಮ್ಮು, ಗಂಟಲು ಗೂರೆನ್ನುವುದು, ಹುಡಿಗೆಮ್ಮು, ನಾಯಿಗೆಮ್ಮು, ಎಲ್ಲಾ ತರದ ಶೀತ, ಗಂಟಲು ಎದೆಯಲ್ಲಿ ಹುಟ್ಟುವ ಸಮಸ್ತ ವ್ಯಾಧಿಗಳು—ಇವಕ್ಕೆಲ್ಲಾ ಈ ಔಷಧವು ಬಹುಪ್ರಾಯವಾಗಿದೆ

ಆ ಕೆಮ್ಮನ್ನು ಅಲಕ್ಷ್ಯಮಾಡಬೇಡಿ. ಅದು ಮಹಾ ಅಪಾಯವನ್ನುಂಟುಮಾಡತಕ್ಕದ್ದಾಗಿದೆ. ಅದರ ನ್ಯೂಮೋನಿಯಾ ಎಂಬ ಅತಿ ಕಠಿಣವಾದ ಜ್ವರವು ಹುಟ್ಟುವದು. ತರುವಾಯ ಉಗುಳಿನಲ್ಲಿ ರಕ್ತ ಬೀಳುವುದು ಹಾಗೆಯೇ ಕ್ಷಯರೋಗಕ್ಕೆ ಆಸ್ಪದವಾಗುವುದು

ಚೇಂಬರ್ಲೈನರವರು ಕಂಡುಹಿಡಿದಿರುವ ಕೆಮ್ಮಿನ ಔಷಧವು ಗಂಟಲಿನಲ್ಲಿ ಶ್ಲೇಷ್ಮ ಕಟ್ಟುವುದನ್ನೂ ಶ್ಲೇಷ್ಮಬೀಳುವದನ್ನೂ ಸುಲಭವಾಗಿ ನಿವಾರಣೆಮಾಡುತ್ತದೆ ಉಸುರು ಹೋಯ್ಯುವುದು ಕಷ್ಟವಾಗಿದ್ದರೆ ಅದನ್ನು ಕೂಡಲೇ ಪರಿಹರಿಸುತ್ತದೆ. ಅಪಾಯಕರವಾದ ಕೆಮ್ಮಿನ ಶಬ್ದವನ್ನು ನಿಲ್ಲಿಸಿಬಿಡುತ್ತದೆ. ಎದೆ ಒಣಗುವಂಥಾ ಕೆಟ್ಟಸ್ಥಿತಿಯನ್ನು ಸಂಪೂರ್ಣವಾಗಿ ವಾಸಿಮಾಡಬಲ್ಲದು. ಕೆಮ್ಮನ್ನು ಶಮನಮಾಡಿ, ನೀವು ಸುಖವಾಗಿ ನಿದ್ರೆಮಾಡುವಂತೆ ಮನಸ್ಸಿಗೆ ಉಲ್ಲಾಸಕೊಡುತ್ತದೆ.

ಚೇಂಬರ್ಲೈನರವರು ಕಂಡುಹಿಡಿದಿರುವ ಕೆಮ್ಮಿನ ಔಷಧದಲ್ಲಿ ಸ್ವಲ್ಪಮಾತ್ರವಾದರೂ ಅಫೀಮನ್ನು ಸೇರಿಸುವುದಿಲ್ಲ.

ಈ ಔಷಧವು ವನಸ್ಪತಿಗಳ ತಯಾರಿ.

ಕೈಯಿಂದ ಮುಟ್ಟದೆ ತಯಾರಾಗಿದೆ.

ಎಲ್ಲಲ್ಲೂ ವಿಕರಿಯಾಗುವುದು. ಸಣ್ಣಸೀಸೆಗೆ ೧ ರೂಪಾಯಿ. ದೊಡ್ಡಸೀಸೆಗೆ ೨ ರೂಪಾಯಿ.

CHEAP, CHEAP, VERY CHEAP.

60-3

English School Books for all standards. Mangalore and Mysore Govt. Book Depot publications.
BOOKS FOR F. A AND B. A. STUDENTS.
Notes for L. S. and Matriculation Texts for 1906.
Matriculation Texts for 1906, in Kanarese, Tamil, Telugu, and Sanskrit.

N. B.—Postage is free when 5 copies of Texts are purchased at a time. A discount of 5% is allowed when 12 copies are taken

Apply:—Mission Book Depot,
Bangalore City.

NOTICE.

64-1

The public are hereby informed that the amount of taxes due on their houses, shops, carriages, etc for the year 1905-06, may be paid to the collection mutsaddies, on demand, by the end of the current official year *i.e.* commencing from 1st April to 30th June 1906, failing which coercive measures will be adopted to recover the amount in accordance with the provisions laid down in the Municipal Regulations.

City Municipal Office, Mysore.
Dated ,5th April, 1906.

C. VENKATA RAO,
Vice President.

ಮ್ಯುನಿಸಿಪಲ್ ನೋಟೀಸು.

64-1

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನೆಂದರೆ — ೧೯೦೫—೦೬ನೆ ಇಸವಿ ವಿಶ್ವಾವಸು ಸಂವತ್ಸರದ ಮೊಹತರ್ಫ ಕಂದಾಯವನ್ನು ಅಂದರೆ ಮನೆ, ಅಂಗಡಿ, ಗಾಡಿ ವಗೈರೆಗಳ ಕಂದಾಯವನ್ನು ಏಪ್ರಿಲ್ ಶುರು ಮಾಡಿಕೊಂಡು ೧೯೦೬ನೆ ಜೂನ್ ೩೦ರ ಒಳಗೆ ಅಂದರೆ ಸಾಲ್ ಆಖೈರು ಒಳಗಾಗಿ ಬೇಚಾಕ್ ಕಲೆಕ್ಷನ್ ಮುತ್ಸದ್ದಿಗೆ ಕೊಟ್ಟು ಫೈಸಲ್ ಮಾಡಬೇಕು. ಈ ರೀತಿ ಮಾಡದೆ ತಪ್ಪಿದರೆ ಮ್ಯುನಿಸಿಪಲ್ ರೆಗ್ಯುಲೇಷನ್ ಅನುಸರಿಸಿ ಮುಂದಲ ಕ್ರಮ ಜರುಗಿಸಿ ಮೊಬಲಗು ವಸೂಲ್ ಮಾಡಲ್ಪಡುತ್ತೆ

ತಾರೀಖು ೫ ಏಪ್ರಿಲ್ ೧೯೦೬

C. VENKATA RAO,
Vice President, City Municipality, Mysore.

ಇಗೋ ನೋಡಿ ಅಪರೂಪವಾದ ಹೊಸಪುಸ್ತಕ!

61-2

"ಶ್ರೀ ಚಾಮರಾಜೇಂದ್ರ ಒಡೆಯರವರ ಚರಿತ್ರೆ" ಎಂಬ ಈ ಪುಸ್ತಕವು ಕನ್ನಡವನ್ನು ಕಲಿತಿರತಕ್ಕ ಪ್ರತಿಯೊಬ್ಬ ಮನುಷ್ಯನೂ ಓದಲಿಕ್ಕೆ ಹರ್ಷಕರವಾದದ್ದಾಗಿದೆ. ಮೈಸೂರು ಸಂಸ್ಥಾನದ ಚರಿತ್ರೆಯೂ, ರಾಜವಂಶೀಯರ ಪೂರ್ವ ಚರಿತ್ರೆಯೂ, ಲೇಟ್ ಶ್ರೀ ಚಾಮರಾಜೇಂದ್ರ ಒಡೆಯರವರ ಅಂತರಂಗ ಬಹಿರಂಗ ಕಾರ್ಯಗಳೂ, ಅವರಿಗಿದ್ದ ಅಸಾಧಾರಣವಾದ ಪ್ರಜಾ ವಾತ್ಸಲ್ಯವೂ, ಅವರ ಕಾಲದಲ್ಲಿ ನಡೆದ ನಾನಾ ಉತ್ಸವಾದಿಗಳೂ ಬಹು ಹೃದಯಂಗಮವಾಗುವಂತೆ ವಿವರಿಸಲ್ಪಟ್ಟಿವೆ ಶ್ರೀಮನ್ ಮಹಾರಾಜರವರೂ ಮಹಾ ಮಾತೃಶ್ರೀಯವರೂ ಈ ಪುಸ್ತಕವನ್ನು ನೋಡಿ ಬಹಳ ಸಂತೋಷಪಟ್ಟಿದ್ದಾರೆ ಇದರ ಅವತರಣಿಕೆಯನ್ನು ತಂಬೂಶೆಟ್ಟಿಯವರೇ ಬರೆದಿರುತ್ತಾರೆ. ಇದರಲ್ಲಿ ಶ್ರೀಮನ್ ಮಹಾರಾಜರವರು ತಮ್ಮ ಮಿತ್ರಮಂಡಲಿಗೆ ಬರೆದ ಅನೇಕ ಕಾಗದ ಪತ್ರಗಳೂ, ಪೈರೂಯರುಗಳು ಮಹಾರಾಜರಿಗೆ ಬರೆದ ಸ್ನೇಹಪತ್ರಿಕೆಗಳೂ, ಮಹಾರಾಜರವರು ಮಾಡುತ್ತಿದ್ದ ಸೈನು ಮುಂತಾದವುಗಳೆಲ್ಲ ಅಡಕವಾಗಿರುವವು. ಇವರಲ್ಲಿ ರತಕ್ಕ ಅಪೂರ್ವವಾದ ಚಿತ್ರಗಳು ಇಂಗ್ಲೆಂಡಿನಲ್ಲಿ ನೇತ್ರಾನಂದಕರವಾಗಿ ತಯಾರಾಗಿಸಿದವುಗಳಾಗಿವೆ. ಈ ಪುಸ್ತಕವು ಮೈಸೂರು ಸಂಸ್ಥಾನದ ಪ್ರತಿಯೊಂದು ಮನೆಯಲ್ಲೂ ಇರಬೇಕಾದ್ದು. ಪ್ರತಿಯೊಬ್ಬ ಗೃಹಸ್ಥನೂ ಅತ್ಯವಶ್ಯವಾಗಿ ಓದಬೇಕಾದ್ದು. ಇದುವರೆಗೂ ಯಾರೂ ನೋಡಿರಲಾರರಿ ಒಂದಾವರ್ತಿ ಓದಿದರೆ ಪುನಃ ಪುನಃ ಓದುವಂತೆ ಮನಸ್ಸನ್ನು ಆಕರ್ಷಿಸುವದು. ಇದರ ಬೆಲೆ ೧॥ ರೂಪಾಯಿ ಮಾತ್ರವೇ, ಅಂಚೇ ಹಾಸಲು ಸೇರಿ ವಿ. ಪಿ. ಪಿ. ಮೂಲಕ ತರಿಸಿಕೊಂಡರೆ ೧—೧೧—೦ ಬೀಳುವದು.

೧ ಜನರಲ್ ಏಜನ್ಸಿ,
೨ ಎಂ. ಶಿಂಗ್ರಯ್ಯ,

ಕೃಷ್ಣರಾಜಮೊಹಲ್ಲಾ,
ಮೈಸೂರು.

ನೂತನವಾದ ಪುಸ್ತಕ!!!

ಎಲ್ಲರೂ ಓದಿ ಸಂತೋಷಪಡತಕ್ಕದ್ದು!!!

ಕಥೆಗಳು ಬಹು ರಸಿಕವಾಗಿವೆ!!!

ಇದರ ಹೆಸರು

ಅರೇಬಿಯನ್ ನೈಟ್ಸ್ ಅಥವಾ ಯವನಯಾಮಿನೀ

ವಿನೋದ ಕಥೆಗಳು.

37 9

ಈ ಆಶ್ಚರ್ಯಕರವಾದ ಪುಸ್ತಕವು ಲೋಕದ ಎಲ್ಲ ಭಾಷೆಗಳಲ್ಲಿ ಪ್ರಚುರಿಸಲ್ಪಟ್ಟು ಅನೇಕ ಕೋಟಿ ಪ್ರತಿಗಳು ಮಾರಾಟವಾಗಿವೆ. ಈಗಲೂ ಇಂಗ್ಲಿಷ್ ಭಾಷೆಯಲ್ಲಿ ಇದನ್ನು ವರುಷ ವರುಷವೂ ಅನೇಕ ಸಹಸ್ರ ಜನರು ಕೊಂಡು ಓದಿ ಆತ್ಮಾನಂದ ಭರಿತರಾಗುವರು ಇಂಥಾ ಉತ್ಕೃಷ್ಟವಾದ ಪುಸ್ತಕವನ್ನು ಕನ್ನಡ ಭಾಷೆಗೆ ತರ್ಜುಮೆ ಮಾಡುವದರಲ್ಲಿ ಅನೇಕ ತಿಂಗಳುಗಳ ಸಮಯವನ್ನೂ ಹೇರಳವಾದ ದ್ರವ್ಯವನ್ನೂ ವಿನಿಯೋಗಿಸಿರುತ್ತೇವೆ. ಭಾಷೆಯು ಬಹು ರಸಿಕವಾಗಿದೆ. ನಾನೂರು ಎಪ್ಪತ್ತು ಪುಟಗಳುಳ್ಳದ್ದು. ಅಚ್ಚು ಮತ್ತು ಬೈಂಡು ಬಹು ಶ್ಲಾಘನೀಯವಾಗಿವೆ. ಇದರ ಬೆಲೆ ಎರಡೇ ರೂಪಾಯಿ. ವಿ. ಪಿ. ಮೂಲಕ ಎರಡು ರೂಪಾಯಿ ಮೂರು ಆಣೆಗಳು. ಜಾಗ್ರತೆ ನೋಡಿ!!! ಜಾಗ್ರತೆ ಜಾಗ್ರತೆ ಕೊಳ್ಳಿರಿ!!! ಅವಸರ ಮಾಡಿರಿ!!! ಜಲ್ದಿ ದೇಖೋ!!!

ಮ್ಯಾನೇಜರ್,
ಸಿ. ಎಲ್. ಎಸ್. ಬುಕ್ ಡಿಪೋ,
ಮೈಸೂರು.

ಔಷಧಿ ತಕ್ಕೊಂಡು ಗುಣವಾಗುವದಕ್ಕಿಂತಲೂ

ರಕ್ಷಣಕ್ರಮದಲ್ಲಿರುವದು ಉತ್ತಮ

SCOTT'S EMULSION. 57-

(ಸ್ಕಾಟ್ಸ್ ಇಮಲ್‌ಷನ್)

ನೆಟ್ಟಗೆ ಶರೀರವುಳ್ಳವರಿಗೆ ಪ್ಲೇಗ್, ಮಹಾಮಾರಿರೋಗ, ಮಾರೀಬೇಧಿ ಅಥವಾ ಶ್ವಾಸಕೋಶದ ರೋಗಗಳ ಭಯಕ್ಕೆ ಒಳಪಡುವ ಅಗತ್ಯವಿಲ್ಲ

ರೋಗವು ಬಲಹೀನರನ್ನೂ ದುರ್ಬಲರನ್ನೂ ಬೇಗನೆ ತಗಲಿ ಹಿಡಿಯುತ್ತದೆ

ಅಸ್ವಸ್ಥತೆಯನ್ನು ದೂರ ಹೋಗಲಾಡಿಸಿ ಶರೀರದಲ್ಲಿರುವ ಬಲಹೀನ ಭಾಗಗಳನ್ನು ಬಲಪ್ರಾಣಗೊಳಿಸಿ, ಸಂಪೂರ್ಣ ಸೌಖ್ಯವನ್ನು ಉಂಟುಮಾಡುತ್ತದೆ.

ಕೈಸೋಕದೆ ತಯಾರಾದದ್ದು

ಎಲ್ಲಾ ಔಷಧ ವ್ಯಾಪಾರಗಾರರಿಂದ ಮಾರಾಟವಾಗುತ್ತದೆ.

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,
ಔಷಧಗಳ ಕಾರ್ಖಾನೆ,
ಲಂಡನ್, ಇಂಗ್ಲೆಂಡ್

ಈ ಮೀನುಮನುಷ್ಯ ಇರುವ ಔಷಧವನ್ನೇ ಕೊಂಡುಕೊಳ್ಳಿ.

ವೃತ್ತಾಂತ ಪತ್ರಿಕೆ

೧೯೦೬ ನೇ ಇಸವಿ ಏಪ್ರಿಲ್ ತಾ॥ ೧೨ ನೇ ಗುರುವಾರ.

ಅಗ್ನಿಪರ್ವತದ ಹಾವಳಿ.

ಯೂರೋಪ್ ಖಂಡಕ್ಕೆ ಸೇರಿದ ಇಟಲಿ ರಾಜ್ಯದಲ್ಲಿ ವೆಸೂವಿಯಸ್ ಎಂಬ ಅಗ್ನಿಪರ್ವತವಿರುವುದು. ಇದು ಲೋಕದಲ್ಲೆಲ್ಲಾ ಬಹು ಭಯಂಕರವಾದದ್ದೆಂದು ಹೆಸರುಗೊಂಡಿದೆ. ಹಿಂದೆ ೭೯ ನೇ ಇಸವಿಯಲ್ಲಿ ಅದರ ಬಾಯಿಯಿಂದ ಹೊರಗೆ ಕಾದ ಮಣ್ಣು ಕಲ್ಲುಗಳೂ ಬಂಡೆಗಳೂ ಮೇಲಕ್ಕೆ ಉಕ್ಕಿ ಹಾರಿಬಂದು ಸುತ್ತಲೂ ಇದ್ದ ಪ್ರಸಿದ್ಧವಾದ ಮೂರು ಪಟ್ಟಣಗಳ ಮೇಲೆ ಸುರಿದು ಸಂಪೂರ್ಣ ನಾಶವಾಗಿದವು. ಈಚೆಗೆ ೧೯೦೪ ನೇ ಇಸವಿಯಿಂದಲೂ ಆವರ್ತಿ ಈ ಅಗ್ನಿ ಪರ್ವತದಿಂದ ಅನಾಹುತಗಳಾಗುತ್ತವೆ. ಈಗಲೂ ಕಳೆದ ವಾರ ಬಂದಿರುವ ತಂತೀ ವರ್ತಮಾನಗಳು ಬಹು ಭಯಂಕರವಾಗಿರುವವು. ಈ ಪರ್ವತದ ಎರಡು ಬಾಯಿಗಳಿಂದ ಕಲ್ಲು ಮಣ್ಣು ಬಂಡೆಗಳು ಕರಗಿ ಹಾರಿಬಂದು ೩೦—೪೦ ಮೈಲಿ ದೂರ ಸುತ್ತಲೂ ಇರುವ ಪಟ್ಟಣ ಗ್ರಾಮಗಳ ಮೇಲೆ ಮಳೆಗರೆದಂತಾಗಿದೆ ಆಗಲೇ ಕೆಲವು ಗ್ರಾಮಗಳೂ ಪಟ್ಟಣಗಳೂ ನಾಶಹೊಂದಿದವು ಅನೇಕ ಪ್ರಜೆಗಳೂ ಪ್ರಾಣಿಗಳೂ ಪ್ರಾಣಕೊಟ್ಟರು ಕೆಲವು ಪಟ್ಟಣಗಳು ೧೦—೧೫ ಅಂಗುಲ ಪ್ರಮಾಣಕ್ಕೆ ಮಣ್ಣು ಕಲ್ಲುಗಳಿಂದ ಮುಚ್ಚಲ್ಪಟ್ಟಿವೆ ಇನ್ನು ಕೆಲವು ಕಡೆಗಳಲ್ಲಿ ಕಗ್ಗತ್ತಲೆ ಕವಿದುಕೊಂಡಿದೆ ಕೆಲವು ಸಾರಿ ಭೂಕಂಪಗಳೂ ಆಗುತ್ತಿರುವವು. ಅಲ್ಲಿ ಕಷ್ಟಕ್ಕೆ ಸಿಕ್ಕಿದವರನ್ನು ಬಿಡಿಸಿ ತರುವುದಕ್ಕೆ ಸರ್ಕಾರದವರು ಸೈನಿಕರನ್ನೂ [illegible]ಗಳನ್ನೂ ಆತುರವಾಗಿ ಕಳುಹಿಸಿರುತ್ತಾರೆ. ಇಟಲೀ ರಾಜರಾದ ವಿಕ್ಟರ್ ಇಮ್ಯಾನುಯಲ್ ಯವರು ಆ ಪ್ರಾಂತ್ಯ ದಯಮಾಡಿ, ಪ್ರಜೆಗಳನ್ನೂ ಅವರ ಆಸ್ತಿಗಳನ್ನೂ ಸಂರಕ್ಷಣೆಮಾಡುವುದಕ್ಕೆ ತಕ್ಕ ಸನ್ನಾಹಗಳನ್ನು ಆತುರವಾಗಿ ಮಾಡಿಸುತ್ತಿದಾರೆ

ಅಗಸ್ಟಿನ್ ಮಹಾನುಭಾವನು ದೇವರನ್ನು ಪ್ರಾರ್ಥಿಸುವುದು

ಕರ್ತನೇ, ನನ್ನ ಪ್ರಾರ್ಥನೆಯನ್ನು ಆಲೈಸು. ನಿನ್ನ ಶಿಕ್ಷೆಗೆ ನನ್ನಾತ್ಮವು ಕುಂದಿ ಹೋಗದಿರಲಿ ನಿನ್ನ ಉಪಕಾರವನ್ನು ಹೊಗಳುತ್ತಿರುವಾಗ ನಾನು ಬೇಸರ ಪಡದವನಾಗಿರಲಿ ಒಂದು ಕಾಲದಲ್ಲಿ ನಾನು [illegible] ಆಸೆಪಟ್ಟು ಅನುಸರಿಸುತ್ತಿದ್ದ ದುರ್ಮಾರ್ಗಗಳಿಗಿಂತ ನೀನು ನನಗೆ ಅತಿ ಮಧುರವಾಗಿರುವಂತೆ ಅನುಭವವಾಗುವ ಹಾಗೆಯೂ ನಿನ್ನನ್ನು ನಾನು ಅತ್ಯಂತ ಬಲವಾದ ಪ್ರೀತಿಯಿಂದ ಪ್ರೀತಿಸುವ ಹಾಗೆಯೂ ನನ್ನ ಹೃದಯ ಪೂರ್ವಕವಾದ ಪ್ರೀತಿಯಿಂದ ನಿನ್ನ ಹಸ್ತವನ್ನು ಹಿಡಿದುಕೊಳ್ಳುವ ಹಾಗೆಯೂ ಆಸೆಯಿಂದಲೂ ದುಷ್ಪ್ರೇರಣೆಯಿಂದಲೂ ನೀನು ನನ್ನನ್ನು ಬಿಡುಗಡೆಮಾಡುವ ಹಾಗೆಯೂ ನಿನ್ನ ಅಪಾರವಾದ ಕನಿಕರವನ್ನು ತೋರ್ಪಡಿಸು [illegible] ನನ್ನ ದಾಷ್ಟ್ಯವಾಗದಿದ್ದ ನನ್ನನ್ನು ತಿರುಗಿ [illegible]

ಕರ್ತನೇ, ನನ್ನ ಅರಸೇ, ನನ್ನ ದೇವರೇ ಇದೋ ನನ್ನನ್ನು [illegible] ನಾನು ಬಾಲ್ಯದಲ್ಲಿ ಕಲಿತವುಗಳೊಳಗೆ ಯಾವ್ಯಾವದು ಉಪಯುಕ್ತವಾದುವೋ ಅದನ್ನು ನಿನ್ನ ಸೇವೆಯಲ್ಲಿ ಉಪಯೋಗಿಸಿಕೋ ಮಾತನಾಡುವುದು, ಬರೆಯುವುದು, ಓದುವುದು, ಲೆಕ್ಕಮಾಡುವುದು ಎಲ್ಲವೂ ನಿನ್ನ ಸೇವೆಯಲ್ಲಿಯೇ ವಿನಿಯೋಗವಾಗಲಿ ಏಕೆಂದರೆ ನಾನು ನಿಷ್ಪ್ರಯೋಜನವಾದ ವಿಷಯಗಳನ್ನು ಕಲಿತಾಗ್ಯೂ ನೀನು ಅಮೂಲ್ಯವಾದ ನಿನ್ನ ಶಿಕ್ಷಣವನ್ನು ಅನುಗ್ರಹಿಸಿದ್ದೆ ನಿಷ್ಪ್ರಯೋಜನ ವಿಷಯಗಳಲ್ಲಿ ನಾನು ಉಲ್ಲಾಸಪಟ್ಟು ನಡೆಸಿದ ಪಾಪಗಳನ್ನು ನೀನು ಕ್ಷಮಿಸಿದ್ದೆ ಅಂಥ ವಿಷಯಗಳನ್ನು ಓದುವುದರಿಂದ ನನಗೆ ಶಬ್ದಪರಿಚಯವುಂಟಾಯಿತು ಸರಿಯೇ, ಆದರೂ ಕಥೆಗಳಲ್ಲದ ಬೇರೆ ಪುಸ್ತಕಗಳಿಂದಲೂ ಶಬ್ದ ಪರಿಚಯವನ್ನು ಪಡೆಯಬಹುದಾಗಿದ್ದಿತು ಇವೇ ಬಾಲಕರಿಗೆ ಸುಲಭ [illegible] ಕರುಣಾಕರ! ಸಲಾಂ! ಸಲಾಂ! ಅನ್ಯಜನ ಸುಲಭ, [illegible]ವಲ್ಲಭಾ!

ಒಳದೇಶದ ವೃತ್ತಾಂತಗಳು.

ದಿವಾನ್ ಮಾಧವರಾಯರು ಕಳೆದ ವಾರ ಬೆಂಗಳೂರಿನಲ್ಲಿ [illegible] ಕೃಷ್ಣಮೂರ್ತಿ ಯವರನ್ನು ಅವರ [illegible]ದಲ್ಲಿ ಒಂದು ಗಂಟೆಯ ಹೊತ್ತು ಅವರ ಸಂಗಡ ಮಾತನಾಡಿ [illegible]ರೆಂದು ಕೇಳಿದೆವು

✦✦✦✦

[illegible] ಬಾತ್ಮೀದಾರರು ಬರೆಯುವುದು—ನರಸೀಪುರಕ್ಕೆ ಸೇರಿದ [illegible]ಟದಲ್ಲಿ ಕಳೆದ ೨೬ ನೆ ತಾ ಸೋಮವಾರ [illegible] ಸೇರಿದ ಮಾಸಣಿಗುವಿ ಎಂಬ ಕಾಡು ಜಂಗಲಿಗೆ ಬೇರೆ ಸಂಗಡ ಹೋಗಿದ್ದ ೧೯ ವರುಷದ ಬಸಿಯ, ೨೦ ವರುಷದ ಗಿರಿಯ ಎಂಬೀ ಆಳುಗಳು ಹಗಲು ೧೦ ಗಂಟೆ ಹೊತ್ತಿನಲ್ಲಿ ಬೆಂಕಿಗೆ ಆಕಸ್ಮಾತ್ತಾಗಿ ಸಿಕ್ಕಿ ಬೂದಿಯಾದರು. ಹೊರೆಯವರು ಮಾತ್ರ ಒಂದು ದೇಹ [illegible] ಅಡಿ ಎತ್ತರವಿದ್ದ ಮರವನ್ನು ಏರಿ ಪ್ರಾಣವುಳಿಸಿಕೊಂಡರು ಕಾಲು ಕೈ ಎರಡಕ್ಕೂ ಸ್ವಲ್ಪ ಗಾಯವಾಯಿತು ಮರುದಿನ ಬೆಳಿಗ್ಗೆ ಸ್ಥಳದ ಡಾಕ್ಟರು ಬಂದು ನೋಡಿ ಔಷಧ ಹಾಕುತ್ತಿದಾರೆ

✦✦✦✦

ದಿವಾನ್ ಮಿ॥ ವಿ ಪಿ ಮಾಧವರಾಯರು ಕಳೆದ ಗುರುವಾರ ಬೆಂಗಳೂರಿನಿಂದ ನೀಲಗಿರಿಗೆ ಪ್ರಯಾಣ ಮಾಡಿದರು. ನೀಲಗಿರಿಯಿಂ ಬಂದನಂತರ ಬೆಂಗಳೂರಿನಲ್ಲಿ ಅವರಿಗೆ ಪ್ರಜೆಗಳೆಲ್ಲಾ ಸೇರಿ ಅಡ್ರೆಸ್ಸನ್ನು ಒಪ್ಪಿಸುವ ಏರ್ಪಾಡು ಮಾಡುತ್ತಿದ್ದಾರೆ

✦✦✦✦

ಕೋಲಾರ್ ಚಿನ್ನದಗಣಿ ಪೋಲೀಸ್ ಸೂಪರಿಂಟೆಂಡೆಂಟರಾದ ಮಿ॥ ಎ. ಆ ಡೇವಿಡ್‌ಸನ್‌ರವರು ರಾಜೀನಾಮೆ ಕೊಟ್ಟು ಸೀಮೆಗೆ ಹೋದ್ದರಿಂದ ಆ ಕೆಲಸಕ್ಕೆ ಮದರಾಸಿನಿಂದ ಮಿ॥ ನೇಯರ್ ಎಂಬವರನ್ನು ಸರ್ಕಾರದವರು ಕರೆಸಿ ನೇಮಿಸಿಕೊಂಡಿದಾರೆಂದು ಕೇಳುವೆವು

✦✦✦✦

ನೀಲಗಿರಿಯಿಂದ ತಂತೀವರ್ತಮಾನ ಬಂದದ್ದರಿಂದ ಕೌನ್ಸಿಲರುಗಳಾದ ಮಿ॥ ಟಿ ಆನಂದರಾಯರೂ, ಮಿ॥ ಕೆ ಪಿ ಪುಟ್ಟಣ್ಣಶೆಟ್ಟರೂ ಮೊನ್ನೆ ಮಂಗಳವಾರ ರಾತ್ರಿ ಬೆಂಗಳೂರಿಂದ ನೀಲಗಿರಿಗೆ ಪ್ರಯಾಣ ಮಾಡಿರುತ್ತಾರೆ ಆದಕಾರಣ ದಿವಾನರೂ ಕೌನ್ಸಿಲರೂ ಅಲ್ಲಿಂದ ವಾಪಸು ಬರುವುದು ಸ್ವಲ್ಪ ತಡವಾಗುವದೆಂದು ಕಾಣುವುದು

✦✦✦✦

ಯಶವಂತಪುರ ತಾಲ್ಲೂಕು ಸೋಲಿಗ್ರಾಮದಲ್ಲಿ ಒಂದು ಡಿಸ್ಪೆನ್ಸರಿ ಆಸ್ಪತ್ರೆಯನ್ನು ಕಳೆದ ಜನವರಿ ೧೬ ರಲ್ಲಿ ಸ್ಥಾಪಿಸಿ, ಅದಕ್ಕೆ ಶ್ರೀ [illegible] ಜನಚಂದ್ರೈಯ್ಯನವರೆಂಬ ವೈದ್ಯರನ್ನು ಚಿಕಿತ್ಸೆ ಕಾರನ್ನಾಗಿ ಏರ್ಪಾಡುಮಾಡಿರುವರೆಂತಲೂ, ಅಂದಿನಿಂದ ಅನೇಕ ರೋಗಿಷ್ಠರು ಔಷಧಗಳನ್ನು ಪಡೆದು ಗುಣಹೊಂದುತ್ತಿದಾರೆಂತಲೂ ಒಬ್ಬ ಬಾತ್ಮೀದಾರರು ಬರೆಯುವರು

✦✦✦✦✦

ನೂರು ರೂಪಾಯಿ ಬೆಲೆಯ ನೋಟುಗಳು ಬೆಂಗಳೂರು ದಿವಾನ್ ರೋಡ್ ಕೆರೆ ಏರಿಯ ಮೇಲೆ ರಿಜರ್ವ್ ಪೋಲೀಸ್ ಗ್ರೌಂಡ್ ಮುಂದೆ [illegible] ಏಪ್ರಿಲ್ ೫ ನೆ ತಾ ಬಿದ್ದು ಸಿಕ್ಕಿರುತ್ತವೆ ಅವನ್ನು ಕಳೆದುಕೊಂಡಿರತಕ್ಕವರು ಬೆಂಗಳೂರು ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್‌ರವರಿಗೆ ಬರೆದುಕೊಳ್ಳಬಹುದೆಂದು ಅವರು ತಿಳಿಸಿರುತ್ತಾರೆ.

✦✦✦✦

ಕೋಲಾರಕ್ಕೆ ಸೇರಿದ ಮಾದಮಂಗಲದ ಹೆಡ್ ಕಾನ್‌ಸ್ಟೇಬಲ್ಲು [illegible] ಕೆಲವು ಮಂದಿಯನ್ನು ಹಿಂಸಿಸಿ ಅವರಿಂದ ಕಳುವನ್ನು ಒಪ್ಪಿಕೊಂಡಂತೆ ಹೇಳಿಸಬೇಕೆಂದು ಪ್ರಯತ್ನ ಪಟ್ಟನೆಂದು ರುಜುವಾತಾದ್ದರಿಂದ ಸೆಷನ್ಸ್ ಜಡ್ಜರು ಆ ಪೋಲೀಸಿನವನಿಗೆ ನಾಲ್ಕು ವರುಷಗಳ ಕಠಿಣ ಸಜಾ ವಿಧಿಸಿದರು. ಹಿಂಸೆಪಡುವ ಪೋಲೀಸಿನವರಿಗೆ ಇದರಿಂದ ಒಳ್ಳೇ ಎಚ್ಚರಿಕೆ ಕೊಟ್ಟಂತಾಯಿತು

ಮತವೂ ದಾಯಭಾಗವೂ.

[“ಮತವೂ ದಾಯಭಾಗವೂ” ಎಂಬೀ ವಿಷಯದ ಬಾತ್ಮಿಗಳನ್ನು ಪ್ರಕಟಿಸಲು ನಮ್ಮ ಪತ್ರಿಕೆಯಲ್ಲಿ ಅವಕಾಶಕೊಟ್ಟಿರುವೆವಷ್ಟೆ. ಈ ತಿಂಗಳು ಅಂದರೆ ಏಪ್ರಿಲ್ ತಿಂಗಳ ಆಖೈರಿನೊಳಗಾಗಿ ಬರತಕ್ಕ ಬಾತ್ಮಿಗಳನ್ನು ಪ್ರಕಟಿಸುವೆವು. ಆ ತರುವಾಯ ಈ ವಿಷಯವಾದ ಬಾತ್ಮಿಗಳನ್ನು ಪ್ರಕಟಿಸಲಾರೆವೆಂದು ಸೂಚಿಸುತ್ತೇವೆ —ಎಡಿ.]

ಅಯ್ಯಾ,

ತಮ್ಮ ಮಾರ್ಚಿ ತಾ ೧೫ನೇ “ವೃತ್ತಾಂತ ಪತ್ರಿಕೆ”ಯಲ್ಲಿ “ಜಾತಿಬಿಟ್ಟವರಿಗೆ ದಾಯಭಾಗ” ಎಂಬ ಬಾತ್ಮಿಗೆ ತಾವು ಕೊಟ್ಟ ಉತ್ತರದಲ್ಲಿ “ಈ ಬಾತ್ಮಿದಾರರಿಗೆ ನಮ್ಮ ಪ್ರಶ್ನೆ ಯೇನಂದರೆ—ಹಿಂದೂ ಧರ್ಮವನ್ನು ತ್ಯಜಿಸಿಬಿಟ್ಟವರ ವಿಷಯದಲ್ಲಿ ಹೇಳಿರುವ ಧರ್ಮಶಾಸ್ತ್ರವಿಧಿಗಳು ಧರ್ಮವಾದವುಗಳೋ?” ಎಂದು ಪ್ರಶ್ನೆ ಮಾಡಿ, ಸದರಿ ಪ್ರಶ್ನೆಗೆ ನೀವೇ ಉತ್ತರಕೊಟ್ಟು, ಸಮಾಧಾನ ಪಟ್ಟದ್ದಲ್ಲದೆ ‘ಹಿಂದೂ ಧರ್ಮಶಾಸ್ತ್ರದಲ್ಲಿ ಜಾತಿಕೆಟ್ಟವರ ವಿಷಯವಾದ ಒಂದು ಸಣ್ಣ ಭಾಗವನ್ನು ಮಾತ್ರ ತಿದ್ದುಪಡಿಮಾಡುವದಲ್ಲದೆ ಆ ಧರ್ಮಶಾಸ್ತ್ರವನ್ನೆಲ್ಲಾ ಬದಲಾಯಿಸುವದಿಲ್ಲ ಎಂತಲೂ,” “ಹಿಂದೂ ಧರ್ಮಶಾಸ್ತ್ರವು ವಿವೇಕಾಭಿಪ್ರಾಯ ಹೇಳುವದಾದರೆ ಆ ಭಾಗವನ್ನು ಮಾತ್ರ ರದ್ದುಮಾಡಿ ಬದಲಾಯಿಸಿಕೊಳ್ಳಬೇಕಾಗಿದೆ” ಎಂತಲೂ ಬೋಧಿಸುತ್ತೀರಿ ಹಿಂದೊಮ್ಮೆ “ರುಮಾಲನ್ನು ಬಿಟ್ಟು ಟೋಪಿಯನ್ನು ಮಕ್ಕಳು ತೊಟ್ಟುಕೊಂಡದ್ದಕ್ಕಾಗಿ” ಮಕ್ಕಳಿಗೆ ದಾಯಭಾಗವಿಲ್ಲವೆಂದು ಹೇಳಬೇಕು” ಎಂದು ಮಂಗಳೂರು ತಾ. ೧೬ನೇ ನವಂಬರ್ ೧೯೦೩, ಪುಟ ೭೭ನೇ “ಸತ್ಯದೀಪಿಕೆ”ಯಲ್ಲಿ ತನ್ನ ಧಿಷಿಕೆಯ ಪ್ರಕಾರದಿಂದ ಹುಡುಕಿ ತೆಗೆದ ಈ ನ್ಯಾಯವನ್ನೇ ವಾಚಕ ಮಹಾಶಯರಿಗೆ ಬೋಧಿಸಿ ಮೌನಗೊಂಡಿತು ಇಂಥಾ ಬೋಧನೆಗಳನ್ನೆಲ್ಲಾ ತಮ್ಮಂಥಾ ಎಡಿಟರವರು ಹೇಳಿರುವ ಮಾತ್ರದಿಂದ ಸುಮ್ಮನೆ ಕೇಳಿಕೊಂಡು ನಂಬುವುದು ಬೇಕಾಗಿದೆಯಲ್ಲದೆ, ನಿಜವಾಗಿ ನನ್ನ ಅಂತರ್ಯಾಮಿ (ಮನಸ್ಸಾಕ್ಷಿ) ಇದಕ್ಕೆ ಒಪ್ಪುವದಿಲ್ಲವು. ಯಾಕೆಂದರೆ ಒಂದು ಮತದವರ ಮತತತ್ವವು ಇನ್ನೊಂದು ಮತದವರಿಗೆ ಸರಿಯೆಂದೂ ನ್ಯಾಯವೆಂದೂ ತೋರಿದ ಪಕ್ಷಕ್ಕೆ ಲೋಕದಲ್ಲಿ ಭಿನ್ನಾಭಿಪ್ರಾಯ ಅನೇಕ ಮತಗಳು ಉಂಟಾಗಲಿಕ್ಕೆ ಕಾರಣವೇ ಇರಲಿಲ್ಲವು ಆದ್ದರಿಂದ ಒಂದು ಮತದವರ ಮತತತ್ವವು ಇನ್ನೊಂದು ಮತದವರಿಗೆ ವಿರೋಧವೆಂದೂ ಸರಿಯಲ್ಲವೆಂದೂ ತೋರುವದು ಸಹಜವು ಯಾಕೆಂದರೆ ‘ಕ್ರೈಸ್ತರಲ್ಲಿ ತಂದೆಯಾದವನು ಆಸ್ತಿಯನ್ನು ತನಗಿಷ್ಟಬಂದವರಿಗೆ ಕೊಟ್ಟುಬಿಡುವದಕ್ಕೆ ಅಧಿಕಾರವುಳ್ಳವನಾಗಿರುತ್ತಾನೆ” ಎಂದು ಬರೆದಿದ್ದೀರಿ ಸ್ವಯಾರ್ಜಿತ ಆಸ್ತಿಯನ್ನು ಯಾವ ವಿಧದಿಂದ ವಿನಿಯೋಗಿಸಲಿಕ್ಕೂ ಸರ್ವಮತದವರಿಗೆ ಸಮಾನ ಅಧಿಕಾರ ಇರುತ್ತದಾದರೂ, ಪಿತ್ರಾರ್ಜಿತದ ಆಸ್ತಿಯಲ್ಲಿ ಪರಂಪರೆಯಾಗಿ ತನಗೆ ಬಂದ ಹಕ್ಕನ್ನು ತನಗೂ ನ್ಯಾಯಭರಿತರಾದ ಮಕ್ಕಳಿರುತ್ತಾ, ತನಿಷ್ಟಬಂದವರಿಗೆ ಆ ಆಸ್ತಿಯನ್ನು ಕೊಟ್ಟುಬಿಡುವ ಅಧಿಕಾರವು ನ್ಯಾಯವಾದ ಅಧಿಕಾರವೋ ? ನನ್ನನ್ನು ಕೇಳುವಿರಾದರೆ ಈ ಅಧಿಕಾರವು ನ್ಯಾಯವಾದ ಅಧಿಕಾರವಲ್ಲವೆಂದೂ ಅಧರ್ಮವಿಧಿಯೆಂದೂ ಖಂಡಿತ ಹೇಳುವೆನು. ಪಿತ್ರಾರ್ಜಿತ ಆಸ್ತಿಯುಳ್ಳ ಎ. ಎಂಬ ಮುಸಲ್ಮಾನನಿಗೆ ಬಿ ಸಿ. ಎಂಬ ಇಬ್ಬರು ಮಕ್ಕಳಿರುತ್ತಾರೆ. ಇವರು ಸದರಿ ಆಸ್ತಿಯಲ್ಲಿ ಸಮ ಭಾಗಿಗಳಲ್ಲವೋ ? ಆದರೆ ಬಿ ಎಂಬುವವನಿಗೂ ಡಿ. ಎಂಬ ಮಗನು ಹುಟ್ಟುತ್ತಾನೆ. ಇದರಿಂದ ಡಿ ಎನ್ನುವವನಿಗೆ ಬಿ. ಎಂಬ ತಂದೆಯ ಹಕ್ಕಿನಲ್ಲಿ ಸಹಜವಾದ ಬಾಧ್ಯತೆಯು ಉಂಟಾಗುತ್ತದಾದರೂ, ಎ. ಎನ್ನುವವನು ಜೀವಂತನಾಗಿರುವಾಗ ಬಿ. ಎನ್ನುವವನು ಮೃತನಾದರೆ ಡಿ. ಎನ್ನುವವನಿಗೆ ಸದರಿ ಆಸ್ತಿಯಲ್ಲಿ ಯಾವತರದ ಹಕ್ಕುಬಾಧ್ಯತೆಯೂ ಇರುವದಿಲ್ಲವು ಇದು ಬಹಳ ಅನ್ಯಾಯದ ಸಂಗತಿಯೆಂದು ನಮಗೆ ತೋರುತ್ತದಾದರೂ, ಅದನ್ನು ತಿದ್ದಿ ಸರಿಪಡಿಸುವಷ್ಟು ಅಧಿಕಾರ ಯಾರಿಗಿರುತ್ತದೆ? ಇದರಂತೆಯೇ ಕ್ರೈಸ್ತರಲ್ಲಿಯೂ, ಮೇಲೆ ತೋರಿಸಿದಂತೆ ಅನ್ಯಾಯವೆಂದು ತೋರುವ ಆ ತಂದೆಗಿರುವ ಹಕ್ಕನ್ನು ರದ್ದುಪಡಿಸಿ ತಿದ್ದಿಕೊಳ್ಳಬೇಕೆಂದು ನಾವು ಎಷ್ಟು ವಿಧವಾಗಿ ಕಂಠಶೋಷಣೆ ಮಾಡಿದರೂ ಯಾರು ಕೇಳುತ್ತಾರೆ ? ಯಾಕೆಂದರೆ ಸರ್ಕಾರದವರು ಮತಸ್ವಾತಂತ್ರ್ಯವನ್ನು ಸಂಪೂರ್ಣವಾಗಿ ಪ್ರಜೆಗಳಿಗೆ ಕೊಟ್ಟಿರುತ್ತಾರಲ್ಲಾ ? ಹೀಗಿದ್ದಮೇಲೆ ಅಂಥಾ ಮತಧರ್ಮಗಳಲ್ಲಿ ತಾವಾಗಿ ಪ್ರವೇಶಿಸಿ, ಅದನ್ನು ತಮ್ಮ ಇಷ್ಟಬಂತೆ ತಿದ್ದಿಕೊಳ್ಳಬೇಕೆಂದು ಹೇಳುವದು ನ್ಯಾಯವೋ ? ಇದರಲ್ಲಿಯೂ ಹಿಂದೂ ಧರ್ಮಶಾಸ್ತ್ರವು ಜಾತಿ ಕೆಟ್ಟವರ ವಿಷಯದಲ್ಲಿ ನ್ಯಾಯವಾದ ವಿಧಿಯನ್ನೇ ವಿಧಿಸುತ್ತದಲ್ಲದೆ ಅಧರ್ಮವಿಧಿ ವಿಧಿಸುವದಿಲ್ಲವು ಹ್ಯಾಗೆಂದರೆ ಹಿಂದೂ ಧರ್ಮಶಾಸ್ತ್ರವು ಮತಾಂತರ ಹೊಂದುವವರನ್ನು ಅಡ್ಡಿಮಾಡುವದಿಲ್ಲ. ಸ್ಮಾರ್ತನೊಬ್ಬನು ವೈಷ್ಣವನಾದರೂ, ವೈಷ್ಣವನೊಬ್ಬನು ಸ್ಮಾರ್ತನಾದರೂ ದಾಯಭಾಗವು ತಪ್ಪುವದಿಲ್ಲ. ಈಗ “ಥಿಯೋಸೋಫೀ” ಎಂಬ ಹೊಸಮತವನ್ನವಲಂಬಿಸಿದ ಹಿಂದುಗಳನೇಕರಿರುತ್ತಾರೆ ಅಂಥವರಿಗೆ ದಾಯಭಾಗದ ಹಕ್ಕು ತಪ್ಪಿಹೋಗುವದಿಲ್ಲ. ಒಟ್ಟಾಗಿ ಹೇಳುವದಾದರೆ ಮತಾಂತರವು ದಾಯಭಾಗವನ್ನು ತಪ್ಪಿಸುವದಿಲ್ಲ ಆದರೆ ಸ್ವಜಾತಿ ನಿಯಮ ಮೀರುವ ಜಾತಿಭ್ರಷ್ಟರಿಗೆ ದಾಯಭಾಗ ಸಿಕ್ಕಲಾರದೆಂದು ಸದರೀ ಧರ್ಮಶಾಸ್ತ್ರವು ನ್ಯಾಯವಾದ ವಿಧಿಯನ್ನೇ ವಿಧಿಸುತ್ತದೆ ಅನ್ಯದೇಶಾಂಗಗಳಲ್ಲಿ ಜಾತಿಭೇದವು ಇಲ್ಲವಾದ್ದರಿಂದ ಅವರ ಮತಧರ್ಮವು ಜಾತಿನಿಯಮವನ್ನು ಮೀರುವ ಭ್ರಷ್ಟರ ವಿಷಯದಲ್ಲಿ ಮೌನಧರಿಸಿದೆ. ನಮ್ಮ ಹಿಂದೂ ದೇಶದಲ್ಲಿ ಜಾತಿಕಟ್ಟಳೆಯು ಅನೇಕ ಕಾಲಗಳಿಂದ ನಡೆದುಕೊಂಡುಬಂದ ಪೂರ್ವದ ಪದ್ಧತಿ ಈ ಪದ್ಧತಿಯಂತೆ ಜಾತಿಕಟ್ಟಳೆಯನ್ನು ಸಂರಕ್ಷಿತವಾಗಿ ಕಾಪಾಡುವದೇ ಹಿಂದೂ ಧರ್ಮದ ಉದ್ದೇಶವು ಆದ್ದರಿಂದ ಜಾತಿಭ್ರಷ್ಟರಿಗೆ ದಾಯಭಾಗ ಸಿಕ್ಕಲಾರದೆಂದು ವಿಧಿಸಿ, ಸ್ವಜಾತಿನಿಯಮ ಮೀರುವ ಜಾತಿಭ್ರಷ್ಟರನ್ನು ಎಚ್ಚರಿಸಿ, ಕೆಟ್ಟುಹೋಗದಂತೆ ತಡೆಯುತ್ತದೆ ಮ್ಲೇಂಛರು ಎಲ್ಲಾ ಜಾತಿಯವರನ್ನೂ ತಮ್ಮ ಮತಕ್ಕೆ ಸೇರಿಸಿಕೊಂಡು, ತಮ್ಮ ಮತಾಭಿವೃದ್ಧಿಯನ್ನು ಮಾಡಲು ಪ್ರಯತ್ನಿಸುತ್ತಾರೆ ಆದರೆ ಹಿಂದೂ ಧರ್ಮವು ಅನ್ಯರ ಗೋಜಿಗೆ ಹೋಗದೆ, ತನ್ನಷ್ಟಕ್ಕೆ ತನ್ನ ಧರ್ಮಮತಗಳನ್ನು ಕ್ಷೇಮವಾಗಿ ಕಾಪಾಡಿಕೊಂಡು, ತನ್ನಲ್ಲಿಯೇ ವೃದ್ಧಿಗೊಳ್ಳಲಿಕ್ಕೆ ಪ್ರಯತ್ನಿಸುತ್ತದೆ ಇದು ನ್ಯಾಯವಲ್ಲವೋ ? ಸ್ವಜಾತಿನಿಯಮದಂತೆ ಪಿತೃಋಣವನ್ನು ತೀರಿಸುವ ಹಕ್ಕುಗಳಿಲ್ಲದ ಜಾತಿಭ್ರಷ್ಟನಿಗೆ ಪಿತೃಧನವನ್ನು ಮಾತ್ರ ತಿಂದುಹಾಕಲಿಕ್ಕೆ ಹಕ್ಕುಬರಬೇಕೆಂದು ಕೇಳಿದರೆ ಅದು ಎಲ್ಲಿಂದ ಬಂದೀತು ? ಇದು ಅಧರ್ಮವಿಧಿಯೋ ? ಇದು ನ್ಯಾಯವೋ ? ನಿಮಗೆ ಇಷ್ಟಾಯಿ ಇರುವದೇನು ? “ರಾಜಾ ಬೋಲ್ಯಾ ಮಾಲುಕ್ ಕಾಲಾ, ಬುದ್ಧಾ ಬೋಲ್ಯಾ ದಾತಿ ಹಲ್ಯಾ” ಎಂಬ ಗಾದೆಯಂತೆ ಈ ನ್ಯಾಯವನ್ನು ಕೇಳುವ ದಾತಾರರು ? ಕೇಳಲೀ ಕೇಳದೇ ಇರಲೀ ಹೇಳುವವನು ಹೇಳಬೇಕಲ್ಲಾ ! ಗವರ್ನಮೆಂಟಿನವರು ಮತಸ್ವಾತಂತ್ರ್ಯವನ್ನು ಪ್ರಜೆಗಳಿಗೆ ಕೊಟ್ಟದ್ದರಿಂದ ಧಾರ್ಮಿಕ ಕಾರ್ಯಗಳಲ್ಲಿ ಪ್ರವೇಶಿಸದೆ, ಎಲ್ಲಾ ಮತದವರಿಗೂ ಒಂದೇ ತರದ ಬಾಧ್ಯತೆಯನ್ನು ಕಲ್ಪಿಸುವ ನ್ಯಾಯವನ್ನು (ಲಾ) ತಯಾರ್ಮಾಡಿ, ಅದನ್ನು ಸರ್ವಮತದವರೂ ಒಪ್ಪಿಕೊಳ್ಳಲೇಬೇಕೆಂದು ವಿಧಿಸಿದರೆ ಪೆನಲ್ ಕೋಡಿನ ವಿಧಿಯಂತೆ ಇದಕ್ಕೆ ಸರ್ವರೂ ಒಪ್ಪಿ ಮಾನ್ಯಕೊಡಲೇ ಬೇಕಲ್ಲದೆ, ಪ್ರಜೆಗಳಲ್ಲಿ ಒಂದೊಂದು ಮತದವರ ಮತತತ್ವವನ್ನೂ ತಿದ್ದಬೇಕೆನ್ನು ಹೇಳುವದೂ ಹಾಗೆ ಪ್ರವೇಶಿಸುವದೂ ನ್ಯಾಯವಲ್ಲ ಒಮ್ಮೆ ಹಾಗೆ ಮಾಡಿದರೆ ಅದು ಬಲಾತ್ಕಾರದ ವಿಧಿ ಎಂದು ಹೇಳಲಿಕ್ಕೆ ಯಾರಿಗೂ ಅಡ್ಡಿ ಇರಲಾರದು.

ನಿಮ್ಮ ಶಾಸ್ತ್ರದಲ್ಲಿರುವ ವಾಕ್ಯಗಳನ್ನು ಇದ್ದಂತೆಯೇ ತೆಗೆದು ಉದಾಹರಿಸಿದ್ದಕ್ಕೆ “ಇಂಥ ಮಾತನ್ನು ಹೇಳುವದಕ್ಕೆ ಅವರಿಗೆ ಅಧಿಕಾರವೇನುಂಟು ?” ಎಂತಾ ಬರೆಯುತ್ತೀರಿ ಅಹಾ ! ನಮ್ಮ ಶಾಸ್ತ್ರವಚನಗಳು ಅಧರ್ಮವಿಧಿಗಳೆಂದೂ, ಶಾಸ್ತ್ರಭಾಗವನ್ನು ತಿದ್ದಿ ಸರಿಪಡಿಸಬೇಕೆಂದೂ ನೀವು ಹೇಳುತ್ತೀರಿ ನಿಮಗೆ ಮಾತ್ರ ಹೀಗೆ ಹೇಳಲಿಕ್ಕೆ ಅಧಿಕಾರವೆಲ್ಲಿಂದಬಂತು ? ಇಂಥಾ ಅಧಿಕಾರವಿದ್ದರೆ ತೋರಿಸುವಿರಾ ? ಆದರೆ ನಿಮ್ಮನ್ನು ಕೇಳಿಕೊಳ್ಳುವ ಅಧಿಕಾರ ನಮಗುಂಟು ನಾವು ಕೇಳಿದ್ದಕ್ಕೆ ಸರಿಯಾದ ಉತ್ತರಕೊಡಲು ನೀವು ಬದ್ಧರಾಗಿರುತ್ತೀರಿ. “ನಿಮ್ಮನ್ನು ಕೇಳುವವರೆಲ್ಲರಿಗೆ ಯಾವಾಗಲೂ ಸಾತ್ವಿಕತ್ವದಿಂದಲೂ ಭಯದಿಂದಲೂ ಪ್ರತ್ಯುತ್ತರ ಕೊಡುವದಕ್ಕೆ ಸಿದ್ಧವಾಗಿರಿ” ಎಂಬ ೧ ಪೇತ್ರ ೩. ೧೫ ವಚನ ನೋಡಿಕೊಳ್ಳಿ ಮತ್ತು ನಿಮ್ಮ ವ್ಯಾಖ್ಯಾನದಲ್ಲಿರುವ ಕಥೆಯಿಂದ ನಮ್ಮನ್ನು ಹುಲಿಗೂ, ನಿಮ್ಮನ್ನು ಹಸುವಿಗೂ ಹೋಲಿಸಿದ್ದೀರಿ. ಇಂಥಾ ಕುತರ್ಕವಚನಕ್ಕೆ ಉತ್ತರಕೊಟ್ಟು ಜೆಡ್ಡಾಟಕ್ಕೆ ನಾನು ಎಂದಿಗೂ ಎಡೆಕೊಡಲಾರೆನು ಇಂತಿ ತಮ್ಮ ವಿಧೇಯನು,

ಹಿರಡೂರು ರ ಮ.

[ಈ ಬಾತ್ಮಿಗೆ ಮುಂದಿನವಾರ ನಾವು ಸಮಾಧಾನ ಹೇಳುವೆವು —ಎಡಿ.]

ರಾಜಧಾನಿಯ ಮ್ಯುನಿಸಿಪಲ್ ಮೀಟಿಂಗು

ಕಳೆದ ಶನಿವಾರ ಬೆಳಿಗ್ಗೆ ಮೈಸೂರು ಪಟ್ಟಣದ ಮ್ಯುನಿಸಿಪಲ್ ಕಮಿಷನರುಗಳು ಟೌನ್ ಹಾಲ್ ಬಂಗಲೆಯಲ್ಲಿ ಸಭೆ ಸೇರಿ ತಿಂಗಳು ಕಟ್ಟಿದ ಮ್ಯುನಿಸಿಪಲ್ ಮೀಟಿಂಗನ್ನು ನಡಸಿದರು. ಆಡಿಟರುಗಳು ಫೆಬ್ರುವರಿ ತಿಂಗಳ ಲೆಕ್ಕಗಳನ್ನು ಆಜಮಾಯಿಷಿ ಮಾಡಿ, ರಿಪೋರ್ಟು ಕಳುಹಿಸಲಿಲ್ಲವಾದ್ದರಿಂದ ಮ್ಯುನಿಸಿಪಲ್ ಜಮಾಖರ್ಚನ್ನು ಮೆಂಬರು ಗಳು ಮುಂದಿನ ತಿಂಗಳು ನೋಡುತ್ತೇವೆಂದು ಹೇಳಿ ತೆಗೆದಿಟ್ಟರು.

ಟ್ರಸ್ಟ್ ಬೋರ್ಡಿನವರ ಸ್ವಾಧೀನದಲ್ಲಿರುವ ಮೂರು ಪೇಟೆ ಗಳ ಕನ್ಸರ್ವೆನ್ಸಿ ಸಂಬಂಧವನ್ನು ಮ್ಯುನಿಸಿಪಾಲಿಟಿಯಿಂದ ತಪ್ಪಿಸಿ, ಟ್ರಸ್ಟ್ ಬೋರ್ಡಿನವರ ಕೈ ಕೆಳಗೆ ಕೊಡಬೇಕೆಂದು ಸರ್ಕಾರದವರು ಹುಕುಂ ಕಳುಹಿಸಿದ್ದರು. ಮೆಂಬರುಗಳು ಈ ಹುಕುಮನ್ನು ಓದಿ ನೋಡಿಕೊಂಡು ಕಳೆದ ಮೂರು ತಿಂಗಳ ಆ ಸಂಬಂಧಿ ಖರ್ಚನ್ನು ಮ್ಯುನಿಸಿಪಾಲಿಟಿಯಿಂದ ಪಾವತಿ ಮಾಡಬೇಕೆಂದು ಒಪ್ಪಿರುತ್ತಾರೆ.

ಪ್ರಿನ್ಸ್ ಆಫ್ ವೇಲ್ಸರವರು ಕೆಪ್ಪ್ಯಾಕ್ಯಾಂಪಿಗೆ ಹೋಗಿದ್ದ ವಿರ್ಶಾಟಿನ ಸಂದರ್ಭದಲ್ಲಿ ಸರ್ಕಾರದವರು ಕೆಲವು ಗಾಡಿಗಳನ್ನು ಚನ್ನಪಟ್ಟಣ ರಸ್ತೆಯ ಮೂಲಕ ರಾಜಧಾನಿಗೆ ಬಿಡಬೇಕೆಂದು ಹುಕುಂ ಕೊಟ್ಟು ಒಂದು ತಿಂಗಳು ತಡೆದಿದ್ದರು. ಆ ಉಕ್ಕಡದ ಗುತ್ತಿಗೆ ಕಂಟ್ರಾಕ್ಟರು—ಕೆಲವು ಗಾಡಿಗಳನ್ನು ತಡೆದದ್ದರಿಂದ ತಮ್ಮ ಉತ್ಪತ್ತಿ ಕಡಿಮೆಯಾಯಿತೆಂದೂ, ಅದಕ್ಕಾಗಿ ಪರಿಹಾರ ಕೊಡಬೇಕೆಂತಲೂ ಅರ್ಜಿ ಬರೆದುಕೊಂಡಿದ್ದರು. ಮ್ಯುನಿಸಿಪಲ್ ಮೆಂಬರುಗಳು ಈ ಸಂಗತಿಯನ್ನು ವಿಚಾರಿಸಿ, ಕೆಲವರು ತೋಲ ಗಾಡಿ ಬಿಡಕೂಡದೆಂಬ ಹುಕುಂ ಕೊಡಲಿಲ್ಲವಾದ್ದರಿಂದ ಅವರ ಅರ್ಜಿಗೆ ಗಮನ ಕೊಡಲಾಗದೆಂದು ತೀರ್ಮಾನ ಮಾಡಿದರು.

ಗವರ್ನಮೆಂಟ್ ಪರಾಬ್ ಕಂಟ್ರಾಕ್ಟರ್ ಸಾಹುಕಾರ್ ಬಚ್ಚಣ್ಣ ನವರು ತಮ್ಮ ವಶಕ್ಕೆ ಅಂದರೆ ಪರಾಬ್ ಕೋಟೆಗೆ ಮ್ಯುನಿಸಿಪಲ್ ತಲಿಗೆ ಸಾರ್ ಕೊಡುವೆಂದೂ, ಅಲ್ಲಿ ಸರ್ಕಾರಿ ತರಪು ತಾವು ಬಿಕರಿ ಮಾಡತಕ್ಕ ಸೆಸ್ಸಿನಿಂದ ಬಂದ ಲಾಭವನ್ನು ಸರ್ಕಾರದವರೂ ತಾವೂ ಪಂಚಿಕೊಳ್ಳುವೆವೆಂತಲೂ ತಿಳಿಸಿದರು. ಮೆಂಬರುಗಳು ಈ ವಿಷಯವನ್ನು ಚರ್ಚಿಸಿ, ಕಂಟ್ರಾಕ್ಟರಿಗೂ ಈ ವ್ಯಾಪಾರದಲ್ಲಿ ಲಾಭವಿರುತ್ತಾದ್ದರಿಂದ ಆದ್ದಾಕ್ಕೆ ಅಂಗೆ ಈಗ ವಿಧಿಸಿರುವ ೧೦೮ ರೂಪಾಯಿ ತೆರಿಗೆಯನ್ನು ಪಡೆಯಲ್ಪಡಬೇಕೆಂದು ತೀರ್ಮಾನ ಮಾಡಿದರು.

ರಾಜ ನಿವಾಸಲ್ಲಿರುವ ಮಹಾರಾಣಿಯವರ ಆಸ್ಪತ್ರೆ ಖರ್ಚಿಗೆ ಮ್ಯುನಿಸಿಪಾಲಿಟಿಯಿಂದ ಈಗ ೩,೦೦೦ ರೂಪಾಯಿ ಪಾವತಿ ಆಗುತ್ತಿದೆ. ಅದನ್ನು ವೈದ್ಯ ಇಲಾಖೆಗೆ ವಹಿಸಿ ಬಿಡಬೇಕೆಂದು ಡೆಪ್ಯುಟಿ ಕಮಿಷನರು ಸೂಚಿಸಿದರು. ಮೆಂಬರುಗಳು ಅದರ ಸಾಧಕ ಬಾಧಕಗಳನ್ನು ಕುರಿತು ಚರ್ಚೆ ಮಾಡಿ, ಸದ್ಯಕ್ಕೆ ಈಗಿರುವ ಪ್ರಕಾರವೇ ನಡೆಯಲೆಂತಲೂ ಹಾಗೆ ಬದಲಾಯಿಸಬೇಕಾದ ಅಗತ್ಯ ಕಾಣುವುದಿಲ್ಲವೆಂತಲೂ ಅಭಿಪ್ರಾಯ ಪಟ್ಟರು.

೧೯೦೬—೦೭ ನೆ ಸಾಲಿನಲ್ಲಿ ಒಳಗೊಳ್ಳದ ನೀರಿನ ಯಂತ್ರ ಮಂಟಪಗಳನ್ನು ದುರಸ್ತು ಮಾಡಿಸುವುದಕ್ಕಾಗಿ ಚೀಪ್ ಕಮೀಷನರವರಿಗೆ ಗೂ ಮ್ಯುನಿಸಿಪಾಲಿಟಿಯವರು ೫೦೦ ರೂಪಾಯಿ ಕೊಡಬೇಕಾಗುತ್ತದೆ ಎಂದು ಚೀಫಿಯವರು ತಿಳಿಸಿದ್ದರು. ಮೆಂಬರುಗಳು ಅಂದಿರೆ ಕಾಮಗಾರಿ ಕಡಿಮೆ ಕೊಡತಕ್ಕದ್ದೆಂದು ತೀರ್ಮಾನ ಮಾಡಿದರು.

ಕಸ್ಬಾ ಮಾರ್ಕೆಟ್ಟಿನಲ್ಲಿ ಮಾರ್ಕೆಟ್ಟಿನ ಎದುರಿಗಿರುವ ಕಿರಾಣಿಯ ಬಿಲ್ಡಿಂಗ್ ಒಂದನ್ನು ಪಾಠಶಾಲೆಯ ಕಟ್ಟಡವನ್ನು ಮಾಲೀಕರಿಗೆ ೧೯ ಸಾವಿರ ರೂಪಾಯಿ ಕ್ರಯ ಕೊಟ್ಟು ತೆಗೆದುಕೊಂಡು ಕೆಡವ ಬೇಕೆಂತಲೂ, ಆ ಸ್ಕೂಲನ್ನು ಕಟ್ಟುವದಕ್ಕೆ ಮಾರ್ಕೆಟ್ಟಿನ ಉತ್ತರ ಭಾಗದಲ್ಲಿರುವ ಮೈದಾನದಲ್ಲಿ ಸ್ಥಳ ಕೊಡಬೇಕೆಂತಲೂ ಸರ್ಕಾರದವರು ಹುಕುಂ ಮಾಡಿದಾರೆ. ಮೆಂಬರುಗಳು ಈ ಸಂಗತಿಯನ್ನು ಒಪ್ಪಿಕೊಂಡು ಮಾರ್ಕೆಟ್ಟನ್ನು ಅಭಿವೃದ್ಧಿ ಮಾಡುವುದಕ್ಕೂ ಒಂದು ದಸ್ತು ಹಾಕುವುದಕ್ಕೂ ಬೇಕಾಗುವಷ್ಟು ಸ್ಥಳವನ್ನು ಉಳಿಸಿಕೊಂಡು ಉಳಿದ ಖಾಲೀ ಜಾಗದಲ್ಲಿ ಸ್ಕೂಲನ್ನು ಕಟ್ಟುವುದಕ್ಕೆ ಅವಶ್ಯವಾದಷ್ಟು ಸ್ಥಳವನ್ನು ಕೊಡಬಹುದೆಂದು ಗೌರ್ನಮೆಂಟಿಗೆ ಅರಿಕೆ ಮಾಡಿಕೊಂಡಿದಾರೆ.

ಮಿ॥ ಸುಬ್ಬಕೃಷ್ಣಯ್ಯರ ಬಾಬತು ಕಾಲೇಜ್ ರೋಡಿನಲ್ಲಿರುವ ಭಾವಿಗಾಗಿ ಕಂಪೆನ್ಸೇಷನ್ ಕೊಡುವ ವಿಚಾರವಾದ ಕಾಗದ ಪತ್ರಗಳನ್ನೆಲ್ಲಾ ಅಡ್ವೋಕೇಟ್‌ಗಳಾದ ಮಿ॥ ರಂಗ್ಯಯ್ಯಂಗಾರ್‌ರಿಗೂ ಮಿ॥ ಚಂದ್ರಶೇಖರಯ್ಯನವರಿಗೂ ಕೊಟ್ಟು, ಅವರ ಅಭಿಪ್ರಾಯವನ್ನು ಕೇಳಬೇಕೆಂದು ಗೊತ್ತಾಗಿದೆ.

ಸುಬ್ರಾಯನ ಕೆರೆಯೊಳಗೆ ಒಂದು ಸ್ನಾನ ಗಟ್ಟವನ್ನು ಕಟ್ಟಿಸುವುದಕ್ಕೂ, ಅದರ ಪೂರ್ವಕ್ಕಿರುವ ಖಾಲೀ ನಿವೇಶನದ ಸುತ್ತಲೂ ಬಂತಿ ಕಂಬಿಗಳನ್ನು ಹಾಕುವುದಕ್ಕೂ, ಪಕ್ಕಿ ಮಾಡಿಸುವದಕ್ಕೂ, ಅಭಿವೃದ್ಧಿಯಲ್ಲಿ ಒಂದು ಮಾರ್ಕೆಟ್ಟನ್ನು ಕಟ್ಟಿಸುವುದಕ್ಕೂ ದಕ್ಷಿಣ ಮಾರಿಗುಡಿ ಯಲ್ಲಿ ಉಳಿದಿರುವ ೧,೩೦೦ ಚಿಲ್ಲರೆ ರೂಪಾಯನ್ನು ವಿನಿಯೋಗಿಸಬೇಕೆಂದು ತೀರ್ಮಾನ ಮಾಡಿದಾರೆ.

ಮೈಸೂರು ಪಟ್ಟಣಕ್ಕೆ ಒಬ್ಬ ಚೀಫ್ ಸ್ಯಾನಿಟರಿ ಇನ್ಸ್‌ಪೆಕ್ಟರನ್ನೂ ನಾಲ್ವರು ಇನ್ಸ್‌ಪೆಕ್ಟರುಗಳನ್ನೂ ನೇಮಿಸಿಕೊಳ್ಳುವುದಕ್ಕೆ ಮುಂದಿನ ವರುಷದ ಬಡ್ಜೆಟ್ಟಿನಲ್ಲಿ ೧,೫೦೦ ರೂಪಾಯಿ ತೆಗೆದಿಡಬೇಕೆಂದು ಗೊತ್ತು ಮಾಡಿದರು.

ಟೌನ್ ಹಾಲ್ ಬಂಗಲೆಯ ದಿನಾ ಖರ್ಚನ್ನು ಪ್ರತ್ಯೇಕವಾಗಿ ಇಟ್ಟು ತೋರಿಸಬೇಕೆಂದು ಮೆಂಬರುಗಳು ಸೂಚಿಸಿದಾರೆ.

ರಾಜಧಾನಿಯಲ್ಲಿ ವಸೂಲಾಗದೆ ಬಾಕಿ ನಿಂತಿರುವ ಮ್ಯುನಿಸಿಪಲ್ ಕಂದಾಯಗಳ ಬಾಕಿ ರೂ ೫,೦೦೦—೬—೩ನ್ನು ರಿಮಿಷನ್ ಮಾಡಬಹುದೆಂದು ಮೆಂಬರುಗಳು ಸಮ್ಮತಿಪಟ್ಟರು.

ಮದರಾಸ್ ಪಟ್ಟಣವೂ ಮೈಸೂರು ವಿದ್ಯಾವತಿಯರೂ

ಮೈಸೂರು ಮಹಾರಾಣಿಯವರ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮಾಡಿ, ಬಿ ಎ ಎಂಬ ಬಿರುದು ಪ್ರಶಸ್ತವಾದ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ, ಆ ಕಾಲೇಜಿಗೂ ಅದನ್ನು ಸ್ಥಾಪಿಸಿದ ಮಹನೀಯರಿಗೂ ಮೈಸೂರು ಸಂಸ್ಥಾನಕ್ಕೂ ವಿಶೇಷವಾದ ಗೌರವವನ್ನು ಉಂಟುಮಾಡಿರುವ ಸೌಭಾಗ್ಯವತಿ ರುಕ್ಮಿಣಮ್ಮನವರೂ ಸೌಭಾಗ್ಯವತಿ ಶ್ರೀರಂಗಮ್ಮನವರೂ ಕಳೆದ ತಿಂಗಳ ಅಂತ್ಯಭಾಗದಲ್ಲಿ ಮದರಾಸ್ ಪಟ್ಟಣಕ್ಕೆ ಹೋಗಿ ಅಲ್ಲಿ ನಡೆದ ಕಾನ್ವೊಕೇಷನ್ ಎಂಬ ಮಹಾ ವಿದ್ಯಾಸಮಾಜದಲ್ಲಿ ವಿಶೇಷವಾದ ಸನ್ಮಾನವನ್ನು ಪಡೆದು ಬಂದರೆಂದು ಕಳೆದವಾರ ತಿಳಿಸಿದೆವಷ್ಟೆ. ಆದೇ ಪಟ್ಟಣದಲ್ಲಿ ಬಹು ಮಂದಿ ಗೌರವಸ್ಥ ಮನುಷ್ಯರು ಅವರಿಬ್ಬರನ್ನೂ ಕರೆಸಿಕೊಂಡು ಕೆಲವು ಸಂತೋಷ ಸಭೆಗಳನ್ನು ನಡಸಿ ಅವರ ಜಿತವನಸ್ಸನ್ನೂ ಕಾರ್ಯಸಾಧನಸಾಮರ್ಥ್ಯವನ್ನೂ ಕೊಂಡಾಡಿ, ತುಂಬಾ ಗೌರವಪಡಿಸಿರುತ್ತಾರೆ. ಆ ಬಗ್ಗೆ ಒಂದು ಸಭೆಯಲ್ಲಿ ನಡೆದ ವೃತ್ತಾಂತವನ್ನು ಇಲ್ಲಿ ವಿವರಿಸುವೆವು.

ಮದರಾಸ್ ಪಟ್ಟಣದಲ್ಲಿರುವ ಮಿ॥ ಕೆ ವೆಂಕಟರಾಮನಾಯರೂ ಅವರ ಪತ್ನಿಯವರೂ ಕೋನ್ನಿಮರ್ ಗಾರ್ಡನ್ ಎಂಬ ಉದ್ಯಾನವನದಲ್ಲಿ ಆ ಪಟ್ಟಣದ ಬಹು ಮಂದಿ ದೇಶೀಯ ದೊಡ್ಡ ಮನುಷ್ಯರನ್ನೂ ಅವರ ಪತ್ನೀಯರುಗಳನ್ನೂ ಕರೆಸಿಕೊಂಡು ಆ ಸಂಘದಲ್ಲಿ ಮೈಸೂರಿನ ವಿದ್ಯಾವತಿಯರ ನಿಮಿತ್ತ ಅನೇಕ ಸಂತೋಷಗೋಷ್ಠಿಗಳನ್ನು ನಡಸಿದರು. ಆ ಸಂಸದಲ್ಲಿ ಹಾಜರಾಗಿದ್ದ ಬಹು ದೊಡ್ಡ ಮನುಷ್ಯರೆಂದರೆ—ರಾವ್ ಬಹದೂರ್ ಪಿ ಆನಂದಚಾರ್ಲು, ಮಿ॥ ಜಸ್ಟಿಸ್ ಶಂಕರನ್‌ನಾಯರ್, ದಿವಾನ್ ಬಹದೂರ್ ಎ ರಾಜರತ್ನಮೊದಲಿಯಾರ್, ದಿವಾನ್ ಬಹದೂರ್ ಸಿ ರಾಮಚಂದ್ರರಾವ್‌ಸಾಹೇಬ್, ಮಿ॥ ಗಳಾದ ಎಸ್ ಕಸ್ತೂರಿರಂಗಯ್ಯಂಗಾರ್, ಸಿ ಪಿ ರಾಮಸ್ವಾಮಿ ಅಯ್ಯರ್, ಎಂ ಒ ಪಾರ್ಥಸಾರಥಿ ಐಯ್ಯಂಗಾರ್, ಸಿ ಕೃಷ್ಣನ್, ಸಿ ನಾಗೇಶ್ವರ ಜಿ ಎ ಸಿ ಬಿ ರಾಮರಾವ್, ಕೆ ಬಿ ರಾಮನಾಥ ಐಯ್ಯರ್ ಸತ್ಯನಾಥನ್, ಮಿಸೆಸ್ ಪಿಳ್ಳೆ, ಮಿಸೆಸ್ ರಾಮರಾವ್, ಈ ಮೊದಲಾದ ದೊಡ್ಡ ಮನುಷ್ಯರೂ ಅವರ ಪತ್ನೀಯರೂ ಹಾಜರಾಗಿದ್ದರು. ಸಂಗೀತವೇ ಮೊದಲಾದ ಸಂತೋಷಕಾರ್ಯಗಳು ನಡೆದವು. ತರುವಾಯ ಮದರಾಸ್ ವಿಕ್ಟೋರಿಯಾ ಹಾಸ್ಟೆಲ್ ಎಂಬುದರ ಮಿ॥ ಪಿಳ್ಳೆಯವರು ಎದ್ದು ನಿಂತು ಆ ಪತ್ನಿಯರ ಪರವಾಗಿ ಸೌ॥ ಗಳಾದ ರುಕ್ಮಿಣಮ್ಮನವರನ್ನೂ ಶ್ರೀರಂಗಮ್ಮನವರನ್ನೂ ಅವರು ಪಡೆದ ಅಪೂರ್ವವಾದ ಪ್ರಶಸ್ತಿಗಳಿಗಾಗಿ ಕೊಂಡಾಡಿ, ಸಂಕ್ಷೇಪವಾಗಿಯೂ ಸಮಯೋಚಿತವಾಗಿಯೂ ಗಂಭೀರವಾಗಿಯೂ ಕೆಲವು ಮಾತುಗಳನ್ನು ಹೇಳಿದರು. ಅದರ ಮುಖ್ಯಾಭಿಪ್ರಾಯ ವೇನೆಂದರೆ—

ಒಂದೂ ಸಂಘಕ್ಕಿರುವ ಸಮಾಜದ ಸೆಕ್ರೆಟರಿಯವರು ಮೈಸೂರು ಮಹಾರಾಣಿಯವರ ಕಾಲೇಜಿನಲ್ಲಿ ಓದಿ ಬಿ ಎ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರುವಂಥಾ ಸೌ॥ ಗಳಾದ ರುಕ್ಮಿಣಮ್ಮನವರಿಗೂ ಶ್ರೀರಂಗಮ್ಮನವರಿಗೂ ತಮ್ಮ ಸಂತೋಷಾತಿಶಯವನ್ನು ಪ್ರಕಾಶಪಡಿಸಬೇಕೆಂಬ ಕಾರ್ಯಭಾರವನ್ನು ನನಗೆ ವಹಿಸಿರುತ್ತಾರೆ. ಇಂಥಾ ಕಾರ್ಯವು ಸಂತೋಷ ಜನಕವಾದವೆಷ್ಟೆನ್ನುವುದಕ್ಕೆ ಸಂಶಯವಿಲ್ಲ. ಆದರೆ ಸೆಕ್ರೆಟರಿಯವರು ಈ ಕೆಲಸವನ್ನು ಇನ್ಯಾರಿಗಾದರೂ ವಹಿಸಿದ್ದರೆ ಚನ್ನಾಗಿತ್ತು. ಯಾಕೆಂದರೆ ನಾನು ಈ ಅನಿಷ್ಟಕ್ಕೆ ಹೊಸಬಳು, ಇದಲ್ಲದೆ ನಿಮ್ಮ ದೇಶಭಾಷೆಯಲ್ಲಿ ಮಾತಾಡುವುದು ನನಗೆ ಬರುವುದಿಲ್ಲ. ನಾನು ನನ್ನ ಸ್ವಭಾಷೆಯಾದ ಮರಾಟೆಯಲ್ಲಿ ಮಾತನಾಡಿದರೆ ನಿಮ್ಮಲ್ಲಿ ಅನೇಕರು ನನ್ನ ಅಭಿಪ್ರಾಯ ತಿಳಿಯದಂತಾಗುತ್ತದೆ. ಆದ್ದರಿಂದ ನಾನು ಇಂಗ್ಲೀಷಿನಲ್ಲೇ ಮಾತನಾಡಬೇಕಾಗಿರುವುದು. ಈ ಭಾಷೆಯನ್ನಾದರೋ ನನಗೆ ಹೊಸದು. ಅದರಲ್ಲಿ ನನಗೆ ಚನ್ನಾಗಿ ಪರಿಶ್ರಮವಿಲ್ಲ. ಅದಕಾರಣ ಕೆಲವು ದೋಷಗಳುಂಟಾದರೂ ಸಂಭವಿಸಿದರೆ ನೀವು ಮನ್ನಿಸಬೇಕು. ಇಲ್ಲಿ ಸೇರಿರುವವರೆಲ್ಲರ ಪರವಾಗಿಯೂ ಸೌ॥ ಗಳಾದ ರುಕ್ಮಿಣಮ್ಮನವರನ್ನೂ ಶ್ರೀರಂಗಮ್ಮನವರನ್ನೂ ಅವರು ಯೂನಿವರ್ಸಿಟಿ ಪರೀಕ್ಷೆಯಲ್ಲಿ ತೇರ್ಗಡೆಯಾಗಿ ಇಷ್ಟು ಮಟ್ಟಿಗೆ ಪ್ರಾಶಸ್ತ್ಯವನ್ನು ಪಡೆದದ್ದಕ್ಕಾಗಿ ಸಂತೋಷಪಟ್ಟು ವಂದಿಸುತ್ತೇನೆ. ಇವರಿಬ್ಬರೂ ನೆನ್ನೆ ಸೆನೆಟ್ ಸಂಸದಲ್ಲಿ ಪ್ರಶಸ್ತವಾದ ನಿಲುವಂಗಿಯನ್ನೂ ಶಿರೋಭೂಷಣವನ್ನೂ ಧರಿಸಿ, ಅಧ್ಯಕ್ಷರಿಂದ ಡಿಪ್ಲೋಮ ಎಂಬ ಬಿರುದನ್ನು ಸಂಪಾದಿಸಿಕೊಂಡದ್ದು ಅಪೂರ್ವ ನೇತ್ರಾನಂದವನ್ನುಂಟು ಮಾಡಿತು. ಈ ಸ್ತ್ರೀಯರ ಜಿತ ಮನಸ್ಸನ್ನೂ ಕಾರ್ಯಸಾಧನೆಯನ್ನೂ ತಾಳ್ಮೆಯನ್ನೂ ವಿಶೇಷವಾಗಿ ಕೊಂಡಾಡುತ್ತೇನೆ. ಯಾಕೆಂದರೆ ಇವರು ಸಂಸಾರವಂದಿಗರಾಗಿರುತ್ತಾರೆ, ಗೃಹಕೃತ್ಯಗಳನ್ನು ನಡಿಸಿಕೊಂಡು, ಮಕ್ಕಳ ಪೋಷಣೆ ಅವರ ಬೆಳವಣಿಗೆಗಳನ್ನು ನೋಡಿಕೊಂಡು, ವಿದ್ಯಾಭ್ಯಾಸಂಗವನ್ನು ಬಿಡದೆ ಮಾಡಿದ್ದಾರುದಕ್ಕಾಗಿ ಹಿಂದೂ ಸ್ತ್ರೀಯರಾದ ನಮಗೆಲ್ಲಾ ಗೌರವವುಂಟಾಗಿರುತ್ತದೆಂದು ಭಾವಿಸುವೆವು. ಈ ಭಾಗದಲ್ಲಿ ನಾವು ಅಹಂಕಾರ ಪಟ್ಟುಕೊಳ್ಳಬಹುದಾಗಿದೆ. ಇವರಿಬ್ಬರೂ ಹಾಕಿಕೊಟ್ಟಿರುವ ಮೇಲ್ಪಂಕ್ತಿಯನ್ನು ನಾವೂ ಅನುಸರಿಸುತ್ತಾ ಬಂದಲ್ಲಿ ನಮಗೂ ಅಂಥಾ ಪ್ರಾಶಸ್ತ್ಯ ಲಭ್ಯವಾದೀತೆನ್ನುವುದಕ್ಕೆ ಸಂಶಯವಿಲ್ಲ. ಈ ಸಂದರ್ಭದಲ್ಲಿ ನಾವು ಮೈಸೂರು ಸಂಸ್ಥಾನದ ಶ್ರೀಮನ್ಮಹಾರಾಜರವರಿಗೆ ಅವರ ತಂದೆಯವರು ಸ್ಥಾಪನೆ ಮಾಡಿದ ಈ ವಿದ್ಯಾಶಾಲೆಯನ್ನು ಅವರು ನಡಸಿಕೊಂಡು ಬಂದಿರುವುದಕ್ಕಾಗಿ ನಮ್ಮ ಕೃತಜ್ಞತೆಯನ್ನು ಸಮರ್ಪಿಸುವೆವು. ಇಂಥಾ ವಿದ್ಯಾಶಾಲೆಯು ಹಿಂದುಸ್ಥಾನದ ಈ ಭಾಗದಲ್ಲಿ ಇರುವುದಿಲ್ಲ. ಬಾಲಕಿಯರಿಗಾಗಿ ಬೊಂಬಾಯಿಯಲ್ಲಾಗಲಿ ಮದರಾಸಿನಲ್ಲಾಗಲಿ ಇಂಥಾ ಬೇರೊಂದು ವಿದ್ಯಾಶಾಲೆ ಇಲ್ಲವಲ್ಲಾ ಎಂದು ವಿಷಾದಿಸುತ್ತೇನೆ. ಈಗ ಈ ದಿನ ನಮ್ಮ ಹೊಗಳಿಕೆಗೂ ನಮ್ಮ ಸಂತೋಷಕ್ಕೂ ನಮ್ಮ ಸನ್ಮಾನಕ್ಕೂ ಪಾತ್ರರಾದ ಈ ಭಾಗ್ಯವತಿಯರಂತೆಯೇ ಇತರ ಹಿಂದೂ ಸ್ತ್ರೀಯರೂ ಕೂಡ ಪಟ್ಟು ವಿದ್ಯಾವತಿಯರಾಗಿ ಲೋಕದ ಮೆಚ್ಚಿಕೆಯನ್ನು ಸಂಪಾದಿಸುವವರಾಗಲೆಂದು ಅತ್ಯಂತ ಉತ್ಸಾಹದಿಂದ ನಿರೀಕ್ಷಿಸುತ್ತೇನೆ.

ತರುವಾಯ ಶ್ರೀಮತಿ ರುಕ್ಮಿಣಮ್ಮ, ಬಿ ಎ ಯವರು ಸಭೆಯವರನ್ನು ಕುರಿತು ಪ್ರತ್ಯುತ್ತರ ಹೇಳಿದ್ದೇನೆಂದರೆ—

ನಮಗೆ ಮಹದಾನಂದ ಸಂತೋಷ ಪಟ್ಟು ಈ ದಿನ ನಮಗೆ ಇಷ್ಟು ವಿಶೇಷವಾಗಿ ಸನ್ಮಾನಮಾಡಿದ್ದಕ್ಕಾಗಿ ನಾನು ನಿಮ್ಮಗಳನ್ನೆಲ್ಲಾ ಪರಸ್ಪರಕವಾಗಿ ವಂದಿಸುತ್ತೇನೆ. ಈ ದಿನ ನೀವು ನಮಗೆ ಮಾಡಿದ ಸನ್ಮಾನಕ್ಕೂ ಈ ಸಂತೋಷ ಕಾರ್ಯಗಳಿಂದ ನೀವುಗಳೆಲ್ಲಾ ನಿಮ್ಮ ಸ್ವದೇಶೀಯಳಾದ ನಮ್ಮ ಗೌರವಿಸಿದ ಮಾನಸವು ಯಥಾರ್ಥವಾಗಿ ಪ್ರಕಾಶಪಡಿಸಿದಿರಿ. ವಿದ್ಯಾಭ್ಯಾಸ ವಿಷಯದಲ್ಲಿ ನಾವು ಸಂಪಾದಿಸಿಕೊಂಡಿರುವ ಪ್ರಾಶಸ್ತ್ಯವು ಅಲ್ಪಮಾತ್ರವಾದದ್ದಾಗಿರುತ್ತದೆ. ನಮ್ಮ ಸಹೋದರಿಯರು ಈ ದಿವಸ ಅವರಿಗೆ ತಕ್ಕ ಪ್ರಾಶಸ್ತ್ಯಗಳನ್ನು ಕೊಟ್ಟು ಇದ್ದಲ್ಲಿ ಇದು ಪ್ರಾಶಸ್ತ್ಯವನ್ನು ಹೊಂದಿಯಾರೆನ್ನುವುದಕ್ಕೆ ಸಂಶಯವಿಲ್ಲ. ಈ ಭಾಗವು ಮಹಾನೀಯರುಗಳಾದ ನಮ್ಮ ಮೇಲೆ ಬಿದ್ದ ಭಾರವಾಗಿರುತ್ತದೆ.

ಅನಂತರ ಶ್ರೀಮತಿ ಶ್ರೀರಂಗಮ್ಮ, ಬಿ ಎ ಯವರು ಪ್ರತ್ಯುತ್ತರ ಕೊಟ್ಟದ್ದೇನೆಂದರೆ—

ನಾವು ಬಿ ಎ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ್ದಕ್ಕಾಗಿ ಸಭಿಕರುಗಳು ನಮಗೆ ಈ ದಿನ ಮಾಡಿದ ಸನ್ಮಾನೋತ್ಸವಗಳಿಗೋಸ್ಕರ ನಿಮ್ಮನ್ನು ಪೂರ್ಣಕವಾಗಿ ವಂದಿಸುವೆನು. ನಿಮ್ಮ ಸಾರ್ಥವಾದ ಕೆಲಸವನ್ನು ನಾವು ಮಾಡಿರುವುದು ದರೆ ಆಗ ಸನ್ಮಾನವು ನಮಗೆ ಪಾತ್ರವಾಗತಕ್ಕದ್ದಲ್ಲ. ನಮಗೆ ವಿದ್ಯಾದಾನವನ್ನು ಮಾಡಿದ ಮಹಾರಾಣಿಯವರ ಕಾಲೇಜಿಗೆ ಗೌರವವೆಲ್ಲಾ ಸೇರತಕ್ಕದ್ದು. ಯಾಕೆಂದರೆ ಪ್ರಿನ್ಸಿಪಲರು ಮಾಲಿಗಳೂ ಅವರ ಕೆಳಗಿನ ಉಪಾಧ್ಯಾಯರೂ, ಸರ್ ಕೆ ಶೇಷಾದ್ರಿ ಐಯ್ಯರ್ ಮಿ॥ ವಿ ಪಿ ಮಾಧವರಾವ್, ಮಿ॥ ಎ ರಾಮಯ್ಯಂಗಾರ್, ಇವರು ನಮಗೆ ಬಹು ಸಹಾಯಕರಾಗಿದ್ದರು. ಈ ಸ್ತ್ರೀಯರಿಗಾಗಿ ಸಭೆ ನಡಸುವುದು ಬಹು ಸಂತೋಷ. ಇದೇ ೨೦ ವರುಷಗಳ ಹಿಂದೆ ಮಹಾರಾಜರವರು ಸ್ಥಾಪಿಸಿದ ದೊಡ್ಡ ಮನುಷ್ಯರ ಸಭಾ ಸದಸ್ಯ ವಿದ್ಯಾಶಾಲೆಯನ್ನು ಸ್ಥಾಪಿಸಿ, ನಮ್ಮ ಸ್ತ್ರೀಯರ ಮುಂದಿನ ಅಭಿವೃದ್ಧಿಗಳನ್ನು ಕಲ್ಪಿಸಿಕೊಟ್ಟರು. ಅವರು ಈಗ ಇದ್ದಿದ್ದರೆ ಇಲ್ಲಿ ನಮಗಿತಲು ಬಹಳ ಸಂತೋಷವಾಗುತ್ತಿತ್ತು ಎಂದು ನಿಮ್ಮನ್ನು ಕೇಳಿಯೂ ವಂದಿಸುವೆನು.

ಅನಂತರ ಎಲ್ಲರೂ ಪನ್ನೀರು ಬಟ್ಟೆ ತಮ್ಮ ಸಂತೋಷವನ್ನು ಪ್ರಕಾಶಪಡಿಸಿದರು. ಪುಷ್ಪ ತಾಂಬೂಲ ಗಳನ್ನು ಹಂಚಿದ್ದ ಸಭೆ ಸಂತೋಷ ಮುಕ್ತಾಯವಾಯಿತು.

ಇಂಡಿಯಾ ದೇಶದ ವೃತ್ತಾಂತಗಳು

ಕಳೆದ ವಾರ ಹಿಂದುಸ್ಥಾನದಲ್ಲೆಲ್ಲಾ ೧೩,೯೯೬ ಜನಗಳು ಪ್ಲೇಗಿನಿಂದ ಸತ್ತರು. ಈ ಪೈಕಿ ೧೧,೦೦೦ ಜನರು ಕಾಲವಾದರು.

****

ಬೊಂಬಾಯಿಯಲ್ಲಿ ಈಗ ರೋಗವು ಬಹಳ ಹೆಚ್ಚಿದೆ. ಕಳೆದ ವಾರ ೧,೧೫೦ ಜನರು ಎಲ್ಲಾ ಕಾರಣಗಳಿಂದಲೂ ಮೃತಪಟ್ಟರು.

****

ಹಿಂದುಸ್ಥಾನದಿಂದ ದಕ್ಷಿಣ ಆಫ್ರಿಕಕ್ಕೆ ಹೋದ ಸಂಘದವರಿಗೆ ಹೋಗಿದ್ದಕೊಂಡು ಜೀವನ ಮಾಡತಕ್ಕವರು ೧೦೦೦೦ ಜನಗಳು ಎಂದು ಹೊಸ ಲೆಕ್ಕದ ರಿಪೋರ್ಟಿನಲ್ಲಿ ತಿಳಿಯುತ್ತದೆ.

****

ಕಲ್ಕತ್ತೆಯ ಬಳಿ ಬಿನಾಪೂರದಲ್ಲಿ ಸರ್ಕಾರಿ ಕೂಲಿ ರೆಕಾರ್ಡ ಹುಡುಗಳು ಕಳೆದ ವಾರ ಬೆಂಕಿ ಬಿದ್ದು ನೂರಾರು ಜೋಪಡಿಗಳು ಸುಟ್ಟುಹೋಗಿ ೩೦,೦೦೦ ರೂಪಾಯಿ ನಷ್ಟವಾಗಿರುತ್ತದೆ.

****

ಉಗ್ಲಿ ನದಿಯ ಮೇಲೆ ಹಿಮ ಸ್ತ್ರೀಯರಿಗೆ ಅಂತಃಕರಣ ಸ್ನಾನಘಟ್ಟಗಳನ್ನು ಕಟ್ಟಿಸಿಕೊಡಬೇಕೆ ಎಂದು ಕಲ್ಕತ್ತಾ ಮ್ಯುನಿಸಿಪಾಲಿಟಿಯವರು ಒಂದು ಲಕ್ಷ ರೂಪಾಯಿ ಸ್ಯಾಂಕ್ಷನ್ ಮಾಡಿದಾರೆ.

****

ಕಲ್ಕತ್ತೆಯ ಹತ್ತಿರ ಕ್ಯಾನಿಂಗ್ ಟೌನಿನಲ್ಲಿ ಕಳೆದ ಸೋಮವಾರ ರಾತ್ರಿ ಕಳ್ಳರು ಪೋಸ್ಟ್ ಆಫೀಸಿಗೆ ಕನ್ನ ಹಾಕಿ, ಕಬ್ಬಿಣದ ಪೆಟ್ಟಿಗೆಯನ್ನು ಒಡೆದು, ಒಳಗಿದ್ದ ೮೦೦ ರೂಪಾಯಿ ಎಲ್ಲ ದೋಚಿಕೊಂಡು ಹೋದರು.

****

ಅಮೃತಸಾರ ನಗರದಲ್ಲಿ ಒಬ್ಬ ಮಹಾಜನರು ಒಂದು ಇಂಗ್ಲೀಷ್ ಸ್ಕೂಲ್ ಸೇರಿ, ಪ್ರಿನ್ಸ್ ಆಫ್ ವೇಲ್ಸ್‌ರವರ ಹೆಸರಿನ ಮೇಲೆ ೧,೦೦೦ ರೂಪಾಯಿ ಖರ್ಚುಮಾಡಿ ಒಂದು ದವಾಖಾನೆ ಆಸ್ಪತ್ರೆಯನ್ನು ಕಟ್ಟಿಸುವರಾಗಿದಾರೆ.

****

ಇಬ್ಬರು ಬಂಗಾಳಾ ಗಂಡಸರೂ ಒಬ್ಬ ಹೆಂಗಸೂ ಸೇರಿ ಡಲಿಗೇಟ್ ಕೊಟ್ಟು ಪಾಠ ಮಾಡಿ, ಪೋಸ್ಟ್ ಆಫೀಸಿನಿಂದ ೮೦೦ ರೂಪಾಯಿ ತೆಗೆದುಕೊಂಡರು. ಈಗ ಆ ಮೂವರು ನಂದಿಯನ್ನೂ ದರ್ಯಾಪ್ತು ಮಾಡುತ್ತಿದಾರೆ.

****

ಬೊಂಬಾಯಿಪಟ್ಟಣದಲ್ಲಿ ಮೇಜರ್ ಪ್ಲೇಯರ್ ಎಂಬೊಬ್ಬ ಡಾಕ್ಟರು ಒಬ್ಬ ರೋಗಿಯನ್ನು ನೋಡಿ ಔಷಧಿ ಕೊಡುತ್ತಿದ್ದನು. ರೋಗಿಯು ಸತ್ತು ಹೋದನು. ಅದರ ಮೇಲಿ ಅವನಿಗೆ ಪ್ಲೇಗ್ ಬಂದುದಾಗಿತ್ತೆಂದೂ, ಇಂಥಾ ಅಂಟುರೋಗದ ವಿಷಯವನ್ನು ಆ ಡಾಕ್ಟರು ಹೆಲ್ತ್ ಆಫೀಸರಿಗೆ ತಿಳಿಸಲಿಲ್ಲವೆಂತಲೂ ಅವರ ಮೇಲೆ ಫಿರ್ಯಾದು ಮಾಡಿ ಮ್ಯಾಜಿಸ್ಟ್ರೇಟರು ಆ ಡಾಕ್ಟರನ್ನು ವಿಚಾರಣೆ ಮಾಡಿ, ಅವರಿಗೆ ೩೦ ರೂಪಾಯಿ ಜುಲ್ಮಾನೆ ಹಾಕಿಬಿಟ್ಟರು.

ಬರ್ಮಾಕ್ಕೆ ಸೇರಿದ ಮೌಗ್ವಿ ಪಟ್ಟಣದಲ್ಲಿ ಮ್ಯುನಿಸಿಪಲ್ ಕಟ್ಟೆ ಟ ಕಳೆದ ವಾರ ಬೆಂಕಿಬಿದ್ದು ಉರಿದು ಹೋಯಿತು. ಅಪರಾಧಿಗಳ ಹಿಡಿದುಕೊಡುವವರಿಗೆ ಇನಾಮು ಸಿಕ್ಕುತ್ತದೆಂದು ಸರ್ಕಾರದವರು ಪ್ರಕಟಿಸಿದ್ದಾರೆ

****

ಬರ್ಮಾ ಆಯವ್ಯಯದಲ್ಲಿ ರೈಲ್ವೆ ಬಾಬ್ತಿಗೆ ಗವರ್ನಮೆಂಟಿನ ವರು ... ಲಕ್ಷ ರೂಪಾಯಿ ಖರ್ಚು ಮಾಡುವವರಾಗಿದ್ದಾರೆ. ಈ ವರ್ಷದಲ್ಲಿ ... ಲಕ್ಷ ಮುಂದಿನ ವರುಷ ೧೦೦ ಲಕ್ಷ ರೂಪಾಯಿಗಳನ್ನು ವಿನಿಯೋಗಿಸುವರು

****

ಮೈಸೂರಿನ ... ವಿದ್ಯಾಶಾಲೆಯಲ್ಲಿ ಓದುತ್ತಿದ್ದ ಇಬ್ಬರು ... ಕೊಂಡು ಅವರಿಗೆ ವಿದ್ಯಾಸಂಬಂ ... ಪ್ರಯತ್ನಮಾಡಿದವರು ಇವರಿಗಿಂತಲೂ ಮೊದಲೇ ಇ ... ಅವರು ... ದಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾರೆ

****

ಬರ್ಮಾ ಆರೆಕ್ಕಾನ್ ಸೆ ... ನಗರದಲ್ಲಿ ... ದಿನಕ್ಕೆ ... ಪ್ರತಿ ... ಪಟ್ಟಣದ ... ಇದೆ

****

ಕಲ್ಕತ್ತಾ ಪಟ್ಟಣದ ... ಸಿಗರೆಟ್ಟುಗಳ ... ಕಾರ್ಖಾನೆಯನ್ನು ಕಟ್ಟ ... ಕಳೆದ ವಾರ ಬೆಂಕಿ ಬಿದ್ದು ನಾಶ ವಾಗಿ ... ಬಂದಿದೆ

****

ಕೋ ... ಯಲ್ಲಿ ... ಶಂಕ ... ಪ್ರಕಟವಾಗಿದೆ ... ಜನರಿಗೆ ... ಈ ಸಲ ... ಕಾಣಿಸಿತು

****

ಪ್ರೊಫೆಸರ್ ... ಎಂಬ ಪ್ರಸಿದ್ಧ ವೈದ್ಯನು ಕಳೆದ ವಾರ ಸ ... ಪಟ್ಟಣದಲ್ಲಿ ... ವಿಷದ ... ವಿಷವನ್ನು ... ಸರ್ಪಗಳ ... ಸುಮಾರು ... ಜಾತಿಯ ... ಹೇಳಿದನು

****

ಪ್ರಿನ್ಸ್ ಆಫ್ ವೇಲ್ಸ್ ರವರನ್ನು ಸತ್ಕಾರ ಮಾಡುವುದಕ್ಕೆ ಬೊಂ ... ಪಟ್ಟಣದ ... ಸಮಾಲೋಕ ... ಹಣ ... ಉಳಿದಿದೆ ಎಂದು ... ಬಂದದ್ದರಿಂದ ಈ ... ಚಿತ್ರವನ್ನು ... ಕಮಿಟಿಯವರು ... ಸಿದ್ದಾರೆ

****

ಈ ಪಟ್ಟಣದ ಬಳಿ ಮರಳಿನ ... ಬಟ್ಟೆ ಒಗೆಯುವುದಕ್ಕಾ ... ವರುಷದ ... ಸ್ಕಾತಾಗಿ ನದಿಯಲ್ಲಿ ಬಿದ್ದು ಬಿಟ್ಟಳು. ಅವಳನ್ನು ಎತ್ತಿ ಬದು ಕಿಸ್ಕೊಂಡು ಅವಳ ಗಂಡನ ನೀರಿಗೆ ಇಳಿದನು. ಇವನೂ ... ಇಬ್ಬರೂ ... ಆ ಊರಿನವರೆಲ್ಲಾ ... ನುಂಟುಮಾಡಿದೆ

****

ಈಶ್ವರದ ... ಮಹಮದ್ ... ವಿಷಯ ... ಪುಸ್ತಕ ... ಪ್ರಿನ್ಸ್ ಆಫ್ ವೇಲ್ಸ್ ರವರು ದಯಮಾಡಿದ್ದ ... ಪ್ರಜೆಗಳ ... ಅಪೂರ್ವವಾದ ... ಪುಸ್ತಕಗಳ ... ವೆ

****

ಮದರಾಸ್ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಉಪಾಧ್ಯಾಯರಾಗಿದ್ದ ... ಹಿಂದೂಸ್ಥಾನದ ತತ್ವಶಾಸ್ತ್ರ ವಿಚಾರ ... ಅಲ್ಲಿಗೆ ಹೋಗಿ ... ದಲ್ಲಿ ಕೆಲವು ಕಾಲದಿಂದಲೂ ... ಕಾಲವಾದರೆಂದು ... ವರ್ತಮಾನ ಬಂದಿದೆ. ಇವರು ವಿದ್ಯಾವಿಚಾರದಲ್ಲಿ ... ಹಿಂದೂಸ್ಥಾನದಲ್ಲೂ ... ಶ್ರೇಷ್ಠವಾದ ಸನ್ಮಾನಗಳನ್ನು ಹೊಂ ... ಇವರ ಮರಣದಿಂದ ಅವರ ಪತ್ನಿಯವರಿಗೆ ಪ್ರಾಪ್ತವಾದ ... ದೇವರು ... ಮಾಡಲೆಂದು ಪ್ರಾರ್ಥಿ ಸೆ

****

ಪೂರ್ವಬಂಗಾಳ ಎಂಬ ಹೊಸ ಅಧಿಪತ್ಯದ ಲೆಪ್ಟಿನೆಂಟ್ ಗವ ... ಪುಲ್ಲರ್ ರವರು ಪತ್ನಿ ಪರಿವಾರ ಸಹಿತ ... ಕಳೆದ ವಾರ ... ದಯಮಾಡಿದರು

ಆಗ ಅಲ್ಲಿನ ಪ್ರಜೆಗಳು ಅವರಿಗೆ ಸನ್ಮಾನಮಾಡುವುದಕ್ಕಾಗಿ ನಾಗಾ ಎಂಬ ಜಾತಿಯ ಯುದ್ಧಭಟರನ್ನು ಕರೆದು, ಪ್ರಾಚೀನ ಕಾಲದಲ್ಲಿ ಅವರು ಯುದ್ಧಮಾಡುವುದಕ್ಕೆ ಹೊರಡುವಾಗ ಯಾವ ರೀತಿ ವೈಗಲ್ಲಾ ... ದೇಶೀಯ ಆಯುಧಗಳನ್ನು ... ಅದೇ ರೀತಿ ... ಲೆಪ್ಟಿನೆಂಟ್ ಗವರ್ನರವರು ಈ ಅಪೂರ್ವವಾದ ಸಂತೋಷವನ್ನು ನೋಡಿ, ಆ ... ಮಂದಿಗೂ ಒಂದು ಬಹುಮಾನಗಳನ್ನು ಕೊಡಿಸಿದರು

****

ಬೊಂಬಾಯಿ ಪಟ್ಟಣದಲ್ಲಿ ಕಳೆದ ವಾರ ಸುಮಾರು ... ಪ್ರಜೆಗಳು ಸ್ತ್ರೀಯರಿಗೆ ವಿದ್ಯೆ ಕಲಿಸುವ ವಿಚಾರ ... ಕಾಲೇಜಿನ ಅಧ್ಯಕ್ಷರಾದ ... ಸಭಾನಾಯಕರಾಗಿ ... ಈ ಪ್ರ ... ಸುಮಾರು ಎಂಟು ಸಾವಿರ ಮಂದಿ ಮಾತ್ರ ವಿದ್ಯೆ ಕಲಿಯುತ್ತಿರ ... ಆದಕಾರಣ ಎಲ್ಲರಿಗೂ ವಿದ್ಯೆ ಕಲಿಸುವಂತೆ ... ಮಾಡಬೇಕೆಂದು ಸರ್ಕಾರದವರನ್ನು ... ಈ ಸಭೆಗೆ ರತ್ನಗಿರಿ, ಪೂನ, ಥಾಣಾ, ಸತಾರ, ಈ ಮೊದಲಾದ ... ಪ್ರಜಾಪ್ರತಿನಿಧಿಗಳು ಹೋಗಿದ್ದರು. ಇಷ್ಟು ಮಂದಿ ಪ್ರಜೆಗಳ ವಿಜ್ಞಾಪನೆಯನ್ನು ಬೊಂಬಾಯಿ ಗವರ್ನಮೆಂಟಿನವರು ... ಕಾದು ನೋಡಬೇಕಾಗಿದೆ

****

ಪ್ರಿನ್ಸ್ ಆಫ್ ವೇಲ್ಸ್ ರವರು ಬೊಂಬಾಯಿಗೆ ದಯಮಾಡಿದ್ದಾಗ ಅಲ್ಲಿನ ಸಮುದ್ರ ತೀರದಲ್ಲಿ ಅಲೆಕ್ಸಾಂಡ್ರಾ ಡಾಕ್ ಎಂಬ ಕಟ್ಟೆ ... ಕಟ್ಟುವುದಕ್ಕೆ ಅಸ್ತಿಭಾರ ಹಾಕಿದರಷ್ಟೆ. ಈ ಕಟ್ಟೆ ... ಕಂಪನಿಯವರು ಬಂದು ... ತಿಂಗಳಿಂದಲೂ ಅದಕ್ಕಾಗಿ ... ಕಲ್ಲುಗಳನ್ನು ಒಡೆಯುತ್ತಿದ್ದರು ... ಕೈಕೆಳಗೆ ೩,೦೦೦ ಗಂಡಸರು ಹೆಂಗಸರ ... ಕೂಲಿಮಾಡಿ ಜೀವಿಸಿಕೊಂಡು ... ಕಲ್ಲುಗಳನ್ನು ... ಒಡೆಯುತ್ತಿದ್ದಕ್ಕೆ ... ಕಳೆದ ವಾರ ಒಂದು ದಿನ ಸುಮಾರು ... ಪೌಂಡು ಡೈನಮೈಟನ್ನು ... ಇಟ್ಟು ... ಸಿಡಿಸಿದ್ದರಿಂದ ... ಜನರ ಪೈಕಿ ... ಗಂಡಸರು ... ಮಂದಿ ... ಬಂದಿದೆ

****

ಹಿಮಾಚಲ ಪರ್ವತದ ತಪ್ಪಲಲ್ಲಿರುವ ಕಸೌಲಿ ಪಟ್ಟಣದ ಆಸ್ಪತ್ರೆಯಲ್ಲಿ ನಾಯಿ ನರಿ ಮುಂತಾದ ಪ್ರಾಣಿಗಳಿಂದ ಕಡಿಸಿಕೊಂಡವರಿಗೆ ಚಿಕಿತ್ಸೆ ಮಾಡುತ್ತಾರೆ ... ರಿಪೋರ್ಟಿನಿಂದ ತಿಳಿದು ಬರುವುದೇನೆಂದರೆ — ಕಳೆದ ... ವರುಷ ... ಮಂದಿ ಈ ಆಸ್ಪತ್ರೆಯಲ್ಲಿ ಚಿಕಿತ್ಸೆ ಮಾಡಿಸಿಕೊಂಡರು ... ಹಿಂದಿನ ವರುಷಕ್ಕಿಂತ ... ಮಂದಿ ಹೆಚ್ಚು ... ಮಂದಿಯ ಪೈಕಿ ಯೂರೋಪಿಯನ್ನರು ... ಹಿಂದೂಸ್ಥಾನದವರ ... ಯಾವ ಯಾವ ಪ್ರಾಣಿಯಿಂದ ಎಷ್ಟೆಷ್ಟು ಮಂದಿ ಈ ಆಸ್ಪತ್ರೆಗೆ ... ಹುಚ್ಚುನಾಯಿ ... ನರಿಗಳಿಂದ ... ಮಂದಿ ... ಮನುಷ್ಯರಿಂದ ... ಬಿಲ್ಲಿ ... ಕಾಡಿನ ... ಇವರಲ್ಲಿ ಹುಚ್ಚನ್ನು ... ಕಚ್ಚಿಸಿಕೊಂಡವರು ... ಮಂದಿ, ನರಿಯಿಂದ ... ಹುಚ್ಚುನಾಯಿ ಕಡಿದವರ ... ರೋಗಿಗಳಲ್ಲೆಲ್ಲಾ ಏಳು ಮಂದಿ ಗುಣವಾಗದೆ ಮೃತಪಟ್ಟರು. ಇದೂ ಕಂಡರೆ ಇವರನ್ನು ನಾಯಿ ಕಡಿದಾಗ ಕಡಿದ ಭಾಗದ ಮೇಲೆ ಒಟ್ಟೆ ಮೊದಲಾದ ಅಂತರವೇನೂ ಇರಲಿಲ್ಲ. ಬರೀ ಚರ್ಮವನ್ನೇ ನಾಯಿ ಹಿಡಿದು ಬಲವಾಗಿ ಕಡಿದಿತ್ತು

ತಾಲ್ಲೋಕು ವರ್ತಮಾನಗಳು.

ಚಾಮರಾಜನಗರ — ಇದೇ ಊರಿನಲ್ಲಿರುವ ಕೆಂಪೇಗೌಡನ ಮನೆಯಲ್ಲಿ ಇಲಿಗಳನ್ನು ಹಿಡಿಯುವದಕ್ಕಾಗಿ ತಿಂಡಿ ಸಮೇತ ಇಟ್ಟಿದ್ದ ಇಲಿಗತ್ತರಿಯಲ್ಲಿ ಒಂದು ಭಾರಿ ನಾಗರಹಾವು ನೆನ್ನೆ ಗರ ... ಬಂದು ತಲೆ ಸಿಕ್ಕಿಸಿಕೊಂಡು ಬಿದ್ದಿತ್ತು. ಹಾವು ಬಹು ಭಾರಿಯಾಗಿ ಪ್ರಾಣಸಹಿತ ಇದ್ದದ್ದನ್ನು ನೋಡಲು ಅನೇಕರಿಗೆ ತಮಾಷೆಯಾಗಿತ್ತು. ಮನುಷ್ಯಯತ್ನ ಒಂದಾದರೆ ದೈವಯತ್ನವೇ ಬೇರೆ — ಈ ಊರಿನಲ್ಲಿ ಜಾತಮಾಲಿಗಳು ಬಹು ಪ್ರೋತ್ಸಾಹದ ಮೇಲೆ ಬರುತ್ತಿರುವುದರಿಂದ ... ನಿಸಿಪಾಲಿಟಿಯವರು ಗಮನ ಕೊಟ್ಟರೆ ಒಳ್ಳೇದು — ಮಳೆ ಇಲ್ಲದೆ ಬಿಸಿಲು ಜೋರಾಗಿದೆ. ನೀರಿಗೆ ಆಶ್ರಯವಾದ ದೊಡ್ಡ ಅರಸನ ಕೊಳ ಕ್ಕೆ ಹುಳುಗಳು ಬಿದ್ದಿವೆ

ಮದ್ದಗಿರಿ — ಈ ಗ್ರಾಮದಲ್ಲಿ ಬಿಸಲಿನ ತಾಪದಿಂದ ಭಾವಿಗಳಲ್ಲಿ ರತಿಕ್ತ ಅಲ್ಪ ಸ್ವಲ್ಪ ಜಲಾಧಾರಗಳೂ ಬತ್ತಿ ಹೋಗಿ ಜನಗಳಿಗೂ ಜೀವರಾಶಿಗಳಿಗೂ ಸಹಾ ಪಾನೋದಕಗಳಿಗೆ ತುಂಬಾ ತೊಂದರೆ ಸಂಭವಿಸಿರುತ್ತೆ. ಈ ತೊಂದರೆಗಳು ಯಾವಾಗ್ಗೆ ನಿವಾರಣೆಯಾಗುವವೋ ಎಂದು ಜನಗಳು ಚಿಂತಿಸುವರು — ಮದ್ದಗಿರಿ ಮಿಷನ್ ಬಾಲಿಕಾಪಾಠ ಶಾಲೆಯ ಬಾಲಿಕೆಯರಿಗೆ ಬಹುಮಾನ ಕೊಡುವುದಕ್ಕೆ ಕಳೆದ ... ನೇ ಈ ಗುರುವಾರ ಪ್ರಾತಃಕಾಲ ಈ ಗ್ರಾಮದ ಅನೇಕ ದೊಡ್ಡ ಮನು

ಷ್ಯರು ವರ್ತಕರು ಆದಿಯಾಗಿ ಸಭೆ ಸೇರಲ್ಪಟ್ಟಿತ್ತು. ... ಗೋಪಾಲಾಚಾರ್ಯರು ಅಗ್ರಾಸನವನ್ನು ವಹಿಸಿದರು. ರೆವ್ ... ಟಾಮ್ಲಿನ್ಸನ್ ದೊರೆಯವರು ಮತ್ತು ಉಪದೇಶಿಗಳು ... ಮಾಡಿದರು. ಅನಂತರ ೬ ಬಾಲಿಕೆಯರು ಸಭೆಯವರಿಗೆ ನ ... ಆಗುವಂತೆ ಸಂಗೀತವನ್ನು ಹಾಡಿದರು. ... ಕನ್ನಡ ಪತ್ರ ... ಸಂಭಾಷಣೆ ಮತ್ತು ವಿದ್ಯಾಭ್ಯಾಸದಲ್ಲಿ ಒಂದು ನಾಟಕ ಸಹಾ ಸಭೆಯವರಿಗೆ ಆಶ್ಚರ್ಯವಾಗುವಂತೆ ರಚಿಸಿದರು. ಅನಂತರ ಅಮಲ್ದಾರರು ದೊರೆಯವರ ಅನುಮತಿಯ ಪ್ರಕಾರ ಎಲ್ಲಾ ಬಾಲಿಕೆಯರಿಗೂ ... ಪೆಟ್ಟಿಗೆ ... ಮೊದಲಾದ ಬಹುಮಾನಗಳನ್ನು ಕೊಟ್ಟು ವಿದ್ಯಾಭ್ಯಾಸದಲ್ಲಿ ಆಸಕ್ತಿಯುಂಟಾಗುವ ಹಾಗೆ ... ಬೋಧಿಸಿದರು. ಅನಂತರ ಸಭಿಕರಿಗೂ ಬಾಲಿಕೆಯರಿಗೂ ಗಂಧ ಪುಷ್ಪ ತಾಂಬೂಲ ... ಕೊಟ್ಟರು. ಬಾಲಿಕೆಯರು ಮಹಾರಾಜರವರ ಶ್ರೇಯಸ್ಸನ್ನು ... ಹಾಡಿ ಪೂರೈಸಿದನಂತರ ಸಭೆ ಬರಖಾಸ್ತಾಯಿತು.

ಚನ್ನಪಟ್ಟ — ... ಬಿಸಲು ಬಹು ಬಿರುಸಾಗಿದೆ. ನಾಲ್ಕು ಕಡೆಗಳಲ್ಲೂ ... ಜನ ಉಪದ್ರವು ಜರುಗಿಕೊಂಡಿರುತ್ತದೆ. ನೀರಿನ ... ವರ್ತಕ ... ಈ ಊರಿನ ಕೆರೆಯಲ್ಲಿ ಎರಡು ... ಭಾವಿಗಳನ್ನು ... ಈ ಊರ ಟೌನಿಗೆ ಸೇರಿದ್ದಾಗಿದೆ ... ನೇ ತಾರೀಖು ... ಯಲ್ಲಿ ಟೌನಿನ ... ಬಿದ್ದು ಕೊಟ್ಟಿಗೆ ... ಅಮೂಲ್ಯವಾದ ... ಈ ಇನ್ಸ್ಪೆಕ್ಟರು ಕೆಲವು ಜನ ಪೋಲೀಸ್ ... ಬಂದು ... ಸಕಾಲ ... ಅಮಲ್ದಾರರ ... ಚಿತ್ರವಿಸಲಾಗ ... ದೀಪಗಳನ್ನು ... ಪಟ್ಟಣ ... ಈ ವಿಷಯದಲ್ಲಿ ... ಅಮಲ್ದಾರರು ... ಮುನಿಸಿಪಲ್ ... ಸರ್ಕಾರ ... ಫಲಪ್ರಾಪ್ತಿ ... ಪ್ರಜೆಗಳಿಗೂ ... ಸರ್ಕಾರದ ... ಕಾಯಿದೆ ... ಊರ ... ಆಗಲಾರದು "ಒಡೆಯನಿಲ್ಲದ ಊರು ಬಡವರಿಗೆ ಆಕಳಲ್ಲ" ಎಂಬ ನೀತಿವಾಕ್ಯಕ್ಕೆ ಸರಿಯಾಗಿದೆ. ಇಲ್ಲಿನ ಮ್ಯುನಿಸಿಪಲ್ ... ಪೋಲೀಸಿನವರು ... ಈ ಅಧಿಕಾರ ... ಕೊಟ್ಟರೆ ... ಈ ಟವುನಲ್ಲಿ ... ಆಸ್ಪತ್ರೆಯಿಂದ ನಮ್ಮಗಳಿಗೆ ಆಗುತ್ತಿರುವ ಪ್ರಯೋಜನವನ್ನು ಎಷ್ಟು ಹೇಳಿದರೂ ಸಾಲದು. ನಮ್ಮ ಟವುನಿನವರೂ ಅಲ್ಲದೆ ಸುತ್ತಮುತ್ತ ಗ್ರಾಮಗಳ ... ಈ ಆಸ್ಪತ್ರೆಯಲ್ಲಿ ಇರುವವರು ರೋಗಿಗಳ ಅನುಕೂಲಕ್ಕೆ ಬೇಕಾದ ಎಲ್ಲಾ ಏರ್ಪಾಡುಗಳೂ ಬಹು ತೃಪ್ತಿಕರವಾಗಿ ನಡೆಯುತ್ತವೆ. ಈ ಆಸ್ಪತ್ರೆಯ ... ರೋಗಿಗಳ ಚಿಕಿತ್ಸೆ ನಡೆಯುತ್ತಿದೆ ... ತಿಂಗಳು ... ಜನರು ಸಂಪೂರ್ಣ ಗುಣಹೊಂದಿ ... ದ್ದಾರೆ. ನೂರಾರು ಜನ ... ಬರುತ್ತಿದ್ದಾರೆ ... ಹೋಗುತ್ತಾ ಇದ್ದಾರೆ. ಈಗ ಇದರಲ್ಲಿ ... ಜನರು ರೋಗಿಗಳಾಗಿ ಇದ್ದಾರೆ. ಅಲ್ಲದೆ ಪ್ರತಿ ದಿನವೂ ಸರಾಸರಿ ... ಜನಗಳು ಔಷಧಕ್ಕೆ ಬರುತ್ತಿದ್ದಾರೆ. ಈ ಸಂಸ್ಥೆಯಿಂದಲೇ ಆಸ್ಪತ್ರೆಯ ... ಯೋಗಕ್ಷೇಮವು ತಿಳಿಯಬಹುದು ... ಎಸ್ ... ಮಿಸ್ಟರ್ ಅಯ್ಯನವರು ... ಅವರ ವಿಷಯ ತುಂಬಾ ... ಚಿಕಿತ್ಸೆ ... ಪ್ರೀತಿ ... ಈ ಆಸ್ಪತ್ರೆಯ ಮುಖ್ಯಾಧಿಕಾರಿಗಳಾಗಿರುವ ಡಾಕ್ಟರ್ ... ಎಂ. ಪಿ. ರವರು ಬೆಂಗಳೂರಿನಿಂದ ಪ್ರತಿ ವಾರಕ್ಕೆ

ತಪ್ಪದೆ ಒಂದಾವರ್ತಿ, ಸಂಪರ್ಭಾನುಸಾರ ಎರಡಾವರ್ತಿ, ಬಂದು ರೋಗಿಗಳನ್ನು ಪರಾಂಬರಿಸಿ, ವಿಚಾರಿಸುತ್ತಾ ನೂತನವಾಗಿ ಬೇಕಾದ ಏರ್ಪಾಡುಗಳನ್ನು ನೋಡುತ್ತಾ ಇರುವರು.—ಈ ಟವನಿನ ಕೆಳಗಿನ ಚರ್ಮದ ಮಂಡಿಗಳ ಸಂಖ್ಯೆ ದಿನೇ ದಿನೇ ವೃದ್ಧಿಯಾಗುತ್ತಿದೆ. ಮೊದಲು ಎರಡು ಇದ್ದದ್ದು ಈಗ ಮೂರಾಯಿತು. ಈ ಮೂರು ಮಂಡಿಗಳೂ ಒಂದೇ ಸ್ಥಳದಲ್ಲಿದ್ದು ಇವುಗಳಿಂದ ಬರುವ ದುರ್ವಾಸನೆಯನ್ನು ಸಹಿಸಲಾಗದು. ಸುಬೇದಾರ್ ಪಲ್ಲಿ ತಿರುಗಾಡುವ ಜನಗಳಿಗೇನೆ ಆ ವಾಸನೆ ಸಹಿಸಲಾಗದ್ದಾಗಿದೆಯಲ್ಲಾ! ಸಮೀಪದಲ್ಲೇ ವಾಸಮಾಡುವವರೂ, ಸ್ಕೂಲ್ ಉಪಾಧ್ಯಾಯರುಗಳೂ, ವಿದ್ಯಾರ್ಥಿಗಳೂ, ಅದನ್ನು ಹ್ಯಾಗೆ ಸಹಿಸುತ್ತಾ, ಸಹಿಸುತ್ತಾ ಇರುವರೋ! ಅದರ ಬಗ್ಗೆ ತಿಳಿಯದು. ಇದರಿಂದ ಜನಗಳಿಗೆ ಎಷ್ಟು ಅನಾರೋಗ್ಯವೆಂಬ ಪದಾ ಅಮಲ್ದಾರರವರು ತಕ್ಕ ಶೀಘ್ರವಾಗಿ ಗಮನಕ್ಕೆ ತಾರದಿರುವದನ್ನು ನೋಡಿದರೆ ಇವರ ಪ್ರಜೆಗಳ ಆರೋಗ್ಯಭಾಗ್ಯದ ವಿಷಯದಲ್ಲಿ ಎಷ್ಟು ಹಿತಚಿಂತಕರಾಗಿದ್ದಾರೆಂಬುವದು ನಿದರ್ಶನವಾಗುತ್ತಲಿದೆ. ಈ ವಿಷಯ ಎಷ್ಟು ಬೇಗನೆ ತಿದ್ದಲ್ಪಟ್ಟರೆ ಅಷ್ಟು ಪ್ರಯೋಜನವಾಗುವದು.—ಕಳೆದ ತಾ ೩೦ರಲ್ಲಿ ಡಿಪ್ಯುಟಿ ಕಮೀಷನರು ಮಿ॥ ಅವರ ದಯೆಯಿಂದ ಸವಾರಿ ೦೩ ಬೇಗರೂರಿನ ಬಿತ್ತನೆಗೆ ಇಲ್ಲಿ ಪ್ರಜಾಪ್ರಮುಖರು ಅಮಲ್ದಾರರ ಮೇಲೆ ತಮ್ಮ ಕೊರತೆಗಳನ್ನು ಬಿನ್ನೈಸಿಕೊಂಡರು.—ಸಬ್ ಡಿವಿಜನ್ ಆಫೀಸರವರು ನಯವಾಗಿ ಪೇಳಿದ್ದರೆ ಗಳನ್ನು ದಯಾಪರರಾಗಿ ಮಾಡುತ್ತಿದ್ದರು. ಇಲ್ಲಿನ ಕಾಮದವನನ್ನು ಈ ಸಂಗತಿ ಏನೋ ಪರಿಹಾರವಾಗಲಿಲ್ಲ. ಇದಕ್ಕೆ ಯಾವಾಗ ಸಮಾಧಾನ ದೊರಕುವದೋ ನಿರೀಕ್ಷಿಸಬೇಕಾಗಿದೆ.

ದೊಡ್ಡಬಳ್ಳಾಪುರ.—ಇಲ್ಲಿ ಬಿಸಿಲಿನ ತಾಪವು ಏರಿ ಕನ್ನವು ದಿನ ದಿನಕ್ಕೂ ಹೆಚ್ಚುತ್ತಾ ಇದೆ. ಬಾವಿಗಳಲ್ಲಿ ನೀರು ಕಡಿಮೆಯಾಗಿ, ಜನಗಳು ಬಹಳ ಕಷ್ಟಪಡುತ್ತಿದ್ದಾರೆ. ... ನೀರು ಸಿಕ್ಕುವದು ಕಷ್ಟ. ಈ ನೀರು ಮೊದಲು ತೊಟ್ಟಿಯಲ್ಲಿ ಶೇಖರಿಸಿ ದನಗಳಿಗೆ ಮತ್ತು ಜನಗಳಿಗೆ ... ನಗರ ಕೆರೆಯಲ್ಲಿ ನಾಲ್ಕು ಸ್ವಲ್ಪ ನೀರಿದೆ. ... ಜನಗಳಿಗೆ ತುಂಬಾ ಪ್ರಯಾಸ ... ತಕ್ಕ ಜನರು ಇಲ್ಲವೆ ... ನಮ್ಮ ದಯಾಳುಸರ್ಕಾರದವರು ... ಊರನ್ನು ಒಳ್ಳೆ ಸ್ಥಿತಿಗೆ ತಂದರೆ ನಮ್ಮ ಜನರು ಬಹಳ ಕೃತಜ್ಞರಾಗಿರುವರು. ... ಈಗ ಸರ್ಕಾರದವರು ಇತ್ತ ಕಡೆ ಲಕ್ಷ್ಯವಿಟ್ಟು ... ಊರಿನ ಜನರ ಕಷ್ಟವನ್ನು ನಿವಾರಿಸಬೇಕೆಂದು ... ನಮ್ಮ ಅಮಲ್ದಾರರೂ ದೊಡ್ಡ ಮನಸ್ಸು ಮಾಡಿಕೊಂಡು ಕೋ ಆಪರೇಟಿವ್ ಸೊಸೈಟಿ ಸ್ಥಾಪಿಸುವದಕ್ಕೆ ಬಹು ಪ್ರಯಾಸಪಡುತ್ತಾರೆ. ಇದು ನೆರವೇರಲಿ ಎಂದು ಕೋರುತ್ತೇವೆ.—ಕನ್ನಡ, ಇಂಗ್ಲಿಷ್ ಲೋವರ್ ಸೆಕೆಂಡರಿಯಲ್ಲಿ ಈ ಸಾರಿ ೧೦ ಪಾಸಾಗಿರುವದು ತುಂಬಾ ಸಂತೋಷ ... ನಗರದ ಗರಡಿಯವರು ಗರಡಿ ಪೂಜೆ ಮಾಡಿದರು. ... ಜನರು ಸೇರಿ ಸಂತೋಷಪಟ್ಟರು.

ಬೇಲೂರು.—ಇಲ್ಲಿ ಎ. ವಿ. ಸ್ಕೂಲಿನಲ್ಲಿ ... ನರಸಿಂಹಯ್ಯನವರಿಗೆ ಬೇರೆ ಊರಿಗೆ ವರ್ಗವಾದ ವಿಷಯ ... ಈ ಊರಿನವರು ಇವರನ್ನು ಇನ್ನೂ ಕೆಲವು ಕಾಲ ಇಲ್ಲಿಯೇ ಇಟ್ಟುಕೊಳ್ಳಬೇಕೆಂದು ವಿದ್ಯಾಭ್ಯಾಸದ ಇಲಾಖಾ ಇನ್ಸ್ಪೆಕ್ಟರ್ ಜನರಲ್ ಸಾಹೇಬರವರನ್ನು ಪ್ರಾರ್ಥಿಸಿಕೊಂಡರು. ಅವರು ಈ ಹೆಡ್ ಮಾಸ್ಟರಲ್ಲಿ ಜನಗಳಿಗಿರುವ ಪ್ರೀತಿ ಗೌರವಾದಿಗಳಿಗೆ ಸಂತೋಷಪಟ್ಟರೂ, ಈಗ ಇಟ್ಟಿರುವ ಆರ್ಡರನ್ನು ಬದಲಾಯಿಸಲು ಸಾಧ್ಯವಿಲ್ಲವೆಂದು ಇಂಗಿತವನ್ನು ಜಾಹೀರು ಪಡಿಸಿದರು. "ರಾಜಾಜ್ಞಾ ಬಲವತ್ತರಂ" ಎಂಬ ನ್ಯಾಯರೀತ್ಯಾ ಸಮ್ಮತಿಯನ್ನು ... ಅಧಿಕಾರಿಗಳ ಅಪ್ಪಣೆಯನ್ನು ಸ್ವೀಕರಿಸಿ ಇವರನ್ನು ಇಲ್ಲಿಂದ ಕಳುಹಿಸಿಕೊಡಲು ನಿಶ್ಚಯಿಸಿ ... ತಾ ॥ ನೇ ಸೋಮವಾರ ಈ ಊರಿನ ಸ್ಕೂಲಿನಲ್ಲಿ ಅಮಲ್ದಾರ್ರೇ ಮೊದಲಾದ ಉದ್ಯೋಗಸ್ಥರೂ, ಮ್ಯುನಿಸಿಪಲ್ ಮೆಂಬರುಗಳೇ ಮೊದಲಾದ ಗ್ರಾಮಸ್ಥರೂ ಸಭೆ ಸೇರಿದ್ದರು. ಆ ಸಭೆಯಲ್ಲಿ ಸರ್ವರ ಒಪ್ಪಿಗೆಯಂತೆ ನಮ್ಮ ಅಮಲ್ದಾರರು ಅಗ್ರಾಸನವನ್ನು ವಹಿಸಿದರು. ಶೇಷಾಚಾರ್ಯರು ಅಸಿಸ್ಟೆಂಟ್ ಮಾಸ್ಟರುಗಳ ಮತ್ತು ವಿದ್ಯಾರ್ಥಿಗಳ ಪರವಾಗಿ, ವಿದ್ವತ್ತು ಪತ್ರಿಕೆಯನ್ನು ಹೆಡ್ ಮಾಸ್ಟರಿಗೆ ಒಪ್ಪಿಸಿದರು. ಒಬ್ಬ ವಿದ್ಯಾರ್ಥಿಯು ಸ್ನೇಹಭಾವದ ಉಪನ್ಯಾಸ ಮಾಡಿದನು. ಮಾರು ವಂದಿ ಸಹಿತ ... ಮಂಗಳವನ್ನು ಹಾಡಿದರು. ಸಭಾಧ್ಯಕ್ಷರು ಹೆಡ್ ಮಾಸ್ಟರ ಗುಣಕಥನ ಮಾಡಿ, ಈ ಊರಿಗೆ ... ವೇಳೆ ಕಾ ... ಸ್ಕೂಲಿನ ಅಭಿವೃದ್ಧಿಗೆ ತಾಂದಕಾರಣರಂತೆ ಏರ್ಪಾಡ ಮಾಡಿ, ಪ್ರತಿ ವರುಷವೂ ಇಂಗ್ಲಿಷ್ ಮತ್ತು ಕನ್ನಡ ಪರೀಕ್ಷೆಗಳಲ್ಲಿ ನಮ್ಮ ಹುಡುಗರನ್ನು ತಪ್ಪದೆ ಪ್ಯಾಸ್ ಮಾಡಿಸುತ್ತಾ ಬಂದಿರುವದರಿಂದಲೇ, ಈ ನರಸಿಂಹಯ್ಯನವರ ಕೆಲಸದ ಶ್ರದ್ಧೆಯೂ, ಮ್ಯಾನೇಜ್ಮೆಂಟಿನ ಶ್ರೇಷ್ಠತ್ವವೂ ವ್ಯಕ್ತಪಡುತ್ತೆ. ಇಂಥಾವರನ್ನು ಅಗಲುವದು ನಮಗೆ ಇಷ್ಟವಿಲ್ಲದಿದ್ದರೂ, ಸರ್ಕಾರದ ಹುಕುಂ ಆಗಿರುವದರಿಂದ ... ಇವರಂತೆಯೇ ಈಗ ದಯಮಾಡಿಸಿರುವ ಹೆಡ್ ಮಾಸ್ಟರ್ ಮಿ. ಶ್ರೀನಿವಾಸಾಚಾರ್ಯರು ಸ್ಕೂಲನ್ನು ಅಭಿವೃದ್ಧಿ ಸ್ಥಿತಿಯಲ್ಲಿ ಇಟ್ಟಿರುವರೆಂದು ನಂಬಿರುವದಾಗಿಯೂ ಅಪ್ಪಣೆ ಕೊಡಿಸಿದರು. ಅನಂತರ ಸಬ್ ರಿಜಿಸ್ಟ್ರಾರ್ ಮಿ॥ ನರಸಿಂಗರಾಯರು.—ಈ ನರಸಿಂಹಯ್ಯನವರು ಎರಡಾವರ್ತಿ ಇವಾ ಆಗಿದ್ದಂಥಾ ಅರ್ಹರೂ ಆದ ಇಂಗ್ಲಿಷ್ ಸ್ಕೂಲನ್ನು ಪುನಃ ಸ್ಥಾಪಿಸಿ, ಕೇವಲ ಉಚ್ಚ ಸ್ಥಿತಿಗೆ ತಂದು, ಅಲ್ಲಿಂದ ಇಲ್ಲಿಗೆ ವರ್ಗವಾಗಿ ... ಈ ಸ್ಕೂಲನ್ನೂ ಉತ್ತಮ ಸ್ಥಿತಿಗೆ ತಂದಿರುವರು ... ಇದು ಹಾಲ್ಸ್ವಾಮ್ ಮಾಸ್ತರಂತೆ ... ಮೊದಲನೆಯದಾದವುಗಳಿಗೆ ಸಮನಾಗಿದೆ ಎಂದೆ ಭಾವಿಸಿದ್ದೇನೆ. ... ಅನಂತರ ಸರ್ವರಿಗೂ ಗಂಧ ತಾಂಬೂಲಗಳನ್ನು ಒಪ್ಪಿಸಿ, ಸಭಾಧ್ಯಕ್ಷರಿಗೆ ವಂದನೆಯನ್ನು ಸಮರ್ಪಿಸಿ, ಸಭೆಯನ್ನು ಪೂರೈಸಿದರು.

ಚಂದಾದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದೆ ಬರುವ ಪತ್ರಿಕೆಗಳಿಗೆ ನಾವು ಸಿಗಾ ಕೊಡಲಾರೆವು. ಆದಕಾರಣ ಚಂದಾದಾರರು ನಮ್ಮ ಕಳುಹಿಸುವ ಕಾಗದಗಳಲ್ಲಿ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು. ಮತ್ತು ಚಂದಾಯನ್ನು ಕಳುಹಿದ ಎರಡು ಹಣಗಳಲ್ಲೂ ಬರೆಯಕೂಡದು, ಇಂಥವುಗಳಿಗೆ ನಾವು ಸಿಗಾ ಕೊಡಲಾರೆವು.

ಚಂದಾದಾರರು ಪತ್ರದ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬುದನ್ನು ಸಕಲರೂ ತಿಳಿಯತಕ್ಕದ್ದು.—ಎಡಿ.

ಈ ವಾರ ನಮ್ಮಲ್ಲಿಗೆ ಬಂದಿರುವ ಕೆಲವು ಬ್ರಾಂಚುಗಳನ್ನು ಸ್ಥಳ ಸಂಕೋಚದಿಂದ ಪ್ರಕಟಿಸಲು ಅನುಕೂಲವಾಗಿಲ್ಲವೆಂದು ವ್ಯಸನಪಡುತ್ತೇವೆ.

ಕರೆಸ್ಪಾಂಡೆನ್ಸ್.

ಮಲೆನಾಡು ಸ್ಕೂಲುಗಳ ವಿಚಾರ.

ಅಯ್ಯಾ,

ಈ ತೀರ್ಥಹಳ್ಳಿ ತಾಲ್ಲೋಕು ಮಲೆನಾಡು ಪ್ರದೇಶದಲ್ಲಿ ಸಕ್ಕರೆಯ ತರದ ಮಿರ್ಜಿನವರ ಜನಗಳ ಪ್ರಯೋಜನಕ್ಕಾಗಿ ನಾಲ್ಕಾರು ಕಡೆ ಹಾ ಬಾಲೆಗಳನ್ನು ಇಟ್ಟಿರುತ್ತಾರೆ. ಮಲೆನಾಡಿನವರ ಮನಸ್ಥಿತಿಯನ್ನು ಎಲ್ಲರೂ ಬಲ್ಲರು. ತಮ್ಮ ಮಕ್ಕಳನ್ನು ಸ್ಕೂಲಿಗೆ ಬಂದು ರಿಜಿಸ್ಟರಿಗೆ ಹಾಕಿ ಹೆಸರು ಬರೆಸಿ ಹೋಗುತ್ತಾರೆ. ಹುಡುಗರು ಕ್ರಮವಾಗಿ ಸ್ಕೂಲಿಗೆ ಬಾರದೆ, ಅಕ್ಷರಾಭ್ಯಾಸ ಮಾಡುತ್ತಾರೆ. ನಂತರ ಎರಡು ತಿಂಗಳು ಬಿಟ್ಟು, ಸದರಿ ಹುಡುಗರ ತಂದೆಗಳು ಬಂದು,—ಏನು, ಮೇಷ್ಟ್ರೇ, ನಮ್ಮ ಮಗನಿಗೆ ಏನು ಕಲಿಸಿದ್ದೀರಿ? ಎಂತ ಕೇಳುತ್ತಾರೆ. ಆದಕ್ಕೆ ಉಪಾಧ್ಯಾಯನು—ನಿಮ್ಮ ಮಗನು ಸ್ಕೂಲಿಗೆ ಬಂದಿಲ್ಲವೆ ಎಂತ ಹೇಳಿದ್ದನ್ನು ಕೇಳಿ,—ಏನು ಮೇಷ್ಟ್ರೇ, ನಮ್ಮ ಹುಡುಗನು ಬಂದು ಎರಡು ತಿಂಗಳಾಯಿತು. ಇನ್ನೂ ಪ್ರಸಂಗ ... ಯಲ್ಲವೋ? ನಮ್ಮ ಘಟ್ಟದ ಕೆಳಗಿನ ಐಗಳೇ ಉತ್ತಮ. ಇದೆಲ್ಲಿ ಬರವಸ್ತು? ಈಗ ನಮ್ಮ ಹುಡುಗನು ಬಂದು ಎರಡು ತಿಂಗಳಾಯಿತು. ಈ ಎಷ್ಟುವರೆಕ್ಕೆ ಬರುವದಿಲ್ಲ. ನಮ್ಮ ಹುಡುಗನ ಇಲ್ಲಿ ಬರ ಬೇಕಿಲ್ಲವೂ, ಮೇಷ್ಟ್ರೇ, ನಮ್ಮ ಹುಡುಗನ ಪಜಾ ಮಾಡಬಿಡಿ. ನಾನು ಘಟ್ಟದ ಕೆಳಗಿನ ಒಬ್ಬ ಐಗಳಿಗೆ ಕರಕೊಂಡು ಬರುತ್ತೇನೆ. ನನಗೆ ಅವನೇ ಉತ್ತಮನು. ತಿಂಗಳಿಗೆ ಎರಡೂವರೆ ರೂಪಾಯಿ ಕೊಟ್ಟು, ಅನ್ನ ಹಾಕಿದರೆ ಹುಡುಗರಿಗೆ ಬರಾಬ್ಬರ ಬರುತ್ತೆ. ನಮ್ಮ ಮನೆ ಕೆಲಸವೂ ಆಗುತ್ತೆ ಎಂತ ಹೇಳಿ ಹುಡುಗನನ್ನು ಕರಕೊಂಡು ಹೋಗುತ್ತಾನೆ. ದೇವರು ಈ ಮಲೆನಾಡಿನವರ ಮೂಢತ್ವವನ್ನು ಎಂದಿಗೆ ಹೋಗಲಾಡಿಸುತ್ತಾನೋ ಎಂದು ನಿರೀಕ್ಷಿಸುವ

ವಿದ್ಯಾಭಿಮಾನಿ.

ವಿವೇಕೋದಯವೂ ಕ್ರೈಸ್ತಮತವೂ.

ಅಯ್ಯಾ,

ಮಾರ್ಚಿ ತಿಂಗಳ ವಿವೇಕೋದಯವನ್ನು ಓದಿದವರು 'ನಿಷ್ಪಕ್ಷಪಾತಿ' ಎಂಬುವರಿಗೆ ವಿರುದ್ಧಿಸಿಕೊಳ್ಳುವುದಕ್ಕೆ ಅವಕಾಶಕೇಳಿ, ಹಲವರು ಕೆಲವು ಕಾಗದಗಳ ಹಿಂದೆ ವೃತ್ತಾಂತ ಪತ್ರಿಕೆಯಲ್ಲಿ ಪ್ರಕಟಿಸಿದ್ದ ಲೇಖನಕ್ಕೆ ಪ್ರತ್ಯುತ್ತರಕೊಡಲು ಇವರು ಬಹು ಪ್ರಯತ್ನಪಟ್ಟಿದ್ದಾರೆ. "ಕ್ರೈಸ್ತನ ಶ್ರೇಷ್ಠವಾದ ಬೋಧನೆಗಳನ್ನು ಹಿಂದೂಗಳಲ್ಲಿ ಕೆಲವರು ತಮ್ಮ ಅನುಕೂಲಕ್ಕೆ ತಕ್ಕಂತೆ ಬದಲಾಯಿಸಿರುವದರಿಂದ ಅಂತರೂಪಾಂತರವನ್ನು ಹೊಂದಿದ ಮತವು ಆಧಿಕಾರವಲ್ಲದೆ ಮತ್ತೇನು?" ಎಂದು ಬರೆದಿರುವರು. ಯಾವ ಯಾವ ಸಂದರ್ಭದಲ್ಲಿ ಕ್ರೈಸ್ತಮತವು ರೂಪಾಂತರವಾಗಿರುವದೋ ಅದನ್ನು ನಮ್ಮ ಸ್ವಮತ ವಿಮತ ಸ್ವರೂಪಾಭಿಜ್ಞರಾದ 'ನಿಷ್ಪಕ್ಷಪಾತಿ' ಯವರು ತಿಳಿಸಿದರೆ ಪ್ರಪಂಚದ ಕೋಟ್ಯಾನುಕೋಟಿ ಕ್ರೈಸ್ತರಿಗೆ ವ ಪದುಪಕಾರ ಮಾಡಿದಂತಾಗುವುದು.

ಆದು ಹಾಗಿರಲಿ, ಸ್ವಾಮಿಯವರು ವೇದಾಂತಿಗಳು ವಿಗ್ರಹಾರಾಧನೆಯನ್ನು ಪ್ರತಿ ದಿನಸವೂ ಮಾಡುತ್ತಲೇ ಇರುವರು. ರಾಮಕೃಷ್ಣಪರಮಹಂಸರೂ ಅವರ ಶಿಷ್ಯಮಂಡಲಿಯೂ ಪೂಜಿಸಿದ ಮಹಾಕಾಳಿಗೆ "ಆದಿಮಧ್ಯಾಂತ ವಿಹೀನೇ ಸ್ವಭಾವಸಿದ್ಧ ಚಿದಾನಂದರೂಪ ಮದ್ವಿತೀಯಂ" ಎಂಬ ಬಿರುದಿತ್ತೆಂದೂ ಈ ವರೆಗೆ ನಮಗೆ ಗೊತ್ತಿರಲಿಲ್ಲ. ಜಾತಿಭೇದವಿಲ್ಲದ ವೇದಾಂತಿಗಳು ಮೈಸೂರು ಸಂಸ್ಥಾನದಲ್ಲಿ ಎಷ್ಟು ಮಂದಿ ಇರುವರೋ ಅದನ್ನು ತಿಳಿಸಿದರೆ ಅವರಿಗೆ ಬಹು ಕೃತಜ್ಞನಾಗಿರುತ್ತೇನೆ. 'ನಿಷ್ಪಕ್ಷಪಾತಿ' ಯವರನ್ನು ವಿಗ್ರಹಾರಾಧಕರಲ್ಲವೇ ಸಿಯೂ, ಪಕ್ಷಪಾತಿಗಳೆಂದೂ ಬಿಕ್ಕು ಎಂದು ತಿಳಿದು, ಪಕ್ಷೀಕರಣೆಯನ್ನು ಮಾಡುವವರೆಂದಿದಾಗಿಯೂ, ... ತಿಳಿದಿರೋಣವೇ? ಅಥವಾ, ಅವರನ್ನು ವಿಚಾರಿಸುತ್ತ ನೆ ತಿಳಿಯೆಂದು ರಳಿಯೋಣವೇ?

ಸಾಗರನಿವಾಸಿ.

ತಲೆಕೆರೆ ವಿಷಯಗಳು.

ಅಯ್ಯಾ,

ತಲೆಕೆರೆಯಲ್ಲಿ ಈಗ ಒಂದು ತಿಂಗಳಿಂದ ಪ್ಲೇಗು ಇಲ್ಲದಿರುವದಿಲ್ಲ. ಈಗಿನ ಜನಗಳೆಲ್ಲಾ ಊರು ಸೇರುತ್ತಾರೆ. ಗಾಬರಿಯು ಹೋಗಲಿಕ್ಕೆ ನೀರಡು ಮನೆಸ ... ಮುಚ್ಚಿ ಹೋಗಿರುವಂತೆ ಕಾಣುತ್ತೆ. ಈ ಗ್ರಾಮದಲ್ಲಿ ನೀರಿನ ತೆರೆ ಹೇಳಲಿಕ್ಕೆ ತೀರದು. ಇದು ದೊಡ್ಡ ಗ್ರಾಮವೆಂಬ ಪದಾ ಜನಗಳಿಗೆ ... ನೀರಿನ ಪಸೆ ಬತ್ತಿಹೋಗಿ ... ಕೆರೆಯಲ್ಲಿ ... ಈ ಊರಿನ ಉತ್ತರಕ್ಕೆ ನಲ್ಲೂ ರುವ ಕೆರೆಯು ... ರೂಪಾಯಿ ಆಕಾರದಲ್ಲಿ ... ಈ ಕೆರೆಯಲ್ಲಿ ಮೂರು ತಿಂಗಳಾದರೂ ಸರಿಯಾಗಿ ನೀರಿಲ್ಲವಿಲ್ಲ. ಜನಗಳೆಲ್ಲಾ ... ಬಗೆಯುವವರು ರಂಗಾಪುರದ ಹಳ್ಳ ಒಂದು ಮೈಲಿ ಇದ್ದಾಗ್ಯೂ ... ಇನ್ನು ಒಂದೆರಡು ತಿಂಗಳು ನೀರು ಇರುತ್ತೆ. ... ದಿನ ದಿನಕ್ಕೆ ೧೫೦ ಜನಗಳ ... ನಮ್ಮ ಅವರು ಗಮನಕ್ಕೆ ತೆಗೆದುಕೊಂಡು, ... ದುರ್ಭಿಕ್ಷಕಾಲದಲ್ಲಿ ಅವರಿಗೆ ಬಹಳ ಪುಣ್ಯ ಬರುತ್ತೆ.

ನಮ್ಮ ಅಮಲ್ದಾರರು ಇಂಥಾ ತಿಂಗಳ ... ಜನರಿಗೆ ತೊಂದರೆಕೊಡದ ಹಾಗೆ ಇಲ್ಲವಿದ್ದ ... ಹೋಕದ್ದಂಗಳ ... ಬಹಳ ಜನಕ್ಕೆ ತೊಂದರೆ ... ಅವರ ಸ್ವಭಾವವನ್ನು ಪೋಲೀಸಿನವರು ತಿಳಿದುಕೊಂಡು ... ಕೊಡತಕ್ಕ ತೊಂದರೆಯಂತೂ ವಿವರಿಸಲಾಗದು. ... ಕೇಸು ಬಂದರೆ ಪೋಲೀಸಿನವರು ಹಣ ... ಕಕ್ಷಿಗಾರರು ... ಪೋಲೀಸ್ ಮಾಡಿದ್ದು ... ಬಿಡುವುದೇ ಇಲ್ಲ. ... ಪೋಲೀಸಿನವರ ಇರ ವ ಭಾಗದಲ್ಲಿ ಈ ಪೋಲೀಸ ... ನಮ್ಮ ಅಮಲ್ದಾರರು ... ಈ ಸಂಗತಿ ... ಇನ್ಸ್ಪೆಕ್ಟರ್ ಜನರಲ್ ಸಾಹೇಬರವರ ಗಮನಕ್ಕೆ ... ಬಿಗ್ಗನ್ನು ದುಗ್ಗಾಪುರದ ... ಸಕ್ಕರೆಯ ... ಕಾರಣತಿಳಿಯದು.

ಈ ಊರಲ್ಲಿ ಬಿಸಿಲಿನ ... ೧೦೦ ದಿನದಲ್ಲಿ ಉಪ್ಪಾರ ಬಸವನಹಳ್ಳಿ ... ಗ್ರಾಮದ ನಾಲ್ಕು ಮನೆ ... ಬೆಂಕಿ ಬಿದ್ದು ... ದೊಡ್ಡ ಕೆರೆ ... ಎರಡು ... ಗಳು ಸುಟ್ಟವು ... ಇರುತ್ತೆ.

ಪ್ರಜಾಹಿತಚಿಂತಕ.

ವಿದೇಶ ವರ್ತಮಾನಗಳು.

ಎಲಾರ್ಡಿ ರಾಜ್ಯದಲ್ಲಿ ಹೋದ ವರುಷ ದಾನ ... ೩,೪೩,೦೦೦ ರೂಪಾಯಿ ಇಲ್ಲ ಬಳಿದಿದೆ ಎಂದು ಪ್ರಕಟವಾಗಿದೆ.

◆◆◆◆

ಜರ್ಮನ್ ರಾಜ್ಯಕ್ಕೆ ಸೇರಿದ ಹಾಕರ್ಸ್ ... ಗಣಿಯೊಳಗೆ ... ಕೂಲಿಕಾರರು ... ವೆಂದು ವರ್ತಮಾನ ಬಂದಿದೆ.

◆◆◆◆

ಲಂಡನ್ ಪಟ್ಟಣಕ್ಕೆ ಸೇರಿದ ಬ್ಲಾಕ್ ಫ್ರಯರ್ಸ್ ... ಒಂದು ದೊಡ್ಡ ಬಂಗಲೆ ... ಉರುಳಿಕೊಂಡು ... ಜನರಿಗೆ ಗಾಯಗಳಾಗಿವೆ.

◆◆◆◆

ಪ್ರಿನ್ಸ್ ಆಫ್ ವೇಲ್ಸ್ ರವರು ಪತ್ನಿ ಪರಿವಾರ ಸಹಿತ ಅಜಿಪ್ಟ್ ದೇಶದಲ್ಲಿ ಒಂದು ... ಇದ್ದು, ಖೆಡಿವ್ ರಾಜರ ಆತಿಥ್ಯವನ್ನು ಸ್ವೀಕರಿಸಿ, ಅಲ್ಲಿಂದ ವಿಲಾಯತಿಯನ್ನು ಕುರಿತು ಪ್ರಯಾಣ ಮಾಡಿದಾರೆ.

◆◆◆◆

ರಷ್ಯಾ ರಾಜ್ಯದವರು ... ಕೋಟಿ ದ್ರವ್ಯವನ್ನು ಸಾಲ ಪಡೆಯುವಾಗಿದಾರೆ. ಈ ಪೈಕಿ ೬೦ ಕೋಟಿಯನ್ನು ಫ್ರೆಂಚ್ ಸಂಸ್ಥಾನದವರು ಕೊಡುವರೆಂದು ... ಪಾರಿಸ್ ನಗರದ ವರ್ತಕರು ... ಯುವರು.

◆◆◆◆

ಇಟಲಿ ರಾಜ್ಯದಲ್ಲಿರುವ ವಿಸೂವಿಯಸ್ ಎಂಬ ಅಗ್ನಿಪರ್ವತದಲ್ಲಿ ಈಗ ಹೆಚ್ಚಾಗಿ ಬೆಂಕಿಯೂ ಹೊಗೆಯೂ ಹೊರಕ್ಕೆ ಸುರಿಯುತ್ತಲಿರುವಂತಾಗಿದೆ. ಸುತ್ತು ಮುತ್ತಿನ ಗ್ರಾಮಗಳ ಪ್ರಜೆಗಳು ಗಾಬರಿಬಿದ್ದು ಮನೆ ಮಠಗಳನ್ನು ಬಿಟ್ಟು ಓಡಿಹೋಗುತ್ತಿದ್ದಾರೆ.

ಅಮೇರಿಕಕ್ಕೆ ಸೇರಿದ ಕೊಲೋರ್ಯಾಡೋ ಪ್ರಾಂತ್ಯದಲ್ಲಿ ಪಟ್ಟಣದ ಬಳಿ ಕಳೆದ ವಾರ ಎರಡು ರೈಲ್ ಗಾಡಿಗಳು ಒಂದು ಎದುರಾಗಿದ್ದ ಬಿಡದಿ ಅನಾಹುತವಾಯಿತು. ಗಾಡಿಗಳು ಹೊರಟುಹೋದವು. ೪೦ ಮಂದಿ ಪ್ರಯಾಣಿಕರು ಪ್ರಾಣ ಕಳೆದರು. ಈ ಸ್ಥಳ ೧೫ ಜನ ಬೆಂಕಿಯಲ್ಲಿ ಸುಟ್ಟುಹೋದರು. ಗಾಡಿ ಪೂರಾ ಗಾಯಗೊಳ್ಳವಾದವೆಂದು ತಂತೀ ವರ್ತಮಾನ ಬಂದಿದೆ.

****

ಅಮೇರಿಕಕ್ಕೆ ಸೇರಿದ ಬ್ರೂಕ್ಲಿನ್ ಪಟ್ಟಣದಲ್ಲಿ ರೈಲುಗಳು ಎದುರಾಗಿ ಬಂದು ಬಿಡದಿ ಅನಾಗುತವಾದದ್ದರಲ್ಲಿ ಜೋಸೆಫ್ ಎಂಬುವನ ಗೆಸುಮೂಳೆ ಊನವಾಯಿತು. ಈಗ ಅವನ ಸ್ವರ್ಗಕ್ಕೆ ಹೋಗಿಹೋಯಿತು. ಇದಕ್ಕಾಗಿ ಅವನು ರೈಲ್ ನವರ ಮೇಲೆ ಒಂದು ಲಕ್ಷ ರೂಪಾಯಿಗೆ ದಾವಾ ಮಾಡಿದನು. ಇದರಲ್ಲಿ ಪ್ರತಿವಾದಿ ರೈಲ್ವೆ ಕಂಪನಿಯವರು ಕೆಂಪಗೆ ಕಾಸಿದ ತಂದು ಅವನ ಕೈಯಲ್ಲಿಟ್ಟದ್ದರು ಚರ್ಮ ಸುಟ್ಟುಹೋಗಿ ಅವನಿಗೆ ನೋವಾದಷ್ಟೇ ಗೊತ್ತಾಗಲಿಲ್ಲ. ಆಗ ಕಂಪನಿಯವರಿಗೆ ನಿಜವಾಗಿ ತಮ್ಮಿಂದ ಇಂಥಾ ಇಂದ್ರಿಯ ಹೀನವಾಯಿತಪ್ಪಿ, ಅವನು ಕೇಳಿದ ಒಂದು ಲಕ್ಷ ರೂಪಾಯಿಯನ್ನೂ ತಂದು ಕೊಟ್ಟರು.

****

ರಷ್ಯಾ ಜಪಾನ್ ಯುದ್ಧದಲ್ಲಿ ರಷ್ಯಾದವರು ತಮ್ಮ ಕಡೆ ನಷ್ಟ ಸೈನಿಕರ ಲೆಕ್ಕಗಳನ್ನು ಈಗ ಪ್ರಕಟಿಸಿದ್ದಾರೆ. ಯುದ್ಧಾರಂಭದಿಂದ ೧೯೦೫ನೆ ಸೆಪ್ಟಂಬರ್ ೧೫ರ ವರೆಗೆ ರಷ್ಯಾ ಸೈನಿಕರಲ್ಲಿ ೫೬೦೦ ಜನರು ಗಾಯಪಟ್ಟು ಕಾಯಿಲೆಬಿದ್ದು ಆಸ್ಪತ್ರೆಗಳ ಯುದ್ಧದಲ್ಲಿ ೨೩,೦೦೦ ಮಂದಿ ಸತ್ತರು, ೧,೨೧,೪೭೬ ಗಾಯಪಟ್ಟರು, ೩೯,೨೬೮ ಸೈನಿಕರು ಸಿಕ್ಕಲಿಲ್ಲವೆಂದು ಮುಕ್ಡೆನ್‌ ಲಿಯಾವೋಯಾಂಗ್ ಯುದ್ಧದಲ್ಲಿ ರಷ್ಯಾದವರ ಕಡೆ ೧,೫೬,೦೦೦ ಜನ, ಮುಕ್ಡೆನ್ ಯುದ್ಧದಲ್ಲಿ ೧,೨೯,೦೦೦ ಜನರೂ, ಮುಕ್ಡೆನ್ ಯುದ್ಧದಲ್ಲಿ ೩,೩೬,೪೦೦ ಸೈನಿಕರೂ ನಿಂತು ಜಪಾನಿನವರಿಗೆ ಯುದ್ಧ ಮಾಡಿ ಆಂತು ೬,೫೧,೨೦೦ ಸೈನಿಕರು ಯುದ್ಧ ಮಾಡಿದ್ದರಲ್ಲಿ ಇವರಲ್ಲಿ ೧೦೦ ಜನರಿಗೆ ೨೨ ಮಂದಿಯಂತೆ ಕೊಲೆಯಾಗಿದ್ದಾರೆ ಹೀಗಲಾಗಿ ಹಿಂದೆ ಯಾವ ಯುದ್ಧದಲ್ಲೂ ಇಷ್ಟುಮಟ್ಟಿಗೆ ಆಗಲಿಲ್ಲವೆಂದು ತಿಳಿಯುವುದು.

ಪ್ರಕಟನೆಗಳು.

ಪ್ರಿಂಟಿನ ಯಂತ್ರ ಕ್ರಯಕ್ಕೆ ಬಂದಿದೆ.

41-7

ಡಬಲ್ ಡೆಮ್ಮಿ ಸೈಜು. ಬಹು ಜಾಗ್ರತೆಯಾಗಿ ನೋಡತಕ್ಕದ್ದು; ಉರುಳೆಗಳು, ಫೋಸುಗಳು ಚಕ್ರ ಎಲ್ಲಾ ಸೇರಿ ಕೊಡಲಾಗುತ್ತೆ. ಇವಕ್ಕೆ ಒಂದೆರಡು ಸ್ವಲ್ಪ ರಿಪೇರಿ ಆಗಬೇಕಾಗಿರುವುವು. ಅಗ್ಗವಾಗಿ ಕೊಡುತ್ತೇವೆ. ಯಂತ್ರವನ್ನು ಖುದ್ದಾಗಿ ಬಂದು ನೋಡಬಹುದು. ಈ ವಿಳಾಸಕ್ಕೆ ಬರೆದು ಕೇಳಿ.—

ದಿ ಸೂಪರಿಂಟೆಂಡೆಂಟ್, ವೆಸ್ಲಿಯನ್ ಮಿಷನ್ ಪ್ರೆಸ್,

ಮೈಸೂರು.

ಬೆಂಗಳೂರು ಚಿಕ್ಕಬಳ್ಳಾಪುರ ಲೈಟ್ ರೈಲ್ವೆ ಕಂಪೆನಿ ಲಿಮಿಟೆಡ್ ನಿಯಮಕ ಮೂಲಧನ.

46-7

ಷೇರು ಒಂದಕ್ಕೆ ೨೫ ರೂಪಾಯಿಗಳ ಬೆಲೆಯುಳ್ಳ ೪೮ ಸಾವಿರ ಷೇರುಗಳಿಂದಾಗುವ ೧೨ ಲಕ್ಷ ರೂಪಾಯಿಗಳು ಈ ಷೇರು ಮೊಬಲಗಿನ ಷೇರು ಒಂದಕ್ಕೆ ಒಂದು ರೂಪಾಯಿಯಂತೆ ಅಪ್ಲಿಕೇಷನ್ ೧೨ ಕಿಸ್ತುಗಳಲ್ಲಿ ಬಾಬತು ಮಾಡತಕ್ಕದ್ದು ಈ ಲೈನಿನ ಪ್ರಕಟಿಸಲ್ಪಟ್ಟಿದೆ

ಶ್ರೀಮನ್ ಮೈಸೂರು ಮಹಾರಾಜರವರ ಸರ್ಕಾರದವರು ಈ ಕಂಪನಿ ಮೂಲಧನಕ್ಕೆ ಶೇಕಡ ವರುಷ ೧ಕ್ಕೆ ೪ ರೂಪಾಯಿಯಂತೆ ಕೊಡಲು ತಾವು ಜಾಮೀನಾಗಿರಲು ಅನುಮತಿಯನ್ನು ಕಂಪೆನಿಯ ಮೂಲಕ ತಿಳಿಸಿರುತ್ತಾರೆ.

ಈ ಕಂಪನಿಯ ಷೇರುಗಳನ್ನು ಅಪೇಕ್ಷಿಸತಕ್ಕಂಥಾವರು ಈ ಕೆಳಗೆ ಸಹಿ ಮಾಡಿರುವವರಿಗೆ ದರಖಾಸ್ತು ಮಾಡಿಕೊಳ್ಳಬೇಕು.

ಈ ಕಂಪೆನಿಯ ಷೇರುಗಳನ್ನು ಕಮೀಷನಿಗೆ ಸಬ್ ಏಜಂಟರಾಗಿ ಮಾರಲು ಅಪೇಕ್ಷೆಯುಳ್ಳ ಖಾತರಿಯಾದ ಜನರು ಸದರಿ ಯವರ ಬರೆದುಕೊಳ್ಳಬಹುದು.

ಷೇರು ಮೊಬಲಗುಗಳನ್ನು ಜಮಾ ಪಿಸಿ, ಬೆಂಗಳೂರಿನಲ್ಲಿರುವ ಮೈಸೂರು ಬ್ಯಾಂಕಿಗೆ, ಚೀಫ್ ಏಜಂಟರಿಗೆ ಅಥವಾ ಇವರಿಂದ ಹಣ ವಸೂಲು ಮಾಡುವಂತೆ ಲಿಖಿತ ಮೂಲಕವಾಗಿ ಅಧಿಕಾರ ಪಡೆದ ಸಬ್ ಏಜಂಟರಿಗೆ ಪಾವತಿ ಮಾಡಬೇಕು.

ಷೇರುಗಳಿಗೆ ದರಖಾಸ್ತು ಮಾಡುವವರು ಅಪ್ಲಿಕೇಷನ್‌ಗಳ ಜೊತೆ ಷೇರು ಒಂದಕ್ಕೆ ಒಂದು ರೂಪಾಯಿಯಂತೆ ಅಪ್ಲಿಕೇಷನ್ ಫಿ ರವಾನಿಸಬೇಕು. ಇದು ಷೇರು ಮೊಬಲಗಿನಲ್ಲಿ ಉತ್ತಾರ ಹಾಕಲ್ಪಡುವದು.

(ಸಹಿ) ಬಿ. ವಿ. ರಾಮಸ್ವಾಮಿ ಶೆಟ್ಟಿ, ಬಿ. ಎ,

ಅಡ್ವೊಕೇಟ್, ಮತ್ತು ಬೆಂಗಳೂರು ಚಿಕ್ಕಬಳ್ಳಾಪುರ

ಲೈಟ್ ರೈಲ್ವೆ ಕಂಪೆನಿಯ ಚೀಫ್ ಏಜಂಟ್,

ನಗರ್ತಪೇಟೆ, ಬೆಂಗಳೂರು ಸಿಟಿ.

ಸೀಮೆ ವಿಲಾಯತಿಯಿಂದ ಯಾವ ಸಾಮಾನುಗಳನ್ನಾದರೂ ತರಿಸಿಕೊಳ್ಳಬೇಕಾಗಿದ್ದರೆ

19-13

ಬ್ರೈಡ್ ಮತ್ತು ಕಾಸ್ಟೆಲೆಂಡ್,

೬೯—೭೪, ಸಿಟಿ ರೋಡ್, ಲಂಡನ್, ಇ. ಸಿ.

ಎಂಬೀ ವಿಳಾಸಕ್ಕೆ ಬರೆ ಕಳುಹಿಸಿ, ಕಾಗದ ಬರೆಯಿರಿ ಈ ಕಂಪನಿಯವರು ಪೇಟೆಂಟ್ ಔಷಧಿಗಳನ್ನೂ, ಅಚ್ಚುಗಳನ್ನು (ಇಕ್ಕೊಳ ಕೊಡುವಂಥಾ, ಯಂತ್ರ)ಗಳಿಂದಲೇ ತಯಾರಾದಂಥಾ ಆಹಾರಗಳನ್ನೂ, ಇನ್ನೂ ನಾನಾತರದ ಪದಾರ್ಥಗಳನ್ನೂ ಇಟ್ಟು ಬಿಕರಿಮಾಡುತ್ತಾರೆ. ಅವರು ಬಹು ವಿಶೇಷವಾದ ಗಮನಕೊಟ್ಟು ಸಾಧ್ಯವಿದ್ದಷ್ಟೂ ಅಗ್ಗವಾಗಿ, ಬೇಕಾದ ಸಾಮಾನುಗಳನ್ನೇ ಆರಿಸಿ, ಮರುಟಪ್ಪಾಲಿಗೇನೇ ಕಳುಹಿಸಿಕೊಡುವರು.

ನೋಟೀಸು.

62-3

ಮೈಸೂರು ಚಾಮರಾಜ ಮೊಹಲ್ಲಾದಲ್ಲಿರುವ ಕಂಚುಗಾರ ಈರಮ್ಮನು ಸಮಸ್ತ ಜನಗಳಿಗೂ ತಿಳಿಯಪಡಿಸುವದೇನೆಂದರೆ.—

ಮೃತಪಟ್ಟ ನನ್ನ ಗಂಡ ಚಿಕ್ಕ ಅಲ್ಲೈಯ್ಯ ಈತನ ಅಣ್ಣ ದೊಡ್ಡ ಅಲ್ಲೈಯ್ಯ ಎಂಬುವರಿಬ್ಬರು ಸಹೋದರರಾಗಬೇಕು ನನ್ನ ಭಾವ ದೊಡ್ಡ ಅಲ್ಲೈಯ್ಯನೆಂಬುವರಿಗೆ ಹೆಂಡತಿ ಈರಮ್ಮ ಉರಫ್ ಅಮ್ಮಾಜಮ್ಮ ೧೪ ವರುಷದ ಒಬ್ಬ ಹೆಣ್ಣುಮಗಳು ನನಗೆ ಹತ್ತು ವರುಷದ ಕಾಮೈಯ್ಯನೆಂಬ ಒಬ್ಬ ಗಂಡು ಮಗನು ಸಹಾ ನಾವು ನಾಲ್ಕು ಜನಗಳಿರುತ್ತೇವೆ ಈ ನಮ್ಮ ಉಭಯರ ಆಸ್ತಿಗಳಿಗೂ ಹೆಣ್ಣುಮಗಳ ಪೋಷಣೆ ವಗೈರೆ ನನ್ನ ಭಾವನ ಹೆಂಡತಿ ಈರಮ್ಮ ಉರಫ್ ಅಮ್ಮಾಜಮ್ಮನ ಅನಂತರ ನನ್ನ ಮತ್ತು ನನ್ನ ಮಗ ಕಾಮೈಯ್ಯನಿಗೆ ಸೇರಿದ್ದಾಗಿದೆ. ಸದರಿ ಈರಮ್ಮ ಉರಫ್ ಅಮ್ಮಾಜಮ್ಮನೆಂಬುವರಿಗೆ ಜನಗಳು ದುರ್ಬೋಧನೆ ಮಾಡಿ ಅವರಲ್ಲಿರತಕ್ಕ ಬಂಗಾರದ ನಗಗಳು ನಗದು ಮೊಬಲಗು ಚಾಮರಾಜ ಮೊಹಲ್ಲಾದಲ್ಲಿ ಅವರು ವಾಸವಾಗಿರತಕ್ಕ ನಂಬರ್ ೪೧೬—೪೧೭ ನೆ ಹೆಂಚಿನ ಮನೆ ಖಾಲೀ ಜಾಗ ವಗೈರೆ ಚರ ಮತ್ತು ಸ್ಥಿರ ಸ್ವತ್ತುಗಳನ್ನು ಪರಾಧೀನ ಮಾಡುವ ಹಾಗೆ ವರ್ತಮಾನ ಕೇಳುತ್ತೇನೆ. ಹಾಗೆ ಯಾರಾದರೂ ಯಾವವಿಧ ಮಾರ್ಗದಿಂದಾಗಲಿ ತಮ್ಮ ಅಧೀನ ಪಡಿಸಿಕೊಂಡಲ್ಲಿ ತೋದರೆ ಪಡಬೇಕಾಗುತ್ತದೆ ಇದರ ವಿಷಯ ನೇರು ಬಾಧ್ಯತೆಯು ನನ್ನ ಮತ್ತು ನನ್ನ ಮೈನರ್ ಮಗ ಕಾಮೈಯ್ಯನದಾಗಿರುತ್ತೆ, ತಿಳಿಯುವದು.

ಈರಮ್ಮನ ಗುರ್ತಿನ ರುಜು.

ಜರ್ಮನ್ ಸಿಲ್ವರ್ ಪುದುಚೇರಿ ಬೋಲ್ ಕಾಲು ಗೊಲುಸು.

53-5

ಜರ್ಮನ್ ಸಿಲ್ವರ್ ಕಂಬಿ ಮತ್ತು ತಗಡುಗಳನ್ನು ಸ್ಪೆಷಲ್ ಆರ್ಡರು ಕೊಟ್ಟು ಆಸ್ಟ್ರಿಯಾ ದೇಶದಿಂದ ತರಿಸಿ, ಅವುಗಳಿಂದ ಸಕಲ ಆಭರಣಗಳನ್ನೂ ತಯಾರಿಸುತ್ತಲಿದ್ದೇವೆ. ಇವುಗಳ ಬೆಳ್ಳಿ ರಂಗು ಎಷ್ಟು ವರುಷಗಳಾದರೂ ಕೆಡಲಾರದು

ಅನೇಕರು ಸುಲಭ ಕ್ರಯದಲ್ಲಿ ತಯಾರಿಸಿ ಕಳುಹಿಸಬೇಕೆಂದು ಕೋರಿದ್ದರಿಂದಲೂ ಸಕಲರಿಗೂ ಉಪಯೋಗವಾಗುವ ಹಾಗೆ ಇರಬೇಕೆಂಬುವ ಅಭಿಪ್ರಾಯದಿಂದಲೂ ಕೆಳಗೆ ನಮೂದಿಸಿರುವ ಮೇರೆಗೆ ಈ ಗೊಲಸುಗಳಲ್ಲಿ ಮೂರು ತರಹಗಳಾಗಿ ತಯಾರಿಸಲ್ಪಟ್ಟಿರುತ್ತವೆ. ಇದು ಬಡವರಿಗೂ ಭಾಗ್ಯವಂತರಿಗೂ ಸಹಾ ಉಪಯೋಗವಾಗುವ ಹಾಗೆ ಸುಲಭ ಕ್ರಯವನ್ನು ಇಟ್ಟು ಈ ಕೆಳಗೆ ನಮೂದಿಸಿ ಇರುತ್ತೇವೆ ಈಗ ಎಷ್ಟು ವಿಕ್ರಯಕ್ಕೆ ನಮ್ಮಲ್ಲಿ ಸಿದ್ಧವಾಗಿದೆ



೧ ನೇ ನಂಬರು ಪುದುಚೇರಿ ಗೊಲಸು—ಇವುಗಳ ಕೇಲು ಬೆಳ್ಳಿಯ ಗೊಲಸಿನ ಕೆಲಸಕ್ಕೆ ಸಮಾನವಾಗಿ ಸುಂದರ ಮೊದಲಾದವುಗಳಿಲ್ಲನೆ ನೋಟಕ್ಕೆ ಅಚ್ಚ ಬೆಳ್ಳಿಯ ಗೊಲಸಿನಂತೆ ತಯಾರಿಸಲ್ಪಟ್ಟಿರುತ್ತೆ.

	ರೂ.
ದೊಡ್ಡವರಿಗೆ	೨—೨—೦
ಚಿಕ್ಕವರಿಗೆ	೧—೧೪—೦
ಮಕ್ಕಳಿಗೆ	೧—೯—೦

೨ ನೇ ನಂಬರು ಪುದುಚೇರಿ ಗೊಲಸು—ಮೇಲು ಭಾಗದಲ್ಲಿ ಕಳೆಯುವ ಹಾಗೆ ಕೇಲುಗಳಿಂದಲೂ ಮದು ಬೋತಾದ ತಿರುಪಿನಿಂದಲೂ ತಯಾರಿಸಲ್ಪಟ್ಟಿರುತ್ತೆ.

	ದೊಡ್ಡವರಿಗೆ	ಚಿಕ್ಕವರಿಗೆ.	ಮಕ್ಕಳಿಗೆ.
ರೂ.	೨—೦—೦	೧—೧೨—೦	೧—೮—೦

೩ನೆ ನಂಬರು ಪುದುಚೇರಿ ಗೊಲಸು—ಇದು ಸಾಧಾರಣ ಕೇಲಿನಿಂದಲೂ ಮೇಲು ಭಾಗ ಹಸನಾದ ನಲಿಗೆಗಳಿಂದಲೂ ತಯಾರಿಸಿದೆ

	ದೊಡ್ಡವರಿಗೆ.	ಚಿಕ್ಕವರಿಗೆ.	ಮಕ್ಕಳಿಗೆ
ರೂ.	೧—೦—೦	೦—೧೪—೦	೦—೧೨—೦

ವಿಳಾಸ:—ಮ್ಯಾನೇಜರ್, ಜರ್ಮನ್ ಸಿಲ್ವರ್ ಬ್ಯಾಂಗಲ್ ಡಿಪೋ, ಸಾಹುಕಾರ್ ಪೇಟೆ, ಮದ್ರಾಸು.

ರಬ್ಬರ್ ಸ್ಟಾಂಪುಗಳು.

43 8

ನಮ್ಮ ಕಂಪನಿಯಲ್ಲಿ ತಯಾರಾಗತಕ್ಕ ಇಂಗ್ಲಿಷ್ ಮೋಸ್ತರ್ ರಬ್ಬರ್ ಸ್ಟಾಂಪುಗಳಿಗೆ ದರಖಾಸ್ತು ಕಳುಹಿಸತಕ್ಕವರಿಗೆ ಅರ್ಧ ಕ್ರಯಕ್ಕೆ ತಯಾರಿಸಿ ಕಳುಹಿಸುತ್ತೇವೆ.

ಚೂಪಾಗಿ, ದುಂಡು, ಚಚ್ಚೌಕ, ಯಾವ ಆಕಾರವಾದರೂ ಅದರಲ್ಲಿ ಬೇಕಾದ ಅಕ್ಷರಗಳನ್ನು ಹಾಕಿ, ಸುಂದರವಾದ ರಬ್ಬರ್ ಸ್ಟಾಂಪು ೧, ಇಂಕಿ ಸೀಸೆ ೧, ರಬ್ಬರ್ ಸ್ಟಾಂಪು ಇರಿಸುವ ಪೆಟ್ಟಿಗೆ ೧, ಬ್ರಷ್ ೧, ಪ್ಯಾಡ್ ೧, ಇವುಗಳ ಸಹಿತ ಕ್ರಯ ರೂ. ೧—೮—೦, ಪೋಸ್ಟೇಜು ೩ ಆಣೆ.

ವಿಳಾಸ:—ಮ್ಯಾನೇಜರ್, ರಬ್ಬರ್ ಸ್ಟಾಂಪ್ ಮ್ಯಾನುಫ್ಯಾಕ್ಚರಿಂಗ್ ಕಂಪನಿ, ಪಾರ್ಕ್ ಟೌನ್, ಮದ್ರಾಸ್.

ಇದಕ್ಕೆ ಸಮಾನವಾದ ಪುಸ್ತಕ ಉಂಟೋ?

50-4

ಕನ್ನಡ ಭಾಷೆಯಲ್ಲಿ ಇದುವರೆವಿಗೂ ಇಂಥಾ ಸೊಗಸಾದ ಪುಸ್ತಕವು ಪ್ರಚುರವಾಗಲಿಲ್ಲ. ಸ್ವಲ್ಪ ನೋಡಿ.

“ಹಿಂದೂದೇಶಪ್ರದಕ್ಷಿಣ”

ಎಂದು ಕರೆಯಲ್ಪಡುವ ಈ ನೂತನ ಪುಸ್ತಕದಲ್ಲಿ ಸುಮಾರು ತೊಂಭತ್ತು ಉತ್ಕೃಷ್ಟವಾದ ಚಿತ್ರಗಳು ಅಡಗಿವೆ ಹಣವನ್ನು ಮಾಡಿ ಹಿಂದೂದೇಶವನ್ನೆಲ್ಲಾ ನೋಡುವದಕ್ಕೆ ಬದಲಾಗಿ ಈ ಪುಸ್ತಕವನ್ನು ಕೊಂಡು ಓದಿದರೆ ಎಲ್ಲಾ ಸ್ಥಳಗಳೂ, ಜನರ ಸ್ಥಿತಿಗತಿಗಳೂ ಬಹು ಪರಿಷ್ಕಾರವಾಗಿ ಕಂಡುಬರುವವು. ಇದರಲ್ಲಿರುವ ಚಿತ್ರಗಳನ್ನು ಸ್ವಲ್ಪ ನೋಡಿ. ಆಗ್ರಾಪಟ್ಟಣದ ಬಳಿಯಲ್ಲಿರುವ ಜಗತ್ಪ್ರಸಿದ್ಧವಾದ ತಾಜ್‌ಮಹಲ್, ಬನಾರಸ್ ನಗರದ ಗೋಡಿ, ಗಂಗಾನದಿ, ಕಲ್ಕತ್ತಾನಗರ, ಕಲ್ಕತ್ತಾ ಹೈಕೋರ್ಟು, ಕಾಳಿಕಾದೇವತೆ, ಚಂದ್ರನಗರ, ಬಂಗಾಳಿಯರ ಮನೆಗಳು, ಜಗನ್ನಾಥಸ್ವಾಮಿ, ಭುವನೇಶ್ವರವೆಂಬ ದೇವಸ್ಥಾನ, ಜಗನ್ನಾಥದ ರಥೋತ್ಸವ, ಕನರಾಕ್ ದೇವಸ್ಥಾನ, ಏವರೆಸ್ಟ್ ಶಿಖರ, ಬೃಂದಾವನದ ಬೀದಿ, ಬೃಂದಾವನದ ದೇವಸ್ಥಾನಗಳು, ಪಂಜಾಬಿಗಳು ಅಂಬಿಗರು ದೋಣಿಯನ್ನು ಎಳೆದುಕೊಂಡು ಹೋಗುವದು, ಗಯಾದಲ್ಲಿರುವ ಬುದ್ಧನ ದೇವಸ್ಥಾನ, ಔರಂಗಜೇಬನು ಕಟ್ಟಿಸಿದ ಮಸೀದಿ ಕಾಶೀ(ಪುಣ್ಯಕ್ಷೇತ್ರ)ದಲ್ಲಿರುವ ದಶಾಶ್ವಮೇಧ ಘಟ್ಟ, ಹಿಂದುಗಳಿಗೆ ಶವ ದಹನವು, ಕಾಶೀಕ್ಷೇತ್ರದ ದೇವಸ್ಥಾನಗಳು, ಅಲಹಾಬಾದ್‌ನಗರ ಮತ್ತು ಅದರ ಕೋಟೆ, ಅಲಹಾಬಾದ್‌ನಲ್ಲಿರುವ ಖುಸ್ರುಬಾಗ್ ಅರಮನೆ, ಯಮುನಾನದಿಯಲ್ಲಿ ಯಾತ್ರಿಕರು ಮುಳುಗುವದು, ಕಾನ್‌ಪುರದಲ್ಲಿರುವ ಶಿಲಾಶಾಸನ, ಕಾನ್‌ಪುರದ ಹತ್ತಿರ ಗಂಗಾನದಿಯ ಮೇಲೆ ಕಟ್ಟಿರುವ ಸೇತುವೆ, ಲಕ್ನೋನಗರದ ರೆಸಿಡೆನ್ಸಿ ಬಂಗಲೆ, ಲಕ್ನೋ ಪಟ್ಟಣದ ಬಾಗಿಲು, ಸರ್ ಹೆನ್ರಿ ಲಾರೆನ್ಸ್‌ನ ಸ್ಮಾರಕ, ಗೋಮತಿನದಿಯ ಮೇಲಿರುವ ಅರಮನೆ, ಸ್ನಾನದಲ್ಲಿ ಜನರ ಸ್ಥಿತಿ, ಹರಿದ್ವಾರಘಟ್ಟ, ಗಂಗೋತ್ರಿ ದೇವಸ್ಥಾನ, ಹಿಮಾಲಯಪರ್ವತಗಳ ಮೇಲಿರುವ ಪಟ್ಟಣ, ಹಿಮಪ್ರವಾಹಗಳು, ಆಗ್ರಾಪಟ್ಟಣದ ಕೋಟೆ, ಯಮುನಾನದಿಯು, ದೂರದಲ್ಲಿ ತೋರುತ್ತಿರುವ ತಾಜ್‌ಮಹಲ್ ಗೋರಿಯು, ತಾಜ್‌ಮಹಲಿನ ಕಲ್ಲಿನಲ್ಲಿ ಕೆತ್ತಿರುವ ಫಲಕ, ಅಕ್ಬರನ ಅರಮನೆ, ಆಗ್ರಾಪಟ್ಟಣದ ಮುತ್ತಿನ ಮಸೀದಿ, ಫತ್ತೆಪುರ್ ಸಿಕ್ರಿಯಲ್ಲಿರುವ ಪಾಂಚ್‌ಮಹಲ್ ಅರಮನೆ, ರಾಜಪುತ್ರರು, ಭರತಪುರದ ಕೋಟೆ, ಅಲ್ವರಿನಲ್ಲಿ ಮಹಾರಾಜಭಕ್ತಾವರ್‌ಸಿಂಗರ ಗೋರಿ, ಅಲೆಕ್ಸಾಂಡರನು ಪೋರಸನೂ, ದೆಹಲಿ ನಗರದ ದೊಡ್ಡ ಮಸೀದಿ, ಪ್ರಾಚೀನ ದೆಹಲಿಯ ಬಾಗಿಲು, ರಾಜದೇವನು ಸ್ಥಾಪಿಸಿದ ಕಬ್ಬಿಣದ ಸ್ತಂಭ, ನಾದಿರ್‌ಷಹನು ಡೆಲ್ಲಿನಗರದಲ್ಲಿ ಪ್ರಜಾಸಂಹಾರವನ್ನು ನೋಡುತ್ತಿರುವದು ದೆಹಲಿಯ ಬಳಿಯಲ್ಲಿರುವ ಕುತುಬ್‌ಮಿನಾರ್, ಟಿಂಡ್ಬಟ್ ಕವೆಂಬ ಟಿಬೆಟ್ ದೇಶಕ್ಕೆ ಹೋಗುವ ದಾರಿ, ಸಿಮ್ಲಾ, ಅಮೃತಸರದ ಸುವರ್ಣಾಲಯ ಲಾಹೋರಿನಲ್ಲಿರುವ ರಣಜಿತಸಿಂಗನ ಗೋರಿ, ಜಾಹೋರ್ ಪಟ್ಟಣ, ಇವೇ ಮುಂತಾದ ಅನೇಕ ರಮಣೀಯವಾದ ಸ್ಥಳಗಳ ಚಿತ್ರಗಳು ಈ ಪುಸ್ತಕದಲ್ಲಿ ಅಡಗಿವೆ. ಅವುಗಳನ್ನೆಲ್ಲಾ ಇಲ್ಲಿ ವಿವರಿಸುವದಕ್ಕೆ ಸ್ಥಳ ಸಾಲದು

ಪ್ರತಿಯೊಂದು ಅಂಶದ ವಿವರಣೆಯೂ ಬಹು ಪರಿಷ್ಕಾರವಾಗಿರುತ್ತದೆ. ದಕ್ಷಿಣ ದೇಶದಲ್ಲಿರುವ ಅನೇಕ ಪ್ರಸಿದ್ಧವಾದ ಸ್ಥಳಗಳ ಚಿತ್ರಗಳೂ, ಅವುಗಳ ವಿವರಣೆಗಳೂ ಇದರಲ್ಲಿವೆ. ಪುಸ್ತಕವು ಹನ್ನೊಂದು ಅಂಗುಲ ಉದ್ದವಾಗಿಯೂ ಒಂಬತ್ತು ಅಂಗುಲ ಅಗಲವಾಗಿಯೂ ಇರುತ್ತದೆ ಪುಸ್ತಕವು ಭಾರಿಯದಾಗಿದೆ ಇಂಥಾ ಪುಸ್ತಕವನ್ನು ಹೊರಡಿಸುವದಕ್ಕೆ ಬಹಳ ಸಮಯವನ್ನೂ ಹಣವನ್ನೂ ವ್ಯಯ ಮಾಡಿರುತ್ತೇವೆ ಪುಸ್ತಕದ ಅಚ್ಚು ಮತ್ತು ಬೈಂಡು ಸುಂದರವಾಗಿರುಗಿವೆ ಇದರ ಕ್ರಯ ಎಂಟೇ ಆಣೆ ವಿ. ಪಿ. ಪಿ. ಮೂಲಕ ಖರ್ಚು ಅನೇಕ ಆಣೆಗಳಾಗುವವು ಪುಸ್ತಕವು ಜಾಗ್ರತೆಯಲ್ಲಿ ಮಾರಾಟವಾಗುತ್ತಿರುವುದರಿಂದ ತಾವುಗಳೆಲ್ಲರೂ ಕೆಳಗೆ ಕಂಡ ವಿಳಾಸದಾರರಿಗೆ ಬೇಗ ಬರೆದು ತರಿಸಿಕೊಳ್ಳಬೇಕು.

ಮ್ಯಾನೇಜರ್,

ಸಿ. ಎಲ್. ಎಸ್. ಬುಕ್ ಡಿಪೋ,

ಮೈಸೂರು.

ಮೈಸೂರು ಸಿಟಿ ಮ್ಯುನಿಸಿಪಾಲಿಟಿ ಇಸ್ತಿಹಾರು

ತಾರೀಖು ೫ನೇ ಮಾಹೆ ಏಪ್ರಿಲ್, ೧೯೦೬.

೧೯೦೬ನೇ ಇಸವಿ ಜುಲೈ ಮಾಹೆ ತಾರೀಖು ೧ರ ಲಾಗಾಯತು ೧೯೦೭ನೆ ಇಸವಿ ಜೂನ್ ಮಾಹೆ ತಾರೀಖು ೩೦ರ ವರೆಗೆ ಈ [illegible] ಎ ಷೆಡ್ಯೂಲಿನಲ್ಲಿ [illegible] ಮೈಸೂರು ಸಿಟಿಗೆ ಸೇರಿದ ತವಾಂ ಟೋಲುಗೇಟುಗಳ ಮುಖಾಂತ್ರ ಸಿಟಿ ಒಳಕ್ಕೆ ಬರುವ ಗಾಡಿಗಳ [illegible] ಗಳು ವಗೈರೆಗಳ ಮೇಲೆ ಬಿ ಷೆಡ್ಯೂಲಿನಲ್ಲಿ ನಮೂದಿಸಿರುವ ಪ್ರಕಾರ, ಸಿಟಿ ಮ್ಯುನಿಸಿಪಲ್ ರೆಗ್ಯುಲೇಷನ್ [illegible] ನೆ ಸೆಕ್ಷನ್‌ಗಳಲ್ಲಿ ನಮೂದಿಸಿರುವ ಷರತ್ತುಗಳಿಗೆ ಒಳಪಡಿಸಿ ಪ್ರತಿ [illegible] ಟೋಲುಗೇಟಿನಲ್ಲಿಯಾಗಲಿ ಅಥವಾ ವರೋಬಸ್ತು ಗೇಟುಗಳಲ್ಲಿಯಾಗಲಿ, ಟೋಲು ವಸೂಲು ಮಾಡುವ ಬಾಬತ್ತು ೧೯೦೬ನೆ ಇಸವಿ ಮೇ ಮಾಹೆ ತಾರೀಖು ೧೯ನೇ ಮಧ್ಯಾಹ್ನ ೧ ಘಂಟೆಯ ಲಾಗಾಯತು [illegible] ಯವರ ಮೆಮೋರಿಯಲ್ ಹಾಲಿನಲ್ಲಿ ಪ್ರೆಸಿಡೆಂಟರವರಿಂದ ಯಾ ಅವರಿಂದ ಸ್ಪೆಷಲ್ಲಾಗಿ ನೇಮಿಸಲ್ಪಟ್ಟ ಇತರ ಆಫೀಸರವರಿಂದ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ.

೨ ಹರಾಜಿನಲ್ಲಿ ಬಾಬತ್ತು ಪಡೆಯುವ ಕಂಟ್ರಾಕ್ಟರು ಬಿ ಷೆಡ್ಯೂಲಿನಲ್ಲಿ ನಮೂದಿಸಿರುವ ರೇಟಿನಂತೆಯೇ ಗೇಟುಗಳ ಮುಖಾಂತರ ಸಿಟಿ ಒಳಕ್ಕೆ ಬರುವ [illegible] ಗಳ ಮೇಲೆ ಟೋಲು ವಸೂಲ್ಮಾಡಬೇಕು. ಹೆಚ್ಚು ರೇಟನ್ನು ವಸೂಲ್ಮಾಡಕೂಡದು [illegible] ಪ್ರೆಸಿಡೆಂಟರವರಿಂದ ವಿಧಾಯಕ [illegible] ಪ್ರಕಾರದಲ್ಲಿ ಕ್ರಮವಾಗಿ ಸಾಲು ಮಾಹೆ ತಾರೀಖು [illegible] ಟೋಲು ವಸೂಲಿ ಮಾಡತಕ್ಕ ಆಸಾಮಿಗಳಿಗೆ ರಶೀದಿ ಕೊಡಬೇಕು.

೩ ಎಲ್ಲಾ ಪರಿಸ್ಥಿತಿಗಳಲ್ಲಿ ದರಖಾಸ್ತು ದಾರರನ್ನೇ ಆಗಲಿ ಅಥವಾ ಮತ್ಯಾವರನ್ನೇ ಆಗಲಿ ಮಂಜೂರು ಮಾಡುವ ಅಧಿಕಾರವು ಪ್ರೆಸಿಡೆಂಟರವರಲ್ಲಿರುತ್ತದೆ.

೪ ಪ್ರತಿ ೧೯೦೬ [illegible] ತಾರೀಖು ಒಳಗಾಗಿ ಹಿಂದಿನ ಮಾಹೆಯ ಬಾಬತ್ತು ಮೊಬಲಗನ್ನು ಪಾವತಿಮಾಡಬೇಕು. ಹರಾಜು [illegible] ಬಾಬತ್ತು ಪಡೆಯತಕ್ಕ ಕಂಟ್ರಾಕ್ಟರು ಎರಡು ಮಾಹೆಗಳ ಬಾಬ್ತಿಗೆ ಸಮವಾದ ಮೊಬಲಗನ್ನು ಡಿಪಾಜಿಟ್ ಬಗ್ಗೆ ಹಾಜರ್ಮಾಡಬೇಕು. ಷರತ್ತುಗಳ ಪ್ರಕಾರ ಕಂಟ್ರಾಕ್ಟು ನಡೆದರೆ, ಡಿಪಾಜಿಟ್ಟಿನಲ್ಲಿರುವ ಮೊಬಲಗನ್ನು ಆಖೈರು ಎರಡು ಮಾಹೆಗಳ ಬಾಬ್ತು ಬಗ್ಗೆ ಜಮೆಗೆ ತೆಗೆದುಕೊಳ್ಳುತ್ತೆ.

೫ ಹರಾಜು [illegible] ಕೂಡಲೇ ಡಿಪಾಜಿಟ್ ಬಗ್ಗೆ ಮೊಬಲಗನ್ನು ಹಾಜರ್ಮಾಡದೆ ಇದ್ದರೆ, ಖರ್ಚುಗಳು ಮತ್ತು ಲುಕ್ಸಾನುಗಳು, ಅನ್ವಯ ಕಂಟ್ರಾಕ್ಟುದಾರರನ್ನು [illegible] ಪುನಃ ಹರಾಜು ಮಾಡಿಸುತ್ತೆ. ಬಾಬ್ತು ಮೊಬಲಗನ್ನು ಪಾವತಿ ಒಳಗೆ ಹಾಜರ್ಮಾಡಲು ತಪ್ಪಿದರೆ ಡಿಪಾಜಿಟ್ ಮೊಬಲಗನ್ನು ದಂಡವಾಗಿ ತೆಗೆದುಕೊಂಡು ಬಾಬಿನ್ನು ದುಬಾರಾ ಹರಾಜು ಮಾಡಿಸಿ ಅದರಲ್ಲಿ ನಷ್ಟವೇನಾದರೂ ಆದಲ್ಲಿ ಆ ನಷ್ಟಕ್ಕೆ ಅನ್ವಯ ದರಖಾಸ್ತುದಾರನ್ನು ಗುರಿಪಡಿಸುತ್ತೆ. ಎರಡನೆ ಹರಾಜಿನಲ್ಲಿ ನಫೆ ಬಂದಲ್ಲಿ ಮೊದಲು ದರಖಾಸ್ತುದಾರನಿಗೆ ಸದರಿ ನಫೆಗೆ ಹಕ್ಕು ಇರುವುದಿಲ್ಲ.

೬ ಪ್ರತಿ ಒಬ್ಬ ಕಂಟ್ರಾಕ್ಟರು ಪ್ರೋಜೇನಾ ಟೋಲುಗೇಟುಗಳ ಮುಖಾಂತ್ರ ಪ್ರವೇಶಮಾಡುವ ತರಹವಾರಿ ಗಾಡಿ ಯಾ ಜಾನುವಾರುಗಳು ಇವುಗಳ ಮೇಲೆ [illegible] ಟೋಲ್ ಯಾನೆ ಸುಂಕ ಇವುಗಳ ತಪಸೀಲು ತೋರಿಸುವ ಲೆಖ್ಖವನ್ನು ಪ್ರೆಸಿಡೆಂಟರವರು ವಿಧಾಯಕ ಮಾಡುವ ನಮೂನೆಯಲ್ಲಿಟ್ಟು ಅಂಥಾ ಲೆಖ್ಖವನ್ನು ಕಂಟ್ರಾಕ್ಟರು ಪ್ರತಿ ಮಾಹೆಯಲ್ಲಿಯೂ, ಪ್ರೆಸಿಡೆಂಟರವರ ಇನ್ಸ್‌ಪೆಕ್ಷನ್ ಬಗ್ಗೆ ಹಾಜರ್ಮಾಡಬೇಕು. [illegible] ಅಥವಾ ಮ್ಯುನಿಸಿಪಲ್ ಉದ್ಯೋಗಸ್ತರು ಅಪೇಕ್ಷಿಸಿದಾಗ ಅಂಥಾ ಲೆಖ್ಖಗಳನ್ನು ಅವರ ಇನ್ಸ್‌ಪೆಕ್ಷನ್ ಬಗ್ಗೆ ಹಾಜರ್ಮಾಡುವುದಕ್ಕೆ ಬದ್ಧನಾಗಿರತಕ್ಕದ್ದು.

೭ ಪ್ರತಿ ಒಬ್ಬ ಕಂಟ್ರಾಕ್ಟರು ಟೋಲುಗೇಟುಗಳ ಮುಖಾಂತರ ಬರತಕ್ಕ ಗಾಡಿ ಯಾ ಜಾನುವಾರುಗಳ ತಪಸೀಲು ಲೆಖ್ಖವನ್ನು [illegible] ಕಾಲಂನಲ್ಲಿ ನಮೂದಿಸ [illegible] ಬಗ್ಗೆ ಆಯಾಯ ಕಂಟ್ರಾಕ್ಟುದಾರರ ಸ್ವಂತ ಖರ್ಚಿನಿಂದ ಪ್ರಮಾಣ [illegible] ಟೋಲುಗೇಟಿನಲ್ಲಿ [illegible], ಒಬ್ಬೊಬ್ಬ [illegible] ಬದ್ಧನಾಗಿರತಕ್ಕದ್ದು.

೮ ಹಾಲಿ ಇರುವ ಟೋಲುಗೇಟುಗಳನ್ನು ಮತ್ತು ಮನೆಗಳನ್ನು ಕಂಟ್ರಾಕ್ಟರು ಒಳ್ಳೇ ಸ್ಥಿತಿಯಲ್ಲಿಟ್ಟುಕೊಂಡು, ಅವುಗಳನ್ನು ಉಪಯೋಗಮಾಡಿಕೊಳ್ಳಬಹುದು.

೯ ಈ ಮೇಲ್ಕಂಡ ಷರತ್ತುಗಳಿಗೆ ಒಳಪಟ್ಟು ಕಂಟ್ರಾಕ್ಟು ಬಾಬತ್ತು ಸರಿಯಾಗಿ ನಡೆಸಿಕೊಂಡು ಹೋಗತಕ್ಕ ವಿಚಾರದಲ್ಲಿ ಕಂಟ್ರಾಕ್ಟರು ಪ್ರೆಸಿಡೆಂಟರವರಿಂದ [illegible] ನಮೂನೆಯಲ್ಲಿ ಛಾಪಾಕಾಗದದಲ್ಲಿ ರೂಲ್ಸ್ ಪ್ರಕಾರ ಮುಚ್ಚಳಿಕೆ ಬರೆದು ಕೊಡಬೇಕು.

೧೦ ಈ ಕೆಳಗೆ [illegible] ಗಳ ಮೇಲೆ ಕಂಟ್ರಾಕ್ಟರು ಟೋಲನ್ನು ವಸೂಲ್ಮಾಡಕೂಡದು.

(೧) ಮ್ಯುನಿಸಿಪಾಲಿಟಿಗೆ [illegible] ಪಾವತಿಮಾಡಿ ನಂಬರು ಹಾಕಿಸಿಕೊಂಡಿರತಕ್ಕ [illegible] ಕ್ಯಾರೇಜುಗಳು ಮ್ಯುನಿಸಿಪಾಲಿಟಿಯಿಂದ ಕರೆದಿರುವ [illegible] ಗಾಡಿಗಳು ಅಥವಾ [illegible] ಮತ್ತು [illegible] ಯಾ ಮ್ಯುನಿಸಿಪಲ್ [illegible] ಗೆ ಸೇರಿದ ಅಥವಾ [illegible] ವಗೈರೆ ಸಾಗಿಸುವದಕ್ಕಾಗಿ ಮೊಕರರ್ ಮಾಡಲ್ಪಟ್ಟ ಕ್ಯಾರೇಜುಗಳು, ಗಾಡಿಗಳು ಮತ್ತು ಜಾನುವಾರುಗಳ ಮೇಲೆ ಮತ್ತು [illegible] ದಲ್ಲಿ [illegible] ಘಂಟೆಯ ಕಾಲದೊಳಗಾಗಿ ಅಂದರೆ ಒಂದು ಮಧ್ಯರಾತ್ರಿಯಿಂದ ಇನ್ನೊಂದು ಮಧ್ಯರಾತ್ರಿಯ ವರೆಗೆ ಯಾವ ಕ್ಯಾರೇಜ [illegible] ಅಥವಾ ಜಾನುವಾರುಗಳ ಮೇಲೆಯೇ ಆಗಲಿ, ಒಂದುಸಾರಿಗಿಂತಲೂ ಹೆಚ್ಚಾಗಿ ಟೋಲು ವಸೂಲ್ಮಾಡಕೂಡದು.

(೨) [illegible] ಬರತಕ್ಕ ಸೈನಿಕರ ವಾಹನಕ್ಕಾಗಿ ಅಥವಾ ಅಂಥಾ ಸೈನಿಕರ ಸಾಮಾನು ವಗೈರೆ ಸಾಗಿಸುವುದಕ್ಕೆ ಬಗ್ಗೆ ಉಪಯೋಗಿಸುವ ಗಾಡಿ [illegible] ಜಾನುವಾರುಗಳ ಮೇಲೆ ಮಿಲಿಟೇರಿ ಅಥವಾ ಗವರ್ನಮೆಂಟ್ ಸ್ಟೋರಿಗೆ ಸಾಗಿಸಲ್ಪಡುವ ಸಾಮಾನುಗಳು ಇರತಕ್ಕ ಗಾಡಿ ಅಥವಾ [illegible] ಮೇಲೆ ಸರ್ಕಾರಿ ಡ್ಯೂಟಿಯಮೇಲೆ ಬರತಕ್ಕ ಪೋಲೀಸು ಆಫಿಸರರು, ನೌಕರಮಾನೇರು ಅವರ ಕ್ಯಾರೇಜುಗಳು, ಗಾಡಿಗಳು ಮತ್ತು [illegible] ಗಳು ಇವುಗಳ ಮೇಲೆ ಮತ್ತು ಅರಮನೆ ಇಲಾಖೆಗೆ ಸೇರಿದ ಗಾಡಿಗಳು, ಕ್ಯಾರೇಜುಗಳು, ಜಾನವಾರುಗಳು ಇವುಗಳ ಮೇಲೆ ಸಹಾ.

ಷೆಡ್ಯೂಲ್ ಎ

ನಂಬರು			
೧	ಫೈರ್ವಿಸ್ಟೇಷನ್ ರಸ್ತೆ	ಬಳಗೊಳದ ರಸ್ತೆ ಮತ್ತು ಪಿಕ್ ರ್ಡ್ ರಸ್ತೆ ಇವೆರಡು ಜಂಕ್ಷನ್ ಆಗುವ ಸ್ಥಳದಲ್ಲಿರುವ ಉಕ್ಕಡ	
೨	ಬಳಗೊಳದ ರಸ್ತೆ	ಕೆಂಪಸಕಟ್ಟೆ	ಉಕ್ಕಡ
೩	ಶ್ರೀರಂಗಪಟ್ಟಣದ ರಸ್ತೆ	ಎರೆ ಕಟ್ಟೆ	ಡಿಟೋ
೪	ಬೆಂಗಳೂರು ರಸ್ತೆ	ವೀರನಗೆರೆ	ಡಿಟೋ
೫	ಸಿವಿಟಿಟಿ ರಸ್ತೆ	ಬಂಡಿಸಂತೆ	ಡಿಟೋ
೬	ಮಹದೇವಪುರದ ರಸ್ತೆ	ಜಲಪುರಿ	ಡಿಟೋ
೭	ಹಲನಹಳ್ಳಿ ರಸ್ತೆ	ಇಟ್ಟಿಗೆಗೂಡು	ಡಿಟೋ
೮	ರೇಸುಕೋರ್ಸ್ ರಸ್ತೆ	ರೋಣಸಂತೆ	ಡಿಟೋ
೯	ನಂಜನಗೂಡು ರಸ್ತೆ	ನಂಜನಗೂಡು	ಡಿಟೋ
೧೦	ಡಿಟೋ	ಹಾಲಿ ಉಕ್ಕಡದಬಳಿ ವಿಧಾಯಕಮಾಡಿರುವಂತೆ ನಾಚನಹಳ್ಳಿ ಉಕ್ಕಡ	
೧೧	ಮಾನಂದವಾಡಿ	ಚಟ್ಟನಹಳ್ಳಿ	ಉಕ್ಕಡ
೧೨	ವೈರ್ರಾಯ ರಸ್ತೆ	ಹೊಲಗೇರಿ	ಡಿಟೋ
೧೩	ಚಾಮುಂಡಿ [illegible] ದ ರಸ್ತೆ		ಡಿಟೋ
೧೪	ಜ್ಯೂಬಿಲಿ ರಸ್ತೆ	ಕುಕ್ಕರಹಳ್ಳಿ	ಡಿಟೋ
೧೫	ಇಲವಾಲದ ರಸ್ತೆ	ಶ್ರೀರಾಮಪೇಟೆ ಡಿಟೋ	

ಷೆಡ್ಯೂಲ್ ಬಿ.

ನಂಬರು	ಟೋಲುಗೇಟುಗಳಲ್ಲಿ ವಸೂಲು ಮಾಡತಕ್ಕ ದರಗಳ ತಪಸೀಲು	ರೂ	ಆ	ಪೈ
೧	ಸ್ಪ್ರಿಂಗು ಇರತಕ್ಕ [illegible] ಒಂದು ನಾಲ್ಕು ಚಕ್ರದ ಕ್ಯಾರೇಜಿಗೆ	೦	೪	೦
೨	ಡಿಟೋ [illegible] ಚಕ್ರದ ಕ್ಯಾರೇಜಿಗೆ	೦	೨	೦
೩	ಮನುಷ್ಯರು ಯಾ [illegible] ಗಳು ಕುದುರೆಗಳು, ಹೇಸರಕತ್ತೆಗಳು ಇವುಗಳಿಂದ ಎಳೆಯಲ್ಪಟ್ಟ ಭರ್ತಿಗಾಡಿಗಳ [illegible] ಗಾಡಿ ೧ಕ್ಕೆ	೦	೨	೦
೪	ಡಿಟೋ [illegible] ಇರತಕ್ಕ ಪ್ರತಿ ಒಂದು ಗಾಡಿಗೆ	೦	೧	೦
೫	ಡಿಟೋ [illegible] ಹೇರಿಕೊಂಡು ಬರತಕ್ಕ ಕೋಣ ಯಾ ಎತ್ತು ೧ಕ್ಕೆ	೦	೦	೬
೬	ಡಿಟೋ [illegible] ಅಥವಾ ಹೇರು ಹೇರಿಕೊಂಡು ಬರತಕ್ಕ [illegible] ಗಿಂತಲೂ [illegible]	೦	೧	೦
೭	ಹೇರು ಇಲ್ಲದೆ [illegible] ಇಲ್ಲದೆ ಬರತಕ್ಕ ಕುದುರೆ ೧ಕ್ಕೆ	೦	೦	೬
೮	[illegible] ಕಟ್ಟಿಯಾಗಿರತಕ್ಕ ಸವಾರಿ ಅಥವಾ [illegible] ಇರುವ ಕುದುರೆ ೧ಕ್ಕೆ	೦	೦	೬
೯	ಡಿಟೋ [illegible] ೧ಕ್ಕೆ	೦	೮	೦
೧೦	ಡಿಟೋ [illegible] ೧ಕ್ಕೆ	೦	೧	೦

C VENKATA RAO,
for President

ಮೈಸೂರು ಸೀಮೆಯಲ್ಲಿ ಪ್ಲೇಗಿನ ಸ್ಥಿತಿ.

೨೪—೩—೧೯೦೬ ರಿಂದ ೩೦—೩—೧೯೦೬ ರ ವರೆಗೆ

ಸ್ಥಳ	ಪ್ಲೇಗ್ ಬಂದವರು	ಸತ್ತವರು	ಸೋಂಕಿದ ಊರುಗಳ ಸಂಖ್ಯೆ	
ಬೆಂಗಳೂರು ಪಟ್ಟಣ	9	7	18	25
ಮೈಸೂರು ,,	0	0	4	5
ಬೆಂಗಳೂರು ಡಿಸ್ಟ್ರಿಕ್ಟು	1	4	27	31
ಮೈಸೂರು ,,	0	0	5	[illegible]
ಕೋಲಾರ್ ,,	2	0	4	[illegible]
ಕೋಲಾರ್ ಚಿನ್ನದ ಗಣಿಗಳು	5	6	9	[illegible]
ತುಮಕೂರು ಡಿಸ್ಟ್ರಿಕ್ಟು	0	0	11	1[illegible]
ಹಾಸನ (ಸೋಕಿಸಲಿಲ್ಲ)	0	0	0	0
ಚಿತ್ರದುರ್ಗ ,,	2	3	8	6
ಕಡೂರ್ ,,	1	1	11	1[illegible]
ಶಿವಮೊಗ್ಗ ,,	7	6	0	1
ಜುಮ್ಲಾ	27	24	97	87

ಶಾಲಿವಾಹನ ಶಕ ವರುಷಂಗಳು ೧೮೨೮ ನೇ ಪರಾಭವ ಸಂವತ್ಸರದ ಚೈತ್ರ ಬಹುಳ ಚೌತಿ ಗುರುವಾರದಿಂದ ಚೈತ್ರ ಬಹುಳ ದ[illegible] ಬುಧವಾರದ ವರೆಗಿನ ಒಂದು ವಾರದ ಪಂಚಾಂಗ

೧೯೦೬ ನೇ ಇಸವಿ ಏಪ್ರಿಲ್

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಅರಬಿ ಮಾ[illegible]
12	ಗುರು *	ಚೌತಿ	60 31	ಅ	16 18	30
13	ಶುಕ್ರ ಸ್ಥ	ಪಂಚಮಿ	14 48	ಜ	12 28	1
14	ಶನಿವಾ	ಷಷ್ಟಿ	39 29	ಮೂ	38 52	2
15	ರವಿವಾ	ಸಪ್ತಮಿ	31 41	ಪೂ	36 16	3
16	ಚಂದ್ರ	ಅಷ್ಟಮಿ	30 56	ಉ	31 10	4
17	ಕುಜ	ನವಮಿ	27 5[illegible]	ಶ್ರ	31 2	5
18	ಬುಧ	ದಶಮಿ	26 6	ಧ	31 1	6

* ಸಂಕಷ್ಟ ಚತುರ್ಥಿ

ಸ್ಥ ಚಿತ ವಿಷುಪುಣ್ಯಕಾಲ, ಸೌರಸಂವತ್ಸರಾರಂಭ, [illegible] ಯುಂ T ಭಾನುಸಪ್ತಮಿ, [illegible] ನೃಸಿಂಹ ಸ್ವಾಮಿ ರಥ

ಮರಾಜಯಂತಿ

ಪೇಟೇ ಧಾರಣೆ.

ದಿನಸಿ	ಮೈಸೂರು	ಬೆಂಗಳೂರು
ಸಾದ್ರೀ ಅಕ್ಕಿ ಪಲ್ಲ ೧ಕ್ಕೆ ರೂ	೧೨-೬-೦	೧೪-೪[illegible]
ಕೆಂಬುತಿ ಅಕ್ಕಿ ಅವಲ್	೧೨-೮-೦	೧೩-೮[illegible]
,, ದುಯ್ಯಂ	೧೧-೮-೦	೧೩-೦[illegible]
ಬಾಪ್ರಾಳ ಅಕ್ಕಿ	೯-೨-೦-೦	೯-೨ ೯[illegible]
ಸಣ್ಣಕ್ಕಿ ಅವಲ್	೯ ೦ ೦	೯೪-೮[illegible]
,, ದುಯ್ಯಂ	೯೩-೦ ೦	೯೪ ೦[illegible]
ತೊಗರೀ ಬೇಳೆ ಪಲ್ಲ ೧ಕ್ಕೆ	೧೦ ೦ ೦	೧೦ ೦[illegible]
,, ದುಯ್ಯಂ	೯-೧೨ ೦	೯-೧೨[illegible]
ಸ್ವರ್ಣ ರಾಗಿ ಪಲ್ಲ ೧ಕ್ಕೆ	೬-೧೪-೦	೫-೧೨[illegible]
ಕಾರಾಗಿ	೬-೮-೦	೫-೬[illegible]
ಜೋಳ	೨-೧-೦	೮ ೮[illegible]
ಹಲಸಂದೆ ಪಲ್ಲ ೧ಕ್ಕೆ	೯-೧೨ ೦	೯೦-೬[illegible]
ಬಿಳೀ ಅವರೆ	೭-೯೦-೦	೮-೪[illegible]
ಹೆಸರು	೯೦ ೮ ೦	೧೧-೪[illegible]
ಉದ್ದು	೧೨-೪-೦	೧೨-೦[illegible]
ಕಡಲೆ	೧೦-೮ ೦	೧೨-೦[illegible]
ಎಳ್ಳು ಸೆ ೧೨೭ಕ್ಕೆ	೧೯ ೦-೦	೧೯-೦[illegible]
ಹುರಳಿ	೭-೮-೦	೭-೧೨[illegible]
ಹರಳು ೧೨೭ ಸೇರಿಗೆ	೧೧-೧೨-೦	೧೨-೪[illegible]
ಸೀಗೇಕಾಯಿ ಮಣ ೧ಕ್ಕೆ	೩-೪-೦	೩-೧೦[illegible]
ಮೆಣಸಿನಕಾಯಿ	೪ ೬-೦	೩-೪[illegible]
,, ದುಯ್ಯಂ	೩-೭-೦	೩-೦[illegible]
ಬೆಲ್ಲ ದೊಡ್ಡ ಅಚ್ಚು	೪ ೯-೦	ಮ ೧-೬[illegible]
ಬೆಳ್ಳುಳ್ಳಿ ಮಣ ೧ಕ್ಕೆ	೫ ೩ ೦	೪-೧೨[illegible]
ಹರಳೆಣ್ಣೆ ,,	೫-೯-೦	೪-೬[illegible]
ಕೊತ್ತುಂಬರಿ ಪಲ್ಲ ೧ಕ್ಕೆ	೯೧-೦ ೦	೧೦-೦[illegible]
ಉಪ್ಪು ,,	೭ ೦-೦	೭-೦[illegible]
ಮೆಣಸೇ ಹಣ್ಣು	೦ ೯೬-೦	೦-೯೧[illegible]
,, ಹಳೇದು	೦-೮-೦	೦-೯[illegible]
ತುಪ್ಪ	೯೩-೮-೦	೧೧-೧೨[illegible]
ಸೀಮೆಯೆಣ್ಣೆ ಪಟ್ಟ ೧ಕ್ಕೆ	೫-೪ ೦	೪-೦[illegible]
ತೆಂಗಿನಕಾಯಿ ೧೦೦ಕ್ಕೆ	೪-೦ ೦	೪-೮[illegible]
ಅಳಲೇಕಾಯಿ ಮಣ ೧ಕ್ಕೆ	೦-೯೨-೦	೦-೯[illegible]
ಅಂಟ್ವಾಳದ ಕಾಯಿ ಮಣ ೧ಕ್ಕೆ	೦ ೭-೦ ೦	೦-೯೧[illegible]
ಚಿನ (ಪೌನ್) ಕೆಂಪು	೧೫-೪-೦	೧೫-೩[illegible]
,, ,, ಹಸಿಮೆ	೧೫ ೭ ೦	೧೫-೧೭[illegible]
,, ,, ಗಟ್ಟಿ ತೊಲ ೧ಕ್ಕೆ	೨೩-೭-೨-೦	೨೪-೬[illegible]
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ	೭-೨-೦-೦	೮೦-[illegible]

Printed and Published by the Rev E W THOMPSON, M A the Proprietor and Manager, Wesleyan Mission Press Mysore 12/4/1906.

ವೃತ್ತಾಂತ ಪತ್ರಿಕೆ.

REGISTERED M. 20

ಕ್ರಯ ೧ ದುಡ್ಡು ——— ಕ್ರಯ ೧ ದುಡ್ಡು

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಪುಸ್ತಕ ೧೯ — ಮೈಸೂರು—ಸನ್ ೧೯೦೬ ನೇ ಇಸವಿ ಏಪ್ರಿಲ್ ತಾರೀಖು ೧೯ ನೇ ಗುರುವಾರ. — ಸಂಚಿಕೆ ೧೬.

೫,೦೦೦ ಪವುಂಡು ವುಲನ್ ದಾರ ಮಾತ್ರ ಇದೆ.

40 9

ಪುಟಿಯುರಾವ ವುಲನ್ ಪವುಂಡ ೧ ಕ್ಕೆ ೧—೧೦—೦
ಫಸ್ಟ್ ಸೂಪ್ಪರ " " " ೧—೧೭—೦
ಸುಪೀರಿಯರ್ " " " ೨—೦—೦
ಸೊವರನ್ " " " ೩—೭—೦
ವುಲನ್ ಟೋಪಿ ಡಜನ್ ೧ ಕ್ಕೆ ೩—೦—೦ ಒಂದೇ ಪಾಸು ೧೦ ತರಿಸಿಕೊಳ್ಳುವವರಿಗೆ ೩—೧೨—೦.
ಹೊಸ ನಮೂನೆ ಬೆಲ್ಟು ಸ್ಟೈಲು ಪೋಸ್ಟು ಕಾರ್ಡುಗಳು.
ಸಿಂಗಲ್ ಕಲರ್ ೧೦೦ ಕ್ಕೆ ೦—೨—೬. ೧೦೦೦. ೧—೮—೦
ಕಲರ್ ಕಲರ್ ೧೦೦ ಕ್ಕೆ ೦ ೩—೦ ೧೦೦೦. ೧—೧೦—೦
ವಿ. ಪಿ. ಮ. ಲಕ ತರಿಸಿಕೊಳ್ಳುವವರು ಮಾತ್ರ ೧೦೦ ಕ್ಕೆ —೫ ಮುಂಚಿತವಾಗಿ ಕಳುಹಿಸದ ಹೊರತು ವಿ. ಪಿ. ಮೂಲಕ ಕಳು ಹಿಸುವದಿಲ್ಲ.
ಕೆ. ಯು. ಪ್ರೊವಿಂಷಲ್ ಕಂಪನಿ, ಬೆಂಗಳೂರು ಸಿಟಿ.

ಹೋ ೧ ಮೋ ೧ ಸಿ ಯಾ.

ತಗಲುತ್ತಲೇ ನೋವು ವಾಸಿ ಯಾಗುತ್ತೆ.

● ಔಷಧಿಯು ಸುಟ್ಟ, ಅರಸುವ, ಕಾಬೂನೆ, ಅಸ್ಪತ್ರೆ, ಗಾಯ, ಪಪ್ಪಾಲಿ, ಕೋಟಿ, ಕಸ್ಸೇರಿ, ಮುಂತಾದ ಸ್ಥಳ ಗಳಲ್ಲಿ ಇದ್ದೇ ಇದೆ ನೋಡಿ. ಇದಕ್ಕೆ ಸಮಾನವಾದ ಔಷಧ ಮತ್ತೊಂ ದಿಲ್ಲವೆಂಬುದು ಲೋಕಪ್ರಸಿದ್ಧವಾಗಿದೆ.

● ಕೆಲವು ತಕ್ಕಾಲದಲ್ಲಿ ಜೀವರಾಶಿಗಳಿಗೆ ಮಹತ್ತಾಗಿ ಸಿಕ್ಕ ಔಷಧ ಇದನ್ನು ಉಪಯೋಗಿಸಿದ ದೊಡ್ಡ ಮನುಷ್ಯರು, ಡಾಕ್ಟರು ಮುಂತಾದವರು ಅದರ ಗುಣವನ್ನು ಹೊಗಳಿ ಸರ್ಟಿಫಿಕೇಟು ಕೊಟ್ಟಿದ್ದಾರೆ. ನೋವು ಕಂಡರೆ ಇದನ್ನು ಹಚ್ಚಿದ ಕೂಡಲೇ ಗುಣವಾಗುವದು.

● ಕೆಲವು ಅವೆ ತಲೆನೋವು, ಸೊಂಟನೋವು, ಪಾರ್ಶ್ವವಾಯು, ಮೂಲವ್ಯಾಧಿ, ಉಬ್ಬಸ, ಪಾದಗಳು, ನರ ಸೊರಳುವದು, ಕೀಲುವಾಯು, ಗುಳ್ಳೆಗಳು, ಹಲ್ಲುನೋವು, ಮುಖದ ಊದುಗಳು, ಗಡ್ಡೆಗಳು, ರಣಗಳು, ಹುಳುಕಡ್ಡಿ, ಸೊಳ್ಳೆ ಕೀಟ ಕಡಿದದ್ದು ಚಿಪ್ಪರುವದು, ಬೆಂಕಿಯಲ್ಲಿ ಸುಟ್ಟದ್ದು, ಕತ್ತಿ ಗಾಯ—ಇವೇ ಮೊದಲಾದ ನಾನಾ ಬಾಧೆಗಳನ್ನು ಗುಣಪಡಿಸುತ್ತದೆ. ರಾತ್ರಿ ಹಚ್ಚಿಕೊಂಡು ಮಲಗಿದರೆ ಸೊಳ್ಳೆ ಹತ್ತಿರ ಬಾರದು.

ಕ್ರಯ:—ಸಣ್ಣ ಡಬ್ಬಿ ೧ ಕ್ಕೆ ೧ ರೂ., ದೊಡ್ಡದಕ್ಕೆ ರೂ. ೨; ಒಂದೇ ಸಲ ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಬಿಡುತ್ತಾರೆ. ರೂ. ೨—೮ ಆಣೆ ಬೆಲೆಯ ಡಬ್ಬಿಯಲ್ಲಿ ೧ ರೂ. ಡಬ್ಬಿಯಲ್ಲಿರುವದಕ್ಕಿಂತ ೫ ರಷ್ಟು ಹೆಚ್ಚು ಔಷಧವಿರುತ್ತೆ. ೨—೮ ಆ ಈ ಡಬ್ಬಿಯನ್ನು ತರಿಸಿಕೊಳ್ಳುವವರಿಗೆ ಟಪ್ಪಾಲ್ ಮಾಫು ಬಿಡುತ್ತೆ.

●●●●●●●●●

ಹೋಮೋಸಿಯಾ ಯಂಬ್ರೋಕೇಷನ್.

● ಕೆಲವು ಹಳೇ ನೋವುಗಳಿಗೆ ಉಪಯೋಗಿಸತಕ್ಕದ್ದು. ಮೇಲೆ ಕಂಡ ಇದನ್ನು ಹಚ್ಚಕೂಡದು. ಇದರಲ್ಲಿ ಹೋಮೋಸಿಯಾ ಗುಣಗಳು ಬಹು ತೀಕ್ಷ್ಣವಾಗಿ ಇರುತ್ತವೆ. ಅದಕ್ಕಿಂತಲೂ ಇನ್ನೆರಡು ಗುಣಗಳುಳ್ಳ ಹೊಸ ಭಾಗವಿರುತ್ತವೆ. ಇದನ್ನು ಬಹು ಬೇಗನೆ ಸೇದಿಕೊಳ್ಳಬಲ್ಲದು. ಡಬ್ಬಿಗಳಲ್ಲಿ ತುಂಬಿದೆ, ೧ ರೂ. ಗೂ ಒಂದರಂತೆ ಬಿಕರಿ ಮಾಡಲ್ಪಡುವದು. ೧೨ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫು. ಎಲ್ಲಾ ಅಂಗಡಿಗಳಲ್ಲಿ ದೊರೆಯುವದು.

● ಔಷಧಗಳ ವಿವರಣೆಯೂ, ಸರ್ಟಿಫಿಕೇಟುಗಳೂ ಉಳ್ಳ ಪುಸ್ತಕವನ್ನು ಅಪೇಕ್ಷಿಸಿದರೆ ಕಳುಹಿಸುವೆವು.

ವಿಳಾಸ:—ಹೋಮೋಸಿಯಾ ಕಂಪೆನಿ. ೨೨ ಸೆಕೆಂಡು ಬೀಚ್ [illegible]

ಕೊಡಗು ದೇಶದ ಶ್ರೇಷ್ಠವಾದ ಉತ್ಕೃಷ್ಟ ಕಾಫಿಯು.

ಹುರಿಯದೆ ಇರುವದು ಅಥವಾ ಜಗತ್ತಿನ ಹುರಿದದ್ದು. ಪದವಾದಿದ ಸ್ಥಳದಿಂದಲೆ ಸೆಟ್ಟಿಗೆ ರವಾನಿಸಲ್ಪಡುವದು.

35 10

ವ್ಯಾಪಾರದ ಹೆಗ್ಗುರ್ತು

ಕಾಡುಕೋಣದ ತಲೆಯ ಮುದ್ರೆ ಇದೆ.

ಸಂಪೂರ್ಣವಾಗಿ ಯಂತ್ರದಿಂದಲೆ ಸಿದ್ಧಪಡಿಸಿದ್ದು, ಹೆಗ್ಗುರ್ತು ಉಳ್ಳ ವಿಳಾಸದ ಚೀಟಿ ಸುತ್ತಿಲ್ಲದಿರುವವು ಸ್ವಚ್ಛವಾದವುಗಳಲ್ಲ. ಅವು ನಮ್ಮದಲ್ಲ. ಏಜಂಟರುಗಳು ಬೇಕು. ಇಂಥವರಿಗೆ ಅಲಾಯಿದ ದರ. ಬರೆಯುವವರು ದಯವಿಟ್ಟು ಈ ಪತ್ರಿಕೆಯ ಹೆಸರನ್ನು ಸೂಚಿಸಿ.

ವಿಳಾಸ.—ಮ್ಯಾನೇಜರ್, ಮಹ್ಯಾಥಿಸನ್ಸ್ ಕಾಫಿ ವರ್ಕ್ಸ್, ಮೈಸೂರು.

ಜ್ವರ ಹರಿ. 29-11

ಇದು ಸಾಧಾರಣ ಜ್ವರ, ಚಳೀಜ್ವರ, ಮೊರೇಜ್ವರ, ಪಿತ್ಥಜ್ವರ, ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮರಾಮತ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್. ಟಿ. ವೆಂಕಟಪತಿ ಅಯ್ಯನವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨೦ ಔನ್ಸಿನ ಸೀಸೆಯು ತೀರಿಹೋಯಿತು. ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣ ಹೊಂದಿರುವರು ಇನ್ನೂ ಜನಗಳು ಕಾಹಿಲೇ ಬೀಳುತ್ತಿರುವುದರಿಂದ ದಯವಿಟ್ಟು ಇನ್ನೊಂದು ೨೦ ಔನ್ಸಿನ ಸೀಸೆಯನ್ನು ವಿ. ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದ್ದಾರೆ.

ಕ್ರಯ:—ಸೀಸೆ ೧ ಕ್ಕೆ ೮ ಆಣೆ, ೧ ರೂ., ೧—೮ ರೂ.; ರೂ. ೨—೧೨ ಆ., ೧೧ ರೂ., ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು.

●●●●●●●●●

ಓ ಮ ೦ ಕ ಪೂ ರ.

● ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆಕಳೆ ಯುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು. ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಯೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ. ಕ್ರಯದ ದರವು ಜ್ವರಹರಿ ನಂಬ ಔಷಧದಂತೆಯೇ. ಸೀಸೆಗಳಲ್ಲಿ ದೊರಕುವದು.

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಹೆಸ್ರಿಯ ಓಮಂ ಕರ್ಪೂರವನ್ನು ನಾನೂ ನನ್ನ ಡಾಬೇದಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅತೀಸಾರ ಭೇದಿ, ಅಜೀರ್ಣ ರೋಗಿಷ್ಟರಿಗೆ ಕೊಡುತ್ತೇವೆ. ಕೊಟ್ಟ ಕೂಡಲೆ ಅದರ ರೋಗವು ಗುಣವಾಗುತ್ತಲಿದೆ. ಇದು ಬಹು ಒಳ್ಳೇ ಔಷಧ ವೆಂದು ಬರೆದಿದಾರೆ.

● ಈ ನಾಲ್ಕು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಅಂಗಡಿಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇದಲ್ಲದೆ ಕೆಳಗಿನ ವಿಳಾಸದಾರ್ರಲ್ಲಿ ವಿಶೇಷ:—

ಹೆಸ್ರಿಯುವರ ಗ್ರೇಟ್ ಇಂಡಿಯನ್ ಔಷಧಗಳ ಕಂಪೆನಿ,

[illegible]

"ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ.

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜಂಟರ ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ (ಅಡ್ವಾನ್ಸು) .. .. .. ರೂ. ೧—೦—೦
ಪರಸ್ಥಳದವರು ಆಫೀಸಿನಿಂದ ಅಂಚೆಯ ಮೇಲೆ ತರಿಸಿಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಹಾಸಲ್ ಸೇರಿ .. .. ರೂ. ೧—೧೪—೦
" " " " " ೦—೧೫—೦
ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು.

ನಮ್ಮ ವಿಳಾಸ.—ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು.

ನೀವು ವಿಲಾಯಿತಿಯಿಂದ ಯಾವ ಸಾಮಾನುಗಳನ್ನು ಬರ ತರಿಸಿ ಕೊಳ್ಳಬೇಕಾಗಿದ್ದರೆ 19-11

ಪ್ರೈಡ್ ಮತ್ತು ಕಾರ್ಸ್ವೆಲ್ಡ್,

೮೯—೩೫, ಸಿಟಿ ರೋಡ್, ಲಂಡನ್, ಇ. ಸಿ.

ಎಂಬೀ ವಿಳಾಸಕ್ಕೆ ಪತ್ರ ಕಳಿಸಿ, ಕಾಗದ ಬರೆಯಿರಿ. ಈ ಕಂಪನಿಯವರು ಪೇಟೆಂಟ್ ಔಷಧಿಗಳನ್ನೂ, ಆರಿಸ್ಟ್ರಿಗೂ ಮಾಕ್ಸಿ ಕೊಡತಕ್ಕ, ಯಂತ್ರಗಳಿಂದಲೇ ತಯಾರಾದಂಥಾ ಆಹಾರಗಳನ್ನೂ, ಇನ್ನೂ ನಾನಾತರದ ಪದಾರ್ಥಗಳನ್ನೂ ಇಟ್ಟು ಬಿಕರಿಮಾಡುತ್ತಾರೆ. ಅವರು ಬಹು ವಿಶೇಷವಾದ ಗಮನಕೊಟ್ಟು, ಸಾಧ್ಯವಿದ್ದಷ್ಟೂ ಅಗ್ಗವಾಗಿ, ಬೇಕಾದ ಸಾಮಾನುಗಳನ್ನೇ ಆರಿಸಿ, ಮಾರಿಸ್ವಾಮಿಗಳಿಗೆ ಕಳುಹಿಸಿಕೊಡುವರು.

ಪರಿಮಳ ನಶ್ಯದ ಪುಡಿ

50-8

ಪರಿಮಳ ನಶ್ಯದಪುಡಿ ಡಬ್ಬಿ ೧ ಕ್ಕೆ ...... 0—9—0
ಟಪಾಲ್ ಖರ್ಚು .... 0—3 0
ಸಾದಾ ನಶ್ಯದಪುಡಿ ಡಬ್ಬಿ ೧ಕ್ಕೆ........ 0—6—0
ಟಪಾಲ್ ಖರ್ಚು .... 0—3—0

ಈ ಪುಡಿಯನ್ನು ಮೇಲಾದ ಹೊಗೆಸೊಪ್ಪಿನಿಂದ ಸುವಾಸನೆಯುಳ್ಳದ್ದಾಗಿ ತಯಾರು ಮಾಡಲ್ಪಟ್ಟಿರುತ್ತೆ. ಇದರ ಸುವಾಸನೆ ಒಂದು ಸೇರು ಸಾಧಾರಣ ಪುಡಿಯಲ್ಲಿ ಸ್ವಲ್ಪವನ್ನು ಹಾಕಿ ಕಲಸಿದರೆ ಪುಡಿ ಯಲ್ಲಾ ಗಮಗಮಿಸುತ್ತೆ. ಉಪಯೋಗಿಸುವವರಿಗೆ ಸುವಾಸನೆಯನ್ನೂ ಆನಂದವನ್ನೂ ಉಂಟು ಮಾಡುತ್ತೆ.

ತಲೆನೋವು, ಪೀನಸ, ಜಲದೋಷ, ಶಿರೋವ್ಯಾಧಿ ಇವುಗಳನ್ನು ತಪ್ಪದೆ ಪರಿಹರಿಸುತ್ತೆ. ಮಾದರಿಗೆ ೧ ಡಬ್ಬಿಯನ್ನು ತರಿಸಿ ಪರೀಕ್ಷಿಸಿರಿ.

☞ ಪ್ರತಿ ೧ ಡಬ್ಬಿಯಲ್ಲಿ ೯ ತೋಲ ನಶ್ಯದಪುಡಿ ಇರುತ್ತೆ.

ಮಾನೇಜರ್, ಧರ್ಮ ವೈದ್ಯಶಾಲಾ,

69 ಚಿಕ್ಕಬಜಾರು ರೋಡ್, ಸಾಹುಕಾರ್‌ಪೇಟೆ, ಮದರಾಸು.

ಅದ್ಭುತ ಜಹಜಾ ಪ್ರಿಸೆಂಟೇಷನ್ ವಾಚು!

[illegible]

ವಿಳಾಸ.—[illegible]

P. SUBBROYA'S

World Renowned and most Efficacious Ayurvedic Medicines.

ಪಿ. ಸುಬ್ಬರಾಯರವರ ಲೋಕಪ್ರಸಿದ್ಧವಾದ ಮತ್ತು ಅತ್ಯಂತ ಗುಣಕಾರಿಯಾದ ಆಯುರ್ವೇದ ಔಷಧಗಳು.

11-23

೧. ಪುಷ್ಟಿರಸಾಯನ.—ಇದರ ಸೇವನೆಯಿಂದ ನರಗಳ ಸಂಬಂಧವಾದ ಮತ್ತು ಇತರ ವಿಧವಾದ ಎಲ್ಲಾ ಶರೀರದ ದುರ್ಬಲಗಳೂ ಹೋಗಿ, ಹೊಟ್ಟೆಯಲ್ಲಿ ಅಗ್ನಿ ಉಂಟಾಗಿ, ದೇಹವು ಪುಷ್ಟಿಹೊಂದುವದು. ಪುಷ್ಟಿಯನ್ನು ಕಳೆದುಕೊಂಡ ಚಿಕ್ಕವಯಸ್ಸಿನವರಿಗೆ ಇದು ಅತ್ಯುತ್ತಮ ಔಷಧವು. ಇದರಿಂದ ಶರೀರದ ಪ್ರತಿ ಅವಯವದ ನೋವು, ಆಲಸ್ಯವೂ ಹೋಗಿ, ಪುಷ್ಟಿಯೂ, ಬಲವೂ ಉಂಟಾಗುವವು. ಪೆಟ್ಟಿಗೆಕ್ಕೆ ರೂ. ೨ ವಿ. ಪಿ. ಛಾರ್ಜಿ ೩ ಆಣೆ.

೨. ಅತ್ಯುತ್ತಮವಾದ ಕಸ್ತೂರಿ.—ಕಾಶ್ಮೀರದಿಂದ ತರಿಸಿರುವದು. ಅತ್ಯುತ್ತಮವಾದದ್ದು. ಮತ್ತು ಒಂದೇ ರಸಂ ಇರತಕ್ಕದ್ದು ತೋಲೆ ೧ಕ್ಕೆ ರೂ. ೬೮ ಚಿಲ್ಲರೆಯಾಗಿ ಒಂದು ರೂಪಾಯಿಗೂ ದೊರಕುತ್ತದೆ. ವಿ. ಪಿ. ಛಾರ್ಜಿ ಅಲಾಯದ.

೩. ಸುಗಂಧ ನಶ್ಯಪುಡಿ.—ಈ ನಶ್ಯಪುಡಿಯು ಬಹಳ ಸುವಾಸನಾಯುಕ್ತವಾಗಿರೋಣದರಿಂದ ಇದನ್ನೇ ಪ್ರತ್ಯೇಕವಾಗಿ ಹಾಕಿಕೊಳ್ಳಕೂಡದು. ನೀವು ದಿನವೂ ಹಾಕಿಕೊಳ್ಳುವ ಸಾಮಾನ್ಯ ನಶ್ಯಕ್ಕೆ ಈ ಸುಗಂಧಪುಡಿಯಲ್ಲಿ ಒಂದೆರಡು ಚುಟಿಕೆಯಷ್ಟನ್ನು ಬೆರಸಬೇಕು. ಹೀಗೆ ಬೆರಕೆಮಾಡುವುದರಿಂದ ನಶ್ಯವು ಬಹು ಸುವಾಸನೆಯಾಗಿಯೂ ಮನೋಹರವಾಗಿಯೂ ಆಗುವುದು. ಇದರಿಂದ ನಶ್ಯಹಾಕಿಕೊಳ್ಳುವವರ ಬಳಿ ಬರುವ ಕಟುವಾದ ಕೆಟ್ಟವಾಸನೆ ಇರುವುದೇ ಇಲ್ಲ. ಸುವಾಸನೆಯು ಬಹಳಹೊತ್ತು ಇರುತ್ತದೆ. ಈ ಪುಡಿ ಬೆರಸಿದ ನಶ್ಯ ಬಹಳ ಕಾಲದ ತನಕ ಕೆಡುವುದಿಲ್ಲ. ಇಂಥಾ ನಶ್ಯಹಾಕಿಕೊಂಡಲ್ಲಿ ಶೀತ, ತಲೆನೋವು, ವಾತ ಮೊದಲಾದವು ನಿವಾರಣೆಯಾಗುತ್ತವೆ. ಆಗ್ಗೆ ನಶ್ಯಹಾಕಿಕೊಳ್ಳಬೇಕೆಂಬ ಇಚ್ಛೆಯನ್ನು ಕಡಿಮೆಮಾಡುವುದು. ಇದರಲ್ಲಿ ನಶಾಸಾಗರ ಮಿಂದಿಶವಾಗಿ ಸೇರಿರುವುದಿಲ್ಲ. ಇಂಥಾ ಒಂದು ಡಬ್ಬಿ ನಶ್ಯವು ಒಂದು ತಿಂಗಳ ತನಕ ಬರುತ್ತೆ. ಕ್ರಯ ಒಂದು ಡಬ್ಬಿಗೆ ೪ ಆಣೆ. ೧ ರಿಂದ ೩ ಡಬ್ಬಿ ತನಕ ವಿ. ಪಿ. ಛಾರ್ಜಿ ೩ ಆಣೆ ಹೆಚ್ಚು. ವಿ. ಪಿ. ಛಾರ್ಜಿ ೪ ರಿಂದ ೬ ಡಬ್ಬಿ ತನಕ ೫ ಆಣೆ. ೭ ರಿಂದ ೧೨ ಡಬ್ಬಿ ವರೆಗೆ ವಿ. ಪಿ. ಛಾರ್ಜಿ ೩ ಆಣೆ.

೪. ರಕ್ಷಾಮೃತಂ.—ಸಸ್ಯವರ್ಗಗಳಲ್ಲಿ ಸೇರಿದ ಅನೇಕ ಅಪೂರ್ವ ಮೂಲಿಕೆಗಳಿಂದ ಮಾಡಲ್ಪಟ್ಟಿರುವ ಈ ಚೂರ್ಣವು ಕಾಫಿ, ಚೇಯಿಗಳ ಬದಲಾಗಿ ಉಪಯೋಗಿಸುವುದಕ್ಕೋಸ್ಕರವೇ ತಯಾರುಮಾಡಲ್ಪಟ್ಟಿರುತ್ತದೆ. ಕಾಫಿ, ಚೇಯಿಗಳಲ್ಲಿರುವ ದುರ್ಗುಣಗಳು ಇದಕ್ಕಿಲ್ಲ. ಕಾಫಿ ಪುಡಿಯನ್ನು ಯಾವ ಕ್ರಮದಲ್ಲಿ ಉಪಯೋಗಿಸುತ್ತೇವೋ ಆ ಕ್ರಮದಲ್ಲೇ ಇದನ್ನೂ ಉಪಯೋಗಿಸಿದರೆ ವಿಶೇಷ ರುಚಿಕರವಾದ ಪಾನವಾಗುವುದು. ಶಿಶುಗಳು ಮೊದಲುಗೊಂಡು ವೃದ್ಧಾಪ್ಯದಲ್ಲಿರುವವರ ವರೆಗೆ ಎಲ್ಲಾ ವಯಸ್ಸಿನ ಸ್ತ್ರೀಪುರುಷರೂ ಉಪಯೋಗಿಸಬಹುದಾಗಿದೆ.

ಜ್ವರ, ಸನ್ನಿ, ಬಸರು, ಹೆರಿಗೆ, ವಾಂತಿಭೇದಿ, ಈ ಮೊದಲಾದವುಗಳು ಸಂಭವಿಸಿರುವ ಕಾಲಗಳಲ್ಲಿಯೂ ಈ ರಕ್ಷಾಮೃತ ಚೂರ್ಣದ ಕಷಾಯವನ್ನು ಕಾಲನ್ನು ಬೆರಸಿಯಾಗಲಿ ಬೆರಸದೆಯಾಗಲಿ ಸಮಯಾನುಸಾರವಾಗಿ ಸೇವಿಸಿದರೆ ಜನರನ್ನು ಸಮಸ್ತ ವ್ಯಾಧಿಗಳಿಂದಲೂ ಮುಕ್ತರನ್ನಾಗಿ ಮಾಡುವುದಲ್ಲದೆ, ಯಾವದೊಂದು ರೋಗವೂ ಕಾಲುಹಾಕಿಕೊಳ್ಳದಂತೆ ಕಾಪಾಡುವುದು. ಪಿತ್ತವಾಯುವು, ಗೂರಲು ಉಬ್ಬಸವು ಕ್ಷಯವು, ಅಜೀರ್ಣವು, ಮಲಬದ್ಧತೆಯು, ತಲೆನೋವು ಈ ಮೊದಲಾದ ರೋಗಗಳು ನಿವಾರಣೆಯಾಗುತ್ತವೆ. ಪ್ರಾಣಾಧಾರವಾಗಿ ಇರುವಂಥಾ ರಕ್ತವನ್ನು ಶುದ್ಧಿಮಾಡಿ, ಧಾತುವನ್ನು ವೃದ್ಧಿಪಡಿಸಿ, ದೇಹಾರೋಗ್ಯವನ್ನು ಕೊಡುತ್ತದೆ. ಅಗ್ನಿಮಾಂದ್ಯ, ಉಷ್ಣಪ್ರಕೋಪ, ಮಧುಮೂತ್ರ ಮತ್ತು ಅತಿಮೂತ್ರ ರೋಗಗಳಿಗೂ ವಿಶೇಷ ಅಪೂರ್ವವಾದಂಥಾ ಚೂರ್ಣವು ಇದನ್ನು ಬಿಟ್ಟರೆ ಬೇರೊಂದಿಲ್ಲ.

ಇದನ್ನು ಕ್ರಮಾನುಸಾರ ರಪ್ಪದೆ ಉಪಯೋಗಿಸುತ್ತಾ ಬಂದರೆ ಮಧುಮೂತ್ರ ರೋಗಿಗಳ ಶರೀರದಿಂದ ಹೊರಡುವ ಜಲದಲ್ಲಿ ರತಕ್ಕ ಸಕ್ಕರೆಯನ್ನೂ ವಿಶೇಷವಾದ ದೌರ್ಬಲ್ಯವನ್ನೂ ಕಡಿಮೆ ಮಾಡಿ, ಮೂತ್ರರೋಗದ ಬೇರನ್ನೇ ನಿರ್ಮೂಲ ಮಾಡುವುದು. ದೇಹದ ಉಷ್ಣವನ್ನು ಶಾಂತಿಮಾಡುವುದು; ಮೆದುಳನ್ನು ಬಲಪಡಿಸಿ ಜ್ಞಾಪಕಶಕ್ತಿಯನ್ನು ವೃದ್ಧಿಗೊಳಿಸುವುದು. ವಿದ್ಯಾರ್ಥಿಗಳು, ವಕೀಲರು, ಉದ್ಯೋಗಸ್ಥರು, ವಿರೋಧಕಾರಿಯಾದ ಗುಣವುಳ್ಳ ಕಾಫಿ, ಚೇಯಿಯನ್ನು ಖಂಡಿತವಾಗಿ ಬಿಟ್ಟು, ಈ ರಕ್ಷಾಮೃತ ಚೂರ್ಣವನ್ನೇ ಉಪಯೋಗಿಸುತ್ತಾ ಬಂದಲ್ಲಿ ಇದು ಅಪೂರ್ವವಸ್ತುವಾಗಿ ಪರಿಣಮಿಸುವುದು. ಇಪ್ಪತ್ತು ದಿನಗಳಿಗೆ ಸಾಕಾಗುವಷ್ಟು ಚೂರ್ಣವುಳ್ಳ ಡಬ್ಬಿ ಒಕ್ಕೆ ಕ್ರಯ ೬ ಆಣೆ. ವಿ. ಪಿ. ಛಾರ್ಜಿ ೩ ಆಣೆ ಹೆಚ್ಚಾಗುವುದು. ಮುಂಗಡ ೮ ಆಣೆ ಸ್ಟಾಂಪುಗಳು ಬರೆದಲ್ಲಿ ಒಂದು ಡಬ್ಬಿ ಚೂರ್ಣ ಕಳುಹಿಸಲ್ಪಡುತ್ತೆ.

ಕಾಗದವನ್ನು ಇಂಗ್ಲೀಷ್ ಅಥವಾ ತಮಿಳಿನಲ್ಲಿ ಬರೆಯಿರಿ.

Apply to.—**P. SUBBAROY,**

Porto Novo, South Arcot.

ವಿಳಾಸ:—ಪಿ. ಸುಬ್ಬರಾಯ್, ಪೋರ್ಟನೋವೋ, ದಕ್ಷಿಣ ಆರ್ಕಾಟ್ ಜಿಲ್ಲಾ.

CHAMBERLAIN'S PAIN BALM

ಚೇಂಬರ್ಲೇನ್ ಯವರು ಮಾಡಿದ ನೋವುಹರ ಔಷಧವು.

1515



ಬೆನ್ನೆಲುಬಿನಲ್ಲಿನ ನೋವು, ಪಕ್ಕೆಗಳಲ್ಲಿ ಆಗುವ ನೋವು, ಖಂಡಗಳಲ್ಲಿ ಹುಟ್ಟುವ ನೋವು, ತರಚು, ಜಜ್ಜಾದ ಕಡೆಗಳ ನೋವು, ವಾಯುನೋವು—ಇವುಗಳನ್ನೆಲ್ಲಾ ಸಂಪೂರ್ಣವಾಗಿ ವಾಸಿಮಾಡುವಂಥಾ ಔಷಧ. ವಾಯುನೋವೆಂದರೇನು?

ಕೀಲುಗಳಲ್ಲೂ ಮಣಿಕಟ್ಟುಗಳಲ್ಲೂ ಗಾಯವಾಗುವುದು, ಊದಿಕೊಳ್ಳುವುದು, ಕಠಿಣವಾಗಿ ಕಲಿಯುವ ಖಂಡಗಳಲ್ಲಿ ಇರಿಯುವುದು, ವಿಶ್ರಾಂತಿಕೊಡದೆ ಇರುವುದು, ನಿದ್ದೆಹತ್ತದೆ ಇರುವುದು—ಇದೇ ಇದೆಲ್ಲಾ ವಿಷಯವಾಗಿ ಉಂಟಾಗುತ್ತದೋ ಆಗ್ಗೆ ನಿಮಗೆ ವಾಯುರೋಗ ಬಂದಿದೆ ಎಂದು ತಿಳಿಯತಕ್ಕದ್ದು.

ಆಗ ಚೇಂಬರ್ಲೇನ್ಯವರು ಮಾಡಿದ ನೋವುಹರ ಔಷಧವನ್ನು ಉಪಯೋಗಿಸಿ.

ಮೊದಲನೇ ಸಲ ಇದನ್ನು ಹಾಕಿ ಉಜ್ಜಿದ ಕೂಡಲೆ ಹಿತಕರವಾದ ಒಂದು ತರಹಾ ಬೆಚ್ಚನ ಸ್ಥಳವೆಲ್ಲಾ ವ್ಯಾಪಿಸುತ್ತದೆ. ಒಡನೆಯೇ ನೋವೆಲ್ಲಾ ಸಂಪೂರ್ಣವಾಗಿ ಪರಿಹರಿಸಲ್ಪಡುತ್ತದೆ. ಮನಸ್ಸಿಗೆ ಉಲ್ಲಾಸವಾಗುತ್ತದೆ. ಆದನ್ನೇ ಆಗಿಂದಾಗ್ಗೆ ಹಾಕಿ ಉಜ್ಜುತ್ತಾ ಬಂದರೆ ಈ ವಾಯುವಿನ ಹುಟ್ಟನ್ನೇ ಕಿತ್ತುಹಾಕಿಬಿಡುವುದು.

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ.

ಕೈಯಿಂದ ಮುಟ್ಟಿದ್ದೇನೂ ಅಲ್ಲ.

ಇದು ಎಲ್ಲೆಲ್ಲೂ ಬಿಕರಿಯಾಗುವುದು. ಸಣ್ಣ ಸೀಸೆಗೆ ೧ ರೂಪಾಯಿ ದೊಡ್ಡ ಸೀಸೆಗೆ ೨ ರೂಪಾಯಿ

ಇದಕ್ಕೆ ಸಮಾನವಾದ ಪುಸ್ತಕ ಉಂಟೋ?

565

ಕನ್ನಡ ಭಾಷೆಯಲ್ಲಿ ಇದುವರೆವಿಗೂ ಇಂಥಾ ಸೊಗಸಾದ ಪುಸ್ತಕವು ಪ್ರಚುರವಾಗಲಿಲ್ಲ. ಸ್ವಲ್ಪ ನೋಡಿ.

"ಹಿಂದೂದೇಶಪ್ರದಕ್ಷಿಣ."

ಎಂದು ಕರೆಯಲ್ಪಡುವ ಈ ನೂತನ ಪುಸ್ತಕದಲ್ಲಿ ಸುಮಾರು ತೊಂಭತ್ತು ಉತ್ಕೃಷ್ಟವಾದ ಚಿತ್ರಗಳು ಅಡಗಿವೆ. ಹಣವ್ಯಯ ಮಾಡಿ ಹಿಂದೂದೇಶವನ್ನೆಲ್ಲಾ ನೋಡುವುದಕ್ಕೆ ಬದಲಾಗಿ ಈ ಪುಸ್ತಕವನ್ನು ಕೊಂಡು ಓದಿದರೆ ಎಲ್ಲಾ ಸ್ಥಳಗಳೂ, ಜನರ ಸ್ಥಿತಿಗತಿಗಳೂ ಬಹು ಪರಿಷ್ಕಾರವಾಗಿ ಕಂಡುಬರುವವು. ಇದರಲ್ಲಿರುವ ಚಿತ್ರಗಳನ್ನು ಸ್ವಲ್ಪ ನೋಡಿ. ಆಗ್ರಾಪಟ್ಟಣದ ಬಳಿಯಲ್ಲಿರುವ ಜಗತ್ಪ್ರಸಿದ್ಧವಾದ ತಾಜ್‌ಮಹಲ್, ಹುಮಾಯೂನನ ಗೋರಿ, ಪುಷ್ಕರ್ಣಿ, ಕಲ್ಕತ್ತಾ ನಗರ, ಕಲ್ಕತ್ತಾ ಹೈಕೋರ್ಟು, ಕಾಳಿಕಾದೇವತೆ, ಚಂದ್ರನಗರ, ಬಂಗಾಳಿಯರ ಮನೆಗಳು, ಜಗನ್ನಾಥಸ್ವಾಮಿ, ಭುವನೇಶ್ವರವೆಂಬ ದೇವಸ್ಥಾನ, ಜಗನ್ನಾಥರ ರಥೋತ್ಸವ, ಕನರಾಕ್ ದೇವಸ್ಥಾನ, ಎಡಕಟ್ಟೆ ಕಿಬರ, ಬಿಜ್ಜಿಂಡುನಗರದ ಬೀದಿ, ಬಿಜ್ಜಿಂಡುನಗರದ ದೇವಸ್ಥಾನಗಳು, ಜಜಚಕ್ರಗಳು, ಅಂಬೆಗರು ದೋಣಿಯನ್ನು ಎಳೆಕೊಂಡು ಹೋಗುವದು, ಗಯಾದಲ್ಲಿರುವ ಬುದ್ಧನ ದೇವಸ್ಥಾನ, ಔರಂಗಜೇಬನು ಕಟ್ಟಿಸಿದ ಮಸೀತಿ, ಕಾಶೀ(ಪುಣ್ಯಕ್ಷೇತ್ರ)ದಲ್ಲಿರುವ ದಶಾಶ್ವಮೇಧಘಟ್ಟ, ಕಪಿಗಳಿಗೆ ತಿಂಡಿ ಹಾಕುವದು, ಕಾಶೀಕ್ಷೇತ್ರದ ದೇವಸ್ಥಾನಗಳು, ಅಲಹಾಬಾದ್‌ನಗರ ಮತ್ತು ಅದರ ಕೋಟೆ, ಅಲಹಾಬಾದ್‌ನಲ್ಲಿರುವ ಖುಸ್ರುಬಾಗ್ ಅರಮನೆ, ಯಮುನಾನದಿಯಲ್ಲಿ ಯಾತ್ರಿಕರು ಸ್ನಾನಮಾಡುವದು, ಕಾನ್ಪುರದಲ್ಲಿರುವ ಶಿಲಾಶಾಸನ, ಕಾನ್ಪುರದ ಪಕ್ಕದ ಗಂಗಾನದಿಯ ಮೇಲೆ ಕಟ್ಟಿರುವ ಸೇತುವೆ, ಲಕ್ನೋನಗರದ ರೆಸಿಡೆನ್ಸಿ ಬಂಗಲೆ, ಲಕ್ನೋಪಟ್ಟಣದ ಬಾಗಿಲು, ಸರ್ ಹೆನ್ರಿ ಹ್ಯಾವಲಾಕನು, ಗೋಮತಿನದಿಯ ಮೇಲಿರುವ ಅರಮನೆ, ಹ್ಯಾರಿದ್ವಾರದಲ್ಲಿ ಜನರ ಸ್ಥಿತಿ, ಹರಿದ್ವಾರಘಟ್ಟ, ಗಂಗೋತ್ರಿ ದೇವಸ್ಥಾನ, ಹಿಮವತ್ಪರ್ವತಗಳ ಮೇಲಿರುವ ಪಟ್ಟಣ, ಹಿಮಪ್ರವಾಹಗಳು, ಆಗ್ರಾಪಟ್ಟಣದ ಕೋಟೆ, ಯಮುನಾನದಿಯು, ದೂರದಲ್ಲಿ ತೋರುತ್ತಿರುವ ತಾಜ್‌ಮಹಲ್ ಗೋರಿಯು, ತಾಜ್‌ಮಹಲಿನ ಕಲ್ಲಿನಲ್ಲಿ ಕೆತ್ತಿರುವ ಫಲಕ, ಅಕ್ಬರನ ಅರಮನೆ, ಆಗ್ರಾಪಟ್ಟಣದ ಮುತ್ತಿನ ಮಸೀತಿ, ಫತೇಪುರ್ ಸಿಕ್ರಿಯಲ್ಲಿರುವ ಪಂಚ್‌ಮಹಲ್ ಅರಮನೆ, ರಾಜಪುತ್ರರು, ಭರತಪುರದ ಕೋಟೆ, ಅಲ್ವಾರಿನಲ್ಲಿ ಮಹಾರಾಜಭಕ್ತ್ವಾರ್‌ಸಿಂಗರ ಗೋರಿ, ಅಲೆಕ್ಸಾಂಡರನ ತೋರಣವೂ, ದೆಹಲಿ ನಗರದ ದೊಡ್ಡ ಮಸೀತಿ, ಪುರಾತನ ದೆಹಲಿಯ ಬಾಗಿಲು, ರಾಜನೇವನು ಸ್ಥಾಪಿಸಿದ ಕಬ್ಬಿಣದ ಸ್ತಂಭ, ನಾದರ್‌ಷಹಾನು ದೆಹಲಿನಗರದಲ್ಲಿ ಪ್ರಜಾಸಂಹಾರವನ್ನು ನೋಡುತ್ತಿರುವದು ದೆಹಲಿಯ ಬಳಿಯಲ್ಲಿರುವ ಕುಟುಬ್‌ಮಿನಾರ್, ಚಾಂದ್ನಿಚೌಕ ಬೀದಿ, ಸಿಮ್ಲಾಕ್ಕೆ ಹೋಗುವ ದಾರಿ, ಸಿಮ್ಲಾ, ಅಮೃತಸಾರದ ಸುವರ್ಣಾಲಯ, ಲಾಹೋರಿನಲ್ಲಿರುವ ರಣಜಿತ್‌ಸಿಂಗರ ಗೋರಿ, ಲಾಹೋರ್ ಪಟ್ಟಣ, ಇವೇ ಮೊದಲಾದ ಅನೇಕ ರಮಣೀಯವಾದ ಸ್ಥಳಗಳ ಚಿತ್ರಗಳು ಈ ಪುಸ್ತಕದಲ್ಲಿ ಅಡಗಿವೆ. ಅವುಗಳನ್ನೆಲ್ಲಾ ಇಲ್ಲಿ ವಿವರಿಸುವದಕ್ಕೆ ಸ್ಥಳ ಸಾಲದು.

ಪ್ರತಿಯೊಂದು ಅಂಶದ ವಿವರವೂ ಬಹು ಪರಿಷ್ಕಾರವಾಗಿರುತ್ತದೆ. ದಕ್ಷಿಣ ದೇಶದಲ್ಲಿರುವ ಅನೇಕ ಪ್ರಸಿದ್ಧವಾದ ಸ್ಥಳಗಳ ಚಿತ್ರಗಳೂ, ಅವುಗಳ ವಿವರಣೆಗಳೂ ಇದರಲ್ಲಿವೆ. ಪುಸ್ತಕವು ಹನ್ನೊಂದು ಅಂಗುಲ ಉದ್ದವಾಗಿಯೂ ಒಂಬತ್ತು ಅಂಗುಲ ಅಗಲವಾಗಿಯೂ ಇರುತ್ತದೆ. ಪುಸ್ತಕವು ಭಾರಿಯಾಗಿದೆ. ಇಂಥಾ ಪುಸ್ತಕವನ್ನು ಪ್ರಚುರಪಡಿಸುವದಕ್ಕೆ ಬಹಳ ಸಮಯವನ್ನೂ ಹಣವನ್ನೂ ವ್ಯಯ ಮಾಡಿರುತ್ತೇವೆ. ಪುಸ್ತಕದ ಅಚ್ಚು ಮತ್ತು ಬೈಂಡು ಸುಂದರವಾಗಿರುತ್ತವೆ. ಇದರ ಕ್ರಯ ಎಂಟೇ ಆಣೆ. ವಿ. ಪಿ. ಮೂಲಕ ಹನ್ನೊಂದು ಆಣೆಗಳಾಗುವವು. ಪುಸ್ತಕವು ಜಾಗ್ರತೆಯಲ್ಲಿ ಮಾರಾಟವಾಗುತ್ತಿರೋದರಿಂದ ಕಾಪಿಗಳಲ್ಲರೂ ಕೆಳಗೆ ಕಂಡ ವಿಳಾಸಕ್ಕೆ ಬೇಗ ಬರೆದು ತರಿಸಿಕೊಳ್ಳಬೇಕು.

ಮ್ಯಾನೇಜರ್,

ಸಿ. ಎಲ್. ಎಸ್. ಬುಕ್ ಡಿಪೋ,

ಮೈಸೂರು.

ರಬ್ಬರ್ ಸ್ಟ್ಯಾಂಪುಗಳು.

139

ನಮ್ಮ ಕಂಪನಿಯಲ್ಲಿ ತಯಾರುಮಾಡಲ್ಪಡುವ ಇಂಗ್ಲಿಷ್ ಮೋ ರಬ್ಬರ್ ಸ್ಟ್ಯಾಂಪುಗಳಿಗೆ ದರಖಾಸ್ತು ಕಳುಹಿಸತಕ್ಕವರಿಗೆ ಅರ್ಧ ಕ್ರಯಕ್ಕೆ ತಯಾರಿಸಿ ಕಳುಹಿಸುತ್ತೇವೆ.



ಚಚ್ಚೌಕ, ದುಂಡು, ಚಟ್ಟೆ ಯಾವ ಆಕಾರವಾದರೂ ಅದರ ರಬೇಕಾದ ಅಕ್ಷರಗಳನ್ನು ಸುಂದರವಾದ ರಬ್ಬರ್ ಸ್ಟ್ಯಾಂಪು

ಇಂಕಿ ಸೀಸಾ ೧, ರಬ್ಬರ್ ಸ್ಟ್ಯಾಂಪು ಇರಿಸುವ ಪೆಟ್ಟಿಗೆ ೧, ಬ್ರಷ್ ೧, ಪ್ಯಾಡ್ ೧, ಇವುಗಳ ಸಹಿತ ಕ್ರಯ ರೂ ೧—೮—೦; ಪೋಸ್ಟೇಜು ೩ ಆಣೆ.

ವಿಳಾಸ:—ಮ್ಯಾನೇಜರ್, ರಬ್ಬರ್ ಸ್ಟ್ಯಾಂಪ್ ಮ್ಯಾನುಫ್ಯಾಕ್ಚರಿಂಗ್ ಕಂಪೆನಿ, ಮಾರ್ಕೆಟ್, ಮದ್ರಾಸ್.

ಇಸ್ತಿಹಾರ್.

651

ಮೈಸೂರು ಸೀಮೆಯಲ್ಲಿ ೧೯೦೬ನೆ ಇಸವಿ ಜುಲೈ ಗುತ್ತಿಗೆ ಆಗಾಯಿತು ೧೯೦೬ನೆ ಇಸವಿ ಜೂನ್ ೩೦ನೆ ತಾರೀಖಿಗೆ ಖೈದಾಗುವ ವರುಷದಲ್ಲಿ ಶರಾಬು, ಶೇಂದಿ, ಚರಸ, ಗಾಂಜಾ ಮತ್ತು ಅಫೀಂ ಅಂಗಡಿಯಲ್ಲಿರುವ ಅಂಗಡಿಗಳ ಸನುವಾರುದಲ್ಲಿ ಬಿಕರಿ ಮಾಡುವ ಸ್ವಾತಂತ್ರ್ಯ ಹಕ್ಕು ೧೯೦೬ ನೆ ಇಸವಿ ಏಪ್ರಿಲ್ ೫ ನೆ ತಾರೀಖಿನ ಮೈಸೂರು ಗೆಜೆಟ್ಟಿನಲ್ಲಿ ಜಾಹಿರ್ ಆಗಿರುವ ಷರತ್ತುಗಳಿಗೆ ಒಳಪಟ್ಟು ಅದರಲ್ಲಿ ಕಂಡ ಸ್ಥಳ ಮತ್ತು ತಾರೀಖುಗಳಲ್ಲಿ ಬಹಿರಂಗವಾಗಿ ಹರಾಜು ಮಾಡಲ್ಪಡುವದು.

ಮೈಸೂರು ಸೀಮೆಯ ಎಕ್ಸೈಜು ಕಮಿಷನರವರ ಆಫೀಸು. ೬ ನೆ ಏಪ್ರಿಲ್, ೧೯೦೬.	P. S. PURNIAH, Excise Commission in Mysore.

ಮಕ್ಕಳ ಆರೋಗ್ಯವನ್ನು

ಯಾವಾಗಲೂ ಕಾಪಾಡುವದು ಹೆತ್ತವರ ಮೇಲೆ ಬಿದ್ದ ಭಾರವಾಗಿದೆ. ಸಣ್ಣ ಮಕ್ಕಳು ಬೀಳದಂತೆ ಕೆಳದೆ ಬಿಟ್ಟರೆ ಒಳಪಡುವಂಥ ರೋಗಗಳು, ಆಹಾರದಿಂದ ಆಡಿಮಿಯುಳ್ಳ ಪಡಗಡುವೆಂದು ಕಂಡ ಕಪಳೇ

SCOTT'S EMULSION. 57

(ಸ್ಕಾಟ್ಸ್ ಇಮಲ್‌ಷನ್)

ಎಂಬೀ ಸೇವನಾ ಔಷಧವನ್ನು ಕೊಡಬೇಕು.

ಹಾಲಿನಲ್ಲಿ ಕಲೆತು ಕೊಟ್ಟರೆ ಕೊಟ್ಟ ಕ್ಷಣದಲ್ಲೇ ದೊಡ್ಡ ವ್ಯತ್ಯಾಸ ತೋರುವದು.

ಅದು ಸಂತೋಷವೂ ಆನಂದವೂ ಮಾಡಲಾಗಿ ಆಹಾರ ರುಚಿ ಹೊಂದಿಸಬೇಕೆ ಬೇರಿಸುವದು.

ಕೈಯಿಂದ ಮುಟ್ಟದೆ ತಯಾರಿಸಿದ್ದು.

ಎಲ್ಲಾ ಔಷಧವಾರಾಟಗಾರರಲ್ಲಿ ಸಿಕ್ಕುತ್ತದೆ.

ಸ್ಕಾಟ್ ಅಂಡ್ ಬೋನ್, ಲಿಮಿಟೆಡ್,

ರಸಾಯನಿಕ ಕಾರ್ಖಾನೆ,

ಲಂಡನ್, ಇಂಗ್ಲೆಂಡ್.

ಈ ವಿಧವಾದ ಮುದ್ರೆಯಿರುವ ಔಷಧವನ್ನೇ ಕೊಂಡುಕೊಳ್ಳಿ.

ವೃತ್ತಾಂತ ಪತ್ರಿಕೆ

೧೯೦೬ ನೇ ಇಸವಿ ಏಪ್ರಿಲ್ ತಾ॥ ೧೯ ನೇ ಗುರುವಾರ.

ರಾಜಧಾನಿಯಲ್ಲಿ ನೀರಿನ ಬರವು

ರಾಜಧಾನಿಯಾದ ಮೈಸೂರು ಪಟ್ಟಣದಲ್ಲಿ ಸದ್ಯ ನೀರಿಗೆ ತುಂಬಾ ಕಷ್ಟ ಉಂಟಾಗಿದೆ ಎಂಬ ಸಂಗತಿಯನ್ನು ಸುಮಾರು ಒಂದು ತಿಂಗಳ ಕೆಳಗೆ ಸ್ವಲ್ಪ ಮಟ್ಟಿಗೆ ಸೂಚಿಸಿದ್ದೆವಷ್ಟೆ. ಈ ಕಷ್ಟವು ಇನ್ನೂ ಪರಿಹರವಾಗಲಿಲ್ಲ ಎಂದು ಪ್ರಜೆಗಳೊಡನೆ ನಾವೂ ಚಿಂತಿಸಬೇಕಾಗಿದೆ. ಈ ಪಟ್ಟಣದಲ್ಲಿರುವ ಕಾರಂಜಿ ಕೆರೆ, ದೊಡ್ಡ ಕೆರೆ, ದೇವರಾಯನ ಕಟ್ಟೆ, ಈ ಮೊದಲಾದ ದೊಡ್ಡ ದೊಡ್ಡ ಜಲಾಶಯಗಳೂ ಕೆಲವು ಸಣ್ಣ ಜಲಾಶಯಗಳೂ ಬತ್ತಿಹೋಗಿರುವವು; ಇಲ್ಲವೇ ಬಣಗುವ ಸ್ಥಿತಿಗೆ ಬಂದಿವೆ. ಮಳೆಯಂತೂ ಯುಗಾದಿಯಾಗಿ ಮೂರು ವಾರಗಳು ಕಳೆದರೂ ಇನ್ನೂ ಒಂದು ಹದವಾದರೂ ಆಗಿ ಇಲ್ಲ. ಪ್ರಜೆಗಳು ಸಾಮಾನ್ಯವಾಗಿಯೂ ಎತ್ತರವಾದ ಭಾಗಗಳಲ್ಲಿರುವವರು ವಿಶೇಷವಾಗಿಯೂ ಜನವರಿ ಲಾಗಾಯಿತು ನೀರಿಗಾಗಿ ಪಡುತ್ತಿರುವ ಶ್ರಮವನ್ನು ವಿವರಿಸಲಾರೆವು. ಈ ಕಷ್ಟವನ್ನು ಶಾಶ್ವತವಾಗಿ ನೀಗಿಸಬೇಕೆಂತಲೇ ಸರಕಾರದವರು ಮೂರು ಲಕ್ಷ ರೂಪಾಯಿ ವರೆಗೆ ಖರ್ಚುಮಾಡಿ ಬೆಳಗೊಳದಿಂದ ಕಾವೇರಿ ನೀರನ್ನು ನಲ್ಲಿಗಳ ಮೂಲಕ ತಂದು, ರಾಜಧಾನಿಯ ಎಲ್ಲಾ ಭಾಗಗಳಿಗೂ ಬಿಟ್ಟರು. ಈ ನೀರು ಬಂದಾರಭ್ಯ ಪ್ರಜೆಗಳಿಗೆ ನೀರಿನ ಕೊರತೆಯಿರಲಿಲ್ಲ. ಕಳೆದ ೧೯೦೦ ನೆ ಇಸವಿಯಲ್ಲಿ ನೀರಿಗೆ ಸ್ವಲ್ಪ ತೊಂದರೆಯಾಗಿತ್ತಾದರೂ ಈಗಿನಷ್ಟು ಶ್ರಮವನ್ನೂ ಹಾಹಾಕಾರವನ್ನೂ ಜನರು ಅನುಭವಿಸಲಿಲ್ಲ. ಈಗ ಹೀಗಾಗುವುದಕ್ಕೆ ಕಾರಣವೇನೋ ತಿಳಿಯದು.

ಕುಕ್ಕರಹಳ್ಳಿ ಕೆರೆಯಲ್ಲಿ ನೀರು ಕಳೆದ ಜನವರಿ ಪ್ರಾರಂಭದಲ್ಲೇ ತೂಬಿಗೆ ಹತ್ತುವುದಕ್ಕಾಗದಷ್ಟು ಇಳಿದುಹೋಗಿತ್ತು. ಆ ಲಾಗಾಯಿತು ಫೆಬ್ರವರಿ ಮೊದಲನೆ ವಾರದವರೆಗೆ ಪಟ್ಟಣಕ್ಕೆಲ್ಲಾ ಕಾವೇರಿ ನೀರೇ ಸರಬರಾಜಾಗುತ್ತಿತ್ತು. ಪ್ರಿನ್ಸ್ ಆಫ್ ವೇಲ್ಸ್‌ರವರ ಆತಿಥ್ಯ ನಡೆದ ಕಾಲದಲ್ಲಿ ನೀರನ್ನು ಅಪಾರವಾಗಿ ರಸ್ತೆ ಮುಂತಾದ್ದಕ್ಕೆ ಉಪಯೋಗಿಸಿದ್ದರಿಂದಲೂ ಬೆಳಗೊಳದಲ್ಲಿ ಚಿಕ್ಕದೇವರಾಜ ನಾಲೆಗೆ ನೀರು ಬಿಟ್ಟದ್ದರಿಂದಲೂ ಪಟ್ಟಣಕ್ಕೆ ನೀರು ಒದಗುವುದು ಕಡಿಮೆಯಾಯಿತು. ಆಗ ಅಂದರೆ ಫೆಬ್ರವರಿ ೯, ೧೦ ನೆ ತಾ. ನಲ್ಲಿ ಕುಕ್ಕರಹಳ್ಳಿ ಕೆರೆಯಲ್ಲಿ ಉಳಿದಿದ್ದಷ್ಟು ಆ ನೀರನ್ನೂ ಎತ್ತಿ ಪಟ್ಟಣಕ್ಕೆ ಬಿಡಲಾರಂಭಿಸಿದರು. ಆ ತಿಂಗಳ ೧೪—೧೫ ನೆ ತಾ. ಸುಮಾರಿಗೆ ಕಾವೇರಿ ನೀರು ಸಹ ನಲ್ಲಿಯ ಮೂಲಕ ಬೆಳಗೊಳದಿಂದ ಬಂದು, ರೈಲ್ವೆ ಸ್ಟೇಷನ್ ಬಳಿ ಕಟ್ಟಿರುವ ಎರಡು ತೊಟ್ಟಿಗಳಲ್ಲೂ ಶೇಖರವಾಗುತ್ತಾ, ಕಡೆಗೆ ಅಂದರೆ ಕಳೆದ ಮಾರ್ಚಿ ಮೊದಲನೇ ವಾರದ ಹೊತ್ತಿಗೆ ಎರಡು ಕೊಳಗಳೂ ಭರ್ತಿ ಆದವು. ಈಗ ಸುಮಾರಾಗಿ ಒಂದು ತಿಂಗಳಿಂದಲೂ ಎರಡು ಕೊಳಗಳಲ್ಲೂ ೨೪ ಅಡಿಯ ನೀರೂ, ಪೂರ್ಣವಾದ ನೀರು ನಿಲ್ಲುವ ಕೊಳದಲ್ಲಿ ೧೦ ಅಡಿ ನೀರೂ ಇರುವ ಕೊಳಗಳಲ್ಲಿ ೪—೫ ಅಡಿ ನೀರೂ ಶೇಖರವಾಗಿರುವುದಾಗಿ ಹೇಳಲ್ಪಟ್ಟಿದೆ. ಬೆಳಗೊಳದಲ್ಲಿ ಎರಡು ಎಂತ್ರಗಳೂ ಕೆಲಸಮಾಡುತ್ತಾ ನೀರನ್ನು ಎತ್ತಿ ಪಟ್ಟಣಕ್ಕೆ ಕಳುಹಿಸುತ್ತಿರುವವೆಂದು ಕೇಳುತ್ತೇವೆ.

ಕಳೆದ ಮಾರ್ಚಿ ೧೭ ರಲ್ಲಿ ಶ್ರೀಮನ್ಮಹಾರಾಜರವರು ಪಟ್ಟಣದಲ್ಲಿರುವ ನೀರಿನ ಕ್ಲೇಶವನ್ನು ನೋಡಿ ಬೆಳಗೊಳಕ್ಕೆ ದಯಮಾಡಿ, ಅಲ್ಲಿನ ಏರ್ಪಾಡುಗಳನ್ನೆಲ್ಲಾ ಪರಿಶೀಲಿಸಿ, ಜನಸತಿಗೆ ಸ್ವಲ್ಪವೂ ಕೊರತೆಯಾಗದಂತೆ ಏರ್ಪಾಡು ಮಾಡಬೇಕೆಂದು ಛೀಫ್ ಇಂಜಿನಿಯರಿಗೂ ಸೂಪರಿಂಟೆಂಡೆಂಟ್ ಯವರಿಗೂ ಅಪ್ಪಣೆಕೊಡಿಸಿದಾರೆ. ಇವರು ಯಾವ ಏರ್ಪಾಡು ಮಾಡುವರೋ ಇನ್ನೂ ತಿಳಿಯಲಿಲ್ಲ.

ಈಗ ಕಾವೇರಿಯ ನೀರು ಮೇಲ್ಕಂಡ ಕೊಳಗಳಲ್ಲಿ ಇದ್ದಾಗ್ಯೂ ಅದನ್ನು ಪಟ್ಟಣದ ಎಲ್ಲಾ ಭಾಗಗಳಿಗೂ ಸರ್ವದಾ ಬಿಡುವುದಿಲ್ಲ. ಈ ಬೇಸಿಗೆಯಲ್ಲಿ ಹೀಗೆ ನೀರು ತಡೆಹಿಡಿದುಕೊಳ್ಳಬೇಕೆಂಬುವುದು ಎಂಥಾ ವಿವೇಕವೋ ನಮಗೆ ತಿಳಿಯದು. ಚಾಮರಾಜ ಅಗ್ರಹಾರ ಮತ್ತು ಕನ್ನೇಗೌಡನ ಕೊಪ್ಪಲು, ಮಂಡಿ, ಈರನಗೆರೆ, ಜೈಲು, ಈ ಭಾಗಗಳಲ್ಲಿ ಪ್ರಜೆಗಳಿಗೆ ಕಾಲಕ್ಕೆ ಸ್ನಾನಪಾನಾದಿಗಳಿಗೆ ನೀರು ದೊರಕದ ಅವಸ್ಥೆಯ ಹಾಗಾಗಿದೆ. ಗವರ್ನಮೆಂಟ್ ಹೌಸಿನ ಸರ್ಕಾರಿ ಕುದುರೆಗಳನಕಾ ನಾಯಿಗಳೋ ಪಾವಾಯಲ್ಲಿ ಪೋಸ್ಟ್ ಆಫೀಸಿನ ಹತ್ತಿರಕ್ಕೂ ಇತರ ಕಡೆಗಳಿಗೂ ಬಂದು ತೊಟ್ಟಿಗಳಲ್ಲಿ ನೀರು ಕುಡಿಯುತ್ತಲಿವೆ.

ಒಳದೇಶದ ವೃತ್ತಾಂತಗಳು.

ಬೆಂಗಳೂರು ದಂಡಿನಲ್ಲಿ ಡಾಕ್ಟರಾಗಿರುವ ಕರ್ನಲ್ ಬರ್ಕ್‌ರವರಿಗೆ ಮದರಾಸ್ ಗವರ್ನಮೆಂಟಿನ ಸರ್ಜನ್ ಜನರಲ್ ಎಂಬ ಭಾರೀ ಕೆಲಸವು ಸದ್ಯ ಬದಲಿ ನೋಡುವಂತೆ ನೇಮಕವಾಗಿದೆ.

****

ಕೌನ್ಸಿಲರುಗಳು ಬೆಂಗಳೂರಿಂದ ನೀಲಗಿರಿಗೆ ಹೋಗಲಿಲ್ಲವೆಂತಲೂ, ಆ ಪ್ರಕಾರ ಒಬ್ಬರು ಇಷ್ಟರಲ್ಲೇ ಮಲನಾಡಿನ ಕಡೆ ಸರ್ಕೀಟು ಹೊರಡುವವರಾಗಿದಾರೆಂತಲೂ ವರ್ತಮಾನವಿದೆ.

****

ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿಗೆ ಸೇರಿದ ೧೨ ಡಿವಿಷನ್‌ಗಳಿಗೂ ಹೊಸ ಮ್ಯುನಿಸಿಪಲ್ ಕಮಿಷನರರನ್ನು ಮುಂದಿನ ತಿಂಗಳ ೧೯ ರಿಂದ ಚುನಾಯಿಸುವುದಕ್ಕೆ ಪ್ರಾರಂಭವಾಗುವುದು.

****

ಬೆಂಗಳೂರು ಅಕ್ಕಿಪೇಟೆ ಸೂರಪ್ಪನವರ ಸಣ್ಣ ಹುಡುಗನ ಶವವು ಒಕ್ಕಲಿನ ಸಂಪಂಗಿ ಹಳ್ಳಿ ಕೆರೆಯಲ್ಲಿ ಕಳೆದ ಗುರುವಾರ ಬೆಳಗ್ಗೆ ಸಿಕ್ಕಿತು. ಪೊಲೀಸಿನವರು ಒಬ್ಬ ಹುಡುಗನನ್ನು ಹಿಡಿದು ವಿಚಾರಣೆ ಮಾಡುತ್ತಿದಾರೆಂದು ತಿಳಿದು ಬಂದಿದೆ.

****

ಯಳಂದೂರು ತಾಲ್ಲೂಕ್ ಮದ್ದನಹಳ್ಳಿಯಲ್ಲಿ ಹಿಂದಿನಿಂದ ಸಂಜ್ಞೆಯುಳ್ಳ ಮನೆಯನ್ನು ಗುಮಾಸ್ತರೂ ಮೇಲೆ ಸರ್ಕಾರದವರು ಹೊಸದಾಗಿ ಅಗೆಸುತ್ತಿದ್ದರಲ್ಲಿ ಸುಮಾರು ೧,೦೦೦ ರೂಪಾಯಿನ ನಗ ನಾಣ್ಯ ಬೆಳ್ಳಿ ಬರೆಗಳು ಸಿಕ್ಕಿದವು. ಅದನ್ನೆಲ್ಲಾ ಪೋಲೀಸಿನವರು ತಮ್ಮ ಸ್ವಾಧೀನದಲ್ಲಿಟ್ಟುಕೊಂಡಿದಾರೆ.

****

ಚಿತ್ರದುರ್ಗದ ಡಿಸ್ಟ್ರಿಕ್ಟಿನಲ್ಲಿ ಅರ್ಬತ್‌ನಾಟ್ ಕಂಪೆನಿಯವರು ಗನ್ನಾ ಫಸಲಿಗಾಗಿ ಗವರ್ನಮೆಂಟಿನಿಂದ ಸಾವಿರಾರು ಎಕರೆ ಜಮೀನನ್ನು ಕಂದಾಯಕ್ಕೆ ವಹಿಸಿಕೊಂಡಿದಾರಷ್ಟೆ. ಈ ಕಂಪೆನಿಯ ಮೂಲಧನವು ೧೦ ಲಕ್ಷ ರೂಪಾಯಿ ಎಂದಲೂ ಆ ಪ್ರಕಾರ ೫,೫೦೦ ರೂಪಾಯಿ ವರೆಗೆ ಮಾರ್ಕೆಟ್ ಕೂಡ ಇದೆ ಎಂತಲೂ ತಿಳಿಯಬಂದಿದೆ.

****

ಮೈಸೂರು ಸಂಸ್ಥಾನದ ಛೀಫ್ ಜಡ್ಜರಾಗಿದ್ದ ಮಿ॥ ಜಸ್ಟಿಸ್ ಸ್ಟೀಲಿ ಯವರು ಕೆಲಸಕ್ಕೆ ರಾಜೀನಾಮೆ ಕೊಟ್ಟು ಮೊನ್ನೆ ಸೋಮವಾರ ರಾತ್ರಿ ಸೀಮೆಗೆ ಪ್ರಯಾಣಮಾಡಿದರು. ಇವರ ಕೆಲಸಕ್ಕೆ ಯಾರೂ ಇನ್ನೂ ನೇಮಕವಾಗಿಲ್ಲ. ಮದರಾಸ್ ಹೈಕೋರ್ಟಿನ ಮಿ॥ ಜಸ್ಟಿಸ್ ಮಿಲ್ಲರ್ ಯವರು ನೇಮಕರಾಗಬಹುದೆಂದು ವರ್ತಮಾನವಿದೆ.

****

ರಾಜಧಾನಿಯಲ್ಲಿ ಕೆಲವು ದೊಡ್ಡ ಮನುಷ್ಯರು ಕ್ಷೇಮವಾದ ಸೇರಿ ಒಂದು ಸಂಘವನ್ನು ಮಾಡಿಕೊಂಡು, ಜರ್ಮನ್ ರಾಜ್ಯದ ಸ್ಥಾಪಿಸಿ ೧೯೦೯ ಜನರಿಂದ ಚಂದಾ ಹಣವನ್ನು ಕೂಡಿಸಲಾರಂಭಿಸಿದಾರೆ. ಮೈಸೂರು ಮಹಾರಾಜಾ ಕಾಲೇಜಿನ ಸಹೋಪಾಧ್ಯಾಯರಾದ ಮಿ॥ ಕೃಷ್ಣಮೂರ್ತಿಯವರು ಈ ಸಂಘದ ಖಜಾಂಚಿಯಾಗಿರುವುದರಿಂದ ಕಷ್ಟನಿವಾರಣೆಯಲ್ಲಿ ನಿರತರಾದಂಥಾ ಪುಣ್ಯಾತ್ಮರು ಚಂದಾ ಹಣವನ್ನು ಅವರಿಗೆ ಕಳುಹಿಸಿಕೊಡುವರೆಂದು ನಿರೀಕ್ಷಿಸುತ್ತೇವೆ.

****

ಗ್ರ್ಯಾಂಡ್ ಡ್ಯೂಕ್ ಸ್ಟಾಕ್ಸ್ ವಿಮಾರ್ ಐಸನಾಕ್ ರಾಜಕುಮಾರರು ಪರಿವಾರಸಹಿತ ಕಳೆದ ವಾರ ರಾಜಧಾನಿಗೆ ಬಂದು ಅರಮನೆ ಮುಂತಾದ್ದನ್ನು ನೋಡಿಕೊಂಡು, ಪ್ರಿನ್ಸ್ ಗೋಪಾಲರಾಜೇ ಅರಸಿನವರ ಸಂಗಡ ಗುಂಡ್ಲುಪೇಟೆ ಬಳಿ ಜಂಗಲಿಗೆ ಹೋಗಿ ಷಿಕಾರಿ ಮಾಡಿ, ಹಿಂತಿರುಗಿ ಫ್ರೆಂಚ್‌ರಾಕ್ಸ್, ನಾಗಮಂಗಲದ ಮೇಲೆ ಹಾದು, ಕುಣಿಗಲಿಗೆ ಹೋಗಿ ಅಲ್ಲಿರುವ ಸರ್ಕಾರಿ ಅಶ್ವಶಾಲೆಯನ್ನು ಪರಾಂಬರಿಸಿ, ತುಮಕೂರಿನಲ್ಲಿ ರೈಲು ಹತ್ತಿ ಉತ್ತರ ದೇಶಕ್ಕೆ ಪ್ರಯಾಣ ಮಾಡಿದರು.

****

ಬೆಂಗಳೂರಿನಲ್ಲಿ ಕಿಡುಬಡಾಲಿನ ತಯಾರಿಗಾಗಿ ಸರ್ಕಾರದವರು ಇಟ್ಟಿರುವ ಕಾರ್ಖಾನೆಯಲ್ಲಿ ಕಳೆದ ೧೯೦೫ ನೆ ವರುಷದಲ್ಲಿ ೨,೧೬,೧೫೦ ಜನರಿಗೆ ಕಿಡುಬು ಹಾಕುವಷ್ಟು ಹಾಲನ್ನು ಮಾತ್ರ ತಯಾರುಮಾಡಿದರು. ಅದರ ಹಿಂದಿನ ವರುಷಕ್ಕಿಂತಲೂ ೨,೯೦,೦೦೫ ಜನರಿಗೆ ಹಾಕುವಷ್ಟು ಹಾಲು ಕಡಿಮೆ. ಒಟ್ಟಿನಲ್ಲಿ ಹಾಕುವಷ್ಟು ಹಾಲನ್ನು ತಯಾರುಮಾಡುವುದಕ್ಕೆ ೧೯೦೪ ರಲ್ಲಿ ೪ ಕಾಸೂ, ೧೯೦೫ ರಲ್ಲಿ ೮ ಕಾಸೂ ಖರ್ಚು ಮುಟ್ಟಿರುತ್ತದೆ.

****

ಬೆಂಗಳೂರು ಮಲ್ಲೇಶ್ವರದ ಬಡಾವಣೆಯಲ್ಲಿರುವ ಹೊಸ ವಿಘ್ನೇಶ್ವರ ದೇವಸ್ಥಾನದಲ್ಲಿ ಅರ್ಚಕನಿಗೆ ೯ ರೂ., ಪರಿಚಾರಕನಿಗೆ ಮುಂತಾದ್ದಕ್ಕೆ ೮ ರೂ., ಕಾವಲುಗಾರನಿಗೆ ೩ ರೂ., ಅಂತೂ ೨೦ ರೂಪಾಯನ್ನು ತಿಂಗಳೊಂದಕ್ಕೆ ಸರ್ಕಾರದಿಂದ ಕೊಡುವುದಾಗಿ ಸ್ಯಾಂಕ್ಷನ್ ಆಗಿದೆ. ಇವಲ್ಲದೆ ಇನ್ನು ಮುಂದೆ ನೂತನ ದೇವಸ್ಥಾನಾದಿಗಳನ್ನು ಹೊಸದಾಗಿ ಕಟ್ಟಿದ್ದಲ್ಲದೆ ಜೀರ್ಣೋದ್ಧಾರ ಮಾಡಿದರೂ ಅವುಗಳಿಗೆ ಶಾಶ್ವತವಾಗಿ ನಡೆಯುವಂತೆ ಧನವಿಟ್ಟು ಮುಂತಾದ್ದು ಹಾಕಿ ತೋರಿಸಿ ಕೊಟ್ಟ ಹೊರತು ಗವರ್ನಮೆಂಟಿನವರು ಗ್ರ್ಯಾಂಟನ್ನು ಸ್ಯಾಂಕ್ಷನ್ ಮಾಡುವುದಿಲ್ಲವೆಂದು ಹುಕುಂ ಕೊಟ್ಟಿದಾರೆ.

ಮೈಸೂರು ಗೆಜೆಟ್ ಸಂಗ್ರಹ.

ಸರ್ ಪಿ. ಎನ್. ಕೃಷ್ಣಮೂರ್ತಿ, ಕೆ. ಸಿ. ಐ. ಇ. ಯವರು ದಿವಾನಗಿರಿಯ ಉದ್ಯೋಗವನ್ನು ಮಾರ್ಚಿ ೩೧ ನೆ ತಾ॥ ಮಧ್ಯಾಹ್ನ ಬಿಟ್ಟರೋ ಆದ ದಿಂದ ಅವರಿಗೆ ಶ್ರೀ ಮನ್ಮಹಾರಾಜರವರು ೩ ನೆ ತಾರೀಖಿನಿಂದ ಮೂರು ತಿಂಗಳ ಪ್ರಿವಿಲೇಜ್ ರಜಾ ದಯಪಾಲಿಸಿರುತ್ತಾರೆ.

ಸರ್ ಪಿ. ಎನ್. ಕೃಷ್ಣಮೂರ್ತಿ, ಕೆ. ಸಿ. ಐ. ಇ. ಯವರು ದಿವಾನಗಿರಿಯನ್ನು ಬಿಟ್ಟ ಕಾರಣ ಅವರಿಗೆ ಕೊಟ್ಟಿರುವ ರಜಾ ಪೂರೈಸಿದ ಮೇಲೆ ಕೆಲಸದಿಂದ ನಿವೃತ್ತರಾಗಲು ಶ್ರೀಮನ್ಮಹಾರಾಜರವರು ಅಪ್ಪಣೆ ಕೊಡಿಸಿರುತ್ತಾರೆ. ಈ ಸಂದರ್ಭದಲ್ಲಿ ಸರ್ ಕೃಷ್ಣಮೂರ್ತಿಯವರು ಸುಮಾರಾಗಿ ಮೂವತ್ತಾರು ಸಂವತ್ಸರಗಳ ವರೆಗೆ ಮಾಡಿರುವ ನೌಕರಿ ವಿಷಯದಲ್ಲಿ ಶ್ರೀಮನ್ಮಹಾರಾಜರವರು ತಮಗುಂಟಾಗಿರುವ ಅಭಿಮಾನವನ್ನು ರಿಕಾರ್ಡ್ ಮಾಡುವ ಅಭಿಲಾಷೆಯುಳ್ಳವರಾಗಿದಾರೆ. ಹ್ಯಾಗೆಂದರೆ—ಸರ್ ಕೃಷ್ಣಮೂರ್ತಿಯವರು ೧೮೭೦ ನೆ ಇಸವಿಯಲ್ಲಿ ಅಸಿಸ್ಟೆಂಟ್ ಸೂಪರಿಂಟೆಂಡೆಂಟರಾಗಿ ಕೆಲಸಕ್ಕೆ ದಾಖಲಾಗಿ, ೧೮೮೦ ರಲ್ಲಿ ಡೆಪ್ಯುಟಿ ಕಮಿಷನರ ದರ್ಜೆಗೆ ಹತ್ತಿ, ೧೮೯೦ ರಲ್ಲಿ ಚೀಫ್ ಕೋರ್ಟ್ ಜಡ್ಜರಾಗಿ ೧೮೯೫ ರಲ್ಲಿ ಕೌನ್ಸಿಲ್ ಮೆಂಬರಾಗಿ ಬಡ್ತಿಗೆ ಬಂದು, ಕಡೆಗೆ ೧೯೦೧ ರಲ್ಲಿ ದಿವಾನರಾಗಿ ನೇಮಕವಾದರು. ಸಾರ್ವಭೌಮ ಸರ್ಕಾರದವರು, ಇವರು ಈ ಸಂಸ್ಥಾನದಲ್ಲಿ ಮಾಡಿದ ನೌಕರಿಯನ್ನು ಪರಿಗಣಿಸಿ, ಇವರಿಗೆ ೧೮೯೭ ರಲ್ಲಿ ಸಿ. ಐ. ಇ. ಎಂಬ ಬಿರುದನ್ನೂ ಅಲ್ಲಿಂದೀಚೆಗೆ ೧೯೦೩ ರಲ್ಲಿ ಅದಕ್ಕಿಂತಲೂ ಪ್ರಶಸ್ತವಾದ ಕೆ. ಸಿ. ಐ. ಇ. ಎಂಬ ಬಿರುದನ್ನೂ ದಯಪಾಲಿಸಿರುತ್ತಾರೆ. ಇವರು ದಿವಾನರಾಗಿದ್ದುಕೊಂಡು ಘನವೆತ್ತಿದ ಲೇಟ್ ರೀಜೆಂಟ್ ಮಹಾರಾಣಿ, ಸಿ. ಐ. ಇ. ಯವರ ಕಾಲದಲ್ಲೂ ತಮ್ಮ ಕಾಲದಲ್ಲೂ ನೌಕರಿ ಮಾಡಿದ್ದಕ್ಕಾಗಿ ಅವರಿಗೆ ಮನಃಪೂರ್ವಕವಾದ ವಂದನೆಗಳನ್ನು ಅವರ ನೌಕರಿಯ ಈ ಅಂತ್ಯಕಾಲದಲ್ಲಿ ದಯಪಾಲಿಸುವರು. ಅವರು ದೀರ್ಘವಾದ ಮತ್ತು ಶ್ಲಾಘನೀಯವಾದ ನೌಕರಿಯನ್ನು ಮಾಡಿ ವಿಶ್ರಾಂತಿಯನ್ನು ಸಂಪಾದಿಸಿಕೊಂಡಿರುತ್ತಾರಾದ್ದರಿಂದ ಈ ವಿರಾಮಕಾಲವು ಅವರಿಗೆ ಸುಖಸಂತೋಷಗಳನ್ನು ಕೊಡುವುದಾಗಲೆಂದು ಶ್ರೀಮನ್ಮಹಾರಾಜರವರೂ ಮಹಾರಾಣಿ ಛೀಫ್ ರೀಜೆಂಟರವರೂ ಹಾರೈಸುವರು.

ಚಿತ್ರದುರ್ಗದ ಅಮಲ್ದಾರ್ ಮಿ॥ ಟಿ. ರಾಮಚಂದ್ರರಾಯರಿಗೆ ಕೊಟ್ಟಿದ್ದ ಒಂದೂವರೆ ತಿಂಗಳ ಪ್ರಿವಿಲೇಜ್ ರಜವನ್ನು ಇನ್ನೂ ಒಂದು ವರೆ ತಿಂಗಳಿಗೆ ಜಾಸ್ತಿ ಮಾಡಿದೆ.

ಮಿ॥ ಕೆ. ಪಿ. ಪುಟ್ಟಣ್ಣಚೆಟ್ಟಿಯವರು ಮಾರ್ಚಿ ೨೯ ರಲ್ಲಿ ಕೌನ್ಸಿಲ್ ಮೆಂಬರ್ ಕೆಲಸದ ಚಾರ್ಜನ್ನು ವಹಿಸಿಕೊಂಡಿದಾರೆ.

ಹಾಸನದ ಅ॥ ಕಮಿಷನರ್ ಮಿ॥ ಎಂ. ಎ. ನಾರಾಯಣ ಐಯ್ಯಂಗಾರ್ರಿಗೆ ೧ನೆ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರ ಕೊಟ್ಟಿದೆ. ಅವರು ಸಾಕ್ಷಿಗಳ ಕೈಫಿಯತ್ತನ್ನು ಇಂಗ್ಲಿಷಿನಲ್ಲಿ ಬರೆದುಕೊಳ್ಳಬಹುದು.

ಸ್ಪೆಷಲ್ ಡ್ಯೂಟಿ ಸಬ್ ಅ॥ ಇಂಜಿನಿಯರ್ ಮಿ॥ ಜೆ. ಎಂ. ವಾಸ್ಸುದೇವರಾಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ೧೫ ದಿನಗಳ ಪ್ರಿವಿಲೇಜ್ ರಜಾ ಕೊಟ್ಟಿದೆ.

ಮಿ॥ ಟಿ. ಆನಂದರಾಯರನ್ನು ೧ನೆ ಕೌನ್ಸಿಲರಾಗಿಯೂ ಮಿ॥ ಕೆ. ಪುಟ್ಟಣ್ಣಚೆಟ್ಟಿಯವರನ್ನು ೨ನೆ ಕೌನ್ಸಿಲರಾಗಿಯೂ ಏರಡುವರುಷ ಅಥವಾ ಮಹಾರಾಜರವರು ಇಷ್ಟಪಡುವ ವರೆಗೆ ಆರಕ್ಕಿದ್ದೆಂದು ಶ್ರೀಮನ್ಮಹಾರಾಜರವರು ನೇಮಕಮಾಡಿರುತ್ತಾರೆ.

ಶ್ರೀರಂಗಪಟ್ಟಣದ ತಾಲ್ಲೂಕ್ ಅಮಲ್ದಾರ್ ಮಿ॥ ಎನ್. ಗೋಪಾಲಕೃಷ್ಣಯ್ಯಂಗಾರ್ರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳ ಪ್ರಿವಿಲೇಜ್ ರಜಾ ಕೊಟ್ಟಿದೆ.

ಫ್ರೆಂಚ್‌ರಾಕ್ಸಿನ ಆಕ್ಟಿಂಗ್ ಡೆಪ್ಯುಟಿ ಅಮಲ್ದಾರ್ ಎಸ್. ಶ್ರೀನಿವಾಸೈಯ್ಯಂಗಾರು ಶ್ರೀರಂಗಪಟ್ಟಣದ ತಾಲ್ಲೂಕ್ ಛಾರ್ಜನ್ನು ವಹಿಸಿರತಕ್ಕದ್ದು.

ಸೊರಬದ ತಾಲ್ಲೂಕ್ ಅಮಲ್ದಾರ್ ಮಿ॥ ಎನ್. ಗೋಪಾಲಕೃಷ್ಣಪ್ಪನವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಮೂರು ವಾರಗಳ ಪ್ರಿವಿಲೇಜ್ ರಜಾ ಕೊಟ್ಟಿದೆ.

ಶಿರಸ್ತೇದಾರರು ಆ ತಾಲ್ಲೂಕಿನ ಅಮಲ್ದಾರ್ ಮತ್ತು ೩ನೆ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಕೆಲಸನೋಡತಕ್ಕದ್ದು.

ಮಿ॥ ಟಿ. ಆನಂದರಾಯರು ಮಾರ್ಚಿ ೨೯ ರಲ್ಲಿ ಕೌನ್ಸಿಲ್ ಮೆಂಬರ್ ಕೆಲಸದ ಛಾರ್ಜನ್ನು ವಹಿಸಿಕೊಂಡಿದಾರೆ.

ಮುಂದೆ ಹೇಳುವ ಗೆಜೆಟೆಡ್ ಆಫೀಸರುಗಳಿಗೆ ಬಿಟ್ಟ ಹುಕುಂ ಮಾಡಲ್ಪಟ್ಟಿದೆ — ಮಿ॥ ಎಂ. ಜಿ. ರಾಮರಾಯರು, ಮಿ॥ ಜೆ. ಶ್ರೀನಿವಾಸರಾಯರು, ಮಿ॥ ಕೆ. ರಾಮಸ್ವಾಮಯ್ಯನವರು

ಮೈಸೂರು ಇಂಪೀರಿಯಲ್ ಸರ್ವಿಸ್ ರೆಜಿಮೆಂಟ್ ಕಂಪನಿಯ ಡಾಕ್ಟರಾಗಿರುವ ಮಿ॥ ಎನ್. ನರಸಿಂಹಯ್ಯಂಗಾರ್ರನ್ನು ಮೈಸೂರು ಗೋಶಾಲೆಗಳ ರೋಗಚಿಕಿತ್ಸೆಮಾಡುವ ಅಸಿಸ್ಟೆಂಟರಾಗಿ ನೇಮಿಸಿದೆ.

ಮಿ॥ ಚಾರ್ಲ್ಸ್ ಫೋರ್ ಯವರನ್ನು ಫೆಬ್ರವರಿ ೪ ರಿಂದ ಸ್ಯಾನಿಟರಿ ಇಂಜಿನಿಯರಾಗಿ ನೇಮಕಮಾಡಿದೆ. ಇವರ ಸಂಬಳ ಮತ್ತು ದರ್ಜೆ ಎಕ್ಸಿಕ್ಯೂಟಿವ್ ಇಂಜಿನಿಯರಂತೆ ಗೊತ್ತುಮಾಡಿದೆ.

ಮಿ॥ ಎನ್. ಟಿ. ಕೃಷ್ಣಯ್ಯಂಗಾರನ್ನು ಫೆಬ್ರವರಿ ೨೦ ರಿಂದ ಎರಡು ವರುಷಗಳ ವರೆಗೆ ೨ ನೆ ಕ್ಲಾಸ್ ಸಬ್ ಅ॥ ಇಂಜಿನಿಯರಾಗಿ ನೇಮಿಸಿ, ಸ್ಯಾನಿಟರಿ ಡಿವಿಜನ್‌ಗೆ ವರ್ಗಮಾಡಿದೆ.

೧ ನೆ ಕ್ಲಾಸ್ ಸೂಪರ್‌ವೈಜರ್ ಮಿ॥ ಎ. ನಲ್ಲನಾಯಗಂ ಮೊದಲಿಯಾರು ಹೇಮಾವತಿಯಲ್ಲಿ ಹೊಸ ಅಣೆಕಟ್ಟನ್ನು ಕಟ್ಟಿಸಿದ ಸಂದರ್ಭದಲ್ಲಿ ಬಹಳ ಚೆನ್ನಾಗಿ ಕೆಲಸಮಾಡಿರುತ್ತಾರಾದಕಾರಣ ಸರ್ಕಾರದವರು ಅವರಿಗೆ ಆನರರಿ ಅ॥ ಇಂಜಿನಿಯರ್ ದರ್ಜೆಯನ್ನು ಕೊಟ್ಟಿದಾರೆ.

ನಮ್ಮ ಪುಸ್ತಕಭಂಡಾರವು.

“ಕಿಂಡರ್‌ಗಾರ್ಟನ್ ಕ್ರಮ”—ಮೈಸೂರು ಗೌ॥ ನಾರ್ಮಲ್ ಸ್ಕೂಲ್ ಅಸಿಸ್ಟೆಂಟ್ ಮಾಸ್ಟರ್ ಮೆ॥ ಎಂ ವೆಂಕಟಸುಬ್ಬೈಯ್ಯ, ಬಿ. ಎ. ಯವರು ರಚಿಸಿದ್ದು ಕ್ರಯ—೮ ಆಣೆ

ಪಾಶ್ಚಾತ್ಯರ ಸಂಸರ್ಗದಿಂದ ಈ ದೇಶಕ್ಕೆ ಉಂಟಾಗಿರುವ ಫಲಗಳಲ್ಲಿ ವಿದ್ಯಾಭ್ಯಾಸ ವಿಷಯಕವಾದ್ದು ಒಂದು ಮುಖ್ಯವಾಗಿದೆ. ಬೋಧಿಸುವ ಪಾಠಗಳು ಮಾತ್ರವಲ್ಲದೆ, ಅವುಗಳನ್ನು ಮಕ್ಕಳಿಗೆ ಬೋಧಿಸುವ ಕ್ರಮವು ಸಹ ಈಚೀಚೆಗೆ ವಿಶೇಷವಾಗಿ ಬದಲಾಗುತ್ತಿದೆ. ಶೈಶವದಲ್ಲಿ, ಅಂದರೆ ಏಳೆಂಟು ವರ್ಷಗಳವರೆಗೆ, ಮಗುವಿಗೆ ಮಾಡಿಸಬೇಕಾದ ವಿದ್ಯಾಭ್ಯಾಸದ ಪದ್ಧತಿಗೆ ‘ಕಿಂಡರ್‌ಗಾರ್ಟನ್’ ಎಂದು ಹೆಸರು. ಹುಟ್ಟಿದ ಮಗುವಿಗೆ ಸುತ್ತುಮುತ್ತಲಿರುವ ಪದಾರ್ಥಗಳೆಲ್ಲ ಅಪರಿಚಿತಗಳಾಗಿರುವುವು. ಬೆಂಕಿಯು ಸುಡುವುದೆಂಬಂಥ ಪ್ರಸಿದ್ಧ ವಿಷಯಗಳು ಸಹ ತಿಳಿದಿರುವುದಿಲ್ಲ. ಹೀಗೆ ಸುತ್ತುಮುತ್ತಲಿರುವ ಪದಾರ್ಥಗಳು ಮಗುವಿಗೆ ಅಪರಿಚಿತವಾಗಿರುವುದರಿಂದ ಅವುಗಳ ಮಧ್ಯೆ ದೊಡ್ಡವರಂತೆ ತಾನೂ ಜೀವಿಸಬೇಕಾದರೆ ಮೊದಲು ಅನುಭವದಿಂದ ಆ ಪದಾರ್ಥಗಳ ವಿಷಯವಾಗಿ ಜ್ಞಾನವನ್ನು ಸಂಪಾದಿಸಬೇಕು. ಈ ಜ್ಞಾನವುಂಟಾಗುವುದಕ್ಕೆ ಸಹಕಾರಿಯಾಗಿ ಮಗುವಿನಲ್ಲಿ ಚಟುವಟಿಕೆ, ಕುತೂಹಲ, ಅನುಕರಣ ಮುಂತಾದ ಗುಣಗಳು ಸಹಜವಾಗಿರುವುವು. ಈಗಿನ ಸಂದರ್ಭದಲ್ಲಿ ಈ ದೇಶದ ಮಕ್ಕಳು ಸಾಮಾನ್ಯವಾಗಿ ಈ ಗುಣಗಳನ್ನು ತಾವೇ ಸಿಕ್ಕಿದಂತೆ ಉಪಯೋಗಿಸಿ, ಯಥಾಕಥಂಚಿತ್ ಜ್ಞಾನವನ್ನು ಪಡೆಯುತ್ತಿರುವರು. ಮಕ್ಕಳು ಹೀಗೆ ತಮ್ಮ ಸ್ವಭಾವದ ಗುಣಗಳನ್ನು ಉಪಯೋಗಿಸಿ ಕೆಲಸಮಾಡುವುದಕ್ಕೆ ಜನಗಳು ಆಟವೆಂತಲೂ, ಚೇಷ್ಟೆಯೆಂತಲೂ ಹೇಳುವರು. ದೇವರು ಕೊಟ್ಟಿರುವ ಶಕ್ತಿಯನ್ನು ಮಕ್ಕಳು ತಾವಾಗಿ ಉಪಯೋಗಿಸುವಂತೆ ಬಿಟ್ಟುಬಿಡುವುದಕ್ಕೆ ಬದಲಾಗಿ ಅಧ್ಯಾಪಕರೊಬ್ಬರಿದ್ದು ಆ ಉಪಯೋಗವನ್ನು ವಿಚಾರಿಸಿ, ತಿದ್ದುಪಾಟು ಮಾಡುತ್ತಿದ್ದರೆ ಮಕ್ಕಳಿಗೆ ಈಗ್ಗಿಂತಲೂ ಹತ್ತುಪಾಲು ಹೆಚ್ಚಾಗಿ ಪ್ರಯೋಜನವಾಗುವುದೆಂಬುದು ಸ್ಪಷ್ಟವಾಗಿದೆ. ಮಕ್ಕಳನ್ನು ಹೀಗೆ ನೋಡಿಕೊಳ್ಳಬೇಕೆಂಬುದೇ ಕಿಂಡರ್‌ಗಾರ್ಟನ್ನಿನ ಮುಖ್ಯ ತಾತ್ಪರ್ಯ. ಒಟ್ಟಿನಲ್ಲಿ ಕಿಂಡರ್‌ಗಾರ್ಟನ್ ಎಂದರೆ ವ್ಯವಸ್ಥಿತವಾದ ಆಟವೇ ಹೊರತು ಮತ್ತೆ ಬೇರೆಯಲ್ಲ. ‘ಕಿಂಡರ್‌ಗಾರ್ಟನ್ ಕ್ರಮ’ ಎಂಬ ಪುಸ್ತಕದಲ್ಲಿ ಮೆ॥ ವೆಂಕಟಸುಬ್ಬೈಯ್ಯನವರು ಈ ವಿದ್ಯಾಭ್ಯಾಸ ಪದ್ಧತಿಯನ್ನು ಸುಲಭವಾಗಿಯೂ, ವಿಸ್ತಾರದಿಂದಲೂ ತಿಳಿಸಿರುವರು. ಹೇಳಿರುವ ವಿಷಯಗಳನ್ನು ಸ್ಪಷ್ಟಪಡಿಸುವುದಕ್ಕಾಗಿ ಗ್ರಂಥದ ಕೊನೆಯಲ್ಲಿ ಅನೇಕ ಚಿತ್ರಗಳನ್ನು ಕೊಟ್ಟಿದಾರೆ. ಇವು ಬಹಳ ಶ್ಲಾಘನೀಯವಾಗಿವೆ; ಮತ್ತು ವಾಚಕರು ಇತರರ ಸಹಾಯವಿಲ್ಲದೆ ತಾವೇ ಓದಿ ವಿಷಯಗಳನ್ನು ಗ್ರಹಿಸಲು ಅನುಕೂಲವಾಗಿವೆ. ಕನ್ನಡದಲ್ಲಿ ಈ ವಿಷಯವಾಗಿ ಇಷ್ಟು ಮಟ್ಟಿನ ಗ್ರಂಥವು ಅಚ್ಚಾಗಲು ಇದೇ ಮೊದಲೆಂದು ತೋರುತ್ತೆ. ಬಾಲವಿದ್ಯಾಭ್ಯಾಸದಲ್ಲಿ ಉದ್ಯುಕ್ತರಾದ ಉಪಾಧ್ಯಾಯರು ಈ ಗ್ರಂಥವನ್ನು ಓದಿ ಪ್ರಯೋಜನವನ್ನು ಪಡೆಯುವರೆಂದು ನಂಬಿದ್ದೇವೆ. ಉಪಾಧ್ಯಾಯರು ಮಾತ್ರವಲ್ಲದೆ, ಮಕ್ಕಳ ಅಭಿವೃದ್ಧಿಯಲ್ಲಿ ನಿಷ್ಠೆಯಾದ ಆದರವುಳ್ಳ ತಾಯಿತಂದೆಗಳು ಸಹ ತಿಳಿಯಬಹುದಾದ ಅಂಶಗಳು ಈ ಗ್ರಂಥದಲ್ಲಿ ಅನೇಕವಾಗಿವೆ. ಕಿಂಡರ್‌ಗಾರ್ಟನ್ ಪಾಠಕ್ಕೆ ಅವಶ್ಯಕವಾದ ಸಾಮಾನುಗಳನ್ನು ಬೊಂಬಾಯಿಯಲ್ಲಿರುವ ಲಾಂಗ್‌ಮನ್ಸ್ ಅಂಡ್ ಕಂಪೆನಿಯವರ ಶಾಖೆಯಿಂದ ತರಿಸಿಕೊಳ್ಳಬಹುದು. ಅನೇಕ ಉಪಕರಣಗಳ ಬೆಲೆಯು ಕೆಲವು ಆಣೆಗಳು ಮಾತ್ರ. ಎಂ. ಎಚ್.

ಬಾತ್ಮಿದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಸ್ಥಳ ಕೊಡಲಾರೆವು. ಅದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು; ಇಂಥವುಗಳಿಗೆ ನಾವು ಸ್ಥಳ ಕೊಡಲಾರೆವು.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಎಡಿ.

ಈ ವಾರ ನಮ್ಮಲ್ಲಿಗೆ ಬಂದಿರುವ ಕೆಲವು ಬಾತ್ಮಿಗಳನ್ನು ಸ್ಥಳ ಸಂಕೋಚದಿಂದ ಪ್ರಕಟಿಸಲು ಅನುಕೂಲವಾಗಿಲ್ಲವೆಂದು ವ್ಯಸನಪಡುತ್ತೇವೆ

ಕರೆಸ್‌ಪಾಂಡೆನ್ಸ್.

ಸಿಡಿಯೂ ಬೆನ್ನಿನೊಳಗೆ ಕಬ್ಬಿಣ ಹೂತು ಚುಚ್ಚುವದೂ.

ಅಯ್ಯಾ,

ಮೈಸೂರು ರಾಜ್ಯವು ಎಲ್ಲಾ ನವನಾಗರೀಕ ವಿಷಯಗಳಲ್ಲಿ ಮೊದಲನೇದಾಗಿದೆ ಎಂದು ಕೇಳಿದೇವೆ. ಹಾಗೆ ಹೇಳುವದು ಬೈಲುಸೀಮೆಯ ತಾಲ್ಲೂಕುಗಳಿಗೆ ಒಪ್ಪಬಹುದು. ಮಲ್ನಾಡು ಇನ್ನೂ ಎಲ್ಲಾ ವಿಷಯಗಳಲ್ಲಿಯೂ ತೂಕಡಿಸುತ್ತಲೂ ಮೂಢಾಚಾರಗಳು, ಅನ್ಯಾಯಗಳಿಂದ ಹೀನವಾಗುತ್ತಲೂ ಇದೆ. ತೀರ್ಥಹಳ್ಳಿ ತಾಲ್ಲೂಕಿನ ಮೇಗರವಳ್ಳಿ ಮತ್ತು ಕಲ್ಲೂರುಗದಿ ಈ ಎರಡು ಸ್ಥಳಗಳಲ್ಲಿ ಸಿಡಿಯಾಡುವದು ಭಯಂಕರವಾಗಿದೆ. ಪ್ರತ್ಯಕ್ಷವಾಗಿ ಎರಡು ಕೊಕ್ಕೆಗಳಿಂದ ಬೆನ್ನಿನೊಳಗೆ ಚುಚ್ಚಿ ಮರಕ್ಕೆ ತೂಗಹಾಕಿ ಸುತ್ತಿಸುತ್ತಾರೆ. ಕೆಲವು ವರುಷಗಳ ಹಿಂದೆ ಒಬ್ಬನು ಸತ್ತೇ ಹೋದನು. ೧೦ನೆ ತಾ. ಮಂಗಳವಾರ ೭ ಜನರಿಗೆ ಚುಚ್ಚಿ ಭಯಂಕರವಾಗಿ ಆಡಿಸಿದರು. ಅಪೈಕಿ ಇಬ್ಬರು ಹುಡುಗರು. ಸರ್ಕಾರದವರು ಎಲ್ಲಾ ಸ್ಥಳಗಳಲ್ಲಿ ಈ ದುಷ್ಪದ್ಧತಿಯನ್ನು ವಜಾಮಾಡಿರುವದು ಇಲ್ಲಿನ ಅಮಲ್ದಾರರಿಗೆ ಗೊತ್ತಿದೆ. ಸಿಡಿ ಆಡುವ ಸ್ಥಳವು ಮೇಗರವಳ್ಳಿ ಪೋಲೀಸ್ ಸ್ಟೇಷನ್ನಿಗೆ ಅತಿ ಸಮೀಪದಲ್ಲಿದೆ. ಹೀಗಿದ್ದರೂ ಪ್ರಜೆಗಳು ಇಷ್ಟು ಭಯಂಕರವಾದ ಕೆಲಸವನ್ನು ಸರ್ಕಾರದವರ ಭಯವಿಲ್ಲದೆ ಮಾಡುವದಕ್ಕೆ ಯಾಕೆ ಅವಕಾಶಕೊಟ್ಟರೋ ಯೋಚಿಸಬೇಕಾಗಿದೆ. ಇದನ್ನು ನೋಡಿದ ಅನೇಕರು ನೊಂದುಕೊಳ್ಳುತ್ತಲೂ ಜುಗುಪ್ಸೆಪಟ್ಟುಕೊಳ್ಳುತ್ತಲೂ ಹೋದರು. ಸಿಡಿಯಲ್ಲಿ ಕಬ್ಬಿಣದ ಕೊಕ್ಕೆಗಳಿಂದ ಚುಚ್ಚಿಸಿಕೊಂಡವರು ಈಗ ಹಾಳಿ ಇದಾರೆ.

ನ್ಯಾಯವಾದಿ.

ಶಿಡ್ಲಘಟ್ಟದಲ್ಲಿ ಕಳ್ಳರ ಅವಾಂತ್ರ.

ಅಯ್ಯಾ,

ನಮ್ಮ ಶಿಡ್ಲಘಟ್ಟದ ತಾಲ್ಲೂಕಿನಲ್ಲಿ ಕಳ್ಳರ ಅವಾಂತರ ಬಹಳವಾಗಿದೆ. ಪ್ರಜೆಗಳಿಗೆ ಪ್ರಾಣಭಯ ಬಹಳವಾಗಿದೆ. ಈಗ್ಗೆ ನಾಲ್ಕು ದಿನಗಳ ಮುಂಚೆ ಈ ಊರಿಗೆ ಸುಮಾರು ೭ ಮೈಲಿ ದೂರವಾಗಿರುವ ಪಲಚಿಲರ್ ಎಂಬ ಹಳ್ಳಿಗೆ ಸಾಯಂಕಾಲ ನಾಲ್ಕು ಗಂಟೆಯಲ್ಲಿ ಮೂರು ಮಂದಿ ಗಂಡಸರು ಹೋಗುತ್ತಿರುವಾಗ ಸುಮಾರು ೨೦—೨೫ ಮಂದಿ ಕಳ್ಳರು ಅವರ ಮೇಲೆ ಬಿದ್ದು ಚನ್ನಾಗಿ ಹೊಡೆದು ಬಟ್ಟೆಗಳನ್ನು ಕಿತ್ತುಕೊಂಡರು. ಸುತ್ತುಮುತ್ತು ಹಳ್ಳಿಗಳಲ್ಲಿ ೨—೩ ದಫಾ ಚೋರಿ ಆಯಿತು. ಈ ತಹಲ್ ವರಿವಿಗೂ ಯಾವದೂ ಪತ್ತೆ ಆಗಲಿಲ್ಲ. ಈ ಕ್ಷಾಮಕಾಲಕ್ಕೆ ಈ ಕಳ್ಳರ ಕಾಟಕ್ಕೂ ನೋಡಿದರೆ ಪ್ರಜೆಗಳಿಗೆ ಬಹಳ ಕಷ್ಟನಷ್ಟಗಳು ಪ್ರಾಪ್ತವಾಗುತ್ತೆ. ಈ ಟವನ್ನಲ್ಲಿ ರಾತ್ರಿ ೧೦ ಗಂಟೆ ಮೇಲೆ ಮನೆಗಳ ಬಾಗಲು ನುಗ್ಗಿ ಬಹಳವಾಗಿ ಹಿಂಸೆ ಕೊಡುತ್ತಾರೆ. ಪೋಲೀಸಿನವರು ಊರು ಗಸ್ತು ಮಾಡುವದು ಬಹಳ ಅಪರೂಪವಾಗಿದೆ. ಊರು ದೋಚಿಕೊಂಡು ಹೋದರೂ ಕೇಳುವರೇ ಇಲ್ಲ. ಈಗಲಾದರೂ ನಮ್ಮ ಸರ್ಕಾರದವರು ಪೋಲೀಸ್ ಉಸ್ತುವಾರಿ ಚನ್ನಾಗಿ ಮಾಡಿಸಿ ಈ ಪ್ರಜೆಗಳ ಕಷ್ಟನಿವಾರಣೆ ಮಾಡಬೇಕೆಂದು ಪ್ರಾರ್ಥಿಸುತ್ತೇವೆ.

ಏಪ್ರೆಲ್ ತಾ. ೨ ಸೋಮವಾರ ಈ ಊರು ಪೂಸಸ್ವಾಮಿ ಮುನಿಸ್ವಾಮಿ ಛತ್ರದಲ್ಲಿ ಪಂಜಾಬ್‌ನಿಂದ ಬಂದು ಇರುವ ಪೈಲ್ವಾನ್ ಅಬ್ದುಲ್ಲಾಬೇಗ್ ಸಾಹೇಬರಿಗೂ ಇದೇ ತಾ. ಜಟಕಾ ಬಂಡಿ ಹೊಡೆಯುವ ಪೈಲ್ವಾನ್ ಕರೀಮುಸಾಹೇಬರಿಗೂ ಬಹಳ ನೇತ್ರಾನಂದಕರವಾದ ಕುಸ್ತಿ ನಡೆಯಿತು. ನಮ್ಮ ದಿಲಾವರ್ ಪೈಲ್ವಾನನೂ ಕರೀಂ ಸಾಹೇಬನೂ ಪಂಜಾಬಿ ಪೈಲ್ವಾನನನ್ನು ಹೊಡೆದರು.

ಒಬ್ಬ ವಾಚಕ.

ಚಿಕ್ಕನಾಯಕನಹಳ್ಳಿ ಮಿಂಚಿನ ಹುಳ.

ಅಯ್ಯಾ,

ಈ ಸಬ್ ತಾಲ್ಲೂಕಿನಲ್ಲಿ ಅಲ್ಲಲ್ಲಿ ಮಿಂಚಿನ ಹುಳಗಳೆಂಬ ಲಾಂದ್ರಗಳು ನಿಲ್ಲಿಸಲ್ಪಟ್ಟಿವೆ. ಆದರೆ ಇವುಗಳಲ್ಲಿ ಕೆಲವು ಮಾತ್ರ ಬ್ರಾಹ್ಮಣರ ಬೀದಿಯಲ್ಲಿ ಕಾಲಕ್ಕೆ ಸರಿಯಾಗಿ ಜೀವದಿಂದ ಪ್ರಕಾಶಿಸುತ್ತವೆ. ಇನ್ನು ಕೆಲವು ಒಬ್ಬರಿಗೊಬ್ಬರು ಚೀ ಕೊಟ್ಟರೂ ಕಾಣದಂತೆ ಮಿಣುಕುತ್ತಾ ೧॥ ಗಂಟೆಯೊಳಗಾಗಿ ಪ್ರಾಣವನ್ನು ಬಿಡುತ್ತವೆ. ಇನ್ನೂ ಅನೇಕ ದೀಪದ ಸ್ತಂಭಗಳು ತಲೆ ಇಲ್ಲದೆ ಬೋಳಿಯಾಗಿ, ರಾತ್ರಿ ಹಗಲೂ ಭೂಮಿಗೆ ಭಾರವಾಗಿ ನಿಂತಿವೆ. ಈಗ ತಾಲ್ಲೂಕಿನಲ್ಲಿ ಪ್ಲೇಗಿನ ಉದ್ರಿಕ್ತ ಕೆಲವರು ಮನೆಗಳನ್ನು ಬಿಟ್ಟು ಷೆಡ್ಡುಗಳಿಗೆ ಹೋಗಿರುವದಾದಕಾರಣ ಒಂದುವೇಳೆ ಕಳ್ಳರು ಕದಿಯಲು ಪ್ರವೇಶಿಸುವದಾದರೆ ಪೋಲೀಸ್ ಇಲಾಖೆಗೆ ಕೆಟ್ಟ ಹೆಸರು ಬರುವದಿಲ್ಲವೇ? ಆದ್ದರಿಂದ ಮ್ಯುನಿಸಿಪಾಲಿಟಿಯವರು ಪ್ರಜೆಗಳ ಹಿತಚಿಂತಕರಾಗಿ, ಈ ಮಿಂಚಿನ ಹುಳಗಳು ರೋಗದಿಂದ ಪ್ರತಿ ರಾತ್ರಿಯಲ್ಲೂ ನರಳುತ್ತಾ ಇರುವದರಿಂದ ತಕ್ಕ ಔಷಧವನ್ನು ಕೊಟ್ಟು ವಾಯಿಲೆಯನ್ನು ವಾಸಿಮಾಡಲು ತುಂಬಾ ಶ್ರದ್ಧೆವಹಿಸುವರೆಂದು ನಂಬುತ್ತೇನೆ.

ಈ ಊರಿನ ಕೆರೆಯ ನೀರು ಎಲ್ಲವೂ ಗದ್ದೆಗಳಿಗೆ ತೂಬಿನಿಂದ ಹಾಯುತ್ತಾ ಇದೆ. ಅಲ್ಲದೆ ಪಕ್ಷಿಗಳು ಕೆರೆಯನ್ನೆಲ್ಲಾ ಕಾಲ್ಪಡಿಗೆಯಿಂದ ಸಮೃದ್ಧವಾದ ಮುಂತಾದ ಕ್ರಿಮಿಗಳನ್ನು ಹಿಡಿದು ಭಕ್ಷಿಸುತ್ತಾ ಇರುವಾಗ ಅಷ್ಟಾಗಿ ನೀರಿಲ್ಲವೆಂಬುವದು ವ್ಯಕ್ತವಾಗುತ್ತೆ. ಇದು ಬತ್ತಿಹೋಗುವ ಸಮಯ ಬಂದಾಗ ಪ್ರಜೆಗಳಿಗೂ ಜಾನುವಾರುಗಳಿಗೂ ತುಂಬಾ ತೊಂದರೆಯಾಗುವನೆಂಬುವದಕ್ಕೆ ಏನೇನೂ ಸಂದೇಹವಿಲ್ಲವೆಂದು ತಿಳಿಯಬರುತ್ತೆ.

ಬಾತ್ಮಿದಾರ್.

ತುಂಕೂರು ಸ್ಟೂಡೆಂಟ್ಸ್ ಹೋಂ.

ಅಯ್ಯಾ,

ಇಲ್ಲಿನ ಸ್ಟೂಡೆಂಟ್ಸ್ ಹೋಮಿನ ವಿಚಾರ ಕಳೆದ ಮಾರ್ಚಿ ತಿಂಗಳಲ್ಲಿ ಬರೆದದ್ದನ್ನು ಕುರಿತು ಅದರ ಮ್ಯಾನೇಜರವರು ಎರಡು ವಾರ ಯೋಚಿಸಿ ಕಳೆದ ವಾರದ ಪತ್ರಿಕೆಯಲ್ಲಿ—ನಾವು ಅಸೂಯೆಯಿಂದ ಕೂಡಿ ಸುಳ್ಳು ಬರೆದಿದ್ದೇವೆ. ಮಾಡಲ್ ಸ್ಟೂಡೆಂಟ್ಸ್ ಹೋಂ ಎಂದು ಕರೆಯಬಹುದಾದ ಇದರ ರೂಲುಗಳು ತಿಳಿಯದೆ ಈ ರೀತಿ ಬರೆದಿದ್ದಾರೆಂದು ಪ್ರಕಟಿಸಿರುತ್ತಾರಷ್ಟೆ? ನಾವು ಬರೆದಿರುವ ವಿಚಾರವು ವಿದ್ಯಾರ್ಥಿಗಳ ಕೊರತೆ ನೀಗುವಂಥಾದ್ದಾಗಿಯೂ ಇತರರಿಗೆ ತೊಂದರೆ ಇಲ್ಲದಿರುವದಾಗಿದೆಯೇ ಹೊರತು ಅಸೂಯೆ, ಸುಳ್ಳು ಮೊದಲಾದವುಗಳಿಂದ ಕೂಡಿಲ್ಲವೆಂದು ವಿರಳವಾಗಿ ಕಾಣಬರುತ್ತದೆ. ಆದರೆ ಹೋಮಿನ ಅಧಿಕಾರಿಗಳು ತಾವಾಗಿಯೇ ನಾವು ಬರೆದಿರುವ ಸಂಗತಿ ಸುಳ್ಳು ಎಂಬುದಾಗಿ ಹೇಳುವದು ಲೋಕರೂಢಿಯಾಗಿರುವದರಿಂದ ಇದಕ್ಕಾಗಿ ವಿಷಾದಪಡಬೇಕಾಗಿಲ್ಲ. ಮ್ಯಾನೇಜರವರು ಪಾಲಕರ ಉಪಯೋಗಕ್ಕಿಟ್ಟಿರುವ ಸ್ಟೋರ್ ರೂಲ್ ಮಾತ್ರ ಹೇಳದೆ ಆ ಪದಾರ್ಥಗಳು ವಿದ್ಯಾರ್ಥಿಗಳಿಗೆ ವಿನಿಯೋಗಿಸುವ ರೂಲ್‌ಗಳನ್ನು ತಿಳಿಸಿದ್ದರೆ ಚನ್ನಾಗಿತ್ತು. ಅಲ್ಲದೆ ಮಾಡಲ್ ಸ್ಟೂಡೆಂಟ್ಸ್ ಹೋಂ ಎಂದು ಬರೆದಿರುವ ಸಂಗತಿ ಆಶ್ಚರ್ಯವಾಗಿದೆ. ಯಾಕೆಂದರೆ ಬೆಂಗಳೂರು ಮೈಸೂರು ಮೊದಲಾದ ಈ ಸೀಮೆಯ ಬೇರೆ ಪಟ್ಟಣಗಳ ಕಾಲೇಜು, ಹೈಸ್ಕೂಲ್ ಮುಂತಾದ ಸ್ಟೂಡೆಂಟ್ಸ್ ಹೋಂ ಅಧಿಕಾರಿಗಳು ಕೆಲವು ಕಾಲವಾದರೂ ಇಲ್ಲಿಗೆ ಬಂದು ಇಲ್ಲಿನ (ಮಾಡಲ್) ನಮೂನೆಗಳನ್ನು ಕಲಿತು ತರಬೇಕಾಗುವದು ಆವಶ್ಯವೆಂದು ತೋರುವಂತಿದೆ. ಕಡೇ ಮಾತಾಗಿ ಇಲ್ಲಿ ಮ್ಯಾನೇಜರವರು ವಿದ್ಯಾರ್ಥಿಗಳ ಶ್ರೇಯೋವೃದ್ಧಿಗೆ ಸಂಪೂರ್ಣ ಗಮನವಿಟ್ಟು ಅವರ ಕ್ಷೇಮಚಿಂತನೆಗಾಗಿ ಯಾವಾಗಲೂ ಪ್ರಯತ್ನಿಸುತ್ತಿರುವ ಪೋಷಕತ್ವಕ್ಕಾಗಿ ಹೋಮಿನ ಬಾಲಕರು ತುಂಬಾ ಕೃತಜ್ಞರಾಗಿರತಕ್ಕದ್ದು ಅವಶ್ಯವಾಗಿದೆ

ವಿದ್ಯಾರ್ಥಿಗಳ ಶ್ರೇಯಸ್ಕಾಮಿ.

ತಿಪಟೂರು ವಿಷಯಗಳು.

ಅಯ್ಯಾ,

ಈ ಟವನ್ ಮ್ಯುನಿಸಿಪಾಲಿಟಿಯ ವಿಷಯದಲ್ಲಿ ಕಂಟ್ರಾಕ್ಟರ್ ಆಗಲಿ, ಅಮಲ್ದಾರರೇ ಆಗಲೀ ಗಮನಕ್ಕೆ ತಂದುಕೊಂಡು ಜನಗಳಿಗೂ ಮತ್ತು ಜಾನುವಾರುಗಳಿಗೂ ಬರತಕ್ಕ ತೊಂದರೆಯನ್ನು ತಪ್ಪಿಸಲಿಲ್ಲ. ಮನೆಯ ಮುಂದೆ ಇರತಕ್ಕ ಚರಂಡಿಗಳನ್ನು ಕಿತ್ತು ಕಲ್ಲುಗಳನ್ನು ಬೀದಿಗೆ ಎಳೆದು ಮನೆಮುಂದೆ ಒಂದಾಳುದ್ದ ಗುಂಡಿಯನ್ನು ತೋಡಿ ೩—೪ ತಿಂಗಳುಗಳಾಯಿತು. ಮನೆಯವರು ಕಂಟ್ರಾಕ್ಟುದಾರರನ್ನು ಇನ್ನು ಇದನ್ನು ಕಟ್ಟಿಸುವದಕ್ಕೆ ದಯ ಬರುವದಿಲ್ಲವೇ ಎಂದು ಕೇಳಿದರೆ ಅಪ್ಪಾ, ನಾನೇನು ಮಾಡಲಿ, ಇನ್ನೂ ಗವರ್ನಮೆಂಟಿನಿಂದ ಸ್ಯಾಂಕ್ಷನ್ ಆಗಿ ಬಂದಿರುವದಿಲ್ಲವೆಂದು ಹೇಳುತ್ತಲಿದಾನೆ. ಮೊದಲು ಮನೆಮುಂದೆಯೂ ರಸ್ತೆಯಲ್ಲಿಯೂ ಇರತಕ್ಕ ಕಲ್ಲುಗಳನ್ನು ಕಿತ್ತು ಜನರಿಗೆ ತೊಂದರೆಯನ್ನು ಕೊಟ್ಟು ಅನಂತರ ಮೇಲಕ್ಕೆ ಬರೆದು ಸ್ಯಾಂಕ್ಷನ್ ಆಗುವದೂ ಉಂಟೆ? ಈ ಕಂಟ್ರಾಕ್ಟರು ಇಷ್ಟರಮಟ್ಟಿಗೆ ಕೆಲಸದಲ್ಲಿ ಉದಾಸೀನತ್ವ ತೋರಿಸುವದನ್ನು ನೋಡಿದರೆ ನಮ್ಮ ಅಮಲ್ದಾರರಿಗೆ ಸದರಿ ಕಂಟ್ರಾಕ್ಟರ ಮೇಲೆ ಸಂಪೂರ್ಣವಾದ ದಯವಿರಬಹುದೆಂದು ತಿಳಿಯಬರುತ್ತೆ.

ನಮ್ಮ ಅಮಲ್ದಾರರು ಬೆಳಗಿನ ೭ ರಿಂದ ಮಧ್ಯಾಹ್ನ ೧೧ ರ ವರೆಗೂ ಪುನಃ ೧೨ ರಿಂದ ಸಾಯಂಕಾಲ ೬—೭ ರ ವರೆಗೂ ಕಛೇರಿ ಮಾಡುತ್ತಲಿರುವದರಿಂದ ಇವರು ಬರುವದಕ್ಕಿಂತ ೧ ಗಂಟೆ ಮುಂಚೆ ಇತರ ನೌಕರರು ಹಾಜರಿರಬೇಕೆಂತಲೂ ಕೇಳುತ್ತೇನೆ. ಇದರಿಂದ ಬಡ ನೌಕರರು ಮನೆಕೆಲಸಗಳನ್ನು ನೋಡಿಕೊಳ್ಳುವದಿಲ್ಲದೆ ಬೆಳಿಗ್ಗೆ ರಾತ್ರಿ ಹಗಲು ಕಷ್ಟ ಬಂದು ಕೆಲಸಮಾಡಬೇಕೆಂಬದಾಗಿ ಗೋಳುಗುಟ್ಟಿಕೊಳ್ಳುತ್ತಾರೆ. ಈ ವಿಷಯವನ್ನು ನಮ್ಮ ಘನ ಅಮಲ್ದಾರರು ಚಿತ್ತಕ್ಕೆ ತೆಗೆದುಕೊಂಡು ಪದ್ಧತಿ ಪ್ರಕಾರ ೧೧ ರಿಂದ ೫ ರ ವರಿಗೆ ಆಫೀಸನ್ನು ಮಾಡಿ, ಈ ಬಡನೌಕರರ ತೊಂದರೆಯನ್ನು ತಪ್ಪಿಸಿ ಕೀರ್ತಿ ಪಡೆಯುವರೆಂದು ನಂಬಿರುತ್ತೇನೆ.

ಸತ್ಯವಾದಿ.

ಬಡ ಸ್ಕೂಲ್ ಮಾಸ್ಟರ ತಲಬು.

ಅಯ್ಯಾ, ೧.

ಘನವನ್ನು ಹೊಂದಿದ ಶ್ರೀಮಂತ ಸರ್ ಪಿ. ಎನ್. ಕೃಷ್ಣಮೂರ್ತಿ, ಸಿ. ಐ. ಇ., ಬಿ. ಎಲ್. ರವರ ದಿವಾನಗಿರಿಯ ಕಾಲದಲ್ಲಿ ಬಡ ಸ್ಕೂಲ್ ಮಾಸ್ಟರುಗಳ ತಲಬು ರೋದನ ಸಂಖ್ಯೆಯಿಂದ ಬಿಡುಗಡೆಯಾದೀತೆಂದು ಬಹಳವಾಗಿ ನಂಬಿಕೊಂಡಿದ್ದೆವು. ಆದರೆ ನಮ್ಮಗಳ ದುರದೃಷ್ಟದಿಂದಲೋ ಅಥವ ಮತ್ತಾವ ಕಾರಣದಿಂದಲೋ ಈ ವಿಚಾರ ಶ್ರೀಮಂತರವರ ವಿಶ್ವಚಿತ್ತಕ್ಕೆ ಬರಲಿಲ್ಲ. ಈ ಕ್ಷಾಮಕಾಲದಲ್ಲಿ ಏಳು ರೂಪಾಯಿಗಳ ತಲಬಿನಿಂದ ಈ ಸ್ಕೂಲ್ ಮಾಸ್ಟರುಗಳು ಎಷ್ಟರಮಟ್ಟಿಗೆ ಸುಖವಾಗಿ ಜೀವಿಸಬಹುದೆಂಬ ವಿಚಾರವು ಶ್ರೀಮಂತರಲ್ಲದ ಪ್ರತಿ ಒಬ್ಬರಿಗೂ ತಿಳಿದೇ ಇರುತ್ತೆ. ಈಗ ಪ್ರಕೃತ ನಮ್ಮ ಮೈಸೂರ್ ಸಂಸ್ಥಾನಕ್ಕೆ ದಿವಾನರಾಗಿ ಬಂದಿರುವ ರಾಜ್ಯಧುರಂಧರರೂ ದಯಾಳುಪ್ರಭುಗಳೂ ಆದ ಮೆ॥ ವಿ. ಪಿ. ಮಾಧವರಾವ್ ಬಹದೂರ್, ಸಿ. ಐ. ಇ. ಯವರು ದೇಶದ ಏಳಿಗೆಗೆ ಮುಖ್ಯಾಂಗವಾದ ವಿದ್ಯಾಭ್ಯಾಸದ ಇಲಾಖೆಯ ಕಡೆಗೆ ತಮ್ಮ ಕೃಪಾದೃಷ್ಟಿಯನ್ನು ತಿರುಗಿಸಿ, ಬಡ ಸ್ಕೂಲ್ ಮಾಸ್ಟರುಗಳ ಕಷ್ಟವನ್ನು ಜಾಗ್ರತೆಯಾಗಿ ನಿವಾರಣೆಮಾಡಿ ಉದ್ಧಾರಮಾಡಬೇಕೆಂದು ಅತಿ ವಿನಯವಾಗಿ ಪ್ರಾರ್ಥಿಸುವ

ಒಬ್ಬಾನೊಬ್ಬ ಸ್ಕೂಲ್ ಮಾಸ್ಟರು.

ಅಯ್ಯಾ, ೨.

ಬಡ ಮಾಸ್ಟರುಗಳ ದುಸ್ಥಿತಿಯು ಇನ್ನೂ ಸರಿಯಾಗಲಿಲ್ಲ. ತಮ್ಮ ಪತ್ರಿಕೆಯನ್ನು ಆಗಿಂದಾಗ್ಯೆ ಓದುತ್ತಿದ್ದುದರಿಂದ ಈ ಕೋರಿಕೆಯು ಸ್ವಲ್ಪ ಕಡಿಮೆಯಾಗುತ್ತಾ ಇತ್ತು. ಈಗ ಪ್ರಸ್ತಾಪ ಸಮಾಚಾರವೇ ನಿರ್ನಾಮವಾಗಿ ನಮ್ಮಗಳಿಗೆಲ್ಲಾ ಆಶಾಭಂಗವಾಯಿತು. ಈ ಅತ್ಯಲ್ಪ ಸಂಬಳಗಳಿಂದ ನಮ್ಮಂತೆ ದೊಡ್ಡ ಕುಟುಂಬಿಗಳಾದ ಬಡ ಮಾಸ್ಟರುಗಳು ಈ ಕ್ಷಾಮಕಾಲದಲ್ಲಿ ಹ್ಯಾಗೆ ಜೀವನ ಮಾಡುತ್ತಾರೋ? ನಮ್ಮಗಳ ದುಸ್ಥಿತಿಯು ‘ಹಾವು ಸಾಯಬಾರದು, ಕೋಲು ಮುರಿಯಬಾರದು’ ಎಂಬ ಗಾದೆಗೆ ಅನುಸಾರವಾಯಿತಲ್ಲಾ! ಮುಂದೆ ಏನುಗತಿ! ಯೋಚನೆಯಿಲ್ಲದೆ ಸುಖವಾಗಿ ಒಂದುಕಡೆ ಕುಳಿತುಕೊಂಡು ಚನ್ನಾಗಿ ಕೆಲಸ ಮಾಡುವುದಕ್ಕೆ ಆಗುವ ಹಾಗಿಲ್ಲವಲ್ಲಾ! “ರಾಜಾ ಪ್ರತ್ಯಕ್ಷ ದೈವತ” ಎಂಬ ಶ್ರುತಿವಚನವು ಇದ್ದರೂ ಪ್ರತ್ಯಕ್ಷವಾದ ಈ ದೇವರು ದರಿದ್ರರಾದ ನಮ್ಮಗಳನ್ನು ನೋಡಲು ಕಾಣದೆ ಇರುವರಲ್ಲಾ! ನಮ್ಮಗಳ ಕೋರಿಕೆಯು “ನರಿಯ ಕೂಗು ಗಗನಕ್ಕೆ ಮುಟ್ಟೀತೇ?” ಎಂಬ ಗಾದೆಗೆ ಅನುಸಾರವಾಗಿದೆಯೋ? ಏನೋ? ಓಹೋ, ಮರೆತಿದ್ದೆನು. ಮುಂದೆ ಜುಲೈ ತಿಂಗಳು ಪ್ರಾಪ್ತವಾದಾಗ ದರಿದ್ರ ಸ್ಕೂಲ್ ಮಾಸ್ಟರುಗಳಿಗೆಲ್ಲ ನಮ್ಮ ಶ್ರೀಮನ್ಮಹಾರಾಜಾ ಸರ್ಕಾರದವರು ಸರಿಯಾದ ವೇತನವನ್ನು ಕಲ್ಪಿಸಿ ಉದ್ಧಾರಮಾಡುವರಲ್ಲವೇ? ಹಾಗೆ ಏನಾದರೂ ಇರುವ ಸಂದರ್ಭದಲ್ಲಿ ತಮ್ಮ ಪತ್ರಿಕೆಯಲ್ಲಿ ಪ್ರಕಟಿಸಿ ನಮ್ಮಗಳನ್ನು ಸಂತೋಷಪಡಿಸಬೇಕೆಂದು ಬೇಡುತ್ತೇನೆ.

ಬಡ ಮಾಸ್ಟರ್.

ನಿಷ್ಕಾರಣವಾದ ತೊಂದರೆಗಳು

...ತಾ. ೨೯ ರಲ್ಲಿ ಗರ್ಗೇಶ್ವರಿ ಗ್ರಾಮಸ್ಥರು ಮತ್ತು ...ಬಂದಿರತಕ್ಕ ಮೈಸೂರು ಬಿನೇಸಾಬಿಯೆಂಬುವನು ಸಹಾ ...ದಿಂದ ಬಂದಿರತಕ್ಕ ಪಾದ್ರಿ ಸೈಯದು ಅಹಮದ್ ...ವನ್ನು ಗರ್ಗೇಶ್ವರಿಯಲ್ಲಿರುವ ಮಹಮ್ಮದ್ ಖಮರೋ... ...ಅಬ್ದುಲ್ ಖಾದರ್ ಸಾಬಿ, ಗಾಡಿ ಹುಸೇನ್ ಖಾನ್ ಸಾಬಿ, ...ಪೈರ್ದಿನ್ ಸಾಬಿ, ಅಬ್ದುಲ್ ಸತ್ತಾರ್ ಸಾಬಿ, ಇವರು ೫ ಜ... ...ಪೋಲೀಸಿನವರು ಗ್ರಾಮಪಟೇಲ ಸಹಾ ಷರೀಕಾಗಿ ಸದ... ...ವರನು ಮಾರ್ಚಿ ತಾ. ೨೮ ನೇ ರಾತ್ರಿ ೧೧ ಗಂಟೆ ವೇ... ...ಸುಮಾರು, ಗರ್ಗೇಶ್ವರಿ ಗ್ರಾಮಸ್ಥರಾದ ನಾವು ಕೊಟ್ಟಿದ್ದ ...ರೂಪಾಯಿ ಪಾದ್ರಿಯವರಲ್ಲಿದ್ದ ನೂರಾರು ರೂಪಾಯಿಗ... ...ಕಿತ್ತುಕೊಂಡು ಅವರ ಶವವನು ಅಗ್ರಹಾರದ ಭಾವಿಯು ...ಳೆಯಲ್ಲೋ ತೆಗೆದುಕೊಂಡುಹೋಗಿ ಹಾಕಿರುತ್ತಾರೆ ...ರೂಪಾಯಿಗಳು ಇದ್ದದ್ದು ನಮ್ಮ ಗ್ರಾಮಸ್ಥರೆಲ್ಲಾ ನೋ... ...ಪಾದ್ರಿಯವರನ್ನು ಮೈಸೂರಿಗೆ ಕಳುಹಿಸುವ ಉದ್ದಿಶ್ಯ ...ಅಬ್ದುಲ್ ಖಾದರ್ ಸಾಬಿ ಗಾಡಿಯನು ಬಾಡಿಗೆಗೆ ನಿಶ್ಚ... ...ಅವನ ಗಾಡಿಯಲ್ಲಿ ಹೋಗುವಂತೆ ಗೊತ್ತುಮಾಡಿತ್ತು. ...ದ್ರಿಯವರನು ಖೂನಿಮಾಡಿದರೆಂದು ಕೇಳಿ ತಾ. ೨೯ ನೇ ...ದು ಗಾಡಿ ಅಬ್ದುಲ್ ಖಾದರ್ ಸಾಬಿಯನು ಕೇಳುವಲ್ಲಿ ...ಮಾಚಾರ ಗೊತ್ತಿಲ್ಲ(?) ಇದರ ಮೇಲೆ ಇವರು ಪಾದ್ರಿಯು ...ಖೂನಿಮಾಡುತ್ತಾರೆಂದು ತಿಳಿದು, ತಿ॥ ನರಸೀಪುರದ ತಾ॥ ...ಕಟಿನ ನಮಟ ಪಾದ್ರಿಯವರನು ಪತ್ತೆಮಾಡಿಸಿಕೊಡಬೇ... ...ನಾಂ ಅರ್ಜಿ ಕೊಟ್ಟಿರುತ್ತಾರೆ. ಮೇಲ್ಕಂಡಂತೆಯೇ ಮೈ... ...ಸಾಬಿಯೆಂಬುವನು ಒಂದು ಅರ್ಜಿ ಕೊಟ್ಟಿರುತ್ತಾನೆ ...ಮೇಲೆ ತಾಲ್ಲೂಕು ಪೋಲೀಸ್ ಇನ್ಸ್ಪೆಕ್ಟರು ಏಪ್ರಿ... ...ನಮ್ಮಗಳನ್ನು ಕರಸಿ—ನೀವೆಲ್ಲಾ ಪಾದ್ರಿಯವರನ್ನು ...ಖೂನಿಮಾಡಿರುವುದಾಗಿ ಅರ್ಜಿ ಬರೆದಿರುತ್ತಾರೆ ಆಸಾಮಿ... ...ತಂದುಬಿಡಬೇಕು ಇಲ್ಲದಿದ್ದರೆ ರೂಲ್ಸು ಪ್ರಕಾರ ...ಸ್ಟೇಷನಿಗೆ ಗುರಿಪಡಿಸುತ್ತೇವೆಂದು ಹೇಳಿದರು ನಮ್ಮಗಳ ...ತೆಗೆದುಕೊಂಡರು ನಾವುಗಳು—ಅವರನು ನೋಡಿರು... ...ವರನ್ನು ಕೊಂದವರು ಅಲ್ಲ ಬಾವಿಗೆ ಒಪ್ಪಿದವ... ...ನಮಗೆ ಯಾವದೂ ಗೊತ್ತಿಲ್ಲ; ನಮ್ಮ ಮೇಲಿನ ಜಿದ್ದಿ... ...ರೀತಿ ಸುಳ್ಳು ಅರ್ಜಿ ಬರೆದಿರುತ್ತಾರೆಂದು ಕೇಳಿದ್ದಕ್ಕೆ ...ಪಾದ್ರಿಯವರನು ನೋಡಿದ್ದಪಕ್ಷದಲ್ಲಿ ಅವರು ಎಲ್ಲಿದ್ದಾಗ್ಯೂ ...ದು ಬಂದಲ್ಲಿ ಅರ್ಜಿದಾರರುಗಳನ್ನು ನಾನೇ ಹಿಡಿದು ಪ್ರ... ...ಗೆ ಆರ್ಡರು ಮಾಡಿಸುತ್ತೇನೆಂದು ಹೇಳಿ ನಮ್ಮಿಂದ ಮು... ...ಡುಕೊಂಡಿದ್ದರ ಮೇಲೆ ನಾವುಗಳು ಇನು ೮—೧೦ ಆ... ...ತೆಯಲ್ಲಿ ಕರೆದುಕೊಂಡು ಈ ಪ್ರಾಂತ್ಯನೆಲ್ಲಾ ತಿರಿಗಿ ...ಮೈಸೂರಿಗೆ ಸೇರಿದ ಅಲ್ಲಹಳ್ಳಿಯಲ್ಲಿ ರೋಡಿಗೆ ಸೇರಿದ ...ಪಾದ್ರಿಯವರು ಕುಳಿತಿದ್ದರು. ಅವರನ್ನು ಕಂಡು ಗರ್ಗೇ... ...ಇನ್‌ಚಾರ್ಜ್ ನರಸಪ್ಪನವರು ನಾವು ಸದರಿ ಪಾ... ...ಮೈಸೂರಿಗೆ ಪೋಲೀಸು ಸೂಪ್ರಂಟು ಸಾಹೇಬರವರ ...ಕೊಂಡುಹೋಗಿದ್ದರ ಮೇಲೆ ಪೋಲೀಸು ಸೂಪ್ರಂಟರವ ...ವರ ಕೈಗೆ ತನು ತೆಗೆದುಕೊಳ್ಳುವಲ್ಲಿ—ನನನ್ನು ಯಾ... ...ಯಲಿಲ್ಲ. ನನಲ್ಲಿ ಯಾವ ರೂಪಾಯಿಯೂ ಇಲ್ಲ. ...ಗ್ರಾಮಸ್ಥರು ಒಟ್ಟು ಸೇರಿ ನನಗೆ ೨ ರೂಪಾಯಿ ಕೊ... ...ಸ್ಟೇಷನಿಯಲ್ಲಿ ೧ ರೂಪಾಯಿ ಕೊಟ್ಟರು ೩ ರೂಪಾಯಿಗೆ ...ಯಲ್ಲಿ ೧೪ ದಿವಸ ನಾಸವಾಸಿದ್ದಕ್ಕಾಗಿ ೨ ರೂಪಾಯಿ ೬ ...ಒಂದು ರೂಪಾಯಿ ನನಲ್ಲಿ ಹಾಜರು ಇರುತ್ತೆಂದು ...ವರಿಗೆ ರೂಪಾಯಿ ತೋರಿಸಿ ಕೈಗೆಯತ್ತು ಕೊಟ್ಟರು. ...ಯತ್ತು ಮೇಲೆ ಸೂಪ್ರಂಟು ಸಾಹೇಬರವರು ಪಾದ್ರಿಯು ...ನರಸೀಪುರದ ತಾಲ್ಲೂಕಿಗೆ ಕರೆದುಕೊಂಡುಹೋಗಿ ...ಯತ್ತು ಮಾಡಿಸಿ, ಅರ್ಜಿದಾರರು ನನ ಮೇಲೆ ಪ್ರಾಸಿ... ...ಗೆ ಆರ್ಡರು ಮಾಡಿಸುವಂತೆ ಇನ್‌ಚಾರ್ಜ್ ನರಸಪ್ಪನವರಿಗೆ ...ಆರ್ಡರು ಮಾಡಿದರು. ಏಪ್ರಿಲ್ ೩ ರಲ್ಲಿ ಪಾದ್ರಿಯವ ...ತಿ॥ ನರಸೀಪುರದ ತಾಲ್ಲೂಕಿಗೆ ಬಂದು, ಆಸಾಮಿ ...ಇನ್ಸ್ಪೆಕ್ಟರವರಲ್ಲಿ ಒಪ್ಪಿಸಿದ್ದಕ್ಕೆ ಪಾದ್ರಿಯವರ ಕೈಗೆಯ... ...ಸೂಪ್ರಂಟರವರಲ್ಲಿ ಕೊಟ್ಟ ಕೈಗೆಯತ್ತು ನಂತೆಯೇ ...ಕೊಟ್ಟರು ಇದರ ಮೇಲೆ ಇನ್ಸ್ಪೆಕ್ಟರವರು ಅರ್ಜಿದಾ... ...ಮೇಲೆ ಪ್ರಾಸಿಕ್ಯೂಷನಿಗೆ ಆರ್ಡರು ಮಾಡಿಸಿ ಸರಿಯಾದ ಬಂ... ...ಮಾಡಿಸುತ್ತೇವೆಂದು ಅಪ್ಪಣೆ ಕೊಡಿಸಿದ್ದರು. ಇದುವರೆ... ...ಬಂದೋಬಸ್ತು ಮಾಡಿಸಲಿಲ್ಲ. ಮಹಮ್ಮದ್ ಖಮ... ...ಬಿ ಎಂಬುವ ನಾನು ಭಾರಿ ವ್ಯಾಪಾರಸ್ಥನಾಗಿಯೂ ಸರ್ಕಾ... ...ದಿ. ಕಂಟ್ರಾಕ್ಟನಾಗಿಯೂ ಇರುತ್ತೇನೆ ಕಳೆದ ವರು... ...ಒಬ್ಬ ಹೊಲೆಯರ ಹುಡುಗನನು ನಮ್ಮ ಹುಡುಗ... ...ಎಂಬುವನು ಮೈಸೂರಿಂದ ಬರತಕ್ಕ ಐರ್ನ್ ಗಾಡಿಯ ...ಹುಡುಗನ ಮೇಲೆ ಹತ್ತಿಸಿ ಖೂನಿ ಮಾಡಿಬಿಟ್ಟನೆಂದು ...ಕೊಟ್ಟರು. ಅದರ ಮೇಲೆ ತಾಲ್ಲೂಕಿನವರು ನಮ್ಮ ...ಗಳನು ಹಿಡಿದುಕೊಂಡು ಹೋಗಿ ಮೊಕದ್ದಮಾ ಮಾಡಿ ...ಸಬ್ ಡಿವಿಜನ್ ಕೋರ್ಟಿನಲ್ಲಿ ನಂಬರು ವಜಾ ಮಾಡಿ ...ಹುಡುಗನಿಗೆ ಹಸುವಿನ ಕರುವೋ ಎಮ್ಮೆಯ ಕರುವೋ ...ಕುಳಿದು ಚಕ್ಕಳಾಕಿತ್ತು ಗಾಯವಾಗಿತ್ತು. ಆ ಹುಡು... ...ಯವರು ರೂಬರೂಬು ಪರಾಂಬರಿಸಿ ನಂಬರು ವಜಾ ...ರೆ. ಸದರಿ ಗ್ರಾಮಸ್ಥರಿಗೂ ನನಗೂ ಜಿದ್ದು ಬರುವಪಕ್ಕೆ ...ದರೆ—ಈ ಊರಲ್ಲಿ ರಾಸಾ ಇಡುವದಕ್ಕೆ ಗ್ರಾಮಸ್ಥರು ...ಕೊಡದೆ ಇದ್ದದ್ದರಿಂದ ತಾಲ್ಲೂಕು ಅಮಲ್ದಾರ್ರು ...ರವರು ಬಂದು ಕೇಳಿದ್ದರ ಮೇಲೆ ಜಾಗ ಕೊಟ್ಟದ್ದಕ್ಕೆ ಆ ಲಾಗಾಯ್ತು ಗ್ರಾಮಸ್ಥರು ನನ್ನ ಮೇಲೆ ಆಗಾಗ್ಯೆ ಇಂಥಾ ತೊಂದರೆ ಉಂಟುಮಾಡುತ್ತಾ ಇರುತ್ತಾರೆ. ಇದಲ್ಲದೆ ಮೈಸೂರು ಬೆಂಗಳೂರು ನಂಜನಗೂಡು ಸಾಹುಕಾರರುಗಳಿಗೆ ನನ್ನ ಮೇಲೆ ಬೇನಾಂ ಕಾಗದಗಳು ಬರೆದಿರುತ್ತಾರೆ. ಪದೇ ಪದೇ ಈ ರೀತಿ ಸುಳ್ಳು ಅರ್ಜಿ ಬರೆಯು ತಕ್ಕವರನ್ನು ಸರ್ಕಾರದವರು ಪತ್ತೆಮಾಡಿ ಮುಂದೆ ಈ ರೀತಿ ನಡೆಯದಂತೆ ಬಂದೋಬಸ್ತು ಮಾಡಿಸುತ್ತಾರೆಂದು ನಂಬಿರುತ್ತೇನೆ.

ಬೆಲ್ರು ಅಂಗಡಿ ಮಹಮ್ಮದ್ ಖಮರುದ್ದೀನ್,
ಮಹಮ್ಮದ್ ಅಮೀರ್ ಸಾಬ್.

ತಾಲ್ಲೂಕು ವರ್ತಮಾನಗಳು.

ಮಂಡ್ಯ.—ಈಗ್ಗೆ ಮೂರು ವಾರಗಳ ಕೆಳಗೆ ಪ್ಲೇಗ್ ವ್ಯಾಧಿಯು ಪ್ರಾರಂಭವಾಗಿದೆ ಎಂದು ತಿಳಿಸಿತ್ತಷ್ಟೆ. ಈಚೆಗೆ ಅದರ ಹಾವಳಿ ಏನೂ ಇಲ್ಲ. ಇಲಿಗಳು ಸಾಯುವದು ನಿಂತಿರುತ್ತದೆ. ಈ ಸಾರಿ ಕೆಲವರು ಮಾತ್ರ ಊರು ಬಿಟ್ಟಿರುತ್ತಾರೆ. ಪ್ಲೇಗಿನ ವ್ಯಾಧಿಯು ಪ್ರಾರಂಭವಾಗಿದೆ ಎಂದು ಟಾಂಟಾಂ ಮೂಲಕ ಘೋಷಿಷ್ ಮಾಡಿಸಿದರು. ಅದರೆ ವ್ಯಾಧಿಯ ನಿವಾರಣೆಯ ಬಗ್ಗೆ ಯಾವ ವಿಧವಾದ ಏರ್ಪಾಡೂ ಮಾಡಲೇ ಇಲ್ಲ. ನಮ್ಮ ಅಮಲ್ದಾರ್ರು ಊರು ಸಂಚಾರಮಾಡುವದೇ ಅಪರೂಪ ಊರಿನ ಪಾಕೀಜಾ ವಿಷಯ ಹೇಳಬೇಕಾದ್ದಿಲ್ಲ. ರಾತ್ರಿ ಕಾಲದಲ್ಲಿ ಲಾಂದ್ರಕಂಭಗಳು ಪ್ರಕಾಶವಾಗಿ ಉರಿಯುವದೇ ಇಲ್ಲ. ಈ ವಿಷಯಗಳನು ಕುರಿತು ಇಲ್ಲಿನ ಮ್ಯುನಿಸಿಪಾಲಿಟಿಯವರು ಗಮನ ಕೊಡಬೇಕೆಂದು ನಿರೀಕ್ಷಿಸುತ್ತೇವೆ.—ಇಲ್ಲಿಗೆ ಮೂರು ಮೈಲಿ ದೂರದಲ್ಲಿ ಕುಮಾರಹಳ್ಳಿ ಎಂಬ ಗ್ರಾಮದಲ್ಲಿ ಹೊಲೆಯರು ನೂರು ಮನೆಗಳ ವರೆಗೂ ವಾಸ ಮಾಡುತ್ತಾ ಇದ್ದಾರೆ. ಅವರಿಗೆ ನೀರಿನ ವಿಷಯದಲ್ಲಿ ಆ ಊರಿನ ಗೌಡರು ಕೊಳದಲ್ಲಿ ನೀರು ಮುಟ್ಟಕೊಡದೇಲೆ ಬಹಳ ತೊಂದರೆ ಕೊಡುತ್ತಾರೆ. ಬಿಸಲು ಕಾಲದಲ್ಲಿ ನೀರು ದೊರಕುವದೇ ಕಷ್ಟ. ಅದರ ಮೇಲೆ ವಿಷಯಗಳಲ್ಲಿ ತೊಂದರೆ ಪಡಿಸಿದರೆ ಇನ್ನೂ ಅಧಿಕ ಕಷ್ಟ. ಈ ವಿಷಯದಲ್ಲಿ ಮೇಲ್ಪಟ್ಟ ಅಧಿಕಾರಿಗಳು ಗಮನ ಕೊಡುವರೆಂದು ನಂಬುತ್ತೇವೆ.—ಈ ಗ್ರಾಮದಲ್ಲಿ ಹೊಲೆಯರು ಈಗ ಒಂದು ವರ್ಷದಿಂದ ತಮ್ಮ ಮಕ್ಕಳಿಗೆ ಕೂಲಿಶಾಲೆ ಇಟ್ಟುಕೊಂಡು ಓದಿಸುತ್ತಾ ಇದ್ದಾರೆ. ಆ ಪಾಠಶಾಲೆಯಲ್ಲಿ ೨೨ ಮಕ್ಕಳ ವರೆಗೂ ಇರುತ್ತಾರೆ. ಅಲ್ಲಿ ಮಿಷನ್ ಇಲಾಖೆಗೆ ಸಂಬಂಧಪಟ್ಟ ಪುಸ್ತಕಗಳನು ಓದಿಸುತ್ತಾರೆ. ಮುಂದಕ್ಕೆ ಮಕ್ಕಳು ದೇವರ ಭಯದಲ್ಲಿ ಬೆಳೆಯುವರೆಂದು ನಿರೀಕ್ಷಿಸುತ್ತೇವೆ.—ಇಲ್ಲಿ ಪ್ರತಿವಾರವೂ ಸಂತೆ ನಡೆಯುತ್ತದೆ. ಸಂತೆಯಲ್ಲಿ ಫಕೀರರ ಹಾವಳಿ ಬಹಳವಾಗಿದೆ ಅಲ್ಲದೆ ಸಂತೆಯಲ್ಲಿ ಕನ್ನ ಸೇರುಗಳನು ಇಟ್ಟು ಅಳೆಯುತ್ತಾರೆ. ಸರ್ಕಾರದವರು ಇದಕ್ಕೆ ಗಮನ ಕೊಡದೆ ಅಮರೇ ಹಳ್ಳಿ ಜನಗಳಿಂದ ತಂದಂಥ ಸಾಮಾನುಗಳನು ಭಯಪಡಿಸಿ ತೆಗೆದುಕೊಂಡು ಹೋಗುತ್ತಾರೆ.

ಹೊಸಕೋಟೆ.—ಕಳೆದ ತಿಂಗಳ ೨೯ ನೆ ತಾರೀಕು ಶುಕ್ರವಾರ ೬ ಸಾಮಾರು ೯ ಗಂಟೆ ಸಮಯದಲ್ಲಿ ಬೆಂಗಳೂರು ಡಿಸ್ಟ್ರಿಕ್ಟಿನ ಹೊಸಕೋಟೆಯಲ್ಲಿನ ಸಾರ್ವಜನಿಕವಾದ ವಾಚಕಮಂದಿರದಲ್ಲಿ ಬಹಿರಂಗವಾದ ಸಭೆ ಸೇರಿತ್ತು. ಈ ಸಭೆಯಲ್ಲಿ ಟವನಿನ ವರ್ತಕ ಪ್ರಮುಖರು, ನಗರರಕ್ಷಕ ಸಂಘದ ಸಭಾಸದರೂ, ತಾಲ್ಲೂಕು ಮುಖಂಡರಾದ ರೈತವರ್ತಕ ಪಟೇಲ್ ಶ್ಯಾನುಭೋಗ ಮುಂತಾದ ಪ್ರಜೆಗಳೂ ಸುಮಾರು ಇನ್ನೂರು ಮಂದಿಯ ವರೆಗೆ ಸೇರಿತ್ತು. ಮೈಸೂರು ದಸರಾ ಮೆಂಬರಾಗಿಯೂ ಡಿಸ್ಟ್ರಿಕ್ಟ್ ಬೋರ್ಡಿನ ಮೆಂಬರಾಗಿಯೂ ಟವನ್ ಮ್ಯುನಿಸಿಪಲ್ ಮೆಂಬರಾಗಿಯೂ ಇರುವ ಮೊ॥ ಕೇಶವಪ್ಪನವರು ಈ ಸಭೆಯ ಅಗ್ರಾಸನಾಧಿಪತ್ಯವನ್ನು ಸಭಿಕರ ಅಪೇಕ್ಷೆಯಂತೆ ವಹಿಸಿದ್ದರು. ಸಭೆಯಲ್ಲಿ ಶ್ರೀಮಾನ್ ವಿ. ಪಿ. ಮಾಧವರಾವ್, ಸಿ ಐ ಇ ಯವರು ಈ ನಮ್ಮ ಮೈಸೂರು ಸಂಸ್ಥಾನದ ಮುಖ್ಯಾಮಾತ್ಯ ಪೀಠವನ್ನು ಅಲಂಕರಿಸುವ ಮಹದಾನಂದದಾಯಕವಾದ ವಾರ್ತಾಪ್ರಶಂಸೆಯೇ ಮುಖ್ಯ ವಿಷಯವಾಗಿತ್ತು. ಈ ಸಮಯದಲ್ಲಿ ಪೂರ್ವ ಈ ಸಂಸ್ಥಾನದಲ್ಲಿ ಅನೇಕ ವರುಷಗಳು ಬಗೆ ಬಗೆ ದಾಖಲೆಗಳಲ್ಲಿ ತೋರಿದ ಇವರ ರಾಜಕಾರ್ಯ ದಕ್ಷತೆ, ನಿಸ್ಪೃಹತೆ, ಧರ್ಮಮರ್ಮಜ್ಞತೆ, ಕಾರ್ಯನಿರ್ವಾಹ ಕ್ರಮದಲ್ಲಿ ನಿಷ್ಪಕ್ಷಪಾತತೆ, ಅಕುಟಿಲವಾದ ಪ್ರಜಾವಾತ್ಸಲ್ಯ, ಇತ್ಯಾದಿಗಳೂ ಈ ತಾಲ್ಲೂಕಿನ ಪ್ರಜೆಗಳಿಗೆ ತಥಾ ಇಡೀ ಕರ್ನಾಟಕಕ್ಕೆ ಅತ್ಯಲ್ಪವಾದ ೨ ವರುಷ ಕಾಲದ ಇವರ ವಿಯೋಗದಿಂದುಂಟಾಗಿದ್ದ ಮನಃಕಳಂಕವೂ, ಪ್ರಕೃತದಲ್ಲಿ ಪ್ರಜೆಗಳ ಸುದೈವಫಲದಿಂದ ಪುನಃ ಇವರು ಈ ಸಂಸ್ಥಾನದ ಮುಖ್ಯಾಮಾತ್ಯ ಪದವಿಗೆ ಆರೋಹಿತರಾಗುವ ಪರಮಾನಂದವೂ, ತದನುಸಾರವಾದ ಭವಿಷ್ಯದಭ್ಯುದಯ ಪರಂಪರೆಗಳೂ, ಇವರಲ್ಲಿ ನೆಲೆಯಾಗಿರುವ ಸ್ವಭಾವದ ಪ್ರಜಾಪರಿಪಾಲನಾ ಚತುರತೆಯೂ, ಇವೇ ಮುಂತಾದ ಗುಣಕಥನ ಅಡಗಿದ ಒಂದು ಉಪನ್ಯಾಸವನು ಸಭಿಕರ ಮುಂದೆ ಮೊ॥ ಭಾರತಿ ಸಂಪಂಗಿರಾಮಯ್ಯನವರು ಓದಿದರು. ಅವರ ಅಭಿಪ್ರಾಯ 'ಪ್ರಜೆಗಳಲ್ಲಿ ನೆಲೆಯಾಗಿರುವ ಪ್ರೀತಿ, ಗೌರವ ರಾಜಭಕ್ತಿಗಳು ಮುಖ್ಯಾಮಾತ್ಯರವರ ಶ್ರೇಯಃಪ್ರಾರ್ಥನೆ ಇವುಗಳನು ತಂತಿಯ ಮೂಲಕ ಮುಖ್ಯಾಮಾತ್ಯರವರ ಸನ್ನಿಧಿಗೆ ಸಮರ್ಪಿಸಬೇಕೆಂದು ತೀರ್ಮಾನಿಸಲ್ಪಟ್ಟಿತು ಅದರಂತೆ ಅಗ್ರಾಸನಾಧಿಪತಿಗಳು ತಂತಿಯನ್ನು ಸಮರ್ಪಿಸತಕ್ಕದ್ದೆಂದು ಎಲ್ಲರೂ ಒಪ್ಪಿದರು ತಂತಿಯನು ಓದಲಾಯಿತು ಸಂತೋಷಸೂಚಕವಾದ ಮಂಗಳವಾದ್ಯರವದಿಂದ ತಂತಿಯನ್ನು ಕಳುಹಿಸಿ, ಸಭಿಕರೆಲ್ಲರಿಗೂ ಗಂಧ ಪುಷ್ಪ ತಾಂಬೂಲಗಳನ್ನು ಹಂಚಿ ಈ ಮಹದಾನಂದಪೂರಿತವಾದ ಸುದಿನವನು ಸಮಸ್ತರೂ ಅನವರತವೂ ಜ್ಞಾಪಕದಲ್ಲಿಡತಕ್ಕದೆಂಬ ಅಗ್ರಾಸನಾಧಿಪತಿಗಳ ಸವಿನುಡಿಗಳಿಂದ ಕೂಡಿ ಸಭೆಯು ಮುಕ್ತಾಯವಾಯಿತು.

ತೀರ್ಥಹಳ್ಳಿ.—ಸುತ್ತುಮುತ್ತಲೂ ಕೆಲವು ಗ್ರಾಮಗಳಲ್ಲಿ ಸಿಡುಬಿನ ಉಪದ್ರ ಪ್ರಬಲವಾಗುತ್ತಾ ಇದೆ. ಕೆಲವರು ಆಗಲೇ ಆ ಉಪದ್ರದಿಂದ ತೀರಿ ಹೋದರು. ಇನ್ನೂ ಅನೇಕರು ಶ್ರಮಪಡುತ್ತಿದ್ದಾರೆ. ಬಿಸಲಿನ ತಾಪವನು ಸಹಿಸಲು ಅಸಾಧ್ಯವಾಗಿದೆ. ಇಷ್ಟು ಬಿಸಲು ಹಿಂದೆ ಯಾವಾಗ್ಯೂ ಇರಲಿಲ್ಲ. ಕಳೆದ ಸಾಲಿನಲ್ಲಿ ಮಳೆಯು ವಿಪರೀತ ಕಡಿಮೆಯಾದದ್ದೇ ಇದಕ್ಕೆ ಕಾರಣ. ಅನೇಕ ಭಾವಿಗಳೂ ಹೊಳೆಗಳೂ ಬತ್ತಿ ಹೋದವು. ಅಡಿಕೆ ತೋಟಗಳಂತೂ ತಂಪಿಲ್ಲದೆ ಒಣಗುತ್ತಾ ಇವೆ. ಮಲ್ನಾಡಿನ ಗೌಡರ ಕಷ್ಟವೂ ಬಡತನವೂ ಅಧಿಕವಾಗುತ್ತಾ ಬಂತು. ಟವನಿನಲ್ಲಿ ಜನರಿಗೆ ನೀರಿಲ್ಲದೆ ಅನೇಕರು ಬಹು ತೊಂದರೆ ಪಡುತ್ತಾರೆ. ಹೊಳೆ ದೂರವಾಗಿದೆ ಪೇಟೆ ಜನಗಳು ಮುನಿಸಿಪಲ್ ಭಾವಿಗಳಿಂದ ನೀರು ತರದೆಹೋದರೆ ಒಂದೆರಡು ಮನೆಯವರು ಸೇದುವದರಲ್ಲಿ ನೀರೇ ಇರುವದಿಲ್ಲ. ಆಗುಂಬೆಗೆ ಹೋಗುವ ರಸ್ತೆ ಎಡಕ್ಕೆ ಇರುವ ಭಾವಿಯಲ್ಲಿ ನೀರು ಹೋಗಿ ತಿಂಗಳಾಯಿತು. ಈಗ ಬಿಸಲು ಕಾಲ ವೈಸ್ ಪ್ರೆಸಿಡೆಂಟರು ಬಹು ಮುತುವರ್ಜಿಯಿಂದ ಅದನು ಸ್ವಲ್ಪ ಆಳಮಾಡಿಸಿದರೆ ಬಹು ಉಪಕಾರವಾದೀತು.—೧೦—೧೧ ನೇ ತಾರೀಖುಗಳಲ್ಲಿ ಇಲ್ಲಿನ ಮಾರೀಪೂಜೆ ನಡೆಸಿ ಕೋಳಿ, ಕುರಿ, ಕೋಣ ಮುಂತಾದವುಗಳನು ಬಲಿ ಅರ್ಪಿಸಿದರು. ಮಾರಿಕಟ್ಟೆ ಇರುವ ಸ್ಥಳದಿಂದ ಜನರಿಗೆ ಬಹು ಅಡಚಣೆಯಾಗಿದೆ. ಅಯ್ಯಾ ಎಡಿಟರೇ, ಒಟ್ಟಾಗಿ ಹೇಳಿದರೆ ಮೈಸೂರು ದೇಶದ ಯಾವ ಸ್ಥಳದಲ್ಲಿಯೂ ಇಂಥಾ ನಡುಪೇಟೆ ಮತ್ತು ಶಿಷ್ಟಂಥವಾದ ಸ್ಥಳದಲ್ಲಿ ಮಾರಿಪೂಜೆ ನಡೆಯುವದಿಲ್ಲ. ಮುಖ್ಯವಾದ ರಸ್ತೆಗೆ ೨ ಅಡಿ ಪಕ್ಕದಲ್ಲಿ ಮಾರಿ ಚಾವಡಿಯನ್ನು ಕಟ್ಟಿದ್ದಾರೆ. ಮುಂಭಾಗದಲ್ಲಿ ಸ್ವಲ್ಪವೂ ಸ್ಥಳವಿಲ್ಲ. ಮಾರಿ ಪೂಜೆ ನಡೆಯುವಾಗ ದೊಡ್ಡ ಗದ್ದಲವಾಗುತ್ತದೆ. ಅನೇಕ ವರ್ತಕರು ಈ ಗಲಾಟೆಯನ್ನು ಸಹಿಸಲಾರದೆ ಬೇಸರಿಕೆಯಿಂದ ಕುಳಿತಿದ್ದಾರೆ. ಅದು ಮಾತ್ರವಲ್ಲದೆ ಇಂಥಾ ನಡುಪೇಟೆಯಲ್ಲಿ ಪ್ರಾಣಿಗಳನ್ನು ಕತ್ತರಿಸುವದು ಬಹು ಹೇಯವಾಗಿ ಕಾಣಿಸುವದಲ್ಲದೆ ಮಕ್ಕಳು ಕಿರಿಚಿ ಹೆದರಿಕೊಳ್ಳುತ್ತಾರೆ ಆ ಎರಡು ದಿವಸಗಳಲ್ಲಿ ಇವುಗಳಿಂದ ಉಂಟಾದ ಗದ್ದಲ ಮುಂತಾದದ್ದು ಜನರನು ರಸ್ತೆಯಲ್ಲಿ ತಿರುಗುವದಕ್ಕೆ ಬಿಡದಷ್ಟು ಇಕ್ಕಟ್ಟಾಗಿತ್ತು.—ಅಮಲ್ದಾರ್ರು ಮತ್ತು ಡೆಪ್ಯುಟಿ ಕಮಿಷನರು ಈ ಸ್ಥಳವನ್ನೂ ಅದರಲ್ಲಿ ನಡೆಯುವ ಕಾರ್ಯಗಳನ್ನೂ ಖುದ್ದು ನೋಡಿದರೆ ಈ ಸ್ಥಳ ಅಂಥಾ ಕೆಲಸಕ್ಕೆ ತಕ್ಕದ್ದಲ್ಲವೆಂದು ಬಹು ಸುಲಭವಾಗಿ ತೀರ್ಮಾನಿಸಬಹುದು.—ಮೇಗರವಳ್ಳಿಯಲ್ಲಿ ಕಳವು ನಡೆಯಿತೆಂದು ಇಲ್ಲಿನ ಜಮಾದಾರ್ರು ಹೋಗಿ ಗುಮಾನಿ ಮೇಲೆ ಕೆಲವರನು ಹಿಡಿದು, ಮನಸ್ಸು ಬಂದ ಹಾಗೆಲ್ಲಾ ಹಿಂಸೆಪಡಿಸಿದರೆಂದು ವರ್ತಮಾನ ಬಂದಿದೆ. ಒಬ್ಬನನು ಬೆಳಿಗ್ಗೆ ೬ ಗಂಟೆಯಿಂದ ಸಾಯಂಕಾಲದ ವರೆಗೂ ಕೈಕಟ್ಟಿ ತೂಗಹಾಕಿದರೆಂತಲೂ ಮತ್ತೊಬ್ಬನಿಗೆ ಎದೆಯ ಮೇಲೆ ಒಂದು ಹಲಗೆ ಕಟ್ಟಿಸಿ ಹೊಡೆದು ಕೈಮರಕ್ಕೆ ಕಟ್ಟಿ ತೂಗಹಾಕಿದರೆಂತಲೂ ಒಬ್ಬ ಹೆಂಗಸನ್ನು ಸಹ ಹಿಂಸೆಪಡಿಸಿದರೆಂತಲೂ ಇನ್ನೊಬ್ಬ ಔಷಧಿ ಕೊಡುವವನನ್ನು ಹಿಡಿದು ಕಟ್ಟಿ ನೇತುಹಾಕಿದ್ದರಿಂದ ಕೂಡಲೆ ಅವನು ಪಟ್ಟಿಗೆ ಹೆದರಿ ವಾಂತಿ ಮಾಡಿದ್ದರಿಂದ ಬಿಟ್ಟರೆಂತಲೂ ಇದನು ನೋಡಿದವರು ಬಹು ಆಶ್ಚರ್ಯದಿಂದ ಹೇಳುತ್ತಿದ್ದಾರೆ. ಇಂಥಾ ಭಯಂಕರ ವಿಷಯಗಳನ್ನು ಅಮಲ್ದಾರ್ರು ಯಾಕೆ ವಿಚಾರ ಮಾಡಲಿಲ್ಲವೋ ತಿಳಿಯದು. ಹಾಗೇನಾದರೂ ಇದ್ದರೆ ವಿಚಾರಿಸುವದು ಅವಶ್ಯವಾಗಿದೆ.—ಮಹಿಷ ಜಾತ್ರೆಯು ಕಳೆದ ಗೌರ್ಣಮಿ ದಿನ ಪ್ರಾರಂಭಿಸಿತು. ಎರಡು ಮೂರು ದಿನ ಬ್ರಾಹ್ಮಣರಿಗೆ ಸಂತರ್ಪಣೆ ನಡೆಯಿತು. ಕೆಲವು ಊಟದಲ್ಲಿ ಕೊರತೆಯೂ ಇತ್ತೆಂತಲೂ ದುಡ್ಡನು ಸರಿಯಾಗಿ ವೆಚ್ಚ ಮಾಡಲಿಲ್ಲವೆಂತಲೂ ದೂರದಿಂದ ಬಂದಿದ್ದ ಕೆಲವರಿಗೆ ಹೊಟ್ಟೆ ತುಂಬ ಇದಲಿಲ್ಲವೆಂತಲೂ ಜನರು ಹೇಳಿಕೊಂಡು ಹೋದರು. ಮೇಲ್ಪಟ್ಟವರು ಇದನ್ನೆಲ್ಲಾ ವಿಚಾರಿಸಿ ಕ್ರಮಪಡಿಸುವದು ಉತ್ತಮ.—ಜಾತ್ರೆಯಲ್ಲಿ ಯಾವುದೋ ಒಂದು ಭಾಗವತರ ನಾಟಕ ಆಡಿಸಬೇಕೆಂದು ವರ್ತಕರಿಂದ ಬಲವಂತವಾಗಿ ಪೋಲೀಸಿನವರ ಕುಮ್ಮಕ್ಕಿನಿಂದ ದುಡ್ಡು ಎತ್ತಿದರಂತೆ. ಇದು ಯಾವ ಕಾನೂನೋ ನಾವು ಕಾಣೆವು.—ಇಲ್ಲಿನ ಕಚೇರಿ ಕೆಲಸದ ಕೆಲವು ಗುಮಾಸ್ತರುಗಳಿಗೆ ವರ್ಗವಾದ್ದರಿಂದ ಅನೇಕ ವಿಷಯಗಳಲ್ಲಿ ಪ್ರಯೋಜನವಾಯಿತೆಂದು ಜನರು ಸಂತೋಷಪಡುವದಲ್ಲದೆ, ಅಕ್ರಮದಲ್ಲಿರುವ ಇನ್ನು ಕೆಲವರಿಗೆ ಬೇಗನೆ ವರ್ಗವಾದರೆ ಬಹು ಉತ್ತಮವೆಂದು ಪ್ರಜೆಗಳು ಅಂಗಲಾಚುತ್ತಿದ್ದಾರೆ

ತುಂಕೂರು.—ಬಿಸಲ ಧಗೆಯು ತುಂಬಾ ದುಸ್ಸಹವಾಗಿದೆ. ಈ ವರುಷದಂಥಾ ಧಗೆಯು ಹಿಂದೆ ಯಾವಾಗಲೂ ಉಂಟಾಗಿರಲಿಲ್ಲ. ಪ್ರತಿ ವರುಷವೂ ಸಾಮಾನ್ಯವಾಗಿ ಈ ಚೈತ್ರಮಾಸದಲ್ಲೇ ಅನೇಕ ಭಾಗಗಳಲ್ಲಿ ಮಳೆಯಾಗಿ ತಕ್ಕಮಟ್ಟಿಗಾದರೂ ಜನಗಳಿಗೂ ಜಾನುವಾರುಗಳಿಗೂ ತನುವನುಂಟುಮಾಡುತ್ತಿತ್ತು. ಈ ವರುಷ ಅದರ ಸೆಲೆಯೇ ಕಾಣದಿರುವದರಿಂದ ಎಲ್ಲಾ ಪ್ರಾಣಿಗಳೂ ತಲ್ಲಣಿಸುತ್ತಿವೆ. ಪ್ರಜೆಗಳು ಮತ್ತು ಕಾಲ್ನಡೆಗಳಿಗೆ ಎಲ್ಲಾ ಭಾಗಗಳಲ್ಲೂ ಪ್ರತಿಕೂಲಗಳೇ ಹರಡಿಕೊಂಡಿರುವದರಿಂದ ಸಂತೋಷಪ್ರದವಾದ ಈ ವಸಂತಋತುವು ಸುಖಾಸ್ಪದವಾಗಿಲ್ಲ. ಹೊರಪೇಟೆಯ ಕೆಲವು ಭಾಗದ ಜನರ ಉಪಯೋಗಾರ್ಥವಾಗಿ ಒಬ್ಬಾನೊಬ್ಬ ವೈಶ್ಯಧನಿಕ ಮಹಾಶಯರು ಕೆರೆಯ ಅಂಗಳದಲ್ಲಿ ಕೈನೀರಾಗಿ ಭಾವಿ ತೆಗೆಸುತ್ತಿದ್ದಾರೆ. ಇವರ ಮೇಲ್ಪಂಕ್ತಿಯನ್ನು ಇತರ ಪುಣ್ಯಾತ್ಮರು ಅನುಸರಿಸಿ ಶೀಘ್ರವಾಗಿ ಪ್ರಜೆಗಳಿಗೆ ಜಲವಸತಿ ಮಾಡ್ಯಾರೆಂದು ನಿರೀಕ್ಷಿಸಲ್ಪಟ್ಟಿದೆ. ಧಾರಣೆವಾಸಿಗಳು ಯಥಾಪ್ರಕಾರವಾಗಿವೆ. ಅಂತು ಯಾವ ಭಾಗದಲ್ಲೂ ಈ ವರುಷವು ಜನರಿಗೆ ಸುಖಾಸ್ಪದವಾಗಿಲ್ಲ.—ನಮ್ಮ ವೈಸ್ ಪ್ರೆಸಿಡೆಂಟರಾಗಿದ್ದ ಮೊ॥ ಟಿ. ಕಾಳಿಂಗಪ್ಪಯ್ಯನವರು ಕಳೆದ ವಾರ ಬೆಂಗಳೂರಿಗೆ ವರ್ಗಪಟ್ಟು ದಯಮಾಡಿದರು. ಇವರ ಕಾಲದಲ್ಲಿ ಹಿಂದಿನವರು ಮಾಡಬೇಕೆಂದಿದ್ದ ಕೆಲವು ಕಾರ್ಯಗಳನ್ನು ಪೂರ್ತಿಮಾಡಿ ಜನರಿಗೆ ಅನುಕೂಲಪಡಿಸಿದರು. ಇವರಂತಹ ನಿಗರ್ವಿಶಿರೋಮಣಿಗಳೂ ಸಾಧುಪ್ರಕೃತಿಯುಳ್ಳವರೂ

ಇವರಿಬ್ಬರೂ ಸಹಾಯಕ ಮೆಂಬರುಗಳಾಗಿದ್ದರೂ, ರಾಜ್ಯವನ್ನು ಎಚ್ಚರಿಕೆಯಿಂದ ನಡೆಯಿಸುವ ಭಾರವು ರಾ. ರಾ. ವಿ. ಪಿ. ಮಾಧವರಾಯರ ಹೆಗಲ ಮೇಲಿದೆ. ರಾ. ರಾ. ಮಾಧವರಾಯರು ಎರಡು ವರ್ಷಗಳ ವರೆಗೆ ಮೈಸೂರಿಂದ ದೂರವಾಗಿದ್ದು ರಾಜ್ಯತಂತ್ರವನ್ನು ನೋಡದೆ ಇದ್ದವರಿಂದ, ಈ ಉದ್ಯೋಗದಲ್ಲಿ ಕೃತಕೃತ್ಯರಾಗುವರೋ ಎಂದು ಕೆಲವರು ಅನುಮಾನಿಸುವರು. ಈ ಅನುಮಾನಕ್ಕೆ ನಮಗೇನೂ ಆಧಾರ ಕಾಣುವದಿಲ್ಲ. ಎರಡು ವರ್ಷಗಳ ತನಕ ನೇಟಿವ್ ಸಂಸ್ಥಾನವಾದ ತಿರುವಾಂಕೂರಿನಲ್ಲಿ ಇವರು ದಿವಾನರಾಗಿದ್ದದ್ದೇ ಇನ್ನೂ ಅನುಕೂಲವೆಂದು ನಾವು ಅಭಿಪ್ರಾಯ ಪಡುತ್ತೇವೆ. ಸರಕಾರಿ ನಡಿಸಿದವನಿಗೆ ಸಾಮೋಟ ಒಡಿಸುವದು ಕಷ್ಟವಾಗಲಾರದು. ಆದರೂ ರಾ. ರಾ. ಮಾಧವರಾಯರು ಎಲ್ಲಿಗೆ ಬಂಡಿಯನ್ನು ಹೊಡೆಯುವರೋ ಎಂದು ಎಲ್ಲರೂ ಪ್ರತೀಕ್ಷಿಸುತ್ತಾರೆ. ಪ್ರಥಮ ಸಂಸ್ಥಾನವೆಂಬ ಬಿರುದುಳ್ಳ ಮೈಸೂರು ಸೀಮೆಯಲ್ಲಿ ಹೊಸ ಏರ್ಪಾಡುಗಳೂ ಹೊಸ ಕಾನೂನುಗಳೂ ಪ್ರಜೆಗಳಿಗೆ ಅನುಕೂಲವಾಗುವಂತೆ ಮಾಡಲ್ಪಡುತ್ತವೆ. ಇಂಥವುಗಳನ್ನು ಏರ್ಪಡಿಸುವಾಗ ರಾ. ರಾ. ಮಾಧವರಾಯರು ಪೂರ್ವಾಪರವನ್ನು ವಿಮರ್ಶಿಸಿ ಮಾಡುವರೆಂದು ನಾವು ಪ್ರತ್ಯೇಕವಾಗಿ ಹೇಳಬೇಕೆಂದಿಲ್ಲ. ಮತಾಂತರವನ್ನು ಅವಲಂಬಿಸಿದವರ ಸಂಬಂಧವಾಗಿ ಸರಕಾರದವರು ಏನೊಂದನ್ನು ಈ ವರೆಗೆ ಇತ್ಯರ್ಥ ಮಾಡಲಿಲ್ಲ. ಈ ಸುಕಾಲದಲ್ಲಿಯೇ ರಾ. ರಾ. ಮಾಧವರಾಯರು ಮೈಸೂರ ದಿವಾನರಾಗಿ ಬಂದಿದ್ದಾರೆ. ಅನ್ಯಮತವನ್ನು ಗ್ರಹಣ ಮಾಡಿದವರ ಹಕ್ಕು ಬಾಧ್ಯತೆಗಳನ್ನು ಕುರಿತು ಮೈಸೂರಿನಲ್ಲಿ ಏನು ನಡೆಯುವದೋ ನೋಡೋಣ ಎಂದು ಇತರ ನೇಟಿವ್ ಸಂಸ್ಥಾನಗಳು ಎವೆಯಿಕ್ಕದೆ ನಿಂತಿವೆ. ಒಂದು ವೇಳೆ ಅಂಥವರಿಗೆ ಪಿತ್ರಾರ್ಜಿತ ಆಸ್ತಿಯಲ್ಲಿ ಏನೊಂದು ಅಧಿಕಾರವಿಲ್ಲವೆಂದು ಹಕ್ಕುಕಾನೂನು ಮಾಡಿದ್ದೇ ಆದರೆ, ಅನೇಕ ಸಂಸ್ಥಾನಗಳಲ್ಲಿ ಹೇಚಾಡುತ್ತಿರುವ ಸತ್‌ಕ್ರೈಸ್ತರ ಆಶಿಸ್ತಾತ್ಯಗಳು ಗಾಳಿಗಿಟ್ಟ ದೀಪದಂತೆ ಆರಿಹೋಗಬಹುದು. ಈ ದುರವಸ್ಥೆಯನ್ನು ತಪ್ಪಿಸಲು ಸರಿಯಾಗುವಂತೆಯೇ ರಾ. ರಾ. ಮಾಧವರಾಯರು ದಿವಾನ ಪದವಿಯನ್ನು ಆರೋಹಿಸಿರುವರೆಂದು ನಂಬುತ್ತೇವೆ. ರಾ. ರಾ. ಮಾಧವರಾಯರು ಯಾವ ವಾತ್ಸಲ್ಯದಿಂದ ಉದ್ರೇಕಿತರಾಗಿ ತಿರುವಾಂಕೂರಿನಲ್ಲಿ ಬಡ ಕ್ರೈಸ್ತರಿಗೋಸ್ಕರ ಕಾದಾಡಿ ಅವರಿಗೆ ಹಿತವನ್ನು ಮಾಡಿದರೋ, ಆ ಬನಾನುರಾಗವು ಅವರಲ್ಲಿ ಇನ್ನೂ ಆರಿಲ್ಲವೆಂದು ನಮಗೆ ನಂಬಿಕೆಯುಂಟು. ಅಂಥಾ ವಾತ್ಸಲ್ಯವು ಇರುವ ತನಕ ಅವರು ರಾಜ್ಯಶಕಟವನ್ನು ಅಧೋಮಾರ್ಗಕ್ಕೆ ಒಡಿಸಲಿಕ್ಕಿಲ್ಲವೆಂಬ ಭರವಸವೂ ಉಂಟು."

ಇಂಡಿಯಾ ದೇಶದ ವೃತ್ತಾಂತಗಳು.

ಸಿಲೋನ್ (ಲಂಕಾ) ದ್ವೀಪದಲ್ಲಿ ವೈದ್ಯಮಾಡತಕ್ಕ ಪಂಡಿತರು ಸರ್ಕಾರಕ್ಕೆ ೫ ರೂಪಾಯಿ ಕೊಟ್ಟು ಲೈಸೆನ್ಸು ಪಡೆಯಬೇಕಾಗಿದೆ.

❖❖❖❖

ಕಲ್ಕತ್ತೆಯಲ್ಲಿ ತಸ್ವೀರುಗಳನ್ನು ಮಾಡಿ ಬಿಕರಿಮಾಡುತ್ತಿದ್ದ ಕೆಲವು ಬಂಗಾಳಿಗಳು ಲಜ್ಜಾಸ್ಪದವಾದ ಕೆಲವು ಚಿತ್ರಗಳನ್ನು ಮಾರುತ್ತಿದ್ದರು. ಪೊಲೀಸಿನವರು ಆ ಪಟಗಳ ಸಹಿತ ಅವರನ್ನು ಹಿಡಿದು ಅವರ ಮೇಲೆ ಮೊಕದ್ದಮೆ ಮಾಡಿದಾರೆ.

❖❖❖❖

ಹೊನ್ನಾವಾರದಲ್ಲಿ ಒಂದು ದೋಣಿಯಲ್ಲಿ ೩೧ ಜನ ಮಂಗಳೂರಿನ ಕಸಬಿನವರು ಹೋಗುತ್ತಿರುವಾಗ ಅದು ಸಮುದ್ರದಲ್ಲಿ ಮುಳುಗಿಕೊಂಡಿತೆಂತಲೂ ೬ ಜನ ಗಂಡಸರು, ೩ ಮಂದಿ ಹೆಂಗಸರು, ಇಬ್ಬರು ಮಕ್ಕಳು ನೀರಿನ ಪಾಲಾದರೆಂತಲೂ ವರ್ತಮಾನ ಬಂದಿದೆ.

❖❖❖❖

ಮಯೂರ್ ಬಂಜ್ ಸಂಸ್ಥಾನದ ಮಹಾರಾಜ ಕುಮಾರಿಯು ಕಾಲವಾದಳು. ಅಲ್ಲಿ ಕಸುಬುದಾರಿ ವಿದ್ಯಾಶಾಲೆಯನ್ನು ಆ ದಿನ ಮಹಾರಾಜರವರು ಪ್ರತಿಷ್ಠೆಮಾಡಬೇಕೆಂದಿದ್ದರು. ಅವರಿಗೆ ಈ ಪುತ್ರೀವಿಯೋಗದುಃಖ ಪ್ರಾಪ್ತವಾದ್ದರಿಂದ ಆ ಕಾರ್ಯವನ್ನು ಸದ್ಯದಲ್ಲಿ ನಿಲ್ಲಿಸಿರುತ್ತಾರೆ.

ಕಲ್ಕತ್ತೆಯಲ್ಲಿ ಒಬ್ಬ ಬಂಗಾಳಿಯು ಹೆಂಡತಿಯನ್ನಿಟ್ಟುಕೊಂಡು ಸಂಸಾರಮಾಡುತ್ತಿದ್ದನು. ಅವಳು ತನ್ನ ತೌರುಮನೆಗೆ ಹೋಗಬೇಕೆಂದು ಕೇಳಿದ್ದಕ್ಕೆ ಗಂಡನು ಹೋಗಬೇಡವೆಂದು ಎಷ್ಟು ಹೇಳಿದರೂ ಕೇಳಲಿಲ್ಲ. ಕಡೆಗೆ ಒಂದು ದಿನ ಅವಳು ಕೋಣೆಯಲ್ಲಿ ನೇಣು ಹಾಕಿಕೊಂಡು ಸತ್ತುಹೋದಳು.

❖❖❖❖

ಮದರಾಸ್ ಆಧಿಪತ್ಯದಲ್ಲಿ ಕಳೆದ ೧೯೦೪ನೆ ವರುಷದಲ್ಲಿ ಹಾವು ಕಡಿದು ೧,೪೯೬ ಜನರೂ, ಕಾಡು ಮೃಗಗಳಿಂದ ೨೬೫ ಜನರೂ ಮೃತಪಟ್ಟರು. ೧೬,೯೯೯ ಗೋಕಾಯಿಗಳು ನಾಶವಾದವು. ಆ ವರುಷದಲ್ಲಿ ೧೫,೧೫೦ ರೂಪಾಯಿ ಇನಾಮು ಕೊಟ್ಟು, ೪೧೯ ಕಾಡು ಮೃಗಗಳನ್ನು ಕೊಲ್ಲಿಸಿದಾರೆ. ಇದಲ್ಲದೆ ಸರ್ಪಗಳು ಸೇರದಂತೆ ಮಾಡುವುದಕ್ಕೋಸ್ಕರ ಸರ್ಕಾರದವರು ೧೫,೯೩೬ ರೂಪಾಯಿ ಖರ್ಚುಮಾಡಿ ಅನೇಕ ಕಡೆಗಳಲ್ಲಿ ಮುಳ್ಳಿನ ಗಿಡಗಳನ್ನು ಹಾಕಿಸಿದರು.

❖❖❖❖

ಹಿಂದುಸ್ಥಾನದಲ್ಲೆಲ್ಲಾ ಕಳೆದ ವಾರ ೧೪,೨೫೩ ಜನರಿಗೆ ಪ್ಲೇಗ್ ತಗಲಿದ್ದರ ಪೈಕಿ ೧೧,೫೪೨ ಜನರು ಕಾಲವಾದರು. ಅಂದರೆ ಹಿಂದಿನ ವಾರದ ಸಂಖ್ಯೆಗಿಂತ ೩,೦೦೦ ಕಡಿಮೆ. ಈ ಪೈಕಿ ಬೊಂಬಾಯಿ ಮತ್ತು ಸಿಂಧು ೧,೨೭೬, ಮದರಾಸ್ ೨೨, ಬಂಗಾಳಾ ೩,೩೩೪, ಸಂಯುಕ್ತ ಆಧಿಪತ್ಯಗಳು ೩,೯೩೪, ಪಂಜಾಬ್ ೫,೯೧೯, ಬರ್ಮಾ ೨೨೦; ಮಧ್ಯ ಪ್ರಾಂತ್ಯಗಳು ೩೦೪, ಮಧ್ಯ ಇಂಡಿಯಾ ೧೫೩, ರಾಜಪುಟಾನಾ ೪೯, ಈ ರೀತಿ ಮರಣಗಳಾಗಿರುತ್ತವೆ.

❖❖❖❖

ಉತ್ತರ ದೇಶದಲ್ಲಿ ಕ್ಷಾಮಪೀಡಿತರ ಸಂಖ್ಯೆಯು ಹಿಂದಿನ ವಾರಕ್ಕಿಂತ ೧೫,೦೦೦ ಜಾಸ್ತಿಯಾಗಿದೆ. ಈಗ ಸಂಯುಕ್ತ ಆಧಿಪತ್ಯಗಳಲ್ಲಿ ೨ ಲಕ್ಷ ಜನರು, ಪಂಜಾಬಿನಲ್ಲಿ ೧೦,೯೦೯ ಜನರು, ರಾಜಪುಟಾನಾದಲ್ಲಿ ೯೪,೬೦೨ ಜನರು, ಬೊಂಬಾಯಿನಲ್ಲಿ ೯೦,೫೨೪ ಜನರು, ಮಧ್ಯ ಇಂಡಿಯಾದಲ್ಲಿ ೧,೧೨,೨೮೦ ಜನರು— ಈ ರೀತಿ ಪ್ರಜೆಗಳು ಕ್ಷಾಮಪೀಡಿತರಾಗಿ ಸರ್ಕಾರದವರ ಪೋಷಣೆಯಲ್ಲಿರುವರು. ಇದಲ್ಲದೆ ಸಂಯುಕ್ತ ಆಧಿಪತ್ಯಗಳಲ್ಲಿ ಕೆಲವು ಕಡೆ ವಾಂತಿಭೇದಿ ಉಪದ್ರವೂ ಸಿಡುಬೂ ಹುಟ್ಟಿ ಹಬ್ಬುತ್ತಿವೆ.

❖❖❖❖

ಪೂನಾಪಟ್ಟಣದಲ್ಲಿ ಒಬ್ಬ ಶ್ರೇಷ್ಠ ಮನುಷ್ಯನ ಹೆಂಡತಿಯಾದ ಯಮುನೆ ಎಂಬ ೧೭ ವರುಷದ ಹುಡುಗಿಯು ಅಲ್ಲಿನ ಆಸ್ಪತ್ರೆ ಅಸಿಸ್ಟೆಂಟ್ ವಾಸುದೇವನೆಂಬವನ ಸಂಗಡ ಸೇರಿಕೊಂಡು, ತನ್ನ ಗಂಡನಿಗೆ ಮತ್ತುಬರುವಂಥಾ ಔಷಧವನ್ನು ತಿನ್ನಿಸಿ, ಅವನು ಜ್ಞಾನಶೂನ್ಯನಾಗಿದ್ದಾಗ ವಾಸುದೇವನನ್ನು ಕಟ್ಟಿಕೊಂಡು ರಾತ್ರೋರಾತ್ರಿ ಪೂನಾ ಪಟ್ಟಣದಿಂದ ಹೊರಟು ಗ್ವಾಲಿಯರಿಗೆ ಹೋಗಿ ಅಲ್ಲಿ ಗಂಡಹೆಂಡರಾಗಿ ಮೂರು ತಿಂಗಳಿದ್ದರು. ಮ್ಯಾಜಿಸ್ಟ್ರೇಟರು ಆ ಹುಡುಗಿಗೆ ೭ ವಾರಗಳ ಸಜೆಯನ್ನೂ ವಾಸುದೇವನಿಗೆ ೧೩ ತಿಂಗಳ ಕಠಿಣ ಸಜೆಯನ್ನೂ ವಿಧಿಸಿರುತ್ತಾರೆ. ಆ ಹುಡುಗಿ ಈಗ ಗರ್ಭಿಣಿಯಾಗಿರುವಳು.

❖❖❖❖

ಕಲ್ಕತ್ತಾ ಪಟ್ಟಣದಲ್ಲಿ ಹಾರ್ಮಸ್ಟನ್ ಎಂಬ ಸರ್ಕಸ್ ಆಟದವರು ಒಂದು ದಿನ ರಾತ್ರಿ ತಮ್ಮ ಡೇರೆಯಲ್ಲಿ ಆಟವನ್ನು ತೋರಿಸುವಾಗ್ಗೆ ಕ್ಯಾಪ್ಟನ್ ಲಿಂಡೊ ಎಂಬುವನು ಸಿಂಹದ ಬೋನಿನೊಳಗೆ ನುಗ್ಗಿ ಅದರ ಸಂಗಡ ಸ್ವಲ್ಪ ಹೊತ್ತು ಹೋರಾಡುತ್ತಿದ್ದು ನೋಟಕರಲ್ಲಿ ವಿಸ್ಮಯವನ್ನುಂಟುಮಾಡಿದನು. ಕಡೆಗೆ ಅವನು ಬೋನಿನಿಂದ ಹೊರಕ್ಕೆ ಬರುವಲ್ಲಿ ಏನೋ ಆಯತಪ್ಪಿ ಸಿಂಹವು ಅವನ ಗದ್ದವನ್ನು ಹಿಡಿದು ಕಚ್ಚಿಬಿಟ್ಟಿತು. ಅವನು ಚಮತ್ಕಾರದಿಂದ ಹೊರಕ್ಕೆ ಬಂದುಬಿಟ್ಟನು. ಕೂಡಲೇ ಅವನಿಗೆ ಸ್ಮರಣೆ ತಪ್ಪಿಹೋದ್ದರಿಂದ ಅಲ್ಲಿದ್ದ ಒಬ್ಬ ವೈದ್ಯನು ಅವನಿಗೆ ಉಪಚಾರಮಾಡಿ, ಆಸ್ಪತ್ರೆಗೆ ಸಾಗಿಸಿದನು. ಈಗ ಅವನು ಬದುಕುವುದು ಕಷ್ಟವೆಂದು ಹೇಳುತ್ತಾರೆ.

❖❖❖❖

ಬರ್ಮಾ ಅಧಿಪತ್ಯಕ್ಕೆ ಸೇರಿದ ಉತ್ತರ ಷಾನ್ ಪ್ರದೇಶದಲ್ಲಿ ಬೌಡ್ವೆನ್ ಎಂಬ ಸ್ಥಳದಲ್ಲಿ ಪೂರ್ವಕಾಲದವರು ಅನೇಕ ಗಣಿಗಳನ್ನು ತೋಡಿ ಬೆಳ್ಳಿಯನ್ನೂ ಸೀಸವನ್ನೂ ತೆಗೆದಿರುತ್ತಾರೆ. ಈಗಲೂ ಅದರ ಕುರುಹುಗಳೂ ಗಣಿಗಳೂ ಹಾಗೇ ಇರುವವು. ಇನ್ನೂ ಯಂತ್ರ ಸಹಾಯದಿಂದ ಕೆಲಸ ಮಾಡಿದರೆ ಆ ಎರಡು ಲೋಹಗಳೂ ಅಪಾರವಾಗಿ ಸಿಕ್ಕುವುದಕ್ಕೆ ಅಡ್ಡಿ ಇಲ್ಲವೆಂದು ವಿಲಾಯತಿಯಿಂದ ಬಂದ ಗಣಿ ಪರೀಕ್ಷಕರು ಗೊತ್ತು ಮಾಡಿದಾರೆ. ಈಗ ಈ ಬೆಳ್ಳಿ ಸೀಸಗಳನ್ನು ತೆಗೆಯುವುದಕ್ಕಾಗಿ ವಿಲಾಯತಿಯಲ್ಲಿ ೩೯ ಲಕ್ಷ ರೂಪಾಯಿ ಮೂಲಧನವುಳ್ಳ ಒಂದು ಕಂಪನಿ ಏರ್ಪಾಡಾಗಿರುವದು. ಈ ಗಣಿಗಳಿಂದ ಖರ್ಚು ಕಳೆದು ೬೪ ಲಕ್ಷ ರೂಪಾಯಿಗೆ ಕಮ್ಮಿ ಇಲ್ಲದೆ ಲಾಭ ಬರುತ್ತೆಂದು ನಿಷ್ಕರ್ಷೆ ಮಾಡಿದಾರೆ.

❖❖❖❖

ಸುಮಾರು ಒಂದು ವರುಷದ ಕೆಳಗೆ ಲಂಕಾ ದ್ವೀಪದ ಗೌರ್ನರವರು ಆ ದ್ವೀಪದಿಂದ ತಟ್ಟುಗುಡಿ (ಟುಟಿಕೊರಿನ್) ಗೆ ಬಂದಿದ್ದಾಗ್ಗೆ ಆ ಪಟ್ಟಣದಲ್ಲಿ ಮದರಾಸಿನ ಒಬ್ಬ ಮುತ್ತಿನ ಸಾಹುಕಾರನು ಮುತ್ತಿನ ವ್ಯಾಪಾರಕ್ಕಾಗಿ ಹೋಗಿ ಇಳುಕೊಂಡಿದ್ದನು. ಒಂದು ದಿನ ರಾತ್ರಿ ೨೫ ಜನ ಕಳ್ಳರು ಹಿಂಡು ಹಿಡಿದು ಆ ಸಾಹುಕಾರನ ಮನೆಗೆ ನುಗ್ಗಿ ೩೦,೦೦೦ ರೂಪಾಯಿನ ನೋಟುಗಳನ್ನೂ ೪೫೦ ಸವರಿನ್ ನಾಣ್ಯಗಳನ್ನೂ ಕೆಲವು ಭಾರೀ ರತ್ನಗಳನ್ನೂ, ಬಹಳ ಒಡವೆಗಳನ್ನೂ ಕಳವು ಮಾಡಿಕೊಂಡು ಹೋದರು. ದಾರಿಯಲ್ಲಿದ್ದ ಪೊಲೀಸಿನವನನ್ನೂ ಇನ್ನೂ ಒಂಬತ್ತು ಜನರನ್ನೂ ಹೊಡೆದು ಕೆಡವಿದರು. ಇದುವರೆಗೆ ಈ ಗುಂಪಿನವರು ಪತ್ತೆ ಆಗಿರಲಿಲ್ಲ. ಕೆಲವು ದಿನಗಳ ಹಿಂದೆ ಪೊಲೀಸಿನವರು ಈ ಕಳ್ಳರನ್ನೂ, ಕಳುವಾದ ನಗನಾಣ್ಯಗಳ ಪೈಕಿ ಮೂರನೇ ಒಂದಂಶವನ್ನೂ ಪತ್ತೆಮಾಡಿ ಹಿಡಿದಿರುತ್ತಾರೆ. ತಿನ್ನವೆಲ್ಲಿಯ ಸೆಷನ್ಸ್ ಕೋರ್ಟಿನಲ್ಲಿ ಈ ಮೊಕದ್ದಮೆ ದರ್ಯಾಪ್ತಿ ಆಗುತ್ತಿದೆ.

ಬಂಗಾಳಾ ಆಧಿಪತ್ಯಕ್ಕೆ ಸೇರಿದ ಚಪ್ರಾ ಡಿಸ್ಟ್ರಿಕ್ಟಿನಲ್ಲಿ ಸಬ್ ಡಿವಿಜನ್ ಆಫೀಸರಾದ ಮಿ॥ ಏ. ಎಚ್. ಲೇ ಎಂಬ ಸಾಹೇಬರು ಸರ್ಕೀಟು ಹೋಗಿದ್ದಾಗ ಯಾವದೋ ಒಂದು ಗ್ರಾಮದಲ್ಲಿ ತಮಗೆ ಸರಿಯಾದ ಸರಬರಾಯಿ ಮಾನಮರ್ಯಾದೆಗಳು ನಡೆಯಲಿಲ್ಲವೆಂದು ಹೇಳಿ ಆಕಪಟ್ಟು, ಅಲ್ಲಿನ ಇಬ್ಬರು ಭಾರೀ ಮನುಷ್ಯರಾದ ಜಮೀನುದಾರರನ್ನು ಹಿಡಿಸಿ, ನೂರಾರು ಪ್ರಜೆಗಳ ಎದುರಿನಲ್ಲಿ ಮೊಣಕಾಲೂರಿಸಿ ಬಿಸಿಲಿನಲ್ಲಿ ಕೈಜೋಡಿಸಿಕೊಂಡು ನಿಲ್ಲುವಂತೆ ಮಾಡಿದರೆಂತಲೂ, ಅವರಿಬ್ಬರೂ ತಾವು ಮಾಡಿದ ಅಪರಾಧಕ್ಕೆ ಜುಲ್ಮಾನೆ ಕೊಡಲು ಸಿದ್ಧರಾಗಿದ್ದೇವೆಂದು ಬಹಳವಾಗಿ ಕೇಳಿಕೊಂಡರೂ ಅವರನ್ನು ಬಿಡದೆ ಇದ್ದರೆಂತಲೂ, ತರುವಾಯ ಅವರಿಬ್ಬರೂ ಚೀಫ್ ಸೆಕ್ರೆಟರಿ ಮೊದಲ ಮೇಲ್ಪಟ್ಟ ಅಧಿಕಾರಿಗಳಿಗೆಲ್ಲಾ ಮೇಲ್ಕಂಡ ಸಂಗತಿಗಳನ್ನು ಕುರಿತು ತಂತೀವರ್ತಮಾನ ಕೊಟ್ಟಾಗ್ಯೂ ಯಾವ ಪ್ರಯೋಜನವೂ ಆಗದೆ ಹೋದದ್ದನ್ನು ಕಂಡು, ಈಗ ಆ ಸಬ್ ಡಿವಿಜನ್ ಆಫೀಸರ ಮೇಲೆ ತಲಾ ೧೦,೦೦೦ ರೂಪಾಯಿಯಂತೆ ಮಾನನಷ್ಟಕ್ಕೆ ದಾವಾ ಮಾಡುವೆವೆಂದು ನೋಟೀಸ್ ಕೊಟ್ಟಿದಾರೆಂತಲೂ ಅಲ್ಲಿನ ಪತ್ರಿಕೆಯೊಂದು ಹೇಳುತ್ತಿದೆ.

❖❖❖❖

ಲಾಹೋರ್ ಪಟ್ಟಣದ ಉತ್ತರ ಮೋರಿಪುರದಲ್ಲಿ ನಾರಾಯಣಿ ಎಂಬೊಬ್ಬ ೨೦ ವರುಷದ ವಿಧವೆಯು ಕಳೆದ ಅಕ್ಟೋಬರ್ ತಿಂಗಳಲ್ಲಿ ತನ್ನ ನೆಂಟರಿಷ್ಟರ ಎದುರಿಗೆ ಚಿತೆಯನ್ನೇರಿ ಆತ್ಮಹತ್ಯಮಾಡಿಕೊಂಡಳು. ಇದಕ್ಕೆ ಸಂಬಂಧಪಟ್ಟ ೬ ಜನರನ್ನು ಸರ್ಕಾರದವರು ಹಿಡಿದು ದರ್ಯಾಪ್ತಿಮಾಡಿಸಿ, ಸೆಷನ್ಸ್ ಜಡ್ಜರಿಂದ ಸಜಾ ಶಿಕ್ಷೆ ಹಾಕಿಸಿದರು. ಇವರು ಅಪೀಲ್ ಮಾಡಿಕೊಂಡರು. ಕಳೆದ ವಾರ ಹೈ ಕೋರ್ಟು ಜಡ್ಜಿಗಳು ಕೆಳ ಕೋರ್ಟಿನ ತೀರ್ಮಾನವನ್ನೇ ಬಹುಮಟ್ಟಿಗೆ ಬಲಪಡಿಸಿ ಬರೆದಿರುವುದೇನೆಂದರೆ— ಸತಿಯಾಗಿ ಆತ್ಮಹತ್ಯ ಮಾಡಿಕೊಂಡ ನಾರಾಯಣಿಯು ಚಿಕ್ಕ ವಯಸ್ಸಿನಲ್ಲೇ ವಿಧವೆಯಾದಳು. ಅವಳು ದೊಡ್ಡವಳಾಗಿ ಪೂಜೆಪುನಸ್ಕಾರಗಳನ್ನು ಮಾಡುತ್ತಾ ಬಂದಳು. ಆದರೂ ಅವಳು ಭಕ್ತಿಯಿಂದ ಸತಿ ಮಾಡಿಕೊಂಡಳೆಂದು ಹೇಳಲಾಗುವುದಿಲ್ಲ. ಅವಳ ಮೈದುನನು ಅವಳ ಮೇಲೆ ಕಣ್ಣಿಟ್ಟು ಅವಳನ್ನು ವರಿಸಬೇಕೆಂದು ಪ್ರಯತ್ನಪಡುತ್ತಿದ್ದದ್ದೇ ಅವಳು ಆತ್ಮಹತ್ಯ ಮಾಡಿಕೊಂಡದ್ದಕ್ಕೆ ಕಾರಣ. ಅವನಾವದೋ ಮಹಾ ರೋಗಿಯಾಗಿದ್ದನು. ಮನೆಯಲ್ಲೇ ಅವನು ಈ ಮೊಕದ್ದಮೆ ಪೂರೈಸುವದರೊಳಗಾಗಿ ಸತ್ತುಹೋದನು. ಇಂಥವನನ್ನು ೨೦ ವರುಷದ ಪ್ರಾಯಸಮರ್ಥೆಯಾದ ಈ ವಿಧವೆಯು ವರಿಸುವುದಕ್ಕೆ ಒಪ್ಪುವಳೇ ಎಂಬುದೇ.

ವಿದೇಶ ವರ್ತಮಾನಗಳು.

ಒಬ್ಬಾನೊಬ್ಬ ಧರ್ಮಿಷ್ಠನು ಲಂಡನ್ ಪಟ್ಟಣದಲ್ಲಿ ಎಡ್ವರ್ಡ್ ದೊರೆಯವರ ಹೆಸರಿನ ಮೇಲೆ ಕಟ್ಟಿರುವ ಆಸ್ಪತ್ರೆಯ ಮೂಲಧನಕ್ಕೆ ಒಂದೂವರೆ ಲಕ್ಷ ರೂಪಾಯಿ ಕಳುಹಿಸಿ, ತನ್ನ ಹೆಸರನ್ನು ಮಾತ್ರ ತಿಳಿಸದೆ ಇರುತ್ತಾನೆ.

❖❖❖❖

ಕಳೆದ ಡಿಸೆಂಬರ್ ತಿಂಗಳಲ್ಲಿ ನಡೆದ ಖಾನೇಷುಮಾರಿಯಿಂದ ಜರ್ಮನಿ ರಾಜ್ಯದಲ್ಲಿ ಒಟ್ಟು ೬೦ ಲಕ್ಷ ಪ್ರಜೆಗಳಿದ್ದಾರೆಂದು ಅಂದರೆ ೧೯೦೦ನೆ ಇಸವಿಯಿಂದೀಚೆಗೆ ಶೇಕಡಾ ೭॥ ಯಷ್ಟು ಜಾಸ್ತಿಯಾಗಿರೆಂದು ಪ್ರಕಟವಾಗಿದೆ.

❖❖❖❖

ವಿಲಾಯತಿಯಲ್ಲಿರುವ ಮುದುಕರಿಗೆಲ್ಲಾ ತಲಾ ವಾರಕ್ಕೆ ೪ ರೂಪಾಯಿಯಂತೆ ಪೆನ್ಷನ್ ಕೊಡುವದಾದರೆ ಪ್ರತಿ ವರುಷವೂ ಈ ಬಾಬ್ತು ೨೩,೨೭,೮೦,೦೦೦ ರೂಪಾಯಿ ಬೇಕಾಗುವುದೆಂದು ಇಂಗ್ಲಿಷ್ ಖಜಾನಾ ಭಕ್ಷಿಯವರು ಹೇಳಿದಾರೆ.

❖❖❖❖

ಆಸ್ಯಾಖಂಡದಲ್ಲಿ ಸೈಬೀರಿಯಾ ರೈಲ್ವೆಯನ್ನು ಮಧ್ಯ ಏಷ್ಯಾ ರೈಲ್ವೆಗೆ ತಂದು ಕೂಡಿಸುವುದಕ್ಕೆ ಓಷ್ಕಂಡಿನಿಂದ ಟಾಮ್ಸ್ಕ್ ವರೆಗೆ ರೈಲ್ ರಸ್ತೆ ಆಗಬೇಕಾಗಿತ್ತು. ರಷ್ಯಾ ಸರ್ಕಾರದವರು ಈ ರೈಲ್ ಹಾಕಬೇಕೆಂದು ಈಗ ಹಣ ಸ್ಯಾಂಕ್ಷನ್ ಮಾಡಿದಾರೆ.

❖❖❖❖

ಅಮೇರಿಕಾ ಸಂಸ್ಥಾನದಲ್ಲಿ ಯಾವ ಐಶ್ವರ್ಯವಂತನಲ್ಲೂ ಮೂರು ಕೋಟಿ ದ್ರವ್ಯಕ್ಕಿಂತಲೂ ಹೆಚ್ಚಾಗಿ ಇರಕೂಡದೆಂತಲೂ, ಮೂರು ಕೋಟಿಗಿಂತ ಹೆಚ್ಚಾಗಿರುವ ಹಣವನ್ನೆಲ್ಲಾ ಸರ್ಕಾರದವರು ವಶಪಡಿಸಿಕೊಳ್ಳಬೇಕೆಂತಲೂ ಒಂದು ಮಸೂದೆ ಕಾನೂನನ್ನು ನಾ ಅಲ್ಲಿನ ಪಾರ್ಲಿಮೆಂಟಿನಲ್ಲಿ ಚರ್ಚೆಮಾಡುತ್ತಿದಾರೆ. ಇಂಥಾ ಕಾನೂನು ಜಾರಿಗೆ ಬರುವುದೆಂದು ಊಹಿಸುವುದು ಕಷ್ಟ.

❖❖❖❖

ಆಸ್ಟ್ರೇಲಿಯಾ ದ್ವೀಪಕ್ಕೆ ಸೇರಿದ ಸಿಡ್ನಿ ಪಟ್ಟಣದಲ್ಲಿ ಎರಡು ಮೂರು ಬಾರಿ ವರ್ತಕರ ಅಂಗಡಿಗಳೂ ಒಂದು ದೊಡ್ಡ ಹೋಟೆಲು ಬೆಂಕಿ ಬಿದ್ದು ಉರಿದು ಹೋದವು. ಬೆಂಕಿಯ ಜ್ವಾಲೆಗಳು ಹಬ್ಬದೆ ಮಾಡುವುದಕ್ಕೆ ಕೆಲವು ಬಂಗಲೆಗಳಲ್ಲೂ ಅಂಗಡಿಗಳಲ್ಲೂ ಸ್ವಲ್ಪಸ್ವಲ್ಪ ಭಾಗವನ್ನು ಒಡೆದು ಕೆಡವಬೇಕಾಯಿತು. ಈ ಅನಾಹುತದಿಂದ ೨೦ ಲಕ್ಷ ದ್ರವ್ಯ ನಷ್ಟವಾದಂತೆ ತಿಳಿದು ಬರುವುದು.

❖❖❖❖❖

ಫ್ರಾನ್ಸ್ ಸಂಸ್ಥಾನದವರು ತಮ್ಮ ಯುದ್ಧದ ಇಲಾಖೆಗೆ ಜೂಲಿಯಟ್ ಎಂಬ ಇಂಜನಿಯರಿಂದ ತಯಾರಿಸಲ್ಪಟ್ಟು ಅಂತರಿಕ್ಷದಲ್ಲಿ ಸಂಚಾರಮಾಡುವುದಕ್ಕೆ ಅರ್ಗಾವಂಥಾ ವಿಮಾನ (ಏರ್ ಬೋಟು) ಯಂತ್ರವನ್ನು ಅಂಗೀಕರಿಸಿದ್ದನ್ನು ನೋಡಿ ಜರ್ಮನಿ ಚಕ್ರವರ್ತಿಯವರು ತಮ್ಮ ರಾಜ್ಯದಲ್ಲೂ ಅಂಥಾ ಯಂತ್ರಗಳನ್ನು ತಯಾರಿಸಬೇಕೆಂದು ಬರ್ಲಿನ್ ಪಟ್ಟಣದ ಯುದ್ಧ ಕೋರ್ಟಿ

...ಷ್ಟರನ್ನು ಕಳುಹಿಸಿ ಅವರ ಸಂಗಡ ತಿಳಿಸಿದರು. ಅವರು ಅದೇ ...ಳುವರೆ ಲಕ್ಷ ದ್ರವ್ಯವನ್ನು ಕೂಡಿಸಿ, ಕಾರ್ಖಾನೆಯಿಂದ ಬೇರೆ ...ತಿಸು ಯಂತ್ರಗಳನ್ನು ತಯಾರುಮಾಡಿಸಲಾರಂಭಿಸಿರುತ್ತಾರೆ.

❖❖❖❖

...ಡಿಯಾ ಗವರ್ನಮೆಂಟಿನವರು ಪರ್ಷಿಯಾದಲ್ಲಿ ಕಿಷಂ ಎಂಬ ...ದ ಬಂದರ್ ಅಬ್ಬಾಸ್ ವರೆಗೆ ತಂತೀ ಕಂಬಗಳನ್ನು ಹಾಕಬೇ... ಉದ್ದೇಶಪಟ್ಟರು. ಮೊದಲು ಪರ್ಷಿಯಾ ಸರ್ಕಾರದವರು ...ಒಪ್ಪಿಕೊಂಡು ಇದ್ದರು. ಕಂಬಗಳನ್ನು ನೆಟ್ಟು ತಂತಿಗಳನ್ನು ...ಮೇಲೆ ತಂತೀ ಲೈನನ್ನು ಸಮುದ್ರ ತೀರದಲ್ಲೇ ಕಟ್ಟಬೇ...ವರು, ಇಂಗ್ಲೀಷ್ ರಾಯಭಾರಿ ವಾಸಮಾಡುವ ಬಂಗಲೆಯು ...ಟ್ಟಬೇಕೆಂದು ಇಂಡಿಯಾ ಗವರ್ನಮೆಂಟಿನವರೂ ಕೇಳಿ... ಪ್ರಾರಂಭವಾಗಿದೆ. ಇದಕ್ಕೆ ಇಂಗ್ಲೀಷ್ ಸರ್ಕಾರದವರ ...ಗ ಉಂಟಾಗಿರುವ ಅಸಮಾಧಾನ ಕಾರಣವೆಂದು ತೋರು...

❖❖❖❖

...ವ್ಯಾದಲ್ಲಿ ವರ್ತಮಾನ ಪತ್ರಿಕೆಗಳನ್ನು ಪ್ರಕಟಮಾಡತ... ತಾವು ಪತ್ರಿಕೆಗೆ ಬರೆಯತಕ್ಕ ಸಂಗತಿಗಳನ್ನು ಮೊದಲು ...ಲ ಅಚ್ಚುಹಾಕಿ ಅದರ ಪ್ರತಿಯನ್ನು ಸರ್ಕಾರದವರಿಗೆ ಕಳು...ಬೇಕೆಂತಲೂ, ಸರ್ಕಾರದವರು ಅವುಗಳನ್ನು ಓದಿ ನೋಡಿ ...ಬಹುದೆಂದು ಹೇಳುವ ಸಂಗತಿಗಳನ್ನೇ ಪತ್ರಿಕೆಗಳಲ್ಲಿ ಹಾಕಿ...ಬೇಕೆಂತಲೂ, ಇಲ್ಲದೆ ಹೋದರೆ ಪತ್ರಿಕಾಧಿಪತಿಗಳನ್ನು ...ಅವರಿಗೆ ೬,೫೦೦ ರೂಪಾಯಿ ವರೆಗೆ ಜುಲ್ಮಾನೆ ಹಾಕುವುದು ...ಕಾಲ ಕೊಟ್ಟು ಜಾರಿಯಲ್ಲಿ ತಂದಿದ್ದಾರೆ. ಇಂಥಾ ವಿಚಿತ್ರ ...ವು ಬಹುಕಾಲ ಚಲಾವಣೆಯಲ್ಲಿ ಇರಲಾರದೆಂದು ನಾವು ...ಕಾಬೇಕಿಲ್ಲ.

❖❖❖❖

...ಯಾ ರಾಜ್ಯದಲ್ಲಿ ಕೆಲವರು ಸೇರಿಕೊಂಡು ಪಳಗಿಸಿದ್ದ ...ವನ್ನು ರಾಣಿಯನ್ನೂ ಕೊಂದುಹಾಕಿ, ಇನ್ನೊಬ್ಬನನ್ನು ...ಗಿ ನೇಮಿಸಿ ಕೊಂಡಿದ್ದಾರಷ್ಟೆ. ಈಗಿನ ದೊರೆಯು ಆ ಕಟು ...ರಿಗೆ ನಾನಾ ಅಧಿಕಾರಗಳನ್ನು ಕೊಟ್ಟು ನೇಮಿಸಿಕೊಂಡಿ... ಇವರನ್ನೆಲ್ಲಾ ಆ ರಾಜ್ಯದಿಂದ ಗಡೀಪಾರು ಮಾಡದಲ್ಲದೆ ...ರಾಯಭಾರಿಯನ್ನು ಅಲ್ಲಿಗೆ ಕಳುಹಿಸುವುದಿಲ್ಲವೆಂದು ವಿಲಾ...ಯವರು ಹೇಳಿ ಕಳುಹಿಸಿದರು. ಇದಲ್ಲದೆ ಈಚೆಗೆ ಆ ದೊರೆಯು ...ದ ಮೆಂಬರುಗಳು ಆ ಕಟುಕರನ್ನೂ ಜನರನ್ನು ಕೆಲಸದಿಂದ ...ಸಬೇಕೆಂದು ... ಹೇಳಿದಾಗ ದೊರೆಯು ಅವರ ಮಾತ... ...ಸ್ಕರಿಸಿದನು. ಇದಕ್ಕಾಗಿ ಮಂತ್ರಿ ಸಭೆಯವರೆಲ್ಲಾ ತುಂಬಾ ...ದಪಟ್ಟು ತಮ್ಮ ಕೆಲಸಗಳಿಗೆ ರಾಜೀನಾಮೆ ಕೊಟ್ಟುಬಿಟ್ಟ... ...ತೀರ್ಮಾನಿಸಿ ಒಂದಿದೆ.

❖❖❖❖

...ಣ ಆಫ್ರಿಕಾಕ್ಕೆ ಸೇರಿದ ನೇಟಾಲಿನಲ್ಲಿ ಕೆಲವರು ಸೇರಿ ದೊಂಬಿ ...ಸಿದರು. ... ಪೋಲೀಸಿನವರು ಕೊಲ್ಲಲ್ಪಟ್ಟರು. ಸರ್ಕಾ... ...ಪರಾಧಿಗಳನ್ನು ... ವಿಚಾರಣೆ ಮಾಡಿ, ಆ ಪೈಕಿ ೧೨ ...ನ್ನು ... ವಿಧಿಸಿದರು. ಈ ಸುದ್ದಿಯು ವಿಲಾಯತಿಗೆ ...ರೊಡನೆ ಇವರನ್ನು ಗಲ್ಲಿಗೆ ಏತ್ತಕೂಡದೆಂದು ಹುಕುಂ ... ನೇಟಾಲಿನ ಅಧಿಕಾರಿಗಳೆಲ್ಲಾ ಕೋಪಿಸಿಕೊಂಡು ...ತಮ್ಮ ... ಕಟ್ಟಿಬಿಟ್ಟರೆ ನಾವು ಅಲ್ಲಿನ ಪ್ರಜೆ... ...ಕಾಶಕ್ಕೆ ಗುರಿಯಾಗುವೆವಾದ್ದರಿಂದ ನಾವೆಲ್ಲಾ ರಾಜೀನಾಮೆ ...ಕೊಡುತ್ತೇವೆಂದು ತಿಳಿಸಿದರು. ಅದನ್ನು ನೋಡಿ ವಿಲಾಯತಿ ...ಯವರು ... ಅಧಿಕಾರಕ್ಕೆ ತಡೆಯನ್ನುಂಟುಮಾಡ... ...ನಮ್ಮ ಅಭಿಪ್ರಾಯವಲ್ಲವೆಂದು ಮೊದಲಾಗಿ ಜವಾಬು ... ಆದ ಮೇಲೆ ನೇಟಾಲ್ ಸರ್ಕಾರದವರು ಆ ೧೨ ಮಂದಿ ...ಗಳನ್ನು ಗಲ್ಲಿಗೆತ್ತಿ ತಮ್ಮ ದರ್ಪವನ್ನು ಪ್ರಕಾಶಪಡಿಸಿರು...

❖❖❖❖

...ರ್ ರಾಜ್ಯದ ಸರ್ಕಾರದವರು ತಮ್ಮ ರಾಜ್ಯದ ಬಾಲಕರನ್ನು ...ರನ್ನಾಗಿಯೂ ಸದ್ಗುಣಿಗಳನ್ನಾಗಿಯೂ, ಸಚ್ಚರಿತ್ರರನ್ನಾಗಿ ...ಮಾಡಬೇಕೆಂದು ಪ್ರಯತ್ನಪಟ್ಟು, ಇದಕ್ಕೆ ಯಾವ ತರಹ ...ಗಳನ್ನು ಪಾಠಶಾಲೆಗಳಲ್ಲಿಟ್ಟು ಓದಿಸಬೇಕೆಂದು ಎರಡು ವರುಷ ...ರ್ ವಿಚಾರಿಸಿ, ಕಡೆಗೆ ಜಪಾನ್, ಫ್ರಾನ್ಸ್, ಕಾನ್ಸ್ಟಾಂಟಿನೋಪಲ್ ...ವಿದ್ಯಾಶಾಲೆಗಳಲ್ಲಿ ಪ್ರಮುಖರಾದ ಕೆಲವು ಮಹನೀಯರನ್ನು ...ಮಿಟಿಯಾಗಿ ನೇಮಿಸಿ, ಅವರಿಂದ ಈ ವಿಷಯವನ್ನು ಇತ್ಯ... ...ಸಿದರು. ಅವರು ಆಲೋಚನೆಮಾಡಿ ಕೆಲವು ಪುಸ್ತಕಗಳನ್ನು ...ಗಿ ಬರೆದು ಅಚ್ಚುಹಾಕಿಸಿದರು. ಈ ಪುಸ್ತಕಗಳಲ್ಲಿ ... ...ನೇ ಉಪಾಧ್ಯಾಯರು ಜರ್ಮನ್ ರಾಜ್ಯದ ಮಕ್ಕಳಿಗೆಲ್ಲಾ ...ಷೇಕಗಳನ್ನು ಹೇಳಿಕೊಡುತ್ತಿದ್ದಾರೆ. ಈ ಪುಸ್ತಕಗಳನ್ನು ...ನೇ ಮೊನ್ನೆ ನಡೆದ ಅಪೂರ್ವ ಯುದ್ಧದಲ್ಲಿ ಜಯಲಕ್ಷ್ಮಿಯು ...ಬುತಮ್ಮ ... ಎಂಬುದಾಗಿ ಜರ್ಮನ್ ...ವಿದ್ಯಾಭ್ಯಾಸದ ಇಲಾಖಾ ಮಂತ್ರಿಯವರು ವಿಲಾಯತಿಗೆ ಬರೆ...ರೆ.

❖❖❖❖

...ಷಿಯಾ ರಾಜ್ಯಕ್ಕೆ ಸೇರಿದ ಸೀಸ್ತಾನ್ ಎಂಬಲ್ಲಿ ಪ್ಲೇಗ್ ಉ...ರಿಹಾಕಿದೆ. ಇಂಗ್ಲೀಷ್ ಡಾಕ್ಟರುಗಳು ರೋಗಿಗಳ ಸಂಬಂಧಿಗ... ...ಳ ಹೇಳಿ ಕಾಯಿಲೆಯವರನ್ನು ಆಸ್ಪತ್ರೆಗೆ ಸಾಗಿಸಿಕೊಂಡು ...ರು. ಕಲೀಮಾ ಎಂಬೊಬ್ಬ ಪಾರ್ಸಿ ವೈದ್ಯನು ಹೊಟ್ಟೆ... ...ದ ಜನರಿಗೆ ಪ್ರಾರ್ಥನೆ ಮಾಡಿದನು. ಜನರೆಲ್ಲಾ ಅವನ ...ಬಿ ಆಸ್ಪತ್ರೆಗೆ ನುಗ್ಗಿ ಆ ಕಟ್ಟಡವನ್ನು ನೆಲಸಮ ಮಾಡಿದ ...ಷಧ ...) ಮೊದಲಾದ ಅಮೂಲ್ಯ ಪದಾರ್ಥಗಳನ್ನು ನಾಶ... ...ರು. ಅಲ್ಲಿಂದ ಇಂಗ್ಲೀಷ್ ರಾಯಭಾರಿ ವಾಸಮಾಡುವ ಬಂಗಲೆ...

...ಗೆ ನುಗ್ಗಿ ರಾಯಭಾರಿಯನ್ನೂ ಡಾಕ್ಟರನ್ನೂ ದೊಣ್ಣೆಗಳಿಂದ ಹೊಡೆ...ದರು. ಸುಂಕದಕಟ್ಟೆಯನ್ನೂ ಹಾಳುಮಾಡುತ್ತಿದ್ದರು. ಅಷ್ಟರಲ್ಲೇ ರಷ್ಯಾ ರಾಯಭಾರಿಯು ಸೈನ್ಯಸಹಿತ ಅಲ್ಲಿಗೆ ಹೋಗಿ ಗಲಭೆಯನ್ನು ಶಮನಮಾಡಿದನು. ಇಷ್ಟಕ್ಕೆಲ್ಲಾ ಖೊರಾಸಾನಿನ ಗವರ್ನರೇ ಮುಖ್ಯ ಕಾರಣನೆಂದು ತಿಳಿಯುವುದು. ಹ್ಯಾಗೆಂದರೆ, ಇವನು ಪರ್ಷಿಯಾ ಗವರ್ನಮೆಂಟಿನ ... ವಿರೋಧವಾಗಿ ತನ್ನ ಕಡೆಯ ಜನರನ್ನು ಸೀಸ್ತಾನಿಗೆ ಕಳುಹಿಸಿ ಅವರ ಮೂಲಕ ಜನರಿಗೆಲ್ಲಾ—ಈ ಪ್ರಾಂತ್ಯ ಪ್ಲೇಗಿನ ಹೆಸರೇ ಇಲ್ಲ. ಯೂರೋಪಿಯನ್ ಜನಗಳು ಬೇಕೆಂದು ಹೀಗೆ ಉಪದ್ರವಿದೆ ಎಂದು ಪ್ರಕಾರ ಹುಟ್ಟಿಸಿದ್ದಾರೆ ಎಂಬುದಾಗಿ ಸಾರಿಸಿದನು.

❖❖❖❖

ವಿಲಾಯತಿಯಲ್ಲಿ ಹಕ್ಕಿ ಪಕ್ಷಿಗಳನ್ನು ಯಾರೂ ಹಿಂಸೆ ಪಡಿಸದಂತೆಯೂ ಕೊಲ್ಲದಂತೆಯೂ ನೋಡಿಕೊಳ್ಳುವುದಕ್ಕೆ ಒಂದು ಖಗ ಸಂರಕ್ಷಣಾ ಸಂಘವಿರುವುದು. ಈ ಸಂಘಕ್ಕೆ ಡಚೆಸ್ ಆಫ್ ಪೋರ್ಟ್ ಲೆಂಡ್ ಎಂಬಾಕೆಯು ಪ್ರೆಸಿಡೆಂಟ್ (ಅಧ್ಯಕ್ಷ) ರಾಗಿರುತ್ತಾರೆ. ಈಚೆಗೆ ಆ ಪ್ರಾಂತ್ಯದಲ್ಲಿ ಕೆಲವು ಪಕ್ಷಿಗಳ ಗರಿಗಳನ್ನು ಅಲ್ಲಿನ ದೊಡ್ಡಮನುಷ್ಯರ ಮನೆ ಸ್ತ್ರೀಯರು ಕೊಂಡು, ತಮ್ಮ ಟೋಪಿಗಳಲ್ಲಿ ಸಿಕ್ಕಿಸಿಕೊಂಡು, ಅಲಂಕಾರ ಮಾಡಿಕೊಳ್ಳುವರು. ವರ್ತಕರು ಈ ಪಕ್ಷಿಗಳನ್ನು ಕೊಲ್ಲಿಸಿ, ಗರಿಗಳನ್ನು ತರಿಸಿ, ಅಂಗಡಿಗಳಲ್ಲಿಟ್ಟು ವಿಕ್ರಿ ಮಾಡುವುದು ಹೆಚ್ಚಿತು. ಹೀಗೆ ಮಾಡೋಣದರಿಂದ ಅಂಥಾ ಹಕ್ಕಿ ಪಕ್ಷಿಗಳ ಜಾತಿಗಳೇ ಕೆಲವು ಕಾಲದೊಳಗಾಗಿ ನಿರ್ಮೂಲವಾಗುವುದರಲ್ಲಿ ಅಡ್ಡಿಯಿಲ್ಲ. ಇಂಥಾ ಕ್ರೂರವಾದ ಹಿಂಸೆಯನ್ನೂ ಕೊಲೆಯನ್ನೂ ಮೇಲ್ಕಂಡ ಸಂಘದವರು ನೋಡಿ, ತುಂಬಾ ಕನಿಕರದಿಂದ ಕೂಡಿದವರಾಗಿ ವಿಲಾಯತಿಯ ರಾಣಿಯವರ ಬಳಿಗೆ ಹೋಗಿ ಅವರ ಸಂಗಡ ಅರಿಕೆ ಮಾಡಿಕೊಂಡರು. ರಾಣಿಯವರು ಅದರ ಮೇಲೆ ಇನ್ನು ಮುಂದೆ ಅಂಥಾ ಗರಿಗಳನ್ನು ಯಾವ ಸ್ತ್ರೀಯರೂ ಅಲಂಕಾರಕ್ಕಾಗಿ ಧರಿಸಿಕೊಳ್ಳಕೂಡದೆಂತಲೂ ಅದು ತನಗೆ ಹಿತವಾಗಿರುವುದಿಲ್ಲವೆಂತಲೂ ಅಪ್ಪಣೆ ಕೊಟ್ಟು, ಈ ಅಭಿಪ್ರಾಯವನ್ನು ಸಕಲ ಪ್ರಜೆಗಳಿಗೂ ತಿಳಿಯಪಡಿಸುವಂತೆ ಆಜ್ಞೆಮಾಡಿರುತ್ತಾರೆ.

ಅಮೇರಿಕದಲ್ಲಿ ಭೂಕಂಪದ ಅನಾಹುತವು.

ಕಳೆದ ವಾರ ಬಂದ ತಂತೀವರ್ತಮಾನಗಳು

ಅಮೇರಿಕದ ಪಶ್ಚಿಮಸಮುದ್ರತೀರದಲ್ಲಿ ಕ್ಯಾಲಿಫೋರ್ನಿಯಾ ಎಂಬ ಡಿಸ್ಟ್ರಿಕ್ಟಿನಲ್ಲಿ ಸ್ಯಾನ್ ಫ್ರಾನ್ಸಿಸ್ಕೋ ಎಂಬ ಭಾರೀ ಪಟ್ಟಣವಿರುವುದು. ಅಲ್ಲಿ ಬಹಳ ವ್ಯಾಪಾರ ನಡೆಯುತ್ತದೆ; ಅನೇಕ ಕೈಗಾರಿಕೆ ಕಾರ್ಖಾನೆಗಳಿರುವವು. ಲಕ್ಷಾಂತರ ಪ್ರಜೆಗಳು ಪ್ರಪಂಚದ ನಾನಾ ಕಡೆಗಳಿಂದ ಹೋಗಿ ನಿಂತು ನಾನಾ ಕಸಬುಗಳನ್ನು ಮಾಡುತ್ತಾರೆ, ಅನೇಕ ಕೋಟ್ಯಾಧೀಶ್ವರರನ್ನು ಪಡೆದು, ಮಹಾ ಐಶ್ವರ್ಯವುಳ್ಳ ಪಟ್ಟಣವೆನಿಸಿಕೊಂಡಿರುವುದು. ಈ ಮಹಾ ನಗರದಲ್ಲೂ ಅದರ ಸಮೀಪದಲ್ಲೂ ಕಳೆದ ವಾರ ಬಹು ಭಯಂಕರವಾದ ಭೂಕಂಪಗಳುಂಟಾಗಿ ವಿವರಿಸಲಾಗದಷ್ಟು ಕಷ್ಟನಷ್ಟಗಳು ಪ್ರಾಪ್ತವಾಗಿರುತ್ತವೆ. ಇದರ ವೃತ್ತಾಂತವನ್ನೆಲ್ಲಾ ಆಯಾ ದಿನದ ತಂತೀ ವರ್ತಮಾನಗಳಿಂದಲೇ ಸವಿಸ್ತಾರವಾಗಿ ತಿಳಿದುಕೊಳ್ಳಬಹುದಾಗಿದೆ.

ಲಂಡನ್, ಏಪ್ರಿಲ್ ೧೯ನೆ ಬುಧವಾರ—ಸ್ಯಾನ್ ಫ್ರಾನ್ಸಿಸ್ಕೋ ಪಟ್ಟಣದಲ್ಲಿ ಏನು ಕಠಿಣವಾದ ಭೂಕಂಪವಾಗಿದೆ. ಕಟ್ಟಡಗಳು ಕಳಚಿಬಿದ್ದವು, ಪ್ರಾಣನಷ್ಟ ಉಂಟಾಗಿದೆ. ಸತ್ತವರ ಶವಗಳನ್ನೂ ಗಾಯಪಟ್ಟವರನ್ನೂ ಹೊರಕ್ಕೆ ಸಾಗಿಸುತ್ತಿದ್ದಾರೆ. ತಂತೀ ವರ್ತಮಾನ ಹೋಗಿ ಬರುವುದು ಅಡ್ಡಿಯಾಗಿದೆ. ಸಾಕ್ರಮೆಂಟೋದಲ್ಲಿಯೂ ಬಹಳ ನಷ್ಟವಾಗಿರುತ್ತೆಂದು ಅಲ್ಲಿಂದ ವರ್ತಮಾನ ಬಂದಿದೆ.

ಸ್ಯಾನ್ ಫ್ರಾನ್ಸಿಸ್ಕೋದಲ್ಲಿ ಈ ದಿನ ಪ್ರಾತಃಕಾಲ ೫ ಗಂಟೆಗೆ ಭೂಕಂಪವಾಯಿತು. ಮೂರು ನಿಮಿಷಗಳ ತನಕ ಭೂಮಿ ನಡುಗಿತು. ಪ್ರಜೆಗಳು ಗಾಬರಿಬಿದ್ದು ಹಾಸಿಗೆಗಳನ್ನು ಬಿಟ್ಟು ಹಾಗೇ ಹೊರಕ್ಕೆ ಓಡಿಬಂದರು. ಕಾರ್ಖಾನೆಗಳೂ ಮಳಿಗೆಗಳೂ ಇದ್ದ ಭಾಗಗಳಲ್ಲೆಲ್ಲಾ ತುಂಬಾ ನಷ್ಟವುಂಟಾಗಿದೆ. ಪಟ್ಟಣದ ಒಳಭಾಗದಲ್ಲಿ ಅಷ್ಟೇನೂ ವಿಶೇಷ ನಷ್ಟವಾಗಿಲ್ಲ. ಸುಮಾರು ೧೫೦ ಮಂದಿ ಹತರಾಗಿದ್ದಾರೆಂತಲೂ ೧,೦೦೦ ಜನರಿಗೆ ಗಾಯಗಳಾದವೆಂತಲೂ ತೋರುತ್ತದೆ. ಕಳಚಿಬಿದ್ದು ಕೊಂಡ ಮನೆಗಳೂ ಕಟ್ಟಡಗಳೂ ಕಾರ್ಖಾನೆಗಳೂ ಹತ್ತಿ ಉರಿಯಲಾರಂಭವಾಗಿದೆ. ಈ ಬೆಂಕಿಯ ಜ್ವಾಲೆಗಳು ಪಟ್ಟಣವನ್ನೆಲ್ಲಾ ಆವರಿಸಿಕೊಳ್ಳುವಂತೆ ಕಾಣುತ್ತದೆ. ಗ್ಯಾಸ್ ಎಂಬ ಹೊಗೆ ಮೀಟರಿನ ಕಾರ್ಖಾನೆ ಒಡೆದದ್ದರಿಂದಲೂ ಗಾಳಿಯ ರಭಸದಿಂದಲೂ ಬೆಂಕಿಯನ್ನು ಆರಿಸುವುದು ಮಹಾ ಪ್ರಯಾಸವಾಗಿದೆ. ಬೆಂಕಿ ಆರಿಸುತ್ತಿರುವವರು ಅದರ ಜ್ವಾಲೆ ಇತರ ಕಟ್ಟಡಗಳಿಗೆ ಹಬ್ಬದಂತೆ ಅನೇಕ ಕಟ್ಟಡಗಳನ್ನು ಒಡೆದು ಕೆಡವುತ್ತಾರೆ. ಪ್ರಜೆಗಳಿಗುಂಟಾಗಿರುವ ಭೀತಿಯೂ ಗಾಬರಿಯೂ ವಿವರಿಸತೀರದು. ವೆಲ್ಲೆಸ್ಲಿಯಾ ಎಂಬ ಭಾರೀ ಹೋಟೆಲು ಕಳಚಿ ಬಿದ್ದುಕೊಂಡು ೩೫ ಜನರನ್ನು ಕೊಂದುಬಿಟ್ಟಿತು. ಇನ್ನೊಂದು ದೊಡ್ಡ ಬಾಡಿಗೆ ಮನೆಯಲ್ಲಿ ೪೦ ಜನರು ಸಿಕ್ಕಿ ಹತರಾದರು.

ಅಮೇರಿಕದ ಪಶ್ಚಿಮಸಮುದ್ರತೀರದಲ್ಲಿರುವ ಡಿಸ್ಟ್ರಿಕ್ಟುಗಳಲ್ಲೆಲ್ಲಾ ಈ ಭೂಕಂಪವು ಪ್ರಾಪ್ತವಾಗಿದೆ. ಈ ಭೂಕಂಪದ ಸೂಚನೆಯು ವಾಷಿಂಗ್ಟನ್ ನಗರದಲ್ಲೂ ಕಾಣಿಸಿಕೊಂಡಿತು.

ಲಂಡನ್, ಏಪ್ರಿಲ್ ೧೯ನೆ ಗುರುವಾರ—ಇದುವರೆಗೆ ಸ್ಯಾನ್ ಫ್ರಾನ್ಸಿಸ್ಕೋದಲ್ಲಿ ೧,೦೦೦ ಜನರು ಸತ್ತುಹೋದರೆಂತಲೂ ೮,೦೦೦ ಜನರಿಗೆ ಗಾಯಗಳಾಗಿವೆ ಎಂತಲೂ ಕೇಳಬಂದಿದೆ. ಪಟ್ಟಣದ ಎಲ್ಲಾ ಭಾಗಗಳೂ ಹತ್ತಿಕೊಂಡು ಭಯಂಕರವಾಗಿ ಉರಿಯುತ್ತಿವೆ. ಇದರಿಂದ ಯಾರನ್ನೂ ಒಳಕ್ಕೆ ಬಿಡದೆ ತಡೆದಿರುತ್ತಾರೆ. ಉರಿಯನ್ನು ಹಬ್ಬದಂತೆ ಮಾಡಬೇಕೆಂದು ಡೈನಮೈಟ್ ಹಾಕಿ ಕಟ್ಟಡಗಳನ್ನು ಒಡೆದು ಕೆಡವುತ್ತಿದ್ದಾರೆ. ಇದರ ಶಬ್ದವು ಪ್ರಜೆಗಳ ಭೀತಿಯನ್ನೂ ಗಾಬರಿಯನ್ನೂ ತುಂಬಾ ಹೆಚ್ಚಿಸಿರುತ್ತದೆ. ಟೆಲಿಗ್ರಾಫ್ ಮತ್ತು ವರ್ತಮಾನ ಪತ್ರಿಕೆಗಳ ಆಫೀಸುಗಳೆಲ್ಲಾ ಹತ್ತಿಕೊಂಡು ಉರಿಯುತ್ತಿರೋಣದರಿಂದ ಅಲ್ಲಿನ ವರ್ತಮಾನ ಹೊರಕ್ಕೆ ತಿಳಿಯುವುದೇ ದುಸ್ತರವಾಗಿದೆ. ಸುಮಾರು ಮೂರುಕೋಟಿ ರೂಪಾಯಿನ ಮನೆ ಆಸ್ತಿಪಾಸ್ತಿಗಳು ನಾಶವಾದಂತೆ ಕಾಣುವುದು. ಅಪಾರವಾದ ಆಸ್ತಿಯೆಲ್ಲಾ ಇನ್ನೂ ರಸ್ತೆಗಳಲ್ಲಿ ಬಿದ್ದಿರುತ್ತದೆ. ಇದನ್ನು ಸಂರಕ್ಷಣೆಮಾಡುವುದಕ್ಕೆ ಎರಡು ರೆಜಿಮೆಂಟಿನ ಸೈನ್ಯವನ್ನು ಬಿಟ್ಟಿದ್ದಾರೆ. ಈ ಸೈನಿಕರ ಅಧಿಪತಿ ಜನರಲ್ ಫನ್‌ಸ್ಟನ್ ಎಂಬಾತನು ನೆನ್ನೆ ಸಾಯಂಕಾಲ—೧,೦೦೦ ಹೆಣಗಳು ಬಿದ್ದಿವೆ ಎಂತಲೂ, ೧,೦೦,೦೦೦ ಪ್ರಜೆಗಳು ಮನೆಮಠಗಳನ್ನು ಕಳಕೊಂಡು ಹೊಟ್ಟೆಗಿಲ್ಲದೆ ಸಂಕಟಪಡುತ್ತಿದ್ದಾರೆಂತಲೂ, ಆಹಾರಪದಾರ್ಥಗಳೂ ಡೇರಾಗಳೂ ತ್ವರೆಯಿಂದ ಒದಗಿಸಿಕೊಡಬೇಕೆಂತಲೂ ರಿಪೋರ್ಟು ಕೊಟ್ಟಿದ್ದಾನೆ.

ಪಟ್ಟಣವೆಲ್ಲಾ ಹತ್ತಿ ಉರಿಯುತ್ತಿರುವುದರಿಂದ ಅಪಾರವಾದ ಹೊಗೆ ಪಟ್ಟಣದ ಮೇಲೆ ಕವಿದು ಸಮುದ್ರದ ಮೇಲೆ ಅನೇಕ ಮೈಲಿಗಳ ದೂರ ಕಾಣಿಸುತ್ತಿದೆ. ಇದನ್ನು ನೋಡಿದರೆ ಪಟ್ಟಣವೆಲ್ಲಾ ಈ ಉರಿಗೆ ಆಹುತಿಯಾಗುವುದೋ ಎಂದು ತೋರುವುದು. ಪ್ರಸಿದ್ಧವಾದ ಅನೇಕ ಕಟ್ಟಡಗಳು, ಹೋಟೆಲುಗಳು, ನಾಟಕಶಾಲೆಗಳು ಕಳಚಿಬಿದ್ದು ಉರಿಯುತ್ತಿವೆ. ಚೀನಿಯರೂ ಜರ್ಮನರೂ ವಾಸಮಾಡುತ್ತಿದ್ದ ಬೇರೆ ಬೇರೆ ಮೊಹಲ್ಲೆಗಳು ನಾಶಹೊಂದಿದವು. ಸಮುದ್ರತೀರದಲ್ಲಿರುವ ಹಡಗುಗಳಿಗೂ ಜಹಜುಗಳಿಗೂ ಅಪಾಯವೇನೂ ಆಗಲಿಲ್ಲ. ಲೀಲೆಂಡ್ ಸ್ಟಾನ್‌ಫರ್ಡ್ ಎಂಬ ವಿದ್ಯಾನಿಲಯವು ಬಹಳಮಟ್ಟಿಗೆ ನಷ್ಟಹೊಂದಿದೆ. ಜನರಲ್ ಫನ್‌ಸ್ಟನ್ ಎಂಬಾತನು—ಸರಿಸುಮಾರಾಗಿ ಸ್ಯಾನ್ ಫ್ರಾನ್ಸಿಸ್ಕೋ ಪಟ್ಟಣವೇ ಸಂಪೂರ್ಣವಾಗಿ ಹಾಳಾಯಿತೆಂದು ಹೇಳಬಹುದು, ಬೆಂಕಿಯ ಜ್ವಾಲೆಗಳನ್ನು ಆರಿಸುವುದು ಅಸಾಧ್ಯವಾಗಿದೆ, ಈಗ ೩,೦೦,೦೦೦ ಪ್ರಜೆಗಳು ಮನೆಮಠಗಳನ್ನು ಕಳಕೊಂಡಿದ್ದಾರೆ, ಆಹಾರ ಸಿಕ್ಕುವುದು ತುಂಬಾ ಪ್ರಯಾಸವಾಗಿದೆ, ಆಹಾರ ಸಾಮಗ್ರಿಗಳೂ ಡೇರೆಗಳೂ ಜಾಗ್ರತೆ ಬೇಕು ಎಂಬುದಾಗಿ ರಿಪೋರ್ಟು ಕೊಟ್ಟಿದ್ದಾನೆ.

ಗವರ್ನಮೆಂಟಿನವರು ಆ ಪಟ್ಟಣಕ್ಕೆ ಆಹಾರ ಸಾಮಗ್ರಿಗಳೇ ಮುಂತಾದ ಸರಕನ್ನು ಅಪಾರವಾಗಿ ಕಳುಹಿಸುತ್ತಿದ್ದಾರೆ. ಕಷ್ಟ ಪರಿಹಾರಮಾಡಬೇಕೆನ್ನುವುದರಲ್ಲಿ ಅಮೇರಿಕದ ಪಟ್ಟಣಗಳವರು ನಾಮುಂದು ತಾಮುಂದು ಎಂಬುದಾಗಿ ಹೆಚ್ಚು ಹೆಚ್ಚಾಗಿ ಸಹಾಯ ಮಾಡಲಾರಂಭಿಸಿದ್ದಾರೆ. ಸೆನೆಟ್ ಎಂಬ ಮಂತ್ರಿಸಮಾಜದವರು ಕಷ್ಟನಿವಾರಣೆಗೋಸ್ಕರ ೧೫ ಲಕ್ಷ ರೂಪಾಯಿ ಸ್ಯಾಂಕ್ಷನ್ ಮಾಡಿದರು. ಬಾಡಿಗೆ ಮನೆಗಳಲ್ಲಿ ಇದ್ದ ಅನೇಕರು ಮೃತಪಟ್ಟಿರುತ್ತಾರೆ. ಭಾರೀ ಹೋಟೆಲುಗಳಲ್ಲಿದ್ದ ಇಂಗ್ಲೀಷ್ ಪ್ರಜೆಗಳೂ ಪರರಾಜ್ಯಗಳವರೂ ಎಲ್ಲಾ ಸುರಕ್ಷಿತರಾಗಿರುವರು.

ಕ್ಯಾಲಿಫೋರ್ನಿಯಾ ಡಿಸ್ಟ್ರಿಕ್ಟಿಗೆ ಸೇರಿದ ಸಾಂಟಾ ಕ್ರೂಸ್, ಮಾಂಟೆರೆ, ಗಿಲ್ರಾಯ್, ಹಾಲಿಸ್ಟರ್ ಎಂಬೀ ಪಟ್ಟಣಗಳಲ್ಲೂ ಭೂಕಂಪದಿಂದ ತುಂಬಾ ನಷ್ಟವಾಗಿದೆ. ಅನೇಕ ಪ್ರಜೆಗಳು ಹತರಾದರು. ಸಾಂಟಾ ರೋಸಾ ಎಂಬ ಪಟ್ಟಣದಲ್ಲಿ ೨೦೦ ಜನರು ಮೃತಪಟ್ಟರು, ೧೦,೦೦೦ ಜನರು ಮನೆಮಠಗಳನ್ನು ಕಳೆದುಕೊಂಡು ಅಲೆಯುತ್ತಿದ್ದಾರೆ.

ಲಂಡನ್, ಏಪ್ರಿಲ್ ೨೦ ನೇ ಶುಕ್ರವಾರ—ಸ್ಯಾನ್ ಫ್ರಾನ್ಸಿಸ್ಕೋದಲ್ಲಿ ಭೂಕಂಪದ ಅನಾಹುತದಿಂದ ಕೆಲವರು ೫,೦೦೦ ಪ್ರಜೆಗಳು ಸತ್ತುಹೋದರೆಂದು ಅಂದಾಜು ಕಟ್ಟಿದ್ದಾರೆ. ಆದರೆ ಸತ್ತವರು ಇಷ್ಟೇ ಜನರೆಂಬುದನ್ನು ಇದುವರೆಗೆ ಖಂಡಿತವಾಗಿ ಗೊತ್ತುಮಾಡಿಲ್ಲ. ನೆನ್ನೆ ದಿನ ಉತ್ಪಾತದಿನವಾಗಿ ಪರಿಣಮಿಸಿತು. ಪಟ್ಟಣದ ನಾಲ್ಕು ಭಾಗಗಳಲ್ಲಿ ಬೆಂಕಿಯ ಜ್ವಾಲೆಗಳು ಹಬ್ಬಿ ಬಂದು, ಸುವರ್ಣದ್ವಾರವುಳ್ಳ ಉದ್ಯಾನವನದಲ್ಲಿ ಕಿಕ್ಕಿರಿಯುವಂತೆ ಸೇರಿಕೊಂಡಿದ್ದ ೩೦,೦೦೦ ಪ್ರಜೆಗಳ ಸುತ್ತಲೂ ಆವರಿಸಿಕೊಂಡವು. ಅವರೆಲ್ಲಾ ಗಾಬರಿಬಿದ್ದು ಉರಿಯ ತಾಪವನ್ನು ಸಹಿಸಿಕೊಳ್ಳಲಾರದೆ ಸಮುದ್ರದ ಕಡೆ ನುಗ್ಗಿ ಹೋದರು. ಸಮುದ್ರತೀರದಲ್ಲಿದ್ದ ದೋಣಿಗಳೂ ಹಡಗುಗಳೂ ಜನಭರಿತವಾದವು. ಅವರಲ್ಲಿ ಯಾರಿಗೂ ಮೈಮೇಲೆ ಪ್ರಜ್ಞೆಯೇ ಇರಲಿಲ್ಲವೆಂದು ಹೇಳಬಹುದು. ಇವರ ಹೇಳಿಕೆಯ ಪ್ರಕಾರ ಅವರ ಹಿಂದೆ ನೂರಾರು ಪ್ರಜೆಗಳು ಉರಿಯಲ್ಲಿ ಸಿಕ್ಕಿ ಮೃತಪಟ್ಟಹಾಗಿದೆ. ನ್ಯಾಯನಿಬಂಧನೆಯ ಮಹಾ ಕಟ್ಟಡದಲ್ಲಿ ಅನೇಕ ಜನ ಬಂದೀವಾನರೂ ಕೂಡ ಹತರಾದರು. ಇದಲ್ಲದೆ ಸಮುದ್ರದಲ್ಲಿ ನೀರು ಉಕ್ಕಿ ಭೂಮಿಯ ಮೇಲೆ ಹರಿದದ್ದರಿಂದ ಸಮುದ್ರತೀರದಲ್ಲಿದ್ದ ಟರ್ಮಿನಲ್ ದ್ವೀಪವೇ ಮೊದಲಾದ ಅನೇಕ ಸ್ಥಳಗಳು ಸಂಪೂರ್ಣವಾಗಿ ಕೊಚ್ಚಿಕೊಂಡು ಲ್ಪಟ್ಟು ನಾಶಹೊಂದಿದವು.

ಸ್ಯಾನ್ ಫ್ರಾನ್ಸಿಸ್ಕೋ ಪಟ್ಟಣದಲ್ಲಿ ಮೂರು ಕಡೆ ಇನ್ನೂ ಬಹು ಭಯಂಕರವಾಗಿ ಬೆಂಕಿ ಉರಿಯುತ್ತಲೇ ಇದೆ. ಈ ಬೆಂಕಿಯನ್ನು ಆರಿಸಬೇಕೆಂದು ನೆನ್ನೆ ರಾತ್ರಿಯೆಲ್ಲಾ ಒಂದೇ ಸಮನಾಗಿ ಆ ಕಟ್ಟಡಗಳನ್ನು ಡೈನಮೈಟಿನಿಂದ ಹಾರಿಸಿದರು. ಆದರೂ ಸಾರ್ಥಕವಾಗಲೇ ಇಲ್ಲ. ಎಷ್ಟು ಗುಡ್ಡದಲ್ಲೂ ವಾನ್ ನೆಸ್ ಅವೆನ್ಯೂ ಎಂಬ ಬೀದಿಯಲ್ಲೂ ಇದ್ದ ಕೋಟ್ಯಾಧೀಶ್ವರರ ಮನೆಗಳೆಲ್ಲಾ ಸಂಪೂರ್ಣವಾಗಿ ನಾಶವಾಗಿರುತ್ತವೆ. ಜನರ ಅಲ್ಲಕಲ್ಲೋಲವೂ ಗಾಬರಿಯೂ ಕಷ್ಟ ... ಅನ್ನನೀರಿನ ಗೋಳಾಟವೂ ವಿವರಿಸಲಶಕ್ಯವಾಗಿದೆ. ಮಿ॥ ರಾಕ್‌ಫೆಲ್ಲರ್ ಎಂಬ ಕೋಟೀಶ್ವರನೂ ಇತರ ಕೋಟ್ಯಾಧೀಶ್ವರರೂ ಬಹು ಧಾರಾಳವಾಗಿ ದ್ರವ್ಯಸಹಾಯ ಮಾಡುತ್ತಿದ್ದಾರೆ.

ಸರಿಸುಮಾರಾಗಿ ಇದುವರೆಗೆ ಸ್ಯಾನ್ ಫ್ರಾನ್ಸಿಸ್ಕೋ ಪಟ್ಟಣದ ಮೂರನೇ ಎರಡು ಪಾಲು ಸಂಪೂರ್ಣವಾಗಿ ನಾಶವಾಯಿತೆಂದು ಹೇಳಬಹುದಾಗಿದೆ. ಇನ್ನೂ ಎರಡು ಕಡೆಗಳಲ್ಲಿ ಬೆಂಕಿ ಉರಿಯುತ್ತಲೂ ಹಬ್ಬುತ್ತಲೂ ಇದೆ. ಆದರೆ ಅದರ ರಭಸವು ಸ್ವಲ್ಪ ಕಡಿಮೆಯಾಗಿರುವುದು. ಈಗ ಆ ಪಟ್ಟಣದಲ್ಲಿ ನಾಲ್ಕನೇ ಒಂದು ಭಾಗವನ್ನು ಉಳಿಸಿಕೊಳ್ಳಬಹುದೆಂದು ತೋರುತ್ತಿದೆ.

ಈಗ ೩,೦೦,೦೦೦ ಪ್ರಜೆಗಳು ಮನೆ ಇಲ್ಲದೆ, ಹೊಟ್ಟೆಗಿಲ್ಲದೆ, ಕುಡಿಯುವುದಕ್ಕೆ ನೀರಿಲ್ಲದೆ ಹಾಹಾಕಾರಪಟ್ಟು ಗೋಳಿಡುತ್ತಾ ಅಲೆಯುತ್ತಿದ್ದಾರೆ

ಕಷ್ಟನಿವಾರಣೋಪಾಯಗಳು ಪ್ರಾರಂಭವಾದವು. ಪೋಲೀಸಿನವರು ಆಹಾರ ಸಾಮಗ್ರಿಗಳನ್ನೆಲ್ಲಾ ಕೂಡಿಸಿ, ತಮ್ಮ ಸ್ವಾಧೀನದಲ್ಲಿ ಇಟ್ಟುಕೊಂಡು, ಸ್ವಲ್ಪ ಸ್ವಲ್ಪವಾಗಿ ಕೊಡುತ್ತಿದ್ದಾರೆ. ಈ ಭಯಂಕರವಾದ ಕಷ್ಟವು ನಿವಾರಣೆಯಾಗುವುದಕ್ಕೆ ಬೇಕಾದ ಆಹಾರವು ಜಾಗ್ರತೆಯಾಗಿ ದೊರೆತ ಹೊರತು ಆಗುವುದಿಲ್ಲವೆಂದು, ಜನರಲ್ ಫನ್ಸ್ಟನ್ ವಾಷಿಂಗ್ಟನ್ ಪಟ್ಟಣಕ್ಕೆ ತಂತಿ ವರ್ತಮಾನ ಕಳುಹಿಸಿ ದೊಡ್ಡ ದೊಡ್ಡ ಕಷ್ಟಗಳು ಬಂದ ಸಮಯದಲ್ಲಿ ಆಹಾರ ಸಾಮಗ್ರಿಗಳನ್ನು ಒದಗಿಸಬೇಕೆಂದು ಕೇಳಿಕೊಂಡರು. ಇಲ್ಲದೆ ಕಷ್ಟನಿವಾರಣೆಯನ್ನು ಮಾಡುವುದು ಕಷ್ಟವಾದುದರಿಂದ ಸರ್ಕಾರದವರು ಕೆಲವು ಸೈನಿಕರನ್ನು ನೇಮಿಸಿ ಕಳುಹಿಸಿರುವರು. ಈ ಕೋಲಾಹಲದಿಂದಲೂ ಬೆಂಕಿಯಿಂದಲೂ ಅನೇಕರಿಗೆ ನಷ್ಟ ಉಂಟಾಯಿತು. ಕೆಲವು ಭೀಮಾ ಕಂಪನಿಗಳಿಗೆ ಅಪಾರ ನಷ್ಟ ವುಂಟಾಗಿದೆ.

ಲಂಡನ್, ಏಪ್ರಿಲ್ ೨೦ನೇ ಶನಿವಾರ.—ಸ್ಯಾನ್ ಫ್ರಾನ್ಸಿಸ್ಕೋ ಪಟ್ಟಣದ ಮೇಯರ್ ಎಂಬ ಅಧ್ಯಕ್ಷನು ಈಗ ಬೆಂಕಿ ಉರಿಯುತ್ತಿರುವುದನ್ನು ಆರಿಸುವ ಪ್ರಯತ್ನ ಮಾಡುತ್ತಿದ್ದಾನೆ. ಕೆಲವು ಇಷ್ಟುಪಾರು ಕಾಣಿಸಿರುತ್ತಾನೆ.

ಕನಾಡಾ ಅಧಿಕಾರದ ಹೌಸ್ ಆಫ್ ಕಾಮನ್ಸ್ ಎಂಬ ಸಭೆಯವರು ಸ್ಯಾನ್ ಫ್ರಾನ್ಸಿಸ್ಕೋ ಪ್ರಜೆಗಳ ಕಷ್ಟನಿವಾರಣೆಗಾಗಿ ೧,೦೦,೦೦೦ ರೂಪಾಯಿಯನ್ನು ಮಂಜೂರ್ ಮಾಡಿದರು. ನ್ಯೂಯಾರ್ಕ್ ಪಟ್ಟಣದ ಪ್ರಜೆಗಳು ೧೦,೦೦,೦೦೦ ರೂಪಾಯಿಯನ್ನು ಕೂಡಿಸಿ ಕಳುಹಿಸಿದರು.

ಮನೆಮಠಗಳನ್ನು ಕಳೆದುಕೊಂಡ ಬಡವರು ಭಾಗ್ಯವಂತರೂ ಎಲ್ಲಾ ಕಾಣಿಕೆಯಂತೆ ಉದ್ಯಾನವನವೇ ಮೊದಲಾದ ವಿಸ್ತಾರ ಪ್ರದೇಶಗಳಲ್ಲಿ ನಿಸ್ಸಹಾಯಕರಾಗಿ ಗುಡಾರ ಏನೂ ಇಲ್ಲದೆ ವಾಸಮಾಡುತ್ತಾರೆ.

ಲಂಡನ್, ಏಪ್ರಿಲ್ ೨೫ನೇ ಭಾನುವಾರ.—ನ್ಯೂಯಾರ್ಕ್ ಫ್ರಾನ್ಸಿಸ್ಕೋ ದಲ್ಲಿ ಎಲ್ಲಾ ಸಮಾಧಾನವಾಗುತ್ತಿದೆ. ಬೆಂಕಿಯು ಉರಿಯುವ ಬಲವು ಕಡಿಮೆಯಾಗಿ ಕೊಂಡು ಆರುತ್ತಿದ್ದಾರೆ. ರೈಲ್ ಗಾಡಿಗಳು ಯಥಾಪ್ರಕಾರ ಓಡುತ್ತಿರುವವು. ಇಷ್ಟು ಅಪಾರವಾದ ಕಷ್ಟನಷ್ಟಗಳು ಉಂಟಾದರೂ ಈಗ ಇದುವರೆಗೆ ಯಾವ ವಿಧದ ಗಲಭೆಯೂ ಇಲ್ಲವೆಂದೂ, ಕಷ್ಟನಿವಾರಣೆಗೆ ಈಗ ಮಂಜೂರ್ ಮಾಡಿರುವ ಹಣವಲ್ಲದೆ ಇನ್ನೂ ೬೦ ಲಕ್ಷ ರೂಪಾಯಿ ಬೇಕಾಗುವುದೆಂದೂ, ಪ್ರೆಸಿಡೆಂಟ್ ರೂಸ್‌ವೆಲ್ಟ್ ಅವರು ತಿಳಿಸಿರುವರು. ಬೆಂಕಿಯಿಂದ ಸುಟ್ಟುಹೋದ ಕಟ್ಟಡಗಳ ಬೆಲೆ ೩೦ ಕೋಟಿ ರೂಪಾಯಿ ಎಂದು ಅಂದಾಜು ಮಾಡಿರುತ್ತಾರೆ. ಭೀಮಾ ಕಂಪನಿಗಳವರು ಈ ಪಟ್ಟಣದಲ್ಲಿ ನಷ್ಟಪಟ್ಟವರಿಗೆ ೩೩ ಕೋಟಿ ರೂಪಾಯಿ ಪರಿಹಾರ ಕೊಡಬೇಕಾಗಿರುವುದು. ಅಲ್ಲಿನ ಪ್ರೋಸ್ಟ್ ಆಫೀಸಿನೊಳಗೆ ಮೂರು ದಿನ ಅನ್ನ ನೀರಿಲ್ಲದೆ ಜೀವರಕ್ಷಣೆಗಾಗಿ ೧೧ ಮಂದಿ ಗುಮಾಸ್ತೆಗಳನ್ನು ಹೊರಕ್ಕೆ ಕರೆಸಿದಾಗ ಬದುಕಿರುತ್ತಾರೆ ಎಂದು ಬಸ್ತುಗಳೆಲ್ಲಾ ಸುರಕ್ಷಿತವಾಗಿ.

ಲಂಡನ್, ಏಪ್ರಿಲ್ ೨೩ ನೇ ಸೋಮವಾರ.—ಸ್ಯಾನ್ ಫ್ರಾನ್ಸಿಸ್ಕೋದಲ್ಲಿ ಇದುವರೆಗೆ ೪೦೦ ಹೆಣಗಳು ಸಿಕ್ಕಿವೆ. ಇನ್ನೂ ಬರ ಹತ್ತಾರು ಮಂದಿ ಕಾಣಿಸಲಿಲ್ಲ. ಈ ಭೂಕಂಪದಿಂದಲೂ ಬೆಂಕಿಯಿಂದಲೂ ಆ ಪಟ್ಟಣದಲ್ಲಿ ೧೦ ಕೋಟಿ ರೂಪಾಯಿ ಆಸ್ತಿಪಾಸ್ತಿಗಳು ನಾಶವಾದವು. ಈಗ ಅನೇಕರು ಭಾಗದಲ್ಲಿ ಬೆಂಕಿ ಹತ್ತಿ ಜನರು ಬಾಯಾರಿಕೆ ನೀರಿಲ್ಲದೆ ಪರದೇಶಕ್ಕೆ ವ್ಯಾಪಿಸಿದಂತಿದೆ.

ಅಗ್ನಿಪರ್ವತದ ಅನಾಹುತವು.

ಯೂರೋಪ್ ಖಂಡಕ್ಕೆ ಸೇರಿದ ಇಟಲಿ ರಾಜ್ಯದಲ್ಲಿ ವಿಸ್ಯೂವಿಯಸ್ ಎಂಬ ಅಗ್ನಿಪರ್ವತದಿಂದ ಆ ಪ್ರಾಂತ್ಯದಲ್ಲಿ ಉಂಟಾದ ಅಪಾಯವನ್ನು ಕಳೆದ ವಾರ ಸ್ವಲ್ಪ ಮಟ್ಟಿಗೆ ತಿಳಿಸಿದ್ದೆವಷ್ಟೆ. ಈಚೆಗೆ ಅಲ್ಲಿಂದ ಬಂದಿರುವ ತಂತೀವರ್ತಮಾನಗಳು ಸಂತೋಷವನ್ನು ಸಮಾಧಾನವನ್ನೂ ಉಂಟುಮಾಡುವವು.

ಆ ಅಗ್ನಿಪರ್ವತದ ಸಮೀಪದಲ್ಲಿ ಆಗಿರುವ ಹಾನಿಯನ್ನು ನೋಡುವುದಕ್ಕೆ ರಾಜನೂ ರಾಣಿಯೂ ನೇಪಲ್ಸ್ ಪಟ್ಟಣಕ್ಕೆ ಹೋಗಿದ್ದರಷ್ಟೆ. ಅವರ ಜೊತೆಯಲ್ಲಿ ಅವರ ಸಿಂಗರ ಮನೆಗೆ ಹೋಗಿ ಅಲ್ಲಿ ಹೋದ ಹಾದಿಯಲ್ಲಿ ಕಾದ ಮಣ್ಣುಗಳೂ ಕಲ್ಲು ಮಣ್ಣು ಸುರಿದು ದಿಕ್ಕಿಲ್ಲದವರಾಗಿ ಪ್ರಾಣಭಯದಿಂದ ಅಲ್ಲಿಗೆ ಹೋಗಿ ಪ್ರಜೆಗಳ ಕಷ್ಟನಷ್ಟಗಳನ್ನು ಕಣ್ಣಾರ ನೋಡಿಕೊಂಡು ಬಂದದ್ದು ಅವ ರಲ್ಲಿರುವ ಪ್ರಜಾಪ್ರೀತಿ ವಾತ್ಸಲ್ಯಾದಿಗಳನ್ನು ಪ್ರಕಾಶಪಡಿಸುತ್ತಿದೆ. ಅವರು ಎದುರಿಗೆ ಹೋಗಿ ನಿಂತು ಆ ಪ್ರಾಂತ್ಯದ ಪ್ರಜೆಗಳಿಗೆ ಆಹಾರ ಔಷಧಿ ಮೊದಲಾದ ಸೌಕರ್ಯಗಳನ್ನು ಒದಗಿಸಿಕೊಟ್ಟು ಬಂದರು.

ಒಟ್ಟೋಜಾನೋ ೧೦೦ ಗ್ರಾಮವು ೨೦೦ ಪ್ರಜೆಗಳ ಸಹಿತ ನಾಶವಾಯಿತು. ಸ್ಯಾನ್ ಗೂಸೆಪ್ ಎಂಬಲ್ಲಿ ಇನ್ನೂ ಕೆಲವು ಕಡೆಗಳಲ್ಲೂ ೨೦೦ ಜನರ ಮೇಲೆ ಗತರಾದರು. ಬಿದ್ದ ಸಿಡಿಲಿನಿಂದ ೫೦-೬೦ ಮೈಲಿ ದೂರದಲ್ಲಿರುವ ನೇಪಲ್ಸ್ ಗ್ರಾಮದಲ್ಲಿ ದೊಡ್ಡ ಮಾರ್ಕೆಟ್ಟು ಬಿದ್ದು ೧೪ ಮಂದಿ ಗತರಾದರು; ೨೦ ಜನರಿಗೆ ಗಾಯವಾಯಿತು. ಪೋಪ್ ಅವರು ಈ ಸಂಗತಿಯನ್ನು ತಿಳಿದು ತಮ್ಮ ಸಂತಾಪವನ್ನು ಇಟಲಿ ರಾಜರಿಗೆ ತಿಳಿಸಿ, ಈ ಸಂಕಷ್ಟ ವ್ಯಸನಾಯ ಮಾಡಿದರು. ಬಂದು ದೇವಾಲಯದ ಕೆಳಗೆ ೧೬ ಸಾವಿರ ಪೂಜಾವಿದ (೧೦೫ ಮೈಲಿ) ಕೊನೆಗಳನ್ನು ಕೊಟ್ಟರು.

ಅಗ್ನಿಪರ್ವತದ ಸುತ್ತಲೂ ಕೆಲವು ಮೈಲಿಗಳವರೆಗೆ ಹರಡಿರುವ ಪಟ್ಟಣಗಳಲ್ಲಿ ಬೂದಿ ಮುಸುಕಿ ಆರು ಅಡಿ ಎತ್ತರ ಬಿದ್ದಿದೆ. ಈ ಅನಾಹುತದಿಂದ ಸುಮಾರು ೪೦೦ ರಿಂದ ೫೦೦ ಪ್ರಜೆಗಳು ತನಕ ಸತ್ತರು.

ಪಾದರೇ... ಅಡಿಯಿಂದ ಬಿಟ್ಟಿದ್ದಾರೆ. ಈಚೆಗೆ ಒಂದು ದಿನ ಆ ಪರ್ವತವೇ ಪುನಃ ಬಾಯ್ತೆರೆಯಿತು. ಮಳೆಯೂ, ಬೂದಿಯ ಮಳೆಯೂ, ಸುಂಟರಗಾಳಿಯೂ ಅಪಾರವಾಗಿ ಪ್ರಾಪ್ತವಾದವು. ಕಳೆದ ೧೩ ನೆ ತಾರೀಖಿನಿಂದ ಇದೆಲ್ಲಾ ಕಡಿಮೆಯಾಗಿದೆ. ಸರ್ಕಾರಿ ನೌಕರರೂ ಸೈನಿಕರೂ ಪರೋಪಕಾರಿಗಳೂ ಆ ಪ್ರಾಂತ್ಯದಲ್ಲಿ ಅನೇಕ ಸಾಹಸ ಕಾರ್ಯಗಳನ್ನು ಮಾಡಿದ್ದಾರೆ. ಕಷ್ಟನಿವಾರಣೆಯಲ್ಲಿ ಆಸಕ್ತರಾಗಿದ್ದಾರೆ. ಇಲ್ಲಿಗೆ ಈ ಸಂಬಂಧ ಅನಾಹುತವು ಅತ್ಯಂತವಾಯಿತೆಂದು ಹೇಳಬಹುದಾಗಿದೆ.

ಆ ಪರ್ವತದ ಬಳಿ ಒಂದು ಅಬ್ಸರ್ವೆಟರಿ ಎಂಬ ಜ್ಯೋತಿಷ ಪರೀಕ್ಷಾಲಯವನ್ನು ಕಟ್ಟಿದ್ದಾರೆ. ಬೆಂಕಿಯ ಮಳೆ ಅಷ್ಟು ರಭಸವಾಗಿ ಸುರಿಯುತ್ತಿದ್ದರೂ ಪ್ರೊಫೆಸರ್ ಮ್ಯಾಟೆಯುಸಿ ಎಂಬ ವಿದ್ವಾಂಸನು ಆ ಕಟ್ಟಡದಲ್ಲೇ ಇದ್ದುಕೊಂಡು, ಪರೀಕ್ಷಾಕಾರ್ಯದಲ್ಲೇ ಆಸಕ್ತನಾಗಿದ್ದನು. ಯೂರೋಪಿನವರೆಲ್ಲಾ ಅವನನ್ನು ಕೊಂಡಾಡುತ್ತಿದ್ದಾರೆ. ದೊರೆಯೂ ಅವನಿಗೆ ಒಂದು ಚಿನ್ನದ ಮೆಡಲನ್ನು ದಯಪಾಲಿಸಿದರು.

ತಾ॥ ೧೭ ರಲ್ಲಿ ಬಂದ ತಂತೀವರ್ತಮಾನ.—ವಿಸ್ಯೂವಿಯಸ್ಸಿನಿಂದ ಕಾರಿ ಸುರಿಯುತ್ತಿದ್ದ ಬೂದಿಯ ಮಳೆ ಸಂಪೂರ್ಣವಾಗಿ ನಿಂತಿದೆ. ಆಕಾಶವು ನಿರ್ಮಲವಾಗಿದೆ. ಸೂರ್ಯಪ್ರಕಾಶವು ನಿಷ್ಕಳಂಕವಾಗಿದೆ. ಆ ಪರ್ವತವು ಶಾಂತವಾಗುತ್ತಿದೆ. ಪ್ರಜೆಗಳೆಲ್ಲಾ ಧೈರ್ಯಶಾಲಿಗಳಾಗಿ ಯಥಾಪ್ರಕಾರ ತಮ್ಮ ಕೆಲಸ ಕಾರ್ಯಗಳ ಮೇಲೆ ಆಸಕ್ತರಾಗಿರುವರು. ಚೆನ್ನಾಗಿಲ್ಲದೆ ಓಡಿಹೋಗಿದ್ದವರು ಕ್ರಮವಾಗಿ ಹಿಂತಿರುಗಿ ತಮ್ಮ ತಮ್ಮ ಗ್ರಾಮ ಊರುಗಳಿಗೆ ಹೋಗಿ ಸೇರಿಕೊಳ್ಳುತ್ತಿದ್ದಾರೆ.

ತಾ॥ ೧೮ ರಲ್ಲಿ ಬಂದ ವರ್ತಮಾನ.—ಒಸ್ಸೆರ್ವೆಟರಿಯಲ್ಲಿ ಟಾಟಿಪಲ್ ಗ್ರೆಕೋವಿಲ್ಲಾ ಇನ್ನೂ ಬೂದಿಯ ಮಳೆ ಸುರಿಯುತ್ತಿರುವುದರಿಂದ ಸೂರ್ಯಕಿರಣಗಳು ಕಾಣದೆ ಕತ್ತಲಾಗಿದೆ. ಇತರ ಪ್ರದೇಶಗಳಲ್ಲಿ ... ಸುರಿಯುತ್ತಿರುವುದು ಕಡಿಮೆಯಾಗಿದೆ.

ಭೂಕಂಪವೂ ಅನಾಹುತವೂ

ಅಮೇರಿಕದ ಪೂರ್ವದಿಕ್ಕಿನಲ್ಲಿರುವ ಫಾರ್ಮೋಸಾ ದ್ವೀಪವು ಜಪಾನ್ ರಾಜ್ಯಕ್ಕೆ ಸೇರಿದ್ದಾಗಿದೆ. ಇಲ್ಲಿ ಕಸ್ತೂರಿಯೇ ಪ್ರಧಾನವಾದ ವ್ಯಾಪಾರ. ಅಲ್ಲಿಂದಲೇ ತಯಾರಾಗಿ ಪ್ರಪಂಚಕ್ಕೆಲ್ಲಾ ರಫ್ತಾಗುವುದು. ಈ ದ್ವೀಪದಲ್ಲಿ ಕಳೆದ ಮಾರ್ಚಿ ೧೭ ನೇ ತಾರೀಖಿನ ದಿನ ಭೂಕಂಪವುಂಟಾಗಿ ೧,೩೦೦ ಪ್ರಜೆಗಳು ಸತ್ತುಹೋದರೆಂದು ಹಿಂದೆಯೇ ತಿಳಿಸಿದ್ದೇವಷ್ಟೆ. ಈಚೆಗೆ ಅದೇ ಈ ತಿಂಗಳ ೧೪ ನೆ ತಾ॥ ರಾತ್ರಿ ಬೆಳಗ್ಗೆ ಆ ದ್ವೀಪದಲ್ಲಿ ಭೂಕಂಪ ಪ್ರಾಪ್ತವಾಗಿ ಮೊದಲಿಗಿಂತಲೂ ಹೆಚ್ಚು ನಷ್ಟವುಂಟಾಗಿರುತ್ತದೆ. ಈ ವಿಷಯವಾಗಿ ತಾ॥ ೧೭ ರಲ್ಲಿ ಬಂದ ತಂತೀವರ್ತಮಾನವೇನೆಂದರೆ—

ಫಾರ್ಮೋಸಾ ದ್ವೀಪದಲ್ಲಿ ಪ್ರಾಪ್ತವಾದ ಭೂಕಂಪದ ಹೊಡೆತದಿಂದ ಇದುವರೆಗೆ ೧೦೫ ಜನರ ಹೆಣಗಳು ಸಿಕ್ಕಿರುತ್ತವೆ, ೬೫ ಮಂದಿ ಗಾಯಪಟ್ಟಿರುವರು. ಅನೇಕ ಮನೆಗಳು ಬಿದ್ದುಹೋದವು. ಇಲ್ಲಿಯ ಜನರು ದಿಕ್ಕಿಲ್ಲದೆ ಓಡಾಡುತ್ತಿರುವರು. ಅಲ್ಲಿ ಕಳೆದ ತಿಂಗಳ ಭೂಕಂಪಕ್ಕೆ ಸಿಕ್ಕಿ ಹಾಳಾದ ಜನರು ಕಟ್ಟಡಗಳೂ ಇನ್ನೂ ಸರಿಯಾಗಿ ನಿಲ್ಲಲಿಲ್ಲ. ಸರ್ಕಾರದವರು ಮನೆಮಠಗಳನ್ನು ಕಳೆದುಕೊಂಡ ಸಾವಿರಾರು ಪ್ರಜೆಗಳಿಗೆ ಆಹಾರ ಮುಂತಾದ್ದನ್ನು ಒದಗಿಸಿಕೊಡುತ್ತಿದ್ದಾರೆ.

ಪತ್ರಿಕಾದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದೆ ಬರುವ ಪತ್ರಿಕೆಗಳಿಗೆ ನಾವು ನಿಗಾ ಕೊಡಲಾರೆವು. ಆದಕಾರಣ ಪತ್ರಿಕಾದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು. ಪತ್ರಿಕೆಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು, ಇಂಥವುಗಳಿಗೆ ನಾವು ನಿಗಾ ಕೊಡಲಾರೆವು.

ಪತ್ರಿಕಾದಾರರು ಪಡುವ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಾಗುವುದಿಲ್ಲವೆಂಬುದನ್ನು ಸಕಲರೂ ತಿಳಿಯತಕ್ಕದ್ದು.—ಎಡಿ

ಪಿ ಎಸ್ ಸುಬ್ಬರಾಯಪ್ಪ, ಬೆಂಗಳೂರು.—ತಮ್ಮ ಪತ್ರ ತಲುಪಿತು. ತಮ್ಮ ಮುಂಚೆ ನಿಮ್ಮ ಪತ್ರಿಕೆಯನ್ನು ಪ್ರಕಟಿಸಲಾಗದು. ಎಸ್ ಪಿ ಪಿ ಕಾಂಗ್ರೆಸ್...ಸರ್ಕಾರದವರು ನಿಮ್ಮ ಅಭಿಪ್ರಾಯದಂತೆ ಸಾಧ್ಯವಾದಷ್ಟು ಶಾಲೆಗಳನ್ನು ಹೆಚ್ಚಿಸುತ್ತಿದ್ದಾರೆ.—ಎಡಿ]

ಕರೆಸ್‌ಪಾಂಡೆನ್ಸ್.

ತರೀಕೆರೆ ವಿಷಯಗಳು—ಜವಾಬು.

ಅಯ್ಯಾ,

ತಮ್ಮ ತಾ ೧೬-೪-೦೬ ರಲ್ಲಿ ಪ್ರಕಟವಾದ ಪತ್ರಿಕೆಯಲ್ಲಿ ತರೀಕೆರೆ ವಿಷಯಗಳಿಂತ ಒಬ್ಬರು ಮೊಕ್ಕ ಪ್ರಜಾಹಿತಚಿಂತಕರು ಬರೆದಿರುವುದನ್ನು ನೋಡಿದೆನು. ಅದರಲ್ಲಿ ಅಡಕವಾಗಿರುವ ೧ನೇ ಗ್ರಾಮದ ಪಾಠಶಾಲಾ ವಿಷಯದಲ್ಲಿ ಮ್ಯುನಿಸಿಪಾಲಿಟಿಯವರು ಸಾಧ್ಯವಾದಷ್ಟು ನಿಗಾಕೊಡುತ್ತಲೇ ಇದ್ದಾರೆ. ಈ ಗ್ರಾಮದಲ್ಲೇ ಪಾಲಿಯಾಗಿ ೩-೪ ವರ್ಷಗಳಿಂದಲೂ ಕಾಲರಾ ಬಿದ್ದಿರುತ್ತದೆ. ಕೆಲವು ಬೀದಿಗಳು ಮಾತ್ರವೇ ಜನಸಂಚಾರವಾಗಿವೆ. ಈ ಪ್ರದೇಶಗಳಲ್ಲಿಯೂ ಮತ್ತು ನೋಡಿದಾಗ ಕ್ಯಾಂಪುಗಳು. ಹಾಕಲ್ಪಟ್ಟಿರುವ ಕಡೆಗಳಲ್ಲಿಯೂ ಪಾಠಶಾಲೆ ನಡೆಯುತ್ತಾ ಇದೆ. ಬೇರೆ ಊರುಗಳಲ್ಲಿ ಗ್ರಾಮಪಾಠಶಾಲೆಗೆ ಗಮನಕೊಡಬೇಕೆಂದು ಹಿಂದೆಲ್ಲಾ ಜಾಸ್ತಿ ಹಣ ಖರ್ಚು ಮಾಡಿದರು ಇಲ್ಲಿಯೇ ಗಮನಕೊಡುವುದು ಇದರಿಂದ ಜನಗಳಲ್ಲೆಲ್ಲರೂ ಬಿಲ್ಲಾಗಿದ್ದಾರೆ.

೨ನೇ ಸಂಗತಿ ನೀರಿನ ಬಾವಿ ವಿಷಯದಲ್ಲಿ ತಮ್ಮ ಪತ್ರಿಕೆದಾರರು ಆಕ್ಷೇಪಿಸಿರುವ ಊರಲ್ಲಿ ನೀರು ಪಡೆಯುವುದಕ್ಕಾಗಿ ಉತ್ತರದಲ್ಲಿ ಯಾವ ಅಸಮಾಧಾನವೂ ಇರುವುದಿಲ್ಲ. ಸಮೀಪದಲ್ಲಿಯೇ ಇರುವ ದೊಡ್ಡ ಕೆರೆ ಮತ್ತು ಚಿಕ್ಕ ಕೆರೆಗಳಲ್ಲಿ ದನ, ಜಾನುವಾರುಗಳಿಗೆ ನೀರು ಸಿಗುತ್ತಾ ಇದೆ. ಈ ವಿಚಾರದಲ್ಲಿ ಇಂಥಾ ಅನುಕೂಲವಾದ ಊರಿನಲ್ಲಿ ನೀರಿನ ಪ್ರಕಾರ ಹುಟ್ಟಲಾರದು. ಇದಲ್ಲದೆ ಕಲ್ಲತ್ತಿ ಜಲಪಾತದಿಂದ ಕುಡಿಯುವ ನೀರು ಈ ಟವುನಿಗೆ ಸಪ್ಲೈ ಆಗುವ ವಿಷಯವಾಗಿ ಶ್ರೀಮನ್ಮಹಾರಾಜಾ ಗವರ್ನಮೆಂಟಿನವರ ಯೋಚನೆಯಲ್ಲಿದ್ದು ಕಾಲಕ್ರಮೇಣ ಆಗಬಹುದೆಂದು ಕಾಣುತ್ತದೆ. ಅಧಿಕಾರಿಗಳು ಪ್ರಜೆಗಳ ಹಿತಕ್ಕೆ ದುಡಿಯುತ್ತಿದ್ದಾರೆ ಎಂಬುದಕ್ಕೆ ಇದೇ ಸಾಕ್ಷಿ.

೩ನೇ ವಿಷಯವನ್ನು ಕುರಿತು ಮಾತ್ರ ಒಪ್ಪಿಕೊಳ್ಳಬೇಕು. ಬರ್ನ ಬಿಡುವ ವಿಷಯದಲ್ಲಿ ಪೋಲೀಸಿನವರು ನ್ಯಾಯವಾಗಿ ನಡೆಸಬೇಕಾದ ತನಿಖೆ ನಡಸಿ ಬಂದ ಪಿರ್ಯಾದುಗಳನ್ನು ರಿಪೋರ್ಟು ಮಾಡತಕ್ಕದ್ದಾಗಿದೆ. ಇದುವರೆಗೂ ಬರಲಿಲ್ಲ. ತಮ್ಮ ಪತ್ರಿಕೆದಾರರು ನಮ್ಮೂರಿನ ಪೋಲೀಸು ಅಧಿಕಾರಿಗಳ ಮೇಲೆ ವಿನಾ ಕಾರಣ ದೋಷಾರೋಪಣೆ ಮಾಡಿ ಬರೆದಿರುವುದು ಸರಿಯಲ್ಲ. ಈ ಊರಿನಲ್ಲಿ ಪೋಲೀಸಿನಿಂದ ಯಾವ ಅಡಚಣೆಯೂ ನಡೆದಿರುವುದಿಲ್ಲ. ಪಾರ್ಟಿಗಳು ಒಟ್ಟಿಗೆ ಸೇರಿಕೊಂಡು ಕಾಲಹರಣ ಮಾಡಿಕೊಳ್ಳುವ ಸನ್ನಿವೇಶಗಳನ್ನು ಕಂಡಿದ್ದರೂ ಪೋಲೀಸಿನವರು ಸುಮ್ಮನಿರುವುದು ಸರಿಯಲ್ಲ. ಪೋಲೀಸಿನವರು ನಿಷ್ಪಕ್ಷಪಾತವಾಗಿ ನ್ಯಾಯದೃಷ್ಟಿಯಿಂದ ನಡೆದುಕೊಳ್ಳುತ್ತಿದ್ದಾರೆ. ಪೋಲೀಸಿನವರು ಈ ಪಾರ್ಟಿಗಳ ಕಲಹಗಳನ್ನು ತಡೆಗಟ್ಟಿ ನಿಲ್ಲಿಸಿ ಶಾಂತಿಯನ್ನು ಕಾಪಾಡುತ್ತಾರೆ.

ಈ ಕಾರಣಗಳಿಂದ ತಮ್ಮ ಪತ್ರಿಕೆದಾರರು ಬರೆದಿರುವುದು ಸರಿಯಲ್ಲವೆಂದು ತಿಳಿಸಲು ಇಚ್ಛಿಸುತ್ತೇನೆ. ಸಾರ್ವಜನಿಕರ ಹಿತಕ್ಕಾಗಿ ತಮ್ಮ ಪತ್ರಿಕೆಯಲ್ಲಿ ಪ್ರಕಟಿಸಬೇಕೆಂದು ಕೋರುತ್ತೇನೆ.

ಲೋಕಲ್ ಮ್ಯುನಿಸಿಪಾಲಿಟಿ ಮೆಂಬರ್.

ತಾಲ್ಲೂಕು ವರ್ತಮಾನಗಳು

ಚಿಕ್ಕಮಗಳೂರು.—ಬಿಸಿಲು ಜಾಸ್ತಿಯಾಗಿ ಕಾಫಿತೋಟಗಳಲ್ಲಿ ಹಿಸಿಲಸಾಧ್ಯವಾಗಿದೆ. ಕೆರೆಕಟ್ಟೆಗಳಲ್ಲಿ ಅಲ್ಪಸ್ವಲ್ಪವಿದ್ದ ನೀರೂ ಬತ್ತಿ ಹೋಗಿ ದನಕರುಗಳಿಗೆ ನೀರಿಗಾಗಿ ತೊಂದರೆಯಾಗಿದೆ. ಕೆಲವು ಕಡೆಗಳಲ್ಲಿ ದನಗಳಿಗೆ ಏನನ್ನು ಹಾಕುವುದೆಂದು ತೋಚದೆ ಇದ್ದಾರೆ. ಇಂಥ ಸಮಯದಲ್ಲಿ ರೈತರಿಗೆ ತೊಂದರೆಯುಂಟು.—ಈ ಊರಿನ ಸಂತೆಯಲ್ಲಿ ಕೆಲವು ವರ್ತಕರು ವ್ಯಾಪಾರಿಗಳು ಅಂಗಡಿಗೆ ಹೋಗಿ ಅವರ ಹಣವನ್ನು ಒಂದು ಕಡೆ ಸಂತೆಯಿಂದ ತೆಗೆದುಕೊಳ್ಳದೆ ಮೂರು ಕಾಸು ಹಣ ಸಿಗುವ ಕಡೆ ಹೋಗಿ, ಕೊಳ್ಳುವವರಿಗೆ ತೊಂದರೆ ಕೊಡುತ್ತಿದ್ದಾರೆ. ಮುಂದೆ ಕಳ್ಳತನಗಳು ಆಗುತ್ತವೆ. ಕೆಲವು ವ್ಯಾಪಾರಿಗಳು ನಷ್ಟ ವ್ಯಾಪಾರದಿಂದ ಲಾಭವಿಲ್ಲದೆ ನಷ್ಟವಾಗುತ್ತಿದ್ದರೂ ಈ ಪಟ್ಟಣದ ಪೋಲೀಸ್ ಹೆಚ್ಚಾಗಿದೆ. ಆದಕಾರಣ ಮ್ಯುನಿಸಿಪಾಲಿಟಿಯವರೂ ಪೋಲೀಸಿನವರೂ ಇತ್ತಕಡೆ ಗಮನಕೊಟ್ಟು ಜನರ ತೊಂದರೆಯನ್ನು ತೆಗೆದುಹಾಕುವಂತೆ ಮಾಡಬೇಕು.—ಶಿವಮೊಗ್ಗೆಯಿಂದ ಸರ್ವೇ ಡಿಪಾರ್ಟ್ಮೆಂಟಿನವರು ಬಂದು ಇಲ್ಲಿ ಕೆಲವು ದಿವಸಗಳಲ್ಲಿ ಒಂದನ್ನು ಎರಡು ಮೊಕದ್ದಮೆಗಳಲ್ಲಿ ಅಪರಾಧಿಗಳಾಗಿ ಕಂಡ ಇಬ್ಬರು ಕೈದಿಗಳಿಗೆ ಸಜಾ ವಿಧಿಸಿ, ೨೨ ನೆ ತಾ. ಇಲ್ಲಿಂದ ಶಿವಮೊಗ್ಗೆಗೆ ಹೋದರೆಂದು ಕೇಳುತ್ತೇನೆ.—ಮೈಸೂರು ಪ್ರಾಂತ್ಯದ ಜಂಗಲ್ ಅಧಿಕಾರಿಗಳು ಕರ್ನಾಟಕದವರು ಇಲ್ಲಿಗೆ ಬಂದು ರಸ್ತೆ ಬಾಬಿನ ಕೆಲಸಗಳನ್ನು ನೋಡಿಕೊಂಡು ಹೋದರು.—ಆ ನ—ಒಂದೆರಡು ದಿವಸಗಳಿಂದ ಮೋಡವಾಗುತ್ತಾ ಇದ್ದು ಸ್ವಲ್ಪ ಮಳೆ ಬರುವಂತೆ ತೋರುತ್ತದೆ. ದೇವರ ದಯೆಯಿಂದ ಎರಡು ಹದ ಮಳೆ ಬಿದ್ದರೆ ಬೀಜ ಬಿತ್ತನೆ ಕಾಲವು ಕಳೆಯದಂತೆ ಜನರಿಗೆ ಸ್ವಲ್ಪ ಮಟ್ಟಿಗಾದರೂ ಅನುಕೂಲವಾಗುವುದು. ಈ ಊರಿನ ಕೆಲವು ಕಡೆಗಳಲ್ಲಿ ಇಲಿಗಳು ಸತ್ತು ಕಾರಣ ಜನರು ಊರನ್ನು ಬಿಟ್ಟು ಶೆಡ್ಡುಗಳನ್ನು ಹಾಕಿಸಿದರು.

ಚಿಕ್ಕಬಳ್ಳಾಪುರ.—ಬೇಸಿಗೆಯ ಬಿಸಿಲು ಜಾಸ್ತಿಯಾಗಿದೆ. ೧೧ ದಿವಸಗಳ ಕಳೆದ ಸುಮಾರಾಗಿ ಗಾಳಿ ಬಿದ್ದು ಅದರ ನೀರಿಗೆ ಕೆರೆ ನಿವಾಸಿಗಳು—ಮಾರ್ಚಿ ತಾ ೨೩ ನೇ ರಾತ್ರಿ ಬಿನ ಕಳ್ಳರು ಈ ಊರಿನ ಸಮೀಪದಲ್ಲಿರುವ ಗ್ರಾಮದಲ್ಲಿ ಒಬ್ಬರ ಮನೆಗೆ ಕನ್ನ ಹಾಕಿ, ಸುಮಾರು ೩೦೦ ರೂ. ನಗದು ಹಣ ದೋಚಿಕೊಂಡು ಹೋದರು. ಆ ರಲ್ಲಿ ಅಜ್ಜನವರ ಗ್ರಾಮದ ಇಬ್ಬರು ಹುಡುಗರು. ಇಬ್ಬರು ಗಂಡಸರು ಈ ಊರಿನ ಸಂತೆಗೆ ಬಂದು ಸಾಯಂಕಾಲ ಹಿಂತಿರುಗಿ ಹೋಗುವಾಗ ಹೊಸ ಕೆರೆಯಲ್ಲಿ ೬ ಜನ ಕಳ್ಳರು ಅವರ ಮೇಲೆ ಬಿದ್ದು ಹೊಡೆದು ಕಾಸುಗಳನ್ನು ಕಿತ್ತುಕೊಳ್ಳಲು ಪ್ರಯತ್ನಪಟ್ಟರು ಆದರೆ ಹತ್ತಿರದ ತೋಟಗಳಲ್ಲಿರುವ ಜನರು

[illegible] ಕಳ್ಳರು ಓಡಿಹೋದರು. ಇದೇ ರೀತಿ ಕೆಲವು ದಿವಸಗಳ [illegible] ವೀರಭದ್ರಪ್ಪನವರ ಛತ್ರದಲ್ಲಿ ಬಿರುತ್ತಿದ್ದ ಒಂದು ಜಟಕಾ [illegible] ಜನರನ್ನು ಹೊಡೆದು ಅವರಲ್ಲಿದ್ದ ಚಿಟ್ಟೆ ನಗದು [illegible] ಕಿತ್ತುಕೊಂಡು ... [illegible] ಕೋಲಾರ ಜಿಲ್ಲೆಯ ... ನಾಗಗಳನ್ನು ... ಸಂಬಂಧಪಟ್ಟ ಚೌಕಿ ಮಾಡಿದವರು ... ವಿಚಾರಣೆ ಮಾಡುತ್ತಿದಾರೆ.—[illegible] ಬೆಂಗಳೂರು ಇನ್ಸ್ಪೆಕ್ಟರ್ ... ಕೆಲಸ ಅಕ್ಟೋಬರ್ ... ಹೋಗಿದಾರೆ. ಅವರ ಬದಲಿ [illegible] ಊರಿನಲ್ಲಿ ಬಚ್ಚು ... ಜನಗಳಿಗೆ ತೋಂದರೆ [illegible] ... ಆಸ್ಪತ್ರೆಗೆ ಕಳುಹಿಸುವರೆಂದು ನಂಬಿದ್ದೇನೆ.

[illegible]ಪ್ಪೂರು.—ತಾ॥ ೧೬ ರಲ್ಲಿ ಸರ್ಕಲ್ ಇನ್ಸ್ಪೆಕ್ಟರ್ ಮಿ॥ [illegible] ಇನ್ಸ್ಪೆಕ್ಟರೊಂದಿಗೆ ದಯಮಾಡಿಸಿ, [illegible] ಬಾಲಿಕೆಯರ ಸ್ಕೂಲಿನಲ್ಲಿ ಕೆಲವು ಕ್ಲಾಸುಗಳನ್ನು ಪರೀಕ್ಷಿಸಿ [illegible] ಬಾಲಿಕೆಯರ ಸಂಗೀತವನ್ನು ಕೇಳಿ ಸಂತೋಷಪಟ್ಟರು. ಮತ್ತು ಈ ಸ್ಕೂಲಿಗೆ ಇತರರಿಂದ ... ಹೆಡ್ ಮಾಸ್ಟರಿಂದ ತಿಳಕೊಂಡು, ಸರ್ಟಿಫಿಕೇಟ್ ಇಲ್ಲದೆ [illegible] ಇತರ ಸ್ಕೂಲುಗಳಿಗೆ ಸೇರಿಸಕೂಡದೆಂಬ ... ತಿಳಿಯಿತು.—ತಾ॥ ೨೦ [illegible] ಕೆಲವು ಅಧಿಕಾರಿಗಳೊಂದಿಗೆ ... ಚಿತ್ತೈಸಿ [illegible] ಅಧಿಕಾರಿಗಳು ... ತೆಗೆದುಕೊಂಡರೆಂತಲೂ, ಆ ಒಂದೆ [illegible] ವಾದ್ಯಗಳೊಂದಿಗೆ ಹೋಗಿ ... [illegible] ... ಈ ಸಂದರ್ಭದ ಪತ್ರಿಕೆ "ಸಚ್ಛ [illegible]" ... ಎಂಬ ರೀತಿ ... [illegible] ... ಅಧಿಕಾರಿಗಳು ... ಉತ್ತರ—ಕಾರ್ಯ [illegible] ... ಅಧಿಕಾರಿ ... ಕಂಟ್ರಾಕ್ಟರು ... ಹೆಡ್ ಮಾಸ್ಟರ್, ಎ. ವಿ. [illegible] ನರಸಿಂಹಪುರ ಎಂಬುವರು ಇಲ್ಲಿನ ಎ. ವಿ. ಸ್ಕೂಲ್ ಬಾಲ [illegible] ಸ್ಕೂಲ್ ಬಾಲಿಕೆಯರಿಗೂ ಮ್ಯಾಜಿಕ್ ಲ್ಯಾಂಟರ್ನ [illegible] ಪಟಗಳನ್ನು ತೋರಿಸಿ ಪ್ರೋತ್ಸಾಹ ಹಳಿಸಿದರು.

[illegible]ಪುರ.—ಇಲ್ಲಿ ನೀರಿನ ಕ್ಷೋಭೆಯು ಅತ್ಯಧಿಕವಾಗಿದೆ. [illegible] ಕೆರೆಬಾವಿಯು ನೀರು ... [illegible] ... ಬರುವ ಕ್ಷಾಮ ... ಸಾಂಕ್ರಾಮಿಕ ... [illegible] ... ಜನಗಳಲ್ಲರೂ ನೀರನ್ನು ... ಅಧಿಕಾರಿಗಳು ... [illegible] ... [illegible] ... ಒಂದು ದಿವಸಕ್ಕೆ ... [illegible] ... "ವಾಗನ ಮದುವೆ ಬಿಕ [illegible]" ಎಂಬ ... [illegible] ... ಪಟ್ಟೀಗಳನ್ನು ... [illegible] ... ಬಾಲಿಕಾಪಾಠ [illegible] ಬಾಲಿಕೆಯರು ಇಂಪಾದ ಸಂಗೀತಗಳನ್ನು ಹಾಡಿ

ಪಮ್ಮ ವಿದ್ಯಾರ್ಥಿನಿಯರನ್ನು ತೋರಬಿಸಿದ್ದರಿಂದಲೂ ಮಾಸ್ಟರು [illegible] ... ಕೆಲಸ ನಡಿಸಿದ್ದರಿಂದಲೂ ಸಂತೋಷಾಂತರಂಗ [illegible] ಬಾಲಿಕೆಯರಿಗೆ ಸಂಪೂರ್ಣವಾಗಿ ವಿದ್ಯಾಭ್ಯಾಸ ಮಾಡಿಸ [illegible] ಅವರ ತಂದೆತಾಯಿಗಳಿಗೆ ಪ್ರೋತ್ಸಾಹ ಕೊಟ್ಟು, ಮಾಸ್ಟರು [illegible] ಯೋಗ್ಯತಾಪತ್ರಿಕೆಗಳನ್ನು ಬಹುಮಾನವನ್ನು ಸಭೆಯಲ್ಲಿ ಬ [illegible] ಕೊಡಿಸುವುದಲ್ಲದೆ ಬಾಲಿಕೆಯರಿಗೆ ಸ್ವಲ್ಪ ಇನಾಂ ಸಹ ಕೊಡಿಸಿದರು. ಹೀಗೆ ಮನೋದಾರ್ಢ್ಯ, ಔದಾರ್ಯ, ಪರೋಪಕಾರ [illegible] ... ಇಂತಹ ನೆರೆಯುತ್ತಿರುವುದು— ಈಗ್ಗೆ ಕೆಲವು ದಿನಗಳ ಹಿಂದೆ ಕೆಲವು ಮನೆಗಳು ಸುಟ್ಟು ಹೋದವು. ಅವುಗಳಲ್ಲಿ ೩ ವರುಷದ ಒಬ್ಬ ಬಾಲಿಕೆಯೂ ೩ ದನಗಳೂ ಸುಟ್ಟು ಹೋದುವಲ್ಲದೆ ತಮ್ಮ ಸಂಸಾರಕ್ಕಾಗಿ ಕೂಡಿಸಿ ಇಟ್ಟುಕೊಂಡಿದ್ದ ದವಸಗಳು ಸಹ ಸುಟ್ಟುಹೋದವು. ಅವರು ಇದರಿಂದ ಬಹಳ ಸಂಕಟಪಡುತ್ತಿರುವರು.—ಮೊನ್ನೆ ೨೩ ನೇ ಸೋಮವಾರ ಮಿ॥ ಡಿ. ಎಸ್. ಕೃಷ್ಣಸ್ವಾಮಯ್ಯಂಗಾರ್ರು ಮ್ಯಾಜಿಕ್ ಲ್ಯಾಂಟರ್ನ ಎಂಬ ಚಿತ್ರಪ್ರದರ್ಶನವನ್ನು ತೋರಿಸಿದರು. ಆಗ ಡೆಪ್ಯುಟಿ ಇನ್ಸ್ಪೆಕ್ಟರವರೂ, ಅಮಲ್ದಾರವರೂ, ಡಾಕ್ಟರವರೂ, ಆಗಾಗ ಬೇರಪ್ಪನವರೂ, ಸ್ಕೂಲ್ ಮಾಸ್ಟರುಗಳೂ ಇನ್ನೂ ಕೆಲವು ಮಹನೀಯರೂ ಬಾಲಕಬಾಲಿಕೆಯರೂ ಸಹ ಸೇರಿದ್ದರು. ಬಾಲಿಕೆಯರಿಗೆ ಪ್ರತ್ಯೇಕ ಸ್ಥಳವು ಏರ್ಪಡಿಸಲ್ಪಟ್ಟಿತ್ತು. ನೋಟವು ನೇತ್ರಾನಂದಕರವಾಗಿತ್ತು. ಪ್ರತಿಯೊಂದು ಚಿತ್ರದ ಸ್ವರೂಪ ಮತ್ತು ಅದರ ಪ್ರಯೋಜನಗಳನ್ನು ಕುರಿತು ಬಹಳ ಸಮರ್ಪಕವಾಗಿ ಉಪನ್ಯಾಸ ಮಾಡಿದರು. ಶ್ರೀಮನ್ಮಹಾರಾಜರವರ ಭಾವಚಿತ್ರಪ್ರದರ್ಶನ ಮಾಡಿದಾಗ ಸರ್ವರೂ ಬಹು ವಿಶ್ವಾಸ [illegible] ಜಯಧ್ವನಿಯನ್ನು ಮಾಡಿದರು. ಮಾರನೇ ಪ್ರಾತಃಕಾಲ ಡೆ॥ ಇನ್ಸ್ಪೆಕ್ಟರ್ ಸಾಹೇಬರು ಬಾಲಿಕಾ ಪಾಠಶಾಲೆಗಳನ್ನು ಪರೀಕ್ಷಿಸಿ ಮುಂದಿನ ಕರ್ತವ್ಯವನ್ನು ಸೂಚಿಸಿ ಸಂಗೀತ ಮೊದಲಾದ ಪಾಠಗಳಿಂದ ಸಂತುಷ್ಟರಾಗಿ ತೆರಳಿದರು. ಇಲ್ಲಿ ಉತ್ತಮರಾಗಿಯೂ ನಾಗರೀಕರಾಗಿಯೂ ಇರತಕ್ಕ ಜನಗಳು ತಮ್ಮ ಬಾಲಕರನ್ನು ವಿದ್ಯಾವಂತರನ್ನಾಗಿ ಮಾಡುವುದಲ್ಲದೆ ಬಾಲಿಕೆಯರನ್ನು ಸಹ ವಿದ್ಯಾಭ್ಯಾಸದ ಮೂಲಕ ಸನ್ಮಾರ್ಗವಂತೆಯರನ್ನಾಗಿ ಮಾಡಿ ಕೀರ್ತಿಯನ್ನು ಹೊಂದುವರು. ಆದರೆ ಇತರ ಕೆಲವು ಅನಾಗರೀಕರಾದ ಜನರು ವಿದ್ಯಾ ಫಲವನ್ನು ತಿಳಿಯದೆ ಹೆಣ್ಣು ಮಕ್ಕಳ ವಿದ್ಯಾಭ್ಯಾಸದಲ್ಲಿ ದುರಭಿಪ್ರಾಯಗಳನ್ನು ಇಟ್ಟುಕೊಂಡಿರುತ್ತಿದ್ದನ್ನು ನೋಡಿ ವ್ಯಸನಪಡಬೇಕಾಗಿದೆ.—ಈ ಊರಿನಲ್ಲಿ ಬೆಂಬಿಯೂ ಸಾರುಜಾಡ್ಯವೂ ಪ್ರಬಲವಾಗಿವೆ. ಪಾರ ನಾವು ನಿವಾಸಿಗಳಾದ ಸಮಗ್ರ ಸರ್ವರೂ ಭಗವಂತನನ್ನು ಕುರಿತು ಪ್ರಾರ್ಥಿಸಬೇಕಾಗಿ ಎಚ್ಚರಿಸುತ್ತೇನೆ.

ಪ್ರಕಟನೆಗಳು.

ಬೆಂಗಳೂರಲ್ಲಿ ಬಳ್ಳೀ ಸ್ಥಿರಾಸ್ತಿ ವಿಕ್ರಯ.

69—1

ಬೆಂಗಳೂರು ಚಾಮರಾಜೇಂದ್ರ ಪೇಟೆಯಲ್ಲಿ ಸಾಹುಕಾರ್ ಮೋತಿಖಾನ್ ತಿಮ್ಮಪ್ಪಯ್ಯನವರ ಅಗ್ರಹಾರದ ಪಶ್ಚಿಮಭಾಗವಾದ ಮನೆ ಕಟ್ಟುವ ನಿವೇಶನ ಮತ್ತು ಅದಕ್ಕೆ ಸೇರಿದ ಒಂದು ತೋಟ ಸಹಾ ಖರೀದಿಗೆ ಕೊಡಲ್ಪಡುತ್ತೆ. ಸದರಿ ಸ್ವತ್ತು ಪಶ್ಚಿಮ, ಉತ್ತರ ಮತ್ತು ದಕ್ಷಿಣಗಳಲ್ಲಿ ಹೈರೋಡನ್ನು ಮತ್ತು ಪೂರ್ವದಲ್ಲಿ ಕನಸರ್ವೇನ್ಸಿ ಗಲ್ಲಿ ಉಳ್ಳದ್ದಾಗಿದೆ. ಇದರಲ್ಲಿ ಮಾವು ಮತ್ತು ಇತರ ಫಲವೃಕ್ಷಗಳು ಚನ್ನಾಗಿ ಫಲಿಸುತ್ತಾ, ಸರ್ವೋತ್ಕೃಷ್ಟವಾಗಿರುವುದಲ್ಲದೆ ತೋಟದಲ್ಲಿ ಧ್ವಜಲವುಳ್ಳ ಸುಮಾರು ೮,೦೦೦ ರೂ. ಅಂದಾಜಾಗುವ ಕಲ್ಲು ಕಟ್ಟಡದ ಒಂದು ಭಾರೀ ಕೊಳವಿರುವುದು. ಮತ್ತು ಇದರ ಅಗಲ ಸುಮಾರು ಒಂದುನೂರು ಅಡಿ, ಉದ್ದ ಸುಮಾರು ಐದುನೂರು ಇಪ್ಪತ್ತು ಅಡಿ ಉಳ್ಳದ್ದಾಗಿ ಇರುತ್ತೆ. ಇಷ್ಟವುಳ್ಳವರು ಬಾಕಿ ವಿಚಾರವನ್ನು ಈ ಕೆಳಗೆ ರುಜು ಮಾಡಿರುವವರಿಂದ ತಿಳಿದುಕೊಳ್ಳಬಹುದು.

ವಿಳಾಸ:—ಮೋತಿಖಾನ್ ಸಾ॥ ತಿಮ್ಮಪ್ಪಯ್ಯನವರ
ಮೊಮ್ಮಕ್ಕಳು ಸಾ॥ ಎಂ. ಎ. ಆದಿರಾಜಯ್ಯ
ದೊಡ್ಡಪೇಟೆ ಮೈಸೂರು,

ಸ್ವತ್ತುಗಳ ಪರಾಧೀನ, ಸ್ವೀಕಾರ, ತಡೆ ನೋಟೀಸು.

[illegible]

ನಂಜನಗೂಡು ತಾ॥ ... [illegible] ... ವೆಂಕಟ್ಟಣ್ಣಯ್ಯನವರ ... [illegible] ... ಹುಡುಗರಿಂದ ... [illegible] ... ವೆಂಕಟರಾಮಯ್ಯ ಊರ್ಫ್ ... [illegible]

NOTICE.

64-3

The public are hereby informed that the amount of taxes due on their houses, shops, carriages, etc. for the year 1905-06, may be paid to the collection mutsaddies, on demand, by the end of the current official year *i.e.* commencing from 1st April to 30th June 1906, failing which coercive measures will be adopted to recover the amount in accordance with the provisions laid down in the Municipal Regulations.

City Municipal Office,
Mysore.
Dated ,5th April, 1906.

C. VENKATA RAO,
Vice President.

ಮ್ಯುನಿಸಿಪಲ್ ನೋಟೀಸು.

64-3

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನೆಂದರೆ—

೧೯೦೫—೦೬ನೆ ಇಸವಿ ವಿಶ್ವಾವಸು ಸಂವತ್ಸರದ ಮೊಹತರ್ಫಾ ಕಂದಾಯವನ್ನು ಅಂದರೆ ಮನೆ, ಅಂಗಡಿ, ಗಾಡಿ ವಗೈರೆಗಳ ಕಂದಾಯವನ್ನು ಏಪ್ರೆಲ್ ಶುರು ಮಾಡಿಕೊಂಡು ೧೯೦೬ನೆ ಜೂನ್ ೩೦ರ ಒಳಗೆ ಅಂದರೆ ಸಾಲ್ ಅಖೈರು ಒಳಗಾಗಿ ಬೇಡಾಕ್ ಕಲೆಕ್ಷನ್ ಮುತ್ಸದ್ದಿರಿಗೆ ಕೊಟ್ಟು ಫೈಸಲ್ ಮಾಡಬೇಕು. ಈ ರೀತಿ ಮಾಡದೆ ತಪ್ಪಿದರೆ ಮ್ಯುನಿಸಿಪಲ್ ರೆಗ್ಯುಲೇಷನ್ ಅನುಸರಿಸಿ ಮುಂದಲ ಕ್ರಮ ಜರುಗಿಸಿ ವಸೂಲ್ ಮಾಡಲ್ಪಡುತ್ತೆ.

ತಾರೀಖು ೫ ಏಪ್ರಿಲ್ ೧೯೦೬.

C. VENKATA RAO,
Vice President, City Municipality,
Mysore.

ಇಗೋ ನೋಡಿ, ಅಪರೂಪವಾದ ಹೊಸಪುಸ್ತಕ!

61 3

"ಶ್ರೀ ಚಾಮರಾಜೇಂದ್ರ ಒಡೆಯರವರ ಚರಿತ್ರೆ" ಎಂಬ ಈ ಪುಸ್ತಕವು ಕನ್ನಡವನ್ನು ಅಲಿಕಿತರಿಗೆ ಪ್ರತಿಯೊಬ್ಬ ಮನುಷ್ಯನೂ ಓದಲಿಕ್ಕೆ ಅರ್ಹವಾದ್ದಾಗಿದೆ. ಮೈಸೂರು ಸಂಸ್ಥಾನದ ಚರಿತ್ರೆಯೂ, ರಾಜವಂಶೀಯರ ಪೂರ್ವ ಚರಿತ್ರೆಯೂ, ಲೇಟ್ ಶ್ರೀ ಚಾಮರಾಜೇಂದ್ರ ಒಡೆಯರವರ ಅಂತರಂಗ ಬಹಿರಂಗ ಕಾರ್ಯಗಳೂ, ಅವರಿಗಿದ್ದ ಅಸಾಧಾರಣವಾದ ಪ್ರಜಾ ವಾತ್ಸಲ್ಯವೂ, ಅವರ ಕಾಲದಲ್ಲಿ ನಡೆದ ನಾನಾ ಉತ್ಸವಾದಿಗಳೂ ಬಹು [illegible] ದವಾಗುವಂತೆ ವಿವರಿಸಲ್ಪಟ್ಟಿವೆ. ಶ್ರೀಮನ್ಮಹಾರಾಜರವರೂ ಮಹಾ ಮಾತೃಶ್ರೀಯವರೂ ಈ ಪುಸ್ತಕವನ್ನು ನೋಡಿ ಬಹಳ ಸಂತೋಷಪಟ್ಟಿದ್ದಾರೆ. ಇದಲ್ಲದೆ ಮಹಾರಾಜರವರು ತಮ್ಮ ಮಿತ್ರರುಗಳಿಗೆ ಬರೆದ ಅನೇಕ ಕಾಗದ ಪತ್ರಗಳೂ, ವೈಸ್ರಾಯರುಗಳು ಮಹಾರಾಜರಿಗೆ ಬರೆದ ಸ್ನೇಹಪತ್ರಗಳೂ, ಮಹಾರಾಜರವರು ಮಾಡುತ್ತಿದ್ದ ಸ್ವಹಸ್ತ ಮುಂತಾದವುಗಳೆಲ್ಲಾ ಅಡಕವಾಗಿರುವವು. ಇದರಲ್ಲಿರತಕ್ಕ ಅಪೂರ್ವವಾದ ಚಿತ್ರಗಳು ಈ ಗ್ರಂಥದಲ್ಲಿ ನೇತ್ರಾನಂದಕರವಾಗಿ ಶೋಭಾಯಮಾನವಾಗಿವೆ. ಈ ಪುಸ್ತಕವು ವೈಸೂರು ಸಂಸ್ಥಾನದ ಪ್ರತಿಯೊಂದು ಮನೆಯಲ್ಲೂ ಇರಬೇಕಾದ್ದು. ಬಿಂದಾವನ [illegible] ಬಿಡಿಬಿಡಿ ಪ್ರತಿ ... ಉಪಯೋಗ ... ಪ್ರತಿ ... ಇನಾಮ ... ರೂ. ೧—೦—೦. ಅಂಚೆ ಸಾಗಣೆ ಸೇರಿ ವಿ. ಪಿ. ಪಿ. ಮೂಲಕ ೧—೯—೦.

ವಿಳಾಸ—ಎಂ. ಶಿಂಗ್ರಯ್ಯ, ಕೃಷ್ಣರಾಜಬೋಲ್ವಾರ್, ಮೈಸೂರು.

ತ್ವರೆಮಾಡಿರಿ! ಬಿಡಬೇಡಿರಿ!!

(ಇಂಥಾ ಸಮಯ ಮುಂದೆ ಸಿಗಲಿಕ್ಕಿಲ್ಲ.) (8-1)

ರಾಸ್ಕೋಪಿ ಸಿಲ್ವರ್ ಲಿವರ್ ವಾಚ್.

ಬಿಂಪೋಬಸ್ತ್. [illegible]



ಇದರ ಸಂಗಡ [illegible] ... ಸೇಫ್ಟಿ ಪಿನ್ನು ... [illegible] ... ಹಿಂದೆ ಕಾಪಿ ... ಪುಸ್ತಕ ... [illegible]

ಮುಕ್ಕಲಿಯುಕ್ತ. . . . . ೦—೯—
ವಾಡಿಕ ಕಡಗ. . . . . ೦—೬—
ವಿ. ಪಿ. ಅಂಚೆಯ ರವಾನೆ ಪ್ರತ್ಯೇಕ.

ವಿಳಾಸ:—ಜೆ. ಯಲ್. ಜೋಷಿ, ಅಂಡ್ ಕೋ,
ಪೋಸ್ಟ್ ಬಿಜಿ., ಜಿಲ್ಲಾ ಉತ್ತರ ಕಾನಡಾ.

ಇದನ್ನು ನೋಡಿದರೆ ನೀವು ಬಹು ಆಶ್ಚರ್ಯ ಪಡುವಿರಿ!!! 60-1

ನಮ್ಮ ಪ್ರಸಿದ್ಧವಾದ ಪುಸ್ತಕಭಂಡಾರದಲ್ಲಿ ಅನೇಕ ಸಹಸ್ರ ರೂಪಾಯಿನ ಕನ್ನಡ ಗ್ರಂಥಗಳೂ, ಪಾಠಪುಸ್ತಕಗಳೂ, ಪೇನಾ, ಪೇನ್ಸಿಲ್, ನೋಟ್‌ಬುಕ್, ನಾನಾ ವಿಧವಾದ ಹಾಸನದ ಟೋಪಿಗಳು, ವೃತ್ತಾಂತಪತ್ರಿಕೆ, ಮಾಸಿಕಾಸನ, ಕನ್ನಡ ಗ್ರಂಥ ಮಿತ್ರ, ಪ್ರಾಗ್ರಸ್, ಹಾರ್ವೆಸ್ಟ್ ಫೀಲ್ಡ್ ಮುಂತಾದ ಪ್ರಸಿದ್ಧವಾದ ವರ್ತಮಾನ ಪತ್ರಿಕೆಗಳೂ ಇಲ್ಲಿ ಅನೇಕ ಸಾವಿರಗಟ್ಟಲೆಯಾಗಿ ಮಾರಾಟವಾಗುತ್ತಿವೆ ಈ ವಿಧೊ ಕಟ್ಟಡವು ರಾಜಧಾನಿಯಲ್ಲಿ ಬಹು ಪ್ರಸಿದ್ಧವಾದ ಸ್ಥಳವೆಂದು ಮೈಸೂರು ದೇಶದಲ್ಲೆಲ್ಲಾ ಹೆಸರುಗೊಂಡಿದೆ ಈ ಕೆಳಗೆ ನಮೂದಿಸಿರುವ ಪುಸ್ತಕಗಳನ್ನು ಸ್ವಲ್ಪ ನೋಡಿ —

ಕಥಾಸಂಗ್ರಹ ೧ ರಿಂದ ೩ ಭಾಗಗಳು	ಕ್ರಯ	೧—೬—೦
	ವಿ. ಪಿ. ಪಿ. ಮೂಲಕ	೧—೩—೦
ಅನುಭವಸಾರ	ಕ್ರಯ	೦-೧-೨—೦
ಗ್ರೀಕರ ಚರಿತ್ರೆ	,,	೦—೨—೦
ರೋಮನರ ಚರಿತ್ರೆ	,,	೦—೨—೦

ಕನ್ನಡ—ಇಂಗ್ಲಿಷ—ಹಿಂದೂಸ್ಥಾನಿ ಭಾಷಾಮಂಜರಿ. ಈ ಪುಸ್ತಕದಿಂದ ಇಂಗ್ಲಿಷ್ ಮತ್ತು ಹಿಂದುಸ್ಥಾನಿ ಭಾಷೆಗಳನ್ನು ಬಹು ಸುಲಭವಾಗಿ ಕಲಿಯಬಹುದು ಇದರ ಕ್ರಯ ಎಂಟೇ ಆಣೆ.
ವಿ. ಪಿ. ಪಿ. ಮೂಲಕ ೦—೧೦—೦

ಶ್ರೀಚಾಮರಾಜೇಂದ್ರ ಒಡೆಯರವರ ಚರಿತ್ರೆ. ಉತ್ಕೃಷ್ಟವಾದ ಪುಸ್ತಕ. ಅನೇಕ ತಸ್ವೀರುಗಳು ಇವೆ. ಇದನ್ನು ಕುರಿತು ರಾಜಧರ್ಮಪ್ರವೀಣ ಮಿ॥ ರಾ॥ ತಂಬೂಚೆಟ್ಟಿರು ಒಂದು ಉತ್ಕೃಷ್ಟವಾದ ಅವತರಣಿಕೆಯನ್ನು ಬರೆದಿದಾರೆ. ಕ್ರಯ ೧—೮—೦
ವಿ. ಪಿ. ಪಿ. ಮೂಲಕ ೧—೧೦—೦

ಎಡ್ವರ್ಡ್ ಸಾರ್ವಭೌಮರ ಜೀವಚರಿತ್ರೆ	೦—೪—೦
ಕ್ರಿಮಿವರ್ಗವರ್ಣನೆ	೦—೧—೦
ಪಕ್ಷಿಗಳ ಚರಿತ್ರೆ	೦—೧—೦
ಪ್ರಾಚೀನ ಜೀವರಾಶಿಗಳ ವರ್ಣನೆ	೦—೧—೦
ಸಣ್ಣವರಿಗೆ ಹೇಳುವ ಕಥೆಗಳು	೦—೧—೦

ಬಾಲಿಕಾಗೀತಮುಕ್ತಾ ಕಲಾಪ, ಗೀತಮಂದಾರ ೦—೨—೦, **ಕಲ್ಯಾಣಗೀತಾವಳಿ** ೦—೫—೦, ಈ ಹಾಡಿನ ಪುಸ್ತಕಗಳು ನಮ್ಮಲ್ಲಿ ಯಾವಾಗಲೂ ದೊರೆಯುತ್ತವೆ

ಮುದ್ರಾಮಂಜೂಷ. ಈ ಪುಸ್ತಕದ ವಿವರವನ್ನು ನಾವು ಆಗಾಗ್ಗೆ ವೃತ್ತಾಂತ ಪತ್ರಿಕೆಯಲ್ಲಿ ಪ್ರಕಟಿಸಿರುವವನ್ನು ವಾಚಕರು ನೋಡಿರಬಹುದು. ಇದರ ಕ್ರಯ ೦—೮—೦

ಭೂಗೋಳಸಂಗ್ರಹ	೦—೪—೦
ಕ್ಷೇತ್ರಗಣಿತಸಂಗ್ರಹ	೦—೪—೦

ಹಿಂದೂದೇಶ ಪ್ರದಕ್ಷಿಣ. ಈ ಪುಸ್ತಕದ ವಿವರವನ್ನೆಲ್ಲಾ ನಾವು ಬಹು ದೀರ್ಘವಾಗಿ ಈ ಪತ್ರಿಕೆಯ ನಾಲ್ಕೈದು ಸಂಚಿಕೆಗಳಲ್ಲಿ ವಿವರಿಸಿರುತ್ತೇವೆ ಇದರ ಕ್ರಯ ೦—೮—೦. ವಿ. ಪಿ. ಪಿ. ಮೂಲಕ ೦—೧೦—೦

ವಸಂತಮಿತ್ರವಿಜಯನಾಟಕಂ. ಬಹು ರಸಿಕವಾಗಿದೆ. ೦-೮-೦

ಅರೇಬಿಯನ್ ನೈಟ್ಸ್ ಅಥವಾ ಯವನಯಾಮಿನೀ ವಿನೋದ ಕಥೆಗಳು —ಈ ಪುಸ್ತಕವು ಲೋಕಪ್ರಸಿದ್ಧವಾದುದೆಂದು ಎಲ್ಲರೂ ಒಪ್ಪಿಕೊಳ್ಳುತ್ತಾರೆ. ನಾನೂರು ಎಪ್ಪತ್ತು ಪುಟಗಳುಳ್ಳದ್ದು. ಭಾರಿ ಪುಸ್ತಕ. ಭಾಷೆಯು ಬಹು ಸರಳವಾಗಿದೆ ಪುಸ್ತಕವನ್ನು ಒಂದಾವರ್ತಿ ಓದಿದ ಮೇಲೆ ಅದನ್ನು ಪುನಃ ಪುನಃ ಓದುವಂತೆ ಅದು ಮನಸ್ಸನ್ನು ಆಕರ್ಷಿಸುವದು. ಇದರ ಕ್ರಯ ಎರಡೇ ರೂಪಾಯಿ. ವಿ. ಪಿ. ಪಿ. ಮೂಲಕ ೨—೩—೦. ಹತ್ತು ಅಥವಾ ಹದಿನೈದು ವರ್ಷಗಳ ಹಿಂದೆ ಇದರ ಕ್ರಯ ಎಂಟು ರೂಪಾಯಿ ಎಂದು ಅನೇಕರಿಗೆ ಗೊತ್ತು. ಇದನ್ನು ಬಡವರೂ, ಐಶ್ವರ್ಯವಂತರೂ ಓದುವಂತೆ ಪುನಃ ಛಾಪಿಸಿ ಇಷ್ಟು ದೊಡ್ಡ ಪುಸ್ತಕವನ್ನು ಇಷ್ಟು ಸುಲಭ ಕ್ರಯಕ್ಕೆ ಮಾರುತ್ತೇವೆ ಮನ್ನರಡು ಪುಸ್ತಕಗಳನ್ನು ಒಟ್ಟಿಗೆ ತರಿಸಿಕೊಂಡರೆ, ಪುಸ್ತಕಕ್ಕೆ ಎರಡು ಆಣೆಯಂತೆ ಕಮಿಷನ್ ಕೊಡುತ್ತೇವೆ ಜಾಗ್ರತೆ ನೋಡಿ

ಮುಖ್ಯವಾಗಿ, ಸ್ನೇಹಿತರೇ, ತಾವು ರಾಜಧಾನಿಗೆ ಬರುವಾಗಲೆಲ್ಲಾ ನಮ್ಮ ಪುಸ್ತಕಾಲಯವನ್ನು ನೋಡಿಯೇ ಹೋಗಬೇಕೆಂದು ಕೇಳಿಕೊಳ್ಳುತ್ತೇವೆ. ನಿಮಗೆ ಪುಸ್ತಕವಲ್ಲದೆ ಬೇರೆ ಯಾವದಾದರೂ ಪದಾರ್ಥಗಳಾಗಲಿ ಅಥವಾ ಸಂಗತಿಗಳಾಗಲೀ ಅಪೇಕ್ಷಿಸುವ ಸಂದರ್ಭದಲ್ಲಿ ನೀವು ನಮಗೆ ಒಂದು ಕಾರ್ಡು ಬರೆದರೆ ತಕ್ಷಣವೇ ಜವಾಬು ಕೊಡುವದಕ್ಕೆ ಪ್ರಯತ್ನಪಡುತ್ತೇವೆ

ನಮ್ಮ ವಿಳಾಸ — ಮ್ಯಾನೇಜರ್,
ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು.

P. SUBBROYA'S
World Renowned and most Efficacious Ayurvedic Medicines.

ಪಿ. ಸುಬ್ಬರಾಯರವರ ಲೋಕಪ್ರಸಿದ್ಧವಾದ ಮತ್ತು ಅತ್ಯಂತ ಗುಣಕಾರಿಯಾದ ಆಯುರ್ವೇದ ಔಷಧಗಳು.

11-21

೧. ಪುಷ್ಟಿರಸಾಯನ.—ಇದರ ಸೇವನೆಯಿಂದ ನರಗಳ ಸಂಬಂಧವಾದ ಮತ್ತು ಇತರ ವಿಧವಾದ ಎಲ್ಲಾ ಶರೀರದ ದುರ್ಬಲಗಳೂ ಹೋಗಿ, ಹೊಟ್ಟೆಯಲ್ಲಿ ಅಗ್ನಿ ಉಂಟಾಗಿ, ದೇಹವು ಪುಷ್ಟಿಗೊಂಡು ಇಡುವುದು. ಪುಷ್ಟಿಯನ್ನು ಕಳೆದುಕೊಂಡ ಚಿಕ್ಕ ವಯಸ್ಸಿನವರಿಗೆ ಇದು ಶ್ರೇಷ್ಠ ಔಷಧವು. ಇದರಿಂದ ಶರೀರದ ಪ್ರತಿ ಅವಯವದ ನೋವೂ, ಅಶಕ್ತಿಯೂ ಹೋಗಿ, ಪುಷ್ಟಿಯೂ, ಬಲವೂ ಉಂಟಾಗುವವು. ಪೆಟ್ಟಿಗೆ ೧ಕ್ಕೆ ರೂ. ೨ ವಿ. ಪಿ. ಛಾರ್ಜಿ ೩ ಆಣೆ.

೨. ಅಜೀರ್ಣ ಗುಳಿಗೆ.—ಅಜೀರ್ಣ, ತೇಗುವುದು, ಹೊಟ್ಟೆಯಲ್ಲಿ ಉರಿ, ಮತ್ತಾಗಿರುವಿಕೆ, ಹಸಿವಿಲ್ಲದಿರುವದು, ಪಿತ್ಥ, ಬಾಯಿಯ ದುರ್ಗಂಧ, ಹೊಟ್ಟೆಶೂಲೆ, ನಿದ್ದೆ ಹತ್ತದಿರುವಿಕೆ, ತಲೆತಿರುಗುವದು, ಇವೆಲ್ಲಾ ನಿರ್ಮೂಲವಾಗುವವು. ಪೆಟ್ಟಿಗೆ ೧ಕ್ಕೆ ೮ ಆಣೆ. ವಿ. ಪಿ. ೨ ಪೆಟ್ಟಿಗೆ ವರೆಗೆ ಛಾರ್ಜಿ ೫ ಆಣೆ.

೩. ಲಕ್ಷ್ಮೀಕರ ಕಸ್ತೂರಿಮಾತ್ರೆ—ಇದು ತಾಂಬೂಲಕ್ಕೆ ಪ್ರಾಣಮಿತ್ರನು. ಇದರಿಂದ ಬಾಯಿಯ ದುರ್ಗಂಧವು ಹೋಗುವದು, ಭೋಜನಾನಂತರ ತಾಂಬೂಲದ ಸಂಗಡ ೧—೨ ಮಾತ್ರೆಗಳನ್ನು ಸೇವಿಸಿದರೆ, ಇತರ ಸುವಾಸನಾದ್ರವ್ಯಗಳು ಅನಾವಶ್ಯಕವಾಗಿರುವುದಲ್ಲದೆ, ಅಲ್ಪಕಾಲದಲ್ಲಿ ಅತ್ಯಂತ ಕಠಿಣವಾದ ಆಹಾರವನ್ನು ಕೂಡ ಜೀರ್ಣಕ್ಕೆ ತರುವುವು. ಬೆಳಿಗ್ಗೆ ಊಟಕ್ಕೆ ಮುಂಚೆ ೨ ಮಾತ್ರೆಗಳನ್ನು ಕ್ರಮವಾಗಿ ಸೇವಿಸುತ್ತಿದ್ದರೆ ಅಜೀರ್ಣ, ಮಂದ, ಹಲ್ಲುನೋವು, ಹೊಟ್ಟೆಯ ಉರಿ, ಇವುಗಳು ವಾಸಿಯಾಗುವುವು. ಇದರಲ್ಲಿ ಅಕ್ಷೇಪಣೀಯವಾದ ಮತ್ತು ಪ್ರತಿಬಂಧಕವಾದ ಯಾವ ವಸ್ತುವೂ ಇಲ್ಲದ್ದರಿಂದಲೂ, ಇವರ ಜಯಾರಿಗೆ ಕಸ್ತೂರಿ ಸುವರ್ಣ ವರಕು ಮುಂತಾದ ಅಮೂಲ್ಯ ವಸ್ತುಗಳು ಸೇರಿರುವದರಿಂದಲೂ ಎಳೇ ಮಕ್ಕಳಿಂದ ಮುದುಕರವರಿಗೆ ಎಲ್ಲರೂ ತಾಂಬೂಲದೊಂದಿಗೆ ಅಥವಾ ಬರಿಬಾಯಲ್ಲಿ ಹಾಕಿಕೊಂಡು ಉಪಯೋಗಿಸಬಹುದು. ಕ್ರಮವಾಗಿ ಸೇವಿಸುವದರಿಂದ ದೇಹದಲ್ಲಿ ರೋಗಕ್ಕೆ ಅಸ್ಪದ ಕೊಡದೆ ಸಹ ನೋಡಿಕೊಳ್ಳುವದು. ಜ್ವರ, ಕೆಮ್ಮು, ಕೆಸ್ತುಲು ಮುಂತಾದವುಗಳಿಗೆ ಸಣ್ಣ ಮಕ್ಕಳಿಂದ ದೊಡ್ಡವರಿಗೆ ೧ ರಿಂದ ೪ ಮಾತ್ರೆಗಳಂತೆ ಕೊಟ್ಟರೆ ಗುಣ ಕಾಣುವದು. ಸುಮಾರು ೨೦೦ ಮಾತ್ರೆ ಉಳ್ಳ ಸೀಸೆ ೧ಕ್ಕೆ ೪ ಆಣೆ ೧ ರಿಂದ ೧೨ ಸೀಸೆಗೆ ವಿ. ಪಿ. ಛಾಂಗಿ ಛಾರ್ಜಿ ೫ ಆಣೆ.

೪ ವೇದನಾಪರಿಹಾರಕ ತೈಲವು—ಇದನ್ನು ಮೇಲ್ಭಾಗದಲ್ಲಿ ಮಾಲೀಸು ಹಚ್ಚುವದರಿಂದ ಕೈಕಾಲು ಹಿಡಿದುಕೊಳ್ಳುವದು, ವಾತರೋಗ, ಪಾರ್ಶ್ವವಾಯು, ನರಗಳ ಸೆಳೆತ, ಮೊಣಕಾಲು ಸೊಂಟ ಮತ್ತು ಎದೆ ಇವುಗಳ ನೋವು, ತೋಳು ಮುಂತಾದ ಅಂಗಗಳ ಕೀಲಿನ ನೋವು. ತಲೆಶೂಲೆ, ಹಲ್ಲುನೋವು, ಕಿವಿನೋವು, ಚಳಿ, ಕೆಮ್ಮು ಮುಂತಾದ ಎಲ್ಲಾ ವಿಧವಾದ ನೋವುಗಳೂ ಖಂಡಿತವಾಗಿ ವಾಸಿಯಾಗುವವು. ಸೀಸೆ ೧ಕ್ಕೆ ೧ ರೂ. ೩ ಬಾಟ್ಲಿ ವರೆಗೆ ವಿ. ಪಿ. ಛಾಂಗಿ ಛಾರ್ಜಿ ೫ ಆಣೆ.

೫. ಲೋಕಪ್ರಸಿದ್ಧವಾದ ಪರಿಮಳ ಕೇಶತೈಲವು.—ಬೋಳುತಲೆ, ಹುಂಡು ಅಥವಾ ಹೊಟ್ಟು ಉದುರುವಿಕೆ, ಇವು ಸಂಪೂರ್ಣವಾಗಿ ವಾಸಿಯಾಗುವವಲ್ಲದೆ, ತಲೆಯನ್ನೂ ಮೆದುಳನ್ನೂ ತಣ್ಣಗಿರುವಂತೆ ಮಾಡಿ, ತಲೆ, ಮೀಸೆ, ಹುಬ್ಬುಕೂದಲುಗಳನ್ನು ಹೇರಳವಾಗಿ ಬೆಳೆಸುವದು ಮತ್ತು ಕಣ್ಣು ಮಿದುಳು ಸಂಬಂಧವಾದ ರೋಗಗಳನ್ನೆಲ್ಲಾ ವಾಸಿಮಾಡುವದು. ಬಹಳ ಮನೋರಂಜಕವಾಗಿ ಪರಿಮಳಿಸುವದು ಬೆಲೆ ಸೀಸೆ ೧ಕ್ಕೆ ೮ ಆಣೆ. ೨ ಸೀಸೆ ವರೆಗೆ ವಿ. ಪಿ. ಛಾರ್ಜಿ ೫ ಆಣೆ.

೬. ನೇತ್ರಬಿಂದು.—ಸಮೀಪದೃಷ್ಟಿ, ಕಣ್ಣಿನಲ್ಲಿ ನೀರು ಸುರಿಯುವುದು, ಕಣ್ಣಿನೋವು, ಹೂವು ಬರುವುದು, ಉರಿ ಮುಂತಾದ ನೇತ್ರರೋಗಗಳು ಇದರಿಂದ ಗುಣವಾಗುವವು. ಸೀಸೆ ೧ಕ್ಕೆ ೮ ಆಣೆ. ವಿ. ಪಿ. ಛಾರ್ಜಿ ೬ ಸೀಸೆ ವರೆಗೂ ೫ ಆಣೆ

೭. ಕರ್ಣಬಿಂದು —ಕಿವಿಯು ಎಷ್ಟು ಜೋರಾಗಿ ನೋಯುತ್ತಿದ್ದರೂ ಅದನ್ನೂ ಕೀವು ಸುರಿಯುತ್ತಿರುವುದು, ಕಿವಿಯ ಮಾಂದ್ಯವು, ಕಿವುಡು ಮುಂತಾದ್ದನ್ನೂ ಜಾಗ್ರತೆ ಪರಿಹರಿಸುವುದು, ಬೆಲೆ ಸೀಸೆ ೧ಕ್ಕೆ ೮ ಆಣೆ ವಿ. ಪಿ. ಛಾರ್ಜಿ ೬ ಸೀಸೆ ವರೆಗೂ ೫ ಆಣೆ.

೮. ಪಾಳಕಜ್ಜಿಗೆ ಔಷಧಿ.—ಚರ್ಮರೋಗಕ್ಕೂ, ಚರ್ಮಗತವಾದ ಎಲ್ಲಾ ವ್ಯಾಧಿಗಳಿಗೂ ಅತ್ಯುತ್ತಮವಾದ ಮದ್ದು. ಒಂದು ಸಾರಿ ವಾಸಿಯಾದ ಮೇಲೆ ಪುನಃ ತಲೆದೋರುವದಿಲ್ಲ. ಸೀಸೆ ೧ಕ್ಕೆ ೪ ಆಣೆ ವಿ. ಪಿ. ಛಾರ್ಜಿ ೬ ಸೀಸೆ ವರೆಗೂ ೫ ಆಣೆ.

೯ ಸುಖಭೇದಿ.—ಹೊಟ್ಟೆನೋವು, ಆಯಾಸ ಯಾವದೂ ಸ್ವಲ್ಪವೂ ಉಂಟಾಗದಂತೆ ಸುಖವಾಗಿ ಭೇದಿಯಾಗುವದು. ಮಲಬಂಧ, ಅಜೀರ್ಣ, ವಾಯು, ಎದೆಯುರಿಯುವಿಕೆ, ಪಿತ್ಥ, ಜ್ವರ, ಇವುಗಳನ್ನು ವಾಸಿಮಾಡುವುದು. ಸೀಸೆ ೧ಕ್ಕೆ ೮ ಆಣೆ. ವಿ. ಪಿ. ಛಾರ್ಜಿ ೬ ಸೀಸೆ ವರೆಗೂ ೫ ಆಣೆ.

ಕಾಗದವನ್ನು ಇಂಗ್ಲಿಷ್ ಅಥವಾ ತಮಿಳಿನಲ್ಲಿ ಬರೆಯಿರಿ.

Apply to:—P. SUBBAROY,
Porto Novo, South Arcot.

ವಿಳಾಸ:—ಪಿ. ಸುಬ್ಬರಾಯ್,
ಪೋರ್ಟೊನೋವೋ, ದಕ್ಷಿಣ ಅರ್ಕಾಟ್ ಜಿಲ್ಲಾ

ಮೈಸೂರು ಸೀಮೆಯಲ್ಲಿ ಪ್ಲೇಗಿನ ಸ್ಥಿತಿ.

೯—೪—1906 ರಿಂದ 13—4—[illegible]

ಸ್ಥಳ.	ಹಿಂದೆ ಉಳಿದದ್ದು	[illegible]	[illegible]	
ಬೆಂಗಳೂರು ಪಟ್ಟಣ	7	7	8	
ಮೈಸೂರು ,,	0	0	1	
ಬೆಂಗಳೂರು ಡಿಸ್ಟ್ರಿಕ್ಟು	0	0	13	
ಮೈಸೂರು ,,	0	0	9	
ಕೋಲಾರ್ ,,	5	0	11	
ಕೋಲಾರ್ ಚಿನ್ನದ ಗಣಿಗಳು	1	1	4	
ತುಂಕೂರು ಡಿಸ್ಟ್ರಿಕ್ಟು	0	0	7	
ಹಾಸನ (ಮೊರಗಿನದು)	0	0	0	
ಚಿತ್ರದುರ್ಗ ,,	0	0	2	
ಕಡೂರ್ ,,	0	0	0	
ಶಿವಮೊಗ್ಗ ,,	0	0	6	
ಜುಮ್ಲಾ	13	8	71	4

ಶಾಲಿವಾಹನ ಶಕ ವರುಷಂಗಳು ೧೮೨೮ ನೇ ಪರಾಭವ ಸಂವತ್ಸರದ ವೈಶಾಖ ಶುದ್ಧ ಆದಿಗೆ ಗುರುವಾರದಿಂದ ವೈಶಾಖ ಶುದ್ಧ ನವಮಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ

೧೯೦೬ ನೇ ಇಸವಿ ಏಪ್ರಿಲ್ ಮತ್ತು ಮೇ.

ತಾ.	ವಾರ.	ತಿಥಿ.	ಘಳಿಗೆ.	ನಕ್ಷತ್ರ.	ಘಳಿಗೆ.	[illegible]
26	ಗುರು *	ಏಟಗೆ	50 2	ಕೃ	3 50	[illegible]
27	ಶುಕ್ರ	ಚೌತಿ	51-33	ರೋ	10-2	[illegible]
28	ಶನಿವಾ ‡	ಪಂಚಮಿ	58-18	ಮೃ	15-6	16
29	ರವಿವಾ	ಷಷ್ಟಿ	60 0	ಆ	20-16	17
30	ಚಂದ್ರ	ಸಪ್ತಮಿ	1-20	ಪು	24-25	18
1	ಕುಜ	ಅಷ್ಟಮಿ	2-39	ಪು	26 50	19
2	ಬುಧ ,,	ನವಮಿ	2-46	ಶ್ಲೆ	28-7	20

* ಅಕ್ಷಯತೃತೀಯ, ಬಲರಾಮಜಯಂತಿ
‡ ಶಂಕರಭಗವತ್ಪಾದರಿಗೆ ಆಶ್ರಮಕೊಟ್ಟ ದಿನ
,, ಮಹಾನ್ಯಕ, ಸೌಂಶ್ರಿರಾಮನವಮಿ

ಪೇಟೆಯ ಧಾರಣೆ.

ದಿನಸಿ		ಮೈಸೂರು.	ಬೆಂಗಳೂರು
ಕಡ್ಡೀ ಅಕ್ಕಿ ಪಲ್ಲಾ ೧ಕ್ಕೆ	ರೂ.	೧೨-೪-೦	೧೩-೭
ಕೆಂಬೂತಿ ಅಕ್ಕಿ ಅವಲ್	..	೧೨-೮-೦	೧೩-೮
,, ದುಯಂ	..	೯-೨-೦-೦	೧೩-೦
ಜಾಪಾನು ಅಕ್ಕಿ	..	೧-೨-೦-೦	೯-೨-೧೦
ಸಣ್ಣಕ್ಕಿ ಅವಲ್	..	೧೪-೦-೦	೧೫-೦
,, ದುಯಂ	..	೧೩-೮-೦	೧೪-೮
ತೊಗರೀ ಬೇಳೆ ಪಲ್ಲಾ ೧ಕ್ಕೆ	..	೧೦-೦-೦	೧೦-೦
,, ದುಯಂ	..	೯-೧೨-೦	೯-೮
ಹೈಗ್ ರಾಗಿ ಪಲ್ಲಾ ೧ಕ್ಕೆ	..	೬-೧೪-೦	೬-೦
ಕಾದ್ರಾಗಿ	..	೬-೮-೦	೫-೧೦
ಜೋಳ	..	೭-೪-೦	೮-೪
ಹಲಸಂದೆ ಪಲ್ಲಾ ೧ಕ್ಕೆ	..	೯-೦-೦	೧೦-೦
ಬಿಳೀ ಅವರೆ	..	೭-೧೦-೦	೮-೮
ಹೆಸರು	..	೧೦-೦-೦	೧೧-೪
ಉದ್ದು	..	೧೨-೪-೦	೧೨-೦
ಕಡಲೆ	..	೧೦-೪-೦	೧೨-೦
ಎಳ್ಳು ಸೆ. ೧೨೭ ಕ್ಕೆ	..	೧೯-೮-೦	೧೯-೦
ಹುರಳಿ	..	೭-೯-೦	೮-೦
ಹರಳು ೧೨೭ ಸೇರಿಗೆ	..	೧೨-೯-೦	೧೨-೪
ಸೀಗೆಕಾಯಿ ಮಣ ೧ಕ್ಕೆ	..	೩-೨-೦	೩-೧೦
ಮೆಣಸಿನಕಾಯಿ	..	೪-೦-೦	೩-೪
,, ದುಯಂ	..	೩-೪-೦	೩-೦
ಬೆಲ್ಲ ದೊಡ್ಡ ಅಚ್ಚು	..	೪-೧೨-೦	ಮು ೦-೮
ಒಳ್ಳೆಣ್ಣೆ ಮಣ ೧ಕ್ಕೆ	..	೫-೬-೦	೪-೧೪
ಹರಳೆಣ್ಣೆ ,,	..	೪-೧೨-೦	೪-೮
ಕೊತ್ತುಂಬರಿ ಪಲ್ಲಾ ೧ಕ್ಕೆ	..	೧೧-೯-೦	೧೦-೦
ಉಪ್ಪು ,,	..	—೮-೬	೬-೧೨
ಮೆಣಸೇ ಹಣ್ಣು	..	೦-೧೨-೦	೦-೧೦
,, ಹಳೇದು	..	೦-೮-೦	೦-೯
ತುಪ್ಪ	..	೧೪-೦-೦	೧೨ ೦
ಸೀಮೆಯೆಣ್ಣೆ ಪೆಟ್ಟಿಗೆ ೧ಕ್ಕೆ	..	೫-೪-೦	೪-೦
ತೆಂಗಿನಕಾಯಿ ೧೦೦ ಕ್ಕೆ	..	೫-೬-೦	೪-೮
ಅಳಲೇಕಾಯಿ ೭೭ ಕ್ಕೆ	..	೦-೯-೦	೦-೯
ಅಂಟ್ವಾಳದ ಕಾಯಿ ಮಣ ೧ಕ್ಕೆ	..	೦-೧೨-೦	೦-೧೨
ಚಿನ (ಬೌರ್) ಕೆಂಪು	..	೧೫-೪-೦	೧೫-೪
,, ,, ಹಸಿವು	..	೧೫-೧೦ ೦	೧೫-೧೦
,, ,, ಗಟ್ಟಿ ತೊಲ ೧ಕ್ಕೆ	..	೨೩-೦-೦	೨೪-೪
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ	..	೭೨-೦-೦	೮೧-೦

Printed and Published by the Rev. E. W. Thompson, M.A., the Proprietor and Manager, Wesleyan Mission Press, Mysore. 26/4/1906.

ವೃತ್ತಾಂತ ಪತ್ರಿಕೆ.

REGISTRED N. 20

ಕ್ರಯ ೧ ದುಡ್ಡು — ಕ್ರಯ ೧ ದುಡ್ಡು

ಪ್ರತಿ ಗುರುವಾರ ಪ್ರಾತ:ಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಸಂಚಿಕೆ ೧೯ | ಮೈಸೂರು—ಸೆ: ೧೯೦೩ ನೇ ಇಸವಿ ಮೇ ತಾರೀಖು ೭ ನೇ ಗುರುವಾರ. | ಸಂಚಿಕೆ ೩೮

೫,೦೦೦ ಪವ್ರ್ ಫ್ಲರ್ ದಾರ ಮಾತ್ರ ಇದೆ.

40·11

೧ ಚೀಟಿಯುಳ್ಳ ಪ್ಲರ್ ಪವ್ರ್ ೧ ಕ್ಕೆ ೧—೧೦—೦
೨ ಹರ್ಸ ಸೂತ್ರದ „ „ „ ೧—೧೪—೦
೩ ಸುಪೀರಿಯರ್ „ „ „ ೨—೦—೦
೪ ಸೊಮರಸಟ್ „ „ „ ೩—೪—೦
ಫ್ಲರ್ ಟೋಪಿ ಡಜನ್ ೧ ಕ್ಕೆ ೭—೦—೦. ಒಂದೇ ದಫಾ ೧೦ ತರಿಸಿಕೊಳ್ಳುವವರಿಗೆ ೬—೧೨—೦
ಹೊಸ ನಮೂನ ದೊಡ್ಡ ಸ್ಪೈಟು ಪೋಸ್ಟು ಕಾರ್ಡುಗಳು.
೧ ಸಿಂಗಲ್ ಕಲರ್ ೧೦೦ ಕ್ಕೆ ೦-೨-೩. ೧೦೦೦. ೧-೪-೦
೨ ಡಬಲ್ ಕಲರ್ ೧೦೦ ಕ್ಕೆ ೦-೩-೦. ೧೦೦೦. ೧-೧೦-೦
ವಿ. ಪಿ. ಮೂಲಕ ತರಿಸಿಕೊಳ್ಳುವವರು ಮಾತ್ರ ೧೦೦ ಕ್ಕೆ ೨೫ ಮುಂಚಿತವಾಗಿ ಕಳುಹಿಸದ ಹೊರತು ವಿ. ಪಿ. ಮೂಲಕ ಕಳಿಸುವದಿಲ್ಲವು.
ಎಲ್, ಜೆ. ಪೊರವಾಲ್ ಕಂಪನಿ, ಬೆಂಗಳೂರು ಸಿಟಿ.

ಕೊಡಗು ದೇಶದ ಸ್ವಚ್ಛವಾದ ಉತ್ಕೃಷ್ಟ ಕಾಫಿಯು.

ಹುರಿಯದೆ ಇರುವದು ಅಥವಾ ಆಗತಾನೆ ಹುರಿದದ್ದು.
ಸವರಮೂಡಿದ ಸ್ಥಳದಿಂದಲೆ ನೆಟ್ಟಗೆ ರವಾನಿಸಲ್ಪಡುವದು.

35 12

ವ್ಯಾಪಾರದ ಹೆಗ್ಗುರ್ತು

ಕಾಡುಕೋಣದ ತಲೆಯ ಮುದ್ರೆ ಇದೆ.

ಸಂಪೂರ್ಣವಾಗಿ ಯಂತ್ರದಿಂದಲೆ ಸಿದ್ಧಪಡಿಸಿದ್ದು. ಹೆಗ್ಗುರ್ತು ಇಲ್ಲ ವಿಲಾಸದ ಚೀಟಿ ಸುತ್ತಿಲ್ಲದಿರುವವು ಸ್ವಚ್ಛವಾದವುಗಳಲ್ಲ. ಅವು ನಮ್ಮದಲ್ಲ, ಏಜಂಟರುಗಳು ಬೇಕು. ಇಂಥವರಿಗೆ ಅಲಾಯಿದ ದರ. ಬರೆಯುವವರು ದಯವಿಟ್ಟು ಈ ಪತ್ರಿಕೆಯ ಹೆಸರನ್ನು ಸೂಚಿಸಿ.

ವಿಳಾಸ.—ಮ್ಯಾನೇಜರ್, ಮ್ಯಾಥಿಸನ್ಸ್ ಕಾಫಿ ವರ್ಕ್ಸ್, ಹುಣಸೂರು.

"ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ.

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜಂಟರು ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ
(ಅಡ್ವಾನ್ಸು) .. .. .. ರೂ. ೧—೪—೦
ಪೋಸ್ಟು ಕಡವರು ಆಫೀಸಿನಿಂದ ಅಂಚೆಯ ಮೇಲೆ ತರಿಸಿಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಪಾಸಲ್ ಸೇರಿ .. .. ರೂ. ೧—೧೪—೦
„ „ ೬ „ „ ೦—೧೫—೦
ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು.
ನಮ್ಮ ವಿಳಾಸ:—ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು.

ಹೋಮಿಯೋಸಿಯಾ.

ತಗಲುತ್ತಲೇ ನೋವು ವಾಸಿಯಾಗುತ್ತೆ.

ಈ ಔಷಧಿಯು ಮನೆ, ಅರಮನೆ, ಕಾರ್ಖಾನೆ, ಆಸ್ಪತ್ರೆ, ಜೈಲ್ ಖಾನೆ, ವಿದ್ಯಾಶಾಲೆ, ಕೋರ್ಟು, ಕಛೇರಿ, ಮುಂತಾದ ಸ್ಥಳಗಳಲ್ಲಿ ಇದ್ದೇ ಇರಬೇಕು. ಇದಕ್ಕೆ ಸಮಾನವಾದ ಔಷಧ ಮತ್ತಾವದೂ ಇಲ್ಲವೆಂಬುವದು ಲೋಕಪ್ರಸಿದ್ಧವಾಗಿದೆ.

ಈ ತೈಲವು ತತ್ಕಾಲದಲ್ಲಿ ಜೀವರಾಶಿಗಳಿಗೆ ಮಹತ್ತಾಗಿ ಸಿಕ್ಕ ಔಷಧ. ಇದನ್ನು ಉಪಯೋಗಿಸಿದ ದೊಡ್ಡ ಮನುಷ್ಯರು, ಡಾಕ್ಟರು, ಮುಂತಾದವರು ಅದರ ಗುಣವನ್ನು ಹೊಗಳಿ ಸರ್ಟಿಫಿಕೇಟುಗಳನ್ನು ಕೊಟ್ಟಿದ್ದಾರೆ. ನೋವು ಕಂಡರೆ ಇದನ್ನು ಹಚ್ಚಿದ ಕೂಡಲೇ ವಾಸಿಯಾಗುವದು.

ಈ ತೈಲವು ಅರೆ ತಲೆನೋವು, ಸೊಂಟನೋವು, ಪಾರ್ಶ್ವವಾಯು, ಮೂಲವ್ಯಾಧಿ, ಉಬ್ಬಸ, ವಾಯುಗಳು, ನರ ತೊಡಳುವದು, ಕೀಲುವಾಯು, ಗುಳ್ಳೆಗಳು, ಹಲ್ಲುನೋವು, ಮುಖ ..., ಊತಗಳು, ಗಡ್ಡೆಗಳು, ವ್ರಣಗಳು, ಸುಳುಕು, ಸೊಳ್ಳೆ ..., ಚೇಳು ಕಚ್ಚಿದ್ದು, ಚಿಪ್ಪಿರುವದು, ಬೆಂಕಿಯಲ್ಲಿ ಸುಟ್ಟದ್ದು, ಕತ್ತಿ ಗಾಯ—ಇವೇ ಮೊದಲಾದ ನಾನಾ ಬಾಧೆಗಳನ್ನು ನೀಗಿಸುತ್ತದೆ. ರಾತ್ರಿ ಹಚ್ಚಿಕೊಂಡು ಮಲಗಿದರೆ ಸೊಳ್ಳೆ ಹತ್ತಿರ ಬರುವದಿಲ್ಲ.

ಕ್ರಯ:—ಸಣ್ಣ ಡಬ್ಬಿ ೧ ಕ್ಕೆ ೧ ರೂ., ದೊಡ್ಡದಕ್ಕೆ ರೂ. ೨—೮, ಒಂದೇ ಸಲ ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಬಿಡುತ್ತಾರೆ. ರೂ. ೨—೮ ಆಣೆ ಬಾಬ್ತು ಡಬ್ಬಿಯಲ್ಲಿ ೧ ಡಬ್ಬಿಯಲ್ಲಿರುವದಕ್ಕಿಂತ ೪ ರಷ್ಟು ಹೆಚ್ಚು ಔಷಧವಿರುತ್ತೆ. ೨—೮ ಆಣೆ ಡಬ್ಬಿಯನ್ನು ತರಿಸಿಕೊಳ್ಳುವವರಿಗೆ ಟಪ್ಪಾಲ್ ಮಾಫಿ ಬಿಡುತ್ತೆ.

****

ಹೋಮಿಯೋಸಿಯಾ ಯಂಬ್ರೋಕೇಷನ್.

ಈ ತೈಲವು ಹಳೇ ನೋವುಗಳಿಗೆ ಉಪಯೋಗಿಸತಕ್ಕದ್ದು. ಒಂದು ಸಲ ಇದನ್ನು ಹಚ್ಚಿದರೆ ... ಗುಣ ಬಹು ಶೀಘ್ರವಾಗಿ ಇರುತ್ತದೆ. ಅದಕ್ಕಿಂತಲೂ ... ಇಷ್ಟರಷ್ಟು ಗುಣಗಳಲ್ಲಿ ಹೊಸ ಭಾಗವಿರುತ್ತದೆ. ಇದನ್ನು ಬಹು ಬೇಗನೆ ಸವಿಕೊಳ್ಳಬಲ್ಲದು. ಡಬ್ಬಿಗಳಲ್ಲಿ ತುಂಬಿ ... ೧ ರೂ. ... ಬಿಕರಿ ಮಾಡಲ್ಪಡುವದು. ೧೨ ... ಕೊಂಡರೆ ಟಪ್ಪಾಲ್ ಖರ್ಚು ಮಾಫ ಎಲ್ಲಾ ಪಾರ್ಸಲ್ ... ದೊರೆಯುವದು.

ಈ ಔಷಧಗಳ ವಿವರಪತ್ರವೂ, ಸರ್ಟಿಫಿಕೇಟುಗಳೂ ಬೇಕಾದವರಿಗೆ ಉಚಿತವಾಗಿ ಕಳುಹಿಸುತ್ತೇವೆ.

ವಿಳಾಸ.—ಹೋಮಿಯೋಸಿಯಾ ಕಂಪೆನಿ, ೨೩ ... ಬೀದಿ ಮದರಾಸ್.

ಜ್ವರಹರಿ. 29·13



ಇದು ಸಾಧಾರಣ ಜ್ವರ, ಹಳೇಜ್ವರ, ಮರೇಜ್ವರ, ಪಿತ್ಥಜ್ವರ, ಶೀತಜ್ವರ, ವಾತಜ್ವರ, ಚಳಿ ಜ್ವರಿಯುವದು, ಎಂಬ ಸಕಲವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮರಾಮತ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್ ಟಿ. ವೆಂಕಟಪತಿ ಅಯ್ಯರವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨೦ ಔನ್ಸಿನ ಸೀಸೆಯು ತೀರಿಹೋಯಿತು. ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣ ಹೊಂದಿರುವರು. ಇನ್ನೂ ಜನಗಳು ಕಾಹಿಲೆ ಬೀಳುತ್ತಿರುವದರಿಂದ ದಯವಿಟ್ಟು ಇನ್ನೊಂದು ೨೦ ಔನ್ಸಿನ ಸೀಸೆಯನ್ನು ವಿ. ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದ್ದಾರೆ.

ಕ್ರಯ:—ಸೀಸೆ ೧ ಕ್ಕೆ ೮ ಆಣೆ. ೧ ರೂ., ೧—೮ ರೂ., ರೂ. ೨—೧೨ ಆ., ೧೧ ರೂ., ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು.

****

ಪಿ ಮಂ ಕ ಪೂರ್ರ.



ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆಕಳೆಯುವದು, ಶಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಪರಿಹಾರವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು. ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಯೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ. ಕ್ರಯದ ದರವು ಜ್ವರಹರಿ ಎಂಬ ಔಷಧದಂತೆಯೇ. ಸೀಸೆಗಳಲ್ಲಿ ದೊರಕುವದು.

ಆರ್ಕಾಟಿನ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಕೆಲ್ಲಿಯವು ... ಕರ್ಪೂರವನ್ನು ... ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ಜನಗಳಿಗೆ ಕಾಲರಾ, ಅಜೀರ್ಣ ... ಅಜೀರ್ಣ ರೋಗಿಷ್ಟರಿಗೆ ಕೊಡುತ್ತೇವೆ. ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ. ಇದು ಬಹು ಒಳ್ಳೇ ಔಷಧ ... ಬರೆದಿದ್ದಾರೆ.

ಈ ನಾಲ್ಕು ಔಷಧಗಳೂ ಊರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಅಂಗಡಿಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇದಲ್ಲದೆ ಕೆಳಗಿನ ವಿಳಾಸದಾರರಲ್ಲಿ ವಿಶೇಷ.—

ಕೆಮ್ಮಿಯುವರ ಗ್ರೇಟ್ ಇಂಡಿಯನ್ ಔಷಧಗಳ ಕಂಪೆನಿ, ಕಸಿಂದ್ ಬೀಚ್ ಲೈನ್, ಮದ್ರಾಸ್.

ಅದ್ಭುತ ಹವಾ ಪ್ರಜೆಂಟೇಷನ್ ವಾಚು!

ಈ ... ಕೋಲ್ಡ್ ... ಸಿಲ್ವರ್ ... ವಾಚು ... ಕಂಪೆನಿಯ ... ಗ್ಯಾರಂಟಿ. ಕ್ರಯ ರೂ. ... ೧೦೦೦ ... ಕ್ರಯ, ೦—೫—೦. ... ಕ್ರಯ, ೦—೧೦—೦. ... ಕ್ರಯ, ೧—೪—೦. ... ಕ್ರಯ, ೦—೧೦—೦.

ವಿಳಾಸ,—ಸ್ಟಾರ್ ವಾಚ್ ಕಂಪೆನಿ, ಜಾರ್ಜ್ ಟೌನ್ ಮದರಾಸ್.

ಮೈಸೂರು ಸಿಟಿ ಮ್ಯುನಿಸಿಪಾಲಿಟಿ.

67 2

ನೋಟೀಸ್.

ತಾರೀಖು ೨೩ ನೇ ಮಾಹೆ ಏಪ್ರಿಲ್ ೧೯೦೩.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನೆಂದರೆ:—

ಮೈಸೂರು ಸಿಟಿ ಚಾಮರಾಜ ಮೊಹಲ್ಲಾಕ್ಕೆ ಸೇರಿದ ಹೊಸ ಹೊಲಗೇರಿ, ಮಂಡಿ ಮೊಹಲ್ಲಾಕ್ಕೆ ಸೇರಿದ ... ಗಾ ಬಡಾವಣೆ, ಇವುಗಳಲ್ಲಿ ಕಟ್ಟಲ್ಪಟ್ಟಿರುವ ಕಟ್ಟಡ ... ಮನೆಗಳು, ಇಡಲ್ಪಟ್ಟಿರುವ ಅಂಗಡಿಗಳು, ಇವುಗಳಿಗೆ ಧಾಖಲಾಗಿರುವ ಕಂದಾಯ ವಗೈರೆ ತಪಶೀಲು ತೋರಿಸುವ ಅಸೆಸ್ಮೆಂಟ್ ಬುಕ್ಕುಗಳು ಪೂರೈಸಲ್ಪಟ್ಟು ರಂಗಾಚಾರ್ಲು ಯವರ ಮೆಮೋರಿಯಲ್ ಹಾಲಿನಲ್ಲಿರುವ ಮ್ಯುನಿಸಿಪಲ್ ಆಫೀಸಿನಲ್ಲಿ ಕಲೆಕ್ಷನ್ ಬ್ರಾಂಚಿನಲ್ಲಿ ಇಡಲ್ಪಟ್ಟಿರುತ್ತವೆ. ಈ ಸ್ವತ್ತುಗಳಿಗೆ ಸಂಬಂಧಪಟ್ಟವರು ಇಷ್ಟವಿದ್ದರೆ ಬಂದು ಬೇಕಾದ ದಾಖಲೆಗಳನ್ನು ನೋಡಿಕೊಂಡು ಹೋಗಬಹುದು. ಪ್ರೆಸಿಡೆಂಟ್ ಸಾಹೇಬರವರು ಹಾಲಿ ದಾಖಲಾಗಿರುವ ಕಂದಾಯಗಳ ಪುನರ್ವಿಮರ್ಶೆಯನ್ನು ೧೯೦೩ ನೇ ಇಸವಿ ಮೇ ಮಾಹೆ ತಾರೀಖು ೨೨ ನೇ ಮಂಗಳವಾರದ ದಿವಸ ಮಾಡುತ್ತಾರೆ. ಕಂದಾಯಗಳನ್ನು ಪುನರ್ವಿಮರ್ಶೆ ಮಾಡಬೇಕೆಂದು ಅಪೇಕ್ಷಿಸತಕ್ಕವರು ಮೇಲ್ಕಂಡ ತಾರೀಖಿಗೆ ಮೂರು ದಿವಸ ಮುಂಚಿತವಾಗಿ ಅರ್ಜಿ ಕೊಡಬೇಕು ತಿಳಿಯುವದು.

C Venkata Rao,
for President, Mysore City Municipality.

ಬಾಡಿಗೆಗೆ ಅಥವಾ ಕ್ರಯಕ್ಕೆ.

72—1

ಮೈಸೂರು ದೊಡ್ಡಪೇಟೆ ಕಂಟಿಗಾದ್ ಬೀದಿಯಲ್ಲಿರುವ ಅಣ್ಣಪ್ಪನವರ ಮುನಿಸಿಪಲ್ ೬೩೧ ನೇ ನಂ॥ ಮಹಡಿ ಮನೆಯನ್ನು ಬಾಡಿಗೆಗಾದರೂ ಖರೀದಿಗಾದರೂ ಕೊಡುತ್ತಾರೆ ಇಷ್ಟಪಟ್ಟವರು ಎಲ್ಲಾ ವಿಷಯವನ್ನು ಮೇಲ್ಕಂಡ ಸ್ಥಳದಲ್ಲಿರುವ ಮ॥ ರಾ॥ ಪಾತ್ರೆ ಅಂಗಡಿ, ಸಾಹುಕಾರ್ ಚಂದಪ್ಪನವರಲ್ಲಿ ತಿಳಿಯಬಹುದು. ಪಾತ್ರೆ ಅಂಗಡಿ ಅಣ್ಣಪ್ಪ

ಸ್ವಲ್ಪ ಕೇಮಾಡಿರಿ! ಬಿಡಬೇಡಿರಿ!!

[illegible] ಸಮಯ ಮುಂದೆ ಸಿಗಲಿಕ್ಕಿಲ್ಲಾ 68-3

ರಾಸ್ಕೋಪದ ಸಿಲ್ವರ ವಾಚ್.

ಬಂದೋಬಸ್ತು ಮಜಬೂತ



ಇವರ ಸಂಗಡ ಸ್ಪ್ರಿಂಗ್, ಕನ್ನಡಿ, ಪೆಟ್ಟಿಗೆ, ಕೀಗೆ ೩ ಸಾಮಾನು ಕಳುಹಿಸುತ್ತೇವೆ ಟಿ. ಬಿ. ಬೇರೆ. ಒಂದೇ ಸಾರಿ ೩ ವಾಚು ತರಿಸಿಕೊಂಡರೆ ಟಿ. ಎ [illegible]. ೬ ವಾಚು ತರಿಸಿಕೊಂಡರೆ ೧ ವಾಚು ಬಕ್ಷೀಸು ವಾಚಿಗೆ ಬೇಕಾಗುವ ಸರಪಣಿಯು ಕಿಮ್ಮತ್ತು ೦—೮—೦

[illegible] ೦—೮—೦

ಬಂಗಾಳದಲ್ಲಿ ಉಪಾಧ್ಯಾಯಿನಿಯರನ್ನು ತರಪೇತು ಮಾಡುವು...ದಕ್ಕೆ ಒಂದು ಪ್ರತ್ಯೇಕವಾದ ವಿದ್ಯಾಶಾಲೆಯನ್ನು ಸ್ಥಾಪಿಸಬೇಕೆಂದು ...ಗವರ್ನಮೆಂಟಿನವರು ಅಭಿಪ್ರಾಯಪಟ್ಟಿದ್ದಾರೆ. ಸದ್ಯದಲ್ಲಿ ಬಿ. ಎ ...ಪರೀಕ್ಷೆ ಕೊಟ್ಟಿರುವಂಥಾ ಇಬ್ಬರು ಸ್ತ್ರೀಯರಿಗೆ ವರುಷಕ್ಕೆ ತಲಾ ...೧೫೦ ರೂಪಾಯಿನಂತೆ ವೇತನ ಕೊಟ್ಟು ವಿಲಾಯತಿಗೆ ಕಳುಹಿಸಿ ...ಅವರನ್ನು ಉಪಾಧ್ಯಾಯಿನಿಯರ ಕೆಲಸಕ್ಕೆ ತರಪೇತು ಮಾಡಿ...ಬೇಕೆಂದು ಗೊತ್ತು ಮಾಡಿದ್ದಾರೆ. ಹಿಂದುಗಳಲ್ಲೂ ಮಹಮ್ಮದೀಯ...ರಲ್ಲೂ ಇದಕ್ಕೆ ಮೊದಲು ವಿದ್ಯಾರ್ಥಿನಿಯರನ್ನು ಹುಡುಕಿ ಚುನಾಯಿ...ಸಬೇಕೆಂತಲೂ ಅವರಲ್ಲಿ ಯಾರೂ ಸಿಕ್ಕದಿದ್ದರೆ ಬ್ರಾಹ್ಮೊ ಅಥವಾ ...ಕ್ರಿಸ್ತಸ್ತ್ರೀಯರನ್ನು ಚುನಾಯಿಸಬಹುದೆಂತಲೂ ವಿಧಿಸಿರುವರು.

❖❖❖❖

ಸಿಲೋನ್ (ಲಂಕಾ) ದ್ವೀಪದಲ್ಲಿ ಒಬ್ಬ ಕುರುಡನ ಪತ್ತರ...ದ ಕಾಗದಗಳಿವೆ ಎಂಬುದನ್ನು ಒಬ್ಬ ದುಷ್ಟನು ತಿಳಿದು ಅವನ ಬಳಿಗೆ ...ಹೋಗಿ—ನೀನು ದುಡ್ಡು ನಗದಾಗಿ ಇಟ್ಟುಕೊಂಡಿದ್ದರೆ ಯಾರಾದ...ರೂ ನಿನ್ನನ್ನು ಹಿಂಸೆ ಪಡಿಸಿ ಕಿತ್ತುಕೊಂಡು ಹೋಗಬಹುದು. ನನ್ನ ...ಹತ್ತಿರ ನೋಟುಗಳಿವೆ, ಇವನ್ನು ತೆಗೆದು ಇಟ್ಟುಕೋ ಎಂದು ಹೇಳಿ ...ಕೆಲವು ಕಾಗದಗಳನ್ನು ಕೊಟ್ಟು ಅವನ ಬಳಿ ಇದ್ದ ರೂಪಾ...ಯನ್ನು ತೆಗೆದುಕೊಂಡು ಹೋದನು. ಕೆಲವು ದಿನಗಳ ಮೇಲೆ ...ಆ ಕಾಗದಗಳಲ್ಲಿ ಒಂದನ್ನು ಒಬ್ಬ ವರ್ತಕನಿಗೆ ಕೊಟ್ಟು ...ಹಣ ಕೊಡೆಂದು ಕೇಳಿದನು. ಆಗ ಅದು ಬರೀ ಕಾಗದವೆಂತಲೂ ...ಮೋಸಹೋದೆನೆಂತಲೂ ಅವನಿಗೆ ಗೊತ್ತಾಯಿತು. ಪೊಲೀಸಿಗೆ ...ದ್ದಾನೆ.

ಸಿಲೋನ್ (ಲಂಕಾ) ದ್ವೀಪಕ್ಕೆ ಸಮುದ್ರತೀರದೊಳಗೆ ಮುಳುಗಿ ಮುತ್ತಿನ ಚಿಪ್ಪುಗಳನ್ನು ತೆಗೆಯುವುದಕ್ಕೋಸ್ಕರ ಸರ್ಕಾರದವರು ಬಹುಜನ ಅರಬ್ಬಿಯವರನ್ನು ಕರೆಸಿದ್ದರು. ಈ ಪೈಕಿ ೭೦೦ ಜನರು ಕಳೆದವಾರ ಜಹಜುಹತ್ತಿ ವಾಪಸು ಪ್ರಯಾಣಮಾಡಿಕೊಂಡು ಕರಾಚಿ ಪಟ್ಟಣಕ್ಕೆ ಬಂದರು. ಅಲ್ಲಿ ಪ್ಲೇಗ್ ಇಲಾಖೆಯವರು ಅವರ ದೇಹಸ್ಥಿತಿಯನ್ನು ಪರೀಕ್ಷೆಮಾಡಿ, ಅವರ ಸಾಮಾನುಗಳನ್ನು ಡಿಸಿನ್‌ಫೆಕ್ಷನ್ ಮಾಡಬೇಕೆಂದು ತಡೆದರು. ಅವರ್‍ಯಾರೂ ಜಹಜುಬಿಟ್ಟು ಇಳಿಯುವುದಕ್ಕೆ ಒಪ್ಪಲಿಲ್ಲ. ತಮ್ಮ ಸಾಮಾನು ಕಳೆದುಹೋಗುತ್ತೆಂದು ಹೇಳಿ ಅದನ್ನೂ ಇಳಿಸಲಿಲ್ಲ. ಪೊಲೀಸಿನವರು ಅವರನ್ನು ಬಲವಂತಮಾಡುವುದಕ್ಕೆ ಪ್ರಯತ್ನಪಟ್ಟರು. ಅರಬ್ಬಿಯರು ಅವರನ್ನೆಲ್ಲಾ ಹೆದರಿಸಿ ಓಡಿಸಿಬಿಟ್ಟರು. ಆಗ ಯೂರೋಪಿಯನ್ ಪೊಲೀಸ್ ಇನ್ಸ್‌ಪೆಕ್ಟರು ಜಹಜಿನೊಳಕ್ಕೆ ಹೋದನು. ಅವನಿಗೂ ಅವರಿಗೂ ಮಾತುನಡೆದು ಅವನು ಪಿಸ್ತೂಲನ್ನು ತೋರಿಸಿದನು. ಕೂಡಲೇ ಅವರೆಲ್ಲಾ ಅವನ ಮೇಲೆ ಬಿದ್ದು ಅವನನ್ನೂ ಅವನ ಸಂಗಡಿಗರನ್ನೂ ಚನ್ನಾಗಿ ಹೊಡೆದು ಗಾಯಮಾಡಿ, ಅವರು ಹತ್ತಿಕೊಂಡು ಬಂದಿದ್ದ ದೋಣಿಗಳನ್ನು ಒಡೆದುಬಿಟ್ಟರು. ತರುವಾಯ ಸರ್ಕಾರದವರು ಮಿಲಿಟರಿ ಇಲಾಖೆಗೆ ಹೇಳಿಕಳುಹಿಸಿ, ಇಂಗ್ಲಿಷ್ ಸಿಪಾಯಿಗಳನ್ನು ಕರೆಸಿದರು. ಇವರನ್ನು ನೋಡಿದ ಕೂಡಲೇ ಅರಬ್ಬಿಯವರಿಗೆ ಜ್ಞಾನೋದಯವಾಯಿತು. ಎಲ್ಲರೂ ಸರ್ಕಾರದವರ ಅಪ್ಪಣೆಯಂತೆ ಜಹಜುಬಿಟ್ಟು ಕ್ಯಾಂಪಿಗೆ ಬಂದುಬಿಟ್ಟರು.

ಬಾತ್ಮೀದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ನಿಗಾ ಕೊಡಲಾರೆವು. ಆದಕಾರಣ ಬಾತ್ಮೀದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನು ಬರೆದು ತಿಳಿಸತಕ್ಕದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು, ಇಂಥವುಗಳಿಗೆ ನಾವು ನಿಗಾ ಕೊಡಲಾರೆವು.

ಬಾತ್ಮೀದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬುದನ್ನು ಸಕಲರೂ ತಿಳಿಯತಕ್ಕದ್ದು.—ಎಡಿ.

ಕರೆಸ್ಪಾಂಡೆನ್ಸ್.

ಬಹುಮಾನವಾಗಿದೆ

ಅಯ್ಯಾ,

ಪ್ಲೇಗಿನ ಕಾಲದಲ್ಲಿ ಸರ್ಕಾರದವರು ಪ್ಲೇಗ್ ಶೆಡ್ಡು ಹಾಕಿಸಿದ್ದರಷ್ಟೆ. ಇದರಿಂದ ಅನೇಕರಿಗೆ ಹೆಚ್ಚು ಪ್ರಯೋಜನವಾಯಿತು.

ಕೆಲವರಿಗೆ ದೇಹಶಕ್ತಿಯು ಕುಂದಿ ಹೋಗಿದೆ. ಎಡಗೈ ಚಳಕಾ ಹೊಡೆಯುವದಕ್ಕೆ ಭಾರವಾದ ಪದಾರ್ಥವನ್ನು ಹಿಡಿಯುವದೂ ಎಳೆಯುವದೂ ಸುತರಾಂ ಆಗುವದೇ ಇಲ್ಲ. ಮರಗೈಯು ಸಾಗೆಯೇ ನಿಷ್ಪ್ರಯೋಜನವಾದ ಅಂಗವಾಗಿದೆ. ಆದ್ದರಿಂದ ಮಹನೀಯರ್‍ಯಾರಾದರ ಇದಕ್ಕೆ ಔಷಧವನ್ನು ಕಂಡು ಹಿಡಿದಿದ್ದರೆ ಪತ್ರಿಕೆಯ ಮೂಲಕವಾಗಲಿ ಟಪಾಲ್ ದ್ವಾರವಾಗಲಿ ತಿಳಿಸಿದರೆ ರೋಗಿಗಳಿಗೆ ಸುಖವೂ ತಮಗೆ ಪ್ರಯೋಜನವೂ ಆಗುವದರಲ್ಲಿ ಸಂಶಯವಿಲ್ಲ.

ಹೊಳೇನರಸೀಪುರ. ಬಿ ಯೇಸುದಾಸಪ್ಪ.

ಪಾಠಶಾಲೆಯ ದುಸ್ಥಿತಿ.

ಅಯ್ಯಾ,

ನಮ್ಮ ಕೊಪ್ಪದಲ್ಲಿ ಒಂದು ಆಂಗ್ಲೋ ಕನ್ನಡ ಸ್ಕೂಲು ಇದೆ. ಸ್ಕೂಲ್ ಹೆಡ್ ಮಾಸ್ಟರವರು ಅಪ್ಪರ್ ಸೆಕೆಂಡರಿ ಪ್ಯಾಸ್ ಮಾಡಿರುವದಾಗಿ ಹೇಳಿಕೊಳ್ಳುತ್ತಾರಂತೆ. ಇಷ್ಟು ಅಭಿವೃದ್ಧಿಯಲ್ಲಿರುವ ಹೆಡ್ ಮಾಸ್ಟರವರು ಟವರ್‍ನಲ್ಲಿ ವಾಸಕ್ಕೆ ಮನೆ ಸಿಕ್ಕದೆ, ಸ್ಕೂಲಿನಲ್ಲಿಯೇ ವಾಸವಾಗಿರುವದರಿಂದಲೇ ಅವರ ಜನಾನುರಾಗವೂ ಮತ್ತು ವಿದ್ಯಾಭಿವೃದ್ಧಿ ವಿಷಯವೂ ವಾಚಕರ ಮನಸ್ಸಿಗೆ ಗೊತ್ತಾಗಬಹುದು. ಪರಂತು ಸ್ಕೂಲ್ ಅರ್ಧಭಾಗವು ಅವರ ಸಾಮಾನುಗಳು, ಹಾಸಿಗೆ, ಬಟ್ಟೆ ವಗೈರೆಗಳು ತುಂಬಿಕೊಂಡಿವೆ. ಸ್ಕೂಲ್ ನಡುವೆ ಕಟ್ಟಿರುವ ಮಗುವಿನ ತೊಟ್ಟಿಲೇ ಬಾಲಕರುಗಳು ವ್ಯಾಸಂಗಮಾಡುವ ಪಾಠದ ಪುಸ್ತಕವಾಗಿದೆ. ಈ ಪುಸ್ತಕದ ಪಾಠವನ್ನು ಪ್ರಾರಂಭದಲ್ಲಿ ಹೆಡ್ ಮಾಸ್ಟರವರು ಬಾಲಕರುಗಳಿಗೆ ಕಲಿಸಿಕೊಡುತ್ತಾರೆ. ಇದು ವಿನಹ ಬೇರೆ ಯಾವ ಕ್ಲಾಸ್ ಪಾಠವೂ ನಡಿಯುವಂತೆ ತೋರುವದಿಲ್ಲ. ಬಾಲಕರುಗಳನ್ನು ಕೇಳುವಲ್ಲಿ ೮-೧೦ ದಿನಸವಾದರೂ ಯಾವ ಪಾಠವನ್ನೂ ಕೇಳುವದಿಲ್ಲವಾಗಿ ಹೇಳುತ್ತಾರೆ. ಸ್ಕೂಲ್ ಫೀ ಕೊಟ್ಟು ಬಾಲಕರುಗಳನ್ನು ಸದರಿ ಹೆಡ್ ಮಾಸ್ಟರವರ ಮಕ್ಕಳ ಪೋಷಣೆಗೋಸ್ಕರ ಕಳುಹಿಸುವದೇ ಸರಿ. ಮಕ್ಕಳು ಮರಿಗಳ ಸಮೇತ ಸ್ಕೂಲಿನಲ್ಲಿ ವಾಸವಾಗಿದ್ದರೆ ಯಾರುತಾನೇ ಕೆಲಸ ಮಾಡಲು ಸಾಧ್ಯವಾಗುತ್ತೆ. ನಮ್ಮ ಕೊಪ್ಪ ಸ್ಕೂಲ್ ಈ ರೀತಿ ಹೀನಸ್ಥಿತಿಗೆ ಬಂದದ್ದು ಮೇಲ್ಪಟ್ಟ ಆಪೀಸರುಗಳ ಚಿತ್ತಕ್ಕೆ ಬಾರದೆ ಸರ್ಕಾರದಿಂದ ಈ ಸ್ಕೂಲಿಗೆ ಸಲ್ಲತಕ್ಕ ಸಂಬಳವು ನಿರರ್ಥಕವಾಗಿ ಬಾಲಕರುಗಳು ವಿದ್ಯಾವಿಹೀನರಾಗುತ್ತಾರಲ್ಲಾ ಎಂಬುವೇ ನನ್ನ ವ್ಯಸನವಾಗಿದೆ.

ಪ್ರತ್ಯಕ್ಷದರ್ಶಿ.

[ಇದು ನಿಜವೆಂದು ನಂಬಬಹುದೇ ?—ಎಡಿ]

ಮಲೆನಾಡು ಕನ್ಯಾವಿಕ್ರಯ.

ಅಯ್ಯಾ,

ಈ ಮಲೆನಾಡು ಪ್ರದೇಶಗಳಲ್ಲಿ ನಾಮಧಾರಿ ಗೌಡರುಗಳು ತಮ್ಮ ಹೆಣ್ಣು ಮಕ್ಕಳನ್ನು ಲಗ್ನ ಮಾಡುತ್ತೇವೆಂದು ಹೇಳಿ, ಗಂಡಿನ ತಂದೆ ತಾಯಿಗಳಿಂದ ೩೦೦ ರೂ., ೩-೪೦೦ ರೂ. ದರ ಎಂತ ಹೇಳಿ ತೆಗೆದುಕೊಳ್ಳುತ್ತಾರೆ. ಇದು ಲಗ್ನವೇ ಅಥವಾ ವಿಕ್ರಯವೇ ವಾಚಕರೇ ಊಹಿಸಬಹುದು. ಮತ್ತು ಈ ಮಲೆನಾಡುಗಳಲ್ಲಿ ಬಡವರೇ ಹೆಚ್ಚು, ...

ರೂ. ಖರ್ಚಾಗುತ್ತೆ. ಆ ಬಡವನು ಒಬ್ಬ ಧಣಿಯನ್ನು ಮಾಡಿಕೊಂಡು, ಅವರಿಗೆ ತಾನು ಕಷ್ಟಮಾಡಿದ ಸುಮಾರು ೧೦—೧೫ ಮೂಡೆ ಅಡಿಕೆ ವರ್ಷಕ್ಕೆ ಹಾಕಬೇಕು. ಹೀಗೆ ಅವನು ಪ್ರತಿವರುಷ ಹಾಕುತ್ತಾ ಬಂದು, ಕೊನೆಗೆ ಲೆಕ್ಕ ತೆಗಸಿ ನೋಡುವದಕ್ಕೆ ಧಣಿಗಳ ಹತ್ತಿರಕ್ಕೆ ಬರುತ್ತಾನೆ. ಸ್ವಾಮಿ, ಅಯ್ಯಾ ನನ್ನ ಲೆಕ್ಕ ತೆಗೆಯಿರಿ ಎಂತ ಹೇಳಿ ಲೆಕ್ಕತೆಗಿಸಿ ನೋಡಿಸುತ್ತಾನೆ. ಆಗ್ಗೆ ಅವರು 'ಲೆಕ್ಕತೆಗೆದು ಈಗ ನೀನು ಹಾಕಿದ ಅಡಿಕೆ ಇಷ್ಟು ಮಣ ಆಯಿತೆಂತಲೂ, ಇದು ಹೋಗಿ ಬಾಕಾಬಾಕಿ ೬೦೦ ಚಿಲ್ಲರೆ ರೂಪಾಯಿ ಉಳಿಯುತ್ತೆಂತಲೂ, ಧಣಿಗಳು ಹೇಳುತ್ತಾರೆ. ನಂತರ ಆ ರೈತನು ಅಯ್ಯಾ ಈಗ ನಾನು ಲಗ್ನವಾಗಬೇಕು ಸಾಲಕೊಟ್ಟರೆ ನನ್ನ ಮನೆ ಊರ್ಜಿತವಾಗುತ್ತೆ. ಇಲ್ಲದಿದ್ದರೆ ಹಾಳಾಗುತ್ತೆ ಎಂತ ರೈತನು ಬಹು ವಿನಯದಿಂದ ಕೇಳಿಕೊಳ್ಳುತ್ತಾನೆ. ಅದಕ್ಕೆ ಧಣಿಗಳು ನಿನ್ನ ಲಗ್ನಕ್ಕೆ ಎಷ್ಟು ರೂಪಾಯಿ ಬೇಕು ಹೇಳು ಎಂತ ಕೇಳುತ್ತಾರೆ. ಅದಕ್ಕೆ ಆ ರೈತನು ಸ್ವಾಮಿ, ನನ್ನ ತಂಗಿ ಇದಾಳೆ. ಅವಳಿಗೆ ನಾನು ೩೦೦ ರೂಪಾಯಿ ದರ ಕೊಟ್ಟರೆ ನನ್ನ ತಂಗಿಯನ್ನು ಕೊಟ್ಟು, ನಾನು ಬೇರೆಕಡೆ ಹೆಣ್ಣು ತರಬೇಕೆಂದಿದ್ದೇನೆ ಎಂತ ಆ ರೈತನು ಹೇಳುತ್ತಾನೆ. ಅದಕ್ಕೆ ಧಣಿಗಳು ನಿನ್ನ ತಂಗಿಯನ್ನು ಈ ವರುಷ ಲಗ್ನಮಾಡು. ಮುಂದಕ್ಕೆ ನೀನು ಲಗ್ನವಾಗಬಹುದು ಎಂದು ಹೇಳಿ, ಆ ಹುಡುಗಿಯನ್ನು ಬೇರೇ ಕಡೆ ಕೊಡಿಸಿ, ಬಂದ ದುಡ್ಡನ್ನು ಧಣಿಗಳು ತೆಗೆದುಕೊಂಡುಬಿಡುತ್ತಾರೆ. ಮುಂದಿನ ವರುಷಕ್ಕೆ ಸದರಿ ರೈತನು ಬಂದು ಸ್ವಾಮಿ, ಈ ವರುಷ ನನಗೆ ಲಗ್ನಕ್ಕೆ ರೂಪಾಯಿ ಕೊಡಬೇಕೆಂದು ಹೇಳುತ್ತಾನೆ. ಧಣಿಗಳು ಅವನ ಹೇಳಿಕೆ ಮೇರಿಗೆ ಕೇಳಿದವರಂತೆ ನಟಿಸಿ ಅವನ ಭೂಮಿ ತೋಟ ಎಲ್ಲಾ ರಿಜಿಸ್ಟರ್ ಮಾಡಿಸಿಕೊಂಡು, ಕೊನೆಗೆ ಅವನಿಗೆ ಏನೂ ಕೊಡದೆ ಗರ್ದಿಭಾರು ಮಾಡುತ್ತಾರೆ. ಈ ಮಲೆನಾಡಿನಲ್ಲಿ ಹೆಣ್ಣಿನ ವಿಕ್ರಯ ಒಂದು, ಧಣಿಗಳು ಪ್ರಜೆಗಳಿಗೆ ಅನ್ಯಾಯಮಾಡುವದು ಒಂದು, ಈ ವಿಧವಾದ ಅನ್ಯಾಯಗಳು ಹೆಚ್ಚಾಗಿ ಮಲೆನಾಡೆಲ್ಲಾ ಬೈಲು ಸೀಮೆಯ ಅವಸ್ಥೆಗೆ ಬಂದಿದೆ. ಈ ವರಿಗೂ ಮಳೆ ಇಲ್ಲ. ಬಡಪ್ರಜೆಗಳು ಆಕಾಶವನ್ನೇ ನೋಡುತ್ತಾರೆ. ಹೆಣ್ಣಿನ ದರ ಒಂದು, ಬಡಪ್ರಜೆಗಳ ಹಿಂಸೆಪಡಿಸಿ ದುಡ್ಡು ಕಿತ್ತುಕೊಳ್ಳುವದು ಒಂದು. ಈ ಎರಡು ಅನ್ಯಾಯಗಳು ನಿಂತರೆ ಮುಂದೆ ಮಲೆನಾಡಿಗೆ ದೇವರು ಸುಖಕೊಡುವನೆಂಬುದಾಗಿ ನಂಬಿರುವ

ರೈತಾಭಿಮಾನಿ.

ಯೋಗೀಶ್ವರರ ಹಟ.

ಅಯ್ಯಾ,

ಕೊಳ್ಳೇಗಾಲದ ತಾಲ್ಲೂಕು ಕಾಮಗೆರೆ ಗ್ರಾಮಕ್ಕೆ ಕಳೆದ ಮಾರ್ಚಿ ತಿಂಗಳು ೧೦ ನೇ ತೇದಿ ಶನಿವಾರ ಯಾರೋ ಉತ್ತರ ದೇಶದ ಒಬ್ಬ ಯೋಗೀಶ್ವರರು ಬಂದು ಇಲ್ಲಿ ಇರತಕ್ಕ ಲಿಂಗಾಯತರುಗಳ ಕೂಡ ಸಂಭಾಷಣೆ ಮಾಡಿ, ನಮ್ಮ ಕೋರಿಕೆ ೧,೦೦೬ ಜನಗಳಿಗೆ ಆರಾಧನೆ ಮಾಡಿಸಬೇಕೆಂತಲೂ, ಅದನ್ನು ನೀವುಗಳು ನೆರವೇರಿಸಿ ನನ್ನ ಮನಸ್ಸು ಸಂತೋಷಪಡಿಸಬೇಕೆಂತಲೂ ಹೇಳಿ, ಗ್ರಾಮದ ಮಧ್ಯದಲ್ಲಿ ಇರುವ ಬಸವೇಶ್ವರನ ದೇವಸ್ಥಾನದ ಮುಂದೆ ಅಸ್ತಿಭಾರ ಮಾಡಲ್ಪಟ್ಟಿರುವ ಸುಬ್ರಮಣ್ಯೇಶ್ವರಸ್ವಾಮಿಯ ಜಮೀನಿನ ಮೇಲೆ ಬೆಂಕಿ ಕುಂಡವನ್ನು ಮಾಡಿಕೊಂಡು, ಈ ಬೇಸಿಗೆ ಬಿಸಲಿನಲ್ಲಿ ಅನ್ನ ಆಹಾರಗಳನ್ನು ಬಿಟ್ಟು ೩ ದಿವಸ ಕುಳಿತುಕೊಂಡಿದ್ದರು. ಅನಂತರ ಈ ಊರಲ್ಲಿ ಇರುವ ಧ್ಯಾನಸೂರು ಗುರುಮಲ್ಲಪ್ಪನವರುಗಳಲ್ಲಿ ಉಪದೇಶವನ್ನು ತೆಗೆದು ಭಕ್ತಿ ವಿಶ್ವಾಸಪೂರ್ವಕಾ ಪ್ರೇಮಶಿಷ್ಯರುಗಳಾಗಿ ಇರಲ್ಪಟ್ಟ ೫೦೦ ಜನಗಳ ಪೈಕಿ ಮುಖ್ಯಸ್ಥರಾಗಿ ಇರುವ ಶಾಂತಲಿಂಗೇಗೌಡ, ಹೊಸಹಳ್ಳಿ ಸಿದ್ದೇಗೌಡ, ಲಿಂಗಮ್ಮನ ಮರಿದೇವರು, ದೊಡ್ಡ ಮರಿದೇವರ ಸಿದ್ದಪ್ಪ, ಶಂಭುಲಿಂಗಪ್ಪ, ಇವರುಗಳಾದಿಯಾಗಿ ಇನ್ನು ಕೆಲವು ಜನಗಳು ಬಂದು ಯೋಗೀಶ್ವರರ ಕೋರಿಕೆಯನ್ನು ನೆರವೇರಿಸುವದಾಗಿ ನಮಸ್ಕಾರವಿತ್ತು, ಅವರನ್ನು ಆ ಸ್ಥಳದಿಂದ ಎಬ್ಬಿಸಿ ಪಕ್ಕದಲ್ಲಿದ್ದ ಬಸವೇಶ್ವರನ ದೇವಸ್ಥಾನಕ್ಕೆ ಕರೆದುಕೊಂಡು ಹೋಗಿ ಶಿವಪೂಜೆಯನ್ನು ಮಾಡಬೇಕೆಂದು ಸದರಿ ಭಕ್ತರುಗಳು ಕೇಳಿಕೊಂಡಲ್ಲಿ ಯೋಗೀಶ್ವರರು ಜಂಗಮರಾಗಿ ಇರುವ ೫ ಜನಗಳು ಜಬರ್ದಸ್ತಾಗಿ ಬಂದು ಶಿವಪೂಜೆ ನೆರವೇರಿಸುವದಾಗಿ ಅಪ್ಪಣೆಯಿತ್ತರು. ಆ ಪ್ರಕಾರವಾಗಿಯೇ ಕೆಲವು ಜಂಗಮರು ಅಕಸ್ಮಾತಾಗಿ ಬಂದಿದ್ದರು. ಇವರಿಗೂ ಯೋಗೀಶ್ವರರಿಗೂ ಮಾತುಗಳು ಹುಟ್ಟಿ ಯೋಗೀಶ್ವರರನ್ನು ಹೊಡೆಯಬಹುದೆಂದು ಸಿದ್ಧರು. ಅನಂತರ ಯೋಗೀಶ್ವರರು ಶಿವಪೂಜೆಯನ್ನು ಬಿಟ್ಟು ಯಥಾಪ್ರಕಾರ ಬಸವೇಶ್ವರನ ದೇವಸ್ಥಾನದ ಲ್ಲೇ ಒಂದುವಾರ ಅನ್ನೋದಕಗಳನ್ನು ಬಿಟ್ಟು ಕುಳಿತುಕೊಂಡಿದ್ದರು. ಕಳೆದ ತಿಂಗಳು ೨೫ ನೇ ತಾ. ಭಾನುವಾರ ಯುಗಾದಿಹಬ್ಬದ ದಿವಸ ಈ ಗ್ರಾಮದ ವಿಲೇಜ್ ಮೇಸ್ತ್ರೀ ನಾ ಮಣೆಯಂ ಚಿಕ್ಕಕೆಂಪೇಗೌಡರು ಈ ಸಮಾಚಾರವನ್ನು ಕೇಳಿ ಅಲ್ಲಿಗೆ ಹೋಗಿ ಜಂಗಮರನ್ನು ಕರೆದು, ಯೋಗೀಶ್ವರರನ್ನು ನೀವು ಬೈದದ್ದು ನಿಮ್ಮಗಳಲ್ಲಿ ತಪ್ಪು ತಪೆಂದೂ, ಆದರಿಂದ ನೀವುಗಳು ಅವರಿಗೆ ನಮಸ್ಕಾರವಿತ್ತು ಯೋಗೀಶ್ವರರನ್ನು ಸಮಾಧಾನ ಪಡಿಸಿ ಶಿವಪೂಜೆಯನ್ನು ನೆರವೇರಿಸಬೇಕೆಂದೂ ಹೇಳಿದ್ದರ ಮೇಲೆ ಅದರಂತೆಯೇ ಅವರು ನಮಸ್ಕಾರವಿತ್ತ ಮೇಲೆ ಯೋಗೀಶ್ವರರು ಶಿವಪೂಜೆಯನ್ನು ನೆರವೇರಿಸಿದರು. ಅಲ್ಲಿಗೆ ಅವರು ಅನ್ನೋದಕಗಳನ್ನು ತೆಗೆದುಕೊಂಡು ೧೬ ದಿವಸಗಳಾಗಿತ್ತು. ಆ ದಿವಸ ಶಿವಪೂಜಾನಂತರ ಆರಾಧನೆ ಮಾಡಿಸುವದಾಗಿ ಒಪ್ಪಿಕೊಂಡಿದ್ದ ಶಾಂತಲಿಂಗೇಗೌಡ ವಗೈರೇ ಜನಗಳನ್ನು ಕರೆಸಿ ನೀವು ಒಪ್ಪಿಕೊಂಡಂತೆ ಕಾರ್ಯವನ್ನು ನೆರವೇರಿಸಬೇಕೆಂದು ಹೇಳಿದರು. ಅದಕ್ಕೆ ಅವರು ನಾವು ಆರಾಧನೆ ಮಾಡಿಸುವದಾಗಿ ಒಪ್ಪಿಕೊಂಡದ್ದುಂಟು. ಆದರೆ ಆ ರೀತಿ ನಾವು ನೆರವೇರಿಸುವದಕ್ಕೆ ನಮ್ಮಿಂದ ಆಗಲಾರದು. ನೀವು ಮುಂದಕ್ಕೆ ಎಲ್ಲಿಯಾದರು ದಯಮಾಡಿಸಬಹುದು ಎಂದು ಹೇಳಿದರು. ಈ ರೀತಿ ಹೇಳಿದ್ದಕ್ಕೆ ಯೋಗೀಶ್ವರರು ಕಾ...

[illegible]

ತಾಲ್ಲೂಕು ವರ್ತಮಾನಗಳು.

ಮಳವಳ್ಳಿ.—[illegible]

ಹೊಳೆನರಸೀಪುರ.—[illegible]

ಕಡೂರು.—[illegible]

ಚನ್ನಪಟ್ಣ.—[illegible]

[illegible]

ಚಿಕ್ಕಮಗಳೂರು.—[illegible]

ತುಮಕೂರು.—[illegible]

...ವರೂ ಯಾರಿಗೂ ಈ ಸಂಗತಿ ತಿಳಿಯಲೇ ಇಲ್ಲ. ಕೊನೆಗೆ ಗಾಯ ಪಟ್ಟ ನರಸನು ಬಹಳ ಪ್ರಯಾಸದಿಂದ ನಡೆದು ಬಂದು ಊರಿನಲ್ಲಿದ್ದ ಪೂರ್ವತೆಯಾದ ವೀರಪಟ್ಟರಿಗೆ ವರ್ತಮಾನ ಕೊಡುತ್ತಲೂ ಅವರು ಈ ಸಂಗತಿ ನಿಕಿ ಪೋಲೀಸಿಗೆ ರಿಪೋರ್ಟು ಮಾಡಿದರು. ಅಧಿಕಾರಿಗ ಳವರು ನೆಳಿಗ್ಗೆ ಆ ಸ್ಥಳಕ್ಕೆ ಹೋಗಿ ಮಹಜರು ಮಾಡಿ ಆ ಶಿವಾ ಜಪ್ಪನೆಂಬುವನನ್ನು ವರ್ಷ ಮಾಡಿಸಿದರು. ಗಾಯಪಟ್ಟ ನರಸನು ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಾನೆ.—ಟೌನು ಕಾಲದಿಂದಲೂ ಸ್ಥಾಪಿತರಾಗಿರುವ ಸಿಂಧಗಿ ಇಂಡಸ್ಟ್ರಿಯಲ್ ಸ್ಕೂಲು ತುಂಬಾ ದುರ್ಸ್ಥಿತಿಯಲ್ಲಿರುತ್ತೆ. ಇದಕ್ಕೆ ಮ್ಯಾನೇಜರಾಗಿರತಕ್ಕ ಮಿ॥ ಜೆ. ಎ. ಸ್ಕ್ಯಾಟ್ ಸಾಹೇಬರ ಮಾನತ್ತೇ ಕಾರಣವಾಗಿದೆ. ಮಿ ಸ್ಕ್ಯಾಟು ಶಿಕ್ಷಿತರಿಗೆ ಈ ಸ್ಕೂಲಿನಿಂದ ಕೆಲವು ಸಾಮಾನುಗಳನ್ನು ತಯಾರಿಸಿ ಕಳುಹಿಸಿದ್ದಕ್ಕಾಗಿ ಅಲ್ಲಿಂದ ಒಂದು ಚಿನ್ನದ ಬಿಲ್ಲೆ ಯನ್ನು ಒಂದು ಕಾಗದವೂ ಬಹುಮಾನವಾಗಿ ಮೆಮ್ಮ ಡೆಪ್ಯುಟಿ ಕಮಿಷನರ್ ಸಾಹೇಬರವರ ಬಳಿಗೆ ಕಳುಹಿಸಲ್ಪಟ್ಟಿತು. ಕಳೆದ ... ಅವರು ಕೆಲವು ಶ್ರೇಷ್ಠ ಮನುಷ್ಯರ ಸಂಗಡ ಈ ಕಾರ್ಖಾನೆ ಯನ್ನು ನೋಡಿ ಸ್ಕೂಲಿನ ಅಭಿವೃದ್ಧಿಯನ್ನು ನೋಡಿ, ಆ ಸಂತೋಷವನ್ನು ಸ್ವಹಸ್ತದಿಂದ ದಯಪಾಲಿಸಿದರು. ಈಗ ಮ್ಯಾನೇಜರವರು ... ಬಾರಿಗಳಿಂದ ಕೆಲವು ಹಿಂದೂ ವಿದ್ಯಾರ್ಥಿಗಳನ್ನು ಕರೆಸಿ ... ಅವರಲ್ಲಿ ಅಧ್ಯಾಪಕರಿಗೆ ವೇತನ ಕೊಡುತ್ತ ಮಾಡಿ ಕೈಗಾ ... ಕಲಿಸಲು ಏರ್ಪಾಡು ಮಾಡಿರುತ್ತಾರೆ. ಈಗಾಗಲೇ ಕೆಲವು ... ವಿದ್ಯಾರ್ಥಿಗಳು ಅಲ್ಲಿ ಕಲಿಸಲಾಗುತ್ತಿದ್ದಾರೆ.

ಪ್ರಕಟನೆಗಳು.

ಸ್ವತ್ತುಗಳ ಸ್ವಾಧೀನದ ತಡೆ ನೋಟೀಸ್.

77-1

ಮೈಸೂರು ಸಬರ್ಬಿನಲ್ಲಿರುವ ಒಲಿಂಪಸ್ ... [illegible] ... ಯು ... ಸ್ವತ್ತುಗಳನ್ನು ... ಆಸ್ತಿ ... ಆಗುವುದಿಲ್ಲ. ಮದ್ರಾಸು ... ಬಂಗಲೆ ಪಕ್ಕದಲ್ಲಿ ಒಂದು ಮಿ. ಲಕ್ಷ್ಮ ... ಸ್ವತ್ತುಗಳನ್ನು ನನ್ನ ಅನುಮತಿ ಇಲ್ಲದೆ ಯಾರೂ ... ಖರೀದಿ ... ಮಾಡಕೂಡದು ... ನನ್ನ ... [illegible]

ಇಸ್ತಿಹಾರ್.

65-3

ಮೈಸೂರು ಸೀಮೆಯಲ್ಲಿ ೧೯೦೬ನೆ ಇಸವಿ ಜುಲೈ ೧ನೆ ತಾರೀಖಿನಿಂದ ೧೯೦೭ನೆ ಇಸವಿ ಜೂನ್ ೩೦ ನೆ ತಾರೀಖಿಗೆ ಮುಕ್ತಾಯವಾಗುವ ವರುಷದಲ್ಲಿ ಸಾರಾಯಿ, ಸೇಂದಿ, ಬೀರು, ಗಾಂಜಾ ಮತ್ತು ಅಫೀಂ ಅಂಗಡಿಯಲ್ಲಿರುವ ಅಂಗಡಿಗಳನ್ನು ನಡೆಸುವುದರಲ್ಲಿ ವಿಕರಿ ಮಾಡುವ ಸ್ವಾತಂತ್ರ್ಯದ ... ೧೯೦೬ ನೆ ಇಸವಿ ಏಪ್ರಿಲ್ ೫ ನೆ ತಾರೀಖಿನ ಮೈಸೂರು ಗೆಜೆಟ್ಟಿನಲ್ಲಿ ಪ್ರಚುರವಾಗಿರುವ ಷರತ್ತುಗಳಿಗೆ ಒಳಪಟ್ಟು ಅದರಲ್ಲಿ ಕಂಡ ಸ್ಥಳ ಮತ್ತು ತಾರೀಖುಗಳಲ್ಲಿ ಬಹಿರಂಗವಾಗಿ ಹರಾಜು ಮಾಡಲ್ಪಡುವವು.

ಮೈಸೂರು ಸೀಮೆಯ ಎಕ್ಸೈಜು ಕಮಿಷನರವರ ಆಫೀಸು ೬ ನೆ ಏಪ್ರಿಲ್, ೧೯೦೬.	P. N. PURNIAH, *Excise Commissioner in Mysore*

ಬೆಂಗಳೂರು ಚಿಕ್ಕಬಳ್ಳಾಪುರ ಲೈಟ್ ರೈಲ್ವೆ ಕಂಪೆನಿ ಲಿಮಿಟೆಡ್ ನಿಯಮಿತ ಮೂಲಧನ.

73—1

ಷೇರು ಒಂದಕ್ಕೆ ೧೦೦ ರೂಪಾಯಿಗಳು ಬೆಲೆಯುಳ್ಳ ೧೯ ಸಾವಿರ ಷೇರುಗಳಿಂದಾಗುವ ೧೯ ಲಕ್ಷ ರೂಪಾಯಿಗಳು. ಈ ಷೇರು ಮೊಬಲಗಿನ ... ಷೇರು ಒಂದಕ್ಕೆ ಒಂದು ರೂಪಾಯಿನಂತೆ ಅಪ್ಲಿಕೇಷನ್ ... ೧೦ ಕಂತುಗಳಲ್ಲಿ ಪಾವತಿ ಮಾಡತಕ್ಕದ್ದು. ಈ ಲೈನಿನ ... ಪ್ರಾರಂಭಿಸಲ್ಪಟ್ಟಿದೆ.

ಮೈಸೂರು ಸರ್ಕಾರದವರು ಈಗ ಆರ್ಡರು ಮಾಡಿರುವ ಟ್ರೇಡ್ ... ಲೈನಿನ ವರಮಾನ ಶೇಕಡ ೪ ಕ್ಕಿಂತ ಕಡಿಮೆ ... ಶೇಕಡ ತಾವು ಸಾಲ್ಪರಂತೆ ಬಡ್ಡಿ ಕೊಡು ... ಈ ಕಂಪನಿಗೆ ಜಾಮೀನಾಗಿರುತ್ತೇನೆಂದೂ ವಹಿಸಿಟ್ಟು ಲಿಖಿತ ... ತಿಳಿಸಿರುತ್ತಾರೆ.

ಈ ಕಂಪನಿಯ ಷೇರುಗಳನ್ನು ಅಪೇಕ್ಷಿಸತಕ್ಕಂಥಾವರು ... ರುಜು ಮಾಡಿರುವವರಿಗೆ ದರಖಾಸ್ತು ಮಾಡಿಕೊಳ್ಳಬೇಕು.

ಈ ಕಂಪನಿಯ ಷೇರುಗಳನ್ನು ಕಂಪನಿಗೆ ಸಬ್ ಏಜಂಟರಾಗಿ ... ಮಾಡಲು ಅಪೇಕ್ಷೆಯುಳ್ಳ ಸಾಹುಕಾರರಾದ ಜನರು ನನಗೆ ... ಬರೆದುಕೊಳ್ಳಬಹುದು.

ಷೇರು ಹಣವನ್ನು ಚೀಫ್ ಕ್ಯಾನ್ವಾಸಿಂಗ್ ಏಜಂಟರಿಗೆ, ಇವರಿಂದ ... ಮೂಲಕ ಹಣ ವಸೂಲು ಮಾಡಲು ಅಧಿಕಾರ ಹೊಂದಿರುವ ... ಏಜಂಟರಿಗೆ, ಬೆಂಗಳೂರು ಬ್ರಾಂಚು ಮದ್ರಾಸು ಬ್ಯಾಂಕಿಗೆ (ಈ ಕಂಪೆನಿಯ ಕ್ರೆಡಿಟ್ಟಿಗೆ), ಅಥವಾ ಮೈಸೂರು ಸೀಮೆಯ ತಾಲ್ಲೂಕು ... ಖಜಾನೆಗಳಿಗಾಗಲಿ ಪಾವತಿ ಮಾಡಬೇಕು. ಈ ... ತಾಲ್ಲೂಕು ಮತ್ತು ಡಿಸ್ಟ್ರಿಕ್ಟು ಖಜಾನೆಗಳಲ್ಲಿ ಕಟ್ಟಬಹುದೆಂದು ಮೈಸೂರು ಗವರ್ನಮೆಂಟಿನವರು ಹುಕುಂ ಕೊಟ್ಟಿದ್ದಾರೆ.

ಷೇರುಗಳಿಗೆ ದರಖಾಸ್ತು ಮಾಡುವವರು ಅರ್ಜಿ ಕಾಗದಗಳ ಜೊತೆಯಲ್ಲಿ ಷೇರು ಒಂದಕ್ಕೆ ಒಂದು ರೂಪಾಯಿನಂತೆ ಅಪ್ಲಿಕೇಷನ್ ಫೀ ರವಾನಿಸಬೇಕು. ಇದು ಷೇರು ಮೊಬಲಗಿನಲ್ಲಿ ಉತ್ತಾರ ಹಾಕಲ್ಪಡುವದು.

(ಸ್ವ) ಟಿ. ವಿ. ರಾಮಸ್ವಾಮಿ ಶೆಟ್ಟಿ, ಬಿ. ಎ.,
ಅಡ್ವೊಕೇಟ್, ಮತ್ತು ಬೆಂಗಳೂರು ಚಿಕ್ಕಬಳ್ಳಾಪುರ
ಲೈಟ್ ರೈಲ್ವೆ ಕಂಪೆನಿಯ ಚೀಫ್ ಏಜಂಟ್,
ನಗರ್ತಪೇಟೆ, ಬೆಂಗಳೂರು ಸಿಟಿ.

ಮೈಸೂರು ಸಿಟಿ ಮ್ಯುನಿಸಿಪಾಲಿಟಿ.

76-1

ಇಸ್ತಿಹಾರು.

ಮೈಸೂರು ಸಿಟಿಯಲ್ಲಿ ೧೯೦೬—೭ ನೇ ಸಾಲಿಗೆ ಈ ಕೆಳಗೆ ನಮೂದಾಗುವ ಬಾಬುಗಳು ಆಯಾಯ ತಾರೀಖಿನಲ್ಲಿ ಹರಾಜು ಮಾಡಲ್ಪಡುವವು. ಇಷ್ಟವುಳ್ಳವರು ಹಾಜರಾಗಿ ಕೂಗಬಹುದು.

ಸಂಖ್ಯೆ	ಹರಾಜು ಮಾಡಲ್ಪಡುವ ತಾರೀಖು	ಕಾಲ	ಬಾಬುವಾರು ತಪಶೀಲು	ಹರಾಜು ಮಾಡಲ್ಪಡುವ ಸ್ಥಳ
1	10-5-1906	ಗಂಟೆ 8 ಬೆಳಿಗ್ಗೆ	ಮಂಡಿ ಮಾರ್ಕೆಟ್ ಸೇಯಲಿ ಫೀಜು ಕಂಟ್ರಾಕ್ಟು ..	ಮಂಡಿ ಮಾರ್ಕೆಟ್
2	,,	8 30 ,,	ಮಂಡಿ ಮಾರ್ಕೆಟ್ ಖಸಾಯಿ ಅಂಗಡಿಗಳ ಮಾಂಸದ ಬಾಡಿಗೆ ವಸೂಲ್ಮಾಡಿಕೊಳ್ಳುವ ಹಕ್ಕು	,,
3	,,	8-30 ,,	ಮಂಡಿ ಮೊಹಲ್ಲಾ ಸ್ಲಾಟರ್ ಹೌಸಿನಲ್ಲಿ ರೋಜೀನಾ ಕತರಾಯಿಸಲ್ಪಡುವ ದನಗಳಿಗೆ ಫೀಜು ವಸೂಲ್ಮಾಡಿಕೊಳ್ಳುವ ಹಕ್ಕು ..	,,
4	,,	8 ,,	ಲಷ್ಕರ್ ಮೊಹಲ್ಲಾ ಬುಲಕ್ ಸ್ಲಾಟರ್ ಹೌಸಿನಲ್ಲಿ ಕತರಾಯಿಸಲ್ಪಡುವ ದನಗಳಿಗೆ ಫೀಜು ವಸೂಲ್ಮಾಡಿಕೊಳ್ಳುವ ಹಕ್ಕು .	ಬುಲಕ್ ಸ್ಲಾಟರು ಹೌಸ ಬಳಿ
5	,,	8 ,,	ಸ್ಲಾಟರ್ ಹೌಸು ಗೊಬ್ಬರದ ಗುಂಡಿಯಿಂದ ರೋಜೀನಾ ಗೊಬ್ಬರ ಸಾಗಿಸಿಕೊಂಡು ಹೋಗುವ ಹಕ್ಕು	,,
6	,,	8 30 ,,	ಬೀಫ್ ಮಾರ್ಕೆಟ್ ಸಾಲುಗಳಿಂದ ಮಾಸೆವಾರು ಬಾಡಿಗೆ ವಸೂಲ್ಮಾಡಿಕೊಳ್ಳುವ ಹಕ್ಕು	,,
7	,,	8 ,,	ದೇವರಾಜ ಮಾರ್ಕೆಟ್ ಸೇಯಲಿ ಫೀಜು ಕಂಟ್ರಾಕ್ಟು ..	ದೇವರಾಜ ಮಾರ್ಕೆಟ್ ಬಳಿ
8	,,	8 ,,	ಬಿಡಾರ ಖಸಾಯಿ ಅಂಗಡಿಗಳಿಂದ ಮಾಸೆವಾರು ಬಾಡಿಗೆ ವಸೂಲ್ಮಾಡಿಕೊಳ್ಳುವ ಹಕ್ಕು	,,
9	11-5-06	2 ಮಧ್ಯಾಹ್ನ	ಶುಕ್ರವಾರ ಸಂತೆಯಲ್ಲಿ ಬೀಳುವ ಗೊಬ್ಬರ ಸಾಗಿಸಿಕೊಂಡು ಹೋಗುವ ಹಕ್ಕು	ಚೀಣ್ಯಾರಾಯನ ಕಟ್ಟೆ ಬಳಿ
10	,,	2 ,,	ಶುಕ್ರವಾರ ಸಂತೆಯ ಮೈದಾನದಲ್ಲಿ ಬಂದು ನಿಲ್ಲುವ ಗಾಡಿಗಳಿಂದ ಗಾಡಿ ಒಂದಕ್ಕೆ ೩ ಪೈ ಸಂತೆ ವಸೂಲ್ಮಾಡುವ ಹಕ್ಕು ..	ಚೀಣ್ಯಾರಾಯನ ಕಟ್ಟೆ ಬಳಿ
11	,,	2 ,,	ಚೀಣ್ಯಾರಾಯನ ಕಟ್ಟೆ ಕೆಳಗೆ ಇರುವ ೬ ಕುಲ್ಲಾ ಅಂಗಡಿಗಳಿಂದ ಬಾಡಿಗೆ ವಸೂಲ್ಮಾಡಿಕೊಳ್ಳುವದು	,,
12	,,	2 ,,	ಶುಕ್ರವಾರ ಸಂತೆಯಲ್ಲಿ ದನಗಳಿಂದ ದನವೊಂದಕ್ಕೆ ೩ ಪೈ ಸೇಯ ವಸೂಲ್ಮಾಡಿಕೊಳ್ಳುವ ಹಕ್ಕು	ಸಂತೆಯ ಬಳಿ
13	,	8 ಬೆಳಿಗ್ಗೆ	ಆಸಿಫ್ ಮಿಯಾ ಸಾಬರ ಗಲ್ಲಿಯಲ್ಲಿರುವ ೬ ತೆಂಗಿನ ಮರಗಳ ಫಸಲು	ಮರಗಳ ಬಳಿ
14	,,	8 ,,	ಮುನಿಯಪ್ಪ ಗರಡಿ ಬೀದಿಯಲ್ಲಿರುವ ತೋಟವನ್ನು ಸಾಗುವಳಿ ಮಾಡಿಕೊಳ್ಳುವ ಹಕ್ಕು ..	ತೋಟದ ಬಳಿ
15	12-5-06	8 ,,	ಚಿಕ್ಕ ರಾಜಮಾರ್ಗ ಬೀದಿಯಲ್ಲಿರುವ ೬೦ ತೆಂಗಿನ ಮರದ ಫಸಲು ..	ಮರದ ಬಳಿ
16	,,	8 ,,	ಸಿಂಹಲ್ ಪಾರ್ಕಿನಲ್ಲಿರುವ ತೆಂಗು, ಮಾವು, ಹುಣಸೆ ಇವುಗಳ ಫಸಲು	ಪಾರ್ಕಿನಲ್ಲಿ
17	,,	8 ,,	ಇಟಗಿಗೂಡು ತೋಪಿನಲ್ಲಿ ರೋಜೀನಾ ಬೀಳುವ ಗೊಬ್ಬರ ಸಾಗಿಸಿಕೊಂಡು ಹೋಗುವದು ..	ತೋಪಿನ ಬಳಿ
18	,,	8 ,,	ಕಿಲ್ಲೆ ಮೊಹಲ್ಲಾ ಬಂಡಿ ಮೋರಿಯಲ್ಲಿ ಬಂದು ಬೀಳುವ ಗೊಬ್ಬರ ಸಾಗಿಸುವದು	ಬಂಡಿ ಮೋರಿಯಲ್ಲಿ
19	,,	8 ,,	ಸ್ಯಾಯೇಜು ಗಾರ್ಡನಿನಲ್ಲಿರುವ ತೆಂಗು ಮತ್ತು ಹುಣಸೆ ಫಸಲು ..	,,
20	,,	8 ,,	ಬಂಡಿ ಮೋರಿಯಲ್ಲಿರುವ ಹುಣಸೆ ಮತ್ತು ತೆಂಗಿನ ಮರಗಳ ಫಸಲು	,,
21	,,	8 ,,	ಹಳೇ ಅಗ್ರಹಾರದ ಗರಲ್ಸ್ ಸ್ಕೂಲು ಬಳಿಯಿರುವ ೬ ತೆಂಗಿನ ಮರಗಳ ಫಸಲು	ಮರಗಳ ಬಳಿ
22	,,	8 ,,	ಕೋರಿಶೆಟ್ಟಿಯ ಮನೆ ಮುಂದೆಯಿರುವ ೯ ತೆಂಗಿನ ಫಸಲು ..	,,
23	,	8-15 ,,	ಸೊಪ್ಪಿನಕೊಳದ ಅಡ್ಡರಸ್ತೆಯಲ್ಲಿರುವ ತೆಂಗಿನ ಮರಗಳ ಫಸಲು ..	,,
24	,,	8-30 ,,	ವಾಣೀವಿಲಾಸದ ರೋಡು ಪಕ್ಕದ ಸೇರುವೆ ಬಳಿಯಿರುವ ೧ ತೆಂಗಿನ ಮರದ ಫಸಲು	ಮರದ ಬಳಿ
25	13-5-06	8 ,,	ವೀವರ್ಸ್ ಲೈನ್ ಮೈದಾನದಲ್ಲಿರುವ ೧೨ ತೆಂಗಿನ ಮರಗಳ ಫಸಲು ..	ಬಳಿ
26	11-5-06	8 ,,	ಹೊಸ ರುದ್ರಭೂಮಿಯಲ್ಲಿರುವ ಹುಲ್ಲಿನ ಕಾವಲು ಮತ್ತು ಮರಗಳ ಫಸಲು	ಶ್ಮಶಾನದ ಬಳಿ
27	,,	8 ,,	ಜೋಡಿತೆಂಗಿನಮರದ ತೋಟಕ್ಕೆ ದನಬಿಟ್ಟು ಮೇಯಿಸಿಕೊಳ್ಳುವ ಹಕ್ಕು	ತೋಟದ ಬಳಿ
28	,,	8 ,,	ಸಿಟಿ ಮಹಕೂರಿನಲ್ಲಿರುವ ಮ್ಯುನಿಸಿಪಾಲಿಟಿಗೆ ಸೇರಿದ ಹುಣಸೆ ಮರಗಳಲ್ಲಿ ಬಿಡುವ ಫಸಲು	ಸಾಹುಕಾರು ಕಚೇರಿಯಲ್ಲಿ
29	15-5-06	8 ,,	ಕನ್ನೇಗೌಡನ ಕೊಪ್ಪಲು ಪಶ್ಚಿಮಭಾಗದಲ್ಲಿರುವ ಮ್ಯುನಿಸಿಪಲ್ ತೋಟವನ್ನು ಸಾಗುವಳಿ ಮಾಡಿಕೊಳ್ಳುವದು ..	ತೋಟದ ಬಳಿ
30	,,	8 ,,	ಲಷ್ಕರ್ ಮೊಹಲ್ಲಾ ಬಾರ್ ಲೈನಿನಿಂದ ರೋಜೀನಾ ಬಂದು ಬೀಳುವ ಗೊಬ್ಬರ ಸಾಗಿಸಿಕೊಂಡು ಹೋಗುವದು. ..	ಬಾರ್ ಲೈನ್ ಬಳಿ
31	,,	8 ,,	ಸಾಹುಕಾರು ಕಚೇರಿಯ ಪೌಂಡಿನಲ್ಲಿ ರೋಜೀನಾ ಬೀಳುವ ಗೊಬ್ಬರ ಸಾಗಿಸಿಕೊಂಡು ಹೋಗುವ ಹಕ್ಕು	ಸಾಹುಕಾರು ಕಚೇರಿಯಲ್ಲಿ
32	,,	2 ಮಧ್ಯಾಹ್ನ	ಟೌನ್ ಹಾಲಿನಲ್ಲಿ ನಾಟಕವಾಗತಕ್ಕಂಥಾ ರಾತ್ರಿಗಳಲ್ಲಿ ಕಾಂಪೌಂಡಿನಲ್ಲಿ ಲೆಮನೇಡ್ ಮತ್ತು ಸೋಡಾವಾಟರು ಇಟ್ಟು ಕೊಂಡು ಮಾರಿಕೊಳ್ಳುವ ಹಕ್ಕು	ಟವನ್ ಹಾಲ್ ಬಳಿ
33	,,	8 ಬೆಳಿಗ್ಗೆ	ಗ್ರ್ಯಾಜುಯೇಟ್ಸ್ ಟ್ರೇಡಿಂಗ್ ಅಸೋಸಿಯೇಷನ್ ಹಿಂಭಾಗದಲ್ಲಿರುವ ೧೦ ತೆಂಗಿನ ಮತ್ತು ೧ ಹುಣಸೆ ಮರದ ಫಸಲು ..	ಮರಗಳ ಬಳಿ

ತಾರೀಖು 1 ನೇ ಮಾಹೆ ಮೇ, 1906.	C. VENKATA RAO,
ಮೈಸೂರು ಸಿಟಿ ಮ್ಯುನಿಸಿಪಲ್ ಆಫೀಸು.	*Vice President,*
	Mysore City Municipality.

ನೀವು ವಿಲಾಯತಿಯಿಂದ ಯಾವ ಸಾಮಾನುಗಳನ್ನಾದರೂ ತರಿಸಿ ಕೊಳ್ಳಬೇಕಾಗಿದ್ದರೆ 19-16

ಬ್ರೈಟ್ ಮತ್ತು ಈಸ್ಟ್‌ಲೆಂಡ್,

೬—೩೪, ಸಿಟಿ ರೋಡ್, ಲಂಡನ್, ಇ. ಸಿ.

ಎಂಬೀ ವಿಳಾಸಕ್ಕೆ ಹಣ ಕಳಿಸಿ, ಕಾಗದ ಬರೆಯಿರಿ. ಈ ಕಂಪನಿಯವರು ಪೇಟೆಂಟ್ ಔಷಧಿಗಳನ್ನೂ, ಆಸ್ಪತ್ರೆಗೂ ವ್ಯಾಪಾರಿಗೂ ಕೊಡುವಂಥಾ, ಯಂತ್ರಗಳಿಂದಲೇ ತಯಾರಾದಂಥಾ ಆಹಾರಗಳನ್ನೂ, ಇನ್ನೂ ನಾನಾತರಹ ಪದಾರ್ಥಗಳನ್ನೂ ಇಟ್ಟು ವ್ಯಾಪಾರಮಾಡುತ್ತಾರೆ. ಅವರು ಬಹು ವಿಶೇಷವಾದ ಗಮನಕೊಟ್ಟು, ಸಾಧ್ಯವಿದ್ದಷ್ಟೂ ಅಗ್ಗವಾಗಿ, ಬೇಕಾದ ಸಾಮಾನುಗಳನ್ನೇ ಆರಿಸಿ, ಮರಟಪಾಲಿಗೇನೆ ಕಳುಹಿಸಿಕೊಡುವರು.

ಪ್ರಶ್ನೋತ್ತರ ಲೇಖ್ಯಬೋಧಿನಿ.

75-1

೨ ನೇ ಛಾಪು. ಮಾರಾಟಕ್ಕೆ ಸಿದ್ಧವಾಗಿರುತ್ತೆ, ದಪ್ಪವಾದ ಕಾಗದ, ಭದ್ರವಾದ ಬೈಂಡುಳ್ಳದ್ದು, ಪುಸ್ತಕದಲ್ಲಿರುವ ಸಂಗತಿಯನ್ನು ದಯವಿಟ್ಟು ಓದಿನೋಡಿ.—

ಕ್ಷೇಮಸಮಾಚಾರ ಕಾಗದಗಳು, ಅರ್ಜಿಗಳು, ಸಿವಿಲ್, ಕ್ರಿಮಿನಲ್, ರೆವಿನ್ಯೂ, ಮುಲ್ಕಿ, ಇಂಜನಿಯರ್, ಫಾರೆಸ್ಟು, ಎಕ್ಸೈಜು, ವಿದ್ಯಾಭ್ಯಾಸ, ವ್ಯವಸಾಯ, ಮ್ಯುನಿಸಿಪಲ್, ಮತ್ತು ಇತರ ಎಲ್ಲಾ ಇಲಾಖೆಗಳ ಬಗೆ ಬಗೆ ಸಂಗತಿಗಳು, ಸಿವಿಲ್ ಪ್ರೊಸೀಜರ್ ಕೋಡು, ಕ್ರಿಮಿನಲ್ ಪ್ರೊಸೀಜರ್ ಕೋಡು, ಪೆನಲ್, ಹಿಂದೂ ಲಾ, ಮಹಮ್ಮದಿ ಲಾ, ಕಂಟ್ರಾಕ್ಟು ಖಾಮೀಲು, ವಾರಸು, ಮೈನರು, ಲಿಮಿಟೇಷನ್, ಸ್ಟಾಂಪು, ಕೋರ್ಟು ಫೀಜು, ಪೋಲೀಸು, ಸ್ಯಾನಿಟರಿ, ಮ್ಯುನಿಸಿಪಲ್, ರೆವಿನ್ಯೂ ಕೋಡು, ರೂಲ್ಸು, ಲ್ಯಾಂಡ್ ಇಂಪ್ರೂವ್, ಲ್ಯಾಂಡ್ ಅಕ್ವಿಜಿಷನ್, ಪೋಸ್ಟು, ಅರಂಸು, ಮೊದಲಾದ ಎಲ್ಲಾ ಆಕ್ಟುಗಳ ಸಾರಾಂಶಗಳು, ಲೇವಾದೇವಿ, ರೆವಿನ್ಯೂ ರೂಲ್ಸು ಪ್ರಕಾರ ಗ್ರಾಮದ ಲೆಕ್ಕಗಳನ್ನು ಬರೆಯುವದು, ಮುಂತಾದ ವ್ಯಾಸಭಾವಿಕೆಯ ಬಗೆ ಬಗೆ ಸಂಗತಿಗಳು, ರೋಜು ಪರ್ಗ, ಮೊದಲಾದ ವರ್ತಕರ ಲೆಕ್ಕಗಳನ್ನು ಬರೆಯುವ ರೀತಿ, ಮೊದಲಾದ ಅನೇಕ ಸಂಗತಿಗಳು ಸ್ವಲ್ಪ ಮಟ್ಟಿಗೆ ಓದುಬರಹ ಬಂದವರು ಕೂಡಾ ಸುಲಭವಾಗಿ ತಿಳಿಯುವಂತೆ ಪ್ರಶ್ನೋತ್ತರ ರೀತಿಯಾಗಿ ಬರೆದಿದೆ. ಪುಸ್ತಕದಲ್ಲಿರುವ ಎಲ್ಲಾ ಸಂಗತಿಗಳನ್ನೂ ವಿವರಿಸುವದು ಸಾಧ್ಯವಲ್ಲವಾಗಿ ಸೂಕ್ಷ್ಮದಿಂದ ತಿಳಿಸಿರುತ್ತೆ.

ಮೋಜಣಿ ಕಲಿಯತಕ್ಕ ಪುಸ್ತಕ ಕ್ರಯ, ೧ಕ್ಕೆ ೧ ರೂಪಾಯಿ ಮಾತ್ರ. ಭೂಮಿ ಅಳೆಯುವ ರೀತಿಯನ್ನು ಸುಲಭವಾಗಿ ತಿಳಿಸುತ್ತದೆ. ಬೇಗ ಬರೆಯಿರಿ. ವಿಳಾಸ ಬದಲಾಯಿಸಿದೆ. ವಿಳಾಸ —ಬಿ ಕೆ. ಮೂರ್ತಿ ಕವಿ, ಬಂಗಾರು ಪೇಟೆ, ಕೋಲಾರ್ ಡಿಸ್ಟ್ರಿಕ್ಟು.

ಜರಮನ್ ಸಿಲವರ್ ಪುದುಚೇರಿ ಬೋಲ್

ಕಾಲು ಗೊಲುಸು.

53-8

ಜರಮನ್ ಸಿಲವರ್ ಕಂಬಿ ಮತ್ತು ತಗಡುಗಳನ್ನು ಸ್ಪೆಷಲ್ ಆರ್ಡರು ಕೊಟ್ಟು, ಆಸ್ಟ್ರೇಲಿಯಾ ದೇಶದಿಂದ ತರಿಸಿ, ಅವುಗಳಿಂದ ಸಕಲ ಆಭರಣಗಳನ್ನೂ ತಯಾರಿಸುತ್ತಲಿದ್ದೇವೆ. ಇವುಗಳ ಬೆಳ್ಳಿ ರಂಗು ಎಷ್ಟು ವರುಷಗಳಾದರೂ ಕೆಡಲಾರದು.

ಅನೇಕರು ಸುಲಭ ಕ್ರಯದಲ್ಲಿ ತಯಾರಿಸಿ ಕಳುಹಿಸಬೇಕೆಂದು ಕೋರಿದ್ದರಿಂದಲೂ ಸಕಲರಿಗೂ ಉಪಯೋಗವಾಗುವ ಹಾಗೆ ಇರಬೇಕೆಂಬುವ ಅಭಿಪ್ರಾಯದಿಂದಲೂ ಕೆಳಗೆ ನಮೂದಿಸಿರುವ ಮೇರಿಗೆ ಈ ಗೊಲಸುಗಳಲ್ಲಿ ಮೂರು ತರಹಾಗಳಾಗಿ ತಯಾರಿಸಲ್ಪಟ್ಟಿರುತ್ತವೆ. ಇದು ಬಡವರಿಗೂ ಭಾಗ್ಯವಂತರಿಗೂ ಸಹಾ ಉಪಯೋಗವಾಗುವ ಹಾಗೆ ಸುಲಭ ಕ್ರಯವನ್ನು ಇಟ್ಟು ಈ ಕೆಳಗೆ ನಮೂದಿಸಿ ಇರುತ್ತೇವೆ. ಈಗ ಇವೆಲ್ಲಾ ವಿಕ್ರಯಕ್ಕೆ ನಮ್ಮಲ್ಲಿ ಸಿದ್ಧವಾಗಿದೆ!



೧ ನೇ ನಂಬರು ಪುದುಚೇರಿ ಗೊಲಸು—ಇವುಗಳ ಕೀಲು ಬೆಳ್ಳಿಯ ಗೊಲಸಿನ ಕೀಲಸಕ್ಕೆ ಸಮಾನವಾಗಿ ಇಂದು ಮೊದಲಾದವುಗಳಿಲ್ಲದೆ ನೋಟಕ್ಕೆ ಅಚ್ಚಬೆಳ್ಳಿಯ ಗೊಲಸಿನಂತೆ ತಯಾರಿಸಲ್ಪಟ್ಟಿರುತ್ತೆ

	ರೂ
ದೊಡ್ಡವರಿಗೆ	೨—೨—೦
ಚಿಕ್ಕವರಿಗೆ	೧—೧೪—೦
ಮಕ್ಕಳಿಗೆ	೧—೧೨—೦

೨ ನೇ ನಂಬರು ಪುದುಚೇರಿ ಗೊಲಸು—ಮೇಲು ಭಾಗದಲ್ಲಿ ಕಳೆಯುವ ಹಾಗೆ ಕೀಲುಗಳಿಂದಲೂ ಮುಚ್ಚು ಬೋತಾದ ತಿರುಪಿನಿಂದಲೂ ತಯಾರಿಸಲ್ಪಟ್ಟಿರುತ್ತೆ

	ದೊಡ್ಡವರಿಗೆ.	ಚಿಕ್ಕವರಿಗೆ.	ಮಕ್ಕಳಿಗೆ
ರೂ	೨—೯—೦	೧—೧೨—೦	೧—೮—೦

೩ನೆ ನಂಬರು ಪುದುಚೇರಿ ಗೊಲಸು—ಇದು ಸಾಧಾರಣ ಕೀಲಿಂದಲೂ ಮೇಲು ಭಾಗ ಹಸನಾದ ನುಲಿಗೆಗಳಿಂದಲೂ ತಯಾರಿಸಿದೆ

	ದೊಡ್ಡವರಿಗೆ	ಚಿಕ್ಕವರಿಗೆ	ಮಕ್ಕಳಿಗೆ,
ರೂ,	೧—೦—೦	೦—೧೪—೦	೦—೧೨—೦

ವಿಳಾಸ:—ಮ್ಯಾನೇಜರ್, ಜರ್ಮನ್ ಸಿಲ್ವರ್ ಜ್ಯುಯಲ್ ಡಿಪೋ, ಸಾಹುಕಾರ್ ಪೇಟೆ, ಮದ್ರಾಸು

P. SUBBROYA'S

World Renowned and most Efficacious Ayurvedic Medicines.

ಪಿ. ಸುಬ್ಬರಾಯರವರ ಲೋಕಪ್ರಸಿದ್ಧವಾದ ಮತ್ತು ಅತ್ಯಂತ ಗುಣಕಾರಿಯಾದ ಆಯುರ್ವೇದ ಔಷಧಗಳು.

11-25

೧೦. ಜ್ವರಸಂಹಾರಿ—ಎಲ್ಲಾ ವಿಧವಾದ ಜ್ವರ, ವಿಷಮಶೀತ ಜ್ವರ, ೨ ರ, ೩ ರ, ಚಳಿ, ಇಗ್ಗುಲಿ ಯಂಜಾ, ಚಳಿಜ್ವರ, ವಾತರೋಗ, ಇವುಗಳನು ಸಂಪೂರ್ಣವಾಗಿ ನಾಶಿ ಮಾಡುವದು. ಪೆಟ್ಟಿಗೆ ೧ಕ್ಕೆ ರೂ. ೧. ವಿ. ಪಿ. ಛಾರ್ಜು ೫ ಆಣೆ.

೧೧. ಕೂದಲು ಉದರಿಹೋಗುವದಕ್ಕೆ—ಕೂದಲು ಬೆಳೆದಿರುವ ಸ್ಥಳಕ್ಕೆ ಹಚ್ಚಿದರೆ ಚರ್ಮಕ್ಕೆ ತೊಂದರೆಯಾಗದೆ ೫ ನಿಮಿಷದಲ್ಲೇ ಉದುರಿ ಹೋಗುವದು. ಸೀಸೆ ೧ ಕ್ಕೆ ೪ ಆಣೆ. ವಿ. ಪಿ. ಛಾರ್ಜು ೩ ಸೀಸೆ ವರಿವಿಗೂ ೫ ಆಣೆ.

೧೨. ಸುಗಂಧಳದಂತಚೂರ್ಣ —ಎಲ್ಲಾ ವಿಧವಾದ ಹಲ್ಲುನೋವುಗಳನು ನಾಶಿಮಾಡುವದು. ಸೀಸೆ ೧ಕ್ಕೆ ೪ ಆಣೆ. ವಿ. ಪಿ ಛಾರ್ಜು ೩ ಸೀಸೆ ವರೆಗೂ ೫ ಆಣೆ.

೧೩. ಚೇಳಿನ ಔಷಧ—ಚೇಳು ಕಚ್ಚಿದ ಸ್ಥಳಕ್ಕೆ ಕೂಡಲೆ ಇದರ ಕೆಲವು ತೊಟ್ಟುಗಳನು ಬಿಟ್ಟ ತಕ್ಷಣವೇ ಉರಿಯು ನಿಲ್ಲುವುದು. ಪ್ರತಿ ಕುಟುಂಬದಲ್ಲಿಯೂ ಅವಶ್ಯಕವಾಗಿರಬೇಕಾದದ್ದು. ಸೀಸೆ ೧ಕ್ಕೆ ೪ ಆಣೆ ವಿ ಪಿ ಛಾರ್ಜು ೧೨ ಸೀಸೆ ವರೆಗೂ ೫ ಆಣೆ. ೧೨ ಸೀಸೆಗಳನ್ನು ಒಂದೇ ಆವರ್ತಿ ತರಿಸಿಕೊಂಡರೆ ಬೆಲೆ ೨-೮-೦ ರೂ. ವಿ. ಪಿ. ಛಾರ್ಜು ಅಲಾಯಿದ ಸಿಲೋನಿಗೆ ೩ ಆಣೆ.

೧೪. ಮಧುರಧ್ವನಿ ಮಾತ್ರೆ—ಧ್ವನಿಯಲ್ಲಿರುವ ನ್ಯೂನತೆಗಳನ್ನು ಸರಿಮಾಡಿ ಮನೋಹರವಾದ ಧ್ವನಿಯನ್ನುಂಟುಮಾಡಿ ಸ್ಫುಟವಾಗಿ ಮಾತನಾಡುವದಕ್ಕೆ ವಿಶೇಷ ಅನುಕೂಲಪಡಿಸಿಕೊಡುವದು ಮುಖ್ಯವಾಗಿ ಸಂಗೀತಗಾರರು, ಉಪನ್ಯಾಸಕರು ಮೊದಲಾದವರಿಗೆ ಬಹಳ ಸಹಕಾರಿಯು. ಇದರ ಸೇವನೆಯಿಂದ ಭಾರವಾದ ಧ್ವನಿಯು ಸರಿಯಾಗುವದು ಹಾಡಿದರೆ ಕಿವಿಗಿಂಪಾಗುವಂತಹ ಧ್ವನಿಯು ಹೊರಡುವದು. ಸೀಸೆ ೧ ಕ್ಕೆ ೮ ಆಣೆ ವಿ ಪಿ ಛಾರ್ಜು ೩ ಸೀಸೆ ವರೆಗೂ ೫ ಆಣೆ.

೧೫. ಸ್ನಾನಕ್ಕೆ ಸುವಾಸನಾ ಭಸ್ಮ—ಸುವಾಸನೆಯುಳ್ಳ ಈ ಭಸ್ಮವನ್ನು ಸ್ನಾನಕಾಲದಲ್ಲಿ ಉಪಯೋಗಿಸುವ ಸೀಗೆ, ಹೆಸರು, ಮುಂತಾದ ಕಡ ಉಪಯೋಗಿಸುವದಕ್ಕೆ ಅನುಕೂಲವಾಗಿರುವದು. ಚರ್ಮಗತವಾದ ಕೊಳೆಯನ್ನೂ ಬೆವರಿನ ದುರ್ಗಂಧವನ್ನೂ ಹೋಗಲಾಡಿಸಿ, ಚರ್ಮವನ್ನು ಮೃದುಮಾಡಿ, ಮಿಂಚುವಂತೆ ಹೊಳಪುಕೊಟ್ಟು, ತಂಪನ್ನುಂಟುಮಾಡುವದು ಇದಲ್ಲದೆ ದೇಹದಲ್ಲಿ ಸರ್ವದಾ ಸುಗಂಧವಿರುವಂತೆ ಮಾಡುವದು. ಚೂರ್ಣವು ಸ್ನಾನಕಾಲದಲ್ಲಿ ಅತ್ಯಂತೋಪಯುಕ್ತವಾದುದರಿಂದ ಪ್ರತಿಯೊಬ್ಬರೂ ಉಪಯೋಗಿಸಲಿಕ್ಕೆ ಯೋಗ್ಯವಾಗಿದೆ. ಪೆಟ್ಟಿ ೧ಕ್ಕೆ ೮ ಆಣೆ ವಿ. ಪಿ. ಸಾಸಲು ೩ ಆಣೆ.

೧೬. ಸಂಜೀವನ ಮಾತ್ರೆಗಳು—ಮಕ್ಕಳಿಗೆ ಜ್ವರ, ನರಗಳಸೆಳತ, ವಿರೇಚನದಿರುವದು, ಅಧಿಕವಾಗಿ ಹೋಗುವದು, ಛಳಿ, ಕೆಮ್ಮಲು, ತಲೆನೋವು, ನೆಗಡಿ, ಇನ್ನೂ ಮಕ್ಕಳಿಗೆ ಬರುವ ಅಜೀರ್ಣಸಂಬಂಧವಾದ ರೋಗಗಳಿಗೆ ಒಳ್ಳೇ ಮದ್ದಾಗಿರುವದು. ಇದನ್ನು ದೊಡ್ಡವರು ಸಹ ಉಪಯೋಗಿಸಬಹುದು. ಸೀಸೆ ೧ಕ್ಕೆ ೧೦ ಆಣೆ ವಿ. ಪಿ ಛಾರ್ಜು ೩ ಸೀಸೆ ವರೆಗೂ ೫ ಆಣೆ.

೧೭. ಗೋರೋಜನ ಮಾತ್ರೆ—ಎಲ್ಲಾ ವಿಧವಾದ ಜ್ವರಗಳಿಗೂ, ವಿಷಮಶೀತಜ್ವರ, ಎರಡರ ಜ್ವರ, ಪ್ರತಿದಿನ ಜ್ವರ, ಇವುಗಳಿಗೆ ಅದ್ವಿತೀಯವಾದ ಔಷಧವು, ಮಲನಾಡು ಜ್ವರ, ಹೊಟ್ಟೆಯಲ್ಲಿ ಗಡ್ಡೆ ಆಗಿ ಜ್ವರ, ಮಿದಳು ಶ್ವಾಸಕೋಶಗಳು ಕೆಟ್ಟದ್ದರೆ ಗುಣಮಾಡುವದು. ಮಕ್ಕಳಿಗೆ ಬರುವ ಜ್ವರ, ಅನಾಹಂಕ ಅತಿಸಾರ, ನರಗಳ ಸೆಳತ, ನಿದ್ರಾಭಾರವಿರೋಣ, ಹೆಚ್ಚಾಗಿ ಹೋಗುವದು, ಛಳಿ, ಕೆಮ್ಮಲು, ತಲೆನೋವು, ಮಕ್ಕಳಿಗೂ ದೊಡ್ಡವರಿಗೂ ಅಜೀರ್ಣ, ಇವುಗಳನ್ನು ಪರಿಹಾರ ಮಾಡುವದು. ಸೀಸೆ ೧ಕ್ಕೆ ೧೦ ಆಣೆ ವಿ. ಪಿ. ಛಾರ್ಜು ೩ ಸೀಸೆ ವರೆಗೂ ೫ ಆಣೆ.

೧೮. ಚರ್ಮರೋಗಕ್ಕೆ ಔಷಧ—ಮಕ್ಕಳಿಗೆ ಬರುವ ಕರಪಾನು, ತುರಿ, ಹುರುಕಾಲು, ಕಜ್ಜಿ, ಆನೆಕಜ್ಜಿ ಮತ್ತು ದೊಡ್ಡವರಿಗೆ ಬರುವ ನಾನಾ ವಿಧವಾದ ಕಜ್ಜಿ ಸಂಬಂಧವಾದ ವ್ಯಾಧಿಗಳು, ಸಂಡು, ತಲೆಯಲ್ಲಿಯೂ ಇತರ ಕಡೆಗಳಲ್ಲಿಯೂ ಬಹಳ ನೋವನ್ನೂ ಅನಂತರ ಉರಿಯನ್ನೂ ಉಂಟುಮಾಡುವ ಎಲ್ಲಾ ಹುಣ್ಣುಗಳೂ ಹೊರಗೆ ಹಚ್ಚುವದರಿಂದಲೇ ಜಾಗ್ರತೆಯಾಗಿ ವಾಸಿಯಾಗುವವು. ಬೆಲೆ ಸೀಸೆ ೧ಕ್ಕೆ ೮ ಆಣೆ. ವಿ. ಪಿ. ಛಾರ್ಜು ೨ ಬಾಟ್ಲಿ ವರೆಗೆ ೫ ಆಣೆ,

೧೯. ಕೇಶಸುವಾಸಿನಿ.—ಈ ತೈಲವು ಪೂರ್ವಪಶ್ಚಿಮ ದೇಶಗಳ ಅಮೂಲ್ಯ ಸುವಾಸನಾ ದ್ರವ್ಯಯುಕ್ತವಾಗಿ ತುಂಬಾ ಪರಿಮಳ ಕೊಡುವಂಥಾದ್ದಾಗಿರುತ್ತದೆ ಇದರ ಉಪಯೋಗದಿಂದ ಕೂದಲು, ಮಿಾಸೆ ಕಣ್ಣು ರೆಪ್ಪೆ ಸಮೃದ್ಧಿಯಾಗಿ ಬೆಳೆಯುತ್ತವೆ. ತಲೆ ಮಿದಳು ಕಣ್ಣುಗಳಿಗೆ ತಂಪುಕೊಡುತ್ತದೆ. ಬೋಳುತಲೆ, ಸಂಡು ಮುಂತಾದ್ದನ್ನು, ವಾಸಿಮಾಡುತ್ತದೆ ವಿಲಾಯತೀ ಪರಿಮಳ ವಸ್ತುಗಳಮೇಲೆ ಪ್ರೀತಿ ಇರುವವರಿಗೆ ಅಚ್ಚು ಮೆಚ್ಚಾಗಿರುತ್ತದೆ. ಬೆಲೆ ರೂ. ೧ ವಿ ಪಿ ಛಾರ್ಜು ಎರಡು ಬಾಟ್ಲಿ ವರೆಗೆ ೫ ಆಣೆ

ಕಾಗದವನ್ನು ಇಂಗ್ಲಿಷ್ ಅಥವಾ ತೆನುಗಿನಲ್ಲಿ ಬರೆಯಿರಿ.

Apply to —P. SUBBAROY,
Porto Novo, South Arcot.

ವಿಳಾಸ —ಪಿ. ಸುಬ್ಬರಾಯ್,
ಪೋರ್ಟೊನೋವೋ, ದಕ್ಷಿಣ ಆರ್ಕಾಟ್ ಜಿಲ್ಲಾ.

ಮೈಸೂರು ಸೀಮೆಯಲ್ಲಿ ಪ್ಲೇಗಿನ ಸ್ಥಿತಿ.

೧೩—೪—೧೯೦೬ ರಿಂದ ೨೦—೪—೧೯೦೬ ರ ವರೆಗೆ

ಸ್ಥಳ.	ಪ್ಲೇಗ್ ತಗಲಿದ್ದು.	ಪ್ಲೇಗ್ ಸತ್ತದ್ದು.	ಹೋದವಾರ ಈ ವಾರದ ಸಂಖ್ಯೆ.	
ಬೆಂಗಳೂರು ಪಟ್ಟಣ	6	5	9	8
ಮೈಸೂರು ,,	0	0	1	3
ಬೆಂಗಳೂರು ಡಿಸ್ಟ್ರಿಕ್ಟು	0	0	13	11
ಮೈಸೂರು ,,	3	2	8	6
ಕೋಲಾರ್ ,,	1	2	4	3
ಕೋಲಾರ್ ಚಿನ್ನದ ಗಣಿಗಳು	4	1	1	4
ತುಂಕೂರು ಡಿಸ್ಟ್ರಿಕ್ಟು	0	0	1	3
ಹಾಸನ (ಹೊರಗಿನವು)	0	0	0	0
ಚಿತ್ರದುರ್ಗ ,,	0	0	0	0
ಕಡೂರ್ ,,	0	0	5	5
ಶಿವಮೊಗ್ಗ ,,	0	0	10	7
ಜುಮ್ಲಾ.	13	10	46	37

ಶಾಲಿವಾಹನ ಶಕ ವರುಷಂಗಳು ೧೮೨೮ ನೇ ಪರಾಭವ ಸಂವತ್ಸರದ ವೈಶಾಖ ಶುದ್ಧ ನವಮಿ ಗುರುವಾರದಿಂದ ವೈಶಾಖ ಬಹುಳ ಪಾಡ್ಯಮಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ

೧೯೦೬ ನೇ ಇಸವಿ ಮೇ.

ತಾ.	ವಾರ.	ತಿಥಿ.	ಘಳಿಗೆ.	ನಕ್ಷತ್ರ.	ಘಳಿಗೆ.	ತ(ಬ)ದಿಬು ವಾ
3	ಗುರು *	ನವಮಿ	1-26	ಉಹುರಿ	57 28	21
4	ಶುಕ್ರ	ಏಕಾದಶಿ	55-46	ಹ	27-28	22
5	ಶನಿವಾ ‡	ದ್ವಾದಶಿ	51-28	ಉ	25-29	23
6	ರವಿವಾ	ತ್ರಯೋ	46-30	ಹ	22-40	24
7	ಚಂದ್ರ ¶	ಚತುರ್ದಶಿ	40 59	ಚಿ	19-20	25
8	ಕುಜ ‖	ಪೌರ್ನ	35-2	ಸ್ವಾ	15 30	26
9	ಬುಧ ,,	ಪಾಡ್ಯ	26-58	ವಿ	11-24	27

* ಅಗ್ನಿ ನಕ್ಷತ್ರಪ್ರವೇಶ. ಸ್ವಾರ್ತಏಕಾದಂ, ಮಂಡ್ಯದಲ್ಲಿ ಜನಾರ್ದನಸ್ವಾಮಿರಥ ‡ ವೈಷ್ಣವಏಕಾದಶಿ, ಪರಿವಾಸರ, ಉತ್ಪಾತಯೋಗ ‡ ಪ್ರದೋಷ, ಮೇಲುಕೋಟೆ ಅಪ್ರಮೇಯಸ್ವಾಮಿ ರಥ ¶ ಶ್ರೀ ನೃಸಿಂಹಜಯಂತಿ, ಬಿಳಿಗಿರಿ ರಂಗಸ್ವಾಮಿ ರಥ. ‖ ವ್ಯಾಸಪೂರ್ಣಿಮಾ ,, ಲಕ್ಷ್ಮೀರಮಣಸ್ವಾಮಿ ರಥ

ಪೇಟೇ ಧಾರಣೆ.

ದಿನಸಿ.		ಮೈಸೂರು,	ಬೆಂಗಳೂರು
ಕಡ್ಡೀ ಅಕ್ಕಿ ಪಲ್ಲಾ ೧ಕ್ಕೆ	ರೂ	೧೩-೦-೦	೧೪-೮-
ಕೆಂಬತ್ತಿ ಅಕ್ಕಿ ಅವಲ್	..	೧೩-೬-೦	೧೩-೧೨-
,, ದಯಂ	..	೧೨-೮-೦	೧೩-೪-
ಜಾಪಾನ್ ಅಕ್ಕಿ	.	೧೨ ೮-೦	೧೭-೧೨-
ಸಣ್ಣಕ್ಕಿ ಅವಲ್	..	೧೪-೦-೦	೧೬-೦-
,, ದಯಂ	..	೧೩-೮-೦	೧೫-೦-
ತೊಗರೀ ಬೇಳೆ ಪಲ್ಲಾ ೧ಕ್ಕೆ	..	೧೦-೦-೦	೧೦-೮-
,, ದಯಂ	.	೯-೧೨-೦	೯-೮-
ಹೆಸರು ರಾಗಿ ಪಲ್ಲಾ ೧ಕ್ಕೆ	..	೬-೧೪-೦	೭-೦-
ಕಾರಾಗಿ	..	೬-೮-೦	೫-೧೨-
ಜೋಳ	..	೭-೪-೦	೮-೦-
ನಲಗಂಡೆ ಪಲ್ಲಾ ೧ಕ್ಕೆ	..	೯-೦-೦	೧೦-೪-
ಬಿಳೀ ಅವರೆ	.	೭-೧೦-೦	೮-೮
ಹೆಸರು	..	೧೦-೨-೦	೧೧-೪-
ಉದ್ದು	..	೧೨-೪-೦	೧೨-೪
ಕಡಲೆ	..	೧೦-೨-೦	೧೦-೦-೦-
ಎಳ್ಳು ಸೆ ೧೨೩ ಕ್ಕೆ	..	೧೯-೮-೦	೨೦-೦-
ಹುರುಳಿ	..	೭-೧೦-೦	೮-೦-
ಹರಳು ೧೨೩ ಸೇರಿಗೆ	..	೧೨-೧೨-೦	೧೨-೪-
ಸೀಗೇಕಾಯಿ ಮಣ ೧ಕ್ಕೆ	..	೩-೦-೦	೩-೧೦-
ಮೆಣಸಿನಕಾಯಿ	..	೪-೬-೦	೩-೮-
,, ದುಂಡು	..	೩-೭-೦	೩-೪-
ಬೆಲ್ಲ ದೊಡ್ಡ ಅಚ್ಚು	..	೪-೧೨-೦	ಮ ೧-೮
ಒಳ್ಳೆಣ್ಣೆ ಮಣ ೧ಕ್ಕೆ	..	೫-೬-೦	೪-೧೨-
ಹರಳೆಣ್ಣೆ ,,	.	೫-೦-೦	೬-೮
ಕೊತ್ತುಂಬರಿ ಪಲ್ಲಾ ೧ಕ್ಕೆ	..	೧೦-೮-೦	೧೦-೦-
ಉಪ್ಪು ,,	..	೬-೮-೦	೬-೧೨-
ಹುಣಸೇ ಹಣ್ಣು	..	೦-೧೨-೦	೦-೧೧-
,, ಹಳೇದು	..	೦-೮-೦	೦-೯-
ತುಪ್ಪ	..	೧೪-೪-೦	೧೨ ೦-
ಸೀಮೆಸುಣ್ಣ ಒಟ್ಟು ೧ಕ್ಕೆ	..	೫-೪-೦	೪-೦-
ತೆಂಗಿನಕಾಯಿ ೧೦೦ ಕ್ಕೆ	..	೫-೪-೦	೪-೬-
ಅಳಲೇಕಾಯಿ ಮಣ ೧ಕ್ಕೆ		೦-೧೨-೦	೦-೯-
ಅಂಟುವಾಳದ ಕಾಯಿ ಮಣ ೧ಕ್ಕೆ	..	೦-೧೨-೦	೦-೧೨-
ಚಿನ (ಪವನ್) ರೆಂಪು	..	೧೫-೪-೦	೧೫-೫-
,, ,, ಪಸಿಮೆ	.	೧೫-೧೦-೦	೧೫-೧೫-
,, ,, ಗಟ್ಟಿ ತೊಲ ೧ಕ್ಕೆ	..	೨೩-೧೨-೦	೨೪-೬-
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ	..	೭೨-೦-೦	೭೪-೦-

Printed and Published by the Rev E W. Thomson, M.A the Proprietor and Manager, Wesleyan Mission Press Mysore 3/5/1906.

ವೃತ್ತಾಂತ ಪತ್ರಿಕೆ.

REGISTERED No. 90

ಕ್ರಯ ೧ ದುಡ್ಡು — ಕ್ರಯ ೧ ದುಡ್ಡು

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಸಂಚಿಕೆ ೧೯ — ಮೈಸೂರು—ಸನ್ ೧೯೦೬ ನೇ ಇಸವಿ ಮೇ ತಾರೀಖು ೧೦ ನೇ ಗುರುವಾರ. — ಸಂಚಿಕೆ ೪೯

೫,೦೦೦ ಪವುನ್ ತ್ರೆಡ್ ದಾರ ಮಾತ್ರ ಇದೆ.

10-13

೧ ಚೇತೋಹರವಾದ ಸಿಲ್ಕ್ ಪರ್ಸ್ ೧ ಕ್ಕೆ ... ೧—೧೦—೦

೨ ಪರ್ಸ ಸೂತ್ರದ ,, ,, ,, ... ೧—೧೪—೦

೩ ಸುಪೀರಿಯರ್ , ,, ,, ... ೨—೦—೦

೪ ಸೋಪಾಂಸಟ್ ,, , ,, ... ೩—೬—೦

ಸಿಲ್ಕ್ ಟೋಪಿ ಪರ್ಸ ೧ ಕ್ಕೆ ೫—೦—೦ ಒಂದೇ ದಫಾ ೧೦

ತರಿಸಿಕೊಳ್ಳುವವರಿಗೆ ೬—೧೨—೦.

ಹೊಸ ನಮೂನೆ ಗೆಸ್ತು ಸ್ಟೆಡು, ಪ್ರೋಸ್ಟು ಕಾರ್ಡುಗಳು.

೧ ಸಿಂಗಲ್ ಕಲರ್ ೧೦೦ ಕ್ಕೆ ೦—೨—೬. ೧೦೦೦. ೧—೬—೦

೨ ಡಬಲ್ ಕಲರ್ ೧೦೦ ಕ್ಕೆ ೦ ೩—೦. ೧೦೦೦ ೧—೧೦—೦

ವಿ ಪಿ. ಮೂಲಕ ತರಿಸಿಕೊಳ್ಳುವವರು ಮಾತ್ರ ೧೦೦ ಕ್ಕೆ ೨೫ ಮುಂಚಿತವಾಗಿ ಕಳುಹಿಸದ ಹೊರತು ವಿ ಪಿ ಮೂಲಕ ಕಳುಹಿಸುವದಿಲ್ಲ.

ಟಿ. ಯು. ಪ್ರೇಮವಾಲ್ ಕಂಪನಿ, ಬೆಂಗಳೂರು ಸಿಟಿ.

ಪೋ ೯ ಮೋ ೯ ಸಿ ಯಾ.

ತಗಲುತ್ತಲೇ ನೋವು ಮಾಸಿಯಾಗುತ್ತೆ.

ಈ ಔಷಧಿಯು ಮನೆ, ಅರಮನೆ, ಕಾರ್ಖಾನೆ, ಆಸ್ಪತ್ರೆ, ಸ್ಕೂಲುಗಳು, ವಿದ್ಯಾಶಾಲೆ, ಹೋಟೆಲು, ಕಛೇರಿ, ಮುಂತಾದ ಸ್ಥಳಗಳಲ್ಲಾ ಇಷ್ಟೇ ಇರಬೇಕು ಇದಕ್ಕೆ ಸಮಾನವಾದ ಔಷಧ ಮತ್ತೊಂದಿಲ್ಲವೆಂಬುವದು ಲೋಕಪ್ರಸಿದ್ಧವಾಗಿದೆ

ಈ ತೈಲವು ಅತ್ಯಲ್ಪದಲ್ಲಿ ಜನರಿಗೆಲ್ಲಾ ಸುಲಭವಾಗಿ ಸಿಕ್ಕುವ ಔಷಧ ಇದನ್ನು ಉಪಯೋಗಿಸಿದ ದೊಡ್ಡ ಮನುಷ್ಯರು, ಡಾಕ್ಟರು, ಮುಂತಾದವರು ಇದರ ಗುಣವನ್ನು ಹೊಗಳಿ ಸರ್ಟಿಫಿಕೇಟುಗಳನ್ನು ಕೊಟ್ಟಿರುವರು. ನೋವು ಕಂಡರೆ ಇದನ್ನು ಹಚ್ಚಿದ ಕೂಡಲೇ ವಾಸಿಯಾಗುವದು.

ಈ ತೈಲವು ಅರೆ ತಲೆನೋವು, ಸೊಂಟನೋವು, ಪಾರ್ಶ್ವವಾಯು, ಮೂಲವ್ಯಾಧಿ, ಉಬ್ಬಸ, ಗಾಯಗಳು, ನರ ಹೊರಳುವದು, ಚೇಳು, ಕೀಲುವಾಯು, ಗುಳ್ಳೆಗಳು, ಹಲ್ಲುನೋವು, ಮುಖದ ಗುಳ್ಳೆ, ಊದುಗಳು, ಗಡ್ಡೆಗಳು, ರೋಗಗಳು, ಜಂಳುಕಚ್ಚು, ಸೊಳ್ಳೆ ಚೇಳು ಕಡಿದದ್ದು ಚುಚ್ಚುವದು, ಬೆಂಕಿಯಲ್ಲಿ ಸುಟ್ಟದ್ದು, ಕತ್ತಿ ಗಾಯ—ಇವೇ ಮೊದಲಾದ ನಾನಾ ಬಾಧೆಗಳನ್ನು ನಿವಾರಿಸುತ್ತದೆ ದಾವು ಹಚ್ಚಿಕೊಂಡು ಮಲಗಿದರೆ ಸೊಳ್ಳೆ ಹತ್ತಿರ ಬರುವದಿಲ್ಲ.

ಕ್ರಯ – ಸಣ್ಣ ಡಬ್ಬಿ ೧ ಕ್ಕೆ ೧ ರೂ., ದೊಡ್ಡದಕ್ಕೆ ರೂ. ೨, ಒಂದೇ ಸಲ ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಬಿಡುತ್ತಾರೆ. ರೂ ೨—೮ ಆಣೆ ಬಾಬ್ತು ಡಬ್ಬಿಯಲ್ಲಿ ೧ ಡಬ್ಬಿಯಲ್ಲಿರುವದಕ್ಕಿಂತ ೩ ರಷ್ಟು ಹೆಚ್ಚು ಔಷಧವಿರುತ್ತೆ. ೧—೮ ರ ೫ ಡಬ್ಬಿಗಳನ್ನು ತರಿಸಿಕೊಳ್ಳುವವರಿಗೆ ಟಪ್ಪಾಲ್ ಮಾಫ ಬಿಡುತ್ತೆ.

****

ಹೊಸವೆಲೆಸಿಯಾ ಬುಂಚೊಗ್ರೇಕೇಷನ್.

ಈ ತೈಲವು ಹಳೇ ನೋವುಗಳಿಗೆ ಉಪಯೋಗಿಸತಕ್ಕದ್ದು. ಹಚ್ಚಿದ ಕೂಡಲೇ ಇದನ್ನು ಒತ್ತಬೇಕಾದದು. ಇದರಲ್ಲಿ ರೋಗನೋವು ಗುಣಗಳು ಬಹು ಅಧಿಕವಾಗಿ ಇರುತ್ತವೆ. ಇದಕ್ಕಿಂತಲೂ ಇನ್ನೆರಡು ಗುಣಗಳಲ್ಲಿ ಹೊಸ ಭಾಗವಿರುತ್ತದೆ. ಇದನ್ನು ಬಹು ಬೇಗನೆ ನೀರಿಕೊಳ್ಳಬಲ್ಲದು. ಡಬ್ಬಿಗಳಲ್ಲಿ ತುಂಬಿದ್ದು, ೧ ರೂ ಗಳಿಂದುದರಂತೆ ಬೆಲೆ ಮಾಡಲ್ಪಡುವದು ೧೨ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫು. ಎಲ್ಲಾ ಷಾಪುಗಳಲ್ಲಿ ದೊರೆಯುವದು.

ಔಷಧಗಳ ವಿವರಣೆಯೂ, ಸರ್ಟಿಫಿಕೇಟುಗಳೂ ಉಳ್ಳ ಪುಸ್ತಕಗಳನ್ನು ಅಪೇಕ್ಷಿಸಿದರೆ ಕಳುಹಿಸುವೆವು.

ವಿಳಾಸ—ಕೊವೋಲಿಯಾ ಕಂಪನಿ, ೨೩ ಸೆಕಂಡು ಬೀಚ್ ಮದ್ರಾಸ್.

ಕೊಡಗು ದೇಶದ ಶ್ರೇಷ್ಠವಾದ ಉತ್ಕೃಷ್ಟ ಕಾಫಿಯು.

ಹುರಿಯದೆ ಇರುವದು ಅಥವಾ ಆಗತಾನೆ ಹುರಿದದ್ದು.

ನಿರವಧಿಯಿಂದ ಸ್ಥಳದಿಂದಲೆ ಸೆಟ್ಟಿಗೆ ರವಾನಿಸಲ್ಪಡುವದು.

35-16

ವ್ಯಾಪಾರದ ಬೆಗ್ಗುರ್

ಕಾಡುಕೋಣದ ತಲೆಯ ಮುದ್ರೆ ಇದೆ.

ಸಂಪೂರ್ಣವಾಗಿ ಯಂತ್ರದಿಂದಲೆ ಸಿದ್ಧಪಡಿಸಿದ್ದು ಬೆಗ್ಗುರ್ ಉಳ್ಳ ವಿಲುಸದ ಬೀಜ ಸುತ್ತಿಲ್ಲದಿರುವವು ಸ್ವಚ್ಛವಾದವುಗಳಲ್ಲ. ಅವು ನಮ್ಮದಲ್ಲ, ಏಜೆಂಟರುಗಳು ಬೇಕು, ಇಂಥವರಿಗೆ ಅಲಾಯಿದ ದರ. ಬರೆಯುವವರು ದಯವಿಟ್ಟು ಈ ಪತ್ರಿಕೆಯ ಹೆಸರನ್ನು ಸೂಚಿಸಿ.

ವಿಳಾಸ.—ಮ್ಯಾನೇಜರ್, ಮ್ಯಾಥಿಸನ್ಸ್ ಕಾಫಿ ವರ್ಕ್ಸ್, ಹುಣಸೂರು.

ಜ್ವ ರ ಹ ರ.

29-14

ಇದು ಸಾಧಾರಣ ಜ್ವರ. ಚಳಿಜ್ವರ, ಮೂರುಜ್ವರ, ಪಿತ್ಥಜ್ವರ, ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲವಿಧವಾದ ಜ್ವರಗಳನ್ನು ಬಹು ಬೇಗನೆ ವಾಸಿಮಾಡುವದು

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮರಾಮತ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್ ಟಿ. ವೆಂಕಟಪತಿ ಅಯ್ಯರವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨೦ ಔನ್ಸಿನ ಸೀಸೆಯು ತೀರಿಹೋಯಿತು. ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣ ಹೊಂದಿರುವರು. ಇನ್ನೂ ಜನಗಳು ಕಾಹಿಲೇ ಬೀಳುತ್ತಿರುವದರಿಂದ ದಯವಿಟ್ಟು ಇನ್ನೊಂದು ೨೦ ಔನ್ಸಿನ ಸೀಸೆಯನ್ನು ವಿ. ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದ್ದಾರೆ.

ಕ್ರಯ:—ಸೀಸೆ ೧ ಕ್ಕೆ ೮ ಆಣೆ, ೧ ರೂ., ೧—೮ ರೂ.; ರೂ. ೨—೧೨ ಆ., ೧೧ ರೂ.; ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು.

****

ಜಿ ಮು ೦ ಕ ಫೂ ನ ರ.

ಈ ಔಷಧವು ಅಜೀರ್ಣ, ಅತಿಭೇದಿ, ಸಾಧಾರಣ ಹೊಟ್ಟೆಕಳೆಯುವದು, ವಾಂತಿಭೇದಿ, ನಾನಾವಿಧದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು. ಇದು ಕೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಯೆ ಹೊಟ್ಟೆನೋವೆ ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ ಕ್ರಯದ ದರವು ಜ್ವರಹರ ಎಂಬ ಔಷಧದಂತೆಯೇ. ಸೀಸೆಗಳಲ್ಲಿ ದೊರಕುವದು

ಕೊಡಗಿನ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ನೆನ್ನೆಯ ದಿವಸ ಕಳುಹಿಸಿದ ನನ್ನ ಕಾಪೇದಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣಭೇದಿ, ಅಜೀರ್ಣ ರೋಗಿಷ್ಠರಿಗೆ ಕೊಡುತ್ತೇವೆ. ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಿದೆ. ಇದು ಬಹು ಒಳ್ಳೇ ಔಷಧವೆಂದು ಬರೆದಿದ್ದಾರೆ

ಈ ನಾಲ್ಕು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಷಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇದಲ್ಲದೆ ಕೆಳಗಿನ ವಿಳಾಸದಾತ್ರಲ್ಲಿ ವಿಶೇಷ:—

ಹೆಪ್ರಿಹಾಮರ ಗ್ರೇಟ್ ಇಂಡಿಯನ್ ಔಷಧಗಳ ಕಂಪೆನಿ,

ಸೆಕೆಂಡ್ ಬೀಚ್ ಲೈನ್, ಮದ್ರಾಸ್.

"ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ.

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜಂಟರ ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ (ಅಡ್ವಾನ್ಸು) .. .. .. ರೂ ೧—೦—೦

ಪರಸ್ಥಳದವರು ಆಫೀಸಿನಿಂದ ಅಂಚೆಯ ಮೇಲೆ ತರಿಸಿಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಟಪಾಲ್ ಸೇರಿ .. .. ರೂ. ೧—೧೪—೦

.. .. .. ,, ,, ೧—೧೫—೦

ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು.

ನಮ್ಮ ವಿಳಾಸ:—ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು.



ಅದ್ಭುತ ಜನರ ಪ್ರಶಂಸೆ ಬಾಚು!

[illegible]

ವಿಳಾಸ.—ಫ್ಲಾಗ್ ವಾಚ್ ಕಂಪೆನಿ, ಕಾರ್ನ್ ಟವನ್ ಮದರಾಸ್.

ಬೆಂಗಳೂರು ಚಿಕ್ಕಬಳ್ಳಾಪುರ ಲೈಟ್ ರೈಲ್ವೆ ಕಂಪನಿ ಲಿಮಿಟೆಡ್ ನಿಯಮಿತ ಮೂಲಧನ.

73—2

ಷೇರು ಒಂದಕ್ಕೆ ೧೫ ರೂಪಾಯಿಗಳು ಬೆಲೆಯುಳ್ಳ ೪೮ ಸಾವಿರ ಷೇರುಗಳಿಂದಾಗುವ ೧೨ ಲಕ್ಷ ರೂಪಾಯಿಗಳು. ಈ ಷೇರು ಮೊಬಲಗು ೪% ಅಥವಾ ಷೇರು ಒಂದಕ್ಕೆ ಒಂದು ರೂಪಾಯಿಯಂತೆ ೯ ಡಿವಿಡೆಂಡ್ ಕೊಟ್ಟು ೧೨ ಕಿಸ್ತುಗಳಲ್ಲಿ ಪಾವತಿ ಮಾಡತಕ್ಕದ್ದು. ಈ ಲೈನಿನ ಸರ್ವೆ ಪೂರೈಸಲ್ಪಟ್ಟಿದೆ.

ಮೈಸೂರು ಸರ್ಕಾರದವರು ಈಗ ಅವರು ಮಾಡಿರುವ ಟ್ರಿಸ್ಟ್ ಸ್ಟ್ಯಾಟಿಸ್ಟಿಕ್ಸ್‌ನಿಂದ ಈ ಲೈನಿನ ವರಮಾನ ನೇಕಡ ೭ ಕ್ಕಿಂತ ಕಮ್ಮಿ ಆಗಲಾರದೆಂದು ತೋರಿಬರುವ ಲೆಕ್ಕದ ಮೇರೆಗೆ ನಾಲ್ಕರಂತೆ ಬಡ್ಡಿ ಕೊಡುವಲ್ಲಿ ಈ ಕಂಪನಿಗೆ ಜಾಮೀನಾಗಿರುತ್ತೇವೆಂದೂ ದಯವಿಟ್ಟು ಲಿಖಿತ ಮೂಲಕ ತಿಳಿಸಿರುತ್ತಾರೆ

ಈ ಕಂಪನಿಯ ಷೇರುಗಳನ್ನು ಅಪೇಕ್ಷಿಸತಕ್ಕಂಥವರು ಈ ಕೆಳಗೆ ರುಜು ಮಾಡಿರುವವರಿಗೆ ಅರ್ಜಿಯನ್ನು ಮಾಡಿಕೊಳ್ಳಬೇಕು.

ಈ ಕಂಪನಿಯ ಷೇರುಗಳನ್ನು ಕೊಳ್ಳುವದಕ್ಕೆ ಸಬ್ ಏಜಂಟರಾಗಿ ಕೆಲಸಮಾಡಲು ಅಪೇಕ್ಷೆಯುಳ್ಳ ಖ್ಯಾತಿಯಾದ ಜನರು ಸಹಿ ಮಾಡುವರಿಗೆನೆ ಬರೆದುಕೊಳ್ಳಬಹುದು.

ಷೇರು ಹಣವನ್ನು ಚೀಫ್ ರ್ಯಾಕ್ವಿಸಿಂಗ್ ಏಜಂಟರಿಗೆ, ಅವರಿಂದ ಲಿಖಿತ ಮೂಲಕ ಹಣ ವಸೂಲು ಮಾಡಲು ಅಧಿಕಾರ ಹೊಂದಿರುವ ಸಬ್ ಏಜಂಟರಿಗೆ, ಬೆಂಗಳೂರು ಬ್ರಾಂಚು ಮದ್ರಾಸು ಬ್ಯಾಂಕಿಗೆ (ಈ ಕಂಪನಿಯ ಕ್ರೆಡಿಟ್ಟಿಗೆ), ಅಥವಾ ಮೈಸೂರು ಸೀಮೆಯ ತಾಲ್ಲೂಕು ಡಿಸ್ಟ್ರಿಕ್ಟ್ ಖಜಾನೆಗಳಿಗಾಗಲಿ ಪಾವತಿ ಮಾಡಬೇಕು. ಹಾಗೆ ಈ ಹಣವನ್ನು ತಾಲ್ಲೂಕು ಮತ್ತು ಡಿಸ್ಟ್ರಿಕ್ಟ್ ಖಜಾನೆಗಳಲ್ಲಿ ಕಟ್ಟಬಹುದೆಂದು ಮೈಸೂರು ಗವರ್ನಮೆಂಟಿನವರು ಅಪ್ಪಣೆ ಕೊಟ್ಟಿದ್ದಾರೆ.

ಷೇರುಗಳಿಗೆ ದರಖಾಸ್ತು ಮಾಡುವವರು ಅಪ್ಲಿಕೇಷನ್‌ಗಳ ಜೊತೆಯಲ್ಲಿ ಷೇರು ಒಂದಕ್ಕೆ ಒಂದು ರೂಪಾಯಿಯಂತೆ ಅಪ್ಲಿಕೇಷನ್ ಫೀ ರವಾನಿಸಬೇಕು. ಇದು ಷೇರು ಮೊಬಲಗಿನಲ್ಲಿ ಮುಜರೆ ಹಾಕಲ್ಪಡುವದು.

(ಸೈನ್) ಬಿ. ಪಿ ರಾಮಸ್ವಾಮಿ ಶೆಟ್ಟಿ, ಬಿ. ಎ.,

ಅಡ್ವೊಕೇಟ್, ಮತ್ತು ಬೆಂಗಳೂರು ಚಿಕ್ಕಬಳ್ಳಾಪುರ

ಲೈಟ್ ರೈಲ್ವೆ ಕಂಪನಿಯ ಚೀಫ್ ಏಜಂಟ್,

ನಗರ್ತಪೇಟೆ. ಬೆಂಗಳೂರು ಸಿಟಿ

P. SUBBROYA'S

World Renowned and most Efficacious Ayurvedic Medicines.

ಪಿ. ಸುಬ್ಬರಾಯರವರ ಲೋಕಪ್ರಸಿದ್ಧವಾದ ಮತ್ತು ಅತ್ಯಂತ ಗುಣಕಾರಿಯಾದ ಆಯುರ್ವೇದ ಔಷಧಗಳು.

11-26

೧. ಪುಷ್ಟಿರಸಾಯನ.—ಇದರ ಸೇವನೆಯಿಂದ ನರಗಳ ಸಂಬಂಧವಾದ ಮತ್ತು ಇತರ ವಿಧವಾದ ಎಲ್ಲಾ ಶರೀರದ ದುರ್ಬಲಗಳೂ ಹೋಗಿ, ಹೊಟ್ಟೆಯಲ್ಲಿ ಅಗ್ನಿ ಉಂಟಾಗಿ, ದೇಹವು ಪುಷ್ಟಿಹೊಂದುವದು. ಪುಷ್ಟಿಯನ್ನು ಕಳೆದುಕೊಂಡ ಚಿಕ್ಕವಯಸ್ಸಿನವರಿಗೆ ಇದು ಅತ್ಯ ಔಷಧವು. ಇದರಿಂದ ಶರೀರದ ಪ್ರತಿ ಅವಯವದ ನೋವೂ, ಆಶಕ್ತಿಯೂ ಹೋಗಿ, ಪುಷ್ಟಿಯೂ, ಬಲವೂ ಉಂಟಾಗುವವು. ಪಟ್ಟಿ ಒಕ್ಕೆ ರೂ. ೨ ವಿ. ಪಿ. ಛಾಂಗಿ ೬ ಆಣೆ.

೨೦. ಅತ್ಯುತ್ತಮವಾದ ಕಸ್ತೂರಿ —ಕಾಶ್ಮೀರದಿಂದ ತರಿಸಿರುವದು. ಅತ್ಯುತ್ತಮವಾದದ್ದು. ಮತ್ತು ಒಂದೇ ರಬಂ ಇರತಕ್ಕದ್ದು ತೊಲಾ ೧ಕ್ಕೆ ರೂ. ೩೪ ಚಿಲ್ರಿಯಾಗಿ ಒಂದು ರೂಪಾಯಿಗೂ ದೊರಕುತ್ತದೆ. ವಿ. ಪಿ. ಚಾರ್ಜು ಅಲಾಯಿದ.

೨೧. ಸುಗಂಧ ನಶ್ಯಪುಡಿ —ಈ ನಶ್ಯಪುಡಿಯು ಬಹಳ ಸುವಾಸನಾ ಯುಕ್ತವಾಗಿರೋಣದರಿಂದ ಇದನ್ನೇ ಪ್ರತ್ಯೇಕವಾಗಿ ಹಾಕಿಕೊಳ್ಳಬಹುದು. ನೀವು ದಿನವಹಿ ಹಾಕಿಕೊಳ್ಳುವ ಸಾಮಾನ್ಯ ನಶ್ಯಕ್ಕೆ ಈ ಸುಗಂಧಪುಡಿಯಲ್ಲಿ ಒಂದೆರಡು ಚಿಟಿಕೆಯಷ್ಟನ್ನು ಬೆರಸಬೇಕು. ಹೀಗೆ ಬೆರಕೆಮಾಡಿದರೆ ನಶ್ಯವು ಬಹು ಸುವಾಸನೆಯುಳ್ಳದ್ದಾಗಿಯೂ ಮನೋಹರವಾಗಿಯೂ ಆಗುವುದು ಇದರಿಂದ ನಶ್ಯಹಾಕಿಕೊಳ್ಳುವವರ ಬಳಿ ಬರುವವರಿಗೆ ಕೆಟ್ಟವಾಸನೆ ಇರುವುದೇ ಇಲ್ಲ. ಸುವಾಸನೆಯು ಬಹಳ ಹೊತ್ತು ಇರುತ್ತದೆ. ಈ ಪುಡಿ ಬೆರಸಿದ ನಶ್ಯ ಬಹಳ ಕಾಲದ ತನಕ ಕೆಡುವುದಿಲ್ಲ. ಇಂಥಾ ನಶ್ಯಹಾಕಿಕೊಂಡಲ್ಲಿ ಶೀತ, ತಲೆನೋವು, ವಾತ ಮೊದಲಾದವು ನಿವಾರಣೆಯಾಗುತ್ತವೆ. ಆಗಾಗ್ಗೆ ನಶ್ಯಹಾಕಿಕೊಳ್ಳಬೇಕೆಂಬ ಇಚ್ಛೆಯನ್ನು ಕಡಿಮೆಮಾಡುವುದು ಇದರಲ್ಲಿ ನವಸಾಗರ ಖಂಡಿತವಾಗಿ ಸೇರಿರುವುದಿಲ್ಲ. ಇಂಥಾ ಒಂದು ಡಬ್ಬಿ ನಶ್ಯವು ಒಂದು ತಿಂಗಳ ತನಕ ಬರುತ್ತೆ. ಕ್ರಯ ಒಂದು ಡಬ್ಬಿಗೆ ೬ ಆಣೆ ೧ ರಿಂದ ೩ ಡಬ್ಬಿ ತನಕ ವಿ. ಪಿ. ಚಾರ್ಜು ೩ ಆಣೆ ಹೆಚ್ಚು. ವಿ ಪಿ ಛಾರ್ಜು ೬ ರಿಂದ ೬ ಡಬ್ಬಿ ತನಕ ೫ ಆಣೆ. ೬ ರಿಂದ ೧೨ ಡಬ್ಬಿ ವರೆಗೆ ವಿ ಪಿ ಛಾರ್ಜು ೭ ಆಣೆ

೨೨ ರಕ್ಷಾಮೃತಂ—ಸಸ್ಯವರ್ಗಗಳಲ್ಲಿ ಸೇರಿದ ಅನೇಕ ಅಪೂರ್ವ ಮೂಲಿಕೆಗಳಿಂದ ಮಾಡಲ್ಪಟ್ಟರುವ ಈ ಚೂರ್ಣವು ಕಾಫಿ, ಟೀಯಿಲೆಗೆ ಬದಲಾಗಿ ಉಪಯೋಗಿಸುವುದಕ್ಕೋಸ್ಕರವೇ ತಯಾರ್ಮಾಡಲ್ಪಟ್ಟಿರುತ್ತದೆ ಕಾಫಿ, ಟೀಯಿಲೆಗಳಲ್ಲಿರುವ ದುರ್ಗುಣಗಳು ಇದಕ್ಕಿಲ್ಲ, ಕಾಫಿ ಪುಡಿಯನ್ನು ಯಾವ ಕ್ರಮದಲ್ಲಿ ಉಪಯೋಗಿಸುತ್ತೀವೋ ಆ ಕ್ರಮದಲ್ಲಿಯೇ ಇದನ್ನೂ ಉಪಯೋಗಿಸಿದರೆ ವಿಶೇಷ ರುಚಿಕರವಾದ ಪಾನವಾಗುವುದು. ಶಿಶುಗಳು ಮೊದಲುಗೊಂಡು ವೃದ್ಧಾಪ್ಯದಲ್ಲಿರುವವರ ವರೆಗೆ ಎಲ್ಲಾ ವಯಸ್ಸಿನ ಸ್ತ್ರೀಪುರುಷರೂ ಉಪಯೋಗಿಸಬಹುದಾಗಿದೆ.

ಜ್ವರ, ಸನ್ನಿ, ಬಿಸರು, ಸೆರಿಗೆ, ವಾಂತಿಭೇದಿ, ಈ ಮೊದಲಾದವುಗಳು ಸಂಭವಿಸಿರುವ ಕಾಲಗಳಲ್ಲಿಯೂ ಈ ರಕ್ಷಾಮೃತ ಚೂರ್ಣದ ಕಷಾಯವನು ಹಾಲನ್ನು ಬೆರಸಿಯಾಗಲಿ ಬೆರಸದೆಯಾಗಲಿ ಸಮಯಾನುಸಾರವಾಗಿ ಸೇವಿಸಿದರೆ ಜನರನ್ನು ಸಮಸ್ತ ವ್ಯಾಧಿಗಳಿಂದಲೂ ಖಂಡಿತವಾಗಿ ಬಿಡುಗಡೆ ಮಾಡುವುದಲ್ಲದೆ, ಯಾವದೊಂದು ರೋಗವೂ ಕಾಲುಹಾಕಿಕೊಳ್ಳದಂತೆ ಕಾಪಾಡುವುದು ಪಿತ್ತವಾಯುವು, ಗೂರ್ಲು ಉಬ್ಬಸವು, ಕ್ಷಯವು, ಅಜೀರ್ಣವು, ಮಲಬದ್ಧತೆಯು, ತಲೆನೋವು ಈ ಮೊದಲಾದ ರೋಗಗಳು ನಿವಾರಣೆಯಾಗುತ್ತವೆ ಪ್ರಾಣಾಧಾರವಾಗಿ ಇರುವಂಥಾ ರಕ್ತವನ್ನು ಶುದ್ಧಿಮಾಡಿ, ಧಾತುವನ್ನು ವೃದ್ಧಿಪಡಿಸಿ, ದೇಹಾರೋಗ್ಯವನ್ನು ಕೊಡುತ್ತದೆ. ಅಗ್ನಿಮಾಂದ್ಯ ಅಳ್ಳೆಪರೆಗೂ, ಮಧುಮೂತ್ರ ಮತ್ತು ಅತಿಮೂತ್ರ ರೋಗಗಳಿಗೆ ವಿಶೇಷ ಅಪೂರ್ವವಾದಂಥಾ ಚೂರ್ಣವು ಇದನ್ನು ಬಿಟ್ಟರೆ ಬೇರೊಂದಿಲ್ಲ.

ಇದನ್ನು ಕ್ರಮಾನುಸಾರ ತಪ್ಪದೆ ಉಪಯೋಗಿಸುತ್ತಾ ಬಂದರೆ ಮಧುಮೂತ್ರ ರೋಗಿಗಳ ಶರೀರದಿಂದ ಹೊರಡುವ ಜಿನಿರಿನಲ್ಲಿ ರಕ್ತಕ್ಕೆ ಸಕ್ಕರೆಯನ್ನೂ ವಿಶೇಷವಾದ ಬೆವರನ್ನೂ ಕಡಿಮೆ ಮಾಡಿ, ಮೂತ್ರರೋಗದ ಬೇರನ್ನೇ ನಿರ್ಮೂಲ ಮಾಡುವುದು ದೇಹದ ಉಷ್ಣವನ್ನು ಶಾಂತಿಮಾಡುವುದು, ಮೆದುಳನ್ನು ಬಲಪಡಿಸಿ ಜ್ಞಾಪಕಶಕ್ತಿಯನ್ನು ವೃದ್ಧಿಗೊಳಿಸುವುದು. ವಿದ್ಯಾರ್ಥಿಗಳು, ವಕೀಲರು, ಉದ್ಯೋಗಸ್ಥರು, ವಿರೋಧಕಾರಿಯಾದ ಗುಣವುಳ್ಳ ಕಾಫಿ, ಟೀಯಿಲೆಯನ್ನು ಖಂಡಿತವಾಗಿ ಬಿಟ್ಟು, ಈ ರಕ್ಷಾಮೃತ ಚೂರ್ಣವನ್ನೇ ಉಪಯೋಗಿಸುತ್ತಾ ಬಂದಲ್ಲಿ ಇದು ಅಪೂರ್ವವಸ್ತುವಾಗಿ ಪರಿಣಮಿಸುವುದು ಇಪ್ಪತ್ತು ದಿನಗಳಿಗೆ ಸಾಕಾಗುವಷ್ಟು ಚೂರ್ಣವುಳ್ಳ ಡಬ್ಬಿ ಒಕ್ಕೆ ಕ್ರಯ ೬ ಆಣೆ. ವಿ. ಪಿ. ಛಾರ್ಜು ೩ ಆಣೆ ಹೆಚ್ಚಾಗುವುದು. ಮುಂಗಡ ೪ ಆಣೆ ಸ್ಟಾಂಪುಟ್ಟು ಬರೆದಲ್ಲಿ ಒಂದು ಸಣ್ಣ ಚೂರು ಕಳುಹಿಸಲ್ಪಡುತ್ತೆ.

ಕಾಗದವನ್ನು ಇಂಗ್ಲಿಷ್ ಅಥವಾ ಕನ್ನಡದಲ್ಲಿ ಬರೆಯಿರಿ.

Apply to:—**P. SUBBAROY,**

Porto Novo, South Arcot.

ವಿಳಾಸ:—ಪಿ. ಸುಬ್ಬರಾಯ್,

ಪೋರ್ಟನೋವೋ, ದಕ್ಷಿಣ ಆರ್ಕಾಟ್ ಜಿಲ್ಲಾ.

CHAMBERLAIN'S PAIN BALM

ಚೇಂಬರ್ಲೈನ್ ಯವರು ಮಾಡಿದ ನೋವುಹರ ಔಷಧವು.



16-18

ಬೆನ್ನೆಲುಬಿನಲ್ಲಿನ ನೋವು, ಹಲ್ಲುಗಳಲ್ಲಿ ಆಗುವ ನೋವು, ಖಂಡಗಳಲ್ಲಿ ಹುಟ್ಟುವ ನೋವು, ತರಚು ಪೆಟ್ಟಾದ ಕಡೆಗಳ ನೋವು, ವಾಯುನೋವು—ಇವುಗಳನ್ನೆಲ್ಲಾ ಸಂಪೂರ್ಣವಾಗಿ ನಾಶಮಾಡುವಂಥಾ ಔಷಧ.

ವಾಯುನೋವೆಂದರೇನು?

ಕೀಲುಗಳಲ್ಲೂ ಮಾಂಸಖಂಡಗಳಲ್ಲೂ ಗಾಯವಾಗುವುದು, ಊದಿಕೊಳ್ಳುವುದು, ಕಠಿಣವಾಗಿ ಸೆಳೆಯುವ ಖಂಡಗಳಲ್ಲಿ ಇರಿಯುವುದು, ವಿಶ್ರಾಂತಿಕೊಡದೆ ಇರುವುದು, ನಿದ್ದೆ ಕತ್ತದೆ ಇರುವುದು—ಇದೇ. ಇದೆಲ್ಲಾ ನಿಮಗೆ ಯಾವಾಗ ಉಂಟಾಗುವುದೋ ಆಗ್ಗೆ ನಿಮಗೆ ವಾಯುರೋಗ ಬಂದಿದೆ ಎಂದು ತಿಳಿಯತಕ್ಕದ್ದು.

ಆಗ ಚೇಂಬರ್ಲೈನ್ ಯವರು ಮಾಡಿದ ನೋವುಹರ ಔಷಧವನ್ನು ಉಪಯೋಗಿಸಿ.

ಮೊದಲನೇ ಸಲ ಇದನ್ನು ಹಾಕಿ ಉಜ್ಜಿದ ಕೂಡಲೆ ಹಿತಕರವಾದ ಒಂದು ತರಹಾ ಕಾವು ಮೈಯೆಲ್ಲಾ ವ್ಯಾಪಿಸುತ್ತದೆ ಒಡನೆಯೇ ನೋವೆಲ್ಲಾ ಸಂಪೂರ್ಣವಾಗಿ ಪರಿಹರಿಸಲ್ಪಡುತ್ತದೆ. ಮನಸ್ಸಿಗೆ ಉಲ್ಲಾಸವಾಗುತ್ತದೆ ಅದನ್ನೇ ಆಗಿಂದಾಗ್ಗೆ ಹಾಕಿ ಉಜ್ಜುತ್ತಾ ಬಂದರೆ ಈ ವಾಯುವಿನ ಹುಟ್ಟನ್ನೇ ಕಿತ್ತು ಹಾಕಿಬಿಡುವುದು

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ.

ಕೈಯಿಂದ ಮುಟ್ಟಿದ್ದೇನೂ ಅಲ್ಲ.

ಇದು ಎಲ್ಲೆಲ್ಲೂ ಬಿಕರಿಯಾಗುವುದು. ಸಣ್ಣ ಶೀಸೆಗೆ ೧ ರೂಪಾಯಿ. ದೊಡ್ಡ ಶೀಸೆಗೆ ೨ ರೂಪಾಯಿ

ಬಾಡಿಗೆಗೆ ಅಥವಾ ಕ್ರಯಕ್ಕೆ

73—2

ಮೈಸೂರು ದೊಡ್ಡಪೇಟೆ ಕಂಬಿಗಾರ್ ಬೀದಿಯಲ್ಲಿರುವ ಅಣ್ಣಪ್ಪನವರ ಮುನಿಸಿಪಲ್ ೬೬೧ ನೇ ನಂ॥ ಮಳಿಗೆ ಮನೆಯನ್ನು ಬಾಡಿಗೆಗಾದರೂ ಖರೀದಿಗಾದರೂ ಕೊಡುತ್ತಾರೆ. ಇಷ್ಟವುಳ್ಳವರು ಎಲ್ಲಾ ವಿಷಯವನ್ನು ದೊಡ್ಡಂಗಡಿ ಸ್ಥಳದಲ್ಲಿರುವ ಮ॥ ರಾ॥ ಬಾತ್ರೆ ಅಂಗಡಿ, ಸಾಹುಕಾರ್ ಚಂದ್ರಪ್ಪನವರಲ್ಲಿ ತಿಳಿಯ ಬಹುದು ಪಾತ್ರೆ ಅಂಗಡಿ ಅಣ್ಣಪ್ಪ.

ಸ್ವತ್ತುಗಳ ಸಹಾಧೀನದ ತಕ್ಕೆ ನೋಟೀಸ್.

77 2

ಮೈಸೂರು ನಜರ್ಬಾದಿನಲ್ಲಿರುವ ಟೆಲಿಗ್ರಾಫ್ ಪಿರ್ಸ ಸೆಂಕ್ಟಪ್ಪನವರು ಜೆಟ್ಟಿಯು ತಿಳಿಸುವದೇನೆಂದರೆ—ನಾನು ನಾಲ್ಕೂವರ ಅಣ್ಣತಮ್ಮಂದಿರು. ನಮ್ಮ ಆಸ್ತಿ ವಿಭಾಗವಾಗಿಲ್ಲ. ನಮಗೆ ನಜರ್ಬಾದ್ ಮೊಹಲ್ಲಾಯಲ್ಲಿ ಮೂರು ಮನೆಗಳೂ ಅಲಹಳ್ಳಿ ಬಂಗಲಿ ಪಕ್ಕದಲ್ಲಿ ಒಂದು ತೋಟವೂ ಇರುತ್ತವೆ ಈ ಸ್ವತ್ತುಗಳನ್ನು ನನ್ನ ಅನುಮತಿ ಇಲ್ಲದೆ ಯಾರೂ ಯಾವ ವಿಧದಲ್ಲಿ ಪಡೆಯಕೂಡದು. ಹಾಗೆ ಪಡೆದರೆ ನನ್ನ ಎಲ್ಲಾ ನಷ್ಟಕ್ಕೂ ಗುರಿಯಾಗುತ್ತಾರೆ. ಗ॥ ಟೆ ಪಿರ್ಸ ಸೆಂಕಟಪ್ಪನಜೆಟ್ಟಿ

ರಬ್ಬರ್ ಸ್ಟಾಂಪುಗಳು.

13-11

ನಮ್ಮ ಕಂಪೆನಿಯಲ್ಲಿ ತಯಾರ್ಮಾಡಲ್ಪಡುವ ಇಂಗ್ಲಿಷ್ ಮೇಡ್ ರಬ್ಬರ್ ಸ್ಟಾಂಪುಗಳಿಗೆ ದರಖಾಸ್ತು ಕಳುಹಿಸತಕ್ಕವರಿಗೆ ಅರ್ಧ ಕ್ರಯಕ್ಕೆ ತಯಾರಿಸಿ ಕಳುಹಿಸುತ್ತೇವೆ.

ಬಾದಾಮಿ, ರತ್ನದ, ಚಚ್ಚೌಕ, ಯಾವ ಆಕಾರವಾದರೂ ಅದರಲ್ಲಿ ಬೇಕಾದ ಅಕ್ಷರಗಳನ್ನು ಹಾಕಿ, ಸುಂದರವಾದ ರಬ್ಬರ್ ಸ್ಟಾಂಪು ೧, ಇಂಕಿ ಸೀಸೆ ೧, ರಬ್ಬರ್ ಸ್ಟಾಂಪ್ ಇರಿಸುವ ಪೆಟ್ಟಿಗೆ ೧, ಬ್ರಷ್ ೧, ಬ್ಯಾಡ್ ೧, ಇವುಗಳ ಸಹಿತ ಕ್ರಯ ರೂ. ೧—೪—೦; ಪೋಸ್ಟೇಜು ೩ ಆಣೆ.

ವಿಳಾಸ:—ಮ್ಯಾನೇಜರ್, ರಬ್ಬರ್ ಸ್ಟಾಂಪ್ ಮ್ಯಾನುಫ್ಯಾಕ್ಚರಿಂಗ್ ಕಂಪೆನಿ, ಪಾರ್ಕ್ ಟೌನ್, ಮದ್ರಾಸ್

ತ್ವರೆಮಾಡಿರಿ! ಬಿಡಬೇಡಿರಿ!

ಇಂಥಾ ಸಮಯ ಮುಂದೆ ಸಿಗಲಿಕ್ಕಿಲ್ಲ 68-3

ರಾಸ್ಕೋಪ್ ಸಿಸ್ಟಂ ಲಿವರ ವಾಚ್.

ಬಂದೋಬಸ್ತು. ೩ ವರುಷ ಕ



ಇದರ ಸಂಗಡ ಸ್ಪ್ರಿಂಗ್, ಕನ್ನಡಿ, ಪೆಟ್ಟಿಗೆ, ಕೀಗೆ ೩ ನವಾಸು ಕಳುಹಿಸುತ್ತೇವೆ. ಟಿ. ಬಿ. ಬೇರೆ. ಒಂದೇ ಸಾರಿ ೩ ವಾಚು ತರಿಸಿಕೊಂಡರೆ ಟಿ. ಬಿ. ಮಾಫಿ. ೬ ವಾಚು ತರಿಸಿಕೊಂಡರೆ ೧ ವಾಚು ಬಕ್ಷೀಸು ವಾಚಿಗೆ ಬೇಕಾಗುವ ಸರಪಣಿಯು ಕಿಮ್ಮತ್ತು ೦—೪—೦

ಮುಲಾಮಿಯದ್ದು . . . . . ೦—೮—೦

ಬೆಳ್ಳಿಯ ಕವಚ . . . . . ೦—೮—೦

ವಿ. ಪಿ. ಇಂದಲೂ ರವಾನಿಸುತ್ತೇವೆ.

ವಿಳಾಸ:—ಜೆಂ. ಯಲ್. ಜೋಶಿ. ಅಂಡ್ ಕೋ.

ಪೋಸ್ಟ್ ೩೩೯., ಜಿಲ್ಲಾ ಉತ್ತರ ಕಾನಡಾ.

ಗ್ರಂಥಸಂಗ್ರಹ.

78-1

ಐತಿಹಾಸಿಕ, ತತ್ವಶಾಸ್ತ್ರ, ಕಲಾಕೌಶಲ, ವೈದ್ಯಕ, ಈ ವಿಷಯಗಳನ್ನು ವರ್ಣಿಸುವಂಥ ತ್ರೈಮಾಸಿಕ ಪುಸ್ತಕವು ವಾರ್ಷಿಕ ಚಂದಾ (ಅಂಚೆ ಹಾಸಲು ಸೇರಿ) ಪೋಷಿತರಿಗೆ ೨ ರೂ, ಇತರರಿಗೆ ೧ ರೂ ೪ ಆಣೆ. ಕನ್ನಡ ಭಾಷಾಭಿಮಾನಿಗಳು ಇದಕ್ಕೆ ಉದಾರಾಶ್ರಯವನ್ನು ಕೊಡುವರೆಂದು ನಂಬಿದ್ದೇವೆ

ವಿಳಾಸ—ಆರ್. ಕೆ. ಇನಾಮತಿ, ಅಣ್ಣಿಗೇರಿ, ಧಾರವಾಡ ಡಿಸ್ಟ್ರಿಕ್ಟ್

ಇಗೋ ನೋಡಿ, ಅಪರೂಪವಾದ ಹೊಸಪುಸ್ತಕ!

61 4

"ಶ್ರೀ ಚಾಮರಾಜೇಂದ್ರ ಒಡೆಯರವರ ಚರಿತ್ರೆ" ಎಂಬ ಪುಸ್ತಕವು ಕನ್ನಡವನ್ನು ಕಲಿತವರಕ್ಕೆ ಪ್ರತಿಯೊಬ್ಬ ಮನುಷ್ಯರ ಓದಲಿಕ್ಕೆ ಸರ್ವಕರವಾದದ್ದಾಗಿದೆ. ಮೈಸೂರು ಸಂಸ್ಥಾನದ ಶ್ರೇಯಸ್ಸೂ, ರಾಜವಂಶೀಯರ ಪೂರ್ವ ಚರಿತ್ರೆಯೂ, ಲೇಟ್ ಚಾಮರಾಜೇಂದ್ರ ಒಡೆಯರವರ ಅಂತರಂಗ ಬಹಿರಂಗ ಕಾರ್ಯಗಳೂ ಅವರಿಗಿದ್ದ ಅಸಾಧಾರಣವಾದ ಪ್ರಜಾ ವಾತ್ಸಲ್ಯವೂ, ಅವರ ಕಾಲದಲ್ಲಿ ನಡೆದ ನಾನಾ ಉತ್ಸವಾದಿಗಳೂ ಬಹು ಹೃದಯಂಗಮವಾಗುವಂತೆ ವಿವರಿಸಲ್ಪಟ್ಟಿವೆ. ಪ್ರಜಾವರ್ಗ ಸಾಮಾನ್ಯರಾದವರೂ ಮಹಾ ಮಾತೃಶ್ರೀಯವರೂ ಈ ಪುಸ್ತಕವನ್ನು ನೋಡಿ ಬಹಳ ಸಂತೋಷಪಟ್ಟಿದ್ದಾರೆ. ಇದರಲ್ಲಿ ಸರ್ಕಾರಿ ಐರನವರು ತಮ್ಮ ಮಿತ್ರರುಗಳಿಗೆ ಬರೆದ ಅನೇಕ ಕಾಗದಪತ್ರಗಳೂ, ವೈಸ್ರಾಯ ರವರು ಮಹಾರಾಜರಿಗೆ ಬರೆದ ಸ್ನೇಹಪತ್ರಿಕೆಗಳೂ, ಮಹಾರಾಜರವರು ಮಾಡುತ್ತಿದ್ದ ಸ್ವೀಚು ಮುಂತಾದವುಗಳೂ ಆಕರ್ಷಣೀಯವಾದವು ಇದರಲ್ಲಿ ರತ್ನಕ್ಕೆ ಅಪೂರ್ವವಾದ ಚಿತ್ರಗಳು ಇಂಗ್ಲೆಂಡಿನಲ್ಲಿ ನೇತ್ರಾನಂದಕರವಾಗಿ ತಯಾರ್ಮಾಡಿಸಿದವುಗಳಾಗಿ ಈ ಪುಸ್ತಕಕ್ಕೆ ವೈಶಿಷ್ಟ್ಯ ಸಂಸ್ಥಾನದ ಪ್ರತಿಯೊಂದು ಮನೆಯಲ್ಲೂ ಇರಬೇಕಾದ್ದು ಒಂದಾವರ್ತಿ ಓದಿದರೆ ಪುನಃ ಪುನಃ ಓದುವಂತೆ ಮನಸ್ಸನ್ನು ಆಕರ್ಷಿಸುವದು ಇದರ ಬೆಲೆ ೧—೪—೦ ಅಂಚೆ ಹಾಸಲು ಸೇರಿ ವಿ ಪಿ ಮೂಲಕ ೧—೧೦—೦

ವಿಳಾಸ —ಎಂ ಶಿಂಗ್ರಯ್ಯ, ಕೃಷ್ಣರಾಜಮೊಹಲ್ಲಾ ಮೈಸೂರು

೧೮೭೩ ರಿಂದ ೧೯೦೬ ವರೆಗೆ.

ಕಾಲದ ಪರೀಕ್ಷೆ!

ಮೂವತ್ತೇಳು ವರ್ಷಗಳಿಗಿಂತಲೂ ಹೆಚ್ಚಾಗಿ

(ಸ್ಕಾಟ್ಸ್ ಇಮಲ್‌ಷನ್)

ಎಂಬೀ ಸೇವನಾ ಔಷಧಿಯನ್ನು ಘನ ಪಂಡಿತರೆಲ್ಲಾ ಅನೇಕ ವೇಳೆ ಶೋಧಿಸಿನೋಡಿ, ಸರ್ವೋತ್ತಮವಾದದ್ದೆಂದು ಹೇಳಿರುತ್ತಾರೆ.

ಆದದರಿಂದ ಮುಂದಿನ ರೋಗಗಳಿಗೆ ಪ್ರಪಂಚದಲ್ಲೆಲ್ಲಾ ಈ ಔಷಧವು ಸರ್ವ ಶ್ರೇಷ್ಠವಾದದ್ದಾಗಿ ಪರಿಣಮಿಸಿದೆ —

ಶ್ವಾಸಕೋಶದ ಆಕ್ರಮಣಗಳು. ನಾನಾ ತರದ ಕೆಮ್ಮಲು;

ಸಕಲವಿಧ ವೈತ್ಯಗಳು, ನಾಂಸಖಂಡಗಳ ಕ್ಷೀಣತೆ;

ಅನಾರೋಗ್ಯ ಅರು

ಇದಲ್ಲದೆ ತಂದೆಯೂ ಮಗನಿಗೂ ಬಲಕರವಾದ ಮತ್ತು ಅಂಗ ಬೆಳೆಸುವ ಸೇವನಾ ಔಷಧವೂ ಇದೇ.

57-

ಕೈಸೋಕದೆ ತಯಾರಾದದ್ದು.

ಔಷಧಗಳ ಅಂಗಡಿಗಳಲ್ಲೆಲ್ಲಾ ಬಿಕರಿಯಾಗುವದು.

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,

ಔಷಧಗಳ ಕಾರ್ಖಾನೆ,

ಲಂಡನ್, ಇಂಗ್ಲೆಂಡ್.

ಈ ಮೀನುಮನುಷ್ಯ ಇರುವ ಔಷಧವನ್ನೇ ಕೇಳಿಕೊಳ್ಳಿ.

ವೃತ್ತಾಂತ ಪತ್ರಿಕೆ.

ಈ ೧೯೦೬ ನೇ ಇಸವಿ ಮೇ ತಾ|| ೧೦ ನೇ ಗುರುವಾರ

ತುರ್ಕಿಗೂ ಈಜಿಪ್ಟಿಗೂ ಮನಸ್ತಾಪ

ಕಳೆದ ವಾರ ಇವೆರಡು ರಾಜ್ಯಗಳಿಗೂ ನಡೆದಿರುವ ವ್ಯವಹಾರಗಳು ಕಳವಳವನ್ನುಂಟುಮಾಡುವವು. ಈಜಿಪ್ಟ್ ದೇಶದಲ್ಲಿ ಈಗಿನ ಖಿಡೈವ್ ರಾಜನಿಗೆ ಪಟ್ಟವಾದಾಗ ಅಂದರೆ ಕಳೆದ ೧೮೯೨ ರಲ್ಲಿ ಈಜಿಪ್ಟ್ ಗವರ್ನಮೆಂಟಿಗೆ ಸಿನಾಯಿ ಪರ್ಯಾಯದ್ವೀಪವು ಸೇರಿತು. ಇದಲ್ಲದೆ ಆ ಗವರ್ನಮೆಂಟಿನವರು ಅರಬ್ಬಿ ಸಮುದ್ರದ ಕಡೆ ಇರುವ ಅಕಾಬಾ ಎಂಬ ಠಾಣ್ಯದಲ್ಲಿ ತಮ್ಮ ಸೈನ್ಯವನ್ನೂ ಇಟ್ಟುಕೊಂಡಿದ್ದರು. ತುರ್ಕಿ ಸುಲ್ತಾನರು ಈ ಠಾಣ್ಯವು ಹೆಜಾಜ್ ಎಂಬ ತಮ್ಮ ಡಿಸ್ಟ್ರಿಕ್ಟಿಗೆ ಸೇರಿದ್ದೆಂದೂ ಅಲ್ಲಿ ಸೈನ್ಯವಿರಕೂಡದೆಂದೂ ಪ್ರತಿಘಟಿಸಿದರು. ಆಗ ತುರ್ಕಿ ಸುಲ್ತಾನರಿಗೂ ಈಜಿಪ್ಟ್ ಸರ್ಕಾರದವರಿಗೂ ಒಂದು ತಹನಾಮೆ ನಡೆಯಿತು. ಈಜಿಪ್ಟಿನವರು ಅಕಾಬಾದಲ್ಲಿದ್ದ ತಮ್ಮ ಸೈನ್ಯವನ್ನು ಹಿಂದಕ್ಕೆ ಕರೆಸಿಕೊಂಡು, ಅಕಾಬಾದಿಂದ ಎಲ್ ಆರಿಷ್ ಎಂಬುದರ ವರೆಗೆ ಒಂದು ರೇಖೆಯನ್ನು ಹಾಕಿ, ಅದೇ ತಮ್ಮ ರಾಜ್ಯದ ಪೂರ್ವದಿಕ್ಕಿನ ಗಡಿಯೆಂದು ತೀರ್ಮಾನಮಾಡಿಕೊಂಡರು. ಈ ರೇಖೆಯ ಪಶ್ಚಿಮಕ್ಕೆ ತಬಾ ಎಂಬೊಂದು ಠಾಣ್ಯವಿರುತ್ತದೆ. ಈಜಿಪ್ಟ್ ಸೈನ್ಯವನ್ನು ೧೮೯೨ ರಲ್ಲಿ ಅಕಾಬಾದಿಂದ ತಬಾ ಎಂಬ ಠಾಣ್ಯಕ್ಕೆ ಕರೆಸಿದ್ದು ಕೆಲವು ಕಾಲಾನಂತರ ಅಲ್ಲಿಂದಲೂ ವಾಪಸ್ ಕರೆಸಿಕೊಂಡಿದ್ದರೂ ಈಗ ಪುನಃ ತಮ್ಮ ಸೈನ್ಯವನ್ನು ತಬಾ ಎಂಬ ಠಾಣ್ಯಕ್ಕೆ ಕಳುಹಿಸಬೇಕೆಂದು ಯೋಚಿಸುತ್ತಿದ್ದರು. ಅಷ್ಟರಲ್ಲೇ ತುರ್ಕಿ ಸುಲ್ತಾನರು ಈ ಠಾಣ್ಯಕ್ಕೆ ತಮ್ಮ ಸೈನ್ಯವನ್ನು ಕಳುಹಿಸಿ, ಈ ಠಾಣ್ಯವು ಅಕಾಬಾ ಡಿಸ್ಟ್ರಿಕ್ಟಿಗೆ ಸೇರಿದ್ದೆಂತಲೂ ಅದು ತಮ್ಮ ರಾಜ್ಯಾಂಗವೆಂತಲೂ ಪ್ರತಿಘಟಿಸಿದರು. ಈ ಠಾಣ್ಯವು ಮೇಲ್ಕಂಡ ರೇಖೆಗೆ ಪಶ್ಚಿಮಕ್ಕಿರುವುದು. ಇದು ತುರ್ಕಿಯವರಿಗೆ ಸೇರಿದ್ದಲ್ಲವೆಂಬುವುದು ಸ್ಪಷ್ಟವಾಗಿದೆ. ಅವರೂ ತುರ್ಕಿಯವರು ಈಗ ತಮ್ಮ ರೇಖೆಯನ್ನು ಮೀರಿ ಒಂದು ಠಾಣ್ಯವನ್ನು ಆಕ್ರಮಿಸಿಕೊಂಡಿರುವುದು ಮಾತ್ರವೇ ಅಲ್ಲ, ಸಿನಾಯಿ ಪರ್ಯಾಯದ್ವೀಪವೆಲ್ಲಾ ತಮ್ಮದೆಂತಲೂ ಅದನ್ನು ತಾವು ಆಕ್ರಮಿಸಿಕೊಂಡು, ಅಲ್ಲಿ ರೈಲ್ ರಸ್ತೆ, ಟೆಲಿಗ್ರಾಫ್ ತಂತಿ ಮೊದಲಾದವುಗಳನ್ನು ಹಾಕಿಕೊಳ್ಳುವೆವೆಂತಲೂ ಹೇಳಿದಾರೆ. ಈ ಮಾತು ನೆರೆಯವರ ಸ್ವತ್ತನ್ನು ಕಿತ್ತುಕೊಳ್ಳಬೇಕೆಂಬುವುದಾಗಿತೇ ಹೊರ್ತು ಮತ್ತೇನೂ ಅಲ್ಲ.

ಈಗ ಇಂಗ್ಲಿಷ್ ಗವರ್ನಮೆಂಟಿನವರು ಬಲಾತ್ಕಾರದಿಂದಾದರೂ ತುರ್ಕಿಯವರನ್ನು ತಬಾ ಎಂಬ ಠಾಣ್ಯದಿಂದ ಓಡಿಸಬೇಕೆಂದು ಸನ್ನಾಹಮಾಡಿಕೊಂಡು, ಅಲ್ಲಿಗೆ ಸೈನ್ಯವನ್ನೂ ಯುದ್ಧ ಸಾಮಗ್ರಿಗಳನ್ನೂ ಕಳುಹಿಸಿ, ತುರ್ಕಿ ಸುಲ್ತಾನರಿಗೆ—ನೀವು ಇನ್ನು ಹತ್ತು ದಿನಗಳೊಳಗಾಗಿ ಈ ಸ್ಥಳವನ್ನು ಬಿಟ್ಟು ಹಿಮ್ಮೆಟ್ಟದಿದ್ದರೆ ಸುಮ್ಮನಿರಲಾರೆವು ಎಂಬ ಅರ್ಥಕ್ಕೆ ಕಾಗದ ಬರೆದಿರುವರು. ಫ್ರಾನ್ಸಿನವರು ಸಹ ತುರ್ಕಿ ಸುಲ್ತಾನರಿಗೆ—ನೀವು ಇಂಗ್ಲೀಷ್ ಗವರ್ನಮೆಂಟಿನವರ ಮಾತನ್ನು ಕೇಳಿ ಹಿಮ್ಮೆಟ್ಟುವುದು ಉತ್ತಮವೆಂದು ಹೇಳಿ ಕಳುಹಿಸಿದರು. ಜರ್ಮನಿಯವರೋ ತುರ್ಕಿಯವರಿಗೆ ಅಂತರಂಗದಲ್ಲೇ ಸಹಾಯ ಮಾಡುವರೆಂಬ ಊಹೆ ಕೆಲವರಲ್ಲಿದೆ. ತುರ್ಕಿಯವರು ಹತ್ತು ದಿನಗಳೊಳಗೆ ವಿಮರ್ಶೆ ತಂದುಕೊಂಡು ತಬಾ ಬಿಟ್ಟು ಹಿಮ್ಮೆಟ್ಟುವರೋ ಅಥವಾ ಅವರ ಕಾಗದವನ್ನೂ ಅವರ ಸಲಹೆಯನ್ನೂ ತಿರಸ್ಕರಿಸಿ ಯುದ್ಧಕ್ಕೆ ನಿಲ್ಲುವರೋ ಮುಂದೆ ತಿಳಿಯಬೇಕಾಗಿದೆ.

ಒಳದೇಶದ ವೃತ್ತಾಂತಗಳು.

ರಾಜಧಾನಿಯಲ್ಲಿ ಈ ತಿಂಗಳ [illegible] ಈ ಮಂತ್ರ [illegible]ಯಲ್ಲಿ ಮೇ [illegible] ನಡೆಯುತ್ತದೆ.

* * * *

ಕೋಲಾರದಲ್ಲಿರುವ ಮ್ಯಾಜಿಸ್ಟ್ರೇಟ್ ರವರ ಮಿ|| ಆರ್ ಬಿ [illegible] ಯವರನ್ನು ಸರ್ಕಾರದವರ ಸ್ಪೆಷಲ್ ಡ್ಯೂಟಿ ಮೇಲೆ ನೇಮಿಸಿದಾರೆಂತಲೂ, [illegible] ಡಿಸ್ಟ್ರಿಕ್ಟಿನ [illegible] ಕೋರ್ಟುಗಳಿಂದ ಬರುವ ಅಪೀಲು ಮೊಕದ್ದಮೆಗಳನ್ನು ತೀರ್ಮಾನ ಮಾಡುವರೆಂತಲೂ ಕೇಳಿದೆವು.

ಕೋಲಾರ್ [illegible]ನಲ್ಲಿ [illegible] ಸಂಘದವರು ೬೦,೦೦೦ ರೂಪಾಯಿ ವೆಚ್ಚಮಾಡಿ ಒಂದು ದೊಡ್ಡ ಆಸ್ಪತ್ರೆಯನ್ನು ಕಟ್ಟಿಸುವವರಾಗಿದಾರೆ.

* * * *

ಸೋಮವಾರ ರಾತ್ರಿ ರಾಜಧಾನಿಯಲ್ಲಿ ಸ್ವಲ್ಪ ಮಳೆ ಆಯಿತು. ಆದರೂ ಸೆಕೆಯು ಇನ್ನೂ ಮಳೆ ಸುರಿದಲ್ಲದೆ ಕಡಿಮೆಯಾಗುವಂತಿಲ್ಲ.

* * * *

ದಿವಾನ್ ಮಿ|| ವಿ ಪಿ ಮಾಧವರಾಯರು ಪರಿವಾರ ಸಹಿತ ಈ ತಿಂಗಳ ಕಡೇ ವಾರದಲ್ಲಿ ನೀಲಗಿರಿಯಿಂದ ವಾಪಸು ಬೆಂಗಳೂರಿಗೆ ಬರುವವರಾಗಿದಾರೆ.

* * * *

ಶ್ರೀಮನ್ಮಹಾರಾಜರವರು ಈ ತಿಂಗಳ ೨೪ ನೆ ತಾರೀಖು ಶುಕ್ರವಾರ ಪೋರ್ಟ್ [illegible]ದಲ್ಲಿ ನೀಲಗಿರಿಯಿಂದ ಹೊರಟು ರಾಜಧಾನಿಗೆ ದಯಮಾಡುವವರಾಗಿದಾರೆಂದು ಕೇಳುತ್ತೇವೆ.

* * * *

ಹಾಸನದಲ್ಲಿರುವ ರೋಗಿಗಳ ಆಸ್ಪತ್ರೆಯನ್ನು ಸರ್ಕಾರದವರು ತೆಗೆದು ಹಾಕುತ್ತಾರೆಂದು ವರ್ತಮಾನ ಹುಟ್ಟಿದೆ. ಇದು ಯಥಾರ್ಥವಾದದ್ದೆಂದು ನಾವು ನಂಬಲಾರೆವು.

* * * *

ಬೆಂಗಳೂರು ಸಿಟಿಯಲ್ಲಿ ಬೆಂಕಿಯನ್ನು ಆರಿಸುವಂಥಾ ಒಂದು ಯಂತ್ರವನ್ನು ೪,೦೦೦ ರೂಪಾಯಿಗೆ ಕೊಂಡು ತರಿಸಿಟ್ಟುಕೊಳ್ಳಬೇಕೆಂದು ಮ್ಯುನಿಸಿಪಾಲಿಟಿಯವರು ಗೊತ್ತುಮಾಡಿದಾರೆ.

* * * *

ಬ್ರಿಟಿಷ್ ರೆಸಿಡೆಂಟ್ ಮಿ|| ಎಸ್ ಎಂ ಫ್ರೇಸರ್ ಯವರು ಒಂದು ಮೊಕದ್ದಮೆಯನ್ನು ನಡೆಸುವುದಕ್ಕಾಗಿ ನಾಳೆ ನಾಡಿದ್ದರಲ್ಲಿ ನೀಲಗಿರಿಯಿಂದ ಬೆಂಗಳೂರಿಗೆ ಬಂದು ವಾಪಸು ಹೋಗುವರೆಂದು ತಿಳಿದು ಬಂದಿದೆ.

* * * *

ನೀಲಗಿರಿ ಬೆಟ್ಟದಲ್ಲಿರುವ ಯೂರೋಪಿಯನ್ ಸರದಾರರಿಗೂ ಅವರ ಪತ್ನಿ ಪುತ್ರಾದಿಗಳಿಗೂ ನಮ್ಮ ಮಹಾರಾಜರವರು ಮೂರು ದಿನ ಔತಣಗಳನ್ನ ಮಾಡಿಸಿ ನಾನಾ ವಿನೋದಗಳನ್ನು ಕಲ್ಪಿಸಿ ಸಂತೋಷಪಡಿಸಿದರೆಂದು ತಿಳಿಯುತ್ತದೆ.

* * * *

ಗವರ್ನಮೆಂಟ್ ಭೂಗರ್ಭ ಇಲಾಖೆಯಲ್ಲಿ ಗಣಿಗಳ ಡಿಪ್ಯುಟಿ ಇನ್ಸ್ಪೆಕ್ಟರಾಗಿದ್ದ ಮಿ|| [illegible] ಲಾವೆಲ್ ಯವರು ಕಾಲವಾದ್ದರಿಂದ ಅವರ ಕೆಲಸಕ್ಕೆ ಸರ್ಕಾರದವರು ಮಿ|| ಎಲ್ ಎಚ್ [illegible] ಯವರನ್ನು ನೇಮಕಮಾಡಿರುತ್ತಾರೆ.

* * * *

ಪೋಲೀಸ್ ಇನ್ಸ್ಪೆಕ್ಟರ್ ಜನರಲ್ ಮಿ|| ಎಸ್ ಸಿ ಇ [illegible] ಯವರನ್ನು ಇನ್ನು ಮೂರು ವರುಷಗಳ ವರೆಗೆ ಮೈಸೂರು ಸಂಸ್ಥಾನದಲ್ಲೇ ಕೆಲಸದಲ್ಲಿಟ್ಟುಕೊಳ್ಳಬಹುದೆಂದು ಇಂಡಿಯಾ ಗವರ್ನಮೆಂಟಿನವರು ಸಮ್ಮತಿಸಿದಾರೆಂದು ಕೇಳುತ್ತೇವೆ.

* * * *

ಬೆಂಗಳೂರ ಸಿಟಿ [illegible] ಸಿಟಿ ಇನ್ಸ್ಟಿಟ್ಯೂಟಿನ ಎದುರು ಪಾರ್ಕಿನಲ್ಲಿ ಸರ್ಕಾರದವರು ದಿವಾನ್ ಬಹದೂರ್ [illegible] ರವರ ಸ್ಮಾರಕಾರ್ಥವಾಗಿ ಒಂದು ಸ್ತಂಭವನ್ನು ಕಟ್ಟಿ [illegible] ನಿವೇಶನವನ್ನು ಮಂಜೂರಾಗಿ ಕೊಡಬೇಕೆಂದು ತಿಳಿಸಿದಾರೆ.

* * * *

ಶೃಂಗೇರಿಯಲ್ಲಿ ಸ್ವಾಮಿಗಳಿಗೆ ದೇಹಾಲಸ್ಯ ಉಂಟಾಗಿದೆ ಎಂತಲೂ ಔಷಧಾದಿಗಳನ್ನು ಕೊಟ್ಟು ನೋಡಿಕೊಳ್ಳುವುದಕ್ಕೆ ಮೈಸೂರು ಸರ್ಕಾರಿ [illegible] ಆಸ್ಪತ್ರೆಯಿಂದ ಮಿ|| ಕೆಂಪರಾಮ [illegible]ರು ಶೃಂಗೇರಿಗೆ ಹೋಗಿ [illegible] ಸುಮಾರು ತಿಂಗಳಾಯಿತೆಂತಲೂ ಕೇಳುತ್ತೇವೆ.

* * * *

ಎರಡನೇ ಕೌನ್ಸಿಲರ್ ಮಿ|| ಕೆ ಪಿ ಪುಟ್ಟಣ್ಣ ಚೆಟ್ಟಿಯವರು ಚಿತ್ರದುರ್ಗ, ತುಮಕೂರು ಡಿಸ್ಟ್ರಿಕ್ಟುಗಳ ಕಡೆ ಸರ್ಕೀಟು ಹೋಗಿದ್ದಾರೆಂತಲೂ, ರೆವಿನ್ಯೂ ಕಮಿಷನರ್ ಮಿ|| ವಿ ರಂಗಸ್ವಾಮಯ್ಯಂಗಾರ್ರವರು ಚನ್ನಪಟ್ಟಣ, ಕ್ಲೋಸ್‌ಪೇಟೆ ಮೊದಲಾದ ಪ್ರಾಂತ್ಯಗಳಲ್ಲಿ ಸಂಚಾರ ಮಾಡುತ್ತಿದಾರೆಂತಲೂ ಕೇಳುತ್ತೇವೆ.

* * * *

ಮೈಸೂರು ಸರ್ಕಾರದವರು ಜಾರಿಗೆ ತಂದಿರುವ ಪರಸ್ಪರ ಸಹಾಯಕ ಸಂಘಗಳ ಕಾನೂನನ್ನು ಅನುಸರಿಸಿ, ಬೆಂಗಳೂರು, ವೈಟ್‌ಫೀಲ್ಡ್, ಹೊಳೆನರಸೀಪುರ, ಮೈಸೂರು, ಈ ಸ್ಥಳಗಳಲ್ಲಿರತಕ್ಕ ಜನರು ಒಂದೊಂದು ಸಂಘವನ್ನು ಸ್ಥಾಪಿಸಿಕೊಂಡಿದಾರೆ. ಸರ್ಕಾರದವರು ಆ ಸಂಘಗಳನ್ನು ರಿಜಿಸ್ಟರ್ ಮಾಡಿಕೊಂಡಿರುವರು.

* * * *

ಕಳೆದ ಗುರುವಾರ ಸಾಯಂಕಾಲ ನೀಲಗಿರಿ ಬೆಟ್ಟದ ಮೇಲೆ ಮದರಾಸ್ ಗವರ್ನರ್ ಸರ್ ಆರ್ಥರ್ ಲಾಲಿ ಯವರು ಸುಮಾರು ೩೧೦ ಯೂರೋಪಿಯನ್ ಮತ್ತು ದೇಶೀಯ ದೊಡ್ಡ ಮನುಷ್ಯರನ್ನು ತಮ್ಮ ಬಂಗಲೆಗೆ ಕರೆಸಿಕೊಂಡು, ನಾನಾ ವಿನೋದಗಳನ್ನು ಕಲ್ಪಿಸಿ ಸಂತೋಷಪಡಿಸಿದರು. ನಮ್ಮ ಶ್ರೀಮನ್ಮಹಾರಾಜರವರೂ ದಿವಾನರವರೂ ದಯಮಾಡಿದ್ದರು.

* * * *

ಕಳೆದ ತಿಂಗಳ ಆಖೈರ್ ಭಾಗದಲ್ಲಿ ಮೈಸೂರು ಫಾರೆಸ್ಟ್ ಇಲಾಖೆಯವರು ಕಲ್ಲಿ[illegible]ಯಲ್ಲಿ ಸುಮಾರು ೨೪ ಗಂಡು ಆನೆಗಳನ್ನೂ ೧೯ ಹೆಣ್ಣಾನೆಗಳನ್ನೂ ಹರಾಜು ಮೂಲಕ ವಿಕ್ರಯಿಸಿದರು. ಗಂಡಾನೆಗಳಿಗೆ [illegible] ರೂಪಾಯಿಯೂ, ಹೆಣ್ಣಾನೆಗಳಿಗೆ [illegible] ರೂಪಾಯಿಯೂ ಬಂತು. ಸರ್ಕಾರದವರು ಈ ಸಲ ಹಿಡಿದ ಆನೆಗಳಿಂದ ತುಂಬಾ ಲಾಭಬಂತೆಂದು ಹೇಳಬೇಕಾಗಿಲ್ಲ.

* * * *

ಕಳೆದ ವಾರ ರಾಜಧಾನಿಯ ರೈಲ್ವೆ ಸ್ಟೇಷನ್ನಿನಲ್ಲಿ ಒಬ್ಬ ಚಿಕ್ಕ ಹುಡುಗನು ಕಂಬಿಗಳ ಮೇಲೆ ಬಿದ್ದು ಗಾಡಿಗೆ ಸಿಕ್ಕಿ ತೋಳು ಮುರಿದುಕೊಂಡು, ಆಸ್ಪತ್ರೆಗೆ ಬಂದನು. ಒಬ್ಬ ನಡುಪ್ರಾಯದವನು ಊರೊಳಗೆ ಗಾಡಿಯ [illegible] ಲಾದನು. ಮಿಸ್ ಬರ್ನಸ್ ಎಂಬಾಕೆಯು ಕುದುರೆ ಗಾಡಿಯಲ್ಲಿ ಹೋಗುತ್ತಿದ್ದಾಗ ಒಂದು ರಸ್ತೆಯಲ್ಲಿ ಕುದುರೆಯು ಮುಗ್ಗರಿಸಿ ಅವರ ಕಾಲು ಊನವಾಯಿತೆಂತಲೂ, ಇದಕ್ಕಾಗಿ ಆಕೆ ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡ್ ಪ್ರೆಸಿಡೆಂಟರ ಮೇಲೆ ನಷ್ಟಕ್ಕಾಗಿ ದಾವಾ ಮಾಡುವುದಾಗಿ ಅವರಿಗೆ ನೋಟೀಸ್ ಕೊಟ್ಟಿರುವಂತೆಯೂ ಕೇಳುತ್ತೇವೆ.

* * * *

ಮಿ|| ದೆಸ್ಸಾಚರ್ ಎಂಬ ರೋಮನ್ ಕ್ರೈಸ್ತ ಪಾದ್ರಿಯವರು ಕಳೆದ ವಾರ ಮೈಸೂರಿಂದ ಬೆಂಗಳೂರಿಗೆ ಮೋಟಾರ್ ಬೈಸಿಕಲ್ ಮೇಲೆ ಕುಳಿತು ಹೋಗುತ್ತಿದ್ದಾಗ ಅವರ ಬೈಸಿಕಲ್ ಮಂಡ್ಯದ ಹತ್ತಿರ ಒಂದು ಬಂಡಿಗೆ ಬಡಿದು ಮುರಿದುಹೋಯಿತು. ಅವರಿಗೆ ಸ್ವಲ್ಪ ಗಾಯವೂ ಆಯಿತು. ತರುವಾಯ ಅವರು ಆ ಗಾಡಿಯನ್ನು ಹಿಂತಿರಿಗಿ ಮೈಸೂರಿಗೆ ಕಳುಹಿಸಿ, ಪುನಃ ಸ್ಟೇಷನ್ನಲ್ಲಿ ರೈಲ್ ಹತ್ತಿ ಬೆಂಗಳೂರಿಗೆ ಹೋದರು.

* * * *

ಕಂಚಿಯಲ್ಲಿ ಈ ತಿಂಗಳ ೩೦ ನೆ ತಾ|| ಬುಧವಾರದಿಂದ ಜೂನ್ ೪ ನೆ ತಾ|| ಸೋಮವಾರದ ವರೆಗೆ ವ್ಯವಸಾಯೋಪಕರಣಗಳ ಮತ್ತು ಗೋಶಾಲೆಗಳ ಪ್ರದರ್ಶನೋತ್ಸವವು ನಡೆಯುತ್ತೆಂತಲೂ ಅಪೇಕ್ಷೆಯುಳ್ಳವರು ವಸ್ತುಗಳನ್ನೂ ದನಗಳನ್ನೂ ಕಳುಹಿ ಪ್ರದರ್ಶನಮಾಡಿ ಬಹುಮಾನ ಪಡೆಯಬಹುದೆಂತಲೂ ಆ ಪ್ರದರ್ಶನದ [illegible] ಸೆಕ್ರೆಟರಿ ಮಿ|| ವಿ ವೆಂಕಟಾಚಾರ್ಯರು ಪ್ರಕಟಿಸಿರುತ್ತಾರೆ. ಈ ತಿಂಗಳ ೨೮ ನೆ ತಾ|| ಒಳಗಾಗಿ ವಸ್ತುಗಳನ್ನು ಅಲ್ಲಿಗೆ ಕಳುಹಿಸ ಬಹುದಾಗಿದೆ.

ಮೈಸೂರು ಗೆಜೆಟ್ ಸಂಗ್ರಹ.

ಸಬ್ ಅ|| ಸರ್ಜನ್ ಮಿ|| ಎನ್ ರಂಗಾಚಾರ್ರಿಗೆ ಹತ್ತು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿತ್ತು.

ಮೈಸೂರ್ ಡಿಸ್ಟ್ರಿಕ್ಟ್ ಸಿವಿಲ್ ಸರ್ಜನ್ ರಾದ ಮಿ|| ಪಿ ಎಸ್ ಅಚ್ಯುತರಾಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ೨೪ ದಿನಗಳ ಪ್ರಿವಿಲೇಜ್ ರಜಾ ಕೊಟ್ಟಿದೆ.

ಸಬ್ ಅ|| ಸರ್ಜನ್ ಮಿ|| ಬಿ [illegible]ಯವರು ಮೈಸೂರು ಡಿಸ್ಟ್ರಿಕ್ಟ್ ಸಿವಿಲ್ ಸರ್ಜನ್ ರಾಗಿಯೂ ಜೈಲ್ ಸೂಪರಿಂಟೆಂಡೆಂಟ್ ರಾಗಿಯೂ ಕೆಲಸ ನೋಡತಕ್ಕದ್ದು.

ಮಿ|| ಎಂ ಜಗನ್ನಾಥಂ ಪಿಳ್ಳೆಯವರು ಪ್ಲೇಗ್ ಡ್ಯೂಟಿ ಚಾರ್ಜನ್ನು ವಹಿಸತಕ್ಕದ್ದು.

ಕೋಲಾರದ ಚಿನ್ನದ ಗಣಿ ಆಕ್ಟಿಂಗ್ ಪೋಲೀಸ್ ಸೂಪರಿಂಟೆಂಡೆಂಟ್ ಮಿ|| ಎ ಇ ಡೇವಿಸ್ ರವರಿಗೆ ಕಾಯಿಲೆ ಸರ್ಟಿಫಿಕೇಟಿನ ಮೇಲೆ ಜನವರಿ ೩ ರಿಂದ ಫೆಬ್ರವರಿ ೧೯ ರವರೆಗೆ [illegible] ರಜಾ ಕೊಟ್ಟಿತ್ತು.

ಮೇಲ್ಕಂಡ ಆಫೀಸರ್ ಮಾರ್ಚ್ ೨೬ ರಿಂದ [illegible] ದಿನಗಳ ಪ್ರಿವಿಲೆಜ್ ರಜವನ್ನೂ ತರುವಾಯ ಒಂದು ತಿಂಗಳ ಕಾಯಿಲೆ [illegible] ರಜವನ್ನು ಕೊಟ್ಟಿದೆ.

ಮೈಸೂರು ಗವರ್ನಮೆಂಟ್ ಕಂಟ್ರೋಲರ್ ರಾಯಬಹದೂರ್ ಮಿ|| [illegible] ರಾಯರಿಗೆ ಏಪ್ರಿಲ್ ೩೦ ರಿಂದ ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ಅವರು ವಾಪಸು ಬರುವತನಕ ಅ|| ಕಂಟ್ರೋಲರ್ ಮಿ|| ಟಿ ಸತ್ಯರಾಜ ಚೆಟ್ಟಿಯವರು ಕಂಟ್ರೋಲರ್ ಆಫೀಸಿನ ಚಾರ್ಜನ್ನು ವಹಿಸತಕ್ಕದ್ದು.

ರೆವಿನ್ಯೂ ಕಮಿಷನರ್ ಮಿ|| ಟಿ ಆನಂದರಾಯರಿಗೆ ಕೊಟ್ಟಿದ್ದ ೧೫ ದಿನಗಳ ಪ್ರಿವಿಲೇಜ್ ರಜವನ್ನು ಅವರು ಉಪಯೋಗಿಸಿಕೊಳ್ಳಲಿಲ್ಲವಾಗಿ ಅದನ್ನು ರದ್ದುಮಾಡಿದೆ.

ಪಾವಗಡದ ತಾಲ್ಲೂಕ್ ಅಮಲ್ದಾರ್ ಮಿ|| ಬಿ ಕೇಸರಿಸಿಂಗ್ ಯವರಿಗೆ ಮಾರ್ಚ್ ೧೫ ರಿಂದ ೧ ತಿಂಗಳು ೧೫ ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಕಡೂರ್ ಡಿಸ್ಟ್ರಿಕ್ಟ್ ಆಕ್ಟಿಂಗ್ ಎಕ್ಸ್ಟ್ರಾ ಅ|| ಕಮಿಷನರ್ ಮಿ|| ವಿ ಕೃಷ್ಣರಾಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಎರಡು ವಾರಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಚಳ್ಳಕೆರೆ ತಾಲ್ಲೂಕ್ ಅಮಲ್ದಾರ್ ಮಿ|| ಸೈಯದ್ [illegible]ಯವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಅವರು ವಾಪಸು ಬರುವತನಕ ಶಿರಸ್ತೇದಾರ್ ಸುಬ್ಬಯ್ಯನವರು ತಾಲ್ಲೂಕ್ ಚಾರ್ಜನ್ನು ವಹಿಸತಕ್ಕದ್ದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಅ|| ಕಮಿಷನರ್ ಮಿ|| ಬಿ ಕೆ ಕುಮಾರಸ್ವಾಮಿ ನಾಯಕರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಹದಿನೈದು ದಿನಗಳ ಪ್ರಿವಿಲೇಜ್ ರಜಾ ಕೊಟ್ಟಿದೆ.

ಅವರು ರಜದ ಮೇಲಿರುವಷ್ಟು ಕಾಲ ಅ|| ಕಮಿಷನರು ತಮ್ಮ ಕೆಲಸಗಳೊಂದಿಗೆ ಮಿ|| ಕುಮಾರಸ್ವಾಮಿ ನಾಯಕರವರ ಆಫೀಸ್ ಚಾರ್ಜನ್ನು ವಹಿಸತಕ್ಕದ್ದು.

ಮಿ|| ಟಿ ಕೆ ಸುಂದರರಾಜಯ್ಯಂಗಾರ್ರನ್ನು ಚಿತ್ರದುರ್ಗದ ಡಿಸ್ಟ್ರಿಕ್ಟಿಗೆ ವರ್ಗಮಾಡಿದೆ. ಅವರು ದಾವಣಗೆರೆ ಸಬ್ ಡಿವಿಜನ್ ಚಾರ್ಜನ್ನು ವಹಿಸತಕ್ಕದ್ದು.

ದೇವನಹಳ್ಳಿ ತಾಲ್ಲೂಕ್ ಅಮಲ್ದಾರ್ ಮಿ|| ಟಿ ಧರ್ಮರಾಜ ಚೆಟ್ಟಿಯವರನ್ನು ಎಕ್ಸ್ಟ್ರಾ ಅ|| ಕಮಿಷನರಾಗಿ ನೇಮಿಸಿದೆ. ಇವರು ಕೋಲಾರ ಡಿಸ್ಟ್ರಿಕ್ಟ್ ಖಜಾನೆಯ ಚಾರ್ಜನ್ನು ವಹಿಸತಕ್ಕದ್ದು.

ರೆವಿನ್ಯೂ ಕಮಿಷನರ ಆಫೀಸ್ ಮ್ಯಾನೇಜರ್ ಮಿ|| ಟಿ ಆನಂದರಾಯರಿಂದ ಮಿ|| ಎ ರಂಗಸ್ವಾಮಯ್ಯಂಗಾರ್ರು ಏಪ್ರಿಲ್ ೨೬ ರಲ್ಲಿ ಚಾರ್ಜು ಪಡೆದುಕೊಂಡಿದಾರೆ.

ಮೈಸೂರು ಅರಮನೆ [illegible] ಅ|| ಇಂಜಿನಿಯರ್ ಮಿ|| ಎಚ್ ಅನಂತಸ್ವಾಮ್ಯಯ್ಯಂಗಾರ್ ರವರಿಗೆ ಕೊಟ್ಟಿದ್ದ ೧ ತಿಂಗಳು [illegible] ದಿನಗಳ

ಅಮೇರಿಕವೂ ವ್ಯವಸಾಯ ಶಿಕ್ಷಣವೂ.

ಮೆ॥ ಪ್ರಭಾಕರ ಸದಾಶಿವ ಕೆಳೋತ್ರಿ ಎಂಬುವರು ಅಮೇರಿಕ ಸಂಸ್ಥಾನದ ಮುಖ್ಯ ನಗರವಾದ ನ್ಯೂಯಾರ್ಕ್ ಪಟ್ಟಣದಿಂದ ಮುಂದ್ಕಂಡ ವಿಷಯವನ್ನು ಕುರಿತು ಬರೆಯುವುದೇನೆಂದರೆ—

ಸಾಂಪ್ರತಕಾಲದಲ್ಲಿ ನಮ್ಮ ದೇಶದಲ್ಲಿ ಪರದೇಶಗಳಿಗೆ ಹೋಗಿ ಆ ದೇಶದ ವಿದ್ಯೆಯನ್ನು ಕಲಿತು ಬಂದು, ಅದರಿಂದ ನಮ್ಮ ಸ್ವದೇಶಬಾಂಧವರಿಗೆ ಅದನ್ನು ಅರುಹುವ ಪ್ರಚಾರವು ಹೆಚ್ಚುತ್ತ ಬಂದಿದೆ ಆದದರಿಂದ ಇಂಥ ಕಾಲದಲ್ಲಿ ನಾನು ಕಳುಹಿಸುವ ಲೇಖನದಿಂದೇನಾದರೂ ಉಪಯೋಗವಾಗ ಬಹುದೆಂದು ನಂಬಿದ್ದೇನೆ.

ವ್ಯವಸಾಯ ಶಿಕ್ಷಣವನ್ನು ಯಾವ ದೇಶದಲ್ಲಿ ಸಂಪಾದಿಸಬೇಕು?—ಶಾಸ್ತ್ರೀಯ ಪದ್ಧತಿಯಂತೆ ವ್ಯವಸಾಯ ಶಿಕ್ಷಣವನ್ನು ಹೊಂದಬೇಕಾದರೆ ಮೊದಲು ಯಾವ ದೇಶಕ್ಕೆ ಹೋಗಿ ಈ ಶಿಕ್ಷಣವನ್ನು ಸಂಪಾದಿಸಬೇಕೆಂಬ ಪ್ರಶ್ನೆಯು ಹುಟ್ಟುತ್ತದೆ. ಇಂಗ್ಲೆಂಡ್, ಜರ್ಮನಿ, ಅಮೇರಿಕ, ಜಪಾನ್, ಫ್ರಾನ್ಸ್ ಮೊದಲಾದ ಸುಧಾರಿಸಿದ ರಾಷ್ಟ್ರಗಳಲ್ಲಿ ಸುಧಾರಿಸಿದ ವ್ಯವಸಾಯ ಕಾಲೇಜುಗಳಿರುತ್ತವೆ ಆದರೆ ವ್ಯವಸಾಯ ಶಿಕ್ಷಣವನ್ನು ಸಂಪಾದಿಸುವದಕ್ಕೆ ಹಿಂದೂ ದೇಶದ ವಿದ್ಯಾರ್ಥಿಗಳಿಗೆ ಅಮೇರಿಕ ಮತ್ತು ಇಂಗ್ಲೆಂಡ್ ದೇಶಗಳೇ ಹೆಚ್ಚು ಸುಲಭಸಾಧ್ಯವಾಗಿವೆ. ಕಾರಣವೇನೆಂದರೆ ಬೇರೆ ದೇಶಗಳಿಗೆ ಹೋಗಿ ಶಿಕ್ಷಣವನ್ನು ಹೊಂದಬೇಕಾದರೆ ಆಯಾ ದೇಶದ ಭಾಷೆಗಳನ್ನು ಕಲಿಯುವದು ಅವಶ್ಯವಾಗುವದು ಆದರೆ ಸಾಂಪ್ರತಕಾಲದಲ್ಲಿ ಇಂಗ್ಲಿಷ್ ಭಾಷೆಯು ನಮ್ಮ ದೇಶದ ರಾಷ್ಟ್ರಭಾಷೆಯಂತೆ ವರ್ತಿಸುತ್ತಿರುವದರಿಂದ ಇಂಗ್ಲಿಷ್ ಭಾಷೆಯಲ್ಲಿ ಶಿಕ್ಷಣದೊರೆಯುವಂಥ ಯೂನಿವರ್ಸಿಟಿಗಳಲ್ಲಿ ಹೋಗಿ ಶಿಕ್ಷಣವನ್ನು ಹೊಂದುವದು ನಮಗೆ ತುಂಬಾ ಅನುಕೂಲವಾಗಿದೆ. ಶಿಕ್ಷಣ ಸಂಬಂಧದಿಂದ ಇಂಗ್ಲೆಂಡ್ ಮತ್ತು ಅಮೇರಿಕ ದೇಶಗಳನ್ನು ಹೋಲಿಕೆ ಮಾಡಿದಲ್ಲಿ ಅಮೇರಿಕ ದೇಶವೇ ನಮಗೆ ಹೆಚ್ಚು ಅನುಕೂಲವಾಗಿದೆಯೆಂದು ಹೇಳಬಹುದು ಕಾರಣವೇನೆಂದರೆ ಅಮೇರಿಕದಲ್ಲಿ ಇಂಗ್ಲೆಂಡಿಗಿಂತ ವ್ಯವಸಾಯ ಶಿಕ್ಷಣವು ಹೆಚ್ಚು ಸುಲಭವಾಗಿ ದೊರೆಯುವದಲ್ಲದೆ ಅನುಭವಜ್ಞಾನವೂ ಅಲ್ಲಿ ಇಂಗ್ಲೆಂಡಿಗಿಂತ ಹೆಚ್ಚಾಗಿ ದೊರೆಯುತ್ತದೆಂದು ಹೇಳಬಹುದು ಇದಲ್ಲದೆ ಹಿಂದುಸ್ಥಾನದಲ್ಲಿ ಮುಖ್ಯವಾಗಿ ಬೆಳೆಯುವ ಹತ್ತಿ, ಗೋಧಿ, ತಂಬಾಕು, ಭತ್ತ ಮೊದಲಾದ ಧಾನ್ಯಾದಿಗಳು ಅಮೇರಿಕದಲ್ಲಿ ಬೆಳೆಯುತ್ತವೆ. ಆದುದರಿಂದ ಶಾಸ್ತ್ರೀಯ ರೀತಿಯಿಂದ ವ್ಯವಸಾಯಜ್ಞಾನವನ್ನು ಸಂಪಾದಿಸಿದ ಹಿಂದೂ ದೇಶದ ವಿದ್ಯಾರ್ಥಿಗೆ ಅನುಭವಜ್ಞಾನವನ್ನು ಸಂಪಾದಿಸುವದಕ್ಕಾದರೂ ಅಮೇರಿಕ ದೇಶವು ತುಂಬಾ ಅನುಕೂಲಕರವುಳ್ಳದ್ದಾಗಿದೆ ಯಾಕೆಂದರೆ ಹೆಚ್ಚು ನುಣುಪಾದ ಮತ್ತು ಉದ್ದವಾದ ಎಳೆಯನ್ನು ಕೊಡುವ ಹತ್ತೀ ಬೆಳೆಯ ಸಾಗುವಳೀ ಪ್ರಯತ್ನಗಳು ಹಿಂದುಸ್ಥಾನದಲ್ಲಿ ಈಗ ತುಂಬಾ ನಡೆದಿರುವದರಿಂದ ಹತ್ತೀ ಬೆಳೆಯ ಜ್ಞಾನವನ್ನು ಸಂಪಾದಿಸುವದಕ್ಕೆ ನಮಗೆ ಅಮೇರಿಕ ದೇಶವೇ ತಕ್ಕುದಾಗಿರುತ್ತದೆ. ಎರಡನೇ ಕಾರಣವೇನೆಂದರೆ ಕಾಲೇಜಿನಲ್ಲಿ ಶಿಕ್ಷಣ ಹೊಂದುವ ವಿದ್ಯಾರ್ಥಿಯು ತನಗೆ ಅನುಕೂಲವಾದಾಗ ಬೇರೆ ಬೇರೆ ಕೆಲಸ ಮಾಡಿ ಅಲ್ಪಸ್ವಲ್ಪ ದುಡ್ಡು ಸಂಪಾದಿಸಿಕೊಳ್ಳುವದಕ್ಕೆ ಆ ದೇಶದಲ್ಲಿ ತುಂಬಾ ಅನುಕೂಲವಿದೆ ಇದರಿಂದ ಬಡ ವಿದ್ಯಾರ್ಥಿಗೆ ಇಲ್ಲಿ ದುಡ್ಡಿನ ಕೊರತೆಯು ಎಂದೂ ಬೀಳುವದಿಲ್ಲ. ಆದುದರಿಂದ ವ್ಯವಸಾಯ ಶಿಕ್ಷಣವನ್ನು ಪಡೆಯುವದಕ್ಕೆ ಅಮೇರಿಕ ದೇಶವು ತುಂಬಾ ಅನುಕೂಲವುಳ್ಳದ್ದಾಗಿದೆ ಎಂದು ಹೇಳಬಹುದು. ಹೀಗೆ ಯಾವ ದೇಶದಲ್ಲಿ ವ್ಯವಸಾಯ ಶಿಕ್ಷಣವನ್ನು ಹೊಂದಬೇಕೆಂಬ ಪ್ರಶ್ನೆಯು ನಿವಾರಣೆಯಾದ ಬಳಿಕ ಎರಡನೇ ಪ್ರಶ್ನೆಯು ಮುಂದೆಬರುತ್ತದೆ ಅದೇನೆಂದರೆ, ಹಣ. ಆದರೆ ಬೇರೆ ದೇಶಗಳಂತೆ ವ್ಯವಸಾಯ ಶಿಕ್ಷಣಕ್ಕೆ ಹೆಚ್ಚು ದುಡ್ಡು ವೆಚ್ಚವಾಗುವದಿಲ್ಲ ಅಮೇರಿಕ ದೇಶದ ಪ್ರತಿಯೊಂದು ಪ್ರಾಂತ್ಯದಲ್ಲಿ ವ್ಯವಸಾಯ ಶಿಕ್ಷಣವು ಪುಕ್ಕಟೆಯಾಗಿ ದೊರೆಯುವಂತೆ ಇಲ್ಲಿನ ಸರ್ಕಾರದವರು ಏರ್ಪಾಡುಮಾಡಿದ್ದಾರೆ. ಇಷ್ಟೇ ಅಲ್ಲ. ಪ್ರತಿವರ್ಷ ಚಳಿಗಾಲದಲ್ಲಿ ಇಲ್ಲಿನ ರೈತರಿಗೆ ಏನೊಂದೂ ಕೆಲಸವಿಲ್ಲದಾಗ ಅವರಿಗೆ ವ್ಯವಸಾಯ ಶಿಕ್ಷಣ ದೊರೆಯುವಂತೆ ಏರ್ಪಾಡು ಮಾಡಿದ್ದಾರೆ ಇದಲ್ಲದೆ ವ್ಯವಸಾಯದ ಕಾಲೇಜಿನಿಂದ ಪ್ರತಿವರ್ಷ ತೇರ್ಗಡೆಹೊಂದುವ ಪ್ರೊಫೆಸರರು ಊರೂರಿಗೆ ಹೋಗಿ ಅಲ್ಲಿ ರೈತರಿಗೆ ವ್ಯವಸಾಯಪದ್ಧತಿಯನ್ನು ತಿಳಿಸಿಕೊಡುತ್ತಾರೆ ಸಾರಾಂಶವೇನೆಂದರೆ ವ್ಯವಸಾಯಜ್ಞಾನದ ಅಭಿವೃದ್ಧಿಗೋಸ್ಕರ ಅಮೇರಿಕ ಸಂಸ್ಥಾನವು ಹಗಲಿರುಳೂ ಪ್ರಯತ್ನಪಡುತ್ತದೆಂದು ಹೇಳಬಹುದು ಈ ಪ್ರಕಾರ ಅವರ ಉದಾರತ್ವದಿಂದಲೇ ಪರದೇಶದಿಂದ ಹೋದ ವಿದ್ಯಾರ್ಥಿಗಳಿಗೂ ತುಂಬಾ ಅನುಕೂಲವಾಗಿದೆ.

ವ್ಯವಸಾಯ ಶಿಕ್ಷಣವನ್ನು ಸಂಪಾದಿಸುವದಕ್ಕೆ ಪ್ರತಿಯೊಬ್ಬ ವಿದ್ಯಾರ್ಥಿಗೆ ತಗಲುವ ಖರ್ಚೇನು?—ಅಮೇರಿಕದಲ್ಲಿದ್ದು ವ್ಯವಸಾಯಶಿಕ್ಷಣವನ್ನು ಸಂಪಾದಿಸುವ ವಿದ್ಯಾರ್ಥಿಗೆ ಪ್ರತಿವರ್ಷ ಕೆಳಗೆ ಕಂಡಂತೆ ಖರ್ಚು ತಗಲುತ್ತದೆ.

೧. ಇರುವದಕ್ಕೆ ಮನೆ ಮತ್ತು ಊಟದ ಖರ್ಚು	೬೦೦ ರೂ.
೨. ಪ್ರಯೋಗಶಾಲೆಯ ಫೀ ಹಣ . ..	೭೫ ,,
೩. ಪುಸ್ತಕಗಳು	೭೫ ,,
೪ ಕಾಲೇಜಿನಲ್ಲಿರುವಾಗ ಅವಶ್ಯಬೀಳುವ ಖರ್ಚು	೭೫ ,,
೫. ಊಟವಲ್ಲದೆ ಇತರ ಅವಶ್ಯವಾದ ವೆಚ್ಚ ..	೩೫ ,,
೬. ಬಟ್ಟೆಬರೆಗಳಿಗೆ . .	೯೦ ,,

ಈ ಪ್ರಕಾರ ಪ್ರತಿವರ್ಷ ಪ್ರತಿಯೊಬ್ಬ ವಿದ್ಯಾರ್ಥಿಗೆ ವ್ಯವಸಾಯ ಶಿಕ್ಷಣಕ್ಕಾಗಿ ೯೦೦ ರೂಪಾಯಿ ಖರ್ಚು ತಗಲುತ್ತದೆ ಆದರೆ ೬೦ ರೂಪಾಯಿಯನ್ನು ವೆಚ್ಚಮಾಡುವ ವಿದ್ಯಾರ್ಥಿ ಇನ್ನ್ಯಾವ ಇತರ ಕೆಲಸ ಮಾಡದೆ ನಿರ್ವಾಹ ಸಾಗಿ ಶಿಕ್ಷಣ ದೊರಕುತ್ತದೆ. ಈ ದೇಶದ ವಿದ್ಯಾರ್ಥಿಗಳು ಬೇಸಿಗೆಯ ನಾಲ್ಕು ತಿಂಗಳುಗಳಲ್ಲಿ ಬೇರೆ ಕೆಲಸ ಮಾಡಿ, ತಮಗೆ ತಗಲುವ ಅರ್ಧದಷ್ಟು ವೆಚ್ಚವನ್ನು ಸಂಪಾದಿಸುತ್ತಾರೆ ಇದಲ್ಲದೆ ಕೆಲವು ವಿದ್ಯಾರ್ಥಿಗಳು ದಿನಾಲು ೩—೪ ಗಂಟೆ ಕೆಲಸಮಾಡಿ ತಮ್ಮ ಊಟದ ಖರ್ಚನ್ನು ಸಹಾ ಉತ್ಪತ್ತಿ ಮಾಡಿಕೊಳ್ಳುತ್ತಾರೆ. ದುಡ್ಡು ದೊರೆಯುವ ಮಾರ್ಗಗಳು ಹಲವುಂಟು ಆದರೆ ಇವೆಲ್ಲ ಪರದೇಶದಿಂದ ವಿದ್ಯಾಸಂಪಾದನೆಗಾಗಿ ಬರುವ ವಿದ್ಯಾರ್ಥಿಗೆ ಸಾಧ್ಯವಲ್ಲ. ಕಾರಣವೇನಂದರೆ ಅವನಿಗೆ ಇಲ್ಲಿಯ ಮೂಲನಿವಾಸಿಗಳಂತೆ ಹೆಚ್ಚಾದ ಪರಿಚಯವಿರುವದಿಲ್ಲ ಇನ್ನು ವಸ್ತುಪುಷ್ಟನಾದ ವಿದ್ಯಾರ್ಥಿಯು ಬಂದು, ಒಂದು ವೇಳೆ ಕೆಲಸಮಾಡಿ ದುಡಿದು ವರ್ಷ ಒಂದಕ್ಕೆ ೫೦೦ ರೂಪಾಯಿಯನ್ನು ಸಂಪಾದಿಸಬಹುದು ಮುಂಬಯಿಯಿಂದ ಈ ದೇಶಕ್ಕೆ ಬರುವ ಪ್ರತಿಯೊಬ್ಬ ವಿದ್ಯಾರ್ಥಿಗೆ ಎರಡನೇ ತರಗತಿಯ ಸ್ಟೀಮರ (ಹಡಗು) ಬಾಡಿಗೆ ೬೦೦ ರೂಪಾಯಿ ಬೀಳುತ್ತವೆ ಸಾಧ್ಯವಿದ್ದಾಗ್ಗೆ ಬ್ರಿಟಿಷ್ ಕಂಪನಿಯವರ ಏಜಂಟರಿಗೆ ಬರೆದುಕೊಂಡು ಈ ಬಾಡಿಗೆಯನ್ನು ಅರ್ಧ ಕಡಿಮೆಮಾಡಿಕೊಳ್ಳಬಹುದು.

ಇಂಡಿಯಾ ದೇಶದ ವೃತ್ತಾಂತಗಳು.

ಮದರಾಸ್ ಅಕೌಂಟೆಂಟ್ ಜನರಲ್‌ರವರ ಆಫೀಸಿನಲ್ಲಿರುವ ಮೆ॥ ಪಿ ವಿ. ಕೃಷ್ಣಸ್ವಾಮಿ ಚೆಟ್ಟಿಯವರು ತಿರುವಾಂಕೂರು ಸಂಸ್ಥಾನದ ಕಂಟ್ರೋಲರಾಗಿ ನೇಮಕವಾಗಿದಾರೆ

●●●●

ಉತ್ತರದೇಶದಲ್ಲಿ ಕ್ಷಾಮಬಾಧೆಯು ಇನ್ನೂ ನಿವಾರಣೆಯಾಗಲಿಲ್ಲ ಈಗಲೂ ೨ ಲಕ್ಷ ಪ್ರಜೆಗಳಿಗಿಂತಲೂ ಹೆಚ್ಚಾಗಿ ರಿಲೀಫ್ ಕಾಮಗಾರಿಗಳನ್ನು ಮಾಡಿ ಹೊಟ್ಟೆ ಹೊರೆಕೊಳ್ಳುತ್ತಿದಾರೆ.

●●●●

ಢಾಕಾ ನಗರದಲ್ಲಿರುವ ಒಂದು ಭಾರೀ ಜಮೀನ್ದಾರನು ಜಮೀನವರಿಗೆ ತನ್ನ ಜಮೀನುಗಳನ್ನೆಲ್ಲಾ ಹಂಚಿಬಿಡುತ್ತಾನೆಂದು ವರ್ತಮಾನ ಹುಟ್ಟಿದೆ ಈ ಸುದ್ದಿಯನ್ನು ಕೇಳಿ ಆ ಜಮೀನುಗಳ ಸಾಗುವಳಿದಾರು ರೈತರಿಗೆ ಗಾಬರಿಯೂ ಹೆದರಿಕೆಯೂ ಉಂಟಾಗಿದೆ. ಇದರ ನಿಜಸ್ಥಿತಿಯು ಮುಂದೆ ತಿಳಿಯಬೇಕು

●●●●

ಇಂಡಿಯಾ ಗವರ್ನಮೆಂಟಿನವರು ಟಿಬೆಟ್ಟಿನ ವಿಷಯವಾಗಿ ಒಂದು ಕರಾರು ಮಾಡಿಕೊಂಡು ಬಂದರಷ್ಟೆ ಇದಕ್ಕೆ ಚೀನಾ ರಾಜ್ಯದವರು ಇದುವರೆಗೂ ರುಜು ಹಾಕದೆ ಚರ್ಚೆ ಮಾಡುತ್ತಿದ್ದರು ಕಳೆದ ವಾರ ಅವರ ಚರ್ಚೆಯೆಲ್ಲಾ ಪೂರೈಸಿತೆಂತಲೂ ರುಜು ಹಾಕಿ ಕೊಟ್ಟರೆಂತಲೂ ತಂತೀವರ್ತಮಾನ ಬಂದಿದೆ.

●●●●

ಬೊಂಬಾಯಿ ಪಟ್ಟಣದಲ್ಲಿ ನಿರ್ಗತಿಕರಾಗಿ ಭಿಕ್ಷೆ ಬೇಡುವ ಪ್ರಜೆಗಳ ಉಪಯೋಗಾರ್ಥವಾಗಿ, ಸರ್ ಕರೀಂಭಾಯಿ ಇಬ್ರಾಹಿಂ ಯವರು ೫೦,೦೦೦ ರೂಪಾಯಿ ಕೊಟ್ಟಿದಾರೆ. ಸರ್ಕಾರದವರು ಯಾವ ರೀತಿ ಅಭಿಪ್ರಾಯ ಪಡುವರೋ ಅದರಂತೆ ಬಡಬಗ್ಗರ ಕಷ್ಟನಿವಾರಣೆಗೆ ಈ ಹಣವನ್ನು ವಿನಿಯೋಗಿಸುವರು

●●●●

ಕಲ್ಕತ್ತಾ ಪಟ್ಟಣಕ್ಕೆ ಸೇರಿದ ಕೆಲವು ಪೋಲೀಸಿನವರೇ ಹೆಣ್ಣುಮಕ್ಕಳನ್ನು ಅಪಹರಿಸಿ ತಮ್ಮ ಮನೆಯಲ್ಲಿಟ್ಟುಕೊಂಡು ಸಾಕಿ, ದುರ್ವ್ಯಾಪಾರಕ್ಕೆ ಇತರರಿಗೆ ಬಿಕರಿ ಮಾಡುತ್ತಿದ್ದದ್ದು ಕಳೆದ ವಾರ ಪತ್ತೆ ಆಯಿತು ಸರ್ಕಾರದವರು ಮೊದಲು ಎರಡು ಮೊಕದ್ದಮೆಗಳನ್ನು ಹೂಡಿದಾರೆ ಇವು ತೀರ್ಮಾನವಾದ ಮೇಲೆ ಇತರ ಮೊಕದ್ದಮೆಗಳು ದಾಖಲಾಗುವವು

●●●●

ಇಂಡಿಯಾ ಗವರ್ನಮೆಂಟಿನವರು ಪಂಡಿತ ಇಂದ್ರ ಕೃಷ್ಣ ಕೌಲ ಎಂಬಾತನಿಗೆ ವಿದ್ಯಾರ್ಥಿ ವೇತನವನ್ನು ಕೊಟ್ಟು ವಿಲಾಯತಿಯಲ್ಲಿ ಕೈಗಾರಿಕೆಗಳನ್ನು ಕಲಿತು ಬರುವಂತೆ ಕಳುಹಿಸಿದಾರೆ. ಈ ವೇತನವು ವರುಷಕ್ಕೆ ೨,೪೫೦ ರೂಪಾಯಿ. ಈತನು ಬೊಂಬಾಯಿನಲ್ಲಿ ಸರ್ಕಾರಿ ವೇತನ ಪಡೆದು ವಿದ್ಯುಚ್ಛಕ್ತಿ ವಿಷಯವನ್ನು ಕಲಿತು, ಲಾಹೋರ್ ಕೈಗಾರಿಕೆ ಪಾಠಶಾಲೆಯ ಹೆಡ್ ಮಾಸ್ತರಾಗಿದ್ದನು.

●●●●

ಅಗ್ಗದ ಸಿಗರೆಟ್ ಎಂಬ ಸಣ್ಣ ಚುಟ್ಟಾಗಳು ಪರರಾಜ್ಯಗಳಿಂದ ಹಿಂದುಸ್ಥಾನಕ್ಕೆ ರಫ್ತಾಗಿ ಬರುವುದು ಹೆಚ್ಚುತ್ತಾ ಬಂದಿದೆ ಮೂರು ವರುಷದ ಕೆಳಗೆ ೨೦ ಲಕ್ಷ ರೂಪಾಯಿ ಕ್ರಯದ ಸಿಗರೆಟ್ಟುಗಳು ಹಿಂದುಸ್ಥಾನಕ್ಕೆ ಬಂದು ಬಿಕರಿ ಆದವು ಈಗ ೧೯೦೫—೦೬ನೇ ಸಾಲಿನಲ್ಲಿ ೧,೧೯,೦೫೩ ಪೌಂಡುಗಳು ರಫ್ತಾಗಿ ಬಂದವೆಂತಲೂ ಇದರ ಬೆಲೆ ಸ್ವಲ್ಪ ಕಡಿಮೆ ೩೫ ಲಕ್ಷ ರೂಪಾಯಿ ಎಂತಲೂ ತಿಳಿದು ಬಂದಿದೆ.

●●●●

ಚಿತ್ತಗೊಂಗದ ಮ್ಯುನಿಸಿಪಲ್ ಪಾರ್ಕಿನಲ್ಲಿ ನಿಲ್ಲಿಸಿರುವ ವಿಕ್ಟೋರಿಯಾ ಚಕ್ರವರ್ತಿನಿಯವರ ಶ್ವೇತ ಶಿಲೆಯ ಪ್ರತಿಮೆಗೆ ಯಾರೋ ಕಪ್ಪು ಬಳಿದು ವಿಕಾರಮಾಡಿಬಿಟ್ಟಿದ್ದರು. ಅಪರಾಧಿಗಳನ್ನು ಹಿಡಿದು ಕೊಡುವವರಿಗೆ ೧೦೦ ರೂಪಾಯಿ ಬಹುಮಾನ ಸಿಕ್ಕುತ್ತೆಂದು ಸರ್ಕಾರದವರು ಪ್ರಕಟಿಸಿದಾರೆ ಆ ಪ್ರತಿಮೆ ನಿಲ್ಲಿಸಿರುವ ಸ್ಥಳದಿಂದ ಒಂದೆರಡು ಮಾರು ದೂರದಲ್ಲೇ ಪೋಲೀಸ್ ಠಾಣಾ ಇದ್ದರೂ ಆ ಕೃತ್ಯ ಮಾಡಿದವರು ಪತ್ತೆ ಆಗದೆ ಇದೆ

●●●●●

ಕಂದಾಸಾಮಿ ಎಂಬೊಬ್ಬ ಹಿಂದೂ ಜೋಯಿಸನು ಈ ತಿಂಗಳ ೨೬ ರಿಂದ ಅಪಾರವಾದ ಮಳೆ ಹಿಡಿದು ೧೫ ದಿನಗಳ ತನಕ ಏಕಪ್ರಕಾರವಾಗಿ ಸುರಿಯುತ್ತೆಂತಲೂ ಅದರಿಂದ ಅಪೂರ್ವವಾದ ಜಲಪ್ರವಾಹಗಳುಂಟಾಗಿ ತುಂಬಾ ನಷ್ಟವಾಗುತ್ತೆಂತಲೂ ಹೇಳಿಬಿಟ್ಟಿರುವುದನ್ನು ಮೂಢರಾದವರು ನಿಜವೆಂದು ನಂಬಿ ಅದರ ವಿಷಯದಲ್ಲಿ ನಾನಾರೀತಿ ಮಾತನಾಡುತ್ತಾ ಗಾಬರಿಪಡುತ್ತಿದಾರೆ. ಹೀಗೆ ನಿಷ್ಕಾರಣವಾಗಿ ಇ[illegible]ನ್ನು ಗಾಬರಿಪಡಿಸುವುದು ಸಹಜವಾದದ್ದಲ್ಲ.

●●●●

ತಿರುವಾಂಕೂರು (ಅನಂತಶಯನ) ಸಂಸ್ಥಾನದಲ್ಲಿ ಕಳೆದ ಭಾನುವಾರ ಹಿರಿಯ ರಾಣಿಯವರ ವಿವಾಹಮಹೋತ್ಸವವು ವಿಶೇಷ ಆಟಂಬರದಿಂದ ನೆರವೇರಿತು ಆ ಸಂಸ್ಥಾನದ ಅರಮನೆಯಲ್ಲಿ ವಿವಾಹವಾಗದೆ ಇಲ್ಲಿಗೆ ೫೫ ವರ್ಷಗಳಾಗಿದ್ದವು. ಈಗ ನಡೆದ ಉತ್ಸವಗಳು ಅದ್ಭುತವಾಗಿದ್ದವೆಂದೂ ಲಕ್ಷಾಂತರ ಜನರೂ ದೊಡ್ಡಮನುಷ್ಯರೂ ಅಲ್ಲಿ ಸೇರಿ ಸಂತೋಷಪಟ್ಟರೆಂದೂ, ಅದಕ್ಕೆಲ್ಲಾ ನಾಲ್ಕುಲಕ್ಷ ರೂಪಾಯಿ ಖರ್ಚಾಯಿತೆಂದೂ ತಿಳಿದುಬಂದಿದೆ

●●●●

ಪುದುಕೋಟೆ ಸಂಸ್ಥಾನವನ್ನಾಳುವ ರಾಜರವರ ತಮ್ಮಂದಿರಾದ ಮೆ॥ ಡಿ ಎಂ. ದೊರೈರಾಜಾಯವರು ಮದರಾಸಿನಲ್ಲಿರುವ ಪ್ರಸಿದ್ಧ ವಕೀಲರಾದ ಮೆ॥ ನಾರ್ಟನ್‌ರವರ ಕೈಕೆಳಗೆ ಕೆಲವುಕಾಲ ವಕಾಲತ್ತು ನಡಸುತ್ತಿದ್ದರು ಈಗ ಅವರು ಸ್ವತಂತ್ರವಾಗಿ ಲಾಯರ್ ಕೆಲಸ ಮಾಡುವಂತೆ ಮದರಾಸ್ ಹೈಕೋರ್ಟಿನಿಂದ ಅಪ್ಪಣೆ ಪಡೆದಿರುತ್ತಾ ಇವರು ಮಧುರೆ ಅಥವಾ ತಿನ್ನವೆಲ್ಲಿಯಲ್ಲಿ ನಿಂತು ಮೊಕದ್ದಮೆಗಳನ್ನು ಹಿಡಿದು ನಡಿಸುತ್ತಾರೆಂದು ತಿಳಿದುಬಂದಿದೆ.

●●●●

ಕಾಶ್ಮೀರ ಸಂಸ್ಥಾನಕ್ಕೆ ಸೇರಿದ ಜಮ್ಮೂ ನಗರದಲ್ಲಿ ಪ್ಲೇಗ್ ಉಪದ್ರವು ಬಹು ಕಠಿಣವಾಗಿದೆ ಇಂಪೀರಿಯಲ್ ಸರ್ವಿಸ್ ಸ್ವಾರರೂ ಅರಮನೆ ಸಿಪಾಯಿಗಳೂ, ಅರಮನೆಯಲ್ಲಿ ಕೆಲವರೂ ಈ ರೋಗ ತಗಲಿ ಕಾಲವಾಗುತ್ತಿದಾರೆ ಪ್ಲೇಗ್ ಸೋಂಕು ಇರುವವರಿಗೆ ಯಾವ ತರದ ನಿರ್ಬಂಧನಾದರೂ ಇಟ್ಟಿಲ್ಲ. ಇದರಿಂದ ಪ್ಲೇಗ್ ಹರಡುವುದಕ್ಕೆ ತುಂಬಾ ಸಹಾಯವಾಗಿದೆ ಕಳೆದ ಒಂದು ವಾರದೊಳಗಾಗಿ ೨೪ ಜನರು ಕಾಲವಾದರೆಂದು ತಂತೀ ವರ್ತಮಾನ ಬಂದಿರುವುದು.

●●●●

ಕಲ್ಕತ್ತಾ ಪಟ್ಟಣದಲ್ಲಿ ರೈಲಿನಿಂದಲೂ ಹಡಗಿನ ಮೇಲೂ ವರ್ತಕರಿಗೆ ಬರುವ ಸಾಮಾನು ಮೂಟೆಗಳನ್ನು ಕೂಲಿಯವರು ಹೊತ್ತುಕೊಂಡು ಹೋಗಿ ಕೊಡುತ್ತಿದ್ದರು ಅವರಿಗೆ ಮೂಟೆ ಒಂದಕ್ಕೆ ಆಣೆಯಂತೆ ಕೂಲಿ ಕೊಡುತ್ತಿದ್ದರು ಕೂಲಿಯವರೆಲ್ಲಾ ಹಿಂದಿನ ವಾರ ಒಟ್ಟು ಕೂಡಿ, ತಮಗೆ ಮೂಟೆಗೆ ೩ ಆಣೆಯಂತೆ ಕೊಟ್ಟ ಹೊರತು ಮೂಟೆ ಹೊರುವುದಿಲ್ಲವೆಂದು ಹೇಳಿ ಹಟ ಹಿಡಿದು ನಿಂತುಬಿಟ್ಟರು ಒಂದು ವಾರದ ತನಕ ವರ್ತಕರಿಗೆ ಮೂಟೆಗಳು ಬಾರದೆ ತುಂಬಾ ಕಷ್ಟನಷ್ಟಗಳುಂಟಾದವು ಕಡೆಗೆ ವರ್ತಕರು ರಿವಾಜಿನ ೩ ಕಾಸು ಹೆಚ್ಚಿಸಿದರು. ಕೂಲಿಯವರು ಅಷ್ಟಕ್ಕೆ ತೃಪ್ತಿಪಟ್ಟು ಕೆಲಸ ಮಾಡುತ್ತಿದಾರೆ.

●●●●

ಪೂರ್ವ ಬಂಗಾಳಾ ಎಂಬ ಹೊಸ ಆಧಿಪತ್ಯದಲ್ಲಿ ಸರ್ಕಾರದವರು ಮೆ॥ ಸುರೇಂದ್ರನಾಥ ಬಾನರ್ಜಿಯವರನ್ನು ದಸ್ತಗಿರಿ ಮಾಡಿ ಅವರಿಗೆ ಜುಲ್ಮಾನೆ ಹಾಕಿದ್ದಕ್ಕಾಗಿ ಉಂಟಾಗಿರುವ ಗಲಿಬಿಲಿಯನ್ನು ಕಳೆದ ಹಿಂದಿನ ವಾರ ತಿಳಿಸಿರುತ್ತೇವಷ್ಟೆ. ಕಳೆದ ವಾರ ಕಲ್ಕತ್ತಾ ಪಟ್ಟಣದಲ್ಲಿ ಸುಮಾರು ೧೫,೦೦೦ ಹಿಂದುಗಳು ಮೈದಾನಿನಲ್ಲಿ ಸಭೆ ಸೇರಿ ಸರ್ಕಾರದವರು ಮಾಡಿರುವ ಕಾರುಬಾರುಗಳು ತೃಪ್ತಿಕರವಾಗಿಲ್ಲವೆಂದು ತೀರ್ಮಾನಿಸಿ, ವೈಸ್‌ರಾಯವರಿಗೂ, ಇಂಡಿಯಾ ಸ್ಟೇಟ್ ಸೆಕ್ರೆಟರಿಯವರಿಗೂ ತಂತೀವರ್ತಮಾನ ಕೊಟ್ಟು ತಿಳಿಸಿದರು ಸೆಕ್ರೆಟರಿಯವರು ಈ ವಿಷಯದಲ್ಲಿ ಏನು ಮಾಡಬೇಕೆಂಬುದಾಗಿ ಯೋಚಿಸುತ್ತಿದ್ದೇನೆಂದು ಹೇಳಿದಾರೆ.

●●●●

ಕಾಶ್ಮೀರದಲ್ಲಿರುವ ಜಲಪಾತದಿಂದ ವಿದ್ಯುಚ್ಛಕ್ತಿಯನ್ನು ಉತ್ಪತ್ತಿ ಮಾಡುವಂಥಾ ಒಂದು ಕಾರ್ಖಾನೆಯನ್ನು ಏರ್ಪಾಡು ಮಾಡುವುದಕ್ಕೆ ವಿಲಾಯತಿಯಲ್ಲಿ ಒಂದು ಕಂಪನಿ ಮಾಡಿದಾರೆ ಅದರ ಮೂಲಧನ ಮೂರುಕೋಟಿ ರೂಪಾಯಿ ಅನೇಕಾನೇಕ ಪ್ರಜೆಗಳು ಈ ಕಂಪನಿಯ ಷೇರುಗಳನ್ನು ಕೊಂಡುಕೊಳ್ಳುತ್ತಿರುವರು. ಝೀಲಂ ನದೀ ನೀರನ್ನು ಕಾಲುವೆಯ ಮೂಲಕ ತಿರುಗಿಸಿಕೊಂಡು ಎತ್ತರವಾದ ಸ್ಥಳದಿಂದ ಕೆಳಕ್ಕೆ ಬಹು ರಭಸದಿಂದ ಧುಮುಕುವಂತೆ ಮಾಡಿ, ಅದರ ಅಡಿಯಲ್ಲಿ ಚಕ್ರಗಳನ್ನಿಟ್ಟು, [illegible]ದಲ್ಲಿ ಹ್ಯಾಗೇ ಹಾಗೆ ವಿದ್ಯುಚ್ಛಕ್ತಿಯನ್ನು ಉತ್ಪತ್ತಿ ಮಾಡುವರು ಈ ಶಕ್ತಿಯನ್ನು ಪ್ರಯೋಗಮಾಡಿ ಅಬ್ಬೋಟಾಬಾದಿನಿಂದ ೨೦೦ ಮೈಲಿ ದೂರದಲ್ಲಿರುವ ಕಾಶ್ಮೀರ ಸಂಸ್ಥಾನದ ರಾಜಧಾನಿಯಾದ ಶ್ರೀನಗರಕ್ಕೆ ರೈಲುಹೋಗಿ ಬರುವಂತೆ ಮಾಡುವರು ಕಾಶ್ಮೀರದಲ್ಲಿ ಅಗ್ನಿ ಸ್ಥಾನಗಳು ಬಹು ನಾನಾ ಕಷ್ಟಗಳುಂಟಾಗುವವು. ಇದನ್ನು ತಪ್ಪಿಸುವದಕ್ಕಾಗಿ ಅಂಥಾ ಪ್ರವಾಸ ಕಾಲಗಳಲ್ಲಿ ಈ ವಿದ್ಯುಚ್ಛಕ್ತಿಯ ಸಹಾಯದಿಂದ ದೋಣಿಗಳು ಸಂಚಾರ ಮಾಡುವಂತೆ ಯಂತ್ರಗಳನ್ನಿಡುವರು. ಇದಲ್ಲದೆ ಕಾಶ್ಮೀರ ಸಂಸ್ಥಾನದಲ್ಲಿ ಪಲತರಬಗೆಯ ಕೈಗಾರಿಕೆ ಕಾರ್ಖಾನೆಗಳನ್ನಿಡಿಸಿ, ಆ ವಿದ್ಯುಚ್ಛಕ್ತಿಯನ್ನೇ ಉಪಯೋಗಿಸಿಕೊಂಡು ಯಂತ್ರಗಳಿಂದ ಕೆಲಸ ನಡೆಯುವಂತೆ ಏರ್ಪಾಡು ಮಾಡುತ್ತಾರೆ. ಮುಖ್ಯವಾಗಿ ಇಲ್ಲಿ ಈಗ ಶ್ರೇಷ್ಠವಾಗುತ್ತಿರುವ ಬಹು ಅಪೂರ್ವವೂ ಪ್ರಸಿದ್ಧವೂ ಆದ ರೇಷ್ಮೆ ಉಣ್ಣೆ ಕೈಗಾರಿಕೆಗಳನ್ನು ಪ್ರಬಲಪಡಿಸಲು ತರಬೇಕೆಂದಿದಾರೆ ಮತ್ತು ಈ ವಿದ್ಯುಚ್ಛಕ್ತಿಯಿಂದ ಗಣಿಕೆಲಸ, ಕಾರ್ಖಾನೆ, ಯುದ್ಧಸಾಮಗ್ರಿಗಳ ಕಾರ್ಖಾನೆ, [illegible] ರೈಲ್ವೇ, ಟ್ರಾಂಗಾಡಿಗಳ ಸಂಚಾರ, ದೀಪಗಳು ಮೊದಲಾದವುಗಳನ್ನೆಲ್ಲಾ ನಡಿಸುವರು ಉತ್ತರದೇಶದಲ್ಲಿ ಅನೇಕ ಪಟ್ಟಣಗಳಿಗೆ ಈ ಶಕ್ತಿಯನ್ನು ತಂತಿಗಳ ಮೂಲಕ ಸಾಗಿಸಿಕೊಂಡು ಹೋಗಿ ಪಂಕಾ ಬೀಸುವದಕ್ಕೂ ಕೂಡ ಪ್ರಯೋಗಮಾಡುತ್ತಾರೆ ಪ್ರಾರಂಭದಲ್ಲಿ ೪೦,೦೦೦ ಕುದುರೆ ಬಲದಷ್ಟು ವಿದ್ಯುಚ್ಛಕ್ತಿಯನ್ನು ಆ ಜಲಪಾತದಿಂದ ಉತ್ಪತ್ತಿ ಮಾಡುತ್ತಾರೆ ಅವರು ಯೋಚಿಸಿಕೊಂಡಿರುವ ಎಲ್ಲಾ ಯತ್ನಗಳೂ ಜಾರಿಗೆ ಬಂದ ಪಕ್ಷದಲ್ಲಿ ಇದರಷ್ಟು ಭಾರಿಯಾದ ವಿದ್ಯುಚ್ಛಕ್ತಿ ಕಾರ್ಖಾನೆಯು ಪ್ರಪಂಚದ ಇನ್ನ್ಯಾವ ಕಡೆಯಲ್ಲೂ ಇರಲಾರದು.

ವಿದೇಶ ವರ್ತಮಾನಗಳು.

ಸ್ಯಾನ್ ಫ್ರಾನ್ಸಿಸ್ಕೊ ಪ್ರಜೆಗಳ ಕಷ್ಟಪರಿಹಾರಾರ್ಥವಾಗಿ ಚೀನಾ ಚಕ್ರವರ್ತಿನಿಯವರು ಒಂದು ಲಕ್ಷ ದ್ರವ್ಯವನ್ನೂ, ಜರ್ಮನ್ ಚಕ್ರವರ್ತಿಯು ಎರಡು ಲಕ್ಷ ದ್ರವ್ಯವನ್ನೂ ಧರ್ಮಮಾಡಿರುತ್ತಾರೆ

●●●●

ಆಸ್ಟ್ರೇಲಿಯದಲ್ಲಿರುವ ಮೆಲ್‌ಬೋರ್ನ್ ಮತ್ತು ಸಿಡ್ನಿನಗರದ ದರ್ಶನವರು ಎರಡು ಲಕ್ಷ ಸವರಿನ್ ನಾಣ್ಯಗಳನ್ನು ಭಾರಿ ಹಡಗಿನಲ್ಲಿ ತುಂಬಿಸಿ ತೆಗೆದುಕೊಂಡುಹೋದರು

●●●●

ಬೆಲ್ಜಿಯಂ ರಾಜ್ಯದ ಒಂದು ಹಡಗು ಬಿಸ್ಕೇ ಕೊಲ್ಲಿಯಲ್ಲಿ ಸುಂಟರಗಾಳಿಗೆ ಸಿಕ್ಕಿ ಮುಳುಗಿಹೋಯಿತು. ಅದರಲ್ಲಿದ್ದ ೪೪ ಮಂದಿಯು ೩ ಮಂದಿ ಮಾತ್ರ ಬದುಕಿ ಬಂದಿದಾರೆ. ಉಳಿದವರೆಲ್ಲಾ ಸಮುದ್ರಪಾಲಾದರು.

●●●●

ವಿಲಾಯಿತಿಯಲ್ಲಿ ಹಿಂದಿನ ವಾರ ಒಂದೆರಡು ದಿನ ಹವಾ ಇದ್ದಕ್ಕಿದ್ದ ಹಾಗೆ ಅತ್ಯುಷ್ಣವಾಗಿ ಪ್ರಜೆಗಳನ್ನು ತುಂಬಾ ಕಷ್ಟಪಡಿಸಿತು. ಬೀದಿಗೆ ಹೋಗುತ್ತಿದ್ದ ೩೦ ಮಂದಿ ಸೋಜರುಗಳು ಬಿಸಲಿನ ತಾಪವನ್ನು ಸೈರಿಸಲಾರದೆ ಮೂರ್ಛೆಹೋದರು. ಆ ಪೈಕಿ ಇಬ್ಬರಿಗೆ ಪ್ರಾಣ ಉಳಿಯಲೇ ಇಲ್ಲ.

●●●●

ಆಫ್ರಿಕದ ಉತ್ತರ ಸಮುದ್ರ ತೀರದಲ್ಲಿರುವ ಟೂನಿಸ್ ಪಟ್ಟಣದ ಜನರು ದಂಗೆಯೆದ್ದು ಒಬ್ಬ ಫ್ರೆಂಚನನ್ನೂ ಅವನ ಹೆಂಡತಿ ಮಕ್ಕಳನ್ನೂ ಕಡಿದು, ಥಾಲಾಪಟ್ಟಣದಲ್ಲಿ ಸರ್ಕಾರಿ ಆಫೀಸಿಗೆ ಮುತ್ತಿಗೆ ಹಾಕಿದರು. ಸೈನಿಕರು ಅವರಲ್ಲಿ ೧೭ ಮಂದಿಯನ್ನು ಕೊಂದು, ಉಳಿದವರನ್ನು ದಮನಮಾಡಿರುತ್ತಾರೆ

●●●●

ಭೂಕಂಪವೂ, ಅಗ್ನಿಯೂ, ಅಪಾರವಾದ ನಾಶವೂ ಪ್ರಾಪ್ತವಾದ ದೆಸೆಯಿಂದ ಅಮೇರಿಕದ ಸ್ಯಾನ್ ಫ್ರಾನ್ಸಿಸ್ಕೊನಗರವು ನಾಶವಾಯಿತಷ್ಟೆ. ಈಗ ಪಟ್ಟಣದ ಪ್ರಜೆಗಳು ಕಲೆತು ಹೊಸ ಮನೆಮಠ ವಗೈರೆಗಳನ್ನು ಕಟ್ಟಿಕೊಳ್ಳಲಾರಂಭಿಸಿದಾರೆ. ಇದಕ್ಕಾಗಿಯೇ ಒಂದು ಕಮಿಟಿ ಏರ್ಪಾಡಾಗಿರುವುದು.

●●●●

ರಷ್ಯಾ ರಾಜ್ಯದವರು ಡೂಮಾ ಎಂಬ ಪ್ರಜಾಪ್ರತಿನಿಧಿ ಸಮಾಜವನ್ನು ಹೊಸದಾಗಿ ಸ್ಥಾಪನೆ ಮಾಡಿರುತ್ತಾರೆ. ಈ ಸಭೆಗೆ ಪ್ರಜೆಗಳು ತಮ್ಮ ಮೆಂಬರುಗಳನ್ನು ಚುನಾಯಿಸಿದ್ದಾಯಿತು. ಚಕ್ರವರ್ತಿಯು ಖುದ್ದಾಗಿ ಹೋಗಿ ಈ ತಿಂಗಳ ೧೦ ರಲ್ಲಿ ಆ ಸಭೆಯನ್ನು ಪ್ರಾರಂಭಿಸುವವರಾಗಿದಾರೆಂದು ತಂತೀವರ್ತಮಾನ ಬಂದಿದೆ.

●●●●

ಪೋರ್ಚುಗಲ್ ರಾಜ್ಯದ ರಾಜಧಾನಿಯಾದ ಲಿಸ್ಬನ್ ಪಟ್ಟಣದಲ್ಲಿ ಜಗತ್ತಿನಲ್ಲಿರುವ ಮಹಾಮಹಾ ವೈದ್ಯರೆಲ್ಲಾ ಸಭೆ ಸೇರಿ ವೈದ್ಯ ವಿಷಯಗಳನ್ನು ಚರ್ಚೆ ಮಾಡುತ್ತಿದಾರೆ. ಮೊದಲನೇ ದಿನ ದೊರೆಯವರ [illegible]ರ್ಸ್ ಪ್ರಭುವು ಉಪನ್ಯಾಸ ಮಾಡಿ ಸಭೆಯನ್ನು ಪ್ರಾರಂಭಿಸಿದರು. ೭,೦೦೦ ವೈದ್ಯ ಪ್ರತಿನಿಧಿಗಳು ಸೇರಿದಾರೆಂದು ತಿಳಿದುಬಂದಿದೆ

●●●●

ವಿಲಾಯಿತಿ ರಾಜ್ಯದ ಪ್ರಿನ್ಸ್ ಆಫ್ ವೇಲ್ಸ್‌ರವರು ಪತ್ನಿ ಪರಿವಾರ ಸಹಿತ ಹಿಂದೂಸ್ಥಾನದ ಸಂಚಾರವನ್ನು ತೀರಿಸಿಕೊಂಡು ವಾಪಸು ವಿಲಾಯಿತಿಯನ್ನು ತಲುಪಿದರು. ಅವರಿಗೆ ಗಿಲ್ಡ್ ಹಾಲ್ ಎಂಬ ರಾಜಸಭಾಸ್ಥಳದಲ್ಲಿ ಲಂಡನ್ ಪಟ್ಟಣದ ಮುಖ್ಯ ಪ್ರಜೆಗಳು ಈ ತಿಂಗಳ ೧೭ ನೇ ತಾರೀಖಿನ ದಿನ ಒಂದು ವಿಜ್ಞಾಪನಾ ಪತ್ರಿಕೆಯನ್ನು ಓದಿ ಒಪ್ಪಿಸುವವರಾಗಿದಾರೆ.

●●●●

ವಿಲಾಯಿತಿಯಲ್ಲಿ ಪ್ರಸಿದ್ಧ ಬಾಜಿನ ಕುದುರೆಗಳು ಕೆಲವು ಬಿಕರಿಯಾದವು. ಒಬ್ಬ ಅಮೇರಿಕದವನು ರಾಕ್ ಸ್ಯಾಂಡ್ ಎಂಬ ಕುದುರೆಯನ್ನು ೩,೭೫,೦೦೦ ರೂಪಾಯಿಗೂ, ಸಿಲವಿ ಎಂಬ ಕುದುರೆಯನ್ನು ೩,೦೦೦ ರೂಪಾಯಿಗೂ, ಅಮಾರಂತಿ ಎಂಬುದನ್ನು ೩,೯೦,೦೦೦ ರೂಪಾಯಿಗೂ, ಸೆಪ್ಟರ್ ಎಂಬುವನ್ನು ೩,೭೫,೦೦೦ ರೂಪಾಯಿಗೂ ಕೊಂಡಿರುತ್ತಾನೆ.

●●●●

ಪ್ರಪಂಚದಲ್ಲಿರುವ ಎಲ್ಲಾ ಸರ್ಕಾರದವರೂ ಒಟ್ಟು ಸೇರಿ, ಎಲ್ಲಾ ಪೋಸ್ಟ್ ಆಫೀಸುಗಳನ್ನೂ ಒಂದೇ ರೀತಿಯಾಗಿಟ್ಟು ನಡಸಬೇಕೆಂದು ಆಲೋಚಿಸುವುದಕ್ಕಾಗಿ ಇಟಲೀ ರಾಜಧಾನಿಯಾದ ರೋಂ ನಗರದಲ್ಲಿ ಒಂದು ಸಮಾಜವು ಸೇರಿದೆ. ಆ ರಾಜ್ಯದ ದೊರೆಯವರೂ ರಾಣಿಯವರೂ ದಯಮಾಡಿ ಉಪನ್ಯಾಸಪೂರ್ವಕವಾಗಿ ಸಮಾಜದ ಕಾರ್ಯವನ್ನು ಪ್ರಾರಂಭಿಸಿದರು

●●●●

ಅಮೇರಿಕದ ಸಂಯುಕ್ತ ಸಂಸ್ಥಾನಗಳಲ್ಲಿನ ಕೋಟ್ಯಾಧೀಶ್ವರರ ಅನಂತರ ಅವರ ಆಸ್ತಿಯನ್ನು ಪಿತ್ರಾರ್ಜಿತವಾಗಿಯೂ ಉಯಿಲು ಮೂಲವಾಗಿಯೂ ಪಡೆಯತಕ್ಕವರು ಆ ಆಸ್ತಿ ಎಷ್ಟೆಂಬುವುದನ್ನು ಹೇಳಬೇಕೆಂತಲೂ, ಸರ್ಕಾರದವರು ವಿಧಿಸುವ ಮೊತ್ತಕ್ಕಿಂತ ಹೆಚ್ಚು ಹಣವನ್ನು ಅವರು ಪಡೆಯಕೂಡದೆಂತಲೂ, ಹೆಚ್ಚು ಆಸ್ತಿ ಪಡೆಯುವವರು ಸರ್ಕಾರಕ್ಕೆ ಹೆಚ್ಚು ತೆರಿಗೆ ಕೊಡಬೇಕೆಂತಲೂ ಕಾನೂನ್ ಮಾಡುತ್ತೇವೆಂದು ಪ್ರೆಸಿಡೆಂಟ್ ರೂಸ್‌ವೆಲ್ಟ್ ಯವರು ತಿಳಿಸಿದಾರೆ.

●●●●

ನಾರುಹುಣ್ಣಿಗೆ ಪರಿಹಾರವನ್ನು ಕಂಡುಹಿಡಿಯುವ ವೈದ್ಯನಿಗೆ [illegible]ಟಿಯ ವೈದ್ಯಸಮಾಜದವರು ೧,೫೦೦ ರೂಪಾಯಿ ಬಹುಮಾನ ಕೊಡುವುದಾಗಿ ಪ್ರಕಟಿಸಿದರು. ಡೇನ್ಮಾರ್ಕ್ ರಾಜಧಾನಿಯಾದ ಕೋಪನ್‌ಹೇಗನ್ ಪಟ್ಟಣದ [illegible] ಎಂಬ ವೈದ್ಯನು ಆ ವೈದ್ಯಸಮಾಜದಲ್ಲಿ ತಾನು ಕಂಡುಹಿಡಿದಿದ್ದ ಒಂದು ಕರಡಾ ಹಾಲನ್ನು ವಿತರಿಸಿ, ಅದನ್ನು ನಾರುಹುಣ್ಣಾಗಿದ್ದ ಒಂದು ಇಲಿಗೆ ಪ್ರಯೋಗಮಾಡಿ ದೃಷ್ಟಾಂತಪಡಿಸಿದನು. ಅದಕ್ಕಾಗಿ ಸಭಿಕರು ಸಂತೋಷಪಟ್ಟು ಮೇಲ್ಕಂಡ ಬಹುಮಾನವನ್ನು ಅವನಿಗೆ ಕೊಡಿಸಿರುತ್ತಾರೆ.

●●●●

ರಷ್ಯಾರಾಜ್ಯದಿಂದ ಮನೆ ಮಠಗಳನ್ನು ಬಿಟ್ಟು ಜರ್ಮನಿ ರಾಜಧಾನಿಯಾದ ಬರ್ಲಿನ್ ಪಟ್ಟಣಕ್ಕೆ ೭,೦೦೦ ಜನರು ಬಂದು ನಿಂತಿರುತ್ತಾರೆ ಇದರಲ್ಲಿ ೬,೫೦೦ ಜನರು ಯೆಹೂದ್ಯರು. ಇವರಿಗೆಲ್ಲಾ ತಿನ್ನುವುದಕ್ಕೆ ಏನೇನೂ ಗತಿಯಿಲ್ಲ. ಇಂಥಾ ಜನರುಗಳನ್ನು ಅಲ್ಲಿ ಇಟ್ಟುಕೊಂಡಿರುವುದು ಸಹಜವಲ್ಲವೆಂದು ಜರ್ಮನಿ ಸರ್ಕಾರದವರು ಯೋಚಿಸಿ ಅವರನ್ನೆಲ್ಲಾ ಅಲ್ಲಿಂದ ಹೊರಡಿಸುವುದಕ್ಕೆ ಉಪಾಯಗಳನ್ನು ಹುಡುಕುತ್ತಿದಾರೆ ಯಾಕೆಂದರೆ ಅವರು ಹೊಟ್ಟೆಗಿಲ್ಲದೆ ಆಗಲೇ ಅನೇಕಾನೇಕ ದುಷ್ಕೃತ್ಯಗಳನ್ನು ಮಾಡಿ, ಪ್ರಜಾ ನೆಮ್ಮದಿಗೆ ಭಂಗವನ್ನುಂಟುಮಾಡಿದಾರೆ.

●●●●

ಚೀನಾರಾಜ್ಯದಲ್ಲಿ ಮಹಾ ಪ್ರಸಿದ್ಧಿಯನ್ನು ಪಡೆದಿದ್ದ ಕಾಲವಾದ ಲಿ ಹಂಗ್ ಚಂಗ್ ಎಂಬ ರಾಜ್ಯಧುರಂಧರನ ಹೆಸರನ್ನು ಆ ರಾಜ್ಯಕ್ಕೆ ಸೇರಿದ ಷಾಂಘಾಯಿ ಪಟ್ಟಣದಲ್ಲಿ ಶಾಶ್ವತಪಡಿಸಬೇಕೆಂದು ಜರ್ಮನಿ ರಾಜ್ಯದ ಕ್ರುಪ್ ಎಂಬ ಫಿರಂಗಿ ಮೊದಲಾದ ಯುದ್ಧ ಸಾಮಗ್ರಿಗಳನ್ನು ಮಾಡುವ ಕಾರ್ಖಾನೆಯವರು ತೀರ್ಮಾನಿಸಿ, ಆತನ ಲೋಹ ಪ್ರತಿಮೆಯನ್ನು ಎರಕಹೊಯಿಸಿ ಕಳುಹಿಸಿರುತ್ತಾರೆ. ಈ ಮೂರ್ತಿಯ ಆಕೃತಿಯು ೧೦ ಅಡಿ ಪ್ರಮಾಣವಿರುತ್ತೆ. ಅದನ್ನು ಎತ್ತರವಾದ ಪೀಠದ ಮೇಲೆ ನಿಲ್ಲಿಸುತ್ತಾರೆಂದು ತಿಳಿದುಬಂದಿದೆ. ಚೀನಾ ರಾಜ್ಯದಲ್ಲೆಲ್ಲಾ ಇದೇ ಮೊದಲನೆಯ ಪ್ರತಿಮೆಯೆಂದು ಕಾಣುವುದು.

●●●●

ಫ್ರಾನ್ಸ್ ಸಂಸ್ಥಾನಕ್ಕೆ ಸೇರಿದ ಪ್ಯಾರಿಸ್ ಪಟ್ಟಣದಲ್ಲಿ ಅಂಚೆ ಜವಾನರು ೩೦೦ ಮಂದಿ ತಮ್ಮ ಸಂಬಳವನ್ನು ಹೆಚ್ಚುಮಾಡಿಕೊಡದಿದ್ದರೆ ಕೆಲಸಕ್ಕೆ ಬರುವುದಿಲ್ಲವೆಂದು ನಿಂತುಬಿಟ್ಟರು. ಸರ್ಕಾರದವರು ಅವರಿಗೆ ಸಂಬಳ ಜಾಸ್ತಿ ಮಾಡದೆ ಸಾವಕಾಶಮಾಡಿದ್ದರಿಂದ ಗಣಿ ಕೆಲಸಗಾರರು ಅವರ ಪಕ್ಷವನ್ನು ವಹಿಸಿ, ಅಂಚೆ ಜವಾನರನ್ನು ಸಮಾಧಾನಪಡಿಸಿ ಕೆಲಸಕ್ಕೆ ಕರೆದುಕೊಳ್ಳದಿದ್ದರೆ ತಾವೂ ಗಣಿಗಳಲ್ಲಿ ಕೆಲಸ ಮಾಡುವುದಕ್ಕೆ ಹೋಗುವುದಿಲ್ಲವೆಂದು ನಿಂತುಬಿಟ್ಟರು. ಆಗ ಸರ್ಕಾರದವರು ಅಂಚೆ ಇಲಾಖೆಯ ನೌಕರರಿಗೆ ಸಂಬಳ ಬಡ್ತಿ ಮಾಡಿ ಅವರನ್ನೂ ಅವರ ಕ್ಷೇಮಚಿಂತಕರಾಗಿ ಬಂದ ಗಣಿ ಕೆಲಸಗಾರರನ್ನೂ ಸಮಾಧಾನಪಡಿಸಿದರು.

●●●●

ಪೂರ್ವದಿಗ್ರಾಜ್ಯದಲ್ಲಿ ಈಚೆಗೆ ನಡೆದ ಭಯಂಕರವಾದ ಕದನಗಳನ್ನೂ ಅದರಿಂದ ಪ್ರಾಪ್ತವಾದ ನಾನಾ ಸಂಕಟ ಕಷ್ಟ ನಷ್ಟಗಳನ್ನೂ ದುಃಖಗಳನ್ನೂ ಕುರಿತು ಫ್ರಾನ್ಸಿನ ಮುಖ್ಯ ಪಟ್ಟಣವಾದ ಪ್ಯಾರಿಸ್ ಪಟ್ಟಣದಲ್ಲಿ ಸುಮಾರು ೭,೦೦೦ ಮಂದಿ ವೈದ್ಯರು ಸೇರಿ ಚರ್ಚೆಮಾಡಿ ಇನ್ನು ಮುಂದೆ ಆಯುಧಗಳನ್ನು ಹಿಡಿದು ಘೋರಯುದ್ಧಗಳನ್ನು ಯಾವ ರಾಜ್ಯದವರೂ ನಡಸಕೂಡದೆಂದೂ ರಾಜ್ಯರಾಜ್ಯಗಳವರು ತಮ್ಮ ತಮ್ಮ ವ್ಯಾಜ್ಯಗಳನ್ನು ಪಂಚಾಯಿತರನ್ನಿಟ್ಟು ವ್ಯವಹರಿಸಿಕೊಳ್ಳಬೇಕೆಂದೂ ತೀರ್ಮಾನಿಸಿದಾರೆ. ಈ ಸಮಾಜದವರು ಇಷ್ಟರಲ್ಲೇ ಒಂದು ಸಭೆಯನ್ನು ನಡಸಿ, ತಮ್ಮ ತೀರ್ಮಾನಗಳನ್ನು ಎಲ್ಲಾ ರಾಜ್ಯಾಧಿಪತಿಗಳಿಗೂ ತಿಳಿಯಪಡಿಸುವವರಾಗಿದಾರೆ.

●●●●

ಪರ್ಷಿಯಾ ರಾಜ್ಯದ ರಾಜಧಾನಿಯಿಂದ ವರ್ತಮಾನ ಬಂದಿರುವುದೇನೆಂದರೆ—ಸ್ವೀಡನ್ ರಾಜ್ಯದ ಪ್ರಸಿದ್ಧ ದೇಶಯಾತ್ರಿಕನಾದ ಡಾ। ಸ್ವೆನ್ ಹೆಡಿನ್ ಎಂಬಾತನು ಇಷ್ಟರಲ್ಲೇ ನಾಲ್ಕನೇ ಸಲ ಏಷ್ಯಾಖಂಡವನ್ನು ಸುತ್ತಿಕೊಂಡು ಹೋಗುವುದಕ್ಕೆ ಬರುತ್ತಾನೆ. ಈ ಸಲ ಈತನು ಜಾಂ ಡಾಕ್, ತುರ್ಫಾನ್, ಖರ್, ಟಿಬೆಟ್ಸ್, ನೈಬಂದ್, ನೇ ಎಂಬೀ ಪ್ರಾಂತ್ಯಗಳಲ್ಲಿ ಸಂಚಾರ ಮಾಡುವನು. ಪರ್ಷಿಯದ ಪೂರ್ವಭಾಗದಲ್ಲಿ ಅವನು ಸಂಚಾರಮಾಡಿ, ಅಲ್ಲಿನ ವಿದ್ಯಾಮಾಪಗಳನ್ನೆಲ್ಲಾ ಗುರುತು ಹಚ್ಚಿಕೊಂಡಿದಾನೆ ೧೬೦ ಫೋಟೋಗಳನ್ನೂ ನಕ್ಷೆಗಳನ್ನೂ ಬರೆದಿಟ್ಟುಕೊಂಡಿದಾನೆ ಇವನು ವಾಪಸು ಹೋದನಂತರ ಪೂರ್ವದಿಗ್ರಾಜ್ಯದ ವಿಚಾರವಾಗಿ ಬರೆದು ಪ್ರಕಟಿಸುವ ಚರಿತ್ರೆಯು ಅಪೂರ್ವವೆನಿಸುವುದು ಎಂಬುದೇ.

●●●●

ವಿಲಾಯಿತಿಗೆ ಸೇರಿದ ಕೆಂಟ್ ಎಂಬ ಡಿಸ್ಟ್ರಿಕ್ಟಿನಲ್ಲಿ ಕೆಲವು ರೈತರು ತಮ್ಮ ಜಮೀನುಗಳಲ್ಲಿ ಬೆಳೆದ ಫಸಲನ್ನು ಕಾಗೆ ಪದ್ದು ಮುಂತಾದ ಪಕ್ಷಿ ಪಕ್ಷಿಗಳು ತೆನೆಗಳ ಮೇಲೆ ಕುಳಿತು ತಿಂದುಹಾಕಿ ಹಾಳುಮಾಡುತ್ತಿದ್ದುವು. ಅವರು ಅದನ್ನು ತಪ್ಪಿಸುವುದಕ್ಕೋಸ್ಕರ ಜಮೀನುಗಳಲ್ಲಿ ಕೋಲುಗಳನ್ನು ನೆಟ್ಟು, ಅವುಗಳಿಗೆ ಬೆಕ್ಕುಗಳ ಆಕೃತಿ ಮಾಡಿ ತಗಲಿ ಕಟ್ಟುತ್ತಾ ಬಂದರು. ಪಕ್ಷಿ ಪಕ್ಷಿಗಳು ಈ ಬೆಕ್ಕುಗಳ ಆಕೃತಿಗಳನ್ನು ನೋಡಿ ಹೆದರಿ ಹಿಂದಕ್ಕೆ ಹೋಗಿಬಿಟ್ಟವು. ಅವರ ಫಸಲಿಗೆ ಯಾವ ನಷ್ಟವೂ ಸಂಭವಿಸಲಿಲ್ಲ. ಇತರ ರೈತರೂ ಅವರಂತೆಯೇ ಮಾಡಲಾರಂಭಿಸಿದಾರೆ. ಇತ್ತಲಾಗಿ ಹಿಂದೂಸ್ಥಾನದಲ್ಲಿ ರೈತರು ಇಂಥಾ ಪದ್ಧತಿಯನ್ನು ಬಹುಕಾಲದಿಂದ ಅನುಸರಿಸುತ್ತಿದಾರೆ. ಆದರೆ ಇವರು ಬೆಕ್ಕಿನ ಆಕೃತಿಗೆ ಬದಲಾಗಿ ಸತ್ತ ಕಾಗೆಗಳನ್ನು ಕಟ್ಟುವರು.

●●●●

ಅಮೇರಿಕಾಕ್ಕೆ ಸೇರಿದ ಸಂಯುಕ್ತ ಪ್ರಜಾ ಪ್ರಭುತ್ವದಲ್ಲಿ ಸರ್ಕಾರದವರು ಪರದೇಶಿಗಳಿಗೆ ಇಟ್ಟಿರುವ ನಿರ್ಬಂಧಗಳೇನೆಂದರೆ—ಯಾವ ರಾಜ್ಯದವನಾಗಲಿ ಅಮೇರಿಕಾಕ್ಕೆ ಹೋಗಿ ವಾಸಮಾಡಬೇಕಾದರೆ ಅವನು ೧೫ ರೂ ತಲೆ ತೆರಿಗೆ ಕೊಡಬೇಕು. ಅಲ್ಲಿ ಹೋಗಿ ಇಳಿಯುವಂಥಾ ಪ್ರತಿಯೊಬ್ಬ ಗಂಡಸಿನ ಬಳಿಯಲ್ಲೂ ಕಡೇ ಪಕ್ಷ ೭೫ ರೂ., ಹೆಂಗಸಿನ ಬಳಿ ೩೫ ರೂ. ಅದರೂ ಠೇವಣಿ ಇರಬೇಕು. ಒಂದು ಸಂಸಾರದವರೆಲ್ಲಾ ಒಟ್ಟಿಗೆ ಹೋಗಿ ಇಳಿಯುವುದಾದರೆ ಅವರ ಯಜಮಾನನ ಬಳಿ ೧೫೦ ರೂಪಾಯಿ ಇದ್ದರೆ ಎಲ್ಲರನ್ನೂ ಬಿಡುತ್ತಾರೆ. ೧೬ ವರುಷಕ್ಕೆ ಮೇಲ್ಪಟ್ಟ ಪ್ರತಿಯೊಬ್ಬನಿಗೂ ಯಾವದಾದರೂ ಒಂದು ಭಾಷೆಯಲ್ಲಿ ಓದಿ ಬರೆಯುವುದಕ್ಕೆ ತಿಳಿದಿರಬೇಕು. ಕಾಯಪುಷ್ಟಿ ಇಲ್ಲದವರನ್ನಾಗಲಿ ಪೀಡೆ ಪಟ್ಟವರನ್ನಾಗಲಿ ಕೂಲಿಮಾಡಿ ಜೀವಿಸುವುದಕ್ಕೂ ಬಿಡುವುದಿಲ್ಲ.

●●●●

ಡಾಕ್ಟರ್ ಟಾಡ್ ಎಂಬೊಬ್ಬ ಪ್ರಸಿದ್ಧ ಇಂಗ್ಲಿಷ್ ವೈದ್ಯನು ಆಫ್ರಿಕಾಖಂಡದ ಪಶ್ಚಿಮತೀರ ರಾಜ್ಯಗಳಲ್ಲಿ ಬಹುಕಾಲ ಇದ್ದು ಸಂಚಾರಮಾಡಿ, ನಿದ್ರಾರೋಗವೇ ಮೊದಲಾದ ಉಷ್ಣರಾಜ್ಯಗಳಲ್ಲಿ ಪ್ರಾಪ್ತವಾಗುವಂಥಾ ರೋಗಗಳ ಲಕ್ಷಣ ಮೊದಲಾದ್ದನ್ನು ಪರೀಕ್ಷೆ ಮಾಡಿಕೊಂಡು ವಾಪಸು ವಿಲಾಯಿತಿಗೆ ಹೋಗಿ ಒಂದು ಮಹಾ ವೈದ್ಯರ ಸಮಾಜದಲ್ಲಿ ಹೇಳಿದ್ದೇನೆಂದರೆ—ನಿದ್ರಾರೋಗವೆಂಬ ಉಪದ್ರವು ಈಚೆಗೆ ಜನಸಂಚಾರವಿರುವ ಕಡೆಗಳಿಗೆಲ್ಲಾ ಹಬ್ಬಿಕೊಳ್ಳುವುದರಲ್ಲಿ ಸಂಶಯವಿಲ್ಲ. ಈ ರೋಗ ಹುಟ್ಟಿ ಹತ್ತು ವರುಷಗಳಾದವು. ಇದುವರಿಗೆ ೩—೬ ಲಕ್ಷ ಪ್ರಜೆಗಳು ಈ ರೋಗ ತಗಲಿ ಮೃತಪಟ್ಟರೆಂದು ಹೇಳಿದರೆ ಉತ್ಪ್ರೇಕ್ಷೆಯಾಗಲಾರದು. ಇಂಥಾ ರೋಗವನ್ನು ಹಬ್ಬದಂತೆ ಸರ್ಕಾರಿ ಅಧಿಕಾರಿಗಳು ತಡೆಯುವುದು ಬಹು ಅವಶ್ಯ. ಪ್ರಯಾಣಿಕರನ್ನು ಅಲ್ಲಲ್ಲಿ ತಡೆದು ಅವರ ದೇಹಸ್ಥಿತಿಯನ್ನು ಪರೀಕ್ಷೆಮಾಡಿ, ರೋಗಿಗಳನ್ನು ಈ ರೋಗವಿರುವ ಪ್ರದೇಶಕ್ಕೇ ವಾಪಸು ಕಳುಹಿಸುವಂತೆ ಏರ್ಪಾಡು ಮಾಡಬೇಕು. ಕತ್ತಿನಲ್ಲಾದರೂ ಒಂದು ನರ ಊದಿಕೊಳ್ಳುವುದೇ ನಿದ್ರಾರೋಗ ಪ್ರಾಪ್ತವಾಗಿದೆ ಎಂಬುದಕ್ಕೆ ಲಕ್ಷಣವಾಗಿದೆ. ಜ್ವರ ಮುಂತಾದ್ದೇನೂ ಕಾಣುವುದೇ ಇಲ್ಲ. ಇಂಥಾ ರೋಗವನ್ನು ಹಬ್ಬದಂತೆ ಮಾಡುವುದು ಸರ್ಕಾರದವರ ಕರ್ತವ್ಯಾಂಶವಾಗಿರುತ್ತದೆ ಎಂಬುದೇ.

●●●●

ಚೀನಾ ಚಕ್ರಾಧಿಪತ್ಯಕ್ಕೆ ಸೇರಿದ ದಕ್ಷಿಣ ಹೋನಾನ್ ಮತ್ತು ಪಶ್ಚಿಮ ಷಾಂಟಂಗ್ ಎಂಬೀ ಭಾಗಗಳಲ್ಲಿ ಕೆಲವು ತುಂಟರು ಸೇರಿಕೊಂಡು ದೊಡ್ಡ ಶಕ್ತಿಯ ಸಂಘವೆಂಬೊಂದು ಕೂಟವನ್ನು ಮಾಡಿಕೊಂಡಿದಾರೆ. ಸರ್ಕಾರದವರು ಪ್ರಜೆಗಳ ವಿದ್ಯಾಭ್ಯಾಸದ ವಿಷಯದಲ್ಲಿ ಮಾಡಿಕೊಂಡಿರುವ ಹೊಸ ಬದಲಾವಣೆಗಳು ಈ ಕೂಟದವರಿಗೆ ಸಮ್ಮತವಾಗಿಲ್ಲವೆಂದೂ ಅವರು ಕ್ರೈಸ್ತರ ಮೇಲೆ ಬಹು ದ್ವೇಷ ಸೂಚಿಸುತ್ತಿದಾರೆಂದೂ ಬಾಹ್ಯದಲ್ಲಿ ಕಾಣಿಸಿಕೊಳ್ಳುತ್ತಾರೆ ಆದರೆ ಗ್ರಾಮ ಭೂಮಿಗಳನ್ನೂ ಮನೆ ಮಠಗಳನ್ನೂ ನುಗ್ಗಿ ಕೊಳ್ಳೆ ಹೊಡೆಯುವುದೇ ಅವರ ಮುಖ್ಯ ಉದ್ದೇಶವಾಗಿದೆ. ಹೋನಾನಲ್ಲಿ ಈ ಕೂಟಕ್ಕೆ ಸೇರಿದವರು ೧೫,೦೦೦ ಜನರಿದಾರೆ. ಇವರು "ಮ್ಯಾಂಚೂ ವಂಶವನ್ನು ನಾಶನಮಾಡಬೇಕು" ಎಂಬ ಮಾತುಗಳನ್ನು ಬರೆದಿರುವ ಬಾವುಟಗಳನ್ನು ಹೊತ್ತುಕೊಂಡು ತಿರುಗುತ್ತಾರೆ. ಇವರ ಹಾವಳಿಯನ್ನು ತಡೆಯುವುದಕ್ಕಾಗಿ ಅನೇಕ ಪಟ್ಟಣಗಳಲ್ಲಿ ಜನರು ಕೋಟೆಕೊತ್ತಲುಗಳನ್ನು ದುರಸ್ತುಮಾಡಿ ಭದ್ರಪಡಿಸಿಕೊಳ್ಳುತ್ತಿರುವರು. ಇವರು ಕೊಳ್ಳೆ ಹೊಡೆಯುವುದೂ ಮನೆ ಮಠಗಳನ್ನು ಸುಡುತ್ತಿರುವುದೂ ದಿನೇ ದಿನೇ ಹೆಚ್ಚುತ್ತಾ ಬಂದಿರುವುದನ್ನು ಸರ್ಕಾರದವರು ನೋಡಿ, ಇವರ ಹಾವಳಿಯನ್ನು ಅಡಗಿಸುವುದಕ್ಕೆ ಅಲ್ಲಿಗೆ ಸೈನ್ಯಗಳನ್ನು ಕಳುಹಿಸಿ ಕೊಟ್ಟಿದಾರೆ

ಬಾತ್ಮಿದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಜಾಗ ಕೊಡಲಾರೆವು. ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು; ಇಂಥವುಗಳಿಗೆ ನಾವು ಜಾಗ ಕೊಡಲಾರೆವು.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಎಡಿ.

ಕರೆಸ್‌ಪಾಂಡೆನ್ಸ್.

ಪೂನಾ ಪಟ್ಟಣ.

ಅಯ್ಯಾ

ಪೂನಾ ಪಟ್ಟಣವು ಮಹಾರಾಟರ ಕಾಲದಲ್ಲಿ ಸ್ಥಾಪಿತವಾದದ್ದೆಂದು ತೋರುತ್ತೆ. ಇದು ಈಗ ಮುಂಬಯಿ ಪ್ರೆಸಿಡೆನ್ಸಿಗೆ ಸೇರಿರುತ್ತೆ. ಈ ಪಟ್ಟಣದಲ್ಲಿ ಮಹಾರಾಷ್ಟ್ರ ಬ್ರಾಹ್ಮಣರು ಮತ್ತು ಮಹಾರಾಟರು ವಿನಹಾ ಇನ್ನು ಯಾವ ಮತಸ್ಥರೂ ಇರುವ ಹಾಗೆ ತೋರಲಿಲ್ಲ. ಪೂನೆಯಲ್ಲಿ ಎಲ್ಲಿ ಹೋದರೂ, ಎಲ್ಲಿ ನೋಡಿದರೂ ಮಹಾರಾಟರೇ ಕಣ್ಣಿಗೆ ಬೀಳುತ್ತಾರಲ್ಲದೆ, ಇತರ ಮತಸ್ಥರನ್ನು ನೋಡುವದೇ ದುರ್ಲಭ. ಯಾವ ಕಡೆ ನೋಡಿದರೂ ಮರಾಟಿ ಮತ್ತು ಸಂಸ್ಕೃತ ಭಾಷೆಯೇ ಹಬ್ಬಿಕೊಂಡಿದೆ ದೊಡ್ಡ ದೊಡ್ಡ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿದವರೂ ಸಹಾ ತಮ್ಮ ಮಾತೃಭಾಷೆಯಾದ ಸಂಸ್ಕೃತ ಅಥವಾ ಮರಾಟಿಯ ಭಾಷೆಯಲ್ಲಿಯೇ ಮಾತಾಡುತ್ತಾರೇ ವಿನಹಾ ವಿಶೇಷವಾಗಿ ಇಂಗ್ಲೀಷು ಭಾಷೆಯಲ್ಲಿ ಮಾತನಾಡುವುದಿಲ್ಲ. ನಮ್ಮ ಮೈಸೂರು ಪ್ರಾಂತ್ಯದಲ್ಲಿಯಾದರೋ ನಮ್ಮ ಮಾತೃಭಾಷೆ ಅಂದರೆ ಸಂಸ್ಕೃತ ಅಥವಾ ಕನ್ನಡ ಭಾಷೆಯಲ್ಲಿ ಮಾತನಾಡದೆ ಲೋವರ್ ಸೆಕೆಂಡರೀ ಪರೀಕ್ಷೆ ಮಾಡಿದವರು ಸಹಾ ತಮ್ಮ ಮನೆಗಳಲ್ಲಿ ಕೂಡಾ ಇಂಗ್ಲೀಷು ಭಾಷೆಯನ್ನು ಉಪಯೋಗಿಸುತ್ತಾರೆ. ಇದಂತಿರಲಿ; ಪೂನಾ ಪಟ್ಟಣದ ಪ್ರಜೆಗಳಾದರೋ ಬಹು ಧೈರ್ಯಶಾಲಿಗಳು. ದೇಶಾಭಿಮಾನಿಗಳು. ಉದಾರತ್ವವುಳ್ಳವರಾಗಿ ಇರುತ್ತಾರೆ ನಮ್ಮ ಮೈಸೂರು ಪ್ರಾಂತ್ಯದಲ್ಲಿಯೂ ಪ್ರಜೆಗಳು ಇನ್ನೂ ದೇಶಾಭಿಮಾನಿಗಳಾದರೆ ನಮ್ಮ ದೇಶವು ಉನ್ನತಸ್ಥಿತಿಗೆ ಬರುವದಕ್ಕೆ ಯಾವ ಅಟಂಕವೂ ಇರುವದಿಲ್ಲ.

ಹಾ. ತಿ. ರಾಮಚಂದ್ರ.

ಪುರಾಣ ಹೇಳಿದ್ದಕ್ಕೆ ಬಹುಮಾನ

ಅಯ್ಯಾ,

ಈಗ್ಗೆ ಸುಮಾರು ೩-೪ ತಿಂಗಳಿಂದ ಬೇಗೂರು ಅಕ್ಕಿಪೇಟೆಯಲ್ಲಿ ಹೊಳವನಹಳ್ಳಿ ವಾಸಸ್ಥರಾದ ವಿದ್ವಾನ್ ಶೇಷಾಚಾರ್ಯರಿಂದ ಭಾರತಾಂತರ್ಗತವಾದ ಅಶ್ವಮೇಧಪರ್ವವು ನಡಿಸುತ್ತಾ ಇದ್ದದ್ದು ಸರಿಯಷ್ಟೆ. ಸದರಿ ಪರ್ವವು ಕಳೆದ ೩೦ ನೆ ತಾ ರಾತ್ರಿ ೧೦ ಘಂಟೆವರಿವಿಗೂ ಸಂಪೂರ್ಣವಾಗಿ ಹೇಳಲ್ಪಟ್ಟಿತು. ಬಹಳ ಮಂದಿ ಸಾಹುಕಾರರೂ ವಿದ್ವಾಂಸರೂ ಮಂಡಿದಾರರೂ ವರ್ತಕರೂ ದಯಮಾಡಿ ಕೇಳಿ ಅತ್ಯಾನಂದಪಟ್ಟು ಮೇಲ್ಕಂಡ ವಿದ್ವಾಂಸರಿಗೆ ಒಂದು ಜಾವು ಬಾಳೆ ತಕ್ಕ ಭಂಗಾರದ ತೋಡಾ ಬಹುಮಾನ ಕೊಡಿಸಿ ಕೊಟ್ಟಿರುತ್ತಾರೆ. ಎಲ್ಲರೂ ಈ ವಿದ್ವಾಂಸರನ್ನು ಕೊಂಡಾಡಿದರು.

ಅಕ್ಕಿಪೇಟೆ ವರ್ತಕರು

ತೆರಕಣಾಂಬಿ ಕೆರೆ ವಿಚಾರ

ಅಯ್ಯಾ,

ಗುಂಡಲ್ ತಾಲ್ಲೂಕು ತೆರಕಣಾಂಬಿ ಹೋಬಳಿ ಬೊಮ್ಮನಹಳ್ಳಿ ಗ್ರಾಮದಲ್ಲಿ ಮನೆ ನಂಬರು ೫೦-೬೦ ಇರುತ್ತೆ. ಇದಕ್ಕಾಗಿ ಈ ಗ್ರಾಮದ ಮುಂದೆ ಸಣ್ಣ ಕಟ್ಟೆ ಇದೆ. ಇದು ತುಂಬಿದರೆ ೬ ತಿಂಗಳು ನೀರು ಬರುವದೇ ದುರ್ಲಭವಾಗುವದು. ಇದಕ್ಕಾಗಿ ಈ ಗ್ರಾಮದ ರೈತರಿಂದ ನಾವುಗಳು ಸದರಿ ಕಟ್ಟೆಗೆ ೩೦೦-೪೦೦ ರೂಪಾಯಿನಷ್ಟು ಮಟ್ಟಿ ಕಾಮಗಾರಿ ಮಾಡಿರುತ್ತೇವೆ. ಇದರ ಕಲ್ಲು ಕಟ್ಟುವಕ್ಕೆ ಸರ್ಕಾರದವರು ಪರಿಹಾರಿಕೆಯಿಂದ ಕಲ್ಲು ಕಟ್ಟಿದ ಮಾಡಿಸಿಕೊಡಬೇಕೆಂದು ಗ್ರಾಮದ ರೈತರು ಪ್ರಾರ್ಥಿಸುತ್ತೇವೆ. ಕಳೆದ ಜನವರಿ ಲಾಗಾಯಿತು ಸದರಿ ಕಟ್ಟೆಯ ಮಟ್ಟಿ ಕಾಮಗಾರಿ ಪ್ರಾರಂಭಿಸಿ ಮಾರ್ಚಿ ಅಖೈರಿನೊಳಗೆ ಪೂರೈಸಿ ತಾಲ್ಲೂಕಿಗೆ ಕಲ್ಲು ಕಟ್ಟುವಕ್ಕೆ ಅರ್ಜಿ ಬರೆದು ಕೊಂಡಿರುತ್ತೇವೆ. ಇದನ್ನು ಸರ್ಕಾರದವರು ಮಾಡಿಸಿಕೊಟ್ಟು ಕಾಪಾಡಬೇಕೆನ್ನುವದು ರೈತರ ಪ್ರಾರ್ಥನೆ.

ಒಬ್ಬ ರೈತ.

ಮಲೆನಾಡಿನ ಗೌಡರೂ ವಿದ್ಯಾಭ್ಯಾಸವೂ

ಅಯ್ಯಾ,

ವಿದ್ಯಾಭಿರುಚಿ ಇಲ್ಲದ ಕೆಲವು ನಾನಾಪ್ಪಾರಿ ಗೌಡರುಗಳು ಕಮ್ಮಿ ತಿಳುವಳಿಕೆಯಿಂದ ಅನೇಕ ವಿಧವಾಗಿ ಮಾತಾಡುತ್ತಾರೆ. ಅಂದರೆ ದೇವರು ಎಂದಿಗೆ ಇವರ ಅಜ್ಞಾನವೆಂಬ ಕತ್ತಲನ್ನು ತೆಗೆದು, ಬೆಳಕನ್ನು ಕೊಡುತ್ತಾನೋ ಎಂಬುದಾಗಿ ನಿರೀಕ್ಷಿಸುತ್ತೇನೆ. ಇವರು ತಮ್ಮ ಮಕ್ಕಳಿಗೆ ವಿದ್ಯಾಭ್ಯಾಸ ಕೊಡುವುದನ್ನು ಇಲ್ಲಿ ಸ್ವಲ್ಪಮಟ್ಟಿಗೆ ವಿವರಿಸುತ್ತೇನೆ. ಅದೇನಂದರೆ ತಮ್ಮ ಮಕ್ಕಳನ್ನು ಕೆಲವು ದಿವಸದ ಮಟ್ಟಿಗೆ ಸ್ಕೂಲಿಗೆ ಕಳುಹಿಸುತ್ತಾರೆ. ನಾಲ್ಕೆಂಟು ದಿವಸ ಹೋದರೆ ಸಾಕು ಕೆಲಸಕ್ಕೆ ಹಚ್ಚಿ ಬಿಡುತ್ತಾರೆ. ಕೆಲವರು ಹೇಳೋದು ಹೀಗೆ: ೬-೭ ತಿಂಗಳು ವರಿಗೂ ಮನೆಯಲ್ಲಿ ಇಟ್ಟುಕೊಳ್ಳುತ್ತಾರೆ. ಪುನಃ ಕೆಲವು ದಿವಸ ಸ್ಕೂಲಿಗೆ ಕ್ರಮವಾಗಿ ಬಂದರೆ ಒಂದು ದಿನ ಬಂದರೆ ಮಾರನೇ ದಿನ ಕಳುಹಿಸದೆ ಮನೆಯಲ್ಲಿ ಇಟ್ಟುಕೊಳ್ಳುತ್ತಾರೆ. ಸದರಿ ಸ್ಕೂಲಿನ ಉಪಾಧ್ಯಾಯರು ಹುಡುಗರ ತಂದೆಯನ್ನು ಕೇಳಿದರೆ ಅವನು ಜವಾಬು ಕೊಡುವುದಿಲ್ಲ. ದನ ಕಾಯುವುದಕ್ಕೆ ಒಬ್ಬ ಹುಡುಗನಿಲ್ಲದೆ ಬಹಳ ತೊಂದರೆಯಾಗಿದೆ ನೋಡ್ರಿ ಎಂದು ಹೇಳುತ್ತಾನೆ. ಅದಕ್ಕೆ ಉಪಾಧ್ಯಾಯನು—ಹೀಗೆ ನೀವು ಹುಡುಗನನ್ನು ಮನೆಯಲ್ಲಿ ಬಿಟ್ಟುಕೊಂಡರೆ ಅವನು ಹಿಂದೆ ಕಲಿತಿದ್ದದ್ದನ್ನೆಲ್ಲಾ ಮರೆಯುತ್ತಾನೆ ಎಂದು ಹೇಳಿದರೆ ಅವರು ಹೇಳುವುದೇನಂದರೆ—ನಮ್ಮ ಜಾತಿ ಹುಟ್ಟಿದ್ದೇ ವ್ಯವಸಾಯಕ್ಕೆ. ಗದ್ದೆ ಹೂಡಾಕೆ ನಾವೇನು ಮಾಬ್ಲಿ ಮಾಡೋದು ಬೇಡ ಎಂದು ಹೇಳುತ್ತಾರೆ. ಮತ್ತು ಹಿರಿಯರು ವಿದ್ಯೆಯಿಲ್ಲದೆ ಪ್ರಪಂಚವನ್ನು ಸಂಪಾದಿಸಿಕೊಂಡರು. ಈಗಿನವರು ವಿದ್ಯೆಯನ್ನು ಕಲಿತು ಮನೆಯನ್ನು ಹಾಳು ಮಾಡಿ ಕೊಳ್ಳುತ್ತಾರೆ ಎಂಬುದಾಗಿ ಹೇಳಿ ನಂತರ—ಮೇಷ್ಟ್ರೇ, ನಮ್ಮ ಹುಡುಗನಿಗೆ ಫಟ್ಟಾದಾಗಳ ಲೆಕ್ಕ ಬರೆಯುವ ಮಟ್ಟಿಗೆ ಕಲಿಸಿಕೊಡಿ. ಆ ಲೆಕ್ಕ ಬಂದರೆ ನಮ್ಮ ಹುಡುಗನಿಗೆ ಬರುವ ಸಾಕು ಎಂಬುದಾಗಿ ಹೇಳುತ್ತಾರೆ. ಆದಕಾರಣ, ಈ ಮಲೆನಾಡಿನ ನಾಯಕರು ದೊಡ್ಡ ಮನಸ್ಸುಳ್ಳವರೆಲ್ಲಾ ಸೇರಿ ಒಂದು ಸಭೆಯನ್ನು ಮಾಡಿ, ಸ್ವಜಾತಿಯ ಬಾಲಕರನ್ನು ವಿದ್ಯಾವಂತರನ್ನಾಗಿ ಮಾಡ್ಯಾರೆಂದು ನಿರೀಕ್ಷಿಸುವ

ವಿದ್ಯಾಭಿಮಾನಿ

ಅಗ್ನಿಕುಂಡದ ಮಹಾತ್ಮೆಯು

ಅಯ್ಯಾ,

ದೇಶದ ದಿನ್ನತ್ಯಕ್ಕೂ ಪ್ರಾಬಲ್ಯಕ್ಕೂ ಜನರ ನಡತೆಯೇ ಕಾರಣವಾದ್ದರಿಂದ ಯಾವ ದೇಶದಲ್ಲಿ ಯಾವ ದೇಶದಲ್ಲಿ ಇವುಗಳು ಕ್ಷೀಣಗೊಳ್ಳುತ್ತಿರುತ್ತವೋ ಅದು ಕೇವಲ ಅಧೋಗತಿಯಲ್ಲಿರುವದೆಂದು ಹೇಳಬೇಕಾಗುವದು. ದಕ್ಷಿಣ ಹಿಂದುಸ್ಥಾನವು ಉತ್ತರ ಹಿಂದುಸ್ಥಾನಕ್ಕಿಂತ ಬಹು ಕೀಳಾದ ಸ್ಥಿತಿಯಲ್ಲಿರುವದನ್ನು ನೋಡಿದರೆ ಯಾರು ವಿಸ್ಮಯವನ್ನು ಪಡದಿರಲಾರರು? ಯಾಕೆಂದರೆ ಬಹು ಜಾತಿಗಳಿಂದಲೂ, ಬಹು ಮತ, ಕುಲ, ಆಚಾರ, ಪ್ರವರಗಳಿಂದಲೂ ವಿಭಾಗವಾಗಿ ಒಬ್ಬರ ಏಳಿಗೆಗೂ ಅಭಿವೃದ್ಧಿಗೂ ಅವಕಾಶಕೊಡದೆ ಮತ್ಸರವಾದ ಬುದ್ಧಿಯಲ್ಲಿ ನಡೆಯುವಂತೆ ನಮ್ಮನ್ನು ಮಾಡಿರುತ್ತದೆ. ಒಂದೊಂದನ್ನು ವಿವರಿಸಲು ಕೇವಲ ಅಸಮರ್ಥನಾಗಿರುತ್ತೇನೆ. ಈ ದೇಶದಲ್ಲೇ ದುರಾಚಾರಕ್ಕೂ ದುಷ್ಕೃತ್ಯಕ್ಕೂ ತೌರುಮನೆಯಾಗಿ ತೋರುತ್ತದೆ. ನೋಡಿರಿ! ಒಳಕೆ ಮಾಡಿದ್ದವರೆಲ್ಲರೂ ತಮ್ಮ ಮುಖವನ್ನು ತೋರ್ಪಡಿಸುವದಕ್ಕಾಗಿ ಸ್ವಲ್ಪ ದೂರದಲ್ಲಿ ಅಗ್ನಿಕುಂಡವನ್ನು ಹಾಕಿ, ಅವರಲ್ಲಿ ಎಲ್ಲರೂ ತಪೋಧಿಕ್ಕರಾಗಿಯೂ, ಏಕಪ್ರಜ್ಞರಾಗಿಯೂ ಉಪವಾಸಾದಿ ಕರ್ಮಗಳನ್ನು ಆಚರಿಸಿ, ಆ ಅಗ್ನಿಯಲ್ಲಿ ಪ್ರವೇಶಿಸಿದರು. ಇವರ ಮುಖವನ್ನು ಪರೀಕ್ಷಿಸುವದಕ್ಕೆ ನಾನೂ ಕೌತುಕದಲ್ಲಿ ಒಬ್ಬನಾಗಿ ಹೋಗಿದ್ದೆನು. ಏನು ಆಶ್ಚರ್ಯಂಗಳು! ಎಷ್ಟು ಆಶ್ಚರ್ಯ! ಎಂತಹ ಮಹಾತ್ಮೆಯು! ಕೇವಲ ಅಬಲರಾಗಿರುವ ೭-೮ ವಯಸ್ಸುಳ್ಳ ಹುಡುಗರು ಸ್ವಲ್ಪವೂ ಬುದ್ಧಿಯಿಲ್ಲದೆ ಇರುವ ತಾಯಿ ತಂದೆಗಳು ಹರಿಕೆಗಳನ್ನು ಮಾಡಿಕೊಂಡು, ಅವರನ್ನು ನೀಚರಲ್ಲಿ ಅಗ್ರಗಣ್ಯರಾಗಿಯೂ ಕುಡಿಯುವವರಲ್ಲಿ ಲವಲೇಶವೂ ಲಜ್ಜಾಸ್ಪದವಿಲ್ಲದಿರುವವರಾಗಿರುವವರ ಮುಸ್ಸಂಜೆಯಲ್ಲಿಯೂ ಬಿಟ್ಟು, ತಾವು ವ್ರತಾ-ಬಾಧೆಗಳನ್ನ ಸಹಿಸಿ, ಅಗ್ನಿಯಲ್ಲಿ ತಮ್ಮ ಮಿತ್ರರು ನಡೆಯುವದನ್ನು ನೋಡುವರು. ವಿದ್ಯಾವಂತರಾದ ಸಾವಿರಾರು ಜನರು ಈ ತಮಾಷೆಯನ್ನು ನೋಡುವದೂ ಅಲ್ಲದೆ ಅದಕ್ಕೆ ಪ್ರೋತ್ಸಾಹಪಡಿಸುವರು. ಅಗ್ನಿಯಲ್ಲಿ ಬಿದ್ದವರಿಗಳಿಗೆ ದೇವರು ದಾರಿದ್ರ್ಯವೂ ತಪ್ಪೀತೇ? ಅಗ್ನಿಯು ಸುಡದೆ ಇದ್ದೀತೇ? ನನಗೆ ತಿಳಿದಿರುವ ಅನೇಕರು ಅಗ್ನಿಯನ್ನು ತುಳಿದ ಮರುದಿವಸವೇ ಎಷ್ಟೋ ವ್ಯವಹಟ್ಟಿರುವರು ಕಾಲುಗಳು ಬೆಂದಿರುತ್ತವೆ. ಉರಿಯು ವಿಪರೀತವು. ಇವರಲ್ಲಿ ಏತರ ಸುಖವು? ಏತರ ಜೀವಶ್ಮಾಮ್ಮಿಕ ಮುಕ್ತಿಯು! ಬೆಂಕಿಯಲ್ಲಿ ನೊಂಬಿದಾಸಿರಂತೆ ವೈಕಹಟ್ಟಿ ಹುಡುಗರನ್ನು ಮುಚ್ಚು ರೇಗಿಸಿ ಅಕಾಲ್ಯಸಾದಂಥ ಕಾರ್ಯವನ್ನು ಸಾಧಿಸಬಹುದು. ಅಗ್ನಿ ಕುಂಡದ ಬಳಿ ನೀರು ಕಾಲುವೆಯನ್ನು ತೋಡಿರುವರು. ಒಡಿಬಂದು ಕಾಲುಗಳನ್ನು ಅದರಲ್ಲಿ ಅದ್ದುವರು. ರೋಷವಶೇಷ, ವೈಶದೋಷನೆ ಅಗ್ನಿ ತುಳಿದಾದ್ದಕ್ಕೇ ಅದ್ದುತ್ತವೆನಿಸಿತೋ? ಯಾವ ಜ್ಞಾನಿಯು ಒಪ್ಪುವನು! ಯಾವ ಮೂರ್ಖನು ಒಪ್ಪನು! ಕಣ್ಣು ಮುಚ್ಚಿಕೊಂಡು ಹುಟ್ಟು ಕುರುಡರಂತೆ ನಾಗರೀಕತೆಯುಳ್ಳವರೂ ಕೂಡ ಇಂತಹ ಅನಾಡಬುದ್ಧಿ ಕೃತ್ಯಗಳನ್ನು ಸಾಧಿಸುವದು ಬಹು ಶೋಚನೀಯವಾಗಿರುತ್ತದೆ. ದೇವಸ್ಥಾನದಲ್ಲಿ ನಡೆಯುವ ಪರಮಾರ್ಥ ಕಾರ್ಯವನ್ನು ನೋಡೋಣ! ದೇವರು ಇರುವ ಸ್ಥಳದಲ್ಲಿ ಒಂದು ನಿತವಾದ ಕತ್ತಿಯು ಇಳಿಕೆಗಾಗಿ ಇರಿಸಲ್ಪಡುವದು. ಅಗ್ನಿಯು ತುಳಿಯುವ ಸ್ಥಳಕ್ಕೂ ಇದಕ್ಕೂ ಸುಮಾರು ಕಾಲು ಮೈಲಿ ದೂರ ಇರಬಹುದು. ಕರಗವನ್ನು ಎತ್ತಿಕೊಂಡು ಅಗ್ನಿಕುಂಡದ ಪ್ರದಕ್ಷಿಣೆಮಾಡಿ ಎಲ್ಲರೂ ಏಕಕಾಲದಲ್ಲಿ ಅಗ್ನಿಕುಂಡದೊಳಗೆ ಪ್ರವೇಶಮಾಡಿದಾಗ ಈ ಕತ್ತಿಯು ಬಂದು ಕಡೆ ವಾಲುತ್ತದೆ. ಇದೊಂದು ದೇವರ ಮಹಿಮೆ! ಜನರ ನಂಬಿಕೆ! ಭಕ್ತರ ಪವಿತ್ರತ್ವದ ಹೆಗ್ಗುರುತು! ನಾನು ಪರೀಕ್ಷೆಮಾಡಲು ಹೋರಿದಿನ ಕೈಯಲ್ಲಿ ಗಡಿಯಾರವನ್ನು ಇಟ್ಟುಕೊಂಡು ಕತ್ತಿಯು ವಾಲಿದ ಅಚಂಚಲವಾದ ದೃಷ್ಟಿ ಇಟ್ಟು ಬಂದ ಆದರೆ ನನಗೆ ಈಗ ಅದಕ್ಕಿರುವ ೬ ಗಜ ದೂರವಿತ್ತು, ಪೂಜಾರಿಯು ನನಗೆ ಪರಿಚಿತ ಇದ್ದರೂ ಒಡಿಬಂದು ನನ್ನನ್ನು ನೋಡಿ ಒಂದೆರಡು ಮಾತನ್ನಾಡಿ ವಿಸ್ಮಯಗೊಂಡು ಗರ್ಭದ ಗುಡಿಯನ್ನು ಪ್ರವೇಶಿಸಿ ಬಂದು ಬಾಗಿಲ ಬಾಗಿಲನ್ನು ಹಾಕಿಕೊಂಡನು. ನಾನು ಬಳಿಗೆ ನುಗ್ಗಿದೆನು. ಕರಗವನ್ನು ಹೂರುವವನನ್ನು ಅತ್ತಗಟ್ಟಿದನು. ಆಗಲಿ, ಕತ್ತಿಯ ತನಕ ನೋಡಿಯೇ ಬಿಡುವೆನು ಎಂದು ಅಲ್ಲೇ ನಿಂತೆನು. ನನ್ನ ಜೊತೆಯಲ್ಲಿ ಇಬ್ಬರು ಸ್ನೇಹಿತರಿದ್ದರು. ಅವರನ್ನು ನಾನು ಇಟ್ಟುಕೊಂಡು ಕದಲದೆ ಇದ್ದೆನು. ದೇವಸ್ಥಾನದಿಂದ ಅಗ್ನಿಕುಂಡವನ್ನು ಚೆನ್ನಾಗಿ ನೋಡಬಹುದು. ೬ ಗಂಟೆ ಆಗುತಲೇ ಪೂಜಾರಿಯು ಬಂದು, ನನ್ನನ್ನು ಅಲ್ಲಿ ನಿಲ್ಲಕೂಡದೆಂತ ಹೇಳಿದನು. ಆದರೂ ನಾವು ಹೋಗಲಿಲ್ಲ. ತದನಂತರ ಆತನು ದೇವರ ಗುಡಿಯೊಳಗೆ ಪ್ರವೇಶಿಸಿ ಇನ್ನೊಂದು ಕದವನ್ನು ಹಾಕಿಕೊಂಡನು. ಎಷ್ಟು ಹೊತ್ತಾದರೂ ಬಾಗಿಲು ತೆರೆಯಲ್ಪಡಲಿಲ್ಲವು. ಸಂಧ್ಯಾಕಾಲವಾಗಲು ನಾವು ಬೇಸತ್ತು ಮನೆಗೆ ತೆರಳಿದೆವು. ಇದೇ ದೇವರ ಮಹಿಮೆಯು! ಅರ್ಚಕನ ಕಾಪಟ್ಯವು! ಜನರ ಮೌಢ್ಯವು! ಇಂತಹ ದೇವರುಗಳನ್ನು ತ್ಯಜಿಸಿರಿ. ನಿರಾಮಯನೂ, ನಿಷ್ಕಳಂಕನೂ, ಪವಿತ್ರಸ್ವರೂಪಿಯೂ ಆದ ಪರಮಾತ್ಮನನ್ನು ಭಜಿಸಿರಿ. ಇದೇ ಪರಮ ಪುರುಷಾರ್ಥವು!

ಎಂ. ನಾರಾಯಣ್ ಸಿಂಗ್

ಧರ್ಮೋಪದೇಶಕರ ಉದ್ದೇಶವೇನು?

ಗುರುವಾದವನು ಶಿಷ್ಯನಿಗೆ ಉಪದೇಶವನ್ನು ಮಾಡುವ ಕಾಲದಲ್ಲಿ ಅವನ ಉದ್ದೇಶವೇನಾಗಿರುವದು? ಶಿಷ್ಯನಾದವನು ಗುರುವಿನಲ್ಲಿ ಉಪದೇಶವನ್ನು ಹೊಂದುವದಕ್ಕೆ ತನ್ನನ್ನು ಒಪ್ಪಿಸಿಕೊಡುವಲ್ಲಿ ಆತನಿಂದ ಯಾವ ಫಲವನ್ನು ಪಡೆಯಬೇಕೆಂದು ಅಪೇಕ್ಷಿಸುತ್ತಾನೆ? ಈ ಪ್ರಶ್ನೆಗೆ ಸಮುತ್ತರವು ಆ ಮಹಾ ಬೋಧಕನಾದ ಕ್ರಿಸ್ತನು ಕೊಡಲೆಂಬುವನು ತನ್ನ ಶಿಷ್ಯನಾದ ತಿಮೊಥೆಯೆಂಬುವನಿಗೆ ಬರೆದಂಥ ಒಂದು ಪತ್ರಿಕೆಯಿಂದ ಗೊತ್ತಾಗುತ್ತದೆ. ಈ ತಿಮೊಥೆಯೆಂಬವನನ್ನು ಪೌಲನು ಒಬ್ಬ ಗುರುವನ್ನಾಗಿ ನೇಮಿಸಿ ಕೆಲವು ಸಭೆಗಳ ಮೇಲ್ವಿಚಾರಣೆಯಲ್ಲಿಟ್ಟದ್ದನು. ಆ ಬೋಧಕನು ಹೇಳುವದೇನಂದರೆ—ಶುದ್ಧ ಹೃದಯದಿಂದಲೂ ಒಳ್ಳೇ ಮನಸ್ಸಿನಿಂದಲೂ ನಿಷ್ಕಪಟವಾದ ನಂಬಿಕೆಯಿಂದಲೂ ಉಂಟಾಗುವ ಪ್ರೀತಿಯೇ ನಾನು ನಿನಗೆ ಪ್ರಬೋಧಿಸುವದರ ಗುರಿಯಾಗಿದೆ. ಈ ಮಾತಿನ ಅಭಿಪ್ರಾಯವೇನಂದರೆ—ಮತೋಪದೇಶಕನಾದವನು ತನ್ನ ಬೋಧನೆಗೆ ವಿಷಯನಾಗಿರುವ ಶಿಷ್ಯನಲ್ಲಿ ಪ್ರೀತಿಯೆಂಬುವದು ಉಂಟಾಗಬೇಕೆಂಬುದನ್ನೇ ಗುರಿಯಾಗಿಟ್ಟುಕೊಂಡು ತನ್ನ ಕೆಲಸವನ್ನು ನಡಸಬೇಕು. ಹಾಗಾದರೆ ಆ ಪ್ರೀತಿಯ ಲಕ್ಷಣವೇನು? ಅದು ದೇವರನ್ನು ಪ್ರೀತಿಸುವ ಪ್ರೀತಿ, ಮತ್ತು ಮನುಷ್ಯರನ್ನು ಪ್ರೀತಿಸುವ ಪ್ರೀತಿ. ಗುರುವಿನ ಪ್ರಬೋಧನೆಯಿಂದ ಶಿಷ್ಯನ ಸ್ವಭಾವದಲ್ಲಿ ಇಂಥ ಪ್ರೀತಿಯು ಹುಟ್ಟದೆ ಹೋದರೆ ಆ ಗುರುವಿನ ಪ್ರಯೋಜನವು ನಿಷ್ಫಲವಾಯಿತು, ಶಿಷ್ಯನ ಮನೋರಥವೂ ಭಂಗವಾಯಿತು.

ನಾವು ಹೇಳಿದ ಈ ಪ್ರೀತಿಯ ಲಕ್ಷಣವನ್ನು ಸ್ವಲ್ಪ ಲಕ್ಷ್ಯವಿಟ್ಟು ನೋಡೋಣ. ಇದಕ್ಕೆ ಪೌಲನು ಅದರ ಉತ್ಪತ್ತಿಗೆ ಆಧಾರವಾಗಿ ಮೂರು ಮೂಲಗಳಿಂದ ಹುಟ್ಟಬೇಕಾದುದಾಗಿ ಪಡಿಯುತ್ತದೆಯೆಂದು ಹೇಳಬಹುದು. ಆ ಮೂರು ಮೂಲಗಳು ಯಾವವೆಂದರೆ—ಶುದ್ಧವಾದ ಹೃದಯ, ಒಳ್ಳೇ ಮನಸ್ಸು, ನಿಷ್ಕಪಟವಾದ ನಂಬಿಕೆ ಎಂಬಿವುಗಳೇ. ಈ ನಂಬಿಕೆಯೇಕಾದ್ದೆಂದರೆ—ದೇವರ ವಿಷಯವಾಗಿ ಯಾವ ಅನುಮಾನವೂ ಇಲ್ಲದಂಥ ನಿಜವಾದ ತಿಳುವಳಿಕೆಯಾಗಿದೆ. ಜಾತಿ ಪದ್ಧತಿಯ ಪ್ರಕಾರವಾಗಿ ತನ್ನ ಕುಲಗೋತ್ರದ ಕಟ್ಟಳೆಯ ಪ್ರಕಾರವಾಗಿ ನಂಬತಕ್ಕ ನಂಬಿಕೆಯಲ್ಲ. ಇತರರು ನಂಬಲಿ, ಬಿಡಲಿ ತನ್ನ ಮನಸ್ಸಿಗೆ ನಿಜವೆಂದು ತಿಳಿದದ್ದನ್ನು ನಂಬುವದೂ, ನಿಜವಲ್ಲದ್ದನ್ನು ನಂಬದೆ ಬಿಡುವದೂ ಆಗಿದೆ. ಅಥವಾ ಗುಡಿಯಲ್ಲಿ ಹಲವಾರು ಲಾಭವು ಬರುವದನ್ನು ನೋಡಿಕೊಂಡು ಆ ಗುಡಿಯ ದೇವರನ್ನು ಸಕಲರೂ ಪೂಜಿಸಬೇಕೆಂದು ಪೂಜಾರಿಯು ಸಕಲರನ್ನೂ ಧಿಕ್ಕರಿಸುತ್ತಾನಷ್ಟೆ. ಅವನಲ್ಲಿರುವ ನಂಬಿಕೆಯು ನಂಬಿಕೆಯೇ? ಆತನಿಗೆ ನಿಷ್ಕಪಟವಾಗಿ ಯಾವದು ಸತ್ಯವೆಂದು ತಿಳಿದಿರುತ್ತದೋ ಅದನ್ನು ನಂಬುವದೇ ನಂಬಿಕೆಯಾಗಿದೆ. ಇದನ್ನು ಇನ್ನೂ ಸ್ಪಷ್ಟವಾಗಿ ತಿಳಿಸಬೇಕಾದರೆ ದೇವರು ಪರಿಶುದ್ಧನೂ ನೀತಿವಂತನೂ ದಯಾಪರನೂ ಎಂಬುವದಲ್ಲದೆ ಆತನು ಪಾಪಗಳನ್ನು ಕ್ಷಮಿಸುವವನೂ ಇಷ್ಟಪಡುವವನೂ ಆಗಿದ್ದಾನೆಂದು ನಂಬುವದೇ ಆಗಿದೆ. ಕ್ರಿಸ್ತನೆಂಬುವನು ದೇವರ ಯೋಗ್ಯನಾದ ಪುತ್ರನೆಂದೂ ದೇವರು ಮನುಷ್ಯರಿಗೆ ಪ್ರಕಟಿಸಿರುವ ಈ ಸಂಗತಿಯನ್ನು ನಿಜವೆಂದು ನಂಬುವದೇ ಆ ನಂಬಿಕೆಯಾಗಿರುವದು.

ಇಂಥ ನಂಬಿಕೆಯಿದ್ದರೆ ಪಾಪಗಳಿಂದ ಬಿಡುಗಡೆಯಾಗಿ ಅಲ್ಲಿಂದ ಬಿಡುಗಡೆ ಅಲ್ಲದೆ, ಹೃದಯವು ಶುದ್ಧವಾಗುವಂತೆ ಮಾಡುತ್ತದೆ. ಮನಸ್ಸಿಗೆ ಸಮಾಧಾನವನ್ನು ತಂದುಕೊಟ್ಟು, ಅದರೊಳಗಿರುವಂಥ ದುಷ್ಟ ಯೋಚನೆಗಳನ್ನು ದುರ್ಗುಣಗಳನ್ನು ಹೋಗಲಾಡಿಸಿ ಹೃದಯವನ್ನು ಶುದ್ಧ ಮಾಡುತ್ತದೆ. ಹೀಗೆ ನಡೆಯುವ ಈ ಕಾರ್ಯಕ್ಕೆ ಪರಿಣಾಮವೇನೆಂದರೆ ದೇವರ ವಿಷಯವಾಗಿಯೂ ಮನುಷ್ಯರ ವಿಷಯವಾಗಿಯೂ ಪ್ರೀತಿಯುಂಟಾಗುವದೇ ಆಗಿದೆ. ಮನುಷ್ಯರ ಮೇಲಣ ಪ್ರೀತಿಯ ಆ ಪರಪ್ರೀತಿಗೆ ಇಂಥ ದೇವ, ಇಂಥ ಜನ್ಮ, ಇಂಥ ಜಾತಿಯೆಂಬ ಭೇದವೇ ಇರುವದಿಲ್ಲ. ಈ ಪ್ರೀತಿಗೆ ಸರ್ವಕಾಲದಲ್ಲಿಯೂ ಎಳೆಯಿವ ಮತ್ತೆ ಕಾರಣವೆಂಬುವದೇ ಫಲವಾಗಿದೆ.

ಇಂಥ ಸಕಲರಲ್ಲಿಯೂ ಉಂಟಾಗತಕ್ಕ ಗುಣವು ಇಂಥ ಗುರುವನ್ನೇ ಗುರುವಾದವನು ತನ್ನ ಶಿಷ್ಯನಲ್ಲಿ ಉಂಟುಮಾಡಬೇಕೆಂಬ ಉದ್ದೇಶದಿಂದ ನಡಸಬೇಕು. ಶಿಷ್ಯನು ಸಹ ಈ ಗುಣವನ್ನೇ ಪಡೆಯಬೇಕೆಂಬ ಗುರಿಯನ್ನು ತನ್ನ ಮುಂದಿಟ್ಟುಕೊಳ್ಳಬೇಕು.

ಅನೇಕರು ಮತವಿಷಯಗಳಲ್ಲಿ ಮಾತಾಡುವಾಗ ಈ ವಿಷಯವನ್ನೇ ಮರೆತು ಕೇವಲ ಶಬ್ದವಾದ ಸಂಗತಿಗಳನ್ನು ಚರ್ಚಿಸುವರು. ಅಂದರೆ ಪರಲೋಕವೆಂಬುದು ಸ್ವಭಾವವೆಂದಾದ್ದು? ಆತ್ಮ ಶರೀರದಲ್ಲಿ ಯಾವ ಸ್ಥಳದಲ್ಲಿರುತ್ತದೆ? ಈ ಲೋಕ ಯಾಕೆ ಉಂಟಾಯಿತು? ಅವುಗಳು ಯಾವ ಪದಾರ್ಥಗಳಿಂದ ಉಂಟಾಗಿವೆ? ಎಂಬಿವೇ ಮೊದಲಾದ ಪ್ರಶ್ನೆಗಳಿಗೆ ಸಮುತ್ತರಗಳು ಕೊಟ್ಟು ಸಮಾಧಾನ ಪಡಿಸುವದಕ್ಕೆ ಪ್ರಯಾಸಪಡುವರು. ಇಂಥ ಅಭೇದವಾದ ಪ್ರಶ್ನೆಗಳಿಗೆ ಸಮಂಜಸವಾದ ಉತ್ತರಗಳನ್ನು ಕೊಡುವ ಯಾರಿಗೂ ಸಾಧ್ಯವಲ್ಲ. ಅದಿರಲಿ ಇಂಥ ವಿಚಾರಗಳನ್ನು ಚರ್ಚಿಸುತ್ತಲಿರುವಾಗ ಪರರಿಗೆ ಪಯೋಜನಗಳಾಗಿರಬೇಕೆಂಬುದನ್ನು ಮರೆತು ಹೋಗಬೇಕಾದಗಳಿಗೆ ಅವಕಾಶ ಕೊಡಬಾರದೆಂಬುದನ್ನು ಮರೆತು ಹೋಗಬಾರದು ಸಕ್ಕದಲ್ಲ.

"ಕಲ್ಪನಾಕಥೆಗಳಿಗೂ ಕೊನೆಯೇ ಇಲ್ಲದ ವಂಶಾವಳಿಗಳಿಗೂ ಲಕ್ಷ್ಯಕೊಡಬಾರದು. ಅಂಥಾ ಕಥೆಗಳೂ ವಂಶಾವಳಿಗಳೂ ವಿವಾದಕ್ಕೆ ಆಸ್ಪದವಾಗಿವೆಯೇ ಹೊರತು ದೇವರ ಕೆಲಸಕ್ಕೆ ಅನುಕೂಲವಾಗಿರುವದಿಲ್ಲ. ನಾನು ಆಜ್ಞಾಪಿಸುವವರ ಗುರಿಯಾದರೋ ಶುದ್ಧ ಹೃದಯದಿಂದಲೂ ಒಳ್ಳೇ ಮನಸ್ಸಿನಿಂದಲೂ ನಿಷ್ಕಪಟವಾದ ನಂಬಿಕೆಯಿಂದಲೂ ಉಂಟಾಗುವ ಪ್ರೀತಿಯೇ" ಎಂದು ಪೌಲನು ಬೋಧಿಸುತ್ತಾನೆ. ಇದೇ ಧರ್ಮೋಪದೇಶಕನ ಉದ್ದೇಶ. ಇದನ್ನೇ ಶಿಷ್ಯನು ಗುರುವಿನಿಂದ ಪಡೆಯಬೇಕಾದ ಫಲ.

ತಾಲ್ಲೋಕು ವರ್ತಮಾನಗಳು

ಮಂಡ್ಯ—ಪ್ಲೇಗ್ ಗಲಾಟೆಯಿಂದ ಇಲ್ಲಿನ ಪ್ರಾಸ್ಥಾನಂ ಕೆ ಒಕ್ಕಲಿಗರ ಕೇರಿಗಳ ಜನರು ತಮ್ಮ ಮನೆಗಳನ್ನು ಬಿಟ್ಟು ಸುಮಾರು ಒಂದು ತಿಂಗಳಿಂದ ಗುಡಿಸಲುಗಳಲ್ಲಿ ವಾಸಮಾಡುತ್ತಾ ಅದಾರೋಗ್ಯವು ಉಪದ್ರವವಾಗುತ್ತಾ ಬರುವದು ಎಂದು ಕಂಡುಬಂದರು. ಇಲಿಗಳು ಸಾಯುವದು ಇನ್ನೂ ತಪ್ಪಿಲ್ಲ.—ಕಳ್ಳರ ಉಪಟಂತ್ರ ಬಹಳವಾಗಿದೆ. ಕಳೆದ ಶುಕ್ರವಾರ ೬ನೇ ತಾ ಸಾಹುಕಾರ ಇಲ್ಲಿ ಕೋಟೆ ಆಸ್ಪದ ದೇವಸ್ಥಾನದಲ್ಲಿ ಅನ್ನುವವರ ಮೇಲೆ ಅಲಂಕರಿಸಿದ್ದ ಬೀರೆ ಭಂಗಾರದ ಒಡವೆಗಳನ್ನು ರಾತ್ರಿಕಾಲದಲ್ಲಿ ಕಳ್ಳರು ಪ್ರವೇಶಿಸಿ ಮುಂದಿನ ಬಾಗಿಲಿಗೆ ಹಾಕಿದ್ದ ಬೀಗವು ಪೂರ್ವಕಾಲದ ಬೀಗವಾಯ ಪಂಚಲೋಹಗಿಯೂ ಇದ್ದರೂ ಅದನ್ನು ಆರದಿಂದ ಕೊಯಿದು ಬೀಗ ಮುರಿದು ಬಾಗಿಲನ್ನು ತೆಗೆದು ಒಳಗಿನ ಬಾಗಿಲಿಗೆ ಹಾಕಿದ್ದರೂ ಒಳಗಿನ ಕಳ್ಳ ಬಂದು ಇದ್ದದ್ದನ್ನು ಗಮನಿಸಿ ಹಿಡಿದ್ದನ್ನು ಬಾಗಿಲನ್ನು ತಳ್ಳಿ ಒಳಗೆ ಪ್ರವೇಶಿಸಿ, ಅಮ್ಮನವರ ಮೇಲೆ ಹಾಕಿದ್ದ ನಗಗಳನ್ನು ಕದ್ದುಕೊಂಡು ಹೋದರು. ಇದೂ ಅಲ್ಲದೆ ಪ್ಲೇಗ್ ಗಲಾಟೆಯ ದ ಕೆಲವು ಶ್ರಾವಣಂದು ಮನೆ ಬಿಟ್ಟು ಗುಡಿಸಲುಗಳಿಗೆ ಹೋದಾಗ ಮೇಲ್ಕಂಡ ದೇವಸ್ಥಾನದಲ್ಲಿ ಅವರ ಮನೆಯಲ್ಲಿ ಪೆಟ್ಟಿಗೆ ಸಾಮಾನು ಸಹಿತ ಇರಿಸಿದ್ದರು. ಇದನ್ನು ಸಹ ಕದ್ದುಕೊಂಡು ಹೋಗಿರುತ್ತಾರೆ. ಈ ಕಾರ್ಯವನ್ನು ನೋಡಿದರೆ ಇದನ್ನು ಗಮನಿಸಿ ತಿಳಿದವರು ಮಾಡಿರಬಹುದೇ ಹೊರತು ಬೇರೆಯಾಗಿ ಮಾಡುವದಕ್ಕೆ ಧೈರ್ಯ ಸಾಲದು ಎಂದು ಹೇಳಬೇಕಾಗಿದೆ. ಸಂಗತಿಯನ್ನು ವಿಚಾರಿಸುವದಕ್ಕೆ ಪೊಲೀಸ್ ಸಬ್‌ಇನ್‌ಸ್ಪೆಕ್ಟರವರು ದಯಮಾಡಿದ್ದರು. ಕಳ್ಳರು ಇನ್ನೂ ಸಿಕ್ಕಿಲ್ಲ. ಪೊಲೀಸಿನವರು ಹತ್ತರದಲ್ಲಿದ್ದಾರೆ.—ಇಲ್ಲಿ ಸುಲಿನ ವ್ಯಾಪಾರವಾಗುತ್ತಿದ್ದು ಮೈಸೂರು ಮುಂಬಯಿ ಮತ್ತು ಹೊಸಪೇಟೆ ವರ್ತಕರು ಗುತ್ತಿಗೆ ಎಂ ಗ್ರಾಮದಿಂದ ಮುಂಗಳವಾರ ಸಾಯಂಕಾಲ ಸುಮಾರು ೭ ಗಂಟೆ ಹೊತ್ತಿನಲ್ಲಿ ಬರುತ್ತಿರುವಾಗ ಸುಮಾರು ಹದಿನೈದು ಜನರು ಕೈಕಾಲು ಜ್ಞಾನವರ ಹತ್ತಿರ ಬಂದು ಎಲೆ ಕೊಡಿರಿ ಎಂದು ಅರವ ಭಾಷೆಯಲ್ಲಿ

...ಹೇಳಿದರಂತಲೂ, ಇಲ್ಲಾ ಎಂದು ಹೇಳಿದಾಗ್ಯೂ ಇನ್ನೂ ಪತ್ರ ...ಸಿದ್ದಲ್ಲದೆ ಸ್ವಲ್ಪ ದೂರದಲ್ಲಿದ್ದ ಇನ್ನೊಬ್ಬ ಮನುಷ್ಯನನ್ನು ...ಮಾಡಿದ್ದರಿಂದ ಅವನು ಇವರುಗಳ ಪತ್ರ ಓದಿಬಂದದ್ದನ್ನು ಇವರು ...ಒಂದೇ ಓಟದಿಂದ ಬಂದು ಸಂಗತಿಯನ್ನು ಪೋಲೀಸಿನವರಿಗೆ ...ದು. ಕೂಡಲೆ ಪೋಲೀಸಿನವರು ಅವರುಗಳನ್ನು ಹಿಡುಕೊಂಡು ...ವರಿಗೆ ಒಪ್ಪಿಸಿಕೊಟ್ಟರು ಕೆಲವು ಜನರು ಆ ರಾತ್ರಿ ೪ ಮಂ ...ವರೂ ಸಿಕ್ಕಿದವರನ್ನು ಬೆಳಕು ಆಗುವ ವರೆಗೂ ಲಾಕಪ್ಪಿನಲ್ಲಿ ...ಪ್ರಸಾಹುಕಾರರು ಎಂದು ತಿಳಿದು ಬಿಟ್ಟುಬಿಟ್ಟರೆಂದು ಕೇಳು ...—ಇಲ್ಲಿನ ಇಂಜಿನಿಯರ್ ಇಲಾಖೆಗೆ ಸೇರಿದ ಮೇ॥ ಎಲಿಸ್ ...ರು ಈ ಸ್ಥಳದಲ್ಲಿ ಪ್ರಜೆಗಳಿಗೆ ಇರುವ ನೀರಿನ ಪ್ರವಾಹವನ್ನು ...ನೋಡುವದಕ್ಕಾಗಿ ೨೦ ಅಡಿಯುಳ್ಳ ಒಂದು ನಲ್ಲಿಯನ್ನು ...ಬರ್ಟ್ಸ್ ಅಂಡ್ ಕೋ ಕಂಪೆನಿಯವರಿಂದ ತರಿಸಿ, ಅದನ್ನು ...ಆಸ್ಪತ್ರೆಗೆ ಎದುರು ಇರುವ ಹಳ್ಳದಲ್ಲಿ ನೀರು ಬರುವ ಜಾಗದಲ್ಲಿ ...ರಿಗೆ ಪ್ರಯೋಜನವನ್ನುಂಟುಮಾಡುವ ಹಾಗೆ ೨೦ ದಿವಸ ...ರೂ ಕಾನೂಗಾರಿ ಮಾಡಿಸಿ ಬಹಳ ಕಷ್ಟಪಟ್ಟರೂ ಕೆಳಗೆ ಬಂದ ...ದರಿಂದ ನೀರು ಬಾರದೇ ಹೋಯಿತು. ಈಗ ಅದೇ ನಲ್ಲಿಯನ್ನು ...ಮೂರು ಮೈಲಿ ದೂರದಲ್ಲಿರುವ ಹಿಂಡುವಾಳ ಎಂಬ ಗ್ರಾಮದ ...ಪೈಲಿಕಲ್ಲಿಗೆ ಸಮೀಪವಾಗಿರುವ ಒಂದು ಹಳ್ಳದ ತೊರೆಯಲ್ಲಿ ...ನೀರನ್ನು ಜನರು ಸದಾಗವಾಗಿ ನಲ್ಲಿಯಿಂದ ತೋಡಿಕೊಂಡು ...ಯೋಗಿಸಿಕೊಳ್ಳುವ ಹಾಗೆ ಸಾಹೇಬರೂ ಮತ್ತು ಸರ್ಕಾರದವ ...ಮಾಡಿಕೊಟ್ಟದ್ದರಿಂದ ಅವರನ್ನು ಗ್ರಾಮಸ್ಥರು ಬಹಳವಾಗಿ ...ಮಾಡುತ್ತಾರೆ —ಈಗ್ಗೆ ಈ ಊರಲ್ಲಿ ಮೋಟಾರ್ ಕಾರ್ ಗಾಡಿ ...ಯಾಟ ಜೋರಾಗಿದೆ ಇವುಗಳು ಬರತಕ್ಕ ಸಮಯವೇ ತಿಳಿ ...ಲ್ಲ. ಹಿಂದೆ ಕೆಲವು ದಿವಸಗಳಲ್ಲಿ ಹೀಗೇ ಮೋಟಾರ್ ಬಂಡಿ ...ಅತಿ ರಭಸವಾಗಿ ಬರುತ್ತಾ ಮ್ಯುನಿಸಿಪಲ್ ಸರಹದ್ದಿನಲ್ಲಿ ...ಭಂಡಿಯೊಂದಕ್ಕೆ ಡಿಕ್ಕಾಬಿಟ್ಟಿತು ಗಾಡಿಯವನು ಚಂಡು ಚಂ ...ಗಾಡಿಯಿಂದ ಹೊರಕ್ಕೆ ಲಾಂದ್ರದ ಕಡೆಗೆ ಎಸೆಯಲ್ಪಟ್ಟು ಮೂ ...ದ್ದು ನರಳುತ್ತಿರುವಾಗ್ಗೆ ಪೋಲೀಸಿನವರು ಲಾಂದ್ರ ಒಡೆದುಹೋ ...ಕ್ಕಾಗಿ ಅವನನ್ನು ಬೆದರಿಸಿದರು! ಹೀಗೆ ಬೆದರಿಸಿದ್ದು ಯಾವ ...ವೋ ತಿಳಿಯದು ಈ ವಿಷಯದಲ್ಲಿ ಸರ್ಕಾರದವರು ನಿಗಾ ...ಟ್ಟು ಮ್ಯುನಿಸಿಪಲ್ ಸರಹದ್ದಿನಲ್ಲಿ ಗಂಟೆಗೆ ಎರಡು ಮೈಲಿ ವೇಗ ...ಧಿಯನ್ನು ಬಿಡುವದಲ್ಲದೆ ಆ ಗಾಡಿ ಬರುವದಕ್ಕೆ ಮುಂಚೆ ...ಸಿಕವರಿಗೆ ಹುಷಾರಿ ಬಗ್ಗೆ ತಿಳುವಳಿಕೆ ಕೊಡುವ ಹಾಗೆ ಮಾಡಿ ...ಕೆಂದು ಇಲ್ಲಿನವರೆಲ್ಲರೂ ಬಹಳವಾಗಿ ಪ್ರಾರ್ಥಿಸುತ್ತಾರೆ.

ಪ್ರಕಟನೆಗಳು.

...ವು ವಿಲಾಯತಿಯಿಂದ ಯಾವ ಸಾಮಾನುಗಳನ್ನಾದರೂ ತರಿಸಿ ...ಬೇಕಾಗಿದ್ದರೆ 19-17

ಬ್ರೈಡ್ ಮತ್ತು ಕೇಸ್ಟಲೆಂಡ್,

೮—೩೪, ಸಿಟಿ ರೋಡ್, ಲಂಡನ್, ಇ. ಸಿ.

ಎಂಬೀ ವಿಳಾಸಕ್ಕೆ ಹಣ ಕಳಿಸಿ, ಕಾಗದ ಬರೆಯಿರಿ. ಕಾಗದಗಳಿಗೆ ೧ ಆಣೆ ಸ್ಟಾಂಪು ಹಚ್ಚಬೇಕು, ಇಂಡಿಯಾ ಪೋಸ್ಟ್ ಕಾರ್ಡುಗಳನ್ನು ಬರೆಯಬಾರದು ಕಂಪೆನಿಯವರು ಪೇಟೆಂಟ್ ಔಷಧಿಗಳನ್ನು, ಆಪಕ್ತರಿಗೂ ...ಗೂ ಕೊಡುವಂಥಾ, ಯಂತ್ರಗಳಿಂದಲೇ ತಯಾರಾದಂಥಾ ...ಗಳನ್ನು, ಇನ್ನೂ ನಾನಾತರದ ಪದಾರ್ಥಗಳನ್ನು ಇಟ್ಟು ಬಿಕ ...ತ್ತಾರೆ ಅವರು ಬಹು ವಿಶೇಷವಾದ ಗಮನಕೊಟ್ಟು, ಸಾಧ್ಯ ...ಷ್ಟು ಅಗ್ಗವಾಗಿ, ಬೇಕಾದ ಸಾಮಾನುಗಳನ್ನೇ ಆರಿಸಿ, ಮರಿಟ ...ರ್ನೇ ಕಳುಹಿಸಿಕೊಡುವರು.

ಕಾಗದಗಳನ್ನು ಇಂಗ್ಲಿಷಿನಲ್ಲೇ ಬರೆಯಬೇಕು.

ಪರಿಮಳ ನಶ್ಯಪುಡಿ

...ವುಳ ನಶ್ಯದಪುಡಿ ಡಬ್ಬಿ ೧ ಕ್ಕೆ	0—9—0
...ಗಿ ಖರ್ಚು	0—3—0
...ದಾ ನಶ್ಯದಪುಡಿ ಡಬ್ಬಿ ೧ಕ್ಕೆ	0—6—0
...ಗಿ ಖರ್ಚು	0—3—0

...ಪುಡಿಯನ್ನು ಮೇಲಾದ ಹೊಗೆಸೊಪ್ಪಿನಿಂದ ಸುವಾಸನೆಯು ...ಗಿ ತಯಾರು ಮಾಡಲ್ಪಟ್ಟಿರುತ್ತೆ ಇದರ ಸುವಾಸನೆ ಒಂದು ...ಸಾಧಾರಣ ಪುಡಿಯಲ್ಲಿ ಸ್ವಲ್ಪವನ್ನು ಹಾಕಿ ಕಲಸಿದರೆ ಪುಡಿ ...ಗಮಗಮಿಸುತ್ತೆ. ಉಪಯೋಗಿಸುವವರಿಗೆ ಸುವಾಸನೆಯನ್ನೂ ...ವನ್ನೂ ಉಂಟುಮಾಡುತ್ತೆ.

...ನೇತ್ರ, ಪೀನಸ, ಜಲದೋಷ, ಶಿರೋವ್ಯಾಧಿ ಇವುಗಳನ್ನು ...ನಿವಾರಿಸುತ್ತೆ. ಮಾದರಿಗೆ ೧ ಡಬ್ಬಿಯನ್ನು ತರಿಸಿ ಪರೀಕ್ಷಿಸಿರಿ.
☞ ಪ್ರತಿ ೧ ಡಬ್ಬಿಯಲ್ಲಿ ೯ ತೋಲ ನಶ್ಯದಪುಡಿ ಇರುತ್ತೆ.

ಪ್ರಸಿದ್ಧವಾದ ಹಲ್ಲು ಪುಡಿ.

...ವನ್ನು ಹಲ್ಲು ಉಜ್ಜಿಕೊಳ್ಳುವದಕ್ಕೆ ತಯಾರು ಮಾಡಿರುತ್ತೇ ...ಲವು ಜನರು ಹಲ್ಲು ಉಜ್ಜಿಕೊಳ್ಳುವಾಗ್ಗೆ ಬೂದಿಯನ್ನು ಮ ...ಕ್ಕಿಯನ್ನು ಹಾಕಿ ಉಜ್ಜಿಕೊಳ್ಳುತ್ತಾರೆ ಅದರಿಂದ ಹಲ್ಲಿ ...ನ ಇಗರುಗಳು ಬಾತು ಹಲ್ಲು ನೋವಿಗೆ ಕಾರಣವಾಗುವ ...ಟ್ಟ ಮೇಲೆ ಬರಸಂತೆ ಬೂದಿ, ಮಣ್ಣು ಇವುಗಳಿಂದ ಹಲ್ಲು ಉ ...ಳ್ಳುವದಕ್ಕಿಂತಲೂ ಈ ಪುಡಿಯನ್ನು ತರಿಸಿಕೊಂಡು ಉಪ ...ಗಿಸಬೇಕೆಂದು ತಿಳಿಸುತ್ತೇವೆ. ಈ ಪುಡಿಯಿಂದ ಸಹಾ ಅನೇಕ ...ರು ಗುಣವಾಗುತ್ತದೆ. ತಂಪಿನಿಂದುಂಟಾಗುವ ಜನ್ನಿ ನೋವು ...ನೋವು ಇವುಗಳನ್ನು ಅತಿಬೇಗನೆ ಪರಿಹಾರ ಮಾಡುತ್ತದೆ. ...ಸಿಹಿಯನ ಕೆಂಪು ಬಾಯಿನ ರಣವು, ಹಲ್ಲು ನೋವು ಇಗುರ ...ಇವುಗಳನ್ನು ನಿವರ್ತಿ ಮಾಡುತ್ತವೆ. ಕ್ರಯ ಡಬ್ಬಿ ೧ ಕ್ಕೆ ...೦

ವಿಳಾಸ:—ಮಹಮೇದರ್, ಧರ್ಮ ವೈದ್ಯಶಾಲಾ, ...ದಾರು ರೋಡ್, ಸಾಹುಕಾರ್‌ಪೇಟೆ, ಮದರಾಸು.

ಮೈಸೂರು ಸಿಟಿ ಮ್ಯುನಿಸಿಪಾಲಿಟಿ.

76-2

ಇಸ್ತಿಹಾರು.

ಮೈಸೂರು ಸಿಟಿಯಲ್ಲಿ ೧೯೦೬—೭ ನೇ ಸಾಲಿಗೆ ಈ ಕೆಳಗೆ ನಮೂದಾಗುವ ಬಾಬುಗಳು ಆಯಾಯ ತಾರೀಖಿ ನಲ್ಲಿ ಹರಾಜು ಮಾಡಲ್ಪಡುವವು. ಇಷ್ಟಪಟ್ಟವರು ಹಾಜರಾಗಿ ಭಿಡದರಖಾಸ್ತು ಮಾಡಬಹುದು.

ಕ್ರಮ ಸಂಖ್ಯೆ	ಹರಾಜು ಮಾಡಲ್ಪಡುವ ತಾರೀಖು	ಕಾಲ	ಬಾಬುವಾರು ತಪಶೀಲು	ಹರಾಜು ಮಾಡಲ್ಪಡುವ ಸ್ಥಳ	[illegible]
		ಗಂಟೆ			
1	10-5-1906	8 ಬೆಳಿಗ್ಯೆ	ಮಂಡಿ ಮಾರ್ಕೆಟ್ ಸುಂಕ ಫೀಜು ಕಂಟ್ರಾಕ್ಟು ..	ಮಂಡಿ ಮಾರ್ಕೆಟ್	
2	,,	8 30 ,,	ಮಂಡಿ ಮಾರ್ಕೆಟ್ ಖಸಾಯಿ ಅಂಗಡಿಗಳ ಮಾಲೆಯವರ ಬಾಡಿಗೆ ವಸೂಲ್ಮಾಡಿಕೊಳ್ಳುವ ಹಕ್ಕು ..	,,	
3	,,	8-30 ,,	ಮಂಡಿ ಮೊಹಲ್ಲಾ ಸ್ಲಾಟರ್ ಹೌಸಿನಲ್ಲಿ ರೋಜೇನಾ ಕತರಾಯಿಸಲ್ಪಡುವ ದನುಗಳಿಗೆ ಫೀಜು ವಸೂಲ್ಮಾಡಿಕೊಳ್ಳುವ ಹಕ್ಕು ..	,,	
4	,,	8 ,,	ಲಷ್ಕರ್ ಮೊಹಲ್ಲಾ ಬುಲಕ್ ಸ್ಲಾಟರ್ ಹೌಸಿನಲ್ಲಿ ಕತರಾಯಿಸಲ್ಪಡುವ ದನುಗಳಿಗೆ ಫೀಜು ವಸೂಲ್ಮಾಡಿಕೊಳ್ಳುವ ಹಕ್ಕು ..	ಬುಲಕ್ ಸ್ಲಾಟರು ಹೌಸು ಬಳಿ	
5	,,	8 ,,	ಸ್ಲಾಟರ್ ಹೌಸು ಗೊಬ್ಬರದ ಗುಂಡಿಯಿಂದ ರೋಜೇನಾ ಗೊಬ್ಬರ ಸಾಗಿಸಿಕೊಂಡು ಹೋಗುವ ಹಕ್ಕು	,,	
6	,,	8-30 ,,	ಬೀಫ್ ಬುಚ್ಚರ್ಸ್ ಸಾಲುಗಳಿಂದ ಮಾಲೆಯವರ ಬಾಡಿಗೆ ವಸೂಲ್ಮಾಡಿಕೊಳ್ಳುವ ಹಕ್ಕು	,,	
7	,,	8 ,,	ದೇವರಾಜ ಮಾರ್ಕೆಟ್ ಸುಂಕ ಫೀಜು ಕಂಟ್ರಾಕ್ಟು ..	ದೇವರಾಜ ಮಾರ್ಕೆಟ್ ಬಳಿ	
8	,,	8 ,,	ಬಿಟ್ಟೋ ಖಸಾಯಿ ಅಂಗಡಿಗಳಿಂದ ಮಾಲೆಯವರ ಬಾಡಿಗೆ ವಸೂಲ್ಮಾಡಿಕೊಳ್ಳುವ ಹಕ್ಕು	,,	
9	11-5-06	2 ಮಧ್ಯಾಹ್ನ	ಶುಕ್ರವಾರ ಸಂತೆಯಲ್ಲಿ ಬೀಳುವ ಗೊಬ್ಬರ ಸಾಗಿಸಿಕೊಂಡು ಹೋಗುವ ಹಕ್ಕು	ಜೇನಪ್ಪರಾಯನ ಕಟ್ಟೆ ಬಳಿ	
10	,,	2 ,,	ಶುಕ್ರವಾರ ಸಂತೆಯ ಮೈದಾನದಲ್ಲಿ ಬಂದು ನಿಲ್ಲುವ ಗಾಡಿಗಳಿಂದ ಗಾಡಿ ೧ಕ್ಕೆ ೩ ಪೈ ಸಂತೆ ವಸೂಲ್ಮಾಡುವ ಹಕ್ಕು ..	ಜೇನಪ್ಪರಾಯನ ಕಟ್ಟೆ ಬಳಿ	
11	,,	2 ,,	ಜೇನಪ್ಪರಾಯನ ಕಟ್ಟೆ ಕೆಳಗೆ ಇರುವ ೬ ಹುಲ್ಲು ಅಂಗಡಿಗಳಿಂದ ಬಾಡಿಗೆ ವಸೂಲ್ಮಾಡಿಕೊಳ್ಳುವದು	,,	
12	,,	2 ,,	ಶುಕ್ರವಾರ ಸಂತೆಯಲ್ಲಿ ದನಗಳಿಂದ ದಾಸು ೧ಕ್ಕೆ ೩ ಪೈ ಮೇರೆ ವಸೂಲ್ಮಾಡಿಕೊಳ್ಳುವ ಹಕ್ಕು	ಸಂತೆಯ ಬಳಿ	
13	,,	8 ಬೆಳಿಗ್ಯೆ	ಅಶರಫ್ ಮಿಯಾ ಸಾಹೆಬರ ಗಲ್ಲಿಯಲ್ಲಿರುವ ೨ ತೆಂಗಿನ ಮರಗಳ ಫಸಲು	ಮರಗಳ ಬಳಿ	
14	,,	8 ,,	ಮುನಿಯಾದಪ್ಪ ಗರಡಿ ಬೀದಿಯಲ್ಲಿರುವ ತೋಟವನ್ನು ಸಾಗುವಳಿ ಮಾಡಿಕೊಳ್ಳುವ ಹಕ್ಕು	ತೋಟದ ಬಳಿ	
15	12-5-06	8 ,,	ಚಿಕ್ಕ ಬಜಾರ್ ಬೀದಿಯಲ್ಲಿರುವ ೫೦ ತೆಂಗಿನ ಮರದ ಫಸಲು ..	ಮರದ ಬಳಿ	
16	,,	8 ,,	ಪೀಪಲ್ಸ್ ಪಾರ್ಕಿನಲ್ಲಿರುವ ತೆಂಗು, ಮಾವು, ಹುಣಿಸೆ ಇವುಗಳ ಫಸಲು	ಪಾರ್ಕಿನಲ್ಲಿ	
17	,,	8 ,,	ಇಟ್ಟಿಗೆಗೂಡು ತೋಪಿನಲ್ಲಿ ರೋಜೇನಾ ಬೀಳುವ ಗೊಬ್ಬರ ಸಾಗಿಸಿಕೊಂಡು ಹೋಗುವದು	ತೋಪಿನ ಬಳಿ	
18	,,	8 ,,	ಕಿಲ್ಲೆ ಮೊಹಲ್ಲಾ ಬಂಡಿ ಪೋಟನಲ್ಲಿ ಬಂದುಬೀಳುವ ಗೊಬ್ಬರ ಸಾಗಿಸುವದು	ಬಂಡಿ ಪೋಟನಲ್ಲಿ	
19	,,	8 ,,	ಸ್ವಯೇಜು ಗಾರ್ಡನ್ನಿನಲ್ಲಿರುವ ತೆಂಗು ಮತ್ತು ಹುಣಿಸೆ ಫಸಲು ..	,,	
20	,,	8 ,,	ಬಂಡಿ ಪೋಟನಲ್ಲಿರುವ ಹುಣಿಸೆ ಮತ್ತು ತೆಂಗಿನ ಮರಗಳ ಫಸಲು..	,,	
21	,,	8 ,,	ಹಳೇ ಅಗ್ರಹಾರದ ಗರ್ಲ್ಸ್ ಸ್ಕೂಲು ಬಳಿಯಿರುವ ೨ ತೆಂಗಿನ ಮರಗಳ ಫಸಲು	ಮರಗಳ ಬಳಿ	
22	,,	8 ,,	ಕೋರಿಶೆಟ್ಟಿಯ ಮನೆ ಮುಂದೆಯಿರುವ ೧ ತೆಂಗಿನಮರದ ಫಸಲು ..	,,	
23	,,	8-15 ,,	ಸೊಪ್ಪಿನಕೊಳದ ಅಶ್ವರಥ್ಥೆಯಲ್ಲಿರುವ ತೆಂಗಿನ ಮರಗಳ ಫಸಲು ..	,,	
24	,,	8-30 ,,	ವಾಣೀವಿಲಾಸದ ರೋಡು ಪಕ್ಕದ ಸೇತುವೆ ಬಳಿಯಿರುವ ೧ ತೆಂಗಿನ ಮರದ ಫಸಲು	ಮರದ ಬಳಿ	
25	13-5-06	8 ,,	ವೀವರ್ಸ್ ಲೈನ್ ಮೈದಾನದಲ್ಲಿರುವ ೧೨ ತೆಂಗಿನ ಮರಗಳ ಫಸಲು. .	ಡಿಟ್ಟೋ	
26	14-5-06	8 ,,	ಹೊಸ ರುದ್ರಭೂಮಿಯಲ್ಲಿರುವ ಹುಲ್ಲಿನ ಕಾವಲು ಮತ್ತು ಫಲವೃಕ್ಷಗಳ ಫಸಲು	ಕೃಷ್ಣಾಗ್ರದ ಬಳಿ	
27	,,	8 ,,	ಜೋಡುತೆಂಗಿನಮರದ ತೋಟಕ್ಕೆ ದನಬಿಟ್ಟು ಮೇಯಿಸಿಕೊಳ್ಳುವ ಹಕ್ಕು	ತೋಟದ ಬಳಿ	
28	,,	8 ,,	ಸಿಟಿ ಮಹಲ್ ಕೆರೆಯಲ್ಲಿರುವ ಮ್ಯುನಿಸಿಪಾಲಿಟಿಗೆ ಸೇರಿದ ಹುಣಿಸೆ ಮರಗಳಲ್ಲಿ ಬಿಡುವ ಫಸಲು	ಸಾಯರು ಕಚೇರಿಯಲ್ಲಿ	
29	15 5-06	8 ,,	ಕನ್ನೇಗೌಡನ ಕೊಪ್ಪಲು ಪಶ್ಚಿಮಭಾಗದಲ್ಲಿರುವ ಮ್ಯುನಿಸಿಪಲ್ ತೋಟವನ್ನು ಸಾಗುವಳಿ ಮಾಡಿಕೊಳ್ಳುವದು ..	ತೋಟದ ಬಳಿ	
30	,,	8 ,,	ಲಷ್ಕರ್ ಮೊಹಲ್ಲಾ ಬಾರ್ ಲೈನಿಂದ ರೋಜೇನ ಬಂದು ಬೀಳುವ ಗೊಬ್ಬರ ಸಾಗಿಸಿಕೊಂಡು ಹೋಗುವದು ..	ಬಾರ್ ಲೈನ್ ಬಳಿ	
31	,,	8 ,,	ಸಾಯರು ಕಚೇರಿಯ ಕಾಂಪೌಂಡಿನಲ್ಲಿ ರೋಜಿನ ಬೀಳುವ ಗೊಬ್ಬರ ಸಾಗಿಸಿಕೊಂಡು ಹೋಗುವ ಹಕ್ಕು	ಸಾಯರು ಕಚೇರಿಯಲ್ಲಿ	
32	,,	2 ಮಧ್ಯಾಹ್ನ	ಟೌನ್ ಹಾಲಿನಲ್ಲಿ ನಾಟಕವಾಗತಕ್ಕ ರಾತ್ರಿಗಳಲ್ಲಿ ಕಾಂಪೌಂಡಿನಲ್ಲಿ ಲಿಮನೇಡ್ ಮತ್ತು ಸೋಡಾವಾಟರು ಇಟ್ಟುಕೊಂಡು ಮಾರಿಕೊಳ್ಳುವ ಹಕ್ಕು	ಟೌನ್ ಹಾಲ್ ಬಳಿ	
33	,,	8 ಬೆಳಿಗ್ಯೆ	ಗ್ರಾಜುಯೇಟ್ಸ್ ಟ್ರೇಡಿಂಗ್ ಅಸೋಸಿಯೇಷನ್ ಹಿಂಭಾಗದಲ್ಲಿರುವ ೧ ತೆಂಗಿನ ಮತ್ತು ೧ ಹುಣಿಸೆ ಮರದ ಫಸಲು ..	ಮರಗಳ ಬಳಿ	

ತಾರೀಖು 1 ನೇ ಮಾಹೆ ಮೇ, 1906
ಮೈಸೂರು ಸಿಟಿ ಮ್ಯುನಿಸಿಪಲ್ ಆಫೀಸು.

C VENKATA RAO,
Vice President,
Mysore City Municipality.



ಇದನ್ನು ನೋಡಿದರೆ ನೀವು ಬಹು ಆಶ್ಚರ್ಯ ಪಡುವಿರಿ!!! 99-2

ನಮ್ಮ ಪ್ರಸಿದ್ಧವಾದ ಪುಸ್ತಕಭಂಡಾರದಲ್ಲಿ ಅನೇಕ ಸರಸ್ವ ಉಪಾಯದ ಕನ್ನಡ ಗ್ರಂಥಗಳೂ, ಬಾಲಪುಸ್ತಕಗಳೂ, ಪೆನ್ನು, ಪೆನ್ಸಿಲ್, ನೋಟ್‌ಬುಕ್, ನಾನಾ ವಿಧವಾದ ಕಾಗದದ ಜೋಪಿಗಳು, ವೃತ್ತಾಂತ ಪತ್ರಿಕೆ, ಪುಸಿಲೌಸಮ್, ಕನ್ನಡ ಗ್ರಂಥ ವಿಚಿತ್ರ, ಪ್ರಾಗ್ರೆಸ್, ಹಾವರ್ಕಿ ಸೀಲ್ಡ್ ಮುಂತಾದ ಪ್ರಸಿದ್ಧವಾದ ವರ್ತಮಾನ ಪತ್ರಿಕೆಗಳೂ ಇಲ್ಲಿ ಅನೇಕ ಸಾವಿರಗಟ್ಟಲೆಯಾಗಿ ಮಾರಾಟವಾಗುತ್ತಿವೆ. ಈ ದಿವೊ ಕಟ್ಟಡವು ರಾಜಧಾನಿಯಲ್ಲಿ ಬಹು ಪ್ರಸಿದ್ಧವಾದ ಸ್ಥಳವೆಂದು ಮೈಸೂರು ದೇಶದಲ್ಲೆಲ್ಲಾ ಹೆಸರುಗೊಂಡಿದೆ ಈ ಕೆಳಗೆ ನಮೂದಿಸಿರುವ ಪುಸ್ತಕಗಳನ್ನು ಸ್ವಲ್ಪ ನೋಡಿ.—

ಕಥಾಸಂಗ್ರಹ ೧ ರಿಂದ ೩ ಭಾಗಗಳು ಕ್ರಯ ೧—೮—೦
ವಿ. ಪಿ. ಪಿ. ಮೂಲಕ ೧—೩—೦

ಅನುಭವಸಾರ .. .. ಕ್ರಯ ೦-೧೨—೦

ಗ್ರೀಕರ ಚರಿತ್ರೆ .. .. „ ..೦—೨—೦

ರೋಮನರ ಚರಿತ್ರೆ .. „ ..೦—೨—೦

ಕನ್ನಡ—ಇಂಗ್ಲಿಷ್—ಹಿಂದೂಸ್ಥಾನಿ ಭಾಷಾಮಂಜರಿ. ಈ ಪುಸ್ತಕದಿಂದ ಇಂಗ್ಲಿಷ್ ಮತ್ತು ಹಿಂದೂಸ್ಥಾನಿ ಭಾಷೆಗಳನ್ನು ಬಹು ಸುಲಭವಾಗಿ ಕಲಿಯಬಹುದು ಇದರ ಕ್ರಯ ಎಂಟೇ ಆಣೆ.
ವಿ. ಪಿ. ಪಿ. ಮೂಲಕ ೦—೧೦—೦

ಶ್ರೀಚಾಮರಾಜೇಂದ್ರ ಒಡೆಯರವರ ಚರಿತ್ರೆ. ಉತ್ಕೃಷ್ಟವಾದ ಪುಸ್ತಕ ಅನೇಕ ತಸ್ವೀರುಗಳು ಇವೆ. ಇದನ್ನು ಕುರಿತು (ರಾಜಕಾರ್ಯಪ್ರವೀಣ ಮಿ॥ ರಾ॥ ತಂಬೂಚೆಟ್ಟಿಯವರು ಒಂದು ಉತ್ಕೃಷ್ಟವಾದ ಅವತರಣಿಕೆಯನ್ನು ಬರೆದಿದ್ದಾರೆ. ಕ್ರಯ ೦—೮—೦
ವಿ. ಪಿ. ಪಿ. ಮೂಲಕ ೦—೧೧—೦

ಎಡ್ವರ್ಡ್ ಸಾರ್ವಭೌಮರ ಜೀವಚರಿತ್ರೆ ೦—೪—೦

ಕ್ರಿಮಿವರ್ಗವರ್ಣನೆ ೦—೧—೦

ಪಕ್ಷಿಗಳ ಚರಿತ್ರೆ ೦—೧—೦

ಪ್ರಾಚೀನ ಜೀವ ಜಾತಿಗಳ ವರ್ಣನೆ ೦—೧—೦

ಹೆಣ್ಣುಮಕ್ಕಳಿಗೆ ಹೇಳುವ ಕಥೆಗಳು ೦—೧—೦

ಬಾಲಿಕಾಗೀತಮುಕ್ತಾ ಕಲಾಪ, ಗೀತಮಂದಾರ ೦—೨—೦, ಕಲ್ಯಾಣಗೀತಾವಳಿ ೦—೫—೦. ಈ ಹಾಡಿನ ಪುಸ್ತಕಗಳು ನಮ್ಮಲ್ಲಿ ಯಾವಾಗಲೂ ದೊರೆಯುತ್ತವೆ.

ಮುದ್ರಾಮಂಜೂಷ. ಈ ಪುಸ್ತಕದ ವಿವರವನ್ನು ನಾವು ಆಗಾಗ್ಗೆ ವೃತ್ತಾಂತ ಪತ್ರಿಕೆಯಲ್ಲಿ ಪ್ರಕಟಿಸಿರುವುದನ್ನು ವಾಚಕರು ನೋಡಿರಬಹುದು. ಇದರ ಕ್ರಯ ೦—೮—೦

ಭೂಗೋಳಸಂಗ್ರಹ ೦—೪—೦

ಕ್ಷೇತ್ರಗಣಿತಸಂಗ್ರಹ ೦—೨—೦

ಹಿಂದೂದೇಶ ಪ್ರದಕ್ಷಿಣ. ಈ ಪುಸ್ತಕದ ವಿವರವನ್ನೆಲ್ಲಾ ನಾವು ಬಹು ದೀರ್ಘವಾಗಿ ಈ ಪತ್ರಿಕೆಯ ನಾಲ್ಕೈದು ಸಂಚಿಕೆಗಳಲ್ಲಿ ಮುದ್ರಿಸಿರುತ್ತೇವೆ ಇದರ ಕ್ರಯ ೦—೮—೦. ವಿ ಪಿ. ಪಿ. ಮೂಲಕ ೦—೧೧—೦

ಮಸಂತಮಿತ್ರವಿಜಯನಾಟಕಂ. ಬಹು ರಸಿಕವಾಗಿದೆ ೦—೮—೦

ಅರೇಬಿಯನ್ ನೈಟ್ಸ್ ಅಥವಾ ಯವನಯಾಮಿನೀ ವಿನೋದ ಕಥೆಗಳು — ಈ ಪುಸ್ತಕವು ಲೋಕಪ್ರಸಿದ್ಧವಾದುದೆಂದು ಎಲ್ಲರೂ ಒಪ್ಪಿಕೊಳ್ಳುತ್ತಾರೆ. ನಾನೂರು ಎಪ್ಪತ್ತು ಪುಟಗಳುಳ್ಳದ್ದು. ಛಾಪಿ ಪುಸ್ತಕ. ಭಾಷೆಯು ಬಹು ಸರಳವಾಗಿದೆ ಪುಸ್ತಕವನ್ನು ಒಂದಾವರ್ತಿ ಓದಿದ ಮೇಲೆ ಅದನ್ನು ಪುನಃ ಪುನಃ ಓದುವಂತೆ ಅದು ಮನಸ್ಸನ್ನು ಆಕರ್ಷಿಸುವುದು ಇದರ ಕ್ರಯ ಎರಡೇ ರೂಪಾಯಿ. ವಿ ಪಿ. ಪಿ. ಮೂಲಕ ೨—೩—೦. ಹತ್ತು ಅಥವಾ ಹದಿನೈದು ವರ್ಷಗಳ ಹಿಂದೆ ಇದರ ಕ್ರಯ ಎಂಟು ರೂಪಾಯಿ ಎಂದು ಅನೇಕರಿಗೆ ಗೊತ್ತು. ಇದನ್ನು ಬಡವರೂ, ಐಶ್ವರ್ಯವಂತರೂ ಓದುವಂತೆ ಪುನಃ ಛಾಪಿಸಿ ಇಷ್ಟು ದೊಡ್ಡ ಪುಸ್ತಕವನ್ನು ಇಷ್ಟು ಸುಲಭ ಕ್ರಯಕ್ಕೆ ಮಾರುತ್ತೇವೆ. ಹನ್ನೆರಡು ಪುಸ್ತಕಗಳನ್ನು ಒಟ್ಟಿಗೆ ತರಿಸಿಕೊಂಡರೆ, ಪುಸ್ತಕಕ್ಕೆ ಎರಡು ಆಣೆಯಂತೆ ಕಮಿಷನ್ ಕೊಡುತ್ತೇವೆ ಜಾಗ್ರತೆ ನೋಡಿ

ಮುಖ್ಯವಾಗಿ, ಸ್ನೇಹಿತರೇ, ತಾವು ರಾಜಧಾನಿಗೆ ಬರುವಾಗಲೆಲ್ಲಾ ನಮ್ಮ ಪುಸ್ತಕಾಲಯವನ್ನು ನೋಡಿಯೇ ಹೋಗಬೇಕೆಂದು ಕೇಳಿಕೊಳ್ಳುತ್ತೇವೆ. ನಿಮಗೆ ಪುಸ್ತಕವಲ್ಲದೆ ಬೇರೆ ಯಾವುದಾದರೂ ಪದಾರ್ಥಗಳಾಗಲೀ ಅಥವಾ ಸಂಗತಿಗಳಾಗಲೀ ಅಪೇಕ್ಷಿಸುವ ಸಂದರ್ಭದಲ್ಲಿ ನೀವು ನಮಗೆ ಒಂದು ಕಾರ್ಡು ಬರೆದರೆ ತಕ್ಷಣವೇ ಜವಾಬು ಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ನಮ್ಮ ವಿಳಾಸ — ಮ್ಯಾನೇಜರ್,
ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು.

ದೇವಾಂಗ ವಂಶಸ್ಥರಿಗೆ ಅಗತ್ಯ ಬೇಕಾದದ್ದು.

[redacted] 16-23

ಸ್ವಲ್ಪ ಪ್ರತಿಗಳು, ಜಾಗ್ರತೆಯಿಟ್ಟು ಕೊಳ್ಳತಕ್ಕದ್ದು, ನಂತರ ಖಂಡಿತ ಸಿಕ್ಕುವುದಿಲ್ಲ. ಸ್ವಕುಲಗುರುಗಳು ಶ್ರೀ ಮುಕ್ಕಿಸಂಗ ಮುನಿಸ್ವಾಮಿಗಳು ರಚಿಸಿದ್ದ ಅರ್ಥಸಹಿತ ದೇವಾಂಗಮತಪ್ರಕಾಶಿಕೆ ಸಮೇತವಾಗಿ ಸುಂದರವಾದ ೧೭ ತಸ್ವೀರಿದೆ. ಕ್ರಯ ಸುಲಭಮಾಡಿದೆ. ೧೭ ತಸ್ವೀರಿರುವ ಪ್ರತಿ ೧ಕ್ಕೆ ವಿ. ಪಿ. ಖರ್ಚು ಸೇರಿ ರೂ ೨—೮
ತಸ್ವೀರಿಲ್ಲದ ಇದೇ ಪ್ರತಿ ೧ಕ್ಕೆ ವಿ. ಪಿ. ಖರ್ಚು ಸೇರಿ ರೂ. ೧—೮.
ವೇದ ಉಪನಿಷತ್ತುಗಳ ಅರ್ಥಸಹಿತ ಮೂಲಸ್ತಂಭ ೧ ಕ್ಕೆ ರೂ. ೧—೮
ತಕ್ಷಣ ಮುಖಲಿಖಿತಕ್ಕೂ ವಿ ಪಿ. ಖರ್ಚು ಕಳುಹಿಸತಕ್ಕದ್ದು. ವಿಳಾಸ—
ಮೈಸೂರು ಜವಳಿ ಅಂಗಡಿ ಬೀದಿ ಶ್ರೀ ಯಜಮಾನ ಪುಟ್ಟಮಲ್ಲಯ್ಯ.

ಪ್ರಶ್ನೋತ್ತರ ಲೇಖ್ಯಬೋಧಿನಿ.

75 3

೨ನೇ ಛಾಪು. ಮಾರಾಟಕ್ಕೆ ಸಿದ್ಧವಾಗಿರುತ್ತೆ, ದಪ್ಪವಾದ ಕಾಗದ, ಭವ್ಯವಾದ ಬೈಂಡುಳ್ಳದ್ದು, ಪುಸ್ತಕದಲ್ಲಿರುವ ಸಂಗತಿಯನ್ನು ದಯವಿಟ್ಟು ಓದಿನೋಡಿ:—ಕ್ರಯ ೧—೪—೦

ಕ್ಷೇಮಾಕ್ಷೇಮಾಚಾರ ಕಾಗದಗಳು, ಅರ್ಜಿಗಳು, ಸಿವಿಲ್, ಕ್ರಿಮಿನಲ್, ರೆವಿನ್ಯೂ, ಮುಜರಾಯಿ, ಇಂಜನಿಯರ್, ಫಾರೆಸ್ಟು, ಎಕ್ಸೈಜು, ವಿದ್ಯಾಭ್ಯಾಸ, ಸ್ವಾಮಿಕಾರ್ಯ, ಮುನಿಸಿಪಲ್. ಮತ್ತು ಇತರ ಎಲ್ಲಾ ಇಲಾಖೆಗಳ ಬಗೆ ಬಗೆ ಸಂಗತಿಗಳು, ಸಿವಿಲ್ ಪ್ರೊಸೀಜರ್ ಕೋಡು, ಕ್ರಿಮಿನಲ್ ಪ್ರೊಸೀಜರ್ ಕೋಡು, ಪೀನಲ್, ಹಿಂದೂ ಲಾ, ಮಹಮ್ಮದಿ ಲಾ, ಕಂಟ್ರಾಕ್ಟು ಡಾಮೇಜು, ನಾವಸು, ಮೈನರು, ಲಿಮಿಟೇಷನ್, ಸ್ಟಾಂಪ್ಸ್, ಕೋರ್ಟು ಫೀಜು, ಪೋಲೀಸು, ಸ್ಯಾನಿಟರಿ, ಮ್ಯುನಿಸಿಪಲ್, ರೆವಿನ್ಯೂ ಕೋಡು, ರೂಲ್ಸು, ಲ್ಯಾಂಡ್ ಇಂಪ್ರೂವ್. ಲ್ಯಾಂಡ್ ಅಕ್ವಿಜಿಷನ್, ದೊಡ್ಡಿ, ಅರಂಸು, ಮೊದಲಾದ ಎಲ್ಲಾ ಆಕ್ಟುಗಳ ಸಾರಾಂಶಗಳು, ಬೇನಾಮಿ, ರೆವಿನ್ಯೂ ರೂಲ್ಸು ಪ್ರಕಾರ ಗ್ರಾಮದ ಲೆಕ್ಕಗಳನ್ನು ಬರೆಯುವುದು, ಮುಂತಾದ ವ್ಯವಹಾರಿಕ ಬಗೆ ಬಗೆ ಸಂಗತಿಗಳು, ರೋಜು ವರ್ಗ, ಮೊದಲಾದ ವರ್ತಕರ ಲೆಕ್ಕಗಳನ್ನು ಬರೆಯುವ ರೀತಿ, ಮೊದಲಾದ ಅನೇಕ ಸಂಗತಿಗಳು ಸ್ವಲ್ಪ ಓದಿದವರಿಗೆ ಓದುಬರಹ ಬಂದವರು ಕೂಡಾ ಸುಲಭವಾಗಿ ತಿಳಿಯುವಂತೆ: ಪ್ರಶ್ನೋತ್ತರ ರೀತಿಯಾಗಿ ಬರೆದಿದೆ ಪುಸ್ತಕದಲ್ಲಿರುವ ಎಲ್ಲಾ ಸಂಗತಿಗಳನ್ನೂ ವಿವರಿಸುವುದು ಸಾಧ್ಯವಿಲ್ಲವಾಗಿ ಸೂಕ್ಷ್ಮವಿಂದ ತಿಳಿಸಿರುತ್ತೆ.

ಬೇಕಾದವರು ಪುಸ್ತಕದ ಕ್ರಯ, ೧ಕ್ಕೆ ೧ ರೂಪಾಯಿ ಮಾತ್ರ). ಬೋನಿ ಅಳೆಯುವ ರೀತಿಯನ್ನು ಸುಲಭವಾಗಿ ತಿಳಿಸುತ್ತದೆ ಬೇಗ ಬರೆಯಿರಿ. ವಿಳಾಸ ಬದಲಾಯಿಸಿದೆ ವಿಳಾಸ —ಟಿ. ಕೆ ಮೂರ್ತಿ ಶಾಸ್ತ್ರಿ, ಐಕ್ಯೂರು ಪೋಸ್ಟು, ಕೋಲಾರ್ ಡಿಸ್ಟ್ರಿಕ್ಟು.

ಜರ್ಮನ್ ಸಿಲ್ವರ್ ಪ್ರಮುಖೇರಿ ಬೋಲ್ ಕಾಲು ಗೊಲಸು.

53 9

ಜರ್ಮನ್ ಸಿಲ್ವರ್ ಕಂಚಿ ಮತ್ತು ತಗಡುಗಳನ್ನು ಸ್ಪೆಷಲ್ ಆರ್ಡರು ಕೊಟ್ಟು ಆಸ್ಟ್ರೇಲಿಯಾ ದೇಶದಿಂದ ತರಿಸಿ, ಅದರಿಂದ ಸಕಲ ಆಭರಣಗಳನ್ನೂ ತಯಾರಿಸುತ್ತಿದ್ದೇನೆ. ಇವುಗಳ ಜೆಲ್ಲು ರಂಗು ಎಷ್ಟು ವರುಷಗಳಾದರೂ ಕೆಡಲಾರದು.

ಅನೇಕರು ಸುಲಭ ಕ್ರಯದಲ್ಲಿ ತಯಾರಿಸಿ ಕಳುಹಿಸಬೇಕೆಂದು ಕೋರಿದ್ದರಿಂದಲೂ ಸಕಲರಿಗೂ ಉಪಯೋಗವಾಗುವ ಹಾಗೆ ಇಂಥ ಕೆಲಸದ ಅಭಿಪ್ರಾಯದಿಂದಲೂ ಕೆಳಗೆ ನಮೂದಿಸಿರುವ ಬೇರೆ ಈ ಗೊಲಸುಗಳಲ್ಲಿ ಮೂರು ತರಹಗಳಾಗಿ ತಯಾರಿಸಲ್ಪಟ್ಟಿರುತ್ತವೆ. ಇದು ಬಡವರಿಗೂ ಭಾಗ್ಯವಂತರಿಗೂ ಸದಾ ಉಪಯೋಗವಾಗುವ ಹಾಗೆ ಸುಲಭ ಕ್ರಯವನ್ನು ಇಟ್ಟು ಈ ಕೆಳಗೆ ನಮೂದಿಸಿ ಇರುತ್ತೇವೆ ಈಗ ಇವೆಲ್ಲಾ ವಿಕ್ರಯಕ್ಕೆ ನಮ್ಮಲ್ಲಿ ಸಿದ್ಧವಾಗಿವೆ



೧ ನೇ ನಂಬರು ಪುರಿ ಗೊಲಸು—ಇವುಗಳ ಕಾಲು ಬೆಳ್ಳಿಯ ಗೊಲಸಿನ ಕೆಲಸಕ್ಕೆ ಸಮಾನವಾಗಿ ಸಂದು ಮಾಡಲ್ಪಟ್ಟಿರುವುದ ನೋಟಕ್ಕೆ ಅಚ್ಚಬೆಳ್ಳಿಯ ಗೊಲಸಿನಂತೆ ತಯಾರಿಸಲ್ಪಟ್ಟಿರುತ್ತೆ.

	ರೂ.
ದೊಡ್ಡವರಿಗೆ	೨—೦—೦
ಚಿಕ್ಕವರಿಗೆ	೧—೧೦—೦
ಮಕ್ಕಳಿಗೆ	೧—೮—೦

೨ ನೇ ನಂಬರು ಪುರಿ ಗೊಲಸು—ಮೇಲ್ಭಾಗದಲ್ಲಿ ಕೆಳಯಿದ ಹಾಗೆ ಕೆಲಸವಿರುವುದ ಮತ್ತು ಬೋರಾಪ ತಿರುಪಿನಿಂದಲೂ ತಯಾರಿಸಲ್ಪಟ್ಟಿರುತ್ತೆ

ದೊಡ್ಡವರಿಗೆ	ಚಿಕ್ಕವರಿಗೆ	ಮಕ್ಕಳಿಗೆ
ರೂ. ೨—೦—೦	೧—೧೨—೦	೧—೮—೦

೩ನೆ ನಂಬರು ಪುರಿಜೇಬಿ ಗೊಲಸು—ಇದು ಸಾಧಾರಣ ಕೆಲಸದಲ್ಲೂ ಮೇಲ್ಭಾಗ ಜಡಸಾದ ಮಣಿಗಳಿಂದಲೂ ತಯಾರಿಸಿದೆ

ದೊಡ್ಡವರಿಗೆ	ಚಿಕ್ಕವರಿಗೆ	ಮಕ್ಕಳಿಗೆ
ರೂ. ೧—೦—೦		

ವಿಳಾಸ:—ಮ್ಯಾನೇಜರ್, ಜರ್ಮನ್ ಸಿಲ್ವರ್ ಜ್ಯುಯಲ್ ಡಿಪೋ, ಸಾಹುಕಾರ್ ಪೇಟೆ, ಮದ್ರಾಸು

ಮೈಸೂರು ಸೀಮೆಯಲ್ಲಿ ಪ್ಲೇಗಿನ ಸ್ಥಿತಿ.

೨೦—೪—೧೯೦೬ ರಿಂದ ೨೭—೪—೧೯೦೬ ರ ವರೆಗೆ

ಸ್ಥಳ.	ಪ್ಲೇಗ್ ತಗಲಿದ್ದು.	ಪ್ಲೇಗ್ ಸತ್ತದ್ದು.	ಕಾಲರಾ ಈ ವಾರ ಸಂಖ್ಯೆ	
ಬೆಂಗಳೂರು ಪಟ್ಟಣ	5	2	8	
ಮೈಸೂರು „	0	0	2	
ಬೆಂಗಳೂರು ಡಿಸ್ಟ್ರಿಕ್ಟು	1	1	5	
ಮೈಸೂರು „	0	1	5	
ಕೋಲಾರ್ „	0	0	3	
ಕೋಲಾರ್ ಚಿನ್ನದ ಗಣಿಗಳು	1	2	7	
ತುಮಕೂರು ಡಿಸ್ಟ್ರಿಕ್ಟು	0	0	5	
ಹಾಸನ (ಮೊರಗಿನದು)	0	0	0	
ಚಿತ್ರದುರ್ಗ „	0	0	0	
ಕಡೂರ್ „	0	0	18	
ಶಿವಮೊಗ್ಗ „	0	0	8	
ಜುಮ್ಲಾ	5	5	49	31

ಶಾಲಿವಾಹನ ಶಕ ವರುಷಂಗಳು ೧೮೨೮ ನೇ ಪರಾಭವ ಸಂವತ್ಸರದ ವೈಶಾಖ ಬಹುಳ ಬಿದಿಗೆ ಗುರುವಾರದಿಂದ ವೈಶಾಖ ಬಹುಳ ಸಪ್ತಮಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ.

೧೯೦೬ ನೇ ಇಸವಿ ಮೇ.

ತಾ.	ವಾರ.	ತಿಥಿ.	ಘಳಿಗೆ.	ನಕ್ಷತ್ರ.	ಘಳಿಗೆ.	ಅರಬಿ ದಿನಾಂಕ
10	ಗುರು *	ಬಿದಿಗೆ	22 58	ಜ್ಯೇಷ್ಠ	7 11	28
11	ಶುಕ್ರ ..	ತದಿಗೆ	17-8	ಮೂ	3-12	29
12	ಶನಿವಾರ	ಚೌತಿ	11-50	ಪೂಷಾ	56-52	30
13	ರವಿವಾರ	ಪಂಚಮಿ	6-52	ಉತ್ತರಾ	51-40	31
14	ಚಂದ್ರ ¶	ಷಷ್ಠಿ	2-50	ಶ್ರವಣ	57-13	1
15	ಕುಜ §	ಅಷ್ಟಮಿ	57-5	ಧ	53-3	2
16	ಬುಧ	ನವಮಿ	57-20	ಶ	53-56	3

* ... ಚಿತ್ರಾ, ... ¶ ... § ...

ಪೇಟೇ ಧಾರಣೆ.

ಸಿನಸಿ.		ಮೈಸೂರು.	ಬೆಂಗಳೂರು.
ಕಸ್ತೂರಿ ಅಕ್ಕಿ ಪಲ್ಲ ೧ಕ್ಕೆ	ರೂ	೧೩-೦-೦	೧೪-೮-೦
ಕೆಂಪುಬತ್ತ ಅಕ್ಕಿ ಅವಲ್ ..	..	೧೩-೪-೦	೧೩-೮-೦
„ ದಪ್ಪ	..	೧೨-೮-೦	೧೩-೦-೦
ಜಾಪಾಳ ಅಕ್ಕಿ ..	..	೧೨-೮-೦	೧೨-೧೨-೦
ಸಣ್ಣಕ್ಕಿ ಅವಲ್ ..	..	೧೪-೦-೦	೧೨-೦-೦
„ ದಪ್ಪ ..	..	೧೩-೮-೦	೧೫-೦-೦
ತೊಗರಿ ಬೇಳೆ ಪಲ್ಲ ೧ಕ್ಕೆ	..	೧೦-೦-೦	೧೦-೮-೦
„ ದಪ್ಪ ..	.	೯-೧೨-೦	೧೦-೦-೦
ಹೆಸರುಬೇಳೆ ಪಲ್ಲ ೧ಕ್ಕೆ .	..	೬-೧೪-೦	೬-೦-೦
ಕಾರಾಗಿ ..	..	೬-೮-೦	೫-೧೨-೦
ಜೋಳ ..	..	೩-೪-೦	೮-೪-೦
ಹಲಸಂದೆ ಪಲ್ಲ ೧ಕ್ಕೆ ..	..	೯-೦-೦	೧೦-೪-೦
ಬಿಳೀ ಅವರೆ ..	..	೩-೧೦-೦	೮-೮-೦
ಹೆಸರು ..	..	೧೦-೨-೦	೧೦-೪-೦
ಉದ್ದು ..	..	೧೨-೪-೦	೧೨-೦-೦
ಕಡಲೆ ..	..	೧೦-೨-೦	೧೨-೨-೦
ಎಳ್ಳು ಸೇ ೧೨೩ ಕ್ಕೆ ..	..	೧೯-೮-೦	೨೦-೪-೦
ಹುರುಳಿ ..	..	೬-೧೦-೦	೮-೨-೦
ಹರಳು ೧೨೩ ಸೇರಿಗೆ ..	..	೧೨-೧೨ ೦	೧೨-೮-೦
ಸೀಗೇಕಾಯಿ ಮಣ ೧ಕ್ಕೆ	..	೩-೦-೦	೩-೧೦-೦
ಮೆಣಸಿನಕಾಯಿ ..	..	೪-೧೨-೦	೩-೧೦-೦
„ ದುಂಡು .	..	೩-೪-೦	೩-೬-೦
ಬೆಲ್ಲ ದೊಡ್ಡ ಅಚ್ಚು ..	..	೪-೧೨-೦	ಮ ೧-೮-೦
ಒಳ್ಳೆ ಮಣ ೧ಕ್ಕೆ .	..	೫-೬-೦	೪-೧೨-೦
ಜರಳೆಕ್ಕೆ „ ..	..	೫-೧-೦	೪-೮-೦
ಕೊತ್ತುಂಬರಿ ಪಲ್ಲ ೧ಕ್ಕೆ ..	..	೧೦-೮-೦	೧೦-೮-೦
ಉಪ್ಪು „ ..	..	೬-೮-೦	೬-೧೨-೦
ಮೆಣಸೇ ಸಣ್ಣ ..	..	೦-೧೪-೦	೦-೧೦-೦
„ ಕಳ್ಳೇದು ..	..	೦-೮-೦	೦-೯-೦
ತುಪ್ಪ ..	..	೧೪-೬-೦	೧೨ ೪-೦
ಸೀಮೆಯೆಣ್ಣೆ ಪಟ್ಟ ೧ಕ್ಕೆ	..	೫-೪-೦	೪-೨-೦
ತೆಂಗಿನಕಾಯಿ ೧೦೦ ಕ್ಕೆ	..	೫ ೪-೦	೪-೬-೦
ಅಳಲೇಕಾಯಿ ಮಣ ೧ಕ್ಕೆ	..	೦-೧೬-೦	೦-೯-೦
ಅಂಟ್ವಾಳದ ಕಾಯಿ ಮಣ ೧ಕ್ಕೆ	..	೦-೧೨ ೦	೦-೧೨-೦
ಬಿನ (ಶಕ್ಕರ್) ಕೆಂಪು	..	೧೫-೪-೦	೧೫-೦-೦
„ „ ಹಸಿರು	..	೧೫-೧೦-೦	೧೬-೨-೦
„ „ ಗಟ್ಟಿ ತೊಲ ೧ಕ್ಕೆ	..	೨೩-೧೨-೦	೨೪-೨-೦
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ	..	೩೭-೦-೦	೮೪-೮-೦

Printed and Published by the Rev. E. W. Thompson, M.A. the Proprietor and Manager, Wesleyan Mission Press, Mysore 10/5/1906.

ವೃತ್ತಾಂತ ಪತ್ರಿಕೆ.

REGISTERED M. 29

ಕ್ರಯ ೧ ದುಡ್ಡು —— ಕ್ರಯ ೧ ದುಡ್ಡು

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಪುಸ್ತಕ ೧೯ — ಮೈಸೂರು—ಸನ್ ೧೯೦೭ ನೇ ಇಸವಿ ಮೇ ತಾರೀಖು ೧೬ ನೇ ಗುರುವಾರ. — ಸಂಚಿಕೆ ೩೦

೫,೦೦೦ ಪವೌಂಡು ವುಲ್ಲನ್ ದಾರ ಮಾತ್ರ ಇದೆ.



40-13

೧ ಕೇಟಿಯರುವ ವುಲ್ಲನ್ ಏರ್ನ್ ೧ ಕ್ಕೆ ... ೧—೧೨—೦
೨ ಜರ್ಸ್ ಸೂಪರ ,, ,, ,, ... ೧—೧೪—೦
೩ ಸುಪೀರಿಯರ್ ,, ,, ,, ... ೨—೦—೦
೪ ಸೊವರನಟ್ ,, ,, ,, ... ೩—೪—೦

ಕೂಲ್ ಟೋಪಿ ಡಜನ್ ೧ ಕ್ಕೆ ೫—೦—೦ ಒಂದೇ ದಫಾ ೧೦ ಕ್ಕೆ ತರಿಸಿಕೊಳ್ಳುವವರಿಗೆ ೩—೦—೦.

ಹೊಸ ನಮೂನೆ ದೊಡ್ಡ ಸೈಜು ಪೋಸ್ಟು ಕಾರ್ಡುಗಳು
೧ ಸಿಂಗಲ್ ಕಲರ್ ೧೦೦ ಕ್ಕೆ ೦—೭—೬. ೧೦೦೦. ೧ ೪—೦
೨ ಡಬಲ್ ಕಲರ್ ೧೦೦ ಕ್ಕೆ ೦ ೩—೦. ೧೦೦೦ ೧—೧೨—೦

ವಿ. ಪಿ. ಮೂಲಕ ತರಿಸಿಕೊಳ್ಳುವವರು ಮಾತ್ರ ೧೦೦ ಕ್ಕೆ ೨ ರ ಮುಂಚಿತವಾಗಿ ಕಳುಹಿಸದ ಹೊರತು ವಿ. ಪಿ. ಮೂಲಕ ಕಳುಹಿಸೆವು.

ಡೇಲ್, ಎಮ್. ಪೋರವಾಲ್ ಕಂಪನಿ, ಬೆಂಗಳೂರು ಸಿಟಿ.

ಕೊಡಗು ದೇಶದ ಸ್ವಚ್ಛವಾದ ಉತ್ಕೃಷ್ಟ ಕಾಫಿಯು.

ಹುರಿಯದೆ ಇರುವದು ಅಥವಾ ಆಗತಾನೆ ಹುರಿದದ್ದು.
ಬೆಳೆಯುವ ಸ್ಥಳದಿಂದಲೆ ನೆಟ್ಟಗೆ ರವಾನಿಸಲ್ಪಡುವದು.

85 14



ವ್ಯಾಪಾರದ ... ಹೆಗ್ಗುರ್ತು

ಕಾಡುಕೋಣದ ತಲೆಯ ಮುದ್ರೆ ಇದೆ.

ಸಂಪೂರ್ಣವಾಗಿ ಯಂತ್ರದಿಂದಲೆ ಸಿದ್ಧಪಡಿಸಿದ್ದು. ಜೆಗ್ಗು ಹರ್ಗ ಇಳ್ಳ ವಿಲಾಸದ ಚೀಟ ಸುತ್ತಿಲ್ಲದಿರುವು ಸ್ವಚ್ಛವಾದವುಗಳಲ್ಲ. ಅವು ನಮ್ಮದಲ್ಲ. ಏಜಂಟರುಗಳು ಬೇಕು. ಇಂಥವರಿಗೆ ಅಲಾಯದ ದರ. ಬರೆಯುವವರು ದಯವಿಟ್ಟು ಈ ಪತ್ರಿಕೆಯ ಹೆಸರನ್ನು ಸೂಚಿಸಿ.

ವಿಳಾಸ.—ಮ್ಯಾನೇಜರ್, ಮ್ಯಾಥಿಸನ್ಸ್ ಕಾಫಿ ವರ್ಕ್ಸ್, ಹುಣಸೂರು.

"ವೃತ್ತಾಂತ ಪತ್ರಿಕೆ" ಚಂದಾ ವಿವರ.

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜೆಂಟರ ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ (ಅಡ್ವಾನ್ಸು) .. .. .. ರೂ. ೧—೦—೦
ಪರಸ್ಥಳದವರು ಆಫೀಸಿನಿಂದ ಅಂಚೆಯ ಮೇಲೆ ತರಿಸಿಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಹಾಸಲ್ ಸೇರಿ .. .. ರೂ. ೧—೧೪—೦
,, ,, ೬ ,, ,, ೦—೧೫—೦
ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು.

ನಮ್ಮ ವಿಳಾಸ:—ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು.

ನೀವು ವಿಲಾಯತಿಯಿಂದ ಯಾವ ಸಾಮಾನುಗಳನ್ನಾದರೂ ತರಿಸಿಕೊಳ್ಳಬೇಕಾಗಿದ್ದರೆ 19-18



ಬ್ರೈಡ್ ಮತ್ತು ಈಸ್ಟ್‌ಲೆಂಡ್,
೯—೩೪, ಸಿಟಿ ರೋಡ್, ಲಂಡನ್, ಇ. ಸಿ.

ಎಂಬೀ ವಿಳಾಸಕ್ಕೆ ಪಣ ಕಳಿಸಿ, ಕಾಗದ ಬರೆಯಿರಿ. ಕಾಗದಗಳಿಗೆ ೧ ಆಣೆ ಸ್ಟಾಂಪು ಹಚ್ಚಬೇಕು, ಇಂದಿಯಾ ಪೋಸ್ಟ್ ಕಾರ್ಡುಗಳನ್ನು ಬರೆಯಬಾರದು. ಈ ಕಂಪನಿಯವರು ಪೇಟೆಂಟ್ ಔಷಧಿಗಳನ್ನೂ, ಆಟಕ್ಕಾಗಲೂ ಮಕ್ಕಳಿಗೂ ಕೊಡುವಂಥಾ, ಯಂತ್ರಗಳಿಂದಲೇ ತಯಾರಾದಂಥಾ ಆಟಗಳನ್ನೂ, ಇನ್ನೂ ನಾನಾತರದ ಪದಾರ್ಥಗಳನ್ನೂ ಇಟ್ಟು ಬಿಕರಿಮಾಡುತ್ತಾರೆ. ಅವರು ಬಹು ವಿಶೇಷವಾದ ಗಮನಕೊಟ್ಟು, ಸಾಧ್ಯವಿದ್ದಷ್ಟು ಅಗ್ಗವಾಗಿ, ಬೇಕಾದ ಸಾಮಾನುಗಳನ್ನೇ ಆರಿಸಿ, ಮರಿಟ ಪ್ಯಾಕಿಗೇನೆ ಕಳುಹಿಸಿಕೊಡುವರು.

ಕಾಗದಗಳನ್ನು ಇಂಗ್ಲಿಷಿನಲ್ಲೇ ಬರೆಯಬೇಕು.

ಹೊ ೀ ಮೊ ೀ ಸಿ ಯಾ.



ತಗಲುತ್ತಲೇ ನೋವು ಮಾಸಿ ಯಾಗುತ್ತೆ

ಈ ಔಷಧಿಯು ಮನೆ, ಅರಮನೆ, ಕಾರ್ಖಾನೆ, ಆಸ್ಪತ್ರೆ, ಪೊಲೀಸ್ ಠಾಣಾ, ವಿದ್ಯಾಶಾಲೆ, ಕೋರ್ಟು, ಕಛೇರಿ, ಮುಂತಾದ ಸ್ಥಳಗಳಲ್ಲಾ ಇದ್ದೇ ಇರಬೇಕು. ಇದಕ್ಕೆ ಸಮಾನವಾದ ಔಷಧ ಮತ್ತ್ಯಾವುದೂ ಇಲ್ಲವೆಂಬುವದು ಲೋಕಪ್ರಸಿದ್ಧವಾಗಿದೆ.

ಈ ತೈಲವು ತತ್ಕಾಲದಲ್ಲಿ ಬೇನೆಗಳಿಗೆ ಮಹತ್ತಾಗಿ ಸಿದ್ಧ ಔಷಧ. ಇದನ್ನು ಉಪಯೋಗಿಸಿದ ದೊಡ್ಡ ಮನುಷ್ಯರು, ಡಾಕ್ಟರು, ಮುಂತಾದವರು ಇದರ ಗುಣವನ್ನು ಹೊಗಳಿ ಸರ್ಟಿಫಿಕೇಟುಗಳನ್ನು ಕೊಟ್ಟಿದ್ದಾರೆ. ನೋವು ಇರುವ ಕಡೆ ಇದನ್ನು ಹಚ್ಚಿದ ಕೂಡಲೇ ವಾಸಿಯಾಗುವದು.

ಈ ತೈಲವು ಅರೆ ತಲೆನೋವು, ಸೊಂಟನೋವು, ಪಾರ್ಶ್ವ ನೋವು, ಮೂಲವ್ಯಾಧಿ, ಉಬ್ಬಸ, ವಾಯುಗಳು, ನರ ಹೊರಳುವದು, ಉಳುಕು, ಕೀಲುವಾಯು, ಗುಳ್ಳೆಗಳು, ಹಲ್ಲುನೋವು, ಮುಖದ ಬಾವು, ಊದುಗಳು, ಗಡ್ಡೆಗಳು, ವ್ರಣಗಳು, ಸುಳುಕು, ಸೊಳ್ಳೆ ಮುಂತಾದವು ಕಡಿದದ್ದು, ಚಪ್ಪರಿಸುವದು, ಬೆಂಕಿಯಲ್ಲಿ ಸುಟ್ಟುಕೊಂಡದ್ದು, ಕತ್ತಿ ಗಾಯ—ಇವೇ ಮೊದಲಾದ ನಾನಾ ಬಾಧೆಗಳನ್ನು ಶಮನಮಾಡುತ್ತದೆ. ರಾತ್ರಿ ಹಚ್ಚಿಕೊಂಡು ಮಲಗಿದರೆ ಸೊಳ್ಳೆ ಹತ್ತಿರ ಬರುವದಿಲ್ಲ.

ಕ್ರಯ — ಸಣ್ಣ ಡಬ್ಬಿ ೧ ಕ್ಕೆ ೧ ರೂ., ದೊಡ್ಡದಕ್ಕೆ ರೂ. ೨—೮., ಒಂದೇ ಸಲ ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಬಿಡುತ್ತಾರೆ. ರೂ. ೨—೮ ಆಣೆ ಬಾಬ್ತು ಡಬ್ಬಿದಲ್ಲಿ ೧ ರೂ. ಡಬ್ಬಿದಲ್ಲಿರುವದಕ್ಕಿಂತ ೪ ರಷ್ಟು ಹೆಚ್ಚು ಔಷಧವಿರುತ್ತೆ. ೨—೮ ಆ ಈ ಡಬ್ಬಿವನ್ನು ತರಿಸಿಕೊಳ್ಳುವವರಿಗೆ ಟಪ್ಪಾಲ್ ಮಾಫಿ ಬಿಡುತ್ತೆ.

●●●●●●●●

ಹೋಮೊಸಿಯಾ ಯಂಬ್ರೋಕೇಷನ್.

ಈ ತೈಲವು ಹಳೇ ನೋವುಗಳಿಗೆ ಉಪಯೋಗಿಸತಕ್ಕದ್ದು. ಒಡೆದ ಕಡೆ ಇದನ್ನು ಹಚ್ಚಕೂಡದು. ಇದರಲ್ಲಿ ಹೋಮೋಸಿಯಾ ಗುಣಗಳು ಬಹು ತೀಕ್ಷ್ಣವಾಗಿ ಇರುತ್ತವೆ. ಅವಕ್ಕಿಂತಲೂ ಇನ್ನೆರಡು ಗುಣಗಳುಳ್ಳ ಹೊಸ ಭಾಗವಿರುತ್ತದೆ. ಇದನ್ನು ಬಹು ಬೇಗನೆ ಸೇದಿಕೊಳ್ಳಬಲ್ಲದು. ಡಬ್ಬಿಗಳಲ್ಲಿ ತುಂಬಿ ೧ ರೂ. ಗೂ ಒಂದರಂತೆ ಬಿಕರಿ ಮಾಡಲ್ಪಡುವದು. ೧೨ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ. ಎಲ್ಲಾ ಸ್ಥಳಗಳಲ್ಲೂ ದೊರೆಯುವದು.

ಈ ಔಷಧಗಳ ವಿವರಣೆಯೂ, ಸರ್ಟಿಫಿಕೇಟುಗಳೂ ಉಳ್ಳ ಪುಸ್ತಕಗಳನ್ನು ಅಪೇಕ್ಷಿಸಿದರೆ ಕಳುಹಿಸುವೆವು.

ವಿಳಾಸ:—ಹೋಮೋಸಿಯಾ ಕಂಪೆನಿ, ೨೩, ಸೇಂಟು ಜೇಮ್ಸ್ ಸ್ಟ್ರೀಟ್.

ಜ್ವರಹರಿ. 713



ಇದು ಸಾಧಾರಣ ಜ್ವರ, ಚಳೀಜ್ವರ, ಮೋರೀಜ್ವರ, ಪಿತ್ಥಜ್ವರ, ಶೀತಜ್ವರ ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮರಾಮತ್ ತಾಲೂಕಾ ಸಬ್ ಡಿವಿಜನ್ ಆಫೀಸರ್ ಎಸ್ ಟಿ ವೆಂಕಟಪತಿ ಅಯ್ಯರವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨೦ ಔನ್ಸಿನ ಸೀಸೆಯು ತೀರಿಹೋಯಿತು. ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣ ಹೊಂದಿರುವರು. ಇನ್ನೂ ಜನಗಳು ಕಾಹಿಲೇ ಬೀಳುತ್ತಿರುವುದರಿಂದ ದಯವಿಟ್ಟು ಇನ್ನೊಂದು ೨೦ ಔನ್ಸಿನ ಸೀಸೆಯನ್ನು ವಿ. ಪಿ. ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದ್ದಾರೆ.

ಕ್ರಯ:—ಸೀಸೆ ೧ ಕ್ಕೆ ೮ ಆಣೆ, ೧ ರೂ., ೧—೮ ರೂ.; ರೂ. ೨—೧೨ ಆ., ೧೧ ರೂ; ಡಜನ್ನರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು.

●●●●●●●●

ಹಿ ಮಾ ಂ ಶ ಕ ರ್ಪೂ ರ.



ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆ ಕಳೆದುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು. ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಯೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ ಶ್ರಾಜುವ ದರವು ಜ್ವರಹರಿ ಎಂಬ ಔಷಧದಂತೆಯೇ. ಸೀಸೆಗಳಲ್ಲಿ ದೊರಕುವದು.

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಹೆಸ್ರಿಯು ಒಮಂ ಕರ್ಪೂರವನ್ನು ನಾನೂ ನನ್ನ ಡಾಕ್ಟರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ಪರೀಕ್ಷೆಗಳಿಂದಲೂ ಕಾಲರಾ, ಅಜೀರ್ಣಭೇದಿ, ಅಜೀರ್ಣ ರೋಗಿಷ್ಟರಿಗೆ ಕೊಡುತ್ತೇವೆ. ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ. ಇದು ಬಹು ಒಳ್ಳೇ ಔಷಧವೆಂದು ಬರೆದಿದ್ದಾರೆ.

ಈ ನಾಲ್ಕು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಅಂಗಡಿಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇಲ್ಲದೆ ಕೆಳಗಿನ ವಿಳಾಸದಾರರಲ್ಲಿ ವಿಶೇಷ:—

ಹೆಪ್ರಿಯವರ ಗ್ರೇಟ್ ಇಂಡಿಯನ್ ಔಷಧಗಳ ಕಂಪೆನಿ, ಸೆಂಟ್ರಲ್ ಜೇಲ್ ರೋಡ್, ಮದ್ರಾಸ್.

ಬೆಂಗಳೂರು ಚಿಕ್ಕಬಳ್ಳಾಪುರ ಲೈಟ್ ರೈಲ್ವೆ ಕಂಪೆನಿ ಲಿಮಿಟೆಡ್ ನಿಮಿತ್ತ ಘೋಷಣೆ.

73—3

ಷೇರು ಒಂದಕ್ಕೆ ೨೫ ರೂಪಾಯಿಗಳು ಬೆಲೆಯುಳ್ಳ ೬೮ ಸಾವಿರ ಷೇರುಗಳಿಂದಾಗುವ ೧೭ ಲಕ್ಷ ರೂಪಾಯಿಗಳು. ಈ ಷೇರು ಮೊಬಲಗು ೫ ಅಥವಾ ಷೇರು ಒಂದಕ್ಕೆ ಒಂದು ರೂಪಾಯಿನಂತೆ ೬ ಪ್ರೀಮಿಯಂ ಫೀ ಕೊಟ್ಟು ೧೨ ಕಿಸ್ತುಗಳಲ್ಲಿ ಪಾವತಿ ಮಾಡತಕ್ಕದ್ದು. ಈ ಲೈನಿನ ಸರ್ವೆ ಪೂರೈಸಲ್ಪಟ್ಟಿದೆ.

ಮೈಸೂರು ಸರ್ಕಾರದವರು ಈಗ ಆರ್ಡರು ಮಾಡಿರುವ ಟ್ರಾಫಿಕ್ ಸ್ಟ್ಯಾಟಿಸ್ಟಿಕ್ಸ್ನಿಂದ ಈ ಲೈನಿನ ವರಮಾನ ಶೇಕಡ ೪ ಕ್ಕಿಂತ ಕಮ್ಮಿ ಆಗಲಾರದೆಂದು ತೋರಿಬಂದರೆ ಶೇಕಡ ತಾವು ಹಾಕ್ಕರಂತೆ ಬಡ್ಡಿ ಕೊಡಲು ಈ ಕಂಪೆನಿಗೆ ಜಾಮೀನಾಗಿರುತ್ತೇವೆಯೂ ದಯವಿಟ್ಟು ಲಿಖಿತ ಮೂಲಕ ತಿಳಿಸಿರುತ್ತಾರೆ.

ಈ ಕಂಪೆನಿಯ ಷೇರುಗಳನ್ನು ಅಪೇಕ್ಷಿಸತಕ್ಕಂಥವರು ಈ ಕೆಳಗೆ ರುಜು ಮಾಡಿರುವವರಿಗೆ ದರಖಾಸ್ತು ಮಾಡಿಕೊಳ್ಳಬೇಕು.

ಈ ಕಂಪೆನಿಯ ಷೇರುಗಳನ್ನು ಕಮಿಷನಿಗೆ ಸಬ್ ಏಜಂಟರಾಗಿ ಬಿಕರಿಮಾಡಲು ಅಪೇಕ್ಷೆಯುಳ್ಳ ಖಾತರಿಯಾದ ಜನರು ಸದರಿಯವರಿಗೇನೆ ಬರೆದುಕೊಳ್ಳಬಹುದು.

ಷೇರು ಹಣವನ್ನು ಚೀಫ್ ಕ್ಯಾನ್ವಾಸಿಂಗ್ ಏಜಂಟರಿಗೆ, ಇವರಿಂದ ಲಿಖಿತ ಮೂಲಕ ಹಣ ವಸೂಲು ಮಾಡಲು ಅಧಿಕಾರ ಹೊಂದಿರುವ ಸಬ್ ಏಜಂಟರಿಗೆ, ಬೆಂಗಳೂರು ಬ್ರಾಂಚು ಮದ್ರಾಸು ಬ್ಯಾಂಕಿಗೆ (ಈ ಕಂಪೆನಿಯ ಕ್ರೆಡಿಟ್ಟಿಗೆ), ಅಥವಾ ಮೈಸೂರು ಸೀಮೆಯ ತಾಲ್ಲೂಕು ಡಿಸ್ಟ್ರಿಕ್ಟು ಖಜಾನೆಗಳಿಗಾಗಲಿ ಪಾವತಿ ಮಾಡಬೇಕು. ಹೀಗೆ ಈ ಹಣವನ್ನು ತಾಲ್ಲೂಕು ಮತ್ತು ಡಿಸ್ಟ್ರಿಕ್ಟು ಖಜಾನೆಗಳಲ್ಲಿ ಕಟ್ಟಬಹುದೆಂದು ಮೈಸೂರು ಗವರ್ನಮೆಂಟಿನವರು ಅಪ್ಪಣೆ ಕೊಟ್ಟಿದ್ದಾರೆ.

ಷೇರುಗಳಿಗೆ ದರಖಾಸ್ತು ಮಾಡುವವರು ಅಪ್ಲಿಕೇಷನುಗಳ ಜೊತೆಯಲ್ಲಿ ಷೇರು ಒಂದಕ್ಕೆ ಒಂದು ರೂಪಾಯಿನಂತೆ ಅಪ್ಲಿಕೇಷನ್ ಫೀ ರವಾನಿಸಬೇಕು. ಇದು ಷೇರು ಮೊಬಲಗಿನಲ್ಲಿ ಉತ್ತಾರ ಹಾಕಲ್ಪಡುವದು.

(ಸೈನ್) ಬಿ. ವಿ. ರಾಮಸ್ವಾಮಿ ಶೆಟ್ಟಿ, ಬಿ. ಎ.,
ಅಡ್ವೊಕೇಟ್, ಮತ್ತು ಬೆಂಗಳೂರು ಚಿಕ್ಕಬಳ್ಳಾಪುರ ಲೈಟ್ ರೈಲ್ವೆ ಕಂಪೆನಿಯ ಚೀಫ್ ಏಜಂಟ್,
ನಗರ್ತಪೇಟೆ, ಬೆಂಗಳೂರು ಸಿಟಿ.

ಸ್ವತ್ತುಗಳ ಪರಾಧೀನದ ತಡೆ ನೋಟೀಸ್.

77-3

ಮೈಸೂರು ಸಬರ್ಬಾದಿನಲ್ಲಿರುವ ಟೆಲಿಗ್ರಾಫ್ ಪಿರ್ವ ವೆಂಕಟ್ರಮಣ ಶೆಟ್ಟಿಯು ತಿಳಿಸುವದೇನೆಂದರೆ—ನಾವು ನಾಲ್ಕುಜನ ಅಣ್ಣತಮ್ಮಂದಿರು. ನಮ್ಮ ಆಸ್ತಿ ವಿಭಾಗವಾಗಿಲ್ಲ. ನಮಗೆ ಸಬರ್ಬಾದ್ ಮೊಹಲ್ಲೆಯಲ್ಲಿ ಮೂರು ಮನೆಗಳೂ ಆಲಹಳ್ಳಿ ಟಂಗಲಿ ಪಕ್ಕದಲ್ಲಿ ಒಂದು ಹೊಲವೂ ಇರುತ್ತವೆ. ಈ ಸ್ವತ್ತುಗಳನ್ನು ನನ್ನ ಅನುಮತಿ ಇಲ್ಲದೆ ಯಾರೂ ಯಾವ ವಿಧದಲ್ಲೂ ಪಡೆಯಕೂಡದು, ಹಾಗೆ ಪಡೆದರೆ ನನ್ನ ಎಲ್ಲಾ ನಷ್ಟಕ್ಕೂ ಗುರಿಯಾಗುತ್ತಾರೆ. ಗೌ ಟಿ. ಪಿರ್ವ ವೆಂಕಟ್ರಮಣಶೆಟ್ಟಿ.

ಶ್ರೇಷ್ಠ ಜವಳಿ, ಒಳ್ಳೇತಯಾರಿ, ಸುಲಭಖರೀದಿ.

81-1

ಪ್ರಖ್ಯಾತವಾದ ಅರಳೇಪ್ಯಾಟೆ ಪೇಟೆಸೀರೆಗಳು, ರೇಷ್ಮೆ ಪಂಚೆಗಳು, ಶೈವಸ್ತ್ರಗಳು, ಸವರನ್ನು ಉಟ್ಟಿಕೊಳ್ಳುವ ಶಾಲುಗಳು, ಇವು ಬಹು ಸಿಬರವಾಗಿ ತಯಾರು ಮಾಡಿಸಲ್ಪಟ್ಟು ಸುಲಭ ಖರೀದಿಗಳಿಗೆ ವಿ. ಪಿ ಮೂಲಕ ರವಾನಿಸಲ್ಪಡುತ್ತವೆ. ತರಿಸಿಕೊಳ್ಳತಕ್ಕವರು ತಮಗೆ ಬೇಕಾದ ತರಹ ಇಂತಾದ್ದೆಂದು ನಮಗೆ ಬರೆದು ಮತ್ತು ಅದರ ಖರೀದಿ ಹತ್ತು ರೂಪಾಯಿಗೆ ಮೇಲ್ಪಟ್ಟಿರುವ ಪಕ್ಷದಲ್ಲಿ ಸುಮಾರು ಅರ್ಧ ಕ್ರಯವನ್ನು ಆರ್ಡರಿನೊಡನೆಯೇ ರವಾನಿಸಿದರೆ ಬಾಕಿ ಹಣಕ್ಕೆ ವಿ. ಪಿ ಮೂಲಕ ಜವಳಿ ರವಾನಿಸಲ್ಪಡುತ್ತದೆ. ವೈ. ಕೆ ಮೂರ್ತಿ, ಅಂಡ್, ಕೋ.

ನಂ. ೨, ಮಾಮೂರ್ತಿಪೇಟೆ, ಬೆಂಗಳೂರು ಸಿಟಿ.

ಕೈ ಕೆಮಾಡಿರಿ! ಬಿಡಬೇಡಿರಿ!!

ಇಂಥಾ ಸಮಯ ಮುಂದೆ ಸಿಗಲಿಕ್ಕಿಲ್ಲಾ. 68-4

ರಾಸ್ಕೋಪ ಸಿಸ್ಟಂ ಲಿವರ ವಾಚ್.

ಬಂದೋಬಸ್ತ. ನಾಜೂಕ.



ಇದರ ಸಂಗಡ ಸ್ಪ್ರಿಂಗ್, ಕನ್ನಡಿ, ಪೆಟ್ಟಿಗೆ, ಹೀಗೆ ೩ ಸಾಮಾನು ಕೊಡಲಾಗುತ್ತವೆ. ೮. ೩. ಜೇರೆ ಒಂದೇ ಸಾರಿ ೩ ವಾಚು ತರಿಸಿಕೊಂಡರೆ ೭. ೩. ಪಗಾರ. ೬ ವಾಚು ತರಿಸಿಕೊಂಡರೆ ೧ ವಾಚು ಬಕ್ಷೀಸು. ವಾಚಿಗೆ ಬೇಕಾಗುವ ಸರಪಣಿಯು ಕಿಮ್ಮತು ೦—೪—೦

ಹುಕಾಯಂತ್ರ,	೦—೪—೦
ವಾಚಿನ ಕವರು.	೦—೪—೦

ವಿ. ಪಿ. ಇಂದಲೂ ರವಾನಿಸುತ್ತೇವೆ

ವಿಳಾಸ:—ಜಿಂ ಯಲ್ ಜೋಶಿ, ಅಂಡ್ ಕೋ,

ಪೋಸ್ಟ ಶಿರ್ಸಿ., ಜಿಲ್ಲಾ ಉತ್ತರ ಕಾನಡಾ.

ಪ್ರಶ್ನೋತ್ತರ ಲೇಖ್ಯಬೋಧಿನಿ.

75-3

೨ ನೇ ಛಾಪು. ಮಾರಾಟಕ್ಕೆ ಸಿದ್ಧವಾಗಿರುತ್ತೆ, ದಪ್ಪವಾದ ಕಾಗದ, ಭದ್ರವಾದ ಬೈಂಡಾಳ್ಳದ್ದು, ಪುಸ್ತಕದಲ್ಲಿರುವ ಸಂಗತಿಯನ್ನು ಹಯವಿಟ್ಟು ಓದಿನೋಡಿ—ಕ್ರಯ ೧—೪—೦.

ಕ್ಷೇಮಸಮಾಚಾರ ಕಾಗದಗಳು, ಅರ್ಜಿಗಳು, ಸಿವಿಲ್, ಕ್ರಿಮಿನಲ್, ರೆವಿನ್ಯೂ, ಪೊಲೀಸ್, ಇಂಜನಿಯರ್, ಫಾರೆಸ್ಟು, ಎಕ್ಸೈಜು, ವಿದ್ಯಾಭ್ಯಾಸ, ವ್ಯವಸಾಯ, ಮುನ್ಸಿಪಲ್, ಮತ್ತು ಇತರ ಎಲ್ಲಾ ಇಲಾಖೆಗಳ ಬಗೆ ಬಗೆ ಸಂಗತಿಗಳು, ಸಿವಿಲ್ ಪ್ರೊಸೀಜರ್ ಕೋಡು, ಕ್ರಿಮಿನಲ್ ಪ್ರೊಸೀಜರ್ ಕೋಡು, ಪೆನಲ್, ಹಿಂದೂ ಲಾ, ಮಹಮದಿ ಲಾ, ಕಂಟ್ರಾಕ್ಟು, ಡಾಮೋಜು, ವಾರಸು, ಮೈನರು, ಲಿಮಿಟೇಷನ್, ಸ್ಟಾಂಪು, ಕೋರ್ಟು ಫೀಜು, ಪೊಲೀಸು, ಸ್ಯಾನಿಟರಿ, ಮ್ಯುನಿಸಿಪಲ್, ರೆವಿನ್ಯೂ ಕೋಡು, ರೂಲ್ಸು, ಲ್ಯಾಂಡ್ ಇಂಪ್ರೂವ್, ಲ್ಯಾಂಡ್ ಅಕ್ವಿಜಿಷನ್, ದೊಡ್ಡಿ, ಆಗೀಸು, ಮೊದಲಾದ ಎಲ್ಲಾ ಆಕ್ಟುಗಳ ಸಾರಾಂಶಗಳು, ಲೇವಾದೇವಿ, ರೆವಿನ್ಯೂ ರೂಲ್ಸು ಪ್ರಕಾರ ಗ್ರಾಮದ ಲೆಕ್ಕಗಳನ್ನು ಬರೆಯುವದು, ಮುಂತಾದ ಶ್ಯಾನಭಾಗಿಕೆಯ ಬಗೆ ಬಗೆ ಸಂಗತಿಗಳು, ರೋಜು ವರ್ಗ, ಮೊದಲಾದ ವರ್ತಕರ ಲೆಕ್ಕಗಳನ್ನು ಬರೆಯುವ ರೀತಿ, ಮೊದಲಾದ ಅನೇಕ ಸಂಗತಿಗಳು ಸ್ವಲ್ಪ ಓದುಬರಹ ಬಂದವರು ಕೂಡಾ ಸುಲಭವಾಗಿ ತಿಳಿಯುವಂತೆ ಪ್ರಶ್ನೋತ್ತರ ರೀತಿಯಾಗಿ ಬರೆದಿದೆ ಪುಸ್ತಕದಲ್ಲಿರುವ ಎಲ್ಲಾ ಸಂಗತಿಗಳನ್ನೂ ವಿವರಿಸುವದು ಸಾಧ್ಯವಲ್ಲವಾಗಿ ಸೂಕ್ಷ್ಮವಾಗಿ ತಿಳಿಸಿರುತ್ತೆ.

ನೋಡಿಕೆ ಕಲಿಯತಕ್ಕ ಪುಸ್ತಕ ಕ್ರಯ, ೧ಕ್ಕೆ ೧ ರೂಪಾಯಿ ಮಾತ್ರ). ಭೂಮಿ ಅಳೆಯುವ ರೀತಿಯನ್ನು ಸುಲಭವಾಗಿ ತಿಳಿಸುತ್ತದೆ

ಮದರಾಸು ನಶ್ಯದಪುಡಿ! ಈ ನಶ್ಯವು ಉತ್ಕೃಷ್ಟವಾಗಿಯೂ ಟಿಟಕಿಯನ್ನು ೧ ತೊಲೆಗೆ ಹಾಕಿದಾಗ್ಯೂ ಸುವಾಸನೆಯುಳ್ಳದಾಗಿಯೂ ಘಾಟಾಗಿಯೂ ಇರುತ್ತೆ. ೬ ತೊಲೆ ಇರುವ ೧ ಡಬ್ಬಿಗೆ ೩ ಆಣೆ

ಬೇಗ ಬರೆಯಿರಿ. ವಿಳಾಸ ಬದಲಾಯಿಸಿದೆ. ವಿಳಾಸ:—ಟಿ. ಕೆ. ಮೂರ್ತಿ ಅವರಿ, ಲಕ್ಕೂರು ಪೋಸ್ಟು, ಕೋಲಾರ್ ಡಿಸ್ಟ್ರಿಕ್ಟ್.

CHAMBERLAIN'S COLIC, CHOLERA AND DIARRHOEA REMEDY.

ಚೇಂಬರ್ಲೇನ್ ಯವರು ಹೊಟ್ಟೆಶೂಲೆ, ಕಾಲರಾ, ಭೇದಿಗಳಿಗೆ ಕಂಡುಹಿಡಿದಿರುವ ಔಷಧವು.

15-19



ಕೆಳ ಹೊಟ್ಟೆಯ ನೋವು, ಬರೀ ಭೇದಿಯಾಗುವುದು, ಆಮಶಂಕೆ, ವಾಂತಿಭೇದಿ ಉಪದ್ರ, ಶೀಲಾನೋವು, ಹೊಟ್ಟೆಯ ನಾನಾ ತರದ ಶೂಲೆಗಳು—ಈ ರೋಗಗಳನ್ನೆಲ್ಲಾ ವಾಸಿಮಾಡುತ್ತದೆ. ಈ ಪರಮಾಶ್ಚರ್ಯಯುಕ್ತವಾದ ಔಷಧವು ಜನರನ್ನು ಬದುಕಿಸಿರುವಷ್ಟು ಮತ್ತು ನೋವನ್ನೂ ಬಾಧೆಯನ್ನೂ ನಿವಾರಣೆ ಮಾಡಿರುವಷ್ಟು ಪ್ರಪಂಚದಲ್ಲೇ ಇನ್ಯಾವ ಔಷಧವೂ ಮಾಡಿರುವುದಿಲ್ಲ.

ಜ್ಞಾಪಕದಲ್ಲಿಟ್ಟುಕೊಳ್ಳಿ—ಒಂದು ಹೊತ್ತು ಈ ಔಷಧವನ್ನು ಸೇವಿಸಿದ ಕೂಡಲೇ ಹೊಟ್ಟೆಯೊಳಗಿರುವ ಎಲ್ಲಾ ತರದ ನೋವನ್ನೂ ನಿಲ್ಲಿಸಿಬಿಡುತ್ತದೆ. ಬಹಳ ಕಠಿಣವಾದ ಭೇದಿಯೂ ಕೂಡ ಮೂರೇ ಹೊತ್ತು ಈ ಔಷಧದಿಂದ ನಿರ್ಮೂಲನಮಾಡಿ ನಿಲ್ಲಿಸುತ್ತದೆ. ಖಂಡಿತವಾಗಿ ವಾಸಿಮಾಡುವುದೇ ಇದರ ಗುಣ.

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ.

ಕೈಯಿಂದ ಸ್ವಲ್ಪವೂ ಮುಟ್ಟಿದ್ದಲ್ಲ.

ಇದು ಎಲ್ಲೆಲ್ಲೂ ಬಿಕರಿಯಾಗುವುದು. ಸಣ್ಣ ಸೀಸೆಗೆ ೧ ರೂಪಾಯಿ. ದೊಡ್ಡ ಸೀಸೆಗೆ ೨ ರೂಪಾಯಿ.

ಪರಿಮಳ ನಶ್ಯದಪುಡಿ

80-1

ಪರಿಮಳ ನಶ್ಯದಪುಡಿ ಡಬ್ಬಿ ೧ ಕ್ಕೆ	0—9—0
ಛಾಂಗಿ ಖರ್ಚು	0—3—0
ಸಾದಾ ನಶ್ಯದಪುಡಿ ಡಬ್ಬಿ ೧ಕ್ಕೆ	0—6—0
ಛಾಂಗಿ ಖರ್ಚು	0—3—0

ಈ ಪುಡಿಯನ್ನು ಮೇಲಾದ ಹೊಗೆಸೊಪ್ಪಿನಿಂದ ಸುವಾಸನೆಯುಳ್ಳದ್ದಾಗಿ ತಯಾರು ಮಾಡಲ್ಪಟ್ಟಿರುತ್ತೆ. ಇದರ ಸುವಾಸನೆ ಒಂದು ಸೇರು ಸಾಧಾರಣ ಪುಡಿಯಲ್ಲಿ ಸ್ವಲ್ಪವನ್ನು ಹಾಕಿ ಕಲಸಿದರೆ ಪುಡಿಯೆಲ್ಲಾ ಗಮಗಮಿಸುತ್ತೆ, ಉಪಯೋಗಿಸುವವರಿಗೆ ಸುವಾಸನೆಯನ್ನೂ ಆನಂದವನ್ನೂ ಉಂಟುಮಾಡುತ್ತೆ.

ತಲೆನೋವು, ಪೀನಸ, ಜಲದೋಷ, ಶಿರೋವ್ಯಾಧಿ ಇವುಗಳನ್ನು ತಪ್ಪದೆ ಪರಿಹರಿಸುತ್ತೆ. ಮಾದರಿಗೆ ೧ ಡಬ್ಬಿಯನ್ನು ತರಿಸಿ ಪರೀಕ್ಷಿಸಿರಿ

☞ ಪ್ರತಿ ೧ ಡಬ್ಬಿಯಲ್ಲಿ ೯ ತೋಲ ನಶ್ಯದಪುಡಿ ಇರುತ್ತೆ

ವಿಳಾಸ:—ಮಾನೇಜರ್, ಧರ್ಮ ವೈದ್ಯಶಾಲಾ,

69 ಬೈನಾಬಜಾರು ರೋಡ್, ಸಾಹುಕಾರ್ ಪೇಟೆ, ಮದರಾಸು.

ಮಕ್ಕಳ ಹಿತಕಾರಿ

ಎಂಬ

(ಸ್ಕಾಟ್ಸ್ ಇಮಲ್ ಷನ್)

ಎಂಬ ಸೇವನಾ ಔಷಧಕ್ಕೆ ಕೋಟ್ಯಾಂತರ ತಂದೆತಾಯಿಗಳು ಹೆಸರಿಟ್ಟಿದ್ದಾರೆ. ಯಾಕೆಂದರೆ ಇದು ಮಕ್ಕಳ ಆರೋಗ್ಯವನ್ನು ವೃದ್ಧಿಪಡಿಸಿ ದೇಹವನ್ನು ಪುಷ್ಟಿಯಾಗಿ ಬೆಳೆಸಿರುತ್ತದೆ.

ಇದು ತುಂಬಾ ರುಚಿಯಾಗಿರುವುದರಿಂದ ಮಕ್ಕಳು ಬಹು ಸಂತೋಷವಾಗಿ ಸೇವನೆಮಾಡುತ್ತಾನೆ. 9

ಇದು ಕಾಯಿಲೆ ಮಕ್ಕಳನ್ನು ಆರೋಗ್ಯಮಾಡುವುದು, ಅಶಕ್ತರಾದ ಮಕ್ಕಳನ್ನು ಬಲಿಷ್ಟರನ್ನಾಗಿ ಮಾಡುವುದು.

ಕೈಸೋಕದೆ ತಯಾರಾದದ್ದು.

ಎಲ್ಲಾ ಔಷಧ ವ್ಯಾಪಾರಸ್ಥರಲ್ಲೂ ಬಿಕರಿಯಾಗುತ್ತೆ.

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,

ಔಷಧಗಳ ಕಾರ್ಖಾನೆ,

ಲಂಡನ್, ಇಂಗ್ಲೆಂಡ್

ಈ ಮೀನು ಮನುಷ್ಯ ಇರುವ ಔಷಧ ವನ್ನೇ ಕೊಂಡುಕೊಳ್ಳಿ.

ವೃತ್ತಾಂತ ಪತ್ರಿಕೆ.

ಸನ್ ೧೯೦೬ ನೇ ಇಸವಿ ಮೇ ತಾ॥ ೧೭ ನೇ ಗುರುವಾರ.

ಹಿಂದುಸ್ಥಾನದಲ್ಲಿ ಬಡತನ ಹೆಚ್ಚುತ್ತಿದೆಯೋ?

ಬೊಂಬಾಯಿನಲ್ಲಿರುವ ವರ್ತಕರ ಮಂಡಲಿಯ ಸಭೆಯಲ್ಲಿ ಮ॥ ಪಡಪೂರ್ಜಿ ಎಂಬ ದೊಡ್ಡಮನುಷ್ಯರು ಹಿಂದುಸ್ಥಾನದ ಬಡತನ ಮತ್ತು ರಾಜಕೀಯಗಳ ವಿಚಾರಗಳನ್ನು ಕುರಿತು ಪ್ರಸ್ತಾಪಮಾಡುತ್ತಾ ಹೇಳಿದ್ದೇನೆಂದರೆ—

ವರ್ತಕರೂ, ಲೇವಾದೇವಿ ಮಾಡುವವರೂ, ವ್ಯಾಪಾರಗಾರರೂ, ಕಸಬುಗಳನ್ನೇರ್ಪಡಿಸಿ ನಡಸುತ್ತಿರುವವರೂ ಹಿಂದುಸ್ಥಾನವು ದಿನೇ ದಿನೇ ಎಲ್ಲಾ ವಿಷಯಗಳಲ್ಲೂ ಬೆಳವಣಿಗೆ ಹೊಂದುತ್ತಿದೆ ಎಂದು ಪರಿಷ್ಕಾರವಾಗಿ ತಿಳಿದುಕೊಂಡಿದ್ದಾರೆ. ಜನರ ಉಪಾಧ್ಯಾಯರೂ ವಕೀಲರೂ ವಾಗ್ಮಿಗಳಾದ ಉಪನ್ಯಾಸಕರೂ ಹಿಂದುಸ್ಥಾನದಲ್ಲಿ ದಿನಕ್ರಮೇಣ ಬಡತನವೇ ಮತ್ತು ಹೆಚ್ಚುತ್ತಿದೆ ಎಂದೂ, ಹಿಂದುಸ್ಥಾನವು ಐಶ್ವರ್ಯಯುಕ್ತವಾದ ಭೂಮಿ ಎಂದೂ ಹೇಳುತ್ತಿದ್ದಾರೆ. ಪೇಟದಲ್ಲಿ ಐಶ್ವರ್ಯವಿದ್ದೂ ಪ್ರಜೆಗಳು ಬಡವರಾಗಿರುವುದಕ್ಕೆ ಕಾರಣವೇನಾಗಿರಬೇಕು? ಸಾವಿರಾರು ವರುಷಗಳಿಂದಲೂ ಈ ರಾಷ್ಟ್ರದಲ್ಲಿ ಪ್ರಜೆಗಳಿಗೆ ನೆಮ್ಮದಿ ಇಲ್ಲದೆ ನಾನಾ ತಿರುಕುಳಕ್ಕೆ ಪಾತ್ರರಾಗಿದ್ದರು. ಈಗೀಗ ಅವರು ಕಣ್ಣುಬಿಡುತ್ತಿದ್ದಾರೆ. ಇಷ್ಟಲ್ಲದೆ ಈಗ ಆಳತಕ್ಕವರನ್ನು ದೂರುವವರು ಕಂದಾಯ ಕಾಣಿಕೆಗಳು ಬಹಳ ಹೆಚ್ಚಾಯಿತೆಂದೂ ಈ ರಾಷ್ಟ್ರದಿಂದ ಐಶ್ವರ್ಯವು ಸಾಗಿಹೋಗುವುದೂ ಅಪಾರವಾಗುತ್ತಿದೆ ಎಂತಲೂ ಆಕ್ಷೇಪಣೆಮಾಡುತ್ತಾರಲ್ಲವೇ? ಇದರ ನಿಜಸ್ಥಿತಿಯನ್ನು ಕುರಿತು ನೋಡೋಣ. ಹಿಂದುಸ್ಥಾನದಲ್ಲಿ ಸರ್ಕಾರಕ್ಕೆ ವಸೂಲಾಗುವ ಕಂದಾಯ ಕಾಣಿಕೆಗಳನ್ನು ಪ್ರಜೆಗಳಿಗೆ ಹಂಚಿಹಾಕಿದರೆ ತಲೆಗೆ ೩ ರೂಪಾಯಿನ ಮೇಲಾಗುವುದಿಲ್ಲ. ಯೂರೋಪಿಯನ್ ರಾಜ್ಯಗಳಲ್ಲಿ ತಲೆಗೆ ೪೫ ರೂಪಾಯಿಯೂ ಈಜಿಪ್ಟಿನಲ್ಲಿ ೧೭ ರೂಪಾಯಿಯೂ, ಜರ್ಮನಿನಲ್ಲಿ ೯ ರೂಪಾಯಿಯೂ ಕಂದಾಯ ಬೀಳುತ್ತದೆ. ಹಿಂದುಸ್ಥಾನದಲ್ಲಿ ಸೈನ್ಯದ ಖರ್ಚು ತಲೆಗೆ ಒಂದು ರೂಪಾಯಿಗಿಂತ ಹೆಚ್ಚು ಬೀಳುವುದಿಲ್ಲ, ಜರ್ಮನಿನಲ್ಲಾದರೋ ಎರಡು ರೂಪಾಯಿ ಬೀಳುವುದು. ಈಗ ಲಾರ್ಡ್ ಕಿಚ್ನರ್‌ಯವರು ಮಾಡುವ ಸೈನ್ಯದ ಹೊಸ ಏರ್ಪಾಡಿಗೆ ಪ್ರತಿ ಒಬ್ಬ ಪ್ರಜೆಗೂ ಒಂದಾಣೆ ಆಸೆಯಷ್ಟು ಖರ್ಚು ತಗಲುವುದು. ಇದು ದುಬಾರಿ ಎಂದು ಯಾರಾದರೂ ಹೇಳುವದಕ್ಕಾದೀತು? ಇಷ್ಟು ಖರ್ಚನ್ನು ಅವರು ಹಿಂದುಸ್ಥಾನದ ರೈಲ್ವೆ ಬಂದೋಬಸ್ತಿಗಾಗಿಯೇ ವಿನಿಯೋಗಿಸುವರು. ಇದರಿಂದ ಈ ರಾಷ್ಟ್ರಕ್ಕೆ ಉಪಕಾರವಲ್ಲದೆ ನಷ್ಟವೇನೂ ಇಲ್ಲ. ಅಮೇರಿಕದಲ್ಲಿ ರೈಲ್ ಬಂದಾಬಸ್ತು ಯಾವಷ್ಟೋ ದೇಶೋನ್ನತಿಗೆ ಸಹಾಯವಾಗುವುದೆಂದು ಸಂತೋಷಪಡುತ್ತಾರೆ. ಹಿಂದುಸ್ಥಾನವು ಐಶ್ವರ್ಯಭೂಮಿ, ಇಲ್ಲಿನ ಜನರು ಬಹಳ ಸ್ವಲ್ಪ ಕಂದಾಯ ಕೊಡುತ್ತಾರೆ. ಜರ್ಮನಿಯವರಂತೆ ಹಿಂದುಸ್ಥಾನದವರೂ ತಮ್ಮ ವಿದ್ಯೆ ಬುದ್ಧಿ ಐಶ್ವರ್ಯಾದಿಗಳನ್ನು ದೇಶೀಯ ಕಸಬುಗಳ ಅಭಿವೃದ್ಧಿಗಾಗಿ ವಿನಿಯೋಗಿಸಿದಲ್ಲಿ ಇಲ್ಲಿನ ಐಶ್ವರ್ಯವೂ ಅಪಾರವಾಗಿ ಹೆಚ್ಚುವುದು. ಬಗಾಳಿಗಳು ೩೦—೪೦ ವರುಷಗಳಿಂದ ಒಂದೇ ಸಮನಾಗಿ ಕಂದಾಯಗಳನ್ನು ಕೊಡುತ್ತಾ, ಐಶ್ವರ್ಯವಂತರಾಗಿರುವರು. ಅವರೂ ತಮ್ಮ ಐಶ್ವರ್ಯವನ್ನು ವಿನಿಯೋಗಿಸಿ ಒಂದು ಕಸಬನ್ನಾದರೂ ಅಭಿವೃದ್ಧಿಗೆ ತರಲಿಲ್ಲ. ರಾಜಕೀಯ ವಿಷಯಗಳನ್ನು ಮಾತ್ರ ಹಿಡಿದು ಬರೀ ವಾಕ್ಕಲಹ ಮಾಡುವುದರಲ್ಲಿ ನಿಸ್ಸೀಮರೆನಿಸಿಕೊಂಡಿದ್ದಾರೆ. ಇದು ಬಹು ದುಃಖಕರವಾಗಿರುವುದು. ಅವರು ಮಾತ್ರ ಹಾಗಿರದೆ ತಮ್ಮ ಜೊತೆಗೆ ಬೊಂಬಾಯಿ ಪ್ರಾಂತ್ಯದವರನ್ನೂ ಸೇರಿಸಿಕೊಳ್ಳಬೇಕೆಂದು ಸಂಕೋಲೆ ಹಾಕಿ ಎಳೆಯುತ್ತಿರುವರು. ಹಿಂದುಸ್ಥಾನವನ್ನು ಆಳಿಕೊಳ್ಳುವುದಕ್ಕೆ ಇಲ್ಲಿನವರಿಗೆ ಇನ್ನೂ ಸಾಮರ್ಥ್ಯ ಸಾಲದು. ಅವರಿಗೆ ಸಹಾಯಕರೊಬ್ಬರು ಅಗತ್ಯವಾಗಿ ಬೇಕಾಗಿದೆ. ಇಂಥಾ ಸಹಾಯಕರು ಸದ್ಯದಲ್ಲಿ ಇಂಗ್ಲೀಷರನ್ನು ಬಿಟ್ಟರೆ ಮತ್ಯಾರೂ ಕಾಣುವುದಿಲ್ಲ. ಇದುವರೆಗೆ ಯಾವ ಜನಾಂಗದವರೇ ಆಗಲಿ ಇಂಗ್ಲೀಷರಷ್ಟು ನ್ಯಾಯನಿಷ್ಠುರತೆ ಸತ್ಯ ಶೀಲ ಬುದ್ಧಿಶಕ್ತಿ ಪ್ರಭುತ್ವಯುಕ್ತರೂ ಇಟ್ಟು ಬೆಳೆದಿರುವುದಿಲ್ಲ ಎಂಬುದೇ.

ಮೇಲ್ಕಂಡ ಭಾಷಣದಲ್ಲಿ ಸೂಚಿತವಾಗುವ ಹಿಂದುಸ್ಥಾನದ ಬಡತನವೆಂಬೀ ವಿಚಾರವನ್ನು ಮಾತ್ರ ಕುರಿತು ಸದ್ಯ ಪ್ರಸ್ತಾಪಮಾಡುವೆವು. ಹಿಂದುಸ್ಥಾನದಲ್ಲಿ ರೈಲ್ ರಸ್ತೆಗಳನ್ನು ಹಾಕಿ, ನೀರಾವರಿ ಕಾಮಗಾರಿಗಳನ್ನು ಮಾಡಿಸಿ, ಆಬಾದುಮಾಡುವುದಕ್ಕೆ ಪರರಾಜ್ಯಗಳಿಂದ ಹಣ ಸಾಲ ಮಾಡಿ ತಂದರೆ ಪರರಾಜ್ಯಗಳಿಗೆ ಆ ಹಣಕ್ಕೆ ಬಡ್ಡಿ ಬಂದು ಮಾತ್ರ ಪಾವತಿ ಆಗುವುದಲ್ಲದೆ ಹೆಚ್ಚೇನೂ ಇಲ್ಲ. ಅಮೇರಿಕ, ಬ್ರೆಜಿಲ್ ಮೊದಲಾದ ರಾಜ್ಯಗಳವರು ಇದೇ ಅಭಿಪ್ರಾಯದಿಂದ ಹೊರಗೆ ಸಾಲಮಾಡಿ ತಂದು ತಮ್ಮ ದೇಶದಲ್ಲಿ ವಿನಿಯೋಗಿಸಿ ವಿಶೇಷ ಲಾಭಕೊಡುವಂಥಾ ಕಾರ್ಯಗಳನ್ನು ಮಾಡಿಕೊಂಡಿರುತ್ತಾರೆ. ಹೀಗೆ ಸಾಲತಂದದ್ದರಿಂದ ತಮ್ಮ ರಾಜ್ಯವು ಅಭಿವೃದ್ಧಿಯಾಯಿತೆಂದು ತಿಳಿದಿರುವರೇ ಹೊರತು ಬಡಸ್ಥಿತಿಗೆ ಬಂದಿತೆಂದು ಅವರು ಎಷ್ಟುಮಾತ್ರವೂ ಹೇಳುವುದಿಲ್ಲ. ಈ ಅಭಿಪ್ರಾಯವು ನ್ಯಾಯವಾದದ್ದೊ ಅಲ್ಲವೋ ಮುಂದೆ ಹೇಳುವ ದೃಷ್ಟಾಂತದಿಂದ ಗೊತ್ತಾಗುವುದು.

ಮಸಲಾ ಮೈಸೂರು ಸಂಸ್ಥಾನದಲ್ಲಿ ೧೦೦ ಲಕ್ಷ ರೂಪಾಯಿ ಖರ್ಚಾಗತಕ್ಕಂಥಾ ಒಂದು ನಾಲಾ ಕಾಮಗಾರಿ ಇದೆ ಎಂದೂ ಅದನ್ನು ಮಾಡಿಸುವುದಕ್ಕೆ ಸರ್ಕಾರಿ ಖಜಾನೆಯಲ್ಲಿ ಹಣವಿಲ್ಲವೆಂದೂ ಇಟ್ಟುಕೊಳ್ಳೋಣ. ಸರ್ಕಾರದವರು ವಿಲಾಯಿತಿಯ ಸಾಹುಕಾರರಿಂದ ಶೇಕಡಾ ನೂರಕ್ಕೆ ೪ ರೂಪಾಯಿನ ಪ್ರಕಾರ ಬಡ್ಡಿ ಮಾತನಾಡಿ, ೧೦೦ ಲಕ್ಷ ರೂಪಾಯಿ ಸಾಲ ತಂದು, ತಾವು ಉದ್ದೇಶಪಟ್ಟಿರುವ ನೀರಾವರಿ ಕಾಮಗಾರಿಯನ್ನು ಮಾಡಿಸಿ ಮುಗಿಸಿದರೆಂದೂ ಇಟ್ಟುಕೊಳ್ಳೋಣ. ಈ ನಾಲೆ ಕಾಮಗಾರಿ ಆಗುವುದಕ್ಕೆ ಮೊದಲು ವರುಷಕ್ಕೆ ೫ ಲಕ್ಷ ರೂಪಾಯಿ ಉತ್ಪತ್ತಿಯಾಗುತ್ತಿದ್ದರೆ ನಾಲೆ ಬಂದ ಮೇಲೆ ಅದೇ ಭೂಮಿಯು ತರೀ ಸಾಗುವಳಿಗೆ ಬಂದು ವರುಷಕ್ಕೆ ೨೦ ಲಕ್ಷ ರೂಪಾಯಿ ಉತ್ಪತ್ತಿ ಆದೀತಲ್ಲವೇ? ಮೇಲ್ಕಂಡ ೧೦೦ ಲಕ್ಷ ರೂಪಾಯಿಗೆ ಮೈಸೂರು ಸರ್ಕಾರದವರು ವರುಷಕ್ಕೆ ೪ ಲಕ್ಷ ರೂಪಾಯಿ ಮಾತ್ರ ಬಡ್ಡಿ ಕಳುಹಿಸುವರು. ಹೆಚ್ಚು ಉತ್ಪತ್ತಿಯಾದ ೨೦ ಲಕ್ಷ ರೂಪಾಯಿನಲ್ಲಿ ಬಡ್ಡಿಗಾಗಿ ೪ ಲಕ್ಷ ಮಾತ್ರ ಖರ್ಚಾಗುವುದೆಂತಲೂ ೧೬ ಲಕ್ಷ ರೂಪಾಯಿ ಮೈಸೂರು ಸರ್ಕಾರಕ್ಕೇ ಫಾಯಿದೆ ಆಗುವುದೆಂತಲೂ ಸಾಮಾನ್ಯವಾಗಿ ಗೊತ್ತಾಗುವುದು. ಹೀಗೆ ಪರದೇಶಗಳಲ್ಲಿ ಸಾಲತಂದರೆ ಅದರಿಂದ ಲಾಭವೇ ಹೊರ್ತು ನಷ್ಟವೇನೂ ಇಲ್ಲ.

ಪರಂತು ಮೈಸೂರು ಸಂಸ್ಥಾನದಲ್ಲಿರುವ ಪ್ರಜೆಗಳೇ ಮುಂದೆ ಬಂದು ತಮ್ಮ ಸರ್ಕಾರದವರಿಗೆ ಬೇಕಾದ ೧೦೦ ಲಕ್ಷವನ್ನೂ ತಾವೇ ಹಂಚಿಕೊಂಡು ಕೊಡುವುದಾದರೆ ಮೇಲ್ಕಂಡ ಬಡ್ಡಿ ೪ ಲಕ್ಷ ರೂಪಾಯಿ ವಿಲಾಯಿತಿಗೆ ಹೋಗುವುದೇ ಇಲ್ಲ; ಇಲ್ಲಿನ ಪ್ರಜೆಗಳಿಗೇ ಪ್ರಾಪ್ತಿ ಆದೀತು. ಈ ಸಂದರ್ಭದಲ್ಲಿ ನಾವು ವಾಚಕರಿಗೆ ತಿಳಿಸಬೇಕಾದದ್ದೇನೆಂದರೆ—ಇಲ್ಲಿನವರು ಪರರಾಜ್ಯಗಳಿಂದ ಸಾಲ ತರುವುದಕ್ಕೆ ಎರಡು ಕಾರಣಗಳುಂಟು: ಮೊದಲನೆಯದಾಗಿ ಈ ರಾಷ್ಟ್ರದಲ್ಲಿ ಅಷ್ಟು ವಿಶೇಷವಾದ ಐಶ್ವರ್ಯವಿಲ್ಲ. ಎರಡನೆಯದಾಗಿ ಇಲ್ಲಿನ ಪ್ರಜೆಗಳು ತಮ್ಮಲ್ಲಿರುವ ಹಣವನ್ನು ನ್ಯಾಯವಾದ ಸುಲಭ ಬಡ್ಡಿಗೆ ಕೊಡುವುದಕ್ಕೆ ಸಮ್ಮತಿಸುವುದಿಲ್ಲ; ಮತ್ತು ಪ್ರಜೆಗಳು ತಮ್ಮಲ್ಲಿರುವ ಅಲ್ಪಸ್ವಲ್ಪ ಹಣವನ್ನು ಒಂದು ಕಾಸಿನಷ್ಟು ಪ್ರಯೋಜನಕೊಡದಂಥಾ ಆಭರಣಾದಿಗಳಿಗೆ ಹಾಕುತ್ತಾರೆ. ಆದಕಾರಣ ಈ ರಾಷ್ಟ್ರದ ಐಶ್ವರ್ಯವಂತರು ಎಂದಿಗೆ ಒಡವೆವಸ್ತುಗಳ ಮೇಲೆ ಹಣ ಹಾಕುವುದನ್ನು ಕಡಿಮೆಮಾಡಿ, ಸರ್ಕಾರದವರಿಗೂ ದೇಶೀಯ ಕೈಗಾರಿಕೆಗಳ ಅಭಿವೃದ್ಧಿಗೂ ವಿಶೇಷವಾಗಿ ಸಾಲಕೊಡುತ್ತಾ ಬರುವರೋ ಆದಿಗೆ ಅವರಲ್ಲಿ ನೈಜವಾದ ಸ್ವದೇಶಾಭಿಮಾನವಿದೆ ಎಂದು ಗೊತ್ತಾಗುವುದು.

ಸಮಾಜ ಸಂಸ್ಕರಣ ವಿಧಾನಗಳು.

ಪೂರ್ವಕಾಲದಲ್ಲಿ ಒಬ್ಬ ದುಷ್ಟ ರಾಜನು ಒಂದು ದೇಶವನ್ನಾಳುತ್ತಿದ್ದನು. ಇವನು ಅನ್ಯಮತಸ್ಥಳಾದ ಬೇರೊಬ್ಬ ರಾಜನ ಕುಮಾರಿಯನ್ನು ವಿವಾಹವಾದನಾಗಲು ಅವಳ ಪ್ರೇರಣೆಗೆ ಒಳಪಟ್ಟು ತಾನೂ ಅವಳಿಗೆ ಕೇವಲ ಅನುಸಾರನಾದ ... ದೇವತಾ ಪೂಜೆಗಳನ್ನು ಮಾಡುತ್ತಾ ಜನರು ಅವನನ್ನು ಅನುಸರಿಸಿ ಪ್ರಜೆಗಳ ದುರ್ಮಾರ್ಗಪ್ರವರ್ತಕರಾದರು. ... ಆ ದೇವತೆಗೆ ಬಲಿಕೊಡುವವರಾದ್ದರಿಂದ ... ಆಸಕ್ತರಾದ ... ತಮ್ಮ ಇಷ್ಟಾರ್ಥಗಳಿಗೆ ... ಭೋಗ್ಯವಸ್ತುಗಳನ್ನು ... ತಮ್ಮನ್ನು ... ಆ ಅರಸನೇ ... ತನ್ನ ಅರಮನೆಯ ಬಳಿಯಲ್ಲಿ ... ನೋಡಲಾಗಿ ... ತೋಟವು ಕಾಣಿಸುತ್ತಿತ್ತು ... ಅದನ್ನು ಅರಮನೆಗೆ ಸೇರಿಸಿಕೊಂಡರೆ ಉತ್ತಮವಾಗಿರುವುದೆಂದು ಅದನ್ನು ಕ್ರಯಕ್ಕೆ ತೆಗೆದುಕೊಳ್ಳುತ್ತೇನೆಂದು ಎಷ್ಟು ... ಆ ರೈತನು ಒಪ್ಪದೆ—ಇದು ಹಿರಿಯರು ಸಂಪಾದನೆ ಮಾಡಿದ್ದು. ಇದನ್ನು ಪರಾಧೀನ ಮಾಡಬಾರದೆಂದು ದೇಶದ ಕಟ್ಟಳೆಯು ಇರುವದರಿಂದ ನಾನದನ್ನು ಮಾರುವುದು ಇಲ್ಲ. ಬೇರೊಂದಕ್ಕೆ ಬದಲಾಯಿಸಿಕೊಳ್ಳುವುದೂ ಇಲ್ಲ ಎಂದು ಹೇಳಿದನು. ಆ ಅರಸು ಇದನ್ನು ಕೇಳಿ ಬಹು ವ್ಯಸನಾಕ್ರಾಂತನಾಗಿ ಮಂಚದ ಮೇಲೆ ಮಲಗಿರಲು ದುರ್ನೀತಳಾದ ಅವನ ರಾಣಿಯು ಅವನನ್ನು ಸಮಾಧಾನಪಡಿಸಿ ... ಕೆಲವರನ್ನು ಕರೆಯಿಸಿ ಅವರಿಗೆ ಹೇಳಿಕೊಡಬೇಕಾದದ್ದನ್ನೆಲ್ಲಾ ಹೇಳಿಕೊಟ್ಟು ಕಳುಹಿಸಿದಳು. ಅವರು ಸುಳ್ಳು ಸಾಕ್ಷಿಗಳನ್ನು ಸೃಷ್ಟಿಸಿ ಈ ರೈತನು ದೇವದೂಷಣೆ ಮಾಡಿದನೆಂದು ಹೇಳಿಸಿ ಅವನನ್ನು ಊರಾಚೆ ಎಳೆದುಕೊಂಡು ಹೋಗಿ ಕೊಂದು ಹಾಕಿದರು. ಇಂಥ ಘೋರಕೃತ್ಯಗಳು ಆ ರಾಜನ ಕಾಲದಲ್ಲಿ ಬಹಳವಾಗಿ ನಡೆಯುತ್ತಿದ್ದುವೆಂಬುದರಲ್ಲಿ ಸಂಶಯವಿಲ್ಲ. ... ದೇಶವು ಘೋರಾವಸ್ಥೆಗೆ ಬರುತ್ತಾ ಇರಲು ... ಒಬ್ಬ ಪ್ರವಾದಿಯನ್ನು ಕಳುಹಿಸಿದನು. ಆತನ ಹೆಸರು ಎಲೀಯನು.

ಆ ಎಲೀಯನು ಬಹು ರೋಷವುಳ್ಳವನು. ತಪ್ಪನ್ನು ಕಂಡರೆ ಸಹಿಸಲಾರದವನು. ಆತನು ಸ್ವದೇಶದಿಂದ ನೆಟ್ಟಗೆ ಹೊರಟು ಆ ಅರಸನ ಬಳಿಗೆ ಹೋಗಿ—ನೀನೂ ನಿನ್ನ ಪ್ರಜೆಗಳೂ ದಾರಿತಪ್ಪಿ ನಡೆಯುವದರಿಂದ ೩½ ವರ್ಷಗಳ ವರೆಗೂ ಘೋರವಾದ ಕ್ಷಾಮದಿಂದ ಸಂಕಟಪಡುವಿರಿ ಎಂದು ಹೇಳಿದನು. ಹಾಗೆಯೇ ಮಹಾ ಕಠಿಣವಾದ ಕ್ಷಾಮವುಂಟಾಯಿತು. ಬಳಿಕ ಆತನು ಆ ದೇಶೀಯರು ಆರಾಧಿಸುತ್ತಿದ್ದ ಬಾಳನೆಂಬ ದೇವತೆಯ ಪೂಜಾರಿಗಳನ್ನೆಲ್ಲಾ ಒಂದು ಬೆಟ್ಟದ ಮೇಲೆ ಬರಹೇಳಿ ಅವರೆಲ್ಲರ ಮುಂದೆ ಒಂದು ಪಶುವನ್ನು ಬಲಿಗೊಟ್ಟು, ಅದನ್ನು ಭಕ್ಷಿಸುವಂತೆ ಯಾರ ಪ್ರಾರ್ಥನೆಯಿಂದ ದೇವರು ಆಕಾಶದಿಂದ ಅಗ್ನಿಯನ್ನು ಕಳುಹಿಸುವನೋ ಅವರು ಆರಾಧಿಸುವ ದೇವರೇ ನಿಜವಾದ ದೇವರೆಂದು ತೀರ್ಮಾನಿಸಬೇಕು ಎಂದು ಅವರಿಗೆ ಹೇಳಲು ಅವರು ಹಾಗೇ ಒಪ್ಪಿದರು. ಅವರು ಅದೇ ಪ್ರಕಾರ ಎಷ್ಟು ಬಗೆಯಲ್ಲಿ ಎಷ್ಟು ಕೂತ್ತು ಪ್ರಾರ್ಥನೆ ಮಾಡಿದಾಗ್ಯೂ ಯಾವ ಉತ್ತರವೂ ಬರಲಿಲ್ಲ. ತರುವಾಯ ಎಲೀಯನು ಪ್ರಾರ್ಥನೆ ಮಾಡಲು ಆಕಾಶದಿಂದ ಅಗ್ನಿಯು ಹೊರಟು ಬಂದು ಆ ಬಲಿಯನ್ನೆಲ್ಲಾ ದಹಿಸಿಬಿಟ್ಟಿತು

ಈ ಪ್ರಕಾರ ಆ ಎಲೀಯನು ಮನುಷ್ಯರಿಗತೀತವಾದ ಶಕ್ತಿಯನ್ನು ಪ್ರಕಟಿಸುವದರಿಂದಲೇ ಜನರು ತನ್ನ ಮಾತನ್ನು ಲಕ್ಷ್ಯಕ್ಕೆ ತಂದು ಸನ್ಮಾರ್ಗಾವಲಂಬಿಗಳಾಗುವರೆಂದು ತಿಳಿದಿದ್ದನು. ತಾನು ಆರಾಧಿಸುವ ಆ ದೇವರೇ ನಿಜವಾದ ದೇವರೆಂಬುದನ್ನು ಪ್ರತ್ಯಕ್ಷಪಡಿಸಿದ ಬಳಿಕ ಆ ಮಾಯಿಕ ಪೂಜಕರಾದವರನ್ನೆಲ್ಲಾ ಕೊಲ್ಲಿಸಿದನು. ಇವರೆಲ್ಲರೂ ಆ ರಾಣಿಯ ಆಶ್ರಿತರಾಗಿದ್ದದರಿಂದ ಆಕೆಯು ಇವರ ಮರಣಕ್ಕೆ ಕಾರಣನಾದ ಎಲೀಯನಿಗೆ—ನೀನು ನಮ್ಮ ದೇಶವನ್ನು ಬಿಟ್ಟು ಓಡಿಹೋದರೆ ಉಳಿಯುತ್ತೀ ಇಲ್ಲದಿದ್ದರೆ ನಿನ್ನನ್ನು ಕೊಂದೇಹಾಕಿಸುವೆನು ಎಂದು ಹೇಳಿಕಳುಹಿಸಿದಳು. ಆ ಎಲೀಯನ ಮನೋವ್ಯಾಕುಲವನ್ನು ಬಣ್ಣಿಸಲಾಗದು. ತಾನು ಇಷ್ಟು ಪ್ರಯಾಸಪಟ್ಟರೂ ಆ ರಾಜನಾಗಲಿ ರಾಣಿಯಾಗಲಿ ಬುದ್ಧಿ ಬರಲಿಲ್ಲವಲ್ಲಾ! ಜನಗಳು ವಿಗ್ರಹಾರಾಧನೆಯನ್ನು ಬಿಟ್ಟು ಸನ್ಮಾರ್ಗಿಗಳಾಗಲಿಲ್ಲವಲ್ಲಾ! ಎಂದು ತನ್ನಲ್ಲಿ ಬಹಳ ಬೇಸರಗೊಂಡನು. ಅಲ್ಲಿ ಕ್ಷಣಮಾತ್ರವೂ ನಿಲ್ಲದೆ ಒಂದು ಮರುಭೂಮಿಗೆ ಹೊರಟುಹೋದನು. ಬಹು ದೂರ ನಡೆದು ಬಳಲಿ ಒಂದು ಪೊದೆಯ ನೆರಳಲ್ಲಿ ಬಿದ್ದುಕೊಂಡು—ದೇವರ ಸೇವಕರೆನ್ನಿಸಿಕೊಂಡವರು ತಮ್ಮ ಕಾರ್ಯದಲ್ಲಿ ಸಫಲ ಕಾಣದೆ ಸತ್ತುಹೋದರು. ನಾನು ಬದುಕಿ ಪ್ರಯೋಜನವೇನು? ನನ್ನ ಪ್ರಾಣವನ್ನು ಇನ್ನು ಉಳಿಸಬೇಡ ಎಂದು ದೇವರಿಗೆ ಮೊರೆಯಿಟ್ಟುಕೊಂಡನು. ಭಕ್ತವತ್ಸಲನೂ ಕೃಪಾಕರನೂ ಆದ ಭಗವಂತನು ಅವನಿಗೆ ಪ್ರತ್ಯಕ್ಷನಾಗಿ ಒಂದು ಮಹಾ ಪರ್ವತದ ಮೇಲಕ್ಕೆ ಅವನನ್ನು ಬರಹೇಳಿದನು. ಎಲೀಯನು ಅಲ್ಲೊಂದು ಗುಹೆಯಲ್ಲಿ ವಾಸಮಾಡಿಕೊಂಡಿರಲಾಗಿ ಒಂದು ದಿನ ಮಹಾಪ್ರಚಂಡವಾದ ಗಾಳಿಯು ಎದ್ದಿತು. ಆ ಗಾಳಿಯಲ್ಲಿ ಎಷ್ಟೋ ಮಹಾಮಹಾ ವೃಕ್ಷಗಳು ಬೇರು ಸಹಿತ ಕಿತ್ತು ಉರುಳಿಹೋದವು. ಬಂಡೆಗಳು ಸೀಳಿಹೋದವು. ಆ ಬೆಟ್ಟವೇ ಹಾರಿಹೋಗುವದೋ ಎಂಬ ಹಾಗೆ ತೋರಿತು. ಇದರ ಪ್ರಚಂಡಮಾರುತವು ನಿಂತುಹೋಗಲು ಭೂಕಂಪವುಂಟಾಗಿ ಮತ್ತಷ್ಟು ಭಯಂಕರವಾಯಿತು. ಬಳಿಕ ಕಾಡ್ಗಿಚ್ಚು ಹುಟ್ಟಿ ಅಲ್ಲಿದ್ದ ಸಸ್ಯಾದಿಗಳನ್ನು ನಿರ್ಮೂಲ ಮಾಡಿಬಿಟ್ಟಿತು. ಇವೆಲ್ಲಾ ಉತ್ಪಾತಗಳುಂಟಾದರೂ ಭಗವಂತನು ತನ್ನ ಚಿತ್ತವನ್ನು ಅವುಗಳಲ್ಲಿ ಪ್ರಕಟಿಸಲಿಲ್ಲವೆಂದು ಎಲೀಯನು ತಿಳಿದುಕೊಂಡನು. ತರುವಾಯ ಕೇವಲ ಸೂಕ್ಷ್ಮವಾದ ಮೆಲ್ಲನೆಯ ಶಬ್ದವು ಕೇಳಬಂದಿತು. ಕೂಡಲೆ ಆತನು ಇದು ದೇವರ ಧ್ವನಿಯೆಂದು ತಿಳಿದುಕೊಂಡು ಕೇವಲ ಭಯಭಕ್ತಿಯಿಂದ ಗುಹೆಯ ಬಾಗಿಲಿಗೆ ಬಂದು ನಿಂತುಕೊಂಡನು. ಆಗ ದೇವರು ಅವನಿಗೆ—ನಿನ್ನ ಕೆಲಸವು ಇನ್ನೂ ಮುಗಿಯಲಿಲ್ಲ. ನೀನು ಧರಿಸಿರುವ ಸಮಾಜಸಂಸ್ಕರಣ ಕಾರ್ಯವು ನಿನ್ನೊಬ್ಬನಿಂದಲೆ ಆಗಲಾರದಂಥಾದ್ದು. ನನ್ನ ಸೇವೆಯನ್ನು ಮಾಡುವವನು ನಾನೊಬ್ಬನೇ ಉಳಿದಿದ್ದೇನೆಂದು ನೀ ಆಧೈರ್ಯಪಡಬೇಡ. ದುರ್ಮಾರ್ಗವನ್ನು ನಿರಾಕರಿಸಿ ಸನ್ಮಾರ್ಗಾವಲಂಬಿಗಳಾದವರು ಏಳು ಸಾವಿರ ಮಂದಿಯಿದ್ದಾರೆ ಎಂದು ಹೇಳಿ ಧೈರ್ಯಪಡಿಸಿದನು.

ಸಂಘಸಂಸ್ಕರಣ ಕಾರ್ಯದಲ್ಲಿ ಆಸಕ್ತರಾದವರಿಗೆ ಈ ವೃತ್ತಾಂತವು ಎಂಥ ಸದ್ಬೋಧನೆಯನ್ನು ಕೊಡುತ್ತದೆ! ಬಲಾತ್ಕಾರದಿಂದ ಈ ಕಾರ್ಯವನ್ನು ಸಾಧಿಸಲು ಪ್ರಯತ್ನಿಸುವದಕ್ಕಿಂತ ಉತ್ತಮವಾದ ಮಾರ್ಗವು ಬೇರೊಂದಿದೆ. ಬರಗಾಲದ ಮೂಲಕವಾಗಿ ಭಗವಂತನು ತನ್ನ ಕೋಪವನ್ನು ತೋರಿಸುತ್ತಾನೆ. ಜನರು ಅದನ್ನು ಕಂಡು ಭಯಪಟ್ಟು ಸನ್ಮಾರ್ಗವನ್ನು ಹಿಡಿಯುವದಕ್ಕೆ ಅವಕಾಶವಿದೆ. ಭಯಂಕರ ವಿಧಗಳಿಂದ ದೇವರ ಕೋಪವನ್ನೂ ಪವಿತ್ರತೆಯನ್ನೂ ತೋರ್ಪಡಿಸುವದಕ್ಕಿಂತ ಕೇವಲ ನಯವಾದ ಮಾರ್ಗಗಳಿಂದ ಭಗವಂತನ ಪ್ರೀತಿಯನ್ನು ತಿಳಿಯಪಡಿಸುವದರಿಂದ ಎಷ್ಟೋ ದುಷ್ಟನಾದರೂ ಸಾಧುವಾಗುವನೆಂಬ ನಂಬಿಕೆಯುಂಟು

ಸಂಘಸಂಸ್ಕರಣವನ್ನು ನಿರ್ವಹಿಸುವ ಭಾರವು ಯಾರದಾಗಿದೆ? ಇದು ಪ್ರತಿಯೊಬ್ಬರಿಗೂ ಸೇರಿದಂಥಾದ್ದು. ಅವನು ಇತರರು ಪ್ರಾರಂಭಿಸಲಿ ಎಂದು ಪ್ರತಿಯೊಬ್ಬರೂ ಹೇಳುತ್ತಿದ್ದರೆ ಕಾರ್ಯಾರಂಭವೇ ಆಗುವದಿಲ್ಲ. ಅಧಿಕಾರಿಯ ತನ್ನಲ್ಲೇ ಆಗಲಿ ಪರರಲ್ಲೇ ಆಗಲಿ ತಪ್ಪೆಂದು ತಿಳಿದಿರುವದನ್ನು ಕೇವಲ ನಯವಾದ ವಿಧದಲ್ಲಿ ತಿದ್ದಲುಪಕ್ರಮಿಸಿದರೆ ಸಂಘಸಂಸ್ಕರಣಕಾರ್ಯವು ಬಹು ಸುಲಭವಾಗಿ ನಡೆಯುವದು

ಒಳದೇಶದ ವೃತ್ತಾಂತಗಳು.

ಜರ್ಮನ್ ರಾಜ್ಯದ ಕ್ಷಾಮನಿವಾರಣೆಯ ಧರ್ಮಫಂಡಿಗೆ ಹಾಸನದ ಹೈ ಸ್ಕೂಲ್ ವಿದ್ಯಾರ್ಥಿಗಳು ಎಂಟು ರೂಪಾಯಿ ಚಂದಾ ಕೂಡಿಸಿ ಕಳುಹಿಸಿದರು. ರಾಜಧಾನಿಯಲ್ಲಿ ಚಂದಾ ಕೂಡಿಸುವದಕ್ಕೆ ಏರ್ಪಾಡಾಗಿರುವ ಸಂಘದವರು ಎಷ್ಟು ಹಣವನ್ನು ಕಳುಹಿಸಿದರೋ ಗೊತ್ತಾಗಲಿಲ್ಲ.

ಬ್ರಿಟಿಷ್ ರೆಸಿಡೆಂಟರೂ ಅವರ ಅಸಿಸ್ಟೆಂಟರೂ ಪತ್ನೀ ಪರಿವಾರ ಸಹಿತ ನೀಲಗಿರಿಯಿಂದ ಮೊನ್ನೆ ಭಾನುವಾರ ಬೆಂಗಳೂರಿಗೆ ವಾಪಸು ಬಂದಿರುತ್ತಾರೆ.

❖❖❖❖

ನೆರಬಳ್ಳಿ ಹೊಸದಾಗಿ ನೇಮಿಸಲ್ಪಟ್ಟಿರುವ ಸರ್ಕಾರಿ ಸೂಲಗಿತ್ತಿಯು ಮೊದಲಿದ್ದಾಕೆಯಷ್ಟು ಅನುಭವಸ್ಥಳಲ್ಲವೆಂತಲೂ ಹೆರಿಗೆ ಕಠಿಣವಾದ ಸಂದರ್ಭದಲ್ಲಿ ಆಸ್ಪತ್ರೆ ಅಸಿಸ್ಟೆಂಟರನ್ನೇ ಕರೆಸಬೇಕಾಗಿದೆ ಎಂತಲೂ ಒಬ್ಬ ಬಾತ್ಮೀದಾರರು ಬರೆಯುತ್ತಾರೆ

❖❖❖❖

ಕುಲೀನ್‌ಪೇಟೆ ಸಬ್ ಡಿವಿಜನ್ ಆಫಿಸರ್ ಮೆ॥ ಆನಂದರಾಯರು ಮಾಗಡಿ ತಾಲ್ಲೂಕು ಮಿಡ್ಲಿಕಲ್ ಹೋಬಳಿ ಸ್ಕೂಲ್ ವಿದ್ಯಾರ್ಥಿಗಳಿಗೆ ವಾರ್ಷಿಕ ಬಹುಮಾನಗಳನ್ನು ಕೊಟ್ಟು, ವಿದ್ಯಾಭಿವೃದ್ಧಿಗೆ ಸಹಕಾರಿಯಾದಂಥಾ ಉಪನ್ಯಾಸ ಮಾಡಿ, ಪ್ರೋತ್ಸಾಹಪಡಿಸಿ ಬಂದರೆಂದು ಕೇಳುತ್ತೇವೆ

❖❖❖❖

ಬಲಾತ್ಕಾರವಾಗಿ ಸಿಡುಬು ಹಾಕುವ ಕಾನೂನನ್ನು ಬೆಂಗಳೂರು ಪಟ್ಟಣಕ್ಕೆ ಯಾಕೆ ಜಾರೀ ಮಾಡಕೂಡದೆಂದು ಸರ್ಕಾರದವರು ಮ್ಯುನಿಸಿಪಾಲಿಟಿಯವರನ್ನು ಕೇಳಿದಾರೆ. ಮ್ಯುನಿಸಿಪಲ್ ಬೋರ್ಡ್ ಮೆಂಬರುಗಳು ಈ ದಿನ ಈ ವಿಷಯವನ್ನು ಕುರಿತು ಏನು ತೀರ್ಮಾನ ಮಾಡುವರೋ ಮುಂದೆ ತಿಳಿಯತಕ್ಕದ್ದಾಗಿದೆ

❖❖❖❖

ಕೋಲಾರ್ ಚಿನ್ನದ ಗಣಿಯ ಸ್ಯಾನಿಟರಿ ಬೋರ್ಡಿಗೆ ಸೇರಿರುವ ಪ್ರದೇಶಗಳಲ್ಲೆಲ್ಲಾ ಪ್ರಜೆಗಳಿಗೆ ಬಲಾತ್ಕಾರವಾಗಿ ಸಿಡುಬು ಹಾಕಿಸಬೇಕೆಂಬ ಕಾನೂನನ್ನು ಸರ್ಕಾರದವರು ಪ್ರಯೋಗಾರ್ಥವಾಗಿ ೬ ತಿಂಗಳ ವರೆಗೆ ಜಾರಿಗೆ ತಂದಿರುತ್ತಾರೆ. ಸ್ಯಾನಿಟರಿ ಬೋರ್ಡಿನವರು ಅದಕ್ಕೆ ಅನುಕೂಲವಾದ ರೂಲನ್ನು ಮಾಡಿ, ಪ್ರಜೆಗಳಿಗೆ ಚೆನ್ನಾಗಿ ತಿಳಿಯಪಡಿಸಿ, ತರುವಾಯ ಜಾರಿಗೆ ತರುವರೆಂದು ನಿರೀಕ್ಷಿಸುತ್ತೇವೆ

❖❖❖❖

ಚಿತ್ರದುರ್ಗದಲ್ಲಿ ಮೆ॥ ಆರ್ಬುತ್ನಾಟ್‌ಯವರು ಶಿಕಾರ್ ಕರೆಗೆ ಹೋಗಿ ಒಂದು ಬಾತನ್ನು ಹೊಡೆದು ಕೊಂದರು. ಅದನ್ನು ತರುವುದಕ್ಕೆ ನೀರಿನಲ್ಲಿ ಇಳಿದು ಹೋದ ಒಬ್ಬ ಹುಡುಗನು ಹಿಂದಕ್ಕೆ ಬರಲೇ ಇಲ್ಲ. ಅವರು ಅವನನ್ನು ಎತ್ತಿ ತರುವವನಿಗೆ ೫೦ ರೂಪಾಯಿ ಕೊಡುತ್ತೇನೆಂದರೂ ಯಾರೂ ಸಿಕ್ಕದೆ ಹೋದರೆಂತಲೂ, ಅವನು ಸತ್ತುಹೋದನೆಂತಲೂ ತಿಳಿದು ಬಂದಿದೆ

❖❖❖❖

ಕೋಲಾರದ ಭಾಂಧಿಯರ್ಲಿನಲ್ಲಿ ಕಸಾಯಿ ಖಾನೆಯೊಳಗೆ ಒಂದು ಕುರಿಯನ್ನು ಕಡಿದಾಗ್ಗೆ ಅದರ ಹೊಟ್ಟೆಯಲ್ಲಿ ಒಂದು ವಿಚಿತ್ರವಾದ ಮರಿ ಸಿಕ್ಕಿತು. ಈ ಮರಿಗೆ ತಲೆ ಇಲ್ಲ; ಕೈ ಕಾಲು ಮೈ ಮೊದಲಾದ ಅಂಗಗಳು ಮನುಷ್ಯನ ಆಕೃತಿಯುಳ್ಳವಾಗಿದ್ದವು. ಆದರೆ ಕೂದಲು ತುಂಬಾ ಬೆಳೆದಿತ್ತು. ಇಂಥಾ ವಿಚಿತ್ರ ಸೃಷ್ಟಿಯನ್ನು ಬೆಂಗಳೂರು ಮ್ಯೂಸಿಯಂನಲ್ಲಿ ಇಡುವುದಕ್ಕಾಗಿ ಕಳುಹಿಸಿದಾರೆ

❖❖❖❖

ಹಿಂದಿನ ಸೋಮವಾರ ರಾತ್ರಿ ಕುಲೀನ್‌ಪೇಟೆಯಿಂದ ದೇವನಹಳ್ಳಿ ... ಗಾಡಿಯಲ್ಲಿ ವಾಪಸು ಬರುತ್ತಿದ್ದ ಒಂದು ಸಂಸಾರದವರಿಗೂ ಇನ್ನು ಕೆಲವರಿಗೂ ಅನೇಕರಿಂದ ದಾರಿಯಲ್ಲಿ ಮಾರಾಮಾರಿ ಆಯಿತೆಂತಲೂ, ಪೋಲೀಸಿನವರು ಮೂವರನ್ನು ಹಿಡಿದು ದಸ್ತು ಮಾಡುತ್ತಿದಾರೆಂತಲೂ, ... ಆತನಿಗೆ ಬಹಳ ಪೆಟ್ಟಾಗಿದ್ದುದರಿಂದ ಮ್ಯಾಜಿಸ್ಟ್ರೇಟರು ಆತನ ಹೇಳಿಕೆಯನ್ನು ತೆಗೆದುಕೊಂಡಿದಾರೆಂತಲೂ ಒಬ್ಬ ಬಾತ್ಮೀದಾರರು ತಿಳಿಸುತ್ತಾರೆ

❖❖❖❖

ಮೈಸೂರು ಗವರ್ನ್‌ಮೆಂಟಿನವರು ಕೈಗಾರಿಕೆ ವಿಷಯಗಳನ್ನು ಕಲಿಯಬರುವವರಿಗೆ ಇನ್ನು ಮೇಲೆ ಪ್ರತಿವರುಷವೂ ಎಂಟು ಸ್ಕಾಲರ್‌ಷಿಪ್‌ಗಳನ್ನು ಕೊಟ್ಟು ವಿದ್ಯಾರ್ಥಿಗಳನ್ನು ಸೀಮೆಗೆ ಕಳುಹಿಸುತ್ತೇವೆಂದು ಪ್ರಕಟಿಸಿದಾರೆ. ವಿದ್ಯಾರ್ಥಿಗಳು ವಿಲಾಯಿತಿಗೆ ಹೋಗಿ ಕಲಿತು ಬರುವದಾದರೆ ಅವರಿಗೆ ವರುಷಕ್ಕೆ ತಲಾ ೩,೦೦೦ ರೂಪಾಯಿನಂತೆಯೂ, ಹಿಂದುಸ್ಥಾನದಲ್ಲಾಗಲಿ ಜರ್ಮನಿಯಲ್ಲಾಗಲಿ ಇದ್ದು ಕಲಿತು ಬರುವುದಾದರೆ ತಿಂಗಳಿಗೆ ೧೦೦ ರೂಪಾಯಿನಂತೆಯೂ ದಾಮೋದರದಾಸ್ ಧರ್ಮಫಂಡಿನಿಂದ ವೇತನ ಕೊಡುವರು. ಕಸಬುಗಳನ್ನು ಕಲಿಯತಕ್ಕ ಮೈಸೂರು ಬಾಲಕರಿಗೆ ಇದರಿಂದ ತುಂಬಾ ಪ್ರೋತ್ಸಾಹವಾಯಿತೆನ್ನುವುದಕ್ಕೆ ಸಂಶಯವಿಲ್ಲ.

❖❖❖❖

ಬೆಂಗಳೂರು ಡಿವಿಜನ್ ಎಕ್ಸಿಕ್ಯುಟಿವ್ ಇಂಜಿನಿಯರ್ ಮೆ॥ ಬಿ. ಎಸ್. ವೆಂಕಟಾಚಾರ್ಯ ಅವರ ಕೈ ಕೆಳಗಣ ಸಬ್ ಡಿವಿಜನ್ ಆಫಿಸರ್ ಮೆ॥ ಎಫ್. ಎಚ್ ಬರೀಯವರೂ ಮೊನ್ನೆ ಭಾನುವಾರ ಜೋಡಿ ಕುದುರೆ ಕಟ್ಟಿದ್ದ ಟಾಂಗಾ ಗಾಡಿಯಲ್ಲಿ ಕುಳಿತು ಹೊಸಕೋಟೆ ಕೆರೆ ಏರಿಯ ಮೇಲೆ ಬರುತ್ತಿದ್ದಾಗ ಕುದುರೆಗಳು ಗಾಬರಿಬಿದ್ದು ಗಾಡಿಯನ್ನು ಕೆರೆಯೊಳಕ್ಕೆ ಕೆಡವಿದವು. ಒಳಗಿದ್ದವರಿಬ್ಬರೂ ೩೦ ಅಡಿ ಆಳವಾಗಿದ್ದ ಕೆರೆಯೊಳಕ್ಕೆ ಬಿದ್ದು ಪೂರಾ ಗಾಯಪಟ್ಟರು. ಸ್ವಲ್ಪ ಹೊತ್ತು ಅವರಿಗೆ ಮೈಮೇಲೆ ಸ್ಮರಣೆಯೇ ಇರಲಿಲ್ಲ. ಜಟ್ಕಾ ಗಾಡಿಯವರು ಅವರನ್ನು ತಮ್ಮ ಗಾಡಿಯಲ್ಲಿ ಮಲಗಿಸಿಕೊಂಡು ಬೆಂಗಳೂರಿಗೆ ಕರೆದು ತಂದು ಬಿಟ್ಟರೆಂದು ಕೇಳುತ್ತೇವೆ.

❖❖❖❖

ಬೆಂಗಳೂರು ಪಟ್ಟಣದ ಲಿಂಗಾಯತ ಸಂಘದವರು ಅಲ್ಲಿನ ಮೆ॥ ತೋಟದಪ್ಪನವರ ಸತ್ರದಲ್ಲಿ ಸಭೆಸೇರಿ ತೀರ್ಮಾನಿಸಿರುವುದರ ಪ್ರಕಾರ ಆ ಸಂಘದವರು ಶ್ರೀಮನ್ಮಹಾರಾಜರವರಿಗೆ ಈ ಸಲ ಅವರ ವರ್ಧಂತೀ ಮಹೋತ್ಸವಕಾಲದಲ್ಲಿ ಒಂದು ಅಡ್ರೆಸ್ಸನ್ನು ಒಪ್ಪಿಸುವರು. ಮಹಾರಾಜರವರು ಮೆ॥ ಕೆ. ಪಿ. ಪುಟ್ಟಣ್ಣಚೆಟ್ಟಿಯವರನ್ನು ಎರಡನೆಯ ಕೌನ್ಸಿಲರಾಗಿ ನೇಮಕ ಮಾಡಿದ್ದೇ ಇದಕ್ಕೆ ಮುಖ್ಯ ಕಾರಣವಾಗಿದೆ. ಇದಲ್ಲದೆ ಆ ಸಂಘದವರು ಇಷ್ಟರಲ್ಲೇ ಅದೇ ಕಟ್ಟಡದಲ್ಲಿ ಮೆ॥ ಪುಟ್ಟಣ್ಣಚೆಟ್ಟಿಯವರನ್ನು ಕರೆಸಿಕೊಂಡು ಕೆಲವು ಸಂತೋಷೋತ್ಸವಗಳನ್ನು ನಡೆಸುವವರಾಗಿದಾರೆ. ಮೆ॥ ಚೆಟ್ಟಿಯವರು ಮಲ್ನಾಡು ಸರ್ಕೀಟು ತೀರಿಸಿಕೊಂಡು ಮೊನ್ನೆ ಭಾನುವಾರ ಬೆಂಗಳೂರಿಗೆ

ಉಪಾಧ್ಯಾಯನ ಉದ್ಯೋಗ.

(ಸಂಗ್ರಹ.)

ಉಪಾಧ್ಯಾಯನ ಕೆಲಸವು ಸುಲಭ ತರದ್ದಲ್ಲ, ಮಕ್ಕಳನ್ನು ಕಲಿಸಲು ಉಪಾಧ್ಯಾಯನಿಗೆ ತಕ್ಕಷ್ಟು ಬುದ್ಧಿವಂತಿಕೆಯೂ ಶಾಸ್ತ್ರಪರಿಚಯವೂ ಪ್ರೇಮಲವಾದ ಹೃದಯವೂ ಅವಶ್ಯವಾಗಿವೆ. ಉಪಾಧ್ಯಾಯನ ಪದವಿಗೆ ತಾನು ಯೋಗ್ಯನೋ ಅಯೋಗ್ಯನೋ ಎಂಬುದನ್ನು ವಿಚಾರಿಸದೆ ಈ ವೃತ್ತಿಯಲ್ಲಿ ಉದರಪೋಷಣಾರ್ಥವಾಗಿಯೇ ಪ್ರವೇಶಿಸಿಕೊಳ್ಳುವವರು ಹಲವರುಂಟು. ಯಾವದೊಂದು ಕಸಬನ್ನಾದರೂ ಮಾಡುವವಕ್ಕೆ ಮೊದಲು ಅದಕ್ಕೆ ಬೇಕಾದ ಮಾಹಿತಿಯನ್ನು ಪಡೆಯುವದು ಅತ್ಯಗತ್ಯ. ವ್ಯಾಪಾರವನ್ನು ನಡಿಸಲುಳ್ಳ ಸಾಹುಕಾರನು ಮೊತ್ತಮೊದಲು ವರ್ತಕನಲ್ಲಿ ಕೆಲವು ತಿಂಗಳುಗಳ ವರೆಗಾದರೂ ನಿಂತು ಅನುಭವವನ್ನು ಹೊಂದುವನು. ಯಾರೊಬ್ಬನು ಪರೀಕ್ಷೆಗಳನ್ನು ತೇರಿದ್ದರೂ ಕೆಲವು ವಕಾಲತ್ತುಗಳಲ್ಲಿ ವ್ಯವಹರಿಸಿ ನಡಿಸದೆ ದೊಡ್ಡ ವಕೀಲನೆನ್ನಿಸಲಾರನು. ಆದರೆ ಉಪಾಧ್ಯಾಯನ ಸಂಗತಿ ಬೇರೆಯಾಗಿದೆ ಅವನು ಹಿಂದುಮುಂದು ನೋಡದೆ ಈ ವೃತ್ತಿಯನ್ನು ಅವಲಂಬಿಸುವನು, ಇತರ ಉದ್ಯೋಗಗಳನ್ನು ಸರಿಯಾಗಿ ನಡಿಸುವದಕ್ಕೆ ಅವಶ್ಯವಿರುವ ಅನುಭವವೂ ಶಾಸ್ತ್ರಪರಿಚಯವೂ ಉಪಾಧ್ಯಾಯವೃತ್ತಿಗೆ ಅಗತ್ಯವಿಲ್ಲವೆಂದು ಭಾವಿಸಿ, ಪ್ರತಿ ಒಬ್ಬನು ಮಾಸ್ತರನಾಗಿ ವಿರಾಜಮಾನನಾಗುವನು ಒಂದು ಸಲ ಗುರುಪದವಿಯನ್ನು ಏರಿದ ಮೇಲೆ ತನ್ನನ್ನು ಅಲ್ಲಿಂದ ತಳ್ಳಿಹಾಕಲಾರರು ಎಂಬ ಭರವಸವು ಅವನಲ್ಲಿ ಸ್ವಾಭಾವಿಕವಾಗಿ ಇರುವದರಿಂದ ಈ ಉದ್ಯೋಗವನ್ನೇ ಹಿಡಿದುಕೊಳ್ಳುವನು ಆದರೆ 'ಆಳು ಮಾಡಿದ್ದು ಹಾಳು' ಎಂಬ ಗಾದೆಯಂತೆ ಮಾಸ್ತರರು ಮಾಡಿದ ನಿರರ್ಥಕವಾದ ಶ್ರಮಕ್ಕೆ ಮೂರು ಕಾಸು ಅಲ್ಲದೆ ಅದಕ್ಕೆ ಹೆಚ್ಚಿನ ಬೆಲೆ ದೊರೆಯಬಾರದು. ಈ ಕಾರಣದಿಂದ ಶಿಕ್ಷಣಕ್ರಮದ ಸೂತ್ರಗಳನ್ನು ಅರಿಯದೆಯೂ, ಮನಶ್ಶಾಸ್ತ್ರದ ಪರಿಚಯವನ್ನು ಪಡೆಯದೆಯೂ, ಮಕ್ಕಳನ್ನು ಕಟಾಕ್ಷಿಸದೆಯೂ ಇರುವ ಉಪಾಧ್ಯಾಯನಿಂದ ಮಕ್ಕಳಿಗೆ ಕೆಡಕು ಉಂಟಾಗಿ, ಈ ಕೆಡಕು ಜನ್ಮವೆಲ್ಲವನ್ನೇ ಅಂಟಿಕೊಳ್ಳಬಹುದು. ಆದದರಿಂದಲೇ ಮಕ್ಕಳ ಗುಣ ಸ್ವಭಾವಗಳಿಗೆ ಆಕಾರ ಕೊಡುವಂತಿರುವ ಉಪಾಧ್ಯಾಯರು ಕೆಲಕಾಲದ ತನಕ 'ಟ್ರೇನ್' ಆಗಬೇಕೆಂದು ಇಲಾಖೆಯವರು ಕಟ್ಟಾಜ್ಞೆ ಮಾಡಿದ್ದಾರೆ.

ಪ್ರತಿ ಒಬ್ಬ ಉಪಾಧ್ಯಾಯನು ಎರಡು ಸಂಗತಿಗಳನ್ನು ಲಕ್ಷಿಸತಕ್ಕದ್ದು. ಅವನು ಮೊದಲಾಗಿ ಉತ್ತಮವಾದ ಆದರ್ಶವನ್ನು ತನ್ನ ಕಣ್ಣು ಮುಂದೆ ಇಟ್ಟುಕೊಳ್ಳತಕ್ಕದ್ದು ತಾನು ಯಾರ ಹಾಗೆ ನಡೆಯಬೇಕು? ತನ್ನ ಶಾಲೆಯನ್ನು ಹ್ಯಾಗೆ ಉನ್ನತ ಸ್ಥಿತಿಗೆ ತರಬೇಕು? ತನ್ನ ಯುವಕರು ಯಾರನ್ನು ಮಾದರಿಯಾಗಿ ಮಾಡಿಕೊಳ್ಳಬೇಕು? ಇವೇ ಮುಂತಾದ ಸಂಗತಿಗಳು ಅಡಕವಾಗಿ ಪದೇ ಪದೇ ಕಣ್ಣಿಗೆ ಬೀಳುವಂತೆ ಒಂದು ಪಟ್ಟಿಯನ್ನು ಉಪಾಧ್ಯಾಯನು ಪ್ರಥಮದಲ್ಲಿ ತಾನೇ ಬರೆದು ಇಟ್ಟುಕೊಳ್ಳಬೇಕು, ಇದೇ ಮೊದಲನೆಯದು. ಈ ಉದ್ದೇಶವನ್ನು ಅನುಷ್ಠಾನಕ್ಕೆ ತರುವದೇ ಆತನ ಎರಡನೇ ಕರ್ತವ್ಯ. ಉಪ್ಪರಿಗೆಯನ್ನೇ ಕಣ್ಣಿಟ್ಟು ನೋಡಿ ಕಾಲಿನ ತಿಪ್ಪೆ ಕೆಡರುವದೂ, ದುರಭಿಮಾನವೂ ಮನೆಯ ಮುಂದೆ ವೃಂದಾವನ ಕಾಣುವದೂ ಉಪಾಧ್ಯಾಯನಲ್ಲಿ ದೋಷವಾದ ಗುಣಗಳು. ನಮ್ಮಲ್ಲಿ ಅನೇಕ ಮಂದಿ ಶೋಧಕರು ಯಾವದೊಂದನ್ನಾದರೂ ತಮ್ಮ ಆದರ್ಶವನ್ನಾಗಿ ಇಟ್ಟುಕೊಳ್ಳುವದು ಅಪರೂಪ ಉಪಾಧ್ಯಾಯರು ತಮ್ಮ ಪಡೆನುಡಿಗಳಿಂದ ಚಿಕ್ಕಮಕ್ಕಳ ಬೆಳವಣಿಗೆಗೆ ಹ್ಯಾಗೆ ಸಹಾಯಕರಾಗಬಹುದೆಂಬುದನ್ನು ಅವರು ಚಿಂತಿಸದೆ ಇನ್‌ಸ್ಪೆಕ್ಟರನ್ನು ಮೆಚ್ಚಿಸಿ ಅವನ ಪ್ರಸಾದವನ್ನು ಪಡೆಯುವದೇ ನಿತ್ಯಚಿಂತನೆಯನ್ನಾಗಿ ಮಾಡಿಕೊಂಡು ಅದಕ್ಕೆ ಅನುಗುಣವಾಗಿ ಮಕ್ಕಳನ್ನು ವರ್ಷದ ಒಂದು ತುದಿಯಿಂದ ಇನ್ನೊಂದು ತುದಿ ವರೆಗೆ ಅಟ್ಟಿಕೊಂಡು ಹೋಗುವರು ಅಷ್ಟೇ ಅಲ್ಲ; ರಸ್ತೆಯು ಸ್ವಲ್ಪ ದೂರವಾಗಿದ್ದರೆ ಚೊಂಕಾಪಿನಿಂದ ಅವರನ್ನು ಹೊಡೆದುಕೊಂಡು ಹೋಗುವದೂ ಉಂಟು, ಒಂದೊಂದು ಸಂದರ್ಭದಲ್ಲಿ ಪಟ್ಟಾರ್ಥ ಪ್ರಶ್ನಾರ್ಥಗಳನ್ನು ಬಾಯಿಪಾಠಮಾಡಿಸಿ, ಅವರನ್ನು ತಾನೇ ಹೊತ್ತುಕೊಂಡು ಹೋಗುವದು ಸರ್ವಸಾಧಾರಣವಾಗಿದೆ.

ಉಪಾಧ್ಯಾಯರು ಪಾಠಗಳನ್ನು ಮಕ್ಕಳಿಗೆ ಹೇಳಿಕೊಡುವದರಲ್ಲಿ ಬಗೆಬಗೆಯ ತಂಟೆಗಳಿವೆ. ಸುಲಭವಾದ ಪಾಠಪ್ರವಚನಗಳನ್ನು ಹೇಳಿಕೊಡುವದು ಅಗೌರವವೆಂದು ಬಗೆದು, ನಮ್ಮ ಉಪಾಧ್ಯಾಯರು ಬಡ ಮಕ್ಕಳ ತಲೆಯ ಮೇಲೆ ದೊಡ್ಡ ದೊಡ್ಡ ಭಾಷಣಗಳನ್ನು ಹೊಯಿದುಬಿಡುವರು ಮಕ್ಕಳ ಬುದ್ಧಿವಿಕಾಸಕ್ಕೆ ಎಡೆಗೊಡದೆ, ಅವರಿಗೆ ಹೇಳಿದ್ದನ್ನೇ ಹೇಳಿಕೊಟ್ಟು ಆಗಾಗ ಜಗಿದುಬಿಡುವರು ತಮ್ಮ ಪಾಂಡಿತ್ಯವನ್ನು ವಿಜೃಂಭಿಸುವದಕ್ಕೆ ಹೋಗಿ, 'ತುಷ್ಟ' ಎಂಬದಕ್ಕೆ 'ಶ್ವೈತ' ಎಂದು ಬರೆದುಕೊಟ್ಟು ಅರ್ಥವನ್ನು ನಿರರ್ಥವನ್ನಾಗಿ ಮಾಡಿಬಿಡುವರು, ಅಂಕೆಗಳ ಮಾರುದ್ದ ಸಾಲಿನ ಲೆಕ್ಕಗಳನ್ನು ಕೊಟ್ಟು, ಅವರಿಗೆ ವಿದ್ಯೆಯಲ್ಲಿ ಬೇಸರ ಹುಟ್ಟಿಸುವದುಂಟು; ಮಕ್ಕಳ ದೇಹದಾರ್ಢ್ಯವನ್ನು ನೋಡಿಕೊಳ್ಳದೆ, ಅವರ ತಲೆಯನ್ನು ಕುಂಬಳಕಾಯಿಯಷ್ಟು ದೊಡ್ಡದಾಗಿ ಮಾಡಲು ಯತ್ನಿಸುವರು; ಅಥವಾ, ಆಲಸ್ಯಗಾರರಾಗಿದ್ದರೂ ತಮ್ಮ ಸಂಬಳಕ್ಕಾಗಲಿ, ಗ್ರ್ಯಾಂಟ್ ಹಣಕ್ಕಾಗಲಿ ಮೋಸವಾಗದಂತೆಯೂ ಉದ್ಯೋಗವು ತಪ್ಪಿಹೋಗದಂತೆಯೂ ನೋಡಿಕೊಂಡು, ಅದಷ್ಟು ಕಡಿಮೆ ಶ್ರಮದಿಂದ ತಮ್ಮ ಕೆಲಸಗಳನ್ನು ಸಾಗಿಸುವರು. ಟ್ರೇನ್ ಆದ ಉಪಾಧ್ಯಾಯರು ಸಹ ಹಳ್ಳಿಯ ಶಾಲೆಗಳನ್ನು ಸೇರುತ್ತಲೇ, ತಮಗೆ ಹೇಳಿಕೊಟ್ಟ ಸೂತ್ರಗಳನ್ನೆಲ್ಲಾ ಮರೆತುಬಿಟ್ಟು ಪೂರ್ವಾಚಾರಗಳನ್ನೇ ಅನುಸರಿಸುವರು. ಇಂಥಾ ಉಪಾಧ್ಯಾಯರು ನಟ್ಟು, ಆಗತಮಾಡಿದ ಮಕ್ಕಳು ಸೊಂಪಾಗಿ ಬೆಳೆಯದೆ ಬಾಡಿ, ಬಸವಳಿದು, ಕರಡಾಗಿಹೋದಂತೆ ಕಾಣುವದು ಆಶ್ಚರ್ಯವಲ್ಲ.

ಈ ದೋಷಗಳನ್ನು ಪರಿಹರಿಸುವದಕ್ಕೆ ಎರಡು ಉಪಾಯಗಳಿವೆ. ಪ್ರತಿ ಒಬ್ಬ ಉಪಾಧ್ಯಾಯನು 'ಟ್ರೈನಿಂಗ್' ಶಾಲೆಯನ್ನು ಬಿಟ್ಟು ಹಳ್ಳಿ ಶಾಲೆಗಳನ್ನು ಸೇರುತ್ತಲೇ ಹೊಸ ಪುಸ್ತಕಗಳನ್ನು ಓದುತ್ತಲೇ ಇರಬೇಕು. ಉಪಾಧ್ಯಾಯರು ಆಲಸ್ಯದಿಂದಾಗಲಿ ಮರವೆಯಿಂದಾಗಲಿ ಜಗುಳಿಬೀಳದಂತೆ ಇಂಗ್ಲಿಷ್ ಭಾಷೆಯಲ್ಲಿ ಹಲವು ಮಾಸಿಕಪತ್ರಗಳಿವೆ, ಹಾಗೂ ದೊಡ್ಡ ದೊಡ್ಡ ಮನುಷ್ಯರು ತಮ್ಮ ಜ್ಞಾನಾನುಭವಗಳನ್ನು ಆಗಾಗ ಪುಸ್ತಕರೂಪವಾಗಿ ಪ್ರಕಟಿಸುವರು. ತಿಂಗಳಿಗೆ ಐದಾರು ರೂಪಾಯಿಂದ ಜೀವನಮಾಡುವ ಬಡ ಉಪಾಧ್ಯಾಯರು ಶಾಲೆಗೆ ಬೇಕಾದ ಪಾಠಪುಸ್ತಕಗಳನ್ನು ಕೊಂಡುಕೊಳ್ಳದೆ ಇರುವಾಗ ಇತರ ಪುಸ್ತಕಗಳ ಮಾತು ಏನು ಹೇಳಬಹುದು? ಈ ಕಾರಣದಿಂದ ಗ್ರಂಥಕಾರರು ಪುಸ್ತಕರಚನೆಗೆ ಮನಸ್ಸು ಮಾಡುವದಿಲ್ಲ. 'ಬಾಲಪತ್ರ' ಮತ್ತು 'ವಿದ್ಯಾದಾಯಿನಿ' ಎಂಬೀ ಎರಡೇ ಮಾಸಿಕಪತ್ರಗಳು ಕನ್ನಡ ಉಪಾಧ್ಯಾಯರಿಗೋಸ್ಕರ ಪ್ರಕಟವಾಗುತ್ತವೆ, ಇವು ಕೂಡ ಅಷ್ಟು ಸಮರ್ಪಕವಾಗಿವೆ ಎಂದು ಹೇಳಲಾರೆವು ಪತ್ರಿಕಾ ಪ್ರಸಾರಣೆಯು ಮತ್ತು ಪುಸ್ತಕರಚನೆಯು ಕಾಲ ಇನ್ನೂ ಬಂದಿಲ್ಲ, ಅದಕ್ಕೆ ಇನ್ನು ಕೆಲವೆ ವರ್ಷಗಳ ತನಕ ತಡೆಯಬೇಕು. ಇನ್‌ಸ್ಪೆಕ್ಟಿಂಗ್ ಅಧಿಕಾರಿಗಳು ಆಗಾಗ ಉಪಾಧ್ಯಾಯರ ಸಭೆಗಳನ್ನು ನೆರೆಯಿಸಿ ನೂತನ ಕ್ರಮಗಳನ್ನು ಸ್ವತಃ ಉಪಾಧ್ಯಾಯರ ತಿಳುವಳಿಕೆಗೆ ತರುವದೇ ಎರಡನೇ ಉಪಾಯ ವರ್ಷದಲ್ಲಿ ಇಂಥಾ ಒಂದೆರಡು ಸಂಘಗಳು ನೆರೆದುಬರುತ್ತವಾದರೂ, ಈ ಸಂಘಗಳಲ್ಲಿ ಚರ್ವಿತಚರ್ವಣವೇ ವಿಶೇಷವಾಗಿ ನಡೆಯುತ್ತಿದೆ. ಹೊಸ ವಿಷಯಗಳನ್ನೂ ನೂತನ ಕ್ರಮಗಳನ್ನೂ ಇನ್‌ಸ್ಪೆಕ್ಟಿಂಗ್ ಅಧಿಕಾರಿಗಳು ಉಪಾಧ್ಯಾಯರಿಗೆ ಮುಂದಿಟ್ಟು ಮಾಡಿ, ಅವರು ತಮ್ಮ ತಮ್ಮ ಪ್ರವೃತ್ತಿಗಳಲ್ಲಿ ನಿರುತ್ಸಾಹರಾಗದಂತೆ ನೋಡಿಕೊಳ್ಳಬೇಕು.

ಮೈಸೂರು ಸರ್ಕಾರಿ ಹುಕುಮುಗಳು.

ನಾಯಿ ನರಿ ಸರ್ಪಗಳಿಂದ ಕಡಿಸಿಕೊಂಡವರಿಗೆ ಚಿಕಿತ್ಸೆ ಮಾಡುವ ಔಷಧವನ್ನು ಉತ್ತರ ದೇಶದಲ್ಲಿರುವ ಕಸೌಲಿ ಆಸ್ಪತ್ರೆಯಲ್ಲಿ ವಿಕ್ರಿ ಮಾಡುತ್ತಾರೆ. ಸರ್ಪದ ವಿಷಪರಿಹಾರಕ್ಕೆ ಕೊಡುವ ಔಷಧಕ್ಕೆ ಶೀಸೆಗೆ ೪ ರೂಪಾಯಿಯಂತಲೂ, ಇತರ ಔಷಧಕ್ಕೆ ಶೀಸೆಗೆ ೧ ರೂಪಾಯಿಯಂತಲೂ ತಿಳಿದು ಬರುವದು. ಬೇಕಾದವರು ಕಸೌಲಿಯಲ್ಲಿರುವ ಸೆಂಟ್ರಲ್ ಇನ್‌ಸ್ಟಿಟ್ಯೂಟ್ ಎಂಬ ಔಷಧಗಳ ಕಾರ್ಖಾನೆಯಿಂದ ತರಿಸಿಕೊಳ್ಳಬಹುದೆಂದೂ ಸರ್ಕಾರಿ ಆಸ್ಪತ್ರೆಯವರಿಗೆ ಆ ಔಷಧಗಳನ್ನು ಮುಫತ್ತಾಗಿ ಕೊಡುವರೆಂದೂ ರೆಸಿಡೆಂಟರವರು ಮೈಸೂರು ಸರ್ಕಾರದವರಿಗೆ ತಿಳಿಸಿದಾರೆ.

ಮೈಸೂರು ಸರ್ಕಾರಿ ಇಂಡಸ್ಟ್ರಿಯಲ್ ಸ್ಕೂಲಿನಲ್ಲಿ ಮಣ್ಣಿನ ಪಾತ್ರೆ ಹಂಚು ಮೊದಲಾದವುಗಳನ್ನು ತಯಾರುಮಾಡುವದಕ್ಕೆ ಕಟ್ಟಡವೂ ಜೋಪಡಿಗಳೂ ಸಾಕಾಗುವದಿಲ್ಲವೆಂತಲೂ ಡ್ರಾಯಿಂಗ್ ಕ್ಲಾಸಿಗೆ ಕೆಲವು ಹೊಸ ಬೆಂಚು ಮಣೆ ಮುಂತಾದ್ದು ಬೇಕಾಗಿದೆ ಎಂತಲೂ ಇದಕ್ಕೆಲ್ಲಾ ೩,೦೦೦ ರೂಪಾಯಿ ಬೇಕಾಗುವದೆಂತಲೂ ಸೂಪರಿಂಟೆಂಡೆಂಟರು ಸೂಚಿಸಿದರು ಗವರ್ನಮೆಂಟಿನವರು ಈಗತಾನೇ ಅಷ್ಟು ಹಣವನ್ನು ಸ್ಯಾಂಕ್ಷನ್ ಮಾಡಿರುತ್ತಾರೆ.

ಸರ್ಕಾರಿ ಸ್ಕೂಲುಗಳಲ್ಲೂ ಸರ್ಕಾರದಿಂದ ಗ್ರ್ಯಾಂಟು ಪಡೆಯುವ ಸ್ಕೂಲುಗಳಲ್ಲೂ ಓದುತ್ತಿರುವ ವಿಧವಾವಿದ್ಯಾರ್ಥಿನಿಯರಿಗೆ ತಿಂಗಳಿಗೆ ೧-೮ ರೂಪಾಯಿಯಂತೆ ವೇತನಗಳನ್ನು ಕೊಡಬಹುದೆಂದು ಗವರ್ನಮೆಂಟಿನವರು ಸ್ಯಾಂಕ್ಷನ್ ಮಾಡಿದಾರೆ ಆದು ಮೈಸೂರು ಮಹಾರಾಣಿಯವರ ಕಾಲೇಜಿನಲ್ಲಿ ಓದತಕ್ಕ ವಿದ್ಯಾರ್ಥಿನಿಯರಿಗಾಗಲಿ, ದೇವರಾಜ ಬಹದೂರ್ ಧರ್ಮಫಂಡಿನಿಂದ ವೇತನ ಪಡೆಯುತ್ತಿರುವವರಿಗಾಗಲಿ ಈ ವೇತನಗಳನ್ನು ಕೊಡುವದಿಲ್ಲ ಮತ್ತು ಎರಡನೇ ಸಲ ವಿವಾಹವಾಗಬಹುದಾದಂಥಾ ವಿಧವೆಯರಿಗೂ ಈ ವೇತನಗಳು ಸಲ್ಲಲಾರವು

ಪ್ಲೇಗ್ ಉಪದ್ರವು ಪ್ರಾಪ್ತವಾದ ಊರುಗಳಲ್ಲಿ ಸರ್ಕಾರಿ ನೌಕರರು ಬೇಗನೆ ಮನೆಗಳನ್ನು ಬಿಟ್ಟು ಹೋಗುವದಕ್ಕೆ ಅನುಕೂಲಿಸುವಂತೆ ಸರ್ಕಾರದವರು ಅಂಥವರಿಗೆ ಒಂದು ತಿಂಗಳ ಸಂಬಳವನ್ನು ಅಡ್ವಾನ್ಸು ಕೊಡಿಸುತ್ತಿದ್ದರು. ತಿಂಗಳಿಗೆ ೧೦ ರೂಪಾಯಿ ಅಥವಾ ಅದಕ್ಕಿಂತ ಕಡಿಮೆ ಸಂಬಳವನ್ನು ಪಡೆಯತಕ್ಕ ನೌಕರಮಾನ್ಯರು ಆ ಒಂದು ತಿಂಗಳ ಸಂಬಳದಲ್ಲೇ ಹೊಸ ಜೋಪಡಿಗಳನ್ನು ಕಟ್ಟಿಕೊಳ್ಳುವದೂ ಮಟ್ಟುಗಳನ್ನು ಕೊಂಡು ಹೊದ್ದಿಸಿಕೊಳ್ಳುವದೂ ಸಾಧ್ಯವಲ್ಲವೆಂತಲೂ, ಅಂಥಾ ನೌಕರಮಾನ್ಯರಿಗೆಲ್ಲ ಒಂದು ತಿಂಗಳ ಸಂಬಳವನ್ನು ಅಡ್ವಾನ್ಸು ಕೊಡುವದಲ್ಲದೆ ಜೋಪಡಿ ಕಟ್ಟಿಕೊಳ್ಳುವದಕ್ಕೆ ಬೇಕಾಗುವಷ್ಟು ಗಳ ಬೊಂಬುಗಳನ್ನು ಮುಫತ್ತಾಗಿಯೇ ಕೊಡಿಸಿದರೆ ತುಂಬಾ ಸಹಾಯವಾದೀತೆಂತಲೂ ಸೀನಿಯರ್ ಸರ್ಜನರವರು ಗವರ್ನಮೆಂಟಿಗೆ ಶಿಫಾರಸು ಮಾಡಿದರು. ಸರ್ಕಾರದವರು ಅದೇ ರೀತಿ ಸ್ಯಾಂಕ್ಷನ್ ಮಾಡಿ, ನಿಜವಾಗಿಯೂ ಬಡವರೆಂದು ತಿಳಿದುಬಂದ ನೌಕರರಿಗೆ ಮಾತ್ರ ಸಾಮಾನನ್ನು ಮುಫತ್ತಾಗಿ ಕೊಡಬೇಕೆಂದು ಅಪ್ಪಣೆ ಕೊಡಿಸಿದಾರೆ. ಇದರಿಂದ ಅಲ್ಪ ನೌಕರರು ಬೇಗನೆ ಜೋಪಡಿ ಕಟ್ಟಿಕೊಳ್ಳುವದಕ್ಕೆ ತುಂಬಾ ಸಹಾಯವಾಯಿತು.

ಚಿಕ್ಕಬಳ್ಳಾಪುರದ ಸತ್ರದಲ್ಲಿ ಪ್ರಯಾಣಿಕರಿಗೆ ಅನ್ನಹಾಕುವದಕ್ಕೆ ಅಲ್ಲಿನ ಮೆ॥ ದೊಡ್ಡರಂಗಣ್ಣನವರೂ ಮೆ॥ ಚಿಕ್ಕಣ್ಣನವರೂ ಸರ್ಕಾರದವರ ವಶಕ್ಕೆ ೬,೦೦೦ ರೂಪಾಯಿ ಫಂಡು ಕೊಟ್ಟರು. ಈ ರೀತಿ ಪರಾರ್ಥವಾಗಿ ಧರ್ಮದ ಫಂಡನ್ನು ಸರ್ಕಾರದಲ್ಲಿ ಇಟ್ಟವರಿಗೆ ಸರ್ಕಾರದವರು ಶೇಕಡಾ ವರುಷಕ್ಕೆ ೪ ರೂಪಾಯಿಯಂತೆ ಬಡ್ಡಿ ಕೊಡುತ್ತಾರೆ. ಮೇಲ್ಕಂಡ ಸತ್ರದ ಮ್ಯಾನೇಜರು ಪೂರಾ ಬಡ್ಡಿಯನ್ನು ಖಜಾನೆಯಿಂದ ತೆಗೆದುಕೊಂಡು, ಸತ್ರಕ್ಕೆ ಖರ್ಚಾದಷ್ಟು ಹೋಗಾ ಉಳಿಯುವ ಹಣವನ್ನು ತಮ್ಮ ಬಳಿಯಲ್ಲೇ ಇಟ್ಟುಕೊಳ್ಳುತ್ತಿದ್ದಾರೆಂತಲೂ, ಹೀಗೆ ಇಟ್ಟುಕೊಳ್ಳುವದರಿಂದ ಮುಂದೆ ಆ ಹಣ ದುರ್ವಿನಿಯೋಗವಾಗುವದಕ್ಕೆ ಅವಕಾಶವಾಗುತ್ತೆಂತಲೂ, ಸತ್ರದ ಖರ್ಚಿಗೆ ಎಷ್ಟು ಬೇಕೋ ಅಷ್ಟನ್ನೇ ಅವರಿಗೆ ಬಡ್ಡಿ ಹಣದಲ್ಲಿ ಕೊಡುವದು ಯೋಗ್ಯವಾಗಿದೆ ಎಂತಲೂ ಕೋಲಾರದ ಡೆಪ್ಯುಟಿ ಕಮಿಷನರ್ ಮೆ॥ ಕೆ. ಪಿ. ಪುಟ್ಟಣ್ಣಶೆಟ್ಟಿಯವರು ಗವರ್ನಮೆಂಟಿಗೆ ಬರೆದು ತಿಳಿಸಿದರು. ಸರ್ಕಾರದವರು ಅದು ಒಳ್ಳೇ ಸಲಹೆ ಎಂದು ಅಂಗೀಕರಿಸಿ, ಅದರಂತೆ ಹುಕುಂ ಮಾಡಿ, ಈ ಹುಕುಮು ಈ ಸಂಸ್ಥಾನದಲ್ಲಿ ಧರ್ಮಾರ್ಥವಾಗಿ ಕೊಟ್ಟಿರುವ ಸಮಸ್ತ ಫಂಡುಗಳಿಗೂ ಅನ್ವಯಿಸತಕ್ಕದ್ದೆಂತಲೂ ಅಂಥಾ ಸತ್ರ ದೇವಸ್ಥಾನ ಪಾಠಶಾಲೆಗಳ ಖರ್ಚಿಗೆ ಎಷ್ಟೆಷ್ಟು ಬೇಕಾಗುವದೋ ಅಷ್ಟನ್ನೇ ತಾಲ್ಲೂಕ್ ಅಮಲ್ದಾರರು ಮ್ಯಾನೇಜರುಗಳಿಗೆ ಪಾವತಿ ಮಾಡತಕ್ಕದ್ದೆಂತಲೂ ಸರ್ಕ್ಯುಲರ್ ಕೊಟ್ಟಿದಾರೆ ಇದಲ್ಲದೆ ಆಯಾ ಮ್ಯಾನೇಜರುಗಳು ನ್ಯಾಯವಾದ ರೀತಿಯಲ್ಲಿ ಖರ್ಚಿನ ಲೆಕ್ಕಗಳನ್ನು ಅಮಲ್ದಾರರಿಗೆ ಕೊಡಬೇಕೆಂತಲೂ ವಿಧಿಸಿರುವರು.

ಕೆಲವು ವರುಷಗಳ ಕೆಳಗೆ ಲೇಟ್ ಮುಜರಾಯಿ ಸೆಕ್ರೆಟರಿಯವರು ಮೈಸೂರು ಸಂಸ್ಥಾನಕ್ಕೆ ಸೇರಿದ ಹದಿನಾರು ಅನ್ನಸತ್ರಗಳಲ್ಲಿ ಪ್ರಯಾಣಿಕರಿಗೆ ಅನ್ನಹಾಕುವದನ್ನು ತಪ್ಪಿಸಿ, ಅಕ್ಕಿಪಡಿ ಕೊಡುವಂತೆ ಹುಕುಂ ಕೊಟ್ಟು ಚಾರೀಲಿ ತಂದರು ಈಚೆಗೆ ಗವರ್ನಮೆಂಟಿನವರು ಪ್ರಜೆಗಳಿಗುಂಟಾಗಿರುವ ತೊಂದರೆಗಳನ್ನು ಕೇಳಿ, ಆ ಪೈಕಿ ನಂಜನಗೂಡು ಸತ್ರವಲ್ಲದೆ ... ಉಳಿದ ... ಸತ್ರಗಳಲ್ಲೂ ಅಕ್ಕಿಪಡಿ ಕೊಡುವದನ್ನು ತಪ್ಪಿಸಿ, ಪೂರ್ವಪದ್ಧತಿಯಂತೆ ಪ್ರಯಾಣಿಕರಿಗೆ ಅನ್ನ ಭೋಜನ ಮಾಡಿಸಬೇಕೆಂದು ಹುಕುಂ ಕೊಟ್ಟು ಬಹಳ ಉಪಕಾರ ಮಾಡಿದರು. ಉಳಿದ ಹದಿನಾಲ್ಕು ಸತ್ರಗಳ ವಿಚಾರವಾಗಿ ಪ್ರಜೆಗಳು ಪ್ರತಿನಿಧಿ ಸಭೆಯಲ್ಲಿ ಆಗಾಗ್ಗೆ ದೂರು ಹೇಳುತ್ತಾ, ಅಕ್ಕಿಪಡಿ ಕೊಡುವದನ್ನು ತಪ್ಪಿಸಬೇಕೆಂತಲೂ ಪೂರ್ವದಂತೆ ಅದಿಗೆ ಸತ್ರ ಪ್ರಯಾಣಿಕರಿಗೆ ಅನ್ನಹಾಕಬೇಕೆಂತಲೂ ಕೇಳಿಕೊಳ್ಳುತ್ತಿದ್ದರು. ಗವರ್ನಮೆಂಟಿನವರು ಈ ವಿಷಯದಲ್ಲಿ ಡೆಪ್ಯುಟಿ ಕಮಿಷನರುಗಳಿಗೆ ಬರೆದು ಅವರ ಅಭಿಪ್ರಾಯವನ್ನು ತರಿಸಿಕೊಂಡು, ಮುಂದೆ ಹೇಳುವ ಸರ್ಕಾರಿ ಸತ್ರಗಳಲ್ಲಿ ಯಥಾಪ್ರಕಾರ ಪೂರ್ವಪದ್ಧತಿಯನ್ನೇ ಅಂದರೆ ಪ್ರಯಾಣಿಕರಿಗೆ ಅಕ್ಕಿಪಡಿ ಕೊಡುವದಕ್ಕೆ ಬದಲು ಅದಿಗೆ ಮಾಡಿ ಬಡಿಸಬೇಕೆಂಬದಾಗಿ ಹುಕುಂ ಮಾಡಿರುತ್ತಾರೆ ಆ ಸತ್ರಗಳು ಯಾವವೆಂದರೆ—ಮೈಸೂರು ಡಿಸ್ಟ್ರಿಕ್ಟಿನಲ್ಲಿ—ನಂಜನಗೂಡು ಗಣಾಧನೇ ಸತ್ರ, ಮದ್ದೂರು. ಬೆಂಗಳೂರ್ ಡಿಸ್ಟ್ರಿಕ್ಟಿನಲ್ಲಿ—ಸೋಮ, ಕಿಬಿ, ರಾಮಗಿರಿ; ತುಮಕೂರು ಡಿಸ್ಟ್ರಿಕ್ಟಿನಲ್ಲಿ—ಬೆಳ ಚಿತ್ರದುರ್ಗದ ಡಿಸ್ಟ್ರಿಕ್ಟಿನಲ್ಲಿ—ಚಿತ್ರದುರ್ಗ, ಶಿವಾರನಾಳ್ಳಿ, ಹರಿಹರ, ಬೊಮ್ಮಗೊಂಡನ ಕೆರೆ, ಹಿರಿಯೂರು, ಜಗಳೂರು, ಹೊಳಲ್ಕೆರೆ, ಅಗೋಳ್ಗಟ್ಟ, ಮಂಗಳ ಇವೇ

ಕೋರಟಗೆರೆ ಡೆಪ್ಯುಟಿ ಅಮಲ್ದಾರ್ ಮಿ॥ ಎಚ್ ... ಅವರು ನಗ್ಗಳಿಗೆ ಗ್ರಾಮದಲ್ಲಿ ದೇವಸ್ಥಾನದ ... ಕಟ್ಟಿಸುವದಕ್ಕೆ ಪ್ರಜೆಗಳಿಂದ ... ಗ್ರಾಮದಲ್ಲಿ ೬೦೦ ರೂಪಾಯನ್ನು ... ಎಂದು ಮೆ॥ ಪಟೇಲ್ ಅಲ್ಲಿನ ಶೆ. ರಾಮಣ್ಣ ಎಂಬುವರು ಗವರ್ನಮೆಂಟಿಗೆ ಅರ್ಜಿ ಬರೆದುಕೊಂಡರು. ಇದರ ವಿಷಯದಲ್ಲಿ ಸರ್ಕಾರದವರು ತುಮಕೂರು ಡೆಪ್ಯುಟಿ ಕಮಿಷನರ್ ಮತ್ತು ... ಕಮಿಷನರ ಅಭಿಪ್ರಾಯಗಳನ್ನು ಕೇಳಿ ತರಿಸಿಕೊಂಡು ಹುಕುಂ ಮಾಡಿರುವದೇನೆಂದರೆ—... ಹಣವೇನೂ ... ಆಗಿ ಖರ್ಚಾಗಿದೆ ಎಂತಲೂ, ಕೆಲಸ ಮಾಡಿಸುತ್ತಿದ್ದ ಪಟೇಲ್ ರಾಮಭಾಗರು ಸರಿಯಾದ ಲೆಕ್ಕದ ಪಟ್ಟಿ ಇಟ್ಟಿಲ್ಲವೆಂತಲೂ, ಡೆಪ್ಯುಟಿ ಅಮಲ್ದಾರರು ಈ ಗ್ರಾಮದ ಆವಶ್ಯಕತೆಯನ್ನು ಕಂಡು ಹಿಡಿದು ಪ್ರಜೆಗಳಿಗೆ ಪ್ರೋತ್ಸಾಹ ಹುಟ್ಟಿಸಿ, ದೇವರಭಟ್ಟರೆಂಬುವರ ಆಡತ್ವಾಗಿ ಸ್ಥಳವನ್ನು ಮುಫತ್ತಾಗಿ ಕೊಡಿಸಿ, ... ಸಹಕರಿಸಿದ್ದಾರೆಂತಲೂ ಅಸಿಸ್ಟೆಂಟ್ ಕಮಿಷನರು ವಿಚಾರಣೆಯಿಂದ ರಿಪೋರ್ಟ್ ಮಾಡಿದಾರೆ ಆದರೆ ಡೆಪ್ಯುಟಿ ಅಮಲ್ದಾರರು ಗ್ರಾಮಸ್ಥರ ಕೂಟವನ್ನು ಸೇರಿಸಿ, ಎಷ್ಟು ಹಣವಾಗಬೇಕು, ಹ್ಯಾಗೆ ಕಟ್ಟಬೇಕು ಎಂಬೀ ಸಂಗತಿಗಳನ್ನು ಅವರಿಗೆಲ್ಲಾ ಮೊದಲೇ ತಿಳಿಸಿ, ಕಟ್ಟುವಾಗ ಪ್ರಾರಂಭಿಸುವದಕ್ಕೆ ಮೊದಲೇ ಈ ಸಂಗತಿಯನ್ನು ಮೇಲ್ಪಟ್ಟ ಅಧಿಕಾರಿಗಳಿಗೆ ತಿಳಿಸಿದ್ದರೆ ಇಷ್ಟು ಪ್ರಕಾರಿಗೂ ಜನರಲ್ಲಿ ಮನಸ್ತಾಪಕ್ಕೂ ಅವಕಾಶವಾಗುತ್ತಿರಲಿಲ್ಲ ಹೀಗೆ ಮಾಡದೆ ತಪ್ಪಿದರಲ್ಲಾ ಎಂದು ವ್ಯಸನಪಡಬೇಕಾಗಿದೆ. ಆದರೆ ಅವರ ಹಣವನ್ನು ದುರುಪಯೋಗಕ್ಕೆ ಬಳಸಿಕೊಳ್ಳಲಿಲ್ಲವೆನ್ನುವದೂ ಈ ಬಾಗದಲ್ಲಿ ಇನ್ನಾವ ಆಕ್ಷೇಪಣೆಗೂ ಅವರು ಗುರಿಯಾಗುವದಿಲ್ಲವೆನ್ನುವದೂ ಗೊತ್ತಾಯಿತು. ರೆವಿನ್ಯೂ ಕಮಿಷನರು ಹೇಳುವಂತೆ ಇನ್ನು ಮುಂದೆ ಯಾವ ಸರ್ಕಾರಿ ... ಗಸ್ತೇ ಆಗಲಿ ಪಬ್ಲಿಕ್ಕಿಗಾಗಿ ಚಂದಾ ಮುಂತಾದ್ದು ವಸೂಲ್ಮಾಡುವಾಗ್ಗೆ ಸ್ಥಳದ ಮುಖಂಡರನ್ನು ತಮ್ಮ ಸಂಗಡ ಮೆಂಬರಾಗಿ ಸೇರಿಸಿಕೊಳ್ಳಬೇಕು. ವಸೂಲ್ಮಾಡುವ ಹಣಕ್ಕೂ ಖರ್ಚು ಮಾಡುವ ಬಾಬುಗಳಿಗೂ ಸರಿಯಾದ ಲೆಕ್ಕದ ಪಟ್ಟಿಗಳನ್ನು ಇಡಬೇಕು ಇದಲ್ಲದೆ ಅಂಥಾ ಸಂಗತಿಗಳನ್ನೆಲ್ಲಾ ಲಿಖಿತ ಮೂಲಕವಾಗಿ ಡಿಸ್ಟ್ರಿಕ್ಟ್ ಅಧಿಕಾರಿಗಳಿಗೆ ಆಗಾಗ್ಗೆ ತಿಳಿಸುತ್ತಾ ಬರಬೇಕು.

ಕೊಪ್ಪ ತಾಲ್ಲೂಕ್ ಎಡಗುಣಮುಕ್ಕಿಯಲ್ಲಿರುವ ದೇಗುಲದ ಮಠಕ್ಕೆ ಕೆಲವು ಇನಾಂ ಜಮೀನುಗಳಿದ್ದುವು. ೧೮೬೪—೬೬ ರಲ್ಲಿ ಇನಾಂ ಸೆಟ್ಲ್‌ಮೆಂಟಾದಾಗ ಆ ಜಮೀನುಗಳಿಗೆ ಬದಲಾಗಿ ರೂ. ೭—೯ ಅಣೆ ನಗದಿಯಾದ ವರ್ಷಾಶನವನ್ನು ಗೊತ್ತುಮಾಡಿದರು. ಕಳೆದ ೧೯೦೪ ನೆ ಮೇ ೨೬ ರಲ್ಲಿ ಆ ಕಮಿಷನರ್ ಮಿ॥ ಕೆ. ವೈಲಾರಿಯವರು ಆ ಮಠವನ್ನು ಅಜಮಾಯಿಷಿ ಮಾಡಿ, ಮಠವೆಲ್ಲಾ ಬಿದ್ದುಹೋಗಿ ಹಾಳಾದ್ದು ಬೆಳಕೊಂಡಿದೆ ಎಂತಲೂ, ಸುಮಾರು ೫೦ ವರುಷಗಳಿಂದಲೂ ಹಾಳು ಬಿದ್ದಿದೆ ಎಂತಲೂ, ಇನಾಂ ಸೆಟ್ಲ್‌ಮೆಂಟಾದಾಗ್ಗೆ ಈ ಮಠ ಇದೆಯೋ ಇಲ್ಲವೋ ಎಂಬ ವಿಚಾರ ನಡೆದಂತೆ ಕಾಣುವದಿಲ್ಲವೆಂತಲೂ ರಿಪೋರ್ಟ್ ಮಾಡಿದರು. ಅದರ ಮೇಲೆ ಡೆಪ್ಯುಟಿ ಕಮಿಷನರು—ಕೊಪ್ಪದ ದೇವಸ್ಥಾನದಲ್ಲಿದ್ದ ವೀರಭದ್ರ ದೇವರು ಸುಮಾರು ೧೮೦ ವರುಷಗಳ ಕೆಳಗೆ ಒಡೆದು ಭಿನ್ನವಾಗಿತ್ತೆಂತಲೂ, ಆ ದೇವರನ್ನು ಮೇಲ್ಕಂಡ ಮಠದಲ್ಲಿ ತಂದಿಟ್ಟು ಪೂಜಿಸಿದ್ದಾರೆಂತಲೂ, ಸುಮಾರು ೬೫ ವರುಷಗಳ ಹಿಂದಿನಿಂದಲೂ ಮೇಲ್ಕಂಡ ತಸ್ತೀಕು ಈ ಮಠಕ್ಕೆ ಸಲ್ಲುತ್ತಿತ್ತೆಂತಲೂ, ಮುಂದೆಯೂ ಅದನ್ನು ನಡೆಸುವದು ಸಹಜವಾಗಿದೆ ಎಂತಲೂ ಗವರ್ನಮೆಂಟಿಗೆ ಶಿಫಾರಸು ಮಾಡಿದರು. ಸರ್ಕಾರದವರು ಅದರ ಮೇಲೆ ಆ ತಸ್ತೀಕನ್ನು ಅಲ್ಲಿದ್ದ ವೀರಭದ್ರ ದೇವರ ಹೆಸರಿನಲ್ಲಿ ಪಾವತಿ ಆಗತಕ್ಕದ್ದೆಂಬು ತೀರ್ಮಾನ ಮಾಡಿದಾರೆ.

...ಳೇ ನರಸೀಪುರದಲ್ಲಿರುವ ಶ್ರೀ ಯೋಗಾನಂದ ಮಠದ ಕಾರ್ಯಗಳು ತೃಪ್ತಿಕರವಾಗಿ ನಡೆಯುತ್ತಿವೆ. ಗುರುಗಳಿಗೆ ಸಲ್ಲುವ ರೂಪಾಯಿ ವರ್ಷಾಶನವು ಮಠದ ಖರ್ಚಿಗೆ ಸಾಲದು. ಆದ್ದರಿಂದ ಗವರ್ನಮೆಂಟಿನವರು ೧೯೦೬ ನೆ ಮಾರ್ಚಿ ಮೊದಲುಗೊಂಡು ತಿಂಗಳಿಗೆ ...ರೂಪಾಯಿಯಂತೆ ಗುರುಗಳಿಗೆ ಕೊಡತಕ್ಕದೆಂತಲೂ, ಪ್ರತಿ ವರ್ಷ ...ದ ಜಮೀನುಗಳಿಂದ ಉಳಿಕೆಯಾಗುವ ೧,೦೫೦ ರೂಪಾಯಿ ...೦ ರೂಪಾಯಿಯನ್ನು ವಾಪತಿ ಮಾಡಬೇಕೆಂತಲೂ ಸ್ಯಾಂಕ್ಷನ್ ...ದೆ ಇದಲ್ಲದೆ ಈ ಮಠವನ್ನು ದುರಸ್ತು ಮಾಡಿಸುವುದಕ್ಕೆ ...ಬೇಕಾಗುವುದೆಂದೂ ಅಂದಾಜು ಪಟ್ಟಿಯನ್ನು ಕಳುಹಿಸ ...ಬೇಕೆಂದು ಕಮಿಷನರಿಗೆ ಬರೆದು ಕೇಳಿರುತ್ತಾರೆ.

ಮೈಸೂರು ಪಟ್ಟಣದಲ್ಲಿರುವ ಶ್ರೀ ಉತ್ತರಾದಿ ಮಠದ ನಾಟಿಯಲ್ಲಿ ...ವೃಂದಾವನಗಳಿರುತ್ತವೆ. ಅವುಗಳ ಪಸ್ತೋದಕಕ್ಕೂ, ಆರಾಧನೆ, ಸಿಬ್ಬಂದಿ ಖರ್ಚಿಗೂ ವರುಷಕ್ಕೆ ೫೦೦ ರೂಪಾಯಿ ...ವುದೆಂದು ಆ! ಕಮಿಷನರ್ ಮಿ॥ ಸಿ. ಕೃಷ್ಣರಾಯರು ಗವರ್ನ್‌ಮೆಂಟಿಗೆ ರಿಪೋರ್ಟ್ ಮಾಡಿದರು. ಅವಕ್ಕಿರುವ ಗೂಳಿದರವೆ ...ದ ದಮಾಬಂದಿಯೂ ಸುಮಾರು ೫೦೦ ರೂಪಾಯಿ ಆಗುತ್ತೆ... ಕೊಟ್ಟು ಬಿಟ್ಟರೆ ರಿಪೇರಿ ಮೊದಲಾದ ಇತರ ಖರ್ಚಿಗೆ ಹಣ ...ವುದಿಲ್ಲವೆಂದು ಕೇಳಿ, ಸರ್ಕಾರದವರು ವರುಷಕ್ಕೆ ೩೩೫ ರೂ. ...ನ್ನು ಸ್ಯಾಂಕ್ಷನ್ ಮಾಡಿ, ಅರ್ಚಕರ ೧೫ ತಿಂಗಳ ಸಂಬಳ ೯೦ ...ಯನ್ನೂ ಹೋದ ವರುಷ ಅವರು ಮಾಡಿದ ಆರಾಧನೆ ಖರ್ಚಿ ...ರೂಪಾಯಿಯನ್ನೂ ಅವರಿಗೆ ವಾಪತಿ ಮಾಡತಕ್ಕದೆಂತಲೂ ...ಕೊಟ್ಟಿದಾರೆ.

ವಿದೇಶ ವರ್ತಮಾನಗಳು.

ಕೂಚ್ ಬಿಹಾರಿನ ಮಹಾರಾಜಕುಮಾರನು ಕಳೆದವಾರ ಲಂಡನ್ನಿನಲ್ಲಿ ಜ್ವರದಿಂದ ಇಳಿದರು. ಇಷ್ಟರಲ್ಲೇ ಜಾಂಜಿಬಾರಿನ ಸುಲ್ತಾನರಲ್ಲಿಗೆ ತಲಪುವವರಾಗಿದಾರೆ.

❖❖❖❖

...ಯಿಂದ ೧,೨೦೦ ಜನರು ಕನಡಾ ಸಂಸ್ಥಾನಕ್ಕೆ ಹೋಗಿ...ದು ಅವರಿಗೆ ಅಲ್ಲಿನವರು ಮನೆಮಠಗಳನ್ನೂ ಜೀವನೋಪಾಯವನ್ನೂ ಕಲ್ಪಿಸಿಕೊಡುತ್ತಿದಾರೆ.

❖❖❖❖

...ದ ಏಪ್ರಲ್ ೭ ರಲ್ಲಿ ಫ್ರೆಂಚರಿಗೆ ಸೇರಿದ ಇಂಡೋ ಚೀನಾದಲ್ಲಿ...ಲಾವೋಸ್ ಎಂಬ ಸಂಸ್ಥಾನದ ರಾಜಧಾನಿ ಲ್ಯಾಂಗ್ ಪ್ರಬಾಂಗ್ ಎಂಬ ಪಟ್ಟಣಕ್ಕೆ ಬೆಂಕಿ ಬಿದ್ದು ಉರಿದುಹೋಯಿತು...

❖❖❖❖❖

...ಟಲಿ ರಾಜ್ಯದಲ್ಲಿರುವ ಕ್ರೈಸ್ತ ಮಹಾ ಗುರುವಾದ ಪೋಪ್ ಸ್ವಾಮಿಗಳು ಬರ್ಮಾರ್ ಮಹಾರಾಜರವರಿಗೆ ಕಳೆದವಾರ ಭೇಟಿ...ಅವರಿಗೆ ತಮ್ಮ ಒಂದು ಫೋಟೋ ತಸ್ವೀರನ್ನು ಬಹುಮಾನ...ದರು.

❖❖❖❖

...ಷಿಯಾ ರಾಜ್ಯಕ್ಕೆ ಸೇರಿದ ...ಲ್ಯಾಂಡ್ ಆಧಿಪತ್ಯದಲ್ಲಿ ಅಪಾರವಾದ ...ಗಳ ಪೆಸೆಯಿಂದ ಅನೇಕ ಪ್ರಜೆಗಳಿಗೆ ಉಂಟಾಗಿದೆ ಎಂತಲೂ ...ಇ ಆಸ್ತಿ ಪಾಸ್ತಿ ...ಬಾ ಹಾಳಾದವೆಂತಲೂ ತಂತಿವರ್ತಮಾನ ಬಂದಿದೆ.

❖❖❖❖

...ನೀಸೆಯು ಪ್ಯಾರಿಸ್ ಕೋರ್ಟುಗಳು ತನ್ನ ನೀರನ್ನು ಯಾವ ಸಂದರ್ಭದಲ್ಲಿ ...ಕುಡಿಯುತ್ತಿದೆ ಇಲ್ಲ. ಕುಡಿಯುವ ನೀರಿಗೆ ಸ್ವಲ್ಪ ಬ್ರಾಂಡಿ ...ಕಲಸಿ ಕುಡಿಯುತ್ತಾರೆ. ಅವರಲ್ಲಿ ಮದ್ಯವನ್ನು ಕುಡಿಯುವ ...ಬಹಳ ಅಪರೂಪ.

❖❖❖❖

ಟರ್ಕಿ ರಾಜ್ಯದವರು ಕ ...ರಿಯಾದಲ್ಲಿ ರೈಲ್‌ರಸ್ತೆ ಹಾಕುತ್ತಿದಾರೆ. ಅದಕ್ಕೆ ೬೦೦ ಕತ್ತೆ ಸೇತುವೆಗಳನ್ನು ಕಟ್ಟಬೇಕಾಗಿರುವುದನ್ನು ...ಅಮೇರಿಕದ ಕಾರ್ಖಾನೆಯವರಿಗೆ ಸೇತುವೆಗಳ ಸಾಮಾನುಗಳನ್ನು ...ಮಾಡಿಸಿ ಕಳುಹಿಸುವಂತೆ ಕಂಟ್ರಾಕ್ಟು ವಹಿಸಿದರು.

❖❖❖❖

...ಫ್ರಿಕಾ ಖಂಡದಲ್ಲಿ ಸಿಕ್ಕುವ ಆನೆಗಳ ಪೈಕಿ ಗಂಡಾನೆಗಳಿಗೆ ಮಾತ್ರವಲ್ಲ ... ಉಭಯ ಪಾರ್ಶ್ವಗಳಲ್ಲೂ ಕೊಂಬು (ದಂತ) ಬೆಳೆಯುವುದು. ...ಹೆಣ್ಣಾನೆಗಳಿಗೆ ಬೆಳೆಯದೆ ಇರುವುದೂ ಸಹಜವಾಗಿದ್ದರೂ ...ಇಲ್ಲಿ ಗಂಡಾನೆಗೂ ಹೆಣ್ಣಾನೆಗೂ ಭೇದವಿಲ್ಲದೆ ಕೊಂಬು ಬೆಳೆಯುತ್ತೆ.

❖❖❖❖

...ಪಾನ್ ರಾಜ್ಯದಲ್ಲಿರುವ ಮುಖ್ಯಮುಖ್ಯ ಮ್ಯುನಿಸಿಪಲ್ ಮೆಂಬರುಗಳು ಮುಖ್ಯಮುಖ್ಯ ವರ್ತಮಾನ ಪತ್ರಿಕೆಗಳನ್ನು ನಡಸುವವರೂ ಲಂಡನ್ ಪಟ್ಟಣಕ್ಕೆ ಹೋಗಿ ಇಂಗ್ಲಿಷರ ಆತಿಥ್ಯವನ್ನು ...ಹೊಂದುವವರಾಗಿದಾರೆ. ಇಂಗ್ಲಿಷರು ಅವರನ್ನು ಸಗೌರವವಾಗಿ ...ಸಬೇಕೆಂದು ಏರ್ಪಾಡು ಮಾಡುತ್ತಿರುವರು.

❖❖❖❖

...ಯುತಿಯಲ್ಲಿ ಅಲೆಕ್ಸಾಂಡ್ರಾ ಮಹಾರಾಣಿಯವರ ಮೊದಲನೇ ...ತಿಮೆಯನ್ನು ಲಂಡನ್ ಆಸ್ಪತ್ರೆಯ ಎದುರಿಗೆ ಕೆತ್ತಿಸಿ ಇಡಿಸ...ಬೇಕೆಂದು ಆ ಆಸ್ಪತ್ರೆಯವರು ಗೊತ್ತುಮಾಡಿದಾರೆ. ಆಕೆಯವರಿಗೆ ...ಗ್ಗಣವಾದ ರೋಗಿಷ್ಟರ ವಿಷಯದಲ್ಲಿ ಇರುವ ಕನಿಕರವೂ ...ದಾರ ಚಿತ್ತವೃತ್ತಿಯೂ ಅಪೂರ್ವವಾಗಿರುವವು.

❖❖❖❖

...ನ ಪ್ರೆಸಿಡೆಂಟ್ ಪದವಿಗೆ ಹೊಸದಾಗಿ ಚುನಾಯಿಸಲ್ಪಟ್ಟ "ಫಾಲಿಯುರಿಸ್" ಯವರು ಬೆಳಿಗ್ಗೆ ೮ ಗಂಟೆಯೊಳಗಾಗಿ ಹಾಸಿಗೆಯಿಂದೆದ್ದು ಗಾಳಿಸವಾರಿ ಹೋಗಿ ಬಂದು ಸಂಸ್ಥಾನದ ಕಾರುಬಾರುಗಳಲ್ಲಿ ಕಠಿಣತರವಾದ ವಿಷಯಗಳನ್ನೆಲ್ಲಾ ಬೆಳಿಗ್ಗೆಯೇ ಮಾಡಿ ಪೂರೈಸಿಕೊಂಡು ಒಳ್ಳೊಳ್ಳೆ ಗ್ರಂಥಗಳನ್ನು ಓದುವುದರಲ್ಲಿಯೇ ತುಂಬಾ ಕಾಲವನ್ನು ಕಳೆಯುವರು.

❖❖❖❖

ಲಂಡನ್‌ಪಟ್ಟಣದಲ್ಲಿದ್ದು ಕಾಲವಾದ ಮಿ॥ ಜಾರ್ಜ್ ಹಂಟ್ ಎಂಬೊಬ್ಬ ಬೆಳ್ಳಿ ಕಸಬುಗಾರನು ತನ್ನ ಆಸ್ತಿಯಲ್ಲಿ ೩ ಲಕ್ಷ ರೂಪಾಯಿಯನ್ನೂ ಮಿ॥ ಹಾರ್ನಿಮನ್ ಎಂಬೊಬ್ಬ ಟೀಸೊಪ್ಪಿನ ವ್ಯಾಪಾರಸ್ಥನು ೬ ಲಕ್ಷ ರೂಪಾಯಿಯನ್ನೂ, ಮಿ॥ ಹಾರ್ಕಿನ್ಸ್ ಎಂಬೊಬ್ಬ ವರ್ತಕನು ೩ ಲಕ್ಷ ರೂಪಾಯಿಯನ್ನೂ ಧರ್ಮಕಾರ್ಯಗಳಿಗೆ ವಿನಿಯೋಗಿಸಬೇಕೆಂದು ಉಯಿಲು ಬರೆದಿದಾರೆ.

❖❖❖❖

ಜರ್ಮನ್ ಚಕ್ರವರ್ತಿಯವರು ಆರೋಗ್ಯ ದೃಢಕಾಯರಾಗಿದ್ದಾಗ್ಯೂ ಅವರ ಬಳಿ ಮಹಾ ಗಟ್ಟಿಗರಾದ ನಾಲ್ವರು ವೈದ್ಯರು ಸರ್ವದಾ ಇದ್ದೇ ಇರುತ್ತಾರೆ. ಅವರ ಪೈಕಿ ಒಬ್ಬ ಡಾಕ್ಟರು ಯಾವಾಗಲೂ ಅವರ ಮನೆಯಲ್ಲೇ ಕಾದು ಬಿದ್ದಿರುವನು. ಈ ವೈದ್ಯರು ದಿನಕ್ಕೆ ನಾಲ್ಕಾವರ್ತಿ ಚಕ್ರವರ್ತಿಯವರ ಕೈಯನ್ನು ನೋಡಿ ನಾಡೀ ಪರೀಕ್ಷೆ ಮಾಡುವರು; ಉಷ್ಣಾಂಶವನ್ನೂ ಪರೀಕ್ಷಿಸುತ್ತಾರೆ.

❖❖❖❖

ವಿಲಾಯತಿ ರಾಜ್ಯದ ಪ್ರಿನ್ಸ್ ಆಫ್ ವೇಲ್ಸ್‌ರವರು ಪತ್ನಿ ಪರಿವಾರ ಸಹಿತ ಕಳೆದ ೮ ನೇ ತಾರೀಖು ಬೆಳಿಗ್ಗೆ ಲಂಡನ್ ಪಟ್ಟಣವನ್ನು ತಲಪಿದರು. ಅವರ ಮಕ್ಕಳು ಜಹಜಿಗೆ ಹತ್ತಿ ಹೋಗಿ ಸಂತೋಷ ಪಡಿಸಿದರು. ಅವರನ್ನು ಎದುಗೊಳ್ಳುವುದಕ್ಕೆ ವಿಕ್ಟೋರಿಯಾ ಸ್ಟೇಷನ್ನಿನಲ್ಲಿ ಮೇಲಿನವರೂ ರಾಜನಗರದವರೂ ಬಹುಮಂದಿ ದೊಡ್ಡ ಮನುಷ್ಯರೂ ಕಾದಿದ್ದು ಅವರಿಗೆ ಸುಸ್ವಾಗತವನ್ನು ಬಯಸಿದರು.

❖❖❖❖

ಸರ್ವಿಯಾ ರಾಜ್ಯದಲ್ಲಿ ಸೈನ್ಯದ ಕೆಲವು ಉದ್ಯೋಗಿಗಳು ದೊರೆಯನ್ನೂ ರಾಣಿಯನ್ನೂ ಕೊಲ್ಲಿಸಿ ಬೇರೊಬ್ಬ ದೊರೆಯನ್ನು ನೇಮಿಸಿಕೊಂಡಿದಾರಷ್ಟೆ. ಈ ದೊರೆಯು ಮಂತ್ರಿಗಳು ದೊರೆಯನ್ನು ಕುರಿತು—ಅಂಥಾ ದುಷ್ಟ ಉದ್ಯೋಗಿಗಳನ್ನು ಕೆಲಸದಿಂದ ವಜಾಮಾಡಬೇಕೆಂದು ಕೇಳಿಕೊಂಡರು. ದೊರೆಯು ಹಾಗೆ ವಜಾ ಮಾಡಲಾಗುವುದಿಲ್ಲವೆಂದು ಹೇಳಿದ್ದರಿಂದ ಮಂತ್ರಿಗಳೆಲ್ಲಾ ಕೆಲಸಕ್ಕೆ ರಾಜೀನಾಮೆ ಕೊಟ್ಟಿದಾರೆ.

❖❖❖❖

ವಿಲಾಯತಿಗೆ ಸೇರಿದ ಬಕ್ಸ್ಲಿ ಹೀತ್ ಎಂಬ ಪಟ್ಟಣದಲ್ಲಿ ಅಣ್ಣತಮ್ಮಂದಿರಿಬ್ಬರೇ ೩೫ ವರುಷದಿಂದ ಒಂದು ಮನೆಯಲ್ಲಿದ್ದರು. ಅವರು ನೆರೆಹೊರೆಯವರ ಸಂಗಡ ಮಾತನಾಡಿದ ದಿನವೇ ಇಲ್ಲ. ಇವರಿಬ್ಬರೂ ಹಿಂದಿನ ವಾರ ವಿಕಕಾಲದಲ್ಲಿ ಕಾಲವಾದರು. ಸರ್ಕಾರದವರು ಅವರ ಮನೆಯನ್ನು ನುಗ್ಗಿ ಶೋಧನೆ ಮಾಡಿದಾಗ ಚೀಲ ಬಟ್ಟೆಬರೆಗಳ ಮಧ್ಯೆ ಒಂದೂವರೆ ಲಕ್ಷ ರೂಪಾಯಿ ಸಿಕ್ಕಿತು. ಇದು ಅವರಿಗೆ ಹ್ಯಾಗೆ ಯಾವಾಗ ಎಲ್ಲಿಂದ ಬಂದಿತೋ ತಿಳಿಯದೆ ಇದೆ.

❖❖❖❖

ಸ್ಟೇಯರ್, ಗ್ರೀನ್ ಎಂಬಿಬ್ಬರು ಭಾರೀ ಕಂಟ್ರಾಕ್ಟುದಾರರೆಂದು ನಟಿಸಿ ಸೆವೆನಾ ಎಂಬಲ್ಲಿ ಆಗುವ ನಿಲ್ದಾಣದ ಕಟ್ಟಡಗಳನ್ನು ಕಟ್ಟುವ ಕಂಟ್ರಾಕ್ಟು ವಹಿಸಿಕೊಂಡು, ಅದರಲ್ಲಿ ಸುಮಾರು ೧೮ ಲಕ್ಷ ರೂಪಾಯಿ ತನಕ ತಿಂದು ಹಾಕಿ ಗವರ್ನ್‌ಮೆಂಟಿಗೆ ದ್ರೋಹ ಮಾಡಿದರು. ಈ ಮೊಕದ್ದಮೆಯು ನಾಲ್ಕು ವರುಷಗಳಿಂದ ನಡೆಯುತ್ತಿದ್ದು ಕಡೆಗೆ ಅವರ ಮೇಲೆ ದ್ರೋಹದ ಅಪರಾಧ ರುಜುವಾತಾಯಿತು. ಅವರಿಗೆ ನಾಲ್ಕು ವರುಷ ಕಠಿಣ ಸಜೆಯನ್ನೂ ೧೮ ಲಕ್ಷ ರೂಪಾಯಿ ಜುಲ್ಮಾನೆಯನ್ನೂ ವಿಧಿಸಿರುತ್ತಾರೆ.

❖❖❖❖

ಕನಡಾ ಸಂಸ್ಥಾನಕ್ಕೆ ಸೇರಿದ ಯೂಕಾನ್ ಡಿಸ್ಟ್ರಿಕ್ಟಿನಲ್ಲಿ ಅಧಿಕಾರಿಗಳು ಕ್ರೆಟ್‌ಫೀಲ್ಡ್ ಎಂಬೊಬ್ಬ ಮಾಗಿಗರೆಯುವವನ ಕೂಡೆ ಕಂಟ್ರಾಕ್ಟು ಮಾಡಿಕೊಂಡಿದಾರೆ. ಅವನು ಮಳೆಯನ್ನು ಬರಮಾಡಿದರೆ ಅಧಿಕಾರಿಗಳು ಸರ್ಕಾರದಿಂದ ೩೦,೦೦೦ ರೂಪಾಯಿ ಪ್ರತಿಫಲ ಕೊಡುವುದಾಗಿ ವಾಗ್ದಾನ ಮಾಡಿರುವರು. ಮಳೆಯನ್ನು ಸುರಿಸುವುದು ಮನುಷ್ಯನಿಂದ ಸಾಧ್ಯದಲ್ಲಿ—ಮುಂದೆ ಹ್ಯಾಗೋ ಹೇಳಲಾರೆವು—ಸಾಧ್ಯವಲ್ಲವೆಂಬುವುದನ್ನು ಆ ಅಧಿಕಾರಿಗಳು ಗ್ರಹಿಸಲಾರದೆ ಹೋದವಲ್ಲಾ ಎಂದು ಯಾರೂ ವ್ಯಸನ ಪಡದಿರಲಾರರು.

❖❖❖❖

ಜರ್ಮನ್ ರಾಜ್ಯಕ್ಕೆ ಸೇರಿದ ಫಾರ್ಮೋಸಾ ದ್ವೀಪದಲ್ಲಿ ಹೋದ ತಿಂಗಳೂ ಆಚೇ ತಿಂಗಳೂ ಎರಡಾವರ್ತಿ ಭೂಕಂಪವಾಯಿತಷ್ಟೆ. ಮೊದಲನೆ ಭೂಕಂಪದ ಅನಾಹುತದಿಂದ ೧,೦೩೮ ಜನರು ಸತ್ತರು, ೨,೩೨೯ ಜನರಿಗೆ ಗಾಯಗಳಾದವು. ೫,೫೫೬ ಮನೆಮಠಗಳು ನಾಶವಾದವು, ೩,೩೮೩ ಮನೆಮಠಗಳು ಕಾಲು, ಅರ್ಧ, ಮುಕ್ಕಾಲುಪಾಲು ಬಿದ್ದುಹೋದವು. ಎರಡನೇ ಭೂಕಂಪದ ಅನಾಹುತದಿಂದ ೧೦ ಮಂದಿ ಸತ್ತರಾದರು; ೫೦ ಜನರಿಗೆ ಗಾಯಗಳಾದವು, ೧,೫೯೧ ಮನೆಮಠಗಳು ಹಾಳಾದವು ೭೮೯ ಮನೆಗಳು ವಾಸಕ್ಕೆ ಅಯೋಗ್ಯವಾದವು.

❖❖❖❖

ಅಫ್ಘಾನಿಸ್ಥಾನದ ಅಮೀರರು ರಾಜ್ಯಭಾರದ ಕೆಲಸ ಕಾರ್ಯಗಳಲ್ಲಿ ವಿಶೇಷ ಮನಸ್ಸಿಡುವಂತೆ ಕಾಣುವುದು. ಅವರು ಕೆಲಸದ ಗಲಾಟೆಯಲ್ಲಿ ಊಟ ಮಾಡುವುದನ್ನೇ ಮರೆತು, ಆಗಾಗ್ಗೆ ತಮ್ಮ ಆಸ್ಥಾನ ಸಾಮಾಜಿಕರನ್ನು "ನಾನು ಊಟ ಮಾಡಿದೇನೇ?" ಎಂದು ಕೇಳುವುದೂ ಇಲ್ಲವೆಂದರೆ ಹೋಗಿ ಭೋಜನ ಮಾಡುವುದೂ ಉಂಟು. ಅವರು ರಾತ್ರಿಯೆಲ್ಲಾ ಕೆಲಸ ಮಾಡುತ್ತಿದ್ದು ಬೆಳಿಗ್ಗೆ ೫—೬ ಗಂಟೆಗೆ ಹಾಸಿಗೆ ಮೇಲೆ ಮಲಗಿ ಮಧ್ಯಾಹ್ನ ೨ ಗಂಟೆ ತನಕ ನಿದ್ದೆಮಾಡುವರು. ಅವರ ಕಾವಲುದಾರರು ಅಮೀರರಿಗೋಸ್ಕರ ಅರಮನೆ ಬಾಗಿಲಲ್ಲಿ ಕಂದುರಿಗಳಿಗೆ ಜೇನು ಹಾಕಿ ರೊಟ್ಟಿ ಬುತ್ತಿಗಳನ್ನು ಕಟ್ಟಿ ಸರ್ವದಾ ಕಾದು ಬಿದ್ದಿರುತ್ತಾರೆ.

ಲಂಡನ್ ಪಟ್ಟಣದಲ್ಲಿ ಬೆಂಕಿಯನ್ನಾರಿಸುವುದಕ್ಕೆ ೧,೭೬೫ ಜನ ನೌಕರರಿದಾರೆ ೮೫ ಯಂತ್ರಗಳೂ ೩೧೮ ಕುದುರೆಗಳೂ ಇರುತ್ತವೆ. ಕಳೆದ ವರುಷ ಆ ಪಟ್ಟಣದಲ್ಲಿ ೩,೯೧೧ ಕಡೆ ಬೆಂಕಿ ಹತ್ತಿತು. ೧೦೦ ಜನರು ಬೆಂಕಿಯಲ್ಲಿ ಸಿಕ್ಕಿ ಸತ್ತರಾದರು. ಈ ಬೆಂಕಿಗಳ ಕಾರಣವನ್ನು ವಿಚಾರಿಸುವಲ್ಲಿ ಮಕ್ಕಳು ದೀಪದಕಡ್ಡಿ ಇಟ್ಟುಕೊಂಡು ಆಡುತ್ತಿದ್ದದರಿಂದ ೧೩೯ ಕಡೆಯಲ್ಲೂ, ಹುಡುಗರು ಬೆಂಕಿಯಲ್ಲಿ ಆಡುತ್ತಿದ್ದದರಿಂದ ೮೭ ಕಡೆಯಲ್ಲೂ, ಬಿಸಿಬೂದಿಯಿಂದ ೯೬ ಕಡೆಗಳಲ್ಲೂ, ಸುಣ್ಣಕಲ್ಲಿನ ಮೇಲೆ ಮಳೆ ಸುರಿದು ಅರಳಿದ್ದರಿಂದ ಅದರ ಸೆಕೆಗೆ ೫ ಕಡೆಗಳಲ್ಲೂ, ಚಿಟ್ಟು ಸೇದಿ ಎಸೆದದ್ದರಿಂದ ೧೮ ಕಡೆಗಳಲ್ಲೂ ಬೆಂಕಿ ಹುಟ್ಟಿತೆಂದು ಗೊತ್ತಾಯಿತು.

❖❖❖❖

ಕನಡಾ ಎಂಬ ಇಂಗ್ಲಿಷ್ ರಾಜ್ಯಾಂಗದಲ್ಲಿ ಪಾರ್ಲಿಮೆಂಟ್ ಮೆಂಬರುಗಳು ಎಡ್ವರ್ಡ್ ಮಹಾರಾಜ ಚಕ್ರವರ್ತಿಯವರನ್ನೂ ಮಹಾರಾಣಿಯವರನ್ನೂ ಕನಡಾವಿಗೆ ಕರೆಸಿಕೊಳ್ಳಬೇಕೆಂದು ಆಲೋಚನೆ ಮಾಡಿದರು. ರಾಜದಂಪತಿಗಳಿಂದ ಕ್ವಿಬೆಕ್ಕಿನ ಸೇತುವೆಯನ್ನು ಪ್ರತಿಷ್ಠೆ ಮಾಡಿಸಬೇಕೆಂಬುದೇ ಅವರ ಉದ್ದೇಶವೆಂದು ಕಾಣುತ್ತದೆ. ಕೆಲವು ಮೆಂಬರುಗಳು ಈ ಉದ್ದೇಶವನ್ನು ಅವರಿಗೆ ಅರಿಕೆ ಮಾಡಬೇಕಾದದ್ದಿಲ್ಲವೆಂತಲೂ, ರಾಜದಂಪತಿಗಳು ಈ ರಾಜ್ಯಾಂಗಕ್ಕೆ ಬಂದಾವರ್ತಿ ದಯಮಾಡಿ ಭೇಟಿ ಕೊಡಬೇಕೆಂದು ವಿಜ್ಞಾಪನೆ ಮಾಡಿಕೊಳ್ಳಬೇಕೆಂತಲೂ ಅಭಿಪ್ರಾಯಪಟ್ಟರು. ಕಡೆಗೆ ಅದೇ ಪ್ರಕಾರ ಆ ಪಾರ್ಲಿಮೆಂಟಿನವರು ಒಂದು ವಿಜ್ಞಾಪನೆಯನ್ನು ಕಳುಹಿಸಿರುತ್ತಾರೆ. ರಾಜದಂಪತಿಗಳು ವಿಲಾಯತಿಯನ್ನು ಬಿಟ್ಟು ಹೊರಡುವುದು ಸಂಶಯಾಸ್ಪದವಾಗಿರುವುದು.

ಬಾತ್ಮಿದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವ ನಿಗಾ ಕೊಡಲಾರೆವು. ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನು ಬರೆದು ತಿಳಿಸತಕ್ಕದ್ದು ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು, ಇಂಥವುಗಳಿಗೆ ನಾವು ನಿಗಾ ಕೊಡಲಾರೆವು.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಎಡಿ.

ಸ್ತೋತ್ರಿಶಂಕರಪ್ಪ, ಅರಸೀಕೆರೆ—ನೀವು ಬರೆದಿರುವ ವಿಚಾರವು ಹೊಳೇನರಸೀಪುರದ ಬಾತ್ಮಿದಾರರು ಅಪೇಕ್ಷಿಸುವ ಸಂಗತಿಗೆ ಸಂಬಂಧಪಟ್ಟದ್ದಾಗಿಲ್ಲ. ಹಾಗೆ ಇದ್ದಪಕ್ಷದಲ್ಲಿ ನೀವು ಅವರಿಗೆ ನೇರಾ ಬರೆದು ತಿಳಿಸಬಹುದು. ನಾವು ನಿಮ್ಮ ಬಾತ್ಮಿಯನ್ನು ಪ್ರಕಟಿಸಬೇಕಾದ ಆವಶ್ಯಕತೆಯಿಲ್ಲ.

ಯೋಗಿಗಳ ವಿಚಾರ, ಕೊಳ್ಳೇಗಾಲ, ಏಪ್ರಿಲ್ ..., ಮದ್ದಗಿರಿ ತಾ, ಕ್ಲೀನಲ್, ಚಿಕ್ಕಬಳ್ಳಾಪುರ, ಬಿ ಎಸ್, ಆನೇಕಲ್ಲು; ಭೋಗ..., ಚಿತ್ರದುರ್ಗ, ಆರ್. ಆರ್. ಗೊಟ್ಟಿಗೆರೆ—ಈ ಬಾತ್ಮಿಗಳು ಪ್ರಕಟನೆಗೆ ಅರ್ಹವಾದ ವರ್ತಮಾನಗಳೇನೂ ಇಲ್ಲ.

ಬಿ ಕೆ ಎಸ್, ಬೇಲೂರು—ನೀವು ಬಾತ್ಮಿಯನ್ನು ವಿವರವಾಗಿಯೂ ಸಂಕ್ಷೇಪವಾಗಿಯೂ ಬರೆಯುವುದಿಲ್ಲ. ಬರೀ ವರ್ತಮಾನಗಳನ್ನು ಬರೆದಲ್ಲಿ ಪ್ರಕಟಿಸಬಹುದು.

ಹಾಸನದ ತಾಲ್ಲೂಕ್ ಗ್ರಾಮದ ಪೋಲೀಸ್ ಶೇಕದಾರರು ೧೦೦೫ ವರುಷಗಳಿಂದ ಅಲ್ಲೇ ಇದ್ದುಕೊಂಡಿರುತ್ತಾರೆಂತಲೂ, ಅನೇಕರಿಗೆ ತೊಂದರೆಯುಂಟಾಗಿದೆಯೆಂತಲೂ, ಶೇಕದಾರರುಗಳನ್ನು ಸರ್ಕಾರದವರು ಮೂರು ವರುಷಕ್ಕಾದರೂ ಒಂದು ಸಲ ವರ್ಗಾವರ್ಗಿ ಮಾಡುತ್ತಿರಬೇಕೆಂತಲೂ ಒಬ್ಬ ಬಾತ್ಮಿದಾರರು ಬರೆಯುತ್ತಾರೆ.

ಪ್ರತ್ಯಕ್ಷದರ್ಶಿ, ಕೊಡಿಗೇನಹಳ್ಳಿ, ಮದ್ದಗಿರಿ ತಾ—ನೀವು ಹೇಳುವ ವಿಷಯ ಫಿರ್ಯಾದಾಗಿದೆಯಷ್ಟೆ. ಮೊಕದ್ದಮೆ ಇತ್ಯರ್ಥವಾದ ಮೇಲೆ ತಿಳಿಸಿ.
—ಎಡಿ.]

ಕರೆಸ್‌ಪಾಂಡೆನ್ಸ್.

ಬಡಮಾಸ್ತರುಗಳ ಕಷ್ಟನಿವಾರಣೋಪಾಯ.

ಅಯ್ಯಾ,

ಈ ಬಡಮಾಸ್ತರುಗಳಿಗೆ ಸರ್ಕಾರದವರು ದಯವಿಟ್ಟು ಪಾಲಿಸುತ್ತಿರುವ ೬—೧೦ ರೂಪಾಯಿನಿಂದ ಸುಭಿಕ್ಷಕಾಲದಲ್ಲಿಯೇ ಜೀವನ ಮಾಡುವದು ಕಷ್ಟವಾಗಿರುವಲ್ಲಿ ಇಂಥಾ ದುರ್ಭಿಕ್ಷಕಾಲದಲ್ಲಿ ಇವರಲ್ಲಿ ತುಂಬಾ ಸಂಸಾರಿಗಳು ಹೊಟ್ಟೆ ತುಂಬಾ ತಿನ್ನುವದಕ್ಕೆ ಕೂಡ ಗತಿಯಿಲ್ಲದೆ ಒಂದು ಹೊತ್ತು ತಿಂದು ಮತ್ತೊಂದು ಹೊತ್ತು ಉಪವಾಸವಾಗಿಯೋ ಅಥವಾ ಎರಡು ಹೊತ್ತೂ ಅರೆಹೊಟ್ಟೆಯಾಗಿಯೋ ತಿಂದು ಬಹಳ ಕಷ್ಟದಿಂದ ಜೀವನ ಮಾಡುತ್ತಿರುವುದು ಎಲ್ಲರಿಗೂ ತಿಳಿದೇ ಇದೆ. ಈ ಅವಸ್ಥೆಯಲ್ಲಿ ಕಾಲಕ್ಷೇಪ ಮಾಡಲಾರದೆ ಅನೇಕ ಬಡ ಮಾಸ್ತರುಗಳೂ ಇದನ್ನು ನೋಡಿದ ಕರುಣಿಗಳೂ ವರ್ತಮಾನಪತ್ರಿಕೆಗಳಲ್ಲಿ ಪ್ರಕಟಿಸಿ ನಮ್ಮ ಸರ್ಕಾರದವರಿಗೆ ಅನೇಕ ವೇಳೆ ಅರಿಕೆಮಾಡಿಕೊಂಡಾಗ್ಯೂ ಈ ವರೆಗೂ ಅವರಿಗೆ ದಯಬರಲಿಲ್ಲ. ಈಗಿನ ಹೊಸ ಮಂತ್ರಿವರ್ಯರಾದ ಶ್ರೀಮದ್ವೀಪಿ ಮಾಧವರಾಯರು ತಪ್ಪದೆ ದಿವಾನಗಿರಿಯಲ್ಲಿ ನಮ್ಮ ಕಷ್ಟವನ್ನು ನಿವಾರಣೆಮಾಡುವರೆಂದು ಆಲೋಚಿಸಿ ಪತ್ರಿಕೆಗಳಲ್ಲಿ ಹಾಕಿಸುತ್ತಿರಬಹುದು. ಇದು ಒಳ್ಳೇ ಪ್ರಯತ್ನವೇ ಸರಿ. ಆದರೆ ಇವರು ಮತ್ತೊಂದು ಸಂಗತಿಯನ್ನು ಮರೆತಿರುವಂತೆ ಕಾಣುತ್ತೆ. ಅದೇನೆಂದರೆ—ದೊಡ್ಡ ಅಧಿಕಾರಿಗಳಿಂದ ತಮ್ಮ ಕಷ್ಟವು ನಿವಾರಣೆಯಾಗಬೇಕಿದ್ದರೆ "ಹೊಳೇತನಕ ಓಟ್ಟ ಧೊರೇತನಕ ದೂರು" ಎಂಬಂತೆ ನಮ್ಮ ಶ್ರೀಮನ್ಮಹಾರಾಜಾಸಾಹೆಬ್ ಬಹದ್ದೂರ್ ಮಹಾಸ್ವಾಮಿಗಳವರ ಚರಣಸನ್ನಿಧಾನಕ್ಕೂ ಮಂತ್ರಿವರ್ಯರಾದ ಶ್ರೀಮತ್ ವಿ. ಪಿ. ಮಾಧವರಾಯರವರ ಸನ್ನಿಧಾನಕ್ಕೂ ಈ ಸಂಸ್ಥಾ...

ಬದ ಪ್ರತಿ ಒಂದು ತಾಲ್ಲೂಕಿನ ಬಡ ಮಾಸ್ಟರುಗಳೂ ಹೋಬಳಿ ಸ್ಕೂಲ್ ಮಾಸ್ಟರುಗಳೂ ಸೇರಿ ತಮ್ಮ ಅತ್ಯಂತ ಕಷ್ಟವಾದ ಅಹನ್ಯಹನಿ ಕಾಲಕ್ಷೇಪವನ್ನು ನಮೂದಿಸಿ, ಒಂದೊಂದು ಅರ್ಜಿ ಮೇರೆ ಬರೆದುಕೊಂಡರೆ ಸಕಲ ಪ್ರಜೆಗಳನ್ನೂ ಧರ್ಮದಿಂದ ಕಾಪಾಡತಕ್ಕ ಪ್ರತ್ಯಕ್ಷ ದೇವರಾದ ನಮ್ಮ ಮಹಾಸ್ವಾಮಿಯವರು ತಮ್ಮ ಸಂಸ್ಥಾನದ ಏಳಿಗೆಗೆ ಮುಖ್ಯಾಂಗವಾದ ವಿದ್ಯಾಭ್ಯಾಸದ ಇಲಾಖೆಯ ಈ ಬಡ ಮಾಸ್ಟರುಗಳ ಆಶಾಪಾಶಗಳನ್ನೂ ತಮ್ಮ ಘನವಾದ ಚಿತ್ತದಲ್ಲಿ ತಂದು, ಈ ಬಡ ಮಾಸ್ಟರುಗಳಿಗೆ ಕಲವು ಬಡ್ತಿ ಮಾಡಿ ಇವರನ್ನು ಉದ್ಧಾರಮಾಡಿ ಕಾಪಾಡದೆ ಎಂದಿಗೂ ಬಿಡುವದಿಲ್ಲ ಈ ಬಡ ಮಾಸ್ಟರುಗಳು ಈ ರೀತಿ ಐಕಮತ್ಯದಿಂದ ಸೇರಿ ಪ್ರಯತ್ನಮಾಡಿದರೆ ಇವರ ಕಷ್ಟ ನಿವಾರಣೆಯಾಗುವದರಲ್ಲಿ ಸ್ವಲ್ಪವೂ ಸಂಶಯವಿಲ್ಲ. ಇವರ ಗೋಳಾಟವನ್ನು ನೋಡಲಾರದೆ ನಾನು ಈ ಮೂಲಕ ಸೂಚಿಸಿದೇನೆ. ಬಡ ಮಾಸ್ಟರುಗಳು ಜಾಗ್ರತೆಮಾತಲಿ.

ಬಂಧಿತನಾದಿ.

ಬಡ ಮಾಸ್ಟರುಗಳ ಸಂಬಳ.

ಅಯ್ಯಾ,

ಕಳೆದ ಏಪ್ರೆಲ್ ತಾ. ೨೬ ನೆ ಪತ್ರಿಕೆಯಲ್ಲಿ ಬಡ ಮಾಸ್ಟರ ಕೆಲಸಿನ ವಿಚಾರ ಯಾರೋ ತಿಳಿಸಿದ್ದರಷ್ಟೆ. ಇದರ ವಿಷಯವಾಗಿ ಮಾತ್ರ ಈ ಇಲಾಖಾ ದೊಡ್ಡ ಮನುಷ್ಯರಿಂದ ಏರ್ಪಾಡು ನಡೆಯುತ್ತಾ ಇದ್ದ ಒಂದು ಸಂಗತಿ ತಿಳಿದದ್ದರಿಂದ ನಾನು ತಿಳಿಸುತ್ತೇನೆ ನಾಳೆ ಜಾಲ್ಯೆಯಿಂದ ಎ ವಿ. ಸ್ಕೂಲಿನ ೭ ರೂಪಾಯಿ ತಲಬಿನ ಮಾಸ್ಟರಿಗೆಲ್ಲಾ ೧೦ ರೂಪಾಯಿ ಆಗುತ್ತೆಂತಲೂ, ಅವರಿಗೆಲ್ಲಾ ಬಡ್ತಿ ಕೊಟ್ಟು ಉಳಿದ ಹಣವನ್ನು ಯೋಚಿಸಿ ಲಭ್ಯವಿದ್ದ ಹೋಬಳಿ ಮಾಸ್ಟರಿಗೆ ಕೊಡುತ್ತಾರಾಗಿಯೂ ವರ್ತಮಾನ ತಿಳಿಯಿತು. ಇದು ನಿಜವಾಗಿರುವ ಭಾಗದಲ್ಲಿ ಹೋಬಳಿ ಮಾಸ್ಟರ ಸುಖದುಃಖ ವಿಚಾರಿಸತಕ್ಕವರೇ ಇಲ್ಲವೆಂತಲೂ ಮರ್ಯಾದೆ ವಿಚಾರವೆಂತೂ ಹೊಸದಾಗಿ ಹೇಳಬೇಕಾದದ್ದು ಇಲ್ಲವಷ್ಟೆ. ಆದರೆ ಮೇಲ್ಪಟ್ಟ ಅಧಿಕಾರಿಗಳು ಎಂದಿಗೂ ಈ ರೀತಿ ಪಕ್ಷಪಾತ ಮಾಡಲಾರರು, ಪರಂತು ಎಲ್ಲರಿಗೂ ಈ ಹಿಂದೆ ೫ ರೂಪಾಯಿನಿಂದ ೭ಕ್ಕೆ ಹೇಗೆ ಬಡ್ತಿ ದಯಪಾಲಿಸಿದರೋ ಆದರಂತೆ ಈಗಲೂ ೭ ರಿಂದ ೧೦ಕ್ಕೆ ಬಡ್ತಿ ದಯಪಾಲಿಸಿ ಬಡ ಮಾಸ್ಟರನ್ನು ಉದ್ಧಾರ ಮಾಡಲೆಂದು ಪ್ರಾರ್ಥಿಸುತ್ತೇನೆ

ವಿದ್ಯಾಭಿಮಾನಿ.

ಬೇಪಾರಿ ದೇವರ ಪೂಜೆ.

ಅಯ್ಯಾ,

ರಾಯಚೂರುವೆಂಬ ಪಟ್ಟಣದ ಸಮೀಪದಲ್ಲಿ ನೆಲಹಾಳುವೆಂಬ ಗ್ರಾಮದ ಒಳಗೆ ಬೇಪಾರಿ ದೇವರ ಪೂಜೆಯನ್ನು ಕುರಿತು ಇಬ್ಬರು ಮನುಷ್ಯರು ಒಂದು ಉಪಾಯವನ್ನು ಮಾಡಿದರು. ಅದು ಹ್ಯಾಗೆಂದರೆ ಇಬ್ಬರೊಳಗೆ ಒಬ್ಬನು ಚಿಲ್ಲರೆ ಅಂಗಡಿಯನ್ನೂ ಮತ್ತೊಬ್ಬನು ದೇವರ ಮಹಿಮೆಯನ್ನು ಹೇಳುವದಕ್ಕೂ ಆರಂಭಮಾಡಿದರು. ಗ್ರಾಮ ಗ್ರಾಮದ ಸುತ್ತಲಿರುವ ಮನುಷ್ಯರಿಗೆ ಸಕಲ ರೋಗಗಳನ್ನು ನಿರ್ಮೂಲವನ್ನು ಮಾಡಿ ಸಂಪೂರ್ಣ ಆರೋಗ್ಯವನ್ನು ಪಾಲಿಸುತ್ತೇನೆಂಬ ಡಂಗೂರವನ್ನು ಹಾಕಿಸಿದರು ಎಲ್ಲರೂ ಕೂಡಿಬಂದರು ಯಾವ ರೋಗ ಮನುಷ್ಯನಿಗೆ ಇದ್ದರೂ ಆ ರೋಗಕ್ಕೆ ತಕ್ಕ ಹಾಗೆ ದೇವರು ಹೇಳುವನು. ತಮ್ಮ ಚಿಲ್ಲರೆ ಅಂಗಡಿಗೆ ಹೋಗಿ ಫಲಾನಿ ಸಾಮಾನುಗಳು ತೊಂಡುತರಬೇಕೆಂದು ಹೇಳಿದರೆ ಅದೇ ಅಂಗಡಿಯಲ್ಲಿ ಬಂದಜನರು ವ್ಯಾಪಾರ ಮಾಡುವರು. ೧ ದಿನಕ್ಕೆ ೨೦—೩೦ ರೂಪಾಯಿಗಳ ವ್ಯಾಪಾರ ಮಾಡುವರು ಈ ವರ್ತಮಾನವು ಒಬ್ಬಮನುಷ್ಯ ಕೇಳಿ ಚಿನ್ನಮನಸ್ಸಿನ ಬೇವ ಹಾಗೆ ದೇವರು ಹೇಳುವ ಮನುಷ್ಯನಿಗೆ ಹೊಡೆದರು. ಜನರಿಗೆ ಮೋಸಮಾಡಿ ಸುಳ್ಳುದೇವರು ಇವರೇ ನೋಡಿರಿ ನೋಡಿರಿ ಎಂದು ಬೀಳ ಗಡಿಬಿಡಿಮಾಡಿ ಕೇಸಿಗೆ ತರಲ್ಪಟ್ಟರು

ಆರ್ ಜೆ. ಎಫ್

ದಾನ ಮಾಡುವುದಕ್ಕೆ ಇದೇ ಸಮಯ.

ಅಯ್ಯಾ,

ಮೈಸೂರು ಪಟ್ಟಣದಲ್ಲಿಯೂ ಈ ದೇಶದಲ್ಲಿಯೂ ಇರುವಂಥ ಧರ್ಮಿಷ್ಠರೂ ಪರೋಪಕಾರಿಗಳೂ ಆದ ಮಾನ್ಯರಿಗೆ ಪ್ರಕಟಪಡಿಸುವದು ಏನಾಗಿ—

ನಾವು ಮೈಸೂರು ಪಟ್ಟಣದಲ್ಲಿಯೂ ಈ ಡಿಸ್ಟ್ರಿಕ್ಟಿನಲ್ಲಿಯೂ ರೋಗಾದಿ ಉಪದ್ರವಗಳಿಂದ ಪ್ರಾಪ್ತವಾಗುತ್ತಲಿರುವ ಎಲ್ಲಾ ಕೋಮಿನ ಹೆಂಗಸರಿಗೂ ಮಕ್ಕಳಿಗೂ ಪ್ರಯೋಜನವಾಗಿರುವ ಹಾಗೆ ಒಂದು ಭಾರಿ ಆಸ್ಪತ್ರೆಯನ್ನು ಕಟ್ಟಿಸುತ್ತಲಿರುವದು ಸಮಸ್ತರಿಗೂ ತಿಳಿದಿದೆಯಷ್ಟೆ. ಈ ದೊಡ್ಡ ಕಟ್ಟಡಕ್ಕಾಗಿ ಒಂದು ಲಕ್ಷ ರೂಪಾಯಿಗಿಂತಲೂ ಹೆಚ್ಚಾಗಿ ಬೇಕಾಗಿದೆ. ಈ ಹಣದಲ್ಲಿ ಘನವನ್ನು ಹೊಂದಿದ ನಮ್ಮ ಮಹಾರಾಜಾ ಸಾಹೇಬರವರ ಸರ್ಕಾರದವರು ನಾಲ್ಕರಲ್ಲಿ ಒಂದು ಭಾಗವನ್ನು ಕೊಡುವದಾಗಿ ವಾಗ್ದಾನಮಾಡಿದಾರೆ ಬಾಕಿ ಮೂರು ಭಾಗದ ಮೊಬಲಗನ್ನು ಧರ್ಮಿಷ್ಠರೂ ಪರೋಪಕಾರಿಗಳೂ ಆಗಿರುವ ನಮ್ಮ ಸನ್ಮಿತ್ರರಿಂದ ವಸೂಲ್ ಮಾಡಬೇಕಾಗಿದೆ ಅಲ್ಲದೆ ಆಸ್ಪತ್ರೆಯಲ್ಲಿ ಔಷಧ ವಗೈರೆಗಳಿಗಾಗಿ ಪ್ರತಿ ತಿಂಗಳೂ ಮುಟ್ಟುವ ಖರ್ಚು ಎಂಟು ನೂರು ರೂಪಾಯಿಗಿಂತಲೂ ಕಡಿಮೆಯಾಗಲಾರದು ದೇಶದಲ್ಲಿ ಶ್ರಮೆಪಡುವವರ ಕಷ್ಟಗಳನ್ನು ಪರಿಹರಿಸುವದಕ್ಕಿಂತ ಶ್ರೇಷ್ಠವಾದ ಧರ್ಮಕ್ರಿಯೆ ಮತ್ತಾವದೂ ಇಲ್ಲವೆಂಬುದನ್ನು ಸರ್ವರೂ ಒಪ್ಪಿಕೊಳ್ಳುವರು ಆದದರಿಂದ ಈ ಘನವಾದ ಕೆಲಸಕ್ಕಾಗಿ ಧರ್ಮಿಷ್ಠರು ಕೊಡುವಂಥ ಹಣವು ಕೃತಜ್ಞತಾಪೂರ್ವಕವಾಗಿ ಸ್ವೀಕರಿಸಲ್ಪಡುವದು. ಮತ್ತು ಆಸ್ಪತ್ರೆಯ ಔಷಧ ವಗೈರೆ ಖರ್ಚುಗಳಿಗಾಗಿ ತಿಂಗಳು ತಿಂಗಳಿಗೂ ಕ್ರಮವಾಗಿ ಕೊಡಲ್ಪಡುವ ಕಾಣಿಕೆಗಳು ಅತ್ಯಾದರದಿಂದ ವಂದನಾಪೂರ್ವಕವಾಗಿ ಸ್ವೀಕರಿಸಲ್ಪಡುವವು.

ನಿಮ್ಮ ವಿಧೇಯ

ಮೈಸೂರು. ಜೆ. ಹಮ್ಮ್ಯ. ಸಾತೆ.

ಸಿಡುಬು ಹಾಕಿದ ಮಕ್ಕಳೊ, ಅವರಿಗೆ ಮಾಡತಕ್ಕ ಚಿಕಿತ್ಸೆಯೂ.

ಅಯ್ಯಾ,

ಗ್ರಾಮಾಂತ್ರಗಳಲ್ಲಿ ಅನೇಕರು ತಮ್ಮ ಮಕ್ಕಳಿಗೆ ದೇವೀ ಹಾಕಿಸುತ್ತಾರೆ. ಹಾಕಿಸಿದ ನಂತರ ಮುಂದೆ ಯಾವ ರೀತಿ ಆ ಮಗುವನ್ನು ಕಾಪಾಡಬೇಕೆಂದು ಕೇಳತಕ್ಕದ್ದು ಜನಗಳ ಕರ್ತವ್ಯವಾಗಿದೆ. ಹೀಗೆ ಕೇಳಿದ್ದಕ್ಕೆ ಸಮುತ್ತರವನ್ನು ಅಂದರೆ, ನೀರು ಹಾಕಬೇಕಾದ ವಿಷಯ, ಜ್ವರ ಬರತಕ್ಕ ವಿಷಯ, ಹಾಲು ತುಂಬತಕ್ಕ ವಿಧಾನ, ಇತ್ಯಾದಿ ಕಾರಣಗಳನ್ನೆಲ್ಲಾ ಹೇಳುವದು ವ್ಯಾಕ್ಸಿನೇಟರುಗಳ ಕರ್ತವ್ಯವಾಗಿದೆ. ಅನೇಕ ಜನಗಳು ಈ ಸಂಗತಿಗಳನ್ನು ಈ ವ್ಯಾಕ್ಸಿನೇಟರಿಂದ ತಿಳುಕೊಂಡರೂ ಕೂಡ ಅವರು ಹೇಳಿದಂತೆ ಮಾಡುವದು ದೊಡ್ಡಮ್ಮನಿಗೆ ಅವಮಾನಕರವೆಂದೂ, ತಾವು ಮಾಡುವದು ಶಾಂತಿಕರವೆಂದೂ ತಿಳಿದು ದೇವಿ ಹಾಕಿದ ಗುರ್ತುಗಳಲ್ಲಿ ಹಾಲು ತುಂಬುವ ಸಮಯದಲ್ಲಿ ಗುರ್ತುಗಳ ಮೇಲೆ ಬೇವಿನಸೊಪ್ಪಿನ ಪುಡಿ, ನಿಂಬೇ ಎಲೆಯ ಪುಡಿ, ಬೂದಿ ಪುಡಿ, ಸುಣ್ಣದ ಪುಡಿ, ಅರಿಶಿನದ ಪುಡಿ, ಬೆಣ್ಣೆಯನ್ನು ಹಾಸಿ ಆ ಗುರ್ತುಗಳ ಮೇಲೆ ಬಿಡುವುದು ಇತ್ಯಾದಿಗಳನ್ನು ಹಾಕುತ್ತಾರೆ ಈ ಜನಗಳಿಗೆ ಮೇಲ್ಕಂಡವುಗಳನ್ನು ಉಪಯೋಗಿಸದಿರುವದು ಚೆನ್ನಾಗಿ ತಿಳಿದಿದ್ದರೂ ಇವನ್ನು ಮಾತುಮವಕ್ಕೆ ಇಂಥವರೇ ಮಾಡಬೇಕೆಂದೂ, ಹೀಗೆಯೇ ನಡಸಬೇಕೆಂದೂ ತಿಳಿದುಕೊಂಡಿರುವರು. ಇವನ್ನು ಉಪಯೋಗಿಸುವ ವಿಧಾನವು ಇವರಿಗೆ ತಿಳಿದಿದೆಯೋ ಹೊರತು ಅದರಿಂದಾಗುವ ಅನಾಹುತವು ಇಷ್ಟರಿಗೂ ತಿಳಿಯದು. ಇದರಿಂದ ಕೆಲವರಿಗೆ ಏನೂ ಆಗದಿದ್ದರೂ ಮೇಲ್ಕಂಡವುಗಳ ಕೆಟ್ಟಸಾರವು ಆ ಗಾಯಗಳಲ್ಲಿ ತುಂಬಿರುವ ಹಾಲಿನ ಗುಣವನ್ನು ಕೆಡಿಸಿ, ಗುರ್ತುಗಳನ್ನು ಹುಣ್ಣಾಗುವ ರೀತಿಯಲ್ಲಿಯೂ, ವಿಶೇಷವಾದ ನೋವಿನಿಂದ ಕೂಡಿದವುಗಳಾಗಿಯೂ ಆಗುತ್ತವಲ್ಲದೆ ಒಂದೊಂದು ವೇಳೆ ಕೈಯನ್ನೇ ಮರ್ಬಲಸ್ಥಿತಿಗೆ ಬರುವಂತೆ ಮಾಡುವದು ಮತ್ತು ಇವುಗಳಿಂದ ಮಕ್ಕಳು ಸಹಿಸಲಸಾಧ್ಯವಾದ ಕಷ್ಟಕ್ಕೆ ಗುರಿಯಾಗುವರು. ಮೇಲ್ಕಂಡ ಪುಡಿಗಳಲ್ಲಿ ಕೆಂಚಿತ್ತಾದರೂ ಗುಣವಾಗದಿದ್ದರೂ ಅಯ್ಯೋ ಪಾಪ! ಆ ಎಳೆಕೂಸುಗಳಿಗೆ ಉಪಯೋಗಿಸಿ, ವ್ಯತ್ಯಸ್ತರೂಪವಾದ ಯಾತನೆಗೆ ಗುರಿಮಾಡುವ ನಮ್ಮ ಜನರ ಸೌಖ್ಯವೆಷ್ಟಿರಬಹುದು!

ವಾಚಕಮಹಾಶಯರೇ. ನೀವಾದರೂ ನಿಮ್ಮ ನಿಮ್ಮ ಗ್ರಾಮಗಳಲ್ಲಿನ ಜನಗಳಿಗೆ ವ್ಯಾಕ್ಸಿನೇಷನ್ ಮಾಡಿದಾಗ್ಗೆ ಈ ರೀತಿ ಮಾಡಬಾರದೆಂದೂ. ವಿಶೇಷ ಸಹಿಸಲಶಕ್ಯವಾದ ಬಾಧೆಯುಂಟಾದಲ್ಲಿ ವ್ಯಾಕ್ಸಿನೇಟರಿಗೆ ತಿಳಿಸಿ, ಅವರು ಹೇಳಿದಂತೆ ಮಾಡಬೇಕೆಂದೂ ತಿಳಿಸಿ ಆ ಎಳೆಕೂಸುಗಳ ಕಷ್ಟನಿವಾರಣೆ ಮಾಡೀರೆಂದು ನಂಬಿರುತ್ತೇನೆ.

ಬೆಂಗಳೂರು ದಂಡು, ಬಿ ಆರ್ ಗೋವಿಂದರಾಜು,

[illegible] ವ್ಯಾಕ್ಸಿನೇಟರ್

ಮೈಸೂರು ಗೆಜೆಟ್ ಸಂಗ್ರಹ.

ಆ ಎಕ್ಸ್ಟ್ರಾ ಅ! ಕಮಿಷನರ್ ಮೆ|| ಟಿ ಕೆ ಸುಂದರರಾಜೈಯಂಗಾರ್ರನ್ನು ಕೋಲಾರದಿಂದ ಹಾಸನಡಿಸ್ಟ್ರಿಕ್ಟ್ ಖಜಾನಾ ಛಾರ್ಜಿಗೆ ವರ್ಗಮಾಡಿದೆ

ಗುಂಡ್ಲುಪೇಟೆ ತಾಲ್ಲೂಕ್ ಅಮಲ್ದಾರ್ ಮೆ|| ಎ ಕೃಷ್ಣೇ ಅರಸಿನವರಿಗೆ ಡಿಸೆಂಬರ್ ೪ ರಿಂದ ೧೩ ದಿನಗಳ ಫರ್ಲೋ ರಜಾ ಕೊಟ್ಟಿತ್ತು.

ಮೈಸೂರು ಮಹಾರಾಜಾ ಕಾಲೇಜ್ಜಿನ ಗಣಿತ ವಿದ್ಯಾಬೋಧಕರನ್ನಾಗಿ ವರ್ಗಮಾಡಿರುವ ಮೆ|| ಟಿ. ಆರ್. ವೆಂಕಟಸ್ವಾಮಿನಾಯ್ಡುಯವರಿಗೆ ಮಾರ್ಚಿ ೨೩ ರಿಂದ ಮೂರು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಸಂಸ್ಥಾನದ ಹುಜೂರು ಖಜಾನಾ ಆಫೀಸರಾದ ಮೆ|| ಬಿ. ಗೋಪಾಲೈಯ್ಯಂಗಾರ್ರಿಗೆ ಅರ್ಧ ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಕೋಲಾರದ ಡಿಸ್ಟ್ರಿಕ್ಟ್ ಸಬ್ ಪ್ರೋಟೆಂ ಅ|| ಡೆಪ್ಯುಟಿ ಕಮಿಷನರ್ ಮೆ ಸಿ ಶ್ರೀಕಂಠೇಶ್ವರ ಐಯ್ಯರವರನ್ನು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಾಗಿ ನೇಮಿಸಿದೆ

ಮುಂದೆ ಹೇಳುವ ಡೆಪ್ಯುಟಿ ಇನ್ಸ್ಪೆಕ್ಟರುಗಳ ವರ್ಗಾವರ್ಗಿ ಹುಕುಂ ಮಾಡಲ್ಪಟ್ಟಿದೆ:—

೧. ಮೆ|| ಎಂ. ರಾಮಸ್ವಾಮೈಯ್ಯನವರನ್ನು ತುಂಕೂರಿನಿಂದ ಮೈಸೂರಿಗೆ.

೨. ಮೆ|| ಎಸ್ ರಂಗಾಚಾರ್ಯರವರನ್ನು ಕೋಲಾರದಿಂದ ತುಂಕೂರಿಗೆ.

೩. ಮೆ|| ಎಸ್. ಗೋಪಾಲರಾಯರನ್ನು ಮೈಸೂರಿನಿಂದ ಕೋಲಾರಕ್ಕೆ.

೪. ಲೋಕಲ್ ಪರೀಕ್ಷೆಗಳ ಆಫಿಸ್ ಮ್ಯಾನೇಜರ್ ಮೆ|| ಎಚ್. ಎ. ವೆಂಕಟರಮಣೈಯ್ಯನವರು ಕಡೂರ್ ಡಿಸ್ಟ್ರಿಕ್ಟಿನ ಡೆಪ್ಯುಟಿ ಇನ್ಸ್ಪೆಕ್ಟರಾಗಿರತಕ್ಕದ್ದು.

ಮೆ|| ಟಿ. ಎಸ್ ನಂಜಪ್ಪನವರು ಮೈಸೂರು ಡಿಸ್ಟ್ರಿಕ್ಟಿನ ಮೆಡಿಕಲ್ ಮತ್ತು ಸ್ಯಾನಿಟರಿ ಆಫಿಸರಾಗಿಯೂ ಮೈಸೂರ್ ಜೈಲಿನ ಸೂಪರಿಂಟೆಂಡೆಂಟರಾಗಿಯೂ ಬದಲಿ ನೋಡತಕ್ಕದ್ದು.

ಮೆ|| ಪಿ ಪಲ್ಲುಯವರು ಮೆ|| ಟಿ. ಎಸ್. ನಂಜಪ್ಪನವರ ಕೆಲಸದ ಛಾರ್ಜನ್ನು ವಹಿಸತಕ್ಕದ್ದು.

ಅಮಲ್ದಾರ್ ಮೆ|| ಪಾರ್ಥಸಾರಥಿ ಐಯ್ಯಂಗಾರ್ರನ್ನು ಚನ್ನಪಟ್ಟಣದ ತಾಲ್ಲೂಕಿಗೆ ವರ್ಗಮಾಡಿದೆ. ಅವರು ಕೂಡ್ಲೆ ಕೆಲಸದ ಛಾರ್ಜನ್ನು ವಹಿಸತಕ್ಕದ್ದು.

ಚನ್ನಪಟ್ಟಣದ ತಾಲ್ಲೂಕ್ ಆಕ್ಟಿಂಗ್ ಅಮಲ್ದಾರ್ ಮೆ|| ಟಿ. ರಾಮಚಂದ್ರರಾಯರು ವಾಪಸು ಶಿವಮೊಗ್ಗ ಡಿಸ್ಟ್ರಿಕ್ಟ್ ಖಜಾಂಚಿಯಾಗಿ ಹೋಗತಕ್ಕದ್ದು.

ಹಾಸನದ ಡಿಸ್ಟ್ರಿಕ್ಟ್ ಶಿರಸ್ತೇದಾರ್ ಎ. ರಾಮಸ್ವಾಮೈಯ್ಯಂಗಾರ್ರು ಅರಕಲಗೂಡು ತಾಲ್ಲೂಕ್ ಅಮಲ್ದಾರರಾಗಿ ನೇಮಿಸಲ್ಪಟ್ಟಿದ್ದರು.

ಮೈಸೂರು ಮುಜರಾಯಿ ಇಲಾಖೆಯಲ್ಲಿ ಮೆ|| ವಿ. ರ...ಮೈಯ್ಯಂಗಾರ್ರನ್ನೂ ಮೆ|| ಎಚ್. ಜೆ. ಮೊಲಾಯಿಯವರನ್ನೂ ಕ್ಯಾಟಿವ್ ಇಂಜಿನಿಯರ್ ದರ್ಜೆಯಲ್ಲಿ ೩ನೇ ಕ್ಲಾಸಿಗೆ ಬಡ್ತಿ...

ಕೋಲಾರ್ ಡಿಸ್ಟ್ರಿಕ್ಟಿನ ಮತ್ತು ಖಜಾನೆಯ ಛಾರ್ಜನ್ನು ಕಳೆದ ಏಪ್ರಿಲ್ ೩೦ ರಲ್ಲಿ ಮೆ|| ಸಿ. ಶ್ರೀಕಂಠೇಶ್ವರ ಐಯ್ಯರವರು ... ಸಿ. ರಾಮಸ್ವಾಮಿಯರಿಂದ ಪಡೆದುಕೊಂಡಿದಾರೆ.

ಇಂಡಿಯಾ ದೇಶದ ವೃತ್ತಾಂತಗಳು.

ಹೈದರಾಬಾದಿನಲ್ಲಿ ನವಾಬ್ ಅಫ್ಸರ್ ಜಂಗ್ ಬಹದೂರ್ ದೊಡ್ಡ ಮನುಷ್ಯನು ಬಹು ಶ್ರೇಷ್ಠವಾದ ಒಂದು ಮೋಟಾರ್ ಎಂಬ ಗಾಡಿಯನ್ನು ೨೦ ಸಾವಿರ ರೂಪಾಯಿಗೆ ಕೊಂಡುಕೊಂಡು ಒಂದು ಭೂತಕನ್ನಡಿಯನ್ನೂ ನೈಜಾಮರವರಿಗೆ ಒಪ್ಪಿಸಿರುತ್ತಾರೆ.

❖❖❖❖

ನಿಕ್ಕಲ್ ಎಂಬ ಲೋಹದ ಒಂದಾಣೆ ಬಾಬತು ನಾಣ್ಯಗಳ ಚಲಾವಣೆಗೆ ತರಬೇಕೆಂದು ಗವರ್ನಮೆಂಟಿನವರು ತೀರ್ಮಾನಮಾಡಿರಷ್ಟೆ. ಈ ನಾಣ್ಯದ ಮೇಲೆ ಛಾಪಾ ಆಗತಕ್ಕ ನಕ್ಷೆ ಇಂಥಾದ್ದೆಂದು ಇನ್ನೂ ನಿರ್ಧಾರವಾಗಲಿಲ್ಲ ಇನ್ನು ನಕ್ಷೆಗಳ ಅಜಮಾಯಿಷಿಯೇ ನಡೆಯುತ್ತಿದೆ

❖❖❖❖

ಹೈದರಾಬಾದ್ ಸಂಸ್ಥಾನವು ಅಷ್ಟು ಸಂಪದ್ಯುಕ್ತವಾಗಿದ್ದರೂ ಸರ್ಕಾರದವರು ವಿದ್ಯಾಶಾಲೆಗಳನ್ನೂ ಹೈಸ್ಕೂಲುಗಳನ್ನೂ ಬಾಡಿಗೆಮನೆಗಳಲ್ಲಿ ಮಾಡುತ್ತಿದಾರೆ. ವರುಷಕ್ಕೆ ೬—೮ ಸಾವಿರ ರೂಪಾಯಿ ಬಾಡಿಗೆಗೇ ಖರ್ಚಾಗುವುದು. ಸರ್ಕಾರಿ ಹಣದಿಂದ ಸುಂದರವೂ ವಿದ್ಯಾಶಾಲೆಗೆ ಅನುಕೂಲವೂ ಆಗಿರುವಂಥಾ ಕಟ್ಟಡಗಳನ್ನು ಏತಕ್ಕಾಗಿ ಯಾಕೆ ಕಟ್ಟಿಸಲಿಲ್ಲವೋ ತಿಳಿಯದು.

❖❖❖❖

ಲಾಸಾ ಪಟ್ಟಣದಲ್ಲಿ ಇಂಗ್ಲಿಷರಿಗೂ ಟಿಬೆಟ್ಟನವರಿಗೂ ... ಕರಾರಿನ ಪ್ರಕಾರ ಚೀನಾ ಸರ್ಕಾರದವರು ಒಪ್ಪಿ ರುಜು ಹಾಕಿದ್ದಲ್ಲದೆ ... ಷರ ದಂಡಯಾತ್ರೆಯ ಖರ್ಚನ್ನು ಅಂದರೆ ೨೫ ಲಕ್ಷ ರೂಪಾಯಿ ... ಮೂರು ವರುಷಗಳಲ್ಲಿ ಕೊಟ್ಟು ತೀರಿಸುವುದಕ್ಕೂ ಸಮ್ಮತಿ ಪಟ್ಟಿ ... ಮೊದಲನೇ ವರುಷದ ಕಿಸ್ತು ೮ ಲಕ್ಷ ಚಿಲ್ಲರೆ ರೂಪಾಯಿ ಇಷ್ಟು ಇಂಡಿಯಾ ಗವರ್ನಮೆಂಟಿಗೆ ಸಲ್ಲುವ ಏರ್ಪಾಡು ನಡೆದಿದೆ

❖❖❖❖

ಕಾಶೀ ಪಟ್ಟಣದಲ್ಲಿ ಮಹಾ ವಿದ್ವಾಂಸ ಪಂಡಿತನೆಂಬ ಕೀರ್ತಿಯನ್ನು ಪಡೆದು ನಾನಾ ಉಪಯುಕ್ತ ಗ್ರಂಥಗಳನ್ನು ರಚಿಸಿ, ಅ... ಸಂಘಗಳಿಗೆ ಮೂಲ ಪುರುಷನಾಗಿದ್ದ ಮಹಾಮಹೋಪಾಧ್ಯಾಯ ಶ್ರೀಮಾನ್ ಪಂಡಿತ ರಾಮಶಾಸ್ತ್ರಿ ಎಂಬ ಸಂಸ್ಕೃತ ವಿದ್ವಾಂಸರು ಕಳೆದ ೨ ನೇ ತಾರೀಖಿನ ದಿನ ಕಾಲವಾದರೆಂತಲೂ ಅವರ ... ನೂರಾರು ಜನ ಪಂಡಿತರು ಮಣಿಕರ್ಣಿಕಾ ಘಾಟಿಗೆ ಹೋಗಿ ... ಕರ್ಮವನ್ನು ನೆರವೇರಿಸಿದರೆಂತಲೂ ತಿಳಿದು ಬಂದಿದೆ

❖❖❖❖

ಉತ್ತರ ದೇಶದಲ್ಲಿ ಕ್ಷಾಮಪೀಡಿತರಾದ ಪ್ರಜೆಗಳ ಸಂಖ್ಯೆಯು ಹೆಚ್ಚುತ್ತಲಿದೆ. ಕಳೆದ ವಾರ ೩,೮೩,೭೦೧ ಜನರು ಕ್ಷಾಮಪೀಡಿತರಾಗಿ ಸರ್ಕಾರದವರ ರಿಲೀಫ್ ಕಾರ್ಖಾನೆಗಳಲ್ಲಿ ಸೇರಿಕೊಂಡು ಜೀವನ ಮಾಡುತ್ತಿದ್ದರು ಅಂದರೆ ಈ ಸಂಖ್ಯೆಯು ಹಿಂದಿನ ವಾರದಲ್ಲಿದ್ದಕ್ಕಿಂತ ೧,೩೭೨ ಹೆಚ್ಚು ಸಂಯುಕ್ತ ಆಧಿಪತ್ಯಗಳಲ್ಲಿ ೧,೦... ರೂ, ಮಧ್ಯ ಇಂಡಿಯಾದಲ್ಲಿ ೨,೮೦೮ ಜನರೂ ಕಡಿಮೆಯಾದರೂ ರಾಜಪುಟಾನಾದಲ್ಲಿ ೧,೬೩೬ ಜನರೂ, ಬೊಂಬಾಯಿನಲ್ಲಿ ೪... ಜನರೂ ಹೆಚ್ಚಾಗಿರುತ್ತಾರೆ

❖❖❖❖

ಹೈದರಾಬಾದಿನಲ್ಲಿ ಕಳೆದ ವಾರ ಕೆಲವು ಮಾದಿಗರು ಆಕಸ್ಮಾತ್ತಾಗಿ ಮೃತಪಟ್ಟರು ಇದನ್ನು ನೋಡಿ ವೀಧಾಯಿ ಮಾರುವವರ ನೀರು ಕೆಟ್ಟಿದೆ, ಅದರಲ್ಲಿ ವಿಷಪದಾರ್ಥವಿದೆ ಎಂದು ವರ್ತಮಾನ ಹಬ್ಬಿಸಿದರು. ಕೂಡಲೇ ಅದು ನಿಜವೆಂದು ನಂಬಿ ಸರ್ಕಾರದವರು ಬೀದಿ ಬೀದಿಗಳಲ್ಲಿ ಡಂಗೂರ ಹೊಡಿಸಿ, ಭಾವಿಗಳ ನೀರನ್ನು ಯಾರೂ ಕುಡಿಯಕೂಡದೆಂದು ಸಾರಿಸಿದರು. ಆ ತರುವಾಯ ಪರೀಕ್ಷೆ ಮಾಡಿದ್ದರಲ್ಲಿ ವೀಧಾಯಿ ಮಾರುವವರು ಕೆಟ್ಟುಹೋದ ತಿಂಡಿಗಳನ್ನು ಮಾರುತ್ತಿದ್ದರೆಂತಲೂ ಭಾವಿ ನೀರಿನಲ್ಲಿ ದೋಷವೇನೂ ಇಲ್ಲವೆಂತಲೂ ತಿಳಿಯಿತು.

❖❖❖❖

ಹಿಂದುಸ್ಥಾನದಲ್ಲೆಲ್ಲಾ ಕಳೆದ ವಾರ ೧೫,೮೯೨ ಜನರಿಗೆ ಪ್ಲೇಗು ತಗಲಿದೆ. ೧೩,೨೯೮ ಜನರು ಕಾಲವಾದರು ಬೇರೆ ಬೇರೆ ಕಡೆಯ ಸಂಖ್ಯೆಗಳು ಎಷ್ಟೆಷ್ಟೆಂದರೆ—ಬೊಂಬಾಯಿ ಮತ್ತು ಸಿಂಧು ೧,೬... ಮದರಾಸ್ ೧೪. ಬೆಂಗಾಲ್ ೧,೧೦೮, ಸಂಯುಕ್ತ ಆಧಿಪತ್ಯ ೨,೯೨೭, ಪಂಜಾಬ್ ೭,೯೭೯, ಬರ್ಮಾ ೧೪೦, ಮಧ್ಯ ಪ್ರಾಂತ್ಯಗಳು ೪೦, ಮಧ್ಯ ಇಂಡಿಯಾ ೨೩, ರಾಜಪುಟಾನಾ ೬೩ ... ವಾರ ಮೃತಪಟ್ಟವರ ಸಂಖ್ಯೆಗಿಂತಲೂ ೨,೪೦೦ ಕಡಿಮೆಯು ... ಈ ಪೈಕಿ ಪಂಜಾಬಿಗೆ ಸೇರಿದ ಸಿಯಾಲ್ಕೋಟ್ ಎಂಬ ಒಂದೇ ಡಿಸ್ಟ್ರಿಕ್ಟಿನಲ್ಲಿ ಕಳೆದ ವಾರ ೧,೪೩೫ ಜನರು ಕಾಲವಾಗಿದಾರೆ. ... ಬೊಂಬಾಯಿ ಪಟ್ಟಣದಲ್ಲಿ ಈಗೀಗ ಪ್ಲೇಗ್ ಉಪದ್ರವ ... ಕಡಿಮೆಯಾಗುತ್ತಿರುವಂತೆ ಕಾಣುವುದು. ಕಳೆದ ವಾರ ... ಮಂದಿ ಮಾತ್ರ ಈ ಉಪದ್ರವಕ್ಕೆ ಪ್ರಾಣ ಕೊಟ್ಟರು. ಎಲ್ಲಾ ಕಡೆಗಳಲ್ಲಿಂತಲೂ ೧,೯೩೨ ಮಂದಿ ಕಾಲವಾಗಿರುತ್ತಾರೆ.

...ದಲ್ಲಿ ಸ್ತ್ರೀಯರನ್ನು ಉಪಾಧ್ಯಾಯಿನಿಯರನ್ನಾಗಿ ಮಾಡಿಸಬೇಕೆಂಬುವುದು ಸರ್ಕಾರದವರಿಗೂ ಪ್ರಜೆಗಳಿಗೂ ...ತೆ ಅಂಥಾ ದೊಡ್ಡ ವಿದ್ಯಾಶಾಲೆಯನ್ನು ಸ್ಥಾಪಿಸುವುದಕ್ಕೆ ...ವಾಬರವರು ಪ್ರತಿ ವರುಷವೂ ೭,೫೦೦ ರೂಪಾಯಿನಂತೆ ...ಯ ಮಾಡುವುದಾಗಿ ವಾಗ್ದಾನ ಮಾಡಿದ್ದಾರೆ. ಬೆಂಕಿ ಪುರ ...ದಲ್ಲೇ ಒಂದು ವಿದ್ಯಾಶಾಲೆ ಏರ್ಪಾಡಾಗುವುದರಲ್ಲಿದೆ. ... ಅಂಥಾ ವಿದ್ಯಾಶಾಲೆಯನ್ನು ಸ್ಥಾಪಿಸುವುದಕ್ಕೆ ೨೯,೦೦೦ ...ಬೇಕಾಗುವುದು. ಈ ಪೈಕಿ ಅರೆವಾಸಿಯನ್ನು ಸರ್ಕಾರದ ...ಕೊಳ್ಳುವರು ಉಳಿದ ಹಣ ಚಂದಾ ಮೂಲಕ ವಸೂಲಾ...ವೆ

****

...ಯಿಸಲ್ಲಿ ಬಟ್ಟೆಗಳ ಕಾರ್ಖಾನೆಗಳನ್ನಿಟ್ಟಿರುವ ಸಾಹು... ಕಳೆದವಾರ ಸಣೆ ಸೇರಿ, ಕಳೆದ ವರುಷ ನೂಲಿನ ಮತ್ತು ...ವ್ಯಾಪಾರಾಭಿವೃದ್ಧಿಯ ವಿಷಯವನ್ನು ಕುರಿತು ಚರ್ಚೆ... ಈ ಚರ್ಚೆಯಿಂದ ತಿಳಿದುಬರುವುದೇನೆಂದರೆ—ಹೋದ ...ವರುಷದ ಕಾರ್ಖಾನೆಗಳಲ್ಲಿ ತಯಾರಾದ ಬಟ್ಟೆಬರೆಗಳ ...ಕ್ರಯ ಸಿಕ್ಕಿದು, ಸರಕುಗಳು ಬಹಳ ಹೆಚ್ಚಾಗಿ ಬಿಕ... ಬಟ್ಟೆಬರೆಗಳನ್ನು ಇನ್ನೂ ಸ್ವಲ್ಪ ನಾಜೂಕಾಗಿಯೂ ಸು...ತಯಾರಾಗಿದೆ ಪಕ್ಷದಲ್ಲಿ ಹಿಂದೂಸ್ಥಾನದ ಪ್ರಜೆಗಳನ್ನ ...ಪಡಿಸಿ, ಅವರು ಪರದೇಶದ ಸರಕುಗಳನ್ನು ಅಪೇಕ್ಷೆ ...ಮಾಡಿಕೊಳ್ಳಬಹುದು. ಗವರ್ನವೆಂಟಿನವರು ಈ ದೇಶದ ...ವನ್ನು ಬಹಳವಾಗಿ ವೃದ್ಧಿಗೆ ತರಬೇಕೆಂದು ಸಾಹಸಪಡು ...ಸಂತೋಷಪ್ರದವಾಗಿದೆ ಈಚೆಗೆ ಸ್ವದೇಶಿ ಏರ್ಪಾಡು ... ಕಡೆಗಳಲ್ಲೂ ತಲೆದೋರುತ್ತಿರುವುದರಿಂದ ಈ ದೇಶದ ...ವ್ಯಾಪಾರವೂ ಆ ಮೂಲಕ ಈ ದೇಶದ ಕಸಬೂ ಅಭಿ...ವೃದ್ಧಿಯಾಗುವುದರಲ್ಲಿ ಸಂಶಯವಿಲ್ಲ ನಮ್ಮ ದೇಶದಲ್ಲಿ ಒಳ್ಳೆ ...ಬೆಳೆ ಮಾಡುವುದಿಲ್ಲ ಇದೊಂದು ದೊಡ್ಡ ಕೊರತೆಯಾ...ದೆ ಇಂಥಾ ಕೊರತೆಯನ್ನು ಗವರ್ನವೆಂಟಿನವರೇ ಹೋಗ...ಲಾಡು ನಿಶ್ಚಯಮಾಡಿ, ಪರರಾಜ್ಯಗಳಿಂದ ಒಳ್ಳೆಯ ಹತ್ತಿ...ಗಳನ್ನು ತರಿಸಿ, ಅಲ್ಲಲ್ಲಿ ಬಿತ್ತಿ ಬೆಳಸಿ ಪರೀಕ್ಷೆಮಾಡಿಸುತ್ತಿ...ವುದಕ್ಕಾಗಿ ಹಿಂದೂಸ್ಥಾನದವರೆಲ್ಲಾ ಅವರಿಗೆ ಕೃತಜ್ಞರಾಗಿರು...ವೆ.

****

...ಶುಕ್ರವಾರ ಬೆಳಿಗ್ಗೆ ೬ ಗಂಟೆಗೆ ಬೊಂಬಾಯಿನಿಂದ ಮದ...ರಾಸು ಸೇರಬೇಕಾಗಿದ್ದ ಮೆಯಿಲ್ ಗಾಡಿಯು ಬರಲಿಲ್ಲ. ...ಏಕೆಂದರೆ ರೇಣಿಗುಂಟೆಯಿಂದ ೧೦-೧೨ ಮೈಲಿ ಆಚೆ ಉರು...ಪು ಕೋಡ ರು ಎಂಬೀ ಸ್ಟೇಷನ್‌ಗಳ ನಡುವೆ ಆ ಮೆಯಿ...ಲು ತನ್ನ ಎದುರಿಗೆ ಸಿಕ್ಕಿದ ಗೂಡ್ಸ್ ಗಾಡಿಗೆ ಬಿದ್ದು ಅಪಾ...ಯ ಇದು ಆದದ್ದು ಬೆಳಿಗಿನ ಝಾಮದ ೧ ಗಂಟೆ ಹೊತ್ತು ...ಗೂಡ್ಸ್ ಗಾಡಿಯು ಒಂದು ಹಳ್ಳದಲ್ಲಿ ಹೋಗುತ್ತಿರುವಾಗ ...ಗಾಡಿಯೊಳಗೆ ನೀರು ನುಗ್ಗಿದುಹೋಯಿತು. ಸಾಕು ...ಗಳನ್ನೆಲ್ಲಾ ಅಲ್ಲೇ ನಿಲ್ಲಿಸಿ ಬಿಟ್ಟು, ನೀರು ತುಂಬಿಸಿ ...ವುದಕ್ಕಾಗಿ, ಇಂಜಿನ್ನೊಂದನ್ನು ಮಾತ್ರ ಬಿಚ್ಚಿ ...ಸ್ಟೇಷನ್‌ಗೆ ನಡೆಸಿಕೊಂಡು ಹೋದನು. ಆ ಸ್ಟೇಷನ್ ...ಮಾಸ್ಟರ್ ಬರುವುದನ್ನು ಕಂಡಕೂಡಲೇ ಅದರ ಹಿಂದೆ ಗಾಡಿ ...ಯತ್ತವೆಂದು ತಿಳಿದುಕೊಂಡು, ಅಲ್ಲಿ ಬಂದು ನಿಂತಿದ್ದ ...ಮೆಯಿಲ್ ಗಾಡಿಗೆ ರಸ್ತೆ ಮುಂದಕ್ಕೆ ಸರಿಯಾಗಿದೆ ...ಹೊರಡಬಹುದು ಎಂಬ ಅರ್ಥವುಳ್ಳ ಲೈನ್ ಕ್ಲಿಯರ್ ಎಂಬ ...ನ್ನು ಆ ಗಾಡಿ ನಡೆಸುವವನಿಗೆ ಕೊಟ್ಟುಬಿಟ್ಟನು ಈ ಮೆ...ಯಿಲು ಸರಾಸರಿಯಲ್ಲಿ ಇಳಿಜಾರಿನಲ್ಲಿ ಗಂಟೆಗೆ ೪೦-೫೦ ...ಮೈಲು ವೇಗದಿಂದ ಬರುತ್ತಾ ಹಳ್ಳದಲ್ಲಿ ತಿರುವಿನಲ್ಲಿ ನಿಂತಿದ್ದ ...ಗೂಡ್ಸ್ ಗಾಡಿಗಳಿಗೆ ಬಡಿದು ಅನಾಹುತವಾಯಿತು ಮೆಯಿ...ಲಿನಲ್ಲಿ ಮೂರು ಗಾಡಿಗಳೂ ಗೂಡ್ಸ್ ಟ್ರೈನಿನಲ್ಲಿ ಐದು ...ಒಡೆದು ಹತ್ತಿ ಉರಿದುಹೋದವು ರೈಲ್ವೆ ನೌಕರರು ...ವಿಯೂ ಒಬ್ಬ ಯೂರೋಪ್ಯಿಯನ್ ಪ್ರಯಾಣಸ್ಥನೂ ...ರು ರೈಲ್ ರಸ್ತೆ ದುರಸ್ತು ಮಾಡುವುದಕ್ಕೆ ಒಂದು ದಿನ ...ಯಿತು

ತಾಲ್ಲೋಕು ವರ್ತಮಾನಗಳು.

...ರು —ಇಲ್ಲಿಗೆ ಒಂದು ಸಬ್ ಡಿವಿಜನ್ ಕೋರ್ಟ್ ಆಗು...ತ್ತದೆ ಮೂರು ೫-೬ ತಿಂಗಳ ಹಿಂದೆಯೇ ವದಂತಿಯಾಗಿತ್ತು. ...ಸಂತೋಷವಾಗಿದ್ದರು ಆದರೆ ಈಚೆಗೆ ಅದರ ಸಮಾಚಾ... —ಇಲ್ಲಿನ ಮ್ಯುನಿಸಿಪಾಲಿಟಿಯು ತಕ್ಕಮಟ್ಟಿಗೂ ಒಳ್ಳೆ...ದೆ ಆದರೆ ರಾತ್ರಿ ಕಾಲಗಳಲ್ಲಿ ಕೆಲವು ಮ್ಯುನಿಸಿಪಲ್ ...ಅರ್ಧ ಗ್ರಹಣ, ಪೂರ್ಣ ಗ್ರಹಣ ಹಿಡಿಯುವದುಂಟು ಇಲ್ಲ ...ದಿನ ಪಕ್ಷದ ಹಾಗೆ ಕಾಣಿಸುತ್ತವೆ ಇದಕ್ಕೆ ಕಾರಣವೇ ...ದು ಟರ್ನ ಪಾಕೇಜಾ ವಿಷಯದಲ್ಲಿ ನಮ್ಮ ಅಮ...ಲ್ದಾರರಿಗೆ ನಿಗಾ ಕೊಡುವದೂ ಟರ್ನ ಇನ್ಸ್‌ಪೆಕ್ಷನ್ ಮಾಡು...ವುದು ಅವಶ್ಯವಾಗಿದೆ.

...ರು.—ಈ ಪಟ್ಟಣಕ್ಕೆ ೪ ಮೈಲಿ ದೂರದಲ್ಲಿರುವ ...ರು ಎಂಬ ಹಳ್ಳಿಯಲ್ಲಿ ವಾಂತಿಭೇದಿ ಎಂಬ ರೋಗದಿಂದ ...೪ ಮಂದಿ ಸತ್ತು ಹೋದರು —ಕಲ್ಲೂರು ಎಂಬ ...ಒಳಗೆ ದನ ಕಾಯುವ ಹುಡುಗರು ಮೂವರು ಬಿಸ...ಸತ್ತು ಹೋದರು —ರಾಯಚೂರು ಪಟ್ಟದ ಸಮೀಪದ ...ಪಟ್ಟವೆಂಬ ಗ್ರಾಮದೊಳಗೆ ಒಬ್ಬ ಹೆಂಗಸು ಗಂಡಿಸಿನಂತೆ ...ವೇಷ ಹಾಕಿಕೊಂಡು ಇರುತ್ತಾಳೆ. ಕಳೆದವಾರ ಅವಳು ಮತ್ತೊಬ್ಬ ಹೆಂಗಸನ್ನು ಮದುವೆ ಮಾಡಿಕೊಂಡಿರುತ್ತಾಳೆ. ಊರಿನ ಜನರೆಲ್ಲಾ ಬೆರಗಾಗಿ ನೋಡುತ್ತಾರೆ —ರಾಯಚೂರು ಪಟ್ಟಣದಲ್ಲಿ ಕಲರಾ ರೋಗವು ವ್ಯಾಪಿಸಿಕೊಂಡು ದಿನಕ್ಕೆ ೧೦—೧೨ ರಂತೆ ಸಾಯುತ್ತಾರೆ

ಕುಲೀಸ್‌ಪೇಟೆ.—ಇಲ್ಲಿನ ಸುಂದರವಾದ ಹೊಸ ಪೋಸ್ಟಾಫೀಸ್ ಕಟ್ಟಡದಲ್ಲಿ ಕೆಲಸವು ಮೊನ್ನೆ ಆರಂಭವಾಯಿತು ನಡೆಯುತ್ತಿದೆ ಈ ಕಟ್ಟಡವನ್ನು ಸಾಹುಕಾರ್ ಭಾಗ್ಯನರಸಿಂಹಯ್ಯನವರು ಬಹು ಮೊಹನತ್ತಿನಿಂದಲೂ ಮುತುವರ್ಜಿಯಿಂದಲೂ ತಯಾರ್ಮಾಡಿಸಿದಾರೆ —ಡೆಪ್ಯುಟಿ ಅ॥ ವಿ॥ ವೆಂಕಯ್ಯನವರು ಈ ಊರನ್ನು ಆಬಾದ್ ಮಾಡುತ್ತಾ ಹೊಸದಾಗಿ ಮನೆಗಳನ್ನು ಕಟ್ಟಿಸುತ್ತಾ ಮುನಿಸಿಪಾಲಿಟಿಯಲ್ಲೂ ಪ್ರತಿಕಾರ್ಯದಲ್ಲೂ ತುಂಬಾ ಮೆಹನತ್ತು ಮಾಡುತ್ತಿದಾರೆ. ಇವರು ಏಳು ವರುಷ ಕಾಲ ಅಮಲ್ದಾರಿ ಮಾಡಿದ ಅನುಭವಸ್ಥರು —ಈ ಊರಿನಲ್ಲಿ ವ್ಯಾಜ್ಯದ ಮೊಕದ್ದಮೆಗಳು ಜಾಸ್ತಿ ಮೆ॥ ಆನಂದರಾಯರು ಎಲ್ಲರಿಗೂ ಚೆನ್ನಾಗಿ ಬುದ್ಧಿ ಕಲಿಸುತ್ತಿದಾರೆ ಮಳೆ ಇಲ್ಲ, ಪ್ರಜಾಕ್ಷೇಮ ಚೆನ್ನಾಗಿದೆ, ನೀರಿಗೆ ಸಾಧಾರಣ ಕಷ್ಟವುಂಟು

ತಿಪ್ಟೂರು.—ಕೆಲವು ದಿನಗಳ ಕೆಳಗೆ ಒಬ್ಬ ಯೌವನಸ್ಥನು ಕೆರೆಯಲ್ಲಿ ಈಜುತ್ತಿದ್ದು ಮೃತನಾಗಿ ಹೊರಗೆ ತೆಗೆಯಲ್ಪಟ್ಟನೆಂಬುದು ವಿಷಾದಕರವಾಗಿದೆ —ಸ್ವಲ್ಪ ಮಳೆಯಾಯಿತು, ಶಖೆಯು ಜೋರಾಗಿಯೂ ಮೋಡಗಳು ವಿಪರೀತವಾಗಿಯೂ ಏಳುತ್ತಿವೆ ನೊಣವಿನಕೆರೆ ಮತ್ತು ತುರುವೆಕೆರೆ ಕಡೆಗಳಲ್ಲಿ ಬಲ್ಲಹೆಗ್ಗಾಯಿತು —ತುರುವೆಕೆರೆ ಸಮ್ಮತು ಕುವಾಳ ಗ್ರಾಮದ ನಂಜೇಗೌಡನ ಮಕ್ಕಳು ಮಂಚಯ್ಯ ಮತ್ತು ನಂಜಪ್ಪ ಎಂಬ ಇಬ್ಬರು ಲೋವರ್ ಸೆಕಂಡರಿ ಪ್ಯಾಸ್ ಮಾಡಿರುತ್ತಾರೆ ತುರುವೆಕೆರೆ ಗರ್ಲ್ಸ್ ಸ್ಕೂಲ್ ಹೆಡ್ಮಾಸ್ಟರ್ ಗುಂಡಪ್ಪನವರ ಪ್ರಯಾಸವು ಇದರಲ್ಲಿ ತೋರುತ್ತದೆ ಇತರ ಬಾಲಕರು ಯಾರೂ ಆ ಕ್ಲಾಸಿಗೆ ತಯಾರಾಗದೆ ಈ ಹಳ್ಳಿ ಹುಡುಗಿ ದೂರದಿಂದ ಬಂದು ಓದಿ ಬಡತನವಿದ್ದಾಗ್ಯೂ ವಿದ್ಯಕ್ಕಾಗಿ ಪ್ರಯಾಸ ಪಟ್ಟದ್ದು ಶ್ಲಾಘನೀಯವಾದದ್ದು. ಮನ ಭೂಭಾಸಾಹೇಬರವರೂ ಸರ್ಕಲ್ ಇನ್ಸ್‌ಪೆಕ್ಟರವರೂ ಈ ಬಾಲಕಿಗೆ ಕೆಲಸ ಕೊಡುವಂತೆ ಅಪ್ಪಣೆ ಕೊಟ್ಟದ್ದಾಗಿಯೂ ಸದ್ಯದಲ್ಲಿ ಕೆಲಸವು ಖಾಲಿ ಇಲ್ಲ ಎಂಬ ಇಂಥಾ ರಸು ನಕಾರ ಬಂದಿದೆ ಅಂತು ಹಳ್ಳಿ ಜನರನ್ನು ಮನ ಸರ್ಕಾರದವರು ಪ್ರೋತ್ಸಾಹಿಸದೆ ಇರರು.

ಫ್ರೆಂಚ್‌ರಾಕ್ಸ್.—ಈ ಪ್ರಾಂತ್ಯದಲ್ಲಿ ಜಡಮಳೆಯಾಯಿತು ಗೋಕಾಯಿಗಳ ಕಷ್ಟ ತಪ್ಪಿತು ರೈತರೆಲ್ಲಾ ತಮ್ಮ ಹೊಲಗಳನ್ನು ಉತ್ತು ಜೋಳ ಚೆಲ್ಲುತ್ತಾರೆ —ದಯವುಳ್ಳ ಸರಕಾರದವರು ನೀರಿನ ಕ್ಷಾಮವನ್ನು ನೀಗಿಸುವದಕ್ಕೆ ಕೆರೆಯಲ್ಲಿ ಭಾವಿಗಳನು ತೋಡಿಸುವಂತೆ ಅಪ್ಪಣೆಮಾಡಿದಾರೆ ಅದಕ್ಕಿಂತಲೂ ಊರಿನಲ್ಲಿರುವ ಉಪ್ಪುನೀರಿನ ಬಾವಿಗಳನ್ನು ಆಳಮಾಡಿಸಿದ್ದರೆ ಜನರಿಗೆಲ್ಲಾ ನೀರಿನ ಕ್ಷಾಮ ಸ್ವಲ್ಪಮಟ್ಟಿಗೆ ತಪ್ಪುತ್ತಿತ್ತು —ದಯವುಳ್ಳ ಅ॥ ಕಮಿಷನರ್ ಮೆ॥ ಶ್ರೀನಿವಾಸರಾಯರು ಇಲ್ಲಿನ ಜನರ ಕಷ್ಟವನ್ನು ನೋಡಲಾರದೆ ಒಬ್ಬ ಸ್ಪೆಷಲ್ ಗಿತ್ತಿಯನ್ನು ಕರೆಸಿದಾರೆ. ಎಲ್ಲರೂ ತಮ್ಮ ಕಷ್ಟಕಾಲಕ್ಕೆ ಈ ಅಮ್ಮನನ್ನು ಕರೆಸಿಕೊಳ್ಳಬಹುದು —ಈ ಊರಿನಲ್ಲಿ ಜೂಜುಕೋರರು ಜಾಸ್ತಿಯಾಗಿದಾರೆ ಹೊತ್ತಾರೆಯಿಂದ ಸಾಯಂಕಾಲದ ವರಿಗೂ ಆಟದಲ್ಲಿಯೇ ಕೆಲವರು ಕಾಲಕಳೆಯುತ್ತಾರೆ ಕೈಯಲ್ಲಿದ್ದದ್ದು ಮುಗಿದ ಮೇಲೆ ಕಳ್ಳತನಕ್ಕೆ ಷುರುಮಾಡುತ್ತಾರೆ ಈ ವಿಷಯಕ್ಕೆ ಪೋಲೀಸ್ ಜಮಾದಾರರು ನಿಗಾಕೊಟ್ಟರೆ ಉಭಯತ್ರರಿಗೂ ಪ್ರಯೋಜನ ಉಂಟು ಈ ಜಮಾದಾರರು ಬಂದ ಮೇಲೆ ಅನೇಕರು ಸಂತೋಷವುಳ್ಳವರಾಗಿದಾರೆ —ಇಲ್ಲಿನ ಸಂತೆಯಲ್ಲಿ ಮೋಸದಾಟ ಹೆಚ್ಚಾಗಿ ನಿತ್ತದೆ ಅವರು ಒಂದು ಕಾಸು ಕೊಟ್ಟರೆ ತಕ್ಕೊಳ್ಳುವದಿಲ್ಲ. ಮೂರು ಕಾಸು ಕೊಡುವ ವರೆಗೂ ಬಿಡುವದಿಲ್ಲ. ಕೊಡದಿದ್ದರೆ ಸಾಮಾನುಗಳ ಮೇಲೆ ರಕ್ತವನ್ನು ಬೀಳಿಸುತ್ತಾರೆ ಪೋಲೀಸಿನವರಿಗೆ ಹೇಳೋಣವೆಂದರೆ ಸಂತೆಯಲ್ಲಿ ಯಾರೂ ಸಿಕ್ಕುವದಿಲ್ಲ. ಜಮಾದಾರರು ಗಮನಕ್ಕೆ ತರಬೇಕು —ಪೋಲೀಸಿನವರು ಕಮ್ಮಿ ಸೇರುಗಳನ್ನು ಒಂದೊಂದು ಸಮಯದಲ್ಲಿ ಕಂಡುಹಿಡಿದು ಅವರಿಗೆ ಯಾವ ಶಿಕ್ಷೆಯೂ ಇಲ್ಲದೆ ಬಿಟ್ಟುಬಿಡುತ್ತಾರೆ ಇದರ ಫಲವೇನೋ ನಾವರಿಯೆವು ಊಹಿಸಿಕೊಳ್ಳಲಿ. ಕೆಲವರಿಗೆ ಶಿಕ್ಷೆಯಾದರೆ ಅನೇಕ ಬಡಬಗ್ಗರಿಗೆ ಬಹಳ ಪ್ರಯೋಜನ. ರೈಲ್ವೆ ಸ್ಟೇಷನ್ ಸುತ್ತಮುತ್ತಲೂ ಉಣ್ಣೆಗಳ ಕಾಟ ಹೆಚ್ಚಾಗಿದೆ ಪ್ರಯಾಣಸ್ಥರಿಗೆ ಬಹಳ ಅನಾನುಕೂಲ ಆದ್ದರಿಂದ ಹಳೇ ಮಣ್ಣನ್ನು ತೆಗೆದು ಹೊಸ ಮಣ್ಣನ್ನು ಹಾಕಿಸಿದರೆ ಅವುಗಳ ಕಾಟ ತಪ್ಪೀತು.

ಚನ್ನಪಟ್ಟಣ.—ತಾ ೫ನೆ ಶನಿವಾರ ಬೆಂಗಳೂರಿಂದ ಬರುವ ಮೆಯಿಲ್ ಟ್ರೇನನಲ್ಲಿ ಮೈಸೂರು ಶೀಮೆಯ ರೆವಿನ್ಯೂ ಕಮಿಷನರಾದ ಮೆ॥ ಎ ರಂಗಸಾಮೈಯ್ಯಂಗಾರ್ಯರವರು ಇಲ್ಲಿಗೆ ದಯಮಾಡಿಸಿದರು ಇಲ್ಲಿನ ಅಧಿಕಾರಿಗಳು, ಲೋಕಲ್ ಪ್ಲೀಡರುಗಳು, ಮ್ಯುನಿಸಿಪಲ್ ಮೆಂಬರುಗಳೇ ಮೊದಲಾದ ದೊಡ್ಡ ಮನುಷ್ಯರು ರೈಲ್ವೆ ಸ್ಟೇಷನ್ನಲ್ಲಿ ಕಾದಿದ್ದು, ಆ ಮಹಾನೀಯರಿಗೆ ಮರ್ಯಾದೆಯೊಡನೆ ಸುಸ್ವಾಗತವನ್ನು ಬಯಸಿ ಟ್ರಾವೆಲರ್ಸ್ ಬಂಗ್ಲೆ ವರಿವಿಗೂ ಸವಾರಿಯೊಡನೆ ಹಿಂಬಾಲಿಸಿದರು ಆ ಪೈಕಿ ಒಬ್ಬರಾದ ಮೆ॥ ವಾಸುದೇವರಾಯರು ಈ ಮಹನೀಯರನ್ನು ಕುರಿತು ಮುಂದೆ ಹೇಳುವ ಅಭಿಪ್ರಾಯವನ್ನು ಉಪನ್ಯಾಸಮಾಡಿದರು —ಮೈಸೂರು ಶೀಮೆಯನ್ನು ಆಳುವ ನಮ್ಮ ಶ್ರೀಮನ್ಮಹಾರಾಜರವರು ರೆವಿನ್ಯೂ ಕಮಿಷನರ್ ಕೆಲಸಕ್ಕೆ ತಮ್ಮನ್ನು ಚುನಾಯಿಸಿ ಮೊಕರೂರು ಮಾಡಿರುವದು ಅತ್ಯಂತ ಶ್ಲಾಘ್ಯವಾದ್ದಾಗಿರುತ್ತೆ. ತಾವು ರೆವಿನ್ಯೂ, ಸಿವಿಲ್, ಕ್ರಿಮಿನಲ್, ಪೋಲೀಸ್ ಮೊದಲಾದ ಎಲ್ಲಾ ಖಾತೆಗಳಲ್ಲಿಯೂ ದಕ್ಷರಾದವರಾಗಿ ದೇಶದಲ್ಲೆಲ್ಲಾ ಪ್ರಖ್ಯಾತಿಪಡೆದು ಶೋಭಿಸುತ್ತಿರುವಿರಿ. ಮೇಲಾಗಿ ಬಹುಕಾಲದಿಂದ ಈ ದೇಶದಲ್ಲಿ ಬಗೆಬಗೆಯಾದ ಅಧಿಕಾರಗಳಲ್ಲಿರುತ್ತಾ ಪ್ರಜೆಗಳ ಮತ್ತು ನೌಕರರ ಕಷ್ಟಸುಖಗಳನ್ನು ಬಹಳ ಚೆನ್ನಾಗಿ ತಿಳಿದವರಾಗಿ ಅಂಥಾವರ ಕಷ್ಟಗಳನ್ನು ನಿವಾರಣೆಮಾಡಿ ಸುಖವನ್ನುಂಟು ಮಾಡುವ ದಕ್ಷರೆಂದು ಸಹಾ ಯಶಸ್ಸನ್ನು ಪಡೆದು ಇರುತ್ತೀರಿ. ಇಂಥಾ ತಮ್ಮನ್ನು ಈ ಪದವಿಗೆ ತಂದದ್ದಕ್ಕಾಗಿ ನಮ್ಮ ದೇಶದ ಸಮಸ್ತ ಪ್ರಜೆಗಳೂ ಶ್ರೀಮನ್ಮಹಾರಾಜರವರಿಗೆ ಕೃತಜ್ಞರಾಗಿರುತ್ತೇವೆ. ತಾವು ಈ ಪದವಿಗೆ ಬಂದ ಕೂಡಲೆ ಈ ನಮ್ಮ ತಾಲ್ಲೂಕಿನ ಪ್ರಜೆಗಳ ಕಷ್ಟ ವಿಚಾರಣೆ ಮಾಡಲು ಪ್ರಥಮತಃ ಇಲ್ಲಿಗೆ ದಯಮಾಡಿದ್ದಕ್ಕಾಗಿ ತಮಗೂ ತುಂಬಾ ಕೃತಜ್ಞರಾಗಿರುತ್ತೇವೆಂತ ಅರಿಕೆಮಾಡಿದ್ದಕ್ಕೆ ಅವರು ತಮ್ಮ ಗೌರವಕ್ಕೂ ಪದವಿಗೂ ತಕ್ಕಂತೆ ತಕ್ಕದ್ದು ಮಾತುಗಳನ್ನಾಡಿ ಎಲ್ಲರನ್ನು ಸಂತೋಷಪಡಿಸಿದರು. ನಂತರ ತಾ ೫, ೬, ೭, ಈ ಮೂರು ದಿವಸಗಳೂ ಈ ಚನ್ನಪಟ್ಟಣದಲ್ಲಿ ಮೊಕ್ಕಾಂಮಾಡಿ, ಜನಗಳ ಅಹವಾಲುಗಳನ್ನು ಕೇಳಿ, ತಾಲ್ಲೂಕ್ ಕಚೇರಿ ಇನ್ಸ್‌ಪೆಕ್ಷನ್ ಮಾಡಿಕೊಂಡು ೮ನೆ ತಾ ಪ್ರಾತಃಕಾಲ ಕ್ಲೋಸ್‌ಪೇಟೆಗೆ ಸವಾರಿ ಚಿತ್ತೈಸಿದರು.

ಚಿಕ್ಕಮಗಳೂರು.—ಬಿಸಲು ಜೋರಾಗಿದೆ. ಮಳೆ ಬರಲಿಲ್ಲ. ಆಕಾಶದಲ್ಲಿ ಮೋಡ ಕವಿಯುವದು ತಪ್ಪಲಿಲ್ಲ. ೧೨ ನೆ ತಾ ರಾತ್ರಿ ... ಸೆಂಟ್ ಮಳೆ ಆಯಿತು ಬಿಸಲಿನ ಝಳವನ್ನು ತಡೆಯುವದು ಕಷ್ಟವಾಗಿದೆ ಇಲ್ಲಿನ ತಾಲ್ಲೋಕ್ ಕಚೇರಿ ಕಟ್ಟಡವು ಮಲೆನಾಡಿನಲ್ಲಿ ನುಡಿಯುವ ಮಳೆಕಾಲಕ್ಕೆ ಅನುಕೂಲವಾಗಿ ಕಾಣುವದಿಲ್ಲವೆಂದೂ ಅಮಲ್ದಾರರು ತಮ್ಮ ಕೋರ್ಟಿನ ಕೆಲಸವನ್ನು ನಡಿಸುತ್ತಿರುವಾಗ ಸುತ್ತಲೂ ವ್ಯಾಜ್ಯಕ್ಕೋಸ್ಕರವಾಗಿ ಬಂದು ಕಾದಿರುವ ಜನರ ಗುಂಪು ನಿಂತಾಗುವ ಕಿರಿಯಿಂದಲೂ ಒಳಗಡೆಯಲ್ಲಿ ಬರವಣಿಗೆ ಕೆಲಸ ಮಾಡುವವರಿಗೂ ವಕಾಲತ್ತು ಮಾಡುವ ಲಾಯರುಗಳಿಗೂ ಬಹಳ ಕಷ್ಟವೆಂದೂ ಒಂದು ದಿನ ಕೋರ್ಟಿನಲ್ಲಿ ವಕಾಲತ್ತು ಮಾಡುತ್ತಿದ್ದ ಲಾಯರುಗಳಲ್ಲಿ ಒಬ್ಬರಿಗೆ ಶಖೆಯನ್ನು ಸಹಿಸಲಾರದೆ ಜ್ವರ ಬಂತೆಂದೂ ಹೇಳಿಕೊಳ್ಳುತ್ತಾರೆ ಹೀಗಿದ್ದರೆ ಸರಕಾರದವರು ಇದನ್ನು ಕೊಂಚ ಬದಲಾಯಿಸಿ, ಕಚೇರಿಯ ಕೆಲವು ಭಾಗದ ಮೇಲಿರುವ ತಗಡನ್ನು ತೆಗೆದು ಹಾಕಿ ಛಾವಣಿಯನ್ನು ಎತ್ತರಿಸಿ ಕಟ್ಟಿಸಿದರೆ ಒಳಗಡೆಯಲ್ಲಿ ಕೆಲಸ ಮಾಡುವವರಿಗೆಲ್ಲಾ ಅನುಕೂಲವಾಗುವದು —ಕಳೆದ ೨೬ ನೆ ತಾ. ಪೇಟೇ ಬೀದಿಯಲ್ಲಿ ಸುಟ್ಟು ಹೋದ ಚಲವಪಟ್ಟರ ಮನೆ ಬೆಂಕಿಯನ್ನು ಆರಿಸುವದಕ್ಕೆ ಹೋಗಿ ಬೆಂಕಿಯಲ್ಲಿ ಬಿದ್ದು ಕಷ್ಟಪಡುತ್ತಿದ್ದ ಮನುಷ್ಯನು ಸತ್ತು ಹೋದನು —ಇಲ್ಲಿದ್ದ ಪೋಲೀಸ್ ಸೂಪರಿಂಟೆಂಡೆಂಟ್ ಮೆ॥ ರಾಮಸ್ವಾಮಯ್ಯನವರು ಬೇರೆ ಕಡೆಗೆ ವರ್ಗಾಯಿಸಲ್ಪಟ್ಟರು. ಅವರ ಸ್ಥಾನಕ್ಕೆ ಮೆ॥ ವಿಲ್ಕಿನ್ಸನ್ ಸಾಹೇಬರು ಬಂದಿದಾರೆ —ಸಂತೆಯಲ್ಲಿ ಫಕೀರರ ಉಪದ್ರವನ್ನು ಯಾರೂ ಈ ವರಿಗೂ ತಪ್ಪಿಸಲಿಲ್ಲ. ಮೂರು ನಾಲ್ಕು ಜನ ಫಕೀರರು ಸೇರಿಕೊಂಡು ಒಬ್ಬ ಜಾಜುಬಿ ವ್ಯಾಪಾರ ಮಾಡುವ ಗೌಡನನ್ನು ಸುತ್ತಿಕೊಂಡು ಅವನನ್ನು ಬೈಯುತ್ತಾ, ಮೂರು ಕಾಸು ಕೊಡುವ ವರಿಗೂ ಹೋಗ ಬಿಡಲ್ಲವೆಂದು ಹೇಳುತ್ತಾ ಫಕೀರರೂ ಗೌಡನ ಕಿತ್ತಾಡುವದನ್ನು ಪೋಲೀಸಿನವರು ನೋಡಿದರೂ ಲಕ್ಷ್ಯಮಾಡದೆ ಇರುವದು ಯಾಕೋ ತಿಳಿಯದು ಹೀಗೆ ಅಂಗಡಿ ಇಟ್ಟಿರುವ ಒಬ್ಬನ ಬಳಿಗೆ ಫಕೀರನಷ್ಟು ಬೇರೆ ಭಿಕ್ಷಗಾರರೆಷ್ಟು. ವ್ಯಾಪಾರದಲ್ಲಿ ಒಬ್ಬ ಅಂಗಡಿಯವನು ಭಿಕ್ಷಗಾರರಿಗೆ ಒಂದಾಣೆಗೆ ಕಮ್ಮಿ ಇಲ್ಲದಂತೆ ಕೊಡಬೇಕಾಗುತ್ತದೆ ಹೀಗಿರುವಲ್ಲಿ ಅವರು ಕೇಳಿದಷ್ಟನ್ನೇ ಕೊಡಬೇಕೆಂದು ನಿರ್ಬಂಧಪಡಿಸುವವರ ಕಾಟದಿಂದ ತಪ್ಪಿಸುವವರ್ಯಾರು

ತುಂಕೂರು.—ಬಿಸಲೂ, ಮೋಡವೂ ಹೆಚ್ಚಾಗಿದೆ ಶೈಖೆಯ ಮೋಡವಿಶೇಷದಿಂದ ಸಹಿಸಲಾರದಷ್ಟಾಗಿದೆ ಕಳೆದ ೪ ನೇ ತಾ ಆರಂಭವಾಯಿತು ಮಳೆ ಪ್ರಾರಂಭವಾಗಿ ಆಗಾಗ್ಗೆ ಕೊಂಚ ಮಟ್ಟಿಗೆ ಆಗುತ್ತಲಿದೆ ವಿಶೇಷ ಮಳೆ ಬರುವದಕ್ಕೆ ಗಾಳಿ ಹೊಡತ ಜೋರಾಗಿರುವದರಿಂದ ತುಷಾರವೃಷ್ಟಿಯಾಗುತ್ತಲಿದೆ ಮುಂದೆ ಭಾರಿ ಮಳೆಗಳಾಗುವ ಸಂಭವ ತೋರುತ್ತಲಿದೆ —ಈಗ ಒಂದು ವಾರದಿಂದ ಬಿರುಸಾಗಿ ಗಾಳಿ ಬೀಸುವದರಿಂದ ಬಾಳೆ, ಮಾವು ಮುಂತಾದ ಫಸಲಿಗೆ ತುಂಬಾ ತೊಂದರೆ ಉಂಟಾದ್ದಲ್ಲದೆ ತಾ ೪ ನೇ ಮಂಗಳವಾರ ಬಸ್ತಾನೊಬ್ಬ ಬ್ರಾಹ್ಮಣ ಹೆಂಗಸು ಕೆರೆಯಲ್ಲಿರುವ ಭಾವಿಯಿಂದ ನೀರು ತೆಗೆದ ಕೊಡವನ್ನು ಮೆಟ್ಟಲು ಹತ್ತಿ ಮೇಲಕ್ಕೆ ಬರುತ್ತಿರುವಾಗ ಬಲವಾದ ಗಾಳಿಯ ಹೊಡತದಿಂದ ಹವನಕಟ್ಟಿ ನೆಲಕ್ಕೆ ಬೀಳುವಾಗ ತಲೆಯ ಮೇಲಿದ್ದ ಬಿಂದಿಗೆ ಕಾಲಮೇಲೆ ಬಿದ್ದು ಕಾಲು ಮುರಿದು ಹೋಯಿತು ನಂತರ ವಾರಸುದಾರರಿಂದ ಆಸ್ಪತ್ರೆಗೆ ಒಯ್ಯಲ್ಪಟ್ಟು ಇಲಾಜು ಹೊಂದುತ್ತಿದಾಳೆ. ಹೋದವರುಷಕ್ಕಿಂತಲೂ ಈ ವರುಷ ಇಲ್ಲಿ ಬಹಳ ಮದುವೆಗಳು. ಹೆಣ್ಣುಳ್ಳವರೆಲ್ಲರೂ ಸೇಟರು, ಹೊನ್ನುಳ್ಳವರೆಲ್ಲರೂ ದಾಯಾದಿಗಳು ಎಂಬಂತೆ ಬರುಗುತ್ತಲಿವೆ —ಈ ನಮ್ಮ ತುಂಕೂರಿಗೆ ೯—೧೦ ಮೈಲಿ ಫಾಸಲೆಯಲ್ಲಿ ಕೆಸ್ತೂರು ಎಂಬ ಒಂದು ಸಣ್ಣ ಗ್ರಾಮವಿರುತ್ತೆ. ಅಲ್ಲಿನ ಜನರು ಕಳೆದ ವಾರ ರಾಮಾಯಣ ಎಂಬ ಆಟವನ್ನು ಆಡುತ್ತಿರುವಾಗ ರಂಗಸ್ಥಳದ ಉಭಯಪಾರ್ಶ್ವಗಳಲ್ಲಿ ಬೆಳಕಿಗಾಗಿ ಎರಡು ಬಾಳೆ ಕಂಭಗಳ ಮೇಲೆ ಸೀಮೆಎಣ್ಣೆ ಹಾಕಿದ ತಪ್ಪಲೆಗಳಿಗೆ ಮುಚ್ಚಳ ಮುಚ್ಚಿ ಅದಕ್ಕೆ ರಂಧ್ರ ಮಾಡಿ ಬತ್ತಿ ಹಾಕಿ ಉರಿಯುವಂತೆ ಮಾಡಿದ್ದರು. ಈ ಮದ್ಯೆ ಆಟ ನಡೆಯುತ್ತಿರುವಾಗ ಅಕಸ್ಮಾತ್ತಾಗಿ ಯಾರಿಂದಲೋ ಬಾಳೇ ಕಂಭವು ತಗಲಿಸಲ್ಪಟ್ಟು ಕೆಳಕ್ಕೆ ಬೀಳುವಾಗ ಮೇಲಿದ್ದ ತಪ್ಪಲೆ ಉರುಳಿ ಅದರಲ್ಲಿದ್ದ ಸೀಮೆಯೆಣ್ಣೆ ಹತ್ತಿಕೊಂಡು ನೋಟಕ್ಕಾಗಿ ಬಂದಿದ್ದ ಬಹು ಜನರ ಗುಂಪಿಗೆ ಬಿದ್ದು ಉರಿ ಹತ್ತಿಕೊಂಡಿತು ... ಗಲಾಟೆಯಲ್ಲಿ ಇನೊಂದು ದೀಪವೂ ಈ ಅವಸ್ಥೆಯನ್ನೇ ಹೊಂದಿ ಬಹು ಜನಕ್ಕೆ ಬೆಂಕಿ ತಗಲಿ ನಾನಾ ಗಾಯಗಳಾದವು. ಅದರಲ್ಲಿ ... ಬ್ಬರಿಗೆ ಬಹಳ ಉರಿ ತಾಗಿದ್ದರಿಂದ ಇಲ್ಲಿನ ಆಸ್ಪತ್ರೆಗೆ ತೆಗೆದುಕೊಂಡು ಬಂದಿದ್ದರು ಆದರೂ ಅವರಿಗೆ ಗುಣವಾಗದೆ ಆ ಇಬ್ಬರೂ ಸತ್ತು ಹೋದರು ಈ ಸಂದರ್ಭದಲ್ಲಿ ಅಲ್ಲಿನ ಜನರು ರಾಮಾಯಣವನ್ನು ಸರ್ಕಾರಿ ಅಪ್ಪಣೆ ಹೊಂದದೆ ಆಡಿರುವದಲ್ಲದೆ ಈ ಅನಾಹುತ ಉಂಟಾಗಿರುವದಕ್ಕೂ ಕೂಡ ವಿಚಾರಣೆ ಬಗ್ಗೆ ೧೨ ಜನರನ್ನು ದಸ್ತಗಿರಿ ಮಾಡಿ ಕರೆದುಕೊಂಡು ಬಂದಿರುತ್ತಾರೆ.

ಇದನ್ನು ನೋಡಿದರೆ ನೀವು ಬಹು ಆಶ್ಚರ್ಯ ಪಡುವಿರಿ!!!

69-3

ನಮ್ಮ ಪ್ರಸಿದ್ಧವಾದ ಪುಸ್ತಕಭಂಡಾರದಲ್ಲಿ ಅನೇಕ ಸಹಸ್ರ ರೂಪಾಯಿನ ಕನ್ನಡ ಗ್ರಂಥಗಳೂ, ಶಾಲಾಪುಸ್ತಕಗಳೂ, ಪೇನಾ, ಪೆನ್ಸಿಲ್, ನೋಟುಬುಕ್, ನಾನಾ ವಿಧವಾದ ಕಾಗದದ ಟೋಪಿಗಳು, ವೃತ್ತಾಂತ ಪತ್ರಿಕೆ, ಮಹಿಳಾಸುಖ ಕನ್ನಡ ಗ್ರಂಥ ಮಿತ್ರ, ಪ್ರಾಗ್ರೆಸ್, ಹಾರ್ವೆಸ್ಟ್ ಫೀಲ್ಡ್ ಮುಂತಾದ ಪ್ರಸಿದ್ಧವಾದ ವರ್ತಮಾನ ಪತ್ರಿಕೆಗಳೂ ಇಲ್ಲಿ ಅನೇಕ ಸಾವಿರಗಟ್ಟಲೆಯಾಗಿ ಮಾರಾಟವಾಗುತ್ತಿವೆ ಈ ಡಿಪೋ ಕಟ್ಟಡವು ರಾಜಧಾನಿಯಲ್ಲಿ ಬಹು ಪ್ರಸಿದ್ಧವಾದ ಸ್ಥಳವೆಂದು ಮೈಸೂರು ದೇಶದಲ್ಲೆಲ್ಲಾ ಹೆಸರುಗೊಂಡಿದೆ ಈ ಕೆಳಗೆ ನಮೂದಿಸಿರುವ ಪುಸ್ತಕಗಳನ್ನು ಸ್ವಲ್ಪ ನೋಡಿ —

ಕಥಾಸಂಗ್ರಹ ೧ ರಿಂದ ೩ ಭಾಗಗಳು ಕ್ರಯ ೧—೦—೦
ವಿ ಪಿ ಪಿ ಮೂಲಕ ೧—೩—೦

ಅನುಭವಸಾರ ಕ್ರಯ ೦-೧-೨—೦

ಗ್ರೀಕರ ಚರಿತ್ರೆ „ ೦—೨—೦

ರೋಮನರ ಚರಿತ್ರೆ „ ೦—೨—೦

ಕನ್ನಡ—ಇಂಗ್ಲಿಷ—ಹಿಂದೂಸ್ಥಾನಿ ಭಾಷಾಮಂಜರಿ. ಈ ಪುಸ್ತಕದಿಂದ ಇಂಗ್ಲಿಷ್ ಮತ್ತು ಹಿಂದುಸ್ಥಾನಿ ಭಾಷೆಗಳನ್ನು ಬಹು ಸುಲಭವಾಗಿ ಕಲಿಯಬಹುದು ಇದರ ಕ್ರಯ ಎಂಟೇ ಆಣೆ
ವಿ ಪಿ ಪಿ ಮೂಲಕ ೦—೧೦—೦

ಶ್ರೀಚಾಮರಾಜೇಂದ್ರ ಒಡೆಯರವರ ಚರಿತ್ರೆ. ಉತ್ಕೃಷ್ಟವಾದ ಪುಸ್ತಕ ಅನೇಕ ಚಿತ್ರಗಳು ಇವೆ ಇದನ್ನು ಕಾರಿತ್ರ ರಾಜಸೇವಾಪ್ರವೀಣ ಎಂ ಬಿ ಶ್ರೀನಿವಾಸಯ್ಯಂಗಾರ್ ರವರು ಬರೆದಿದ್ದಾರೆ ... ಒಂದು ಉತ್ಕೃಷ್ಟವಾದ ಆವೃತ್ತಿಯನ್ನು ಬರೆದಿದಾರೆ ಕ್ರಯ ೧—೮—೦
ವಿ ಪಿ ಪಿ ಮೂಲಕ ೧—೧೦—೦

ಎಡ್ವರ್ಡ್ ಸಾರ್ವಭೌಮರ ಜೀವಚರಿತ್ರೆ ೦—೪—೦

ಕ್ರಿಮಿವರ್ಗವರ್ಣನೆ ೦—೧—೦

ಪಕ್ಷಿಗಳ ಚರಿತ್ರೆ ೦—೧—೦

ಪ್ರಾಚೀನ ಜೀವರಾಶಿಗಳ ವರ್ಣನೆ ೦—೧—೦

ಸಣ್ಣವರಿಗೆ ಹೇಳುವ ಕಥೆಗಳು ೦—೭—೦

ಬಾಲಿಕಾಗೀತಮುಕ್ತಾಕಲಾಪ, ಗೀತಮಂದಾರ ೧—೨—೦, **ಕಲ್ಯಾಣಗೀತಾವಳಿ** ೦—೫—೦ ಈ ಸಾಹಿತ್ಯ ಪುಸ್ತಕಗಳು ನಮ್ಮಲ್ಲಿ ಯಾವಾಗಲೂ ದೊರೆಯುತ್ತವೆ

ಮುದ್ರಾಮಂಜೂಷ ಈ ಪುಸ್ತಕದ ವಿವರವನ್ನು ನಾವು ಆಗಾಗ್ಗೆ ವೃತ್ತಾಂತ ಪತ್ರಿಕೆಯಲ್ಲಿ ಪ್ರಕಟಿಸಿರುವದನ್ನು ವಾಚಕರು ನೋಡಿರಬಹುದು, ಇದರ ಕ್ರಯ ೧—೯—೦

ಭೂಗೋಳಸಂಗ್ರಹ ೦—೪—೦

ಕ್ಷೇತ್ರಗಣಿತಸಂಗ್ರಹ ೦—೩—೦

ಹಿಂದೂದೇಶ ಪ್ರದಕ್ಷಿಣ ಈ ಪುಸ್ತಕದ ವಿವರವನ್ನೆಲ್ಲಾ ನಾವು ಬಹು ದೀರ್ಘವಾಗಿ ಈ ಪತ್ರಿಕೆಯ ನಾಲ್ಕೈದು ಸಂಚಿಕೆಗಳಲ್ಲಿ ವಿವರಿಸಿರುತ್ತೇವೆ ಇದರ ಕ್ರಯ ೦—೮—೦ ವಿ ಪಿ ಪಿ ಮೂಲಕ ೦—೧೧—೦

ವಸಂತಮಿತ್ರವಿಜಯನಾಟಕಂ ಬಹು ರಸಿಕವಾಗಿದೆ ೦ ೮—೦

ಅರೇಬಿಯನ್ ನೈಟ್ಸ್ ಅಥವಾ ಯಾವನಯಾಮಿನೀ ವಿನೋದ ಕಥೆಗಳು ಈ ಪುಸ್ತಕವು ಲೋಕಪ್ರಸಿದ್ಧವಾದುದೆಂದು ಎಲ್ಲರೂ ಒಪ್ಪಿಕೊಳ್ಳುತ್ತಾರೆ ನಾನೂರು ಎಪ್ಪತ್ತು ಪುಟಗಳುಳ್ಳದ್ದು ಭಾರಿ ಪುಸ್ತಕ ಭಾಷೆಯೂ ಬಹು ಸರಳವಾಗಿದೆ ಪುಸ್ತಕವನ್ನು ಒಂದಾವರ್ತಿ ಓದಿದ ಮೇಲೆ ಅದನ್ನು ಪುನಃ ಪುನಃ ಓದುವಂತೆ ಅದು ಮನಸ್ಸನ್ನು ಆಕರ್ಷಿಸುವದು ಇದರ ಕ್ರಯ ಎರಡೇ ರೂಪಾಯಿ ವಿ ಪಿ ಪಿ ಮೂಲಕ ೨—೩—೦ ಹತ್ತು ಅಥವಾ ಹದಿನೈದು ವರ್ಷಗಳ ಹಿಂದೆ ಇದರ ಕ್ರಯ ಎಂಟು ರೂಪಾಯಿ ಎಂದು ಅನೇಕರಿಗೆ ಗೊತ್ತು ಇದನ್ನು ಬಿಸವರು, ಐಶ್ವರ್ಯವಂತರು ಓದುವಂತೆ ಪುನಃ ಛಾಪಿಸಿ ಇಷ್ಟು ದೊಡ್ಡ ಪುಸ್ತಕವನ್ನು ಇಷ್ಟು ಸುಲಭ ಕ್ರಯಕ್ಕೆ ಮಾರುತ್ತೇವೆ ಹನ್ನೆರಡು ಪುಸ್ತಕಗಳನ್ನು ಒಟ್ಟಿಗೆ ತರಿಸಿಕೊಂಡವ, ಪುಸ್ತಕಕ್ಕೆ ಎರಡು ಆಣೆಯಂತೆ ಕಮಿಷನ್ ಕೊಡುತ್ತೇವೆ ಜಾಗ್ರತೆ ನೋಡಿ

ಮುಖ್ಯವಾಗಿ, ಸ್ನೇಹಿತರೇ, ತಾವು ರಾಜಧಾನಿಗೆ ಬರುವಾಗಲೆಲ್ಲಾ ನಮ್ಮ ಪುಸ್ತಕಾಲಯವನ್ನು ನೋಡಿಯೇ ಹೋಗಬೇಕೆಂದು ಕೇಳಿಕೊಳ್ಳುತ್ತೇವೆ. ನಿಮಗೆ ಪುಸ್ತಕವಲ್ಲದೆ ಬೇರೆ ಯಾವದಾದರೂ ಪದಾರ್ಥಗಳಾಗಲೀ ಅಥವಾ ಸಂಗತಿಗಳಾಗಲೀ ಅಪೇಕ್ಷಿಸುವ ಸಂದರ್ಭದಲ್ಲಿ ನೀವು ನಮಗೆ ಒಂದು ಕಾರ್ಡು ಬರೆದರೆ ತಕ್ಷಣವೇ ಜವಾಬು ಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ನಮ್ಮ ವಿಳಾಸ — ಮ್ಯಾನೇಜರ್,
ಸಿ. ಎಲ್ ಎಸ್. ಬುಕ್ ಡಿಪೋ, ಮೈಸೂರು.

P. SUBBROYA'S
World Renowned and most Efficacious
Ayurvedic Medicines

ಪಿ ಸುಬ್ಬರಾಯಿಯವರ
ಲೋಕಪ್ರಸಿದ್ಧವಾದ ಮತ್ತು ಅತ್ಯಂತ ಗುಣಕಾರಿಯಾದ
ಆಯುರ್ವೇದ ಔಷಧಗಳು.

11 27

೧ **ಪುಷ್ಟಿರಸಾಯನ** —ಇದರ ಸೇವನೆಯಿಂದ ನರಗಳ ಸಂಬಂಧವಾದ ಮತ್ತು ಇತರ ವಿಧವಾದ ಎಲ್ಲಾ ಶರೀರದ ದುರ್ಬಲಗಳೂ ಹೋಗಿ, ಹೊಟ್ಟೆಯಲ್ಲಿ ಅಗ್ನಿ ಉಂಟಾಗಿ, ದೇಹವು ಪುಷ್ಟಿಹೊಂದುವದು ಪುಷ್ಟಿಯನ್ನು ಕಳೆದುಕೊಂಡ ಚಿಕ್ಕವರುಗಳು ನವರಿಗೆ ಇದು ಶ್ರೇಷ್ಠ ಔಷಧವು ಇದರಿಂದ ಶರೀರದ ಪ್ರತಿ ಅವಯವದ ನೋವೂ, ಅಶಕ್ತಿಯೂ ಹೋಗಿ ಪುಷ್ಟಿಯೂ, ಬಲವೂ ಉಂಟಾಗುವವು ಪೆಟ್ಟಿಗೆಗೆ ರೂ ೨ ವಿ. ಪಿ ಚಾರ್ಜಿ ಆಣೆ.

೨ **ಅಜೀರ್ಣ ಗುಳಿಗೆ** —ಅಜೀರ್ಣ, ತೇಗುವುದು, ಹೊಟ್ಟೆಯಲ್ಲಿ ಉರಿ, ಮತ್ತಾಗಿರುವಿಕೆ ... ಪಿತ್ತ, ಬಾಯಿಯ ದುರ್ಗಂಧ, ಹೊಟ್ಟೆಶೂಲೆ ನಿದ್ರೆ ಹತ್ತದಿರುವಿಕೆ, ತಲೆತಿರುಗುವದು, ಇವೆಲ್ಲಾ ನಿರ್ಮೂಲವಾಗುವವು ಪೆಟ್ಟಿಗೆಗೆ ೮ ಆಣೆ ವಿ ಪಿ ೨ ಪೆಟ್ಟಿಗೆ ವರೆಗೆ ಛಾಂಗಿ ಛಾರ್ಜು ೫ ಆಣೆ

೩ **ಲಕ್ಷ್ಮೀಕರ ಕಸ್ತೂರಿಮಾತ್ರೆ**—ಇದು ತಾಂಬೂಲಕ್ಕೆ ಪ್ರಾಣಮಿತ್ರನು ಇದರಿಂದ ಬಾಯಿಯ ದುರ್ಗಂಧವು ಹೋಗುವದು, ಭೋಜನಾನಂತರ ತಾಂಬೂಲದ ಸಂಗಡ ೧—೨ ಮಾತ್ರೆಗಳನ್ನು ಸೇವಿಸಿದರೆ, ಇತರ ಸುವಾಸನಾದ್ರವ್ಯಗಳು ಅನಾವಶ್ಯಕವಾಗಿರುವುದಲ್ಲದೆ, ಅಲ್ಪಕಾಲದಲ್ಲಿ ಅತ್ಯಂತ ಕಠಿಣವಾದ ಆಹಾರವನ್ನು ಕೂಡ ಜೀರ್ಣಕ್ಕೆ ತರುವುದು ಬೆಳಿಗ್ಗೆ ಊಟಕ್ಕೆ ಮುಂಚೆ ೨ ಮಾತ್ರೆಗಳನ್ನು ಕ್ರಮವಾಗಿ ಸೇವಿಸುತ್ತಿದ್ದರೆ ಅಜೀರ್ಣ, ಮಂದ, ಹಲ್ಲುವೇದನೆ, ಹೊಟ್ಟೆಯುರಿ, ಇವುಗಳು ವಾಸಿಯಾಗುವವು ಇದರಲ್ಲಿ ಅಫೀಮು ಮುಂತಾದ ಮತ್ತು ಪ್ರತಿಬಂಧಕವಾದ ಯಾವ ವಸ್ತುವೂ ಇಲ್ಲದ್ದರಿಂದಲೂ, ಇದರ ತಯಾರಿಗೆ ಕಸ್ತೂರಿ ಸುವರ್ಣ ವರಕು ಮುಂತಾದ ಅಮೂಲ್ಯ ವಸ್ತುಗಳು ಸೇರಿರುವದರಿಂದಲೂ ಎಳೇ ಮಕ್ಕಳಿಂದ ಮುದುಕರವರಿಗೆ ಎಲ್ಲರೂ ತಾಂಬೂಲದ ... ಅಥವಾ ಒರಿಸಿಯಲ್ಲಿ ಹಾಕಿಕೊಂಡು ಉಪಯೋಗಿಸಬಹುದು ... ಸೇವಿಸುವದರಿಂದ ದೇಹದಲ್ಲಿ ರೋಗಕ್ಕೆ ಆಸ್ಪದ ... ಜ್ವರ, ನೆಗಡಿ, ಕೆಮ್ಮಲು ಮುಂತಾದವುಗಳಿಗೆ ಸಣ್ಣ ಮಕ್ಕಳಿಂದ ದೊಡ್ಡವರಿಗೆ ೧ ರಿಂದ ೪ ಮಾತ್ರೆಗಳಂತೆ ... ಕೊಡಬಹುದು ಸುಮಾರು ೨೦೦ ಮಾತ್ರೆ ಉಳ್ಳ ಸೀಸೆಗೆ ೪ ಆಣೆ ೧ ರಿಂದ ೧೨ ಸೀಸೆ ವಿ ಪಿ ಛಾಂಗಿ ಚಾರ್ಜು ೫ ಆಣೆ

೪ **ವೇದನಾಹರ ತೈಲ**—ಇದನ್ನು ನೋವುಗಳಲ್ಲಿ ಮಾತ್ರ ಹಚ್ಚುವದರಿಂದ ಪ್ರಕಾಶ ... ವಾತರೋಗ ಪಾರ್ಶ್ವವಾಯು, ನರಗಳ ... ಮೊಣಕಾಲು ಸೊಂಟ ಮತ್ತು ಎದೆ ಇವುಗಳ ನೋವು, ... ಕೀಲಿನ ನೋವು ತಲೆಶೂಲೆ, ಹಲ್ಲುನೋವು ಕಿವಿನೋವು, ಚಳಿ, ಕೆಮ್ಮು ಮುಂತಾದ ಎಲ್ಲಾ ವಿಧವಾದ ನೋವುಗಳು ಖಂಡಿತವಾಗಿ ವಾಸಿಯಾಗುವವು ಸೀಸೆ ೧ಕ್ಕೆ ೧ ರೂ ೩ ಬಾಟ್ಲಿ ವರೆಗೆ ವಿ ಪಿ ಛಾಂಗಿ ಚಾರ್ಜು ೫ ಆಣೆ

೫ **ಲೋಕಪ್ರಸಿದ್ಧವಾದ ಪರಿಮಳ ಕೇಶತೈಲವು** —ಬೋಳುತಲೆ, ಕೂದಲು ಅಥವಾ ಹೊಟ್ಟು ಉದುರುವಿಕೆ, ಇವು ಸಂಪೂರ್ಣವಾಗಿ ವಾಸಿಯಾಗುವದಲ್ಲದೆ, ತಲೆಯ ನರ್ವ್ ಮೆದುಳನ್ನು ತಣ್ಣಗಿರುವಂತೆ ಮಾಡಿ, ಕಳೆ, ವಿಸಾಸೆ, ... ಕೂದಲುಗಳನ್ನು ಹೇರಳವಾಗಿ ಬೆಳೆಸುವದು ಮತ್ತು ಕಣ್ಣು ವಿಷಯ ಸಂಬಂಧವಾದ ರೋಗಗಳನ್ನೆಲ್ಲಾ ವಾಸಿಮಾಡುವದು ಬಹಳ ಮನೋರಂಜಕವಾಗಿ ಪರಿಮಳಿಸುವದು ಬೆಲೆ ಸೀಸೆ ೧ಕ್ಕೆ ೮ ಆಣೆ ೨ ಸೀಸೆ ವರೆಗೆ ವಿ ಪಿ ಛಾರ್ಜು ೫ ಆಣೆ

೬. **ನೇತ್ರಬಿಂದು** —ಸಮೀಪದೃಷ್ಟಿ, ಕಣ್ಣಿನಲ್ಲಿ ನೀರು ಸುರಿಯುವುದು, ಕಣ್ಣುನೋವು ... ಬಿರುವುದು, ಉರಿ ಮುಂತಾದ ನೇತ್ರರೋಗಗಳು ಇದರಿಂದ ಗುಣವಾಗುವವು ಸೀಸೆ ೧ಕ್ಕೆ ೮ ಆಣೆ ವಿ ಪಿ ಚಾರ್ಜು ೬ ಸೀಸೆ ವರೆಗೂ ೫ ಆಣೆ

೭ **ಕರ್ಣಬಿಂದು** — ಕಿವಿಯು ಎಷ್ಟು ಹೆಚ್ಚಾಗಿ ನೋಯುತ್ತಿದ್ದರೂ ಅದನ್ನು ಶೀಘ್ರ ಸರಿಯಾಗುವುದು, ಕಿವಿಯ ಮಾಂದ್ಯವು, ಕಿವುಡು ಮುಂತಾದ್ದನ್ನು ಜಾಗ್ರತೆ ಪರಿಹರಿಸುವುದು, ಬೆಲೆ ಸೀಸೆ ೧ಕ್ಕೆ ೮ ಆಣೆ ವಿ ಪಿ ಛಾರ್ಜು ೬ ಸೀಸೆ ವರೆಗೂ ೫ ಆಣೆ.

೮ **ಖಜ್ಜಿ ಕಲ್ಲಿಗೆ ಔಷಧಿ** —ಚರ್ಮ ರೋಗಕ್ಕೂ, ಚರ್ಮಗತವಾದ ಎಲ್ಲಾ ವ್ಯಾಧಿಗಳಿಗೂ ಅತ್ಯುತ್ತಮವಾದ ಮದ್ದು ಒಂದು ಸಾರಿ ವಾಸಿಯಾದ ಮೇಲೆ ಪುನಃ ತಲೆದೋರುವದಿಲ್ಲ ಸೀಸೆ ೧ಕ್ಕೆ ೪ ಆಣೆ ವಿ ಪಿ ಛಾರ್ಜು ೬ ಸೀಸೆ ವರೆಗೂ ೫ ಆಣೆ

೯. **ಸುಖಭೇದಿ** —ಹೊಟ್ಟೆನೋವು ಆಯಾಸ ಯಾವದೂ ಸ್ವಲ್ಪವೂ ಉಂಟಾಗದಂತೆ ಸುಖವಾಗಿ ಭೇದಿಯಾಗುವದು ಮಲಬಂಧ, ಅಜೀರ್ಣ, ವಾಯು, ಎದೆಯುರಿಯುವದು, ಪಿತ್ತ, ಜ್ವರ, ಇವುಗಳನ್ನು ವಾಸಿಮಾಡುವುದು ಸೀಸೆ ೧ಕ್ಕೆ ೮ ಆಣೆ ವಿ ಪಿ ಛಾರ್ಜು ೬ ಸೀಸೆ ವರೆಗೂ ೫ ಆಣೆ

ಕಾಗದವನ್ನು ಇಂಗ್ಲಿಷ್ ಅಥವಾ ತಮಿಳಿನಲ್ಲಿ ಬರೆಯಿರಿ.

Apply to —**P. SUBBAROY,**
Porto Novo, South Arcot.

ವಿಳಾಸ.—ಪಿ. ಸುಬ್ಬರಾಯ್,
ಪೋರ್ಟನೋವೋ, ದಕ್ಷಿಣ ಆರ್ಕಾಟ್ ಜಿಲ್ಲಾ.

ಮೈಸೂರು ಸೀಮೆಯಲ್ಲಿ ಪ್ಲೇಗಿನ ಸ್ಥಿತಿ.

27—4—1906 ರಿಂದ 4—5—1906 ರ ವರೆ(ಗೆ)

ಸ್ಥಳ	ಪ್ಲೇಗ್ ತಗಲಿದ್ದು	ಪ್ಲೇಗ್ ಸತ್ತದ್ದು	ಹೋ(...) ಈ (...)
ಬೆಂಗಳೂರು ಪಟ್ಟಣ	1	2	0
ಮೈಸೂರು „	0	0	0
ಬೆಂಗಳೂರು ಡಿಸ್ಟ್ರಿಕ್ಟ್	1	1	0
ಮೈಸೂರು „	0	0	0
ಕೋಲಾರ್ „	0	0	0
ಕೋಲಾರ್ ಚಿನ್ನದ ಗಣಿಗಳು	1	2	0
ತುಮಕೂರು ಡಿಸ್ಟ್ರಿಕ್ಟ್	0	0	0
ಹಾಸನ (ಹೊರಗಿನದು)	0	0	0
ಚಿತ್ರದುರ್ಗ „	0	0	1
ಕಡೂರ್ „	0	0	0
ಶಿವಮೊಗ್ಗ „	0	0	0
ಜುಮ್ಲಾ	5	5	1

ಶಾಲಿವಾಹನ ಶಕ ವರುಷಂಗಳು ೧೮೨೮ ನೇ ಪರಾಭವ ಸಂವತ್ಸರದ ವೈಶಾಖ ಬಹುಳ ದಶಮಿ ಗುರುವಾರದಿಂದ ವೈಶಾಖ ಬಹುಳ ಅಮಾವಾಸ್ಯೆ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ

೧೯೦೬ ನೇ ಇಸವಿ ಮೇ.

ತಾ	ವಾರ	ತಿಥಿ	ಘಳಿಗೆ.	ನಕ್ಷತ್ರ	ಘಳಿಗೆ
17	ಗುರು	ದಶಮಿ	57 46	ಪೂಭಾ	56 8
18	ಶುಕ್ರ *	ಏಕಾದಶಿ	59 39	ಪೂಭಾ	59-31
19	ಶನಿವಾರ	ದ್ವಾದಶಿ	60 0	ರೇ	60 0
20	ರವಿವಾರ	ದ್ವಾದಶಿ	2 10	ರೇ	1 24
21	ಚಂದ್ರ	ತ್ರಯೋದಶಿ	6 12	ಕೃ	9 36
22	ಕುಜ	ಚತುರ್ದಶಿ	10-56	ಭ	13 31
23	ಬುಧ	ಅಮಾವಾಸ್ಯೆ	15 51	ಕೃ	22 9

* ಸ್ಮಾರ್ತ ಏಕಾದಶೀ ಉಪವಾಸ ... ವೈಷ್ಣವ ಪಾರಣೆ ... ಅಮಾವಾಸ್ಯೆ ... ಪ್ರತಿ...

ಪೇಟೇ ಧಾರಣೆ.

ವಿನಸಿ		ಮೈಸೂರು	ಬೆಂಗಳೂ(ರು)
ಕಾಳಿ ಅಕ್ಕಿ ಪಲ್ಲಾ ೧ಕ್ಕೆ	ರೂ	೧೩—೯—೦	[illegible]
ಕೆಂಪು ಅಕ್ಕಿ ಅವಲ್		೧೩—೯ ೦	[illegible]
„ ದುಯಂ		೧೨ ೧—೨—೦	[illegible]
ಜಾಸಾಜಿ ಅಕ್ಕಿ		೧೨ ೮—೦	[illegible]
ಸಣ್ಣಕ್ಕಿ ಅವಲ್		೧೯—೮—೦	[illegible]
„ ದುಯಂ		೧೩ ೮ ೦	[illegible]
ತೊಗರಿ ಬೇಳೆ ಪಲ್ಲಾ ೧ಕ್ಕೆ		೧೬ ೮—೦	[illegible]
„ ದುಯಂ		೧೦—೦—೦	[illegible]
ಸೈರ ರಾಗಿ ಪಲ್ಲಾ ೧ಕ್ಕೆ		೬—೧೪—೦	[illegible]
ಕಾರಾಗಿ		೬—೮ ೦	[illegible]
ಜೋಳ		೩—೪—೦	[illegible]
ಹಲಸಂದೆ ಪಲ್ಲಾ ೧ಕ್ಕೆ		೯—೪—೦	[illegible]
ಬಿಳೀ ಅವರೆ		೮—೦—೦	[illegible]
ಹೆಸರು		೧೦—೮—೦	[illegible]
ಉದ್ದು		೧೨ ೪ ೦	[illegible]
ಕಡಲೆ		೧೦—೮—೦	[illegible]
ಎಳ್ಳು ಸೆ ೧೨೩ ಕ್ಕೆ		೨೦—೦—೦	[illegible]
ಹುರುಳಿ		೮—೦—೦	[illegible]
ಹರಳು ೧೨೩ ಸೇರಿಗೆ		೧೩ ೮ ೦	[illegible]
ಸೀಗೇಕಾಯಿ ಮಣ ೧ಕ್ಕೆ		೩—೦ ೦	[illegible]
ಮೆಣಸಿನಕಾಯಿ		೪ ೦—೦	[illegible]
„ ದುಯಂ		೩—೪—೦	[illegible]
ಬೆಲ್ಲ ದೊಡ್ಡ ಅಚ್ಚು		೩—೧೨—೦	[illegible]
ಒಳ್ಳೆಣ್ಣೆ ಮಣ ೧ಕ್ಕೆ		೫—೧೨—೦	[illegible]
ಹರಳೆಣ್ಣೆ „		೫—೦ ೦	[illegible]
ಕೊತ್ತುಂಬರಿ ಪಲ್ಲಾ ೧ಕ್ಕೆ		೧೧—೮—೦	[illegible]
ಉಪ್ಪು „		೬—೦—೦	[illegible]
ಹುಣಸೇ ಹಣ್ಣು		೧—೨—೦	[illegible]
„ ಹಳೇದು		೦—೮—೦	[illegible]
ತುಪ್ಪ		೧೬—೮—೦	[illegible]
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ		೫—೪—೦	[illegible]
ತೆಂಗಿನಕಾಯಿ ೧೦೦ ಕ್ಕೆ		೫ ೪—೦	[illegible]
ಅಳಲೇಕಾಯಿ ಮಣ ೧ಕ್ಕೆ		೦ ೧—೨—೦	[illegible]
ಅಂಟ್ವಾಳದ ಕಾಯಿ ಮಣ ೧ಕ್ಕೆ		೦ ೧—೨—೦	[illegible]
ಚಿನ (ಪವನ್) ಕೆಂಪು		೧೫—೪—೦	[illegible]
„ „ ಪಸಿಮೆ		೧೫—೧೦ ೦	[illegible]
„ „ ಗಟ್ಟಿ ತೊಲ ೧ಕ್ಕೆ		೨೩—೧—೨—೦	[illegible]
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ		೮೫—೦—೦	[illegible]

Printed and Published by the Rev E W THOMPSO(N) the Proprietor and Manager, Wesleyan Mission P(ress) Mysore 17/5/1906.

ವೃತ್ತಾಂತ ಪತ್ರಿಕೆ.

REGISTERED M. 20

ಕ್ರಯ ೧ ದುಡ್ಡು ———— ಕ್ರಯ ೧ ದುಡ್ಡು

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಪುಸ್ತಕ ೧೯ | ಮೈಸೂರು—ಸನ್ ೧೯೧೩ ನೇ ಇಸವಿ ಮೇ ತಾರೀಖು ೨೯ ನೇ ಗುರುವಾರ. | ಸಂಚಿಕೆ ೫೧

೫೦೦೦ ಪವರ್ ಫುಲ್ ದಾರ ಮಾತ್ರ ಇದೆ.

40-14

ಹುರಿಯಿರುವ ಪ್ರೌಲ್ ಪವರ್ ೧ ಕ್ಕೆ ೧—೧೦—೦
ಶರ್ ಸೂಪ್ರರ " " " ೧—೧೪—೦
ಪುರಿಯಿರುವ " " " ೨—೦—೦
ಹೊಸಿಯರಿ " " " ೩—೪—೦
ಕೇರ್ ಟೋಪಿ ಡಜನ್ ೧ ಕ್ಕೆ ೭—೦—೦, ಒಂದೇ ದಫಾ ೧೦ ತರಿಸಿಕೊಳ್ಳುವವರಿಗೆ ೬—೧೨—೦
ಸ್ ಸಮೂನೆ ದೊಡ್ಡ ಸ್ಟಾಕು ಪೋಸ್ಟು ಕಾರ್ಡುಗಳು.
ಸಿಂಗಲ್ ಕಲರ್ ೧೦೦ ಕ್ಕೆ ೦-೨-೬. ೧೦೦೦ ೧-೪-೦
ಕಲರ್ ಕಲರ್ ೧೦೦ ಕ್ಕೆ ೦-೩-೦. ೧೦೦೦ ೧-೧೦-೦
ವಿ. ಪಿ. ಮೂಲಕ ತರಿಸಿಕೊಳ್ಳುವವರು ಮಾತ್ರ ೧೦೦ ಕ್ಕೆ ೨೫ ಮುಂಚಿತವಾಗಿ ಕಳುಹಿಸದ ಹೊರತು ವಿ. ಪಿ. ಮೂಲಕ ಕಳುಹಿಸುವುದಿಲ್ಲ.
ಕೆ. ಪಿ. ಪೋರವಾಲ್ ಕಂಪನಿ, ಬೆಂಗಳೂರು ಸಿಟಿ.

ಹೊಮಿಯೊಸಿಯಾ.

ತಗಲುತ್ತಲೇ ನೋವು ವಾಸಿಯಾಗುತ್ತೆ.

ಔಷಧಿಯನ್ನು ಮನೆ, ಅರಮನೆ, ಕಾರ್ಖಾನೆ, ಆಸ್ಪತ್ರೆ, ಪಾಠಶಾಲೆ, ವಿದ್ಯಾಶಾಲೆ, ಕೋರ್ಟು, ಕಛೇರಿ, ಮುಂತಾದ ಸ್ಥಳಗಳಲ್ಲಿ ಇಡಬೇಕು. ಇದಕ್ಕೆ ಸಮಾನವಾದ ಔಷಧ ಮತ್ತಾವುದೂ ಲೋಕಪ್ರಸಿದ್ಧವಾಗಿದೆ.
ತೈಲವು ಅಲ್ಪಕಾಲದಲ್ಲಿ ಜನರಿಗೆ ಮಹತ್ತಾಗಿ ಸಿಕ್ಕಿದ ಔಷಧ ಇದನ್ನು ಉಪಯೋಗಿಸಿದ ದೊಡ್ಡ ಮನುಷ್ಯರು, ಡಾಕ್ಟರು ಮುಂತಾದವರು ಇದರ ಗುಣವನ್ನು ಹೊಗಳಿ ಸರ್ಟಿಫಿಕೇಟು ಕೊಟ್ಟಿರುತ್ತಾರೆ ನೀವೇ ಕಂಡು ಇದನ್ನು ಪರೀಕ್ಷಿಸಿ ನೋಡಬಹುದು.
ತೈಲವು ಅರೆ ತಲೆನೋವು, ಸೊಂಟನೋವು, ಪಾರ್ಶ್ವವಾಯು, ಮೂಲವ್ಯಾಧಿ, ಉಬ್ಬಸ, ವಾಯುಗಳು, ನರ ಸೆಳೆಯುವದು, ಕೀಲುನೋವು, ಗುಳ್ಳೆಗಳು, ಹಲ್ಲುನೋವು, ಮುಖ ಊದುವಿಕೆ, ಗಡ್ಡೆಗಳು, ರಣಗಳು, ತುರಿಕಜ್ಜಿ, ಸೊಳ್ಳೆ ಕಚ್ಚುವದು, ಚಳಿ ಕಾಯಿಲೆ, ಬೆಂಕಿಯಲ್ಲಿ ಸುಟ್ಟದ್ದು, ಕತ್ತಿ ಗಾಯ—ಇವೇ ಮೊದಲಾದ ನಾನಾ ಬಾಧೆಗಳನ್ನು ಹೋಗಿಸುತ್ತದೆ ಔಷಧವನ್ನು ಹಚ್ಚಿದರೆ ಸೊಳ್ಳೆ ಹತ್ತಿರ ಬರುವುದಿಲ್ಲ.
ಕ್ರಯ—ಸಣ್ಣ ಡಬ್ಬಿ ೧ ಕ್ಕೆ ೧ ರೂ., ದೊಡ್ಡದಕ್ಕೆ ರೂ. ೩, ಒಂದೇ ಸಲ ೧೨ ಡಬ್ಬಿ ತರಿಸಿದರೆ ಟಪ್ಪಾಲ್ ಖರ್ಚು ಬೀಳುತ್ತದೆ ರೂ. ೨—೮ ಆಣೆ ಬಾಬ್ತು ಡಬ್ಬಿಯಲ್ಲಿ ೧ ಡಬ್ಬಿಯದಕ್ಕಿಂತ ೪ ರಷ್ಟು ಹೆಚ್ಚು ಔಷಧವಿರುತ್ತೆ. ೨—೮ ರ ಈ ಡಬ್ಬಿಯನ್ನು ತರಿಸಿಕೊಳ್ಳುವವರಿಗೆ ಟಪ್ಪಾಲ್ ಖರ್ಚು ಬೀಳುತ್ತೆ.

****

ಹೋಮೋಸಿಯಾ ಯಂಬ್ರೋಕೇಷನ್.

ತೈಲವು ಕಾಲಿ ನೋವುಗಳಿಗೆ ಉಪಯೋಗಿಸತಕ್ಕದ್ದು. ಹಿಂದೆ ಹೇಳಿದ ಇದನ್ನು ಹಚ್ಚಿಕೊಂಡರೂ ಇದರಲ್ಲಿ ಹೋಮೋ ಗುಣಗಳು ಬಹಳ ಶ್ರೇಷ್ಠವಾಗಿ ಇರುತ್ತವೆ. ಅದಕ್ಕಿಂತಲೂ ಇನ್ನೆರಡು ಗುಣಗಳಲ್ಲಿ ಹೊಸ ಬಾಗವಿರುತ್ತದೆ. ಇದನ್ನು ಬಹು ಬೇಗನೆ ಸೇವಿಸಿಕೊಳ್ಳಬಲ್ಲದು. ಡಬ್ಬಿಗಳಲ್ಲಿ ತುಂಬಿ ೧, ೦ ರೂ ಗಳು ಒಂದರಂತೆ ಬಿಕರಿ ಮಾಡಲ್ಪಡುವದು. ೧೨ ತೆಗೆದುಕೊಂಡರೆ ಟಪ್ಪಾಲ್ ಖರ್ಚು ಮಾತ್ರ ಎಲ್ಲಾ ಸ್ಥಳಗಳಿಗೂ ಕಳುಹಿಸಲ್ಪಡುವದು.
ಔಷಧಗಳ ವಿವರಪಟ್ಟಿಯೂ, ಸರ್ಟಿಫಿಕೇಟುಗಳೂ ಬೇಕಾದವರು ಅಪೇಕ್ಷಿಸಿದರೆ ಕಳುಹಿಸುವೆವು.
ವಿಳಾಸ:—ಹೋಮೋಸಿಯಾ ಕಂಪೆನಿ, ೨೩ ಕಂಪು ಬೀದಿ, ಮದ್ರಾಸ್.

ಕೊಡಗು ದೇಶದ ಶ್ರೇಷ್ಠವಾದ ಉತ್ಕೃಷ್ಟ ಕಾಫಿಯು

ಹುರಿಯದೆ ಇರುವದು ಅಥವಾ ಆಗತಾನೆ ಹುರಿದದ್ದು.
ಸವಮೂಡಿದ ಸ್ಥಳದಿಂದಲೆ ನೆಟ್ಟಗೆ ರವಾನಿಸಲ್ಪಡುವದು.

85-13

ವ್ಯಾಪಾರದ ಹೆಗ್ಗುರ್ತು

ಕಾಡುಕೋಣದ ತಲೆಯ ಮುದ್ರೆ ಇದೆ.

ಸಂಪೂರ್ಣವಾಗಿ ಯಂತ್ರದಿಂದಲೆ ಸಿದ್ಧಪಡಿಸಿದ್ದು. ಹೆಗ್ಗುರ್ತು ಕಳ್ಳ ಏಲಾವದ ಚೀಟಿ ಸುತ್ತಿಲ್ಲದಿರುವವು ಸ್ವಚ್ಛವಾದವುಗಳಲ್ಲ. ಅವು ನಮ್ಮದಲ್ಲ. ಏಜಂಟರುಗಳು ಬೇಕು. ಇಂಥವರಿಗೆ ಅಲಾಯದ ದರ. ಬರೆಯುವವರು ದಯವಿಟ್ಟು ಈ ಪತ್ರಿಕೆಯ ಹೆಸರನ್ನು ಸೂಚಿಸಿ.

ವಿಳಾಸ.—ಮ್ಯಾನೇಜರ್, ಮ್ಯಾಥಿಸನ್ಸ್ ಕಾಫಿ ವರ್ಕ್ಸ್, ಮೈಸೂರು.

ಜ್ವರಹರಿ. 71-4

ಇದು ಸಾಧಾರಣ ಜ್ವರ, ಚಳೀಜ್ವರ, ಮೋರೇಜ್ವರ, ಪಿತ್ಥಜ್ವರ, ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲವಿಧವಾದ ಜ್ವರಗಳನ್ನು ಬಹು ಬೇಗನೆ ವಾಸಿಮಾಡುವದು

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮಹಾಮತ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್ ಟಿ. ವೆಂಕಟಪತಿ ಅಯ್ಯರವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨೦ ಬಾಗಿನ ಸೀಸೆಯು ತೀರಿಹೋಯಿತು ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚನ್ನಾಗಿ ಗುಣ ಹೊಂದಿರುವರು ಇನ್ನೂ ಜನಗಳು ಕಾಹಿಲೇ ಬೀಳುತ್ತಿರುವು ದರಿಂದ ದಯವಿಟ್ಟು ಇನ್ನೊಂದು ೨೦ ಬಾಗಿನ ಸೀಸೆಯನ್ನು ವಿ. ಪಿ. ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿರುವರೆ

ಕ್ರಯ:—ಸೀಸೆ ೧ ಕ್ಕೆ ೮ ಆಣೆ, ೧ ರೂ., ೧—೮ ರೂ., ರೂ. ೨—೧೨ ಆ., ೧೦ ರೂ., ಜನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು.

****

ಓಮುಂಕಪೂರ.

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆಕಳೆ ನುಲಿವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು. ಇದು ಹೆಂಗಸರು ಮಕ್ಕಳಿಗೆ ಒಂದು ಪರಿ ಸೇರಗೆ ಅಗುವಾಗ್ಯೆ ಕೊಟ್ಟರೆ ನೋವು ಮುಂತಾದ ವ್ಯಾಧಿಗಳನ್ನು ಬೇಗ ಗುಣಪಡಿಸುತ್ತದೆ. ಕ್ರಯದ ದರವು ಜ್ವರಹರಿ ಎಂಬ ಔಷಧದಂತೆಯೇ ಸೀಸೆಗಳಲ್ಲಿ ದೊರಕುವದು

ಕನಕಪುರದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಹೆಸ್ರಿಯ ಓಮುಂ ಕರ್ಪೂರವನ್ನು ನಾನೂ ನನ್ನ ಹಾಗೇದಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣ ಭೇದಿ, ಅಜೀರ್ಣ ರೋಗಿಷ್ಟರಿಗೆ ಕೊಡುತ್ತೇವೆ. ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ. ಇದು ಬಹು ಒಳ್ಳೇ ಔಷಧವೆಂತ ಬರೆದಿದಾರೆ

ಈ ನಾಲ್ಕು ಔಷಧಗಳೂ ಊರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಔಷಧಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇದಲ್ಲದೆ ಕೆಳಗಿನ ವಿಳಾಸದಾರರಲ್ಲಿ ವಿಶೇಷ:—

ಜೆನ್ರಿಕುಂಪ ಗ್ರೇಟ್ ಇಂಡಿಯನ್ ಔಷಧಗಳ ಕಂಪೆನಿ,
ಸೆಕೆಂಡ್ ಬೀಚ್ ಲೈನ್, ಮದ್ರಾಸ್.

"ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ.

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜಂಟ್ರ ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ
(ಅಡ್ವಾನ್ಸು) .. .. .. ರೂ. ೧—೦—೦
ಪರಸ್ಥಳದವರು ಆಫೀಸಿನಿಂದ ಅಂಚೆಯ ಮೇಲೆ ತರಿಸಿಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಪೋಸ್ಟೇಜ್ ಸೇರಿ .. .. ರೂ. ೧—೧೪—೦
" " " " " ೧—೧೫—೦
ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು

ನಮ್ಮ ವಿಳಾಸ.—ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು.

ನೀವು ವಿಲಾಯಿತಿಯಿಂದ ಯಾವ ಸಾಮಾನುಗಳನ್ನು ತರಿಸಿಕೊಳ್ಳಬೇಕಾಗಿದ್ದರೆ 19-19

ಬ್ರೈಡ್ ಮತ್ತು ಕೀಸ್ಟಿಂಟ್,
೭೮—೩೫, ಸಿಟಿ ರೋಡ್, ಲಂಡನ್, ಇ. ಸಿ.

ಎಂಬೀ ವಿಳಾಸಕ್ಕೆ ಬರೆದು ಕಳುಹಿಸಿ, ಕಾಗದ ಬರೆಯುವರಿ. ಕಾಗದಗಳಿಗೆ ೧ ಆಣೆ ಸ್ಟಾಂಪು ಹಚ್ಚಬೇಕು, ಇಂಡಿಯಾ ಪೋಸ್ಟು ಕಾರ್ಡುಗಳನ್ನು ಬರೆಯಬಾರದು ಈ ಕಂಪನಿಯವರು ಪೇಟೆಂಟ್ ಔಷಧಿಗಳನ್ನು, ಆಟಿಕೆ ಸಾಮಾನುಗಳನ್ನು, ಯಂತ್ರಗಳಿವರೇ ತಿಂಡಿ ಪದಾರ್ಥಗಳನ್ನು, ಇನ್ನೂ ನಾನಾತರದ ಪದಾರ್ಥಗಳನ್ನೂ ಇಟ್ಟು ಬಿಕರಿ ಮಾಡುತ್ತಾರೆ ಅವರು ಬಹು ವಿಶೇಷವಾದ ಗಮನ ಕೊಟ್ಟು, ಸಾಧ್ಯವಿದ್ದಷ್ಟು ಅಗ್ಗವಾಗಿ, ಬೇಕಾದ ಸಾಮಾನುಗಳನ್ನು ಆರಿಸಿ, ಮರಿಚು ಟಪ್ಪಾಲಿನಲ್ಲೇ ಕಳುಹಿಸಿಕೊಡುವರು

ಕಾಗದಗಳನ್ನು ಇಂಗ್ಲಿಷಿನಲ್ಲೇ ಬರೆಯಬೇಕು.

ಬೆಂಗಳೂರು ಲಕ್ಷ್ಮಿಪುರ ಲೈಟ್ ರೈಲ್ವೆ ಕಂಪೆನಿ ಲಿಮಿಟೆಡ್ ನಿಯಮಕ ಮೂಲಧನ.

73-4

ಷೇರು ಒಂದಕ್ಕೆ ೨೫ ರೂಪಾಯಿಗಳು ರೀತಿಯಲ್ಲಿ ೪೦ ಸಾವಿರ ಷೇರುಗಳಿಂದಾಗುವ ೧೦ ಲಕ್ಷ ರೂಪಾಯಿಗಳು. ಈ ಷೇರು ಮೊಬಲಗು ೫ ಕಂತು ಷೇರು ಒಂದಕ್ಕೆ ಒಂದು ರೂಪಾಯಿನಂತೆ ಪ್ರಿಮಿಯಮ್ ಫೀ ಕೊಟ್ಟು ೧೨ ತಿಂಗಳಲ್ಲಿ ಪಾವತಿ ಮಾಡತಕ್ಕದ್ದು. ಈ ಲೈನಿನ ಸರ್ವೆ ಪೂರೈಸಲ್ಪಟ್ಟಿದೆ

ಮೈಸೂರು ಸರ್ಕಾರದವರು ಈಗ ಆದರದ ಮಾಡಿರುವ ಪ್ರಿಫರ್ ಸ್ಟಾಕ್ ಕ್ಕೆ ಸಮ ಲೈನಿನ ವರಮಾನ ಶೇಕಡ ೬ ರಂತೆ ಕಮ್ಮಿ ಆಗಬಾರದೆಂದು ತೀರ್ಮಾನಿಸಿ ನಮ್ಮ ಸರಿಯಾದ ಕಾಲದಲ್ಲಿ ಕಂಪನಿಯವರು ಒಪ್ಪಿಕೊಂಡಲ್ಲಿ ಬಡವರ ಶೇಕಡ ೩ ರ ಮಾಸ್ಸರಂತೆ ಬಡ್ಡಿ ಕೊಡಲು ಈ ಕಂಪನಿಗೆ ಜಾಮೀನಾಗಿರುತ್ತೇವೆಂದು ದಯವಿಟ್ಟು ಲಿಖಿತಮೂಲಕ ಒಪ್ಪಿರುತ್ತಾರೆ

ಈ ಕಂಪನಿಯ ಷೇರುಗಳನ್ನು ಅಪೇಕ್ಷಿಸತಕ್ಕಂಥವರು ಈ ಕೆಳಗೆ ಬರುವ ವಿಳಾಸಕ್ಕೆ ದರಖಾಸ್ತು ಮಾಡಿಕೊಳ್ಳಬೇಕು.

ಈ ಕಂಪನಿಯ ಷೇರುಗಳನ್ನು ಕಮಿಷನಿಗೆ ಸಬ್ ಏಜಂಟರಾಗಿ ಬಿಕರಿ ಮಾಡಲು ಇಷ್ಟಪಡುವ ಖಾತರಿಯುಳ್ಳ ಜನರು ನಮಗೆ ಬರೆದುಕೊಳ್ಳಬಹುದು.

ಷೇರು ಹಣವನ್ನು ಚೀಫ್ ಕ್ಯಾಷಿಯರ್ ಪಟ್ಟೆ ಟರಿಗೆ, ಇದರಿಂದ ಲಿಖಿತ ಮೂಲಕ ಹಣ ವಸೂಲು ಮಾಡಲು ಅಧಿಕಾರ ಹೊಂದಿರುವ ಸಬ್ ಏಜಂಟರಿಗೆ, ಬೆಂಗಳೂರು ಬ್ರಾಂಚ್ ಮದ್ರಾಸ್ ಬ್ಯಾಂಕಿಗೆ (ಈ ಕಂಪನಿಯ ಕ್ರೆಡಿಟ್ಟಿಗೆ), ಅಥವಾ ಮೈಸೂರು ಸೀಮೆಯ ತಾಲ್ಲೂಕು ಡಿಸ್ಟ್ರಿಕ್ಟು ಖಜಾನೆಗಳಿಗಾಗಲಿ ಪಾವತಿ ಮಾಡಬೇಕು. ಇದಕ್ಕಾಗಿ ಈ ಹಣವನ್ನು ತಾಲ್ಲೂಕು ಮತ್ತು ಡಿಸ್ಟ್ರಿಕ್ಟು ಖಜಾನೆಗಳಲ್ಲಿ ಕಟ್ಟಬಹುದೆಂದು ಮೈಸೂರು ಗವರ್ನಮೆಂಟಿನವರು ಅಪ್ಪಣೆ ಕೊಟ್ಟಿದಾರೆ.

ಷೇರುಗಳಿಗೆ ದರಖಾಸ್ತು ಮಾಡುವವರು ಅರ್ಜಿ ಕಾಗದಗಳ ಜೊತೆಯಲ್ಲಿ ಷೇರು ಒಂದಕ್ಕೆ ಒಂದು ರೂಪಾಯಿನಂತೆ ಅಪ್ಲಿಕೇಷನ್ ಫೀ ರವಾನಿಸಬೇಕು. ಇದು ಷೇರು ಮೊಬಲಗಿನಲ್ಲಿ ಜಮಾ ಮಾಡಲ್ಪಡುವದು.

(ಸೈ) ಬಿ. ವಿ ರಾಮಸ್ವಾಮಿ ಶೆಟ್ಟಿ, ಬಿ. ಎ,
ಅಡ್ವೊಕೇಟ್, ಮತ್ತು ಬೆಂಗಳೂರು ಲಕ್ಷ್ಮಿಪುರ
ಲೈಟ್ ರೈಲ್ವೆ ಕಂಪನಿಯ ಚೀಫ್ ಏಜಂಟ್,
ನಗರ್ತಪೇಟೆ, ಬೆಂಗಳೂರು ಸಿಟಿ.

ದೇವಾಂಗ ವಂಶಸ್ಥರಿಗೆ ಅಗತ್ಯ ಬೇಕಾದದ್ದು.

ದೇವಾಂಗಮತ ಪ್ರಕಾಶಿಕೆ.	ದೇವಾಂಗಮತ ಮೂಲಸ್ತಂಭ.

16-34

ಸ್ವಲ್ಪ ಪ್ರತಿಗಳಿವೆ. ಜಾಗ್ರತೆಪಟ್ಟರೆ ಸಿಕ್ಕುತ್ತವೆ. ನಂತರ ಮುದ್ರಿತ ಸಿಕ್ಕುವದಿಲ್ಲ. ಸ್ವಕುಲಗುರುಗಳು ಮುದ್ದುಸಂಗ ಮುನಿಸ್ವಾಮಿಗಳು ರಚಿಸಿದ್ದ ಅರ್ಥಸಹಿತ ದೇವಾಂಗಮತಪ್ರಕಾಶಿಕೆ. ಸಚಿತ್ರವಾದ ಸುಂದರವಾದ ೧೪ ತಸ್ವೀರಿದೆ ಕ್ರಯ ಸುಲಭವಾಗಿದೆ ೧೪ ತಸ್ವೀರಿರುವ ಪ್ರತಿ ೧ಕ್ಕೆ ವಿ. ಪಿ ಖರ್ಚು ಸೇರಿ ರೂ. ೨—೮

ತಸ್ವೀರಿಲ್ಲದ ಇದೇ ಪ್ರತಿ ೧ಕ್ಕೆ ವಿ ಪಿ. ಖರ್ಚು ಸೇರಿ ರೂ. ೧—೮.

ವೇದ ಉಪನಿಷತ್ತುಗಳ ಅರ್ಥಸಹಿತ ಮೂಲಸ್ತಂಭ ೧ಕ್ಕೆ ರೂ. ೧—೮.

ತಕ್ಷಣ ಮಣಿಆರ್ಡರಿಗೂ ವಿ. ಪಿ. ಲೂ ಕಳುಹಿಸುತ್ತೆ. ವಿಳಾಸ— ಮೈಸೂರು ಜವಳಿ ಅಂಗಡಿ ಬ್ರಹ್ಮಶ್ರೀ ಯಜಮಾನ ಪುಟ್ಟಮಲ್ಲಯ್ಯ

ರಬ್ಬರ್ ಸ್ಟಾಂಪುಗಳು.

83-1

ನಮ್ಮ ಕಂಪೆನಿಯಲ್ಲಿ ತಯಾರಿಸಲ್ಪಡುವ ಇಂಗ್ಲಿಷ್ ಮೇಡ್ ರಬ್ಬರ್ ಸ್ಟಾಂಪುಗಳಿಗೆ ದರಖಾಸ್ತು ಕಳುಹಿಸತಕ್ಕವರಿಗೆ ಅರ್ಧ ಕ್ರಯಕ್ಕೆ ತಯಾರಿಸಿ ಕಳುಹಿಸುತ್ತೇವೆ.

ಓವಾಲ್, ರವುಂಡು, ಚಚ್ಚೌಕ, ಯಾವ ಆಕಾರವಾದರೂ ಅದರಲ್ಲಿ ಬೇಕಾದ ಅಕ್ಷರಗಳನ್ನು ಹಾಕಿ, ಸುಂದರವಾದ ರಬ್ಬರ್ ಸ್ಟಾಂಪು ೧, ಇಂಕಿ ಸೀಸಾ ೧, ರಬ್ಬರ್ ಸ್ಟಾಂಪು ಇರಿಸುವ ಪೆಟ್ಟಿಗೆ ೧, ಬ್ರಷ್ ೧, ಪ್ಯಾಡ್ ೧, ಇವುಗಳ ಸಹಿತ ಕ್ರಯ ರೂ ೧—೮—೦, ಪೋಸ್ಟೇಜು ೩ ಆಣೆ

ವಿಳಾಸ:—ಮ್ಯಾನೇಜರ್, ರಬ್ಬರ್ ಸ್ಟಾಂಪ್ ಮ್ಯಾನುಫ್ಯಾಕ್ಚರಿಂಗ್ ಕಂಪೆನಿ, ಪಾರ್ಕ್ ಟೌನ್, ಮದ್ರಾಸ್.

ಪರಿಮಳ ನಶ್ಯದಪುಡಿ

80-2

ಪರಿಮಳ ನಶ್ಯದಪುಡಿ ಡಬ್ಬಿ ೧ಕ್ಕೆ	0—9—0
ಛಾಂಗಿ ಖರ್ಚು	0—3—0
ಸಾದಾ ನಶ್ಯದಪುಡಿ ಡಬ್ಬಿ ೧ಕ್ಕೆ	0—6—0
ಛಾಂಗಿ ಖರ್ಚು	0—3—0

ಈ ಪುಡಿಯನ್ನು ಮೇಲಾದ ಹೊಗೆಸೊಪ್ಪಿನಿಂದ ಸುವಾಸನೆಯುಳ್ಳದ್ದಾಗಿ ತಯಾರು ಮಾಡಲ್ಪಟ್ಟಿರುತ್ತೆ. ಇದರ ಸುವಾಸನೆ ಬಂದು ಸೇರು ಸಾಧಾರಣ ಪುಡಿಯಲ್ಲಿ ಸ್ವಲ್ಪವನ್ನು ಹಾಕಿ ಕಲಸಿದರೆ ಪುಡಿಯೆಲ್ಲಾ ಗಮಗಮಿಸುತ್ತೆ. ಉಪಯೋಗಿಸುವವರಿಗೆ ಸುವಾಸನೆಯನ್ನೂ ಆನಂದವನ್ನೂ ಉಂಟುಮಾಡುತ್ತೆ

ತಲೆನೋವು, ಪೀನಸ, ಜಲದೋಷ, ಶಿರೋವ್ಯಾಧಿ ಇವುಗಳನ್ನು ತಪ್ಪದೆ ಪರಿಹರಿಸುತ್ತೆ. ಮಾದರಿಗೆ ೧ ಡಬ್ಬಿಯನ್ನು ತರಿಸಿ ಪರೀಕ್ಷಿಸಿರಿ.

ಪ್ರತಿ ೧ ಡಬ್ಬಿಯಲ್ಲಿ ೯ ತೊಲ ನಶ್ಯದಪುಡಿ ಇರುತ್ತೆ.

ಮಾದರಿ ನಶ್ಯವನ್ನು ಕೋರುವವರು ಅರ್ಧಾಣೆ ಸ್ಟಾಂಪನ್ನು ಕವರಿನಲ್ಲಿ ಇಟ್ಟು ಕಳ್ಸಿದರೆ ಮಾದರಿಗೆ ಪುಡಿಯನ್ನು ಕಳುಹಿಸುತ್ತೇವೆ.

ವಿಳಾಸ:—ಮಾನೇಜರ್, ಧರ್ಮ ವೈದ್ಯಶಾಲಾ, 69 ಚೈನಾಬಜಾರು ರೋಡ್, ಸಾಹುಕಾರ್‌ಪೇಟೆ, ಮದರಾಸು.

ಪ್ರಶ್ನೋತ್ತರ ಲೇಖ್ಯಬೋಧಿನಿ.

75-4

೨ ನೇ ಛಾಪೆ. ಮಾರಾಟಕ್ಕೆ ಸಿದ್ಧವಾಗಿರುತ್ತೆ, ದಪ್ಪವಾದ ಕಾಗದ, ಭವ್ಯವಾದ ಬೈಂಡುಳ್ಳದ್ದು, ಪುಸ್ತಕದಲ್ಲಿರುವ ಸಂಗತಿಯನ್ನು ದಯವಿಟ್ಟು ಓದಿನೋಡಿ:—ಕ್ರಯ ೧—೪—೦.

ಕ್ಷೇಮಸಮಾಚಾರ ಕಾಗದಗಳು, ಅರ್ಜಿಗಳು, ಸಿವಿಲ್, ಕ್ರಿಮಿನಲ್, ರೆವಿನ್ಯೂ, ಮುಲ್ಕಿ, ಇಂಜನಿಯರ್, ಫಾರೆಸ್ಟು, ಎಕ್ಸೈಜು, ವಿದ್ಯಾಭ್ಯಾಸ, ವ್ಯವಸಾಯ, ಮ್ಯುನಿಸಿಪಲ್, ಮುಜ್ರಾ ಇತರ ಎಲ್ಲಾ ಇಲಾಖೆಗಳ ಬಗೆ ಬಗೆ ಸಂಗತಿಗಳು, ಸಿವಿಲ್ ಪ್ರೊಸೀಜರ್ ಕೋಡು, ಕ್ರಿಮಿನಲ್ ಪ್ರೊಸೀಜರ್ ಕೋಡು, ಪೆನಲ್, ಹಿಂದೂ ಲಾ, ಮಹಮದಿ ಲಾ, ಕಂಟ್ರಾಕ್ಟು ಡಾಮೋಜು, ವಾರಸು, ಮೈನರು, ಲಿಮಿಟೇಷನ್, ಸ್ಟಾಂಪು, ಕೋರ್ಟ್ ಫೀಜು, ಪೊಲೀಸು, ಸ್ಯಾನಿಟರಿ, ಮ್ಯುನಿಸಿಪಲ್, ರೆವಿನ್ಯೂ ಕೋಡು, ರೂಲ್ಸು, ಲ್ಯಾಂಡ್ ಇಂಪ್ರೂವ್, ಲ್ಯಾಂಡ್ ಅಕ್ವಿಜಿಷನ್, ದೆಖ್ಖನ್, ಆಕ್ಟು, ಮೊದಲಾದ ಎಲ್ಲಾ ಆಕ್ಟುಗಳ ಸಾರಾಂಶಗಳು ಲೇವಾದೇವಿ, ರೆವಿನ್ಯೂ ರೂಲ್ಸು ಪ್ರಕಾರ ಗ್ರಾಮದ ಲೆಕ್ಕಗಳನ್ನು ಬರೆಯುವದು, ಮುಂತಾದ ವ್ಯಾಸಭಾವಿಕೆಯ ಬಗೆ ಬಗೆ ಸಂಗತಿಗಳು, ರೋಜು ವರ್ಗ, ಮೊದಲಾದ ವರ್ತಕರ ಲೆಕ್ಕಗಳನ್ನು ಬರೆಯುವ ರೀತಿ, ಮೊದಲಾದ ಅನೇಕ ಸಂಗತಿಗಳು ಸ್ವಲ್ಪ ಓದಿದ ಬರಹ ಬಲ್ಲವರು ಕೂಡಾ ಸುಲಭವಾಗಿ ತಿಳಿಯುವಂತೆ ಪ್ರಶ್ನೋತ್ತರ ರೀತಿಯಾಗಿ ಬರೆದಿದೆ. ಪುಸ್ತಕದಲ್ಲಿರುವ ಎಲ್ಲಾ ಸಂಗತಿಗಳನ್ನೂ ವಿವರಿಸುವದು ಸಾಧ್ಯವಲ್ಲವಾಗಿ ಸೂಕ್ಷ್ಮದಿಂದ ತಿಳಿಸಿರುತ್ತೆ.

ಮೋಜಣಿ ಕಲಿಯತಕ್ಕ ಪುಸ್ತಕ ಕ್ರಯ, ೧ಕ್ಕೆ ೧ ರೂಪಾಯಿ ಮಾತ್ರ. ಭೂಮಿ ಅಳೆಯುವ ರೀತಿಯನ್ನು ಸುಲಭವಾಗಿ ತಿಳಿಸುತ್ತದೆ

ಮದರಾಸು ಪಶ್ಯದಪುಡಿ! ಈ ನಶ್ಯವು ಉತ್ಕೃಷ್ಟವಾಗಿಯೂ ಚಟಕೆಯನ್ನು ೧ ತೊಲೆಗೆ ಹಾಕಿದಾಗ್ಯೂ ಸುವಾಸನೆಯಿರುವದಾಗಿಯೂ ಘಾಟಾಯಿತಾಗಿಯೂ ಇರುತ್ತೆ. ೬ ತೊಲೆ ಇರುವ ೧ ಡಬ್ಬಿಗೆ ೬ ಆಣೆ

ಬೇಗ ಬರೆಯಿರಿ. ವಿಳಾಸ ಬದಲಾಯಿಸಿದೆ. ವಿಳಾಸ:—ಬಿ. ಕೆ. ಮೂರ್ತಿ ಛಾಪಿನಿ, ಲಕ್ಕೂರ್ರು ಪೋಸು, ಕೋಲಾರ್ ಡಿಸ್ಟ್ರಿಕ್ಟು.

CHAMBERLA'N'S COUGH REMEDY.

ಚೇಂಬರ್ಲೈನ್ ಯವರು ಕಂಡು ಹಿಡಿದ ಕೆಮ್ಮಿನ ಔಷಧವು.



15-20

ಶೀತದ ಕೆಮ್ಮು, ಗಂಟಲು ಗೂರೆನ್ನುವುದು, ಹುಡಿಗೆಮ್ಮು, ನಾಯಿಗೆಮ್ಮು, ಎಲ್ಲಾ ತರದ ಶೀತ, ಗಂಟಲು ಎದೆಯಲ್ಲಿ ಹುಟ್ಟುವ ಸಮಸ್ತ ವ್ಯಾಧಿಗಳು—ಇವಕ್ಕೆಲ್ಲಾ ಈ ಔಷಧವು ಬಾಣಪ್ರಾಯವಾಗಿದೆ

ಆ ಕೆಮ್ಮನ್ನು ಅಲಕ್ಷ್ಯಮಾಡಬೇಡಿ. ಅದು ಮಹಾ ಅಪಾಯವನ್ನುಂಟುಮಾಡತಕ್ಕದ್ದಾಗಿದೆ. ಅದರ ನ್ಯೂಮೋನಿಯಾ ಎಂಬ ಅತಿ ಕಠಿಣವಾದ ಜ್ವರವು ಹುಟ್ಟುವುದು. ತರುವಾಯ ಉಗುಳಿನಲ್ಲಿ ರಕ್ತಬೀಳು ಹಾಗೆಯೇ ಕ್ಷಯರೋಗಕ್ಕೆ ಆಸ್ಪದವಾಗುವುದು

ಚೇಂಬರ್ಲೈನ್‌ರವರು ಕಂಡುಹಿಡಿದಿರುವ ಕೆಮ್ಮಿನ ಔಷಧವು ಗಂಟಲಿನಲ್ಲಿ ಶ್ಲೇಷ್ಮ ಕಟ್ಟುವುದನ್ನೂ ಶ್ಲೇಷ್ಮ ವುದನ್ನೂ ಖಂಡಿತವಾಗಿ ನಿವಾರಣೆಮಾಡುತ್ತದೆ. ಉಸುರು ಹೊಯ್ಯುವುದು ಕಷ್ಟವಾಗಿದ್ದರೆ ಅದನ್ನು ಕೂಡಲೆ ಪರಿಸುತ್ತದೆ ಅಪಾಯಕರವಾದ ಕೆಮ್ಮಿನ ಕಬ್ಬವನ್ನು ನಿಲ್ಲಿಸಿಬಿಡುತ್ತದೆ. ಎದೆ ಒಣಗುವಂಥಾ ಕೆಟ್ಟಸ್ಥಿತಿಯ ಸಂಪೂರ್ಣವಾಗಿ ವಾಸಿಮಾಡಬಲ್ಲದು ಕೆಮ್ಮನ್ನು ಶಮನಮಾಡಿ, ನೀವು ಸುಖವಾಗಿ ನಿದ್ರೆಮಾಡುವಂತೆ ಮಾಡಿ ಉಲ್ಲಾಸಕೊಡುತ್ತದೆ.

ಚೇಂಬರ್ಲೈನ್‌ರವರು ಕಂಡುಹಿಡಿದಿರುವ ಕೆಮ್ಮಿನ ಔಷಧದಲ್ಲಿ ಸ್ವಲ್ಪಮಾತ್ರವಾದರೂ ಅಫೀಮನ್ನು ಸೇರಿಸುವುದಿಲ್ಲ.

ಈ ಔಷಧವು ವನಸ್ಪತಿಗಳ ತಯಾರಿ.

ಕೈಯಾನದ ಮಟ್ಟದೆ ತಯಾರಾಗಿದೆ.

ಎಲ್ಲೆಲ್ಲೂ ವಿಕರಿಯಾಗುವುದು. ಸಣ್ಣಶೀಸೆಗೆ ೧ ರೂಪಾಯಿ ದೊಡ್ಡಶೀಸೆಗೆ ೨ ರೂಪಾಯಿ.

ತ್ವರೆಮಾಡಿರಿ! ಬಿಡಬೇಡಿರಿ!!

ಇಂಥಾ ಸಮಯ ಮುಂದೆ ಸಿಗಲಿಕ್ಕಿಲ್ಲಾ (68-5)

ರಾಸ್ಕೋಪ ಸಿಸ್ಟಂ ಲಿವರ ವಾಚ್.

ಬಂದೋಬಸ್ತ — ನ ಜಬೂತ.



ಇದರ ಸಂಗಡ ಸ್ಪ್ರಿಂಗ್, ಕನ್ನಡಿ, ಪೆಟ್ಟಿಗೆ, ಹೀಗೆ ೩ ಸಾಮಾನು ಕಳುಹಿಸುತ್ತೇವೆ ಟ. ಖ. ಬೇರೆ ಒಂದೇ ಸಾರಿ ೩ ವಾಚು ತರಿಸಿಕೊಂಡರೆ ಟ. ಖ. ಮಾಫಿ. ೬ ವಾಚು ತರಿಸಿಕೊಂಡರೆ ೧ ವಾಚು ಬಕ್ಷೀಸು ವಾಚಿಗೆ ಬೇಕಾಗುವ ಸರಪಣಿಯ ಕಿಮ್ಮತು ೦—೮—೦

ಜುಕಾಯಂತ್ರ.	೦—೮—೦
ವಾಚಿನ ಕವರು	೦—೮—೦

ವಿ. ಪಿ. ಇಂದಲೂ ರವಾನಿಸುತ್ತೇವೆ.

ವಿಳಾಸ:—ಜಿಂ ಯುಲ್ ಜೋಶಿ, ಅಂಡ್ ಕೋ, ಪೋಸ್ಟ್ ಶಿರ್ಸಿ., ಜಿಲ್ಲಾ ಉತ್ತರ ಕಾನಡಾ.

ಔಷಧಿ ತಕ್ಕೊಂಡು ಗುಣವಾಗುವದಕ್ಕಿಂತಲೂ ತಕ್ಕ ಕ್ರಮದಲ್ಲಿರುವದು ಉತ್ತಮ

SCOTT'S EMULSION. 57-10

(ಸ್ಕೋಟ್ಸ್ ಇಮಲ್‌ಷನ್)

ಪುಷ್ಟ ಶರೀರವುಳ್ಳವರಿಗೆ ಪ್ಲೇಗ್, ಮಹಾಮಾರಿರೋಗ, ವಾಂತಿಭೇದಿ ಅಥವಾ ಶ್ವಾಸಕೋಶದ ರೋಗಗಳ ಭಯಕ್ಕೆ ಒಳಪಡುವ ಅಗತ್ಯವಿಲ್ಲ.

ರೋಗವು ಬಲಹೀನರನ್ನೂ ದುರ್ಬಲರನ್ನೂ ಬೇಗನೆ ತಗಲಿ ಹಿಡಿಯುತ್ತದೆ

ಅಸ್ವಸ್ಥವನ್ನು ದೂರ ಹೋಗಲಾಡಿಸಿ, ಶರೀರದಲ್ಲಿರುವ ಬಲಹೀನ ಭಾಗಗಳನ್ನು ಬಲತ್ರಾಣಗೊಳಿಸಿ, ಸಂಪೂರ್ಣ ಸೌಖ್ಯವನ್ನು ಉಂಟುಮಾಡುತ್ತದೆ

ಕೈಸೋಕದೆ ತಯಾರಾದದ್ದು.

ಎಲ್ಲಾ ಔಷಧ ವ್ಯಾಪಾರಗಾರರಲ್ಲೂ ಮಾರಾಟವಾಗುತ್ತದೆ

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್, ಔಷಧಗಳ ಕಾರ್ಖಾನೆ, ಲಂಡನ್, ಇಂಗ್ಲೆಂಡ್.

ಈ ಮೀನುಮನುಷ್ಯ ಇರುವ ಔಷಧವನ್ನೇ ಕೊಂಡುಕೊಳ್ಳಿ.

ರೇಷ್ಮೆ ಜವಳಿ, ಬಳ್ಳೇ ತಯಾರಿ, ಸುಲಭ ಖರೀದಿ.

81-2

ಪ್ರಖ್ಯಾತವಾದ ಆರಣೀ ಪ್ಯಾಟೆ ಮೋಲು ಸೀರೆಗಳು ರೇಷ್ಮೆ ಪಟಗಳು, ಕೈವಸ್ತ್ರಗಳು ಸವರನ್ನು ಬಿಟ್ಟಾಕಣಗಳು, ಮೊದಲಾದ ರೇಷ್ಮೆ ಸಾಮಾನುಗಳು ಬಹು ಸುಬರವಾಗಿ ತಯಾರು ಮಾಡಲ್ಪಟ್ಟು ಗಡೀ ಕ್ರಯಕ್ಕೆ ಚೈಲ್ಲವತೆ ಕ್ರಯ ಸಾಕಿ ವಿ ಪಿ. ಮೂಲಕ ರವಾನಿಸಲ್ಪಡುತ್ತವೆ ಸಾಮಾನು ತರಿಸಿಕೊಳ್ಳುವವರು ಒಂದು ಸಾರಿ ಅಗೆದುಕೊಂಡರೆ ಪ್ಯಾಗೆ ಉತ್ತಮವಾದ ಸಾಮಾನು ತೆಗೆದುಕೊಳ್ಳಬಹುದು ಹಾಗೆಯೇ ಕೋರಿರುವ ... ದಲ್ಲಿ ಅತ್ಯುತ್ತಮವಾದ ಸಾಮಾನೇ ಯಾವಾಗಲು ಕಳುಹಿಸಲ್ಪಡುವದು. ಒಂದುಸಾರಿ ತರಿಸಿಕೊಂಡು ನೋಡಿದರೆ ಆ ಮೇಲೆ ಯಾವಾಗಲೂ ತರಿಸಿಕೊಳ್ಳುವೆವೆಂಬುದರಲ್ಲಿ ಸಂದೇಹವಿಲ್ಲ

ತರಿಸಿಕೊಳ್ಳುವ ಸಾಮಾನಿನ ಕ್ರಯ ಹತ್ತು ರೂಪಾಯಿಗೆ ಮೇಲ್ಪಟ್ಟದ್ದರಲ್ಲಿ ಮುಂಗಡ ಅರ್ಧ ಕ್ರಯವನ್ನು ಆರ್ಡರಿನೊಡನೆ ರವಾನಿಸಿದರೆ ಬಾಕಿಯ ಹಣಕ್ಕೆ ವಿ ಪಿ ಮೂಲಕ ಸಾಮಾನು ಕಳುಹಿಸಲ್ಪಡುವದು.

ವೈ ಕೆ ಮೂರ್ತಿ ಅಂಡ್ ಕೋ,
ನಂ — ಮನವಾರ್ಪೇಟೆ, ಬೆಂಗಳೂರು ಸಿಟಿ

ವೃತ್ತಾಂತ ಪತ್ರಿಕೆ.

ಸನ್ ೧೯೦೬ ನೇ ಇಸವಿ ಮೇ ತಾ॥ ೨೪ ನೇ ಗುರುವಾರ

ಕಂದಾಯದ ರಿಮಿಷನ್.

ಕೆಲವು ತಿಂಗಳ ಕೆಳಗೆ ಮ॥ ಕೆ ಪಿ. ಪುಟ್ಟಣ್ಣಶೆಟ್ಟಿಯವರು ಕೋಲಾರದ ಡೆಪ್ಟಿ ಕಮಿಷನರಾಗಿದ್ದಾಗ ಅವರ ಶಿಫಾರಸಿನ ಮೇರೆ ಕೋಲಾರ್ ಡಿಸ್ಟ್ರಿಕ್ಟಿನಲ್ಲಿ ತರೀ ಫಸಲಿನಿಂದ ಜೀವನ ಮಾಡತಕ್ಕ ರೈತರಿಗೆ ಸರ್ಕಾರದವರು ಮಳೆಬೆಳೆ ಆಗಲಿಲ್ಲವೆಂದು ತಿಳಿದು ಅವರು ಕೊಡತಕ್ಕ ಕಂದಾಯಗಳಲ್ಲಿ ಕೆಲವು ಭಾಗವನ್ನು ರಿಮಿಷನ್ ಮಾಡಿದರಷ್ಟೆ. ಈಚೆಗೆ ಮ॥ ಪುಟ್ಟಣ್ಣಶೆಟ್ಟಿಯವರು ಕೌನ್ಸಿಲರ್ ಪದವಿಗೆ ಬಂದು ತುಮಕೂರು, ಕೋಲಾರ, ಶಿವಮೊಗ್ಗ, ಚಿತ್ರದುರ್ಗ ಡಿಸ್ಟ್ರಿಕ್ಟುಗಳಲ್ಲಿ ಸಂಚಾರ ಮಾಡಿ, ಆ ಪ್ರಾಂತ್ಯಗಳಲ್ಲಿ ಮಳೆ ಬೆಳೆ ಇಲ್ಲದೇನೂ ನೀರಿಲ್ಲದೇನೂ ಕಷ್ಟಪಡುತ್ತಿರುವ ರೈತ ಪ್ರಜೆಗಳನ್ನೂ ಗೌಕಾಯಿಗಳನ್ನೂ ನೋಡಿ ತುಂಬಾ ಕನಿಕರಪಟ್ಟು, ಗವರ್ನಮೆಂಟಿನವರಿಗೆ ರಿಪೋರ್ಟು ಕಳುಹಿಸಿದರು. ಮೈಸೂರ ಸರ್ಕಾರದವರು ಆ ನಾಲ್ಕು ಡಿಸ್ಟ್ರಿಕ್ಟುಗಳಲ್ಲೂ ನಾಲ್ಕಾಣೆಯಷ್ಟು ಫಸಲಾಗದೆ ಇರುವಂಥಾ ತರೀ ಜಮೀನುಗಳ ಅರೆವಾಸಿ ಕಂದಾಯವನ್ನು ರಿಮಿಷನ್ ಮಾಡಬೇಕೆಂತಲೂ ಬೆಳೆಯಾಗದ ಖುಷ್ಕಿ ಜಮೀನುಗಳ ಕಂದಾಯವನ್ನು ನಿಧಾನವಾಗಿ ವಸೂಲ್ಮಾಡಬೇಕೆಂತಲೂ ಹುಕುಂ ಕೊಟ್ಟಿರುವಂತೆ ಕೇಳುತ್ತೇವೆ. ನಮ್ಮ ದೇಶದಲ್ಲಿ ರೈತರು ಮಳೆಯನ್ನೇ ನಿರೀಕ್ಷಿಸಿಕೊಂಡಿರುವುದಕ್ಕಿಂತಲೂ ಸರ್ಕಾರದವರು ಕೊಡುವ ಸಾಲವನ್ನು ತೆಗೆದುಕೊಂಡು, ಜಮೀನುಗಳಲ್ಲಿ ಭಾವಿಗಳನ್ನು ತೋಡಿ, ಯಾತಗಳ ಮೂಲಕ ವರುಷಕ್ಕೆ ಎರಡು ಮೂರು ಬೆಳೆಗಳನ್ನು ಪಡೆದುಕೊಳ್ಳಬೇಕು. ಗ್ರಾಮಾಂತರಗಳಲ್ಲಿ ಕುಡಿಯುವ ನೀರಿಗೆ ತುಂಬಾ ಕಷ್ಟವಾಗಿರುವುದನ್ನು ನೋಡಿ ಸರ್ಕಾರದವರು ಅವಶ್ಯವಾದಷ್ಟು ಹಣವನ್ನು ಆ ನಾಲ್ಕು ಡಿಸ್ಟ್ರಿಕ್ಟುಗಳಿಗೂ ಸ್ಯಾಂಕ್ಷನ್ ಮಾಡಿ, ಭಾವಿಗಳನ್ನು ತೋಡಿಸುವಂತೆ ಹುಕುಂ ಕೊಟ್ಟಿದ್ದಾರೆ. ಇದರಿಂದ ನೀರಿನ ಕ್ಷಾಮವು ಬಹು ಮಟ್ಟಿಗೆ ತಪ್ಪುವುದೆಂದು ಸಂತೋಷಿಸುವೆವು. ಈ ರೀತಿ ಗವರ್ನಮೆಂ

ಈ ಪ್ರಜೆಗಳ ಕಷ್ಟನಿವಾರಣೆಗಾಗಿ ಇಷ್ಟು ಮುಟ್ಟಿಗೆ ಯುಕ್ತಿಗಳನ್ನು ತೋರಿಸಿರುವ ಭಾಗದಲ್ಲಿ ಸಕಲರೂ ಕೃತಜ್ಞರಾಗಿರುವರೆನ್ನುವುದಕ್ಕೆ ಸಂಶಯವಿಲ್ಲ. ಚಾಲ್ತಿ ವರ್ಷದಲ್ಲಿ ಈಗಾಗಲೇ ಅನೇಕ ಕಡೆಗಳಲ್ಲಿ ಮಳೆ ಆಗಿದೆ. ಎಲ್ಲ ರೈತಪ್ರಜೆಗಳು ಸಂಭ್ರಮಯುಕ್ತರಾಗಿ ಉತ್ತು ಬಿತ್ತುವದಾರೆಂತಲೂ ವರ್ತಮಾನ ಬಂದಿದೆ. ಇದರಿಂದ ಈ ವರುಷ ಸುಭಿಕ್ಷವೆನಿಸೀತೆಂದು ನಿರೀಕ್ಷಿಸಬಹುದು.

ಒಬ್ಬ ಭಕ್ತನು ತನ್ನ ಕಾಲದ ವಿದ್ಯಾಭ್ಯಾಸದ ರೀತಿಯನ್ನು ಖಂಡಿಸುವದು.

ಆಹಾ! ಬಿದ್ದು ಹೋಗುವ ಪ್ರವಾಹವೇ, ನಿನ್ನನ್ನು ಎದುರಿಸಿ ನಿಲ್ಲುವವರು ಯಾರು? ಏನು ಬತ್ತಿ ಹೋಗುವುದು ಇನ್ನೆಂದಿಗೆ? ವಿಸ್ತಾರವಾದಂಥ ಮತ್ತು ಭಯಂಕರವಾದಂಥ ಸಂಸಾರಸಾಗರವನ್ನು ದಾಟಲೆಳಸುವ ನರ ಸಂಕುಲವನ್ನು ಅದರೊಳಗೆ ಇನ್ನೆಷ್ಟು ಕಾಲದ ಪರ್ಯಂತ ಮುಳುಗಿಸುತ್ತಿರುವೆ? ಎಲೆ ಘೋರರಾಕ್ಷಸಸ್ವರೂಪವಾದ ವಿದ್ಯಾಭ್ಯಾಸವೇ! ಸಿಬಿಲೀನನೆಂದೂ ಜಾವನೆಂದೂ ಹೆಸರುಗೊಂಡಿರುವ ಅಜ್ಯುಪಿತರನನ್ನು ಕುರಿತು ನಾನು ಓದಲಿಲ್ಲವೇ? ಸಿಬಿಲೀನನು ಮಾಡಿರುವುದು ಉಂಟೇ! ಅವನಲ್ಲಿ ಇವೆರಡು ಲಕ್ಷಣಗಳನ್ನು ಕಲ್ಪಿಸುವುದು ಕೇವಲ ಅಸಂಬದ್ಧವಲ್ಲವೇ! ಅಥವಾ ಇದು ನಿಜ ನಿಜವಾಗಿ ಜಾರತ್ವವನ್ನು ಮಾಡುವದಕ್ಕೆ ಪ್ರೋತ್ಸಾಹವನ್ನುಂಟುಮಾಡುವುದಕ್ಕಾಗಿ ಅವನಲ್ಲಿ ಸಿಡಿಲನ್ನು ಹಿಡಿದಿರುವ ಶಕ್ತಿಯುಂಟೆಂಬ ಭಾವವನ್ನು ಕಳ್ಳಸುಳ್ಳಾಗಿ ಕಲ್ಪಿಸಿರುವ ಉಪಾಯವಲ್ಲವೇ?

"ಈ ಕಥೆಗಳೆಲ್ಲವೂ ಹೋಮರನೆಂಬ ಗ್ರೀಕ ಕವಿಯ ಸ್ವಕಪೋಲಕಲ್ಪನೆಯೇ ಹೊರತು ಬೇರೇನೂ ಅಲ್ಲ. ಈತನು ಮಾನುಷ ಕೃತ್ಯಗಳನ್ನು ದೇವರಿಗೆ ಕಲ್ಪನೆ ಮಾಡುತ್ತಾನೆ? ಹೀಗೆ ಮಾಡುವದನ್ನು ಬಿಟ್ಟು ಮನುಷ್ಯರಿಗೆ ದೈವ ಲಕ್ಷಣಗಳನ್ನು ಅನುವರ್ತಿಸಿ ಬರೆದಿದ್ದರೆ ಎಷ್ಟು ಒಳ್ಳೆಯದಾಗಿತ್ತು!" ಎಂದು ಸಿಸಿರೋ ಮಹಾವಾಗ್ಮಿಯ ಪ್ರಮಾಣವಚನವನ್ನು ಈ ವಿದ್ಯಾಬೋಧಕರಲ್ಲೊಬ್ಬನಾದರೂ ತಿವಿಗೊಟ್ಟು ಲಕ್ಷಿಸಲಿಲ್ಲವೇಕೆ! ಆಹಾ! ಆ ಹೋಮರನು ಇದನ್ನೆಲ್ಲಾ ಕಲ್ಪಿಸಿ ಬರೆದನು ನಿಜವೇ! ಅದಿರಲಿ ಹೇಯವಾದ ಪಾಪಕೃತ್ಯಗಳನ್ನು ಮಾಡಿದ ಮನುಷ್ಯರನ್ನು ದೇವರೆಂದು ಹೇಳಿದ ಕಾರಣ; ಪಾಪಕೃತ್ಯಗಳೆಂದು ಜನರು ಭಾವಿಸುವುದಕ್ಕೆ ಅವಕಾಶವೇ ಇಲ್ಲದಂತಾಯಿತು. ಆ ಪಾಪಕೃತ್ಯಗಳನ್ನು ಮಾಡುವವರು—ನಾವು ದುಷ್ಟತನದಲ್ಲಿ ಮುಳುಗಿ ಹೋಗಿರುವ ಜನರನ್ನು ಅನುಸರಿಸುವವರಲ್ಲ, ಪರಲೋಕವಾಸಿಗಳಾದ ದೇವರುಗಳನ್ನೇ ಅನುಸರಿಸುವವರಾಗಿದ್ದೇವೆ ಎಂದು ಹೇಳಿಕೊಳ್ಳುವದಕ್ಕೆ ಅವಕಾಶವುಂಟಾಗಿದೆಯಲ್ಲವೇ?

ಇಷ್ಟು ಕೇಡಿಗೆ ಹಿತವಾಗಿ ಮಾನವರನ್ನು ನರಕಕ್ಕೆ ನೈಯುತ್ತಿರುವ ಅಧೀಕರ ಪ್ರವಾಹವೇ! ನಿನ್ನಿಂದ ಪಾಪದ ಕೃತ್ಯವನ್ನು ನಡಸುತ್ತಿರುವ ನಿನ್ನಲ್ಲಿ ಬಾಲಕರನ್ನು [illegible] ಬಹುಮಾನವನ್ನೂ ವಿಧಿಸಿರುವರಲ್ಲಾ! ಇಂಥ ವಿದ್ಯೆಯನ್ನು ಕಲಿತಿರುವ ವಿದ್ವಾಂಸರಿಗೆ ಕ್ರಮವಾದ ಸಂಬಳವನ್ನಲ್ಲದೆ ಬಹುಮಾನದ ಹಣಗಳನ್ನು ಕೊಡತಕ್ಕದ್ದೆಂದು ಶಾಸನಗಳೂ ಹೇಳುತ್ತಿವೆ!

ಇಷ್ಟೇ ಅಲ್ಲ ಟೆರೆನ್ಸ್ ಎಂಬ ಬೇರೊಬ್ಬ ಕವಿಯು—ಮಳೆಯ ರೂಪವಾಗಿ ಜ್ಯುಪಿತರನು ಒಬ್ಬ ಸ್ತ್ರೀಯ ಮಡಿಲಲ್ಲಿಳಿದು ಅವಳ ಪಾತಿವ್ರತ್ಯವನ್ನು ಕೆಡಿಸಿದ ಸಂಗತಿಯನ್ನು ಬರೆದು ನೇತ್ರಾಕರ್ಷಕವಾದ ಚಿತ್ರವನ್ನು ನೋಡಿದ ಒಬ್ಬ ಯೌವನಸ್ಥನು ಕಾಮಾತುರನಾಗಿ ಪ್ರೇರಿತನಾಗಿ, "ಸಿಡಿಲಿನಿಂದ ಆಕಾಶವನ್ನು ನಡುಗಿಸುವಂಥವನಾದ ಜ್ಯುಪಿತರನು ಇಂಥ ಕೃತ್ಯವನ್ನು ಮಾಡಬಹುದೋ? ಸಾಮಾನ್ಯನಾದ ನಾನು ಮಾಡಲಾಗದೋ?" ಎಂದು ಹೇಳಿ ಅದೇ ಮೇರೆಗೆ ದುರ್ಮಾರ್ಗಿಯಾದನೆಂಬುದಾಗಿ ಬರೆದಿದ್ದಾನೆ.

ಇಂಥ ಮಾನಗೆಟ್ಟ ಕಥೆಯನ್ನು ಮುಪ್ಪರಿಂದ ಮಾತ್ರವೇ ಭಾಷಾ ಸ್ವಾರಸ್ಯವೆಂತಲೂ ಇಲ್ಲವಾದರೆ ಇಲ್ಲವೆಂತಲೂ ಸಾಧಿಸಲಾಗಿದೆ! ಕಾವ್ಯತತ್ವಗಳನ್ನು ಬಾಲಕರ ಕೋಮಲ ಹೃದಯಂಗಮವಾಗುವಂತೆ ಮಾಡುವುದು ಎಷ್ಟು ಅನ್ಯಾಯ! ಬಾಲಕರಲ್ಲಿ ತಪ್ಪೇನೂ ಇಲ್ಲ. ಆದರೆ ಅಮೂಲ್ಯವಾದ ಮದ್ಯಪಾನವನ್ನು ಮಾಡಿಸುವ ಈ ಬಾಲಕರ ಗುರುಪಂಡಿತರು ತಾವೂ ವಿಷಪಾನಮಾಡುವದಲ್ಲದೆ ತಮ್ಮ ವಿದ್ಯಾರ್ಥಿಗಳಿಗೂ ಬಲಾತ್ಕಾರವಾಗಿ ಪಾನಮಾಡಿಸಿ. ಹಾಗೆ ಮಾಡಲೊಲ್ಲದಿದ್ದರೆ ಹೊಡೆದು ಬಡಿದು ಶಿಕ್ಷಿಸುತ್ತಿದ್ದರು. ಅಯ್ಯೋ, ನನ್ನ ಮೋರೆಯನ್ನು ಕೇಳುವುದಕ್ಕೆ ಇಂಥ ವಿಷಪಾನವನ್ನು ಮಾಡಬಿಟ್ಟ ನ್ಯಾಯಾಧೀಶನೂ ಇದ್ದಿಲ್ಲ. ನನ್ನ ದೇವರೇ, ನಿನ್ನ ಸನ್ನಿಧಿಯಲ್ಲಿ ಇದನ್ನೆಲ್ಲಾ ಹೇಳುವುದರಲ್ಲಿ ಭಯವೇನೂ ಇರುವುದಿಲ್ಲ. ನಾನು ಇಂಥ ವಿಷಪಾನ ಮಾಡುವದರಲ್ಲಿ ಬಹು ಸಂತೋಷಪಡುತಲಿದ್ದೆನು. ಅದಕಾರಣ ಗುರುಗಳಿಂದ ಹೊಗಳಿಸಿಕೊಳ್ಳುತಲಿದ್ದೆನು.

ಅಯ್ಯೋ ನನ್ನ ಜೀವನಾಯಕನೇ, ನನ್ನ ದೇವರೇ, ಇದರಿಂದ ನನಗೇನು ಪ್ರಯೋಜನವೇನು? ನಾನು ಪಡೆದ ಹೆಸರೆಲ್ಲವೂ ಏನು? ಅದೆಲ್ಲ ಹೊಗೆಗೂ ಗಾಳಿಗೂ ಸಮಾನವಲ್ಲವೆ? ನನಗೆ ನೀನಿತ್ತ ವಾಕ್ಶಕ್ತಿ ಮೊದಲಾದ ವರಗಳನ್ನು ವಿನಿಯೋಗಿಸುವುದಕ್ಕೆ ಇನ್ನಾವ ವಿಷಯ ಇರಲಿಲ್ಲವೇ? ಓ ಸ್ವಾಮಿ, ನಿನ್ನ ನಾಮಾವಳಿಯು ಪೂಗಲಿಲ್ಲವೇ? ನಿನ್ನ ಸತ್ಯವೇದಾಗಮಗಳು ಇರಲಿಲ್ಲವೇ? ಅವುಗಳು ಸಿಕ್ಕಿದುದನ್ನೆಲ್ಲಾ ಹಿಡಿದುಕೊಂಡು ಬಳ್ಳಿಯನ್ನು ಆಧಾರವಿಲ್ಲದೆ ಹೇಗೋ ಹಾಗೆಯೇ ನನ್ನ ಹೃದಯವು ಮೊದಲೆ ನಿನ್ನನ್ನು ಸ್ತುತಿಸುವದರಲ್ಲಿಯೂ ನಿನ್ನ ವೇದಾಗಮ ಪರಿಶ್ರಮದಲ್ಲಿಯೂ ನಿಂತಿದ್ದರೆ ಕೇವಲ ನಿಷ್ಪ್ರಯೋಜನಗಳಾದ ಈ ಲೌಕಿಕ ವಿದ್ಯೆಗಳಲ್ಲಿ ಗತಿಸದೆ ಇರುತ್ತಿದ್ದಿತು.

ಆಹಾ! ನನ್ನ ಹೃದಯವು ತಕ್ಕ ನೆಲೆಯನ್ನು ಕಾಣದೆ ಈ ಕಲ್ಪನಾ ಕಥೆಗಳೆಂಬ ಅರಣ್ಯದಲ್ಲಿ ಸಿಕ್ಕಿಕೊಂಡು ಅಲೆದಲೆದು ತೊಳಲುತ್ತ ನಿನ್ನ ಸಮ್ಮುಖವನ್ನು ಬಿಟ್ಟು ದೂರ ದೂರವಾಗಿ ಹೊರಟು ಹೋಗುತ್ತಿದ್ದಿತು. ನನ್ನ ಸಾಮರ್ಥ್ಯವನ್ನು ವಿದ್ಯಾಗುರುಗಳು ನೋಡಿ ಅತ್ಯಂತ ಸಂತೋಷಪಡುತ್ತ ನನ್ನನ್ನು ಮಾದರಿಯಾಗಿಟ್ಟುಕೊಳ್ಳುವಂತೆ ಆಜ್ಞಾಪಿಸಲು, ಅವನು ಶಿರಸಾವಹಿಸಿ ಸಭೆಯ ಮುಂದೆ ತಮ್ಮ ವಿದ್ಯಾಕೌಶಲ್ಯವನ್ನು ಪ್ರಸಂಗಮುಖದಿಂದ ಪ್ರಕಟಿಸುವಲ್ಲಿ ವ್ಯಾಕರಣವಿರುದ್ಧವಾದ ಪ್ರಯೋಗವನ್ನೇನಾದರೂ ಮಾಡಿ ವಿದ್ವಾಂಸರಿಂದ ನಿಂದಿಸಲ್ಪಟ್ಟರೆ ಅತ್ಯಂತ ಅವಮಾನವುಂಟೆಂದು ನಾಚಿಕೆಪಡುವರು. ಆದರೆ ತಮ್ಮ ಕಾಮಾತುರತೆಯನ್ನೇ ವಿಷಯೀಕರಿಸಿ ಕೇವಲ ಲಕ್ಷಣಬದ್ಧವಾದ ಭಾಷಾಸರಣಿಯಲ್ಲಿ ಕಾವ್ಯವನ್ನು ರಚಿಸಿ ಸಭೆಯ ಮುಂದೆ ಓದಿದರೆ ಪಂಡಿತರು ಅವರನ್ನು ಅತಿ ಸನ್ಮಾನದಿಂದ ಸ್ತುತಿಸಿದಲ್ಲಿ ಮಹದಾನಂದಭರಿತರಾಗಿ ಹಿಗ್ಗುವರು! ಓ ಸ್ವಾಮಿ, ನೀನೀ ವೈಪರೀತ್ಯಗಳನ್ನೆಲ್ಲಾ ನೋಡುತ್ತಿದ್ದೀ. ಅವರಿಗೆ ಪ್ರತಿದಂಡನೆಯನ್ನು ಕೊಡದೆ ಸುಮ್ಮನಿರುತ್ತೀ. ನೀನು ದೀರ್ಘಶಾಂತನು, ಕೃಪಾಳುವೂ ಸತ್ಯದಲ್ಲಿಯೂ ಬಾಹುಳ್ಯನು. ಸದಾಕಾಲವೂ ಸುಮ್ಮನಿರುವೆಯಾ?

ಇದಕೋ, ನಿನ್ನನ್ನು ಹುಡುಕುತ್ತ ನಿನ್ನಲ್ಲಿ ದೊರಕುವ ಪರಮ ಮಾಧುರ್ಯಯುಕ್ತವಾದ ಸುಖವನ್ನು ಆಸ್ವಾದಿಸುವುದಕ್ಕೆ ಪ್ರಯತ್ನಿಸುವ ಆತ್ಮವನ್ನು ಈ ಮಹಾಭಯಂಕರವಾದ ಕೂಪದಿಂದ ಬಿಡಿಸುವಂಥವನಾಗಿದ್ದೀ. "ಓ ಕರ್ತನೇ, ನಿನ್ನ ಮುಖವನ್ನು ಹುಡುಕುತ್ತೇನೆ" ಎಂದು ಯಾವನ ಹೃದಯವು ನಿನಗೆ ಹೇಳುತ್ತದೋ ಅವನನ್ನು ನೀನು ಸಂರಕ್ಷಿಸುತ್ತೀ. ದುಂದುಗಾರನಾದ ಆ ಕಿರೀಮಗನು ಕೃಪಾಕರನಾದ ತನ್ನ ತಂದೆಯ ಮನೆಯನ್ನು ಬಿಟ್ಟು ಹೊರಟು ಹೋದುದಕ್ಕೆ ಅವನ ದುಷ್ಟ ಮನಸ್ಸೇ ಕಾರಣವು! ಅವನು ಹೊರಟು ಹೋಗುವಾಗ ನೀನು ಅನುಗ್ರಹಿಸಿದ ವರಗಳೆಲ್ಲವನ್ನೂ ನೀನು ಪ್ರೀತಿಯುಳ್ಳ ತಂದೆಯಾದುದರಿಂದಲೇ ಕೊಟ್ಟೆ. ಅವನು ಅವೆಲ್ಲವನ್ನು ಕಳೆದುಕೊಂಡು ಹಿಂದಿರುಗಿ ಬರಬೇಕೆಂದ ಬಳಿಕ ನಿನ್ನ ಪ್ರೀತಿಯು ತಪ್ಪಲಿಲ್ಲ. ನಮ್ಮ ಗುರಿ ತಪ್ಪಿದ ಪ್ರಯಾಣದ ಪರಿಣಾಮದಲ್ಲಿ ನಾವು ನಿನ್ನನ್ನು ಬಿಟ್ಟು ದೂರ ಹೋಗುತ್ತೇವೆ. ಹಾಗೆ ದೂರಸ್ಥರಾಗುವುದೇ ನಿನ್ನ ಸಮುಖಕ್ಕೆ ದೂರವಾದ ದೇಶವಾಗಿದೆ. ಆಹಾ! ಮನುಷ್ಯರು ವ್ಯಾಕರಣ ಸೂತ್ರಗಳನ್ನು ತಪ್ಪಿ ಮಾತಾಡದಂತೆ ಎಷ್ಟು ಜಾಗರೂಕರಾಗಿದ್ದಾರೆ! ಆದರೆ ಪಾಪವಿಮೋಚನೆಯ ವಿಷಯದಲ್ಲಿ ಸ್ಥಿರವಾಗಿರುವ ಸೂತ್ರಗಳನ್ನು ಲಕ್ಷಿಸದಿರುವರಲ್ಲ! ಅಗಮ್ಯವಾದ ಪ್ರಕಾಶದಲ್ಲಿದ್ದುಕೊಂಡಿರುವವನೇ, ಮೇರೆದಪ್ಪಿ ನಡೆಸಿದವರಿಗೆ ನೀನು ಅನವರತ ಕರ್ಮಾನುಸಾರವಾಗಿ ಅಂಧತೆಯನ್ನು ಕೊಟ್ಟು ದಂಡಿಸುತ್ತೀ. ವಿದ್ವತ್ಸಭೆಯಲ್ಲಿ ಶಬ್ದಗಳಕೆಯನ್ನು ಬಿಡಿಸಿ ಬೇಕಾದರೂ ತಪ್ಪಿಲ್ಲದೆ ಪ್ರಸಂಗವನ್ನು ಮಾಡುವುದರಲ್ಲಿ ಅತಿಜಾಗರೂಕನಾಗಿರುವ ವಾಗ್ಮಿಯು ತನ್ನ ಸೋದರನಾದ ಮನುಷ್ಯರ ಪ್ರಾಣಹಾನಿಕಾರವನ್ನು ಮಾಡುವುದಕ್ಕಾದರೂ ಸ್ವಲ್ಪವೂ ಹಿಂಜರಿಯದಷ್ಟು ಕ್ರೋಧವನ್ನು ಹೃದಯದಲ್ಲಿ ತುಂಬಿಟ್ಟುಕೊಂಡಿರುವನಲ್ಲ! ಇಂತಪ್ಪ ಹೇಸಿಕೆಯ ಕೂಪದಿಂದ ಉದ್ಧರಿಸಿ ಕಾಯ್ದುಕೊ! ಅನನ್ಯಜನಸುಲಭಾ! ಕೃಪಾಮಾಲಿವಲ್ಲಭಾ!

ಒಳದೇಶದ ವೃತ್ತಾಂತಗಳು.

ನೀಲಗಿರಿ ಅರಮನೆಯಲ್ಲಿ ಶ್ರೀಮನ್ಮಹಾರಾಜರವರು ೧೮ನೇ ವರ್ಷವರ್ಧಂತಿಯನ್ನು ಕಳೆದ ಶುಕ್ರವಾರ ಬೆಳಸಿದರು.

* * * *

ಬೇಸಿಗೆ ರಜಾ ಪಡೆದಿದ್ದ ಸಿವಿಲ್ ಕೋರ್ಟುಗಳು ಈ ತಿಂಗಳ ೨೮ ನೇ ತಾರೀಖು ಸೋಮವಾರದಿಂದ ತೆರೆಯಲ್ಪಟ್ಟು, ಯಥಾಪ್ರಕಾರ ಕೆಲಸಗಳು ಜರುಗುವವು.

* * * *

ಶ್ರೀಮನ್ಮಹಾರಾಜರವರು ಈ ತಿಂಗಳ ೨೮ ನೇ ತಾ ಸೋಮವಾರ ನೀಲಗಿರಿಯಿಂದ ಮೋಟಾರ್ ಗಾಡಿಯಲ್ಲಿ ಹೊರಟು, ಆ ಸಾಯಂಕಾಲ ರಾಜಧಾನಿಯನ್ನು ತಲುಪುವರಾಗಿರುವರು. ಕೇಳುತ್ತೇವೆ.

* * * * *

ಮಹಾಮಾತೃಶ್ರೀಯವರೂ ಮಹಾರಾಣಿಯವರೂ ಯುವರಾಜರವರೂ ಪರಿವಾರಸಹಿತ ನೀಲಗಿರಿಯಿಂದ ರೈಲಿನ ಮೇಲೆ ಪ್ರಯಾಣ ಮಾಡಿ, ತಾ ೨೯ ನೆ ಮಂಗಳವಾರ ಸಾಯಂಕಾಲ ರಾಜಧಾನಿಗೆ ದಯಮಾಡುವಂತೆ ವರ್ತಮಾನವಿದೆ.

* * * *

ದಿವಾನ್ ಮೆ॥ ವಿ ಪಿ ಮಾಧವರಾಯರು ಕಳೆದ ಶುಕ್ರವಾರ ಬೆಳಿಗ್ಗೆ ನೀಲಗಿರಿಯಿಂದ ವಾಪಸು ಬೆಂಗಳೂರಿಗೆ ಬಂದಿಳಿದರು. ಬಹುಜನ ಅಧಿಕಾರಿಗಳೂ ದೊಡ್ಡ ಮನುಷ್ಯರೂ ಕಾದಿದ್ದು ಅವರನ್ನು ಸ್ಟೇಷನಿನಲ್ಲಿ ಎದುರುಗೊಂಡರು.

* * *

ಸರ್ಕಾರದವರು ಮೆ॥ ಸ್ಪಾರ್ಕ್ಸ್ ರವರನ್ನು ಬೆಂಗಳೂರು ಡಿಸ್ಟ್ರಿಕ್ಟಿಗೆ ವರ್ಗಮಾಡಿ, ಮೆ॥ ಎಂ ಕಾಂತರಾಜೇ ಅರಸಿನವರನ್ನು ಮೈಸೂರು ಡಿಸ್ಟ್ರಿಕ್ಟಿಗೆ ನೇಮಿಸಿರುವರೆಂತಲೂ, ಈ ಹುಕುಮು ಮುಂದಿನ ತಿಂಗಳಲ್ಲಿ ಜಾರಿಗೆ ಬರುವದೆಂತಲೂ ಕೇಳುತ್ತೇವೆ.

* * * *

ಒಬ್ಬ ಮನುಷ್ಯನು ಕೆಲವು ಬೈಸಿಕಲ್ ಗಾಡಿಗಳನ್ನು ಕದ್ದು ತಂದು, ಮೈಸೂರಿನಲ್ಲಿ ಕೆಲವು ಜನರಿಗೆ ಸುಲಭ ಕ್ರಯಕ್ಕೆ ಕೊಟ್ಟಿರುತ್ತಾನೆ. ಪೋಲೀಸಿನವರು ಇಂಥಾ ಕಳುವು ಬೈಸಿಕಲ್‌ಗಳನ್ನು ಕಂಡುಹಿಡಿದು, ಬೆಂಗಳೂರು ಪೋಲೀಸಿನವರಿಗೆ ತಿಳಿಸಿರುವರು.

* * * *

ಬಾಣಾವರದ ರೈಲ್ವೆ ಸ್ಟೇಷನಿನಿಂದ ೧೮ ಮೈಲಿ ದೂರದಲ್ಲಿರುವ ಹಳೇಬೀಡಿನ ಪ್ರಸಿದ್ಧ ದೇವಸ್ಥಾನವು ತುಂಬಾ ಶಿಥಿಲವಾಗಿರುವುದನ್ನು ನೋಡಿ, ಮೈಸೂರು ಸರ್ಕಾರದವರು ಛೀಫ್ ಇಂಜನಿಯರಿಂದ ಅದನ್ನು ಜೀರ್ಣೋದ್ಧಾರಮಾಡುವುದಕ್ಕೆ ಎಷ್ಟು ಖರ್ಚಾಗುವುದೆಂದು ಗೊತ್ತುಮಾಡಿಸಿ, ದುರಸ್ತು ಮಾಡುವದಕ್ಕೆ ಪ್ರಾರಂಭಿಸಿದ್ದಾರೆ. ಇದು ಬಹು ಪುರಾತನವಾದದ್ದು; ಪೂರ್ವಿಕರ ಶಿಲ್ಪವಿದ್ಯಾ ಪ್ರೌಢಿಮೆಯನ್ನು ಪ್ರಕಾಶಪಡಿಸುವಂಥಾದ್ದು. ಸರ್ಕಾರದವರು ಇಂಥಾ ಶ್ರೇಷ್ಠವಾದ ಕಟ್ಟಡವನ್ನು ಜೀರ್ಣೋದ್ಧಾರ ಮಾಡಿಸಲಾರಂಭಿಸಿರುವದು ಸ್ತೋತ್ರಾರ್ಹವಾಗಿರುತ್ತದೆ.

* * * *

ಬೆಂಗಳೂರು ದಂಡಿನಲ್ಲಿರುವ ರಾವ್ ಬಹದೂರ್ ಮೆ॥ ಆರ್ಕಾಟ್ ನಾರಾಯಣಸ್ವಾಮಿ ಮೊದಲಿಯಾರ್ರವರು ನೆನ್ನೆ ಸಾಯಂಕಾಲ ದಿವಾನ್ ಮೆ॥ ವಿ ಪಿ. ಮಾಧವರಾಯರನ್ನು ತಮ್ಮ ಸ್ಕೂಲ್ ಕಟ್ಟಡಕ್ಕೆ ಬರಮಾಡಿಕೊಂಡು, ಕೆಲವು ಸಂತೋಷೋತ್ಸವಗಳನ್ನು ಮಾಡಿಸಿ, ತಮ್ಮ ಕೃತಜ್ಞತೆಯನ್ನು ಪ್ರಕಾಶಪಡಿಸಿದರೆಂದು ತಿಳಿದು ಬಂದಿದೆ.

* * * *

ಕೋಲಾರಕ್ಕೆ ಸೇರಿದ ಶಾಮಸಮುದ್ರದ ಪೋಲೀಸ್ ಸ್ಟೇಷನಿನಲ್ಲಿ ದಫೇದಾರ್ ನಾಗಲಿಂಗಂ ಎಂಬುವನು ಕೆಲವು ಜನರನ್ನು ಹಿಡಿದು ಲಾಕಪ್ಪಿನಲ್ಲಿಟ್ಟದ್ದು, ಲಂಚಕೊಟ್ಟ ಮೇಲೆ ಅವರನ್ನೆಲ್ಲಾ ಬಿಟ್ಟು ಬಿಟ್ಟನೆಂದು ಮೊಕದ್ದಮೆ ಆಗಿದೆ. ಈಗ ಅವನನ್ನು ಸಸ್ಪೆಂಡ್ ಮಾಡಿದ್ದಾರೆ. ಅವನ ಮೇಲೆ ಬಂದಿರುವ ಮೊಕದ್ದಮೆ ಇಷ್ಟರಲ್ಲೇ ವಿಚಾರಣೆಯಾಗುವದೆಂದು ತಿಳಿದಿದೆ.

* * * *

ಬರುವ ಜೂನ್ ತಿಂಗಳ ೩ ನೆ ತಾರೀಖಿನ ದಿನ ರಾಜಧಾನಿಯಲ್ಲಿ ಶ್ರೀ ಮನ್ಮಹಾರಾಜರವರ ವರ್ಧಂತಿ ಮಹೋತ್ಸವವು ನೆರವೇರುವುದು. ಮುಖ್ಯಮುಖ್ಯರಾದ ಅಧಿಕಾರಿಗಳು ಯೂರೋಪ್ಯರ್ ಸರ್ದಾರರು ಪತ್ರಿಕಾಧಿಪತಿಗಳೊಡನೆ ಬೆಂಗಳೂರು ಮುಂತಾದ ಸ್ಥಳಗಳಿಂದ ಕರೆಸಲ್ಪಡುವರು. ಕುದುರೆಗಳ ಜೂಜೂ ಪೋಲೋ ಎಂಬ ಚೆಂಡಾಟದ ಪಂದ್ಯವೂ ನಡೆಯುವಂತೆ ಏರ್ಪಾಡಾಗಿದೆ.

* * * *

ಮೊನ್ನೆ ಮಂಗಳವಾರ ರಾತ್ರಿ, ರಾಜಧಾನಿಯಲ್ಲಿ ಒಳ್ಳೇ ಮಳೆಯಾಯಿತು. ಪಟ್ಟಣದಲ್ಲಿ ಕೆಲವು ಕಡೆ ಮನೆಮಠಗಳಿಗೂ ಗಿಡಗಳಿಗೂ ಸಿಡಿಲು ಬಿದ್ದು ನಷ್ಟವಾಯಿತು. ಮೆ॥ ಲಕ್ಷ್ಮೀಕಾಂತರಾಜೇ ಅರಸಿನವರ ಬಂಗಲೆಯಲ್ಲೂ ಒಂದು ಕೊರಡು ಕಡಿದು ಮುರಿದು ಹೋಗಿದೆ. ಕೋಲಾರದಲ್ಲಿ ಒಬ್ಬಿಬ್ಬರಿಗೆ ಜಖಂ ಆಯಿತೆಂದು ಕೇಳುತ್ತಾರೆ. ಭೂಮಿಯು ತಕ್ಕ ಮಟ್ಟಿಗೆ ಹದವಾಗಿದೆ. ಕೆರೆಗಳಿಗೆ ಸ್ವಲ್ಪ ನೀರು ಬಂದಿರುವುದು.

* * * *

ಮೆ॥ ವಿ. ಪಿ ಮಾಧವರಾಯರಿಗೆ ಮೈಸೂರು ಸಂಸ್ಥಾನದ ದಿವಾನಗಿರಿಯು ನೇಮಕವಾದದ್ದಕ್ಕೆ ಬೆಂಗಳೂರು ಸಿಟಿ ಮತ್ತು ದಂಡಿನಲ್ಲಿರುವ ಹಿಂದೂ ಮುಸಲ್ಮಾನ್ ಯೂರೋಪ್ಯರ್ ಪ್ರಜೆಗಳು ಸಂಭ್ರಮಪಟ್ಟು, ತಮ್ಮ ಸಂತೋಷವನ್ನೂ ಕೃತಜ್ಞತೆಯನ್ನೂ ಉತ್ಸವಗಳ ಮೂಲಕ ಪ್ರಕಾಶಪಡಿಸುವವರಾಗಿದ್ದಾರೆ. ಈ ಉತ್ಸವವು ನಾಳೆ ಶನಿವಾರ ಸಾಯಂಕಾಲ ಲಾಲ್ ಬಾಗ್ ಉದ್ಯಾನವನದಲ್ಲಿ ನಡೆಯುವುದು. ಅಲ್ಲಿಗೆ ಎಲ್ಲಾ ಜನರೂ ಹೋಗುವರು. ಮೆ. ಮಾಧವರಾಯರಿಗೆ ಅಡ್ರೆಸ್ಸುಗಳನ್ನು ಓದಿ ಒಪ್ಪಿಸುವರೆಂದು ಕೇಳುತ್ತೇವೆ.

* * * *

ಮೆ॥ ವಿ. ಪಿ. ಮಾಧವರಾಯರು ತಿರುವಾಂಕೂರು ದಿವಾನಗಿರಿಯನ್ನು ಒಪ್ಪಿಕೊಂಡು ಹೋದಲ್ಲಾದುದರಿಂದ ಅವರಿಗೆ ಮೈಸೂರು ಸಂಸ್ಥಾನದಿಂದ ೫೦೦ ರೂಪಾಯಿ ಪೆನ್ಶನ್ ಸಲ್ಲುತ್ತಿದ್ದು, ಈ ವೇಳೆ ಅವರೇ ಈ ಸಂಸ್ಥಾನದ ದಿವಾನರಾಗಿ ನೇಮಕವಾದ್ದರಿಂದ ಇವರ ಸಂಬಳದ ವಿಚಾರದಲ್ಲಿ ಶ್ರೀಮನ್ಮಹಾರಾಜರವರು ಪರ್ಯಾಲೋಚನೆ ಮಾಡಿ, ದಿವಾನಗಿರಿಯ ಸಂಬಳ ೩,೦೦೦ ರೂಪಾಯಿ, ಪೆನ್ಶನ್ ೫೦೦ ರೂಪಾಯಿ, ಇವೆರಡನ್ನೂ ಸೇರಿಸಿ, ಅವರಿಗೆ ೩,೫೦೦ ರೂಪಾಯಿ ಸಂಬಳ ಸಲ್ಲತಕ್ಕದ್ದೆಂದು ನಿಷ್ಕರ್ಷೆಮಾಡಿರುವರೆಂದು ತಿಳಿಯುತ್ತದೆ.

* * * *

ಹಿಂದಿನ ಸೋಮವಾರ ಸಾಯಂಕಾಲ ಕೋಲಾರ್ ಚಿನ್ನದ ಗಣಿಯ ಮಡೆ ಕಡಲೆಲ್ಲಾ ಬಹು ಬಿರುಸಾಗಿದ ಸುಂಟರಗಾಳಿ ಬೀಸಿತು. ಅನೇಕ ಛಾವಣಿ ಕಟ್ಟಡಗಳ ಮೇಲ್ಛಾವಣಿಗಳೂ ಕೆಂಚುಗಳೂ ಕಿತ್ತುಹಾರಿ ಹೋದವು. ಮಣ್ಣಿನ ಮನೆಗಳು ಧೂಳು ಎಬ್ಬಿಸಿ ಬಗ್ಗುತಲೆಯನ್ನುಂಟುಮಾಡಿತು. ಹುಲಿ ಆಳೆಗಳೆ ಮತ್ತು ಬಡಬಗ್ಗರಾದ ಪ್ರಜೆಗಳ ಜೋಪಡಿಗಳೆಲ್ಲಾ ಕೆಡಹಿಕೊಂಡು ಹೋದವು. ಒಂದು ಕಡೆ ದೊಡ್ಡ ಗೋಡೆ ಅನಾಮತ್ತು ಉರುಳಿಕೊಂಡು ಒಬ್ಬ ಮನುಷ್ಯನನ್ನು ಕೊಂದುಬಿಟ್ಟಿತು. ಆ ಪ್ರದೇಶದಲ್ಲಿ ಇದುವರೆಗೆ ಇಂಥಾ ಸುಂಟರಗಾಳಿಯು ಅನಾಹುತ ವ್ಯಕ್ತಮಾಡಿದ್ದಿಲ್ಲ.

* * * *

ಈಚೆಗೆ ಮೈಸೂರು ಸಂಸ್ಥಾನದ ಇಂಜನಿಯರ್ ಇಲಾಖೆಯ ಖರ್ಚು ವರುಷೇ ವರುಷ ಹೆಚ್ಚುತ್ತಾ ಬಂದಿದೆ ಎಂದೂ ಅದನ್ನು ತನಿಖೆ ಮಾಡಿ ರಿಪೋರ್ಟು ಕೊಡಬೇಕೆಂದು ಶ್ರೀಮನ್ಮಹಾರಾಜರವರು ಒಂದು ಕಮಿಟಿಯನ್ನು ಗೊತ್ತುಮಾಡಿರುತ್ತಾರೆ. ಈ ಕಮಿಟಿಯ ಮೆಂಬರುಗಳಾದ ದಿವಾನ್ ಮೆ॥ ಮಾಧವರಾಯರೂ ಛೀಫ್ ಇಂಜನಿಯರ್ ಮೆ॥ ವೆ ಕ್ಯಾರ್ಟರ್ ಯವರೂ, ಕಂಟ್ರೋಲರ್ ಮೆ॥ [illegible] ಯವರೂ ಮೊನ್ನೆ ಸೋಮವಾರದಿಂದ ಬೆಂಗಳೂರು ದಿವಾನ್ ಆಫೀಸಿನಲ್ಲಿ ಸಭೆ ಸೇರಿ ಆ ಇಲಾಖೆಯ ಶಿಬ್ಬಂದಿ, ಖರ್ಚು, ಈ ಮೊದಲಾದ ವಿಷಯಗಳನ್ನು ಕುರಿತು ಚರ್ಚೆ ಮಾಡುತ್ತಿರುವರು. ಇವರು ಇಷ್ಟರಲ್ಲೇ ರಿಪೋರ್ಟು ಬರೆದು ಶ್ರೀಮನ್ಮಹಾರಾಜರವರಿಗೆ ಒಪ್ಪಿಸುವರೆಂತಲೂ, ಅದರ ಮೇಲೆ ಅವರು ಹುಕುಂ ದಯಪಾಲಿಸುವರೆಂತಲೂ ಕೇಳುತ್ತೇವೆ.

* * * *

ಕಳೆದ ಶನಿವಾರ ಬೆಳಿಗ್ಗೆ ಬೆಂಗಳೂರು ಸಿಟಿ ಮುನಿಸಿಪಲ್ ಆಫೀಸಿನಲ್ಲಿ ಪ್ರೆಸಿಡೆಂಟರ ಬದಲಾವಣೆಗೆ ಇಬ್ಬರು ಮುನಿಸಿಪಲ್ ಕಮಿಷನರುಗಳನ್ನು ಚುನಾಯಿಸುವದಕ್ಕೋಸ್ಕರ ಸರ್ಕಾರಿ ಗರ್ಲ್ಸ್ ಸ್ಕೂಲಿನಲ್ಲಿ ಪ್ರಸಿಡೆಂಟೂ ಓಟರುಗಳೂ ಸೇರಿದ್ದರು. ಸನ್ಮತಿ ರೂಲುಗಳನ್ನು ಕುರಿತು ವಿಚಾರದಲ್ಲಿ ಮುನಿಸಿಪಲ್ ಪ್ರಸಿಡೆಂಟರಿಗೂ ಪ್ರಜೆಗಳಿಗೂ ಚರ್ಚೆ ನಡೆದು, ಪ್ರೆಸಿಡೆಂಟರು ಹೇಳಿದ ಅಭಿಪ್ರಾಯವನ್ನು ಓಟರುಗಳು ಒಪ್ಪದೆ, ಮೆಂಬರನ್ನು ಚುನಾಯಿಸದೇನೇ ಹೊರಟು ಹೋದರು. ಚರ್ಚಾಸ್ಪದವಾದ ಸಂಗತಿಯನ್ನು ಮೊದಲೇ ಅರ್ಥ ಮಾಡದೆ ಹೋದದ್ದು ಅಭಾಸಕ್ಕೆ ಕಾರಣವಾಯಿತು. ಈ ವಿಷಯವಾಗಿ ಪ್ರಸಿಡೆಂಟರೂ ಪ್ರಜೆಗಳೂ ಬೇರೆ ಬೇರೆ ಅರ್ಜಿಗಳನ್ನು ಗವರ್ನಮೆಂಟಿಗೆ ಬರೆದು ಅದರ ಅಪ್ಪಣೆಯನ್ನು ಉಭಯರೂ ಎದುರುನೋಡುತ್ತಿರುವಂತೆ ತಿಳಿಯುವುದು. ಈಚೆಗೆ ಪ್ರಸಿಡೆಂಟರು ಓಟರುಗಳ ಅಭಿಪ್ರಾಯದಂತೆ ಒಪ್ಪಿಕೊಂಡದ್ದರಿಂದ ಚುನಾವಣೆಯು ನಡೆಯುತ್ತಿರುವುದಾಗಿ ಕೇಳುತ್ತೇವೆ.

---

* ಸಿಸೆರೊ ಎಂಬ ರೋಮಾಪುರದ ಶಾಸ್ತ್ರಜ್ಞ.

* ಈ ಸಂದರ್ಭದಲ್ಲಿ ನಮ್ಮ ದೇಶದ ಕೃಷ್ಣಾವತಾರದ ಕಥೆಯನ್ನು ನೋಡುವದು.

ನಮ್ಮ ಪುಸ್ತಕ ಭಂಡಾರವು.

"ಕನಕಲತಾ ಪರಿಣಯ ನಾಟಕಂ"

ಇದು "ಪ್ರಿಯದರ್ಶಿಕಾ ನಾಟಕ," "ಕೃಷ್ಣವಿಜಯವ್ಯಾಯೋಗಂ" ಮುಂತಾದ ಹಳೆಗನ್ನಡದ ಗ್ರಂಥಗಳನ್ನು ವಿರಚಿಸಿರುವ ಮೈಸೂರು ಕೃಷ್ಣರಾಜಪೇಟೆಯಲ್ಲಾ ನಿವಾಸಿಗಳಾದ ವೇ॥ ನಂಜನಗೂಡು ಶ್ರೀಕಂಠಶಾಸ್ತ್ರಿಗಳಿಂದ ಅಚ್ಚಗನ್ನಡದಲ್ಲಿ ಬರೆಯಲ್ಪಟ್ಟ ನವೀನ ನಾಟಕ. ಇದರಲ್ಲಿ ದುಷ್ಟಸ್ತ್ರೀಯರು ತಮ್ಮ ಮೋಹಪಾಶಕ್ಕೆ ಸಿಕ್ಕಿದ ಪುರುಷನಿಂದ ಎಂತಹ ದುಷ್ಕಾರ್ಯವನ್ನಾದರೂ ಮಾಡಿಸಬಲ್ಲರು ಎಂಬುವುದೂ ಅಂಥವರಿಂದ ನಿರ್ದೋಷಿಗಳಾದ ಪರರಿಗೂ ಕಷ್ಟಪರಂಪರೆಯು ಸಂಭವಿಸುತ್ತದೆಂಬುವುದೂ, ಸಜ್ಜನರಿಗೆ ಎಂತಹ ಕಷ್ಟಗಳು ಸಂಭವಿಸಿದಾಗ್ಯೂ ತಮ್ಮ ಸದ್ಗುಣಗಳನ್ನು ಬಿಡುವುದಿಲ್ಲವೆಂಬುವುದೂ ಮುಖ್ಯ ನೀತಿಯಾಗಿದೆ. ಕರ್ನಾಟಕ ಭಾಷೆಯಲ್ಲಿ ನಾಟಕರಚನೆಯೇ ಇಲ್ಲವೆಂಬ ಕೊರತೆಯನ್ನು ಹೋಗಲಾಡಿಸಬೇಕೆಂಬುವುದೇ ಈ ಗ್ರಂಥಕರ್ತರ ಪ್ರಯತ್ನವಾಗಿದೆ. ಇದು ಐದು ಅಂಕಗಳುಳ್ಳದ್ದಾಗಿಯೂ ಮನೋಹರವಾದ ಕಲ್ಪಿತಕಥೆಯಾಗಿಯೂ ಇದೆ. ಚಂಡವಿಕ್ರಮನೆಂಬ ರಾಜನಿಗೆ ಕನಕಲತೆಯೆಂಬ ಮಗಳಿದ್ದಳು. ಆತನಿಗೆ ಪುತ್ರಸಂತಾನವಿಲ್ಲದಿದ್ದುದರಿಂದ ಕನಕಲತೆಯನ್ನು ಮದುವೆಯಾಗತಕ್ಕವನೇ ರಾಜ್ಯಕ್ಕೆ ಉತ್ತರಾಧಿಕಾರಿಯಾಗಬೇಕಾಗಿತ್ತು. ರಾಜನ ಮೈದುನನಾದ ಮಧೂಲಕನೆಂಬುವನಲ್ಲಿ ಅನುರಕ್ತಳಾಗಿದ್ದ ಮಾಲಿನಿಯೆಂಬ ಚೇಟಿಯು ಕನಕಲತೆಗೂ ಮಧೂಲಕನಿಗೂ ಮದುವೆಯಾದರೆ ತನ್ನ ಪ್ರಿಯನಾದ ಮಧೂಲಕನೇ ರಾಜನಾಗುವನೆಂದು ಭ್ರಮಿಸಿ, ಕನಕಲತೆಯನ್ನು ಬಲಾತ್ಕರಿಸಿದಳು. ಕನಕಲತೆಯು ಇದನ್ನು ತಿರಸ್ಕರಿಸಿ, ವಿಕ್ರಮಸಿಂಹನೆಂಬ ಮತ್ತೊಬ್ಬ ರಾಜನನ್ನು ವರಿಸಿ, ಅವನೊಡನೆ ಹೊರಟುಹೋಗಲು ಮಾಲಿನಿಯು ಮೂಢನಾದ ಮಧೂಲಕನ ಕೈಯಿಂದ ಚಂಡವಿಕ್ರಮನನ್ನು ಕೊಲ್ಲಿಸಿ, ಆತನ ಪರಿವಾರವನ್ನು ಕಾರಾಗೃಹದಲ್ಲಿ ಹಾಕಿಸಿ, ಕನಕಲತಾ ವಿಕ್ರಮಸಿಂಹರಿಗೆ ಅನೇಕ ತೊಂದರೆಗಳನ್ನುಂಟುಮಾಡಿ ಅವರಿಬ್ಬರನ್ನೂ ಅಗಲಿಸಿ, ಮಧೂಲಕನನ್ನು ರಾಜನನ್ನಾಗಿ ಮಾಡಿದಳು. ಸರೆಮನೆಯ ಅಧಿಕಾರಿಯಾಗಿದ್ದ ಚಂಡವಿಕ್ರಮನ ಕಡೆಯ ಒಬ್ಬ ಕಂಚುಕಿಯು ಚಂಡವಿಕ್ರಮನ ಪರಿವಾರವನ್ನು ಸೆರೆಯಿಂದ ಬಿಡಿಸಿ, ಮಾಲಿನಿಯನ್ನು ಕೊಲ್ಲಿಸಿದನು. ಪರಸ್ಪರ ಅಗಲಿದ ಕನಕಲತಾ ವಿಕ್ರಮಸಿಂಹರು ಒಂದು ಋಷ್ಯಾಶ್ರಮದಲ್ಲಿ ಸೇರಲು, ಆ ಋಷಿಯೂ ಚಂಡವಿಕ್ರಮನ ಪತ್ನಿಯೂ ಕನಕಲತಾ ವಿಕ್ರಮಸಿಂಹರಿಗೆ ಮದುವೆ ಮಾಡಿಸಿದರು. ಮಧೂಲಕನು ತನ್ನ ದುಷ್ಕೃತ್ಯಕ್ಕಾಗಿ ಪಶ್ಚಾತ್ತಾಪಪಟ್ಟು ಸನ್ಯಾಸಿಯಾದನು. ಈ ಕಥೆಯು ಇದರಲ್ಲಿ ಉಕ್ತವಾಗಿದೆ. ಇದರ ಕ್ರಯ ೫ ಆಣೆ. ಕರ್ಣಾಟಕ ಭಾಷಾಭಿಮಾನಿಗಳೆಲ್ಲರೂ ಈ ನಾಟಕವನ್ನು ಓದಬೇಕಾಗಿದೆ.

ಮೈಸೂರು ಸರ್ಕಾರಿ ಹುಕುಮುಗಳು

ಕಳೆದ ೧೯೧೫ ನೆ ಡಿಸೆಂಬರ್ ತಿಂಗಳಲ್ಲಿ ತಿರುಪತಿಯಲ್ಲಿರುವ ನಮ್ಮ ಮಹಾರಾಜರವರ ಧರ್ಮಸತ್ರದಲ್ಲಿ ಮುಕ್ಕೋಟಿ ಸಮಾರಾಧನೆಗೂ ೧೯೧೫ ನೆ ಅಕ್ಟೋಬರ್ ತಿಂಗಳಲ್ಲಿ ನಡೆದ ಬ್ರಹ್ಮೋತ್ಸವಕ್ಕೂ ಒಟ್ಟು ರೂ ೧,೫೯೨—೯—೧ ಪೈ ಖರ್ಚಾಯಿತು, ಗವರ್ನಮೆಂಟಿನವರು ಈ ಖರ್ಚನ್ನು ಸ್ಯಾಂಕ್ಷನ್ ಮಾಡಿ. ಇನ್ನು ಮುಂದೆ ಈ ಉಕ್ತ ಎರಡು ಸಮಾರಾಧನೆಗಳಿಗೆ ಪ್ರತಿ ವರುಷವೂ ೧,೫೦೦ ರೂಪಾಯಿನಂತೆ ಕೊಡತಕ್ಕದ್ದೆಂದು ಗೊತ್ತು ಮಾಡಿದೆ

ತೀರ್ಥಹಳ್ಳಿಯಲ್ಲಿರುವ ಶ್ರೀರಾಮದೇವರ ದೇವಸ್ಥಾನವು ಸರ್ಕಾರಿ ಮುಜರಾಯಿ ಇಲಾಖೆಗೆ ಸೇರಿರುತ್ತದೆ. ಈ ದೇವಸ್ಥಾನಕ್ಕೆ ವರುಷಕ್ಕೆ ೧,೯೩೮ ರೂಪಾಯಿನ ವರಮಾನವಿದೆ. ಡೆಪ್ಯುಟಿ ಕಮಿಷನರ್ ಮಿ॥ ಎಂ. ಎಸ್. ನಾರಾಯಣರಾಯರು ಈ ದೇವಸ್ಥಾನದ ಲೆಕ್ಕಗಳನ್ನು ಪರಿಶೀಲಿಸಿ, ಧರ್ಮದರ್ಶಿಗಳು ಎಲ್ಲಾ ವರಮಾನವನ್ನು ತಮಗೆ ತೋರಿದಂತೆ ಖರ್ಚು ಮಾಡುತ್ತಾರೆಂತಲೂ, ಈಗ ೧ ಸಾವಿರ ರೂಪಾಯಿನಷ್ಟು ಪ್ರತಿವರುಷವೂ ನಿಗದಿ ಇಲ್ಲದೆ ಖರ್ಚಾಗುತ್ತಿದೆ ಎಂತಲೂ, ಅದನ್ನೆಲ್ಲಾ ಕ್ರಮಪಡಿಸಬೇಕಾದದ್ದು ತುಂಬಾ ಅವಶ್ಯವೆಂತಲೂ ಗವರ್ನಮೆಂಟಿಗೆ ರಿಪೋರ್ಟು ಮಾಡಿದರು. ಸರ್ಕಾರದವರು ಆ ದೇವಸ್ಥಾನದ ಸಿಬ್ಬಂದಿ ಖರ್ಚು, ನಿತ್ಯಕಟ್ಟಳೆ ಹಬ್ಬ ಹರಿದಿನಗಳ ಖರ್ಚು ಮುಂತಾದ್ದನ್ನು ಇಷ್ಟಿಷ್ಟೇ ಇರಬೇಕೆಂದು ಬಾಬುವಾರು ನಿಗದಿ ಮಾಡಿ, ಇವಕ್ಕೆಲ್ಲಾ ವರುಷಕ್ಕೆ ೧,೬೨೩ ರೂಪಾಯಿ ಖರ್ಚನ್ನಿಟ್ಟು ಸ್ಯಾಂಕ್ಷನ್ ಮಾಡಿದ್ದಾರೆ.

ಶಿರಸಿಯ ಹಿಂದಿನ ಎಲೆ ಸಣ್ಣ ಕೊಂಬೆಗಳನ್ನು ರೈತರು ಯಾವ ಅಡ್ಡಿಯೂ ಇಲ್ಲದೆ ವ್ಯವಸಾಯಕೋಸ್ಕರ ಕಡಿದು ತೆಗೆದುಕೊಂಡು ಹೋಗುತ್ತಿದ್ದರು. ಈಚೆಗೆ ಸರ್ಕಾರದವರು ಆ ಮರವು ಬಹು ಬೆಲೆಯುಳ್ಳದ್ದೆಂತಲೂ ಅದನ್ನು ಕಡಿಯಕೂಡದೆಂತಲೂ ತಡೆದುಬಿಟ್ಟರು. ಅದರ ಮೇಲೆ ರೈತಪ್ರಜೆಗಳು ಅನೇಕಾವರ್ತಿ ಅರ್ಜಿಗಳನ್ನು ಬರೆದು, ಹಾಗೆ ತಡೆಯಕೂಡದೆಂದು ಕೇಳಿಕೊಂಡರು. ಗವರ್ನಮೆಂಟಿನವರು ಈಗ ಹುಕುಂ ಕೊಟ್ಟಿರುವುದೇನೆಂದರೆ — ಶಿರಸಿಯ ಮರದ ಎಲೆಗಳನ್ನು ಎಳೆಯ ಸಣ್ಣ ರೆಂಬೆಗಳನ್ನೂ ರೈತರಿಗೆ ಫಾರೆಸ್ಟ್ ಇಲಾಖೆಯವರೇ ಕತ್ತರಿಸಿಕೊಡಬೇಕು. ವ್ಯವಸಾಯಸಾಮಾನುಗಳಿಗೂ ಮನೆ ಕಟ್ಟಿಕೊಳ್ಳುವುದಕ್ಕೂ ಮರ ಬೇಕಾಗಿದ್ದಲ್ಲಿ ಒಂದು ಗಾಡಿ ಹೊರೆಯ ಮರಕ್ಕೆ ೫ ರೂಪಾಯಿನಂತೆ ರುಸುಂ ತೆಗೆದುಕೊಂಡು ಕೊಡಬಹುದು. ಸ್ವಂತ ಹಿಡುವಳಿ ಜಮೀನುಗಳಲ್ಲಿರುವ ಮರಗಳನ್ನು ಕಡಿದು ಸಾಗಿಸಿಕೊಳ್ಳುವುದಕ್ಕೆ ರೈತರಿಂದ ಯಾವ ತರಹ ಸುಂಕವನ್ನೂ ವಸೂಲ್ಮಾಡಿಕೊಳ್ಳಕೂಡದು. ಎಲೆ ಕೊಂಬೆಗಳನ್ನು ಗಾಡಿ ಮರವನ್ನು ಗಾಡಿ ಸಾಗಿಸಿಕೊಳ್ಳುವುದಕ್ಕೆ ಡೆಪ್ಯುಟಿ ಕಮಿಷನರೋ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರವರೋ ಲೈಸೆನ್ಸುಗಳನ್ನು ಬರೆದು ಕೊಡಬೇಕು ಎಂಬುದೇ.

ರಾಜಧಾನಿಯಲ್ಲಿರುವ ಶ್ರೀಮನ್ ಮಹಾರಾಜರವರ ಧರ್ಮಸತ್ರದಲ್ಲಿ ಪ್ರಯಾಣಿಕರಿಗೆ ಅನ್ನ ಹಾಕುವುದು. ಬೈರಾಗಿಗಳಿಗೆ ಸದಾವರ್ತನ್ನು ಕೊಡುವುದು, ಸಂಸ್ಕೃತವಿದ್ಯಾರ್ಥಿಗಳಿಗೆ ಅನ್ನ ಹಾಕುವುದು, ಕಂಗಳರಿಗೆ ಅಕ್ಕಿ ಕೊಡುವುದು ಸಿಬ್ಬಂದಿ ಖರ್ಚು, ಸತ್ರದ ರಿಪೇರಿ, ಈ ಮೊದಲಾದ ಬಾಬುಗಳಿಗೆ ಸರ್ಕಾರದವರು ಪ್ರತಿ ವರುಷವೂ ಮುಂದೆ ಹೇಳುವಂತೆ ೧೭,೯೫೦ ರೂಪಾಯಿ ಪ್ರಕಾರ ಖರ್ಚುಮಾಡುತ್ತಿದ್ದಾರೆ. ನವರಾತ್ರಿ ಕಾಲದಲ್ಲಿ ನಡೆಯುವ ಅನ್ನಛತ್ರಕ್ಕೆ ಈ ಹಣವು ಸಾಕಾಗುವುದಿಲ್ಲವೆಂದು ಕಂಡುಬಂದದ್ದರಿಂದ ಸರ್ಕಾರದವರು ಇದಕ್ಕಾಗಿಯೇ ಇನ್ನು ಮುಂದೆ ಪ್ರತಿ ವರುಷವೂ ಪ್ರತ್ಯೇಕವಾಗಿ ೧,೫೦೦ ರೂಪಾಯಿ ಕೊಡುವುದಾಗಿ ಸ್ಯಾಂಕ್ಷನ್ ಮಾಡಿದ್ದಾರೆ. ಈ ಪ್ರಕಾರ ಖರ್ಚಾಗತಕ್ಕ ಬಾಬುಗಳ್ಯಾವುವೆಂದರೆ — ಕಂಗಳರಿಗೂ ಅನಾಥರಿಗೂ ಕೊಡುವ ಅಕ್ಕಿಗೆ ೯,೦೦೦ ರೂಪಾಯಿ, ಬ್ರಾಹ್ಮಣರಿಗೆ ಅನ್ನ ಹಾಕುವುದಕ್ಕೂ ಬೈರಾಗಿಗಳಿಗೆ ಸದಾವರ್ತನ್ನು ಕೊಡುವುದಕ್ಕೂ ೬,೦೦೦ ರೂಪಾಯಿ, ಸತ್ರದ ಸಿಬ್ಬಂದಿ ಖರ್ಚಿಗೆ ೧,೬೦೦ ರೂಪಾಯಿ, ಕಟ್ಟಡ ಮುಂತಾದ್ದರ ವಾರ್ಷಿಕ ರಿಪೇರಿಗೆ ೧೫೦ ರೂಪಾಯಿ, ಸಾಮಿಲಾತು ಮುಂತಾದ್ದರ ಖರ್ಚಿಗೆ ೧೦೦ ರೂಪಾಯಿ, ಇದಲ್ಲದೆ ನವರಾತ್ರಿಯಲ್ಲಿ ಸಂತರ್ಪಣೆ ಖರ್ಚಿಗೆ ೧,೫೦೦ ರೂಪಾಯಿ, ಅಂತು ೧೯,೪೫೦ ರೂಪಾಯಿ ಈ ಸತ್ರದಲ್ಲಿ ಪ್ರತಿ ವರುಷವೂ ಖರ್ಚಾಗುವಂತೆ ನಿಗದಿಯಾಗಿದೆ.

ನೆದರ್ಲೆಂಡ್ಸಿನಲ್ಲಿ ನಡೆದ ಪ್ರದರ್ಶನಶಾಲೆಗಾಗಿ ಸೊರಬದ ಹನುಮಂತಪ್ಪನವರು, ಸುಬ್ಬಣ್ಣನವರು, ಗೋಪಾಲಪ್ಪನವರು ಎ. ವೀರಪ್ಪನವರು, ಇವರುಗಳಿಂದ ದಂತದಲ್ಲೂ ಮತ್ತು ಗಂಧದ ಮರದಲ್ಲೂ ಕೆಲವು ಸಣ್ಣ ಕೆಲಸದ ಸಾಮಾನುಗಳನ್ನು ಸರ್ಕಾರದವರು ಮಾಡಿಸಿ ಕಳುಹಿಸಿಕೊಟ್ಟರು. ಅವುಗಳಿಗೆ ಆ ಕಾರಿಗಾರರು ೧,೩೦೦ ರೂಪಾಯಿ ಕ್ರಯಕೊಡಬೇಕೆಂದು ಸರ್ಕಾರದವರನ್ನು ಕೇಳಿದರು. ಸರ್ಕಾರದವರು ಮಿ॥ ಕ್ಯಾಮಿರಾನ್‌ಯವರಿಂದಲೂ ಮಿ॥ ರಾಘವಲುನಾಯ್ಡುಯವರಿಂದಲೂ ಆ ಚಿತ್ರಪದಾರ್ಥಗಳನ್ನು ಪರೀಕ್ಷೆ ಮಾಡಿಸಿ, ಅವರಿಂದ ರಿಪೋರ್ಟು ತರಿಸಿಕೊಂಡಿದ್ದಾರೆ. ಆ ಪದಾರ್ಥಗಳಿಗೆ ಇನ್ನೂ ಕೆಲವು ಸಣ್ಣ ಕೆಲಸಗಳು ಮಾತ್ರ ಆಗಬೇಕಾಗಿದೆ ಎಂತಲೂ, ಈ ಹೆಚ್ಚು ಕೆಲಸಕ್ಕೆ ೨೦೦ ರೂಪಾಯಿ ತಗಲುವುದೆಂತಲೂ ಈಗ ಇರುವಂತೆ ಆ ಪದಾರ್ಥಗಳಿಗೆ ೯೦೦ ರೂಪಾಯಿ ಮಾತ್ರ ಕೊಡಬಹುದೆಂತಲೂ ಅವರಿಬ್ಬರೂ ರಿಪೋರ್ಟು ಕೊಟ್ಟರು. ಅದರ ಮೇಲೆ ಗವರ್ನಮೆಂಟಿನವರು ಕ್ರಯದ ಬಾಬತ್ತು ೯೦೦ ರೂಪಾಯಿಯನ್ನೂ ಹೊಸ ಕೆಲಸ ಮಾಡಿಸುವುದಕ್ಕೆ ೨೦೦ ರೂಪಾಯಿಯನ್ನೂ ಸ್ಯಾಂಕ್ಷನ್ ಮಾಡಿ, ಆ ಪದಾರ್ಥಗಳೆಲ್ಲಾ ತಯಾರಾದ ಮೇಲೆ ಬೆಂಗಳೂರಿನಲ್ಲಿರುವ ಸರ್ಕಾರಿ ಮ್ಯೂಜಿಯಂ ಎಂಬ ತಮಾಷೆ ಬಂಗಲೆಯಲ್ಲಿ ಇಡಬೇಕೆಂದು ಹುಕುಂ ಕೊಟ್ಟಿದ್ದಾರೆ. ಈ ಸಂದರ್ಭದಲ್ಲಿ ಸರ್ಕಾರದವರು ಸರ್ಕಾರಿ ಅಧಿಕಾರಿಗಳಿಗೂ ಕಾರಿಗಾರರಿಗೂ ತಿಳಿಸಿರುವುದೇನೆಂದರೆ — ಪ್ರದರ್ಶನಗಳಿಗಾಗಿ ಕಾರಿಗಾರರು ಮಾಡತಕ್ಕ ಪದಾರ್ಥಗಳು ಪ್ರಜೆಗಳು ಅಪೇಕ್ಷಿಸಿ ಕೊಂಡುಕೊಳ್ಳುವಂಥವುಗಳಾಗಿರಬೇಕು. ಮಾರಾಟವಾಗಲಾರದಂಥಾ ಬಹು ಬೆಲೆಯಾಗುವಂಥಾ ಪದಾರ್ಥಗಳನ್ನು ಕಾರಿಗಾರರು ಮಾಡುವುದಾಗಲಿ, ಅಧಿಕಾರಿಗಳು ಹೇಳಿ ಅವರಿಂದ ಮಾಡಿಸುವುದಾಗಲಿ ನ್ಯಾಯವಾದದ್ದಲ್ಲ. ಅಧಿಕಾರಿಗಳು ಅಂಥಾ ಕಾರಿಗಾರರಿಂದ ಪ್ರಜೆಗಳಿಗೆ ಸುಲಭ ಕ್ರಯಕ್ಕೆ ಸಿಕ್ಕುವಂಥಾ ಸಾಧಾರಣ ವಸ್ತುಗಳನ್ನೇ ಹೇಳಿ ಕೊಟ್ಟು ಮಾಡಿಸಬೇಕು ಎಂಬುದೇ

ಫಲವೃಕ್ಷಗಳು.

ತೆಂಗಿನಮರ.

[ಮೈಸೂರು ಸಂಸ್ಥಾನದಲ್ಲಿ ಪ್ರಜೆಗಳ ಶ್ರೇಯೋಭಿವೃದ್ಧಿಗಾಗಿ ಹೊಸಮಾರ್ಗಗಳನ್ನು ಕಂಡುಹಿಡಿದು, ಸಾಧ್ಯವಾದ ಮಟ್ಟಿಗೂ ಅವುಗಳನ್ನು ಜನಸಾಮಾನ್ಯಕ್ಕೆ ತಿಳಿಯಪಡಿಸಿ, ತಕ್ಕಮಟ್ಟಿಗೆ ಪ್ರೋತ್ಸಾಹ ಮಾಡುವುದಕ್ಕಾಗಿ ಶ್ರೀಮನ್ ಮಹಾರಾಜಾ ಸರ್ಕಾರದವರು ಈಚೆಗೆ ಅನೇಕ ಏರ್ಪಾಡುಗಳನ್ನು ಮಾಡಲಾರಂಭಿಸಿದ್ದಾರೆ. ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸುವುದಕ್ಕೆ ಅನೇಕ ವಿದ್ಯಾಶಾಲೆಗಳನ್ನು ಸ್ಥಾಪಿಸಿ, ಕಲಿತುಕೊಳ್ಳುವವರಿಗೆ ವೇತನಗಳನ್ನು ಕೊಡುವುದು ಇಲ್ಲಿನವರು ಇತರ ದೇಶಗಳಿಗೂ ಪಟ್ಟಣಗಳಿಗೂ ಹೋಗಿ ಹೊಸಕಸಬುಗಳನ್ನು ಕಲಿತು ಬರುವಂತೆಯೂ ದೇಶೀಯ ಕೈಗಾರಿಕೆಗಳನ್ನು ಈಗಿನ ಕಾಲಕ್ಕೆ ಅನುಕೂಲಿಸುವ ಹಾಗೆ ನೂತನ ಕ್ರಮಗಳನ್ನೂ ಉಪಕರಣಗಳನ್ನೂ ಅನುಭವಪೂರ್ವಕವಾಗಿ ತಿಳಿದುಕೊಂಡು ಬರುವಂತೆಯೂ ಅವರಿಗೆ ಪರ್ಯಾಪ್ತ ಸಾಧನಗಳನ್ನು ಕೊಡುವುದಾಗಿ ಏರ್ಪಾಡುಮಾಡಿದ್ದಾರೆ. ಇದಲ್ಲದೆ ನಮ್ಮ ಸಂಸ್ಥಾನವು ಹಿಂದೂಸ್ಥಾನದ ಇತರಭಾಗಗಳಂತೆ ವ್ಯವಸಾಯಕ್ಕೆ ಮಾತೃಭೂಮಿಯಾಗಿರುವುದು. ಮುಕ್ಕಾಲುಪಾಲು ಪ್ರಜೆಗಳೆಲ್ಲಾ ಭೂವ್ಯವಸಾಯದಿಂದಲೇ ಜೀವಿಸಬೇಕಾದವರಾಗಿರುವರು ಗವರ್ನಮೆಂಟಿನವರು ಈ ಮುಖ್ಯವಿಷಯವನ್ನು ಮರೆಯದೆ, ನಮ್ಮ ಸಂಸ್ಥಾನದ ರೈತಪ್ರಜೆಗಳಿಗೆ ವ್ಯವಸಾಯವಿದ್ಯೆಯನ್ನು ಚೆನ್ನಾಗಿಯೂ ದೃಷ್ಟಾಂತಪೂರ್ವಕವಾಗಿಯೂ ಕಲಿಸಬೇಕೆಂದು ಕುತೂಹಲಪಟ್ಟು ಅಲ್ಲಲ್ಲಿ ಪಾಠಶಾಲೆಗಳನ್ನಿಟ್ಟು ಮಾಡೆಲ್ ಫಾರಂ ಎಂಬ ಪರೀಕ್ಷಾರ್ಥವಾದ ಜಮೀನುಗಳನ್ನು ಮಾಡಿಸಿರುತ್ತಾರೆ. ಯಾವ ಯಾವ ಬೆಳೆಗಳನ್ನು ಯಾವ ಯಾವ ರೀತಿಯಲ್ಲಿ ಮಾಡಬೇಕೆಂಬುವುದನ್ನು ರೈತರಿಗೆ ತಿಳಿಯಪಡಿಸುವುದಕ್ಕೆ ಒಂದು ಪ್ರತ್ಯೇಕವಾದ ಇಲಾಖೆಯನ್ನೇ ಏರ್ಪಡಿಸಿರುವರು.

ವಿಶೇಷ ಲಾಭಕರವಾಗಿಯೂ ಬಹು ಪ್ರಯೋಜನಕರವಾಗಿಯೂ ಇರುವಂಥಾ ಫಲವೃಕ್ಷಗಳು ನಮ್ಮ ಸಂಸ್ಥಾನದಲ್ಲಿ ಹೇರಳವಾಗಿದ್ದರೂ ಅವುಗಳನ್ನು ಸಾಕಿ ಬೆಳೆಸುವ ವಿಧಾನವನ್ನು ನಮ್ಮ ರೈತಪ್ರಜೆಗಳು ಅಷ್ಟು ಚೆನ್ನಾಗಿ ತಿಳಿದಿಲ್ಲವಾದಕಾರಣ ಆ ಪೈಕಿ ಒಂದಾದ ತೆಂಗಿನಮರವನ್ನು ಕುರಿತು ಗಣ್ಯರಾದ ಒಬ್ಬ ದೊಡ್ಡಮನುಷ್ಯರು ಆನೆಕಲ್ ಕ್ಯಾಂಪಿನಿಂದ ಬರೆದು ಕಳುಹಿಸಿರುವ ಬಾತ್ಮಿಯನ್ನು ಇಲ್ಲಿ ಪ್ರಕಟಿಸಿದ್ದೇನೆ. ಭೂವ್ಯವಸಾಯದಿಂದ ಫಲವನ್ನಪೇಕ್ಷಿಸುವ ನಮ್ಮ ವಾಚಕರೆಲ್ಲಾ ಇದನ್ನು ಚೆನ್ನಾಗಿ ಓದಿ ಪ್ರಯೋಜನ ಹೊಂದುವವರಾಗಲೆಂದು ಹಾರೈಸುತ್ತೇವೆ —ಎಡಿಟರ್.]

ತೆಂಗಿನಮರ ಬೆಳೆಯುವ ಸ್ಥಳ ಮುಂತಾದ್ದು

ಉಷ್ಣವಲಯದಲ್ಲಿ ಆಗಕಕ್ಕೆ ಬಹು ಪ್ರಯೋಜನವಾದ ಮರಗಳ ಪೈಕಿ ತೆಂಗಿನಮರವೂ ಒಂದು. ಅದು ಕರ್ಕಾಟಕ ಸಂಕ್ರಾಂತಿವೃತ್ತ ಮೊದಲುಗೊಂಡು ಮಕರಸಂಕ್ರಾಂತಿವೃತ್ತಗಳ ಪ್ರದೇಶದಲ್ಲೂ ಸಮುದ್ರತೀರದ ಪ್ರಾಂತ್ಯದಲ್ಲೂ ಬೆಳೆಯುತ್ತದೆ. ಈ ಮರವಲ್ಲಿ ನಿಷ್ಪ್ರಯೋಜನವಾದ ಭಾಗವು ಯಾವುದೂ ಇಲ್ಲ. ಈಗ ಮುಖ್ಯವಾಗಿ ಮಲಬಾರ್ ಟ್ರಾವಂಕೋರ್ ಮತ್ತು ಕೊಚಿನ್ ಸೀಮೆಗಳಲ್ಲಿ ಮಾತ್ರ ಬಹಳವಾಗಿ ಬೆಳೆಯತಕ್ಕ ಮರವಾಗಿದ್ದರೂ ಬಂಗಾಳಾ, ಕೋರಮಂಡಲ ಮೊದಲಾದ ಪ್ರದೇಶಗಳಲ್ಲಿಯೂ ಬೆಳೆಯಬಹುದು.

ಕೋಮಲವಾದ ಬಾಗಿರುವ ಗರಿಗಳ ಗುಂಪಿನಿಂದ ಕೂಡಿದ ಮರದ ಸೊಗಸನ್ನು ಮಹಾಕವಿಗಳನೇಕರು ವರ್ಣಿಸಿರುತ್ತಾರೆ. ಮರವು ಸುಮಾರು ೯೦ ಅಡಿ ಎತ್ತರದವರೆಗೂ ಬೆಳೆಯುತ್ತೆ. ಬುಡದ ೩ ಅಡಿ ದಪ್ಪವೂ ತುದಿಯಲ್ಲಿ ಒಂದಡಿ ಅಡ್ಡಗಲವೂ ಇರುತ್ತದೆ. ಯಾದ ಹೂ ಮತ್ತು ಫಲಗೊನೆಯೂ ಇದ್ದರೆ ಒಂದು ಗೊಂಚಲಿನಲ್ಲಿ ೫ ರಿಂದ ೧೫ ಕಾಯಿಗಳು ಆಗುತ್ತವೆ. ಒಳ್ಳೇ ಪ್ರಾಯದ ಮರದ ಐದಾರು ವಾರಗಳಲ್ಲಿ ೮—೧೨ ಗೊಂಚಲುಗಳಾಗುತ್ತವೆ. ಈ ರೀತಿ ಒಂದು ವರುಷಕ್ಕೆ ಸುಮಾರು ೮೦—೧೦೦ ಕಾಯಿಗಳು ಬಿಡುವ ಸಾಮಾನ್ಯವಾಗಿರುವ ತುದಿಯುಳ್ಳ ಈ ಮರವು ಬಿಸಿಲನ್ನು ಆಕರ್ಷಿಸಿ ಅದರಿಂದುಂಟಾಗಿರುವ ಧೂಳುವನ್ನು ತಪ್ಪಿಸುತ್ತದೆ. ಈ ಗುಣಗಳವರಿಂದ ಹಿಂದೂ ಜನರು ತೆಂಗಿನಮರವನ್ನು ಕಲ್ಪವೃಕ್ಷವೆಂದು ಕರೆಯುವುದು ತಿಳಿವಿರುವುದು ಆಶ್ಚರ್ಯ!

ಅದರಿಂದಾಗುವ ಪ್ರಯೋಜನ

ತೆಂಗಿನ ಕಾಯಿಯಿಂದ ಮನುಷ್ಯನಿಗೆ ಪ್ರಯೋಜನವಾಗಿ ಅನೇಕ ಪದಾರ್ಥಗಳಾಗುತ್ತವೆ. ಗುಂಜಿನಿಂದ ಒಂದೇ ಗಾರೆ ಮೊದಲ್ಗೊಂಡು ಜನಗಳಿಗೆ ಬೇಕಾದ ಪಟ್ಟೆ ಹಗ್ಗದ ವರೆಗೂ ಬೇಕಾದಷ್ಟು ಪದ್ಧತಿಗಳಾಗುತ್ತವೆ. ಒಣಕೊಬ್ಬರಿಯಲ್ಲಿ ಸೇಕಡಾ ೬೭ ರಷ್ಟು ಎಣ್ಣೆ ಇರುತ್ತದೆ. ಈ ಎಣ್ಣೆಯನ್ನು ಚಿತ್ರಗಾರರು ಉಪಯೋಗಿಸುತ್ತಾರೆ. ದೀಪದಲ್ಲಿ ಉರಿಸುವುದಕ್ಕೂ, ಮೈಗೆ ಹಚ್ಚಿಕೊಳ್ಳುವುದಕ್ಕೂ, ಸಾಬೂನು ಬಿಲ್ಲೆಗಳನ್ನು ತಯಾರು ಮಾಡುವುದಕ್ಕೂ ಅನುಕೂಲವಾದದ್ದು. ಶೀತದ ಕಾಲದಲ್ಲಿ ಗಟ್ಟಿಯಾದ ನಾಲಗೆ ಬರುತ್ತದೆ. ಇದನ್ನು ಕರಗಿಸಿ ಮತ್ತು ಮೇಣದ ಬದಲಾಗಿ ಉಪಯೋಗಿಸುತ್ತಾರೆ. ಇದರಿಂದ ಮುರಬ್ಬ, ಬಿಸ್ಕತ್ (ಮೇಣ ಬತ್ತಿ, ಸಕ್ಕರೆ ಮೊದಲಾದವುಗಳನ್ನು ತಯಾರುಮಾಡುತ್ತಾರೆ. ಇದರ ಹಳೆಯ 'ಎನಿಗ್' ಎಂಬುದು ಆಗುತ್ತದೆ. ಕಾಸ್ಟರ್ ಆಯಿಲ್ ಎಂಬ ವಸ್ತುವಿನ ಗುಣ ಇದಕ್ಕೆ ಉಂಟು. ಇದು ಮನುಷ್ಯರಿಗೂ, ಮೃಗಗಳಿಗೂ, ಪಕ್ಷಿಗಳಿಗೂ ಪುಷ್ಟಿಕರವಾದ ಆಹಾರವು. ಕೋಳಿಗಳನ್ನು ಕೊಬ್ಬಿಸುವುದಕ್ಕೆ ವಿಶೇಷವಾಗಿ ಇದನ್ನು ಉಪಯೋಗಿಸುತ್ತಾರೆ. ಎಣ್ಣೆ ತೆಗೆದ ಮೇಲೆ ನಿಂತ ಹಿಂಡಿಯು ಒಳ್ಳೇ ಗೊಬ್ಬರವಾಗುತ್ತದೆ.

ಬಣ್ಣಗಾರರು ಈ ತೆಂಗಿನಕಾಯಿ ಹಾಲನ್ನು ರೇಷಿಮೆ, ನೂಲು ಮತ್ತು ಹತ್ತಿ ಉಕ್ಕಿನ ಬಟ್ಟೆಗಳಿಗೆ ಬಣ್ಣ ಹಾಕುವುದಕ್ಕೆ ಉಪಯೋಗಿಸುತ್ತಾರೆ. ಎಳನೀರು ಕುಡಿಯುವುದಕ್ಕೆ ಹಿತವಾಗಿಯೂ, ಪುಷ್ಟಿಕರವಾಗಿಯೂ, ಜಾಗ್ರತೆ ಜೀರ್ಣವಾಗುವ ವಸ್ತುವಾಗಿಯೂ ಇರುತ್ತದೆ.

ಪರಿಮಳ ದ್ರವ್ಯಗಳನ್ನು ತಯಾರುಮಾಡಬೇಕಾದರೆ ಸ್ವಚ್ಛವಾದ ಎಣ್ಣೆ ತೆಗೆಯಬೇಕು. ಇದಕ್ಕಾಗಿ ಕೊಬ್ಬರಿಯನ್ನು ನೀರಿಗೆ ಹಾಕಿ ಸ್ವಲ್ಪ ಹೊತ್ತು ಬೇಯಿಸಬೇಕು. ಆ ಮೇಲೆ ಈಚೆಗೆ ತೆಗೆದು ಅದನ್ನು ತುರಿದು, ಚೆನ್ನಾಗಿ ತಿರುವಿ ಅದನ್ನು ಎಣ್ಣೆ ಮೇಲಕ್ಕೆ ಬರುವವರೆಗೂ ಕಾಯಿಸಬೇಕು. ಈ ಎಣ್ಣೆಯನ್ನು ನಿತ್ಯಗಟ್ಟಲೆ ಉಪಯೋಗಕ್ಕೆ ತೆಗೆಯಬೇಕಾದರೆ ಬಹಳ ಖರ್ಚು ಬೀಳುತ್ತದೆ. ಆದ್ದರಿಂದ ಈಗ ಉಪಯೋಗಿಸುವ ಒರಳು ಗಾಣಗಳಿಗೆ ಬದಲಾಗಿ ನಾಗರೀಕವಾದ ನೂತನ ಯಂತ್ರಗಳನ್ನು ಉಪಯೋಗಿಸುವುದು ಒಳ್ಳೆಯದು. ಕಾದೊಡನೆ ತೆಗೆದ ಎಣ್ಣೆ ಬಹಳ ಸುವಾಸನೆಯುಳ್ಳದ್ದಾಗಿರುತ್ತೆ. ಇದನ್ನು ಊಟಕ್ಕೆ ಉಪಯೋಗಿಸುತ್ತಾರೆ. ತೆಂಗಿನ ನಾರನ್ನು ಪೂರ್ವದಲ್ಲಿ ಹಾಸಿಗೆ ಮುಂತಾದ ದಿಂಬುಗಳನ್ನು ಮಾಡುವುದಕ್ಕೆ ಮಾತ್ರ ಉಪಯೋಗಿಸುತ್ತಿದ್ದರು. ಈಗ ಅದರಿಂದ ಬ್ರಷ್, ಬಟ್ಟೆಗೆ ಧೂಳು ಹೊಡೆಯುವುದು), ಮೇಜಿನ ಮೇಲೆ ಹಾಸುವ ಚಾಪೆ, ನಮೂನೆ ಬುಟ್ಟಿಗಳು, ಟೋಪಿಗಳು ಇವುಗಳನ್ನು ಮಾಡುತ್ತಾರೆ. ಇವುಗಳನ್ನು ಮಾಡುವುದಕ್ಕೆ ಸಣ್ಣ ಗುಂಜು ಬೇಕು. ಇದಕ್ಕೋಸ್ಕರ ಗುಂಜನ್ನು ನೀರು ರಭಸವಾಗಿ ಹರಿಯುವ ನದೀ ಘಟ್ಟದಲ್ಲಿ ಅಥವಾ ಸಮುದ್ರದ ತೀರದಲ್ಲಿ ಹೂಳಬೇಕು. ಪ್ರವಾಹವು ಇಳಿದಾಗ ಹೊತ್ತ ಗುಂಜುಗಳನ್ನು ಬೇರ್ಪಡಿಸಿ, ಗಂಜಿನ ಮಟ್ಟೆಗಳನ್ನು ಎತ್ತಿ ಅವುಗಳಲ್ಲಿ ಹಾಕಬೇಕು. ಪ್ರವಾಹ ಜೋರುವಾಗುವುದಕ್ಕೆ ಮುಂಚೆ ಗುಂಡಿಗಳನ್ನು ಮುಚ್ಚಿ, ಎಲೆ ಮುಂತಾದವುಗಳಿಂದ ಮುಚ್ಚಿ, ನೀರನಲಿ ಕೊಚ್ಚಿಕೊಂಡು ಹೋಗದಂತೆ ಭದ್ರಪಡಿಸಿಕೊಳ್ಳಬೇಕು. ಹೆಚ್ಚುಕಾಲ ಗುಂಡಿಗಳಲ್ಲಿ ತೆಂಗಿನ ಮಟ್ಟೆಯನ್ನು ಇಟ್ಟರೆ ಪದರಿಂದ ನಾರಿನ ಗುಣವು ಕೆಟ್ಟುಹೋಗುತ್ತದೆ. ಆದ್ದರಿಂದ ೬—೮ ತಿಂಗಳ ವರೆಗೂ ಗುಂಡಿಗಳಲ್ಲಿ ಮಟ್ಟೆಗಳನ್ನು ಇಟ್ಟಿರುವುದು ಬಹುಸಾಕು. ನಂತರ ಇವುಗಳನ್ನು ಗುಂಡಿಗಳಿಂದ ಹೊರಕ್ಕೆ ತೆಗೆದು, ಮರದ ಕೊಡತಿಯಿಂದ ಹೊಡೆದರೆ ಎಳೆಗಳು ಬಿಟ್ಟುಕೊಳ್ಳುತ್ತವೆ. ಹೀಗೆ ಕಾಲದಲ್ಲಿ ಗುಂಜುಗಳಿಂದ ಸಂಗ್ರಹಿಸತಕ್ಕ ನಾರು ಹೊರಡುತ್ತದೆ. ೬—೭ ಕಾಯಿನ ಗುಂಜಿನಿಂದ ಒಂದು ಪೌಂಡು (೪೦ ರೂ. ತೂಕ) ನಾರು ಆಗುತ್ತದೆ.

ಹೊಂಬಾಳೆಯಿಂದ ತೆಗೆದ ರಸದಿಂದ ಹೆಂಡ, ಬೆಲ್ಲ, ಸಕ್ಕರೆ ಆಗುತ್ತವೆ. ಮರವನ್ನು ಕಂಬಕ್ಕೂ ಜಂತಿಗೂ, ಗರಿಗಳನ್ನು ಮನೆಯ ಮೇಲೆ ಹೊದಿಸುವುದಕ್ಕೂ, ಸೌದೆಗೂ ಉಪಯೋಗಿಸುತ್ತಾರೆ. ತೆಂಗಿನ ಕರಟಗಳನ್ನು ಹುಕ್ಕಾ, ಕುಡಿಯುವ ಪಾತ್ರೆಗಳು. ಅಂಗಿಯ ಗುಂಡಿ

...ಮೊದಲಾದವನ್ನು ಮಾಡುವದಕ್ಕೆ ಉಪಯೋಗಿಸುತ್ತಾರೆ. ಚಿಪ್ಪು ಸುಟ್ಟರೆ ಎಣ್ಣೆ ಬರುತ್ತದೆ. ಇದನ್ನು ದಕ್ಷಿಣ ಸಮುದ್ರದಲ್ಲಿನ [illegible]ದವರು ಹಲ್ಲನ್ನು ಕಪ್ಪುಮಾಡಿಕೊಳ್ಳುವದಕ್ಕೆ ಉಪಯೋಗಿಸುತ್ತಾರೆ. ಚಿಪ್ಪಿನ ಬೂದಿಯಿಂದ ಒಳ್ಳೇ ಕಪ್ಪುಬಣ್ಣ ತಯಾರಾಗುತ್ತದೆ. ಗರಿಗಳು ಹೊರಡುವ ಜಾಗದಲ್ಲಿ ಗೋಣಿಯು ಹಾಗಿರುವ ಪದಾರ್ಥ [illegible] ಗಾಯಗಳನ್ನು ನಿಲ್ಲಿಸುವದಕ್ಕೆ ಉಪಯೋಗವಾದ್ದಾಗಿರುತ್ತದೆ. [illegible] ಚಿಗುರುಗಳು ರುಚಿಯಾದ ತೃಪ್ತಿಕರವಾದ ಆಹಾರವು

ತೆಂಗಿನ ಪದಾರ್ಥಗಳ ಆಮದುರಪ್ತು.

ಇಂಡಿಯಾ ದೇಶದಿಂದ ೧೯೦೩—೦೪ನೇ ಸಾಲಿನಲ್ಲಿ ೧,೪೪,೦೦,೦೦೦ ರೂಪಾಯಿ ಬೆಲೆಯಾಗುವ ತೆಂಗಿನ ಸಾಮಾನು ಇತರ ಕಡೆಗಳಿಗೆ ರಫ್ತಾಯಿತು. ೩೦ ಲಕ್ಷ ರೂಪಾಯಿ ಬಾಳುವಷ್ಟು ತೆಂಗಿನ ಸಾಮಾನು ಆಮದಾಯಿತು. ತೆಂಗಿನಕಾಯಿ ಅಲ್ಲದೆ ಕೊಬ್ಬರಿ, ತೆಂಗಿನೆಣ್ಣೆ, ತೆಂಗಿನ ನಾರು, ತೆಂಗಿನ ಹಗ್ಗ ಮೊದಲಾದ್ದು ಮಲಬಾರ್, ನಿಕೋಬಾರ್, [illegible] ದ್ವೀಪಗಳಿಂದಲೂ ಕೊಬ್ಬರಿ ಎಣ್ಣೆಯಿಂದ ತಯಾರಾದ [illegible]ನು, ಮೇಣಬತ್ತಿ ಮೊದಲಾದವು ಯುರೋಪ್ ಖಂಡದಿಂದಲೂ [illegible] ದಿಂದ ಬಂದ ಸಾಮಾನುಗಳೇ ಸುಮಾರು [illegible] ಲಕ್ಷ ರೂಪಾಯಿ ಬಾಳುವವಾಗಿದ್ದವು. ಬಾಕಿ ಪದಾರ್ಥಗಳು [illegible] ನಾವು ಕಚ್ಚಾ ಪದಾರ್ಥಗಳನ್ನು ಕಳುಹಿಸಿ ಅವಕ್ಕೆ ಬದಲಾಗಿ [illegible]ಮಾಡಿದ ಸಾಮಾನುಗಳನ್ನು ತರಿಸಿಕೊಳ್ಳುತ್ತೇವೆ.

ತೆಂಗಿನ ಗಿಡವನ್ನು ಬೆಳೆಸುವ ರೀತಿ.

[illegible] ಚೆನ್ನಾಗಿ ಬೆಳೆದಿರುವ ಮರವನ್ನು [illegible] ಇದರಲ್ಲಿ ಸ್ವಲ್ಪ ಕಾಯಿಗಳುಳ್ಳ ಗೊಂಚಲನ್ನು ಆರಿಸಿ, ಅದ[illegible] ದೊಡ್ಡ ಕಾಯಿಗಳುಳ್ಳ ಕಾಯಿಯನ್ನು [illegible] ವೈಶಾಖ [illegible] ತಿಂಗಳ ವರೆಗೆ [illegible] ಚೆನ್ನಾಗಿ ಎಷ್ಟು ದಿವಸ ಇರುವದರಿಂದ [illegible] ಇಟ್ಟುಕೊಳ್ಳಬೇಕು. ಒಳ್ಳೆ ಮರದಿಂದ ತೆಗೆದ [illegible] ಸ್ವಲ್ಪವೇ [illegible] ಮುಂದಿನ ಬೀಜವನ್ನು ಆರಿಸಿ [illegible] ಕಾಯಿಗಳು ದೆ [illegible] ಬೀಜಕ್ಕೆ ತೆಗೆಯುವ ತೆಂಗಿನಕಾಯಿಗಳನ್ನು [illegible] ಹಗ್ಗಕ್ಕೆ ಕಟ್ಟಿ [illegible] ಕಾಯಿಗಳು ಬಿದ್ದ ಮೇಲೆ [illegible] ಬೀಜಕ್ಕೆ ಉಪಯೋಗಿಸಬಾರದು [illegible] ಕಾಯಿಗಳನ್ನು [illegible] ಬಳಿಗೆ [illegible] ಅವುಗಳಲ್ಲಿ [illegible] ಕಾಯಿಗಳನ್ನು [illegible] ಇಟ್ಟಿರುವ [illegible] ಗರಾಸರವರಿಂದ [illegible] ಅಸ್ತದವಿಲ್ಲ [illegible] ಅಥವಾ ಎತ್ತರವಾದ ಮರಳಿನಲ್ಲಿ [illegible] ಬೀಜವನ್ನು ನೆಟ್ಟು [illegible] ಸಸಿಗಳಿಗೆ [illegible] ಏಪ್ರಿಲ್ ತಿಂಗಳ ವರೆಗೂ ಬೀಜ[illegible] ವಿಶೇಷ [illegible] ತೆಂಗಿನ [illegible] ವಿಶೇಷ ತ್ರಾಸವಾ [illegible] ಇರಕ ವದು.

[illegible] ಗಳನ್ನು [illegible] ಅದರಲ್ಲಿನ ಕಲ್ಲು [illegible] ನಂತರ ತೆಂಗಿನಕಾಯಿಗಳನ್ನು [illegible] ಒಂದು ಅಡಿಗೆ ಕಡಿಮೆಯಿಲ್ಲದಷ್ಟು [illegible] ಕಾಣುವಂತೆ [illegible] ಇತರ [illegible] ಹಾಗೆ [illegible] ಇವನ್ನು [illegible] ಆದಾಗ್ಯೂ ಪ್ರದೇಶದ [illegible] ಇದ್ದಹಾಗೆ [illegible] ದಿವಸ ಸ್ವಲ್ಪ ನೀರು ಹಾಕಬೇಕು. [illegible] ಆದರೆ [illegible] ತಿಂಗಳಿಗಾಗಿ [illegible] ಸಸಿಗಳನ್ನು [illegible] ಕಾಪಾಡಬೇಕು. [illegible] ಸಸಿಗಳನ್ನು ಕಿತ್ತು [illegible] ನೆಡುವ[illegible] ಒಂದು ವರು[illegible] ಸಸಿಗಳನ್ನು [illegible] ಕಲ್ಲು [illegible] ಇರುವ [illegible] ಸಸಿಗಳನ್ನು ನೆಡಬಾರದು. [illegible] ಗೊಬ್ಬರ [illegible] ಚೆನ್ನಾಗಿ [illegible]ತ್ತವೆ. [illegible] ಬಹಳ ಅನುಕೂಲವಾದದ್ದು [illegible] ಬೆಳೆಯನ್ನು ಉಂಟುಮಾಡು[illegible] ತೆಂಗಿನ ಸಸಿಗಳನ್ನು ನೆಡುವ ಗುಂಡಿಗಳು ೮ ಅಥವಾ ೧೦ ಗಜ [illegible]ಬೇಕು. [illegible] ಗುಂಡಿಗಳು ಚೆನ್ನಾಗಿ [illegible] ಗುಂಡಿಗಳು ಅಗಲವಾಗಿಯೂ ಆಳವಾಗಿಯೂ ಇರ[illegible] ಇಲ್ಲದಿದ್ದರೆ ಬೇರುಗಳು ಭೂಮಿಯ ಮೇಲೆ ಕಾಣಿಸಿಕೊಂಡು [illegible] ತಕ್ಕಷ್ಟು ಆಹಾರವಿಲ್ಲದೆ ಬಿದ್ದು ಉರುಳಿಹೋದರೂ ಹೋಗ[illegible]. ಸಸಿಗಳನ್ನು ನೆಡುವದಕ್ಕೆ ೨—೩ ತಿಂಗಳ ಮುಂಚೆಯೇ [illegible]ಗಳನ್ನು ತೆಗದು, ಅದರಲ್ಲಿ ಕಟ್ಟಿಗೆ ಹಾಕಿ ಸುಟ್ಟು, ಗೊಬ್ಬರ ಹಾಕಿ [illegible]ಮಾಡಿರಬೇಕು ಸಸಿಗಳನ್ನು ನೆಟ್ಟ ಮೇಲೆ ಆರುತಿಂಗಳ ವರೆಗೂ [illegible] ಬಿಸಿಲು ತಗಲದಹಾಗೆ ಕಪ್ಪು ಮತ್ತು ಕೊಂಬೆಗಳಿಂದ [illegible] ಭೂಮಿಯ ಗುಣಾನುಸಾರ ನೀರು ಹಾಕುತ್ತಿರಬೇಕು. [illegible] ಕಳೆ ಮುಂತಾದ್ದನ್ನು ತೆಗೆಯಬೇಕು. ಪ್ರತಿ ೨—೩ ವರು[illegible] [illegible]

ಫಲವಿಚಾರ.

ಮರಗಳು ೮ ಅಥವಾ ೧೦ ವರುಷಕ್ಕೆ ಫಲಕ್ಕೆ ಬರುತ್ತವೆ. ಫಲಕ್ಕೆ ಬಂದ ಮೇಲೆ ಎರಡು ವರುಷಗಳ ವರೆಗೂ ಹೊಂಬಾಳೆಯಿಂದ ಹೆಂಡವನ್ನು ಇಳಿಸಿದರೆ ಮುಂದಕ್ಕೆ ಹೆಚ್ಚು ಫಲವಾಗುತ್ತದೆಂದು ಹೇಳುತ್ತಾರೆ. ಮೇಲೆ ಹೇಳಿದ ದ್ವೀಪದಲ್ಲಿನ ಜನರು ಹೀಗೆ ಹೆಂಡವನ್ನು ಇಳಿಸುತ್ತಾರೆ.

ಒಂದು ತೆಂಗಿನ ಮರವು ಒಂದು ವರ್ಷಕ್ಕೆ ನೂರಕ್ಕೆ ೧ ರಿಂದ ೨ ರೂಪಾಯಿ ವರೆಗೂ ಬೆಲೆ ಬಾಳುವ ಸುಮಾರು ೫೦ ರಿಂದ ೧೦೦ ಕಾಯಿಗಳನ್ನು ಕೊಡುತ್ತದೆ. ಇದು ಸುಮಾರು ೧೦೦ ವರುಷದ ವರೆಗೂ ಇರುತ್ತದೆ ಪ್ರತಿ ಮರದಿಂದಲೂ ಕನಿಷ್ಟಪಕ್ಷ ೨೦೦ ರೂಪಾಯಿಗೆ ಕಡಿಮೆಯಿಲ್ಲದೆ ಉತ್ಪತ್ತಿಯಾಗುವದು.

ವಿದೇಶ ವರ್ತಮಾನಗಳು.

ವಿಲಾಯತಿಯಲ್ಲಿ ನೂರು ವರುಷಗಳ ಮೇಲೆ ಬದುಕಿದ್ದ ಒಬ್ಬ ಹೆಂಗಸೂ ಒಬ್ಬ ಗಂಡಸೂ ಕಾಲವಾದರು. ಗಂಡಸಿಗೆ ೧೦೪ ವರುಷವೂ ಹೆಂಗಸಿಗೆ ೧೦೫ ವರುಷವೂ ಆಗಿತ್ತು.

◆◆◆◆

ವಿಲಾಯತಿಯಲ್ಲಿ ಕಾಲವಾದ ಎಡಿತ್ ಫ್ರಾನ್ಸಿಸ್ ಎಂಬಾಕೆಯು ತನ್ನ ಆಸ್ತಿಯಲ್ಲಿ ೭೩,೦೦೦ ರೂಪಾಯಿಯನ್ನು, ಪ್ರೊವೆಲ್ ಎಂಬಾತನು ೩೭,೦೦೦ ರೂಪಾಯಿಯನ್ನೂ ಧರ್ಮ ಕೆಲಸಗಳಿಗೆ ವಿನಿಯೋಗಿಸಬೇಕೆಂದು ಮರಣಶಾಸನವನ್ನು ಬರೆದಿರುತ್ತಾರೆ.

◆◆◆◆

ಡೆನ್ಮಾರ್ಕ್ ರಾಜ್ಯದ ಸಮುದ್ರತೀರದಲ್ಲಿ ಸುಮಾರು ಎರಡು ವಾರಗಳ ತನಕ ಭಯಂಕರವಾದ ಬಿರುಗಾಳಿ ಮಳೆಗಳು ಪ್ರಾಪ್ತವಾದದ್ದರಿಂದ ಹಲವು ಹಡಗುಗಳು ಸಮುದ್ರತೀರದಲ್ಲೇ ಸುತ್ತಿಸುತ್ತಿ ಮುಳುಗಿಹೋದವು ಅವುಗಳಲ್ಲಿದ್ದ ೭೦ ಜನರು ಮುಳುಗಿ ಸತ್ತರು.

◆◆◆◆

ಬಿಸ್ಕೇ ಕೊಲ್ಲಿಯಲ್ಲಿ ಕಳೆದ ಏಪ್ರಿಲ್ ೧೮ ರಲ್ಲಿ ಸಮುದ್ರಸೇನೆಗೆ ಸೇರಿದ ಬೆಲ್ಜಿಯಂ ರಾಜ್ಯದ ಒಂದು ಜಹಜು ಬಹಳ ದೊಡ್ಡದಾಗಿತ್ತೆಂದಲೂ ಅದರಲ್ಲಿದ್ದ ೧೪೪ ಮಂದಿಯ ಪೈಕಿ ೩೪ ಜನರು ಮುಖ್ಯ ಉದ್ಯೋಗದವರ ಸಹಿತ ಸಮುದ್ರದ ಪಾಲಾದರೆಂತಲೂ ತಿಳಿದುಬಂದಿದೆ.

◆◆◆◆

ಸರ್ವಿಯಾ ರಾಜ್ಯದ ಅಲೆಕ್ಸಾಂಡರ್ ದೊರೆಯನ್ನೂ ರಾಣಿಯನ್ನೂ ಕೊಲ್ಲಿಸಿದ್ದರಲ್ಲಿ ಮುಖಂಡರುಗಳಾಗಿದ್ದ ಐದು ಮಂದಿ ಸೈನ್ಯದ ಉದ್ಯೋಗಸ್ಥರನ್ನು ಈಗಿನ ಪೀಟರ್ ದೊರೆಯು ವರ್ಷ [illegible] ಕೆಲಸ ಬಿಡಿಸುವಂತೆ ಒಪ್ಪಿ [illegible] ಕೊಟ್ಟಿರುವಂತೆಯೂ ಇವನ್ನು ನೋಡಿ ಮಂತ್ರಿಗಳೆಲ್ಲಾ ಆ [illegible] ಕೆಲಸದ ಮೇಲೆ ಇರುವುದಾಗಿ ಒಪ್ಪಿಕೊಂಡಿರುವುದಾಗಿಯೂ ತಿಳಿದುಬಂದಿದೆ.

◆◆◆◆

ಕಳೆದ ೧೯೦೫ ನೆ ವರುಷ ರಷ್ಯಾರಾಜ್ಯದ ರಾಜಾದಾಯವು [illegible] ಕೋಟಿಯೂ ೯೫ ಲಕ್ಷ ರೂಪಾಯಿ; ಖರ್ಚು ೪೫೯ ಕೋಟಿಯೂ [illegible] ಲಕ್ಷ ರೂಪಾಯಿ. ಆದಾಯಕ್ಕಿಂತಲೂ ಖರ್ಚು ಹೆಚ್ಚಾಯಿತಾದ್ದರಿಂದ ಸರ್ಕಾರದವರು ಕಳೆದ ತಿಂಗಳಲ್ಲಿ ೭೫ ಕೋಟಿ ರೂಪಾಯಿಯನ್ನು ನೂರಕ್ಕೆ ೬ ರೂಪಾಯಿ ಬಡ್ಡಿ ಗೊತ್ತುಮಾಡಿ, ಸಾಲ ತೆಗೆದುಕೊಂಡಿರುತ್ತಾರೆ. ಹೋದ ವರುಷ ಆ ರಾಜ್ಯದಲ್ಲಿ ಪ್ರಜಾಸಮಾಧಾನಕ್ಕೆ ಭಂಗವುಂಟಾಗಿ ನಾನಾ ಕಷ್ಟಗಳು ಪ್ರಾಪ್ತವಾದ ಕಾರಣ ಸರ್ಕಾರದ ಉತ್ಪತ್ತಿಯಲ್ಲಿ ೧೨ ಕೋಟಿಯೂ ೪೫ ಲಕ್ಷ ರೂಪಾಯಿ ಕಡಿಮೆಯಾಯಿತು.

◆◆◆◆

ಕ್ವಿಬೆಕ್ ಪಟ್ಟಣದಲ್ಲಿ ಇತರ ಕಡೆಗಳಿಂದ ಹೋಗಿ ಸರಕುಗಳನ್ನು ಬಿಕರಿಮಾಡತಕ್ಕ ವರ್ತಕರು ಆರಾರು ತಿಂಗಳಿಗೆ ಒಂದುಸಲ ಸರ್ಕಾರದಿಂದ ಹೊಸ ಲೈಸೆನ್ಸನ್ನು ಪಡೆಯುತ್ತಿರಬೇಕು. ಒಟ್ಟು ವ್ಯಾಪಾರ ಮಾಡುವ ವರ್ತಕನು ಈ ಲೈಸೆನ್ಸ್ ಪಡೆಯುವುದಕ್ಕೆ ೧೫೦ ರೂಪಾಯಿಯನ್ನು, ಅವನಿಂದ ಕೊಂಡು ಅಂಗಡಿಯವರಿಗೆ ಬಿಕರಿಮಾಡುವ ವರ್ತಕನು ೩೦೦ ರೂಪಾಯಿಯನ್ನು, ಇವನಿಂದ ಕೊಂಡ ವಸ್ತುಗಳನ್ನು ಪ್ರಜೆಗಳಿಗೆ ಮಾರತಕ್ಕ ಚಿಲ್ಲರೆ ವರ್ತಕನು ೬೦೦ ರೂಪಾಯಿಯನ್ನು ಪಾವತಿ ಮಾಡಬೇಕಾಗಿದೆ ಇದಲ್ಲದೆ ಆ ಪ್ರಾಂತ್ಯದಲ್ಲಿ ಸಿಕ್ಕದೆ ಪರರಾಷ್ಟ್ರಗಳಿಂದ ರಫ್ತಾಗಿ ಬರತಕ್ಕ ಯಂತ್ರ ಮೊದಲಾದ ಸಾಮಾನುಗಳಿಗೆ ೧೫೦ ರೂಪಾಯಿನಂತೆ ಲೈಸೆನ್ಸ್ ರುಸುಂ ಕೊಡಬೇಕು ಎಂಬುದಾಗಿ ಅಲ್ಲಿನ ಸರ್ಕಾರದವರು ಕಾನೂನುಮಾಡಿದಾರೆ.

◆◆◆◆

ವಿಲಾಯತಿಯಲ್ಲೂ ಯುರೋಪಿನ ಇತರ ಕಡೆಗಳಲ್ಲೂ ಮರ್ಣರೋಗವನ್ನು ಅನುಭವಿಸುವಂಥಾ ಪ್ರಜೆಗಳನ್ನು ಧರ್ಮಿಷ್ಠರು ಪ್ರತ್ಯೇಕವಾದ ಆಲಯಗಳಲ್ಲಿಟ್ಟು ಅವರಿಂದ ಅಲ್ಪಸ್ವಲ್ಪ ಕೆಲಸ ಕಾರ್ಯಗಳನ್ನು ಮಾಡಿಸುತ್ತಲೂ ಸಾಕಿ ಸಲಹುತ್ತಲೂ ಬಂದಿದಾರೆ. ಇಂಥಾ ಪುಣ್ಯ ಕೆಲಸಕ್ಕೆ ಐಶ್ವರ್ಯವಂತರೂ ಬಡವರೂ ತಮ್ಮ ಶಕ್ತ್ಯಾನುಸಾರ ದ್ರವ್ಯ ಸಹಾಯ ಮಾಡುವರು ಈಗ ವಿಲಾಯತಿಯಲ್ಲಿ ಕಷ್ಟ ಕೆಲಸಗಳನ್ನು ಮಾಡುವುದಕ್ಕೆ ಸಾಮರ್ಥ್ಯವಿಲ್ಲದಂಥಾ ಸ್ತ್ರೀ ಪುರುಷರನ್ನು ಒಂದು ಸ್ಥಳದಲ್ಲಿಟ್ಟು ಅವರಿಗೆ ಅನ್ನ ಬಟ್ಟೆ ನಡಿಸಬೇಕೆಂತಲೂ ಅವರಿಂದ ಸುಲಭಸಾಧ್ಯವಾದ ಕೆಲಸಗಳನ್ನು ಮಾಡಿಸಬೇಕೆಂತಲೂ ಪ್ರಿನ್ಸೆಸ್ ಕ್ರಿಸ್ಟಿಯನ್ ಎಂಬ ರಾಜಕುಮಾರಿಯೂ ಇನ್ನು ಕೆಲವು ಸ್ತ್ರೀ ಪುರುಷರೂ ಪ್ರಯತ್ನಪಡುತ್ತಿದಾರೆ. ಅವರು ಇಂಥಾ ಏರ್ಪಾಟಿಗೆ ಪ್ರಾರಂಭದಲಿ ಒಂದುವರೆ ಲಕ್ಷ ರೂಪಾಯಿ ಬೇಕಾಗುವದೆಂದೂ ಆದಕೆ ಎಲರೂ ಧರ್ಮ ಕೊಡಬಹುದೆಂದೂ ತಿಳಿಸಿರುವರು. ಈ ರಾಜಕುಮಾರಿಯ ಭೂತದಯೆ ಪರೋಪಕಾರಗಳು ಸ್ತೋತ್ರಾರ್ಹವಾಗಿರುತ್ತವೆ.

◆◆◆◆

ಕೊಲೊರ್‍ಯಾಡೋ ನಗರದ ಒಂದು ಕಲ್ಲಿದ್ದಲ ಗಣಿಯಲ್ಲಿ ವಿಷವಾಯುವು ಬಹು ರಭಸದಿಂದ ಹತ್ತಿಕೊಂಡು ಹಾನಿ ಅನಾಹುತವಾಯಿತು. ಆಗ್ಗೆ ೪೦ ಮಂದಿ ಮಾತ್ರ ಆ ಗಣಿಯೊಳಗೆ ಕೆಲಸಮಾಡುತ್ತಿದ್ದರು. ಇವರಲ್ಲಿ ೨೦ ಜನ ಮೃತಪಟ್ಟರು. ಇನ್ನು ಕೆಲವರು ಸಿಕ್ಕಿ ಇಲ್ಲ.

◆◆◆◆

ತುರ್ಕಿ ಸುಲ್ತಾನರನ್ನು ಅವರ ರಾಜಧಾನಿಯಾದ ಕಾನ್‌ಸ್ಟೆಂಟಿನೋಪಲ್ ಪಟ್ಟಣದಲ್ಲಿ ಕೊಂದುಹಾಕಬೇಕೆಂದು ಕೆಲವರು ಸೇರಿ ಫಿತೂರಿ ಮಾಡಿದ್ದದ್ದು ಪತ್ತೆಯಾಯಿತು. ಅವರಲ್ಲಿ ಬೆಲ್ಜಿಯಂ ಪ್ರಜೆಯಾದ ಜೋರಿಸ್ ಎಂಬವನೂ ಸೇರಿದ್ದನು. ಸುಲ್ತಾನರು ಇವನನ್ನು ಕರೆಸಿ, ಅವನ ಅಪರಾಧವನ್ನು ಕ್ಷಮಾಪಣೆಮಾಡಿ, ಮತ್ತೆ ಆ ರಾಜ್ಯಕ್ಕೆ ಕಾಲುಹಾಕುವುದಿಲ್ಲವೆಂದು ಅವನಿಂದ ಭಾಷೆ ತೆಗೆದುಕೊಂಡು, ಗಡೀಪಾರು ಮಾಡಿಸಿರುತ್ತಾರೆ.

◆◆◆◆

ಇಟಲಿರಾಜ್ಯದಲ್ಲಿರುವ ವಿಸೂವಿಯಸ್ ಎಂಬ ಪರ್ವತದಿಂದ ಅಗ್ನಿ ಹುಟ್ಟಿ ಹೊರಕ್ಕೆ ಹರಿದುಬಂದು ಅನಾಹುತವಾಯಿತಷ್ಟೆ. ಆ ಪರ್ವತದ ಬಳಿಯಲ್ಲೇ ಒಂದು ಪರೀಕ್ಷಾ ಕಟ್ಟಡದಲ್ಲಿದ್ದ ಮೆಟ್ಯೂಚಿ ಎಂಬ ಶಾಸ್ತ್ರಪಂಡಿತನು ತಿಳಿಸಿರುವುದೇನೆಂದರೆ—ವಿಸೂವಿಯಸ್ ಅಗ್ನಿ ಪರ್ವತವು ತಣ್ಣಗಾಗಿದೆ. ಇನ್ನೂ ಅದರ ಬಾಯಿಯಿಂದ ಸ್ವಲ್ಪ ಹೊಗೆ ಹೊರಡುತ್ತಿದೆ. ಆಗಾಗ್ಗೆ ಬಹಳ ಹೊತ್ತಿಗೆ ಒಂದು ಸಲ ಇನ್ನೂ ಅದರ ಬಾಯಿಯಿಂದ ಮರಳು ಮಣ್ಣು ಹಾರಿ ಬರುತ್ತಿರುವುದು. ನಾನು ಹೋಗಿ ಅದರ ಬಾಯಿಯನ್ನು ನೋಡಿದೆನು. ಗಾಳಿಯಿಂದ ಧೂಳೆದ್ದು ಆವರಿಸುತ್ತಿರುವ ಕಾರಣ ಚೆನ್ನಾಗಿ ಪರೀಕ್ಷಿಸುವುದಕ್ಕೆ ಅವಕಾಶವಾಗಲಿಲ್ಲ. ಆದರೂ ಪರ್ವತದ ಬಾಯಿ ಮೊದಲಿದ್ದದ್ದಕ್ಕಿಂತಲೂ ಈಗ ತುಂಬಾ ಅಗಲವಾಗಿಯೂ ಆಳವಾಗಿಯೂ ಆಗಿದೆ ಎಂಬುದೇ.

◆◆◆◆

ಟ್ರಾನ್ಸ್‌ವಾಲಿನಲ್ಲಿರುವ ಚಿನ್ನದ ಗಣಿ ಕಂಪನಿಗಳ ಷೇರುಗಳು ತುಂಬಾ ಲಾಭಕರವಾಗಿರುವುದರಿಂದ ಅವುಗಳನ್ನು ಕೊಂಡುಕೊಳ್ಳುವ ಭಾಗದಲ್ಲಿ ಐಶ್ವರ್ಯವಂತರೆಲ್ಲಾ ಬಹಳ ಆಸೆಪಡುವರು. ಇಟಲಿಯವನೊಬ್ಬನೂ ಆಫ್ರಿಕಾ ದೇಶದವನೊಬ್ಬನೂ ಸೇರಿ, ಆ ಷೇರುಪತ್ರಗಳಂತೆಯೇ ಕಳ್ಳ ಪತ್ರಗಳನ್ನು ಸೃಷ್ಟಿಸಿಕೊಂಡು, ತುರ್ಕಿ ರಾಜಧಾನಿಯಾದ ಕಾನ್‌ಸ್ಟೆಂಟಿನೋಪಲ್ ಪಟ್ಟಣಕ್ಕೆ ಹೋಗಿ, ಅವುಗಳನ್ನು ಅಲ್ಲಿನ ಪ್ರಜೆಗಳಿಗೆ ಬಿಕರಿ ಮಾಡುತ್ತಿದ್ದರು. ಅವರ ಮೋಸವನ್ನು ಅರಿಯಲಾರದೆ ಜನರು ಎರಡು ಲಕ್ಷ ರೂಪಾಯಿ ತನಕ ಕೊಟ್ಟು, ಆ ಕಳ್ಳ ಪತ್ರಗಳನ್ನು ಕೊಂಡುಕೊಂಡರು. ಅಲ್ಲಿನ ಪೋಲೀಸಿನವರು ಗುಮಾನಿ ಇಟ್ಟದ್ದು ಬಹಳ ಯುಕ್ತಿ ಚಮತ್ಕಾರಗಳನ್ನು ವಿನಿಯೋಗಿಸಿ, ಅವರಿಬ್ಬರನ್ನೂ ಹಿಡಿದು ಲಾಕಪ್ಪಿನಲ್ಲಿ ಹಾಕಿಕೊಂಡಿದಾರೆ.

◆◆◆◆

ರಷ್ಯಾ ಸರ್ಕಾರದವರು ಈಚೆಗೆ ಬಹು ಮಂದಿ ಪ್ರಜೆಗಳನ್ನು ರಾಜದ್ರೋಹಿಗಳೆಂದು ಹೇಳಿ ಹಿಡಿದು ಬಂದೀಖಾನೆಗಳಲ್ಲಿ ತುಂಬಿಕೊಂಡಿದಾರೆ ವಾರ್ಸಾಪಟ್ಟಣದ ಜೈಲಿಗೆ ಆರು ಮಂದಿ, ಪೋಲೀಸಿನವರಂತೆ ವೇಷಹಾಕಿಕೊಂಡು ಹೋಗಿ, ಅಲ್ಲಿದ್ದ ಮುಖ್ಯಾಧಿಕಾರಿಯನ್ನು ಕಂಡು ಅವನ ಕೈಗೆ ಒಂದು ಹುಕುಮನ್ನು ಕೊಟ್ಟರು. ಅದರಲ್ಲಿ ಜೈಲಿನೊಳಗಿರುವ ಹತ್ತು ಮಂದಿ ಪ್ರಜಾ ಮುಖಂಡರನ್ನು ರಾಜಧಾನಿಗೆ ಕಳುಹಿಸಿಕೊಡಬೇಕೆಂಬ ಹುಕುಂ ಬರೆದಿತ್ತು. ಅದೇ ಪ್ರಕಾರ ಅಧಿಕಾರಿಯು ಹತ್ತು ಮಂದಿ ಮುಖಂಡರನ್ನು ಚುನಾಯಿಸಿ, ಒಂದು ಗಾಡಿಯೊಳಗೆ ಕೂರಿಸಿ ಕಾವಲಿಟ್ಟು, ಆ ಆರು ಮಂದಿ ಪೋಲೀಸಿನವರ ವಶಕ್ಕೆ ಒಪ್ಪಿಸಿದನು ಈ ಗಾಡಿಯು ಊರ ಹೊರಗೆ ಹೋದ ಕೂಡಲೇ ಆ ಪೋಲೀಸಿನವರಂತೆ ವೇಷಹಾಕಿಕೊಂಡಿದ್ದವರು ಗಾಡಿ ಹೊಡೆಯುವವನನ್ನೂ ಜೈಲಿನ ಜವಾನರನ್ನೂ ಹಿಡಿದು ಚನ್ನಾಗಿ ಹೊಡೆದು, ಅವರಿಗೆ ಮತ್ತೇರುವಂಥಾ ಔಷಧವನ್ನು ಕುಡಿಸಿ, ಗಾಡಿಯೊಳಗಿದ್ದ ಹತ್ತು ಮಂದಿಯನ್ನೂ ಇಳಿಸಿ, ಎಲ್ಲರೂ ಹೊಸ ಉಡುಪುಗಳನ್ನು ಹಾಕಿಕೊಂಡು ಹೊರಟುಹೋದರು

◆◆◆◆

ಆಸ್ಟ್ರೇಲಿಯದ ಅನೇಕಾನೇಕ ಸ್ಥಳಗಳಲ್ಲಿ ಕುಷ್ಠರೋಗಿಗಳನ್ನು ಒಂದೊಂದು ಪಟ್ಟಣದಲ್ಲಿಟ್ಟು ಸಾಕಿ ಅವರಿಗೆ ಚಿಕಿತ್ಸೆ ಮುಂತಾದ್ದು ಮಾಡುತ್ತಿರುವ ಮಿಷನ್ ಸಂಘದ ಮೂಲಪುರುಷರು ಲಂಡನ್ ಪಟ್ಟಣದಲ್ಲಿ ಸಭೆ ಸೇರಿ, ತಾವು ನಡಿಸುತ್ತಿರುವ ಕೆಲಸ ಕಾರ್ಯಗಳನ್ನು ಕುರಿತು ಉಪನ್ಯಾಸ ಮಾಡಿದರು ಅದರಿಂದ ತಿಳಿದುಬರುವ ಸಂಗತಿಗಳೇನೆಂದರೆ—೩೦ ವರುಷಗಳ ಕೆಳಗೆ ಈ ಸಂಘದವರು ೧೬೦೦ ಮಂದಿ ಕುಷ್ಠರೋಗಿಗಳನ್ನೂ ಅವರ ಮಕ್ಕಳನ್ನೂ ಸಾಕಿ ಸಲಹುತ್ತಿದ್ದರು. ಈಗ ಈ ರೋಗಿಗಳ ಸಂಖ್ಯೆಯು ೪,೨೦೦ ಕ್ಕೆ ಏರಿರುತ್ತದೆ ಈ ಸಂಘದವರು ಇಂಡಿಯಾ, ಬರ್ಮಾ, ಸಿಲೋನ್, ಈ ಪ್ರಾಂತ್ಯಗಳಲ್ಲಿ ೬೩ ಆಲಯಗಳನ್ನು ಕಟ್ಟಿ ಕುಷ್ಠ ರೋಗಿಗಳನ್ನು ಕೂಡಿಸಿ ಚಿಕಿತ್ಸೆ ಮಾಡುತ್ತಿದಾರೆ. ಇದಲ್ಲದೆ ಅವರು ಚೀನಾ ದೇಶದಲ್ಲಿ ೧೨ ಆಲಯಗಳನ್ನೂ, ಜಪಾನಿನಲ್ಲಿ ಎರಡು, ಸುಮಾತ್ರಾ ದ್ವೀಪದಲ್ಲಿ ಒಂದು ಆಲಯಗಳನ್ನು ಮಾಡಿಕೊಂಡು ಕುಷ್ಠರೋಗಿಗಳನ್ನು ಸಾಕುತ್ತಿದಾರೆ. ಪೂರ್ವದಿಕ್ಕಿನ ದೇಶಗಳಲ್ಲಿರುವ ಕುಷ್ಠರೋಗಿಗಳಲ್ಲಿ ಶೇಕಡಾ ಒಂದರಷ್ಟು ಜನ ಮಾತ್ರ ಈ ಸಂಘದವರ ಪೋಷಣೆಗೆ ಬಂದಿರುತ್ತಾರೆ. ಇನ್ನೂ ಶೇಕಡಾ ೯೯ ರಷ್ಟು ಮಂದಿ ಕುಷ್ಠರೋಗಿಗಳಿರುವರು. ಈ ಸಂಘದವರಿಗೆ ಕಳೆದ ವರುಷ ಎಲ್ಲಾ ಬಾಬುಗಳಿಂದಲೂ ೩,೦೩ ೫೭೫ ರೂಪಾಯಿ ಜಮಾ ಆಯಿತು. ಈ ಪೈಕಿ ೩,೦೫,೭೦೦ ರೂಪಾಯಿಯನ್ನು ರೋಗಿಗಳ ಪೋಷಣೆ ಮುಂತಾದ ಕ್ಕೆ ವಿನಿಯೋಗಿಸಿರುತಾರೆ

ಮೈಸೂರು ಗೆಜೆಟ್ ಸಂಗ್ರಹ.

ಮೇ ೨೪ ನೆ ತಾ. ಗುರುವಾರ ಎಂಪೈರ್ ಡೇ ಆದ್ದರಿಂದ ಆ ದಿನ ಮೈಸೂರು ಸಂಸ್ಥಾನದ ಎಲ್ಲಾ ಕೋರ್ಟು ಕಚೇರಿಗಳಿಗೂ ಸ್ಕೂಲುಗಳಿಗೂ ರಜಾ ಕೊಡಲ್ಪಟ್ಟಿದೆ

ಸಕಲೇಶಪುರದ ಸಬ್ ಅ ಸರ್ಜನ್ ಮೆ॥ ಕೆ. ಅನಂತರಾಮಯ್ಯಂಗಾರ್ರಿಗೆ ಮೇ ತಾ. ೧೫ ರಿಂದ ನಾಲ್ವತ್ತೈದು ದಿನಗಳ ಪ್ರಿವಿಲೇಜ್ ರಜಾ ಕೊಟ್ಟಿದೆ.

ನಂಜನಗೂಡಿನ ಅ ಅಸಿ ಸರ್ಜನ್ ಮೆ॥ ಟಿ ಚಂಗಲ್ರಾಯ ಮೊದಲಿಯಾರು ಸಕಲೇಶಪುರದ ಆಸ್ಪತ್ರೆ ಛಾರ್ಜನ್ನು ವಹಿಸಿರತಕ್ಕದ್ದು.

ದಿವಾನರವರ ಪ್ರೈವೆಟ್ ಸೆಕ್ರೆಟರಿ ಮೆ॥ ಆರ್ ನಾರಾಯಣಸ್ವಾಮಿ ರಾಯರಿಗೆ ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಕಡೂರ್ ಡಿಸ್ಟ್ರಿಕ್ಟ್ ಫಾರೆಸ್ಟುಗಳ ಡೆಪ್ಯುಟಿ ಕನ್ಸರ್ವೇಟರ್ ಮೆ॥ ಟಿ. ಹೀರಾಸಿಂಗ್ ಯವರಿಗೆ ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಶ್ರೀನಿವಾಸಪುರದ ಅಮಲ್ದಾರ್ ಮೆ॥ ಅಬ್ದುಲ್ ಹಕೀಂ ಯವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಕೋಲಾರ್ ಡಿಸ್ಟ್ರಿಕ್ಟ್ ಪೊಲೀಸ್ ಹೆಡ್ ಕ್ವಾರ್ಟರ್ ಇನ್ಸ್ಪೆಕ್ಟರ್ ಪಿ ಸುಬ್ಬರಾಯರು ಶ್ರೀನಿವಾಸಪುರದ ತಾಲ್ಲೂಕ್ ಅಮಲ್ದಾರ್ ಮತ್ತು ೭ ನೆ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಕೆಲಸ ನೋಡುವಂತೆ ನೇಮಿಸಲ್ಪಟ್ಟಿದಾರೆ

ಪೊಲೀಸ್ ಇಲಾಖೆಯಲ್ಲಿ ಮುಂದೆ ಹೇಳುವ ಸೂಪರಿಂಟೆಂಡೆಂಟರ ವರ್ಗಾವರ್ಗಿಗಳನ್ನು ಹುಕುಂ ಮಾಡಿದೆ —

ಮೆ॥ ಟಿ ರಾಮಸ್ವಾಮಯ್ಯಂಗಾರವರನ್ನು ಕಡೂರಿನಿಂದ ಚಿತ್ರದುರ್ಗಕ್ಕೆ, ಮೆ॥ ನಾಡಿಗ ಸುಬ್ಬರಾಯರನ್ನು ಚಿತ್ರದುರ್ಗದಿಂದ ಬೆಂಗಳೂರಿಗೆ (ಇವರು ಪೊಲೀಸ್ ಇನ್ಸ್ಪೆಕ್ಟರ್ ಜನರಲ್‌ರವರ ಹೆಡ್ ಕ್ವಾರ್ಟರ್ ಆಫೀಸು ಅಸಿಸ್ಟೆಂಟರಾಗಿರತಕ್ಕದ್ದು), ಮೆ॥ ಎಲ್ ಕೃಷ್ಣರಾಯರನ್ನು ತುಂಕೂರಿನಿಂದ ಬೆಂಗಳೂರಿಗೆ, ಮೆ॥ ವೈ ವಿ ಕೃಷ್ಣಮೂರ್ತಿಯವರನ್ನು ಬೆಂಗಳೂರಿನಿಂದ ತುಂಕೂರಿಗೆ

ಸಂಸ್ಥಾನದ ಹುಜೂರ್ ಖಜಾನೆಯ ಛಾರ್ಜನ್ನು ಮೆ॥ ಬಿಷ್ಟೊಪಂತ್ ರಾಮರಾಯರವರು ಮೆ॥ ಟಿ ಗೋಪಾಲೈಯ್ಯಂಗಾರ್ರಿಂದ ಮೇ ತಾ ೨ ರಲ್ಲಿ ವಹಿಸಿಕೊಂಡಿರುತ್ತಾರೆ

ಬಾತ್ಮಿದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ನಿಗಾ ಕೊಡಲಾರೆವು ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು, ಇಂಥವುಗಳಿಗೆ ನಾವು ನಿಗಾ ಕೊಡಲಾರೆವು

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು —ಎಡಿ

"ಪ್ರಜೆಗಳ ಹಿತಚಿಂತಕ," ಚನ್ನಪಟ್ಟಣ—ಈ ಬಾತ್ಮಿಯಲ್ಲಿ ಪ್ರಕಟನೆಗೆ ಅರ್ಹವಾದ ವರ್ತಮಾನಗಳೇನೂ ಕಂಡ ಬರುವುದಿಲ್ಲ

"ವಿದ್ಯಾಭಿಮಾನಿ," ಲಕ್ಕವಳ್ಳಿ—ಈ ಬಾತ್ಮಿಯಿಂದ ಬಾತ್ಮಿದಾರರ ಉದ್ದೇಶವೇನೆಂಬುದು ಗೊತ್ತಾಗುವುದಿಲ್ಲ

"ಸತ್ಯವಾದಿ," ಅರಗ್ರ ತೀರ್ಥಹಳ್ಳಿ ತಾ —ನೀವು ಹೇಳುವ ವಿಷಯದಲ್ಲಿ ಶಿಕ್ಷೆಂತ್ರಗಳನ್ನು ಮಾಡುವುದಕ್ಕೆ ಸರ್ಕಾರದವರು ಕೋರ್ಟುಗಳನ್ನು ಏರ್ಪಡಿಸಿದಾರೆ.

"ದೈವಾಭಿಮಾನಿ," ಗಂಡ್ರಹಳ್ಳಿ, ನಗರ ತಾ —ಇಂಥಾ ವಿಚಾರವನ್ನು ಜನರು ಅಲ್ಲಲ್ಲಿ ಒಟ್ಟುಕೂಡಿ ಸರಿಪಡಿಸಿಕೊಳ್ಳಬೇಕು

ಕರೆಸ್‌ಪಾಂಡೆನ್ಸ್

ನಮ್ಮ ಮುಂಡುವದಕ್ಕೆ ಇದೇ ಸಮಯ.

ಅಯ್ಯಾ,

ಮೈಸೂರು ಪಟ್ಟಣದಲ್ಲಿಯೂ ಈ ದೇಶದಲ್ಲಿಯೂ ಇರುವಂಥ ಧರ್ಮಿಷ್ಠರೂ ಪರೋಪಕಾರಿಗಳೂ ಆದ ಮಹನೀಯರಿಗೆ ಶ್ರುತಪಡಿಸುವದು ಏನಾಗಿ —

ನಾವು ಮೈಸೂರು ಪಟ್ಟಣದಲ್ಲಿಯೂ ಈ ಡಿಸ್ಟ್ರಿಕ್ಟಿನಲ್ಲಿಯೂ ರೋಗಾದಿ ಉಪದ್ರವಗಳಿಂದ ಪ್ರಯೋಜನವಿಲ್ಲದೆ ಎಲ್ಲಾ ಕೋಮಿನ ಹೆಂಗಸರಿಗೂ ಮಕ್ಕಳಿಗೂ ಪ್ರಯೋಜನವಾಗಿರುವ ಶಾಂತಿ ಒಂದು ಧರ್ಮ ಆಸ್ಪತ್ರೆಯನ್ನು ಕಟ್ಟಿಸುತ್ತಿರುವದು ಸರ್ವರಿಗೂ ತಿಳಿದಿರುವಷ್ಟು ಈ ದೊಡ್ಡ ಕಟ್ಟಡಕ್ಕಾಗಿ ಒಂದು ಲಕ್ಷ ರೂಪಾಯಿಗೆ ಮೇಲು ಖರ್ಚಾಗಿ ಬೇಕಾಗಿದೆ. ಈ ಹಣದಲ್ಲಿ ಧನವನ್ನು ಹೋಗಿದ ನಮ್ಮ ಮಹಾರಾಜಾ ಸಾಹೇಬರವರ ಸರ್ಕಾರದವರು ನಾಲ್ಕರಲ್ಲಿ ಒಂದು ಭಾಗವನ್ನು ಕೊಡುವದಾಗಿ ಈಗ ನಮೂದಿಸಿದಾರೆ ಬಾಕಿ ಮೂರು ಭಾಗದ ಮೊಬಲಗನ್ನು ಧರ್ಮಿಷ್ಠರೂ ಪರೋಪಕಾರಿಗಳೂ ಆಗಿರುವ ನಮ್ಮ ಸನ್ಮಿತ್ರರಿಂದ ವಸೂಲ್ ಮಾಡಬೇಕಾಗಿದೆ ಅಲ್ಲದೆ ಆಸ್ಪತ್ರೆಯಲ್ಲಿ ಔಷಧ ವಗೈರೆಗಳಿಗಾಗಿ ಪ್ರತಿ ತಿಂಗಳು ನೂರೈವತ್ತು ಎಂಟು ನೂರು ರೂಪಾಯಿ ಕೆಂತಲು ಕಡಿಮೆಯಾಗಲಾಗದು ದೇಶದಲ್ಲಿ ಪ್ರಮೇಹಶೂಲದ ಕಷ್ಟಗಳನ್ನು ಪರಿಹರಿಸುವದಕ್ಕಿಂತ ಶ್ರೇಷ್ಠವಾದ ಧರ್ಮಕ್ರಿಯೆ ಮತ್ತಾವುದೂ ಇಲ್ಲವೆಂಬುವದನ್ನು ಸರ್ವರೂ ಒಪ್ಪಿಕೊಳ್ಳುವರು ಆದದರಿಂದ ಈ ಘನವಾದ ಕೆಲಸಕ್ಕಾಗಿ ಧರ್ಮಿಷ್ಠರು ಕೊಡುವಂಥ ಹಣವು ಕೃತಜ್ಞತಾಪೂರ್ವಕವಾಗಿ ಸ್ವೀಕರಿಸಲ್ಪಡುವದು. ಮತ್ತು ಆಸ್ಪತ್ರೆಯ ಔಷಧ ವಗೈರೆ ಖರ್ಚುಗಳಿಗಾಗಿ ತಿಂಗಳು ತಿಂಗಳಿಗೂ ಕ್ರಮವಾಗಿ ಕೊಡಲ್ಪಡುವ ಕಾಣಿಕೆಗಳು ಬಹ್ವಾದರದಿಂದ ವಂದನಾಪೂರ್ವಕವಾಗಿ ಸ್ವೀಕರಿಸಲ್ಪಡುವವು.

ನಿಮ್ಮ ವಿಧೇಯ

ಮೈಸೂರು. ಜಿ ಹಟ್ಟಿಲ್ಲಿ. ಸಾಹೆ.

ಮಲೆನಾಡಿನ ಬ್ರಾಹ್ಮಣರ ಕಾಟ

ಅಯ್ಯಾ,

ವಾಚಕರೇ, ಈ ಮಲೆನಾಡಿನಲ್ಲಿ ಅಡಿಕೆ ಕೊಯಿಲು ಆಬ್ಬರು ಕಾಲಕ್ಕೆ ಬ್ರಾಹ್ಮಣರ ಗುಂಪುಗಳು ಅಡಿಕೆ ಸಂಭಾವನೆ ಎಂಬದಾಗಿ ಬರುತ್ತಾರೆ ಒಂದೊಂದು ದಫೆ ಬರತಕ್ಕ ಬ್ರಾಹ್ಮಣರ ಗುಂಪಿನಲ್ಲಿ ಸುಮಾರು ೧೦—೧೫ ಜನರು ಇರುತ್ತಾರೆ, ಇವರುಗಳಿಗೆಲ್ಲಾ ತಲಾ ಒಂದು ಖಾವಿಗೆ ಕಡಿಮೆಯಿಲ್ಲದೆ ಅಡಿಕೆ ಕೊಡಬೇಕು, ಹಾಗೆ ಕೊಡುವದಿಲ್ಲವೆಂಬದಾಗಿ ಒಕ್ಕಲಿಗರು ಹೇಳಿದರೆ ಅದಕ್ಕೆ ಬ್ರಾಹ್ಮಣರು—ಅಯ್ಯಾ, ನಾವುಗಳು ನಿಮ್ಮಗಳಿಗೆ ಗುರುಗಳು, ಮತ್ತು ಭೂಮಿಗೆಲ್ಲಾ ದೇವತೆಗಳು ನಮ್ಮನ್ನು ನೀನು ಹಾಗೇ ಕಳುಹಿಸಿದರೆ ನಿನಗೆ ಬಹಳ ಪಾಪ ಬರುತ್ತೆ ಎಂತ ಹೇಳಿ, ಮಲೆನಾಡಿನ ಕಮ್ಮಿ ತಿಳುವಳಿಕೆ ಇದ್ದ ಬಡಪ್ರಜೆಗಳ ಹತ್ತಿರ ಅಡಿಕೆಯನ್ನು ತೆಗೆದುಕೊಂಡು ಹೋಗುತ್ತಾರೆ ಹೀಗೆ ಒಂದು ವರುಷಕ್ಕೆ ಒಬ್ಬ ಒಕ್ಕಲಿಗನಿಗೂ ಕೂಡ ಕನಿಷ್ಠಪಕ್ಷ ನಾಲ್ಕು ಮಣ ಅಡಿಕೆ ಖರ್ಚಾಗುತ್ತೆ ಬ್ರಾಹ್ಮಣರಿಗೆ ಕೊಡಬೇಕಾದ ಅಡಿಕೆ ಸಂಭಾವನೆಯ ಕಾರಣವೇನೊ ಗೊತ್ತಾಗದು ಅಡಿಕೆಯ ಕಾಲ ಬಂದ ಕೂಡಲೇ ಬಹು ಜನ ಬಡವರು ಸಂಭಾವನೆ ಕೊಡಲಾರದೆ ಬಹಳ ವ್ಯಸನದಿಂದ ಈ ಬ್ರಾಹ್ಮಣರ ಕಿರುಕುಳವನ್ನು ಯಾವ ಪುಣ್ಯಾತ್ಮರು ತಪ್ಪಿಸುತ್ತಾರೋ ಅವರಿಗೆ ನಾವುಗಳು ಬಹಳ ಕೃತಜ್ಞರಾಗಿರುತ್ತೇವೆ ಎಂಬದಾಗಿ ಹೇಳುತ್ತಾರೆ ಸತ್ಯವಾದಿ.

[ಕಷ್ಟಾರ್ಜಿತದಿಂದ ಜೀವಿಸಬೇಕೆಂಬ ವಿವೇಕವು ಎಂದಿಗೆ ನೆಲೆಗೊಂಡೀತೋ ಕಾಣೆವು —ಎಡಿ]

ಕಂದೂರು ಸಂತೆಯ ಗಲಭೆಯು.

ಅಯ್ಯಾ

ಮಾಗಡಿ ತಾಲ್ಲೂಕ್ ಕಂದೂರಲ್ಲಿ ಪ್ರತಿ ಶನಿವಾರವೂ ಸಂತೆ ನಡೆಯುತ್ತದೆ ಈ ಸಂತೆಗೆ ಅನೇಕ ಕಡೆಗಳಿಂದ ವ್ಯಾಪಾರಸ್ಥರು ಬಂದು ಸೇರುತ್ತಾರೆ. ಈ ಗ್ರಾಮಕ್ಕೆ ಅಕ್ಕಪಕ್ಕ ಇರತಕ್ಕ ಗ್ರಾಮಗಳಲ್ಲಿ ರತಕ್ಕ ತಿಗಳರು ಮುಂತಾದ ಇತರ ಬಾಗಾಯತಿ ಜಮೀನುಗಳ ಸಾಗುವಳಿದಾರರು ತಮ್ಮ ತಮ್ಮ ಜಮೀನುಗಳಲ್ಲಿ ಬೆಳೆದ ವೀಳ್ಯೇದೆಲೆ, ತೆಂಗಿನಕಾಯಿ ತರಕಾರಿ, ಕಾಯಿಸೊಪ್ಪು ಮುಂತಾದ್ದು ಮಾರುವುದಕ್ಕೆ ತರುವ ಪದ್ಧತಿಯುಂಟು ಈ ಗ್ರಾಮದ ಶ್ಯಾನುಭೋಗ ಮುಂತಾದ ಸರ್ಕಾರಿ ನೌಕರರು ಅವರಿಂದ ಪಡೆಗೆ ಎಂಬ ಸುಲಿಗೆ ಮಾಡುತ್ತಾ ಸ್ವಪ್ರಯೋಜನ ಹೊಂದುತ್ತಿದ್ದರು ಹೀಗೆ ಇರುತ್ತಿರುವಲ್ಲಿ ಏಪ್ರಿಲ್ ೨೮ ನೆ ಶನಿವಾರ ಸಂತೆಯಲ್ಲಿ ಪಡೆಗೆ ಸಲೀಸು ಇವರ ಇಷ್ಟಪೂರ್ತಿ ಕೊಡದೇ ತಪ್ಪಿದ್ದಕ್ಕಾಗಿ ಆ ಗ್ರಾಮ ಶ್ಯಾನುಭೋಗ ಗುರುಸ್ವಾಮಿ ನಾರಸಿಂಹದೇವರಯ್ಯನವರು—ನೀವೆಲ್ಲರು ವ್ಯಾಪಾರದ ಕಂದಾಯ ಕೊಡಬೇಕು ತಪ್ಪಿದರೆ ಈ ಗ್ರಾಮಕ್ಕೆ ವ್ಯಾಪಾರಕ್ಕೆ ಬಿಡುವದಿಲ್ಲವೆಂದು ಅವರುಗಳ ಪೆಸರೆಲ್ಲಾ ಪಟ್ಟಿ ಬರೆಕೊಂಡದು ಅವರು ಹೇಳುವದಕ್ಕೆ ಭಯಪಟ್ಟವರೆಲ್ಲಾ ಶಕ್ತ್ಯಾನುಸಾರ ತಲಾದ್ದು ತಾವು ಅಲ್ಪಸ್ವಲ್ಪ ಸಾಮಾನಿನಲ್ಲಿ ಕೊಟ್ಟರು

ದಯಾಳುಗಳಾದ ಗವರ್ನಮೆಂಟಿನಲ್ಲ ಸರ್ಕಾರದ ನೌಕರರು ಪಡೆಗೆ ಎಂದು ರೈತರಿಂದ ಸುಲಿಗೆ ಮಾಡಿಕೊಳ್ಳುವದಕ್ಕೆ ಅಧಿಕಾರ ಕೊಟ್ಟಿರುತ್ತಾರೆಯೇ ತಾವು ಸ್ವಂತವಾಗಿ ಕಷ್ಟಪಟ್ಟು ವ್ಯವಸಾಯ ಮಾಡಿ ಬೆಳೆದ ಪದಾರ್ಥವನ್ನು ಅವರು ವಿಕ್ರಯಿಸುವುದಕ್ಕೆ ಆ ಧನವನ್ನು ಕಂದಾಯ ಮುಂತಾದ್ದಕ್ಕೆ ಅವರ ಹೊಟ್ಟೆಬಟ್ಟೆ ವಗೈರೆಗೆ ಮಾಡಿಕೊಳ್ಳುವ ಸ್ವತಂತ್ರ ಇವರಿಗೆ ಇಲ್ಲವೇ ? ಇದು ಜಮಾಯಿಶಿಯಿಂದ ಜೀವನವೋ ? ಅಥವಾ ವ್ಯಾಪಾರದಿಂದ ಜೀವನವೋ ಜಮೀನ್ದಾರರು ತಮ್ಮ ಜಮೀನಿನಲ್ಲಿ ಬೆಳೆಯುವ ರಾಗಿ ಭತ್ತ ವಿಕ್ರಯಿಸುತ್ತಾರಲ್ಲಾ ! ಅದೂ ವ್ಯಾಪಾರವಾಗುತ್ತದೆಯೋ ? ಇಂಥಾದ್ದಕ್ಕೆ ಸರ್ಕಾರದಲ್ಲಿ ಸಂಸ್ಥಾನಾಮತ ಕಂದಾಯ ಉಂಟೇ ? ಇದನ್ನು ತಮ್ಮ ಪತ್ರಿಕೆಯ ಮೂಲಕ ಪ್ರಜೆಗಳ ಅವಗಾಹನೆಗೆ ತಂದು ಅವರು ಪಡುವ ಅಭಿಪ್ರಾಯವನ್ನು ಪ್ರಕಟಿಸುತ್ತೀರೆಂದಪೇಕ್ಷಿಸುವ

ಕಂದೂರು ಪ್ರತ್ಯಕ್ಷದರ್ಶಿ

ತಿಪ್ಟೂರು ತಾಲ್ಲೋಕು ಅರಳಗುಪ್ಪೆ

ಅಯ್ಯಾ,

ಬಿಸಲು ಬಹು ಜೋರಾಗಿದೆ ಊರಿನೊಳಗೆ ಯಾವ ಬಾವಿಯಲ್ಲೂ ನೀರಿಲ್ಲದೆ ಜನಗಳಿಗೂ ಜಾನುವಾರುಗಳಿಗೂ ಬಹು ಪ್ರಯಾಸವಾಗುವದನ್ನು ನೋಡಿ, ಮೆ॥ ಸಾಹುಕಾರ್ ಪುಟ್ಟಸಿದ್ದಯ್ಯನವರು ಕೋಟೆ ಒಳಿಯಲ್ಲಿ ಸಾವಿರಾರು ರೂಪಾಯಿ ಮುಟ್ಟಿಸಿ ಒಂದು ಬಾವಿಯನ್ನು ತೆಗೆಸಿರುತ್ತಾರೆ ಇವರ ಉದಾರ ಮನಸ್ಸನ್ನು ಎಷ್ಟು ಕೊಂಡಾಡಿದರೂ ತೀರದು. ಸರ್ಕಾರದವರು ಈ ಭಾವಿಯ ಸಮೀಪದಲ್ಲಿ ಕೋಟೆಗೆ ಗೋಡೆಯನ್ನೊಡಿಸಿ ರಸ್ತೆ ಮಾಡಿಸಿಕೊಟ್ಟರುವದು ಇನ್ನೂ ಅನುಕೂಲವಾಗಿದೆ.

ಈ ಗ್ರಾಮದಲ್ಲಿ ಬ್ರಾಹ್ಮಣರು ಬಹು ದಿನಗಳಿಂದಲೂ ಐಕಮತ್ಯವಿಲ್ಲದೆ ನಾಲ್ಕು ಪಾರ್ಟಿಗಳಾಗಿದ್ದರು ಈ ಮಾಹೆ ೧೦ ನೆ ತಾ ತಿಪ್ಟೂರು ನಾಡ ಶೇಕದಾರ್ ಮೆ॥ ನರಸಿಂಗರಾಯರು ಬಂದು ಸ್ಕೂಲ್ ಕಟ್ಟಡದಲ್ಲಿ ಮುಖ್ಯಜನರನ್ನೆಲ್ಲಾ ಸೇರಿಸಿ ಸಭೆಮಾಡಿದರು ಅಲ್ಲಿಗೆ ಆ ನಾಲ್ಕು ಪಾರ್ಟಿಯವರನ್ನೂ ಬರಮಾಡಿ, ಅವರ ಮುಖಂಡರುಗಳಿಂದ ವಾದ್ಯಾಂಶಗಳನ್ನು ವಿಚಾರಿಸಿ ಅವರಿಗೆಲ್ಲಾ ತಕ್ಕ ಸಮಾಧಾನೋಕ್ತಿಗಳನ್ನು ಹೇಳಿ, ಬಹು ಸಾಹಸಮಾಡಿ ಅವರೆಲ್ಲರೂ ಏಕೀಭವಿಸಿ ಬಾಳುವಂತೆ ಮಾಡಿದರು. ನಂತರ ಸರ್ವರೂ ಆನಂದಪಟ್ಟು ಶ್ರೀಜನಾರ್ದನಸ್ವಾಮಿಯ ದೇವಸ್ಥಾನಕ್ಕೆ ಹೋಗಿ ತಮ್ಮ ಭಯಭಕ್ತಿಪೂರ್ವಕವಾದ ವಂದನೆಗಳನ್ನು ದೇವರಿಗೆ ಸಮರ್ಪಿಸಿದರು. ನಂತರ ಶೇಕದಾರರೂ ವರ್ನಾಕ್ಯುಲರ್ ಸ್ಕೂಲ್ ಮಾಸ್ಟರೂ ಶಾಸ್ತ್ರಗಳಿಂ ಗ್ರಾಮಸ್ಥರಿಗೆ ಸದುಕ್ತಿಗಳನ್ನು ಹೇಳಿದರು. ತರುವಾಯ ಗ್ರಾಮಸ್ಥರ ಪರವಾಗಿ ಮೆ॥ ಚಂದ್ರಶೇಖರಯ್ಯನವರು ಕೆಲವು ಮಾತುಗಳಿಂದ ಅವರನ್ನು ಪ್ರತಿವಂದನೆ ಮಾಡಿದರು ನಂತರ ದೇವೇಂದ್ರನು ಗ್ರಾಮಸ್ಥರ ಆನಂದವು ಇನ್ನೂ ವೃದ್ಧಿಯಾಗುವ ಹಾಗೆ ಸುವೃಷ್ಟಿಯನ್ನುಂಟುಮಾಡಿದನು ಇದೇ ರೀತಿಯಾಗಿ ನಮ್ಮ ಭಾರತೀಯರಲ್ಲಿ ಸಮಗ್ರವಾದ ಐಕಮತ್ಯವು ನೆಲೆಗೊಳ್ಳುವಂತೆ ದೇವರು ಅನುಗ್ರಹಿಸುತ್ತಿರಬೇಕೆಂತ ಕೋರುವೆನು. ಸಿ ಸಿ.

ಕಟ್ಟುಪಾಡೂ, ನಾಟಕದ ಬಂಡುತನವೂ

ಅಯ್ಯಾ

ಈ ಮಲೆನಾಡಿನ ಗೌಡರುಗಳ ಪೈಕಿ ಶ್ರೀಯೋಗನಂಜರಾವ ರಂ. ಗಿರಿಯಪ್ಪಗೌಡರು ಇನ್ನೂ ಅನೇಕ ಸ್ವಜಾತಿಯ ಜನ ಸೇರಿಸಿಕೊಂಡು ಒಂದು ಸಂಘವನ್ನು ಮಾಡಿ ನಾಮಧಾರಿ ಜಾತಿ ನಡೆಯತಕ್ಕ ಅನ್ಯರ ಕನ್ಯಾವಿಕ್ರಯ, ಮಧ್ಯಪಾನ ಮಾಡುವದು ಜಾತಿಯ ಬಾಲಕರುಗಳನ್ನು ಹೀನಸ್ಥಿತಿಗೆ ತರುವದು, ಇವುಗಳ ಮುಂದೆಂತಲೂ ಹಾಗೆ ಬಿಡದಿದ್ದರೆ ಅವರಿಗೆ ತಕ್ಕ ಶಿಕ್ಷೆ ಮಾಡುತಲೂ ಹೇಳಿ, ಬಂದೋಬಸ್ತು ಮಾಡಿದ್ದು ಸರ್ವರಿಗೂ ಗೊತ್ತೇ ಇದೆ ರಂ ಗಿರಿಯಪ್ಪಗೌಡರು ಮಾತನಾಡುವ ಶ್ರೋತೃನ ಸಭ್ಯಾಕ್ಕೆ ಹೆದರಿ ಕೆಲವರು ಅವರ ಸ್ನೇಹವನ್ನೇ ಬಿಟ್ಟುಬಿಟ್ಟರು ಅಂದ ಜನಗಳು ಮಾತ್ರ ಸ್ನೇಹವನ್ನು ಬಿಟ್ಟರೆ ಆಗತಕ್ಕದ್ದೇನು ? ಪಟ್ಟಣದಲ್ಲಿರುವ ದೀಪಕಗೆ ನಾವು ವಿಧೇಯರಾಗಿ ನಡಕೊಂಡರೆ ಪ್ರಾಪ್ತವಾಗತಕ್ಕ ಸೌಖ್ಯವನ್ನು ಈ ಜನಗಳೇನಾದರೂ ತಪ್ಪಿಸುವರೋ

ಈಗ ಒಂದು ವಾರದ ಕೆಳಗೆ ಗಟ್ಟದಕೆಳಗಿನಿಂದ ಬಂದ ಘಂಟಿ ಆಟವನ್ನು ಕೆಲವು ದೊಡ್ಡ ಮನುಷ್ಯರು ಸರಿ ಆಡಿಸಿದರು ನಾಗೇಶ ನೈಲಿ ನಡೆಸಿಕೊಂಡು ಹೋಗಿ ಆಟ ನೋಡುವ ಒಬ್ಬನಾಗಿ ಕುಳಿತೆನು ಈ ಆಟಕ್ಕೆ ೨೫ ರೂಪಾಯಿ ಕೂಲಿ ತೆ, ಈ ಆಟದಲ್ಲಿ ದೊಡ್ಡ ಮನುಷ್ಯರೂ ಆನೆ ಕಜನ ಗೋಣಿ ನೆಂದಿದ್ದರು ಈ ಆಟವು ಅನೇಕ ಬಂದುಮಾತುಗಳಿಂದ ಕೂಡಿದ್ದು, ಶ್ರೀಕೃಷ್ಣನ ತಂಗಿಯಾದ ಪೌರಸದಿಯನ್ನು ಕಳೆದುಕೊಂಡುವ ಕಾಲಕ್ಕೆ ಆಟದ ಹಾಸ್ಯಗಾರನು ಆ ಪೌರಸದಿಯನ್ನು ಆ ಸಮೂಹದಲ್ಲಿ ಲಜ್ಜೆಯಿಲ್ಲದೆ ಅನೇಕ ಬಂಡತನಗಳನ್ನು ಮಾಡಿದ್ದು ಆಟ ನೋಡುವದಕ್ಕೆ ಬಂದ ದೊಡ್ಡ ಮನುಷ್ಯರಿಗೂ ಮಹಾಸ್ಥಾನದ ಹೆಂಗಸರಿಗೂ ಎಷ್ಟು ನಾಚಿಕೆಗೆ ಬುದ್ಧಿಭ್ರಮಣೆಯನ್ನು ಮಾಡಿತೆಂದು ವಾಚಕರೇ ಊಹಿಸಬಹುದು ಎವರಿಗೇ, ಇಂಥಾ ದುರ್ವಿನಿಂಗಕ್ಕೂ ಮಹ್ಮದಾನಗಳಿಗೂ ಮನಗೊಡಸದೆ, ದೇವರು ಎಂದಿಗೆ ಅಜ್ಞಾನವನ್ನು ಹೋಗಲಾಡಿಸುತ್ತಾನೋ ಎಂಬದಾಗಿ ದೇವರನ್ನು ಪ್ರಾರ್ಥಿಸಿಕೊಳ್ಳುತ್ತೇನ

ನಿಷ್ಪಕ್ಷಪಾತಿ

ದೇವಿ ಹಾಕಿಸಿಕೊಳ್ಳದವರಿಂದಾಗುವ ಗುಣಾವಗುಣಗಳು

ಅಯ್ಯಾ

ಮಕ್ಕಳಿಗೆ ದೇವಿ ಹಾಕಿಸದೆ ತಂಬಾ ತೊಂದರೆ ಪಡ ಪಡುವ ವಿಚಿತ್ರಮಂಡಲಿಯವರೆಲ್ಲರಿಗೆ ತಿಳಿದಿದೆಯಷ್ಟೆ. ಅಂದರೆ ಮಗು ಜನನವಾದ ೨೫ ದಿನಗಳಲಾಗಾಯಿತು ೩ ತಿಂಗಳ ಒಳಗಾಗಿ ದೇವಿ ಹಾಕಿಸದಿದ್ದರೆ ಮಕ್ಕಳು ಕರ್ಣಾಣಿ ವಿಷಜ್ವರ, ಅಜ್ಜ ತಿರು ಹುಳುಗಳ ವಿಷಸಂಬಂಧವಾದ ಅನೇಕ ರೋಗಗಳಿಗೆ ಗುರಿಯಾಗುತ್ತಾರೆ. ಆದ್ದರಿಂದ ಮಕ್ಕಳಿಗೆ ಹುಟ್ಟಿದ ೨೫ ದಿನಗಳಲಾಗಾಯಿತು ೩ ತಿಂಗಳೊಳಗಾಗಿ ದೇವಿ ಹಾಕಿಸಿದರೆ ಮೇಲ್ಕಂಡ ರೋಗಗಳು ನಿಲ್ಲದೆ ಶರೀರದಲ್ಲಿ ಸಂಭವಿಸಲಾರವು. ಮತ್ತು ದೇವಿ ಸ್ವಲ್ಪವೂ ಏಳುವದಿಲ್ಲ. ತಂದೆತಾಯಿಗಳ ಗರ್ಭದಿಂದ ಸಂಬಂಧಿಸಿದ ರೋಗಗಳನ್ನು ಗುಣಪಡಿಸಿ, ಮಕ್ಕಳನ್ನ ಆರೋಗ್ಯಸ್ಥಿತಿಗೆ ತರಲು ಇದು ಮುಖ್ಯ ಕಾರಣವಾಗುತ್ತೆ ಆದ್ದರಿಂದ ಮಕ್ಕಳಿಗೆ ದೇವಿ ಹಾಕಿಸುವದ ಜರೂರು ದೇವಿ ಹಾಕುವವರು ಹೇಳಿದಂತೆ ಮಕ್ಕಳ ತಂದೆತಾಯಿಗಳು ಕೇಳದೆ ಅವರ ಸ್ವಪ್ರೀತಿ ಬೇವಿನಸೊಪ್ಪು ಬೂದಿ, ಇಂಥಾ ಪದಾರ್ಥಗಳನ್ನು ಸಹ ವಲ್ಲಿ ಮಕ್ಕಳಿಗೆ ಪ್ರತಿ ದೊಡ್ಡವರ ಕಾಟವನ್ನು ಒದಗಿಸಿಕೊಳ್ಳುತ್ತಾರೆ. ಇದೂ ಅಲ್ಲದೆ ದೊಡ್ಡವರಿಗೆ ಉಷ್ಣಾದಿಗಳಿಂದ ಕೈ, ಕಾಲ ಕಣ್ಣುಗಳು ಉರಿಯುವದು ಇದ್ದರೆ ೧೫—೨೦ ವರುಷಕ್ಕೊಂದಾವರ್ತಿ ದೇವಿ ಹಾಕಿಸಿಕೊಂಡಲ್ಲಿ ಅಂಥಾ ಉಷ್ಣಾದಿಗಳನ್ನು ಕಾದು ಹಿಡಿದು ನಿವಾರಣೆ ಮಾಡಿ ಶರೀರದಲ್ಲಿ ರಕ್ತವೃದ್ಧಿಯುಂಟಾಗಿ ಶುದ್ಧವಾದ ರಕ್ತಸಂಬಂಧ ರಕ್ತ ಕೆಡುವದು, ಇಂಥಾ ಕಾಯಿಲೆಗಳು ಸಂಭವಿಸದೆ ಶರೀರವು ಆರೋಗ್ಯಸ್ಥಿತಿಗೆ ಬರುತ್ತದೆ ಇದು ಮುಖ್ಯ ಕಾರಣವಾಗಿರುತ್ತೆ ಆದ್ದರಿಂದ ಪ್ರಜೆಗಳನ್ನು ಒಳ್ಳೇ ಆರೋಗ್ಯಸ್ಥಿತಿಯಲ್ಲಿ ಇಡಬೇಕೆಂದು ದಯಾಳುಗಳಾದ ಗವರ್ನಮೆಂಟಿನವರು ವ್ಯಾಕ್ಸಿನೇಟರುಗಳನ್ನು ನಿಯಾಮಿಸಿದರು. ಪ್ರಜೆಗಳನ್ನು ಅಭಿವೃದ್ಧಿ ಪಡಿಸುವದಕ್ಕಾಗಿ ರಾಜಧಾನಿಗಳಲ್ಲಿಟ್ಟಿರುತ್ತಾರೆ ಆದ್ದರಿಂದ ಸರ್ವರೂ ಕಾಲ ಕಾಲಗಳಲ್ಲಿಯೂ ಆಲಸ್ಯವಿಲ್ಲದೆ ತಮ್ಮ ತಾಲ್ಲೋಕುಗಳಲ್ಲಿಯೂ ತಮ್ಮ ಗ್ರಾಮಾಂತರಗಳಲ್ಲಿಯೂ ಇರುವ ತಮ್ಮ ಬಂಧು ಮಿತ್ರಾದಿಗಳಿಗೆ ದಯವಿಟ್ಟು ದೇವಿ ಹಾಕಿಸಿಕೊಳ್ಳುವದರಲ್ಲಿ ಚನ್ನಾಗಿ ಎಚ್ಚರಿಸಿ ಮಕ್ಕಳಿಗೆ ದೊಡ್ಡವರ್ಗ ಬಾರದಂತೆ ಅಕ್ಕರೆ ವಹಿಸುವದಲ್ಲದೆ ದೊಡ್ಡವರ ಶರೀರ ಆರೋಗ್ಯಸ್ಥಿತಿಯನ್ನು ಕಾಪಾಡಿಕೊಳ್ಳುವದಕ್ಕೂ ಈಗಲೇ ಗಮನ ಕೊಡುವರೆಂದು ಅತ್ಯಂತ ವಿಧೇಯನಾಗಿ ಪ್ರಾರ್ಥಿಸುತ್ತೇನೆ.

ದೊಡ್ಡಬಳ್ಳಾಪುರ — ಯರ‍್ರಪ್ಪ,

—೦—೫—೧೯೦೬ — ವ್ಯಾಕ್ಸಿನೇಟರ್

ತಾಲ್ಲೋಕು ವರ್ತಮಾನಗಳು.

ಮಂಡ್ಯ.—ಕಳೆದ ವಾರ ಇಲ್ಲಿ ೨—೩ ದಿವಸ ಸ್ವಲ್ಪ ಮಳೆ ಬಂದಾಗ್ಯೂ ಬಿಸಿಲು ಇನ್ನೂ ಜೋರಾಗಿಯೇ ಇದೆ. ಸೆಕೆ ಬಹಳ, ಪ್ಲೇಗ್ ವ್ಯಾಧಿಯು ದಿನದಿನಕ್ಕೆ ಜಾಸ್ತಿಯಾಗುತ್ತಲಿದೆ ಇದುವರಿಗೂ ಮಳೆಗಾಲ ಸಮೀಪವಾಯಿತಲ್ಲಾ ಎಂದು ಕಳೆದ ವೇಟೆಯ ವರ್ತಕರೂ, ಚಿಲ್ಲರೆ ಅಂಗಡಿ ವ್ಯಾಪಾರಸ್ಥರೂ ಊರು ಬಿಡಲು ಅಪೇಕ್ಷೆಯಾಗಿರಲಿಲ್ಲ. ಆದರೆ ಕಾಯಿಲೆ ಜಾಸ್ತಿಯಾಗುತ್ತಾ ಬಂದದ್ದರಿಂದ ಆದರ ಸೋಂಕಿರುವ ಹಾಗೆ ಎಲ್ಲರೂ ಕೆಲವು ದಿನಗಳ ಮಟ್ಟಿಗಾದರೂ ಊರು ಬಿಟ್ಟು ಗುಡಿಸಲುಗಳಲ್ಲಿ ವಾಸಮಾಡಬೇಕೆಂದು ಯೋಚಿಸಿರುತ್ತಾರೆ. ಈ ಕಾ

...ಬಡಜನರಿಗೆ ತುಂಬಾ ಕಷ್ಟ. ಕಾಯಿಲೆಯ ಬೇಸೆಯಿಂದ ಇಲ್ಲಿನ ...ಸು ತಾಲ್ಲೂಕ್ ಕಚೇರಿ ಎದುರಿಗೆ ಇರುವ ಸರ್ಕಾರಿ ಕಟ್ಟ ...ವಾರ್ಗಿಯಾಗಿದೆ — ಈಗ್ಗೆ ೧೫ ದಿವಸಗಳ ಕೆಳಗ ಇಲ್ಲಿನ ಎಕ್ಸೈ... ಅಸಿಸ್ಟೆಂಟ್ ಇನ್ಸ್ಪೆಕ್ಟರು ತಾ. ಕಚೇರಿಗೆ ಹೋಗಿ ವಾಪಸು ಬರು ...ವಾಗ ಆ ಇಲಾಖಾ ಇನ್ಸ್ಪೆಕ್ಟರಿಗೂ ಅವರಿಗೂ ದಾರಿಯಲ್ಲಿ ವಾ... ...ವಾದಾತೆಂತಲೂ ಇದರಿಂದ ಅನೇಕರಿಗೆ ಮನಸ್ತಾಪ ಉಂಟಾ... ಈ ವಿಷಯ ಇಲಾಖಾ ಸಬ್ ಡಿವಿಜನ್ ಆಫೀಸರ ತನಿಕೆ... ...ಎಂತಲೂ ಕೇಳುತ್ತೇನೆ.

ಚಾಮರಾಜನಗರ.—ಈ ಕಡೆ ೨—೩ ದಿನ ಒಳ್ಳೇ ...ದ ಮಳೆ ...ತು ಹೊಲಗಳೆಲ್ಲ ಬಿತ್ತನೆ ಕೆಲಸಗಳನ್ನು ಸಂಭ್ರಮದಿಂದ ನಡಸ ...ರು ಆದರೆ ಕೆರೆ ಕುಂಟೆಗಳಿಗೆ ಮಾತ್ರ ನೀರು ಸರಿಯಾಗಿ ಬರ... ಕಾಲ್ನಡೆಗಳಿಗೆ ಕಾಲು ಬಾಯಿ ವ್ಯಾಧಿ ತೋರಿದರೆ ಉಂಟು... ಮ್ಯುನಿಸಿಪಾಲಿಟಿಯವರು ಲಾಂದ್ರಗಳನ್ನು ತೆಗೆಸಿ ಇಟ್ಟಿದ್ದಾರೆ. ...ಸಲ್ಲಿ ನಿಗಾ ಕೊಡಬೇಕು. ಎರಡು ಮೂರು ದಿವಸಗಳ ಹಿಂದೆ ...ಯಲ್ಲಿ ಶ್ರೀ ...ರೆಯವರಿಗೂ ಮುಸಲ್ಮಾನರಿಗೂ ಮಾರಾಮಾರಿ ...ತು ಶ್ರೀ ... ವಾಸನಮಾಡಿಕೊಂಡು ತುರುಕರ ಮಸೀದಿ ...ಹೋದದ್ದೇ ಕಾರಣವೆಂದು ತಿಳಿಯಬರುತ್ತೆ. ವಿವರವೆಲ್ಲಾ ...ತಿಳಿಯಬೇಕಾದ್ದಾಗಿದೆ ಎಂಬುದೇ.

...ವನಹಳ್ಳಿ.—ಇತ್ತ ಕಡೆ ಮಳೆ ಇಲ್ಲ. ದವಸಗಳ ಧಾರಣೆ ಬಹಳ ...ಗಿ ಬಡಬಗ್ಗರ ಜೀವನವು ತುಂಬಾ ಕಷ್ಟದಲ್ಲಿದೆ. ಈ ಊರಿನಲ್ಲಿ ...ಟ ಮುನಿಸಿಪಾಲಿಟಿಯವರು ತಮ್ಮ ಕುಮಾರನಿಗೆ ...ರದಲ್ಲಿ ಲಕ್ಷ್ಮಣಾದಿ ಸಾವಿರಾರು ಬಡಜನಗಳಿಗೆ ಅನ್ನ ...ಸಂತರ್ಪಣೆ ಮಾಡಿದರು. ಅಲ್ಲಿರುವ ಸಬ್ ಡಿವಿಜನ್ ಶಾನೆ ಬರು ...ವಾದ ಅಧಿಕಾರಿಗಳು ಒಂದು ನೋಟ ಬಂದೂ ಸಂತೋಷಪ ... ವಸ್ತ್ರಕಾಲದಲ್ಲಿ ... ಸ್ತ್ರೀಯರೇ ಮುಂತಾದವರಿಗೆ ...ದಾನವು ದಕ್ಷಿಣೆ ... ಬಡಬಗ್ಗರಿಗೆ ಕೊಟ್ಟು ಸಂತೋಷಪ ...ದು ... ಆಗುತ್ತೆ. ಜನರು ಬುದ್ಧಿವಂತರಾದ ... ಸ್ತ್ರೀಯರನ್ನು ಶುಭಕಾರ್ಯಗಳಿಗೆ ಕರೆಸಿಕೊಳ್ಳ ...ಬೇಕೆಂದು

ಬೆಂಗಳೂರು.—ಈಗ ಬೆಂಗಳೂರು ಸಿಟಿ ಕೋಟೆ ಬಯಲ ... ಸ್ಟ್ರೀಟ್ ... ಸರ್ಕಸ್ ಎಂಬ ಹೆಸರಿನಿಂದ ಆಡುತ್ತಿರುವ ...ವರು ... ಚಮತ್ಕಾರವಾಗಿಯೂ ... ಆಶ್ಚರ್ಯಕರವಾಗಿ ...ಲಿ ಸಿಂಹ, ನರಿ, ಚಿರತೆ, ಕರಡಿ, ಆನೆ, ಕೋತಿ, ಕು... ...ರುವ ಪ್ರಾಣಿಗಳಿಂದ ಮನುಷ್ಯರಿಗಿಂತಲೂ ಹೆಚ್ಚಾಗಿ ...ರುವ ಸಾಹಸಗಳು ವರ್ಣಿಸಲು ಅಸಾಧ್ಯವಾಗಿದೆ ಎಲ್ಲಾ ...ಗಳನ್ನು ಒಂದೇ ಸಲ ಕೂಡಿಗೆ ಬಿಟ್ಟುಕೊಂಡು ಸ್ವಲ್ಪವಾ ...ಇಲ್ಲದೆ ಕಸರತ್ ಮಾಡಿಸುವ ಒಬ್ಬ ಯೂರೋಪ್ಯ... ...ಮತ್ತು ಒ... ಚಿಕ್ಕ ವಯಸ್ಸಿನ ಲೇಡಿಯ ಸಾಮರ್ಥ್ಯವನ್ನು ...ಕೊಂಡಾಡತಕ್ಕದ್ದಾಗಿದೆ. ಇದುವರೆಗೆ ಈ ರೀತಿಯಾದ ಸಾಮ ...ಷ್ಟು ತೋರಿಸಿದವರು ಯಾರೂ ಇಲ್ಲ. ... ಸ್ಥಳ ...ನೆಲದ ಮೇಲೆ ಸಹಾ ಜನರು ಕುಳಿತುಕೊಂಡು ನೋಡಲು ...ದೆ ... ಬೆಂಗಳೂರಿನ ಅಧಿಕಾರಿಗಳೂ ಸಂತೋಷ ಸಮೇತ ...ಬರುತ್ತಿದಾರೆ. ಸಿಂಹಕ್ಕೆ ಆನೆಗೂ ವೈರವೆಂದು ಎಲ್ಲರಿ... ...ರದ್ದು ಅಂಥಾ ವೈರವನ್ನು ಬಿಟ್ಟು ಆನೆಯೊಂದಿಗೆ ...ಗಳ ... ಸಿಂಹಗಳು ಮೇಳ್ಯಂತ ... ಹಾಗೆ ...ಳ ... ಸಾಹಸಗಳನ್ನು ಮಾಡುವವು. ಇದು ...ನೋಡುತ್ತ ... ಬಲಿಯನ್ನು ಅದರ ... ಒಡನ್ನು ಸ್ವಲ್ಪ ... ಸಾಧ್ಯವೆಂದಿಗೆ ... ನಂತರ ... ಮೇಲೆ ಕೂಡಿಸಿ, ಆ ಮೇಲೆ ಅದನ್ನು ನಾ... ...ಸಾಕಿದವರು ... ಕರೆದುಕೊಂಡು ಹೋಗುವ ...ನಿರ್ಭಯವಾಗಿ ಇಬ್ಬರು ಕರೆದುಕೊಂಡು ಹೋಗುತ್ತಾರೆ. ...ಮುಖ್ಯ ಈ ರೀತಿ ಕರೆದುಕೊಂಡು ಹೋಗುವುದು ತುಂಬಾ ...ವ ಕೆಲಸ ಈ ರೀತಿ ಯಾರೂ ನೋಡಿರಲಿಲ್ಲ. ಇವರು ...ವಲ್ಲಿ ನೈಸೂರಿಗೆ ಹೋಗಿ ಅಲ್ಲಿನ ಪ್ರಜೆಗಳಿಗೆ ತುಂಬಾ ಆ ...ಸುವವರಾಗಿದಾರೆ.—ಈ ತಿಂಗಳ ... ನೇ ತಾರೀಖಿನಲ್ಲಿ ಯಂ ...ಲವಾರ ಎಲ್ಲಾ ಆಫೀಸುಗಳು ಮತ್ತು ಸ್ಕೂಲುಗಳಿಗೆ ...ರಜಾ. ಅಲ್ಲದೆ ಆ ದಿನ ಎಲ್ಲಾ ಸ್ಕೂಲಿನವರೂ ಬಹಳ ...ದ ಆಟಪಾಟಗಳು ಆಡುತ್ತಲೂ ಸಾರ್ವಭೌಮರವರ ಶ್ರೀ... ...ಗಳನ್ನು ಹಾಡುತ್ತಲೂ ಬಹಳ ಸಂತೋಷ ...ಕೆಂದು ಮೈಸೂರು ಗವರ್ನಮೆಂಟ್ ಹುಕುಂ ಆಗಿರುವುದು ...ಗಳು.—ಇಲ್ಲಿನ ಮುನಿಸಿಪಾಲಿಟಿ ಕೆಲವು ಕಡೆ ರಸ್ತೆಯೂ ಅನೇಕ ಭಾಗಗಳಲ್ಲಿ ಗಲೀಜಾಗಿಯೂ ಇದೆ. ಈ ಟವನ್ನಿನ ...ರುವುದರಿಂದ ನೀರಿಗೆ ಅಷ್ಟೇನೂ ಕೊರತೆ ಕಾಣಲಿಲ್ಲ ...ತಾಲ್ಲೂಕಿನ ಕೆಲವು ಗ್ರಾಮಗಳಲ್ಲಿ ದನಕರುಗಳಿಗೆ ನೀರಿ... ...ಕಷ್ಟಪಟ್ಟವು. ಅಂಥಾ ಕಾಲದಲ್ಲಿ ಬಿದಿನಿಗೆರೆ ಎಂಬ ...ಉಮ್ಮರ್ ಖಾನ್ ಸಾಹೇಬರೊಂದಿಗೆ ದಾರಿಗೆ ಜವಳಿ ... ...ವ ಬಿದಿರ್ಯನ ರಂಗಣ್ಣನು ಅರವಟ್ಟಿಗೆ ಇಟ್ಟು ಬೆಂಗ ...ದಲ್ಲಿ ತಿರುಗಾಡುವ ಜನರಿಗೆ ಸಹಾಯ ಮಾಡಿದರು — ...ಕಳೆದ ಮೂರು ವರ್ಷಗಳಂತೆಯೇ ಮೇ ೧೩ರಲ್ಲಿ ವಿಶ ...ಮಳೆ ಬಂದು ಅನೇಕ ಮರಗಳನ್ನು ಮುರಿದು ಹುಲ್ಲು ...ಗಳನ್ನು ಕೆಡವಿ ಬಹಳ ನಷ್ಟಮಾಡಿತು ೧೪ ನೇ ದಾ ...ಸಲ್ಲಿ ...ಬಂತು. ಎಲ್ಲಾ ೩ ಅಂಗುಲ ಚಿಲ್ಲರೆ ಮಳೆ ಬಿದ್ದ ಹಾಗಾ ...ಎಲ್ಲೆಲ್ಲಿಯೂ ನೀರು ನಿಂತಿರುವುದರಿಂದ ದನಕರುಗಳು ಕುಡಿ... ...ಮಾರ್ಗವಾಗಿ ಘಾಮಿ ತಂಪೇರಿದೆ.—ಈ ಟವನಿನ ಜನಗ... ...ದ ಸುಮಾರು ೨೦೦ ಎಕರೆ ಜಮೀನನ್ನು ಕುಮುದ ಲೈನಿಗೆ ...ವಿದರಿಂದ ... ಜಮೀನಿನ ... ...

೩೦೦ ಜನರು—ತಮ್ಮ ಜೀವನ ಹೋಯಿತಲ್ಲಾ. ತಾವು ದೇಶಭ್ರಷ್ಟರಾಗಿ ಹೋಗುವ ಗತಿಯಾಯಿತಲ್ಲಾ. ತಮ್ಮ ಹೆಂಗಸರು ಮಕ್ಕಳನ್ನು ಯಾವ ಕಾಡಿಗೆ ಕರೆದುಕೊಂಡು ಹೋಗೋಣಪ್ಪಾ. ನಮ್ಮ ಶ್ರೀಮನ್ ಮಹಾರಾಜರಿಗೆ ಬಡ ಜನರಾದ ನಮಗಿಂತಲೂ ಕುದುರೆಗಳು ವಿಶೇಷ ವಾದವಲ್ಲಾ ಎಂದು ಕೆಲವರು ಯಾವ ಕಡೆ ಹೋದರೂ ನಿಟ್ಟುಸಿರು ಬಿಡುತ್ತಾ ಗೋಳಾಡುತ್ತಾರೆ. ಈ ಸ್ಥಳದಲ್ಲಿ ಜಮೀನು ಸಿಕ್ಕುವದೇ ಇಲ್ಲ. ಇವರೆಲ್ಲರೂ ಈ ಊರನ್ನೇ ಬಿಡಬೇಕಾಗಿದೆ ಬಹು ಕಾಲದಿಂದ ಮನೆಗಳನ್ನು ಕಟ್ಟಿಕೊಂಡು ಇಲ್ಲಿ ವಾಸಸ್ಥರಾಗಿದ್ದ ಈ ಜನರ ಗೋಳನ್ನು ನೋಡುವದಕ್ಕೆ ಯಾರಿಂದಲಾದೀತು! ದಯಾಳು ಸರ್ಕಾರದವರು ಇವರಿಗೆಲ್ಲಾ ತಕ್ಕ ಸಹಾಯ ಮಾಡಿ ಆದರಿಸುವರೆಂದು ಪ್ರಾರ್ಥಿಸುತ್ತೇನೆ—ಈ ತಾಲ್ಲೂಕಿಗೆ ಸೇರಿದ ಬಿದನೆಗೆರೆಯಲ್ಲಿ ಮದ ...ಹಾಸ್ ಕಣಿಯ ವೈದ್ಯ ಲಿಂಗಾಚಾರಿ ಎಂಬುವ ಅಕ್ಕಸಾಲಿಗನು ೬ ವರುಷಗಳಿಂದಲೂ ನಂಬಿಕೆ ತೋರಿಸಿ ೧,೫೦೦ ರೂಪಾಯಿಗಳ ಮಾಲುಗಳನ್ನು ಎತ್ತಿಹಾಕಿಕೊಂಡು ಕಾಲಿಗೆ ಬುದ್ಧಿ ಹೇಳಿದನು. ಇಲ್ಲಿನ ಮಾಲನ್ನು ಕಳೆದುಕೊಂಡವನೊಬ್ಬನು ರೈಲ್ ಚಾರ್ಜ್ ಇಟ್ಟುಕೊಂಡು ಆಸಾಮಿಯನ್ನು ಪತ್ತೆಮಾಡಲು ಅಲ್ಲಿಯೂ ಈ ಮನುಷ್ಯನಿಗೆ ನಂಬಿಕೆ ತೋರಿಸಿ ಅವನ ಸಂಗಡ ಮೂರು ದಿನಗಳಿದ್ದು ಅಲ್ಲಿಂದಲೂ ಪರಾರಿಯಾದದ್ದನ್ನು ಇಲ್ಲಿಂದ ಹೋದವನು ನೋಡಿ ಆ ದಗಾಕೋರನನ್ನು ಮೆಚ್ಚಿ ನೆನಸಿಕೊಳ್ಳುತ್ತಾ ತನ್ನ ಊರಿನ ಕಡೆ ಮುಖ ತಿರುಗಿಸಿ ನಿಟ್ಟುಸಿರು ಬಿಡುತ್ತಾ ಇದಾನೆ.—ಇಲ್ಲಿನ ವೈದ್ಯ ಇಲಾಖೆ ಉತ್ತಮವಾದ ಸ್ಥಿತಿಯಲ್ಲಿದೆ ಅನೇಕ ಗ್ರಾಮಸ್ಥರು ನಂಬಿಕೆಯಿಂದ ಬಂದು ಔಷಧಿ ಸೇವಿಸಿ ಗುಣಹೊಂದುತ್ತಿರುವದರಿಂದ ಕರ್ನಾಟಕ ವೈದ್ಯರೂ ಯುನಾನಿ ಪಂಡಿತರೂ ಹಿಂದು ಬೀಳುತ್ತಾ ಇದಾರೆ. ಇವರಲ್ಲಿ ವಸಂತಪ್ಪನೆಂಬುವನು ಹಣದಾಸೆಯಿಲ್ಲದೆ ವೈದ್ಯ ಮಾಡುವದರಿಂದ ಕೀರ್ತಿ ಪಡೆದಿದಾರೆ—ಈ ಊರಿಗೆ ತಂಟಪ್ಪಾಲ್ ಬರುವದರಿಂದ ಇಲ್ಲಿ ಕೆಲವು ವರ್ಷಗಳಿಂದಲೂ ಜನರ ಪ್ರೀತಿಗೆ ಪಾತ್ರರಾಗಿರುವ ಪೋಸ್ಟ್ ಮೇಷ್ಟರನ್ನು ಎಲ್ಲಿ ವರ್ಗಮಾಡುವರೋ ಎಂದು ಜನರೆಲ್ಲಾ ಚಿಂತಿಸುತ್ತಿದಾರೆ

ಇಂಡಿಯಾ ದೇಶದ ವೃತ್ತಾಂತಗಳು.

ಕಳೆದ ವಾರ ಸಿಂಲಾ ಪಟ್ಟಣದಲ್ಲಿ ಸಾಯಂಕಾಲ ೫ ಗಂಟೆಯಲ್ಲಿ ಭೂಕಂಪವಾಯಿತು ಕೆಲವು ಕಟ್ಟಡಗಳು ಅಲ್ಲಾಡಿದರೂ ಒಂದೂ ಬೀಳಲಿಲ್ಲ.

✤✤✤✤

ಮದರಾಸ್ ಪಟ್ಟಣದಲ್ಲಿ ಪ್ಲೇಗನ್ನು ತಡೆಯುವದಕ್ಕೆ ಇಲಿ ಹೆಗ್ಗಣಗಳನ್ನು ಇದಾಂಕೋಟ್ಟು ಕೊಲ್ಲಿಸಲಾರಂಭಿಸಿದ್ದಾರೆ. ಇದುವರೆಗೆ ೫೧,೦೦೦ ಇಲಿ ಹೆಗ್ಗಣಗಳು ಸಂಹಾರವಾದವು

✤✤✤✤

ಉತ್ತರ ದೇಶದಲ್ಲೂ ಈ ಸಲ ಬಿಸಲಿನ ತಾಪ ವಿಶೇಷವಾಗಿರುವುದು ಜಾಕೋಬಾಬಾದಿನಲ್ಲಿ ಶೆಕೆಯು ನೆರಳಿನಲ್ಲಿ ೧೨೨ ಡಿಗ್ರಿ ಇದೆ ಎಂತಲೂ ಲಾಹೋರಿನಲ್ಲಿ ೧೧೫ ಡಿಗ್ರಿ ಇದೆ ಎಂತಲೂ ಪ್ರಕಟವಾಗಿದೆ

✤✤✤✤

ಪ್ಯಾಲಿಚ್ಪುರದಲ್ಲಿ ರೇವಿಯೆ ಸ್ಟೇಷನಿನಲ್ಲಿ ಸಾಹುಕಾರನ ಆಳು ಯುನೂ ನಿಂತು ಡಿಟಿಲ್ಲಾ ನೋಡಬೇಕೆಂದು ಬೆಂಕಿ ಕಡ್ಡಿಯನ್ನು ಗೀಚಿದನು. ಅದು ಆಕಸ್ಮಾತ್ತಾಗಿ ಕೈಯಿಂದ ತಪ್ಪಿ ಯಿನ್ನಾಯಿಳಕ್ಕೆ ಬಿದ್ದು ಕೊಂಡಿತು ಕೂಡಲೆ ಯನ್ನಾಯಲ್ಲಾ ಏಕಕಾಲದಲ್ಲಿ ಹತ್ತಿಕೊಂಡು ಮಹಾ ಬೆಟ್ಟದೊಡನೆ ದಾರಿ ಅನಾಹುತವಾಯಿತು. ಇದರಿಂದ ಇಬ್ಬರು ಸತ್ತು ಹೋದರು, ಇನ್ನಿಬ್ಬರಿಗೆ ಸ್ವಲ್ಪ ಸುಟ್ಟ ಗಾಯಗಳಾಗಿವೆ

✤✤✤✤

ಕೋಲಾರಗೆ ಸೇರಿದ ಯಮಿನಾಲ್ಮಾಡು ತಾಲ್ಲೂಕಿನಲ್ಲಿ ರುವ ರೈತ ಪ್ರಜೆಗಳು ವೀರರಾಜೇಂದ್ರ ಪೇಟೆಯಲ್ಲಿ ಕೂಟನೆ ನಡೆ ಸೇರಿ ರೈಲ್ ರಸ್ತೆ ಹಾಕುವ ವಿಚಾರವನ್ನು ಕುರಿತು ಚರ್ಚೆ ಮಾಡಿ. ಕೊಡಗಿನ ಮೇಲೆ ರೈಲ್ ಹಾಕುವದಾದರೆ ರೈಲ್ವೆ ಉತ್ಪತ್ತಿಯಲ್ಲಿ ಅದರ ಬಡ್ಡಿಗೆ ಸಾಲದೆ ಹೋಗುವಷ್ಟು ಹಣವನ್ನು ಪ್ರಜೆಗಳೆಲ್ಲಾ ಸೇರಿಗೆ ರೂಪದಲ್ಲಿ ಹಂಚಿಕೊಂಡು ಕೊಡುವದಾಗಿ ತೀರ್ಮಾನಿಸಿ, ಗವರ್ನಮೆಂಟಿಗೆ ಅರಿಕೆ ಮಾಡಿರುತ್ತಾರೆ.

✤✤✤✤

ಉತ್ತರ ದೇಶದ ಪ್ಲೇಗು ಬಾಧೆಯು ಇನ್ನೂ ಕಡಿಮೆಯಾಗಿಯೇ ಇರುವುದು. ಸಂಯುಕ್ತ ಅಧಿಪತ್ಯಗಳಲ್ಲಿ ೧,೬೪,೦೦೦; ರಾಜಪುಟಾನಾ ೯೫,೩೭೦, ಮಧ್ಯ ಇಂಡಿಯಾ ೧,೦೫,೭೫೦, ಬೊಂಬಾಯಿ ಅಧಿಪತ್ಯ ೮೧,೧೮೫—ಈ ರೀತಿ ೩,೫೫೬,೭೫೦ ಜನರು ಪ್ಲೇಗು ಬಾಧೆಗೆ ಸಿಕ್ಕಿ ನರಳುತ್ತಿರುವರು ಒಟ್ಟು ಸಂಖ್ಯೆಯಲ್ಲಾ ಇಷ್ಟೇ ಅಲ್ಲ. ಕೆಲವು ಅಧಿಪತ್ಯಗಳಿಂದ ಪ್ಲೇಗುಪೀಡಿತರ ಸಂಖ್ಯೆ ಇಷ್ಟೆಂದು ರಿಪೋರ್ಟು ಬರಲಿಲ್ಲ.

✤✤✤✤

ಲಾಹೋರ್ ಪಟ್ಟಣದಲ್ಲಿರುವ ಸರ್ಕಾರಿ ವೈದ್ಯ ವಿದ್ಯಾಶಾಲೆಯಲ್ಲಿ ಸುಮಾರು ೩೦೦ ಹುಡುಗರು ವಿದ್ಯೆ ಕಲಿತುಕೊಳ್ಳುತ್ತಿದಾರೆ. ಇವರನ್ನು ಉಪಾಧ್ಯಾಯರು ಸರಿಯಾಗಿ ಆಳಲಿಲ್ಲವೆಂದು ಗಲಭೆಯುಂಟಾಗಿದೆ. ಸುಮಾರು ೭೦೦ ಮಂದಿ ಬಾಲಕರು ವಿದ್ಯಾಶಾಲೆಯನ್ನು ಏಕಕಾಲದಲ್ಲಿ ಬಿಟ್ಟು ಉಪಾಧ್ಯಾಯರುಗಳ ಮೇಲೆ ಅರ್ಜಿ ಬರೆದು ಎಲ್ಲರೂ ರುಜು ಹಾಕಿ ಗವರ್ನಮೆಂಟಿಗೆ ಒಪ್ಪಿಸಿ, ಅವರ ಅಪ್ಪಣೆಯನ್ನು ನಿರೀಕ್ಷಿಸುತ್ತಿದಾರೆ

✤✤✤✤

ಹಿಂದುಸ್ಥಾನದ ವೈಸ್‌ರಾಯರಾಗಿದ್ದ ಲಾರ್ಡ್ ಕರ್ಜನ್ ಪ್ರಭುಗಳು ಆಗ್ರಾಪಟ್ಟಣದಲ್ಲಿ ರುವ ತಾಜ್ ಮಹಲ್ ಎಂಬ ಲೋಕಪ್ರಸಿದ್ಧವಾದ ಕಟ್ಟಡದ ಮೇಲೆ ತುಂಬಾ ಪ್ರೀತಿಯಿಟ್ಟು, ಅದರೊಳಗೆ ಕಟ್ಟುವಂಥಾ ಬಹು ಅಂದವಾದ ಮತ್ತು ಬೆಲೆಯುಳ್ಳ ಕಂದೀಲು ಗುಳೊಪ್ಪುಗಳನ್ನು ... ಈ ದೀಪಗಳು ಲಾಹೋರಿನ ಕಾರ್ಖಾನೆಯಲ್ಲಿ ಸಿದ್ಧವಾಗುತ್ತಾ ಬಂದಿವೆ. ಈ ಕಂದೀಲು ಗುಳೊಪ್ಪುಗಳು ಆ ಕಟ್ಟಡಕ್ಕೆ ಯೋಗ್ಯವಾಗಿರುವವು.

✤✤✤✤

ಕಳೆದ ೧೨ ನೆ ತಾರೀಖಿಗೆ ಆಖೈರಾದ ಏಳು ದಿನಗಳಲ್ಲಿ ಹಿಂದುಸ್ಥಾನದೊಳಗೆ ೧೩,೭೬೬ ಜನರಿಗೆ ಪ್ಲೇಗ್ ತಗಲಿತು; ೧೧,೬೦೬ ಜನರು ಆ ಉಪದ್ರದಲ್ಲಿ ಸತ್ತರು ಅಂದರೆ ಹಿಂದಿನ ವಾರದ ಮರಣಸಂಖ್ಯೆಗಿಂತ ೨,೦೦೦ ಕಡಿಮೆ. ಬೇರೆ ಬೇರೆ ಕಡೆಗಳ ಸಂಖ್ಯೆ ಎಷ್ಟೆಂದರೆ—ಬೊಂಬಾಯಿ ಮತ್ತು ಸಿಂಧು ೧,೩೬೧; ಮದರಾಸ್ ೪; ಬಂಗಾಳಾ ೪೩೭; ಸಂಯುಕ್ತ ಅಧಿಪತ್ಯಗಳು ೧೭೬೧; ಪಂಜಾಬ್ ೭,೮೯೬; ಬಿಹಾರ್ ೧೭೫, ಮಧ್ಯಪ್ರಾಂತ್ಯಗಳು ೩೧; ಮಧ್ಯ ಇಂಡಿಯಾ ೩೭, ರಾಜಪುಟಾನಾ ೩೬.

✤✤✤✤

ಅಲಹಾಬಾದ್ (ಪ್ರಯಾಗ) ದಿಂದ ೩೬ ಮೈಲಿ ಈಚೆ ನಾಲ್ಕೂವರೆ ಎಂಬ ಸ್ಟೇಷನ್ ಬಳಿ ರೈಲ್ ಕಂಬಿಗಳ ಮೇಲೆ ಉದ್ದಲಾಗಿ ಹಗಲು ಹೊತ್ತಿನಲ್ಲೇ ಯಾರೋ ಭಾರೀ ಕಲ್ಲುಗಳನ್ನು ಹಾಕಿದ್ದರು ಗಾಡಿಯನ್ನು ಕೆಡವಿ ಅನಾಹುತ ಮಾಡಬೇಕೆಂಬುದೇ ಅವರ ಉದ್ದೇಶವೆಂದು ಕಾಣುತ್ತದೆ. ಆದರೆ ಗಾಡಿ ನಡೆಸುವವನು ದೂರದಿಂದಲೇ ಈ ಅಟಂಕವನ್ನು ಕಂಡು, ಅಪಾಯವಾಗದಂತೆ ಅಲ್ಲಿ ಗಾಡಿ ನಿಲ್ಲಿಸಿ ಬಿಟ್ಟನು. ಆದರೂ ಇಂಜಿನ್ ಗಾಡಿಯ ಮುಂಭಾಗವು ಸ್ವಲ್ಪ ಮುರಿದು ಹೋಯಿತು ಇನ್ನೇನೂ ಅಪಾಯವಾಗಲಿಲ್ಲ. ಪೋಲೀಸಿನವರು ತನಿಖೆ ಮಾಡುತ್ತಿದಾರೆ.

✤✤✤✤

ಬಿಹಾರ್‌ದಲ್ಲಿ ಕರೆನ್ಸಿ ನೋಟುಗಳು ಕಳುವಾದ ಸಂಗತಿಯನ್ನು ತಿಳಿಸುವ ಸಂದರ್ಭದಲ್ಲಿ ಅಲ್ಲಿನ ಒಂದು ಪತ್ರಿಕೆಯು ಹೇಳುವುದೇನೆಂದರೆ—ನೋಟುಗಳನ್ನು ಯಾರು ಯಾವ ಗಳಿಗೆಯಲ್ಲಿ ಕೊಟ್ಟರೂ ಅವುಗಳಿಗೆ ಪೂರಾ ಹಣವನ್ನು ಆ ಕೂಡಲೇ ಕೊಡುತ್ತೇವೆಂದು ಇಂಡಿಯಾ ಗವರ್ನಮೆಂಟಿನವರು ಆ ನೋಟುಗಳ ಮೇಲೆ ಬರೆಸಿರುತ್ತಾರಲ್ಲವೋ? ನೋಟು ತೋರಿಸಿದರೆ ಹಣ ಕೊಡುವುದಿಲ್ಲವೆಂದು ತಿರಸ್ಕರಿಸುವುದಕ್ಕೆ ಯಾರಿಗೆ ತಾನೇ ಧೈರ್ಯ ಬಂದೀತು? ಅಥವಾ ಹಣ ಕೊಡಕೂಡದೆಂದೂ ಯಾರೂ ಅಪ್ಪ ಣೆ ಹಾಕಕೂಡದು. ಕರೆನ್ಸಿ ಇಲಾಖೆಯವರು ನೋಟು ತೆಗೆದುಕೊಂಡು ಅದನ್ನು ಕೊಟ್ಟವರ ಹೆಸರು ಮುಂತಾದ್ದನ್ನು ಬರೆದಿಟ್ಟುಕೊಂಡು ಹಣ ಕೊಡಬೇಕಲ್ಲದೆ ಅವರಿಂದ ಇನ್ನೇನೂ ಆಗಲಾರದು. ನೋಟು ಕಳೆದುಕೊಂಡವನು ಏನು ಬೇಕಾದರೂ ಮಾಡಿಕೊಳ್ಳಬಹುದು. ನೋಟಿಗೆ ಹಣಕೊಡದೆ ತಡೆಯುವುದೂ ಅಂಚೆಯನ್ನು ಊರಿಂದೂರಿಗೆ ಸಾಗದಂತೆ ಅಡ್ಡಿಮಾಡುವುದೂ ಒಂದೇ ಆಗೀತು.

✤✤✤✤

ಹೈದರಾಬಾದಿನಲ್ಲಿ ಬಹುದೇಶದ ನಾಣ್ಯಗಳೇ ಚಲಾವಣೆಯಲ್ಲಿರುವುದರಿಂದ ಇಂಡಿಯಾಗವರ್ನಮೆಂಟ್ ರೂಪಾಯಿನ ಬೆಲೆ ನಿಶ್ಚಯಿಸುವುದು ವಿಸ್ಮಯರ್ದಾರೆ ಇದುವರೆಗೆ ಜನರು ತುಂಬಾ ನಷ್ಟಪಡುತ್ತಿದ್ದರು ಚಿಲ್ಲರೆ ಕೊಡುವ ವರ್ತಕರಿಗೆ ಈ ವಿಚಾರದ ತುಂಬಾ ಅನುಕೂಲವಾಗಿತ್ತು. ಈ ರೀತಿ ಬಹು ಕಾಲದಿಂದ ಜನರು ತಮಗುಂಟಾಗುತ್ತಿರುವ ನಷ್ಟವನ್ನು ಕುರಿತು ಗವರ್ನಮೆಂಟಿನವರಿಗೆ ಅನೇಕ ವೇಳೆ ಅರಿಕೆ ಮಾಡುತ್ತಲೂ ಇದ್ದರು. ಕಳೆದ ವಾರ ನೈಜಾಂ ಗವರ್ನಮೆಂಟಿನವರು ಒಂದು ಇಸ್ತಿಹಾರು ಹಾಕಿಸಿ, ಇನ್ನು ಮುಂದೆ ರೂಪಾಯಿಗೆ ೧೬ ಅಣೆಗಳಂತಲೂ ೬೪ ಗುಂಡಗಳಂತಲೂ ಚಿಲ್ಲರೆಯನ್ನು ನಿಬಂಧನೆ ಪ್ರಜೆಗಳಿಗೆಲ್ಲಾ ತಿಳಿಯಪಡಿಸಿರುತ್ತಾರೆ ಇದನ್ನು ನೋಡಿ ಇದುವರೆಗೆ ಲಾಭಪಡೆಯುತ್ತಿದ್ದ ವರ್ತಕರೆಲ್ಲಾ ಗೋಳುಗುಟ್ಟಲಾರಂಭಿಸಿರುವುದೇನೂ ಆಶ್ಚರ್ಯವಲ್ಲ. ಅಂತು ಗವರ್ನಮೆಂಟಿನವರು ಬಂಧಿತವಾದಂಥಾ ಈ ಹುಕುಂ ಕೊಟ್ಟಿರುವುದು ಸಕಲ ಪ್ರಜೆಗಳಿಗೂ ಸಂತೋಷವನ್ನುಂಟು ಮಾಡಿದೆ

✤✤✤✤

ಪೂರ್ವ ಬಂಗಾಳಾ ಎಂಬ ಹೊಸ ಅಧಿಪತ್ಯಕ್ಕೆ ಸೇರಿದ ಮೈಮನ್‌ಸಿಂಗ್ ಪಟ್ಟಣದಲ್ಲಿ ಹಿಂದುಗಳಿಗೂ ಮಹಮದೀಯರಿಗೂ ಲೋಚ ವಾರ ದೊಂಬಿ ಕಲಹಗಳು ನಡೆದವು. ಈ ಕಲಹಗಳಿಗೆ ಮಹಮ್ಮದೀಯರು ಹೇಳುವ ಕಾರಣಗಳೇನೆಂದರೆ—ಈಶ್ವರಗಂಜ್ ಎಂಬ ಸ್ಥಳದಲ್ಲಿರುವ ಹಿಂದೂ ಜಮೀನ್ದಾರರು ತಮ್ಮ ಜೀತಗಾರರಾದ ಮಹಮ್ಮದೀಯರನ್ನು ಸ್ವದೇಶೀ ಪಕ್ಷಕ್ಕೆ ಸೇರಬೇಕೆಂದು ಬಲಾತ್ಕಾರ ಮಾಡಿಸಿ, ಪರದೇಶಗಳಿಂದ ಬರುವಂಥಾ ಪದಾರ್ಥಗಳನ್ನು ಕೊಂಡುಕೊಳ್ಳುವುದಿಲ್ಲವೆಂದು ಅವರಿಂದ ಕರಾರು ಬರೆಸಿಕೊಂಡರು ಸಾಲ ಕೊಡುವ ಹಣಗಾರರು ಮಹಮದೀಯರಿಗೆ ಸಾಲ ಕೊಡುವುದಿಲ್ಲವೆಂದೂ, ವಕೀಲರು ಮೊಖದ್ದಮೆಗಳನ್ನು ನಡಸುವುದಿಲ್ಲವೆಂದೂ ಆರಸ್ತರಿಸಿದರು ಇಷ್ಟು ಮಾಡಿದ್ದೂ ಸಾಲದೆ ಹಿಂದುಗಳು ಡಿಸ್ಟ್ರಿಕ್ಟ್ ಅಧಿಕಾರಿಗಳಿಗೆ ತಂತೀ ವರ್ತಮಾನ ಕೊಟ್ಟು, ಮಹಮದೀಯರೆಲ್ಲಾ ತಮ್ಮ ಮನೆಗಳಿಗೆ ನುಗ್ಗಿ ಲೂಟಿ ಮಾಡುತ್ತಾರೆಂದು ಸುಳ್ಳು ಸುದ್ದಿಗಳನ್ನು ತಿಳಿಸಿದರು. ಅದು ನಿಜವೆಂದು ಕಂಡು ಬರುವಂತೆ ಜಮೀನ್ದಾರರು ತಮ್ಮ ಸೇವಕರನ್ನೇ ಕಳುಹಿಸಿ ಮಾರ್ಕೆಟ್ಟು ಅಂಗಡಿಮುಂಗಟ್ಟುಗಳನ್ನು ಲೂಟಿ ಮಾಡಿಸಿರುತ್ತಾರೆ ಎಂಬುದೇ. ಆದರೆ ಹಿಂದುಗಳು ಹೇಳುವ ಕಾರಣವೇನೆಂದರೆ—ಹಿಂದುಗಳನ್ನು ಗವರ್ನಮೆಂಟಿನವರು ತಮ್ಮ ಪ್ರಜೆಗಳಲ್ಲವೆಂದು ಇಸ್ತಿಹಾರು ಕೊಟ್ಟಿರುವಂತೆ ಪ್ರಕಾರ ಹುಟ್ಟಿರುವುದರಿಂದ ಮಹಮದೀಯರು ಅವರ ಮೇಲೆ ಬಿದ್ದು ನಾನಾ ಹಿಂಸೆಗಳನ್ನು ಮಾಡಲು ಅವಕಾಶವಾಗಿದೆ. ಅನೇಕ ಜನ ಮಹಮದೀಯರು ಅಂಗಡಿಮುಂಗಟ್ಟುಗಳನ್ನು ಲೂಟಿ ಮಾಡಿದಾರೆ ಎಂಬುದೇ. ಸರ್ಕಾರದವರು ಈ ವರ್ತಮಾನಗಳನ್ನು ಕೇಳಿದ ಕೂಡಲೇ ಪ್ರಶಾಂತಿಯನ್ನು ಕಾಪಾಡುವುದಕ್ಕೆ ಪೋಲೀಸ್ ಮೊದಲಾದ ಸಿಬ್ಬಂದಿಯನ್ನೂ ಸೈನಿಕರನ್ನೂ ಅಲ್ಲಿಗೆ ಕಳು...

ಇದನ್ನು ನೋಡಿದರೆ ನೀವು ಬಹು ಆಶ್ಚರ್ಯ ಪಡುವಿರಿ!!! 69-4

ನಮ್ಮ ಪ್ರಸಿದ್ಧವಾದ ಪುಸ್ತಕಭಂಡಾರದಲ್ಲಿ ಅನೇಕ ಸಹಸ್ರ ರೂಪಾಯಿನ ಕನ್ನಡ ಗ್ರಂಥಗಳೂ, ಶಾಲಾಪುಸ್ತಕಗಳೂ, ಪೇಪರ್, ಪೆನ್ಸಿಲ್, ನೋಟ್‌ಬುಕ್, ನಾನಾ ವಿಧವಾದ ಕಾಗದದ ಜೋಡಿ, ಗಳು, ವೃತ್ತಾಂತ ಪತ್ರಿಕೆ, ಮಹಿಳಾಸಖಿ, ಕನ್ನಡ ಗ್ರಂಥ ಮಿತ್ರ, ಪ್ರಾಗ್ರೆಸ್, ಹಾರ್ವೆಸ್ಟ್ ಫೀಲ್ಡ್ ಮುಂತಾದ ಪ್ರಸಿದ್ಧವಾದ ವರ್ತಮಾನ ಪತ್ರಿಕೆಗಳೂ ಇಲ್ಲಿ ಅನೇಕ ಸಾವಿರಗಟ್ಟಲೆಯಾಗಿ ಮಾರಾಟವಾಗುತ್ತವೆ. ಈ ಡಿಪೊ ಕಟ್ಟಡವು ರಾಜಧಾನಿಯಲ್ಲಿ ಬಹು ಪ್ರಸಿದ್ಧವಾದ ಸ್ಥಳ ಎಂದು ಮೈಸೂರು ದೇಶದಲ್ಲೆಲ್ಲಾ ಹೆಸರುಗೊಂಡಿದೆ. ಈ ಕೆಳಗೆ ನಮೂದಿಸಿರುವ ಪುಸ್ತಕಗಳನ್ನು ಸ್ವಲ್ಪ ನೋಡಿ.—

ಕಥಾಸಂಗ್ರಹ ೧ ರಿಂದ ೩ ಭಾಗಗಳು ಕ್ರಯ ೧—೮—೦
ವಿ. ಪಿ. ಪಿ. ಮೂಲಕ ೧—೩—೦
ಅನುಭವಸಾರ .. .. ಕ್ರಯ ೦-೧-೬—೦
ಗ್ರೀಕರ ಚರಿತ್ರೆ .. .. ,, .. ೦—೨—೦
ರೋಮನರ ಚರಿತ್ರೆ .. .. ,, .. ೦—೨—೦

ಕನ್ನಡ—ಇಂಗ್ಲಿಷ—ಹಿಂದೂಸ್ಥಾನಿ ಭಾಷಾಮಂಜರಿ. ಈ ಪುಸ್ತಕದಿಂದ ಇಂಗ್ಲಿಷ್ ಮತ್ತು ಹಿಂದುಸ್ಥಾನಿ ಭಾಷೆಗಳನ್ನು ಬಹು ಸುಲಭವಾಗಿ ಕಲಿಯಬಹುದು ಇದರ ಕ್ರಯ ಎಂಟೇ ಆಣೆ.
ವಿ. ಪಿ. ಪಿ. ಮೂಲಕ ೦—೧೦—೦

ಶ್ರೀಚಾಮರಾಜೇಂದ್ರ ಒಡೆಯರವರ ಚರಿತ್ರೆ. ಉತ್ಕೃಷ್ಟವಾದ ಪುಸ್ತಕ ಅನೇಕ ತಸ್ವೀರುಗಳು ಇವೆ. ಇದನ್ನು ಕುರಿತು ರಾಜಧರ್ಮಪ್ರವೀಣ ಮಾ॥ ರಾ॥ ತಂಬೂಚೆಟ್ಟಿ ರವರು ಒಂದು ಉತ್ಕೃಷ್ಟವಾದ ಅವತರಣಿಕೆಯನ್ನು ಬರೆದಿದ್ದಾರೆ. ಕ್ರಯ ೦—೮—೦
ವಿ. ಪಿ. ಪಿ. ಮೂಲಕ ೦—೧೧—೦

ಎಡ್ವರ್ಡ್ ಸಾರ್ವಭೌಮರ ಜೀವಚರಿತ್ರೆ ೦—೪—೦
ಕ್ರಿಮಿವರ್ಗವರ್ಣನೆ ೦—೧—೦
ಪಕ್ಷಿಗಳ ಚರಿತ್ರೆ ೦—೧—೦
ಪ್ರಾಚೀನ ಜೀವರಾಶಿಗಳ ವರ್ಣನೆ ೦—೧—೦
ಚಿಣ್ಣರಿಗೆ ಹೇಳುವ ಕಥೆಗಳು ೦—೧—೦

ಬಾಲಿಕಾಗೀತಮುಕ್ತಾಕಲಾಪ, ಗೀತಮಂದಾರ ೧—೨—೦. ಕಲ್ಯಾಣಗೀತಾವಳಿ ೦—೫—೬, ಈ ಹಾಡಿನ ಪುಸ್ತಕಗಳು ನಮ್ಮಲ್ಲಿ ಯಾವಾಗಲೂ ದೊರೆಯುತ್ತವೆ

ಮುದ್ರಾಮಂಜೂಷ. ಈ ಪುಸ್ತಕದ ವಿವರವನ್ನು ನಾವು ಆಗಾಗ್ಗೆ ವೃತ್ತಾಂತ ಪತ್ರಿಕೆಯಲ್ಲಿ ಪ್ರಕಟಿಸಿರುವದನ್ನು ವಾಚಕರು ನೋಡಿರಬಹುದು. ಇದರ ಕ್ರಯ ೧—೮—೦

ಭೂಗೋಳಸಂಗ್ರಹ ೦—೪—೦
ಕ್ಷೇತ್ರಗಣಿತಸಂಗ್ರಹ ೦—೩—೦

ಹಿಂದೂದೇಶ ಪ್ರದಕ್ಷಿಣ. ಈ ಪುಸ್ತಕದ ವಿವರವನ್ನೆಲ್ಲಾ ನಾವು ಬಹು ದೀರ್ಘವಾಗಿ ಈ ಪತ್ರಿಕೆಯ ನಾಲ್ಕೈದು ಸಂಚಿಕೆಗಳಲ್ಲಿ ವಿವರಿಸಿರುತ್ತೇವೆ ಇದರ ಕ್ರಯ ೦—೯—೦ ವಿ ಪಿ ಪಿ ಮೂಲಕ ೦—೧೧—೦

ವಸಂತಮಿತ್ರವಿಜಯನಾಟಕಂ. ಬಹು ರಸಿಕವಾಗಿದೆ ೦-೮-೦

ಅರೇಬಿಯನ್ ನೈಟ್ಸ್ ಅಥವಾ ಯವನಯಾಮಿನೀ ವಿನೋದ ಕಥೆಗಳು: ಈ ಪುಸ್ತಕವು ಲೋಕಪ್ರಸಿದ್ಧವಾದುದೆಂದು ಎಲ್ಲರೂ ಒಪ್ಪಿಕೊಳ್ಳುತ್ತಾರೆ ನಾನೂರು ಎಪ್ಪತ್ತು ಪುಟಗಳುಳ್ಳದ್ದು, ಭಾರಿ ಪುಸ್ತಕ. ಭಾಷೆಯು ಬಹು ಸರಳವಾಗಿದೆ ಪುಸ್ತಕವನ್ನು ಒಂದಾವರ್ತಿ ಓದಿದ ಮೇಲೆ ಅವನ್ನು ಪುನಃ ಪುನಃ ಓದುವಂತೆ ಅದು ಮನಸ್ಸನ್ನು ಆಕರ್ಷಿಸುವದು. ಇದರ ಕ್ರಯ ಎರಡೇ ರೂಪಾಯಿ. ವಿ. ಪಿ. ಪಿ. ಮೂಲಕ ೨—೩—೦ ಹತ್ತು ಅಥವಾ ಹದಿನೈದು ವರ್ಷಗಳ ಹಿಂದೆ ಇದರ ಕ್ರಯ ಎಂಟು ರೂಪಾಯಿ ಎಂದು ಅನೇಕರಿಗೆ ಗೊತ್ತು, ಇದನ್ನು ಬಿಡವರು, ಐವತ್ತರ್ನಂತರ ೧ ಓದುವಂತೆ ಪುನಃ ಛಾಪಿಸಿ ಇಷ್ಟು ದೊಡ್ಡ ಪುಸ್ತಕವನ್ನು ಇಷ್ಟು ಸುಲಭ ಕ್ರಯಕ್ಕೆ ಮಾರುತ್ತೇವೆ ಹನ್ನೆರಡು ಪುಸ್ತಕಗಳನ್ನು ಒಟ್ಟಿಗೆ ತರಿಸಿಕೊಂಡರೆ, ಪುಸ್ತಕಕ್ಕೆ ಎರಡು ಆಣೆಯಂತೆ ಕಮಿಷನ್ ಕೊಡುತ್ತೇವೆ ಜಾಗ್ರತೆ ನೋಡಿ.

ಮುಖ್ಯವಾಗಿ, ಸ್ನೇಹಿತರೇ, ತಾವು ರಾಜಧಾನಿಗೆ ಬರುವಾಗಲೆಲ್ಲಾ ನಮ್ಮ ಪುಸ್ತಕಾಲಯವನ್ನು ನೋಡಿಯೇ ಹೋಗಬೇಕೆಂದು ಕೇಳಿಕೊಳ್ಳುತ್ತೇವೆ. ನಿಮಗೆ ಪುಸ್ತಕವಲ್ಲದೆ ಬೇರೆ ಯಾವದಾದರೂ ಪದಾರ್ಥಗಳಾಗಲೀ ಅಥವಾ ಸಂಗತಿಗಳಾಗಲೀ ಅಪೇಕ್ಷಿಸುವ ಸಂದರ್ಭದಲ್ಲಿ ನೀವು ನಮಗೆ ಒಂದು ಕಾರ್ಡು ಬರೆದರೆ ತಕ್ಷಣವೇ ಜವಾಬು ಕೊಡುವದಕ್ಕೆ ಪ್ರಯತ್ನಮಾಡುತ್ತೇವೆ.

ನಮ್ಮ ವಿಳಾಸ.— ಮ್ಯಾನೇಜರ್,
ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು.

P. SUBBROYA'S
World Renowned and most Efficacious Ayurvedic Medicines.

ಪಿ. ಸುಬ್ಬರಾಯರವರ ಲೋಕಪ್ರಸಿದ್ಧವಾದ ಮತ್ತು ಅತ್ಯಂತ ಗುಣಕಾರಿಯಾದ ಆಯುರ್ವೇದ ಔಷಧಗಳು.

11-28

೧೦. ಜ್ವರಸಂಹಾರಿ—ಎಲ್ಲಾ ವಿಧವಾದ ಜ್ವರ, ವಿಷಮಶೀತ ಜ್ವರ, ೨ ರ, ೩ ರ, ಚಳಿ, ಇನ್‌ಫ್ಲುಯೆಂಜಾ, ಚಳಿಜ್ವರ, ವಾತರೋಗ, ಇವುಗಳನ್ನು ಸಂಪೂರ್ಣವಾಗಿ ವಾಸಿ ಮಾಡುವದು. ಪೆಟ್ಟಿಗೆ ೧ ಕ್ಕೆ ರೂ. ೧. ವಿ. ಪಿ. ಛಾರ್ಜು ೫ ಆಣೆ.

೧೧. ಕೂದಲು ಉದುರಿಸೋಗುವದಕ್ಕೆ—ಕೂದಲು ಬೆಳೆದಿರುವ ಸ್ಥಳಕ್ಕೆ ಹಚ್ಚಿದರೆ ಚರ್ಮಕ್ಕೆ ತೊಂದರೆಯಾಗದೆ ೫ ನಿಮಿಷದಲ್ಲೇ ಉದುರಿ ಹೋಗುವದು. ಸೀಸೆ ೧ ಕ್ಕೆ ೪ ಆಣೆ. ವಿ. ಪಿ. ಛಾರ್ಜು ೬ ಸೀಸೆ ವರಿವಿಗೂ ೫ ಆಣೆ.

೧೨. ಸುಗಂಧಕದಂತಚೂರ್ಣ—ಎಲ್ಲಾ ವಿಧವಾದ ಹಲ್ಲುನೋವುಗಳನ್ನು ವಾಸಿಮಾಡುವದು. ಸೀಸೆ ೧ಕ್ಕೆ ೪ ಆಣೆ. ವಿ. ಪಿ. ಛಾರ್ಜು ೬ ಸೀಸೆ ವರೆಗೂ ೫ ಆಣೆ.

೧೩. ಚೇಳಿನ ಔಷಧ—ಚೇಳು ಕಚ್ಚಿದ ಸ್ಥಳಕ್ಕೆ ಕೂಡಲೆ ಇದರ ಕೆಲವು ತೊಟ್ಟುಗಳನ್ನು ಬಿಟ್ಟ ತಕ್ಷಣವೇ ಉರಿಯು ನಿಲ್ಲುವುದು. ಪ್ರತಿ ಕುಟುಂಬದಲ್ಲಿಯೂ ಅವಶ್ಯಕವಾಗಿರಬೇಕಾದದ್ದು. ಸೀಸೆ ೧ಕ್ಕೆ ೪ ಆಣೆ. ವಿ. ಪಿ ಛಾರ್ಜು ೧೨ ಸೀಸೆ ವರೆಗೂ ೫ ಆಣೆ. ೧೨ ಸೀಸೆಗಳನ್ನು ಒಂದೇ ಆವರ್ತಿ ತರಿಸಿಕೊಂಡರೆ ಬೇರೆ ೨-೮-೦ ರೂ ವಿ. ಪಿ ಛಾರ್ಜು ಅಲಾಯಿದ. ಸಿಲೋನಿಗೆ ೩ ಆಣೆ.

೧೪. ಮಧುರಧ್ವನಿ ಮಾತ್ರೆ—ಧ್ವನಿಯಲ್ಲಿರುವ ನ್ಯೂನತೆಗಳನ್ನು ಸರಿಮಾಡಿ ಮನೋಹರವಾದ ಧ್ವನಿಯನ್ನುಂಟುಮಾಡಿ ಸ್ಫುಟವಾಗಿ ಮಾತನಾಡುವದಕ್ಕೆ ವಿಶೇಷ ಅನುಕೂಲಪಡಿಸಿಕೊಡುವದು. ಮುಖ್ಯವಾಗಿ ಸಂಗೀತಗಾರರು, ಉಪನ್ಯಾಸಕರು ಮೊದಲಾದವರಿಗೆ ಬಹಳ ಸಹಕಾರಿಯು. ಇದರ ಸೇವನೆಯಿಂದ ಭಾರವಾದ ಧ್ವನಿಯು ಸರಿಯಾಗುವದು ಕಾಪಿದರೆ ಕಿವಿಗಿಂಪಾಗುವಂತಹ ಧ್ವನಿಯು ಹೊರಡುವದು. ಸೀಸೆ ೧ ಕ್ಕೆ ೮ ಆಣೆ ವಿ. ಪಿ ಛಾರ್ಜು ೬ ಸೀಸೆ ವರೆಗೂ ೫ ಆಣೆ.

೧೫. ಸ್ನಾನಕ್ಕೆ ಸುವಾಸನಾ ಭಸ್ಮ—ಸುವಾಸನೆಯುಳ್ಳ ಈ ಭಸ್ಮವನ್ನು ಸ್ನಾನಕಾಲದಲ್ಲಿ ಪ್ರಿಯರಾದ ಗಂಡಸರೂ, ಹೆಂಗಸರೂ, ಮುದುಕರೂ ಉಪಯೋಗಿಸುವದಕ್ಕೆ ಅನುಕೂಲವಾಗಿರುವದು ಚರ್ಮಗತವಾದ ಕೊಳೆಯನ್ನೂ ಬೆವರಿನ ದುರ್ಗಂಧವನ್ನೂ ಹೋಗಲಾಡಿಸಿ, ಚರ್ಮವನ್ನು ಮೃದುಮಾಡಿ, ಮಿಂಚುವಂತೆ ಹೊಳಪುಕೊಟ್ಟು, ತಂಪನ್ನುಂಟುಮಾಡುವದು ಇದಲ್ಲದೆ ದೇಹದಲ್ಲಿ ಸರ್ವದಾ ಸುಗಂಧವಿರುವಂತೆ ಮಾಡುವದು ಚೂರ್ಣವು ಸ್ನಾನಕಾಲದಲ್ಲಿ ಅತ್ಯಂತೋಪಯುಕ್ತವಾದುದರಿಂದ ಪ್ರತಿಯೊಬ್ಬರೂ ಉಪಯೋಗಿಸಲಿಕ್ಕೆ ಯೋಗ್ಯವಾಗಿದೆ. ಪೆಟ್ಟಿ ೧ಕ್ಕೆ ೮ ಆಣೆ ವಿ. ಪಿ. ನಾಸಲು ೩ ಆಣೆ.

೧೬. ಸಂಜೀವನ ಮಾತ್ರೆಗಳು—ಮಕ್ಕಳಿಗೆ ಜ್ವರ, ನರಗಳಸೆಳೆತ, ನಿದ್ರೆಬಾರದಿರುವದು, ಅಧಿಕವಾಗಿ ಸೋರುವದು ಭೇದಿ, ಕೆಮ್ಮಲು, ತಲೆನೋವು, ನೆಗಡಿ, ಇನ್ನೂ ಮಕ್ಕಳಿಗೆ ಬರುವ ಅಜೀರ್ಣಸಂಬಂಧವಾದ ರೋಗಗಳಿಗೆ ಒಳ್ಳೇ ಮದ್ದಾಗಿರುವದು ಇದನ್ನು ದೊಡ್ಡವರು ಸಹ ಉಪಯೋಗಿಸಬಹುದು. ಸೀಸೆ೧ಕ್ಕೆ ೧೦ ಆಣೆ ವಿ ಪಿ. ಛಾರ್ಜು ೬ ಸೀಸೆ ವರೆಗೂ ೫ ಆಣೆ.

೧೭. ಗೋರೋಚನ ಮಾತ್ರೆ—ಎಲ್ಲಾ ವಿಧವಾದ ಜ್ವರಗಳಿಗೂ, ವಿಷಮಶೀತಜ್ವರ, ಎಡಬಿಡದ ಜ್ವರ, ಪ್ರತಿದಿನದ ಜ್ವರ, ಇವುಗಳಿಗೆ ಅದ್ವಿತೀಯವಾದ ಔಷಧವು ಮಲೇರಿಯ ಜ್ವರ, ಹೊಟ್ಟೆಯಲ್ಲಿ ಗಡ್ಡೆ ಆಗಿದ್ದರೆ, ಮಿದುಳು ಶ್ವಾಸಕೋಶಗಳು ಕೆಟ್ಟಿದ್ದರೆ ಗುಣಮಾಡುವದು. ಮಕ್ಕಳಿಗೆ ಬರುವ ಜ್ವರ, ಆಮಶಂಕೆ, ಅತಿಸಾರ, ನರಗಳ ಸೆಳೆತ, ನಿದ್ರೆಬಾರದಿರುವಿಕೆ, ಹೆಚ್ಚಾಗಿ ಸೋರುವದು, ಚಳಿ, ಕೆಮ್ಮಲು, ತಲೆನೋವು, ಮಕ್ಕಳಿಗೂ ದೊಡ್ಡವರಿಗೂ ಅಜೀರ್ಣ, ಇವುಗಳನ್ನು ಪರಿಹಾರ ಮಾಡುವದು. ಸೀಸೆ ೧ಕ್ಕೆ ೧೦ ಆಣೆ ವಿ ಪಿ. ಛಾರ್ಜು ೬ ಸೀಸೆ ವರೆಗೂ ೫ ಆಣೆ.

೧೮. ಚರ್ಮರೋಗಕ್ಕೆ ಔಷಧ—ಮಕ್ಕಳಿಗೆ ಬರುವ ಕರಪಾನು, ತುರಿ, ಹುರುಕಾಲು, ಕಜ್ಜಿ, ಆನೆಕಜ್ಜಿ ಮತ್ತು ದೊಡ್ಡವರಿಗೆ ಬರುವ ನಾನಾ ವಿಧವಾದ ಕಜ್ಜಿ ಸಂಬಂಧವಾದ ವ್ಯಾಧಿಗಳು, ಸಂದು, ತಲೆಯಲ್ಲಿಯೂ ಇತರ ಕಡೆಗಳಲ್ಲಿಯೂ ಬಹಳ ನೋವನ್ನು ಅಸಹ್ಯವನ್ನೂ ಉರಿಯನ್ನೂ ಉಂಟುಮಾಡುವ ಎಲ್ಲಾ ಹುಣ್ಣುಗಳೂ ಬೇಗನೆ ಗುಣವಾಗುವದಲ್ಲದೇ ಜಾಗ್ರತೆಯಾಗಿ ವಾಸಿಯಾಗುವದು, ಬೆಲೆ ಸೀಸೆ ೧ಕ್ಕೆ ೮ ಆಣೆ ವಿ. ಪಿ. ಛಾರ್ಜು ೨ ಬಾಟ್ಲಿ ವರೆಗೆ ೫ ಆಣೆ.

೧೯. ಕೇಶಸುವಾಸಿನಿ—ಈ ತೈಲವು ಪೂರ್ವಪಶ್ಚಿಮ ದೇಶಗಳ ಅನುವಿಲ್ಲ ಸುವಾಸನಾ ದ್ರವ್ಯಯುಕ್ತವಾಗಿ ಎಂದಿಗಾ ಪರಿಮಳ ಕೊಡುವಂಥದ್ದಾಗಿರುತ್ತದೆ ಇದರ ಉಪಯೋಗದಿಂದ ಕೂದಲು, ಮೀಸೆ ಕಣ್ಣು ರೆಪ್ಪೆ ಸಮೃದ್ಧಿಯಾಗಿ ಬೆಳೆಯುತ್ತವೆ. ತಲೆ ಮಿದುಳು ಕಣ್ಣುಗಳಿಗೆ ತಂಪುಕೊಡುತ್ತದೆ. ಬೋಳುತಲೆ, ಸುಂಡು ಮುಂತಾದ್ದನ್ನು ವಾಸಿಮಾಡುತ್ತದೆ. ವಿಲಾಯತಿಯ ಪರಿಮಳ ವಸ್ತುಗಳಮೇಲೆ ಪ್ರೀತಿ ಇರುವವರಿಗೆ ಅಚ್ಚು ಮೆಚ್ಚಿನದಾಗಿರುತ್ತದೆ. ಬೆಲೆ ರೂ. ೧ ವಿ. ಪಿ ಛಾರ್ಜು ಎರಡು ಬಾಟ್ಲಿ ವರೆಗೆ ೫ ಆಣೆ.

ಕಾಗದವನ್ನು ಇಂಗ್ಲಿಷ್ ಅಥವಾ ತಮಿಳಿನಲ್ಲಿ ಬರೆಯಿರಿ.

Apply to:—**P. SUBBAROY,**
Porto Novo, South Arcot.

ವಿಳಾಸ:—ಪಿ. ಸುಬ್ಬರಾಯರ್,
ಪೋರ್ಟನೋವೊ, ದಕ್ಷಿಣ ಆರ್ಕಾಟ್ ಜಿಲ್ಲಾ.

ಮೈಸೂರು ಸೀಮೆಯಲ್ಲಿ ಪ್ಲೇಗಿನ ಸ್ಥಿತಿ.

4—5—1906 ರಿಂದ 11—5—1906 ರ ವರೆಗೆ

ಸ್ಥಳ.	ಪ್ಲೇಗ್ ಆಗಲಿದ್ದು.	ಪ್ಲೇಗ್ ಸತ್ತದ್ದು.	ಹೋದವಾರ	ಈ ವಾರದ ಸಂಖ್ಯೆ
ಬೆಂಗಳೂರು ಪಟ್ಟಣ	0	0	5	3
ಮೈಸೂರು ,,	0	0	0	0
ಬೆಂಗಳೂರು ಡಿಸ್ಟ್ರಿಕ್ಟು	0	0	[illegible]	4
ಮೈಸೂರು ,,	1	1	[illegible]	8
ಕೋಲಾರ್ ,,	0	0	0	1
ಕೋಲಾರ್ ಚಿನ್ನದ ಗಣಿಗಳು	1	1	4	3
ತುಂಕೂರು ಡಿಸ್ಟ್ರಿಕ್ಟು	0	0	1	1
ಹಾಸನ (ಹೊರಗಿನದು)	[illegible]	2	0	0
ಚಿತ್ರದುರ್ಗ ,,	0	0	0	0
ಕಡೂರ್ ,,	0	0	3	1
ಶಿವಮೊಗ್ಗಾ ,,	0	0	4	3
ಜುಮ್ಲಾ.	6	[illegible]	35	19

ಶಾಲಿವಾಹನ ಶಕ ವರುಷಂಗಳು ೧೮೨೯ ನೇ ಪರಾಭವ ಸಂವತ್ಸರದ ಜ್ಯೇಷ್ಠ ಶುದ್ಧ ಪಾಡ್ಯಮಿ ಗುರುವಾರದಿಂದ ಜ್ಯೇಷ್ಠ ಶುದ್ಧ ಸಪ್ತಮಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ.

೧೯೦೬ ನೇ ಇಸವಿ ಮೇ.

ತಾ.	ವಾರ.	ತಿಥಿ.	ಘಳಿಗೆ.	ನಕ್ಷತ್ರ.	ಘಳಿಗೆ.	ಅಧಿಧನುಮಾಸ
24	ಗುರು *	ಪಾಡ್ಯ	21 2	ರೋ	28-29	11
25	ಶುಕ್ರ	ಬಿದಿಗೆ	25-33	ಮೃ	34-26	12
26	ಶನಿವಾ	ತದಿಗೆ	29 8	ಆರ್ದ್ರ	39 28	13
27	ರವಿವಾರ	ಚೌತಿ	31-16	ಪು	33 23	14
28	ಚಂದ್ರ	ಪಂಚಮಿ	33-13	ಪು	46-26	15
29	ಕುಜ	ಷಷ್ಠಿ	33-20	ಶ್ಲೇ	48-10	16
30	ಬುಧ	ಸಪ್ತಮಿ	32-21	ಮ	48-28	17

* ಪುನ್ನಾಗಗೌರಿ ವ್ರತ ಬೌದ್ಧಕಲ್ಪಿಕದಿನಂ, [illegible] ಸ್ಥಾಪಿತ, ಚಂದ್ರೋದಯ ರಜ್ಜುಕಾನಿ ಚಂದ್ರ [illegible] ಪ್ರತಿಷ್ಠಾಪನ, [illegible] ಪಶ್ಚಿಮಗಳು

ಪೇಟೇ ಧಾರಣೆ.

ದಿನಸಿ.	ಮೈಸೂರು.	ಬೆಂಗಳೂರು.
ಕಬ್ಬಿನ ಅಕ್ಕಿ ಪಲ್ಲಾ ೧ಕ್ಕೆ	ರೂ ೧೩-೪-೦	೧೫-೦-೦
ಕೆಂಬೂತ ಅಕ್ಕಿ ಅವಲ್ ..	.. ೧೩-೪-೦	೧೩-೮-೦
,, ದುಯಂ	.. ೧೨-೧೨-೦	೧೩-೦-೦
ಜುವಾರಿ ಅಕ್ಕಿ ..	.. ೧೨-೮-೦	೧೩-೦-೦
ಸಣ್ಣಕ್ಕಿ ಅವಲ್ ..	.. ೧೪-೮-೦	೧೫-೮-೦
,, ದುಯಂ ..	.. ೧೩-೮-೦	೧೫-೦-೦
ತೊಗರೀ ಬೇಳೆ ಪಲ್ಲಾ ೧ಕ್ಕೆ	.. ೧೧-೬-೦	೧೦-೮-೦
,, ದುಯಂ ..	.. ೧೦-೮-೦	೧೦-೦-೦
ಬೈರ ರಾಗಿ ಪಲ್ಲಾ ೧ಕ್ಕೆ ..	.. ೬-೧೪-೦	೬-೦-೦
ಹಾರಕ	.. ೬-೮-೦	೫-೧೨-೦
ಜೋಳ	.. ೩-೪-೦	೮-೪-೦
ಹಲಸಂದೆ ಪಲ್ಲಾ ೧ಕ್ಕೆ ..	.. ೯-೮-೦	೧೦-೦-೦
ಬಿಳೀ ಅವರೆ	.. ೮-೬-೦	೮-೮-೦
ಹೆಸರು	.. ೧೦-೮-೦	೧೧-೮-೦
ಉದ್ದು	.. ೧೨-೪-೦	೧೧-೧೨-೦
ಕಡಲೆ	.. ೧೦-೮-೦	೧೨-೦-೦
ಎಳ್ಳು ಸ. ೧೨೩ ಕ್ಕೆ ..	.. ೨೧-೦-೦	೨೦-೮-೦
ಹುರುಳಿ	.. ೮-೭-೦	೮-೪-೦
ಹರಳು ೧೨೩ ಸೇರಿಗೆ ..	.. ೧೩-೮-೦	೧೨-೮-೦
ಸೀಗೇಕಾಯಿ ಮಣ ೧ಕ್ಕೆ ..	.. ೩-೦-೦	೩-೮-೦
ಮೆಣಸಿನಕಾಯಿ ..	.. ೪-೦-೦	೩-೧೪-೦
,, ದುಯಂ ..	.. ೩-೪-೦	೩-೮-೦
ಬೆಲ್ಲ ದೊಡ್ಡ ಅಚ್ಚು ..	.. ೪-೪-೦	ಮ ೧-೯-೦
ಒಳ್ಳೆಣ್ಣೆ ಮಣ ೧ಕ್ಕೆ ..	.. ೫-೮-೦	೪ ೧೨-೦
ಹರಳೆಣ್ಣೆ ,, ..	.. ೫-೨-೦	೪-೮-೦
ಕೊತ್ತುಂಬರಿ ಪಲ್ಲಾ ೧ಕ್ಕೆ ..	.. ೧೦-೮-೦	೧೦-೦-೦
ಉಪ್ಪು ,, ..	.. ೫-೧೦-೦	೬-೮-೦
ಹುಣಸೇ ಹಣ್ಣು ..	.. ೦-೧೨-೦	೦-೧೧-೦
,, ತಳೇದು ..	.. ೦-೮-೦	೦-೯-೦
ತುಪ್ಪ ಮಣ ೧ಕ್ಕೆ ..	.. ೧೩-೮-೦	೧೬-೮-೦
ಸೀಮೆಯೆಂಣೆ ಪೆಟ್ಟಿ ೧ಕ್ಕೆ ..	.. ೫-೪-೦	೪-೨-೦
ತೆಂಗಿನಕಾಯಿ ೧೦೦ ಕ್ಕೆ ..	.. ೫-೪-೦	೪-೮-೦
ಆಳಲೇಕಾಯಿ ಮಣ ೧ಕ್ಕೆ ..	.. ೦-೧೨-೦	೦-೯-೦
ಅಂಟುವಾಳದ ಕಾಯಿ ಮಣ ೧ಕ್ಕೆ ..	.. ೦-೧೨-೦	೦-೧೨-೦
ಚಿನ (ಪೌಕ್) ಕೆಂಪು ..	.. ೨೫-೪-೦	೧೫-೬-೦
,, ,, ಹಸಿರು ..	.. ೧೫-೧೦-೦	೧೬-೬-೦
,, ,, ಗಟ್ಟಿ ತೊಲ ೧ಕ್ಕೆ ..	.. ೨೩-೧೨-೦	೨೪-೨-೦
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ ..	.. ೮೫-೧-೦	೮೪-೮-೦

Printed and Published by the Rev E. W. Thompson, M.A., the Proprietor and Manager, Wesleyan Mission Press, Mysore. 21/5/1906.

ವೃತ್ತಾಂತ ಪತ್ರಿಕೆ.

REGISTERED

ಕ್ರಯ ೧ ಮ ಷ್ಟು ——— ಕ್ರಯ ೧ ಮ ಧ

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಸಂಪುಟ ೧೯ | ಮೈಸೂರು—ಸನ್ ೧೯೦೬ ನೇ ಇಸವಿ ಮೇ ತಾರೀಖು ೩೧ ನೇ ಗುರುವಾರ. | ಸಂಚಿಕೆ ೫೨

೫,೦೦೦ ಪವನ್ ಪ್ರೈಸ್ ದಾರ ಮಾತ್ರ ಇದೆ

10 15

೧ ಬ್ಲೀಚು ಮಾಡುವ ಪ್ರೈಸ್ ಪವನ್ ... ೧—೧೦—೦
೨ ಪರ್ಸ್ ಸುಪೀರಿಯರ್ „ „ „ ೧—೧೪—೦
೩ ಸುಪೀರಿಯರ್ ರ್ „ „ „ ೨—೦—೦
೪ ಸೋಮಾನಿಯರ್ „ „ „ ೩—೪—೦
ಪ್ರೈಸ್ ಪವನ್ ೧ ಕ್ಕೆ ೨—೧—೦ ಒಂದೇ ದಫಾ ೧೦
ಪವನ್ ತರಿಸಿಕೊಳ್ಳುವವರಿಗೆ ೬—೧೨—೦
ಹೊಸ ನಮೂನೆ ದ ಷ್ಟ್ ಸ್ಟ್ರಿಪ್ ಪ್ರೈಸ್ ಕಾರ್ಡುಗಳು.
೧ ಸಿಂಗಲ್ ಕಲರ್ ೧೦೦ ಕ್ಕೆ ೦ ೨ ೬. ೧೦೦೦. ೧ ೪ ೦
೨ ಡಬಲ್ ಕಲರ್ ೧೦೦ ಕ್ಕೆ ೦ ೩ ೦ ೧೦೦೦ ೧ ೧೦ ೦
ಕಾರ್ಡ್ ವಿ ಪಿ ಮೂಲಕ ತರಿಸಿಕೊಳ್ಳುವವರು ಮಾತ್ರ ೧೦೦ ಕ್ಕೆ ೨೫ ರಂತೆ ಮುಂಚಿತವಾಗಿ ಕಳಿಸಿದರೆ ಆರ್ಡರ್ ವಿ ಪಿ ಮೂಲಕ ಕಳಿಸಲಾಗುವದು

ಯಲ್. ಯು. ಪ್ರೊರವಾಲ್ ಕಂಪನಿ, ಬೆಂಗಳೂರು ಸಿಟಿ.

ಹೋಮೋಯಿ ಸಿ ಯಾ

ಪತ್ರದ ಆಕಾರ ತಗಲುತ್ತಲೇ ನೋವು ವಾಸಿಯಾಗುತ್ತೆ

ಈ ಔಷಧಿಯು ಮನೆ ಅರಮನೆ, ಕಾರ್ಖಾನೆ, ಆಸ್ಪತ್ರೆ, ಪೋಲೀಸ್ ಠಾಣೆ, ವಿದ್ಯಾಶಾಲೆ ಕೋರ್ಟು, ಕಛೇರಿ ಮುಂತಾದ ಸ್ಥಳಗಳಲ್ಲೆಲ್ಲಾ ಇರತಕ್ಕದ್ದು ಇದಕ್ಕೆ ಸಮಾನವಾದ ಔಷಧ ಮತ್ತೊಂದೂ ಇಲ್ಲವೆಂಬುವದು ಲೋಕಪ್ರಸಿದ್ಧವಾಗಿದೆ

ಈ ತೈಲವು ತತ್ಕಾಲದಲ್ಲಿ ಜೀವರುಗಳಿಗೆ ಮಾತ್ರವಾಗಿ ಸಿಕ್ಕತಕ್ಕ ಔಷಧ ಇದನ್ನು ಉಪಯೋಗಿಸಿದ ದೊಡ್ಡ ಮನುಷ್ಯರು, ಡಾಕ್ಟರುಗಳು, ಮುಂತಾದವರು ಇದರ ಗುಣವನ್ನು ಹೊಗಳಿ ಸರ್ಟಿಫಿಕೇಟುಗಳನ್ನು ಕೊಟ್ಟಿರುವರೆ ನೋವು ಕಂಡರೆ ಇದನ್ನು ಹಚ್ಚಿದ ಕೂಡಲೇ ವಾಸಿಯಾಗುವದು

ಈ ತೈಲವು ಅರೆ ತಲೆಶೂಲೆ, ಸೊಂಟನೋವು, ಪಾರ್ಶ್ವವಾಯು, ಮೂಲವ್ಯಾಧಿ, ಉಬ್ಬಸ, ಹಾವುಗಳು, ನರ ಹೊರಳುವದು, ಚಳುಕು, ಕೀಲುವಾಯು, ಗುಳ್ಳೆಗಳು, ಹಲ್ಲುನೋವು, ಮುಖನೋವು, ಊತಗಳು, ಗಡ್ಡೆಗಳು, ರಣಗಳು, ಗಾಯಕತ್ತು, ಸೊಳ್ಳೆ ಕುಟ್ಟಿ ಚೇಳು ಕಡಿದಪ್ಪು ಚಪ್ಪರವದು, ಬೆಂಕಿಯಲ್ಲಿ ಸುಟ್ಟ ಕೊಂಡದ್ದು, ಕತ್ತಿ ಗಾಯ—ಇವೇ ಮೊದಲಾದ ನಾನಾ ಬಾಧೆಗಳನ್ನು ಹುಟ್ಟಡಗಿಸುತ್ತದೆ ರಾತ್ರಿ ಹಚ್ಚಿಕೊಂಡು ಮಲಗಿದರೆ ಸೊಳ್ಳೆ ಹತ್ತಿರ ಸೇರುವದಿಲ್ಲ

ಕ್ರಯ — ಸಣ್ಣ ಡಬ್ಬಿ ೧ ಕ್ಕೆ ೮ ಆಣೆ, ದೊಡ್ಡದಕ್ಕೆ ರೂ ೨—೮ ಆ , ಒಂದೇ ಸಲ ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ ಬಿಡುತ್ತಾರೆ ರೂ ೨—೮ ಆಣೆ ಬಾಟ್ಲು ಡಬ್ಬಿದಲ್ಲಿ ೧ ರೂ. ಡಬ್ಬಿದಲ್ಲಿರುವದಕ್ಕಿಂತ ೪ ರಷ್ಟು ಹೆಚ್ಚು ಔಷಧವಿರುತ್ತೆ ರೂ ೨—೮ ಆ ಈ ಡಬ್ಬಿಯನ್ನು ತರಿಸಿಕೊಳ್ಳುವವರಿಗೆ ಟಪ್ಪಾಲ್ ಖರ್ಚು ಮಾಫಿ ಬಿಡುತ್ತೆ

****

ಹೋಮೋಯಿಸಿಯಾ ಯುಂಬ್ರೋಕೇಷನ್

ಈ ತೈಲವು ಜೀರ್ಣ ನೋವುಗಳಿಗೆ ಉಪಯೋಗಿಸತಕ್ಕದ್ದು ಇದರ ಒಡೆದ ಕಡೆ ಇದನ್ನು ಹಚ್ಚಕೂಡದು ಇದರಲ್ಲಿ ಹೋಮೋಯಿಸಿಯದ ಗುಣಗಳು ಬಹು ತೀಕ್ಷ್ಣವಾಗಿ ಇರುತ್ತವೆ ಅದಕ್ಕಿಂತಲೂ ಇದರಲ್ಲಿ ಇನ್ನೆರಡು ಗುಣಗಳಲ್ಲಿ ಹೊಸ ಭಾಗವಿರುತ್ತದೆ ಇದನ್ನು ಕರ್ಪೂರವು ಬಹು ಬೇಗನೆ ಸೇವಿಸಿಕೊಳ್ಳಬಲ್ಲದು ಡಬ್ಬಿಗಳಲ್ಲಿ ತುಂಬಿ ೮ ಆಣೆಗೂ, ೧ ರೂ ಗೂ ಒಂದರಂತೆ ಬಿಕರಿ ಮಾಡಲ್ಪಡುವದು. ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ ಎಲ್ಲಾ ಊರುಗಳಲ್ಲಿಯೂ ದೊರೆಯುವದು

ಈ ಔಷಧಗಳ ವಿವರಣೆಯೂ, ಸರ್ಟಿಫಿಕೇಟುಗಳೂ ಉಳ್ಳ ನೋಟೀಸುಗಳನ್ನು ಅಪೇಕ್ಷಿಸುವರೆ ಕಳುಹಿಸುವೆವು.

ವಿಳಾಸ—ಹೋಮೋಯಿಸಿಯಾ ಕಂಪೆನಿ, ೨೩ ಸೆಂಟು ಜೇಮ್ಸ್ ಸ್ಟ್ರೀ, ಮದರಾಸ್.

ಕೊಡಗು ದೇಶದ ಶ್ರೇಷ್ಠವಾದ ಉತ್ಕೃಷ್ಟ ಕಾಫಿಯು

ಹುರಿಯದೆ ಇರುವದು ಅಥವಾ ಆಗತಾನೆ ಹುರಿದದ್ದು.
ಕದಮಾಡಿದ ಸ್ಥಳದಿಂದಲೆ ನೆಟ್ಟಗೆ ರವಾನಿಸಲ್ಪಡುವದು.

35 16

ವ್ಯಾಪಾರದ ಹೆಗ್ಗುರ್ತು

ಕಾಪುಕೋಣದ ತಲೆಯ ಮುದ್ರೆ ಇದೆ

ಸಂಪೂರ್ಣವಾಗಿ ಯಂತ್ರದಿಂದಲೆ ಸಿದ್ಧಪಡಿಸಿದ್ದು ಹೆಗ್ಗುರ್ತು ಉಳ್ಳ ವಿಲಾಸದ ಚೀಟಿ ಸುತ್ತಿಲ್ಲದಿರುವವು ಸ್ವಚ್ಛವಾದವುಗಳಲ್ಲ ಅವು ನಮ್ಮದಲ್ಲ ಏಜಂಟರುಗಳು ಬೇಕು ಇಂಥವರಿಗೆ ಅಲಾಯದ ದರ. ಬರೆಯುವವರು ದಯವಿಟ್ಟು ಈ ಪತ್ರಿಕೆಯ ಹೆಸರನ್ನು ಸೂಚಿಸಿ

ವಿಳಾಸ—ಮ್ಯಾನೇಜರ್, ಮ್ಯಾಥಿಸನ್ಸ್
ಕಾಫಿ ವರ್ಕ್ಸ್, ಮೈಸೂರು.

ಜ್ವ ರ ಹ ರಿ. 71 5



ಇದು ಸಾಧಾರಣ ಜ್ವರ, ಚಳೀಜ್ವರ, ಮೊರೆಜ್ವರ, ಪಿತ್ಥಜ್ವರ, ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಕ್ಕಿಕರೆಯಲ್ಲಿರುವ ಮರಾಮತ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್ ಟಿ ವೇಂಕಟಪತಿ ಅಯ್ಯರವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨೦ ಗ್ರೈನಿನ ಸೀಸೆಯು ತೀರಿಹೋಯಿತು ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚನ್ನಾಗಿ ಗುಣ ಹೊಂದಿರುವರು ಇನ್ನೂ ದಿನಗಳು ಕಾಹಿಲೇ ಬೀಳುತ್ತಿರುವು ದರಿಂದ ದಯವಿಟ್ಟು ಇನ್ನೊಂದು ೨೦ ಗ್ರೈನಿನ ಸೀಸೆಯನ್ನು ವಿ. ಪಿ ಪಿ ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದ್ದಾರೆ

ಕ್ರಯ —ಸೀಸೆ ೧ ಕ್ಕೆ ೮ ಆಣೆ, ೧ ರೂ , ೧—೮ ರೂ , ರೂ. ೨—೧೨ ಆ , ೧೧ ರೂ , ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು.

****

ಓ ಮು ೦ ಕ ರ್ಪೂ ರ.

Omum Carpoor

ಈ ಔಷಧವು ಅಜೀರ್ಣ, ಅತಿಭೇದಿ, ಸಾಧಾರಣ ಹೊಟ್ಟೆಕಳೆ ತಮನದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು ಇದು ಹೆಂಗಸರು ತಿಂಗಳಿಗ ಒಂದಾನರ್ತ ಹೊರಗೆ ಆಗುವಾಗ್ಯ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ ಕ್ರಯದ ದರವು ಜ್ವರಹರಿ ಎಂಬ ಔಷಧದಂತೆಯೇ ಸೀಸೆಗಳಲ್ಲಿ ದೊರಕುವದು

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಹೆಪ್ಪಿಯ ಓಮುಂ ಕರ್ಪೂರವನ್ನು ನಾನೂ ನನ್ನ ತಾಬೇದಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣ ಭೇದಿ, ಅಜೀರ್ಣ ರೋಗಿಷ್ಠರಿಗೆ ಕೊಡುತ್ತೇವೆ. ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ. ಇದು ಬಹು ಒಳ್ಳೇ ಔಷಧವೆಂದು ಬರೆದಿದ್ದಾರೆ.

ಈ ನಾಲ್ಕು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಅಂಗಡಿಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇದಲ್ಲದೆ ಕೆಳಗಿನ ವಿಳಾಸದಾರರಲ್ಲಿ ವಿಶೇಷ —
ಹೆಪ್ಪಿಯವರ ಗ್ರೇಟ್ ಇಂಡಿಯನ್ ಔಷಧಗಳ ಕಂಪೆನಿ,
[illegible]

"ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ.

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ಪತ್ರ ಏಜಂಟರ ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ (ಅಡ್ವಾನ್ಸು)	ರೂ. ೧—೩—
ಪರಸ್ಥಳದವರು ಅಂಚೆಯಿಂದ ಅಂಚೆಯ ಮೇಲೆ ತರಿಸಿ ಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಡಾಕ್ ಸಹಿತ	ರೂ. ೧—೧೪—
„ „	೧—೧೫—

ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು.

ನಮ್ಮ ವಿಳಾಸ.—ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು.

ನೀವು ವಿಲಾಯಿತಿಯಿಂದ ಯಾವ ಸಾಮಾನುಗಳನ್ನಾದರೂ ತರಿಸಿ ಕೊಳ್ಳಬೇಕಾಗಿದ್ದರೆ 19 20

ಬ್ರೈಚ್ ಮತ್ತು ಈಸ್ಟ್‌ಲೆಂಡ್,



೬೯—೩೫, ಸಿಟಿ ರೋಡ್, ಲಂಡನ್, ಇ. ಸಿ.

ಎಂಬ ವಿಳಾಸಕ್ಕೆ ಬರೆದು ಕಳಿಸಿ, ಕಾಗದ ಬರೆಯು ಕಾಗದಗಳಿಗೆ ೧ ಆಣೆ ಸ್ಟಾಂಪು ಹಚ್ಚಬೇಕು, ಇವರು ಪ್ರೈಸ್ ಲಿಸ್ಟು ಕಾರ್ಡುಗಳನ್ನು ಬರೆಯುವಾರದ ಈ ಕಂಪನಿಯವರು ೨ ಸ್ಟೇಟ್ ಔಷಧಿಗಳನ್ನೂ, ಆಕಸ್ಮಿಕ ಮಾಳಿಗೆಗೂ ಕೊಡುವರು, ವಿಲಾಯಿತಿಯಿಂದಲೇ ತಯಾರಾದ ಆಕಾರಗಳನ್ನೂ, ಇನ್ನೂ ನಾನಾತರದ ಪದಾರ್ಥಗಳನ್ನೂ ಇಟ್ಟು ಬಿಕರಿಮಾಡುತ್ತಾರೆ ಇವರು ಬಹು ವಿಶೇಷವಾದ ಗಮನಕೊಟ್ಟು, ಸಾಮಾನುಗಳನ್ನು ಅಗ್ಗವಾಗಿ ಬೇಕಾದ ಸಾಮಾನುಗಳನ್ನೇ ಆರಿಸಿ, ಮರಿ ಜಪ್ಪಾಲಿನಲ್ಲೇ ಕಳುಹಿಸಿಕೊಡುವರು.

ಕಾಗದಗಳನ್ನು ಇಂಗ್ಲಿಷಿನಲ್ಲೇ ಬರೆಯಬೇಕು

ಬೆಂಗಳೂರು ಚಿಕ್ಕಬಳ್ಳಾಪುರ ಲೈಟ್ ರೈಲ್ವೆ ಕಂಪನಿ ಲಿಮಿಟೆಡ್.

73—5

ನಿಯಮಿತ ಮೂಲಧನದ ಷೇರು ಒಂದಕ್ಕೆ ೨೫ ರೂ ಮುಖಬೆಲೆಯುಳ್ಳ ೩೮ ಸಾವಿರ ಷೇರುಗಳಿಂದಾಗುವ ೯೨ ಲಕ್ಷ ರೂಪಾಯಿಗಳು. ಈ ಷೇರು ಮೊಬಲಗು ೫ ಅಥವಾ ಷೇರು ಒಂದಕ್ಕೆ ಒಂದು ರೂಪಾಯಿಯಂತೆ ಅಪ್ಲಿಕೇಷನ್ ಕೊಟ್ಟು ೧೨ ಕಂತುಗಳಲ್ಲಿ ಬರುವ ನಾಡಾತಕ್ಕದ್ದು ಈ ಲೈನಿಗೆ ಸರ್ವೆ ಪ್ರಾರಂಭಿಸಲ್ಪಟ್ಟಿತು

ಮೈಸೂರು ಸರ್ಕಾರದವರು ಈಗ ಆರ್ಡರು ಮಾಡಿರುವ ಪ್ರಿಲಿಮಿನರಿ ಸ್ಟ್ಯಾಟಿಸ್ಟಿಕ್ಸ್ನಿಂದ ಈ ಲೈನಿನ ವರಮಾನ ಶೇಕಡ ೬ ಕ್ಕಿಂತ ಕಡಿಮೆ ಆಗಲಾರದೆಂದು ತೋರುತ್ತದೆ ... ಕಂಪನಿಯವರು ಒದಗಿಸಿಕೊಡಲ್ಲಿ ಶೇಕಡ ಆರು ನಾಲ್ಕರಂತೆ ಬಡ್ಡಿ ಕೊಡಲು ಈ ಕಂಪನಿಗೆ ಜಾಮೀನಾಗಿರುತ್ತೇವೆಂದು ದಯವಿಟ್ಟು ಲಿಖಿತ ಮೂಲಕ ತಿಳಿಸಿರುತ್ತಾರೆ

ಈ ಕಂಪನಿಯ ಷೇರುಗಳನ್ನು ಅಪೇಕ್ಷಿಸತಕ್ಕಂಥವರು ಕೆಳಗೆ ರುಜು ಮಾಡಿರುವವರಿಗೆ ದರಖಾಸ್ತು ಮಾಡಿಕೊಳ್ಳಬೇಕು.

ಈ ಕಂಪನಿಯ ಷೇರುಗಳನ್ನು ಕಮಿಷನಿಗೆ ಸಬ್ ಏಜಂಟರಾಗಿ ಬಿಕರಿ ಮಾಡಲು ಅಪೇಕ್ಷಿಸುವ ಹಾಲಿ ಯೋಗ್ಯರಾದ ಜನರು ನಡಿಯಿಂದ ಗೇನೆ ಬರೆದುಕೊಳ್ಳಬಹುದು.

ಷೇರು ಹಣವನ್ನು ಚೀಫ್ ಕನ್ಸಲ್ಟಿಂಗ್ ಏಜಂಟರಿಗೆ, ಅವರಿಂದ ಲಿಖಿತ ಮೂಲಕ ... ಅಧಿಕಾರ ಹೊಂದಿರುವ ಸಬ್ ಏಜಂಟರಿಗೆ ... (ಈ ಕಂಪನಿಯ ಶ್ರಿಡಿಟ್ಟಿಗೆ) ಅಥವಾ ಮೈಸೂರು ಸ್ಟೇಟ್ ಬ್ಯಾಂಕುಗಳಿಗೆ ಡಿಸ್ಟ್ರಿಕ್ಟ್ ಖಜಾನೆಗಳಿಗಾಗಲಿ ಜಮಾ ಮಾಡಬೇಕು ಹಾಗೆ ಹಣವನ್ನು ತಾಲ್ಲೂಕು ಮತ್ತು ಡಿಸ್ಟ್ರಿಕ್ಟ್ ಖಜಾನೆಗಳಿಗೆ ಕಟ್ಟಬಹುದೆಂದು ಮೈಸೂರು ಗವರ್ನಮೆಂಟಿನವರು ಅಪ್ಪಣೆ ಕೊಟ್ಟಿದ್ದಾರೆ

ಷೇರುಗಳಿಗೆ ದರಖಾಸ್ತು ಮಾಡುವವರು ಅಪ್ಲಿಕೇಷನ್‌ಗಳ ಜೊತೆಯಲ್ಲಿ ಷೇರು ಒಂದಕ್ಕೆ ಒಂದು ರೂಪಾಯಿಯಂತೆ ಅಪ್ಲಿಕೇಷನ್ ಫಿ ರವಾನಿಸಬೇಕು ಇದು ಷೇರು ಮೊಬಲಗಿನಲ್ಲಿ ಮುಜರಾ ಕೊಡಲ್ಪಡುವದು.

(ಸ್ಸೈ) ಬಿ. ವಿ ರಾಮಸ್ವಾಮಿ ಚೆಟ್ಟಿ, ಬಿ. ಎ,
ಅಡ್ವೊಕೇಟ್, ಮತ್ತು ಬೆಂಗಳೂರು ಚಿಕ್ಕಬಳ್ಳಾಪುರ
ಲೈಟ್ ರೈಲ್ವೆ ಕಂಪನಿಯ ಚೀಫ್ ಏಜಂಟ್,
ನಗರ್ತಪೇಟೆ, ಬೆಂಗಳೂರು ಸಿಟಿ.

ಮುಂಬಯಿ ವ್ಯಾಪಾರವಾಹಲಿಚ್ಛಿಸುವವರು.

85-1

ಮುಂಬಯಿಯಲ್ಲಿ ಪ್ರತಿಯೊಂದು ಮಾಲಿನ ಕೂಳ ಅಳತೆ ಮತ್ತು ಮಾಲಿನ ವರ್ಣನೆ ಹಾಗೂ ಅನೇಕ ಉಪಯುಕ್ತ ಮಾಹಿತಿಯಿರುವ ಕನ್ನಡ ಪುಸ್ತಕ:—ಕ್ರಯ ೧೦ ಆಣೆ. ವಿ. ಪಿ. ಯಿಂದ ಕಳುಹಿಸು ವೆವು. ಟಪಾಲು ಖರ್ಚು ಬೇರೆ. ಬಾಕ್ಸ ಸೇಲರರಿಗೆ ಯೋಗ್ಯ ಕ ಮಿಷನ್ ದೊರೆಯುವದು. ಮತ್ತು ಲಿಂಗಾಯತ ಧರ್ಮಸಂಬಂಧ ವಿರ ಶೋತ್ಪತ್ತಿ ಕ್ರಿಯಾಲಕ್ಷಣವೆಂಬುವ ಕನ್ನಡ ಪುಸ್ತಕ—ನಾಲ್ಕು ಆಣೆ. ಹಳೆ ಅಕ್ಷರದಿಂದ ಬರಿಯಿರಿ. ಪತ್ತಾ ಚನ್ನಬಸಪ್ಪ ಮಲ್ಲಪ್ಪ ನಾರದ, ಪೋಷ್ಟ ಮಾಂಡ್ವಿ, ಮುಂಬಯಿ

ಇದಕ್ಕೆ ಸಮಾನವಾದ ಪುಸ್ತಕ ಉಂಟೋ?

ಕನ್ನಡ ಭಾಷೆಯಲ್ಲಿ ಇದುವರಿವಿಗೂ ಇಂಥಾ ಸೊಗ ಸಾದ ಪುಸ್ತಕವು ಪ್ರಚುರವಾಗಲಿಲ್ಲ, ಸ್ವಲ್ಪ ನೋಡಿ.

"ಹಿಂದೂದೇಶ ಪ್ರದಕ್ಷಿಣ"

ಎಂದು ಕರೆಯಲ್ಪಡುವ ಈ ನೂತನ ಪುಸ್ತಕದಲ್ಲಿ ಸುಮಾರು ತೊಂಬತ್ತು ಉತ್ಕೃಷ್ಟವಾದ ಚಿತ್ರಗಳು ಅಡಗಿವೆ. ಹಣವ್ಯಯಮಾಡಿ ಹಿಂದೂ ದೇಶವನ್ನೆಲ್ಲಾ ನೋಡುವದಕ್ಕೆ ಬದಲಾಗಿ ಈ ಪುಸ್ತಕವನ್ನು ಕೊಂಡು ಓದಿದರೆ ಎಲ್ಲಾ ಸ್ಥಳಗಳೂ, ಜನರ ಸ್ಥಿತಿಗತಿಗಳೂ ಬಹು ಪರಿಷ್ಕಾರವಾಗಿ ಕಂಡುಬರುವವು. ಇದರಲ್ಲಿರುವ ಚಿತ್ರಗಳನ್ನು ಸ್ವಲ್ಪ ನೋಡಿ. ಆಗ್ರಾಪಟ್ಟಣದ ಬಳಿಯಲ್ಲಿರುವ ಜಗತ್ಪ್ರಸಿದ್ಧವಾದ ತಾಜ ಮಹಲ್, ಹುಮಾಯೂನನ ಗೋರಿ, ಹುಗ್ಲಿ ನದಿ, ಕಲ್ಕತ್ತಾನಗರ, ಕಲ್ಕತ್ತಾ ಹೈಕೋರ್ಟು, ಕಾಳಿಕಾಪರ್ವತ, ಚಂದ್ರನಗರ, ಬಂಗಾಳದ ಮನೆಗಳು, ಜಗನ್ನಾಥಸ್ವಾಮಿ, ಭುವನೇಶ್ವರನೆಂಬ ದೇವಸ್ಥಾನ, ಜಗನ್ನಾಥದ ರಥೋತ್ಸವ, ಕನರಾಕ ದೇವಸ್ಥಾನ, ಎವರಸ್ಟ ಶಿಖರ, ಖಟ್ಮಂಡುನಗರದ ಬೀದಿ, ಖಟ್ಮಂಡುನಗರದ ದೇವಸ್ಥಾನಗಳು, ಜಹಜುಗಳು, ಅಂಬಿಗರು ದೋಣಿಯನ್ನು ಎಳಕೊಂಡು ಹೋಗುವದು, ಗಯಾದಲ್ಲಿರುವ ಬುದ್ಧನ ದೇವಸ್ಥಾನ, ಔರಂಗಜೇಬನು ಕಟ್ಟಿಸಿದ ಮಸೀದಿ, ಕಾಶೀಪುಣ್ಯಕ್ಷೇತ್ರದಲ್ಲಿರುವ ದಶಾಶ್ವಮೇಧಘಟ್ಟ, ಕಪಿಗಳಿಗೆ ತಿಂ ಡಿ ಹಾಕುವದು, ಕಾಶೀಕ್ಷೇತ್ರದ ದೇವಸ್ಥಾನಗಳು, ಅಲಹಾಬಾದ ನಗರ ಮತ್ತು ಅದರ ಕೋಟೆ, ಅಲಹಾಬಾದಿನಲ್ಲಿರುವ ಖುಸ್ರುಬಾಗ ಅರಮನೆ, ಯಮುನಾನದಿಯಲ್ಲಿ ಯಾತ್ರಿಕರು ಮುಳುಗುವದು, ಕಾನ್ಪುರದಲ್ಲಿರುವ ಶಿಲಾಶಾಸನ, ಕಾನ್ಪುರದ ಹತ್ತರ ಗಂಗಾನದಿಯ ಮೇಲೆ ಕಟ್ಟಿರುವ ಸೇತುವೆ, ಲಕ್ನೋನಗರದ ರೆಸಿಡೆನ್ಸಿ ಬಂಗಲೆ, ಲಕ್ನೋಪಟ್ಟಣದ ಬಾಗಿಲು, ಸರ್ ಹೆನ್ರಿ ಹ್ಯಾವಲಾಕನು, ಗೋಮತಿ ನದಿಯ ಮೇಲಿರುವ ಅರಮನೆ, ಹ್ವಾನದಲ್ಲಿ ಜನರಸ್ಥಿತಿ, ಹರಿದ್ವಾರ ಘಟ್ಟ, ಗಂಗೋತ್ರಿ ದೇವಸ್ಥಾನ, ಹಿಮಾಚಲಪರ್ವತಗಳ ಮೇಲಿರುವ ಬೆಟ್ಟಗಳು, ಹಿಮಾಪ್ರವಾಹಗಳು, ಆಗ್ರಾಪಟ್ಟಣದ ಕೋಟೆ, ಯಮುನಾನದಿಯ ದಡದಲ್ಲಿ ತೋರುತ್ತಿರುವ ತಾಜಮಹಲ್ ಗೋರಿಯು, ತಾಜಮಹಲಿನ ಕಲ್ಲಿನಲ್ಲಿ ಕೆತ್ತಿರುವ ಪರದೆ, ಅಕ್ಬರನ ಅರಮನೆ, ಆಗ್ರಾಪಟ್ಟಣದ ಮುತ್ತಿನ ಮಸೀದಿ, ಫತ್ತೆಪುರ ಸಿಕ್ರಿಯಲ್ಲಿರುವ ಪಾಂಚಮಹಲ ಅರಮನೆ, ರಾಜಪುತ್ರರು, ಭರತಪುರದ ಕೋಟೆ, ಅಲ್ವಾರಿನಲ್ಲಿ ಮಹಾರಾಜ ಭಕ್ತಾವರಸಿಂಗರ ಗೋರಿ, ಅಲೆಕ್ಸಾಂಡರನೂ ಪೋರಸನೂ, ದೇಹಲಿ ನಗರದ ದೊಡ್ಡ ಮಸೀದಿ, ಪುರಾತನ ದೇಹಲಿಯ ಬಾಗಿಲು, ರಾಜದೇವನು ಸ್ಥಾಪಿಸಿದ ಕಬ್ಬಿಣದ ಸ್ತಂಭ, ನಾದರಷಹಾನು ದೇಹಲಿ ನಗರದಲ್ಲಿ ಪ್ರಜಾಸಂಹಾರವನ್ನು ನೋಡುತ್ತಿರುವದು, ದೇಹಲಿಯ ಬಳಿಯಲ್ಲಿರುವ ಕುತುಬಮಿನಾರ್, ಚಾಂದ್ನಿ ಚೌಕವೆಂಬ ಬೀದಿ, ಸಿಮ್ಲಾಕ್ಕೆ ಹೋಗುವ ದಾರಿ, ಸಿಮ್ಲಾ ಅಮೃತಸರದ ಸುವರ್ಣಾಲಯ, ಲಾಹೋರಿನಲ್ಲಿರುವ ರಣಜಿತಸಿಂಗನ ಗೋರಿ, ಲಾಹೋರ ಪಟ್ಟಣ, ಇವೇ ಮುಂತಾದ ಅನೇಕ ರಮಣೀಯ ಸ್ಥಳಗಳ ಚಿತ್ರಗಳು ಈ ಪುಸ್ತಕದಲ್ಲಿ ಅಡಗಿವೆ ಅವುಗಳನ್ನೆಲ್ಲಾ ಇಲ್ಲಿ ವಿವರಿಸುವದಕ್ಕೆ ಸ್ಥಳ ಸಾಲದು.

ಪ್ರತಿಯೊಂದು ಅಂಶದ ವಿವರಣೆಯೂ ಬಹು ಪರಿಷ್ಕಾರವಾಗಿರುತ್ತದೆ. ದಕ್ಷಿಣ ದೇಶದಲ್ಲಿರುವ ಅನೇಕ ಪ್ರಸಿದ್ಧವಾದ ಸ್ಥಳಗಳ ಚಿತ್ರಗಳೂ, ಅವುಗಳ ವಿವರಣೆಗಳೂ ಇದರಲ್ಲಿವೆ ಪುಸ್ತಕವು ಹನ್ನೆರಡು ಅಂಗುಲ ಉದ್ದವಾಗಿಯೂ ಒಂಬತ್ತು ಅಂಗುಲ ಅಗಲವಾಗಿಯೂ ಇರುತ್ತದೆ ಪುಸ್ತಕವು ಭಾರಿಯಾಗಿದೆ. ಇಂಥಾ ಪುಸ್ತಕವನ್ನು ಪ್ರಚುರಪಡಿಸುವದಕ್ಕೆ ಬಹಳ ಸಮಯವನ್ನೂ ಹಣವನ್ನೂ ವ್ಯಯಮಾಡಿರುತ್ತೇವೆ ಪುಸ್ತಕದ ಅಚ್ಚು ಮತ್ತು ಬೈಂಡು ಬಹು ಸುಂದರವಾಗಿವೆ. ಇದರ ಕ್ರಯ ಎಂಟೇ ಆಣೆ. ವಿ. ಪಿ. ಮೂಲಕ ಹನ್ನೆರಡು ಆಣೆಗಳಾಗುವವು. ಪುಸ್ತಕವು ಜಾಗ್ರತೆಯಲ್ಲಿ ಮಾರಾಟವಾಗುತ್ತಿದೆಯಾದ್ದರಿಂದ ತಾವುಗಳೆಲ್ಲರೂ ಕೆಳಗೆ ಕಂಡ ವಿಳಾಸದಾರರಿಗೆ ಬೇಗ ಬರೆದು ತರಿಸಿಕೊಳ್ಳಬೇಕು.

ನಮ್ಮ ವಿಳಾಸ:—ಮ್ಯಾನೇಜರ್,
ಸಿ. ಎಲ್. ಎಸ್, ಬುಕ್ ಡಿಪೋ,
ಮೈಸೂರು.

CHAMBERLAIN'S PAIN BALM
ಚೇಂಬರ್ಲೇನ್ ಯವರು ಮಾಡಿದ ನೋವುಹರ ಔಷಧವು

15-21

ಬೆನ್ನೆಲುಬಿನಲ್ಲಿನ ನೋವು, ಪಕ್ಕಗಳಲ್ಲಿ ಆಗುವ ನೋವು, ಖಂಡಗಳಲ್ಲಿ ಹುಟ್ಟುವ ನೋವು, ತಲೆನೋವು, ಜಜ್ಜಿದ ಕಡೆಗಳ ನೋವು, ವಾಯುನೋವು—ಇವುಗಳನ್ನೆಲ್ಲಾ ಸಂಪೂರ್ಣವಾಗಿ ವಾಸಿಮಾಡುವಂಥಾ ಔಷಧ

ವಾಯುನೋವೆಂದರೇನು?

ಕೀಲುಗಳಲ್ಲೂ ಮಣಿಕಟ್ಟುಗಳಲ್ಲೂ ಗಾಯವಾಗುವದು, ಊದಿಕೊಳ್ಳುವುದು, ಕಠಿಣವಾಗಿ ಸಳೆಯುವ ಬಾಧೆ, ಖಂಡಗಳಲ್ಲಿ ಇರಿಯುವುದು, ವಿಶ್ರಾಂತಿಕೊಡದೆ ಇರುವುದು, ನಿದ್ದೆ ಹತ್ತದೆ ಇರುವುದು—ಇದೇ. ಇದೆಲ್ಲಾ ನಿಮಗೆ ಯಾವಾಗ ಉಂಟಾಗುವುದೋ ಆಗ್ಗೆ ನಿಮಗೆ ವಾಯುರೋಗ ಬಂದಿದೆ ಎಂದು ತಿಳಿಯತಕ್ಕದ್ದು.

ಆಗ ಚೇಂಬರ್ಲೇನ್ಯವರು ಮಾಡಿದ ನೋವುಹರ ಔಷಧವನ್ನು ಉಪಯೋಗಿಸಿ.

ಮೊದಲನೇ ಸಲ ಇದನ್ನು ಹಾಕಿ ಉಜ್ಜಿದ ಕೂಡಲೆ ಹಿತಕರವಾದ ಒಂದು ತರಹಾ ಕಾವು ಮೂಳೆಯೊಳಕ್ಕೆ ವ್ಯಾಪಿಸುತ್ತದೆ. ಒಡನೆಯೇ ನೋವೆಲ್ಲಾ ಸಂಪೂರ್ಣವಾಗಿ ಪರಿಹರಿಸಲ್ಪಡುತ್ತದೆ. ಮನಸ್ಸಿಗೆ ಉಲ್ಲಾಸವಾಗುತ್ತದೆ. ಆದನ್ನೇ ಆಗಿಂದಾಗ್ಗೆ ಹಾಕಿ ಉಜ್ಜುತ್ತಾ ಬಂದರೆ ಈ ವಾಯುವಿನ ಕುಟ್ಟನ್ನೇ ಕಿತ್ತುಹಾಕಿಬಿಡುವುದು.

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ.

ಕೈಯಿಂದ ಮುಟ್ಟಿದ್ದೇನೂ ಅಲ್ಲ.

ಇದು ಎಲ್ಲೆಲ್ಲೂ ಬಿಕರಿಯಾಗುವುದು. ಸಣ್ಣ ಸೀಸೆಗೆ ೧ ರೂಪಾಯಿ. ದೊಡ್ಡ ಸೀಸೆಗೆ ೨ ರೂಪಾಯಿ.

ತ್ವರೆಮಾಡಿರಿ! ಬಿಡಬೇಡಿರಿ!!

ಇಂಥಾ ಸಮಯ ಮುಂದೆ ಸಿಗಲಿಕ್ಕಿಲ್ಲ. 68-6

ರಾಸ್ಕೋಪ ಸಿಸ್ಟಂ ಲಿವರ ವಾಚ್.

ಬಂದೋಬಸ್ತು. ಮಜಬೂತ.

ಇದರ ಸಂಗಡ ಸ್ಪ್ರಿಂಗ್, ಕನ್ನಡಿ, ಪೆಟ್ಟಿಗೆ, ಹೀಗೆ ೩ ಸಾಮಾನು ಕಳುಹಿಸುತ್ತೇವೆ, ಟ. ಖ. ಬೇರೆ. ಒಂದೇ ಸಾರಿ ೩ ವಾಚು ತರಿಸಿಕೊಂಡರೆ ಟ. ಖ. ಮಾಫಿ. ೬ ವಾಚು ತರಿಸಿಕೊಂಡರೆ ೧ ವಾಚು ಬಕ್ಷೀಸು ವಾಚಿಗೆ ಬೇಕಾಗುವ ಸರಪಣಿಯ ಕಿಮ್ಮತು ೦—೮—೦

ಸುಕಾಯಂತ್ರ. .. .. .. ೦—೮—೦

ವಾಚಿನ ಕವರು. .. .. .. ೦—೮—೦

ವಿ. ಪಿ. ಇಂದಲೂ ರವಾನಿಸುತ್ತೇವೆ.

ವಿಳಾಸ:—ಜಿ. ಯಲ್ ಜೋಶಿ, ಅಂಡ್ ಕೋ,
ಪೋಸ್ಟ ಶಿರ್ಸಿ, ಜಿಲ್ಲಾ ಉತ್ತರ ಕಾನಡಾ.

ಮಕ್ಕಳ ಆರೋಗ್ಯವನ್ನು

ಯಾವಾಗಲೂ ಕಾಪಾಡುವದು ಹೆತ್ತವರ ಮೇಲೆ ಬಿದ್ದ ಭಾರವಾಗಿದೆ.

ಸಣ್ಣ ಮಕ್ಕಳು ಬೆಳೆದಂತೆ ಕೇಳದೆ ಸಿಟ್ಟಿಗೆ ಒಳಪಡುವಂಥವರಾಗಿದ್ದು ಆಹಾರರುಚಿ ಕಡಿಮೆಯುಳ್ಳವರಾಗಿದ್ದಾರೆಂದು ಕಂಡ ಕೂಡಲೇ

SCOTTS EMULSION. 57-11

(ಸ್ಕಾಟ್ಸ್ ಇಮಲ್ ಷನ್)

ಎಂಬೀ ಸೇರುವ ಔಷಧವನ್ನು ಕೊಡಬೇಕು.

ಹಾಲಿನಲ್ಲಿ ಕೆಲವು ತೊಟ್ಟು ಬೆರಸಿ ಕೊಟ್ಟ ಕೂಡಲೇ ದೊಡ್ಡ ವ್ಯತ್ಯಾಸ ತೋರುವದು

ಅದು ಸಂತೋಷವೂ ಆನಂದವೂ ಸ ಹಜವಾಗಿ ಆಹಾರದ ರುಚಿ ಹೊಂದಿ ನಗುಬ ಚಿನ್ನ ತೋರಿಸುವದು.

ಕೈಯಿಂದ ಮುಟ್ಟಿ ತಯಾರಿಸಿದ್ದಲ್ಲ.

ಎಲ್ಲಾ ಔಷಧಮಾರಾಟಗಾರರಲ್ಲೂ ಸಿಕ್ಕುತ್ತದೆ
ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,
ಔಷಧಗಳ ಕಾರ್ಖಾನೆ,
ಲಂಡನ್, ಇಂಗ್ಲೆಂಡ್.

ಈ ಮೀನುಮನುಷ್ಯ ಇರುವ ಔಷಧವನ್ನೇ ಕೊಂಡುಕೊಳ್ಳಿ.

ಒಳ್ಳೇ ಸಮಯ

83-1

ಈ ಕ್ರಯಕ್ಕೆ ಎಂದಿಗೂ ಸಿಕ್ಕತಕ್ಕದಲ್ಲ.

ಈ ಕೆಳಗೆ ನಮೂದಿಸಿ ಇರುವ ೫ ರೂಪಾಯಿಗಳ ಗಡಿಯಾರವನ್ನು ಬರುವ ಜುಲೈ ಆಖೈರು ವರಿಗೆ ರೂ. ೩—೧೪—೦ ಗೆ ಕೊಡಲ್ಪಡುತ್ತ.



ಶ್ರೀವಿಕಸಿತಸುಮ, ಸ್ಫಟಿಕ ದರ್ಪಣ, ಸಾಮಾನ್ಯ ಪ್ರಮಾಣ, ಸಂಕುಚಿತಪರಿವರ್ತನವುಳ್ಳ ಗಡಿಯಾರವು, ೩೦ ಗಂಟೆಗಳ ಕಾಲಕ್ಕೆ ಬೀಗ ಕೊಡುವುದು, ೨೦ ವರುಷಗಳ ವರಿಗೆ ಚನ್ನಾಗಿ ನಡೆಯುತ್ತಿರುವುದು, ಗಟ್ಟಿಯಾಗಿ ಕೆಲಸ ಮಾಡಿರುವ ವಿರುವುಳ್ಳ ಡೈಯಲ್, ಮುಳ್ಳುಗಳು ಉಳ್ಳದ್ದು, ಬೀಗದ ಕೈಯಿಲ್ಲದೆ ಪೇಟೆಂಟು ನೂತನವಾದ ಹೊಸ ನಮೂನೆ ಮುಳ್ಳುಗಳು, ಮುಳ್ಳು ಸಹಿತ ಸಮಗ್ರಯಂತ್ರೋಪಕರಣವುಳ್ಳದ್ದು ಜಡಕೊಟ್ಟ ಉಕ್ಕಿನ ಭಾಗಗಳುಳ್ಳದ್ದು, ಧೂಳು ಸೇರದಷ್ಟು, ಸರಿಯಾದ ಕಾಲವನ್ನು ತೋರಿಸುತ್ತಿರುವದು, ಸುಲಭವಾಗಿ ಸರಿಮಾಡಿಕೊಳ್ಳತಕ್ಕದ್ದು ಸರಪಣಿ, ಪೆಟ್ಟಿಗೆ, ಗ್ಲಾಸ್, ಮತ್ತು ಸ್ಪ್ರಿಂಗ್ ಸಹಿತ ಮೊದಲಿನ ಕ್ರಯ ರೂ ೫. ಈಗಿನ ಕ್ರಯ ರೂ. ೩—೧೪—೦.

ಅಲಾರಂ ಟಯಂಪೀಸು.



ಇದು ಬಹಳ ಮೇಲಾದ ಸಾಮಾನುಗಳಿಂದ ತಯಾರಿಸಲ್ಪಟ್ಟದು (೩೦)ಗಂಟೆಗೊಂದು ಸಾರಿ ಬೀಗ ಕೊಡತಕ್ಕದ್ದು. ಸ್ವಲ್ಪವು ವ್ಯತ್ಯಾಸವಿಲ್ಲದಂತೆ ಕಾಲವನ್ನು ತೋರಿಸತಕ್ಕದ್ದು. ವಿದ್ಯಾರ್ಥಿಗಳಿಗೂ ಮತ್ತು ಆಫೀಸು ಉದ್ಯೋಗಸ್ಥರುಗಳಿಗೂ ವರ್ತಕರುಗಳಿಗೂ ಬಹಳ ಉಪಯೋಗವಾದದ್ದು. ಎರಡು ನಿಮಿಷಗಳ ಪರಿಯಂತರ ಗಾಢನಿದ್ರೆಯಲ್ಲಿ ಇದ್ದವರನ್ನು ಎಚ್ಚ . . . ಲಾರಂ ಧ್ವನಿ ಕೊಡತಕ್ಕದ್ದು. ಇದಕ್ಕೆ ನಾವು ೫ ವರುಷ . . . ಗೆ ಗ್ಯಾರಂಟಿ ಇದರ ಕ್ರಯ ರೂಪಾಯಿ ೨—೮—೦.

ಸಾದಾ ಟಯಂಪೀಸು.



ಇದು ಆಫೀಸುಗಳಿಗೂ, ಸ್ಕೂಲ್‌ಗಳಿಗೂ, ದೊಡ್ಡ ಮನುಷ್ಯರ ಮನೆಗಳಲ್ಲೂ ಇರುವದಕ್ಕೆ ಲಾಯಖಾದದ್ದು ೩೦ ಗಂಟೆಗೆ ಒಂದು ಸಾರಿ ಬೀಗ ಕೊಡತಕ್ಕದ್ದು. ಅನೇಕ ಕಾಲಗಳ ವರಿಗೆ ಒಂದು ಸೆಕಂಡು ಸಹ ವ್ಯತ್ಯಾಸವಿಲ್ಲದೇ ನಡಿಯತಕ್ಕದ್ದು. ಇದಕ್ಕೆ ನಾವು ೫ ವರುಷಗಳವರಿಗೆ ಗ್ಯಾರಂಟಿ. ಕ್ರಯ ರೂಪಾಯಿ ೧—೮—೦.

ವಿಳಾಸ—ಫರ್ರ ವಾಚು ಕಂಪನಿ ಮ್ಯಾನೇಜರ್,
ಪಾರ್ಕ್ ಟವರ್, ಮದ್ರಾಸ್.

ವೃತ್ತಾಂತ ಪತ್ರಿಕೆ.

—:o:—

ಸ ೧೯೦೬ ನೇ ಇಸವಿ ಮೇ ತಾ ೩೧ ನೇ ಗುರುವಾರ

ರಷ್ಯಾ ರಾಜ್ಯದ ರಾಜಕೀಯ ವಿಷಯಗಳು.

ರಷ್ಯಾ ಚಕ್ರಾಧಿಪತ್ಯದಲ್ಲಿ ಅಲ್ಲಿನ ರಾಜ್ಯಭಾರವನ್ನು ನಿರ್ವಹಿಸುತ್ತಿರುವ ದೊಡ್ಡ ದೊಡ್ಡ ಅಧಿಕಾರಿಗಳು ನಿರ್ವಾ

...ಮೂಗಿಯೂ ಪ್ರಜಾಭಿಮಾನದಿಂದಲೂ ಕಾರ್ಯಗಳನ್ನು ನಡಸುವುದಿಲ್ಲವೆಂದು ಪ್ರಜಾ ಕೋಟಿಗಳು ಅವರ ಮೇಲೆ ತಿರುಗಿಬಿದ್ದು ಆಗಿಂದಾಗ್ಗೆ ನೆಮ್ಮದಿಗೆ ಭಂಗವನ್ನುಂಟುಮಾಡಿ, ಕೆಲವು ಅಧಿಕಾರಿಗಳನ್ನು ಕೊಂದುಹಾಕಿ ಗಲಭೆಯನ್ನೆಬ್ಬಿಸಿದರೂ ಅಧಿಕಾರಿಗಳು ಪ್ರಜೆಗಳನ್ನು ಕೊಂದು ಅವರ ಮುಖಂಡರನ್ನೆಲ್ಲಾ ಹಿಡಿದು ಬಂಧನದಲ್ಲಿ ಹಾಕಿರುವರು. ಚಕ್ರವರ್ತಿಯವರು ಪ್ರಜೆಗಳನ್ನು ಸಂತೈಸಿ ಅವರ ಇಷ್ಟಪಟ್ಟ ಪ್ರಕಾರ ಡ್ಯೂಮಾ ಎಂಬೊಂದು ಪ್ರಜಾಪ್ರತಿನಿಧಿ ಸಮಾಜವನ್ನು ಸ್ಥಾಪಿಸಿದರೂ ನಮ್ಮ ವಾಚಕರಿಗೆ ತಿಳಿದಿರುವಷ್ಟೆ. ಈ ಪ್ರಜಾಪ್ರತಿನಿಧಿಗಳು ಚಕ್ರವರ್ತಿಯವರಿಗೆ ಒಂದು ವಿಜ್ಞಾಪನಾ ಪತ್ರಿಕೆಯನ್ನು ಬರೆದು, ಸೆರೆಯಲ್ಲಿಟ್ಟಿರುವ ಮುಖಂಡರಾದ ಪ್ರಜೆಗಳನ್ನೆಲ್ಲಾ ಬಿಟ್ಟುಬಿಡಬೇಕೆಂತಲೂ, ದುಷ್ಟಾಧಿಕಾರಿಗಳನ್ನೂ ಮಂತ್ರಿಗಳನ್ನೂ ಕೆಲಸದಿಂದ ತೆಗೆದುಹಾಕಬೇಕೆಂತಲೂ, ಪ್ರತಿನಿಧಿಗಳನ್ನು ಚುನಾಯಿಸುವಂಥಾ ಹಕ್ಕನ್ನು ಸರ್ವಸಾಮಾನ್ಯವಾಗಿ ಸಕಲ ಪ್ರಜೆಗಳಿಗೂ ಕೊಡಬೇಕೆಂತಲೂ, ಇನ್ನು ಮುಂದೆ ಪ್ರಜಾಪ್ರತಿನಿಧಿಗಳ ಅಭಿಪ್ರಾಯದಂತೆಯೇ ರಾಜ್ಯಭಾರ ಕಾರ್ಯಗಳನ್ನು ನಿರ್ವಹಿಸಬೇಕೆಂತಲೂ ಬೇಡಿಕೊಂಡರು. ಚಕ್ರವರ್ತಿಯವರು ಈ ವಿಜ್ಞಾಪನೆಗಳನ್ನು ಕುರಿತು ತಮ್ಮ ಮಂತ್ರಿಗಳ ಸಂಗಡ ಪರ್ಯಾಲೋಚನೆ ಮಾಡಿ ಪ್ರಜಾನೆಮ್ಮದಿಗೆ ಭಂಗ ಉಂಟಾಗಿರುವಾಗ್ಗೆ ಮುಖಂಡರನ್ನು ಸೆರೆಮನೆಯಿಂದ ಬಿಡುವುದು ಸಹಜವಲ್ಲವೆಂತಲೂ ಮಂತ್ರಿಗಳನ್ನು ವಜಾಮಾಡುವುದೂ ಬಿಡುವುದೂ ತಮ್ಮ ಚಿತ್ತವೆಂತಲೂ, ರೈತಪ್ರಜೆಗಳನ್ನು ಕಾಪಾಡುವ ವಿಷಯದಲ್ಲೂ ಸಕಲ ಪ್ರಜೆಗಳಿಗೂ ವಿದ್ಯೆ ಕಲಿಸತಕ್ಕ ಭಾಗದಲ್ಲೂ ಸರಿಯಾದ ಏರ್ಪಾಡುಗಳನ್ನು ಮಾಡುವೆವೆಂತಲೂ ಅಪ್ಪಣೆಕೊಟ್ಟಿದ್ದಾರೆ. ಈ ಪ್ರತಿನಿಧಿಸಭೆಯವರು ಮುಂದಿನ ತಿಂಗಳಲ್ಲೂ ಎರಡು ವಾರಗಳ ತನಕ ಸಭೆಸೇರುವದರಿಂದ ಅವರು ಇನ್ನು ಕೆಲವು ರಾಜಕೀಯ ವಿಷಯಗಳನ್ನು ಚರ್ಚಿಸುವರೆನ್ನುವುದಕ್ಕೆ ಸಂಶಯವಿಲ್ಲ.

ಒಳದೇಶದ ವೃತ್ತಾಂತಗಳು.

ದಿವಾನ್ ವಿ. ಪಿ. ಮಾಧವರಾಯರು ಈ ದಿನ ಮಧ್ಯಾಹ್ನ ನಾಳೆ ಬೆಂಗಳೂರಿಗೆ [illegible] ದಯಮಾಡುವವರಾಗಿದ್ದಾರೆ.

• ••

ಮೈಸೂರು ಮಹಾರಾಣಿ ಛತ್ರದವರಾಗಿದ್ದ ಮಿ. ಗೋಪಾಲೈಯ್ಯಂಗಾರ್ಯರು ಕಳೆದವಾರ ಬೆಂಗಳೂರಿನಲ್ಲಿ ಕಾಲವಾದರೆಂದು ತಿಳಿಸಲು ವಿಷಾದಪಡುತ್ತೇವೆ.

••••

ಮಾಜೀ ದಿವಾನ್ ಸರ್ ಕೃಷ್ಣಮೂರ್ತಿಯವರ ಪತ್ನೀಯವರಿಗೆ ಈಗ ಶಾರೀರವಾಯು ಪ್ರಾಪ್ತವಾಗಿದೆ ಎಂದು ಕೇಳುತ್ತೇವೆ. ಈಶ್ವರನು ಅವರಿಗೆ ಬೇಗನೆ ನಿವಾರಣೆಯಾಗಲೆಂದು ಹಾರೈಸುವೆವು.

••••

ಕಳೆದ ವಾರ ಚಿತ್ರದುರ್ಗದ ಟವನ್ನಲ್ಲಿ ಕಂಡುಕಳ್ಳರು ಒಬ್ಬ ಶೆಟ್ಟಿಯ ಮನೆಗೆ ನುಗ್ಗಿ ಮನೆಯವರನ್ನು ಹಿಂಸಿಸಿ, ಸುಮಾರು ೧,೫೦೦ ರೂಪಾಯಿ ನಗನಾಣ್ಯಗಳನ್ನು ತೆಗೆದುಕೊಂಡು ಹೋದರೆಂದು ತಿಳಿದುಬಂದಿದೆ.

••••

ರಾಜಧಾನಿಯ ಪ್ರಜೆಗಳಿಗೆ ನೀರಿನ ಕಷ್ಟ ಇನ್ನು ನಿವಾರಣೆಯಾಗಲಿಲ್ಲ. ನಲ್ಲಿಗಳಲ್ಲಿ ಸ್ವಲ್ಪ ಹೊತ್ತು ನೀರು ಬಿಟ್ಟು ಕಟ್ಟಿಬಿಡುತ್ತಾರೆ. ಮ್ಯುನಿಸಿಪಲ್ ಅಧಿಕಾರಿಗಳು ಈ ವಿಷಯಕ್ಕೆ ವಿಶೇಷವಾಗಿ ಗಮನಕೊಡಬೇಕೆಂದು ನಿರೀಕ್ಷಿಸುತ್ತೇವೆ.

••••

ನೊರಬಿಡ ವಾರ್ತಾಹರರು ಬರೆಯುತ್ತಾರೇನೆಂದರೆ— "ಕಳೆದ ೧೨ನೇ ವೃತ್ತಾಂತ ಪತ್ರಿಕೆಯಲ್ಲಿ ಪ್ರಕಟವಾದ ನೊರಬಿಡ ಸ್ಕೂಲಿನ ವಿಚಾರ ನಿಜವಲ್ಲ. ಅದಕ್ಕೆ ಮಾಡುವವರು ಆಕ್ಷೇಪಣೆಯನ್ನು ಕರೆಯದೆ ಹಾಗೆಯೇ ಇರದು [illegible] ನಡೆಸಿಕೊಂಡಂತೆ ಪರಿಷ್ಕಾರವಾಗಿ ಈಚೆಗೆ ತಿಳಿದುಬಂದಿದೆ" ಎಂದಿದೆ.

••••

ಕಳೆದ ಶನಿವಾರ ರಾಜಧಾನಿಯ ಟೌನ್ ಹಾಲಿನಲ್ಲಿ ಮ್ಯುನಿಸಿಪಲ್ ಕಮಿಷನರುಗಳ ಸಭೆ ಸೇರಿ ಬೆಂಗಳೂರಿನ ಉಪನಿಯಮಗಳನ್ನು ನಡಸಿದರು. ಅಲ್ಲಿ ನಡೆದ ಸಂಗತಿಗಳನ್ನು ಮುಂದಿನ ವಾರ ವಿವರಿಸಬೇಕೆಂದಿದ್ದೇವೆ. ಅಲ್ಲದೆ ಈ ವಾರ ಇತರ ಕಡೆಗಳಿಂದ ಬಂದಿರುವ ಅನೇಕ ವಾರ್ತೆಗಳನ್ನು ಪ್ರಕಟಿಸಲು ಅವಕಾಶವಾಗದೆ ಇರುವುದೆಂದು ವಿಷಾದಿಸುತ್ತೇವೆ.

••••

ಈ ವಾರ ರಾಜಧಾನಿಯಲ್ಲಿ ನಡೆಯುವ ಶ್ರೀಮನ್ಮಹಾರಾಜರವರ ವರ್ಧಂತಿ ಉತ್ಸವಗಳಿಗಾಗಿ ಎಲ್ಲಾ ಡಿಸ್ಟ್ರಿಕ್ಟುಗಳಿಂದಲೂ ಮುಖ್ಯರಾದ ಅಧಿಕಾರಿಗಳು ಬರುವವರಾಗಿದ್ದಾರೆ. ಇದಲ್ಲದೆ ಸುಮಾರು [illegible] ಯೂರೋಪಿಯನ್ ಸರದಾರರೂ ಅವರ ಪತ್ನಿ ಛತ್ರಿಯರೂ ಬಂದಿಳಿಯುವರು. ಪುರಪ್ರಮುಖರು ವೈಭವವಾದ ಏರ್ಪಾಡುಗಳನ್ನು ಮಾಡಲಾರಂಭಿಸಿದ್ದಾರೆ.

••••

ಮೈಸೂರು ಮಹಾರಾಜಾ ಕಾಲೇಜಿನ ವಿದ್ಯಾರ್ಥಿನಿಲಯದ ಮ್ಯಾನೇಜರಾಗಿದ್ದ ಮಿ| ಕಸ್ತೂರಿರಂಗಯ್ಯರು ಒಂದು ತಿಂಗಳಿಂದಲೂ ಕಾಯಿಲೆಯಾಗಿ ನರಳುತ್ತಾ, ವಿದ್ಯಾರ್ಥಿಗಳ ಪ್ರೀತಿಪಾತ್ರರಾಗಿದ್ದರು. ಅವರಿಗೆ ಇನ್ನೂ ೩೫ ವರ್ಷ ವಯಸ್ಸಾಗಿತ್ತು.

••••

ಚಿಂತಾಮಣಿಯಲ್ಲಿ ತಾಲ್ಲೂಕ್ ಆಫೀಸಿನ ಹತ್ತಿರದಲ್ಲೇ ಇಬ್ಬರು ಮನೆ ಕಟ್ಟಿಕೊಳ್ಳುವುದಕ್ಕೆ ಅಪ್ಪಣೆಯನ್ನು ಪಡೆದರು. ಡೆಪ್ಯುಟಿ ಕಮಿಷನರು ಆ ಅಪ್ಪಣೆಯನ್ನು ವಜಾಮಾಡಿದರು. ರೆವಿನ್ಯೂ ಕಮಿಷನರು ಅವರಿಗೆ ಅಪ್ಪಣೆಕೊಡಬೇಕಾದದ್ದು ನ್ಯಾಯವೆಂದು ಅಭಿಪ್ರಾಯಪಟ್ಟು ಆ ರೀತಿ ಅಪ್ಪಣೆ ಕೊಟ್ಟರು. ಅದರ ಮೇಲೆ ಗವರ್ನಮೆಂಟಿನವರು ರೆವಿನ್ಯೂ ಕಮಿಷನರ ಹುಕುಮನ್ನು ರದ್ದುಮಾಡಿ, ಅವರಿಗೆ ಮನೆ ಕಟ್ಟಿಕೊಳ್ಳುವುದಕ್ಕೆ ಅಪ್ಪಣೆ ಕೊಡಕೂಡದೆಂದು ಹುಕುಂ ಕೊಟ್ಟಿದ್ದಾರೆ.

••••

ಕಳೆದ ವಾರ ನಾವು ತಿಳಿಸಿದಂತೆ ಮೈಸೂರು ಸರ್ಕಾರದವರು ತುಮಕೂರು ಡಿಸ್ಟ್ರಿಕ್ಟಿನ ರೈತಪ್ರಜೆಗಳ ಕಷ್ಟನಷ್ಟಗಳನ್ನು ಕುರಿತು, ಡೆಪ್ಯುಟಿ ಕಮಿಷನರ ಶಿಫಾರಸಿನ ಪ್ರಕಾರ. ಸ್ವಲ್ಪವೂ ಫಸಲು ಬೆಳೆ ಆಗದೆ ಹೋದ ಜಮೀನುಗಳ ೧೯೦೫—೦೬ ನೇ ಸಾಲಿನ ಅರ್ಧ ಕಂದಾಯವನ್ನು ರಿಮಿಷನ್ ಮಾಡಿ, ಮಿಕ್ಕ ಜಮೀನುಗಳಲ್ಲಿ ನಾಲ್ಕಾಣೆಯಷ್ಟು ಬೆಳೆಯೂ ಆಗದಿರುವ ಸಂದರ್ಭದಲ್ಲಿ ಅಂಥಾ ಜಮೀನುಗಳ ಕಡೇ ಎರಡು ಕಿಸ್ತುಗಳ ಕಂದಾಯವನ್ನು ಸಂದರ್ಭಾನುಸಾರ ನಾಲ್ಕು ಇಲ್ಲವೇ ಆರು ಕಿಸ್ತುಗಳಂತೆ ಕಂಟುಹಾಕಿ ವಸೂಲ್ಮಾಡತಕ್ಕದ್ದೆಂದು ಹುಕುಂ ಮಾಡಿದ್ದಾರೆ. ಇದರಿಂದ ಆ ಡಿಸ್ಟ್ರಿಕ್ಟಿನ ಆರೀ ಕಂದಾಯದಲ್ಲಿ ಸರ್ಕಾರದವರು ಸುಮಾರು ೪೪ ೦೦೦ ರೂಪಾಯಿ ರಿಮಿಷನ್ ಮಾಡಿದಂತಾಯಿತು.

••••

ಮೊನ್ನೆ ಸೋಮವಾರ ಸಾಯಂಕಾಲವೇ ಶ್ರೀಮನ್ಮಹಾರಾಜರವರು ನೀಲಗಿರಿಯಿಂದ ಮೋಟಾರ್ ಗಾಡಿಯಲ್ಲಿ ದಯಮಾಡಬೇಕಾಗಿತ್ತು. ಆದರೆ ಅರಮನೆಯಿಂದ ಅವರಿಗಾಗಿ ಕಳುಹಿಸಿದ್ದ ಮೋಟಾರ್ ಗಾಡಿಯು ನೀಲಗಿರಿಯನ್ನು ತಲಪದೆ ದಾರಿಯಲ್ಲೇ ಮುರಿದು, ನಡೆಸುವವನಿಗೆ ಗಾಯವಾಗಿ ವಾಪಸ್ ಬಂದಿತು. ಅದನ್ನು ತಿಳಿದು ಶ್ರೀಮನ್ಮಹಾರಾಜರವರು ರೈಲಿನಲ್ಲೇ ದಯಮಾಡುವುದಾಗಿ ಅಪ್ಪಣೆ ಕೊಟ್ಟರು. ಅದೇ ಪ್ರಕಾರ ಮಹಾಮಾತೃಶ್ರೀಯವರೂ ಮಹಾರಾಜರವರೂ ಯುವರಾಜರವರೂ ಪರಿವಾರ ಸಹಿತ ಮೊನ್ನೆ ಸೋಮವಾರ ಬೆಳಗ್ಗೆ ನೀಲಗಿರಿಯಿಂದ ಸ್ಪೆಷಲ್ ರೈಲಿನಲ್ಲಿ ಪ್ರಯಾಣ ಮಾಡಿ, ಮಂಗಳವಾರ ಬೆಳಗ್ಗೆ ಬೆಂಗಳೂರನ್ನು ತಲಪಿ, ಅಲ್ಲಿ ಸ್ಟೇಷನಿನಲ್ಲಿ ಭೋಜನಾದಿಗಳನ್ನು ತೀರಿಸಿಕೊಂಡು, ಮಧ್ಯಾಹ್ನ ೧೨॥ ಗಂಟೆಗೆ ಸ್ಪೆಷಲ್ ರೈಲು ಹತ್ತಿ ಸಾಯಂಕಾಲ ೬ ಗಂಟೆಗೆ ರಾಜಧಾನಿಯನ್ನು ಸುಖವಾಗಿ ಸೇರಿದರು. ಬೆಂಗಳೂರು ಸ್ಟೇಷನಿನಲ್ಲಿ ದಿವಾನರೇ ಮೊದಲಾದ ಅಧಿಕಾರಿಗಳೂ, ರಾಜಧಾನಿಯ ಸ್ಟೇಷನಿನಲ್ಲಿ ಅರಸು ಮಕ್ಕಳೂ ಅಧಿಕಾರಿಗಳೂ ದೊಡ್ಡ ಮನುಷ್ಯರೂ ಕಾದಿದ್ದು ರಾಜವರ್ಗದವರಿಗೆ ಹಾರತುರಾಯಿಗಳನ್ನರ್ಪಿಸಿ ಕುಶಲಪ್ರಶ್ನೆಯನ್ನು ಮಾಡಿದರು. ಗೌರವಾರ್ಥವಾದ ತೋಪುಗಳು ಹಾರಿಸಲ್ಪಟ್ಟವು. ಅವರ ಸಂಗಡ ಪ್ರೈವೆಟ್ ಸೆಕ್ರೆಟರಿ ಮಿ॥ ಮೆಕಾನಕಿಯವರು, ವಿ. ರಾಘವೇಂದ್ರರಾಯರು ಲೆಫ್ಟಿ. ಹೀಲ್ ಸಾಹೇಬರು ಮೊದಲಾದವರೆಲ್ಲಾ ಬಂದಿರುತ್ತಾರೆ.

ತಾಲ್ಲೂಕು ವರ್ತಮಾನಗಳು.

ಚಿಕ್ಕಮಗಳೂರು.—ಈ ಊರಿನಲ್ಲಿ ಇದೇ ತಿಂಗಳು ೧೩ ನೇ ತಾ॥ ಒಂದು ಸಲ ಒಳ್ಳೇ ಮಳೆಯಾಯಿತು. ಈಚೆಗೆ ಇನ್ನೂ ಮಳೆ ಬರಲಿಲ್ಲ. ಬಿಸಿಲಿನ ಧಗೆಯು ತಗ್ಗಲಿಲ್ಲ. ಇಲ್ಲಿಗೀಗಲೂ ಕಡೂರು ತಾಲ್ಲೂಕಿನ ಪ್ರಾಂತ್ಯ ಕೆಟ್ಟ ಮಳೆ ಆಗಿರುವುದಾಗಿ ತೋರುತ್ತೆ.— ಇದೇ ತಿಂಗಳು ೨೦ ನೇ ತಾ॥ ಇಲ್ಲಿಗೆ ಸುಮಾರು ೧೦ ಮೈಲಿ ದೂರದಲ್ಲಿರುವ ಮಾವಿನಕೆರೆ ಗ್ರಾಮದ ಮುಂಭಾಗದಲ್ಲಿ ಒಂದು ಮರದ ಕೆಳಗೆ ಯಾರೋ ಸುಮಾರು ೩ ತಿಂಗಳಿನ ಒಂದು ಗಂಡು ಕೂಸನ್ನು ಮಲಗಿಸಿದ್ದುದನ್ನು ಆ ಗ್ರಾಮದ ಪಟೇಲರು ಕಂಡು ಕೂಡಲೇ ಪೊಲೀಸಿಗೆ ರಿಪೋರ್ಟ್ ಮಾಡಿದ್ದರ ಮೇಲೆ ಪೊಲೀಸಿನವರು ಅದನ್ನು ಆಸ್ಪತ್ರೆಗೆ ಕಳುಹಿಸಲು ಲೇಡಿ ಅಪಾಥಿಕೆರಿ ಮಿಸ್ ಮಿಲ್ಲರ್ ಯವರು ಅದನ್ನು ತಮ್ಮ ಆಸ್ಪತ್ರೆಯಲ್ಲಿ ಪೋಷಣೆಮಾಡುತ್ತಿದ್ದಾರೆ. ಪೊಲೀಸಿನವರು ಅದರ ತಾಯಿಯನ್ನು ಪತ್ತೆಮಾಡುವ ತರದೂದಿನಲ್ಲಿದ್ದಾರೆ.—ಇಲ್ಲಿ ಕೆಲವು ಮನೆಗಳಲ್ಲಿ ಇಲಿಗಳು ಬಿದ್ದವೆಂದು ವರ್ತಮಾನ ಬಂದಕೂಡಲೆ ಡಾಕ್ಟರ್ ಸಾಹೇಬರು ಆ ಮನೆಗಳನ್ನು ಚೆನ್ನಾಗಿ ಡಿಸಿನ್ಫೆಕ್ಷನ್ ಮಾಡಿಸಿದರೆಂದು ಕೇಳುತ್ತೇನೆ.—ಈ ಡಿಸ್ಟ್ರಿಕ್ಟಿನ ಕೆಲವು ಕಡೆಗಳಲ್ಲಿ ಸಾಲುಮರಗಳ ರೆಂಬೆಗಳು ರಸ್ತೆಯ ಮೇಲೆ ಬಂದು ತಿರುಗಾಡುವ ಗಾಡಿಗಳ ಕಮಾನುಗಳಿಗೆ ತಗಲುವವಲ್ಲದೆ ಸಕ್ಕರೆ ಪಟ್ಟಣದಿಂದ ಚಿಕ್ಕಮಗಳೂರಿಗೆ ಹೋಗುವ ರಸ್ತೆಯ ಕೆಲವು ಕಡೆಗಳಲ್ಲಿ ಮರಗಳ ಬೇರುಗಳು ರಸ್ತೆಯ ಮಧ್ಯದಲ್ಲಿ [illegible] ಬಂಡಿಯ ಚಕ್ರಗಳು ಇವುಗಳ ಮೇಲೆ ಹತ್ತಿ ಘಟಿಸುತ್ತವೆ. ಇದಲ್ಲದೆ ಕತ್ತಲೆ ಕಾಲದಲ್ಲಿ ತಿರುಗಾಡುವ ಪಥಿಕರು ಕಾಣದೆ ಅವುಗಳನ್ನು ಎಡವಿ ಬೀಳುವುದಕ್ಕೂ ಕಾರಣಗಳಾಗಿವೆ.

ಶಿಕಾರಿಪುರ.—ಇಲ್ಲಿ ಬಿಸಿಲಿನ ತಾಪ ದುಸ್ಸಹವಾಗಿದೆ. ನಾಲ್ಕು ಸುತ್ತಲೂ ಇಲ್ಲ. ಕಾಲರಾವು ಎಲ್ಲರಲ್ಲಿಯೂ ತುಂಬಿದೆ. ಇದೇ ತಿಂಗಳು ೫ ನೇ ಸೋಮವಾರ ಎರವನೆ ಕೌನ್ಸಿಲರ ಮಿ॥ ಕೃಷ್ಣಣ್ಣ ಚೆಟ್ಟಿಯವರ ಸಮಾಧಿಯು ಈ ಕಡೆ ದರ್ಶನಮಾಡಿಸಿ ಊರು ಕೆರೆಯ ಪಟ್ಟಿಗೆ ಶೃಂಗರಿಸಲ್ಪಟ್ಟಿತ್ತು. ಅಗ್ನಿ ಪಳಿಯೂರ್ ಚಪ್ಪರದಲ್ಲಿ ಸೇರಿದ್ದ ಚಪ್ಪರದಲ್ಲಿ ಬಾಲಿಕೆಯರು ಒಪ್ಪರನ್ನು ಸಂಘಿಸಿ ಪದಗಳನ್ನು ಹಾಡಿದರು. ವಾರದ ಬೆಳಗ್ಗೆ ಒಂದು ಅಸಿಸ್ಟೆಂಟ್ ಕಮಿಷನರು, ಅಮಲ್ದಾರರು, ಇತರ ಕೆಲವು ಮಹನೀಯರೊಡನೆ ಟವನ್ ಸುತ್ತಿ ಪರೀಕ್ಷಿಸಿದರು. ಮತ್ತು ಪಳಿಯೂರು ವರ್ನ್ಯಾಕ್ಯುಲರ್ ಸ್ಕೂಲಿಗೆ ಎಪ್ಪಿರೋಡನೆ ಬಂದು ಪರೀಕ್ಷಿಸಿ ಮಕ್ಕಳ ಇಂಪಾದ ಗಾನವನ್ನು ಮೆಚ್ಚಿ ಕೇಳಿ ಪೂರ್ಣ ಸ್ಪಷ್ಟವಾಗಿ ತಮ್ಮ ಅಭಿಪ್ರಾಯವನ್ನು ಅಲ್ಲಿಯ ಪುಸ್ತಕದಲ್ಲಿ ಬರೆದರು. ಇವರು ಬಂದಿರುವ ವಾರ್ತೆಯನ್ನು ಕೇಳಿ ದೂರ ಗ್ರಾಮಸ್ಥರೂ ಊರಿನವರೂ ತಮ್ಮ ತಮ್ಮ ಅಹವಾಲುಗಳನ್ನು ಅರ್ಜಿಗಳ ಮೈಲಿ ದೂರವಾಗಿರುವ ಚುಚರ್ಗುಂಡಿ ಎಂಬ ಗ್ರಾಮದಲ್ಲಿ ಆಕಸ್ಮಾತ್ತಾಗಿ ಒಬ್ಬನ ಮನೆಯಲ್ಲಿದ್ದ ಎರಡು ಹೇಮೆಯ್ಯೆಯ ಡಬ್ಬಗಳಿಗೆ ಬೆಂಕಿ ತಗಲಿ ಆ ಮನೆಯೂ, ಅದರ ಸಮೀಪದ ಮನೆಗಳೂ ಹತ್ತಿಕೊಂಡು, ಉರಿಯು ಮನೆಯಿಂದ ಮನೆಗೆ ವ್ಯಾಪಿಸಿ ಕೊನೆಗೆ ಊರಿಗೆ ಊರೇ ಸಂಪೂರ್ಣವಾಗಿ ಉರಿದು ಭಸ್ಮವಾಯಿತು. ಕುಡಿಯುವ ನೀರೇ ಮೊದಲಿಗೆ ಇಲ್ಲದ್ದರಿಂದ ಬೆಂಕಿ ಆರಿಸಲು ಬಹು ಅನುಕೂಲವಾಯಿತು. ಅದರ ಜ್ವಾಲೆ ಅಂತರಿಕ್ಷವನ್ನು ಮುಟ್ಟಿತು. ಈ ಅನಾಹುತದಿಂದ ಸುಮಾರು ಲಕ್ಷಾಂತರ ರೂಪಾಯಿ ನಷ್ಟವಾಗಿದೆ ಎಂದು ಹೇಳುವರು. ಈಗ ಅವರ ಸಂಕಟವನ್ನು ವಿವರಿಸಲು ನಮ್ಮಿಂದಾಗದು. ಆಹಾರ ಸಾಮಗ್ರಿಗಳೂ, ಹೊದಿಯುವ ಬಟ್ಟೆಬರೆಗಳೂ ಏನೇನೂ ಇಲ್ಲದೆ ಅವರು ಮರಗಳ ಕೆಳಗೂ ಹಾದಿ ಬೀದಿಗಳಲ್ಲಿ ಬಿಸಿಲಿನಲ್ಲೂ ಬಿದ್ದಿದ್ದಾರೆ. ಇತರ ಗ್ರಾಮಗಳ ಕೆಲವು ದಯಾಳುಗಳು ಅವರ ಅನ್ನದ ಮಟ್ಟಿಗೆ ಸ್ವಲ್ಪ ಅನುಕೂಲ ಮಾಡಿಕೊಟ್ಟಿದ್ದಾರೆ. ಅವರಿಗೆ ಪ್ರಾಪ್ತವಾಗಿರುವ ಇಂಥಾ ದುರ್ದೆಸೆಯಲ್ಲಿ ಕಾಲರಾ ಅವರನ್ನೇ ಆಹಾರವನ್ನಾಗಿ ಕೂಗಿಕೊಳ್ಳುತ್ತಾ ಬರುತ್ತಿದೆ. ಇಂಥಾ ಪರಿತಾಪಕರವಾದ ಸ್ಥಿತಿಯಲ್ಲಿರುವವರನ್ನು ಎಲ್ಲರೂ ಕನಿಕರಿಸಿ ತಮ್ಮಿಂದಾದ ಸಹಾಯ ಮಾಡುವರೆಂದು ನಂಬಿದ್ದೇವೆ.—ಈ ಊರಿನಲ್ಲಿ ಈ ವರೆಗೂ ಜ್ವರ ವಾರಂಟಿನ್ನಾ ಹಿಡಿದು ಬಂಗಳು ಜನರನ್ನು ಬಾಧಿಸಿ ಕೊಲ್ಲುತ್ತಿದ್ದದ್ದು ಸಾಲದೆ, ಈಗ ಅದರ ಜೊತೆಗೆ ಕಾಲರಾ ಸಹ ಹುಟ್ಟಿ ಬಹು ಜೋರಾಗಿದೆ. ಆಗಲೇ ಕೆಲವರು ಕಾಲವಾದರು. ಸುತ್ತುಮುತ್ತು ಗ್ರಾಮಗಳಲ್ಲಿಯೂ ಹಬ್ಬಿಗಿದೆ. ಅನೇಕರು ಪ್ರಾಣಭೀತಿಯಲ್ಲಿದ್ದಾರೆ. ಈ ವಿಪತ್ತಿನ ಪರಿಹಾರಾರ್ಥವಾಗಿ ವೀರಶೈವರು, ಕುರುಬರು, ಮುಸಲ್ಮಾನರು ಪ್ರತಿ ರಾತ್ರಿಯೂ ಭಜನೆ ಮಾಡುತ್ತಿರುವರು. ಮತ್ತೆ ಕೆಲವರು ತಮ್ಮ ತಮ್ಮ ಇಷ್ಟ ದೇವತಾಪೂಜೆ ಮಾಡುವರು. ಆದರೂ ರೋಗವು ಶಮನವಾಗಲಿಲ್ಲ.

ತುಂಕೂರು.—ಆಕಾಶವು ನಿರ್ಮಲವಾಗಿ ಬಿಸಿಲು ಬೆಂಕಿಯೋಪಾದಿಯಲ್ಲಿ ಕಾಯುತ್ತಲಿದೆ. ಗಾಳಿ ಬಲವಾಗಿದ್ದರೂ ಧಗೆ ಮಾತ್ರ ಸಹಿಸಲಾಗದು. ಯಾವಾಗಲೂ ಈ ಕಾಲದಲ್ಲಿ ಮಳೆ ಸಮೃದ್ಧಿಯಾಗಿ ಬಂದು ಭೂಮಿಯು ತೃಣಜಲಪರಿತವಾಗಿ ಹೊಲಗಳು ಉಳ್ಳೆ ಪ್ರೋಕ್ಷಿಸಿ ಬೀಜ ಮೇರಾಬಿಗೆ ಸಿದ್ಧವಾಗುತ್ತಿದ್ದವು. ಪ್ರಕೃತದಲ್ಲಿ ಹೊಲಗಳಿಗೆ ಗೊಬ್ಬರ ಹೊಡೆಯಲೂ ಕೂಡ ಅವಕಾಶವಿಲ್ಲದಂತಾಗಿ ಜೋರಾಗಿ ನೋಡಿದರೆ ಮರುಭೂಮಿಗೆ ಸಮವಾಗಿ ಕಾಣಿಸುತ್ತಲಿದೆ. ದಿನದಿನಕ್ಕೆ ದನಗಳಿಗೂ ಜಾನುವಾರುಗಳಿಗೂ ಕಷ್ಟಪರಂಪರೆಗಳು ಹೆಚ್ಚುತ್ತಲಿವೆ. ಇಲ್ಲಿನ ಕೆರೆಯೆಲ್ಲವೂ ಬತ್ತಿಹೋಗಿ ಅದರಲ್ಲಿರುವ ಭಾವಿಯಲ್ಲಿಯೂ ಕೂಡ ನೀರಿಲ್ಲದಂತಾಗಿದೆಯಂತೆ. ಇವರ ಗತಿಯೇ ಈ ರೀತಿ ಇರುವಾಗ್ಗೆ ಇತರ ಜಲವಸತಿ ವಿಷಯ ಹೇಳತಕ್ಕದ್ದೇನಿದೆ? ಈ ತಾಲ್ಲೂಕಿನ ಕೆಲವು ಭಾಗಗಳಲ್ಲಿ ದನಗಳಿಗೆ ಮೇವಿಗೆ ತುಂಬಾ ತಂಗಾಟವಾಗಿರುವದರಿಂದ ಮರಗಳ ಎಲೆಗಳನ್ನು ಕಿತ್ತು ಹಾಕಿ ಕಾಪಾಡುತ್ತಿದ್ದಾರೆ. ಇಲ್ಲಿ ರಂಗಾಯಿಗೆ ಎರಡು ಕೊರೆ ದೊರೆಯುವುದು ಕೂಡ ದುಸ್ತರವಾಗಿದೆ. ಮತ್ತೆ ರೈತರು ದನಕರುಗಳನ್ನು ಹೇಗೆ ಉಳಿಸಿಕೊಂಡಾರೋ ತಿಳಿಯದು. ಈ ಟವನ್ ಸುತ್ತಮುತ್ತ ಇರುವ ಬಾಗಾಯತುಗಳಲ್ಲಿರುವ ಭಾವಿಗಳೆಲ್ಲಾ ಬತ್ತಿ ವೃಕ್ಷಗಳು ಕೂಡ ಬಿಸಿಲಿಂದ ತುದಿಯ ವರಿಗೂ ಒಣಗಿ ನಿಂತಿವೆ. ಈ ಸಲದ ತೊಂದರೆಗಳು ಇಷ್ಟೆಂದು ಹೇಳುವುದು ಅಸಾಧ್ಯವಾಗಿದೆ.— ಈ ಸಲ ಇಲ್ಲಿ ನಡೆದ ಮದುವೆಗಳಿಗೆ ಬೇರೆ ಕಡೆಗಳಿಂದ ವೇಶ್ಯಾಂಗನೆಯರು ನರ್ತನಕ್ಕಾಗಿ ಕರೆಸಲ್ಪಟ್ಟಿದ್ದರು.—ನೆನ್ನೆ ತಾ॥ ೧೭ ನೇ ಗುರುವಾರ ರಾತ್ರಿ ಸುಮಾರು ೧೧ ಗಂಟೆ ಸಮಯದಲ್ಲಿ ದಕ್ಷಿಣ ದಿಕ್ಕಿನಲ್ಲಿ ಒಂದು ದೊಡ್ಡ ನಕ್ಷತ್ರವು ಕೋಟಿ ದಗಲು ಹತ್ತಿ ಹತ್ತಿಸಿದ ಪ್ರಕಾಶದಂತಾಗಿ ಬಹುಪತನವಾಯಿತು. ಈ ಆಶ್ಚರ್ಯಕರ ದೃಶ್ಯವನ್ನು ನೋಡಿದವರು ಜನರಲ್ಲಿ ವಿಸ್ಮಯವನ್ನುಂಟುಮಾಡಿರುತ್ತೆ.—ಈ ವರದಲಿ ಸಮೀಪ ಪ್ರಾಂತ್ಯದಿಂದ ಬೆಂಕಿಯಿಂದ ಅನಾಹುತವು ಜಾಸ್ತಿಯಾಗಿದೆ. ಟವನ್ನಿಗೆ ಪೂರ್ವ ದಿಕ್ಕಿನಲ್ಲಿ ಒಂದು ಸಣ್ಣ ಗ್ರಾಮಕ್ಕೆ ಬೆಂಕಿ ತಗಲಿ ೭ ಮನೆಗಳೂ ಸಂಪೂರ್ಣವಾಗಿ ಸುಟ್ಟುಹೋದ್ದಲ್ಲದೆ ಮನೆಯಲ್ಲಿ ಕಟ್ಟಿದ್ದ ಸುಮಾರು ೧೦ ಮೇಕೆಗಳು ಕುರಿಗಳು ಕೋಳಿಗಳು ಸಾಮಾನುಗಳು ಧಾನ್ಯಗಳು ಉರಿದುಹೋಗಿ ಉರಿಯಲ್ಲಿ ಒಬ್ಬ ಮುದುಕಿಯೂ ಸಿಕ್ಕಿ ಸತ್ತುಹೋದಳು. ಇದೇ ವಾರದಲ್ಲಿ ಟವನ್ ಕ್ರಿಶ್ಚನ್ ಪಾಳ್ಯದ ಹಿಂಭಾಗದಲ್ಲಿ ಜೋಪಡಿ ಹಾಕಿಕೊಂಡಿದ್ದ ಒಬ್ಬ ಕ್ರಿಶ್ಚನ ಮನೆಯು ಆಕಸ್ಮಾತ್ತಾಗಿ ಬೆಂಕಿ ಹತ್ತಿಕೊಂಡದ್ದರಿಂದ ಗುಡಿಸಲೆಲ್ಲವೂ ಸಂಪೂರ್ಣವಾಗಿ ಸುಟ್ಟುಹೋಯಿತು. ನೆನ್ನೆ ಗುರುವಾರ ಸಂತೆ ಕಟ್ಟುವ ಸ್ಥಳದಲ್ಲಿ ಹುಲ್ಲು ಹೊದ್ದಿಸಿದ್ದ ಒಂದು ದನದ ಕೊಟ್ಟಿಗೆ ಇತ್ತು. ಇದಕ್ಕೆ ಯಾರೋ ಬೆಂಕಿ ಹಾಕಿದ್ದರಿಂದ ಹತ್ತಿಕೊಂಡು ಉರಿಯುತ್ತಿರುವಾಗ ಸಮೀಪದಲ್ಲಿ ಪೊಲೀಸ್ ಸ್ಟೇಷನಿನಲ್ಲಿದ್ದ ಜಮಾದಾರರು ತಮ್ಮ ಜವಾನರುಗಳೊಡನೆ ಆ ಸ್ಥಳಕ್ಕೆ ಬಂದು ಸಂತೆ ಜನರನ್ನು ಸಹಾಯಕ್ಕೆ ತೆಗೆದುಕೊಂಡು ತುಂಬಾ ಪ್ರಯಾಸದಿಂದ ಬೆಂಕಿ ಆರಿಸಿದರು. ಇಲ್ಲದಿದ್ದರೆ ಸುತ್ತುಮುತ್ತಲ ಮನೆಗಳಿಗೆ ಬೆಂಕಿ ತಗಲಿ ತುಂಬಾ ಅನಾಹುತವಾಗುತ್ತಿತ್ತು.—ನೆನ್ನೆ ೧೭ ನೇ ಭಾನುವಾರ ಕಲ್ಲಿನ ಮಂಡಿ ವರ್ತಕರೆಲ್ಲಾ ಬಂದು ಕೂಡಿಸಿ [illegible] ಜನರಿಗೆ ತುಂಬಾ ವಿಶೇಷವಾದ ಅನ್ನದಾನ ಮಾಡಿದರು. ಆ ದಿನ ಊಟಕ್ಕಾಗಿ ಸುಮಾರು ೩೦೦೦ ಜನರು ಸೇರಿದ್ದರೆಂದು ತಿಳಿದುಬಂದಿದೆ. ಈ ವಿಚಾರದಲ್ಲಿ ತುಂಬಾ ಸೇವೆ ಮಾಡಿದವರು ಸಂತೋಷಪಟ್ಟರು. ಇಲ್ಲಿನ ಅಮಲ್ದಾರರು ಮೂಡ್ಲಭಾಗದ ಜಮೀನಿನ ಪೈಕಿ ಕೆಲವರು ಸೇರಿ ಕೆರೆಯ ತೂಬಿನಿಂದ ಹೊರಡುವ ನಾಲೆ ಕಾಲುವೆಗೆ ಬೇರೆ ಕಡೆ ಭಾವಿ ಕಡೆಗಳಿಗೆ ಬಿಟ್ಟರಂತೆ. ನಲ್ಲಿ ಇರಿಸಿ ಅದರ ಉಪಯೋಗಗಳಲ್ಲಿ ಜನ ಸಂತೋಷ ಪಡುವಂತೆ ಮಾಡಿ ನೀರು ಸಲೀಸಾಗಿ ಹರಿಯುವಂತೆ ಮಾಡಿಕೊಡಬೇಕೆಂದು ಜನರನ್ನು ಕೊಂಡಾಡಿ ವಿಚಾರಣೆಗಳು ದರಿಗೂ ಸರ್ಕಾರ ಸ್ವಾಧೀನವೆಂಬುದಾಗಿ ಡೆಪ್ಯುಟಿ ಕಮಿಷನರಿಗೂ ಅರ್ಜಿ ಕೊಡಬೇಕೆಂದಿದ್ದರು. ಈ ರೀತಿ ಇವರಿಗೆ ಒಳಿತು ಈ ರೀತಿ ಕಾಲೆ ಮನಸ್ಸು ಮಾಡುವ ವಿಚಾರ ಮಾಡಿದರು. ಸರ್ಕಾರಕ್ಕೆ ದಾರಿ ಅಂದಾಜು ಅನುಸರಿಸಿ ಇದಕ್ಕೆ ವಿರೋಧವಾಗಿ ಅರ್ಜಿ ಬರೆದು ಹತ್ತೂ ಜನರ ರುಜು ಹಾಕಿ ಗವರ್ನಮೆಂಟಿಗೆ ಕೊಟ್ಟಿರುತ್ತಾರೆ. ಇದರಲ್ಲಿ ಉಪಯೋಗ ಕೇವಲ ಮನೆ ಪರವಾಗಿದೆ. ದಾಕ್ಷಿಣ್ಯ ತುಂಬುವ ಈ ಅರ್ಜಿಯ ರೀತಿಯು ಬಹಳ ಜಾಹಿರು

ಬೆಂಗಳೂರು ಪಟ್ಟಣವೂ ಮೆ॥ ವಿ. ಪಿ. ಮಾಧವರಾವ್, ಸಿ. ಐ. ಇ. ಯವರೂ.

ದಂಡಿನಲ್ಲಿ ನಡೆದ ಸನ್ಮಾನವು.

ಕಳೆದ ೨೩ ನೆ ತಾ ಬುಧವಾರ ಸಾಯಂಕಾಲ ಬೆಂಗಳೂರು ದಂಡಿನಲ್ಲಿರುವ ಮೆ॥ ಆರ್ಕಾಟ್ ನಾರಾಯಣಸ್ವಾಮಿ ಮೊದಲಿಯಾರ್‌ರವರು ಮೈಸೂರು ಸಂಸ್ಥಾನದ ದಿವಾನ್ ಮೆ॥ ವಿ. ಪಿ. ಮಾಧವರಾಯರನ್ನು ತಮ್ಮ ಸ್ಕೂಲಿಗೆ ಬರಮಾಡಿಕೊಂಡು, ಕೆಲವು ಸಂತೋಷೋತ್ಸವಗಳನ್ನು ನಡಿಸಿ, ಅವರಲ್ಲಿ ತಮಗಿರುವ ಪ್ರೀತಿ ಗೌರವಗಳನ್ನು ಪ್ರಕಾಶಪಡಿಸಿದರು. ಆ ಸಂತೋಷ ಸಭೆಯಲ್ಲಿ ಸರ್ ಪಿ ಎನ್ ಕೃಷ್ಣಮೂರ್ತಿಯವರು, ಬೊಂಬಾಯಿ ಹೈ ಕೋರ್ಟ್ ಜಡ್ಜಿಯಾದ ಮೆ॥ ಚಂದ್ರಾವರ್ಕರವರು, ಕೌನ್ಸಿಲ್ ಮೆಂಬರುಗಳು, ರೆವಿನ್ಯೂ ಕಮಿಷನರು, ಛೀಫ್ ಕೋರ್ಟ್ ಜಡ್ಜಿಗಳು, ಮೆ॥ ತಂಬೂಚೆಟ್ಟಿಯರು, ಮೆ॥ ದಳವಾಯಿ ದೇವರಾಜೇ ಅರಸಿನವರು, ಈ ಮೊದಲಾದ ಬಹು ಮಂದಿ ದೊಡ್ಡ ಮನುಷ್ಯರು ಹಾಜರಾಗಿದ್ದರು ಮೆ॥ ನಾರಾಯಣಸ್ವಾಮಿ ಮೊದಲಿಯಾರ್‌ರವರು ಮೆ॥ ವಿ ಪಿ ಮಾಧವರಾಯರನ್ನು ಎದುರುಗೊಂಡು, ನೇತ್ರಾನಂದಕರವಾಗಿ ಅಲಂಕರಿಸಿದ್ದ ಸ್ಕೂಲ್ ಕಟ್ಟಡದೊಳಕ್ಕೆ ಕರೆದುಕೊಂಡುಹೋಗಿ ಶ್ರೇಷ್ಠಾಸನದಲ್ಲಿ ಕೂಡಿಸಿದರು ಹಾಡುಗಳು, ಕಸರತ್ತು, ಬ್ಯಾಂಡ್ ವಾದ್ಯಗಳು, ನಾಟಕ, ದೀಪೋತ್ಸವ, ಬಾಣಬಿರುಸು, ಈ ಮೊದಲಾದುವನ್ನು ನಡಿಸಿ ಸಭಿಕರನ್ನೆಲ್ಲಾ ಸಂತೋಷಪಡಿಸಿದರು ಮೆ॥ ಮಾಧವರಾಯರು ಬಹು ಸಂತೋಷಪಟ್ಟು ಮೆ॥ ನಾರಾಯಣಸ್ವಾಮಿ ಮೊದಲಿಯಾರ್‌ರನ್ನೂ ಸಭಿಕರನ್ನೂ ವಿನಯಪೂರ್ವಕವಾಗಿ ವಂದನೆಮಾಡಿ, ಎಲ್ಲರಿಂದಲೂ ಬೀಳ್ಕೊಂಡು, ತೆರಳಿದರು

ಒಕ್ಕಲಿಗರ ಪ್ರತಿನಿಧಿಗಳು ಮಾಡಿದ ಸನ್ಮಾನವು

ಕಳೆದ ಶುಕ್ರವಾರ ಬೆಳಿಗ್ಗೆ ಬೆಂಗಳೂರಿನಲ್ಲಿರುವ ಬ್ಯಾರಿಸ್ಟರ್ ಮೆ॥ ನಾಗಪ್ಪನವರು, ಕಂಟ್ರಾಕ್ಟರ್ ಮೆ॥ ವೈವಣ್ಣನವರು, ಫಲಪುಷ್ಪ ತೋಟಗಾರರಾದ ಮೆ॥ ರುದ್ರಪ್ಪನವರು, ಈ ಮುಂತಾದ ಒಕ್ಕಲಿಗರ ಪ್ರತಿನಿಧಿಗಳು ಸುಮಾರು ೩೦ ಮಂದಿ ಮೆ॥ ವಿ ಪಿ ಮಾಧವರಾಯರನ್ನು ಅವರ ಬಂಗಲೆಯಲ್ಲಿ ಕಂಡು, ಅವರಿಗೆ ಒಂದು ವಿಜ್ಞಾಪನಾಪತ್ರಿಕೆಯನ್ನೊಪ್ಪಿಸಿ, ಕೇಳಿಕೊಂಡದ್ದೇನೆಂದರೆ—

ಮೈಸೂರು ಸಂಸ್ಥಾನದ ಒಕ್ಕಲಿಗರುಗಳ ಪ್ರತಿನಿಧಿಗಳಾದ ನಾವು ತಮಗೆ ಈ ದಿನ ನಮ್ಮ ಕೃತಜ್ಞತೆ ಭಕ್ತಿ ವಿಶ್ವಾಸಗಳನ್ನು ಪ್ರಕಾಶಪಡಿಸುವದಕ್ಕೆ ತಮ್ಮ ಅನುಜ್ಞೆಯನ್ನು ಬೇಡುತ್ತೇವೆ ತಾವು ಉದಾರಬುದ್ಧಿಶಾಲಿಗಳೆಂತಲೂ ಪ್ರಜಾಪ್ರೀತಿಪಾತ್ರರೆಂತಲೂ ಹೆಸರು ಪಡೆದಿರುವ ರಾಜ್ಯಧುರಂಧರರು ತಾವು ಈ ಸಂಸ್ಥಾನದ ದಿವಾನಗಿರಿಯನ್ನಲಂಕರಿಸಿದ ಪ್ರಾರಂಭದಲ್ಲೇ ನಮ್ಮ ಜಾತಿಯವರೆಲ್ಲಾ ಒಂದು ಸಂಘವನ್ನು ಮಾಡಿಕೊಂಡು, ತಮ್ಮ ಜನರು ಉನ್ನತಸ್ಥಿತಿಗೆ ಬರುವಂಥ ಮಾರ್ಗಗಳನ್ನು ಹುಡುಕಿ ಕಂಡುಹಿಡಿಯಬೇಕೆಂದು ಉದ್ದೇಶಪಟ್ಟು ಕಾರ್ಯನಿರ್ವಹ ಮಾಡುತ್ತಾರೆ ನಮ್ಮ ಜನರು ಈ ಸಂಸ್ಥಾನದ ಪ್ರಜಾಸಂಖ್ಯೆಯಲ್ಲಿ ಮೊದಲನೆಯವರಾಗಿದ್ದರೂ ಅವರ ಸ್ಥಿತಿಗತಿಗಳು ತುಂಬಾ ಹೀನವಾಗಿರುವವು ಅವರು ಇತರ ಪಂಗಡದವರಿಗಿಂತಲೂ ಹಿಂದೆ ಬಿದ್ದಿದ್ದಾರೆ. ಪ್ರಜಾಭಿವೃದ್ಧಿಗೋಸ್ಕರ ತಾವು ವಿದ್ಯಾಭ್ಯಾಸ ಮಾಡಿಸಿ ಅಭಿವೃದ್ಧಿಗೆ ತರತಕ್ಕವರೆಂಬ ಹೆಸರುವಾಸಿಯನ್ನು ಪಡೆದಿರುವಿರಿ. ಆದ್ದರಿಂದ ನಮ್ಮ ಜನರ ಮೇಲೆ ಕೃಪಾಕಟಾಕ್ಷವಿಟ್ಟು, ಅವರಿಗೆ ವಿದ್ಯಾದಾನ ಮಾಡಿ ಎಲ್ಲಾ ಭಾಗಗಳಲ್ಲೂ ಅವರನ್ನು ಮುಂದಕ್ಕೆ ತಂದು ಶಾಶ್ವತವಾದ ಕೀರ್ತಿಯನ್ನು ಪಡೆಯುವವರಾಗಬೇಕೆಂದು ಬೇಡುತ್ತೇವೆ ಶ್ರೀಮನ್ ಮಹಾರಾಜರವರು ತಮ್ಮನ್ನು ಈ ಪದವಿಗೆ ನೇಮಕಮಾಡಿದ ವಿಷಯದಲ್ಲಿ ನಮಗುಂಟಾಗಿರುವ ಸಂತೋಷವನ್ನೂ ಕೃತಜ್ಞತೆಯನ್ನೂ ತಾವು ನಮ್ಮ ಪರವಾಗಿ ಅವರಿಗೆ ಅರಿಕೆ ಮಾಡಬೇಕೆಂದು ವಿನಯಪೂರ್ವಕವಾಗಿ ಪ್ರಾರ್ಥಿಸುತ್ತೇವೆ ಎಂಬುದೇ.

ಇಂಥಾ ಅಪೂರ್ವವಾದ ವಿಜ್ಞಾಪನೆಯನ್ನು ಮೆ॥ ಮಾಧವರಾಯರು ಅಂಗೀಕರಿಸಿ ಅವರನ್ನು ವಿಶೇಷ ಆದರದಿಂದಲೂ ಮನಃಪೂರ್ವಕವಾಗಿಯೂ ವಂದನೆಮಾಡಿ—ನಿಮ್ಮ ಉದ್ದೇಶವು ಶ್ರೇಷ್ಠವಾದದ್ದು, ಸ್ತೋತ್ರಾರ್ಹವಾದದ್ದು ಇಂಥಾ ಸಂದರ್ಭದಲ್ಲೇ ನೀವು ಈ ಸಂಘವನ್ನು ಏರ್ಪಾಡುಮಾಡಿಕೊಂಡಿದ್ದೀರೆಂಬುವುದನ್ನು ಕೇಳಿ ತುಂಬಾ ಸಂತೋಷಪಡುವೆನು ನಿಮ್ಮ ಉದ್ದೇಶವು ಸಾರ್ಥಕವಾಗಲಿ. ನನ್ನ ಕೈಲಾಗುವ ಮಟ್ಟಿಗೂ ನಿಮ್ಮ ಸಂಘಕ್ಕೆ ಪ್ರೋತ್ಸಾಹಕೊಡುವೆನು ಎಂಬೀ ಅಭಿಪ್ರಾಯವುಳ್ಳ ಪ್ರತ್ಯುತ್ತರವನ್ನು ದಯಪಾಲಿಸಿ, ಅವರಿಗೆಲ್ಲಾ ಪ್ರತಿಮರ್ಯಾದೆಗಳನ್ನು ಮಾಡಿ ಕಳುಹಿಸಿಕೊಟ್ಟರು.

ಲಾಲ್ ಬಾಗಿನ ಉತ್ಸವ.

ಕಳೆದ ಶನಿವಾರ ಮೈಸೂರು ಸಂಸ್ಥಾನದ ದಿವಾನರಾದ ಮೆ॥ ವಿ. ಪಿ. ಮಾಧವರಾವ್, ಸಿ ಐ. ಇ. ಯವರನ್ನು ಬೆಂಗಳೂರು ಪೇಟೆ ಮತ್ತು ಲಷ್ಕರ್ ನಿವಾಸಿಗಳು ಅಲ್ಲಿನ ಲಾಲ್ ಬಾಗ್ ಆಲ್ಬರ್ಟ್ ವಿಕ್ಟರ್ ಹಾಲ್ ಎಂಬ ಕಟ್ಟಡಕ್ಕೆ ಬರಮಾಡಿಕೊಂಡು, ಸಂತೋಷೋತ್ಸವಗಳನ್ನು ನಡಿಸಿ, ಅವರಿಗೆ ವಿಜ್ಞಾಪನಾಪತ್ರಿಕೆಯನ್ನು ಒಪ್ಪಿಸಿದರು. ಸಿಟಿ ಮತ್ತು ಲಷ್ಕರ್ ನಿವಾಸಿಗಳಲ್ಲಿ ಮುಖ್ಯರಾದವರಿಗೆ ಪತ್ರಿಕೆಗಳನ್ನು ಕಳುಹಿಸಿ ಕರೆಸಿಕೊಂಡಿದ್ದರು. ಈ ಸಭೆಗೆ ಸಮಸ್ತ ಆಫೀಸರುಗಳೂ, ಯೂರೋಪಿಯನ್ ದೊಡ್ಡ ಮನುಷ್ಯರೂ, ದೊರೆಸಾನಿಗಳೂ, ಛೀಫ್ ಕೋರ್ಟ್ ಜಡ್ಜಿಗಳೂ, ಡಿಸ್ಟ್ರಿಕ್ಟ್ ಜಡ್ಜಿಗಳೂ, ಸಬ್ ಜಡ್ಜಿಯವರೂ, ಈ ಸಿಟಿಯಲ್ಲಿರುವ ವರ್ತಕರೂ ಅಲ್ಲದೆ ಹೊಳೆನರಸೀಪುರ ಮತ್ತು ಮಧುಗಿರಿ ಮುನಿಸಿಫರೂ, ಡೆಪ್ಯುಟಿ ಕಮಿಷನರೂ ಅಮಲ್ದಾರರೂ, ಅನೇಕ ಹಿಂದೂ ಮತ್ತು ಮಹಮದೀಯರೂ, ಇತರ ಕಾಲೇಜಿನ ಮುಖ್ಯರೂ, ವರ್ತಕರೂ ಸೇರಿದ್ದರು. ಇಂಥಾ ಸಭೆಯು ನೋಡುವುದಕ್ಕೆ ತುಂಬಾ ಆನಂದವನ್ನು ಉಂಟು ಮಾಡುತ್ತಿತ್ತು. ಆ ಕಟ್ಟಡವೂ ಲಾಲ್ ಬಾಗಿನ ಹೊರಗಡೆಯೂ ನೇತ್ರಾನಂದಕರವಾಗಿ ಅಲಂಕಾರ ಮಾಡಿಸಿದ್ದರು ದಿವಾನ್ ಮೆ॥ ಮಾಧವರಾಯರ ಸವಾರಿಯು ದೊಡ್ಡಪೇಟೆ ಚೌಕದಲ್ಲಿ ಹೊರಟು, ಲಾಲ್‌ಬಾಗ್ ಬಾಗಿಲಿಗೆ ಬಂದ ಕೂಡಲೆ ಕೆಲವು ಮ್ಯುನಿಸಿಪಲ್ ಕಮಿಷನರೂ ದೊಡ್ಡ ಮನುಷ್ಯರೂ ವಾದ್ಯಗಳೊಡನೆ ಅವರನ್ನು ಎದುರುಗೊಂಡು ವಿಕ್ಟರ್ ಹಾಲ್ ಬಳಿಗೆ ಕರೆದುಕೊಂಡು ಬಂದರು ಕೂಡಲೇ ಅಲ್ಲಿ ಬ್ಯಾಂಡ್ ವಾದ್ಯವು ಮಧುರವಾಗಿ ಎಲ್ಲರೂ ಇವರ ಸುಸ್ವಾಗತವನ್ನು ಬಯಸಿ ಪ್ಲಾಟ್‌ಫಾರ್ಮಿಗೆ ಕರೆದುಕೊಂಡು ಹೋಗಿ ಅಲ್ಲಿ ಶ್ರೇಷ್ಠವಾದ ಆಸನದಲ್ಲಿ ಕೂಡಿಸಿದರು ನಂತರ ಪ್ಲಾಟ್‌ಫಾರ್ಮಿನ ಮೇಲೆ ಹೊಸ ಕೌನ್ಸಿಲರುಗಳೂ ಮೆ॥ ಸಿ. ಶ್ರೀನಿವಾಸಯ್ಯಂಗಾರ್‌ರವರು ರೆವಿನ್ಯೂ ಮತ್ತು ಜನರಲ್ ಸೆಕ್ರಿಟರಿಯವರೂ ಮೆ॥ ಚಂದ್ರಶೇಖರಯ್ಯರವರೇ ಮುಂತಾದವರು ತಮ್ಮ ತಮ್ಮ ಸ್ಥಾನಗಳಲ್ಲಿ ಕೂತುಕೊಂಡರು ನಂತರ ಬ್ಯಾಂಡ್ ಮೊದಲಾದ ವಾದ್ಯಗಳು ಬಾರಿಸಲ್ಪಟ್ಟವು. ಆ ಮೇಲೆ ಇಂಗ್ಲಿಷ್ ಅಡ್ರಸ್ಸನ್ನು ಮೆ॥ ಜೆ. ಡಬ್ಲಿಯು. ಚೇಂಬರ್ಸ್ ಸಾಹೇಬರವರಿಂದಲೂ, ಕನ್ನಡ ಭಾಷೆಯ ಅಡ್ರಸ್ಸು ಶ್ರೀನಿವಾಸಮಂದಿರದ ಸೆಕ್ರೆಟರಿ ಮೆ॥ ಎ ಗೋವಿಂದಾಚಾರ್ಯರಿಂದಲೂ, ಹಿಂದುಸ್ಥಾನಿ ಭಾಷೆಯ ಅಡ್ರಸ್ಸು ಮೆ॥ ವಿಜಾರ್ ಮಹಮದ್ ಗೌಸ್ ರಜವಿ ಸಾಹೇಬರವರಿಂದಲೂ ಓದಲ್ಪಟ್ಟವು. ಕನ್ನಡದಲ್ಲಿ ಓದಿದ ಅಡ್ರಸ್ಸಿನ ವಿವರವೇನೆಂದರೆ—

ಮೈಸೂರು ದಿವಾನರಾದ ಮ॥ ರಾ॥ ರಾ॥ ಶ್ರೀ ವಿ ಪಿ ಮಾಧವರಾವ್ ಸಿ ಐ ಇ ಯವರ ಸನ್ನಿಧಾನಕ್ಕೆ

ಬೆಂಗಳೂರು ಪೇಟೆ ಮತ್ತು ಲಷ್ಕರ್ ನಿವಾಸಿಗಳು ಒಪ್ಪಿಸಿದ ವಿಜ್ಞಾಪನಾಪತ್ರಿಕೆ

ಮಹಾಸ್ವಾಮಿ

ಬೆಂಗಳೂರು ನಗರದ ಮತ್ತು ಲಷ್ಕರಿನ ಪ್ರಜೆಗಳ ಪ್ರತಿನಿಧಿಗಳಾದ ನಾವು ಈ ಸಂಸ್ಥಾನದ ದಿವಾನರಾಗಿ ತಾವು ಮೈಸೂರಿಗೆ ಹಿಂತಿರುಗಿ ದಯಮಾಡಿದ ಈ ಸಂದರ್ಭದಲ್ಲಿ ತಮ್ಮನ್ನು ಆದರಪೂರ್ವಕವಾಗಿ ಎದುರುಗೊಂಡು ಬರಮಾಡಿಕೊಳ್ಳಲು ಅಪೇಕ್ಷಿಸುತ್ತೇವೆ

ತಾವು ಈ ಸಂಸ್ಥಾನದಲ್ಲಿ ದೀರ್ಘಕಾಲ ದಿವಾನಗಿರಿಗೆ ಮೊದಲು ಉಪಯೋಗವಾದ ಅನೇಕ ಕಾರ್ಯಗಳನ್ನು ಮಾಡಿ ಪ್ರಖ್ಯಾತರಾಗಿ ಇಲ್ಲಿಯ ಪ್ರಜೆಗಳ ಎಲ್ಲಾ ಪಂಗಡದವರ ಪ್ರೀತಿಗೂ ಗೌರವಕ್ಕೂ ಪಾತ್ರರಾಗಿ ಈಗ್ಗೆ ಎರಡು ವರ್ಷಗಳ ಹಿಂದೆ ಇಲ್ಲಿಂದ ತೆರಳುವ ಕಾಲದಲ್ಲಿ ನಾವುಗಳೆಲ್ಲರೂ ಬಹು ದುಃಖಿತರಾಗಿ ಇದೇ ಕಟ್ಟಡದಲ್ಲಿಯೇ ತಮ್ಮನ್ನು ಕಳುಹಿಸಿಕೊಡಲು ಸೇರಿದೆವು

ಆದರೆ ಆ ಕಾಲದಲ್ಲಿ ನಮಗೆ ಈ ಸಂಸ್ಥಾನಕ್ಕೆ ಒದಗಿದ ವ್ಯಸನಕ್ಕೆ ಪರಿಹಾರವಾದ ಅನಂತರದಲ್ಲಿ ಸಂಸ್ಥಾನದ ರಾಜ್ಯಕಾರ್ಯ ನಿರ್ವಹಣಕ್ಕಾಗಿ ತಮ್ಮಂಥ ಪ್ರಸಿದ್ಧ ರಾಜ್ಯತಂತ್ರಜ್ಞರನ್ನು ಇಲ್ಲಿಂದ ಕಳುಹಿಸಿಕೊಡಲು ಸಾಧ್ಯವಾಯಿತೆಂಬ ಸಮಾಧಾನವು ಸ್ವಲ್ಪಮಟ್ಟಿಗೆ ಸಹ್ಯವಾಯಿತು

ಜನರೂ, ಭಾಷೆಯೂ, ಆಚಾರವ್ಯವಹಾರಗಳೂ, ಪದ್ಧತಿಗಳೂ ಕ್ರಮವೂ, ರಾಜ್ಯದ ಆಡಳಿತಗಳೂ ಭಿನ್ನವಾಗಿರುವ ಆ ಸಂಸ್ಥಾನದಲ್ಲಿ ತಮ್ಮ ರಾಜ್ಯಕಾರ್ಯ ಕ್ರಮವನ್ನು ಕುತೂಹಲದಿಂದ ನೋಡುತ್ತಾ ಬಂದೆವು ಆ ಸಂಕೆಯೊಡನೆ ಇದಿರುನೋಡುತ್ತಿದ್ದೆವು

ಸಾಮಾನ್ಯ ರಾಜ್ಯತಂತ್ರಜ್ಞರಿಗೆ ಸ್ಥಳೀಯ ವಿಷಯಗಳನ್ನು ಅರಿತುಕೊಳ್ಳಲಿಕ್ಕೆ ಕೂಡ ಅವಕಾಶ ದೊರೆಯದಷ್ಟು ಸ್ವಲ್ಪ ಕಾಲದಲ್ಲಿಯೇ ತಾವು ಆ ರಾಜ್ಯದ ಸನ್ನಿವೇಶಗಳನ್ನೆಲ್ಲಾ ಕೂಲಂಕಷವಾಗಿ ತಿಳಿದುಕೊಂಡು ಜನರಂಜನೆಗೂ ಕಾರ್ಯಸಾಧನೆಗೂ ಮೂಲಭೂತವಾದ ತಮ್ಮ ಉದಾರವಾದ ಪ್ರಜಾನುರಾಗದಿಂದ ಪ್ರೇರಿತರಾಗಿ ತಾವು ಆ ದೇಶದಲ್ಲಿ ಚಿರಸ್ಥಾಯಿಯಾಗಿಯೂ ಲೋಕೋಪಕಾರಕವಾಗಿಯೂ ಇರುವ—ಎಂದರೆ ಅನಂತಶಯನ ಸಂಸ್ಥಾನದ ಭವಿಷ್ಯತ್ಪರಿಸ್ಥಿತಿಯಲ್ಲಿಯೂ ರಾಜ್ಯನಿರ್ವಹಣ ಕ್ರಮದಲ್ಲಿಯೂ ಚಿರಸ್ಮರಣೀಯವಾಗಿ ನಿಲ್ಲಲು ಅರ್ಹವಾದ—ಹಲವು ತಿದ್ದುಪಾಟುಗಳನ್ನು ಮಾಡಲು ಸಮರ್ಥರಾದದ್ದನ್ನು ನೋಡಿ ನಮಗೆ ಅತ್ಯಂತವಾದ ತೃಪ್ತಿಯೂ ಅಭಿಮಾನವೂ ಉಂಟಾದವು.

ಆದರೆ ಅನಂತಶಯನದಲ್ಲಿಯ ತಮ್ಮ ರಾಜ್ಯಕಾರ್ಯ ಕೃತಕೃತ್ಯತೆಯಿಂದ ನಮಗೆ ಉಂಟಾದ ಅಭಿಮಾನವು ನಮಗೆ ಸಂಭವಿಸಿದ ನಷ್ಟವನ್ನು ದ್ವಿಗುಣವಾಗಿ ಭಾವಿಸುವಂತೆ ಮಾಡಿತು ಆದಕಾರಣ ಈ ಸಂಸ್ಥಾನದ ಶ್ರೇಯಸ್ಕರವಾದ ರಾಜ್ಯಕಾರ್ಯ ನಿರ್ವಹಣಕ್ಕಾಗಿ ದಯಾಳುಗಳಾದ ನಮ್ಮ ಶ್ರೀಮನ್ ಮಹಾರಾಜ ಶ್ರೀ ಕೃಷ್ಣರಾಜವಡೆಯರ್ ಬಹದೂರ್‌ರವರು ತಮ್ಮನ್ನು ದಿವಾನರನ್ನಾಗಿ ನೇಮಿಸಿ ಪೂರ್ವದಲ್ಲಿ ತಾವು ಕೆಲಸ ಮಾಡುತ್ತಿದ್ದ ಈ ದೇಶಕ್ಕೆ ಪುನಃ ಕರೆಯಿಸಿಕೊಂಡರೆಂಬ ವೃತ್ತಾಂತವನ್ನು ಕೇಳಿ ವಿಶೇಷವಾಗಿ ಸಂತುಷ್ಟರಾದೆವು.

ಮಹಾರಾಜರವರಲ್ಲಿ ಭಕ್ತಿ ವಿಶ್ವಾಸ, ಮೈಸೂರು ಸಂಸ್ಥಾನದ ಪ್ರಜೋಪಕಾರಕವಾದ ಮಹಾ ಕಾರ್ಯಗಳ ಫಲಾನುಭವ—ಇವೇ ಮೊದಲಾದ ರಾಜ್ಯ ಕ್ಷೇಮಾಭಿವೃದ್ಧಿಯಲ್ಲಿ ಸಮನಾದ ಆಸಕ್ತಿಯುಳ್ಳವರಾಗಿರುವದರಿಂದ ತಾವು ಮೈಸೂರಿಗೆ ದಿವಾನರಾಗಿ ದಯಮಾಡಿಸಿದ್ದಕ್ಕಾಗಿ ಇಡೀ ಮೈಸೂರು ಸಂಸ್ಥಾನಕ್ಕೆ ಪರತವಾಗಿರುವ ಲಷ್ಕರ್ ನಿವಾಸಿಗಳಾದ ನಾವೂ ಈ ಸಂಸ್ಥಾನದ ಪ್ರಜೆಗಳೊಡನೆ ಆನಂದಿಸುತ್ತೇವೆ

ಈ ಉನ್ನತಪದವಿಯಲ್ಲಿ ತಾವು ಪ್ರೇಮಪಾತ್ರರಾಗಿಯೂ ಪ್ರಾಜ್ಞರಾಗಿಯೂ ಇರುವ ನಮ್ಮ ಶ್ರೀಮನ್ ಮಹಾರಾಜರವರ ವಿಶ್ವಾಸಕ್ಕೆ ಪಾತ್ರರಾಗಿ, ಸಮರ್ಥರಾಗಿಯೂ ಅನುಭವಶಾಲಿಗಳಾಗಿಯೂ ಇರುವ ಅಧಿಕಾರಿಗಳ ಹಾರ್ದವಾದ ಸಹಾಯವನ್ನು ಹೊಂದಿ, ಈ ಸಂಸ್ಥಾನದಲ್ಲಿಯೂ ಅನಂತಶಯನದಲ್ಲಿಯೂ ಹಿಂದೆ ತಾವು ನಿರ್ವಹಿಸಿದ ಕಾರ್ಯಗಳಿಂದ ನಮಗುಂಟಾಗಿರುವ ಪ್ರಬಲವಾದ ಆಶೋತ್ತರಗಳನ್ನು ಸಾರ್ಥಕಗೊಳಿಸುವಂತೆ ಕಾಲಕ್ರಮದಲ್ಲಿ ಶ್ಲಾಘನೀಯವಾದ ಕಾರ್ಯಸಿದ್ಧಿಯನ್ನು ಪಡೆಯುವಿರೆಂದು ದೃಢವಾಗಿ ನಂಬುತ್ತೇವೆ.

ತಮ್ಮ ಪದವಿಯ ಕಷ್ಟಕರವಾದ ಜವಾಬ್ದಾರಿ ಕೆಲಸಗಳನ್ನು ಸಮರ್ಪಕವಾಗಿ ನಿರ್ವಹಿಸಲಾಗುವಂತೆ ತಮಗೆ ದೀರ್ಘಾಯುಸ್ಸನ್ನೂ ಆರೋಗ್ಯವನ್ನೂ ಶಕ್ತಿಯನ್ನೂ ಅನುಗ್ರಹಿಸಬೇಕೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

ಬೆಂಗಳೂರು, ೧೬ ನೇ ಮೇ, ೧೯೦೬.

ದಿವಾನರವರು ಮೇಲ್ಕಂಡ ಅಡ್ರಸ್ಸುಗಳಿಗೆ ಪ್ರತ್ಯುತ್ತರ ಕೊಟ್ಟರು. ಅದರ ಅಭಿಪ್ರಾಯವೇನೆಂದರೆ—

ಸಿಟಿ ಮತ್ತು ದಂಡಿನ ಪ್ರಜೆಗಳ ಪರವಾಗಿಯೂ, ಮಹಮದೀಯರ ಪರವಾಗಿಯೂ ಈ ವಿಜ್ಞಾಪನಾಪತ್ರಿಕೆಯನ್ನೊಪ್ಪಿಸಿದ್ದಕ್ಕಾಗಿ ನಿಮ್ಮಗಳನ್ನೆಲ್ಲಾ ಮನಃಪೂರ್ವಕವಾಗಿ ವಂದಿಸುತ್ತೇನೆ. ಈಗ್ಗೆ ೨ ವರ್ಷಗಳ ಹಿಂದೆ ಅತ್ಯಂತ ವ್ಯಸನದಿಂದ ಈ ಸಂಸ್ಥಾನವನ್ನು ಬಿಟ್ಟೆನು. ನನಗೆ ತಿರುವಾಂಕೂರಿನಲ್ಲುಂಟಾಗಿರತಕ್ಕ ಅನುಭವವನ್ನು ಕುರಿತು ಈಗ ಪ್ರಸ್ತಾಪಿಸಬೇಕಾದ ಆವಶ್ಯಕತೆ ಕಂಡುಬರುವುದಿಲ್ಲ. ಕ್ರಮೇಣ ನನ್ನಿಂದ ಮಾಡಲ್ಪಡಬಹುದೆಂಬುದಾಗಿ ನನ್ನ ಮಿತ್ರರಿಂದಲೂ, ಹಿತೈಷಿಗಳಿಂದಲೂ ಮಹತ್ತರವಾಗಿ ನಿರೀಕ್ಷಿಸಲ್ಪಟ್ಟ ರಂಗದಲ್ಲಿ ಒಂದು ಭಾಗವನ್ನಾದರೂ ನೆರವೇರಿಸುವಷ್ಟು ಶಕ್ತನಾಗಿದ್ದಲ್ಲಿ ನಾನು ಭಾಗ್ಯಶಾಲಿಯಾಗಿಯೇ ಇರಬೇಕೆಂದು ಎಣಿಸುವೆನು. ಮೈಸೂರಿನಂಥ ಮುಖ್ಯ ಸಂಸ್ಥಾನವನ್ನು ಆಳುವದು ಸುಲಭಸಾಧ್ಯವಲ್ಲವೆಂದು ನಾನು ಸಂಪೂರ್ಣವಾಗಿ ತಿಳಿದಿರುತ್ತೇನೆ. ಜನಸಾಮಾನ್ಯದ ಕ್ಷೇಮಕ್ಕಾಗಿ ಸಂಪೂರ್ಣ ದಯೆಯೂ, ಮನುಷ್ಯರ ಮತ್ತು ವಸ್ತುಗಳ ಸಂಬಂಧವಾಗಿ ನಿಷ್ಪಕ್ಷಪಾತ ವಿವೇಚನೆಯೂ, ಸಂಸ್ಥಾನಾಭಿವೃದ್ಧಿಯಲ್ಲೇ ಮಗ್ನರಾಗಿರುವಿಕೆಯೂ ಪ್ರಜಾಪಾಲನೆಗೆ ಮುಖ್ಯ ಅಂಗಗಳು ಇವು ನನ್ನ ಯಾವ ಪ್ರಯತ್ನದಲ್ಲೂ ಬೇಡವಾಗುವದಿಲ್ಲವೆಂದು ನಿಮಗೆ ದೃಢವಾಗಿ ಹೇಳುವೆನು ರಾಜಕಾರ್ಯ ನಿರ್ವಾಹಕತ್ವವನ್ನು ಸುಲಭಗೊಳಿಸತಕ್ಕ ಮತ್ತು ರಾಜ್ಯಕ್ಕೆ ಉಪಯೋಗವಾದ ಪ್ರಜೆಗಳ ಸಹಾಯಕ್ಕೆ ಅರ್ಹನಾಗುವುದಕ್ಕೂ, ಸಹೋದ್ಯೋಗಿಗಳ ಸಹಾಯವನ್ನು ಪಡೆಯುವದಕ್ಕೂ ನಾನು ನಿರಂತರವಾಗಿಯೂ ಪ್ರಯತ್ನಪಡುತ್ತೇನೆ ನಮ್ಮ ಪ್ರಿಯರಾದ ಸಂಸ್ಥಾನಾಧಿಪತಿಗಳಾದ ಶ್ರೀಮನ್ ಮಹಾರಾಜರವರ ಗುಣಕಥನವನ್ನು ವಿಶೇಷವಾಗಿ ಮಾಡಬೇಕಾದ ಆವಶ್ಯಕತೆಯು ಇಲ್ಲಿ ಕಂಡುಬರುವದಿಲ್ಲ ಅವರ ಗುಣಗಳಲ್ಲಿ ರಾಜ್ಯಾಭಿವೃದ್ಧಿಗಾಗಿ ಮುಖ್ಯವಾದ ವಿವೇಕವೆ, ಸರಳತ್ವವೂ ನ್ಯಾಯೈಕಪಕ್ಷಪಾತಿತೆಗಳನ್ನು ಕುರಿತು ನೀವು ಹೇಳಿರುವುದು ಯುಕ್ತವೇ ಸರಿ ... ನನ್ನನ್ನು ದಿವಾನರನ್ನಾಗಿ ನೇಮಿಸಿದ್ದಕ್ಕಾಗಿ ನಾನು ಅತ್ಯಂತ ಗೌರವಿಸಲ್ಪಟ್ಟೆನೆಂದು ಭಾವಿಸುತ್ತೇನೆ ಸಂಸ್ಥಾನದ ಕೌನ್ಸಿಲಿನಲ್ಲಿ ನನ್ನನ್ನು ಅವರ ಪ್ರತಿನಿಧಿಯನ್ನಾಗಿ ಗಣಿಸಿರುವದಕ್ಕಾಗಿ ಮತ್ತಷ್ಟು ಗೌರವಿಸಲ್ಪಟ್ಟಂತೆ ಭಾವಿಸುವೆನು ನೀವು ನನ್ನ ವಿಷಯದಲ್ಲಿ ಔದಾರ್ಯಪೂರ್ವಕವಾಗಿ ಆಡಿರುವ ಮಾತಿಗೆ ನಾನು ಇನ್ನೊಂದು ಸಲ ನಿಮ್ಮೆಲ್ಲರನ್ನೂ ವಂದಿಸುತ್ತೇನೆ ಎಂಬುದೇ

ಆ ಮೇಲೆ ಮೆ॥ ಗಣಪತಿನಾಯಕರು ಒಡನೆಯೇ ಒಂದು ಗಾನವನ್ನು ಹಾಡಿದರು ನಂತರ ಬಿಯಾನೊ ಮೊದಲಾದ ವಾದ್ಯಗಳ ಸಮೇತ ಕೆಲವು ಯೂರೋಪಿಯನ್ ಮೊದಲಾದವರು ಸಂಗೀತ ಹಾಡಿದರು. ತರುವಾಯ ಅಷ್ಟಾವಧಾನ, ಕತ್ತಿಗಳ ಪ್ರದರ್ಶನ ಆಟ, ಅಂಗಸಾಧನೆಗಳು, ಈ ಮೊದಲಾದ ಆಟಗಳು ಆಡಲ್ಪಟ್ಟವು ಮೆ॥ ಎಸ್. ಮುನಿಸ್ವಾಮಿಯವರು ದಿವಾನರವರಿಗೆ ಹಾರ ಹಾಕಿ ತಾಂಬೂಲ ಮೊದಲಾದವುಗಳನ್ನು ಒಪ್ಪಿಸಿ ಅದಕ್ಕಾಗಿ ಏರ್ಪಡಿಸಿದ್ದ ಕೊಠಡಿಗೆ ಅವರನ್ನು ಕರೆದುಕೊಂಡು, ಫಲಾಹಾರಾದಿಗಳನ್ನು ಕೊಡಿಸಿದರು ಆ ಬಂಗಲೆಯ ಹಿಂದುಗಡೆ ದಿವ್ಯವಾದ ಬಾಣಬಿರುಸುಗಳು, ದೀಪಗಳು ಹಚ್ಚಲ್ಪಟ್ಟವು ದೀಪೋತ್ಸವವು ಬಹಳ ರಮಣೀಯವಾಗಿತ್ತು ಎಲ್ಲಾ ಪಂಗಡದವರಿಗೂ ಬೇರೆ ಬೇರೆ ಡೇರೆಗಳಲ್ಲಿ ಫಲಾಹಾರಾದಿಗಳು ನಡೆಯುವಂತೆ ತಕ್ಕ ಏರ್ಪಾಡುಗಳನ್ನು ಮಾಡಿದ್ದರು ನಂತರ ಪಾನಸುಪಾರಿ ಮೊದಲಾದವುಗಳು ಕೊಡಲ್ಪಟ್ಟವು ಸಭೆ ವಿಸರ್ಜನೆಯಾಯಿತು ಅನೇಕ ದೊಡ್ಡ ಮನುಷ್ಯರು ಸೇರಿದ್ದರು ಕೆಲವರಿಗೆ ಸ್ಥಳಗಳು ದೊರೆಯದೆ ನಿಂತುಕೊಂಡು ನಿರೀಕ್ಷಿಸುತ್ತಿದ್ದರು ಎಲ್ಲರೂ ತಮ್ಮ ತಮ್ಮ ಮನೆಗಳಿಗೆ ಹೋಗುವ ಕಾಲದಲ್ಲಿ ಅವರವರ ಗಾಡಿಗಳು ತಕ್ಷಣವೇ ಸಿಕ್ಕುವಂತೆ ಪೋಲೀಸ್ ಸೂಪರಿಂಟೆಂಡೆಂಟರವರು ತಕ್ಕ ಏರ್ಪಾಡುಗಳನ್ನು ಮಾಡಿದ್ದರು ಈ ದಿನ ಬಹಳ ಸಂಭ್ರಮವಾಗಿತ್ತು

ಇಂಡಿಯಾ ದೇಶದ ವೃತ್ತಾಂತಗಳು

ಕಳೆದ ವಾರ ೨೩ ದಿನ ಸಿಂಲಾ ಪಟ್ಟಣದಲ್ಲಿ ಭೂಮಿಯು ನಡುಗಿತು ಆ ಸ್ಥಳಕ್ಕೆ ಒಂದು ಭೂಕಂಪದಿಂದ ಸಮಸ್ತ ಕಟ್ಟಡಗಳೂ ಅಲ್ಲಾಡಿ, ಪ್ರಜೆಗಳಿಗೆ ಗಾಬರಿಯನ್ನುಂಟು ಮಾಡಿತು.

◆◆◆◆

ಬರೋಡಾ ಸಂಸ್ಥಾನದ ಗಾಯಕವಾಡ್ ಮಹಾರಾಜರವರು ಪರಿವಾರ ಸಹಿತ ಕಳೆದ ವಾರ ವಿಲಾಯಿತಿಯಿಂದ ಅಮೇರಿಕಾ ರಾಜ್ಯವನ್ನು ನೋಡಿ ಬರುವುದಕ್ಕಾಗಿ ಆ ಕಡೆ ಪ್ರಯಾಣ ಮಾಡಿದರೆಂದು ವರ್ತಮಾನ ಬಂದಿದೆ

◆◆◆◆

ಬೊಂಬಾಯಿ ಪಟ್ಟಣದಲ್ಲಿ ಜಾಂಸೆಟ್‌ಜಿ ಬಂದರ್ ಕೊಲಾಬಾ ಎಂಬಲ್ಲಿ ಮೂವರು ವರ್ತಕರು ಒಂದು ಕಟ್ಟಡವನ್ನು ಬಾಡಿಗೆಗೆ ತೆಗೆದುಕೊಂಡು, ಹತ್ತಿಯ ಮೂಟೆಗಳನ್ನು ಇಡಿಸಿದ್ದರು ಈ ಕಟ್ಟಡಕ್ಕೆ ಬೆಂಕಿ ಬಿದ್ದು ಎಲ್ಲಾ ಸುಟ್ಟು ಹೋಗಿದೆ ಏಳು ಲಕ್ಷ ರೂಪಾಯಿ ನಷ್ಟವಾಯಿತು.

◆◆◆◆

ಸಿಂಲಾ ಪಟ್ಟಣವನ್ನು ಅಭಿವೃದ್ಧಿ ಮಾಡುವುದಕ್ಕೆ ಸರ್ಕಾರದವರು ಸ್ಯಾಂಕ್ಷನ್ ಮಾಡಿದ ೨೦ ಲಕ್ಷ ರೂಪಾಯಿನ ಪೈಕಿ ಇನ್ನೂ ೧೩ ಲಕ್ಷ ಖರ್ಚಾಗದೆ ಹಾಗೇ ಉಳಿದಿದೆ ಎಂದು ತಿಳಿದು ಬಂದದ್ದರಿಂದ ಈ ಹಣವನ್ನು ಹ್ಯಾಗೆ ವಿನಿಯೋಗಿಸಬೇಕೆಂದು ತೀರ್ಮಾನಿಸುವುದಕ್ಕೆ ಒಂದು ಕಮಿಟಿ ಏರ್ಪಾಡಾಗಿದೆ.

◆◆◆◆

ಕಲ್ಕತ್ತಾ ಪಟ್ಟಣದಲ್ಲಿ ಮೂರು ಮಂದಿ ಪೋಲೀಸಿನವರು ಮೂರು ಜನರನ್ನು ಹಿಡಿದು ಬೀದಿಗಳಲ್ಲಿ ಗಲಭೆಮಾಡಿದರೆಂದು ಹೇಳಿ ಚಾರ್ಜು ಮಾಡಿದರು. ಆ ಮೇಲೆ ಅವರಿಂದ ಲಂಚ ತಿಂದು ಲಾಕಪ್ಪಿನಿಂದ ಬಿಟ್ಟುಬಿಟ್ಟರು. ಈಗ ಆ ಮೂವರು ಪೋಲೀಸಿನವರ ಮೇಲೂ ಫಿರ್ಯಾದು ದಾಖಲಾಗಿದೆ

ಹಿಂದುಸ್ಥಾನದ ದೇಶೀಯ ಸೈನಿಕರಲ್ಲಿ ಆರು ಮಂದಿಯನ್ನು ಬೊಂಬಾಯಿ ಗವರ್ನಮೆಂಟಿನವರು ಚುನಾಯಿಸಿ, ಮಹಾರಾಜಾ ಚಕ್ರವರ್ತಿಯವರ ಅಂಗರಕ್ಷಕರನ್ನಾಗಿ ನೇಮಿಸಿ ವಿಲಾಯತಿಗೆ ಕಳುಹಿಸಿದರು. ಇವರೆಲ್ಲಾ ಕಳೆದ ವಾರ ಲಂಡನ್ ಪಟ್ಟಣವನ್ನು ಬಂದು ಇಳಿದು, [illegible]ಸ್ಟರ್ ಎಂಬ ರಾಜಭವನವನ್ನು ತಲುಪಿರುತ್ತಾರೆ.

❖❖❖❖

ಹಿಂದುಸ್ಥಾನದಿಂದ ಲಂಡನ್ ಪಟ್ಟಣಕ್ಕೆ ಹೋಗಿ ವಿದ್ಯಾಭ್ಯಾಸ ಮಾಡುತ್ತಿರುವ ಮಹಮದೀಯರು ಕಳೆದ ವಾರ ತಮ್ಮ ಪ್ರವಾದಿಯಾದ ಮಹಮ್ಮದನ ಹುಟ್ಟಿದ ಹಬ್ಬವನ್ನು ಬಹು ವಿಜೃಂಭಣೆಯಿಂದ ನಡಿಸಿದರೆಂತಲೂ, ಲಿವರ್‌ಪೂಲ್ ಪಟ್ಟಣದಲ್ಲಿರುವ ಮಹಮದೀಯರೂ ಆ ದಿನ ಹಬ್ಬ ಮಾಡಿದರೆಂತಲೂ ತಿಳಿಯುವುದು.

❖❖❖❖

ದರ್ಭಾಂಗ ಸಂಸ್ಥಾನದ ಮಹಾರಾಜರವರ ಮೇಲೂ ಇವರ ಇಬ್ಬರು ಮಹಾರಾಣಿಯರುಗಳ ಮೇಲೂ ಮಹಾರಾಜಾ ಕಾಮೇಶ್ವರ ಸಿಂಗ್ ಎಂಬ ಅವರ ಕುಮಾರರಾದ ಬಾಬು ಗಿರೀಂದ್ರೇಶ್ವರ ಸಿಂಗರವರು ಸಂಸ್ಥಾನದ ಕೆಲವು ಆಸ್ತಿಗಳನ್ನೂ ರೂಢಿಸುವುದಕ್ಕೆ ಸರ್ಕಾರದಿಂದ ಒಬ್ಬ ರಿಸೀವರನ್ನು ನೇಮಿಸಬೇಕೆಂಬುದಾಗಿ ಕಲ್ಕತ್ತಾ ಪಟ್ಟಣದ ಹೈಕೋರ್ಟಿನಲ್ಲಿ ಕಳೆದ ವಾರ ದಾವಾ ತಂದಿದ್ದಾರೆ.

❖❖❖❖❖

ಕಳೆದ ವಾರ ಹಿಂದುಸ್ಥಾನದಲ್ಲಿ ೧೭,೦೮೭ ಜನರಿಗೆ ಪ್ಲೇಗ್ ತಗಲಿ, ೧೧,೯೮೩ ಜನರು ಆ ಉಪದ್ರದಲ್ಲಿ ಸಾವಿರಾರು. ಈ ವಾರ ಸಂಖ್ಯೆ ವಿವರ ಹ್ಯಾಗೆಂದರೆ—ಪಂಜಾಬ್ ೯,೩೮೭, ಬೊಂಬಾಯಿ ೫೨೩, ಸಂಯುಕ್ತ ಅಧಿಪತ್ಯಗಳು ೯೧೮, ಬಂಗಾಳಾ ೨೫೮, ಕಾಶ್ಮೀರ ೨೩೦, ಬರ್ಮಾ ೯೮ ಮಧ್ಯ ಇಂಡಿಯಾ ೫೩, ಮೈಸೂರು ೨೦, ರಾಜಪುತಾನಾ ೨೩, ಬೆಲೂಚಿಸ್ಥಾನ ಮತ್ತು ಮಧ್ಯ ಸಂಸ್ಥಾನಗಳು ೩೩೩, ಮದರಾಸ್ ೫.

❖❖❖❖

ಕಾಂಗ್ರಾ ಜಿಲ್ಲೆಯಾದ [illegible] ಕಳೆದ ವಾರ ಒಂದು ಸಿರೀ (೨೦ಕಾ) [illegible] ಇದ್ದರು. ಇವರ ಸಂಗಡ [illegible] ೩೦೦, ಐದು ಮಂದಿ [illegible] ದೊಡ್ಡ ಮನುಷ್ಯರು, ಮೂವತ್ತು ಮಂದಿ [illegible] ಒಬ್ಬ [illegible], ಈ ನೋವಲ್ಲದವರೆಲ್ಲಾ ಬಂದಿದ್ದರು. ಆ ದ್ವೀಪದವರು [illegible] ತಿಳಿಯುವುದು.

❖❖❖❖

ಲಾಹೋರ್ ಪಟ್ಟಣದಲ್ಲಿ ದೇಶೀಯ ಕಸಬು ಗಾರರನ್ನು ಪ್ರೋತ್ಸಾಹ ನಡಿಸುವುದಕ್ಕೆ ಕೆಲವು ಪ್ರಜೆಗಳು ಸೇರಿ ಸ್ವದೇಶೀ ಬ್ಯಾಂಕನ್ನು ಏರ್ಪಡಿಸಿ [illegible] ಅದರ [illegible] ಲಕ್ಷ ರೂಪಾಯಿ. ಷೇರು ೧ಕ್ಕೆ ೧೦೦ ರೂಪಾಯಿಯಂತೆ ಬಿಕರಿ [illegible]. ದೇಶೀಯ ದೊಡ್ಡ ಮನುಷ್ಯರೇ ನಿಂತು ಈ ಬ್ಯಾಂಕ್ [illegible] ಕಾರಣ ಅದು ಚಿರಕಾಲ ನಡೆಯುತ್ತದೆಂತಲೂ [illegible] ದೇಶೀಯ ಕಸಬುಗಳಿಗೆ ಪ್ರೋತ್ಸಾಹವಾಗುವುದೆಂತಲೂ ನಂಬಿಕೆಯುಂಟಾಗಿದೆ.

❖❖❖❖

ಪಾಟಿಯಾಲಾ ಸಂಸ್ಥಾನದ ಮಹಾರಾಜರಾದ ಸರ್ ರಣಧೀರಸಿಂಗ್, ಜಿ.ಸಿ.ಎಸ್.ಐ. ಯವರು ಕಳೆದ ಶನಿವಾರ ಅರೇಬಿಯಾ ಎಂಬ ಹಡಗನ್ನು ಹತ್ತಿ ವಿಲಾಯತಿಗೆ ಪ್ರಯಾಣ ಮಾಡಿದರು. ಇವರ ಸಂಗಡ ಡಾಕ್ಟರ್ ಜೇಂಸ್ ಎಂಬ ವಾಕ್ಯರೂ, ಮಿಸ್ಟರ್ ವರ್ಜೀನ್ ಚಂದ್ ಎಂಬ ವಕೀಲರೂ ಹೋಗಿರುವರು. ಈ ಮಹಾರಾಜರಿಗೆ ಕುದುರೆ ಜೂಜಿನಲ್ಲಿ ಬಹಳ ಇಷ್ಟ. ತಮ್ಮ ರೆಕಾರ್ಡ್ ರೇಸ್ ಎಂಬ ಕುದುರೆಯನ್ನು ಮೊದಲೇ ಕಳುಹಿಸಿದ್ದರು. ಅಲ್ಲಿ ಅದು ಎರಡು ಜೂಜುಗಳನ್ನು ಗೆದ್ದು ಬಹುಮಾನ ತಂದಿದೆ.

❖❖❖❖

ಹಿಂದುಸ್ಥಾನದ ಸರ್ವ ಸೇನಾಪತಿಯಾದ ಲಾರ್ಡ್ ಕಿಚ್ನರ್ ರವರು ಇಲ್ಲಿನ ಇಂಗ್ಲಿಷ್ ಸೈನ್ಯದ ಇಲಾಖೆಯಲ್ಲಿ ಈಗಿನ ಕಾಲಕ್ಕೆ ತಕ್ಕಂತೆ ನಾನಾ ಹೊಸ ಏರ್ಪಾಡುಗಳನ್ನು ಮಾಡುತ್ತಿದ್ದಾರಷ್ಟೆ. ಈ ಪ್ರಕಾರ ದಿನಂತೆ ಈಗ ಕಲ್ಲಿಕೋಟೆ, ಕನ್ನಾನೂರುಗಳಲ್ಲಿರುವ ಇಂಗ್ಲಿಷ್ ಸೈನ್ಯಗಳನ್ನು ಅಲ್ಲಿಂದ ವಾಪಸ್ ಕರೆಸಿಕೊಳ್ಳುವರು. ಅಲ್ಲಿನ ಇಂಗ್ಲಿಷ್ ಸಿಪಾಯಿಗಳು ವೆಲ್ಲಿಂಗ್‌ಟನ್ ದಾಣ್ಯಕ್ಕೆ ಬರುವರು. ಮಲೆಯಾಳಿಯ ರಿರುವ ಪ್ರದೇಶಕ್ಕೆ ಮಧ್ಯಸ್ಥಾನವಾದ ಮಾಲ್ಲಾಪುರದಲ್ಲಿ ಮಾತ್ರ ಒಂದು ಕಂಪನಿಯಷ್ಟು ಇಂಗ್ಲಿಷ್ ಸಿಪಾಯರನ್ನು ಇಟ್ಟಿರುತ್ತಾರೆ.

❖❖❖❖

ಹಿಂದುಸ್ಥಾನದ ಜನರಿಗೆ ಕೈಕಸಬುಗಳನ್ನು ಇತರ ದೇಶಗಳಲ್ಲಿ ಕಲಿಸುವುದಕ್ಕೋಸ್ಕರ ಕಲ್ಕತ್ತೆಯಲ್ಲಿ ಒಂದು ಸಂಘವಿರುವುದು. ಈ ಸಂಘದವರು ವೇತನಗಳನ್ನು ಕೊಟ್ಟು ಪ್ರತಿ ವರುಷವೂ ಇಬ್ಬರು ವಿದ್ಯಾರ್ಥಿಗಳನ್ನು ಪರರಾಜ್ಯಗಳಿಗೆ ಕಳುಹಿಸುತ್ತಿದ್ದಾರೆ. ಈ ಸಂಘದವರ ಸಹಾಯದಿಂದ ಮಿ॥ ಪಿ. ಸಿ. ರಾಯ್, ಮಿ॥ ಎ. ಘೋಸ್ ಎಂಬಿಬ್ಬರು ಜರ್ಮನ್ ರಾಜ್ಯಕ್ಕೆ ಹೋಗಿ, ದೀಪದ ಕಡ್ಡಿಗಳನ್ನು ತಯಾರ್ಮಾಡುವ ವಿಧಾನವನ್ನೆಲ್ಲಾ ಕಲಿತು ವಾಪಸ್ ಬಂದಿದ್ದಾರೆ. ಮೇಲ್ಕಂಡ ಸಂಘದವರು ಇವರಿಬ್ಬರಿಗೂ ದ್ರವ್ಯಸಹಾಯ ಮಾಡಿ, ದೀಪದ ಕಡ್ಡಿ ಕಾರ್ಖಾನೆಯನ್ನು ಕಲ್ಕತ್ತೆಯಲ್ಲಿ ಸ್ಥಾಪಿಸಬೇಕೆಂದು ಏರ್ಪಾಡು ಮಾಡುತ್ತಿರುವರು.

❖❖❖❖

ಮದರಾಸ್ ಪಟ್ಟಣದಲ್ಲಿರುವ ಪ್ರಸಿದ್ಧ ಜವಾಹಿರಿ ವ್ಯಾಪಾರಸ್ಥರಾದ ಮೆ॥ ಟಿ. ರಂಗನಾಥ ಠಾಕೂರ್ ಯವರು ತಮ್ಮ ಮೊಮ್ಮಗಳಿಗೆ ಕಳೆದ ವಾರ ವಿವಾಹ ಮಾಡಿದರು. ಒಬ್ಬ ಮೊಮ್ಮಗನ ಉಪನಯನವೂ ಆಯಿತು. ಈ ಸಂತೋಷೋತ್ಸವಗಳನ್ನು ಅವರು ಬಹು ಅಟ್ಟಹಾಸವಾಗಿ ನೆರವೇರಿಸಿದರು. ಹಿಂದುಸ್ಥಾನದ ಎಲ್ಲಾ ಭಾಗಗಳಿಂದಲೂ ಬಹು ಮಂದಿ ದೊಡ್ಡ ಮನುಷ್ಯರೂ, ಮೈಸೂರು ಮಹಾರಾಜರೂ, ವಿಜಯನಗರದ ರಾಜರೂ, ಅಂಬಾ ಧಾರಾಕೋಟೆಗಳ ಜಮೀನ್ದಾರರೂ, ಪಿಠಾಪುರ ಸಮಾಜರೂ, ಬರೋಡಾ ರಾಜಾಸಾಹೇಬರೂ, ನೇಪಾಳದ ರಾಜಾ ಇಂದ್ರಕರಣ ಬಹದೂರ್‌ಯವರೂ, ಆಲಿಪುರದ ರಾಜಾಸಾಹೇಬರೂ, ಹುಲಿವನಾಥ ಜಮೀನ್ದಾರರೂ, ಇನ್ನೂ ಅನೇಕ ಮಹನೀಯರೂ ಸಮಯೋಚಿತಕಾಲದಲ್ಲಿ ವಧೂವರರಿಗೂ ವಟುವಿಗೂ ಬಹುಮಾನಗಳನ್ನು ಕೊಟ್ಟು ಕಳುಹಿಸಿದರು.

❖❖❖❖

ನಾಸಿಕದ ಹತ್ತಿರ ಇರುವ ಗಂಗಾಪುರವೆಂಬ ಊರಿನಲ್ಲಿ ಕಳೆದ ವಾರ ಒಂದು ಮಗುವು ಬೆಂಕಿಯನ್ನಿಟ್ಟುಕೊಂಡು ಆಡುತ್ತಿದ್ದ ಸಂದರ್ಭದಲ್ಲಿ ಒಂದು ಮನೆ ಹತ್ತಿಕೊಂಡಿತು. ಜ್ವಾಲೆಗಳು ನೆರೆಹೊರೆ ಮನೆಗಳಿಗೂ ವ್ಯಾಪಿಸಿಕೊಂಡು, ಬಲವಾಗಿ ಬೀಸುತ್ತಿದ್ದ ಗಾಳಿಯ ಸಹಾಯದಿಂದ ೪೪ ಮನೆಗಳನ್ನು ಸುಟ್ಟು ಬೂದಿ ಮಾಡಿತು. ಆ ೪೪ ಮನೆಗಳಲ್ಲಿದ್ದ ಜನರೂ ಸರ್ವಸ್ವವನ್ನೂ ಕಳೆದುಕೊಂಡು ಬಹಳ ಕಷ್ಟಪಡುತ್ತಿದ್ದಾರೆ. ಆದರೆ ದೇವರ ದಯೆಯಿಂದ ಪ್ರಾಣನಷ್ಟವೇನೂ ಆಗಲಿಲ್ಲ. ಸರ್ಕಾರ ಅಧಿಕಾರಿಗಳೂ ದೊಡ್ಡ ಮನುಷ್ಯರೂ ಆ ನಿರಾಶ್ರಯರನ್ನು ಸಾಕುವುದಕ್ಕೆ ಅವರಿಗೆ ಮನೆ ಮಠಗಳನ್ನು ಮಾಡಿಕೊಡುವುದಕ್ಕೂ ಚಂದಾ ಮೂಲಕ ದ್ರವ್ಯವನ್ನು ಕೂಡಿಸುತ್ತಿದ್ದಾರೆ.

❖❖❖❖

ಕಳೆದ ೧೯೦೪—೦೫ನೆ ಸಾಲಿನಲ್ಲಿ ಹಿಂದುಸ್ಥಾನದಿಂದ ಪರದೇಶಗಳಿಗೆ ೧೦ ಕೋಟಿಯ ೩ ಲಕ್ಷ ರೂಪಾಯಿನ ಕ್ರಯದ ಬಾಳೆ ಹಣ್ಣು ಅಫೀಮು ರಫ್ತು ಆಯಿತು. ಈ ಪೈಕಿ ೯ ಕೋಟಿಯ ೩೭ ಲಕ್ಷ ರೂಪಾಯಿನಷ್ಟು ಅಫೀಮನ್ನು ಚೀನಾ ರಾಜ್ಯದವರೇ ಕೊಂಡುಕೊಂಡರು. ಇದರಿಂದ ಇಂಡಿಯಾ ಸರ್ಕಾರದವರಿಗೆ ನಾಲ್ಕು ಕೋಟಿ ರೂಪಾಯಿ ರೆವಿನ್ಯೂ ಉತ್ಪತ್ತಿಯಾಗಿದೆ. ಇತ್ತಲಾಗಿ ಪರರಾಜ್ಯಗಳಿಂದ ೧೯೦೪—೦೫ನೆ ಸಾಲಿನಲ್ಲಿ ಹಿಂದುಸ್ಥಾನಕ್ಕೆ ಬಂದ ಮದ್ಯಪ್ರಾಣಿಗಳ ಮೊಬಲಗು ೬ ಕೋಟಿ ೧೦ ಲಕ್ಷ ರೂಪಾಯಿ ಆಯಿತು. ೧೯೦೫—೦೬ನೆ ಇಸವಿಯಲ್ಲಿ ಉತ್ಪತ್ತಿ ಆದ ಮೊಬಲಗು ೩ ಕೋಟಿ ೫೩ ಲಕ್ಷ ರೂಪಾಯಿ ಆಯಿತು. ಹೀಗೆ ವರ್ಷಗಳ ಆದಾಯ ಹೆಚ್ಚಾದ್ದಕ್ಕೆ [illegible] ಬಲವಾದ ನ್ಯಾಯವಾದ ಕಾರಣಗಳೇನೂ [illegible] ಸರ್ಕಾರದವರು ತಿಳಿಸಿದಾರೆ.

❖❖❖❖

ಲಾರ್ಡ್ ಕರ್ಜನ್ ಪ್ರಭುಗಳು ಲಂಡನ್ ಪಟ್ಟಣದಲ್ಲಿ ಗ್ರಂಥಕರ್ತರ ಸಂಘದವರ ಅಪೇಕ್ಷೆಯಂತೆ ಅವರ ಕೂಟಕ್ಕೆ ಹೋಗಿ ಮಾತನಾಡುವಾಗ್ಗೆ ಹಿಂದುಸ್ಥಾನದ ಪ್ರಜೆಗಳ ವಿದ್ಯಾಭಿವೃದ್ಧಿಯನ್ನು ಕುರಿತು ಹೇಳಿದ್ದೇನೆಂದರೆ—ಹಿಂದುಸ್ಥಾನದಲ್ಲಿರುವ ೩೦ ಕೋಟಿ ಪ್ರಜೆಗಳ ಪೈಕಿ ೧ ಕೋಟಿ ೫೩ ಲಕ್ಷ ಪುರುಷರೂ ೧೦ ಲಕ್ಷ ಸ್ತ್ರೀಯರುಗಳೂ ಓದು ಬರಹ ಬಲ್ಲವರು. ಇವರಲ್ಲಿ ೧೦ ಲಕ್ಷ ಗಂಡಸರೂ ೧ ಲಕ್ಷ ಹೆಂಗಸರೂ (ಯುರೋಪಿಯನರೂ, ಯುರೇಷಿಯನರ ಸೇರಿ) ಇಂಗ್ಲಿಷ್ ಭಾಷೆಯನ್ನು ಓದಿ ಬರೆಯಬಲ್ಲರು. ನಾನು ವೈಸರಾಯ್ ಪದವಿಯಲ್ಲಿದ್ದಾಗ್ಗೆ ವಿದ್ಯಾಭಿವೃದ್ಧಿಗೂ ಗ್ರಂಥಪ್ರಕಟನೆಗೂ ನನ್ನ ಕೈಲಾದಮಟ್ಟಿಗೂ ಪ್ರೋತ್ಸಾಹ ಮಾಡಿದೆನು. ಇಂಡಿಯಾ ದೇಶದ ಆದಾಯ ಇಂಗ್ಲೆಂಡಿನಲ್ಲಿ ಹಿಂದಿನ ಸ್ನೇಹಿತರುಗಳಿಗೆ [illegible] ಇಷ್ಟಾಗ್ಯೂ ಅವರ [illegible] ಅವರ ಮಾತುಗಳಿಗೆ [illegible] ಪಾರ್ಲಿಮೆಂಟ್ ಮೆಂಬರುಗಳಿಗೆ ಅಂಥಾ ಶಕ್ತಿ ಇಲ್ಲವೆಂದು ಹೇಳಿದರು ಎಂಬ [illegible].

❖❖❖❖

ಪೂರ್ವ ಬಂಗಾಳಾ ಎಂಬ ಹೊಸ ಆಧಿಪತ್ಯದಲ್ಲಿ ಪ್ರಜೆಗಳು "ವಂದೇ ಮಾತರಂ" ಎಂಬ ಪದವನ್ನು ಬೀದಿಬೀದಿಗಳಲ್ಲಿ ಕೂಗಕೂಡದೆಂದು ಸರ್ಕಾರದವರು ವಿಧಿಸಿದ್ದರಷ್ಟೆ. ಈಚೆಗೆ ಲೆಫ್ಟಿನೆಂಟ್ ಗವರ್ನರವರು ಕರುಣೆಯಿಟ್ಟು ಆ ನಿರ್ಬಂಧವನ್ನು ತಪ್ಪಿಸಿರುತ್ತಾರೆ. ಆದರೆ ಮಹಮದೀಯರಿಗೂ ಹಿಂದುಗಳಿಗೂ ಜಗಳ ಕದನಗಳಾಗಬಹುದೆಂದು ಪೋಲೀಸಿನವರಿಗೇನಾದರೂ ಊಹೆ ಕಂಡುಬಂದಲ್ಲಿ ಹಿಂದುಗಳ ಮೆರವಣಿಗೆಗಳನ್ನು ಲೈಸೆನ್ಸ್ ಕೊಡದೆ ನಡೆಯತಕ್ಕದ್ದಲ್ಲವೆಂದು ವಿಧಿಸಿರುವರು. ಇದಲ್ಲದೆ ಬ್ಯಾರಿಸಾಲ್ ಮುಂತಾದ ಪ್ರದೇಶಗಳಲ್ಲಿ ಸ್ಕೂಲ್ ಬಾಲಕರು ಕೆಲವರು ಪೋಲೀಸಿನವರ ಮೇಲೆ ಗುಂಪಿನಲ್ಲಿ ಸೇರಿ ಪ್ರಜಾಸಮ್ಮತಿಗೆ ಭಂಗವನ್ನುಂಟುಮಾಡಿದ್ದರಿಂದ ಅಂಥಾ ಹುಡುಗರನ್ನು ಸರ್ಕಾರಿ ಸ್ಕೂಲುಗಳಿಗೆ ಸೇರಿಸಿಕೊಳ್ಳಬೇಕೂಡದೆಂದೂ ಅವರ ಹೆಸರುಗಳನ್ನೆಲ್ಲಾ ಸ್ಕೂಲ್ ಹಾಜರ್ ಪಟ್ಟಿಯಿಂದ ವಜಾಮಾಡಬೇಕೆಂದೂ ಅಪ್ಪಣೆಕೊಟ್ಟು ವಜಾಮಾಡಿಸಿದ್ದರು. ಈಗ ಈ ಹುಕುಮನ್ನು ಸರ್ಕಾರದವರು ರದ್ದುಮಾಡಿ, ವಜಾಮಾಡಲ್ಪಟ್ಟ ಹುಡುಗರ್ಯಾರಿದ್ದರೂ ಜೂನ್ ತಿಂಗಳೊಳಗಾಗಿ ಆಯಾ ಸ್ಕೂಲಿಗೆ ಹೋಗಿ ದಾಖಲಾಗಬಹುದೆಂದೂ ಅವರಿಗೆ ಯಾವ ವಿಧವಾದ ಶಿಕ್ಷೆಯನ್ನೂ ವಿಧಿಸುವುದಿಲ್ಲವೆಂದೂ ಇಸ್ತಿಹಾರು ಹಾಕಿಸಿರುತ್ತಾರೆ. ಇವೆರಡು ಹುಕುಮುಗಳಿಂದಲೂ ಆ ಪ್ರಾಂತ್ಯದಲ್ಲಿ ಪ್ರಜಾಸಮ್ಮತಿಯು ಬಹುಮಟ್ಟಿಗೆ ಅನುಕೂಲವಾಗಿದೆ. ಆದರೂ ಬಂಗಾಳಾ ವಿಭಜನೆಯ ವಿಚಾರವಾದ ಜಿಜ್ಞಾಸವನ್ನು ಅಲ್ಲಿನವರು ಇನ್ನೂ ಬಿಟ್ಟಿಲ್ಲ.

ವಿದೇಶ ವರ್ತಮಾನಗಳು.

ಆಸ್ಟ್ರೇಲಿಯಾಕ್ಕೆ ಸೇರಿದ ಬೆಂಡಿಗೋ ಎಂಬ ಸ್ಥಳದಲ್ಲಿ ಒಂದು ಚಿನ್ನದ ಗಣಿ ಇರುವುದು. ಅದು ೪,೦೦೦ ಅಡಿ ಆಳವಾಗಿದೆ. ಇದಕ್ಕಿಂತಲೂ ಆಳವಾದ ಚಿನ್ನದ ಗಣಿ ಪ್ರಪಂಚದ ಇನ್ಯಾವ ಕಡೆಯಲ್ಲೂ ಇಲ್ಲ.

❖❖❖❖

ಮಿ॥ ಆಂಡ್ರೂ ಕಾರ್ನೆಗಿ ಎಂಬ ಕೋಟ್ಯಾಧೀಶ್ವರನು ಕೆನಡಾ ಆಧಿಪತ್ಯಕ್ಕೆ ಸೇರಿದ ವಿಕ್ಟೋರಿಯಾ ಪಟ್ಟಣದಲ್ಲಿ ಒಂದು ಸರಸ್ವತೀ ಭಂಡಾರವನ್ನು ಸ್ಥಾಪಿಸಬೇಕೆಂದು ಒಂದೂವರೆ ಲಕ್ಷ ರೂಪಾಯಿ ಧರ್ಮ ಮಾಡಿರುವನು.

❖❖❖❖

ಫ್ಲಾರೆನ್ಸಾ ಎಂಬೊಂದು ಹಡಗು ಹಿಂದುಸ್ಥಾನದಿಂದ ಹೋಗಿ ಆಸ್ಟ್ರೇಲಿಯಾ ದ್ವೀಪವನ್ನು ತಲುಪಿತು. ಈ ದಾರಿಯಲ್ಲಿ ಪ್ರಯಾಣ ಮಾಡುತ್ತಿದ್ದ ನೂರಾರು ಜನ ಕೂಲಿಕಾರರಿಗೆ ವಾಂತಿಭೇದಿ ಉಪದ್ರವೂ ಶಿಡುಬೂ ಪ್ರಾರಂಭವಾಗಿ ಉದ್ದೇಶ ಸ್ಥಳವನ್ನು ಸೇರುವಷ್ಟರೊಳಗಾಗಿ ೬೪ ಜನರು ಕಾಲವಾದರು.

❖❖❖❖

ಟ್ರಾನ್ಸ್‌ವಾಲ್ ಆಧಿಪತ್ಯದಲ್ಲಿರುವ ಪ್ರಜೆಗಳಿಗೆಲ್ಲಾ ತಾರತಮ್ಯವಿಲ್ಲದೆ ಅಲ್ಲಿನ ಪಾರ್ಲಿಮೆಂಟ್ ಸಭೆಗೆ ಮೆಂಬರುಗಳನ್ನು ಚುನಾಯಿಸುವ ಹಕ್ಕನ್ನು ದಯಪಾಲಿಸಬೇಕೆಂದು ಅಲ್ಲಿನ ಪ್ರಜೆಗಳು ಒಂದು ವಿಜ್ಞಾಪನಾಪತ್ರಿಕೆಯನ್ನು ಬರೆದು ಇಂಗ್ಲಿಷ್ ಗವರ್ನಮೆಂಟಿಗೆ ಒಪ್ಪಿಸುವವರಾಗಿರುತ್ತಾರೆ. ಇದಕ್ಕೆ ಆಗಲೇ ೩೦,೦೦೦ ಪ್ರಜೆಗಳಿಗಿಂತಲೂ ಹೆಚ್ಚಾಗಿ ರುಜುಹಾಕಿದಾರೆ.

❖❖❖❖

ಇಂಗ್ಲಿಷ್ ಗವರ್ನಮೆಂಟಿನವರು ದಕ್ಷಿಣ ಆಫ್ರಿಕಾ ಯುದ್ಧದ ಚರಿತ್ರೆಯನ್ನು ಸರ್ಕಾರಿಯಾಗಿ ಸಾಂಗೋಪಾಂಗವಾಗಿ ಬರೆಸಿ ಅಚ್ಚು ಹಾಕಿಸುತ್ತಿದಾರೆ. ಇದಕ್ಕೆ ಒಟ್ಟು ೩,೦೫,೦೦೦ ರೂಪಾಯಿ ಖರ್ಚಾಗುವುದು. ಈ ಪೈಕಿ ಇದುವರೆಗೆ ೩,೩೦,೦೦೦ ರೂಪಾಯಿ ಖರ್ಚಾಯಿತು. ಮೊದಲನೇ ಭಾಗವು ಇಷ್ಟರಲ್ಲೇ ಸಿದ್ಧವಾಗುವುದು. ಇನ್ನು ಮೂರು ಭಾಗಗಳು ಅನಂತರ ಪ್ರಕಟಿಸಲ್ಪಡುವವು ಎಂದು ವಿಲಾಯತಿಯ ಮಂತ್ರಿಶ್ರೇಷ್ಠರು ತಿಳಿಸಿದಾರೆ.

❖❖❖❖

ಇಟಲಿ ರಾಜ್ಯಕ್ಕೆ ಸೇರಿದ ವೆಸೂವಿಯಸ್ಸೆಂಬ ಪರ್ವತದ ಗರ್ಭದಲ್ಲಿ ಕಲ್ಲು ಮಣ್ಣು ಮುಂತಾದ್ದು ನೀರಿನಂತೆ ಕಾದು ಹೊರಕ್ಕೆ ಸುರಿದು ಅನಾಹುತವಾಯಿತಷ್ಟೆ. ಅದರಿಂದೀಚೆಗೆ ಆ ಪ್ರದೇಶದಲ್ಲಿ ಪ್ರಚಂಡಗಾಳಿಯೂ ಅಪೂರ್ವ ಮಳೆಯೂ ಹಿಡಿದು, ಮರಳು ಬೂದಿ ಇದ್ದಲು ಮುಂತಾದ್ದು ಮಳೆಯ ಸಂಗಡ ಸುರಿದು, ಸಮಸ್ತ ಕಟ್ಟಡಗಳನ್ನೂ ಮುಚ್ಚಿಬಿಟ್ಟವು. ಅನೇಕ ರೈಲ್ ಸೇತುವೆಗಳೂ ರಸ್ತೆಗಳೂ ಕಿತ್ತು ಕೊಚ್ಚಿಹೋದವು. ಈಗೀಗ ಎಲ್ಲಾ ಸಮಾಧಾನಕ್ಕೆ ಬಂದಿದೆ ಎಂದು ತಿಳಿಯುವುದು.

❖❖❖❖

ಐರ್ಲಾಂಡಿನ ಮುಖ್ಯ ನಗರವಾದ ಡಬ್ಲಿನ್ ಪಟ್ಟಣದಲ್ಲಿ ಕಾಡು ಮೃಗಗಳನ್ನಿಟ್ಟು ಸಾಕುತ್ತಾರೆ. ಅಲ್ಲಿಗೆ ನ್ಯೂಬಿಯಾ ದೇಶದಿಂದ ಒಂದು ಜೋಡಿ ಸಿಂಹವನ್ನು ತಂದಿಟ್ಟು ಸುಮಾರು ೫೦ ವರುಷಗಳಾದವು. ಈ ಸಿಂಹಗಳಿಂದ ಇದುವರೆಗೆ ೨೮೮ ಮರಿಗಳೂ ಮೊಮ್ಮಗಳೂ ಆಗಿವೆ. ಈ ಸಿಂಹಗಳ ಪೈಕಿ ಒಂದು ಜೋಡಿಯನ್ನು ರಂಗೂನ್ ಪಟ್ಟಣದ ಪ್ರಾಣಿಗಳ ಆಲಯದಲ್ಲಿ ತಂದಿಡುವುದಕ್ಕೋಸ್ಕರ ಕ್ರಯಕ್ಕೆ ಕೊಂಡುಕೊಂಡಿದಾರೆ. ಅವೆರಡೂ ಇಷ್ಟರಲ್ಲೇ ಹಡಗುಗಳ ಮೇಲೆ ಬರ್ಮಾದೇಶಕ್ಕೆ ಬರುವವು.

❖❖❖❖

ಸ್ಪೆಯಿನ್ ರಾಜ್ಯದ ಆಲ್ಫೋನ್ಸೋ ದೊರೆಯವರ ವಿವಾಹವು ರಾಜಧಾನಿಯಾದ ಮ್ಯಾಡ್ರಿಡ್ ಪಟ್ಟಣದಲ್ಲಿ ನಡೆಯುವುದು. ಪ್ರಿನ್ಸೆಸ್ ಈನಾ ಎಂಬ ವಿಲಾಯತೀ ರಾಜವಂಶದ ಸುಕುಮಾರಿಯೇ ಅವರ ಅರ್ಧಾಂಗಿಯಾಗುವರು. ಇನ್ನೊಂದು ವಾರದ ವರೆಗೆ ಆ ಪಟ್ಟಣದಲ್ಲಿ ಈ ರಾಜವಿವಾಹೋತ್ಸವಗಳು ವಿಶೇಷ ಅಟ್ಟಹಾಸದೊಡನೆ ನಡೆಯುವವು. ಐಶ್ವರ್ಯವಂತರ ದೇಶಗಳು ಬರ್ಮಾ ಮಾತ್ರವಲ್ಲದೆ ಫ್ರಾನ್ಸ್ ಮುಂತಾದವುಗಳೆಲ್ಲಾ ಯುರೋಪಿನ ದೊರೆಗಳೆಲ್ಲಾ ತಮ್ಮ ಪ್ರತಿನಿಧಿಗಳನ್ನು ಈ ವಿವಾಹಕ್ಕೆ ಕಳುಹಿಸಿಕೊಟ್ಟಿದಾರೆ.

❖❖❖❖

ನ್ಯೂಕ್ಯಾಲೆಡೋನಿಯಾ ಎಂಬ ದ್ವೀಪದಲ್ಲಿ ಸರ್ಕಾರದವರು ರಾಜಾಜ್ಞೆಯಿಂದ ಅಲ್ಲಿರುವ ಪ್ರಜೆಗಳ ಪೈಕಿ ಮುದುಕರಿಗೆಲ್ಲಾ ಪ್ರತಿ ತಿಂಗಳಿನಲ್ಲೂ ಅವರ ಜೀವನಕ್ಕೆ ಪೆನ್ಷನ್ ಕೊಡುತ್ತಿದಾರೆ. ಪೆನ್ಷನ್ ಪಡೆಯತಕ್ಕವರು ೬೫ ವರುಷ ವಯಸ್ಸು ಮೀರಿದವರಾಗಿಯೂ, ಕಡೇಪಕ್ಷ ೨೫ ವರುಷಗಳಿಂದ ಅಲ್ಲಿ ವಾಸಮಾಡತಕ್ಕವರಾಗಿಯೂ ೫ ವರುಷಗಳಿಂದ ಸಚ್ಚರಿತರೆಂತಲೂ, ಸಚ್ಚರಿತ್ರರೆಂತಲೂ, ಸರ್ಕಾರಿಕರೆಂತಲೂ ಹೇಳಿಸಿಕೊಳ್ಳುವವರಾಗಿಯೂ ಇರಬೇಕು. ಈಗ ಈ ರೀತಿ ಪೆನ್ಷನ್ ಪಡೆಯುತ್ತಿರುವವರಲ್ಲಿ ನಾಲ್ವರು ಮಂದಿ ೧೦೦ ವರುಷಕ್ಕಿಂತ ಹೆಚ್ಚು ವಯಸ್ಸಿನವರೂ ಇದ್ದಾರೆಂದು ತಿಳಿಯುವುದು.

❖❖❖❖

ಚೀನಾ ರಾಜ್ಯದ ಪ್ರಜೆಗಳು ಇತರ ರಾಜ್ಯಗಳಿಗೆ ಹೋಗಿ ಎಲ್ಲಾ ತರದ ವಿದ್ಯೆಗಳನ್ನೂ ಕಲಿತು ಬರಬೇಕೆಂತಲೂ ಆ ಮೂಲಕ ತಮ್ಮ ರಾಜ್ಯವನ್ನು ಈಗಿನ ಕಾಲಕ್ಕೆ ತಕ್ಕಂತೆ ಅಭಿವೃದ್ಧಿಪಡಿಸಿಕೊಳ್ಳಬೇಕೆಂತಲೂ ಕುತೂಹಲಪಡುವವರಾಗಿದ್ದಾರೆ. ಅನೇಕರು ಸರ್ಕಾರದಿಂದ ವೇತನಗಳನ್ನು ಪಡೆದು ಯೂರೋಪ್ ಅಮೇರಿಕ ಜಪಾನ್ ರಾಜ್ಯಗಳಿಗೆ ಆಗಲೇ ಹೋಗಿ ವಿದ್ಯಾಭ್ಯಾಸಂಗವಾಡುತ್ತಿದಾರೆ. ಇನ್ನೂ ಅನೇಕ ಮಂದಿ ಸ್ವಂತ ಹಣವನ್ನೇ ವಿನಿಯೋಗಿಸಿಕೊಂಡು ಆ ಸ್ಥಳಗಳಿಗೆ ಹೋಗಿರುತ್ತಾರೆ. ಇನ್ನು ಹತ್ತಾರು ವರುಷಗಳಲ್ಲಿ ಚೀನಾರಾಜ್ಯವೂ ಇತರ ರಾಜ್ಯಗಳಂತೆ ನವನಾಗರೀಕವಾದದ್ದಾದೀತೆಂದು ಎಲ್ಲರೂ ನಿರೀಕ್ಷಿಸುತ್ತಿರುವರು.

❖❖❖❖

ವಿಲಾಯತಿಗೆ ಸೇರಿದ ಹಡರ್ಸ್‌ಫೀಲ್ಡ್ ಎಂಬ ಪಟ್ಟಣದಲ್ಲಿ ಬ್ರಾಡ್‌ಫೋರ್ಡ್ ಮೇಯರೆಂಬ ಪುರಾಧ್ಯಕ್ಷನಾದ ಮಿ॥ ಬೆಂಜಮಿನ್ ಬ್ರಾಡ್‌ಬೆಂಟ್ ಎಂಬುವನು ಆ ಪಟ್ಟಣದಲ್ಲಿ ಮಕ್ಕಳನ್ನು ಸಾಕಿ ಬೆಳೆಸುವ ವಿಷಯದಲ್ಲಿ ಮಕ್ಕಳ ಪೋಷಕರಿಗೆ ತಿಳುಹಿಸಿರುವುದೇನೆಂದರೆ—ತಾಯಿತಂದೆಗಳೂ ಪೋಷಕರೂ ತಮ್ಮ ಕೂಸುಗಳನ್ನು ಪ್ರತಿ ೧೫ ದಿನಕ್ಕೊಂದು ಸಲ ತಕ್ಕಡಿಗೆ ಹಾಕಿ ತೂಕಮಾಡಿ ನೋಡುತ್ತಿರಬೇಕು. ಇದಕ್ಕೋಸ್ಕರಲೇ ಒಂದು ತೂಗುವ ಯಂತ್ರವನ್ನು ಕೊಂಡು ತರಿಸಿ ನಮ್ಮ ಆಫೀಸಿನಲ್ಲಿ ಇಡಿಸಿರುತ್ತೇವೆ. ಯಾರುಬೇಕಾದರೂ ಬಂದು ಕೇಳಿ ತೆಗೆದುಕೊಂಡುಹೋಗಬಹುದು. ಕೂಸುಗಳಿಗೆ ಸರ್ವದಾ ಹಾಲು ಕುಡಿಸುತ್ತಲೇ ಇರಕೂಡದು; ಕಾಲವನ್ನು ಗೊತ್ತುಮಾಡಿಕೊಂಡು ಕಾಲಕ್ಕೆ ಸರಿಯಾಗಿಯೂ ಮಿತವಾಗಿಯೂ ಆಹಾರಕೊಡಬೇಕು. ಕೂಸುಗಳನ್ನು ವಿಶೇಷವಾಗಿ ಬಿಸಿಲು ಬೆಳಕು ಗಾಳಿ ಇರುವಂಥಾ ಪ್ರದೇಶಗಳಲ್ಲಿ ಮಲಗಿಸುತ್ತಿರಬೇಕು. ಇದಕ್ಕೋಸ್ಕರ ಮಕ್ಕಳನ್ನು ಪೈರುಗಳಿಗೆ ಎತ್ತಿಕೊಂಡು ಹೋಗಬೇಕಾದದ್ದಿಲ್ಲ. ತೋಟಗಳಲ್ಲಿ ಮಲಗಿಸಿ ಬೆಳಕು ಗಾಳಿ ವಿಶೇಷವಾಗಿರತಕ್ಕ ಸ್ಥಳದಲ್ಲಿ ಇಟ್ಟರೆ ಸಾಕಾಗಿದೆ. ಹೀಗೆ ಕ್ರಮವಾಗಿ ನಡೆಯುತ್ತಾ ಬಂದರೆ ಮಕ್ಕಳು ಗಟ್ಟಿಮುಟ್ಟಾಗಿ ಬೆಳೆಯುವರು ಎಂಬುದೇ.

ಯೂರೋಪಿಯರ್ ಸ್ತ್ರೀಯರು ನಡುವಿಗೆ ಕಟ್ಟಿಕೊಳ್ಳುವಂಥಾ ಲಂಗಾಗಳು ಅವರ ಪ್ರಮಾಣಕ್ಕಿಂತಲೂ ದೊಡ್ಡವಾಗಿರುವವು. ಆದ್ದರಿಂದ ಈ ಲಂಗಾಗಳ ಕೊನೆಗಳು ಅವರು ಬೀದಿಯಲ್ಲಿ ಹೋಗುತ್ತಿದ್ದರೆ ನೆಲದ ಮೇಲೆ ಹರಿಯುತ್ತಿರುವವು. ಗಾಡಿ ಕುದುರೆ ಮುಂತಾದವು ಬಂದಾಗ ಈ ಲಂಗಾಗಳ ಕೊನೆಗಳ ಮೇಲೆ ಹರಿಯುವದರಿಂದ ತುಳಿಯುವುದೂ ಆದರಿಂದ ಸ್ತ್ರೀಯರು ಬಿದ್ದು ಅಪಾಯವಾಗುವುದೂ ಉಂಟು ಯೂರೋಪಿಗೆ ಸೇರಿದ ಸ್ಯಾಕ್ಸನಿ ರಾಜ್ಯದಲ್ಲಿ ವಾಷ್‌ಹಾಸರ್ ಪಟ್ಟಣದ ಅಧಿಕಾರಿಗಳು ಅಂಥಾ ಸ್ತ್ರೀಯರನ್ನು ರಸ್ತೆಗಳಲ್ಲಿ ಬಿಡಕೂಡದೆಂತಲೂ, ಅವರೇನಾದರೂ ಬಂದರೆ ಅವರಿಗೆ ಜುಲ್ಮಾನೆ ಹಾಕತಕ್ಕದ್ದೆಂತಲೂ, ಇದಕ್ಕೂ ಲಕ್ಷ್ಯಮಾಡದಿದ್ದರೆ ಅವರನ್ನು ಹಿಡಿದು ಸಜಾ ಹಾಕುತ್ತೇವೆಂತಲೂ ಇಸ್ತಿಹಾರು ಕೊಟ್ಟಿದ್ದಾರೆ ಇವರನ್ನು ನೋಡಿ ಜರ್ಮನಿ ಮ್ಯುನಿಸಿಪಾಲಿಟಿಗಳವರೂ ಅಂಥಾ ಕಾನೂನನ್ನೇ ತಮ್ಮ ಪಟ್ಟಣಗಳಲ್ಲೂ ಜಾರಿಗೆ ತರಬೇಕೆಂದಿದ್ದಾರೆಂಬದಾಗಿ ತಿಳಿದು ಬಂದಿದೆ

••••

ರಷ್ಯಾ ರಾಜ್ಯದ ಪೂರ್ವದ ರಾಜವರ್ಗದವರೂ ಮೂವರು ಇತರ ದೊಡ್ಡ ಮನುಷ್ಯರೂ ಸೇರಿ, ಕ್ಷಾಮನಿವಾರಣೆಗೆ ಒಂದು ಫಂಡನ್ನು ಎತ್ತಿ ಆರಂಭಿಸಿ ಅದಕ್ಕೆ ವಿಲಾಯಿತಿಯ ಪ್ರಜೆಗಳನ್ನೂ ಚಂದಾ ಕಳುಹಿಸುವಂತೆ ಕೇಳಿಕೊಂಡಿದ್ದಾರೆ ಇವರು ಕೇಳುವುದೇನೆಂದರೆ—ಈಗ ರಷ್ಯಾದಲ್ಲಿ ವಿಶೇಷ ಕ್ಷಾಮ ಪ್ರಾಪ್ತವಾಗಿದೆ. ಬಹು ಭಯಂಕರವಾದ ಯುದ್ಧವು ಪೂರೈಸುವಷ್ಟರಲ್ಲೇ ಒಳದೇಶದ ಗಲಭೆಗಳು ಪ್ರಾರಂಭವಾದವು ಇವುಗಳ ದೆಸೆಯಿಂದ ಕೋಟ್ಯಾನುಕೋಟಿ ದ್ರವ್ಯನಷ್ಟವಾಯಿತು ಲಕ್ಷಾಂತರ ಸಂಸಾರಗಳು ಪಾಲಕರನ್ನು ಯುದ್ಧ ಮುಂತಾದ್ದರಲ್ಲಿ ಕಳೆದುಕೊಂಡು ವಿವರಿಸಲಾರದಂಥಾ ಕಷ್ಟಗಳಿಗೆ ಗುರಿಯಾಗಿವೆ ಈಗಾದರೋ ರಷ್ಯಾಕ್ಕೆ ಸೇರಿದ ೪೯ ಅಧಿಕಾರ್ಯಗಳ ಪೈಕಿ ೨೫ ಅಧಿಕಾರ್ಯಗಳಲ್ಲಿ ವಿಶೇಷ ಕ್ಷಾಮ ಪ್ರಾಪ್ತವಾಗಿರುವುದು ಇಂಥಾ ಕಷ್ಟಕ್ಕೆ ಸಿಕ್ಕಿದ ಪ್ರಜೆಗಳನ್ನು ಕಾಪಾಡುವುದಕ್ಕೆ ದ್ರವ್ಯಸಹಾಯವಾಗಬೇಕು ಎಂಬುದೇ.

"ಎಂಪೈರ್ ಡೇ" ಎಂಬ ರಾಷ್ಟ್ರೀಯ ಮಹಾದಿನವು

[ದಿಗ್ವಿಖ್ಯಾತರಾಗಿ ಆಳಿದ ಮಹಾರಾಜ್ಞಿ ವಿಕ್ಟೋರಿಯಾ ಅಮ್ಮನವರ ಜನ್ಮದಿನದ ಜ್ಞಾಪಕಾರ್ಥವಾಗಿ ಬ್ರಿಟಿಷ್ ಸಾಮ್ರಾಜ್ಯದ ಚತುರ್ದಿಕ್ಕುಗಳಲ್ಲಿ ಕಳೆದ ೨೪ ನೆಯ ತಾರೀಕನ್ನು ಮಹಾ ಉತ್ಸವ ದಿನವಾಗಿ ಸಕಲ ಪ್ರಜೆಗಳೂ ಆಚರಿಸಿದ ವಿಷಯದಲ್ಲಿ ನಮ್ಮ ಬಳಿಗೆ ಲೇಖನಗಳು ಅನೇಕವಾಗಿ ಬಂದಿರುವುವು ಇವುಗಳನ್ನೆಲ್ಲಾ ಪ್ರಕಟಿಸುವುದಕ್ಕೆ ಸ್ಥಳ ಸಂಕೋಚವಾಗಿರುವ ಕಾರಣದಿಂದ ಕೆಲವಕ್ಕೆ ಮಾತ್ರ ಇಲ್ಲಿ ಸ್ಥಳವನ್ನು ಕೊಟ್ಟಿರುವೆವು ಈ ಮಹಾ ದಿನವನ್ನು ಉತ್ಸವವಾಗಿ ಆಚರಿಸುವುದರಲ್ಲಿ ಉದ್ದೇಶವೇನು? ಎಂದು ಕೇಳಬೇಕಾದುದಿಲ್ಲ ಇದರಲ್ಲಿ ನಮಗೆ ತೋರುವ ಮುಖ್ಯಾಂಶಗಳೆರಡು ೧ನೇದು—ಪ್ರಜೆಗಳಿಗೆಲ್ಲಾ ನಿಜವಾಗಿ ಶ್ರೇಯಸ್ಸಿಗೆ ಕಾರಣವಾದಂಥ ಪ್ರಭುತ್ವದಲ್ಲಿ ಸಕಲರೂ ಪಾತ್ರ್ಯವನ್ನಿಟ್ಟು ಅಂಥ ರಾಜ್ಯವು ಶಾಶ್ವತವಾಗಿಯೂ ಮಹದೈಶ್ವರ್ಯ ಸಂಪನ್ನವಾಗಿಯೂ ಹೆಚ್ಚುತ್ತಾ ಬರಲಿ ಎಂದು ಅಪೇಕ್ಷಿಸಿ ತಮ್ಮ ಆ ಅಪೇಕ್ಷೆಯನ್ನು ನೆರವೇರಿಸಿಕೊಡಬಲ್ಲವನಾದ ಸರ್ವಶಕ್ತನಾದ ಭಗವಂತನನ್ನು ಪ್ರಾರ್ಥಿಸುವುದು ಯುಕ್ತೋಚಿತವಾಗಿದೆ ೨ನೇದು—ರಾಜ್ಯವನ್ನಾಳತಕ್ಕ ಪ್ರಭುವು ಎಷ್ಟೇ ಇಷ್ಟವುಳ್ಳವನಾಗಿದ್ದರೂ ಕೂಡ ತನ್ನ ಪ್ರಜೆಗಳಲ್ಲಿ ಒಬ್ಬೊಬ್ಬನ ಕಷ್ಟಸುಖಗಳನ್ನು ವಿಚಾರಿಸಿಕೊಳ್ಳಬಲ್ಲನು ಅವನೂ ಒಬ್ಬ ಮನುಷ್ಯನಷ್ಟೆ ಆದರೆ ಸಕಲ ಜಗನ್ನಿಯಾಮಕನಾದ ಭಗವಂತನು ಸರ್ವಜ್ಞನಾಗಿರುವದರಿಂದ ತನ್ನ ಈ ಅಪಾರವಾದ ರಾಜ್ಯಕ್ಕೆ ಸೇರಿದ ಸಮಸ್ತರನ್ನು ಒಟ್ಟಾಗಿ ತಿಳಿಯುವುದಲ್ಲದೆ ಅವರಲ್ಲಿ ಪ್ರತಿಯೊಬ್ಬನ ವಿಷಯವನ್ನೂ ಅರಿತು ಅವನವನ ವಿದ್ಯಮಾನಕ್ಕೆ ಸರಿಯಾಗಿ ಫಲಾಫಲಗಳನ್ನು ಕೊಟ್ಟು ರಾಜ್ಯಭಾರವನ್ನು ನಡಸುವಂಥವನಾಗಿದ್ದಾನಲ್ಲವೇ? ಆದ್ದರಿಂದಲೇ ಈ ಮಹಾ ದಿನದಲ್ಲಿ ಸರ್ವರೂ ಮನಸ್ಸಿಗೆ ತೆಗೆದುಕೊಳ್ಳತಕ್ಕದ್ದು ಸಾರ್ವಭೌಮನಾದ ರಾಜನೂ ಸಹ ತನ್ನ ಮೇಲಣ ಅಧಿಕಾರಿಯೊಬ್ಬನು ವಿಚಾರಿಸತಕ್ಕವನಾಗಿದ್ದಾನೆಂದು ಹೆದರಿ ರಾಜ್ಯವಾಳುವದಕ್ಕೂ ಪ್ರಜೆಗಳಾದವರು ಯಾವ ಕಷ್ಟಕ್ಕೊಳಪಟ್ಟರೂ ಅದರಿಂದ ಬಿಡುಗಡೆಯನ್ನು ಹೊಂದುವಂತೆ ಅನುಗ್ರಹಿಸತಕ್ಕ ರಾಜಾಧಿರಾಜನು ಒಬ್ಬನಿದ್ದಾನೆಂದೂ ಆತನ ಬಳಿಗೆ ಯಾರುಬೇಕಾದರೂ ಧಾರಾಳವಾಗಿ ಹೋಗಿ ತಮ್ಮ ಮೊರೆಯನ್ನು ಹೇಳಿಕೊಳ್ಳಬಹುದೆಂದೂ ನಂಬಿ ದೇವಭಕ್ತಿಯುತರಾಗುವದಕ್ಕೂ ಅವಕಾಶವಿದೆ ಪ್ರಜೆಗಳಿಗೆ ರಾಜಭಕ್ತಿಯು ಅಲಂಕಾರಪ್ರಾಯವಾದುದೇ ಸರಿ, ಆದರೆ ದೇವಭಕ್ತಿಯು ಸರ್ವರಿಗೂ ಶಿರೋಭೂಷಣಪ್ರಾಯವಾದುದೆಂಬುದನ್ನು ಪ್ರತಿಯೊಬ್ಬರೂ ಗ್ರಹಿಸತಕ್ಕದ್ದು —ಎಡಿಟರ್]

ಚಿಕ್ಕಮಗಳೂರು

೨೪ನೆ ತಾರೀಖು ಎಂಪೈರ್ ಡೇ ಆದ್ದರಿಂದ ಇಲ್ಲಿನ ಗವರ್ನಮೆಂಟ್ ಕನ್ನಡ ಸ್ಕೂಲಿನ ಹೆಡ್ ಮಾಸ್ಟರ್ ಮ॥ ನಂಜುಂಡಯ್ಯಂಗಾರ್ಯ ಅವರ ಅಸಿಸ್ಟೆಂಟ್ ಮಾಸ್ಟರುಗಳೂ ಸೇರಿ ಹುಡುಗರನ್ನು ಹುಡುಗಿಯರನ್ನು ಸ್ಕೂಲಿಗೆ ಬರಮಾಡಿಕೊಂಡು ಮ॥ ಬಾಬು ಸಾಹೇಬರವರ ಅಪ್ಪಣೆಯಂತೆ ಬಾಲಕಬಾಲಿಕೆಯರಿಂದ ಹಾಡನ್ನು ಹೇಳಿಸಿ ಚಕ್ರವರ್ತಿಯವರ ಶ್ರೇಯೋಭಿವೃದ್ಧಿ ವಿಷಯವಾಗಿ ಒಂದು ಉಪನ್ಯಾಸ ಓದಿ ಬಂದಿದ್ದವರಿಗೆಲ್ಲಾ ಪುಷ್ಪ ಗಂಧ ತಾಂಬೂಲಾದಿಗಳನ್ನೂ ಹುಡುಗರಿಗೆ ತಿಂಡಿಯನ್ನೂ ಕೊಟ್ಟು ಆ ದಿನವನ್ನು ಸಂತೋಷವಾಗಿ ಆಚರಿಸಿದರು.

ಮುಮ್ಮಡಿಗಿರಿ

ಶ್ರೀಮನ್ಮಹಾರಾಜ್ಞೀ ವಿಕ್ಟೋರಿಯಾ ಮಹಾರಾಣಿ ಅಮ್ಮನವರ ಜ್ಞಾಪಕಾರ್ಥವಾಗಿ ನಮ್ಮ ಮೈಸೂರ್ ಪ್ರಿನ್ಸ್ ಮಹಾರಾಜಾ ಕೃಷ್ಣರಾಜ ಒಡೆಯರ್ ಬಹದ್ದೂರವರು ಮೇ ೨೪ ನೇ ತಾರೀಖು ದಿನವನ್ನು ಎಂಪೈರ್ ಡೇ ಎಂಬದಾಗಿ ಘೋಷಿಸಿ ಮಹಾರಾಣಿಯವರು ಧರ್ಮದಿಂದ ರಾಜ್ಯವಾಳಿದ ದಿನವೆಂತಾ ಸಮಸ್ತ ಜನಗಳಿಗೂ ತಿಳಿಯುವಂತೆ ಈ ದಿವಸ ಎಲ್ಲಾ ಆಫೀಸುಗಳಿಗೂ ರಜಾ ದಯಪಾಲಿಸಿದ್ದರಿಂದ ನಮ್ಮ ಊರಿನಲ್ಲಿರುವ ಸಾ॥ ಹೊಳಲನಹಳ್ಳಿ ಚಿಕ್ಕರುದ್ರಪ್ಪನೆಂಬುವರು ಆ ದಿನ ಸಾಯಂಕಾಲ ೪ ಗಂಟೆಯಲ್ಲಿ ತಮ್ಮ ಅಂಗಡಿಗೆ ಚಿತ್ರವನ್ನೆಲ್ಲಾ ಸಿದ್ಧಮಾಡಿಕೊಂಡು ಈ ಸಂಭ್ರಮದ ಜ್ಞಾಪಕಾರ್ಥವಾಗಿ ತಮ್ಮ ಆನಂದವನ್ನು ಗಂಧ ಪುಷ್ಪ ತಾಂಬೂಲ ರಸಾಯನಗಳನ್ನು ಅತ್ಯಾನಂದದಿಂದ ಕೊಟ್ಟು ಸಂತೋಷಪಡಿಸಿದರು.

ಆನೇಕಲ್ಲು ತಾಲ್ಲೂಕು ದೊಮ್ಮಸಂದ್ರ

ಈ ತಿಂಗಳು ೨೪ ನೇ ತಾ ಎಂಪೈರ್ ಡೇ ಮಹೋತ್ಸವವು ಇಲ್ಲಿನ ಮಿಡ್ಲ್ ಮತ್ತು ಗೌರ್ನಮೆಂಟ್ ಸ್ಕೂಲುಗಳಲ್ಲಿ ಆಚರಿಸಲ್ಪಟ್ಟಿತು ಮಿಡ್ಲ್ ಸ್ಕೂಲ್ ಮಕರತೋರಣಗಳಿಂದ ಅಲಂಕರಿಸಲ್ಪಟ್ಟಿತ್ತು. ಆ ದಿನ ಮಧ್ಯಾಹ್ನ ೧ ಗಂಟೆಯ ಸಮಯದಲ್ಲಿ ಸ್ಕೂಲ್ ಕಾಂಪೌಂಡಿನಲ್ಲಿ ಬಾಲಕಬಾಲಕಿಯರನ್ನೂ ಈ ಗ್ರಾಮದ ಕಮಿಟಿ ಮೆಂಬರುಗಳನ್ನೂ ಕರೆಯಿಸಿದ್ದರು ಇಲ್ಲಿನ ಉಪಾಧ್ಯಾಯರು ಅಧ್ಯಕ್ಷರಾಗಿರುವಲ್ಲಿ ೭ ನೇ ಎಡ್ವರ್ಡ್ ಸಾರ್ವಭೌಮರವರ ಆಯುರಾರೋಗ್ಯವನ್ನು ಬಯಸಿ ಒಂದು ವಿಜ್ಞಾಪನಾಪತ್ರಿಕೆಯು ಹೆಡ್ ಮಾಸ್ತರವರಿಂದ ಓದಲಾಯಿತು ಬಾಲಬಾಲಕಿಯರ ಗಾಯನವಾಯಿತು ಡ್ರಿಲ್ ಆಟಪಾಟಗಳು ಆದ ಮೇಲೆ ಇಂಗ್ಲೀಷ್ ನೋಟಿಗೆ ಸಂಬಂಧಪಟ್ಟ "ರಾಜನಂ ರಕ್ಷಿಸು" ಎಂಬುವ ಕನ್ನಡ ಹಾಡನ್ನು ಬಾಲಕಬಾಲಕಿಯರು ಹಾಡಿದರು. ಕೊನೆಯಲ್ಲಿ ಬಾಲಕಬಾಲಕಿಯರಿಗೆ ಮಾವಿನ ಹಣ್ಣು ಸಕ್ಕರೆ ಮುಂತಾದವುಗಳನ್ನು ಹಂಚಿ ಸಂತೋಷಪಟ್ಟು ಕೂಟವನ್ನು ಮುಕ್ತಾಯ ಮಾಡಿದರು

ನೆಲಮಂಗಲ.

ಈ ತಿಂಗಳ ೨೪ ನೇ ತಾರೀಕಿನ ದಿವಸ ಇಂಡಿಯಾ ಚಕ್ರವರ್ತಿಯವರಾದ ಶ್ರೀಮನ್ ಎಡ್ವರ್ಡ್ ಸಾರ್ವಭೌಮರ ಪಟ್ಟಾಭಿಷೇಕ ಸೂಚಕವಾದ ಮಹೋತ್ಸವವು ಬಹು ವಿಜೃಂಭಣೆಯಾಗಿ ನಡೆಯಿತು ಆ ದಿನ ಬೆಳಿಗ್ಗೆ ೯ ಗಂಟೆಗೆ ಇಂಡಿಯಾ ಚಕ್ರವರ್ತಿಯವರ ಜಯಧ್ವಜ ಸೂಚಕವಾದ ಬಾವುಟಕ್ಕೆ ಸ್ಕೂಲ್ ಬಾಲಕ, ಬಾಲಕಿಯರುಗಳು ವಂದನಾಪೂರ್ವಕವಾದ ಇಂಗ್ಲಿಷ್ ಹಿಂದೂಸ್ತಾನಿ ಹಾಡುಗಳನ್ನು ಹೇಳಿ ಮುಗಿಸಿದೊಡನೆ ಕ್ಲಾರಿಟ್ ವಾದ್ಯ ಮಂಗಳಧ್ವನಿಯನ್ನುಂಟುಮಾಡಿತು. ಅಲಂಕರಿಸಲ್ಪಟ್ಟಿದ್ದ ಸ್ಕೂಲಿನಲ್ಲಿ ಅಮಲ್ದಾರರು ಪ್ರೆಸಿಡೆಂಟರಾಗಿ ಸಭೆ ನಡಿಸಿದರು ಆ ಕಾಲದಲ್ಲಿ ಹೆಡ್ಮಾಸ್ಟರು ಕನ್ನಡದಲ್ಲಿಯೂ, ಸಂಸ್ಕೃತ ಪಂಡಿತರು ಸಂಸ್ಕೃತದಲ್ಲಿಯೂ, ಹಿಂದೂಸ್ತಾನಿ ಸ್ಕೂಲ್ ಹೆಡ್ಮಾಸ್ಟರು ಹಿಂದೂಸ್ತಾನಿಯಲ್ಲಿಯೂ ಪ್ರಭುಗಳಾದ ಎಡ್ವರ್ಡರವರ ಆಳ್ವಿಕೆಯ ಉತ್ತಮವಾದ ಧರ್ಮಕಾರ್ಯಗಳನ್ನು ಕುರಿತು ಉಪನ್ಯಾಸ ಮಾಡಿ ಮುಗಿಸಿದ ನಂತರ ಅಮಲ್ದಾರರವರು ಸ್ವಲ್ಪ ಹೊತ್ತು ಇಂಗ್ಲಿಷಿನಿಂದ ಹಿಂದೂಸ್ತಾನಕ್ಕೆ ಆದ ಮಹೋಪಕಾರಗಳನ್ನೆಲ್ಲಾ ಉಪನ್ಯಾಸ ಮಾಡಿ ತಿಳಿಸಿದ ನಂತರ ಸಭಿಕರುಗಳಿಗೆಲ್ಲಾ ಗಂಧ ಪುಷ್ಪ ತಾಂಬೂಲಗಳನ್ನು ಕೊಟ್ಟು ಸಭೆಯನ್ನು ಮುಕ್ತಾಯ ಮಾಡಿದರು. ಮಧ್ಯಾಹ್ನಾನಂತರ ಬಾಲಕರಿಗೆ ಆಟಪಾಟಗಳನ್ನು ಮಾಡಿಸಿ ಅವರವರ ಯೋಗ್ಯತಾನುಸಾರವಾಗಿಯೂ, ಬಾಲಕಿಯರಿಗೂ ಬಹುಮಾನಗಳನ್ನು ಕೊಡಿಸಿದರು ಎಲ್ಲಾ ಸ್ಕೂಲ್ ಬಾಲಕ ಬಾಲಕಿಯರಿಗೆ ಲಾಡು ಮುಂತಾದ ತಿಂಡಿಯನ್ನು ಹಂಚಿ ಸಂತೋಷಪಡಿಸಿದರು

ಚನ್ನಪಟ್ಟಣ

ಈ ತಿಂಗಳು ೨೪ ನೆ ತಾ ಶ್ರೀಮದಿಂಡಿಯಾ ಚಕ್ರವರ್ತಿ ಸಾರ್ವಭೌಮರವರ ಕಿರೀಟಧಾರಣೆಯ ದಿವಸವಾದುದರಿಂದ ಇಲ್ಲಿನ ಸ್ಕೂಲಿನಲ್ಲಿ ಒಂದು ಸಭೆ ಸೇರಿತ್ತು. ಹೈಸ್ಕೂಲ್ ಹೆಡ್‌ಮಾಸ್ಟರೂ, ಅಮಲ್ದಾರರೂ, ಸಬ್‌ರಿಜಿಸ್ಟ್ರಾರೂ ಡಾಕ್ಟರೇ ಮೊದಲಾದ ಅನೇಕ ದೊಡ್ಡ ಮನುಷ್ಯರೂ, ವರ್ತಕರೇ ಮೊದಲಾದ ಗ್ರಾಮದ ಮಹಾ ಜನಗಳೂ, ವಿದ್ಯಾರ್ಥಿಗಳೂ, ಇತರರೂ ಸೇರಿದ್ದರು ಹೈಸ್ಕೂಲ್ ಹೆಡ್‌ಮಾಸ್ಟರ್ ಮ॥ ಕೃಷ್ಣಯ್ಯಂಗಾರ್, ಬಿ ಎ ಯವರು ಅಗ್ರಾಸನವನ್ನು ವಹಿಸಿದ್ದರು ಮ॥ ವೆಂಕಟದಾಸಪ್ಪನವರು ಇಂಗ್ಲಿಷ್ ಮುಖಾಂತರದಿಂದ ಸಭೆಯ ಸದುದ್ದೇಶದ ಅರ್ಥವನ್ನು ತಿಳಿಯಪಡಿಸಿದರು ನಾಲ್ವರು ಹುಡುಗರು ಶ್ರೀಮದೆಡ್ವರ್ಡ್‌ಸಾರ್ವಭೌಮರ ಶ್ರೇಯಃಪ್ರಾರ್ಥನೆಯನ್ನು ಶ್ರೀಮತ್ಕೃಷ್ಣರಾಜ ಒಡೆಯರವರ ಶ್ರೇಯಃಪ್ರಾರ್ಥನೆಯನ್ನು ಇಂಪಾದ ಸ್ವರದಿಂದ ಹೃದಯಂಗಮವಾಗುವಂತೆ ಸಭಿಕರ ಮುಂದೆ ಹಾಡಿದರು ಅನಂತರ ಮ॥ ವೆಂಕಟಸುಬ್ಬಯ್ಯನವರು ಕೆಲವು ಪದ್ಯಗಳನ್ನು ಹೇಳಿದ್ದಲ್ಲದೆ, ಬ್ರಿಟಿಷ್ ಚಕ್ರಾಧಿಪತ್ಯದ ವಿಸ್ತೀರ್ಣದ ವಿಷಯವಾಗಿ ಉಪನ್ಯಾಸ ಮಾಡಿದರು ಕೂಡಲೆ ಮ॥ ನಂಜುಂಡಶಾಸ್ತ್ರಿಗಳು ಬ್ರಿಟಿಷರಿಂದ ಈ ದೇಶಕ್ಕೆ ಉಂಟಾದ ಉಪಯೋಗವೇನೆಂಬ ವಿಷಯದಲ್ಲಿ ಉಪನ್ಯಾಸ ಮಾಡಿದರು. ಬಾಲಕರು ಮಂಗಳಪೂರ್ವಕವಾದ ಹಾಡುಗಳನ್ನು ಹೇಳಿದರು ಅನಂತರ ಸಭಿಕರೆಲ್ಲರೂ ಶ್ರೀಮದೆಡ್ವರ್ಡ್ ಮತ್ತು ಅಲೆಗ್ಸಾಂಡ್ರಾ ಮಹಾರಾಜ್ಞಿಯವರಿಗೂ ಶ್ರೀಮತ್ಕೃಷ್ಣರಾಜ ಒಡೆಯರ್ ಬಹದ್ದೂರವರಿಗೂ ಅಮಾತ್ಯರಾದ ಶ್ರೀಮಾನ್ ವಿ. ಪಿ. ಮಾಧವರಾಯರವರಿಗೂ ಭಗವಂತನು ಚಿರಾಯುವನ್ನಿತ್ತು ಕಾಪಾಡಲೆಂದು ಎಲ್ಲರೂ ಏಕಕಂಠದಿಂದ ಧ್ವನಿಮಾಡಿದರು ತರುವಾಯ ಗಂಧ ಪುಷ್ಪ ತಾಂಬೂಲಾದಿಗಳೂ ವಿದ್ಯಾರ್ಥಿಗಳಿಗೆ ಬತ್ತಾಸೂ ಹಂಚಲ್ಪಟ್ಟು ಸಭೆಯು ವಿಸರ್ಜಿತವಾಯಿತು ಕನ್ನಡ, ಹಿಂದೂಸ್ತಾನಿ, ಇಂಡಸ್ಟ್ರಿಯಲ್ ಸ್ಕೂಲ್ ವಿದ್ಯಾರ್ಥಿಗಳು ಆ ದಿನವನ್ನು ಅತ್ಯಂತ ಸಂಭ್ರಮದಿಂದ ಕಳೆದು ಆನಂದಪಟ್ಟರು ಇದೇ ರೀತಿಯಾಗಿ ನಾಳೆ ಸ್ಕೂಲು ಉತ್ಕೃಷ್ಟವಾದ ಸಂದರ್ಭ ಸ್ಕೂಲಿನಲ್ಲೂ ಉತ್ಸವಗಳು ನಡೆಯುವಂತೆ ಪರ್ವವಾಗಿದೆ

ಅಜ್ಜಂಪುರ

